ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 42

NAVAYUGA

1—7—1971

ಚಾರುಚರ್ಯನ

ಎಣ್ಣೆ ಬರುವಾಗ ಗಾಣ ಮುರಿಯುತ್ತಿದೆ

ಕರ್ನಾಟಕದಲ್ಲೂ ಎನ್‌ಜಿವೊಗಳ ಸಂಘವೊಂದಿದೆ. ಎನ್‌ಜಿವೊ ಅಂದರೆ, ನಾನ್ ಗಜೆಟೆಡ್ ಆಫೀಸರ.

ಎನ್‌ಜಿವೊ ಎಂಬುದು ಬ್ರಿಟಿಷ ಸಾರ್ವಭೌಮತೆಯ ಪಳೆಯುಳಿಕೆ. ಜಿವೊಗಳೆಲ್ಲ ಫರಂಗಿಯವರಾಗಿ ಆದರಡಿಯ ಕೂಲಿಗಳಂತೆ ಈ ಎನ್‌ಜಿವೊಗಳು.

ಇಂದು ಕಾಲ ಬದಲಾಗಿದೆ. ಫರಂಗಿಯವರು ದೇಶಬಿಟ್ಟು ಹೋಗಿದ್ದಾರೆ. ಆದರೂ ಜಿವೊ—ಎನ್‌ಜಿವೊ ಜೀವ ಬಿಡಲಿಲ್ಲ. ಜಿವೊ ಆಗುವವರೆಲ್ಲ ದೇಶೀಯರೇ ಆದರೂ ಅವರಲ್ಲಿ ಸ್ಥಾನ ಗುಣದಿಂದ ಫರಂಗಿ ಗುಣ ಅಂಟಿಕೊಳ್ಳುತ್ತದೆ.

'ನಾನು ಜಿವೊ ಆಗಿ ಹದಿನೈದು ವರ್ಷ ಸೇವೆ ಸಲ್ಲಿಸಿ ನಿವೃತ್ತನಾದೆ' ಎಂದು ಅಭಿಮಾನದಿಂದಲೇ ಹೇಳಿಕೊಳ್ಳುವವರುಂಟು. ಎನ್‌ಜಿವೊ—ಜಿವೊಗಳ ನಡುವಿರುವುದು ಕರಿಯರು ಮತ್ತು ಬಿಳಿಯರ ಅಂತರ. ಈಗಿನ ಭಾಷೆಯಲ್ಲಿ ಅಮೆರಿಕೆ–ಆಫ್ರಿಕೆಗಳ ಅಂತರ.

ಒಂದು ಕಡೆ ಅತ್ಲಾಂತಿಕ ಸಾಗರದಷ್ಟು; ಇನ್ನೊಂದು ಕಡೆ ಪೆಸಿಫಿಕ್ ಮತ್ತು ಹಿಂದೀ ಮಹಾಸಾಗರಗಳಷ್ಟು.

ಒಂದು ಸ್ವಭಾವದಲ್ಲಿ, ಇನ್ನೊಂದು ಸಂಬಳ ಸಾರಿಗೆಗಳಲ್ಲಿ.

ಇದು ಫರಂಗಿಯವರ ಅವಶೇಷ. ದೇಶೀಯರ ಮುಖಭಂಗ ಮಾಡಲು ಬಳಸಿಕೊಂಡ ಅವರ ಸಾಧನದಿಂದ ನಾವು ನಮ್ಮ ಸಹೋದರರ ಮುಖಕ್ಕೆ ಹೊಡೆದು ತೃಪ್ತಿಪಡುತ್ತೇವೆ.

ರಾಜ್ಯದ ಎನ್‌ಜಿವೊ ಸಂಘ ಹುಟ್ಟಿದ್ದು ಫರಂಗಿಯವರ ಆಡಳಿತದಲ್ಲಿ. ಸಂಘ-ಸಂಸ್ಥೆ ಕಟ್ಟಲು ಅವರಷ್ಟು ಉದಾರತೆ ತೋರಿಸಲು ಇಂದಿನ ಸರಕಾರ ತಯಾರಿಲ್ಲ. ಯಾರು ಎಂತಹ ಪೆಟ್ಟಿಗೆ ಮಾಡಿಸಲೂ ಫರಂಗಿಯವರ ಆಕ್ಷೇಪವಿಲ್ಲ; ಅದರ ಬೀಗದ ಕೈ ಮಾತ್ರ ಅವರ ಬಳಿಯಿಟ್ಟಿರಾಯ್ತು.

ಇದೀಗ ರಾಜ್ಯ ಎನ್‌ಜಿವೊ ಸಂಘ ತನ್ನ ಬಂಗಾರದ ಹಬ್ಬವಾಚರಿಸಿತು. ಈ ಐವತ್ತು ವರ್ಷ ಕಾಲ ಯಾರ್‍ಯಾರ ಕಟ್ಟಡದಲ್ಲಿ ಕಾಲಯಾಪನೆ ಮಾಡಿದ ಸಂಘದ ಮೇಲೆ ರಾಜ್ಯಪಾಲ ಧರ್ಮವೀರರು ಭಾರೀ ಕೃಪೆದೋರಿದರು. ತನ್ನ ಸರಕಾರದ ಮೂಲಕ ಸ್ವಂತ ಕಟ್ಟಡ ಕಟ್ಟಿಸಲೆಂದು ಕಬ್ಬನ್ ಪಾರ್ಕಿನಲ್ಲೇ ನಿವೇಶನವೊಂದನ್ನು ಮಂಜೂರು ಮಾಡಿದರು. ಜನಪ್ರಿಯ ಸರಕಾರ ಮಾಡದ ಮಹಾ ಪುಣ್ಯಕಾರ್ಯವನ್ನು ಸಾಧಿಸಿ ಪ್ರಶಂಸಾಭಾಜನರಾದರು.

ಚಿನ್ನದ ಹಬ್ಬದ ಆಚರಣೆ ಸಂಭ್ರಮದಿಂದಲೇ ನಡೆಯಿತು. ರಾಜ್ಯಪಾಲ ಧರ್ಮವೀರರು ದತ್ತ ನಿವೇಶನದಲ್ಲಿ ಸ್ವಭವನಕ್ಕೆ ಶಂಕು ಸ್ಥಾಪಿಸಿದರು; ಮಾಜೀ ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ಬಂಗಾರದ ಹಬ್ಬದ ನಿಮಿತ್ತ ನೇರಿದ ಸಭೆಯ ಅಧ್ಯಕ್ಷತೆ ವಹಿಸಿದರು.

ಮತ್ತೆ ಧರ್ಮವೀರ—ವೀರೇಂದ್ರರು ಒಂದೇ ವೇದಿಕೆಯ ಮೇಲೆ ನಿಂತು ಒಂದೇ ಸಭೆಯನ್ನು ಕುರಿತು ಮಾತಾಡಿದರು.

ಇಂಡಿಕೇಟಿಗರು ಇದನ್ನು ಕಂಡು ಹಿಂಗು ತಿಂದ ಮಂಗನಂತಾದರು. ಈ ಎನ್‌ಜಿವೊಗಳಿಗೆ ಬುದ್ಧಿಯಿಲ್ಲ ಎಂದು ಗೊಣಗಿಕೊಂಡರು. ನಾಳೆ ಮಂತ್ರಿಯಾದೊಡನೆಯೇ ಎಲ್ಲ ಅರ್ಹತೆ ತನಗೆ ತಾನಾಗೇ ಬರುತ್ತದೆಂದು ಸಮಾಧಾನಪಟ್ಟುಕೊಂಡರು

ಸಭೆಯಲ್ಲಿ ಏನು ನಡೆಯಿತು?

ಒಬ್ಬರು ಕೇಳಿದರು; ಇನ್ನೊಬ್ಬರು ಸಮರ್ಥಿಸಿದರು. ಉಳಿದೊಬ್ಬರು ಕೇಳಿಕೆಯನ್ನು ಸ್ವಾಗತಿಸಿ ಸದ್ಯ ಕಷ್ಟದ ದಿನಗಳಿವೆ; ಮುಂದೆ ಒಳ್ಳೆಯ ದಿನಗಳು ಬರಲಿವೆಯೆಂದು ಆಶೆ ತೋರಿಸಿದರು.

ಯಾರು ಕೇಳಿದವರು? ಏನು ಕೇಳಿದವರು?

ಎನ್‌ಜಿವೊಗಳ ಪ್ರತಿನಿಧಿ ಶ್ರೀ ಕೆ. ಎ. ಕೇಶವ ಮೂರ್ತಿಯವರು ಕೇಳಿದರು. ಕರ್ತವ್ಯದಿಂದ ನಾವೆಂದೂ ವಿಮುಖರಾಗಿಲ್ಲವೆಂದು ಎದೆ ತಟ್ಟಿ ಹೇಳಿಕೊಂಡರು. ತಮಗೇನೂ ರಾಜಾ ಜೀವನ [ರಾಜರಿಲ್ಲದ ಈ ಕಾಲದಲ್ಲಿ ಪ್ರಜಾಪ್ರಭುಗಳ ಐಶೋ—ಆರಾಮು) ಬೇಡವೆಂದರು.

ತಮ್ಮ ಅಲ್ಪ ತೃಪ್ತ ಮನೋಭಾವವನ್ನು ಪ್ರದರ್ಶಿಸಿದರು. ಸಾಮಾನ್ಯ ಜೀವನಕ್ಕೆ ಅವಶ್ಯವಿರುವಷ್ಟು ವೇತನ ನೀಡಿ; ಬೆಲೆಯೇರಿಕೆಗನುಗುಣವಾದ ತುಟ್ಟಿಭತ್ತೆ ನೀಡಿ ಎಂದು ಕರವ ಮುಗಿದು ಶರಣೆಂದರು.

ಅಯ್ಯೋ ಪಾಪವೇ ಎನಿಸದಿದ್ದೀತು ವೇದಿಕೆಯ ಕೆಳಗೆ ನಿಂತೋ ಕುಳಿತೋ ಕೇಳಿದವರಿಗೆ, ವೇದಿಕೆಯ ಮೇಲೆ ಕುಳಿತವರಿಗೆ ಎನಿಸದಿದ್ದೀತೆ?

ಎನಿಸಿಯೇ ಅನಿಸಿತು.

ಎನಿಸುವಂತೆ ಮೊದಲೇ ಶ್ರೀ ಎಸ್. ಕೃಷ್ಣಮೂರ್ತಿಯವರು ಅವರ ಮನಸ್ಸು ಹಸನುಮಾಡಿದ್ದರು.

ಶ್ರೀ ಕೃಷ್ಣಮೂರ್ತಿಯೇನಂದರು?

ಎನ್‌ಜಿವೊಗಳ ನಿಷ್ಠೆ, ಪ್ರಾಮಾಣಿಕತೆ, ಕಾರ್ಯತತ್ಪರತೆ ಎಲ್ಲವೂ ಅವರವರ ಹೊಟ್ಟೆಯನ್ನವಲಂಬಿಸಿದೆ. ಅವರಿಗೀಗ ಜೀವನ ಸಾಗಿಸುವುದೇ ಕಷ್ಟವಾಗಿದೆ. ಸುಭದ್ರ ಸಮಾಜ ರೂಪಿಸುವಲ್ಲಿ ಎನ್‌ಜಿವೊಗಳ ಪಾತ್ರ ಬಹಳ. ಅವರು ತಮ್ಮ ಕರ್ತವ್ಯ ನಿರ್ವಹಿಸಲು ಬೇಕಾದ ಸೌಲಭ್ಯಗಳನ್ನು ಸರಕಾರ ಒದಗಿಸಿಕೊಡಬೇಕು.

ಸರಕಾರ ಅಂದರೆ ಎನ್ ಜಿ ವೊಗಳು, ಎನ್‌ಜಿವೊ ಅಂದರೆ ಸರಕಾರ. ಇವರು ದುಡಿಯದೆ ಹೋದರೆ ಅದು ನಿಷ್ಕ್ರಿಯ.

ಮಾಜಿ ಮುಖ್ಯಮಂತ್ರಿಯವರ ದಯಾರ್ದ್ರ ಹೃದಯ ಆರ್ದ್ರಾ ಮಳೆನೀರಿನಂತೆ ಕರಗಿ ಪ್ರವಾಹವಾಯ್ತು.

ಕೊಡುವ ಹೊಣೆಗಾರಿಕೆಯುಳ್ಳದ್ದರಿಂದ ಕೊಡಲೇಬೇಕು ಎಂದರು. ಏನನ್ನು?

ರಾಜ್ಯ ಸರಕಾರಿ ನೌಕರರಿಗೂ ಕೇಂದ್ರ ಸರಕಾರಿ ನೌಕರರಿಗೂ ವೇತನದಲ್ಲಿ ಅಂತರವಿರಬಾರದು ಎಂದರು.

ಪ್ರೌಢ ಶಾಲೆಯಲ್ಲಿ ಮೊದಲನೆಯ ಭಾಷೆ ಕಲಿಸುವ ಪಂಡಿತ ಮತ್ತು ಎರಡನೆಯ ಭಾಷೆ ಕಲಿಸುವ ಪದವೀಧರರ ನಡುವೆಯೇ ಪಾತಾಳ–ಆಕಾಶಗಳ ಅಂತರ ತಂದು ಹಾಕಿದ ಶ್ರೀ ವೀರೇಂದ್ರ ಪಾಟೀಲರು ಕೇಂದ್ರ–ರಾಜ್ಯ ನೌಕರರ ವೇತನದಲ್ಲಿ ಸಮಾನತೆ ಬಯಸಿದರು!

ತಾನು ಮುಖ್ಯಮಂತ್ರಿಯಾಗಿದ್ದಾಗ, ಎನ್‌ಜಿವೊಗಳನ್ನು ನರಕದಿಂದ ಸ್ವರ್ಗಕ್ಕೇರಲು ಪರಿಪುಷ್ಟವಾದ ಏಣಿ ಕಟ್ಟತೊಡಗಿರುವುದಾಗಿ ಹೇಳಿಕೊಂಡರು.

ಎನ್‌ಜಿವೊಗಳು ಕೇಳಿದ್ದನ್ನೆಲ್ಲಾ ಕೊಟ್ಟುಬಿಡುವ ತನ್ನ ಉದಾರ ಹೃದಯವನ್ನು ತೆರೆದು ತೋರಿಸಿದ ಅವರು ಸರಕಾರ ಆರ್ಥಿಕ ಮುಗ್ಗಟ್ಟಿನಿಂದ ಅದನ್ನು ಅಂದು ಕಾರ್ಯರೂಪಕ್ಕೆ ತರಲಾಗಲಿಲ್ಲವೆಂದು ನೊಂದು ನುಡಿದರು.

ಆಡಳಿತಕ್ಕೆ ನೌಕರರು ಬೆನ್ನುಮೂಳೆಯೆಂದವರು ಒಪ್ಪಿಕೊಂಡು, ಸರಕಾರವೆಂದರೆ ಅವರು ಎಂದು ಹೇಳಿ. ಸರಕಾರ–ನೌಕರರು ಹಾಲು — ನೀರಿನಂತಿರಬೇಕು ಎಂದರು.

(ಹಾಲು ಸರಕಾರಕ್ಕೆ; ನೀರು ನೌಕರರಿಗೆ).

ಈಗ ಏನನ್ನಾದರೂ ಕೊಡುವವರು ರಾಜ್ಯಪಾಲರು. ಆದುದರಿಂದಲೇ ಅವರು ಹೇಳಿದರು–ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಲಕ್ಷ್ಯದಲ್ಲಿರಿಸಿಕೊಂಡು ಎನ್‌ಜಿವೊಗಳು ತಮ್ಮ ಬೇಡಿಕೆಗಳನ್ನು ಮುಂದಿಡಬೇಕು.

ಈಗಾಗಲೇ ನಲುವತ್ತು ಕೋಟಿಯ ಓವರ್ ಡ್ರಾಫ್ಟ್ ನಮ್ಮದು. ಅದು ದಿನದಿನಕ್ಕೂ ಬೆಳೆಯುತ್ತಲೇ ಹೋಗುತ್ತದೆ.

ನಾಸಿಕದಂತಹ ಕಾರಖಾನೆಯನ್ನು ಒಂದೊಂದೂ ರಾಜ್ಯದಲ್ಲಿ ಆರಂಭ ಮಾಡಿದರೆ ಹೇಗೆ?

ನೌಕರರು ಜನತೆಯ ಸೇವಕರು ಎಂಬುದನ್ನು ಅವರು ನೆನಪಿಸಿಕೊಟ್ಟರು. ಜನ ತುಂಡು ಬಟ್ಟೆಯೂ ಇಲ್ಲದೆ ಬೆತ್ತಲೆಯಿರುವಾಗ ಎನ್‌ಜಿವೊಗಳು ಕಂಬಳಿ ಹೊದೆಯ ಬಯಸುವುದರಲ್ಲಿ ಯಾವ ನ್ಯಾಯ? (ಇದು ಪ್ರತಿಗಾಮಿತನವಲ್ಲವೆ? ಧನಿಯನ್ನು ಮೂರಾಬಟ್ಟೆಮಾಡಿ 'ಒಕ್ಕಲನ್ನು ಉದ್ಧಾರ'ಮಾಡುವುದು ಪ್ರಗತಿ. ಜನತೆಯನ್ನು ಹಿಂಡಿ ಹಿಪ್ಪೆಮಾಡಿ ಸರಕಾರಿ ನೌಕರರನ್ನು ಸಾಕುವುದು ಪ್ರಗತಿಯಾಗಬೇಡವೆ?

'ವೇತನ ಭತ್ತೆ ಹೆಚ್ಚಿಸಿರಿ; ಕಡಿಮೆ ಕೆಲಸ ಹೆಚ್ಚು ಸಂಬಳ' ಎಂಬ ಬೇಡಿಕೆಗಳ ನ್ಯಾಯಬದ್ಧತೆಯನ್ನು ರಾಜ್ಯಪಾಲರು ಪ್ರಶ್ನಿಸಲಿಲ್ಲ. ಈ ಬೇಡಿಕೆಗಳಿಗೆ ಬೆಲೆಯೇರಿಕೆಯೇ ಕಾರಣವೆಂದು ಎಲ್ಲರಿಗೂ ತಿಳಿದ ಸತ್ಯವನ್ನು ಒಪ್ಪಿಕೊಂಡರು. ಇದು ಗಂಭೀರ ಮಾನವೀಯ ಪ್ರಶ್ನೆಯೆಂದು ಅಭಿಪ್ರಾಯಿಸಿದರು. ಇವಕ್ಕೆ ಪರಿಹಾರ ಹುಡುಕುವ

(ನಾಲ್ಕನೇ ಪುಟ ನೋಡಿರಿ)

ಚರಿತ್ರಾರ್ಹ ಮೊಕದ್ದಮೆಗಳು—೮

'ಪೆಟ್ಟಿಗೆಯಲ್ಲೊಂದು ಹೆಣ'

ಲೇಖಕರು: ಶ್ರೀ ಬಿ. ಕೃಷ್ಣ ಭಟ್, ಯಲ್‌ಯಲ್.ಬಿ., ಭದ್ರಾವತಿ

8—3—50ರ ಭರೇಲಿಯ ದೈನಿಕ 'ಮಿಲಾಪ'ದಲ್ಲಿ, ಭರೇಲಿಯ ಮುಖ್ಯಸ್ಥರು ಹೊರಡಿಸಿದ ಪ್ರಕಟಣೆಯೊಂದು ಅಚ್ಚಾಯಿತು. ಅದರ ಒಕ್ಕಣೆ ಹೀಗಿತ್ತು—

ಯಶಪಾಲ ಸಿಂಗನಿಗೆ,

"ನೀನು ಎಲ್ಲಿದ್ದರೂ ಓಡಿಬಿಡುವುದು. ನಿನ್ನ ಹೆಂಡತಿ-ಮಕ್ಕಳು, ತಾಯಿ-ತಂದೆಯರಿಗೆ ತುಂಬ ಬೇಸರವಾಗಿದೆ. ಅವರು ನಿನ್ನ ದಾರಿ ನೋಡುತ್ತಿದ್ದಾರೆ."

6—2—50ರಿಂದ ಯಶಪಾಲನ ಪತ್ತೆ ಇರಲಿಲ್ಲ. ಯಶಪಾಲನ ಮದುವೆ ಪಲ್ವಿಂದರ್ ಜೊತೆ ಆಗಿತ್ತು. ಅವರಿಗೆ ಎರಡು ಮಕ್ಕಳೂ ಆಗಿದ್ದುವು. ಗಂಡ-ಹೆಂಡಿರು, ಅಂಬಾಲಾದಲ್ಲಿನ ಹಿರಿಯರ ಮನೆಯಲ್ಲಿ ವಾಸವಾಗಿದ್ದರು. ಯಶಪಾಲನಿಗೂ, ಅವನ ತಂದೆಗೂ ಹೊಂದಿಕೊಳ್ಳಲಿಲ್ಲ. ಆತ ತಾಯಿ-ತಂದೆ, ತಾತಂದಿರಿಂದ ಬೇರೆಯಾದ. ಪಲ್ವಿಂದರ್ ಪ್ರೇರಣೆಯಿಂದ ಈ ಬೇರ್ಪಡೆ ಆಯಿತೆಂದು ಜನ ಆಡಿಕೊಳ್ಳುತ್ತಿದ್ದರು. ಯಶಪಾಲ ವ್ಯಾಪಾರದಿಂದ ಜೀವನ ನಡೆಸುತ್ತಿದ್ದ. ಹಾಲು-ತತ್ತಿ, ಇತರ ಚಿಲ್ಲರೆ ವಸ್ತುಗಳಲ್ಲಿ ಅವನು ವ್ಯವಹರಿಸುತ್ತಿದ್ದ.

ಹೀಗೆ ಬೇರೆಯಾದ ಸ್ವಲ್ಪ ಸಮಯದ ನಂತರ ಮಹೇಂದ್ರಪಾಲ ಅವರ ಮನೆಗೆ ಹೋಗಿ-ಬಂದು ಮಾಡುತ್ತಿದ್ದ. ಒಂದೊಂದು ಬಾರಿ, ಹೀಗೆ ಬಂದವನು ಅವರೊಡನೆ ಉಳಿದುಕೊಳ್ಳುತ್ತಿದ್ದ. ಆತ ಪಲ್ವಿಂದ್ರಳ ದೂರದ ಸಂಬಂಧಿ. ಅಂಬಾಲಾಕ್ಕೆ ಸಮೀಪದಲ್ಲಿದ್ದ ಬಲದೇವ ನಗರದಲ್ಲಿ ಆತ ಉದ್ಯೋಗದಲ್ಲಿದ್ದ.

ಯಶಪಾಲನ ತಂದೆ, ತಾತಂದಿರ ಕಣ್ಣು ಮಹೇಂದ್ರನ ಮೇಲೆ ಬಿತ್ತು. ಅವರು ಅವನನ್ನು ಕರೆಸಿಕೊಂಡು ಪ್ರಶ್ನಿಸಿದರು. ಅವನು ಅವರಿಗೆ ಹಾರಿಕೆಯ ಉತ್ತರಕೊಟ್ಟ. ಪತ್ರಿಕೆಯಲ್ಲಿ ಬಂದ ಪ್ರಕಟಣೆಯಿಂದ ಪ್ರಯೋಜನ ಸಿಗಲಿಲ್ಲ, ಯಶಪಾಲನ ಪತ್ತೆಯಾಗಲಿಲ್ಲ. ಮನೆಮಂದಿ ವಿಮಂಚನೆಗೊಳಗಾದರು.

10—3—50ರಂದು ಬಲದೇವನಗರದ ಸಮೀಪದ ಹಳ್ಳಿಯ ಬಾವಿಯೊಂದರಿಂದ ದುರ್ನಾತ ಬರುವುದನ್ನು ಹಳ್ಳಿಗರು ಗಮನಿಸಿದರು. ಗ್ರಾಮದ ಅಧಿಕಾರಿಗಳಿಗೆ ವರ್ತಮಾನ ಹೋಯಿತು. ಅವರು ಬಂದು ಬಾವಿಯನ್ನು ಶೋಧಿಸಿದರು. ಬಾವಿಯೊಳಗೊಂದು ಕಬ್ಬಿಣದ ದೊಡ್ಡ ಪೆಟ್ಟಿಗೆ ಕಾಣಿಸಿತು. ಅಲ್ಲಿಂದ ಅದನ್ನು ಎತ್ತಲಾಯಿತು. ಬಿಚ್ಚಿ ನೋಡಿದಾಗ ಅದರೊಳಗೊಂದು ಮನುಷ್ಯ ದೇಹ ಸಿಕ್ಕಿತು— ಹೆಣವನ್ನು ಕಂಡವರು—ಸತ್ತು ಬಹಳ ದಿನವಾಗಿರ ಬೇಕೆಂದು ತರ್ಕಿಸಿದರು. ಮರಣೋತ್ತರ ಶವ ಪರೀಕ್ಷೆಯ ಮರುದಿನ ಹೆಣವನ್ನು ಮಣ್ಣು ಮಾಡಲಾಯಿತು—ಶವದ ಫೋಟೋ ತೆಗೆದುಕೊಳ್ಳಲು ಪೋಲಿಸರು ಮರೆತರು. ಪೆಟ್ಟಿಗೆಯಲ್ಲಿ ದೊರಕಿದ ಬಟ್ಟೆ—ಬರೆಗಳ ಆಧಾರದ ಮೇಲೆ ಅದು ಯಶಪಾಲನ ದೇಹವೆಂದು ಅನಂತರ ಹೇಳಲಾಯಿತು

ತದನಂತರ ಕೊಲೆಯ ತರದೂದು ಬಿರುಸಿನಿಂದ ನಡೆಯಿತು. ಯಶಪಾಲನ ಕೊಲೆಯ ಆರೋಪವನ್ನು ಪಲ್ವಿಂದರ್ ಮತ್ತು ಮಹೇಂದ್ರರ ಮೇಲೆ ಹೊರಿಸಲಾಯಿತು. ಮಾಡಿದ ಕೊಲೆಯನ್ನು ಮುಚ್ಚಿಡಲು ಪ್ರಯತ್ನಿಸಿದರೆಂಬ ಆಪಾದನೆ ಬೇರೆ ಸೇರಿಸಲಾಯಿತು. ಮಹೇಂದ್ರ ಪೋಲೀಸರ ಕೈಗೆ ಸಿಗಲಿಲ್ಲ. ತನಿಖೆ ಆರಂಭವಾಗುವುದಕ್ಕೆ ಮುಂಚೆ ಪಲ್ವಿಂದರ್ ಎರಡು ಹೇಳಿಕೆಗಳನ್ನು ಕೊಟ್ಟಳು—ಒಂದು ಮೂವನ ಸಮಕ್ಷಮ. ಇನ್ನೊಂದು ಅಧಿಕಾರಿಗಳ ಸಮ್ಮುಖದಲ್ಲಿ—

ಅವಳ ಹೇಳಿಕೆಗಳನ್ನು ಹೀಗೆ ಸಂಗ್ರಹಿಸಬಹುದು.

'ಬೇಟೆಯಾಡುವುದೆಂದರೆ, ಫೋಟೋ ತೆಗೆಯುವುದೆಂದರೆ ಯಶಪಾಲನಿಗೆ ಎಲ್ಲಿಲ್ಲದ ಉತ್ಸಾಹ. ಬೇಟೆಯಾಡಿ ಬಂದ ಯಶಪಾಲ, ಬೇಟೆಯಲ್ಲಿ ಸಿಕ್ಕ ಮೃಗಗಳ ಚರ್ಮಗಳಿಗೆ ಬಣ್ಣ ಹಾಕುವುದರಲ್ಲಿ, ತೆಗೆದ ಫೋಟೋಗಳನ್ನು ತೊಳೆಯುವುದರಲ್ಲಿ ಕಾಲ ಕಳೆಯುತ್ತಿದ್ದ. ಡಿಸೆಂಬರ್ 1949ರಲ್ಲಿ ಬಲದೇವ ನಗರದ ಒಂದು ಅಂಗಡಿಯಿಂದ, ಫೋಟೋ ತೊಳೆಯುವ ಔಷಧಿಯನ್ನು ಮಹೇಂದ್ರನ ಕೂಡೆ ತರಲು ತಿಳಿಸಿದ್ದ. ಮಹೇಂದ್ರ ತಂದುಕೊಟ್ಟ ಔಷಧಿಯನ್ನು ನಾನು ಒಂದು ಅಲಮಾರಿನಲ್ಲಿಟ್ಟೆ. ಆದಾದ ಕೆಲವು ದಿನಗಳ ನಂತರ ಯಶಪಾಲ ಬೇಟೆಗೆ ಹೊರಟು ಹೋದ. ಆತನಿಗೆ ಇದ್ದಕ್ಕಿದ್ದಂತೆ ಹೊಟ್ಟೆಯ ಬಾಧೆ ಜಾಸ್ತಿಯಾಗಿ, ಭೇದಿ ಸುರುವಾಯಿತು. ಅದಕ್ಕೆ ವೈದ್ಯರಿಂದ ಔಷಧಿ ತರಿಸಿಕೊಂಡೆ. ಈ ಔಷಧಿಯನ್ನು, ಫೋಟೋ ತೊಳೆಯಲು ತಂದಿಟ್ಟ ಔಷಧಿಯ ಪಕ್ಕದಲ್ಲಿ ತಂದಿಟ್ಟೆ—ಯಶಪಾಲ ಅಲಮಾರಿನ ಬಾಗಿಲು ತೆರೆದು, ಔಷಧಿಯ ಬದಲು, ಫೋಟೋ ತೊಳೆಯುವ ದ್ರಾವಕವನ್ನು ಸೇವಿಸಿದ. ಕುಡಿದ ಸ್ವಲ್ಪದರಲ್ಲಿ ಆತ ಕುಸಿ ಕೂತ. ನನ್ನ ಮಗ 'ಅಮ್ಮಾ! ಅಪ್ಪ ಬಿದ್ದು ಬಿಟ್ಟರು' ಎಂದು ಕೂಗಿಕೊಂಡನು. ನಾನು ಅಲ್ಲಿಗೆ ಧಾವಿಸಿದೆ. ಯಶಪಾಲ ನರಳುತ್ತಿದ್ದ. ಸಹಾಯಕ್ಕೆ ಕರೆಯುವ ಮೊದಲು ಆತ ತೀರಿಕೊಂಡ. ನಾನು ಅದನ್ನು ಮಹೇಂದ್ರನಿಗೆ ತಿಳಿಸಿದೆ—ಮಾವನಿಗೆ ತಿಳಿಸಲು ನನಗೆ ಭಯವಾಯಿತು. ಅವರಿಗೂ—ನಮಗೂ ಸರಿಯಿರಲಿಲ್ಲ. ಹೆದರಿದ್ದ ನಾನು ಯಶಪಾಲನ ಶವವನ್ನು ಮಹೇಂದ್ರನ ಸಹಾಯದಿಂದ ಒಂದು ಪೆಟ್ಟಿಗೆಯಲ್ಲಿ ಬಚ್ಚಿಟ್ಟೆ. ಆ ಪೆಟ್ಟಿಗೆ ನಮ್ಮ ಮನೆಯಲ್ಲಿ ನಾಲ್ಕೈದು ದಿನವಿತ್ತು. ಅನಂತರ ನನ್ನ ಸೂಚನೆಯಂತೆ ಮಹೇಂದ್ರ ಅದನ್ನು ಬಲದೇವ ನಗರಕ್ಕೆ ಸಾಗಿಸಿದ. ಸಾಗಿಸದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕಿದೆ. ನಾಲ್ಕೈದು ದಿನ ಶವವನ್ನಿಟ್ಟ ಪೆಟ್ಟಿಗೆ ಬಲದೇವನಗರದ ಒಂದು ಗೋದಾಮಿನಲ್ಲಿತ್ತು. ಒಂದು ರಾತ್ರಿ ನಾನೂ ಮಹೇಂದ್ರನೂ, ಅದನ್ನು ಅಲ್ಲಿಂದ ಜೀಪಿನಲ್ಲಿ ಒಯ್ದು, ಭಾವಿಗೆ ತಳ್ಳಿದೆವು."

ಪಲ್ವಿಂದರ್ ತನ್ನ ಮಾವನ ಮುಂದೆ ನುಡಿದ ತಪ್ಪೊಪ್ಪಿಗೆಯ ಹೇಳಿಕೆಯನ್ನು ಕೋರ್ಟು, ಕಾನೂನಿನ ದೃಷ್ಟಿಯಿಂದ ಗಮನಕ್ಕೆ ತೆಗೆದುಕೊಳ್ಳುವಂತಿರಲಿಲ್ಲ.

ಆಗಾಗ್ಗೆ ಮನೆಗೆ ಬಂದು ಹೋಗುತ್ತಿದ್ದ ಮಹೇಂದ್ರ—ಪಲ್ವಿಂದರ್‌ರೊಳಗೆ ಅನೈತಿಕ ಸಂಬಂಧ ಬೆಳೆಯಿತು. ಗಾಢವಾಗಿ ಅವರೊಳಗೆ ಬೆಳೆದುನಿಂತ ಸಂಬಂಧಕ್ಕೆ ಯಶಪಾಲ ಅಡ್ಡಿಯಾಗಿದ್ದ. ಅವನನ್ನು ತೆಗೆಯಲು ಹಂಚಿಕೆ ಹಾಕಿದರು. 6-2-50 ರಂದು ಮಧ್ಯಾಹ್ನ ಅವರಿಬ್ಬರೂ ಸೇರಿ ಪೊಟೇಶಿಯಂ ಸೈನೇಡ್ ಎನ್ನುವ ವಿಷ ಕೊಟ್ಟು ಕೊಂದರು. 16-'-50ರ ತನಕ ಶವವನ್ನು ಮನೆಯಲ್ಲಿ ಬಚ್ಚಿಟ್ಟರು. ಪಲ್ವಿಂದರ್ ಮನೆಯಲ್ಲಿಲ್ಲದ ಸಮಯದಲ್ಲಿ ಮಹೇಂದ್ರ ಶವವನ್ನು ಜೀಪಿನಲ್ಲಿ ಬಲದೇವ ನಗರಕ್ಕೆ ಸಾಗಿಸಿದ. ಅಲ್ಲೊಂದು ಉಗ್ರಾಣದಲ್ಲಿ ಬಚ್ಚಿಟ್ಟ. 20-2-5,ರಂದು ಉಗ್ರಾಣದಲ್ಲಿ ಅಡಗಿಸಿಟ್ಟ ಪೆಟ್ಟಿಗೆಯನ್ನು ಇಬ್ಬರೂ ಜೀಪಿನಲ್ಲಿ ರಾಜಾಪುರ ರಸ್ತೆಯ ಅಂಚಿನಲ್ಲಿದ್ದ ಹಾಳುಭಾವಿಯ ಹತ್ತಿರಕ್ಕೆ ಒಯ್ದು, ಬಾವಿಯಲ್ಲಿ ಕೆಡವಿಬಂದರು. ಇವು ತನಿಖೆಯ ಕಾಲದಲ್ಲಿ ಪೋಲಿಸರು ಸಂಗ್ರಹಿಸಿದ ವಿಷಯಗಳು.

ವಿಚಾರಣೆಯ ಕಾಲದಲ್ಲಿ ಪಲ್ವಿಂದರ್ ತಾನು ಕೊಟ್ಟ ಮೊದಲ ಹೇಳಿಕೆಯನ್ನು ಪೂರ್ತಿಯಾಗಿ ಅಲ್ಲಗಳೆದಳು.

ಶವ ಪರೀಕ್ಷೆ ನಡೆಸಿದ ಡಾಕ್ಟರರಿಗೆ ಪೊಟೇಶಿಯಂ ಪ್ರಯೋಗಿಸಿದ ಕುರುಹುಗಳು ಯಶಪಾಲನ ದೇಹದಲ್ಲಿ ಕಾಣಿಸಲಿಲ್ಲ. ತುಟಿ—ಬಾಯಿಗಳು ಕರಗಿರಲಿಲ್ಲ, ಕರುಳು ಮೃದುವಾಗಿ ಹುಣ್ಣುಗಳು ಮೂಡಿರಲಿಲ್ಲ. ಪೊಟೇಶಿಯಂ ಸೈನೈಡ್‌ನಿಂದ ಯಶಪಾಲ ಸತ್ತಿದ್ದರೆ ಈ ಬಾಹ್ಯ ಲಕ್ಷಣಗಳು ಇರಬೇಕಾಗಿತ್ತು.

ಆದರೂ ಸೆಷನ್ಸ್ ಜಡ್ಜಿಗಳು ಪಲ್ವಿಂದರಳನ್ನು ತಪ್ಪಿತಸ್ಥಳೆಂದು ಪರಿಗಣಿಸಿ ಅವಳಿಗೆ ಜೀವಾವಧಿ ಶಿಕ್ಷೆ ವಿಧಿಸಿದರು. ಈ ತೀರ್ಪಿನ ವಿರುದ್ಧ ಆಕೆ ಹೈಕೋರ್ಟಿಗೆ ಅಪೀಲು ಮಾಡಿಕೊಂಡಳು. ಆಕೆಯ ಮೇಲೆ ಬಂದ ಕೊಲೆಯ ಆಪಾದನೆ ಸ್ಥಿರ ಪಟ್ಟಿಲ್ಲವೆಂದು, ಆ ಆರೋಪದಿಂದ ಅವಳನ್ನು ಹೈಕೋರ್ಟು ವಿಮುಕ್ತಿಗೊಳಿಸಿತು. ಆದರೂ ದುಷ್ಕೃತ್ಯವನ್ನು ಬಚ್ಚಿಡಲು ಪ್ರಯತ್ನಿಸಿದ ತಪ್ಪಿಗೆ ಏಳು ವರ್ಷ ಕಠಿಣ ಶಿಕ್ಷೆ ವಿಧಿಸಿತು.

ಯಶಪಾಲನ ಸಾವು ನಿಗೂಢ ಸಮಸ್ಯೆಯಾಗಿ ಉಳಿಯಿತು.

ವಿಷ ಉಣಿಸಿ ಕೊಂದುದಕ್ಕೆ ನೇರ ಸಾಕ್ಷಿ ಇರಲಿಲ್ಲ. ವಿಷ ಕೊಟ್ಟುದನ್ನು ಕಂಡವರಿರಲಿಲ್ಲ. ಶವದ ಸಾಗಾಣಿಕೆಗೆ ಸಂಬಂಧಿಸಿದ ಸಾಕ್ಷಿ ಸಾವಿನ ಕಾರಣವನ್ನು ಬಯಲಿಗೆ ತರುವಂತಿರಲಿಲ್ಲ. ಮೊಕದ್ದಮೆಯಲ್ಲಿ ರುಜುವಾತಾಗದೆ ಉಳಿದ ಅನೇಕ ಸಂಗತಿಗಳಿದ್ದುವು.

ಯಶಪಾಲನನ್ನು ಅನ್ಯರು ಕೊಂದರೇ? ಅಥವಾ ಆತ ಆತ್ಮಹತ್ಯೆ ಮಾಡಿಕೊಂಡನೇ? ಕೊಂದುದು ನಿಜವಾದರೆ, ಅವರೀರ್ವರಲ್ಲಿ ಯಾರು ಈ ಕೃತ್ಯವೆಸಗಿದವರು? ದೈನಿಕದಲ್ಲಿ ಬಂದ ಪ್ರಕಟಣೆ ಪಲ್ವಿಂದರಳ ಒಳಗಿನ ತುಮುಲ ಆಂದೋಲನವನ್ನು, ಕಾತುರತೆಯನ್ನು ಚಿತ್ರಿಸಿದೆ. ಹಾಗಿದ್ದರೆ ಅದರಲ್ಲಿ ಬಂದ ವರ್ಣನೆ ಕೃತಕವೇ? ಭರೇಲಿಯ ಮುಖ್ಯಸ್ಥರ ಮನೆಗೆ ಸೇರಿದ ಅವಳು, ತನ್ನ ಸ್ಥಾನ—ಮಾನ, ಅಧಿಕಾರಗಳನ್ನು ಅಷ್ಟು ಸುಲಭವಾಗಿ ಕಳೆದುಕೊಳ್ಳಲು ಉದ್ಯುಕ್ತಳಾಗುವಳೇ? ಯಶಪಾಲನಿಗೆ ಕೊಟ್ಟಿದ್ದು ಪೊಟೇಶಿಯಮ್ ಸೈನೈಡ್ ಎನ್ನುವ ವಿಷ ಡಾಕ್ಟರರಿಗೆ ಶವ ಪರೀಕ್ಷೆಯ ಕಾಲದಲ್ಲಿ ಅದರ ಕುರುಹುಗಳೂ ಸಿಗಲಿಲ್ಲ. ಯಶಪಾಲನನ್ನು ಕೊಂದಿದ್ದು ಭರೇಲಿಯಲ್ಲಿಯೇ? ಬಲದೇವ ನಗರದಲ್ಲಿಯೇ? ಬಂದ ಸಂದರ್ಭಗಳು ಆಕೆಯನ್ನು ನಿ[illegible] ಎಂದು ಹೇಳುವಂತಿರಲಿಲ್ಲ

ಪತಿ ಕುಸಿದು ಬಿದ್ದುದನ್ನು ಕಂಡ ಆವಳು ವೈದ್ಯರನ್ನೇಕೆ ಬರಮಾಡಿಕೊಳ್ಳಲಿಲ್ಲ?

ಆಕೆಯ ಹೇಳಿಕೆಯ ಆಧಾರದ ಮೇಲೆ ಕಡಿದಿದ್ದ ಕೊಂಡಿಗಳನ್ನು ಕೂಡಿಸಿ ಒಂದು ಇತ್ಯರ್ಥಕ್ಕೆ ಬರ ಬಹುದಿತ್ತು. ಆದರೆ ಹಾಗೆ ಮಾಡಲು ಸಾಕ್ಷ್ಯಕ್ಕೆ ಸಂಬಂಧಿಸಿದ ಶಾಸನ ಅಡ್ಡಿಯಾಯಿತು. ಅದಲ್ಲದೆ ಆಕೆ ತಾ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
131 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಭಾಷೆ ಬಲ್ಲವರು, ಆದರೆ, ಅಭಿವ್ಯಕ್ತಿ ಸ್ವಾತಂತ್ರ್ಯ ವಂಚಿತರು

ಕನ್ನಡ ನಾಡಿನ ಹೆಚ್ಚಿನ ವಿಶ್ವವಿದ್ಯಾಲಯವೆಂದರೆ, ಮೈಸೂರು ವಿಶ್ವವಿದ್ಯಾಲಯ. ಇದು ಹಳೆಯದೂ ಹೌದು, ಭವ್ಯವೂ ಸಾಹಸಿಯೂ ಹೌದು

ಕನ್ನಡದ ಬಗ್ಗೆ ಮಿತಿ ಮೀರಿದ ಕಾಳಜಿ ವಹಿಸುತ್ತಿರುವ ಕರ್ನಾಟಕದ ವಿಶ್ವ ವಿದ್ಯಾಲಯ ಇದೊಂದೇ.

೧೯೭೮ನೆ ಸಾಲಿನ ಪಿಯುಸಿ ಯೂನೇ ಪದವಿಪೂರ್ವ ಪರೀಕ್ಷೆಯು ನಡೆಯಿತು; ಅದರ ಪರಿಣಾಮವೂ ಪ್ರಕಟವಾಯ್ತು. ಒಂದೆರಡು ದಿನಗಳಲ್ಲಿಯೇ ಫಲಿತಾಂಶಗಳ ಸಮೀಕ್ಷೆಯೊಂದು ಸಮಾಚಾರ ಪತ್ರಿಕೆಗಳಲ್ಲಿ ಆಚ್ಚಾಯ್ತು ಈ ಸಮೀಕ್ಷೆಯಿಂದ ನಾವು ತುಂಬ ಕಲಿಯ ತಕ್ಕದ್ದಿದೆ; ನಮ್ಮ ಹಲವಾರು ತಪ್ಪು ತಿಳುವಳಿಕೆಗಳನ್ನು ತಿದ್ದಿಕೊಳ್ಳಲಿಕ್ಕಿದೆ

ಫಲಿತಾಂಶ ಸಮೀಕ್ಷೆಯಂತೆ ಪ್ರತಿವಿಷಯಗಳಲ್ಲಿ ಉತ್ತೀರ್ಣತೆಯ ಮತ್ತು ವಿದ್ಯಾರ್ಥಿಯ ಸರಾಸರಿ ಪ್ರಾಪ್ತಾಂಕ ಪ್ರತಿಶತವೀರೀತಿಯಿದೆ.

ಕನ್ನಡ	–೬೩.೯ – ೩೩.೮
ಇಂಗ್ಲಿಷ್	–೪೧.೩ – ೨೮.೧
ಸಂಸ್ಕೃತ	–೬೫.೬ – ೩೪.೩
ಹಿಂದಿ	–೮೩.೫ – ೪೨.೬
ಉರ್ದು	–೭೭.೬ – ೩೬.೮
ತೆಲುಗು	–೯೦.೯ – ೪೩.೬
ತಮಿಳು	–೮೯.೬ – ೪೩.೯

ಈ ಭಾಷೆಗಳಲ್ಲಿ, ಉತ್ತೀರ್ಣತೆಯ ಪ್ರತಿಶತದಲ್ಲಿ ತೆಲುಗು ಪ್ರಥಮ ಸ್ಥಾನ ಗಳಿಸಿದರೆ, ಅಂಕಗಳ ಪ್ರತಿ ಶತದಲ್ಲಿ ತಮಿಳು ಮುಂದಿದೆ, 'ನಮಗೆ ಬೇಡ'ವೆಂದು ಹೇಳುವ ಉತ್ತರದ ಭಾಷೆ ಹಿಂದಿಯಲ್ಲಿನ ಉತ್ತೀರ್ಣತೆ ಮತ್ತು ಸರಾಸರಿ ಪ್ರಾಪ್ತಾಂಕಗಳು ಮೂರನೆಯ ಸ್ಥಾನ ಪಡೆದಿದೆ.

ನಮ್ಮ ಕನ್ನಡದ ಅವಸ್ಥೆಯೇನು? ೬ನೆಯ ಸ್ಥಾನ ಅಂದರೆ ಕೊನೆಗಿಂತ ಮೊದಲನೆಯ ಸ್ಥಾನ ಕೊನೆಯದು ಇಂಗ್ಲಿಷಿಗೆ,ವಿದೇಶೀ ಭಾಷೆಗೆ ಸಲ್ಲುತ್ತದೆ.

ಸರಾಸರಿ ಪ್ರಾಪ್ತಾಂಕದಲ್ಲಿಯೂ ಕನ್ನಡದ ಸ್ಥಿತಿಗತಿ ಚೆನ್ನಾಗಿಲ್ಲ. ಅದರಲ್ಲಿಯೂ ಅದು ಆರನೆಯದ್ದೇ, ಇಂಗ್ಲಿಷ್ ಏಳನೆಯದ್ದೇ.

ಉಳಿದ ಕೆಲವು ವಿಷಯಗಳ ಉತ್ತೀರ್ಣತೆ–ಸರಾಸರಿ ಪ್ರಾಪ್ತಾಂಕಗಳನ್ನು ಗಮನಿಸಬಹುದು

ಭೌತಶಾಸ್ತ್ರ	–೩೮.೧ – ೨೫.೪
ರಸಾಯನಶಾಸ್ತ್ರ	–೪೭.೧ – ೨೯.೧
ಗಣಿತ ಶಾಸ್ತ್ರ	–೪೧.೫ – ೨೬.೫
ಜೀವ ಶಾಸ್ತ್ರ	–೬೦.೮ – ೨೫.೪
ಸಸ್ಯ ಶಾಸ್ತ್ರ	–೪೦.೦ – ೨೪.೩
ಪ್ರಾಣಿ ಶಾಸ್ತ್ರ	–೪೦.೧ – ೨೫.೦
ಭೂಗರ್ಭ ಶಾಸ್ತ್ರ	–೭೧.೬ – ೩೬.೮
ಅರೇಬಿಕ್	–೧೦೦.೦ – ೫೭.೮
ಫ್ರೆಂಚ್	–೮೧.೩ – ೪೭.೩
ಮಲೆಯಾಳಿ	–೯೭.೨ – ೫೬.೦
ಇತಿಹಾಸ	–೮೦.೨ – ೩೭.೬
ಅರ್ಥ ಶಾಸ್ತ್ರ	–೬೫.೧ – ೩೧.೯
ತರ್ಕ ಶಾಸ್ತ್ರ	–೬೯.೮ – ೪೫.೮
ಭೂಗೋಳ ಶಾಸ್ತ್ರ	.೬೯.೩ – ೩೩.೮
ರಾಜನೀತಿ ಶಾಸ್ತ್ರ	–೮೪.೧ – ೪೦ ೭
ವಾಣಿಜ್ಯ ಶಾಸ್ತ್ರ	–೬೮ ೩ – ೩೫ ೦
ಸಂಗೀತ ಶಾಸ್ತ್ರ	–೯೭ ೪ – ೩೨.೭
ಗೃಹ ವಿಜ್ಞಾನ	–೬೭.೮ – ೩೪ ೮
ಸಮಾಜ ಶಾಸ್ತ್ರ	–೭೦.೪ – ೩೫.೨
ಮನಶ್ಶಾಸ್ತ್ರ	–೬೫ ೦ – ೩೨.೬

ಇಲ್ಲಿಯೂ ಅರೇಬಿಕ್, ಫ್ರೆಂಚ್ ಮತ್ತು ಮಲೆಯಾಳಿ ಭಾಷೆಗಳು ಕನ್ನಡವನ್ನು ಹಿಂದೆ ಹಾಕಿರುವುದು ಸ್ಪಷ್ಟ.

ಭೌತಾದಿ ಆರು ಶಾಸ್ತ್ರಗಳನ್ನು ಬಿಟ್ಟರೆ, ಉಳಿದ ವೈಜ್ಞಾನಿಕ ಹಾಗೂ ಕಲಾ ವಿಷಯಗಳಲ್ಲಿ ಅಭ್ಯರ್ಥಿಗಳು ಕನ್ನಡಕ್ಕಿಂತ ಹೆಚ್ಚಿನ ಸರಾಸರಿ ಪ್ರಾಪ್ತಾಂಕ ಗಳಿಸಿರುವುದು ವೇದ್ಯವಾಗುತ್ತದೆ.

ಕನ್ನಡನಾಡಿನಲ್ಲಿ ಕನ್ನಡವನ್ನೇ ಅಧ್ಯಯನ ಮಾಡುವವರ ಸಂಖ್ಯೆ ಹೆಚ್ಚು, ಇವರದ್ದೇ ಸಂಪೂರ್ಣ, ತುಂಬಿ ತುಳುಕಾಡುವ ಬಹುಮತ.

ಇವರು ಆಡುವುದು ಕನ್ನಡ, ಬಳಸುವುದು ಕನ್ನಡ, ಕಲಿಯುವುದೇನನ್ನು?

ಅದು ಅವರಿಗೇ ಗೊತ್ತು.

ಮಾತೃಭಾಷೆಯಲ್ಲಿ ತನ್ನ ಭಾವನೆಗಳನ್ನು ಸರಳವಾಗಿ ಸುಲಭವಾಗಿ ನಿಸ್ಸಂಕೋಚವಾಗಿ ಅಭಿವ್ಯಕ್ತಗೊಳಿಸಲಾರದೆ ಹೋದರೆ, ಅಂಥಹನಿಂದ ಏನಾದೀತು?

ಪಿಯುಸಿಗೆ ಮೊದಲಿನ ಸಾರ್ವತ್ರಿಕ ಪರೀಕ್ಷೆ ಎಸೆಸ್ಸೆಲ್ಸಿ. ೧೯೭೮ರ ಎಪ್ರಿಲ್–ಮೇಯಲ್ಲಿ ನಡೆದ ಈ ಪರೀಕ್ಷೆಗಳ ಫಲಿತಾಂಶಗಳನ್ನೂ ನಾವು ಪರಿಶೀಲಿಸಬಹುದು.

ಈ ಫಲಿತಾಂಶ ವಿಷಯವಾರಾಗಿ ಪ್ರಕಟವಾಗಿಲ್ಲ 'ಮೂರು ಭಾಷೆಗಳು' ಮತ್ತು 'ಮೂರು ವಿಷಯ'ಗಳಲ್ಲಿ ಬಹಿರಂಗವಾಗಿದೆ. ಇದರಂತೆ ಉತ್ತೀರ್ಣರು

ಮೊದಲ ಭಾಷೆ	— ೮೦ ೦೪
ಇಂಗ್ಲಿಷ್	— ೫೦ [illegible]೪
ಮೂರನೆ ಭಾಷೆ	— ೬೮.೫೬
ವಿಜ್ಞಾನ	— ೪೯.೧೦
ಗಣಿತ	— ೪೦.೫೭
ಸಮಾಜಜ್ಞಾನ	— ೫೨ ೧೭

ಇದು ಕನ್ನಡ ನಾಡು. ಇಲ್ಲಿಯೂ ಮೊದಲನೆಯ ಭಾಷೆಯೆಂದು ಕನ್ನಡ ಓದುವವರ ಸಂಖ್ಯೆಯೇ ಹೆಚ್ಚು. ಆದುದರಿಂದಲೇ ಕನ್ನಡದಲ್ಲಿಯೂ ಪರಿಣಾಮಕಾರಿ ಫಲಿತಾಂಶ ಬಂದಿದೆಯೆಂದು ತಿಳಿಯಬಹುದು. ಆವರು ಪಡೆದ ಸರಾಸರಿ ಪ್ರಾಪ್ತಾಂಕ ಸದ್ಯ ಅಲಭ್ಯವಾದರೂ ಅದೂ ಸುಮಾರು ೪೦ನ್ನಾದರೂ ತಲಪಬಹುದು.

ಇದು ಸಾಕೆ?

ವಿದ್ಯಾರ್ಥಿಗಳು ಸಿನೆಮಾ—ನಾಟಕಾದಿ ಮನರಂಜನೆಗೆ ವಿನಿಯೋಗಿಸುವಷ್ಟು ಸಮಯವನ್ನೂ ಕನ್ನಡದ ಅಧ್ಯಯನಕ್ಕೆ ಬಳಸುವುದಿಲ್ಲವೆಂಬುದು ಕಠೋರವಾದರೂ ಸತ್ಯವೇ.

ಕನ್ನಡದಲ್ಲೇನಿದೆ? ಅದು ನಮ್ಮ ದಿನ ಬಳಕೆಯ ಮಾತು. ಹೇಗೂ ಪಾಸಾಗಿ ಬಿಡಬಹುದೆಂಬ ಅವಜ್ಞೆ ವಿದ್ಯಾರ್ಥಿಗಳಲ್ಲಿದೆಯೆಂಬುದೂ ಅಷ್ಟೇ ಕಟು ಸತ್ಯ.

ಪಿಯುಸಿಯಲ್ಲಿ ಸೇ. ೩೩, ಪದವಿಯಲ್ಲಿ ಸೇ. ೩೦ ಪಡೆದ ಕನ್ನಡದ ಪುತ್ರರಿಂದ ಕನ್ನಡ ನಾಡ ನುಡಿಯ ಉದ್ಧಾರವಾಗಬೇಕು. ಯುವಕರಿಂದ ನಾವು ನಿರೀಕ್ಷಿಸುವುದೇ ಬಹಳಷ್ಟು.

ಕನ್ನಡದ ಪರಿಸ್ಥಿತಿ ಅದೆಷ್ಟು ಶೋಚನೀಯ! ಈ ದುರವಸ್ಥೆಗೆ ಹಿಂದಿಯನ್ನೋ ಇಂಗ್ಲಿಷನ್ನೋ ಅಥವಾ ಮತ್ತಾವುದನ್ನೋ ಬೊಟ್ಟುಮಾಡಿ ತೋರಿಸುವುದು ಫ್ಯಾಶನ್ ಆಗಿದೆ.

ಆದರೆ, ಇಷ್ಟರಿಂದ ಕನ್ನಡದ ಸ್ಥಿತಿಗತಿ ಉನ್ನತವಾಗುತ್ತದೆಯೆ?

ಕನ್ನಡದ ಬಗೆಗೆ ವಿಶ್ವವಿದ್ಯಾಲಯದ ಅಧಿಕಾರಿಗಳಿಗಿರುವಷ್ಟು ಕಾಳಜಿ ಸರಕಾರಿ ಅಧಿಕಾರಿಗಳಿಗಿದೆಯೆ? ಕನ್ನಡಿಗರಿಗಿದೆಯೆ?

ಕನ್ನಡವನ್ನು ಅಧ್ಯಯನ ಮಾಡದೇನೇ ಪಿಯುಸಿ ಉತ್ತೀರ್ಣರಾಗುವ ಅವಕಾಶವನ್ನು ನಮ್ಮ ಕನ್ನಡನಾಡಿನ ಹೆಸರಾಂತ

(ಐದನೇ ಪುಟ ನೋಡಿರಿ)

ಗೇಹರಾಜ್ಯದಲ್ಲಿ

ಉತ್ತರದ ಗಂಗೆ–ದಕ್ಷಿಣದ ಕಾವೇರಿ

'ಬ್ರಹ್ಮಾನಂದಂ ಆಂಧ್ರ ಮಹಾಪ್ರಭುಂ...'

'ಇದೇನಿದು? ಹುಚ್ಚು ಹಿಡಿದಿದೆಯೋ ಏನೋ. ಕಾಲೇಜು ಹುಡುಗ್ರು ಸಿನಿಮಾದ ಗುಣ ಗಾಣಿಸುವಂತೆ?'

'ಇದು ಸಿನಿಮಾ ಪದ ಅಲ್ವೆ ..'

'ಮತ್ಯಾವ ಮಹಾಪ್ರಭು ಸ್ತುತಿ?'

'ಅದೇ ಆಂಧ್ರ ಪ್ರದೇಶದ ಮುಖ್ಯ ಮಂತ್ರಿ....'

'ಬ್ರಹ್ಮಾನಂದ ರೆಡ್ಡಿ ...'

'ಹ್ಞೂಂ. ಅವ್ರನ್ನೇ ಪ್ರಶಂಸಿಸುತ್ತಿರುವುದು.'

'ಯಾಕಪ್ಪಾ, ಅಂಥದ್ದೇನು ಮಾಡಿದರು? ತಮ್ಮ ಸಾರಿಗೆ–ಸಂಬಳಗಳನ್ನು ಬಂಗ್ಲಾನಿಧಿಗೆ ಅರ್ಪಿಸಿದರೆ?'

'ಅಂಥ ದಾನವೇನೂ ಮಾಡಲಿಲ್ಲ ..'

"ಮತ್ತೆ ರಾಜಿನಾಮೆ ನೀಡಿ ಹೊಸ ರಕ್ತಕ್ಕೊಂದು ಅವಕಾಶ ಮಾಡಿಕೊಟ್ಟರೆ?"

'ಥೆ. ಥೆ .. ಅಷ್ಟು ತ್ಯಾಗ ಮಾಡೋದಕ್ಕೆ ಮುಂದೆ ಬರ್ಲಿಲ್ಲ....'

'ಮತ್ತೆಂಥದು? ಯಾರ ಮೇಲಾದರೂ ಯುದ್ಧ ಘೋಷಣೆ ಮಾಡಿದರೇನು?'

'ಅಯ್ಯೋ, ಏನೇನ್ ಹೇಳ್ತೀಯ? ಯುದ್ಧ ಮಾಡಬೇಕಾದವ್ರು ಕೇಂದ್ರದವ್ರು ತಾನೆ?'

'ಇನ್ಯಾವುದರಲ್ಲಿ ವೀರ್ಯ ತೋರ್ಸಿದರೂಂತ ಅವ್ರ ಮುಖಸ್ತುತಿ ಮಾಡೋಕೆ ಹೊರಟ್ರಿ?'

'ಅಲ್ಲ, ಸರಕಾರಿ ಬೊಕ್ಕಸದಿಂದ ಅವ್ರು, ನೌಕರರಿಗೆ ತಾತ್ಕಾಲಿಕ ಪರಿಹಾರ ಘೋಷಿಸಿದ್ರು.'

'ಓ, ಮೊನ್ನೆ ಮೊನ್ನೆ ಎರಡುತಿಂಗಳ ಕಾಲ ನೌಕರರು ಮುಷ್ಕರ ಹೂಡಿದರೂ ಅವ್ರು ಜಗ್ಗಲಿಲ್ಲ ಮೊದಲು ಕೆಲಸಕ್ಕೆ ಹಾಜರಾಗಿ, ಮುಂದೆ ಎಲ್ಲಾ ಎಂದು ಗುಡುಗಿದರು ಅಷ್ಟು ಬಿಗಿ ಮುಷ್ಟಿಯವ್ರು ಈಗ ಭತ್ತೆ ಹೆಚ್ಚಿಸಿದರೆಂದು ಹೊಗಳುತ್ತೀರಾ?"

"ಬೇಡವೇ ಮತ್ತೆ! ಮನೆ ಬಾಡಿಗೆ ಭತ್ತೆಯನ್ನೂ ಹೆಚ್ಚಿಸಿದ್ದಾರೆ. ಈಗಿನ ಕೊಡುಗೆಯಿಂದ ೪೫ ಲಕ್ಷ ನೌಕರರಿಗೆ ಪ್ರಯೋಜನ ಪ್ರತಿಯೊಬ್ಬನಿಗೂ ಕಡಿಮೆಯೆಂದರೆ ೧೫ ರೂಪಾಯಿಗಳ ಲಾಭ...."

'ಹ್ಞೂಂ ಆದರೆ, ಇದೇ ಘೋಷಣೆಯನ್ನು ಸಂಪಿಗೆ ಮೊದಲೇ ಮಾಡುತ್ತಿದ್ದರೆ?'

'ನೌಕರರಿಗೆ ಮುಖ್ಯಮಂತ್ರಿ ಹೆದರುವುದೆಂದರೇನು?'

'ಹೆದರುವುದು ಬೇಡಾನ್ರಿ. ಅವ್ರ ಮೇಲೆ ಮರುಕವಾದ್ರೂ ತೋರಿಸ ಬಹುದಿತ್ತು.'

"ನೋಡಮ್ಮ. ಇಲ್ಲೇ ನೀನು ತಪ್ಪಿರೋದು ..."

'ಏನು?'

'ತಾಯಿಯ ಮರುಕ ಮೊದಲೇ ಪ್ರಕಟವಾಗುತ್ತೆ, ತಂದೆಯ ಮರುಕ ಕೊನೆಯಲ್ಲಿ ..."

"ಅಂದ್ರೆ ...?"

"ಹೊಡೆಯೋಕೆ ಮೊದಲೇ ಅಮ್ಮ ಮಗುವನ್ನ ಎತ್ತಿಕೊಂಡು ಹೋಗ್ತಾಳೆ. ಏಟುತಿಂದ ಮಗುವನ್ನ ಅಪ್ಪ ಎತ್ತುತ್ತಾನೆ ..."

'ಅಂದ್ರೆ ಪಿತಾ–ಪುತ್ರ ಸಂಬಂಧವೇ ಒಳ್ಳೇದೂನ್ನೋದು ನೀವು .'

'ಇಲ್ದಿದ್ರೆ ಅವ್ರನ್ನು ಬಿಗಿಹಿಡಿಯೋದು ಹೇಗೇ ಹೇಳು. ಉಪಾಧ್ಯಾಯರಿಗೆ ಯಾವ ಮಗುವಿನ ಮೇಲೂ ದ್ವೇಷವಿರೋಲ್ಲ ಆದ್ರೂ ಅವ್ರು ತಪ್ಪು ಮಾಡಿದವರನ್ನ ದಂಡಿಸದೆ ಹೋದರೆ, ಮಕ್ಳು ಸರಿಯಾಗಿ ನಡೆಯೋದು ಯಾವಾಗ?"

'ಅಂದ್ರೆ ಗುರು–ಶಿಷ್ಯ ಸಂಬಂಧಾನೂ ಸಮರ್ಪಕಾಂತಾಯ್ತು....'

'ಅದ್ಯಾವ ಸಂಬಂಧವೇ ಇರಲಿ, ಆಂಧ್ರ ಪ್ರಭು ತನ್ನ ನಂಬಿದವರ ಮೇಲೆ ಮರುಕ ತೋರಿದನಲ್ಲಾ....'

'ತಿರುಪತಿ ವೆಂಕಟರಮಣನ ಹಾಗೆ ಕಾಸು ಬಿಡೋಕೆ ಹಿಂದೇಟು ಹಾಕಲಿಲ್ಲ....'

'ಯಾರದ್ದೇ ಕಾಸು ಬಿಡೋದು?'

'ಜನರದ್ದು....'

'ಮತ್ತೆಂಥದು?'

'ಅಲ್ಲ, ನೋಡಿ, ಕೇಂದ್ರದ ಯೋಜನಾ ಸಚಿವ ...'

'ಹ್ಞೂ ಸಿಸು....'

'ಅವರಿಗೊಂದು ಜಾಗ ಬೇಕಂತೆ ..'

'ಎಷ್ಟು ಲಕ್ಷದ್ದು?'

'ಹಾಗಲ್ಲಾರಿ, ಅವರು ಸಂಸತ್ತಿಗೆ ಆಯ್ಕೆಯಾಗಿ ಬರಬೇಕಲ್ಲ? ಅದಕ್ಕೊಂದು ಸ್ಥಾನ ಬೇಕು....'

'ಓ, ಹೌದೂಂತೇನೆ ಆದ್ರೂ ಅವಸರವಿಲ್ಲಾನ್ನ ಇನ್ನೂ ಮೂರು–ನಾಲ್ಕು ತಿಂಗಳುಗಳಿವೆ ಅಷ್ಟರೊಳಗೆ ಯಾರಾದರೂ ಸತ್ತರೂ ಸಾಯಬಹುದು...'

'ಛೆ, ಎಂಥ ಅಬದ್ಧ ಮಾತಾಡ್ತೀರೀಂತ. ಸಾಯೋದಂದ್ರೆ ಅಷ್ಟೂ ಸಲೀಸೆ?'

"ಸಾಯೋದು ಸಲಿಸೋ ಅಲ್ವೋ ಗೊತ್ತಿಲ್ಲ ಆದ್ರೆ ಸಾಯ್ಸೋದು ಮಾತ್ರ ಭಾರೀ ಸಲೀಸು, ವಿನೋದಪ್ರದವೆಂದು ವಿಯತನಾಮದಲ್ಲಿ ಜಾನ್ಸನ್–ನಿಕ್ಸನ್ನರೂ ಬಂಗ್ಲಾದೇಶದಲ್ಲಿ ಯಾಹ್ಯಾಖಾನರೂ ತೋರಿಸಿ ಕೊಡುತ್ತಿದ್ದಾರೆ...."

"ಅಷ್ಟೆಲ್ಲ ಬೇಡಾನ್ರಿ...."

'ಮತ್ತೆ?'

"ಸುಬ್ರಹ್ಮಣ್ಯಂ ಅಂದ್ರೆ ಚಿಲ್ರೆ ಅಲ್ಲ. ಅವರಿಗಾಗಿ ತನ್ನ ಎಂಪಿ ಶಿಪ್ಪಿಗೆ ರಾಜಿನಾಮೆ ಕೊಡಲು ಯಾವನೋ ಒಬ್ಬ ಗೌಂಡರ್ ಮುಂದೆ ಬಂದಿದ್ದಾನಂತೆ ..."

'ಹ್ಞೂಂ. ಆ ಗೌಂಡರ್‌ಗೆ ರಾಜ್ಯಸಭೆಯಲ್ಲಿ ಕುರ್ಚಿ ಇರಿಸಿದರಾಯ್ತು. ಅದುವರೆಗೆ ಬಂದಷ್ಟು ತಾತ್ಕಾಲಿಕ ಪರಿಹಾರ ನೀಡಿದರೆ ಸರಿಹೋಗುತ್ತೆ ...'

'ಅಲ್ರಿ, ಮುಖಕ್ಕೆ ಹೊಡೆಯದೆ ಮಾತಾಡೋದಕ್ಕೆ ನಿಮಗೆ ಗೊತ್ತೇ ಇಲ್ಲವೇನು?'

"ಅಲ್ವೆ, ಸತ್ಯ ಸಂಗತಿಯನ್ನ ಯಾಕೆ ಮುಚ್ಚಿಡ ಬೇಕು? ನಾಯಕರು–ಅನುನಾಯಕರು ಎಲ್ಲರೂ ಒಂದೇ–ಗೋಮುಖ ವ್ಯಾಘ್ರಗಳು. ಅದನ್ನು ಕಂಡು ಅನುಭವಿಸಿಯೇ ದಾಸರು ಹಾಡಿದ್ದು–ಸತ್ಯವಂತರಿಗಿದು ಕಾಲವಲ್ಲ ಅಂತ...."

"ನೀವಾದ್ರೂ ಒಬ್ರು ಸತ್ಯವಂತರಿದ್ದೀರಲ್ಲಾ..."

"ಹ್ಹ ಹ್ಹ....ಭಾರೀ ಒಳ್ಳೆದು...."

'ಯಾಕೆ ನಗು ಬರುತ್ತೆ?'

'ಅಲ್ವೆ, ನಾನೂ ಈ ಜಗತ್ತಿನಲ್ಲೇ ಇದ್ದೇನೆಂಬುದನ್ನೂ ನೀನು ಮರೆತು ಬಿಟ್ಟೆಯೇನು?'

'ಅಂದ್ರೆ?'

'ಹಂದಿಮರಿಯೊಟ್ಟಿಗೆ ಸೇರಿ ದನದ ಕರುವೂ ಅಮೇಧ್ಯ ಭಕ್ಷಣಕ್ಕೆ ತೊಡಗುವುದಂತೆ ..."

'ಹ್ಞೂಂ...ಅಂತೂ ನಿಮ್ಮದೊಂದು . ಮತ್ತೆ ಸಿಸು ಕಾವೇರಿ ನದೀ ನೀರಿನ ಬಗ್ಗೆ ಮಾತಾಡ ಹೊರಟಿದ್ದಾರೆ....'

'ಅವ್ರು ಮದ್ರಾಸದಲ್ಲಿ ಹಾಗೇ ಮಾತಾಡಬೇಕು ...'

"ಹಾಗೇ ಅಂದ್ರೆ?"

'ತಮಿಳು ನಾಡಿಗೆ ಅನ್ಯಾಯವಾಗೋಲ್ಲ. ಕರ್ನಾಟಕದಲ್ಲಿ ಜನಪ್ರಿಯ ಸರ್ಕಾರ ರಚನೆಯಾಗೋವರ್ಗೆ ನ್ಯಾಯಮಂಡಳಿ ನೇಮಕವಾಗೋಲ್ಲ ಮೈಸೂರಿನ ಯೋಜನೆಗಳು ೧೯೭೫ರೊಳಗೆ ಪೂರ್ಣವಾಗೋಲ್ಲ ಅವಕ್ಕೆ ಕಾನೂನು ಬದ್ಧ ಒಪ್ಪಿಗೆ ಕೇಂದ್ರ ನೀಡೋಲ್ಲ ...'

"ಅಂತೂ ಸಿಸುರವರು ತಮಿಳುನಾಡಿನ ಪಕ್ಷಪಾತಿಯಾಗಿದ್ದಾರೆ..."

'ಶೂ, ಹಾಗೆಲ್ಲ ಅನ್ನಬಾರದು.'

'ಯಾಕೆ?'

'ಸಿಸುರವರದ್ದು ಅ. ಭಾ. ವ್ಯಕ್ತಿತ್ವ ಅ

ಎಣ್ಣೆ ಬರುವಾಗ ಗಾಣ ಮುರಿಯುತ್ತದೆ

(ಒಂದನೇ ಪುಟದಿಂದ)

ಹೊಣೆಗಾರಿಕೆಯನ್ನು ಮತ್ತಾರ ತಲೆಯ ಮೇಲೋ ಹೊರಿಸಿ ತಾನು ನುಣುಚಿಕೊಂಡರು

ಉತ್ಪಾದನೆ ಹೆಚ್ಚಬೇಕು; ಪೂರೈಕೆ ಹೆಚ್ಚಬೇಕು ಅದುವರೆಗೆ ನೌಕರರ ಬೇಡಿಕೆ ಈಡೇರಿಸುವುದರಿಂದ ಏನೂ ಪ್ರಯೋಜನವಿಲ್ಲವೆಂದರು

- ನೌಕರರ ಬೇಡಿಕೆಗಳನ್ನು ಈಡೇರಿಸಬೇಕಾದ ಅಗತ್ಯವೇ ಇಲ್ಲವೆಂದು ಭರತ ವಾಕ್ಯ ಹಾಡಿಬಿಟ್ಟರು

ಬಂಗಾರದ ಹಬ್ಬವಾಚರಿಸಿದ ದಿನ ಬಂಗಾರ ಬಿಡಿ, ಚಾಕಲೇಟಾದರೂ ಹಂಚುವ ಬಗ್ಗೆ ರಾಜ್ಯಪಾಲರು ಭರವಸೆ ನೀಡಲಿಲ್ಲ

ಎನ್‌ಜಿಓಗಳೆಲ್ಲರೂ ಅಪ್ರಾಮಾಣಿಕರೆಂಬ ದೃಢ ನಿಲುವು ರಾಜ್ಯಪಾಲರು ತಳೆದಿದ್ದರೆಂದು ಹಿಂದೊಮ್ಮೆ ವರದಿಯೂ ಆಗಿತ್ತು.

ಹೊಟ್ಟೆಗಿಲ್ಲದೆ ನರಳಿನರಳಿ ಸಾಯಬೇಕಷ್ಟೇ ಹೊರತು, ಹೊಟ್ಟೆಗಿಲ್ಲವೆಂದು ಆತ್ಮಹತ್ಯೆ ಮಾಡಿಕೊಳ್ಳುವ ಸ್ವಾತಂತ್ರ್ಯ ನಮಗಿಲ್ಲ

ಮಕ್ಕಳು ಹೊಟ್ಟೆಗಿಲ್ಲದೆ ನರಳಾಡುವುದನ್ನು ಕಣ್ಣಾರೆ ಕಾಣುವುದು ಅವುಗಳ ಹೆತ್ತವರ ಮೂಲಭೂತ ಪ್ರಾರಬ್ಧ ಕರ್ಮ. ಆದರೆ, ಅವುಗಳ ಕುತ್ತಿಗೆ ಹಿಸುಕುವ ಅಧಿಕಾರ ಅಕೆ ಪಡೆದು ಬಂದಿಲ್ಲ

ಬಡವರ ಉದ್ಧಾರದ ವ್ರತತೊಟ್ಟ ಅಧಿಕಾರಿಗಳ ವ್ರತಾಚರಣೆಯಿನ್ನೂ ಮುಗಿದಿಲ್ಲ ಅವರು ಪ್ರಗತಿಪರ ಸಮಾಜವಾದಿ ದೇವತೆಯ ಸಿದ್ಧಿಗೆ ತೊಡಗಿದ್ದಾರೆ. ಸಿದ್ಧಿ ಅವರಿಗೆ ಸಿಗ್ಗುವಾಗ, ಜನತೆಯ ಹೆಣ ನಿರ್ನಾಮವಾಗಿ ಹೋಯ್ತೆಂದು ಹೇಳಲಾಗುತ್ತದೆ!

ಎಣ್ಣೆ ಬರುವಾಗ ಗಾಣ ಮುರಿಯುತ್ತದೆ!

●●

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. 21/1971

ಯು. ಪದ್ಮನಾಭ ಶೆಟ್ಟಿ —ವಾದಿ

ಮತ್ತು

S. C. ಡಿ'ಸೋಜ ಕೂಡಾ —ಪ್ರತಿವಾದಿರು

1ನೇ ಪ್ರತಿವಾದಿ S.C. ಡಿ'ಸೋಜ, ಜೋಸೆಫ್ ಡಿ.ಸೋಜರ ಮಗ—ಹಾಲಿ ಉಡುಪಿ ತಾಲೂಕು ಪುತ್ತೂರು ಗ್ರಾಮ —ಯವರಿಗೆ

1ನೇ ಪ್ರತಿವಾದಿಯು ವಾದಿಳ ವಳಗೆ ಬಾಡಿಗೆಗೆ ಅನುಭವಿಸಿ ಬರುವ ಮತ್ತು 1ನೇ ಪ್ರತಿವಾದಿಯ ವಳಗೆ 2ನೇ ಪ್ರತಿವಾದಿಯು ವಳವಕ್ಕಾಗಿ ಅನುಭವಿಸಿ ಬರುವ ದಾವಾ ಆಸ್ತಿ ಸ್ವಾಧೀನತೆಗೂ ಬಾಡಿಗೆ ವ ಪುಟ್ಟುವಳ್ಳಿ ಬಗ್ಗೂ—ವಾದಿಳು ಪ್ರತಿವಾದಿರ ಮೇಲೆ ಸದರಿ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 6—7—1971ಕ್ಕೆ ತಕ್ಷಿಗೆ ಇಟ್ಟಿದೆ. ಆ ದಿವಸ ಸದರಿ 1ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉತ್ತರಿಸದೆ ಇದ್ದ್ರೆ ಆತನ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಸದರಿ 1ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸಲಾಗಿಯದೆ.

H. Ramanath Pai

Advocate for Plff.

ಉಡುಪಿ, ತಾ. 23-6-1971

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S K.

ಸಂಪುಟ : 50
ಸಂಚಿಕೆ : 42

ಸಂಸ್ಥಾಪಕರು :
ದಿ। ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦–೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಸಮಾಜವಾದದ ನಿಲುವಂಗಿಯೊಳಗೆ ಏನಿದೆ?

ಮಹಾರಾಷ್ಟ್ರದ ಎಂಎಲ್‌ಎ ಒಬ್ಬರ ಮಗಳ ಮದುವೆಯ ಸಂಗತಿ ಇಂಡಿಕೇಟಿನ ಪಾರ್ಲಿಮೆಂಟರಿ ಪಕ್ಷವನ್ನೇ ಕೆಣಕಿತು ಸುಮಾರು ಒಂದು ಲಕ್ಷ ಅತಿಥಿಗಳಿಗೆ ಭೋಜನೋಪಹಾರ ವ್ಯವಸ್ಥೆ, ಅದ್ದೂರಿಯ ಮೆರವಣಿಗೆ, ಪೆಂಡಾಲಮ್ ಆದು ಇದು ಎಂದು ಈ ಮದುವೆಗಾದ ಎಲ್ಲ ವೆಚ್ಚಗಳನ್ನು ಜೋಡಿಸಿದರೆ, ಅರ್ಧ ಕೋಟಿಯನ್ನೂ ಮೀರಬಹುದು ಮಾನ್ಯ ಎಂಎಲ್‌ಎಗಳು ಗಣ್ಯರೂ ಪ್ರಭಾವಶಾಲಿಗಳೂ ಆಗಿರುವುದರಿಂದ ಅವರು ಇದರ ಬಹುಭಾಗವನ್ನು ಪುಕ್ಕಟೆ ಪಡೆದಿರುವುದೂ ಅಸಂಭವವಲ್ಲ ಈ ಸಂಭ್ರಮದ ಮದುವೆಯಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿ ಶ್ರೀ ವಿ. ಪಿ. ನಾಯಕರೂ ಕೇಂದ್ರದ ವಿತ್ತ ಸಚಿವ ಶ್ರೀ ವೈ. ಬಿ ಚವನರೂ ಖುದ್ದಾಗಿ ಭಾಗವಹಿಸಿದ್ದರೆಂಬುದೇ ಹೆಚ್ಚಿನ ಚರ್ಚೆಗೆ ಅವಕಾಶ ಮಾಡಿಕೊಟ್ಟಿತು ಮದುವೆ ನಡೆಯುವುದು ಮತ್ತದರಲ್ಲಿ ಮಂತ್ರಿಗಳೂ ವೈಯಕ್ತಿಕವಾಗಿ ಭಾಗವಹಿಸುವುದು ಅನ್ಯಾಯವಲ್ಲ. ಆದರೆ, ಈ ಮದುವೆ ಮಾತ್ರ ಭಾರೀ ವಿವಾದಾತ್ಮಕವಾಗಿಯೇ ಪರಿಣಮಿಸಿತು

ಸಮಾಜವಾದವನ್ನು ಗುತ್ತಿಗೆಗೆ ಹಿಡಿದಿರುವ ಇಂಡಿಕೇಟಿಗರೇ ಈ ರೀತಿಯ ಅದ್ದೂರಿಗೆ ಮರುಳುಗೊಂಡು ಸಂಪತ್ತನ್ನು ನದಿಯಲ್ಲಿ ಹುಣಿಸೇಹಣ್ಣು ತೊಳೆದಂತೆ ಪೋಲುಮಾಡುವುದನ್ನು ನಾಯಕ–ಚವನರು ಹೇಗೆ ಸಹಿಸಿಕೊಂಡರು? ಅದೇ ಹಣವನ್ನು ಯಾವುದಾದರೂ ಕೈಗಾರಿಕೆ—ಉದ್ಯಮಗಳಲ್ಲಿ ತೊಡಗಿಸಿದ್ದರೆ ಸಮಾಜದ ನೂರಾರು ನಿರುದ್ಯೋಗಿಗಳಿಗೆ ಉದ್ಯೋಗಾವಕಾಶವಾದರೂ ದೊರೆಯುತಿತ್ತು ಹಲವು ಮನೆಗಳನ್ನಾದರೂ ಕಟ್ಟಿಹಾಕುತಿದ್ದರೆ, ಹಲವು ಕುಟುಂಬಗಳಿಗಾದರೂ ನೆರಳು ಸಿಗುತಿತ್ತು. ಯಾವುದಾದರೂ ಶಿಕ್ಷಣ ಸಂಸ್ಥೆಗೆ ದಾನ ನೀಡುತ್ತಿದ್ದರೆ, ಅಜರಾಮರವಾಗಿ ಆ ಎಂಎಲ್‌ಎಯ ಹೆಸರು ಉಳಿಯುತಿತ್ತು. ಇನ್ನೂ ಏನಾದರೂ ಮಾಡುತಿದ್ದರೆ, ಬಡಜನರಿಗೆ ಉಪಕಾರವಾದರೂ ಆಗುತಿತ್ತು ಈ ಸಂಬಂಧದ ಚರ್ಚೆ ಇಂಡಿಕೇಟಿನ ಎಂಪಿಗಳ ಸಭೆಯಲ್ಲಿ ತುಸು ಕಾವಿನಿಂದಲೇ ನಡೆಯಿತು ನಿಷ್ಠ ಸಮಾಜವಾದಿಗಳು ಈ ಅಸಮಾಜವಾದಿ ಕ್ರಮವನ್ನು ಕಟುವಾಗಿಯೇ ಟೀಕಿಸಿದರು ಆಧ್ಯಕ್ಷತೆ ವಹಿಸಿದ್ದ ಪ್ರಧಾನಿ ಗಾಂಧಿಯು ತುಟಿಯೆರಡು ಮಾಡಲಿಲ್ಲ ಕೊನೆಗೆ ವಿಕೋಪಕ್ಕೆ ಹೋಗುವುದನ್ನು ತಡೆಯಲು ಬಾಯಿಬಿಟ್ಟರು — ತಾನು ಮಹಾರಾಷ್ಟ್ರದ ಮುಖ್ಯಮಂತ್ರಿಯ ಬಳಿ ವಿವರ ಕೇಳಿದ್ದಾಗಿಯೂ ಅತಿಥಿ ಅಭ್ಯಾಗತರು ಮಿತಿಮೀರಿ ಬಂದುದರಿಂದ ಹೆಚ್ಚಿನ ವೆಚ್ಚ ಮಾಡಬೇಕಾಗಿ ಬಂದಿತೆಂದವರು ತಿಳಿಸಿದರೆಂದೂ ಹೇಳಿ ಸುಮ್ಮಗಾದರು

ಇಲ್ಲಿಯೂ ಪ್ರಧಾನಮಂತ್ರಿಯವರು ಜಾರಿಬಿದ್ದರು. ಈ ಅವಕಾಶವನ್ನು ಉಪಯೋಗಿಸಿ ಅವರು ಇಂಡಿಕೇಟಿಗರಿಗೆ ಮಿತವ್ಯಯ, ಸಮಾಜವಾದಗಳ ಪಾಠವನ್ನು ಪುನರಾವೃತ್ತಗೊಳಿಸಬಹುದಿತ್ತು. ಪಾಪ, ನಿತ್ಯಂಪ್ರತಿ ೩೦ರಿಂದ ೫೦ ಸಾವಿರ ರೂಪಾಯಿ ವೆಚ್ಚಮಾಡುವ, ಸಮಾಜವಾದಿ ದೇಶದ. ಪ್ರಧಾನಿಗೆ ತನ್ನ ಸಮಾಜವಾದಿಗಳ ಮುಂದೆ ಹಾಗೆ ಹೇಳುವ ನೈತಿಕ ಬಲವಿದೆಯೆ? ಯಾವನಾದರೂ ಎಂಪಿ ತನ್ನ ಸಮಾಜವಾದ ಮೂಲಕ್ಕೇ ಕೊಡಲಿ ಹಾಕಿದರೆ? ಆದುದರಿಂದಲೇ ಆಕೆ ಅಷ್ಟೇ ಹೇಳಿ ತೃಪ್ತರಾದರು. ಮದುವೆ–ಸಮಾರಂಭದಲ್ಲಿ ಬಹಳಷ್ಟು ಜನ ಸೇರಿದ್ದು ನಿಜ ಈ ಜನರು ಯಾರು? ಈ ಸೇರಿಕೆ ಅನಿಶ್ಚಿತವಾಗಿತ್ತೆಂದು ಮುಖ್ಯಮಂತ್ರಿ ನಾಯಕರ ವಿವರಣೆಯಿಂದ ಊಹಿಸಬೇಕಾಗುತ್ತದೆ ಆದರೆ, ಈ ಊಹೆ ಶ್ರದ್ಧಾಂಗ ಸುಳ್ಳು ಸರ್ವೇ ಸಾಮಾನ್ಯವಾಗಿ ಹೇಳಿಕೆಯಿಲ್ಲದೆ ಮದುವೆಗೆ ಹೋಗುವ ಸಂಪ್ರದಾಯ ಬಡ ಬೋರೇಗೌಡ ಬೆಳೆದು ಬಂದ ಸಂಸ್ಕೃತಿಗೆ ವಿರುದ್ಧವಾದುದು. ಇನ್ನು ಭಿಕ್ಷುಕರು ಹೋಗುವುದುಂಟು–ಇವರು ಎಂಜಲೆಲೆಯಿಂದಲೇ ತೃಪ್ತರಾಗಬೇಕಷ್ಟೆ ಸಾವಿರ ಸಾವಿರ ಭಿಕ್ಷುಕರೆಲ್ಲ ಈ ಮದುವೆಗೆ ಬಂದರೆನ್ನುವುದು ತೀರ ಹಾಸ್ಯಾಸ್ಪದ. ಅಂದರೆ, ಬಂದವರೆಲ್ಲರೂ ಗೌರವೋಪೇತ ಆಹ್ವಾನಿತರು, ಅವರ ಆಗಮನ ಅನಿರೀಕ್ಷಿತವಲ್ಲ ಆದುದರಿಂದ ಅದ್ದೂರಿ ಉದ್ದೇಶಿತವೇ ಇದು ರಾಜ–ಮಹಾರಾಜರ ದರ್ಬಾರದ ಪುನರಾವೃತ್ತಿಯೇ ಹೊರತು, ಸಮಾಜವಾದಿಯಲ್ಲ... ವಿಚಿತ್ರವೆನಿಸುವಂತಿಲ್ಲ ಪಂಡಿತ ನೆಹರುರವರು ಸಮಾಜವಾದದತ್ತ ದೇಶವನ್ನೊಯ್ಯುವ ನಿರ್ಧಾರ ಮಾಡಿದಂದಿನಿಂದಲೂ ಕಾಗದದ ಸಮಾಜವಾದವೇ ದೃಢವಾಗಿ ಇಲ್ಲಿ ನೆಲೆಯೂರುತ್ತ ಬಂದಿದೆ. ನಮ್ಮ ರಾಷ್ಟ್ರಪತಿಗಳು ಸಂಚಾರವೇಳೆ ಉಳಕೊಳ್ಳಲು ಅಲ್ಲಲ್ಲಿ ಮರಿ ರಾಷ್ಟ್ರಭವನಗಳೇ ಬೇಕು, ಮಂತ್ರಿಗಳಿಗೆ ಸಕಲ ಸೌಕರ್ಯೋಪೇತ ಬೃಹತ್ ಅರಮನೆಗಳು ಬೇಕು ಎಂಪಿ, ಎಮ್ಮೆಲ್ಯೆಗಳಿಗೆ ಮೊದಲ ವರ್ಗದ ಪುಕ್ಕಟೆ ಟಿಕೇಟಿನಿಂದ ಹಿಡಿದು, ಮನೆ, ನೀರು ದೀಪ, ಫೋನು, ವೇತನ ಅಂಚೆಯೆಲ್ಲವೂ ಪುಕ್ಕಟೆಯಾಗಬೇಕು; ಇಂತಹ ಸಮಾಜವಾದಿಗಳ ಕೈಗಳಲ್ಲಿ ಸಮಾಜವಾದ ಸನೆಗುದಿಗೆ ಬಿದ್ದಿದೆ. ಸಮಾಜದಿಂದ ಸಿಡಿದು ಹೋದ ಈ ಜನರು ಸಮಾಜವಾದವನ್ನು ತರುತ್ತಾರೆ ಎಂದು ನಂಬುವುದು ಮೂರ್ಖತನವಾಗಬಹುದು ಸಮಾಜವಾದದ ನಿಲುವಂಗಿತೊಟ್ಟುಕೊಂಡ ಸಮಾಜದ್ರೋಹಿಗಳಿಂದ ದೇಶವನ್ನು ದೇವರೇ ಕಾಪಾಡಬೇಕು.

ಕನ್ನಡದ ಬಗ್ಗೆ ಮಮತೆ!

ರಾಜ್ಯದಲ್ಲಿ ನಿರ್ಮಾಣಗೊಳ್ಳುವ ಕನ್ನಡ ಚಿತ್ರಗಳಿಗೆ ೫೦ ಸಾವಿರ ರೂಪಾಯಿ ನೀಡುವ ಕರ್ನಾಟಕ ಸರಕಾರದ ಧೋರಣೆಯಿಂದ ಚಿತ್ರ ಸಂಖ್ಯೆಗಳು ಹೆಚ್ಚಿದುವು; ಗುಣಮಟ್ಟ ಕಡಮೆಯಾಯ್ತು ಎನ್ನುವವರೊಂದು ಗುಂಪು ರಾಷ್ಟ್ರಪತಿ ಆಡಳಿತವು ಈ ಸಹಾಯಧನವನ್ನು ನಿಲ್ಲಿಸಲು ನಿರ್ಧರಿಸಿತು ಇದನ್ನು ಪ್ರತಿಭಟಿಸುವಲ್ಲಿ ಸ್ಟುಡಿಯೊದವರೊಡನೆ ಹಂಚಿಕೆದಾರರೂ ಸಿನಿಮಾ ಮಂದಿರಗಳ ಮಾಲಕರು ಈ ಉದ್ಯಮದ ಎಲ್ಲರೂ ಸೇರಿದರು ಕನ್ನಡೇತರ ಚಿತ್ರಗಳ ಹಂಚಿಕೆಗಳಿಗೇ ಆದ್ಯಗಮನ ನೀಡುತ್ತಿರುವ ಹಂಚಿಕೆದಾರರಿಗೆ ಈಗ ಒಮ್ಮಿಂದೊಮ್ಮೆಲೆ ಕನ್ನಡ ಚಿತ್ರಗಳ ಮೇಲೆ ಮಮತೆ ಹುಟ್ಟಿತು. ಕನ್ನಡ ಚಿತ್ರಗಳ ಪ್ರದರ್ಶನವೆಂದರೆ, ಮೂಗು ಮುರಿಯುವ ಚಿತ್ರ ಮಂದಿರ ಮಾಲಿಕರಿಗೆ ಭಾಷಾಭಿಮಾನ ಮೂಡಿತು. ಈ ಅಭಿಮಾನ, ಈ ಮಮತೆಯೆಲ್ಲವೂ ಐವತ್ತು ಸಾವಿರ ರೂಪಾಯಿಗಳಿಗಾಗಿ ಪುಕ್ಕಟೆ ಸಿಗುತ್ತಿರುವುದು ಹೋಯಿತಲ್ಲಾ ಎಂಬುದಕ್ಕಾಗಿ.

ಸಹಾಯ ಧನ ನೀಡುವುದರ ಬದಲು ಸರಕಾರ ಇತರ ರೀತಿಯ ಉತ್ತೇಜನ ನೀಡಿದರೆ, ಕನ್ನಡ ಚಿತ್ರಗಳ ಗುಣಮಟ್ಟ ಎತ್ತರವಾದೀತು 'ನಮಗೆ ಸಂಖ್ಯೆಗಿಂತ ಗುಣ ಮುಖ್ಯವಾದರೆ, ಗುಣವನ್ನು ಮೆಚ್ಚುವ, ಅದನ್ನು ಗೌರವಿಸುವ ಸಂಪ್ರದಾಯ ಹಾಕಿಕೊಳ್ಳಬೇಕು ಕನ್ನಡ ಚಲಚ್ಚಿತ್ರಗಳ ಸ್ಪರ್ಧೆಗಳನ್ನು ಏರ್ಪಡಿಸಿ ಒಳ್ಳೆಯ ಚಿತ್ರವನ್ನು ಬಹುಮಾನಿಸಬಹುದು ಈ ಬಹುಮಾನ ಲಕ್ಷಾಂತರ ರೂಪಾಯಿಗಳದ್ದೂ ಇರಬಹುದು. ಒಂದು ವೇಳೆ ಅಂಥ ಬಹುಮಾನ ಗಳಿಸುವ ಅರ್ಹತೆಯುಳ್ಳ ಚಿತ್ರ ಬರದಿದ್ದರೆ ಬಹುಮಾನವನ್ನು ನೀಡದಿರುವುದೂ ಒಳಿತು. ಸರಕಾರಿ ಸಹಾಯಧನ ಯೋಜನೆಗೆ ಮೊದಲೂ ಉತ್ತಮ ಚಿತ್ರಗಳು ತಯಾರಾಗಿವೆ, ಇಲ್ಲದೆಯೂ ತಯಾರಾಗಬೇಕು. ಒಂದೊಮ್ಮೆ ಬಲಶಾಲಿ ಜನಾಂಗ ನಿರ್ಮಿಸಲು ಜರ್ಮನ್ ನಾಯಕರು ವ್ಯಭಿಚಾರಕ್ಕೆ ಪ್ರೋತ್ಸಾಹ ಕೊಟ್ಟಿದ್ದರಿಂದ ನಿರ್ಬಲರ ಬೃಹತ್ ಸೃಷ್ಟಿಯೇ ಆದಂತೆ ಕಳಪೆ ಚಿತ್ರಗಳು ಕನ್ನಡದಲ್ಲಿ ನಿರ್ಮಾಣವಾಗುವುದನ್ನು ನಿರ್ಮಾಪಕರನ್ನು ಬಿಟ್ಟರೆ, ಉಳಿದವರು ಮೆಚ್ಚುವುದಿಲ್ಲ. ●

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!
ಬ್ಲೂ ಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=
ಐಡಿಯಲ್ - ಫೊಟೋ - ಹೌಸ್ PHONE: 3131
ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ
ಅಧಿಕೃತ ಮಾರಾಟಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1
Tele: GOLDKING. Estd: 1947 Phone: 3242 Res: 3272.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಹೊಸ ಕಟ್ಟಡ ಉದ್ಘಾಟನೆ

ಮಂಗಳೂರಿನ ಉರ್ವಾ ಮೈದಾನದಲ್ಲಿ ಹೊಸದಾಗಿ ನಿರ್ಮಿಸಲಾದ ಭಾರತ ಸ್ಕೌಟ್ಸ್ ಎಂಡ್ ಗೈಡ್ಸ್‌ನ ನೂತನ ಕಟ್ಟಡದ ಉದ್ಘಾಟನೆಯನ್ನು ಜಸ್ಟೀಸ್ ಶ್ರೀ ಕೆ. ಸದಾನಂದ ಹೆಗ್ಡೆಯವರು ಜ್ಯೋತಿ ಬೆಳಗಿಸುವುದರ ಮೂಲಕ ನೆರವೇರಿಸಿದರು.

ಪ್ರಾರಂಭದಲ್ಲಿ ಎಡ್ವಕೇಟ್ ಶ್ರೀ ಸೀತಾರಾಮ ಶೆಟ್ಟರು ಸ್ವಾಗತಿಸಿದರು. ಅನಂತರ ಸ್ಕೌಟ್ಸ್ ಕಮಿಶನರ್ ಡಾ| ಕೆ. ಬಿ. ಶೆಟ್ಟಿ ಹೊಸ ಕಟ್ಟಡ ರಚನೆಯ ಕುರಿತ ವರದಿಯನ್ನೋದಿದರು. ಈ ಕಟ್ಟಡದ ನಿರ್ಮಾಣಕ್ಕೆ 15,000 ವೆಚ್ಚ ತಗಲಿದ್ದು ಸರಕಾರದ ಕಡೆಯಿಂದ 15,000 ದೊರಕಿದ್ದು ಉಳಿದಂಶವನ್ನು ಸಾರ್ವಜನಿಕರಿಂದ ಸಂಗ್ರಹಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಶ್ರೀ ಮುಳ್ಳೇರಿ ಶ್ರೀನಿವಾಸ ನಾಯಕರು ಈ ಧನ ಸಂಗ್ರಹ ಕಾರ್ಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಿದ್ದರು.

ಜಸ್ಟೀಸ್ ಹೆಗ್ಡೆಯವರು ಉದ್ಘಾಟಿಸುತ್ತಾ, ಜಿಲ್ಲೆಯಲ್ಲಿ ಸ್ಕೌಟ್ ಚಳವಳವನ್ನು ಬಲಪಡಿಸಲು ಶ್ರೀ ಬಿ. ಸೋಮಶೇಖರ ರಾವ್, ಡಾ| ಗಿರಿಧರ ರಾವ್ ಮೊದಲಾದವರು ತೋರಿಸಿದ್ದ ಆಸಕ್ತಿಯನ್ನು ಸ್ಮರಿಸಿ ಈ ಕಟ್ಟಡದ ನಿರ್ಮಾಣ ಮಾಡಿದಕ್ಕೆ ಹರ್ಷ ವ್ಯಕ್ತಪಡಿಸಿದರು.

ಎಸೋಸಿಯೇಶನಿನ ಅಧ್ಯಕ್ಷ ಶ್ರೀ ಮುಳ್ಳೇರಿ ಶ್ರೀನಿವಾಸ ನಾಯಕರು ಕಟ್ಟಡ ರಚನೆಗೆ ಸಹಕರಿಸಿದವರನ್ನು ಅಭಿನಂದಿಸಿದರು. ಅಂತ್ಯದಲ್ಲಿ ಗೈಡ್ಸ್ ಕಮಿಷನರ್ ಶ್ರೀಮತಿ ಒಕ್ಸೇವಿಯೊ ಅಲ್ಬುಕರ್ಕರವರು ಧನ್ಯವಾದ ಅರ್ಪಿಸಿದರು.

ಮಲ್ಪೆ ಗಾಂಧಿ ಶತಮಾನ ಸ್ಮಾರಕ ಶಾಲೆಯಲ್ಲಿ 7ನೇ ತರಗತಿ ಉದ್ಘಾಟನೆ

ಮಲ್ಪೆ ಗಾಂಧಿ ಶತಮಾನೋತ್ಸವ ಸ್ಮಾರಕ ಹಯರ್ ಪ್ರೈಮರಿ ಶಾಲೆಯ 7ನೇ ತರಗತಿಯ ಉದ್ಘಾಟನಾ ಸಮಾರಂಭವು ಜಿಲ್ಲಾ ಸಹಾಯಕ ವಿದ್ಯಾಧಿಕಾರಿ ಶ್ರೀ ಬಿ. ರಾಮಭಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ಯಂ. ಮಧ್ವರಾಜರವರಿಂದ ನೆರವೇರಿತು.

ಶಾಲಾಭಿವೃದ್ಧಿ ಸಮಿತಿಯ ಪರವಾಗಿ ಡಾ| ಕೇ. ಬಲ್ಲಾಳರು ಸ್ವಾಗತಿಸಿ ಈ ಶಾಲೆಗೆ ನೂತನ ಕಟ್ಟಡ ಕಟ್ಟಿಸಿಕೊಡುವಲ್ಲಿ ಶ್ರೀ ಎಂ. ಮಧ್ವರಾಜರು 5,000 ರೂ ಗಳಿಗೂ ಹೆಚ್ಚಿನ ನೆರವು ನೀಡಿರುವರೆಂದು ಹೇಳಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ಕೃಷ್ಣರಾಯರು 249 ವಿದ್ಯಾರ್ಥಿಗಳು ಕಲಿಯುತ್ತಿರುವ ಶಾಲೆಯಲ್ಲಿ ಬೋಧನಾ ಉಪಕರಣ ಹಾಗೂ ಇನ್ನಿತರ ಅವಶ್ಯಕ ವಸ್ತುಗಳಿಲ್ಲದೆ ಆಗುತ್ತಿರುವ ತೊಂದರೆಗಳನ್ನು ವಿವರಿಸಿದರು.

ಶ್ರೀಮತಿ ಮಧ್ವರಾಜರು ಸರಸ್ವತಿ ದೇವಿಯ ಭಾವಚಿತ್ರವನ್ನೂ, ಮಲ್ಪೆ ಫಿರಂಗಿ ಪೇಟೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಶಾರಾ ಎನ್ ಅಮೀನರು ಮಹಾತ್ಮಾ ಗಾಂಧಿಯ ಭಾವಚಿತ್ರವನ್ನೂ, ಶ್ರೀ ಎ. ಜೆ. ಅಲ್ಸೆಯವರು ಶ್ರೀ ಎಂ. ಮಧ್ವರಾಜರ ಭಾವಚಿತ್ರವನ್ನೂ ಅನಾವರಣ ಮಾಡಿದರು.

ಶ್ರೀ ಎಂ. ರಾಘವೇಂದ್ರರು ಸಭಿಕರ ಪರವಾಗಿ ಮಾತನಾಡಿದರು. ಶಾಲಾ ಅಧ್ಯಾಪಕ ಶ್ರೀ ಮಾಧವ ಜತ್ತನ್ನರು ಧನ್ಯವಾದ ಅರ್ಪಿಸಿದರು

ಪುತ್ತೂರು III ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C. 24/4/1970

Between—

ಶ್ರೀಮತಿ ಅಮ್ಮು ಕೂಡಾ —ಅರ್ಜಿದಾರರು

ಮತ್ತು

ಕಿಟ್ಟಪ್ಪ ಗೌಡ ಕೂಡಾ —ಎದುರುದಾರರು

13ನೇ ಎದುರುದಾರ— ದರ್ಮಪಾಲ ಜೈನ್, ಅನಂತ ರಾಜ ಅರಿಗರ ಮಗ, ಪುತ್ತೂರು ತಾಲೂಕು ಪೆರ್ಲಂಪಾಡಿ ಗ್ರಾಮ, P. O. ಪಳನೀರು, S. K.

ಮೇಲಿನ ಗೇಣಿ ಅರ್ಜಿಯು ತಾರೀಕು 28-7-1971ಕ್ಕೆ ನಿಮ್ಮ ಹಾಜರಾತಿ ಬಗ್ಗೆ ವಾಯಿದೆಯಾಗಿರುತ್ತದೆ ಆ ದಿವಸ ನೀವು ಮೇಲ್ಕಂಡ ಕೋರ್ಟಿನ ಮುಂದೆ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಹಿನ್ನಾಮಾಡಿ ಗೇಣಿ ಅರ್ಜಿಯನ್ನು ಇತ್ಯರ್ಥಪಡಿಸಲಾಗುವುದು ಎಂದು ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸಲಾಗಿದೆ.

ಸ್ಥಳ: Sd/- K. T. Bhat
ಎಡ್ವಕೇಟ್, ಪುತ್ತೂರು, S. K.

Puttur, S. K., Date 22-6-71.

ಹಸಿವು ಆಗುವುದೆಂತು?

ಮುಂಜಾನೆ ಎದ್ದು ಒಳ್ಳೆಯ ಆಹಾರ ಸೇವಿಸಿದಾಗ ಮನಸ್ಸಿಗೂ, ದೇಹಕ್ಕೂ ತೃಪ್ತಿ. ಆದರೆ ನಾಲ್ಕೈದು ಗಂಟೆಗಳ ನಂತರ ಮೊದಲಿನ ತೃಪ್ತಿ ಮಾಯವಾಗುತ್ತದೆ. ನಸುಕೋಪ, ಮುಖದ ಮೇಲೆ ಕೆಂಪು ಬಣ್ಣ, ನಿರುತ್ಸಾಹ ಇವೆಲ್ಲವೂ ಆಗಿನ ಲಕ್ಷಣಗಳು. ಇವಕ್ಕೆಲ್ಲ ಕಾರಣ 'ವಿಪರೀತ ಹಸಿವು' ಹಸಿವಾಗುವುದು ಎಲ್ಲರಿಗೂ ಸಹಜ. ಹಾಗಾದರೆ ಹಸಿವು ಹೇಗೆ ಆಗುತ್ತದೆ? ಅದರ ಸ್ವರೂಪವೇನು? ಇವುಗಳ ಕುರಿತು ನಡೆದಿರುವ ವೈಜ್ಞಾನಿಕ ಅನ್ವೇಷಣೆಗಳು ಸ್ವಾರಸ್ಯವಾಗಿವೆ

ಹಸಿವು ಯಾವಾಗ?

ಆಹಾರ ಸೇವಿಸಿದ ಎಷ್ಟು ಸಮಯದ ನಂತರ ಹಸಿವೆಯುಂಟಾಗುತ್ತದೆ? ಇದು ನಾವು ಸೇವಿಸುವ ಆಹಾರವನ್ನು ಅವಲಂಬಿಸಿಕೊಂಡಿದೆ ಕೇವಲ ಅನ್ನ-ಸಾರು ಸೇವಿಸಿದರೆ ಬೇಗನೇ ಹಸಿವಾಗುತ್ತದೆ. ಕಾರಣ, ಅನ್ನದಲ್ಲಿ ಶರ್ಕರ ಪಿಷ್ಟವು ಹೆಚ್ಚಿನ ಪ್ರಮಾಣದಲ್ಲಿದ್ದು ಅದು ಬೇಗನೇ ಜೀರ್ಣವಾಗುತ್ತದೆ. ಇದರಂತೆ ಪ್ರೋಟೀನು, ಮೇದಸ್ಸು ಇವು ವಿಪುಲವಾಗಿರುವ ಆಹಾರವನ್ನು ಸೇವಿಸಿದರೆ ನಿಧಾನವಾಗಿ ಹಸಿವಾಗುತ್ತದೆ. ಸಾಮಾನ್ಯವಾಗಿ, ಸೇವಿಸಿದ ಆಹಾರ ಜೀರ್ಣಾಂಗಗಳಲ್ಲಿ ಸಂಪೂರ್ಣ ಜೀರ್ಣವಾಗಿ ಹಸಿವೆಯುಂಟಾಗಲು ನಾಲ್ಕು ಗಂಟೆಗಳು ಬೇಕು.

ಒಂದು ನಿರ್ಬಲ ವಾದ

ಹಸಿವಾಗಲು ಕಾರಣವೇನು? ಇದು ವಿಜ್ಞಾನಿಗಳಿಗೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ ಹಿಂದಿನಿಂದಲೂ ಇದಕ್ಕೆ ವೈಜ್ಞಾನಿಕ ಉತ್ತರಗಳು ಸಿದ್ಧಗೊಳ್ಳುತ್ತಿವೆ. ಪ್ರಥಮವಾಗಿ ಬೆಳಕುಕಂಡ ವಾದ ಕೂಡಾ ಹಲಕಾರಿಯಾಗಿದೆ. ಪಚನಕ್ರಿಯೆ ಮುಗಿದಾಗ ಉದರದ ಒಳಭಾಗದ ನರಗಳು ಸಂಕುಚಿತವಾಗುವುದರಿಂದ ಹಸಿವು ಉಂಟಾಗುತ್ತದೆ ಎಂಬುದಾಗಿ ಒಬ್ಬ ವಿಜ್ಞಾನಿ ವಾದಿಸಿದ. ಆದರೆ ಈ ವಾದ ಎಲ್ಲರಿಂದ ಒಪ್ಪಿಗೆಯನ್ನು ಪಡೆಯಲಾರದೇ ಹೋಯಿತು. ಕಾರಣ, ಕೆಲವು ವಿಜ್ಞಾನಿಗಳು ಪ್ರಾಣಿಗಳ ಉದರದ ನರಗಳನ್ನು ತೆಗೆದು ಹಾಕಿದರೂ ಅವು ಹಸಿವಿನಿಂದ ದೂರವಾಗಲಿಲ್ಲ.

ಗ್ಲೂಕೋಸಿನ ಪಾತ್ರ

ನಾವು ಆಹಾರ ಸೇವಿಸಿದಾಗ ರಕ್ತದಲ್ಲಿನ ಬದಲಾವಣೆಯೇನು? ರಕ್ತದಲ್ಲಿ 'ಗ್ಲೂಕೋಸ್ ಸಕ್ಕರೆಯ' ಪ್ರಮಾಣ ಅಧಿಕವಾಗುತ್ತದೆ. ಈ 'ಗ್ಲೂಕೋಸ್' ರಕ್ತದ ಮೂಲಕ ದೇಹದ ಅಸಂಖ್ಯಾತ ಜೀವಕೋಶಗಳನ್ನು ಸೇರುತ್ತದೆ. ಈ ವೇಳೆ ರಕ್ತದಲ್ಲಿ ಪುನಃ 'ಗ್ಲೂಕೋಸ್'ನ ಅಭಾವ ಉಂಟಾಗುತ್ತದೆ. ಆಗ ನಮಗೆ ಹಸಿವೆ ಕಾಣಿಸಿಕೊಳ್ಳುತ್ತದೆ ಪ್ರೋಟಿನ್, ಲವಣಗಳು ಮತ್ತು ವಿಟಾಮಿನ್‌ಗಳು ಈ ಕಾರ್ಯದಲ್ಲಿ ಭಾಗವಹಿಸುತ್ತವೆಯೋ ಎಂಬ ಪ್ರಶ್ನೆಗೆ ಇನ್ನೂ ಸರಿಯಾದ ಉತ್ತರ ತಿಳಿದು ಬಂದಿಲ್ಲ

ಮಿದುಳಿನ ಎರಡು ಕೇಂದ್ರಗಳು

ಮಿದುಳಿನಲ್ಲಿ 'ಹೈಪೊಥಲಾಮಸ್' [Hypothalmus] ಎಂಬ ಪ್ರಮುಖ ಭಾಗವಿದೆ. ಈ ಭಾಗದಲ್ಲಿ "ಹಸಿವು" ಹಾಗೂ ಆಹಾರ ಸೇವಿಸಿದಾಗ ಲಭಿಸುವ 'ತೃಪ್ತಿ'ಯನ್ನು ಸೂಚಿಸುವ ಎರಡು ಕೇಂದ್ರಗಳಿವೆ. 'ತೃಪ್ತಿ' ನೀಡುವ ನರ ಕೇಂದ್ರವು ಎರಡು ಜೀವಕಣಗಳಿಂದ ನಿರ್ಮಿತವಾಗಿದ್ದು ಇದರ ಬದಿಯಲ್ಲೇ 'ಹಸಿವು' ಸೂಚಿಸುವ ನರಕೇಂದ್ರವಿದೆ.

ಕಾರ್ಯ ವಿಧಾನ

ಈ ಕೇಂದ್ರಗಳು ಹೇಗೆ ಕಾರ್ಯ ನಿರ್ವಹಿಸುತ್ತವೆ ಎಂಬುದನ್ನು ತಿಳಿಯುವುದು ಮುಖ್ಯವಾಗಿದೆ. ಚರ್ಮದ ಒಳ ಭಾಗದಲ್ಲಿರುವ ಜ್ಞಾನವಾಹಿ ನರಗಳು ಆಹಾರ ಅಗತ್ಯವಿದೆ ಅಥವಾ ಸಾಕಷ್ಟು ತೃಪ್ತಿಯಾಗಿದೆ ಎಂಬ ಸಂದೇಶಗಳನ್ನು ಮೆದುಳಿನ ಕೇಂದ್ರಗಳಿಗೆ ಸಾಗಿಸುತ್ತವೆ. ಜ್ಞಾನವಾಹಿ ನರಗಳು ಕಳುಹಿಸುವ ಸಂದೇಶಗಳು ಸಾಂಕೇತಿಕ ರಸಾಯನಿಕ ರೂಪದಲ್ಲಿದ್ದು, ಅದರ ಸ್ವರೂಪದ ಬಗ್ಗೆ ಹೆಚ್ಚಿನ ವಿವರಗಳು ದೊರೆತಿಲ್ಲ. ಈ ಎರಡು ಕೇಂದ್ರಗಳು ಏಕಕಾಲದಲ್ಲಿ ಕೆಲಸಮಾಡುವುದಿಲ್ಲ.

ಹಸಿವಾಗದೇ ಇರಲು ಸಾಧ್ಯವೇ?

ನಮ್ಮ ದೇಹಕ್ಕೆ ನಂಜುಂಟುಮಾಡುವ 'ಗೋಲ್ಡ್ ಥಯೋಗ್ಲೂಕೋಸ್' (Gold-thioglucose) ಎಂಬ ವಸ್ತುವಿದೆ ಇದನ್ನು ಚುಚ್ಚುಮದ್ದಿನ ರೂಪದಲ್ಲಿ ಪ್ರಾಣಿಗಳಿಗೆ ಕೊಟ್ಟಾಗ ತೃಪ್ತಿಯ ಕೇಂದ್ರವು ತನ್ನ ಕಾರ್ಯಚಟುವಟಿಕೆಯನ್ನು ಕಳೆದುಕೊಂಡಿದೆ. ಅದೇ ರೀತಿಯಲ್ಲಿ ಅಂಫೆಟಮೈನ್ (Amphetomine) ಉಪಯೋಗಿಸಿದಾಗ ಪ್ರಾಣಿಗಳ ಹಸಿವಿನ ಕೇಂದ್ರ ತನ್ನ ಶಕ್ತಿಯನ್ನು ಕಳೆದುಕೊಂಡಿದೆ. ಆಗ ಆ ಪ್ರಾಣಿಗಳು ಆಹಾರದ ಕಡೆಗೆ ನೋಡುವುದೇ ಇಲ್ಲ. ಈ ಎರಡು ಕೇಂದ್ರಗಳನ್ನು ವಿದ್ಯುತ್ತಿನ ಮೂಲಕ ಮೂಲಸ್ಥಿತಿಗೆ ತರಬಹುದೆಂದು ಕಂಡುಹಿಡಿಯಲಾಗಿದೆ ಇದೇ ರೀತಿ ಆರೋಗ್ಯಕ್ಕೆ ಹಾನಿಬಾರದ ಹಾಗೆ, ಮನುಷ್ಯನಲ್ಲಿಯೂ ಹಸಿವೆಯನ್ನು ತಡೆಗಟ್ಟಬಹುದೇ? ಎಂದು ವಿಜ್ಞಾನಿಗಳು ಪ್ರಯೋಗ ನಡೆಸುತ್ತಿದ್ದಾರೆ. ಇನ್ನು ಕೆಲವೇ ಸಮಯದಲ್ಲಿ ವಿಜ್ಞಾನ ವೃಕ್ಷದಲ್ಲಿ ಇನ್ನೊಂದು ಫಲ ಶೋಭಿಸಲೂಬಹುದು.

—ಶ್ರೀ ಬಿ. ವಿ. ನಾಯಕ್, ಉಡುಪಿ.



ವಿನಂತಿ

ಈ ಸಂಚಿಕೆಯ ಪುಟಸಂಖ್ಯೆಯನ್ನು 12 ಪುಟಗಳಂತೆ ಪ್ರಕಟಿಸಿದ್ದರೂ ಅನಿವಾರ್ಯ ಕಾರಣಗಳಿಂದ 10 ಪುಟಗಳನ್ನು ಮಾತ್ರ ಕೊಡಲಾಗಿದೆ.

—ಸಂ ನ.

ಚಂದಾ ಹಣ ಬಾಕಿ ಇರುವವರು ದಯಮಾಡಿ ಅದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ. ಯನ್ನು ಪಡಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.

ದನ್ನು ಒಂದು ರಾಜ್ಯಕ್ಕೆ ಸಂಸೀಮಿತಗೊಳಿಸುವುದು ಮಹಾ ಪಾಪ'

'ಆಯ್ತಪ್ಪ, ಕೇಂದ್ರ ಸರಕಾರ ತಮಿಳುನಾಡು ಸರಕಾರಕ್ಕೆ ನೀರಿನ ವಿಷಯದಲ್ಲಿ ಹೊಸ ಸಲಹೆ ನೀಡಿದೆಯಂತೆ ..'

'ಮತ್ತೆ ಬೇರೆ ಕೆಲಸವೇನು? ಸಲಹೆನೀಡುವುದು ಅಂದ್ರೆ ಸಮಯ ದೂಡುವುದೂಂತ ಅರ್ಥ ...ಅದ್ರಮೇಲೆ ಉತ್ತರದ ಗಂಗೆಯ ಅಮೃತವನ್ನೇ ತಮಿಳುನಾಡಿಗೆ ಉಣಿಸುವ ಯೋಜನೆಯೊಂದಿದೆ ನೋಡು .'

'ಹೌದು ಹೌದು ಕರುಣಾನಿಧಿಯವರಿಗೆ ಅದೇ ಉತ್ತಮ. ಇಡಿಯ ರಾಜ್ಯವನ್ನೇ ಮುಳುಗಿಸುವಷ್ಟು ನೀರು ದೊರೆಯಬಹುದು ..'

'ಅದ್ರೆ ಪಾಪ, ಅದನ್ನು ನೋಡೋಕೆ ಅವ್ರು ಆಯುಷ್ಯ ಪಡೆದು ಬಂದಿದ್ದಾರೋ ಇಲ್ಲವೋ!'

'ಮತ್ತೆ ಸುರು ಮಾಡಿದ್ರಿ ಅಭದ್ರ ..'

"ಅದಕ್ಕೇ ಅವ್ರು ಕೃಷ್ಣಾ–ಕಾವೇರಿಯನ್ನು ಕೂಡಿಸಿ ಬಿಡಿ ಅಂದಿದ್ದಾರೆ ಮೊದಲಿಗೆ .."

'ಅದು ಸರೀನ್ನಿ. ಎಲ್ಲವನ್ನೂ ಒಂದೇ ಬಾರಿ ಮಾಡೋಕೆ ಸಾಧ್ಯವಿಲ್ಲಾನ್ನಿ.'

"ಹ್ಞಾಂ. ಸಂಕಲ್ಪಮಾಡುವಾಗ ನಾವು ಹೇಳೋದುಂಟು ..."

"ಏನು?"

'ಗಂಗೆ, ಯಮುನೆ, ಗೋದಾವರಿ, ಸರಸ್ವತಿ, ನರ್ಮದೆ, ಸಿಂಧು ಕಾವೇರಿಗಳ ನೀರು ಇಲ್ಲಿ ಒಂದುಗೂಡಲಿ ಅಂತ.'

'ಸಿಂಧುವೊಂದು ಬಿಟ್ರೆ ಉಳಿದವೆಲ್ಲ ತಮಿಳು ನಾಡಿನಲ್ಲಿ ..'

'ಅದ್ಯಾಕೆ ಬಿಡಬೇಕು? ಮಾನಸ ಸರೋವರದಿಂದಲೇ ಸಿಂಧು–ಬ್ರಹ್ಮಪುತ್ರಗಳು ಹುಟ್ಟುವುದಲ್ಲಾ? ಸಿಂಧುವಿನ ನೀರು ಬ್ರಹ್ಮಪುತ್ರದ ಮೂಲಕ ಗಂಗೆಗೆ ಸೇರುತ್ತೆ...'

"ಅದೆಂಥದೋ, ಭಗೀರಥ ಉತ್ತರಮುಖಿಯಾಗಿದ್ದ ಗಂಗೆಯನ್ನು ದಕ್ಷಿಣಮುಖಿಯಾಗಿ ತಿರುಗಿಸಿ ತಂದನಂತೆ. ಈಗ ಅದೇ ಗಂಗೆಯನ್ನು ಮತ್ತೂ ದಕ್ಷಿಣಕ್ಕೆ ಎಳೆದು ತರುವ ಸಾಹಸಕ್ಕೆ ಮನಮಾಡಿದ್ದಾರೆ...."

'ಹ್ಞಾಂ ಹೌದೂನ್ನು.'

'ಅಲ್ಲ, ಹಾಸನ ಮಂಗಳೂರು ರೈಲುದಾರಿಯೇ ಇನ್ನೂ ಪೂರ್ಣವಾಗಿಲ್ಲ ಹಾಗಿರುವಾಗ, ಗಂಗೆ–ಕಾವೇರಿ ಸಂಗಮ ಎಂದೋ?..'

"ಇನ್ನು ಒಂಭತ್ತು ತಿಂಗಳುಗಳೊಳಗೆ ವಿಯತನಾಮದ ಯುದ್ಧವನ್ನು ಕೊನೆಗೊಳಿಸಿ, ಅಲ್ಲಿಂದ ಅಮೆರಿಕನ್ ಸೇನೆಯನ್ನು ಮರಳಿತರಬೇಕೆಂದು ಸಿನೆಟು ನಿಕ್ಸನ್ನರಿಗೆ ಆದೇಶ ನೀಡಿದೆಯಂತೆ ..."

"ಹೌದೇ? ಅಂದರೆ, ನಿಕ್ಸನ್ನರ ನರಮೇಧಕ್ಕೆ ಸಿನೇಟು ಒಪ್ಪಿಗೆ ಕೊಡಲಿಲ್ಲ ಅಂದ ಹಾಗಾಯ್ತು .."

'ಹಾಗೇ ಅನ್ನ ಬೇಕು ಮತ್ತೆ...ಅಮೆರಿಕೆಯ ಕಾಂಗ್ರೆಸಿಗೆ ಯುದ್ಧದಲ್ಲಿ ಆಸಕ್ತಿಯಿಲ್ಲಯೆನಿಸುತ್ತದೆ...'

"ಅದೇನೂಂತ?"

'ಅಲ್ಲ ನೋಡು ರಶ್ಯದವ್ರು ಅಂತರಿಕ್ಷದಲ್ಲಿ ಟರ್ಮಿನಸ್ ನಿರ್ಮಿಸಿದ್ದಾರೆ ಇನ್ನು ಮಹಾ ಮಹಾ ನಗರಗಳನ್ನು ಕಟ್ಟಲಿದ್ದಾರೆ. ಹಾಗಿರುವಾಗ ಅಮೆರಿಕದ ಬುದ್ಧಿಜೀವಿಗಳು ವಿಯತನಾಮದಲ್ಲೇ ಕೊಳೆಯುವುದು ಯಾವ ಧರ್ಮ?"

'ಅಂದ್ರೆ, ರಶ್ಯನರು ದೇವತೆಗಳಾಗುವಾಗ ಅಮೆರಿಕನ್ನರು ಮರ್ತ್ಯರಾಗೇ ಉಳಿಯಬಾರದೂಂತ...."

'ಅದು ಹೇಗೇ ಇರ್‍ಲಿ ..ಅವರಿಬ್ಬರೂ ಆಕಾಶದಲ್ಲಿ ಹೊಯ್ದಾಡುತ್ತಿದ್ದಾರೆಂದೇ ನಾವೆಲ್ಲ ಬದುಕಿ ಉಳಿದಿದ್ದೇವೆ ..'

"ಇಲ್ಲವಾದರೆ?"

"ಅದೆಂದೋ, ರಸಾತಳಕ್ಕೆ ಕುಸಿದು ಹೋಗುತ್ತಿದ್ದೆವು.."

"ಹ್ಞಾಂ .."

"ಏನು ಬಾಯೊಣಗಿಸುತ್ತೆ ..."

"ಏನೋಪ್ಪ .ಈ ಮಳೆ–ಗಾಳಿ–ಛಳಿ"

"ಓಹೋ, ಏನು ಮಾಡೋದು, ಕೆಲವೊಮ್ಮೆ ಹೀಗೂ ಆಗುತ್ತೆ ..."

"ಹೇಗೆ?"

"ಹೀಗೆ ತಿಳೀತೆ?"

"ಅಯ್ಯಪ್ಪ ..."

"ಹೇಗನ್ನಿಸುತ್ತೆ?"

"ಶ್ಯೂ....ಅದನ್ನೂ ಕೇಳೋದೆ?"

—ಗೋರಾ.

ಭಾಷೆ ಬಲ್ಲವರು; ಆದರೆ, ಅಭಿವ್ಯಕ್ತಿ ಸ್ವಾತಂತ್ರ್ಯ ವಂಚಿತರು

(ಮೂರನೇ ಪುಟದಿಂದ)

ಕಾಲೇಜುಗಳು ಒದಗಿಸಿಕೊಡುತ್ತವೆ. ತಾಯ್ತಂದೆಗಳಿಗೂ ಕನ್ನಡ ಬೇಡ ಇದೇ ಮುಂದುವರಿಯಲೂ ಬಹುದು

ಕನ್ನಡದ ಕಲಿಯೋಗಲು ಕನ್ನಡವನ್ನೇ ಕಾಲೇಜಿನಲ್ಲಿ ಅಧ್ಯಯನ ಮಾಡಬೇಕೆಂದೇನಿಲ್ಲ ಕನ್ನಡದ ಬಗ್ಗೆ ಅನಾಸಕ್ತಿ-- ಅನಾಸ್ಥೆ ಅಪಾಯಕಾರಿಯಲ್ಲ

ಆದರೆ, ಅದರ ಮೇಲೆ ತಿರಸ್ಕಾರ ಭಾವನೆ ಹುಟ್ಟಿತೆಂದರೆ, ಅದರಿಂದ ಕನ್ನಡಕ್ಕೆ ಅಪಾಯ ಕಂಡಿತ

ಶಾಲೆ–ಕಾಲೇಜುಗಳಲ್ಲಿನ ಕನ್ನಡ ಪಾಠ ಪುಸ್ತಕಗಳ ಸಂಪೂರ್ಣ ಸಾರ ಕನ್ನಡದ ವಿದ್ಯಾರ್ಥಿಗಳಿಗೆ ಮುಂಡಟ್ಟಾಗಬೇಕು

ಪುಸ್ತಕವು ತೆಳ್ಳಗಿದ್ದು, ಅಧ್ಯಯನ ಯೋಗ್ಯವಾಗಿರಬೇಕು ಕೂಲಂಕಷ ಅಧ್ಯಯನಕ್ಕೆ ಅವಶ್ಯವಾಗುವಷ್ಟು ಅಧ್ಯಯನಾವಕಾಶವೂ ಬೇಕು

ಪ್ರೌಢಶಾಲೆಗಳಲ್ಲಿನ ಮೊದಲ ಭಾಷೆಯ ಗತಿಯೇನು?

ಮೊದಲಿನಂತೆಯೇ ವಾರಕ್ಕೆ ಮೂರೂ ಮುಕ್ಕಾಲು ತಾಸು ಅದರ ಅಧ್ಯಯನ ಅದಕ್ಕೆ ಒಟ್ಟು ನಾಲ್ಕೂವರೆ ತಾಸು ಕಾಲಾವಧಿಯ ಎರಡು ಪ್ರಶ್ನಪತ್ರಗಳು, ೧೫೦ ಗುಣಗಳು.

ಪುಸ್ತಕಗಳು ದಪ್ಪವಾದವು, ಪಾಠ್ಯ ವಿಷಯಗಳು ಹೆಚ್ಚಿದವು ಬರವಣಿಗೆಗೆ ಹೆಚ್ಚಿನ ಪರಿಶ್ರಮ ನೀಡುವುದು ಅಗತ್ಯವಾಯ್ತು

ಇವೆಲ್ಲ ಎಲ್ಲಿ ನಡೆಯಬೇಕು? ಎಂದು ನಡೆಯಬೇಕು? ಹೇಗೆ ನಡೆಯಬೇಕು?

ಪರಿಣಾಮ, ಪುಸ್ತಕ ಮುಗಿಸಿದರು, ಲೇಖನ ಕಾರ್ಯ ಹಿಂದುಳಿಯಿತು

ವಿಷಯ ಗೊತ್ತು, ಆದರೆ ಅದನ್ನು ಮಕ್ಕಳು ಬರೆಯಲಾರರು; ಹೇಳಲಾರರು ಬಾಯಿ ಬಿಡಿಸಹೋದರೆ ಪುಸ್ತಕ ಮುಗಿಯೋದಿಲ್ಲ

ಹೊಸ ಪರೀಕ್ಷಾಕ್ರಮದಂತೆ ಪಾಸಾಗುವುದು ಕಷ್ಟವಲ್ಲ

ಉಳಿದ ವಿಷಯಗಳಲ್ಲಿ ನವ್ಯಪ್ರಶ್ನೆಗಳಲ್ಲಿ ಪ್ರತಿಯೊಂದಕ್ಕೆ ಅರ್ಧರ್ಧ ಗುಣಗಳು, 'ಕನ್ನಡ'ದಲ್ಲಿ ಹಾಗೆ ಒಪ್ಪೊಂದು.

ಅಭಿವ್ಯಕ್ತಿ–ಲೇಖನ ಪರಿಶ್ರಮವಿಲ್ಲದೇನೇ ಎಬಿಸಿಡಿ ಬರೆದು ಮತ್ತೆ ಸ್ವಲ್ಪ ಕ್ಕೆ ಪಾಂಕ ಗಳಿಸಿ ಉತ್ತೀರ್ಣನಾಗುವುದು ಸಾಧ್ಯ

ಅವರೇ ಮುಂದೆ ಹೋಗುತ್ತಾರೆ . ನಾಲ್ಕು ಸುಂದರ ವಾಕ್ಯ ಬರೆಯುವ ಅಭ್ಯಾಸ ಅವರಿಗಿಲ್ಲ; ಅದವರಿಗೆ ಎಸ್ಸೆಸ್ಸೆಲ್ಸಿಯವರೆಗೆ ಅಗತ್ಯವೂ ಇಲ್ಲ ಪಿಯುಸಿಯಲ್ಲೂ ಅಷ್ಟೇ. ನಾಲ್ಕು ಎಸ್ಸೆ ಬೈಹಾರ್ಟ್ ಮಾಡಿದರು. ಏನೇನೋ ಬರೆದರು ಬಚಾವಾದರೆ ಆದರೆ, ಇಲ್ಲ ಗೋತಾ ಹಾಕಿದರು

ಭಾಷಾಧ್ಯಯನ ಎಳವೆಯಲ್ಲೇ ನಡೆಯಬೇಕು, ಶಬ್ದ ಭಂಡಾರ ಅಲ್ಲೇ ಬೆಳೆಯಬೇಕು ತನಗನಿಸಿದ್ದನ್ನು ನಾಲ್ಕು ಚಿಕ್ಕ ಚೊಕ್ಕ ಮಾತುಗಳಲ್ಲಿ ಹೇಳಲು, ಬರೆಯಲು ಅಲ್ಲೇ ಅಭ್ಯಾಸ ಮಾಡಬೇಕು ಇದಕ್ಕಾಗಿ ಅವುಗಳ ಅಧ್ಯಯನದ ಕ್ಷೇತ್ರ ಅತ್ಯಂತ ವಿಶಾಲವಾಗಿರ ಬೇಕು, ಅದಕ್ಕೆ ತಕ್ಕಷ್ಟು ಕಾಲಾವಕಾಶವು ಪಾಠ್ಯಕ್ರಮದಲ್ಲಿ ದೊರೆಯಬೇಕು

ಇಲ್ಲವಾದರೆ, ಎಲ್ಲವೂ ಹರಕು ಮುರುಕು ಅದೂ ಇಲ್ಲ, ಇದೂ ಇಲ್ಲ; ಏನೂ ಇಲ್ಲ ಆದರೂ ಕನ್ನಡವಿರುತ್ತದೆ, ಆದು ನಡೆವೆಣವಾಗುತ್ತದೆ ● ●

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 59/1971

ಸಿಂಡಿಕೇಟ್ ಬೇಂಕ್, ಮಣಿಪಾಲ್ —ವಾದಿ

ಮತ್ತು

1 ತನಿಯ ಪೂಜಾರಿ, ಸದಿಯ ಪೂಜಾರಿ ಮಗ, ಕಾರ್ಕಳ ತಾಲ್ಲೂಕು ಯೆರ್ಲಪಾಡಿ ಗ್ರಾಮ 2 T ನಾರಾಯಣ ಸುವರ್ಣ, ತನ್ಯ ಪೂಜಾರಿ ಮಗ, ಉಡ್ಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಮಣಿಪಾಲದಲ್ಲಿ ಬೀಡಾಬೀಡಿ ಅಂಗಡಿಯಿಟ್ಟುಕೊಂಡಿರುವವ —ಪ್ರತಿವಾದಿರು

ಯಿವರೊಳಗೆ

ಸದ್ರಿ 6ನೇ ಪ್ರತಿವಾದಿಗೆ ಯಿ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಪ್ರತಿವಾದಿರು ವಾದಿ ಬೇಂಕಿಗೆ ಬರಕೊಟ್ಟ 29–4–68ನೇ ತಾರೀಕಿನ ಡಿಮೂಂಡ್ ನೋಟಿನ ಅಸಲು ಬಡ್ಡಿ ಬಾಕಿ ಬಗ್ಗೆ ವಾದಿ ಬೇಂಕಿನವರು ಪ್ರತಿವಾದಿರ ಮೇಲೆ ಮಾಡಿದ ಮೇಲಿನ ದಾವೆ ಮತ್ತು ಜಡ್ಜ್‌ಮೆಂಟ್ ಮುಂಚೆ ಜಪ್ತಿ ಅಪೇಕ್ಷಿಸಿ ಮಾಡಿದ I. A No. Iನೇ ಅರ್ಜಿಯು ಸಹಾ ತಾ. 6–7–71ಕ್ಕೆ 1ನೇ ಪ್ರತಿವಾದಿಯು ಅಪ್ಪೈರು ನೋಟೀಸು ಬಗ್ಗೆ ಯಿಟ್ಟಿರುವುದರಿಂದ ಸದ್ರಿ ದಿವ್ಸ ಹಗಲು 11 ಗಂಟೆಗೆ ಸರಿಯಾಗಿ 1ನೇ ಪ್ರತಿವಾದಿಯು ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಉದಹರಿಸದಿದ್ದಲ್ಲಿ ಸದ್ರಿ ದಾವೆಯು ಯೇಕಪಕ್ಷವಾಗಿ ತೀರ್ಮಾನಿಸಲ್ಪಡುತ್ತದೆ ಎಂತ ಯಿ ಮೂಲಕ ಪ್ರತಿವಾದಿಗೆ ತಿಳಿಸೋಣಾಗುತ್ತದೆ.

– B. Krishna Bhat

Advocate for Plaintiff

Udipi, 7—6—1971

Gram: VISHWA Tel: 28111 & 28112

When at Bangalore

Stay at

HOTEL NATARAJA

Restaurant Boarding & Lodging,

107 Police Road, City Market,

BANGALORE-2.

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಪುತ್ತೂರು III ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R R C 2182/70

Between

ಶಂಕರನಾರಾಯಣ ಮೂರಾಡಿತ್ತಾಯ –ಅರ್ಜಿದಾರ

ಮತ್ತು

ಬಾಬು ಯಾನೆ ಈಶ್ವರ ಗೌಡ —ಎದ್ರಿ

ಎದ್ರಿಗೆ —

ಬಾಬು ಯಾನೆ ಈಶ್ವರ ಗೌಡ, ರಾಮ ಗೌಡರ ಮಗ, ಪುತ್ತೂರು ತಾಲೂಕು ಶಾಂತಿಗೋಡು ಗ್ರಾಮದ ಬೀರಮಂಗಿಲ ಎಂಬಲ್ಲಿ

ಮೇಲಿನ ಗೇಣಿ ಅರ್ಜಿಯು ತಾರೀಕು 21–7–1971ಕ್ಕೆ ನಿಮ್ಮ ಹಾಜರಾತಿ ಬಗ್ಗೆ ವ್ಯಾದೆ ಇಟ್ಟಿರುತ್ತದೆ. ಆ ದಿವಸ ನೀವು ಮೇಲ್ಕಂಡ ಕೋರ್ಟು ಮುಂದೆ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಗೇಣಿ ಅರ್ಜಿಯನ್ನು ಮುಂದುವರಿಸುವುದಾಗಿ ಕೋರ್ಟು ಹುಕ್ಕುಂ ಪ್ರಕಾರ ಈ ಮೂಲಕ ತಿಳಿಯಪಡಿಸೋಣಾಗಿದೆ.

Sd/- K. T Bhat

Advocate for Petitioner

Puttur 22—6—71

ರಾಜ್ಯದ ಹೈಸ್ಕೂಲುಗಳಿಗೆ

ನವಯುಗ

ಮೈಸೂರು ರಾಜ್ಯದ ಡಿ. ಪಿ ಐ ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ ಸಿ ಎಲ್ 4. 17–4/65–66ರ ಪತ್ರದಂತೆ ತರಿಸಿಕೊಳ್ಳಲು ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದೆ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

2 ವಿಶೇಷ ಸಂಚಿಕೆ ಸಹಿತ ವಾರ್ಷಿಕ ಚಂದಾ ರೂ 10/- ಮಾತ್ರ

ಮೆನೇಜರ್, ನವಯುಗ, ಉಡುಪಿ.

ವಿಶಾಲ ವಿಶ್ವದಲ್ಲಿ

ನಮಗಾಗಿ ಮರುಗುವವರಿಲ್ಲ!

ಬಂಗ್ಲಾದೇಶದಲ್ಲಿ ಸರ್ವಾಧಿಕಾರಿ ಯಾಹ್ಯಾರು ಸಾರ್ವತ್ರಿಕ ನರಮೇಧಕ್ಕೆಳಸಿದರು. ದಿನದಿನಕ್ಕೂ ಇದರ ಕ್ರೂರತೆ ತೀವ್ರ ಭಯಂಕರವಾಗುತ್ತಲೇ ನಡೆಯಿತು; ನಡೆಯುತ್ತಲಿದೆ.

ಅಲ್ಲಿ ಮನೆಮಾರು ಕಳೆದುಕೊಂಡವರು ಅನಾಶ್ರಿತರಾಗಿ ಭಾರತದ ಬಂಗಾಳಕ್ಕೆ ನಿರಾಶ್ರಿತರಾಗಿ ಬರತೊಡಗಿದರು. ಇದುವರೆಗೆ ಬಂದವರು ೬೦ರಿಂದ ೭೦ ಲಕ್ಷ. ಜೀವವಿದ್ದರೆ, ಬೇಡಿ ತಿಂದೇನೆಂಬುದರಲ್ಲಿ ನಂಬಿಕೆಯಿಟ್ಟು ಇನ್ನೂ ದಿನಂಪ್ರತಿ ಸಾವಿರಾರು ಸಂಖ್ಯೆಯಲ್ಲಿ ಓಡಿ ಬರುತಿದ್ದಾರೆ

ಇವರ ಪುನರ್ವಸತಿ ಮಾನವತಾ ಪ್ರೇಮಿಗಳ ಕರ್ತವ್ಯ. ಬಂಗ್ಲಾದೇಶದ ಜನತೆಯ ಹೋರಾಟಕ್ಕೆ ಶಹಭಾಸ್‌ಗಿರಿ ಕೊಟ್ಟವರು ನಾವು, ನಮ್ಮ ಸಂಸತ್ತು, ನಮ್ಮ ಆಕಾಶವಾಣಿ, ನಮ್ಮ ಪತ್ರಿಕೆಗಳು.

ನಮ್ಮನ್ನೂ ನಮ್ಮ ಆಶ್ರಯವನ್ನೂ ನಂಬಿ ಬೇಡಿ ಬಂಗ್ಲಾದೇಶೀಯರು ಬಂದಿದ್ದಾರೆ. ಶರಣೆಂದಿದ್ದಾರೆ.

ಶರಣಾಗತ ರಕ್ಷಕರು ನಾವು. ಯಾರು ಬಂದರೂ ನಾವು ಒಲ್ಲೆಯೆನ್ನಲಿಲ್ಲ. ಸ್ವಾತಂತ್ರ್ಯೋತ್ತರದಲ್ಲಿಯೇ ಪಶ್ಚಿಮ ಪಾಕಿಗಳು ಬಂದರು. ಉತ್ತರದ ಟಿಬೇಟಿಯನ್ನರು ಧಾವಿಸಿದರು; ಈಗ ಪೂರ್ವದ ಬಂಗಾಳದಿಂದ ಸಾಗಾಲೋಟಕಿತ್ತು ಬರುತಿದ್ದಾರೆ.

ಇವರ ರಕ್ಷಣೆಗೆ ನಾವು ವ್ಯಯಿಸಬೇಕಾದ್ದು ದಿನವೊಂದಕ್ಕೆ ಸುಮಾರು ಎರಡು ಕೋಟಿ ರೂಪಾಯಿ.

ಇಷ್ಟು ಹಣ ನಮಗೆಲ್ಲಿಂದ? ಅದಕ್ಕೇ ವಿದೇಶಗಳ ಮುಂದೆ ಕೈಚಾಚತೊಡಗಿದ್ದೇವೆ ಇದು ಭಿಕ್ಷಾಟನೆಯಲ್ಲ; ಬಂಗ್ಲಾ ನಿರಾಶ್ರಿತರು ಭಾರತಕ್ಕೆ ಓಡಿಬಂದುದರ ಗಂಭೀರ ಪರಿಣಾಮಗಳನ್ನು ವಿಶ್ವಕ್ಕೆ ಮನವರಿಕೆ ಮಾಡಿಕೊಟ್ಟು ಅವರ ಕರ್ತವ್ಯ ಸರ್ಪವನ್ನು ಕೆರಳಿಸುವುದು.

ಇದುವರೆಗೆ ವಿದೇಶಗಳ ಮಾನವತಾವಾದಿಗಳಿಂದ ಬಂದ ನೆರವು ಸುಮಾರು ೧೦ ಕೋಟಿ ರೂಪಾಯಿ.ಒಂದು ವಾರದ ವೆಚ್ಚಕ್ಕೂ ಹರಹರ! ಇನ್ನು ಮುಂದೆ ನೆರವಿನ ಹೊಳೆ ಹರಿಯ ಬಹುದು. ಹರಿಯದೆ ಬರಿಯ ಮಳಲೂ ಕಾಣಬಹುದು.

ಮಾನವತೆಯನ್ನು ಗುತ್ತಿಗೆ ಪಡೆದವರು ನಾವು. ಉಳಿದವರು?

ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಪೂರೈಕೆ ಮಹಾರಾಷ್ಟ್ರಗಳು ಮಾಡುವುದರಿಂದಲೇ ಯಾಹ್ಯಾ ನರಮೇಧ ಮುಂದುವರಿಯುತ್ತಿದೆ. ಪಾಕಿಸ್ತಾನಕ್ಕೆ ಸಾರ್ವತ್ರಿಕ ಬಹಿಷ್ಕಾರ ಹೇರಿದರೆ ಶಸ್ತ್ರಾಸ್ತ್ರ ಮಾತ್ರವಲ್ಲ ಆರ್ಥಿಕಾದಿ ನೆರವನ್ನೂ ನಿಲ್ಲಿಸಿದರೆ, ಇದಕ್ಕೆ ಯಾಹ್ಯಾ ಮಂಗಳ ಹಾಡಬಹುದು.

ಇದನ್ನು ಮಹಾರಾಷ್ಟ್ರಗಳಿಗೆ ತಿಳಿಸಿವಾಗ ಅವರ ಪ್ರತಿಕ್ರಿಯೆ ಗಮನಾರ್ಹ

ಅಂತಹ ಕ್ರಮಗಳಿಂದ ಯಾಹ್ಯಾ ನರಮೇಧ ನಿಲ್ಲುವುದರ ಬದಲು ಇನ್ನೂ ಬೇರೆ ದಾರಿ ಹಿಡಿದು ವಿಪರೀತ ಪರಿಣಾಮವಾಗಬಹುದು!

ಅಂದರೇನು? ಭಾರತದ ಕಳಕಳಿಯನ್ನು ಯಾರು ಕೇಳಿದರೂ ಕೆಂಪು ಚೀನಾ ಕೇಳುವುದಿಲ್ಲ. ಮಹಾರಾಷ್ಟ್ರಗಳು ನೆರವು ನೀಡದೆ ಹೋದರೆ. ಕೆಂಪು ಚೀನಾ ಯಾಹ್ಯಾಖಾನರನ್ನೇ ಕೊಂಡುಕೊಳ್ಳುತ್ತದೆ.

ಮತ್ತೆ ನರಮೇಧ ಮುಗಿಯುವುದುಂಟೆ?

"ನಾವೂ ಶಸ್ತ್ರಾಸ್ತ್ರ ನೀಡುತ್ತೇವೆ; ಅವುಗಳಿಂದ ಯಾಹ್ಯಾ ನರಮೇಧ ಮುಂದುವರಿಸಲಿ ನಿರಾಶ್ರಿತರನ್ನು ನೆಲೆಗೊಳಿಸಲು ನಾವು ನಿಮಗೂ ಸಹಾಯ ಮಾಡುತ್ತಿರುತ್ತೇವೆ."

-ಹಾಗಾದರೆ, ನರಮೇಧ ನಿಲ್ಲುವುದೆಂತು? ಬಂಗ್ಲಾದೇಶೀಯರಿಗೆ ಹಿತಕರವಾದ ರಾಜ್ಯಕೀಯ ನಿರ್ಧಾರ ಯಾಹ್ಯಾ ಕೈಕೊಳ್ಳುವರೆಂಬುದು ಕನಸಿಗೂ ನಿಲುಕದು.

ಪೇಚಿಗೆ ಸಿಲುಕಿದ್ದು ಭಾರತ ಮಾತ್ರ. ನಮ್ಮ ರಾಜ್ಯಕೀಯ ವಿಚಕ್ಷಣರ ನಿರೀಕ್ಷೆಯೆಲ್ಲವನ್ನೂ ಮೀರಿ ಬಂಗ್ಲಾ ನಿರಾಶ್ರಿತರ ಪ್ರಶ್ನೆ ಭೂತಾಕಾರವಾಗಿ ಎದ್ದು ನಿಂತಿದೆ

ಇದಕ್ಕೆ ವಿದೇಶಗಳಿಂದ ಉತ್ತರವರಸುವುದು ಮರಳಿನಲ್ಲಿ ನೀರನ್ನರಸಿದಂತೆ. ಆದುದರಿಂದ ಭಾರತವೇ ನ್ಯಾಯಸಮ್ಮತವಾದ ನಿರ್ಧಾರವೊಂದಕ್ಕೆ ಬರಬೇಕು.

ನಿರಾಶ್ರಿತರ ಪ್ರವಾಹವಿತ್ತ ಹರಿಯತೊಡಗಿದೊಡನೆಯೇ ಗಡಿಗಳಲ್ಲಿ ಕಠಿನ ಪಹರೆ ನೀಡಿ ತಡೆಯುತ್ತಿದ್ದರೆ, ಇಲ್ಲಿ ನೆರೆ ಬರುತ್ತಿರಲಿಲ್ಲ. ಆದರೆ, ನಾವು ಇಲ್ಲಿಯೂ ತಪ್ಪಿದ್ದೇವೆ; ಉದಾರರಾಗಿ ನಮ್ಮ ಕೋಟೆಯ ಅಗುಳಿ ಕಿತ್ತು ಹಾಕಿದ್ದೇವೆ. ಇನ್ನು ಮುಚ್ಚಲಾದೀತೆ?

ಬಂಗ್ಲಾದೇಶದ ನಿರಾಶ್ರಿತರನ್ನು ನೆಲೆಗೊಳಿಸಲು ಪಾಕಿಸ್ತಾನದಲ್ಲೇ ಸ್ಥಳವಶಪಡಿಸಿಕೊಳ್ಳುವುದು ಅಂತಾರಾಷ್ಟ್ರೀಯ ನೀತಿಸಮ್ಮತ. ಇವರನ್ನು ಬೇರೆ ಬೇರೆ ರಾಜ್ಯಗಳಲ್ಲಿ ಹಂಚಿ ಪ್ರತಿ ರಾಜ್ಯಕ್ಕೂ ತಲೆ ಬೇನೆ ಹಂಚಿಕೊಡುವುದಕ್ಕಿಂತ ಬಂಗ್ಲಾದಲ್ಲೇ ಸ್ಥಳ ವಶಪಡಿಸಿಕೊಂಡು ಅವರನ್ನು ನೆಲೆಗೊಳಿಸುವುದು ಉತ್ತಮ ಪಕ್ಷ.

ಅದಕ್ಕಾಗಿ ಭಾರತ ದಿಟ್ಟ ಹೆಜ್ಜೆಯಿಡಬೇಕಾಗುತ್ತದೆ. ಬಂಗ್ಲಾದೇಶಕ್ಕೆ ಅನಿವಾರ್ಯವಾದ ಮಾನ್ಯತೆ ನೀಡಬೇಕಾಗುತ್ತದೆ; ಸೈನಿಕ ಕಾರ್ಯಾಚರಣೆಯನ್ನು ಕೈಕೊಳ್ಳಬೇಕಾಗುತ್ತದೆ. ಇದರ ಪರಿಣಾಮವೇನಾಗ ಬಹುದು?

ಮತ್ತೊಂದು ಭಾರತ–ಪಾಕ್ ಯುದ್ಧವೇ ಸಂಭವಿಸ ಬಹುದು.

ದೇಶದ ವಿರೋಧಿ ಪಕ್ಷಗಳು ಎಂದೋ ಮಾನ್ಯತೆ ನೀಡಬೇಕೆಂದು ಕೇಳಿಕೊಂಡಿವೆ. ಇದೀಗ ಆಡಳಿತ ಪಕ್ಷದಲ್ಲೂ ಈ ಬಗ್ಗೆ ಅನುಕೂಲಾಭಿಪ್ರಾಯ ಮೂಡಿಬಂದಿದೆ.

ಶ್ರೀಮತಿ ಇಂದಿರಾ ಗಾಂಧಿಯೂ ಮನ್ನಣೆ ನೀಡಲು ಆತುರರಾಗಿಯೇ ಇದ್ದಾರೆ. ಆದರೂ ಈ ಇತಿಹಾಸದ ತಿರುವಿನಲ್ಲಿ ತಾನೇ ಮೊದಲು ಹೆಜ್ಜೆಯಿಡಲು ಆಕೆಯ ಹೆಣ್ಣು ಹೃದಯ ಹೆದರುತ್ತದೆ.

ಕೊಸಿಗಿನ್ ಇದ್ದಾರೆ, ಹೀತ್ ಇದ್ದಾರೆ, ನಿಕ್ಸನ್ ಇದ್ದಾರೆ. ಯಾರಾದರೊಬ್ಬರು ಮೊದಲ ಹೆಜ್ಜೆಯಿಟ್ಟರೆ ಎರಡನೆಯದೇ ಆಕೆಯದ್ದು.

ಅವರೇಕೆ ಇಡಬೇಕು? ಶಸ್ತ್ರಾಸ್ತ್ರ ಸರಬರಾಯಿಗೆ ನಿಷೇಧವಿದ್ದಾಗಲೂ ಅವುಗಳ ಸರಬರಾಜು ಮಾಡುತ್ತಿರುವವರು ಆ ಹೆಜ್ಜೆಯಿಡುವರೆ? ಪೂರೈಕೆ ಮಾಡದೆ ಹೋದರೆ ವಿಪರೀತ ಪರಿಣಾಮವಾಗುವುದೆಂದು ನಂಬದವರು ಆ ಹೆಜ್ಜೆಯಿಡುತ್ತಾರೆಯೆ?

ಯಾರಿಗೆ ಯಾರೂ ಇಲ್ಲ. ಬಂಗ್ಲಾ ನಿರಾಶ್ರಿತರು ರಶ್ಯಕ್ಕೆ ಫ್ರಾನ್ಸಿಗೆ, ಇಂಗ್ಲೆಂಡಿಗೆ ಅಥವಾ ಅಮೆರಿಕಕ್ಕೆ ಓಡುವುದಿಲ್ಲ, ಓಡಿಸಿದರೂ ಓಡಲು ಸಿದ್ಧರಿಲ್ಲ.

ಅವರಿಗೆ ಮಾತೃಹೃದಯ ಬೇಕು; ಅದು ಭಾರತದಲ್ಲಿದೆ. ಆದ್ದರಿಂದ ಅವರಿಗೆ ಭಾರತವೇ ಬೇಕು; ಅದರಲ್ಲೂ ಬಂಗಾಳವೇ ಬೇಕು.

ಆರುನೂರು ಕೋಟಿ ರೂಪಾಯಿ ಉಳಿಸಿ ಬಂಗ್ಲಾ ನಿರಾಶ್ರಿತರನ್ನು ಬದುಕಿಸುವ ದೃಢನಿರ್ಧಾರ ತಳೆದ ನಾವು ಸಮಾಜವಾದವನ್ನು ಅವರಿಗಾಗಿ ತೊಳೆದು ಬಿಟ್ಟಿದ್ದೇವೆ.

ಭಾರತ ಸಮಾಜವಾದಕ್ಕೆ ತಕ್ಕ ನೆಲವಲ್ಲವೇನೋ ಎನಿಸುತ್ತದೆ.

ಪ್ರತಿಗಾಮಿಗಳನ್ನು, ಬಂಡವಾಳ ಶಾಹಿಗಳನ್ನು ಸಮಾಜವಾದ ದ್ರೋಹಿ ಶಕ್ತಿಗಳನ್ನು ಹೊರಗಿಟ್ಟು ಅಪ್ಪಟ ಸಮಾಜವಾದಿಗಳ ಸೇನೆಕಟ್ಟಿ ದೇಶದಲ್ಲಿ ಸಮಾಜವಾದದ ಬೀಜ ಬಿತ್ತಲು ಪ್ರಧಾನಿಗಾಂಧಿ ದಿಟ್ಟ ಹೆಜ್ಜೆಯಿಟ್ಟರು.

ನೆಲ ಹಸನಾಯ್ತು; ಸೇನೆ ಸಿದ್ಧವಾಯ್ತು. ಬೀಜಕ್ಕೆ ಬಂಗ್ಲಾ ಹುಳ ಬಿದ್ದುಬಿಡಬೇಕೆ?

ಸಮಾಜವಾದ ಬೆಳೆಯುವ ಸೌಭಾಗ್ಯ ಭಾರತಕ್ಕಿಲ್ಲವಾದರೆ ಪ್ರಧಾನಿ ಗಾಂಧಿಯನ್ನೇಕೆ ಬೊಟ್ಟು ಮಾಡಬೇಕು?

ಬಂಗ್ಲಾದೇಶದ ಬಗ್ಗೆ ತನ್ನ ನಿರ್ಣಯ ತೆಗೆದುಕೊಳ್ಳಲು ಅಂಜುವ ಶ್ರೀಮತಿ ಗಾಂಧಿ ಉಳಿದವರು ಆ ನಿರ್ಣಯ ತೆಗೆದುಕೊಳ್ಳಬೇಕೆಂದು ಬಯಸಿದ್ದಾರೆ. ಕಾಗದ ಪತ್ರಗಳ ನಿರ್ಣಯ ತೆಗೆದುಕೊಂಡು ಜನತೆಯ ಮುಂದೆ ಚಿನ್ನದ ಜಿಂಕೆಯನ್ನು ಸುಳಿಬಿಟ್ಟು ಮತಾಪಹರಣ ಕಲೆಯಲ್ಲೇ ನಿಸ್ಸೀಮರಾದ ನಮ್ಮ ನಾಯಕರು ವ್ಯಾವಹಾರಿಕ—ಕಾರ್ಯಾಚರಣೆಗೆ ಹಿಂದುಳಿಯದೆ ಮತ್ತೇನು ಮಾಡಬೇಕು?

ವಿದೇಶ ಸುತ್ತಿ ಯಾರಿಂದಲೂ ಯಾವ ವಿಧದಲ್ಲೂ ಭರವಸೆ ಪಡೆಯದೆ ಸರ್ದಾರ ಸ್ವರ್ಣಸಿಂಗರು ನಿರಾಶೆಯ ವರದಿಯನ್ನು ಶ್ರೀಮತಿ ಗಾಂಧಿಗೆ ಸಲ್ಲಿಸಿದರು.

ಅತ್ಯಂತ ನಿರಾಶೆಯಲ್ಲೂ ಮನುಷ್ಯ ಸಚೇತನಾಗುವುದುಂಟು. ಗಾಯಗೊಂಡ ಹೆಣ್ಣುಹುಲಿಗೆ ಧೈರ್ಯ ಹೆಚ್ಚು.

ಈ ಹುಚ್ಚು ಧೈರ್ಯದ ನಿರ್ಣಯ ಹೇಗೆ ಹೊರಬೀಳುವುದೆಂದು ಕಾದು ನೋಡಬೇಕು.

ಪಾಕಿಸ್ತಾನಕ್ಕೆ ಕೆಂಪುಚೀನಾವಾದರೂ ಮಿತ್ರರಾಷ್ಟ್ರವಿದೆ. ನಮಗೆ ಯಾರಿದ್ದಾರೆ? ನಮ್ಮ ವಿದೇಶ ನೀತಿಯಲ್ಲಿ ಆಮೂಲಾಗ್ರ ಬದಲಾವಣೆಯಾಗ ಬೇಕೆಂಬುದರಲ್ಲಿ ಸತ್ಯಾಂಶವಿದೆಯೆನಿಸುವುದಿಲ್ಲವೆ?

ಕಮ್ಯುನಿಸ್ಟ್ ಲೋಕ ನಮಗೀಗ ನೆರವೀಯಲಿಲ್ಲ; ಬಂಡವಳಶಾಹಿಗಳು ಸಹಾಯ ನೀಡಲಿಲ್ಲ; ತಟಸ್ಥರು ಇನ್ನೂ ತಾಟಸ್ಥ್ಯ ತ್ಯಜಿಸಲಿಲ್ಲ. ಮೂರು ಗುಂಪುಗಳಿಗೂ ಭಾರತ ಮೂರಾಬಟ್ಟೆಯಾಗುವುದೇ ಬೇಕಾಗಿದೆ. ನಾವು ಈ ತಿಳಿನೀರಿನ ಸತ್ಯವನ್ನು ಮನವರಿಕೆಮಾಡಿಕೊಂಡಿದ್ದೇವೆಯೆ?

●●

ಬೇಕಾಗಿದ್ದಾರೆ

ಅನುಭವಸ್ಥ ಕಂಪೋಸಿಟರರು

ಸಂಬಳ ಯೋಗ್ಯತಾನುಸಾರ

ವಿಚಾರಿಸಿರಿ:—

ನವಯುಗ ಪ್ರೆಸ್, ಉಡುಪಿ.

ಕನ್ನಡದ ಹಿರಿಯಾಳು, ವಿದ್ವಾಂಸರಾದ

ಶ್ರೀ ಡಿ. ಎಲ್. ನರಸಿಂಹಾಚಾರ್ಯರು

ಬರೆದವರು : ಶ್ರೀ ವೆಂಕಟರಾಯಾಚಾರ್ಯ, ಸುರತ್ಕಲ್ಲು.

ಸಾಹಿತ್ಯಕ್ಷೇತ್ರದಲ್ಲಿ ಪದ್ಯ ಬರೆವ ಮೂಲಕ ವ್ಯವಸಾಯಿಗಳಿಗೆ ಕವಿಗಳೆಂದು ಹೇಳುತ್ತಾರೆ. ಆದರೆ ಆ ಪದ್ಯಕೃತಿಗಳನ್ನು ಪರಿಚಯಿಸುವವರಿಗೂ ಕವಿಯಷ್ಟೆ ಪ್ರತಿಭಾದಿಗಳಿರಬೇಕು, ವಿಮರ್ಶಕನು ಕವಿಸಹೃದಯನಿರಬೇಕು. ಆದರೆ ಸ್ವತಂತ್ರವಾಗಿ ಒಂದಾನೊಂದು ಶಬ್ದದ ಮೂಲಾರ್ಥಗಳನ್ನೋ; ರಾಜ-ಕವಿ-ಕೃತಿಗಳ ಕಾಲವಿಚಾರಗಳನ್ನೋ; ಇತರ ವಿದ್ವಾಂಸರ ಲೇಖನವೋದಿ ಪ್ರೇರಕವಾಗಿ ಅಥವಾ ಖಂಡನವಾಗಿ ಬರೆವಲ್ಲಿಗೆ "ಸಂಶೋಧನ"ವೆನ್ನುತ್ತಾರೆ. ಪ್ರಾಚೀನ ಕೃತಿಗಳನ್ನು ಒದಗಿಸಿ, ಅವುಗಳ ಪಾಠಾಂತರಗಳಲ್ಲಿ ಯಾವುದು ಸರಿಯೆಂದು ತೂಗಿನೋಡಿ, ಆ ಕೃತಿಯ, ಕವಿಯ ಕಾಲ ವಿಚಾರಾದಿ ಪರಿಚಯ ಲೇಖನಗಳೊಂದಿಗೆ ಪ್ರಕಟಿಸುವುದು 'ಗ್ರಂಥ ಸಂಪಾದನೆ'ಯೆನ್ನುತ್ತಾರೆ. ಶ್ರೀ ಡಿ.ಎಲ್. ನರಸಿಂಹಾಚಾರ್ಯರು ಸ್ವತಃ ವಿಶೇಷತಃ ಕವಿಗಳಲ್ಲ! ಅವರು ಮೊದಲು ಕಲಿತುದು ವೈಜ್ಞಾನಿಕ ವಿಭಾಗ; ಆದರೆ, ಮುಂದೆ ಸೇರಿದುದು ಕನ್ನಡ ಭಾಷಾರಂಗ. ಆ ಮೇರೆಗೆ, ಅವರಿಗೆ ತಕ್ಕಂತೆ ಸ್ಥಾನ ದೊರಕಿಲ್ಲ; ಆದರೆ, ಬೇಕಷ್ಟು ಉತ್ತಮ ಕೃತಿಗಳ ಅಧ್ಯಯನಕ್ಕೆಡೆಯಾಯಿತು; ಮುಂದೆ ಪ್ರಾಧ್ಯಾಪಕರಾಗಿ ನಿವೃತ್ತರಾದ ಮೇಲೂ, ಈ ಹಿಂದಿನ ಕನ್ನಡ ಅಧ್ಯಯನದ ಫಲವಾಗಿಯೆಂಬಂತೆ, ಕನ್ನಡ–ಕನ್ನಡ ಕೋಶದ ಪ್ರಧಾನ ಸಂಪಾದಕರಾಗುವಂತಾಯಿತು. ಗ್ರಂಥ ಸಂಪಾದನೆಯಲ್ಲಿ ಆಯಾ ಕವಿ–ಕಾವ್ಯಗಳ ದೀರ್ಘ ಪ್ರಾಮಾಣಿಕ ರೀತಿಯ 'ಮುನ್ನುಡಿ'ಗಳನ್ನೂ ಇವರು ಬರೆದಿದ್ದಾರೆ. ಅಂತೆ, ಇತರರು ಬರೆದ ಕವಿತೆ—ಲೇಖನಗಳ ಸಂಕಲನಕ್ಕೆ ಬೇರೆ "ಮುನ್ನುಡಿ" ಬರೆದರು, ಶ್ರೀ ಆಚಾರ್ಯರು. ಹಾಗೆ ಇತರರ ಕೃತಿಗಳ ವಿಮರ್ಶೆಯನ್ನೂ ಸಾಂಗವಾಗಿ ಬರೆದರು. ಸ್ವಯಂ ಬರೆದ ಲೇಖನಗಳು ಇವರವು ಹೆಚ್ಚು ಪಾಲು ಇವೆ; 70 ಲೇಖನಗಳು ಪ್ರಕಟವಾಗಿವೆಯೆಂದು ತಿಳಿಯುತ್ತದೆ; ಹನ್ನೊಂದು ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಏಳು ಕೃತಿಗಳ "ಮುನ್ನುಡಿ"ಗಳನ್ನು ಬೇರೆಯರಿಗೆ ಹರಸಿ ಬರೆದಿದ್ದಾರೆ. ಹನ್ನೆರಡು ಕೃತಿಗಳ ವಿಮರ್ಶೆ ಬರೆದಿದ್ದಾರೆ. ಒಟ್ಟಿಗೆ ನೂರಕ್ಕೂ ಮಿಕ್ಕುವ ಈ ಲೇಖನಗಳು ಒಟ್ಟಾಗಿ ಅಚ್ಚಾಗುತ್ತಿವೆಯೆಂದು ಕೇಳುತ್ತೇವೆ. ಈ ಬೃಹತ್ಸಂಕಲನಕ್ಕೆ ಭಾರತ ಸರಕಾರವೂ ಪ್ರಾಂತೀಯ ಸರಕಾರವೂ ಉದಾರವಾಗಿ ಧನ ಸಹಾಯವಿತ್ತರೆ; ಸಾಹಿತ್ಯ ವಿಮರ್ಶಕ, ಸಂಶೋಧಕರಿಗೆ ಹಾಗೂ ವಾಚಕ ವರ್ಗಕ್ಕೆ ಉಪಕರಿಸಿದಂತೆ. (ಇತ್ತೀಚೆಗೆ ಪ್ರಕಟವಾದ ಶ್ರೀ ತ. ಸು. ವೆಂಕಣ್ಣಯ್ಯನವರ ಸ್ಮಾರಕ ಗ್ರಂಥವಾದ, ಒಂದು ಸಾವಿರ ಪುಟದಷ್ಟು ಮಹತ್ತಾದ, 'ಸವಿನೆನಪು' ಹೊತ್ತಗೆಗೆ ಸರಕಾರವು ನೆರವಿತ್ತುದರಿಂದಲೆ ಅದು ಸುಲಭವಾಗಿ ದೊರೆಯುವಂತಾಗಿದೆ) ಆ ಮೇರೆಗೆ, ಶ್ರೀ ಡಿ. ಎಲ್. ನರಸಿಂಹಾಚಾರ್ಯರ ಎಲ್ಲಾ ಲೇಖನಗಳ ಒಂದು ಸಂಪುಟದಿಂದ ಸಾಹಿತ್ಯ ರಚನೆ–ವಿಮರ್ಶೆ—ಸಂಶೋಧನೆಗಳ ಅಭ್ಯಾಸಿಗಳಿಗೆ ಕೂಡಾ ಸಹಕರಿಸಿದಂತಾಗುತ್ತದೆಯೆಂದು ಹೇಳಿದರೆ ಅತಿಶಯೋಕ್ತಿಯಲ್ಲ!

ಸಾಹಿತ್ಯದ ಮುನ್ನಡೆಗೆ ವಿಮರ್ಶೆ–ಸಂಶೋಧನೆಗಳು (ಗ್ರಂಥ ಸಂಪಾದನೆ ಕೂಡಾ) ಹಿನ್ನೆಲೆಯಾಗಿವೆ. ಶ್ರೀ ಡಿ. ಎಲ್. ನರಸಿಂಹಾಚಾರ್ಯರು ವಿಮರ್ಶಕರೆನ್ನುವುದಕ್ಕಿಂತಲೂ ಸಂಶೋಧಕರೆಂಬುದೇ ಹೆಚ್ಚು ಒಪ್ಪುತ್ತದೆಯೆನ್ನಬೇಕು. ಶಬ್ದಗಳ ಮೂಲರೂಪ, ಅರ್ಥ ವಿವರಣಗಳು ಕಾಲಾಂತರದಲ್ಲಿ ಹೇಗೆ ಮಾರ್ಪಾಡಾಗಿವೆ; ಇತರ ಭಾಷೆಗಳಲ್ಲಿ ತತ್ಸದೃಶಗಳೇನಿವೆ; ಯಾವ ಕೃತಿಗಳಲ್ಲಿ ಅವೆಲ್ಲಾ ಬಳಸಿವೆಯೆಂಬುದು ಅವರಿಗೆ ಹೆಚ್ಚು ರುಚಿಸುತ್ತಿತ್ತು. ಅಂತೆ, ಕೆಲವು ಕವಿಗಳ—ರಾಜರ ಕೃತಿಗಳ ಬಗ್ಗೆ ವಿಶೇಷಾಸಕ್ತಿಯಲ್ಲಿ ವಿಷಯಗಳನ್ನು ಕಲೆ ಹಾಕಿ ಬರೆದಿದ್ದಾರೆ. ಈ ಲೇಖನಗಳ ಬಗೆಗೆ ಹಲವು ಮಂದಿ ಮೆಚ್ಚಿದ್ದಾರೆ; ಕೆಲವು ಬರೆಹಗಳ ಬಗೆಗೆ ತುಸ ಚರ್ಚೆಗಳೂ ಬಂದಿವೆ. ಆದರೆ, ಸರ್ವತೋಮುಖವಾಗಿ (ಪೂರ್ವಪಕ್ಷದವುಗಳಾಗಿಯೋ, ಉತ್ತರ ಪಕ್ಷದವುಗಳಾಗಿಯೋ) ಇವು ಸಾಹಿತ್ಯ ವಿವೇಚಕರಿಗೆ ಮುನ್ನಡೆಗೆ ಪ್ರೇರಕವಾಗಿವೆ. ಅಂತೂ, ಕನ್ನಡ ಸಾಹಿತ್ಯಾಕಾಶದಲ್ಲಿ ಎಂದೂ ಮರೆಯಲಾಗದ—ಮರೆಯಲಾರದ ವ್ಯಕ್ತಿತ್ವವು ಈ ಕೃತಿಗಳೆಂಬ ಕಿರಣ ಜಾಲಗಳಿಂದ ಶ್ರೀ ಡಿ. ಎಲ್. ನರಸಿಂಹಾಚಾರ್ಯರ ಪಾಲಿಗೆ ಒದಗಿದೆ. ಅವರ ಊರ ಹೆಸರು 'ದೊಡ್ಡ ಬೆಲೆ', ಅವರ ಲೇಖನಗಳೆಲ್ಲಾ 'ದೊಡ್ಡ ಬೆಲೆ'ಯವು; 'ಹೆಚ್ಚು ಬೆಲೆ'ಯವುಗಳೆನ್ನಲಡ್ಡಿಯಿಲ್ಲ!

ಸಂಶೋಧನೆಯ ಬಗೆಗೆ ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಹೆಚ್ಚು ನಿಷ್ಠೆಯುಳ್ಳವರಾಗಿದ್ದರು. ಅವರು ಪ್ರತಿಸಲ–ಎಲ್ಲಾದರೂ—ಚಾರಿತ್ರಿಕ ಮಹಾಸಭೆ (ಕಾನ್ಫರೇನ್ಸ್)ಗಳಿಗೆ ಹೋಗುತ್ತಿದ್ದರೆಂಬುದೇ ಇದಕ್ಕೆ ನಿದರ್ಶನವಾಗಿದೆ. ಅಂತೆ, ಸಂಶೋಧನಾತ್ಮಕ ಲೇಖನಗಳ ಒಂದು ಸಂಕಲನಕ್ಕೆ ಅವರು ಬರೆದ "ಮುನ್ನುಡಿ"ಯ ಮಾತುಗಳೂ ಇಲ್ಲಿ ಸಾಕ್ಷಿಗಳಾಗಿವೆ. (ಹುಬ್ಬಳ್ಳಿಯ "ಸಾಹಿತ್ಯ ಭಂಡಾರ"ವು 1957ರಲ್ಲಿ ಪ್ರಕಟಿಸಿದ ನನ್ನ ಲೇಖಗಳ ಸಂಕಲನ 'ಸಾಹಿತ್ಯದ ಹಿನ್ನೆಲೆ'ಯ ಬಗೆಗೆ ದೀರ್ಘವಾದ "ಮುನ್ನುಡಿ" ಬರೆದು ದಯಪಾಲಿಸಿದ್ದಾರೆ. ಈ ಸಂಕಲನದ ಹೆಸರನ್ನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿಯೂ ಅಳವಡಿಸಿದ್ದಾರೆ), ಈ 'ಮುನ್ನುಡಿ' ಬರೆದು ಕೊಡಬೇಕೆಂದು, ವ್ಯಕ್ತಿಪರಿಚಯೂ ದಿಗಳಿಲ್ಲದೆ ಕೇವಲ ಲೇಖನವಾಚನದ ಮೂಲಕ ಕೇಳಿದಾಗ, ಕೃಪೆಯಿಂದ ಬರೆದು ನೀಡಿದ ರೀತಿ ನೆನೆವಾಗ ಇವರು ಕಿರಿಯರಲ್ಲಿ ವ್ಯಾಸಂಗಕಾರರಲ್ಲಿ ತರತಮವಿರಿಸದೆ–ಆತ್ಮೀಯರಾಗಿ ನಡೆದುಕೊಳ್ಳುವುದೆಂಬುದು ಸುವ್ಯಕ್ತವಾಗುತ್ತದೆ; ಇವರ ಸೌಜನ್ಯ ಇಲ್ಲಿ ಸ್ಪಷ್ಟ!

ಹಿರಿಯರಲ್ಲಿ ಇವರು ಹೇಗೆ ಗೌರವದಿಂದ ವರ್ತಿಸುತ್ತಿದ್ದರೆನ್ನಲು ಇತ್ತೀಚೆಗೆ (ಕಳೆದ ಇಸ್ವಿಯ ಕೊನೆಗೆ) ಪ್ರಕಟವಾದ ದಿ. ಪ್ರಾಧ್ಯಾಪಕ ತ. ಸು ವೆಂಕಣ್ಣಯ್ಯನವರ ಸ್ಮಾರಕ ಗ್ರಂಥವಾದ 'ಸವಿನೆನಪು' ಬೃಹದ್ಗ್ರಂಥದಲ್ಲಿ ಬರೆದುದನ್ನು ನೋಡಬಹುದು:

"ಹಿರಿಯ ಗುರುಗಳಾದ ಬಿ. ಎಂ. ಶ್ರೀಕಂಠಯ್ಯನವರು ಕನ್ನಡ ವಿದ್ಯೆಯಲ್ಲಿ ಪರಿಣತಿಯನ್ನು ಪಡೆಯಲು ಮಾರ್ಗದರ್ಶಕರಾಗಿದ್ದರೆ, ವೆಂಕಣ್ಣಯ್ಯನವರು ನಾನು ಮನುಷ್ಯನಾಗಿ ಮನುಷ್ಯರಂತೆ ಬಾಳುವುದನ್ನು ಕಲಿಸಿಕೊಟ್ಟರು. ಯಾವ ಪುಣ್ಯದ ಫಲವೋ ನನಗೆ ಅವರ ಸತ್ಸಂಗ ಲಭ್ಯವಾದುದು" (ಪುಟ ೬೧).

ಮಂಗಳೂರಲ್ಲಿರುವ ಸರಕಾರಿ ಕಲಾಶಾಲೆಯಲ್ಲಿ ಒಂದು ಭಾಷಣಕ್ಕಾಗಿ (ರುದ್ರಭಟ್ಟನೆಂಬ ಕವಿಯ ಬಗೆಗೆ) ಶ್ರೀ ಡಿ.ಎಲ್. ನರಸಿಂಹಾಚಾರ್ಯರು (1957ರಲ್ಲಿ) ಬಂದಿದ್ದರು; ಅವರು ಆಗ ಉಳಕೊಂಡಿದ್ದ "ವಿಶ್ವಭವನ"ದ ಉಪ್ಪರಿಗೆಯ ಕೋಣೆಯಲ್ಲಿ ನಾನು ಪ್ರವೇಶಿಸಿ, ನನ್ನ ಹೆಸರನ್ನು ಸೂಚಿಸಿದಾಗ ಅತ್ಯಾದರದಿಂದ ಬರಮಾಡಿದರು. (ನನ್ನ 'ಸಾಹಿತ್ಯದ ಹಿನ್ನೆಲೆ'ಗೆ ಆಗ ಬಂದಾಗ, 'ಮುನ್ನುಡಿ' ಬರೆದು ಕಂಡು ಕೊಡುವೆನೆಂದು ಶ್ರೀಯುತರು ಹೇಳಿದಂತೆ ಕಾಣಲು ಹೋದೆನು). 'ಒಂದು ಹಸ್ತಿಯಲ್ಲಿ ಕಳುಹುವೆ'ನೆಂದು ಅವರ ಉತ್ತರವಾದುದು; ಅಲ್ಲಿಂದ ಮತ್ತೆ ಶ್ರೀ ಆಚಾರ್ಯರು ಮಂಜೇಶ್ವರಕ್ಕೈದಿ, ಶ್ರೀ ಗೋವಿಂದ ಪೈಯವರನ್ನು ಕಂಡಿದ್ದಾರೆಂದೂ ಕೇಳಿದ್ದೇನೆ. ಈ ಸಂಗತಿಗಳಿಂದ, ಕಿರಿಯರಲ್ಲಿ ಅವರು ಇರಿಸುವ ವಾತ್ಸಲ್ಯವೂ, ಹಿರಿಯರಲ್ಲಿ ಇರಿಸುವ ಆದರವೂ ವೇದ್ಯವಾಗುತ್ತವೆ.

ಮತ್ತೆ ತುಸ ಹೊತ್ತಿನಲ್ಲಿ ಶ್ರೀ ನರಸಿಂಹಾಚಾರ್ಯರು ಅಲ್ಲಿಂದ ಕಲಾಶಾಲೆಗೆ ಹೊರಟರು. ನಾನೂ ಅವರೊಂದಿಗೆ ಹೊರಡಲುದ್ಯುಕ್ತನಾದೆನು. 'ನಿಮಗೆಲ್ಲಾ ಈ ಭಾಷಣಗಳೇಕೆ?' ಎಂದು ಮಂದಹಾಸದೊಡನೆ ಶ್ರೀಯುತರು ಹೇಳುವಾಗ, 'ಅಭ್ಯಾಸಕ್ಕಾಗಿ ಅಲ್ಲಿ ನಾನೂ ಬರುವೆ'ನೆಂದಾಗ, ತುಂಬುನಗೆಯಿಂದ ಪುನಃ ನಕ್ಕರು! 'ಸಮಾನಶೀಲ ವ್ಯಸನೇಷು ಸಖ್ಯಂ' ಎಂಬ ಸೂಕ್ತಿ ಇಲ್ಲಿ—ಶ್ರೀ ಆಚಾರ್ಯರ ವರ್ತನೆಯಲ್ಲಿ—ಸ್ಫುಟಾರ್ಥವಾಗಿದೆ!

ಶ್ರೀ ಡಿ. ಎಲ್. ಎನ್. ಇನ್ನೂ ಹತ್ತಾರು ವರ್ಷ ಬಾಳುತ್ತಿದ್ದರೆ ಹಲವಾರು ಉತ್ತಮ ಕೃತಿಗಳ—ವಿಚಾರಗಳ ಪ್ರಚಾರಕ್ಕೆಡೆಯಾಗುತ್ತಿತ್ತೆಂದು ಆವಾರಿಗೂ ತೋರದಿರದು. 'ಮರಣಂ ಪ್ರಕೃತಿಃ ಶರೀರಿಣಾಂ' ಎಂಬ ಸೂಕ್ತಿಯಂತೆ, ಪಾಂಚ ಭೌತಿಕ ದೇಹವು ಬಿಟ್ಟು ಹೋಗದಿರದು. ಆದರೂ ಶ್ರೀಯುತ 'ದೊಡ್ಡಬೆಲೆ' ನರಸಿಂಹಾಚಾರ್ಯರು ಇದುವರೆಗೆ ಪ್ರಕಟಿಸಿದ ಕೃತಿಗಳು–ವಿಚಾರಗಳು - ಸಾಹಿತ್ಯ— ಸಂಶೋಧನ–ವಿಮರ್ಶನ ಪ್ರಪಂಚದಲ್ಲಿ ಚಿರಸ್ಥಾಯಿ ಕೀರ್ತಿಯನ್ನು ಪಡೆದಿವೆ. ಅವೆಲ್ಲಾ ನಮಗೆ ಆದರ್ಶವಾಗಿವೆಯೆಂಬುದು ಸಮಾಧಾನಕಾರಕವಾಗಿದೆ. ಈ ಸನ್ಮಾರ್ಗದಲ್ಲಿ ನಾವೆಲ್ಲಾ ನಾಗುವಂತೆ ಶ್ರೀದೇವರು ಅನುಗ್ರಹಿಸಲೆಂಬುದೇ ನಮ್ಮ ಪ್ರಕೃತೋಚಿತವಾದ ಹಾರೈಕೆಯಾಗಿದೆ! ಇತಿ ಶಮ್!

ಪಿ. ಸೂ. ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಬರೆದ ಲೇಖನಗಳು, ಮುನ್ನುಡಿಗಳು, ಹಾಗೂ ಅವರ ಭಾಷಣಗಳ ಸಂಕಲನವು ಸಾವಿರದ ನೂರು ಪುಟಗಳಷ್ಟು ಬೃಹದಾಕಾರದ ಪುಸ್ತಕ ರೂಪದಲ್ಲಿ ಮೈಸೂರಲ್ಲಿ ಶ್ರೀ ಡಿ. ವಿ. ಕೆ. ಮೂರ್ತಿಯವರಿಂದ ಸದ್ಯ ಪ್ರಕಟವಾಗಲಿದೆಯೆಂದೂ ಕೇಳುತ್ತದೆ. ಹಾಗೆ, 'ಪ್ರಜಾವಾಣಿ'ಯ ಶ್ರೀ ಟಿ. ಎಸ್. ವೈಕುಂಠರಾಜು, ಅವರ ಸಂಚಾಲಕತ್ವದಲ್ಲಿ ಶ್ರೀ ಡಿ. ಎಲ್. ಎನ್. ಅವರ ಹೆಸರಿನ ನಿಧಿಯ ಅರ್ಪಣೆಯ ವಿಚಾರ ಕೇಳುತ್ತದೆ. ಕನ್ನಡದ ಹಿರಿಯ ವಿದ್ವಾಂಸರ ಹೆಸರಲ್ಲಿ ಇನ್ನಷ್ಟು ಕೆಲಸಗಳು ನಡೆದು, ಕನ್ನಡಿಗರ ಜ್ಞಾನ ವಿನಿಮಯ ಪ್ರಸಾರಗಳಿಗೆಡೆಯಾಗುವುದು ಸಂತಸದ ಸಂಗತಿಯೇ ಸೈ!

●●

'ಪೆಟ್ಟಿಗೆಯಲ್ಲೊಂದು ಹೆಣ'

(ಎರಡನೇ ಪುಟದಿಂದ)

ನು ಕೊಟ್ಟ ಹೇಳಿಕೆಯಲ್ಲಿ ತನ್ನ ತಪ್ಪನ್ನು ಒಪ್ಪಿಕೊಂಡಿರಲಿಲ್ಲ. ಅನ್ಯರ ಹೆಗಲ ಮೇಲೆ ಹೊರಿಸಲು ಯತ್ನಿಸಿದ್ದಳು. ಅವಳ ಹೇಳಿಕೆಯ ಪ್ರಕಾರ ಗಂಡನ ಸಾವು ಆಕಸ್ಮಿಕ. ಆಕಸ್ಮಿಕವೆನ್ನುವುದನ್ನು ತಳ್ಳಿ ಕೊಟ್ಟರೆ ಯಶಪಾಲನ ಕೊಲೆಯಾಯಿತೆನ್ನುವುದಕ್ಕೆ ಸಾಕ್ಷಿ ಇಲ್ಲ – ಪ್ರಾಸಿಕ್ಯೂಷನ್ ಸಿದ್ಧಾಂತವನ್ನು ವೈದ್ಯರ ಹೇಳಿಕೆ ಅಲುಗಾಡಿಸುತ್ತದೆ.

ಯಶಪಾಲನ ಸಾವು, ಆತನ ಶವದ ಸಾಗಾಣಿಕೆ ಬಲವತ್ತರವಾದ ಶಂಕೆಯನ್ನು ಹುಟ್ಟಿಸುವುದು ನಿಜ. ಈ ದೇಶದಲ್ಲಿ, ಆಕಸ್ಮಿಕ ಸಾವುಗಳನ್ನು ಹಳೆಯ ಹಗೆ ತೀರಿಸಿಕೊಳ್ಳಲು ಬಳಸುವುದನ್ನು ನಾವು ಕಂಡಿದ್ದೇವೆ. ಯಶಪಾಲ ಸಹಜವಾಗಿಯೇ ಸತ್ತಿರಬಹುದು. ಆದರೆ ಅದನ್ನು ತಮ್ಮ ವಿರುದ್ಧ ತನುಗಾಗದವರು ಬಳಸಿಯಾರು ಎನ್ನುವ ಪಲ್ಲವಿಂದರಳ ಭಯ ಸಹಜವಾದುದೆಂದು ಹೇಳಬಹುದು.

ಈ ಕಾರಣಗಳನ್ನು ಮುಂದು ಮಾಡಿ ಸುಪ್ರೀಂ ಕೋರ್ಟು, ಪಲ್ವಿಂದರಳನ್ನು ಖುಲಾಸೆ ಮಾಡಿತು— ತಲೆ ತಪ್ಪಿಸಿಕೊಂಡ ಮಹೀಂದ್ರ ಕೊನೆಯತನಕ ಪೋಲಿಸರಿಗೆ ಸಿಗಲಿಲ್ಲ. ಆತ ಕಾನೂನಿನ ಕಕ್ಷೆಯ ಆಚೆಗೇ ಉಳಿದುಕೊಂಡ.

●●

ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಆಗಾಗ್ಗೆ ಹೊಸ ಹೊಸ ಸ್ಟೋಕಿನಿಂದ
ಕೊಲಿಟಿಯಲ್ಲಿ, ಸ್ಟೈಜಿನಲ್ಲಿ, ಕ್ರಯದಲ್ಲಿ ಪರಿಶೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂತಾ ಕೆರೆಟ ತೂಕದಲ್ಲಿ
ಬೇಕಾದವರು ಮುಂದಾಗಿ ಬಂದು ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

NAVAYUGA 1-7-1971

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಸಿ. ವಿ. ರಾಮನ್ ಹೇಳುತ್ತಾರೆ

ಜ್ಯಾಮಿತಿಯಲ್ಲೂ ಪ್ರಕೃತಿಯ ಲಾಸ್ಯವಿದೆ

ಜೀವನ ರೂಪಿಸುವಲ್ಲಿ ಪುಸ್ತಕಗಳ ಪಾತ್ರ ಹಿರಿದು. ಬುದ್ಧಿ ಬಲಿಯುವ ಕುಮಾರಾವಸ್ಥೆಯಲ್ಲಿ ಅವುಗಳ ಮಹತ್ವ ಮತ್ತೂ ಹೆಚ್ಚು. ಮನೆ ಮತ್ತು ಶಾಲೆಗಳಲ್ಲಿ ದೊರೆಯುವ ವಾತಾವರಣದ ಪ್ರಭಾವ ವ್ಯಕ್ತಿಯ ಚರಿತ್ರ ನಿರ್ಮಾಣದ ಮೇಲೆ ಪ್ರಭಾವ ಬೀರಿಯೇ ತೀರುತ್ತವೆ. ಪುಸ್ತಕಗಳು ಮನೆ-ಮಠಗಳಲ್ಲಿ ಮಕ್ಕಳಿಗೆ ದೊರೆಯುವ ಭೋಜನವೆನ್ನ ಬಹುದು. ಶಾಲೆ-ಕಾಲೇಜುಗಳಲ್ಲಿ ಕಲಿಯುವ ಪುಸ್ತಕಗಳು ಜೀವನ ಮಂದಿರಕ್ಕೆ ಜೋಡಿಸಿದ ಕಂಬಗಳು. ಈ ಪುಸ್ತಕವನ್ನು ಕಲಿಯಲೇ ಬೇಕೆಂಬ ಅನಿವಾರ್ಯ ನಿಯಮ ಅಹಿತಕಾರಿ. ಜೀವನದಲ್ಲಿ ಈ ನಿಯಮ ವಿಪರೀತ ಪರಿಣಾಮ ಬೀರಲೂ ಬಲ್ಲದು. ಅನಿವಾರ್ಯತೆಯ ನಿಯಮಗಳನ್ನು ಮಾಡದೆ, ಅವರವರ ಅಭಿರುಚಿಗೆ ತಕ್ಕಂತೆ ಓದುವ ಅವಕಾಶ ಕಲ್ಪಿಸಿಕೊಟ್ಟರೆ, ಜೀವನವನ್ನು ತಿದ್ದಿತೀಡುವ ಕೆಲಸವು ಸರಳವಾಗುವುದು. ಶಿಕ್ಷಣ ವಿಚಕ್ಷಣರು ಮನೋವೈಜ್ಞಾನಿಕ ವಿಧಾನದಿಂದ ಈ ಸತ್ಯ ತತ್ವವನ್ನು ಪರಿಶೀಲಿಸುತ್ತಿದ್ದಾರೆ.

ನನ್ನ ಬಗ್ಗೆ ನಾನೊಂದು ಮಾತು ಹೇಳಬಲ್ಲೆ. ನಾನು ಎಫ್. ಎ. ಯಲ್ಲಿ ಓದುತ್ತಿರುವಾಗ, ರಾಬರ್ಟ್‌ಲುಯಿಸ್ಟೀವೆನ್ಸನ್ನನ ಸುಪ್ರಸಿದ್ಧ ಕಾದಂಬರಿ "ಕಿಡ್‌ನಾಪ್ಡ್" ನಿಯತವಾಗಿತ್ತು. ಇದೇ ಕಾದಂಬರಿಯನ್ನು ನಾನು ಅನೇಕ ಬಾರಿ ವರ್ಗಗಳಲ್ಲಿ ಓದಿದೆ. ಅದರ ಮೇಲೆ ನನ್ನ ಅಧ್ಯಾಪಕರ ವ್ಯಾಖ್ಯಾನಗಳನ್ನು ಕೇಳಿದೆ. ಏಕಾಕಿಯಾಗಿಯೂ ಹಲವು ಬಾರಿ ನಾನೀ ಪುಸ್ತಕವನ್ನೋದಿದೆ. ಅಂದು ನಾನು ಕೊಂಡು ಕೊಂಡಿದ್ದ 'ಕಿಡ್‌ನಾಪ್ಡ್'ನ ಪ್ರತಿಯೆಲ್ಲೋ ಹೇಗೋ ಕಳೆದು ಹೋಯ್ತು. ಒಂದು ದಿನ ನಾನು ರೇಲ್ವೆ ನಿಲ್ದಾಣದಲ್ಲಿ ಬುಕ್‌ಸ್ಟಾಲ್ ಬಳಿ ನಿಂತಿದ್ದೆ. ತತ್‌ಕ್ಷಣವೇ ನನ್ನ ದೃಷ್ಟಿ 'ಕಿಡ್‌ನಾಪ್ಡ್'ನತ್ತ ತಿರುಗಿತು. ಈ ಗ್ರಂಥ ಉತ್ತಮ ಕಾಗದದ ಮೇಲೆ ಉತ್ತಮವಾಗಿಯೇ ಮುದ್ರಿತವಾಗಿತ್ತು. ಅದರ ಪ್ರಾವಣವೂ ಮನೋಹರವಾಗಿತ್ತು. ನಾನು ಪರವಶನಾಗಿ ಬಿಟ್ಟೆ; ಆ ಪುಸ್ತಕವನ್ನು ಕೊಂಡುಕೊಂಡೆ. ನೇರಾಗಿ ಮನೆಗೆ ಮರಳಿದೆ. ಅದನ್ನೋದುವ ಲವಲವಿಕೆ ತುಂಬಿ ತುಳುಕಾಡುತಿತ್ತು. ತಿನ್ನದೆ ಉಣ್ಣದೆ ನಾನದನ್ನು ಓದತೊಡಗಿದೆ. ನಂಬಿದರೆ ನಂಬಿ, ಬಿಟ್ಟರೆ ಬಿಡಿ, ನಾನು ಆ ಕಾದಂಬರಿಯ ಕಥೆ ಮತ್ತು ಅದನ್ನು ಬರೆದ ಶೈಲಿಯಿಂದ ಬಹಳಷ್ಟು ಪ್ರಭಾವಿತನಾದೆ; ರಾತ್ರೆ ಮಲಗುವುದಕ್ಕೆ ಮೊದಲೇ ಗ್ರಂಥವನ್ನು ಮುಗಿಸಿ ಬಿಟ್ಟೆ. ಅನಂತರ ಸ್ಟೀವನ್ಸನ್ನನ ಎಲ್ಲ ಸಾಹಿತ್ಯ ಕೃತಿಗಳ ಪ್ರತಿಗಳನ್ನು ಕೊಂಡುಕೊಂಡೆ; ಅತ್ಯಾಸಕ್ತಿಯಿಂದ ಓದಿದೆ. ನನ್ನ ಮಾತುಗಾರಿಕೆ ಮತ್ತು ಬರವಣಿಗೆಯಲ್ಲಿ ಜನತೆ ಆಕರ್ಷಣೆಯನ್ನೂ ಲಾವಣ್ಯವನ್ನೂ ಗುರುತಿಸುತ್ತದೆ. ಈ ಆಕರ್ಷಣೆ ಮತ್ತು ಲಾವಣ್ಯಗಳು ಸ್ಟೀವನ್ಸನ್ನನು ನನಗಿತ್ತ ವರದಾನ.

ನನ್ನ ಹದಿನೆಂಟನೆಯ ವಯಸ್ಸಿನಲ್ಲೇ ವಿಶ್ವವಿದ್ಯಾಲಯದ ಎಲ್ಲ ಪರೀಕ್ಷೆಗಳಲ್ಲೂ ಉತ್ತೀರ್ಣನಾದೆ. ಆ ವೇಳೆಗೆ ನನಗೆ ನಾಲ್ಕು ಭಾಷೆಗಳ ಜ್ಞಾನವಿತ್ತು. ಇತರ ವಿದ್ಯಾರ್ಥಿಗಳಂತೆಯೇ ನಾನೂ ಅನೇಕ ಪುಸ್ತಕಗಳನ್ನು ಓದಿದ್ದೆ, ಆದರೆ, ಮೂರರ ಪ್ರಭಾವ ನನ್ನ ಮೇಲೆ ಅಚ್ಚಳಿಯದೆ ಬಿದ್ದಿದೆ.

ಎಡ್ವಿನ್ ಅರ್ನಾಲ್ಡನು ಆಂಗ್ಲ ಕವಿ. ಆವನು ಪೂನಾದ ದಕ್ಷಿಣ ಕಾಲೇಜಿನಲ್ಲಿ ಪ್ರಿನ್ಸಿಪಲ್ಲನಾಗಿದ್ದನು. ಆವನು 'ಬುದ್ಧ ಚರಿತ್ರೆ'ಯನ್ನು ಆಂಗ್ಲ ಭಾಷೆಯಲ್ಲಿ ಅನುವಾದಿಸಿದ್ದನು. ಇದು ಆತನ ಜೀವನದ ಸಾಧನೆಯಾಗಿತ್ತು. ಈ ಗ್ರಂಥದಿಂದ ಪ್ರಾಚೀನ ಭಾರತ ಮತ್ತು ಅದರ ತತ್ವ ಚಿಂತನೆಯ ಅಲ್ಪಜ್ಞಾನ ನನಗಾಯ್ತು. ಇದರ ಪ್ರಭಾವ ಯುರೋಪಿನ ಲೇಖಕರ ಮತ್ತು ಐರೋಪ್ಯ ಸಾಹಿತ್ಯದ ಮೇಲೂ ಬಿತ್ತು. ಸಿದ್ಧಾರ್ಥ ನಿರ್ವಾಣಗಾಥೆಯು ನನ್ನನ್ನು ಮುಗ್ಧಗೊಳಿಸಿತು. ಆವನ ಸತ್ಯಶೋಧನೆ ಜಗತ್ತಿಗೆ ಮಹತ್ವದ ಕೊಡುಗೆ. ಸತ್ಯಶೋಧನೆಗಾಗಿ ಏನು ಮಾಡಬೇಕೆಂಬ ಪ್ರೇರಣೆ ನನಗೀ ಪುಸ್ತಕ ನೀಡಿತು. ಭಾರತದಲ್ಲಿ, ಇಂದಿಗೂ ಈ ಸತ್ಯಶೋಧನೆ ಪ್ರಾಚೀನ ಪಂಡಿತರ ಮನೆತನದಲ್ಲಿ ಜೀವಂತವಾಗಿ ಉಳಿದಿದೆ.

ಯುಕ್ಲಿಡನು ಜ್ಯಾಮಿತಿಯ ಮೇಲೆ ಬರೆದ ಪುಸ್ತಕವು ವಿಶ್ವ ವಾಙ್ಮಯದ ಮಹತ್ವಪೂರ್ಣ ರಚನೆ. ಈ ಗ್ರಂಥದ ಕ್ರಮಬದ್ಧತೆ ಇದರ ಉಪಯೋಗವನ್ನು ಕಡಿಮೆ ಮಾಡಿದೆ; ಆದರೆ, ವಿದ್ವಾಂಸರ ಅಭಿಪ್ರಾಯದಂತೆ ಈ ಗ್ರಂಥವು ಶತಾಬ್ದಿಗಳಿಂದಲೂ ಅನೇಕ ಆವೃತ್ತಿಗಳನ್ನು ಕಂಡಿದೆ. ಈ ಗ್ರಂಥದಿಂದ ನಮಗೆ ಬೌದ್ಧಿಕ ಅನುಶಾಸನ ಪ್ರಾಪ್ತವಾಗುವುದೆಂದು ನನ್ನ ಅಭಿಮತ. ಉದಾಹರಣೆಯ ರೂಪದಲ್ಲಿ ಹೀಗೆ ಹೇಳ ಬಹುದು- ಯುಕ್ಲಿಡನ ಶಿಷ್ಯ ಒಂದು ಮರವನ್ನು ತನಗಿಷ್ಟ ಕಂಡಂತೆ ನೋಡುತ್ತಾನೆ. ಅದರ ಶಾಖೆ ಮತ್ತು ಪತ್ರಗಳ ಸೌಂದರ್ಯವನ್ನು ನೋಡ ನೋಡುತ್ತ ಅವು 'ಮರ'ದಿಂದ ಮಾಡಲ್ಪಟ್ಟವೆಂಬುದನ್ನೂ ಆತ ಮರೆತು ಬಿಡುತ್ತಾನೆ. ಜ್ಯಾಮಿತಿಯ ಮಹತ್ವ ಗೌಣವೇನಲ್ಲ. ರೇಖೆಗಳಿಗಿಂತ ಹೆಚ್ಚಾಗಿ ಅವುಗಳ ಸ್ವರೂಪ, ವಕ್ರರೇಖೆಗಳು ನಮಗೆ ಅಸೀಮ ಜ್ಞಾನತಂದೊದಗಿಸುತ್ತವೆ. ನಮ್ಮ ವಿವಿಧ ಇಂದ್ರಿಯಗಳಿಗೆ ಪುಷ್ಟಿದಾಯಕ ಆಹಾರ ಕೊಡುತ್ತವೆ. ಗಣಿತದ ಎಲ್ಲ ಶಾಖೆಗಳೂ ನಮ್ಮ ಸ್ಥೂಲ ಕರ್ಮ ಮತ್ತು ಜ್ಞಾನೇಂದ್ರಿಯಗಳಿಗೆ ಹಾಲೂಡುತ್ತವೆ. ಯೂನಾನಿನ ಆಚಾರ್ಯರು ಬೌದ್ಧಿಕ ಅನುಶಾಸನಕ್ಕೆಂದೇ ಇದನ್ನು ನಿರ್ಮಿಸಿ ಮಾನವನಿಗೆ ಅಪಾರ ಸೇವೆಮಾಡಿದರು.

ಛಾತ್ರವಾಸದಲ್ಲಿ ಜ್ಯಾಮಿತಿ ಕಲಿಯುವುದು ನನಗೊಂದು ದೊಡ್ಡ ಸಮಸ್ಯೆಯೇ ಆಗಿತ್ತು. ಅದರ ಕ್ರಮ ಬದ್ಧತೆಯು ನನ್ನನ್ನೂ ಗಾಬರಿಗೊಳಿಸಿತ್ತು. ಕೆಲ ವರ್ಷ ಕಳೆಯುತ್ತಲೇ ನನ್ನ ಅಭಿಪ್ರಾಯ ತಪ್ಪೆಂದು ಮನವರಿಕೆಯಾಯ್ತು. ಸಾಮಾನ್ಯ ಜ್ಞಾನ ಮತ್ತು ಜ್ಯಾಮಿತಿಗಳ ನಡುವೆ ಅಸಾಧಾರಣ ಸಂಬಂಧವಿದೆ. ಪ್ರಕೃತಿಯ ಪ್ರತಿಯೊಂದು ವಸ್ತು, ಮಾನವ ನಿರ್ಮಿತ ಪ್ರತ್ಯೇಕ ಸ್ಫಟಿಕ, ಹುಟ್ಟಿದ ಎಲೆ ಹೂ ಹಣ್ಣು, ಭೂಮಿ, ವಾಯು, ಜಲಗಳಲ್ಲಿ, ದೃಗ್ಗೋಚರವಾಗುವ ಒಂದೊಂದೂ ನನಗೆ ಜ್ಯಾಮಿತಿ ಶಾಸ್ತ್ರದ ಸಂದೇಶ ನೀಡುತ್ತಿದೆ. ಯುಕ್ಲಿಡನ ಜ್ಞಾನವು ನನಗೆ ಸಂಗೀತವಶಾಸ್ತ್ರದಂತೆ. ಇದರಲ್ಲಿ ನಾನು ಪ್ರಕೃತಿಯ ಲಾಸ್ಯವನ್ನು ಕಾಣುತ್ತೇನೆ. ಅದು ಅಜ್ಞಾನದ ಪರದೆಯನ್ನು ದೂರ ಸರಿಸಿ ನನಗೆ ಸತ್—ಚಿತ್—ಆನಂದದ ಸಂದೇಶ ಕೊಟ್ಟಿದೆ ಕರ್ನಾಟಕ ಸಂಗೀತದಲ್ಲಿ ಇದು ಅಸಾಧಾರಣ.

ಈ ವೈಜ್ಞಾನಿಕ ಯುಗದಲ್ಲಿ ಪ್ರೊಫೆಸರ್ ಹಿಲ್ಮ್ ಹೋಲ್ಟ್ಸ್ ಟರ್ಮನ್ ತ್ಯುಡವಿಶ್‌ನ ಹೆಸರನ್ನು ಅತ್ಯಂತ ಶ್ರದ್ಧಾಪೂರ್ವಕ ಎತ್ತಿಕೊಳ್ಳುತ್ತೇವೆ. ಹತ್ತೊಂಬತ್ತನೆಯ ಶತಮಾನದಲ್ಲಿ ಭೌತಿಕ ವಿಜ್ಞಾನವನ್ನು ಉನ್ನತಸ್ತರಕ್ಕೆ ತಂದು ಮುಟ್ಟಿಸಿದ ಶ್ರೇಯಸ್ಸು ಈ ಜರ್ಮನ್ ಅಧ್ಯಾಪಕನದ್ದು. ವಿದ್ಯಾರ್ಥಿಯಾಗಿರುವಾಗಲೇ ನಾನು ಅವನ 'ಸ್ವರಲಹರೀ'ಯೆಂಬ ಪುಸ್ತಕವನ್ನು ಓದಿದ್ದೆ. ಆ ಸಮಯದಲ್ಲೇ ಈ ಪುಸ್ತಕದ ಆಂಗ್ಲ ಅನುವಾದ ಪ್ರಕಟವಾಗಿತ್ತು. ವಿಚಾರಗಳ ಗಂಭೀರತೆ, ಅಂತರ್ದರ್ಶನ, ಮತ್ತು ಭಾಷಾ ಸರಳತೆಗಳು ಬಂಗಾರಕ್ಕೆ ಕಂಪು ಮೂಡಿದಂತಾಗಿತ್ತು. ಶ್ರೀಕೃಷ್ಣನು ವಿಶ್ವರೂಪವನ್ನು ತೋರಿಸಿ ಅರ್ಜುನನಿಗೆ ಮಾಡಿದ ಉಪಕಾರವನ್ನೇ 'ಸ್ವರಲಹರೀ' ನನಗೆ ಮಾಡಿತು. ನನ್ನ ಬೌದ್ಧಿಕ ವಿಕಾಸದಲ್ಲಿ ತ್ಯುಡವಿಶನ ಕೊಡುಗೆ ಅಪಾರವಾದದ್ದು. ಅದರ ವಿವರ ನೀಡುವುದು ಅಸಾಧ್ಯವಾದದ್ದು. ನನ್ನ ಸಂಶೋಧನೆಗಳ ಹಲವು ಕಗ್ಗಂಟುಗಳನ್ನು ಬಿಡಿಸುವಲ್ಲಿ ಈ ಜರ್ಮನ್ ಪುಸ್ತಕದಿಂದ ನೆರವು ಸಿಕ್ಕಿತು ಇದೇ ಮಹಾತ್ಮನ ಇನ್ನೊಂದು ಪುಸ್ತಕ "ದಿ ಫಿಜಿಯಾಲಜಿ ಆಫ್ ವಿಯನ್"ನ್ನು ಓದಬೇಕೆಂಬ ನನ್ನ ಲವಲವಿಕೆ ಬಹುಕಾಲದವರೆಗೆ ಉಳಿಯಿತು. ಅದು ಜರ್ಮನ್ ಭಾಷೆಯಿಂದ ಹೊರಗೆ ಬರಲೇ ಇಲ್ಲ.

●●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

Edited, Printed & Published by K. H. Shetty at the Navayuga Press, Udipi, 3, India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 43

NAVAYUGA

8—7—1971

ಚಾರುಚಂದನ

ರಾಮನಗರದ ನ್ಯಾಸಫಲಕ

ಬೆಂಗಳೂರು ನಗರಪಾಲಿಕೆಯು ಶ್ರೀರಾಮಪುರದಲ್ಲಿ ತನ್ನ ಪ್ರೌಢ ಶಾಲೆಗೊಂದು ಕಟ್ಟಡವನ್ನು ಕಟ್ಟಿಸಲು ನಿರ್ಧರಿಸಿತು. ಅದರ ಶಿಲಾನ್ಯಾಸ ಕಾರ್ಯಕ್ರಮವೂ ಆರಂಭವಾಯ್ತು. ನ್ಯಾಸ ಸಂಬಂಧಿ ವಿವರಗಳನ್ನು ಕೆತ್ತಿ ಸಂಸ್ಥಾಪಿಸುವುದು ಇಂದಿನ ಫ್ಯಾಶನ್. ಇದಕ್ಕೆಂದೇ ನುಣುಪಾದ ಸಿಮೆಂಟು ಕಲ್ಲಿನಲ್ಲಿ ಈ ವಿವರಗಳನ್ನು ಕೆತ್ತಿ ತಯಾರಿಸಿ ಇಡಲಾಗಿತ್ತು. ಅದನ್ನು ಮೊದಲಿಗೆ ಯಾರು ಓದಿದರೋ? ಹೌಹಾರಿದರು. ಮುಂದೆ ಎಲ್ಲರಿಗೂ ಮೋಜೆನಿಸಿತು; ಪತ್ರಿಕೆಗಳಲ್ಲೂ ಅಚ್ಚಾಯಿತು – ಅಲ್ಲಿ ಕೆತ್ತಿದ್ದು ತಪ್ಪೋ ತಪ್ಪು ಎಂಬ ಸತ್ಯ ಸಂಗತಿ.

ಕನ್ನಡದ ರಾಜಧಾನಿ ಬೆಂಗಳೂರು. ಅಲ್ಲಿನ ನಗರಪಾಲಿಕೆಯೇ ಕಟ್ಟಲಿರುವ ಕಟ್ಟಡದ ಶಿಲಾನ್ಯಾಸ ಸಂಬಂಧಿ ಫಲಕ ಕೆತ್ತಿರುವುದು ಇಂಗ್ಲಿಷಿನಲ್ಲಿ—ಅದು ಇಂದಿನ ಮತ್ತೊಂದು ರಿವಾಜು; ಕನ್ನಡ ಬಾರದವರಿಗಾಗಿಯೇ ನಾವು ಅಂಗಡಿ ಬೋರ್ಡು ತೂಗುತ್ತೇವೆ; ಅಂಥವರಿಗಾಗಿಯೇ ಶಾಲೆ ತೆರೆಯುತ್ತೇವೆ; ಇಂಗ್ಲಿಷರಿಗಾಗಿಯೇ ನಮ್ಮ ಸರಕಾರಿ ಕಛೇರಿಗಳಿರುತ್ತವೆ—ಕನ್ನಡ ಮಾತ್ರ ಬಲ್ಲವರು ಈ ಕಪಿ ಫರಂಗಿಯವರಿಗೇ ಶರಣು ಹೋಗಬೇಕು; ಇದು ನಮ್ಮ ಸರಕಾರದ, ನಾಯಕ ಶಿರೋ ಅಥಮಣಿಗಳ ಕನ್ನಡ ಪ್ರೇಮ.

ಸಮರ್ಥ ಇಂಜಿನಿಯರನೊಬ್ಬನೇ ಮೇಲೆ ಹೇಳಿದ ನ್ಯಾಸಫಲಕದಲ್ಲಿ ಕೆತ್ತಬೇಕಾದ ಬರಹವನ್ನು ಬರೆದುಕೊಟ್ಟನಂತೆ. ಇಂಜಿನಿಯರಿಂಗನ್ನು ಇಂಗ್ಲಿಷಿನಲ್ಲಿ ಆತ ಕಲಿತಿದ್ದಾನೆ; ವ್ಯವಹಾರವನ್ನು ಇಂಗ್ಲಿಷಿನಲ್ಲೇ ನಡೆಸಿದ್ದಾನೆ; ಆದರೆ ಆತನಿಗೆ ನಾಲ್ಕು ಲಕ್ಷಣವಾದ ಪದಗಳನ್ನು ತಪ್ಪಿಲ್ಲದೆ ಬರೆದುಕೊಡುವುದು ಸಾಧ್ಯವಾಗಲಿಲ್ಲ. ಅವನು ಇಂಜಿನಿಯರ್; ಭಾಷಾಪಂಡಿತನಲ್ಲ.

ಇಂಜಿನಿಯರ್—ಡಾಕ್ಟರು ಬರೆದರು ಎನ್ನುವುದಕ್ಕಿಂತ ಗೀಚಿದರು ಎಂದು ಹೇಳುವುದು ಸೂಕ್ತವೆನಿಸುತ್ತದೆ. ಸರಕಾರಿ ಆಸ್ಪತ್ರೆಯೊಂದರಲ್ಲಿ ನಡೆದ ಸಂಭಾಷಣೆಯೊಂದು ನೆನಪಿಗೆ ಬರುತ್ತದೆ. ಇದು ಕಂಪೌಂಡರ್–ರೋಗಿಯ ನಡುವೆ ನಡೆದದ್ದು. ರೋಗಿ ಡಾಕ್ಟರರಲ್ಲಿ ಹೋಗಿ ತನ್ನ ಹಾಲಹವಾಲಿಗಳನ್ನು ಗೋಗರೆದು ಅವರಿಂದೊಂದು ಚೀಟಿ ತೆಗೆದುಕೊಂಡು ಬಾಟ್ಲಿಯೊಡನೆ ಕಂಪೌಂಡರನ ಕೈಗಿತ್ತೊಡನೆ ಇದು ಆರಂಭವಾಗುತ್ತದೆ. ಅವನು ರೋಗಿಯನ್ನು ದುರುಗುಟ್ಟಿ ಕೇಳಿದ–'ಯಾರಿಗೆ?'

'ನನಗೇ ಸ್ವಾಮಿ?'

'ಏನು?'

ರೋಗಿ ಡಾಕ್ಟರರ ಮುಂದೆ ಹೇಳಿದ್ದನ್ನೇ ಮತ್ತೊಮ್ಮೆ ಉಚ್ಚರಿಸಿದ.

ಡಾಕ್ಟರು ಬರೆದದ್ದು ಅವರ ಕಂಪೌಂಡರನಿಗೇ ಅರ್ಥವಾಗದಿದ್ದರೆ, ಅದಾವ ಶಾರ್ಟ್ ಹ್ಯಾಂಡ್ ಲಿಪಿ ಇದ್ದೀತು? ಈ ಇಂಜಿನಿಯರ್ ಬರೆದದ್ದು ಕೆತ್ತುವವನಿಗೆ ಓದಲು ಬಾರದಿದ್ದರೆ, ಅವನು ಬರೆದದ್ದು ಹೇಗಿದ್ದೀತು? ಈ ರೋಗ ಡಾಕ್ಟರು–ಇಂಜಿನಿಯರಿಗೆಮಾತ್ರ ಸೀಮಿತವಲ್ಲ. ಲಿಪಿದೋಷ-ಭಾಷಾದೋಷಗಳೂ ಗುಣಗಳೆಂದು ಒಪ್ಪಲೇ ಬೇಕಾದ ಸಮಯ ಸನ್ನಿಹಿತವಾಗುತ್ತಿದೆ.

ಹಿಂದೆ ಪಾಠ ಶಾಲೆಗಳಲ್ಲಿ ಇಂಥ ತಪ್ಪುಗಳಿಗೆ ಅಂಕಗಳನ್ನು ಕಳೆಯುವ ಪರಿಪಾಠವಿತ್ತು. ಇಂದು ಹೀಗೆ ಮಾಡಿದರೆ, ಪ್ರಾಯಃ ಯಾರಿಗೂ ಉತ್ತೀರ್ಣತೆ ಅಸಾಧ್ಯ. ಕನ್ನಡದ ಫಲಕಗಳ ಬಗ್ಗೆ ಕೆಲ ಸಮಯದ ಹಿಂದೆ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಇಲ್ಲಿಯೂ ಅಕ್ಷರ ದೋಷವೇ ಉಲ್ಲೇಖನೀಯವಾಗಿತ್ತು. ಅಕ್ಷರಗಳ ದೋಷಗಳೊಡನೆ ವಾಕ್ಯ ರಚನೆಯಲ್ಲಿಯೂ ದೋಷಗಳು ಕಾಣಿಸಿಕೊಳ್ಳುವುದು ಇಂದು ಮನೆ ಮಾತು.

ಬಿ. ಎ. ಪದವೀಧರನೊಬ್ಬನು ಹುದ್ದೆಯೊಂದಕ್ಕೆ ಆವೇದನಾ ಪತ್ರ ಬರೆದಾಗ ನಾಲ್ಕಾರು ಅಕ್ಷರ ದೋಷಗಳು, ಶಬ್ದ ದೋಷಗಳು, ವಾಕ್ಯದೋಷಗಳಿರುವುದಾದರೆ ಅದು ಯಾರ ತಪ್ಪು?

ಪ್ರಹ್ಲಾದನಿಗೆ ಹಿರಣ್ಯಕಶಿಪು ಕೇಳಿದ್ದನಂತೆ–ಏನ ಕಲಿಸಿದರೊ ನಿನಗೆ,ಏನ ಕಲಿತೆಯೊ ನೀನು ಕಡೆಗೆ? ತಾನೆಂದಂತೆ ಹರನೆನ್ನದೆ ಹರಿಯೆಂದಾಗ ಆತನೀ ಪ್ರಶ್ನೆ ಕೇಳಿದ್ದಂತೆ.

ಇಂದಿನ ಭಾಷಾದೋಷಗಳಿಗೆ ಶಿಕ್ಷಕರನ್ನೇ ಬೊಟ್ಟು ಮಾಡುವುದೂ ನಡೆದು ಬಂದ ರೀತಿ. ಅಂತಹವನನ್ನು ಪಾಸು ಮಾಡಿದ–ಕೆಲವೊಮ್ಮೆ ಕ್ಲಾಸ್ ಕೊಟ್ಟ–ಪರೀಕ್ಷೆ ಮಂಡಳಿಯದ್ದು ತಪ್ಪಲ್ಲ; ವಿಶ್ವವಿದ್ಯಾಲಯ ತಪ್ಪಲ್ಲ. ಅಂತಹವನನ್ನು ಕೆಲಸಕ್ಕೆ ತೆಗೆದುಕೊಂಡವರದ್ದಂತೂ ಅಲ್ಲವೇ ಅಲ್ಲ. ಸರಿಯಾಗಿ ಕಲಿತುಕೊಳ್ಳದ ಅವನು ನಿಜಕ್ಕೂ ನಿರಪರಾಧಿ.

ಇಂತಹ ತಪ್ಪುಗಳನ್ನು ಹೊರಿಸುವುದಾದರೆ, ಅದನ್ನು ಹೊರ ಬೇಕಾದವರು ನಮ್ಮ ನಾಯಕರು. ನಾಯಕರು ಎಂದರೆ, ರಾಜ್ಯಕೀಯರಂಗದವರು ಮಾತ್ರವಲ್ಲ, ಎಲ್ಲ ರಂಗದ ನಾಯಕ ಮಣಿಗಳು.

ನಮ್ಮ ಮಕ್ಕಳೆಲ್ಲರೂ ಬೃಹಸ್ಪತಿಯ ಪುತ್ರರೆಂದು ನಾವು ತಿಳಿದಿದ್ದೇವೆ. ಸಮಾಜವಾದದ ಹೆಸರಿನಲ್ಲಿ ಕನಸಿನ ಮಂಡಿಗೆಯನ್ನು ನಾವು ಈ ಬೃಹಸ್ಪತಿ ಪುತ್ರರಿಗೆ ತಿನ್ನಿಸ ಹೊರಟಿದ್ದೇವೆ.

ಮೂರನೆ ತರಗತಿಯಿಂದಲೇ ನ್ಯೂಟನ್ನನ ತತ್ವವನ್ನು ಈ ಗುರುಪುತ್ರರ ಮೆದುಳಿಗೆ ನಾಟಿಸಿ, ಮುಂದಿನ ಕೆಲವು ವರ್ಷಗಳಲ್ಲಿಯೇ ಅವರಿಗೆ ಯುಕ್ಲಿಡ– ಪೈಥಗೊರಸರನ್ನು ಪರಿಚಯ ಮಾಡಿ, ಎಲ್ಲರೂ ಮಹಾ ವಿಜ್ಞಾನಿಗಳೂ ಮಹಾಗಣಿತಜ್ಞರೂ ಆಗುವಂತೆ ಎಳೆಪ್ರಾಯದಲ್ಲೇ ಎಚ್ಚರಿಕೆ ವಹಿಸುತ್ತೇವೆ.

ಇಂಗ್ಲಿಷ್ ಪರಕೀಯರ ಭಾಷೆ–ಅದಕ್ಕೆ ಬಹಿಷ್ಕಾರ; ಹಿಂದಿಯನ್ನು ಒತ್ತಾಯದಿಂದ ನಮ್ಮ ಮೇಲೆ ಹೇರುತ್ತಾರೆ–ಅದನ್ನು ವಿರೋಧಿಸ ಬೇಕು. ಸಂಸ್ಕೃತ ಸತ್ತಭಾಷೆ–ಅದನ್ನು ಕಲಿತು ಮಂತ್ರ ಪಠಿಸ ಬೇಕಾಗಿಲ್ಲ. ಮತ್ತೆ ಕನ್ನಡ? ಮನೆ ಮಾತು! ಅದರಲ್ಲಿ ಕಲಿಯುವುದೇನಿದೆ?–ಇದು ನಮ್ಮ ಸುಪ್ತ ಭಾಷಾ ನೀತಿ.

ಪ್ರೌಢ ಶಾಲೆಗಳಲ್ಲಿ ವಿಜ್ಞಾನ–ಗಣಿತಗಳಿಗಿರುವಷ್ಟು ಪ್ರಾಶಸ್ತ್ಯ ಭಾಷಾಧ್ಯಯನಕ್ಕಿಲ್ಲ. ಶಾರೀರಿಕ ಶಿಕ್ಷಣ, ವರ್ಕ್ ಎಕ್ಸ್‌ಪೀರಿಯನ್ಸ್‌ಗಳಿಗಿರುವಷ್ಟು, ಸ್ಥಾನ ಮೂರನೆಯ ಭಾಷೆಗಿಲ್ಲ!

ಭಾಷಾ ಪಠ್ಯ ಪುಸ್ತಕಗಳನ್ನು ದಪ್ಪ ಮಾಡುತ್ತ ಹೋದಂತೆ ಅಧ್ಯಯನಾವಧಿ ಕಡಿಮೆಯಾಗುತ್ತಹೋದರೆ ಹೇಗೆ?

ಮೂರು ಪೀರಿಯೆಡ್‌ಗಳ ಹಿಂದಿಯಲ್ಲಿ ಪಠ್ಯ–ಉಪಪಠ್ಯ, ವ್ಯಾಕರಣ. ಪ್ರಬಂಧ,ವಾಕ್ಯರಚನೆ....ಇನ್ನು ಏನೇನು ಸಾಧ್ಯವಾಗಬೇಕು, ವಿದ್ಯಾ ಇಲಾಖೆಗೆ?

ತುಂಬಿದ ತರಗತಿ, ದಪ್ಪಾತಿದಪ್ಪ ಪುಸ್ತಕ, ಕಡಿಮೆಯಲ್ಲಿ ಕಡಿಮೆ ಅವಧಿ ನೀಡಿ, ಇವರಿಗೆ ಸರಿಯಾಗಿ ಕಲಿಸಿ ಎಂದರೆ–

ರಾಮನು ಜಿಂಕೆಯನ್ನು ಬೆನ್ನಟ್ಟಿದನು ಎಂದವರು ಬರೆಯುತ್ತ ಹೋದರೆ, ರಮನ್ನು ಜಿಕವನ್ನು ಬೇನಟಿದ್ದನ್ನು. ಎಂದು ಮಕ್ಕಳು ಬರೆದರೆ ತಪ್ಪೇನು?

ಇದನ್ನೊಂದು ಮಾದರಿ–ಒಂದುಪ್ರಶ್ನೆ-ನಿಷೇಧಾರ್ಥದ ರೂಪ ಬರೆಯಿರಿ. ಜ್ಞಾನ–ಅಜ್ಞಾನ ಎಂಬಂತೆ.

ಎಂದು ಹೇಳಿ ತಪ್ಪುವಿನ ನಿಷೇಧ ರೂಪ ಕೇಳಿದಾಗ ಅತಪ್ಪುಯೆಂದು ಬರೆದರೆ ಒಪ್ಪಾಗದೆ ಹೋಗುವುದು ನ್ಯಾಯ.

ಒಂದು ಕಾಲವಿತ್ತು—ಅಕ್ಷರ ವಿನ್ಯಾಸ–ಕಾಗುಣಿತ – ವಾಕ್ಯರಚನೆ – ವ್ಯಾಕರಣಗಳನ್ನು ಸಂಪೂರ್ಣವಾಗಿ ಮಂದಟ್ಟು ಮಾಡುತಿದ್ದ ಕಾಲವದು. ಎಂಟನೆಯ ತರಗತಿ ಮುಗಿಯುವಷ್ಟರಲ್ಲಿ ಪದಪರಿಚಯ, ಸಂಧಿ–ಸಮಾಸ–ಅಲಂಕಾರ–ಛಂದಸ್ಸುಗಳವರೆಗೂ ಮಕ್ಕಳಿಗೆ ಕಲಿಸುತಿದ್ದರು. ಮಕ್ಕಳು ಕಲಿತುಕೊಳ್ಳುತಿದ್ದರು.ಹೈಸ್ಕೂಲ್‌ಗಳಲ್ಲಿ ಇವುಗಳ ಪುನರಾವರ್ತನೆ ನಡೆದು ಅವು ಗಟ್ಟಿಯಾಗುತಿದ್ದು. ಕಾಲೇಜುಗಳಲ್ಲಿ ತಿಳಿದಿರುವುದನ್ನು ಲಕ್ಷಣವಾಗಿ ಬರೆಯುತಿದ್ದರು.

ಇಂದು ಪರಿಸ್ಥಿತಿ ಭಿನ್ನ. ವ್ಯಾಕರಣಾದಿಗಳು ಬರಿಯ ಫಂಕ್ಷನಲ್ ಆಗಿ ಕಲಿಸಬೇಕು.

ಜಲಜನಕ ಮತ್ತು ಆಮ್ಲಜನಕ ಕೂಡಿದರೆ ನೀರಾಗುವುದು

ರಾಮ ಮತ್ತು ಅವತಾರಗಳು ಒಂದುಗೂಡಿದಾಗ ಸವರ್ಣದೀರ್ಘಸಂಧಿಯಾಗುವುದು. ಸತಿ ಮತ್ತು ಈಶಗಳು ಕೂಡಿದಾಗಲೂ ಅದೇ ಸಂಧಿಯಾಗುತ್ತದೆ.

ಅದು ಒಂದೇ ಸೂತ್ರ, ಎರಡೇ ಅಸಿಲಗಳು. ಇದು ಹಾಗಲ್ಲ ವಿಜ್ಞಾನ—ಗಣಿತಗಳ ಸೂತ್ರಗಳಂತೆ ವ್ಯಾಕರಣದ ಸೂತ್ರಗಳನ್ನು ಸಂಕುಚಿತವಾಗಿ ಇಡುವುದು ಸಾಧ್ಯವಿಲ್ಲ. ಪ್ರಯೋಗ–ಅಭ್ಯಾಸ ಬಲದಿಂದಲೇ ಅವುಗಳು ಮನನರಿಕೆಯಾಗಬೇಕು. ಇದಕ್ಕೆ ಅಧ್ಯಯನಾವಧಿ ಹೆಚ್ಚು ಬೇಕು.

ಪಾಠ–ಪದ್ಯಗಳ ಪುಟಗಳನ್ನು ಕಡಮೆ ಮಾಡಬೇಕು; ವಾಕ್ಯರಚನೆ–ನಿಬಂಧ ರಚನೆಗಳಿಗೆ ಹೆಚ್ಚಿನ ಅವಕಾಶ ಬೇಕು.

ಭಾಷಾಧ್ಯಯನದ ಉದ್ದೇಶ್ಯ ಭಾಷೆಯಲ್ಲಿನ ಪ್ರಭುತ್ವ ಹೆಚ್ಚಿಸುವುದು. ಇಂದು ಅದೊಂದನ್ನು ಬಿಟ್ಟು ಉಳಿದದ್ದೆಲ್ಲ ನಡೆಯುತ್ತದೆ.

ಇದಕ್ಕೆ ರಾಮನಗರದ ನ್ಯಾಸಫಲಕ ಸಾಕ್ಷಿ ಹೇಳುತ್ತದೆ.

ಚರಿತ್ರಾರ್ಹ ಮೊಕದ್ದಮೆಗಳು—೯

'ವಿಲಾಸಿಯಾ ಕೊಲೆ'

ಬರೆದವರು: ಶ್ರೀ ಬಿ. ಕೃಷ್ಣ ಭಟ್, ಎಲ್‌ಎಲ್. ಬಿ., ಭದ್ರಾವತಿ.

ಬ್ರಿಜ ಭೂಷಣ ಸಿಂಗ್ 1943ರಲ್ಲಿ ಲಕ್ನೋದಲ್ಲಿ ಅಧಿಕಾರದಲ್ಲಿದ್ದರು. ಅವರು ಐ. ಸಿ. ಯಸ್. ಆಫೀಸರರು. ವಿಲಾಸಿಯೂ ಅವರ ಮನೆಯಲ್ಲಿ ಕೆಲಸಕ್ಕಿದ್ದಳು.

ಸಿಂಗರ ಮನೆಯಲ್ಲಿ ಇನ್ನೊಬ್ಬ ತರುಣ ಕೆಲಸ ಮಾಡುತ್ತಿದ್ದ. ಆ ತರುಣನಿಗೆ ಕೆಲಸದಾಕೆಯಲ್ಲಿ ಪ್ರೀತಿಯುತ್ಪನ್ನವಾಯಿತು. ಅವಳು ಬೇಡವೆನ್ನಲಿಲ್ಲ. ಮೈಯ ಹಸಿವು ಇಬ್ಬರಲ್ಲಿಯೂ ಹುಟ್ಟಿತ್ತು. ಹೀಗೆ ಅವರೊಳಗೆ ಅನೈತಿಕ ಸಂಬಂಧ ಬೆಳೆಯಿತು ಅದು ಸಿಂಗರ ದೃಷ್ಟಿಗೆ ಬಿತ್ತು. ಸಿಂಗ್ ಅದನ್ನು ಆಕ್ಷೇಪಿಸಿದರು. ಇಬ್ಬರನ್ನೂ ಗದರಿಸಿದರು. ಅದರಿಂದ ಪ್ರಯೋಜನವಾಗಲಿಲ್ಲ.

26—5—43ರಂದು ಸಿಂಗರು ಮನೆಯಲ್ಲಿರಲಿಲ್ಲ. ಪ್ರೇಮಿಗಳು ಅಂತಹ ಸಮಯವನ್ನೇ ಕಾಯುತ್ತಿದ್ದರು. ಸಿಂಗರ ಗೈರು ಹಾಜರಿಯಲ್ಲಿ, ಪ್ರೇಮಿಗಳು ಕೂಡಿಕೊಂಡರು. ಮೈಯ ಹಸಿವನ್ನು—ಸಿಂಗರ ಬಂಗಲೆಯಲ್ಲೇ—ತೀರಿಸಿಕೊಂಡರು. ಇದನ್ನು ಮನೆಯಲ್ಲಿದ್ದ ಕೆಲವರು ನೋಡಿದರು. ಕಂಡವರು ಸುಮ್ಮನಿರಲಿಲ್ಲ. ಸಿಂಗರು ಮರಳಿ ಬಂದುದೇ ತಡ, ಈ ಕೃತ್ಯದ ವರದಿ ಮಾಡಿದರು. ಅವರು ಮನೆಗೆ ಹಿಂತಿರುಗಿ ಬಂದಾಗ ಸಂಜೆ ಏಳೂವರೆ ಗಂಟೆಯಾಗಿತ್ತು. ಸುದ್ದಿಯನ್ನು ಕೇಳಿ ಸಿಂಗರು ನಖಶಿಖಾಂತ ಉರಿದರು. ಆಕೆಯನ್ನು ಹತ್ತಿರಕ್ಕೆ ಕರೆಸಿಕೊಂಡರು. ಚೆನ್ನಾಗಿ ಥಳಿಸಿದರು. ಆಕೆಯಿಂದ ಆ ಹೊಡೆತಗಳನ್ನು ತಡೆಯುವುದಾಗಲಿಲ್ಲ. ವಿಲಾಸಿಯೂ ಕುಸಿದುಬಿದ್ದಳು.

ರಾತ್ರಿ ಎಂಟರ ಸುಮಾರಿಗೆ ಬ್ರಿಜ ಭೂಷಣ ಸಿಂಗರು—ಮನೆಯಲ್ಲಿ ಏನೂ ನಡೆದಿಲ್ಲವೋ ಎನ್ನುವಂತೆ—ಸ್ನೇಹಿತರೊಬ್ಬರೊಂದಿಗೆ ಭೋಜನಕ್ಕೆ ಹೊರಟುಹೋದರು. ಸ್ನೇಹಿತರ ಮನೆಯಲ್ಲಿ ಊಟ ಮುಗಿಸಿ, ಅವರು ಮನೆ ಸೇರಿದಾಗ ಮಧ್ಯರಾತ್ರಿಯಾಗಿತ್ತು. ಅವರು ಹಿಂದಿರುಗುವುದರೊಳಗೆ ವಿಲಾಸಿಯೂ ಕೊನೆಯುಸಿರು ಎಳೆದಿದ್ದಳು. ಅದೇ ರಾತ್ರಿ ಬ್ರಿಜಭೂಷಣ ಸಿಂಗರು ಪತ್ನೀ ಸಮೇತ, ಅಲ್ಲಿಂದ ಅರುವತ್ತು ಮೈಲಿಗಳ ದೂರದಲ್ಲಿರುವ ಬನ್ವರ್ ಸಿಂಗ್ ಎನ್ನುವ ಸಂಬಂಧಿಗಳ ಮನೆಗೆ ಕಾರಿನಲ್ಲಿ ಹೊರಟು ಹೋದರು. ಅವರ ಕಾರಿನ ಚಾಲಕ ಮಹಾವೀರ ಜೊತೆಯಲ್ಲಿದ್ದ. ವಿಲಾಸಿಯೊಳ ಸಂಬಂಧಿ—ವಸಂತಿ—ಬನ್ವರ್ ಸಿಂಗ್ ಮನೆಯಲ್ಲಿ ಕೆಲಸಕ್ಕಿದ್ದಳು.

ವಿಲಾಸಿಯೊಳ ಹೆಣವನ್ನು ಕಾರಿನ ಡಿಕ್ಕಿಯಲ್ಲಿ ತುರುಕಿಸಲಾಗಿತ್ತು. ವಿಲಾಸಿಯೊಳ ಹೆಣವನ್ನು ಪತ್ತೆಯಿಲ್ಲದಂತೆ ಮಾಡುವುದು ಅವರ ಪಯಣದ ಉದ್ದೇಶವಿತ್ತು. ರಾಮನಗರ ತಲುಪಲು ಇನ್ನೂ ಎರಡು ಮೈಲಿಗಳಿರುವಂತೆ, ವಾಹನದ ಗಾಲಿಯೊಂದು ಕೆಟ್ಟು ಹೋಯಿತು. ಗಾಲಿಯನ್ನು ಸರಿಗೊಳಿಸುವ ತನಕ ಅವರು ಅಲ್ಲಿ ನಿಲ್ಲಬೇಕಾಯಿತು. ಆ ಮಾರ್ಗವಾಗಿ ಜೋಡೆತ್ತಿನ ಗಾಡಿಯಲ್ಲಿ ಬರುತ್ತಿದ್ದ ಹಳ್ಳಿಗರು, ಸಿಂಗ್ ದಂಪತಿಗಳನ್ನು ತಮ್ಮ ಗಾಡಿಯಲ್ಲಿ ಹತ್ತಿಸಿಕೊಂಡರು. ಬನ್ವರ್ ಸಿಂಗ್ ಮನೆಯ ಮುಂದು ಅವರನ್ನಿಳಿಸಿದರು. ಬನ್ವರ್ ಸಿಂಗ್ ತನ್ನ ಸೇವಕರನ್ನು ಕಾರು ನಿಂತಲ್ಲಿಗೆ ಕಳುಹಿಸಿದ. ಬ್ರಿಜೇಷ ಸಿಂಗರ ಕಾರಿನ ಚಾಲಕ, ಈ ಸೇವಕರ ಸಹಾಯದಿಂದ ಡಿಕ್ಕಿಯಲ್ಲಿಟ್ಟ ವಿಲಾಸಿಯೊಳ ಶವವನ್ನು ಹೊರತೆಗೆದ. ಅನಂತರ ಅವರು ಆ ಶವವನ್ನು ಛಿದ್ರ–ಛಿದ್ರಗೊಳಿಸಿ ಹುಲುಸಾಗಿ ಬೆಳೆದ ಗಿಡದ ಮಧ್ಯೆ ಎಸೆದುಬಿಟ್ಟರು ಆಕೆಯ ದೇಹದ ಬಿಡಿ ಭಾಗಗಳನ್ನು ಆ ಮೇಲೆ ಪೋಲೀಸರು ಆ ಸ್ಥಳದಲ್ಲಿ ಸಂಗ್ರಹಿಸಿದರು.

28–5–43ರಂದು ಪೋಲೀಸರು ಬನ್ವರ್ ಸಿಂಗರ ಮನೆಯನ್ನು ಝಡತಿ ಮಾಡಿದರು. ವಿಲಾಸಿಯೊಳ ಪತ್ತೆಗಾಗಿ ಅವರು ಶೋಧ ನಡೆಸಿದರು. ಅಲ್ಲಿ ಅವಳ ಸುಳಿವು ಸಿಗಲಿಲ್ಲ. ದೇಹಬಾಧೆ ತೀರಿಸಿಕೊಳ್ಳಲು ಅಡವಿಗೆ ಹೋದ ಆಕೆ ತಿರುಗಿ ಬರಲಿಲ್ಲವೆಂಬ ಹಾರಿಕೆಯ ಉತ್ತರ ಕೊಟ್ಟರು ಬನ್ವರ್ ಸಿಂಗ್.

ಪೋಲಿಸರು ಬ್ರಿಜೇಷ ಸಿಂಗರನ್ನೂ, ಅವರ ಕಾರಿನ ಚಾಲಕ ಮಹಾವೀರನನ್ನೂ ಬಂಧಿಸಿದರು. ಬನ್ವರ್ ಸಿಂಗ್ ಹಾಗೂ ಅವರ ಇಬ್ಬರು ಸೇವಕರನ್ನೂ ದಸ್ತಗಿರಿ ಮಾಡಿದರು. ತನಿಖೆಯ ಕ್ರಮ ಮುಗಿಸಿ, ಅವರೆಲ್ಲರನ್ನೂ ಕೋರ್ಟಿನ ಮುಂದು ಹಾಜರು ಮಾಡಿದರು. ಬ್ರಿಜೇಷರ ಮೇಲೆ ವಿಲಾಸಿಯೊಳ ಕೊಲೆಯ ಆರೋಪವನ್ನೂ, ಉಳಿದವರ ಮೇಲೆ ಕೊಲೆಯ ಸುಳಿವನ್ನು ಮುಚ್ಚಿಡಲು ಪ್ರಯತ್ನಿಸಿದರೆಂಬ ಆರೋಪ ಹೊರಿಸಿ ವಿಚಾರಣೆಗೆ ಗುರಿಗೊಳಿಸಿದರು. ಬನ್ವರ್ ಸಿಂಗ್ ಈ ಕೊಲೆ ನಡೆದ ಸಮಯದಲ್ಲಿ ರೆವೆನ್ಯೂ ಸಬ್‌ಡಿವಿಜನ್ನಿನ ಅಧಿಕಾರಿಯಾಗಿದ್ದರು.

ಸೆಷನ್ಸ್ ನ್ಯಾಯಾಧೀಶರ ಮುಂದೆ ಅವರ ವಿಚಾರಣೆ ನಡೆಯಿತು. ಯಾರೂ ತಪ್ಪನ್ನು ಒಪ್ಪಿಕೊಳ್ಳಲಿಲ್ಲ. ಬ್ರಿಜ ಭೂಷಣ ಸಿಂಗರು ನಂಬಿಕೆಗೆ ಅರ್ಹವಾದ ಹೇಳಿಕೆಯನ್ನು ವಿಚಾರಣೆಯ ಕಾಲದಲ್ಲಿ ಕೊಟ್ಟರು. ವಿಲಾಸಿಯಾಗೆ ಹೊಡೆದುದನ್ನು ಅವರು ನಿರಾಕರಿಸಲಿಲ್ಲ; ಆಕೆಯ ಕೈಬೆನ್ನುಗಳಿಗೆ ಕೈಯಿಂದ ಹೊಡೆದೆ ಎಂದರು. ಆದರೆ ಅವು ಸಾಮಾನ್ಯವಾದ ಏಟುಗಳು. ಆಕೆಯ ನಡತೆಯಿಂದ ಉದ್ವಿಗ್ನಗೊಂಡುದಾಗಿಯೂ, ಅವಳನ್ನು ಕೆಲಸದಿಂದ ತೆಗೆದು ಹಾಕುವಂತೆ ಪತ್ನಿಗೆ ತಿಳಿಸಿದ್ದಾಗಿಯೂ ತಿಳಿಸಿದರು. ತಾನು ಊಟ ಮುಗಿಸಿ ಮರಳಿ ಮನೆಗೆ ಬಂದಾಗಲೂ, ವಿಲಾಸಿಯು ಮನೆಯಲ್ಲಿದ್ದುದನ್ನು ಕಂಡು ಕೋಪಗೊಂಡು, ಅವಳನ್ನು ವಸಂತಿ ಇರುವಲ್ಲಿಗೆ ತಲಪಿಸುವ ಉದ್ದಿಶ್ಯ ಕಾರಿನಲ್ಲಿ ಆ ರಾತ್ರಿ ರಾಮನಗರ್ ಗುಲಾರಿಯಾಕ್ಕೆ ಹೋದುದಾಗಿಯೂ ಎಂಬ ವಿವರಣೆ ಕೊಟ್ಟರು—ಕಾರು ಕೆಟ್ಟುಹೋಗಿದ್ದನ್ನು ಅವರು ಅಲ್ಲಗಳೆಯಲಿಲ್ಲ—ಜೋಡೆತ್ತಿನ ಗಾಡಿ ಆ ಮಾರ್ಗವಾಗಿ ಬಂದುದನ್ನು ನಿರಾಕರಿಸಲಿಲ್ಲ. ಆದರೆ ಗಾಡಿಯಲ್ಲಿ ಪ್ರಯಾಣ ಮಾಡಲಿಲ್ಲ. ಕಾರು ಕೆಟ್ಟು ನಿಂತ ಸ್ಥಳದಿಂದ, ತಾನು, ವಿಲಾಸಿಯೂ, ತನ್ನ ಹೆಂಡತಿ ಬನ್ವರ್ ಸಿಂಗರ ಮನೆಗೆ ನಡೆದು ಹೋದೆವೆಂದೂ ಹೇಳಿದರು. ಕಾರು ಸರಿಯಾದೊಡನೆ, ತಾನು ಲಕ್ನೋವಿಗೆ ಹಿಂದಿರುಗಿದುದಾಗಿಯೂ, ತನ್ನ ಹೆಂಡತಿ ಹಾಗೂ ವಿಲಾಸಿಯೂ ಬನ್ವರ್ ಸಿಂಗರಲ್ಲಿ ಆ ರಾತ್ರಿ ಉಳಿದು ಕೊಂಡರೆಂದೂ ತಿಳಿಸಿದರು.

ಆ ವಿಚಾರಣೆ—ಆಗಿನ ನಿಯಮದಂತೆ ಜ್ಯೂರಿಗಳ ಸಹಾಯದಿಂದ ನಡೆಯಿತು. ಜ್ಯೂರಿಗಳು ಆಪಾದನೆ ಸಿದ್ಧಪಟ್ಟಿಲ್ಲವೆಂದು ಅಭಿಪ್ರಾಯಕೊಟ್ಟರು. ಹೀಗಿದ್ದರೂ ಸೆಷನ್ಸ್ ನ್ಯಾಯಾಧೀಶರು, ಬ್ರಿಜ ಭೂಷಣರು ಬೇಹುಶಾರಾಗಿ ವರ್ತಿಸಿ ವಿಲಾಸಿಯ ಸಾವಿಗೆ ಕಾರಣರಾದರೆಂದು ನಿರ್ಧರಿಸಿ–ಪಿನಲ್ ಕೋಡಿನ 304(4) ರೀತ್ಯಾ–ಆ ತಪ್ಪಿತಕ್ಕೆ ಆರು ತಿಂಗಳ ಕಠಿಣ ಶಿಕ್ಷೆ ವಿಧಿಸಿದರು.

ಶಿಕ್ಷೆಯ ವಿರುದ್ಧ ಶ್ರೀ ಸಿಂಗರು ಹೈಕೋರ್ಟಿಗೆ ಅಪೀಲು ಹಾಕಿದರು. ಹೈಕೋರ್ಟು ಅವರ ಅಪೀಲನ್ನು ತಳ್ಳಿ ಹಾಕಿತು. ಆದರೆ ವಿಧಿಸಿದ ಶಿಕ್ಷೆಯನ್ನು ಅನುಭವಿಸಿದ ಅವಧಿಗೆ ಮಿತಿಗೊಳಿಸಿತು–ತೀರ್ಪು ಬರುವ ಹೊತ್ತಿಗೆ ಶ್ರೀ ಸಿಂಗರು ಸೆರೆಮನೆಯಲ್ಲಿ ನಾಲ್ಕು ತಿಂಗಳು ಕಳೆದಿದ್ದರು.

ಈ ತೀರ್ಮಾನದ ವಿರುದ್ಧ ಸಿಂಗರು ಪ್ರಿವಿ ಕೌನ್ಸಿಲ್ಲಿಗೆ ಅಪೀಲು ಹೋದರು. ಕೇಸಿನ ವಿದ್ಯಮಾನವನ್ನು ನ್ಯಾಯಾಲಯ ಆಮೂಲಾಗ್ರ ಪರಿಶೀಲಿಸಿತು–ವಾದ–ಪ್ರತಿವಾದಗಳನ್ನು ಅದು ಹೀಗೆ ಕ್ರೋಢೀಕರಿಸಿತು:

"ಕೇಸಿನಲ್ಲಿ ಬಂದ ಸಂದರ್ಭಗಳು, ಸಾಕ್ಷಿಗಳು ಕೊಟ್ಟ ಹೇಳಿಕೆಗಳು ಬಲವತ್ತರವಾದ ಅನುಮಾನವನ್ನು ಹುಟ್ಟಿಸುವುದು ನಿಜ. ಆದರೆ ಕ್ರಿಮಿನಲ್ ಕೇಸುಗಳಲ್ಲಿ ನಿರೀಕ್ಷಿಸ ಬಹುದಾದ, ಬರಲೇ ಬೇಕಾದ ಖಚಿತತೆ ಕಂಡು ಬರುವುದಿಲ್ಲ–ಮನೆಯ ಕೆಲಸದಾಕೆಯನ್ನು ಸಾಯ ಹೊಡೆದು, ಮರುಗಳಿಗೆಯಲ್ಲಿ ಅಲ್ಲಿಂದ ಬಂದು ಔತಣ ಕೂಟಕ್ಕೆ ಐ. ಸಿ. ಯಸ್. ಅಧಿಕಾರಿಯೊಬ್ಬರು ಹೋದರೆಂಬುದನ್ನು ನಂಬುವುದೇ ತುಂಬ ಕಷ್ಟಕ್ಕಿಟ್ಟು ಕೊಂಡಿದೆ–ಏಟು ತಿಂದು ಬಿದ್ದ ಆಕೆಯ ಔಷಧೋಪಚಾರಕ್ಕೆ ಯಾವ ವ್ಯವಸ್ಥೆಯನ್ನೂ ಮಾಡದೆ ಅವರು ಅಲ್ಲಿಂದ ಕಾಲ್ತೆಗೆದರೆಂದು ಹೇಳಿದರೆ ಒಪ್ಪಿಕೊಳ್ಳುವುದು ತೀರ ಪ್ರಯಾಸದ ವಿಷಯವೆ. ಈ ಮಾನವೀಯ ನಡತೆಯೂ ಆ ಅಧಿಕಾರಿಯಲ್ಲಿ ಇರಲಿಲ್ಲವೆಂದು ಪರಿಗಣಿಸ ಬೇಕಾಗುತ್ತದೆ.

26–5–43ರಂದು ಗಾಡಿಯಲ್ಲಿದ್ದ ಹಳ್ಳಿಯ ಜನ ವಿಲಾಸಿಯೊಳನ್ನಾಗಲೀ, ಅವಳ ದೇಹವನ್ನಾಗಲೀ ಕಂಡಿರಲಿಲ್ಲ. ನಿಜ

(ಹನ್ನೊಂದನೇ ಪುಟ ನೋಡಿರಿ)

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು–4

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ, ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 43

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಉಬ್ಬಣ್ಣಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦–೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಠ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ವಿಳಂಬ ನೀತಿಯಿಂದ ಸಮಸ್ಯೆ ಮತ್ತಷ್ಟು ಜಟಿಲವಾಗುತ್ತದೆ

ತಮಿಳುನಾಡಿನ ದ್ರಾವಿಡ ಮುನ್ನೇತ್ರ ಕಳ್ರಗಂ ಪಕ್ಷವು ಹುಟ್ಟಿದ್ದು ಪ್ರತ್ಯೇಕತೆಯ ಬೀಜದಿಂದ ಎಂದ ಮೇಲೆ ಅದು ಪ್ರತ್ಯೇಕತಾ ಭಾವನೆಯಿಂದ ದೂರವಿರಬೇಕೆಂದು ಬಯಸುವುದು ತಪ್ಪಾದೀತೋ ಏನೋ! ಅಣ್ಣಾದೊರೈಯವರ ನಿಧನಾನಂತರ ಈ ಸಂಕುಚಿತ ಭಾವನೆಯಿನ್ನೂ ಬಲಿತಿದೆಯೆಂಬುದು ನಿರ್ವಿವಾದ. ಹಿಂದಿ ವಿರೋಧ ಪ್ರತ್ಯೇಕತೆ ಮತ್ತು ಕಾವೇರಿ ನೀರಿನ ಪ್ರಶ್ನೆಗಳೇ ದ್ರಾಮುಕದ ತ್ರಿಶೂಲ. ಪ್ರಧಾನಿ ಗಾಂಧಿಯವರು ತನ್ನ ಸಿಂಹಾಸನದ ಭದ್ರತೆಗಾಗಿ ಹಿಂದೆ ದ್ರಾಮುಕದ ಮುಂದೆ ತಲೆದೂಗಿದಂತೆ ತೋರಿಸಿಕೊಂಡರು, ಕರುಣಾನಿಧಿಯವರು ಇದನ್ನು ಸತ್ಯವೆಂದೇ ನಂಬಿದರು. ಆದರೆ ಪರಾಶ್ರಯವಿಲ್ಲದೇನೇ ತನ್ನ ಪದವಿ ಸುದೃಢವಾದ ಬಳಿಕ ಪ್ರಧಾನಿ ಗಾಂಧಿಯವರು ಅವರಿಗೂ ಲತ್ತೆ ಕೊಡಲು ಮುಂದಾಗಿದ್ದಾರೆ. ಅಣ್ಣಾದೊರೈಯವರ ನಾಯಕತ್ವದಲ್ಲಿ ದ್ರಾಮುಕ ತನ್ನ ಸಂಪೂರ್ಣ ಸಂಕುಚಿತ ಮನೋಭಾವವನ್ನು ತ್ಯಜಿಸಿ ತುಸು ವಿಶಾಲ ಜಗತ್ತನ್ನು ನೋಡುತ್ತಿತ್ತು. ವಿಶಾಲತೆಯ ಗಾಳಿಯನ್ನು ಸೇವಿಸಲು ಕಲಿಸಿದವರೇ ಅವರು. ಆದರೆ ಅವರ ನಿಧನಾನಂತರ,ಮತ್ತೆ ದ್ರಾಮುಕ ತನ್ನ ಮಾಮೂಲು ಕುರುದಾರಿ ಹಿಡಿಯತೊಡಗಿದೆಯೆಂಬುದು ನಿರ್ವಿವಾದ.

ಮೊನ್ನೆಮೊನ್ನೆ ಕೇಂದ್ರ ಸರಕಾರದ ಸಚಿವಾಲಯಗಳಿಗೆ ಹಿಂದಿಯಲ್ಲಿ ನಾಮಕರಣ ಮಾಡಿದುದನ್ನು ದ್ರಾಮುಕ ವಿರೋಧಿಸಿತು. ತನ್ನ ರಾಜ್ಯದಲ್ಲಿ ಮಾತ್ರ ಅದು ಎಲ್ಲವನ್ನೂ ತಮಿಳೀಕರಣ ಮಾಡಿದೆಯೆಂಬುದನ್ನು ಮರೆಯಲಾಗದು. ಕೇಂದ್ರ – ರಾಜ್ಯ ಸಂಬಂಧ ಹೇಗಿರಬೇಕೆಂಬುದನ್ನು ಪರಿಶೀಲಿಸಿ ವರದಿ ಮಾಡಲು ರಾಜ ಮನ್ನಾರ್ ಸಮಿತಿಯನ್ನು ನೇಮಿಸಿತು. ಅದು ತನ್ನ ವರದಿಯನ್ನು ಸಲ್ಲಿಸಿ ತಮಿಳು ನಾಡಿನ ಬಯಕೆಗಳಿಗೆ ಉತ್ತೇಜನವನ್ನೂ ಕೊಟ್ಟಿದೆ. ಕಾವೇರಿ ನೀರಿನ ಸಂಬಂಧದಲ್ಲಿ ಪಂಚಾಯತಿಯನ್ನು ನೇಮಿಸ ಬೇಕೆಂದು ದ್ರಾಮುಕ ಕೇಂದ್ರದ ಮೇಲೆ ಹಲವು ವಿಧದ ಒತ್ತಡಗಳನ್ನು ಹೇರುತ್ತಿದೆ. ಭೀಕರವಾದ ಚಳುವಳಿ ನಡೆಸುವ ಇರಾದೆಯೂ ಅದಕ್ಕಿದೆ. ಈಯೆಲ್ಲ ಪ್ರದರ್ಶನೆಗಳ ಅರ್ಥವೇನು? ಭಾರತವೆಂಬುದು ಹಲವು ರಾಜ್ಯಗಳ ಸಮುದಾಯವಾಗಿದ್ದು ಅವೆಲ್ಲವೂ ಒಂದು ಸೂತ್ರದಲ್ಲಿ ಬಂಧಿತವಾಗಿವೆಯೆಂಬ ಸತ್ಯಾಂಶವನ್ನು ದ್ರಾಮುಕರು ಮರೆತ್ತಿದ್ದಾರೆ. ತಾವಾಯಿತು, ಸ್ವಾರ್ಥ ಸಾಧನೆಯಾಯಿತು ಎಂಬ ಅವರ ನೀತಿ ರಾಷ್ಟ್ರೀಯ ಐಕ್ಯಕ್ಕಾಗಲೀ, ರಾಜ್ಯರಾಜ್ಯಗಳ ಸಮಧುರ ಸಂಬಂಧಕ್ಕಾಗಲೀ ಪೂರಕವಾಗದೆ ಉಳಿಯುವುದಿಲ್ಲ. ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಪಕ್ಷಗಳು ಅಧಿಕಾರಕ್ಕೆ ಬಂದಿರುವುದಕ್ಕೆ ಅಲ್ಲಲ್ಲಿ ಅವವಕ್ಕಿರುವ ಪ್ರಬಲ ಶಕ್ತಿಯೇ ಕಾರಣ. ಈ ಶಕ್ತಿಯು ಬರಿಯ ಪ್ರಾದೇಶಿಕವಾದ್ದರಿಂದ ಪ್ರಾದೇಶಿಕನೀತಿಯ ಬಲದಿಂದಲೇ ಅದು ಬೆಳೆಯಬೇಕಾಗುತ್ತದೆ. ಆಗ ರಾಷ್ಟ್ರೀಯ ನೀತಿ ಅನಿವಾರ್ಯವಾಗಿ ಗುಂಡಿಸೇರುತ್ತವೆ. ಕೇಂದ್ರ ಸರಕಾರದ ವಿರುದ್ಧವಾಗಿ ರಾಜ್ಯದ ಮಂತ್ರಿಗಳೂ ಶಾಸಕರೂ ಚಳುವಳಿ ಹೂಡಿದ ನಿದರ್ಶನಗಳು ನಮ್ಮಲ್ಲಿವೆ. ಬಂಗ್ಲಾದೇಶದ ಆಡಳಿತೆಯನ್ನು ಬಹುಮತೀಯ ಅವಾಮಿಲೀಗಿನ ಆಶಯದಂತೆ ನಡೆಯಗೊಡಬೇಕೆಂಬುದನ್ನು ಆರಂಭದಲ್ಲೇ ಒಪ್ಪಿಕೊಂಡ ಪ್ರಧಾನಿಗೆ ಕರುಣಾನಿಧಿಯವರು ಸವಾಲು ಹಾಕುತ್ತಾರೆ—'ತಮಿಳುನಾಡಿನಲ್ಲಿ ನಮ್ಮದೇ ಬಹುಮತ. ನಮಗೆ ಹೆಚ್ಚು ಅಧಿಕಾರ ಬೇಕು; ಪ್ರತ್ಯೇಕ ಧ್ವಜ ಚಿಹ್ನೆಬೇಕು? ಸ್ವತಂತ್ರ ದ್ರವಿಡ ಸ್ಥಾನದ ಆಸೆಯಿಂದು ತಮಗಿಲ್ಲವೆಂದೂ ಅಧಿಕ ಸ್ವಾತಂತ್ರ್ಯವಿರುವ ರಾಜ್ಯ ಬೇಕೆಂದೂ ಅವರ ಆಶಯ. ಇದೇ ಗಾಳಿ ಇತರ ರಾಜ್ಯಗಳಲ್ಲೂ ಹರಡಿದೆ; ಸಾಕಷ್ಟು ಬಲವಿಲ್ಲದ್ದರಿಂದ ಅದು ಬಲಿತಿಲ್ಲ. ರಾಜಮನ್ನಾರ್ ಸಮಿತಿಯ ವರದಿಯ ಬಗ್ಗೆ ಚರ್ಚಿಸಲು ಕೇಂದ್ರವು ರಾಜ್ಯದ ಮುಖ್ಯಮಂತ್ರಿಗಳ ಸಭೆ ಸೇರಿಸಬೇಕೆಂದು ಕರುಣಾನಿಧಿಯವರ ಇಚ್ಛೆ. ತಮಿಳುನಾಡು ಸರಕಾರ ರಚಿತ ಸಮಿತಿಗೆ ಅಖಿಲ ಭಾರತ ವ್ಯಾಪ್ತಿ ಹೇಗೆ ಬರುತ್ತದೆ ಎಂಬುದು ಮಾತ್ರ ಉತ್ತರಿಸಲಾಗದ ಪ್ರಶ್ನೆ. ಕಾವೇರಿಯ ಕೊಳ್ಳದಲ್ಲಿನ ಕಪಿನೀ ಮೊದಲಾದ ಯೋಜನೆಗಳನ್ನು ತಡೆಯಲು ಕೇಂದ್ರ ಸರಕಾರ ವಿಫಲವಾಗಿದೆಯೆಂಬುದೊಂದು ದೂರು. ಕರ್ನಾಟಕವು ಈ ಯೋಜನೆಗಳನ್ನು ತನ್ನ ಆರ್ಥಿಕ ಬಲದಿಂದಲೇ ನಡೆಸುತ್ತಿರುವುದಕ್ಕೆ ಅವರು ಮೂಗು ಮುರಿಯತೊಡಗಿದ್ದಾರೆ. ಕಾವೇರಿನೀರಿನ ಸಂಬಂಧದಲ್ಲಿ ತಮ್ಮವಾದವನ್ನು ಪುಷ್ಟೀಕರಿಸುವ ಸಾಕ್ಷಿ ಚಿತ್ರಗಳನ್ನೂ ಅವರು ತಯಾರಿಸಿದ್ದಾರೆ! ನಮಗೂ ಮೈಸೂರಿನಂತೆಯೇ ನಡೆದುಕೊಳ್ಳಲು ಗೊತ್ತಿದೆ" ಎಂಬ ಬೆದರಿಕೆ ಬೇರೆ ಹಾಕಿದ್ದಾರೆ. ಹೇಗಾದರೂ ಮಾಡಿ, ಕರ್ನಾಟಕದಲ್ಲಿ ಹರಿಯುವ ಕಾವೇರಿ ನೀರನ್ನೆಲ್ಲ ತಾನೇ ದಕ್ಕಿಸಿಕೊಳ್ಳುವ ತಮಿಳುನಾಡಿನ ಇರಾದೆ ಲೋಕಜನಿತ. ಹಿಂದೀ ವಿರೋಧಿಗಳಾದ ತಾವಿನ್ನೂ ಫರಂಗಿಯವರೇ ಎಂದವರು ಭ್ರವಿಃಸಿರ್ಗನಿಳರ ಅಪಮಾನಕರವಾದ ಒಡಂಬಡಿಕೆಯ ಮೇಖಲೆಯಲ್ಲಿ ಕನ್ನಡಿಗರನ್ನು ಬಂಧಿಸಿಡುವ ದುರಾಶಯ ಹೊಂದಿದ್ದಾರೆ.

ತಮಿಳುನಾಡು ಅದೆಷ್ಟು ಒತ್ತಾಯ ತಂದರೂ ಕರ್ನಾಟಕದಲ್ಲಿ ಪ್ರಜಾ ಪ್ರತಿನಿಧಿ ಸರಕಾರ ರಚನೆಯಾಗುವವರೆಗೆ ಪಂಚಾಯತಿಯ ನೇಮಕ ಸಾಧ್ಯವಿಲ್ಲ. ಯೋಜನಾ ಸಚಿವ ಸುಬ್ರಹ್ಮಣ್ಯಂ ಕೂಡ ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ. ಕಾವೇರಿ ನೀರಿನ ಹಗರಣದಲ್ಲಿ ಕೇರಳದ್ದೂ ಪಾಲಿದೆ. ಅಂತಾರಾಜ್ಯ ನದೀ ಯೋಜನೆಗಳನ್ನೆಲ್ಲ ಕೇಂದ್ರ ಸರಕಾರವೇ ವಹಿಸಿಕೊಳ್ಳಲಿ ಎಂಬ ಮಾತೂ ಇದೆ. ಯೋಜನಾಯೋಗ್ಯ ನದಿಗಳು ಏಕರಾಜ್ಯಗಾಮಿಯಾಗುವುದು ಸಾಧ್ಯವಿಲ್ಲ. ಬಹು ರಾಜ್ಯಗಳಲ್ಲಿ ಹರಿಯುವ ನದಿಗಳ ನೀರು ಯಾರಿಗೆ ಎಷ್ಟು ನ್ಯಾಯವಾಗಿ ದೊರೆಯಬೇಕೆಂಬ ವಿವಾದ ಆಗಲೂ ಇರುವಂಥದ್ದೇ. ನದೀನೀರನ್ನು ನಳ್ಳಿಹಿಡಿದು ದಿಲ್ಲಿಗೊಯ್ಯುವುದು ಸಾಧ್ಯವಿಲ್ಲತಾನೆ? ತಮಿಳಿನ ನಾಯಕರು ತಮಿಳುನಾಡಿಗೆ ನ್ಯಾಯವೊರೆಯುತ್ತದೆನ್ನುತ್ತಾರೆ; ಕನ್ನಡದ ನಾಯಕರು ಕನ್ನಡಕ್ಕೆ ಅನ್ಯಾಯವಾಗುವುದಿಲ್ಲವೆನ್ನುತ್ತಾರೆ. ಆದರೆ, ಇಬ್ಬರೂ ತಮ್ಮ ತಮ್ಮದೇ ನ್ಯಾಯವೆಂದು ಪಟ್ಟು ಹಿಡಿದಿರುವುದರಿಂದ, ಅವರವರ ನ್ಯಾಯ ಅವರವರಿಗೆ ಖಂಡಿತಕ್ಕೂ ಸಿಗುವುದಿಲ್ಲ. ಕೇಂದ್ರ ಸರಕಾರ ಕರ್ನಾಟಕದ ಯೋಜನೆಗಳನ್ನು ಮುನ್ನಡೆ ದೂಡುವ ಒಂದೊಂದು ದಿನವೂ ನೆಲ ಜಲ ವಿವಾದವನ್ನು ಮತ್ತಷ್ಟು ಜಟಿಲ ಮಾಡಿಕೊಂಡೇ ಕಳೆಯುತ್ತವೆ.

ತಲೆಬಾಗುತ್ತದೆ

ರಶ್ಯದ ಸೋಯಜ್ ೧೧ರಲ್ಲಿನ ಗಗನ ಯಾತ್ರಿ ತ್ರಯರು ತಮ್ಮ ಮೂರುವಾರಗಳ ಅಂತರಿಕ್ಷವಾಸವನ್ನು ಸುಭೀತಿಯಿಂದಲೇ ಕಳೆದರು. ಗಗನ ಯಾನ, ಅಂತಾಗ್ರಹ ಯಾನಗಳಲ್ಲಿ ಮಹತ್ವದ ಮೈಲಿಗಲ್ಲನ್ನು ಸ್ಥಾಪಿಸುವುದು ಸಾಧ್ಯವೆಂದು ಅವರು ಸಾಧಿಸಿದರು ವಿಜ್ಞಾನದ ಅದ್ಭುತಾದ್ಭುತವನ್ನು ಲೋಕಕ್ಕೆ ತೋರಿಸಿಕೊಟ್ಟರು ಇನ್ನೇನು. ಭೂಮಿಗೆ ಮುಟ್ಟಬೇಕು ಎನ್ನುವಷ್ಟರಲ್ಲಿ ಅವರು ಮೃತ್ಯು ಮುಖರಾಗಿ ಹೋದರು– ಇದು ದೈವದ ಮಹಾ ವಿಡಂಬನೆಯಲ್ಲದೆ

(ಹತ್ತನೇ ಪುಟ ನೋಡಿರಿ)

ಪುತ್ತೂರು II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

Ex. C-147/71 O. S. 381/1968

ಚಂದ್ರಶೇಖರ ಅರಿಗಿಂತಾಯ —ಅರ್ಜಿದಾರ
ಕಲ್ಯಾಣಿ ಅಮ್ಮ ಕೂಡಾ —ಎದ್ರಿರು

1ನೇ ಎದ್ರಿ ಕಲ್ಯಾಣಿ ಅಮ್ಮ—ರಾಮಕೃಷ್ಣ ಕೊಂಗಿರ್ಣಾಯರ ವಿಧವೆ.

4ನೇ ಎದ್ರಿ S.K. ಉರುವಾಲ್, 6ನೇ ಎದ್ರಿ ರಾಘವ N. ಉರುವಾಲ್, 7ನೇ ಎದ್ರಿ N. R ಉರುವಾಲ್, 8ನೇ ಎದ್ರಿ ಭಾಸ್ಕರ, 9ನೇ ಎದ್ರಿ ಸರಸ್ವತಿ. 1[illegible]ನೇ ಎದ್ರಿ ಸುರೇಶ. —ರಾಮಕೃಷ್ಣ ಕೊಂಗಿರ್ಣಾಯರ ಮಕ್ಕಳು.

1, ೨, ೪ ಮತ್ತು 10ನೇ ಎದ್ರಿರು ಬೆಳ್ತಂಗಡಿ ತಾಲ್ಕು ಉರುವಾಲು ಗ್ರಾಮದಲ್ಲಿರುವವರು.

4ನೇ ಎದ್ರಿ Chithrakut Building, Siru Road, Malabar Hill, Bombayಯೆಂಬಲ್ಲಿರ್ವವ. 6ನೇ ಎದ್ರಿ C/o The Indian Rayon Corporation Ltd., Post Bag No. 10039, Bombay ಯೆಂಬಲ್ಲಿರ್ವವ. 7ನೇ ಎದ್ರಿ 2-B "Ocean View" Dr. A. Besant Road, Bombay ಯೆಂಬಲ್ಲಿರ್ವವ.

ಸದ್ರಿ ಎದ್ರಿಯರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:-

ಮೇಲ್ಕಂಡ ಅರ್ಜಿದಾರನು ಎದ್ರಿರ ಪಕ್ಕಿನ ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಆದ್ರಿಂದ ವಿಕ್ರಯದ ಇಷ್ತಿಹಾರಿನ ಶರ್ತಗಳನ್ನು ನಿರ್ಣಯಿಸುವರೆ 1971ನೇ ಇಸ್ವಿ ಜುಲ್ಯಾ ತಿಂಗಳ 14ನೇ ತಾರೀಕು ನಿಶ್ಚೈಸೋಣಾಗಿಯದೆ ಯೆಂತ ನಿಮಗೆ ಇದರಿಂದ ತಿಳಿಸೋಣಾಗುತ್ತದೆ.

(ಕೋರ್ಟು ಹುಕ್ಕುಂ ಪ್ರಕಾರ)

S. SOORAPPAYA
Vakil for Petr.

ಪುತ್ತೂರು, ತಾ. 13–6–1971

ಗೇಹರಾಜ್ಯದಲ್ಲಿ

ಭಗವದಂಶ ಸಂಭೂತರು

'ಜಯಪ್ರಕಾಶ ನಾರಾಯಣರು ತಮ್ಮ ವಿದೇಶ ಪ್ರವಾಸ ಮುಗಿಸಿ ಬಂದ್ರು...."

'ಅಂದ್ರೆ ಜೆ. ಪಿ. ತಾನೆ?''

'ಹೂಂ, ಏನಸ್ತಾರೆ ಅವ್ರೂಂದ್ರೆ, ಬಂಗ್ಲಾ ದೇಶಕ್ಕೆ ತಕ್ಷಣ ಮಾನ್ಯತೆ ನೀಡಬೇಕು; ಮಾತ್ರವಲ್ಲ, ಸಾಧ್ಯವಾದ ಸೈನಿಕ ನೆರವನ್ನು ಕೊಡಬೇಕೂಂತ....',

'ಅಲ್ರಿ ಇದು ಅವ್ರ ಅಭಿಪ್ರಾಯವೇ ಅಥವಾ ವಿದೇಶ ಸಂಚಾರದಲ್ಲಿ ಕಂಡುಕೊಂಡದ್ದೇ ಅಂತ....'

'ಅಲ್ರೀ, ವಿದೇಶಗಳಲ್ಲಿ ನಮಗೇನು ದೊರೆಯುತ್ತೆ? ಮಾತಿನ ಸಹಾನುಭೂತಿ ಮಾತ್ರ. ಜಾಸ್ತಿಯಾದ್ರೆ ಒಂದು ಸ್ವಲ್ಪ ಭಿಕ್ಷೆ....'

'ಯಾಹ್ಯಾಖಾನರು ಹೊಸ ಘೋಷಣೆ ಮಾಡಿ ಪರಿಹಾರದ ದಾರಿಯನ್ನು ತೋರಿಸಿಕೊಟ್ರಂತಲ್ಲಾ.......'

'ಅದು ಶುದ್ಧಾಂಗ ಸುಳ್ಳು. ಅವರ ಘೋಷಣೆಯಿಂದ ಪರಿಹಾರ ದಾರಿಯಲ್ಲಿ ಮುಳ್ಳೇ ಬಿದ್ದಂತಾಯ್ತು. ಇಲ್ಲಿಯವರೆಗೆ ಅಂದ್ರೆ ಅಮೆರಿಕಾದಿ ಬೃಹತ್ ರಾಷ್ಟ್ರಗಳಿಗೂ ತೃಪ್ತಿಯಾಗಲಿಲ್ಲವಂತೆ........'

'ಅವುಗಳ ಅತೃಪ್ತಿಗೆ ಬೇರೆಯೇ ಕಾರಣವಿದ್ದೀತು ...'

'ಏನು ಹೇಳು ಮತ್ತೆ?'

'ಎಲ್ಲಾ ಬರೂ ಸಮಸ್ಯೆ ಪರಿಹಾರವಾದರೆ, ತಮ್ಮ ತುಕ್ಕು ಹಿಡಿದ ಶಸ್ತ್ರಾಸ್ತ್ರಗಳಿಗೆ ಬೇರೆ ಗಿರಾಕಿ ಹಿಡಿಯ ಬೇಕಾಗುತ್ತಲ್ಲಾಂತ....'

'ಭಾರೀ ತಮಾಶೆ ಮಾಡ್ತೀಯಾ?'

'ಇದ್ರಲ್ಲಿ ತಮಾಶೆಯೇನು ಬಂತು? ಇರೋದು ಹಾಗೆ ತಾನೆ?'

'ಒಂದ್ರೀತಿಯಿಂದ ಹೌದೂನ್ನು. ದೊಡ್ಡವ್ರು ಏನು ಮಾಡಿದ್ರೂ ಅದ್ರಲ್ಲಿ ರಹಸ್ಯ ಅಡಗಿರುತ್ತದೆ.'

'ಅದು ಸರೀನ್ರಿ, ಆದ್ರೆ ಅದ್ರ ರಹಸ್ಯ ನಮ್ಮ ತಲೆಗೆ ಬರುತ್ತಾ ಪೆ...'

"ಹೌದಮ್ಮ, ತಲೆಗೆ ಬರುತ್ತೇಂದ ಕೂಡ್ಲೆ ನೆನಪಾಯ್ತು....'

'ಏನ್ರಿ?'

'ನೋವಿಯತ್ತು ರಷ್ಯದವ್ರ ಆಕಾಶದಲ್ಲಿ ಟರ್ಮಿನಸ್ ನಿರ್ಮಿಸಿದ್ದರಲ್ಲಾ....'

'ಅಂದ್ರೆ....ಸೆಲ್ಯೂಟ್.. "

'ಹೂಂ. ಅದ್ರಲ್ಲಿ ಆಡ್ಡಾಡುವ ಮೂವರು ಮಾನವ ಖೇಚರರಿದ್ದರಲ್ಲಾ....'

'ಹೌದು....'

'ಅವ್ರ ದೇಹ ಮಾತ್ರ ಭೂಮಿಗಿಳಿದು ಬಂತತೆ!"

'ಅದೆಂಥದು?'

'ನೋಯುಜ್—೧೧ರಲ್ಲಿ ಅವ್ರು ಇಳಿಯುತಿದ್ದರಂತೆ. ಅದು ಭೂಮಿಯ ಕಕ್ಷೆಯನ್ನು ಸೇರುವಷ್ಟರಲ್ಲೇ ಭೂಮಿಯೊಡನಿದ್ದ ಸಂಬಂಧ ಕಡಿದು ಹೋಯಿತಂತೆ. ಉಪಗ್ರಹವಿಳಿದ ಬಳಿಕ, ಅದರೊಳಗೆ ಗಗನ ಯಾತ್ರಿತ್ರಯರ ಶವಗಳು ಅವರವರ ಆಸನಗಳಲ್ಲಿ ಕುಳಿತಿದ್ದಂತೆಯೇ ಇತ್ತಂತೆ!"

'ಮತ್ತೇನೆಂಥದು? ಮಾಡಬಾರದ್ದು ಮಾಡಹೋದ್ರೆ, ಆಗಬಾರದ್ದೇ ಆಗುತ್ತೆ....'

'ಅಲ್ವೆ, ಅವ್ರೇನು ಮಾಡಬಾರದ್ದು ಮಾಡಿದ್ರು?'

'ಇನ್ನೇನು ಮಾಡ್ಬೇಕು! ಆಕಾಶದಲ್ಲಿ ಟರ್ಮಿನಸ್ಸು—ನಗರ...."

'ಅಲ್ವೆ, ಹಿಂದಿನ ಕಾಲದವ್ರೂ ಮಾಡಿದ್ರಲ್ಲಾ?"

'ನೋಡಿ, ಅವರೆಲ್ಲ ಮಾಯಾವಿಗಳು; ದುಷ್ಟರು, ರಾಕ್ಷಸರು, ಅವರಿಗೂ ಸುಖವೆಲ್ಲಿ ಬಂತು? ದೇವ್ರು ಬೇರೆ ಬೇರೆ ರೀತಿಯಿಂದ ಅವ್ರನ್ನು ಕೊಂದ, ಅವ್ರ ಮಾಯಾ ನಗರಗಳನ್ನು ನಾಶಮಾಡಿದ, ಮಾನವರು ಮಾನವರೇ; ಅವ್ರು ಖೇಚರರೂ ಅಲ್ಲ, ದೇವತೆಗಳೂ ಅಲ್ಲ ಎಂದು ಬುದ್ಧಿ ಹೇಳಿದ....'

'ಇದು ಭಾರಿ ಸರಿಯಾದದ್ದು. ಆದರೆ, ನೋಡು, ದೇವತ್ವ—ದಾನವತ್ವ ಮೊದಲಾದುವುಗಳೆಲ್ಲ ಗುಣಕರ್ಮ ವಿಭಾಗಜನ್ಯ. ಉತ್ತಮವಾಗಿರುವಲ್ಲೆಲ್ಲ ಭಗವಂತನ ಅಂಶವಿದೆ....'

"ಇಲ್ಲದೆ ಮತ್ತೆ? ಶ್ರೀಕೃಷ್ಣ ಹೇಳಿದ್ದಾನಲ್ಲ ಗೀತೆಯಲ್ಲಿ....'

'ಹಾಗೆ ಉತ್ತಮ ವಿಜ್ಞಾನದಲ್ಲೂ ದೈವತ್ವವಿದೆ....'

"....ಇರಬಹುದು....'

'ಹಾಗಿರುವಾಗ, ಗಗನಯಾನ, ಗಗನ ನಗರ ನಿರ್ಮಾಣಗಳನ್ನೆಲ್ಲಾ ಸಾಧಿಸುವುದರಲ್ಲೂ ಭಗವಂತನ ಆಂಶಿಕ ಶಕ್ತಿಯಿದ್ದೇ ತೀರಬೇಕು....'

'ಆಯ್ತಪ್ಪ; ಆದ್ರೆನೋಡಿ, ಅವರೇಕೆ ಸತ್ತುಹೋದರು?'

'ಛೆ ಛೆ.. ಅವರು ಸತ್ತು ಹೋಗಲಿಲ್ಲ'

'ಮತ್ತೆ ಬದುಕಿ ಬಂದರೆ?'

'ಇಲ್ಲ ಕಣೆ, ಅಮರರಾದರು!'

'ಹೋ, ಹಾಗೆ. ಆಗಲಿ ಅದಕ್ಕೆ ಕಾರಣ?'

'ಕಾರಣ ಯಾರಿಗೆ ಗೊತ್ತು? ಗಗನ ಯಾತ್ರಿಗಳು ನಾನಾತರದ ಅನುಭವ ಹೊಂದಿದ್ದುಂಟು. ಒಂದು ವರ್ಷದ ಹಿಂದೆ ೧೮ದಿನ ಗಗನದಲ್ಲಿದ್ದು ಬಂದ ರಶ್ಯನ್ ಯಾತ್ರಿಗಳು ವೈಕೈಯಲ್ಲಿ ಯಾತನೆ ಹೊಂದಿದ್ದರಂತೆ; ಲಿಂಬೆ ಹಿಂಡಿದಂತೆ ಅವರ ದೇಹವನ್ನು ಹಿಂಡಿದಂತಾಗಿತ್ತಂತೆ....'

'ಇದೆಲ್ಲ ದೇವರ ಲೀಲೆ...'

'ಆದರೂ ಅವರು ಮರಳಿದರು ಜೀವಸಹಿತ.. ಇವರು ಮಾತ್ರ ಜೀವರಹಿತ....'

'ಅಲ್ರಿ ಈ ತ್ರಯರು ಯಾರು?'

'೪೩ ವಯಸ್ಸಿನ ಗಾರ್ಗಿಡುಬ್ರೊವೋಲ್ಸಿ ನಾಯಕರು; ೩೫ ವಯಸ್ಸಿನ ವಾಡಿಸಾವ್ ವೋಲ್ಕೋವ್ ಫ್ಲೈಟ್ ಇಂಜನಿಯರು ೩೭ ವರ್ಷದ ವಿಕ್ಟರ್ ಪಿಸಯೇವ್ ಟೆಸ್ಟ್ ಇಂಜನಿಯರು....'

'ಅಯ್ಯೋ, ಅವರ ಹೆಸರುಗಳೆ! ಯಾರಿಗೆ ನೆನಪುಳಿಯುತ್ತೆ?'

'ಏನು ಮಾಡೋದು ಹೇಳು, ಅವರವರ ನಾಲಿಗೆ ತಿರುಗುವಂತೆ ಹೆಸರಿರುತ್ತದೆ.'

'ಅಂತೂ ಮೂವರ ಬಲಿಯಾಯಿತೂನ್ನಿ....'

'ಇದು ಬಲಿಯಲ್ಲ, ಬಲಿದಾನ'

'ಇನ್ನಾದ್ರೂ ಗಗನಯಾತ್ರೆಗೊಂದು ತಡೆಬರಬಹುದು....'

'ಏನನ್ತೀಯಾ ನೀನು? ಅವರ ಮರಣದ ಕಾರಣಗಳನ್ನು ಕಂಡುಹಿಡಿದು, ಅದಕ್ಕೆ ಪರಿಹಾರ ಹುಡುಕಿ ಮುಂದುವರಿಸಬಾರದೇಕೆ?'

'ಆಯ್ತು. ಆಗುವುದೂ ಹಾಗೇ ಅನ್ನಿ. ಅಲ್ಲ, ಈಗ ಅಮರರಾದ ಖೇಚರರು ಎಷ್ಟು ದಿನ ಆಕಾಶದಲ್ಲಿದ್ರು?'

'೨೪ ದಿನಗಳು. ಇದುವರೆಗೆ ಯಾರೂ ಇಷ್ಟು ದೀರ್ಘಕಾಲ ಇರಲಿಲ್ಲ.... '

'ಹ್ಞೂಂ.. ಪಾಪ, ಅಲ್ಲ, ನಮ್ಮೂರಲ್ಲೇ ದಿನಕ್ಕೊಂದು ರೀತಿಯ ಹವೆಗೆ ನಮ್ಮ ದೇಹ ಒಗ್ಗಿಕೊಳ್ಳದೆ ರೋಗಕ್ಕೆ ಗುರಿಯಾಗ್ತದೆ. ಹಾಗಿರುವಾಗ, ಆಕಾಶದಲ್ಲಿ ಅಷ್ಟು ದಿನವಿರುವಾಗ,ಮೇಲೆ ಕೆಳಗೆ ಆಗುವಾಗ ಏನೇನಾಗುತ್ತೋ ಯಾರಿಗೆ ಗೊತ್ತು?'

'ಅದು ಹೌದೂನ್ನು. ಈಗಲಾದ್ರೂ ಒಪ್ಪಿಕೋತಿ ತಾನೆ?'

'ಕೋತಿಗಳು ಯಾವಾಗ್ಲೂ ಬಿಳಿ ಅಥವಾ ಕಪ್ಪು. ಓತಿಯಾದ್ರೆ ಮಾತ್ರ ಬಣ್ಣ ಬದಲಿಸುತ್ತವೆ.'

'ಆದ್ರೂ ನೋಡು, ಬಣ್ಣ ಬದಲಿಸುವಲ್ಲೂ ಈಗ ರಾಜಕಾರಣಿಗಳು ಓತಿಗಳನ್ನೂ ಮೀರಿದ್ದಾರೆ....'

'ಹೌದೂಂತೇನೆ. ನೋಡಿ, ಪಶ್ಚಿಮ ಬಂಗಾಳದಲ್ಲೂ ರಾಷ್ಟ್ರಪತಿಯಾಳಿಕೆ ಬಂತಂತೆ.'

'ಇದು ಮೊದಲೇ ಗೊತ್ತಿತ್ತೂನ್ನು. ನಾಲ್ಕು ವರ್ಷಗಳಲ್ಲಿ ಮೂರು ಬಾರಿ ರಾಷ್ಟ್ರಪತಿಯಾಳಿಕೆ ಪಡೆದ ಬಂಗಾಳವೇ ಧನ್ಯ!"

'ಯಾಕೇಂತೀರಿ?'

'ಬಂಗಾಳದಲ್ಲಿನ ರಾಜ್ಯಕೀಯ ಪರಿಸ್ಥಿತಿ ಎಷ್ಟು ಅಸ್ಥಿರವಾಗಿದೆಯೆಂಬುದಕ್ಕೆ ಇದೇ ಕನ್ನಡಿ ಹಿಡಿಯುತ್ತದೆ; ಈಗ ಅಲ್ಲಿಗೆ ಒಬ್ಬ ಮಂತ್ರಿಯಂತೆ ಕೇಂದ್ರದಲ್ಲಿ....'

'ಅದು ಸರೀನ್ರಿ. ಕಮ್ಯುನಿಸ್ಟರ ಒತ್ತಾಯಕ್ಕೆ ಮಣಿದೇ ಅಲ್ಲಿ ಮೊನ್ನೆ ಮಾರ್ಚಿಯಲ್ಲಿ ಚುನಾವಣೆ ನಡೆದದ್ದು ತಾನೆ?'

"ನೀನೂ ನಾನೂ ಹಾಗೆನ್ನಬಹುದು. ಆದರೆ ಪ್ರಧಾನಿ ಹಾಗನ್ನುವುದಿಲ್ಲ. ಪರಿಸ್ಥಿತಿ ಅಲ್ಲಿ ತಿಳಿಗೊಂಡಿತ್ತು; ಚುನಾವಣೆಯೂ ಯ್ತು. ಈಗ ಮತ್ತೆ....'

'ಅಲ್ರಿ, ಅಜಯ್ ಯಾಕೆ ರಾಜಿನಾಮೆ ಕೊಟ್ರು— ಮುಖ್ಯಮಂತ್ರಿ ಪದವಿಯ ಮೇಲೆ ಭಾರಿ ಮೋಹಗೊಂಡಿದ್ದವ್ರು—ರಾಜಿನಾಮೆ ಕೊಡಿ ಯಾ ವಿಧಾನಸಭೆಯೆದುರಿಸಿ ಅಂದ್ರೂ ಕೇಳದೆ ದಬ್ಬಿಸಿಕೊಂಡವ್ರು...'

'ಬಂಗ್ಲಾ ನಿರಾಶ್ರಿತರ ಪ್ರವಾಹ ಅವರನ್ನು ಪಾತಳಿಗೆ ನೂಕಿತಂತೆ....'

"ಅಲ್ಲಾಂತೆ....'

"ಮತ್ತೆ?'

'ಸಂಯುಕ್ತರಂಗದ ಅಂಗ ಪಕ್ಷಗಳೇ ಹೊಡೆದಾಡ ತೊಡಗಿವೆಯಂತೆ....'

'ಇರಬಹುದು. ಎಲ್ಲಾ ಕಡೇನೂ ಹರಡಿದ ರೋಗತಾನೆ?'

'ಅಲ್ರಿ, ನಮ್ಮ ರಾಜ್ಯದಲ್ಲಿನ ಇಂಡಿಕೇಟಗರೇ ಪರಸ್ಪರ ಕತ್ತಿ ಮಸೆಯ ಹೊರಟಿದ್ದಾರೆ, ಮತ್ತೆ ಬೇರೆ ಬೇರೆ ಪಕ್ಷಗಳ ಗತಿಯೇನು?'

"ಈ ವರಸೆಯಲ್ಲಿ ಕೆಂಗೆಲ್ಲರೂ ಇದ್ದಾರೆಂದು ಸುದ್ದಿ...."

"ಮತ್ತವರೇನು ಮಾಡೋದು? ಕೇಂದ್ರದಲ್ಲಿನ ಮಂತ್ರಿಪಟ್ಟವೂ ಅಲುಗುತ್ತಿರುವಾಗ ರಾಜ್ಯದಲ್ಲಾದರೂ ಕಳವೂರೋಣ ಅಂತ ಇರಬಹುದು. ಹದಿನೈದು ವರ್ಷ ಕರ್ನಾಟಕ ಲಿಂಗಾಯತರ ರಾಜ್ಯವಾಯ್ತು; ಇನ್ನೊಂದು ಪರ್ಯಾಯ ತಮಗೇ ದೊರೆಯಬೇಕೆಂದು ಒಕ್ಕಲಿಗರ ಪ್ರಯತ್ನ. ಅದಕ್ಕಾಗಿ ಕೆಂಗೆಲ್ ಅವರಿಗೆ ಬೇಕಾಗಿದ್ದಾರೆ. ಕೆಂಗೆಲ್ಲರಿಗೂ ಇದು ಭಾರಿಪ್ರಿಯ."

"ಅಧಿಕಾರವಿಲ್ಲದ ದಂಡ ಕೈಯಲ್ಲಿ ಹಿಡಿಯಲು ಅವರು ಸಿದ್ಧರಿಲ್ಲ........'

'ಅದು ಸರೀನ್ನಿ. ಇಂದಿರಮ್ಮನ ತಾಳಕ್ಕೆ ಸರಿಯಾಗಿ ಕುಣಿಯಲು ಬಾರಿ ರಿಹರ್ಸಲ್ಲು ಮಾಡಿರಬೇಕು.'

'ರಿಹರ್ಸಲ್ಲು ಮಾಡದೆ ಹೇಗಾಗುತ್ತೆ!'

'ತಿಳೀತು ಬಿಡಿ. ನಮ್ಮದೆಲ್ಲ ರಿಹರ್ಸಲ್ಲಿನಲ್ಲೇ ಖಾಲಿಯಾಯ್ತು. ಇನ್ನು ಆಟಕ್ಕೆ...............'

''ಇಲ್ಲ ಕಣೇ....ಇಲ್ಲ........"

—ಗೋರಾ.

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ

ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

ವಿದಾಯ ಸತ್ಕಾರ

ಬೇರೆ ಬೇರೆ ಕೋರ್ಟುಗಳಲ್ಲಿ ೩೨ ವರುಷಗಳ ಪ್ರಾಮಾಣಿಕ ಹಾಗೂ ದಕ್ಷ ಸೇವೆ ಸಲ್ಲಿಸಿ ನಿವೃತ್ತರಾಗುವ ಉಡುಪಿ ಮುನ್ಸಿಫ್ ಕೋರ್ಟಿನ ಮುನ್ಸಿ ಶ್ರೀ ವಿಠಲ ಶೆಟ್ಟರಿಗೆ ತಾ. 17ರಂದು ಉಡುಪಿಯ ಎಲ್ಲಾ ಕೋರ್ಟುಗಳ ನ್ಯಾಯಾಧೀಶರುಗಳೂ, ಸಿಬ್ಬಂದಿಯವರೂ ವಿದಾಯ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಪ್ರಿನ್ಸಿಪಾಲ್ ಸಿವಿಲ್ ಜಡ್ಜ್ ಶ್ರೀ ಬಿ. ವಿಶ್ವನಾಥ ರೈಯವರು ಅಧ್ಯಕ್ಷತೆ ವಹಿಸಿದ್ದ ಈ ಸಮಾರಂಭದಲ್ಲಿ ಪ್ರಿನ್ಸಿಪಾಲ್ ಮುನ್ಸಿಫ್ ಶ್ರೀ ಎಸ್. ಗೋಪಾಲಕೃಷ್ಣ, ಸಿವಿಲ್ ಜಡ್ಜರ ಕೋರ್ಟಿನ ಶಿರಸ್ತೆದಾರ್ ಶ್ರೀ ಬಿ. ಕೃಷ್ಣ ನಾಯಕ್ ಮೊದಲಾದವರು ಶ್ರೀ ಶೆಟ್ಟರ ಸೇವಾ ಕಾರ್ಯದಕ್ಷತೆಯನ್ನು ಕೊಂಡಾಡಿದರು. ಶ್ರೀ ವಿಠಲ ಶೆಟ್ಟರು ತನಗಿತ್ತ ಸತ್ಕಾರಕ್ಕೂ ತನ್ನ ಕುರಿತು ವ್ಯಕ್ತಪಡಿಸಿದ ಮೆಚ್ಚುಗೆಗೂ ಆಭಾರ ಸೂಚಿಸಿ ತನ್ನ ಅಧಿಕಾರಾವಧಿಯಲ್ಲಿ ನೆರವಾದವರನ್ನು ಸ್ಮರಿಸಿದರು.

ಬೇಗಂ ಲಿಯಾಕತ್ ಆಲಿಖಾನ್

'ರಾನಾ' ಅಂದರೆ ಮೆಹಂದಿ ಎಂದು ಅರ್ಥ, ಮಿಸ್ ರಾನಾಳು ಯುವಾವಸ್ಥೆಯಲ್ಲಿ ವಿಲಾಯತಿಯಲ್ಲಿ ಶಿಕ್ಷಣ ಪಡೆದು ದಿಲ್ಲಿಗೆ ಮರಳಿದಾಗ, ಪಾಕಿಸ್ತಾನವೆಂಬ ದೇಶ ನಿರ್ಮಾಣವಾಗುವುದು; ಅದರ ಪ್ರಥಮ ಪ್ರಧಾನಿಯ ಪತ್ನಿಯೆನಿಸುವ ಸೌಭಾಗ್ಯ ತನಗೆ ಒದಗಿ ಬರುವುದು ಎಂಬುದು ಕನಸಿಗೂ ದೂರವೆನಿಸಿದ ಸಂಗತಿಗಳು. ಕನಸಿನಲ್ಲಿ ಕಾಣಲಾಗದ ಕೆಲವು ಸಂಗತಿಗಳು ನಿತ್ಯಜೀವನದಲ್ಲಿ ಸತ್ಯವಾಗಿ ಪರಿಣಮಿಸಿ ಹೋಗುವುದುಂಟು. ಮಿಸ್. ರಾನಾ ದೆಹಲಿಯಲ್ಲಿ ಅಧ್ಯಾಪಿಕೆಯಾಗಿದ್ದಾಗ, ಜನಾಬ್ ಲಿಯಾಕತ್ ಆಲೀಖಾನರೊಡನೆ ಪರಿಚಯ ಬೆಳೆಯಿತು. ಇದು ಮುಂದುವರಿದು ರಾನಾ ಲಿಯಾಕತ್ ಆಲೀಖಾನರ ಕಾರ್ಯದರ್ಶಿಯಾದಳು. ಅಲ್ಪಾವಧಿಯಲ್ಲೇ ಅವರ ಪತ್ನಿಯೂ ಆದಳು.

ದುಃಖ ದಾರಿದ್ರ್ಯಗಳಿಂದ ಕಂಗೆಟ್ಟು ಕ್ರಿಸ್ತಮತವನ್ನು ಅಪ್ಪಿಕೊಂಡ ನಿರ್ಧನ ಕುಟುಂಬಕ್ಕೆ ಆಕೆ ಸೇರಿದವಳು. "ಪ್ರೇಮದಿಂದಲ್ಲ, ತನ್ನ ಸಾಮರ್ಥ್ಯವನ್ನು ಮೆಚ್ಚಿಕೊಂಡು ಸ್ವಲಾಭಕ್ಕಾಗಿಯೇ ಜನಾಬಖಾನರು ತನ್ನನ್ನು ತನ್ನ ಜೀವನ ಸಂಗಾತಿಯನ್ನಾಗಿ ಮಾಡಿಕೊಂಡರು"ಎಂದಳು ಒಮ್ಮೆ ರಾನಾ. ಇದು ತಪ್ಪೆನ್ನುವಂತಿಲ್ಲ. ಬೇಗಂ ಖಾನಳು ತನ್ನ ಸಾಮರ್ಥ್ಯವನ್ನು ಅಭಿವ್ಯಕ್ತ ಮಾಡುವ ಯಾವ ಅವಕಾಶವನ್ನೂ ವ್ಯರ್ಥವಾಗಿ ಕಳೆದುಕೊಳ್ಳಲಿಲ್ಲ.

ಪಾಕಿಸ್ತಾನ ರಚನೆಯಾಯ್ತು. ಜನಾಬ್‌ಖಾನರು ಅದರ ಮೊತ್ತ ಮೊದಲ ಪ್ರಧಾನ ಮಂತ್ರಿಯಾದರು. ಪಾಕಿಸ್ತಾನದ ಆರಂಭ ದಿನಗಳು ಅದೆಷ್ಟು ಸಂಕಷ್ಟಗ್ರಸ್ತವಾಗಿದ್ದವೆಂಬುದು ಹೆಚ್ಚಿನವರಿಗೆ ಗೊತ್ತು. ಇದಕ್ಕೆ ಸ್ವಯಂ ಪಾಕಿಸ್ತಾನವೇ ಹೊಣೆ. ಈ ಸಮಯದಲ್ಲಿ ಬೇಗಂ ಖಾನ್ ತನ್ನ ಹೊಸ ಮಾತೃಭೂಮಿಗಾಗಿ ಪತಿಯೊಡನೆ ಸಹಭಾಗಿಯಾಗಿ ದುಡಿದಳು. ಬುರುಖಾದಿಂದ ಹೊರಗಿರುವ ತನ್ನನ್ನು ತಪ್ಪು ತಿಳಿದುಕೊಂಡ ಅಜ್ಞ ಮುಸ್ಲಿಂ ಮಹಿಳೆಯರನ್ನು ಜಾಗ್ರತಗೊಳಿಸಲು ಪ್ರಯತ್ನಿಸಿದಳು.

ಇದ್ದಕ್ಕಿದ್ದಂತೆ ಜನಾಬ್ ಖಾನರನ್ನು ಪಾಕಿಸ್ತಾನಿಗಳೇ ಗುಂಡಿಟ್ಟು ಕೊಂದು ಬಿಟ್ಟರು. ಪ್ರಧಾನ ಮಂತ್ರಿಯ ವಿಧವೆಯನ್ನು ಹೇಗೆ ಕಾಣಬೇಕೋ ಹಾಗೆ ಪಾಕಿಸ್ತಾನ ಸರಕಾರ ಬೇಗಂ ಖಾನಳನ್ನು ನೋಡಲಿಲ್ಲ. ತನ್ನ ಪತಿಯ ಕೊಲೆಯ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಯಬೇಕೆಂದು ಆಕೆ ಹಲವು ಬಾರಿ ಮನವಿ ಮಾಡಿಕೊಂಡಳು. ಆದರೆ, ಅದನ್ನು ಯಾರೊಬ್ಬರೂ ಕಿವಿಗೆ ಹಾಕಿಕೊಳ್ಳಲಿಲ್ಲ. ಅನಂತರ ಆಕೆ ಮೌನ ವ್ರತ ಧರಿಸಿದಳು, ಈ ಮೌನದಲ್ಲಿಯೂ ಪಾಕ್ ಸರಕಾರಕ್ಕೆ ಸಂದೇಹ ಹುಟ್ಟಿತು.

ಬೇಗಂ ಖಾನಳ ಯೋಗ್ಯತೆ ಹಾಲಿನಷ್ಟು ಬಿಳಿ. ಅದಕ್ಕೆ ಬೇರೆ ಕನ್ನಡಿ ಹಿಡಿಯುವುದು ಅನಗತ್ಯ. ಪಾಕಿಸ್ತಾನ ಸರಕಾರವು ಆಕೆಯನ್ನು ನೆದರ್‌ಲೇಂಡಿನಲ್ಲಿ ತನ್ನ ರಾಜದೂತಳನ್ನಾಗಿ ನೇಮಿಸಿತು. ಈ ಹುದ್ದೆಯಲ್ಲಿ ಆಕೆ ತನ್ನ ಕರ್ತವ್ಯಗಳನ್ನು ಸಮರ್ಥ ರೀತಿಯಲ್ಲಿ ನಿಭಾಯಿಸಿದಳು. ಆದರೆ, ಪಾಕಿಸ್ತಾನದ ಅಸ್ಥಿರ ರಾಜ್ಯನೀತಿಯು ಆಕೆಯ ಮಾರ್ಗದಲ್ಲಿ ಮತ್ತೆ ಮುಳ್ಳು-ಕಲ್ಲು ಎಸೆಯಿತು. ಇದರಿಂದಾಗಿ ಬೇಗಂ ಲಿಯಾಕತಳು ಅಂಧಕಾರದಲ್ಲಿ ಅದೃಶ್ಯಳಾಗಿ ಹೋದಳು.

ಪಾಕಿಸ್ತಾನದ ಪ್ರಥಮ ಪ್ರಧಾನಿ ಲಿಯಾಕತ್ ಆಲಿಖಾನರು ರಾಜನೀತಿಯಲ್ಲಿ ಬಹಳ ನಿಪುಣರು; ಅವರ ನೀತಿನಿರ್ಧಾರದಲ್ಲಿ ಅವರ ಹೆಂಡತಿಯ ಕೈವಾಡವೆಷ್ಟು ಎಂಬುದನ್ನು ಹೆಚ್ಚಿನವರು ಅರಿತಿಲ್ಲ.

ರಾನಾ ಬೇಗಂ ಅಥವಾ ಬೇಗಂ ಲಿಯಾಕತ್ ಆಲಿಯು ಭಾರತೀಯ ಸಂಸ್ಕಾರಗಳಿಂದ ಪರಿಪೋಷಿತಳಾದವಳು. ಪತಿವ್ರತಾ ಸ್ತ್ರೀಯಂತೆ ಬಾಳಿಬಂದವಳು; ಇಂದಿಗೂ ಬಾಳುತ್ತಿರುವವಳು. ತನ್ನ ಪತಿಯ ಉತ್ಕರ್ಷೆಯಲ್ಲಿ ಸಾಧ್ಯವೆನಿಸಿದಷ್ಟು ಸಹಯೋಗ ಮಾಡಿದವಳು.

ಆಕೆಯ ಪತಿ ಆಕಸ್ಮಿಕ ನಿಧನಾನಂತರ ಮೂರು ದಿನಗಳಕಾಲ ಶೋಕಾಚರಣೆ ನಡೆಯಿತು. ಈ ವೇಳೆ ಆಕೆ ಪತಿಶವದ ಬಳಿ ಅವಿಚಲಳಾಗಿ ಕುಳಿತುಕೊಂಡಿದ್ದಳು. ರುದ್ರ ಯಾತ್ರೆಯಲ್ಲಿ ಆಕೆ ಭಾಗವಹಿಸಿದಳು. ಸ್ಮಶಾನದಲ್ಲಿ ಅಂತಿಮ ಪ್ರಾರ್ಥನೆ ಸಲ್ಲಿಸುತ್ತಿರುವಾಗ ಆಕೆ ಗಂಭೀರ ಮೌನ ತಳೆದಿದ್ದಳು. ಅಲ್ಲಿ ಒಂದು ಪಟಕಾದರೂ ಕಣ್ಣೀರು ಆಕೆಯ ಕಣ್ಣುಗಳಿಂದ ಸುರಿಯಲಿಲ್ಲ. ತಕ್ಷಣ ಆಕೆಯನ್ನೊಂದು ಕೋಣೆಯಲ್ಲಿಟ್ಟು ಬಾಗಿಲು ಹಾಕಲಾಯ್ತು. ಅಲ್ಲಿ ಆಕೆ ಬೇಕೆಂಬಷ್ಟು ಮರುಗಿದ್ದಿರಬೇಕು. ಏಕೆಂದರೆ, ಸಂಜೆಯ ಹೊತ್ತಿಗೆ ಆಕೆಯ ಮೇಲೆ ವೈಧವ್ಯವು ತನ್ನ ಸಂಪೂರ್ಣ ಸಾಮ್ರಾಜ್ಯ ಸ್ಥಾಪಿಸಿಬಿಟ್ಟಿತ್ತು. ಆಕೆಯ ಮುಖವನ್ನು ಕಂಡೊಡನೆಯೇ ಮುತ್ತೈದೆತನಕ್ಕೆ ಎರವಾಗಿದ್ದಾಳೆಂದು ಯಾರಾದರೂ ಹೇಳಬಹುದಿತ್ತು.

ಜನಾಬ್ ಖಾನರ ಕುಟುಂಬದೊಡನೆ ಅನೇಕ ಮಹಾನಾಯಕರ ಸಂಪರ್ಕವಿತ್ತು; ಇವರಲ್ಲಿ ಹಲವಾರು ಭಾರತೀಯರೂ ಇದ್ದರು. ಹಿಂದೂ ಪರಿವಾರದಲ್ಲಿರುವಂತೆ ಹಾಸ-ಪರಿಹಾಸದ ವಾತಾವರಣ ಖಾನರ ಮನೆಯಲ್ಲಿ ಸದಾ ಇರುತಿತ್ತೆಂಬುದು ಇವರೆಲ್ಲರಿಗೂ ಗೊತ್ತು.

ಬೇಗಂ ಖಾನಳು ಪರದೆ ಧರಿಸುತ್ತಿರಲಿಲ್ಲ. ಇದರಿಂದ ಆಕೆ ಪಾಕಿಸ್ತಾನದಲ್ಲಿಯೇ ಹಲವಾರು ಅಡ್ಡಿ ಆತಂಕಗಳನ್ನು ಅನುಭವಿಸ ಬೇಕಾಯ್ತು. ಮುಲ್ಲಾಗಳೂ ಸ್ವಾರ್ಥಲೋಲುಪರೂ ತಂತಮ್ಮಲ್ಲೇ ಆಕೆಯ ವರ್ತನೆಯನ್ನು ಖಂಡಿಸುತ್ತಿದ್ದರು. ಕೆಲವೊಮ್ಮೆ ಮಸೀದಿಗಳಲ್ಲಿನ ಸಭಾವೇಳೆಯೇ ಆಕೆಯ ಬಗ್ಗೆ ಕಠೋರ ವಾಕ್ಯಗಳನ್ನು ಆಡುತ್ತಿದ್ದರು. ಆದೇನಿದ್ದರೂ ಲಿಯಾಕತ್ ಆಲೀ ದಂಪತಿಗಳು ಈ ಕಡೆಗೆ ಗಮನವನ್ನೇ ಕೊಡಲಿಲ್ಲ. ಪಾಕಿಸ್ತಾನವನ್ನು ಸುಖಿ ಮತ್ತು ಸಂಮೃದ್ಧಗೊಳಿಸಲು ದೀಕ್ಷಾ ಬದ್ಧರಾಗಿದ್ದ ಇವರಿಗೆ ಅಜ್ಞ ಜನರ ಮಾತುಗಳಿಗೆ ಮನಹರಿಸಲು ಅವಕಾಶವೆಲ್ಲಿಂದ? ಆದರೂ ಸಂಪ್ರದಾಯವಾದಿ ಕಠೋರ ಮುಲ್ಲಾಗಳು ಅವರ ಭಾವನೆಗಳಿಗೆ [illegible] ಪ್ರಹಾರ ಮಾಡಿದರು. ಬೇಗಂ [illegible] ಇದೆಲ್ಲಕ್ಕೆ ಕಿವಿಗೊಡದೆ [illegible] ದಾರಿಯಲ್ಲಿ ಮುಂದೆ [illegible].

ಜನಾಬ್ [illegible]ಕತ್ ಒಂದೊಮ್ಮೆ ಹೇಳಿದ್ದರು- "[illegible] ಬೇಡಿಕೆ ಈ ರೀತಿಯಾಗಿ ಇಷ್ಟು [illegible] ಮಾನ್ಯವಾಗುವುದೆಂದು ನಮಗಿಲ್ಲ ಗೊತ್ತಿತ್ತು? ಆದುದರಿಂದಲೇ [illegible] ಪೂರ್ವ ತಯಾರಿಯನ್ನೂ ಮಾಡಿಕೊಂಡಿರಲಿಲ್ಲ. ಇದೇ

(ಎಂಟನೇ ಪುಟ ನೋಡಿರಿ)



ಒಂದು ಐತಿಹಾಸಿಕ ಸಿಂಹಾವಲೋಕನ

ತುಳುನಾಡು

ಲೇಖಕರು : ಡಾ| ಪಿ. ಗುರುರಾಜ ಭಟ್.

ತುಳುನಾಡೆಂಬುದು ದಕ್ಷಿಣ ಕನ್ನಡ ಜಿಲ್ಲೆಗೆ ಇದ್ದ ಐತಿಹಾಸಿಕ ಹೆಸರು. ಇತಿಹಾಸ ಪ್ರಸಿದ್ಧಿಯನ್ನು ಪಡೆದ ಈ ತುಳುನಾಡಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ವರೆಗಿನ ಕೆಲವು ಭಾಗಗಳೂ ಘಟ್ಟದ ಮೇಲಣ ಶಿವಮೊಗ್ಗೆಯ ಕೆಲವು ಭಾಗಗಳೂ ಸೇರಿದ್ದುವು.

ಇಂದಿನವರೆಗೂ ತುಳುನಾಡಿಗೆ ಸಂಬಂಧಿಸಿದ ಹಲಕೆಲವು ಚಾರಿತ್ರಿಕ ಪ್ರಶ್ನೆಗಳು ಬಗೆಹರಿಯದೆ ಸಮಸ್ಯಾತ್ಮಕವಾಗಿಯೇ ಉಳಿದಿವೆ. ಆಳವಾದ ಅಭ್ಯಾಸದ ದೆಸೆಯಿಂದ ಇವುಗಳನ್ನು ಬಗೆಹರಿಸಲು ಪ್ರಯತ್ನಿಸಬೇಕಷ್ಟೆ! ತುಳುವರೆಂದರೆ ಯಾರು, ಅವರು ಒಂದು ವಿಶಿಷ್ಟವಾದ ಜನಪ್ರಭೇದವೇ, ಅವರ ವಂಶೀಯ ವೈಲಕ್ಷಣ್ಯಗಳಾವುವು, ತುಳುಭಾಷೆಯು ಎಂದಿನಿಂದ ಬಳಕೆಯಲ್ಲಿತ್ತು, ಕಲ್ಯಾಣಪುರ ನದಿಯಿಂದ ಉತ್ತರಕ್ಕೆ ತುಳುಭಾಷೆಯು ಏನೇನೂ ಪ್ರಚಾರವಲ್ಲಿರದಿರಲು ಕಾರಣಗಳಾವುವು, ತುಳುಭಾಷೆಯು ಬಳಕೆಯಿಲ್ಲದ ಬಾರಕೂರು, ಬಸರೂರು, ಹಾಡುವಳ್ಳಿಗಳು ತುಳು ದೇಶದ ಕೇಂದ್ರ ಸ್ಥಳಗಳಾಗಲು ಕಾರಣವೇನು, ತುಳುವು ಲಿಖಿತ ರೂಪವನ್ನು ಹೊಂದದಿರಲು ಏನು ಕಾರಣ, ತುಳುನಾಡಿನಲ್ಲಿ ಮೂಲಿಗರು ಯಾರಾಗಿದ್ದರು, ಮೊಗೇರರು ಮತ್ತು ಬಿಲ್ಲವರ ಪ್ರಾಚೀನತೆ ಯಾವುದಿರಬಹುದು, ನಾಡವರ ಮೂಲವಾವುದು, ತುಳುವರಲ್ಲಿ ಬ್ರಾಹ್ಮಣ್ಯ ಎಂದಿನಿಂದ ಪ್ರಾರಂಭವಾಗಿದ್ದಿರಬಹುದು, ಜೈನ ಧರ್ಮದ ಉಗಮ ಈ ನಾಡಿನಲ್ಲಿ ಎಂದಾಯಿತು, ಭೂತಾರಾಧನೆಯ ತಾತ್ವಿಕ ಹಿನ್ನೆಲೆಯೇನು, ದೇವಸ್ಥಾನ ನಿರ್ಮಾಣ ಕೆಲಸ ಎಂದಿನಿಂದ ಪ್ರಾರಂಭವಾಯಿತು, ಅಳಿಯ ಕಟ್ಟಿನ ವೈಶಿಷ್ಟ್ಯವೇನು ಎಂಬಿತ್ಯಾದಿ ಪ್ರಶ್ನೆಗಳಿಗೆ ಅಲ್ಲಲ್ಲಿ ಇಷ್ಟಿಷ್ಟು ಮಾತ್ರ ಉತ್ತರವನ್ನೀಯಬಹುದಷ್ಟೆ. ಸಂಶೋಧನಾ ಮಾರ್ಗದಲ್ಲಿ ಮುಂದೊತ್ತುವವರಿಗೆ ತುಳುನಾಡಿನ ಇತಿಹಾಸವು ಸ್ವಾರಸ್ಯವಾದ ಮೂಲವಸ್ತುವನ್ನು ಒದಗಿಸುತ್ತದೆ. ಸ್ಥೂಲವಾಗಿ ಹೇಳುವುದಾದರೆ ದಕ್ಷಿಣದಲ್ಲಿ ಚಂದ್ರಗಿರಿ ಹೊಳೆಯಿಂದ (ಈಗ ಇದು ಕೇರಳಕ್ಕೆ ಸೇರಿದೆ) ಉತ್ತರದಲ್ಲಿ ಹೊನ್ನಾವರ ಹೊಳೆಯ ತನಕವಿರುವ ಕರಾವಳಿ ಪ್ರದೇಶವು ತುಳುನಾಡಾಗಿತ್ತು. ಕೆಲವೊಮ್ಮೆ ಗೋಕರ್ಣದ ತನಕವೂ ಅದರ ಮೇರೆ ವಿಸ್ತರಿಸಿತ್ತು.

ಪ್ರಾಚೀನತೆಯ ದೃಷ್ಟಿಯಿಂದ ಈ ಅಭ್ಯಾಸವನ್ನು ಮುಂದುವರಿಸುವುದಾದರೆ ತುಳುನಾಡಿನಲ್ಲಿ ಕೆಲವು ಸ್ಥಳಗಳಲ್ಲಾದರೂ ಅಗತೆಮಾಡಿ ಪ್ರಾಚೀನತೆಯ ಕುರುಹುಗಳೇನಿವೆ ಎಂಬುದನ್ನು ಗೊತ್ತು ಹಚ್ಚಬೇಕು. ಉಡುಪಿಯ ಸಮೀಪವಿರುವ ಉದ್ಯಾವರ (ಉದಯಪುರ), ಬಾರಕೂರು (ಬಾರಕನ್ಯಾಪುರ), ಮಂಗಳೂರು (ಮಂಗಲಾಪುರ), ಸುಬ್ರಹ್ಮಣ್ಯ (ಕುಕ್ಕೆ), ಕೊಲ್ಲೂರು (ಕುವಲಯಪುರ),—ಈ ಸ್ಥಳಗಳು ಇಂತಹ ಪ್ರಾಕ್ತನ ಅಗತೆಗೆ ಯೋಗ್ಯವಾದುವುಗಳೆನ್ನಲಡ್ಡಿಯಿಲ್ಲ. ಉದ್ಯಾವರ, ಬಾರಕೂರು ಮತ್ತು ಮಂಗಳೂರುಗಳನ್ನು ಅಗತೆ ಮಾಡುವುದರಿಂದ ಕ್ರಿ.ಶ. ದ ಆದಿಯ ಶತಮಾನಗಳ ಹಾಗೂ ಕ್ರಿ.ಪೂ. ದ ಕೆಲವು ಶತಮಾನಗಳ ಇತಿಹಾಸವನ್ನು ಬೆಳಕಿಗೆ ತರುವುದು ಸಾಧ್ಯವಾಗ ಬಹುದು.

ಇತ್ತಲಾಗೆ ಬೆಳ್ತಂಗಡಿ ತಾಲೂಕಿಗೆ ಸೇರಿದ ಕಜೇಕಾರು ಎಂಬಲ್ಲಿ ಕ್ರಿ.ಪೂ. 800—300ರ ವರೆಗೆ ಅನ್ವಯಿಸಬಹುದಾದ ಬೃಹತ್ ಶಿಲಾ ಸಂಸ್ಕೃತಿಯ ಕುರುಹುಗಳು ದೊರಕಿವೆ. ಅಂತೆಯೇ ಕಾಸರಗೋಡು ತಾಲೂಕಿನ ಮಧೂರಿನ ಸಮೀಪವೂ ಈ ಸಂಸ್ಕೃತಿಯ ಕುರುಹುಗಳಿವೆ. ಉದ್ಯಾವರದಲ್ಲಿ ಕ್ರಿ.ಪೂ. 3—4ನೇ ಶತಕದ ಕುರುಹುಗಳು ದೊರೆತಿವೆ. ಈ ಪ್ರದೇಶಗಳಲ್ಲಿ ಪ್ರಾಕ್ತನ ಸಂಶೋಧನೆಗೆ ತುಂಬ ಅವಕಾಶವಿದ್ದೇ ಇದೆ

ಅಶೋಕನ ಶಿಲಾಲೇಖದಲ್ಲಿ ಉಲ್ಲೇಖಗೊಂಡಿರುವ ಸತಿಯ ಪುತ್ರವು ತುಳುನಾಡೆಂಬುದಾಗಿ ತಿಳಿಯಲ್ಪಟ್ಟಿದೆ. ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದ್ದರೂ ಇದಕ್ಕೆ ಸಂಬಂಧಿಸಿದ ಸಂಶೋಧನೆ ಯೋಗ್ಯರೀತಿಯಲ್ಲಿ ನಡೆಯಬೇಕೆಂಬುದು ನಿರ್ವಿವಾದವಾದರೂ ಈ ಸತಿಯ ಪುತ್ರವು ತುಳುನಾಡೆಂದು ಸ್ಥೂಲವಾಗಿ ಅಂಗೀಕರಿಸಬಹುದು. ಇಂದಿಗೂ ಮೊಗೇರ ಮತ್ತು ಬಿಲ್ಲವ ವರ್ಗಗಳಲ್ಲಿ 'ಸದಿಯ' ಎಂಬ ಕುಲನಾಮವಿದೆ. ಈ ಎರಡೂ ಜನಪ್ರಭೇದವು ಬಹಳ ಪ್ರಾಚೀನವೆನ್ನುವುದರ ಸಂದೇಹವಿರಲಾರದು. ಸಂಖ್ಯೆಯಲ್ಲಿ ಇವರ ಆಧಿಕ್ಯ ತುಳುನಾಡಿನಲ್ಲಿ ಇದ್ದುದು ತಿಳಿದು ಬರುತ್ತದೆ. 'ಸದಿಯ'ವು 'ಸತಿಯ'ದ ರೂಪಭೇದವೇ?

ತುಳುನಾಡಿನ ಇತಿಹಾಸಕ್ಕೆ ಅನ್ವಯಿಸಿಕೊಂಡು ಪರಶುರಾಮನ ಕತೆ, ಮಯೂರವರ್ಮನ ಕತೆ, ಭೂತಾಳ ಪಾಂಡ್ಯನ ಕತೆ—ಇವುಗಳನ್ನು ಹೇಳುವುದಿದೆ. ಆದರೆ ನಮಗಿಷ್ಟರ ವರೆಗೆ ದೊರಕಿದ ಯಾವ ಅಧಿಕೃತ ದಾಖಲೆಗಳಲ್ಲೂ ಸ್ವಲ್ಪವಾದರೂ ಇವುಗಳ ಉಲ್ಲೇಖವಿಲ್ಲ. ಅಧಿಕೃತವಾಗಿ ಕ್ರಿ. ಶ. 7ನೇ ಶತಮಾನದಿಂದ ಆರಂಭವಾಗಿ ತುಳುವರ ಇತಿಹಾಸವನ್ನು ಬರೆಯಬಹುದು. ಆದರೆ ತುಳುನಾಡು ಯಾವುದೋ ಒಂದು ಕಾಲದಲ್ಲಿ ಸಮುದ್ರದಿಂದ ಆವರಿಸಲ್ಪಟ್ಟಿತೆಂದೂ, ಕ್ರಮೇಣ ಜನವಸತಿ ಉಂಟಾಯಿತೆಂದೂ ತಿಳಿದುಕೊಳ್ಳಬಹುದು.

ತುಳುನಾಡಿನಲ್ಲಿ ಸುಮಾರು ಕ್ರಿ. ಶ. ಒಂದೆರಡು ಶತಕಗಳಿಂದ ಆರಂಭವಾಗಿ ವಿಜಯನಗರದ ಸ್ಥಾಪನೆಯವರೆಗೆ ಆಳಿದ ಅರಸುಮನೆತನವೆಂದರೆ ಆಳುಪರದ್ದು. ಈ ಮನೆತನದಿಂದ ಈ ಪ್ರದೇಶಕ್ಕೆ "ಆಳ್ವಖೇಡ" ವೆಂಬ ಹೆಸರು ಪ್ರಸಿದ್ಧವಾಗಿತ್ತು. ಈ ಮನೆತನವು ಅವಿಚ್ಛಿನ್ನವಾಗಿ ಒಂದುವರೆ ಸಾವಿರ ವರ್ಷಗಳ ತನಕ ಆಳಿಕೊಂಡಿದ್ದುದು ಅದರ ಪ್ರಾಬಲ್ಯ ದಕ್ಷತೆಯನ್ನು ಸೂಚಿಸುತ್ತದೆ. ಗ್ರೀಕ್ ಭೂಗೋಳ ಶಾಸ್ತ್ರಜ್ಞನಾದ ಟೊಲೆಮಿಯ ದಾಖಲೆಯಲ್ಲಿ ಬರುವ "ಓಲಖೈರಾ" ಎಂಬುದು ಆಳ್ವಖೇಡವೇ ಆಗಿದೆ. (ಕ್ರಿ. ಶ. 2ನೇ ಶತಕ) ಎಂದರೆ ಕ್ರಿ. ಶ. ಎರಡನೇ ಶತಕಕ್ಕೆ ಈ ಭೂಭಾಗವು ವ್ಯವಸ್ಥಿತವಾದ ರಾಜಾಡಳಿತೆಯೊಳಗಿತ್ತೆಂದು ಊಹಿಸಬಹುದು. ಕ್ರಿ. ಶ. 7ನೇ ಶತಮಾನಕ್ಕಿಂತ ಮೊದಲು ಆಳುಪರ ಪರವಾಗಿಯಾಗಲೀ ಇಲ್ಲಿಯ ಜನಜೀವನದ ವಿಷಯವಾಗಲೀ ನಮಗೆ ಸಮರ್ಪಕವಾದ ದಾಖಲೆಗಳು ದೊರಕದಿರುವುದೇ ಆ ಕಾಲದ ಐತಿಹಾಸಿಕ ಪರಿವೆ ಇಲ್ಲದಿರಲು ಕಾರಣ.

ಕ್ರಿ. ಶ. 7ನೇ ಶತಮಾನದಲ್ಲಿ ಆಳುಪರರು ಕದಂಬ ಮಂಡಲವನ್ನು ಆಳುತ್ತಿದ್ದರೆಂದು ಶಾಸನಗಳಿಂದ ತಿಳಿದು ಬರುತ್ತದೆ. ಆಂಧ್ರ ಪ್ರದೇಶದಲ್ಲಿ ದೊರಕಿದ ಬಾದಾಮಿಯ ಚಾಲುಕ್ಯ ಚಕ್ರವರ್ತಿಯಾದ ಒಂದನೇ ವಿಕ್ರಮಾದಿತ್ಯನ ಕಾಲದ ತಾಮ್ರ ಶಾಸನದಲ್ಲಿ ಆಲುಪ ರಾಜನ ಉಲ್ಲೇಖವಿದೆ. ಈತನು ಮಂಗಲಾಪುರದ ಒಡೆಯನೆಂದೂ ಮಂಗಲಾಪುರದಿಂದ ಮೂರುಹೂರಿಗೆ ಕಷ್ಟ ತಾಪತ್ರಯಗಳನ್ನು ಕಡೆಗಣಿಸಿ ಚಾಲುಕ್ಯ ಚಕ್ರವರ್ತಿಯ ಆಜ್ಞೆ ಮೇರೆಗೆ ಹೋಗಿದ್ದನೆಂದೂ ಈ ಶಾಸನ ತಿಳಿಸುತ್ತದೆ. ಇತ್ತಲಾಗೆ ಕ್ರಿ.ಶ. 6ನೇ ಶತಮಾನದ ಶಿಲಾಲೇಖದಲ್ಲಿ ಆಳುಪರ ಉಲ್ಲೇಖವಿದೆ. ಕ್ರಮಾಗತವಾಗಿ ಬಾದಾಮಿಯ ಚಾಲುಕ್ಯರು, ಮಾನ್ಯಖೇಟದ ರಾಷ್ಟ್ರಕೂಟರು, ಕಲ್ಯಾಣಿಯ ಚಾಲುಕ್ಯರು, ದ್ವಾರಸಮುದ್ರದ ಹೊಯ್ಸಳರು ಮತ್ತು ವಿಜಯ ನಗರದ ಸಾಮ್ರಾಟರ ಅಧೀನರಾಗಿದ್ದರೆಂದು ತಿಳಿದು ಬರುತ್ತದೆ. ಆದಾಗ್ಯೂ ಆಳ್ವಖೇಡದ ಸಂಪೂರ್ಣ ಒಡೆತನವು ಅವರ ಕೈಯಲ್ಲೇ ಇತ್ತು. ಅವರು ಒಮ್ಮೊಮ್ಮೆ ರಾಜಾಧಿರಾಜ, ರಾಜಪರಮೇಶ್ವರವೆಂಬ ಬಿರುದುಗಳನ್ನು ಹೊಂದಿದ್ದರು. ಆಳುಪರ ರಾಜಧಾನಿಯು ಮೊದಲು ಮಂಗಲಾಪುರವಾಗಿತ್ತು. ಅನಂತರ ಉದಯಪುರಕ್ಕೆ ಕೊಂಡೊಯ್ಯಲಾಯಿತು. ಅನಂತರ ಬಾರಕೂರು ಕೇಂದ್ರ ಸ್ಥಳವಾಯಿತು. ಕಡೆಗೆ ಪುನಃ ಮಂಗಲಾಪುರವೇ ಕೇಂದ್ರ ಸ್ಥಳವಾಗಿ ವ್ಯವಹರಿಸಲ್ಪಡುತ್ತಿತ್ತು.

ಈ ಆಳುಪ ಮನೆತನದ ಆಳ್ವಿಕೆಯನ್ನು ಪ್ರಾಚೀನ ಆಳುಪರು, ಮಧ್ಯಯುಗೀನ ಆಳುಪರು ಮತ್ತು ಕಡೆಯ ಆಳುಪರು ಎಂಬುದಾಗಿ ಮೂರು ಹಂತಗಳಾಗಿ ವಿಭಾಗಿಸಬಹುದು. (ಈಗಲೂ ಬಳಕೆಯಲ್ಲಿರುವ 'ಆಳ್ವ' ಎಂಬ ಕುಲನಾಮವು 'ಆಳುಪ ಮನೆತನದಿಂದ ಬಂದ ಹೆಸರಿರಬೇಕು.)

ಆಳುಪರು ಶೈವ ಮತ್ತು ಶಾಕ್ತ ಧರ್ಮಾವಲಂಬಿಗಳಾಗಿಯೂ ಕೆಲವೊಮ್ಮೆ ಜೈನ ಧರ್ಮಾವಲಂಬಿಗಳಾಗಿಯೂ ಇದ್ದರು. ಅವರಿಂದ ನಾಥ ಪಂಥಕ್ಕೆ ಪ್ರೋತ್ಸಾಹ ದೊರೆತಂತೆಯೂ ಕಂಡುಬರುತ್ತದೆ. ಮಂಗಳೂರಿನ ಕದ್ರಿ ಮಂಜುನಾಥ ದೇವಾಲಯದಲ್ಲಿರುವ ಲೋಕೇಶ್ವರವೆಂಬ ಪಂಚಲೋಹದ ವಿಗ್ರಹದ ಪಾಣಿಪೀಠದಲ್ಲಿ ಕ್ರಿ. ಶ. 968ರ ಒಂದು ಶಾಸನವಿದೆ. ಇದು ಗ್ರಂಥ ಲಿಪಿಯಲ್ಲಿದ್ದು ಕುಂದವರ್ಮನೆಂಬ ಆಳುಪರಸನು ಈ ವಿಗ್ರಹವನ್ನು ಕದರಿಕಾ ವಿಹಾರದಲ್ಲಿ ಪ್ರತಿಷ್ಠಾಪಿಸಿದನೆಂದು ಈ ಶಾಸನದಲ್ಲಿದೆ. ಲೋಕೇಶ್ವರ ವಿಗ್ರಹವು ನಾಥ ಪಂಥದ ಮೂರ್ತಿಯಾಗಿದೆ. ಇವರ ಕಾಲದಲ್ಲಿ

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore — 27.**

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 81/71

ಶ್ರೀ ವಿನಾಯಕ ದೇವರು ಕೋಟೆ ಮಠ ಉಡ್ಪಿ ಸ್ಥಾಪನೆ ನಂಬ್ರ 474 ದೇವಲ್ಕುಂದ ಗ್ರಾಮ ಶ್ರೀ ದೇವರ ಅರ್ಚಕ ಆದಳ್ತಿ ಮೊಕ್ತೇಸರ್ ಸುಬ್ರಾಯ ಭಟ್ಟ

—ವಾದಿ

ಮಹಾಲಿಂಗ ಶೆಟ್ಟಿ ಸಹಾ

—ಪ್ರತಿವಾದಿರು

ಸದ್ರಿ ವಾದಿ ಕಡೆಯಿಂದ ಈ ಮೂಲ್ಕ ಜಾಹೀರು ಮಾಡಿಕೊಳ್ಳುವನೇಂದ್ರೆ —

2 ಸದಾಶಿವ ಹೆಗ್ಡೆ—ಹಂಚಿನ ಮನೆ ವೆಂಕಪ್ಪ ಹೆಗ್ಡೆ ಮಗ, ಕುಂದಾಪುರ ತಾಲ್ಲುಕು ಕೆಂಚನೂರು ಗ್ರಾಮ

ವಾದಿ ದೇವರ ಭಂಡಾರಕ್ಕೆ ಕೈಪೇತಿನ A ಶೆಡ್ಯೂಲು ಆಸ್ತಿ ಜವಾಬ್ದಾರಿಯಿಂದ ಸಾಲಿಯಾನ ಬರತಕ್ಕ ಅಮೃತ ಪಡಿ ವಸೂಲಿ ಬಗ್ಗೆ ವಾದಿ ಭಂಡಾರದ ಕಡೆಯಿಂದ ದಾಕ್ಲು ಮಾಡಿದ ಮೇಲ್ಕಂಡ ದಾವೆಯು ತಾ. 19-8-71ಕ್ಕೆ ಅಖೈರ ತನ್ಕಿಗೆ ಯಿಟ್ಟಿದೆ. ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ರೆ ಸದ್ರಿ ದಿವ್ಸ ಹಗಲು 11 ಗಂಟೆಗೆ ಸ್ವತಹಾ ವ ವಕೀಲರದ್ವಾರಾ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಜಾಹೀರಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿದೆ.

M. M. Hebbar

Advocate for Pl ff.

Kundapoor, Date 28—6—71

570ರಿಂದ 59 ಗ್ರೈನು ಭಾರವುಳ್ಳ ಚಿನ್ನದ ಗದ್ಯಾಣಗಳೆಂಬ ನಾಣ್ಯಗಳು ಬಳಕೆಯಲ್ಲಿದ್ದವು. ಎರಡು ಮುಖಗಳು—ಒಂದು ಕಡೆ ಪೂರ್ಣ ಕಂಭ ಇನ್ನೊಂದೆಡೆ ಚಾಮರವುಳ್ಳ ಲಾಂಛನವೂ ಅಚ್ಚುಪಡಿಸಲ್ಪಟ್ಟಿತ್ತು ಎಂದು ಸ್ಥೂಲವಾಗಿ ಹೇಳಬಹುದು ಇವುಗಳು ಪಾಂಡ್ಯ ಗದ್ಯಾಣಗಳೆಂದು ಕರೆಯಲ್ಪಡುತ್ತಿದ್ದುವು ಪಾಂಡ್ಯ ಧನಂಜಯವೆಂಬ ಬರಹವು ನಾಣ್ಯದ ಇನ್ನೊಂದು ಬದಿಯಲ್ಲಿರುತ್ತಿತ್ತು.

ಹೊಯ್ಸಳ ಅರಸನಾದ ಮೂರನೇ ವೀರ ಬಲ್ಲಾಳನ ಕಾಲದಲ್ಲಿ ತುಳುನಾಡು ಪ್ರತ್ಯಕ್ಷವಾಗಿ ಹೊಯ್ಸಳ ಸಾಮ್ರಾಜ್ಯಕ್ಕೆ ಸೇರಿಕೊಂಡಿತು ಆಳುಪ ರಾಣಿಯಾದ ಚಿಕ್ಕತಾಯಿ ಎಂಬವಳು ವೀರ ಬಲ್ಲಾಳನನ್ನು ವಿವಾಹವಾಗಿದ್ದಳು ಇವನಿಗಿಂತ ಮುನ್ನ ತುಳುನಾಡು ಕರ್ಣಾಟಕ ಸಾಮ್ರಾಜ್ಯದ ಅಂಕೆಯೊಳಗಿದ್ದರೂ ಎಲ್ಲಾ ವಿಷಯಗಳಲ್ಲೂ ಸ್ವತಂತ್ರವಾಗಿಯೇ ಇತ್ತೆನ್ನಬಹುದು

ವಿಜಯನಗರದ ಸಾಮ್ರಾಜ್ಯ ಸ್ಥಾಪನೆಯಾದ ಅನಂತರ (ಕ್ರಿ. ಶ. 1396) ತುಳುನಾಡು ಮಂಗಳೂರು ಮತ್ತು ಬಾರಕೂರು ಎಂಬ ನಿರ್ದಿಷ್ಟವಾದ ಎರಡು ಪ್ರಾಂತ್ಯಗಳಾಗಿ ವಿಭಾಗಿಸಲ್ಪಟ್ಟಿತು ಇವುಗಳನ್ನು ಇಬ್ಬರು ರಾಜ್ಯಪಾಲರುಗಳು ದಕ್ಷತೆಯಿಂದ ಆಳುತ್ತಿದ್ದರು ವಿಜಯನಗರ ಸಾಮ್ರಾಜ್ಯಕ್ಕೆ ಈ ಪ್ರಾಂತ್ಯಗಳಿಂದ ತುಂಬಾ ಲಾಭವಿತ್ತು. ಸಮುದ್ರಯಾನ ವ್ಯವಹಾರಕ್ಕೆ ತುಳುನಾಡಿನ ಅವಶ್ಯಕತೆ ಇತ್ತು ವಿಜಯನಗರ ಸಾಮ್ರಾಜ್ಯದ ಶ್ರೇಷ್ಠವಾದ 28 ನಗರಗಳಲ್ಲಿ ನಾಲ್ಕು ನಗರಗಳು ತುಳುನಾಡಿಗೆ ಸೇರಿದ್ದುವು—ಮಂಗಳೂರು, ಬಾರಕೂರು, ಭಟಕಳ ಮತ್ತು ಹೊನ್ನಾವರ ವಿಜಯನಗರದ ಆಧಿಪತ್ಯ ಕಾಲದಲ್ಲಿ ತುಳುನಾಡಿನಲ್ಲಿ ಹಲವು ಅರಸೊತ್ತಿಗೆಗಳಿದ್ದುವು ಇವುಗಳು ಸಾಂಪ್ರದಾಯಿಕವಾಗಿ ಆಡಳಿತೆಯ ಕರ್ತವ್ಯವನ್ನು ಸ್ಥಳೀಯವಾಗಿ ನಡೆಸುತ್ತಿದ್ದುವು ಬಂಗವಾಡಿಯ ಬಂಗರು, ಮೂಲ್ಕಿಗೆಯ ಚೌಟರು, ವೇಣೂರಿನ ಅಜಿಲರು ಕಾರಕಳದ ಭೈರರಸರು, ಮೂಲಿಕೆಯ ಸಾವಂತರು, ಸೂರಾಲಿನ ತೊಳಹರು, ಕಾಪಿನ ಮರ್ದ ಹೆಗ್ಗಡೆಯರು, ಎರ್ಮಾಳಿನ ಪೂರಮ್ಮ ಹೆಗ್ಗಡೆಯರು, ಎಲ್ಲೂರಿನ ಕುಂದ ಹೆಗ್ಗಡೆಯವರು, ಹೊಸಂಗಡಿಯ ಹೊನ್ನೆಯ ಕಂಬಳಿ ಅರಸರು, ಕುಂಬಳೆಯ ರಾಜರು, ಹಾಡುವಳಿ ಮತ್ತು ಗೇರುಸೊಪ್ಪೆಯ ತುಳುವರಸರು—ಇವರಲ್ಲಿ ಮುಖ್ಯರಾದವರಿದ್ದರು. ಆಡಳಿತೆಯಲ್ಲಿ ಇವರಿಗೆ ಸಹಾಯಕರಾಗಿ ಸೇನಾಪಿಗಳೂ, ಕರಣಿಕರೂ, ಸೇನಭೋವರೂ, ಹೆಗ್ಗಡೆಗಳೂ ಬಲ್ಲಾಳುಗಳೂ, ಪುರೋಹಿತರೂ ನೇಮಿಸಲ್ಪಡುತ್ತಿದ್ದರು.

ಕುಟುಂಬಗಳು ನಾನಾ ತರದ "ಬಳಿ"ಗಳ ಮುಖೇನ ತಮ್ಮ ವೈಶಿಷ್ಟ್ಯಗಳನ್ನು ಹೊಂದಿದ್ದವು. ಬ್ರಾಹ್ಮಣರಿಗೆ ಗೋತ್ರಗಳಿದ್ದಂತೆ ಬ್ರಾಹ್ಮಣೇತರರಿಗೆ ಬಳಿಗಳಿದ್ದವು. ಬ್ರಾಹ್ಮಣೇತರರಲ್ಲಿ ಅಧಿಕಾರ ಪರಂಪರೆಯು ಹೆಣ್ಣಿನ ಮೂಲಕವಾಗಿತ್ತು ಇದನ್ನು ಅಳಿಯ ಸಂತಾನ ಸಂಪ್ರದಾಯ ಕಟ್ಟು ಎಂದು ಕರೆಯುತ್ತಾರೆ ಇದೊಂದು ಬಹುಪ್ರಾಚೀನ ಕೌಟುಂಬಿಕ ವ್ಯವಸ್ಥೆ ಎನ್ನಬಹುದು. ಶಾಸನಗಳನ್ನು ಪರಿಶೀಲಿಸಿದರೆ ಸುಮಾರು 150 ಬಳಿಗಳು ದೊರಕುತ್ತವೆ.

ಅಳಿಯ ಸಂತಾನದ ಸ್ಪಷ್ಟ ಉಲ್ಲೇಖವನ್ನು ಮಾಡುವ ಇಷ್ಟರ ತನಕ ದೊರಕಿದ ಅತಿ ಪ್ರಾಚೀನ ಶಿಲಾಲೇಖವೆಂದರೆ ಕ್ರಿ ಶ. 1109ರ ಕಾರ್ಕಳ ತಾಲೂಕಿನ ಕೇರವಸೆ ಎಂಬಲ್ಲಿ ಚಂದ್ರನಾಥ ಬಸ್ತಿಯಲ್ಲಿರುವ ಶಾಸನ ಇದು ಇತ್ತಲಾಗೆ ಹೊಸತಾಗಿ ದೊರಕಿದ ಕಲ್ಬರಹ ಈ ದಾಖಲೆಯು ವೀರ ಚೆನ್ನರಸ ಹಾಗೂ ಆತನ ತಮ್ಮ ಪಾಂಡ್ಯದೇವರಸ—ಇವರ ಉಲ್ಲೇಖವನ್ನೂ 'ಬಂಡಾರಿಕ' ಹಾಗೂ ಆತನ ಅಳಿಯ 'ಕೊಂಡೆ'ಯ ಉಲ್ಲೇಖವನ್ನೂ ಮಾಡುತ್ತದೆ ಬೇರೆ ಬೇರೆ ಹಂತಗಳಲ್ಲಿ ಜನ ಪ್ರಭೇದವು ಹೊರಗಣಿಂದ ಇಲ್ಲಿ ಬಂದು ನೆಲಸಿದ್ದ ಪರಿಣಾಮವಾಗಿ ಪರಸ್ಪರ ಜಾತಿ ಸಂಕೀರ್ಣಕ್ಕೆ ಕಾರಣವಾಯಿತೆನ್ನಬಹುದು

ಮೊಗೇರರು ಬೆಸ್ತರ ಕೆಲಸದಲ್ಲಿ ನಿಷ್ಣಾತರಾಗಿದ್ದರೆ, ಬಿಲ್ಲವರು ಬೇಟೆಗಾರಿಕೆಯಲ್ಲಿ ನಿಪುಣರಾಗಿದ್ದರೆನ್ನಬಹುದು ನಾಡವರು ಮೊದಲು ವ್ಯವಸಾಯ ಪ್ರಧಾನ ಉದ್ಯೋಗದಲ್ಲಿ ಜಾಗೃತರಾಗಿದ್ದು ಕಾಲ ಕ್ರಮೇಣ ಸಮಾಜದ ಪ್ರಾಮುಖ್ಯ ವ್ಯಕ್ತಿಗಳಾದರು ನಾಡಿನ ಮುಖಂಡರುಗಳಾದರು 'ನಾಡವ' 'ಆಳುವ' 'ರಾಷ್ಟ್ರಕೂಟ' ಪದಗಳಿಗೆ ಸಂಬಂಧವಿದೆಯೇ? ಬ್ರಾಹ್ಮಣ ಹಾಗೂ ಜೈನ ವರ್ಗಗಳು ಎಂದಿನಿಂದ ನೆಲೆಯೂರಿದುವು ಎನ್ನುವುದು ಸುಲಭವಲ್ಲವಾದರೂ ಸುಮಾರು ಕ್ರಿ.ಶ 7ನೇ ಶತಮಾನದಿಂದಲಾದರೂ ಆಗಿರಬಹುದೆನ್ನಬಹುದು. ಈ ಶತಮಾನಕ್ಕೆ ಅನ್ವಯಿಸುವ ವಡ್ಡರ್ಸೆಯ ಶಿಲಾಲೇಖವೊಂದು "ಪಾರ್ವರರ" ಉಲ್ಲೇಖ ಮಾಡುತ್ತದೆ ಪ್ರಾಚೀನ ದೇವಲಗಳ ಅಸ್ತಿತ್ವದಿಂದಲೂ ಇದು ವಿದಿತವಾಗುತ್ತದೆ ಜೈನಧರ್ಮವು ಸುಮಾರು 12ನೆ ಶತಮಾನಕ್ಕೆ ತುಳುನಾಡಿನಲ್ಲಿ ಸರಿಯಾಗಿ ಬೇರೂರಿತೆನ್ನಬಹುದು ಮಧ್ಯಕಾಲೀನ ಇತಿಹಾಸದಲ್ಲಿ ಜೈನಧರ್ಮವು ಬಹು ಪ್ರಭಾವಶಾಲಿಯಾಯಿತು. ಸಾಧಾರಣ ಎಲ್ಲಾ ತುಂಡರಸ ಮನೆತನಗಳು ಜೈನಧರ್ಮವನ್ನು ಅಂಗೀಕರಿಸಿದ್ದುವು ಆದರ ಮತಾಂಧತೆ ಹೆಚ್ಚಾಗಿರಲಿಲ್ಲ ತುಳುವರಲ್ಲಿ 180 ಜೈನ ಬಸದಿಗಳಿದ್ದುವು. ಇವುಗಳಲ್ಲಿ ಹಚ್ಚಿನವು ಈಗಲೂ ಕಂಡುಬರುತ್ತವೆ. ಸುಮಾರು ಕ್ರಿ ಶ 10ನೇ ಶತಕದ ತನಕ ಬೌದ್ಧ ಧರ್ಮವೂ ಪ್ರಚಾರದಲ್ಲಿದ್ದಂತೆ ತಿಳಿದು ಬರುತ್ತದೆ

ತುಳುನಾಡಿನ ಧಾರ್ಮಿಕ ಕೇಂದ್ರಗಳು ಈ ಕೆಳಗಿನಂತಿವೆ. ಉಡುಪಿ (ಶಿವಳ್ಳಿ) ಸುಬ್ರಹ್ಮಣ್ಯ (ಕುಕ್ಕೆ), ಕೋಟೇಶ್ವರ (ಧ್ವಜೇಶ್ವರ), ಕುಂಭಾಶಿ, ಶಂಕರನಾರಾಯಣ (ಕೊಡಗಿ), ಕೊಲ್ಲೂರು ಮತ್ತು ಗೋಕರ್ಣ, ಇವುಗಳನ್ನು ಸಪ್ತಕ್ಷೇತ್ರಗಳೆನ್ನುತ್ತಾರೆ. ಸುಮಾರು ಕ್ರಿ. ಶ. 17ನೇ ಶತಕದ ತನಕ ದೇವಾಲಯಗಳು ನಿರ್ಮಾಣವಾದುವು ಪ್ರಾಚೀನ ದೇಗುಲಗಳು ಗಜಪೃಷ್ಠಾಕಾರದಲ್ಲಿವೆ. ಹೆಚ್ಚಿನವುಗಳು ಚತುರಶ್ರವಾಗಿವೆ ಶಿಲ್ಪಶಾಸ್ತ್ರ, ಹಾಗೂ ವಾಸ್ತು ಕ್ರಮವನ್ನು ಅಭ್ಯಾಸ ಮಾಡುವವರಿಗೆ ತುಳುನಾಡಿನ ಹಿಂದೂ ದೇವಾಲಯಗಳು ವ್ಯಷ್ಟಾನ್ನವನ್ನೀಯುವಂತಿವೆ ಅನೇಕ ತರದ ಪ್ರಾಚೀನ ವೈಷ್ಣವ ವಿಗ್ರಹಗಳೂ (ಕೃಷ್ಣ, ಜನಾರ್ದನ, ಕೇಶವ, ಅನಂತಪದ್ಮನಾಭ, ವರವಾಸುದೇವ, ವಿಷ್ಣುಮೂರ್ತಿ, ಲಕ್ಷ್ಮೀನಾರಾಯಣ, ನರಸಿಂಹ ಪ್ರಭೇದಗಳು) ದೇವ ವಿಗ್ರಹಗಳೂ (ಸಪ್ತ ಮಾತೃಕೆಯರು, ರಾಜರಾಜೇಶ್ವರಿ, ಮಹಿಷ ಮರ್ದಿನಿ, ಮಹಿಷಾಸುರ ಮರ್ದಿನಿ, ನಾರಾಯಣೀ, ಸರಸ್ವತಿ, ಗೌರೀ, ಪರಮೇಶ್ವರಿ, ಚಂಡೇಶ್ವರಿ ಪ್ರಭೇದಗಳು) ಶೈವ ಸಂಬಂಧವಾದ ಮೂರ್ತಿಗಳೂ (ಉಮಾಮಹೇಶ್ವರ, ಲೋಕೇಶ್ವರ, ಸ್ಕಂದ, ಶಾಸ್ತಾರ, ಗಣಪತಿ ಪ್ರಭೇದಗಳು) ಸೂರ್ಯ ವಿಗ್ರಹಗಳೂ ಬಹುಸಂಖ್ಯೆಯಲ್ಲಿ ಕಂಡುಬರುತ್ತವೆ. ಇವುಗಳ ಅಭ್ಯಾಸವನ್ನು ಮಾಡುವುದು ಬಹು ಆಗತ್ಯವಾಗಿದೆ ಈ ಮೂರ್ತಿಗಳು ಕಡುಶರ್ಕರ ಪಾಕದಿಂದಲೂ, ಶಿಲೆಯಿಂದಲೂ, ಪಂಚಲೋಹದಿಂದಲೂ, ಮರದಿಂದಲೂ ನಾನಾ ತರವಾಗಿ ಕೆತ್ತಲ್ಪಟ್ಟಿವೆ

ತುಳುನಾಡಿನಲ್ಲಿ ಸುಮಾರು 4.00—500 ದೇವಾಲಯಗಳಿವೆ ಇವುಗಳಲ್ಲಿ ದೇವಸ್ಥಾನಗಳೂ ಸೇರಿವೆ. ಈ ದೇವಾಲ

(ಒಂಭತ್ತನೇ ಪುಟ ನೋಡಿರಿ)

ಕುಟುಂಬ ಯೋಜನೆಯಿಂದ ಸಂಸಾರದ ಖರ್ಚು ಕಡಿಮೆ

ಉಚಿತ ಸೇವೆ ಮತ್ತು ಸಲಹೆಗಳಿಗಾಗಿ ಸಮೀಪವಿರುವ ಕುಟುಂಬ ಯೋಜನಾ ಕೇಂದ್ರಕ್ಕೆ ಅಥವಾ ಪ್ರಸೂತಿ ಮತ್ತು ಶಿಶು ಆರೋಗ್ಯ ಕೇಂದ್ರಕ್ಕೆ ಹೋಗಿ ವಿಚಾರಿಸಿ.

ಬೇಗಂ ಲಿಯಾಖತ್ ಆಲಿಖಾನ್

(ಐದನೇ ಪುಟದಿಂದ)

ಗ ಇಟ್ಟ ಹೆಜ್ಜೆಯಲ್ಲಿಯೇ ಎಲ್ಲವನ್ನೂ ಮಾಡಿಕೊಳ್ಳ ಬೇಕಾಯ್ತು. ಮುಂದಿನ ಪ್ರಧಾನಮಂತ್ರಿಗೆ ಇಂದಿನ ಮುಳ್ಳುಗಳು ಹೂಗಳಾಗಿ ಪರಿಣಮಿಸುವಂತೆ ನಾವು ಪ್ರಯತ್ನಿಸುತ್ತಿದ್ದೇವೆ." ಆದರೇನು? ವಿಧಿಯ ಇಚ್ಛೆಯೇ ಬೇರೆಯಿತ್ತು. ಕೊಲೆಗಡುಕನೊಬ್ಬನ ಗುಂಡಿಗೆ ಅವರನ್ನು ಬಲಿ ನೀಡಿತು.

ಜನಾಬ್ ಲಿಯಾಖತ್ ಆಲೀಖಾನರು ಕೊನೆಯ ಬಾರಿಗೆ ರಾವಲ್ಪಿಂಡಿಗೆ ಹೊರಡುವುದಕ್ಕೆ ಮೊದಲು ಅವರು ಹೇಳಿದ್ದರು "ಪಾಕಿಸ್ತಾನವು ಭಾರತದೊಂದಿಗೆ ಸಮರಸಿದ್ಧವಾಗ ಬೇಕೆನ್ನುವುದು ಮೂರ್ಖತನದ ಪರಮಾವಧಿ. ಗೋಡೆಗೆ ತಲೆ ಹೊಡೆದುಕೊಳ್ಳಬೇಕೆಂದು ಬಯಸುವಂತಿದೆ. ನಮ್ಮ ದೇಶವನ್ನು ಸಂಮೃದ್ಧವಾಗಿ ಕಟ್ಟಲು ನಾವು ಭಾರತದೊಂದಿಗೆ ಸ್ನೇಹದಿಂದಿರಬೇಕು" ಈ ವಾಕ್ಯಗಳು ಅಂದು ಪಾಕ್ ಸಮಾಚಾರ ಪತ್ರಗಳಲ್ಲಿ ಪ್ರಕಟವಾಗಿದ್ದುವು. ಪ್ರಾಯಃ ಇವೇ ವಾಕ್ಯಗಳು ಅವರನ್ನು ಬಲಿಗೊಂಡುವೋ ಏನೋ!

ಪ್ರಧಾನ ಮಂತ್ರಿ ಜನಾಬ ಖಾನರ ಕೊಲೆಯಾಯ್ತು. ಪಾಕಿಸ್ತಾನದ ಪ್ರಧಾನಿಯ ವಿಶಾಲವಾದ ಮನೆಯಿಂದ ಬಹುಮೂಲ್ಯ ಪೀಠೋಪಕರಣಗಳನ್ನು ಹೊತ್ತು ಸೈನಿಕ ಲಾರಿಗಳು ಹೊರಡುತ್ತಿದ್ದುವು. ಬೇಗಂ ಖಾನಳ ಪ್ರೀತಿಯ ಸುಂದರ ನಂದನವನವನ್ನು ಸೈನಿಕರು ತೊತ್ತಳದುಳಿದರು. ಬೇಗಂ ಚಿಕ್ಕದೊಂದು ಮನೆಗೆ ಹೊರಡಲು ಸನ್ನದ್ಧಳಾಗುತಿದ್ದಳು. ಈ ವೇಳೆಯಲ್ಲಿಯೂ ಆಕೆ ಶಾಂತವಾಗೇ ಇದ್ದಳು. ಆದರೆ, ಪಾಕ್ ಸರಕಾರದ ವರ್ತನೆ ಆಕೆಯನ್ನು ಅವಶ್ಯ ಕ್ರೋಧವಶ ಮಾಡಿರಬೇಕು. ಆಕೆ ಮತ್ತೇನೂ ಹೇಳಲಿಲ್ಲ-- "ನನ್ನ ಪತಿದೇವರು ಆರಂಭಿಸಿರುವ ಕಾರ್ಯಗಳನ್ನು ಸಂಪೂರ್ಣ ಮಾಡಲು ನನ್ನ ಶೇಷಾಯುಷ್ಯ ವ್ಯಯಿಸುತ್ತೇನೆ. ಇಬ್ಬರು ಮಕ್ಕಳನ್ನೂ ಅವುಗಳ ತಂದೆಯಂತಾಗಿಸಲು ಪ್ರಯತ್ನಿಸುತ್ತೇನೆ."

ವೈಧವ್ಯ ಹೊಂದಿದ ಬೇಗಮಳ ಚಿತ್ತಭಿತ್ತಿಯಲ್ಲಿ ೩೩ ವರ್ಷ ಹಿಂದಿನ ಘಟನೆಗಳು ಚಲಚ್ಚಿತ್ರದಂತೆ ಸುಳಿದಿರಬೇಕು. ಉಚ್ಚ ಶಿಕ್ಷಣ ಪಡೆದು ಲಂಡನ್ನಿನಿಂದ ದಿಲ್ಲಿಗೆ ಬಂದದ್ದು—ಒಂದು ಶಾಲೆಯಲ್ಲಿ ಅಧ್ಯಾಪಿಕೆಯಾಗಿ ಸೇರಿಕೊಂಡದ್ದು—ಜನಾಬ್ ಲಿಯಾಖತ್ ಆಲಿಖಾನರ ಪರಿಚಯವಾದದ್ದು—ಮುಂದುವರಿದು ದಾಂಪತ್ಯ ಜೀವನದಲ್ಲಿ ಬದಲಾದದ್ದು.

ಪ್ರಧಾನ ಮಂತ್ರಿಯ ವಿಧವೆಯೆಂದು ಪಾಕಿಸ್ತಾನ ಸರಕಾರವು ತಿಂಗಳೊಂದರ ಎರಡು ಸಾವಿರ ರೂಪಾಯಿಗಳ ಪೆನ್‌ಶನ್ ನೀಡಲು ಮುಂದೆ ಬಂತು. ಆದರೆ, ಬೇಗಂ ಖಾನ್ ಈ ಕೊಡುಗೆಯನ್ನು ನಿರಾಕರಿಸಿದಳು.

ಆಕೆಯಿಂದೂ ಮುಂಚಾನೆಯೇಳುತ್ತಾಳೆ; ತನ್ನ ನಿಯಮಿತ ಕಾರ್ಯಕಲಾಪಗಳಲ್ಲಿ ಮೈಮರೆಯುತ್ತಾಳೆ.

●●

ಯಾಹ್ಯಾಖಾನರಿಂದ
ಲೋಕವಂಚಕ ಪರಿಹಾರ-ಸೂಚನೆ

ಭಾರತದ ಮಂತ್ರಿವರೇಣ್ಯರುಗಳು ರಶ್ಯ, ಫ್ರಾನ್ಸ್, ಇಂಗ್ಲೆಂಡ್, ಕೆನಡಾ, ಅಮೆರಿಕಗಳ ರಾಜಧಾನಿಗೆ ಹಾರಿ, ಅಲ್ಲಿ ಬಂಗ್ಲಾದೇಶ ತಮಗೆ ತಂದ ಬವಣೆಯನ್ನು ಗೋಗರೆದು ಬಂದರು.

ಭಾರತದ ನಿಲುವಿಗೆ ಹೆಚ್ಚಿನವರು ಮೌನ ಸ್ವಾಗತ ನೀಡಿದರು. ನಿರಾಶ್ರಿತರ ಸೋಂಕು ಜಾಡ್ಯ ನಿರ್ಮೂಲನ ಕಾರ್ಯದಲ್ಲಿ ಭಾರತದ ಶ್ರದ್ಧೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದರು.

ಬಂಗ್ಲಾ ನಿರಾಶ್ರಿತರು ತಮ್ಮ ದೇಶಕ್ಕೆ ಮರಳುವಂತಾಗಬೇಕು– ಇದು ನ್ಯಾಯವೆಂದರು.

ಭಾರತದ ಮಂತ್ರಿಗಳು ಕರ್ತವ್ಯಪಾಲಕರಾಗಿ ಮರಳಿಬಂದರು. ಅವರ ಕೈ-ಕಾಲು ನಡುಗುತಿತ್ತು; ತಲೆ ಭಾರವಾಗಿತ್ತು. ಸಲ್ಲಿಸಿದ ಸಂಚಾರ ವರದಿ ಅವರಿಗೇ ತೃಪ್ತಿ ನೀಡಲಿಲ್ಲ. ಅವರ ಮಹಾತಾಯಿಗೆ ಶ್ರೀಮತಿ ಗಾಂಧಿಗೆ ತೃಪ್ತಿ ನೀಡಿದೆಯೆ?

ಪಕ್ಷೀಯ ಸಭೆಯಲ್ಲಿ ಅವರು ತಮ್ಮ ಸರಕಾರದ ನೀತಿ, ಮಂತ್ರಿಗಳ ಕಾರ್ಯಗಳನ್ನು ಸಮರ್ಥಿಸಿಕೊಂಡರು; ಸದಸ್ಯರೇನು ಮಾಡುತಿದ್ದಾರೆಂದು ಪ್ರಶ್ನಿಸಿದರು. ನಮಗೆಲ್ಲರೂ ಮಿತ್ರರೇ ಎಂದರು. ನಿಮ್ಮ ಎಣಿಕೆಯೆಲ್ಲ ತಪ್ಪು ಎಂದು ಆರ್ಭಟಿಸಿದರು– (ತನ್ನದು ಮಾತ್ರವೇ ಸರಿ.)

ಇದುವರೆಗೂ ಆಕೆಯದು ಅದೇ ದಾರಿ; ಮುಂದೆಯೂ ಅದೇ ದಾರಿ.

ಅತ್ತ ಪಾಕ್ ಸರ್ವಾಧಿಕಾರಿ, ಯಾಹ್ಯಾಖಾನರಿಂದ ಮಹತ್ವದ ರೇಡಿಯೋ ಘೋಷಣೆ. ೩೬ ಪತ್ತೈದು ನಿಮಿಷಗಳ ವರೆಗೆ ಅನ್ಯಾಹತವಾದ ಪ್ರಸಾರ ಭಾಷಣ.

ಮುಂದಿನ ನಾಲ್ಕೇ ನಾಲ್ಕು ತಿಂಗಳುಗಳಲ್ಲಿ ಪಾಕಿಸ್ತಾನದ ಅಧಿಕಾರವನ್ನು ಚುನಾಯಿತ ಪ್ರತಿನಿಧಿಗಳ ಕೈಗಳಿಗೆ ಒಪ್ಪಿಸಲಾಗುವುದು – ಮುಖ್ಯಾಂಶ.

ಪ್ರಜಾಸರಕಾರ ಆದಷ್ಟು ಶೀಘ್ರವಾಗಿ ಸ್ಥಾಪನೆಗೊಳ್ಳಬೇಕೆಂಬುದೇ ಯಾಹ್ಯಾಖಾನರ ಹೃದ್ಗತ. ಅದಕ್ಕೆ ವಿರುದ್ಧವಾದುದು ಶೇಖ ಮುಜಿಬುರ್ ರಹಮಾನರ ಮನೋಗತ. ಆದುದರಿಂದಲೇ ದೇಶದ್ರೋಹಿಗಳ ಉಚ್ಚಾಟನೆ ಅನಿವಾರ್ಯ; ಹಾಗಾಗಿ ಸಂಭವಿಸಿದ ಈ ಅಶಾಂತಿ ಅಪರಿಹಾರ್ಯ.

'ಓ ಪೂರ್ವ ಪಾಕಿಸ್ತಾನದ ಪ್ರಜೆಗಳೇ, ನೀವ್ಯಾಕೆ ಕಾಫಿರಸ್ತಾನಕ್ಕೆ ಓಡಿ ಹೋಗುತ್ತೀರಿ? ನಿಲ್ಲಿರಿ; ನಿಲ್ಲಿರಿ; ಹೋದವರೇ ಬನ್ನಿರಿ. ನಿಮ್ಮನ್ನು ನಮ್ಮ ಕೈಗಳು (ಸಂಗೀನು) ಸ್ವಾಗತಿಸುತ್ತಿವೆ. ನಮ್ಮ ಶಸ್ತ್ರಾಸ್ತ್ರಗಳು ನಿಮ್ಮಮೇಲೆ ಕೈ ಮಾಡುತ್ತವೆಂಬುದು ಮಿಥ್ಯಾರೋಪ. ಶೇಖ ಮುಜಿಬುರ್ ಕಾಫಿರರೊಡನೆ ಹೊಡೆದಾಡಿ ಪಡೆದ ಪವಿತ್ರ ನೆಲವನ್ನು ಮತ್ತೆ ಅವರಿಗೇ ಕೊಡಲು ಹವಣಿಸುತ್ತಿದ್ದರು. ಇಸ್ಲಾಂ ಹೆಸರಲ್ಲಿ ಅಲ್ಲಾನ ಪ್ರೀತ್ಯರ್ಥವಾಗಿ ಪವಿತ್ರ ಪಾಕಿಸ್ತಾನದ ಸಮಗ್ರತೆಗಾಗಿ, ನಿಮ್ಮೆಲ್ಲರ ಕ್ಷೇಮಚಿಂತನೆಗಾಗಿ ಆರಂಭವಾದ ಹೋರಾಟ ಇನ್ನೇನು ನಿಂತಂತೆಯೇ. ನಿಮ್ಮ ದುಃಖದ ದಿನಗಳು ದೂರವಾದುವು. ನಿಮ್ಮನ್ನು ನೀವೇ ಆಳಿಕೊಳ್ಳಿರಿ. ನಾಲ್ಕು ತಿಂಗಳು ಕಾದಿರಿ....'

ಯಾಹ್ಯಾರ ಭರವಸೆಯಲ್ಲಿ ನಂಬಿಕೆ ಯಾರಿಗೆ? ಇದೆಷ್ಟನೆಯ ಆಶ್ವಾಸನೆ?

ಚುನಾಯಿತ ಪ್ರತಿನಿಧಿ ಸಭೆಯೇ ದೇಶಕ್ಕೆ ಸಂವಿಧಾನ ರಚಿಸುವುದೆಂಬ ಅವರ ಮಾತು ಮೃಗಜಲವಾಯ್ತು. ಇದೀಗ ಕೆಲವು ತಜ್ಞರು ಕೂಡಿ ಅದನ್ನು ನಿರ್ಮಿಸುತ್ತಾರೆ. ಈ ತಜ್ಞರು ಯಾಹ್ಯಾಖಾನರ ಹಸ್ತಕರಲ್ಲದೆ ಹೊರಗಿನವರಲ್ಲ.

ಈ ಸಂವಿಧಾನ ಹೇಗಿದ್ದೀತು? ಪ್ರಜಾಸತ್ತೆಯ ಹೆಸರಿನಲ್ಲಿನ ಸರ್ವಾಧಿಕಾರಕ್ಕೆ ಅನುಕೂಲವಾಗಿದ್ದೀತು. ದೇಶದ್ರೋಹಿ ಪಕ್ಷದಿಂದ ಆಯ್ಕೆಗೊಂಡ ಸದಸ್ಯರ ಬದಲಿಗೆ ಬೇರೆ ಚುನಾವಣೆಗಳು ನಡೆಯುತ್ತವೆ. ಅಂದರೆ, ಅವಾಮಿ ಲೀಗಿಗೆ ಸೇರದವರು, ಯಾಹ್ಯಾ ಕೈಗೊಂಬೆಗಳೇ ಬಂಗ್ಲಾದಲ್ಲೂ ಆಯ್ಕೆಯಾಗುವಂತೆ ನೋಡಿಕೊಳ್ಳುತ್ತಾರೆ

ಆಗ, ಕಾನೂನು ಬದ್ಧ ಸರ್ವಾಧಿಕಾರಕ್ಕೆ ಅನುಕೂಲವಾಗುವುದು.

ಯಾಹ್ಯಾರ ನರಮೇಧವನ್ನು ಮೆಚ್ಚುವವರು ಯಾರೂ ಇಲ್ಲ. ಆದರೂ ಇದರಲ್ಲೇ ತಮ್ಮ ಸುಖವಿದೆಯೆಂಬುದವರಿಗೆ ಗೊತ್ತು. ಕಚ್ಚಿ ತುರಿಸಿದಾಗಾಗುವ ಬ್ರಹ್ಮಾನಂದ!

Gram: VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging.
107 Police Road, City Market,
BANGALORE-2.

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

ಸೆನೇಟರ್ ಕೆನೆಡಿಯೊಬ್ಬರು ಅಮೆರಿಕೆಯ ಪಾಕ್ ನೀತಿಯನ್ನು ಬಹಿರಂಗವಾಗಿ ಖಂಡಿಸಿದರು ನಿಜ. ಒಂದು ಕೈತಟ್ಟಿದರೆ ಶಬ್ದವಾಗುವುದಿಲ್ಲವೆಂಬುದೂ ಅಷ್ಟೇ ಸತ್ಯ.

ಅಮೆರಿಕೆಯು ಇನ್ನೂ ಶಸ್ತ್ರಾಸ್ತ್ರಗಳನ್ನು ಪಾಕಿಸ್ತಾನಕ್ಕೆ ನೀಡುತ್ತಲಿದೆ; ಮುಂದೆಯೂ ನೀಡುತ್ತಲೇ ಹೋಗುತ್ತದೆ. ಅದರ ಮಟ್ಟಿಗೆ ಅದು ಧರ್ಮ.

ನಿರಾಶ್ರಿತರ ಪುನರ್ವಸತಿಗೆ ಧನ ಸಹಾಯವನ್ನೂ ಅದು ನೀಡುತ್ತದೆ; ಯಾಹ್ಯಾಖಾನರಿಗೆ ಸೈನಿಕ ಬಲವನ್ನೂ ಕೊಡುತ್ತದೆ.

ಆದುದರಿಂದಲೇ ಯಾಹ್ಯಾಖಾನರಿಗೆ ತಮ್ಮ ಭುಜಗಳಲ್ಲಿ ಅಪಾರ ವಿಶ್ವಾಸ ಮೂಡಿದೆ. 'ನಮಗೆ ಲೋಕದಲ್ಲಿ ಯಾರೂ ಮಿತ್ರರಿಲ್ಲ'ವೆಂಬ ಕಟುಸತ್ಯವನ್ನು ಪ್ರಧಾನಿ ಗಾಂಧಿ ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತಾರೆ. ಆದರೆ, ಭಾರತಕ್ಕೆ ಮಿತ್ರರಾರೂ ಇಲ್ಲವೆಂಬುದನ್ನು ಯಾಹ್ಯಾಖಾನರು ಎಂದೋ ತಿಳಿದುಕೊಂಡಿದ್ದಾರೆ.

ನಮ್ಮ ವಿದೇಶನೀತಿಯಲ್ಲಿ ರಹಸ್ಯವಿಲ್ಲ. ಹಗಲಿನಂತೆ ಅದು ವಿಶ್ವವ್ಯಾಪ್ತ. ಆದುದರಿಂದಲೇ ಬಂಗ್ಲಾದೇಶವನ್ನು ನಾವು ಮನ್ನಿಸುವುದಿಲ್ಲ; ಪಾಕಿಸ್ತಾನದ ಮೇಲೆ ಸೈನಿಕ ಕಾರ್ಯಾಚರಣೆ ಮಾಡುವುದಿಲ್ಲ. ಅವಸರದಿಂದ ಯಾವ ಕ್ರಮವನ್ನೂ ಕೈಕೊಳ್ಳುವುದಿಲ್ಲ

ನಮ್ಮ ಅವಸರವೆಲ್ಲ ಸ್ವದೇಶೀ ಸ್ಥಿತಿಯ ಮಟ್ಟಿಗೆ ಪರಿಸೀಮಿತ

ಬಂಗ್ಲಾದೇಶದಿಂದ ನಾಗರಿಕರೆಲ್ಲರೂ ಗಡಿದಾಟಿ ಬಂದ ಬಳಿಕ ಆಲೋಚನೆ ಮಾಡಿದರೆ ಸಾಕು. ಅಷ್ಟರೊಳಗೆ ಏನಾದರೂ ಆದೀತು.

ಮನೆಗೆ ಮಾರಿಯೆನಿಸಿ ಬಂಗ್ಲೋಪಕಾರಿಯಾದ ಹೃದಯ ವೈಶಾಲ್ಯ, ಬುದ್ಧಿ ಔದಾರ್ಯವನ್ನು ವಿಶ್ವವೇ ಹೊಗಳಬೇಕು. ಅಂತಹ ಹೊಗಳಿಕೆಯಿಂದಲೇ ನಮ್ಮ ಇತಿಹಾಸ ಲೇಖಕರು ತೃಪ್ತಿ ಪಡಬೇಕು.

ಭಾರತ ವಿಭಜನೆಯ ವೇಳೆ ಬಂದ ಪಾಕ್ ನಿರಾಶ್ರಿತರ ಮತ್ತು ಚೀನಿಯರ ದಬ್ಬಾಳಿಕೆಯಿಂದ ನೊಂದ ಟಿಬೇಟಿಯನ್ ನಿರಾಶ್ರಿತರ ಪ್ರಶ್ನೆಗಳನ್ನು ಅತ್ಯಂತ ಸಹನೆಯಿಂದ ಎದುರಿಸಿ ಪಂ. ಜವಾಹರಲಾಲರು ಶಾಂತಿ ದೂತರಾದರು. ತಂದೆಯಂತೆ ಮಗಳು.

ಪಾಕ್ ಆಕ್ರಮಣದ ವಿರುದ್ಧ ಕಾರ್ಯಾಚರಣೆಗೆ ತೊಡಗಿದ ಲಾಲಬಹದೂರರು ಪ್ರಧಾನಿಯಾಗಿದ್ದರೆಂಬುದನ್ನು ಹೆಚ್ಚಿನವರು ಮರೆತಿದ್ದಾರೆ. ಅವರು ಅಮರರಾದರೂ ಅವರ ಹೆಸರು ಅಮರವಾಗಲಿಲ್ಲ.

ಉರುವಲು ತಾನುರಿದು ಜನೋಪಕಾರಿಯಾಗುತ್ತದೆ ಭಾರತ ತಾನು ನವೆದು ಲೋಕಕ್ಕೆ ಉಪಕಾರ ಮಾಡುತ್ತದೆ. ಇದು ನಮಗೆ ಗೌರವ.

ಯಾಹ್ಯಾಖಾನರು ನಿರಾಶ್ರಿತರನ್ನು ಪಾಕಿಸ್ತಾನಕ್ಕೆ ಕರೆದಿದ್ದಾರೆ. ಅವರ ಪಾಕ್ ಮರಳಿಕೆಗೆ ತಡೆಮಾಡಬಾರದೆಂದು ಭಾರತಕ್ಕೆ ಕರೆನೀಡಿದ್ದಾರೆ.

ಅವರ ಕರೆಯನ್ನು ಅದೆಷ್ಟು ಜನ ನಿರಾಶ್ರಿತರು ಮನ್ನಿಸುತ್ತಾರೆ?

ಆಗ ಪಾಕಿಸ್ತಾನವು ತನ್ನ ನಾಗರಿಕರನ್ನು ಮರಳಿಸುವಂತೆ ಭಾರತವನ್ನು ಕೇಳಬಹುದು. ಹೋಗುವವರು ಯಾರು? ಭಾ

ತುಳುನಾಡು

(ಏಳನೇ ಪುಟದಿಂದ)

ಯಗಳು ಆಗಮ ರೀತಿಯಲ್ಲಿ ಕೇರಳ ಸಂಪ್ರದಾಯದಲ್ಲಿ ನಿರ್ಮಾಣವಾದರೂ ಇವುಗಳಲ್ಲಿರುವ ಮೂರ್ತಿ ಶಿಲ್ಪವನ್ನು ಪರಿಶೀಲಿಸಿದರೆ ಕರ್ನಾಟಕ ಶಿಲ್ಪದ ಪ್ರಭಾವ ಚೆನ್ನಾಗಿತ್ತೆಂಬ ಅರಿವಾಗದಿರದು.

ಬ್ರಹ್ಮ, ವಿಷ್ಣು, ಮಹೇಶ್ವರರ ಆರಾಧನೆಯು ಸಾಕಷ್ಟು ವೈಶಿಷ್ಟ್ಯವನ್ನು ಪಡೆದಿತ್ತು. ಒಂದೇ ಅಂಗಣದಲ್ಲಿ ಈ ಮೂರು ಗುಡಿಗಳೂ ಇದ್ದ ದೃಷ್ಟಾಂತ ಉದ್ಯಾವರದಲ್ಲಿದೆ. ಶ್ರೀ ಶಂಕರಾಚಾರ್ಯರ ಪಂಚಾಯತನ ಆರಾಧನೆಯೂ ಶ್ರೀ ಮಧ್ವಾಚಾರ್ಯರ ವೈಷ್ಣವಾರಾಧನೆಯೂ ತುಳುನಾಡಿನಲ್ಲಿ ಒಟ್ಟೊಟ್ಟಿಗಿವೆ.

ಪ್ರಾಚೀನ ಆರಾಧನೆಯಾದ ಭೂತಯಾ ದೈವದ ಅರ್ಚನೆಯೂ ಸಾಕಷ್ಟಿದೆ ತುಳುನಾಡಿನಲ್ಲಿ. ಎಲ್ಲೆಲ್ಲೂ ದೇವಸ್ಥಾನಗಳಿವೆ. (ಭೂತಸ್ಥಾನಗಳು) ಭೂತಾಲಯಗಳಿವೆ, ಆಲಿಡೆಗಳಿವೆ, ಬ್ರಹ್ಮಸ್ಥಾನಗಳಿವೆ. ದೈವಗಳ ಸಂಖ್ಯೆಯನ್ನು ಎಣಿಸುವುದು ಕಷ್ಟ. ಪ್ರಾಮುಖ್ಯವಾದುವುಗಳು ಪಂಜುರ್ಲಿ, ರಕ್ತೇಶ್ವರಿ, ಕೋಟಿ–ಚೆನ್ನಯ, ಕಲ್ಲುಕುಟ್ಟಿಗ, ಜುಮಾದಿ, ನಂದಿಗೋಣ, ಕೊಡಮಂತಾಯ, ಬಬ್ಬರ್ಯ; ವೈದಿಕ ದೇವತೆಗಳೂ ದೈವಗಳಾಗಿ ಆರಾಧಿಸಲ್ಪಡುತ್ತವೆ—ಬ್ರಹ್ಮ, ನಾರಾಯಣಿ, ಶಿವ; ಆಲಡೆ ಅಥವಾ ಬ್ರಹ್ಮಸ್ಥಾನಗಳಲ್ಲಿ ಪಂಚದೈವಗಳ ಆರಾಧನೆ ಮುಖ್ಯ– ರಕ್ತೇಶ್ವರಿ, ನಾಗ, ಬ್ರಹ್ಮ, ನಂದಿಗೋಣ ಮತ್ತು ಕ್ಷೇತ್ರಪಾಲ. ಇದೊಂದು ವಿಚಿತ್ರ ರೀತಿಯ ಸಂಪ್ರದಾಯ.

ಈ ದೈವಗಳ ಪ್ರಾರ್ಥನೆಯು 'ಪಾಡ್ದನ'ವೆನ್ನಿಸಿಕೊಳ್ಳುತ್ತದೆ. ಪ್ರತಿ ದೈವಕ್ಕೂ ಅದರ ಹುಟ್ಟು, ಬೆಳವಣಿಗೆ ಹಾಗೂ ಸಂಚಾರವನ್ನು ವಿವರಿಸುವ 'ಪಾಡ್ದನ'ವಿದೆ. ಇದು ಜಾನಪದ ಸಾಹಿತ್ಯಕ್ಕೆ ಸೇರುತ್ತದೆ. ಈ 'ಪಾಡ್ದನ'ಗಳ ಚಾರಿತ್ರಿಕ ಹಿನ್ನೆಲೆಯನ್ನು ವಿಮರ್ಶಿಸುವುದು ಒಂದು ಹಿರಿದಾದ ಕೆಲಸ. ದೈವಗಳಿಗೆ ತಂಬಿಲ, ನೇಮ, ಅಯನ ಹಾಗೂ ಕೋಲಗಳೆಂಬ ಧಾರ್ಮಿಕ ಸಮಾರಂಭಗಳು ಜರಗುತ್ತವೆ. ತುಳುನಾಡಿನಲ್ಲಿ ನಾಗಾರಾಧನೆಯು ವಿಶೇಷ ರೀತಿಯಲ್ಲಿ ನಡೆಯುತ್ತದೆ. ನಾಗನಿಗೂ ಸ್ಕಂದನಿಗೂ ಅರ್ಚನೆಯಲ್ಲಿ ಅಭೇದ್ಯ. ಸುಬ್ರಹ್ಮಣ್ಯನ ಪೂಜೆಯೆಂದರೆ ಸರ್ಪದ ಉಪಾಸನೆಯೇ ಆಗಿದೆ. ತುಳುನಾಡಿನಲ್ಲಿ ಹೆಚ್ಚಾಗಿ ದ್ವಿಬಾಹು ಸ್ಕಂದ ಮೂರ್ತಿಗಳು ಕಂಡು ಬರುತ್ತವೆ. ನಾಗನ ಪ್ರೀತ್ಯರ್ಥವಾಗಿ ಪಕ್ಕೆ ಬಲಿ ಮತ್ತು ನಾಗಮಂಡಲವೆಂಬ ಧಾರ್ಮಿಕ ಸಮಾರಂಭಗಳು ಜರಗುತ್ತವೆ. ಶಾಸ್ತ್ರೀಯವಾಗಿ ಆಶ್ಲೇಷಾಬಲಿ ನಡೆಯುತ್ತದೆ.

ತುಳುವದಲ್ಲಿ ಗರಡಿಗಳು ಬಹಳ. ಗರಡಿ ಎಂದರೆ ಕೋಟಿ–ಚೆನ್ನಯರಿಗೆ ನಿರ್ಮಿಸಲ್ಪಟ್ಟ ಭೂತಾಲಯ. ಇಲ್ಲಿ ಇತರ ದೈವಗಳೂ ಇವೆ. ಬ್ರಹ್ಮ, ಜೋಗಿಪುರುಷ, ಧೂಮಾವತಿ, ನಂದಿ, ಲೆಕ್ಕಸಿರಿ (ರಕ್ತೇಶ್ವರಿ), ಪಿಲಿಚಾಮುಂಡಿ, ದೇಯಿ—ಬೈದ್ಯೇದಿ, ಬೇತಾಳ, ಕ್ಷೇತ್ರಪಾಲ ಇತ್ಯಾದಿ. ಗರಡಿಗಳಲ್ಲಿ ದೈಹಿಕ ವ್ಯಾಯಾಮ ನಡೆಯುತ್ತಿತ್ತು.

ವಿಜಯನಗರದ ಪತನದ ನಂತರ ಕೆಳದಿ ನಾಯಕರ ಆಳ್ವಿಕೆಯೊಳಗೆ ತುಳುನಾಡು ಸೇರಿತು. ಕ್ರಿ. ಶ. 18ನೇ ಶತಕದ ಮಧ್ಯದವರೆಗೆ ಕೆಳದಿ ನಾಯಕರ ಅಧಿಪತ್ಯವಾಯಿತು. ಅನಂತರ ಸ್ವಲ್ಪ ಅವಧಿಯಲ್ಲಿ ಹೈದರಾಲಿ, ಟಿಪ್ಪು ಸುಲ್ತಾನರ ಆಡಳಿತೆಯಾಗಿ ಆಂಗ್ಲೆಯರ ಪ್ರಭುತ್ವಕ್ಕೆ ತುಳುನಾಡು ಕ್ರಿ. ಶ. 18ನೇ ಶತಕದ ಅಂತ್ಯಕ್ಕೆ ಸೇರಿತು. ಗೋವೆಯನ್ನು ಪೋರ್ಚುಗೀಸರು ಹಿಡಿದ ನಂತರ ತುಳುವರಲ್ಲಿ ಕ್ರೈಸ್ತ ಧರ್ಮದ ಪ್ರಚಾರವೂ ಪ್ರಬಲವಾಯಿತು. ಇಸ್ಲಾಂ ಧರ್ಮವು ಸಾಧಾರಣ ಕ್ರಿ. ಶ. 12ನೇ ಶತಕದಲ್ಲೇ ಪ್ರಚಾರಕ್ಕೆ ಬಂದಂತೆ ತಿಳಿದು ಬರುತ್ತದೆ.

○ ○ ○

ಅನುಬಂಧ:

1. ಉಡುಪಿ ತಾಲೂಕಿಗೆ ಸೇರಿದ ವಡ್ಡರ್ಸೆಯಲ್ಲಿ ದೊರಕಿದ ಶಿಲಾಲೇಖನವು ಸುಮಾರು ಕ್ರಿ. ಶ. 7ನೇ ಶತಮಾನದಿದ್ದು ತುಳುನಾಡಿನಲ್ಲಿ ಇಷ್ಟರತನಕ ದೊರಕಿದ ಯಾವತ್ತೂ ದಾಖಲೆಗಳಲ್ಲಿ ಅತ್ಯಂತ ಪ್ರಾಚೀನದಾಗಿದೆ.

2. ಕಾರ್ಕಳ ತಾಲೂಕಿನ ವೇಣೂರಿನಲ್ಲಿ ದೊರಕಿದ ಕ್ರಿ.ಶ. 167ರ ಶಿಲಾಲೇಖವು ತೇದಿ ಇರುವ ದಾಖಲೆಗಳಲ್ಲಿ ಅತ್ಯಂತ ಪ್ರಾಚೀನವಾಗಿದೆ.

3. ಉಡುಪಿ ಸಮೀಪ ಉದ್ಯಾವರದಲ್ಲಿರುವ ಶಂಭುಕಲ್ಲಿನ ದೇವಾಲಯವು ನಮ್ಮ ನಾಡಿನ ಅತ್ಯಂತ ಪ್ರಾಚೀನ ದೇವಾಲಯವಾಗಿದೆ. (ಸುಮಾರು ಕ್ರಿ.ಶ.7—8ನೇ ಶತಮಾನ.)

4. ಮಂಗಳೂರಿನ ಕದ್ರಿ ಮಂಜುನಾಥ ದೇವಾಲಯದಲ್ಲಿರುವ ನಾಥ ಪಂಥದ ಲೋಕೇಶ್ವರ ಎಂಬ ಪಂಚಲೋಹದ ವಿಗ್ರಹವು ಭಾರತದ ಪಂಚಲೋಹದ ವಿಗ್ರಹಗಳಲ್ಲಿ ಅತ್ಯಂತ ಶ್ರೇಷ್ಠವಾದುದೆನ್ನಬಹುದು.

5. ಮಂಗಳೂರು ತಾಲೂಕಿನ ಪೊಳಲಿ ಎಂಬಲ್ಲಿಯ ರಾಜರಾಜೇಶ್ವರಿ ಎಂಬ ಶಕ್ತಿ ವಿಗ್ರಹವು ಮೃಣ್ಮಯವಾಗಿದ್ದು ಸುಮಾರು 12 ಅಡಿ ಎತ್ತರವಾಗಿದೆ. ಇದು ಕರ್ನಾಟಕದ ಮೃಣ್ಮಯ ಮೂರ್ತಿಗಳಲ್ಲಿ ಅತಿ ಪ್ರಾಚೀನವೂ ಅತ್ಯಂತ ವೈಶಿಷ್ಟ್ಯವುಳ್ಳುದೂ ಎನ್ನಬಹುದು.

6. ಕಾರ್ಕಳದ ಅನಂತಶಯನದ ದೇವಾಲಯದಲ್ಲಿರುವ ಅನಂತಪದ್ಮನಾಭ ಮೂರ್ತಿಯು ಕರಿ ಶಿಲೆಯಿಂದ ಕೊರೆಯಲ್ಪಟ್ಟದ್ದು. ಹೊಯ್ಸಳ ಕಾಲದ ಶಿಲ್ಪದ ಒಂದು ವಿಶಿಷ್ಟ ಮಾದರಿಯದ್ದಾಗಿದೆ. ಕರ್ನಾಟಕದ ಶ್ರೇಷ್ಠ ಶಿಲಾ ವಿಗ್ರಹಗಳಲ್ಲಿ ಒಂದಾಗಿದೆ. (ಉದ್ದ 10 ಅಡಿ; ಎತ್ತರ 8 ಅಡಿ)

7. ತುಳುನಾಡಿನ ವಿಗ್ರಹ ವೈಚಿತ್ರ್ಯ ಮತ್ತು ನೈಪುಣ್ಯವನ್ನು ಕ್ರಿ.ಶ. 12ನೇ ಶತಕದ ಕುಂದಾಪುರದ ಬೈಂದೂರು ಸೇನೇಶ್ವರ ದೇವಾಲಯದಲ್ಲಿ ಕಾಣಬಹುದು.

8. ಲಿಂಗಾಕಾರದಲ್ಲಿ ಶಕ್ತಿಯ ಆರಾಧನೆಯು ತುಳುನಾಡಿನ ಅರ್ಚನಾಕ್ರಮದಲ್ಲಿ ಒಂದು ವೈಶಿಷ್ಟ್ಯವಾಗಿದೆ. ಅದೇ ರೀತಿಯಲ್ಲಿ ತುಳುನಾಡಿನ ಪ್ರಧಾನ ಶಂಕರನಾರಾಯಣ (ಹರಿಹರ) ಕ್ಷೇತ್ರಗಳಲ್ಲಿ ಈ ದೇವತೆಯು ಲಿಂಗದ ರೂಪದಲ್ಲಿ ಆರಾಧಿಸಲ್ಪಡುತ್ತದೆ. ಕಾರ್ಕಳದ ಗೋಮಟೇಶ್ವರ 41½ ಅಡಿ ಎತ್ತರವಿದ್ದು ಭಾರತದ ಎತ್ತರವಿರುವ ಶಿಲಾವಿಗ್ರಹಗಳಲ್ಲಿ 2ನೇಯ ಸ್ಥಾನ ಪಡೆದಿದೆ. ವೇಣೂರಿನ ಗುಮ್ಮಟ ಮೂರ್ತಿಯು 35 ಅಡಿ ಎತ್ತರ.

9. ಕಾರ್ಕಳ ತಾಲೂಕಿನ ವರಾಂಗ ಎಂಬ ಸ್ಥಳವು—ಕರ್ನಾಟಕದ ಐದು ಪ್ರಾಚೀನ ಜೈನ ಕೇಂದ್ರಗಳಲ್ಲಿ ಒಂದಾಗಿದೆ.

10. ಮೂಡುಬಿದಿರೆಯ ಸಾವಿರ ಕಂಬದ ಬಸದಿಯು (ತ್ರಿಭುವನ ಚೂಡಾಮಣಿ) ಕರ್ನಾಟಕದ ಪ್ರಾಮುಖ್ಯ ಶಿಲಾ ಕಟ್ಟಡಗಳಲ್ಲಿ ಒಂದಾಗಿದೆಯೆನ್ನಬಹುದು. ಇದರಲ್ಲಿರುವ 7 ಅಡಿ ಎತ್ತರದ ಚಂದ್ರಪ್ರಭ ಸ್ವಾಮಿಯ ಪಂಚಲೋಹದ ಮೂರ್ತಿಯು ಪ್ರಾಯಶಃ ದಕ್ಷಿಣ ಭಾರತದಲ್ಲೇ ಪಂಚಲೋಹದ ದೊಡ್ಡ ಮೂರ್ತಿಯಾಗಿದೆ.

11. ತುಳುನಾಡಿನ ಇತಿಹಾಸವು ಬಹು ಪ್ರಾಚೀನಕಾಲದಿಂದಲೂ ವಿಶಾಲ ಕರ್ನಾಟಕದ ಇತಿಹಾಸದ ಒಂದು ಅಂಗವಾಗಿದೆ.

12. ಕ್ರಿ. ಶ. 7ನೇ ಶತಮಾನ ತಮಿಳುನಾಡಿನ ತಾಮ್ರ ಶಾಸನದಲ್ಲಿ 'ತುಳು'ವಿಗೆ ಪ್ರಥಮ ಉಲ್ಲೇಖ ಶಾಸನ ದಾಖಲೆಯಲ್ಲಿ ಸಿಗುತ್ತದೆ. (ಪಲ್ಲವ ಅರಸನಾದ ಎರಡನೇ ನಂದಿವರ್ಮ) ಕ್ರಿ. ಶ. ದ ಆದಿಯ ಶತಮಾನಗಳಿಗೆ ಅನ್ವಯಿಸುವ 'ಸಂಗಮ' ಸಾಹಿತ್ಯದಲ್ಲಿ ತುಳುನಾಡಿನ ಉಲ್ಲೇಖವು ಕಂಡು ಬರುತ್ತದೆ. ● ●

...ಕತ ಸರಕಾರದ ರಾಜೋಪಚಾರದ ಮುಂದೆ ಯಾಹ್ಯಾಖಾನರ ಬೂಟೋಪಚಾರವೇಕೆ?

ಬಂಗ್ಲಾ ವಿವಾದಕ್ಕೆ ರಾಜ್ಯಕೀಯ ಪರಿಹಾರ ಅಗತ್ಯವೆಂದು ವಿಶ್ವಪ್ರಮುಖರು ಒಪ್ಪಿದ್ದಾರೆ. ಯಾಹ್ಯಾಖಾನರು ಅಂತಹ ಪರಿಹಾರವೊಂದನ್ನು ಮುಂದಿಟ್ಟಿದ್ದಾರೆ. ಯಾಹ್ಯಾಪ್ರಿಯರು ಕಲೆದೂಗಿದರು; ಅಪ್ರಿಯರು ಕೊಡಹಿದರು. ಉಳಿದವರು ಸುಮ್ಮನೇ ಉಳಿದರು.

ಯಾಹ್ಯಾ ಪರಿಹಾರ ಪರಿಹಾರವೇ ಅಲ್ಲ. ಆದರ ಹಿಂದೆ ಲೋಕವನ್ನೇ ವಂಚಿಸುವ ಕರಾಳ ಛಾಯೆಯಿದೆಯೆನ್ನುವುದು ಸತ್ಯಾತಿ ಸತ್ಯ.

ಯಾಹ್ಯಾರಿಗೆ ಬಂಗ್ಲಾ ನಿರಾಶ್ರಿತರು ಮರಳಿ ಬರಬೇಕೆಂದಿಲ್ಲ. ನಿರಾಶ್ರಿತರು ಹೋಗುವುದು ತಡೆಯಬೇಕಾಗಿಲ್ಲ, ನಿರಾಶ್ರಿತರ ವೇಷದಲ್ಲಿ ಪಾಕ್ ಸೈನಿಕರೂ ಭಾರತ ಪ್ರವೇಶಿಸಬೇಕು; ಭಾರತದೊಳಗಡೆಯೂ ದೊಂಬಿಹೂಡಬೇಕು. ಭಾರತದ ಸಮೃದ್ಧತೆಯನ್ನು ನಿರ್ನಾಮ ಮಾಡಬೇಕು; ಮತೀಯ ಹೋರಾಟ ನಡೆಯ ಬೇಕು; ಕಾಶ್ಮೀರ ಕಬಳಿಸಬೇಕು....

ಯಾಹ್ಯಾಖಾನರ ವಾಂಛಿತವಿದೇತರಹೆ. ಅದು ನಮಗೂ ಗೊತ್ತು. ತಣ್ಣೀರನ್ನೂ ತಣಿಸಿ ಕುಡಿಯ ಬೇಕು—ಅವಸರ—ಗಡಿಬಿಡಿ—ಅಸಹನೆ, ಧೈರ್ಯ–ಸಾಹಸ—ಹೋರಾಟ, ಇತ್ಯಾದಿಯೆಲ್ಲವನ್ನೂ ನಾವು ಸ್ವದೇಶೀ ನೀತಿಯಲ್ಲಿ ತೋರಿಸಿ ಖಾಲಿಮಾಡಿದ್ದೇವೆ. ನಾವೀಗ ಬಂಗೈಯವರು.

ಈ ನಿಲುವು ಹೇಡಿತನವಲ್ಲ; ಅತ್ಯಂತ ಮುತ್ಸದ್ಧಿತನೋಪೇತವಾದದ್ದು. ದಿವಾಳಿ ಯಾದ ಮುತ್ಸದ್ಧಿತನವಿನ್ನೂ ನಮ್ಮಲ್ಲಿದೆಯೆಂದು ತಿಳಿದುಕೊಂಡಿರುವುದೇ ನಮ್ಮ ಮುತ್ಸದ್ಧಿತನವೇ ಎಂದು ಲೋಕ ಕೇಳಿದರೆ ಅದು ಅದರ ಅಜ್ಞಾನ ಮಾತ್ರ! ● ●

ನವಯುಗ

ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

1971ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. No. 309/1970

ವನಜ ಶೆಡ್ತಿ —ವಾದಿಳು

ಮತ್ತು

ಅಣ್ಣಪ್ಪ ಶೆಟ್ಟಿ ಕೂಡಾ —ಪ್ರತಿವಾದಿರು

ಪ್ರತಿವಾದಿರು 1. ಅಣ್ಣಪ್ಪ ಶೆಟ್ಟಿ, ಅಡ್ಪಾಡಿ ಹೊಸ್ಮನೆ ಕೊಲ್ಲು ಸೆಡ್ತಿರ ಮಗ, ಉಡ್ಪಿ ತಾಲೂಕು, ಪೆರ್ಡೂರು ಗ್ರಾಮ.

6. ಗಣಪಯ್ಯ ಶೆಟ್ಟಿ, ಹೊರಲಾಳಿ ಕೆಳಾಮನೆ ಸದಿಯಮ್ಮ ಶೆಡ್ತಿರ ಮಗ, ಉಡ್ಪಿ ತಾಲೂಕು ಸಂಚಾರು ಗ್ರಾಮ.

7. ತೇಜಪ್ಪ ಶೆಟ್ಟಿ, ಸಧಿಯಮ್ಮ ಶೆಡ್ತಿರ ಮಗ, ಉಡ್ಪಿ ತಾಲೂಕು ಕಾವಡಿ ಗ್ರಾಮದ ಮೂಡು ಮೊಸಂಬಳ್ಳಿ ಬಣ್ಣಾಲೆ ಮನೆಯಲ್ಲಿರುವವ. —ಇವರಿಗೆ

ವಾದಿಳು ಮೇಲ್ಕಂಡ ಪ್ರತಿವಾದಿ ಪಗೈರೆರ ಮೇಲೆ ಹಿಸೆ ಬಗ್ಗೆ ಸದ್ರಿ ದಾವೆಯನ್ನು ದಾಖಲ್ಲು ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದರೂ ಆಕ್ಷೇಪಣೆಯಿದ್ದಲ್ಲಿ ತಾರೀಕು 20–8–1971ನೇ ದಿವಸ ಹಗಲು 11 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು; ತಪ್ಪಿದಲ್ಲಿ ನಿಮ್ಮ ಆಕ್ಷೇಪಣೆ ಶಿವಾಯಿ ಏಕ ಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟಿನ ಹುಕುಂ ಮೇರೆಗೆ ಯಿ ಮೂಲಕ ತಿಳಿಸೋಣಾಗಿದೆ.

(Sd.) S. S. Kolkebail
Advocate for Plaintiff

ಕುಂದಾಪುರ, 9—7—1971

ಜೂನ್ ತಿಂಗಳ ದ್ವಿತೀಯ ವಾರದಲ್ಲಿ ಮುಂಬೈಯ ಕನ್ನಡ ಕಲಾಕೇಂದ್ರ ಎರಡು ಬಾರಿ ಪ್ರದರ್ಶಿಸಿದ 'ಯಾರು ನನ್ನವರು?' ನಾಟಕದಲ್ಲಿ ದಿಗ್ದರ್ಶಕ ಶ್ರೀ ಸದಾನಂದ ಸುವರ್ಣ ಡಾ. ರಾಮರಾಯನ ಪಾತ್ರದಲ್ಲಿ ಮತ್ತು ಕಂಪೌಂಡರ್ ನಾನಾ ಪಾತ್ರದಲ್ಲಿ ಶ್ರೀ ಎಸ್. ಎಂ. ಶೆಟ್ಟಿ.

ಮುಂಬೈ ಕಲಾ ವಿಲಾಸಿಗಳ ಹೊಸ ಸಾಹಸ

ಯಾರು ನನ್ನವರು?

ಶ್ರೀ ದತ್ತಾತ್ರೇಯವರ ಮರಾಠೀ ನಾಟಕ "ಮಾಝಾ ಕುಣಾ ಮ್ಹಣೂಮಿ"ಯನ್ನು ಶ್ರೀ ಶಿಮುಂಜೆ ಪರಾರಿಯವರು ರೂಪಾಂತರಿಸಿ ಕನ್ನಡಿಗರಿಗೆ ಅರ್ಪಿಸಿದ್ದಾರೆ. ತಾ. 11-6-1971ರಂದು ಮುಂಬಯಿಯ ರವೀಂದ್ರ ನಾಟ್ಯಮಂದಿರದಲ್ಲಿ ಇದರ ಪ್ರಥಮ ಪ್ರಯೋಗ ಅತ್ಯಂತ ಯಶಸ್ವಿಯಾಗಿತ್ತು.

ವಿಧಿಯ ವಿಕಟ ಅಟ್ಟಹಾಸಕ್ಕೆ ಬಲಿಯಾದ ಹೆಣ್ಣಿನ ಸುತ್ತ ಕಥೆಯು ಹೆಣೆದುಕೊಂಡಿದೆ. ನವ ದಂಪತಿಗಳಾದ ಶ್ರೀಧರ-ಮಾಧವಿಯರ ಸುಮಧುರ ಬಾಳಿನಲ್ಲಿ ಅನಿರೀಕ್ಷಿತ ಝುಂಝಾವಾತವೆದ್ದಿತು. ಇನ್ನು ಪ್ರಣಯಾಲಾಪದ ಗುಂಗಿನಲ್ಲಿರುವಾಗಲೇ ಪತಿಯ ದುರ್ಮರಣದ ವಾರ್ತೆ ಮಾಧವಿಯನ್ನು ಗತಿಕೆಡಿಸಿತು

ತಂದೆಯ ಅನುಕಂಪ, ಅಣ್ಣನ ಅಸಹಾಯಕತೆ, ಅತ್ತಿಗೆಯ ನಂಜಿನ ನಾಲಗೆ— ಈ ತ್ರಿಗುಣಗಳ ಮಧ್ಯೆ ಮಾಧವಿಯ ಭಗ್ನ ಬಾಳು ಹೇಗೋ ಸಾಗುತ್ತಿರುವಾಗ ಡಾ| ರಾಮರಾಯ ಅವಳನ್ನು ಪುನರ್ವಿವಾಹವಾದ. ಅಷ್ಟರಲ್ಲಿ ಸ್ಕೂಟರ್ ಅಪಘಾತದಿಂದ ಜ್ಞಾಪಕಶಕ್ತಿ ಕಳಕೊಂಡ ಶ್ರೀಧರನನ್ನು ಮಾಧವಿ ಕಂಡಾಗ ಕಥೆಗೆ ಕಳಸವಿಟ್ಟಂತಾಗುತ್ತದೆ.

ಮಾಧವಿಯ ಪಾತ್ರದಲ್ಲಿ ಲತ ಜಾಕರ್ ಸೈಜ ಅಭಿನಯದಿಂದ ರಂಜಿಸಿದ್ದಾರೆ. ಶ್ರೀಧರನೊಂದಿಗೆ ದಾಂಪತ್ಯ ಜೀವನದಲ್ಲಿ ಕಳೆದ ಸರಸಸಲ್ಲಾಪಗಳ ಆ ರಸನಿಮಿಷಗಳಲ್ಲಂತೂ ಅವರ ಅಭಿನಯ ಅಮೋಘ; ಅಭಿನಂದನೀಯ. ಶ್ರೀಧರನ ಪಾತ್ರದಲ್ಲಿ ಕೆ. ಜೆ. ರಾಯರು ಎಂದಿನಂತೆ ಉತ್ತಮ ಅಭಿನಯ ನೀಡಿ ನಾಟಕಕ್ಕೆ ಕಳೆ ತುಂಬಿದ್ದಾರೆ.

ಡಾ. ರಾಮರಾಯನ ಪಾತ್ರದಲ್ಲಿ ನಾಟಕದ ದಿಗ್ದರ್ಶಕ ಸದಾನಂದ ಸುವರ್ಣರ ಗಂಭೀರ ಅಭಿನಯ ಆ ಪಾತ್ರಕ್ಕೆ ವಿಶಿಷ್ಟ ಮೆರಗನ್ನು ನೀಡಿದೆ. ಸ್ವಾರ್ಥಿ ಹಾಗೂ ಮತ್ಸರಿ ಅತ್ತಿಗೆಯ ಪಾತ್ರದಲ್ಲಿ ಶಾರದಾ ರಾವ್ ಅತ್ಯಂತ ಸಮರ್ಪಕವಾಗಿ ಅಭಿನಯಿಸಿದ್ದಾರೆ. ಆಕೆಯ ಪತಿ ಅನಂತನಾಗಿ ದೇವದಾಸ ಮೇಗರವಳ್ಳಿಯವರೂ ಕಂಪೌಂಡರ್ ನಾನಾ ಪಾತ್ರದಲ್ಲಿ ಎಸ್. ಎಂ. ಶೆಟ್ಟಿ ಯವರು ಉತ್ತಮ ಅಭಿನಯ ನೀಡಿ ಪ್ರೇಕ್ಷಕರಿಗೆ ಸಾಕಷ್ಟು ಮನರಂಜನೆಯನ್ನು ಒದಗಿಸಿದ್ದಾರೆ. ಮಾಧವಿಯ ಅಸಹಾಯಕ ತಂದೆ ಭಾಸ್ಕರರಾಯನಾಗಿ ಶ್ರೀ ಎಸ್. ವಿ. ಆಚಾರ್ಯರು ಚೆನ್ನಾಗಿಯೇ ಅಭಿನಯಿಸಿದರೂ ಸಂದರ್ಭೋಚಿತವಾಗಿ ಮಾತಿನ ಧ್ವನಿಯಲ್ಲಿ ಏರಿಳಿತವನ್ನೂ ನಟನೆಯಲ್ಲಿ ವೈವಿಧ್ಯತೆಯನ್ನೂ ಅಳವಡಿಸಿಕೊಂಡರೆ ಇನ್ನಷ್ಟು ಸಮರ್ಪಕವಾದೀತು. ಡಾ. ರಾಮರಾಯನ ತಾಯಿಯಾಗಿ ಸುಶೀಲಾ ಆಚಾರ್ಯರು ಹಿತಮಿತವಾಗಿ ಆದರೆ ಅಷ್ಟೇ ಗಂಭೀರವಾಗಿ ನಟಿಸಿದ್ದಾರೆ. ಶ್ರೀಧರನ ತಂದೆ ಭೈರಪ್ಪನಾಗಿ ಟಿ. ಎಸ್. ಕಾಂಚನರ ಅಭಿನಯ ಸಹನೀಯ.

ರಂಗಸಜ್ಜಿಕೆ ಅತ್ಯುತ್ತಮ. ಸದಾನಂದ ಸುವರ್ಣರ ದಿಗ್ದರ್ಶನ ಅಮೋಘ. ಹಿನ್ನೆಲೆ ಸಂಗೀತ ಮಧುರ. ಶಿಮುಂಜೆ ಪರಾರಿಯವರ ರೂಪಾಂತರ ಕಾರ್ಯ ಸಮರ್ಪಕವಾಗಿದೆ. ಕೆಲವು ಪ್ರಸಂಗಗಳಲ್ಲಿ ಉಪಯೋಗಿಸಿದ ಭಾಷೆಯಂತೂ ಕಾವ್ಯಮಯವಾಗಿದೆ.

— ಬಿ. ಎಸ್. ಕುರ್ಕಾಲ್

(ಮೂರನೇ ಪುಟದಿಂದ)

ಮತ್ತಿನ್ನೇನು? ಈ ಯೋಧತ್ರಯರ ಮೃತ್ಯುವಿಗೇನು ಕಾರಣವಿದ್ದೀತು?—ಏನೆಂದು ಹೇಳಿದರೂ ಅದು ಊಹೆಯದು. ಅಂತರಿಕ್ಷಯಾನದಿಂದ ಮರಳಿಬಂದವರಲ್ಲಿಯೂ ಒಬ್ಬೊಬ್ಬರಿಗೆ ಒಂದೊಂದು ವಿಧದ ವಿಚಿತ್ರ ದೈಹಿಕಾನುಭವವಾದುದುಂಟು. ಅಂಥದೇ ಒಂದು ರೀತಿಯ ದೈಹಿಕ ಪೀಡೆಯಿಂದಲೇ ಅವರು ಸಾವನ್ನಪ್ಪಿಕೊಂಡಿರಲೂ ಬಹುದು. ಅಂದರೆ, ಸದ್ಯದ ಸಾಧನ ಸೌಲಭ್ಯೋಪಕರಣಗಳು ಕೆಲವೇ ದಿನಗಳಿಗಿಂತ ಹೆಚ್ಚು ಕಾಲ ಅಂತರಿಕ್ಷದಲ್ಲಿ ನೆಲೆನಿಲ್ಲಲು ಅನುಕೂಲವಿಲ್ಲವೆಂಬೇ ಊಹಿಸ ಬೇಕಾಗುತ್ತದೆ. ಇದು ಇನ್ನು ಮುಂದಿನ ಸಂಶೋಧನೆಗಳಿಗೆ ಪಥಪ್ರದರ್ಶಕವಾಗುತ್ತದೆ. ಗಗನಯಾನದಲ್ಲಿ ತೊಡಗಿದವರಲ್ಲಿ ಅಮೆರಿಕನ್ನರೇ ಬಹಳ ಮುಂದುವರಿದವರೆಂಬುದನ್ನು ಸುಳ್ಳುಮಾಡಿದ ರಶ್ಯನ್ ವ್ಯೋಮಚರರ ಅನುಭವವನ್ನು ಅವರ ಮುಖದಿಂದಲೇ ಕೇಳುವ ಭಾಗ್ಯ ನಮಗಿಲ್ಲವಾಯ್ತು. ಅವರ ತಪಸ್ಸು, ಅವರ ಸಾಧನೆಯು ಮುಂದೆ ನಮ್ಮೆಲ್ಲರ ತಲೆ ಬಾಗಿಯೇ ಬಾಗುತ್ತದೆ. ●●

ಎಕಾಡೆಮಿ ಮಹಾಧಿವೇಶನ

ಮಣಿಪಾಲ ಎಕಾಡೆಮಿ 'ಆಫ್' ಜನರಲ್ ಎಜುಕೇಶನಿನ ಮಹಾಸಭೆಯು 30—6—71 ರಂದು ಪ್ಯಾಲಿಕ್ಲಿನಿಕ್‌ನಲ್ಲಿ ಅಧ್ಯಕ್ಷ ಡಾ| ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ಸೇರಿತು. ಡಾ| ಪೈಗಳು ಎಕಾಡೆಮಿಯ ಆಶ್ರಯದಲ್ಲಿ ಬೇರೆ ಬೇರೆ ಶೈಕ್ಷಣಿಕ ಸಂಸ್ಥೆಗಳ ಪ್ರಗತಿಯನ್ನು ವಿವರಿಸಿದರು.

ಡಾ| ಎ. ವಿ. ಬಾಳಿಗಾ ಸರ್ಜಿಕಲ್ ವಿಭಾಗವು ಆಧುನಿಕ ಸಲಕರಣೆಗಳೊಂದಿಗೆ ಶೀಘ್ರ ಪರಿಪೂರ್ಣವಾಗುವಾಗ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಹಾಸಿಗೆಯ ಸಂಖ್ಯೆ ... ಕ್ಕೆ ಏರಿ ಜನ ಸೇವೆಗೆ ಸಿದ್ಧವಾಗುವುದೆಂದರು.

ಬರ್ನ್ಸ್ ಸೆಂಟರ್‌ನಲ್ಲಿ ಉಚಿತವಾಗಿ ನೀಡುತ್ತಿರುವ ಚಿಕಿತ್ಸೆಯಿಂದ ಈ ಕೇಂದ್ರ ಹೆಚ್ಚು ಜನಪ್ರಿಯವಾಗುತ್ತಿದ್ದು, ಅಮೆರಿಕದ ನೆರವು ಇಷಕ್ಕೆ ದೊರಕುತ್ತಿರುವುದರಿಂದ ಈ ಕೇಂದ್ರದ ಮೂಲಕ ಇನ್ನೂ ಹೆಚ್ಚಿನ ಸೇವೆ ಸಲ್ಲಿಸಲು ಸಾಧ್ಯವಿದೆ ಎಂದು ಡಾ| ಪೈ ಹೇಳಿದರು. ಎಕಾಡೆಮಿಯು ಕೈಕೊಂಡಿರುವ ಎಜ್ಯುಕೇಶನ್ ಫೈನಾನ್ಸ್ ಫೌಂಡೇಶನಿನ ನೂತನ ಯೋಜನೆ ಪ್ರಸ್ತಾಪಿಸಿ ಈ ಯೋಜನೆಯಲ್ಲಿ ನುಕ್ಕಳೂ ಮಕ್ಕಳ ಹಿರಿಯರೂ ಅಧ್ಯಾಪಕರುಗಳೂ ಭಾಗವಹಿಸಿ ಸಂಸ್ಥೆಗಳ ಪುರೋಭಿವೃದ್ಧಿಗೆ ನೆರವಾಗುವಂತೆ ಕೇಳಿಕೊಂಡರು.

ಆಡಳಿತ ಮಂಡಳಿಯ ಆಯ್ಕೆಯಾದ ಬಳಿಕ ಶ್ರೀ ಪಿ. ಶ್ರೀಪತಿ ಆಚಾರ್ಯರು ಸದಸ್ಯರ ಪರವಾಗಿ ಡಾ| ಪೈಗಳನ್ನು ಅಭಿನಂದಿಸಿದರು.

ಶೀರೂರು ಮಠದ ಸ್ವಾಮಿಗಳಿಂದ ಪೀಠ ತ್ಯಾಗ

ಉಡುಪಿ ಶೀರೂರು ಮಠದ ಮೇಲಿನ ತಮ್ಮ ಅಧಿಕಾರ ಹಾಗೂ ಸನ್ಯಾಸವನ್ನು ಸ್ವಾಮಿ ಲಕ್ಷ್ಮೀ ಮನೋಜ್ಞ ತೀರ್ಥರು ತ್ಯಾಗ ಮಾಡಿದ್ದಾರೆ.

ಈ ಕುರಿತು ಸ್ವಾಮಿಗಳು ಅಷ್ಟ ಮಠಗಳ ಭಕ್ತಾದಿಗಳ ಸಮಿತಿಗೆ ಹೇಳಿಕೆಯೊಂದನ್ನು ನೀಡಿದ್ದು ಸನ್ಯಾಸ ಹಾಗೂ ಪೀಠತ್ಯಾಗದ ಕುರಿತು ತಮ್ಮ ನಿರ್ಧಾರವನ್ನು 'ದ್ವಂದ್ವ' ಸೋದೆ ಮಠದ ಸ್ವಾಮಿಗಳವರಿಗೆ ತಿಳಿಸಿರುವುದಾಗಿಯೂ, ಇನ್ನು ಮುಂದೆ ಶೀರೂರು ಮಠದ ಜತೆ ತನಗೆ ಓರ್ವ ಸಾಮಾನ್ಯ ನಾಗರಿಕನಂತಲ್ಲದೆ ಬೇರಾವ ಸಂಬಂಧವು ಇಲ್ಲವೆಂದೂ ತಿಳಿಸಿದ್ದಾರೆ.

ಸೋದೆ ಮಠದ ಶ್ರೀ ವಿಶ್ವೋತ್ತಮ ತೀರ್ಥ ಸ್ವಾಮಿಗಳು 1—7—71ರಂದು ಎಂಟು ವರುಷದ ವಟುವೊಬ್ಬನಿಗೆ ಲಕ್ಷ್ಮೀವರ ತೀರ್ಥ ಸ್ವಾಮಿ ಎಂದು ನಾಮಕರಣ ಮಾಡಿ ಶೀರೂರು ಮಠದ ಉತ್ತರಾಧಿಕಾರಿಯನ್ನಾಗಿ ನೇಮಿಸಿದ್ದಾರೆ.

IN THE COURT OF THE MUNSIF OF KARKALA

No. 159/1971

1. Chand... dyanthaya.
2. Ramani ... thi.
3. Bharath Ad..anthaya.

—Plaintiffs.

Vs.

Manjayya Bhandary—Defendant.

To

The Defendant Manjayya Bhandary, Son of Sesha Bhandary, residing at Balajiguthu Nitte village, Karkala taluk.

Please take notice that the plaintiffs have instituted the above suit against you for recovery of Rs. 1000—00 for damages of false and malicious prosecution stands Posted to 12—7—1971. In case you fail to appear before the said court on 12—7—1971 at 10 A.M. the suit will be decided in your absence.

(By order of the Court)

K. S. Kamath

Advocate for Plaintiffs

Karkala, 1—7—71

"ವಿಲಾಸಿಯಾ ಕೊಲೆ"

(ಎರಡನೇ ಪುಟದಿಂದ)

ಹೇಳುವುದಿದ್ದರೆ, ಅವಳ ಶವವನ್ನೇ ಇದುತನಕ ಕಂಡವರಿಲ್ಲ. ಅವಳಿಗೆ ಹೊಡೆದುದನ್ನೂ, ಅವಳು ಸ್ಮೃತಿ ತಪ್ಪಿ ಬಿದ್ದುದನ್ನೂ ನೋಡಿದವರಿಲ್ಲ. ವಿಲಾಸಿಯಾ ಸತ್ತಿರುವಳೆಂಬುದೇ ಖಚಿತವಾಗಿ ರುಜುವಾತು ಆಗಿಲ್ಲ. ಅಡವಿಯಲ್ಲಿ ದೊರೆತ ಮೂಳೆಗಳು ಅವಳವೆಂಬುದೇ ತಜ್ಞರ ಸಾಕ್ಷಿಯಿಂದ ಸ್ಥಿರಪಟ್ಟಿಲ್ಲ. ಆಕೆಯ ಹೆಣವನ್ನು ಬನ್ವರ್ ಸಿಂಗರ ಮನೆಗೆ ಕಾರಿನಲ್ಲಿ ಒಯ್ಯಲಾಯಿತೆಂದೂ, ಅಲ್ಲಿ ಅವರ ಸೇವಕರ ಸಹಾಯದಿಂದ ತುಂಡು ತುಂಡು ಮಾಡಲಾಯಿತೆಂಬ ವಾದವನ್ನು ಎತ್ತಿ ಹಿಡಿಯಲು ಆಧಾರಗಳೇ ಇಲ್ಲ. ಒಂದು ವೇಳೆ ಒಪ್ಪಿಕೊಂಡರೂ, ಒದಗಿ ಬಂದ ಸಂದರ್ಭಗಳು ಈ ತೀರ್ಮಾನಕ್ಕೆ ಪುಷ್ಟಿ ಕೊಡುವುದಿಲ್ಲ. ಕಾರಿನಲ್ಲಿ ಅವಳ ಹೆಣ ಇದ್ದುದು ನಿಜವಿದ್ದರೆ, ಅದನ್ನು ರಾಮಗರ ತನಕ ಒಯ್ಯುವ ಆವಶ್ಯಕತೆ ಏನಿತ್ತು? ಆರೋಪಿ, ತನ್ನ ಡ್ರೈವರನ ಸಹಾಯದಿಂದ, ಅದನ್ನು ಮಾರ್ಗ ಮಧ್ಯದಲ್ಲಿ ಎಲ್ಲಿಯಾದರೂ ಎತ್ತಿ ಎಸೆಯಬಹುದಿತ್ತು. ತಮ್ಮ ಪಾಪ ಕೃತ್ಯಕ್ಕೆ ಸಾಕ್ಷಿಯೊದಗಿಸುವ ಕೆಲಸವನ್ನು ಆರೋಪಿ ಎಂದಾದರೂ ಪ್ರಯತ್ನಿಸುತ್ತಿದ್ದರೇ?

ವಿಲಾಸಿಯಾ ಬಿದ್ದ ಮನೆಯಲ್ಲಿ ಆ ರಾತ್ರಿಯನ್ನು ಕಳೆಯಲೂ ಸಿದ್ಧವಿಲ್ಲದೆ ಬ್ರಿಜಭೂಷಣ ಸಿಂಗರು, ಅರುವತ್ತು ಮೈಲಿಗಳ ಪ್ರಯಾಣ ಮಾಡಿದರೆಂಬ ಹೇಳಿಕೆ ನಂಬಿಕೆಗೆ ಅರ್ಹವಾಗಿಲ್ಲ. ಅವರು ಕೊಟ್ಟ ವಿವರಣೆ ಸುಳ್ಳಿನ ಕಂತೆ–ಈ ಕಟ್ಟು ಕತೆಯೇ ಅವರನ್ನು ಶಂಕೆಯಿಂದ ಕಾಣುವಂತೆ ಮಾಡಿತು. ವಿಲಾಸಿಯಾ ಶವದ ಸಾಗಾಣಿಕೆಗೇ ಈ ಪ್ರಯಾಣ ಮಾಡಿದರೆಂದು ಊಹಿಸಲು ಎಡೆ ಮಾಡಿಕೊಟ್ಟಿತು. ಅವರ ಕಾರು ಲಕ್ನೋ ಬಿಟ್ಟ ಮೊದಲುಗೊಂಡು ವಿಲಾಸಿಯಾಳನ್ನು ನೋಡಿದವರು ಇಲ್ಲ. ಆಕೆ ಹೇಗೆ ಎಷ್ಟು ಹೊತ್ತಿಗೆ ಅದೃಶ್ಯಳಾದಳೋ ತಿಳಿಯುವುದಿಲ್ಲ. ಈ ಗುರುತರವಾದ ಆರೋಪಕ್ಕೆ ಬಲಿಯಾಗಲು, ಆರೋಪಿ ಅನ್ಯರನ್ನು ನಿಂದಿಸಿ ಪ್ರಯೋಜನವಿಲ್ಲ. ತನ್ನನ್ನೇ ದೂರಿಕೊಳ್ಳಬೇಕು. ಅನುಮಾನ ಎಷ್ಟೇ ಬಲವಂತವಿದ್ದರೂ, ಆರೋಪ ಆದರಿಂದ ಸಾಬೀತಾಯಿತೆಂದು ಹೇಳಲು ಬರುವುದಿಲ್ಲ. ಇಷ್ಟರಿಂದಲೇ ಆರೋಪಿ ಕೊಲೆ ಮಾಡಿದನೆಂದೂ, ಹೆಣವನ್ನು ಕಾರಿನಲ್ಲಿ ಸಾಗಿಸಿದನೆಂದೂ ಖಚಿತವಾಗಿ ಹೇಳಲು ಬರುವುದಿಲ್ಲ'.

ಈ ಕಾರಣಗಳನ್ನು ಕೊಟ್ಟು ಪ್ರಿವಿ ಕೌನ್ಸಿಲ್ ಶ್ರೀ ಸಿಂಗರನ್ನು ಖುಲಾಸೆ ಮಾಡಿತು.

●●

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಚಿನ್ನಮ್ಮನ ಕುಟುಂಬಯೋಜನೆ

ಬರೆದವರು: ಶ್ರೀ ರಾಧಾಕೃಷ್ಣ, ಪುತ್ತೂರು.

ಶಾಲೆಯಿಂದ ಮನೆಗೆ ಓಡುತ್ತಲೇ ಬಂದ ಆರು ವರ್ಷದ ಪುಟ್ಟ ತನ್ನ ತಾಯಿಗೆ ಹೇಳಿದ "ಅಮ್ಮಾ, ಶಾಲೆಯಲ್ಲಿ ಸಿನೇಮಾ ತೋರಿಸುತ್ತಾರಂತೆ" ಎಂದು. ಅದನ್ನು ಕೇಳಿದ ಇತರ ಮಕ್ಕಳು ರಾಮು, ಹೊನ್ನಿ "ನಮಗೆ ಹೋಗಬೇಕು ಸಿನೇಮ ನೋಡಲು" ಎಂದರು. ಪುಟ್ಟ ಹೇಳಿದ "ಹಿರಿಯರನ್ನೂ ಕರೆದುಕೊಂಡು ಸಿನೇಮಾಕ್ಕೆ ಬನ್ನಿ ಎಂದು ಉಪಾಧ್ಯಾಯರು ಹೇಳಿದ್ದಾರೆ. ನನಗಂತೂ ಹೋಗಲೇಬೇಕು" ಎಂದು ಚೀಲವನ್ನೊಂದು ಕಡೆಯಿಟ್ಟು ಕಾಲು ತೊಳೆಯಲಿಕ್ಕೆಂದು ಹೋದ. ಆದೇತಾನೇ ಎರಡು ಹೊರೆ ಹುಲ್ಲು ತಂದುಹಾಕಿ ಕುಳಿತಿದ್ದಳು ಪುಟ್ಟನ ತಾಯಿ ಚಿನ್ನಮ್ಮ, ಶಾಲೆಯಿಂದ ಬಂದವನಿಗೆ ಬೆಲ್ಲದ ನೀರು (ಕಾಫಿ?) ಕೊಡಲೆಂದು ಎದ್ದಳು. ಮಕ್ಕಳು ಸಿನೇಮಾಕ್ಕೆ ಹೋಗುವ ಉತ್ಸಾಹದಿಂದ ಕುಣಿದಾಡತೊಡಗಿದರು.

ತಾಯಿ ಕೊಟ್ಟ ಕರಿಕಾಫಿ ಹೀರುತ್ತಾ "ಆರು ಗಂಟೆಗೆ ಬರಬೇಕೆಂದು ಹೇಳಿದ್ದಾರೆ" ಎಂದ. ಪುಟ್ಟ ಹೋದರಾಗಬಹುದೆಂದು ಚಿನ್ನಮ್ಮನಿಗೂ ಅನಿಸಿತು. ಈ ಹಳ್ಳಿಯಲ್ಲಿ ಏನಿದೆ? ಬಂದರೆ ವರ್ಷಕ್ಕೆ ಒಂದೆರಡು ಆಟ. ಅದಕ್ಕೆ ಹೋಗಲು ಕಾಸು ಬೇಕಲ್ಲ. ಇದ ವರೆ ಸರಕಾರದವರು ಧರ್ಮಕ್ಕೆ ತೋರಿಸುತ್ತಾರೆ. ಕಳೆದ ವರ್ಷವೂ ಶಾಲೆಯ ಅಂಗಳದಲ್ಲಿ ಸಿನೇಮ ತೋರಿಸಿದ್ದರು. ಆದಕ್ಕೂ ಅವಳು ಮಕ್ಕಳನ್ನು ಕರೆದುಕೊಂಡು ಹೋಗಿದ್ದಳು. ಮಕ್ಕಳ ಆತುರ ಜೋರಾಗಿದ್ದರೂ ಅವರ ತಂದೆ ಮನೆಗೆ ಬಾರದೆ ಹೊರಡುವಂತಿರಲಿಲ್ಲ.

ಪೇಟೆಗೆ ಹೋಗಿದ್ದ ರಾಮಪ್ಪ ಮನೆಗೆ ಬಂದಾಗ ಸ್ವಲ್ಪ ಒಣಮೀನು ತಂದಿದ್ದ. ಚಾ ಹುಡಿಯ ಒಂದು ಪೊಟ್ಟಣವೂ ಇತ್ತು. ಅವನ ಮುಖ ನೋಡುವಾಗಲೇ ಸಾಕಷ್ಟು ಕಳ್ಳು ಕುಡಿದು ಬಂದಿದ್ದಾನೆಂಬುದು ಚಿನ್ನಮ್ಮನಿಗೆ ತಿಳಿದುಬಂತು. ಈಗ ಏನೇ ಮಾತಾಡಿದರೂ ಅವನಿಗೆ ಸಿಟ್ಟು ಬಂದೀತು. ಮಕ್ಕಳ ಮನಸ್ಸನ್ನು ತೃಪ್ತಿಪಡಿಸುವುದೂ ಅಗತ್ಯ. ಅಂಜುತ್ತಲೇ ಚಿನ್ನಮ್ಮ ಕೇಳಿದಳು "ಶಾಲೆಯ ಅಂಗಳದಲ್ಲಿ ಸಿನೇಮ ತೋರಿಸುವರಂತೆ. ಮಕ್ಕಳಿಗೆ ನೋಡಬೇಕು ಎಂದಾಗಿದೆ; ಹೋಗಲೇ?" ಎಂದು. ರಾಮಪ್ಪನಿಗೆ ರಗಳೆ ಎನ್ನಿಸಿತು. "ಏನಿದೆ ಅದರಲ್ಲಿ, ಕುಟುಂಬ ಯೋಜನೆ ಸಿನೇಮಾ ಅದು. ಕಳ್ದ ವರ್ಷ ತೋರಿಸಿದ್ದೇ. ಸರ್ಕಾರದವರಿಗೆ ತಲೆ ಸಮ ಇಲ್ಲ. ಹೆಚ್ಚು ಮಕ್ಕಳಿರಬಾರದು. ಎರಡೇ ಸಾಕು ಎನ್ನುತ್ತಾರೆ. ಆಗುವ ಮಕ್ಕಳು ಆಗದಿರುತ್ತವೆಯೇ? ಸರ್ಕಾರದವರಲ್ಲ ಯಾರೇ ಬಂದರೂ ಹಣೆಬರಹ ತಪ್ಪಿಸಲಿಕ್ಕಾಗಲಿಕ್ಕಿಲ್ಲ" ಎಂದ. ಕಳ್ಳು ತನ್ನ ಪ್ರಭಾವ ಬೀರತೊಡಗಿತ್ತು. "ಅದು ಹೌದು. ಮಕ್ಕಳಿಗೊಂದು ಆಶೆ, ನೋಡಲಿ; ನೀವು ಮನೆಯಲ್ಲಿ ಇರಿ. ನಾನು ಮಕ್ಕಳೊಂದಿಗೆ ಹೋಗಿಬರುತ್ತೇನೆ" ಎಂದು ನಯವಾಗಿ ನುಡಿದಳು ಚಿನ್ನಮ್ಮ. "ಹೂಂ. ಏನ್ ಬೇಕಾದರೂ ಮಾಡು ನನಗೇನು?" ಎಂದ ರಾಮಪ್ಪ ಬೀಡಿ ಹೊತ್ತಿಸಲು ಹೋದ.

ಬೀಡಿಯ ಹೊಗೆಯುಗುಳುತ್ತಾ ಒಳಗಿಂದ ಬಂದ ರಾಮಪ್ಪ "ಮಕ್ಕಳಾಗದಂತೆ ಮಾಡಲಿಕ್ಕೆಲ್ಲ ಇವರಿಗೆ ಗೊತ್ತು. ಇಲ್ಲದವರಿಗೆ ಆಗುವಂತೆ ಮಾಡುತ್ತಾರೆಯೇ? ಓಪರ್ನನ್, ಲೂಪ್, ಅಂತ ಏನೆಲ್ಲ ಹೇಳುತ್ತಾರೆ. ಬೇಡ ಬೇಡಾಂತ ಹೇಳಿದರೂ ನೀನು ಹೋಗಿ ಲೂಪ್ ಹಾಕಿಸಿ ಕೊಂಡು ಬಂದೆಯಲ್ಲಾ ಏನು ಪ್ರಯೋಜನಾತು? ಆಗುವುದು ತಪ್ಪಿದೆಯೇ?" ಎಂದ. ಅವನೊಂದಿಗೆ ವಾದ ಹೂಡಿ ಪ್ರಯೋಜನವಿಲ್ಲವೆಂಬ ಅರಿವಿದ್ದುದರಿಂದ ಚಿನ್ನಮ್ಮ ಸುಮ್ಮನಾದಳು.

ಮೈ ತುಂಬ ಕೊಳೆ ಹಚ್ಚಿಕೊಂಡಿದ್ದ ಮಕ್ಕಳನ್ನು ಒದ್ದೆ ಬಟ್ಟೆಯಲ್ಲಿ ಒರಸಿ ಅಂಗಿ ಹಾಕಿದಳು. ಹರಿದ ಮಾಸಲು ಬಣ್ಣದ ಅಂಗಿಗಳು. ಹೊಸ ಅಂಗಿ ಬರಬೇಕಾದರೂ ಹೇಗೆ? ಮನೆಯಲ್ಲಿರುವಾಗ ಬರಿಮೈಯೇ ಗತಿ. ಎಲ್ಲ ಮಕ್ಕಳಿಗೂ ಬೇಕಷ್ಟು ಬಟ್ಟೆಬರೆ ಕೊಳ್ಳುವುದು ತಮಗೆ ಅಸಾಧ್ಯವೆಂಬ ಅರಿವಿನಿಂದ ಅವಳು ಇದ್ದುದರಲ್ಲೇ ಸುಧಾರಿಸುತ್ತಿದ್ದಳು. ತನ್ನ ಗಂಡ ಬೀಡಿ ಸೇದುವ, ಕುಡಿಯುವ, ಕೋಳಿ ಕಟ್ಟಕ್ಕೆ ಹಾಕುವ ಹಣವನ್ನೆಲ್ಲ ಉಳಿಸಿದರೆ ಇದಕ್ಕಿಂತ ಸಮಾಧಾನದಲ್ಲಿರಬಹುದಾಗಿತ್ತು ಎಂದು ಅವಳಿಗನ್ನಿಸುತ್ತದೆ. ಗಂಡನೊಡನೆ ಹಾಗೆ ಹೇಳುವ ಧೈರ್ಯ ಅವಳಿಗೆಲ್ಲಿಂದ ಬರಬೇಕು. ಹೇಳಿದ್ದೂ ಉಂಟು. ಬಂದ ಪ್ರತಿಫಲ ಬೈಗಳು. ಸಾಲದ್ದಕ್ಕೆ ಹೊಡೆತ ಬೇರೆ. ಏನೇ ಆಗಲಿ ಮಕ್ಕಳಿಗೆ ಸಂತೋಷವಾಗಲಿ ಎಂದು ಚಿನ್ನಮ್ಮ ಇದ್ದುದರಲ್ಲಿ ಚೆನ್ನಾಗಿರುವ ಒಂದೆರಡು ಕಡೆ ಹರಿದು ತೇಪೆ ಹಚ್ಚಿದ್ದ ಸೀರೆಯನ್ನುಟ್ಟುಕೊಂಡು ತಲೆಯನ್ನು ಬಾಚಿದಂತೆ ಮಾಡಿ ಸಿನೇಮಾಕ್ಕೆ ತನ್ನ ನಾಲ್ಕು ಮಕ್ಕಳೊಡನೆ ಹೊರಟಳು. ಹಿರಿಯಮಗ ಹತ್ತು ವರ್ಷದ ಬಾಬು ಧನಿಗಳಲ್ಲಿಗೆ ದನಕರುಗಳ ಚಾಕರಿಗೆ ಹೋಗುತ್ತಿದ್ದ.

'ಹೋಗಿ ಬರುತ್ತೇನೆ ಬೇಗ' ಎಂದು ಚಿನ್ನಮ್ಮ ಹೇಳಿದಾಗ "ಹೂಂ" ಎಂದ ರಾಮಪ್ಪ ಮುಗಿದಿದ್ದ ಬೀಡಿಯನ್ನು ಎಸೆದು ಎಲೆ ಅಡಿಕೆ ಮೆಲ್ಲಲುಸಿದ್ಧನಾಗತೊಡಗಿದ. ಚಿನ್ನಮ್ಮನಿಗೆ ಈಗ ಇರುವ ಮಕ್ಕಳು ಐದೇ ಆದರೂ ಎಂಟುಬಾರಿ ಅವಳು ಹೆತ್ತಿದ್ದಾಳೆ. ಎರಡು ಮಕ್ಕಳು ಹುಟ್ಟುವ ಮೊದಲೇ ನಿರ್ಜೀವವಾಗಿದ್ದವು. ಮತ್ತೊಬ್ಬ ನಾಲ್ಕು ವರ್ಷದವರೆಗೆ ಇದ್ದು ಗಂಟಲಮಾರಿಗೆ ತುತ್ತಾಗಿದ್ದ.

ರಾಮಪ್ಪ ಗೇಣಿ ಒಕ್ಕಲು. ಮೂರು ಮುಡಿ ಗದ್ದೆ ಬೇಸಾಯ ಮಾಡುತ್ತಾನೆ. ಬೇಸಾಯದ ಕೆಲಸವಿಲ್ಲದ ದಿನಗಳಲ್ಲಿ ಧನಿಗಳ ಮನೆಗೆ ಕೆಲಸಕ್ಕೆ ಸರಿಯಾಗಿ ಹೋದರೆ, ಹೊಟ್ಟೆಗೆ ಬಟ್ಟೆಗೆ ಕೊರತೆಯಾಗಲಾರದು. ಚಿನ್ನಮ್ಮನ ಮದುವೆಯಾಗಿ ನಾಲ್ಕು ವರ್ಷಗಳವರೆಗೆ ಅವರ ಜೀವನ ಸುಖದಿಂದಲೇ ಕಳೆದಿತ್ತು. ಚಿನ್ನಮ್ಮ ಎರಡು ಮಕ್ಕಳ ತಾಯಿಯಾಗಿ ಒಂದು ಗರ್ಭ ಹೋದ ಮೇಲೆ ಅವಳ ದೇಹಶಕ್ತಿ ಕುಂದ ತೊಡಗಿತ್ತು. ಮನೆಯಲ್ಲಿ ಜನ ಸಂಖ್ಯೆ ಹೆಚ್ಚಿದ್ದರಿಂದ ಹೊಟ್ಟೆಗೂ ತತ್ವಾರ ಆಗತೊಡಗಿ

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
132 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7 3/8 % ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4 % ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C No. 152/70

ಶ್ರೀ ಸೋದೆ ವಾದಿರಾಜ ಮಠ —ವಾದಿರು

ಮತ್ತು

1. ಚಂದು ಸೇರಿಗಾರ(ಪೌತಿ) 2. ಪದ್ದು ಸೇರಿಗಾರ —ಪ್ರತಿವಾದಿರು

2ನೇ ಪ್ರತಿವಾದಿ: ಪದ್ದು ಸೇರಿಗಾರ, ಮೈಂದ ಸೇರಿಗಾರನ ಅಂಣ. ಉಡುಪಿ ತಾಲೂಕು ಮಜೂರು ಗ್ರಾಮದಲ್ಲಿರುವವ

ವಾದಿರು ಗೇಣಿ ಬಾಕಿ ಬಗ್ಗೆ ದಾಕ್ಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 12-7-1971ಕ್ಕೆ ಇಟ್ಟಿದೆ. ಆ ದಿನ್ನ ಬೆಳಿಗ್ಗೆ 11 ಗಂಟೆಗೆ ಕೋರ್ಟಿನ ಮುಂದೆ ಹಾಜ್ರಾಗಿ ಉದಾಹರಿಸುವರೆ ತಪ್ಪಿದ್ದಲ್ಲಿ ನಿಂಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾನಿಸಲಾಗುವುದು.

By order of court

Sd. Sri V. G. Kedlaya,
M. A. LL. B
Advocate, Udipi

ಉಡುಪಿ, ತಾ. 10-6-71

NAVAYUGA 8-7-1971

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ತು. ಚಿನ್ನಮ್ಮನಿಗೆ ದುಡಿಯಲೂ ಸಾಧ್ಯವಾಗುತ್ತಿರಲಿಲ್ಲ. ರಾಮಪ್ಪನೊಬ್ಬನ ದುಡಿತದಿಂದಲೇ, ಜೀವನ ಸಾಗಬೇಕಾಗಿತ್ತು. ಅವನು ನಿತ್ಯವೂ ಕೆಲಸಕ್ಕೆ ಹೋಗುತ್ತಿರಲಿಲ್ಲ ನಾಲ್ಕೈದು ದಿನ ಹೋದರೆ ಮತ್ತಾರು ದಿನ, ಜಾತ್ರೆ,ಕೋಳಿ ಅಂಕ, ಎಂದು ತಿರುಗುತ್ತಾನೆ. ಬೀಡಿ ಸೇದುವುದು ಸರಾಯಿ ಕುಡಿಯುವುದೂ ಅದರಲ್ಲೇ ಆಗಬೇಕು. ಮನೆಯಲ್ಲಿ ಸಾಮಾನು ಮುಗಿದಿದೆ ಎಂದರೆ ಅವನಿಗೆ ಎಲ್ಲಿಲ್ಲದ ಸಿಟ್ಟು ಬರುತ್ತದೆ. ಮಕ್ಕಳು ಮರಿ ಹೆಚ್ಚಾದಾಗ ಎಷ್ಟು ಸಾಮಾನು ತಂದರೂ ಸಾಕಾಗುತ್ತದೆಯೇ? ಹೀಗೆಲ್ಲಾ ಯೋಚಿಸುತ್ತಾ ಚಿನ್ನಮ್ಮ ಶಾಲೆಯ ಅಂಗಳಕ್ಕೆ ಬಂದಳು.

ಸಿನೇಮಾ ತೋರಿಸುವ ಸ್ಥಳದಲ್ಲಿ ಆಗಲೇ ನೂರಾರು ಜನ ಸೇರಿದ್ದರು. ಹೆಚ್ಚಾಗಿ ಅಲ್ಲಿದ್ದವರು ಚಿನ್ನಮ್ಮನಂಥವರೇ. ಹಲವು ಮಂದಿ ಚಿಕ್ಕಮಕ್ಕಳೊ ತಾಯಂದಿರೊಂದಿಗೆ ಬಂದಿದ್ದರು. ಸರಕಾರಿ ಜೀಪೊಂದು ಅಲ್ಲಿ ನಿಂತಿತ್ತು. ಒಂದು ಕಡೆ ಎರಡು ಕಂಬಗಳನ್ನು ನೆಟ್ಟು ಒಂದು ಬಿಳಿಯ ಬಟ್ಟೆ ಕಟ್ಟಿದ್ದರು ಕೆಲವರು ಕುತೂಹಲದಿಂದ ಅದನ್ನೇ ನೋಡುತ್ತಿದ್ದರು. ಈ ಹಿಂದೆ ನೋಡಿಗೊತ್ತಿದ್ದವರು ಆ ಬಟ್ಟೆಯಲ್ಲೇ ಸಿನೇಮ ಕಾಣುವುದೆಂದು ಹೇಳುತ್ತಿದ್ದರು.

ಕೆಲವೇ ನಿಮಿಷಗಳಲ್ಲಿ ಪರದೆಯ ಮೇಲೆ ಚಿತ್ರಗಳು ಸರಿದಾಡ ತೊಡಗಿದವು. ಒಂದು ಬಡ ಕುಟುಂಬ. ಏಳೆಂಟು ಮಕ್ಕಳಿದ್ದಾರೆ. ಅಷ್ಟು ಮಕ್ಕಳಿಗೆ ಹಂಚಲು ತಾಯಿಯ ಬಳಿ ಎರಡು ಮೂರು ರೊಟ್ಟಿಗಳೇ ಇರುವುದು ದೊಡ್ಡ ತುಂಡಿಗಾಗಿ ಮಕ್ಕಳು ಜಗಳಾಡುತ್ತಾರೆ. ತಾಯಿಯ ಕಣ್ಣಿನಲ್ಲಿ ನೀರು ಒಸರುತ್ತದೆ. ತಂದೆಯೋ ಮನೆಗೆ ಬರುವಾಗಲೇ ಸುಸ್ತಾಗಿರುತ್ತಾನೆ. ಮಕ್ಕಳೆಲ್ಲ ತಮ್ಮ ಕೇಳಿಕೆಗಳ ಪಟ್ಟಿಯನ್ನೇ ಅವನ ಮುಂದೆ ಹೇಳಿಕೊಳ್ಳುತ್ತಾರೆ ಒಬ್ಬರಿಗೂ ಸರಿಯಾದ ಬಟ್ಟೆ ಬರೆಯಿಲ್ಲ. ತಾಯಿಯ ದೇಹವೂ ಬಹಳ ಕ್ಷೀಣವಾಗಿದೆ. ಏನೋ ಕಾಯಿಲೆಯಾಗಿರಬೇಕು ಪಾಪ. ಇದನ್ನು ನೋಡುತ್ತಾ ತನ್ನ ಸ್ಥಿತಿಗತಿಯೂ ಇದಕ್ಕಿಂತ ಬಹಳ ವ್ಯತ್ಯಾಸವಾಗಿಲ್ಲ ಎಂದುಕೊಂಡಳು ಚಿನ್ನಮ್ಮ

ಪರದೆಯ ಮೇಲೆ ಬೇರೊಂದು ದೃಶ್ಯ.

ಒಳ್ಳೆಯ ಬಟ್ಟೆಬರೆ ಹಾಕಿದ ಇಬ್ಬರೇ ಮಕ್ಕಳು. ಶಾಲೆಗೆ ಹೋಗುತ್ತಿದ್ದಾರೆ ಚಿತ್ರಕಲೆಯೂ ಆಟಪಾಠಗಳೂ ಅವರ ಹವ್ಯಾಸ ತಂದೆತಾಯಿಗಳು ಅವರೊಂದಿಗೆ ಆನಂದವಾಗಿ ಇದ್ದಾರೆ. ಆ ಮಕ್ಕಳ ಬೇಡಿಕೆಗಳೆಲ್ಲ ಈಡೇರುತ್ತವೆ. ಇದೊಂದು ಯಾವ ಕೊರತೆಯೂ ಇಲ್ಲದ ಕುಟುಂಬ. ಹೀಗಿರಬೇಕೆಂಬ ಆಸೆಯಿಲ್ಲದವರಾದರೂ ಯಾರು? ಎನ್ನಿಸಿತು ಚಿನ್ನಮ್ಮನಿಗೆ

ನಾಲ್ಕೈದು ಮಕ್ಕಳ ತಾಯಿ ಪುನಃ ಗರ್ಭಿಣಿ. ಗರ್ಭದ ಮೇಲೆ ಜಿಗುಪ್ಸೆ ಅವಳಿಗೆ. ಗರ್ಭಪಾತ ಮಾಡಿಸಿಕೊಳ್ಳಲು ಹಳ್ಳಿ ವೈದ್ಯಳೊಬ್ಬಳ ಸಲಹೆ ಕೇಳುತ್ತಾಳೆ. ಅವಳು ಕೊಟ್ಟ ಔಷಧಿ ಸೇವಿಸುತ್ತಾಳೆ. ಗರ್ಭಪಾತವಾಗುತ್ತವೆ, ರಕ್ತಸ್ರಾವ ನಿಲ್ಲದೆ ನಂಜು ಮೀರಿ, ಸಾಯುತ್ತಾಳೆ. ತನ್ನ ಮಕ್ಕಳನ್ನು ಬಿಟ್ಟು ಸಾಯುವಾಗಿನ ಅವಳ ಮುಖದ ವೇದನೆಯನ್ನು ನೋಡಿ ಚಿನ್ನಮ್ಮನ ಕಣ್ಣಿನಲ್ಲೂ ನೀರೂರಿತು. ಸೆರಗಿನಿಂದ ಅದನ್ನೊರಸಿಕೊಂಡಳು.

ಸಿನೇಮಾದಲ್ಲಿ ಕುಟುಂಬ ಯೋಜನಾ ಕೇಂದ್ರ. ಹಲವಾರು ಮಂದಿ ಅಲ್ಲಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಾರೆ. ಗಂಡಸರ ಶಸ್ತ್ರಚಿಕಿತ್ಸೆ, ಹೆಂಗಸರಿಗೆ ಲೂಪ್ ಪ್ರಯೋಗ, ಗರ್ಭನಿರೋಧಕ ಸಾಧನಗಳು. ಕುಟುಂಬ ಯೋಜನೆಯಿಂದ ಸುಖಮಯ ಜೀವನ. ಎರಡು ಯಾ ಮೂರು ಮಕ್ಕಳು ಸಾಕು. ಅದರಿಂದ ಸುಖೀಜೀವನ ನಡೆಸಲು ಸಾಧ್ಯ ಎಂದು ತೋರಿಸಿತು. ಸಿನೇಮಾ ಮುಗಿಯಿತು.

ವೇದಿಕೆಯ ಮೇಲೆ ಪ್ಯಾಂಟು ಶರಟು ಕನ್ನಡಕ ಧರಿಸಿದವರೊಬ್ಬರು ಬಂದು ನಿಂತು ಭಾಷಣಕ್ಕೆ ತೊಡಗಿದರು. "ಕುಟುಂಬ ಯೋಜನೆಗಾಗಿ ಸರಕಾರ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಿದೆ. ಜನರು ಅದರ ಸದುಪಯೋಗ ಮಾಡಿಕೊಂಡು, ಮಿತಸಂತಾನ ಹೊಂದಿ ಸುಖೀ ಜೀವನ ನಡೆಸಬೇಕು. ನಾಳೆ ಈ ಸ್ಥಳದಲ್ಲಿ ನಮ್ಮ ಕುಟುಂಬ ಯೋಜನಾ ಕೇಂದ್ರದ ವತಿಯಿಂದ ಗಂಡಸರಿಗೆ ಸಂತಾನ ಹರಣ ಶಸ್ತ್ರಚಿಕಿತ್ಸೆಯೂ ಹೆಂಗಸರಿಗೆ ವಂಕಿಧಾರಣೆಯೂ ನಡೆಯಿಸಲಾಗುವುದು. ಮೂರು ಮಕ್ಕಳಿಗಿಂತ ಹೆಚ್ಚು ಮಕ್ಕಳ ತಂದೆತಾಯಿಗಳಾಗಿರುವವರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ನಮ್ಮ ಕುಟುಂಬ ಯೋಜನಾ ಸಪ್ತಾಹವನ್ನು ಯಶಸ್ವಿಗೊಳಿಸಿ, ಅದರ ಸಂಪೂರ್ಣ ಪ್ರಯೋಜನ ಹೊಂದಬೇಕೆಂದು ಸರಕಾರದ ಹಾಗೂ ಕುಟುಂಬ ಯೋಜನಾ ಕೇಂದ್ರದ ವತಿಯಿಂದ ಕೇಳಿಕೊಳ್ಳುತ್ತೇನೆ" ಎಂದು ನುಡಿದರು.

ಚಿನ್ನಮ್ಮ ಭಾಷಣ ಕೇಳುತ್ತಿದ್ದರೂ ಸಿನೇಮದ ವಿಚಾರವಾಗಿಯೇ ಯೋಚಿಸುತ್ತಿದ್ದಳು. ಕಳೆದ ವರ್ಷವೂ ಇದೇ ರೀತಿ ಸಿನೇಮ ತೋರಿಸಿದ್ದರು. ಭಾಷಣ ಮಾಡಿದ್ದರು. ತನಗೂ ಈ ವಿಚಾರ ಸರಿಯೆನ್ನಿಸಿತ್ತು. ಐದು ಮಕ್ಕಳ ತಾಯಿಯಾಗಿ ಅವರ ಪೋಷಣೆಯೇ ತನಗೆ ಸಮಸ್ಯೆಯಾಗಿರುವಾಗ ತಾನೇಕೆ ಇನ್ನು ಮಕ್ಕಳಾಗದಂತೆ ಮಾಡಿಸಿಕೊಳ್ಳ ಬಾರದು? ಎನ್ನಿಸಿತ್ತು. ಅದನ್ನು ತನ್ನ ಯಜಮಾನರೊಡನೆ ಹೇಳಿದಾಗ ಬೈದುಬಿಟ್ಟಿದ್ದರು. "ನಿಮಗೆ ಬೇಡವಾದರೆ ಬೇಡ. ನಾನೇ ಲೂಪ್ ಹಾಕಿಸಿಕೊಳ್ಳುತ್ತೇನೆ" ಎಂದು ಹೇಳಿ ಅವರನ್ನು ಒಪ್ಪಿಸಬೇಕಾದರೆ ಅತ್ತು ಕರೆದು ಸಾಕುಸಾಕಾಗಿತ್ತು. ಅಂತೂ ಮನಸ್ಸಿಲ್ಲದಿದ್ದೇ ಒಪ್ಪಿದ್ದರು.

ಮರುದಿನ ಕುಟುಂಬ ಯೋಜನಾ ಶಿಬಿರಕ್ಕೆ ಬಂದಿದ್ದಳು. ಅಲ್ಲಿ ಡಾಕ್ಟರುಗಳನ್ನು ನರ್ಸಮ್ಮನವರುಗಳನ್ನು ಕಂಡೇ ಎದೆ ಹೊಡೆದುಕೊಳ್ಳ ತೊಡಗಿತ್ತು. ಹಲವು ಮಂದಿ ಹೆಂಗಸರು ತನ್ನಂತೆ ಅಲ್ಲಿಗೆ ಬಂದಿದ್ದುದೇ ಒಂದು ಸಮಾಧಾನವಾಗಿತ್ತು. ತನ್ನ ಸರದಿ ಬಂದಾಗ ಕೋಣೆಯ ಒಳಗೆ ಹೋಗಿ ಅವರು ಹೇಳಿದ ಹಾಗೆ ಮಂಚದ ಮೇಲೆ ಮಲಗಿದ್ದಳು. ಬಿಳಿ ಬಟ್ಟೆಯನ್ನು ಧರಿಸಿದ ಡಾಕ್ಟರಮ್ಮ ತನಗೆ ಲೂಪು ಹಾಕಿ ಬಂದಾಗ ಭಯವೇ ಆದರೂ ಅಲ್ಲಿಂದ ಹೊರಗೆ ಬಂದಾಗ, ಇನ್ನು ವರ್ಷಕ್ಕೊಮ್ಮೆ ಬಸುರಿಯಾಗಿ ಹೆರುವ ಕಷ್ಟ ತಪ್ಪಿತಲ್ಲ ಎಂದು ಸಮಾಧಾನವಾಗಿತ್ತು. ಕುಡಿದು ಬಂದು ಯಾವಾಗೆಂದರೆ ಆಗ ತನ್ನ ದೇಹದ ಬಯಕೆ ತೀರಿಸಿಕೊಳ್ಳುವ ಗಂಡನಿಗೆ ಮೈ ತೆತ್ತರೂ ಬಸಿರಾಗಲಾರೆ ಎಂದು ಸಂತಸವಾಗಿತ್ತು. ಆದರೆ....ಚಿನ್ನಮ್ಮ ತನ್ನ ಹೊಟ್ಟೆಯ ಮೇಲೆ ಕೈಯ್ಯಾಡಿಸಿ ಕೊಂಡಳು.

ಆಗಲೇ ಜನರು ಚದುರತೊಡಗಿದ್ದರಿಂದ, ಪುಟ್ಟ "ಹೋಗುವ ಅಮ್ಮ" ಎಂದ. ಚಿನ್ನಮ್ಮ ಯೋಚನೆಯಿಂದ ಹೊರಬಂದು ಎದ್ದುನಿಂತಳು. ಸಣ್ಣ ಮಗು ನಿದ್ರಿಸಿತ್ತು. ಅದನ್ನು ಬೆನ್ನ ಮೇಲೆ ಹಾಕಿಕೊಂಡು ಉಳಿದ ಮಕ್ಕಳೊಂದಿಗೆ ಹೊರಟಳು. ತಿಂಗಳುಬೆಳಕಿದ್ದುದರಿಂದ ದಾರಿ ನಡೆಯುವ ಬಗ್ಗೆ ಚಿಂತಿಸಬೇಕಾಗಿರಲಿಲ್ಲ. ದಾರಿಯಲ್ಲಿ ಅಂಗಡಿಗಳೆದುರಾದಾಗ ಮಕ್ಕಳಿಗೆ ಬಿಸ್ಕೇಟಿನ ನೆನಪಾಯಿತು. ಇಲ್ಲವೆನ್ನಲಿಕ್ಕಾಗದೆ ತನ್ನ ಬಾಳೆಕಾಯಿಯಲ್ಲಿ ಸಿಕ್ಕಿಸಿದ್ದ ಚಿಲ್ಲರೆಯಲ್ಲಿ ಹತ್ತು ಪೈಸೆ ಕೊಟ್ಟು ಪುಟ್ಟನನ್ನು ಅಂಗಡಿಗೆ ಕಳಿಸಿ ಬಿಸ್ಕೇಟು ತರಿಸಿದಳು. ಎಲ್ಲರಿಗೂ ಎರಡೆರಡು ಚಿಕ್ಕ ಬಿಸ್ಕೇಟು ಸಿಕ್ಕಿತು. "ಹೋಗುವಾ" ಎಂದು ಮನೆಯತ್ತ ಹೊರಟಳು ತನ್ನ ನಾಲ್ವರೂ ಮಕ್ಕಳೊಂದಿಗೆ ಚಿನ್ನಮ್ಮ.

ಚಿನ್ನಮ್ಮ ಈಗ ಏಳು ತಿಂಗಳ ಗರ್ಭಿಣಿ. ಲೂಪ್ ಹಾಕಿಸಿಕೊಂಡರೂ ಕೂಡಾ, ಏನೂ ಪ್ರಯೋಜನವಾಗಲಿಲ್ಲವಲ್ಲಾ? ಎಂಬುದೇ ಅವಳಿಗೆ ಯೋಚನೆ. "ನೀವು ಹೀಗೆ ಭಾಷಣ ಕೊಡುತ್ತೀರಲ್ಲಾ, ನೀವು ಹೇಳಿದಾಗೆ ಲೂಪ್ ಹಾಕಿಸಿಕೊಂಡರೂ ನಾನು ಗರ್ಭಿಣಿಯಾಗಿದ್ದೇನೆ. ಇದಕ್ಕೇನೆನ್ನುತ್ತೀರಿ?" ಎಂದು ಡಾಕ್ಟರರೊಡನೆ ಕೇಳಿಯೇ ಬಿಡಬೇಕಾಗಿತ್ತು ಅಂದುಕೊಂಡಳು. "ಅವರು ಮಕ್ಕಳಾಗದಂತೆ ಮಾಡಿಯಾರೇ. ವಿನಃ ಮಕ್ಕಳಿಲ್ಲದವರಿಗೆ ಆಗುವ ಹಾಗೆ ಮಾಡುವುದು ಸಾಧ್ಯವಿಲ್ಲ. ಇವರು ಏನೇ ಹೇಳಿದರೂ ದೇವರು ಬರೆದಿಟ್ಟ ಹಣೆಬರಹ ಬದಲಾಗದು" ಎನ್ನುವ ತನ್ನ ಗಂಡನ ಮಾತು ಅವಳಿಗೆ ನೆನಪಾಯಿತು. ಇನ್ನು ತಾಯಿಯಾಗಬಾರದು. ಇದ್ದ ಮಕ್ಕಳೇ ಸಾಕು ಎಂದು ವಂಕಿ ಹಾಕಿಸಿಕೊಂಡ ತಾನು ಪುನಃ ಬಸುರಿಯಾಗಬೇಕಾದರೆ? ಎಲ್ಲಾ ಅವನಿಚ್ಛೆ ಎಂದುಕೊಳ್ಳುತ್ತಾ ಮಕ್ಕಳೊಡನೆ ಮನೆಗೆ ಬಂದಳು ಐದು ಮಕ್ಕಳ ತಾಯಿ ಚಿನ್ನಮ್ಮ.

●●

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0-75 ಪೈಸೆ ಮಾತ್ರ.
ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ
(ನವಯುಗ-ಪ್ರೆಸ್) ಉಡುಪಿ, ದ.ಕ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.
ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್
Please Visit **ಫೋನ್: 77**
HOTEL SHIVAPRASAD
High Class Boarding, Lodging & Restaurant
COONDAPUR, S. K.

ಚಂದಾ ಹಣ ಬಾಕಿ ಇರುವವರು ದಯಮಾಡಿ ಅದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ.ಯನ್ನು ಪಡಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 44

NAVAYUGA

15—7—1971

ಬರಲಿದೆ—

ಅಂತಾರಾಷ್ಟ್ರೀಯ ಪುಸ್ತಕ ವರ್ಷ

೧೯೭೦ರ ನವಂಬರ ತಿಂಗಳಲ್ಲಿ ಯುನೆಸ್ಕೊವಿನ ಸಾಮಾನ್ಯಾಧಿವೇಶನ ಸೇರಿ, ೧೯೭೨ನೆಯ ಇಸವಿಯನ್ನು 'ಅಂತಾರಾಷ್ಟ್ರೀಯ ಪುಸ್ತಕಗಳ ವರ್ಷ'ವನ್ನಾಗಿ ಆಚರಿಸಲು ನಿರ್ಧರಿಸಿತು. ಪುಸ್ತಕಗಳ ಮಹತ್ವದ ಬಗ್ಗೆ ಸಮಾಜದ ಲಕ್ಷ್ಯವನ್ನು ಕೇಂದ್ರೀಕರಿಸುವುದೇ ಇದರ ಮುಖ್ಯೋದ್ದೇಶ. ಇಂದು ಜನಸಂಚಾರದ ಒಂದು ಪ್ರಮುಖ ಮಾಧ್ಯಮವೆಂಬ ಹೆಸರು ಪುಸ್ತಕಗಳಿಗಿದೆ. ಉತ್ಪಾದನೆ ಮತ್ತು ವಿತರಣೆಗಳಲ್ಲಿ ನಡೆದ ಪ್ರಗತಿಯಿಂದಾಗಿ, ಹೆಚ್ಚು ಹೆಚ್ಚಾಗಿ ಅಗ್ಗದ ಬೆಲೆಯ ಪುಸ್ತಕಗಳು ದೊರೆಯುವಂತಾಗಿವೆ. ಇದರ ಪರಿಣಾಮವನ್ನು ನಾವು 'ಪುಸ್ತಕಕ್ರಾಂತಿ' ಎಂದು ಕರೆಯ ಬಹುದು.

ದಿನ ದಿನಕ್ಕೂ ಪುಸ್ತಕ ಓದುವವರ ಸಂಖ್ಯೆ ಬೆಳೆಯುತ್ತಲಿದೆ. ಜನಸಂಖ್ಯೆಯಲ್ಲಾದ ಹೆಚ್ಚಳ, ಶಿಕ್ಷಣ ಪ್ರಸಾರ ಮತ್ತು ಹೆಚ್ಚುತ್ತಿರುವ ಅವಕಾಶಗಳಿಂದಾಗಿ ಪುಸ್ತಕಗಳ ಮಾರುಕಟ್ಟೆಯೂ ದೊಡ್ಡದಾಗುತ್ತಿದೆ. ಹೊಸ ಸಾಧನಗಳಿಂದ ವಿತರಣೆ ಮತ್ತು ಪುಸ್ತಕಾಲಯಗಳ ವಿಸ್ತರಣೆಗಳಿಂದ ಪುಸ್ತಕಗಳು ಸುಲಭವಾಗಿ ದೊರೆಯುತ್ತವೆ. ಜ್ಞಾನ ಪ್ರಸಾರ ಕಾರ್ಯದಲ್ಲಿ ಪುಸ್ತಕಗಳ ಸ್ಥಾನ ನಿಜಕ್ಕೂ ಮಹತ್ವಪೂರ್ಣ.

ವಿಕಾಸಶೀಲವಾದ ಜಗತ್ತಿನಲ್ಲಿ ಆರ್ಥಿಕ ಮತ್ತು ಸಾಮಾಜಿಕ ಉನ್ನತಿಗಾಗಿ ಪುಸ್ತಕಗಳ ಬಳಕೆ ದಿನೇ ದಿನೇ ಹೆಚ್ಚುತ್ತಿದೆ. ಇದನ್ನು ಸೂಕ್ತ ವಿಧಾನಗಳಿಂದ ಮನ್ನಿಸುವುದೇ ಅಂತಾರಾಷ್ಟ್ರೀಯ ಪುಸ್ತಕ ವರ್ಷಾಚರಣೆಯ ಗುರಿ. ಈ ಆಚರಣೆಯ ಪ್ರಭಾವವು ಮುಂದಿನವರ್ಷಗಳಲ್ಲೂ ಪರಿಣಾಮಕಾರಿಯಾಗಿ ಉಳಿಯುತ್ತದೆ. ಪುಸ್ತಕಗಳಉತ್ಪಾದನೆಯಲ್ಲಿ ಪ್ರಗತಿ, ಅವುಗಳವಿತರಣೆಯ ವ್ಯವಸ್ಥೆಗಾಗಿ ಶ್ರಮಿಸಲಾಗುವುದು. ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯಲ್ಲಿ ಪುಸ್ತಕಗಳ ಸಂಪೂರ್ಣ ಸಹಯೋಗವಿರುವಂತೆ ನೋಡಿ ಕೊಳ್ಳಲಾಗುವುದು.

ಇದಕ್ಕೆಂದೇ ಯುನೆಸ್ಕೊ ಅಂತಾರಾಷ್ಟ್ರೀಯ ಪುಸ್ತಕ ವರ್ಷ ಯೋಜನಾಸಮಿತಿಯೊಂದನ್ನು ನೇಮಿಸಿದೆ. ಇದರ ಸಭೆಯೊಂದು ಮೊನ್ನೆ ಎಪ್ರಿಲ್ ತಿಂಗಳ ಮಧ್ಯಾವಧಿಯಲ್ಲಿ ಪ್ಯಾರಿಸ್‌ನಲ್ಲಿ ಸೇರಿತ್ತು. ಯುನೆಸ್ಕೊವಿನ ಡೈರೆಕ್ಟರ್ ಜನರಲ್ಲರು ಜಗತ್ತಿನ ಬೇರೆ ಬೇರೆ ದೇಶಗಳಿಂದ ಆಯ್ಕೆಮಾಡಿದ ಎಂಟು ಮಂದಿ ಪುಸ್ತಕ ವಿಶೇಷಜ್ಞರೂ ಈ ಸಭೆಯಲ್ಲಿ ಭಾಗವಹಿಸಿದ್ದರು. ಬೆಲ್ಜಿಯಮ್ಮಿನ ರಾಯಲ್ ಲೈಬ್ರೆರಿಯ ಪುಸ್ತಕಾಧ್ಯಕ್ಷ ಶ್ರೀ ಹರ್ಮನ್ ಲೀಬರ್ಸ್ ಈ ಸಮಿತಿಯ ಅಧ್ಯಕ್ಷರು. ಭಾರತದಿಂದ ಆಯ್ಕೆಯಾದ ಶ್ರೀ ದಿನಾನಾಥ ಮಲಹೋತ್ರರು ಉಪಾಧ್ಯಕ್ಷರು.

"ಎಲ್ಲರಿಗಾಗಿ ಪುಸ್ತಕಗಳು" ಎಂಬುದು ಅಂತಾರಾಷ್ಟ್ರೀಯಪುಸ್ತಕ ವರ್ಷದ ಧ್ಯೇಯ ವಾಕ್ಯ. ಇದಕ್ಕೆ ಸೂಕ್ತ ಸಂಕೇತವೊಂದನ್ನು ಯುನೆಸ್ಕೋ ಕಾರ್ಯಾಲಯ ಗೊತ್ತು ಮಾಡುತ್ತದೆ. ಯುನೆಸ್ಕೋವಿನ ಹಲವು ಸಮಿತಿಗಳು ಮತ್ತು ಹತ್ತಾರು ಪುಸ್ತಕ ತಜ್ಞರು ಅನೇಕ ಕಾರ್ಯಕ್ರಮಗಳನ್ನು ಸೂಚಿಸಿದ್ದಾರೆ. ಇವುಗಳಲ್ಲಿ ಕೆಲವನ್ನು ಭಾರತಕ್ಕೆಂದು ಗೊತ್ತುಮಾಡಿದೆ. ಇಲ್ಲಿ ಸಾರ್ವಜನಿಕ ಮತ್ತು ವ್ಯಕ್ತಿಗತ ಕ್ಷೇತ್ರಗಳೆರಡೂ ಕಾರ್ಯರತವಾಗಿರುವುದರಿಂದ ಇವೆರಡರ ಸಂಯುಕ್ತ ಸಹಯೋಗದಿಂದ ಎಲ್ಲ ಕಾರ್ಯಕ್ರಮಗಳನ್ನೂ ರೂಪಿಸುವುದು ಅಗತ್ಯವಾಗಿದೆ.

ಭಾರತೀಯ ಪ್ರಕಾಶಕ ಮತ್ತು ಪುಸ್ತಕ ವಿಕ್ರೇತರ ಮಹಾಸಂಘದ ವಾರ್ಷಿಕ ಸಮ್ಮೇಳನ ೧೯೭೦ರ ದಶಂಬರದಲ್ಲಿ ಸೇರಿತ್ತು. ಅಂತಾರಾಷ್ಟ್ರೀಯಪುಸ್ತಕ ವರ್ಷದಕಾರ್ಯಕ್ರಮವನ್ನು ಅಲ್ಲೇ ನಿರ್ಧರಿಸಲಾಯಿತು. ರಾಷ್ಟ್ರೀಯ ಪುಸ್ತಕ ಬೋರ್ಡ್, ರಾಷ್ಟ್ರೀಯ ಪುಸ್ತಕ ನ್ಯಾಸ, ಶಿಕ್ಷಣ ಮಂತ್ರಿಶಾಖೆಯ ಯುನೆಸ್ಕೋ ಸಂಬಂಧಿ ಪುಸ್ತಕ ವಿಕಾಸ ಶಾಖೆ, ಸಾಹಿತ್ಯ ಅಕಾಡಮಿ, ಸೂಚನಾ ಮಂತ್ರಾಲಯದ ಪ್ರಕಾಶನ ವಿಭಾಗ, ಭಾರತ ಪುಸ್ತಕಾಲಯ ಸಂಘ ಮೊದಲಾದ ಸಂಸ್ಥೆ—ವಿಭಾಗಗಳು ತಮ್ಮ ಸಹಕಾರವನ್ನು ನೀಡುವುವು. ಪುಸ್ತಕ ವರ್ಷದ ಕಾರ್ಯಕ್ರಮಗಳನ್ನು ಗೊತ್ತು ಮಾಡಿ, ಅವನ್ನು ವ್ಯವಹಾರಕ್ಕೆ ತರಲು ರಾಷ್ಟ್ರೀಯ ಯೋಜನಾ ಸಮಿತಿಯೊಂದನ್ನು ನೇಮಿಸಲಾಗಿದೆ.

ಕೆಲವು ಸಂಸ್ಥೆಗಳು ಈಗಾಗಲೇ ಕಾರ್ಯಕ್ರಮಗಳನ್ನು ನಿರ್ಧರಿಸಿವೆ. ಜನತೆ, ಸರಕಾರ ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳ ಸಹಾಯದಿಂದ ಕಾರ್ಯ ರೂಪಕ್ಕೆ ತರುವ ಕೆಲವು ಯೋಜನೆಗಳೂ ಇವೆ. ಇವುಗಳಲ್ಲಿ ಕೆಲವನ್ನು ಉಲ್ಲೇಖಿಸ ಬಹುದು:

ಉದ್ಘಾಟನೆ

ಅಂತಾರಾಷ್ಟ್ರೀಯ ಪುಸ್ತಕ ವರ್ಷವನ್ನು ೧೯೭೨ನೆ ಜನವರಿ ಮೊದಲ ದಿನ ಉದ್ಘಾಟಿಸಲಾಗುವುದು. ರಾಷ್ಟ್ರಪತಿ ಅಥವಾ ಪ್ರಧಾನಿಯವರನ್ನು ಇದಕ್ಕಾಗಿ ಆಮಂತ್ರಿಸಲಾಗುವುದು. ಇದರಲ್ಲಿ ಭಾಗವಹಿಸಲು ಜನ ಸಂಚಾರ ಸಾಧನಗಳ ಸಂಪೂರ್ಣ ಉಪಯೋಗ ಮಾಡಿಕೊಳ್ಳಲಾಗುವುದು.

ವಿಶ್ವ ಪುಸ್ತಕ ಮೇಳ

೧೯೭೨ರ ಜನವರಿಯಲ್ಲಿ ವಿಶ್ವ ಪುಸ್ತಕ ಮೇಳವೊಂದು ನವದೆಹಲಿಯಲ್ಲಿ ಏರ್ಪಡುವುದು. ರಾಷ್ಟ್ರೀಯ ಪುಸ್ತಕ ನ್ಯಾಸ ಮತ್ತು ಭಾರತೀಯ ಪ್ರಕಾಶಕ ಹಾಗೂ ಪುಸ್ತಕ ವಿಕ್ರೇತರ ಮಹಾಸಂಘವು ಒಂದಾಗಿ ಇದನ್ನು ಸಂಘಟಿಸುವುವು. ಭಾರತದಲ್ಲಿ ಇದು ಮೊದಲನೆಯ ಇಂತಹ ಮೇಳವಾಗುವುದು. ಆದುದರಿಂದ ಈ ಮೇಳದ ಬಗ್ಗೆ ದೇಶ—ವಿದೇಶಗಳಲ್ಲಿ ಈಗಾಗಲೇ ಆಸಕ್ತಿ ಮೂಡಿದೆ.

ಆಫ್ರೇಸ್ಯಾ ಪ್ರಕಾಶಕ ಸಮ್ಮೇಳನ

ವಿಶ್ವ ಪುಸ್ತಕ ಮೇಳದಲ್ಲಿ ಆಫ್ರೇಸ್ಯಾ ಪ್ರಕಾಶಕ ಸಮ್ಮೇಳನವೊಂದು ನಡೆಯಲಿದೆ. ಇದಕ್ಕಾಗಿ ಕೆಲವು ಅಂತಾರಾಷ್ಟ್ರೀಯ ಸಂಸ್ಥೆಗಳಿಂದ ಆರ್ಥಿಕ ನೆರವನ್ನು ಪಡೆಯಲಾಗುವುದು. ಈ ನೆರವು ಸಾಕಷ್ಟು ಲಭ್ಯವಾಯಿತೆಂದರೆ, ಇಂತಹ ಸಮ್ಮೇಳನದಿಂದ ವಿಕಾಸಶೀಲ ದೇಶಗಳ ಪುಸ್ತಕ ಪ್ರಕಾಶನ ಕಾರ್ಯಕ್ರಮಗಳಿಗೆ ಬಹಳ ಪ್ರಯೋಜನ ದೊರೆಯುವುದು.

ನಿರ್ಯಾತವೃದ್ಧಿ ಪ್ರಯತ್ನ

ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಭಾರತೀಯ ಪುಸ್ತಕಗಳ ನಿರ್ಯಾತದ ಸಾಧ್ಯಾಸಾಧ್ಯತೆಗಳ ಪರಿಶೀಲನೆಗೆ ಉಪಯುಕ್ತ ವ್ಯಕ್ತಿಗಳ ದಳಗಳನ್ನು ಕಳಿಸಲಾಗುವುದು.

ಪ್ರಾದೇಶಿಕ ಪುಸ್ತಕ ಮೇಳಗಳು

ರಾಷ್ಟ್ರೀಯ ಪುಸ್ತಕ ನ್ಯಾಸವು ದೇಶದ ವಿವಿಧೆಡೆಗಳಲ್ಲಿ ಪುಸ್ತಕ ಮೇಳಗಳನ್ನು ನಡೆಸುವುದು.

ಸಂಚಾರಿ ಪುಸ್ತಕ ಮೇಳ

ಭಾರತ ಸರಕಾರದ ರೇಲ್ವೆ ಮಂತ್ರಿ ಶಾಖೆಯ ಸಹಕಾರದೊಡನೆ ರೇಲಿನಲ್ಲಿ, ದೇಶದ ನಾಲ್ಕು ಪ್ರಮುಖ ಭಾಗಗಳಿಂದ ಆಯ್ದ ಪುಸ್ತಕಗಳನ್ನು, ಇಡಿಯ ದೇಶದಲ್ಲಿ ಪ್ರದರ್ಶಿಸಲಾಗುವುದು. ಈ ಸಂಚಾರಿ ಪುಸ್ತಕ ಮೇಳವು ಇಡಿಯ ವರ್ಷವೂ ಸುತ್ತುವರಿಯುವುದು. ಪುಸ್ತಕಗಳನ್ನು ಮಾರುವುದಕ್ಕೂ ಇಲ್ಲಿ ವ್ಯವಸ್ಥೆ ಮಾಡಲಾಗುವುದು.

ಪುಸ್ತಕಾಲಯ ಸೇವೆ

ಓದಿನಲ್ಲಿ ಆಸಕ್ತಿ ಬೆಳೆಯಲು ಪುಸ್ತಕಾಲಯಗಳು ಉತ್ತೇಜಕ. ಆದುದರಿಂದ ರಾಷ್ಟ್ರೀಯ–ರಾಜ್ಯ–ಜಿಲ್ಲೆ–ಗ್ರಾಮಗಳ ಮಟ್ಟದಲ್ಲಿ ಪುಸ್ತಕಾಲಯ ವಿಕಾಸವಾಗಬೇಕು. ಪ್ರತಿಯೊಂದು ರಾಜ್ಯದಲ್ಲಿಯೂ ಸ್ಥಾನೀಯ ಪುಸ್ತಕಾಲಯಗಳ ಸಂಖ್ಯೆ ಹೆಚ್ಚಿಸಲು ಮತ್ತು ಶಾಲೆ ಕಾಲೇಜುಗಳಲ್ಲಿನ ಪುಸ್ತಕಾಲಯಗಳು ಉತ್ತಮಗೊಳ್ಳಲು ಲಭ್ಯವಾದಷ್ಟು ಹೆಚ್ಚಿನ ಹಣವೊದಗಿಸುವಂತೆ ರಾಜ್ಯ ಸರಕಾರಗಳನ್ನು ಕೇಳಿಕೊಳ್ಳಲಾಗಿದೆ.

ಗ್ರಾಮ ವಾಚನಾಲಯಗಳು

ಗ್ರಾಮಗಳಲ್ಲಿ ವಾಚನಾಲಯಗಳನ್ನು ತೆರೆಯಲು ಉತ್ತೇಜನ ನೀಡುವ ಕಡೆಗೆ ಈ ವರ್ಷದಲ್ಲಿ ಆಸಕ್ತಿಯಿಡಲಾಗುವುದು. ರಾಜ್ಯ ಸರಕಾರಗಳು ಪ್ರತಿ ಹಳ್ಳಿಯಲ್ಲೂ ಆಸಕ್ತರ ಒಂದು ಸಮಿತಿ ನೇಮಿಸುವಂತೆಯೂ ಈ ಸಮಿತಿಯು ರೂ. ೧೦೦ ಮೌಲ್ಯದ ಪುಸ್ತಕಗಳನ್ನು ಕೊಂಡು ಪುಸ್ತಕಾಲಯವನ್ನು ತೆರೆಯುವಂತೆಯೂ ಆದೇಶ ನೀಡಲು ಕೇಂದ್ರ ಸರಕಾರವನ್ನು ಕೇಳಿಕೊಳ್ಳಲಾಗಿದೆ. ಗ್ರಾಮ ವಾಚನಾಲಯಗಳಿಗೆ ಮಾರ್ಗದರ್ಶನ ನೀಡಲು ಅಧಿಕಾರಿಗಳಿಗೆ ಸಹಾಯವಾಗುವಂತೆ ಪುಸ್ತಿಕೆಯೊಂದನ್ನು ತಯಾರಿಸಲೂ ಸಲಹೆ ನೀಡಲಾಗಿದೆ.

ಬುಕ್ ಕ್ಲಬ್ಬುಗಳಿಗೆ ಉತ್ತೇಜನ

ಭಾರತದಲ್ಲಿನ ಬುಕ್‌ಕ್ಲಬ್‌ಗಳು ಬೆರಳೆಣಿಕೆಯಷ್ಟು. "ಹೋಮ್ ಲೈಬ್ರೆರಿ ಪ್ಲಾನ್ ಸೊಸೈಟಿ" ಎಂಬ ಸಂಸ್ಥೆಯು ಪ್ರತಿಯೊಂದು ಭಾಷಾ ಕ್ಷೇತ್ರದಲ್ಲಿ ಬುಕ್‌ಕ್ಲಬ್ಬುಗಳನ್ನು ಸ್ಥಾಪಿಸಲು ಮತ್ತವನ್ನು ನಡೆಸಲು ಪ್ರೋತ್ಸಾಹ ನೀಡಲು ಯೋಜನೆಯೊಂದು ತಯಾರಾಗಿದೆ. ಬುಕ್ ಕ್ಲಬ್ಬುಗಳನ್ನು ಆರಂಭಿಸಲು ಬೇಕಾದ ತಿಳುವಳಿಕೆಯನ್ನು ಇದು ಕೊಡುವುದಲ್ಲದೆ ಕ್ಲಬ್ಬಿನ ಕಾರ್ಯಕರ್ತರಾಗುವವರಿಗೆ ಪ್ರಶಿಕ್ಷಣವನ್ನೂ ನೀಡುವುದು.

ದೇಶದ ವಿವಿಧ ಭಾಗಗಳಲ್ಲಿ ಪುಸ್ತಕ ಪ್ರ

(ಹನ್ನೆರಡನೇ ಪುಟ ನೋಡಿರಿ)

ಚಿತ್ರಪ್ರರ್ಹ ಮೊಕದ್ದಮೆಗಳು—೧೦

‘ ಪ್ರೊದತ್ತೂರಿನಲ್ಲಿ ಶಿಶುಹತ್ಯೆ ’

ಬರೆದವರು: ಶ್ರೀ ಬಿ. ಕೃಷ್ಣ ಭಟ್, ಎಲ್‌ಎಲ್. ಬಿ., ಭದ್ರಾವತಿ.

ಚಿನ್ನ ಕೊಂಡಯ್ಯ ಜಾತಿಯಿಂದ ವೈಶ್ಯರು. ತಮ್ಮ ಕುಲ ಕಸುಬನ್ನು ತುಂಬ ಜಾಣ್ಮೆಯಿಂದ ಕುದುರಿಸಿಕೊಂಡಿದ್ದರು. ಹೇರಳ ಹಣ ಗಳಿಸಿದ್ದರು ಪ್ರೊದತ್ತೂರಿನ ಪ್ರಮುಖ ಹರಹಿನಲ್ಲಿ ಅವರು ವಾಸ ಮಾಡುತ್ತಿದ್ದರು.

ಅವರದು ಚಿಕ್ಕ ಸಂಸಾರ. ಅವರೂ ಸೇರಿ ಮನೆಯಲ್ಲಿದ್ದವರು ನಾಲ್ಕು ಮಂದಿ. ವಯಸ್ಸಾದ ಅತ್ತೆ, ಹೆಂಡತಿ, ಒಬ್ಬಳೇ ಮಗಳು ಇವರೇ ಅವರ ಪರಿವಾರ. ಅವರಿಗೆ ಗಂಡು ಮಕ್ಕಳಿರಲಿಲ್ಲ. ವಯಸ್ಸಾಗಿದ್ದುದರಿಂದ ತಿರುಗಿ ಮಕ್ಕಳನ್ನು ಪಡೆಯುವ ಆಸೆ ಇರಲಿಲ್ಲ. ಈ ಕೊರಗು ಅವರನ್ನು ಕೊರೆಯುತಿತ್ತು. ಈ ನೋವನ್ನು ಅವರು ಪಕ್ಕದ ಮನೆಯ ಹುಡುಗನಲ್ಲಿ ಆತ್ಮೀಯತೆಯನ್ನು ತೋರಿಸಿ ಮರೆಯಲೆತ್ನಿಸುತಿದ್ದರು. ಆ ಪುಟ್ಟ ಪೋರ—ರಾಮುಡು—ಅವರನ್ನು ಬಹಳವಾಗಿ ಆಕರ್ಷಿಸಿದ್ದ. ಅವರೂ ಅವನನ್ನು ಹೆಚ್ಚಾಗಿ ಹಚ್ಚಿಕೊಂಡಿದ್ದರು. ಅವರು ರಾಮುಡುವನ್ನು ದತ್ತು ತೆಗೆದುಕೊಳ್ಳುವ ಹಂಚಿಕೆ ಹಾಕಿದರು. ಹೆಂಡತಿ–ಅತ್ತೆ ಈ ಆಲೋಚನೆಯನ್ನು ಪ್ರತಿಭಟಿಸಿದರು, ದತ್ತು ತೆಗೆದುಕೊಳ್ಳಲು ಅಡ್ಡಿಯಾಗಿ ನಿಂತರು.

2-4 1931ರಂದು ಅವರು ಮನೆಯಲ್ಲಿರಲಿಲ್ಲ. ಅದರ ಮರುದಿನವೂ ಊರಲ್ಲಿರಲಿಲ್ಲ. ಕೆಲಸದ ಮೇಲೆ ಬೇರೆ ಊರಿಗೆ ಹೋಗಿದ್ದರು. 4-1-31ರಂದು ಮಧ್ಯಾಹ್ನ ಮನೆಗೆ ಹಿಂತಿರುಗಿದರು. ಈ ಮಧ್ಯೆ ರಾಮುಡು ಕಾಣೆಯಾದ. 2-4-31ರಂದು ರಾಮುಡುವನ್ನು ನೋಡಿದವರಿದ್ದರು. ಅಂದು ಸಂಜೆ ಆರರ ವರೆಗೂ ಆತ ಮನೆಯ ಮುಂದಿನ ಬೀದಿಯಲ್ಲಿ ಆಡುತಿದ್ದ. ರಾಮುಡುವಿನ ತಾಯಿ–ತಂದೆ ವಿಹ್ವಲರಾದರು ಮಗನಿಗಾಗಿ ಶೋಧ ನಡೆಸಿದರು. ಊರೆಲ್ಲ ಸುತ್ತಾಡಿದರು. ಆದರೆ ರಾಮುಡು ಸಿಗಲಿಲ್ಲ. ಅನ್ಯ ಮಾರ್ಗ ಕಾಣದೆ. 3-4-31ರಂದು ಪೋಲಿಸರಿಗೆ ದೂರು ಕೊಟ್ಟರು. ತಂದೊಪ್ಪಿಸಿದವರಿಗೆ 50–30 ರೂಪಾಯಿಗಳ ಬಹುಮಾನ ಕೊಡುವುದಾಗಿ ಡಂಗುರ ಹೊಡೆಸಿದರು.

ಆದರೆ ಮಗುವಿನ ಪತ್ತೆಯಾಗಲಿಲ್ಲ. ತಾಯಿ–ತಂದೆ ವಿವಂಚನೆಗೊಳಗಾದರು. ಜ್ಯೋತಿಷಿಗಳ ಹತ್ತಿರಕ್ಕೆ ಜನ ಅಟ್ಟಿದರು. ಆ ಜ್ಯೋತಿಷಿ, ಗುಣಿಸಿ-ಭಾಗಿಸಿ, ‘ಮಗುವಿನ ಕೊಲೆಯಾಗಿದೆ. ಮನೆಯ ಉತ್ತರ ದಿಕ್ಕಿನಲ್ಲಿರುವ ಮನೆಯ ಹೆಂಗಸರು ಮಗುವನ್ನು ಕೊಂದಿರುತ್ತಾರೆ 4-4-31ರ ಸಂಜೆಯೊಳಗೆ ಹೆಣ ಸಿಗುತ್ತೆ’ ಎಂದು ನುಡಿದ. ಈ ವಾರ್ತೆಯಿಂದ ತಾಯಿ–ತಂದೆ ಭೂಮಿಗಿಳಿದು ಹೋದರು.

ಕೆಲಸದ ಮೇಲೆ ಹೋಗಿದ್ದ ಚಿನ್ನ ಕೊಂಡಯ್ಯ ಎಪ್ರಿಲ್ ನಾಲ್ಕರಂದು ಮನೆಗೆ ಬಂದರು. ಊಟಕ್ಕೆ ಕುಳಿತ ಅವರಿಗೆ, ಏನೋ ದುರ್ಗಂಧ ಬರುತ್ತಿರುವಂತೆ ಅನಿಸಿತು. ಹೆಣ್ಣು ಮಕ್ಕಳನ್ನು ಏನೆಂದು ವಿಚಾರಿಸಿದರು. ಹೆಗ್ಗಣ ಸತ್ತು ಬಿದ್ದಿರಬೇಕು ಎನ್ನುವ ಹಾರಿಕೆಯ ಉತ್ತರ ಬಂತು. ವಿಷಯವನ್ನು ಅವರು ಕೆದಕಲಿಲ್ಲ. ಅಲ್ಲಿಗೇ ಬಿಟ್ಟು, ಬಿಟ್ಟು ಊಟ ಮುಗಿಸಿ, ಅಂಗಡಿಗೆ ಹೊರಟರು.

ಹೆಂಗಸರಿಗೆ ಎಲ್ಲಿಲ್ಲದ ಕಸಿವಿಸಿ; ಆತಂಕ. ಅನ್ಯರ ಕಣ್ಣಿಗೆ ಬೀಳುವ ಮೊದಲು ಅವರು ಮಗುವಿನ ಶವವನ್ನು ಮನೆಯೊಳಗಿಂದ ಸಾಗಿಸುವುದು ಅಗತ್ಯವಿತ್ತು. ಹಿಂದು-ಮುಂದು ಯೋಚಿಸದೆ ಅವರು ಕಾರ್ಯೋನ್ಮುಖರಾದರು-ಕೊಲೆ ಗೈಯುವುದು ಸುಲಭ. ಆದರೆ ಶವವನ್ನು ಯಾರಿಗೂ ತಿಳಿಯದಂತೆ ಸಾಗಹಾಕುವುದು ಪ್ರಯಾಸದ ಕೆಲಸ.—ಅದೂ ಜನ ನಿಬಿಡ ಊರಿನಲ್ಲಿ. ವೆಂಕಟಮ್ಮ ಮತ್ತು ಅವರ ಮಗಳು, ಶವವನ್ನು ಅಡಗಿಸಿಟ್ಟ ಸ್ಥಳದಿಂದ ಹೊರ ತೆಗೆದರು. ಮಹಡಿಯ ಮೇಲಕ್ಕೆ ಮಂಕ್ರಿಯಲ್ಲಿ ಹೊತ್ತು ತಂದರು. ಅಲ್ಲಿಂದ ಅದನ್ನು ಪಕ್ಕದ ಮನೆಯ ಮಾಡಿನ ಮೇಲೆ ಎಸೆದು ಬಿಡುವ ಹಂಚಿಕೆ ಹಾಕಿದರು. ಅವರ ದುರದೃಷ್ಟ— ಎಲ್ಲ ಏರು—ಪೇರಾಯಿತು. ರಸ್ತೆಯಲ್ಲಿ ಹೋಗುತಿದ್ದವನ ದೃಷ್ಟಿಗೆ ಅವರಿಬ್ಬರು ಸಿಕ್ಕು ಬಿದ್ದರು. ಆತ ಅದೇ ಊರಿನವ ರಾಮುಡು ನಾಪತ್ತೆಯಾದ ವಿಚಾರ ಅವನಿಗೆ ತಿಳಿದಿತ್ತು. ಜ್ಯೋತಿಷಿಯ ಮಾತೂ ಅವನ ಕಿವಿಗೆ ಬಿದ್ದಿತ್ತು. ಆತ ಹೆಂಗಸರು ಏನು ಮಾಡುತ್ತಾ ಎಂಬುದನ್ನು ನೋಡುತ್ತ ನಿಂತ. ವೆಂಕಟಮ್ಮ ಬುಟ್ಟಿಯಲ್ಲಿ ತುಂಬಿಟ್ಟ ಹೆಣವನ್ನು ಪಕ್ಕದ ಮನೆಯ ಮಾಡಿನ ಮೇಲಕ್ಕೆ, ಬುಟ್ಟಿ ಸಹಿತ ..ಸೆದಳು ತಾಯಿಯ ಕೆಲಸ ಕಾಣಿಸದಿರಲಿ ಎಂದು, ಬಟ್ಟೆಯ ಪರದೆಯೊಂದನ್ನು ಅಡ್ಡವಾಗಿ ಹಿಡಿದಿದ್ದಳು. ಇದನ್ನೆಲ್ಲ ಹಾದಿಹೋಕ ರಸ್ತೆಯಿಂದಲೇ ನೋಡಿದ. ಬುಟ್ಟಿಯಲ್ಲಿ ಮಗುವಿನ ಕಾಲುಗಳು ಜೋಲಾಡುತಿದ್ದುದನ್ನೂ ಗಮನಿಸಿದ. ದೇಹ ಬಾಧೆ ತೀರಿಸಿ ಕೊಳ್ಳಲು ರಸ್ತೆಯ ಅಂಚಿನಲ್ಲಿ ಕುಳಿತಿದ್ದ ಇನ್ನೊಬ್ಬ ಇದನ್ನು ನೋಡಿದ.

ಅವರು ರಾಮುಡುವಿನ ತಾಯಿ ತಂದೆಯರಿಗೆ ವಿಚಾರ ತಿಳಿಸಿದರು. ಅವರೆಲ್ಲ ಒಟ್ಟಾಗಿಯೇ ಮಹಡಿಯ ಮೇಲಕ್ಕೆ ಹೋದರು. ರಾಮುಡುವಿನ ದೇಹ ಮಹಡಿಯ ಮೇಲೆ ಸಿಕ್ಕಿತು. ಆಗಲೇ ಅದು ಕೊಳೆಯಲಾರಂಭಿಸಿತ್ತು. ವರ್ತಮಾನ ಪೋಲಿಸರಿಗೆ ಹೋಯಿತು. ಠಾಣೆಯಿಂದ ದಫೇದಾರ ಸ್ಥಳಕ್ಕೆ ಬಂದ. ಮರಣೋತ್ತರ ಹೇಳಿಕೆಯನ್ನು ಬರೆದುಕೊಳ್ಳಲಾರಂಭಿಸಿದ. ಆತ ತಡಮಾಡಿದ್ದರೆ ಹೆಣ ಹದ್ದುಗಳ ವಶವಾಗುತ್ತಿತ್ತು. ಮಹಜರಿನ ಕೆಲಸ ಮುಗಿದೊಡನೆ ಶವವನ್ನು ವೈದ್ಯ ಪರೀಕ್ಷೆಗೆ ಆಸ್ಪತ್ರೆಗೆ ರವಾನಿಸಲಾಯಿತು. ಅಷ್ಟರಲ್ಲಿ ಪೋಲಿಸ್ ಇನ್ಸ್‌ಪೆಕ್ಟರ್ ಸ್ಥಳಕ್ಕೆ ಬಂದರು.

ಬಂದವರು ಚಿನ್ನ ಕೊಂಡಯ್ಯನವರ ಮನೆಯನ್ನು ಪ್ರವೇಶಿಸಿದರು. ಅಡಿಗೆ ಮನೆಯ ತುಂಬ ದುರ್ವಾಸನೆ ಬರುತ್ತಿತ್ತು. ಅಲ್ಲೊಂದು ಪುಟ್ಟ ತೊಟ್ಟಿ. ಅದರ ತುಂಬ ಮರಳು ತುಂಬಿತ್ತು. ತೊಟ್ಟಿಯಿಂದಲೂ ದುರ್ಗಂಧ ಎದ್ದು ಬರುತಿತ್ತು. ನೊಣಗಳು ತೊಟ್ಟಿಯನ್ನು ಮುತ್ತಿದ್ದುವು. ತೊಟ್ಟಿಯ ಪಕ್ಕದಲ್ಲೊಂದು ಹಳೆಯ ಸೀರೆ ಬಿದ್ದಿತ್ತು. ಸೀರೆ ವೆಂಕಟಮ್ಮನವರಿಗೆ ಸೇರಿದ್ದು. ನೊಣಗಳು ಸೀರೆಯ ಮೇಲೆ ಕುಳಿತಿದ್ದುವು. ಆ ಸೀರೆಯಿಂದಲೂ ದುರ್ಗಂಧವೆದ್ದು ಬರುತಿತ್ತು. ಮಹಡಿಯಲ್ಲಿ ಮೆಟ್ಟಲಲ್ಲಿ, ತೊಟ್ಟಿಯ ಪಕ್ಕದಲ್ಲಿ ಲಸಿಕೆ ಚೆಲ್ಲಿದ್ದುದು ಕಂಡುಬಂತು. ಸತ್ತ ಮಗುವಿನ ಬಾಯಿಯಿಂದ ಸುರಿದಿರಬೇಕು. ಎರಡಕ್ಕೆ ಎರಡು ಕೂಡಿಸಿದರೆ ನಾಲ್ಕಾಗುತ್ತೆ ಎಂಬುದನ್ನು ತಿಳಿಯದಷ್ಟು ಇನ್ಸ್‌ಪೆಕ್ಟರರು ದಡ್ಡರಿರಲಿಲ್ಲ. ಅವರಿಗೆ ಕೊಲೆಯ ವಿವರಗಳು ತಟ್ಟನೆ ಹೊಳೆದುವು.

ಸಂಶಯ ಸಹಜವಾಗಿ ತಾಯಿ–ಮಗಳ ಮೇಲೆ ಬಿತ್ತು. ಅವರು ವೆಂಕಟಮ್ಮನನ್ನೂ ಶ್ರೀಮತಿ ಕೊಂಡಯ್ಯನವರನ್ನೂ ಬಂಧಿಸಿದರು. ತನಿಖೆ ಬಿರುಸಿನಿಂದ ನಡೆಯಿತು. ಚಿನ್ನ ಕೊಂಡಯ್ಯ 2—4—31ರಂದ ಊರಲ್ಲಿರಲಿಲ್ಲ ಆದ್ದರಿಂದ ಕೊಲೆಯಲ್ಲಿ ಅವರ ಕೈವಾಡವಿರಲು ಸಾಧ್ಯವಿರಲಿಲ್ಲ. ಅವರನ್ನು ಪೋಲಿಸರು ಕೈ ಬಿಟ್ಟರು.

2—4—31ರಂದು ರಾಮುಡು ಅವರ ಮನೆಯ ಮುಂದಿನ ರಸ್ತೆಯಲ್ಲಿ ಆಡುತಿದ್ದ. ಹಿಂದೆ ಹಾಗೆ ಆಡುತಿದ್ದ ಮಗುವನ್ನು ಒಳಕ್ಕೆತ್ತಿ ತಂದು, ತಿಂಡಿ ಕೊಟ್ಟು ಆಡಿಸುವ ಪದ್ಧತಿಯಿತ್ತು. ತಿಂಡಿ ಕೊಡುವ ನೆಪದಲ್ಲಿ—ಯಾರೂ ಇಲ್ಲದ ಸಮಯ ಸಾಧಿಸಿ–ಮಗುವನ್ನು ವೆಂಕಟಮ್ಮ ಒಳಕ್ಕೆ ಎತ್ತಿಕೊಂಡು ಹೋದಳು. ಅನಂತರ ಮಗುವನ್ನು ನೀರಿನ ತೊಟ್ಟಿಯಲ್ಲಿ ಮುಣುಗಿಸಿದಳು. ಸತ್ತಿದ್ದ ಮಗುವನ್ನು ಮರಳಿನಲ್ಲಿ ಹೂತಿಟ್ಟಳು. ರಾಮುಡುವಿನ ಕೊಲೆಯಾದುದು ಹೀಗೆ.

ಹೆಣ ಸಿಕ್ಕಿದ್ದೇ ತಡ–ಚಿನ್ನ ಕೊಂಡಯ್ಯನವರ ಮನೆಯ ಮುಂದು ಜನ ಮುತ್ತಿಕೊಂಡರು. ಊರಿನ ಗಣ್ಯರಲ್ಲಿ ಒಬ್ಬರಾದ ಶ್ರೀ ಸುಬ್ಬಯ್ಯ ಚೆಟ್ಟಿಯಾರರು ಆ ಗುಂಪಿನಲ್ಲಿದ್ದರು. ಅವರೆದುರಿನಲ್ಲಿ ಕೊಂಡಯ್ಯನವರು ಸತ್ಯ ತಿಳಿಸುವಂತೆ ಪತ್ನಿಯನ್ನು ಒತ್ತಾಯಿಸಿದರು. ಆಕೆ ಅವರ ಮುಂದು ಒಂದು ಕತೆಯನ್ನೇ ಹೊಸೆದಳು. ಆಕೆ ಆ ಹೇಳಿಕೆಯಲ್ಲಿ ಕೃತ್ಯದ ಹೊಣೆಯನ್ನೆಲ್ಲ ತಾಯಿಯ ಹೆಗಲ ಮೇಲೆ ಹೊರಿಸಿದಳು. ಅವಳ ಹೇಳಿಕೆಯ ಪ್ರಕಾರ ಮಗುವನ್ನು ಕದ್ದು ತಂದವಳು, ತೊಟ್ಟಿಯಲ್ಲಿ ಮುಣುಗಿಸಿದವಳು, ಮರಳಿನಲ್ಲಿ ಬಚ್ಚಿಟ್ಟವಳು ತಾಯಿ ವೆಂಕಟಮ್ಮ.

ಅದರ ವಿವರ ಇಂತಿದೆ

‘ನೀರಿನ ತೊಟ್ಟಿಯಲ್ಲಿ ಏನಿದೆ ಎಂದು ಅಮ್ಮನನ್ನು ಪ್ರಶ್ನಿಸಿದೆ. ಅದರಲ್ಲಿ ರಾಮುಡುವನ್ನು ಮುಣುಗಿಸಿರುವೆನೆಂದು ಉತ್ತರಿಸಿದಳು. ಗುಲ್ಲೆಬ್ಬಿಸದಿರುವಂತೆ ಸಂಜ್ಞೆ ಮಾಡಿದಳು. ಏಕೆಂದರೂ ‘ನಾನು ನಿನ್ನ ತಾಯಿ. ನಿನ್ನ ಹಿತಕ್ಕಾಗಿಯೇ ಹೀಗೆ ಮಾಡಿದೆ’ ಅಂದಳು.

‘ರಾಮುಡುವಿನ ತಂದೆ–ತಾಯಿ ಅವನಿಗಾಗಿ ಚಡಪಡಿಸುತಿದ್ದರು. ಅವನ ಶೋಧದಲ್ಲಿ ತೊಡಗಿದ್ದರು. ರಾಮುಡುವನ್ನು ಹುಡುಕಲು ನಾನೂ ಅವರನ್ನು ಕೂಡಿಕೊಂಡೆ. ಅವರ ಕಣ್ಣು ತಪ್ಪಿಸಿ ಪುನಃ ಒಳಕ್ಕೆ ಹೋದೆ ಆಗ ರಾಮುಡುವಿನ ದೇಹವನ್ನು ಅಮ್ಮ ತೊಟ್ಟಿಯಿಂದ ಹೊರತೆಗೆದು, ಒಂದು ಕಟ್ಟೆಯ ಮೇಲಿಡುತ್ತಿದ್ದಳು. ಹಾಗೆ ಇಡುತ್ತಿರುವುದನ್ನು ನಾನು ನೋಡಿದೆ. ‘ನಿನಗೇನು ಕೆಲಸ’ ಎಂದು ಅಮ್ಮ ಗದರಿಸಿದಳು. ಹೊರಹೋಗುವಂತೆ ಸೂಚಿಸಿದಳು. ಒಳಗಿರುವುದರಿಂದ ಅನುಮಾನ ಬರುತ್ತದೆ ಎಂದು ಹೇಳಿದಳು.

‘ವಿಧಿಯಿಲ್ಲದೆ ನಾನು ಮುಂಬಾಗಿಲಿಗೆ ಬಂದೆ. ಬಹಳ ಹೊತ್ತು ಹೊರಗಿರುವುದು ನನ್ನಿಂದ ಆಗಲಿಲ್ಲ. ನಾನು ಪುನಃ ಒಳಮನೆಗೆ ಸುಳಿದೆ. ಅಷ್ಟರಲ್ಲಿ ಅಮ್ಮ ತೊಟ್ಟಿಯ ಪಕ್ಕದ ಮರಳನ್ನು ಬಗಿದು ಒಂದು ಗುಂಡಿ ಸಿದ್ಧಪಡಿಸಿದ್ದಳು. ಆ ಗುಂಡಿಯಲ್ಲಿ ರಾಮುಡುವಿನ ದೇಹವನ್ನು ಅಮ್ಮ ಎತ್ತಿ ಇಟ್ಟಳು ಮರಳು ಮುಚ್ಚಿದಳು ನನ್ನ ಕಡೆ ತಿರುಗಿ “ಈಗ ಎಲ್ಲ ಸರಿ ಹೋಯಿತು’’ ಎಂದಳು.

ಇದು ಹೇಳಿಕೆಯ ತಿರುಳು.

ಈ ತಪ್ಪೊಪ್ಪಿಗೆಯ ಹೇಳಿಕೆಯಿಂದ ಕೊಲೆಯ ವಿವರ ಹೊರ ಬಂತು.

ತಾಯಿ-ಮಗಳ ಮೇಲೆ ಕೊಲೆಯ ಆಪಾದನೆ ಹೊರಿಸಿ ವಿಚಾರಣೆಗೆ ಗುರಿಪಡಿಸಿ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
132 ಶಾಖೆಗಳಿಂದ ಹಬ್ಬಿರುವ **“ವಿಜಯಾ ಬ್ಯಾಂಕ್”**ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¾% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
“ಜೀವನ–ನಿಧಿ”ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, **ಬೆಂಗಳೂರು–1.**

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 44

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦–೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಕನ್ನಡದ ಎರಡು ಅಮರಾತ್ಮಗಳು

ಒಂದೇ ವಾರದಲ್ಲಿ ಎರಡು ಕನ್ನಡ ಜೀವಗಳು ಅಮರವಾಗಿ ಹೋದುದು ಕನ್ನಡಿಗರ ದುರುದೃಷ್ಟ. ಹುಯಿಲಗೋಳಿ ನಾರಾಯಣ ರಾಯರು ವಯೋಮಾನದ ದೃಷ್ಟಿಯಲ್ಲಿ ಹಿರಿಯರು. ಅ. ನ. ಕೃಷ್ಣರಾಯರು ಇವರಿಗಿಂತ ಎಷ್ಟೋ ಕಿರಿಯರು. ಒಬ್ಬರು 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಎಂಬ ಕವಿತೆ ರಚಿಸಿ ಅದನ್ನು ಹಾಡಿ ಕನ್ನಡಿಗರಲ್ಲಿ ಭಾವೈಕ್ಯ ಮೂಡಿಸುವಲ್ಲಿ ಸಶಕ್ತರಾದರೆ, ಇನ್ನೊಬ್ಬರು ಕನ್ನಡದ ನೆಲವನ್ನು ಮೆಟ್ಟಿ ಸುತ್ತಿ ಸುಳಿದಾಡಿ ಕನ್ನಡಿಗರಲ್ಲಿ ಸಾಧನಾ ಐಕ್ಯವನ್ನು ಸಾಧಿಸುವಲ್ಲೀ ಹೆಣಗಾಡಿದವರು. ಕನ್ನಡ ನಾಡಿಗೆ ಕನ್ನಡ ಜನರಿಗೆ ಈ ಇರ್ವರೂ ಸಲ್ಲಿಸಿದ ಸೇವೆ ಪ್ರಶಂಸಾರ್ಹವಾದದ್ದು; ಈ ಮಹಾಜೀವಿಗಳ ಸ್ಮರಣೆಯೇ ಉತ್ಸಾಹ–ಸ್ಫೂರ್ತಿವರ್ಧಕವಾದದ್ದು; ಕನ್ನಡಿಗರನ್ನು ಬಡಿದೆಬ್ಬಿಸಲು ಸಮರ್ಥವಾದದ್ದು.

ನಾರಾಯಣರಾಯರು ವೃತ್ತಿಯಲ್ಲಿ ವಕೀಲರಾಗಿದ್ದರೂ ಅವರ ಕನ್ನಡ ಪ್ರೇಮ ಕಾವೇರಿಯಂತೆ ಮಂಜುಳವಾದದ್ದು. ಕಾಂಗ್ರೆಸ್ ಅಧಿವೇಶನವೊಂದರಲ್ಲಿ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡ'ನ್ನು ರಚಿಸಿ ಹಾಡಿ ಕನ್ನಡಿಗರಿಗೆ ತಮ್ಮ ನೈಜ ಸತ್ವವನ್ನೂ ಭಾರತೀಯರಿಗೆ ಕನ್ನಡ ಪರಂಪರೆಯ ಭವ್ಯತೆಯನ್ನೂ ಮನವರಿಕೆ ಮಾಡಿಕೊಟ್ಟವರು. ಕನ್ನಡದ ಕುಲ ಪುರೋಹಿತ ಆಲೂರು ವೆಂಕಟರಾಯರ ಸಿಕಟಾನುವರ್ತಿಯಾಗಿದ್ದ ಶ್ರೀ ಹುಯಿಲಗೋಳರು ಕನ್ನಡನಾಡಿನ ಹುಯಿಲನ್ನು ಕೇಳಿ ಗೋಳಿಟ್ಟವರು. ಮರಾಠಿ ನಾಟಕಗಳ ದರ್ಬಾರಿನ ದಬ್ಬಾಳಿಕೆಯಿಂದ ಕನ್ನಡ ನಾಟ್ಯರಂಗವನ್ನು ಬದುಕಿಸಿದ ಕೀರ್ತಿ ರಾಯರದು. ಪೌರಾಣಿಕ ನಾಟಕಗಳಿಂದಲೇ ತೃಪ್ತಿ ಹೊಂದುವುದು ಪರಿಪಾಠವಾಗಿ ಬಂದ ಕನ್ನಡಿಗರಿಗೆ ಸಾಮಾಜಿಕ ನಾಟಕಗಳ ಒಲವು ಮೂಡಿಸಿದ ಸಾಮಯಿಕ ಪ್ರಜ್ಞಾವಂತರು ಹುಯಿಲಗೋಳರು. ಕನ್ನಡ ನಾಡು–ನುಡಿಗಳಲ್ಲಿ ಅವರಿಗೆ ಅತೀವ ಆಸಕ್ತಿ; ಕನ್ನಡಿಗರ ಹಿತಕ್ಕಾಗಿ ಅವರು ಹೂಡಿದ ಹೋರಾಟ ಅತ್ಯಂತ ಪ್ರಾಮಾಣಿಕ; ಕಲಕಲನಾದಮೊದನೆ ಕರ್ನಾಟಕ ಸಂಗೀತವನ್ನು ಹಾದುತ್ತ ಹರಿಯುವ ಕಾವೇರಿಯಂತೆ ಅವರು ಸಾಹಿತ್ಯ ಹಾಗೂ ಲಲಿತ ಕಲೆಗಳಿಗೆ ಸಲ್ಲಿಸಿದ ಸೇವೆ ಉಪಯುಕ್ತ. ಅವರು ತನುಮನ ವಾಕ್ಕುಗಳಿಂದ ಪಕ್ಕಾ ಕನ್ನಡಿಗರು. ನಾಟಕಗಳಲ್ಲೂ ಬಣ್ಣ ಬಳಿದುಕೊಂಡು ಉತ್ತಮ ನಾಟಕಗಳ ರಸದೌತಣಗಳನ್ನು ಊಡಿದ್ದೂ ಉಂಟು. ವನಸುಮದಂತೆ, ಪ್ರಚಾರ ಪ್ರಶಸ್ತಿಗಳ ಅಬ್ಬರತಾಳ ಬಯಸದ ಹುಯಿಲಗೋಳರು ನಿಜಕ್ಕೂ ಅಮೃತಾತ್ಮರು; ಅವರ ಹೆಸರಿಗಿಂತ ಅವರ 'ಉದಯವಾಗಲಿ' ಗೀತೆ ಕನ್ನಡಿಗರಲ್ಲಿ ಜ್ಞಾನೋದಯ ಮೂಡಿದೆ; ಮೂಡುತ್ತಲೇ ಇದೆ. ಕಳೆದ ನಲ್ವತ್ತು ವರ್ಷಗಳಿಂದಲೂ ಅಖಂಡವಾಗಿ ಜನಪ್ರಿಯವಾಗಿ ಉಳಿದಿದೆ. ಮುಂದೆಯೂ ಉಳಿಯುತ್ತದೆ.

ಅನಕೃ ಕನ್ನಡಾಂಬೆಯ ವರಪುತ್ರ. ಆಕೆಯ ಆರಾಧನೆ–ಉಪಾಸನೆಯಲ್ಲೇ ತನ್ನ ಆಯುಷ್ಯವನ್ನು ತೇದು ಕನ್ನಡಿಗರ ಮನೆಮನೆಯಲ್ಲೂ ಮನ ಮನದಲ್ಲೂ ನೆಲೆನಿಂತ ಹಿರಿಯ ವ್ಯಕ್ತಿ ಅನಕೃ.ಅನಕೃ ಏನೇನು ಆಗಿದ್ದಾರೆಂದು ಗಣಿಸುವುದೇ ಕಷ್ಟ. ಭಗವಾನ್ ಶ್ರೀಕೃಷ್ಣನ ಬಗ್ಗೆ ರುದ್ರಭಟ್ಟ ಬರೆದ ಪದವೊಂದು ನೆನಪಿಗೆ ಬರುತ್ತದೆ.'ಪ್ರತಿಮಲ್ಲರ್ ಗಿರಿಕಲ್ಪನೆಂದು, ಇತರರೆಲ್ಲರ್ ಬಾಲನೆಂದು ಅಂಗನಾತತಿ ಪುಷ್ಪಾಯುಧನೆಂದು 'ಗೋಪ ನಿವ ಹರ ಸಾಮೂಸ್ಯನೆಂದು' ಕಂಸಂ ಲಯಕಾಲನೆಂದು, ದಿವಿಜರ್ ವಿಶ್ವಾತ್ಮನೆಂದು........'

ಇದೇ ಬಗೆಯ ಉಲ್ಲೇಖ ಅನಕೃವಿಗೂ ಸಲ್ಲುತ್ತದೆ. ಕನ್ನಡದಲ್ಲಿ ಕವಿಯಾಗಿ ಬದುಕುವುದು ಸಾಧ್ಯವಿಲ್ಲವೆಂಬ ಬಲ್ಲುಲಿಯನ್ನು ಸುಳ್ಳು ಮಾಡಿ ತೋರಿಸಿದ ಅನಕೃ ಕನ್ನಡ ಗದ್ಯಕ್ಕೆ ಅತ್ಯಪೂರ್ವ ಪ್ರಾಣ ಪ್ರತಿಷ್ಠೆ ಮಾಡಿದ್ದಾರೆ ನಾಟಕ ವಿಮರ್ಶೆ– ಕಾದಂಬರಿ– ಕತೆ– ಸಂಶೋಧನೆಗಳೆಂದು ಸುಮಾರು ಇನ್ನೂರ ಐವತ್ತು ಕೃತಿ ರತ್ನಗಳನ್ನು ತಮ್ಮ ಪ್ರಭಾವಶಾಲಿ ಲೆಕ್ಕಣಿಕೆಯಿಂದ ಸೃಷ್ಟಿಸಿ ಕನ್ನಡಾಂಬೆಯ ಕೊರಳಿಗೆ ಹಾರವರ್ಪಿಸಿದ ಅದ್ವಿತೀಯ ಪ್ರತಿಭಾ ಸಂಪನ್ನರು ಇವರು.ಇಡಿಯ ಕನ್ನಡ ನಾಡನ್ನು ಸುತ್ತಾಡಿ ಕನ್ನಡಿಗರ ಸಾಧನಾ ಐಕ್ಯಕ್ಕೆ ದುಡಿದ ಧೀಮಂತರಿವರು. ಕನ್ನಡ ಕಲಿಯುವುದು, ಕನ್ನಡ ಓದುವುದು, ಕನ್ನಡವಾಡುವುದುಅನಾಗರಿಕತೆಯೆಂಬ ಕಲಂಕಿತ ಭಾವನೆ ಸುಶಿಕ್ಷಿತ ಕನ್ನಡಿಗರಲ್ಲಿ ಹೊಗೆಯೊಡುತಿದ್ದಾಗ, ಅದನ್ನು ದೂರ ಮಾಡಿ ಕನ್ನಡದ ಕಸುವನ್ನೆತ್ತಿ ಪ್ರದರ್ಶಿಸಿದ ಕೇಸರಿ ಇವರು. ಅವರ ನಾಲಗೆ–ಕೈಯೆರಡೂ ಎರಡು ಬ್ರಹ್ಮಾಸ್ತ್ರಗಳು. ಆಡತೊಡಗಿದರೆ, ನಿರರ್ಗಳವಾದ ವಾಕ್ ಪ್ರವಾಹ ನಿರ್ಜರಿಯಂತೆ ಹರಿಯುತ್ತದೆ; ಬರೆಯತೊಡಗಿದರೆ, ಸಾಗರದ ಉತ್ತುಂಗತರಂಗ ಮಾಲೆಗಳಂತೆ ಲೇಖನಿ ಮುಂದೆ ಮುಂದೆ ಎತ್ತರೆತ್ತರಕ್ಕೆ ಏರತೊಡಗುತ್ತದೆ; ಪ್ರಗತಿಶೀಲ ಮನೋಭಾವ ತಲೆಯೆತ್ತುತ್ತದೆ. ಅವರು ಹಲವರಿಗೆ ಮಾರ್ಗದರ್ಶಕರು; ಕಾದಂಬರಿ—ಗದ್ಯದಲ್ಲಿ ತನ್ನದೇ ಯುಗ ನಿರ್ಮಿಸಿಕೊಂಡ ಮಹಾಪುರುಷರು. ಲಲಿತ ಕಲೆಗಳ ಕಡೆಗೂ ಆಸಕ್ತರಾಗಿದ್ದ ಇವರು ಮುಟ್ಟದ ರಂಗವಿಲ್ಲವೆನ್ನ ಬಹುದು. ಇವರ ಸಾಹಿತ್ಯ ಪ್ರಣಾಳಿಯ ಬಗ್ಗೆ ಭಿನ್ನಮತವಿದ್ದರೂ ಕಾದಂಬರಿ ಕ್ಷೇತ್ರದಲ್ಲಿನ ಅವರ ಪ್ರಭುತ್ವ ಅಕ್ಷುಣ್ಣವಾಗಿಯೇ ಉಳಿದಿದೆ. ಕನ್ನಡ ಸಾಹಿತ್ಯ ಪರಿಷತ್ತು— ವಿವಿಧೆಡೆಯ ಕನ್ನಡ ಸಂಘಗಳಿಗೆ ಜೀವದಂತಿದ್ದ ಅನಕೃ ಉಡುಪಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರಾಗಿ ಹಲವು ವಿರೋಧಗಳ ನಡುವೆಯೂ ಆಯ್ಕೆಗೊಂಡರು. ಅನಕೃವೊಂದು ವ್ಯಕ್ತಿಯಲ್ಲ; ಅತ್ಯಪೂರ್ವಶಕ್ತಿ. ಆ ಶಕ್ತಿಯಿಂದು ನಮ್ಮ ಕಣ್ಣುಗಳಿಂದ ಅಗಲಿಹೋಯಿತು. ಆದರೆ, ಅವ್ಯಕ್ತರೂಪದಲ್ಲಿ ಸದಾ ನಮ್ಮ ಸುತ್ತ ಸುಳಿದಾಡುತ್ತದೆ.

ಅಗಲಿದ ಇರ್ವರು ಕನ್ನಡದ ಕಡುಗಲಿಗಳ ಆತ್ಮ ಚಿರಶಾಂತಿಯನ್ನು ಹೊಂದಲೆಂದು ಆ ಅಮರಾತ್ಮಗಳ ಮುಂದೆ 'ನವಯುಗ' ಸದಾ ತಲೆವಾಗುತ್ತದೆ.

ಅಡ್ಡಗೋಡೆ ಕಟ್ಟುತ್ತಾರೆ!

ಅಸ್ಸಾಮದ ಚಾಲಿಹಾ ಮತ್ತು ರಾಜಸ್ಥಾನದ ಸುಖಾಡಿಯಾರು ಮುಖ್ಯಮಂತ್ರಿತನವನ್ನು ನಿರಾಂತಕವಾಗಿ ಅನುಭವಿಸಿ ಈಗ ನಿವೃತ್ತರಾದುದು ಅನಾರೋಗ್ಯ- ಅಶಕ್ತಿಯ ನೆಪದಿಂದ ಆದರೆ, ಇದಕ್ಕೆ ನಿಜವಾದ ಕಾರಣ ಬೇರೆಯೇ ಇರಬೇಕೆನಿಸುತ್ತದೆ. ಇವರಿಬ್ಬರ ಉತ್ತರಾಧಿಕಾರಿಗಳ ಆಯ್ಕೆಯು ಸುಲಭ– ಸರಳವಾಗಿ ನಡೆಯಿತೆಂದು ತೋರಿಬಂದರೂ ಒಳಗಿನ ರಹಸ್ಯ ಬೇರೆಯೇ ಇರದಿರಲಾರದೆನಿಸುತ್ತದೆ. ಮುಂದಿನ ಜನವರಿಯ ಸುಮಾರಿಗೆ ಸಾರ್ವತ್ರಿಕ ಚುನಾವಣೆ ನಡೆಯಲಿರುವಾಗ ಈ ಹಳೆಯ ಹುಲಿಗಳು ಅಧಿಕಾರ ನಿವೃತ್ತರಾದುದು ಅರ್ಥವತ್ತಾಗಿಲ್ಲವೆಂದು ಹೇಳುವುದು ಮೂರ್ಖತನ. ಇಂಡಿಕೇಟಿನ ಒಳಗಡೆ ನಾ ಕಷ್ಟ ವಿವಾದಗಳೂ ಭಿನ್ನಾಭಿಪ್ರಾಯಗಳೂ ಅಧಿಕಾರಕ್ಕಾಗಿ ಪರದಾಟಗಳೂ ಮಿತಿಮೀರಿವೆಯೆಂಬುದಕ್ಕೆ ಇದೊಂದು ಉದಾಹರಣೆ ಕರ್ನಾಟಕದ ಇಂಡಿಕೇಟಿಗರ ಒಳ ಜಗಳವನ್ನು ನಿವಾರಿಸುವಲ್ಲಿ ಕೇಂದ್ರ ನಾಯಕರೂ ಅಶಕ್ತರಾಗಿದ್ದಾರೆ. ರಾಜಸ್ಥಾನದಲ್ಲಿ ಬರ್ಕತುಲ್ಲಾಖಾನರು ಮುಖ್ಯಮಂತ್ರಿಯಾಗಿ ಆಯ್ಕೆಯಾದರೂ ಅವರು ಸುಖಾಡಿಯಾರ ಅಭ್ಯರ್ಥಿಯೆಂಬುದು ನಿಸ್ಸಂಶಯ. ಮಾವನಲ್ಲ. ಹೆಂಡತಿ ತಂದೆಯೆಂಬಂತೆ ತಾನು ದೂರವಿದ್ದೇ ರಾಜಸ್ಥಾನವನ್ನು ಆಳುವ ಇರಾದೆಯನ್ನು ಸುಖಾಡಿಯಾ ಬಿಟ್ಟು ಕೊಟ್ಟಿಲ್ಲವೆಂದೇ ಇದರ ಅರ್ಥ. ರಾಜ್ಯ ರಾಜ್ಯಗಳಲ್ಲಿ ಅಧಿಕಾರಕ್ಕಾಗಿ ನಡೆಯ

(ಆರನೇ ಪುಟ ನೋಡಿರಿ)

ಹಾರ್ದಿಕ ಕೃತಜ್ಞತಾ ಸಮರ್ಪಣೆ

ಇದೇ ತಾ. 7–7–1971ರಂದು ಮಂಗಳೂರು ಪುರಭವನದಲ್ಲಿ ನಮ್ಮ ಪುತ್ರ ಚಿ| ಸುಧಾಕರನಿಗೆ ದಿ| ಕಡೆಂಜ ಸುಬ್ಬಯ ಶೇಣವರ ಪುತ್ರಿ ಕುಮಾರಿ ಪ್ರೇಮಲತಾಳೊಂದಿಗೆ ಜರಗಿದ ವಿವಾಹ ಸಮಾರಂಭಕ್ಕೆ ಸಾದರ ಪೂರ್ವಕವಾಗಿ ಊರು ಪರವೂರುಗಳಿಂದ ದಯವಿಟ್ಟು ಆಗಮಿಸಿ ಸಮಾರಂಭವನ್ನು ಚಂದಗಾಣಿಸಿ ವಧೂವರರನ್ನು ಆಶೀರ್ವದಿಸಿದ ಯಾವತ್ತೂ ಬಂಧು ಮಿತ್ರರಿಗೂ ಸಮಾರಂಭದ ಯಶಸ್ವಿಗಾಗಿ ಸರ್ವರೀತಿಯಿಂದ ಸಹಕರಿಸಿ ನೆರವಾದ ಸಮಸ್ತರಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ನವನಿಕೇತನ
ಮಂಗಳೂರು-7

ಶ್ರೀಮತಿ ಮತ್ತು ಶ್ರೀ ಕೆ. ಕೆ. ಶೆಟ್ಟಿ, ಎಂ. ಪಿ.

ಮಣೂರು

ಧಾರಣೆಯೇಕೆ ಏರಿಕೆಯಲ್ಲಿದೆ?

ಕರ್ನಾಟಕದ ಇಂಡಿಕೇಟ್ ಅಧ್ವರ್ಯುಗಳನ್ನು ಕೇಂದ್ರದ ನಾಯಕರು ಬರಮಾಡಿಕೊಂಡರು. ಏಕೆ ಎಂದು ಬೇರೆ ಕೇಳಬೇಕಾಗಿಲ್ಲ- ಪಕ್ಷದಲ್ಲಿನ ಭಿನ್ನಾಭಿಪ್ರಾಯಗಳನ್ನು ಹೊಡೆದೋಡಿಸಲೆಂಬುದು ಹಗಲಿನಷ್ಟು ಸ್ಪಷ್ಟ. ಹತ್ತು ದಿನಗಳ ಕಾಲ ಈ ಸಂಬಂಧದಲ್ಲಿ ಮಾತುಕತೆ ನಡೆಯಿತು. ಹತ್ತಾರು ರಾಜ್ಯ- ಕೇಂದ್ರ ನಾಯಕರು ಇದರಲ್ಲಿ ಭಾಗವಹಿಸಿದರು. ಆದರೆ, ಮಾತುಕತೆ ಮತ್ತಷ್ಟು ವಿವಾದಗಳಿಗೆ ಕಾರಣವಾಯಿತೇ ಹೊರತು ಪರಿಹಾರ ಪ್ರೇರಕವಾಗಲಿಲ್ಲ.

ದೇವರಾಜ ಅರಸರು ಬೇಡವೆಂದು ಕೆಂಗಲ್, ಸಿದ್ಧವೀರಪ್ಪರು. ಕೆಂಗಲ್, ಸಿದ್ಧವೀರಪ್ಪರಲ್ಲಿ ಯಾರೂ ಆಗದೆಂದು ದೇವರಾಜರು,ಎಂ.ವಿ.ಕೃಷ್ಣಪ್ಪನವರು ಕೂಡದೆಂದು ಎಲ್ಲರೂ.... ಹೀಗೆ ಸರ್ವ ಸಮ್ಮತಿಯ ಅಭ್ಯರ್ಥಿ ಇನ್ನೂ ನಾಪತ್ತೆ. ಮುಖ್ಯಮಂತ್ರಿಯಾಗುವ ಸದವಕಾಶದಿಂದ ವಂಚಿತರಾದ ಸಿದ್ಧ ವೀರಪ್ಪನವರು ದೇವರಾಜರನ್ನು ತರಾಟೆಗೆ ತೆಗೆದುಕೊಳ್ಳದಿರುತ್ತಾರೆಯೆ? ಶಠಸ್ಯ ಪ್ರತಿ ಶಾಠ್ಯಂ- ಇದು ಹಿಂದಿನಿಂದಲೂ ಕರ್ನಾಟಕದ ರಾಜ್ಯ ನೀತಿ. ಪ್ರಾದೇಶಿಕ ಕಾಂಗ್ರೆಸ್ಸಿನ ಕಾರ್ಯ ನಿರ್ವಾಹಕ ಪದವಿಗಿಂತಲೂ ಚುನಾವಣೆಯ ಹುರಿಯಾಳುಗಳನ್ನು ಆರಿಸುವತ್ತ ಮುಖ್ಯ ಗಮನ. ತಂತಮ್ಮ ಪಂಗಡಗಳೇ ಗೆಲ್ಲಬೇಕು; ಆದಕ್ಕಾಗಿ ತಮ್ಮ ಗುಂಪಿನವರಿಗೇ ಟಿಕೇಟು ದೊರೆಯಬೇಕು; ಅದು ಸಿದ್ಧಿಸಿದರೆ ಮಾತ್ರ ತಾವು ಮುಖ್ಯಮಂತ್ರಿಯಾಗುವ ಅವಕಾಶ ಬಂದೀತು. ಇದಕ್ಕೆಂದೇ ಈಗಿಂದೀಗಲೇ ಕೇಶಾಕೇಶಿ ಪ್ರಯತ್ನ.

ಪುತ್ತೂರು II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 60/71

ಯು. ವೆಂಕಟ್ರಮಣಯ್ಯ ಮತ್ತು ಇನ್ನೊಬ್ಬರು
—ವಾದಿಯರು.

Vs.

ಜೋನ್ ಲೂಯಿಸ್ ಮತ್ತು ಇತರರು–
—ಪ್ರತಿವಾದಿಯರು.

ನೋಟೀಸು

ಸುಳ್ಯ ತಾಲೂಕು ಸುಳ್ಯ ಕಸಬಾ ಗ್ರಾಮದ ನಡುಬೈಲಿನಲ್ಲಿ ವಾಸವಾಗಿರುವ ರೋಮನ್ ಕೆಥೋಲಿಕ್ ಜಾತಿಯ, ದಿವಂಗತ ಲೂಯಿಸರ ಮಗ 1ನೇ ಜೋನ್ ಲೂಯಿಸ್ ಮತ್ತು ಅವರ ಮಗ ಸದ್ರಿ ನಡುಬೈಲಿನಲ್ಲೇ ವಾಸವಾಗಿರುವ 2ನೇ ಪಿಯೋ ಲೂಯಿಸರಿಗೆ ತಿಳಿಸುವುದೇನೆಂದರೆ–

ನಿಮ್ಮ ಮೇಲೆ ಯು. ವೆಂಕಟ್ರಮಣಯ್ಯ ಮತ್ತು ಅವರ ಹೆಂಡತಿ ರಾಧ ಎಂಬವರು ಮೇಲೆ ಕಾಣಿಸಿದ ಕೋರ್ಟಿನಲ್ಲಿ ನೀವು ವಾಸವಾಗಿರುವ ಸುಳ್ಯ ಕಸಬದ ಮನೆ ಮತ್ತು ಉಪಕಟ್ಟಡಗಳ ಸ್ವಾಧೀನತೆಯ ಬಗ್ಗೆ ದಾವಾ ಹೂಡಿರುತ್ತಾರೆ. ಸದ್ರಿ ದಾವೆಯು ತಾ. 31–7–1971ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇದೆ. ನೀವು ಆ ದಿವಸ ಬೆಳಗ್ಗೆ 11 ಗಂಟೆಗೆ ಮೇಲೆ ಕಾಣಿಸಿದ ಕೋರ್ಟಿನಲ್ಲಿ ಸ್ವತಹ ಅಥವಾ ವಕೀಲರ ಮುಖಾಂತರ ಹಾಜರಾಗಿ ಆಕ್ಷೇಪಗಳು ಇರುವುದಾದರೆ ಹಾಜರು ಪಡಿಸಬೇಕು. ಇಲ್ಲವಾದರೆ ನಿಮ್ಮ ಗೈರು ಹಾಜರಿಯಲ್ಲಿ ದಾವೆಯು ಮುಂದುವರಿಯುವುದು. ತಿಳಿದಿರಲಿ.

(By order of Court)

A. P. Gowrishankar
Advocate for Plaintiffs.

Puttur, S. K. 7—7—71

ಸದ್ಯ ಒಮ್ಮತವಾಗಲಿಲ್ಲ. ಕೇಂದ್ರದ ನಿರ್ಧಾರ ಅನಿರ್ದಿಷ್ಟವಾಗಿ ಮುಂದಕ್ಕೆ ಹೋಯ್ತು. ರಾಜ್ಯ ಇಂಡಿಕೇಟಿನ ಇಕ್ಕಡೆ–ಮುಕ್ಕಡೆಯವರೆಲ್ಲರೂ ಕೇಂದ್ರದ ಮುಂದೆ ತಲೆಬಾಗುವ ಮಾತಾಡಿದರು. ಕೇಂದ್ರವೇನು ಮಾಡಬೇಕು? ತಂದೆಯನ್ನೂ ತಿನ್ನುತಿದ್ದ ಕರ್ನಾಟಕದ ರಾಜ್ಯಕೀಯ ಭಿನ್ನಮತಗಳನ್ನೂ ತಿನ್ನ ತೊಡಗಿದೆ. ಇನ್ನೂ ನಾಲ್ಕಾರು ತಿಂಗಳು ಬಿಡುವಿದೆ; ಅಷ್ಟರೊಳಗೆ ಏನಾದರೂ ಆದರೆ ಸರಿ ಒಂದು ವೇಳೆ ಇಲ್ಲಿ ಇಂಡಿಕೇಟು ಬಹುಮತ ಗಳಿಸದೆ ಹೋದರೂ ಆಕೆಯದೇನು ಸೂರೆ ಹೋಗಲಿದೆ?

ಕನ್ನಡದ ಹಿರಿಮೆಯಿರುವುದೇ ದ್ವಿಖಂಡವಾದದಲ್ಲಿ. ದ್ವೈತಮತ ಸ್ಥಾಪನೆ ಮೊದಲಾದುದು ಇಲ್ಲಿ ತಾನೇ? ಕನ್ನಡ ಮಾಧ್ಯಮ ಬೇಕೇಬೇಕು– ಬೇಡವೇ ಬೇಡ; ಕಾವೇರಿ ನೀರೆಲ್ಲ ನಮಗೇಬೇಕು–ಅಷ್ಟು ಸ್ವಾರ್ಥಿಗಳಾಗಬಾರದು- ಬೆಳಗಾವಿ ನಮ್ಮಲ್ಲೆ ಉಳಿಯಬೇಕು– ಮಹಾರಾಷ್ಟ್ರದಲ್ಲಿ ಸೇರಿದರೇನು, ಭಾರತ ಬಿಟ್ಟು ಹೋಗುವುದಿಲ್ಲ ತಾನೆ? ಹಿಂದೀ ಭಾಷೆ ರಾಷ್ಟ್ರೀಯ ಐಕ್ಯಸೂತ್ರ– ಅದು ದಾಸ್ಯದ ಸಂಕೋಲೆ, ಒಂದು ಕರ್ನಾಟಕ— ಎರಡು ಹೋಳು.... ಈ ಖಂಡವಾದವೇ ನಮ್ಮ ಹಿಂದುಳಿಯುವಿಕೆಗೆ ಕಾರಣವಿದ್ದೀತೆ?

o o o

ಹಸುರು ಕ್ರಾಂತಿಯ ಬಗೆಗೆ ನಾವು ತುಂಬ ಮಾತನಾಡುತ್ತೇವೆ. ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ವಿಕ್ರಮ ಸಾಧಿಸಿದ್ದೇವೆಂದು ಹೇಳಿಕೊಳ್ಳುತ್ತೇವೆ. ಜತೆಗೆ ವಿದೇಶಗಳಿಂದ ಗಣನೀಯ ಪ್ರಮಾಣದಲ್ಲಿ ನಿರ್ಯಾತವನ್ನೂ ಮಾಡಿಕೊಳ್ಳುತ್ತಿದ್ದೇವೆ. ಸರಕಾರದ ವಶದಲ್ಲಿ ಸಾಕಷ್ಟು ಆಹಾರ ಸಂಗ್ರಹವಿದೆಯೆಂದು ಹೇಳಲಾಗುತ್ತಿದೆ. ಆದರೆ ಮಾರುಕಟ್ಟೆಯಲ್ಲಿ ಅವುಗಳ ಬೆಲೆ ಒಂದೇ ಸವನೆ ಏರ ಹತ್ತಿದೆ. ಈಗ ಒಂದು ತಿಂಗಳಲ್ಲಿ ಅಕ್ಕಿಯ ಬೆಲೆ ಕಿಲೋ ಒಂದರ ಮೂವತ್ತು ಪೈಸೆಯಷ್ಟು ಏರಿದೆ. ಬೆಲೆಯೇರಿಕೆಗೆ ಕಾರಣವೇನು?

ನಗರಗಳಲ್ಲಿ ಆಹಾರ ವಸ್ತು ವಿತರಣೆಗೊಂದು ಕಾರ್ಡು ಇದೆ. ಅಧಿಕಾರಿಗಳು ಅಕ್ಕಿಯನ್ನೂ ಕಾರ್ಡುದಾರರಿಗೆ ಹಂಚಲು ಬಿಡುಗಡೆ ಮಾಡುತ್ತಾರೆ. ಹಂಚುವವರೇನು ಮಾಡುತ್ತಾರೆ? ಕಾರ್ಡು ಒಂದಕ್ಕೆ ಐದೋ ಹತ್ತೋ ಕಿಲೋ ಅಕ್ಕಿ ಕೊಟ್ಟು ಸಿಂಹಪಾಲನ್ನು ಹೆಚ್ಚು ಬೆಲೆಯಲ್ಲಿ ಮಾರಿ ತಮ್ಮ ಬಕಾಸುರ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಾರೆ! ಕಾರ್ಡುದಾರರಿಗೆ ಎಷ್ಟು ಅಕ್ಕಿ ದೊರೆಯುತ್ತದೆ ಎಂಬುದೂ ಗೊತ್ತಿಲ್ಲ.

ಸರಕಾರದ ಅಧಿಕಾರಿಗಳು ಪತ್ರಿಕೆಗಳ ಮೂಲಕವಾದರೂ ಸತ್ಯ ಸ್ಥಿತಿಯನ್ನು ಶ್ರೀಸಾಮಾನ್ಯರಿಗೆ ಮನವರಿಕೆ ಮಾಡಿಕೊಡುವುದಿಲ್ಲ. ರಾಜಕೀಯ ಪಕ್ಷಗಳು ಮತಯಾಚನೆಗೆ ಮಾತ್ರ ಆತನ ಭೇಟಿಯಾಗುವ ವ್ರತ ಧರಿಸಿದಂತಿದೆ. ಬಡಜನರ ಉದ್ಧಾರಕರು ತಮಗೆ ಬೇಕಷ್ಟು ಪಡೆದು ಅವರ ಶೋಷಣೆಯಲ್ಲಿ ಅಂಗಡಿಗಾರರಿಗೆ ಸಹಾಯ ಮಾಡುತಿದ್ದಾರೆಯೆ? ಆಹಾರಧಾನ್ಯಗಳ ಬೆಲೆಯೇರಿಕೆಗೆ ಹಲವು ಕಾರಣಗಳಿವೆ. ಅಧಿಕಾರಿಗಳು ತಮ್ಮಲ್ಲಿರುವ ಸಂಗ್ರಹವನ್ನು ಉದಾರವಾಗಿ ಬಿಡುಗಡೆ ಮಾಡಬೇಕು; ಹಳ್ಳಿಹಳ್ಳಿಗೂ ಅದು ವಿತರಣೆಯಾಗಬೇಕು. ಉತ್ತಮ ಫಸಲು ಪಡೆದರೂ ಆಹಾರಧಾನ್ಯಗಳ ಬೆಲೆಯೇರುತ್ತ ಹೋಗುವುದು. ಹಗಲು ದರೋಡೆ ಹೆಚ್ಚುತ್ತಿರುವುದನ್ನೂ ಶ್ರೀಸಾಮಾನ್ಯನನ್ನು ಹಿಂಡಿ ಹಿಪ್ಪೆಮಾಡಲಾಗುತ್ತಿರುವುದನ್ನೂ ತೋರಿಸುತ್ತದೆ. ಊಟಕ್ಕಿಲ್ಲದ ಉಪ್ಪಿನಕಾಯಿಯಂತೆ ಸಂಗ್ರಹದಲ್ಲಿ ಉಳಿಯಬಹುದಾದ ಅಕ್ಕಿಯಿಂದ ಧಾರಣೆ ಇಳಿಯುವುದಿಲ್ಲ.

o o o

ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಫಲಿಮಾರು ಮಠಾಧೀಶರಾಗಿದ್ದವರೊಬ್ಬರು ಸನ್ಯಾಸವನ್ನು ತ್ಯಜಿಸಿ ಮುಂದೆ ವೈವಾಹಿಕ ಜೀವನಕ್ಕಿಳಿದುದು ಮರೆಯುತ್ತ ಬರುತ್ತಿರುವಾಗ, ಅಂಥಹುದೇ ಇನ್ನೊಂದು ಘಟನೆ ನಡೆಯಿತು. ಶೀರೂರು ಮಠದ ಅಧಿಪತಿಗಳಾಗಿದ್ದವರೂ ಮಠಾಧಿಪತ್ಯವನ್ನೂ ಸನ್ಯಾಸವನ್ನೂ ಬಿಟ್ಟು ಹೋದರು. ಅವರು ಬರಿಗೈಯ್ಯಲ್ಲಿ ಹೋಗಲಿಲ್ಲವೆನ್ನುವ ಮಾತು ಬೇರೆ. ಇವರೂ ಸದ್ಯದಲ್ಲೇ ಮದುವೆಯಾಗಲಿರುವರೆಂದೂ ವದಂತಿಯಿದೆ. ಸನ್ಯಾಸ ಧರ್ಮದಲ್ಲಿ ಉಳಿಯಲು ತಮ್ಮ ಅಸಮರ್ಥತೆಯನ್ನು ಈ ಇರ್ವರೂ ಬಹಿರಂಗಗೊಳಿಸಿದ್ದಾರೆ. ಸನ್ಯಾಸ ತ್ಯಾಗಮಾಡಿ ಗೃಹಸ್ಥನಾಗುವುದು, ಅಥವಾ ಗೃಹಸ್ಥನಾಗುವುದಕ್ಕೆಂದೇ ಸನ್ಯಾಸ ಮಾಡುವುದು ಇತ್ತೀಚೆಗೆ ಎಲ್ಲ ಮತಾಚಾರಗಳಿಗೂ ಅಂಟಿದ ಜಾಡ್ಯ. ಇದರಿಂದ ಮಾಧ್ವ ಮತ ದೂರಾಗಬೇಕೆಂದು ಬಯಸುವುದು ಸಾಧುವಾದರೂ ಸಾಧ್ಯವಾಗಲಿಲ್ಲ.

ಉಡುಪಿ ಮಠಗಳಲ್ಲಿ ಬಾಲ ಸನ್ಯಾಸಿಗಳೇ ಇರುತ್ತಾರೆ. ತಿಳುವಳಿಕೆ ಮೂಡದ ಮುಗ್ಧ ಬಾಲಕನನ್ನು ಸನ್ಯಾಸಿಯಾಗಿ ಮಾಡುವುದು ಮೊನ್ನೆಯೂ ನಡೆಯಿತು. ಈತನಿಗೆ ತನ್ನತನದ ಅರಿವಾಗತೊಡಗಿದಾಗ ತನ್ನಿಂದ ಸನ್ಯಾಸ ನಿರ್ವಹಣೆ ಅಸಾಧ್ಯವೆಂದು ಮನವರಿಕೆಯಾಗಬಹುದು; ಆಗ ಅದನ್ನು ತ್ಯಜಿಸುವುದು ಅನುಚಿತವಾಗದು.

ಇದೀಗ ಸನ್ಯಾಸ ತ್ಯಜಿಸಿದವರು ಸುಮಾರು ೮ ವರ್ಷಗಳ ಕಾಲ ಆಶ್ರಮವಾಸಿಯಾಗಿದ್ದರು. ಸನ್ಯಾಸಿಯಾಗುವುದು, ಮಠದ ಸಂಪತ್ತಿನ ಪೂರ್ಣ ಪ್ರಯೋಜನ ಪಡೆಯುವುದು—ಮುಂದೊಂದು ದಿನ ತ್ಯಾಗ ಮಾಡುವುದು, ಶ್ರೀಕೃಷ್ಣನಿಗೆ ಮತ್ತು ತನ್ನ ಮಠದ ದೇವರಿಗೆ ಪೂಜೆ ಮಾಡುವುದಷ್ಟೇ ಆತನ ಕರ್ತವ್ಯಗಳು ಇದಕ್ಕಾಗಿ ಆತನು ನಿವೃತ್ತನಾಗುವಾಗ ಏಕಗಂಟಿನಲ್ಲಿ ಹಣವನ್ನು ಕೊಟ್ಟು, ಅವನ ಭವಿಷ್ಯ ಜೀವನಕ್ಕೆ ಸಹಾಯ ಮಾಡಬಹುದು; ಇಲ್ಲವೇ ರಾಷ್ಟ್ರಪತಿಗಳಿಗೆ ವೇತನ—ಭತ್ತೆ—ಪೆನ್ಶನ್ ಇರುವಂತೆ ಈತನಿಗೂ ಅಂತಹ ಸೌಲಭ್ಯಗಳನ್ನು ಕರುಣಿಸ ಬಹುದು.

ಹೀಗಾದಲ್ಲಿ ಶ್ರೀಕೃಷ್ಣನ ಸೇವೆಗೆ ಕಲಂಕ ಬರುವುದಿಲ್ಲ, ಮಠ—ಮಹಡಿಗಳಲ್ಲಿ ತೊಟ್ಟಿಲು ಕಟ್ಟುವುದು ತಪ್ಪುತ್ತದೆ. ನಡೆಯುತ್ತ ಬಂದರೆ, ಮಠಗಳ ಸ್ಥಿತಿಯೇನಾದೀತು?

ಇದಕ್ಕೊಂದು ಪರ್ಯಾಯ ವ್ಯವಸ್ಥೆಯೇಕಾಗಬಾರದು? ಮಠದ ಆಸ್ತಿ—ಸಂಪತ್ತಿನ ಮೇಲೆ ಮಠಾಧಿಪತಿಗಳಿಗೆ ಯಾವ ಅಧಿಕಾರವೂ ಇರಬಾರದು. ದೇಶಕ್ಕೆ ಪಾರ್ಲಿಮೆಂಟ್ ಇರುವಂತೆ ಶಿಷ್ಯಕೋಟಿ-ಸರಕಾರದ ಪ್ರತಿನಿಧಿಗಳು ಅವುಗಳ ವ್ಯವಹಾರ ಮಾಡಬೇಕು. ಎಂಟು—ಒಂಬತ್ತು ವರ್ಷದ ಬಾಲಕರನ್ನೇ ಆರಿಸಿ ಆತನನ್ನು ಮಠಾಧಿಪತಿಯನ್ನಾಗಿಸಬೇಕು. ಆದರೆ, ತನ್ನ ೧೮ನೆ ವಯಸ್ಸಿನಲ್ಲಿ ಆತ ಆ ಹುದ್ದೆಯಿಂದ ನಿವೃತ್ತನಾಗಬೇಕು. ಆ ಬಳಿಕವೂ ಆತ ಸನ್ಯಾಸಿಯಾಗೇ ಉಳಿಯ ಬಯಸಿದರೆ, ಮಠಕ್ಕೂ ಆತನಿಗೂ ಸಂಬಂಧವಿರಬಾರದು. ಸನ್ಯಾಸಾಶ್ರಮದ ಸ್ಯಾಂಪಲ್ ನೋಡುವ ಚಟ ತಪ್ಪುತ್ತವೆ. ಇಲ್ಲವಾದರೆ ಮಾಧ್ವಮಠಗಳು ಸೂರೆ ಹೋಗುವ ಕಾಲ ಸನ್ನಿಹಿತವಾಗಬಹುದು; ಸರಕಾರವೇ ನೇರವಾಗಿ ಹಸ್ತಕ್ಷೇಪ ಮಾಡಬಹುದು.

o o o

ಉಡುಪಿ ತಾಲೂಕಿನ ಕೆಮ್ಮಣ್ಣಿನ ಬಳಿ ಹೂಡೆಯೆಂಬ ಸಮುದ್ರ ತೀರದಲ್ಲಿ ಭಾರಿ ಕೊರೆತವುಂಟಾಗಿದೆ. ತೆರೆಗಳು ದಡ ಅಪ್ಪಳಿಸುವುದರೊಡನೆ ಕೊರೆಯುತ್ತ ಒಳಗೆ ನುಗ್ಗ ತೊಡಗಿವೆ. ಈ ಕೊರೆತವು ಸುಮಾರು ಆರೇಳು ಫರ್ಲಂಗುಗಳಷ್ಟು ಉದ್ದಕ್ಕೆ ನಡೆಯುತ್ತಿದೆ. ಫಲಹೊತ್ತ ತೆಂಗಿನ ಹಲವಾರು ಮರಗಳು ಇಷ್ಟರಲ್ಲೇ ಸಮುದ್ರ ರಾಜನಿಗೆ ಸಮರ್ಪಣೆಯಾಗಿವೆ. ಇನ್ನೂ ಹಲವಾರು ಸಮರ್ಪಿತವಾಗಲಿವೆ. ಕಿನಾರೆಯಲ್ಲಿನ ಮುರುಕು ಜೋಪುಡಿಗಳಲ್ಲಿರುವ ಶ್ರೀಸಾ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303 / 2 72304 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಗೋಹರಾಜ್ಯದಲ್ಲಿ

ರೊಪ್ಪಗಳಲ್ಲಿ ದೊಂಬಿಯೇಳದೆ?

"ಅಧ್ಯಕ್ಷ ನಿಕ್ಸನ್ನರ ವಿಶೇಷ ದೂತ ಕೀಸಿಂಗರ್ ಇಲ್ಲಿಗೆ ಬಂದ್ರಂತಲ್ಲಾ...."

"ಬಂದು ಹೋದರು...."

"ಅವರೇನಂದರಂತೆ?"

"ಅವರನ್ನೋದೇನುಂಟು? ಅಮೆರಿಕದ ಪಾಕ್ ನೀತಿಯಿಂದ ನೊಂದ ಇಂದಿರಮ್ಮನ ಮ್ನ ತುಸು ಸಂತೋಷಪಡಿಸಲೆಂದಷ್ಟೇ ಅವರು ಬಂದದ್ದು...."

"ಅದು ಹೇಗೆ?"

"ನಿಮ್ಮ ಸ್ವರ್ಣಸಿಂಗರೇನೇನೋ ಹೇಳಿ ಹೋದರು. ನೀವೇನನ್ನುತ್ತೀರಿ ಎಂದ ರವರು ."

'ಅದಕ್ಕೆ....?'

'ಮತ್ತೆಂಥದು? ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಪೂರೈಕೆ ಮಾಡಬಾರದೆಂದು ಎರಡೂ ಕರವ ಮುಗಿದು ಶಿರಣೆನುವೆವು....'

'ಯಾಕೆ?'

'ಅಯ್ಯೋ, ಯಾಕಂದರೇನು? ಭಾರತ ಉಪಖಂಡಕ್ಕೆ, ಅದು ತೀರ ಮಾರಕವಾಗುತ್ತದೆ....'

'ಆದ್ರೆ ನೋಡಿ, ಪಾಕಿಗೆ ಶಸ್ತ್ರಾಸ್ತ್ರ ಸರಬರಾಜನ್ನು ನಿಲ್ಲಿಸಲು ಅಧ್ಯಕ್ಷ ನಿಕ್ಸನ್ನರು ಸಿದ್ಧರಿಲ್ಲ ಎಂದು ವರದಿಯಾಗಿದೆಯಲ್ಲಾ?'

'ಹೌದು...'

'ಮತ್ತೇ ಕೀಸಿಂಗರ್ ಬಂದದ್ದೇಕೆ?'

'ನಮ್ಮನ್ನ ತಪ್ಪುತಿಳಿಯಬೇಡಿ. ನಮ್ಮ ಶಸ್ತ್ರಾಸ್ತ್ರಗಳಿಂದ ನಿಮಗೇನೂ ಹಾನಿಯಿಲ್ಲ. ನಾವು ನೀಡದೆ ಹೋದರೆ ಕೆಂಪು ಚೀನಾ ನೀಡುತ್ತೆ. ನಮ್ಮನ್ನು ತಡೆಯಿರೆಂದವರು ಅದನ್ನು ತಡೆಯ ಬಲ್ಲಿರೇನು? ಅದ್ದರಿಂದ ಉದ್ದುದ್ದ ಮಾತನಾಡ ಬೇಡಿ. ನಿಮಗೂ ಬೇಕಾದರೆ ಕೊಡುವ. ಅಸ್ತ್ರ ಬೇಕಾದರೆ ಅಸ್ತ್ರ, ಹಣ ಬೇಕಾದರೆ ಹಣ....'

'ನೀವೊಳ್ಳೆ ಮಾತಾಡ್ತೀರಿ. ಬೆಣ್ಣೆಯಂತಾಡಿ ಉರಿಯೆಣ್ಣೆ ಗೆಸೆಯುತ್ತೀರಿ.... ಮತ್ತೆ ರಷ್ಯಾ?'

'ತಾನು ನೀಡಿಲ್ಲ ಎನ್ನುತ್ತದೆ; ಆದರೆ ಇನ್ನರಲ್ಲೂ ರಹಸ್ಯವಿರ ಬೇಕೆನಿಸುತ್ತದೆ....'

'ಬ್ರಿಟನ್ನು?'

'ಅದೀಗ ತಮಾಷೆ. ಬ್ರಿಟಿಷ್ ನಾಯಕರನ್ನು ಭಾರತ ಬಾಲಬಡಕರೆಂದು ಪಾಕಿಸ್ತಾನ ಕರೆಯ ಹತ್ತಿದೆ....'

'ಇನ್ನೊಂದು ಮಹಾರಾಷ್ಟ್ರ....'

'ಫ್ರಾನ್ಸ್. ಅದೊಂದು ಶಸ್ತ್ರಾಸ್ತ್ರ ಪಾಕಿಗಿಲ್ಲವೆಂದು ಡಣಾಡಂಗುರ ಸಾರಿದೆ...ಕೆನಡಾವು ವಿಮಾನಗಳ ಬಿಡಿ ಭಾಗ ಪೂರೈಸ್ಸಲು ನಿರಾಕರಿಸಿದೆ....'

'ಅದು ಸರೀನ್ನಿ. ಇದ್ದುದರಲ್ಲೇ ಸಮಾಧಾನ. ಅಲ್ಲಾರಿ, ವಿಶ್ವಸಂಸ್ಥೆಯ ಮಧ್ಯ ಪ್ರವೇಶವನ್ನು ಯಾರೋ ಬಯಸುತ್ತಾರಂತೆ....'

'ಬ್ರಿಟಿಷ್ ಪಾರ್ಲಿಮೆಂಟ್ ನಿಯೋಗದ ಅಭಿಪ್ರಾಯ ಅದು. ಈ ಮಧ್ಯಪ್ರವೇಶದಿಂದ ಯಾವ ಇತ್ಯಾರ್ಥವೂ ಆಗುವುದಿಲ್ಲ. ಒಪ್ಪಿದ್ದನ್ನು ಕಾರ್ಯಗತಗೊಳಿಸುವುದೆಂದರೇನೆಂದರಿಯದ ಪಾಕ್ ನಾಯಕರಿಗೆ ಇದರಿಂದ ಉಸಿರಾಡಲು ಸಮಯ ಸಿಕ್ಕೀತಷ್ಟೆ!"

'ಆದ್ರೆ ನೋಡಿ, ಜಯಪ್ರಕಾಶ ನಾರಾಯಣರು ಭಾರೀ ವಿಚಿತ್ರ ಮಾತಾಡ್ತಿದ್ದಾರೆ....'

'ಏನು?'

'ಪೂರ್ವಬಂಗಾಳ ಸಮಸ್ಯೆ ಭಾರತ—ಪಾಕ್ ಯುದ್ಧದಿಂದಲೆ ಬಗೆಹರಿಯುತ್ತದೆ.'

'ಓಹೋಹೋ, ಅಂದರೆ ಭಾರತ ಬಂಗ್ಲಾ ದೇಶಕ್ಕೆ ಮಾನ್ಯತೆ, ಸೈನಿಕ ನೆರವು ನೀಡಬೇಕೆಂಬುದವರ ಮನೀಷೆಯಂತಾಯ್ತು...."

"ಹ್ಞೂಂ............"

'ಇದೇ ಅಭಿಪ್ರಾಯವನ್ನು ಜನಸಂಘವೂ ತಳೆದಿದೆ. ಸರಕಾರ ಈಬಗ್ಗೆ ನಿರ್ಧಾರ ಕೈಕೊಳ್ಳದಿದ್ದರೆ ಚಳವಳಿ ಹೂಡುವ ಬೆದರಿಕೆಯನ್ನೂ ಹಾಕಿದೆ....'

'ಅಲ್ರಿ ನಿಜಲಿಂಗಪ್ಪನವರೂ ಮಾನ್ಯತೆ ನೀಡಬೇಕಂದಿದ್ದಾರಲ್ಲಾ?'

'ಆದ್ರೆ ವೀರೇಂದ್ರ ಪಾಟೀಲರು ಅಂತಹ ಕ್ರಮದ ಬಗ್ಗೆ ಎಚ್ಚರಿಕೆ ನೀಡಿದ್ದಾರೆ...'

'ಅಂತೂ ಬಂಗ್ಲಾ ಸಮಸ್ಯೆ ಭಾರಿ ಜಿಗುಟು. ಉಭಯತ್ರ ಗಂಡಾಂತರಕಾರಿಯೆನಿಸ ಹತ್ತಿದೆ.......'

"ಆದ್ದರಿಂದ್ಲೇ ಇಂದಿರಮ್ಮನ ಧೈರ್ಯ—ದಿಟ್ಟತನ ಕೈಕೊಟ್ಟದೆ....."

'ಅಲ್ರಿ, ಪಾಟ್ನಾದಲ್ಲಿ ಕೈದಿಗಳ ದೊಂಬಿಯಾಯ್ತಂತಲ್ಲ?'

'ಹ್ಞೂಂ.......'

'ಗೋಳಿಬಾರೂ ಆಯ್ತಂತೆ...'

'ಹೌದು....'

"ದೊಂಬಿಯಾಕೇಂತ?"

'ಯಾಕೆ ಅಂದ್ರೆ ಏನೆ? ಅಧಿಕಾರಿಗಳ ಚಿತ್ರಹಿಂಸೆಯನ್ನು ತಡೆಯಲಾಗದೊಬ್ಬ ಕೈದಿ ಆತ್ಮಹತ್ಯೆ ಮಾಡಿಕೊಂಡನಂತೆ. ಇದರಿಂದ ರೊಚ್ಚಿಗೆದ್ದ ಕೈದಿಗಳು ದೊಂಬಿಯೆದ್ದರಂತೆ.......'

'ದೊಂಬಿಗಾರರು ಅಧಿಕಾರಿಗಳನ್ನು ಕಬ್ಬಿಣದ ಸಲಾಕೆಗಳಿಂದ ಥಳಿಸಿದರಂತೆ; ಕಟ್ಟಡ ಸುಟ್ಟರಂತೆ....'

'ಪರಿಸ್ಥಿತಿಯನ್ನು ಹತೋಟಿಗೆ ತರಲು ಗೋಳಿಬಾರು ಅನಿವಾರ್ಯವಾಯ್ತಂತೆ...'

'ಅಲ್ರಿ, ಕೆಲವು ಕೈದಿಗಳು ಓಡಿ ಹೋದ್ರಂತಲ್ಲಾ?'

'ಆರುನೂರು ಕೈದಿಗಳಿಗೆ ಅವಕಾಶವಿರುವಲ್ಲಿ ಒಂದೂವರೆ ಸಾವಿರ ಕೈದಿಗಳನ್ನು ತುರುಕಿಸಿದರೆ ಹೇಗಾದೀತು?'

'ಅದು ಹೌದೂನ್ನಿ. ನಮ್ಮ ಶಾಲೆ ಕಾಲೇಜುಗಳ ನೆನಪಾಗುತ್ತೆ ...'

'ಕುರಿಗಳ ರೊಪ್ಪಗಳಲ್ಲಿ ಇದುವರೆಗೆ ದೊಂಬಿಯೇಳದೆ ಇದ್ದದ್ದೇ ಆಶ್ಚರ್ಯ.'

'ಅದು ಹಾಗಿರ್ಲಿ....ನೋಡಿ, ಸುಬ್ರಹ್ಮಣ್ಯಂ.......'

"ಏನು?"

'ಚುನಾವಣೆ ಯೆದುರಿಸಲು ಸಿದ್ಧರಾಗಿದ್ದಾರಂತೆ,.......'

'ಆಗಲೇ ಬೇಕಲ್ಲ? ಇಲ್ಲವಾದರೆ ಮಂತ್ರಿಯಾಗಿ ಮುಂದುವರಿಯುವುದು ಹೇಗೆ?'

'ಅವರಿಗಾಗೇ ಕೃಷ್ಣಗಿರಿ ಕ್ಷೇತ್ರದಿಂದ ಗೌಂಡರ್ ರಾಜಿನಾಮೆಯಿತ್ತರಂತೆ...'

'ಹ್ಞೂಂ.......'

"ಇನ್ನೂ ತಮಾಷೆಯೆಂದರೆ, ಸುರವರ ಪರವಾಗಿ ದ್ರಾಮುಕ ಪ್ರಚಾರ ಮಾಡುವುದಂತೆ....'

'ಒಳ್ಳೇದಾಯ್ತು ಬಿಡು. ಹಳೆಯ ದೋಸ್ತಿ ಬಿಡಲಾದೀತೆ?'

'ಅಲ್ರಿ, ರಾಷ್ಟ್ರಪತಿ—ರಾಜ್ಯಪಾಲರ ವಿಶೇಷ ಧ್ವಜಗಳನ್ನು ರದ್ದು ಮಾಡಿದರಂತಲ್ಲಾ?'

"ಹೌದೂನ್ನು, ಎಂದೋ ಆಗ ಬೇಕಾದ್ದು ಇಂದಾದರೂ ಆಯ್ತು."

"ಅದ್ಯಾಕೇಂತ?"

"ಒಂದು ದೇಶ—ಒಂದು ಜನತೆಯಾಗಿರುವಾಗ ಧ್ವಜಗಳು ಬೇರೆ ಬೇರೆ ಯಾಕೇಂತ? ತಮಿಳು ನಾಡು ಪ್ರತ್ಯೇಕ ಧ್ವಜ—ಲಾಂಛನ ಕೇಳಿದಾಗ ಅದು ಆಗದೆನ್ನುವವರು ರಾಷ್ಟ್ರಪತಿ—ರಾಜ್ಯಪಾಲರಿಗೆ ಬೇರೆ ಧ್ವಜವೇಕೆ ಕೊಡುತ್ತಾರೆ?"

"ಹ್ಞಾಂ........"

"ಏನು ಭಾರೀ ಆಯಾಸ?"

"ಯಾಕೋಪ್ಪ ಸುಸ್ತು...."

"ಓ, ಹಾಗೋ........"

—ಗೋ ೯ ರಾ

● ●

ಉಡುಪಿ ರೋಟರಿ ಕ್ಲಬ್ ಪದಗ್ರಹಣ ಸಮಾರಂಭ

ತಾ. 6—7—71ರಂದು ಮಣಿಪಾಲದಲ್ಲಿ ಉಡುಪಿ ರೋಟರಿ ಕ್ಲಬ್ಬಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದ ಮುಖ್ಯ ಅತಿಥಿಯಾಗಿ ರೋಟರಿ ಗವರ್ನರ್ ಶ್ರೀ ಟಿ. ರಮೇಶ ಪೈಯವರು ಮಾತನಾಡುತ್ತಾ, ದೇಶೀಯ ಸಮಸ್ಯೆಗಳನ್ನು ರೋಟರಿ ತತ್ವ ಅಳವಡಿಸಿಕೊಂಡಲ್ಲಿ ಸುಲಭವಾಗಿ ಪರಿಹರಿಸ ಬಹುದು. ನಮ್ಮಲ್ಲಿ ಬಡತನವಿದ್ದರೂ ಸಂಘಟನಾತ್ಮಕ ಪ್ರಯತ್ನದಿಂದ ನಮ್ಮ ಸಮಸ್ಯೆಗಳನ್ನು ಬಗೆಹರಿಸ ಬಹುದಾಗಿದೆಯೆಂದೂ ಹೇಳಿದರು. ಉಡುಪಿ ರೋಟರಿ ಕ್ಲಬ್ಬಿನ ವತಿಯಿಂದ ಒಂದು ಸಾವಿರ ರೂ.ಗಳನ್ನು ಬಂಗ್ಲಾ ನಿರಾಶ್ರಿತರಿಗೆ ನೀಡಿದ್ದನ್ನು ತಿಳಿಸಿದ ಅವರು ಆ ದುರ್ದೈವೀ ಜನರ ವಿಷಯದಲ್ಲಿ ನಾವು ಸಹಾನುಭೂತಿಯುಳ್ಳವರಾಗಿರ ಬೇಕೆಂದು ನುಡಿದರು.

ಮಾಜಿ ಅಧ್ಯಕ್ಷ ಶ್ರೀ ಪಿ. ಶ್ರೀಪತಿ ಆಚಾರ್ಯರು ಸ್ವಾಗತಿಸಿ ತನ್ನ ಕಾಲಾವಧಿಯಲ್ಲಿ ನೆರವಾದ ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು. ಕಾರ್ಯದರ್ಶಿ ಶ್ರೀ ಎ. ಜೆ. ಅತ್ತೈಯವರು ವಾರ್ಷಿಕ ವರದಿಯನ್ನೊಪ್ಪಿಸಿದರು. ಶ್ರೀ ಪಿ. ಶ್ರೀಪತಿ ಆಚಾರ್ಯರು ನೂತನಾಧ್ಯಕ್ಷ ಡಾ। ಕೆ. ಮೋಹನದಾಸ ಪೈಯವರಿಗೆ ಅಧಿಕಾರವನ್ನು ವಹಿಸಿಕೊಟ್ಟ ತರುವಾಯ ನೂತನ ಪದಾಧಿಕಾರಿಗಳ ಹೆಸರನ್ನು ಓದಿ ಹೇಳಿದರು. ತರುವಾಯ ಗವರ್ನರ್ ಶ್ರೀ ಟಿ. ರಮೇಶ ಪೈಗಳು ಪ್ರತಿಜ್ಞಾವಿಧಿಯನ್ನು ನೆರವೇರಿಸಿದರು.

ಡಾ। ಟಿ. ಎಂ. ಎ. ಪೈಯವರು ಗವರ್ನರ್—ಶ್ರೀ ಪೈಗಳು ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿ ರೋಟರಿ ಕ್ಲಬ್ ಸಾಧಿಸಿದ ಪ್ರಗತಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಡಾ। ಕೆ. ಮೋಹನದಾಸ ಪೈಯವರು ಮಾತನಾಡಿ ಸದಸ್ಯರು ತನಗೆ ಸಂಪೂರ್ಣ ಸಹಕಾರ ನೀಡಬೇಕು ಎಂದು ಕೇಳಿಕೊಂಡರು.

ರೋಟರಿ ಆಡಳಿತ ಮಂಡಳಿ: ಡಾ। ಕೆ. ಮೋಹನದಾಸ ಪೈ (ಅಧ್ಯಕ್ಷ), ಡಾ। ಎಚ್. ಶಾಂತಾರಾಮ, ಶ್ರೀ ಪಿ.ವಿ. ಭಟ್ (ಉಪಾಧ್ಯಕ್ಷರು), ಶ್ರೀ ಕೆ. ರಂಗಸ್ವಾಮಿ (ಕಾರ್ಯದರ್ಶಿ), ಶ್ರೀ ಕೆ. ಎಂ. ಕಾರಂತ (ಜತೆಕಾರ್ಯದರ್ಶಿ), ಶ್ರೀ ಬಿ. ಆರ್. ಭಟ್ (ಕೋಶಾಧಿಕಾರಿ), ಶ್ರೀ ಬಿ. ಬಿ. ಶೆಟ್ಟಿ, ಶ್ರೀ ಎ. ಜೆ. ಅತ್ತೈ, ಡಾ। ಕೆ. ಎಲ್. ಶೌರಿ ಮತ್ತು ಶ್ರೀ ಎಂ. ಕೃಷ್ಣರಾಜ್ (ಡೈರೆಕ್ಟರುಗಳು).

ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ಕೆ. ರಂಗಸ್ವಾಮಿಯವರು ಧನ್ಯವಾದ ಅರ್ಪಿಸಿದರು.

IN THE COURT OF THE MUNSIF OF KARKALA

O. S. No. 432/1967

Ex. C. No. 280/1970

Dasa Rai —ಅರ್ಜಿದಾರ.

ಮತ್ತು

Korapolu Hengsu ಕೂಡಾ.

—ಎದ್ರಿರು.

ಎದ್ರಿರು—4ನೇ ಜಾನಕಿ, 5ನೇ ಸುನಂದಾ, 6ನೇ ಪುಷ್ಪಾ, 7ನೇ ಅಚ್ಯುತ, 8ನೇ ಚಂದ್ರು, 9ನೇ ಲಕ್ಷ್ಮಿ—ಈ ಮೈನರ ಮಕ್ಕಳ ಬಗ್ಗೆ ಗಾರ್ಡಿಯನ್ನಳು 9ನೇ ಗೋಪಿ ಹೆಂಗ್ಸು. 10ನೇ ಕೃಷ್ಣ, 11ನೇ ಬೇಬಿ, 12ನೇ ವಸಂತ, 13ನೇ ಜಯಂತಿ, 14ನೇ ಚೆಲುವಯ್ಯ—ಈ ಮೈನರ ಮಕ್ಕಳ ಬಗ್ಗೆ 3ನೇ ಗಿರಿಜಾ ಹೆಂಗ್ಸು—ಕೊರಪಳು ಹೆಂಗ್ಸಿನ ಮಕ್ಕಳು ಕಾರ್ಕಳ ತಾಲೂಕು ಬೆಳುವಾಯಿ ಗ್ರಾಮದ ಪರಪ್ಪು ಎಂಬಲ್ಲಿರುವವರು.

ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—ಅರ್ಜಿದಾರನು ನಿಮ್ಮ ಹಕ್ಕಿನ ಸ್ಥಿರಾಸ್ತಿ ಏಲಂ ನಿವೃತ್ತಿ ಕೇಳಿ ದಾಖಲು ಮಾಡಿದ ಅಮಲ್‌ಜ್ಯಾರಿಯನ್ನು ನಿಮ್ಮ ಹಾಜರಾತಿ ಬಗ್ಗೆ, ತಾ. 26—7—1971ಕ್ಕೆ ಇಡೋಣಾಗಿಯದೆ. ಸದ್ರಿ ದಿನ ಪೂರ್ವಾಹ್ನ ಗಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಉಜಾಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ವ್ಯವಹರಣೆಯನ್ನು ತೀರ್ಮಾನಿಸಲ್ಪಡುವುದು.

(By order of Court)

(Sd)—K. J. KUDVA

Advocate for applicant

Karkala, 1—7—71

Gram: VISHWA Tel: 28111 & 28112

When at Bangalore
Stay at

HOTEL NATARAJA

Restaurant Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ನಾಲ್ಕು ದಿಕ್ಕಿನಿಂದ

ಅಂಧಕಾರಮಯ ಭವಿತವ್ಯ

ಶ್ರೀ

ಕೇಂದ್ರದ ರೇಲ್ವೆ ಸಚಿವ ಕೆಂಗೆಲ್ ಹನುಮಂತಯ್ಯನವರು ಇಂದಿರಾ ಸಮಾಜವಾದದ ಕಟ್ಟಾ ಅನುಯಾಯಿಗಳು. ಕಮ್ಯುನಿಸ್ಟರಿಗೂ ಮೀರಿದ ಪ್ರಗತಿ ಪರ ನೀತಿ ತಮ್ಮ ಸಮಾಜವಾದವೆಂಬುದವರ ದೃಢನಿಲುವು. ಹೋದಲ್ಲಿ, ಬಂದಲ್ಲಿ, ನಿಂತಲ್ಲಿ, ಕುಳಿತಲ್ಲಿ ತಮ್ಮ ಮುಂದಿರುವವರಿಗೆ ಸಮಾಜವಾದದ ಮಂಡಿಗೆಯನ್ನು ಹಂಚುವುದು ಅವರ ಸ್ವಭಾವ. ಅದೇ ಮಂಡಿಗೆಯನ್ನು ಬೆಂಗಳೂರಿನಲ್ಲಿ ರೇಲ್ವೆ ನೌಕರರಿಗೂ ವಿತರಣೆ ಮಾಡಿದರು.

ಇಲಾಖೆಯ ಕನಿಷ್ಠ ನೌಕರನೂ ಅತ್ಯುನ್ನತ ಪದವಿಗೆ ಏರುವಂತಹ ಅವಕಾಶವನ್ನು ಕಲ್ಪಿಸುವ ಯೋಜನೆ ಕೆಂಗೆಲ್ಲರಿಗಿದೆಯಂತೆ. ಇದನ್ನವರು ಪರಿಶೀಲಿಸುತ್ತಿರುವರಂತೆ, ನೌಕರಿಯಲ್ಲಿ ಬಡ್ತಿಗೆ ಕಾರ್ಯನಿಷ್ಠೆ ಪ್ರಾಮಾಣಿಕತೆಗಳೇ ಅರ್ಹತೆಗಳೆಂದು ಪರಿಗಣಿಸ ಬೇಕೆಂಬುದು ಅವರ ಅಭಿಪ್ರಾಯವಂತೆ. ಈ ಯೋಜನೆ ಕಾರ್ಯರೂಪಕ್ಕೆ ಬಂದರೆ, ನಿಜಕ್ಕೂ ಕ್ರಾಂತಿಕಾರಿಯೇ ಆಗುವುದು.

ಸತ್ಯ– ನಿಷ್ಠೆ ಹೊಂದಿರುವ ನೌಕರರು ಹಂತ ಹಂತವಾಗಿ ಬಡ್ತಿಹೊಂದುತ್ತಾ ಹೋಗಬೇಕು. ಉನ್ನತ ಹುದ್ದೆಗಳಿಗೆ ನೇರವಾದ ನೇಮಕ ಸಲ್ಲದು. ಇದು ನಿಜ. ಎಲ್ಲ ಸಂದರ್ಭಗಳಲ್ಲಿಯೂ ಇದು ಸಾಧ್ಯವಾಗುವುದಿಲ್ಲ, ಸಾಧ್ಯವಿರುವಲ್ಲಾದರೂ ಕಾರ್ಯರೂಪಕ್ಕೆ ಬಂದೀತೆ? ಕೆಂಗೆಲ್ಲರು ಪರಿಶೀಲಿಸಿ ಮುಗಿಸುವಷ್ಟರಲ್ಲೇ ಅವರು ರೇಲ್ವೆ ಮಂತ್ರಿ ಪದಕ್ಕೆ ಎರವಾಗಬಹುದು. ನೌಕರರು ಉನ್ನತ ಪದವಿಗೇರಬಹುದು, ಆದರೆ, ಏರುವಂತಹ ಕನಸು ಕಂಡಾದರೂ ಬ್ರಹ್ಮಾನಂದವನ್ನು ಅನುಭವಿಸಬಾರದೇಕೆ? ಇಂದಿರಾ ಸಮಾಜವಾದವು ಆಚರಣೆಗಲ್ಲ, ಆಡುವುದಕ್ಕೆ ಮಾತ್ರವೆಂದು ವಿತ್ತಮಂತ್ರಿ ಚವನರು ಬಜೆಟ್ಟಿನಲ್ಲಿ ಆಗಲೇ ಘೋಷಿಸಿ ಬಿಟ್ಟಿದ್ದಾರೆ, ಅದರ ನಡುವೆ ಕೆಂಗಲ್ಲರದ್ದೇನು?

○ ○ ○

ವಿದ್ಯಾರ್ಥಿಗಳಲ್ಲಿ, ಮುಖ್ಯವಾಗಿ ವಿಶ್ವವಿದ್ಯಾಲಯ ಮಟ್ಟದವರಲ್ಲಿ ಅಶಿಸ್ತು–ತತ್ಕಾರಣ ಕ್ಷೋಭೆ– ಹುಟ್ಟಿಕೊಂಡಿರುವುದಕ್ಕೆ ನಿರುದ್ಯೋಗ ಪ್ರಶ್ನೆಯೇ 'ಮುಖ್ಯ ಕಾರಣ'ವೆಂದು ಗಜೇಂದ್ರಗಡಕರ ಆಯೋಗ ಅಭಿಪ್ರಾಯ ಪಟ್ಟಿದೆ. ಈ ಸಮಿತಿಯಲ್ಲಿ ಶಿಕ್ಷಣ ತಜ್ಞರೂ ಆಡಳಿತಗಾರರೂ ಸೇರಿ ಹನ್ನೆರಡು ಮಂದಿ ಸದಸ್ಯರಿದ್ದರು.

ತಮ್ಮ ಭವಿಷ್ಯವು ಅಂಧಕಾರಮಯವಾಗಿರುವುದು ಮನವರಿಕೆಯಾದಾಗ ವಿದ್ಯಾರ್ಥಿಗಳಲ್ಲಿ ಕ್ಷೋಭೆ ಹುಟ್ಟುವುದು ಸಹಜವೆಂಬುದು ಸಮಿತಿಯ ಅಭಿಮತ. ಸಮಾಜದ ಬಗ್ಗೆ ಅವರಲ್ಲಿ ಅತೃಪ್ತಿ ಮೂಡಿದೆ, ಇಂದಿನ ಶೈಕ್ಷಣಿಕ ಅವಕಾಶಗಳು ಸುಲಭವಾಗಿ ಶೋಷಣೆಗೊಳಪಡುತ್ತವೆ. ಆದುದರಿಂದ ಅವುಗಳ ಬಗ್ಗೆ ಮುಗುಸ್ಸೇ ಅವರಲ್ಲಿ ತಲೆದೋರಿದೆ.

ಈ ಪರಿಸ್ಥಿತಿಯು ಪ್ರಾದೇಶಿಕ, ಭಾಷಿಕ ಮತ್ತು ಮತೀಯ ಬೇಡಿಕೆಗಳ ಆಧಾರದ ಮೇಲಿನ ಬೆಳವಣಿಗೆಗೆ ಕಾರಣವೆನಿಸಿದೆ.

ಕುಂದುಕೊರತೆಗಳ ನಿವಾರಣೆಗೆ ಬಲಪ್ರಯೋಗ, ಚಳುವಳಿ, ಹಿಂಸಾಕೃತ್ಯಗಳೇ ಸಶಕ್ತವೆಂದು ನಂಬಿದವರೂ ಇದ್ದಾರೆ– ಸಮುದಾಯದ ಮೇಲೆ ಗಮನ ಹರಿಸಬಲ್ಲ ವಿದ್ಯಾರ್ಥಿಗಳು ಅಸಮಾಧಾನವೆನಿಸಿದೊಡನೆಯೇ ಹಿಂಸಾಕೃತ್ಯದಲ್ಲಿ ತೊಡಗುತ್ತಾರೆ.

ವಿದ್ಯಾರ್ಥಿ ಕ್ಷೋಭೆಗೆ ನಿರುದ್ಯೋಗ ಕಾರಣ. ನಿರುದ್ಯೋಗಕ್ಕೆ ನಮ್ಮ ಪರಾವಲಂಬನ ವಿದ್ಯೆಯೇ ಕಾರಣ. ಬರಿಯ ಬಿಳಿಯ ಕೊರಳ ಪಟ್ಟಿಗರನ್ನು ಸೃಷ್ಟಿ ಮಾಡಬಲ್ಲ ನಮ್ಮ ಶಿಕ್ಷಣ ಕ್ರಮಕ್ಕೂ ಉದ್ಯೋಗಾವಕಾಶಗಳಿಗೂ ಉತ್ತರ–ದಕ್ಷಿಣ. ಪರಿಮಿತವಾಗಿ ಬೆಳೆಯುತ್ತಿರುವ ಉದ್ಯೋಗಾವಕಾಶಗಳಿಗೆ ಅಪರಿಮಿತ ಉದ್ಯೋಗಾಕಾಂಕ್ಷಿಗಳು ಅರ್ಜಿ ಗುಜರಾಯಿಸಿದಾಗ, ಪಶೀಲಿ ರುಷುವತ್ತುಗಳು ತಲೆಯೆತ್ತುವುದು ಸಹಜ. ಆದುದರಿಂದ ನಮ್ಮ ಶಿಕ್ಷಣ ಪ್ರಣಾಳಿ, ಪದ್ಧತಿಯೆಲ್ಲವೂ ಆಮೂಲಾಗ್ರ ಬದಲಾಗ ಬೇಕು. ಭವಿಷ್ಯದ ಬಗ್ಗೆ 'ಹಬ್ಬಿದ ಅಂಧಕಾರವನ್ನು ಚದುರಿಸಿ ಆಶಾಭಾವನೆ ಮೂಡಿಸಬಲ್ಲ ಶಿಕ್ಷಣ ಬೇಕು' ಗಜೇಂದ್ರ ಗಡಕರ ಸಮಿತಿಯ ಅಭಿಪ್ರಾಯದಲ್ಲಿ ಎರಡು ಮಾತಿಲ್ಲ.

○ ○ ○

ಎರಡು ಸಂತೋಷದ ಸುದ್ದಿಗಳು ಕನ್ನಡದ ಸುಶಿಕ್ಷಿತರಿಗೆ ಈ ವಾರ ಬಂದಿವೆ. ಬೆಂಗಳೂರು ವಿಶ್ವ ವಿದ್ಯಾಲಯವು ಇಪ್ಪತ್ತು ಪುಸ್ತಕಗಳನ್ನು ಬಿಡುಗಡೆಗೊಳಿಸಿತು. ಕನ್ನಡ ಮಾಧ್ಯಮವು ಜನಪ್ರಿಯವಾಗಲು ಪಠ್ಯ ಪುಸ್ತಕಗಳ ಅಭಾವವು ತಡೆಯಾಗುತಿದ್ದು ಇದನ್ನು ನೀಗಿಸುವಲ್ಲಿ ವಿಶ್ವವಿದ್ಯಾಲಯದ ಕ್ರಮವು ಅತ್ಯಂತ ಸೂಕ್ತವಾದುದು. ಮೈಸೂರು ವಿಶ್ವವಿದ್ಯಾಲಯವೂ ಕನ್ನಡ ಪುಸ್ತಕ ಪ್ರಕಟಣೆಯಲ್ಲಿ ಸಾಕಷ್ಟು ಮುಂದುವರಿದಿದ್ದು ಕರ್ನಾಟಕ ವಿಶ್ವವಿದ್ಯಾಲಯವೂ ಈ ಕಡೆ ಅಡಿಯಿಡ ತೊಡಗಿದೆ.

ರಾಜ್ಯದ ವಿಶ್ವವಿದ್ಯಾಲಯಗಳ ಹೊಂದಾಣಿಕೆಯಿಂದ ಗುಣಯುಕ್ತವಾದ ಮತ್ತು ಸಾಂದರ್ಭಿಕ ಪುಸ್ತಕಗಳನ್ನು ಕನ್ನಡದಲ್ಲಿ ಹೊರತರುವುದರಿಂದ ಪುಸ್ತಕವಿಲ್ಲವೆಂಬ ಅಪವಾದ ದೂರವಾಗುತ್ತದೆ. ಭಾರತದಲ್ಲಿ ಪ್ರಕಟವಾಗುವ ಇಂಗ್ಲಿಷ್ ಪುಸ್ತಕಗಳೂ ಹಳೆಯ ವಿಷಯವನ್ನಷ್ಟೇ ಪ್ರತಿಪಾದಿಸುತ್ತವೆಯೆಂದ ರಾಜ್ಯಪಾಲ ಧರ್ಮವೀರರ ಮಾತು ಕನ್ನಡಿಗರಿಗೆ ಸಮಾಧಾನ ಪಡುವುದಕ್ಕಲ್ಲ, ಹೊಸ ಆಧುನಿಕ ವಿಷಯಗಳನ್ನೆತ್ತಿ ಕನ್ನಡದಲ್ಲಿ ಗ್ರಂಥ ರಚನೆಯಾಗಲು ಪ್ರೇರಕ ಶಕ್ತಿಯಾಗಬೇಕು.

ಇದೇ ಹೊತ್ತಿಗೆ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಬಜೆಟ್ಟಿನಲ್ಲಿ ಎರಡು ಸ್ತುತ್ಯ ಮತ್ತು ಆವಶ್ಯಕ ಯೋಜನೆಗಳನ್ನು ಉಲ್ಲೇಖಿಸಿದೆ. ವಿದ್ಯಾರ್ಥಿಗಳ ಉಪಯೋಗಕ್ಕೆಂದು ಸಂಕ್ಷಿಪ್ತ ಕನ್ನಡ–ಕನ್ನಡ ಕೋಶವನ್ನು ಪ್ರಕಟಿಸಿ ಸುಲಭ ಬೆಲೆಯಲ್ಲಿ ಒದಗಿಸುವುದು, ಅಲಭ್ಯವಾಗಿರುವ ಕನ್ನಡ ಕಾವ್ಯ (ಹಳೆಯ)ಗಳನ್ನು ಮುದ್ರಿಸುವುದು. ಇವೆರಡೂ ಎಂದೋ ಆರಂಭವಾಗ ಬೇಕಾದದ್ದೇ, ಶ್ರೀ ಜಿ. ನಾರಾಯಣರು ಈ ದಿಸೆಯಲ್ಲಿ ಆಸಕ್ತಿ ತಳೆದು ಸರಕಾರದ ನೆರವು ಬಯಸಿದ್ದಾರೆ. ಸರಕಾರವೂ ಉಳ್ಳವರೂ ಪರಿಷತ್ತಿನ ಉಪಯುಕ್ತ ಸೇವೆಗೆ ಮಿತಿಮೀರಿ ಸಹಾಯ ನೀಡಬೇಕು.

○ ○ ○

ಕೆಲವು ಕಾಲದ ನಂತರ ನಿವೃತ್ತ ಮಹಾದಂಡನಾಯಕ ಕೆ. ಎಂ. ಕಾರ್ಯಪ್ಪನವರು ತುಂಟಿಯೆರಡು ಮಾಡಿದ್ದಾರೆ. 'ಬಂಗ್ಲಾದೇಶದ ಬಗ್ಗೆ ವಿದೇಶೀಯರೆಲ್ಲರೂ ಗಂಭೀರ ಮೌನ ತಳೆದಿರುವಾಗ ಭಾರತೀಯರಲ್ಲಿ ಪ್ರತಿಯೊಬ್ಬನೂ ಬಾಯಿ ಬಿಡುತ್ತಾನೆ. ಬಂಗ್ಲಾ ದೇಶಕ್ಕೆ ಮನ್ನಣೆ, ಸೈನಿಕ ನೆರವು ನೀಡಬೇಕು ಎಂಬುವರಿಂದ ತೊಡಗಿ, ಬಂದಿರುವ ನಿರಾಶ್ರಿತರನ್ನು ಗಡಿಯಾಚೆ ಹೊಡೆದೋಡಿಸ ಬೇಕೆನ್ನುವವರೂ ಇದ್ದಾರೆ.

ನಿವೃತ್ತ ಮಹಾದಂಡನಾಯಕರು ಇವೆರಡನ್ನೂ ಅಲ್ಲಗಳೆಯುತ್ತಾರೆ. ಬಂಗ್ಲಾ ದೇಶದ ಅಶಾಂತಿಯನ್ನು ಕೊನೆಗಾಣಿಸುವಲ್ಲಿ ಭಾರತ ಮುಂದೆ ಬರಬೇಕೆನ್ನುತ್ತಾರೆ. ಇದು ಹೇಗೆ? ಯಾಹ್ಯಾಖಾನರೂ ಶೇಕ ಮುಜಿಬುರರೂ ರಾಜಿಯಾಗುವಂತೆ ಪ್ರಯತ್ನಿಸಬೇಕು. ಇದು ಸಾಧಿತವಾದರೆ, ಬಂದ ನಿರಾಶ್ರಿತರೂ ಅವರ ದೇಶಕ್ಕೆ ಮರಳುತ್ತಾರೆ, ನಮ್ಮ ಪ್ರತಿಷ್ಠೆಯೂ ಬೆಳೆಯುತ್ತದೆ.

ಆದರೆ, ಬಂಗ್ಲಾ ದೇಶದಲ್ಲಿ ಹೋರಾಟ ಪ್ರಾರಂಭವಾದ ಮರುಗಳಿಗೆಯಲ್ಲೇ ನಮ್ಮ ಸಂಸತ್ತು ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿತು, ನಮ್ಮ ಆಕಾಶವಾಣಿ ಬಂಗ್ಲಾದೇಶದ ಆಕಾಶವಾಣಿಯಾಗಿ ಪರಿವರ್ತನೆಗೊಂಡಿತ್ತು. ಇದೀಗ ಸಮಸ್ಯೆ ಹೆಮ್ಮರವಾಗುತ್ತಲೇ ಹೋಗುತ್ತಿರುವುದನ್ನು ಕಂಡು ಕಂಗಾಲಾದರೆ ಯಾರ ತಪ್ಪು?' ● ●

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE 3131

ಅಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele GOLDKING Estd 1947 Phone. 3242 Res. 3272

ಜೀವನದಲ್ಲಿ ಒಳಿತನ್ನು ಸಾಧಿಸಬೇಕು



—ಶ್ರೀ ಕೆ. ಕೆ. ಪೈ

ತಾ. 5–7–71ರಂದು ಸಿಂಡಿಕೇಟ್ ಬೇಂಕಿನ ಅಧಿಕಾರೀ ಹಾಗೂ ಸಿಬ್ಬಂದಿ ವರ್ಗದವರು ಡಾ। ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ ತನ್ನ ೬೦ನೇ ಹುಟ್ಟು ಹಬ್ಬ ದಿನಾಚರಣೆ ಸಮಾರಂಭದಲ್ಲಿ ಚೆಸ್ಟ್ರೋಡಿಯನ್ ಶ್ರೀ ಕೆ. ಕೆ. ಪೈಯವರು ಮಾತನಾಡುತ್ತಾ, ಬೇಂಕಿಂಗ್ ಉದ್ಯಮ ಸರ್ವೋತ್ಕೃಷ್ಟ ಸೇವಾ ಉದ್ಯಮವಾಗಿದೆ. ಬ್ಯಾಂಕಿನ ಮೂಲಕ ಸಮಾಜಕ್ಕೆ ತಮ್ಮ ಪ್ರಾಮಾಣಿಕ ಸೇವೆ ಸಲ್ಲಿಸುವುದು ನಮ್ಮ ಮುಖ್ಯ ಕರ್ತವ್ಯ ಎನ್ನುವುದನ್ನು ಮರೆಯಬಾರದೆಂದು ಹೇಳಿದರು. ಜೀವನದಲ್ಲಿ ಒಳಿತನ್ನು ಸಾಧಿಸ ಬೇಕೆನ್ನುವ ತನ್ನ ಉದ್ದೇಶವನ್ನು ವಿವರಿಸಿದ ಶ್ರೀ ಪೈಗಳು ತನ್ನ ತಾರುಣ್ಯದಲ್ಲಿ ಡಾ। ಪೈಗಳು ತನ್ನಲ್ಲಿ ವಿಶ್ವಾಸವಿಟ್ಟು ಯೋಗ್ಯ ರೀತಿಯಲ್ಲಿ ನಡೆಸಿದ್ದನ್ನು ಸ್ಮರಿಸಿದರು.

ನಾವು ಮಾತಿಗಿಂತ ವಿಧಾಯಕ ಕಾರ್ಯಗಳಿಗೆ ಹೆಚ್ಚಿನ ಮಹತ್ವ ನೀಡಬೇಕು. ಮುಖ್ಯವಾಗಿ ಬೇಕಾದ್ದು ಹೃತ್ಪೂರ್ವಕ ಕೆಲಸ. ಬೇಂಕಿನಲ್ಲಿ ತನ್ನ ಸಹೋದ್ಯೋಗಿಗಳಾಗಿಯೂ ಸಿಬ್ಬಂದಿಗಳಾಗಿಯೂ ದುಡಿಯುವ ತಜ್ಞರ ಕುರಿತು ಅವರು ಪ್ರಸ್ತಾಪಿಸಿ ಹಲವು ಸಂದರ್ಭಗಳಲ್ಲಿ ಉದ್ರೇಕಗೊಳ್ಳುವ ಪ್ರಸಕ್ತಿಯಿದೆ. ಕಠಿಣ ಮಾತುಗಳು ಬರುತ್ತವೆ. ಆದರೆ ಇವೆಲ್ಲ ಒಳಿತನ್ನು ಸಾಧಿಸಬೇಕೆನ್ನುವ ದೃಷ್ಟಿಯಿಂದಲೇ ಹೊರತು ಉದ್ದೇಶಪೂರ್ವಕವಾಗಿ ಯಾರ ಮೇಲೂ ಕಹಿಭಾವನೆ ಇರಿಸಿಕೊಂಡಿಲ್ಲ ಎಂದವರು ನಿವೇದಿಸಿ ತನ್ನ ಸಹೋದ್ಯೋಗಿಗಳು ತನ್ನ ಕೆಲಸದಲ್ಲಿ ಪ್ರಾಮಾಣಿಕವಾದ ಸೇವೆ ಸಲ್ಲಿಸಿ ನೆರವಾದುದನ್ನು ಸ್ಮರಿಸಿದರು.

ಆರಂಭದಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಎಚ್. ಡಿ. ಎಸ್. ಪೈಯವರು ಸ್ವಾಗತಿಸಿದರು.

ಶ್ರೀ ಎಚ್. ವಿ. ಕಾಮತರು ಮಾತನಾಡಿ ೬೦ ವರುಷದಲ್ಲಿ ಶ್ರೀ ಪೈಗಳು ಕಂಪೆನಿ ಹಾಗೂ ಸಮಾಜಕ್ಕಾಗಿ ಸಲ್ಲಿಸಿರುವ ಸೇವೆ ಉಲ್ಲೇಖನೀಯ ಎಂದರು.

ಶ್ರೀ ಕು. ಶಿ. ಹರಿದಾಸ ಭಟ್ಟರು ಮಾತನಾಡಿ ಶ್ರೀ ಪೈಗಳು ಸಮಾಜದಲ್ಲಿ ಬೆರೆತು ಬಾಳಿದವರು. ಜನ ಸಾಮಾನ್ಯರೊಡನೆ ಸಾಮಾನ್ಯವಾಗಿ ಕೆಲಸ ಮಾಡುವುದು ಅವರ ಜೀವನದ ವೈಶಿಷ್ಟ್ಯವಾಗಿದೆ ಎಂದರು. ಶ್ರೀ ಕೆ. ವಿ. ಶೆಣೈಯವರು ಶ್ರೀ ಪೈಗಳವರ ಕುಲದೇವತೆ ಮಹಾಲಸಾ ನಾರಾಯಣಿ ದಂತದ ಮೂರ್ತಿಯನ್ನು ಸಿಬ್ಬಂದಿ ವರ್ಗದವರ ಪರವಾಗಿ ಅರ್ಪಿಸಿದರು.

ಡಾ। ಟಿ. ಎಂ. ಎ. ಪೈಗಳು ತಮ್ಮ ಅಧ್ಯಕ್ಷ ಭಾಷಣದಲ್ಲಿ ಪ್ರಾಮಾಣಿಕ ಹಾಗೂ ದಕ್ಷ ಆಡಳಿತ ನಡೆಸಿ ಜನತೆಯ ಒಲವನ್ನು ಹೇಗೆ ಸಂಪಾದಿಸಬಹುದೆನ್ನುವುದಕ್ಕೆ ಶ್ರೀ ಪೈಗಳೇ ಉದಾಹರಣೆ. ದಕ್ಷ ಆಡಳಿತೆ ಒಂದು ಕಲೆಯಾಗಿದ್ದು ಶ್ರೀ ಪೈಗಳು ಅದನ್ನು ತನ್ನ ಜೀವನದಲ್ಲಿ ಸಿದ್ಧಿಸಿಕೊಂಡಿದ್ದಾರೆಂದು ಹೇಳಿ ಶ್ರೀ ಪೈಗಳಿಗೆ ಶುಭಕೋರಿದರು.

ಅಂತ್ಯದಲ್ಲಿ ಶ್ರೀ ಎಚ್. ವಿ. ಪೈಯವರು ಧನ್ಯವಾದ ಅರ್ಪಿಸಿದರು. ಬೇಂಕಿನ ಅಧಿಕಾರಿಗಳು ಶ್ರೀ ಪೈಗಳ ಗೌರವಾರ್ಥ ರಾತ್ರಿ ವ್ಯಾಲಿವ್ಯೂನಲ್ಲಿ ಭೋಜನಕೂಟವೊಂದನ್ನು ಏರ್ಪಡಿಸಿದ್ದರು.

ಚಾರುಚಯನ

ಮುಳ್ಳಿನ ಮರವೇರಿದವರು ನಾವು

ಬಂಗ್ಲಾ ದೇಶದ ವಿದ್ಯಮಾನಗಳಿಂದ ಭಾರತವೆದುರಿಸ ಬೇಕಾಗಿ ಬಂದ ಸಮಸ್ಯೆಗಳನ್ನು ಪ್ರಮುಖ ರಾಷ್ಟ್ರಗಳ ನಾಯಕರಿಗೆ ತಿಳಿಹೇಳಲು ಹೋದ ನಮ್ಮ ಮಂತ್ರಿಗಳು ವಿರಹಿಣಿಯ ನಿಟ್ಟುಸಿರಂತೆ ಮರಳಿ ಬಂದರು. ಸಹಾನುಭೂತಿಯ ಹೆಸರಲ್ಲಿ ಮತ್ತಷ್ಟು ತಾಪವನ್ನೇ ನಮಗೆ ಹೊತ್ತು ತಂದರು.

ಸಂಸತ್ತಿನೊಳಗೂ ಹೊರಗೂ ಈ ಬಗ್ಗೆ ಬಿರುಸಿನ ಚರ್ಚೆ. ಏಕಪಕ್ಷೀಯವಾಗಿ ಭಾರತ ತುರ್ತುಕ್ರಮ ಕೈಕೊಳ್ಳಬೇಕು. ಶೇಖ ಮುಜಿಬುರ್ ರೆಹಮಾನರ ಹೆಸರಿನ ಸರಕಾರವನ್ನು ಮಾನ್ಯ ಮಾಡಬೇಕು; ಸೈನಿಕ ನೆರವು ಅವರಿಗೆ ನೀಡಬೇಕು; ನಿರಾಶ್ರಿತರಾಗಿ ಬಂದವರಿಗೆ ಅವರ ದೇಶದಲ್ಲೇ ಆಶ್ರಯ ಒದಗಿಸಬೇಕು.,..

ಬೇಕುಗಳು ತುಂಬ. ಇವೆಲ್ಲಕ್ಕೂ ಪ್ರಧಾನಿಯದೊಂದೇ ಉತ್ತರ— 'ಉಚಿತ ಕಾಲದಲ್ಲಿ ತಕ್ಕ ಕ್ರಮ'– ಇದು ನಮ್ಮ ಪರಾಕ್ರಮ.

ಪ್ರಧಾನಿಯ ಈ ಹಂದಿ ನಡಿಗೆ ಆಕೆಯ ಪಕ್ಷೀಯರಿಗೇ ಸರಿಬರಲಿಲ್ಲ. ಸ್ವತಂತ್ರವಾಗಿ ವಿವೇಚಿಸಿ ಅವಿಳಂಬವಾಗಿ ಮುಂದೆ ಹೆಜ್ಜೆಯಿಡ ಬೇಕು– ಇದು ಅವರ ಅಭಿಪ್ರಾಯ.

ಮುಂದಿನ ಹೆಜ್ಜೆ ಇಟ್ಟಿಲ್ಲ ನಿಜ; ಇಂದಿನ ಹೆಜ್ಜೆಯಾದರೂ ಏನು? ಬಂಗ್ಲಾ ಪ್ರಶ್ನೆ ಪಾಕಿಸ್ತಾನದ ಆಂತರಿಕ ವ್ಯವಹಾರವೆಂದು ಸುಮ್ಮನುಳಿದಿದ್ದೇವೆಯೆ? ಸಂಸತ್ತು ಬಂಗ್ಲಾ ಸ್ವಾತಂತ್ರ್ಯ ಹೋರಾಟಗಾರರಿಗೆ ಹೃತ್ಪೂರ್ವಕ ಸಹಾನುಭೂತಿ ವ್ಯಕ್ತಪಡಿಸಿದ್ದರಿಂದ ಅಲ್ಲಿಂದ ಮುಂದುವರಿದಿದ್ದೇವೆ.

ಬಂಗ್ಲಾದೇಶಕ್ಕೆ ಮನ್ನಣೆ ನೀಡುವಲ್ಲಿ ಹಿಂದುಳಿದಿದ್ದೇವೆ. ನಮ್ಮದು ತ್ರಿಶಂಕು; ನಮ್ಮ ನಿಲುವು ಅಸ್ಪಷ್ಟ. ಯಾವ ನೀತಿಯನ್ನನುಸರಿಸ ಬೇಕು ಎಂಬುದೇ ನಮಗೆ ಗೊತ್ತಿಲ್ಲ...

ಇದರ ಪರಿಣಾಮವೇ ಉಚಿತ ಕಾಲದಲ್ಲಿ ಉಚಿತ ಕ್ರಮ. ಬಂಗ್ಲಾ ದೇಶದ ಬಗ್ಗೆ ಸ್ವತಂತ್ರ ಧೋರಣೆ ತಳೆಯುವಷ್ಟು ಎದೆಗಾರಿಕೆ ನಮಗಿಲ್ಲ; ನೈತಿಕಬಲ ಮೊದಲೇ ಇಲ್ಲ.

ಶೇಕ್ ಮುಜಿಬುರ್ ರೆಹಮಾನರೇ ಭಾರತದ ಮಟ್ಟಿಗೆ ಬಂಗ್ಲಾ ದೇಶದ ನಾಯಕರು. ಪಾಕಿಸ್ತಾನ ಅರಸುವ ಯಾವುದೇ ಪರಿಹಾರ ಅವರಿಗೆ ಮಾನ್ಯವಾಗ ಬೇಕು– ಇದು ವಿದೇಶ ಮಂತ್ರಿ ಹೇಳಿಕೆ.

ಅಂತಹ ಪರಿಹಾರ ಯಾಹ್ಯಾಖಾನರು ಸೂಚಿಸಲಿಲ್ಲ; ಸೂಚಿಸುವುದೂ ಇಲ್ಲ. ಸೂಚಿಸಬೇಕೆಂದು ಪರೀಕ್ಷಿಸುವುದೂ ಅಸಾಧ್ಯ ಇಲ್ಲ.

ಹಿರಿಯ ದೇಶಗಳು ಯಾಹ್ಯಾಖಾನರ ವಿಷದ ಹಲ್ಲುಗಳನ್ನು ಕಿತ್ತು ಹಾಕುವವೆಂದು ಶ್ರೀಮತಿ ಗಾಂಧಿ ನಂಬಿದ್ದರು. ಅಮೇರಿಕೆಗಿಂತಲೂ ಹೆಚ್ಚಾಗಿ ಅವರು ರಶ್ಯದ ಮೇಲೆ ಅಪಾರ ವಿಶ್ವಾಸವಿಟ್ಟಿದ್ದರು.

ಸದ್ಯ ತಮಗೂ ನಡಕೊಳ್ಳುವ ಯಾಹ್ಯಾಖಾನರನ್ನು ಕೆಂಪು ಚೀನಾದ ಕೈಗೊಂಬೆ ಮಾಡಲು ಅವರೇಕೆ ಸಿದ್ಧರಾದಾರು? ರಾಜನೀತಿಯಲ್ಲಿ ಸ್ವಾರ್ಥ ತಪ್ಪಲ್ಲ.

ನಂಬಿದವರೆಲ್ಲ ಸರ್ಪಕ್ಕೆ ಮತ್ತೂ ಮತ್ತೂ ಶಸ್ತ್ರಾಸ್ತ್ರಗಳ ಹಾಲೂಡುತ್ತಿದ್ದಾರೆ. 'ಸರಕಾರಕ್ಕೇನೂ ತಿಳಿದು ಬಂದಿಲ್ಲ'ವೆಂದು ಪ್ರಧಾನಿ ಗಾಂಧಿ ಅವನ್ನು ಅಲ್ಲಗಳೆಯುತ್ತಾರೆ.

ನಮ್ಮ ಕುಂಭಕರ್ಣನ ಸರಕಾರಕ್ಕೆ ತಿಳಿದು ಬರುವಷ್ಟರಲ್ಲಿ ಯಾಹ್ಯಾಖಾನರು ಸರ್ವಶಕ್ತಿ ಸಂಪನ್ನರಾಗುತ್ತಾರೆ.

ಬೇಸಗೆಯ ಉರಿಯಲ್ಲಿ ಹಾವು–ಮುಂಗಸಿ, ಹುಲಿ–ದನವೆಲ್ಲವೂ ಒಂದೆಡೆಯಲ್ಲಿ ನದಿಗಿಳಿದು ನೀರು ಕುಡಿಯುತ್ತವಂತೆ. ಸ್ವಾರ್ಥ ಪ್ರೇರಿತವಾದ ಅಮೇರಿಕೆ–ರಶ್ಯ–ಚೀನ ಎಲ್ಲವೂ ಯಾಹ್ಯಾಖಾನರಿಗೆ ಸೈನಿಕ ನೆರವು ನೀಡುತ್ತವೆ.

ನಮಗಾರು ?

ನಿರಾಶ್ರಿತರ ಪುನರ್ವಸತಿಯ ನೆಪವೊಡ್ಡಿ ನಾವು ಸೈನಿಕ ಕ್ರಮವೀಗ ಕೈಕೊಂಡರೆ....?

ಸೀಟೋ–ನ್ಯಾಟೋ ರಾಷ್ಟ್ರಗಳು ಯಾಹ್ಯಾಖಾನರ ನೆರವಿಗೆ ಧಾವಿಸಿವರೆ?

ಬಿಸಿ ತುಪ್ಪ ನುಂಗಿದ್ದೇವೆ– ಉಗುಳಲಿಲ್ಲ; ನುಂಗಲೂ ಇಲ್ಲ. ಗಂಟಲು ಉರಿಸಿಕೊಳ್ಳುವುದಷ್ಟೇ ನಮ್ಮ ಪ್ರಾರಬ್ಧ ಕರ್ಮ.

ಬಂಗಾಳದ ಗಡಿಯಲ್ಲಿ ಅಪ್ರಚೋದಿತ ಶೆಲ್–ಬಾಂಬುದಾಳಿ ನಡೆದರೂ ನಾವು ಮೂಕರಾಗಿದ್ದೇವೆ. ಪಾಕ್ ಸೈನಿಕರ ಗುಂಡಿಗೆ ನಮ್ಮವರು ಬಲಿಯಾದರೂ ತೆಪ್ಪಗಾಗಿದ್ದೇವೆ. ಗಡಿದಾಟಿ ಹಿಂಸಾಕಾಂಡಾಸಕ್ತರಾದರೂ ನಾವು ಹೆಳವರಾಗಿದ್ದೇವೆ.

ಬಂಗ್ಲಾ ನಿರಾಶ್ರಿತರ ಸತ್ಕಾರವಷ್ಟೇ ನಮ್ಮ ಕರ್ತವ್ಯವೆಂದು ನಂಬಿ ಅದರಲ್ಲೇ ಮೈ ಮರೆತಿದ್ದೇವೆ.

ಸಮಾಜವಾದ, ಬಡತನದ ನಿರ್ಮೂಲನ, ಮೊದಲಾದ ಆಣೆಯೋಜನೆಗಳನ್ನು ಗಂಟು ಕಟ್ಟಿ ಮುಂದಿನ ಚುಣಾವಣೆಗಳವರೆಗೆ ಅಟ್ಟದಲ್ಲಿ ಸುರಕ್ಷಿತವಾಗಿಟ್ಟಿದ್ದೇವೆ.

ಸಂಸತ್ತಿನೊಳಗೂ ಹೊರಗೂ ಸರಕಾರದ ತ್ವರಿತ ನೀತಿಯ ಬಗ್ಗೆ ಜನಾಭಿಪ್ರಾಯ ಮೂಡುತ್ತಿರುವಾಗ, ಇಂಡಿಕೇಟಿನ ಕಾರ್ಯಕಾರಿಣಿಯು ಅದಕ್ಕೆ ತಡೆಯೊಡ್ಡಿದೆ.

'ಬಂಗ್ಲಾ ದೇಶದ ನೀತಿಯ ಬಗ್ಗೆ ಅವಸರದ ಕ್ರಮ ಕೈಕೊಳ್ಳುವಂತೆ ಸರಕಾರದ ಮೇಲೆ ಒತ್ತಡ ಹೇರ ಬಾರದು'-ಇದು ಅದರ ಗೊತ್ತುವಳಿ.

ಗೊತ್ತುವಳಿಯನ್ನು ಮಂಡಿಸಿದವರು, ಅನುಮೋದಿಸಿದವರು ಯಾರೇ ಇರಲಿ, ಅದು ಪ್ರಧಾನಿ ಗಾಂಧಿಯನ್ನು ಅಡಕತ್ತರಿಯಿಂದ ಬಿಡಿಸುವುದಕ್ಕಾಗಿಯೆಂಬುದು ಎಲ್ಲರಿಗೂ ಗೊತ್ತು.

ಅಂದರೆ, ಇಂದಿನ ತ್ರಿಶಂಕು ನೀತಿ ಇನ್ನೂ ಬಹುಕಾಲ ಮುಂದುವರಿಯುತ್ತದೆ. ಕಿಂಕರ್ತವ್ಯಮೂಢೆ ಇಂದಿರಾ ಗಾಂಧಿ ಹಿಂದೆ ಹೆಜ್ಜೆಯಿಟ್ಟವರಲ್ಲ. ಮುಂದೆ ಹೆಜ್ಜೆಯಿಡುವಷ್ಟು ಕೆಚ್ಚು ಆಕೆಗಿಲ್ಲ.

ಕೆಂಪು ಚೀನಾದ ಆಕ್ರಮಣ ಪಂ. ನೆಹರುರವರ ಆಯುಷ್ಯ ಅಪಹರಿಸಿತು. ಪಾಕ್ ದುರಾಕ್ರಮಣ ಶಾಸ್ತ್ರಿಯವರನ್ನು ಸಂಶಯಾಸ್ಪದ ಮರಣಕ್ಕೆ ಗುರಿ ಮಾಡಿತು. ಬಂಗ್ಲಾ ನಿರಾಶ್ರಿತರು ಶ್ರೀಮತಿ ಗಾಂಧಿಯವರ ಮಹತ್ವಾಕಾಂಕ್ಷೆಯ ಮೇಲೆ ನೀರೆರೆದರು– ಅವರ ರಾಜ್ಯಕೀಯ ಭವಿಷ್ಯದ ಮೇಲೆ ಅವರು ಪರದೆಯೆಳೆದರೂ ಆಶ್ಚರ್ಯವಲ್ಲ.

ಹಾವು ಸಾಯಬಾರದು; ಕೋಲು ಮುರಿಯಬಾರದು ಎಂಬುದು ವಿದೇಶೀಯರ ಬಂಗ್ಲಾ ನೀತಿ. ಕಾಸಿಲ್ಲದ ಉದಾರತೆ ನಮ್ಮ ನೀತಿ. ಇದರ ಫಲ ನಾಯಕರು ತಿನ್ನುವುದಿಲ್ಲ; ಅವರು ಹಿಂದೆಯೂ ಮಿಷ್ಟಾನ್ನವುಂಡವರು, ಇಂದೂ ಉಣ್ಣುವವರು; ಮುಂದೂ ಗಿಟ್ಟಿಸಿಕೊಳ್ಳುವವರೇ.

ಆದರೆ, ಶ್ರೀಸಾಮಾನ್ಯ ಮಾತ್ರ ಧರಾತಳದಿಂದ ಪಾತಳಿಗೆ ಉರುಳುತ್ತಾನೆ. ಮುಂದಿನ ಬಜೆಟ್ಟು ಆತನ ರಕ್ತವನ್ನು ಹೆಪ್ಪುಗಟ್ಟಿಸುತ್ತದೆ.

ಇಂದಿರಾ ಜಾಲದಲ್ಲಿ ಸಿಕ್ಕ ಹಾಕಿಕೊಂಡದಕ್ಕೆ ಇದೆಲ್ಲವನ್ನೂ ಸಹಿಸಿಕೊಳ್ಳಬೇಕು. ಮುಳ್ಳಿಡಿದ ಮರವೇರಿದ ಮೇಲೆ ಮುಳ್ಳು ಗಂಜಿದಡೆಂತು?

● ●

ಕಾಯಿದೆ ಕಾನೂನು ಕಡೆಗಣಿಸಿ ಸಮಾಜವಾದವಲ್ಲ

–ಶ್ರೀ ಬಿ. ವಿಶ್ವನಾಥ ರೈ

ಇದೇ ತಾ. 1.7.71ರಂದು ಶ್ರೀ ಟಿ. ಎ. ವಾಸುದೇವನ್‌ರ ಅಧ್ಯಕ್ಷತೆಯಲ್ಲಿ ಜರಗಿದ ಉಡುಪಿ ಲಯನ್ಸ್ ಕ್ಲಬ್ಬಿನ ನೂತನ ಪದಾಧಿಕಾರಿಗಳ ಅಧಿಕಾರ ಹಸ್ತಾಂತರ ಸಮಾರಂಭವನ್ನುದ್ದೇಶಿಸಿ ಉಡುಪಿ ಸಿವಿಲ್ ಜಡ್ಜ್ ಶ್ರೀ ಬಿ. ವಿಶ್ವನಾಥ ರೈಯವರು ಮಾತನಾಡುತ್ತಾ, ಸಮಾಜವಾದೀ ಧೋರಣೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಅತಿರೇಕವಾದ ಅವಸರ ಸಲ್ಲದು. ಸಾವಧಾನವಾಗಿ ಕಾರ್ಯರೂಪಕ್ಕೆ ತರಬೇಕೇ ವಿನಹ ಕಾಯಿದೆ ಕಾನೂನುಗಳನ್ನು ಕಡೆಗಣಿಸಿಯಲ್ಲ ಎಂದರು. ನ್ಯಾಯಾಂಗದ ಕುರಿತು ಅವರು ಪ್ರಸ್ತಾಪಿಸಿ ಜನತೆ ನ್ಯಾಯಾಂಗದ ಹೊಣೆಗಾರಿಕೆಯನ್ನರಿತು ಅದಕ್ಕೆ ತಕ್ಕಂತೆ ವರ್ತಿಸ ಬೇಕೆಂದು ಹೇಳಿ ಉಡುಪಿ ಲಯನ್ಸ್ ಕ್ಲಬ್ ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸುತ್ತಿರುವ ಸಮಾಜ ಕಲ್ಯಾಣ ಕಾರ್ಯಕ್ಕಾಗಿ ತನ್ನ ಮೆಚ್ಚುಗೆ ಸೂಚಿಸಿದರು.

ಆರಂಭದಲ್ಲಿ ಕ್ಲಬ್ಬಿನ ಅಧ್ಯಕ್ಷ ಶ್ರೀ ಟಿ. ಎ. ವಾಸುದೇವನ್‌ರು ಸ್ವಾಗತಿಸಿ ತನ್ನ ಅಧಿಕಾರಾವಧಿಯಲ್ಲಿ ನೆರವಾದ ಸಹೋದ್ಯೋಗಿಗಳಿಗೆ ಕೃತಜ್ಞತೆ ಸಲ್ಲಿಸಿದರು. ಕಾರ್ಯದರ್ಶಿ ಶ್ರೀ ಕೆ. ನಾರಾಯಣ ಶೆಟ್ಟರು ಕ್ಲಬ್ಬಿನ ವಾರ್ಷಿಕ ವರದಿಯನ್ನೊಪ್ಪಿಸಿದರು. ಕೋಶಾಧಿಕಾರಿ ಶ್ರೀ ಎಂ. ಜಿ. ಹೆಗ್ಡೆಯವರು ಕ್ಲಬ್ಬಿನ ಆರ್ಥಿಕ ಪರಿಸ್ಥಿತಿಯನ್ನು ವಿವರಿಸಿದರು. ಬಳಿಕ ನೂತನ ಪದಾಧಿಕಾರಿಗಳನ್ನು ಆರಿಸಲಾಯಿತು. ನೂತನ ಅಧ್ಯಕ್ಷ ಡಾ| ಎ. ಎಸ್ ನಾರಾಯಣರು ತನ್ನನ್ನು ಅಧ್ಯಕ್ಷರನ್ನಾಗಿ ಆರಿಸಿದ್ದಕ್ಕೆ ಕೃತಜ್ಞತೆ ಸಲ್ಲಿಸಿ ಸದಸ್ಯರೆಲ್ಲರ ಸಹಕಾರ ಕೋರಿದರು. ಕಾರ್ಯದರ್ಶಿ ಶ್ರೀ ಕೆ. ನಾರಾಯಣ ಶೆಟ್ಟರಿಗೆ ಗವರ್ನರರ ಎವಾರ್ಡನ್ನು ನೀಡಿದ ತರುವಾಯ ಹೊಸ ಕಾರ್ಯದರ್ಶಿ ಶ್ರೀ ಎ. ಅಣ್ಣಯ್ಯನವರು ಧನ್ಯವಾದವರ್ಪಿಸಿದರು.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು–4

ಜಸ್ಟಿಸ್ ಹೆಗ್ಡೆಯವರಿಂದ ಕಾಟಿಪಳ್ಳ ಸರಕಾರಿ ಹೈಸ್ಕೂಲ್ ಉದ್ಘಾಟನೆ.

ಸುರತ್ಕಲ್ ಸಮೀಪದ ಕಾಟಿಪಳ್ಳ ಪುನರ್ವಸತಿ ಕೇಂದ್ರಕ್ಕೆ ಮಂಜೂರಾದ ನೂತನ ಸರಕಾರಿ ಹೈಸ್ಕೂಲಿನ ಉದ್ಘಾಟನೆಯನ್ನು ತಾ. 27–6–71ರಂದು ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾದ ಜಸ್ಟಿಸ್ ಕೆ. ಸದಾನಂದ ಹೆಗ್ಡೆಯವರು ಜ್ಯೋತಿ ಬೆಳಗಿಸುವುದರ ಮೂಲಕ ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಶ್ರೀ ಎನ್. ಎ. ಮುತ್ತಣ್ಣನವರು ವಹಿಸಿದ್ದರು.

ಆರಂಭದಲ್ಲಿ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಪಟೇಲ್ ಶ್ರೀನಿವಾಸರಾವ್‌ರವರು ಸ್ವಾಗತಿಸಿದರು. ಜಸ್ಟಿಸ್ ಹೆಗ್ಡೆಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಈ ಊರನ್ನು ನೋಡುವಾಗ ಬಹಳ ಸಂತೋಷವಾಗುತ್ತದೆ. ತಮ್ಮ ಹುಟ್ಟಿದ ಮನೆ, ಇದ್ದ ಊರು, ಮಾಡುತ್ತಿದ್ದ ಕಸಬುಗಳನ್ನು ತ್ಯಜಿಸಿ ಹೊಸ ಊರಿಗೆ ಬಂದು ಹೊಸ ಕಟ್ಟಡ ಕಟ್ಟಿಕೊಂಡು ಹೊಸ ಕಸಬುಗಳನ್ನು ಅನ್ವೇಷಣೆ ಮಾಡುತ್ತಿದ್ದೀರಿ. ಒಂದು ದೃಷ್ಟಿಯಲ್ಲಿ ನೀವು ಊರ ಒಳಗಿನ ನಿರಾಶ್ರಿತರು. ನಿರಾಶ್ರಿತರಾದವರಲ್ಲಿ ಧೈರ್ಯ, ಸ್ಥೈರ್ಯಗಳಿದ್ದರೆ ಹೆಚ್ಚು ಅಭಿವೃದ್ಧಿ ಹೊಂದಲು ಸಾಧ್ಯವಿದೆ ಎಂದು ಹೇಳಿದರು. ಬಡತನ ಕಷ್ಟವಾದರೂ ಅದನ್ನು ಸರಕಾರ ಅಥವಾ ಬೇರೆಯವರು ಸಂಪೂರ್ಣ ಪರಿಹರಿಸಲಾರರು. ಅದಕ್ಕೆ ನಮ್ಮ ಸಾಧನೆ, ದೇವರ ದಯೆ ಅಗತ್ಯ. ನಿಮ್ಮ ಬಡತನ ಹೋಗಲು ನೀವೇ ಕೃಷಿ, ಕೈಗಾರಿಕೆ ಹೀಗೆ ಪ್ರತಿಯೊಂದು ರೀತಿಯಲ್ಲೂ ಉತ್ಪತ್ತಿ ಹೆಚ್ಚಿಸಿಕೊಳ್ಳಲು ಶ್ರಮಿಸಬೇಕೆಂದು ಸಲಹೆ ನೀಡಿದರು.

ವಿದ್ಯಾವಂತರಾಗದಿದ್ದರೆ ಪ್ರಜಾಸತ್ತಾತ್ಮಕ ಸರಕಾರವಿದ್ದೂ ಪ್ರಯೋಜನವಾಗದೆಂದೂ ಮುಂದೆ ಸರ್ವಾಧಿಕಾರ ತಲೆ ಹಾಕಲು ಸಾಧ್ಯವಿದೆಯೆಂದೂ ಅವರು ಎಚ್ಚರಿಸಿ ಹೊಸತಾಗಿ ರೂಪುಗೊಂಡ ಈ ಕೇಂದ್ರ ಅಭಿವೃದ್ಧಿ ಹೊಂದಿ ಇತರ ಹಳ್ಳಿಯವರಿಗೆ ಒಂದು ಮಾದರಿಯಾಗಲಿಯೆಂದು ಹಾರೈಸಿದರು.

ಅನಂತರ ಕಾಟಿಪಳ್ಳದ ಕಂಟ್ರಾಕ್ಟರ್ ಹಾಜಿ. ಎಂ. ಎ. ಜಬ್ಬಾರ್‌ರವರು ದಾನವಾಗಿತ್ತ ಪುಸ್ತಕಗಳನ್ನು ಬಂದರ ಯೋಜನೆಯ ಚೀಫ್ ಇಂಜಿನಿಯರ್ ಶ್ರೀ ಎಚ್. ಕೆ. ಪಂಡಿತಾರಾಧ್ಯರೂ, ಮಂಗಳೂರು ಕಲ್ಲಪ್ರ ಟೆಕ್ಸ್ಟೈಲ್ಸ್‌ನವರು ದಾನವಾಗಿತ್ತ ಸಮ ವಸ್ತ್ರಗಳನ್ನು ಸಿಂಡಿಕೇಟ್ ಬೇಂಕ್‌ನ ಡೈರೆಕ್ಟರ್ ಡಾ. ಎಂ. ಬಿ. ಮಹಮ್ಮದ್‌ರವರು ಶಾಲಾಮಕ್ಕಳಿಗೆ ವಿತರಣೆ ಗೈದರು.

ಬಳಿಕ ಕಾಟಿಪಳ್ಳ ಪುನರ್ವಸತಿ ಕೇಂದ್ರದ ನಿವಾಸಿಗಳ ಕೋರಿಕೆಗಳನ್ನೊಳಗೊಂಡ ಮನವಿಯೊಂದನ್ನು ಕಾಟಿಪಳ್ಳ ಪುನರ್ನಿವೇಶನ ಸುಧಾರಕ ಸಂಘದ ಪರವಾಗಿ ಶ್ರೀ ಪಿ. ಹಸನಬ್ಬನವರು ಜಿಲ್ಲಾಧಿಕಾರಿಯವರಿಗೆ ಒಪ್ಪಿಸಿದರು. ಶ್ರೀ ಪಿ. ಹರಿಯಪ್ಪ ದೇವಾಡಿಗರು ಒದಗಿಸಿದ ನಾಮಫಲಕ ಮತ್ತು ಮಂಗಳೂರಿನ ಹೋಟೇಲ್ ದೀವಾನ್‌ನವರು ಒದಗಿಸಿದ ಮಾರ್ಬಲ್ ಸ್ಲೇಟುಗಳನ್ನು ಶಾಲೆಗೆ ಒಪ್ಪಿಸಲಾಯಿತು.

ಶ್ರೀ ಎನ್. ಎ. ಮುತ್ತಣ್ಣನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಮನವಿಯಲ್ಲಿ ಹೇಳಿದ ಕೋರಿಕೆಗಳನ್ನು ಪರಿಶೀಲಿಸುವ ಭರವಸೆ ನೀಡಿ, ಇಂದು ಇಲ್ಲಿಯವರಿಗೆ ಒಂದು ಸ್ಮರಣೀಯ ದಿನ. ಅವರ ಹಲವಾರು ಬೇಡಿಕೆಗಳಲ್ಲಿ ಒಂದು ಬೇಡಿಕೆ ಪೂರೈಸಿದೆ. ಜಿಲ್ಲೆಯ ಗಣ್ಯ ಮಹನೀಯರೊಬ್ಬರಿಂದ ಈ ಶಾಲೆಯ ಉದ್ಘಾಟನೆಯಾಗಿದೆ ಎಂದು ಹೇಳಿದರು. ಇಂದು ನಾವು ಹಳ್ಳಿಯ ಪ್ರಗತಿಯನ್ನು ಅಲ್ಲಿನ ಶಾಲೆ, ಸಹಕಾರ ಸಂಘ, ಪಂಚಾಯತ್‌ಗಳ ಆಳತೆಗೋಲಿನಿಂದ ಅಳೆಯುತ್ತೇವೆ. ಈ ಸಂಸ್ಥೆಗಳು ಕೇವಲ ಹೆಸರಿಗೆ ಮಾತ್ರ ಇದ್ದು ಪ್ರಯೋಜನವಿಲ್ಲ. ಈ ಸಂಸ್ಥೆಗಳು ಚಟುವಟಿಕೆಗಳಿಂದ ತುಂಬಿದ್ದು ಗ್ರಾಮಗಳ ಅಭಿವೃದ್ಧಿಗಾಗಿ ದುಡಿಯುವುದಗತ್ಯವೆಂದರು. ಇಂದು ವಿದ್ಯಾಭ್ಯಾಸದ ಮಟ್ಟ ಬರಬರುತ್ತಾ ಕ್ಷೀಣವಾಗುತ್ತಿದೆ. ಇದಕ್ಕೆ ಹಲವಾರು ಕಾರಣಗಳಿರಬಹುದು. ಅನೇಕರ ಸಹಕಾರ ಬೇಕಾಗುತ್ತದೆ. ಸರಕಾರದಿಂದ ಎಷ್ಟು ಮಾಡಲು ಸಾಧ್ಯವಿದೆಯೋ ಅಷ್ಟು ಮಾಡಬಹುದು. ಅದರೊಂದಿಗೆ ಗ್ರಾಮಸ್ಥರೂ ಸಹಕರಿಸಬೇಕು ಎಂದು ಜಿಲ್ಲಾಧಿಕಾರಿಗಳು ಕರೆ ನೀಡಿದರು.

ಈ ಕೇಂದ್ರದಲ್ಲಿ ಒಂದು ದೇವಸ್ಥಾನದ ರಚನೆಗೆ ಸರಕಾರ ಒಪ್ಪಿದೆ. ನೀರು ಸರಬರಾಯಿ ಯೋಜನೆಯ ಅಂದಾಜು ಪತ್ರಗಳು ಸಿದ್ಧವಾಗಿ ಸರಕಾರಕ್ಕೆ ಹೋಗಿವೆಯೆಂದೂ ತಿಳಿಸಿದರು. ಕೊನೆಯಲ್ಲಿ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಯು. ಎ. ಆನಂದರವರು ಧನ್ಯವಾದ ಅರ್ಪಿಸಿದರು. ಮಂಗಳೂರು ಕೋಮಲಾ ಸ್ವೀಟ್ಸ್‌ರವರ ವತಿಯಿಂದ ಸಭಿಕರಿಗೆ ಸಿಹಿತಿಂಡಿ ವಿತರಣೆ ನಡೆಯಿತು.

ಉಡುಪಿ ಆಡಳಿತ ಬ್ಲಾಕ್ ಕಾಂಗ್ರೆಸಿನ ಸಭೆ

ತಾ. 27–6–71ರಂದು ಉಡುಪಿ ಆಡಳಿತ ಬ್ಲಾಕ್ ಕಾಂಗ್ರೆಸಿನ ಆಶ್ರಯದಲ್ಲಿ ಶ್ರೀ ಕಮಲಾಕ್ಷ ಶೆಣೈಯವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಭೆಯಲ್ಲಿ ಮಲ್ಪೆ ಬಂದರ ಯೋಜನೆಯ ಕಾರ್ಯ ತ್ವರಿಗೊಳ್ಳಲೆಂದು ಕೇಳಿಕೊಳ್ಳಲಾಯಿತು. ಕನ್ವೀನರ್ ಶ್ರೀ ಯೋಗೀಶ್ವರ ಹೊಳ್ಳರು ಸ್ವಾಗತಿಸಿದರು. ಶ್ರೀಗಳಾದ ಪ್ರಭಾಕರ ಹೆಗ್ಡೆ, ರೋಹಿದಾಸ ಪೈಯವರು ಮಾತನಾಡಿದ ಬಳಿಕ ಕಾರ್ಯದರ್ಶಿ ಶ್ರೀ ಸಿ. ಎಲ್. ಕಾಮತರು ಧನ್ಯವಾದಗಳನ್ನರ್ಪಿಸಿದರು.

ಉಡುಪಿ ಆಡಳಿತ ಬ್ಲಾಕ್ ಕಾಂಗ್ರೆಸಿನ ಕಾರ್ಯಕಾರೀ ಸಮಿತಿಯ ಸಭೆಯೂ ಅದೇ ದಿನ ಶ್ರೀ ಯೋಗೀಶ್ವರ ಹೊಳ್ಳರ ಅಧ್ಯಕ್ಷತೆಯಲ್ಲಿ ಜರಗಿ ಉಡುಪಿ ಮುನಿಸಿಪಾಲಿಟಿ ಮತ್ತು ತಾಲೂಕಿನ ಒಂಭತ್ತು ಪಂಚಾಯತುಗಳಿಂದ 15 ಜನ ಸದಸ್ಯರಿರುವ ಕಾರ್ಯಕಾರೀ ಸಮಿತಿಯನ್ನು ರಚಿಸಲಾಯಿತು.

ಶ್ರೀಗಳಾದ ಬಿ. ಯೋಗೀಶ್ವರ ಹೊಳ್ಳ (ಕನ್ವೀನರ್) ಅಲೆವೂರು ಸರ್ವೋತ್ತಮ ಕಿಣಿ ಮತ್ತು ವಿ. ಸದಾಶಿವ ಶೆಟ್ಟಿ (ಉಪಾಧ್ಯಕ್ಷರು), ಪ್ರಭಾಕರ ಹೆಗ್ಡೆ ಮತ್ತು ಸಿ. ಎಲ್. ಕಾಮತ್ (ಕಾರ್ಯದರ್ಶಿಗಳು), ದಯಾನಂದ ನಾಯಕ್ ಮತ್ತು ಶಂಭು ಶೆಟ್ಟಿ (ಕೋಶಾಧಿಕಾರಿಗಳು), ಕೆ. ಕೇಶವ ಕಾಮತ್ (ಕಾರ್ಯಾಲಯದ ಕಾರ್ಯದರ್ಶಿ)ಗಳಾಗಿ ಆಯ್ಕೆ ಹೊಂದಿದರು.

ಎ. ಐ. ಸಿ. ಸಿ. ಯ ಅಧಿವೇಶನದ ಮೇರೆಗೆ ಬೇರೆ ಬೇರೆ ಸಮಿತಿಗಳನ್ನೂ ರಚಿಸಲಾಯಿತು.

ಡಾ| ಕೆ. ಶಾಮ ಶೆಟ್ಟರ ನಿಧನ

ಮೂಲ್ಕಿಯಲ್ಲಿ ದಕ್ಷ ಹಾಗೂ ನಿಷ್ಠಾವಂತ ಡಾಕ್ಟರರಾಗಿದ್ದು ಸರ್ವಜನಪ್ರಿಯರಾಗಿದ್ದ ಕೊಲ್ನಾಡುಗುತ್ತಿನ ಪ್ರಮುಖ ಬಂಟ ಸಮಾಜದ ಹಿರಿಯ ಪ್ರತಿಷ್ಠಿತ ವ್ಯಕ್ತಿಯಾಗಿದ್ದ ಡಾ| ಕೆ. ಶಾಮ ಶೆಟ್ಟರು 76ನೇ ವಯಸ್ಸಿನಲ್ಲಿ ತಾ. 4—7—71ರಂದು ಸ್ವಗೃಹದಲ್ಲಿ ನಿಧನ ಹೊಂದಿದರು. ದಿವಂಗತರು ಮುಲ್ಕಿಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಮೊಕ್ತೇಸರರಾಗಿದ್ದು ದೇವಳದ ಅಭಿವೃದ್ಧಿಗಾಗಿ ತುಂಬಾ ಸೇವೆ ಸಲ್ಲಿಸಿದ್ದರು. ವಿವಿಧ ಸಾರ್ವಜನಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದ ಇವರು 1922ರಲ್ಲಿ ಮುಲ್ಕಿಯಲ್ಲಿ ವೈದ್ಯಕೀಯ ವೃತ್ತಿಯನ್ನು ಪ್ರಾರಂಭಿಸಿದ್ದರು. ಮುಲ್ಕಿ ಆಸ್ಪತ್ರೆಯ ಗೌರವ ವೈದ್ಯಾಧಿಕಾರಿಯಾಗಿಯೂ ದುಡಿದಿದ್ದರು.

(ಮೂರನೇ ಪುಟದಿಂದ)

ಹತ್ತಿರುವ ಕಚ್ಚಾಟ ಮುಂದಿನ ಸಾರ್ವತ್ರಿಕ ಚುನಾವಣೆಗಳ ವೇಳೆಯಲ್ಲಿ ಇಂಡಿಕೇಟಿಗೆ ಪ್ರಬಲ ಆಘಾತ ನೀಡಲಿದೆಯೆಂಬುದು ಖಚಿತ. ೭೧ರಲ್ಲಿ ಬೀಸಿದ ಇಂದಿರಾಪರ ಗಾಳಿ ೭೨ರಲ್ಲಿ ಆಕೆಗೆ ಪ್ರತಿಕೂಲವಾಗಿ ಬೀಸಿದರೂ ಬೀಸಬಹುದು. ಈ ನಿರೀಕ್ಷಿತ ಬಿರುಗಾಳಿಗೆ ಅಡ್ಡ ಗೋಡೆ ಕಟ್ಟುವುದೀಗ ಇಂಡಿಕೇಟಿಗರ ಕರ್ತವ್ಯ.

●●

ಮನೆಯೊಂದಾದಲ್ಲಿ ಇರಲೇಬೇಕಾದ

ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2–00

❖ ❖ ❖

ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ

ಗೀತೆಯ ಸಮೂಲ ಅನುವಾದ

ಗೀತೆಯ ಕೈಗನ್ನಡಿ

ಪಾಕೆಟ್ ಎಡಿಶನ್ ಬೆಲೆ ರೂ. 1–50

❖ ❖ ❖

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2–00

❖ ❖ ❖

Letter Writing Made Easy

- ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ

ಬೆಲೆ ರೂ. 1-50.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್)

ಉಡುಪಿ, ದ. ಕ.

Independence Day Special, 1971

ನವಯುಗ

ಸ್ವಾತಂತ್ರ್ಯೋತ್ಸವ ಸಂಚಿಕೆ

ಆಗೋಸ್ತು ೧೫ ಸಮೀಪಿಸುತ್ತಿದೆ; ಭಾರತೀಯರಾದ ನಮಗೊಂದು ಪರಮ ಪವಿತ್ರ ದಿನ. ಸ್ವಾತಂತ್ರ್ಯ ದಿನೋತ್ಸವದ ಸವಿನೆನಪನ್ನು ಚಿರಂತನವಾಗಿರಿಸಲು ತಮ್ಮ ನೆಚ್ಚಿನ **ನವಯುಗವು** ನಾಡಿನ ಸುವಿಖ್ಯಾತ ಬರಹಗಾರರ ರಾಜಕೀಯ ಹಾಗೂ ಸಾಂಸ್ಕೃತಿಕ ಮೌಲ್ಯವಿರುವ ಲೇಖನಗಳಿಂದ ಕೂಡಿದ ವಿಶೇಷಾಂಕವನ್ನು ಎಂದಿನಂತೆ ಈ ವರ್ಷವೂ ಪ್ರಕಟಿಸುತ್ತದೆ.

ಈ ಜನಪ್ರೀತ ಪತ್ರಿಕೆಯು ಅಸಂಖ್ಯ ಜನರ ಕೈಸೇರುತ್ತ ತಮ್ಮ ಉದ್ದಿಮೆ, ವ್ಯವಹಾರಗಳ ನೈಜ ದರ್ಶನವನ್ನು ಎಲ್ಲರಿಗೂ ಒದಗಿಸುವುದು. ಆ ಪ್ರಯುಕ್ತ ದಯವಿಟ್ಟು ಆದಷ್ಟು ತ್ವರಿತವಾಗಿ ತಮ್ಮ ಜಾಹೀರಾತನ್ನು ಕಳುಹಿಸಿ ಸಹಕರಿಸಿರಿ.

ಲೇಖಕರ ಸಂದರ್ಭೋಚಿತವಾದ ಸಣ್ಣ ಲೇಖನ, ಹರಟೆ, ಪ್ರಬಂಧ, ಕವನಾದಿಗಳನ್ನು ಈ ತಿಂಗಳಾಂತ್ಯದೊಳಗೆ ಕಳಿಸಬಹುದು.

ವ್ಯವಸ್ಥಾಪಕರು,

ನವಯುಗ, ಉಡುಪಿ.

ಏನೇ ಬಂದರೂ ಶಾಂತನಾಗಿರು

* ಉಸಿರು ಬಿಗಿಹಿಡಿದು ಶಾಂತನಾಗಿರು.

* ತೊಂದರೆ ಸುತ್ತಲೂ ದಾಳಿ ನಡೆಸಿರುವಾಗ ಶಾಂತನಾಗಿರು

* ಅವಹೇಳನವು ನಿನ್ನ ಮೇಲೆ ಅಭಿಯೋಗ ನಡೆಸಲು ಸಿದ್ಧವಾಗಿ ನಿಂತಿರುವಾಗ ನೀನು ಶಾಂತನಾಗಿರು.

* ನಿನ್ನ ಭಾವನೆಗಳಿಗೆ ನೋವೆನಿಸಿದಾಗ ನೀನು ಮನಸ್ಸಿನ ಸ್ಥಿಮಿತ ಕಳೆದುಕೊಳ್ಳದೆ ಶಾಂತನಾಗಿರು.

* ನಿನ್ನನ್ನು ಉದ್ವೇಗ ಉಪಶಮನಗೊಳ್ಳುವ ವರೆಗೆ ಉಸಿರು ಬಿಗಿಹಿಡಿದು ಶಾಂತನಾಗಿರು.

* ಮನಸ್ಸಿಗೆ ಕಹಿ ಎನಿಸಿದಾಗ ಪತ್ರವನ್ನು ಅಂಚೆಗೆ ಹಾಕದೆ ಕೈ ತಡೆ ಹಿಡಿದು ಸುಮ್ಮನಾಗಿರು.

* ಟೆಲರಿನ ಕಳೆಯುಲಿ ಕತ್ತಲು ಕವಿದ ನಿನ್ನ ಮನಸ್ಸಿಗೆ, ನಿನ್ನ ಕಣ್ಣಿಗೆ ಬೆಳಕು ಕಂಡೇ ಕಾಣುತ್ತದೆ.

* ಕಾಲವು ಅನೇಕ ಢುತ್ಕಾರಗಳನ್ನು ಮಾಡಿಸಬಲ್ಲದು ಎಂಬುದನ್ನು ನೆನಪಿನಲ್ಲಿಡು.

* ನೀನು, ಸ್ಥಿಮಿತ ತಂದು ಮಾತನಾಡುವ ವರೆಗೆ ನಾಲಗೆಯನ್ನು ಬಿಗಿಹಿಡಿ, ಆಡಬೇಕೆಂದಿರುವ ಮಾತನ್ನು ಆಡುವ ಆವಶ್ಯಕತೆಯೇ ಕಾಣದಿರಬಹುದು.

* ಮನುಷ್ಯ ಯೋಜಿತವಾದ ಅಸ್ತ್ರಗಳಲ್ಲಿ ಭಾರೀ ಪರಿಣಾಮಕಾರಿಯಾದುದೆಂದರೆ ಮೌನವೊಂದೆ! ಅದರ ಶಕ್ತಿ ಬಹು ಅಪಾರ.

* ಬೇರೆಯವರಿಗಿರುವ ತೊಂದರೆಗಳ ಬಗೆಗೆ ಆಲೋಚಿಸಿದರೆ ನಿನ್ನ ತೊಂದರೆಗಳು ನಿನಗೆ ಹಗುರಾಗಿ ಕಾಣಿಸುತ್ತವೆ.

* ನಿನ್ನ ಹೃದಯ ಮುರಿದು ಬೀಳುವಂಥ ಸ್ಥಿತಿ ಪ್ರಾಪ್ತವಾದಾಗ ಇನ್ನೊಬ್ಬರ ತೊಂದರೆಗಳ ಬಗೆಗೆ ಚಿಂತಿಸು.

* ನಿನ್ನ ತಲೆ ಛಿಟಲ್ ಎಂದು ಸಿಡಿಯುವಾಗ ಇನ್ನೊಬ್ಬರ ತಲೆನೋವಿನ ಬಗೆಗೆ ಯೋಚಿಸು.

* ನಿನಗೆ ಎದುರಾದ ಶಾಪಗಳನ್ನು ಎಣಿಸದೆ, ನೀನು ಪಡೆದಿರುವ ವರಗಳನ್ನು ಎಣಿಸು. ನಿನ್ನ ಮನಸ್ಸು ಆಗ ನಿಜವಾಗಿಯೂ ಹಗುರಾಗುತ್ತದೆ.

—(ಪ್ರ.)

ಮಿತ ಕುಟುಂಬ ಯೋಜನೆಗೆ

ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, ದ.ಕ.

'ಪ್ರೊದತ್ತೂರಿನಲ್ಲಿ ಶಿಶುಹತ್ಯೆ'

(ಎರಡನೇ ಪುಟದಿಂದ)

ದರು. ಜೊತೆಗೆತ್ತು ಕೃತ್ಯದ ಪುರಾವೆಗಳನ್ನು ಕಾಣೆಯಾಗುವಂತೆ ಮಾಡಿದರು ಎನ್ನುವ ಆರೋಪ. ಸೆಷನ್ಸ್ ಜಡ್ಜಿಗಳ ಮುಂದು ವಿಚಾರಣೆ ಆರಂಭವಾಯಿತು.

ಸೆಷನ್ಸ್ ಜಡ್ಜಿಗಳು, ಸುಬ್ಬಯ್ಯ ಚೆಟ್ಟಿಯೂರರ ಮುಂದೆ ಹೇಳಿದ ತಪ್ಪೊಪ್ಪಿಗೆಯನ್ನು ಅಂಗೀಕರಿಸಲು ನಿರಾಕರಿಸಿದರು. ಅದನ್ನು ಸ್ವೀಕರಿಸಲು ಕಾಯಿದೆ ಅಡ್ಡಿಯಾಗುತ್ತದೆ ಎಂಬ ಅಭಿಪ್ರಾಯಕ್ಕೆ ಬಂದರು. ತಾಯಿ-ಮಗಳಲ್ಲಿ ಯಾರು ಮಗುವನ್ನು ಕೊಂದರೆಂಬುದು ಸ್ಥಿರಪಟ್ಟಿಲ್ಲ. ಆದ್ದರಿಂದ ಇಬ್ಬರ ಮೇಲೂ ಕೊಲೆಯ ಆರೋಪ ರುಜುವಾತಾಗಿಲ್ಲ. ಈ ಕಾರಣಕ್ಕಾಗಿ ಅವರಿಬ್ಬರನ್ನು ಖೂನಿಯ ಆರೋಪದಿಂದ ಬಿಡುಗಡೆ ಮಾಡಿದರು. ಆದರೆ ಕೃತ್ಯಕ್ಕೆ ಸಂಬಂಧಿಸಿದ ಪುರಾವೆಗಳನ್ನು ನಾಶಗೊಳಿಸಲು ಪ್ರಯತ್ನಿಸಿದರೆಂಬುದು ಸಿದ್ಧ ಪಟ್ಟಿದೆ ಎಂದು ಆ ಆಪಾದನೆಗೆ ಶಿಕ್ಷೆ ವಿಧಿಸಿದರು. ವಿಧಿಸಿದ ಶಿಕ್ಷೆ ತೀರ ಹಗುರದ್ದು: ವೆಂಕಟಮ್ಮನಿಗೆ ನಾಲ್ಕು ವರ್ಷಗಳ ಕಠಿಣ ಸಜ, ಶ್ರೀಮತಿ ಚಿನ್ನ ಕೊಂಡಯ್ಯನವರಿಗೆ ಕೋರ್ಟು ಏಳುವವರೆಗಿನ ಶಿಕ್ಷೆ.

ರಾಮುಡುವಿನ ಮಾತಾ-ಪಿತೃಗಳಿಗೆ ಇದರಿಂದ ಅತೃಪ್ತಿಯುಂಟಾಯಿತು. ಅವರು ಹೈಕೋರ್ಟಿಗೆ ಅರ್ಜಿ ಸಲ್ಲಿಸಿದರು. ಮಾಡಿದ ತಪ್ಪಿಗೆ ವಿಧಿಸಿದ ಶಿಕ್ಷೆ ತೀರ ಕಡಿಮೆಯಾಯಿತೆಂದೂ, ಕೊಲೆಯ ಆರೋಪದಿಂದ ವಿಮುಕ್ತಿಗೊಳಿಸಿದ್ದು ತಪ್ಪೆಂದೂ ಅರ್ಜಿಯಲ್ಲಿ ಕಾಣಿಸಿದರು. ಪ್ರತ್ಯೇಕ ಅರ್ಜಿಯೊಂದನ್ನು ಸರಕಾರದ ಪರ ಹೈಕೋರ್ಟಿಗೆ ಸಲ್ಲಿಸಲಾಯಿತು.

ಈ ಎರಡು ಅರ್ಜಿಗಳು ಏಕ ಕಾಲದಲ್ಲಿ ವಿಚಾರಣೆಗೆ ಬಂದುವು. ಅದನ್ನು ಇಬ್ಬರು ಜಡ್ಜಿಗಳ ಮುಂದು ವಾದಿಸಲಾಯಿತು. ಒಬ್ಬರು ನ್ಯಾಯಾಧೀಶರು, ಇಬ್ಬರೂ ಸೇರಿ ಕೊಲೆ ನಡೆಸಿದ್ದಾರೆ. ಆದ್ದರಿಂದ ಇಬ್ಬರೂ ಕೊಲೆ ಮಾಡಿದ ಅಪರಾಧಕ್ಕೆ ದಂಡಾರ್ಹರು ಎಂದು ತೀರ್ಮಾನಿಸಿ ಜೀವಾವಧಿ ಶಿಕ್ಷೆ ವಿಧಿಸಿದರು. ಅಪೀಲನ್ನು ಕೇಳಿದ ಮತ್ತೊಬ್ಬರು ಇನ್ನೊಂದು ನಿಲುವಿಗೆ ಬಂದರು. ಈ ಕೊಲೆ ನಡೆಸಲು ಇಬ್ಬರು ಸೇರುವ ಅಗತ್ಯವಿಲ್ಲ. ಇಬ್ಬರಲ್ಲಿ, ಯಾರೊಬ್ಬರೂ ಸುಲಭವಾಗಿ ಮಾಡಿ ಮುಗಿಸ ಬಹುದಾದ ಕೆಲಸ. ಆದರೆ ಆರೋಪಿಗಳಲ್ಲಿ ಯಾರೇ ಕೊಲೆ ಮಾಡಿದರೆಂಬುದು ನಿಸ್ಸಂದಿಗ್ಧವಾಗಿ ಹೊರಬಂದಿಲ್ಲ. ಆದ್ದರಿಂದ ಕೊಲೆಯ ಆಪಾದನೆಯಿಂದ ಇವರಿಬ್ಬರೂ ಬಿಡುಗಡೆ ಹೊಂದಬೇಕಾಗಿದೆ. ಆದರೆ ಕೊಲೆಯ ಕುರುಹುಗಳನ್ನು ನಾಶ ಪಡಿಸಲು ಇಬ್ಬರೂ ಜೊತೆಯಾಗಿದ್ದಾರೆ. ಇದರಲ್ಲಿ ಎಳ್ಳಷ್ಟು ಅನುಮಾನವಿಲ್ಲ. ಈ ಅಪರಾಧಕ್ಕೆ ವಯಸ್ಸಾದ ಹೆಂಗುಸಂಮ ವೆಂಕಟಮ್ಮನಿಗೆ ನಾಲ್ಕು ವರ್ಷಗಳ ಸಶ್ರಮ ಶಿಕ್ಷೆಯನ್ನೂ ಅವಳ ಮಗಳಿಗೆ ಏಳು ವರ್ಷಗಳ ಶಿಕ್ಷೆಯನ್ನೂ ವಿಧಿಸಿದರು.

ಪರಸ್ಪರ ವಿರುದ್ಧವಾದ ಅಭಿಪ್ರಾಯಕ್ಕೆ ಈ ಇಬ್ಬರು ನ್ಯಾಯಾಧೀಶರು ಬಂದುದರಿಂದ ಒಬ್ಬರ ತೀರ್ಪೂ ಊರ್ಜಿತವಾಗಲಿಲ್ಲ. ಕೇಸಿನ ವಿಚಾರಣೆಯನ್ನು ಮೂರನೆಯವರಿಗೆ ವಹಿಸಲಾಯಿತು. ಕೊಲೆಯ ವಿಚಾರದಲ್ಲಿ ಈ ನ್ಯಾಯಾಧೀಶರು ಮೂಲ ಕೋರ್ಟಿನ ತೀರ್ಪನ್ನು ಎತ್ತಿ ಹಿಡಿದು, ಇನ್ನೊಂದು ಅಪರಾಧಕ್ಕೆ ತಲಾ ನಾಲ್ಕು ವರ್ಷಗಳ ಸಶ್ರಮ ಶಿಕ್ಷೆ ವಿಧಿಸಿದರು.

ತಾಯಿ-ಮಗಳು ಜೈಲಿಗೆ ಹೋದರು. ಶಿಕ್ಷೆಯನ್ನು ಅನುಭವಿಸಿದರು. ರಾಮುಡು ಪ್ರಕರಣ ಹೀಗೆ ಮುಕ್ತಾಯ ಕಂಡಿತು.

ಬೀದರ ಜಿಲ್ಲೆಯಲ್ಲಿ

ಸಣ್ಣ ರೈತರ ಅಭಿವೃದ್ಧಿ ಯೋಜನೆ

ಶ್ರೀ ಬಿ. ಎಸ್. ಶ್ರೀಕಂಠಯ್ಯ (ವಿಭಾಗಾಧಿಕಾರಿಗಳು–ಗುಲಬರ್ಗ)

ನಮ್ಮ ದೇಶದಲ್ಲಿ ರಾಜಕೀಯ ಸ್ವಾತಂತ್ರ್ಯಾನಂತರ ಜನ ಜೀವನದ ಮಟ್ಟವನ್ನು ಸುಧಾರಿಸಲು ಅನೇಕ ಅಭಿವೃದ್ಧಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಯಿತು. ಆ ಯೋಜನೆಗಳಲ್ಲಿ ಹೆಚ್ಚಾಗಿ ರೈತರ ಅಭಿವೃದ್ಧಿಗೆ ಪ್ರಾಶಸ್ತ್ಯ ಕೊಡಲಾಗಿದೆ. ನಮ್ಮ ದೇಶ ಕೃಷಿ ಪ್ರಧಾನವಾದ ರಾಷ್ಟ್ರ. ಕಾರಣ ಕೃಷಿಯ ಅಭಿವೃದ್ಧಿಗೆ ಪ್ರಾಧಾನ್ಯ ಕೊಡುವುದು ಸಹಜ. ಈ ಯೋಜನೆಗಳ ಪೈಕಿ ಜನಪದ ಅಭಿವೃದ್ಧಿ ಯೋಜನೆಯೂ ಒಂದು. ಜನಪದ ಅಭಿವೃದ್ಧಿ ಯೋಜನೆಯ ಸಾಧನೆಯ ಫಲವಾಗಿ ಕೃಷಿಕ್ಷೇತ್ರದಲ್ಲಿ ಹೆಚ್ಚಾಗಿ ಪ್ರಗತಿ ಕಂಡುಬಂದಿದೆ. ಆದರೂ ಈ ಯೋಜನೆಗಳ ಪ್ರಯೋಜನ ಕೇವಲ ಕೆಲವೊಂದು ಶಕ್ತಿವಂತ ದೊಡ್ಡ ರೈತರಿಗೆ ಲಭಿಸಿ ಸಣ್ಣ ರೈತರಿಗೆ ಸಾಕಷ್ಟು ಪ್ರಮಾಣದಲ್ಲಿ ದೊರೆತಿಲ್ಲವೆಂದು ಭಾರತ ಸರ್ಕಾರದವರು ಆಗಾಗ್ಗೆ ನಡೆಸಿದ ಸರ್ವೆ ಮುಖಾಂತರ ಮನಗಂಡು, ರೈತಸಮಾಜದಲ್ಲಿ ಬಹುಪಾಲು ಇರುವ ಸಣ್ಣ ರೈತರ ಅಭಿವೃದ್ಧಿ ಸಾಧನೆ ಮಾಡಬೇಕೆಂಬ ಉದ್ದೇಶದಿಂದ ಒಂದು ಯೋಜನೆಯನ್ನು ರೂಪಿಸಿದರು. ಈ ಯೋಜನೆಯೇ "ಸಣ್ಣ ರೈತರ ಅಭಿವೃದ್ಧಿ ಯೋಜನೆ". ಯೋಜನೆಯು ಕಾರ್ಯನಿರ್ವಹಣೆಗೆ ಸ್ಥಾಪನೆಯಾದ ಸಂಸ್ಥೆಗಳೇ ಸಣ್ಣ ರೈತರ ಅಭಿವೃದ್ಧಿ ಸಂಸ್ಥೆಗಳು ಎಂದು ಹೆಸರು ಪಡೆದವು.

ಈ ತರಹದ ಸಂಸ್ಥೆಗಳು ಭಾರತದಲ್ಲಿ 40—50 ಅಸ್ತಿತ್ವಕ್ಕೆ ಬಂದಿವೆ. ಅಥವಾ ಬರುತ್ತಲಿವೆ. ಮೈಸೂರು ರಾಜ್ಯದಲ್ಲಿ ಈಗಾಗಲೇ ನಾಲ್ಕು ಸಣ್ಣ ರೈತರ ಅಭಿವೃದ್ಧಿ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ. ಇವುಗಳಲ್ಲಿ ಒಂದಾಗಿ ಬೀದರ್‌ನಲ್ಲಿ. ಬೀದರ್ ಜಿಲ್ಲಾ ವ್ಯಾಪ್ತಿಯನ್ನೊಳಗೊಂಡ "ಬೀದರ ಜಿಲ್ಲಾ ಸಣ್ಣ ರೈತರ ಅಭಿವೃದ್ಧಿ ಸಂಸ್ಥೆ" –1970ನೇ ಇಸ್ವಿ ಅಕ್ಟೋಬರ್ ತಿಂಗಳಲ್ಲಿ ಅಸ್ತಿತ್ವಕ್ಕೆ ಬಂದಿತು.

ಯೋಜನೆಯ ಗುರಿಗಳು

ಜಿಲ್ಲೆಯ ಎಲ್ಲ ಸಣ್ಣ ರೈತರ ಸಮೀಕ್ಷೆ ಮಾಡಿ ಅವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ ಸುಧಾರಿಸಲು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು; ಸರ್ಕಾರದ ಅಂಗವಾಗಿ ಹಾಲಿ ಕೆಲಸ ಮಾಡುತ್ತಿರುವ ವ್ಯವಸಾಯ ಇಲಾಖೆ, ತೋಟಗಾರಿಕೆ ಇಲಾಖೆ, ಪಶು ಸಂಗೋಪನೆ ಇಲಾಖೆ, ಸಹಕಾರ ಇಲಾಖೆ, ಇವುಗಳ ಕಾರ್ಯನೀತಿಗಳನ್ನು ಸಮನ್ವಯಗೊಳಿಸಿ ಸಣ್ಣ ರೈತರ ಅಭಿವೃದ್ಧಿಗಾಗಿ ಸಹಕಾರ ಸಂಸ್ಥೆಗಳ ಮತ್ತು ವಾಣಿಜ್ಯ ಬ್ಯಾಂಕುಗಳ ಮತ್ತು ಸಣ್ಣ ರೈತರ ಸಹಕಾರ ಪಡೆದು, ಅಭಿವೃದ್ಧಿ ಕಾರ್ಯ ಕೈಗೊಳ್ಳುವುದು, ಸಣ್ಣ ರೈತರ ಉಪಯೋಗಕ್ಕಾಗಿ ಯಾಂತ್ರಿಕ ಸಲಕರಣೆಗಳು ಹಾಗೂ ಸುಧಾರಿತ ವ್ಯವಸಾಯ ಉಪಕರಣಗಳು ಮತ್ತು ದುರಸ್ತು, ಸೇವಾಕ್ರಮ ಮುಂತಾದ ಕಾರ್ಯಕ್ರಮಗಳನ್ನು ಜಾರಿಗೆ ತರುವುದು, ಸಣ್ಣ ರೈತರಲ್ಲಿ ಸುಧಾರಿತ ವ್ಯವಸಾಯ ಕ್ರಮಗಳನ್ನು ಪ್ರಸಾರಗೊಳಿಸಿ ಅವರ ವ್ಯವಸಾಯ ಕಾರ್ಯದ ಬಗ್ಗೆ ತಕ್ಕ ಮಾರ್ಗದರ್ಶನ ಮತ್ತು ವ್ಯವಸಾಯಕ್ಕೆ ಬೇಕಾಗುವ ಹಣ ಸೌಲಭ್ಯ, ಗೊಬ್ಬರ, ಕ್ರಿಮಿನಾಶಕ ಔಷಧ, ಮುಂತಾಗಿ ವ್ಯವಸಾಯ ವಸ್ತುಗಳ ಸರಬರಾಜು ವ್ಯವಸ್ಥೆ ಬಗ್ಗೆ ನಿರ್ದೇಶನ ಕೊಡುವುದು; ವ್ಯವಸಾಯಕ್ಕೆ ಉಪಕಸಬು ಆಗಿ ಸಣ್ಣ ರೈತರು ಕೋಳಿ ಸಾಕಾಣಿಕೆ, ಪಶು ಸಂಗೋಪನೆ, ಕುರಿಪಾಲನೆ ಮುಂತಾಗಿ ಕಾರ್ಯಕ್ರಮ ಕೈಗೊಳ್ಳಲು ಸಹಾಯ ಮತ್ತು ಮಾರ್ಗದರ್ಶನ ಕೊಡಿಸುವುದು, ಮಾರಾಟ ಮತ್ತು ಪರಿವರ್ತನೆ ಕಾರ್ಯಗಳನ್ನು ವ್ಯವಸ್ಥೆಗೊಳಿಸುವುದು, ಜಿಲ್ಲೆಯ ಗ್ರಾಮೀಣ ಕುಶಲ ಕರ್ಮಿಗಳ ಸಮಸ್ಯೆಗಳನ್ನು ತಿಳಿದು ಅವುಗಳ ಪರಿಹಾರಕ್ಕೆ ಮತ್ತು ಅವರ ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗುವಂತೆ ಯೋಜನೆಗಳನ್ನು ತಯಾರು ಮಾಡಿ ಅವುಗಳನ್ನು ಕಾರ್ಯರೂಪಕ್ಕೆ ತರುವುದು, ಇತ್ಯಾದಿ ಈ ಸಂಸ್ಥೆಯ ಮುಖ್ಯ ಉದ್ದೇಶಗಳು ಮತ್ತು ಕಾರ್ಯಕ್ರಮಗಳು.

ಈ ಉದ್ದೇಶ ಸಾಧನೆಗೆ ನಾನಾ ರಂಗಗಳಲ್ಲಿ ಎಂದರೆ ವ್ಯವಸಾಯ, ಸಹಕಾರ, ತೋಟಗಾರಿಕೆ, ಪಶುಪಾಲನೆ ಮುಂತಾದ ವಿಭಾಗಗಳಲ್ಲಿ ಯೋಜನೆಗಳನ್ನು ತಯಾರಿಸಿ ನಾಲ್ಕು ವರ್ಷದ ಅವಧಿಯಲ್ಲಿ ಗುರಿಸಾಧಿಸಬೇಕೆಂದು ವಿಚಾರವಿದೆ. ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಾಗ ಸಣ್ಣ ರೈತರಿಗೆ ನಾಲ್ಕು ವರ್ಷದ ಅವಧಿಯಲ್ಲಿ ನಾನಾ ಅಭಿವೃದ್ಧಿ ಕಾರ್ಯಗಳಿಗೆ ಒಟ್ಟು 546 ಲಕ್ಷ ರೂಪಾಯಿಗಳನ್ನು ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ರೂಪದಲ್ಲಿ ಸಹಕಾರ ಸಂಘಗಳ ಮುಖಾಂತರ ವಿತರಣೆ ಮಾಡಬೇಕೆಂದು ಉದ್ದೇಶಿಸಲಾಗಿದೆ.

ಇದರ ಜೊತೆ ಸಹಕಾರ ಸಂಘಗಳು ವಿತರಣೆ ಮಾಡುವ ಹಣದ ಮೇಲೆ ಅಪಾಯ ನಿವಾರಣಾನಿಧಿ ರೂಪದಲ್ಲಿ ಸುಮಾರು 35 ಲಕ್ಷ ರೂಪಾಯಿಗಳನ್ನು ಸಹಕಾರ ಸಂಘಗಳಿಗೆ ಈ ಸಂಸ್ಥೆ ವಿತರಣೆ ಮಾಡುತ್ತದೆ. ಸಣ್ಣ ರೈತರು ತಾವು ಪಡೆಯುವ ಸಾಲಕ್ಕೆ ಸಾಕಷ್ಟು ಆಧಾರ ಕೊಡಲು ಅಸಮರ್ಥರಾದಾಗ ಮತ್ತು ಅಭಿವೃದ್ಧಿ ಕಾರ್ಯಗಳ ಸಾಧನೆಯ ನಂತರ ಬೇಸಾಯದಿಂದ ಬರುವ ಉತ್ಪನ್ನವು, ಸಾಲದ ಕಂತುಗಳನ್ನು ನ ಕಾಲದಲ್ಲಿ ತೀರಿಸಲು ಸಾಲದೇ ಹೋದಾಗ ಅವರಿಗೆ ಸಹಾಯ ಧನದ ರೂಪದಲ್ಲಿ ಈ ಸಂಸ್ಥೆ 4 ವರ್ಷಗಳ ಅವಧಿಯಲ್ಲಿ ಸುಮಾರು 120 ಲಕ್ಷ ರೂಪಾಯಿಗಳನ್ನು ವಿತರಣೆ ಮಾಡುತ್ತದೆ. ಸಂಸ್ಥೆಯ ಒಟ್ಟು ವೆಚ್ಚ 160 ಲಕ್ಷ ರೂಪಾಯಿಗಳು. ಬೀದರ ಜಿಲ್ಲೆಯಲ್ಲಿ 91 ಸಾವಿರ ರೈತ ಕುಟುಂಬಗಳ ಪೈಕಿ 36 ಸಾವಿರ ರೈತಕುಟುಂಬಗಳು ಸಣ್ಣ ರೈತರು ಎಂದು, ಈ ಸಂಸ್ಥೆಯು ನಡೆಸಿದ ಸಮೀಕ್ಷೆಯಿಂದ ತಿಳಿದು ಬಂದಿದೆ. ಈ ಎಲ್ಲ 36000 ರೈತರನ್ನು ಈಗಾಗಲೇ ಗುರುತಿಸಲಾಗಿದೆ. ಈ ಎಲ್ಲ ಸಣ್ಣ ರೈತರು ಯೋಜನೆಯ ಕಾರ್ಯವ್ಯಾಪ್ತಿಗೆ ಒಳಪಡುತ್ತಾರೆ. ಎರಡೂವರೆ ಎಕರೆ ಮೇಲ್ಪಟ್ಟು ಹತ್ತು ಎಕರೆ ಒಳಗೆ ಖುಷ್ಕಿ ಜಮೀನು ಇದ್ದುವರು, ಎರಡೂವರೆ ಎಕರೆ ಮೇಲ್ಪಟ್ಟು ಐದು ಎಕರೆ ಒಳಗೆ ತರೀ ಜಮೀನು ಇದ್ದವರು ಸಣ್ಣ ರೈತರೆಂದು ಪರಿಗಣಿಸಲಾಗಿದೆ. ಸಣ್ಣ ರೈತರ ಆರ್ಥಿಕ, ಸಾಮಾಜಿಕ, ಅಭಿವೃದ್ಧಿಯೇ ಯೋಜನೆಯ ಮುಖ್ಯಗುರಿ. ಒಡ್ಡು ಹಾಕುವುದು, ಭೂಮಿಯ ಸಮಪಾತಳಿ ಮಾಡುವುದು

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

NAVAYUGA 15-7-1971

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಮತ್ತು ಟ್ರ್ಯಾಕ್ಟರನಿಂದ ಉಳುಮೆ ಮಾಡುವುದು, ನೀರಾವರಿ ಸೌಕರ್ಯದ ಏರ್ಪಾಡು, ವ್ಯವಸಾಯ ಉಪಕರಣಗಳ ವಿತರಣೆ, ಬೆಳೆ ಸಾಲ ವಿತರಣೆ ಹಾಗೂ ವ್ಯವಸಾಯ ವಸ್ತುಗಳ ಮಾರಾಟ ಮತ್ತು ಪರಿವರ್ತನೆ ಇತ್ಯಾದಿ ಕ್ರಮಗಳು ಈ ಯೋಜನೆಯಲ್ಲಿ ಅಡಕವಾಗಿವೆ.

ದೊಡ್ಡ ನೀರಾವರಿ ಯೋಜನೆಗಳು

ಜಿಲ್ಲೆಯಲ್ಲಿ ದೊಡ್ಡ ನೀರಾವರಿ ಯೋಜನೆಗಳ ಅಭಾವ ಮತ್ತು ಭೂಮಿ ಒಳಭಾಗದಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಇರುವುದು, ಈ ಯೋಜನೆಗೆ ಕಾರಣೀಭೂತವಾಗಿವೆ. ಈ ಯೋಜನೆಯ ವೆಚ್ಚ 272 ಲಕ್ಷ ಎಂದು ಅಂದಾಜು ಮಾಡಲಾಗಿದೆ. ವ್ಯವಸಾಯಕ್ಕೆ ಉಪಯೋಗಕ್ಕೆ ಬರಲು ಅನುಕೂಲವಾಗುವಂತೆ ಭಾವಿಗಳಿಗೆ ವಿದ್ಯುತ್‌ಚಾಲಿತ ಪಂಪ್‌ಸೆಟ್ಟು ಅಥವಾ ಡೀಸೆಲ್ ಇಂಜನ್ ಕೊಡಿಸಲು ಹಣ ಸಹಾಯ ಒದಗಿಸಲಾಗುತ್ತದೆ. ನಾಲ್ಕು ವರ್ಷಗಳ ಅವಧಿಯಲ್ಲಿ ಒಂದು ಲಕ್ಷ ಎಕರೆ ಜಮೀನಿನಲ್ಲಿ ಬೆಳೆ ತೆಗೆಯಲು ತಗಲುವ ಖರ್ಚಿಗಾಗಿ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕು 170 ಲಕ್ಷ ರೂಪಾಯಿ ಬೆಳೆಸಾಲ ವಿತರಣೆ ಮಾಡುವ ಕಾರ್ಯಕ್ರಮ ಇಟ್ಟುಕೊಂಡಿದೆ. ಈಗಾಗಲೇ 5ಸಾವಿರ ಸಣ್ಣ ರೈತರಿಗೆ 25ಸಾವಿರ ಎಕರೆ ಜಮೀನು ವ್ಯವಸಾಯಕ್ಕೆ ಬೆಳೆಸಾಲ 40ಲಕ್ಷರೂಪಾಯಿ ಮಂಜೂರ ಆಗಿದ್ದು ನಗದು ವಸ್ತು ರೂಪದಲ್ಲಿ ಬಟುವಡೆಯಾಗುತ್ತದೆ.

ವ್ಯವಸಾಯ ಅಭಿವೃದ್ಧಿ ಯೋಜನೆಯ ಜೊತೆ ಉಪಕಸುಬುಗಳ ಅಭಿವೃದ್ಧಿಯೂ ಅವಶ್ಯವೆಂದು ತಿಳಿದು, ಪಶುಸಂಗೋಪನೆ, ಉತ್ತಮ ತಳಿ ಹಾಲುಕೊಡುವ ದನಗಳ ವಿತರಣೆ, ಮತ್ತು ಕುರಿಪಾಲನೆ ಯೋಜನೆಗಳನ್ನು ಕೈಗೊಳ್ಳಲಾಗಿದೆ. ನಾಲ್ಕುವರ್ಷಗಳ ಅವಧಿಯಲ್ಲಿ 2ಸಾವಿರ ಕೋಳಿ ಯೂನಿಟ್‌ಗಳ ಸ್ಥಾಪನೆಯ ಗುರಿ ಇಟ್ಟುಕೊಳ್ಳಲಾಗಿದೆ. ಕೋಳಿಯ ಗೂಡುಗಳ ತಯಾರಿಕೆ ಈಗಾಗಲೇ ನಡೆಯುತ್ತಿದೆ. ಮುಂದಿನ ಒಂದು ತಿಂಗಳ ಅವಧಿಯಲ್ಲಿ 50ಯೂನಿಟ್ಟುಗಳನ್ನು ಸಣ್ಣ ರೈತರು ಹೊಂದುವರಾಗಿದ್ದಾರೆ. 21 ಕುಟುಂಬಗಳಿಗೆ ಉತ್ತಮ ತಳಿಯ ಹಾಲು ಕರೆಯುವ ಹಸು ಮತ್ತು ಎಮ್ಮೆಗಳನ್ನು ಕೊಡಲು ಏರ್ಪಾಡು ಮಾಡಲಾಗಿದೆ. ಅದಕ್ಕೆ ಬೇಕಾದ ಹಣ ಸಹಕಾರ ಸಂಘದವರು ಮತ್ತು ಇಲಾಖೆಯವರ ವಶಕೊಡಲು ತೀರ್ಮಾನಿಸಿದೆ 50 ಕುಟುಂಬಗಳಿಗೆ ಈ ವರ್ಷ ಕುರಿ ಮತ್ತು ಟಗರು ವಿತರಣೆ ಮಾಡಲು ಸಹಕಾರ ಇಲಾಖೆಯವರು ಮತ್ತು ಬ್ಯಾಂಕು ಕಾರ್ಯ ಪ್ರವೃತ್ತವಾಗಿವೆ. 4ವರ್ಷಗಳ ಅವಧಿಯಲ್ಲಿ 200 ಕುರಿ ಯೂನಿಟ್‌ಗಳು 2 ಸಾವಿರ ಕೋಳಿ ಯೂನಿಟ್‌ಗಳು 2000 ಹಾಲು ಕರೆಯುವ ದನಗಳು ಇವುಗಳ ವಿತರಣೆ, ಯೋಜನೆಯಲ್ಲಿ ಅಡಕವಾಗಿದೆ. ಇದಕ್ಕೆ ಬೇಕಾಗುವ ಹಣವನ್ನು ಸಹಕಾರ ಬ್ಯಾಂಕು ಸಣ್ಣ ರೈತರಿಗೆ ಪ್ರಾಥಮಿಕ ಸಹಕಾರ ಸಂಘಗಳ ಮುಖಾಂತರ ಮಧ್ಯಮಾವಧಿ ಸಾಲರೂಪದಲ್ಲಿ ವಿತರಣೆ ಮಾಡುತ್ತದೆ. ವೆಚ್ಚದಲ್ಲಿ ಶೇಕಡಾ 25 ಭಾಗ ಸಬ್‌ಸಿಡಿ ರೂಪದಲ್ಲಿ ಈ ಸಂಸ್ಥೆ ಸಣ್ಣರೈತರಿಗೆ ಸಹಾಯ ಮಾಡುತ್ತದೆ. ಯೂನಿಟ್‌ಗಳ ಮೇಲ್ವಿಚಾರಣೆ ಮತ್ತು ಕೋಳಿ ಮೊಟ್ಟೆ ಹಾಲು ಇವುಗಳ ಮಾರಾಟ ವ್ಯವಸ್ಥೆ ಇಲಾಖೆ ಮತ್ತು ಸಹಕಾರ ಸಂಘಗಳ ಹೊಣೆಯಾಗಿದ್ದು ಈ ಬಗ್ಗೆ ಸಂಸ್ಥೆ ತಕ್ಕ ನಿರ್ದೇಶನ ನೀಡುತ್ತದೆ. ಜಿಲ್ಲೆಯಲ್ಲಿ ಕುಶಲ ಕರ್ಮಿಗಳು, 5000ಮಂದಿ ಇದ್ದಾರೆಂದು ಅಂದಾಜು ಮಾಡಲಾಗಿದೆ. ಅವರ ಆರ್ಥಿಕ ಅಭಿವೃದ್ಧಿಗೆ 4 ವರ್ಷಗಳ ಅವಧಿಯಲ್ಲಿ ಸುಮಾರು 20ಲಕ್ಷ ರೂಪಾಯಿ ಅಂದಾಜು ವೆಚ್ಚದ ಯೋಜನೆ ತಯಾರಿಸಲಾಗಿದೆ. ಭಾರತ ಸರ್ಕಾರಕ್ಕೆ ಒಪ್ಪಿಗೆಗಾಗಿ ಅದನ್ನು ರವಾನಿಸಲಾಗಿದೆ.

ಸಣ್ಣ ರೈತರು ಯೋಜನೆಗಳ ಸದುಪಯೋಗ ಮಾಡಿಕೊಳ್ಳಬೇಕು. ಅವರು ಸತ್ಯದಿಂದ, ನಿಷ್ಠೆಯಿಂದ ಕಷ್ಟಪಟ್ಟು ಕೆಲಸ ಮಾಡಬೇಕು. ಸಹಕಾರ ಸಂಘಗಳ ಸೇವೆ ಯೋಜನೆಯ ಯಶಸ್ಸಿಗೆ ಮುಖ್ಯವಾದುದರಿಂದ ಅವು ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಬೇಕು.

(ಆಕಾಶವಾಣಿ ಧಾರವಾಡಕೇಂದ್ರ ಸೌಜನ್ಯದಿಂದ)

ಅಂತಾರಾಷ್ಟ್ರೀಯ ಪುಸ್ತಕ ವರ್ಷ

(ಒಂದನೇ ಪುಟದಿಂದ)

ಕಾಶನ ಮತ್ತು ವಿಕ್ರಯಕ್ಕೆ ಸಂಬಂಧಿಸಿ ಗೋಷ್ಠಿಗಳನ್ನೂ ತರಬೇತಿ ಕಾರ್ಯಕ್ರಮಗಳನ್ನೂ ನಡೆಸಲಾಗುವುದು. ಇವುಗಳಲ್ಲಿ ಪಾಠ್ಯಪುಸ್ತಕಗಳ ಲೇಖಕರು ಮತ್ತು ಸಂಪಾದಕರು, ಸಾಮಾನ್ಯ ಪುಸ್ತಕ ಮತ್ತು ಪೇಪರ್ ಬೇಂಕಿನ ಸಂಪಾದಕರು, ಮಕ್ಕಳ ಪುಸ್ತಕಗಳ ಸಂಪಾದಕರು, ಪುಸ್ತಕ ಸಜ್ಜುಗೊಳಿಸುವವರು ಮೊದಲಾದವರಿಗೆ ವಿಶೇಷವಾಗಿ ಸಂಬಂಧಪಿರುವುದು. ಪುಸ್ತಕ ಪ್ರಕಾಶನ ವ್ಯವಸ್ಥೆ, ಪುಸ್ತಕ ವಿಕ್ರಯದ ಕಾರ್ಯಗಳಲ್ಲಿ ಸಾಕಷ್ಟು ತಿಳುವಳಿಕೆ ಕೊಡಲಾಗುವುದು.

ಭಾರತೀಯ ಭಾಷೆಗಳಲ್ಲಿ ಉತ್ತಮವಾಗಿ ತಯಾರಿಸಿದ, ಮುದ್ರಿಸಿದ ಪುಸ್ತಕಗಳಿಗೆ ಬಹುಮಾನ ನೀಡುವುದು. ಅತಿ ಹೆಚ್ಚು ಪುಸ್ತಕಗಳನ್ನು ನಿರ್ಯಾತ ಮಾಡುವವರನ್ನೂ ಸನ್ಮಾನಿಸುವುದು. ಪುಸ್ತಕ ನಿರ್ಯಾತಕ್ಕೆ ಉಪಯುಕ್ತವಾಗುವ ವಸ್ತು ಮತ್ತು ಕಚ್ಚಾ ಮಾಲುಗಳನ್ನು ಹೊಂದುವಲ್ಲಿ ಯಾವ ತಡೆಯನ್ನೂ ಹೇರಬಾರದೆಂದು ಸರಕಾರವನ್ನು ಕೇಳಿಕೊಳ್ಳುವುದು. ಅಂಚೆ ಮೂಲಕ ಕಳಿಸುವ ಪುಸ್ತಕಗಳಿಗೆ ಅಂಚೆ ದರವನ್ನು ಇಳಿಸುವಂತೆ ವಿನಂತಿಸುವುದು.

ಭಾರತೀಯ ಭಾಷಾ ಪತ್ರಿಕೆಗಳು ಪುಸ್ತಕ ವರ್ಷದಲ್ಲಿ ವಿಶೇಷ ಸಂಚಿಕೆಗಳನ್ನು ಪ್ರಕಟಿಸುವಂತೆಯೂ ಈ ವಿಶೇಷಾಂಕಗಳಲ್ಲಿ ಪುಸ್ತಕ ಪ್ರಕಾಶನದ ವಿವಿಧ ಪಕ್ಷಗಳ ಮೇಲೆ ಬೆಳಕುಚೆಲ್ಲುವಂತೆಯೂ ಪ್ರಾರ್ಥಿಸಲಾಗುವುದು.

ಸಮಾಜದಲ್ಲಿ ಪುಸ್ತಕಗಳ ಮಹತ್ವ ಎಂಬುದರ ಮೇಲೆ ಚರ್ಚೆ ಮತ್ತು ನಿಬಂಧ ಸ್ಪರ್ಧೆಗಳನ್ನು ನಡೆಸುವಂತೆ ಶಿಕ್ಷಣಾಲಯಗಳನ್ನು ಒಲಿಸುವುದು.

ಶಿಕ್ಷಣ ಮಂತ್ರಾಲಯವು ಭಾರತೀಯ ಪ್ರಕಾಶಕ ಮತ್ತು ಪುಸ್ತಕ ವಿಕ್ರೇತರ ಮಹಾಸಂಘದ ಸಹಕಾರದಿಂದ ಪ್ರಕಾಶನ ಶಿಕ್ಷಣ ಸಂಸ್ಥಾನವನ್ನು ಸ್ಥಾಪಿಸ ಹೊರಟಿರುವುದು.

ದಿಲ್ಲಿ ವಿಶ್ವವಿದ್ಯಾಲಯದಲ್ಲಿ ಪುಸ್ತಕ ಪ್ರಕಾಶನ ವಿಷಯದಲ್ಲಿ ಪದವಿ ತರಗತಿಗಳನ್ನು ಆರಂಭಿಸುವುದು.

ಅಂತಾರಾಷ್ಟ್ರೀಯ ಪುಸ್ತಕ ವರ್ಷದ ನೆನಪಿಗಾಗಿ ವಿಶೇಷ ಅಂಚೆ ಚೀಟಿಯನ್ನು ಹೊರಡಿಸುವುದು. ಇದೇ ರೀತಿ ಇತರ ದೇಶಗಳಲ್ಲೂ ಅಂಚೆ ಚೀಟಿಯನ್ನು ಹೊರಡಿಸುವ ನಿರೀಕ್ಷೆಯಿರುವುದು. ಭಾರತೀಯ ಪ್ರಕಾಶಕರ ಪರಿಚಯ ಗ್ರಂಥವೊಂದನ್ನು ಪ್ರಕಟಿಸುವುದು.

ಜನತೆಯಲ್ಲಿ ಪುಸ್ತಕಗಳ ಬಗ್ಗೆ ಆಸಕ್ತಿ ಹುಟ್ಟುವಂತೆ ರೇಡಿಯೋ, ಟೆಲಿವಿಜನ್ ಮತ್ತು ಇತರ ಪ್ರಚಾರ ಸಾಧನಗಳ ಸಂಪೂರ್ಣ ಪ್ರಯೋಜನ ಪಡೆಯುವುದು.

ಹೊಸ ಲೇಖಕರ ಚೊಚ್ಚಲ ಕೃತಿಗಳಿಗೆ ಪುರಸ್ಕಾರ ನೀಡುವುದು. ಈ ಪುರಸ್ಕೃತ ಪುಸ್ತಕಗಳು ಪ್ರಮುಖ ಪ್ರಕಾಶಕರ ಮೂಲಕ ಪ್ರಕಟವಾಗುವಂತೆ ನೋಡುವುದು.

—ಇವು ಇನ್ನಿತರ ಕಾರ್ಯಕ್ರಮಗಳು. ●

ಉಡುಪಿ ಮುನ್ಸಿಫರ ಕೋರ್ಟಿನಲ್ಲಿ

P. & S. C. 6/1971

ಸಂಜೀವ ನಾಯಕ ಕೂಡಾ —ಅರ್ಜಿದಾರರು

ಮತ್ತು

ಸರೋಜಿನಿ ಬಾಯಿ —ಎದ್ರಿ

ಇವರೊಳಗೆ

ಸರೋಜಿನಿ ಬಾಯಿ, ಪಿ. ವೈಕುಂಠ ಕಾಮತರ ವಿಧವೆ ಹಾಗೂ ಪೆರ್ಡೂರು ಅನಂತ ನಾಯಕರ ಮಗಳು.

ಈ ಮೂಲಕ ಎದ್ರಿಗೂ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ ಅರ್ಜಿದಾರರು ಅರ್ಜಿಯಲ್ಲಿ ಕಾಣ್ಸಿದ ಸಾಲಗಳ ವಸೂಲಿ ಬಗ್ಗೆ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಮಾಡಿದ ಮೇಲ್ಕಾಣಿಸಿದ ಅರ್ಜಿಯು ತಾರೀಕು 2-8-1971ಕ್ಕೆ ಇಟ್ಟಿಯದೆ. ಆಕ್ಷೇಪ ದಾಖಲು ಮಾಡಲು ಬಯಸುವವರು ಸದ್ರಿ ತಾ. 9-8-1971ರಂದು ಬೆಳಿಗ್ಗೆ ಘಂಟೆ 11.00ಕ್ಕೆ ಈ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಅರ್ಜಿಯ ಮುಂದಿನ ತನ್ಖಿ ನಿಮ್ಮ ಗೈರು ಹಾಜರಿಯಲ್ಲಿ ಮಾಡೋಣಾದೀತು.

(ಕೋರ್ಟು ಹುಕ್ಕುಂ ಪ್ರಕಾರ)

ಪಿ. ಬಾಲಕೃಷ್ಣ ಆರ್. ಶೆಣೈ.
ಅರ್ಜಿದಾರರ ಕಡೆ ಎಡ್ವೋಕೇಟು

ಉಡುಪಿ, ದ. ಕ. 6—7—1971

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ, ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಚಂದಾ ಹಣ ಬಾಕಿ ಇರುವವರು ದಯಮಾಡಿ ಆದಷ್ಟು ಶೀಘ್ರ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ.ಯನ್ನು ಪಡಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 45

NAVAYUGA

22—7—1971

ಶಿಕ್ಷಣದಲ್ಲಿ ಆಮೂಲಾಗ್ರ ಕ್ರಾಂತಿ ಬೇಕು

ವಿದ್ಯಾರ್ಥಿಗಳಲ್ಲಿ ಅಶಿಸ್ತು ಹೆಚ್ಚಿದೆ; ಮುಖ್ಯವಾಗಿ ಕಾಲೇಜುಗಳಲ್ಲಿ ಅವರ ವರ್ತನೆ ಲಂಗುಲಗಾಮಿಲ್ಲದೆ ಮುಂದುವರಿದಿದೆ. ಇದರಿಂದ ಅವರಿಗೆ, ಅವರ ಪಾಲಕರಿಗೆ ಸಮಾಜಕ್ಕೆ, ದೇಶಕ್ಕೆ ಅಗೌರವ, ಅಪ್ರಯೋಜನ, ಅನಿಷ್ಟ.

ಇದೇಕೆ?

ಗಜೇಂದ್ರ ಗಡಕರ ಆಯೋಗವು ಈಕಡೆಗೆ ಕ್ಷಕಿರಣ ಬೀರಿತು. ಕೆಲವು ಕಾಲ ವಿದ್ಯಾರ್ಥಿ ಅಶಿಸ್ತಿನ ಬಗ್ಗೆ ಅಧ್ಯಯನ-ಪರಿಶೀಲನ ನಡೆಸಿ ತನ್ನ ವರದಿಯನ್ನದು ಸಲ್ಲಿಸಿ ಕರ್ತವ್ಯಪಾಲಿಸಿತು.

ವಿದ್ಯಾರ್ಥಿಗಳಿಗೆ ತಮ್ಮ ಭವಿತವ್ಯದ ಬಗ್ಗೆ ಭರವಸೆಯಿಲ್ಲದಿರುವುದೇ ಅಶಿಸ್ತಿನ ಮೂಲವೆಂಬುದು ವರದಿಯ ಮಥಿತಾಂಶ

ಭವಿತವ್ಯದ ಭರವಸೆಯೆಂದರೇನು?

ಅಧ್ಯಯನಾನಂತರ ಏನುಮಾಡಬೇಕು? ಜೀವನೋಪ ಜೀವನಕ್ಕೊಂದು ಉದ್ಯೋಗ ಬೇಕು. ಲಕ್ಷಾಂತರ ಪದವೀಧರರು ಕೋಟ್ಯಂತರ ಯುವಕರು ನಿರುದ್ಯೋಗಿಗಳಾಗಿರುವ ಭಾರತದಲ್ಲಿ ಉದ್ಯೋಗ ದೊರೆಯುವುದಾದರೂ ಎಲ್ಲಿಂದ?

ಬುದ್ಧಿವಂತರಿಗೆ ಎಲ್ಲೆಲ್ಲೂ ಪಾರಿ ಅಶಿಕ್ಷಿತ ನಿರುದ್ಯೋಗಿಗಳಿಗಿಂತ ಅರ್ಧ ಶಿಕ್ಷಿತ ನಿರುದ್ಯೋಗಿಗಳು ದೇಶಕ್ಕೆ ಅಪಾಯಕಾರಕರು; ಪೂರ್ಣ ಶಿಕ್ಷಿತರು ಗಂಡಾಂತರಕಾರಕರು.

ನಿರುದ್ಯೋಗ ಪ್ರಶ್ನೆಗೆ ಉತ್ತರವರಸಲು ಪಂ. ಜವಾಹರಲಾಲಾದಿಗಳು ಶ್ರದ್ಧಾಪೂರ್ವಕ ಪ್ರಯತ್ನಿಸಿದರು; ಇಂದಿಗೂ ಅಂತಹ ಪ್ರಯತ್ನ ನಡೆಯುತ್ತಿದೆ. ಆದರೆ, ಪ್ರತಿ ವರ್ಷವೂ ಲಕ್ಷಗಟ್ಟಲೆ ಪದವಿ ಹೊತ್ತು ಹೊರಬರುವವರಿಗೆ ನೌಕರಿಯೊದಗಿಸಲು ಯಾರೂ ಶಕ್ತರಾಗಲಿಲ್ಲ.

ನಾವು ತಪ್ಪಿ ಬಿದ್ದಿರುವುದಾದರೂ ಇಲ್ಲಿಯೇ. 'ಸುಶಿಕ್ಷಿತ'ರಿಗೆಲ್ಲ ಉದ್ಯೋಗಾವಕಾಶವೊದಗಿಸುವ ಹೊಣೆಗಾರಿಕೆಯಿಂದೂ ಸರಕಾರವೇ ಹೊತ್ತುಕೊಂಡಿದೆ. ಈ ಪದ್ಧತಿ ಇನ್ನೂರು ವರ್ಷ ಹಳೆಯದು- ಇಲ್ಲಿ ಪ್ರಗತಿಯಿನ್ನೂ ಇಣಿಕಿನೋಡಲಿಲ್ಲ.

ಈ ಮಾತನ್ನು ನಂಬುವುದು ಕಷ್ಟವಾಗಬಹುದು; ಆದರೆ, ಇದು ನೂರಕ್ಕೆ ನೂರು ಸತ್ಯ.

ನಮ್ಮ ಮಕ್ಕಳಿಗೆ, ನಮ್ಮ ಯುವಕರಿಗೆ ಶಿಕ್ಷಣ ಕೊಡುವ ಹೊಣೆಗಾರಿಕೆಯನ್ನು ಸರಕಾರ ವಹಿಸಿಕೊಂಡಿದೆ. ಕೆಲವರು ತಜ್ಞರೆಂಬ ಲೇಬಲ್ ಹಚ್ಚಿಕೊಂಡವರು ಬೇರೆಯವರ ಮಕ್ಕಳು ಏನು ಕಲಿಯಬೇಕು, ಎಷ್ಟುಕಲಿಯ ಬೇಕು ಎಂದು ಮುಂತಾದುದನ್ನು ಗೊತ್ತು ಪಡಿಸಿ, ಕಲಿಸುವ ಜವಾಬ್ದಾರಿಯನ್ನು ಯಾರು ಯಾರಿಗೋ ಬಿಡುತ್ತಾರೆ.

ಮೈಕಾಲೆ ಮಹಾಶಯನ ಗರುಡಿಯಲ್ಲಿ ಪಳಗಿದ ಬಿಳಿಯ ಕೊರಳ ಪಟ್ಟೆದಾರರ ಅಪ್ಪಟ ಶಿಷ್ಯರು ತಮ್ಮ ಹಳೆಯ ಮನೋಧರ್ಮವನ್ನು ಬಿಟ್ಟುಕೊಡಲಿಲ್ಲ

ಸ್ವಾತಂತ್ರ್ಯ ಲಭ್ಯವಾಗುವುದಕ್ಕೆ ಮೊದಲು 'ಗುಮಾಸ್ತರ ತರಬೇತಿ ಕೇಂದ್ರ'ಗಳಂತೆ ನಮ್ಮ ಶಿಕ್ಷಣಾಲಯಗಳು ಕೆಲಸ ಮಾಡುತಿದ್ದುವು ಇಂದೂ ಅದೇ ಮಾದರಿಯಲ್ಲಿ ಅವು ನಡೆಯುತ್ತಿವೆ.

ಸ್ವಾತಂತ್ರ್ಯ ಪೂರ್ವದಲ್ಲಿ ಅತ್ಯಂತ ಸಂಕುಚಿತವಾಗಿದ್ದ ಶಿಕ್ಷಣ ಸೌಲಭ್ಯಗಳು ಆನಂತರದಲ್ಲಿ ಕಾಡು-ಹುಲ್ಲಿನಂತೆ ಅತ್ಯಂತ ವಿಸ್ತಾರವಾಗುತ್ತ ಬಂದಿದೆ; ಗ್ರಾಮ ಗ್ರಾಮದಲ್ಲೂ ಶಾಲೆತೆರೆದಿದ್ದೇವೆ; ಮೂರು-ಆರು ಮೈಲಿಗೊಂದು ಹೈಸ್ಕೂಲ್, ಹದಿನೈದು-ಇಪ್ಪತ್ತು ಮೈಲಿಗೊಂದು ಹಾಯರ್ ಸೆಕೆಂಡರಿ- ಕಾಲೇಜುಗಳು.

ಇವೆಲ್ಲವುಗಳಲ್ಲಿಯೂ ಇರುವ ಸೀಟಿಗಿಂತ ಹೆಚ್ಚು ಅಭ್ಯರ್ಥನಾ ಪತ್ರಗಳು!

ಜಗತ್ತಿನಲ್ಲಿನ ಶಿಕ್ಷಣಾಲಯಗಳ ಪರೀಕ್ಷಾ ಫಲಿತಾಂಶವನ್ನು ಗಮನಿಸುವಾಗ, ನಮ್ಮದೇ ಬಹಳ ಹೀನ ಮಟ್ಟದ್ದಿರಬೇಕೆನಿಸುತ್ತದೆ. ಸರ್ವೇ ಸಾಮಾನ್ಯ ನಮ್ಮ ಪರೀಕ್ಷೆಗಳಲ್ಲಿ ನೂರಕ್ಕೆ ಐವತ್ತರಷ್ಟು ಅನುತ್ತೀರ್ಣರಾಗುತಿದ್ದಾರೆ.

ಅನುತ್ತೀರ್ಣರೂ ಉತ್ತೀರ್ಣರಾದರೆ ಆಗ ನಿರುದ್ಯೋಗ ಪ್ರಶ್ನೆ ಮತ್ತೊಂದು ರೀತಿಯ ಉಲ್ಬಣಕ್ಕೇರುತ್ತದೆ.

ಪರೀಕ್ಷೆಗಳಲ್ಲಿ ಉತ್ತೀರ್ಣತೆಯ ಪ್ರತಿಶತ ಕಡಿಮೆಯಾಗುವುದು ಎಂದರೆ, ನಮ್ಮ ಶಿಕ್ಷಣವನ್ನು ಒಗ್ಗಿಸಿಕೊಳ್ಳುವಲ್ಲಿ ಅಷ್ಟು ಜನರು ಅಶಕ್ತರಾಗಿದ್ದಾರೆಂದು ಮಾತ್ರ ಅರ್ಥ. ಅಂಥವರು ನಿರುಪಯುಕ್ತರು, ನಿಷ್ಪ್ರಯೋಜಕರು ಎಂದು ಮುಂತಾಗಿ ಬಿರುದು ಕೊಡಬಹುದು; ಆದರೆ ಜೀವನದಲ್ಲಿ ಅವರು ಅನುತ್ತೀರ್ಣರಾಗುವುದಿಲ್ಲ.

ಒಂಟಿ, ಜೋಡಿ ಪದವೀಧರರೇ ನಿರುದ್ಯೋಗಿಗಳಾಗಿ ಸಮಾಜಕ್ಕೆ ಭಾರರೂಪಿಗಳಾಗಿದ್ದಾರೆ. ಅವರ ಭವಿತವ್ಯ ನಿರಾಶಾಮಯವಾಗಿರುವುದನ್ನು ಕಂಡೂ ಕಂಡೂ ಆಶಾಜೀವಿಗಳಾಗುವುದು ಇಂದಿನ ವಿದ್ಯಾರ್ಥಿಗಳಿಗೆ ಸಾಧ್ಯವಾಗುವುದು ಹೇಗೆ?

ಅನುತ್ತೀರ್ಣತೆಗೆ ಅಧ್ಯಯನದಲ್ಲಿ ನಿರಾಸಕ್ತಿಯೇ ಕಾರಣವೆಂಬುದನ್ನು ಒಪ್ಪಿಕೊಳ್ಳುವ. ಈ ನಿರಾಸಕ್ತಿಗೆ ಕಾರಣವೇನು?

ಬಾಹ್ಯ ಆಕರ್ಷಣೆ, ಉದಾಸೀನತೆ, ಅಸಡ್ಡೆ, ಮಂದ ಬುದ್ಧಿ ಇವೆಲ್ಲವುಗಳನ್ನು ಮುಂದೆ ಮಾಡುತ್ತಾರೆ. ಇವೆಲ್ಲವೂ ನಿರಾಸಕ್ತಿಯನ್ನು ಪೋಷಿಸುತ್ತವೆಯೇ ಹೊರತು ಇವೇ ಎಲ್ಲವಲ್ಲ.

ಭವಿಷ್ಯದ ಬಗ್ಗೆ ನಿರಾಶೆಯೇ ನಿರಾಸಕ್ತಿಯ ಬೀಜ. ಭವಿತವ್ಯದ ಬಗ್ಗೆ ಭರವಸೆ ಮೂಡಿಸುವುದು ನಮ್ಮ ಇಂದಿನ ಶಿಕ್ಷಣಕ್ಕೆ ಸಾಧ್ಯವಾಗಿಲ್ಲ; ಆಗುವುದೂ ಇಲ್ಲ.

ಬ್ರಿಟಿಷರ ಕಾಲದಲ್ಲಿ ಸಾಧ್ಯವಾಗಿತ್ತು. ಕರಿಯ ಫರಂಗಿಗಳಿಗೆ ಸರಕಾರಿ ಉದ್ಯೋಗ ದೊರೆಯುತ್ತಿತ್ತು. ಇಂದು ಕಲಿಯುವವರು ಹೆಚ್ಚಾದಂತೆ ಉದ್ಯೋಗಾವಕಾಶ ಕಡಮೆಯಾಯ್ತು; ಇಲ್ಲವಾಯ್ತು. ಭವಿಷ್ಯದಲ್ಲಿ ನಿರಾಶೆ ಕಾಯ್ತು.

ಸುಶಿಕ್ಷಿತರಿಗೆ ಸ್ವತಂತ್ರ ಉದ್ಯೋಗಮಾಡಿಕೊಳ್ಳುವ ಅವಕಾಶವನ್ನು ಒದಗಿಸಿ ಕೊಡಲಿಲ್ಲ. ಇದ್ದುದನ್ನು ನಾವು ತಪ್ಪಿಸಿದ್ದೇವೆ. ಪರಾವಲಂಬನೆಯ ಪಾಠವನ್ನೇ ಹದಿನಾರು ವರುಷ ಕಲಿಸಿ ಅವರ ಇಚ್ಛಾ ಶಕ್ತಿಯನ್ನು ಕರ್ತೃತ್ವ ಶಕ್ತಿಯನ್ನು ಸಂಪೂರ್ಣ ಅದುಮಿ ಹಾಕಿದ್ದೇವೆ, ನಾಶ ಮಾಡಿ ಬಿಟ್ಟಿದ್ದೇವೆ.

ಪದವೀಧರನಾದವನು ನೌಕರಿ ಹುಡುಕುವುದೇ ಧರ್ಮವೆಂಬ ಪಾಠವನ್ನೇ ನಾವು ಮನಂಬುಗುವಂತೆ ಹೇಳಿದ್ದೇವೆ.

ನಮ್ಮ ಶಿಕ್ಷಣ ಸಾಮಾಜಿಕ ಆವಶ್ಯಕತೆಗಳನ್ನು ಹೊಂದಿಕೊಂಡು ನಡೆದಿಲ್ಲ.

ಸಮಾಜವೊಂದೆಡೆ ಸರಿದರೆ, ಶಿಕ್ಷಣ ಮತ್ತೊಂದೆಡೆ ಎಳೆಯುತ್ತಿದೆ. ಬಿ. ಎ., ಬಿ. ಕಾಂ., ಬಿ. ಎಸ್ಸಿ. ಪದವೀಧರರು ರೈತರಾದರೆ ಯಾರಿಗೆ ಲಾಭ?

ಕೃಷಿ ಕ್ರಮದಲ್ಲಿ ಸುಧಾರಣೆಯಾಗುವುದಿಲ್ಲ; ಅವರಿಗೆ ಕಲಿತ ವಿದ್ಯೆ ಬಳಕೆಗೆ ಬರಲಿಲ್ಲ.

ಅವರು ತಮಗಿರಬಹುದಾದ ಗದ್ದೆಗಳನ್ನು ಯಾರು ಯಾರಿಗೋ ಕೊಟ್ಟು, ತಾವು ನೌಕರಿ ಹುಡುಕುತ್ತಾರೆ.

ನೌಕರಿಯಲ್ಲೂ ಅಷ್ಟೆ ಕಾಲೇಜುಗಳಲ್ಲಿ ಕಲಿತ ಮಸ್ತಕದ ವಿದ್ಯೆಗೂ ನೌಕರಿಗೂ ಏನೇನೂ ಸಂಬಂಧವಿರುವುದಿಲ್ಲ.

ಜೀವನೋಪಯೋಗಿಯಾದ ವಿದ್ಯೆಯು ನಮಗೆ ದೊರೆಯುವುದಿಲ್ಲ. ಆಸಕ್ತಿ ಕೆರಳಿಸಬಲ್ಲ ಶಿಕ್ಷಣ ನಮಗೆ ಸಿಗುತ್ತಿಲ್ಲ.

ಅದ್ದರಿಂದಲೇ ನಮ್ಮಲ್ಲಿ ಅನುತ್ತೀರ್ಣತೆ ಹೆಚ್ಚು. ಇದರಿಂದ ವರ್ಷಂಪ್ರತಿ ನೂರಾರು ಕೋಟಿ ರೂಪಾಯಿಗಳು ಪೋಲು.

ಉತ್ತೀರ್ಣರಾದವರಾದರೂ ಉದ್ಯೋಗದ ಬೇಟೆಯಲ್ಲಿ ಅಸಫಲರಾಗುತ್ತಾರೆ. ಲಂಚ-ರುಷುವತ್ತು, ಪ್ರಭಾವಗಳು ಆಗ ಅನಿವಾರ್ಯವಾಗಿ ತಲೆ ಹಾಕುತ್ತವೆ. ಯೋಗ್ಯತೆ ತಿಪ್ಪೆಗೆ ಸರಿಯುತ್ತದೆ.

ಲಂಚಾಸುರ, ಭ್ರಷ್ಟಾಚಾರ, ಪಕ್ಷಪಾತ, ಅನ್ಯಾಯ ಮೊದಲಾದ ದೊಡ್ಡ ದೊಡ್ಡ ಶಬ್ದಗಳನ್ನು ಪ್ರತಿನಿತ್ಯ ಸೃಷ್ಟಿ ಮಾಡುತ್ತಲೇ ಹೋಗುತ್ತೇವೆ

ಯಾರು ಯಾರದೋ ಕಣ್ಣಿಗೆ ಮಣ್ಣೆರಚಲೆಂದು ಅವುಗಳ ನಿರೋಧದ ಬಗ್ಗೆ ವೇದಿಕೆಯ ಮೇಲೆ ನಿಂತು ಗುಡುಗುತ್ತೇವೆ.

ನಮ್ಮ ಸಮಸ್ಯೆಗಳಿಗೆ ನಿರುದ್ಯೋಗ ಮೂಲ. ನಿರುದ್ಯೋಗಕ್ಕೆ ಶಿಕ್ಷಣ ಪ್ರೇರಕ.

ಅದ್ದರಿಂದ ಶಿಕ್ಷಣ ಕ್ರಮದಲ್ಲಿ ಆಮೂಲಾಗ್ರ ಕ್ರಾಂತಿಯಾಗದೆ ನಿರುದ್ಯೋಗ ದೂರವಾಗುವುದಿಲ್ಲ; ಅಶಿಸ್ತು ಮಾಯವಾಗುವುದಿಲ್ಲ.

ಸರ್ವ ವಿದ್ಯಾಪಾರಂಗತರಾಗಿ ಎಲ್ಲರನ್ನೂ ಕಡೆಯುವ ನಮ್ಮ ಹುಚ್ಚು ಪ್ರಯತ್ನ ನಿಲ್ಲಬೇಕು. ಅವರವರಿಗೆ ಇಷ್ಟವಾದ, ಅವರವರ ಪ್ರಕೃತಿಗೆ ಒಗ್ಗ ಬಲ್ಲ ಶಿಕ್ಷಣ ನೀಡಬೇಕು.

ಇಂದಿನ ಶಿಕ್ಷಣದಿಂದ ಇಹವೂ ಇಲ್ಲ; ಪರವೂ ಇಲ್ಲ. ಸಮಾಜಕ್ಕೆ- ವ್ಯಕ್ತಿಗೆ ನೆಮ್ಮದಿಯೂ ಇಲ್ಲ.

ಆಗಸ್ಟ ೭ನೆಯ ದಿನವನ್ನು 'ಶಿಕ್ಷಣದಲ್ಲಿ ಕ್ರಾಂತಿ ದಿನ'ವೆಂದು ಆಚರಿಸುವ ಸಿದ್ಧತೆ ನಡೆಯುತ್ತಿದೆ.

ಅಪ್ರಯೋಜಕ, ಅಹಿತಕಾರಕ, ಅರ್ಥಹೀನ ಶಿಕ್ಷಣ ಪ್ರಣಾಳಿಯನ್ನು ಆಮೂ

(ಹತ್ತನೇ ಪುಟ ನೋಡಿರಿ)

ಚರಿತ್ರಾರ್ಹ ಮೊಕದ್ದಮೆಗಳು—೧೧

'ಸಾಧ್ವಿಯ ಸಾವು'

ಬರೆದವರು : ಶ್ರೀ ಬಿ. ಕೃಷ್ಣ ಭಟ್, ಯಲ್.ಯಲ್. ಬಿ., ಭದ್ರಾವತಿ

ಫೂಲ್ಮಣಿಯ ಕತೆ ಗತ ಶತಕ್ಕೆ ಸೇರಿದ್ದು. ಹಳೆಯ ಕತೆಯಿದ್ದರೂ, ಅದು ವ್ಯಥೆಯ ಕತೆ. ಅವಳ ಸಾವಿನಿಂದ ಸರಕಾರ ಎಚ್ಚೆತ್ತಿತು. ಶಾಸನದಲ್ಲಿರುವ ದೋಷವನ್ನು ಎತ್ತಿ ತೋರಿಸಿತು. ಸ್ತ್ರೀಯರ ಅಸಹಾಯಕ ಸ್ಥಿತಿ–ಗತಿಗಳತ್ತ ಜನರ ದೃಷ್ಟಿ ಹರಿಯುವಂತೆ ಮಾಡಿತು. ಅವಳ ಸಾವು ಹೊಸ ಶಾಸನದ ಉದಯಕ್ಕೆ ನಾಂದಿ ಹಾಡಿತು. ಹೆಣ್ಣು ಮಕ್ಕಳ ಒಪ್ಪಿಗೆಯ ವಯಸ್ಸನ್ನು ಹತ್ತೆಂದು ನಿಗದಿ ಪಡಿಸಿದ್ದರು. ಬಾಲ ವಿವಾಹವನ್ನು ತಡೆಗಟ್ಟುವ ಶಾಸನ ಇರಲಿಲ್ಲ—ಇದು ಅವಳ ಸಾವಿಗೆ ಮೊದಲಿನ ಪರಿಸ್ಥಿತಿ.

ಈ ಅಂಧ ಶ್ರದ್ಧೆಯ ಪರಿಸರದಲ್ಲಿ ಬೆಳೆದು ಬಂದವಳು ಫೂಲ್ಮಣಿಯ ತಾಯಿ. ಅವರು ಜಾತಿಯಿಂದ ಕಾಯಸ್ಥರು. ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನು—ಗಂಡಿನ ಕೊರಳಿಗೆ ಕಟ್ಟಿ—ಕನ್ಯಾದಾನ ಮಾಡಿದ ಪುಣ್ಯ ಕಟ್ಟಿಕೊಳ್ಳುವ ಬಯಕೆ ಆ ತಾಯಿಯದು. ಹತ್ತಿ–ಹೊಂದಿದವರ ಸಹಕಾರದಿಂದ, ಫೂಲ್ಮಣಿಯ ಮದುವೆ ಹರಿಮೋಹನ ಮೈಥಿಯ ಜೊತೆ ನಡೆಯಿತು. ಈ ವಿವಾಹ ಸಮಾರಂಭ ನಡೆದುದು 11-5-1890ರಲ್ಲಿ, ಆಗ ಫೂಲ್ಮಣಿ ಇನ್ನೂ ಹುಡುಗಿ. ಹನ್ನೊಂದು ವರ್ಷ ತುಂಬಿ, ಮೂರು ತಿಂಗಳುಗಳುರುಳಿದ್ದವು—ಅವಳ ಗಂಡ ಕಟ್ಟುಮಸ್ತಿನ ಆಳು. ಮದುವೆಯ ಕಾಲಕ್ಕೆ ಆತನ ವಯಸ್ಸು ಇಪ್ಪತ್ತೈದು.

ಫೂಲ್ಮಣಿಯ ವೈವಾಹಿಕ ಜೀವನ ದೀರ್ಘವೂ ಇರಲಿಲ್ಲ; ಸುಖಮಯವೂ ಆಗಿರಲಿಲ್ಲ. ಮದುವೆಯಾದ ಮೇಲೆ ಅವಳು ನಾಲ್ಕು ಬಾರಿ ಪತಿಗೃಹಕ್ಕೆ ಹೋಗಿಬಂದು ಮಾಡಿದ್ದಳು. ಮೂರೋ–ನಾಲ್ಕೋ ರಾತ್ರಿಗಳನ್ನು ಅಲ್ಲಿ ಕಳೆದಿದ್ದಳು. ತನ್ನ ಪತಿಯ ಭೋಗ–ಲಾಲಸೆಯನ್ನು ತಣಿಸಲು ಆ ಸಾಧ್ವಿ 15–6–1890ರ ರಾತ್ರಿ ತನ್ನ ಮೈಯನ್ನೊಪ್ಪಿಸಿದಳು. ಹರಿಮೋಹನ ತನ್ನ ಬಯಕೆಯನ್ನು ಹಿಂಗಿಸಿಕೊಂಡ, ಅವನ ದುಡುಕಿನ ವರ್ತನೆಯಿಂದ ಅವಳ ಗುಹ್ಯಾಂಗಗಳಲ್ಲಿ ಗಾಯಗಳಾದುವು—ರಕ್ತ ಕೋಡಿ ಹರಿಯಿತು. ವೈದ್ಯಕೀಯ ನೆರವು ದೊರಕಿದರೂ, ಅವಳನ್ನುಳಿಸುವುದು ವೈದ್ಯರಿಂದ ಆಗದೆ ಹೋಯಿತು. ಆಕೆ ಮರುದಿನ 16-6-1890ರಂದು ತೀರಿಕೊಂಡಳು.

ದೈಹಿಕವಾಗಿ ಫೂಲ್ಮಣಿ ಸಂಭೋಗಕ್ಕೆ ಅನರ್ಹಳಿದ್ದಳು ತಾಯ್ತನದ ಮೆಟ್ಟಲೇರುವ ಚೈತನ್ಯ ಅವಳ ಅಂಗಾಂಗಗಳಿಗಿರಲಿಲ್ಲ. ಪೋಲೀಸರು ಅವಳ ಪತಿ ಹರಿಮೋಹನನನ್ನು ಬಂಧಿಸಿದರು. ಫೂಲ್ಮಣಿಯ ಸಾವಿಗೆ ಕಾರಣನಾದನೆಂದು ಅವನ ಮೇಲೆ ಖಟ್ಲೆ ಹೂಡಿದರು. ಅವನ ವಿಚಾರಣೆ ಜ್ಯೂರಿಗಳ ಸಮ್ಮುಖದಲ್ಲಿ, ಕಲಕತ್ತೆಯ ಹೈಕೋರ್ಟಿನಲ್ಲಿ ನಡೆಯಿತು.

ಪಿನಲ್ ಕೋಡಿನ 304ಎ, 325, 338ನೇ ಕಲಮುಗಳಲ್ಲಿ ನಮೂದಿಸಿದ ಅಪರಾಧಗಳನ್ನು ಮಾಡಿದ್ದಾನೆಂಬುದು, ಹರಿಮೋಹನನ ಮೇಲಿದ್ದ ಆಪಾದನೆ-ತಕ್ಷೀರಿನ ಸಾಬೀತಿಗೆ, ಪರಿಣಾಮದ ತಿಳುವಳಿಕೆ ಒಂದರಲ್ಲಿ ಪ್ರಾಧಾನ್ಯವಿದ್ದರೆ, ಇನ್ನೊಂದರಲ್ಲಿ ಅದು ಗೌಣ.

ಈ ಆಕಸ್ಮಿಕ ಸಂಭವಿಸಿದಾಗ ಫೂಲ್ಮಣಿ ತವರಿನಲ್ಲಿದ್ದಳು. ಅಂದು ಆ ಮನೆಯಲ್ಲಿದ್ದವರೇ ಕೃತ್ಯದ ಪ್ರತ್ಯಕ್ಷದರ್ಶಿಗಳು. ಅವರು ಹೇಳಿಕೆಯನ್ನು ಮೊದಲು ತೆಗೆದುಕೊಳ್ಳಲಾಯಿತು. ತಾಯಿಯ ಹೇಳಿಕೆಯಿಂದ ಇಷ್ಟು ವಿವರಗಳು ಹೊರ ಬಂದುವು.

ಅವರು ಜಾತಿಯಿಂದ ಕಾಯಸ್ಥರು. ಅವರ ಜಾತಿಯಲ್ಲಿ—ಹೆಂಡತಿ ಋತುಮತಿಯಾಗುವುದಕ್ಕೆ ಮೊದಲು—ಗಂಡ-ಹೆಂಡಿರು ಒಂದೆ ಹಾಸುಗೆ ಹಂಚಿಕೊಳ್ಳುತ್ತಿರಲಿಲ್ಲ. ಅಪ್ರಾಪ್ತ ವಯಸ್ಸಿನ ಹೆಂಡತಿಯೊಡನೆ ಸಂಭೋಗಿಸುವುದು ಧರ್ಮ ವಿರುದ್ಧ. ಫೂಲ್ಮಣಿ ಇನ್ನೂ ಮೈನೆರೆಯದ ಮೈನರಳು. ದುರಂತ ಸಂಭವಿಸಿದ ರಾತ್ರಿಯ ತನಕವೂ ಫೂಲ್ಮಣಿ ವಯಸ್ಸಿಗೆ ಬಂದಿರಲಿಲ್ಲ. ಮದುವೆ ಮುಗಿದ ನಂತರ, ಆಕೆ ಮಗಳೊಡನೆ ಅಳಿಯನ ಮನೆಯಲ್ಲಿ ಒಂದು ವಾರ ಉಳಿದಿದ್ದಳು. ಇದು ಸಂಪ್ರದಾಯ. ಇದಾದ ಮೇಲೆ ಆಕೆ, ಆರೋಪಿಯ ಮನೆಗೆ ಮಗಳೊಡನೆ ಎರಡು ಬಾರಿ ಹೋಗಿದ್ದಳು. ಆದರೆ ರಾತ್ರಿಯನ್ನು ಅಲ್ಲಿ ಕಳೆಯಲಿಲ್ಲ. ಈ ಎರಡು ಸಂದರ್ಭಗಳ ಮಧ್ಯೆ ಆರೋಪಿ ಆಕೆಯ ಮನೆಗೆ ಬಂದಿದ್ದ. ಹಾಗೆ ಬಂದವನು ಮೂರು ದಿನ ಉಳಿದಿದ್ದ. ಆದರೆ ಗಂಡ–ಹೆಂಡಿರು ಒಂದೇ ಹಾಸುಗೆಯಲ್ಲಿ ಮಲಗಿರಲಿಲ್ಲ. ಆರೋಪಿಗೆ 'ಬೈಠಕ್ ಖಾನೆ'ಯಲ್ಲಿ ಮಲಗಲು ಎಡೆಮಾಡಿತ್ತು. ಫೂಲ್ಮಣಿ ಅವಳ ಜೊತೆಯಲ್ಲಿ ಮಹಡಿಯಲ್ಲಿ ಮಲಗಿದ್ದಳು.

ಜೂನ್ 15ರ ರಾತ್ರಿ ಆರೋಪಿ ಮನೆಗೆ ಬಂದ. ರಾತ್ರಿ ಅವರ ಮನೆಯಲ್ಲೇ ಉಳಿದುಕೊಂಡ. ಆ ರಾತ್ರಿ ಫೂಲ್ಮಣಿ ಅವಳ ಪಕ್ಕದಲ್ಲಿ ಕೋಣೆಯಲ್ಲಿ ನಿದ್ದೆ ಹೋಗಿದ್ದಳು. ಅವಳಿಬ್ಬರು ತಂಗಿಯರು, ಕೋಣೆಯ ಮುಂದಿನ ಜಗುಲಿಯಲ್ಲಿ ಮಲಗಿದ್ದರು. ಅಳಿಯ ಹರಿಮೋಹನನಿಗೆ ತಾಯಿ-ಮಗಳು ಮಲಗಿದ್ದ ಕೋಣೆಯ ಪಕ್ಕದ ಕೊಠಡಿಯಲ್ಲಿ ಹಾಸುಗೆ ಹಾಸಲಾಯಿತು.

ಮಧ್ಯ ರಾತ್ರಿಯ ಸುಮಾರಿಗೆ ಫೂಲ್ಮಣಿ ಜೋರಾಗಿ ಅಳುವುದು ಕೇಳಿಬಂತು. ಆಕೆಯ ಅಳುವಿನಿಂದ—ಹನ್ನೊಂದರ ಸುಮಾರಿಗೆ ನಿದ್ದೆ ಹೋಗಿದ್ದವಳಿಗೆ—ಎಚ್ಚರವಾಯಿತು. ಆಕೆ ಅನಂತರ ದೀಪ ಹಚ್ಚಿದಳು. ಪಕ್ಕದಲ್ಲಿ ಪವಡಿಸಿದ್ದ ಫೂಲ್ಮಣಿ ಅವಳ ಬಳಿ ಇರಲಿಲ್ಲ. ಆಕೆ ಆರೋಪಿ ಮಲಗಿದ್ದ ಹಾಸುಗೆಯಲ್ಲಿ ಹೊರಳಾಡುತ್ತಿದ್ದಳು. ಹಾಸುಗೆ ಬಟ್ಟೆ–ಬರೆ ರಕ್ತಮಯವಾಗಿತ್ತು. ಹರಿ ಮೋಹನ ಅವಳ ಪಕ್ಕದಲ್ಲಿ ಪೆಚ್ಚು ಮೋರೆ ಹಾಕಿಕೊಂಡು ನಿಂತಿದ್ದ—ಆಕೆ ತನ್ನ ವೃದ್ಧ ತಾಯಿಯನ್ನು ಕರೆದಳು. ಆ ಮುದುಕಿ ಎದ್ದು ಬಂದಳು. ವಿಷಯ ತಿಳಿದುಕೊಂಡಳು. ಹರಿ ಮೋಹನನ ಮೇಲೆ ಉರಿ ಕಾರಿದಳು. ಆಕೆ ಜರೆದುದನ್ನು ಕೇಳಿಯೂ ಆರೋಪಿ ಸುಮ್ಮನಿದ್ದ. ಆ ಬಡಪಾಯಿ ಹುಡುಗಿ ಕುಡಿಯಲು ನೀರು ಕೇಳಿದಳು. ಬೇರೇನು ಮಾತನಾಡಲಿಲ್ಲ. ಅನಂತರ ಡಾಕ್ಟರರಿಗೆ ಕರೆ ಹೋಯಿತು. ಅವರು ಬರಲಿಲ್ಲ. ಮರುದಿನ ಬೆಳಿಗ್ಗೆ ಬಂದರು; ಔಷಧಿ ಕೊಟ್ಟರು. ಫೂಲ್ಮಣಿ ಎರಡು ಗಂಟೆಯ ಸುಮಾರಿಗೆ ತೀರಿ ಕೊಂಡಳು.

ಈ ಹೇಳಿಕೆಯನ್ನು ಅಂದು ರಾತ್ರಿ ಮನೆಯಲ್ಲಿದ್ದ ಫೂಲ್ಮಣಿಯ ಅಜ್ಜಿ, ಇತರ ಹೆಣ್ಣು ಮಕ್ಕಳು ಸಮರ್ಥಿಸಿದರು. ದಾಖಲೆಗಳನ್ನು ಹಾಜರು ಪಡಿಸಿ, ಫೂಲ್ಮಣಿಯ ವಯಸ್ಸನ್ನು ರುಜುವಾತು ಮಾಡಲಾಯಿತು. ಆ ದಾಖಲೆಗಳ ಪ್ರಕಾರ ಫೂಲ್ಮಣಿ ಜನಿಸಿದ್ದು 2-3-1879ರಲ್ಲಿ.

ಈ ಸಾಕ್ಷಿಗಳ ಜೊತೆಯಲ್ಲಿ ಆರೋಪವನ್ನು ಸ್ಥಿರ ಪಡಿಸಲು ನಾಲ್ಕು ಜನ ಡಾಕ್ಟರುಗಳ ಹೇಳಿಕೆಯನ್ನು ಪ್ರಾಸಿಕ್ಯೂಷನ್ ಪರ ತೆಗೆದು ಕೊಳ್ಳಲಾಯಿತು. ಅವರಲ್ಲಿ ಅನ್ನೋದ ಪ್ರಸಾದದಾಸರು ಮೊದಲನೆಯವರು. ಅವರು ಫೂಲ್ಮಣಿಯನ್ನು ಮೊದಲು ಪರೀಕ್ಷಿಸಿದವರು. ಫೂಲ್ಮಣಿಯ ಶವ ಪರೀಕ್ಷೆ ನಡೆಸಿದ ಡಾಕ್ಟರ್ ಕ್ಯಾಬ್ ಎರಡನೆಯವರು. ಈ ಸಾಕ್ಷಿಗಳ ಹೇಳಿಕೆಯನ್ನು ತೆಗೆದು ಕೊಳ್ಳುವ ಕಾಲದಲ್ಲಿ ಕೋರ್ಟಿನಲ್ಲಿ ಹಾಜರಿದ್ದ ಇನ್ನಿಬ್ಬರು ಡಾಕ್ಟರುಗಳನ್ನು ತಜ್ಞರೆಂದು ಪರಿಗಣಿಸಿ, ಅವರ ಅಭಿಪ್ರಾಯಗಳನ್ನೂ ಸಂಗ್ರಹಿಸಲಾಯಿತು.

ಡಾಕ್ಟರ್ ಅನ್ನೋದ ಪ್ರಸಾದದಾಸರು ಕೋರ್ಟಿಗೆ ತಿಳಿಸಿದ ವಿವರ ಹೀಗಿದೆ:— 15/16 ರಾತ್ರಿ ಎರಡರ ಸುಮಾರಿಗೆ ನನಗೆ ಕರೆ ಬಂತು. 16ರಂದು ಬೆಳಿಗ್ಗೆ 6 ಅಥವಾ 7 ಗಂಟೆಯ ಸುಮಾರಿಗೆ ನಾನು ಫೂಲ್ಮಣಿಯನ್ನು ಅವಳ ಮನೆಯಲ್ಲಿ ಪರೀಕ್ಷಿಸಿದೆ. ಅವಳು ಸಾಯುವ ಸ್ಥಿತಿಯಲ್ಲಿದ್ದಳು. ಅವಳ ನಾಡಿಗಳು ಆಗಲೇ ಬಿದ್ದಿದ್ದವು. ಫೂಲ್ಮಣಿಯ ಜನನೇಂದ್ರಿಯವನ್ನೂ ಪರೀಕ್ಷಿಸಿದ್ದೆ—ಅದು ಹರಿದಿತ್ತು. ಯೋನಿಯ ಉಭಯ ಪಾರ್ಶ್ವಗಳಲ್ಲೂ ರಕ್ತ ಹೆಪ್ಪುಗಟ್ಟಿ ಕೊಂಡಿದ್ದುದು ಕಾಣಿಸಿತು. ನಾನು ಅವಳಿಗೆ ಔಷಧಿ ಕೊಟ್ಟೆ. ಸಂಜೆ ಮೂರರ ಸುಮಾರಿಗೆ ಆರೋಪಿ ಆಸ್ಪತ್ರೆಗೆ ಬಂದು ಫೂಲ್ಮಣಿ ತೀರಿ ಹೋದ ಸಂಗತಿ ತಿಳಿಸಿದ. ಅದು ಹೇಗೆ ಸಂಭವಿಸಿತೆಂದು ಆರೋಪಿಯನ್ನು ಪ್ರಶ್ನಿಸಿದೆ. ತಾನು ಆಕೆಯೊಡನೆ ಸಂಭೋಗಿಸಿದೆ ಎಂಬುದಾಗಿ ಆರೋಪಿ ತಿಳಿಸಿದ. ಫೂಲ್ಮಣಿಯ ವಯಸ್ಸು ಹನ್ನೊಂದು ಇರಬಹುದು. ಶವ ಪರೀಕ್ಷೆ ನಡೆಸಿದ ಡಾಕ್ಟರ್ ಕ್ಯಾಬ್ ಈ ರೀತಿ ಹೇಳಿಕೆ ಕೊಟ್ಟರು.

ಫೂಲ್ಮಣಿಯ ಶವವನ್ನು ಪರೀಕ್ಷಿಸಿದ್ದೆ—ಅವಳ ವಯಸ್ಸು ಹನ್ನೆರಡರೊಳಗಿರಬಹುದು. ಆಕೆ ಋತುಮತಿಯಾಗಿರಲಿಲ್ಲ. ಅತಿಯಾದ ರಕ್ತಸ್ರಾವ ಅವಳ ಸಾವಿಗೆ ಕಾರಣ. ಅವಳ ಯೋನಿ ಹರಿದಿತ್ತು. ಜನನೇಂದ್ರಿ

(ಒಂಭತ್ತನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
132 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:— **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, **ಬೆಂಗಳೂರು_1.**

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 164/1970

ವಾದಿ—L. ನಂಬ್ರ 931 ದಿ. ಗವರ್ನಮೆಂಟು ಎಂಪ್ಲೋಯೀಸ್ ಕಮಿಶನರ್ಸ್ ಕೋ-ಒಪರೇಟಿವ್ ಸೊಸೈಟಿ ಲಿಮಿಟೆಡ್ ಕುಂದಾಪುರ.

ಪ್ರತಿವಾದಿ— ದಿ. ನೇಶನಲ್ ಏಜನ್ಸೀಸ್ ಮೆನ್ಯುಫೇಕ್ಚರರ್ಸ್ ಡೀಲರ್ಸ್ & ಕನ್ಸ್ಯೂಮರ್ ಗೂಡ್ಸ್, 796 ಕಾಸ್‌ಬಾಗ್, ದೊಡ್ಡಬಳ್ಳಾಪುರ ಬೆಂಗಳೂರು ಡಿಸ್ಟ್ರಿಕ್ಟ್.

ಸದ್ರಿ ಪ್ರತಿವಾದಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ,

ಪ್ರತಿವಾದಿರಿಂದ ವಾದಿರಿಗೆ ಡಿಮೊಂಡು ಡ್ರಾಫ್ಟಿನ ಬಾಬ್ತು ಬರತಕ್ಕ ಹಣ ಬಡ್ಡಿ ಬರಮಾಡಿಕೊಳ್ಳುವರೆ ವಾದಿರು ದಾಖಲ್ಲು ಮಾಡಿದ ಮೇಲಿನ ದಾವೆಯು ತಾರೀಕು 30—7—1971ಕ್ಕೆ ತನಿಖೆಗೆ ಇರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಹಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡಿಸಿಯದೆ.

G. V. AITHAL
Advocate for Plaintiffs.
Date 5—7—1971, Coondapoor

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 45

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦–೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಸುವರ್ಣಾಂಕನಯೋಗ್ಯ ನಿಕ್ಸನ್ನರ ಕೆಂಪು ಚೀನಾ ದರ್ಶನ

ಕೆಂಪು ಚೀನಾ ಮತ್ತು ಅಮೇರಿಕೆಗಳ ನಡುವಣ ರಾಜ್ಯಕೀಯ ಭಿನ್ನಮತಕ್ಕೆ ಕೆಂಪು ಚೀನದಷ್ಟೇ ವಯಸ್ಸು. ತೈವಾನದಲ್ಲಿ ಬಿಡದಿ ಹೂಡಿದ ಚಿಯಾಂಗ್ ಕೈಶೇಕರನ್ನೇ ಅಂದಿನಿಂದಲೂ ಬೆಂಬಲಿಸಿಕೊಂಡು ಬಂದ ಅಮೆರಿಕೆಯ ರಾಜ್ಯನೀತಿಯಲ್ಲಿ ತತ್‌ಕ್ಷಣ ಪರಿವರ್ತನೆ ಸಂಭವಿಸಿದಂತೆನಿಸಿದೆ. ಇದು ಉತ್ಪಾತಕಾರಕ ಅಪಶಕುನವೋ ಉತ್ಪಾತಭಾದಕ ಶುಭಶಕುನವೋ ಕಾದು ನೋಡಬೇಕಷ್ಟೆ. ಅಧ್ಯಕ್ಷ ನಿಕ್ಸನ್ನರ ವಿಶೇಷ ರಾಜ್ಯಕೀಯ ರಾಯಭಾರಿ ಕೀಸಿಂಗರ್ ಭಾರತ-ಪಾಕಿಸ್ತಾನಗಳನ್ನು ಭೆಟ್ಟಿಮಾಡಿದ ಬಳಿಕ ಪೀಕಿಂಗಿಗೆ ಹಾರಿ ಹೋದರೆಂದೂ ಅಲ್ಲಿ ಅವರು ಅಧ್ಯಕ್ಷ ನಿಕ್ಸನ್ನರಿಗೆ ಪೀಕಿಂಗ್ ಸಂದರ್ಶನದ ಆಹ್ವಾನ ಪಡೆದರೆಂದೂ, ಈ ಆಹ್ವಾನವನ್ನು ನಿಕ್ಸನ್ ಸ್ವೀಕರಿಸಿ ಮುಂದಿನ ವಸಂತದೊಳಗೆ ಕಾರ್ಯರೂಪಕ್ಕೆ ತರುವರೆಂದೂ ವರದಿಯಾಗಿದೆ. ಸುಮಾರು ಹತ್ತು ವರ್ಷಗಳಿಗೆ ಹಿಂದೆ ಅಮೆರಿಕನ್ ಅಧ್ಯಕ್ಷ ಐಸನ್‌ಹಾವರ್ ಮತ್ತು ರಶ್ಯನ್ ಪ್ರಧಾನಿ ಕ್ರುಶ್ಚೇವರು ಪರಸ್ಪರ ಭೇಟಿಯಾದಂತೆಯೇ ಮಾವೊ-ನಿಕ್ಸನ್ ಭೆಟ್ಟಿ ಇತಿಹಾಸದ ಮಹತ್ವದ ಮೈಲಿಗಲ್ಲಾಗುವುದು ನಿಸ್ಸಂಶಯ.

ಈ ಹಿಂದೆ ಕೆಂಪು ಚೀನಕ್ಕೆ ವಿಶ್ವಸಂಸ್ಥೆಯಲ್ಲಿ ಪ್ರವೇಶ ನೀಡಬೇಕೆಂದೂ ಅಷ್ಟು ದೊಡ್ಡ ದೇಶವನ್ನೂ ಜಗತ್ತಿನ ಜನಸಂಖ್ಯೆಯ ಐದರಲ್ಲಿ ಒಂದಂಶವನ್ನೂ ವಿಶ್ವಸಂಸ್ಥೆಯಿಂದ ಹೊರಗಿಡುವುದು ವಿಶ್ವ ಕಲ್ಯಾಣ ದೃಷ್ಟಿಯಿಂದಲೇ ಸಮಂಜಸವಲ್ಲವೆಂದೂ ಭಾರತ ಬೇಡಿಕೊಳ್ಳುತಿತ್ತು. ಆಗ, ಅಮೆರಿಕೆಗೆ ಇದು ಪಥ್ಯವಾಗುತ್ತಿರಲಿಲ್ಲ. ಅಮೆರಿಕೆ—ಕೆಂಪು ಚೀನಗಳ ರಾಯಭಾರಿಗಳು ೧೯೫೫ರಲ್ಲಿ ಪರಸ್ಪರ ವಿಚಾರ ಮಥನಕ್ಕೆ ತೊಡಗಿದ್ದುಂಟು. ಆದರೆ ಇದು ಎರಡು ವರ್ಷಗಳಿಗೆ ಹೆಚ್ಚು ಮುಂದುವರಿಯಲಿಲ್ಲ. ಎರಡು ವರ್ಷಗಳಿಗೆ ಹಿಂದೆ ಈ ಮಾತುಕತೆ ಮತ್ತೊಮ್ಮೆ ಆರಂಭವಾಯ್ತು. ಇದರ ಫಲವೇ ನಿಯೋಜಿತ ನಿಕ್ಸನ್‌ರ ಪೀಕಿಂಗ್ ಸಂದರ್ಶನ ಮತ್ತು ಆ ಮೇಲಿನ ಬೆಳವಣಿಗೆ. ಅಮೆರಿಕೆ—ಕೆಂಪು ಚೀನಾಗಳ ನಡುವೆ ವ್ಯಾಪಾರ ಸಂಬಂಧವನ್ನು ಕಲ್ಪಿಸಲೆಂದು ಆರಂಭವಾದ ಮಾತುಕತೆ ಇಷ್ಟು ಮುಂದುವರಿದುದು ಆಶ್ಚರ್ಯವೇ ಸರಿ. ಅಮೆರಿಕೆ—ಕೆಂಪು ಚೀನಾಗಳ ರಾಜ್ಯನೀತಿಯಲ್ಲಿ ಪರಿವರ್ತನೆಯಾಗಿದೆಯೇ ಎಂದೆನಿಸುತ್ತದೆ. ವಿಯೆತ್‌ನಾಮದಲ್ಲಿ ಈ ಎರಡೂ ಶಕ್ತಿಸಂಪನ್ನ ಬೃಹತ್ ರಾಷ್ಟ್ರಗಳು ಪರೋಕ್ಷವಾಗಿ ಸಮರ ಘೋಷಿಸಿ ಹೋರಾಡುತ್ತಿವೆ. ಕೆಂಪು ಚೀನಾದ ದಾನವತೆಯನ್ನು ಉಪ್ಪು-ಖಾರ ಹಚ್ಚಿ ಇಡಿಯ ವಿಶ್ವದಲ್ಲಿ ಪ್ರಚಾರ ಮಾಡಿ ಅದರ ಬಗ್ಗೆ ದುರ್ಭಾವನೆ ಮೂಡುವಂತೆ ಪ್ರಯತ್ನಿಸಿದ ದೇಶ ಅಮೆರಿಕೆ. ಕೆಂಪು ಚೀನವಾದರೂ ಸುಮ್ಮನೆ ಕುಳಿತಿಲ್ಲ; ಅಮೆರಿಕೆಯನ್ನು ಖಂಡಿಸಲು ಅದೂ ತುದಿಗಾಲಲ್ಲೇ ನಿಂತಿತ್ತು. ಇತ್ತೀಚೆಗೆ ವಿಯಟ್ನಾಂನ ಹೋರಾಟ ತನ್ನ ಮೊದಲಿನ ತೀವ್ರತೆಯನ್ನೂ ಉಗ್ರತೆಯನ್ನೂ ಕಳೆದುಕೊಂಡಿದೆ ಅಮೆರಿಕನ್ ಸೇನೆಯನ್ನು ಅಲ್ಲಿಂದ ಸಂಪೂರ್ಣವಾಗಿ ಮರಳಿ ಕರೆದುಕೊಳ್ಳುವಂತೆ ನಿಕ್ಸನ್ನರಿಗೆ ಕಾಂಗ್ರೆಸ್ಸು ಆದೇಶ ನೀಡಿದೆ. ಆದುದರಿಂದ ಕೆಂಪು ಚೀನಾದೊಡನೆ ಹಗೆ ಬೇಡವೆಂದು ನಿಕ್ಸನ್ ತಿಳಿದರೆ? ಅವಿರತ ಬೇರೆಯಾಗಿದ್ದ ಬೃಹತ್ ದೇಶವೊಂದರ ಸ್ನೇಹ ಗಳಿಸಿ ಕೊಟ್ಟೆನೆಂಬ ಕೀರ್ತಿ ಅವರಿಗೆ ಬೇಕಾಗಿದೆಯೆ?

ಈ ಎರಡೂ ದೇಶಗಳ ನಡುವೆ ಮೊದಲು ಆರಂಭವಾದದ್ದು ವಾಣಿಜ್ಯ ಸಂಬಂಧಿ ಮಾತುಕತೆ. ಅಮೆರಿಕೆಯೊಡನೆ ಸಿದ್ಧವೂ ಲು ಇದೆ; ಕೆಂಪು ಚೀನಕ್ಕೆ ಅವುಗಳ ಅಗತ್ಯವಿದೆ. ಸೋವಿಯತ್—ಚೀನಾಗಳ ವಿವಾದ ವಿರೂಪ ತಳೆದ ಬಳಿಕ ಚೀನಕ್ಕೆ ತುಸು ತ್ರಾಸವೇ. ಆದುದರಿಂದ ಅದು ಅಮೆರಿಕೆಯೊಡನೆ ವ್ಯಾಪಾರ ಒಡಂಬಡಿಕೆ ಮಾಡಿಕೊಂಡರೆ ವಿಸ್ಮಯವಿಲ್ಲ. ಯಾಹ್ಯಾಖಾನರ ಬಂಗ್ಲಾ ನರಮೇಧವನ್ನು ಕಣ್ಣಾರೆ ಕಂಡೂ ಶಸ್ತ್ರಾಸ್ತ್ರ ಸರಬರಾಜು ಮಾಡುತ್ತಿರುವ ನಿಕ್ಸನ್, ಕೆಂಪು ಚೀನಾ ಬಯಸುವುದಾದರೆ ಸೈನಿಕೋಪಕರಣಗಳನ್ನೂ ನೀಡಲು ಮುಂದೆ ಬಂದರೆ ಸೋಜಿಗವಿಲ್ಲ. ತನ್ನ ಏಕಮೇವ ಪ್ರಬಲ ಪ್ರತಿಸ್ಪರ್ಧಿ ಸೋವಿಯತ್ ರಶ್ಯ ವೈಜ್ಞಾನಿಕ ಮತ್ತು ರಾಜ್ಯಕೀಯ ಕ್ಷೇತ್ರಗಳಲ್ಲಿ ಬಹಳಷ್ಟನ್ನು ಸಾಧಿಸಿರುವಾಗ ತಾನು ಏಕಾಕಿಯಾಗಿರ.ವಂತೆ ನಿಕ್ಸನ್ನರಿಗೆ ಅನುಭವವಾಗಿರ ಬಹುದು. ಸೋವಿಯತ್—ಕೆಂಪು ಚೀನಗಳ–ಭಿನ್ನಾಭಿಪ್ರಾಯ–ಇದು ತಾತ್ವಿಕವೂ ಹೌದು; ಭೌತಿಕವೂ ಹೌದು–ಉಪಶಮನಗೊಳ್ಳುವುದರ ಬದಲು ಹಳೆಯ ವ್ರಣವಾಗ ತೊಡಗಿರುವುದರಿಂದ ಚೀನಾದ ಸ್ನೇಹ ತಾನು ಪಡೆದು ರಶ್ಯವನ್ನು ಹಿಮ್ಮೆಟ್ಟಿಸ ಬಹುದೆಂದು ನಿಕ್ಸನ್ ಇರಾದೆಯಿರಲೂ ಬಹುದು. ಏಶ್ಯಾದಲ್ಲಿ ತಮಗೆ ತಳವೂರಲು ಅವಕಾಶ ನೀಡುವ ಪಾಕಿಸ್ತಾನದ ಸ್ನೇಹಕ್ಕೆ ಪ್ರತಿಯಾಗಿ ಅವರು ಅಂದಿನಿಂದಲೂ ಯಥೇಚ್ಛ ಸೈನಿಕ ನೆರವು ನೀಡುತ್ತಲೇ ಬಂದಿದ್ದಾರೆ. ಪಾಕಿಸ್ತಾನವು ಕೆಂಪು ಚೀನದಿಂದಲೂ ಶಸ್ತ್ರಾಸ್ತ್ರ ಪಡೆಯುತ್ತಿದೆಯೆಂದೂ ತಾವು ಸಹಾಯ ನಿಲ್ಲಿಸಿದರೆ, ಅದು ಸಂಪೂರ್ಣ ಮಾವನ ಗುಲಾಮವಾಗುವುದೆಂದೂ ನಂಬುತ್ತಿರುವ ಅಮೆರಿಕೆ ಅದೇ ಕೆಂಪು ಚೀನದ ಹತ್ತಿರ ಹತ್ತಿರ ಹೋಗುತ್ತಿರುವುದರ ರಹಸ್ಯವೇನು?

ವ್ಯಾಪಾರವೊಂದು ಮುಖ್ಯ ಗುರಿಯೆಂಬುದನ್ನು ಒಪ್ಪಿಕೊಳ್ಳ ಬಹುದು. ಆದರೆ, ಇದಕ್ಕೂ ಹೆಚ್ಚಿನ ಉದ್ದೇಶ ಬೇರೆಯಿದ್ದೇ ತೀರಬೇಕು. ಕೆಂಪು ಚೀನದ ಮಾವೋತ್ಸೆತುಂಗ್ ಮತ್ತು ತೈವಾನಿನ ಚಿಯಾಂಗ್ ಕೈ ಶೇಖ ಇಬ್ಬರೂ ಹಳೆಯ ಮುತ್ಸದ್ದಿಗಳು. ಅವರು ಆಜೀವ ಅಧಿಕಾರದಿಂದ ನಿವೃತ್ತರಾಗದೆ ಹೋದರೂ ಮೃತ್ಯುವವರ ಹೆಡತಲೆಯಲ್ಲಿ ಕುಣಿಯಾಡುತ್ತಿದೆಯೆಂಬುದು ಸತ್ಯ. ಭವಿಷ್ಯದಲ್ಲಿ ಅವರವರ ಉತ್ತರಾಧಿಕಾರಿಗಳು ಯಾವ ದಾರಿ ತುಳಿಯುವರೆಂದು ನಂಬುವುದು ಕಷ್ಟ. ಆದ್ದರಿಂದ ಹಳಬರನ್ನೇ ಆಲಂಗಿಸಿಕೊಂಡು ಸ್ನೇಹವಾರಂಭಿಸಿದರೆ, ಮುಂದಿನ ತಲೆಮಾರು ಅಮೆರಿಕೆಗೆ ವಿರೋಧವಾಗಿ ನಿಲ್ಲದು. ಮಾವೋ ವಿಚಾರಲಹರಿ ಮಾವೋ ನಂತರ ತನ್ನ ರೂಪಬದಲಾಯಿಸುವುದು ಕಂಡಿತವೇ. ಸೋವಿಯತ್ತಿನ ಹೆಗ್ಗಳಿಕೆ ಏಕಮುಖವಾಗಿ ಮುಂದೊತ್ತುವಲ್ಲಿ ತಡೆಯೊಡ್ಡಲು ಅಮೆರಿಕೆಗೆ ಕೆಂಪು ಚೀನಾದ ಸಹಾಯ ಹಸ್ತವೀಗ ಅಗತ್ಯವೆನಿಸಿದೆ. ವೈಜ್ಞಾನಿಕ ಕ್ಷೇತ್ರದಲ್ಲಿ ಕೆಂಪು ಚೀನ ಕೂಡ ಗಣನೀಯ ಪ್ರಗತಿ ಸಾಧಿಸಿದೆಯೆಂಬುದು ಶತಸ್ಸಿದ್ಧ. ಅಮೆರಿಕೆಯು ಒಂದು ಕಲ್ಲಿನಿಂದ ಎರಡು ಹಣ್ಣು ಉದುರಿಸುವ ಇರಾದೆ ಹೊಂದಿದೆ. ಒಂದು ವೇಳೆ ಎರಡೂ ಹಣ್ಣುಗಳು ಲಭ್ಯವಾಗದೆ ಹೋದರೂ ಐಕ್‌ರ ಇತಿಹಾಸ ಪ್ರಸಿದ್ಧ ಭೇಟಿಯಂತೆಯೇ ನಿಕ್ಸನ್ನರ ಭೇಟಿ ಪ್ರಯತ್ನಗಳು ಸುವರ್ಣಾಂಕನ ಯೋಗ್ಯವಾಗುತ್ತವೆಯೆಂಬುದು ಸತ್ಯ.

ಎರಡೂ ಸಾಚಾ ನೋಟುಗಳು

ದೇಶದ ಸಮಾಚಾರ ಪತ್ರಿಕೆಗಳಲ್ಲಿ ನಾವು ಖೋಟಾ ನೋಟುಗಳಿಗೆ ಸಂಬಂಧಪಟ್ಟ ವಿವರಗಳನ್ನು ಓದುತಿದ್ದೇವೆ. ಈ ಸಂಬಂಧ ಹಲವಾರು ಕಟ್ಲೆಗಳು ಜರುಗಿದರೂ ಹಲವರ ಮೇಲೆ ಆರೋಪ ಸಿದ್ಧವಾಗಿ ದಂಡನೆ ವಿಧಿಸಿದರೂ ಈ ನೋಟುಗಳ ತಯಾರಕರ ವಿತರಣೆಗಾರರ ಸಂಖ್ಯೆ ಹೆಚ್ಚುತ್ತಲೇ ಇದೆ. ಶ್ರೀ ಆಚಾರ್ಯ ಕೃಪಲಾನಿಯವರ ಅಭಿಪ್ರಾಯದಲ್ಲಿ ಸಾಚಾನೋಟುಗಳ ಮೊತ್ತದಷ್ಟೇ ಖೋಟಾನೋಟುಗಳೂ ಚಲಾವಣೆಯಲ್ಲಿವೆ. ದೊಡ್ಡ ಮೊತ್ತದ ನೋಟುಗಳು ಮಾತ್ರವಲ್ಲ ಸಣ್ಣ ಮೊತ್ತದವುಗಳೂ ಇವರಲ್ಲಿ ಸೇರಿವೆ. ಸಾಚಾ ಯಾವುದು–ಖೋಟಾ ಯಾವುದೂ ಎಂದು ಗೊತ್ತು ಮಾಡುವುದೂ ಅಸಾಧ್ಯವಾಗಿದೆ. ನಾಸಿಕ ಮುದ್ರಣಾಲಯದಿಂದಲೇ ಖೋಟಾನೋಟುಗಳಿಗೂ ಕಾಗದ ಸರಬರಾಜು ಆಗುತ್ತಿದೆಯೆಂದು ಕೆಲವರ್ಷಗಳಿಗೆ ಮೊದಲು ದೂರು ಬಂದಿತ್ತು. ಸನೂನ ಕ್ರಮ ಸಂಖ್ಯೆಯೇ ಇರುವುದು ಈ ಖೋಟಾನೋಟುಗಳ ವೈಶಿಷ್ಟ್ಯ. ಒಂದೇ ಸಂಖ್ಯೆಯ ಎರಡು ನೋಟುಗಳು ಒಂದೇ ಬಾರಿ ಒಂಡೆಡೆ ಸೇರುವುದು ಕಷ್ಟ ಸಾಧ್ಯವೆಂಬುದರಿಂದ ಈ ತಂತ್ರ ಸದ್ಯ ಸಿದ್ಧಿಸಿವೆ. ಒಂದೊಮ್ಮೆ ಒಂದೇ ಸಂಖ್ಯೆಯ ಎರಡು ನೋಟುಗಳನ್ನೂ ವಿತ್ತಸಚಿವರಿಗೆ ಕೊಟ್ಟು ಅವುಗಳಲ್ಲಿ ಸಾಚಾ ಯಾವುದೆಂದು ತಿಳಿಸಲು ಕೇಳಿಕೊಂಡಾಗ, ಸೂಕ್ತ ಪರಿಶೀಲನಾನಂತರ ಅವರು ನೀಡಿದ ವಿವರಣೆ ಆತ್ಮವಂಚನೆಯದ್ದು ಬೇಜವಾಬ್ದಾರಿಯದ್ದು—ಎರಡೂ ಸಾಚಾವೇ ಪರಮೋಶಿಯಿಂದ ಒಂದೇ ಸಂಖ್ಯೆ ಎರಡಕ್ಕೂ ಬಿದ್ದಿದೆ! ಇದೇ ತರಹದ ವ್ಯವಹಾರ ಮುಂದುವರಿದರೆ, ನಾವು ನಮ್ಮನ್ನೇ ವಂಚಿಸುತ್ತ ಹೋಗುತ್ತೇವೆ; ಯಾವವರಂತೆ ಕೊನೆಗಾಣುತ್ತೇವೆ.

●●

ಕನ್ನಡಿಗರು

ಕಣ್ಣೀರಿನಲ್ಲಿ ಕೈತೊಳೆಯುವಂತಾಗಬಾರದು

ನನೆಗುದಿಗೆ ಬಿದ್ದ ಕರ್ನಾಟಕದ ಪ್ರಶ್ನೆಗಳು ಎರಡು.

ಒಂದು, ಕಾವೇರಿ ನೀರಿನ ಹಂಚಿಕೆಯ ಪ್ರಶ್ನೆ, ಇನ್ನೊಂದು ಬೆಳಗಾಂವಿ ಗಡಿಯ ಪ್ರಶ್ನೆ.

ಬೆಳಗಾಂವಿಯೊಡನೆ ಆರಂಭವಾದ ಮರಾಠಿಗರ ಭೂದಾಹ ಕಾರವಾರವನ್ನೂ ಕಬಳಿಸಲು ಹಾತೊರೆಯುತ್ತಿದೆ. ಕೇಂದ್ರದ ಮಾಜಿ ಗೃಹ ಮಂತ್ರಿ, ಹಾಲಿ ವಿತ್ತಸಚಿವ ಚವಣರ ಪಕ್ಷಪಾತಪೂರ್ಣ ಕೃಪಾಕಟಾಕ್ಷ ಮರಾಠಿಗರ ಮೇಲಿದೆ, ಅದುವರೆಗೆ ಕರ್ನಾಟಕ್ಕೆ ನ್ಯಾಯದಾನವಾಗುವುದಿಲ್ಲ

ಬೆಳಗಾಂವಿ ಪ್ರಶ್ನೆ ಇಷ್ಟರಲ್ಲೇ ತೀರ್ಮಾನವಾಗ ಬೇಕಾಗಿತ್ತು; ಹದಿನೈದು ವರ್ಷಗಳ ಕಾಲ ಮೂವರು ಪ್ರಧಾನಿಗಳ ತಲೆ ಕೊರೆಯ ಬಾರದಿತ್ತು.

ಮೊನ್ನೆ ಮೊನ್ನೆಯವರೆಗೆ ಬಾರಿ ಬಾರಿಗೂ ಬೆಳಗಾಂವಿಯನ್ನು ಕೆಣಕುತಿದ್ದ ಮರಾಠಿಗರು ಇತ್ತೀಚೆಗೆ ಅದೇಕೋ ಸುಮ್ಮಗಾಗಿದ್ದಾರೆ ಅವರ ಅರ್ಭಟೆ, ಗರ್ಜನೆ, ಸಿಡಿಲಮೊರೆತ ತಣ್ಣಗಾಗಿದೆ

ಅಂದರೆ, ಅವರು ತಮ್ಮ ದಾನವೇಚ್ಛೆಯನ್ನು ಬಿಟ್ಟುಕೊಟ್ಟಿದ್ದಾರೆಂದು ಅರ್ಥವಲ್ಲ ಪ್ರಕೃತದ ಮೌನ ಭವಿಷ್ಯದ ಭಾರಿ ಸಮರದ ಸಿದ್ಧತೆಯಿರಬೇಕು.

ಶ್ರೀ ಚವಣರ ವ್ಯಕ್ತಿತ್ವವನ್ನು ಮಸುಳಿಸುವಲ್ಲಿ ಶ್ರೀಮತಿ ಗಾಂಧಿ ಸಾಕಷ್ಟು ಯಶಗಳಿಸಿದ್ದಾರೆ ಅವರಿಗೆ ವಿತ್ತ ಶಾಖೆಯನ್ನು ನೀಡಿದಂದಿನಿಂದ ಬೆಲೆಗಳು ಒಂದೇ ಸಮನೆ ಏರತೊಡಗಿವೆ. ಸಮಾಜವಾದದ ಬಡಾಯಿ ಮಾತ್ರ ಕೇಳುತ್ತಿದೆ.

ಇಂದು ದೇಶದಲ್ಲಿ ಸಮಾಜವಾದಿ ಆರ್ಥಿಕ ಕಾರ್ಯಕ್ರಮಗಳ ಅನುಷ್ಠಾನ ಎಳ್ಳಷ್ಟೂ ಆಗಿಲ್ಲ. ಇಲ್ಲಿ ನಡೆದಿರುವುದು ಸಮಾಜವಾದದ ಭಯಾನಕ ವಿಡಂಬನೆ ಮಾತ್ರ.

ಛತ್ರಪತಿ ಶಿವಾಜಿಯ ವಂಶಜರು ಇಂದು ಕೃಪಾಕಾಂಕ್ಷಿ ಭಾವಾಜಿಯಾಗಿದ್ದಾರೆ. ಆದ್ದರಿಂದಲೇ ಚವಣರ ಮಾತಿಗೆ ಕೇಂದ್ರದಲ್ಲಿ ಬೆಲೆಯಿಲ್ಲ.

ಬೆಳಗಾಂವಿ ಕೊಡಿಸಿರೆಂದು ಕೇಳಲು ಚವಣರಿಗೆ ದಮ್ಮಿಲ್ಲ; ಕೇಳಿದರೆ, ಅದು ನಡೆಯುವುದೂ ಇಲ್ಲ.

ಟಿಬೇಟಿನಲ್ಲಿನ ದಲಾಯಿಲಾಮರ ಎದುರು ಪಂಛೇನ್ ಲಾಮಾರನ್ನು ಎತ್ತಿ ಕಟ್ಟಿತು ಕೆಂಪು ಚೀನಾ. ಉಚಿತ ಸಮಯದಲ್ಲಿ ದಲಾಯ್‌ಲಾಮಾ ದೇಶ ಬಿಟ್ಟು ಓಡಿ ಹೋಗುವಂತೆಯೂ ಮಾಡಿತು; ತನ್ನ ವಿಶಾಲೋದರದಲ್ಲಿ ಟಿಬೇಟನ್ನು ಸಮಾವೇಶಗೊಳಿಸಿತು.

ಇಂದೀಗ ದಲಾಯ್‌ಲಾಮಾ ಭಾರತದಲ್ಲಿ ಆಶ್ರಯ ಪಡೆದಿದ್ದಾರೆ. ತಮ್ಮ ತಾಯ್ನಾಡಿಗೆ ಮರಳುವ ಹುಚ್ಚಾಸೆ ತಳೆದು ಬದುಕಿದ್ದಾರೆಂಬುದು ಟಿಬೇಟಿಯನ್ನರಿಗಂತೂ ಗೊತ್ತಿಲ್ಲ; ಉಳಿದವರಿಗೇನು ಗೊತ್ತು?

ಶ್ರೀಮತಿ ಗಾಂಧಿ ಅನಭಿಷಿಕ್ತ ಶಿವಾಜಿ ಮಹಾರಾಜರ ಶ್ವೇತ ಛತ್ರ– ರಾಜದಂಡಗಳನ್ನು ಅಪಹರಿಸಿ ಮತ್ತೊಬ್ಬರನ್ನು ರಾಜನನ್ನಾಗಿ ಮಾಡ ಹೊರಟಿದ್ದಾರೆ. ಆದಾದ ಕೂಡಲೇ ಛವಣರ ಕೈ ಸಂಪೂರ್ಣ ಬಿಡುತ್ತಾರೆ.

ಛವಣರು ಮಂತ್ರಿಯಾಗಿರುವ ವರೆಗೆ ಬೆಳಗಾಂವಿ ಕರ್ನಾಟಕದಲ್ಲೇ ಉಳಿಯುತ್ತದೆ ಎಂಬ ಆಶೆಯಾಗ ಮೂಡತೊಡಗಿದೆ.

ಕೇಂದ್ರದ ನೀರಾವರಿ ಮತ್ತು ವಿದ್ಯುತ್ ಶಾಖೆಗಳ ಸಚಿವ ಶ್ರೀ ಕೆ. ಎಲ್. ರಾವ್ ಕನ್ನಡಿಗರಲ್ಲ; ತಮಿಳರೂ ಅಲ್ಲ. ಅವರು ಆಂಧ್ರಕ್ಕೆ ಹತ್ತಿರದವರು.

ಅವರ ಯೋಜನೆಗಳು ಭಾರಿ ಭಾರಿ. ತಮಿಳರಿಗೆ ಗಂಗೋದಕ ಪಾನ ಮಾಡುವ ದೊಡ್ಡ ಯೋಜನೆಯೊಂದನ್ನು ಮೆಲುಕು ಹಾಕುತ್ತಿದ್ದಾರೆ.

ಹಿಂದೂ ಪುರಾಣಗಳ ಅಸ್ತಿತ್ವವನ್ನೇ ಪ್ರಶ್ನಿಸುವ, ಅವೆಲ್ಲ ಬ್ರಾಹ್ಮಣ ಸಮುದಾಯ ಕಟ್ಟಿದ ಕಟ್ಟುಕತೆಗಳೆನ್ನುವ ದ್ರಾವಿಡ ಮುನ್ನೇತ್ರ ಕಳಗಂನ್ನು ಎರಡನೆ ಬಾರಿಯೂ ಅಪ್ಪಿ ಕೊಂಡ ತಮಿಳರು ಗಂಗಾಜಲದ ಪಾವಿತ್ರ್ಯವನ್ನು ಒಪ್ಪಲಾರರು; ಆದರೂ ಗಂಗೆಯ ನೀರು ಅವರಿಗೆ ಬೇಕು.

ಅವರಿಗೆ ಕಾವೇರಿಯ ನೀರೂ ಬೇಕು; ಗಂಗೆಯ ನೀರೂ ಬೇಕು. ಶ್ರೀ ರಾಯರು ಸಿಂಧುವಿನ ನೀರು ತಂದು ಕೊಡುವುದಾದರೆ ಅದೂ ಬೇಕು, ವಿದೇಶಗಳಿಂದ ನೀರು ಆಯಾತ ಮಾಡಬಹುದಾದರೆ, ಅದಕ್ಕೂ ತಮಿಳರು ತುದಿಗಾಲಲ್ಲಿ ನಿಂತಿದ್ದಾರೆ.

ಒಟ್ಟಾರೆ ಅವರಿಗೆ ನೀರುಬೇಕು; ಎಲ್ಲಿಯದಾದರೂ ಸರಿ, ಹೇಗಾದರೂ ಸರಿ; ಯಾರು ಹೇಗೆ ಸುರಿದರೂ ಸರಿ.

ಶ್ರೀ ರಾಯರು ತಮಿಳರಿಗೆ ಬೆರಳು ತೋರಿಸಿ ಕೆಟ್ಟರು; ಅವರೀಗ ತಮ್ಮ ಕೈಯನ್ನೇ ಕಳೆದು ಕೊಳ್ಳುವ ಸ್ಥಿತಿ ಬಂದಿದೆ.

ತಮ್ಮ ಕೈಯುಳಿಸಲೆಂದು ಅವರು ತಮಿಳರ ಪಕ್ಷಕ್ಕೆ ವಾಲಿದರು; ರಾಜ್ಯ ಕಾರಣವೂ ಇದಕ್ಕೆ ಅನುಕೂಲ ವಾತಾವರಣ ನಿರ್ಮಿಸಿತು.

ತಮಿಳುನಾಡು–ಕರ್ನಾಟಕಗಳ ನಡುವೆ ಹಲವು ಸುತ್ತಿನ ಮಾತು ಕತೆಗಳು ನಡೆದು ಅವೆಲ್ಲವೂ ಹೊಳೆ, ನೀರಲ್ಲಿ ಹುಣಿಸೇ ಹಣ್ಣು ತೊಳೆದಂತಾಯ್ತು.

ಕಾವೇರಿಯ ಕೊಳ್ಳದಲ್ಲಿನ ಕರ್ನಾಟಕದ ಯೋಜನೆಗಳನ್ನು ಮಂಜೂರು ಮಾಡದೆ, ಅವನ್ನು ಅಮಾನ್ಯ ಮಾಡುವುದು ಶ್ರೀ ರಾಯರ ಪ್ರಯತ್ನ. ತಮಿಳು ನಾಡಿಗೆ ಅದು ಬಯಸುವಂತೆ ಧಾರಾಳ ನೀರು ಒದಗಿಸುವುದು ಅವರ ಇಂಗಿತ.

೧೯೨೪ರ ಒಡಂಬಡಿಕೆಯಂತೆ ತಮಗೆ ಇಷ್ಟು ನೀರು ದೊರೆಯಲೇ ಬೇಕು–ಇದು ತಮಿಳರ ಸವಾಲು. ಅದೇ ಒಡಂಬಡಿಕೆಯಂತೆ ನಮಗಿಷ್ಟು ನೀರು ಉಳಿಯಲೇ ಬೇಕು ಇದು ಕನ್ನಡಿಗರ ತರ್ಕ.

ಕೊಟ್ಟರೆ, ಉಳಿಯುವುದಿಲ್ಲ; ಉಳಿಸಿದರೆ ಕೊಡುವುದಕ್ಕಿಲ್ಲ. ಅಂದಿನ ಲೆಖ್ಖಾಚಾರವೇ ತಪ್ಪೋ; ಅಥವಾ ಅಂದಿನಷ್ಟು ನೀರು ಇಂದು ಹರಿಯದಿದೆಯೋ! ಎರಡೂ ಸರಿಯಿರಬಹುದು.

ತಮಿಳುನಾಡು ಪ್ರಶ್ನೆಯನ್ನು ಪಂಚಾಯತಿಗೆ ಒಪ್ಪಿಸ ಬೇಕೆಂದು ಒತ್ತಾಯ ತಂದಿದೆ; ಪ್ರಶ್ನೆಯನ್ನು ಸಮಾಧಾನಕರ (ತಮಗೆ) ವಾಗಿ ಉತ್ತರಿಸದೆ ಹೋದರೆ ತೀವ್ರ ಕ್ರಮಕೈಕೊಳ್ಳುವ ಬೆದರಿಕೆ ಹಾಕಿದೆ.

ಕರ್ನಾಟಕದಲ್ಲಿ ಜನಪ್ರಿಯ ಸರಕಾರವಿಲ್ಲ; ಆದ್ದರಿಂದ ಈಗ ಯಾವ ನಿರ್ಧಾರವೂ ಆಗದು; ಮುಂದೆ ತಮಿಳು ನಾಡಿಗೆ ಅನ್ಯಾಯವಾಗುವುದಿಲ್ಲ ಎಂದು ಶ್ರೀ ಸುಬ್ರಹ್ಮಣ್ಯಂ ಭರವಸೆ; ಆದರೂ ಬೆದರಿಕೆಯ ಗೊತ್ತುವಳಿ.

ಅಧಿಕೃತ ಭಾಷೆಯಾಗಲಿದ್ದ ಹಿಂದಿಯ ವಿರೋಧವಾಗಿ ತಮಿಳುನಾಡು ಚಳುವಳಿ ಹೂಡಿದಾಗ ಅಗ್ಗದ ಜನಪ್ರಿಯತೆಗೆಂದು ಸಚಿವ ಪದಕ್ಕೆ ರಾಜೀನಾಮೆ ನೀಡಿ ಹಿಂದಿನಿಂದದನ್ನು ಹಿಂದೆ ಪಡೆದ ಮಹಾರಥರಲ್ಲಿ ಶ್ರೀ ಸಿಸು ಕೂಡ ಒಬ್ಬರು

ಏನಾದರೂ ಹುಯಿಲೆಬ್ಬಿಸಿ ಕರ್ನಾಟಕದಲ್ಲಿ ಜನಪ್ರಿಯ ಸರಕಾರ ರಚನೆಯಾಗುವುದಕ್ಕೆ ಮೊದಲೇ ಪಂಚಾಯತಿಯ ನೇಮಕ ಮಾಡಿಸಿಕೊಳ್ಳಬೇಕು–ಇದು ಶ್ರೀ ಕರುಣಾನಿಧಿಯ ಕರುಣೆಯ ಬಯಕೆ

ಲೋಕ ಸಭೆಯಲ್ಲಿ ಪ್ರಶ್ನೆಯೊಂದನ್ನು ನೀರಾವರಿ ಸಚಿವರು ಉತ್ತರಿಸಿದರು. ಕಾವೇರಿ ಜಲವಿವಾದ ಬೇಗನೇ ಇತ್ಯರ್ಥವಾಗ ಬೇಕಾದದ್ದೇ ಸದ್ಯ ಕರ್ನಾಟಕದಲ್ಲಿ ರಾಷ್ಟ್ರಪತಿ ಆಳಿಕೆಯಿರುವುದರಿಂದ ಮಂತ್ರಿ ಮಟ್ಟದ ಮಾತುಕತೆ ನಡೆಯುವುದು ಸಾಧ್ಯವಿಲ್ಲ. ಎರಡೂ ರಾಜ್ಯಗಳ, ಜತೆಗೆ ಕೇರಳದ ಸಂಸತ್ ಸದಸ್ಯರ ಸಮ್ಮೇಳನ ಕರೆಯಲಾಗುವುದು. ವಿವಾದವನ್ನು ಸಂಧಾನದ ಮೂಲಕವೇ ಬಗೆಹರಿಸುವುದು ಸಾಧ್ಯವೆಂದು ಭರವಸೆ.

ಇದು ಕಾರ್ಯಗತವಾದರೆ, ಬೇರೆ ಪಂಚಾಯತಿ ಅನಗತ್ಯ. ಪಾರ್ಲಿಮೆಂಟ್ ಸದಸ್ಯರಲ್ಲಿ ಬಹುಮತ ಯಾರಿಗಿದೆಯೆಂಬುದು ಸ್ಪಷ್ಟ.

ಈ ಸಮ್ಮೇಳನವೇ ಪಂಚಾಯ್ತಿಯ ಕಾರ್ಯ ನಡೆಸಬಹುದಾದರೆ, ಬಹುಮತದ ನಿರ್ಣಯ ಮಾಡುತ್ತದೆ; ತಮಿಳುನಾಡಿಗೆ ಬೇಕಾದಷ್ಟು ನೀರು ದೊರೆಯುವಂತಾಗಲು ಸಾಧ್ಯವಾಗುತ್ತದೆ.

ಆದುದರಿಂದ ಇಂತಹ ಸುವರ್ಣ ಸಂಧಿಯನ್ನು ಕಳೆದುಕೊಳ್ಳಲು ತಮಿಳುನಾಡು ಸಿದ್ಧವಾಗದು.

(ಏಳನೇ ಪುಟ ನೋಡಿರಿ)



ಗೇಹರಾಜ್ಯದಲ್ಲಿ

ನೀ ಮುಂದೆ...ನ್, ನಾ ನಿನ್ನ ಹಿಂದೆ

'ಅಲ್ರಿ' ನಮ್ರಾಜ್ಯದಲ್ಲಿ ವಿದ್ಯುತ್ತು, ರಸ್ತೆ, ಪಾಠಶಾಲೆಗಳಿಗೆ ಏನೇನೂ ಅಭಾವ ವಿಲ್ಲಾಂತ ತೋರುತ್ತೆ....'

'ಯಾಕೆ ಹಾಗಂತೀಯ?'

'ನೋಡಿ, ಈಗ ಸರ್ವೇಸಾಮಾನ್ಯವಾಗಿ ಹಳ್ಳಿ ಹಳ್ಳಿಗೂ ವಿದ್ಯುತ್ ಪೂರೈಕೆ ಆಗ್ತಿದೆ. ಉಳಿದಿರೋ ಹಳ್ಳಿಗೂ ಇನ್ನೈದು ವರ್ಷಗಳಲ್ಲಿ ಹರಿಯುತ್ತದೆ.. ಮತ್ತೆ ರಸ್ತೆ ನೋಡಿ, ಪ್ರತಿ ಹಳ್ಳಿಯನ್ನೂ ಮುಟ್ಟಿದೇಂತ ಹೇಳಬಹುದು. ಹೆಚ್ಚಿನವುಗಳಲ್ಲಿ ಬಸ್ಸುಗಳೋ ಕಾರುಗಳೋ ನಿರಾತಂಕವಾಗಿ ಓಡಾಡಬಹುದು. ಇನ್ನು ಶಾಲೆಗಳನ್ನು ನೋಡಿ. ಪ್ರತಿ ಹಳ್ಳಿಯಲ್ಲೂ ಪ್ರಾಥಮಿಕ ಶಾಲೆ, ದೊಡ್ಡ ಹಳ್ಳಿಯಲ್ಲಿ ಹೈಸ್ಕೂಲು, ಪಟ್ಟಣಗಳಲ್ಲಿ ಕಾಲೇಜು....'

'ಹೌದಮ್ಮ, ನೀನನ್ನೋದು ನೂರಕ್ಕೆ ನೂರು ಸತ್ಯ. ಆದರೆ...'

'ಏನು?'

'ಕಾಡು ಹುಲ್ಲಿನಂತೆ ಬೆಳೆದರೆ ಸಾಲದು ನೋಡು....'

'ಮತ್ತೆ?'

'ನೀನು ಹೇಳಿದ ಮೂರರ ಸತ್ಯಸ್ಥಿತಿ ಹೇಗಿದೆ ಗೊತ್ತಾ ನಿನಗೆ?'

'ಹೇಳಿ ಬಿಡಿ....'

'ಹಳ್ಳಿಗೆ ವಿದ್ಯುತ್ತು ಬರುವುದು ಅಂದ್ರೆ ಯಾರೊ ಒಂದಿಬ್ಬರು ಮಹಾವ್ಯಕ್ತಿಗಳ ಮನೆಗೋ ಪಂಪುಸೆಟ್ಟಿಗೋ ಕನೆಕ್ಷನ್ ಸಿಗುವುದಲ್ಲ ನೋಡು. ಯಾರು ಯಾರು ಕನೆಕ್ಷನ್ ಬಯಸುತ್ತಾರೆಯೋ ಅವರಿಗೆಲ್ಲ ದೊರೆಯುವಂತಾಗಬೇಕು. ಅರ್ಜಿ ಹಾಕಿ ವರ್ಷವೊಂದು ಕಳೆದರೂ ಅದು ಮೇಲೆಬಾರದೆ ಲ್ಯಾಪ್ಸ್ ಆಗುವುದಾದರೆ ಏನು ಪ್ರಯೋಜನ? ಶ್ರೀಸಾಮಾನ್ಯ ಎಣ್ಣೆ ದೀಪದಿಂಲೇ ತಪ್ತಿಪಡಬೇಕಷ್ಟೆ....'

'ಅದು ಹೌದೂನ್ನಿ. ನೋಡಿ, ನಮ್ಮ ಆಚೆ ಮನೆ ಕಮಲಮ್ಮನವರು ಅರ್ಜಿಹಾಕಿ ಒಂದೂವರೆ ವರ್ಷವಾಯ್ತಂತೆ. ಇನ್ನೂ ವರ್ಕ್ ಆರ್ಡರೇ ಬಂದಿಲ್ಲವಂತೆ....'

'ನೋಡಿದೆಯಾ, ಹಳ್ಳಿ ಹಳ್ಳಿಗೆ ವಿದ್ಯುತ್ತಲ್ಲ,ವಿದ್ಯುತ್ ಕಂಬ ಮಾತ್ರ. ಒಂದ್ವೈಪತ್ತೋ ನೂರೋ ಕೈಬಿಡುತಿದ್ರೆ ಯಾವಾಗ್ಲೋ ಆಗಿ ಹೋಗ್ತಿತ್ತು ಜಗ ಜಗ....'

'ಅದು ಸರೀನ್ನಿ. ಎಲ್ರಿಂದ್ಲೂ ಕೈಬಿಡೋಕೆ ಹೇಗಾಗುತ್ತೇ?'

'ಕೈಬಿಡದಿದ್ದ ತಪ್ಪಿಗೆಂದು ಕತ್ತಲೆಯಲ್ಲೇ ಕೊಳೆಯುತ್ತಿರಬೇಕು. ಇನ್ನು ನಿನ್ನ ರಸ್ತೆ ಕತೆನೋಡು....'

'ಹ್ಞೂಂ....'

'ರಸ್ತೆಯೇನೋ ಆಯ್ತು. ಅದ್ರಲ್ಲಿ ನಡೆಯೋದಂತೂ ಸಾಧ್ಯವಿಲ್ಲ.'

'ಯಾಕೆ?'

'ಮಳೆ ನೀರು ಹರಿದು ತೋಡಾಗಿ ಬಿಟ್ಟಿದೆ. ತಾರು ಕಾಣುವ ಭಾಗ್ಯ ಪಡೆದು ಬಂದಿಲ್ಲ, ಬೇಡ. ಜಲ್ಲಿಯನ್ನೂ ಕಾಣುವ ಯೋಗವಿಲ್ಲ. ಅದೂ ಹೋಗಲಿ, ಹೊಂಡಗುಳಿ ಗುಂಪು, ಹಳ್ಳತಿಟ್ಟುಗಳನ್ನಾದರೂ ಸರಿಮಾಡ ಬೇಡವೆ' ಮಳೆ ಬರುವಾಗ ಅವುಗಳಲ್ಲಿ ನಡೆಯೋದು ಅಂದ್ರೆ ಹೆದರಿಕೆಯಾಗುತ್ತೆ...'

'ಎಲ್ಲೋ ಒಂದೊಂದು ಹಾಗೆ ಇರಬಹುದು....'

'ಒಂದೊಂದು ಯಾಕಮ್ಮ? ಹಳ್ಳೀ ರಸ್ತೆಗಳೆಲ್ಲ ಒಂದೇತರ. ಯಾರಾದ್ರೂ ಮಂತ್ರಿ-ಮಾಗಧರು ಬರ್ತಾರೇಂತಾದ್ರೆ ಅಲ್ಪಸ್ವಲ್ಪ ರಿಪೇರಿ. ಇಲ್ಲ, ಏನೂ ಇಲ್ಲ. ಬಸ್ಸುಗಳು ಹೋಗುತ್ತಿರೋ ರಸ್ತೆಗಳನ್ನೂ ಸರಿಯಾಗಿ ಇಟ್ಟುಕೊಳ್ಳೊದಿಲ್ಲಾಂತಾಂದಮೇಲೆ ಉಳಿದವುಗಳ ಪಾಡೇನು?'

'ಮೊನ್ನೆ ನೋಡಿ....ಗೆ ರಾಮಕ್ಕ ಹೊರಟಿದ್ರಂತೆ. ಹತ್ತು ಗಂಟೆಗೆ ಹೊರಡೋ ಬಸ್ಸು ಹನ್ನೆರಡಾದ್ರೂ ನಾಪತ್ತೆಯಂತೆ ವಿಚಾರ್ಸಿವಾಗ, ಆ ರಸ್ತೆಯಲ್ಲಿ ಬಸ್ಸು ಹೋಗೋದಿಲ್ಲಾಂತಂದ್ರಂತೆ....'

'ಅಲ್ವೆ, ಕಚಡಾದಲ್ಲಿ ಕಚಡಾ ರಸ್ತೆಯಲ್ಲಿ ಬಸ್ಸು ಓಡಿಸೋದೂಂದ್ರೆ ಸುಲಭವಲ್ಲ ನೋಡು, ಟೈರು ಕೆಡುತ್ತೆ, ಬಸ್ಸಿನ ಆಯುಷ್ಯ ಕ್ಷೀಣಿಸುತ್ತೆ, ಜೀವ ಹಾರಿಹೋಗುತ್ತೆ...."

'ಅದೂ ಹೌದೂನ್ನಿ. ರಸ್ತೆಯಿದ್ರೂ ಅದನ್ನ ಉಪಯೋಗಕ್ಕೆ ಸರಿಯಾಗಿ ಇಡದಿದ್ರೆ....'

"ನಿನ್ನ ಪಾಠಶಾಲೆಗಳ ಕತೆ ಮತ್ತಿನ್ನೇನು?'

ಹ್ಞಾಂ....ಏನಂದ್ರಿ'

'ಹಳ್ಳಿಯಲ್ಲಿ ಶಾಲೆ ತೆರೆದ್ರೆ ಸಾಕೆ? ಶಿಕ್ಷಕರನ್ನು ನೇಮಿಸಬೇಡ್ವೆ?'

"ಒಳ್ಳೆ ಮಾತಾಡ್ತೀರಿ...."

"ನಗರ ಪಟ್ಟಣಗಳ ಶಾಲೆಗಳಲ್ಲೇ ಸಾಕಷ್ಟು ಶಿಕ್ಷಕರನ್ನು ನೇಮಿಸೋ ಗೋಜು ಸರ್ಕಾರಕ್ಕಿಲ್ಲ; ಮತ್ತೆ ಹಳ್ಳೀ ಶಾಲೇನ ಯಾರು ಕೇಳ್ತಾರೆ?'

'ಅಂದ್ರೆ?'

'ಶಾಲೆಯಿದ್ರೆ, ಟೀಚರ್ರೆ ಮೇಸ್ಟ್ರು ಇಲ್ಲ. ಮೇಸ್ಟ್ರು ಇದ್ರೆ, ಶಾಲೆಗೆ ಬರೋದಿಲ್ಲ. ಅವ್ರು ಬಂದ ದಿನ್ನ ಮಕ್ಳು ಬರೋದಿಲ್ಲ....'

'ನಮ್ಮ ಸರೋಜನ ಗಂಡನ ಚಿಕ್ಕಪ್ಪನ ಮಗಳ ಗಂಡ ಪಂಚಾಯತಿ ಪ್ರೆಸಿಡೆಂಟು ಅಂತೆ. ಅವನ ಚಾರ್ಜಿನಲ್ಲಿ ಎರಡು ಪ್ರಾಥಮಿಕ ಶಾಲೆಗಳಿವೆಯಂತೆ. ಮೊದಲಿದ್ದ ಮೇಸ್ಟ್ರು ವರ್ಗವಾಗುವಾಗ ಚಾರ್ಜು ಕೊಟ್ಟು ಹೋಗಿದ್ರಂತೆ. ಮತ್ತೆ ಮೂರು ನಾಲ್ಕು ಬಾರಿ ನೇಮಕವಾದವ್ರು ಯಾರೂ ಬರಲಿಲ್ಲವಂತೆ....'

'ಅಂಥ ಶಾಲೆಗಳು ಇದ್ರೆಷ್ಟು, ಬಿಟ್ರೆಷ್ಟು?'

'ಅದು ಸರಿಯೇ-ಆದ್ರೂ ಇದ್ದಂತಾಯ್ತಲ್ಲ?'

'ಬರೀ ಭೂಷಣ ಅಂಕೆ ಸಂಖ್ಯೆಗಳಿಗೆ ಮಾತ್ರ. ನೋಡು ಚಿಕ್ಕ ಸಂಸಾರ— ಸುಖದ ಸಂಸಾರವೆಂದು ಡಂಗುರ ಸಾರುವವರು, ದೊಡ್ಡ ಸಂಸಾರದ ತಾಪತ್ರಯ ಶತಗಳನ್ನು ಕಣ್ಣು ಕೋರೈಸುವಂತೆ ವರ್ಣಿಸುವವರು ಈ ಜೀವಚ್ಛವಗಳಂತಹ ವಿದ್ಯುತ್ ಸರಬರಾಜು, ರಸ್ತೆ, ಶಾಲೆಗಳನ್ನು ವಿಸ್ತರಿಸುತ್ತ ಹೋಗುವುದೇಕೆ?'

"ಶವಗಳಲ್ಲಿ ಪ್ರಾಣ ಪ್ರತಿಷ್ಠೆ ಮಾಡಬೇಕೂನ್ನಿ...."

"ಹೌದು,ಪ್ರಾಣವಿಲ್ಲದೆ ಹೋದರೆ, ಕೊಳೆತು ನಾರತೊಡಗುತ್ತದೆ...."

"ಅದಿರ್ಲಿ, ಅಲ್ಲ, ಪಾಕಿಸ್ತಾನಕ್ಕೆ ಅಮೆರಿಕೆ ಶಸ್ತ್ರಾಸ್ತ್ರಗಳ ನೆರವನ್ನು ತಡೆ ಹಿಡಿಯಲು ಒಪ್ಪುವುದಿಲ್ಲ...."

'ಅದ್ಯಾಕೆ ಒಪ್ಪುತ್ತೆ? ನೀಡದೇ ಇದ್ರೆ ಪಾಕಿಗಳು ಕೆಂಪು ಚೀನಾದ ಚೇಲರಾಗ್ತಾರೆ; ಅದು ನಿಮಗೇ ಗಂಡಾಂತರಕಾರಿಯೆಂದು ನಮಗೆ ಬುದ್ಧಿ ಹೇಳ್ತಾರೆ ...'

"ಅಮೇರಿಕೆಯ ಸಿನೆಟರ್ ಕೆನ್ನೆಡಿಯವರು ಮಾತ್ರವಲ್ಲ, ಹಲವಾರು ಮುತ್ಸದ್ಧಿಗಳೂ ಪ್ರಮುಖ ಪತ್ರಿಕೆಗಳೂ ಭಾರತ ಪರ ಅಭಿಪ್ರಾಯ ವ್ಯಕ್ತ ಮಾಡುತ್ತಿದ್ದಾರಂತೆ."

'ಹೌದು ಆದ್ರೆ ಭಾರತ ಒಳ್ಳೆಯದಾಗಬೇಕೆಂದು ಅಮೆರಿಕೆ ಸರಕಾರ ಬಯಸುವುದಿಲ್ಲ. ಆದ್ದರಿಂದಲೇ ಭಾರತದ ಜನಾಭಿಪ್ರಾಯ, ಪ್ರತಿಭಟನೆಗಳನ್ನದು ಕಸದ ಬುಟ್ಟಿಗೆ ತೂರುತ್ತದೆ....'

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂ ಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಪುತ್ತೂರು IInd Adle ಮುನ್ಸಿಫ್ ಕೋರ್ಟಿನಲ್ಲಿ

Ex. C. 407/70

Sri K. S. Temple —ಅರ್ಜಿದಾರ

ಅಬ್ದುಲ್ ರಹಿಮಾನ ಬ್ಯಾರಿ, V. K. ಪಳ್ಳಿ ಬ್ಯಾರಿ ಮಗ, ಸುಬ್ರಹ್ಮಣ್ಯ ಗ್ರಾಮ —ಎದ್ರಿ

ಸದ್ರಿ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಅರ್ಜಿದಾರನ ಕಡೆಯಿಂದ ದಾಖಲಾದ ಈ ಅಮಲ್ಜಾರಿಯಲ್ಲಿ Rule 37 ನೋಟೀಸು ಬಗ್ಗೆ ತಾ. 6—8—71ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಪ್ಪಾಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

(Sd) M. RAMMOHAN RAO
Advocate for Petitioner

Puttur, 15—7—71.

ಪುತ್ತೂರು IIIrd Adle ಮುನ್ಸಿಫ್ ಕೋರ್ಟಿನಲ್ಲಿ

R. R. C. 2203/70

ಪದ್ಮನಾಭ ಯಡಪ್ಪಾಡಿತ್ತಾಯ-ಅರ್ಜಿದಾರ

ಚೆನ್ನಮ್ಮ ಕೂಡಾ —ಎದ್ರಿರು

ಎದ್ರಿರು:- 3. ದುಗ್ಗ ಗೌಡ

4. ನಾಗಪ್ಪ ಗೌಡ-ಅಮ್ಮು ಗೌಡರ ಮಕ್ಕಳು, ಗೋಳಿತೊಟ್ಟು ಗ್ರಾಮ.

ಸದ್ರಿ 3,4ನೇ ಎದ್ರಿರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

69-70ನೇ ವರ್ಷದ ಗೇಣಿ ಕೇಳಿ ಅರ್ಜಿದಾರನು ನಿಮ್ಮ ವಗೈರೆರ ಮೇಲೆ ಮಾಡಿದ ಈ ನಂಬ್ರ 27-7-71ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಪ್ಪಾಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

(Sd) M. RAMMOHAN RAO
Advocate for Petitioner.

Puttur, 17—7—71

'ಮುಂದಿನ ವರ್ಷ ಬಂಗ್ಲಾ ದೇಶದಲ್ಲಿ ಬರಗಾಲ ಬಡಿಯುವುದಂತೆ........'

'ಅಲ್ಲವೇ ಮತ್ತೆ? ವರ್ಷವಿಡೀ ಹೋರಾಟ ಮಗ್ನರಾದರೆ ಬೆಳೆ ಬೆಳೆಯುವವರು ಯಾರು?'

'ಆಗ, ಅನ್ನವಿಲ್ಲದ ಬಂಗ್ಲಾ ದೇಶೀಯರು ಮತ್ತೆ ಇಲ್ಲಿಗೆ ಓಡಿ ಬರಬಹುದು....'

'ಮತ್ತೇನು ಮಾಡಬೇಕು? ಹತ್ತರೊಡನೆ ಹದಿನೈದು....'

'ಬಂಗ್ಲಾದೇಶಕ್ಕೆ ಮನ್ನಣೆ ನೀಡಬೇಕೆಂದು ರಾಜನಾರಾಯಣ್ ಉಪವಾಸ ಮಾಡುತ್ತಾರಂತೆ....'

'ಭಾರತದ ವಿದೇಶನೀತಿಯನ್ನು ಹೀಗಳೆಯುವ ಹುಚ್ಚು ಹವ್ಯಾಸವಿದು ಅಂತ ಪ್ರಧಾನಿ ಅಂದಾರೂನ್ನು.'

'ಯಾಕೆ?'

'ಅಲ್ಲವೆ, ಮೊದಲಿಗೆ ರಶ್ಯವೋ ಅಮೆರಿಕವೋ ಸಾಂಕೇತಿಕವಾಗಿ ಮನ್ನಣೆ ನೀಡಿದರೆ, ಮರುಕ್ಷಣದಲ್ಲೇ ನಾವು....'

'ಅಂದ್ರೆ ನಮಗೆ ಸ್ವತಂತ್ರ ನೀತಿಯಿಲ್ಲ ಅಂತ....'

'ಶಾಂತಂ ಪಾಪಂ...ಶಾಂತಂಪಾಪಂ. ಇಲ್ಲದೆ ಮತ್ತೆ?'

'ಏನು?'

'ನೀವುಂದೆ ರಶ್ಯ ಅಮೆರಿಕೆ ನಾನಿನ್ನು ಹಿಂದೆ....'

'ಇದೊಳ್ಳೆ ಫೇಷಾಯ್ತು. ಅಲ್ಲ, ಈ ನೀತಿಯಿಂದಾಗಿ ನಮ್ಮ ಪಾಡು ಮಾತ್ರ ನಾಯಿ ಪಾಡು....'

'ಅಲ್ವೆ, ನಾವು ಮುಂದೆ ಹೋದ್ರೆ ಭಾರೀ ಗಂಡಾಂತರ....'

'ಯಾಕೆ?'

'ಲೋಕದ ಇತರರೂ ಪಾಕಿನ ಹಿಂದೆ ಬಂದು ನಿಂತ್ರೆ....'

'ಅದು ಹೌದು....'

'ನೋಡು, ಇದು ನೀತಿಯಲ್ಲ ರಾಜಕೀಯ....'

'ಏನು ರಾಜ್ಯಕೀಯವೋ....'

'ನಿರಾಶ್ರಿತರನ್ನು ಸ್ವಾಗತಿಸಿದ ಮಾನವತೆ ತೋರಿಸಿದ್ದಕ್ಕೆ ಅದು ದಾನವತೆಯಂತೆ ಪೀಡಿಸ ಹೊರಟಿದೆ....'

'ಅಮೆರಿಕೆಯ ನಿಲುವಲ್ಲಿ ಬದಲಾಗುತ್ತಂತಲ್ಲ..'

'ಆದೀತೂನ್ನು. ಯಾಹ್ಯಾರ ಕೈಹಿಡಿದುಕೊಂಡರೂ ಅವರು ಮುಳುಗುತ್ತಾರೆಂದು ಖಾತ್ರಿಯಾದಾಗ....'

'ಓ. ಆಗ....'

'ಅಲ್ಲ ಈಗ....'

'ಸಾಕು ಬಿಡೀಂದ್ರೆ....'

—ಗೋರಾ.

ಕಾರ್ಯಶೀಲ ಪ್ರಜಾಸತ್ತೆ

ಕಾರ್ಯಶೀಲ ಪ್ರಜಾಸತ್ತೆಯ ನೈಜ ಸ್ವರೂಪವನ್ನು ತಿಳಿಯಲು ಒಮ್ಮೆ ಪ್ರಧಾನ ಮಂತ್ರಿಗಳ ನಿವಾಸಕ್ಕೆ ಭೇಟಿ ನೀಡಿ. ನೈಜ ಸ್ವರೂಪ ತಾನೇ ತಾನಾಗಿ ಅರಿವಾಗುವುದು. ದೇಶದ ವಿವಿಧ ಕಡೆಗಳಿಂದಬಂದ ಜನರನ್ನು ಅವರ ವೇಷ ಭೂಷಣಗಳನ್ನು ಅಲ್ಲಿ ಕಾಣಬಹುದು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಭಾರತ ದರ್ಶನ ಕಣ್ಮುಂದೆ ನಿಲ್ಲುವುದು. ಕೆಲವು ಮಂದಿ ನಡೆದು ಬಂದರೆ ಇನ್ನು ಕೆಲವರು ಎತ್ತಿನಗಾಡಿಗಳಲ್ಲಿ, ಮತ್ತೆ ಕೆಲವರು ವಾಹನಗಳಲ್ಲಿ ಹೀಗೆ ಎಲ್ಲಾ ಜನಾಂಗಗಳ, ಸಮಾಜದ ವಿವಿಧ ರಂಗಗಳ ವ್ಯಕ್ತಿಗಳು ಪ್ರಧಾನ ಮಂತ್ರಿಗಳ ನಿವಾಸಕ್ಕೆ ಆಗಮಿಸುತ್ತಿರುತ್ತಾರೆ. ಪ್ರಧಾನ ಮಂತ್ರಿಗಳ ನಿವಾಸದದೃಶ್ಯ ಮರೆಯಲಾಗದು. ತಮ್ಮ ಪ್ರಧಾನಿಯನ್ನು ಕಾಣುವಹಂಬಲ ಮತ್ತು ಕಾತುರತೆ ಭೇಟಿ ನೀಡುವವರಲ್ಲಿ ಎಂದೂ ತುಂಬಿರುತ್ತದೆ.

ಪ್ರತಿದಿನ ಬೆಳಿಗ್ಗೆ 8.45ಗಂಟೆಗೆ ಶ್ರೀಮತಿಇಂದಿರಾಗಾಂಧಿಯವರು ತಮ್ಮ ನಿವಾಸದ ಸಮೀಪದಲ್ಲಿರುವ ಗೃಹವೊಂದಕ್ಕೆ ಕಾಲ್ನಡಿಗೆಯಲ್ಲಿ ತೆರಳುತ್ತಾರೆ. ಕೆಲವು ತಿಂಗಳುಗಳಿಂದೀಚೆಗೆ ಪ್ರಧಾನಿ ನಿವಾಸದ ಸಮೀಪದ ಈಗೃಹವನ್ನು ಪ್ರಧಾನಿಯ ಕಚೇರಿಯನ್ನಾಗಿ ಪರಿವರ್ತಿಸಲಾಗಿದೆ. ಅಲ್ಲಿಸಾವಿರಾರು ಮಂದಿ ಪ್ರಧಾನಿಯವರ ಭೇಟಿಗಾಗಿ ಕಾದಿರುತ್ತಾರೆ. ಅಖಿಲಭಾರತ ಯಾತ್ರೆಗಾಗಿ ಬಂದವರು, ಹೊಸದಾಗಿ ವಿವಾಹವಾದ ದಂಪತಿಗಳು ಪ್ರಧಾನಿಯವರ ದರ್ಶನ ಹಾಗು ಆಶೀರ್ವಾದಗಳಿಗಾಗಿ ಕಾದಿರುತ್ತಾರೆ. ಬಂಗ್ಲಾದೇಶದ ನಿರಾಶ್ರಿತರ ನಿಧಿಗಾಗಿ ತಮ್ಮ ಕಾಣಿಕೆಯನ್ನು ಪ್ರಧಾನಿಯವರಿಗೆ ನೇರವಾಗಿ ಸಲ್ಲಿಸಲೂ ಹಲವರು ಬರುತ್ತಾರೆ. ಕೃತಜ್ಞತೆಯನ್ನು ಸಲ್ಲಿಸಿ ಪ್ರಧಾನಮಂತ್ರಿಗಳು ಆ ಕಾಣಿಕೆಗಳನ್ನು ಸ್ವೀಕರಿಸುವರು. ಕೇಂದ್ರ ಸರ್ಕಾರ ಹಾಗು ಸ್ಥಳೀಯ ಸರಕಾರಗಳ ವಿರುದ್ಧ ಬರುವ ದೂರುಗಳನ್ನು ಅವರು ಸಹನೆಯಿಂದ ಆಲಿಸುವರು. 54 ಕೋಟಿ ಜನತೆಯ ಭಾರ ತಮ್ಮ ಮೇಲಿದ್ದರೂ ಅವರ ಈ ಸಹನೆ ಅವರ ದೊಡ್ಡ ವ್ಯಕ್ತಿತ್ವದ ಪ್ರತೀಕ.

"ನನ್ನ ಜೀವನದ ಆಸೆ ಇಂದು ನೆರವೇರಿತು" ಎಂಬುದಾಗಿ ಇತ್ತೀಚೆಗೆ ಪ್ರಧಾನಿಗಳ ದರ್ಶನಲಾಭ ಪಡೆದ ವೃದ್ಧರೊಬ್ಬರು ಹೇಳಿದ್ದಾರೆ. ಪ್ರಧಾನಮಂತ್ರಿಗಳ ಕಾರ್ಯನಿರ್ವಹಣೆ ಬಗ್ಗೆ ವೃದ್ಧರ ಮೆಚ್ಚುಗೆ ನೂರಕ್ಕೆ ನೂರು ಸತ್ಯ.

ಅಬ್ರಹಾಂ ಲಿಂಕನ್ನರ ಅಮೃತ ವಾಣಿ

ಅಬ್ರಹಾಂ ಲಿಂಕನ್‌ರು ಜ್ಞಾನ ನಿಧಿಯೂ ಅನುಭವ ನಿಧಿಯೂ ಆಗಿದ್ದರು. ಅವರ ಕೆಲವು ಉಕ್ತಿಗಳು ಸಾರ್ವಕಾಲಿಕವಾಗಿವೆ. ಅವುಗಳನ್ನು ಅವರು ಹೇಳಿ ನೂರು ವರ್ಷಕ್ಕೆ ಮೇಲಾಗಿ ಹೋಗಿದ್ದರೂ ಅವು ಪ್ರಚಲಿತ ಕಾಲಕ್ಕೇ ಸಂಬಂಧಿಸಿರುವಷ್ಟು ಅರ್ಥಪೂರ್ಣವಾಗಿವೆ.

ಮಿತವ್ಯಯ ಸಾಧಿಸುವ ಗುಣಧರ್ಮವನ್ನು ನೀವು ಪುರಸ್ಕರಿಸದಿದ್ದರೆ ಸಮೃದ್ಧಿಯನ್ನು ತರುವ ಕೆಲಸ ನಿಮ್ಮಿಂದ ಆಗಲಾರದು.

ಬಲಶಾಲಿಗಳನ್ನು ದುರ್ಬಲಗೊಳಿಸುವುದರಿಂದ ನೀವು ದುರ್ಬಲರನ್ನು ಬಲಶಾಲಿಗಳನ್ನಾಗಿ ಮಾಡಲಾರಿರಿ.

ಸಂಬಳನೀಡುವವನನ್ನು ಹಿಡಿದೆಳೆಯುವ ಮೂಲಕ ನೀವು ಸಂಬಳ ಸ್ವೀಕರಿಸುವವನನ್ನು ಮೇಲಕ್ಕೆ ಎತ್ತಲಾರಿರಿ.

ವರ್ಗ ಕಲಹಗಳನ್ನು ಪ್ರೋತ್ಸಾಹಿಸುತ್ತ ನೀವು ಮಾನವ ಸೋದರತೆಯನ್ನು ಹೆಚ್ಚಿಸಲಾರಿರಿ.

ಶ್ರೀಮಂತರನ್ನು ಹಾಳುಮಾಡುವ ಮೂಲಕ ನೀವು ಬಡವರಿಗೆ ಸಹಾಯಮಾಡಲಾರಿರಿ.

ಸಾಲ ತಂದ ಹಣದ ಮೇಲೆ ನೀವು ಸಮರ್ಪಕವಾದ ಸುರಕ್ಷಿತತೆಯನ್ನು ಸ್ಥಾಪಿಸಲಾರಿರಿ.

ಮನುಷ್ಯನ ಕ್ರಮ ಶಕ್ತಿ ಹಾಗೂ ಸ್ವಾತಂತ್ರ್ಯವನ್ನು ಕಿತ್ತುಕೊಂಡು ನೀವು ಆತನಲ್ಲಿ ಧೈರ್ಯಚಾರಿತ್ರ್ಯಗಳನ್ನು ನಿರ್ಮಾಣ ಮಾಡಲಾರಿರಿ.

ಮನುಷ್ಯರು ಯಾವುದನ್ನು ತಾನೇ ಮಾಡಬೇಕೋ, ತಾವೇ ಮಾಡಬಲ್ಲರೋ ಅದನ್ನು ನೀವೇ ಅವರಿಗಾಗಿ ಮಾಡುತ್ತ ನೀವು ಅವರಿಗೆ ಶಾಶ್ವತವಾಗಿ ಸಹಾಯ ಮಾಡಲಾರಿರಿ.

ವಿಧಾಯಕವಾಗಿ ನಾವು ಸಮಾಜಕ್ಕೆ ಉಪಯೋಗವಾಗಲು ಅಸಂಖ್ಯಾತ ದಾರಿಗಳಿವೆ. —ಪ್ರ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. No. 23/1971

ಮಣಿಪಾಲ್ ಪವರ್ ಪ್ರೆಸ್ ಯಿದರ ಮನೇಜಿಂಗ್ ಪಾರ್ಟನರ್ T. ಮೋಹನದಾಸ ಪೈ —ವಾದಿ

ಮತ್ತು

ಸುಂದರ ಶೆಟ್ಟಿ —ಪ್ರತಿವಾದಿ

ಯಿವರೊಳಗೆ

ಪ್ರತಿವಾದಿ: ಸುಂದರ ಶೆಟ್ಟಿ—ತಂದೆ ಹೆಸ್ರು ಸಿದ್ದು ಶೆಟ್ಟಿ, ಉಡ್ಪಿ ತಾಲ್ಲೂಕು ಪುತ್ತೂರು ಗ್ರಾಮದ ನಿಟ್ಟೂರುನಲ್ಲಿರುವವ.

ವಾದಿರ ಪ್ರೆಸ್ಸಿನಲ್ಲಿ ಪ್ರತಿವಾದಿಯು ಮಾಡ್ಸಿದ ಪ್ರಿಂಟಿಂಗ್ ವಗೈರೆಯ ಬಾಬ್ತು ಪ್ರತಿವಾದಿಯಿಂದ ವಾದಿಗೆ ಬರತಕ್ಕ ಅಸಲು ಬಡ್ಡಿ ವಗೈರೆ ರೂ. 180_71ಕ್ಕೆ ವಾದಿಯು ಪ್ರತಿವಾದಿ ಮೇಲೆ ಮಾಡಿದ ಮೇಲಿನ ದಾವೆಯು ಪ್ರತಿವಾದಿಯು ಅಪೈರು ನೋಟೀಸಿನ ಬಗ್ಗೆ ತಾರೀಕು 6—8—71ಕ್ಕೆ ತಸ್ತಿಗೆ ಯಿಟ್ಟಿರುವುದರಿಂದ ಪ್ರತಿವಾದಿಯ ಉದಾರಣೆ ವಗೈರೆಯಿದ್ದಲ್ಲಿ ಸದ್ರಿ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಜ್ವಾಹೀರು ಮಾಡಲಿಕ್ಕೆ ತಪ್ಪಿದ್ರೆ ಪ್ರತಿವಾದಿಯನ್ನು ಶಿಕ್ಷಾ ಮಾಡಿ ಸದ್ರಿ ದಾವೆ ಫಡಿಚಾ ಮಾಡೋಣಾಗುತ್ತದೆ ಎಂತ ಯಿದರ ಮೂಲ್ಕ ಪ್ರತಿವಾದಿಗೆ ತಿಳಿಸೋಣಾಗುತ್ತದೆ.

B. KRISHNA BHAT.
Advocate for Plaintiff.

Udipi, 7—7—1971.

Independence Day Special, 1971

ನವಯುಗ

ಸ್ವಾತಂತ್ರ್ಯೋತ್ಸವ ಸಂಚಿಕೆ

ಅಗೋಸ್ತು ೧೫ ಸಮೀಪಿಸುತ್ತಿದೆ; ಭಾರತೀಯರಾದ ನಮಗೊಂದು ಪರಮ ಪವಿತ್ರ ದಿನ. ಸ್ವಾತಂತ್ರ್ಯ ದಿನೋತ್ಸವದ ಸವಿನೆನಪನ್ನು ಚಿರಂತನವಾಗಿರಿಸಲು ತಮ್ಮ ನೆಚ್ಚಿನ ನವಯುಗವು ನಾಡಿನ ಸುವಿಖ್ಯಾತ ಬರಹಗಾರರ ರಾಜಕೀಯ ಹಾಗೂ ಸಾಂಸ್ಕೃತಿಕ ಮೌಲ್ಯವಿರುವ ಲೇಖನಗಳಿಂದ ಕೂಡಿದ ವಿಶೇಷಾಂಕವನ್ನು ಎಂದಿನಂತೆ ಈ ವರ್ಷವೂ ಪ್ರಕಟಿಸುತ್ತದೆ.

ಈ ಜನಪ್ರಿಯ ಪತ್ರಿಕೆಯು ಅಸಂಖ್ಯ ಜನರ ಕೈಸೇರುತ್ತ ತಮ್ಮ ಉದ್ದಿಮೆ, ವ್ಯವಹಾರಗಳ ನೈಜ ದರ್ಶನವನ್ನು ಎಲ್ಲರಿಗೂ ಒದಗಿಸುವುದು. ಆ ಪ್ರಯುಕ್ತ ದಯವಿಟ್ಟು ಆದಷ್ಟು ತ್ವರಿತವಾಗಿ ತಮ್ಮ ಜಾಹೀರಾತನ್ನು ಕಳುಹಿಸಿ ಸಹಕರಿಸಿರಿ.

ಲೇಖಕರ ಸಂದರ್ಭೋಚಿತವಾದ ಸಣ್ಣ ಲೇಖನ, ಹರಟೆ, ಪ್ರಬಂಧ, ಕವನಾದಿಗಳನ್ನು ಈ ತಿಂಗಳಾಂತ್ಯದೊಳಗೆ ಕಳಿಸಬಹುದು.

ವ್ಯವಸ್ಥಾಪಕರು,
ನವಯುಗ, ಉಡುಪಿ.

Gram: VISHWA Tel: 28111 & 28112

When at Bangalore
Stay at

HOTEL NATARAJA

Restaurant Boarding & Lodging.

107 Police Road, City Market,

BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.

Telephone attached rooms.

READ &
ADVERTISE IN
NAVAYUGA WEEKLY

ವೇದಿಕೆಯ ಮೇಲಿನ ಮಾತುಗಳು

ರಾಷ್ಟ್ರಪತಿ ವಿ. ವಿ. ಗಿರಿಯವರು ಕರ್ನಾಟಕಕ್ಕೆ ಹಳಬರು. ಇಲ್ಲಿ ರಾಜ್ಯಪಾಲರಾಗಿದ್ದಾಗಲೇ ಅವರು ಉಪರಾಷ್ಟ್ರಪತಿಯಾಗಿ, ಮುಂದೆ ರಾಷ್ಟ್ರದ ಪ್ರಥಮ ಪ್ರಜೆಯಾಗಿ ಆಯ್ಕೆಯಾದದ್ದು. ರಾಜ್ಯಪಾಲರಾಗಿರುವಾಗ ಶ್ರೀ ಗಿರಿಯವರು ರಾಜ್ಯದ ಉನ್ನತಿಯ ಬಗ್ಗೆ ಬಹಳಷ್ಟು ಕಾಳಜಿ ವಹಿಸಿದ್ದುಂಟು. ನಗರ ನಿರ್ಮಲತೆಯ ಕಡೆಗೆ ಅವರು ಹರಿಸಿದ ಮೊದಲ ಗಮನವನ್ನು ಅವರ ನಂತರ ಬಂದ ರಾಜ್ಯಪಾಲರೂ ಮುಂದುವರಿಸಿದರು. ಕಳೆದ ನಾಲ್ಕೂವರೆ ವರ್ಷಗಳಲ್ಲಿ ಹಲವಾರು ಬಾರಿ ರಾಜ್ಯಕ್ಕೆ ಸಂದರ್ಶನ ನೀಡಿದ ಶ್ರೀ ಗಿರಿಯವರು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ವಜ್ರ ಮಹೋತ್ಸವವನ್ನು ಉದ್ಘಾಟಿಸಲೆಂದು ಮತ್ತೊಮ್ಮೆ ಸುಂದರ ನಗರ ಬೆಂಗಳೂರಿಗೆ ಬಂದರು.

ಸರಕಾರಿ ಆಸ್ಪತ್ರೆಗಳ ಬಗ್ಗೆ ನಾಲ್ಕು ನಿಟ್ಟಿನಿಂದ ಕಟುವಾಕ್ಯಗಳು ಕೇಳುತ್ತಲೇ ಇವೆ. ಇವುಗಳು ವಿಧಾನ ಸಭೆಗಳಲ್ಲಿ ದೊಂಬಿಯೆಬ್ಬಿಸಿದ್ದೂ ಇದೆ. ಆದರೆ, ನಮ್ಮ ಆಸ್ಪತ್ರೆಗಳ ಸ್ಥಿತಿಗತಿಗಳು ಏನೊಂದೂ ಸುಧಾರಿಸಲಿಲ್ಲ. ಪ್ರಾಯಃ ಟೀಕೆ ಟಿಪ್ಪಣಿಗಳು ಹೆಚ್ಚಾದಂತೆ ಅವುಗಳ ಪರಿಸ್ಥಿತಿ ಶೋಚನೀಯತೆಯಿಂದ ಶೋಕನೀಯತೆಯತ್ತ ಸರಿಯುತ್ತಿದೆಯೆನಿಸುತ್ತದೆ. ಇದರಲ್ಲಿ ಸರಕಾರದ ಲೋಪದೋಷಗಳು ಕೆಲವಾದರೆ, ನೌಕರರ ಅಂಧಾದುಂಧಿ ವ್ಯವಹಾರ ಹಲವು.

ಅನ್ನ—ವಸನ—ವಸತಿಯಂತೆಯೇ ಆರೋಗ್ಯವೂ ನಾಗರಿಕರಿಗೆ ಲಭ್ಯವಾಗಬೇಕು. ಶ್ರೀಮಂತರು-ಇವರ ಸಂಖ್ಯೆ ಕೆಲವು ಸಾವಿರ ಮಾತ್ರ—ಮಾತ್ರ ಪಡೆಯಬಲ್ಲ ಖಾಸಗಿ ಆಸ್ಪತ್ರೆಗಳ ಸೌಕರ್ಯಗಳು ಶ್ರೀಸಾಮಾನ್ಯನಿಗೆ ಅಲಭ್ಯ. ಆತ ಸರಕಾರಿ ಆಸ್ಪತ್ರೆಗಳಿಗೇ ಶರಣು ಹೋಗಬೇಕು. ಸಾರ್ವಜನಿಕ ಬೊಕ್ಕಸದ ಬಲದಿಂದ ನಡೆಯುವ ಇವುಗಳಲ್ಲಿ ಸಾರ್ವಜನಿಕರಿಗೇ ಉಪಯುಕ್ತ ಸೇವೆ ದೊರೆಯದೆ ಹೋದರೆ, ತರಿತೆತ್ತು ಹೊಳೆ ಈಸಿ ದಾಟಿದಂತಾಗುತ್ತದೆ. ಇಂತಹ ದುಃಸ್ಥಿತಿ ಬರಬಾರದೆಂಬ ರಾಷ್ಟ್ರಪತಿಗಳ ಉದ್ಗಾರ ಅವರಷ್ಟೇ ಹಳೆಯದು.

ಶ್ರೀಮಂತ ವಿದೇಶಗಳಲ್ಲಿ ಸಾರ್ವತ್ರಿಕ ಆರೋಗ್ಯ, ವಿಮೆಯ ಸೌಲಭ್ಯಗಳು ದೊರೆಯುತ್ತವೆ. ಅಂಥದೇ ಸೌಲಭ್ಯ ನಮಗೂ ಬೇಕೆಂದು ಬಯಸುವುದು, ಬರಲೆಂದು ಹಾರಯ್ಸುವುದು ಅಪರಾಧವಲ್ಲ. ಆದರೆ, ಇರುವ ಸೌಲಭ್ಯಗಳನ್ನೇ ನೀಡಲು, ಪಡೆಯಲು ಅಶಕ್ತರಾದವರಿಂದ ಮುಂದೇನನ್ನನ್ನು ನಿರೀಕ್ಷಿಸಬೇಕು? ಶ್ರೀ ಸಾಮಾನ್ಯನ ಬಗ್ಗೆ ಅತ್ಯಂತ ಕನಿಕರ ತೋರಿಸುವುದೇ ಸಮಾಜವಾದಿಗಳ ಫ್ಯಾಶನ್ ಆಗಿ ಪರಿಣಮಿಸಿದೆ. ರಾಷ್ಟ್ರಪತಿಗಳು ವೇದಿಕೆಗೆ ತಕ್ಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರೆನ್ನುವ ಸಮಾಧಾನವೊಂದನ್ನು ಬಿಟ್ಟರೆ, ಅವರ ಮಾತುಗಳನ್ನು ಪಾಲಿಸಲು ಯಾರೊಬ್ಬರೂ ಸಿದ್ಧರಿಲ್ಲವೆನಿಸುತ್ತದೆ.

ಂ ಂ ಂ

ಶ್ರೀಮತಿ ಇಂದಿರಾಗಾಂಧಿಯವರು ಬಂಗ್ಲಾ ದೇಶದ ಸಮಸ್ಯೆಯಲ್ಲಿ ಸಿಕ್ಕು ಹಾಕಿಕೊಂಡಿದ್ದಾರೆ. ಇದರ ನಡುವೆ ಆಕೆಯ ಟೀಕಾಕಾರರು ಆಕೆಯ ಪಕ್ಷದಲ್ಲೇ ಹೆಚ್ಚತೊಡಗಿದ್ದಾರೆ. 'ಬಡತನ ತೊಲಗಿಸುವ' ಘೋಷಣೆಯ ಬಲದಿಂದ, ಸಮಾಜವಾದದ ಶಕ್ತಿಯಿಂದ ಅಜೇಯ ವಿಕ್ರಮ ಗಳಿಸಿದ ಆಕೆ ಬಡತನವನ್ನು ದೂರಮಾಡಲು ಸಂಪೂರ್ಣ ಅಶಕ್ತರಾಗಿದ್ದಾರೆ; ಸಮಾಜವಾದ ಬಾಯ್ಮಾತಿನಲ್ಲೇ ಉಳಿದಿದೆ. ಹಿಂದೆ ಆಕೆಯ ಟೀಕಾಕಾರರು ಪ್ರತಿಗಾಮಿಗಳೆನಿಸಿದ್ದರು; ಇಂದು ಪ್ರಾಯಃ ತೀವ್ರಗಾಮಿಗಳಾಗಲೂ ಬಹುದು.

ಎರಡು ವರ್ಷಗಳಿಂದ ಒಂದೇ ಸವನೆ ದೇಶದ ಮೂಲೆ ಮೂಲೆಗಳಲ್ಲೂ ಬೆಲೆಯೇರುತ್ತಲೇ ಇದೆ. ಇತ್ತೀಚೆಗಿನ ಕೆಲವು ವಾರಗಳಿಂದ ಅದು ಮತ್ತಷ್ಟು ಏರತೊಡಗಿದೆ. ಮಧ್ಯಾವಧಿ ಚುನಾವಣೆಗಳಿಗೆ ಮೊದಲೂ ಅನಂತರವೂ ಬೆಲೆ ಹತೋಟಿಗೆ ಸರಕಾರ ಆವಶ್ಯಕ ಕ್ರಮಗಳನ್ನು ಕೈಕೊಳ್ಳಲಾಗುವುದೆಂದು ಸಚಿವರು ಘೋಷಿಸುತ್ತಲೇ ಬಂದಿದ್ದಾರೆ; ಇಂದಿಗೂ ಅವರದು ಅದೇ ಘೋಷಣೆ. ಆದರೆ, ಅರ್ಥ ಸಚಿವರು ಬೆಲೆಯೇರಿಕೆಯನ್ನು ತಡೆಯುವ ಯಾವುದೇ ಕ್ರಮಗಳನ್ನು ತೆಗೆದುಕೊಂಡದ್ದಿಲ್ಲ; ಬದಲಿಗೆ ತೆರಿಗೆಗಳನ್ನೆಲ್ಲ ಏರಿಸಿ ಕೊರತೆ ಧನವನ್ನು ವಿನಿಯೋಗಿಸಿ ಮತ್ತಷ್ಟು ಬೆಲೆಯೇರಲು ಕಾರಣರಾಗಿದ್ದಾರೆ. ಇದೀಗ ಬಂಗ್ಲಾ ನಿರಾಶ್ರಿತರ ಹೊಟ್ಟೆ ಹೊರೆಯಲು ದಿನಕ್ಕೆ ಸುಮಾರು ಎರಡು ಕೋಟಿ ರೂಪಾಯಿಗಳು ಬೇಕಾಗಿದ್ದು, ಕೊರತೆ ಧನ ವಿನಿಯೋಗವು ಮತ್ತಷ್ಟು ಹೆಚ್ಚಿ ಬೆಲೆ ನೇರ ಬಾಣದಂತೇರಲು ಅನುಕೂಲವಾಗುವುದು.

ಶ್ರೀಮತಿ ಗಾಂಧಿಯ ಪ್ರಚಲಿತ ಟೀಕಾಕಾರರು ಮುಖ್ಯವಾಗಿ ಇಬ್ಬರು. ಶ್ರೀಗಳಾದ ಅಮೃತ ನಹತಾ ಮತ್ತು ನವಲ್ ಕಿಶೋರ. ಶ್ರೀಗಳಾದ ಚಂದ್ರಶೇಖರ್ ಮತ್ತು ಶಶಿಭೂಷಣರು ಈಗ ಆದೇನೋ ತೆಪ್ಪಗುಳಿದಿದ್ದಾರೆ ತಮ್ಮ ಟೀಕಾಚಾರವೆಲ್ಲ ತಪ್ಪೆಂದು ಅವರು ಮನವರಿಕೆ ಮಾಡಿಕೊಂಡಿದ್ದಾರೆಯೆ? ಉತ್ಪಾದನೆಯನ್ನು ಎತ್ತರಿಸಲು ಸೂಕ್ತವಾದ ಕ್ರಮಗಳನ್ನು ಕೈಕೊಳ್ಳದೆ ಹೋದರೆ ಯಾವುದೇ ಮಾರ್ಗದಿಂದ ಬೆಲೆಯಿಳಿಸಲು ಸಾಧ್ಯವಿಲ್ಲ. ಶ್ರೀಮತಿ ಗಾಂಧಿಯವರು ಬೆಲೆಯಿಳಿಸುವುದು ಬೇಡ; ಅವು ಇನ್ನೂ ಏರದಂತೆ ನೋಡಿಕೊಂಡರೆ, ಶ್ರೀ ಸಾಮಾನ್ಯ ಕೃತಜ್ಞನಾಗಿರುತ್ತಾನೆ; ತಾನಿತ್ತ ಮತ ಸಾರ್ಥಕವಾಯಿತೆಂದು ತಿಳಿಯುತ್ತಾನೆ. ಆದರೆ, ಇವಕ್ಕಿಂತ ಆಕೆಗೆ ಪ್ರಿಯವಾದದ್ದು ಬೇರೆಯೇ ಇದೆ.

ಂ ಂ ಂ

ಮಧ್ಯಾವಧಿ (ಲೋಕ ಸಭೆ) ಚುನಾವಣೆಗಳ ವೇಳೆ ಇಂಡಿಕೇಟ್ ಮತ್ತದರ ಮಿತ್ರ ಪಕ್ಷಗಳೆಮುಗೆ ರಚಿತವಾದ ಮೈತ್ರಿ ಕೂಟ ಸಂಪೂರ್ಣ ಅಸಫಲವಾಯ್ತು. ಕೂಟ ರಚನೆ ದೊಡ್ಡ ದೊಡ್ಡ ಉದ್ದೇಶಗಳಿಂದ ಪ್ರೇರಿತವಾದದ್ದು ದಿಟವಾದರೂ ಅಂಗ ಪಕ್ಷಗಳ ಅಕರ್ಮಣ್ಯತೆ ಕೆಲವೆಡೆ ವಿಶ್ವಾಸ ದ್ರೋಹಗಳಿಂದ ಅದು 'ಮುಂದೆಂದೂ ಬೇಡ'ವೆಂಬಂತಾಯ್ತು. ಆದುದರಿಂದಲೇ ಅಂದು ಮೈತ್ರಿ ಕೂಟದ ಪ್ರಬಲ ಸಮರ್ಥಕರಾಗಿದ್ದವರು ಇಂದು ಅದನ್ನು ವಿರೋಧಿಸುತ್ತಾರೆ. ಸಿಂಡಿಕೇಟಿನ ಎಸ್ಸೆನ್‌ರ ಅಭಿಪ್ರಾಯ—ಆ ರೀತಿಯಾಗಿ ನಮ್ಮ ಗುರಿಯತ್ತ ಸಾಗಿದೆವು; ಅದು ನಿಷ್ಪ್ರಯೋಜಕವೆಂದು ಸಿದ್ಧವಾಯ್ತು. ಆದುದರಿಂದ ಅದು ಬೇಡ.

ಕರ್ನಾಟಕದ ವೀರೇಂದ್ರ ಪಾಟೀಲರೂ ಗುಜರಾತದ ಹಿತೇಂದ್ರ ದೇಸಾಯರೂ ಮೈತ್ರಿ ಕೂಟ ರಚನೆಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದರೂ ಅವರು ಅಂದು ತೋರಿಸಿದ್ದು ಇಂದು ಸತ್ಯವಾಯ್ತು. ಮುಂದಿನ ಜನವರಿಯ ಹೊತ್ತಿಗೆ ಮತ್ತೆ ಹಲವು ರಾಜ್ಯಗಳಲ್ಲಿ ವಿಧಾನ ಸಭಾ ಚುನಾವಣೆಗಳು ನಡೆ

ಕಣ್ಣೀರಿನಲ್ಲಿ ಕೈತೊಳೆಯುವಂತಾಗಬಾರದು

(ನಾಲ್ಕನೇ ಪುಟದಿಂದ)

ಕರ್ನಾಟಕದಲ್ಲಿ ಜನಪ್ರಿಯ ಸರಕಾರವಿಲ್ಲದಾಗ ಅದರಿಂದ ದುರ್ಲಾಭ ಗಳಿಸುವುದನ್ನು ಮಾಜಿ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲ್ ಗಂಭೀರವಾಗಿ ವಿರೋಧಿಸಿದ್ದಾರೆ. ಇಂತಹುದೇನಾದರೂ ನಡೆದರೆ, ರಾಜ್ಯದಲ್ಲಿ ದೊಂಬಿಯೇಳಬಹುದೆಂದು ಎಚ್ಚರಿಕೆಯನ್ನೂ ನೀಡಿದ್ದಾರೆ.

ನೂರಕ್ಕೆ ನೂರರಷ್ಟು ಇಂಡಿಕೇಟಿಗರನ್ನು ಲೋಕ ಸಭೆಗೆ ಆರಿಸಿ ಕಳಿಸಿದ ಕನ್ನಡಿಗರಿಂ ಶ್ರೀಮತಿ ಗಾಂಧಿ ಪ್ರಸನ್ನರಾಗಿದ್ದಾರೆ. ಇದ್ದರಿಂದಲೇ ಅರ್ಧ ಡಜನ್ ಮಂತ್ರಿಗಳನ್ನು ಇಲ್ಲಿಂದಲೇ ಆರಿಸಿಕೊಂಡಿದ್ದಾರೆ.

ಇಷ್ಟರಿಂದಲೇ ಕನ್ನಡಿಗರು ತೃಪ್ತರಾಗಬೇಕೆ? ಇದಕ್ಕೆ ರಾಜ್ಯದ ಎಂಪಿಗಳು ಉತ್ತರ ಹೇಳಬೇಕು.

ಜನಪ್ರಿಯ ಸರಕಾರವಿಲ್ಲವಾಗ ನೆಲ—ಜಲ ವಿವಾದಗಳನ್ನು ರಾಜ್ಯಪಾಲರು ಮುಂದುವರಿಸಬಾರದೆಂದು ವಾದಿಸಿ, ಅವರ ಮೇಲೆ ದೂರು ಒಯ್ದ ಎಂಪಿಗಳು ಡಾ| ರಾಯರ ಹೇಳಿಕೆಯನ್ನು ಖಂಡಿಸಬೇಕು.

ತಮ್ಮ ಖಂಡನೆಯನ್ನೂ ಲೆಕ್ಕಿಸದೆ ಒಂದು ವೇಳೆ ಡಾ| ರಾಯರು ಉದ್ದೇಶಿತ ಸಮ್ಮೇಳನವನ್ನು ಸೇರಿಸಿದರೆ, ಅದನ್ನು ಬಹಿಷ್ಕರಿಸಬೇಕು.

ರಾಜ್ಯ ವಿಧಾನ ಸಭೆಯ ಅಧಿಕಾರವೀಗ ಪಾರ್ಲಿಮೆಂಟಿಗೆ ಇರುವುದೆಂಬ ಅಂಶ ಸತ್ಯ. ಅಧಿಕಾರ ಬಲದಿಂದ ಏನು ಬೇಕಾದರೂ ಮಾಡಬಹುದಾದರೂ ರಾಜ್ಯದ ಹಿತಕ್ಕೆ ಬಾಧೆಯಾಗದಂತೆ ಎಚ್ಚರಿಕೆ ವಹಿಸಬೇಕು.

'ಇಡಬೇಕೆಂದಿರಮ್ಮನಲ್ಲಿ ವಿಶ್ವಾಸಮಂ ಭಕ್ತಿಯಂ" ಎಂದ ಸ್ತುತಿ ಪಾಠಕರು ಈಗ ಜಾಗ್ರತೆ ತಪ್ಪಿದರೆ, ಕನ್ನಡಿಗರು ಕಣ್ಣೀರಿನಲ್ಲಿ ಸದಾ ಕೈತೊಳೆಯುವ ದುರ್ಗತಿಗಿಳಿಯ ಬಲ್ಲರು.

●●

THE VIJAYA BANK LTD.

A. O. Bangalore-1

ವಿಜಯ ಬ್ಯಾಂಕ್ ಲಿಮಿಟೆಡ್, ಕುಂದಾಪುರ ಶಾಖೆ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ವ್ಯಾದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೆ ವಾಪಾಸು ಬಂದಿರುವುದರಿಂದಲೂ, ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ, ಸದ್ರಿಯವರಿಗೆ ವ ಅವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಿಂಗಳ ತಾ. 31—7—71ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು 7—8—1971ನೇ ಶನಿವಾರ ಅಪರಾಹ್ನ 12-30ಕ್ಕೆ ಸರಿಯಾಗಿ ಬೇಂಕಿನ ವಠಾರದಲ್ಲಿ ಬಹಿರಂಗ ಹರಾಜು ಮಾಡಲಾದೀತು; ಯಾ ಬೇಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬಹಿರಂಗ ಯಾ ಖಾಸಗಿಯಾಗಿ ಹರಾಜು ಮಾಡಲಾದೀತು. ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು ವ ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗುತ್ತಾರೆ. ತಿಳಿದಿರಲಿ.

ಸಾಲದ ಜಂಜಡಾ ನಂಬ್ರ	ಸಾಲಗಾರನ ಹೆಸರು ಮತ್ತು ವಿಳಾಸ	ಮೊಬಲಗು
52/69	M. ಭೋಜ ಹೆಗ್ಡೆ, S/o ಮಂಜಯ್ಯ ಹೆಗ್ಡೆ, ಮರಾತುರ, P.o ಮೊಳಹಳ್ಳಿ, ಕುಂದಾಪುರ ತಾಲೂಕು.	183.95
70/69	T. ಗೋವಿಂದ ಶೆಟ್ಟಿ, ಪಂಚಾಯತ್ ಸೆಕ್ರೆಟರಿ, N/o ವೆಂಕಪ್ಪ ಶೆಟ್ಟಿ, ಕನ್ಯಾನ ಗ್ರಾಮ, ಪೋಸ್ಟ್ ಕಟ್ ಬೇಲ್ತೂರ, ಕುಂದಾಪುರ ತಾಲೂಕು S.K.	815.50
247/69	B. ದೇವೇಂದ್ರ, ಹೆಲ್ತ್ ಅಸಿಸ್ಟೆಂಟ್, ಪೋಸ್ಟ್ ಹಕ್ಲಾಡಿ, ಕುಂದಾಪುರ ತಾಲೂಕು, ದ. ಕ.	336.15
266/69	T. ಶೇಷಗಿರಿ ನಾಯಕ್, S/o ಕೊಗ್ಗನಾಯಕ್, ಮರ್ಚೆಂಟ್, ಪೋಸ್ಟ್ ತೆಕ್ಕಟ್ಟೆ, ಕುಂದಾಪುರ ತಾಲೂಕು, S. K.	821.85
819/69	ಅಂತಯ್ಯ ಶೆಟ್ಟಿ, N/o ಮಹಾಬಲ ಶೆಟ್ಟಿ, ಹಂದಾಡಿ ಗ್ರಾಮ, ಪೋಸ್ಟ್ ಬ್ರಹ್ಮಾವರ, ಉಡುಪಿ ತಾಲೂಕು.	260.45
559/69	H. ರತ್ನಾಕರ ಶೆಟ್ಟಿ, S/o K. ಶೀನಪ್ಪ ಶೆಟ್ಟಿ, ಹಳನಾಡು ದೊಡ್ಡಮನೆ, ಪೋಸ್ಟ್ ಕಾವ್ರಾಡಿ	258.10

Place: Coondapoor, M. Balakrishna Alva, B.Com.

9—7—1971. Manager.

ರೈತ–ಬೆಸ್ತರ ರಕ್ಷಣೆಗೆ ಸಿಂಡಿಕೇಟ್ ಬ್ಯಾಂಕಿನ ಹೊಸ ಠೇವಣಿ ಯೋಜನೆ

ಹಲವಾರು ಹೊಸ ಯೋಜನೆಗಳನ್ನು ಠೇವಣಿ ಮತ್ತು ಸಾಲಗಳಲ್ಲಿ ಆರಂಭ ಮಾಡಿದ ಹೆಗ್ಗಳಿಕೆಯುಳ್ಳ, ಸಿಂಡಿಕೇಟ್ ಬ್ಯಾಂಕು ರೈತ ಮತ್ತು ಬೆಸ್ತರ ಲಾಭಕ್ಕಾಗಿ ಹೊಸತೊಂದು ಯೋಜನೆಯನ್ನು ಜ್ಯಾರಿಗೆ ತಂದಿದೆ. ಅನಾವೃಷ್ಟಿ, ನೆರೆ, ಕೀಟ ಮತ್ತು ರೋಗ ಮೊದಲಾದುವುಗಳಿಂದ ಬೆಳೆ ಹಾಳಾದಾಗ, ಹಾಗೆಯೇ ನೈಸರ್ಗಿಕ ಕಾರಣಗಳಿಂದ ಮೀನುಗಳು ದೊರೆಯದಾಗ ಬೆಳೆಗಳ ವಿಮೆಯು ನಮ್ಮ ದೇಶದಲ್ಲಿಲ್ಲ. ಅಂಥ ಸಮಯದಲ್ಲಿ ರೈತರೂ ಬೆಸ್ತರೂ ಅಸಹಾಯಕರಾಗಿ ಹೋಗುತ್ತಾರೆ. ರೈತ ಅಥವಾ ಬೆಸ್ತರು ಮೇಲೆ ಹೇಳಿದ ಕಾರಣಗಳಿಂದ ಅಸಹಾಯಕರಾದಾಗ, ಇವರು ಅದಕ್ಕೆ ಹಿಂದಿನ ಆರು ತಿಂಗಳುಗಳಲ್ಲಿಟ್ಟ ಠೇವಣಿಯ ಮೊತ್ತದ ಇಮ್ಮಡಿಯನ್ನು ಸಾಲ ಪಡೆಯುವ ಭರವಸೆ ನೀಡುವ ಠೇವಣಿ ಯೋಜನೆಯನ್ನು ಸಿಂಡಿಕೇಟ್ ಬ್ಯಾಂಕು ಆರಂಭಿಸಿದೆ. "ರೈತರ ರಕ್ಷಣಾ ಠೇವಣಿ" ಎಂದು ಈ ಯೋಜನೆಯ ಹೆಸರು. ರೆವಿನ್ಯು ಅಧಿಕಾರಿಗಳು ಬೆಳೆಗಳು ಮೇಲೆ ಹೇಳಿದ ಯಾವುವಾದರೊಂದು ಅಥವಾ ಹೆಚ್ಚು ಕಾರಣದಿಂದ ಕೈತಪ್ಪಿತೆಂದು ಘೋಷಿಸಿದೊಡನೆಯೇ ಸಾಲ ಒದಗಿಸಲಾಗುವುದು. ಮೂರು ವರ್ಷಗಳ ಅವಧಿಯಲ್ಲಿ ಮರುಪಾವತಿ ಮಾಡುವ ಈ ಸಾಲಗಳನ್ನು ಇವರು ತಮ್ಮ ಪುನರ್ವಸತಿ, ಜೀವನೋಪಾಯ ಅಥವಾ ಮುಂದಿನ ಬೆಳೆಗೆ ಬೀಜ–ಗೊಬ್ಬರ ಮೊದಲಾದುವುಗಳ ಖರೀದಿಗಳಿಗೆ ಬಳಸಿಕೊಳ್ಳಬಹುದು.

ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಒಂದಾದ ಸಿಂಡಿಕೇಟ್ ಬ್ಯಾಂಕ್ ರಾಷ್ಟ್ರೀಕರಣದ ಎರಡನೆ ವಾರ್ಷಿಕೋತ್ಸವದ ಪೂರ್ವ ಸಂಧ್ಯೆಯಲ್ಲಿ ಮುಂದೆ ತಂದಿದೆ.

●●

ಯಲಿವೆ. ಅವುಗಳಲ್ಲಿ ಸಿಂಡಿಕೇಟ್–ಜನಸಂಘ–ಸ್ವತಂತ್ರ ಪಕ್ಷ ಮೊದಲಾದುವು ಸ್ವತಂತ್ರವಾಗಿಯೇ ಸ್ಪರ್ಧೆಗಿಳಿಯುವ ನಿರ್ಧಾರ ಮಾಡಿವೆ. ಸಿಂಡಿಕೇಟಿನ ಕಣ್ಮಣಿಗಳಾದ ವೀರೇಂದ್ರ ಪಾಟೀಲರೂ ಮುರಾರ್ಜಿ ದೇಸಾಯಿಯವರೂ ಈ ಅಭಿಪ್ರಾಯವನ್ನೇ ದೃಢೀಕರಿಸಿದ್ದಾರೆ.

ಕರ್ನಾಟಕ, ಗುಜರಾತ, ಪಂಜಾಬ, ಬಂಗಾಳಗಳಲ್ಲಿ ಈಗಾಗಲೇ ರಾಷ್ಟ್ರಪತಿಯಾಳಿಕೆಯಿದೆ. ಬಿಹಾರದಲ್ಲಿ ಪ್ರಗತಿಶೀಲ ಸಂಯುಕ್ತರಂಗದಲ್ಲಿ ಇಂಡಿಕೇಟ್, ಬಲಕಮ್ಯುನಿಷ್ಟರ ನಡುವೆ ಈಗಾಗಲೇ ವಿರಸಮೂಡಿದೆ. ಅದು ಬಹು ಬೇಗನೇ ಇತ್ಯರ್ಥವಾಗದೆ ಹೋದರೆ, ಬಲ ಕಮ್ಯುನಿಷ್ಟರು ಸಂಯುಕ್ತರಂಗದಿಂದ ಹಿಂದೆ ಸರಿದು ಸರಕಾರವುರುಳಿ ರಾಷ್ಟ್ರಪತಿಯಾಳಿಕೆಗೆ ದಾರಿಮಾಡಿಕೊಡುತ್ತದೆ. ಅದೇ ರೀತಿ ಕೇರಳದ ಸರಕಾರದ ಇಂಡಿಕೇಟಿನ ಸಹಯೋಗದ ಪರಿಣಾಮ ಏನಾಗಬಹುದೆಂದು ಹೇಳುವಂತಿಲ್ಲ. ಆಂಧ್ರ, ಮಹಾರಾಷ್ಟ್ರ, ಮಧ್ಯಪ್ರದೇಶ, ರಾಜಸ್ತಾನ, ಆಸಾಮು, ಜಮ್ಮೂ ಕಾಶ್ಮೀರಗಳಲ್ಲಿ ಹೇಗೂ ಚುನಾವಣೆ ಮುಂದಿನ ವರ್ಷ ನಡೆಯ ಬೇಕು. ಆಗ, ಇಡಿಯ ದೇಶದಲ್ಲೇ ಮತ್ತೊಂದು ಸಾರ್ವತ್ರಿಕ ಚುನಾವಣೆ ನಡೆದರೂ ಆಶ್ಚರ್ಯವಲ್ಲ. ಹಲವಾರು ಸರಕಾರಗಳನ್ನು ಉರುಳಿಸಿದ ಶ್ರೀಮತಿ ಗಾಂಧಿಗೆ ಇನ್ನೂ ಕೆಲವು ಸರಕಾರವುರುಳಿಸುವುದು ಅಶಕ್ಯವಲ್ಲ. ಆದ್ದರಿಂದ ಇಡೀ ದೇಶದಲ್ಲೇ ಚುನಾವಣೆಗೆ ತಯಾರಿಯಾಗುವುದರಲ್ಲಿ ರಾಜ್ಯಕೀಯ ಪಕ್ಷಗಳು ಮನಸ್ಸು ಹರಿಸಬೇಕು.

●●

ಹೊಸ ಜಿಲ್ಲಾಧಿಕಾರಿಗಳಿಗೆ ಕಾಟಿಪಳ್ಳ ನಿವಾಸಿಗಳ ಮನವಿ

ಸುರತ್ಕಲ್, ಜೂ. 29:—ಕಾಟಿಪಳ್ಳ ಪುನರ್ನಿವೇಶನ ಕೇಂದ್ರವನ್ನು ಪ್ರಪ್ರಥಮವಾಗಿ 'ನೋಟಿಫೈಡ್ ಏರಿಯಾ' ಎಂದು ಸರಕಾರವು ಕೂಡಲೇ ಘೋಷಿಸುವಂತಾಗಿ ಸರಕಾರದ ನೇರ ಆಧಿಕಾರಕ್ಕೆ ಒಳಪಡುವಂತೆ ಶಿಫಾರಸು ಮಾಡಬೇಕೆಂದು ಕಾಟಿಪಳ್ಳ ಪುನರ್ನಿವೇಶನ ಸುಧಾರಕ ಸಂಘವು ನೂತನ ಜಿಲ್ಲಾಧಿಕಾರಿಯವರನ್ನು ವಿನಂತಿಸಿದೆ. ಈ ಕೇಂದ್ರದ ನಿರ್ವಾಸಿತರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವರೆ ಇಲ್ಲಿ ಕೆಲವು ಕೈಗಾರಿಕಾ ಉದ್ಯಮಗಳನ್ನು ಶೀಘ್ರವೇ ತೆರೆಯಲ್ಪಡುವಂತಾಗಬೇಕೆಂದೂ ಬಂದರ ಯೋಜನೆ ಮತ್ತು ಗೊಬ್ಬರ ಕಾರ್ಖಾನೆಗಳನ್ನು ಸ್ಥಾಪಿಸುವ ಉದ್ದಿಶ್ಯ ಇಲ್ಲಿಗೆ ಸ್ಥಾನಾಂತರಗೊಂಡ ನಿರ್ವಾಸಿತರಿಗೆ ಮನೆ ಕಟ್ಟಲು ಸರಕಾರವು ಪಣಂಬೂರಿನ ವಿವಿಧೋದ್ದೇಶ ಸಹಕಾರಿ ಸಂಘದ ಮೂಲಕ ಕೊಟ್ಟ ಸಾಲಕ್ಕೆ ಇಲ್ಲಿ ಕಾರ್ಖಾನೆ, ಕೈಗಾರಿಕೆಗಳನ್ನು ಸ್ಥಾಪಿಸಿ ನಿರ್ವಾಸಿತರಿಗೆ ಉದ್ಯೋಗ ಒದಗಿಸುವ ತನಕ ಬಡ್ಡಿ ರಿಯಾಯಿತಿ ಮಾಡಬೇಕು ಮತ್ತು ವಾಯಿದೆ ದಾಟಿದ ಸಾಲಗಳ ಕಂತು ಬಾಕಿಯಾಗಿದ್ದಲ್ಲಿ ಜಪ್ತಿ ಸಾಲಕ್ಕೆ ಡಿಕ್ರಿಯಾಗಿ ಮನೆಗಳು ಏಲಂ ಆಗದಂತೆ ಕಂತುಗಳನ್ನು ಮುಂದೆ ಹಾಕಬೇಕು. ಅಲ್ಲದೆ ಸರಕಾರವು ಇತ್ತೀಚೆಗೆ ಮಂಜೂರು ಮಾಡಿದ ರೂ. 10 ಲಕ್ಷ ಸಾಲವನ್ನು ಇನ್ನು ಮುಂದೆ ಅರ್ಜಿ ಮಾಡುವಂಥ ನಿರ್ವಾಸಿತರ ಕುಟುಂಬಗಳಿಗೆ ಈ ಹಿಂದಿನಂತೆಯೇ ದೊರಕಿಸುವಂತಾಗಬೇಕೆಂದೂ ಕೇಳಿಕೊಳ್ಳಲಾಗಿದೆ.

ನೀರಿನ ಅಭಾವವು ಇನ್ನೂ ನೀಗದಿರುವ ಕಾರಣ ಪಣಂಬೂರು ತನಕ ಬಂದ "ತುಂಬೆ" ನೀರನ್ನು ಈ ಪುನರ್ನಿವೇಶನ ಕೇಂದ್ರಕ್ಕೆ ಕೂಡಲೇ ಒದಗಿಸುವಂತಾಗಬೇಕು. ಕಾಟಿಪಳ್ಳ ಅಂಚೆ ಕಚೇರಿಯಲ್ಲಿ ತಂತಿ ಮತ್ತು ಟೆಲಿಫೋನ್ ಸೌಕರ್ಯ, ಸ್ಟ್ರೀಟ್ ಲೈಟ್, ಮಾರ್ಕೆಟು ಇತ್ಯಾದಿ ಹಿಂದಿನ ಪಣಂಬೂರಿನ ಎಲ್ಲಾ ಸೌಕರ್ಯಗಳನ್ನು ಒದಗಿಸುವಂತಾಗಬೇಕು. ಬಡ ನಿರ್ವಾಸಿತರ ಇಲ್ಲಿ ಒಂದು ಆಸ್ಪತ್ರೆಯನ್ನು ತೆರೆದು ಹೆರಿಗೆ ಮತ್ತು ವೈದ್ಯಕೀಯ ಸವಲತ್ತನ್ನು ಒದಗಿಸಬೇಕೆಂದೂ ಈ ಕೇಂದ್ರದಲ್ಲಿ ಹಿಂದುಗಳಿಗೆ ಯಾವ ಪೂಜಾ ಮಂದಿರವೂ ಇಲ್ಲದಿರುವುದರಿಂದ ಪಣಂಬೂರು ಬೈಕಂಪಾಡಿ ದೇವಸ್ಥಾನಗಳ ಪರಿಹಾರ ಧನದಿಂದ ದೇವಸ್ಥಾನವೊಂದನ್ನು ರಚಿಸುವಂತಾಗಬೇಕೆಂದೂ ಮನವಿಯಲ್ಲಿ ವಿನಂತಿಸಲಾಗಿದೆ.

ಎಲ್ಲಾ ಸರಕಾರಿ ಕಚೇರಿಗಳು, ಬ್ಯಾಂಕುಗಳು ಬಂದರು ಯೋಜನೆ ಮತ್ತು ವಿಶೇಷವಾಗಿ ಇನ್ನು ಮುಂದೆ ಸ್ಥಾಪಿಸಲ್ಪಡುವ ಗೊಬ್ಬರ ಕಾರ್ಖಾನೆಗಳಲ್ಲಿ ನಿರ್ವಾಸಿತರ ಕುಟುಂಬಗಳ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ದೊರಕಬೇಕು. ಮಂಗಳೂರಿನಿಂದ ಕಾಟಿಪಳ್ಳಕ್ಕೆ ಕೃಷ್ಣಾಪುರ ಮಾರ್ಗವಾಗಿ ಪ್ರತ್ಯೇಕ ಸಿಟಿ ಬಸ್ಸು ಚಲಾವಣೆಯಾಗಬೇಕು. ಈಗ ತೆರೆಯಲಾದ ಸರಕಾರಿ ಹೈಸ್ಕೂಲಿನ ತಾತ್ಕಾಲಿಕ ಕಟ್ಟಡವು ಈ ಕೇಂದ್ರದ ಮಧ್ಯೆ ಯೋಗ್ಯ ಸ್ಥಳದಲ್ಲಿದ್ದು ಈ ಕೇಂದ್ರದಿಂದ ಮತ್ತು ಆಸುಪಾಸಿನ ಗ್ರಾಮಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಿರುವುದರಿಂದ ಹೈಸ್ಕೂಲು ಇಲ್ಲಿಯೇ ಇರುವಂತಾಗಬೇಕು. ನಿರ್ವಾಸಿತರಿಗೆ ಕೊಡ ಮಾಡಿದ ಸೈಟುಗಳನ್ನು ಅವರವರ ಹೆಸರಿಗೆ ಖಾಯಂ (ಪಟ್ಟಾ)ಗೊಳಿಸಬೇಕು. ಇತ್ಯಾದಿ ಬೇಡಿಕೆಗಳನ್ನು ಜಿಲ್ಲಾಧಿಕಾರಿಗಳ ಮುಂದಿಡಲಾಗಿದೆ.

ಸಿಂಹಳ ಹಾಗೂ ಟಿಬೇಟ್‌ಗಳಿಂದ ವಲಸೆ ಬಂದ ನಿರ್ವಾಸಿತರಿಗೆ ಒದಗಿಸಿಕೊಟ್ಟ ಹಲವಾರು ಸವಲತ್ತುಗಳನ್ನು ದೇಶದ ಮಹಾ ಬಂದರ ಕೈಗಾರಿಕಾಭಿವೃದ್ಧಿಗೋಸ್ಕರ ದೇಶದ ಅಭ್ಯುದಯದ ಏಕ ಮಾತ್ರ ದೃಷ್ಟಿ ಇರಿಸಿ ಹಲವಾರು ಕಷ್ಟ ನಷ್ಟಗಳನ್ನು ಅನುಭವಿಸಿ, ತ್ಯಾಗ ಪೂರ್ಣವಾಗಿ ತಮ್ಮ ಆಸ್ತಿ ಪಾಸ್ತಿಗಳನ್ನು ಬಿಟ್ಟುಕೊಟ್ಟ ಈ ನಿರ್ವಾಸಿತರ ಸಂಕಷ್ಟಗಳನ್ನು ಮಾನವೀಯ ಅನುಕಂಪದಿಂದ ವಿವೇಚಿಸಿ, ಮೇಲಿನ ಕೇಳಿಕೆಗಳನ್ನು ಈಡೇರಿಸಿ ಕೊಡುವಂತೆ ಮನವಿಯಲ್ಲಿ ವಿಜ್ಞಾಪಿಸಲಾಗಿದೆ.

ಜಗನ್ನಾಥ ಎಜುಕೇಶನ್ ಸೊಸೈಟಿ ಬೊಂಬಾಯಿ

ಕೊರಂಗ್ರಪಾಡಿ ಸರಕಾರಿ ಹೈಯರ್ ಪ್ರೈಮರಿ ಶಾಲೆಯಲ್ಲಿ 1971–72ನೇ ಶಾಲಾ ವರ್ಷದಲ್ಲಿ ಕಲಿಯಲಿರುವ ಬಡ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಕೊಡುವರೇ ರೂ. 310ನ್ನೂ ಅಲ್ಲದೆ ಇದೇ ಶಾಲೆಯಲ್ಲಿ, ಮತ್ತು ಅಲೆವೂರು, ಕುಕ್ಕಿಕಟ್ಟೆ, ಮಣಿಪುರ ಮೊದಲಾದ ಶಾಲೆಗಳಲ್ಲಿ 1970–71ನೇ ವರ್ಷದ ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಕೊರಂಗ್ರಪಾಡಿ ಪಟೇಲ್ ಶ್ರೀ ಕೆ. ಜಗನ್ನಾಥ ಸೆಟ್ಟಿ ಮೆಮೋರಿಯಲ್ ಬಹುಮಾನವನ್ನು ಕೊಡಲು ರೂ. 216ನ್ನು ಈಗಾಗಲೇ ಸೊಸೈಟಿಯ ಸ್ಕಾಲರ್‌ಶಿಪ್ ಎಡ್ವೈಸರಿ ಕಮಿಟಿ ಕೊರಂಗ್ರಪಾಡಿ ಇವರಿಗೆ ಕಳುಹಿಸಿಕೊಡಲಾಗಿದೆ. ಅಲ್ಲದೆ 1970–71ನೇ ವರ್ಷದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ S. S. L. C. ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದ ವಿದ್ಯಾರ್ಥಿಗೆ ಕೊಡಲಿರುವ ಬಹುಮಾನಕ್ಕೆ ಈ ತನಕ ಅರ್ಜಿ ಬರದಿರುವದರಿಂದ, ಅಂತಹ ವಿದ್ಯಾರ್ಥಿ ತನ್ನ ಅರ್ಜಿಯನ್ನು ಜಗನ್ನಾಥ ಎಜ್ಯುಕೇಶನ್ ಸೊಸೈಟಿ, 49, ಲೋಕಮಾನ್ಯ ತಿಲಕ ನಗರ, ಗೋರೆಗಾಂವ್, ಮುಂಬಯಿ–62. ಇವರಿಗೆ ಕೂಡಲೇ ಕಳುಹಿಸಿಕೊಡಬೇಕಾಗಿ ಅಪೇಕ್ಷಿಸಲಾಗಿದೆ.

ಉಡುಪಿಯಲ್ಲಿ ಕ್ಯಾಬರೆ ನೃತ್ಯ ಪ್ರದರ್ಶನ

ಶ್ರೀ ಕೆ. ಎಂ. ಸುವರ್ಣರ ಮಾಲಕತ್ವದಲ್ಲಿ ಉಡುಪಿಯಲ್ಲಿ ಮೇಲ್ಪಟ್ಟಪಲ್ಲಿ ನಡೆಯುತ್ತಿರುವ ಹೊಟೇಲ್ ಟೂರಿಸ್ಟಿನಲ್ಲಿ ತಾ. 15–7–71ರಂದು ಹೊಸದಾಗಿ ವಿಜೃಂಭಣೆಯಿಂದ ಉದ್ಘಾಟಿತವಾದ "ಬ್ಲೂ ರೂಮ್"ನಲ್ಲಿ ಕ್ಯಾಬರೆ ನೃತ್ಯ ಪ್ರಾರಂಭಿಸಲ್ಪಟ್ಟಿದೆ. ಉಡುಪಿಯಲ್ಲಿ ಪ್ರಪ್ರಥಮವಾಗಿ ಇದನ್ನು ಏರ್ಪಡಿಸಿದ ಸಾಹಸ ಹೊಟೇಲ್ ಟೂರಿಸ್ಟಿನವರದು. ಆರಂಭದಲ್ಲಿ ಹೊಟೇಲ್ ಮಾಲಿಕರ ಪರವಾಗಿ ಸ್ವಾಗತಿಸಿದ ಶ್ರೀ ಸತ್ಯನಾರಾಯಣ ಮೂರ್ತಿಯವರು ಜಿಲ್ಲೆಯ ದ್ವಿತೀಯ ಮಹಾನಗರವಾದ ಉಡುಪಿಯಲ್ಲಿ ಈ ಪ್ರಯೋಗ ಏರ್ಪಡಿಸುತ್ತಿರುವುದು ಮಹತ್ವಪೂರ್ಣವಾದುದೆಂದೂ ಇದಕ್ಕೆ ಜನತೆ ಪ್ರೋತ್ಸಾಹವೀಯಬೇಕೆಂದೂ ಹೇಳಿದರು. ಕೋಡಿಕ್ ಕಂಪೆನಿಯ ಶ್ರೀ ಕೆ. ಎಂ. ಶೆಟ್ಟರು ಮಾತನಾಡುತ್ತಾ, ಈ ತರಹದ ಸಮಾರಂಭಗಳನ್ನು ಏರ್ಪಡಿಸುವಾಗ ಶಿಸ್ತು ನಿಯಮ ಹಾಗೂ ಸಭ್ಯತೆಗಳನ್ನು ಪಾಲಿಸುವಂತಾದ್ದು ಪ್ರಾಮುಖ್ಯವಾಗಿದೆಯೆಂದೂ ಹಾಗಿದ್ದರೆ ಮಾತ್ರ ನೃತ್ಯ ಪ್ರದರ್ಶಿಸುವವರಿಗೂ ಪ್ರೇಕ್ಷಕರಿಗೂ ಉತ್ತೇಜನವಿತ್ತಂತಾಗುವುದೆಂದೂ ಸೂಚಿಸಿ ಶ್ರೀ ಸುವರ್ಣರು ಏರ್ಪಡಿಸಿರುವ ಈ ಉಪಕ್ರಮದಿಂದ ಉಡುಪಿಯ ಜನತೆಗೆ ಮನರಂಜನೆ ದೊರೆಯಲೆಂದು ಹಾರೈಸಿದರು.

ಕ್ಯಾಬರೆ ನೃತ್ಯಗಾತಿ ಕುಮಾರಿ ಸಿಮಿಯವರು ನೃತ್ಯ ಪ್ರದರ್ಶನ ಮಾಡಿದರು. ಮಂಗಳೂರಿನ "ಸೆಟಲೈಟ್"ನವರಿಂದ ಪಾಶ್ಚಾತ್ಯ ಸಂಗೀತ ಹಿಮ್ಮೇಳನದ ವ್ಯವಸ್ಥೆ ಮಾಡಲಾಗಿತ್ತು. ಜಾರ್ತಿ ತುಂಬಿಯಾಗಿದ್ದ "ಬ್ಲೂ ರೂಮ್"ನಲ್ಲಿ ಕುಮಾರಿ ಸಿಮಿ ಎರಡು ಬಾರಿ ನೃತ್ಯ ಪ್ರದರ್ಶನ ನೀಡಿ ರಸಿಕ ಪ್ರೇಕ್ಷಕರನ್ನು ಮೆಚ್ಚಿಸಿದರು.

'ಕಟ್ಟಿಗೆ ಮುಹೂರ್ತ'

ಶ್ರೀ ಅದಮಾರು ಮಠದ ಪರ್ಯಾಯದ ಪೂರ್ವಭಾವಿಯಾಗಿ ಸಂಪ್ರದಾಯ ಪ್ರಕಾರ ನಡೆಯಲಿರುವ "ಕಟ್ಟಿಗೆ ಮುಹೂರ್ತ" ಸಮಾರಂಭವು ತಾ. 15–7–1971ರಂದು ವಿದ್ವಜ್ಜನರ ಮತ್ತು ಶಿಷ್ಯ ವರ್ಗದವರ ಸಮಾವೇಶದೊಂದಿಗೆ ಬಹು ವಿಜೃಂಭಣೆಯಿಂದ ನೆರವೇರಿತು. ಬೆಳಗ್ಗೆ ಅದಮಾರು ಮಠದಲ್ಲಿ ದೇವತಾ ಪ್ರಾರ್ಥನೆಯಾದ ನಂತರ ವಾದ್ಯ ಘೋಷಗಳಿಂದ ಹೊರಟ ಮೆರವಣಿಗೆಯು ಚಂದ್ರೇಶ್ವರ, ಅನಂತೇಶ್ವರ ದೇವರಲ್ಲಿ ಪ್ರಾರ್ಥನೆ ಸಲ್ಲಿಸಿ ಶ್ರೀ ಕೃಷ್ಣ ಮಠದಲ್ಲಿ ವಿಧಿವತ್ತಾಗಿ "ಕಟ್ಟಿಗೆ ಮುಹೂರ್ತ"ವನ್ನು ನೆರವೇರಿಸಲಾಯಿತು.

●●

ಅ. ನ. ಕೃ ಇನ್ನು ಇಲ್ಲ!

೧

ಕನ್ನಡದ ಬಾಂದಳದಿ ಗರಿಗೆದರಿ
ಗರುಡನೋಲು
ಬಹುದೂರ ಹಾರಿ ಸಿಡಿಮಿನೋಟ ಬೀರಿ
ಅನ್ಯರಿಗೆ ಕಾಣಿಸದ ಹೊಸವಸ್ತುಗಳ
ನಾಯ್ದು
ವಿರಚಿಸಿದ 'ಅ. ನ. ಕೃ' ಕಾದಂಬರಿ!

೨

ನಟ ಸಾರ್ವಭೌಮ, ಸಂಧ್ಯಾರಾಗ
ಮೊದಲಾದ
ಕೃತಿಕಾರ ಕಾದಂಬರೀ ಸಾರ್ವಭೌಮ.
ವೈವಿಧ್ಯಪೂರ್ಣ ಸಾಹಿತ್ಯವನು ನಿರ್ಮಿಸಿದ
ಅ. ನ. ಕೃ ಕನ್ನಡದಿ ಖ್ಯಾತ ನಾಮ!

೩

ನಾಟಕ, ವಿಮರ್ಶೆ, ಕತೆ, ಕಾದಂಬರಿಗಳ
ಬರೆ–
ಬರೆದ ನವ ಸಾಹಿತ್ಯ ಕ್ರಾಂತಿಕಾರ
ಪ್ರಗತಿಪರ ಸಾಹಿತ್ಯ ಸೃಷ್ಟಿಯಿಂ
ಜನಮನವ
ಸೂರೆಗೊಂಡಿಹ ದಿಟ್ಟತನದ ಧೀರ!

೪

ಕೂಲಿಕಾರ ಮಜೂರ ಮೇಣ್ ಮಧ್ಯಮ
ಸಮಾಜ
ವರ್ಗದವರ್ಗಾಗಿ ಸಾಹಿತ್ಯರಚಿಸಿ
ದಿವ ಕೈದಿರುವ ಅ.ನ.ಕೃಷ್ಣರಾಯರ ಆತ್ಮ
ಮರಳಿ ಕರ್ನಾಟಕದಿ ಬರಲಿ ಜನಿಸಿ!

೫

ಸಾಹಿತ್ಯರಂಗದಲಿ ಅ. ನ. ಕೃ ಸಮರಿಲ್ಲ
ಕನ್ನಡದ ಗುಡಿ ದೀಪ ಆರಿತಲ್ಲ!
ಅ. ನ. ಕೃ ನಿಧನದಿಂ ಕನ್ನಡದ ನಾಡೆಲ್ಲ
ಮರುಗುತಿದೆ ಅ. ನ. ಕೃ ಇನ್ನು ಇಲ್ಲ!

—ಎಸ್. ತಿರುಮಲೇಶ್ವರ ಭಟ್,
ವಿದ್ವಾನ್

(ತಾ. 8—7—71ರಂದು ಕಣ್ಮರೆಯಾದ ಕಾದಂಬರೀ ಸಾರ್ವಭೌಮ ಅ. ನ. ಕೃಷ್ಣರಾಯರನ್ನು ಸ್ಮರಿಸಿ ಬರೆದುದು)

ರಾಜ್ಯದ ಹೈಸ್ಕೂಲುಗಳಿಗೆ ನವಯುಗ

ಮೈಸೂರು ರಾಜ್ಯದ ಡಿ. ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17–4/65–66ರ ಪತ್ರದಂತೆ ತರಿಸಿಕೊಳ್ಳಲು ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

2 ವಿಶೇಷ ಸಂಚಿಕೆ ಸಹಿತ ವಾರ್ಷಿಕ ಚಂದಾ ರೂ. 10/– ಮಾತ್ರ.

ಮೆನೇಜರ್, ನವಯುಗ, ಉಡುಪಿ.

‘ಸಾಧ್ವಿಯ ಸಾವು’

(ಎರಡನೇ ಪುಟದಿಂದ)

ಯು ಹಾಗೆ ಹರಿದು ಹೋಗುವುದರಿಂದ ವಿಪರೀತ ರಕ್ತಸ್ರಾವ ಆಗಬಹುದು. ಚೆನ್ನಾಗಿ ಬೆಳೆದ ಗಂಡಸು ನಡೆಸಿದ ಸಂಭೋಗಕ್ರಿಯೆಯಿಂದ ಆಕೆಯ ಗುಹ್ಯಾಂಗ ಹರಿದಿರಬೇಕು. ಆ ಗಾಯಗಳು ಸಂಭೋಗ ಕ್ರಿಯೆಯಿಂದಲೇ ಆಗಿರ ಬೇಕು. ಬೇರಾವ ರೀತಿಯಿಂದಲೂ ಸಂಭವಿಸಲು ಸಾಧ್ಯವಿಲ್ಲ.’

ಆರೋಪಿಯ ಪರ ಹಾಕಿದ ಪ್ರಶ್ನೆಗಳಿಗೆ ಅವರು ಹೀಗೆ ಉತ್ತರ ಕೊಟ್ಟರು.

‘ಫೂಲ್ಮಣಿಯ ಸ್ತನಗಳು ಎದ್ದು ಕಾಣಲು ಪ್ರಾರಂಭಿಸಿದ್ದುವು. ಅಷ್ಟರಿಂದ ಅವಳು ಪ್ರಾಪ್ತ ವಯಸ್ಕಳೆಂದು ಹೇಳಲು ಬರುವದಿಲ್ಲ. ಆಕೆಯ ಗುಹ್ಯೇಂದ್ರಿಯವನ್ನು ಪರೀಕ್ಷಿಸಿದಾಗ ಆಕೆಗೆ ಸಂಭೋಗ ರೂಢಿಯಾಗಿತ್ತೆಂದು ಕಂಡು ಬಂತು. ಹೆಚ್ಚಿನ ಬಲಪ್ರಯೋಗ ನಡೆದಿಲ್ಲವೆಂದು ಹೇಳಬಹುದು.’

ವಕೀಲರು ಧೈರ್ಯದಿಂದ ಮತ್ತೊಂದು ಪ್ರಶ್ನೆ ಹಾಕಿದರು.

‘ಹಿಂದೆ ಹಲವು ಬಾರಿ ಅವಳೊಡನೆ ಸಂಭೋಗಿಸಿದ ಆರೋಪಿ, ಅಂದಿನ ತನ್ನ ಕ್ರಿಯೆಯಿಂದ ಅವಳ ಮೇಲೆ ಈ ಪರಿಣಾಮ ಆದೀತೆಂದು, ಯೋನಿ ಹರಿದು ಹೋಗಬಹುದೆಂದು ತರ್ಕಿಸಲು ಆಸ್ಪದ ಇದೆಯೇ?’

ಇದಕ್ಕೆ ‘ಇಲ್ಲ’ ಎಂಬ ನೇರ ಉತ್ತರ ಡಾಕ್ಟರಿಂದ ಬಂತು.

ವಕೀಲರು ಪಾಟೀ ಸವಾಲನ್ನು ಅಲ್ಲಿಗೇ ನಿಲ್ಲಿಸಿ ತಣ್ಣಗೆ ಕುಳಿತರು.

ಅನಂತರ ಕೋರ್ಟಿನಲ್ಲಿ ಹಾಜರಿದ್ದ ತಜ್ಞ ವೈದ್ಯರ ವಾಗ್ಮೂಲವನ್ನು ತೆಗೆದುಕೊಳ್ಳಲಾಯಿತು. ಡಾಕ್ಟರ್ ಮೆಕ್ಲೋಡ್ ಹಾಗೂ ಡಾಕ್ಟರ್ ಜೋಬರ್ಟ, ಡಾಕ್ಟರ್ ಕ್ಯಾಬರ ಹೇಳಿಕೆಯನ್ನು ಸಮರ್ಥಿಸಿದರು. ಅಂದಿನ ಸಂಪರ್ಕ, ಹಿಂದಿಗಿಂತ ಹೆಚ್ಚಿನ ನೋವು ತಂದೀತೆಂದು ಊಹಿಸಲು ಆಸ್ಪದ ಇದೆಯೇ ಎನ್ನುವ ಆರೋಪಿಯ ಪರ ಹಾಕಿದ ಪ್ರಶ್ನೆಗೆ ಅವರಲ್ಲೊಬ್ಬರು ‘ಇಲ್ಲ’ವೆಂಬ ಅಭಿಪ್ರಾಯ ಕೊಟ್ಟರು. ಬೆಳೆದ ಹೆಂಗಸಿನ ಯೋನಿ ಸಂಭೋಗ ಕಾಲದಲ್ಲಿ ಹರಿದ ನಿದರ್ಶನಗಳಿವೆ ಎಂದು ಇನ್ನೊಂದು ಪ್ರಶ್ನೆಗೆ ಉತ್ತರಿಸಿದರು.

ಅನಂತರ ನ್ಯಾಯ ಮೂರ್ತಿಗಳು ಆರೋಪಿಯ ಹೇಳಿಕೆಯನ್ನು ತೆಗೆದು ಕೊಂಡರು. ಆತ ವಿವರದ ಹೇಳಿಕೆಯನ್ನು ಕೊಟ್ಟ. ‘ಮೃತಳ ಜೊತೆ ಅನೇಕ ಬಾರಿ ರತಿಕ್ರೀಡೆ ನಡೆಸಿದ್ದೆ. ಜೂನ್ 15ರ ರಾತ್ರಿ ನಾವು ಗಂಡ—ಹೆಂಡತಿ ಬೇರೆ ಬೇರೆ ಕಡೆ ಮಲಗಿದ್ದೆವು. ರಾತ್ರಿ 3ರ ಸಮಾರಿಗೆ ಎಚ್ಚರವಾಯಿತು ಆಗ ಫೂಲ್ಮಣಿ ಪಕ್ಕದಲ್ಲಿ ಮಲಗಿದ್ದನ್ನು ಕಂಡೆ. ಆಕೆ ನರಳಾಡುತಿದ್ದಳು. ಮಲಗಿದ್ದ ಹಾಸುಗೆ ರಕ್ತದಲ್ಲಿ ತೊಯ್ದಿತ್ತು. ಅವಳಿಗೆ ಏನಾಯಿತೆಂಬುದು ನನಗೆ ತಿಳಿಯದು. ಅದು ಸಹಜ ಸ್ರಾವವೆಂದು ನಾನು ಗ್ರಹಿಸಿದೆ.’

ಆವನ ಹೇಳಿಕೆಯನ್ನು ಬರೆದುಕೊಂಡ ತರುವಾಯ ಕೋರ್ಟಿನಲ್ಲಿ ಪ್ರತಿ ದ್ವಂದಿಗಳ ವಾದ-ಪ್ರತಿವಾದಗಳು ನಡೆದುವು ಆರೋಪಿಯ ಮೇಲೆ ಬಂದ ಸಾಕ್ಷ್ಯದ ತಪಸೀಲನ್ನು ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಪಗ್ ಜ್ಯೂರಿಗಳಿಗೆ ವಿವರಿಸಿದರು. ಇದು ಅಪ್ರಾಯಸ್ಥ ಕನ್ಯೆಯ ಜೊತೆ ನಡೆಸಿದ ಸಂಭೋಗ. ಆದರೂ ಅತ್ಯಾಚಾರವಾಗುವುದಿಲ್ಲ. ಏಕೆಂದರೆ ಮೃತಳು ಆರೋಪಿಯ ಪತ್ನಿ. ಒಪ್ಪಿಗೆಯ ವಯಸ್ಸನ್ನು ಹತ್ತಕ್ಕೇ ಮಿತಿಗೊಳಿಸಿರುವುದರಿಂದ, ಹತ್ತರ ಗಡಿ ದಾಟಿದ ಮೃತಳೊಡನೆ ಸಂಭೋಗ ನಡೆಸಿದ್ದು, ಪಿನಲ್ ಕೋಡಿನ 376ನೇ ಸೆಕ್ಷನಿನ ಕಕ್ಷೆಯೊಳಗೆ ಬರುವುದಿಲ್ಲ. ಆದರೆ ಮೈನೆರೆಯದ ಪತ್ನಿಯೊಡನೆ ದೈಹಿಕ ಸಂಪರ್ಕ ಬೆಳೆಸುವುದು ಧರ್ಮಬಾಹಿರ. ಅದನ್ನು ಎಲ್ಲ ಧರ್ಮಗಳು—ಹಿಂದು, ಮುಸ್ಲಿಂ, ಕ್ರಿಶ್ಚಿಯನ್— ನಿಷೇಧಿಸಿವೆ. ಆರೋಪಿಯದು ನ್ಯಾಯಬಾಹಿರ ನಡತೆ. ಆತ ತಿಳಿದೂ, ತಿಳಿದೂ ತಪ್ಪುಮಾಡಿದ. ದುಡುಕಿ ವರ್ತಿಸಿ ಅಪಾಯಕರ ಗಾಯಗಳನ್ನುಂಟುಮಾಡಿದ. ಆದ್ದರಿಂದ ಪಿನಲ್ ಕೋಡಿನ 304 ಮತ್ತು 325ರ ರೀತ್ಯಾ ಶಿಕ್ಷೆಗೆ ಅರ್ಹನು. ಹರಿ ಮೋಹನ ತಪ್ಪಿತಸ್ಥ ಎಂದು ತೀರ್ಮಾನಿಸ ಬೇಕೆಂದು ಪ್ರಾರ್ಥಿಸಿದರು.

ಆರೋಪಿಯ ಪರ ಹಾಜರಾದ. ಕಲಕತ್ತೆಯ ಅಂದಿನ ಪ್ರಸಿದ್ಧ ಲಾಯರ್— ಶ್ರೀ ಎಂ.ಎಲ್.ದತ್ತರು ಶ್ರೀ ಪಗ್‌ರ ವಾದವನ್ನು ಖಂಡಿಸಿದರು. ಬರಿಯ ವಾಗ್ವಿಲಾಸದಿಂದಲ್ಲ. ಆಪಾದನೆ ಸ್ಥಿರ ಪಡಲು ಪ್ರಾಸಿಕ್ಯೂಷನ್, ತಿಳುವಳಿಕೆ, ಉದ್ದೇಶ್ಯ, ದುಡುಕು, ಅಜಾಗರೂಕತೆಗಳನ್ನು ಸಿದ್ಧಪಡಿಸಬೇಕು. ಶಿಕ್ಷೆ ವಿಧಿಸುವ ಮೊದಲು ಇವುಗಳಲ್ಲಿ ಒಂದಾದರೂ ಸಾಬೀತಾಗಿದೆಯೇ ಎಂಬುದನ್ನು ಸೋಸಿ ನೋಡಬೇಕು. ಅದು ಬಂದಿಲ್ಲ— ಶಿಕ್ಷೆ ವಿಧಿಸುವಂತಿಲ್ಲ. ಇಲ್ಲಿ ಧರ್ಮದ ಪ್ರಶ್ನೆ ಬರುವುದೇ ಇಲ್ಲ. ಆರೋಪಿಯನ್ನು ಕೋರ್ಟಿನ ಮುಂದೆ ನಿಲ್ಲಿಸಿರುವುದು ಧರ್ಮಬಾಹಿರ ನಡತೆಯ ವಿಚಾರಣೆಗಾಗಿಯಲ್ಲ. ಪಿನಲ್ ಕೋಡಿನ ಪ್ರಕಾರ ತಕ್ಸೀರು ಮಾಡಿದ್ದಾನೆ ಎಂಬುದೇ ತಂದಿರುವ ಕೇಸು. ಆದ್ದರಿಂದ ಅದರ ಕಕ್ಷೆಯ ಆಚೆಗೆ ಹೋಗುವ ಅವಶ್ಯಕತೆಯಿಲ್ಲ. ಹತ್ತು ವರ್ಷವೂ ಆಗದ ಹೆಂಡತಿಯೊಡನೆ ಸಂಭೋಗ ನಡೆಸುವುದು ತಪ್ಪೆಂದು ಕಾನೂನು ತಿಳಿಸುತ್ತದೆ. ಒಪ್ಪಿಗೆಯ ವಯೋ ಮಿತಿಯನ್ನು ದಾಟಿದ ಹೆಂಡತಿಯೊಡನೆ, ರತಿಕ್ರೀಡೆ ನಡೆಸುವುದರಲ್ಲಿ ತಪ್ಪೇನಿದೆ? ಮದುವೆಯಾಗುವುದೇ ಆ ಆನಂದ ಹೊಂದಲು! ಆ ಸುಖ ಬಯಸುವುದರಲ್ಲಿ ಏನು ತಪ್ಪಿದೆ? ಯಾವ ಅಚಾತುರ್ಯದ ಕೆಲಸ ಆರೋಪಿ ಮಾಡಿದ್ದಾನೆ! ಇದು ಅನೈತಿಕವಂತೂ ಅಲ್ಲ. ಫೂಲ್ಮಣಿಯ ಸಾವು ಒಂದು ಆಕಸ್ಮಿಕ. ಹಾಗೆ ಸಾವು ಸಂಭವಿಸೀತು ಎಂದು ಶಂಕಿಸಲು ಆರೋಪಿಗೆ ಎಲ್ಲಿದೆ ಅವಕಾಶ. ಹಿಂದೆ ಸಂಭೋಗಿಸಿದಾಗ ಹಾಗಾಗಿರಲಿಲ್ಲವೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಆದ್ದರಿಂದ ಆರೋಪಿ ನಿರ್ದೋಷಿ.’

ವಾದ–ಪ್ರತಿವಾದಗಳನ್ನು ಕೇಳಿದ ಮೇಲೇ ನ್ಯಾಯಾಧೀಶರು ಜ್ಯೂರಿಗಳಿಗೆ ಕೇಸಿನ ವಿದ್ಯಮಾನಗಳನ್ನು ವಿವರಿಸಿದರು. ಕಾನೂನಿನ ಮುಖ್ಯಾಂಶಗಳನ್ನೂ ತಿಳಿ ಹೇಳಿದರು. ತದನಂತರ ಅವರ ಅಭಿಪ್ರಾಯವನ್ನು ತಿಳಿಸಲು ಸೂಚಿಸಿದರು.

ಜ್ಯೂರಿಗಳು ತಮ್ಮ ತಮ್ಮೊಳಗೆ ಚರ್ಚಿಸಿದರು. ಒಂದು ಒಮ್ಮತಕ್ಕೆ ಬಂದರು— ಆರೋಪ ಸ್ಥಿರಪಟ್ಟಿಲ್ಲವೆಂಬ ತೀರ್ಮಾನಕ್ಕೆ ಬಂದರು. ಆದರೆ ಪ್ರಾಣಕ್ಕೆ ಸಂಚಕಾರ ತರುವ ರೀತಿಯಲ್ಲಿ ವರ್ತಿಸಿದ. ಆಗ ದುಡುಕಿದ; ಎಚ್ಚರಿಕೆ ವಹಿಸಲಿಲ್ಲವೆಂಬುದಾಗಿ ಅಭಿಪ್ರಾಯಕೊಟ್ಟರು. ಪಿನಲ್ ಕೋಡಿನ 338ನೇ ಸೆಕ್ಷನ್ ರೀತ್ಯಾ ತಪ್ಪು ಮಾಡಿದ್ದಾನೆ ಎಂದು ಜ್ಯೂರಿಗಳ ನಾಯಕ ಕೋರ್ಟಿಗೆ ತಿಳಿಸಿದ.

ನ್ಯಾಯಾಧೀಶ ಶ್ರೀ ವಿಲ್ಸನ್ ಹರಿಮೋಹನನಿಗೆ ಒಂದು ವರ್ಷ ಕಠಿಣ ಶಿಕ್ಷೆ ವಿಧಿಸಿದರು. ಈ ಮೊಕದ್ದಮೆಯು ಪಿನಲ್ ಕೋಡಿನ 375ನೇ ವಿಧಿಯ ತಿದ್ದುಪಡಿಗೆ ಕಾರಣವಾಯಿತು. ಈ ತಿದ್ದುಪಡಿಯ ಮೂಲಕ ಒಪ್ಪಿಗೆಯ ವಯೋಮಿತಿಯನ್ನು 10ರಿಂದ 12ಕ್ಕೆ ಹೆಚ್ಚಿಸಲಾಯಿತು. ಕೇಂದ್ರ ಶಾಸನ ಸಭೆಯ ಸದಸ್ಯರೂ, ಪಿನಲ್ ಕೋಡಿನ ಮೇಲೆ 5 ಸಂಪುಟಗಳ ಭಾಷ್ಯಕಾರರೂ ಆದ ಶ್ರೀ ಹರಿಸಿಂಗ ಗೌರ್ ಅವರ ಸತತ ಪರಿಶ್ರಮದ ಫಲವಾಗಿ 1925ರಲ್ಲಿ ವಯೋಮಿತಿಯನ್ನು 13ಕ್ಕೆ ಏರಿಸಲಾಯಿತು. 1929ರಲ್ಲಿ ಬಾಲ್ಯ ವಿವಾಹವನ್ನು ತಡೆಗಟ್ಟುವ ಶಾಸನ ಜಾರಿಗೆ ಬಂತು.

ಫೂಲ್ಮಣಿಯ ಸಾವು ಹಲವರ ಕಣ್ಣು ತೆರೆಯಿಸಿತು.

● ●

ಅಬ್ರಹಾಂ ಲಿಂಕನ್ ಒಂದು ಸಲ ಹೇಳಿದರು : ‘ಜನರು, ತಾವು ಎಷ್ಟರಮಟ್ಟಿಗೆ ಮನಸ್ಸು ಮಾಡುತ್ತಾರೋ ಅಷ್ಟರಮಟ್ಟಿಗೆ ಸಂತೋಷದಿಂದ ಇರುತ್ತಾರೆ.

○ ○ ○

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ, ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್.

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 32/1971 I A. 1

ವಾದಿ– ಶೇಷಪ್ಪ ಚಾಕ್ರ

ಪ್ರತಿವಾದಿರು– 1. ಮೂಕಮ್ಮ ಶೆಡ್ತಿ
2. ಆನಂದು ಸೆಟ್ಟಿ

ಕುಂದಾಪುರ ತಾಲೂಕು ಮೊಳಹಳ್ಳಿ ಗ್ರಾಮದಲ್ಲಿರುವ ಪುಟ್ಟಮ್ಮ ಸೆಡ್ತಿ ಮಗಳು ಮೂಕಮ್ಮ ಸೆಡ್ತಿ 1 ಈಕೆಯ ಮಗ ಆನಂದು ಸೆಟ್ಟಿ 1 ಕೂಡಾ 2 ಜನರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ,

ಪ್ರತಿವಾದಿರು ವಾದಿಯಿಂದ ಸಾಲವಾಗಿ ಪಡೆದ ರೂಪಾಯಿ 500—00ಕ್ಕೆ ಪ್ರತಿವಾದಿರು ವಾದಿಗೆ ತಾ. 3—4—1968ರಲ್ಲು ಬರಕೊಟ್ಟ ಡಿಮಾಂಡು ನೋಟಿನ ಬಾಬ್ತು ಹಣ ಬಡ್ಡಿ ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖಲ್ಲು ಮಾಡಿದ ಮೇಲಿನ ದಾವೆಯು ತಾರೀಕು 20–8–1971ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ಖಿಗೆ ಇರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಶಿಯದೆ.

N. S. PARAMESHWARAIH
Advocate for Plaintiff.
Date 6—7—1971, Coondapoor

ಪುತ್ತೂರು IInd Adl. ಮುನ್ಸಿಫ್ ಕೋರ್ಟಿನಲ್ಲಿ

Ex.C. 834/70 (O. S. 189/66)

ಸತ್ಯವತಿ —ಅರ್ಜಿದಾರ

K.S. ಅನಂತಕೃಷ್ಣ ರಾವ್, ಸುಬ್ರಾಯರ ಮಗ-ಇಜ್ಜಾಪು-ಹಳೇನೇರಂಕಿ ಗ್ರಾಮ —ಎದ್ರಿ

ಸದ್ರಿ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯ ಪಡ್ಸುವುದೇನೆಂದರೆ:-

ಈ ಅಮಲ್ದಾರಿಯಲ್ಲಿ ದಾಖಲಾದ ಯೇಲಂ ಇಸ್ತಿಹಾರಿನ ಶರತಗಳನ್ನು ನಿರ್ಣಯಿಸುವ ನೋಟೀಸಿನ ಬಗ್ಗೆ ತಾ. 2–8–71ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಪರಿಸ ತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವ್ಯಾ ಮಾಡಿ ಯುಕ್ತಕಂಡಂತೆ ತೀರ್ಮಾನಿಸಲಾಗುವುದು.

Sd/—M. RAMMOHAN RAO
Advocate for Petr.
Puttur, 10—7—71

NAVAYUGA 22-7-1971

Registered with the Registrar of News Papers for India under No. R. N. 3546/'57

REGD. No B. G. 176
LICENCE No. 33
Licensed to Post without Prepayment

ನನ್ನ ಕರೆಯುವೆಯೆಂದು ಕಾದಿದ್ದೇನೆ....

ಲಂಡನ್ ನಗರದ ಭಾರತೀಯ ವಿದ್ಯಾರ್ಥಿಭವನದಲ್ಲಿ ಯುಗಾದಿಯನ್ನು ಆಚರಿಸಿದರು. ರಾತ್ರೆ ಉತ್ಸವವೊಂದರ ಏರ್ಪಾಡು ನಡೆಯಿತು. ನನಗೂ ಕವಿತೆ ಹೇಳುವುದಕ್ಕಾಗಿ ನಿಮಂತ್ರಣ ಬಂತು. ಉತ್ಸವದಲ್ಲಿ ೧೦—೧೫ ಮಹಿಳೆಯರೂ ೪೦—೫೦ ಪುರುಷರೂ ಭಾಗವಹಿಸಿದ್ದರು.

ಉತ್ಸವದ ಕಾರ್ಯಕ್ರಮವೆಲ್ಲವೂ ಇಂಗ್ಲಿಷ್ ಭಾಷೆಯಲ್ಲೇ ನಡೆಯಿತು. ಸಂಗೀತ ಮೊದಲಾದುವು ಬಂಗಾಳಿ ಇತ್ಯಾದಿ ಭಾರತೀಯ ಭಾಷೆಗಳವು. ಇವುಗಳನ್ನು ಇಂಗ್ಲೀಷಿಗೆ ಭಾಷಾಂತರ ಮಾಡಿದರು. ಭಾರತೀಯರ ಮಾತೃಭಾಷೆಯೇ ಇಂಗ್ಲಿಷ್ ಎಂಬಷ್ಟು ಭ್ರಮೆ ಹುಟ್ಟಿತು. ಭಾರತದ ಬೇರೆ ಬೇರೆಡೆಯ ಜನರಿಲ್ಲಿದ್ದರು ಹಿಂದೀ ಭಾಷೆಯ ಪ್ರಚಾರ ಅಗ ಹೆಚ್ಚಾಗಿರಲಿಲ್ಲ ಆದುದರಿಂದ ಇಂಗ್ಲಿಷನ್ನೇ ಅಪ್ಪಿಕೊಂಡಿದ್ದರು. ಆದರೆ, ಹಿಂದಿಯಲ್ಲಿ ಮಾತನಾಡುವ ಬಗ್ಗೆ ಯಾವ ಪ್ರಯತ್ನವನ್ನೂ ಅಲ್ಲಿ ಯಾರೂ ಮಾಡಲಿಲ್ಲ. ಸಭಾಸದರೂ ವೇದಿಕೆಯ ಮೇಲೆ ಕುಳಿತವರೂ ಎಲ್ಲರೂ ಇಂಗ್ಲಿಷಿನಲ್ಲಿಯೆ ಮಾತಾಡುತಿದ್ದರು. ಅಲ್ಲಿ ಮಂಡಿತರಾಗಿದ್ದ ಕೆಲವು ಆಂಗ್ಲೇಯರು ಭಾರತೀಯರಿಗೆ ತಮ್ಮದೇ ಆದ ಭಾಷೆಯೊಂದಿಲ್ಲವೇ ಎಂದು ಭಾವಿಸುತಿದ್ದರು ಪರದಾಸ್ಯವು ನಮ್ಮನ್ನು ಅತ್ಯಂತ ಕೃತ್ರಿಮಗೊಳಿಸಿದೆಯೆನಿಸಿತು. ಇದರ ಪರಿಣಾಮವನ್ನು ನಾವು ಮುಂದೆಯೂ ಬಹುಕಾಲ ಅನುಭವಿಸಬೇಕಾಗಿದೆ.

ಕವಿತಾ ವಾಚನಕ್ಕೆ ನನ್ನನ್ನು ಕರೆದೊಡನೆಯೇ, ನಾನು ಹಿಂದಿಯಲ್ಲಿ ಮಾತನಾಡತೊಡಗಿದೆ. "ಭಾರತದ ಸಂವಿಧಾನವು ಹಿಂದಿಯನ್ನು ರಾಷ್ಟ್ರಭಾಷೆಯೆಂದು ಸ್ವೀಕರಿಸಿದೆ. ಆದರೂ ನಮ್ಮ ಮನಸ್ಸಿನಲ್ಲಿ ಹಿಂದಿಯ ಬಗ್ಗೆ ಇನ್ನೂ ಉತ್ಸಾಹ ಮೂಡಿಲ್ಲ' ಅಥವಾ ಅದನ್ನು ಕಲಿಯಲು ನಾವಿನ್ನೂ ಮುಂದಾಗಿಲ್ಲ. ಸರಿಯಾದ ಇಂಗ್ಲಿಷ್ ಭಾಷೆಯಲ್ಲಿ ಮಾತನಾಡುವುದಕ್ಕಿಂತ ಹರಕು-ಮುರುಕು ಹಿಂದಿಯಲ್ಲಿ ಮಾತನಾಡುವುದು ಒಳ್ಳೆಯದು. ಅನ್ನಗಳಿಸಲು ಬೇಕಷ್ಟು ಇಂಗ್ಲಿಷನ್ನು ನಾನೂ ಕಲಿತು ಕೊಂಡಿದ್ದೇನೆ. ನಾನು ಇಂಗ್ಲಿಷಿನಲ್ಲೇ ನಿಮ್ಮೊಡನೆ ಮಾತಾಡ ಬಲ್ಲೆ; ಆದರೂ ಹಿಂದಿಯಲ್ಲಿ ನಾಲ್ಕು ಮಾತಾಡುತ್ತೇನೆ. ನನ್ನ ಹಿಂದಿಯಲ್ಲಾಡುವ ಮಾತುಗಳನ್ನು ನೀವು ತಿಳಿದುಕೊಳ್ಳುವುದಿಲ್ಲವಾದರೆ, ನನ್ನ ಕವಿತೆಗಳನ್ನೆಂತು ಮೆಚ್ಚ ಬಲ್ಲಿರಿ? ನನ್ನ ಕವಿತೆಯನ್ನು ನೀವು ಅರ್ಥಮಾಡಿಕೊಳ್ಳಲಾರಿರೆಂದರೆ, ಬರಿಯ ಮಾತುಗಳಿಂದ ನಿಮ್ಮನ್ನು ನಾನೆಂತು ಮೆಚ್ಚಿಸಬಲ್ಲೆ? ಕವಿತೆಗಳ ಮೂಲಕವೇ ನಿಮ್ಮನ್ನು ನಾನು ಆನಂದಗೊಳಿಸಬಲ್ಲೆ ಧ್ವನಿ ಮತ್ತು ಲಯಗಳ ಸಹಾಯದಿಂದಲೇ ಕವಿತೆಯಿಂದ ಶ್ರೋತರ ತಲೆದೂಗಿಸ ಬಹುದು" — ನನ್ನ ಈ ಮಾತುಗಳನ್ನು ಸಭಾಸದರು ಮೆಚ್ಚಿದಂತೆನಿಸಿತು. ಆ ಬಳಿಕ ಕವಿತೆಯೋದ ತೊಡಗಿದೆ— "ನನ್ನ ಕರೆಯುವೆಯೆಂದು ಕಾದಿದ್ದೇನೆ..."

ಹಿಂದೀತರ ಭಾಷಿಗಳೂ ನನ್ನ ಕವಿತೆಯನ್ನು ಅರ್ಥಮಾಡಿಕೊಂಡಂತೆನಿಸಿತು. ಅಥವಾ ನನ್ನನ್ನು ಸಂತೋಷ ಪಡಿಸುವುದಕ್ಕಾಗಿಯೆ ಅವರು ಪ್ರಯತ್ನಿಸಿದರೆ? ಸಂಗೀತವೇನೋ ಚೆನ್ನಾಯ್ತು. ಕೆಲವರು ಧ್ವನಿ ಮತ್ತು ಲಯಗಳಿಂದ ಅರ್ಥವಿಸಿಕೊಂಡರು. ಉತ್ತರ ಭಾರತದವರು ಕವಿತೆಯ ರಸಾಸ್ವಾದನೆಯನ್ನು ಪರಿಪೂರ್ಣ ಮಾಡಿಕೊಂಡರು. ಇನ್ನು ಕೆಲವಾರು ಗೀತ-ಗಾಯನಗಳು ನಡೆದುವು. ಶ್ರೋತರು ಹರ್ಷಪುಲಕಿತಗಾತ್ರರಾದರು. ಭಾರತದಲ್ಲಿನ ಸಭೆಯೆಂದೇ ಆಗ ಭಾಸವಾಯ್ತು. ಯಾವನೋ ಒಬ್ಬ ಡಾಕ್ಟರು ಧನ್ಯವಾದ ಹೇಳಿದನು. ನನ್ನ ಬಗ್ಗೆ ತುಂಬ ಪ್ರಶಂಸೆಯ ಮಾತಾಡಿದನು. ಜನಗಣಮನದೊಂದಿಗೆ ಸಭಾಂತ್ಯವಾಯ್ತು.

—ಹಿಂದೀ ಭಾಷೆಯ ಕವಿ ಬಚ್ಚನ್‌ರವರ ಲಂಡನ್ ಯಾತ್ರೆಯ ವೇಳೆಯ ಅನುಭವವಿದು. ಭಾರತೀಯರು ತಮ್ಮ ಭಾಷೆಗಳನ್ನು ಮರೆತು ಇಂಗ್ಲಿಷ್ ಭಾಷೆಗೆ ಶರಣು ಹೋಗುವ ದುಸ್ಥಿತಿ ಇಂದೂ ತಪ್ಪಿಲ್ಲ. ದೇಶದಲ್ಲಿ ನಡೆಯುವ ಅಂತಾರಾಜ್ಯ ಸಭೆ—ಸಮ್ಮೇಳನಗಳ ಕಾರ್ಯಕ್ರಮಗಳೇ ಇಂಗ್ಲಿಷಿನಲ್ಲಿ ನಡೆಯುತ್ತಿರುವಾಗ, ವಿದೇಶಗಳಲ್ಲಿ ನಡೆಯುವ ಸಭೆಗಳ ಬಗ್ಗೆ ಟೀಕೆ ಅನಗತ್ಯ. ಸಂವಿಧಾನ ಮಾನ್ಯ ಭಾಷೆಗಳಲ್ಲಿ ಪ್ರಮಾಣ ವಚನ ಸ್ವೀಕರಿಸುವ ಅವಕಾಶ ನೀಡಿದರೂ ಶಾಸಕರು ತಂತಮ್ಮ ಮಾತೃ ಭಾಷೆಯಲ್ಲಿ ಪ್ರಮಾಣ ವಚನ ಸ್ವೀಕರಿಸಲು ಮುಂದೆ ಬಾರದ ಉದಾಹರಣೆಗಳೆಷ್ಟಿಲ್ಲ? ಶಾಸನ ಸಭೆಗಳಲ್ಲಿ ಮಾಡುವ ಭಾಷಣಗಳೂ ಕೇಳುವ ಪ್ರಶ್ನೆಗಳೂ ನಡೆಯುವ ಕಾರ್ಯಕಲಾಪಗಳೂ ಇಂಗ್ಲಿಷ್‌ನ ಮರೆಹೋಗುತ್ತಿವೆ.

ಇತ್ತೀಚೆಗೆ ಭಾರತೀಯ ಜನಸಂಘದ ಅಧಿವೇಶನವು ಇಂಗ್ಲಿಷಿನಿಂದ ದೂರವಾಗದಿದ್ದರೂ ಅಲ್ಲಿ ಭಾರತೀಯ ಭಾಷೆಗಳಲ್ಲಿಯೂ ಭಾಷಣಗಳು ನಡೆದುವೆಂದು ವರದಿಯಾಗಿದೆ. ನಮ್ಮ ಭಾಷೆಗಳ ಮೇಲೆಯೇ ನಮಗೆ ಅಭಿಮಾನವಿಲ್ಲದೆ ಹೋದರೆ, ನಮ್ಮ ಜನಗಳ ಮೇಲೆ ಏಕೆ, ನಮ್ಮ ಮೇಲೆಯೇ ನಮಗೆ ಅಭಿಮಾನ ಮೂಡುವುದೆಂತು?

ರಶ್ಯ ದೇಶದಲ್ಲಿ ತಮಿಳು-ಬಂಗಾಳಿ-ಹಿಂದಿ ಮುಂತಾದ ಭಾಷಾಧ್ಯಯನದ ಪ್ರತಿಷ್ಠಾನಗಳಿವೆ. ಅಂತಹುದೇ ಪ್ರತಿಷ್ಠಾನವೊಂದನ್ನು ಕನ್ನಡಾಧ್ಯಯನದ ಬಗೆಗೂ ತೆರೆಯಬಾರದೇಕೆಂದು ಕೇಳಿದರೆ, ಅದಕ್ಕೆ ಅವರ ಉತ್ತರ ಸದಾಸಿದ್ಧ-'ಕನ್ನಡವನ್ನು ನೀವು ಸರಕಾರದ ವ್ಯವಹಾರ ಭಾಷೆಯೆಂದು ಮಾಡಿದ್ದೀರಾ? ಶಿಕ್ಷಣ ಮಾಧ್ಯಮವೆಂದು ಸ್ವೀಕರಿಸಿದ್ದೀರಾ? ನಿಮಗೇ ಬೇಡವಾದ ನಿಮ್ಮ ಭಾಷೆ ನಮಗೇಕೆ?'

ಪ್ರಾದೇಶಿಕ ಭಾಷಾಮಾಧ್ಯಮವು ನಮ್ಮ ವ್ಯಕ್ತಿತ್ವವನ್ನು ಪ್ರಾದೇಶಿಕ ಬಂಧನದಲ್ಲಿಡುತ್ತದೆಯೆಂಬ ದುರ್ಭಾವನೆ ನಮ್ಮಲ್ಲಿ ಮೂಡಿದೆ. ನಾವೆಲ್ಲರೂ ನಮ್ಮ ವಿಶ್ವವ್ಯಾಪ್ತ ವ್ಯಕ್ತಿತ್ವವನ್ನು ಅದುಮಿಕೊಳ್ಳಲು ಬಯಸುವುದಿಲ್ಲ. ಆದುದರಿಂದಲೇ ಕನ್ನಡ ಮಾಧ್ಯಮವೆಂದರೆ ಮೂಗುಮುರಿಯುತ್ತೇವೆ. ಮಾತೃಭಾಷೆಯಲ್ಲೇ ಅಭಿವ್ಯಕ್ತಿ ಸಾಧ್ಯವೆಂಬುದನ್ನು ತಿಳಿತಿಳಿದೂ ನಾವು ಅದನ್ನು ಕಡೆಗಣಿಸುತ್ತೇವೆ. ಕನ್ನಡದಲ್ಲೇನಿದೆ ಎಂದು ಕೇಳುತ್ತೇವೆ. ಪ್ರಾಯ ವಿದೇಶೀಯರು ಕನ್ನಡವನ್ನು ಕಲಿಯಲು ತೋರಿಸುವಷ್ಟು ಆಸಕ್ತಿಯನ್ನು ಸ್ವಯಂ ಕನ್ನಡಿಗರೇ ಪ್ರದರ್ಶಿಸುವುದಿಲ್ಲ.

ಆದುದರಿಂದಲೇ ನಮ್ಮ ಮಾತೃಭಾಷಾಭಿಮಾನ ಮಿಥ್ಯಾಭಿಮಾನ. ಇದಕ್ಕಿಂತ ದಯನೀಯ ಸ್ಥಿತಿ ಬೇರೊಂದಿಲ್ಲ. ಇದು ಬದಲಾಗದೆ ಕನ್ನಡ ಕನ್ನಡವೆಂದು ಹರದಾಡುತ್ತ ಹೋದರೆ, ಕನ್ನಡವನ್ನು ಸಂಪೂರ್ಣ ಕೈ ಬಿಟ್ಟಂತೆಯೇ. ನಮ್ಮದನ್ನೇ ಉಳಿಸಿಕೊಳ್ಳಲಾಗದವರು ಪರರದನ್ನೆಂತು ಸಂರಕ್ಷಿಸಬಲ್ಲರು?

●●

(ಒಂದನೇ ಪುಟದಿಂದ)

ಲಾಗ್ರ ಬದಲಾಯಿಸುವ ಬಗ್ಗೆ ಸರಕಾರವನ್ನು ಒತ್ತಾಯಿಸುವುದು ಆ ದಿನದ ಮುಖ್ಯ ಕರ್ತವ್ಯ.

ಶೈಕ್ಷಣಿಕ ಕ್ರಾಂತಿಯು ಬೌದ್ಧಿಕ ಕ್ರಾಂತಿಗೆ ಪ್ರೇರಕವಾಗುತ್ತದೆ. ಇದರಿಂದ ನಮ್ಮ ಹತ್ತಾರು ಸಮಸ್ಯೆಗಳು ಇಲ್ಲವಾಗುತ್ತವೆ.

ಭವಿಷ್ಯದ ಬಗ್ಗೆ ಆಶಾಮಯ ಸ್ವಪ್ನ ಕಂಡ ಮಾತ್ರಕ್ಕೆ ತೃಪ್ತಿಯಾಗುವುದಿಲ್ಲ. ಅದು ಸತ್ಯವೂ ಆಗಬೇಕು. ಅಂತಹ ಶಿಕ್ಷಣ ನಮಗೆ ಬೇಕು.

●●

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit **ಫೋನ್: 77**

HOTEL SHIVAPRASAD
High Class Boarding, Lodging & Restaurant
COONDAPUR, S. K.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0-75 ಪೈಸೆ ಮಾತ್ರ.
ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್. ಪೋಸ್ಟಿನಿಂದ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

Edited, Printed & Published by K. H. Shetty at the Navayuga Press. Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 46

NAVAYUGA

29—7—1971

ಕೃಪಾಪೋಷಿತ ನಾಟಕಮಂಡಳಿಗಳು

ಬಂಗ್ಲಾದೇಶ—ಬಂಗ್ಲಾ ಹೋರಾಟ–ಪಾಕಿಗೆ ನಿಕ್ಸನ್ನರ ಬೆಂಬಲ–ಭಾರತ–ಅಮೆರಿಕೆ ಮೈತ್ರಿ ಭಂಗ-ನಿರಾಶ್ರಿತರ ಮಹಾಪ್ರವಾಹ–ಅವರ ಪುನರ್ವಸತಿ ಮೊದಲಾದುವುಗಳ ನಡುವೆ ಬಂಗ್ಲಾ ನಾಯಕ ಶೇಕ ಮುಜಿಬುರ್ ರೆಹಮಾನರು ಸಮಾಚಾರ ಪತ್ರಿಕೆಗಳಿಂದ ಕೆಲವು ದಿನ ಅದೃಶ್ಯರಾಗಿದ್ದರು. ಅವರನ್ನು ಚಿತ್ರಹಿಂಸೆಗೆ ಗುರಿಪಡಿಸಲಾಗುತ್ತಿದೆ, ಬಂಗ್ಲಾ ದೇಶೀಯರು ಪಾಕ್ ಪಡೆಗಳಿಗೆ ಶರಣಾಗುವಂತೆ ಹೇಳಿಕೆ ನೀಡಲು ಒತ್ತಾಯಿಸಲಾಗುತ್ತಿದೆ.—ಈ ಮುಂತಾದ ವರದಿಗಳು ಬಂದಿದ್ದುವು. ಪಾಕ್ ಜೇಲಿನಲ್ಲಿ ಬಂಧಿತರಾಗಿರುವ 'ಮುಜಿಬುರ್ ಯಾಹ್ಯಾಖಾನರ ಬಲತ್ಕಾರದ ವಿರುದ್ಧ ನಿರಶನ ವ್ರತ ಕೈಕೊಂಡಿದ್ದಾರೆಂದೂ ಹಿಂದೆ ಹೇಳಲಾಗಿತ್ತು.

ಸುಮಾರು ಒಂದು ತಿಂಗಳಿಗೂ ಮಿಕ್ಕಿದ ಗಂಭೀರ ಮೌನವನ್ನು ಮುರಿದು ಶೇಕ ಮುಜಿಬುರ್ ಮತ್ತೆ ವಾರ್ತಾಕಾಶಕ್ಕೆ ಪಾದಾರ್ಪಣ ಮಾಡಿದ್ದಾರೆ. ನಿರಶನದಿಂದಾಗಿ ಶರೀರ ಅಸ್ವಸ್ಥಗೊಂಡಿರುವುದರಿಂದ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆಯೆಂದು ಒಂದು ವರದಿ ತಿಳಿಸಿತು. ಅದರ ಬೆನ್ನಲ್ಲೇ ಮುಜಿಬುರರ ಮೇಲೆ ದೇಶದ್ರೋಹದ ಆಪಾದನೆ ಹೊರಿಸಿ ಅವರನ್ನು ವಿಚಾರಣೆಗೆ ಗುರಿ ಮಾಡುವ ಪಾಕ್ ಸರಕಾರದ ಆಲೋಚನೆಯೂ ಬಹಿರಂಗವಾಯ್ತು. ಸರ್ವಾಧಿಕಾರವಿರುವ ದೇಶಗಳಲ್ಲಿ ಅಧಿಕಾರಿಗಳು ಯಾರನ್ನೂ ಆರೋಪ ಹೊರಿಸಿ ವಿಚಾರಿಸದೇನೇ ಬಲಿ ನೀಡುವುದು ಹೊಸತನವಲ್ಲ. ವಿಚಾರಣೆಯ ನೆಪ ನಾಗರಿಕ ಜನತೆಯನ್ನು ವಂಚಿಸಲೆಂದು ಸರ್ವಾಧಿಕಾರಿಗಳು ಆಡುವ ನಾಟಕ ಮಾತ್ರ.

ಬಂಗ್ಲಾ ಜನ ಹೃದಯ ನಿವಾಸಿ ಮುಜಿಬುರ್‌ರ ಶರೀರವಿಂದು ಪಾಕ್ ಸರ್ವಾಧಿಕಾರಿಗಳ ವಶದಲ್ಲಿರಬಹುದು. ಬಂಗ್ಲಾ ಪ್ರಜೆಗಳ ಹಿತಾಸಕ್ತಿಯನ್ನು ಅವರು ಎತ್ತಿಹಿಡಿದದ್ದು ಯಾಹ್ಯಾಖಾನರಿಗೆ ದ್ರೋಹ ಮಾಡಿದಂತೆನಿಸಲೂ ಬಹುದು. ಸೈನಿಕ ನ್ಯಾಯಾಲಯವೊಂದರ ಮುಂದೆ ಮುಜಿಬುರ್ ರೆಹಮಾನರ ಪಾಪ ಪಠನವನ್ನು ಯಾಹ್ಯಾ ಕೃಪಾ ಪೋಷಿತ ನಾಟಕ ಮಂಡಳಿ ಮಾಡಬಹುದು. ಅವನ್ನು ಒಪ್ಪಿಕೊಂಡು ಅನನ್ಯ ಶರಣಾದರೆ, ದಂಡನೆಯ ಉಗ್ರತೆಯನ್ನು ಕಡಿಮೆ ಮಾಡಬಹುದೆಂಬ ಆಮಿಷ ತೋರಿಸ ಬಹುದು. ಇದನ್ನು ಮುಜಿಬುರ್ ಒಪ್ಪುವುದಿಲ್ಲ. ಆಗ ಅವರಿಗೆ ಮರಣ ದಂಡನೆ ನೀಡಬಹುದು; ಆಜೀವ ಕಾರಾವಾಸ ಕೊಡಬಹುದು; ಅಥವಾ ಇನ್ನೂ ಏನೇನೋ ಮಾಡಬಹುದು.

ಮುಜಿಬುರ್ ರೆಹಮಾನರ ಆತ್ಮ ಪ್ರತಿ ಬಂಗ್ಲಾ ಪ್ರಜೆಯ ಹೃದಯದಲ್ಲಿ ಹುದುಗಿದೆ. ಆದ್ದರಿಂದ ಅವರ ದೇಹಕ್ಕೆ ಯಾಹ್ಯಾ ಸರಕಾರ ನೀಡುವ ಯಾವುದೇ ವಿಧದ ದಂಡನೆಯ ಪರಿಣಾಮ ಬಂಗ್ಲಾ ವಿದ್ಯಮಾನಗಳ ಮೇಲೆ ಆಗೇ ಆಗುವುದು. ತಮ್ಮ ಜನ ನಾಯಕನ ಬಂಧನ–ದಂಡನೆಗಳಿಂದಲೇ ಬಂಗ್ಲಾ ದೇಶೀಯರು ರೊಚ್ಚಿಗೆದ್ದು ವೈಮನಸಗಳಿಂದ ಮದ್ದು ಗುಂಡು–ಬಾಂಬುಗಳಿಗೆ ತಲೆಕೊಡುತ್ತಿದ್ದಾರೆ. ಮುಜಿಬುರರನ್ನು ಇನ್ನೂ ಯಾಹ್ಯಾಖಾನರು ಪೀಡಿಸ ತೊಡಗಿದರೆ, ಪರಿಣಾಮ ಮತ್ತಷ್ಟು ಕೆಡುತ್ತದೆ. ಅಮೆರಿಕೆ-ಕೆಂಪು ಚೀನಾಗಳು ಒಂದಾಗ ಬಹುದು; ಅವೆರಡೂ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಮುಂದುವರಿಸಬಹುದು; ಬಂಗ್ಲಾವನ್ನು ಮತ್ತೊಂದು ವಿಯತನಾಮವನ್ನಾಗಿ ಮಾಡಲೂ ಬಹುದು. ಕೊನೆಗೆ ಯಾಹ್ಯಾರ ಕೈ ಮೇಲಾದರೂ ಆಗ ಬಹುದು. ಆದರೆ, ಬಂಗ್ಲಾ ದೇಶ ಮಾತ್ರ ಅವರಿಗೆ ದಕ್ಕದು. ಅದೆಂದೋ ಪಾಕಿಸ್ತಾನದಿಂದ ಸಿಡಿದು ಹೋಗಿದೆ; ಸ್ವತಂತ್ರವಾಗಿದೆ.

o o o

ಇದೇ ತಿಂಗಳ ೧೯ನೆಯ ತಾರೀಕಿಗೆ ದೇಶದ ೧೪ ದೊಡ್ಡ ವಾಣಿಜ್ಯ ಬ್ಯಾಂಕುಗಳು ರಾಷ್ಟ್ರೀಕೃತವಾಗಿ ಎರಡು ವರ್ಷಗಳು ಸಂದುವು. ದೇಶದ ಹಲವೆಡೆ ಈ ಮಹತ್ವದ ದಿನವನ್ನು ವೈಭವದಿಂದ ಆಚರಿಸಲಾಯ್ತು. ರಾಷ್ಟ್ರೀಕೃತ ಬ್ಯಾಂಕುಗಳ ಕಾರ್ಯ ಸಾಧನೆಗೆ ಸಂಬಂಧಪಟ್ಟ ವಿವರಗಳು ಪತ್ರಿಕೆಗಳಲ್ಲಿ ಬಿಡುಗಡೆಯಾದುವು. ಇವುಗಳಲ್ಲಿನ ಮುಖ್ಯ ಅಂಶವೆಂದರೆ, ಠೇವಣಿ ಹೆಚ್ಚಳ ಮತ್ತು ಆವಶ್ಯಕ ಕ್ಷೇತ್ರಗಳಿಗೆ ಸಾಲನೀಡಿಕೆಯಲ್ಲಿ ಪ್ರಗತಿ, ಬ್ಯಾಂಕಿಂಗ್ ಸೌಲಭ್ಯಗಳ ಒದಗಣಿಕೆ.

ಈ ವರ್ಷದ ಮೇಯಲ್ಲಿ ಸ್ಟೇಟ್ ಬ್ಯಾಂಕೂ ಸೇರಿ ರಾಷ್ಟ್ರೀಕೃತ ಬ್ಯಾಂಕುಗಳ ಠೇವಣಾತಿಗಳು ೪೬೦ ಕೋಟಿ ರೂಪಾಯಿಗಳು ಹೆಚ್ಚಾಗಿವೆ. ಹೆಚ್ಚಳ ಕಳೆದ ವರ್ಷ ೩೦೦ ಕೋಟಿರೂಪಾಯಿಯಿತ್ತು. ಅಂತೂ ಇಂದು ೬೦೦೦ ಕೋಟಿ ಠೇವಣಿ, ಅಂದರೆ, ರಾಷ್ಟ್ರದ ಒಟ್ಟು ಠೇವಣಿಯ ಸೇ. ೮೫ ರಷ್ಟು, ಈ ಬ್ಯಾಂಕುಗಳಲ್ಲಿವೆ. ಎರಡು ವರ್ಷಗಳಿಗೆ ಮೊದಲೂ ಈ ೧೪ ಬ್ಯಾಂಕುಗಳಲ್ಲಿ ಸೇ. ೮೫ರಷ್ಟು ಠೇವಣಿಗಳು ಇದ್ದುವೆಂಬುವನ್ನು ನಾವು ಗಮನಿಸುವದಾದರೆ, ಅರಾಷ್ಟ್ರೀಕೃತ ಬ್ಯಾಂಕುಗಳ ಪ್ರಗತಿಯೂ ಇದೇ ಪ್ರಮಾಣದಲ್ಲಿ ಮುಂದುವರಿದಿದೆಯೆಂಬಂಶ ನಿರ್ಲಕ್ಷ್ಯಿಸತಕ್ಕುದಲ್ಲ.

ಸಾಲ ಸೌಲಭ್ಯಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳು ಹೆಚ್ಚಿಸಿವೆ; ಬ್ಯಾಂಕಿಂಗ್ ಸೌಲಭ್ಯಗಳನ್ನು ಅವು ಒದಗಿಸಿವೆಯೆಂಬುದನ್ನು ಒಪ್ಪಿಕೊಳ್ಳಬೇಕು. ಆದರೆ, ಸಾಲ ನೀಡುವ ನೀತಿಯು ಅತ್ಯಂತ ಜಟಿಲವಾಗಿಯೇ ಇದೆಯೆನ್ನುವುದಕ್ಕೆ ಠೇವಣಿ ಹೆಚ್ಚಿದ ಪ್ರಮಾಣದಲ್ಲಿ ಸಾಲನೀಡಿಕೆ ಏರದಿದ್ದುದೇ ಸಾಕ್ಷಿ. ಅಲ್ಪಾದಾಯವುಳ್ಳವರಿಗೆ, ಮಧ್ಯಮ ವರ್ಗದ ನೌಕರರಿಗೆ ಈ ಬ್ಯಾಂಕುಗಳಿಂದ ಸಾಲಪಡೆಯುವುದು ಸುಲಭ ಸಾಧ್ಯವಲ್ಲ. ಸಮಾಜದ ದುರ್ಬಲ ಅಂಗಗಳಿಗೂ ಸಾಲ ಸೌಕರ್ಯ ಒದಗಿಸುವ ರಾಷ್ಟ್ರೀಕರಣದ ಒಂದು ಉದ್ದೇಶ ಸರ್ವೇಸಾಮಾನ್ಯವಾಗಿ ಈಡೇರಿಲ್ಲವೆಂಬುದನ್ನು ಮರೆಯಲಾಗದು.

ಸರಕಾರದ ವಲಯದಲ್ಲಿನಂತೆ ಅಲಕ್ಷ್ಯ ಭ್ರಷ್ಟಾಚಾರ, ಉದಾಸೀನತೆ ಮೊದಲಾದುವು ಬ್ಯಾಂಕಿಂಗ್ ರಂಗದಲ್ಲೂ ಕಾಣಿಸಿಕೊಳ್ಳುತ್ತಿದೆಯೆಂದು ದೂರುಗಳು ಬರುತ್ತಿವೆ. ಬ್ಯಾಂಕ್ ನೌಕರರು– ಗ್ರಾಹಕರ ನಡುವೆ ಸ್ವಾಮಿ—ಸೇವಕ ಸಂಬಂಧ ಗೋಚರವಾಗುತ್ತಿದೆಯೆಂದೂ ಹೇಳುತ್ತಾರೆ. ಕೆಲವೆಡೆ ಇದು ಸತ್ಯವಿರಲೂ ಬಹುದು. ಇದರ ಗಾಳಿ ಕ್ರಮೇಣ ಇತರತ್ರ ಹರಡಿ ಸೇವೆಯೆಂಬುದು ಉದ್ದೇಶ್ಯ ಮಾತ್ರವಾಗಿ ಉಳಿಯದಂತೆ ಈಗಿಂದೀಗಲೇ ಎಚ್ಚರಿಕೆ ವಹಿಸಬೇಕು

ಬ್ಯಾಂಕ್‌ಗಳ ಅಧಿಕಾರಿಗಳು ಬ್ಯಾಂಕ್‌ಗಳ ಸರ್ವತೋಮುಖ ಪ್ರಗತಿಯ ಹೆಗ್ಗಳಿಕೆ ಹೇಳುತ್ತಿರುತ್ತಾರೆ. ಠೇವಣಿ ಸಾಲ–ಲಾಭಾಂಶಗಳ ಹೆಚ್ಚಳವೆಲ್ಲ ಅವರ ತುದಿನಾಲಗೆಯಲ್ಲಿದೆ. ಆದರೆ, ನೌಕರರ ನಿಷ್ಠೆ, ಕಾರ್ಯಪ್ರಣಾಳಿ, ಕರ್ತವ್ಯಪರತೆಯತ್ತ ಅವರು ಗಮನಹರಿಸುವುದು ಕಡಿಮೆ. ಹೆಗ್ಗಳಿಕೆಯ ಹುಲಿಯನ್ನು ತೋರಿಸಿ ರಾಷ್ಟ್ರೀಕರಣವು ಯಶಸ್ವಿಯಾಗಿದೆಯೆಂದು ಡಂಗುರ ಸಾರುವುದೇ ಅವರ ಹಾಗೂ ಸರಕಾರದ ಏಕಮೇವ ಉದ್ದೇಶವೇ ಎಂಬ ಸಂದೇಹ ಬರುತ್ತದೆ.

ಕೆಲವು ಸಮಯಕ್ಕೆ ಮೊದಲು ರಾಷ್ಟ್ರೀಕೃತ ಬ್ಯಾಂಕುಗಳ ಹಿಂದಿನ ವರ್ಷದ ಬ್ಯಾಲನ್ಸ್‌ಶೀಟು ಪ್ರಕಟವಾಯ್ತು. ಅವುಗಳೆಲ್ಲವೂ ಭಾರೀ ಮೊತ್ತದ ಲಾಭವನ್ನು ತೋರಿಸಿ ಅದನ್ನು ಕೇಂದ್ರ ಸರಕಾರಕ್ಕೆ ಕೊಟ್ಟುಬಿಟ್ಟದ್ದುವು. ಬ್ಯಾಂಕಿಂಗ್ ಖಾಸಗಿ ರಂಗದಲ್ಲಿದ್ದಾಗ ಅದು ವ್ಯಾಪಾರವಾಗಿದ್ದರೂ ರಾಷ್ಟ್ರೀಕೃತಗೊಂಡ ಮೇಲೆ 'ಸೇವೆ'ಯಾಗಬಾರದೆ? ಇವುಗಳ ಲಾಭವು ಸಾಲಗಾರರು ನೀಡಿದ ಬಡ್ಡಿಯಿಂದ ಗಳಿತವಾದುದು. ಸಮಾಜದ ದುರ್ಬಲ ವರ್ಗಕ್ಕೆ ಸಾಲ ನೀಡಿ, ಅವರಿಂದ ಅತಿ ಹೆಚ್ಚಿನ ದರದಲ್ಲಿ ಬಡ್ಡಿ ವಸೂಲು ಮಾಡಿ ಅವರನ್ನು ಮತ್ತೂ ದುರ್ಬಲಗೊಳಿಸುವುದು ಸಾಮಾಜಿಕ ನ್ಯಾಯವಾಗುವುದಿಲ್ಲ. ರಾಷ್ಟ್ರೀಕೃತ ಬ್ಯಾಂಕುಗಳ ನೌಕರನೊಬ್ಬ ಹನ್ನೆರಡು ಭಾರತೀಯ ಸಂಸಾರದ ಸರಾಸರಿ ವಾರ್ಷಿಕ ಆದಾಯದಷ್ಟು ಸಂಬಳವನ್ನು ಗಳಿಸುತ್ತಾನೆ. ಠೇವಣಿಗಳ ಬಡ್ಡಿಯೇರಿಸಿದರೆ, ಉಳ್ಳವನಿಗೇ ಸೇರುತ್ತದೆ. ಆದ್ದರಿಂದ ದುರ್ಬಲವರ್ಗದವರಿಗೆ, ನೀಡುವ ಸಾಲದ ಮೇಲಿನ ಬಡ್ಡಿದರವನ್ನು ಇಳಿಸಿ ಆ ತರ ರಕ್ತ ಹೆಪ್ಪುಗಟ್ಟದಂತೆ ಮಾಡಬಾರದೇಕೆ? ಮುಂದಿನ ವಾರ್ಷಿಕೋತ್ಸವವನ್ನು ಆಚರಿಸುವ ಹೊತ್ತಿಗಾದರೂ ಇದು ಕಾರ್ಯರೂಪಕ್ಕೆ ಬಂದು, ಬಡ್ಡಿಯ ಭಾರದಿಂದ ಶ್ರೀಸಾಮಾನ್ಯ ಸಾಲಕ್ಕೆ ಸಿಕ್ಕಿಬೀಳದಂತಾಗಬಾರದೇಕೆ?

o o o

ಪ್ರಸಮಾ ಮತ್ತು ಸಂಸಮಾ ಪಕ್ಷಗಳು ವಿಲೀನಗೊಂಡುದು ಯಾವ ಪುರುಷಾರ್ಥಕ್ಕೆಂದು ಅವುಗಳ ನಾಯಕರಿಗೇ ಗೊತ್ತಿರಲಾರದು. ಇತ್ತೀಚಿಗಿನ ವರ್ಷಗಳಲ್ಲಿ ಆ ಮೀಬೋತ್ಪತ್ತಿಯಂತೆ ಪಕ್ಷಗಳು ಒಡೆಯುತ್ತ ಬರುತ್ತಿರುವಾಗ ಈ ವಿಲೀನತೆಯೊಂದು ಶುಭಸಮಾಚಾರವೆಂದು ನಂಬಿದವರಿಗೆ ಸಂಪೂರ್ಣ ಭ್ರಮನಿರಸನವಾಗಿದೆ. ಕೇರಳದ ಅಚ್ಯುತ ಮೆನನ್ನರ ಸರಕಾರಕ್ಕೆ ಅಲ್ಲಿನ ಪ್ರಸಮಾ ಪಕ್ಷ ನೀಡುತಿದ್ದ ಬೆಂ

(ಹತ್ತನೇ ಪುಟ ನೋಡಿರಿ)

ಚರಿತ್ರಾರ್ಹ ಮೊಕದ್ದಮೆಗಳು—೧೨

ಮಗನಿಂದ ಮಿಲಿಯಾಧೀಶನ ಕೊಲೆ

ಬರೆದವರು: ಶ್ರೀ ಬಿ. ಕೃಷ್ಣ ಭಟ್, ಯಲ್.ಯಲ್.ಬಿ., ಭದ್ರಾವತಿ

ಶಿವಲೋಮಲ್, ಸಿಂಧ್ ಪ್ರಾಂತದ ಶ್ರೀಮಂತ ವರ್ತಕ. ಸ್ವಶಕ್ತಿಯಿಂದ ಮೇಲಕ್ಕೆ ಬಂದವ. ಮಿಲಿಯಾಧೀಶ ಬೇರೆ ಆಗಿದ್ದ. ಆತ ಸಿಂಧ್ ಪ್ರಾಂತದ ಜೆಕೋಬಾಬಾದ್‌ನಲ್ಲಿ ವಾಸವಾಗಿದ್ದ-ಆತನಿಗೆ ವಯಸ್ಸಿಗೆ ಬಂದ ಇಬ್ಬರು ಮಕ್ಕಳಿದ್ದರು- ಹಿರಿಯವನು ಮಾಧವ; ಕಿರಿಯವನೇ ಗೋಪಾಲದಾಸ ಮಾಧವ, ಮೊದಲಹೆಂಡತಿಯಲ್ಲಿಹುಟ್ಟಿದವ. ಗೋಪಾಲನ ತಾಯಿ ಶಿವಲೋಮಲ್ಲರ ಎರಡನೆಯ ಹೆಂಡತಿ. ಶಿವಲೋಮಲ್ಲರು ಮೊದಲ ಹೆಂಡತಿಯ ಮರಣಾನಂತರ ಎರಡನೆಯ ಬಾರಿಗೆ ಮದುವೆಯಾದರು. ಆ ಪತ್ನಿ ಗೋಪಾಲನಿಗೆ ಜನ್ಮಕೊಟ್ಟು ಮೃತ್ಯುಮುಖಳಾದಳು ಆಕೆ ಸತ್ತ ಮೇಲೆ ಅವರನ್ನು ಕೈ ಹಿಡಿದವಳು ಪರಮೇಶ್ವರಿ. ಈ ಮೂರನೆ ಹೆಂಡತಿಯಲ್ಲಿ ಅವರಿಗೆ ಮಕ್ಕಳಾಗಲಿಲ್ಲ.

ಹಿರಿಯ ಮಗ ಮಾಧವ ಒಳ್ಳೆಯ ಪ್ರಕೃತಿಯವ. ಆತ ಕಾಂಗ್ರೆಸಿನ ನಿಷ್ಠೆಯ ಕಾರ್ಯಕರ್ತನಾಗಿದ್ದ. ತಂದೆಗೆ ಅವನಲ್ಲಿ ಹೆಚ್ಚಿನ ಮಮತೆ. ಮಾಧವ ಚಲೇ ಜಾವ್ ಚಳುವಳಿಯಲ್ಲಿ ಭಾಗವಹಿಸಿ ಜೈಲಿಗೆ ಹೋದ. 3-3-43ರ ತನಕ ಆತ ಜೈಲಿನಲ್ಲಿದ್ದ. ಮಾಧವ ತಂದೆಗೆ ಅವರ ವ್ಯವಹಾರದಲ್ಲಿ ನೆರವಾಗುತಿದ್ದ. ಆದರೆ ಗೋಪಾಲನ ಸ್ವಭಾವ ಇದಕ್ಕೆ ತದ್ವಿರುದ್ಧ. ಆತ ಉಡಾಳ. ಬೀದಿಯ ಜನರ ಸಹವಾಸದಲ್ಲಿ ಹೊತ್ತು ಕಳೆಯುತಿದ್ದ. ಪೋಲಿತಿರುಗುತ್ತಿದ್ದ. ಇದು ತಂದೆಗೆ ಸರಿಬೀಳಲಿಲ್ಲ. ಸಂಪಾದಿಸಿದ ಸಂಪತ್ತಿನಲ್ಲಿ ಆತನಿಗೆ ಏನನ್ನೂ ಕೊಡಬಾರದೆಂದು ಅವರು ಯೋಚಿಸುತಿದ್ದರು ತನ್ನ ಪಶ್ಚಾತ್ ತನ್ನ ಆಸ್ತಿಗೆ ಮಾಧವನನ್ನು ಉತ್ತರಾಧಿಕಾರಿಯಾಗಿ ನೇಮಿಸಿ ಬಿಡುವ ಹಂಚಿಕೆ ಹಾಕಿದ್ದರು. ಹಾಗೊಂದು ಮರಣಪತ್ರ ಬರೆದಿಡುವ ಲೆಖ್ಖ ಹಾಕಿದ್ದರು. ಆದರೆ ಆದು ನೆರವೇರಲಿಲ್ಲ ಮಾಧವ ಸೆರೆಮನೆಯಿಂದ ಮರಳಿ ಬರುವುದನ್ನೇ ಅವರು ಕಾಯುತಿದ್ದರು.

ಶಿವಲೋಮಲ್ಲರಿಗೆ ಒಬ್ಬಳು ತಂಗಿ ಇದ್ದಳು. ಆ ತಂಗಿಯ ಮದುವೆಯೂ ಆಗಿತ್ತು. ಆಕೆಗೆ ಇಬ್ಬರು ಮಕ್ಕಳಿದ್ದರು. ತಂಗಿ ಮತ್ತು ತಂಗಿಯ ಗಂಡ ಭೂಕಂಪದಲ್ಲಿ ಸಾವನ್ನಪ್ಪಿದರು. ತಬ್ಬಲಿಗಳಾದ ಸೋದರಳಿಯಂದಿರನ್ನು ಶಿವಲೋಮಲ್ಲರು ಮನೆಯಲ್ಲೇ ಪೋಷಿಸಲಾರಂಭಿಸಿದರು. ಅವರಲ್ಲಿ ಹಿರಿಯವನಾದ ಮನು, ಮಾವನ ಮೆಚ್ಚುಗೆಯನ್ನು ಗಳಿಸಿದ. ಅವರ ವಿಶ್ವಾಸಕ್ಕೆ ಪಾತ್ರನಾದ. ಅವರ ವಹಿವಾಟನ್ನು—ಮಾಧವನಿಲ್ಲದಾಗ—ಅವನೇ ನೋಡಿಕೊಳ್ಳುತಿದ್ದ.

27—2—43ರಂದು ಶಿಲೋಮಲ್ಲರ ಹೆಂಡತಿ ಪರಮೇಶ್ವರಿ ಮನೆಯಲ್ಲಿರಲಿಲ್ಲ. ಹತ್ತಿರದ ಬಂಧುವಿನ ಮದುವೆಯಲ್ಲಿ ಭಾಗವಹಿಸಲೆಂದು ಆಕೆ 27-2-43ಕ್ಕೂ ಮುಂಚೆ ಜೆಕೋಬಾಬಾದ್ ಬಿಟ್ಟಿದ್ದಳು. ಮದುವೆಗೆಂದು ಹೋದವಳು ಇನ್ನೂ ಊರು ಸೇರಿರಲಿಲ್ಲ.

27—2—13ರಂದು ರಾತ್ರಿ ಹನ್ನೆರಡರ ತನಕ ಶಿವಲೋಮಲ್ಲರು ಎಚ್ಚರಿದ್ದರು. ರಾತ್ರಿ 12—30ರ ಸುಮಾರಿಗೆ ಅವರು ಅಳಿಯ ಮನುವನ್ನು ಹತ್ತಿರಕ್ಕೆ ಕರೆದು ಆತನ ಕೈಯಲ್ಲಿ 1200-00 ರೂಪಾಯಿಗಳನ್ನು, ತಿಜೋರಿಯಲ್ಲಿಡಲೆಂದು ಕೊಟ್ಟರು. ನಾಲ್ಕು ಮಂದಿ ಸಭ್ಯ ಗ್ರಹಸ್ಥರು ಅಂದು ಶಿವಲೋಮಲ್ಲರ ಅತಿಥಿಗಳಾಗಿ ಆ ಮನೆಯಲ್ಲಿ ತಂಗಿದ್ದರು. ಶಿವಲೋಮಲ್ಲರು ತಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಮುಗಿಸಿ, ತಮ್ಮ ಕೋಣೆಯಲ್ಲಿ ಒಬ್ಬರೇ ಮಲಗಿಕೊಂಡರು. ಅವರು ಮಲಗಿದ್ದ ಕೋಣೆಯ ಪಕ್ಕದಲ್ಲಿನ್ನ ಕೋಣೆಯಲ್ಲಿ ಶಿವಲೋಮಲ್ಲರ ಸೊಸೆ ಮತ್ತು ಮಕ್ಕಳು—ಮಾಧವನ ಹೆಂಡತಿ-ಮಕ್ಕಳು—ಮಲಗಿದರು.

ಮನೆಯಲ್ಲಿ ಬಹಳ ದಿನದಿಂದ ಕೆಲಸಕ್ಕಿದ್ದ ಹೆಣ್ಣು ಮಗಳೊಬ್ಬಳಿಗೆ ರಾತ್ರಿ 3ರ ಸುಮಾರಿಗೆ ಎಚ್ಚರವಾಯಿತು. ಆಕೆ ಗುಂಡಿಯನ್ನೊತ್ತಿದಳು. ಆದರೆ ದೀಪ ಉರಿಯಲಿಲ್ಲ. ಏನೋ- ಎಲ್ಲಿಯೋ ದೋಷವಿರಬೇಕೆಂದು ಆಕೆ ಸುಮ್ಮನಾದಳು. ಸದಾ ಮುಚ್ಚಿಯೇ ಇರುತ್ತಿದ್ದ ಅಂಗಳದ ಬಾಗಿಲುಗಳು ತೆರೆದಿರುವುದು ಕಂಡಿತು. ರಾತ್ರಿ ಮಲಗುವುದಕ್ಕೆ ಮೊದಲು, ಆ ಬಾಗಿಲನ್ನು ಭದ್ರ ಪಡಿಸದೆ ದೀಪ ಆರಿಸುವ ಕ್ರಮವೇ ಇರಲಿಲ್ಲ. ಅದನ್ನು ಯಾರು ತೆಗೆದಿರಬಹುದು? ಅದಕ್ಕಿಂತಲೂ ಹೆಚ್ಚಿನ ಅಚ್ಚರಿ ಅವರಿಗಾಗಿ ಕಾದಿತ್ತು. ಶಿವಲೋಮಲ್ಲರು ಮನೆಯಲ್ಲಿರಲಿಲ್ಲ.

ಮನು ಎಂದಿನಂತೆ 8 ಗಂಟೆಗೆ ಎದ್ದವನು 9ರ ಸುಮಾರಿಗೆ ಕಛೇರಿಗೆ ಹೋದ. ದಿನಗಳು, ವಾರಗಳು ಉರುಳಿದುವು. ಆದರೆ ಶಿವಲೋಮಲ್ಲರ ಸುಳಿವು ಸಿಗಲಿಲ್ಲ. ಈ ಮಧ್ಯೆ ಮಾಧವನ ಬಿಡುಗಡೆಯಾಯಿತು. ಎಷ್ಟು ಹುಡುಕಿದರೂ ಶಿವಲೋಮಲ್ಲರ ಪತ್ತೆಯಾಗಲಿಲ್ಲ.

ಇತ್ತ ಶಿವಲೋಮಲ್ಲರ ಶೋಧ ನಡೆಯುತಿದ್ದಂತೆಯೇ, ಒಂದು ವಿಚಿತ್ರ ಘಟನೆ ನಡೆಯಿತು. ಸಿಂಧದ ಆಗಿನ ಪ್ರಧಾನಿ ಶ್ರೀ ಅಲ್ಲಾಭಕ್ಷರನ್ನು ಕಾಣಲು, ಅತ್ತು ಎನ್ನುವ 20ರ ಹರೆಯದ ಮುಸ್ಲಿಂ ಯುವಕ ತುಂಬ ಚಡ-ಪಡಿಸುತಿದ್ದ. ಅವರನ್ನು ಭೆಟ್ಟಿಯಾಗುವುದು ಅತ್ತುವಿಗೆ ಆಗದೆ ಹೋಯಿತು. ಅಲ್ಲಾಭಕ್ಷರು ಖಾಯಿಲೆ ಮಲಗಿದ್ದುದರಿಂದ ಅವನ ಪ್ರಯತ್ನ ಯಶಸ್ವಿಯಾಗಲಿಲ್ಲ. ಆದರೆ ತಾನು ಅಲ್ಲಾಭಕ್ಷರನ್ನು ನೋಡಲು ಬಯಸಿದ್ದೇಕೆಂಬುದನ್ನು ಆತ ತನ್ನ ಗೆಳೆಯ ಖಾಬರನಿಗೆ ತಿಳಿಸದಿರಲಿಲ್ಲ. ಈ ಖಾಬರ್, ಅಬ್ದುಲ್ಲಾ ಎನ್ನುವ ಪೋಲಿಸ್ ಸಬ್ ಇನ್ಸ್‌ಪೆಕ್ಟರರ ಮನೆಗೆ ದಿನವೂ ಹಾಲು ಸರಬರಾಜು ಮಾಡುತ್ತಿದ್ದ. ಗುರುತಿನ ಸಬ್ ಇನ್ಸ್‌ಪೆಕ್ಟರರ ಮುಂದೆ ಖಾಬರ್, ಅತ್ತು ತನಗೆ ತಿಳಿಸಿದ ಸಂಗತಿಯನ್ನು ವಿವರಿಸಿದ. ಆ ವಿವರಗಳನ್ನು ಕೊಡಲೆಂದೇ ಆತ 18-4-43ರಂದು ಜೆಕೋಬಾಬಾದಿಗೆ ಬಂದಿದ್ದ; ಸಬ್ ಇನ್ಸ್‌ಪೆಕ್ಟರರನ್ನು ಕಂಡಿದ್ದ. ಈ ವರ್ತಮಾನವನ್ನು ಅಬ್ದುಲ್ಲಾ ಕರಾಚಿಗೆ ಮುಟ್ಟಿಸಿದರು. ಮತ್ತೆರಡು ದಿನದಲ್ಲಿ ಕರಾಚಿಯಿಂದ ಹಿರಿಯ ಪೋಲಿಸ್ ಅಧಿಕಾರಿಗಳೊಬ್ಬರು ಜೆಕೋಬಾಬಾದಿಗೆ ಬಂದರು. ಅತ್ತುವನ್ನು ಠಾಣೆಗೆ ಕರೆಸಿಕೊಂಡರು.

22-4-43ರಂದು ಬಂಧನದಲ್ಲಿದ್ದ ಅತ್ತು, ಪೋಲಿಸರನ್ನೂ, ಇತರ ಕೆಲವರನ್ನೂ ಊರ ಹೊರಗಿದ್ದ ಮಸಾಣಕ್ಕೆ ಕರೆದುಕೊಂಡು ಹೋದ. ಅದು ಮುಸ್ಲಿಂ ಶವಗಳನ್ನು ಹೂಳುವ ಸ್ಥಳ. ಅಲ್ಲೊಂದು ಜಾಗವನ್ನು ಪೋಲಿಸರಿಗೆ ತೋರಿಸಿದ-ಅವನ ಸೂಚನೆಯಂತೆ ಆ ಸ್ಥಳವನ್ನು ಅಗೆಯಲಾಯಿತು. ಅಗೆದಾಗ ಒಂದು ದೊಡ್ಡ ಗೋಣಿಯ ಚೀಲ ಸಿಕ್ಕಿತು. —ಎರಡು ಗೋಣಿ ತಟ್ಟುಗಳನ್ನು ಜೋಡಿಸಿ ಹೊಲಿದಂತಿತ್ತು. ಚೀಲದೊಳಗೊಂದು ಕೊಳೆತು ನಾರುವ ಶವ. ಆಗಲೇ ಬಹಳ ಜೀರ್ಣವಾಗಿತ್ತು. ಶವದ ಕತ್ತಿನ ಸುತ್ತ ಒಂದು ರುಮಾಲು ಸುತ್ತಿದ್ದು ಕಾಣಬಂತು. ಚೀಲದೊಳಗೆ ಒಂದು ಜುಬ್ಬ, ಒಂದು ಪಂಚೆ, ಒಂದು ಜೊತೆ ಸ್ಲಿಪ್ಪರುಗಳು ಸಿಕ್ಕವು. ಶವದ ಕೈ ಬೆರಳುಗಳಲ್ಲಿ ಹಾಕಿಕೊಂಡಿದ್ದ ಬಂಗಾರದ ಉಂಗುರಗಳಿದ್ದುವು.

ಅನಂತರ ಅತ್ತುವನ್ನು ಮ್ಯಾಜಿಸ್ಟ್ರೇಟರ ಮುಂದು ಹಾಜರು ಪಡಿಸಲಾಯಿತು. ಆ ಮರುದಿನದಲ್ಲಿ ಆತ ಒಂದು ತಪ್ಪೊಪ್ಪಿಗೆಯ ಹೇಳಿಕೆ ಕೊಟ್ಟ. ಈ ಹೇಳಿಕೆಯಲ್ಲಿ ಆತ ಶಿವಲೋಮಲ್ಲರ ಸಾವಿಗೆ ಸಂಬಂಧಿಸಿದ ಎಲ್ಲ ವಿವರಗಳನ್ನೂ ಕೊಟ್ಟ. ತಾನು ವಹಿಸಿದ ಪಾತ್ರವನ್ನು ತಿಳಿಸಿದ್ದಲ್ಲದೆ, ಉಳಿಕೆಯವರು ನಡೆಸಿದ ಕೆಲಸಗಳನ್ನೂ ತಿಳಿಸಿದ. ಮರುದಿನ ಊರಿನಲ್ಲಿದ್ದ ಮೂರು ಚಿನಿವಾರರ ಅಂಗಡಿಗಳಿಗೆ ಕರೆದು ಕೊಂಡು ಹೋದ. ಅವರ ಮೂಲಕ ಶಿವಲೋಮಲ್ಲರ ಜುಬ್ಬದಲ್ಲಿದ್ದ ಬಂಗಾರದ ಗುಂಡಿಗಳನ್ನು ಕರಗಿಸಿ, ಮಾರಿರುವುದಾಗಿಯೂ [illegible] ಕೊಟ್ಟ.

ಅವನು ಕೊಟ್ಟ ಹೇಳಿಕೆ ಹಾಗೂ ವರ್ತಮಾನಗಳಿಂದ ಪೋಲಿಸರಿಗೆ ಇತರ ಆರೋಪಿಗಳ ಪತ್ತೆ ಹಚ್ಚುವುದು ಸುಲಭವಾಯಿತು ಕೊಲೆಯ ತನಿಖೆ ಹಗುರಾಯಿತು. 23-4-43ರಂದು ಪೋಲಿಸರು ಹಜ್ರೊ ಎಂಬ ಇನ್ನೊಬ್ಬ ಆರೋಪಿಯನ್ನು ಬಂಧಿಸಿದರು. ಆತ ತನ್ನ ತಪ್ಪೊಪ್ಪಿಗೆಯ ಹೇಳಿಕೆಯಲ್ಲಿ, ತಮಗೆ ಸಹಾಯಕರಾದವರ ಹೆಸರುಗಳನ್ನು ಹೇಳಿದ.

ಹೂತಿಟ್ಟ ಸ್ಥಳದಿಂದ ಹೊರ ತೆಗೆದ ಶವವನ್ನು, ಯಾರದೆಂದು ಗುರುತಿಸ ಬೇಕಾದ್ದು ಅತಿ ಮುಖ್ಯ. ಶಿವಲೋಮಲ್ಲರ ಬಂಧುಗಳನ್ನು ಅದಕ್ಕಾಗಿ ಕರೆಸಿ ಕೊಳ್ಳಲಾಯಿತು. ಶಿವಲೋಮಲ್ಲರ ಪತ್ನಿ ಪರಮೇಶ್ವರಿ, ಯಾರ ಶವವೆಂದು ಹೇಳಲು ಅಸಮರ್ಥಳಾದಳು. ಶವ ಯಾರೂ ಗುರುತಿಸುವ ಸ್ಥಿತಿಯಲ್ಲಿರಲಿಲ್ಲ. ಶವದ ಜೊತೆಯಲ್ಲಿ ಸಿಕ್ಕಿದ, ಜುಬ್ಬ, ಧೋತಿ, ಸ್ಲಿಪ್ಪರು, ಬಂಗಾರದ ಉಂಗುರಗಳನ್ನು ಅವಳು ತನ್ನ ಪತಿಯವೆಂದು ಗುರುತಿಸಿದಳು. ಆಕೆಯ ಅಣ್ಣ —ಗೋವಿಂದ ರಾಂ—ಅದನ್ನು ಸಮರ್ಥಿಸಿದರು. ಹಿರಿಯ ಮಗ ಮಾಧವ, ಸೋದರಳಿಯ ಮನು, ಈ ಎಲ್ಲ ಸಾಮಗ್ರಿಗಳು ಶಿವಲೋಮಲ್ಲರಿಗೆ ಸೇರಿದವೆಂದು ತಿಳಿಸಿದರು ಪಂಚೆ-ಜುಬ್ಬಗಳಲ್ಲಿದ್ದ ಅಗಸನ ಗುರುತುಗಳನ್ನು, ಅವುಗಳನ್ನು ಆಧಾರವಾಗಿ ಬಳಸಿದರು.

ಶಿವಲೋಮಲ್ಲರು ಉಡುತಿದ್ದ ಇತರ ಪಂಚೆಗಳಲ್ಲೂ ಆ ರೀತಿಯ ಗುರುತುಗಳಿದ್ದುವು. ವಿಚಾರಣೆ ಮಾಡಿದಾಗ ಅಗಸ ಅದನ್ನು ದೃಢೀಕರಿಸಿದ. ಪೋಲಿಸರು ದರ್ಜಿಯವನನ್ನು ಕರೆಸಿಕೊಂಡು ಜುಬ್ಬದ ಅಳತೆಗಳನ್ನು ತೆಗೆಸಿಕೊಂಡರು. ಆ ಜುಬ್ಬದ ಅಳತೆಗೂ, ಮನೆಯಲ್ಲಿದ್ದ ಶಿವಲೋಮಲ್ಲರ ಇತರ ಜುಬ್ಬಗಳಿಗೂ ತಾಳೆಯಾಯಿತು. ಉಂಗುರಗಳನ್ನು ತಾನೇ ಮಾಡಿ ಕೊಟ್ಟೆನೆಂದು ಇನ್ನೊಬ್ಬ ಅಕ್ಕಸಾಲಿ ತಿಳಿಸಿದ.

ಶವ ಪರೀಕ್ಷೆ ನಡೆಸಿದ ವೈದ್ಯರು ವಿದ್ಯಮಾನದ ಮೇಲೆ ಬೆಳಕು ಚೆಲ್ಲಲು ಅಸಮರ್ಥರಾದರು. ಶವ ಹೆಣ್ಣಿಂದೊ-ಗಂಡಿಂದೋ ಎಂಬುದನ್ನು ತಿಳಿಸಲು ಅವರಿಂದಾಗದೆ ಹೋಯಿತು.

ಅತ್ತುವಿನ ತಪ್ಪೊಪ್ಪಿಗೆಯ ಹೇಳಿಕೆ, ಅನೇಕ ವಿವರಗಳಿಂದ ಕೂಡಿತ್ತು. ಆ ಹೇ

(ಒಂಭತ್ತನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 132 ಶಾಖೆಗಳಿಂದ ಹಬ್ಬಿರುವ **"ವಿಜಯಾ ಬ್ಯಾಂಕ್"**ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ "ಜೀವನ-ನಿಧಿ"ಯಲ್ಲಿ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:— **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, **ರೇಸ್ ಕೋರ್ಸ್ ರೋಡ್, ಬೆಂಗಳೂರು-1.**

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 46

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಮೋಸ್ಕೋ-ಡಿಲ್ಲಿ ವಿರುದ್ಧ ಪಿಂಡಿ—ಪೀಕಿಂಗ್ ಬಲೆಯಲ್ಲಿ ಅಮೆರಿಕನ್ ರಾಜಧಾನಿ?

ಪಾಕಿಸ್ತಾನದ ಸರ್ವಾಧಿಕಾರಿ ಯಾಹ್ಯಾಖಾನರು ಇಪ್ಪತ್ತೈದು ವರ್ಷ ಹಳೆಯ ಭಾರತ ವಿರೋಧಿ ನೀತಿಯನ್ನು ಪ್ರಬಲವಾಗೇ ಪುರಸ್ಕರಿಸುತ್ತ ಬರುತಿದ್ದಾರೆಂಬುದಕ್ಕೆ ಕೆಲವು ದಿನಗಳಿಂದ ಖಚಿತ ಪ್ರಮಾಣಗಳು ಲಭ್ಯವಾಗುತ್ತಿವೆ. ಇತ್ತೀಚಿಗೆ ಅವರು ಮಾಡಿದ ರೇಡಿಯೋ ಪ್ರಸಾರ ಭಾಷಣವು ಅದನ್ನೇ ಮತ್ತಷ್ಟು ಪುಷ್ಟೀಕರಿಸುತ್ತದೆ ಭಾರತವು ಪ್ರಬಲ ರಾಷ್ಟ್ರವೆಂದೂ ಅದು ತನ್ನ ಮೇಲೆ ಯಾವ ಕಾಲದಲ್ಲಾದರೂ ಆಕ್ರಮಣ ಮಾಡಬಹುದೆಂದೂ ಅಂದಿನಿಂದಲೂ ಪಾಕಿಸ್ತಾನದ ತಿರುಬೊಬ್ಬೆ. ಆದರೆ, ಆದರ ಬೊಬ್ಬೆ ಬರಿಯ ತೋಳ ಬಂತೋ ತೋಳ ಎಂಬಂತೆ ಎಂಬುದನ್ನು ನಿಷ್ಪಕ್ಷಪಾತಿ ರಾಜ್ಯಕಾರಣಿಗಗಳು ಬಲ್ಲರು; ಬದಲಿಗೆ ಪಾಕಿಸ್ತಾನವೇ ಒಂದಲ್ಲ ಹಲವು ಬಾರಿ ಭಾರತದ ಭೂಭಾಗವನ್ನು ಆಕ್ರಮಿಸಿ ಕಾಲು ಕೆದರಿ ಜಗಳಕ್ಕೆ ಆಹ್ವಾನಿಸಿದ್ದು, ಹೋರಾಟದಲ್ಲಿ ಪಾಕಿನ ಮೂಗು ಮುರಿದು ಹೋದದ್ದು ಇತಿಹಾಸ ವೇದ್ಯ. ಇದೀಗ ಬಂಗ್ಲಾ ದೇಶದ ವಿದ್ಯಮಾನಗಳನ್ನು ಬೇಕೆಂದೇ ಸೃಷ್ಟಿಸಿ, ತನ್ಮೂಲಕ ಭಾರತವನ್ನು ಸುಸ್ತುಗೊಳಿಸಿ, ಅದು ತನ್ನನ್ನು ಕೆಣಕಲೇ ಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ಯಾಹ್ಯಾಖಾನರು ನಿರ್ಮಿಸಿದರು. ಆದರೂ ಭಾರತೀಯ ಮುತ್ಸದ್ದಿಗಳು ದೇವದುರ್ಲಭವಾದ ಸಹನೆಯನ್ನು ತೋರಿಸುತ್ತ ಬಂದಿದ್ದಾರೆ. ನಮ್ಮ ಯೋಜನೆ-ಯೋಚನೆಗಳು, ನಮ್ಮ ಅರ್ಥ ವ್ಯವಸ್ಥೆ ಕಾಲು ತಪ್ಪಿದರೂ ನಾವು ಸುಮ್ಮನಿದ್ದೇವೆ. ಇಂತಹ ನಿರೀಹರನ್ನು ಸಮರಕ್ಕೆಳೆಯುವ ದುಸ್ಸಾಹಸವನ್ನು ಯಾಹ್ಯಾಖಾನರು ಮಾಡುತಿದ್ದಾರೆ.

ಬಂಗ್ಲಾದೇಶದ ನಿರಾಶ್ರಿತರು ಪಾಕಿಸ್ತಾನಕ್ಕೆ ಮರಳಲು ಅವರು ಕರೆ ನೀಡಿದ್ದಾರೆ· ಭಾರತದ ಪ್ರಧಾನಿಯೊಡನೆ ಉಭಯ ಪ್ರಶ್ನೆಗಳ ಮೇಲೆ ಚರ್ಚೆ ನಡೆಸಲು ಎಲ್ಲಿಯಾದರಲ್ಲಿ ಯಾವಾಗ ಬೇಕೋ ಆಗ ಭೆಟ್ಟಿ ಮಾಡಲು ತಾನು ಸಿದ್ಧವೆಂದು ಉಗ್ಗಡಿಸಿದ್ದಾರೆ. ಅವರ ಜತೆಯಲ್ಲೇ ಭಾರತವು ಪಾಕಿಸ್ತಾನದ ಮೇಲೆ ಆಕ್ರಮಣ ನಿರತವಾಗುತ್ತಿದೆಯೆಂದೂ ಒಂದು ವೇಳೆ ಯುದ್ಧ ಸಾರಿದ್ದೇ ಆದರೆ, ಪಾಕಿಸ್ತಾನವು ಏಕಾಕಿಯಾದ ದೇಶವಲ್ಲವೆಂದೂ ಅದಕ್ಕೆ ಸಹಾಯ ನೀಡುವ ಹತ್ತಾರು ಇತರ ದೇಶಗಳಿವೆಯೆಂದೂ ಬೆದರಿಕೆ ಹಾಕಿದ್ದಾರೆ. ಯಾಹ್ಯಾಖಾನರ ಈಯೆಲ್ಲ ಹೇಳಿಕೆ—ಬೆದರಿಕೆ—ಗದರಿಕೆಗಳಲ್ಲಿ ಸತ್ಯಾಂಶ ಲವಲೇಶವೂ ಇಲ್ಲವೆಂಬುದು ಹಗಲಿನಷ್ಟು ತಿಳಿ. ಆದರೆ, ಸತ್ಯವನ್ನು ಸತ್ಯವೆಂದು ನಂಬುವುದಕ್ಕೆ ಸಿದ್ಧರಿಲ್ಲದ ಸ್ವಾರ್ಥಲೋಲುಪ ಕುಹಕಿಗಳಿಗೆ ಇದು ತಿಳಿಯುವುದಿಲ್ಲ. ಕೆಂಪು ಚೀನಾವು ಭಾರತದ ಶತ್ರುರಾಷ್ಟ್ರವಾಗಿದ್ದು ಅದು ಪಾಕಿಸ್ತಾನವನ್ನು ಬೆಂಬಲಿಸುವುದು ಸಹಜವೇ. ಆದರೆ, ಅಮೆರಿಕೆಯೂ ಪಾಕಿಗೆ ಒತ್ತಾಸೆ ನೀಡುವುದು ವಿಲಕ್ಷಣವೆನಿಸುತ್ತದೆ. ಭಾರತವು ಇತ್ತೀಚಿಗಿನ ವರ್ಷಗಳಲ್ಲಿ ರಶ್ಯದತ್ತ ಒಲವು ತೋರಿಸುವುದರಿಂದ, ನೇಪಾಲ, ಬರ್ಮಾ, ಪಾಕಿಸ್ತಾನ, ಮಲಯಾ ಇತ್ಯಾದಿಗಳು ಕೆಂಪು ಚೀನಾದತ್ತ ಸ್ನೇಹ ಹಸ್ತ ಚಾಚುತ್ತಿರುವುದರಿಂದ, ಅಳಿಯುತ್ತಿರುವ ತನ್ನ ಪಭಾವವನ್ನು ಎಂತಾದರೂ ಉಳಿಸಿಕೊಳ್ಳಲು ನಿಕ್ಸನ್ ಮಾವೋನ ಭೇಟಿ ಮಾಡಲು ನಿರ್ಧರಿಸಿದರೆ? ಈ ಭೇಟಿಯನ್ನು ಏರ್ಪಡಿಸುವಲ್ಲಿ ಯಾಹ್ಯಾಖಾನರ ಕೈವಾಡವೂ ಇದೆಯೆನ್ನುವುದು ದಿಟವಾದರೆ, ಕೆಂಪು ಚೀನಾ—ಪಾಕಿಸ್ತಾನಗಳೇ ಅಮೆರಿಕೆಯನ್ನು ತಮ್ಮತ್ತ ಒಲಿಸಿಕೊಳ್ಳಲು ಪೂರ್ವತಯಾರಿ ನಡೆಸಿದಂತಿದೆಯೆನ್ನ ಬೇಕಾಗುತ್ತದೆ.

ಏಶ್ಯಾದ, ಮುಖ್ಯವಾಗಿ ದಕ್ಷಿಣ ಏಶ್ಯಾದ ನಾಯಕತ್ವದ ಪ್ರಶ್ನೆಯೇ ಭಾರತ–ಕೆಂಪು ಚೀನಗಳ ತಿಕ್ಕಾಟಕ್ಕೆ ನಾಂದಿ. ಅದಕ್ಕೆಂದೇ ಮಾವೋ ಭಾರತದ ಸುತ್ತು ಮುತ್ತಲಿನ ದೇಶಗಳನ್ನು ಒಲಿಸಿಕೊಂಡಿದ್ದಾರೆ. ಅವುಗಳೊಡನೆ ವ್ಯಾಪಾರಾದಿ ಸಂಬಂಧವನ್ನೂ ಹೊಂದಿದ್ದಾರೆ. ಭಾರತದ ಸುತ್ತಲಿನ ಎಲ್ಲ ದೇಶಗಳನ್ನು ತನ್ನ ಪ್ರಭಾವದಲ್ಲಿ ಬಂಧಿಸಿ, ತನ್ಮೂಲಕ ಭಾರತವನ್ನೂ ಮಣಿಸಬೇಕೆಂದು ಕೆಂಪು ಚಿನಾದ ದೈತ್ಯಾಶೆ. ಅಮೆರಿಕೆಯ ನೀತಿಗಳನ್ನು ಇತ್ತೀಚೆಗೆ ಭಾರತ ಖಡಾಕಂಡಿತವಾಗಿ ಟೀಕಿಸುತ್ತಿದೆ. ಆದ್ದರಿಂದ ಈ ಅವಕಾಶವನ್ನು ಬಳಸಿ ಅಮೆರಿಕೆಯನ್ನು ತಮ್ಮತ್ತ ಎಳೆಯುವಲ್ಲಿ ಅಸಮರ್ಥವಾದರೂ ಭಾರತದ ಬಗ್ಗೆ ಅದು ವಿಮುಖವಾಗುವಂತೆ ಮಾಡಿದರೆ ಅದೇ ದೊಡ್ಡ ಸಾಧನೆಯೆನಿಸುವುದು. ಗಡಿ ಪ್ರಶ್ನೆಯನ್ನು ಮತ್ತೆ ಎತ್ತಿ ಭಾರತ– ರಶ್ಯಗಳ ಮೇಲೆ ಯುದ್ಧ ಸಾರಿದರೂ ಸಾರಬಹುದು. ನಿಕ್ಸನ್ ತನ್ನ ಪೀಕಿಂಗ್ ಸಂದರ್ಶನವು ನಿರ್ಧಾರ ಮಾಡಿದ ಹಿಂದೆಯೇ ಚಿಯಾಂಗ ಕೈಶೇಖರಿಗೆ ಒಡಂಬಡಿಕೆಗಳಿಗೆ ಬದ್ಧವಾಗಿರುವ ಆಶ್ವಾಸನೆ ನೀಡಿದ್ದೂ ಸೋಜಿಗವೇ. ಈ ಆಶ್ವಾಸನೆಗಳನ್ನು ನಿಕ್ಸನ್ ಪಾಲಿಸಿಕೊಂಡು ಬರುವುದಾದರೆ, ಕೆಂಪು ಚೀನಾದೊಂದಿಗೆ ಚೆನ್ನಾಟ ಸಾಧ್ಯವಾಗುವುದಿಲ್ಲ. ಹಾಗಾದರೆ, ವಿಯತನಾಮ ಪ್ರಶ್ನೆಯನ್ನೂ ತನ್ನನ್ನು ಬಿಟ್ಟು ಇತ್ಯರ್ಥ ಮಾಡಬಾರದೆಂದು ಹನಾಯ್ ಎಚ್ಚರಿಕೆ ನೀಡಿದೆ. ಕೆಂಪುಚೀನಾದ ಕುತಂತ್ರ-ನಿಕ್ಸನ್ನರ ಅಧೀರತೆಗಳನ್ನು ಮಾತ್ರ ಈ ಭೆಟ್ಟಿ ದೃಢಪಡಿಸುತ್ತದೆಯೆ? ನಿಕ್ಸನ್ನರು ಪೀಕಿಂಗಿನಲ್ಲಿ ಯಶಗಳಿಸುವುದಿಲ್ಲ; ಗಳಿಸಿದರೂ ಅದು ತೋರಿಕೆಯದು ಮಾತ್ರ. ಪಂ. ಜವಾಹರಲಾಲರನ್ನೇ ವಂಚಿಸಿದ ಚೌಎನ್ ಲಾಯ್ ನಿಕ್ಸನ್ನರನ್ನೂ ಮೋಸಗೊಳಿಸವುದಿಲ್ಲವೆಂದು ಹೇಗೆ ಹೇಳಬೇಕು?

ಚುನಾವಣಾ ನಿರ್ಧಾರ

ಕಾವೇರಿ ನೀರಿನ ವಿವಾದದ ಬಗ್ಗೆ ತಮಿಳು ನಾಡಿನ ಅವಸರ—ಸಂಭ್ರಮಗಳು ವಿಧಾನ ಸಭೆಯಲ್ಲಿ ತೋರಿದ ಬಳಿಕ ಅಷ್ಟು ಪ್ರಧಾನಿಯ ಗಮನಕ್ಕೆ ಬರುವುದು ತಡವಾಗಲಿಲ್ಲ. ಆಕೆ ಮುಖ್ಯಮಂತ್ರಿ ಕರುಣಾನಿಧಿಯವರಿಗೊಂದು ಪತ್ರ ಬರೆದು, ಅದರಲ್ಲಿ ತಾನು ತಮಿಳುನಾಡಿನ ಜನತೆಯ ತೀವ್ರ ಕಳವಳವನ್ನು ಅರ್ಥ ಮಾಡಿಕೊಂಡಿರುವುದಾಗಿಯೂ ಸದ್ಯ ಕರ್ನಾಟಕದಲ್ಲಿ ಜನಪ್ರಿಯ ಸರಕಾರವೊಂದು ಅಸ್ತಿತ್ವದಲ್ಲಿಲ್ಲದಿರುವುದರಿಂದ ವಿವಾದ ಪರಿಹಾರದ ಬಗ್ಗೆ ಏನೂ ಮಾಡುವ ಹಾಗಿಲ್ಲವಾಗಿಯೂ ತಿಳಿಸಿ ತನ್ನ ಸದ್ಯದ ಅಸಹಾಯಕತೆಯನ್ನು ತೋಡಿಕೊಂಡಿದ್ದಾರೆ. ಇಲ್ಲಿ ಜನಪ್ರಿಯ ಸರಕಾರವು ಮುಂದಿನ ಫೆಬ್ರವರಿ–ಮಾರ್ಚಿವೇಳೆಗಷ್ಟೇ ಸ್ಥಾಪನೆಗೊಳ್ಳಬಹುದು. ಅಂದರೆ ವಿವಾದದ ತೀರ್ಮಾನವನ್ನು ಅಷ್ಟು ದೂರ ಮುಂದೆ ಹಾಕಿದರೆಂಬುದು ಸ್ಪಷ್ಟ. ಅದರ ಜತೆಯಲ್ಲೇ ನೀರಿನ ವಿವಾದದಲ್ಲಿ ಶ್ರೀಮತಿ ಗಾಂಧಿ ಕರ್ನಾಟಕಕ್ಕೆ ನ್ಯಾಯವೊದಗಿಸುತ್ತಾರೆಂದೂ ಇಲ್ಲವಾದರೆ, ಪಂಚಾಯತಿ ನೇಮಿಸಿಯೇ ಬಿಡುತಿದ್ದರೆಂದೂ ಹೇಳಿ ವಿಧಾನಸಭಾ ಚುನಾವಣೆಗಳನ್ನು ಎದುರಿಸಲು ಇಂಡಿಕೇಟಿಗರಿಗೊಂದು ಆಧಾರ ದೊರಿತಂತಾಯ್ತು. ಪ್ರಧಾನಿ ಗಾಂಧಿ ಹೊರಪಡಿಸಿದ ಅಭಿಪ್ರಾಯಗಳು ಹೊಸತಲ್ಲ; ಒಂದು ತಿಂಗಳಿಗೆ ಮೊದಲು ಯೋಜನಾ ಸಚಿವ ಸುಬ್ರಹ್ಮಣ್ಯಂ ಹೇಳಿದ್ದನ್ನೇ ಅವರೂ ಪತ್ರಮುಖೇನ ತಿಳಿಸಿದರು. ರಾಷ್ಟ್ರಪತಿ ಆಳಿಕೆಯ ವೇಳೆ ಕರ್ನಾಟಕವನ್ನು ಪಂಚಾಯತಿಗೆ ಸಿಕ್ಕಿಸಿ ಹಾಕುತ್ತಾರೆಂಬ ಹೆದರಿಕೆಯೊಂದು ದೂರವಾದುದನ್ನು ಬಿಟ್ಟರೆ ಸದ್ಯ ಮತ್ತಾವ ಸಮಾಧಾನವೂ ಕನ್ನಡಿಗರಿಗೆ ದೊರೆಯಲಿಲ್ಲ. ಇಷ್ಟಾದರೂ ಅದುದಕ್ಕೆ ರಾಜ್ಯಪಾಲ ಧರ್ಮವೀರರ ನಿಲುವು ಕಾರಣವಿರಬಹುದೆ? ಅಥವಾ ಇಂಡಿಕೇಟಿಗರ ಪ್ರಯತ್ನವಿರಬಹುದೆ? ಇಲ್ಲವೇ ಎರಡರಲ್ಲೂ ಅಲ್ಪಸ್ವಲ್ಪವಿರಬಹುದೆ? ಅದೇನಿದ್ದರೂ ವಿಧಾನಸಭೆಯ ಚುನಾವಣೆಗಳನ್ನು ಮುಂದಿಟ್ಟುಕೊಂಡು.ನೀರಿನ ವಿವಾದವನ್ನು ಕೆಣಕುವುದು ಸರಿಯಲ್ಲವೆಂಬ ಪ್ರಧಾನಿ ಗಾಂಧಿಯ ಚುನಾವಣಾ ನಿರ್ಧಾರ ಸಮರ್ಥನೀಯವಾದದ್ದು— ಇದು ಕನ್ನಡಿಗರೆಲ್ಲರಿಗೂ ಸಂತೋಷ ನೀಡಿದ ಆಚಾರ. ●●

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S 113/1971

ಶ್ರೀ ಗಜಾನನ ಕ್ಲೋತ್ ಸ್ಟೋರ್ಸಿನ ಹೋಲ್ ಸೇಲ್ ಡಿಪಾರ್ಟಮೆಂಟಿನ ಪಾಲುಗಾರ್‍ರು—
—ವಾದಿರು

ಮತ್ತು

B.R. ಶ್ಯಾಮ ಅೃತಾಳ-ಜವುಳಿ ವ್ಯಾಪಾರಸ್ತ, ಶಿವಮೊಗ್ಗ ಡಿಸ್ಟ್ರಿಕ್ಟ್, ತೀರ್ಥಳ್ಳಿ —ಪ್ರತಿವಾದಿ

ಸದರಿ ಪ್ರತಿವಾದಿಗೆ—

ಪ್ರತಿವಾದಿಯು ವಾದಿರ ಅಂಗಡಿಯಲ್ಲಿ ತಾ. 18—5—69ರಿಂದ 31—7—70ರವರೇಗೆ ನಡ್ಸಿದ ಲೇವಾದೇವಿ ಬಾಬ್ತು ಪ್ರತಿವಾದಿಯಿಂದ ವಾದಿರಿಗೆ ಬಹಾ ಅಸಲು ಬಡ್ಡಿ ಕೂಡಾ ರೂಪ್ಯಾ—1117—70ಕ್ಕೆ ವಾದಿರು ಪ್ರತಿವಾದಿಯ ಮೇಲೆ ಹೂಡಿದ ಸದರಿ ವ್ಯಾಜ್ಯವು ತಾರೀಕು 18—8—71ಕ್ಕೆ ಪ್ರಥಮ ತನಿಖೆಗೆ ಬಿಟ್ಟಿದೆ— ಆ ದಿವ್ಸ ಸದರಿ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಹರಿಸದೆಯಿದ್ರೆ ಪ್ರತಿವಾದಿಯ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು—ಸದರಿ ಪ್ರತಿವಾದಿಗೆ ಯಿ ಮೂಲಕ ತಿಳಿಯ ಪಡಿಸೋಣಾಗಿಯದೆ—

H. Ramanath Pai
Advocate for Plffs.

ತಾರೀಕು, 24—7—1971

ಸಮಾಜವಾದಿ ಪ್ರಾಮಾಣಿಕತನ

ಪ್ರಾಮಾಣಿಕತನ....ಬಡಬಗ್ಗರನ್ನು, ನಿರ್ಬಲರನ್ನು, ಅಬಲೆಯರನ್ನು ಶೋಷಿಸಲಿಕ್ಕಾಗಿಯೇ, ತಮ್ಮ ಕಪಿಮುಷ್ಟಿಯೊಳಗಿಟ್ಟುಕೊಳ್ಳಲಿಕ್ಕಾಗಿಯೇ, ವಂಚಿಸಲಿಕ್ಕಾಗಿಯೇ ಗಂಡಸರು ಅದರಲ್ಲೂ ಸಿರಿವಂತರು ಮತ್ತು ಧರ್ಮಲಂಡರು ಶಬ್ದಕೋಶದಲ್ಲಿ ಸೇರಿಸಿರುವ ತಮ್ಮದೇ ಆದ ಒಂದು ಶಬ್ದವೆಂದು ಪ್ರಗತಿ ಶೀಲರು, ನವ್ಯ-ಸಮಾಜವಾದಿಗಳು, ಸಂಪ್ರದಾಯ-ವಿರೋಧಿಗಳು ಪ್ರಚಾರ ಮಾಡುತ್ತಿದ್ದಾರೆ ಅವರ ಪಾಲಿಗೆ ಶಾಸ್ತ್ರ ಬೇರೆಯವರಿಗೆ ಹೇಳಲಿಕ್ಕೆಂದೇ ಇದೆಯಲ್ಲದೆ ನಡೆದುಕೊಳ್ಳಲಿಕ್ಕಾಗಿ ಇರುವದಿಲ್ಲ. ಐಶ್ವರ್ಯವಂತರೂ ಧಾರ್ಮಿಕ-ಗುತ್ತಿಗೆದಾರರೂ—ಎಲ್ಲರಲ್ಲವಾದರೂ ಕೆಲವರು-ಈ ರೀತಿ ನಡೆದುಕೊಂಡು ಬಂದಿರುವದರಿಂದ ಪ್ರಗತಿಶೀಲ ಸಂಪ್ರದಾಯ ವಿರೋಧಿಗಳು ಪ್ರಾಮಾಣಿಕತನದ ಮೇಲೆ ಬಂಡೇಳಲು ಕಾರಣವಾಗಿರುತ್ತದೆ. ಹಾಗಾದರೆ ಇತರರೆಲ್ಲರೂ ಪ್ರಾಮಾಣಿಕರೇನೂ? ಅದನ್ನಾರು ಕೇಳಬಾರದು? ಇತರರಿಗೆ ಹೇಳಬೇಕೇ ವಿನಾ, ತಮಗೆ ತಾವೇ ಕೇಳಿಕೊಳ್ಳಲೂಬಾರದು! ಅಲ್ಲದೆ, ಮುಂದಾಳುಗಳು ಹೋದಂತೆ ತಾನೇ ಹಿಂದಾಳುಗಳು ಅನುಸರಿಸುತ್ತಿರುವನು! ಹಾಗಿರುವದರಿಂದ ಇಂದಿನ ಮುಂದಾಳುಗಳಲ್ಲೊಬ್ಬರು—ರಾಜ್ಯ ಸಭಾ ಸದಸ್ಯರೊಬ್ಬರು—ನವ್ಯ ಮುಂದಾಳುಗಳು ಅಂದರೆ ಸಂಸತ್ ಸದಸ್ಯರು ಪ್ರಾಮಾಣಿಕ ರಾಜನೀತಿ ನಿಪುಣರಾಗಲು ಸಾಧ್ಯವಾಗಿಲ್ಲವಾದರೂ ಪ್ರಾಮಾಣಿಕ ರಾಜಕಾರಣಿಗಳಾಗಲು ಪ್ರಯತ್ನಿಸಬೇಕೆಂದು ತಮ್ಮ ಅಭಿಪ್ರಾಯವನ್ನು ರಾಜ್ಯ ಸಭೆಯಲ್ಲೇ ವ್ಯಕ್ತಪಡಿಸಿದ್ದಾರೆ.

ಬಡವರಿಗೆ ಹಾಗೂ ಅಲ್ಪಸಂಖ್ಯಾಕರಿಗೆ ಇಲ್ಲೇ ಸ್ವರ್ಗ ತಯಾರಿಸುವದಾಗಿಯೂ ಇಂದಿರಾ ದೇವಿಯವರು ಪ್ರಚಾರ ನಡೆಸಿದಾಗ ಭಲೇ! ಭಲೇ! ಶಬ್ದ ಕೇಳ ಬಂತು. ಸಿರಿವಂತರಿಗೆ ಹಾಗೂ ಇತರ ಶೋಷಕ ವರ್ಗಕ್ಕೆ ಇಲ್ಲಿ ನರಕ ನಿರ್ಮಾಣವಾಗುತ್ತದೆಯೆಂದು ಅವರು ಅಭಿಪ್ರಾಯಪಟ್ಟುಕೊಂಡರು. ಇವರೆಲ್ಲರ ಮೇಲೆ—ಮೇಲೆ ಏರಿ ಇಂದಿರಜ್ಜಿಯವರು ಛವಾನರ ಮೂಲಕ 'ಬಡ ಬಜೆಟ'ನ್ನು ಜನತೆಯ ಮುಂದಕ್ಕಿಟ್ಟರು. ಸ್ವರ್ಗಕ್ಕಿನ್ನು ಮೂರೇ ಗೇಣೆಂದು ಕೊಂಡವರು ಹಣೆ ಮುಟ್ಟಿಕೊಂಡು ನೋಡಿದರು, ಕನ್ನಡಿಯಲ್ಲಿ ನೋಡಿದರು. ಅವರಿಗೆ ಕಂಡು ಬಂದದ್ದು ಮೂರು ನಾಮ. ತಮಗೆ ನರಕ ಕಾಣಿಸಲು ಇವರಪ್ಪನಿಂದಲೇ ಸಾಧ್ಯವಾಗಿಲ್ಲವೆಂದ ಮೇಲೆ ಇವರಿಂದ ಸಾಧ್ಯವೇನೆಂದು ಬಂಡವಾಳಶಾಹಿಗಳು ನಗುತ್ತಿದ್ದರು. 'ಅಲ್ಪ ಸಂಖ್ಯಾಕ'ರಿಗೆ ಇದು ತಮ್ಮ ಮತಕ್ಕೆ ವಿರುದ್ಧವಾದ ವಿಷಯಗಳಾಗಿದ್ದುವು ಮನುಷ್ಯರು ಸತ್ತ ಮೇಲೆ ಅವರವರ ಪಾಪ—ಪುಣ್ಯಕ್ಕನುಸಾರವಾಗಿ ನರಕ–ಸ್ವರ್ಗಗಳಿಗೆ ಹೋಗುತ್ತಾರೆಂದು ಹಿಂದೂಗಳು ಹೇಳುತ್ತಾರೆ, ಅಷ್ಟೇ. ಕ್ರಿಸ್ತೀಯರೂ ಮುಸ್ಲಿಮರೂ ಮುಖ್ಯವಾಗಿ ಅದನ್ನು ನಂಬುವದಿಲ್ಲ. ಸತ್ತ ಮೇಲೆ ಹೂಳಲ್ಪಟ್ಟಲ್ಲಿಯೇ ಅವರಿರುತ್ತಾರೆ. ತೀರ್ಪಿನ ದಿವಸ ಅವರೆದ್ದುಕೊಂಡು ಬರುತ್ತಾರೆ.... ಹೀಗೆ ಸತ್ತೊಡನೆ ಅವರು ನರಕಕ್ಕಾಗಲೀ, ಸ್ವರ್ಗಕ್ಕಾಗಲೀ ಹೋಗದೆ ಇಲ್ಲೇ ವಿಶ್ರಾಂತಿ ಪಡೆದುಕೊಳ್ಳುತ್ತಾರೆ ಅವರಿಗೆ ಇಂದಿರಾಜಿಯವರು ಸ್ವರ್ಗ ಕೊಡುತ್ತೇನೆ, ನರಕ ಕಾಣಿಸುತ್ತೇನೆಂದರೆ ಅವರು ಸಮ್ಮತಿಸಿಯಾರೇ? ಅವರಿಗೆ ಇಂದಿರಾ ದೇವಿಯವರ ಸ್ವರ್ಗ–ನರಕ ಬೇಕೋ ಬೇಡವೋ, ಅಧಿಕಾರವಂತೂ ಬೇಕೇ ಬೇಕು. ಅದನ್ನು ಅವರು ಸ್ಪಷ್ಟ ಪಡಿಸಿದ್ದಾರೆ. ಸ್ವರ್ಗ ನರಕಗಳಲ್ಲಿ ನಂಬಿಕೆ ಇಲ್ಲವೆಂದು ಬಂಬಡೆಬಾರಿಸಿಕೊಂಡಿರುವ ಕಮ್ಯುನಿಸ್ಟರೂ ದ್ರಾವಿಡ ಮುನ್ನೇಟ್ರ ಕಳ್ಗಮಿನವರೂ ಇಂದಿರಾಜೀಯವರ ಸ್ವರ್ಗ–ನರಕಗಳಲ್ಲಿ ಸಿಕ್ಕಿಹಾಕಿಕೊಂಡರು. ಹೀಗೆ ಹಿಂದೂಗಳನ್ನುವ ಸ್ವಗ-ನರಕಗಳಿಲ್ಲ, ಸ್ವರ್ಗ–ನರಕಗಳಲ್ಲಿ ನಂಬಿಕೆ ಇಲ್ಲವೆನ್ನುವವರೆಲ್ಲರ ಸಹಾಯದಿಂದ, ಪ್ರೋತ್ಸಾಹದಿಂದ ಇಂದಿರಾಜೀಯವರಂತೂ ಸಿಂಹಾಸನವನ್ನೇರಿದರು. ಪಟ್ಟವನ್ನೇರಿದ ಇಂದಿರಾಜೀಯವರು ಅತ್ತಿತ್ತ ನೋಡಿದರು. ಎಲ್ಲರಿಗೂ ಸರಿಸಮವಾಗಬೇಕು. ಸ್ವರ್ಗ–ನರಕಗಳಲ್ಲಿ ನಂಬಿಕೆ ಇರುವವರಿಗೂ ಇಲ್ಲದವರಿಗೂ ಸಮಾನ ತಂಗುದಾಣ ಒಂದಿರಬೇಕಲ್ಲವೇ? ಹಾಗಿರುವಾಗ, ಇವರೆಲ್ಲರಿಗೆ ಎಲ್ಲೋ ಇದೆಯೆನ್ನಲಾಗುತ್ತಿರುವ, ಮತೀಯ ನಂಬಿಕೆಗೆ ವಿರುದ್ಧವಾಗಿರುವ, ಬಂಡವಾಳಶಾಹಿಗಳ, ಧಾರ್ಮಿಕ ಗುತ್ತಿಗೆದಾರರ ಸ್ವರ್ಗದ ಸೊಲ್ಲೇತಕ್ಕೆ? ಉಳಿದದ್ದು ಎಲ್ಲರ ಪಾಲಿಗೂ ನರಕ! ಇಂದಿರಜ್ಜಿಯವರು ಬಹಳ ಚಾಣಾಕ್ಷತನದಿಂದ ವರ್ತಿಸಿ ಬಹಳ ಅತ್ಯಂತ ಶೀಘ್ರ ತಾನು ಹೇಳಿದುದನ್ನು ಜನರಿಗೆ ತೋರಿಸಿಯೇ ಬಿಟ್ಟರು. ಅವರೇ ಯಥಾರ್ಥವಾದಿ, ಅವರ ನರಕವನ್ನು ನೋಡಿದ ಮೇಲೆ ದ್ರಾ.ಮು.ಕ.ದ ಅಪ್ಪನ್‌ರವರಿಗೆ ಪ್ರಾಮಾಣಿಕತನದ ಜ್ಞಾಪಕ ಬಂದಿದೆ ಅವರ ಅಭಿಪ್ರಾಯದಲ್ಲಿ ಇಂದಿರಾದೇವಿಯವರು ಪ್ರಾಮಾಣಿಕತನದಿಂದ ವರ್ತಿಸಿಲ್ಲವೆಂದಾಯಿತು. ಇಷ್ಟು ಪ್ರಾಮಾಣಿಕತನದಿಂದ ವರ್ತಿಸಿ, ತಾನೆಂದುದನ್ನು ಕಾರ್ಯದಲ್ಲಿ ಕಾಣಿಸಿದ ಇಂದಿರಾದೇವಿಯವರು ಪ್ರಾಮಾಣಿಕರೋ, ಅವರ ಹಿಂದುಗಡೆ ಜಯಕಾರ ಹಾಕುತ್ತಿದ್ದು ಇದೀಗ ಪ್ರಾಮಾಣಿಕತನದಿಂದ ವರ್ತಿಸಿರೆಂದು ಆಜ್ಞಾಪಿಸುತ್ತಿರುವ ಅಪ್ಪನ್‌ರವರು ಪ್ರಾಮಾಣಿಕರೋ? ಅವರ ಪ್ರಾಮಾಣಿಕತನದ ಅರ್ಥವಾದರೂ ಅದೇನು?

ಸಮಾಜವಾದಿಯೆಂದು ವಾದಿಸುತ್ತಿರುವ ಇಂದಿರಜ್ಜಿಯವರು ಬಡವರ ಬಜೆಟ್ಟು—ಅಷ್ಟು ಉದ್ದ ಯಾಕೆ? ಅದಕ್ಕಿಂತಲೂ—ಬಡಬಜೆಟ್ಟನ್ನು ಬಡವರಮಾತ್ರವಲ್ಲ ಬಂಡವಾಳಶಾಹಿಗಳ ಮುಂದೂ ಮಂಡಿಸುವ ಅವಕಾಶವನ್ನು ಛವಾನರಿಗೆ ಒದಗಿಸಿಕೊಟ್ಟರು. ಟೀಕೆಗಳ ಸುರಿಮಳೆಗೆ, ಪ್ರಶಂಸೆಯ ಪಾರಿವಾಳದ ಹಾರಾಟಕ್ಕೆ ಆರಂಭವಾಯಿತು. ಚುನಾವಣೆಯ ಸಮಯ ಇಂದಿರಾಜೀಯವರನ್ನೆದುರಿಸಿದ್ದವರು ಬಜೆಟ್ಟನ್ನು ಕಂಡು ಬೆಂಕಿಕಾರುವದರಲ್ಲೇನೂ ಆಶ್ಚರ್ಯವಿಲ್ಲ. ಅಂದು ಅವರೊಡನಿದ್ದು ಇಂದು ನಡು ನೀರಿನಲ್ಲಿ ಕೈಬಿಡುತ್ತಿರುವವರ ಮಾತಿನತ್ತ ಗಮನ ಹರಿಸಲೇ ಬೇಕಾಗುತ್ತದೆ. ಇಂದಿರಾಜೀಯವರೊಂದಿಗೆ ಇನಿತಾಗಿ ಒಂದಾಗಿ ಮತದಾರರನ್ನೆದುರಿಸಿದವರು ದ್ರಾ. ಮು.ಕ.ದವರು. ಅವರ ರಾಜ್ಯಸಭಾ ಸದಸ್ಯ ಅಪ್ಪನ್‌ರವರು ರಾಜ್ಯಸಭೆಯಲ್ಲಿ ಮಾತಾಡುತ್ತ ಪ್ರಧಾನಿಯವರ ಅಥವಾ ಅರ್ಥ ಅಮಾತ್ಯರ ಅನುಗ್ರಹವನ್ನು ಗಿಟ್ಟಿಸಿಕೊಳ್ಳಲು ಪರಿತಪಿಸುತ್ತಿರುವವರಿಗೆ ಬಜೆಟ್ಟಿನಿಂದ ಸಂತೋಷ ಆಗಿದೆಯೆಂದು ಅಪ್ಪಟವಾಗಿ ಅಂದು ಬಿಟ್ಟರು. ಅತ್ತ ಲೋಕಸಭೆಯಲ್ಲಿ, ಇಂದಿರಾ ಕಾಂಗ್ರೆಸ್ಸಿನ ಶಿವಪೂಜನ ಶಾಸ್ತ್ರಿಯವರು ಮಾತಾಡುತ್ತ ಬಜೆಟ್ಟನ್ನು ವಿರೋಧಿಸುತ್ತಿರುವವರು 'ನಮ್ಮ ಧೋರಣೆಗಳನ್ನೆದುರಿಸಿದವರು; ಅವರೇ ಕಮ್ಯೂನಿಸ್ಟರು ಮತ್ತು ಬಂಡವಾಳಶಾಹಿಗಳೆಂದು ಇಂದಿರಾ ಪೂಜೆಯ ಶಾಸ್ತ್ರವನ್ನು ಮುಗಿಸಿದರು ದ್ರಾ.ಮು.ಕ.ದವರು ಇಂದಿರಾಜೀಯವರ ಚುನಾವಣಾ ಪಾಲುದಾರರು ಅವರು ಅಂದು ಇಂದಿರಾಜೀಯವರನ್ನು ಎದುರಿಸಿದವರಲ್ಲ ಅಲ್ಲಿಗೆ ಅವರು ಕಮ್ಯೂನಿಸ್ಟರೂ ಅಲ್ಲ. ಹಾಗಾದರೆ, ಚುನಾವಣೆಯ ನಂತರ, ಇಂದಿರಾಜೀಯವರ ಕೃಪಾಕಟಾಕ್ಷದಿಂದಾಗಿ ಬಂಡವಾಳಶಾಹಿಗಳಾಗಿಬಿಟ್ಟರೇನು? ಶಿವಪೂಜನ ಶಾಸ್ತ್ರಿಯವರು ಇಂದಿರಾಜೀಯವರ ಚುನಾವಣಾಪೂಜೆಯನಡುವೆ ಕರಡಿಯಾಗಿ ಬರುತ್ತಿದ್ದಾರೆಯೇನೆಂದು ಕಾಂಗ್ರೆಸ್ಸಿಗರು ಕಣ್ಣುಬಿಟ್ಟಲ್ಲಿ ಆಶ್ಚರ್ಯವಿಲ್ಲ. ಅಲ್ಲದೆ ಕಮ್ಯೂನಿಸ್ಟರು ಕೂಡಾ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸಿಗರೊಡನೆ ಕೈಸೇರಿಸಿ ಕೊಂಡವರೇ ಇದ್ದಾರೆ ಅಷ್ಟು ಮಾತ್ರವಲ್ಲ, ಇಂದಿರಾಜೀಯವರೇ ಕಮ್ಯೂನಿಸ್ಟರ ಗುರಿಗೂ ತಮ್ಮ ಗುರಿಗೂ ವ್ಯತ್ಯಾಸವೇನೂ ಇಲ್ಲ, ಹೋಗುತ್ತಿರುವ ಹಾದಿ ಭಿನ್ನವಿರಬಹುದೆಂದು ಹೇಳಿರುವಾಗ ಈ ಶಾಸ್ತ್ರಿಯವರು ಅದ್ಯಾವ ಇಂದಿರಾಶಾಸ್ತ್ರದ ಮೇಲೆ ಅಷ್ಟು ಧೈರ್ಯದಿಂದ ಬಜೆಟ್ಟನ್ನು ಎದುರಿಸುತ್ತಿರುವವರು ಕಮ್ಯೂನಿಸ್ಟರೆಂದು ಹೇಳುತ್ತಿದ್ದಾರೆ! ಹಲವಾರು ಕಮ್ಯೂನಿಸ್ಟರು ಇಂದಿರಾಕಾಂಗ್ರೆಸ್ಸಿನೊಳಗೆ ಸೇರಿಕೊಂಡು ಅದಾಗಲೇ ಸಚಿವಾಲಯದ ಅಂತಃಪುರದಲ್ಲಿ ಆಸೀನರಾಗಿದ್ದಾರೆ. ಇವೆಲ್ಲರೂ ಎದುರಿಸುತ್ತಿರುವ ಬಜೆಟ್ಟು ಬಡವರ ಬಜೆಟ್ಟೇ ಅಲ್ಲ, ಬಂಬಡ ಬಜೆಟ್ಟೆಂದು ಶಿವಪೂಜನ ಶಾಸ್ತ್ರಿಯವರು ಶಾಸ್ತ್ರೀಯ ರೀತಿಯಲ್ಲಿ ಹೇಳುತ್ತಿರುವರೇ? ಅಪ್ಪನ್‌ರವರಂದಿರುವ ಇಂದಿರಾದೇವಿಯವರ ಕೃಪಾಕಟಾಕ್ಷಕ್ಕೊಳಗಾಗಲು ಅವಸರಪಡುತ್ತಿರುವವರ ಚಪಲ ಅಷ್ಟಕ್ಕೇನೇ ಚುಪ್ ಆಗದೆ ಪೂಜನ ಮುಂದರಿದಿದೆ. ಅದೇ ಕಾಂಗ್ರೆಸ್ಸಿನ ಚಪಲೇಂದು ಭಟ್ಟಾಚಾರ್ಯರ ಚಪಲದ ಕುರಿತು ತಿಳಿಸಲೇ ಬೇಕು ಅವರ ಮಾತಿನ ಭಟ್ಟಿಯಲ್ಲಿ ಸಮಾಜವಾದಿ [ಸೋಷಿಯಾಲಿಸಂ] ಸಮರಕ್ಕೆ ಅದಾಗಲೇ ಅರ್ಥ–ಜಯ ಸಿಕ್ಕಿರುತ್ತದೆಂಬುದಕ್ಕೆ ಅರ್ಥ–ಸಂಕಲ್ಪದ ಸಲಹೆಗಳೇ ಸಾಕ್ಷಿಯೆಂದು ಸ್ಪಷ್ಟಪಡಿಸಿದ್ದಾರೆ. ಅಪ್ಪನ್‌ರವರ ಅಪ್ಪಟ ಮಾತಿಗೆ ಭಟ್ಟಾಚಾರ್ಯರೊಂದು ಸಾಕ್ಷಿಯಾಗುವ ಚಪಲ ತೋರಿಸಿಕೊಂಡಲ್ಲಿ ಯಾರಿಂದೇನು ಮಾಡಲು ಸಾಧ್ಯ? ಭಟ್ಟಾಚಾರ್ಯರು ತಮ್ಮ ಬಾಯಿಚಪಲವನ್ನಷ್ಟೇ ತೀರಿಸಿಕೊಂಡಿರುವದಿಲ್ಲ. ಅವರಂದು ಇಂದಿರಾ ದೇವಿಯವರ ಪೂಜೆಮಾಡಿರುವ ಭಟ್ಟಾಚಾರ್ಯರು ಮಾತ್ರವಲ್ಲ ಇಂದಿರಜ್ಜಿಯವರ ಅರ್ಥಸಾಕ್ಷಿಯಾಗಿದ್ದಾರೆ. ಇನ್ನರ್ಥ? ಇಂದಿರಾ ಪೂಜನದಲ್ಲಿ ಕೆಲವರು ಚಪಲ ತೀರಿಸಿಕೊಳ್ಳುತ್ತಿರುವಾಗ ಅದೇ ಪಕ್ಷದ ಮಹಾಪಾತ್ರರು ಅದರಲ್ಲಿ ಭಾಗವಹಿಸದೆ ಸಮಾಜವಾದಿ ಬಜೆಟ್ಟು (ಅರ್ಥ-ಸಂಕಲ್ಪ) ಪ್ರಜಾಪ್ರಭುತ್ವ ಆಡಳಿತದಲ್ಲಿ ಬರಲು ಸಾಧ್ಯವಿಲ್ಲವೆಂದು ಹೇಳಿರುವರು. ಇಂದಿರಾಜಿಯವರ ಅರ್ಥ–ಸಂಕಲ್ಪವನ್ನು ಇವರು ಅರ್ಥ ಮಾಡಿಕೊಂಡಿಲ್ಲವೇನು? ಅರ್ಥ ಮಾಡಿಕೊಳ್ಳುವದಿಲ್ಲವೆನ್ನುವ ಸಂಕಲ್ಪಕ್ಕೆ ಗಂಟುಬಿದ್ದಿದ್ದಾರೇನು? ಅಪ್ಪನ್‌ರವರು ಅಂದಿರುವ, ಕಂಡುಕೊಂಡಿರುವ ಕೃಪಾಕಟಾಕ್ಷಕ್ಕೆ ಇವರು ಪಾತ್ರರಾಗಿಲ್ಲವೇನು?

ರಾಜ್ಯಸಭೆಯಲ್ಲಿ ಮಹಿತೋಷಪುರ ಕಾಯಸ್ಥರೂ ಚೆಂಗಲ್ವರಾಯನ್‌ರವರೂ

(ಏಳನೇ ಪುಟ ನೋಡಿರಿ)

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27.

Phone No.— 1 72303
2 72304
Grams: HOST SATKAR

Vegetarian Cuisine

Attached Bath Rooms and Phones.
Running H and C water.

Moderate Charges

Railway Station, Laundry. Post office and Entertainment Area Nearby.

Large airy Rooms; Roof garden
Quiet Calm Atmosphere
Personalised Service.

ಪಾಕ್ ನರಮೇಧಕ್ಕೆ

ಅಪ್ಪಟ ಅಮೆರಿಕನ್ ತುಪ್ಪ

ಕಾವೇರಿಯಲ್ಲಿ ನೀರು ಪ್ರಶಾಂತವಾಗಿ ಹರಿಯುತಿತ್ತು. ಅದನ್ನು ಕೆದಕತೊಡಗಿದವರು ತಮಿಳು ನಾಡಿನ ಮುಖ್ಯ ಮಂತ್ರಿ ಕರುಣಾನಿಧಿಯವರು. ಕಾವೇರಿಯ ನೀರೆಲ್ಲವೂ ತನ್ನದೇ ಎಂಬಂತೆ ಅವರು ಈಗೀಗ ಮಾತಾಡುತ್ತಾರೆ; ತನ್ನ ಮಾತಿಗೆ ತಕ್ಕ ಹೊಸ ನ್ಯಾಯವನ್ನೂ ಉಗ್ಗಡಿಸುತ್ತಾರೆ. ಗಂಡು ಹುಡುಗ ಮದುವೆಯಾದ ಬಳಿಕ ತಾಯ್ತಂದೆಗಳನ್ನು ಮರೆತು ಹೆಂಡತಿಯ ದಾಸನಾಗುತ್ತಾನೆ. ಗಂಡನ ಮನೆ ಸೇರಿದ ಹೆಣ್ಣು ಮಗಳೂ ತವರನ್ನು ಬಹುಬೇಗನೆ ಮರೆತು ಬಿಡುತ್ತಾಳೆ. ಕಾವೇರಿಯು ಕರ್ನಾಟಕದಲ್ಲಿ ಹುಟ್ಟಿ ತಮಿಳುನಾಡಿನಲ್ಲಿ ಹರಿದು ಹೋಗುವುದರಿಂದ ಆಕೆಯ ನೀರೆಲ್ಲ ತನ್ನದೇ ಎಂದು ತಮಿಳು ನಾಡಿನ ವಿಚಿತ್ರ ನ್ಯಾಯ.

ನೀರಿನೆಲ್ಲ ಹಕ್ಕು ನದೀಪಾತ್ರದ ಕೆಳಗಿನವರಿಗೆಂಬ ಕರುಣಾನಿಧಿ ಸೂತ್ರ ದೊಣ್ಣೆ ಹಿಡಿದವನದ್ದೇ ಎಮ್ಮೆಯೆಂಬುದನ್ನು ನೆನಪಿಗೆ ತರುತ್ತದೆ. ಕೇಂದ್ರ ಸರಕಾರದ ಮೇಲೆ ತಮಿಳುನಾಡಿನ ಒತ್ತಾಯ ದಿನ ದಿನಕ್ಕೆ ಹೆಚ್ಚುತ್ತಿರುವುದರಿಂದ, ಕನ್ನಡಿಗರಿಗೆ ತೀವ್ರ ಕಳವಳವಾಗಿದೆ. ರಾಜ್ಯದಲ್ಲೀಗ ಜನಪ್ರಿಯ ಸರಕಾರವಿಲ್ಲದಿರುವುದರಿಂದ ಹಿಂದಿನ ಸರಕಾರದ ನೀತಿಯನ್ನು ಮುಂದುವರಿಸಿಕೊಂಡು ಹೋಗುವುದಲ್ಲದೆ ರಾಜ್ಯಪಾಲರಿಗೆ ಅನ್ಯದಾರಿಯಿಲ್ಲ. ಈ ನೀತಿಯಲ್ಲೇನಾದರೂ ಬದಲಾವಣೆಯಾಗ ಬೇಕಾದರೆ, ಚುನಾವಣೆಗಳು ನಡೆದು ಇಲ್ಲಿ ಸರಕಾರ ರಚಿತವಾಗಬೇಕು. ಈ ಮಧ್ಯಾವಧಿಯಲ್ಲಿ ಯಥಾಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗ ಬೇಕೆಂದು ರಾಜ್ಯಪಾಲ ಧರ್ಮವೀರರ ಅಪೇಕ್ಷೆ. ತಮಿಳುನಾಡಿನ ಇಂಡಿಕೇಟ್ ನಾಯಕ ಶ್ರೀ ಸಿ. ಸುಬ್ರಹ್ಮಣ್ಯಂ ಕೂಡ ಇದನ್ನು ಬೆಂಬಲಿಸುತ್ತಾರೆ.

ಆದರೆ, ಶ್ರೀ ಕರುಣಾನಿಧಿಯವರು ಪಂಚಾಯತಿ ನೇಮಕಕ್ಕೆ ಪಟ್ಟುಹಿಡಿದಿದ್ದಾರೆ. ಕೇರಳ ಸರಕಾರವೂ ಪಂಚಾಯತಿಯನ್ನು ವಿರೋಧಿಸುವುದಿಲ್ಲ. ಪಂಚಾಯತಿಯ ತೀರ್ಮಾನವು ಅಂತಿಮವಾದದ್ದು—ಅದನ್ನು ಸರ್ವ ಪಕ್ಷೀಯರೂ ಒಪ್ಪಿಕೊಳ್ಳಲೇ ಬೇಕು. ಅದರ ನಿರ್ಣಯವನ್ನು ಪ್ರತಿಭಟಿಸಿ ನ್ಯಾಯಾಲಯಕ್ಕೆ ಹೋಗುವಂತಿಲ್ಲ. ಅದೇನಿದ್ದರೂ ಸರ್ವಪಕ್ಷಗಳಿಗೂ ನ್ಯಾಯವಾದ ತೀರ್ಪನ್ನು ಮಾಡುವುದು ಯಾವ ಪಂಚಾಯತಿಗೂ ಸಾಧ್ಯವಿಲ್ಲ; ಆದರೆ ಸರ್ವಸಮ್ಮತವಾದ ನಿರ್ಣಯಕ್ಕೆ ಬರಬಹುದಷ್ಟೆ. ಇಂತಹ ನಿರ್ಧಾರಕ್ಕೆ ಪಂಚಾಯತಿಯ ಅಗತ್ಯವೇ ಇಲ್ಲ. ತಮ್ಮ ಬಕಾಸುರೇಚ್ಛೆಯನ್ನು ತಮಿಳುನಾಡು ಅದುಮಿ, ವಾಸ್ತವಿಕತೆಯನ್ನು ಮನವರಿಕೆ ಮಾಡಿಕೊಂಡರೆ, ಉಭಯ ಗೌರವಪ್ರದ ಇತ್ಯರ್ಥ ಸಾಧ್ಯವಾಗುತ್ತದೆ. ಕೇಂದ್ರ ನೀರಾವರಿ ಸಚಿವ ಡಾ| ಕೆ. ಎಲ್. ರಾಯರು ಕರ್ನಾಟಕವನ್ನು ಬೆದರಿಸುವುದನ್ನು ಬಿಟ್ಟುಕೊಟ್ಟು ತಮಿಳು ನಾಡಿನ ಕಿವಿಹಿಂಡಲು ಮುಂದುಬರಬೇಕು. ಕಾವೇರಿಯ ಪ್ರಶ್ನೆ ತಾಂತ್ರಿಕತೆಯಿಂದ ಕೂಡಿದ್ದು; ಆದರೆ, ಆ ಘಟ್ಟವನ್ನು ಮೀರಿ ಹೋದದ್ದು. ಆದ್ದರಿಂದ ತಾಂತ್ರಿಕರ ಸಲಹೆಗಳಿಂದ ನಿರ್ಧಾರ ಕೈಕೊಳ್ಳುವುದು ರಾಜ್ಯಕಾರಣಿಗಳಿಗೆ ಬಿಟ್ಟದ್ದು. ಪಂಚಾಯತಿಯ ನಿರ್ಣಯ ಸಮಸ್ಯೆಯನ್ನು ಪರಿಹರಿಸುವ ಬದಲು ಪರಿಸ್ಥಿತಿಯನ್ನು ಮತ್ತಷ್ಟು ವಿಕೋಪಕ್ಕೆ ಒಯ್ಯಬಹುದು. ರಾಜ್ಯ—ರಾಜ್ಯ ಸಂಬಂಧ ಬಿಗಡಾಯಿಸಬಹುದು.

○ ○ ○

ಪಾಕಿಸ್ತಾನಕ್ಕೆ ಅಮೆರಿಕೆಯು ಶಸ್ತ್ರಾಸ್ತ್ರ ಸರಬರಾಜು ಮಾಡುವುದನ್ನು ಭಾರತೀಯರು, ಅವರ ಸಂಸತ್ತು ವಿರೋಧಿಸದೆ ಇದ್ದರೆ ಮತ್ತಾರು ಆ ಕೆಲಸ ಮಾಡಬೇಕು? ಹಡಗು ತುಂಬಿಕೊಳ್ಳುತ್ತಿದೆಯೆಂದು ವರದಿ ಬಂದಂದಿನಿಂದ ಪ್ರಾಯಃ ಶಸ್ತ್ರಾಸ್ತ್ರಗಳು ಪಾಕ್ ನೆಲದಲ್ಲಿ ಇಳಿದ ನಂತರವೂ ಪ್ರತಿಭಟನಾ ಪತ್ರ ಕಳಿಸುತ್ತಿರುವ ನಮ್ಮ ವಿದೇಶ ನೀತಿಯೇನೆಂಬುದೇ ನಮಗೆ ಗೊತ್ತಿಲ್ಲ. ಐಸನ್‌ಹಾವರರ ಕಾಲದಿಂದಲೂ ಒಂದಲ್ಲ ಒಂದು ನೆಪವೊಡ್ಡಿ ಅಮೆರಿಕೆ ಪಾಕಿಗೆ ಸೈನಿಕ ನೆರವು ನೀಡುತ್ತಲೇ ಬಂದಿದೆ. ಜತೆಗೆ ನಮಗೆ ಭರವಸೆ ಕೊಡುತ್ತಲೇ ಇದೆ. ಆದರೆ, ತಾನಿತ್ತ ಭರವಸೆಯನ್ನು ಈಡೇರಿಸುವುದು ಅಮೆರಿಕೆಯಿಂದ ಸಾಧ್ಯವಾಗಿಲ್ಲ; ಆಗಬೇಕೆಂದೂ ಅಲ್ಲಿನ ಸರಕಾರಕ್ಕಿಲ್ಲ.

ನಮ್ಮ ವಿದೇಶ ಸಚಿವರ ವಾಶಿಂಗ್‌ಟನ್ ಭೆಟ್ಟಿ, ಘಟ್ಟಿಯಾದ ಪ್ರತಿಭಟನೆ, ಸಂಸತ್ ಸದಸ್ಯರ ಆಕ್ರೋಶ—ಇಂಡಿಕೇಟಿಗರ ಕೈ ಕೈ ಹಿಸುಕಿಕೊಳ್ಳಾಟ—ಇವೆಲ್ಲವೂ ನೀರ ಮೇಲಣ ಹೋಮವೆನಿಸಿದುವು. ಹರಿಯುವ ನೀರಿಗೆ ದೊಣ್ಣೇರಾಯನ ಅನುಮತಿ ಯಾರು ಕೇಳುತ್ತಾರೆ? ಕೊಡುವವರು ನಿಕ್ಸನ್; ಕೊಳ್ಳುವವರು ಯಾಹ್ಯಾಖಾನ್. ಇಂದಿರಮ್ಮನಿಗೆ ಈ ಕೊಡುಕೊಳ್ಳಾಟದಲ್ಲೇನು ಕೆಲಸ? ಆದುದರಿಂದಲೇ ಆಕೆಯ ವಿದೇಶ ಸಚಿವ ಸರ್ದಾರ ಸ್ವರ್ಣ ಸಿಂಗರು ಅಮೆರಿಕಕ್ಕೆ ಗಂಭೀರ ಎಚ್ಚರಿಕೆ ನೀಡಿದರು—ಅದು ಗಾಳಿಯಲ್ಲಿ ಬಿಟ್ಟ ಹುಸಿಗುಂಡಾಯ್ತು. ಅವರು ಮತ್ತೂ ಮುಂದುವರಿದು ಬಂಗ್ಲಾ ದೇಶದಲ್ಲಿ ಯಾಹ್ಯಾಖಾನರು ತೊಡಗಿದ ನರಮೇಧಕ್ಕೆ ನಿಕ್ಸನ್ ತುಪ್ಪ ಸುರಿಯುತಿದ್ದಾರೆಂದು ನೇರವಾಗಿ ಆಪಾದಿಸಿದರು. ನಮ್ಮ ಮಂತ್ರಿಗಳು ಹೇರಿದ ಆಪಾದನೆಯಿಂದ ನಿಕ್ಸನ್ ನೀತಿ ಬದಲಾಗುವುದೆಂಬುದು ಹುಚ್ಚು; ಆದರೂ ಪ್ರಬಲ ರಾಷ್ಟ್ರವೊಂದನ್ನು ನೇರವಾಗಿ ಖಂಡಿಸುವ ಎದೆಗಾರಿಕೆ ನಮ್ಮಲ್ಲಿ ಈಗಲಾದರೂ ಮೂಡಿತಲಾ ಎಂದು ಮಾತ್ರ ಸಂತೋಷಪಡಬೇಕು.

ಪಂ. ಜವಾಹರರು ತಮ್ಮ ಅದ್ವಿತೀಯ ಶಕ್ತಿಯಿಂದ ಬಂಡವಳಶಾಹಿ-ಕಮ್ಯುನಿಸ್ಟ ಜಗತ್ತುಗಳ ನಡುವೆ ತಟಸ್ಥ ನೀತಿಯನ್ನು ಪ್ರತಿಷ್ಠಾಪಿಸಿದರು. ಎರಡೂ ದೋಣಿಗಳಲ್ಲಿ ಒಂದೇ ಬಾರಿ ಪ್ರಯಾಣಿಸುವ ಡೊಂಬರಾಟದಲ್ಲಿ ಮೊದಮೊದಲಿಗೆ ಅವರು ಯಶಗಳಿಸಿದಂತನಿಸಿತ್ತು. ಆದರೆ, ಕೆಂಪು ಚೀನಾದ ಅನ್ಯಾಯದ ಆಕ್ರಮಣ ಅವರ ಆಯುಷವನ್ನೇ ಕ್ಷೀಣಿಸಿತು. ಈಗ ನಮ್ಮ ವಿದೇಶ ನೀತಿ 'ತಟಸ್ಥ ಬ್ರಾಂಡಿ'ನದ್ದು ಮಾತ್ರ. ನಮ್ಮ ಒಲವು-ಒಯ್ಯಾರಗಳೆಲ್ಲ ಕಮ್ಯುನಿಸ್ಟ ಲೋಕದತ್ತ. ಇದನ್ನು ಅರಿತುಕೊಂಡ ನಿಕ್ಸನ್ ನಮ್ಮ ಕೈ ಬಿಟ್ಟರೆ ತಪ್ಪಾಗದು ನಮ್ಮ ವಿದೇಶ ನೀತಿಯನ್ನು ಪರಿಷ್ಕರಣಗೊಳಿಸಲು ಇದೀಗ ತಕ್ಕ ಸಮಯ. ಹಾವು ಸಾಯಬಾರದು; ಕೋಲು ಮುರಿಯಬಾರದು ನೀತಿಯನ್ನೇ ನಾವು ಮುಂದುವರಿಸುತ್ತಲೇ ಹೋದರೆ, ನಮ್ಮ ಶರೀರಕ್ಕಷ್ಟೇ ದಣಿವು. ಸ್ಪಷ್ಟ ಮಾತುಗಳಿಂದ ಅಮೆರಿಕೆಯನ್ನು ಟೀಕಿಸಿದ ಸರ್ದಾರ ಸಿಂಗರ ಕೆಚ್ಚೆದೆಯನ್ನು ಹೊಗಳದಿರಲಾದೀತೆ? ಆದರೆ, ಇಂದಿರಮ್ಮನ ಪ್ರತಿಕ್ರಿಯೆಯೇನೆಂಬುದಿನ್ನೂ ಹೊರಪಟ್ಟಿಲ್ಲ.

○ ○ ○

ಕರ್ನಾಟಕದ ಇಂಡಿಕೇಟ್ ಅಭ್ಯರ್ಥಿಗಳನ್ನು ಆಯ್ದುಕೊಳ್ಳುವ ಚುನಾವಣಾ ಸಮಿತಿಯ ಪ್ರಶ್ನೆ ಒಮ್ಮೆಗೆ ಬಗೆಹರಿಯಿತು. ದೇವರಾಜ ಅರಸು-ಸಿದ್ಧ ವೀರಪ್ಪ ವಿರಸ ಪ್ರಕರಣದ ಹಿನ್ನಲೆಯಲ್ಲಿ ಉಂಟಾಗಿದ್ದ ಪಾರಸ್ಪರಿಕ ಭಿನ್ನಮತವೀಗ ಮತ್ತೊಮ್ಮೆಗೆ ತಣ್ಣಗಾಯ್ತು. ಯಾರು ಯಾರಿಗೆ ಸಮಿತಿಯ ಅಧ್ವರ್ಯುವಾಗ ಬೇಕೆಂದಿತ್ತೋ ಅವರೆಲ್ಲರೂ ಸಮಿತಿಯ ಸದಸ್ಯರಾದರು. ದೇವರಾಜ ಅರಸರೇ ಸಮಿತಿಯ ನಾಯಕರಾಗಿ ಮುಂದುವರಿದು ಯಥಾಸ್ಥಿತಿ ರಕ್ಷಣೆಗೆ ಮತ್ತೊಂದು ಪ್ರಯತ್ನ ನಡೆಸಿದರು. ಆದುದರಿಂದ ರಾಜ್ಯದ ಅಡಹಾಕ್ ಸಮಿತಿಯನ್ನು ಬದಲಾಯಿಸ ಬೇಕು; ನಾಯಕತ್ವ ಬೇರೆಯಾಗಬೇಕು; ಚುನಾವಣಾ ಸಮಿತಿಯಲ್ಲಿ ಅವರಿರಬಾರದು, ಇವರಿರಬಾರದು— ಎಂದು ಮೊದಲಾದ ನೂರಾರು ಭಿನ್ನಮತಗಳೆಲ್ಲ ಈ ಕ್ಷಣಕ್ಕೆ ಮಾಯವಾದುವು. ಕೇಂದ್ರದ ಆದೇಶದ ಮುಂದೆ ತಲೆಬಾಗಿ ತಮ್ಮ ವಿಧೇಯತೆಯನ್ನು ಇವರು ತೋರಿಸಿಕೊಟ್ಟರು. ತಮ್ಮ ಆತ್ಮ ಸಾಕ್ಷಿಯನ್ನು ಇಂದಿರಮ್ಮನಲ್ಲಿ ಅಡವಿಡುವ ಅವರ ಔದಾರ್ಯವನ್ನು ಶಿಸ್ತಿನ ಸಿಪಾಯಿಗಳೂ ಮೆಚ್ಚಿ ಪ್ರಶಂಸಿಸಲೇ ಬೇಕು.

ಮುಂದೇನು ನಡೆಯುತ್ತದೆ? ಎತ್ತು ಏರಿಗೆಳೆಯುವುದು; ಹೋರಿ ನೀರಿಗೆಳೆಯುವುದು. ಈ ಸಮಿತಿಯು ಒಂದಾಗಿದ್ದುದು ಎರಡಾಗುತ್ತದೆ. ಅಥವಾ ಆಗಿದೆಯೆಂದೇ ಹೇಳೋಣ—ಅವರವರಿಗೆ ಟಿಕೆಟು ದೊರೆಯದಂತೆ ಇವರವರು, ಇವರವರಿಗೆ ಟಿಕೇಟು ದೊರೆಯದಂತೆ ಅವರವರು ಶಕ್ತಿಮೀರಿ ಪ್ರಯತ್ನಿಸುತ್ತಾರೆ. ಆಗ ಆರಂಭವಾದ ಭಿನ್ನಮತವನ್ನೂ ಕೇಂದ್ರ ನಾಯಕರೇ ಪ

In the Court of the Munsiff, Puttur, S. K.

Ex 835/70

Hg. date 5—8—71

K. Ishwara Bhat — Petitioner

vs

A. S. Abdulla Kunhi—Respondent

To

Sri A. S. Abdulla Kunhi,
S/o Mammunhi Beary,
residing at Jalsoor village,
Sullia Taluk, P. O. Jalsoor.

Sir,

Please take notice, and pro-order also that the above execution petition is posted on 5—8—71 on the file of the above said Court for your appearance. If you fail to appear at 11 A. M. before the Court then you will be set exparte and be proceeded with. Be it known.

/ By order /

Venkatramana B. N.,
Advocate for petitioner.

Puttur, 16-7-71.

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂ ಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೊಟೋ ಹೌಸ್ PHONE: 3131

ಆಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

Ex. C. 84/1971 O. S. 32/1970

ಮುಕಾಂಬಿಕೆ ಅಮ್ಮ —ಅರ್ಜಿದಾರಳು.

ಗಣಪತಿ ಭಟ್ಟ —ಎದ್ರಿ

ಬಂಟ್ವಾಳ ತಾಲ್ಕು ವಿಟ್ಲ ಕಸಬಾ ಗ್ರಾಮದಲ್ಲಿರುವ ಕೇಶವ ಭಟ್ರ ಮಗ ಗಣಪತಿ ಭಟ್ಟ, ಪೋಸ್ಟು ವಿಟ್ಲ, ದ.ಕ. ಇವರಿಗೆ.

ಮೇಲ್ಕಂಡ ಅಮಲ್ದಾರಿಯಲ್ಲಿ ಸ್ಥಿರಾಸ್ತಿ ವಿಕ್ರಯದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವರೆ ಮತ್ತು ಅರ್ಜಿದಾರರು ಸ್ಥಿರಾಸ್ತಿ ಏಲಂ ಸಮಯ ಡಿಕ್ರಾಸ್ತಿಗೆ ನಿಲ್ಲುವರೆ ಹಾಕಿದ ಅರ್ಜಿಗೆ ನಿಮ್ಮ ಆಕ್ಷೇಪ ಹಾಕುವರೆ ಕೂಡಾ ಮೇಲ್ಕಂಡ ಅಮಲ್ದಾರಿಯು 19-8-1971ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ವ್ಯಾದೆಯಿರುತ್ತದೆ. ನೀವು 19-8-1971ಕ್ಕೆ ಬೆಳಿಗ್ಗೆ ಗಂಟೆ 11ಕ್ಕೆ ಖುದ್ದು ಯಾ ವಕೀಲರ ಮೂಲಕ ಹಾಜರಾಗಿ ನಿಮ್ಮ ಆಕ್ಷೇಪಗಳೇನಾದರೂ ಇದ್ದಲ್ಲಿ ದಾಖಲು ಮಾಡತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತಕಂಡಂತೆ ಮುಂದುವರಿಸಲಾದೀತು.

(By order of court)

Pulu Narayana Bhat
Advocate for Petitioner.

Belthangady, 22—7—1971

ರಿಹರಿಸಬೇಕಾಗುತ್ತದೆ. ಮುಂದೆ, ಅವರ ಅಭ್ಯರ್ಥಿ ಗೆಲ್ಲದಂತೆ ಇವರೂ ಇವರ ಅಭ್ಯರ್ಥಿ ಗೆಲ್ಲದಂತೆ ಅವರೂ ಕರಾಮತ್ತು ನಡೆಸದೆ ಇರುವುದು ಸಾಧ್ಯವಾಗದು. ಆ ಮೇಲೆ ನಾಯಕತ್ವದ ಹೊಡೆದಾಟ- ಭಿನ್ನಮತ ಕ್ಷಣ ಕ್ಷಣಕ್ಕೂ ನಿಂದನೆ— ಭರ್ತ್ಸನೆ- ಅಂತೂ ವೈಪರೀತ್ಯ. ಈ ನೀತಿಯಿಂದಲೇ ಕರ್ನಾಟಕ ಹಿಂದೆ ಬಿದ್ದದ್ದು. ರಾಜ್ಯಕೀಯವಾಗಿ ಮಾತ್ರವಲ್ಲ, ಸರ್ವಾಂಗೀಣವಾಗಿ.

೦ ೦ ೦

ಅಧಿಕಾರದ ಆಸೆ ಎಂಥೆಂಥವರಿಂದಲೂ ಏನೇನು ಮಾಡಿಸುತ್ತದೆಯೆಂಬುದಕ್ಕೆ ಕರ್ನಾಟಕದಲ್ಲೇ ಬೇಕಷ್ಟು ಉದಾಹರಣೆಗಳು ದೊರೆಯುತ್ತವೆ. ಜಾತೀಯತೆ–ಗುಂಪುಗಾರಿಕೆಗಳೇ ನಮ್ಮ ರಾಜ್ಯನೀತಿಯ ಬಂಡವಾಳ ಈ ಬಂಡವಾಳ ಬದಲಾಗದೆ ಹೋದರೆ, ನಮ್ಮ ರಾಜ್ಯ ದಿವಾಳಿಯೇಳುತ್ತದೆ. ನಮ್ಮ ಮಾತಿಗೆ ಕಾಸಿನ ಬೆಲೆಬರುವುದಿಲ್ಲ. ದೃಢನೀತಿಯ ರಾಜ್ಯಕೀಯ ಪ್ರಜ್ಞೆ ಮತದಾರರಲ್ಲಿ ಮೂಡಬೇಕು; ಇಲ್ಲವಾದರೆ, ನಮ್ಮ ಸರ್ವನಾಶಕ್ಕೆ ನಾವೇ ನಾಂದಿಹಾಡಬೇಕು.

ರಾಜ್ಯಪಾಲ ಧರ್ಮವೀರರು ನಮ್ಮ ರಾಜ್ಯದ ಎಂಪಿಗಳೆಲ್ಲರನ್ನೂ ಚಹಾ ಕೂಟವೊಂದಕ್ಕೆ ಆಹ್ವಾನಿಸಿದರು. ಆದರೆ, ಈ ಆಹ್ವಾನವನ್ನು ಅವರೆಲ್ಲರೂ ಒಂದಾಗಿ ತಿರಸ್ಕರಿಸಿದರು. ರಾಜ್ಯಪಾಲರ ರಾಜ್ಯಕೀಯ ರೀತಿ—ನೀತಿಗಳು ತಮಗೆ ಮೆಚ್ಚುಗೆಯೂ ಗಿಲ್ಲದಿರುವುದೊಂದು ಇದಕ್ಕೆ ಕಾರಣವಾದರೆ, ಅವರು ಸಿಂಡಿಕೇಟಿನೊಂದಿಗೆ ಸಂಪರ್ಕ ಬೆಳೆಸಿಕೊಳ್ಳುತ್ತಿದ್ದಾರೆಂಬುದು ಇನ್ನೊಂದು ಕಾರಣ. ನಮ್ಮ ಎಂ ಪಿ. ಗಳು ರಾಜ್ಯಪಾಲರ ವಿರುದ್ಧ ಇಂದಿರಮ್ಮನವರೆಗೂ ದೂರು ಹೊತ್ತುಕೊಂಡು ಹೋದವರು ಆಡಳಿತೆಯಲ್ಲಿ ನೇರ ಹಸ್ತಕ್ಷೇಪ ಮಾಡಲಾಗದೆ ಇಂದಿರಮ್ಮನ ಮೂಲಕ ಅವರಿಗೆ ಬುದ್ಧಿ ಹೇಳಿಸಿದವರು. ಅದೇನಿದ್ದರೂ ನೀಡಿದ ಚಹಾ ಆಹ್ವಾನದೊಡನೆ ರಾಜಕೀಯವಾಡುವುದು ಸೌಜನ್ಯದ ವ್ಯವಹಾರವಲ್ಲ; ಅದು ರಾಜ್ಯಕೀಯ ವ್ಯವಹಾರವಾಯ್ತು. ಈ ಬಗೆಯ ಹಲವಾರು ಕಾರಣಗಳಿಂದಲೇ ಧರ್ಮವೀರರಿಗೆ ರಾಜ್ಯಪಾಲ ಹುದ್ದೆಯಲ್ಲೇ ಬೇಸರಬಂದಿರಬೇಕು. ಇಲ್ಲೊಂದು ಜನಪ್ರಿಯ ಸರಕಾರ ರಚನೆಗೊಂಡ ಕೂಡಲೇ ತಾನು ನಿವೃತ್ತಿ ಬಯಸುವುದಾಗಿ ಅವರು ಹೇಳಿದ್ದಾರೆ ರಾಜ್ಯಕಾರಣಿಗೆ ಅವನ ಪಕ್ಷದ ಬೆಂಬಲವಾದರೂ ಇದೆ, ರಾಜ್ಯಪಾಲರಿಗೆ? ಅವರ ಸ್ಥಿತಿ ಬಾವಲಿಯದ್ದೇ. ಎಲ್ಲಾ ಸರಿಯಾಗಿದ್ದರೆ ಸರಿ. ಇಲ್ಲವಾದರೆ, ಅಪವಾದ–ಆರೋಪಗಳ ಜಡಿಮಳೆ! ಇದನ್ನೆಲ್ಲ ಸಹಿಸಿಕೊಂಡ ಕರ್ತವ್ಯ ಪರಾಯಣರಾದರೂ ಅವರಷ್ಟು ಜನಪ್ರಿಯ ಸರಕಾರವಾಗುವುದಿಲ್ಲ.

●●

ಪುತ್ತೂರು II ಎಡಿಶನ್ ಮುನ್ಸಿಫ್ ಕೋರ್ಟಿನಲ್ಲಿ

Ex 60/70
in O. S. 388/67

ಬಾಪ ಕುಂಞ ಬ್ಯಾರಿ —ಅರ್ಜಿದಾರ

ಮತ್ತು

ಉಮ್ಮಕ್ಕೆ ಯಾನೆ ಭಾಗೀರತಿ ಕೂಡಾ—ಎದ್ರಿರು

1ನೇ ಎದ್ರಿ ಉಮ್ಮಕ್ಕ ಯಾನೆ ಭಾಗೀರತಿ ಕುದ್ರೆಪ್ಪಾಡಿ ಪರಮೇಶ್ವರಿ ಹೆಂಗ್ಸು ಮಗಳು ಕಾಟುಕುಕ್ಕೆ, ಕಾಸರಗೋಡು ತಾಲ್ಕು.

3ನೇ ಎದ್ರಿ G. K. ವಿಟ್ಠಲ್ ರೈ,

4ನೇ ಎದ್ರಿ G. K. ರಾಮಚಂದ್ರ ರೈ,

—1ನೇ ಎದ್ರಿ ಮಕ್ಕಳು

ಪುತ್ತೂರು ತಾಲ್ಕು ಬಲ್ನಾಡು ಗ್ರಾಮದ ಕೇದಿಕುಮೇರು ಎಂಬಲ್ಲಿ—

ಮೇಲ್ಕಂಡ ಅಮಲ್ಜಾರಿಯಲ್ಲಿ ನಿಮ್ಮ ಸ್ಥಿರಾಸ್ತಿಯು ಜಪ್ತಿಯಾಗಿರುತ್ತಿದ್ದು ಆ ಕುರಿತು ನಿಮಗೆ ಪ್ರೊಹಿಬಿಟರಿ ಆರ್ಡರ್ ಜ್ಯಾರಿ ಕುರಿತು ತಾ. 31–7–71ರಂದು ವ್ಯಾದೆ ಇರುತ್ತದೆ. ಆ ಕುರಿತು ನಿಮಗೇನಾದರೂ ಆಕ್ಷೇಪವಿದ್ದಲ್ಲಿ ನೀವು ತಾ. 31–7–71ಕ್ಕೆ 11 ಗಂಟೆಯ ಸಮಯಕ್ಕೆ ಕೋರ್ಟಿನಲ್ಲಿ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಪ್ಪಾ ಮಾಡಿ ಮುಂದುವರಿಸಲಾದೀತು ಎಂತ ಈ ಮೂಲಕ ನಿಮಗೆ ತಿಳಿಯಪಡಿಸೋಣಾಗಿದೆ.

By Order of Court

(Sd) N. Subramanyam

Advocate for Petitioner

Puttur 12/7/71

ರಾಷ್ಟ್ರೀಕೃತ ಸಿಂಡಿಕೇಟ್ ಬ್ಯಾಂಕ್‌ನ ೨ನೇ ವಾರ್ಷಿಕ ಸಮಾರಂಭ

ರಾಷ್ಟ್ರೀಕರಣದ ಯಶಸ್ಸಿಗಾಗಿ ಶ್ರಮಿಸಿರಿ

— ಡಾ। ಪೈ

ಬ್ಯಾಂಕ್ ರಾಷ್ಟ್ರೀಕರಣದ ದ್ವಿತೀಯ ವಾರ್ಷಿಕೋತ್ಸವವು ಸಿಂಡಿಕೇಟ್ ಬ್ಯಾಂಕಿನ ಮಣಿಪಾಲ ಪ್ರಧಾನ ಕಚೇರಿಯಲ್ಲಿ ತಾ. 19ರಂದು ಸಂಸ್ಥಾಪಕ ಡಾ। ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು.

ಆರಂಭದಲ್ಲಿ ಬ್ಯಾಂಕಿನ ಜನರಲ್ ಮೆನೇಜರ್ ಶ್ರೀ ಎಚ್. ಎನ್. ಪೈಗಳು ಸ್ವಾಗತಿಸಿ ರಾಷ್ಟ್ರೀಕರಣದ ಮೊದಲಿಗಿಂತಲೂ ಹೆಚ್ಚಿನ ಪ್ರಗತಿಯನ್ನು ಸಿಂಡಿಕೇಟ್ ಬ್ಯಾಂಕು ಸಾಧಿಸಿರುವುದಾಗಿಯೂ ಮುಂದಕ್ಕೆ ಇದಕ್ಕೂ ಮಿಗಿಲಾದ ಪ್ರಗತಿಯನ್ನು ಸಾಧಿಸುವ ಭರವಸೆಯಿದೆಯೆಂದೂ ತಿಳಿಸಿದರು.

ಚೀಫ್ ಅಕೌಂಟೆಂಟ್ ಶ್ರೀ ಎಚ್. ಎನ್. ರಾಯರು ಬ್ಯಾಂಕಿನ ಸಂಸ್ಥಾಪಕ ಡಾ। ಟಿ. ಎಂ. ಎ. ಪೈಯವರು ದೂರದೃಷ್ಟಿಯಿಂದ ಹಾಕಿಕೊಟ್ಟಿರುವ ವಿವಿಧ ನವೀನ ಯೋಜನೆಗಳಿಂದ ಸಿಂಡಿಕೇಟ್ ಮೇಲ್ಮಟ್ಟದ ಸಂಸ್ಥೆ ಆಗಿರುವುದೆಂದೂ ಶ್ರೀ ಟಿ. ಎ. ಪೈಗಳ ಮಾರ್ಗದರ್ಶನದಲ್ಲಿ ಬ್ಯಾಂಕು ಕಾಲೋಚಿತ ಹಾಗೂ ಆಕರ್ಷಕ ನವನೂತನ ಯೋಜನೆಗಳನ್ನು ಕಾರ್ಯಗತಗೊಳಿಸುವುದಕ್ಕೆ ಸಾಧ್ಯವಾಯಿತೆಂದೂ ತಿಳಿಸಿ ಹೊಸತಾಗಿ ರೂಪಿಸಲಾದ ರೈತರ ಭದ್ರತಾ ಠೇವಣಾತಿ ಯೋಜನೆಯ ವಿವರಗಳನ್ನಿತ್ತರು.

ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಎಚ್.ಡಿ. ಎಸ್. ಪೈಗಳು ಶುಭಸಂದೇಶಗಳನ್ನು ಓದಿದರು.

ಕರ್ನಾಟಕ ಬೇಂಕಿನ ಅಧ್ಯಕ್ಷ ಶ್ರೀ ಕೆ. ಎಸ್. ಎನ್. ಅಡಿಗರು ಅಭಿನಂದನ ಭಾಷಣ ಮಾಡುತ್ತಾ, ಸಿಂಡಿಕೇಟ್ ಬ್ಯಾಂಕು ರಾಷ್ಟ್ರೀಕರಣದ ಬಳಿಕವೂ ಹಿಂದಿನಂತೆಯೇ ಕಾರ್ಯವೆಸಗುತ್ತಿದೆ ಎಂಬುದಕ್ಕೆ ಅದರ ಪ್ರಗತಿಪರ ವರದಿಯೇ ಸಾಕ್ಷಿಯಾಗಿದೆ ಎಂದೂ, ಸಿಂಡಿಕೇಟು ಮೊದಲಿಂದಲೂ ಕೃಷಿಕರಿಗೂ ಸಣ್ಣಮಟ್ಟದ ಉದ್ಯಮಗಳಿಗೂ ಸಾಲಕೊಡುತ್ತಿದ್ದುದು ಆದರ್ಶನೀಯ ಎಂದೂ, ರಾಷ್ಟ್ರೀಕರಣಕ್ಕಾಗಿ ಆರಂಭದಲ್ಲಿ ಪ್ರತಿಭಟನೆ ಕೇಳಿಬರುತ್ತಿದ್ದರೂ ಇಂದು ಕಡೆಗಣಿಸಲ್ಪಟ್ಟಿರುವ ಹಲವು ವರ್ಗದ ಜನರ ಕಲ್ಯಾಣವಾಗಿರುವುದರಿಂದ ರಾಷ್ಟ್ರೀಕರಣದ ಉದ್ದೇಶ ಸಾಧಿತವಾಗಿರುವುದೆಂದೂ ಇಂತಹ ಉತ್ಸವವನ್ನು ನಾವಿಂದು ಆಚರಿಸುತ್ತಿರುವುದು ಸಂತೋಷದಾಯಕವೆಂದೂ ಹೇಳಿ ಬ್ಯಾಂಕು ಇನ್ನೂ ಪ್ರವರ್ಧಮಾನವಾಗಿ ಬೆಳೆಯಲೆಂದರು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್‌ನ ಅಧ್ಯಕ್ಷ ಹಾಗೂ 'ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನಿನ ಡೈರೆಕ್ಟರ್ ಶ್ರೀ ಟಿ. ರಮೇಶ ಪೈಗಳು ಭಾಷಣ ಮಾಡುತ್ತಾ, ದೇಶದ ಮುಂದಿರುವ ನಾನಾ ಸಮಸ್ಯೆಗಳ ಕುರಿತು ಒಂದಿಷ್ಟೂ ಚಿಂತಿಸದೆ ಕೇವಲ ತಮ್ಮ ಸ್ವಾರ್ಥಕ್ಕಾಗಿ ಮುಷ್ಕರ ಘೇರಾವೋಗಳಿಂದ ಅರಾಷ್ಟ್ರೀಯ ಕ್ರಮ ನಡೆಯುವುದು ನಮ್ಮ ದೇಶದಲ್ಲಿ ಮಾತ್ರ ಇರುವುದಾದರೂ ಸಿಂಡಿಕೇಟ್ ಇಂತಹ ಪರಿಸ್ಥಿತಿಯನ್ನು ನಿರ್ಮಿಸದಿರುವುದಕ್ಕೆ ಸಂತೋಷ ಸೂಚಿಸಿ ಹಿಂದಿನಂತೆ ಇಂದೂ ಸಿಂಡಿಕೇಟ್ ಬ್ಯಾಂಕ್ ಸೇವೆ ಸಲ್ಲಿಸುತ್ತಿರುವುದಕ್ಕಾಗಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಡಾ। ಶಿವರಾಮ ಕಾರಂತರು ತಮ್ಮ ಭಾಷಣದಲ್ಲಿ ರಾಷ್ಟ್ರೀಕರಣದ ಉದ್ದೇಶ ಏನಿದ್ದರೂ ವ್ಯಕ್ತಿಯು ಸ್ವಂತ ಪ್ರಯತ್ನದಿಂದ ಬೆಳೆಯಲು ಆಶಿಸುವಾಗ ಸರಕಾರ ಕಿತ್ತುಕೊಳ್ಳುವ ಪದ್ಧತಿಯನ್ನು ನಾನು ಒಪ್ಪುವುದಿಲ್ಲವೆಂದೂ ಇಂಗ್ಲೆಂಡಿನಲ್ಲಿ ಖಾಸಗಿ ಪ್ರಯತ್ನದಿಂದ ದೇಶಕ್ಕೆ ವಿಶೇಷ ಪ್ರಯೋಜನವಾಗಿದೆಯೇ ಹೊರತು ಯಾವ ಗಂಡಾಂತರವೂ ಆಗಿಲ್ಲವೆಂದೂ, ಡಾ। ಟಿ. ಎಂ. ಎ. ಪೈ ಮತ್ತು ಶ್ರೀ ಟಿ. ಎ. ಪೈಗಳು ತೋರಿಸಿಕೊಟ್ಟುದಕ್ಕಿಂತ ಹೆಚ್ಚಿನದೇನೂ ರಾಷ್ಟ್ರೀಕರಣದಿಂದ ಕಾಣಬರಲಿಲ್ಲವೆಂದೂ ನುಡಿದು ಸಿಂಡಿಕೇಟು ರೈತರ ಬಗ್ಗೆ ತೋರಿಸಿದ ಸಹಾನುಭೂತಿಯನ್ನು ಕೊಂಡಾಡಿದರು.

ಅಧ್ಯಕ್ಷತೆ ವಹಿಸಿದ್ದ ಡಾ। ಟಿ. ಎಂ. ಎ. ಪೈಯವರು ತಮ್ಮ ಭಾಷಣದಲ್ಲಿ ಬ್ಯಾಂಕ್ ರಾಷ್ಟ್ರೀಕರಣದ ಉದ್ದೇಶ ಸಾಧನೆಗಾಗಿ ಯತ್ನಿಸುವುದು ಅತ್ಯಾವಶ್ಯಕ ಬ್ಯಾಂಕಿನ ಶಿಬ್ಬಂದಿಯವರು ಜನ ಸಂಪರ್ಕ ಬೆಳೆಸಿ ಅವರ ವಿಶ್ವಾಸ ಪಡೆಯಬೇಕು. ಪವಿತ್ರವಾದ ಬ್ಯಾಂಕಿಂಗ್ ಉದ್ಯಮವು ಜನಸೇವೆ ಸಲ್ಲಿಸಲಿಕ್ಕೂ ಪ್ರಾಮಾಣಿಕ ವ್ಯಕ್ತಿತ್ವ ರೂಪಿಸಲಿಕ್ಕೂ ಕಾರಣವಾಗಿದೆ. ರಾಷ್ಟ್ರೀಕರಣದಿಂದ ಎಲ್ಲಾ ವರ್ಗದವರಿಗೂ ಸೇವೆಸಲ್ಲಿಸಲು ಅವಕಾಶ ಒದಗಿದೆ ಜೀವವಿಮೆ ರಾಷ್ಟ್ರೀಕೃತವಾದ ಬಳಿಕ ಅದರ ಸಂಪನ್ಮೂಲಗಳು ರಾಷ್ಟ್ರದ ಉನ್ನತಿಗೆ ನೆರವಾದಂತೆ ಬ್ಯಾಂಕು ರಾಷ್ಟ್ರೀಕರಣ ಕೂಡಾ ಎಂದು ತಿಳಿಯಬೇಕಾಗಿದೆ. ಎರಡು ಎರಡುವರೆ ದಶಕಗಳ ಮೊದಲೇ ಗ್ರಾಮಾಂತರ ದೇಶಗಳಲ್ಲಿ ಪ್ರಪ್ರಥಮವಾಗಿ ಸಿಂಡಿಕೇಟ್ ಶಾಖೆಗಳನ್ನು ತೆರೆದುದನ್ನು ಈಗ ಎಲ್ಲರೂ ಅದನ್ನು ಕಾರ್ಯಗತಗೊಳಿಸುತ್ತಿರುವುದು ನನಗೆ ಆನಂದ, ತೃಪ್ತಿಯನ್ನುಂಟು ಮಾಡಿದೆ. ಸಿಂಡಿಕೇಟ್ ಬ್ಯಾಂಕು ಇಂದಿನ ತನಕ ಸಾಧಿಸಿದ ಪ್ರಗತಿಪರ ಧೋರಣೆಗಳನ್ನು ವರ್ಧಿಸಿಕೊಂಡು ಮುಂದುವರಿಯುವಂತಾಗಲಿ. ನಾವು ರಾಷ್ಟ್ರೀಯ ಸಂಸ್ಥೆಯೊಂದರ ಮೂಲಕ ರಾಷ್ಟ್ರಸೇವೆ ಮಾಡುತ್ತಲಿದ್ದೇವೆ ಎಂಬ ಸದ್ಭಾವನೆಯಿಂದ ಸರ್ವರೂ ದುಡಿಯುವಂತಾಗಲಿ ಎಂದು ಹಾರೈಸಿದರು.

ಅಂತ್ಯದಲ್ಲಿ ಡಿವಿಜನಲ್ ಮೆನೇಜರ್ ಶ್ರೀ ಕೆ. ಪಿ. ಶೆಣೈಯವರು ಸರ್ವರಿಗೂ ಧನ್ಯವಾದಗಳನ್ನರ್ಪಿಸಿದರು. ಸಮಾರಂಭವು ಅಲಂಕೃತ ಪ್ರಧಾನ ಕಚೇರಿಯಲ್ಲಿ ಶೋಭಾಯಮಾನವಾಗಿ ಜರಗಿತು.

●

ಹರಿಕಥಾ ಸಪ್ತಾಹ

ಸಾಲಿಗ್ರಾಮದ ಶ್ರೀ ಹನುಮಂತದೇವಸ್ಥಾನದಲ್ಲಿ ವರ್ಷಂಪ್ರತಿಯಂತೆ, ಇದೇ ತಾ. 9ರಿಂದ, ನಮ್ಮ ಜಿಲ್ಲೆಯ ಸುಪ್ರಸಿದ್ಧ ಹರಿದಾಸರಾದ ಶ್ರೀ ಮು। ರಂ। ಸಾಮಗ ಹರಿದಾಸರಿಂದ ಹರಿಕಥಾಸಪ್ತಾಹವು ನಡೆದು ತಾ. 16ಕ್ಕೆ ಮಂಗಲ ಉತ್ಸವವು ಜರಗಿತು. "ಕೂಟ ಮಹಾಜಗತ್ತಿ"ನ ಪ್ರತಿನಿಧಿಗಳೂ, ದೇವಸ್ಥಾನದ ಮೊಕ್ತೇಸರರೂ ಆದ ಶ್ರೀ ಸದಾಶಿವ ಹಂದೆಯವರು, ಹರಿದಾಸರ ಸಮಸ್ತ ಜನಸಂಗ್ರಾಹ್ಯವಾಗಬೇಕಾದ ಸದ್ವಿಚಾರ ಪ್ರಬೋಧನಾತ್ಮಕ ಕಲಾ ಕೌಶಲ್ಯಕ್ಕೆ ಮೆಚ್ಚಿ, ದಕ್ಷಿಣೆಯಿತ್ತು ಮನ್ನಿಸಿ, ಮಹಾಸಭೆಯಾಗಿ ಸೇರಿಬಂದ ಶ್ರೋತೃಗಳ ಜ್ಞಾನ ಸಂಗ್ರಹದ ಸದಾಸಕ್ತಿಯನ್ನು ಪ್ರಶಂಸಿಸಿ, ಎಲ್ಲರೂ ಧರ್ಮ—ದೇವರು ಎಂಬವುಗಳನ್ನು ಹೊಂದಿಕೊಂಡು ಬಾಳುವಂತೆ ಈ ಕಾರ್ಯಕ್ರಮದ ಪ್ರಯೋಜನ ಪಡೆಯಲು ಕೃಪೆದೋರುವಂತೆ ಶ್ರೀ ದೇವರನ್ನು ಪ್ರಾರ್ಥಿಸಿ, ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಈ ದಿನ ನಮ್ಮದು

* ಈ ಹೊತ್ತಿನ ಮಟ್ಟಿಗೆ ನಾವು ಈ ಹೊತ್ತಿನ ಕೆಲಸ ಮಾಡೋಣ. ಜೀವಮಾನದ ಸಮಸ್ಯೆ ತುಂಬಿಕೊಂಡು ತಲೆ ಕೆಡಿಸಿಕೊಳ್ಳುವುದು ಬೇಡ.

* ಈ ಹೊತ್ತಿನ ಮಟ್ಟಿಗೆ ಏನಿದೆಯೋ ಅದಕ್ಕೆ ಹೊಂದಿಕೆ ಮಾಡಿಕೊಂಡು ನಡೆಯೋಣ. ನಮ್ಮ ಈ ಇಚ್ಛೆಗೆ ಬೇಕಾದದ್ದೇ ಆಗಬೇಕೆನ್ನುವ ಹಟಬೇಡ ನಮ್ಮ ಸ್ನೇಹಿತರು, ಸಹಕಾರಿಗಳು, ವಾಣಿಜ್ಯ ಮಿತ್ರರು ಯಾರೇ ಇದ್ದರೂ, ಅವರೊಂದಿಗೆ ಈ ಹೊತ್ತಿನ ಮಟ್ಟಿಗೆ ಹೊಂದಿಕೆ ಮಾಡಿಕೊಳ್ಳೋಣ.

* ಈ ಹೊತ್ತಿನ ಮಟ್ಟಿಗೆ ನಾವು ನಮ್ಮ ಆತ್ಮವನ್ನು ಬಲಪಡಿಸಿಕೊಳ್ಳೋಣ. ಮೂರು ರೀತಿಯಿಂದ ಅದನ್ನು ಮಾಡುವುದು ಸಾಧ್ಯವಿದೆ. ಒಬ್ಬರಿಗೆ ಗೊತ್ತಿಲ್ಲದಂತೆ ಅವರ ಬೆನ್ನ ಹಿಂದೆ ಒಂದು ಒಳ್ಳೆಯ ಕೆಲಸ ಮಾಡೋಣ. ಮನಸ್ಸಿಗೆ ಅಭ್ಯಾಸವಾಗಲೆಂದು ಒಂದೆರಡು ಮಾಡೋಣ. ನಮ್ಮ ಮನಸ್ಸಿಗೆ ವ್ಯಥೆ ಆಗಿದೆ ಎಂಬುದನ್ನು ಯಾರಿಗೂ ತೋರಿಸುವುದು ಬೇಡ. ಈ ಹೊತ್ತಿನ ಮಟ್ಟಿಗೆ ನಾವು ಅದನ್ನು ನಮ್ಮಲ್ಲಿಯೇ ಇಟ್ಟುಕೊಳ್ಳೋಣ.

* ಈ ಹೊತ್ತಿನ ಮಟ್ಟಿಗೆ ನಾಲ್ಕು ಮಂದಿಗೆ ಬೇಕಾದವರಾಗಿ ಇರೋಣ. ಆದಷ್ಟು ಚೆನ್ನಾಗಿ ಕಾಣಿಸುವಂತೆ, ಅಂತಃಕರಣದ ಮುಖ ಮಾಡಿಕೊಂಡು ಇರೋಣ ಇನ್ನೊಬ್ಬರನ್ನು ಮುಕ್ತವಾಗಿ ಹೊಗಳೋಣ. ಅವರ ತಪ್ಪು ಆಡುವುದೇ ನಮ್ಮ ಕೆಲಸವಲ್ಲ. ನಮ್ಮ ಉದಾಹರಣೆಯ ಮೂಲಕ ಇನ್ನೊಬ್ಬರನ್ನು ಈ ಹೊತ್ತಿನ ಮಟ್ಟಿಗೆ ಸುಧಾರಿಸುವ ಪ್ರಯತ್ನ ಮಾಡೋಣ.

* ಈ ಹೊತ್ತಿನ ಮಟ್ಟಿಗೆ ನಾವು ಬದುಕಿರೋಣ. ಇನ್ನೊಬ್ಬರನ್ನು ಬದುಕಿಸೋಣ. ಇನ್ನೊಬ್ಬರನ್ನು ಸಂತೋಷಪಡಿಸುತ್ತ ಸಂತೋಷವಾಗಿರೋಣ.

* ನಮಗಿರುವುದು ಖಂಡಿತವಾಗಿ ಯೂ ಈ ದಿನವೊಂದೇ. ಈ ಹೊತ್ತಿನ ಮಟ್ಟಿಗೆ ಅದರ ಉಪಯೋಗವನ್ನು ಚೆನ್ನಾಗಿ ಮಾಡಿಕೊಳ್ಳೋಣ.

—(ಪ್ರ)

●●

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

I. A. No. I in O. S. 28/70

ಚೀಂಕ್ರಪೂಜಾರಿ —ಅರ್ಜಿದಾರ—ವಾದಿ.

Vs.

ಸೇಸಮ್ಮ ಸಹಾ —ಎದ್ರಿರು—ಪ್ರತಿವಾದಿರು

3.ಕೋಚ ಪೂಜಾರಿ, ಗುಳ್ಳಿ ಹೆಂಗ್ಸಿನ ಮಗ, ಬೆಳ್ತಂಗಡಿ ತಾಲ್ಕು ಕೊಕ್ಕಡ ಗ್ರಾಮದ ಕೆಂಪಕೋಡಿ ಎಂಬಲ್ಲಿ. ಇವರಿಗೆ—

ಮೇಲ್ಕಂಡ ಅರ್ಜಿಯ ಅರ್ಜಿದಾರರು ನಿಂಮ ಮೇಲೆ ಮಾಡಿದ ಮೇಲಿನ ಅರ್ಜಿಯಲ್ಲಿ ನಿಂಮ ಹಾಜರಾತಿ ಬಗ್ಗೆ ತಾರೀಕು 20–9–71ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ನೀವು ಸ್ವತಹ ವ ವಕೀಲರ ದ್ವಾರಾ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ನಿಂಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಕೋರ್ಟು ಹುಕುಂ ಪ್ರಕಾರ

Sd/- K. Rama Bhat

Advocate for Petitioner.

ಪುತ್ತೂರು, 21—7—1971

ಸಮಾಜವಾದಿ ಪ್ರಾಮಾಣಿಕತನ

(ನಾಲ್ಕನೇ ಪುಟದಿಂದ)

ಸಮಾಜವಾದೀ ಘೋಷಣೆಯತ್ತ ಸರಕಾರವು ಗಂಭೀರವಾಗಿ ಗಮನಕೊಟ್ಟಿಲ್ಲವೆಂಬುದಕ್ಕೆ ಅರ್ಥಸಂಕಲ್ಪವೇ ಸಾಕ್ಷಿಯೆಂದೂ ರಾಷ್ಟ್ರವನ್ನೇ ಕೈಬಿಡಲಾಗಿದೆಯೆಂದೂ ಗಂಭೀರವಾಗಿಯೇ ಹೇಳಿದ್ದಾರೆ. ಅಂದರೆ ಚುನಾವಣಾ ಪೂರ್ವ ಘೋಷಿಸಿರುವದನ್ನು ಪ್ರಾಮಾಣಿಕ ರೀತಿಯಿಂದ ಕಾರ್ಯರೂಪಕ್ಕೆ ಇಂದಿರಾ ಮಂಡಲಿ ತಂದಿಲ್ಲವೆಂದಾಯಿತು. ಇದನ್ನೇ ಇಂದಿರಾಜೀಯವರ ಚುನಾವಣಾ ಗೆಳೆಯರು ಕಮ್ಯೂನಿಸ್ಟರೂ ಮುಸ್ಲಿಂ ಲೀಗಿಗಳೂ ಮುದ್ದು ಮುದ್ದಾಗಿ, ಕಂಡದ್ದನ್ನೇ ಹೇಳಿರುವಂತೆ ಇತರರೊಂದಿಗೆ ಧ್ವನಿಗೂಡಿಸಿದ್ದಾರೆ. ಇವರು 'ಆತ್ಮಘಾತಕ', 'ಕಪಟ', 'ಸುಳ್ಳು' ಮುಂತಾದ ಪದಗಳನ್ನೂ ಸಂಸದಿನಲ್ಲಿ ಉಪಯೋಗಿಸಿದ್ದಾರೆ, ಈ ರೀತಿ ಇಂದಿರಾಜೀಯವರ ಸುಪೀ ಅರ್ಥಸಂಕಲ್ಪದ ಕುರಿತು ಇಂದಿರಾ–ಕಾಂಗ್ರೆಸ್ಸಿಗರೂ ಅವರ ಚುನಾವಣಾ ಸಹಭಾಗಿಗಳೂ ಜನಜಾಗರಣೆಗಾಗಿಯೇ ಅನ್ನುವಂತೆ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದಾರೆ. ಭಾರತೀಯ ಜನಸಂಘ, ಸಂಸ್ಥಾ ಕಾಂಗ್ರೆಸ್ಸ್. ಸ್ವತಂತ್ರ ಪಾರ್ಟಿ, ಸಂಯುಕ್ತ ಸಮಾಜವಾದಿ ಪಾರ್ಟಿಯವರಾದರೋ ಇಂದಿರಾಜೀಯವರನ್ನು ಟೀಕಿಸುವದು ಹೊಸತೇನಲ್ಲ. ಅಂದು ಚುನಾವಣೆಯ ಸಮಯ ಬಡ ಬೋರೇ ಗೌಡನ ಬಳಿ 'ಇಂದಿರಾ ನೋಡಿ, ಸಮಾಜವಾದ ನೋಡಿ'ರೆಂದು ಹೇಳಿರುವ ಕಮ್ಯುನಿಸ್ಟರೂ,ದ್ರಾ.ಮು.ಕ.ದವರೂ ಮುಸ್ಲಿಂ ಲೀಗಿಗಳೂ ಅವರೊಂದಿಗೆ ಕೆಲ ಇಂದಿರಾ ಕಾಂಗ್ರೆಸ್ಸಿಗರೂ 'ನಿರಾಶೆ, ಮೋಸ' ಅನ್ನುತ್ತಿರುವದೇ ಅವರ ಪ್ರಾಮಾಣಿಕತನಕ್ಕೆ ಸಾಕ್ಷಿ. ಇದಕ್ಕೇನೇ ಸಮಾಜವಾದಿ ಪ್ರಾಮಾಣಿಕತನವೆಂದು ಪ್ರಗತಿಶೀಲ ಸಂಪ್ರದಾಯ ವಿರೋಧಿ ಸಮತಾವಾದಿಗಳು ಅರ್ಥ ಹೇಳಬಹುದು. ಪ್ರಗತಿಪಥದಲ್ಲಿ ನಿನ್ನೆಯ, ಹಳತು, ಓಬಿರಾಯನ ಕಾಲದ ಪ್ರಾಮಾಣಿಕತನ ಇಂದೂ ಇರುವದು ಸರಿಯೇನು? ಅದೂ ಬದಲಾಗಬೇಕು. ಸಮಾಜವಾದಿ ಪ್ರಾಮಾಣಿಕತನ ಬರಬೇಕು! ಬರಬೇಕು! ಇಂದಿರಾ ಕೃಪಾಕಟಾಕ್ಷಕ್ಕೊಳಗಾಗಬೇಕು!

—ಶ್ರೀ ಶಿವಶಂಕರ

ಸ್ವಾತಂತ್ರ್ಯ ವಿಶೇಷಾಂಕ—
— 1971 —

ಪ್ರತಿ ವರ್ಷದಂತೆ 'ನವಯುಗ'ದ ಸ್ವಾತಂತ್ರ್ಯ ವಿಶೇಷಾಂಕವು ಕರ್ನಾಟಕದ ಪ್ರಸಿದ್ಧ ಬರಹಗಾರರ ವಿವಿಧ ಲೇಖನಗಳನ್ನೊಳಗೊಂಡು ವಿಶಿಷ್ಟ ರೀತಿಯಲ್ಲಿ ಈ ವರ್ಷವೂ ಪ್ರಕಟವಾಗುವುದು.

ಅಖಿಲ ಕರ್ನಾಟಕದಲ್ಲಿಯೂ ಹೊರ ರಾಜ್ಯಗಳಲ್ಲಿಯೂ ವಿಶೇಷ ಪ್ರಚಾರವಾಗುವ ಈ ಸಂಚಿಕೆಯು ಜಾಹೀರಾತಿಗೆ ಉತ್ತಮ ವಾಹಕವಾಗಿದೆ. ಜಾಹೀರಾತುದಾರರು ಆದಷ್ಟು ತ್ವರ್ಯ ಜಾಹೀರಾತು ಕಳಿಸಿ ಪ್ರೋತ್ಸಾಹಿಸುವಂತೆ ವಿನಂತಿ.

ಮನೇಜರ್

'ನವಯುಗ', ಉಡುಪಿ.

ಚಾರುಚಯನ

ನಾವು ದೌರ್ಭಾಗ್ಯ ಚಕ್ರವರ್ತಿಗಳು

ಸುಮಾರು ಹತ್ತು ವರ್ಷಗಳಿಗೆ ಮೊದಲು ಉತ್ತರ ಧ್ರುವ–ದಕ್ಷಿಣ ಧ್ರುವಗಳು ಒಂದಾದ ಭ್ರಮೆಯನ್ನು ಕ್ರುಶ್ಚೇವ ಐಸನ್ ಹಾವರ್ ನಿರ್ಮಿಸಿದರು.

ಇಂತಹುದೇ ಇನ್ನೊಂದು ಭ್ರಮಾತ್ಮಕ ಲೋಕಕ್ಕೆ ನಮ್ಮನ್ನೀಗ ಚೌ–ಎನ್–ಲಾಯ್ ಮತ್ತು ನಿಕ್ಸನ್ ಒಯ್ಯುವ ಸಿದ್ಧತೆ ನಡೆಸಿದ್ದಾರೆ. ನಿಕ್ಸನ್ನರ ಪೀಕಿಂಗ್ ಭೇಟಿ ಇದಕ್ಕಿಂತ ಬೇರೆಯಾದೀತೆ?

ಭಾರತ–ಪಾಕಿಸ್ತಾನಗಳ ಸಂದರ್ಶನ ಮಾಡಲು ಕೀಸಿಂಗರಿಗೆ ಪ್ರೇರಕ ಶಕ್ತಿಯೆನಿಸಿದ್ದು ಬಂಗ್ಲಾದೇಶ್.ಬಂಗ್ಲಾದೇಶ್ ವಿದ್ಯಮಾನಗಳನ್ನು ಅಧ್ಯಯನ ಮಾಡುವುದೇ ಅವರ ಉದ್ದೇಶ.

ಮತ್ತೆ ಕೀಸಿಂಗರ್ ಪೀಕಿಂಗಿಗೇಕೆ ಹೋದರು? ಯಾಹ್ಯಾಖಾನರ ಆಗ್ರಹದ ಮೇರೆಗೆ ಅತ್ತ ರವಾನೆಯಾದರೆಂದು ವಾರ್ತೆ.

ಕೀಸಿಂಗರ್ ತಮ್ಮ ಅಧ್ಯಕ್ಷ ನಿಕ್ಸನ್ನರ ಅನುಮತಿಯಿಲ್ಲದೆ ಪೀಕಿಂಗಿಗೆ ಹೋಗುವುದು ಸಾಧ್ಯವಾದೀತೆ? ಹಾಗೆ ಸ್ವಪ್ನದಲ್ಲಿ ಭಾವಿಸಿದರೂ ದೊಡ್ಡ ತಪ್ಪಾಗುವುದು.

ಚೀನಾ ಅಂದರೆ ತೈವಾನವೆಂದು ಕಳೆದ ಮೂರು ದಶಕಗಳಿಂದಲೂ ಹೇಳಿಕೊಂಡು, ನಂಬಿಕೊಂಡು, ಆಚರಿಸಿಕೊಂಡು ಬಂದ ದೇಶ ಅಮೆರಿಕೆ.

ಕೆಂಪು ಚೀನಾದ ಅಸ್ತಿತ್ವವನ್ನೇ ಅಲ್ಲಗಳೆದ ಪ್ರಬಲ ಪ್ರಮುಖ ದೇಶ ಅಮೆರಿಕೆ.

ಕಾಲಕಾಲಕ್ಕೆ ಅಲ್ಲಿ ಅಧಿಕಾರಕ್ಕೆ ಬಂದವರೆಲ್ಲರೂ ಕೆಂಪು ಚೀನಾವನ್ನು ಒಂದು ದೇಶವೆಂದು ತಿಳಿಯಲೇ ಇಲ್ಲ. ಸುಮಾರು ೭೦–೭೫ ಕೋಟಿ ಚೀನೀಯರ ಅಸ್ತಿತ್ವವನ್ನೇ ವಿರೋಧಿಸಿದ, ಅದಕ್ಕೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪ್ರವೇಶ ನಿರಾಕರಿಸಿದ ದೇಶ ಅಮೆರಿಕೆ.

ರಾತ್ರಿ ಬೆಳಗಾಗುವಷ್ಟರಲ್ಲಿ ಅದರ ನೀತಿಯೇಕೆ ಬದಲಾಯ್ತು.

ಹಾಗೆ ನೋಡಿದರೆ, ಅಮೆರಿಕನ್ ನೀತಿಯಲ್ಲಿ ಬದಲಾವಣೆಯಾಗ ತೊಡಗಿದ್ದು ಇಂದಲ್ಲವೆನಿಸುತ್ತದೆ. ಕೆಂಪು ಚೀನಾ ಅಣ್ವಸ್ತ್ರವನ್ನು ಸಿಡಿಸಿದಂದೇ ಅಮೆರಿಕದ ಚೀನೀ ನೀತಿಗೆ ಹೃತ್ಕಂಪನವಾಗಿದೆ.

ಬಂಗ್ಲಾ ದೇಶ ವಿದ್ಯಮಾನಗಳಿಂದ ಅಮೆರಿಕೆ ಭಾರತದ ಮೇಲೆ ಸಹಾನುಭಾಪ ತೋರಿತು; ನಿರಾಶ್ರಿತರ ಪುನರ್ವಸತಿಗೆಂದು ಬಿಕ್ಕೆ ಹಾಕಿತು.

ಪಾಕಿಸ್ತಾನಕ್ಕೆ ಹಿಂದಿನ ತಾರೀಕಿನ ಲೈಸನ್ಸ್ ನೀಡಿ ಮದ್ದು ಗುಂಡು—ಸೈನಿಕ ಉಪಕರಣಗಳನ್ನು ಹಡಗಗಳಲ್ಲಿ ತುಂಬಿ ಕಳಿಸಿತು.

ಶಾಂತಿಪ್ರಿಯ ದೇಶ—ಭಾರತದ ಮಿತ್ರ ದೇಶ ಹೀಗೇಕೆ ಮಾಡಿತು? ವಿಶ್ವದ ಪ್ರಬಲ ಪ್ರಮುಖ ದೇಶದ ಈ ದ್ವಂದ್ವ ನೀತಿಯೇಕೆ?

ಇದಕ್ಕೆ ಉತ್ತರವರಸಲು ದೂರ ಹೋಗ ಬೇಕಾಗಿಲ್ಲವೆನಿಸುತ್ತದೆ.

ಇತ್ತೀಚೆಗಿನ ದಿನಗಳಲ್ಲಿ ಭಾರತದ ರಾಜ್ಯಕೀಯ ಕಮ್ಯುನಿಜಂನತ್ತ ವಾಲಿದೆ; ಈ ವಾಲಿಕೆ ದಿನದಿನಕ್ಕೂ ಹೆಚ್ಚುತ್ತಲೇ ಇದೆ.

ಉದ್ಯಮಗಳಲ್ಲಿ ರಾಷ್ಟ್ರೀಕರಣ, ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಮೂಲಭೂತ ಹಕ್ಕುಗಳನ್ನೇ ಕಿತ್ತು ಹಾಕುವ ದೂರಾಲೋಚನೆ....ಸೋವಿಯತ್ ರಶ್ಯದತ್ತ ತೀವ್ರವಾದ ಒಲವು....

ನಮ್ಮ ಮಹತ್ವದ ನಿರ್ಣಯಗಳೆಲ್ಲವೂ ಮಂಜೂರಾಗುವುದು ಮೊಸ್ಕೋದಲ್ಲೇ ಎಂಬ ಅತಿಶಯೋಕ್ತಿ ಬೇರೆ.

ಸೋವಿಯತ್ತು ಭಾರತಕ್ಕೆ ತನ್ನ ಕಮ್ಯುನಿಜಮನ್ನು ಮುಫತ್ತಾಗಿ ಸರಬರಾಜು ಮಾಡುತ್ತಿದೆ; ಕ್ರೈಸ್ತ ಮಿಶನರಿಗಳು ಯೇಸು ಕ್ರಿಸ್ತನ ಉಪದೇಶವನ್ನು ಉಚಿತವಾಗಿ ಕಳಿಸುತ್ತಿಲ್ಲವೇ, ಹಾಗೆ.

ಅದು ಪಾಕಿಸ್ತಾನವನ್ನೂ ತನ್ನ ಬುಟ್ಟಿಯಲ್ಲಿ ತುಂಬಿಕೊಳ್ಳಲು ಹವಣಿಸಿತು. ಅಯ್ಯೂಬ–ಕೋಸಿಗಿನ್ ಭೆಟ್ಟಿಯಾದರು. ಏನೋ ತುಸು ಕೊಡುಕೊಳ್ಳಾಟ ನಡೆಯಿತು.

ಆದರೆ, ಪಾಕ್–ಸೋವಿಯತ್ತು ಮಾನಸಿಕವಾಗಿ ಒಂದಾಗುವುದು ಹೇಗೆ ಸಾಧ್ಯ? ಪಾಕಿಗಳನ್ನು ಅಮೆರಿಕೆ ಹಾಗೂ ಕೆಂಪು ಚೀನಗಳ ಪ್ರಭಾವದಿಂದ ಬಿಡಿಸ ಬೇಕೆಂಬುದು ಸೋವಿಯತ್ತಿನ ಅಭಿಲಾಷೆ.

ಇದು ಸಾಧ್ಯವಾಗಲಿಲ್ಲ.

ಪಾಕ್ ಕಾಶ್ಮೀರ ನೀತಿಗೂ ಸೋವಿಯತ್ತಿಗೂ ಯೋಜನ ದೂರ. ಕಾಶ್ಮೀರ ನೀತಿಯೇ ಪಾಕ್ ರಾಜ್ಯಕಾರಣಿಗಳ ವಜ್ರಕವಚ. ಅದಕ್ಕಾಗಿ ಸೈನಿಕ ಶಕ್ತಿ ಸಂಚಯನ ಅತ್ಯವಶ್ಯ. ಯಾರು ಏನು ಶಸ್ತ್ರಾಸ್ತ್ರ ಕೊಡುತ್ತಾರೋ ಅವೆಲ್ಲವೂ ಪಾಕಿಗೆ ಬೇಕೇ ಬೇಕು.

ಅಮೆರಿಕೆ ಕೊಡುತ್ತಿತ್ತು; ಕೆಂಪು ಚೀನಾ ಕೊಡತೊಡಗಿತು; ಸೋವಿಯತ್ತೂ ಕೊಡ ಮಾಡಿತು. ಇನ್ನು ಜಾಗತಿಕ ಮಾರುಕಟ್ಟೆಯಲ್ಲಿ ಹೇಗೆ ಹೇಗೋ ಲಾಗ ಹೊಡೆದುದರಿಂದ ಒಂದಷ್ಟು ಬಂತು.

ಬಂದದ್ದೆಲ್ಲ ನೀರಾಗಿ ಹೋಯ್ತು. 'ಇನ್ನೂ ಕೊಡಿ' ಎಂದರು ಯಾಹ್ಯಾಖಾನ್... 'ಇಗೊ ಕೋ' ಎಂದರು ನಿಕ್ಸನ್.

ನೀವು ಕೊಡದೆ ಹೋದರೇನು. ಕೆಂಪು ಚೀನಾ ಕೊಡುತ್ತದೆ ಎಂಬ ಬೆದರಿಕೆ ಬೇರೆ. ಕೊಡದಿರಲಾದೀತೆ?

ಕೆಂಪು ಚೀನಾ ಅಣುಬಾಂಬು ಸ್ಫೋಟ ಮಾಡಿದ ದೇಶ. ಅದರ ಅಸ್ತಿತ್ವವನ್ನೇ ತಾನು ಅಲ್ಲಗಳೆದರೂ ಅದು ತನ್ನ ಮೇಲೆ ಸಮರ ಹೂಡಿದರೆ, ಅದನ್ನು ಅಲ್ಲಗಳೆಯಲು ಸಾಧ್ಯವಿಲ್ಲ; ತಲೆಗೊಡಲೇ ಬೇಕು.

ಉಳ್ಳವರು ಇಬ್ಬರ ಸ್ನೇಹ ಬಯಸುತ್ತಾರೆ. ತಮ್ಮಂತೆಯೇ ಉಳ್ಳವರು ಮೊದಲ ಪಂಕ್ತಿಯವರು. ಏನೂ ಇಲ್ಲದವರು ಎರಡನೆ ಸಾಲಿನವರು.

ಐಕರು ಕ್ರುಶ್ಚೇವರ ಭೆಟ್ಟಿ ಮಾಡಿದ್ದು ಅವರು ಉಳ್ಳವರೆಂದು; ನಿಕ್ಸನ್ ಚೌ–ಎನ್–ಲಾಯ್‌ಯನ್ನು ಕಾಣುವುದೂ ಅವರೂ ಉಳ್ಳವರೆಂದು.

ಪಾಕಿಸ್ತಾನ ಇಲ್ಲದವರ ಗುಂಪಿನ್ದು. ಆತ್ಮಾಭಿಮಾನವನ್ನೂ ಇಲ್ಲವೆನಿಸಿಕೊಂಡು ಪ್ರಬಲ ರಾಷ್ಟ್ರಗಳ ಮುಂದೆ ಕೈಚಾಚುವುದೇ ಕಾಯಕವಾಗಿಳ್ಳದ್ದು.

ಪೂರ್ವ–ಪಶ್ಚಿಮ ನೋಡದಿದ್ದ ಅಮೆರಿಕೆ—ಕೆಂಪು ಚೀನಾಗಳ ಮಿಲನದಲ್ಲಿ ಯಾಹ್ಯಾಖಾನರ ಕೈವಾಡವಿದೆಯೇ?

ಸೋವಿಯತ್ತಿನಿಂದಲೂ ವಿಪುಲ ಸೈನಿಕೋಪಕರಣ ಪಡೆಯಲು ಅದು ಈ ತಂತ್ರವನ್ನು ಬಳಸಿತೇ?

ರಶ್ಯ—ಕೆಂಪು ಚೀನಾ ಭಿನ್ನಮತ ಬೆಳೆಯುತ್ತಲೇ ಇದೆ. ಇಂಥವೇಳೆ ಅಮೆರಿಕೆ-ಕೆಂಪು ಚೀನಾಗಳು ಹತ್ತಿರ ಬಂದರೆ, ಸೋವಿಯತ್ತು ಬೆದರೀತೆ?

ಈ ಎರಡು ಕಮ್ಯುನಿಸ್ಟ್ ದೇಶಗಳ ನಡುವೆ ಸಮರ ಪ್ರಚೋದಿಸುವುದೇ ನಿಕ್ಸನ್ ಭೇಟಿಯ ರಹಸ್ಯವೆಂದೂ ಹೇಳಲಾಗುತ್ತಿದೆ.

ಭಾರತದ ಮಿತಿಮೀರಿದ ಎಡನೀತಿಯಿಂದ ನೊಂದ ಅಮೆರಿಕೆ ತನ್ನ ಪ್ರತಿಕ್ರಿಯೆಯನ್ನು ಈ ರೀತಿ ವ್ಯಕ್ತಪಡಿಸಿತೆ? ನಮ್ಮ ಒಲವು ಎತ್ತ ಹರಿದಿದೆಯೆನ್ನುವುದನ್ನು ಈಗ ಅಮೆರಿಕನ್ನರು ಸರಿಯಾಗಿ ಕಂಡುಕೊಂಡರೆ?

ಸಾಂಪ್ರದಾಯಿಕವಾಗಿ ಪ್ರಧಾನಿ ಗಾಂಧಿಯವರು ನಿಕ್ಸನ್ನರ ಪೀಕಿಂಗ್ ಭೇಟಿಯನ್ನು ಸ್ವಾಗತಿಸ ಬೇಕು. ವಿಶ್ವಶಾಂತಿಗೆ ಇದು ಪರಿಪೋಷಕವಾಗುವುದೆಂದು ಹಾರಯ್ಸ ಬೇಕು.

ಕೆಂಪು ಚೀನಾ–ಪಾಕಿಸ್ತಾನಗಳೆರಡೂ ಶತ್ರು ರಾಷ್ಟ್ರಗಳು. ಅಮೇರಿಕೆಯೂ ಶತ್ರು ಪಾಕಿಸ್ತಾನಕ್ಕೆ ಬೆಂಬಲ, ಉತ್ತೇಜನ ನೀಡುತ್ತಲೇ ಬರುತ್ತಿದೆ.

ಆದುದರಿಂದಲೇ ಭಾರತ—ಅಮೆರಿಕೆ

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

ಸ್ನೇಹ ಸಂಬಂಧಗಳ ಮೇಲೆ ಗಂಭೀರ ಪರಿಣಾಮ ಬೀರಬಹುದೆಂಬ ಎಚ್ಚರಿಕೆಯೂ ಹೊರಟಿದೆ.

ಭಾರತದ ಗೆಳೆತನಕ್ಕೆ ಅಮೆರಿಕೆಯೆಷ್ಟು ಮಹತ್ವ ಕೊಡುತ್ತಿದೆಯೆಂಬುದೀಗ ಕೆಲವು ವರ್ಷಗಳಿಂದ ಮನವರಿಕೆಯಾಗುತ್ತಿದೆ.

೫೫ ಕೋಟಿ ನಿರ್ಬಲ ಭಾರತೀಯರ ಸ್ನೇಹಕ್ಕಿಂತ ೭೫ ಕೋಟಿ ಸಬಲ ಕೆಂಪು ಚೀನೀಯರ ಮೈತ್ರಿಯನ್ನು ಅದು ಬಯಸುವುದು ತಪ್ಪಲ್ಲ.

ಇಲ್ಲದೆಯೂ ಉಳ್ಳವರೆಂದು ಲೇಬಲ್ ಹಚ್ಚಿ ತಿರುಗುವವರನ್ನು ಯಾರು ಗಮನಿಸುತ್ತಾರೆ.

ನಮ್ಮನ್ನು ಲೋಕ ಗಮನಿಸಬೇಕಾದರೆ, ನಾವೂ ಪ್ರಬಲರಾಗ ಬೇಕು; ಅಣ್ವಸ್ತ್ರ ಹೊಂದ ಬೇಕು.

ಸಾಮಾಜಿಕ ಪರಿಸ್ಥಿತಿಗಳ ಒತ್ತಡದಿಂದ ಸಾಮಾಜಿಕ ನ್ಯಾಯ ಪಾಲನೆಗಾಗಿ ಸಂವಿಧಾನವನ್ನೇ ಬುಡಮೇಲು ಮಾಡುವುದು ಯುಗಧರ್ಮವಾಗುತ್ತದೆ.

ಬದಲಾದ ಜಾಗತಿಕ ರಾಜ್ಯಕೀಯದಲ್ಲೂ ಅಣ್ವಸ್ತ್ರ ತಯಾರಿಸದಿರುವ ನಮ್ಮ ನಿರ್ಧಾರ ಮಾತ್ರ ಅಚಲವಾಗಿಯೇ ಉಳಿಯುವಂಥದ್ದೇ?

ಸಂವಿಧಾನ ಅಪರಿವರ್ತನೀಯವಲ್ಲವಾದರೆ, ನಮ್ಮ ಅಣುಶಕ್ತಿ ನೀತಿಯೂ ಅಪರಿವರ್ತನೀಯವೇ ಆಗಿ ಏಕುಳಿಯಬೇಕು?

ಪೀಕಿಂಗ್ ಭೇಟಿಯಲ್ಲಿ ನಿಕ್ಸನ್ ಜಯಗಳಿಸಿದರೆ, ಅಮೆರಿಕೆಯು ನಮ್ಮಿಂದ ಸಂಪೂರ್ಣ ದೂರ ಹೋದಂತೆಯೇ. ಆಪತ್ಕಾಲದಲ್ಲಿ ನಮ್ಮ ನೆರವಿಗೆ ಬರುವವರು ಯಾರು?

ಸೋವಿಯತ್ತೂ ಕೆಂಪು ಚೀನಾದ ಸ್ನೇಹಕ್ಕೆಳಸಿದರೆ ಆಶ್ಚರ್ಯವಲ್ಲ. ಆಗ ನಮ್ಮ ತಲೆಯ ಮೇಲೆ ನಮ್ಮದೇ ಕೈ.

ಸ್ವಾವಲಂಬನೆಯ ಮಾತಲ್ಲ ಹಾರವನ್ನು ನಾವು ಎಂದೋ ಕೈಬಿಟ್ಟಿದ್ದೇವೆ. ಪರಪುಟ್ಟರಾಗಿ ಬೆಳೆದು ಬಂದಿದ್ದೇವೆ. ನಮ್ಮ ನೀತಿ, ರೀತಿ, ಗೀತಿ, ಪ್ರೀತಿ, ಇತಿ, ಮತಿ, ಗತಿ, ಪ್ರತಿಯೆಲ್ಲವೂ ಪರಕೀಯವೇ.

ಪರಿಸ್ಥಿತಿ ಸುಧಾರಿಸಿಕೊಳ್ಳದಿದ್ದರೆ, ನಾವು ನೆಲದಲ್ಲಿ ಬಿದ್ದವರು ತಿಪ್ಪೆಗೆ ಉರುಳುತ್ತೇವೆ.

ನಮ್ಮ ವಿದೇಶ ನೀತಿ ಅಸಫಲವಾಗಿದೆಯೆಂಬುದನ್ನು ಕೆಂಪು ಚೀನಾ ತೋರಿಸಿಕೊಟ್ಟಿತು. ಅದನ್ನು ಅಮ್ಯೂಬಖಾನರು ಸಮರ್ಥಿಸಿ ಕೊಟ್ಟರು.

ಇದೀಗ ಯಾಹ್ಯಾಖಾನ್—ನಿಕ್ಸನ್ನರು ಅದು ದಿವಾಳಿಯಾಗಿದೆಯೆಂದು ಲೋಕಕ್ಕೆ ಜಾಹೀರು ಮಾಡ ಹೊರಟಿದ್ದಾರೆ.

ಹಾಗಿದ್ದರೂ ನಮ್ಮ ವಿದೇಶೀನೀತಿ ಸಂಪೂರ್ಣ ಸಫಲವೆಂದು ದೃಢ ನಂಬುಗೆಯಿಂದ ನಿಶ್ಚಿಂತರಾಗಿರುವ ನಮಗಿಂತ ದೌರ್ಭಾಗ್ಯ ಚಕ್ರವರ್ತಿಗಳು ಮತ್ತಾರು?

●●

ಜಗನ್ನಾಥ ಎಜುಕೇಶನ್ ಸೊಸೈಟಿ ಮುಂಬಾಯಿ

ಇದರ ಎರಡನೇ ವಾರ್ಷಿಕೋತ್ಸವವು ತಾ. 11—7—71ರಂದು ಸೊಸೈಟಿಯ ಆಫೀಸಿನಲ್ಲಿ ಜರಗಿ ಆಯವ್ಯಯದ ಲೆಕ್ಕವನ್ನೂ ವರದಿಯನ್ನೂ ಒಮ್ಮತದಿಂದ ಮಂಜೂರು ಮಾಡಲಾಯಿತು.

1971–72ನೇ ವರುಷದ ಆಡಳಿತ ಸಮಿತಿಗೆ ಈ ಕೆಳಗಿನ ಮಹನೀಯರನ್ನು ನೇಮಕ ಮಾಡಲಾಯಿತು. ಶ್ರೀಗಳಾದ ಎಸ್. ಜಿ. ಶೆಟ್ಟಿ (ಅಧ್ಯಕ್ಷ) ವಿ. ಪಿ. ಕೋಟ್ಯಾನ್ (ಉಪಾಧ್ಯಕ್ಷ) ವಿ. ಎಲ್. ಆಳ್ವ (ಗೌ. ಪ್ರಧಾನ ಕಾರ್ಯದರ್ಶಿ), ವಿ. ಎಸ್. ಕರಣಿಕ್ (ಗೌ. ಜತೆ ಕಾರ್ಯದರ್ಶಿ), ಎಸ್. ಎಸ್. ಹೆಜಮಾಡಿ (ಗೌ. ಖಜಾಂಜಿ), ಎಸ್. ಎಸ್. ಶೆಟ್ಟಿ, ಎಸ್. ಎಂ. ಶೆಟ್ಟಿ, ಎ. ಎನ್. ಶೆಟ್ಟಿ, ಕೆ. ಎಚ್. ಶೆಟ್ಟಿ, ಜಿ. ಬಿ. ಶೆಟ್ಟಿ, ಎಚ್. ಎಸ್. ರಾವ್, ಎಂ. ವಿ. ಭಟ್, ಬಿ. ಎಸ್. ಶೆಟ್ಟಿ, ಕರುಣಾಕರ ಎಸ್. ಶೆಟ್ಟಿ, ಪಿ. ಕೆ. ಸುಬ್ರಹ್ಮಣ್ಯನ್, ಎಂ. ಎ. ರಾಮನ್, ಶ್ರೀಮತಿ ಪ್ರೇಮಲತಾ ಜಿ. ಶೆಟ್ಟಿ (ಸದಸ್ಯರು). ವಿದ್ಯಾರ್ಥಿ ವೇತನ ಸಮಿತಿ, ಕೊರಂಗ್ರಪಾಡಿ—ಶ್ರೀಗಳಾದ ಕೆ. ಕೆ. ಕುಡ್ವ, ಕೆ. ಬಾಲಕೃಷ್ಣ ಶೆಟ್ಟಿ, ಕೆ. ಶ್ಯಾಮ ಶೆಟ್ಟಿ, ಕೆ. ಸುಂದರ ಶೆಟ್ಟಿ.

ಸಭಿಕರಲ್ಲಿ ಶ್ರೀ ವಿ.ಪಿ. ಕೋಟಿಯಾನ್ ಮತ್ತು ಶ್ರೀ ಎಂ. ವಿ. ಭಟ್‌ರವರು ಸಂಘದ ಏಳಿಗೆಯ ಕುರಿತು ಮಾತನಾಡಿದರು. ಶ್ರೀ ಭಟ್‌ರವರ ಸೂಚನೆಯಂತೆ ಮುಂಬಾಯಿಯ ಕನ್ನಡ ಮೀಡಿಯಂ ಹೈಸ್ಕೂಲ್ ವಿದ್ಯಾರ್ಥಿಗಳ ಪೈಕಿ S. S. C. ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆಯುವ ವಿದ್ಯಾರ್ಥಿಗೆ ಒಂದು ಬಹುಮಾನವನ್ನು ಬರುವ ವರುಷದಿಂದ ಕೊಡಬೇಕೆಂದು ನಿಶ್ಚಯಿಸಲಾಯಿತು.

ಅಧ್ಯಕ್ಷ ಶ್ರೀ ಎಸ್. ಜಿ. ಶೆಟ್ಟಿಯವರು ಮಾತನಾಡುತ್ತಾ, ಕಳೆದ 2 ವರುಷದಿಂದ ಸೊಸೈಟಿಯು ತೃಪ್ತಿಕರವಾದ ಕೆಲಸ ಮಾಡಿರುವುದೆಂದೂ ಈ ವರ್ಷ ಆರ್ಥಿಕ ಸ್ಥಿತಿಯನ್ನು ಇನ್ನಷ್ಟು ಸುಧಾರಿಸಲು ಪ್ರಯತ್ನಿಸಿ, ಹೆಚ್ಚಿನ ಬಡ ವಿದ್ಯಾರ್ಥಿಗಳಿಗೆ ಸಹಾಯ ದೊರೆಯುವಂತಾಗ ಬೇಕೆಂದೂ ನಮ್ಮ ಸೊಸೈಟಿಯ ಸಹಾಯದಿಂದ ಕೊರಂಗ್ರಪಾಡಿ ಗ್ರಾಮದ ಸರಕಾರಿ ಹ್ಯಾಯರ್ ಪ್ರೈಮರೀ ಶಾಲೆಯ ಕಟ್ಟಡ ಮತ್ತು ಧ್ವಜಸ್ತಂಭದ ಕೆಲಸವನ್ನು ತ್ವರಿತವಾಗಿಯೂ ತೃಪ್ತಿಕರವಾಗಿಯೂ ನೆರವೇರಿಸಲಾಯಿತೆಂದೂ; ಈ ವರುಷ ಈ ಶಾಲೆಯ ಬಡವಿದ್ಯಾರ್ಥಿಗಳಿಗೆ ಕಳೆದ ವರುಷಕ್ಕಿಂತ ಶೇಕಡಾ 24ರಷ್ಟು ಹೆಚ್ಚಿನ ವಿದ್ಯಾರ್ಥಿ ವೇತನ ಕೊಡುವಂತಾಗಬೇಕೆಂದು ಹಾರೈಸಿದರು.

ಜತೆ ಕಾರ್ಯದರ್ಶಿ ಶ್ರೀ ವಿ. ಪಿ. ಕೋಟಿಯಾನರು ಧನ್ಯವಾದಗಳನ್ನರ್ಪಿಸಿದರು.

ಮಿಲಾಗ್ರಿಸ್ ಕಾಲೇಜಿನ ವಿದ್ಯಾರ್ಥಿ ಸಂಘದ ಉದ್ಘಾಟನೆ

ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭವು ತಾ. 23—7—71ರಂದು ಜರಗಿತು. ಪ್ರಾರ್ಥನಾನಂತರ ಕಾಲೇಜಿನ ಸ್ತುತಿ ಗೀತೆಯನ್ನು ಹಾಡಲಾಯಿತು; ಬಳಿಕ, ಕಾಲೇಜಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಶ್ರದ್ಧಾಭಕ್ತಿ ಕರ್ತವ್ಯ ನಿಷ್ಠೆಯನ್ನು ವ್ಯಕ್ತಪಡಿಸುವುದಾಗಿ ಸಂಘದ ಸದಸ್ಯರಿಂದ ಪ್ರತಿಜ್ಞಾ ಸ್ವೀಕಾರ ಮಾಡಲಾಯಿತು. ವಿದ್ಯಾರ್ಥಿ ವೃಂದದ ಕಾರ್ಯದರ್ಶಿ ಯು. ರಮೇಶರಾಯರು ಸ್ವಾಗತಿಸಿದರು. ಕಲ್ಯಾಣಪುರದವರೇ ಆದ ನಾಗಪುರದಲ್ಲಿ ಪೋಲೀಸು ಸುಪರಿಂಡೆಂಟರಾಗಿರುವ ಶ್ರೀ ರೊನಾಲ್ಡ್ ಲೂಯಿಸರು ಸಂಘವನ್ನು ಉದ್ಘಾಟಿಸುತ್ತಾ, ಪ್ರಚಲಿತ ವಿದ್ಯಾರ್ಥಿ ಅಶಿಸ್ತಿಗೆ ಕಾರಣಗಳನ್ನು ವಿಶ್ಲೇಷಿಸುತ್ತಾ ಬೋಧಪ್ರದ ಭಾಷಣವನ್ನಿತ್ತರು. ಕಾಲೇಜಿನಲ್ಲಿ ವಿದ್ಯಾರ್ಥಿಗಳ ಮುಂದಿರುವ ಸಕಲ ಸೌಲಭ್ಯಗಳ ಕುರಿತು ಅವರ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಅದರ ಸಂಪೂರ್ಣ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕೆಂದು ಆಶಿಸಿದರು. ಪ್ರಿನ್ಸಿಪಾಲ್ ಡಾ। ಪಿ. ಗುರುರಾಜಭಟ್ಟರು ವಿದ್ಯಾರ್ಥಿಗಳ ಮುಂದೆ, ವಿದ್ಯೆಯ ಮಹತ್ವ, ವಿದ್ಯಾರ್ಥಿಯ ಕರ್ತವ್ಯ, ಜವಾಬ್ದಾರಿಗಳ ಕುರಿತಾಗಿ ತಮ್ಮ ಸೂಕ್ತಿಗಳನ್ನಿರಿಸಿದರು. ವಿದ್ಯಾರ್ಥಿವೃಂದದ ಉಪಕಾರ್ಯದರ್ಶಿ ಶ್ರೀ ಉಮಾನಾಥ ಶೆಟ್ಟಿಯವರು ಧನ್ಯವಾದಗಳನ್ನು ಅರ್ಪಿಸಿದರು.

ವಿಜಯಾ ಬೇಂಕಿನ ಹೊಸ ಶಾಖೆಗಳು

ಕೊಡಗು ಜಿಲ್ಲೆಯ ನಾಗ್ರೂರು ಮತ್ತು ಗಟ್ಟಹಳ್ಳಿ ಎಂಬಲ್ಲಿ ವಿಜಯಾ ಬೇಂಕಿನ ಶಾಖೆಗಳು ತಾ. 27—7—71ರಂದು ತೆರೆಯಲ್ಪಟ್ಟವೆ. ಈ ಎರಡು ಹೊಸ ಶಾಖೆಗಳ ತೆರೆಯುವಿಕೆಯಿಂದ ವಿಜಯಾ ಬೇಂಕು ಒಟ್ಟು 134 ಶಾಖೆಗಳನ್ನು ಹೊಂದಿದಂತಾಯಿತು.

●●

ಮತದಾರರ ಕರಡು ಪಟ್ಟಿಯಲ್ಲಿ ನಿಮ್ಮ ಹೆಸರು ಇದೆಯೇ?

ನೀವು ಮತದಾನ ಮಾಡಲು ಅರ್ಹರಾಗಿದ್ದಲ್ಲಿ ನಿಮ್ಮ ಕ್ಷೇತ್ರದ ಮತದಾರರ ಕರಡು ಪಟ್ಟಿಯಲ್ಲಿ (ಇಲೆಕ್ಟೋರಲ್ ರೋಲ್) ನಿಮ್ಮ ಹೆಸರು ದಾಖಲಾಗಿರುವುದನ್ನು ಖಚಿತ ಪಡಿಸಿಕೊಳ್ಳಿ. ಈ ಪಟ್ಟಿ ದೊರೆಯುವ ಸ್ಥಳ:

ಗ್ರಾಮದ ಆಫೀಸು
ಪಂಚಾಯತಿ ಆಫೀಸು
ಬ್ಲಾಕ್ ಡೆವಲಪ್‌ಮೆಂಟ್ ಆಫೀಸು
ತಾಲೂಕು ಆಫೀಸು
ಸಬ್ ಡಿವಿಜನಲ್ ಆಫೀಸು

ಪಟ್ಟಿಯಲ್ಲಿ ನಿಮ್ಮ ಹೆಸರು ಇಲ್ಲದೆ ಹೋದಲ್ಲಿ 6ನೇ ನಂಬರಿನ ಫಾರ್ಮಿನಲ್ಲಿ ಅರ್ಜಿ ಸಲ್ಲಿಸಿರಿ.

ಅನರ್ಹರಾಗಿರುವ ಯಾರ ಹೆಸರನ್ನಾಗಲಿ ಪಟ್ಟಿಯಲ್ಲಿ ನೀವು ಕಂಡರೆ 7ನೇ ನಂಬರಿನ ಫಾರ್ಮಿನಲ್ಲಿ ಅದನ್ನು ಬರೆದು ಕೊಡಿ.

ನಿಮ್ಮ ಮತ್ತು ನಿಮ್ಮ ಕುಟುಂಬದ ಸದಸ್ಯರ ಬಗೆಗೆ ವಿವರಗಳು ತಪ್ಪಾಗಿದ್ದಲ್ಲಿ 8ನೇ ನಂಬರಿನ ಫಾರ್ಮಿನಲ್ಲಿ ಬರೆದು ತಿಳಿಸಿರಿ.

ಇವೆಲ್ಲ ಫಾರ್ಮುಗಳು ಸಿಗುವ ಸ್ಥಳ:

ಗ್ರಾಮ ಪಟೇಲ
ಗ್ರಾಮಾಧಿಕಾರಿ
ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್

ಫಾರ್ಮು ತುಂಬಿಸಲು ಅವರು ನಿಮಗೆ ಸಹಾಯ ಮಾಡುತ್ತಾರೆ. ತುಂಬಿಸಿದ ಫಾರ್ಮುಗಳನ್ನು ಅವರ ಕೈಯಲ್ಲಿ ಕೊಡಿರಿ.

ಎಸ್. ಪಿ. ಸೆನ್‌ವರ್ಮಾ
ಭಾರತದ ಚೀಫ್ ಇಲೆಕ್ಷನ್ ಕಮಿಷನರ್.

DAVP 71/144 KANNADA

(ಆ) ವಿವೇಕಾನಂದ

ಎದ್ದು ಇನ್ನೊಬ್ಬ (ಅ) ವಿವೇಕಾನಂದ
ಉರು ಹೊಡೆದ ತತ್ವಗಳನೊರೆದೊರೆದು
ಬಿಗಿದ ಭಾಷಣಗಳನು ಉದ್ದ ಉದ್ದ
ಧರ್ಮದೇಳಿಗೆಗಾಸು ಮೀಸಲೆಂದ.
ಊರೂರುಗಳೊಳೆಲ್ಲ ಅವನ ನಡಿಗೆ
ಮರುಳಾಯ್ತು ಜನ ಅವನ ನುಡಿಗೆ
ಹೊರದೇಶಕೂ ಹೋಗಿ ಧರ್ಮ ಪ್ರಚಾರ
ಮಾಡಿ ಬರ ಬೇಕೆನುವುದವನ ವಿಚಾರ,
ಧರ್ಮಾಭಿಮಾನಿಗಳು ಧನವ ಸಂಗ್ರಹಿಸಿ
ಕಳುಹಿ ಕೊಟ್ಟರು ಅವನ ಉಪಚಾರ ನಡೆಸಿ
ಬಂದಿಳಿದ ನವ ವಿಮಾನದಿ ಅಮೇರಿಕಕೆ
ಕಂಡ ನವ ನಾಗರಿಕ ಜನರಲಿಹ ಬಯಕೆ
"ಹಾರಿದರು ಆಗಸಕೆ ಏರಿದರು
ಚಂದ್ರನನು
ಸುತ್ತಿಹರು ಭೂಮಿಯನು
ಧನವಗಳಿಸಿಹರು
ಥಳಕು ಬೆಳಕಿನ ಜೀವನವ ನಡೆಸುತಿಹರು"
ಆದರೂ ಅತೃಪ್ತರಲ್ಲಿರುವ ಜನರು.
ಹೋದವನು ಬೆರೆತನಲ್ಲಿಯ
ಬದುಕಿನೊಳಗೆ
ಮರೆತ ತನ್ನಯ ದೇಶಧರ್ಮವನು ಕಡೆಗೆ
ಸುತ್ತಿವನು ಊರೂರ ಕಂಡ ಕೇರಿಗಳ
ಸಿನೇಮಾ, ಹೋಟೇಲು, ಬಾರು,
ಬೀಚುಗಳ
ಉನ್ಮತ್ತ ಹೆಣ್ಣುಗಳ ಕ್ಯಾಬರೇ
ಸ್ಟ್ರಿಪ್‌ಟೀಸ್‌ಗಳ.
ಕಂಡು, ಮರುಳಾದನವ- ಬಿಳಿಯ
ಮುಖದವಳ
ಲಗ್ನವಾದಳು ಮೇರಿ ಚರ್ಚಿನಲ್ಲವನ
ಮೋಹ ಪರವಶನಾದ ಮೇಲಾವ ಧರ್ಮ?
ಕಾಯ್ತಾಡ ಜನರೆಲ್ಲ ಕಾದು
ಕುಳಿತಿಹರಿಂದು
ನಮ್ಮ ಧರ್ಮವ ಮೆರೆಸಿ ಬರುವನೆಂದು
ಇನ್ನೇಕೆ ಬಂದಾನು ಅತ ಬಡ ಭಾರತಕೆ
ಬಾರದಿರುವುದೇ ಲೇಸು ಅವನ ಜೀವನಕೆ.

—ಟೀ ರಾಧಾಕೃಷ್ಣ, ಪುತ್ತೂರು.

ದಯಮಾಡಿ
ನಿಮ್ಮ ಬಾಕಿ ಚಂದಾ
ಹಣವನ್ನು ಕಳುಹಿಸಿರಿ

ಮಗನಿಂದ ಮಿಲಿಯಾಧೀಶನ ಕೊಲೆ

(ಎರಡನೇ ಪುಟದಿಂದ)

ಳಿಕೆ ಒಂದು ಕತೆಯಂತೆ ಕಾಣುತ್ತದೆ. 'ನಾನೊಂದು ದಿನ ಶಫು ಮನೆಗೆ ಹೋಗಿದ್ದೆ. ಬೆಳಗ್ಗೆ ಹೋದವನು, ಅವನೊಡನೆಯೇ ಇದ್ದೆ. ಮಧ್ಯಾಹ್ನ 12-30ರ ಸುಮಾರಿಗೆ ಗೋಪಾಲದಾಸರು, ಶಫುವನ್ನು ಹುಡುಕಿಕೊಂಡು ಅಲ್ಲಿಗೆ ಬಂದರು-ಬಂದವರೇ ನಮ್ಮಿಬ್ಬರಿಗೂ ಶಿವಲೋಮಲ್ಲರನ್ನು ಸಾಯಿಸಿ ಬಿಡಲು ಸೂಚಿಸಿದರು. ಶಿವಲೋಮಲ್ಲರ ಹೆಂಡತಿಗೂ, ಅವರಿಗೂ ಜಗಳವಾಯಿತಂತೆ. ಈ ಕಾರಣಕ್ಕಾಗಿ ಶಿವಲೋಮಲ್ಲರನ್ನು ಕೊಲ್ಲಿಸುವುದು ಕ್ಷೇಮವೆಂದು ಅವರು ನನ್ನೊಡನೆ ಹೇಳಿದರು. ಅಷ್ಟೇ ಅಲ್ಲ-ಹತ್ತು ರೂಪಾಯಿಗಳನ್ನು ಮುಂಗಡವೆಂದು ಕೊಟ್ಟರು. ಈ ಕೆಲಸ ಪೂರೈಸಿಕೊಟ್ಟರೆ 6000-00 ರೂಪಾಯಿಗಳನ್ನು ಕೊಡುವುದಾಗಿ ಭರವಸೆ ಕೊಟ್ಟರು. ರಾತ್ರಿ 9ರ ಸುಮಾರಿಗೆ ನಾವು ಮೂವರು-ನಾನು, ಶಫು, ಹಜ್ರೋ- ಒಂದು ಟಾಂಗಾವನ್ನು ಬಾಡಿಗೆಗೆ ಗೊತ್ತು ಮಾಡಿದೆವು. ಆ ಟಾಂಗದಲ್ಲಿ ಕುಳಿತುಕೊಂಡು ರಾತ್ರಿ ಹನ್ನೊಂದರ ತನಕ ಊರಲ್ಲಿ ಒಡಿಯಾಡಿದೆವು. ಟಾಂಗದವನಿಗೆ ಬಾಡಿಗೆ ಕೊಟ್ಟು ರಾತ್ರಿ 12-30ರ ಸುಮಾರಿಗೆ ತಿರುಗಿ ಬರುವಂತೆ ಹೇಳಿದೆವು. ಆತ ಒಪ್ಪಿಕೊಂಡಂತೆ ಟಾಂಗವನ್ನು ತಂದು ನಮ್ಮನ್ನೆಬ್ಬಿಸಿದ. ಆಗ 12-45 ಗಂಟೆ ಆಗಿತ್ತು. ಟಾಂಗದವನಿಂದ, ಗಾಡಿಯನ್ನು ನಮ್ಮ ವಶಕ್ಕೆ ತೆಗೆದುಕೊಂಡೆವು. ನಾವು ಮೂವರೂ ಗಾಡಿಯಲ್ಲಿ ಕುಳಿತೆವು. ಶಫು ಮತ್ತು ಹಜ್ರೋ ಗಾಡಿಯನ್ನು ಓಡಿಸಿದರು. ನಾನು ಅಷ್ಟೋ-ಇಷ್ಟೋ ಈ ಕೆಲಸದಲ್ಲಿ ಅವರೊಡನೆ ಸಹಕರಿಸಿದೆ. ನಾವು ಕುಳಿತಿದ್ದ ಟಾಂಗಾ, ಶಿವಲೋಮಲ್ಲರ ಮನೆಯ ಹತ್ತಿರಕ್ಕೆ ಬಂತು. ನಾವು ಟಾಂಗವನ್ನು ರಸ್ತೆಯ ಅಂಚಿನಲ್ಲಿ ನಿಲ್ಲಿಸಿದೆವು. ಗೋಪಾಲ ದಾಸರು, ಮಹಡಿಯ ಮೇಲಿದ್ದವರು ನಮ್ಮನ್ನು ಕಂಡು ಕೆಳಕ್ಕಿಳಿದು ಬಂದು, ಹೊರ ಬಾಗಿಲನ್ನು ತೆಗೆದರು. ನಮ್ಮನ್ನು ಒಳಕ್ಕೆ ಬರುವಂತೆ ಸೂಚಿಸಿದರು. ನಾವೆಲ್ಲ ಒಟ್ಟಾಗಿಯೇ ಅವರ ಮನೆಯನ್ನು ಪ್ರವೇಶಿಸಿದೆವು. ಅವರು ನಮ್ಮನ್ನು ಒಂದು ಕೋಣೆಯ ಹತ್ತಿರಕ್ಕೆ ಕರೆದುಕೊಂಡು ಹೋದರು. ಇದೇ ಕೋಣೆಯಲ್ಲಿದ್ದಾರೆ ಎಂದು ಬೊಟ್ಟುಮಾಡಿ ತೋರಿಸಿದರು. ಮಲಗಿದ್ದ ವ್ಯಕ್ತಿ ಗಾಢ ನಿದ್ರೆಯಲ್ಲಿದ್ದರು. ಅವರು ಒಂದು ಮಂಚದ ಮೇಲೆ ಮಲಗಿದ್ದರು. ಗೋಪಾಲ ದಾಸರು ತಮ್ಮ ಬಳಿಯಿದ್ದ ಟಾರ್ಚಿಯನ್ನು ಹತ್ತಿಸಿದರು. ಅದರ ಬೆಳಕು ಮಲಗಿದ್ದ ವ್ಯಕ್ತಿಯ ಮುಖದ ಮೇಲೆ ಬಿದ್ದಿತು. ಬೆಳಕಿನ ಸಹಾಯದಲ್ಲಿ ಶಫು ಮಲಗಿದ್ದ ವ್ಯಕ್ತಿಯ ಕತ್ತನ್ನು ಬಲವಾಗಿ ಹಿಡಿದು ಅವುಕಿದ. ನಾನು ಶಿವಲೋಮಲ್ಲರ ಕಾಲುಗಳ ಮೇಲೆ ಕುಳಿತೆ. ಹಜ್ರೋ ಅವರ ಎದೆಯ ಮೇಲೆ ಕುಳಿತುಕೊಂಡ. ಇದು ನಡೆಯುತ್ತಿದ್ದಂತೆಯೇ ಗೋಪಾಲದಾಸರು ಟಾರ್ಚನ್ನು ಶಫು ಕೈಗೆ ಕೊಟ್ಟು ಅಲ್ಲಿಂದ ಕಾಲ್ದೆಗೆದರು. ಅನಂತರ ಶಫು ತನ್ನ ತಲೆಗೆ ಸುತ್ತಿಕೊಂಡಿದ್ದ ರುಮಾಲನ್ನು ಬಿಚ್ಚಿ, ಮೃತರ ಕತ್ತಿಗೆ ಸುತ್ತಿದ. ಇದಾದ ತರುವಾಯ ಅವರ ದೇಹವನ್ನು ನಾವು ಬರುತ್ತಾ ತಂದಿದ್ದ ಗೋಣಿ ಚೀಲದಲ್ಲಿ ತುಂಬಿದೆವು. ಚೀಲವನ್ನು ಹೊತ್ತು ಹೊರಕ್ಕೆ ತಂದೆವು. ಟಾಂಗಾದಲ್ಲಿ ಇಳಿಸಿ ಕೊಂಡೆವು. ಗಾಡಿಯನ್ನು ನಮ್ಮ ಜನಾಂಗದವರನ್ನು ಹೂಳುವ ಸ್ಥಳಕ್ಕೆ ಓಡಿಸಿದೆವು. ಚೀಲವನ್ನು ಗಾಡಿಯಿಂದ ಅಲ್ಲಿ ಇಳಿಸಿದೆವು. ಶಫು ಪುನಃ ಟಾರ್ಚು ಹತ್ತಿಸಿದ. ಅದರ ಬೆಳಕಿನಲ್ಲಿ, ನಾವು ಕೊಲೆ ಮಾಡಿದ್ದು ಶಿವಲೋಮಲ್ಲರೆಂಬುದು ತಿಳಿಯಿತು. ಮೃತರ ಮೈಮೇಲಿನ ಜುಬ್ಬದಲ್ಲಿದ್ದ ಬಂಗಾರದ ಗುಂಡಿಗಳನ್ನು ನಾನು ತೆಗೆದುಕೊಂಡೆ. ಅನಂತರ ಒಂದು ಗುಂಡಿ ತೆಗೆದು, ಹೆಣವನ್ನು ಹೂಳಿ, ಮನೆಗೆ ಬಂದೆವು.

ಆ ರಾತ್ರಿ ಶಿವಲೋಮಲ್ಲರ ಮನೆಯಲ್ಲಿ ದೀಪಗಳು ಉರಿಯದಂತೆ ಗೋಪಾಲದಾಸರು ನೋಡಿಕೊಂಡಿದ್ದರು. ನಾವು ಅವರ ಮನೆ ತಲುಪುವುದಕ್ಕೂ ಮೊದಲು ಮನೆಯ 'ಫ್ಯೂಸನ್ನು' ಗೋಪಾಲದಾಸರು ಕೆಡಿಸಿಟ್ಟಿದ್ದರು.

ಮರುದಿನ-ಅಂದರೆ 28-2-43ರಂದು ಗೋಪಾಲದಾಸರು ನಮ್ಮ ಭೇಟಿ ಮಾಡಿ, ಶಫು ಕೈಯಲ್ಲಿ ಒಂದು ನೂರು ರೂಪಾಯಿಗಳನ್ನು ಕೊಟ್ಟರು. ಒಂದು ವಾರ ಬಿಟ್ಟು ನಮಗೆ ಮತ್ತೆ 200-00 ರೂಪಾಯಿಗಳನ್ನು ಪಾವತಿ ಮಾಡಿದರು. ಆದರೆ ಗೋಪಾಲದಾಸರು ಒಪ್ಪಿಕೊಂಡಂತೆ ನಡೆಯಲಿಲ್ಲ. ಒಪ್ಪಿಕೊಂಡಂತೆ 6000-00 ರೂಪಾಯಿಗಳನ್ನು ಕೊಡಲಿಲ್ಲ. ಬರಿಯ ಕಾಲಹರಣ ಮಾಡಲಾರಂಭಿಸಿದರು.'

ಈ ಹೇಳಿಕೆಯ ಆಧಾರದ ಮೇಲೆ ಉಳಿದ ವಿಷಯಗಳನ್ನು ಪೋಲಿಸರು ಸಂಗ್ರಹಿಸಿದರು. ಶಫು, ಅತ್ತು, ಹಜ್ರೋ ಅವರೊಳಗೆ ಹುಟ್ಟಿಕೊಂಡ ಜಿಜ್ಞಾಸೆಯೇ ಈ ಭೀಕರ ಕೊಲೆಯನ್ನು ಬಯಲಿಗೆ ತಂದಿತು. ಗೋಪಾಲದಾಸ ಕೊಡುವುದಾಗಿ ಒಪ್ಪಿಕೊಂಡ ಮೊಬಲಗಿನಲ್ಲಿ ಅತ್ತು ತನ್ನ ಹಿಸ್ಸೆಗೆ ಒತ್ತಾಯಿಸಿದ. ಎಲ್ಲವನ್ನೂ ಗಿಟ್ಟಿಸಿಕೊಂಡು, ಉಳಿದವರಿಗೆ ಪಂಗನಾಮ ಹಾಕಬೇಕೆಂದು ಶಫು ಲೆಖ್ಖ ಹಾಕುತ್ತಿದ್ದ. ಶಫು-ಅತ್ತು ಅವರೊಳಗೆ ಜಗಳವಾಯಿತು. ಅವರಿಬ್ಬರೊಳಗೆ ಶಫು ಬಲಾಢ್ಯ. ಹೀಗೆ ಜಗಳಾಡಿದರೆ ಅತ್ತುವನ್ನು ಕೊಲ್ಲುವುದಾಗಿ ಆತ ಬೆದರಿಸಿದ. ಇದು ಬರಿಯ ಬೆದರಿಕೆಯಾಗಿರಲಿಲ್ಲ. 16—4—43ರಂದು ಶಫುವಿನ ಸೂಳೆ ಮಧ್ಯ ಪ್ರವೇಶಿಸದೆ ಉಳಿದಿದ್ದರೆ, ಅತ್ತು ತನ್ನ ಅಂತ್ಯವನ್ನೇ ಕಾಣುತ್ತಿದ್ದ. ಪ್ರಾಣ ಭೀತಿಯಿಂದ ಅತ್ತು ಜೆಕೋಬಾಬಾದನ್ನು ಬಿಟ್ಟು ಬಂದ. ತನ್ನ ಜೀವ ಉಳಿಸಿಕೊಳ್ಳುವ ಆತುರದಿಂದ, ಪ್ರಧಾನಿ ಅಲ್ಲಾಭಕ್ಷರನ್ನು ನೋಡಲು ಬಯಸಿದ.

6000-00 ರೂಪಾಯಿಗಳನ್ನು ಒಂದು ಗಂಟಿನಲ್ಲಿ ಗೋಪಾಲದಾಸ ಕೊಟ್ಟುಬಿಟ್ಟಿದ್ದರೆ ಈ ಕೊಲೆಯ ಸುಳಿವು ಸಿಗುತ್ತಿರಲಿಲ್ಲವೇನೋ? ಆದರೆ ಅವನ ಹತ್ತಿರ ಅಷ್ಟು ದುಡ್ಡಿರಲಿಲ್ಲ. ಶಿವಲೋಮಲ್ಲರ ವಹಿವಾಟನ್ನು ನೋಡಿಕೊಳ್ಳುತ್ತಿದ್ದವನು ಹಿರಿಯ ಮಗ ಮಾಧವ. ಆತ ಸೆರೆಮನೆಗೆ ಹೋದ ಮೊದಲುಗೊಂಡು ಅವನ ಸ್ಥಾನವನ್ನು ಆಕ್ರಮಿಸಿಕೊಂಡವನು ಸೋದರಳಿಯ ಮನು. ಆದ್ದರಿಂದ ಅಷ್ಟು ಸುಲಭವಾಗಿ ಅವನ ಕೈಗೆ ಹಣ ಸಿಗುವಂತಿರಲಿಲ್ಲ. ತಂದೆ ಇದ್ದಕ್ಕಿದ್ದಂತೆ ಮಾಯವಾದ ಕೆಲವು ದಿನಗಳಲ್ಲಿ ಅಣ್ಣ ಮಾಧವನ ಬಿಡುಗಡೆಯಾಯಿತು ಈ ಅಂತರದಲ್ಲಿ ಒಂದಿಷ್ಟು ಹಣ ಅವನ ಕೈಗೆ ಬಂದಿತಾದರೂ, ಅದನ್ನು ಆತ ಏಕಾ-ಏಕಿ ಖರ್ಚು ಮಾಡುವಂತಿರಲಿಲ್ಲ. ಹೊರ ತೆಗೆಯಲು ಆತ ಹೆದರಿಕೊಂಡ, ಈ ಹಣವನ್ನು ಎಂತು ಯಾಕೆ ಖರ್ಚು ಮಾಡಿದ ಎಂಬ ಅನುಮಾನ ಬಂದರೆ-?

ಈ ಅನುಮಾನ ಕೊನೆಯಲ್ಲಿ ಅವನನ್ನೇ ಆಹುತಿ ತೆಗೆದುಕೊಂಡಿತು. ಶಫು, ಹಜ್ರೋ, ಅತ್ತು, ಗೋಪಾಲದಾಸರ ಮೇಲೆ ಶಿವಲೋಮಲ್ಲರ ಕೊಲೆಯ ಆರೋಪ ಹೊರಿಸಿ, ಅವರನ್ನು ವಿಚಾರಣೆಗೆ ಗುರಿಗೊಳಿಸಲಾಯಿತು. ಅತ್ತುವಿಗೆ ದಯಾಭಿಕ್ಷೆಯನ್ನು ಕೊಡಿಸಿ, ಅವನನ್ನು ಮಾಫಿ ಸಾಕ್ಷಿಯಾಗಿ ತೆಗೆದುಕೊಳ್ಳಲಾಯಿತು.

ಆತ ಕೋರ್ಟಿನಲ್ಲಿ ಎಲ್ಲವನ್ನೂ ವಿಷದಪಡಿಸಿದ. ಆತ ಕೊಟ್ಟ ವಿವರಗಳೊಡನೆ, ಉಳಿಕೆ ಸಾಕ್ಷಿಗಳ ಹೇಳಿಕೆಗಳು ಸುಲಭವಾಗಿ ಹೊಂದಿಕೊಂಡವು ಈ ಹೊಂದಾಣಿಕೆಯಿಂದ ಅವನ ವಾಗ್ಮೂಲದ ತೂಕ ಹೆಚ್ಚಿತು.

27—2—43ರಂದು ರಾತ್ರಿ ಮನೆಯ ಸೇವಕರು ಹೊರ ಬಾಗಿಲನ್ನು ಭದ್ರಪಡಿಸಿ ಮಲಗಲು ಹೋಗಿದ್ದೆವು ಎಂದು ತಿಳಿಸಿದರು. ಮನೆಯ ಕೆಲಸದವಳು ಬೆಳಗಿನ ಸಮಯ ಹೊರ ಬಾಗಿಲು ತೆರೆದಿತ್ತು ಎಂದು ಸಾಕ್ಷಿ ಕೊಟ್ಟಳು. ಎಚ್ಚರಗೊಂಡ ತಾನು ದೀಪ ಉರಿಸಲು ಪ್ರಯತ್ನಿಸಿದಾಗ ಅದು ಹತ್ತಿಕೊಳ್ಳಲಿಲ್ಲವೆಂಬುದನ್ನೂ ಕೋರ್ಟಿನ ಗಮನಕ್ಕೆ ತಂದಳು 28-2-43ರಂದು ವಿದ್ಯುಚ್ಛಕ್ತಿ ಇಲಾಖೆಯ ನೌಕರರು ಬಂದು ಪರೀಕ್ಷಿಸಿದಾಗ ಮೀಟರಿನ 'ಫ್ಯೂಸ್ ವಯರ್' ಸುಟ್ಟಿದ್ದು ಕಂಡು ಬಂತು. ಪ್ಲಗ್ಗಿಗೆ ಲೋಹದ ತುಣುಕನ್ನು ತಗುಲಿಸದೆ, ಆ ರೀತಿ 'ವಯರ್' ಸುಟ್ಟು ಹೋಗಲು ಸಾಧ್ಯವಿಲ್ಲವೆಂದು ಅವರು ಸಾಕ್ಷಿಕೊಟ್ಟರು. ಇದನ್ನು ಆಕಸ್ಮಿಕವೆಂದು ಪರಿಗಣಿಸುವಂತಿರಲಿಲ್ಲ. ಅದು ಉದ್ದಿಶ್ಯಪಟ್ಟು ಮಾಡಿದ ಕೆಲಸ. ಉಳಿಕೆಯ ಜನ ಆ ಕೆಲಸ ಮಾಡಲು ಕಾರಣಗಳಿರಲಿಲ್ಲ. ಮನೆಯ ಯಜಮಾನನ ಆದೇಶದಂತೆ ಅದು ನಡೆದಿರ ಬೇಕು. ಈ ಆದೇಶ ಯಾರು ಕೊಟ್ಟಿರ ಬಹುದು. ಪರಮೇಶ್ವರಿ ಅಂದು ಮನೆಯಲ್ಲಿರಲಿಲ್ಲ. ಶಿವಲೋಮಲ್ಲರು ಕಾಲು ಬಾಚಿಕೊಳ್ಳುವ ತನಕ ದೀಪಗಳು ಉರಿಯುತಿದ್ದುವು. ಅವರು ಈ ರೀತಿ ಆದೇಶ ಕೊಟ್ಟಿರಲು ಖಂಡಿತ ಸಾಧ್ಯವಿಲ್ಲ. ಈ ಸಂದರ್ಭವೂ ಅತ್ತುವಿನ ಹೇಳಿಕೆಗೆ ಪುಷ್ಟಿ ಕೊಟ್ಟಿತು.

ಗೋಪಾಲದಾಸ, ಶಫುವನ್ನು ಆಗಾಗ್ಯೆ ಭೇಟಿಯಾಗುತಿದ್ದ. ಆ ಮಾದರಿಯ ಜನರೊಡನೆ ಬೆರಸುತಿದ್ದನೆಂಬುದು ಸಾಕ್ಷಿಗಳ ಹೇಳಿಕೆಯಿಂದ ಸಿದ್ಧವಾಯಿತು. ಇವುಗಳ ಜೊತೆಗೆ ಆತನ ನಡತೆಯೂ ಶಂಕೆ ಹುಟ್ಟಿಸಿತು.

28-2-43ರಂದು ತಂದೆ ಕಾಣೆಯಾದರು. ಹಾಗೆಕಾಣೆಯಾದತಂದೆಯ ಪತ್ತೆಗೆಆತ ನಡೆಸಿದ ಪ್ರಯತ್ನವೇನು? ಪೋಲಿಸರಿಗೇಕೆ ವರದಿ ಕಳುಹಿಸಲಿಲ್ಲ? 3-3-43ರ ತನಕ ಆತ ಪೋಲಿಸರಿಗೆ ದೂರು ಕೊಟ್ಟಿರಲಿಲ್ಲ. ಅಂದೇ ಮಾಧವನ ಬಿಡುಗಡೆಯಾಯಿತು. ಮಾಧವ ಜೈಲಿನಿಂದ ಬಿಡುಗಡೆಯಾಗಿ ಮನೆಗೆ ಬರುವ ಸಂಗತಿ ಅವನಿಗೆ ತಿಳಿದಿತ್ತು. ಮನೆಗೆ ಬಂದ ಅಣ್ಣ ಪೋಲಿಸರಿಗೆ ದೂರು ಕೊಡುವುದು ಖಂಡಿತವೆಂದು ತಿಳಿದೇ, ಆತ 3-3-43ರಂದು ಪೋಲಿಸ

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ, ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

NAVAYUGA 29-7-1971

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಗೆ ವರದಿ ಕಳಿಸಿದ್ದು.

ಈ ಬಾಬಿನಲ್ಲಿ ಗೋಪಾಲದಾಸ ಕೊಟ್ಟ ವಿವರಣೆಯೂ ನಂಬಿಕೆಗರ್ಹವಾಗಿಲ್ಲ. ಆತ 2– 3–43ರ ವರೆಗೂ ತಂದೆ ಮಲಗಿದ್ದ ಕೋಣೆಯತ್ತ ತಲೆ ಹಾಕಿಲ್ಲವೆಂದು ಹೇಳಿದರೆ ಯಾರು ನಂಬುತ್ತಾರೆ? ದಿನವಿಡೀ ಮನೆಯಲ್ಲಿರುತಿದ್ದ ತಂದೆ, ಯಾರಿಗೂ ತಿಳಿಸದೆ ಎಲ್ಲಿಗೆ ಹೋದರು? ಯಾಕಾಗಿ ಹೋದರು? ಯಾರಿಗೂ ತಿಳಿಸದೆ ರಾತಾ-ರಾತ್ರಿಯೇ ಹೋಗುವ ತರಾ—ತುರಿಯ ಕೆಲಸವೇನು? ಈ ಅನುಮಾನಗಳು ಸಹಜವಾಗಿ ಬರ ಬೇಕಾದವುಗಳು! ಈ ಅನುಮಾನಗಳು ಗೋಪಾಲನಲ್ಲಿ ಏಳಲೇ ಇಲ್ಲವೆಂಬುದು ಆಶ್ಚರ್ಯದ ಸಂಗತಿ.

ತಂದೆಯ ದ್ವೇಷಿಗಳು ಅವರನ್ನು ಲಾಭಕ್ಕಾಗಿ ಅಪಹರಿಸಿ, ಹೀಗೆ ಕೊಂದಿರಬಹುದು ಎನ್ನುವ ಆತನ ಮಾತಿನಲ್ಲಿ ಹುರುಳಿಲ್ಲ. ಲಾಭಕ್ಕಾಗಿ ಕೊಲೆ ಮಾಡುವವರು ಜೋಬಿನಲ್ಲಿದ್ದ ಹಣವನ್ನು ಒಯ್ಯದಿರುತ್ತಾರೆಯೇ? ಕೈಯಲ್ಲಿದ್ದ ಉಂಗುರಗಳನ್ನು ಬಿಟ್ಟು ಬಿಡುತ್ತಾರೆಯೇ?

ಕೊಲೆಯ ಆಪಾದನೆಯನ್ನು ಆತ ಮನುವಿನ ಮೇಲೆ ಹೊರಿಸಲು ಪ್ರಯತ್ನಿಸಿದ. ಮಲತಾಯಿ, ಬಲ ಅಣ್ಣನ ಕೈವಾಡವಿದೆ ಎಂದು ಆರೋಪಿಸಿದ. ಇದು ಮಿಥ್ಯಾರೋಪ.

ಶಿವಲೋಮಲ್ಲರ ಸಾವಿನಿಂದ ಮನುವಿಗೆ ಯಾವ ಲಾಭವೂ ಇಲ್ಲ ಅವರೇ ಅವನ ಆಶ್ರಯದಾತರು; ನೆರಳು ಕೊಟ್ಟವರು. ಅವರ ಸಾವಿನಿಂದ ಅವನಿಗೆ ಇದ್ದ ನೆಲೆ ತಪ್ಪುತ್ತದೆ. ಸ್ವಪ್ನದಲ್ಲಿಯೂ ಆತ ಮಾವನ ಕೊಲೆಯನ್ನು ಚಿಂತಿಸುವುದು ಸಾಧ್ಯವಿಲ್ಲ.

ಈ ವಿಚಾರಣೆಯ ಕಾಲದಲ್ಲಿ ಆರೋಪಿಯ ಚಿಕ್ಕಮ್ಮ ಹಾಗೂ ಅಣ್ಣ ಮಾಧವ ಆತನನ್ನು ಉಳಿಸಲು ಪ್ರಯತ್ನಿಸಿದ್ದು ಕಂಡು ಬರುತ್ತಿದೆ. ಆವರ ಕೈವಾಡವಿರುವುದು ನಿಜವಿದ್ದರೆ. ಆವರೇಕೆ ಗೋಪಾಲದಾಸನನ್ನು ಉಳಿಸಲು ಶ್ರಮಿಸುತಿದ್ದರು—?

ಕೋರ್ಟು ಶಪು—ಗೋಪಾಲದಾಸರಿಗೆ ಮರಣದಂಡನೆ ವಿಧಿಸಿತು. ಇನ್ನೊಬ್ಬ ಆಪಾದಿತ ಹಚ್ರೋನ ವಯಸ್ಸನ್ನು ಗಮನಿಸಿ,— ವಿಚಾರಣೆಯ ಕಾಲದಲ್ಲಿ ಅವನ ವಯಸ್ಸು ಹದಿನೆಂಟು – ಆತ ಉಳಿಕೆಯವರ ಕೈಗೊಂಬೆಯಾಗಿ ವರ್ತಿಸಿದನೆಂದು ಆತನಿಗೆ ಜೀವಾವಧಿ ಶಿಕ್ಷೆ ವಿಧಿಸಿತು.

● ●

ಇದೊಂದು ನೈಜ ಕಥೆ

ದೇಶಾದ್ಯಂತ ವರುಣದೇವನ ಕರುಣಾ ಕಟಾಕ್ಷ ಪೂರ್ಣವಿದ್ದಾಗಲೂ ಬರೂಂಡಾದಲ್ಲಿ ನೀರಿಗೇ ಅಭಾವ. ಬರೂಂಡಾ ರಾಜಾಸ್ಥಾನದ ಜೋಧಪುರ ಜಿಲ್ಲೆಯಲ್ಲಿರುವ ಒಂದು ಗ್ರಾಮ. ವರ್ಷದಲ್ಲಿ 10ರಿಂದ 15 ಇಂಚು ಮಳೆಯಾದರೆ ಹೆಚ್ಚು. ಇದರಿಂದಾಗಿ ಅಲ್ಲಿನ ರೈತರಿಗೆ ಸಜ್ಜೆ ಮತ್ತು ಕಡಲೇಕಾಯಿ ಬಿಟ್ಟರೆ ಬೇರೆ ಬೆಳೆ ತೆಗೆಯಲು ಸಾಧ್ಯವಿರಲಿಲ್ಲ. ಒಂದು ಎಕರೆಯಲ್ಲಿ ವರ್ಷವೊಂದಕ್ಕೆ ಕೇವಲ 300 ರೂ. ವರಮಾನನೆಂದರೆ ಉತ್ಪ್ರೇಕ್ಷೆಯಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ಬರೂಂಡಾ ಅರೆಮರುಭೂಮಿಯಾಗಿತ್ತು. ಇಂತಹ ಅರಭೂಮಿ ಪ್ರದೇಶವನ್ನು ಬೇಸಾಯ ಪ್ರಧಾನ ಪ್ರದೇಶವಾಗಿ ಪರಿವರ್ತನೆ ಮಾಡಿರುವುದು ನಿಜಕ್ಕೂ ಶ್ಲಾಘನೀಯ ಸಾಧನೆ.

ಬರೂಂಡಾ ಹಳ್ಳಿಯ ಸಮೀಪ ಅಂತರಜಲಮೂಲವಿದೆಯೇ ಎಂಬ ಬಗ್ಗೆ ಸ್ಥಳೀಯ ಜನತೆ ಪ್ರಯತ್ನಿಸಿದರು. ಪ್ರಯತ್ನದ ಫಲವಾಗಿ ವರ್ಷವೆಲ್ಲಾ ನೀರಾವರಿ ಸೌಕರ್ಯ ಒದಗಿಸಬಲ್ಲ ಜಲಮೂಲವೊಂದು ಬೆಳಕಿಗೆ ಬಂತು. ನಂತರ ಇಲ್ಲಿ ಪಂಪ್‌ಸೆಟ್‌ವೊಂದನ್ನೂ ಅಳವಡಿಸುವ ಬಗ್ಗೆ ಬರೂಂಡಾ ರೈತರು ತಮ್ಮ ಹತ್ತಿರದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಸಂಸ್ಥೆಯೊಂದಿಗೆ ವ್ಯವಹರಿಸಿದರು. ಪ್ರಾರಂಭದಲ್ಲಿ ಬ್ಯಾಂಕಿನವರು 4000 ಎಕರೆಗಳಿಗೆ ನೀರಾವರಿ ಒದಗಿಸಬಲ್ಲ ಒಂದು ಪಂಪ್‌ಸೆಟ್ ನೀಡಿದರು. ನಂತರ ರೈತರ ಬೇಡಿಕೆಯಿಂದಾಗಿ ಆ ಹಳ್ಳಿಗೆ ಬ್ಯಾಂಕ್‌ನವರು ಮತ್ತೆ ಮೂರು ಪಂಪ್‌ಸೆಟ್‌ಗಳನ್ನು ನೀಡಿದರು. ಸೆಂಟ್ರಲ್ ಬ್ಯಾಂಕ್ ನೆರವಿನಿಂದಾಗಿ ಗ್ರಾಮದ 4000 ಎಕರೆ ಜಮೀನಿಗೆ ನಿರಂತರ ನೀರಾವರಿ ಸೌಲಭ್ಯ ದೊರೆಯಿತು. ಗ್ರಾಮದ ಬಹುಮುಖ ಪ್ರಗತಿಗೆ ಸೆಂಟ್ರಲ್ ಬ್ಯಾಂಕ್ ಕಾರಣವಾಯಿತು. ವರ್ಷದಲ್ಲಿ ಒಂದು ಬೆಳೆಯ ಬದಲಾಗಿ ಮೂರು ಬೆಳೆಗಳನ್ನು ತೆಗೆಯಲು ಸಾಧ್ಯವಾಯಿತು. ಹೈಬ್ರಿಡ್ ಬಗೆಯ ಧಾನ್ಯಗಳನ್ನು ಬೆಳೆಸಲು ಆರಂಭಿಸಿದರು, ಹೈಬ್ರಿಡ್‌ಸಜ್ಜೆ, ಮೆಣಸಿನಕಾಯಿ, ಗೋಧಿ ಇತ್ಯಾದಿ ಬೆಳೆಗಳಿಗೆ ಬರೂಂಡಾ ಹೆಸರು ಗಳಿಸಿತು. ರೈತರ ಆದಾಯದಲ್ಲಿ ಭಾರಿ ಹೆಚ್ಚಳವಾಯಿತು. ಮೊದಲಿದ್ದ ಸಾಲಗಳನ್ನು ಅವರು ವಾಪಸ್ಸು ಮಾಡಲು ಸಾಧ್ಯವಾಯಿತು. ಊರಿನಲ್ಲಿ ಶಾಲೆ ಹಾಗೂ ಸಾಂಸ್ಕೃತಿಕ ಕೇಂದ್ರಗಳು ಸ್ಥಾಪನೆಯಾದವು ಈಗ ಆ ಜನ ತಮ್ಮ ಧಾನ್ಯವನ್ನು ಸಂಗ್ರಹಿಸಿಡಲು ಆಗತ್ಯವಾಗುವ ಸಂಗ್ರಹಣಾ ಮಳಿಗೆಗಳನ್ನು ನಿರ್ಮಿಸಲು ಯೋಚಿಸಿದ್ದಾರೆ. ರಾಜಾಸ್ಥಾನ ಸರ್ಕಾರದ ರಾಷ್ಟ್ರೀಯ ಬೀಜಗಳ ಕಾರ್ಪೋರೇಷನ್ ಬರೂಂಡಾ ರೈತರಿಗೆ ಮಾರುಕಟ್ಟೆ ಕಲ್ಪಿಸುವ ಮುಖ್ಯ ಸಂಸ್ಥೆಯಾಗಿದೆ. ಬರೂಂಡಾ ಗ್ರಾಮ ಅದ್ಭುತ ಪ್ರಗತಿಯಿಂದಾಗಿ ರಾಷ್ಟ್ರೀಕೃತ ಸೆಂಟ್ರಲ್ ಬ್ಯಾಂಕ್ ತನ್ನ ನೆರವು ಕಾರ್ಯಗಳನ್ನು ಇತರ ಗ್ರಾಮ ಗಳಿಗೂ ಒದಗಿಸಲು ನಿರ್ಧರಿಸಿದೆ.

● ●

ಕೃಪಾಪೋಷಿತ ನಾಟಕಮಂಡಳಿಗಳು

(ಒಂದನೇ ಪುಟದಿಂದ)

ಬಲವನ್ನು ಹಿಂತೆಗೆದುಕೊಳ್ಳಲು ಕೇಂದ್ರ ಸಮಿತಿ ಆದೇಶ ನೀಡಿದರೆ, ರಾಜ್ಯ ಸಮಿತಿ ಅದನ್ನು ತಿರಸ್ಕರಿಸಿದೆ. ಅಂದರೆ, ಕೇರಳದಲ್ಲಿದ್ದ ಹಿಂದಿನ ಪ್ರಸವಾ ಪಕ್ಷ ಇಬ್ಭಾಗವಾಗಿದೆ. 'ಸರಕಾರಕ್ಕೆ ಬೆಂಬಲ ನೀಡುವುದಾದರೆ ನಾವೂ ನಿಮ್ಮೊಂದಿಗೆ ಬರುತ್ತೇವೆ' ಎಂದು ಕೇಂದ್ರಕ್ಕೆ ರಾಜ್ಯದ ಒಂದು ತುಕ್ಕುಡಿ ಹೇಳಿಕಳಿಸಿದೆ.

ಮಾರ್ಚಿ ಲೋಕಸಭಾ ಚುನಾವಣೆಗೆ ಪೂರ್ವಭಾವಿಯಾಗಿ ತಮ್ಮ ಭವಿಷ್ಯ ಉಜ್ವಲವಾಗಿಸಲೆಂದು ಕೆಲವು ಪ್ರಸವಾ ಪಕ್ಷೀಯ ಶಾಸಕರು ತಂತಮ್ಮ ಅನುಯಾಯಿಗಳೊಡನೆ ಇಂಡಿಕೇಟ್ ಸೇರಿದರು. ಆಗಲೇ ಪ್ರಸವಾ ಕೆಲವೆಡೆ ಕೊನೆಯುಸಿರೆಳೆಯುತಿತ್ತು. ಇಂಡಿಕೇಟಿನೊಡನೆ ವಿಲೀನಗೊಳ್ಳುವ ಬಗ್ಗೆಯೂ ಪಿಸುಮಾತು ಕೇಳುತಿತ್ತು. ಆದರೆ, ಅದರ ಬಾಂಧವ್ಯ ಕೂಡಿ ಬಂದದ್ದು ಸಂಸವಾದೊಡನೆ. ಈ ಕೂಡಿಕೆಯು ಹೇಗೆ ಮುಂದುವರಿಯುತ್ತದೆಂದು ಭವಿತವ್ಯವೇ ನಿರ್ಧರಿಸಬೇಕು.

ಕೇರಳದ ಘಟಕದ ಬಿರುಕಿಗೆ ಅಚ್ಯುತ ಮೆನನ್ನರನ್ನು ಬೆಂಬಲಿಸುವ ನಿಲುವೇ ಕಾರಣ. ಮೆನನ್ನರನ್ನು ಬಿಡಲಾರದವರು ಪ್ರಸವಾವಾಗೇ ಉಳಿದರು; ಬಿಟ್ಟವರು ವಿಲೀನಗೊಂಡ ಸಮಾಜವಾದಿ ಪಕ್ಷವಾದರು. ವಿಘಟನೆ-ಸಂಘಟನೆಗಳ ಸುಳಿಯಲ್ಲಿ ತುಯ್ಯಲಾಡುತ್ತಿರುವ ನಮ್ಮ ರಾಜ್ಯಕೀಯ ಪಕ್ಷಗಳು ಆಡಳಿತೆಗಿಂತ ಸಲೀಸಾಗಿ ರಾಜ್ಯಕೀಯವಾಡಲು ಪ್ರತಿಜ್ಞೆ ತೊಟ್ಟಿವೆ. ಇಂಥ ರಾಜ್ಯಕೀಯ ನಾಟಕ ನಿರ್ದೇಶಕರ ಕೈಯಿಂದ ಶ್ರೀಸಾಮಾನ್ಯನನ್ನು ಅವನೇ ಕಾಪಾಡಿಕೊಳ್ಳಬೇಕು.

● ●

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2-00

ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಸರಳ ಅನುವಾದ

ಗೀತೆಯ ಕೈಗನ್ನಡಿ

ಪಾಕೆಟ್ ಎಡಿಶನ್ ಬೆಲೆ ರೂ. 2-00

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ

ಬೆಲೆ ರೂ. 1-50.

ಪುಸ್ತಕ ಬೇಕಾದವರು ಆಯಾಯ ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಬುಕ್ ಪೋಸ್ಟ್ ವೆಚ್ಚ ಸೇರಿಸಿ ಮನಿಯಾರ್ಡರು ಮಾಡುವುದು. ವಿಶೇಷ ಅಂಚೆವೆಚ್ಚ ತಗಲುವುದರಿಂದ ವಿ. ಪಿ ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit **ಫೋನ್: 77**

HOTEL SHIVAPRASAD

High Class Boarding, Lodging & Restaurant

COONDAPUR, S. K.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

I. A. No. 1 in 272/1969.

ಸಿಲ್ವೆಸ್ಟರ್ ಮಿನೇಜಸ್ —ಅರ್ಜಿದಾರ.

ಮತ್ತು

ರುಜಾರಿ ಮಿನೇಜಸ್—ಪಾವುಲಿನ್ ಆರಂಜಾ ವ ಸಾಲೇರ ಮಿನೇಜರ— ಮಗ—ಉಡ್ಪಿ ತಾಲೂಕು ಬೆಳ್ಳೆ ಗ್ರಾಮದ ಮೂಡುಬೆಳ್ಳೆ— } ಎದ್ರಿ

ಇವರೊಳಗೆ

ಅರ್ಜಿದಾರನು ಫ್ಯಾನಲ್ ಡಿಕ್ರಿ ಕೇಳಿ ದಾಖಲು ಮಾಡಿದ ಮೇಲಿನ ಅರ್ಜಿಯು ಎದ್ರಿಯ ನೋಟೀಸಿನ ಬಗ್ಗೆ ತಾರೀಕು 20-8-71ಕ್ಕೆ ಇಟ್ಟಿದೆ. ಎದ್ರಿಯು ಸದ್ರಿ ತಾ. 20-8-71ನೇ ಪೂರ್ವಾಹ್ನ ಘಂಟೆ 10ಕ್ಕೆ ಮೇಲ್ಕಂಡ ಅರ್ಜಿಯಲ್ಲಿ ಮೇಲೆ ನಮೂದಿಸಿದ ಕೋರ್ಟು ಮುಂದೆ ಹಾಜರಾಗಲಿಕ್ಕೆ ತಪ್ಪಿದರೆ ಎದ್ರಿಯ ಗೈರು ಹಾಜ್ರಿಯಿಂದ ಸದ್ರಿ ಅರ್ಜಿ ತೀರ್ಮಾನಿಸಲ್ಪಡುವದು.

(Sd) GRATIAN C. REGO
Pleader for Petitioner.

ಉಡ್ಪಿ, ತಾರೀಕು, 21—7—71

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 47

NAVAYUGA

5-8-1971

ಚಾರುಚಿಂತನ

ಭಿನ್ನಮತವಲ್ಲ, ಹುಸಿ ಕಾಳಗ

ಸೋವಿಯತ್ ರಶ್ಯಾದ ಸೋಯುಜ್ ಖೇಚರರು ಧರೆಗಿಳಿಯುತ್ತಿರುವಾಗಲೇ ಅವರ ಪ್ರಾಣಪಕ್ಷಿ ಹಾರಿಹೋಯ್ತು. ಅಂತರಿಕ್ಷದಲ್ಲಿ ಟರ್ಮಿನಸ್ ನಿರ್ಮಿಸುವಲ್ಲಿ ಸಫಲರಾದ ಆ ಮೂವರು ಗಗನಯಾತ್ರಿಗಳು ಅಂತರಿಕ್ಷಯಾತ್ರೇತಿಹಾಸದಲ್ಲಿ ಮಹತ್ವದ ಮೈಲುಗಲ್ಲು ಮುಟ್ಟಿ ಅಮರರಾದರು. ಇದೀಗ, ಅಮೆರಿಕೆಯು ನಾಲ್ಕನೆ ಬಾರಿಗೆ ಚಂದ್ರಲೋಕಕ್ಕೆ ತನ್ನವರನ್ನು ಕಳಿಸಿದೆ. ಇದರ ಉದ್ದೇಶ ಚಂದ್ರನ ಬಗ್ಗೆ ಹೆಚ್ಚು ಹೆಚ್ಚು ತಿಳಿದು ಕೊಳ್ಳುವುದು. ಇನ್ನೂ ಎರಡು ಅಪೊಲೋ ಶ್ರೇಣಿಯನ್ನು ಚಂದ್ರನಲ್ಲಿಗೆ ರವಾನಿಸಿದ ಬಳಿಕ ಚಂದ್ರ ಶೋಧನೆಯ ಕಾರ್ಯಕ್ರಮಗಳಿಗೆ ಅಮೆರಿಕೆ ಪೂರ್ಣವಿರಾಮ ವಿಡುವುದು. ೧೯೭೨ರ ನಂತರ ಅದು ಮತ್ತೊಂದು ಚಟದತ್ತ ಒಲಿಯಬಹುದು. (ಯಾವುದು?)

ಚಂದ್ರನಿಗೂ ಭೂಮಿಗೂ ಇರುವ ಅಂತರ ಸುಮಾರು ಎರಡೂವರೆ ಲಕ್ಷ ಮೈಲಿಗಳು. ಭೂಮಿಯಿಂದ ಚಂದ್ರನಲ್ಲಿ ಮುಟ್ಟುವುದೆಂದರೆ ನೂರಾರು ಆತಂಕಗಳನ್ನು ಎದುರಿಸುವುದೆಂದೇ ಅರ್ಥ. ಚಂದ್ರನಿಂದ ಭೂಮಿಗಿಳಿಯುವುದೂ ಪ್ರಾಣಾಪಾಯದಿಂದ ಹೊರತಾಗಿಲ್ಲ. ಕೋಟ್ಯಂತರ ಡಾಲರ್‌ಗಳ ವೆಚ್ಚದಿಂದ ಏರ್ಪಡುವ ಒಂದೊಂದು ಯಾತ್ರೆಯ ಉದ್ದೇಶ್ಯವೇನು? ಬರಿಯ ಜ್ಞಾನಾರ್ಜನೆ ಮಾತ್ರ. ಪ್ರಕೃತಿಯಲ್ಲಿ ಹುದುಗಿರುವ ರಹಸ್ಯಗಳನ್ನು ಭೇದಿಸುವುದು ಮಹಾ ಸಾಹಸವೇ. ಅಂತಹ ಸಾಹಸದಲ್ಲಿ ಅಮೆರಿಕೆ ಅತ್ಯಂತ ಯಶಸ್ಸುಗಳಿಸಿದೆ.

ಈ ಬಾರಿಯ ಚಂದ್ರಯಾತ್ರಿಕರೂ ಮೂವರೇ. ಇವರೆಲ್ಲರೂ ಅಮೆರಿಕೆಯ ವಾಯು ಪಡೆಯ ಅಧಿಕಾರಿಗಳು. ಸ್ಕಾಟ್ ಅವರು ಈಗಾಗಲೇ ಎರಡು ಬಾರಿ ಅಂತರಿಕ್ಷಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಉಳಿದಿಬ್ಬರು ವೊರ್ಡೆನ್ ಮತ್ತು ಇರ್ವಿನ್. ಇವರಿಗಿದು ಪ್ರಥಮಾನುಭವ. ಯಾತ್ರಿತ್ರಯರು ಹನ್ನೆರಡು ದಿನಗಳ ಕಾಲ ಚಂದ್ರನಲ್ಲಿ ಉಳಿಯುವರು. ಚಂದ್ರಕೋಶದಿಂದ ಐದು ಮೈಲಿ ಸುತ್ತಲಿನ ಪ್ರದೇಶದಲ್ಲಿ ಸಂಚರಿಸಿ ಶೋಧನೆ ನಡೆಸುವರು. ಚಂದ್ರನಲ್ಲಿ ೧೦ ಅಡಿ ಆಳದ ಹೊಂಡ ತೋಡಿ ಅಲ್ಲಿನ ಮಣ್ಣು-ಶಿಲೆ, ಮೊದಲಾದುವುಗಳನ್ನು ಸಂಗ್ರಹಿಸುವರು. ಕ್ಯಾಮರಾ ಮತ್ತು ವೈಜ್ಞಾನಿಕ ಉಪಕರಣಗಳ ಸಹಾಯದಿಂದ ಸಾಕಷ್ಟು ಸಂಶೋಧನೆಗಳನ್ನೂ ಮಾಡುವರು. ಆಗಸ್ಟ್ ೭ರ ಸಂಜೆ ನಿಯೋಜಿತ ಕಾರ್ಯಕ್ರಮಗಳಂತೆ ಗಗನ ಯಾತ್ರಿಗಳು ಭೂಮಿಗಿಳಿಯುವರು. ಚಂದ್ರ ಪ್ರಯಾಣವೀಗ ಹೊಸತಲ್ಲವಾದರೂ ಅದು ಮಹತ್ವ ಪೂರ್ಣವಾದದ್ದು. ನಿಕ್ಸನ್ನರ ಪೀಕಿಂಗ್ ಭೆಟ್ಟಿ ಇದಕ್ಕಿಂತ ಮುಖ್ಯವಾದುದೆ?

○ ○ ○

ಯಾಹ್ಯಾಖಾನರು ಬಂಗ್ಲಾದೇಶದ ಪ್ರಧಾನಿ ಮತ್ತಿತರ ಅಧಿಕಾರಿಗಳನ್ನು ಅವರ ಗೈರು ಹಾಜರಿಯಲ್ಲೇ ವಿಚಾರಣೆ ನಡೆಸಿದರು; ಅವರ ಮೇಲೆ ದೇಶ ದ್ರೋಹದ ಆರೋಪ ಸಿದ್ಧಮಾಡಿ ತೋರಿಸಿದರು. ಅವರ ಆಸ್ತಿ—ಪಾಸ್ತಿಗಳನ್ನು ಹರಾಜು ಹಾಕಿದರು. ತಾವು ಗೆದ್ದೆವೆಂದುಕೊಂಡರು. ಆದರೆ, ಯಾಹ್ಯಾಖಾನರು ಇದರಿಂದ ಪತನದ ದಾರಿಯಲ್ಲಿ ಒಂದು ಮೈಲು ಮುಂದುವರಿದರೆಂಬುದು ಸದ್ಯ ಗೋಚರವಾಗಲಿದೆ. ನಿಕ್ಸನ್— ಲಾಯರು ಅವರಿಗೆ ತುಂಬು ಭರವಸೆ ನೀಡಿರಬಹುದು; ಭಾರತದ ರಾಜ್ಯಕೀಯದಲ್ಲಿ ಅಮೆರಿಕೆಯ ಬಗ್ಗೆ ಒಲವು ಮಾಯವಾಗುತ್ತಿರುವುದರಿಂದ ಅಮೆರಿಕೆ ಪಾಕಿಸ್ತಾನವನ್ನೇ ಅಪ್ಪಿಕೊಳ್ಳುವುದು ನಿಶ್ಚಿತ.

ಭಾರತದೊಂದಿಗಿನ ಪ್ರಶ್ನೆಗಳ ಬಗ್ಗೆ ಚರ್ಚಿಸಲು ಎಲ್ಲಿಂದರಲ್ಲಿ ಎಂದಾದರಂದು ಪ್ರಧಾನಿ ಗಾಂಧಿಯನ್ನು ಭೇಟಿ ಮಾಡಲು ಉತ್ಸುಕರಾಗಿರುವ ಯಾಹ್ಯಾಖಾನ್ ಸಂಬಂಧವನ್ನು ಕೆಡಿಸುವತ್ತಲೇ ಪ್ರಯತ್ನ ಮಾಡುತಿದ್ದಾರೆ. ಡಾಕ್ಕಾದಲ್ಲಿರುವ ಭಾರತೀಯ ಡೆಪ್ಯುಟಿ ಹೈ ಕಮಿಶನರ ಸೇನ್ ಗುಪ್ತರಿಗಿರುವ ಟೆಲಿಫೋನ್ ಸಾಲಭ್ಯವನ್ನು ಕತ್ತರಿಸಿ ಹಾಕಿದ್ದಾರೆ.ಇದಕ್ಕೆ ಪಾಕ್ ಅಧಿಕಾರಿಗಳು ತಾಂತ್ರಿಕ ಅಡಚಣೆಗಳನ್ನು ಮುಂದಿಟ್ಟಿರುವರಾದರೂ ಅದು ಬರಿಯ ತೋರಿಕೆಯದ್ದು. ಈಗಾಗಲೇ ಗೃಹಬಂಧನದಲ್ಲಿರುವ ಸೇನ್ ಗುಪ್ತರು ಭಾರತದೊಡನೆಯೂ ಸಂಬಂಧವಿಟ್ಟುಕೊಳ್ಳುವ ಯಾವ ಸೌಕರ್ಯವೂ ಇಲ್ಲವಾಗಿದ್ದಾರೆ. ಬಂಗ್ಲಾದೇಶದ ವಿದ್ಯಮಾನಗಳು ಹದಗೆಡುತ್ತ ಬಂದಿರುವುದಕ್ಕೆ ಇದೊಂದು ಸಾಕ್ಷಿ. ದೆಹಲಿ ಮತ್ತು ಇಸ್ಲಾಮಬಾದದಲ್ಲಿನ ರಾಯಭಾರಿ ನಿಯೋಗದ ಸದಸ್ಯರು ಅನುಮತಿಯಿಲ್ಲದೆ ಸ್ವರಾಷ್ಟ್ರಕ್ಕೆ ಮರಳಬಾರದೆಂದು ಭಾರತ ವಿಧಿಸಿದೆ. ಪಾಕಿಸ್ತಾನದ ಗೂಢಚಾರರು ನಾನಾ ರೂಪದಲ್ಲಿ ಭಾರತದ ವಿವಿಧೆಡೆ ಹರಡಿದ್ದಾರೆಂಬುದಕ್ಕೆ ಅಲ್ಲಲ್ಲಿ ಹಲವಾರು ಸಾಕ್ಷ್ಯಗಳು ಗೋಚರವಾಗಿರುವುದರಿಂದ ಇದು ಅಗತ್ಯವಾಯ್ತು. ಈ ನಿರ್ಬಂಧವನ್ನು ತೆಗೆದು ಹಾಕದಿದ್ದರೆ, ಭಾರತದೊಂದಿಗಿನ ರಾಜ ತಾಂತ್ರಿಕ ಸಂಬಂಧವನ್ನೇ ಕಡಿದು ಕೊಳ್ಳುವ ಮತ್ತೊಂದು ಬೆದರಿಕೆ ಯಾಹ್ಯಾ ಹಾಕಿದ್ದಾರೆ. ನಿರಂತರ ಭಾರತದ ಗಡಿಯನ್ನು ಉಲ್ಲಂಘಿಸುತ್ತಿರುವ ಪಾಕಿಸ್ತಾನವು ಬಂಗ್ಲಾ ದೇಶದಲ್ಲಿ ಕೆಂಪು ಚೀನೀಯ ಯೋಧರನ್ನು ಆಹ್ವಾನಿಸಿದೆಯೆಂದೂ ವರದಿಯಾಗಿದೆ.

ಬ್ರಿಟನ್ನು ಪಾಕಿಸ್ತಾನಕ್ಕೆ ಸೈನಿಕ ನೆರವೆ ನೀಡುವುದಿಲ್ಲವೆಂದು ಭರವಸೆ ಕೊಟ್ಟದ್ದು ನಿಜ. ಆದರೆ, ಇರಾಣಕ್ಕೆ ಏಳುನೂರು ಟ್ಯಾಂಕುಗಳನ್ನು ಅದು ಮಾರುತ್ತಿದೆ. ಹಿಂದೆ ಪಾಕಿಸ್ತಾನ—ಭಾರತದ ಹೋರಾಟದ ವೇಳೆ ಇದೇ ಇರಾಣವು ಅಯ್ಯೂಬಖಾನರಿಗೆ ಬಲಗೈಯಾಗಿ ನಿಂತು ತನ್ನ ಸೈನಿಕ ಶಕ್ತಿಯನ್ನು ಅವರ ಆಸರೆಗೆ ಒದಗಿಸಿದ್ದನ್ನು ನೆನಪಿಸಿಕೊಳ್ಳಬಹುದು. ನಿಷ್ಪಕ್ಷಪಾತಿ ರಾಜ್ಯಕೀಯ ನಿರೀಕ್ಷಕರ ಅಭಿಪ್ರಾಯದಂತೆ ಪಾಕಿಸ್ತಾನ ಸಮರ ಸನ್ನಾಹದಲ್ಲೇ ನಿರತವಾಗಿದೆ. ಅದು ಭಾರತದ ಮೇಲೆ ಯುದ್ಧ ಸಾರುವ ದಿನ ಬಹಳ ದೂರವಿಲ್ಲ. ನಿಕ್ಸನ್ನರು ಪೀಕಿಂಗನ್ನು ಒಲಿಸಿ ಕೊಳ್ಳಲು ಹೊರಟದ್ದರಿಂದ. ವಿಶ್ವದ ರಾಜ್ಯಕೀಯ ಮತ್ತೊಂದು ತಿರುವು ಮುಟ್ಟಿದೆ. ಭಾರತ—ರಶ್ಯಗಳು ಒಂದಾಗಿ ಬಂಗ್ಲಾದೇಶಕ್ಕೆ ಮಾನ್ಯತೆ ನೀಡುವ ಸಾಧ್ಯತೆಯೂ ಇಲ್ಲದಿಲ್ಲ. ಆಗ, ಬಂಗ್ಲಾದ ಹೆಸರಿನಲ್ಲಿ ಯುದ್ಧ ಅನಿವಾರ್ಯ. ಭಾರತವು ಬಂಗ್ಲಾದೇಶವನ್ನು ಮನ್ನಿಸುವುದನ್ನು ಮುಂದೆ ಮುಂದೆ ಹಾಕುತ್ತಿದೆ; ಆದರೆ, ಯಾಹ್ಯಾಖಾನರು ಮನ್ನಣೆ ಬೇಗನೇ ನೀಡ ಬೇಕೆಂದು ಒತ್ತಾಯ ತರುತಿದ್ದಾರೆ!............

○ ○ ○

ರಾಜ್ಯ ಇಂಡಿಕೇಟಿನ ಸದಸ್ಯರಲ್ಲಿದ್ದ ಭಿನ್ನಾಭಿಪ್ರಾಯಗಳೆಲ್ಲವೂ ದೂರವಾಗಿ ಒಂದಾಗಿ ದುಡಿಯಲು ಅವರು ನಿರ್ಧರಿಸಿದರೆಂದು ವರದಿಯಾಯ್ತು. ಕೆಪ್ಸೀನರ ಪದದಿಂದ ಅಧ್ಯಕ್ಷರಾಗಿ ಭಡ್ತಿ ಹೊಂದಿದ ದೇವರಾಜ ಅರಸರ ಅಭಿಪ್ರಾಯದಲ್ಲಿ ಅಂತಹ ಭಿನ್ನಾಭಿಪ್ರಾಯಗಳೇ ಇರಲಿಲ್ಲ. ಗಂಡ-ಹೆಂಡಿರ ನಡುವೆ ಯುದ್ಧ ನಡೆಯುವುದಿಲ್ಲ; ಒಂದು ವೇಳೆ ನಡೆದರೂ ಅದು ಹುಸಿ ಕಾಳಗ—ಪ್ರಣಯ ಕಲಹ. ಯಾರು ಗಂಡನಾಗಬೇಕು ಎಂಬ ಪ್ರಶ್ನೆಯ ಮೇಲೆ ಬಡಪಾಡಿ ದೇವರಾಜ ಅರಸರೇ ಗಂಡಾಗಿದ್ದಾರೆ; ಹೆಣ್ಣಾದ ಶ್ರೀ ವೀರಪ್ಪನವರು ಸಾಮೂಹಿಕ ನಾಯಕತ್ವದ ಬಗ್ಗೆ ಒಲವು ತೋರಿಸಿ ಗಂಡಿನ ಸ್ವೇಚ್ಛಾ ಶಕ್ತಿಗೆ ತಡೆಯೊಡ್ಡಿ, ನಿರ್ಧಾರದಲ್ಲಿ ತನಗೂ ಪಾಲು ಕೇಳಿದ್ದಾಳೆ—ಇದು ಭಿನ್ನಮತ.

ಸದ್ಯ, ಚುನಾವಣೆಗಳು ಒಂದಿರುವುದರಿಂದ ದಟ್ಟವಾಗಿದ್ದ ಮೋಡಗಳನ್ನು ದೂರವೋಡಿಸಿ ಆಕಾಶವನ್ನು ತಿಳಿಗೊಳಿಸಲಾಯಿತು. ಆದರೂ ತುಂಡು ಮೋಡಗಳು ಯುವಕರ ಹೆಸರಿನಲ್ಲಿ ಅಸಮಾಧಾನವೆಬ್ಬಿಸ ಹೊರಟಿವೆ. ಯುವಕ ಕಾಂಗ್ರೆಸ್ಸಿಗರ ಹೇಳಿಕೆಯಂತೆ 'ಹಿರಿಯರು' ಕಿರಿಯರನ್ನು ಸುದೃಷ್ಟಿಯಿಂದ ನೋಡಿಲ್ಲ. ಚುನಾವಣಾ ಸಮಿತಿಯಲ್ಲಾಗಲೀ ಕಾರ್ಯಕಾರಿ ಸಮಿತಿಯಲ್ಲಾಗಲೀ ಯುವಕರನ್ನು ಸಂಪೂರ್ಣ ಕಡೆಗಣಿಸಲಾಗಿದೆ. ಕೆಲವು ಹಿರಿಯರು ತಂತಮ್ಮ ಸ್ಥಾನಗಳಿಗೆ ಬಲವಾಗಿ ಅಂಟಿಕೊಳ್ಳಲು ಪ್ರಯತ್ನಿಸಿ ಕಿರಿಯರನ್ನು ನಿರ್ಲಕ್ಷಿಸಿದ್ದಾರೆ. ಮಾರ್ಚ್ ತಿಂಗಳ ಚುನಾವಣೆಯಲ್ಲಿ ಇಂಡಿಕೇಟಿನ ಪ್ರಚಂಡ ಜಯಭೇರಿ ಬಾರಿಸುವಲ್ಲಿ ಯುವಜನರ ಪಾತ್ರವೇ ದೊಡ್ಡದು. ಇದನ್ನು ಗಮನಿಸದಿರುವ ಹಿರಿಯರು ತಂತಮ್ಮಲ್ಲೇ ಅಧಿಕಾರ ಹಂಚಿಕೊಂಡು ಭಿನ್ನಾಭಿಪ್ರಾಯವಿಲ್ಲವೆಂದು ಡಂಗುರ ಸಾರುತ್ತಾರೆ.

ಎಲ್ಲವುಗಳಿಂದಲೂ ನಿವೃತ್ತರಾಗಲೊಂದು ವಯಸ್ಸು ಇದೆ. ಕುಟುಂಬದ ಯಜಮಾನಿಕೆಯಿಂದಲೂ ನಿವೃತ್ತರಾಗುವವರುಂಟು. ಆದರೆ, ರಾಜ್ಯಕೀಯದಿಂದ ನಿವೃತ್ತರಾದರೆ, ಜೀವನೇ ಹಾರಿಹೋಯ್ತೆಂದು ಹೆದರುವವರೇ ಹೆಚ್ಚು. ಒಂದೊಮ್ಮೆ ಅಧಿಕಾರ ದಕ್ಕಿದರೆ, ಅದನ್ನು ಉಳಿಸಿಕೊಳ್ಳುವುದರಲ್ಲೇ ಸಮಯ ಕಳೆಯುವಾಗ, ಜನಸೇವೆಗೆ ಅವಕಾಶವೆಲ್ಲಿ? ಅಂಥ ಪ್ರಲೋಭನ ನಮ್ಮ ರಾಜ್ಯಕೀಯದಲ್ಲಿದೆ. ಅದ್ದರಿಂದಲೇ ರಾಜ್ಯಕೀಯ ಪಕ್ಷಗಳಲ್ಲಿ ಅಸಂತುಷ್ಟರ ಸಂಖ್ಯೆ ಹೆಚ್ಚುತ್ತ ಹೋಗುತ್ತಿದೆ. ಹಿರಿಯರು—ಕಿರಿಯರ ನಡುವೆ ಕಂದಕ ಬೀಳುತ್ತಿದೆ.

ವಿದೇಶಗಳಲ್ಲಿನ ರಾಜ್ಯಕೀಯ ಸಾಮಾನ್ಯವಾಗಿ ವಯಸ್ಸಿನಲ್ಲಿ ಕಿರಿಯರ ಕೈತಳ

(ಹತ್ತನೇ ಪುಟ ನೋಡಿ)

ಕೊಲೆಗೆ ಹೊಸ ತಂತ್ರದ ಬಳಕೆ

ಬರೆದವರು:- ಕು. ಶೋಭಾದೇವಿ, B. A.

1933 ಡಿಸೆಂಬ್ರ ನಾಲ್ಕರಂದು ಅಮರೇಂದ್ರ ಚಂದಪಾಂಡೆ ಎಂಬ ಯುವಕ ಕಲ್ಕತ್ತೆಯ ಆಸ್ಪತ್ರೆಯೊಂದರಲ್ಲಿ ಕ್ರೂರವೇದನೆಗೆ ತುತ್ತಾಗಿ ಸಾವನ್ನಪ್ಪಿದ. ಅವನನ್ನು ಪರೀಕ್ಷಿಸಿದ ಡಾಕ್ಟರು ಆತ ಪ್ಲೇಗಿನಿಂದ ಸತ್ತನೆಂದು ಅಭಿಪ್ರಾಯವಿತ್ತರು. ಸಾಮಾನ್ಯವಾಗಿ ಪ್ಲೇಗ್ ಅಥವಾ ಇನ್ನಿತರ ಯಾವುದೇ ಅಂಟುರೋಗಕ್ಕೆ ಬಲಿಯಾದವರ ಸಾವಿನ ಬಗ್ಗೆ ಪೋಲಿಸರು ತಲೆಕೆಡಿಸಿಕೊಳ್ಳಲು ಹೋಗುವುದಿಲ್ಲ ಆದರೆ ಅಮರೇಂದ್ರನ ಸಾವಿನೊಂದಿಗೆ ಕೂಡಿಕೊಂಡಿದ್ದ ಕೆಲವು ವಿಷಯಗಳು ಈ ಬಗ್ಗೆ ತನಿಖೆಗೆ ಕೈನೀಡಿ ಕರೆಯಿತು. ಈ ತನಿಖೆಯಿಂದಾಗಿ ಬಹುಶಃ ಅಪರಾಧ ಚರಿತ್ರೆಯಲ್ಲಿಯೇ ಅಪೂರ್ವವೆನ್ನಬಹುದಾದ ಅಮಾನುಷ ಕೊಲೆಯೊಂದು ಬೆಳಕು ಕಂಡಿತು.

ಮೃತನಾದ ಅಮರೇಂದ್ರ ಮತ್ತು ಅವನ ಮಲ- ಅಣ್ಣನಾದ ವಿನಯೇಂದ್ರ ಪಾಕುರ್ ರಾಜಾ ಎಸ್ಟೇಟಿಗೆ ಸಮಾನ ಹಕ್ಕುದಾರರಾಗಿದ್ದರು. ಇದಲ್ಲದೆ ಇವರೀರ್ವರೂ ತಮ್ಮ ಚಿಕ್ಕಮ್ಮನಾದ ದಿಯೋಗಾರಿನ ರಾಣಿ ಸುರ್ಜಾವತೀ ದೇವಿಯ ಆಸ್ತಿಯಲ್ಲೂ ಪಾಲುದಾರರಾಗಿದ್ದರು. ಅಮರ್‌ನ ತಂದೆ ಪಾಕುರ್‌ನ ರಾಜ 1929ರಲ್ಲಿ ಸ್ವರ್ಗಸ್ಥನಾದಾಗ ಅಮರನಿನ್ನೂ ಹದಿನಾರರ ಹರೆಯದವ. ಸಹಜವಾಗಿಯೇ ರಾಜನ ಮರಣಾನಂತರ ಇಪ್ಪತ್ತೇಳು ವರ್ಷದ ವಿನಯೇಂದ್ರ ಕುಟುಂಬದ ಒಡೆಯನಾದ. ಆದರೆ ವಿನಯೇಂದ್ರ ಅಡ್ಡದಾರಿಗಿಳಿದ. "ಬಾಲಿಕಾಬಾಲಾ" ಎಂಬ ನರ್ತಕಿಯ ರೂಪಿಗೆ ಮರುಳಾದ ಅವನು ಮನೆತನದ ಆಸ್ತಿಯನ್ನು ನಿರ್ಲಕ್ಷ್ಯಿಸತೊಡಗಿದ. ವಿನಯೇಂದ್ರನ ಈ ನಡವಳಿಕೆ ಮನೆಯವರಿಗೆ ಸರಿಬೀಳಲಿಲ್ಲ. ರಾಣಿ ಸುರ್ಜಾವತೀ ಕೂಡ ಇದರ ಬಗ್ಗೆ ತನ್ನ ಅಸಮಾಧಾನ ವ್ಯಕ್ತಪಡಿಸಿದಳು. ಇನ್ನು ಅಣ್ಣ ತಮ್ಮಂದಿರ ನಡುವೆಯಂತೂ ಹೊಂದಾಣಿಕೆಯೇ ಇರಲಿಲ್ಲ. ಇದಕ್ಕೆ ಮುಖ್ಯಕಾರಣ ಅಮರೇಂದ್ರನ ವಿದ್ಯಾಭ್ಯಾಸ ಮತ್ತು ಇನ್ನಿತರ ಅಗತ್ಯ ಖರ್ಚುಗಳನ್ನು ವಿನಯೇಂದ್ರ ಕಡೆಗಣಿಸಿದ್ದು.

ಈ ಎಲ್ಲಾ ಕಾರಣಗಳಿಂದ ಅಮರ್ ಪ್ರಾಪ್ತವಯಸ್ಕನಾದ ಕೂಡಲೇ ಆಸ್ತಿಯಲ್ಲಿ ತನ್ನ ಹಕ್ಕನ್ನು ಗಟ್ಟಿಮಾಡಿಕೊಳ್ಳಲು ಹಂತ ಹಂತವಾಗಿ ಕ್ರಮಕೈಗೊಳ್ಳತೊಡಗಿದ. 1932 ಮೇ ತಿಂಗಳಲ್ಲಿ ಅಮರ್ ಅಣ್ಣನ ಪ್ರಭಾವಕ್ಕೆ ಮಣಿಯದ ದಕ್ಷವ್ಯಕ್ತಿಗಳಿಗೆ ತನ್ನೆಲ್ಲ ಕಾರ್ಯನಿರ್ವಹಣೆಯ ಅಧಿಕಾರ ವಹಿಸಿಕೊಟ್ಟ. ಇದಲ್ಲದೆ ತನ್ನ ಹಿತರಕ್ಷಣೆಗಾಗಿ ಅಮರ್ ವಕೀಲರನ್ನು ಸಂದರ್ಶಿಸತೊಡಗಿದ. ಇವೆಲ್ಲವನ್ನೂ ಅವನು ಬಹಿರಂಗವಾಗಿಯೇ ಮಾಡತೊಡಗಿದ. ಈ ನಡುವೆ ವಿನಯೇಂದ್ರ ಬಹಳಷ್ಟು ಬದಲಾಗಿದ್ದ. ಅವನ ಚರ್ಯೆ ಮನೆಯವರಿಗೆ ಅವನ ಬಗ್ಗೆ ಸಂಶಯ ಮೂಡುವಂತೆ ಮಾಡಿತು. ಆದರೆ ಅನಂತರ ನಡೆದ ಕೆಲವು ಸಣ್ಣಪುಟ್ಟ ಘಟನೆಗಳು ಈ ಸಂಶಯ ನಿರಾಧಾರವೆನ್ನಿಸಿತು.

ಆ ವರುಷದ ಕಾಳೀಪೂಜೆಗೆ, ಚಿಕ್ಕಮ್ಮನ ಆಹ್ವಾನದಂತೆ, ಅಣ್ಣತಮ್ಮಂದಿರು ದಿಯೋಗಾರಿಗೆ ತೆರಳಿದರು. ಅಲ್ಲಿ ಒಂದು ಸಂಜೆ ಅಣ್ಣ ಮತ್ತು ಅವನ ಕಂಪೌಂಡರ್ ಮಿತ್ರನೊಂದಿಗೆ ವಾಯುವಿಹಾರಕ್ಕೆ ಹೋಗಿ ಬಂದ ಅಮರ್ ಇದ್ದಕ್ಕಿದ್ದಂತೆ ಖಾಯಿಲೆ ಬಿದ್ದ. ಅವನನ್ನು ಪರೀಕ್ಷಿಸಿದ ಡಾ. ಸುರೇಂದ್ರನಾಥ ಮುಖರ್ಜಿಯವರು ಧನುರ್ವಾಯುವೆಂದು ಖಚಿತಮಾಡಿಕೊಂಡು ಅದರ ನಿವಾರಣಾ ಚುಚ್ಚುಮದ್ದನ್ನು ಕೊಟ್ಟರು. ಅಮರ್ ರೋಗದಿಂದ ನರಳುತ್ತಿರುವಾಗ ವಿನಯೇಂದ್ರ ತನ್ನ ಮಿತ್ರನೊಂದಿಗೆ ಇದ್ದಕ್ಕಿದ್ದಂತೆ ಕಾಣೆಯಾದ. ಅನಂತರ ರಾಣಿ ಸುರ್ಜಾವತೀದೇವಿ ಮನೆವೈದ್ಯರನ್ನು ಕರೆತರುವಂತೆ ಪಾಕುರ್‌ನಲ್ಲಿದ್ದ ವಿನಯೇಂದ್ರನಿಗೆ ಒಂದು ತಂತಿಯನ್ನು ಕಳುಹಿಸಿದಳು. ಆದರೆ ವಿನಯೇಂದ್ರ ಮನೆವೈದ್ಯರನ್ನು ಕರೆತರುವ ಬದಲು ಕಲ್ಕತ್ತೆಗೆ ತೆರಳಿ ಅಲ್ಲಿಂದ ತಾರಾನಾಥನೆಂಬ ವೈದ್ಯನನ್ನು ಕರೆದು ಕೊಂಡು ಬಂದ. ಡಾ ತಾರಾನಾಥ ಮೊದಲು ಕೊಡುತ್ತಿದ್ದ ಔಷಧಿ ನಿಲ್ಲಿಸಿ ಮಾರ್ಫಿಯಾ ಕೊಡಲು ಸೂಚಿಸಿದ. ಹೊಸ ವೈದ್ಯನ ಆಗಮನದಿಂದಲೇ ಅಚ್ಚರಿಗೊಂಡಿದ್ದ ಮನೆಯವರು ಈಗ ಸಂಶಯದಿಂದ ಹಿಂದೆ ಮುಂದೆ ನೋಡತೊಡಗಿದರು. ಮಾರ್ಫಿಯಾವೇ ನೋಧನುರ್ವಾಯುವಿಗೆಸರಿಯಾದ ಚಿಕಿತ್ಸೆಯೇ. ಆದರೆ ಈ ಚಿಕಿತ್ಸೆ ಮೇಲ್ನೋಟಕ್ಕೆ ಸರಿ ಕಂಡರೂ ಇದರ ಹಿಂದೆ ಏನೋ ಕುತಂತ್ರವಿದೆ ಎಂದು ತಾರಾನಾಥ ಸಂಶಯಾಸ್ಪದ ನಡವಳಿಕೆಯಿಂದ ಸುರ್ಜಾವತೀ ದೇವಿಗೆ ಅನ್ನಿಸತೊಡಗಿತು. ಅಂತೆಯೇ ಆಕೆ ಮೊದಲಿನ ಚಿಕಿತ್ಸೆಯನ್ನೇ ಮುಂದುವರಿಸಲು ಸೂಚಿಸಿದಳು. ಚಿಕ್ಕಮ್ಮ ಎಷ್ಟೇ ಮುತವರ್ಜಿ ವಹಿಸಿದರೂ ಈ ರೋಗದಿಂದ ಚೇತರಿಸಿಕೊಳ್ಳಲು ಅಮರ್‌ಗೆ ಐದು ತಿಂಗಳು ಬೇಕಾಯ್ತು.

ಈ ವೇಳೆಗೆ ವಿನಯೇಂದ್ರ ಅಲಹಾಬಾದ್ ಮತ್ತು ಉಳಿಕೆ ಬ್ಯಾಂಕುಗಳಲ್ಲಿದ್ದ ಎಸ್ಟೇಟಿಗೆ ಸಂಬಂಧಪಟ್ಟ ಹಣವನ್ನು ಹಿಂತೆಗೆದುಕೊಳ್ಳಲು ಸುರು ಮಾಡಿದ್ದ. ಸಾಲವಸೂಲಾತಿಗೆ ತಾನು ಮತ್ತು ಅಮರ್ ಸಮಾನ ಹಕ್ಕುದಾರರೆಂಬ ಶಿಫಾರಸು ಪತ್ರ ಪಡೆದ ವಿನಯೇಂದ್ರ ಬ್ಯಾಂಕುಗಳಿಂದ 13,000 ರೂ.ಗಳನ್ನು ಪಡೆಯುವುದರಲ್ಲಿ ಯಶಸ್ವಿಯಾದ. ಅಕ್ಟೋಬರ್ ತಿಂಗಳಲ್ಲಿ ಪಾಕುರ್ ಎಸ್ಟೇಟಿನೊಂದಿಗೆ ಮೊದಲೇ ಮಾಡಿಕೊಂಡಿದ್ದ ಒಪ್ಪಂದದಂತೆ 17,000 ರೂ. ಕೋರ್ಟಿಗೆ ಕಟ್ಟಲ್ಪಟ್ಟಿತು. ಈ ಹಣವನ್ನು ಲಪಟಾಯಿಸಲು ವಿನಯೇಂದ್ರ ಸಾಕಷ್ಟು ಪ್ರಯತ್ನಿಸಿದ. ಆದರೆ ಅಮರ್ ಇದಕ್ಕೆ ವಿರೋಧವ್ಯಕ್ತಪಡಿಸಿದ್ದರಿಂದ ಹಣ ಕೋರ್ಟಿನಲ್ಲಿಯೇ ಉಳಿಯಿತು ಈ ಘಟನೆ ಅಣ್ಣ ತಮ್ಮಂದಿರ ನಡುವಿನ ಕಹಿಯನ್ನು ಮತ್ತಷ್ಟು ಹೆಚ್ಚಿಸಿತು. ಅವರೀರ್ವರ ಸಂಬಂಧ ತಂತು ಮುರಿದು ಬೀಳುವ ಸ್ಥಿತಿಗೆ ಮುಟ್ಟಿತು. ಆಸ್ತಿಯ ಪಾಲಿನ ಬಗ್ಗೆ ಅಣ್ಣ ತಮ್ಮಂದಿರಲ್ಲಿ ಚರ್ಚೆ ಸುರುವಾಯ್ತು. ಅಂತೂ ಕಡೆಗೆ ಅದು ಪಾಕುರ್‌ನಲ್ಲಿಯೇ ಇತ್ಯರ್ಥವಾಗಲಿ ಎಂಬ ನಿರ್ಣಯಕೆ ಅವರು ಬಂದರು.

ಕಲ್ಕತ್ತೆಯಲ್ಲಿದ್ದಾಗ ಅಮರೇಂದ್ರ ಒಂದು ಸಂಜೆ ಜ್ಯೋತಿಮಯಿ ಎಂಬ ಯುವತಿ ಮತ್ತು ಅವಳ ಓರಗೆಯವರೊಡನೆ ಪೂರ್ಣಾ ಚಿತ್ರ ಮಂದಿರಕ್ಕೆ ಹೋದ. ಅಮರ್ ತನಗೆ ಆಹ್ವಾನವೀಯದಿದ್ದರೂ ವಿನಯ ಅದೇ ವೇಳೆಗೆ ಅದೇ ಚಿತ್ರಮಂದಿರಕ್ಕೆ ಹೋಗುವುದನ್ನೇ ತಪ್ಪಿಸಲಿಲ್ಲ. ಅವನೊಂದಿಗೆ ಖಾದಿ ಯುಡುಗೆ ಧರಿಸಿದ್ದ ಕಪ್ಪು ಬಣ್ಣದ ಕುಳ್ಳ ವ್ಯಕ್ತಿಯೂ ಇದ್ದ. ಅಮರ್‌ನ ಇರವನ್ನು ವಿನಯೇಂದ್ರ ಗುರುತಿಸಿದ್ದ. ಆದರೆ ಅಣ್ಣ ಬಂದಿರುವುದು ಅಮರ್‌ನ ಲಕ್ಷ್ಯಕ್ಕೆ ಬಂದಿರಲಿಲ್ಲ.

ನವೆಂಬರ್ 26ರಂದು, ರಾಣಿ ಸುರ್ಜಾವತೀ ಅಮರ್ ಸಂಪೂರ್ಣ ಗುಣಮುಖನಾಗಿದ್ದುದರಿಂದ ಪಾಕುರ್‌ಗೆ ತೆರಳಲು ನಿಶ್ಚಯಿಸಿದಳು. ಈ ಏರ್ಪಾಡು ವಿನಯೇಂದ್ರನಿಗೆ ಅವರು ಹೊರಡುವ ಹಿಂದಿನ ಸಂಜೆಯಷ್ಟೇ ತಿಳಿಯಿತು. ಅವನು ಮರುದಿನ ನಿಲ್ದಾಣದಲ್ಲಿ ಚಿಕ್ಕಮ್ಮನನ್ನು ಕಾಣಲು ಸಿಗುವುದಾಗಿ ತಿಳಿಸಿದ. ಕುಟುಂಬದಲ್ಲಿನ ವ್ಯವಹಾರಗಳನ್ನೆಲ್ಲಾ ಅರಿತಿದ್ದ ರಾಣಿ ಇದನ್ನು ಕೇಳಿ ಮೊದಲು ಅಚ್ಚರಿಗೊಂಡರೂ ನಂತರ ಸಮ್ಮತಿಸೂಚಕವಾಗಿ ಮೆಲುನಕ್ಕಳು. ಬಹುಶಃ ವಿನಯೇಂದ್ರ ತಾನು ಎಣಿಸಿದಷ್ಟು ಕೆಟ್ಟವನಲ್ಲ; ಅವಳ ಮನ ನುಡಿಯಿತು. ಮೇಲಾಗಿ ಅವಳಿಗೂ ವಿನಿಯೇಂದ್ರನಿಗೂ ಯಾವ ವೈಮನಸ್ಯವೂ ಇರಲಿಲ್ಲ. ಇರಲಿಕ್ಕೆ ಸಾಧ್ಯವೂ ಇರಲಿಲ್ಲ. ಕಾರಣ ಅವಳ ಆಸ್ತಿಯಲ್ಲಿ ವಿನಯ ಪಾಲುದಾರನಾಗಿದ್ದ.

ಚಿಕ್ಕಮ್ಮನನ್ನು ಮರುದಿನ ಸಂಧಿಸುವುದಾಗಿ ತಿಳಿಸಿದ ನಂತರ ವಿನಯೇಂದ್ರ ಮೇಲೆ ಹೇಳಿದ ಆ ಖಾದಿಪ್ರಿಯ ಕುಬ್ಜ ಮಿತ್ರನೊಂದಿಗೆ ಹೌರಾಗೆ ಹೋದ. ವಿನಯೇಂದ್ರ ಸುಪರಿಚಿತ ವ್ಯಕ್ತಿಯಾಗಿದ್ದುದರಿಂದ ಎಲ್ಲರು ಅವನನ್ನು ನೋಡಿದೊಡನೆಯೇ ಗುರುತಿಸಿದ್ದರು.

ಮರುದಿನ ವಿನಯೇಂದ್ರ ದೇಶಭಕ್ತ ಉಡುಗೆ ಧರಿಸಿದ್ದ ಆ ತನ್ನ ಸ್ನೇಹಿತನೊಂದಿಗೆ ಚಿಕ್ಕಮ್ಮನನ್ನು ಬೀಳ್ಕೊಡಲು ಹೌರಾ ನಿಲ್ದಾಣದಲ್ಲಿ ಸಮಯಕ್ಕೆ ಸರಿಯಾಗಿ ಹಾಜರಾದ. ರಾಣಿಯೊಂದಿಗೆ ಅಮರನಲ್ಲದೆ ಅವನ ತಂಗಿ ವನಬಾಲಿ ಮತ್ತು ಸೋದರ ಸೊಸೆ ಅಣಿಮಾ ಕೂಡ ಇದ್ದರು ಇವರು ನಿಲ್ದಾಣಕ್ಕೆ ಬರುವ ವೇಳೆಗೆ ವಿನಯೇಂದ್ರನ ಗೆಳೆಯ ಅಲ್ಲಿರಲಿಲ್ಲ. ಟಿಕೇಟ್ ಪಡೆದ ನಂತರ ಎಲ್ಲರೂ ಪ್ಲಾಟ್‌ಫಾರಂ ಪ್ರವೇಶಿಸಿದರು. ಎಲ್ಲರಿಗೂ ಮುಂದಾಗಿ ಅಮರೇಂದ್ರ ನಡೆಯುತ್ತಿದ್ದ. ರಾಣಿ ವನಬಾಲಿ ಮತ್ತು ಅಣಿಮಾರನ್ನು ಹಿಂಬಾಲಿಸಿ ವಿನಯೇಂದ್ರ ಬರುತ್ತಿದ್ದ. ಜನರ ನಡುವೆ ದಾರಿಮಾಡಿಕೊಂಡು ನಡೆಯುತ್ತಿದ್ದ ಅಮರೇಂದ್ರನಿಗೆ ಖಾದಿಯುಡುಗೆಯ ಕಪ್ಪುಬಣ್ಣದ ಕುಳ್ಳ ವ್ಯಕ್ತಿಯೊಬ್ಬ ಡಿಕ್ಕಿ ಹೊಡೆದ. ಅಮರನಿಗೆ ತನ್ನ ಬಲತೋಳಿಗೆ ಏನೋ ಚುಚ್ಚಿದಂತೆ ಭಾಸವಾದರೂ ನಿಜನಾಗಿಯೂ ತನಗೆ ಆದುದೇನು ಎಂದು ತಿಳಿಯಲು ಅವನಿಗೆ ಕೆಲವು ಕ್ಷಣಗಳೇ ಬೇಕಾಯ್ತು. ಅವನಿಗೆ ಅರಿವು ಮೂಡುವ ವೇಳೆಗೆ ಆ ವ್ಯಕ್ತಿ ಜನಸಮುದಾಯದಲ್ಲಿ ಕರಗಿ ಹೋಗಿದ್ದ.

'ಯಾವನೋ ಒಬ್ಬ ನನಗೆ ಚುಚ್ಚಿಹೋದ' ಎಂದು ಚಿಕ್ಕಮ್ಮನೆಡೆಗೆ ತಿರುಗಿ ಹೇಳಿದ ಅಮರ್ ತನ್ನ ಷರ್ಟಿನ ತೋಳನ್ನು ಮಡಚಿ ಮೇಲೆತ್ತಿ ನೋಡಿದ. ಅವನ ಊಹೆ ಸುಳ್ಳಾಗಿರಲಿಲ್ಲ. ಚುಚ್ಚಿದ ಗುರುತು ಅಲ್ಲಿ ಸ್ಪಷ್ಟವಾಗಿ ಮೂಡಿತ್ತು. ಆದರೆ ವಿನಯ ಇದನ್ನು ಅಷ್ಟಾಗಿ ಗಣ್ಯಕ್ಕೆ ತೆಗೆದುಕೊಳ್ಳಲಿಲ್ಲ. 'ಯಾರದ್ದಾದರೂ ಕೋಟಿನ ಇಲ್ಲವೇ ಕುರ್ತಾದಲ್ಲಿನ ಪಿನ್ನು ಆಕಸ್ಮಿಕವಾಗಿ ಚುಚ್ಚಿರಬಹುದು. ಅಥವಾ ಯಾವುದಾದರೂ

(ಒಂಬತ್ತನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
134 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1921)
ರಿಜಿಸ್ಟರ್ಡ್ ಆಫೀಸು.- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೇರ್‌ಮನ್.

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 47

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦–೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಭಾರತ ವೇದಿಕೆಯ ಮೇಲೆ ರುದ್ರ ನಾಟಕ ಪ್ರದರ್ಶನ ಕಾಲಾಬಜಾರ್

ಕೆಲವು ದಿನಗಳಿಗೆ ಹಿಂದೆ ಹೋಟೇಲು ಮಾಲಿಕರಿಗೆಲ್ಲ ರಾಜ್ಯದ ಇಂಡಿಕೇಟ್ ಎಂ. ಪಿ.ಯೊಬ್ಬರು ಎಚ್ಚರಿಕೆ ನೀಡಿದರು. ಇದು ಹೋಟೇಲು ತಿಂಡಿ-ತೀರ್ಥಗಳ ಬೆಲೆಗಳಿಗೆ ಸಂಬಂಧಿಸಿತ್ತು. 'ನಕ್ಷಲೀಯರಿದ್ದಾರೆ, ಎಚ್ಚರಿಕೆ' ಎಂಬುದು ಗಾಳಿಯಲ್ಲಿ ತೇಲಿಸಿಬಿಡುವಷ್ಟು ಸಾಮಾನ್ಯ ಎಚ್ಚರಿಕೆಯೆಂದು ಸುಮ್ಮನಿರುವುದು ಸಾಧ್ಯವಿಲ್ಲ. ಅಂದರೆ, ಮಾನ್ಯ ಎಂ. ಪಿ.ಗಳ ದೃಷ್ಟಿಯಲ್ಲಿ ಹೊಟೇಲು ಮಾಲಿಕರ ಲಾಭಬಡಕತನವೇ ಅಲ್ಲಿನ ಬೆಲೆಯೇರಿಕೆಗೆ ಕಾರಣ. ಈ ಬೆಲೆಯೇರಿಕೆಯನ್ನು ತಡೆಯುವಲ್ಲಿ ಸರಕಾರ ಅಸಮರ್ಥವೆಂದೂ ಜನತೆಯೇ ಚಳುವಳಿಯೋ ಮತ್ತಿನ್ನೆಂಥದೋ ಹೂಡಿ ತನಗೆ ಬೇಕಾದಂತೆ ದರವಿಳಿಸಿಕೊಳ್ಳಬಹುದೆಂದೂ ತಮ್ಮ ಅಭಿಪ್ರಾಯವನ್ನು ಪರೋಕ್ಷವಾಗಿ ಹೊರಗೆಡಹಿದಂತಾಯ್ತು. 'ಕಾಳಧನ' ವ್ಯವಹಾರ ಮತ್ತು ಬೆಲೆಯೇರಿಕೆಯ ಸಂಬಂಧದಲ್ಲಿ ಲೋಕಸಭೆಯಲ್ಲಿ ಮಾತನಾಡುತ್ತ ವಿತ್ತ ಸಚಿವ ಚವನರೂ ಇಂತಹುದೇ ಚಳುವಳಿಗೆ ಬೆಂಬಲ ವ್ಯಕ್ತಪಡಿಸಿದಂತೆ ಭಾಸವಾಗುತ್ತದೆ. ಬಳಕೆದಾರರ ಚಳುವಳಿಯಿಂದ ಬೆಲೆಗಳನ್ನು ನಿಯಂತ್ರಣದಲ್ಲಿಡಬಹುದೆಂದು ಅವರು ಸಲಹೆ ನೀಡಿದರು.

ಜವಾಬ್ದಾರಿಯುಳ್ಳವರು ಈ ರೀತಿಯ ಸಲಹೆ ಅಥವಾ ಎಚ್ಚರಿಕೆ ನೀಡಿದ್ದರಿಂದ ಪರಿಸ್ಥಿತಿ ಸುಧಾರಿಸುವ ಲಕ್ಷಣಗಳು ಕಾಣುವುದಿಲ್ಲ. ಇದೇ ಬಗೆಯ ನೂರಾರು ಎಚ್ಚರಿಕೆ-ಗದರಿಕೆ–ಬೆದರಿಕೆಗಳೆಲ್ಲ ಗಾಳಿಯಲ್ಲಿ ಬಿಟ್ಟ ಹುಸಿಗುಂಡುಗಳೆಂಬುದು ಜನ ತಿಳಿಯುವುದಿಲ್ಲ. ಎಚ್ಚರಿಕೆಗಳನ್ನು ನೀಡುವುದರ ಮೂಲಕ ಹೊಣೆಗಾರ ವ್ಯಕ್ತಿಗಳು ಪರಿಸ್ಥಿತಿಯ ಭವಿಷ್ಯವನ್ನು ಸುಕ್ಕಟೆಯಾಗಿ ಹೇಳಿ, ಅವರಿಂದ ಬದುಕಿಕೊಳ್ಳಲು ಕಳ್ಳಧನವಂತರಿಗಾಗಲೀ ಲಾಭಬಡಕ ವ್ಯಾಪಾರಿಗಳಿಗಾಗಲೀ ಅನುಕೂಲಾವಕಾಶವೊದಗಿಸುತ್ತಾರೆ. ಬೆಲೆಯೇರಿಕೆಯು ಇಂದು ಸಾರ್ವತ್ರಿಕವೆಂಬುದನ್ನು ಒಪ್ಪಿಕೊಳ್ಳಲೇಬೇಕು; ಆದರೆ ಇದಕ್ಕೆ ಲಾಭಬಡಕ ನೀತಿಯೇ ಏಕಮಾತ್ರ ಕಾರಣವೆಂದು ಪ್ರಚಾರ ಮಾಡುವುದು ಎಷ್ಟು ಮಾತ್ರಕ್ಕೂ ಸಲ್ಲದು. ಉತ್ಪಾದನೆಯಲ್ಲಿ ಕೊರತೆ, ಪೂರೈಕೆಯಲ್ಲಿ ಅವ್ಯವಸ್ಥೆಗಳೇ ಇಲ್ಲಿನ ಮುಖ್ಯ ಕಾರಣ. ಈ ಹೊಣೆಗಾರಿಕೆಯಿಂದ ಜವಾಬ್ದಾರಿಯುಳ್ಳವರು ತಪ್ಪಿಸಿಕೊಂಡು ಎಲ್ಲವಕ್ಕೂ ವ್ಯಾಪಾರಿಗಳನ್ನೇ ಬೊಟ್ಟುಮಾಡಿ ತೋರಿಸಿ, ಅವರ ವಿರುದ್ಧ ಚಳುವಳಿ ಹೂಡಲು ಪ್ರೇರೇಪಣೆ ನೀಡುವುದೆಂದರೆ, ಹುತ್ತವನ್ನು ಬಡಿದು ಹಾವನ್ನು ಕೊಲ್ಲಿರೆಂದಂತೆಯೇ ಸರಿ. ವ್ಯಾಪಾರಾದಿಗಳಿಗೆ ಬ್ಯಾಂಕುಗಳು ನೀಡುವ ಸಾಲಸೌಲಭ್ಯಗಳು ಸ್ಮರಣೀಯ ನಿಜ; ಆದರೆ, ಆದರ ಮೇಲೆ ಹೇರುವ ಬಡ್ಡಿಯ ದರ ಮಾತ್ರ ತೀರ ಹೆಚ್ಚಿನದು. ಬ್ಯಾಂಕ್ ನೆರವಿನಿಂದ ಯಾವುದೇ ಉತ್ಪಾದನೆ, ವಿತರಣೆ ಕೈಕೊಂಡಾಗ, ಆ ಬಡ್ಡಿಯ ಮೊತ್ತವನ್ನೂ ಭರಿಸಬೇಕಾಗುವುದು ಬೆಲೆಯೇರಿಕೆಗೆ ಇದೂ ಒಂದು ಕಾರಣ. ವ್ಯಾಪಾರಿ ಎಲ್ಲ ಪ್ರಕಾರದ ತೆರಿಗೆಗಳನ್ನೂ, ಬಡ್ಡಿಯನ್ನೂ ಬಳಕೆದಾರನ ಮೇಲೆಯೇ ಹಾಕುವುದು ಸಹಜ. ಈಯೆಲ್ಲ ವ್ಯವಸ್ಥೆಗಳು ಸರಳ ಮತ್ತು ಕಡಿಮೆ ಖರ್ಚಿನವಾದರೆ ಬೆಲೆಗಳು ಈಗಿನಂತೆ ನೆಗೆಯಲಾರವು.

ಇನ್ನು ಕಾಳಧನದ ಪ್ರಶ್ನೆ. ವಿಪರೀತ ತೆರಿಗೆಗಳ ಭಯವೇ ಇದಕ್ಕೆ ಮೂಲ. ಪ್ರಾಯಃ ಆದಾಯ ತೆರಿಗೆಯನ್ನು ನಾವು ಕೊಡುವಷ್ಟು ಜಗತ್ತಿನ ಯಾವ ದೇಶವೂ ಕೊಡುವುದಿಲ್ಲ. ತಾವು ಪರಿಶ್ರಮದಿಂದ ಗಳಿಸಿದ್ದನ್ನು ಸರಕಾರಕ್ಕೆ ಬಿಟ್ಟಿಯಾಗಿ ಕೊಡುವಾಗ ಹೃದಯ ಕಿತ್ತುಬರುತ್ತದೆ. ಇದನ್ನು ತಪ್ಪೆನ್ನುವಂತಿಲ್ಲ—ಮಾನವ ಸಹಜ ಪ್ರವೃತ್ತಿ. ಇದರ ಜತೆಗೆ ನಮ್ಮ ಪ್ರಾಮಾಣಿಕತೆಯ ಅಭಾವವೂ ಮಹತ್ವಪೂರ್ಣವಾದದ್ದು. ಸತ್ಯ ಹೇಳಿದರೆ, ಹೆಚ್ಚಿನ ಆಯವು ತೆರಿಗೆಯ ರೂಪದಲ್ಲಿ ಸರಕಾರಕ್ಕೆ ಹೋಗುವುದರಿಂದ ತೆರಿಗೆ ಭಯದಿಂದಲೇ ಆದಾಯವನ್ನು ಮುಚ್ಚಿಡುವ ಚಟ ಅಂಟಿಕೊಂಡಿದೆ. ಇದು ಮಂತ್ರಿಮಾಗಧರನ್ನೂ ಬಿಟ್ಟಿಲ್ಲ; ಸಿನಿಮಾ ನಟ–ನಟಿಯರನ್ನೂ ಬಿಟ್ಟಿಲ್ಲ. ಇದೇ ರೀತಿಯಲ್ಲಿ 'ಕಾಲಾಬಜಾರ್' ನಮ್ಮ ದೇಶದಲ್ಲಿ ನಡೆಯುತ್ತಿದೆ. ಇದರಲ್ಲಿ ತೊಡಗಿಸಿದ ಕಪ್ಪು ಬಂಡವಾಳವು ಪ್ರತಿ ವರ್ಷವೂ ಬೆಳೆಯುತ್ತಲೇ ಹೋಗುತ್ತಿದೆ. ಬಹಿರಂಗ ಮಾರುಕಟ್ಟೆಯಿಂದ ದಿನದಿನವೂ ಕೋಟ್ಯಂತರ ರೂಪಾಯಿಗಳು ಇದಕ್ಕೆ ಸೇರುತ್ತವೆ. ಇದರ ಜತೆಯಲ್ಲಿ ಖೋಟಾ ನೋಟುಗಳ ವ್ಯವಹಾರವೂ ಬೆಳೆದಿದೆ. ಇವೆಲ್ಲವೂ ನಮ್ಮ ಅರ್ಥವ್ಯವಸ್ಥೆಯ ಮೇಲೆ ಭೀಕರ ಪರಿಣಾಮ ಬೀರುವುದಿಲ್ಲವೆಂದರೆ ಯಾರೂ ನಂಬುವಂಥದ್ದಲ್ಲ. ಸರಕಾರವೇ ಕೊರತೆ ಧನ ವಿನಿಯೋಗಕ್ಕೆ ಶರಣು ಹೋಗುವುದರ ಮೂಲಕ ಬೆಲೆಯೇರಿಕೆಗೆ ಅಂಕದ ಪರದೆಯನ್ನು ಎತ್ತುತ್ತದೆ. ಮುಂದಿನ 'ಕಾಲಾಬಜಾರ್' ರುದ್ರ ನಾಟಕವನ್ನು ಅಪ್ರಾಮಾಣಿಕ ಪ್ರಜೆಗಳು, ಹುದ್ದೇದಾರರು, ಅಧಿಕಾರಿಗಳು, ಅನಧಿಕಾರಿಗಳು, ಹೊಣೆಗಾರರು, ಹೊಣೆಗೇಡಿಗಳು —ಎಲ್ಲರೂ ಒಂದಾಗಿಯೇ ಆಡುತ್ತಾರೆ.

ಸರಕಾರಕ್ಕೆ ಬೆಲೆಯೇರಿಕೆಯನ್ನು ತಡೆಯಲು ನಿಯಂತ್ರಣ ಮೂಲಕ ಮಾತ್ರ ಸಾಧ್ಯವೆಂದು ವಿತ್ತ ಸಚಿವ ಚವನರು ಹೇಳಿದ್ದಾರೆ. ಆದರೆ, ನಿಯಂತ್ರಣದೊಡನೆ ಅಭಾವ ಪರಿಸ್ಥಿತಿ—ತನ್ಮೂಲಕ ಬೆಲೆಯೇರಿಕೆ—ಇವು ಅನುಭವಸಿದ್ಧವಾದದ್ದು. ಬೆಲೆ ನಿಯಂತ್ರಿಸುವ ನೆವದಲ್ಲಿ ನಿಯಂತ್ರಣ ಹೇರದೆ ಹೋದರೆ, ಶ್ರೀ ಸಾಮಾನ್ಯನಿಗೆ ಅದೇ ದೊಡ್ಡ ಉಪಕಾರವಾಗುತ್ತದೆ. ಪ್ರಾಯಃ ಬೆಲೆಯೇರಿಕೆ ತಡೆಯಲು ನಿಯಂತ್ರಣದ ಅಂಕುಶವೊಂದೇ ದಿವ್ಯ ಔಷಧಿಯೆಂಬುದು ನಮ್ಮ ಅಧಿಕಾರಿಗಳ ತಪ್ಪು ಕಲ್ಪನೆಯಿರಬೇಕು. ಇದಕ್ಕಿಂತ ಬೇರೆಯಾದ ಹಲವು ಸಾಧನಗಳಿರಬೇಕು. ಆದರೆ, ಮಾನವನ ಇಂದಿನ ದೇಹಸ್ಥಿತಿಯ ಮೇಲೆ ಅಲ್ಲೋಪಥಿಯೂ ಪರಿಣಾಮಕಾರಿ ಪ್ರಭಾವ ಬೀರಲು ಅಸಮರ್ಥವಾಗಿರುವಾಗ, ಆಯುರ್ವೇದವೇನು ಮಾಡೀತು? ನಮ್ಮ ಶ್ರೀಸಾಮಾನ್ಯರೆಲ್ಲರಲ್ಲಿನ ಪ್ರಾಮಾಣಿಕತೆಯ ಪ್ರಮಾಣ ಬೆಳೆಯದೆ ಹೋದರೆ ಶಾಸನ ಮಾತ್ರದಿಂದ ಸುಧಾರಣೆ ಸಾಧ್ಯವಿಲ್ಲ; ಅದನ್ನೇ ಸಚಿವರು ಒಪ್ಪಿಕೊಂಡು ಚಳುವಳಿಯನ್ನು ಹೂಡ ಹೇಳಿದಂತಿದೆ. 'ಪ್ರಾಮಾಣಿಕರಾಗಿರಲು' ಯಾವುದೇ ಅವಕಾಶವನ್ನು ಕೊಡದೇನೇ ದಂಡಪ್ರಯೋಗಕ್ಕೆ ಇಳಿಯುವದು ಪ್ರಜಾಸತ್ತೆಗೆ ಹೇಳಿಸಿದ್ದಲ್ಲ. ಆಳುವವರೇ ಅಪ್ರಾಮಾಣಿಕರೆಂದು ತೋರಿಸಿಕೊಟ್ಟಿರುವಾಗ ಆಳಿಸಿಕೊಳ್ಳುವವರು ಮತ್ತು ಹೇಗಿರಬೇಕು? 'ಮಂತ್ರಿತನ–ಎಂಪಿತನಗಳ ಬಲೆಯಿಳಿದರೆ, ಪೇಟೆ ಧಾರಣೆಗಳೂ ಇಳಿಯ ಬಲ್ಲುದು; ರಾಜ್ಯಕಾರಣದಿಂದ ಅಪ್ರಾಮಾಣಿಕತೆ ದೂರಸರಿದರೆ, ಪ್ರಜಾವಲಯದಿಂದಲೂ ಅದು ಹೊರಟು ಹೋದೀತು. ಯಥಾ ರಾಜಾ ತಥಾ ಪ್ರಜಾ; ಹಿರಿಯಕ್ಕನ ಚಾಳಿ ಮನೆ ಮಂದಿಗೆ; ಹೇಳುವುದು ಶಾಸ್ತ್ರ, ಇಕ್ಕುವುದು ಗಾಳ-ಈಯೆಲ್ಲ ಲೋಕೋಕ್ತಿಗಳನ್ನು ನೂರಕ್ಕೆ ನೂರರಷ್ಟು ಸತ್ಯ ಮಾಡಿ ಕೊಟ್ಟ ದೇಶ ಜಗತ್ತಿನಲ್ಲಿ ಭಾರತವೊಂದೇ ಹೀಗೆಯೇ ಮುಂದುವರಿದರೆ, ನಮ್ಮದು ಚಳುವಳಿಗಳ ದೇಶವಾಗುವುದು; ಸಂಪೂರ್ಣ ಅರಾಜಕ ದೇಶವಾಗುವುದು.

ಅಗ್ನಿಪ್ರಳಯ ಬಂತಂತೆ!

೧೯೭೨ರಲ್ಲಿ ಅಗ್ನಿ ಪ್ರಳಯ ಸಂಭವಿಸುವುದೆಂದು ನಂಬಿ ಅದುವರೆಗಿನ ತಮ್ಮ ಶೇಷಾಯುಷ್ಯವನ್ನು ಪ್ರಾರ್ಥನೆ, ಭಕ್ತಿ ಗೀತ ಪಠನ—ಇವುಗಳಲ್ಲಿಯೇ ಕಳೆಯಲು ನಿರ್ಧರಿಸಿದ ಒಂದು ಪಂಗಡ ನಮ್ಮ ಮದ್ರಾಸದ ಬಳಿ ಶಿಬಿರ ಹೂಡಿದೆ. ಬರಿಯ ಭಾರತೀಯರು ಮಾತ್ರವಲ್ಲ; ಅಮೇರಿಕನ್ನರು, ಪಶ್ಚಿಮ ಜರ್ಮನ್ನರು, ಕೆನಡಿಯನ್ನರು, ಆಸ್ಟ್ರಿಯನ್ನರು– ಮೊದಲಾದವರು ಕುಟುಂಬ ಸಮೇತ ಇಲ್ಲಿಗೆ ಬರತೊಡಗಿದ್ದಾರೆ. ಇಂತಹ ಭಾವನೆ ಹುಟ್ಟಿಸಿದವನು ಪೌಲಾಸೀಲ್ ಲಾರಿಯೆಂಬ ಪಾದ್ರಿ. ಇವನ ವಯಸ್ಸು ೫೧ ಮಾತ್ರ. ಶಿಬಿರಕ್ಕೆ ಬಂದವರು ತಮ್ಮ ಸಂಪತ್ತೆಲ್ಲವನ್ನೂ ಈ ಪಾದ್ರಿಗೆ ಕಾಣಿಕೆ ನೀಡುತ್ತಾರೆ. ಹೀಗೆ ಪ್ರಳಯ ಭಯದಿಂದ ತತ್ತರಿಸಿ ಬಂದವರು ಹಿಪ್ಪಿಗಳಲ್ಲ; ಮಂಕರೂ ಅಲ್ಲ. ಈ ಹಿಂದೆಯೂ 'ಪ್ರಳಯ ಭೀತಿ'ಯಿಂದ ಭೀತರಾದವರು ಬೇರೆಡೆ ಬಂದು ಸೇರಿದ್ದ ಉಲ್ಲೇಖಗಳುಂಟು. ಕೆಲವು ವರ್ಷಗಳಿಗೆ ಮೊದಲು ರೋಮನ್ ಮತಕ್ಕೆ ಸೇರಿದ ಪಾದ್ರಿಯೊಬ್ಬನ ಪ್ರಳಯ ಭವಿಷ್ಯ ಸುಳ್ಳಾಯಿತು. ಸದ್ಯ ಮದ್ರಾಸ ಬಳಿಯಲ್ಲಿ ದೇಶೀಯರೂ–ವಿದೇಶೀಯರೂ ಭಕ್ತಿರಸ ಸಾಗರದಲ್ಲಿ ಮುಳುಗಿದ್ದಾರೆ. ಅಂಧಶ್ರದ್ಧೆ– ಮೂಢ ಭಕ್ತಿ ಎಂಬುದು ಒಂದೇ ದೇಶಕ್ಕೆ ಸೀಮಿತವಾದುದಲ್ಲ. ಅದು ಸಾರ್ವತ್ರಿಕವಾದದ್ದು. ಅಜ್ಞನದು ಅಂಧವಾದ, ಅಪ್ಪನದು ವಾಸ್ತವಿಕವಾದ; ಮಗನದ್ದು ಅತಿರೇಕವಾದ.

ಶ್ರೀ ರಾಘವೇಂದ್ರರ ವಿಚಾರಗಳು

[ಶ್ರೀ ಜಗನ್ನಾಥ ದಾಸರ ಕೃತಿಗಳಿಂದ]

ಲೇಖಕರು: ಶ್ರೀ ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು.

I ಅವತಾರ:

"ಯದಾ ಯದಾ ಹಿ ಧರ್ಮಸ್ಯ
ಗ್ಲಾನಿರ್ಭವತಿ ಭಾರತ |
ಅಭ್ಯುತ್ಥಾನ ಮಧರ್ಮಸ್ಯ
ತದಾತ್ಮಾನಂ ಸೃಜಾಮ್ಯಹಂ ||"

ಭಗವಾನ್ ಕೃಷ್ಣನ ಈ ಗೀತಾ ವಾಕ್ಯದಂತೆ, ಧರ್ಮಗ್ಲಾನಿಯಾದಾಗ– ಅಧರ್ಮದ ಉತ್ಥಾನವಾದಾಗ—ಪರಮಾತ್ಮನೇ ತನ್ನನ್ನು ಅವತರಿಸಿ ಕೊಳ್ಳುತ್ತಾನೆ. ಅಂದರೆ, ಧರ್ಮದ ಉತ್ಥಾನ ಹಾಗೂ ಅಧರ್ಮದ ಗ್ಲಾನಿಯಾಗಲು (ಲೌಕಿಕ ಭಕ್ತರ ರಕ್ಷೆಗೆ– ದುಷ್ಟರ ಶಿಕ್ಷೆಗೆ) ದೇವನೇ ಅವತಾರವೆತ್ತುವನೆಂದು ಇಲ್ಲಿಯ ಮಥಿತಾರ್ಥ.

'ನಾಥಃ ಕತಾ ತ್ರಿಯುಗಹೊತಿರನುದ್ಯುಭೂಮಃ' ಎಂಬಂತೆ (ನಾರಾಯಣ ಪಂಡಿತಾಚಾರ್ಯ–ಮಧ್ವವಿಜಯ) ಕಲಿಯುಗದಲ್ಲಿ ಸ್ವಯಂ ಪರಮಾತ್ಮನೇ ಅವತಾರವೆತ್ತುವುದಿಲ್ಲ! ಆ ಮೇರೆಗೆ, ಭಗವಂತನು ತನ್ನ ಆಪ್ತ ಭಕ್ತರಲ್ಲಿ ಕೆಲವರನ್ನು ಆಗಾಗ ಅವತಾರ ಮಾಡಿಸಿ ಈ ಮೇಲಿನ ಮಾತಿನಂತೆ ಲೌಕಿಕ ಯೋಗಕ್ಷೇಮ ಚಿಂತನೆಗೆಳಸುತ್ತಾನೆಂದು ತಿಳಿಯಬೇಕು. ಈ ತರದಲ್ಲಿ, ಭಗವದಾಜ್ಞೆಯಿಂದ ಭಕ್ತರು ಅವತರಿಸಿ, ತಮ್ಮ ಬಾಳಿನ ವಿಚಿತ್ರ ಘಟನೆಗಳ ಮೂಲಕವಾಗಲೀ, ಗ್ರಂಥ ರಚನೆಯ ಮೂಲಕವಾಗಲೀ, ಲೋಗರಿಗೆ ಉಪಕೃತಿಯನ್ನು ಕೈಗೊಳ್ಳುತ್ತಾರೆ. ಪ್ರಸ್ತುತ, ಇಂತಹ ಉಭಯ ವಿಧಗಳಲ್ಲೂ ಸಮುಪಕೃತಿಯನ್ನು ನಿರ್ವಹಿಸಿದವರಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳೂ ಒಬ್ಬರಾಗಿದ್ದಾರೆ.

ಆ ಮೊದಲು 15–16ನೆಯ ಶತಕದಲ್ಲಿ (ಇಸ್ವಿ 1480—1600) ಬಾಳಿದ ಶ್ರೀ ವಾದಿರಾಜ ಸ್ವಾಮಿಗಳೂ ಇಂತೆ ಉಭಯ ವಿಧಾನಗಳಲ್ಲಿ ಜನೋಪಕಾರಕ್ಕೆಳಸಿದ್ದರು. ಇವರಿಬ್ಬರೂ, ತಮ್ಮ ನಿರ್ಯಾಣಕಾಲವನ್ನು ಮುಂದಾಗಿ ತಿಳುಹಿ, ವೃಂದಾವನಸ್ಥರಾಗಿ ದೇವರ ಧ್ಯಾನ ಮಾಡಿ, ಸಕಾಲಕ್ಕೆ ದಿವ್ಯರೂಪರಾಗಿ ಕಾಣಿಸಿ, ಸಾಗಿದುದಲ್ಲದೆ; ತಮ್ಮ ನಾಮ, ವೃಂದಾವನಾದಿ ಸೇವೆಗಳಿಂದ ಆಸ್ತಿಕರ ಕಷ್ಟಗಳನ್ನು ಪರಿಹರಿಸಿ ಅನುಗ್ರಹಿಸುತ್ತಿದ್ದಾರೆಂಬುದು ಉಲ್ಲೇಖನೀಯವು!

ಶ್ರೀ ರಾಘವೇಂದ್ರ ಸ್ವಾಮಿಗಳು ಮಂತ್ರಾಲಯದಲ್ಲಿ ವೃಂದಾವನಸ್ಥರಾಗಿ ಇದೀಗ ಮುನ್ನೂರು ವರ್ಷಗಳು ಪೂರ್ತಿಯಾಗುತ್ತಿವೆ. ಆ ಕಾರಣ, ಎಲ್ಲೆಡೆ ಪೂಜಾ ಸಭಾ ಪ್ರಕಟನಾದಿಗಳು ನೆರವೇರುವಲ್ಲಿ, ಅವರನ್ನು ಕುರಿತು ಈ ವಿಚಾರಧಾರೆ ಅತ್ಯವಶ್ಯವಿದೆ, ಗುರುವಿನ ಅನುಗ್ರಹದ ಮೂಲಕ ಹರಿಯ ಕೃಪಾಕಟಾಕ್ಷದ ಪ್ರಾಪ್ತಿಗೆ ಸಾಧ್ಯವಿದೆ. ಶ್ರೀ ರಾಘವೇಂದ್ರರ ದಯೆಗೆ ವೃಂದಾವನದ ಸೇವೆ ಮೂಲ; ಅದಕ್ಕೆ ಚಿತ್ರ ಭಿತ್ತಿಯಲ್ಲಿ ಗುರು ಭಕ್ತಿಯು ಒಡಮೂಡುವಂತೆ ಗುರುಗಳ ಆಕೃತಿ (ಭಾವ ಚಿತ್ರ. 2) ಮುಂಗಡೆ ಇರಿಸುವುದು, ಗುರುಗಳ ಮಹಿಮೆಯನ್ನು ಚಿತ್ರಿಸುವುದು, ಗುರುಗಳನ್ನು ಹೊಗಳಿದ ಕೃತಿಗಳನ್ನು ಪಠಿಸುವುದು, ತತ್ಪರಿಚಯದ ಪುಸ್ತಿಕೆ (ಪತ್ರಿಕೆ–ಗ್ರಂಥಗಳನ್ನು) ಪ್ರಕಟಿಸುವುದು ಪ್ರಾಥಮಿಕ ಕಾರ್ಯವಾಗಿದೆ. (ಅಂದರೆ, ಈ ಮೇರೆಗೆ ಗುರುಕೃಪೆ ಒದಗುತ್ತದೆ, ಐಹಿಕಾ ಮುಷ್ಮಿಕ ಸೌಖ್ಯಕ್ಕೇರಲು ಅವಕಾಶವಿದೆ.) ಅನಂತರ, ಗುರುಗಳು ಬರೆದ ತತ್ತ್ವ ವಿಚಾರದ ಕೃತಿಗಳ ಮನನದಿಂದ ನೈಜಸುಖವಿದೆ. ಈ ವಿಧಾನದಲ್ಲಿ ಸಾಗಿದರೆ ಮುಕ್ತಿಯೊದಗುವುದರಲ್ಲಿ ಸಂಶಯವಿಲ್ಲ! ಆದುದರಿಂದ, ಸದ್ಯ ಈ ಮೇಲೆ ಹೆಸರಿಸಿದಂತೆ, ಗುರುಗಳ ಮಹಿಮೆ ಮತ್ತು ತತ್ತ್ವವಿಚಾರ ಕಣಗಳನ್ನೊಳಗೊಂಡ ಶ್ರೀ ಜಗನ್ನಾಥದಾಸರು ರಚಿಸಿದ ಕೆಲವು ಪದ್ಯಗಳನ್ನು ಆಯ್ದು ತುಸ ವಿವರಣೆಗೆಳಸುವುದು ಸೂಕ್ತವಿದೆ. (ಸುರತ್ಕಲ್ಲು ವಿಜಯ ಸಾಹಿತ್ಯಮಾಲೆಯಲ್ಲಿ 1966, 1968, 1969ರಲ್ಲಿ, ಉಪಾಸಿನ ಭಕ್ತರ ಸಹಕಾರದಿಂದ ಇಂತಹ ಕೀರ್ತನಗಳ ಚಿಕ್ಕ ಮೂರು ಪುಸ್ತಿಕೆ ಪ್ರಕಟವಾಗಿದೆ.

ಇಲ್ಲಿ, ಉಡುಪಿ, ಬೆಂಗಳೂರುಗಳಲ್ಲಿ ಅಚ್ಚಾದ ಜಗನ್ನಾಥರ ಕೀರ್ತನೆಗಳಿಂದ ಕೆಲವು ಆರಿಸಲಾಗಿವೆ; ಇತರತ್ರ ಪ್ರಕಟವಾದ ಸಂಕಲನಗಳಿಂದಲೂ ಕೆಲವನ್ನು ಹೆಕ್ಕಿಕೊಂಡಿದ್ದೇವೆ. ಇಲ್ಲಿ ಸಮಗ್ರವಾಗಿ—ಸಾಕಷ್ಟು ವಿಚಾರ ಬರುವಂತಿಲ್ಲಾದರೂ, ತಾತ್ಕಾಲಿಕವಾಗಿ ತಿಳಿಯತಕ್ಕಷ್ಟಿವೆಯೆಂಬಲ್ಲಿ ಸಂಶಯವಿಲ್ಲ.

"ಸಕೃದೇವ ಪ್ರಪನ್ನಾಯ
ತವಾಸ್ಮೀತಿ ಚಯಾಚತೇ |
ಅಭಯಂ ಸರ್ವಭೂತೇಭ್ಯಃ
ದದಾಮ್ಯೇತತ್ ವ್ರತಂ ಮಮ ||"

ಶ್ರೀರಾಮನು 'ವಿಭೀಷಣ ಶರಣಾಗತಿ ಸಂದರ್ಭ'ದಲ್ಲಿ ಹೇಳಿದನೆಂದು ವಾಲ್ಮೀಕಿ ರಾಮಾಯಣದಲ್ಲಿರುವ ಪದ್ಯವಿದು. ಶ್ರೀ ರಾಘವೇಂದ್ರ ಗುರುಗಳು ಶ್ರೀರಾಮನ ಪಾದಾರಾಧಕರು, ಅವರ ಮಟ್ಟಿಗೂ ಈ ವಾಕ್ಯ ಅನ್ವಯಿಸುತ್ತದೆ. ಶ್ರೀ ಗುರುಗಳನ್ನು 'ಒಮ್ಮೆ ಮರೆಹೊಕ್ಕವನಿಗೆ,' 'ನಿನ್ನವನೇ ನಾನೆಂದು' ತಿಳಿವು ಉಳ್ಳವನಿಗೆ, ಎಲ್ಲೆಡೆಯ ಭಯವೂ ಪರಿಹಾರವಾಗಿ ಸುಖಪ್ರಾಪ್ತಿಯಾಗುತ್ತದೆಯೆಂಬುದು ಅತಿಶಯೋಕ್ತಿಯಲ್ಲ (ಅವರನ್ನು ಕುರಿತು ಬರೆದ ಸಂಸ್ಕೃತ—ಕನ್ನಡದ ಹಲವಾರು ಕೃತಿಗಳಲ್ಲಿ ಈ ಬಗ್ಗೆ ಉದಾಹರಣೆಗಳಿವೆ; ಶ್ರೀ ಕಲಮದಾನಿ ಗುರುರಾಯರು ಬರೆದ 'ಶ್ರೀಮತ್ ರಾಘವೇಂದ್ರ ಗುರುಚರಿತ್ರೆ, ಶ್ರೀ ಕೃಷ್ಣಮೂರ್ತಿ ಬಿಂದಾಚಾರ್ಯ ಓಂಕಾರರು ಬರೆದ 'ಮಂತ್ರಾಲಯ ಮಹಾತ್ಮೆ,' ಇ.) ಆದುದರಿಂದ, ಆಸ್ತಿಕರ- ಭಾವುಕರ– ಸಹೃದಯರ ಸುಖಾವಾಪ್ತಿಗೆ ವಿಚಾರಧಾರೆ ಅವಶ್ಯವಾಗಿರುತ್ತದೆ.

ಶ್ರೀರಾಘವೇಂದ್ರರ ಜೀವನ–ಗ್ರಂಥಾದಿಗಳ ಮಹಿಮೆಗಳು ಹಾಗೂ ಶ್ರೀಜಗನ್ನಾಥದಾಸರ ಜೀವನ- ಕೃತಿಗಳ ಮೇಲ್ಮೆಯ ಬಗೆಗೆ ಶ್ರೀ ಆರ್. ಎಸ್. ಪಂಚಮುಖಿಯವರು ಬರೆದ 'ಹರಿದಾಸ ಸಾಹಿತ್ಯ', ಮತ್ತು ಶ್ರೀ ಪಂಡಿತ ಗಲಗಲಿ ಪಂಢರೀನಾಥಾಚಾರ್ಯರು ಬರೆದ 'ಮಾಧ್ವವಾಙ್ಮಯ ತಪಸ್ವಿಗಳು' ಎಂಬ ಉದ್ಗ್ರಂಥಗಳನ್ನು ನೋಡಿಕೊಳ್ಳಬಹುದಾಗಿದೆ. ಶ್ರೀ ರಾಘವೇಂದ್ರರು ಗುರುವರೇಣ್ಯರಲ್ಲಿ ಹೇಗೆ ಒಬ್ಬರಾಗಿದ್ದಾರೋ ಅಷ್ಟೆ ಮೇಲ್ಮೆ ಶ್ರೀಜಗನ್ನಾಥದಾಸರಿಗಿದೆ. ಆ ಮೇರೆಗೆ, 'ಗುರುಗಳ ಬಗೆಗೆ ಶ್ರೀ ಜಗನ್ನಾಥ ದಾಸರು ಬರೆದುದನ್ನೆ ಆರಿಸಿ ಬರೆಯಲುಜ್ಜುಗಿಸಿದುದಾಗಿದೆ. ಇಲ್ಲಿ ಅನೆಲ್ಲಾ ಪದ್ಯಗಳನ್ನು ಪೂರ್ಣವಾಗಿ ಬರೆಯದೆ, ಪ್ರತಿ ಪದ್ಯದ ಪಲ್ಲವಿಯನ್ನು ಸೂಚಿಸಿ, ಆ ಹಾಡಿನಲ್ಲಿ ಒಂದು ಸೊಲ್ಲನ್ನೆತ್ತಿ ತುಸ ವಿವರಿಸಲಾಗಿದೆ. ಮಿಕ್ಕ ವಿಚಾರಾಂಶಗಳಿಗೆ ವಾಚಕ ಮಹೋದಯರು ಆಯಾ ಮೂಲ ಪದ್ಯಗಳನ್ನು ಸಾಕಲ್ಯವಾಗಿ ಓದಿ ಮನನಿಸುವಂತೆ ಇದು ಪ್ರೇರಕವಾದೀತೆಂದು ಭಾವಿಸಲಾಗಿದೆ. ಶ್ರೀ ಜಗನ್ನಾಥ ದಾಸರ ಹಲವು ಕೀರ್ತನೆಗಳು ಹಾಗೂ "ಹರಿ ಭಕ್ತಿಸಾರ"ದ ಬಗೆಗೆ ಡಾ. ಕೆ. ಎಂ. ಕೃಷ್ಣರಾಯರು ಬರೆದ ನಿಬಂಧವನ್ನು ಪ್ರತ್ಯೇಕಶಃ ಪರಿಶೀಲಿಸಬಹುದಾಗಿದೆ (ಅಂತೆ, ಇತರ ಹರಿದಾಸರಾದ ಶ್ರೀಪಾದರಾಯರು, ಶ್ರೀ ವ್ಯಾಸ ರಾಯರು, ಶ್ರೀ ವಾದಿರಾಜರು, ಶ್ರೀಪುರಂದರದಾಸರು ಶ್ರೀ ಕನಕದಾಸರು, ಶ್ರೀ ವಿಜಯವಿಠಲ ದಾಸರು, ಶ್ರೀ ವೇಣುಗೋಪಾಲದಾಸರು, ಮೊದಲಾದವರ ಬಗೆಗೆ ಕನ್ನಡದ ಆಸ್ತಿಕರು ಓದಿ ಆಪ್ಯಾಯನಗೊಳ್ಳುವಂತೆ ಮಹಾ ನಿಬಂಧಗಳನ್ನು ರಚಿಸಿ ಪ್ರಚುರಿಸುವುದು ವಿಹಿತವಾಗಿದೆಯೆನ್ನಲಡ್ಡಿಯಿಲ್ಲ! ಕನ್ನಡ ಸಾಹಿತ್ಯದ ಕೆಲವು ಉದ್ಗ್ರಂಥಗಳ ಬಗೆಗೂ ಇಂತಹ ವಿಮರ್ಶೆಯ ಉದ್ಗ್ರಂಥಗಳು ಆಗಿವೆಯಾದರೂ ಹಲವಾರು ಮಹತ್ಕೃತಿಗಳ ಬಗೆಗೆ ಮಹಾನಿಬಂಧಗಳು ನಿರೂಪಿತವಾದರೆ. ಕನ್ನಡ ರಸಿಕರು ಓದಿ ಆನಂದಿಸಲು ಅವಕಾಶವಿದೆ: 'ಕರ್ಣಾಟಕ ಕವಿಚೂತವನಚೈತ್ರ'ನಾದ ಲಕ್ಷ್ಮೀಶನ ಕೃತಿಗಳ ಬಗೆಗೆ ನಿಬಂಧವಾಗಿ ಪ್ರಕಟಗಲಿದೆ. ನೇಮಿಚಂದ್ರನ ಕೃತಿಗಳ ಬಗೆಗೆ ನಿಬಂಧ ಮುದ್ರಿತವಾಗಿದೆಯೆಂದು ಮಾತ್ರ ಕೇಳುತ್ತೇವೆ!)

II ಶ್ರೀ ರಾಘವೇಂದ್ರರ ಜೀವನ- ಕೃತಿಗಳ ವಿಚಾರ

೧. ಎದ್ದು ಬರುತಾರೆ ನೋಡೆ—ಹೃದಯ ಸದನದಲ್ಲಿ|ಪದುಮನಾಭನ ಭಜಿಸಿ| ಮುದ ಮನದಿಂದ ನಿತ್ಯ| ಸದಮಲ ರೂಪತಾಳಿ||' ವೃಂದಾವನಸ್ಥರಾದರೂ ಗುರುಗಳು ಸ್ವಯಂ ಭಕ್ತರ ನುಡಿಗಳಿಂದ 'ಎದ್ದು ಬರುತಾರೆ'ಂದು ಭಾವಿಸುವಂತಿದೆ. ಗುರುಗಳ ದೇಹಾಲಂಕಾರವು ಸೂಕ್ಷ್ಮವಾಗಿ ಇಲ್ಲಿದೆ.

೨. "ಏಕೆ ಮೂಕನಾದ್ಯೋ–ನಿನ್ನಂಥ ಕರುಣಿಲ್ಲ. ಎನ್ನಂಥ ಕೃಪಣಿಲ್ಲ, ಘನ್ನ ಮಹಿಮ ನೀಯೆನ್ನನು ಬಿಟ್ಟೀಗ||" 'ಪರಮಾತ್ಮನು ಕರುಣಿಯೆಂದೂ, ತಾನು ಕೃಪಣಿಯೆಂದೂ ಸಾರಿದಂತಿದೆ: 'ಪಾಪಿನಾಮಹಮೇವಾಗ್ರ್ಯೋ ದಯಾಳೂನಾಂ ತ್ವಮಗ್ರಣೀಃ" ಎಂಬುದರ ಅನುವಾದವಿದು. ಉಪಲಕ್ಷಣದಿಂದ, ಪರಮಾತ್ಮ–ಜೀವಾತ್ಮರಲ್ಲಿ 'ತರತಮ'ವೂ ಇಲ್ಲಿ ಸೂಚಿತವಿದೆ.

೩) 'ಕರುಣಿಗಳೊಳಗೆಣೆ ಕಾಣೆನೊ ನಿನಗೆ-ಕುಧರ ದೇವನ ದಿವ್ಯ ರದನದಿ ಜನಿಸಿದ|ನದಿಯ ತೀರದಿ ಶೋಭಿಪ| ಸದಮಲ ಘನ ಮಂತ್ರ ಸದನನಿಲಯ ಚಿತಾಮುದನ ಶ್ರೀ ಜಗನ್ನಾಥ ವಿಠಲನ ದೂತ||' ಶ್ರೀ ಗುರುವರೇಣ್ಯರು "ಕರುಣಿಗಳಲ್ಲಿ ಎಣೆಗಾಣದವರು; ಮಾತ್ರವಲ್ಲ, ಅವರ ವಾಸವೈಶಿಷ್ಟ್ಯವೂ (ಸ್ಥಳವೂ) ನಿರೂಪಿತವಿದೆ: ತುಂಗಾನದಿ ವರಾಹದೇವನ ದಾಡೆಯಿಂದ ಹುಟ್ಟಿತೆಂಬ ಪೌರಾಣಿಕ ಕತೆ ಸ್ಮಾರಿತವಿದೆ. ತುಂಗಾತೀರದ ಮಂತ್ರಾಲಯವೇ (ಮಂಚಾಲೆ) ಗುರುಗಳ ವೃಂದಾವನ ಸ್ಥಿತಿಯಿಂದ ವಿಶೇಷತಃ ಉಲ್ಲೇಖ್ಯವಿದೆ, ಸಂದರ್ಶನೀಯವಿದೆ.

(ಮುಂದಿನ ಪುಟ ನೋಡಿರಿ)



ಶ್ರೀಸಾಮಾನ್ಯನಿಗೆ ವಿದೇಶಪ್ರಯಾಣ

ಕೇಂದ್ರ ಸರಕಾರದ ಬಜೆಟ್ಟು ಹಲವು ಕೋಟಿ ರೂಪಾಯಿಗಳ ಹೊಸ ತೆರಿಗೆಗಳನ್ನು ಹೊತ್ತು ಸಂಸತ್ತಿನ ಮುಂದೆ ಬಂತು.

ಮತ್ತೂ ಸುಮಾರು ೨೨೦ ಕೋಟಿಗಳ ಕೊರತೆಯನ್ನೇ ಅದು ತೋರಿಸುತಿತ್ತು. ಈ ಕೊರತೆಯನ್ನು ಎಲ್ಲಿಂದ ಹೇಗೆ ತುಂಬಿಕೊಳ್ಳಲಾಗುವುದೆಂದು ಅಂದೂ ಹೇಳಲಿಲ್ಲ.

ಬಜೆಟ್ಟನ್ನು ಸಮಾಜವಾದದ ಸ್ಥಾಪನೆಯ ಮೊದಲ ಮೆಟ್ಟಲೆಂದು ಆಡಳಿತ ಪಕ್ಷದ ಎಂಪಿಗಳು ಸ್ವಾಗತಿಸಿದರು. ಚ್ಯಾರಿಟಿ ಬಿಗಿನ್ಸ್ ಅಟ್ ಹೋಮ್ ಎಂಬುದನ್ನು ಅವರು ಮರೆತು ಬಿಡಲಿಲ್ಲ.

ಹೊಸ ತೆರಿಗೆಗಳಿಂದ ಜೀವನ ವೆಚ್ಚದ ಮೇಲೆ ಯಾವ ಪರಿಣಾಮವೂ ಬೀರುವುದಿಲ್ಲವೆಂದು ವಿತ್ತ ಮಂತ್ರಿಶಾಖೆ ಪ್ರಕಟಣೆ ನೀಡಿತು. ಅದರ ಹಿಂದೆಯೇ ಅವಶ್ಯಕ ವಸ್ತುಗಳ ಬೆಲೆ ಮತ್ತೂ ಮತ್ತೂ ಏರ ತೊಡಗಿತು.

ಅರ್ಥ ಸಚಿವತ್ವವೂ ಒಂದು ಕಲೆ. ಈ ಕಲೆಯನ್ನು ರೂಢಿಸಿಕೊಳ್ಳಲಾಗಿದೆ. ಅನೇಕಾನೇಕ ಮೇಧಾವಿಗಳಲ್ಲಿ ಮೇಧಾವಿಗಳು ತಮ್ಮ ಸ್ಥಾನವನ್ನು ಕಳೆದುಕೊಂಡಿದ್ದಾರೆ.

ತೆರಿಗೆ ಹೊರಿಸುವುದು ಪರ್ವತದಷ್ಟು; ಇದರಲ್ಲಿ ಹಿಂದೆಗೆದು ಕೊಳ್ಳುವ ಮೂಷಿಕವೂ ಸೇರಿರುತ್ತದೆ.

ಚವನರ ಬಜೆಟ್ಟನಲ್ಲೂ ಮೂಷಿಕವಿದ್ದೇ ಇತ್ತು. ಆದರೆ, ಈ ಮೂಷಿಕವು ಯಾವ ರೂಪದಲ್ಲಿತ್ತು ಎಂದು ಶ್ರೀ ಸಾಮಾನ್ಯ ನಂಬಿದ್ದನೋ ಆ ರೂಪದಲ್ಲಿ ಮಾತ್ರ ಇರಲಿಲ್ಲ.

ಹಣ ಕಾಸಿನ ಮಸೂದೆಯನ್ನು ಮಂಡಿಸುವಾಗ ವಿತ್ತ ಸಚಿವರು ಹದಿನೈದು ಕೋಟಿ ರೂಪಾಯಿಗಳ ಹೊಸ ಕರಾಕರಣೆಯನ್ನು ಕೈಬಿಟ್ಟರು.

ಬಹಳ ಸಂತೋಷ ಪಡಬೇಕಾಗಿಲ್ಲ. ಏಕೆ? ಈ ಪರಿಹಾರದ ಸಿಂಹಪಾಲು ವಿದೇಶೀ ಪ್ರಯಾಣ ಮಾಡುವವರಿಗೆ.

ಭಾರತದ ಶ್ರೀ ಸಾಮಾನ್ಯರೆಲ್ಲರೂ ವಿದೇಶೀ ಪ್ರಯಾಣ ಮಾಡಿ, ಈ ರಿಯಾಯಿತಿಯ ಸಂಪೂರ್ಣ ಲಾಭಗಿಟ್ಟಿಸಿಕೊಳ್ಳಬೇಕು.

ಇಂಗ್ಲಿಷ್ ಸಮಾಚಾರ ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಜಾಹೀರಾತುಗಳ ಮೂಲಕ ಇದನ್ನು ಇಂಗ್ಲಿಷ್ ಬಾರದ ಬೋರೇಗೌಡನಿಗೆ ತಿಳಿಸಬೇಕು.

ಹೊಟ್ಟೆಗೆ ಹಿಟ್ಟಿಲ್ಲ; ಜುಟ್ಟಿಗೆ ಮಲ್ಲಿಗೆ ಹೂ ಎಂದು ಅಪಸ್ವರವೆಬ್ಬಿಸಬಾರದು: ಅಂತಹ ಅಪಸ್ವರ ಸಮಾಜವಾದ ವಿರೋಧಿ-ಪ್ರಗತಿ ಬಾಧಕ.

ಉಳ್ಳವರು ವಿದೇಶ ಯಾತ್ರೆ ಮಾಡಿಯೇ ತೀರುತ್ತಾರೆ—ಅವರಿಗದು . ದುಬಾರಿಯಾದರೇನು, ತಿಬಾರಿಯಾದರೇನು? ತುಂಬಿದ ಸಮುದ್ರಕ್ಕೆಬಿಂದಿಗೆ ನೀರಿನಿಂದೇನಾಗಬೇಕು?

ಶ್ರೀ ಸಾಮಾನ್ಯನನ್ನೂ ವಿದೇಶೀ ಪ್ರಯಾಣಕ್ಕೆ ಉತ್ತೇಜಿಸಲು, ಆತನಿಗಾಗಿಯೆ ಈ ತೆರಿಗೆಯನ್ನ ವಿತ್ತ ಸಚಿವರು ಹಿಂದೆಗೆದಿದ್ದಾರೆ; ಆತನಿಗೂ ವಿದೇಶ ಪ್ರಯಾಣ ದುಬಾರಿಯಾಗದಂತೆ ಪರಿಹಾರ ನೀಡಿದ್ದಾರೆ.

ಸ್ವದೇಶಿ ಪ್ರಯಾಣವು ದುಬಾರಿಯಾಗಿದೆಯೆನ್ನುತ್ತೀರಾ?

ರೈಲೆ ದರ ಹೆಚ್ಚಿತು ನಿಜ; ಕಾರುಗಳ ಬಾಡಿಗೆಯೂ ಏರಿತು; ಹೌದು. ಬಸ್ಸು ಟಿಕೇಟುಗಳ ಮೌಲ್ಯವೂ ತಿವಿಕ್ರಮವಾಯಿತು. ಒಪ್ಪಿಕೊಳ್ಳೋಣ.

ಇದಕ್ಕೇನು ಮಾಡಬೇಕು ಎನ್ನುತ್ತೀರಾ?

ದುಬಾರಿ ವೆಚ್ಚ ತರುವ ರೇಲ್ವೆ, ಕಾರು, ಬಸ್ಸುಗಳನ್ನು ಬಹಿಷ್ಕರಿಸಿ; : ಮಿತವ್ಯಯ ಸಾಧಿಸಿ.

ಅಂದರೆ, ಎತ್ತಿನ ಗಾಡಿಯಲ್ಲೇ ಹೋಗಬೇಕಾಗಿಲ್ಲ. ಅದೂ ದುಬಾರಿಯೇ ಆಗಿದೆ. ಕಾಲ್ನಡೆಯಲ್ಲಿ ನಡೆಯುವ ಅಗತ್ಯವೂ ಇಲ್ಲ.

ಶ್ರೀ ಸಾಮಾನ್ಯರೆಲ್ಲರೂ ವಿದೇಶ ಪ್ರಯಾಣ ಮಾಡ ಬೇಕು; ಚವನರು ತಮಗೆ ನೀಡಿದ ತೆರಿಗೆ ಪರಿಹಾರದ ಪ್ರಯೋಜನವನ್ನು ನೂರಕ್ಕೆ ಐನೂರರಷ್ಟು ಪಡೆದುಕೊಳ್ಳಬೇಕು.

ಸರಕಾರಿ ಜಾಹಿರಾತಿಗಾಗಿ ಕಾಯ ಬೇಕಾಗಿಲ್ಲ, ಅದು ಬರುವಷ್ಟರಲ್ಲಿ ಮತ್ತೆ ತೆರಿಗೆ ಏರಬಹುದು. ಆದುದರಿಂದ ಶುಭಸ್ಯ ಶೀಘ್ರಂ. ಅಥವಾ ಆತನ ಹೆಸರಲ್ಲಿ ಶ್ರೀ ಸಂಪನ್ನರಾದರೂ....

ಹದಿನೈದು ಕೋಟಿ ತೆರಿಗೆ ರಿಯಾಯತಿಯಿಂದ ಬಜೆಟ್ಟಿನ ಕೊರತೆ ೨೫೫ ಕೋಟಿಗೇರಿತು.

ಬಂಗ್ಲಾದೇಶದಿಂದ ಬಂದಿರುವ ನಿರಾಶ್ರಿತರಿಗಾಗಿ ನಾವೀಗ ವೆಚ್ಚಮಾಡುವ ದಿನನಿತ್ಯದ ೨ ಕೋಟಿ ರೂಪಾಯಿಗಳನ್ನೂ ಸೇರಿಸಿಕೊಂಡರೆ, ಈ ವರ್ಷದ ಕೊರತೆ ಒಂದು ಸಾವಿರ ಕೋಟಿಯನ್ನು ಮುಟ್ಟುತ್ತದೆ.

ಪಾಕಿಸ್ತಾನವು ಕಾಲುಕೆದರಿ ನಮ್ಮನ್ನು ಜಗಳಕ್ಕೆ ಕರೆಯುತ್ತಿದೆ. ನಾವು ಬೇಡವೆಂದರೂ ಅದು ನಮ್ಮ ಕುತ್ತಿಗೆಗೇ ಕತ್ತಿಹಾಕತೊಡಗಿದೆ.

ಒಂದು ವೇಳೆ ಯುದ್ಧವೇ ಸಂಭವಿಸಿದರೆ, ನಮ್ಮ ಕೊರತೆ....?

ಈ ವಿದೇಶಗಳಿಂದಲೂ ಬಜೆಟ್ಟನಲ್ಲಿ ನಿರೀಕ್ಷಿಸಲಾದಷ್ಟು ನೆರವು ಬಂದೀತು – ಬರುತ್ತದೆಯೆಂಬ ಆಶೆಯಿಲ್ಲ. ನಾವು ನಮ್ಮ ಮಿತ್ರರನ್ನು ಒಂದಲ್ಲ ಒಂದು ಕಾರಣದಿಂದ ಕಳೆದುಕೊಳ್ಳುತ್ತಲೇ ಬಂದಿದ್ದೇವೆ. ಹಾಗಿದ್ದರೂ ನಮ್ಮ ಯೋಜನೆಗಳನ್ನು ಮೊಟಕುಮಾಡದೆ ಮುಂದುವರಿಸುವ ದೃಢ ಸಂಕಲ್ಪ ನಮ್ಮದು.

ಇದರ ಪರಿಣಾಮವೇನು? ಕೊರತೆಯನ್ನು ಹೇಗೆ ತುಂಬಿಕೊಳ್ಳಲಾಗುವುದೆಂದು ವಿತ್ತಸಚಿವರು ಹೇಳಲಿಲ್ಲ. ಪ್ರಾಯಃ ಕೊನೆಯುಗಳಿಗೆಯಲ್ಲಿ ಕೊರತೆ ಧನವನ್ನೇ ಬಳಸುವುದೇ ಇರಬೇಕು.

ಆಗೇನಾದೀತು? ಮೊದಲೇ ಹದಗೆಟ್ಟಿರುವ ನಮ್ಮ ಅರ್ಥವ್ಯವಸ್ಥೆ ಸಂಪೂರ್ಣ ತಾಳತಪ್ಪದೆ ಹೋಗುವುದಿಲ್ಲ. ಬೆಲೆಯೇರಿಕೆಯನ್ನು ತಡೆಯುವ ಯಾವುದೇ ಪ್ರಾಮಾಣಿಕ ಪ್ರಯತ್ನವನ್ನು ಮಾಡದೆ ಇರುವ ಸರಕಾರ ಅವುಗಳ ಏರಿಕೆಯ ಮಾರ್ಗವನ್ನು ಮತ್ತಷ್ಟು ಹಸನುಗೊಳಿಸುತ್ತಿದೆ.

ಈ ಪರಿಸ್ಥಿತಿ ದೇಶದ ಆರೋಗ್ಯಕ್ಕೆ ಹೇಳಿಸಿದ್ದಲ್ಲ; ಶ್ರೀ ಸಾಮಾನ್ಯನ ಉದ್ಧಾರಕ್ಕೆ ಪೋಷಕವಲ್ಲ. ಸಮಾಜವಾದಕ್ಕೆ ಸೂಕ್ತ ವಾತಾವರಣವಿದರಿಂದ ನಿರ್ಮಾಣವಾಗುವುದಿಲ್ಲ.

ಸಂವಿಧಾನವನ್ನೇ ಬುಡ ಮೇಲು ಮಾಡಿದರೂ ನಮ್ಮ ಈ ದುರ್ದೈವಕ್ಕೆ ಪರಿಹಾರಸಿಗುವುದಿಲ್ಲ.

ವಾಸ್ತವಿಕತೆಯ ಅರಿವಿಲ್ಲದವರೆಂದು ಇತರರನ್ನು ಹಂಗಿಸುವವರೇ ಇಂದು ಗಾಳಿಗೋಪುರ ಕಟ್ಟಹೊರಟಿದ್ದಾರೆ. ನೋಟುಗಳ ಮುದ್ರಣದಿಂದ ಸಂವಿಧಾನ ತಿದ್ದುಪಡಿಯಿಂದಲೇ ನಮ್ಮೆಲ್ಲ ಸಮಸ್ಯೆಗಳು ಮಾಯವಾಗಿ ಹೋಗಿ ಸಾಮಾಜಿಕ ನ್ಯಾಯ ಸ್ಥಾಪನೆಯಾಗುವುದಾದರೆ, ಅದಕ್ಕಾಗಿ ಇಷ್ಟು ಸಮಯ ಕಾಯಬೇಕಾಗಿರಲಿಲ್ಲ.

ವಿತ್ತಸಚಿವರು ಕಡಿಮೆ ಬೀಳುವ ರೂಪಾಯಿಗಳನ್ನು ಎಲ್ಲಿಂತರುತ್ತಾರೆ—ಈ ಅಂಶ ದೇಶದ ಭವಿಷ್ಯವನ್ನು ದಪ್ಪಕ್ಷರಗಳಲ್ಲಿ ಬರಯುತ್ತದೆ. ಅವರು ಕೊರತೆ ಕಾಮಧೇನುವಿಗೇ ಶರಣುಹೋದರೆ, ಶ್ರೀಸಾಮಾನ್ಯ ದೇವರಿಗೆ ಶರಣು ಹೋಗಬೇಕಾಗುತ್ತದೆ.

ಅಥವಾ ಚವನರಿತ್ತ ಪರಿಹಾರ ಬಳಸಿ ವಿದೇಶಗಳಿಗೆ ಪ್ರಯಾಣ ಮಾಡಿ ಅಲ್ಲೇ ವಲಸೆ? ● ●

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೊಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

Gram : VISHWA Tel: 28111 & 28112

When at Bangalore

Stay at

HOTEL NATARAJA

Restaurant Boarding & Lodging,

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಮಂಗಳೂರಲ್ಲಿ ಭಾರತೀಯ ವಿದ್ಯಾಭವನ ಕೇಂದ್ರ.

ಶಿಕ್ಷಣದಲ್ಲಿ ನವೀನ ಮಾರ್ಗದರ್ಶನಕ್ಕೂ, ಭಾರತೀಯ ವಿದ್ಯಾಪ್ರಚಾರಕ್ಕೂ ದಿ। ಕುಲಪತಿ ಮುನಿಷಿಯವರಿಂದ ಮುಂಬಾಯಿಯಲ್ಲಿ ಸ್ಥಾಪಿಸಲ್ಪಟ್ಟ ಭಾರತೀಯ ವಿದ್ಯಾಭವನದ ಕೇಂದ್ರವೊಂದನ್ನು ಮಂಗಳೂರಲ್ಲಿ ತೆರೆಯಲಾಗುವುದೆಂದೂ ಈ ಬಗ್ಗೆ ವಿಜಯಾ ಬೇಂಕಿನ ಅಧ್ಯಕ್ಷ ಶ್ರೀ ಎಂ. ಸುಂದರರಾಮ ಶೆಟ್ಟರು ಹೆಚ್ಚಿನ ಆಸಕ್ತಿ ವಹಿಸಿರುವರೆಂದೂ ತಿಳಿದು ಬರುತ್ತದೆ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 168/1970

ವಾದಿ–ಗಣಪಯ್ಯ ಸೆಟ್ಟಿ, ಕೆಳಾ ಹೊಸ ಮನೆ ಮಾದಯ್ಯ ಸೆಟ್ಟರ ಅಳಿಯ, ಕುಂದಾಪುರ ತಾಲ್ಲೂಕು ಶಿರೂರು ಗ್ರಾಮ.

ಪ್ರತಿವಾದಿರು– 1. ಮಂಜುನಾಥ ಶೇರೆಗಾರ. ಹೊನ್ನಯ್ಯನ ಅಣ್ಣಪ್ಪ ಶೇರೆಗಾರನ ಮಗ. 2. ಶೀನ ಶೇರೆಗಾರ, ಮಂಜುನಾಥ ಶೇರೆಗಾರರ ಮಗ.

ಕುಂದಾಪುರ ತಾಲ್ಲೂಕು ಪಡುವರಿ ಗ್ರಾಮದ ಕೋಟೆ ಬಾಗಲು, ಸದ್ರಿ ಪ್ರತಿವಾದಿರಿಗೆ ತಿಳಿಯಪಡಿಸುವದೇನೆಂದ್ರೆ:–

ವಾದಿ ಪೂರ್ವಾಧಿಕಾರಿ ಕೋಟೆಬಾಗಿಲು ಶೀನಯ್ಯ ಶೇರೆಗಾರರಿಗೆ ಪ್ರತಿವಾದಿರು ರೂಪ್ಯಾ 200–00ಕ್ಕೆ ಬರಕೊಟ್ಟ ದಿನಾಂಡು ನೋಟಿನ ಹಣ ಬಡ್ಡಿ ವಸೂಲು ಮಾಡುವ ಹಕ್ಕನ್ನು ಟ್ರಾನ್ಸ್‌ಫರು ಪಡೆದ ವಾದಿಯು ತನಗೆ ಬರತಕ್ಕ ರೂಪ್ಯಾ 233–00ನ್ನು ಬರಮಾಡಿಕೊಳ್ಳುವರೇ ದಾಖ್ಲು ಮಾಡಿದ ಮೇಲಿನ ದಾವೆ ತಾ.13–8–71 ಕ್ಕೆ ಯಿಟ್ಟಿದೆ. ಆ ಕುರಿತು ನಿಮ್ಮ ಉದಾಹರಣೆಯಿದ್ದರೆ ಸದ್ರಿ ದಿವ್ಸ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಾಣ್ಸಿದ ಕೋರ್ಟು ಮುಂದೆ ಹಾಜ್ರಾಗತಕ್ಕದ್ದು.

(ಕೋರ್ಟು ಹುಕ್ಕುಂ ಪ್ರಕಾರ)

A. Balakrishna Shetty,
Advocate for Plaintiff

ಮೊಕ್ಕಾಂ: ಕುಂದಾಪುರ. ತಾ. 30–7–1971

ಸಮಾಜದ ಮೇಲೆ ಸಂಪತ್ತಿನ ಜಂಬೂಸವಾರಿ

ರಾಜಧನ ರದ್ಧತಿಯ ಸುಗ್ರೀವಾಜ್ಞೆಯನ್ನು ಸರ್ವೋಚ್ಚ ನ್ಯಾಯಾಲಯವು ಅಕ್ರಮವೆಂದು ಸಾರಿದ್ದರಿಂದ, ನ್ಯಾಯಾಂಗಕ್ಕೂ-ಶಾಸಕಾಂಗಕ್ಕೂ ಒಂದು ಬಗೆಯ ಪ್ರಚ್ಛನ್ನ ದ್ವೇಷ ಹುಟ್ಟಿಕೊಂಡಿತು. ಪ್ರಜಾಸತ್ತೆಯಲ್ಲಿ ಸಂವಿಧಾನಕ್ಕೆ ವ್ಯಾಖ್ಯೆ ಮಾಡುವಾಗ ನ್ಯಾಯಾಂಗವು ಜೀವಂತ ಘಟಕವಾದ ಸಮಾಜವನ್ನು ಗಮನಿಸುವುದನ್ನು ಬಿಟ್ಟು ಜಡ ಸಂವಿಧಾನದ ಅಕ್ಷರ ಅಕ್ಷರಗಳನ್ನೇ ವ್ಯಾಖ್ಯಾನಿಸುತ್ತದೆಯೆಂಬ ಅಭಿಪ್ರಾಯವೂ ಮೂಡಿಬಂತು.

ಆದುದರಿಂದಲೇ ಸಮಾಜೋಪಯೋಗಿಯಾದ ಕಾರ್ಯಕ್ರಮಗಳಿಗೆ ಸಂವಿಧಾನವು ಬಾಧಕವಾಗುವುದನ್ನು ತಡೆಯಲು, ಅಂತಹ ಕಾರ್ಯಕ್ರಮಗಳಿಗೆಂದು ಶಾಸಕಾಂಗ ಕೈಕೊಳ್ಳುವ ಕ್ರಮಗಳು ಪ್ರಶ್ನಾತೀತವೆನಿಸಲು ಸರಕಾರ ಸಂವಿಧಾನವನ್ನೇ ತಿದ್ದುಪಡಿ ಮಾಡುವ ಬಗ್ಗೆ ಬಹು ದಿನಗಳಿಂದಲೂ ಯೋಚಿಸುತಿತ್ತು. ಕಳೆದ ವರ್ಷಾಂತ್ಯದಲ್ಲಿ ಲೋಕ ಸಭೆಯನ್ನು ವಿಸರ್ಜಿಸಿದ್ದು ಮತ್ತು ಈ ಮಾರ್ಚಿಯಲ್ಲಿ ಮಧ್ಯಾವಧಿ ಚುನಾವಣೆಗಳು ನಡೆದದ್ದು ಪರಮಾಧಿಕಾರ ಪ್ರಾಪ್ತಿಗೆಂದೇ ಆಗಿದೆ.

ಚುನಾವಣೆಯ ವೇಳೆ ಆಸ್ತಿ ಮೇಲಿನ ಹಕ್ಕಿಗೆ ಇಂಡಿಕೇಟು ವಿರೋಧ ವ್ಯಕ್ತಪಡಿಸಲಿಲ್ಲ. ಆದರೆ, ಮೊನ್ನೆ ಪಾಕ್ಷಿಕ ಸಭೆಯಲ್ಲಿ ಮಾತಾಡುವ ವೇಳೆ ಪ್ರಧಾನಿ ಗಾಂಧಿಯವರು ಅಂತಹ ಹಕ್ಕು ಮೂಲಭೂತ ಹಕ್ಕಾಗಲಾರದೆಂದು ಅಭಿಪ್ರಾಯಪಟ್ಟರು. ಸಂವಿಧಾನದ ನಿರ್ದೇಶಕ ಸೂತ್ರಗಳಲ್ಲಿ ಮೂಲಭೂತ ಅಧಿಕಾರಗಳನ್ನೂ ಮೊಟಕು ಮಾಡುವ ಅಧಿಕಾರವು ಸಂಸತ್ತಿಗೆ ಬರುವಂತೆ ಸದ್ಯ ತಿದ್ದುಪಡಿಯನ್ನು ಸರಕಾರ ಮುಂದಿಟ್ಟಿದೆ. ಅದರ ಜತೆಯಲ್ಲೇ ಖಾಸಗಿ ಆಸ್ತಿಗಳನ್ನು ಸ್ವಾಧೀನಪಡಿಸುವಾಗ ನೀಡಿದ್ದಷ್ಟೇ ನ್ಯಾಯಬದ್ಧ ಪರಿಹಾರವಾಗುವಂತೆ ಮತ್ತೊಂದು ತಿದ್ದುಪಡಿಯೂ ಮುಂದೆ ಬಂದಿದೆ. ನೌಕರಿಯೊಂದೇ ಮೌಲಿಕ ಅಧಿಕಾರವೆನ್ನುವ ಪ್ರಧಾನಿ ಗಾಂಧಿಯವರು ದೇಶದಲ್ಲಿ ನೌಕರಶಾಹಿಯನ್ನೇ ಪುನಸ್ಥಾಪಿಸುವರೇನೋಯೆಂಬ ಅಂಜಿಕೆ ಬರುತ್ತದೆ.

ಮಾರುಕಟ್ಟೆ ದರದ ಪರಿಹಾರ ನೀಡಿ ಖಾಸಗಿ ಆಸ್ತಿಗಳನ್ನು ಸರಕಾರ ವಶಪಡಿಸಿಕೊಳ್ಳುವುದು ಅಸಮಂಜಸವಲ್ಲ; ಹೊಂದಿರಬಹುದಾದ ಆಸ್ತಿಯ ಮೇಲೆ ಪರಮಾವಧಿ ಮಿತಿ ಹೇರುವುದೂ ಅಸಾಧುವಲ್ಲ. ಆದರೆ ಆಸ್ತಿಯ ಮೇಲಿನ ಹಕ್ಕೆಂದೂ ಮೂಲಭೂತವಾಗಲಾರದು ಎಂಬುವುದು ಕಮ್ಯುನಿಜಂ ಅಲ್ಲದೆ ಮತ್ತಿನ್ನೇನು? ಆಸ್ತಿಯೆಂದರೇನು, ಹೊಲ-ಮನೆ-ಹಣಗಳು ಮಾತ್ರವೆ? ಪಾತ್ರೆ—ಪರಡಿ—ಅಂಗಿ—ಬಟ್ಟೆ ಇತ್ಯಾದಿಗಳೂ ಒಬ್ಬನ ಆಸ್ತಿಯೇ ಅಲ್ಲವೆ? 'ಆಸ್ತಿ' ಶಬ್ದಕ್ಕೆ ನೀಡಿದ ಅರ್ಥವ್ಯಾಪ್ತಿಯ ಅಧ್ಯಯನದಿಂದಲೇ ಇದು ತಿಳಿಯಬೇಕು. ಸಮಾಜವಾದದ ಹೆಸರಿನಲ್ಲಿ ಶ್ರೀಸಾಮಾನ್ಯರನ್ನು ಸಂಪತ್ತಿನ ಕೈಗೊಂಬೆಯಾಗಿಸುವ ಪ್ರಯತ್ನ ಸಫಲವಾಗುತ್ತದೆ. ಪಾರ್ಲಿಮೆಂಟಿನ ಪರಮಾಧಿಕಾರದ ಹೆಸರಿನಲ್ಲಿ ಆಡಳಿತ ಪಕ್ಷವು ಯಾರ ಮೇಲೂ ಯಾವ ಸಮಯದಲ್ಲೂ ಸವಾರಿ ಮಾಡುವುದು ಸಾಧ್ಯವಾಗುತ್ತದೆ.

○ ○ ○

ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿಯವರು ಉತ್ತಮ ಲೇಖಕರೂ ಆಗಿದ್ದರು. ರಾಜ್ಯಕೀಯದಲ್ಲೇ ದಿನಯಾಪನೆಗೆ ತೊಡಗಿದ ಮೇಲೆ ಅವರಿಗೆ ಸಾಹಿತ್ಯದತ್ತ ತಲೆಹಾಕಲು ಬಿಡುವೆಲ್ಲಿ? ಅವರ ಹಿಂದಿನ ಸೇವೆಯನ್ನೂ ಇಂದಿನ ಪದವಿಯನ್ನೂ ಗಮನಿಸಿ ಅಣ್ಣಾಮಲಯ್ ವಿಶ್ವವಿದ್ಯಾಲಯವು ಅವರಿಗೆ ತನ್ನ ಘಟಿಕೋತ್ಸವದಂದು ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಲು ನಿರ್ಧರಿಸಿತು. ಸರಕಾರದಿಂದ ಹೆಚ್ಚಿನ ನೆರವು ಪಡೆಯುವುದಕ್ಕಾಗಿ ಸರಕಾರದ ಜನರನ್ನು ಆದರಿಸುವುದು ಪ್ರಜಾಪ್ರಭುತ್ವದ ಸತ್‌ಸಂಪ್ರದಾಯ. ಈ ಸಂಪ್ರದಾಯವನ್ನು ನಾವು ಚಾಚೂ ತಪ್ಪದೆ ನಡೆಸಿಕೊಂಡು ಬಂದಿದ್ದೇವೆ. ಸಂಪ್ರದಾಯ ವಿರೋಧಿಗಳಾದ ದ್ರಾಮುಕದ ಕರುಣಾನಿಧಿಯವರೇ ಈ ಆದರದ ಉರುಳಲ್ಲಿ ತಲೆ ಸಿಕ್ಕಿಹಾಕಿಕೊಂಡರೆಂದ ಮೇಲೆ ಇನ್ನೇನು?

ಆದರೆ, ಅದೇಕೋ ಹಲವರಿಗೆ ವಿಶ್ವವಿದ್ಯಾಲಯವು ಮುಖ್ಯಮಂತ್ರಿಗಳನ್ನು ಮೆಚ್ಚಿಸುವುದು ಸರಿ ಬರಲಿಲ್ಲ. ವಿದ್ಯಾರ್ಥಿಗಳೂ ಇದನ್ನು ಒಪ್ಪಲಿಲ್ಲ; ಅಥವಾ ಅವರನ್ನು ಒಪ್ಪದಂತೆ ಮಾಡಲಾಯ್ತು. ಪರಿಣಾಮ? ಕರುಣಾನಿಧಿಯವರಿಗೆ ಕರಿಬಾವುಟದ ಸ್ವಾಗತ—ಮರಳಿ ಹೋಗಿರೆಂಬ ಕರೆ. ಗೊಂದಲ—ಗಲಭೆ. ಇವನ್ನೆಲ್ಲಾ ಕಂಡೂ ಕಂಡೂ ವಾತಾವರಣಕ್ಕೆ ಬೆದರಿ ಓಡಿಹೋಗದ ಸಶಕ್ತ ವ್ಯಕ್ತಿತ್ವವನ್ನು ಬೆಳಸಿಕೊಂಡವರೇ ನಮ್ಮ ರಾಜಕಾರಣಿಗಳು. ಕರುಣಾನಿಧಿಯವರು ಬೆಚ್ಚಲಿಲ್ಲ, ಬೆದರಲಿಲ್ಲ. ವಿಶ್ವವಿದ್ಯಾಲಯದ ಆವರಣದಲ್ಲಿ ಗಲಭೆ ದೊಡ್ಡದಾಯ್ತು; ಪೋಲೀಸು ಬಂತು-ಅಂತೂ ಕರುಣಾನಿಧಿಯವರಿಗೆ ಡಾಕ್ಟರೇಟೂ ದಕ್ಕಿತು.

ಈ ಗಲಭೆಯ ನಡುವೆ ಯಾರೋ ಒಬ್ಬ ಕೆರೆಯಲ್ಲಿ ಸಾವಪ್ಪಿದ. ಇದು ಆತ್ಮಹತ್ಯೆಯ ಪ್ರಕರಣವೇ, ಕೊಲೆಯೋ ಸಂದಿಗ್ಧವೆನಿಸಿತು. ವಿಶ್ವವಿದ್ಯಾಲಯದಲ್ಲಿ ಗೊಂದಲ ನಿಲ್ಲದ್ದರಿಂದ ಅನಿರ್ದಿಷ್ಟಾವಧಿಯವರೆಗೆ ಅದನ್ನು ಮುಚ್ಚಲಾಯ್ತು. ಈಯೆಲ್ಲ ಅನಾಹುತಗಳಿಗೆ ಕಾರಣವೇನು? ಸಿಂಡಿಕೇಟ್ ಬೆಂಬಲಿಗರಾದ ವಿದ್ಯಾರ್ಥಿಗಳೇ ಈ ದೊಂಬಿಗೆ ಕಾರಣೀಭೂತರೆಂದು ಕರುಣಾನಿಧಿಯವರ ಖಚಿತಾಭಿಪ್ರಾಯ.

ಹಿಂದೆ ಪ್ರಧಾನಿ ಗಾಂಧಿಯವರು ತಮ್ಮ ಕೊಲೆಯ ಪ್ರಯತ್ನ ನಡೆಯುತ್ತಿರುವ ಬಗ್ಗೆ ಆಗಾಗ ಹೇಳಿಕೆ ನೀಡಿ ತಮ್ಮ ಪ್ರಾಣದ ಬೆಲೆಯನ್ನು ಏರಿಸಿಕೊಳ್ಳುತ್ತಿದ್ದುದುಂಟು. ಇದೀಗ ಕರುಣಾನಿಧಿಯವರೂ ಅಣ್ಣಾಮಲಯಿಯಲ್ಲಿ ತನ್ನನ್ನು ಕೊಲ್ಲುವ ಬಗ್ಗೆ ಪಿತೂರಿ ನಡೆದಿತ್ತೆಂದು ಹೇಳಿಕೆ ಕೊಟ್ಟಿದ್ದಾರೆ. ದೊಂಬಿಗೆ ಪ್ರೇರಕರು ಸಿಂಡಿಕೇಟಿಗರೆಂದು ಅಂದವರೇ ಕೊಲೆಯ ವಿಚಾರವನ್ನೂ ಹೊರಗೆಡಹಿದ್ದರಿಂದ ಅವರ ಕೊಲೆಗೆ ಸಿಂಡಿಕೇಟಿಗರು ಉತ್ಸುಕರಿದ್ದಾರೆಂದು ಹೇಳಿದಂತಾಯ್ತು. ನ್ಯಾಯಾಂಗ ವಿಚಾರಣೆ ನಡೆದರೆ ಎಲ್ಲವೂ ತಿಳಿಯುವುದೆಂದ ಕರುಣಾನಿಧಿಯವರು ಹಾಗೆ ಮಾಡಿ ಸತ್ಯವನ್ನು ಬಯಲಿಗೆಳೆಯುವುದೇ ಒಳ್ಳೆಯದು.

○ ○ ○

ಪ್ರತ್ಯೇಕ ತೆಲಂಗಾಣದ ದಳ್ಳುರಿ ಆಂಧ್ರಪ್ರದೇಶವನ್ನೂ ಮುಖ್ಯಮಂತ್ರಿ ಬ್ರಹ್ಮಾನಂದ ರೆಡ್ಡಿಯವರನ್ನೂ ಸುಟ್ಟುರುಹುವ ಹೊಂಚು ಹಾಕಿತ್ತು; ಆದರೆ, ರೆಡ್ಡಿಯವರು ಅದನ್ನು ತನ್ನದೇ ಆದ ವಿಧಾನದಲ್ಲಿ ಎದುರಿಸಿ ಸದ್ಯಕ್ಕೆ ದಮನಗೊಳಿಸಿದರೆಂಬುದು ನಿರ್ವಿವಾದ. ತೆಲಂಗಾಣ ಸಮಿತಿಯು ಮಧ್ಯಾವಧಿ ಚುನಾವಣೆಗಳಲ್ಲಿ ಜನತೆಯ ಬೆಂಬಲ ಪಡೆದದ್ದು ನಿಜವಾದರೂ ಅವರ ಸಂಖ್ಯಾಬಲ ಲೋಕ ಸಭೆಯಲ್ಲಿ ಅಗಣ್ಯ. ಅವರಿಗೆ ಇತರರ ಬೆಂಬಲವೇ ಇಲ್ಲ. ರಾಜ್ಯದೊಳಗೂ ಅವರು ಏಕಾಕಿಗಳು. ಆದ್ದರಿಂದ ಆವಶ ಚಳುವಳಿ ಭೀಕರರೂಪವನ್ನು ಬಿಟ್ಟುಕೊಟ್ಟಿತು.

ಈಗ ಡಾ| ಚೆನ್ನಾರೆಡ್ಡಿ ಮೊದಲಾದ ತೆಲಂಗಾಣ ನಾಯಕರು ಬಹಳ ತಣ್ಣಗಾಗಿ ಹೋಗಿದ್ದಾರೆ. ಎಂತಾದರೂ ಮಾಡಿ ಆಂಧ್ರಪ್ರದೇಶವನ್ನು ಸೀಳಿ ಬಿಡುವುದನ್ನು ಬಿಟ್ಟು ಮಾಗುಳಿಸುವ ಪ್ರಯತ್ನಕ್ಕೆ ತೊಡಗಿದ್ದಾರೆ. ಪ್ರಧಾನಿ ಗಾಂಧಿಯವರು ಇದೇ ರೀತಿಯ ಗಟ್ಟಿ ನಿಲುವು ತಳೆದಿದ್ದರೆ ಪಂಜಾಬದ ವಿಭಜನೆಯೂ ನಿಲ್ಲುತ್ತಿತ್ತೇ ಎನ್ನುವವರೂ ಇದ್ದಾರೆ. ಪಂಜಾಬಿಗಳನ್ನೂ ಆಂಧ್ರರನ್ನೂ ತುಲನೆ ಮಾಡಲಾಗದು. ಹೇಳಿ ಕೇಳಿ ಆಂಧ್ರರು ದಾಕ್ಷಿಣಾತ್ಯರು; ಆರಂಭಶೂರರು ಮಾತ್ರ.

ಡಾ| ಚೆನ್ನಾರೆಡ್ಡಿಯವರು ಪ್ರಧಾನಿ ಗಾಂಧಿಯನ್ನು ನೋಡಿ ಮಾತಾಡಿಬಂದರು. ಸದ್ಯವೇ ಡಾ| ಬ್ರಹ್ಮಾನಂದ ರೆಡ್ಡಿಯವರೂ ದೆಹಲಿಗೆ ಹೋಗಲಿದ್ದಾರೆ. ೧೯೫೬ರಲ್ಲಿ ರಾಜ್ಯ ಪುನಾರಚನಾ ವೇಳೆ ಆಂಧ್ರ—ತೆಲಂಗಾಣ ನಾಯಕರ ನಡುವಾದ ಒಡಂಬಡಿಕೆಗೆ ಮತ್ತೊಮ್ಮೆ ಜೀವದಾನ ಮಾಡಿದರೆ ಸರಿ, ಎಲ್ಲವೂ ಒಮ್ಮೆಗೆ ಥಂಡಾ. ಇನ್ನಾರು ತಿಂಗಳಲ್ಲೇ ವಿಧಾನ ಸಭೆಗೆ ಚುನಾವಣೆಗಳು ನಡೆಯಲಿರುವಾಗ, ಈ ಕೂಡುವಳಿ ಬಾಳುವೆ ಸಹಜ. ಅಷ್ಟರಲ್ಲಿ ನೀಲಂ ರೆಡ್ಡಿಯವರೂ ಆಂಧ್ರದ ರಾಜ್ಯಕೀಯಾಕಾಶದಲ್ಲಿ ನೆಗೆಯತೊಡಗಬಹುದು; ಆದರೆ, ಅವರು ತಮ್ಮ ಕೃತ್ಯಗಳಿಂದ ಆಗಲೇ ಹೊಳಪು ಕಳೆದುಕೊಂಡಿದ್ದಾರೆ. ಇಂಡಿಕೇಟಿಗೆ ಸೇರಲಿ, ಸಿಂಡಿಕೇಟಿಗೆ ಮರಳಲಿ, ಅಥವಾ ಇನ್ನಾವುದೇ ಸಮಾಜವಾದಿಗಳ ಬೆನ್ನು ಹಿಡಿಯಲಿ, ನೀಲಂ ನಡೆಯದ ನಾಣ್ಯವಾಗಿದ್ದಾರೆ. ಅವರು ಹೊಸ ವ್ಯಕ್ತಿತ್ವ ಪಡೆಯಲಾರದಷ್ಟು ಹಳಬರೂ ಆಗಿದ್ದಾರೆ.

●●

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಪುತ್ತೂರು IInd ಎಡಿಶನಲ್ ಮು: ಕೋರ್ಟಿನಲ್ಲಿ

Ex. C. No. 202/70
O. S. 405/69

B. ಮಹಾಲಿಂಗ ಪೈ. —ಅರ್ಜಿದಾರ

ಮತ್ತು

C. ಶೇಷಪ್ಪ ಪೂಜಾರಿ, —ಎದ್ರಿ

ಜಾಮೀನ್ದಾರ-ಅಣ್ಣು ಪೂಜಾರಿ, ತನಿಯ ಪೂಜಾರಿಗಳ ಮಗ, ಪುತ್ತೂರು ತಾಲ್ಲೂಕು ಕಬಕ ಗ್ರಾಮದ ಬೀರಾವು ಎಂಬಲ್ಲಿ ಪೋಸ್ಟು, ಕಬಕ (ದ. ಕ.)

ಅರ್ಜಿದಾರನು ಎದ್ರಿರ ಬಾಬ್ತು ಜಪ್ತಿ ಮಾಡಿದ ಸೊತ್ತುಗಳನ್ನು ಜಾಮೀನ್ದಾರರಾದ ನೀವು ಸದ್ರಿ ಸೊತ್ತುಗಳನ್ನು ನೀವು ಕೊಟ್ಟ ಬೋಂಡು ಪ್ರಕಾರ ಈ ಕೋರ್ಟಿನ ಮುಂದೆ ಹಾಜ್ರು ಪಡಿಸಬೇಕೆಂತ ವಗೈರ ಅರ್ಜಿದಾರನು ಮಾಡಿದ ಅರ್ಜಿಯು ನಿಮ್ಮ ಹಾಜಿರಾತಿ ಬಗ್ಗೆ ತಾ. 30-8-1971 ಕ್ಕೆ ಇಟ್ಟಿರುತ್ತದೆ. ಆ ದಿವಸ ಸ್ವತಹ ವ ವಕೀಲರ ದ್ವಾರಾ ಹಾಜರಾಗಿ ಉಜ್ಜಾಹರಿಸ ತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡ ರೀತಿಯಲ್ಲಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸೋಣಾಗಿಯದೆ.

(By order of the court).

K. Raghunath Rai
Advocate for Petitioner.

Puttur, S. K. 29—7—71

ದಯಮಾಡಿ ನಿಮ್ಮ ಬಾಕಿ ಚಂದಾ ಹಣವನ್ನು ಕಳುಹಿಸಿರಿ

ಶ್ರೀ ರಾಘವೇಂದ್ರರ ವಿಚಾರಗಳು

(ನಾಲ್ಕನೇ ಪುಟದಿಂದ)

೪) 'ನಮಿಸಿ ಬೇಡುವೆ ವರಗಳ ನಿನ್ನ| ವಿಮಲ ಸುಮತಿ ಜನರತಿಪ್ರಿಯ| ಪಾದ| ಕಮಲ ಸುಮತಿ ಜನರತಿಪ್ರಿಯ| ಕಮಲ ವರ್ಗದಲ್ಲಿ ನೀಯದಿರೊ ಮತಿಯ, ಅಮಿತ ಕರುಣದಿ ಪಿಡಿಯೊ ಕಯ್ಯ||' ಗುರುಗಳಲ್ಲಿ ನಮಿಸಿ ಬೇಡುವ ವರವೆಂದರೆ, ಕಮಲ (ಪಾಪ) ವರ್ಗದಲ್ಲಿ ಬುದ್ಧಿಗೊಡದಿರೆಂದು. ಎನಗೂ ಆಣೆ! ಕೃಷ್ಣ ನಿನಗೂ ಆಣೆ! ದುಷ್ಟರ ಸಂಗವ ಬಿಡಿಸದಿದ್ದರೆ ನಿನಗೆ ಆಣೆ! ಶಿಷ್ಟರ ಸಂಗವ ಮಾಡದಿದ್ದರೆ ಎನಗೆ ಆಣೆ 'ಎಂಬಂತೆ' ಪ್ರಾಧಾನ್ಯವಾಗಿ ಪ್ರಾಥಮಿಕವಾಗಿ ದುಷ್ಟ ಸಂಗದ ತ್ಯಾಗ ಬೇಡಿದೆ, ಮತ್ತೆ ತಾನಾಗಿ ಶಿಷ್ಟ ಸಂಗತಿಯಾಗುತ್ತದೆಂದು. ಇಲ್ಲಿ ಪ್ರಾಸಯುಕ್ತವಾಗಿಯೂ ಸಾರ್ಥಕವಾಗಿಯೂ ಗುರುಗಳ ಬೇಡಿಕೆಯಿದೆ. ನಿರ್ಮಲರಾದ ಸದ್ಬುದ್ಧಿ ಜನರಿಗೆ ಗುರುಗಳು ಅತಿ ಪ್ರಿಯರೂ. ಅಂತೆ ತನ್ನ ಪಾದ ಕಮಲದಲ್ಲಿ ಸಮತಿಯುಳ್ಳವರಿಗೆ ಅತಿ ಪ್ರಿಯರೆಂದೂ ಸಹಜವಾಗಿದೆ. ಶರಣಾಗತದಲ್ಲಿ ಆತ್ಮೀಯತೆಯಿರುವುದು ಸೂಕ್ತವು:

೫) "ನಮೋ ನಮೋ ರಾಘವೇಂದ್ರ. ಸದ್ಗುಣ ಸಾಂದ್ರ, ದೇಶ ದೇಶಗಳಿಂದ ದೈನ್ಯದಿಂದಲಿ ಬಂದ| ಶೇಷ ಜನರುಗಳನ್ನು ಸಲಹುವ ವಿಶಿಷ್ಟ| ನಾಸಾರಿದೆನೊ ನಿನ್ನ ನಮಿತ ಜನರ ಪ್ರಸನ್ನ| ಭಾಸುರ ಸುಚರಿತ ಭಜಿಸುವೆನು ಅನವರತ||." ಸ್ವ 'ಪರ ದೇಶಗಳಿಂದ ದೀನತೆಯಿಂದ ಆಶ್ರಯಿಸಿ ಬಂದೆಲ್ಲವರನ್ನು ಕಾಯುವ ವಿಶೇಷವುಳ್ಳವರು, ಗುರುಗಳು ಪರೀಕ್ಷಾರ್ಥವಾಗಿ ಬಂದರೆ ತಕ್ಕ ಶಿಕ್ಷೆ ಗುರುಗಳಿಂದ ಒದಗುವುದೆಂಬುದಕ್ಕೆ ಅನೇಕ ಉದಾಹರಣೆಗಳಿವೆ! 'ಪ್ರಪನ್ನಾರ್ತಿಹರ'ನೆಂಬಂತೆ, "ಅನವರತ ಭಜಿಸುವುದು" ಭಕ್ತನ ಕರ್ತವ್ಯವೆಂದು ಇಲ್ಲಿದೆ!

೬) "ನಿನ್ನ ನಂಬಿದೆ ರಾಘವೇಂದ್ರ— ಭೇದಮತಾಬ್ಧಿ ವಿಹಾರ | ಕು | ವಾದಿ ಮದವನ ಕುಠಾರ| ಸಾಧಿತಾಖಿಳ ತತ್ತ್ವಸಾರ| ಮಧು | ಸೂದನ ಚಂದ್ರ ಚಕೋರ||" ಜೀವಾತ್ಮ-ಪರಮಾತ್ಮರಲ್ಲಿ ತರತಮ-ಭೇದವನ್ನು ಹೇಳುವ (ಮಧ್ವರ) ಮತವೆಂಬ ಕಡಲಲ್ಲಿ ವಿಹರಿಸುವ, ದುರ್ವಾದಿಗಳ ಮದವೆಂಬ ವನಕ್ಕೆ ಕೊಡಲಿಯಂತಿರುವ, ಅಖಿಳ ತತ್ತ್ವಸಾರ ಸಾಧಿಸಿದ, ಹರಿಯೆಂಬ ಚಂದ್ರನಲ್ಲಿ ಚಕೋರ (ತಜ್ಞೇವಾಲು) ಆಗಿರುವ ರಾಘವೇಂದ್ರರೇ, ನಿಮ್ಮನ್ನು ನಂಬಿದನೆಂಬ ಹಂಬಲದ ನುಡಿಯಿದು. ಅನ್ಯಾಂತ ಪ್ರಾಸ, ಅನೋಘ ವಿಷಯಗಳಿಲ್ಲಿವೆ!

೭) "ರಾಘವೇಂದ್ರ ಗುರುರಾಯ— ಭಾವ ದ್ರವ್ಯ ಕ್ರಿಯಾದ್ವೈತ | ನೀ | ಭಾವನ ತಿಳಿಯದೆ ನಿರತ|| ಸೇವಿಸಿ ಸಂತತ ಈ ವಿಧ ನರರನು| ದೇವರೆಂದನುದಿನ | ಭಾವಿಸಿದೆ ನಾ||". ಜಗನ್ನಾಥದಾಸರು ಬೇರೆಡೆಗೂ ಈ ವಿಚಾರವೆತ್ತಿ ಹೇಳಿದ್ದಾರೆ. 'ಜ್ಞಾನೇಚ್ಛಾಕ್ರಿಯಾಶಕ್ತಿ ತ್ರಯವತಿಳಿದಾನಂದಪಡು, ಬಯಸದಿರು ಉಭಯವ', 'ಭಾವ ಕ್ರಿಯಾ ದ್ರವ್ಯಾದ್ವೈತ ನೀನಾವಾಗ ಚಿಂತಿಸೊ ಭೌಮ್ಯಾದಿ ಭೂತ', 'ಜ್ಞಾನೇಚ್ಛಾ ಕ್ರಿಯಂಗಳೆಲ್ಲ ನಿನ್ನಧೀನವಲ್ಲವೆ ಲಕ್ಷ್ಮಿನಲ್ಲೆ'ವೆಂದು 'ಹರಿಕಥಾಮೃತಸಾರ'ವೇ ನೊದಲಾದ ಕೃತಿ ನೋಡಿರಿ. 'ಭಾವ ದ್ರವ್ಯ ಕ್ರಿಯೆಗಳಲ್ಲಿ ಏಕರೂಪನಾಗಿದ್ದು ಅವುಗಳನ್ನು ಪ್ರವರ್ತಿಸುವನು' ಎಂದು ಇಲ್ಲಿಯ ತಾತ್ಪರ್ಯ (ಶ್ರೀ ಪಂಚಮುಖಿಯವರ 'ಹರಿದಾಸ ಸಾಹಿತ್ಯ' ಪುಟ. 205).

೮) "ರಾಘವೇಂದ್ರ ಯತಿಸಾರ್ವಭೌಮ ದುರಿತೌಘದೂರತೇ ನಮೋ ನಮಃ||. ತುಂಗ ಭದ್ರಾ ಸುತರಂಗಿಣಿ ತೀರಗ| ಮಂಗಳ ಚರಿತ ಶುಭಾಂಗ ನಮಃ|| ಇಂಗಿತಜ್ಞ ಕಾಳಿಂಗ ಮಥನ ಯದು ಪುಂಗವ ಹೃದಯ ಸುಸಂಗ ನಮಃ|| ಸಂಗಿರ ಚಿತಿತ ಶೃಂಗಾರಾನನ|ತಿಂಗಳ ಕರುಣಾಪಾಂಗ ನಮಃ|| ಗಾಂಗೇಯ ಸಮ ಭಾಂಗ ಕುಮತ ಮಾ|ತಂಗ ಸಿಂಹ ಸಿತಪಾಂಗ ನಮಃ|| ಪಥಲಾಲಿತ್ಯವುಳ್ಳ ಈ ಸೊಲ್ಲು ಬಲು ಉದ್ದನೆ ಕಂಡರೂ ಹೃದ್ಯವದೆ. 'ಯತಿ ಸಾರ್ವಭೌಮ', 'ಇಂಗಿಜ್ಞ,' 'ಸಂಗಿರ (ವೀಣಾ) ಚಿನ್ಹಿತ,' 'ಗಾಂಗೇಯ ಸಮಭಾಂಗ'ವೆಂಬವು ಇಲ್ಲಿ ವಿಶೇಷತಃ ಗಮನೀಯಗಳು.

೯) "ರಾಘವೇಂದ್ರ ರಾಜಿತ ಗುಣಸಾಂದ್ರ|| ಪಾದೋದಕ ದಿನೇ ದಿನೇ ಸೇವಿಪ| ಸಾಧುಗಳ ವ್ಯಾಧಿಗಳೆಲ್ಲ ನೀನಳಿವೆ||" ಗುರುಗಳ 'ಪಾದೋದಕ'ವೂ ಪಾವನ ತಮ, ಪಾವನಕಾರಕವೆಂದು ಬೇರೆಡೆಯಂತೆ ಇಲ್ಲೂ ಹೇಳಿದುದು ಗಮ್ಯ !

೧೦) "ರಾಯ ಬಾರೋ ತಂದೆ ತಾಯಿ ಬಾರೋ| ವಂದಿಪ ಜನರಿಗೆ ಮಂದಾರ ತರುವಂತೆ| ಕುಂದದಭೀಷ್ಟವ ಸಲಿಸುತಿಪ್ಪ|| ಕುಂದದಭೀಷ್ಟವ ಸಲಿಸುತಿಪ್ಪ ಸರ್ವಜ್ಞ| ಮಂದನ್ನ ಮತಿಗೆ ರಾಘವೇಂದ್ರ||." ಗುರುವರೇಣ್ಯರು 'ಮಂದಾರ ವೃಕ್ಷದಂತೆ' ಅಭೀಷ್ಟದಾತರೆಂದುದು 'ಭಜತಾಂ ಕಲ್ಪವೃಕ್ಷಾಯ' ಎಂಬುದರ ರೂಪಾಂತರವದೆ. ಎರಡನೆಯ ಸಾಲೆ ಮೂರನೆಯ ಸಾಲಲ್ಲಿ ತಪ್ಪದೆ ಬರುವ ಜಾನಪದ ರೀತಿಯೂ ಇಲ್ಲಿದೆ. 'ಮೂಕಂ ಕರೋತಿ ವಾಚಾಲಂ' ಎಂಬತೆ, ಗುರುಕೃಪೆಯೊದಗಿದರೆ ಮೂಕನೂ 'ಸರ್ವಜ್ಞ' ನಾಗುವನೆಂಬುದು ಸೂಚಿತವದೆ!

೧೧) "ರೋಗಹರನೆ ಕೃಪಾಸಾಗರ ಶ್ರೀ ಗುರು|| ಘನ್ನ ಮಹಿಮ ಜಗನ್ನಾಥ ವಿಠಲ| ನಿನ್ನಾರಾಧನೆ ಮಾಡಿಸೊ||" ಗುರುಕೃಪೆಯೊದಗಿದರೆ ರೋಗಹರ, ಅದಕ್ಕೆ 'ಆರಾಧನೆ'ಯೇ ಮೂಲವೆಂದು ನೆನಪಿಡತಕ್ಕದು.

೧೨) "ವಂದಿಸುವೆ ಗುರುರಾಘವೇಂದ್ರಾರ್ಯರ| ಸುವಿರೋಧಿ (ಕೃತ್ ವರ್ಷ) ಶ್ರಾವಣ ಪರದ್ವಿತೀಯ| ಕವಿವಾರ ತುಂಗಭದ್ರಾತೀರದಿ|| ನವಸುಮಂತ್ರಾಲಯದಿ ದೇಹವನು ಬಿಟ್ಟು ಮಾ|ಧವನ ಪುರಕೈದಿದ ಮಹಾತ್ಮರಿವರಹುದೆಂದು||"

ಶ್ರೀ ರಾಘವೇಂದ್ರರ ನಿರ್ಯಾಣಕಾಲ (ವರ್ಷ) ಯಾವುದೆಂದು ನಿರ್ಣಯವಿಲ್ಲಿ ಸುಸ್ಪಷ್ಟವಾಗಿಹೇಳಿದೆ. 'ಸುವಿರೋಧಿ ವತ್ಸರದಿ' ಎಂದು ಉಡುಪಿಯ ಪ್ರತಿಯಲ್ಲಿದೆ; ಆದರೆ, ಶ್ರೀ ರಾಘವೇಂದ್ರರು ವೃಂದಾವನಸ್ಥರಾಗಿ ಇದೀಗಣ 'ವಿರೋಧಿಕೃತ್' ವರ್ಷಕ್ಕೆ (1971ಕ್ಕೆ) ಮೂರು ನೂರು ವರ್ಷಗಳಾದುವೆಂದು ಎಲ್ಲರೂ ಒಪ್ಪಿದ್ದಾರೆ. ಅಂದಮೇಲೆ, 'ವಿರೋಧಿ ವತ್ಸರ'ವೆಂದು ಇಲ್ಲಿ ಹೇಳಿದರೆ, ಇದಕ್ಕಿಂತ ಇಪ್ಪತ್ತೆರಡು ವರ್ಷದ ಹಿಂದಿನ 'ವಿರೋಧಿ' ವತ್ಸರವೆನ್ನಬೇಕಾಗುತ್ತದೆ; ಅದು ಸರಿಯಲ್ಲ! ಹಾಗಾಗಿ, ಇಲ್ಲಿ 'ಸುವಿರೋಧಿ(ಕೃತ್ ವರ್ಷ)'ವೆಂದು ತಿದ್ದಿಕೊಳ್ಳಬೇಕಾಗಿದೆ. ಹಾಗೆ, ಶ್ರೀ ರಾಘವೇಂದ್ರರು ಗುರುವಾರ ನಿರ್ಯಾಣರಾದರೆಂದು, ಆ ದಿನ ವ್ರತಾದಿಗಳನ್ನು ಹೆಚ್ಚಾಗಿ ಭಕ್ತರು ಆಚರಿಸುತ್ತಾರೆ. ಇಲ್ಲಿ 'ಕವಿವಾರ'ವೆಂದಿರುವುದರಿಂದ, ಗುರುಗಳು ಶುಕ್ರವಾರವೇ ವೃಂದಾವನಸ್ಥರಾದುದೆಂದೂ ತಿಳಿಯಬೇಕಾಗಿದೆ. (ಈ ಬಗ್ಗೆ ಬಲ್ಲವರು ತಕ್ಕಂತೆ ವಿವೇಚಿಸಿ, ಉಪಕಾರವೆಸಬೇಕಾಗಿ ಅರಿಕೆ)

೧೩) "ಶ್ರೀ ರಾಘವೇಂದ್ರ ನಿಮ್ಮ ಚಾರುಚರಣವ| ಸಾರಿದೆ ಶರಣುಮಂದಾರ ಕರುಣವ— ಮುನಿರಾಯ ನಿಮ್ಮ ಪದವನರುಹಧ್ಯಾನ|ಪ್ರಣಮ ಸುಸ್ತವನ ಅರ್ಚನಮಾಳ್ಪ ನಾನಾ|ಜನರ ವಾಂಛಿತವೀವ, ಗುಣಪೂರ್ಣಜ್ಞಾನ|ಧನ ಪಾಲಿಸೆನಗೀಕ್ಷಣ ನಿನ್ನಾಧೀನ| ಮನುಜನ ಪ್ರತಿದಿನ ದಣಿದಣಿಸುವುದು| ಘನವೇ ಗುರು ಪಾವನತರ ಚರಿತ||" ಗುರುಗಳ ಸೇವಾವಿಧಾನಗಳು ಪ್ರತ್ಯೇಕಶಃ ಇಲ್ಲಿವೆ. 'ಭಕ್ತನನ್ನು ಇನ್ನೂ ದಣಿಸುವುದು ಸರಿಯೇ?' ಎಂಬ ಮೊರೆತವಿಲ್ಲಿದೆ. ಗುಣಪೂರ್ಣವಾದ ಜ್ಞಾನವೇ ಧನವಾಗಿ ಗುರುಗಳಿದ್ದಾರೆಂಬುದು ವಿಶಿಷ್ಟವಾಗಿದೆ.

೧೪) "ಶ್ರೀ ರಾಘವೇಂದ್ರ ಬಾರೋ| ವ್ಯಾಸರಾಯನೆನೆಸಿ ನೃಪನ| ಕ್ಲೇಶ ಕಳೆದವನೆ ಬಾರೋ| ಶ್ರೀ ಸುಧೀಂದ್ರ ಕರಕಂಜಜ| ವಾಸುದೇವಾರ್ಚಕನೆ||" ವಿಜಯನಗರದ ಕೃಷ್ಣದೇವರಾಯನ 'ಕುಹೂಯೋಗ'ವನ್ನು ಕಳಚಿದ ಶ್ರೀ ವ್ಯಾಸರಾಯರೇ ಪುನಃ ಶ್ರೀ ರಾಘವೇಂದ್ರರಾಗಿದ್ದಾರೆಂಬ ಆಸ್ತಿಕರ ವಚನವಿಲ್ಲಿದೆ.

೧೫) 'ಸುರಪನಾಲಯದಂತೆ ಮಂತ್ರಾಲಯ| ಕಾಮಧೇನುವಿನಂತೆ ಯಿಪ್ಪ ಶ್ರೀ ಗುರು ಸಾರ್ವ|ಭೌಮ ಸುಧೀಂದ್ರಸುತ ರಾಘವೇಂದ್ರ|| ಆಮಯಾಧಿಪ ಖಳತಾಮಿಸ್ರ ಓಡಿಸುವ ಚಿಂ|ತಾಮಣಿ ಪ್ರಕಾಶದಂತಿಪ್ಪ ವೃಂದಾವನದಿ||' ಗುರುಗಳ ಸನ್ನಿಧಿಯಿಂದ ಮಂತ್ರಾಲಯವು ಪಾವನವಾದುದು. ನಮಿಪರಿಗೆ ಕಾಮಧೇನುವೆಂದು ಬೇರೆ ಹೇಳಿದೆ; ಅಂತೆ ತಾಮಿಸ್ರವೋಡಿಸಲು 'ಚಿಂತಾಮಣಿ'ಯೊಂದು ಇಲ್ಲಿದೆ!

೧೬) 'ಸ್ಮರಿಸಿ ಬೇಡುವೆನು ಶ್ರೀ ಗುರು ಸಾರ್ವಭೌಮ| ದಿತಿಸುತಗೆ ಸುತನೆನಿಸಿ ಅತಿಮುದದಿ ಸುರ ಮುನಿಯ| ಮತವಿಡಿದು ಹರಿ ಮಹಿಮೆ ಪಿತಗೆ ಪೇಳಿ|| ಖತಿಗೊಂಡು ನಿನ್ನ ಮೂರುತಿ ತೋರೆನಲು ಶ್ರೀ|ಪತಿಯ ಸ್ತಂಭದಿತೋರ್ದ ಪ್ರಹ್ಲಾದರಾಜ||' ಹಿರಣ್ಯಕಶಿಪುವಿನ ಮಗನಿಗೆ ನಾರದನು ಗರ್ಭದಲ್ಲೆ ಹಿತವಾದವುಸುರಿದ್ದು; ಆತ ಹರಿಯೆ ದೇವರೆಂದುದು; ತಂದೆ ಮಗನನ್ನು ವಿಧವಿಧವಾಗಿ ಹಿಂಸಿಸಿ, ಕೊನೆಗೆ ಕತ್ತಿಯೆತ್ತಿದಾಗ 'ಕಂಭದಿಂದ ಹರಿಯುದಯಿಸಿದುದು' ವ್ಯಾಸ ಭಾಗವತ, ವಿಷ್ಣು ಪುರಾಣಾದಿಗಳಲ್ಲಿದೆ. ಅದೇ ಪ್ರಹ್ಲಾದನೇ ಶ್ರೀರಾಘವೇಂದ್ರರಾಗಿ ಅವತರಿಸಿದುದೆಂಬ ಆಖ್ಯಾಯಿಕೆಯಿಲ್ಲಿದೆ.

೧೭) "ಹರಿಯ ಉಂಡನ್ನ ನಮ್ಮ ಗುರು ರಾಘವೇಂದ್ರರಿಗೆ| ಪರಮ ಭಕುತಿಯಿಂದ ಅರ್ಪಿಸುವ ವಿವರ||"ವೆಂಬ ಸುಳಾದಿಯಲ್ಲಿ ಆಯ್ದು ಸೊಲ್ಲು, ಒಂದು ಜತೆಯಿದ್ದು, ಆಹಾರಾದಿಗಳಲ್ಲಿ ಯಾವ ದೇವರಿದ್ದಾರೆಂಬುದು ಸಾಧಾರವಾಗಿದೆ. 'ಪ್ರಾಣಾಗ್ನಿ ಹೋತ್ರ'ದಂತೆ, 'ಹರಿಕಥಾಮೃತಸಾರ'ದಲ್ಲಿ ಕೂಡಾ ಈ ವಿವರಕ್ಕೆಡೆಯಿದೆ, ಆಸ್ತಿಕರು ತಿಳಿಯತಕ್ಕುದಾದ ವಿಚಾರವಿದು!

೧೮) 'ಹೊಂದಿ ಬದುಕಿರೋ|ರಾಘ|ವೇಂದ್ರರಾಯರ|| ನಂಬಿ ನುತಿಸುವ|ಜನ ಕದಂಬಕಿಷ್ಟವ|| ತುಂಬಿ ಕೊಡುವರು| ಅನ್ಯರ| ಹಂಬಲೀಯರು||' ಗುರುಶಿಖಾಮಣಿಗಳಾದ ಶ್ರೀ ರಾಘವೇಂದ್ರರು ಭಕ್ತರಿಗೆ 'ಅನ್ಯರ ಹಂಬಲೀಯರೆಂ'ಬು ಇಲ್ಲಿ ವಿಶೇಷಣವಿದೆ!

೧೯) 'ಸ್ವಾಮಿ ಲಾಲಿ| ಭಕ್ತ| ಪ್ರೇಮಿ ಲಾಲಿ||'ಯೆಂಬ ಸುವ್ವಾಲಿಯಲ್ಲಿ ಶ್ರೀಗುರುಗಳನ್ನು 'ಲಾಲಿ, ರೀತಿಯಲ್ಲಿ ಹಾಡಿ ಹೊಗಳಿದೆ.

೨೦) 'ತೂಗಿರೆರಾಯರ ತೂಗಿರೆ ಗುರುಗಳ||'ವೆಂಬ ಜೋಗುಳದಲ್ಲಿ ಶ್ರೀ ಪುರಂದರದಾಸರು 'ತೂಗಿರೆ ರಂಗನ'ನೆಂದಂತೆ ಚೆಲುವಾಗಿ ಬಣ್ಣಿಸಿಯದೆ.

೨೧) 'ಮಂಗಳ ಗುರು ರಾಘವೇಂದ್ರಗೆ||' ಎಂಬುದರಲ್ಲಿ "ಮಂಗಳಾದೀನಿ" ಎಂಬಂತೆ, ಗುರುಸ್ತೋತ್ರ ರೂಪ ಮಂಗಳಾಶಾಸನವು ಚೆನ್ನಾಗಿ ಬಣ್ಣಿಸಲಾಗಿವೆ.

III ಕೊನೆಮಾತು:

ಶ್ರೀ ರಾಘವೇಂದ್ರರ ಜೀವನ ವಿಚಾರಗಳಂತೆ. ಕೆಲವೊಂದು ತತ್ತ್ವಸಾರ ಈ ಪದ್ಯಾಂಶಗಳಲ್ಲಿರುವಂತೆ, ಇಡಿಯ ಪದ್ಯಗಳ ಅರ್ಥಾನುಸಂಧಾನ ಪೂರ್ವಕ ಅಭ್ಯಾಸ—ಪಠನಾದಿಗಳನ್ನು ಕೈಕೊಂಡರೆ, ಶ್ರೀ ಗುರು ಕೃಪೆಯೊದಗಿ, ಭಕ್ತರ ತಾಪತ್ರಯಗಳ ಪರಿಹಾರವಾಗಿ, ಸದ್ಗತಿಯನ್ನೈದಲು ಅವಕಾಶವಿದೆ; ಈ ವಿಚಾರದ ಸುಸಂದರ್ಭವನ್ನೆಲ್ಲರೂ ಸದುಪಯೋಗಿಸುವಂತೆ ವಿನಂತಿಸುತ್ತೇವೆ. ಇತ್ಯಲಮ್!

●●

ನಿಮಗೆ ಬೇಕಾಗುವ
ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,
ಉತ್ತಮ ವಜ್ರಗಳು
ಕೊಲಿಟಿಯಲ್ಲಿ, ಸ್ಟ್ಯಾಜಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂತಾ ಕೆರೆಟ ತೂಕದಲ್ಲಿ
ಮುಂದಾಗಿ ನಮ್ಮಿಂದ ಪಡೆಯಬಹುದು.
ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

ಗೇಹರಾಜ್ಯದಲ್ಲಿ

ಪರಮಾಧಿಕಾರಿ ಶಾಸಕಾಂಗ

'ಮೂಲಭೂತ ಹಕ್ಕುಗಳನ್ನು ಮೊಟಕು ಮಾಡುವ ಅಧಿಕಾರವನ್ನು ಸಂಸತ್ತು ತೆಗೆದುಕೊಳ್ಳುತ್ತದಂತಲ್ಲಾ, ಇದು ಹೇಗೇಂತ....?

'ಹೇಗೆಂದರೇನೆ? ಸಂವಿಧಾನಕ್ಕೆ ತಿದ್ದುಪಡಿತಂದು ಅದನ್ನು ಕಾರ್ಯರೂಪಕ್ಕೆ ತಂದರೆ ಸರಿ....'

'ಅದು ಸರೀನ್ನಿ. ಆದ್ರೆ ಮೂಲ ಭೂತ ಹಕ್ಕುಗಳನ್ನು ಕಸಿದುಕೊಳ್ಳುವ ಅಧಿಕಾರವೇ ಸಂಸತ್ತಿಗೆ ಇಲ್ಲಾಂತಾದ ಮೇಲೆ, ಅಂತಹ ಹಕ್ಕುಗಳನ್ನು ಕಸಿದುಕೊಳ್ಳಲು ಅನುಕೂಲವಾಗುವ ಸಂವಿಧಾನ ತಿದ್ದುಪಡಿಯನ್ನು ಮಾಡುವ ಅಧಿಕಾರ ಸಂಸತ್ತಿಗಿದೆಯೇಂತ....'

'ಸಂವಿಧಾನವೇನೂ ಅಪರಿವರ್ತನೀಯವಲ್ಲ.ಕೆರೆಯನೀರಿನಲ್ಲಿಕಾಲ ಕಾಲಕ್ಕೆ ಹೊಸ ಹೊಸ ನೀರು ಬಂದು ಸೇರುತ್ತದೆ. ಆದ್ದರಿಂದ ಅದು ಪಾನಯೋಗ್ಯವಾಗುತ್ತದೆ. ಅದಿಲ್ಲದೆ ಹಳೆಯದೇ ಇದ್ದುಳಿದರೆ, ಸಾರತೊಡುಗುತ್ತದೆ; ಕ್ರಿಮಿಕೀಟ, ಹುಳ ಹುಪ್ಪಟೆಗಳ ಆಗರವಾಗುತ್ತದೆ.'

'ಅದು ಹೌದೂನ್ನಿ....'

'ಅಂತೆಯೇ ದೇಶದ ಸಂವಿಧಾನಕೂಡ ಎನ್ನುತ್ತಾರೆ ಕೆಲವರು. ಸಾಮಾಜಿಕ ಪರಿಸ್ಥಿತಿಗಳಿಗೆ ಹೊಂದಿಕೊಂಡು ಅದರ ಸ್ವರೂಪದಲ್ಲೂ ಬದಲಾಗಬೇಕೆನ್ನುತ್ತಾರೆ ಅವರು. ಸಾಮಾಜಿಕ ದುರ್ಬಲತೆಯನ್ನು ನೀಗಿಸಿ ಎಲ್ಲರಿಗೂ ನ್ಯಾಯವೊದಗಿಸಲು ಸಂವಿಧಾನ ಕಳ್ಳಿಪಕಳೆಯಂತೆ ಅಡ್ಡಿಬಂದರೆ, ಅದನ್ನು ಮೂಲೋತ್ಪಾಟನ ಮಾಡಿಯೇ ಮುಂದುವರಿಯಬೇಕಾಗುತ್ತದೆ....'

'ಅಂದ್ರೆ, ಸಂವಿಧಾನ ರೂಪಿಸಿದವರು ಸಾಮಾಜಿಕ ನ್ಯಾಯವನ್ನು ಅಲಕ್ಷ್ಯಿಸಿದರು....'

'ಹಾಗೆಂತ ಹೇಳುವುದು ಯಾಕೆ? ತಮ್ಮ ಕಾಲದ ನಂಬಿಕೆಗೆ ಸರಿಯಾಗಿ ಅವರು ಅದನ್ನು ರೂಪಿಸಿದರು. ಈಗ ಕಾಲ ಬದಲಾಗಿದೆ. ಬದಲಾದ ಕಾಲಮಾನಗಳಿಗನುಕೂಲವಾಗುವಂತೆ ಈಗಾಗಲೇ ಸಂವಿಧಾನ ಹಲವಾರು ತಿದ್ದುಪಡಿ ಪಡೆದರೆ, ಅದು ನಮ್ಮ ಜೀವಂತತನಕ್ಕೆ ಪ್ರಬಲ ಸಾಕ್ಷಿ....'

'ಅಲ್ಲಾರಿ, ನನ್ನ ಪ್ರಶ್ನೆ ಹಾಗೇ ಉಳಿಯಿತು....'

'ಯಾವುದು? ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುವ ಸಂಬಂದದ್ದು....'

'ಹೌದಮ್ಮ, ಇಡಿಯ ಸಂವಿಧಾನವನ್ನೇ ಬುಡಮೇಲು ಮಾಡುವ ಅಧಿಕಾರವಿರುವವರಿಗೆ ಅದರ ಕೆಲವು ಕಲಂಗಳನ್ನು ತಿದ್ದುವ ಅಧಿಕಾರವಿಲ್ಲ ಅಂದರೆ ಹೇಗೆ?'

'ಮತ್ಯಾಕೆ ಇಷ್ಟು ಮೀನಮೇಷಾಂತ?'

'ನೋಡು, ಆಸ್ತಿಯ ಮೇಲಿನ ಹಕ್ಕು ಮೂಲಭೂತ ಹಕ್ಕು ಅಂತ ರಾಜಧನರದ್ದತಿ ಪ್ರಶ್ನೆಯಲ್ಲಿ ನ್ಯಾಯಾಲಯ ಅಭಿಪ್ರಾಯ ಪಟ್ಟಿದೆ. ಹಾಗೆಯೇ ಗೋಲಕನಾಥ ಪ್ರಕರಣದಲ್ಲಿ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿ ಅದು ವ್ಯಾಖ್ಯೆಮಾಡಿದೆ. ಆದ್ದರಿಂದ ನ್ಯಾಯಾಂಗ ದೃಷ್ಟಿಯಲ್ಲೂ ನ್ಯಾಯಸಮ್ಮತವಾಗುವಂತೆ ಸಂವಿಧಾನವನ್ನು ತಿದ್ದುವುದೆಂದರೆ ತುಸು ತ್ರಾಸವಾಯ್ತು ಅಷ್ಟೆ.'

'ಆದರೆ ನೋಡಿ, ಗೋಲಕನಾಥ ಪ್ರಕರಣದಲ್ಲಿ ಸುಪ್ರೀಂ ಕೋರ್ಟಿನ ಅಭಿಪ್ರಾಯವನ್ನು ಬದಲಿಸಲು ಕೇಳಿಕೊಳ್ಳಬೇಕೆನ್ನುತ್ತಾರಲ್ಲಾ?'

'ಅನ್ನುವವರು ಅನ್ನುತ್ತಲೇ ಇರುತ್ತಾರೆ. ಸಂಸತ್ತಿನಲ್ಲಿ ತಿದ್ದುಪಡಿ ಮಸೂದೆ ಬಂದಾಯ್ತು. ಇನ್ನು, ನ್ಯಾಯಾಂಗದ ಕಾರ್ಯಭಾರಕ್ಕೂ ಮಿತಿಯೊಂದನ್ನು ಹೇರಬೇಕೆಂಬ ಬಗ್ಗೆ ವಿಚಾರ ನಡೆಯುತ್ತಿದೆ.'

'ಅಂದರೆ?'

'ಶಾಸಕಾಂಗದ ಪರಮಾಧಿಕಾರವನ್ನು ನ್ಯಾಯಾಂಗವು ಮಾನ್ಯಮಾಡುವಂತೆ ದಬಾಯಿಸುವ ಪ್ರಯತ್ನ?'

'ಅಲ್ಲಾರಿ, ಶಾಸಕಾಂಗ ಯಾವ ಕಾನೂನು ಮಾಡಿದರೂ ಅದನ್ನು ನ್ಯಾಯಾಂಗದಲ್ಲಿ ಆಹ್ವಾನಿಸಬಾರದೂಂತ....'

'ಅಲ್ಲವೇ ಮತ್ತೆ? ಶಾಸಕಾಂಗ ಅಂದರೆ, ಜನಪ್ರತಿನಿಧಿಗಳು. ಅವರು ಏನು ಮಾಡುತ್ತಾರೆ, ಆಡುತ್ತಾರೆ–ಎಲ್ಲವೂ ಜನಹಿತಕ್ಕಾಗಿ, ಸಮಾಜ ಕಲ್ಯಾಣಕ್ಕಾಗಿ. ಆದ್ದರಿಂದ ಪರಮಾಧಿಕಾರವುಳ್ಳ ಶಾಸಕಾಂಗ ಹಲವು ಕಾಲ ಚರ್ಚಿಸಿ ಸ್ವೀಕರಿಸಿದ ಶಾಸನಗಳನ್ನು ಒಂದು ಕ್ಷಣದಲ್ಲಿ ಒಬ್ಬ ನ್ಯಾಯಾಧೀಶ ಕಿತ್ತು ಹಾಕುವುದೆಂದರೆ ಏನು?'

'ಈಗ ಸರಿ ಹೋಯ್ತು.'

ಆಗಲಾದರೂ ನಮ್ಮ ಮತದಾರರಲ್ಲಿ ಮತದಾನ ಪ್ರಜ್ಞೆ ಮೂಡುವುದೋ ನೋಡಬೇಕು........'

'ಮೂಡುತ್ತೆ, ಮೂಡುತ್ತೆ, ಮೂರು ಕಾಸಿನ ಹುಳಿ ಹೆಂಡಕ್ಕೆ ಮರುಳಾಗುವವರು.......'

'ಛೆ ಛೆ...ಮೂರು ಕಾಸಿಗೇನು ಬಂತೆ? ಮೂರು ರೂಪಾಯಿಗಳು....'

"ಹ್ಞೂಂ. ಅಲ್ರಿ, ಅದೆಲ್ಲ ಸಾಧ್ಯ ಅನ್ನುತ್ತೀರಾ?'

'ರಾಜ್ಯಕೀಯವೇ ಹಾಗೆ ನೋಡು ... ಮತ್ತೆ, ಈಗ ಉದ್ದೇಶಿತ ತಿದ್ದುಪಡಿಯನ್ನು ಸಿಂಡಿಕೇಟಿಗರೂ ಬೆಂಬಲಿಸುತ್ತಾರೆ; ಕಮ್ಯುನಿಸ್ಟರು, ದ್ರಾಮುಕರು, ಸಮಾಜವಾದಿಗಳು ತುದಿಗಾಲಲ್ಲಿ ನಿಂತಿದ್ದಾರೆ. ಮತ್ತೆ ಮಂಜೂರಾಗದೇನು?'

'ಹ್ಞೂಂ ಅಲ್ರಿ, ಇನ್ನೊಂದು ಸುದ್ದಿ ಕೇಳಿದೆ........'

'ಏನು?'

"ಸಿಂಡಿಕೇಟಿನ ಅಭ್ಯರ್ಥಿಗಳೆಲ್ಲ ಇಂಡಿಕೇಟಿಗೆ ಸೇರಲು ತವಕ ಪಡುತಿದ್ದಾರಂತೆ........"

'ಅದೆಲ್ಲ ಇದ್ದದ್ದೇ; ಮಾಮೂಲು ಪಕ್ಷಾಂತರ........'

'ಹಾಗಲ್ಲಾರೀ ನಮ್ಮ ವಿರೇಂದ್ರ ಪಾಟೀಲ, ಗುಜರಾತದ ಹಿತೇಂದ್ರ ದೇಸಾಯಿ, ತಮಿಳು ನಾಡಿನ ಕಾಮರಾಜ, ಆಂಧ್ರದ ಸಂಜೀವ ರೆಡ್ಡಿ, ಉತ್ತರ ಪ್ರದೇಶದ ಚಂದ್ರಭಾನು ಗುಪ್ತ........'

'ಓಹೋಹೋ, ಪಟ್ಟಿ ಭಾರಿ ಉದ್ದಕ್ಕೆ ಬೆಳೆಯುತ್ತಿದೆ. ಹ್ಞೂಂ, ಇದ್ದರೂ ಇರಬಹುದೂನ್ನು. ದೇಶ ವ್ಯಾಪಿಯಾಗಿ ಒಡೆದಿರುವ ಪಕ್ಷಾಂತರ ರೋಗಕ್ಕೆ ಇವರೂ ತುತ್ತಾದರೆ ಆಶ್ಚರ್ಯವಿಲ್ಲ....'

'ಅಲ್ಲಾರೀ, ಶಿಸ್ತಿನ ಶಿಪಾಯಿಗಳೆಲ್ಲರೂ ಅಶಿಸ್ತನ್ನು ತೋರಿಸಿದರೆ,........'

'ಇದ್ದಾರಲ್ಲಾ, ಶಿಸ್ತುಪ್ರಿಯ ನಿಜಲಿಂಗಪ್ಪ, ಶಿಸ್ತಿನ ನಮ್ರಸೇವಕ ಮುರಾರ್ಜಿ ಭಾಯಿ ...'

'ಇಬ್ಬರಿಗಾಗಿ ಒಂದು ಪಕ್ಷ ಬೇಕೆ?'

"ಇಬ್ಬರೇ ಏಕೆ? ಅತ್ತ ಇತ್ತ ನೆಗೆದಾಡುವ ಹಲವಾರು ಕಪ್ಪೆಗಳೂ ಇವರ ಮುಂದೆ-ಹಿಂದಿರುತ್ತವೆ. ಆದರೆ ನೋಡು, ನೀನಂದ ಮಾತಿನಲ್ಲಿ ಎಷ್ಟು ಸತ್ಯವಿದೇಂಬುದು ಅಗೋಚರ ..."

'ಅಲ್ರಿ, ಉಭಯ ಗೌರವಯುತವಾದ ಪರಿಹಾರ ಸೂತ್ರವೊಂದರ ರಚನೆಯಾಗಲಿದೆಯಂತೆ....'

"ಅದು ಸಾಧ್ಯವಿಲ್ಲ........"

"ಯಾಕೆ?"

'ಅಲ್ಲಮ್ಮ, ಇಂಡಿಕೇಟಿನಲ್ಲೇ ಈಗ ಗುಂಪುಗಾರಿಕೆ, ಅಧಿಕಾರ ಲಾಲಸೆ, ಅಸಮಾಧಾನಗಳ ತಾಂಡವ ತೊಡಗಿದೆ. ಮತ್ತೆ ಆ ಹಳೆಬರನ್ನು—ಅಂದರೆ, ಪ್ರತಿಗಾಮಿಗಳೆಂದು ತಾವೇ ಕರೆದವರನ್ನು ಕೂಡಿಸಿಕೊಂಡರೆ, ಈ ಗುಂಪುಗಾರಿಕೆ ಮತ್ತಷ್ಟು ಬೆಳೆದೇ ತೀರುತ್ತದೆ.ಪಕ್ಷ ಮತ್ತೆ ಎರಡಾಗುತ್ತದೆ....'

'ಇಲ್ಲವಾದರೆ, ಎರಡಾಗುವುದಿಲ್ಲ ಅನ್ನುತ್ತೀರಾ?'

'ಛೆ ಛೆ....ರಾಜಕೀಯ ಪಕ್ಷಗಳು ಯಾವಾಗಲೂ ಕಡಮೆಯೆಂದರೆ ಎರಡು ತುಕುಡಿ. ಬಲವುಳ್ಳವರು ಅಧಿಕಾರ ಪಡೆಯುತ್ತಾರೆ; ಬಲಹೀನರು ಪಕ್ಷದಲ್ಲಿ ಉಳಿದು ತಮ್ಮ ಸರದಿಗಾಗಿ ಕಾಯುತ್ತಿರುತ್ತಾರೆ....'

'ಆದ್ರೂನೋಡಿ, ಕಾಮರಾಜ, ಪಾಟೀಲ—ದೇಸಾಯಿಯವರು ಪ್ರಗತಿಶೀಲರೆಂದು ಅಂದೇ ಇಂಡಿಕೇಟಿಗರು ಹೇಳತೊಡಗಿದ್ದರು. ನೀಲಂ ರೆಡ್ಡಿ ತನಗಾಗ ಮುಖಭಂಗವೆಲ್ಲವನ್ನೂ ಮರೆತು ಇಂದಿರಮ್ಮನೊಡನೆ ಕೈ ಮಿಲಾಯಿಸಲು ರೆಡಿಯಾಗಿದ್ದಾರೆ........'

'ಇರಬಹುದು ಆದರೆ ಕಾಂಗ್ರೆಸ್ ಒಂದಾಗುವ ಮಾತು ಚೇಷ್ಟೆಯದ್ದು ಎಂದು ಇಬ್ಬಣಗಳೂ ಹೇಳುತ್ತಲೇ ಬಂದಿದ್ದಾವಲ್ಲಾ....'

"ಅವರು ಹೇಳುತಿರಲಿ. ಯಾರ ಕೈಯಲ್ಲಿ ಅಧಿಕಾರವಿದೆಯೋ ಅವರತ್ತ ಒಲಿಯುವುದು ಸಹಜ ತಾನೆ?'

'ಆದರೂ ಕಷ್ಟಕಾಲದಲ್ಲಿ ತಾನು ಕರೆದಾಗ ಹತ್ತಿರ ಬಾರದವರನ್ನು ಶ್ರೀಮತಿ ಗಾಂಧಿ ಈ ಸುಖದ ದಿನಗಳಲ್ಲಿ ಸೇರಿಸಿಕೊಳ್ಳುತ್ತಾರೆಯೇ? ಇವರು ಸುಮ್ಮಸುಮ್ಮನೆ ಸೇರಿಕೊಳ್ಳುತ್ತಾರೆಯೆ?'

'ಇಕ್ಕಡೆಯವರೂ ಒಂದು ಅನುಕೂಲ ವಾತಾವರಣಕ್ಕಾಗಿ ಕಾಯುತಿದ್ದಾರೆನಿಸುತ್ತದೆ........'

'ಇರಬಹುದೂನ್ನು ಆದರೆ ವೀರೇಂದ್ರಪಾಟೀಲರು ಈ ವರದಿಗಳನ್ನು ಖಂಡತುಂಡವಾಗಿ ಅಲ್ಲಗಳೆದಿದ್ದಾರೆ, ಆದ್ದರಿಂದ ಹೋಂಗಿಯೇ ಇರಬಹುದು.'

'ಹ್ಞೂಂ....'

'ಏನು ಮುಖ....'

'ಏನೂ ಇಲ್ಲಾನ್ನು....'

—ಗೋರಾ.

ಶ್ರೀ ರಾಘವೇಂದ್ರ ಸ್ವಾಮಿಗಳ ಪುಣ್ಯ ದಿನಾಚರಣೆ

ಸುರತ್ಕಲ್ಲು ಕೇಂದ್ರದ ಹೊಸಬೆಟ್ಟು ಗ್ರಾಮ ಸಂಘದಲ್ಲಿ ತಾ. 8—8—71ರಲ್ಲು ಶ್ರೀ ರಾಘವೇಂದ್ರ ಸ್ವಾಮಿ ಪುಣ್ಯ ದಿನಾಚರಣೆ ನಡೆಯಲಿದೆ. 'ಶ್ರೀ ಗುರು ದೇವತಾ ಸ್ತೋತ್ರಗಳು' ಎಂಬ ಪುಸ್ತಿಕೆಯ ಪ್ರಕಟನೆ, ಕೀರ್ತನ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ವಿತರಣೆ, ಶ್ರೀ ರಾಘವೇಂದ್ರ ಸ್ವಾಮಿ ಜೀವನ–ಕೃತಿ ಪರಿಚಯ ಭಾಷಣ, ಭಜನ ಮತ್ತು ಪೂಜಾದಿಗಳು ಏರ್ಪಡಿಸಲಾಗಿವೆ. ಗೆಳೆಯರ ಬಳಗ ಹಾಗೂ ವಿಜಯ ಸಾಹಿತ್ಯ ಮಾಲೆಯ ವತಿಯಿಂದ ಈ ಕಾರ್ಯಕ್ರಮಗಳು ಜರಗಿಸಲಾಗುತ್ತಿವೆಯೆಂದು ತಿಳಿದು ಬಂದಿದೆ.

●●

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 155/70

ರಾಮಚಂದ್ರ ಪೈ —ವಾದಿ.
ಅಣ್ಣಪ್ಪ ಭೋವಿ —ಪ್ರತಿವಾದಿ

ಪ್ರತಿವಾದಿ ಅಣ್ಣಪ್ಪ ಭೋವಿಯು ಶೇಷ ಭೋವಿ ಮಗ–ಕುಂದಾಪುರ ತಾಲೂಕು ಹಳ್ಳಿಹೊಳೆ ಗ್ರಾಮದ ಕುಂದ ಬೈಲಲ್ಲಿ ಇರುವವರು. Post, ಹಳ್ಳಿ ಹೊಳೆ, ದ. ಕ.ಜಿಲ್ಲಾ.

ಪ್ರತಿವಾದಿಗೆ ತಿಳಿಸುವುದೇನೆಂದರೆ, ವಾದಿಯ ವಸ್ತ್ರದಂಗಡಿಯಲ್ಲಿ ನೀವು ಮಾಡಿದ ವ್ಯವಹಾರದ ಬಾಬತು ಬರತಕ್ಕ ಮೊಬಲಗಿಗೆ ವಾದಿಯು ಮೇಲ್ಕಂಡದಾವೆಯನ್ನು ಮಾಡಿರುತ್ತಾನೆ. ಸದ್ರಿ ದಾವೆಯ ತಾರೀಕು 19–8–1971ಕ್ಕೆ ತನ್ನಿಗೆ ಇಟ್ಟಿರುವುದರಿಂದ ಆಕುರಿತು ನಿಮ್ಮ ಉದಾಹರಣೆಯಿದ್ದ ಪಕ್ಷಕ್ಕೆ ಸದ್ರಿ ತಾರೀಕಿನ ದಿವಸ ಹಗಲು 11ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಆಗಿ ಜಾಹೀರು ಮಾಡಿಕೊಳ್ಳ ತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯನ್ನು ಕೇಳಿ ತೀರ್ಮಾನವಾದೀತು.

(ಕೋರ್ಟು ಹುಕುಂ ಪ್ರಕಾರ)

M. Radhakrishna Karanth
Advocate for Plaintiff

ಮೊಕ್ಕಾಂ: ಕುಂದಾಪುರ.ತಾರೀಕು 1–8–1971

ಪುತ್ತೂರು IInd ಎಡಿಶನಲ್ ಮು. ಕೋರ್ಟ್

O.S. 70/69

ಧರ್ಮಪಾಲ ಶೆಟ್ಟಿ —ವಾದಿ

ಮತ್ತು

ಅಕ್ಕಮ್ಮ ಯಾನೆ ಶಾರದ ಸಹಾ —ಪ್ರತಿವಾದಿರು

3ನೇ ಪ್ರತಿವಾದಿ:— ರಾಮಣ್ಣ ಭಂಡಾರಿ, ಕರಿಯಪ್ಪ ಭಂಡಾರಿಗಳ ಮಗ, ಬಂಟ್ವಾಳ ತಾಲ್ಲೂಕು ವೀರಕಂಭ ಗ್ರಾಮದಲ್ಲಿ Post ವೀರಕಂಭ (ದ.ಕ.) 4ನೇ ಪ್ರತಿವಾದಿ ಶಾಂಭವಿ, ಕರಿಯಪ್ಪ ಭಂಡಾರಿಗಳ ಮಗಳು. 6ನೇ ಪ್ರತಿವಾದಿ ಸರಸ್ವತಿ, ಕರಿಯಪ್ಪ ಭಂಡಾರಿಗಳ ವಿಧವೆ. ಇಬ್ಬರೂ ಕಾಸರಗೋಡು ತಾಲ್ಲೂಕು ಮಂಜೇಶ್ವರ ಟೌನ್‌ನಲ್ಲಿ P.O. ಮಂಜೇಶ್ವರ. (ಕೇರಳ ಸ್ಟೇಟ್) 5ನೇ ಪ್ರತಿವಾದಿ. ನಾರಾಯಣ ಭಂಡಾರಿ, ಕರಿಯಪ್ಪ ಭಂಡಾರಿಗಳ ಮಗ, ಪುತ್ತೂರು ತಾಲೂಕು ಮುಡ್ನೂರು ಗ್ರಾಮದಲ್ಲಿ P.O. ಮ್ಯೂಸೂರು (ದ.ಕ.). ಇವರಿಗೆ—

ವಾದಿಯು ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾರೀಕು 25–8–71ಕ್ಕೆ ಇಟ್ಟಿರುತ್ತದೆ. ಆ ದಿವ್ಸ ಸ್ವತಹ ವಕೀಲರ ದ್ವಾರಾ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲಾದೀತು.

By order of the Court

Sd/– K. Raghunath Rai
Advocate for Plaintiff

Puttur S.K. 31—7—71

ಕೊಲೆಗೆ ಹೊಸ ತಂತ್ರದ ಬಳಕೆ

(ಎರಡನೇ ಪುಟದಿಂದ)

ಕ್ರಿಮಿ ಕಚ್ಚಿರಬೇಕು. ನಿನ್ನ ಶರ್ಟಿನ ಒಳಗೆಲ್ಲಾದರು ಅದು ಅವಿತುಕೊಂಡಿರ ಬಹುದು' ಎಂದ. ಆದರೆ ಅಮರನನ್ನು ಬೀಳ್ಕೊಡಲು ಬಂದಿದ್ದ ಗೆಳೆಯರಿಗೆ ಇದರಲ್ಲೇನೋ ಅನುಮಾನ ಕಾಣತೊಡಗಿತು. ಅವರು ಅಮರನನ್ನು ಕಲ್ಕತ್ತೆಯಲ್ಲೇ ಉಳಿಯುವಂತೆ ಒತ್ತಾಯಿಸ ತೊಡಗಿದರು. ಇವರ ಅಭಿಪ್ರಾಯವನ್ನು ವಿನಯೇಂದ್ರ ಅನುಮೋದಿಸಲಿಲ್ಲ. ಈ ಕ್ಷುಲ್ಲಕ ವಿಷಯಕ್ಕಾಗಿ ಗಾಬರಿಪಡುವುದಾಗಲೀ, ಪ್ರಯಾಣ ರದ್ದುಗೊಳಿಸುವುದಾಗಲೀ ಮೂರ್ಖತನ ಎಂದು ಹೇಳಿದ. ರಾಣಿಗೆ ಸಂಶಯ ಬಂದರೂ ಅವಳು ಪಯಣವನ್ನು ನಿಲ್ಲಿಸಲಿಲ್ಲ. ಎಲ್ಲರು ಅಮರನನ್ನು ಕೂಡಿಯೇ ಪಾಕುರ್‌ಗೆ ತೆರಳಿದರು.

ಹೌರಾ ನಿಲ್ದಾಣದಲ್ಲಿ ನಡೆದ ಈ ಘಟನೆಯಿಂದ ವ್ಯಾಕುಲನಾಗಿದ್ದ ಅಮರನ ಆಪ್ತಗೆಳೆಯ ಕಮಲಪ್ರಸಾದಪಾಂಡೆ, ಅಮರ್‌ಗೆ ಕೂಡಲೇ ಹೊರಟು ಬರಲು ಸೂಚಿಸಿ ಪತ್ರ ಹಾಕಿದ. ಗೆಳೆಯನ ಆದೇಶದಂತೆ ನವೆಂಬರ್ 29ರಂದು ಅಮರ್ ಕಲ್ಕತ್ತೆಗೆ ವಾಪಾಸಾದ. ಅವರೀರ್ವರು ಕೂಡಲೇ ವೈದ್ಯರ ಬಳಿಗೆ ಹೋದರು. ಅಲ್ಲಿ ಅವನ ಬಲತೋಳಿನ ಮೇಲಾಗಿದ್ದ ಗಾಯವನ್ನು ಪರೀಕ್ಷಿಸಿದ ಡಾ. ನಳಿನೀ ರಂಜನ್ ಸೇನ್‌ಗುಪ್ತಾ, ಅದು ಚುಚ್ಚುಮದ್ದಿನ ಸೂಜಿಯಿಂದಾದ ಗುರುತೆಂದು ಸ್ಪಷ್ಟವಾಗಿ ಹೇಳಿದಳು. ಮರುದಿನ ಡಾ. ಸೇನ್‌ಗುಪ್ತಾರ ಆದೇಶದಂತೆ ಡಾ. ಸಂತೋಷ್ ಗುಪ್ತಾ ಅಮರನ ರಕ್ತವನ್ನು ತೆಗೆದುಕೊಂಡು ಪರೀಕ್ಷಿಸತೊಡಗಿದರು. ಇದು ನಡೆದ ನಾಲ್ಕು ದಿನಗಳಲ್ಲಿಯೇ ಅಮರ್ ವಿಧಿವಶನಾದ. ಅವನ ರಕ್ತವನ್ನು ಬೇರೆ ಬೇರೆ ರೀತಿಯಲ್ಲಿ ಪರೀಕ್ಷಿಸಿದ ಡಾಕ್ಟರು ಅವನ ರಕ್ತಕ್ಕೆ ಪ್ಲೇಗ್ ರೋಗಾಣುಗಳು ಸೋಂಕಿರುವುದನ್ನು ಕಂಡುಕೊಂಡರು. ಆ ಕೂಡಲೆ ಅವರು ಸಾರ್ವಜನಿಕ ಆರೋಗ್ಯ ಇಲಾಖೆಗೆ ಈ ಸುದ್ದಿಯನ್ನು ಮುಟ್ಟಿಸಿದರು.

ಅಮರೇಂದ್ರನ ಈ ಅಕಾಲ ಮರಣದಿಂದ ಎಸ್ಟೇಟಿನ ಹಕ್ಕುದಾರಿಕೆಯ ನಿರ್ಣಯದ ಬಗ್ಗೆ ರಾಜಮನೆತನದಲ್ಲಿ ದೊಡ್ಡ ಚರ್ಚೆಯೇ ನಡೆಯತೊಡಗಿತು. ಬಂಗಾಲದ ಒಂದು ಪ್ರತಿಷ್ಠಿತ ಮನೆತನದ ಮಾನದ ಪ್ರಶ್ನೆಯೂ ಇದರಲ್ಲಿದ್ದುದರಿಂದ ಕೋರ್ಟಿನ ಸಹಾಯಪಡೆಯುವುದು ಅವರಿಗೆ ಅಸಾಧ್ಯವಾಗಿತ್ತು. ಎಲ್ಲರೂ ಈ ಗಹನ ವಿಷಯದ ಚರ್ಚೆಯಲ್ಲೇ ಮುಳುಗಿದ್ದರಿಂದ ಅಮರನ ಈ ಅನಿರೀಕ್ಷಿತ ಸಾವಿನ ಬಗ್ಗೆ ಯಾರೂ, ಯಾವ ದೂರನ್ನೂ ಪೋಲೀಸ್ ಖಾತೆಗೆ ಕೊಡಲಿಲ್ಲ. ಕೊನೆಗೆ ಗೆಳೆಯನ ಸಾವಿನಿಂದ ನೊಂದಿದ್ದ ಕಮಲಪ್ರಸಾದ ಪಾಂಡೆ, ತನ್ನ ಗೆಳೆಯನ ಈ ಅನುಮಾನಾಸ್ಪದ ಸಾವಿನ ಬಗ್ಗೆ ತನಿಖೆ ನಡೆಸುವಂತೆ ಕೋರಿ, ಕಲ್ಕತ್ತೆಯ ಡೆಪ್ಯುಟಿ ಕಮಿಷನ್ನರಿಗೆ 1934, ಜನವರಿ 22ರಂದು ಒಂದು ಅರ್ಜಿ ಸಲ್ಲಿಸಿದ. ಇದಕ್ಕಾಗಿ ಬಂಗಾಲದ ಇಂಟಲಿಜೆನ್ಸ್ ಸರ್ವಿಸ್ ಖಾತೆಯ ಸಬ್ ಇನ್ಸ್‌ಪೆಕ್ಟರ್ ರತ್‌ಚಂದ್ರ ಮಿತ್ರರವರು ನೇಮಕಗೊಂಡರು. ಇವರ ನೇತೃತ್ವದಲ್ಲಿ ಈ ಬಗ್ಗೆ ತನಿಖೆ ಚುರುಕಾಗಿ ನಡೆಯಿತು. ಈ ಶೋಧನೆಯಿಂದ ಎಲ್ಲರನ್ನೂ ಬೆರಗಾಗಿಸುವಂತಹ ಅದ್ಭುತ ರಹಸ್ಯಗಳು ಹೊರಬಿದ್ದವು.

1932 ಮೇ ತಿಂಗಳಲ್ಲಿ ಅಂದರೆ ಅಮರ್ ತನ್ನ ಕಾರುಭಾರವನ್ನೆಲ್ಲಾ ದಕ್ಷವ್ಯಕ್ತಿಗಳಿಗೆ ಒಪ್ಪಿಸಿಕೊಟ್ಟ ದಿನವೇ ವಿನಯೇಂದ್ರನ ಆಪ್ತ ಮಿತ್ರ ಡಾ. ತಾರಾನಾಥ ತನ್ನ ಪ್ರಾಯೋಗಿಕ ಕೆಲಸಕ್ಕಾಗಿ ಸ್ವಲ್ಪ ಪ್ಲೇಗ್ ತಳಿಯನ್ನು ಕಳುಹಿಸಿಕೊಡುವಂತೆ ಹಾಫ್‌ಕಿನ್ ಇನ್‌ಸ್ಟಿಟ್ಯೂಟ್‌ಗೆ ಮೂರುತ್ತರಕ್ಕೂ ಹಣ ಕಟ್ಟಿ ತಂತಿಯೊಂದನ್ನು ಕಳುಹಿದ್ದ. ಇದಲ್ಲದೆ ಅವನು ಸಾಕಷ್ಟು ಬುದ್ಧಿ ಖರ್ಚುಮಾಡಿ, ತನಗೇನೂ ಸಂಬಂಧವಿಲ್ಲದ ಡಿ. ಟಿ. ಎಮ್. ಕಾಗದಗಳನ್ನು ಲಗತ್ತಿಸಿ ಒಂದು ಪತ್ರವನ್ನು ಹಾಕಿದ್ದ. ಆದರೆ ಬಂಗಾಲದ ಜನರಲ್ ಸರ್ಜನ್ನರ ಅನುಮತಿಯಿಲ್ಲದೆ ಕಳುಹಲು ಸಾಧ್ಯವಿಲ್ಲವೆಂದು ಹಾಫ್‌ಕಿನ್ ಇನ್‌ಸ್ಟಿಟ್ಯೂಟ್‌ನವರು ಖಡಾಖಂಡಿತವಾಗಿ ತಿಳಿಸಿಬಿಟ್ಟರು. ನಿರುಪಾಯನಾದ ತಾರಾನಾಥ ಕೊನೆಗೆ ಅದೇ ತಿಂಗಳಲ್ಲಿ ಕಲ್ಕತ್ತೆಯ ಡಾ. ಲುಕಿಲ್ಲರನ್ನು ಭೇಟಿಯಾದ. ತಾರಾನಾಥ ಪ್ಲೇಗ್ ನಿವಾರಣೆಗೆ ಹೊಸ ಔಷಧವೊಂದನ್ನು ಕಂಡುಹಿಡಿದಿದ್ದಾನೆ ಎಂಬ ಹೇಳಿಕೆಯನ್ನು ನಂಬಿದ ಅವರು ಅವನಿಗೆ ತಮ್ಮ ಪ್ರಯೋಗ ಶಾಲೆಯಲ್ಲಿ ಕೆಲಸಮಾಡಲು ಅವಕಾಶಕೊಟ್ಟರು. ಅಂತೆಯೇ ತಾರಾನಾಥ ಡಾ. ಲುಕಿಲ್ಲರ ನಿರ್ದೇಶನದಲ್ಲಿ ಹಾಫ್‌ಕಿನ್ ಇನ್‌ಸ್ಟಿಟ್ಯೂಟ್‌ನಿಂದ ತರಿಸಲ್ಪಟ್ಟ ಪ್ಲೇಗ್ ತಳಿಯ ಮೇಲೆ ತನ್ನ ಪ್ರಯೋಗ ಸುರುಮಾಡಿದ. ಆದರೆ ಅವನ ಈ ಪ್ರಯೋಗ ಹಾಳಾದುದು ಮಾತ್ರವಲ್ಲದೆ ಪ್ಲೇಗ್ ತಳಿಯು ನಾಶವಾಯ್ತು. ಹೊಸತಳಿಯನ್ನು ತರಿಸುವಂತೆ ಅವನು ಡಾ. ಲುಕಿಲ್ಲರನ್ನು ಸಾಕಷ್ಟು ಪ್ರಚೋದಿಸಿದ. ಆದರೆ ಇದಕ್ಕೆ ಅವರು ಸೊಪ್ಪು ಹಾಕಲಿಲ್ಲ. ಕಡೆಗೆ ಅವನ ಒತ್ತಾಯಕ್ಕೆ ಮಣಿದು ತಾರಾನಾಥ ಪ್ಲೇಗಿಗೆ ಹೊಸಮದ್ದನ್ನು ಕಂಡುಹಿಡಿದಿರುವುದರಿಂದ ಅವನಿಗೆ ಹಾಫ್‌ಕಿನ್ ಇನ್‌ಸ್ಟಿಟ್ಯೂಟ್‌ನಲ್ಲಿ ಕೆಲಸಮಾಡಲು ಅನು ಮಾಡಿಕೊಡಬೇಕೆಂದು ಕೋರಿ ಒಂದು ಶಿಫಾರಸು ಪತ್ರ ಬರೆದು ಇನ್‌ಸ್ಟಿಟ್ಯೂಟ್‌ನ ಅಧಿಕಾರಿಗಳಿಗೆ ಅದನ್ನು ಕೊಡುವಂತೆ ಹೇಳಿದರು. ಆದರೆ ಈ ಶಿಫಾರಸು ಪತ್ರವನ್ನು ಬೊಂಬಾಯಿಗೆ ಒಯ್ದವನು ತಾರಾನಾಥನಲ್ಲ, ವಿನಯೇಂದ್ರ. ವಿನಯೇಂದ್ರ ಬೊಂಬಾಯಿಯಲ್ಲಿ ಓರಿಯಂಟಲ್ ಹೋಟೇಲ್‌ನಲ್ಲಿ ಉಳಿದುಕೊಂಡ. ಅಲ್ಲಿ ಅವನು ತನ್ನ ವಿಳಾಸಕ್ಕೆ ಬದಲಾಗಿ ತಾರಾನಾಥನ ಕಲ್ಕತ್ತೆಯ ವಿಳಾಸವನ್ನು ಕೊಟ್ಟ. ಮರುದಿನ ಅವನು ಡಾ. ನಾಯಿಡುರವರನ್ನು ಭೆಟ್ಟಿಯಾದ. ಅವರಿಗೆ ತಾನು ತಂದಿದ್ದ ಶಿಫಾರಸು ಪತ್ರವನ್ನು ಒಪ್ಪಿಸಿ ಅದನ್ನು ತಾರಾನಾಥ ಕಳುಹಿರುವುದಾಗಿಯೂ ಮತ್ತು ತನ್ನಗೆಳೆಯನಿಗೆ ಅಲ್ಲಿ ಕೆಲಸಮಾಡಲು ಸ್ಥಳ ದೊರೆತೀತೆ ಎಂದು ಮುಂದಾಗಿಯೇ ತಿಳಿಯಲೋಸುಗ ತಾನು ಬಂದಿರುವುದಾಗಿ ತಿಳಿಸಿದ. ಅವರು ಅದನ್ನು ಓದಿ ಮೊದಲು ತಾರಾನಾಥ ತಾನೇ ಖುದ್ದಾಗಿ ಒಂದು ಕಾಗದ ಬರೆದು ಇನ್‌ಸ್ಟಿಟ್ಯೂಟ್‌ನ ಡೈರೆಕ್ಟರುಗಳಿಂದ ಅನುಮತಿ ಪಡೆಯುವಂತೆ ಹೇಳಿದರು. ಗತ್ಯಂತರವಿಲ್ಲದೆ ವಿನಯೇಂದ್ರ ಅದೇ ಸಂಜೆ ಕಲ್ಕತ್ತೆಗೆ ಮರಳಿದ.

ಜುಲೈ ತಿಂಗಳಲ್ಲಿ ವಿನಯೇಂದ್ರ ಮತ್ತೊಮ್ಮೆ ಬೊಂಬಾಯಿಗೆ ಹೋದ. ಈ ಬಾರಿ ಅವನು "ಸೀ ವ್ಯೂ" ಹೋಟೆಲ್‌ನಲ್ಲಿ ಉಳಿದುಕೊಂಡ. ಇಲ್ಲಿಯೂ ಅವನು ತಾರನಾಥನ ವಿಳಾಸವನ್ನೇ ಕೊಟ್ಟಿದ್ದ. ಬೊಂಬಾಯಿಗೆ ಬಂದೊಡನೆ ಬಾಯೇಂದ್ರ ಪ್ಲೇಗ್ ತಳಿಯನ್ನು ಹೊಂದಲು ಬಹಳಷ್ಟು ಸಾಹಸ ನಡೆಸಿದ. ಹಾಫ್‌ಕಿನ್ ಇನ್‌ಸ್ಟಿಟ್ಯೂಟ್ ಸೇರಿದ ಇಬ್ಬರು ವೆಟರ್ನರಿ ಸರ್ಜನ್ನರನ್ನು ಭೇಟಿಯಾಗಿ ಅವರಿಗೆ ಲಂಚದಾಸೆಯನ್ನೂ ತೋರಿಸಿ ತನ್ನ ಕಾರ್ಯ ಸಾಧಿಸಿಕೊಳ್ಳಲು ಪ್ರಯತ್ನಿಸಿದ. ಆದರೆ ಇದರಲ್ಲಿಯೂ ಅವನು ವಿಫಲನಾದ. ಅಂತು ಕಡೆಗೆ ಅವರೊಲ್ಲಬ್ಬರಿಂದ ಆರ್ಥರ್ ರೋಡ್‌ನಲ್ಲಿರುವ ಇನ್‌ಫೆಕ್ಷಿಯಸ್ ಡಿಸೀಸಸ್ ಹಾಸ್ಪಿಟಲಿನಿಂದ ಪ್ಲೇಗ್ ತಳಿಯನ್ನು ಹೊಂದಬಹುದು ಎಂಬ ವಿಚಾರ ಅವನ ಕಿವಿಗೆ ಬಿತ್ತು.

ತತ್‌ಕ್ಷಣವೇ ವಿನಯೇಂದ್ರ ಆರ್ಥರ್ ರೋಡ್ ಇನ್‌ಸ್ಟಿಟ್ಯೂಟ್‌ನ ಡಾ. ಪಟೇಲರನ್ನು ಕಂಡು ಅವರ ಪ್ರಯೋಗಾಲಯದಲ್ಲಿ ತನ್ನ ಮಿತ್ರನಿಗೆ ಕೆಲಸ ಮಾಡಲು ಅವಕಾಶವೀಯಬೇಕೆಂದು ಕೋರಿದ. ಅವನನ್ನು ನಂಬಿದ ಡಾ. ಪಟೇಲರು ತಮ್ಮ ಅಸಿಸ್ಟೆಂಟ್ ಡಾ ಮೆಹ್ತಾಗೆ ತಾರನಾಥನನ್ನು ಪರಿಚಯ ಮಾಡಿಸಿ ಅವನ ಪ್ರಯೋಗಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಡಲು ಹೇಳಿದರು. ಅನಂತರ ಹಾಫ್‌ಕಿನ್ ಇನ್‌ಸ್ಟಿಟ್ಯೂಟ್‌ನಿಂದ ಒಂದು ಟ್ಯೂಬ್ ತುಂಬಾ ಪ್ಲೇಗ್ ತಳಿಯನ್ನು ಡಾ. ಪಟೇಲರು ತರಿಸಿಕೊಟ್ಟರು. ಜುಲೈ-ಏಳಕ್ಕೆಸ್ಟೇ ಬೊಂಬಾಯಿಗೆ ಬಂದ ತಾರಾನಾಥ ಬಂದ ಐದೇ ದಿನಗಳಲ್ಲಿ ಕಲ್ಕತ್ತೆಗೆ ವಾಪಾಸಾದ. ಡಾ. ಪಟೇಲರ ಪ್ರಯೋಗ ಶಾಲೆಯಲ್ಲಿ ಇಲಿಯೊಂದರ ಮೇಲೆ ಅವರು ನಡೆಸುತ್ತಿದ್ದ ಪ್ರಯೋಗವಿನ್ನೂ ಪೂರ್ಣವಾಗಿಯೇ ಇರಲಿಲ್ಲ. ಆದಕ್ಕೆ ಅವನು ಕಲ್ಕತ್ತೆಯಲ್ಲಿ ತನಗೆ ಅತಿ ಮುಖ್ಯವಾದ ಕೆಲಸವಿರುವುದರಿಂದ ತಾನು ಹೋಗಲೇ ಬೇಕೆಂದು ಆದರೆ ತಾನು ಬೇಗನೆ ಹಿಂದಿರುಗುವುದಾಗಿ ಡಾ. ಮೆಹ್ತಾಗೆ ಸಮಾಧಾನ ಹೇಳಿ ಹೊರಟು ಬಿಟ್ಟ. ಅನಂತರ ತಾರಾನಾಥನಾಗಲಿ ವಿನಯೇಂದ್ರನಾಗಲೀ ಬೊಂಬಾಯಿಗೆ ಹೋಗಲಿಲ್ಲವೆಂದು ಹೇಳಬೇಕಾಗಿಯೇ ಇಲ್ಲ. ಇಂತು ಪಡೆದ ಪ್ಲೇಗ್ ತಳಿಯನ್ನೇ ಅಮರ್‌ನ ಬಲತೋಳಿಗೆ ಚುಚ್ಚಿ, ಅವನನ್ನು ಕೊಂದರೆಂಬ ಆಪಾದನೆಯ ಮೇಲೆ ಬಾಯೇಂದ್ರ ಮತ್ತು ತಾರಾನಾಥನನ್ನು ಬಂಧಿಸಿ ಕೋರ್ಟಿನೆದುರು ಪೋಲಿಸರು ನಿಲ್ಲಿಸಿದರು.

ಈ ಕೌತುಕಮಯ ಕೊಲೆಯ ಮೊಕದ್ದಮೆ ಸಹಜವಾಗಿಯೇ ಎಲ್ಲರನ್ನೂ ಆಕರ್ಷಿಸಿತು. ನ್ಯಾಯ ಮೂರ್ತಿ ಲಾರ್ಟ್‌ವಿಲಿಯಂ ಮತ್ತು ನ್ಯಾಯಮೂರ್ತಿ ನಸೀಮ್ ಆಲಿಯವರ ಸನ್ನಿಧಿಯಲ್ಲಿ ಈ ಬಗ್ಗೆ

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು-4

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು

ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ

ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ, ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್.

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :

ಬೆಂಗಳೂರು, ಮಂಗಳೂರು ಮತ್ತು ಮೈಸೂರು

NAVAYUGA 5-8-1971

Registered with the Registrar
of News Papers for India
under No R. N. 3546/'67

REGD. No B. G. 176
LICENCE No. 33
Licensed to Post without Prepayment

ವಾದ ವಿವಾದಗಳು ಬಿರುಸಾಗಿ ನಡೆಯಿತು. ಕೊನೆಗೆ ಅಮರ್‌ನ ಸಾವು ಆಕಸ್ಮಿಕವಲ್ಲವೆಂದೂ ಅವನನ್ನು ವಿನಯೇಂದ್ರ ಮತ್ತು ತಾರಾನಾಥ ಉದ್ದೇಶಪೂರ್ವಕವಾಗಿಯೇ ಕೊಲ್ಲಿಸಿದರೆಂದೂ ಖಚಿತವಾಯ್ತು. ಇದಕ್ಕೆ ಪೋಲಿಸ್ ಖಾತೆ ಸಂಗ್ರಹಿಸಿದ್ದ ಮಾಹಿತಿಗಳೂ ಪುಷ್ಟಿ ನೀಡಿದವು. ಇದರ ಪ್ರಕಾರ–

1896ರಿಂದ ಮೊದಲುಗೊಂಡು ಇಡೀ ಹಿಂದೂಸ್ಥಾನದಲ್ಲಿಯೇ ಬೊಂಬಾಯಿಯಲ್ಲಿರುವ ಹಾಫ್‌ಕಿನ್ ಇನ್‌ಸ್ಟಿಟ್ಯೂಟ್ ಒಂದೇ ಪ್ಲೇಗ್ ರೋಗದ ಬಗೆಗೆ ಮತ್ತು ಅದರ ನಿವಾರಣಾ ಚುಚ್ಚುಮದ್ದಿನ ಬಗ್ಗೆ ಸಂಶೋಧನಾ ಕಾರ್ಯಗಳನ್ನು ನಡೆಸುತ್ತಿರುವುದು.

ಈ ಇನ್‌ಸ್ಟಿಟ್ಯೂಟ್ ಸರಿಯಾದ ಆಧಾರಗಳ ಮೇಲೆ ಸರ್ಕಾರಕ್ಕೆ ಸಂಬಂಧಿಸಿದ ಸಂಶೋಧನಾ ಕೇಂದ್ರಗಳಿಗೆ ಪ್ರಾಯೋಗಿಕ ಕೆಲಸಕ್ಕಾಗಿ ಪ್ಲೇಗ್ ತಳಿಯನ್ನು ಕಳುಹುತ್ತದೆ. ಅಲ್ಲದೆ ಈ ಇನ್‌ಸ್ಟಿಟ್ಯೂಟ್ ಯಾವುದೇ ಕಾರಣಕ್ಕಾಗಿ ಪ್ರತ್ಯೇಕ ಸಂಸ್ಥೆಯಾ ವ್ಯಕ್ತಿಗಳಿಗೇ ಆಗಲಿ ಪ್ಲೇಗ್ ತಳಿಯನ್ನು ಕಳುಹುವುದಿಲ್ಲ. 1932ರಲ್ಲಿ ಈ ಇನ್‌ಸ್ಟಿಟ್ಯೂಟ್ ಡಾ. ಲುಕಿಲ್ಲರಿಗೆ ಪ್ಲೇಗ್ ತಳಿಯನ್ನು ಕಳುಹಿತ್ತು. ತಾರಾನಾಥನ ಅಜಾಗರೂಕತೆಯಿಂದ ಆ ತಳಿ ನಾಶವಾಯ್ತು. ಅಪರಾಧಿ ತಾರಾನಾಥನಿಗೆ ಕಲ್ಕತ್ತೆಯಲ್ಲಿ ಪ್ಲೇಗ್ ತಳಿಯನ್ನು ಪಡೆಯುವುದು ಕನಸಿನ ಮಾತಾಗಿದ್ದುದರಿಂದ ಅದಕ್ಕಾಗಿ ಅವನಿಗೆ ಬೊಂಬಾಯಿಗೇ ಶರಣು ಹೋಗದೆ ವಿಧಿಯಿರಲಿಲ್ಲ. ಬೊಂಬಾಯಿಗೆ ತೆರಳಿದ ಮೇಲೆ ತಾರಾನಾಥ ವಿನಯೇಂದ್ರನ ಮೂಲಕ ಡಾ. ಪಟೇಲರ ಬಳಿ ಜೀವಂತ ಪ್ಲೇಗ್ ತಳಿಗಳ ಮೇಲೆ ಪ್ರಯೋಗ ನಡೆಸುವ ಅವಕಾಶವನ್ನು ಕಲ್ಪಿಸಿಕೊಂಡ.

ಇಲ್ಲಿ ಅವನೇ ಸ್ವತಃ ಪ್ರಯೋಗ ನಡೆಸುತ್ತಿದ್ದುದರಿಂದ ಅನ್ಯರ ಕಣ್ಣಿಗೆ ಗೋಚರಿಸದಂತೆ ಸ್ವಲ್ಪ ಪ್ಲೇಗ್ ತಳಿಯನ್ನು ತನ್ನೊಂದಿಗೆ ಕಲ್ಕತ್ತೆಗೆ ಕದ್ದೊಯ್ಯುವ ಸಾಧ್ಯತೆ ಇದೆ. ಅಲ್ಲದೆ ಜುಲೈ ತಿಂಗಳಲ್ಲಿ ಪಡೆಯಲಾದ ಪ್ಲೇಗ್ ತಳಿ ನವೆಂಬರ್ ತಿಂಗಳವರೆಗೆ ಜೀವಂತವಾಗಿರ ಬಲ್ಲವು. ಆದುದರಿಂದ ಈ ರೀತಿ ಕದ್ದು ತಂದ ಪ್ಲೇಗ್ ತಳಿಯನ್ನು ಹೌರಾ ನಿಲ್ದಾಣದಲ್ಲಿ ಅನಾಮಧೇಯ ವ್ಯಕ್ತಿಯೊಬ್ಬನ ಮೂಲಕ ಅಮರೇಂದ್ರನ ದೇಹದೊಳಕ್ಕೆ ಚುಚ್ಚಿ ಅವನನ್ನು ತಾರಾನಾಥ ಮತ್ತು ವಿನಯೇಂದ್ರ ಕೊಂದುದು ನಿಚ್ಚಳವಾಯ್ತು. ಆಪಾದಿತರಿಗೆ ನ್ಯಾಯಪೀಠ ಮರಣದಂಡನೆಯನ್ನು ವಿಧಿಸಿತು. ಆದರೂ ಯಾವ ಜನ್ಮದ ಪುಣ್ಯವೋ ಏನೋ ಸಾವಧಾನಕ್ಕೆ ಹೆಸರಾದ ಹೈಕೋರ್ಟಿನ ತೀರ್ಪಿನ ವ್ಯವಧಾನದಿಂದಾಗಿ ಗಲ್ಲುಗಂಬವೇರಬೇಕಾಗಿದ್ದ ವಿನಯೇಂದ್ರ ಮತ್ತು ತಾರಾನಾಥ ಉಳಿದುಕೊಂಡರು.

1936ರ ಜನವರಿಯವರೆಗೆ ಅಂದರೆ ಸುಮಾರು ಒಂದು ವರುಷದವರೆಗೆ ಹೈಕೋರ್ಟು ಈ ಬಗ್ಗೆ ತನ್ನ ಅಂತಿಮ ತೀರ್ಪನ್ನು ಕೊಡಲಿಲ್ಲ ಆಪಾದಿತರು ಹೈಕೋರ್ಟಿನ ಈ ಕಟ್ಟಕಡೆಯ ತೀರ್ಪಿಗಾಗಿ ಮರಣದಂಡನೆಯನ್ನು ಹೊತ್ತು ಸೆರೆಮನೆಯಲ್ಲಿ 10 ತಿಂಗಳು ಕಾದು ಕೂರಬೇಕಾಯ್ತು. ಕೊನೆಗೆ ಹೈಕೋರ್ಟಿನ ಈ ಅಕಾರಣ ವ್ಯವಧಾನದಿಂದಾಗಿ ಅಪರಾಧಿಗಳಿಗೆ ಮರಣದಂಡನೆಗೆ ಬದಲಾಗಿ ಜೀವಾವಧಿ ಶಿಕ್ಷೆ ವಿಧಿಸಬೇಕಾಯ್ತು. ನ್ಯಾಯಾಲಯ ತನ್ನ ತೀರ್ಪಿನ ತಿದ್ದುಪಡಿಗೆ ಈ ರೀತಿ ಸಮಧಾನವಿತ್ತಿತು.

'ಇದು ಕೊಲೆಯೆಂಬುದರ ಬಗ್ಗೆ ಯಾವ ಸಂಶಯವೂ ಇಲ್ಲ. ಆದರೆ ಈ ಕೊಲೆ ಕೇವಲ ಸಂದರ್ಭ ಸಾಕ್ಷಿಗಳನ್ನೇ ಆದರಿಸಿರುವುದರಿಂದಲೂ ಮತ್ತು ನಿಜವಾದ ಕೊಲೆಗಾರನ ಶೋಧನೆ ಸುಲಭವಾಗಲಿ ಎಂಬ ಉದ್ದೇಶದಿಂದ ಆಪಾದಿತರಿಗೆ ಮರಣದಂಡನೆಯನ್ನು ರದ್ದುಗೊಳಿಸಿ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ.'

ಆದರೆ ನ್ಯಾಯಾಲಯದ ಈ ಆಸೆ ನೆರವೇರಲೇ ಇಲ್ಲ. ಆ ವ್ಯಕ್ತಿ ಕಂಡರೆ ಈಗಲೂ ತಾವು ಗುರುತಿಸಬಲ್ಲೆವು ಎಂದು ಹೇಳುವ ಜನರಿಗೇನು ಕೊರತೆಯಿರಲಿಲ್ಲ. ಆದರೆ ಆ ಹೋಲಿಕೆ ಬಹುಶಃ ಬಂಗಾಲದ ಮುಕ್ಕಾಲಂಶದಷ್ಟು ಜನರಿಗೂ ಹೊಂದುವುದರಿಂದಲೋ ಅಥವಾ ಆ ವ್ಯಕ್ತಿ ಮತ್ತೆ ಬರಲೇ ಇಲ್ಲವೋ ಅಂತು ಅಮರನ ಸಾವಿಗೆ ಕಾರಣನಾದ ಆ ಖಾದಿಯುಡುಗೆ ಕುಳ್ಳಗಿನ ಕಪ್ಪುವ್ಯಕ್ತಿ ನ್ಯಾಯ ತಕ್ಕಡಿಯ ಹೊರಗೇ ಉಳಿದು ಹೋದ.

●●

ಭಿನ್ನ ಮತವಲ್ಲ, ಹುಸಿ ಕಾಳಗ

(ಒಂದನೇ ಪುಟದಿಂದ)

ಲ್ಲೇ ಇದೆ. ಅಲ್ಲಿಯೂ ಯುವಕರು ರಾಜ್ಯಕೀಯದಲ್ಲಿ ಅಭಿರುಚಿ ತೋರಿಸುವವರಿದ್ದಾರೆ. ಆದರೆ, ರಾಜ್ಯಕೀಯವೇ ಅವರ ಸರ್ವಸ್ವವಾಗಿ ಪರಿಣಮಿಸಿಲ್ಲ. ನಮ್ಮ ದೇಶದ ಪರಿಸ್ಥಿತಿ ಸಂಪೂರ್ಣ ಭಿನ್ನ. ನಮ್ಮಲ್ಲಿನ ಯುವಕರನ್ನೂ ಕಿರಿಯರನ್ನೂ 'ಹಿರಿಯ ರಾಜ್ಯಕಾರಣಿಗಳೇ ತಮ್ಮೆಡೆಗೆಳೆಯುತ್ತಾರೆ. ಮಹಾತ್ಮಾ ಗಾಂಧಿಯವರು ವಿದೇಶೀಯ ಸರಕಾರದ ವಿರುದ್ಧ ಕೈಕೊಂಡ ತಂತ್ರಗಳನ್ನೆಲ್ಲ ನಾವು ಸ್ವದೇಶೀಯ ಸರಕಾರದ ವಿರುದ್ಧವಾಗಿಯೇ ಬಳಸಿಕೊಳ್ಳಲು ಹಿಂಜರಿಯುತ್ತಿಲ್ಲ. ಯುವಜನರಲ್ಲಿನ ನಿರುದ್ಯೋಗ-ಅಲ್ಪೋದ್ಯೋಗಗಳಿಗೆ ನಾವು ಉತ್ತರ ಹುಡುಕಲು ಹಿಂಜರಿದಂತೆ ಅಸಮಾಧಾನ ಅಸಂತೃಪ್ತಿಯ ತಾಂಡವದಿಂದ ದೇಶ ಜರ್ಜರಿತವಾಗುತ್ತದೆ ರಾಜ್ಯಕೀಯ ಪದಗಳಲ್ಲಿನ ಪ್ರಲೋಭನಗಳನ್ನು ಕಿತ್ತು ಹಾಕಿದರೆ, ಆಗ ಅತ್ತ ಆಕರ್ಷಣೆ ಕಡಮೆಯಾಗುತ್ತದೆ ಆದರೆ, ನಿರುದ್ಯೋಗಿಗಳ ಒಲವೆತ್ತ ಹರಿಯಬೇಕು?

●●

ಜೀವನ ಸೂತ್ರ

ಜಾರ್ಜ್ ವಾಶಿಂಗ್ಟನ್‌ನ ಖಾಸಗೀ ಗ್ರಂಥಾಲಯದಲ್ಲಿ ಒಳ್ಳೆಯ ನಡವಳಿಕೆಗಳ ಒಂದು ಕರಡು ಗ್ರಂಥ ಇದ್ದಿತು ಈ ನಡವಳಿಕೆಗಳನ್ನು ಅವನು ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಿಯೇ ನಕಲು ಮಾಡಿಕೊಂಡಿದ್ದನು.

*ನಾಲ್ಕು ಜನರ ಸಮೂಹದಲ್ಲಿ ನಾವು ಏನನ್ನೇ ಮಾಡಿದರೂ, ಅದನ್ನು ಅಲ್ಲಿದ್ದವರಿಗೆ ಗೌರವ ಕೊಟ್ಟು ಮಾಡಬೇಕು.

*ಸಮೂಹದಲ್ಲಿರುವಾಗ ಜನರಿಗೆ ಕಾಣಬಾರದೆನ್ನುವ ಶರೀರದ ಯಾವುದೇ ಭಾಗವನ್ನು ತೋರಿಸಬಾರದು.

*ತೀರ ಗಂಭೀರ ಪ್ರಸಂಗವೊಂದನ್ನು ಬಿಟ್ಟು ಇನ್ನುಳಿದ ಎಲ್ಲ ಪ್ರಸಂಗಗಳಲ್ಲಿಯೂ ನಾವು ಮಧುರ ಮುಖಭಾವವನ್ನು ಹೊಂದಿರಬೇಕು.

*ವ್ಯವಹಾರದ ಮಾತುಗಳು ಯಾವಾಗಲೂ ನೇರವಾಗಿ ಸಂಕ್ಷಿಪ್ತವಾಗಿರಬೇಕು.

*ತನ್ನ ವಿಶಿಷ್ಟರಂಗದಲ್ಲಿ ಪ್ರವೀಣನೆನಿಸಿದ ಮನುಷ್ಯನಿಗೆ ನಾವು ಕಲಿಸಲು ಹೋಗಬಾರದು. ಅದು ಅಹಂಕಾರವೆನಿಸುತ್ತದೆ.

*ನಮ್ಮ ಪ್ರತೀತಿಯ ಬಗೆಗೆ ನಮಗೇನಾದರೂ ಗೌರವವಿದ್ದರೆ ನಾವು ಒಳ್ಳೆಯವರೆನ್ನುವ ಜನರ ಸಹವಾಸ ಮಾಡಬೇಕು. ಕೆಟ್ಟ ಸಹವಾಸ ಮಾಡುವುದಕ್ಕಿಂತಲೂ ಒಬ್ಬಂಟಿಯಾಗಿರುವುದು ಲೇಸು.

*ನಮ್ಮ ಕೆಳಗಿನ ಜನರೆದುರು ಅಲ್ಲವಾದುದನ್ನು ಆಡಬಾರದು.

*ಒಂದು ರಹಸ್ಯವನ್ನು ಬಯಲಿಗೆಳೆಯಬೇಕೆಂದು ಸ್ನೇಹಿತರೊಂದಿಗೆ ಅನಾದರ ಭಾವನೆಯಿಂದ ನಡೆದುಕೊಳ್ಳುವುದು ಸರಿಯಲ್ಲ.

*ಕೇಳದೇ ಉಪದೇಶ ಹೇಳುವುದಕ್ಕೆ ಹೋಗಬಾರದು, ಕೇಳಿದಾಗಲೂ ಕೂಡ ಅದನ್ನು ಅತ್ಯಲ್ಪ ಕೊಡಬೇಕು.

*ಇನ್ನೊಬ್ಬರ ವ್ಯವಹಾರದ ಬಗೆಗೆ ಕುತೂಹಲ ತೋರಿಸಬಾರದು; ರಹಸ್ಯದಲ್ಲಿ ಮಾತನಾಡಬೇಕೆನ್ನುವವರ ಸಮೀಪ ನಾವು ಸುಳಿಯಲೇ ಬಾರದು.

*ನಮ್ಮ ಕೈಯಿಂದ ಆಗದೇ ಇದ್ದುದನ್ನು ಮಾಡಲು ನಾವು ಕೈ ಹಚ್ಚಬಾರದು; ಆದರೆ, ನಾವು ನೀಡಿದ ಭರವಸೆಯನ್ನು ಪೂರೈಸಿಕೊಡಲು ನಾವು ಎಂದೂ ತಪ್ಪಬಾರದು.

*ನಮ್ಮ ಎದುರು ಇಲ್ಲದವರ ಬಗೆಗೆ ಅಲ್ಲವಾದುದನ್ನು ಆಡುವುದು ಸರಿಯಲ್ಲ; ಅದು ಅನ್ಯಾಯವೆನಿಸುತ್ತದೆ

*ನಮ್ಮ ಹೃದಯದಲ್ಲಿ, ದೇವರ ಬೆಳಕೆಂದು ಯಾವುದನ್ನು ಹೇಳುತ್ತಾರೆಯೋ ಆ ಅಂತರಾತ್ಮನನ್ನು, ಜೀವಂತವಾಗಿ ಇರಿಸಿಕೊಳ್ಳಲು ನಾವು ಸದಾ ಶ್ರಮಿಸಬೇಕು

—(ಪ್ರ)

●●

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ರಾಜ್ಯದ ಹೈಸ್ಕೂಲುಗಳಿಗೆ

ನವಯುಗ

ಮೈಸೂರು ರಾಜ್ಯದ ಡಿ. ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17–4/65–66ರ ಪತ್ರದಂತೆ ತರಿಸಿಕೊಳ್ಳಲು ಸಿಫಾರಸು ಮಾಡಿದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

2 ವಿಶೇಷ ಸಂಚಿಕೆ ಸಹಿತ ವಾರ್ಷಿಕ ಚಂದಾ ರೂ. 10/– ಮಾತ್ರ.

ಮೆನೇಜರ್, ನವಯುಗ, ಉಡುಪಿ.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi. S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 48

NAVAYUGA

12—8—1971

ಅಶಿಸ್ತು ಮತ್ತು ಆತ್ಮಸಾಕ್ಷಿ

ತನಗೆ ಬೇಡವಾದ ವ್ಯಕ್ತಿಯನ್ನು ತಾನೂ ಸೇರಿದ್ದ ಕಾಂಗ್ರೆಸ್ಸಿನ ಹೈಕಮಾಂಡು ರಾಷ್ಟ್ರಪತಿ ಹುದ್ದೆಗೆ ಪಕ್ಷದ ಅಭ್ಯರ್ಥಿಯೆಂದು ಆಯ್ಕೆ ಮಾಡಿದಾಗ, ಆತ್ಮ ಸಾಕ್ಷಿಯ ಹೆಸರೆತ್ತಿ ಆ ಅಭ್ಯರ್ಥಿಯನ್ನು ಸೋಲಿಸಿದ ಪ್ರಧಾನಿ ಗಾಂಧಿಯವರು ಸಂಸತ್ತಿನಲ್ಲಿ ಆತ್ಮಸಾಕ್ಷಿಯನ್ನು ಬೆಂಬಲಿಸಲು ಸಿದ್ಧರಿಲ್ಲ. ಸದ್ಯೋ ಭವಿಷ್ಯದಲ್ಲಿ ಆಕೆ ತುಂಬಿ ತುಳುಕುವ ಬಹುಮತ ಪಡೆದಿದ್ದಾರೆ; ಇದರ ಬಲದಿಂದ ಆಕೆ ಸಂವಿಧಾನ ತಿದ್ದಲು ಬದ್ಧಕಂಕಣರಾಗಿದ್ದಾರೆ. ಸಂಸತ್ತಿನಲ್ಲಿ ತನ್ನ ಪಕ್ಷದ ಸದಸ್ಯರೆಲ್ಲರೂ ತಿದ್ದುಪಡಿ ಮಂಡನೆಯ ವೇಳೆ ಹಾಜರಿರಲೇ ಬೇಕೆಂದು ಕಟಪ್ಪಣೆಮಾಡಿದ್ದಾರೆ. ಮುಂದೆ, ಮತದಾನದ ವೇಳೆಯೂ ಇಂತಹುದೇ ಆಜ್ಞೆಯನ್ನು ಹೊರಡಿಸುತ್ತಾರೆ. ಸಂಸತ್ ಸದಸ್ಯರು ಆಕೆಯ ಆಜ್ಞೆಗಳನ್ನು ಶಿರಸಾವಹಿಸುತ್ತಾರೆ. ಇಲ್ಲಿ ಆತ್ಮ ಸಾಕ್ಷಿಗೆ ಯಾವ ಸ್ಥಾನವೂ ಇಲ್ಲ ಮಾನವೂ ಇಲ್ಲ. ಅದೋ ಸತ್ತು ಹೋಗಿರುತ್ತದೆ. ಯಾವನಾದರೂ ಆ ದೇಶವನ್ನು ಮೀರಿ ನಡೆದರೆ, ಆತನ ಮೇಲೆ ಶಿಸ್ತುಗೇಡಿತನದ ಆರೋಪ ಹೊರಿಸಲಾಗುತ್ತದೆ. ಹಾಗಾದರೆ, ಆತ್ಮಸಾಕ್ಷಿ— ಅಶಿಸ್ತುಗಳ ಪರಿಭಾಷೆಯೇನು? ಆತ್ಮಸಾಕ್ಷಿಯೆಂದರೆ ಅಶಿಸ್ತು; ಅಶಿಸ್ತು ಅಂದರೆ ಆತ್ಮಸಾಕ್ಷಿಯೆ?

ಮಿಲಿಟರಿಯಲ್ಲಿ ಆತ್ಮ ಸಾಕ್ಷಿಗಾಗಲೀ ಅಶಿಸ್ತಿಗಾಗಲೀ ಸ್ಥಾನವೇ ಇಲ್ಲ. ಯಾವನೊಬ್ಬನಾದರೂ ತನ್ನ ಆತ್ಮಸಾಕ್ಷಿಯಂತೆ ನಡೆದರೆ, ಅದು ಅಶಿಸ್ತೆನಿಸುವುದು; ಅದರ ದಂಡವನ್ನವನು ತೆರಲೇ ಬೇಕಾಗುವುದು. ಅಧಿಕಾರಿ ನೀಡಿದ ಆಜ್ಞೆಯನ್ನು ಶಿರಸಾವಹಿಸುವುದಷ್ಟೆ ಇತರರ ಕರ್ತವ್ಯ. ಆಜ್ಞೆಯ ಯುಕ್ತಾಯುಕ್ತತೆಗಳನ್ನು ವಿವೇಚಿಸುವ ಅವಕಾಶವೇ ಅವನಿಗಿರುವುದಿಲ್ಲ. ಈ ಬಿಗಿತವೊಂದು ವೇಳೆ ಸೈನ್ಯದಲ್ಲಿಲ್ಲದೆ ಹೋದರೆ, ಸಂರಕ್ಷಣೆಯೂ ಅಸಾಧ್ಯವಾಗುತ್ತದೆ; ಸೈನ್ಯವೂ ಒಡೆದು ಹೋಳುಗಳಾಗುವ ಸಾಧ್ಯತೆ ಮೂಡುತ್ತದೆ. ಸಾಮಾನ್ಯವಾಗಿ ಯಾವುದೇ ಸಂಘ—ಸಂಸ್ಥೆಗಳಲ್ಲೂ ಆತ್ಮಸಾಕ್ಷಿಗಿಂತ ಶಿಸ್ತಿಗೇ ಅಗ್ರ ಮಾನ್ಯ ಸ್ಥಾನಮಾನವಿದೆ. ಇವನ್ನು ಪಾಲಿಸದೆ ಹೋದರೆ, ತನ್ನ ಸ್ಥಾನಕ್ಕೆ ಎರವಾಗುವ ಭೀತಿಯೂ ಇದೆ.

ರಾಜ್ಯಕೀಯ ಪಕ್ಷಗಳಲ್ಲೂ ಇಂತಹ ಶಿಸ್ತು ಬೇಕೆ? ಕಮ್ಯುನಿಜಂ ದೇಶಗಳು ನಡೆದು ಬಂದ ದಾರಿ ಬೇಕೆಂದು ಸಾರುತ್ತದೆ. ಅಲ್ಲಿ ಅಧಿಕಾರಾರೂಢವಾದ ಕಮ್ಯುನಿಸ್ಟ ಪಕ್ಷದ ಕಛೇರಿಯೇ ನಿಜವಾದ ಆಡಳಿತ ನಡೆಸುತ್ತದೆಂದು ಧಾರಾಳವಾಗಿ ಹೇಳ ಬಹುದು. ಪಕ್ಷವೇ ಮಂತ್ರಿ– ರಾಷ್ಟ್ರಪತಿಗಳನ್ನು ಆರಿಸುತ್ತದೆ. ಯಾರನ್ನಾದರೂ ಎತ್ತುವುದಕ್ಕೂ ಇಳಿಸುವುದಕ್ಕೂ ಅಲ್ಲಿ ಪಕ್ಷ ಸಶಕ್ತವಾಗಿದೆ. ಪಕ್ಷ— ಸರಕಾರಗಳಲ್ಲಿ ಅಭೇದವಿರುವುದರಿಂದಲೇ ಕೆಂಪು ಚೀನಾದಲ್ಲಿ ಮಾವೊ–ಲಾಯ್ ಇನ್ನೂ ಉಳಿದುಕೊಂಡಿದ್ದಾರೆ; ಸೋವಿಯತ್ತಿನಲ್ಲಿ ಇದೇ ಅವಧಿಯಲ್ಲಿ ನಾಲ್ಕಾರು ತಲೆಗಳುರುಳಿದುವು. ಪಕ್ಷದ ಮೇಲೆ ಯಾರ ಹತೋಟಿಯಿದೆಯೋ ಅವರು ಇತರರನ್ನು ಮೆಟ್ಟಿ ಎದ್ದು ನಿಲ್ಲುತ್ತಾರೆ.

ಆದರೆ, ಪ್ರಜಾಪ್ರಭುತ್ವದಲ್ಲಿ ವಿಚಾರ–ಅಭಿಪ್ರಾಯ ಸ್ವಾತಂತ್ರ್ಯಕೆ ಇದುವರೆಗೆ ಮನ್ನಣೆ ಇದೆ. ವ್ಯಕ್ತಿ ಸ್ವಾತಂತ್ರ್ಯಕ್ಕೂ ಅವಕಾಶವುಳಿದಿದೆ. ರಾಜ್ಯಕೀಯ ಪಕ್ಷಗಳಲ್ಲಿ ಅಶಿಸ್ತು–ಆತ್ಮ ಸಾಕ್ಷಿಗಳಿಗೇನು ಅರ್ಥ? ಶ್ರೀಮತಿ ಇಂದಿರಾಗಾಂಧಿಯವರು ರಾಷ್ಟ್ರಪತಿ ಆಯ್ಕೆಯ ವೇಳೆ 'ಯಾರಿಗೆ ಬೇಕಾದರೂ ಓಟು ಹಾಕಿ' ಚಳುವಳಿಗೆ ಕಾಂಗ್ರೆಸ್ಸಿನಲ್ಲಿ ನಾಂದಿ ಹಾಕಿದರು. ಸಂಸತ್ ಸದಸ್ಯರಿಗೆ ಪಕ್ಷದ ಅಭ್ಯರ್ಥಿಗೇ ಮತನೀಡಬೇಕೆಂದು ಆದೇಶ ನೀಡಲು ನಿರಾಕರಿಸಿದರು—ಇದನ್ನು ಆತ್ಮ ಸಾಕ್ಷಿಯೆಂದು ಕರೆದರು. ಅಂದರೆ, ಪಕ್ಷದ ಆದೇಶವು ತನಗೆ ಒಪ್ಪಿಗೆಯಿದ್ದರೆ ಶಿರಸಾವಹಿಸುವುದು; ಇಲ್ಲವಾದರೆ ನಿರಾಕರಿಸುವುದು–ತನಗಿಷ್ಟ ಬಂದಂತೆ ನಡೆದುಕೊಳ್ಳುವುದು ಆತ್ಮಸಾಕ್ಷಿ. ಇಂತಹ 'ಆತ್ಮಸಾಕ್ಷಿ' ಕಮ್ಯುನಿಜಂ ಎಂದೂ ಸಹಿಸುವುದಿಲ್ಲ.

ಆದರೆ, ಇತ್ತೀಚಿಗೆ ಪ್ರಧಾನಿ ಗಾಂಧಿಯವರಿಗೆ ತನ್ನ ಇಂಡಿಕೇಟಿನಲ್ಲಿ ಅಶಿಸ್ತು ಹೆಚ್ಚುತ್ತಿದೆಯೆನಿಸಹತ್ತಿದೆ. ಈ ಅಶಿಸ್ತಿನ ಬಗ್ಗೆ ಅವರು ತನ್ನ ಅಸಮಾಧಾನವನ್ನೂ, ಕ್ರೋಧವನ್ನೂ ಹಲವಾರು ಬಾರಿ ಹೊರಗೆಡಹಿದ್ದುಂಟು. ಇದು ನಿಷ್ಪ್ರಯೋಜನವಾದ್ದರಿಂದಲೇ ಇರಬೇಕು, ಅವರು ಅಶಿಸ್ತಿನ ವಿರುದ್ಧ ಎಚ್ಚರಿಕೆಯನ್ನೂ ನೀಡಿದ್ದಾರೆ. ರಾಜ್ಯಕೀಯ ಪಕ್ಷಗಳಲ್ಲಿ ಅಶಿಸ್ತು ಅಂದರೇನು? ಪಕ್ಷದ ನೀತಿ ನಿರೂಪಣೆಯಾಗುತ್ತದೆ; ಅದೊಂದು ಗೊತ್ತುವಳಿಯ ರೂಪದಲ್ಲಿ ಸದಸ್ಯ ಸಮುದ್ರದ ಮುಂದೆ ನಿಲ್ಲುತ್ತದೆ. ಧ್ವನಿಮತದಿಂದಲೋ ಮತ್ತಾವುದೇ ವಿಧಾನದಿಂದಲೋ ಅದು ಮಂಜೂರಾಗುತ್ತದೆ. ನೀತಿನಿರೂಪಣೆಯಲ್ಲಿ ಎಲ್ಲ ಸದಸ್ಯರೂ ಪ್ರತ್ಯಕ್ಷ ಭಾಗವಹಿಸುವುದು ಸಾಧ್ಯವೇ ಇಲ್ಲ. ಅಂದರೆ, ಪಕ್ಷದ ಕೆಲವರು ಒಂದುಗೂಡಿ ನೀತಿ ನಿರೂಪಿಸಿ ಅದನ್ನು ಇತರರ ಮುಂದಿಡುತ್ತಾರೆ. ಈ ನೀತಿಯನ್ನು ಟೀಕಿಸುವುದು ಸದಸ್ಯನ ಆತ್ಮ ಸಾಕ್ಷಿಗೆ ಅನುಗುಣವಾಗಿಯೇ ಇರಬಹುದು; ಆದರೆ, ನಿರೂಪಕರಿಗೆ ಅಶಿಸ್ತೆಂದು ಕಂಡು ಬರುತ್ತದೆ.

ಪಕ್ಷಗಳ ಟೀಕೆ—ಟಿಪ್ಪಣಿಗಳೆಲ್ಲವೂ ಪಕ್ಷೀಯ ಸೀಮೆಗೇ ಪರಿಸೀಮಿತವಿರಬೇಕಾಗುತ್ತದೆ. ಆದರೆ, ಇತ್ತೀಚೆಗೆ ಪಕ್ಷದ ಹಿರಿಯರ ವರ್ತನೆಯ ಬಗ್ಗೆ ಪಕ್ಷದ ಹೊರಗಡೆಯೇ ಹೆಚ್ಚು ಟೀಕೆಗಳು ಕೇಳಿ ಬರಹತ್ತಿವೆ. ಪಕ್ಷದ ನೀತಿಯನ್ನು ಸಭೆ–ಸಮ್ಮೇಳನಗಳಲ್ಲಿ ಒಪ್ಪಿ ಹೊರಗೆ ಟೀಕಿಸುತ್ತಿದ್ದವರ ಬಗ್ಗೆ ಪಂ. ನೆಹರುರವರೂ ನೊಂದು ಕಟುವಾಗಿ ಅಂದುಕೊಂಡದ್ದುಂಟು. ಪಕ್ಷದೊಳಗಡೆ ಟೀಕಿಸುವ ಎದೆಗಾರಿಕೆಯಿಲ್ಲ; ಒಂದು ವೇಳೆ ಎದೆಗಾರಿಕೆ ತೋರಿಸಿದರೂ ಅದು ಹರಿಯುವ ನೀರಿಗೆ ಹೊಡೆದಂತಾಗುತ್ತದೆಂದು ಅಲ್ಲಿ ಸುಮ್ಮನುಳಿಯಬಹುದು. ಅಥವಾ ಹಾಗೆ ಟೀಕಿಸುವುದರಿಂದ ಅವರಿವರಿಗೆ ಬೇಸರವಾಗಬಹುದೆಂದು ಸುಮ್ಮನೆ ಕೂಡ ಬಹುದು. ಇದು ಅವರ ಆತ್ಮ ಸಾಕ್ಷಿಗೆ ವಿರೋಧವಾದರೂ ಶಿಸ್ತಿಗೆ ಹೊಂದಿಕೊಳ್ಳುತ್ತದೆ. ಆ ಆತ್ಮಸಾಕ್ಷಿ ಹೊರಗಡೆ ಜಾಗ್ರತವಾಗುತ್ತದೆ.

ಪ್ರಧಾನಿ ಗಾಂಧಿಯವರ ಆತ್ಮಸಾಕ್ಷಿ ಜಾಗರಣೆಯನ್ನೇ ಕಾಂಗ್ರೆಸ್ಸು ಅಶಿಸ್ತೆಂದು ಕರೆದು ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತನದಿಂದಲೂ ಕಿತ್ತು ಹಾಕಲಿಲ್ಲವೆ? ಹಾಗೆಯೇ ಪ್ರಧಾನಿ ಗಾಂಧಿಯ ಬೆಂಬಲಿಗರು ತನುಗಾಗದವರೆಲ್ಲರನ್ನೂ ಕಾಂಗ್ರೆಸ್ಸಿನಿಂದ ಹೊರ ಹಾಕಿದ್ದಾರೆ. ಅಂದರೆ, ಆತ್ಮಸಾಕ್ಷಿ ಮತ್ತು ಶಿಸ್ತುಗಳು ಸಮರಸದಿಂದ ಬಾಳುವುದು ಸಾಧ್ಯವಿಲ್ಲವೆಂಬುದನ್ನು ತುಕುಡಿ ಕಾಂಗ್ರೆಸ್ಸುಗಳು ಸಾರಿ ಹೇಳಿವೆ.

ಹಾಗಾದರೆ, ಆತ್ಮಸಾಕ್ಷಿಗೆ ಬೆಲೆಯಿಲ್ಲವೆಂದರ್ಥವಲ್ಲ; ಶಿಸ್ತಿಗೆ ಅರ್ಥವಿಲ್ಲವೆಂದೂ ಹೇಳುವುದು ನ್ಯಾಯವಲ್ಲ. ಆತ್ಮಸಾಕ್ಷಿ–ಶಿಸ್ತುಗಳು ದಂಪತಿಗಳಂತೆ ಹೊಂದಿಕೊಂಡು ಬಾಳಿದರೇನೇ ರಾಜ್ಯಕೀಯ ಪಕ್ಷಗಳು ಉಳಿಯುತ್ತವೆ. ಅವುಗಳು ತಾಕಲಾಡಿದಾಗ, ಸತ್ತಾರೂಢರು ಆತ್ಮ ಸಾಕ್ಷಿಯನ್ನೂ ಪಕ್ಷಾಧಿಕಾರಿಗಳು ಶಿಸ್ತನ್ನೂ ಅಪ್ಪಿಕೊಂಡಾಗ, ಪಕ್ಷ ಚೂರು ಚೂರಾಗುತ್ತದೆ. ಕಾಂಗ್ರೆಸ್ ವಿಘಟನೆ ತೋರಿಸಿ ಕೊಟ್ಟದ್ದೂ ಇದನ್ನೇ.

ಪಕ್ಷದ ಸದಸ್ಯರ ಟೀಕೆ–ಟಿಪ್ಪಣಿಗಳು ಸ್ವಾಗತಾರ್ಹವೇ. ವಿಚಾರಮಥನ ಹೆಚ್ಚಿದಷ್ಟೂ ಪರಿಪಕ್ವ ನಿರ್ಧಾರಕ್ಕೆ ಬರುವುದು ಸಾಧ್ಯವಾಗುತ್ತದೆ. ನಮ್ಮ ವಿಚಾರಗಳನ್ನು ಪಕ್ಷದೊಳಗಿನ ವೇದಿಕೆಗಳಲ್ಲೇ ಹೊರ ಪಡಿಸುವುದು ಅಗತ್ಯ. ಒಂದೊಮ್ಮೆ ಪಕ್ಷವು ನಿರ್ಧಾರಕ್ಕೆ ಬಂದಿತೆಂದ ಮೇಲೆ ಆ ನಿರ್ಧಾರದ ಮುಂದೆ ತಲೆವಾಗುವುದು ಶಿಸ್ತು. ಆತ್ಮಸಾಕ್ಷಿಯ ಹೆಸರಿನಲ್ಲಿ ಸ್ವಚ್ಛಂದ ಟೀಕೆಯು ಪಕ್ಷದ ಗೌರವಕ್ಕೆ, ಉಳಿವಿಗೆ ಆರೋಗ್ಯಕರ ವಾತಾವರಣ ನಿರ್ಮಿಸುವುದಿಲ್ಲ; ಹಾಗೆಯೇ ಶಿಸ್ತಿನ ಹೆಸರಿನಲ್ಲಿ 'ಸರ್ವಾಧಿಕಾರ' ಪ್ರಯೋಗವೂ ಪ್ರಜಾಸತ್ತೆಗೆ ನೆಮ್ಮದಿ ತರುವುದಿಲ್ಲ.

ಆದರೆ, ಇಂದಿನ ಸ್ಥಿತಿಗತಿಗಳು ಬದಲಾಗಿವೆ. ಪಕ್ಷದ ಹಿರಿಯರಿಗೆದುರು ನಿಲ್ಲುವುದೇ ಆತ್ಮ ಸಾಕ್ಷಿಯೆಂಬ ಭಾವನೆಯನ್ನು ತನಗರಿವಿಲ್ಲದಂತೆಯೇ ಪ್ರಧಾನಿ ಗಾಂಧಿ ಬಿತ್ತಿದ್ದಾರೆ. ತನಗೇ ಈ ಬೀಜ ಮುಳುವಾಗಬಹುದೆಂದವರು ಕನಸಿನಲ್ಲೂ ಭಾವಿಸಿರಲಿಲ್ಲ. ಸರಕಾರದ ಕಾರ್ಯ–ಕಲಾಪಗಳ ಮಂದಗತಿ, ಪ್ರಗತಿ ಪಥದತ್ತ ಆಮೆನಡಿಗೆ, ಬಂಗ್ಲಾ ದೇಶದ ನೀತಿ, ಬೆಲೆಯೇರಿಕೆ ಮೊದಲಾದುವುಗಳ ಬಗ್ಗೆ ಆಕೆ ತೀವ್ರ ಪ್ರತಿರೋಧವನ್ನೆದುರಿಸಬೇಕಾಗಿದೆ. ಶಿಸ್ತಿನ ಹೆಸರಿನಲ್ಲಿ ಅದನ್ನು ಅದುಮುವ ಆಕೆಯ ಪ್ರಯತ್ನ ಕೊಂಚಕಾಲ ಯಶಗಳಿಸಬಹುದು; ಆದರೆ, ಎಲ್ಲ ಕಾಲಕ್ಕೂ ಇದು ಬಂಧನಕಾರಿಯಾಗುವುದು ಸಾಧ್ಯವಿಲ್ಲ. ಶ್ರೀಮತಿ ಗಾಂಧಿಯಂತೆಯೇ ಆತ್ಮ ಶಕ್ತಿಯುಳ್ಳವರು ದೇಶದಲ್ಲಿ ಇನ್ನೂ ನೂರಾರು ಮಂದಿ ಇದ್ದಾರೆ. ಭಾರತಮಾತೆ ಬಂಜೆಯಲ್ಲ; ಬರೇ ಹೆತವೀರ್ಯರ ಜನನಿಯೂ ಅಲ್ಲ. ಕಾಂಗ್ರೆಸ್ 'ಸಿಂಡಿಕೇಟಿನ ವಿರುದ್ಧ ಬಂಡೆದ್ದ ಇಂದಿರಾಗಾಂಧಿಯವರು ತಾನು ಜನತೆಗಿತ್ತ ಭರವಸೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ವಿಳಂಬ ಮಾಡಿದಂತೆ ಅವರಿಗೆ ವಿರೋಧ ಹೆಚ್ಚಾಗುತ್ತದೆ. ಅದನ್ನು ಆತ್ಮಸಾಕ್ಷಿಯ ಬೆಂಕಿಯನ್ನು ಶಿಸ್ತಿನ ಬಟ್ಟೆಯಲ್ಲಿ ಬಹುಕಾಲ ಮುಚ್ಚಿಡುವುದು ಯಾರಿಗೂ ಸಾಧ್ಯವಿಲ್ಲ. ತಾನು ಸೃಷ್ಟಿಸಿದ ಬಸ್ಮಾಸುರ ತನ್ನನ್ನೇ ಸುಡ ಬಂದಾಗ ಸುಡುಗಾಡಿನೊಡೆಯ ಶಿವ ವಿಷ್ಣುವಿನ ಮರೆಹೋಗಬೇಕಾಯಿತಂತೆ. ಬಸ್ಮಾಸುರನ ಪ್ರಸಂಗ ಭಾರತದಲ್ಲಿ ಮತ್ತೊಮ್ಮೆ ಮರುಗೊಳಿಸಬಾರದು. ಅದಕ್ಕಾಗಿ ಇಂಡಿಕೇಟು ಎಚ್ಚರಿಕೆಯಿಂದಿರಬೇಕು.

●●

ಚರಿತ್ರಾರ್ಹ ಮೊಕದ್ದಮೆಗಳು—೧೪

ಆಧುನಿಕ ಅರುಂಧತಿ

ಬರೆದವರು—ಬಿ. ಕೃಷ್ಣ ಭಟ್, ಭದ್ರಾವತಿ.

ಪಂಡಿತ ಶ್ರೀಕಾಂತ ವೃತ್ತಿಯಿಂದ ಪಟವಾರಿ. ಅದು ರೆವೆನ್ಯೂ ಇಲಾಖೆಯಲ್ಲಿ ಒಂದು ಕೆಳ ದರ್ಜೆಯ ಹುದ್ದೆ. 1953ರ ಸುಮಾರಿನಲ್ಲಿ ಆತ ಕುಲ್ಗಾಂನಲ್ಲಿ ಕೆಲಸದಲ್ಲಿದ್ದ. ಕುಲ್ಗಾಂ ಕಾಶ್ಮೀರದಲ್ಲಿದೆ. ಆತ ನೋಡಲು ವಕ್ರ ವಕ್ರ; ಸಾಲದ್ದಕ್ಕೆ ಒಕ್ಕಣ್ಣ. ನೋಡಿದರೆ ಅಸಹ್ಯ ಪಟ್ಟುಕೊಳ್ಳುವ ವೇಷ ಕಟ್ಟು. ಜೊತೆಗೆ ವಯಸ್ಸೂ ಆಗಿತ್ತು. ತೀರಿಕೊಂಡಾಗ ಆತನ ವಯಸ್ಸು 55 ಇರಬಹುದು.

ಅರುಂಧತಿ ಅವನ ಹೆಂಡತಿ. ನೋಡಲು ಚೆಲುವೆ, ಪತಿಗಿಂತ ವಯಸ್ಸಿನಲ್ಲಿ ಎಷ್ಟೋ ಚಿಕ್ಕವಳು. ಸತಿ—ಪತಿಯರೊಳಗೆ 32 ವರ್ಷಗಳ ಅಂತರ. ಹೊರನೋಟಕ್ಕೆ ಗಂಡ-ಹೆಂಡಿರು ಅನ್ಯೋನ್ಯವಾಗಿದ್ದರು. ಅನುಮಾನ ಪಡಲು ಅನುವು ಇರಲಿಲ್ಲ.

ಅವರದು ಚಿಕ್ಕ ಸಂಸಾರ. ದಂಪತಿಗಳಿಗೆ ಮಕ್ಕಳಿರಲಿಲ್ಲ. ಅವರ ಮನೆಯಲ್ಲಿದ್ದವರು ಮೂರು ಮಂದಿ— ಶ್ರೀಕಾಂತ, ಅರುಂಧತಿ, ಆಕೆಯ ತಮ್ಮ ಪ್ರೇಮನಾಥ. ಪ್ರೇಮನಾಥ, ಶ್ರೀಕಾಂತನಿಗೆ, ಅವನ ಕೆಲಸ ಕಾರ್ಯಗಳಲ್ಲಿ ನೆರವಾಗುತಿದ್ದ. ಲೆಖ್ಖ-ಪತ್ರ ನೋಡಿಕೊಳ್ಳುತಿದ್ದ. ನಾಲ್ಕು ವರ್ಷಗಳ ಕಾಲ ಪ್ರೇಮನಾಥ ಅವರ ಮನೆಯಲ್ಲಿದ್ದ. ಶ್ರೀಕಾಂತನಿಗೆ ನೆಂಟನ ಮೇಲೆ ಅನುಮಾನ ಬಂತು. ಲೆಖ್ಖ— ಪತ್ರಗಳಲ್ಲಿ ಹೆಚ್ಚು—ಕಡಿಮೆ ಮಾಡಿ ಒಂದಿಷ್ಟು ಹಣ ತಿಂದು ಹಾಕಿದ್ದು ಕಾಣಿಸಿತು. ಹೆಚ್ಚಿನ ವಿರಸಕ್ಕೆ ಅವಕಾಶ ಕೊಡದೆ ಶ್ರೀಕಾಂತ, ನೆಂಟನನ್ನು ಮನೆಯಿಂದ ಹೊರ ಹಾಕಿದ. ಅದು ನಡೆದುದು 1949ರ ಸುಮಾರಿನಲ್ಲಿ.

ನೆಂಟನ ಸ್ಥಾನದಲ್ಲಿ ಶ್ರೀಕಾಂತ ಬೇರೊಬ್ಬನನ್ನು ಕೆಲಸಕ್ಕೆ ತೆಗೆದು ಕೊಂಡ. ಈ ಹೊಸಬ, ಹೊಸ ಹರೆಯದವ, ಮಾಧ್ಯಮಿಕ ಶಾಲೆಯ ಮೆಟ್ಟಲು ಹತ್ತಿ ಇಳಿದಿದ್ದ. ನೋಡಲು ಸ್ಫುರದ್ರೂಪಿ. ಈ ನೂತನ ನೌಕರನ ಹೆಸರು ಮಹಮ್ಮದ್ ಭಟ್. ಕೆಲಸದ ನಿಮಿತ್ತ ಆತ ಶ್ರೀಕಾಂತನ ಮನೆಗೆ ಬಂದು ಹೋಗಿ ಮಾಡುತಿದ್ದ. ಬರಬರುತ್ತ ಆತ ಹೀಗೆ ಬರುವುದು ಹೆಚ್ಚಿತು. ಶ್ರೀಕಾಂತನಿಲ್ಲದ ಸಮಯದಲ್ಲೂ ಆತ ಬರಲಾರಂಭಿಸಿದ. ಅರುಂಧತಿ— ಮಹಮ್ಮದರೊಳಗೆ ಸಹಜವಾಗಿಯೇ ಸ್ನೇಹ ಬೆಳೆಯಿತು. ಮಹಮ್ಮದನ ಆಗಮನದ ಉದ್ದಿಶ್ಯ ಸ್ಪಷ್ಟವಿದ್ದರೂ, ಶ್ರೀಕಾಂತನನ್ನು ಸಂಶಯ ಬಾಧಿಸಲಿಲ್ಲ.

1953ರ ಎಪ್ರಿಲ್ ತಿಂಗಳ ಮೊದಲ ವಾರದಲ್ಲಿ ಶ್ರೀಕಾಂತ ಮಾವನ ಮನೆಗೆ ಹೊರಟು ಹೋದ. ಆತನ ಮಾವನ ಮನೆ ಕುಲ್ಗಾಂಗೆ ಹತ್ತಿರದ ಹಳ್ಳಿಯಲ್ಲಿತ್ತು. ಆಗ ಅರುಂಧತಿ ಗರ್ಭಿಣಿಯಿದ್ದಳು. ಆದ್ದರಿಂದ ಅವಳನ್ನು ಶ್ರೀಕಾಂತ ತನ್ನ ಜೊತೆ ಕರೆದೊಯ್ಯಲಿಲ್ಲ. ಅವಳು ಮನೆಯಲ್ಲುಳಿದಳು.

9—4—53ರಂದು ಶ್ರೀಕಾಂತ—ಸಂಜೆಯ ಸುಮಾರಿಗೆ—ಮನೆಗೆ ಬಂದ. ಬರುತ್ತಾ ಮಾವನ ಮನೆಯಿಂದ ತಿಂಡಿಯ ಗಂಟನ್ನೂ ಹೊತ್ತು ತಂದ. ತಿಂಡಿ ತರಲು ಇನ್ನೊಂದು ಕಾರಣವೂ ಇತ್ತು. 10-4-53 ರಂದು ಆತ ತನ್ನಿಬ್ಬರು ಸ್ನೇಹಿತರನ್ನು ಮಧ್ಯಾಹ್ನದ ಊಟಕ್ಕೆ ಬರಹೇಳಿದ್ದ. ಶ್ರೀಕಾಂತ ಮನೆಗೆ ಬಂದವನು ತಿಂಡಿಯ ಗಂಟನ್ನು ಹೆಂಡತಿಯ ಕೈಯಲ್ಲಿಟ್ಟು, ನೇರವಾಗಿ ಗುಡಿಗೆ ಹೋದ. ಅಲ್ಲಿ ನಿತ್ಯದ ಪೂಜೆ ಸಲ್ಲಿಸಿದ. ಹಿಂದಿರುಗುವಾಗ ರಾತ್ರಿಯಾಗಿತ್ತು. ಊಟಮುಗಿಸಿ ಮಹಡಿಯ ಮೇಲೆ ಹೋಗಿ ಹಾಯಾಗಿ ನಿದ್ರಿಸಿದ.

ಶ್ರೀಕಾಂತನ ಅತಿಥಿಗಳು— ಬದರೀನಾಥ, ಕೇದಾರನಾಥ— ಮಧ್ಯಾಹ್ನದ ಭೋಜನಕ್ಕೆ ಮನೆಗೆ ಬಂದರು. ಅವರನ್ನು ಅರುಂಧತಿ ಉಪಚರಿಸಿ, ಊಣ ಬಡಿಸಿದಳು. ಹಿಂದಿನ ದಿನ ತಂದ ತಿಂಡಿಯನ್ನೂ ಕೊಟ್ಟಳು. ಆದರೆ ಶ್ರೀಕಾಂತ ಮನೆಯಲ್ಲಿರಲಿಲ್ಲ. ಶ್ರೀಕಾಂತ ಎಲ್ಲಿ ಎಂದು ಅವರು ಅರುಂಧತಿಯನ್ನು ಪ್ರಶ್ನಿಸಿದರು. ಕೆಲಸದ ಮೇಲೆ ಹೋಗಿರುವುದಾಗಿ ಆಕೆ ತಿಳಿಸಿದಳು. ಸ್ವಲ್ಪ ಹೊತ್ತು ಅಲ್ಲಿ ಇದ್ದು, ಅತಿಥಿಗಳು ತಮ್ಮ ಕೆಲಸದ ಮೇಲೆ ಹೊರಟುಹೋದರು.

13-4-53ರಂದು ಅರುಂಧತಿ ತಮ್ಮನೊಡನೆ ಆ ಮನೆಯನ್ನು ಬಿಟ್ಟು ಬಂದಳು. ತವರಿಗೆ ಹೋಗುತ್ತಾ ಬಾಗಿಲುಗಳನ್ನು ಭದ್ರ ಪಡಿಸಿ ಬೀಗ ಹಾಕಿ ಕೊಂಡಳು. ಶ್ರೀಕಾಂತನ ಸುಳಿವು ತಿಳಿದು ಬರಲಿಲ್ಲ. ಈ ಮಧ್ಯೆ ಆತ ಕಣ್ಮರೆಯಾಗಿದ್ದ.

ಅರುಂಧತಿ ತಾಯಿಯ ಮನೆ ಸೇರಿ ಕೆಲವು ದಿನಗಳಾದುವು. ಶ್ರೀಕಾಂತನ ಪತ್ತೆಯಿಲ್ಲ. ಅರುಂಧತಿಯ ತಮ್ಮ ಪ್ರೇಮನಾಥ 23-4-53ರಂದು ರೆವೆನ್ಯೂ ಅಧಿಕಾರಿಗಳಿಗೂ, ಪೋಲಿಸು ಅಧಿಕಾರಿಗಳಿಗೂ ಒಂದು ವರದಿಯೊಪ್ಪಿಸಿದ. ಅದರಲ್ಲಿ ಇಷ್ಟು ಬರೆದಿತ್ತು:—

'ಹದಿನೈದು ದಿನಗಳ ಕೆಳಗೆ ನನ್ನ ಭಾವ ಕೆಲಸದ ಮೇಲೆ ಹೋದವನು ಇನ್ನೂ ಹಿಂತಿರುಗಿ ಬಂದಿಲ್ಲ. ಗನಿಫಾರ್ ಎನ್ನುವ ಮನುಷ್ಯ ಭಾವನ ಮೇಲೆ ಬಹಳ ದಿನಗಳಿಂದ ಹಗೆ ಸಾಧಿಸುತಿದ್ದ— ಆತ ಬದವಾನಿಗೆ ಸೇರಿದವನು. ಆತ ನನ್ನ ಭಾವನನ್ನು ಹೊಡೆದು ಸಾಯಿಸಿರಬೇಕು?

ಈ ವರದಿಯನ್ನು ನಂಬಿ ಕೊಂಡು ಪೋಲಿಸರು ಬದವಾನಿಗೆ ಹೋದರು— ಅನುಮಾನ ಬಂದ ಸ್ಥಳಗಳನ್ನು ಶೋಧಿಸಿದರು— ಕಂಡ—ಕಂಡವರನ್ನು ಪ್ರಶ್ನಿಸಿದರು. ಆದರೆ ಬರಿಗೈಯಲ್ಲಿ ಹಿಂತಿರುಗಿದರು— ಇದಾದ 5 ದಿನಗಳ ನಂತರ ಶ್ರೀಕಾಂತನ ಮನೆಯನ್ನು ಪ್ರವೇಶಿಸಿದರು. ಅಲ್ಲಿದ್ದ, ಅವನ ಕೆಲಸಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಈ ಕೆಲಸಕ್ಕೆ ಅವರು ಅರುಂಧತಿಯಿಂದಲೇ ಕೀಲಿಯ ಗೊಂಚಲನ್ನು ಒಯ್ದಿದ್ದರು. ಇದರಿಂದಲೂ ಪೋಲಿಸರಿಗೆ ಯಾವ ಲಾಭವೂ ಆಗಲಿಲ್ಲ. ಶ್ರೀಕಾಂತನ ಸುಳಿವು ಹತ್ತಲಿಲ್ಲ. ಅವರ ಪ್ರಯತ್ನಕ್ಕೆ ಯಶಸ್ಸು ದೊರಕಲಿಲ್ಲ.

14—5—53ರಂದು ಒಂದು ಆಕಸ್ಮಿಕ ಸಂಭವಿಸಿತು. ಕುಲ್ಗಾಂನ ಶಂಭುನಾಥ ಎನ್ನುವವನು ಬರೆದ ಪತ್ರ ಅವರ ಕೈಸೇರಿತು. ಆ ಕಾಗದದಲ್ಲಿ ಆತ ಪೋಲಿಸರಿಗೆ 'ರಾಮಚಂದ್ರನ ಪ್ರಚೋದನೆಯಂತೆ ಶ್ರೀಕಾಂತನ ಕೊಲೆಯಾಗಿದೆಯೆಂದೂ, ಶ್ರೀಕಾಂತನ ದೇಹವನ್ನು ಅವನ ವಾಸದ ಮನೆಯಲ್ಲೇ ಹೂತಿರುವುದಾಗಿಯೂ ಬರೆದಿದ್ದ.

ಪೋಲಿಸರು ಕೂಡಲೇ ಕುಲ್ಗಾಂಗೆ ಧಾವಿಸಿದರು. ಶ್ರೀ ಕಾಂತನ ಮನೆಯನ್ನು ಪ್ರವೇಶಿಸಿದರು. ಮನೆಯ ಒಂದು ಮೂಲೆಯಿಂದ ದುರ್ಗಂಧ ಎದ್ದು ಬರುತ್ತಿತ್ತು. ಆ ಭಾಗವನ್ನು ಹುಲ್ಲು—ಮಣ್ಣಿನಿಂದ ಹೊಸತಾಗಿ ಮುಚ್ಚಿರುವಂತೆ ತೋರಿತು. ಹೆಚ್ಚು ಸಮಯ ಕಳೆಯದೆ ಪೋಲಿಸರು, ನ್ಯಾಯಾಧೀಶರೊಬ್ಬರನ್ನು ಸ್ಥಳಕ್ಕೆ ಬರಮಾಡಿಕೊಂಡರು. ಅವರಿದಿರಿನಲ್ಲಿ, ಅವರ ಆಜ್ಞೆಯಂತೆ, ಹುಲ್ಲು—ಮಣ್ಣನ್ನು ಸರಿಸಿ ಕುಣಿಯಿಂದ ಶ್ರೀ ಕಾಂತನ ದೇಹವನ್ನು ಹೊರ ತೆಗೆದರು. ಹೆಣಕ್ಕೆ ಬಟ್ಟೆ ಸುತ್ತಿದ್ದರು. ಹೆಣ ಸಿಕ್ಕಿತು. ಆದರೆ ಯಾರದೆಂಬುದು ಖಚಿತವಾಗಬೇಕಲ್ಲ—? ಶ್ರೀಕಾಂತನ ಬಂಧುಗಳಿಗೂ, ಅರುಂಧತಿಗೂ ಹೇಳಿ ಕಳಿಸಿದರು. ಅವರಿಗೆ ಅದನ್ನು ಗುರುತಿಸುವುದು ಕಷ್ಟವಾಗಲಿಲ್ಲ. ಹೆಣವನ್ನು ಪರೀಕ್ಷಿಸಿದಾಗ ಕಂಠನಾಳವನ್ನು ಕತ್ತರಿಸಿದ್ದು ಕಂಡು ಬಂತು. ಅರ್ಧ ಅಡಿಯಷ್ಟು ಉದ್ದನೆಯ ಗಾಯ. ಮೈಮೇಲೆ ಬೇರಾವ ಗಾಯಗಳೂ ಇರಲಿಲ್ಲ. ಶವವನ್ನು ಪರೀಕ್ಷೆಗೆಂದು ವೈದ್ಯರ ಹತ್ತಿರಕ್ಕೆ ಸಾಗಿಸಲಾಯಿತು.

ವೈದ್ಯರು ತಮ್ಮ ವರದಿಯನ್ನು ಕಳುಹಿಸಿ ಕೊಟ್ಟರು. ಅವರಿಗೂ ಮೃತ ದೇಹದಲ್ಲಿ ಬೇರಾವ ಗಾಯಗಳೂ ಕಂಡುಬರಲಿಲ್ಲ. ಕಾಣ ಬಂದ ಆ ಗಾಯದಿಂದ ಸಾವು ಸಂಭವಿಸ ಬಹುದೆಂದು ಅವರು ಅಭಿಪ್ರಾಯ ಪಟ್ಟರು.

ಅಂದೇ ಅರುಂಧತಿಯನ್ನು ಪೋಲಿಸರು ತಮ್ಮ ವಶಕ್ಕೆ ತೆಗೆದುಕೊಂಡರು. ಆ ರಾತ್ರಿ ಅವಳು ಪೋಲಿಸರ ವಶದಲ್ಲಿರಬೇಕಾಯಿತು 15—5—53ರಂದು ಆಕೆ ಪೋಲಿಸರನ್ನು ತಮ್ಮ ವಾಸದ ಮನೆಗೆ ಕರೆದೊಯ್ದಳು. ಒಳ ಮನೆಯ ಒಂದು ಮೂಲೆಯನ್ನು ಅವರಿಗೆ ತೋರಿಸಿದಳು. ಆ ಸ್ಥಳವನ್ನು ಅಗೆದಾಗ, ಶ್ರೀಕಾಂತನಿಗೆ ಸೇರಿದ ಬಟ್ಟೆ ಬರೆಗಳ ಗಂಟು ಅಲ್ಲಿ ಸಿಕ್ಕಿತು. ಆ ಬಟ್ಟೆಗಳು ರಕ್ತದಲ್ಲಿ ನೆನೆದಿದ್ದುವು. ಅಂದೇ ಆಕೆ ಮನೆಯೊಳಗಿಂದ ಒಂದು ಗುದ್ದಲಿಯನ್ನು ತಂದು ಅವರ ಮುಂದಿರಿಸಿದಳು. ಆ ಗುದ್ದಲಿಯಿಂದಲೇ ಗುಂಡಿಗಳನ್ನು ತೆಗೆದುದು ಎಂದು ತಿಳಿಸಿದಳು. ಈ ಮಾಲುಗಳನ್ನು ಪೋಲಿಸರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು. ಎರಡು ಪಂಚನಾಮೆಗಳನ್ನು ತಯಾರಿಸಿದರು.

ಅನಂತರ ಪೋಲಿಸರು ಶ್ರೀಕಾಂತನ ಮಲಗುವ ಮನೆಯನ್ನು ಪ್ರವೇಶಿಸಿದರು. ಅಲ್ಲಿ ರಕ್ತದಿಂದ ತೊಯ್ದು ಹೋಗಿದ್ದ, ಒಂದು ದಿಂಬು, ದಿಂಬಿನ ಮೇಲು ಹೊದಿಕೆ, ಚಾದರ, ಎರಡು ಚಾಪೆ, ಒಂದು ಗೋಣಿ ಚೀಲವನ್ನು ವಶಪಡಿಸಿಕೊಂಡರು. ಉಸಿರು ಕಟ್ಟಿಸುವ ಹೊಲಸು ವಾಸನೆ ಬೇರೆ.

ಆ ಮಾಲುಗಳು ಅಲ್ಲಿರುವುದು ಪೋಲಿಸರಿಗೆ ತಿಳಿದಿರಲಿಲ್ಲ. ಆಕೆ ಕೊಟ್ಟ ವರ್ತಮಾನದ ಆಧಾರದ ಮೇಲೆಯೇ ಕೃತ್ಯಕ್ಕೆ ಸಂಬಂಧ ಕಲ್ಪಿಸುವ ಈ ಮಾಲುಗಳು ಪೋಲಿಸರ ಕೈ ವಶವಾದುವು. ಅಲ್ಲಿ ಬಟ್ಟೆ-ಬರೆಗಳನ್ನು ಹೂತಿಟ್ಟ ಸಂಗತಿ ಅರುಂಧತಿ

(ಒಂಭತ್ತನೇ ಪುಟ ನೋಡಿರಿ)

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು—4

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
134 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7 3/8 % ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:— **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು—3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು—1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 48

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦–೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಠ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಸಮಾಜವಾದವಲ್ಲ, ಇದು ಅಧಿಕಾರವಾದ

ಸಮಾಜವಾದದ ಗಾಳಿ ದೇಶದಲ್ಲಿ ಭರದಿಂದ ಬೀಸ ತೊಡಗಿದರೇನೇ ನಮ್ಮ ಅಂದರೆ ದೇಶದ ಉದ್ಧಾರ ಕಾರ್ಯವಾಗುತ್ತದೆಯೆಂದು ಪ್ರಜೆಗಳು ನಂಬಿರುವ ಕಾಲವಿದು. ಈ ನಂಬಿಕೆಯನ್ನು ಹುಟ್ಟಿಸಿದವರು ರಾಜ್ಯಕಾರಣಿಗಳು ಯಾನೇ ಮಂತ್ರಿ ಮಾಗಧರು. ವಿಭಿನ್ನ ಕಾರ್ಯನೀತಿಯುಳ್ಳ ಪಕ್ಷಗಳೂ ತಮ್ಮ ಅಂತಿಮ ಗುರಿ ಸಮಾಜವಾದವೆಂದು ಅಬ್ಬರತಾಳ ಹಾಕುತ್ತಿವೆ. ಕಾಂಗ್ರೆಸ್ ವಿಭಜನೆಯಾದದ್ದೂ ಸಮಾಜ ಮತ್ತು ಪ್ರಗತಿವಾದಗಳ ಹೆಸರಿನಲ್ಲಿ. ಶ್ರೀಮತಿ ಇಂದಿರಾಗಾಂಧಿಯವರು ಮೊನ್ನೆ ಮೊನ್ನೆ ಭಾರೀ ಬಹುಮತ ಗಳಿಸಲು ಸಮರ್ಥರಾದದ್ದೂ ಸಮಾಜವಾದದ ಮಂತ್ರ ಬಲದಿಂದಲೇ. ಸರ್ವಸಮಾನತೆಯ ಬಗ್ಗೆ, ಸಮಾಜವಾದದ ಅನುಷ್ಠಾನದ ಬಗ್ಗೆ ಸಂವಿಧಾನದ ವಿಧಿಗಳು ಅಡ್ಡ ಬಾರದಂತೆ ತಿದ್ದುಪಡಿ ಮಾಡಿಸಿಕೊಂಡ ಶ್ರೀಮತಿ ಗಾಂಧಿಯವರ ಸಹೋದ್ಯೋಗಿಗಳು ತಾವೆಂತಹ ಸಮಾಜವಾದಿಗಳೆಂಬುದನ್ನು ಒಮ್ಮೊಮ್ಮೆ ಜಾಹೀರು ಮಾಡುವುದುಂಟು. ರಾಜ—ಮಹಾರಾಜರಿಗೆ ಸಲ್ಲುವ ರಾಜಧನ—ಮತ್ತಿತರ ಸೌಲಭ್ಯಗಳು ಸಮಾಜವಾದದ ಇಂದಿನ ದಿನಗಳಿಗೆ ಸರಿಹೋಗುವುದಿಲ್ಲವೆಂಬುದು ಹೆಚ್ಚಿನ ರಾಜ್ಯಕೀಯ ಪಕ್ಷಗಳ ಅಂಬೋಣ. ಆದುದರಿಂದಲೇ ಅವುಗಳ ರದ್ದತಿಗೆ ಶ್ರೀಮತಿ ಗಾಂಧಿಯವರು ಬದ್ಧರು; ಸಮಾಜ ಹಿತದ ಮುಂದೆ ಮತ್ತಾವ ಹಿತವೂ ಇಲ್ಲವೆಂದು ಘೋಷಿಸಿದ ಅವರು ಇಲ್ಲವೆಂದರೂ ಆತ್ಮವಂಚನೆ ಮಾಡಿಕೊಂಡಿದ್ದಾರೆ. ಈ ಹಿರಿಯಕ್ಕನ ಚಾಳಿ ಆಕೆಯ ಸಚಿವರಿಗೂ ಅಂಟಿದರೆ, ಅಸಹಜವಾಗುವುದಿಲ್ಲ.

ದೇಶದ ರೇಲ್ವೆಗಳ ನೌಕರರಿಗೆ ಕೆಲವೊಂದು ಉಚಿತ ರೇಲುಪಾಸ್ ಕೊಡುವ ಸಂಪ್ರದಾಯವುಂಟು. ಹಾಗೆಯೇ ರೇಲ್ವೆ ಅಧಿಕಾರಿಗಳಿಗೆ ಸೆಲೂನ್ ಸೌಲಭ್ಯಗಳಿವೆ. ಈ ಸಂಬಂಧದಲ್ಲಿ ಕೇಳಲಾದ ಪ್ರಶ್ನೆಯೊಂದನ್ನು ಉತ್ತರಿಸುತ್ತ ರೇಲ್ವೆಸಚಿವ ಹನುಮಂತಯ್ಯನವರು ನೌಕರರಿಗೆ ಪಾಸು ನೀಡುವ ಕ್ರಮ ಸಮಾಜವಾದದ ದಿನಗಳಿಗೆ ಹೊಂದಿಕೊಳ್ಳುವುದಿಲ್ಲವೆಂದು ಡಣಾಡಂಗುರವಾಗಿ ಹೇಳಿ, ಇನ್ನೊಂದಂಶದ ಬಗ್ಗೆ ಮೌನಿಗಳಾದರು. ರೇಲ್ವೆ ನೌಕರರು ವರ್ಷಕ್ಕೊಂದೆರಡು ಬಾರಿ ತಮ್ಮೂರಿಗೆ ಪ್ರಯಾಣ ಮಾಡುವಾಗ ಪಾಸ್ ಪಡೆಯುವುದರಿಂದ ರೇಲ್ವೆ ಇಲಾಖೆಗೆ ನಷ್ಟವಾಗುವುದು ನಿಜವಾದರೂ ಟಿಕೇಟು ರಹಿತ ಪ್ರಯಾಣಕರಿಂದಲೇ ತುಂಬಿ ತುಳುಕಾಡುವ ರೇಲ್ವೆಗಳಿಗೆ ಈ ನೌಕರರೇನೂ ಭಾರವಾಗಲಾರರೆಂದು ಹೇಳಬೇಕು. ಇದಕ್ಕಾಗಿ ರೇಲ್ವೆಯೇನೂ ಹೆಚ್ಚಿನ ವೆಚ್ಚಮಾಡಬೇಕಾದ ಆಗತ್ಯವಿರುವುದಿಲ್ಲ. ಅರುವತ್ತು ಪ್ರಯಾಣಿಕರು ಕೂರಬಲ್ಲ ಡಬ್ಬಿಗಳಲ್ಲಿ ಹತ್ತು ಜನರು ಆರಾಮವಾಗಿ ಸುಖನಿದ್ರೆಮಾಡಿಕೊಂಡು, ಮತ್ತೊಂದು ನೂರು ಮಂದಿ ಉಬೆಗೆ ಹಾಕಿದ ಮಾವಿನಕಾಯಿಗಳಂತೆ ಬೇಯುತ್ತಿರುವ ನಮ್ಮ ಮೂರನೆ ತರಗತಿಯ ರೇಲು ಡಬ್ಬಿಗಳಿಗೆ 'ಸಮಾಜವಾದ'ದ ವಾಸನೆಯೂ ಬಡಿದಿಲ್ಲವೆಂಬುದು ಸಚಿವರಿಗೆ ತಿಳಿಯಲಿಲ್ಲವೆಂದೇ ಹೇಳಬೇಕಾಗುತ್ತದೆ. ಆದುದರಿಂದಲೇ ಅವರು ನೌಕರರ ಪುಕ್ಕಟೆ ಪ್ರಯಾಣದ ಪುಟ್ಟಿಗಾದರೂ ಸಮಾಜವಾದವನ್ನು ಜ್ಯಾರಿಗೆ ಕೊಡಲು ಯೋಚಿಸಿದಂತಿದೆ. ಆದರೆ, ಕೆಲವೊಂದು ಅಧಿಕಾರಿಗಳಿಗಿರುವ ಸೆಲೂನ್ ಸೌಕರ್ಯವನ್ನವರು ಸಮಾಜವಾದಿ ವಿರೋಧಿ, ಪ್ರತಿಗಾಮಿಯೆಂದು ಕರೆಯಲು ಏಕೆ ಹಿಂಜರಿದರೋ ಅವರನ್ನೇ ಕೇಳಬೇಕು. ಕೆಲವು ಸಮಯದಿಂದ ಭರದಿಂದ ಕೇಳಿ ಬರುತ್ತಿರುವ ಸಮಾಜವಾದದ ಬಿರುಗಾಳಿಯ ಬುಸುಗುಟ್ಟುವಿಕೆಯಲ್ಲಿ ಯಾರು ಯಾರು ಉರುಳಿ ಹೋಗುತ್ತಾರೆಂದು ಹೇಳಬರುವುದಿಲ್ಲ. ಐ.ಎ.ಎಸ್. ನೌಕರರಿಗಿರುವ ವಿಶೇಷ ಸೌಕರ್ಯಗಳ ಮೇಲೆ ಮಂತ್ರಿಗಳ ಕಣ್ಣು ಎಂದೋ ಬಿದ್ದಿದೆ. ರಾಜ—ಮಹಾರಾಜರು ಎಲ್ಲವನ್ನೂ ಕಳೆದು ಕೊಂಡು ಶ್ರೀ ಸಾಮಾನ್ಯರಾಗಲಿದ್ದಾರೆ. ಶ್ರೀ ನೌಕರಗಿರುವ ಕೆಲವು 'ಉಚಿತ' ಗಳು ಪ್ರಯಾಣ, ವೈದ್ಯಕೀಯ ನೆರವು, ಮಕ್ಕಳಿಗೆ ಶಿಕ್ಷಣ ಸೌಲಭ್ಯ—ಇವು ಮೊದಲಾದುವುಗಳೂ ರದ್ದಾಗ ಬಹುದು. ಆದರೆ, ಅಧಿಕಾರಿ ವರ್ಗಕ್ಕಿರುವ ಇಂತಹ ಸೌಲಭ್ಯಗಳನ್ನು ಕೆಣಕಲು ಯಾವ ಸಚಿವರೂ ಸಿದ್ಧರಿಲ್ಲವೆಂದೇ ಹೇಳಬೇಕಾಗುತ್ತದೆ. ಆದುದರಿಂಲೇ ರೇಲ್ವೆ ಅಧಿಕಾರಿಗಳ ಸೆಲೂನ್ ಸೌಲಭ್ಯವನ್ನು ಅಸಮಾಜವಾದಿಯೆಂದು ಹೇಳಲು ಆ ಸಮಾಜವಾದಿಗಳು ಮುಂದುವರಿಯಲಿಲ್ಲ.

ಸಮಾಜವಾದವು ಶ್ರೀ ಸಾಮಾನ್ಯನ ಕಲ್ಯಾಣಕ್ಕಾಗಿ ಬರ ಬೇಕು. ಎಲ್ಲರೂ ಸಮಾನರೆಂಬ ನೀತಿ ಮಂತ್ರಿಗಳಿಗೂ ಅನ್ವಯವಾಗಬೇಕು. ಇಂದು ಮಂತ್ರಿಗಳಿಗಿರುವ ವಿಶೇಷ ಸೌಕರ್ಯಗಳು ಬೇರಾವುದೇ ಸಮಾಜವಾದಿ ದೇಶಗಳಲ್ಲಿಲ್ಲವೆಂದು ಧಾರಾಳವಾಗಿ ಹೇಳ ಬಹುದು. ಮಂತ್ರಿ ಮಾಗಧರು ಪಡೆಯುವ ವೇತನೇತರ ಸೌಲಭ್ಯಗಳಿಗೆ ಬೆಲೆ ಕಟ್ಟಿದರೆ, ಅದು ವೇತನದ ಹತ್ತಾರು ಪಾಲು ಆಗಬಲ್ಲುದು. ಸಮಾಜವಾದದ ಸೊಲ್ಲಾಡುತ್ತ ಸಮಾಜವಾದಕ್ಕೆ ಒಪ್ಪದಂತಹ ಸೌಕರ್ಯಗಳನ್ನು ಅನುಭವಿಸುವುದು ಸಾಧುವಾದುದೆ? ಇದೇ ಪ್ರಶ್ನೆ ರಾಷ್ಟ್ರಪತಿ—ಉಪರಾಷ್ಟ್ರಪತಿಗಳ ವಿಷಯದಲ್ಲೂ ಏಳುತ್ತದೆ; ಎದ್ದಿದೆ; ಸಂಸತ್ ಸದಸ್ಯರ ವಿಷಯದಲ್ಲೂ ಎದ್ದರೆ ವಿಸ್ಮಯವಿಲ್ಲ. ಪ್ರತಿ ನೂರರಲ್ಲಿ ತೊಂಬತ್ತೈದು ಶ್ರೀ ಸಾಮಾನ್ಯರು ಊಟಕ್ಕಾಗಿ ತೊಳಲಾಡುತ್ತಿರುವಾಗ, ಹತ್ತು ಮಂದಿ ಐಶೋ ಆರಾಮದಿಂದ ಬದುಕುವುದು ನ್ಯಾಯವಾದುದೆ? ಈ ಹತ್ತು ಮಂದಿಯಲ್ಲಿ ಕಡಿಮೆಯೆಂದರೆ ಇಬ್ಬರಾದರೂ 'ಸಮಾಜವಾದದ ಕೈವಾರಿ'ಗಳೆಂದು ಲೇಬಲ್ ಹಚ್ಚಿಕೊಂಡವರೆಂಬುದು ನಿರ್ವಿವಾದ. 'ತಮಗೆ ಮಾತ್ರ ಸಾಲಭ್ಯ ಬೇಕು, ಇತರರಿಗೆ ಬೇಡ'ವೆಂಬುದೇ ಸಮಾಜವಾದಿ ಮಂತ್ರಿಗಳ ಅಭಿಪ್ರಾಯವಾದರೆ, ಅವರ ಸಮಾಜವಾದ ತಕ್ಕು ಎಂದು ಬೇರೆ ಹೇಳಬೇಕಾಗಿಲ್ಲ. ತಮ್ಮ ವೇತನವನ್ನುಳಿದ ಸೌಕರ್ಯಗಳನ್ನೆಲ್ಲ ತ್ಯಾಗಮಾಡಿ ಮಂತ್ರಿಗಳು ಮೊದಲಿಗೆ ಸಮಾಜವಾದದ ದೀಪ ಹಚ್ಚಬೇಕು; ಆಗ ಅಧಿಕಾರಿಗಳಿಗೂ ಅನಧಿಕಾರಿಗಳಿಗೂ ಇರುವ ಉಚಿತ ಸೌಕರ್ಯಗಳನ್ನು ರದ್ದು ಮಾಡುವ ನೈತಿಕ ಬಲ ಬರುತ್ತದೆ. ಇಲ್ಲವಾದರೆ, ದೊಣ್ಣೆ ಕೈಯಲ್ಲಿದೆಯೆಂಬುದರಿಂದ ಯಾರ್‍ಯಾರದೋ ಎಮ್ಮೆ ಹೊಡೆದೊಯ್ಯುವಂತಾಗುತ್ತದೆ–ಇದು ಸಮಾಜವಾದವಾಗುವುದಿಲ್ಲ; ಅಧಿಕಾರವಾದವಾಗುತ್ತದೆ.

ಕನ್ನಡ ಶಾಲೆಗಳು

ನಮ್ಮದು ಕನ್ನಡ ರಾಜ್ಯವೆಂದು ಹೇಳುವುದಕ್ಕಿಂತ 'ಕನ್ನಡ ಬ್ರಾಂಡ್ ರಾಜ್ಯ'ವೆನ್ನುವುದು ಹೆಚ್ಚು ಸಮಂಜಸವಾಗ ಬಹುದು. ನಮ್ಮಲ್ಲಿ ಯಾವುದು ಕನ್ನಡದಲ್ಲಿ ನಡೆಯ ಬೇಕೋ ಅದನ್ನು ಬಿಟ್ಟು ಉಳಿದುದೆಲ್ಲವೂ ಕನ್ನಡದಲ್ಲೇ ನಡೆಯುತ್ತದೆ. 'ಆ ಅದು' ಬೇರೆ ಭಾಷೆಯಲ್ಲಿ ಇರುತ್ತದೆ. ಕನ್ನಡ ರಾಜ್ಯದ ಆಡಳಿತ ಶಿಕ್ಷಣ ಇಂಗ್ಲಿಷ್ ಭಾಷೆಯಲ್ಲಿ ನಡೆದು ಕನ್ನಡತನವನ್ನು ಕೆಡಿಸಿ ಹಾಕುತ್ತಿರುವವರೆಗೆ ನಮ್ಮದು ಕನ್ನಡ ರಾಜ್ಯ ಹೇಗಾಗಬೇಕು? ನಮ್ಮ ರಾಜ್ಯ ಸರಕಾರ ಮರಾಠಿ, ತಮಿಳು, ತೆಲುಗು ಶಾಲೆಗಳನ್ನು ತೆರೆದು ತನ್ನ 'ಸರ್ವಭಾಷಾಮಯಿ ಭಾರತಿ' ತನವನ್ನು ತೋರಿಸಿದೆ. ಆದರೆ, ಉಳಿದ ರಾಜ್ಯ ಸರಕಾರಗಳು ಕನ್ನಡಿಗರು ಅಧಿಕ ಸಂಖ್ಯಾಕರಾಗಿರುವ ಊರುಗಳಲ್ಲಾದರೂ ಕನ್ನಡ ಮಾಧ್ಯಮದ ಶಾಲೆಗಳನ್ನು ತೆರೆಯಲಿಲ್ಲ; ಮದ್ರಾಸದಂತಹ ಶಹರದಲ್ಲೇ ಕನ್ನಡ ಮಾಧ್ಯಮದ ಪ್ರೌಢಶಾಲೆ ತೆರೆಯಲಾಗಲಿಲ್ಲವೆಂದ ಮೇಲೆ ಉಳಿದೆಡೆಯ ಮಾತೇಕೆ? ಇವುಗಳೆಡೆಗೆ ಕನ್ನಡ ರಾಜ್ಯದ ಸರ್ಕಾರ ಗಮನ ನೀಡಬೇಕೆಂದು ಉಪಕುಲಪತಿ ಡಾ| ಜವರೇ ಗೌಡರ ಅಭಿಪ್ರಾಯ. ಒಂದು ಮಾತು. ಕನ್ನಡ ರಾಜ್ಯದಲ್ಲೇ ಭಾಷಾ ಮಾಧ್ಯಮದ ಶಾಲೆಗಳೇ ಹೆಚ್ಚು ಹೆಚ್ಚಾಗುತ್ತಿರುವಾಗ, ಕನ್ನಡ ಮಾಧ್ಯಮವನ್ನು ತೆಗೆದುಕೊಳ್ಳದಂತೆ ಹೆತ್ತವರೂ ಪ್ರಿನ್ಸಿಪಾಲರುಗಳೂ ಒತ್ತಡ ಹೇಳುತ್ತಿರುವಾಗ ಕನ್ನಡ ಶಾಲೆಗಳು ಇಲ್ಲಿ ಯಾರಿಗೆ ಬೇಕು? 'ಇಲ್ಲಿ ಸಲ್ಲದವುಗಳು ನೆರೆರಾಜ್ಯಗಳಲ್ಲಾದರೂ ಇರಲೆಂದು' ತೃಪ್ತಿ ಪಡುವುದಕ್ಕಾಗಿಯೇ ಹಾಗೆ ಮಾಡಬೇಕೆ? ಕನ್ನಡಿಗರ ಮಕ್ಕಳು ಕನ್ನಡಿಗರಾಗಲು ಹಿಂಜರಿಯುವವರು ಯಾರ್‍ಯಾರ ನಡುವೆಯೋ ದಿನ ಕಳೆಯುತ್ತಿರುವವರನ್ನು ಕನ್ನಡ ಮಾಡಲು ಮುಂದುವರಿಯ ಬೇಕೆ? ಅವರ ಪಾಡಿಗೆ ಅವರು ಹೇಗೋ ಇರಬಾರದೆ? ●●

ನಿರೀಕ್ಷಿಸಿರಿ !

ಬರುವ ವಾರದ
ನವಯುಗ ಸಂಚಿಕೆ
ಸ್ವಾತಂತ್ರ್ಯೋತ್ಸವ ವಿಶೇಷಾಂಕ ವಾಗಿ
ವಿಶಿಷ್ಟ ರೀತಿಯಲ್ಲಿ ಪ್ರಕಟವಾಗುವುದು.
ಬೆಲೆ: 0–50 ಪೈಸೆ ಮಾತ್ರ.

ಪಾವನ ಪವನ

ಶ್ರೀ ಶಿವಶಂಕರ.

ಮನೋಜ–ಸುಮರ ಮದುವೆ ನಡೆದಾಗ ಹಲವಾರು ಬಾಯಿಗಳು ಹಲವಾರು ರೀತಿ ಅಂದುಕೊಂಡಿದ್ದುವು. ಮನೋಜ ಖ್ಯಾತ ಕವಿ. ಮದುವೆಯಾದಾಗ ಅವನ ವಯಸ್ಸು ಮುವ್ವತ್ತೈದು. ಸುಮನಳು ಕಣ್ಣಿಗೆ ರತಿ ಅಲ್ಲವಾದರೂ ಆಕರ್ಷಣಾ ಅಂದ–ಚೆಂದವನ್ನು ಪಡೆದವಳು. ಅವಳ ಮುಖದ ಮೇಲಿನ ಬಾಲಿಶ ಇನ್ನೂ ಅಳಿಸಿರಲಿಲ್ಲ. ಮನೋಜನಿಗಿಂತ ಹದಿನೈದು ವರ್ಷ ಕಿರಿಯವಳಾಕೆ. ಮನೋಜನ ಗುಣ ಹಾಗಲ್ಲ ಅವಳಂತೆ ಅವನು ಎಲ್ಲರೊಡನೆ ಸಲಿಗೆಯಿಂದ ವರ್ತಿಸುವವನಲ್ಲ. ಅವನ ಮುಖದಲ್ಲಿ ಗಂಭೀರತೆ ಮನೆ ಮಾಡಿಕೊಂಡಿತ್ತು.

ಮನೋಜನ ಕಾವ್ಯಗಳನ್ನು ಆಕೆ ಮೆಚ್ಚಿಕೊಂಡಿದ್ದಳು. ಅವನೊಮ್ಮೆ ಅವಳ ಕಲಾ ಶಾಲೆಯಲ್ಲಿ ಭಾಷಣ ಕೊಡಲು ಬಂದಿದ್ದನು. ಆಗ ಇತರರಂತೆ ಆಕೆಯೂ ಆತನ ಹಸ್ತಾಕ್ಷರಗಳಿಗಾಗಿ ಪುಸ್ತಕವನ್ನು ಚಾಚಿದ್ದಳು. ಆಗ....ಆಗ ಅವಳಿಗೆ ಆಕರ್ಷಣೆಯ ಅನುಭವವಾಯಿತು. ಆಕೆಯ ಸರ್ತಿ ಬಂದಾಗ ಅವನು ನಕ್ಕ ಮುಗುಳ್ನಗೆ ಆಕೆಯ ಮನಸ್ಸನ್ನು ಸೂರೆಮಾಡಿತು. ಅವಳ ಆನಂದಕ್ಕೆ ಎಲ್ಲೆಯೇ ಇಲ್ಲವಾಯಿತು. ಅಲುಗಾಡದ ಸಾಲಿಗೆಗೆ ಅವಳು ಹಿಡಿ ಶಾಪ ಹಾಕಿದಳು. ಗೆಳತಿಯರ ಗಮನವನ್ನದು ಸೆಳೆದುಕೊಂಡಿತು. ಅವರೆಲ್ಲರೂ ಅವಳಿಗೆ ಹಾಸ್ಯ ಮಾಡಲಾರಂಭಿಸಿದರು. ಇತರ ಗೆಳೆಯರೂ ಹಿಂದಕ್ಕೆ ಬೀಳಲಿಲ್ಲ. ಅವರಲ್ಲಿ ಅಮಿತನು, "ಮುದುಕನು ಕೆಡುಕನೇನೂ ಅಲ್ಲವಾದರೂ, ನೀನು ಗಂಭೀರಳಾಗಿರಬೇಕು. ನಿನಗಿಂತವನು ಬಹಳದೊಡ್ಡವನೆ"ಂದು ಹಾಸ್ಯ ಮಾಡಿದನು.

'ನಿಮಗೆ ಹೊಟ್ಟೆಕಿಚ್ಚು'—ಆಕೆಯ ಮರುನುಡಿ.

'ಅಬ್ಬಾ!ಅದೆಂತುನಿನ್ನತ್ತವನು ನೋಟವನ್ನು ಬೀರಿದನು. ಅದರಲ್ಲಿ ಮನ್ಮಥ ಬಾಣವೇ ಅಡಗಿರ ಬೇಕು. ಅದನ್ನು ಸಹಿಸಿಕೊಳ್ಳಲು ನನ್ನಿಂದ ಸಾಧ್ಯವಿಲ್ಲ.' ಇಬ್ಬರೂ ನಕ್ಕು ಬಿಟ್ಟರು.

ಅಮಿತನ ನಗೆ–ನುಡಿ ಎಲ್ಲಾ ಬಗೆಗೆ ಪರಿಚಿತ. ಮನೋಜನೊಂದಿಗೆ ಹೋಲಿಸುವಾಗ ಅವನು ಮನೋಜನಲ್ಲವೆಂದಾಕೆ ಹೇಳಿಕೊಳ್ಳುವಳು.

ಇನ್ನೊಂದು ದಿನ ಅನಿರೀಕ್ಷಿತವಾಗಿ ಅವರು ಭೇಟಿಯಾದರು. ಅವಳ ಹೊಟ್ಟೆಯೊಳಗೆ ಏನೇನೋ ಆಯಿತು. ಮಾತಾಡೋಣವೆಂದರೆ ನಾಲಗೆ ಒಣಗಿ ಹೋಯಿತು; ಮೈ ಕೈ ಬೆವೆತು ಒದ್ದೆಯಾಯಿತು. ಅವಳ ಮನೆಯವರೆಗೂ ಅವರು ನಡೆದು ಬಂದಿದ್ದರು. ಅಲ್ಲಿ ಆತಿಥ್ಯಕ್ಕಾಗಿ ಉಪಚಾರದ ಮಾತಿನಂತೆ ಅವನನ್ನು ಒಳಗೆ ಬರಲು ಆಕೆ ಆಮಂತ್ರಿಸಿದಳಾದರೂಮನಸ್ಸಿನಲ್ಲಿ,ಅವನು ನೆಪನ ಹೇಳಿಕೊಂಡು. ತಪ್ಪಿಸಿಕೊಂಡಾನು ಒಳಗೆ ಬರಲಿಕ್ಕಿಲ್ಲವೆಂದಾಕೆ ಭಾವಿಸಿಕೊಂಡಿದ್ದಳು. ಅವಳ ಲೆಖ್ಖಾಚಾರ ತಲೆಕೆಳಗಾಯಿತು. ಅವಳ ಹಿಂದುಗಡೆಯೇ ಅವನೂ ಒಳಗೆ ಬಂದನು. ಅವಳ ತಾಯಿ–ತಂದೆಯವರ ಪರಿಚಯ ಮಾಡಿಕೊಂಡು ಸಹಜ ರೀತಿಯಲ್ಲಿ ವರ್ತಿಸಿದನಲ್ಲದೆ ಹೋಗುವ ಅವಸರವನ್ನೇ ವ್ಯಕ್ತಪಡಿಸಲಿಲ್ಲ.

ಮನೆಯ ಪುಸ್ತಕ—ಕಪಾಟಿನಲ್ಲಿ ಅವನು ಬರೆದಿದ್ದ ಪುಸ್ತಕಗಳನ್ನು ಕಂಡಾಗ ಅವರ ಕಾವ್ಯಾಭಿರುಚಿಯ ಪರಿಚಯ ಅವನಿಗಾಯ್ತಲ್ಲದೆ, ವೈಯಕ್ತಿಕ ಅಭಿಮಾನವೂ ಉಂಟಾಯಿತು. ಅವನು ಮರುದಿನ ಬರುತ್ತೇನೆಂದಾಗ ಅವಳಿಗೆ ಅಮಿತಾನಂದವಾಯಿತು.

ಮರುದಿನ ಬಹಳ ಜಾಗರೂಕತೆಯಿಂದ ಆಕೆ ಶೃಂಗರಿಸಿಕೊಂಡಳು. ಅವಳ ಹೃದಯ ಕೌಮಾರ್ಯ ದೆಶೆಯಲ್ಲಿದ್ದರೂ ಮನೋಜ ಆಕೆಯ ಮನಸ್ಸನ್ನು ಆಕರ್ಷಿಸಿಕೊಂಡಿದ್ದನು.

ಒಮ್ಮೆ ಅವನನ್ನು ನಿರೀಕ್ಷಿಸುತ್ತ ಆಕೆ ಅಲಂಕರಿಸಿಕೊಂಡಿದ್ದು. ನಿಮಿಷ—ನಿಮಿಷವನ್ನು ಬಹಳ ಕಷ್ಟದಿಂದ ಕಳೆಯುತ್ತಿದ್ದಳು. ಹೋ! ಇನ್ನಾತ ಬರಲಿಕ್ಕಿಲ್ಲ; ನನ್ನನ್ನು ಮರೆತು ಬಿಟ್ಟ....ಆಕೆಯ ಕಲ್ಪನೆಯ ಕುದುರೆ ನಾಗಾಲೋಟದಿಂದ ಧಾವಿಸುತ್ತಿತ್ತು ಹೀಗೆ ನಿರಾಶೆಗೊಳ್ಳುತ್ತಿದ್ದಾಗ ಅವನು ಒಳಗೆ ಬಂದನು. ಆಗ ಮಿಂಚುತ್ತಿದ್ದ ನಗೆ. ಅಬ್ಬಾ! ಅದೆಂತಹ ಆಕರ್ಷಣೆಯುಳ್ಳದ್ದು!

ಮನೋಜನೂ ಆಕೆಗೆ ಮನಸೋತನು. ಆಕೆಯ ಸಾನ್ನಿಧ್ಯ, ಮಾತು....ಎಲ್ಲಾ ಅವನಿಗೆ ರುಚಿಕರವಾಗಿತ್ತು. ಅವರ ಸ್ನೇಹ ಬೆಳೆಯುತ್ತ ಹೋಯಿತು.

ಒಂದು ದಿನ ಅವನು ಅವಳ ತಾಯಿ–ತಂದೆಯರ ಬಳಿ ಮದುವೆಯ ಪ್ರಸ್ತಾಪವನ್ನೆತ್ತಿದ. ಅವರು ಒಪ್ಪಿದರು. 'ನನ್ನ ವಯಸ್ಸು ನಿನಗೇನನ್ನಿಸುತ್ತದೆ'ಂದು ಅವನು ಕೇಳಿದಾಗ ಅವಳ ಕಣ್ಣುಗಳು ತೃಪ್ತಿಯ ನೋಟವನ್ನು ಬೀರಿದುವು.

"ಹಲವಾರು ಹೆಣ್ಣುಗಳನ್ನು ನೋಡಿದ್ದೇನೆ. ಆದರೆ ಬೇಸಿಗೆಯಲ್ಲಿ ತಂಪುಗಾಳಿಯ ಹಾಗೆ ಇರುವವಳು ನೀನೊಬ್ಬಳೇ, ನೀನು ಪಾವನ ಪವನ." ನಗುತ್ತ ಅವಳ ಕಣ್ಣುಗಳನ್ನು ನೋಡಿದನವನು.

ಂ ಂ ಂ

ಮದುವೆಯಾದ ಮೇಲೆ ಮನೋಜನಿಗೆ ಮುಂಬಾಯಿಯಲ್ಲಿ ಉದ್ಯೋಗ ಸಿಕ್ಕಿತು. ಅವರು ಅಲ್ಲಿ ಮನೆಮಾಡಿಕೊಂಡರು. ಮನೋಜನ ಕಾವ್ಯಾಂಗನೆಗೆ ಸುಮನ ಸವತಿಯಾಗಲಿಲ್ಲ. ಅವಳು ಅವನಿಗೆ ಎಲ್ಲಾ ವಿಧದಲ್ಲೂ ಸಹಾಯ ಮಾಡುತ್ತಿದ್ದಳು. ಅವನಾದರೋ ಆಕೆಯನ್ನು ಕುಳ್ಳಿರಿಸಿ ಅವಳ ಮೇಲೆ ಬಲತ್ಕಾರದ ಕಾವ್ಯ ವರ್ಷವನ್ನು ಸುರಿಸುತ್ತಿರಲಿಲ್ಲ. ಆಕೆ ಕೇಳಿದಾಗ ಇಲ್ಲವೆಂದವನೆಂದೂ ಹೇಳಲಿಲ್ಲ.

ಅವನೊಮ್ಮೆ ಕವಿಸಮ್ಮೇಳನಕ್ಕೆ ಹೋಗಿದ್ದನು. ಅವನ ದಾರಿಕಾಯುತ್ತ ರಸ್ತೆಯತ್ತ ಆಕೆ ನೋಡಿದಾಗ ಅಲ್ಲಿ ಆತನೊಬ್ಬಳೊಡನೆ ಮಾತಾಡುತ್ತ ನಿಂತುಕೊಂಡಿದ್ದನು. ಆಕೆ ಕಾರಿನೊಳಗೆ ಕುಳಿತುಕೊಂಡಿದ್ದು ಆಕೆಯೆದುರಿಗೆ ಆತ ನಿಂತುಕೊಂಡಿದ್ದುದರಿಂದ ಸುಮನಳಿಗೆ ಆಕೆಯ ಮುಖ ಕಾಣಲಿಲ್ಲವಾದರೂ ಆಕೆ ಕೃಷ್ಣವೇಣಿ, ಸುಂದರಿಯೆಂಬುದು ತಿಳಿದುಬರುತ್ತಿತ್ತು. ಅವರಿಬ್ಬರೂ ಮಾತಾಡುತ್ತಿದ್ದರು, ನಗಾಡುತ್ತಿದ್ದರು; ಮುಖಕ್ಕೆ ಮುಖ ತಾಗುವಂತೆ, ಆಕೆಯನ್ನು ಕರೆದೊಯ್ಯಲು ಚಾಲಕನಿಗೆ ತಿಳಿಸಿದ ಮನೋಜನು ಮನೆಗೆ ಬಂದನು. ಸುಮನಳ ಮನಸ್ಸಿನಲ್ಲಿ ಅಸಂತೋಷದ ಅಲೆ ಎದ್ದಿತು.

ಅವನು ಮನೆಯೊಳಗೆ ಕಾಲಿಟ್ಟೊಡನೆಯೇ ಅವಳು ಕಾರೆಲ್ಲೆಂದು ಕೇಳಿದಳು. ಅವನು ಉತ್ತರ ಕೊಡುವ ಮುಂದೆಯೇ, 'ಕವಿ ಸಮ್ಮೇಳನ ಹೇಗೆ ನಡೆಯಿತು? ಯಾರಿಗೆ ಬಹುಮಾನ ಸಿಕ್ಕಿತೆಂದು ಪ್ರಶ್ನೆಗಳನ್ನು ಕೇಳಿದಳು.

"ಸರಿತಾ ಸರೀನ್, ಕವಯಿತ್ರಿಗೆ ಸಿಕ್ಕಿತು. ಅವಳು ಅದಕ್ಕೆ ಯೋಗ್ಯಳು."

"ನಿಮಗೆ ಸಿಗಬಹುದೆಂದು ನಾನು ಯೋಚಿಸಿಕೊಂಡಿದ್ದೆ." ಹೇಳುತ್ತಿದ್ದಂತೆಯೇ ಸರಿತಾ—ಈಗ ತಾನೇ ತಾನು ಕಂಡ ಹೆಂಗಸೆಂಬ ಚಿತ್ರ ಅವಳ ಕಣ್ಮುಂದೆ ನಿಂತಿತು.

"ಅದರಲ್ಲೇನು ಸುಮನ್, ನಾವಿಬ್ಬರೂ ಒಟ್ಟಿಗೆ ಶ್ರಮಿಸಿದೆವು. ನಾವಿಬ್ಬರೂ ಒಳ್ಳೆಯ ಸ್ನೇಹಿತರು. ನಮ್ಮಿಬ್ಬರಲ್ಲಿ ಯಾರಿಗೆ ಸಿಕ್ಕಿದರೂ ಒಂದೇ."

"ಅವಳೋ.... ಅವಳಷ್ಟು ಚೆಂದವೇ?

"ಅದಲ್ಲ ಭಾಗ್ಯದ ಬಟ್ಟಲನ್ನು ಆಕೆಯತ್ತ ತಿರುಗಿಸಿದ್ದು. ಅವಳದಕ್ಕೆ ಅರ್ಹಳು, ನಾಳೆ ಅವಳನ್ನಿಲ್ಲಿಗೆ ಊಟಕ್ಕೆ ಬರುವಂತೆ ಆಮಂತ್ರಿಸಿದ್ದೇನೆ. ಹೌದು. ಅವಳು ಅಷ್ಟು ಚಂದವಾಗಿದ್ದಾಳೆ. ನೀನೇ ನೋಡುವಿಯಂತೆ ನಾಳೆ."

'ನಾಳೆ! ಲೇಖಕರಿಲ್ಲಿ ಕಲೆಯುತ್ತಾರೆ! ಆಗ ಸರಿತಾ! ನಾನೆಲ್ಲಿ, ಅವಳೆಲ್ಲಿ ಮೂವತ್ತು ವರ್ಷಗಳಾದರೂ ಆಕರ್ಷಣಾ ಶಕ್ತಿಯುಳ್ಳವಳು...' ಸುಮನ ಮನಸ್ಸಿನಲ್ಲಿಯೇ ಯೋಚಿಸಿಕೊಂಡಳು.

ಂ ಂ ಂ

ಲೇಖಕರ ನಡುವೆ ತನಗೇನು ಕೆಲಸವೆಂದು ಸುಮನ ಅಡುಗೆ ಮನೆಯೊಳಗೆ ನುಸುಳಿಕೊಂಡಳು. ಅತಿಥಿಗಳು ಅಲ್ಲಲ್ಲಿ ಅಡ್ಡಾಡುತ್ತ ಮಾತುಕತೆಯಾಡುತ್ತಿದ್ದರು. ಅವರಲ್ಲಿ ದಂಪತಿ ಲೇಖಕರು ಜಗಲಿಯಲ್ಲಿ ನಿಂತುಕೊಂಡು ಮಾತಾಡುತ್ತಿದ್ದರು. ಅವರ ಮಾತು ಸುಮನಳ ಕಿವಿಗೆ ಬಿತ್ತು.

"ಸರಿತಾ ಯುರೋಪಿನಿಂದ ಹಿಂತಿರುಗಿದ್ದಾಳೆ. ಮನೋಜ ಅವಳನ್ನು ಮದುವೆಯಾಗದಿರುವದು ಬಹಳ ಆಶ್ಚರ್ಯವಿದೆ. ಸುಮನಳೂ ಚೆನ್ನಾಗಿದ್ದಾಳೆ. ಆದರೆ ಮನೋಜನ ರುಚಿಗೆದುರು."

"ಎದುರು ರುಚಿಯವರೇ ಆಕರ್ಷಿಸಲ್ಪಡುತ್ತಾರೆ."

"ಆದರೆ ಬಹಳ ಸಮಯದವರೆಗೆ ಅಲ್ಲ." ಅದನ್ನು ಅಂದ ಅಂಗನೆ ನಕ್ಕುಬಿಟ್ಟಳು. ಅವರು ಮನೋಜನ ಮೇಲೆ ಮರುಕ ವ್ಯಕ್ತಪಡಿಸಿದರು.

ಸುಮನಳ ಮನಸ್ಸಿಗೆ ಆ ಮಾತುಗಳಿಂದ ಗಾಯವಾಗಿತ್ತು. ಸರಿತಳ ಪಾಶ್ಚಾತ್ಯಕ್ಕೆ ಅವಳು ಬೆರಗಾದಳು. ಮನಸ್ಸಿನಲ್ಲಿ ದ್ವೇಷದ ಕಿಡಿಯೆದ್ದಿತು.

ಂ ಂ ಂ

ಅತಿಥಿಗಳೆಲ್ಲರೂ ಹೋದ ಮೇಲೆ ಸುಮನ ಮುಖ ತೊಳೆದು ಕೊಂಡಳು; ಮನೋಜನ ಮುಖದಲ್ಲೇನೂ ಬದಲಾವಣೆಯಾಗಿರಲಿಲ್ಲ.

"ಕೆಲವೊಮ್ಮೆ ನಿಮ್ಮ ಜ್ಞಾನಶಕ್ತಿಗೆ ಹೋಲಿಸಿಕೊಂಡಾಗ ನನಗೆ ಆಶ್ಚರ್ಯವಾಗುತ್ತದೆ. ನಿಮ್ಮ ಮಟ್ಟಕ್ಕೇರಲು ನಾನು ಪ್ರಯತ್ನಿಸುತ್ತಿದ್ದೇನೆ. ಆದರದು ನನ್ನ ಕೈಯ್ಯಲ್ಲಿಲ್ಲ ಅನಿಸುತ್ತದೆ. ನನ್ನನ್ನು ಮದುವೆಯಾಗಿ ಅವಸರ ಪಟ್ಟೆನೆಂದು ನೀವೆಂದಾದರೂ ದುಃಖಿಸಿಕೊಂಡಿರುವಿರೇ?"

ಅವಳ ಪ್ರಶ್ನೆಗೆ ಅವನೇನೂ ತಟ್ಟನೆ ಉತ್ತರಕೊಡಲಿಲ್ಲ. ಆಕೆಯನ್ನು ಬಳಿಗೆಳೆದುಕೊಂಡನು. ತನ್ನ ತೋಳತೆಕ್ಕೆಯಲ್ಲಿ ಸಿಕ್ಕಿಸಿಕೊಂಡನು. ಆಕೆಯ ತಲೆಯ ಮೇಲೆ ಮೆಲ್ಲನೆ ತಟ್ಟಿದನು. ಅವನಪ್ಪುಗೆಯಲ್ಲಿ ಅವಳ ಸಮಸ್ಯೆ ನೀರಾಗಿ ಹೋಯಿತು.

"ನಿನ್ನನ್ನು ಅರ್ಥಮಾಡಿಕೊಂಡೇ ಮದುವೆಯಾಗಿದ್ದೇನೆ. ಅದನ್ನು ನೀನು ಅರ್ಥಮಾಡಿಕೊಳ್ಳಬೇಕು."

(ಏಳನೇ ಪುಟ ನೋಡಿರಿ)

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore**—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಸಂವಿಧಾನಕ್ಕೆ ಮೆಜಾರಿಟಿ ಬಂತು

ಸಂಸತ್ತು ಸಂವಿಧಾನದ ಯಾವುದೇ ವಿಧಿಯನ್ನೂ ತಿದ್ದಲು ನಿರಂಕುಶ ಅಧಿಕಾರ ಪಡೆಯುವಂತೆ ಮಂಡಿಸಿದ ಸಂವಿಧಾನ ತಿದ್ದುಪಡಿ (೨೪ನೆ) ಮಸೂದೆಯು ಸ್ವೀಕಾರವಾಯ್ತು. ಇದರಿಂದ ಸಂಸತ್ತು ಬಯಸಿದರೆ ಯಾವ ಕಾಲದಲ್ಲಾದರೂ ಮೂಲಭೂತ ಹಕ್ಕುಗಳನ್ನೂ ತಿದ್ದಬಹುದು. ಸಂವಿಧಾನದ ಏಳನೆ ವಿಧಿಯಲ್ಲಿ ಮೂಲಭೂತ ಹಕ್ಕುಗಳನ್ನು ಉಲ್ಲೇಖಿಸಲಾಗಿದೆ. ದೇಶದ ಎಲ್ಲ ಪ್ರಜೆಗಳ ಸಮಾನತೆ, ವ್ಯಕ್ತಿ ಮತ್ತು ವಾಕ್ ಸ್ವಾತಂತ್ರ್ಯ ದೇಶದಾದ್ಯಂತ ಸಂಚಾರ ಸ್ವಾತಂತ್ರ್ಯ ಆಸ್ತಿ ಹೊಂದುವ ಮತ್ತು ಅದನ್ನು ಅನುಭವಿಸುವ ಸ್ವಾತಂತ್ರ್ಯ ಹಾಗೂ ವೃತ್ತಿ ಸ್ವಾತಂತ್ರ್ಯ. ಇನ್ನು ಮುಂದೆ ಈ ಹಕ್ಕುಗಳನ್ನೂ ಪಾರ್ಲಿಮೆಂಟು ಕಸಿದುಕೊಳ್ಳಬಹುದು.

ಪ್ರಚಲಿತ ಸರಕಾರಕ್ಕೆ ನುಂಗಲಾರದ ತುತ್ತಾಗಿರುವುದು ರಾಜಧನ ಮತ್ತು ಮಾಜಿ ರಾಜರ ಸೌಲಭ್ಯಗಳ ಸಮಸ್ಯೆ. ರಾಜಧನ ಮೊದಲಾದುವು ಮಾಜಿರಾಜರ ಆಸ್ತಿಯಾದುದರಿಂದ ಅದನ್ನು ಹೊಂದುವ ಹಕ್ಕನ್ನು ಸರಕಾರ ಕಿತ್ತುಕೊಳ್ಳಲಾಗದೆಂದು ಉಚ್ಚನ್ಯಾಯಾಲಯ ನೀಡಿದತೀರ್ಪು ಅದನ್ನು ಉದ್ರೇಕಿಸಿತು. ಚುನಾವಣೆಗಳನ್ನು ಎದುರಿಸುವಾಗಲೂ 'ಆಸ್ತಿಯ ಮೇಲಿನ ಹಕ್ಕನ್ನು ನಾವು ಕಿತ್ತುಕೊಳ್ಳುವುದಿಲ್ಲ; ಆದರೂ ಅದಕ್ಕೊಂದು ಮಿತಿಯಿರಬೇಕೆಂದು ಬಯಸುತ್ತೇವೆ' ಎಂದರು. ಇಂದಿಗೂ ಅದೇ ಅವರ ಅಭಿಪ್ರಾಯ. ಪ್ರಧಾನಿ ಗಾಂಧಿಯವರು ಆಸ್ತಿಯ ಮೇಲಿನ ಹಕ್ಕನ್ನು ಸಂಪೂರ್ಣ ವಿರೋಧಿಸುವುದು ತಮ್ಮ ಅಭಿಮತವಲ್ಲ; ಆಸ್ತಿಯ ಹಕ್ಕು ಸಮಾಜದ ಹಿತಕ್ಕೆ ಆತಂಕವೊಡ್ಡುವುದಾದರೆ, ಅಂತಹ ವೇಳೆಯಲ್ಲಿ ಸಮಾಜ ಹಿತವೇ ಪ್ರಧಾನ ಸ್ಥಾನ ಪಡೆಯ ಬೇಕು– ಈ ಉದ್ದೇಶದಿಂದ ಮೂಲಭೂತ ಹಕ್ಕುಗಳಿಗೂ ಅವಶ್ಯಕ ತಿದ್ದುಪಡಿ ಮಾಡುವ ಅಧಿಕಾರ ಸಂಸತ್ತಿಗಿರಬೇಕೆಂದು ಹೇಳಿ, ಇದರ ದುರ್ಲಾಭ ಪಡೆಯದಿರುವ ಬಗ್ಗೆ ಆಶ್ವಾಸನೆ ನೀಡಿದರು.

ಗೋಲಕನಾಥ ಪ್ರಕರಣದಲ್ಲಿ ಮೂಲಭೂತ ಹಕ್ಕುಗಳಿಗೆ ತಿದ್ದುಪಡಿ ಸೂಚಿಸುವ ಅಧಿಕಾರ ಸಂಸತ್ತಿಗಿಲ್ಲವೆಂದು ಉಚ್ಚನ್ಯಾಯಾಲಯ ಹೇಳಿದ್ದರಿಂದ, ಅಂತಹ ಅಧಿಕಾರವನ್ನು ಸಂವಿಧಾನ ಮಾನ್ಯ ಮಾಡಲು ಈಗಿನ ತಿದ್ದುಪಡಿ ಸಹಾಯಕವಾಗುತ್ತದೆ. ಇದರಿಂದ ಲಭ್ಯವಾಗುವ ಅಧಿಕಾರ ಬಲವನ್ನು ಸರಕಾರ ಹೇಗೆ ಬೇಕಾದರೂ ಬಳಸಿಕೊಳ್ಳುವುದು ಸಾಧ್ಯವಾಗುತ್ತದೆ. ತುಂಬಿ ತುಳುಕುವ ಬಹುಮತವಿದ್ದಾಗ, ಇಡಿಯ ಸಂವಿಧಾನವನ್ನೇ ಬುಡಮೇಲು ಮಾಡುವುದೂ ಅಸಾಧ್ಯ ಕಾರ್ಯವೇನೂ ಅಲ್ಲ. ಸಂವಿಧಾನ ವೈದ್ಯಾನದ ಮುಟ ಚೆಂಡಾಗುವುದನ್ನು ಒಪ್ಪದಿರಲು ಸಾಧ್ಯವಿಲ್ಲ.

ತನ್ನ ಬಹುಮತದ ಬಲದಿಂದ ಶ್ರೀಮತಿ ಗಾಂಧಿಯವರು ತಮ್ಮ ಕೈಗೆ ಮಹಾ ಶಕ್ತಿಸಂಪನ್ನ ಅಣ್ವಸ್ತ್ರವನ್ನು ಪಡೆದುಕೊಂಡರು. ಅವರಿಗೆ ಕೆಲವೊಂದು ನಿರ್ದಿಷ್ಟ ಪ್ರತಿಷ್ಠೆಯ ಕ್ರಮಗಳನ್ನು ಕೈಕೊಳ್ಳಲು ಈ ಅಸ್ತ್ರ ಅಗತ್ಯವಾಗಿದೆ. ಅಬಾಧಿತ ನಿರಂತಕ ಅಧಿಕಾರವನ್ನು ಶ್ರೀಮತಿ ಗಾಂಧಿಯವರು ಪ್ರಧಾನಿಯಾಗಿರುವವರೆಗೆ ದುರುಪಯೋಗ ಪಡಿಸಲಾರರೆಂದೇ ನಂಬಿದರೂ, ಅವರ ಉತ್ತರಾಧಿಕಾರಿಗಳು ಹಾಗೆಯೇ ಮುಂದುವರಿಯುವರೆಂದು ಹೇಗೆ ನಂಬುವುದು? ವಾಕ್—ವ್ಯಕ್ತಿ, ಆಸ್ತಿ ಹೊಂದುವ ಸ್ವಾತಂತ್ರ್ಯವನ್ನೂ ಅವರು ಕಿತ್ತುಕೊಂಡರೆ, ಅದು ಪ್ರಜಾಪ್ರಭುತ್ವವಾಗಲಾರದು; ಕಮ್ಯುನಿಜಂ ಮಾದರಿಯ ಸರ್ವಾಧಿಕಾರವಾಗುತ್ತದೆ. ಯಾವುದೇ ದೇಶ ಅಣ್ವಸ್ತ್ರ ಹೊಂದುವ ಸ್ವಾತಂತ್ರ್ಯವಿದೆ. ಆದರೂ ಅವುಗಳ ಬಗ್ಗೆ 'ಇತರರೇಕೆ ಆತಂಕಗೊಳ್ಳುತ್ತಾರೆ? ಪಾಕಿಸ್ತಾನಕ್ಕೆ ಅಮೇರಿಕೆ ಶಸ್ತ್ರಾಸ್ತ್ರ ನೀಡುವಾಗ ಭಾರತವೇಕದನ್ನು ವಿರೋಧಿಸುತ್ತದೆ? ಶಸ್ತ್ರಾಸ್ತ್ರವೆಂಬುದು ಪಂಜು. ಆ ಪಂಜು ಮಂಗನ ಕೈ ಸೇರಿದರೆ, ಅದು ಊರನ್ನೇ ಉರಿದು ಬಿಡುವುದು ಅಸಂಭವವಲ್ಲ. ಹೆಚ್ಚು ಹೆಚ್ಚಿನ ಅಧಿಕಾರ ಪಡೆದುಕೊಳ್ಳುವುದಕ್ಕಿಂತ ಇರುವ ಅಧಿಕಾರಗಳನ್ನು ಯಶಸ್ವಿಯಾಗಿ ನಿರ್ವಹಿಸುವುದು ಅಪೇಕ್ಷಣೀಯ. ಮೂಲಭೂತ ಹಕ್ಕುಗಳನ್ನೂ ಮೊಟಕು ಮಾಡುವ, ಕಿತ್ತುಕೊಳ್ಳುವ ಅಧಿಕಾರವೂ ಈಗ ಸಂಸತ್ತಿಗೆ ಬಂತು. ಅಂದರೆ, ನಮ್ಮ ಸಂವಿಧಾನದ ೨೨ನೆಯ ವರ್ಷದಲ್ಲಿ ಅದಕ್ಕೆ ಹೊಸ ಪ್ರಾಣ ಬಂತು ಅಂತ ಅರ್ಥ ಮಾಡಿಕೊಳ್ಳಬಹುದು.

o o o

ಕರ್ನಾಟಕದಲ್ಲಿ ಜನಪ್ರಿಯ ಸರಕಾರ ಇಲ್ಲದಿರುವಾಗ ಕಾವೇರಿ ನೀರಿನ ಬಗ್ಗೆ ಯಾವುದೇ ನಿರ್ಧಾರ ಕೈಕೊಳ್ಳುವುದು ಅಸಾಧ್ಯವೆಂದು ಪ್ರಧಾನಿ ಗಾಂಧಿಯವರು ಮುಖ್ಯಮಂತ್ರಿ ಕರುಣಾನಿಧಿಗೆ ಪತ್ರ ಬರೆದುದರ ಪರಿಣಾಮ ಭೀಕರವೇ ಆಯ್ತು. ಜನಪ್ರಿಯ ಸರಕಾರವಿರುವಾಗ ಏನು ಮಾಡಿದಿರಿ ಎಂದು ಕೇಳುವುದನ್ನು ಬಿಟ್ಟು ಅವರು ಸರ್ವೋಚ್ಚನ್ಯಾಯಾಲಯದ ಮರೆ ಹೋದರು. ಕೇಂದ್ರ ಮತ್ತು ರಾಜ್ಯಗಳ ನಡುವಣ ವಿವಾದಗಳನ್ನು ತೀರ್ಮಾನ ಮಾಡಲು ಸರ್ವೋಚ್ಚನ್ಯಾಯಾಲಯಕ್ಕೆ ಸಂವಿಧಾನ ಅಧಿಕಾರ ನೀಡುತ್ತದೆ. ಕಾವೇರಿ ನೀರಿನ ವಿವಾದವು ಕೇಂದ್ರ—ರಾಜ್ಯ ವಿವಾದವಾಗಿದೆಯೆಂಬುದನ್ನು ತಮಿಳುನಾಡಿನ ಸರಕಾರವು ತನ್ನ ಅರ್ಜಿಯಲ್ಲಿ ಸಮರ್ಥಿಸಿದೆ.

ಅದರ ಜತೆಯಲ್ಲೇ ಕರ್ನಾಟಕವನ್ನೂ ಅದು ಎಳೆದು ಹಾಕಿದೆ. ಕಾವೇರಿ ಕೊಳ್ಳದಲ್ಲಿ ಕರ್ನಾಟಕದ ಯೋಜನೆಗಳು ತೀವ್ರಗತಿಯಿಂದ ಮುಂದುವರಿಯುತಿದ್ದು, ಇವುಗಳಿಂದ ತಮಿಳುನಾಡಿನ ಹಿತಕ್ಕೆ ಭಂಗಬರುವುದರಿಂದ ಅವೆಲ್ಲವಕ್ಕೂ ತಡೆಯಾಜ್ಞೆ ನೀಡಬೇಕೆಂದೂ ಅದು ಕೇಳಿಕೊಂಡಿದೆ. ೧೯೫೬ರ ಅಂತರಾಜ್ಯ ಜಲವಿವಾದ ಕಾಯಿದೆಯನ್ವಯ ಕಾವೇರಿ ನೀರಿನ ವಿವಾದವನ್ನು ಪರಿಹರಿಸಲು ಕೇಂದ್ರ ಸರಕಾರ ಪಂಚಾಯತಿಯನ್ನು ನೇಮಿಸಲು ತಪ್ಪಿದೆಯೆಂದೂ ಇದು ಕೇಂದ್ರ ರಾಜ್ಯ ವಿವಾದವೆಂದೂ ಅದು ಹೇಳಿಕೊಂಡಿದೆ.

ತಮಿಳುನಾಡು ಸರಕಾರದ ಅರ್ಜಿಯನ್ನು ನ್ಯಾಯಾಲಯ ಪುರಸ್ಕರಿಸ ಬಹುದು,

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 135/1968.

ಶ್ರೀ ಪೆರೋಡಿ ವಿಠಲ ಶೆಟ್ಟಿ (ಎಡ್ವಕೇಟ್, ರಿಸೀವರ್) —ವಾದಿರು

ಮತ್ತು

1. ಗೋಪಿ ಶೆಡ್ತಿ (ಮೃತ) 2. ದಾಸು ಶೆಟ್ಟಿ ಕೂಡಾ ..ಪ್ರತಿವಾದಿರು

ಇವರೊಳಗೆ

ಸಂಪ್ಲಿಮೆಂಟು ೬ನೇ ಪ್ರತಿವಾದಿ: ಆನಂದ ಶೆಟ್ಟಿ, ಗೋಪ ಶೆಟ್ಟರ ಮಗ, ಉಡುಪಿ ತಾಲೂಕು, ಬೊಮ್ಮರ ಬೆಟ್ಟು ಗ್ರಾಮದಲ್ಲಿರುವವನು— ಇವರಿಗೆ

ವಾದಿರು ಗೇಣಿ ಬಾಕಿ ಕೇಳಿ ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 20-8-71ಕ್ಕೆ ಇಟ್ಟಿದೆ. ಆ ದಿವಸ ಬೆಳಿಗ್ಗೆ 10 ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಉದಾಹರಿಸುವರೆ ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ನಂಬ್ರವನ್ನು ತೀರ್ಮಾನಿಸಲಾಗುವುದು.

By Order of the Court.

Sri K. L. Aithal.

ವಾದಿ ಕಡೆ ವಕೀಲರು.

Udipi S. K. Date: 5-8-71.

ಪುತ್ತೂರು IInd ಎಡಿಶನಲ್ ಮು. ಕೋರ್ಟಿನಲ್ಲಿ

I. A. I O.S. 332/66

ಶೀಲಾರತ್ನ ಯಾನೆ ವಿಜಯಲಕ್ಷ್ಮಿ

(By power of attorney holder The Southern land Trust Ltd. Mangalore, (S. Kanara)

—ಅರ್ಜಿದಾರ

ಮತ್ತು

ಕುಂಞಣ್ಣ ಶೆಟ್ಟಿ ಸಹಾ... ಎದ್ರಿರು

೮ನೇ ಬಾಳಪ್ಪ ಶೆಟ್ಟಿ, ಮಾನಕ್ಕೆ ಹೆಂಗ್ಸಿನ ಮಗ, 'Residing in Room No 4. Ranga Vilasa House, 6-(1-5) Poornayya Road, Balapet, Bangalore

ಅರ್ಜಿದಾರನು ಮಾಡಿದ ಮೇಲಿನ ಅರ್ಜಿಯಲ್ಲಿ ನಿಮ್ಮ ಹಾಜರಾತಿ ಬಗ್ಗೆ ತಾ. 23-8-71ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ನೀವು ಸ್ವತಃ ವ ವಕೀಲರ ದ್ವಾರಾ ಹಾಜರಾಗಿ ಉದಾಹರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲಾದೀತು.

(By order of the Court)

Sd. Radhakrishna Gowda

Advocate for Petitioner

ಪುತ್ತೂರು (ದ. ಕ.), ತಾ. 31-7-71.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ

ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ

ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ–

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಉಡುಪಿ ಮುನ್ಸಿಫರ ಕೋರ್ಟಿನಲ್ಲಿ

S.C No 56/1971

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್ ಬೈ ಇದರ ಪಾರ್ಟ್ನರ ಕೆ. ಶ್ರೀನಿವಾಸ ಶೆಣೈ—ವಾದಿ

ಮತ್ತು

ಸಿ. ಎಚ್. ಎಚ್. ದಾಸ— ಪ್ರತಿವಾದಿ

ಇವರೊಳಗೆ

ಪ್ರತಿವಾದಿ— ಸಿ. ಎಚ್. ಎಚ್. ದಾಸ, ಆಫೀಸರ್, ಲೈಫ್ ಇನ್ಸೂರೆನ್ಸ್ ಕಾರ್ಪರೇಶನ್ ಒಫ್ ಇಂಡಿಯಾ, ಜೀವನ ಪ್ರಕಾಶ, ಬೆಂಗಳೂರು—2. ಇವರಿಗೆ

ನೀವು ವಾದಿ ಫರ್ಮಿನ ಕೂಡೆ ಮಾಡಿದ ಲೇವಾದೇವಿ ಬಾಬ್ತು ನಿಮ್ಮಿಂದ ಬರಾ ಐವೇಜಿನ ವಸೂಲಿ ಬಗ್ಗೆ ಮಾಡಿದ ಮೇಲಾ ನಡೆದ ದಾವೆಯು ತಾರೀಕು 6-9-1971ರಂದು ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುವ ಬಾರಿಗೆ ಇಟ್ಟಿರುವ. ಸದ್ರಿ ತಾ. 6-9-1971ರಂದು ನೀವು ಸ್ವತಃ ಯಾ ವಕೀಲರ ಮುಖಾಂತರ ಬೆಳಿಗ್ಗೆ ಘಂಟೆ 11-00ಕ್ಕೆ ಈ ಕೋರ್ಟಿನಲ್ಲಿ ಹಾಜರಾಗಿ ಉದಾಹರಣೆ ಏನಾದರೂ ಇದ್ದಲ್ಲಿ ಹಾಜೀರು ಪಡಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಮ್ಯಾ (Exparte) ಮಾಡಿ ದಾವೆಯು ಮುಂದಿನ ತನಿಖೆ ನಡೆಸಲಾದೀತು. ತಿಳಿದಿರಲಿ.

ಪಿ. ಬಾಲಕೃಷ್ಣ ಆರ್. ಶೆಣೈ

ವಾದಿ ಫರ್ಮಿನ ಕಡೆ ಎಡ್ವೋಕೇಟ್

ಉಡುಪಿ, ದ.ಕ., 5-8-71.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 311/70

ಜಗನ್ನಾಥ ಶೆಟ್ಟಿ— ವಾದಿ

ಸೂರಮ್ಮ ಶೆಡ್ತಿ ಸಹಾ— ಪ್ರತಿವಾದಿರು.

ವಾದಿ ಕಡೆಯಿಂದ ಈ ಮೂಲ್ಕ ಜಾಹೀರ ಮಾಡಿಕೊಳ್ಳುವದೇನೆಂದ್ರೆ.

ಸೂರಮ್ಮ ಶೆಡ್ತಿ—ಶೇಷ ಶೆಡ್ತಿ ಮಗಳು. ಉಪ್ಪುಂದ ಗ್ರಾಮದ ಕೋಟೆಬಾರಿ ಮನೆ.

ವಾದಿಗೆ ಪ್ರತಿವಾದಿರು ತಾ. 24-9-67ರಲ್ಲು ರೂ 700—00ಕ್ಕೆ ಬರಕೊಟ್ಟ ಡಿಮಾಂಡ ನೋಟಿನ ಅಸ್ಲು ಬಡ್ಡಿ ಬರಮಾಡಿ ಕೊಳ್ಳುವರೆ ವಾದಿ ಮಾಡಿದ ದಾವೆಯು ತಾ. 18-9-71ಕ್ಕೆ ಅಖೈರ ತನಿಖೆಗೆ ಇಟ್ಟಿದೆ. ಆ ಕುರಿತು ನಿಮ್ಮದೇನಾದ್ರೂ ಉದಾಹರಣೆಯಿದ್ರೆ ಸದ್ರಿ ದಿವ್ಸ ಹಗಲು 11 ಗಂಟೆಗೆ ಸ್ವತಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರ ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ವಾದಿ ಕಡೆಯಿಂದ ತಿಳಿಯ ಪಡ್ಸಿದೆ.

M. M. Hebbar.

Kundapur. Date:-1-8-71

ತಿರಸ್ಕರಿಸಬಹುದು. ಕರ್ನಾಟಕದ ಯೋಜನೆಗಳಿಗೆ ತಡೆಯೊಪ್ಪಿಗೆ ನೀಡಬಹುದು; ನೀಡದಿರಬಹುದು. ಆದರೆ, ವಿವಾದಗಳ ಬಗ್ಗೆ ಶೀಘ್ರ ನಿರ್ಣಯ ತೆಗೆದುಕೊಳ್ಳದೆ ಅವುಗಳೊಡನೆ ಜೋಕಾಲಿಯಾಡುವುದರಿಂದ ಆಗಬಹುದಾದ ಭೀಕರ ಪರಿಣಾಮಗಳ ಬಗೆಗೆ ಬೆಳಕು ಹಿಡಿಯುತ್ತದೆ. ರಾಜ್ಯಕೀಯ ಸ್ವಾರ್ಥ ಸಾಧನೆಗೆಂದು ಶ್ರೀಮತಿ ಗಾಂಧಿಯವರು ದ್ರಾಮುಕ ಸರಕಾರವನ್ನು ಅಪ್ಪಿಕೊಂಡುದ್ದರ ಫಲವಾಗಿಯೇ ವಿವಾದ ಇಷ್ಟು ದೂರ ಮುಂದುವರಿಯಿತೆಂಬುದನ್ನು ಮರೆಯಬಾರದು. ಸದ್ಯ ದ್ರಾಮುಕವನ್ನು ಆಕೆ ಕಡೆಗಣಿಸತೊಡಗಿದ್ದರಿಂದ, ಕಾವೇರಿಯ ಸಿಂಹ ಪಾಲು ತಮಗಿಲ್ಲವೆಂಬುದನ್ನು ಮನವರಿಕೆ ಮಾಡಿಕೊಂಡ ಕರುಣಾನಿಧಿಯವರು ಹೊಸ ಗತ್ತುಗಾರಿಕೆಯನ್ನು ತೋರಿಸಿದರು.

ಕರ್ನಾಟಕಕ್ಕೂ ತನ್ನ ವಾದವನ್ನು ಮುಂದಿಡುವುದು ಅಗತ್ಯವಾಗಿದೆ. ಐವತ್ತು ವರ್ಷಗಳಿಗೆ ಹಿಂದಿನ ಒಡಂಬಡಿಕೆಗೇ ಇಂದಿನ ದಿನಗಳಲ್ಲಿ ಜೋತುಬಿದ್ದು ಕಾವೇರಿಯ ನೀರನ್ನೆಲ್ಲ ತಮಿಳುನಾಡಿಗೆ ಬಿಟ್ಟುಕೊಡುವುದರಲ್ಲಿ ಅರ್ಥವಿಲ್ಲವೆಂಬುದನ್ನದು ಸ್ಪಷ್ಟವಾಗಿ ಪ್ರತಿಬಿಂಬಿಸಬೇಕಾಗಿದೆ. ಕಾವೇರಿಯ ದಿಕ್ಕು ಬದಲಾಯಿತು; ಹಲವು ಪ್ರಶ್ನೆಗಳಿಗೆ ಬೀಜ ಬಿತ್ತಿತು. ಕೇಂದ್ರದೊಡನೆ ಜಗಳ ಕೆರೆಯುವ ದ್ರಾಮುಕದ ಸ್ವಭಾವ ಮತ್ತೊಮ್ಮೆ ಜಾಹೀರಾಯ್ತು. ಇದರಿಂದ ಯಾರಿಗೆ ಹಿತ? ಕರುಣಾನಿಧಿಯವರೂ ಹೇಳಲೊಲ್ಲರು; ಶ್ರೀಮತಿ ಗಾಂಧಿಯೂ ಹೇಳಲಾರರು.

o o o

ದೇಶದಲ್ಲಿ ಮಳೆ–ಬೆಳೆಗಳು ತೃಪ್ತಿಕರವಿವೆಯೆಂದು ವರದಿಗಳು ಬರುತ್ತಲಿವೆ. ಮುಂದಿನ ಸಾಲಿನಿಂದ ಆಹಾರ ಧಾನ್ಯಗಳ ಆಯಾತವಿಲ್ಲವೆಂದು ಕೆಲವು ವರ್ಷಗಳಿಂದಲೂ ಅಧಿಕಾರ ಸ್ಥಾನಾಪನ್ನರು ಹೇಳುತ್ತಲೇ ಬಂದಿದ್ದಾರೆ. ಆದರೆ, ಪ್ರಚಲಿತ ವರ್ಷದಲ್ಲಿ ಕರ್ನಾಟಕದ ಬಹು ಪಾಲು ಭಾಗದಲ್ಲಿ ಮಳೆಯು ಕೈಕೊಟ್ಟಿದೆ; ಬೆಳೆ ಬೆಳೆಯದಾಗಿದೆ; ಅಭಾವ ಪರಿಸ್ಥಿತಿ ತಲೆದೋರಿದೆ. ಕರಾವಳಿ ಜಿಲ್ಲೆಗಳಲ್ಲೂ ಅವಕ್ಕೆ ಹೊಂದಿಕೊಂಡಿರುವೆಡೆಗಳಲ್ಲಿಯೂ ಈ ವರ್ಷ ಮಳೆ ತೃಪ್ತಿಕರವಾಗಿ ಬಿದ್ದಿರುವುದಿಲ್ಲ. ಇತ್ತೀಚೆಗಿನ ಕೆಲವು ದಿನಗಳು ಮಳೆಯ ಹನಿಯನ್ನೂ ಕಂಡಿಲ್ಲ. ಬೆಳೆಗಳು ಒಣಗತೊಡಗಿದ್ದು ಇನ್ನೂ ವಾರವೆರಡುವಾರ ಹೀಗೇ ಮುಂದುವರಿದರೆ ಇಲ್ಲಿಯೂ ಬೆಳೆಗಳು ಕೈಕೊಡುವುದು ನಿಶ್ಚಿತ.

ರಾಜ್ಯದ ಉತ್ತರ–ಪೂರ್ವ ಭಾಗಗಳು ನೀರಿಗಾಗಿ ಸದಾ ಪರದಾಡುವವುಗಳು. ಗುಲ್ಬರ್ಗ, ಬಿಜಾಪುರ, ಬೀದರ, ರಾಯಚೂರು, ಕೋಲಾರ, ತುಮಕೂರು, ಚಿತ್ರದುರ್ಗ, ಹಾಸನ, ಧಾರವಾಡ ಮತ್ತು ಬೆಳಗಾಂವಿ ಜಿಲ್ಲೆಗಳ ಸುಮಾರು ೫೦ ತಾಲೂಕುಗಳು ತೀವ್ರ ಅಭಾವ ಪರಿಸ್ಥಿತಿಯಿಂದ ನರಳುತಿದ್ದು ಅಲ್ಲಿನ ಪ್ರಜೆಗಳ ಅವಸ್ಥೆ ದಾರುಣವೆನಿಸಿದೆ. ಪಶುಗಳ ಬದುಕೂ ಶೋಚನೀಯವಾಗಿದೆ. ರಾಜ್ಯಪಾಲ ಧರ್ಮವೀರರು ಹೈದರಾಬಾದ ಕರ್ನಾಟಕ ಪ್ರದೇಶವನ್ನು ಸಂದರ್ಶಿಸಿ ಅಲ್ಲಿನ ವಸ್ತುಸ್ಥಿತಿಯನ್ನು ಕಣ್ಣಾರೆ ಕಂಡು ಬಂದರು. ಪರಿಹಾರ ಕಾಮಗಾರಿಗಳಿಗೆ ಅವರು ಆಜ್ಞೆ ನೀಡಿದರು. ಸುಮಾರು ಐದು ಕೋಟಿ ರೂಪಾಯಿಗಳ ವೆಚ್ಚ ಈ ಬಗ್ಗೆ ನಡೆಯಲಿರುವುದು. ಅಭಾವ ಪೀಡಿತ ಪ್ರದೇಶಗಳಲ್ಲಿ ಭೂಕಂದಾಯ ಮತ್ತು ತಕಾವಿ ಸಾಲಗಳ ವಸೂಲಿಯನ್ನು ಮುಂದಕ್ಕೆ ಹಾಕಲಾಗಿದೆ. ಎಲ್ಲೆಲ್ಲಿಂದಲೋ ಆಹಾರ–ಹುಲ್ಲುಗಳನ್ನು ಪೂರಯ್ಸುವ ಕಾರ್ಯವೂ ಬಿರುಸಿನಿಂದ ಆರಂಭವಾಗಿದೆ.

ಕರ್ನಾಟಕಕ್ಕೆ ಬರಗಾಲವೇನೂ ಹೊಸತಲ್ಲ. ಪ್ರತಿ ವರ್ಷವೂ ರಾಜ್ಯದ ಕೆಲವೆಡೆ ಅನಾವೃಷ್ಟಿ, ಇನ್ನು ಕೆಲವೆಡೆ ಅತಿವೃಷ್ಟಿ ಸಹಜವೇ. ಆದರೆ, ಈ ವರ್ಷ ಒಟ್ಟಿನಲ್ಲಿ ಅನಾವೃಷ್ಟಿಯೆಂದರೇ ಸರಿಹೋದೀತು. ಪರಿಹಾರ ಕಾಮಗಾರಿಗಳು ವಿಪುಲವಾಗಿ ನಡೆಯಬೇಕಾದೀತು. ಇದಕ್ಕೆ ಬರಿಯ ಐದು ಕೋಟಿ ರೂಪಾಯಿಗಳು ಏನೇನೂ ಸಾಲದು. ಕೇಂದ್ರ ಸರಕಾರದಿಂದ ಈ ಬಗ್ಗೆ ಸಹಾಯವನ್ನು ಪಡೆದುಕೊಳ್ಳುವ ಪ್ರಯತ್ನ ಅಗತ್ಯವಾಗಬಹುದು. ಅಭಾವ ಪೀಡೆಯನ್ನು ಎದುರಿಸಲು ರಾಜ್ಯದಲ್ಲಿ ಶಾಶ್ವತವಾದ ಪ್ರಯತ್ನ ಅಗತ್ಯವೆನಿಸುತ್ತದೆ. ಈ ದೃಷ್ಟಿಯಿಂದ ಪರಿಹಾರ ಕಾಮಗಾರಿಗಳನ್ನು ತೊಡಗುವುದು ಉಚಿತವೆನಿಸುತ್ತದೆ. ಬಾವಿಗಳನ್ನು ತೋಡುವುದು ಹೊಳೆ, ಹಳ್ಳ–ಕೆರೆಗಳ ಹೊಳುತೆಗೆಯುವುದು—ಮುಂತಾದುವುಗಳಿಂದ ಪರಿಹಾರ ಕಾಮಗಾರಿ ಮತ್ತು ಬರಗಾಲವನ್ನೆದುರಿಸುವ ಸಾಧನವೆರಡೂ ಸಿದ್ಧಿಸುತ್ತವೆ. ಕೋಟಿಗಟ್ಟಲೆ ಹಣ ಮರಳಲ್ಲಿ ಸುರಿದ ಎಣ್ಣೆಯಾಗುವುದಿಲ್ಲ. ಆದುದರಿಂದ ರಾಜ್ಯಪಾಲರೂ ತತ್ಸಂಬಂಧಿತ ಅಧಿಕಾರಿಗಳೂ ಹಣದ ಬಳಕೆ ಸಾರ್ಥಕವಾಗುವಂತೆ ಎಚ್ಚರಿಕೆ ವಹಿಸಬೇಕು.

❁ ❁

In the Court of the Munsiff of Buntwal

P. & S. C. No. 3/1970

Between:

Lakshmi Amma and others ... Petitioners.

and

Shankeranarayana Rao ... Respondent.

To

The Respondent.
Shankeranarayana Rao.
S/o Nagappayya.
Residing at Venoor.

Please take notice that the above matter for the issue of a Succession Certificate in favour of 1st petitioner has been posted to 16—8—1971 for your appearance. If you intend to appear you should do so personally or through authorised advocate on 16—8—71 at 11 O'Clock. On your failure to appear the matter will be decided in your absence treating you ex parte.

/ By the order of court /

E. Venkateshwar Bhat,
Advocate for Petitioner.

B. C. Road, 6-8-'71.

ಪುತ್ತೂರು II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

Ex. 161/71 S.C. 89/70

ರಾಮಕೃಷ್ಣ ನ್ಯಾಕ — ಅರ್ಜಿದಾರ

ಮತ್ತು

ಕುಶಾಲಪ್ಪ ಗೌಡ — ಎದ್ರಿ

ಎದ್ರಿ:– ಕುಶಾಲಪ್ಪ ಗೌಡ, ಸುಬ್ಬಪ್ಪ ಗೌಡರ ಮಗ, ನೆಲ್ಲೂರು ಕೆಮ್ರಾಜೆ ಗ್ರಾಮ, ಸುಳ್ಯ ತಾಲ್ಲೂಕು.

ಮೇಲಿನ ಅಮಲ್ದಾರಿಯಲ್ಲಿ ಏಲಂ ಇಸ್ತಿಹಾರಿನ ಶರ್ತ ವಗೈರೆಗಳನ್ನು ನಿರ್ಣೈಸುವ ತಾರೀಕು 2-9-71ಕ್ಕೆ ನ್ಯಾಯ ಇರುತ್ತದೆ. ಆದುದರಿಂದ ನೀವು ಆ ದಿವಸ ಬೆಳಿಗ್ಗೆ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ಉದಾಪರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಸ್ತಾ ಮಾಡಿ ತೀರ್ಮಾನ ಮಾಡಲಾದೀತು ಎಂತ ಈ ಮೂಲಕ ನಿಮಗೆ ತಿಳಿಯಪಡಿಸೋಣಾಗಿದೆ.

/By order/

Sd/ N. Subramanyam
Advocate for Petitioner

READ & ADVERTISE IN NAVAYUGA WEEKLY

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

Ex C. 127/71 O. S. 550/66

K. ಶ್ರೀಧರ ಭಟ್ಟ— ಅರ್ಜಿದಾರ

— *Vs* —

ರಾಮಣ್ಣ ಗೌಡ ಸಹಾ— ಎದ್ರಿರು

5. ಅನಂತ, ರಾಮಣ್ಣ ಗೌಡರ ಮಗ, ಬಂಟ್ವಾಳ ತಾಲ್ಲೂಕು ವಿಟ್ಲಮುಡ್ನೂರು ಗ್ರಾಮದ ಡೆಚ್ಚಾರು. ಇವರಿಗೆ—

ಮೇಲ್ಕಂಡ ಅರ್ಜಿದಾರರು ನಿಂಮ ಬಾಬ್ತು ಸ್ಥಿರಾಸ್ತಿ ಏಲಂನ ಕುರಿತು ಮಾಡಿದ ಅರ್ಜಿಯು ನಿಮ್ಮ ಹಾಜರಿ ಬಗ್ಗೆ ತಾರೀಕು 27-8-71ಕ್ಕೆ ಇಟ್ಟಿದೆ. ಆ ದಿವಸ ನೀವು ಸ್ವತಹ ವ ವಕೀಲರ ದ್ವಾರಾ ಹಾಜರಾಗಿ ಉಜಾಪರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಕೋರ್ಟು ಹುಕುಂ ಪ್ರಕಾರ

Sd/- K. RAMA BHAT
Advocate for Petitioner

ಬಂಟವಾಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 268/1970

ಯಂ. ಈಶ್ವರ ಭಟ್ಟ — ವಾದಿ

ಮತ್ತು

ಗಿರಿಜಮ್ಮ ಕೂಡಾ — ಪ್ರತಿವಾದಿರು

6ನೇ ಪ್ರತಿವಾದಿ, ಯಂ. ಶಂಕರ ಭಟ್ಟ, ಮಾಪಣ್ಣ ಭಟ್ಟರ ಮಗ, ಬಂಟವಾಳ ತಾಲೂಕು ಮಾಣಿ ಗ್ರಾಮದ ಪಟ್ಲತೋಡಿಯೆಂಬಲ್ಲಿರುವವರಿಗೆ

ಮೇಲ್ಕಂಡ ವ್ಯಾಜ್ಯವು ತಾ. 16-8-71ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತೆ. ಆ ದಿನ ಹಗಲು ಹನ್ನೊಂದು ಗಂಟೆಗೆ ನೀವು ವ ನಿಮ್ಮ ವಕೀಲರು ಹಾಜರಾಗಲು ತಪ್ಪಿದರೆ ನಿಮ್ಮ ಶಿಸ್ತಾ ಡಿಕ್ರಿ ಮಾಡಲಾದೀತು.

ಇ. ವೆಂಕಟೇಶ್ವರ ಭಟ್
ವಾದಿ ಕಡೆ ಎಡ್ವೋಕೇಟ್

ಬಿ.ಸಿ. ರೋಡು, 6-8-71.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ — **English Made Easy**

ಅನ್ಯರ ಸಹಾಯವಿಲ್ಲದೆ ತನ್ನಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಬೆಲೆ : ರೂ. 2—00

●

Letter Writing Made Easy — **ಸುಲಭದಲ್ಲಿ ಪತ್ರಲೇಖನ**

ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ. ಬೆಲೆ : ರೂ. 1—50

●

ಗೀತೆಯ ಕೈಗನ್ನಡಿ — ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಗೆ ಬೆಲೆ: ರೂ. 2–00

●

ಮನೆ-ಮದ್ದು — **Home Remedies**

ಡಾ| ವಿ. ಆರ್. ಕೊರಡ್ಕಲ್‌ರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ. ಹೆರಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ : ರೂ. 2–00

ವಿ. ಸೂ. ವಿ. ಪಿ. ಮಾಡುವುದಿಲ್ಲ. ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಅಂಚೆ ವೆಚ್ಚ ಸೇರಿಸಿ ಮನಿಯಾರ್ಡರು ಮಾಡಿದರೆ ಬುಕ್ ಪೋಸ್ಟ್ ಮಾಡಲಾಗುವುದು.

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪಾವನ ಪವನ

(ನಾಲ್ಕನೇ ಪುಟದಿಂದ)

ಮರುದಿನ ಮನೋಜನು ಸುಮನಳ ಬಳಿ ಸರಿತಾಳ ಮನೆಗೆ ಊಟಕ್ಕೆ ಬರುತ್ತಿಯೇನೆಂದು ಕೇಳಿದಾಗ ಅವಳು, ನಾನಿಲ್ಲಿಯೇ ಇರುವದಕ್ಕೂ ಅಲ್ಲಿಗೆ ಬರುವದಕ್ಕೂ ಏನಾದರೂ ವ್ಯತ್ಯಾಸವಿದೆಯೇನೆಂದು ಮರು ಪ್ರಶ್ನೆಹಾಕಿದಳು.

ಅವನು ಹೋದ ಮೇಲೆ ಆಕೆಗೆ ಬಹಳ ಬೇಸರವಾಯಿತು. ಅದೆಂತಹ ಆಶಾಗೋಪುರಗಳನ್ನು ಕಟ್ಟಿಕೊಂಡು ಆಕೆ ಬೊಂಬಾಯಿ ಮಹಾನಗರಕ್ಕೆ ಬಂದಿದ್ದಳು!

ತಾನು ಊರಿನಿಂದ, ಹೆತ್ತವರಿಂದ ದೂರವಾಗಿದ್ದೇನೆಂಬ ಪ್ರತ್ಯೇಕತೆಯು ಅನುಭವ ಆಕೆಗುಂಟಾಯಿತು. ಆಗ, "ಹೇ, ಸುಮನ ಹಳೆಯ ಹುಡುಗಿ ಹೇಗಿದೆ ಜೀವನ"ವೆಂಬ ಮಾತು ಕೇಳಿಬಂತು. ಅವಳಿಗೆ ಆಶ್ಚರ್ಯವಾಯಿತು.

"ಅರೇ, ಅಮಿತ! ಎಂತಹ ಆಶ್ಚರ್ಯ! ಹೇಗೆ ಬಂದೆ?"

"ಒಂದು ಸಂದರ್ಶನ.... ಮತ್ತು, ಹೌದು, ನೀನು." ಹುಬ್ಬು ಹಾರಿಸುತ್ತ ಹೇಳಿದ ಅಮಿತ, "ಹೊರಗೆ ಹೋಗೋಣವೇ ಸುಮನ, ಅದು ನಿನ್ನ ಮುದುಕಪ್ಪ ಅಡ್ಡಿ ಬರದಿದ್ದಲ್ಲಿ."

ಆಮಂತ್ರಣವನ್ನು ನಿರಾಕರಿಸಬೇಕೆಂದಾಕೆ ಮನಸ್ಸು ಮಾಡಿದಳು. ಆದರೆ ಅಮಿತ ಅದೇನು ತಿಳಿದುಕೊಳ್ಳುತ್ತಾನೋ! ಏಕಾಂತತೆ ಅವಳನ್ನು ಅತೀವ ಹಿಂಸಿಸುತ್ತಿತ್ತು, ಅವನೊಂದಿಗೆ ಅವಳು ಹೊರಹೊರಟಳಾದರೂ ಇನ್ನೊಮ್ಮೆ ಹೀಗಾಗ ಬಾರದೆಂದು ಯೋಚಿಸಿಕೊಂಡಳು. ತನ್ನ ಮನಸ್ಸಿನ ತುಮುಲ ಅವನಿಗೆ ಅರಿವಾಗಬಾರದೆಂದು ಆಕೆ ಹಸನ್ಮುಖಿಯಾಗಿರಲು ಪ್ರಯತ್ನಿಸುತ್ತಿದ್ದಳಾದರೂ ಅವನ ಪ್ರಶ್ನೆಯಿಂದ ತಪ್ಪಿಕೊಳ್ಳಲಾಗಲಿಲ್ಲ.

'ನೀನು ಸಂತೋಷದಲ್ಲಿರುವಂತೆ ಕಂಡು ಬರುವುದಿಲ್ಲ, ಅದೇಕೆ ಸುಮನ.'

'ನಾನೇತಕ್ಕೆ ಅಸಂತೋಷದಿಂದಿರಬೇಕು? ಈ ಪ್ರಪಂಚದಲ್ಲಿ ಮನೋಜನೇ ಅತ್ಯುತ್ತಮ ಗಂಡ.'

"ಅದು ಕೇಳಲಿಕ್ಕೆ ಚೆನ್ನಾಗಿದೆ. ಹೇಗೂ ನಾನಿಲ್ಲಿ ಒಂದು ವಾರ ಇದ್ದೇನೆ. ಅದನ್ನು ನೋಡುತ್ತೇನೆ. ನಾನೀಗ ಬಹಳ ಸುಧಾರಣೆ ಹೊಂದಿದ್ದೇನೆ, ನೋಡೇ ಸುಮನ."

"ನಿನಗೆ ಬೇಕಾದಾಗ ಬಾ ಅಮಿತ. ಈಗ ಕವಿಸಮ್ಮೇಳನದಿಂದಾಗಿ ಅವರು ಗಡಿಬಿಡಿಯಲ್ಲಿದ್ದಾರೆ."

'ಹಾಂ. ಹೌದು, ಆ ವಿಷಯ ನಾನು ಕೇಳಿದ್ದೇನೆ. ಸರಿತಾ ಸರಿನ್ ಸಹ ನಗರದಲ್ಲಿರುವಂತಿದೆ. ಅವರು 'ಹೆಂಡಂದಿರು ಹುಷಾರ್'ಎಂಬ ಫಲಕವನ್ನು ಹಾಕಿದಲ್ಲಿ ಒಳ್ಳೆಯದೆಂದು ನಾನೆಣಿಸುತ್ತೇನೆ.'

ಅವಳ ಮನಸ್ಸಿನಲ್ಲಿ ಭೀತಿಯುಂಟಾಯಿತು. ಈಗ ಅವನ ಒಡನಾಟವನ್ನು ತಪ್ಪಿಸಿಕೊಳ್ಳುವ ಸ್ಥಿತಿಯಲ್ಲೂ ಅವಳಿರಲಿಲ್ಲ.

ಹಿಂದಕ್ಕೆ ಬಂದಾಗಲೂ ಹಾಗೆಯೇ. ಅವನ ಹಾಸ್ಯ ನುಡಿ, ಚುಟುಕುಗಳು ಅವಳಿಗೆ ಸಂತೋಷವನ್ನುಂಟು ಮಾಡಿದ್ದುವು. ತಾರುಣ್ಯರ ತಮಾಷೆಯ ಮಾತುಗಳನ್ನವನಾಡಿದಾಗಲಂತೂ ನಗದಿರಲು ಆಕೆಗೆ ಸಾಧ್ಯವಾಗಲಿಲ್ಲ. ಮನೆಯ ಹತ್ತಿರ ಬಂದಾಗ ಅವನು ಅವಳ ಕೈಗಳನ್ನು ಹಿಡಿದು ಅದುಮಿದಾಗ ಅವಳಿಗೆ ಪಕ್ಕನೆ ಎಚ್ಚರವಾಯಿತು. ಒಂದು ರೀತಿಯ ಭಯವೂ ಆಯಿತು. ಅವನ ಮಾತುಕತೆ ಅವಳಿಗೆ ಅತೀವ ಅಪ್ಯಾಯಮಾನವಾಗಿತ್ತು.

ಮನೆಯಲ್ಲಿ ಮನೋಜನು ಹಿಂತಿರುಗಿದ್ದನು. 'ನಾನಿಷ್ಟು ಬೇಗ ಬರುತ್ತೇನೆಂದು ತಿಳಿದುಕೊಂಡಿರಲಿಲ್ಲ. ಆದರೆ, 'ನೀನು ಹೊರಗೆ ಹೋಗಿದ್ದೀಯೆಂದು ಕಾಣುತ್ತದೆ.'

ಮನೋಜನ ಮಾತು ಸುಮನಳಿಗೆ ಸರಿಕಂಡು ಬರಲಿಲ್ಲ. ಅವಳು ಉದ್ವೇಗದಿಂದ, "ಅಂದರೆ ನೀವು ಇಲ್ಲದಿದ್ದಲ್ಲಿ ನಾನು ಹೊರಹೋಗ ಬಾರದೆಂದಂತೆ ಕಾಣುತ್ತದೆ"ಎಂದು ತಟ್ಟನೆ ಹೇಳಿದಳು, ಅವನು ಆಕೆಯನ್ನು ಹತ್ತಿರಕ್ಕೆಳೆದುಕೊಂಡು ಆಕೆಯ ತೋಳಿನೊಂದಿಗೆ ತನ್ನ ತೋಳನ್ನು ಸೇರಿಸಿದನು.

ಮರುದಿನ ಸಾಯಂಕಾಲ ಮನೋಜನ ಮನಸ್ಸನ್ನು ಮುದಗೊಳಿಸಬೇಕೆಂದಾಕೆ ಚಂದದ ಸೀರೆಯನ್ನುಟ್ಟು ಅಲಂಕರಿಸಿಕೊಂಡಳು. ಅಷ್ಟರಲ್ಲಿ ಸರಿತಾ ಅಲ್ಲಿಗೆ ಬಂದಳು. ಅಬ್ಬಾ! ಅವಳ ಅಲಂಕಾರವೇ! ಅವಳೆದುರಿನಲ್ಲಿ ತಾನೊಂದು ಹಳ್ಳಿಗೊಡ್ಡು.

ಪ್ರತಿ ದಿನ ಹೀಗೆ ಏನಾದರೂ ನಡೆಯಲಾರಂಭಿಸಿತು. ಕೋಣೆಯಲ್ಲಿ ಟೈಪ್‌ರೈಟರಿನ ಸದ್ದಡಗಿದಾಗ ಅವಳು ಕಾಫಿ ಕೊಂಡುಹೋಗುತ್ತಿದ್ದಳು. ಆಗ ಅವನು ಕಿಟಕಿಯಿಂದ ದಿಗಂತದಾಚೆ ನೋಡುತ್ತಿರುತ್ತಿದ್ದನು. ಅವಳು ಬಂದಿರುವದು ಗೊತ್ತಾದೊಡನೆ ಪುನಃ ತನ್ನ ಕೆಲಸಕ್ಕಾರಂಭಿಸುತ್ತಿದ್ದನು. ಅವನ ಮನಸ್ಸನ್ನು ಕೊರತೆಯು ಕೀಟ ಕೊರೆಯುತ್ತಿತ್ತು. ಅದಕ್ಕೆ ಅವಳು ಮಾಡಿಕೊಂಡ ಅರ್ಥವೇ ಬೇರೆ. ಮನೋಜನಿಗೆ ಸರಿತಾಳೇ ಸರಿ.

ಆ ರೀತಿ ಅವಳು ಆಲೋಚನೆಯ ಅಲೆಗಳ ಮೇಲೆ ಸವಾರಿ ಮಾಡುತ್ತಿದ್ದಾಗ ಅವಳನ್ನು ದಡಕ್ಕೆ ಕರೆದುತಂದು ಬೇರೆ ಪ್ರಪಂಚಕ್ಕೆ ಕೊಂಡೊಯ್ಯುತ್ತಿದ್ದವನು ಅಮಿತ. ಸನ್ನಿವೇಶವು ಅತನ ಸ್ನೇಹವನ್ನು ಆಕೆಗೆ ಬೇಕು ಮಾಡಿಸಿತ್ತು. ಮನೋಜನಾಡಿರುವ ಮಾತುಗಳು, ಆ ಸುಖದ ದಿನಗಳು.... ಲೇಖಕರೆಲ್ಲಾ ಹೀಗೆನೇ ಇರಬಹುದು. ಅವರು ಮುಡಿಸುವದು ಮಾತಿನ ಮಲ್ಲಿಗೆಯನ್ನು, ವಿಹಾರಕ್ಕುಪಯೋಗಿಸುವದು ಕಲ್ಪನೆಯ ಕುದುರೆಗಳನ್ನು, ಮೆಲ್ಲುತ್ತಿರುವದು ಮನಸ್ಸಿನ ಮಂಡಿಗೆಯನ್ನು, ವಾಸಿಸುತ್ತಿರುವದು ಗಾಳಿಗೋಪುರಗಳಲ್ಲಿ....ಇಲ್ಲದಿದ್ದಲ್ಲಿ ಸರಿತಳನ್ನು ಬಿಟ್ಟು ತನ್ನನ್ನೇತಕ್ಕೆ ಮನೋಜ ಮದುವೆಯಾದರು? ನನ್ನ ಬಳಿ ಹಾಗೆಲ್ಲಾ ಅಂದು ಮಾತಾಡಿದವರು ಈಗ ಸರಿತಾಳ ಸಾನ್ನಿಧ್ಯದಲ್ಲಿ? ಅವಳ ಕೊರಗು ಅದು. ಕಣ್ಣುಗಳಲ್ಲಿ ನೀರುತುಂಬಿತು. ಹಾಗೆಯೇ ಹಾಸಿಗೆಯನ್ನು ಆಶ್ರಯಿಸಿದಳಾಕೆ.

ಹೀಗೆ ಯೋಚಿಸುತ್ತಿದ್ದಾಗ ಸಾಯಂಕಾಲ ಅಮಿತನು ಬಂದನು. ಅವನು ಕೇವಲ ಸ್ನೇಹಿತನಂತೆ ಬರುತ್ತಿದ್ದಾನಲ್ಲದೆ ಅವನ ಮನಸ್ಸಿನಲ್ಲಿ ಬೇರಿನ್ನಾವ ಭಾವನೆಯೂ ಇರಲಿಕ್ಕಿಲ್ಲವೆಂಬದು ಅವಳ ಅಭಿಪ್ರಾಯ. ಅಂದು ಚಳಿಯಾಗುತ್ತಿದ್ದು ಹವೆ ತಂಪಾಗಿತ್ತು. ಉಣ್ಣೆಯಂಗಿಯನ್ನು ತೆಗೆದುಕೊಂಡು ಅವನೊಂದಿಗೆ ತಿರುಗಾಡಲು ಹೊರಟಳು.

'ಇದುವೇ ನಮ್ಮ ಕೊನೆಯ ದಿನ. ನಾವಿಂದು ಒಟ್ಟಿಗೆ ಹೋಟೆಲಿನಲ್ಲಿ ಊಟ ಮಾಡೋಣ'. ಅಮಿತನ ಆಹ್ವಾನವನ್ನು ನಿರಾಕರಿಸಬೇಕೆಂದಾಕೆ ಬಾಯಿ ತೆರೆದಾಗ ಅವನ ಮುಖವನ್ನು ನೋಡಿದ ಮೇಲೆ 'ನಾಯಿಲಿ' ಅಂದುಕೊಂಡಳು. ಆದರೆ ಮನೆಯಲ್ಲಿ ಮನೋಜ ಒಬ್ಬರೇ ಇರುತ್ತಾರೆ....ಚಿಂತಿಲ್ಲ....ಒಂದು ದಿನ ತಾನೇ....ಅವಳದ್ದೇ ಸಾಂತ್ವನ.

ಸತ್ಕಾರದೂಟದ ಸಮಯ ಅವನು ನಾನಾತರದ ಪಾನೀಯಗಳಿಗೆ ಹೇಳಿದನು. ಮೆಲ್ಲನೆ ಆಕೆಯ ತೋಳನ್ನು ಸವರಿದನು. ಒಡನೆ ಆಕೆ ಉಣ್ಣೆಯಂಗಿಯನ್ನು ಹಾಕಿಕೊಂಡಳು. ಸತ್ಕಾರದೂಟದ ಅರ್ಥ ಈಗ ಅವಳಿಗಾಯಿತು. ಅವಳು ಅಲ್ಲಿಂದ ತಪ್ಪಿಸಿಕೊಂಡು ಅವನ ಮನಸ್ಸಿಗೆ ನೋವುಂಟು ಮಾಡಲಿಷ್ಟಪಡಲಿಲ್ಲ. ಅವನು ಕುಡಿದು ಯದ್ವಾತದ್ವಾ ಆಡಲಾರಂಭಿಸಿದನು; ನಿಲ್ಲಲು ಪ್ರಯತ್ನಿಸಿದರೂ ಅವನಿಗೆ ಸಾಧ್ಯವಾಗುತ್ತಿರಲಿಲ್ಲ. 'ಸುಮಾ....ಅವನು ಮಧ್ಯೆ ಪ್ರವೇಶಿಸುವ ಮುಂಚೆ ನೀನು ನನ್ನವಳಾಗಿದ್ದಿ. ನಾವು ಮದುವೆಯಾಗಬಹುದಿತ್ತು. ಮನೋಜನು ಸರಿತಳನ್ನು ಮದುವೆಯಾಗಲಿ. ನಾನು ನಿನ್ನ ಸಮಾನನೆ ನನ್ನ ಪ್ರಾಯ....' ತೊದಲಾಡುತ್ತ ಅವನು ಅವಳ ಕೈ ಹಿಡಿಯಲು ಪ್ರಯತ್ನಿಸಿದನು. ಇನ್ನು ಮುಂದರಿಯಲು ಬಿಡುವದು ಲಕ್ಷಣವಲ್ಲವೆಂದು ತಿಳಿದುಕೊಂಡ ಸುಮನ ಒಡನೆ ತನ್ನ ಚೀಲವನ್ನೆತ್ತಿಕೊಂಡು ಹೊರಗೆ ಬಂದುಬಿಟ್ಟಳು. ಅವಳು ಅವಸರ ಅವಸರದಿಂದ ಮನೆ ತಲುಪಿದಳು ಮನೋಜನೂ ಅದಾಗಲೇ ಬಂದಿದ್ದನು. ಅದನ್ನು ಕಂಡ ಸುಮನ, 'ಇವತ್ತಿನ ಸತ್ಕಾರದೂಟಕ್ಕೆ ನೀವು ಹೋಗಿಲ್ಲ!' ಆಶ್ಚರ್ಯದಿಂದ ಕೇಳಿದಳು.

"ನನಗದೆಲ್ಲಾ ಸಾಕಾಗಿ ಹೋಯಿತು. ನೀನಿಲ್ಲದಿದ್ದಲ್ಲಿ ನನಗೆ ಕಡು ಬೇಸರವೆನಿಸುತ್ತದೆ, ಸುಮನ."

'ಛೆ, ಮನೋರಾಜ್! ಇನ್ನೂ ನನ್ನನ್ನು ಪ್ರೀತಿಸುತ್ತೀರಿ. ಸರಿತಳನ್ನು ಬಿಟ್ಟದ್ದಕ್ಕೆ ಪಶ್ಚಾತ್ತಾಪ ಪಡುವದಿಲ್ಲವೇ?'

'ನಾನು ನಿನಗೆ ಅದೆಷ್ಟು ಬಾರಿ ಹೇಳಲ್ಲ–ನನಗೆ ಬೇಕಾಗಿರುವದು ನೀನು. ಸರಿತಳನ್ನು ಮದುವೆಯಾಗುತ್ತಿದ್ದಲ್ಲಿ ನನ್ನ ಉಸಿರು ಕಟ್ಟಿ ಹೋಗುತ್ತಿತ್ತು. ನೀನು ಪಾವನ ಪವನ. ನನಗೆ ಬೇಕಾಗಿರುವದು ಅದೇ. ಎಂದೆಂದಿಗೂ ಅದೇ ಬೇಕು.'

"ಹಾಗಾದರೆ ಅವಳು ಬಂದಂದಿನಿಂದ ಏನೋ ಕಳೆದುಕೊಂಡವರಂತೆ ನೀವೇಕೆ ಕಷ್ಟ ವ್ಯಸನಾಕ್ರಾಂತರಾಗಿದ್ದೀರಿ.?"

'ಸರಿ, ನೀನು ಕೇಳುವಾಗ ನಾನು ತಿಳಿಸಲೇ ಬೇಕಾಗಿದೆ. ಕಾರಣ ಬೇರೆಯೇ ಇದೆ. ನನ್ನ ಮನಸ್ಸಿನಲ್ಲಿರುವದು ನೀನು ಮತ್ತು ಅಮಿತ...."

"ನೀವು ಹೇಳಲು ಹೋಗುತ್ತಿರುವದಾದರೂ ಏನು? ಅಮಿತ ಮತ್ತು ನಾನು ಹಳೆಯ ಗೆಳೆಯರು, ಆದರೂ....'

"ಅವನು ಬಂದಾಗಲೆಲ್ಲಾ ನಿನ್ನನ್ನು ಸಂತೋಷಗೊಳಿಸುತ್ತಿದ್ದನು. ಅವನು ತರುಣನು, ಯುವಕನು ಮತ್ತು ಉತ್ಸಾಹ ಶಾಲಿ, ನೀನು ಬಯಸುತ್ತಿದ್ದಲ್ಲಿ ಅದೆಂತಹ ಯುವಕರನ್ನು ಮದುವೆಯಾಗಬಹುದಾಗಿತ್ತು. ಅದೆಷ್ಟೋ ಜನರು ನಿನ್ನ ಪ್ರೀತಿಗಾಗಿ ಪರಿತಪಿಸುತ್ತಿದ್ದಿರಬಹುದು. ಈ ಮಧ್ಯೆ ನಾನು ಪ್ರವೇಶಿಸಿದುದು ತಪ್ಪೆನ್ನಿಸುತ್ತದೆ. ನಾನು ಸ್ವಾರ್ಥಿಯಾದ್ದು ನಿನಗೆ ಅನ್ಯಾಯ ಮಾಡಿದೆನೆಂದೆನಿಸುತ್ತದೆ. ಆದರೆ ನಾನು ನಿನ್ನನ್ನು ಅದೆಷ್ಟು ಪ್ರೀತಿಸುತ್ತೇನೆಂದರೆ ನಿನ್ನನ್ನು ಬಿಟ್ಟು ಜೀವನ ಅರ್ಥಶೂನ್ಯವೆನಿಸುತ್ತದೆ.'

ತಾನು ತಿಳಿದುಕೊಂಡದ್ದು ಒಂದು, ಮನೋಜ ಅಂದದ್ದು ಇನ್ನೊಂದು. ತನ್ನ ಕಲ್ಪನೆಯ ಕುದುರೆ ಅತ್ತ ಹೊಡೆದಿತ್ತು.

'ಪ್ರತಿಯೊಬ್ಬರೂ ನಿಮಗೆ ಸರಿತಳೇ ಸರಿಯಾದವಳೆಂದು ತಿಳಿದುಕೊಂಡಿದ್ದಾರೆ.'

'ಹಾಗಿದ್ದಲ್ಲಿ ಅವರಿಗೆ ನನ್ನ ವಿಷಯ ಅದೇನೂ ಗೊತ್ತಿರುವದಿಲ್ಲ. ನೀನೇ ನನಗೆ ಹೇಳಿಸಿರುವ ಹೆಣ್ಣು.' ಅವನು ತನ್ನ ಬಾಹುಗಳನ್ನು ಆಕೆಯ ಭುಜದ ಮೇಲೆ ಹಾಕಿ ಆಕೆಯನ್ನು ಬರಸೆಳೆದುಕೊಂಡನು.

(೧೧.೪.೭೧—ದಿ ಸಂಡೇ ಸ್ಟ್ಯಾಂಡರ್ಡ್‌ನಲ್ಲಿ ಪ್ರಕಟವಾಗಿರುವ ಡೊರಿಸ್ ಶಿರೀನ್ ಫ್ರೈಯವರ 'ಎಬ್ರೆತ್ ಆಫ್ ಫ್ರೆಶ್ ಏರ್' ಕಥೆಯ ಭಾವಾನುವಾದ ಅನುಮತಿ ವಿಹಿತ)

● ●

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫ್ಯಾಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಬಂಗ್ಲಾ ಬಂಧುಗಳಿಗೆ ವೈದ್ಯರ ಮನೋಜ್ಞ ಸೇವೆ

ಪಶ್ಚಿಮ ದಿನಾಜಪುರದಲ್ಲಿರುವ ಬಲೂರ್‌ಘಾಟನಿಂದ 28 ಕಿಲೋಮೀಟರ್ ದೂರದಲ್ಲಿರುವ ಕುಮಾರ್‌ಗಂಜಿ ಎಂಬ ಸಣ್ಣ ಹಳ್ಳಿಯಲ್ಲಿ ಮಾನವತೆಗಾಗಿ ಕಂಕಣ ಬದ್ಧ ಸೇವೆ ಸಲ್ಲಿಸುತ್ತಿರುವ ಅಪೂರ್ವ ಪ್ರಸಂಗವನ್ನು ಕಣ್ಣಾರೆ ನೋಡಬಹುದು. ಜಮ್ಮು—ಕಾಶ್ಮೀರದಿಂದ ಬಂದಿರುವ ವೈದ್ಯರು; ತಂಡವು ಈ ಪ್ರದೇಶದಲ್ಲಿ ಕಾರ್ಯಶೀಲರಾಗಿದ್ದಾರೆ. ಈ ತಂಡವುಬಂಗ್ಲಾ ದೇಶದ ನಿರಾಶ್ರಿತರಿಗೆ ಎಲ್ಲಾ ಬಗೆಯ ವೈದ್ಯಕೀಯ ಪರಿಹಾರ ಒದಗಿಸಿ, ನಿರ್ಮಲೀಕರಣಕಾರ್ಯದ ಬಗ್ಗೆ ಕ್ರಮಕೈಗೊಳ್ಳುತ್ತಿದೆ.

ಕೇಂದ್ರ ಆರೋಗ್ಯ ಶಾಖೆಯು ಈ ಪ್ರದೇಶದಲ್ಲಿ ನೆಲೆಸಿರುವ 40 ಸಾವಿರ ಕುಟುಂಬಗಳ ಅಗತ್ಯ ಪೂರೈಸಲೆಂದು ನಾಲ್ಕು ವೈದ್ಯರು ಹಾಗೂ 18 ಆರೋಗ್ಯ ಕಾರ್ಯಕರ್ತರ ತಂಡವನ್ನು ಕಳುಹಿಸಿಕೊಟ್ಟಿದೆ. ಈ ವೈದ್ಯರು ಜೂನ್ 18ನೇ ದಿನಾಂಕ ದಿಂದೀಚೆಗೆ ಆಮಶಂಕೆ, ಕಾಮಾಲೆ ಮತ್ತಿತರ ರೋಗಗಳಿಂದ ನರಳುತ್ತಿದ್ದ 6500 ಕ್ಕಿಂತಲೂ ಹೆಚ್ಚು ರೋಗಿಗಳಿಗೆ ಚಿಕಿತ್ಸೆ ಮಾಡಿದ್ದಾರೆ. ಈ ಅವಧಿಯಲ್ಲಿ 1200 ಕ್ಕಿಂತಲೂ ಹೆಚ್ಚು ಮಂದಿಗೆ ಕಾಲರಾ ವಿರೋಧಿ ಲಸಿ ಹಾಕಲಾಯಿತು. 1100ಕ್ಕಿಂತಲೂ ಹೆಚ್ಚು ಮಂದಿಗೆ ಸಿಡುಬು ನಿರೋಧಕ ಲಸಿ ಹಾಕಲಾಯಿತು. ನಿರಾಶ್ರಿತ ಬಂಗ್ಲಾ ಜನತೆಯಲ್ಲಿ ಕಾಲರಾ ಮತ್ತಿತರ ರೋಗಗಳನ್ನು ನಿಯಂತ್ರಿಸಿರುವುದರಿಂದ, ವೈದ್ಯರು ನಿರಾಶ್ರಿತ ಮಕ್ಕಳ ಅಶಕ್ತತೆ ಹಾಗೂ ಪೋಷಕ ಆಹಾರದ ಅಭಾವದ ನಿವಾರಣೆಗಾಗಿ ಗಮನ ಕೇಂದ್ರೀಕರಿಸಿದ್ದಾರೆ.

ಜಮ್ಮು–ಕಾಶ್ಮೀರದಿಂದ ಬಂದಿರುವ ಈ ವೈದ್ಯತಂಡವು ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ದೃಷ್ಟಿಯಿಂದ ನಿರಾಶ್ರಿತರ ವಸತಿ ಪ್ರದೇಶದಲ್ಲಿ ಪಾಕೀಜು ವ್ಯವಸ್ಥೆ ಏರ್ಪಡಿಸಿದೆ. ನಿರಾಶ್ರಿತರ ಬಳಗದಲ್ಲಿರುವ ಕಾರ್ಮಿಕರನ್ನು ದಿನಗೂಲಿಯ ಮೇಲೆ ನೇಮಕ ಮಾಡಿ ಅವರಿಂದ ವಸತಿ ಪ್ರದೇಶವು ನಿರ್ಮಲವಾಗಿರುವಂತೆ ನೋಡಿಕೊಳ್ಳಲಾಗುತ್ತಿದೆ.

ನೈರ್ಮಲ್ಯದ ಪ್ರತೀಕ

ಈ ವೈದ್ಯತಂಡವು ಪ್ರದರ್ಶಿಸಿದ ಉತ್ಸಾಹ ಹಾಗೂ ನೀಡಿದ ಆರೋಗ್ಯ ಶಿಕ್ಷಣದ ಫಲವಾಗಿ ಕುಮಾರಗಂಜಿನ ಅರಣ್ಯಪ್ರದೇಶ ಹಾಗೂ ಗ್ರಾಮಪ್ರದೇಶದ ಶಿಬಿರಗಳು ನೈರ್ಮಲ್ಯದ ಜೀವಂತಪ್ರದೇಶಗಳಾಗಿವೆ. ಅಲ್ಲಿ ಮಳೆ ಮತ್ತಿತರ ತೊಂದರೆಯಿದ್ದರೂ ನೈರ್ಮಲ್ಯಕ್ಕೆ ಧಕ್ಕೆಯಾಗಿಲ್ಲ.

ಕಾಶ್ಮೀರದ ವೈದ್ಯರ ತಂಡದ ನಾಯಕರಾದ ಡಾ: ಕದ್ರಿಯವರ ಮಾತುಗಳಲ್ಲಿ ಹೇಳುವುದಾದರೆ, "ಈ ನೆರವು ಕಾರ್ಯ ನಮ್ಮ ಅಂತರಾತ್ಮಕ್ಕೆ ತೃಪ್ತಿನೀಡುವಂತಿದೆ. ಈ ನೆರವು ಅವರಿಗೆ ಅತ್ಯಗತ್ಯವಾಗಿತ್ತು." 35 ವಯಸ್ಸಿನ ಡಾ: ಕದ್ರಿ ಶ್ರೀನಗರದ ಮುಖ್ಯ ವೈದ್ಯಾಧಿಕಾರಿಯಾಗಿದ್ದಾರೆ. ಡಾ: ಎ. ಕಯೂಮ್, ಡಾ: ಜಂಗ್ ಬಹದ್ದೂರ್ ಹಾಗೂ ಡಾ: ಜಿ. ಎ. ಮೊಕಯ್ಯ— ಈ ವೈದ್ಯತಂಡದ ಇತರ ಸದಸ್ಯರಾಗಿದ್ದಾರೆ. ಈಗ ಅವರು ಕೈಗೊಂಡಿರುವ ಕಾರ್ಯ ರೋಮಾಂಚಕಾರಕವಾಗಿದೆಯೆಂದು ಅವರ ಅಭಿಪ್ರಾಯ.

ಇವರೆಲ್ಲರೂ ದಿನಂಪ್ರತಿ ಅವಿಶ್ರಾಂತವಾಗಿ ದುಡಿಯುತ್ತಿದ್ದಾರೆ. ಎಲ್ಲಾ ಸವಾಲುಗಳನ್ನು ಅಸೀಮ ಧೈರ್ಯದಿಂದ ಎದುರಿಸುತ್ತಿದ್ದಾರೆ. ನಿರಾಶ್ರಿತರ ಶಿಬಿರಗಳಿಗೆ ಹೋಗಲು ನದಿದಾಟುತ್ತಾರೆ; ಮಳೆ, ಬಿಸಿಲೆನ್ನದೆ 15–20 ಕಿಲೋಮೀಟರ್ ದೂರ ನಡೆದುಕೊಂಡುಹೋಗಿ ನರಳುತ್ತಿರುವ ನಿರಾಶ್ರಿತ ಮಿತ್ರರಿಗೆ ಸೇವೆಮಾಡುತ್ತಿದ್ದಾರೆ.

"ನಾನು ಕುಮಾರಗಂಜಿನಲ್ಲಿ ಕಾರ್ಯಾರಂಭಮಾಡಿದಾಗ ರೋಗಿಗಳ ಒತ್ತಡ ಹೆಚ್ಚಾಗಿತ್ತು. ಆದ್ದರಿಂದ ನಾವು 24 ಗಂಟೆ ಕಾಲವೂ ವೈದ್ಯ ಸಹಾಯ ನೀಡಬೇಕೆಂದು ನಿರ್ಧರಿಸಿ ಆ ರೀತಿ ಸಹಾಯ ಮಾಡಿದೆವು" ಎಂದು ಡಾ:ಕದ್ರಿ ಹೇಳುತ್ತಾರೆ.

"ನಿರಾಶ್ರಿತರಶಿಬಿರದ ಪಾಕೀಜು ಹಾಗೂ ನಿರ್ಮಲೀಕರಣ ಕಾರ್ಯ ಹೊಣೆಯನ್ನು ನಾವೇ ವಹಿಸಿಕೊಂಡೆವು. ನಿರಾಶ್ರಿತರೊಂದಿಗೆ ನಿರ್ಮಲೀಕರಣ ಕಾರ್ಯದ ಬಗ್ಗೆ ಗುಂಪು–ಗುಂಪಾಗಿ ಚರ್ಚಿಸಿದೆವು. ಅವರಿಗೆ ಅರಿವು ಮೂಡಿತು. ಶಿಬಿರಗಳಿರುವ ಪ್ರದೇಶದಲ್ಲಿ ಕಸ ಮತ್ತಿತರ ವರ್ಜಿತ ವಸ್ತುಗಳನ್ನು ಎಸೆಯುವ ಅಭ್ಯಾಸವನ್ನು ಕೈಬಿಟ್ಟರು. ಈ ಜನರ ಜೀವನದಲ್ಲಿ ನಾಟಕೀಯ ಬದಲಾವಣೆಯಾಗಿದೆ" ಎಂದು ವೈದ್ಯತಂಡದ ನಾಯಕರು ವಿವರಣೆ ನೀಡಿರುತ್ತಾರೆ.

ವೃದ್ಧೆಯ ಆಶೀರ್ವಾದ

ರಾಜಸಾಹಿಯ ನಿವಾಸಿಯಾಗಿದ್ದ 70 ವಯಸ್ಸಿನ ವೃದ್ಧೆ ಶ್ರೀ ಗುಲಾಂ ರಸೂಲ್ 'ಈ ವೈದ್ಯತಂಡ ಒಳ್ಳೆಯ ಕಾರ್ಯ ಮಾಡುತ್ತಿದೆ. ಇವರ ಸೇವೆಯ ಫಲವಾಗಿ ನನ್ನ ಮೊಮ್ಮಗ ಬೇಗನೆ ಗುಣ ಹೊಂದಿದ' ಎನ್ನುತ್ತಾರೆ.

ಪೂರ್ವಬಂಗಾಳದ ರಾಜಶಾಹಿಯಿಂದ ಬಂದಿರುವ 24 ವಯಸ್ಸಿನ ಯುವಕ ಶ್ರೀ ಭೂಪೇಂದ್ರನಾಥ ಸಹಾ, 'ಈ ಕಾಶ್ಮೀರದ ವೈದ್ಯರು ಸದಾ ಕಾರ್ಯದಲ್ಲಿ ಕಂಕಣಬದ್ಧರಾಗಿದ್ದು ನಮ್ಮ ಆರೋಗ್ಯ ಕಾಪಾಡುತ್ತಿದ್ದಾರೆ' ಎಂದು ಹೇಳುತ್ತಾನೆ. ಕಾಶ್ಮೀರದ ವೈದ್ಯರು ಮಾಡಿರುವ ಅತ್ಯುತ್ತಮ ಸೇವೆಗಾಗಿ 60ವಯಸ್ಸಿನ ಶ್ರೀಮತಿ ಗಯಾದೇವಿ ಅವರನ್ನು ಆಶೀರ್ವದಿಸಿದಳು.

ಜಮ್ಮು—ಕಾಶ್ಮೀರದ ಜನತೆಯ ಕಾಣಿಕೆಯನ್ನು ಕುಮಾರ್ ಗಂಜಿನಹಳ್ಳಿಪ್ರಧಾನ್ಯಮೂಲಕ ಹಂಚಲಾಗಿದೆ. ಇದು ಅಲ್ಲಿನ ಜನತೆಯ ಸ್ವಯಂಪ್ರೇರಿತ ದಯಾಶೀಲತೆಯ ಕುರುಹಾಗಿದೆ. ಇಂದು ದೇಶ ಎದುರಿಸುತ್ತಿರುವ ಸವಾಲಿಗೆ ದೇಶದ ಜನತೆ ಓಗೊಟ್ಟಿದೆ.

●●

ಪುತ್ತೂರು IInd ಎಡಿಶನಲ್ ಮು. ಕೋರ್ಟಿನಲ್ಲಿ

I. A. I O.S. 473/64

ಶೀಲಾರತ್ನ ಯಾನೆ ವಿಜಯಲಕ್ಷ್ಮಿ

(By power of atterney holder The Southern Land Trust Ltd, Mangalore, (S. Kanara)

—ಅರ್ಜಿದಾರ

ಮತ್ತು

ಕುಂಞಣ್ಣ ಶೆಟ್ಟಿ ಸಹಾ... ಎದ್ರಿರು

5ನೇ ಎದ್ರಿ ಬಾಳಪ್ಪ ಶೆಟ್ಟಿ, ಮಾನಕ್ಕೆ ಹೆಂಗ್ಸಿನ ಮಗ, 'Residing in Room No 4, Ranga Vilasa House, 6-(1-5) Poornayya Road, Balapet, Bangalore.

ಅರ್ಜಿದಾರನು ಮಾಡಿದ ಮೇಲಿನ ಅರ್ಜಿಯಲ್ಲಿ ನಿಮ್ಮ ಹಾಜರಾತಿ ಬಗ್ಗೆ ತಾ. 26-8-71ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ನೀವು ಸ್ವತಹ ವ ವಕೀಲರ ದ್ವಾರಾ ಹಾಜರಾಗಿ ಉಜಾಹರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲಾದೀತು.

(By order of the Court)

Sd. A. Radhakrishna Gowda

Advocate for Petitioner

ಪುತ್ತೂರು (ದ. ಕ.), ತಾ. 31-7-71.

ಬಂಟರ ಯಾನೆ ನಾಡವರ ಸಂಘ ಮುಂಬಯಿ

ಮೇಲಿನ ಸಂಘದ 43ನೇ ವಾರ್ಷಿಕ ಮಹಾಸಭೆಯು ಸಂಘದ ವಿಶೇಷ ಮಹಾಸಭೆಯೊಂದಿಗೆ ತಾ. 11-7-71ರಂದು ದಾದರಿನಲ್ಲಿರುವ ಶೆಟ್ಟಿ ಭಂಡಾರಿ ಹಾಲ್‌ನಲ್ಲಿ ಡಾ। ಎಚ್. ಬಾಲಕೃಷ್ಣ ಶೆಟ್ರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದಜರಗಿತು.

ಹೊಸ ವರ್ಷದ ಆಡಳಿತ ಮಂಡಳಿಗೆ, ಡಾ। ಯಚ್. ಬಾಲಕೃಷ್ಣ ಶೆಟ್ಟಿ ಅಧ್ಯಕ್ಷ, ಶ್ರೀಗಳಾದ ವೈ. ರಘು ಶೆಟ್ಟಿ ಉಪಾಧ್ಯಕ್ಷ, ಕೆ. ಸೀತಾರಾಮ ಶೆಟ್ಟಿ ಗೌ। ಪ್ರ. ಕಾರ್ಯದರ್ಶಿ, ಸುಂದರ ಯಮ್. ಶೆಟ್ಟಿ ಗೌ। ಉಪಕಾರ್ಯದರ್ಶಿ, ಗೋಪಾಲ ಬಿ. ಶೆಟ್ಟಿ ಗೌ। ಕೋಶಾಧಿಕಾರಿ, ಸದಾಶಿವ ಯಸ್. ಶೆಟ್ಟಿ ಗೌ। ಉಪಕೋಶಾಧಿಕಾರಿ ಇವರುಗಳನ್ನೂ ಇತರ 30 ಮಂದಿ ಮೆಂಬರರನ್ನೂ ಶಾಲಾ ಕಮಿಟಿಗೆ ಶ್ರೀಗಳಾದ ಯಮ್. ದೇಜು ಶೆಟ್ಟಿ ಶಾಲಾ ಚಯರ್‌ಮೆನ್, ರಾಮ ಯಚ್. ಶೆಟ್ಟಿ ಶಾಲಾ ಕಾರ್ಯದರ್ಶಿ, ಕೆ. ರಾಘವ ಶೆಟ್ಟಿ ಶಾಲಾ ಕೋಶಾಧಿಕಾರಿ ಇವರನ್ನು ಸರ್ವಾನುಮತದಿಂದ ಆರಿಸಲಾಯಿತು.

ಹಲವು ಸಭಿಕರು ಸಂಘದ ಅಭಿವೃದ್ಧಿ ಕುರಿತು ಭಾಷಣ ಮಾಡಿದರು. ಅಧ್ಯಕ್ಷರ ಭಾಷಣವಾಗಲು ಗೌ। ಪ್ರ. ಕಾರ್ಯದರ್ಶಿಯವರು ಧನ್ಯವಾದವನ್ನಿತ್ತರು.

ಕಾರ್ಕಳದಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸಿದ್ಧತೆ

ಇದೇ ಬರುವ ಅಕ್ಟೋಬರ ತಿಂಗಳ ತಾ.31 ಮತ್ತು ನವಂಬರ್ 1ರಂದು ಕಾರ್ಕಳದಲ್ಲಿ ನೆರವೇರಲಿರುವ ದ. ಕ. ಜಿಲ್ಲಾ ಸಾಹಿತ್ಯ ಸಮ್ಮೇಳನದ ರೂಪರೇಖೆಗಳನ್ನು ಚರ್ಚಿಸುವ ಸಲುವಾಗಿ ಸ್ವಾಗತ ಸಮಿತಿಯ ಮಹಾಸಭೆಯು ತಾ. 1-8-71ರಂದು ಕಾರ್ಕಳದಲ್ಲಿ ದ್ವಾರಕಾ ಹೋಟೆಲಿನ ಸಭಾಂಗಣದಲ್ಲಿ ನೆರವೇರಿತು. ಬೆಳಗ್ಗೆ ಶ್ರೀ. ಬಿ. ಮಂಜುನಾಥ ಪೈಯವರ ಅಧ್ಯಕ್ಷತೆಯಲ್ಲಿಯೂ, ಮಧ್ಯಾಹ್ನ ಶ್ರೀ ಧರ್ಮಸ್ಥಳ ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿಯೂ ಸಭೆಗಳು ಜರಗಿದವು. ಬೆಳಗ್ಗಿನ ಸಭೆಯಲ್ಲಿ ಸ್ವಾಗತಿಸಿದ ಶ್ರೀ ಎಂ. ರಾಮಚಂದ್ರನವರು ಸಭೆಯ ಉದ್ದೇಶವನ್ನು ವಿವರಿಸಿದರು. ವಿಚಾರ ವಿನಿಮಯ ಸಲಹೆ ಸೂಚನೆಗಳಾಗಿ ಈ ಕೆಳಗಿನ ಕಾರ್ಯ ಕ್ರಮವನ್ನು ರೂಪಿಸಲಾಯಿತು.

ಸಮ್ಮೇಳನದ ಮೊದಲ ದಿನ ಉದ್ಘಾಟನೆ ಮತ್ತು ಸಾಹಿತ್ಯ ಗೋಷ್ಠಿ.

ಮರುದಿನ ಕನ್ನಡ ರಾಜ್ಯೋತ್ಸವ, ಕವಿಗೋಷ್ಠಿ, ಯಕ್ಷಗಾನ ಗೋಷ್ಠಿ ಹಾಗೂ ಸನ್ಮಾನ ಸಮಾರಂಭ ಅಲ್ಲದೆ ಬೇರೆ ಬೇರೆ ಪ್ರಮುಖರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಮಿತಿ, ಮನೋರಂಜನಾ ಸಮಿತಿ, ಕೋಶ ಸಮಿತಿ, ಕಾರ್ಯ ನಿಯೋಜಕ ಸಮಿತಿ, ಪ್ರದರ್ಶನ ಸಮಿತಿ, ಸ್ಮರಣ ಸಂಚಿಕೆಯ ಸಮಿತಿಗಳನ್ನು ರಚಿಸಲಾಯಿತು.

ಪ್ರೊ. ಪಿ. ಎನ್. ನರಸಿಂಹ ಮೂರ್ತಿಯವರನ್ನು ಕೋಶಾಧಿಕಾರಿಯಾಗಿ, ಶ್ರೀ ಶೀಕಾನ ರಾಮಚಂದ್ರ ಮತ್ತು ಪ್ರೊ. ಎಂ. ರಾಮಚಂದ್ರ ಅವರನ್ನು ಕಾರ್ಯದರ್ಶಿಗಳಾಗಿ ಆರಿಸಲಾಯಿತು. ಸಮ್ಮೇಳನದ ವೆಚ್ಚ ಸುಮಾರು ರೂ. 12,000/- ಎಂದೂ, ಸಮ್ಮೇಳನಕ್ಕೆ ಬೇರೆ ಬೇರೆ ಸಂಸ್ಥೆಗಳನ್ನು ಧನ ಸಹಾಯ ಮಾಡುವಂತೆ ಕೇಳಿಕೊಳ್ಳಬೇಕೆಂದೂ ನಿರ್ಣಯಿಸಲಾಯಿತು. ಶ್ರೀ ಬಿ. ಮಂಜುನಾಥ ಪೈಯವರು ಸಮಾರೋಪ ಭಾಷಣ ಮಾಡುತ್ತಾ ಸಮ್ಮೇಳನವು ಜಯಶೀಲವಾಗಿ ಜರಗಿ ಜಿಲ್ಲೆಗೆ ಕೀರ್ತಿ ತರುವಂತಾಗಲೆಂದು ಹಾರೈಸಿ ತಮ್ಮ ಸಂಪೂರ್ಣ ಬೆಂಬಲ ನೀಡುವುದಾಗಿ ತಿಳಿಸಿದರು. ಶ್ರೀ ಇದಿನಬ್ಬನವರು ಧನ್ಯವಾದಗಳನ್ನರ್ಪಿಸಿದರು.

ಮಧ್ಯಾಹ್ನದ ಸಭೆಯಲ್ಲಿ ಸ್ವಾಗತಿಸಿದಶ್ರೀ ಎಂ. ರಾಮಚಂದ್ರನವರು ಬೆಳಗ್ಗಿನ ಕಾರ್ಯಕಲಾಪಗಳನ್ನು ವಿವರಿಸಿದ ಬಳಿಕ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಮಾತನಾಡುತ್ತಾ ಬೆಳಿಗ್ಗೆ ರೂಪಿಸಲಾದ ಕಾರ್ಯಕ್ರಮ ಮತ್ತು ನಿರ್ಣಯಗಳ ಬಗ್ಗೆ ಆನಂದ ಮತ್ತು ಸಮ್ಮತಿಯನ್ನು ವ್ಯಕ್ತಗೊಳಿಸಿ ಸಮ್ಮೇಳನಕ್ಕೆ ಸರ್ವವಿಧದ ಸಹಕಾರದ ಭರವಸೆಯಿತ್ತರು.

ಅಂತ್ಯದಲ್ಲಿ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಬಿ. ಎಂ. ಇದಿನಬ್ಬನವರು ಕೃತಜ್ಞತೆಗಳನ್ನು ಅರ್ಪಿಸಿದರು. ಸಭೆಗೆ ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಸದಸ್ಯರು ಆಗಮಿಸಿದ್ದರು.

ಧರ್ಮಸ್ಥಳದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ

ತಾ. 2-8-71ರಂದು ಧರ್ಮಸ್ಥಳದಲ್ಲಿ ಸ್ವಾಮಿ ಪರಮಹಂಸ ಭಾಸ್ಕರ ಶೇಷಾಚಾರ್ಯರಿಗೆ ಅವರ 80ನೆಯ ಜನ್ಮ ದಿನದಂದು ಧರ್ಮಸ್ಥಳ ಕ್ಷೇತ್ರ ಸೇವಾ ಭೂಷಣ ಪ್ರಶಸ್ತಿ ಪ್ರದಾನ ಸಮಾರಂಭವು ಜರಗಿತು.

ಸಂಜೆ ವಸಂತ ಮಹಲಿನಲ್ಲಿ ಶ್ರೀ ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ ಸುರೇಂದ್ರ ಕುಮಾರರು ಶ್ರೀ ಶೇಷಾಚಾರ್ಯರಲ್ಲಿ ತಮಗಿರುವ ಭಕ್ತಿಯನ್ನು ವ್ಯಕ್ತಪಡಿಸಿದರು.

ಶ್ರೀ ವೀರೇಂದ್ರ ಹೆಗ್ಗಡೆಯವರು ಶ್ರೀ ಶೇಷಾಚಾರ್ಯರಿಗೆ 'ಶ್ರೀ ಧರ್ಮಸ್ಥಳ ಕ್ಷೇತ್ರ ಸೇವಾ ಭೂಷಣ' ಎಂಬ ಬಿರುದನ್ನು ಕೊಟ್ಟು ಗೌರವಿಸಿದರು. ರಾಷ್ಟ್ರಪತಿ ಶ್ರೀ ವಿ. ವಿ. ಗಿರಿ ಮತ್ತು ತಿರುವಾಂಕೂರು ಮಹಾರಾಜರು ಕಳುಹಿಸಿದ್ದ ಉಡುಗೊರೆಗಳನ್ನು ಶ್ರೀ ವೆಂಕಟರಮಣ ಉಪಾಧ್ಯಾಯರು ಶ್ರೀ ಶೇಷಾಚಾರ್ಯರಿಗೆ ಒಪ್ಪಿಸಿದರು.

ಶ್ರೀ ವೀರೇಂದ್ರ ಹೆಗ್ಗಡೆಯವರು ಶೇಷಾಚಾರ್ಯರ ಪರಿಚಯಗ್ರಂಥವನ್ನು ಬಿಡುಗಡೆ ಮಾಡಿದರು. ಪ್ರಿನ್ಸಿಪಾಲ್ ಎಸ್. ಪ್ರಭಾಕರ್ ಮುಂತಾದವರು ಶ್ರೀ ಶೇಷಾಚಾರ್ಯರ ವಿಚಾರವಾಗಿ ಮಾತನಾಡಿದರು.

ಬಳಿಕ ಶ್ರೀ ಶೇಷಾಚಾರ್ಯರು ಮಾತನಾಡಿ, ಹಿಂದಿನ ಇಬ್ಬರು ಹೆಗ್ಗಡೆಯವರನ್ನೂ ಸ್ಮರಿಸಿದರು. ಅವರಂತೆಯೇ ಈಗಿನ ಶ್ರೀ ವೀರೇಂದ್ರ ಹೆಗ್ಗಡೆಯವರಲ್ಲಿಯೂ ಅದೇ ಸಾತ್ವಿಕ ಸ್ವಭಾವ ಬೆಳೆದಿದೆ ಎಂದು ಹೇಳಿ ಅವರ ಕುಟುಂಬವನ್ನು ಹರಸಿದರು.

ಓದಿರಿ! "ಗುಡಿ ಗೃಹಕಾರ್ಯ"

ಕನ್ನಡ ಪುಸ್ತಕ ಚಿಕ್ಕ ಬಂಡವಲಿನಲ್ಲಿ ನಿಮ್ಮ ಮನೆಯಲ್ಲಿ ಉದ್ಯೋಗ – ವ್ಯವಹಾರ ಮಾಡಿ ನಿಮ್ಮ ಆದಾಯ ಬೆಳೆಸಿಕೊಳ್ಳಿರಿ. ಪುಟ 224 ಬೆಲೆ ರೂ. 10 ಅಂಚೆ ವೆಚ್ಚ ರೂ.2-50.

COTTAGE INDUSTRY (NU—5)
P. B. No. 1262, Anguri Bagh Market, Delhi—6.

ವಿದ್ಯಾರ್ಥಿ ವೇತನ

ಕರ್ನಾಟಕ ಶ್ರೀ ನೈಟ್ ಹೈಸ್ಕೂಲಿನ ಸಂಚಾಲಕರಾದ ಮುಂಬಾಯಿಯ ಬಂಟರ ಯಾನೆ ನಾಡವರ ಸಂಘದವರು ಇಲ್ಲಿಯ ವಿಶ್ವವಿದ್ಯಾಲಯದಲ್ಲಿ ಕಲಿಯುವ ವ ಕಲಿಯಲಿಚ್ಛಿಸುವ ಸ್ವಜಾತಿ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ರೂಪದಿಂದ ಸಾಲ ಕೊಡುವುದರಿಂದ ಧನ ಸಹಾಯ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳು ಆಗೋಸ್ತು ತಿಂಗಳ 25ನೇ ತಾರೀಕಿನೊಳಗೆ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಬೇಕಾಗಿ ಅಪೇಕ್ಷಿಸಲಾಗಿದೆ.

Bunt Alias Nadava Sangha,
A—4/34 Navayug Nivas,
167 Lamington Road,
Opp: Minerva Cinema,
BOMBAY — 7.

ಆಧುನಿಕ ಅರುಂಧತಿ

(ಎರಡನೇ ಪುಟದಿಂದ)

ಯ ಹೊರತು ಅನ್ಯರಿಗೆ ತಿಳಿದಿರಲಿಲ್ಲ. ಅವಳು ನೀಡಿದ ವರ್ತಮಾನ ಸಾಕ್ಷಿಗೆ ಸಂಬಂಧಿಸಿದ ಶಾಸನದ 27ನೆ ವಿಧಿಯ ವ್ಯಾಪ್ತಿಯೊಳಗೆ ಬರುತ್ತದೆ. ಆದ್ದರಿಂದ ಅಂಗೀಕಾರಕ್ಕೆ ಅರ್ಹವಾದ್ದು.

17—5—53ರಂದು ಪೋಲಿಸರು ಅರುಂಧತಿಯನ್ನು ಮ್ಯಾಜಿಸ್ಟ್ರೇಟರ ಮುಂದು ಹಾಜರು ಪಡಿಸಿ, ಆಕೆ ತಪ್ಪೊಪ್ಪಿಗೆಯ ಹೇಳಿಕೆ ಕೊಡುವಳೆಂದು ತಿಳಿಸಿದರು. ಅವಳ ಹೇಳಿಕೆಯನ್ನು ಮ್ಯಾಜಿಸ್ಟ್ರೇಟರು ಬರೆದುಕೊಳ್ಳಲಾರಂಭಿಸಿದರು. ಈ ಸಮಯದಲ್ಲಿ ಆಕೆ ಏದುಸಿರು ಬಿಡುತ್ತಿದ್ದಳು. ಸಹಿಸಿಕೊಳ್ಳಲು ಸಾಧ್ಯವಿಲ್ಲದ ಬಾಧೆಯಿಂದ ನರಳುತ್ತಿದ್ದಳು. ಆಕೆ ಹೆರಿಗೆಯ ನೋವಿನಿಂದ ಚಡಪಡಿಸುತ್ತಿದ್ದಳು. ಸಾಲದ್ದಕ್ಕೆ ಪ್ರಥಮ ಪ್ರಸವ ಆ ಹೇಳಿಕೆಯ ವಿವರಗಳು ಇಂತಿವೆ:—

'ತಮ್ಮನನ್ನು ಕೆಲಸದಿಂದ ತೆಗೆದ ಮೇಲೆ ನನ್ನ ಯಜಮಾನರು, ಮಹಮ್ಮದನನ್ನು ಕೆಲಸಕ್ಕೆಂದು ನೇಮಿಸಿದರು. ಕೆಲಸದ ನೆಪದಲ್ಲಿ ಆತ ಮನೆಗೆ ಬಂದು ಹೋಗಿ ಮಾಡುತ್ತಿದ್ದ. ನಮ್ಮಿಬ್ಬರಲ್ಲಿ ಪ್ರೀತಿಯುತ್ಪನ್ನವಾಯಿತು. ಅದು ಕದ್ದು ಮುಚ್ಚಿ ನಡೆಯುತ್ತ ಬಂತು. ನಮ್ಮಿಬ್ಬರ ಪ್ರಣಯ ಜೀವನದಲ್ಲಿ ನನ್ನ ಯಜಮಾನರು ಅಡ್ಡಗೋಡೆಯಾಗಿ ನಿಂತಿದ್ದರು. ಅವರನ್ನು ತೆಗೆಯಲು ನಾವಿಬ್ಬರು ತೀರ್ಮಾನಿಸಿದೆವು. ಆ ದಿನ ಯಜಮಾನರು ದೇವರ ಗುಡಿಗೆ ಹೋಗಿ ಬರುವುದರಲ್ಲಿ, ಮಹಮುದ್ ನಮ್ಮ ಮನೆಯಲ್ಲಿ ಅವಿತು ಕುಳಿತ ಅವರು ಉಂಡು ಮಲಗಿದರು. ಅವರಿಗೆ ಚೆನ್ನಾಗಿ ನಿದ್ದೆ ಬರುವುದನ್ನೇ ಕಾಯುತ್ತಿದ್ದ ಮಹಮುದ್ ತನ್ನ ಬಳಿಯಿದ್ದ ಚೂರಿಯಿಂದ ಅವರ ಗಂಟಲನ್ನು ಕತ್ತರಿಸಿದ. ಅವರು ಕೂಗಿ ಕೊಂಡರೆ ಕೇಳಿಸದಿರಲಿ ಎಂದು ನಾನು ಅವರ ಬಾಯಿಗೆ ಬಟ್ಟೆ ತುರುಕಿಸಿದೆ. ಆಮೇಲೆ ನಾವಿಬ್ಬರೂ ಸೇರಿ ಹೆಣವನ್ನು ಕೆಳಕ್ಕೆ ತಂದೆವು. ಗುಂಡಿ ಅಗೆದು ಅದರಲ್ಲಿ ಹೂಳಿದೆವು. ಯಜಮಾನರ ಮೈ ಮೇಲಿದ್ದ ಬಟ್ಟೆ ಬರೆಗಳಿಗೆ ನೆತ್ತರು ಅಂಟಿಕೊಂಡಿತ್ತು. ಆ ಬಟ್ಟೆಗಳನ್ನು ಕೆಳಮನೆಯಲ್ಲಿ ಇನ್ನೊಂದು ಗುಂಡಿ ತೆಗೆದು ಅದರಲ್ಲಿ ಬಚ್ಚಿಟ್ಟು, ಮಣ್ಣು ಮುಚ್ಚಿದೆವು-ತರುವಾಯ ಮಲಗುವ ಮನೆಯನ್ನು ಸ್ವಚ್ಛಗೊಳಿಸಿದೆವು. ಮರುದಿನ ಮಧ್ಯಾಹ್ನದ ಊಟಕ್ಕೆ, ಕೇದಾರನಾಥ, ಬದರೀನಾಥ, ಮೊದಲೇ ತಿಳಿಸಿದಂತೆ ಬಂದಿದ್ದರು. ಅವರನ್ನು ನಾನು ಅಂದು ಉಪಚರಿಸಿ ಕಳುಹಿಸಿದೆ. ಅವರನ್ನು ಕಳುಹಿಸಿ ಕೊಟ್ಟ ಮೇಲೆ ನಾನು ಮನೆಗೆ ಬೀಗ ಹಾಕಿ ಕೊಂಡು ತವರು ಮನೆಗೆ ಹೊರಟು ಹೋದೆ. ಈ ವಿಚಾರವನ್ನು ಹಿಂದಿನಿಂದ ತಮ್ಮನಿಗೆ ತಿಳಿಸಿದೆ.'

ಅವಳು ಕೊಟ್ಟ ಹೇಳಿಕೆಯಿಂದ ಪೋಲಿಸರ ದೃಷ್ಟಿಯನ್ನು ಮಹಮ್ಮದನತ್ತ ತಿರುಗಿಸಿತು. ಅವರು ಅವನ ಪತ್ತೆಗೆ ಹೊಣ ತೊಟ್ಟರು. ಆದರೆ ಆತ ಅವರ ಕೈಗೆ ಸಿಗಲಿಲ್ಲ. ಬಹಳ ದಿನಗಳನ್ನು ಅಡವಿಯಲ್ಲಿ ಕಳೆದ. ತಲೆ ಮರೆಸಿ ಕೊಂಡು ತಿರುಗಿದ. ಹೀಗೆ ಅಲೆಯುತ್ತಿದ್ದ ಸಮಯದಲ್ಲಿ ಆತ ತನ್ನ ಸ್ನೇಹಿತನಿಗೆ—ಅಬ್ದುಲ್ ರಹಮಾನನಿಗೆ—ನಡೆದ ಸಂಗತಿಯನ್ನು ತಿಳಿಸಿದ. ಅಬ್ದುಲ್ ರಹಮಾನ್, ಅದನ್ನು ಪೋಲಿಸರಿಗೆ ಶಂಭುನಾಥ ಎನ್ನುವ ಗುಪ್ತನಾಮದಲ್ಲಿ ಬರೆದು ತಿಳಿಸಿದ. ತಲೆ ಮರೆಸಿ ಕೊಂಡ ಮಹಮ್ಮದ್, ಅನಂತರ ಪಠಾಣ ಕೋಟೆ, ಅಮೃತಸರಗಳಿಗೆ ಹೋಗಿ ಬಂದ ಕೊನೆಯಲ್ಲಿ ಏನು ತೋಚಿತೋ—ಮೇ 30ರಂದು ಪೋಲಿಸರಿಗೆ ಶರಣಾದ. ಹೀಗೆ ಶರಣು ಬಂದ ಮಹಮ್ಮದನನ್ನು ಪೋಲಿಸರು ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದು ಹಾಜರು ಮಾಡಿದರು. ಸತ್ಯ ಸಂಗತಿ ತಿಳಿಸಿದಲ್ಲಿ ಕ್ಷಮಿಸುವುದಾಗಿ ಭರವಸೆಕೊಟ್ಟರು. ಆತ ಒಪ್ಪಿಕೊಂಡ. ಆತ ಪೋಲಿಸರ ಮುಂದು ಹೀಗೆ ತಿಳಿಸಿದ—'ನನ್ನ ಮತ್ತು ಅರುಂಧತಿಯ ಮಧ್ಯ ಶ್ರೀ ಕಾಂತ ಆತಂಕವಾಗಿ ನಿಂತಿದ್ದ. ಅವನ ಸಾವಿನಿಂದ ನಮ್ಮ ದಾರಿ ಸುಗಮ ಎಂದು ತೀರ್ಮಾನಿಸಿದೆವು. ಅದಕ್ಕಾಗಿ ಅವನನ್ನು ಕೊನೆಗಾಣಿಸಲು ಸಂಕಲ್ಪಿಸಿದೆವು. ಅವನನ್ನು ಕೊಂದ ಮೇಲೆ ಗಂಡ- ಹೆಂಡಿರಾಗಿ ಬಾಳುವುದೆಂದು ನಿಶ್ಚೈಸಿದೆವು. ಆದರೆ ಕೊಲ್ಲುವುದು ಹೇಗೆ—? .ಇದನ್ನು ತೀರ್ಮಾನಿಸಲು ನಮಗೆ ಬಹಳ ಕಾಲ ಹಿಡಿಯಿತು. ಕೆಲಸದ ಮೇಲೆ ಹೋಗುತಿದ್ದ ಶ್ರೀಕಾಂತನನ್ನು ಮಧ್ಯದಾರಿಯಲ್ಲಿ ತೀರಿಸಿ ಬಿಟ್ಟರೆ ಹೇಗೆಂದು ಲೆಖ್ಖ ಹಾಕಿದೆವು. ಅದೇಕೋ ಸರಿ ಬರಲಿಲ್ಲ. ಅದು ಸುಲಭವೂ ಇರಲಿಲ್ಲ. ಆದ್ದರಿಂದ ಆ ಯೋಜನೆ ಕೈಗೂಡಲಿಲ್ಲ. ಆಹಾರದಲ್ಲಿ ವಿಷ ಬೆರಸಿದರೆ ಒಳಿತೆಂದು ತರ್ಕಿಸಿದೆವು. ಏಕೋ ದಿಗಿಲಾಯಿತು. ಅರ್ಧಕ್ಕೇ ಅದನ್ನು ಕೈ ಬಿಟ್ಟೆವು. ಕೊನೆಗೆ ಶ್ರೀಕಾಂತನನ್ನು ಅವನ ಮನೆಯಲ್ಲೇ ಕೊಂದು, ಅಲ್ಲಿಯೇ ಹೂಳುವುದೆಂದು ತೀರ್ಮಾನಿಸಿದೆವು.'

'ಈ ಉದ್ದೇಶ್ಯ ಸಾಧನೆಗಾಗಿ ಅವರ ಮನೆಯಲ್ಲೇ ಇರಲಾರಂಭಿಸಿದೆ. ಶ್ರೀಕಾಂತನಿಗೆ ತಿಳಿಯದಂತೆ ನಾನು ಆ ಮನೆಯಲ್ಲಿ ಮೂರು ವಾರ ತಳ್ಳಿದೆ. ಆತ ಮನೆಯಲ್ಲಿಲ್ಲದ ಸಮಯ ಸಾಧಿಸಿ, ಕೆಳ ಮನೆಯಲ್ಲಿ ಗುಂಡಿಗಳನ್ನು ತೋಡಿದೆ. ಹಾಗೆ ತೋಡಿದ ಗುಂಡಿಗಳನ್ನು ಹಲಿಗೆಗಳಿಂದ ಮುಚ್ಚಿದೆ ಮೇಲೆ ಮಣ್ಣು ಸಾರಿಸಿದೆ. ಈ ಕೆಲಸವನ್ನು ನಾನು ಕೊಲೆಗೂ ಹದಿನೈದು ದಿನಗಳ ಮೊದಲು ಪೂರೈಸಿದೆ'

'ಈ ಅವಧಿಯಲ್ಲಿ ನಾನು ಮನೆಯಿಂದ ಹೊರಬಿದ್ದಿರಲಿಲ್ಲ. ನನ್ನ ಮಲ-ಮೂತ್ರದ ವಿಸರ್ಜನೆಯೂ ಮನೆಯೊಳಗೇ ನಡೆಯಿತು. ಅರುಂಧತಿ ಅದನ್ನೆತ್ತಿ ಹೊರಗೆಸೆಯುತಿದ್ದಳು. ನನ್ನ ಊಟ—ಉಪಚಾರವೂ ಅಲ್ಲಿಯೇ ನಡೆಯಿತು. ನಾನು ಅಲ್ಲಿದ್ದಾಗ ಪಂಜಾಬಿನಿಂದ ಒಂದು ಚೂರಿಯನ್ನು ತರಿಸಿ ಕೊಂಡೆ.ಹಾಗೆ ತರಿಸಿಕೊಂಡ ಚೂರಿಯನ್ನು ಅರುಂಧತಿಯ ಕೈಗೆ ಕೊಟ್ಟೆ.'

'ದುರಂತ ನಡೆದ ದಿನ ಶ್ರೀಕಾಂತ ಗುಡಿಗೆ ಹೋಗಿ ಬರುವುದರಲ್ಲಿ, ನಾನು ಅರುಂಧತಿಯ ಸಲಹೆಯಂತೆ, ಅವರು ಮಲಗುವ ಮನೆಯಲ್ಲಿದ್ದ ಮಂಚದ ಕೆಳಗೆ ಮುದುಡಿ ಕೊಂಡೆ. ನಾನು ಅಲ್ಲಿ ಅವಿತು ಕುಳಿತಿರುವುದು ಕಾಣದಿರಲೆಂದು ಅರುಂಧತಿ ಮಂಚದ ಮೇಲೊಂದು ಚಾದರವನ್ನು ಹರವಿದಳು ದಂಪತಿಗಳು ಊಟ ಮುಗಿಸಿ ಮೇಲಕ್ಕೆ ಬಂದರು ನೆಲದ ಮೇಲೆ ಹಾಸಿಕೊಂಡು ಮಲಗಿ ನಿದ್ದೆ ಹೋದರು. ನಾನು ಅಡಗಿ ಕುಳಿತ ಸ್ಥಳದಿಂದ ಹೊರ ಬಿದ್ದೆ. ಅಂಗಾತ ಮಲಗಿದ್ದ ಶ್ರೀಕಾಂತನ ಗಂಟಲನ್ನು ಕೈಯಲ್ಲಿದ್ದ ಚೂರಿಯಿಂದ ಕತ್ತರಿಸಿದೆ—ಹಾಗೆ ಕೊಯ್ಯುವಾಗ ನಾನು ಶ್ರೀಕಾಂತನ ಎದೆಯ ಮೇಲೆ ಕುಳಿತಿದ್ದೆ. ಶ್ರೀಕಾಂತ ಕೊಸರಾಡಿದ. ನನ್ನ ಕೈಯಲ್ಲಿದ್ದ ಚಾಕುವನ್ನು ಕಿತ್ತುಕೊಂಡ. ಆತನ ಕೈಯಿಂದ ಅದನ್ನು ಅರುಂಧತಿ ಅಪಹರಿಸಿ, ಪುನಃ ನನ್ನ ಕೈಗಿತ್ತಳು. ಆಕೆ ಆ ಸಮಯದಲ್ಲಿ ಆತನ ಬಾಯಿಗೆ ಬಟ್ಟೆ ತುರುಕಿಸುತ್ತಿದ್ದಳು.'

'ನನ್ನ ತಿವಿತಕ್ಕೆ ಶ್ರೀಕಾಂತನ ಗಂಟಲು ಹರಿಯಿತು. ದೇಹದಿಂದ ನೆತ್ತರು ಕೋಡಿ ಹರಿಯಿತು. ಆತ ಸ್ವಲ್ಪ ಸಮಯದಲ್ಲಿ ಸತ್ತುಹೋದ. ಆತನ ಶವವನ್ನು ಒಂದು ಬಟ್ಟೆಯಲ್ಲಿ ಸುತ್ತಿದೆವು. ಕೆಳಕ್ಕೆ ತಂದೆವು. ಮೊದಲೇ ಸಿದ್ಧ ಪಡಿಸಿದ ಗುಂಡಿಯಲ್ಲಿ ಇಳಿಸಿದೆವು—ಹಲಿಗೆಗಳನ್ನು ಮೊದಲಿನಂತೆ ಜೋಡಿಸಿ, ಮೇಲೆ ಮಣ್ಣು ಸಾರಿಸಿದೆವು-ಇನ್ನೊಂದು ಗುಣಿಯಲ್ಲಿ ರಕ್ತದಿಂದ ನೆನೆದಿದ್ದ ಶ್ರೀಕಾಂತನ ಬಟ್ಟೆಗಳನ್ನು ಬಚ್ಚಿಟ್ಟೆವು-ಅನಂತರ ಮಹಡಿಯನ್ನೇರಿ, ನೆಲವನ್ನೂ, ಗೋಡೆಯನ್ನೂ ತೊಳೆದೆವು-ಅಷ್ಟರಲ್ಲಿ ಗಂಟೆ ಮೂರಾಯಿತು- ನಾನು ಮನೆಯಿಂದ ಮೆಲ್ಲಗೆ ಹೊರ ಬಿದ್ದೆ. ಹೊರಗೋ ಕೊರೆಯುವ ಛಳಿ. ಅರುಂಧತಿ ಒಳಗಿಂದ ಒಂದು ಉಣ್ಣೆಯ ಶಾಲು ತಂದು ಕೊಟ್ಟಳು. ಆ ಶಾಲನ್ನು ನಾನು ಆ ಮೇಲೆ, ಹಣದ ಅಡಚಣೆಯುಂಟಾಗಲು ಮಾರಿದೆ.'

ಈ ಮಧ್ಯೆ ಪೋಲೀಸರು, ಕೇದಾರನಾಥ ಬದರೀನಾಥರ ಹೇಳಿಕೆ ತೆಗೆದುಕೊಂಡರು. ಪ್ರೇಮನಾಥನನ್ನು ವಿಚಾರಿಸಿದರು. ವೈದ್ಯರ, ತಜ್ಞರ ಅಭಿಪ್ರಾಯ ಬೇರೆ ಸಂಗ್ರಹಿಸಿದರು. ಅವುಗಳ ಆಧಾರದ ಮೇಲೆ ಅರುಂಧತಿಯನ್ನು ಕೋರ್ಟಿನ ಮುಂದು ತಂದು ನಿಲ್ಲಿಸಿದರು. ಶ್ರೀಕಾಂತನ ಕೊಲೆಯ, ಕೊಲೆಗೆ ಸಂಬಂಧಿಸಿದ ಸಾಕ್ಷಿಯನ್ನು ನಾಶಪಡಿಸಲು ಪ್ರಯತ್ನಿಸಿದ ಆರೋಪ ಹೊರಿಸಿದರು.

ವಿಚಾರಣೆಯ ಕಾಲದಲ್ಲಿ ಅರುಂಧತಿ, ಮಹಮ್ಮದನಿಗೆ ಶಾಲು ಕೊಟ್ಟುದನ್ನು ಆತನೊಡನೆ ಅನೈತಿಕ ಸಂಬಂಧವಿತ್ತೆಂಬುದನ್ನು ನಿರಾಕರಿಸಿದಳು. ತಪ್ಪೊಪ್ಪಿಗೆಯ ಹೇಳಿಕೆಯನ್ನು ಅಲ್ಲಗಳೆದಳು. ಕೊಲೆಯಾದ ದಿನ ಶ್ರೀಕಾಂತನ ಜೊತೆ ಮಲಗಿದ್ದುದನ್ನು ಇಲ್ಲವೆನ್ನಲಿಲ್ಲ ಗುಣಿಯಲ್ಲಿ ಸಿಕ್ಕ ಬಟ್ಟೆ-ಬರೆಗಳು ಶ್ರೀಕಾಂತನವೇ ಎಂಬುದನ್ನು ಒಪ್ಪಿಕೊಂಡಳು. ಮೂಲ ಕೋರ್ಟಿನಲ್ಲಿ ಮಾಫಿ ಸಾಕ್ಷಿ ಮಹಮ್ಮದ ಪೋಲೀಸರ ಮುಂದೆ ನೀಡಿದ ಹೇಳಿಕೆಯನ್ನು ಸಮರ್ಥಿಸಿದ. ಆದರೆ ಸೆಷನ್ಸ್ ಕೋರ್ಟಿನಲ್ಲಿ ತನ್ನ ವಾಗ್ಮೂಲವನ್ನು ಬದಲಾಯಿಸಿದ. ಅದು ತನ್ನ ಹೇಳಿಕೆಯೇ ಅಲ್ಲವೆನ್ನುವಷ್ಟು ದೂರ ಹೋದ. ಪೋಲಿಸರು ಹೊಡೆದು ಹಿಂಸಿಸಿ, ಆ ರೀತಿ ಬರೆದು ಕೊಂಡರು ಎಂದು ತಿಳಿಸಿದ. ಅರುಂಧತಿಯೊಡನೆ ತನಗಾವ ಸಂಬಂಧವೂ ಇರಲಿಲ್ಲವೆಂದು ಹೇಳಿದ. ಕೊಲೆ ನಡೆಯಿತೆಂದು ಹೇಳುವ ದಿನಗಳಲ್ಲಿ ತಾನು ಕುಲ್ಲಾಂನಲ್ಲಿ ಇರಲಿಲ್ಲವೆಂದು ಸಾಧಿಸಿದ.

ಕಾಶ್ಮೀರದ ಸೆಷನ್ಸ್ ನ್ಯಾಯಾಧೀಶರು ಆಪಾದನೆಗಳು ಸಾಬೀತಾಯಿತೆಂದು, ಅರುಂಧತಿಗೆ, ಮೊದಲ ಅಪರಾಧಕ್ಕೆ ಜೀವಾವಧಿ ಶಿಕ್ಷೆಯನ್ನೂ, ಕೊಲೆಗೆ ಸಂಬಂಧಿಸಿದ ಸಾಕ್ಷಿಯನ್ನು ಮರೆ ಮಾಚಿದ ತಪ್ಪಿಗೆ ನಾಲ್ಕು ವರ್ಷಗಳ ಕಠಿಣ ಶಿಕ್ಷೆಯನ್ನೂ ವಿ

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ, ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್.
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

NAVAYUGA 12-8-1971
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

'ಪ್ರಗತಿ'ಯ ವಿವಿಧ ಮುಖಗಳು

ಲೇಖಕರು: ಶ್ರೀ ಬಿ. ವಿ. ನಾಯಕ್, ಉಡುಪಿ.

ನಾವಿಂದು ನಾಗರಿಕರಾಗಿದ್ದೇವೆ; ಮಹಾ ವಿಜ್ಞಾನದ ಪ್ರಭಾವ ನಮ್ಮ ಜೀವನದ ಮೇಲೆ ದಟ್ಟವಾಗಿ ಹರಡಿಕೊಂಡಿದೆ. ಮಾನವನ ಬಾಳಿನ ಆರಂಭ ಹಂತವೇ ನಾಗರಿಕತೆ, ಸಂಸ್ಕೃತಿಗಳಿಂದ ಭರಿತವಾಗಿರಲಿಲ್ಲ ಎಂಬುದಕ್ಕೆ ಅನೇಕ ಪುರಾವೆಗಳಿವೆ. ಅನಾಗರಿಕತೆಯಿಂದ ಪ್ರಾರಂಭವಾದ ಮಾನವನ ಬಾಳು, ಕ್ರಮವಾದ ಹಲವು ಜೀವನ ಹಂತಗಳಲ್ಲಿ ಬೆಳವಣಿಗೆ ಹೊಂದಿ, ಇಂದಿನ ಅತ್ಯುನ್ನತ ಸ್ಥಾನವನ್ನು ಪಡೆದುಕೊಂಡಿದೆ. ಜೀವನ ಹಂತಗಳ ಸಂಯೋಜನೆ ಬಹು ಕಾಲದಿಂದ ನಡೆಯುತ್ತಾ ಬಂದಿದ್ದು, ಒಂದು ಜೀವನ ಹಂತದಿಂದ ಇನ್ನೊಂದು ಜೀವನ ಹಂತಕ್ಕೆ ಹಾರುವ ಮಾನವನ ಸಾಹಸವನ್ನು 'ಪ್ರಗತಿ'ಯೆನ್ನುತ್ತೇವೆ.

ಪ್ರಗತಿ ಮತ್ತು ಭವಿಷ್ಯ.

'ಸಮಸ್ಯೆಗಳು ತಲೆ ಎತ್ತುತ್ತಾ ಹೋದಂತೆ ಮನುಷ್ಯರಲ್ಲಿ ಕುತೂಹಲ, ಉತ್ಸಾಹ ಮತ್ತು ಸಾಧನೆ ಬೆಳೆಯುತ್ತಾ ಹೋಗುತ್ತದೆ'—ಇದು ನಾರ್ಮನ್ ವಿನ್ಸೆಂಟ್ ಪೀಲ್‌ರ ಸೂಕ್ತಿ. ಹೀಗೆ ಉತ್ಪನ್ನವಾಗುವ ಸಾಧನೆಯ ಮಹತ್ವವನ್ನು ಪೋರ್ಡ್‌ಮನ್‌ರವರು ಹೀಗೆ ತಿಳಿಸುತ್ತಾರೆ. "ಸಾಧನೆಯನ್ನು ಬಿತ್ತಿರಿ; ಅಭ್ಯಾಸವು ರೂಪುಗೊಳ್ಳುತ್ತದೆ. ಅಭ್ಯಾಸವನ್ನು ಬಿತ್ತಿರಿ; ಗುಣವು ಹುಟ್ಟುತ್ತದೆ. ಗುಣವನ್ನು ಬಿತ್ತಿರಿ; ನಿಮ್ಮ ಭವಿಷ್ಯ ಹುಟ್ಟಿಕೊಳ್ಳುತ್ತದೆ." ಉತ್ತಮ ಭವಿಷ್ಯಕ್ಕಾಗಿ ಮನುಷ್ಯನು ತನ್ನ ಸಮಸ್ಯೆಗಳೊಂದಿಗೆ ಬಹುಕಾಲದಿಂದ ಬಹಳವಾಗಿ ಹೋರಾಡುತ್ತಾನೆ. ಆತನ ಪರಿಶ್ರಮದ ಫಲಕ್ಕೆ ಅನುಗುಣವಾಗಿ ಭವಿಷ್ಯ ಹುಟ್ಟಿಕೊಳ್ಳುತ್ತದೆ. ಆಗ ಹಿನ್ನೆಲೆಯಾಗಿ ಪ್ರಗತಿಯೂ ವಿಕಾಸವಾಗಿರುತ್ತದೆ! ಅಂದರೆ ಪ್ರಗತಿ ಮತ್ತು ಭವಿಷ್ಯಕ್ಕೆ ನಿಕಟ ಸಂಪರ್ಕವಿದೆಯೆಂದಾಯಿತು.

ಗುರಿ ವಿಫಲವಾದರೂ ಪ್ರಗತಿ ಸಾಧ್ಯ!

ಮನುಷ್ಯನು ಒಂದು ಗುರಿಯನ್ನಿಟ್ಟುಕೊಂಡು ಅದರ ಸಫಲತೆಗಾಗಿ ಪರಿಶ್ರಮಿಸುತ್ತಾನೆ. ಗುರಿ ವಿಫಲವಾದರೂ, ಇನ್ನೊಂದು ವಿಧದಿಂದ ಪ್ರಗತಿ ವಿಕಾಸವಾಗುವ ಸಂದರ್ಭಗಳೂ ಉಂಟು. ಉದಾಹರಣೆಗಾಗಿ, ಪ್ರಾಚೀನ ಕಾಲದಲ್ಲಿ ವಿಜ್ಞಾನದ ಪ್ರಮುಖ ಶಾಖೆಯಾದ ರಸಾಯನ ಶಾಸ್ತ್ರವು ನಿಜವಾದ ವಿಜ್ಞಾನವಾಗಿ ಬೆಳೆದಿರಲಿಲ್ಲ. ಅಂದು ಅದು ಮೂಢನಂಬಿಕೆ ಮತ್ತು ಮಾಯಾ ವಿದ್ಯೆಗಳ ಮಿಶ್ರಣವಾಗಿತ್ತು. ಅಂದು ಅದನ್ನು 'ರಸವಾದ'ವೆಂಬ ಹೆಸರಿನಿಂದ ಕರೆಯುತ್ತಿದ್ದರಲ್ಲದೆ, ಅದನ್ನು ಅಭ್ಯಸಿಸುವವರಿಗೆ 'ರಸವಾದಿ'ಗಳೆನ್ನುತ್ತಿದ್ದರು. ಈ ರಸವಾದಿಗಳಿಟ್ಟುಕೊಂಡ ಅದ್ಭುತ ಗುರಿ ಅವರ ಉಜ್ವಲ ಕ್ರಿಯಾ ಶೀಲ ಗುಣಕ್ಕೆ ಸಾಕ್ಷಿ. ಅವರು ಕಂಡುಹಿಡಿಯಲೆತ್ನಿಸಿದ ಅಪೂರ್ವ ವಸ್ತುಗಳೆಂದರೆ ೧) ಕೀಳು ಲೋಹಗಳನ್ನು ಚಿನ್ನವನ್ನಾಗಿ ಮಾಡಬಲ್ಲ ಸ್ಪರ್ಶಮಣಿ, ೨) ಎಲ್ಲಾ ಬಗೆಯ ರೋಗಗಳನ್ನು ಗುಣಪಡಿಸ ಬಲ್ಲ ಮತ್ತು ಮುಪ್ಪನ್ನು ದೂರ ಮಾಡಬಲ್ಲ ಜೀವ ರಸಾಯನ. ರಸವಾದಿಗಳು ಈ ಆಶ್ಚರ್ಯಕರ ಪದಾರ್ಥಗಳನ್ನು ಕಂಡು ಹಿಡಿಯಲು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಲೆಕ್ಕವಿಲ್ಲದಷ್ಟು ಪ್ರಯೋಗಗಳನ್ನು ನಡೆಸಿದರೂ ಅವರು ವಿಫಲವಾದರು. ಆದರೆ ಅವರು ಮಾಡಿದ ಪ್ರಯೋಗಗಳು ಹಲವು ಇತರ ಪದಾರ್ಥಗಳನ್ನು ಬೆಳಕಿಗೆ ತಂದವು. ತಾವು ಅಪೇಕ್ಷಿಸಿದ ವಸ್ತುಗಳನ್ನು ಪಡೆಯಲು ರಸವಾದಿಗಳು ವಿಫಲರಾದರೂ ಅವರು ಮಾಡಿದ ಹೇರಳಪ್ರಯೋಗಗಳ ಫಲವಾಗಿ ಅಪಾರ ಜ್ಞಾನ ಹಿಂದೆ ಉಳಿಯಿತು. ಇದರಿಂದಾಗಿ ಆಧುನಿಕ ರಸಾಯನ ಶಾಸ್ತ್ರ ಪ್ರಗತಿ ಪಥದಲ್ಲಿ ವಿಕಾಸವಾಗಲು ಸಾಧ್ಯವಾಯಿತು. ಆದುದರಿಂದ ಗುರಿ ವಿಫಲವಾದರೂ ಪ್ರಗತಿ ಸಾಧ್ಯವಿದೆ! (ಎಲ್ಲ ಸಂದರ್ಭಗಳಲ್ಲಿ ಎಂದಲ್ಲ.)

ಮೂಲ ಮತ್ತು ವಿಶಾಲತೆ

'ಪ್ರಗತಿ'ಯೆನ್ನುವುದು ಕೇವಲ ಜನಾಂಗದ ಜೀವನಕ್ಕೆ ಮಾತ್ರ ಸೀಮಿತವಾಗಿಲ್ಲ. ಅದರ ವಿಶಾಲತೆ—ಅಪಾರ ಮತ್ತು ಬಹುವಿಧ. ವಿಜ್ಞಾನಕ್ಕೆ ಪ್ರಗತಿಯಿರುವಂತೆ ಸಮಾಜ ಜೀವನದ ಸಹಸ್ರಾರು ಕಾರ್ಯರೀತಿಗಳಿಗೂ ಪ್ರಗತಿಯೆಂಬುದಿದೆ. ಸಮಾಜ ಜೀವನದಲ್ಲೇಕೆ? ಪ್ರತಿಯೊಬ್ಬ ಮಾನವನ ವೈಯುಕ್ತಿಕ ಜೀವನದಲ್ಲಿ ಬರುವ ಅನೇಕ ಸನ್ನಿವೇಶಗಳಲ್ಲಿಯೂ 'ಪ್ರಗತಿ'ಯೆಂಬುದು ಪ್ರಮುಖ ಸ್ಥಾನವನ್ನು ವಹಿಸುತ್ತದೆ. ಪ್ರಗತಿಗೆ ಮೂಲವೆಂದರೆ ಕುತೂಹಲ, ಉತ್ಸಾಹಗಳಿಂದ ಕೂಡಿದ ನಮ್ಮ ಕಾರ್ಯ ಅಥವಾ ಪರಿಶ್ರಮ.

ಬದುಕಿನಲ್ಲಿ ಪ್ರಗತಿ

ಪ್ರತಿಯೊಬ್ಬ ಮಾನವನ ಬದುಕಿನಲ್ಲಿ ಪ್ರಗತಿಯೆಂದರೇನು? ಎಂದು ಅರಿತುಕೊಳ್ಳುವುದು ಅವಶ್ಯ. ಬದುಕಿನಲ್ಲಿ ಅಥವಾ ಬದುಕುವ ರೀತಿಯಲ್ಲಿ ಪ್ರಗತಿ ಎಂದರೆ ಮಾನವೀಯ ಗುಣಗಳ ವಿಕಾಸ. ಆದ ಕಾರಣ ಉಳಿದೆಲ್ಲ ಪ್ರಗತಿಗಿಂತ, ಬದುಕಿನಲ್ಲಿ ಪ್ರಗತಿ ಹೊಂದುವುದಕ್ಕೆ ಹೆಚ್ಚು ಸಮಯ, ತಾಳ್ಮೆ, ಪರಿಶ್ರಮ ಬೇಕು.

ಡಾ|| ರಾಧಾಕೃಷ್ಣನ್‌ರವರು, 'ಮಾನವನು ಹಕ್ಕಿಯಂತೆ ಹಾರಲು ಕಲಿತಿದ್ದಾನೆ; ಮೀನಿನಂತೆ ಈಜಲು ಕಲಿತಿದ್ದಾನೆ—ಆದರೆ ಮಾನವನಂತೆ ಬಾಳಲು ಮಾತ್ರ ಕಲಿತಿಲ್ಲ' ಎಂದಿದ್ದರು. ಮನುಷ್ಯನ ಬದುಕು ಮಾನವೀಯ ಗುಣಗಳಲ್ಲಿ ಪ್ರಗತಿಹೊಂದದಿರುವುದೇ ಇದಕ್ಕೆ ಕಾರಣ. ಉಳಿದೆಲ್ಲ ಪ್ರಗತಿಗಿಂತ ಬದುಕಿನಲ್ಲಿ ಪ್ರಗತಿ ಹೊಂದುವುದು ಅಷ್ಟು ಕ್ಲಿಷ್ಟತರ ಮತ್ತು ಅಪರೂಪ.

ಶ್ರೀ ಡಿ. ವಿ. ಜಯವರು ತಮ್ಮ 'ಬಾಳಿಗೊಂದು ನಂಬಿಕೆ'ಯಲ್ಲಿ ಬದುಕಿನಲ್ಲಿ ಪ್ರಗತಿಯ ಕುರಿತು ಹೀಗೆ ತಿಳಿಸುತ್ತಾರೆ. "ಮೊಟ್ಟ ಮೊದಲು ನಮ್ಮ ಜನಕ್ಕೆ ಬದುಕಿನಲ್ಲಿ ಶ್ರದ್ಧೆ ಹೆಚ್ಚಬೇಕು. ಬದುಕು—ಅಥವಾ ಜೀವನ—ಅಥವಾ ಬಾಳು—ಎಂಬುದು ಒಂದು ದೊಡ್ಡ ವಸ್ತು. ಬದುಕುವುದು ಪಾಪವಲ್ಲ; ಚೆನ್ನಾಗಿ ಬದುಕಲು ಪ್ರಯತ್ನಪಡುವುದು ನಾಚಿಗೆಯ ಕೆಲಸವಲ್ಲ. ಬದುಕನ್ನು ಚೆನ್ನಾಗಿ ಉಪಯೋಗಿಸುವುದೇ ನಮಗಿರುವ ಕರ್ತವ್ಯ—ಎಂಬ ಬುದ್ಧಿ ಜನರಲ್ಲಿ ಬೇರೂರಿ ನಿಲ್ಲಬೇಕು. ಅದೇ ಪ್ರಗತಿ'' ಬದುಕಿನ ಕರ್ತವ್ಯವನ್ನು ಶ್ರದ್ಧೆಯಿಂದ ಪರಿಪಾಲಿಸಿದ್ದಾಗಲೇ "ಪ್ರಗತಿ" ಸುಲಭ ಸಾಧ್ಯವಾಗುತ್ತದೆ.

ನಾವಿಂದು ವಿಜ್ಞಾನ, ಕಲೆ ಮೊದಲಾದ ನೂರಾರು ರಂಗಗಳಲ್ಲಿ ಪ್ರಗತಿಯನ್ನು ಸಾಧಿಸಿದ್ದೇವೆ; ಇನ್ನೂ ಸಾಧಿಸುತ್ತಾ ಇದ್ದೇವೆ. ಆದರೆ ಬದುಕಿನಲ್ಲಿ ಪ್ರಗತಿಯನ್ನು ಸಾಧಿಸುವುದರಲ್ಲಿ ಮಾತ್ರ ನಾವು ಹಿಂದೆ ಬಿದ್ದಿದ್ದೇವೆ. ಇದನ್ನು ನಾವಿಂದು ಸಾಧಿಸಿ, 'ಪ್ರಗತಿ'ಯ ಸರ್ವಮುಖಗಳನ್ನೂ ಜಯಿಸಬೇಕು. ●●

ಧಿಸಿದರು.

ತನಗೆ ವಿಧಿಸಿದ ಶಿಕ್ಷೆಯ ವಿರುದ್ಧ ಅರುಂಧತಿ ಹೈಕೋರ್ಟಿಗೆ ಅಫೀಲು ಹೋದಳು. ಶ್ರೇಷ್ಠ ನ್ಯಾಯಾಲಯ ವಿದ್ಯಮಾನಗಳನ್ನು ವಿಮರ್ಶಿಸಿ ಇನ್ನೊಂದು ಅಭಿಪ್ರಾಯಕ್ಕೆ ಬಂತು. 'ಮಹಮ್ಮದನ ಹೇಳಿಕೆಗೂ, ಅರುಂಧತಿ ಕೊಟ್ಟ ತಪ್ಪೊಪ್ಪಿಗೆಯ ಹೇಳಿಗೂ ಮುಖ್ಯಾಂಶಗಳಲ್ಲಿ ತಾಳೆ ಬೀಳುವುದಿಲ್ಲ. ಎರಡನೆಯದಾಗಿ ಅವಳ ತಪ್ಪೊಪ್ಪಿಗೆಯ ಹೇಳಿಕೆಗೆ ಹೆಚ್ಚಿನ ಮಹತ್ವ ಕೊಡಲೂ ಬರುವುದಿಲ್ಲ. ಈ ಹೇಳಿಕೆ ನೀಡಿದಾಗ ಅರುಂಧತಿ ಪ್ರಸವ ವೇದನೆಯಿಂದ ನರಳುತಿದ್ದಳು. ದೈಹಿಕವಾಗಿ, ಮಾನಸಿಕವಾಗಿ, ಆಕೆ ಸಮಸ್ಥಿತಿಯಲ್ಲಿರಲಿಲ್ಲ. ಈ ಸ್ಥಿತಿಯಲ್ಲಿ ಏನು ಹೇಳಿದೆನೆಂಬುದು ಅವಳಿಗೇ ತಿಳಿದಿರುವುದು ಸಾಧ್ಯವಿಲ್ಲ. ಶ್ರೀಕಾಂತನ ಕೊಲೆಯಾಗಿರುವುದು ನಿಶ್ಚಯ. ಆದರೆ ಅದನ್ನು ಅರುಂಧತಿ ಮಾಡಿದಳೆಂದು ಹೇಳುವುದು ಹೇಗೆ? ಆಕೆ ಆ ರಾತ್ರಿ ಇಲ್ಲಿ ಇದ್ದಳು. ಗಂಡನ ಕೊಲೆಯಾದುದು ಅವಳಿಗೆ ತಿಳಿದಿದೆ. ಇದು ತಿಳಿದೂ ಅವಳೇಕೆ ಮನೆಯನ್ನು ತ್ಯಜಿಸಿದಳು? ತಾಯಿಯ ಮನೆಗೆ ಹೋಗುವಾಗ ಅರುಂಧತಿ, ಮನೆಗೆ ಬೀಗ ಹಾಕಿ ಕೊಂಡಿದ್ದಳು. ಬೀಗದ ಕೈಗಳು ಅವಳ ವಶವಿದ್ದುವು. ಅವಳು ಕೊಟ್ಟ ವರ್ತಮಾನದ ಮೇಲೆಯೇ ಮೃತನ ಬಟ್ಟೆಗಳು ಸಿಕ್ಕಿದ್ದು. ಅವುಗಳು ರಕ್ತಮಯವಾಗಿದ್ದುವು. ಅವುಗಳಿದ್ದ ಸ್ಥಳ ಅವಳಿಗೆ ತಿಳಿದಿತ್ತು. ಬೇರೆಯವರಿಗೆ ತಿಳಿಯದ, ಆ ತಾಣವನ್ನು ಅವಳು ತೋರಿಸಿದಳು. ಈ ಕಾರಣಗಳಿಂದ ಕೊಲೆಯ ಸಾಕ್ಷಿಯನ್ನು ಮರೆಮಾಚಲು ಪ್ರಯತ್ನಿಸಿದಳೆನ್ನುವುದರಲ್ಲಿ ಸಂಶಯವಿಲ್ಲ. ಈ ಅಮಾನುಷ ಕೊಲೆ ನಡೆಸಿದವರನ್ನು ಬಿಟ್ಟು ಬಿಡುವ ಪ್ರಸಂಗ ಬಂದುದ್ದು ದುರದೃಷ್ಟಕರ, ಆದರೂ ಅರುಂಧತಿಯೇ ಈ ಕೊಲೆ ಮಾಡಿದಳೆಂದು ಹೇಳಲು ಬರುವುದಿಲ್ಲ. ಈ ಅನುಮಾನದ ಲಾಭವನ್ನು ಆರೋಪಿ ಪಡೆಯುತ್ತಾಳೆ. ಕೊಲೆಯ ಆಪಾದನೆಯಿಂದ, ನಿಸ್ಸಂದಿಗ್ಧ ರುಜುವಾತು ಬರಲಿಲ್ಲವೆಂದು ಅವಳನ್ನು ಬಿಡುಗಡೆ ಮಾಡಬೇಕಾಗುತ್ತದೆ. ಈ ಕಾರಣ ಕೆಳ ಕೋರ್ಟಿನ ತೀರ್ಪನ್ನು ರದ್ದುಗೊಳಿಸಿ, ಪಿನಲ್ ಕೋಡಿನ 201ನೆಯ ತಪ್ಪಿತಕ್ಕೆ ಆಕೆಗೆ ನಾಲ್ಕು ವರ್ಷಗಳ ಕಠಿಣ ಶಿಕ್ಷೆ ವಿಧಿಸುತ್ತೇವೆ.' ಅರುಂಧತಿ ಜೈಲಿಗೆ ಹೋದಳು. ಶಿಕ್ಷೆಯನ್ನು ಅನುಭವಿಸಿದಳು. ●

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

ಪುತ್ತೂರು ಪ್ರಿನ್ಸಿಪಲ್ ಮುನ್ಸೀಫ್ ಕೋರ್ಟಿನಲ್ಲಿ

O. S. 45/71

M. ಕೃಷ್ಣರಾಯ ಶೆಣೈ— ವಾದಿ
ಪೊಡಿ ಕುಂಞ ಯಾನೆ ಇಸ್ಮಾಯಿಲ್ ಸಹ
—ಪ್ರತಿವಾದಿರು

11ನೇ ಪ್ರತಿವಾದಿ: ಜೈನಾಬಿ— K.A. ಖಾದರರ ಹೆಂಡತಿ, ಕೈಲ ಗ್ರಾಮ.

ಸದ್ರಿ 11ನೇ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ನಿಮ್ಮ ತಂದೆ ಮೃತ H.H. ಇಬ್ರಾಯಿಂ, ತಾ. 27-1-68ರಲ್ಲು ರೂ. 2000/-ಕ್ಕೆ 2 ಹುಂಡಿಗಳನ್ನು ವಾದಿಗೆ ಬರಕೊಟ್ಟ ಬಾಬ್ತು, ಸದ್ರಿ ಎರಡು ಹುಂಡಿಗಳ ಬಾಬ್ತು ಬರತಕ್ಕ ಅಸಲು ಹಣ ಮತ್ತು ಬಡ್ಡಿ ಕೂಡಾ ರೂ. 6369-00 ಕ್ಕೆ ನಿಮ್ಮ ಮೇಲೆ ಕೂಡಾ ವಾದಿಯು ಮಾಡಿದ ಈ ದಾವೆಯು ತಾ. 13-8-71ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ, ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉಡಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಠಿವ್ವಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

Sd/- M. Rammohan Rao
Advocate for Plff.
Puttur, 4-8-71.

Edited, Printed & Published by K. H. Shetty at the Navayuga Press, Udipi. S. India.

ನವಯುಗ

ಸ್ವಾತಂತ್ರ್ಯ ವಿಶೇಷಾಂಕ ೧೯೭೧



NAVAYUGA

INDEPENDENCE DAY SPECIAL 1971

೫೦
ಪೈಸೆ

ಸ್ವಾತಂತ್ರ್ಯೋತ್ಸವ
ಸಂಚಿಕೆ 1971

ನವಯುಗ

ಸಂಪುಟ : 50
ಸಂಚಿಕೆ : 49

ತಟಸ್ಥನೀತಿಗೆ ತಿಲಾಂಜಲಿ ಬಿಟ್ಟವೆನ್ನೋಣವೆ?

ನಾವು ನಮ್ಮ ಸ್ವಾತಂತ್ರ್ಯದ ೨೪ ವರ್ಷಗಳನ್ನು ಪೂರೈಸಿ ಇದೀಗ ೨೫ನೆಯ ವರ್ಷಕ್ಕೆ ಪಾದಾರ್ಪಣ ಮಾಡಿದ್ದೇವೆ. ಕಾಲು ಶತಮಾನಕ್ಕೆ ಅಥವಾ ಒಂದು ತಲೆಮಾರಿಗೆ ಅತಿ ನಿಕಟವಾದ ಈ ಅವಧಿಯು ಅಂತ್ಯಂತ ಮಹತ್ವ ಪೂರ್ಣವಾದದ್ದು. ಸ್ವತಂತ್ರ ದೇಶದ ಈ ಪ್ರಾರಂಭಿಕ ವರ್ಷಗಳು ನಮ್ಮ ಮುಂದಿನ ಪ್ರಗತಿಗೆ ಭದ್ರವಾದ ಬುನಾದಿಯನ್ನು ಹಾಕಿಕೊಡಬೇಕಿತ್ತು. ಆದರೆ ನಾವು ನಮ್ಮ ಭವಿಷ್ಯವನ್ನು ಉಜ್ವಲಗೊಳಿಸುವ ಸಫಲ ಪ್ರಯತ್ನದಲ್ಲಿ ನಿರತರಾಗಿದ್ದೇವೆಯೇ? ಈ ಪ್ರಶ್ನೆಯು ಇಂದೂ ಅನಿರ್ದಿಷ್ಟ ಉತ್ತರವನ್ನೇ ಪಡೆಯುತ್ತದೆ.

ದೇಶದ ವಿಭಜನೆಯು ವರದಾನ ನಮ್ಮ ಸ್ವಾತಂತ್ರ್ಯ. ವಿಭಜನೆಯಿಂದ ಹುಟ್ಟಿದ್ದ ಹತ್ತಾರು ಸಮಸ್ಯೆಗಳು ಅಂದಿನಿಂದ ಇಂದಿನವರೆಗೂ ನಮ್ಮನ್ನು ಬೆನ್ನು ಬಿಡದ ಬೇತಾಳನಂತೆ ತಲ್ಲಣಗೊಳಿಸುತ್ತಿವೆ. ಈ ೨೪ ವರ್ಷಗಳಿಂದಲೂ ಸಾವಿರಾರು ಪಾಕಿಸ್ತಾನಿ ನಿರಾಶ್ರಿತರು ನಮ್ಮ ತಲೆ ತಿನ್ನುತ್ತಿದ್ದಾರೆ. ಪಾಕಿಸ್ತಾನವು ಕಾಶ್ಮೀರ–ರಣಕಚ್ಛಗಳಲ್ಲಿ ನಮ್ಮ ಮೇಲೆ ದಂಡೆತ್ತಿ ಬಂದುದಲ್ಲದೆ ಇದೀಗ ತಾನು ಎದುರಿಸಬೇಕಾದ ಬಂಗ್ಲಾದೇಶದ ಸಮಸ್ಯೆಯಲ್ಲಿ ನಮ್ಮನ್ನು ಕಾಲುಕೆದರಿ ಜಗಳಕ್ಕೆ ಕರೆಯುತ್ತಿದೆ. ನಮ್ಮ ಶತ್ರು ಕೆಂಪು ಚೀನವನ್ನು ಕೂಡಿಕೊಂಡು ಯುದ್ಧದ ಬೆದರಿಕೆಯನ್ನು ಹಾಕುತ್ತಿದೆ. ಬಂಗ್ಲಾ ನಾಗರಿಕರ ಸಾಮೂಹಿಕ ಅಭಿಪ್ರಾಯವನ್ನು ಮೆಟ್ಟಿ ನಿಂತು ಅದರ ಮೇಲೆ ಪೈಶಾಚಿಕ ನೃತ್ಯವಾಡುತ್ತಿದೆ. ಹಲವಾರು ಮಿಲಿಟರಿ ಮೈತ್ರಿಕೂಟಗಳ ಸದಸ್ಯ ರಾಷ್ಟ್ರವಾಗಿರುವ ಪಾಕಿಸ್ತಾನವು ಲಭ್ಯವಾದ ಎಲ್ಲ ಮೂಲಗಳಿಂದ ಶಸ್ತ್ರಾಸ್ತ್ರಗಳನ್ನು ಪಡೆದು ಹೆಬ್ಬುಲಿಯಂತೆ ಗರ್ಜಿಸುತ್ತಿದೆ. ನಾವು ಪಂಡಿತ ನೆಹರುರವರು ರೂಪಿಸಿದ ನಿರ್ಲಿಪ್ತ ನೀತಿಯನ್ನೇ ಅಪ್ಪಿಕುಳಿತಿದ್ದೇವೆ. ಆದರೆ ಇತ್ತೀಚಿಗಿನ ರಾಜಕೀಯ ಸ್ಥಿತಿ ಗತಿಗಳು ನಮ್ಮಲ್ಲಿಯೂ ತುಸು ಬದಲಾವಣೆಯನ್ನು ತಂದೊಡ್ಡಿವೆಯೆಂದು ಹೇಳ ಬಹುದು. ಅಮೆರಿಕದ ಅಧ್ಯಕ್ಷ ನಿಕ್ಸನರು ಪೀಕಿಂಗ್‌ಗೆ ಭೆಟ್ಟಿ ನೀಡಲು ನಿರ್ಧರಿಸಿರುವುದರಿಂದ ಅಮೇರಿಕಾದ ಚೀನಾ ಬಗೆಯ ನೀತಿಯಲ್ಲಿ ಬದಲಾವಣೆಯಾಗುವುದು ಅಸಂಭವವಲ್ಲ. ಭಾರತವನ್ನು ಸಶಕ್ತರಾಷ್ಟ್ರವನ್ನಾಗಿ ಕಟ್ಟುವುದೆ ತನ್ನ ಉದ್ದೇಶವೆಂದು ಹೇಳುವ ಅಮೇರಿಕೆಯು ಬಂಗ್ಲಾ ದೇಶದ ಸಂಬಂಧದಲ್ಲಿ ಭಾರತದ ನಿಲುವೆಯನ್ನು ಬೆಂಬಲಿಸಲಿಲ್ಲ. ಬದಲಿಗೆ ಹಿಂದಿನ ತಾರೀಕನ್ನು ಹಾಕಿ ಪಾಕಿಸ್ತಾನಕ್ಕೆ ಸೈನಿಕ ನೆರವನ್ನು ನೀಡ ಹೊರಟಿದೆ. ಕಮ್ಯುನಿಷ್ಟ್ ಆಕ್ರಮಣ ವಿರೋಧಕ್ಕಾಗಿ ತಾನು ನೀಡಿದ ಶಸ್ತ್ರಾಸ್ತ್ರಗಳು ಭಾರತದ ವಿರುದ್ಧ ಪ್ರಯೋಗವಾದಾಗಲೂ ಮೂಕ ಪ್ರೇಕ್ಷಕನಂತೆ ಕಳಿತಿದ್ದ ಅಮೆರಿಕೆಯಿಂದ ಭಾರತವು ಸಹಾನು ಭೂತಿಯನ್ನಲ್ಲದೆ ಮತ್ತೇನನ್ನೂ ಪಡೆಯಲಿಲ್ಲ. ಕೆಂಪು ಚೀನಕ್ಕೆ ಭಾರತದೊಂದಿಗೆ ಮಾತ್ರ ಗಡಿ ವಿವಾದವಿರುವುದಲ್ಲ. ವಿಶ್ವದ ಪ್ರಬಲ ಕಮ್ಯುನಿಷ್ಟ್ ದೇಶವಾದ ರಷ್ಯಾದೊಡನೆ ಸೀಮಾ ವಿವಾದವಲ್ಲದೆ ಸೈದ್ಧಾಂತಿಕ ಭಿನ್ನಾಭಿಪ್ರಾಯವನ್ನೂ ಪಡೆದಿದೆ. ಈ ಪರಿಸ್ಥಿತಿಯು ದುರ್ಲಾಭವನ್ನು ಹೊಂದಲು ಪಾಕಿಸ್ತಾನವು ಪಿತೂರಿನಡೆಸಿದ್ದುಂಟು. ಈಗ ಇದರಲ್ಲಿ ಅಮೆರಿಕೆಯೂ ಸಹಭಾಗಿಯಾಗುವ ಸಂದೇಹ ತಲೆದೋರಿದೆ. ಮೊನ್ನೆ ಮೊನ್ನೆ ರಶ್ಯಾದ ವಿದೇಶ ಮಂತ್ರಿ ಶ್ರೀ ಗ್ರೋಮಿಕೋ ಅವರು ದೆಹಲಿಗೆ ಅನಿರೀಕ್ಷಿತವಾಗಿ ಭೆಟ್ಟಿ ನೀಡಿದರು. ಕೆಲವೇ ತಾಸುಗಳಲ್ಲಿ ಭಾರತ ಮತ್ತು ರಷ್ಯಗಳ ನಡುವೆ ರಕ್ಷಣಾ ಒಡಂಬಡಿಕೆಯೂಯಿತು. ಇದರಂತೆ ಭಾರತದ ಮೇಲೆ ಹೊರದೇಶಗಳಿಂದ ಆಕ್ರಮಣ ನಡೆದರೆ ಅಥವಾ ಆಕ್ರಮಣದ ಬೆದರಿಕೆ ಹಾಕಿದರೆ ಅದನ್ನು ತನ್ನ ಮೇಲಿನ ಆಕ್ರಮಣವೆಂದು ರಷ್ಯಾವು ಪರಿಗಣಿಸುತ್ತದೆ. ಅಂದರೆ ಪಾಕಿಸ್ತಾನವು ಒಂದು ವೇಳೆ ಸ್ವತಂತ್ರವಾಗಿಯೂಗಲೀ ತನ್ನ ಮಿತ್ರರ ಒತ್ತಾಸೆಯಿಂದಾಗಲೀ ಭಾರತವನ್ನು ಕೆಣಕಿದರೆ ಆಗ ನಮಗೆ ರಷ್ಯಾವು ಆತ್ಮ ರಕ್ಷಣೆಗಾಗಿ ಸರ್ವ ಸಹಾಯವನ್ನೂ ನೀಡುವುದು. ಇದು ಮಿಲಿಟರಿ ಒಡಂಬಡಿಕೆಯಲ್ಲವೆಂದೂ ಬರಿಯ ಮೈತ್ರಿಯೆಂದೂ ಪ್ರಧಾನಿ ಇಂದಿರಾಗಾಂಧಿ ವರ್ಣಿಸಿದರೂ ನಾವು ನಮ್ಮ ತಟಸ್ಥ ನೀತಿಯನ್ನು ಬಿಟ್ಟುಕೊಟ್ಟಿಲ್ಲವೆಂದು ಹೇಳಿದರೂ ಒಂದು ರೀತಿಯಿಂದ ಇದು ಸೈನಿಕ ಒಡಂಬಡಿಕೆಗಿಂತ ಬೇರೆಯಲ್ಲವೆಂದು ಹೇಳಬಹುದು. ನಮ್ಮ ಒಲವು ಅಮೆರಿಕೆಯಿಂದ ಎಂದೋ ಜಾರಿ ಬಿದ್ದಿದೆ. ಏಕೆಂದರೆ ಅದು ಒಂದಲ್ಲ ಒಂದು ನೆಪ ಒಡ್ಡಿ ಪಾಕಿಸ್ತಾನಕ್ಕೆ ಮಿಲಿಟರಿ ಸಹಾಯವನ್ನು ಕೊಡುತ್ತಲೇ ಬಂದಿದೆ. ಇತ್ತೀಚಿಗಿನ ಹಲವು ವರ್ಷಗಳಿಂದ ರಾಜಕೀಯವಾಗಿಯೂ ಸಾಮಾಜಿಕವಾಗಿಯೂ ನಮ್ಮ ಒಲವು ಸೋವಿಯತ್ ದೇಶದತ್ತ ಮಾಲಿಕೊಂಡಿದೆ ಎಂಬುದು ನಿರ್ವಿವಾದ. ಇದೀಗ ಸೈನಿಕವಾಗಿಯೂ ರಷ್ಯಾದತ್ತ ನಾವು ಒಲಿದಿದ್ದೇವೆ ಎಂಬುದು ಸ್ಪಷ್ಟವಾಯಿತು. ಬಂಗ್ಲಾ ದೇಶದ ಸಮಸ್ಯೆಯನ್ನು ಅಲ್ಲಿನ ಜನತೆಯ ಅಭಿಪ್ರಾಯಗನುಸಾರವಾಗಿ ಪರಿಹರಿಸಿಕೊಂಡು ನಿರಾಶ್ರಿತರ ವಾಪಸಾತಿಗೆ ಅನುಕೂಲ ವಾತಾವರಣವನ್ನು ಪಾಕಿಸ್ತಾನವು ನಿರ್ಮಿಸದೆ ಹೋದರೆ ಸ್ವತಂತ್ರ ಬಂಗ್ಲಾದೇಶವನ್ನು ಭಾರತ, ರಷ್ಯಾ ಮೊದಲಾದ ರಾಷ್ಟ್ರಗಳು ಮನ್ನಿಸಿ ಮುಂದಿನ ಕ್ರಮವನ್ನು ಕೈಗೊಂಡರೆ ಆಶ್ಚರ್ಯವಿಲ್ಲ. ಪ್ರಕೃತದ ಒಪ್ಪಂದದಿಂದ್ಧ ಯುದ ಭೀತಿಯು ಬದಲಿಗೆ ಹಬ್ಬಿದ ಯುದ್ಧದ ಕಾರ್ಮೋಡಗಳು ಚದರುವಂತಾಗಲೂ ಬಹುದು. ಅದೇನಿದ್ದರೂ ನಮ್ಮ ತಟಸ್ಥ ನೀತಿಗೆ ಅವಸಾನ ಕಾಲ ಪ್ರಾಪ್ತವಾಯಿತೆಂಬುದು ನಿರ್ವಿವಾದ. ಒಂದು ದೇಶದ ವಿದೇಶ ನೀತಿಯು ಯಾವ ಕಾಲಕ್ಕೂ ಏಕರೂಪವಾಗಿರಬೇಕಾಗಿಲ್ಲ. ಪರಿಸ್ಥಿತಿಗೆ ಹೊಂದಿಕೊಂಡು ನೀತಿಯನ್ನು ಬದಲಾಯಿಸುವುದು ನ್ಯಾಯೋಚಿತವಾದುದು. ನಮ್ಮ ಅಣುಶಕ್ತಿ ನೀತಿಯೂ ಕ್ರಮೇಣ ಬದಲಾದರೆ ಅಸ್ವಾಭಾವಿಕವೆನಿಸದು.

ದೇಶದಲ್ಲಿ ಮೊತ್ತಮೊದಲ ಬಾರಿಗೆ ಲೋಕಸಭೆಯು ವಿಸರ್ಜನೆಗೊಂಡು ಮಧ್ಯಾವಧಿ ಚುನಾವಣೆ ನಡೆಯಿತು. ಚುನಾವಣೆಯ ಫಲಿತಾಂಶಗಳು ಹಲವಾರು ರಾಜ್ಯಕೀಯ ಪಕ್ಷಗಳ ನಿರೀಕ್ಷೆಯನ್ನು ತಲೆಕೆಳಗು ಮಾಡಿದವು. ಶ್ರೀಮತಿ ಇಂದಿರಾ ಗಾಂಧಿಯವರುಶ್ರೀ ಸಾಮಾನ್ಯರ ಉದ್ಧಾರ, ಪ್ರಗತಿ ಮತ್ತು ಸಮಾಜವಾದಗಳ ಬಲದಿಂದ ತುಂಬಿ ತುಳುಕುವ ಬಹುಮತವನ್ನು ಗಳಿಸಿದರು. ತಾನು ಜನತೆಗೆ ನೀಡಿದ ಆಶ್ವಾಸನೆಗಳನ್ನು ಈಡೇರಿಸುವ ಸದುದ್ದೇಶದಿಂದ ಸಂವಿಧಾನವನ್ನು ತಿದ್ದುಪಡಿ ಮಾಡಿಕೊಂಡರು. ದೇಶದ ಸಂಪತ್ತು ಕೆಲವೇ ಜನರ ಕೈಯಲ್ಲಿ ಹಂಚಿಹೋಗುವುದನ್ನು ತಪ್ಪಿಸಲು ಅವರು ಸೂಕ್ತ ಕ್ರಮವನ್ನು ಕೈಕೊಂಡಾರು. ಆದರೆ ಈ ಒಂದೆರಡು ವರ್ಷಗಳಿಂದ ತಲೆದೋರಿರುವ ಬೆಲೆಯೇರಿಕೆಯನ್ನು ತಡೆಹಿಡಿಯುವಲ್ಲಿ ಅವರು ಸಂಪೂರ್ಣ ಅಶಕ್ತರಾಗಿದ್ದಾರೆ. ಬಂಗ್ಲಾ ದೇಶದ ನಿರಾಶ್ರಿತರ ಸಮಸ್ಯೆಯಿಂದಾಗಿ ಕೊರತೆಧನ ವಿನಿಯೋಗವು ಮತ್ತಷ್ಟು ಹೆಚ್ಚಲಿರುವುದರಿಂದ ಅತಿ ಪ್ರಸರಣ ಅನಿವಾರ್ಯ. ಆಗ ಬೆಲೆಯೇರಿಕೆಯು ಸ್ವಾಭಾವಿಕ. ನಮ್ಮ ದೇಶದ ಆರ್ಥಿಕ ವ್ಯವಸ್ಥೆಯನ್ನು ಸ್ವದೇಶಿಯ ನೀತಿಯಿಂದಲೇ ರೂಪಿಸಬೇಕು. ಯಾವುದೋ ಒಂದು ದೇಶಕ್ಕೆ ಹೊಂದಿಕೊಳ್ಳುವ ಆರ್ಥಿಕ ನೀತಿಯು ನಮ್ಮ ದೇಶಕ್ಕೂ ಸಮರ್ಪಕವಾಗುವುದೆಂದು ನಂಬುವುದು ಮೂರ್ಖತನವಾಗುತ್ತದೆ.

ಈ ಸ್ವಾತಂತ್ರ್ಯೋತ್ಸವವು ನಮಗೆ ನಮ್ಮತನದ ಅರಿವನ್ನು ಮೂಡಿ ಕೊಟ್ಟು ಪ್ರಗತಿಗೆ ಪ್ರೇರಕವಾಗಲೆಂದು ಹಾರೈಸುತ್ತೇವೆ.

ನಿವೇದನೆ

ಈ ವಿಶೇಷ ಸಂಚಿಕೆಯನ್ನು ನಾವು ವಾಡಿಕೆಯಂತೆ ವಾಚಕರ ಕೈಗಳಲ್ಲಿಡುತ್ತಿದ್ದೇವೆ. ಇದರ ಪ್ರಕಟನೆಯಲ್ಲಿ ತುಂಬು ಹೃದಯದಿಂದ ಲೇಖಕ ಬಂಧುಗಳು ಸಹಕರಿಸಿದ್ದಾರೆ. ಜಾಹಿರಾತುದಾರರು ತಮ್ಮ ಅತ್ಯಮೂಲ್ಯವಾದ ಜಾಹಿರಾತುಗಳನ್ನು ನೀಡಿ ನಮಗೆ ಬೆಂಗೋಲಾಗಿ ನಿಂತಿದ್ದಾರೆ. ಕೆಲ ಮಿತ್ರರು ಜಾಹೀರಾತುಗಳನ್ನು ಒದಗಿಸಿ ಸಹಕರಿಸಿದ್ದಾರೆ. ನಮ್ಮ ಚಂದಾದಾರರಿಗೂ ವಾಚಕರಿಗೂ ಈ ಸಂಚಿಕೆಯು ತುಸುವಾದರೂ ವಿಚಾರ ಸಾಹಿತ್ಯವನ್ನು ಒದಗಿಸಿದರೆ ನಮ್ಮ ಶ್ರಮ ಸಾರ್ಥಕವಾಗುವುದು. ದೇಶದ ಭವಿಷ್ಯದೊಡನೆ ನಮ್ಮೆಲ್ಲರ ಭವಿಷ್ಯವೂ ಉಜ್ವಲವಾಗಲೆಂದು ನಾವು ಪ್ರಾರ್ಥಿಸುತ್ತೇವೆ.

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು

ಮುಖಚಿತ್ರ: ಶಿಕ್ಷಣಕ್ಷೇತ್ರದಲ್ಲಿ ಆಮೂಲಾಗ್ರ ಕ್ರಾಂತಿ ಸಾಧಿಸಲು ವಿಶ್ವಭಾರತಿಯನ್ನು ಕಟ್ಟಿದ ಕವಿ ರವೀಂದ್ರನಾಥ ಟಾಗೋರ್. ನೋಬೆಲ್ ಪಾರಿತೋಷಕ ವಿಜೇತ, ಸ್ವಾತಂತ್ರ್ಯಾಭಿಮಾನಿ, ಋಷಿತುಲ್ಯ ಟಾಗೋರರು ರೂಪಿಸಿದ್ದ ಶಿಕ್ಷಣ ಪ್ರಣಾಳಿಯು ನಮ್ಮ ಇತ್ತು ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲುದೆ? ಸುಶಿಕ್ಷಿತರ ನಿರುದ್ಯೋಗ, ಗೂಂಡಾಗಿರಿ, ವಿದ್ಯಾರ್ಥಿಗಳಲ್ಲಿ ಅಶಿಸ್ತು— ಮೊದಲಾದುವುಗಳಿಗೆ ಅದು ಸಮಾಧಾನ ಹೇಳಲಾರದೆ?

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಸ್ವಾತಂತ್ರ್ಯೋತ್ಸವದ ಶುಭಾಶಯಗಳು!

ಚಿಕ್ಕಮಗಳೂರಿಗೆ ಪ್ರವಾಸ ಬಂದಾಗ

ಪೈ ಹೋಟೆಲ್

(ಹನುಮಂತಪ್ಪ ಸರ್ಕಲ್)

ಇಲ್ಲಿ
ಉಪಾಹಾರ, ಪಾನೀಯಗಳನ್ನು ಸ್ವೀಕರಿಸಲು
ಮರೆಯಬೇಡಿ!

ನಿಮ್ಮ ದಣಿವು ನಿವಾರಿಸಿಕೊಳ್ಳಲು,
ಶುಚಿ ರುಚಿಗಳಿಗೆ ಚಿಕ್ಕಮಗಳೂರಲ್ಲಿ ಹೆಸರುವಾಸಿಯಾದ

ಪೈ ಹೋಟೇಲ್ ಸಂದರ್ಶಿಸಿ !!

VICTORY TO THOSE

Who have invested in our deposits

FOR

Their deposits have done miracles.

More than 1,20,000 farmers of our district are ploughing to make the Nation self sufficient, with the support of our Finance.

DEPOSIT RATES: 4% to 7¾%

THE SOUTH CANARA DISTRICT CENTRAL COOPERATIVE BANK LTD.,

MANGALORE-3.

Branches :

Coondapur, Puttur, Buntwal, Udipi, Karkal, Belthangady, Sullia and Janatha Bazar, Mangalore

Sri B. Prabhakara Rao, M. A., B. L., Vice President.

Sri B. Narayana Nayak, President.

Sri N Venkappa Rai, H. D. C., Secretary.

ತಂತಿ ವಿಳಾಸ, "ಮೈಲ್ಯಾಂಡ್‌ಬ್ಯಾಂಕ್"

ದೂರ ವಾಣಿ: 29208
29209

ಸ್ಥಾಪನೆ: 1929

ಅಂಚೆ ಪೆಟ್ಟಿಗೆ ಅಂಕ: 1711

ಮೈಸೂರು ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್ ಲಿ.,

ಬೆಂಗಳೂರು — 18

ಮೈಸೂರು ರಾಜ್ಯದ ರೈತರ ಭೂ ಅಭಿವೃದ್ಧಿಗಾಗಿ ಕಳೆದ 40 ವರ್ಷಗಳಿಂದ ದೀರ್ಘಾವಧಿ ಸಾಲವನ್ನು ತಾಲ್ಲೂಕ ಭೂ ಅಭಿವೃದ್ಧಿ ಬ್ಯಾಂಕುಗಳ ಮೂಲಕ ಒದಗಿಸಿ ಕೊಡುತ್ತಿದೆ. ಈ ವರೆಗೆ ಸುಮಾರು 55 ಕೋಟಿ ರೂಪಾಯಿಗಳ ದೀರ್ಘಾವಧಿ ಸಾಲದ ನೆರವನ್ನು ರೈತರಿಗೆ ಒದಗಿಸಿಕೊಟ್ಟಿದೆ.

ಸರ್ಕಾರದವರು ರೂಪಿಸಿರುವ ಭಾವಿ ಯೋಜನೆಯಂತೆ ರೈತರಿಗೆ ಕೇವಲ ಶೇ. 6ರ ಬಡ್ಡಿ ದರದಂತೆ ಈ ವರೆಗೆ ಸುಮಾರು 50,000 ಭಾವಿಗಳ ನಿರ್ಮಾಣಕ್ಕಾಗಿ 20 ಕೋಟಿ ರೂಪಾಯಿಗಳಿಗೂ ಮಿಕ್ಕಿ ಸಾಲವನ್ನು ಮಂಜೂರು ಮಾಡಿದೆ. 2 ಕೋಟಿ ರೂ. ಗಳಿಗೂ ಮಿಕ್ಕಿ ವಿದ್ಯುಚ್ಛಾಲಿತ ಮತ್ತು ಡೀಸೆಲ್ ನೀರೆತ್ತುವ ಯಂತ್ರೋಪಕರಣಗಳನ್ನು ಕೊಳ್ಳಲು ರೈತರಿಗೆ ಸಾಲವನ್ನು ಒದಗಿಸಿಕೊಟ್ಟಿದೆ.

ಸಾಮಾನ್ಯ ಅಭಿವೃದ್ಧಿ ಕಾರ್ಯಗಳಿಗಾಗಿ ಈ ವರೆಗೆ ಸುಮಾರು 22 ಕೋಟಿ ರೂ. ಗಳ ಸಾಲದ ನೆರವನ್ನು ರೈತರಿಗೆ ನೀಡಲಾಗಿದೆ. ಇವಲ್ಲದೆ ಟ್ರಾಕ್ಟರ್, ಪವರ್ ಟಿಲ್ಲರ್, ಸ್ಪ್ರಿಂಕ್ಲರ್ಸ್ ಮುಂತಾದ ವ್ಯವಸಾಯ ಯಂತ್ರೋಪಕರಣಗಳನ್ನು ಕೊಳ್ಳಲು ಸಾಲದ ನೆರವನ್ನು ಒದಗಿಸುತ್ತದೆ.

ಅಗ್ರಿಕಲ್ಚರಲ್ ರೀ ಫೈನಾನ್ಸ್ ಕಾರ್ಪೊರೇಷನ್ ಇವರ ನೆರವಿನಿಂದ ಸುಮಾರು 30 ಕೋಟಿ ರೂ. ಗಳ ಸಾಲದ ನೆರವಿನ 24 ವಿಶೇಷ ಯೋಜನೆಗಳನ್ನು ಕೈಗೊಳ್ಳಲಾಗಿದೆ ಜಲಾಶಯಗಳ ಆಯಾಕಟ್ಟಿನ ಪ್ರದೇಶದ ಜಮೀನುಗಳನ್ನು ಅಭಿವೃದ್ಧಿಗೊಳಿಸುವ ಯೋಜನೆಗಳು, ಸಂಯುಕ್ತ ಕ್ಷೇತ್ರಾಭಿವೃದ್ಧಿ ಯೋಜನೆಗಳು, ಅಡಿಕೆ, ತೆಂಗು, ದ್ರಾಕ್ಷಿ, ಕಿತ್ತಳೆ, ಮುಂತಾದ ತೋಟಗಾರಿಕೆಗೆ ಸಂಬಂಧಪಟ್ಟ ಯೋಜನೆಗಳಿಗೂ ವಿಶೇಷ ಯೋಜನೆಯಿಂದ ನೆರವನ್ನು ಒದಗಿಸಲಾಗುತ್ತಿದೆ. ರೈತರು ಈ ಯೋಜನೆಗಳ ಸದುಪಯೋಗವನ್ನು ಮಾಡಿಕೊಳ್ಳಬೇಕು

ರೈತರು ಈ ಅಭಿವೃದ್ಧಿ ಕಾರ್ಯಗಳಿಂದ ಬೆಳೆ ಬೆಳೆಸಿ ಉಳಿಸಿರುವ ಹಣವನ್ನು ಈ ಬ್ಯಾಂಕಿನ ಗ್ರಾಮಾಂತರ ಡಿಬೆಂಚರುಗಳಲ್ಲಿ ತೊಡಗಿಸಬೇಕಾಗಿ ಕೋರಿಕೆ.

ಜಯಕುಮಾರ್ ಅನಗೋಳಿ, ಐ.ಎ.ಎಸ್.
ಮ್ಯಾನೇಜಿಂಗ್ ಡೈರೆಕ್ಟರ್

ಬಿ.ಎಸ್. ವಿಶ್ವನಾಥನ್, ಎಂ.ಎಲ್.ಸಿ.
ಅಧ್ಯಕ್ಷರು.

ವಿ.ಕೆ. ಚಿನ್ನಮುಲ್‌ಗುಂದ
ಕಾರ್ಯದರ್ಶಿ

ಶ್ರೀ ಐ. ಜೆ. ನಾಯ್ಡು
(ಕೇಂದ್ರ ಕೃಷಿ ಗಣತಿ ಕಮಿಷನರ್)

ಯೋಜನೆಗಳ ಕೀಲಿ-ಕೃಷಿ ಗಣತಿ

ಕೃಷಿಗಣತಿಯ ಕಾರ್ಯ ಕಳೆದ ವರ್ಷ ಮೊತ್ತಮೊದಲ ಬಾರಿಗೆ ದೇಶದಲ್ಲಿ ಆರಂಭವಾಗಿದ್ದು ಅದರ ಖಚಿತ ವಿವರಗಳು ಮುಂದಿನೆರಡು ವರ್ಷಗಳಲ್ಲಿ ಸಿದ್ಧವಾಗಬಹುದು. ಈ ವಿವರಗಳ ಆಧಾರದ ಮೇಲೆ ಯೋಜನೆಗಳನ್ನು ರೂಪಿಸುವುದರಿಂದ ಸಮೃದ್ಧಿ ಸುಲಭವಾಗುವುದೆಂದು ನಿರೀಕ್ಷೆಯಿದೆ.

ಇಂದು ಭಾರತದಲ್ಲಿ ಅತ್ಯಂತ ಬೃಹತ್ತಾದ ಕೃಷಿ ಅಂಕಿ—ಅಂಶ ಸಂಗ್ರಹಣ ಕಾರ್ಯ ಕೈಗೊಳ್ಳಲಾಗಿದೆ. ದೇಶದ ಐದು ಲಕ್ಷಕ್ಕಿಂತಲೂ ಹೆಚ್ಚು ಗ್ರಾಮಗಳಲ್ಲಿ ಹಂಚಿಹೋಗಿರುವ 6 ಕೋಟಿ ಭೂಹಿಡುವಳಿಗಳ ಬಗ್ಗೆ ಮಾಹಿತಿ ಸಂಗ್ರಹಿಸುವ ಕಾರ್ಯದಲ್ಲಿ ಒಂದು ಲಕ್ಷ ಗ್ರಾಮೀಣ ಕಾರ್ಯಕರ್ತರು ನಿರತರಾಗಿದ್ದಾರೆ. ಈ ಕೃಷಿ ಗಣತಿಯ ಫಲವಾಗಿ ಜಿಲ್ಲೆ ಹಾಗು ಇನ್ನೂ ಕೆಳಮಟ್ಟದಲ್ಲಿ ಕೃಷಿ ಅಭಿವೃದ್ಧಿ ಯೋಜನೆಯನ್ನು ವಿಸ್ತರಿಸುವುದರ ಯಥಾರ್ಥತೆಯನ್ನು ಅರಿತುಕೊಳ್ಳಬಹುದು.

ಯೋಜನಾ ಕಾರ್ಯ ಕೈಗೊಳ್ಳಲು ವೈಯಕ್ತಿಕ ಹಿಡುವಳಿ ಕುರಿತ ಮಾಹಿತಿಯ ಪ್ರಾಮುಖ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಅಧಿಕ ಇಳುವರಿ ಬೆಳೆಗಳನ್ನು ತೆಗೆಯುವ ಬೇಸಾಯಗಾರರು ಬೃಹತ್ ಅಥವಾ ಮಧ್ಯಮ ವರ್ಗದ ಹಿಡುವಳಿದಾರ ವರ್ಗಕ್ಕೆ ಸೇರಿದ್ದಾರೆಯೆ ಅಥವಾ ಸಣ್ಣ ಬೇಸಾಯಗಾರರೂ ಈ ಕೃಷಿ ಕಾರ್ಯ ಕೈಗೊಂಡಿದ್ದಾರೆಯೋ ಎಂಬ ಅಂಶವನ್ನು ನಾವು ತಿಳಿದುಕೊಳ್ಳ ಬೇಕಾಗಿದೆ. ಇದೇ ರೀತಿ ಮಿಶ್ರ ಬೆಳೆಯ ಬಗ್ಗೆಯೂ ಅರಿತುಕೊಳ್ಳಬೇಕಾಗಿದೆ. ಪ್ರಸ್ತುತ ಬೆಳೆ ತೆಗೆಯುತ್ತಿರುವ ವಿಧಾನ ಮುಂತಾದ ಮುಖ್ಯ ಮಾಹಿತಿಯನ್ನು ಹಿಡುವಳಿಯ ಆಳತೆಗೆ ಅನುರೂಪವಾಗಿ ವರ್ಗೀಕರಿಸಬೇಕಾಗಿದೆ.

ವಿವರ ಮಾಹಿತಿಯ ಅಭಾವ

ಇಂದು ನೀರಾವರಿ ಸೌಲಭ್ಯ ವಿಸ್ತರಿಸುತ್ತಿದೆ. ವಿವಿಧ ನೀರಾವರಿ ವ್ಯವಸ್ಥೆಯಲ್ಲಿ ವಿವಿಧ ಆಳತೆಯ ಹಿಡುವಳಿಗಳಲ್ಲಿ ತೆಗೆಯುತ್ತಿರುವ ಬೆಳೆಗಳ ವೈವಿಧ್ಯದ ಬಗ್ಗೆ ಅರಿತುಕೊಳ್ಳಬೇಕಾಗಿದೆ. ಅಧಿಕ ಪ್ರಮಾಣದಲ್ಲಿ ಉತ್ತಮ ಗೊಬ್ಬರಗಳ ಬಳಕೆ ಬಗ್ಗೆ ಕಾರ್ಯಕ್ರಮ ರೂಪಿಸುವುದಕ್ಕೆ ಪೂರ್ವಭಾವಿಯಾಗಿ ಹಿಡುವಳಿಯ ಆಳತೆ ಹಾಗು ಗೊಬ್ಬರ ಬಳಕೆ ಪ್ರಮಾಣದ ನಡುವಣ ಸಂಬಂಧವನ್ನು ಅರಿತುಕೊಳ್ಳುವುದು ಆಗತ್ಯವಾಗಿದೆ. ವಿವಿಧ ಆಳತೆಯ ಹಿಡುವಳಿಗಳಿಗೆ ವಿವಿಧ ಉದ್ದೇಶಗಳಿಗಾಗಿ ಬೇಕಾಗುವ ಸಾಲದ ಆಗತ್ಯದ ಬಗ್ಗೆಯೂ ಮಾಹಿತಿ ಸಂಗ್ರಹಿಸುವುದು ಅತ್ಯಗತ್ಯವಾಗಿದೆ. ಕೃಷಿ ಸಾಧನೋಪಕರಣಗಳು, ವಿಶೇಷ ಪ್ರದೇಶಗಳ ಕಾರ್ಯಕ್ರಮಗಳು, ಸಣ್ಣ ಹಾಗು ಮಧ್ಯಮ ವರ್ಗದ ಬೇಸಾಯಗಾರರಿಗೆ ಸಹಾಯ ನೀಡಲು ರೂಪಿಸಿರುವ ನೂತನ ಸಮಾಜವಾದಿ ಕಾರ್ಯಕ್ರಮಗಳು ಹಾಗು ಕೃಷಿ ಕಾರ್ಮಿಕರಿಗಾಗಿ ಪರಿಣಾಮಕಾರಿ ನೀತಿ ಪ್ರಣಾಳಿಕೆ ಸಿದ್ಧಪಡಿಸಲು ಕೃಷಿ ಗಣತಿಯ ಮಾಹಿತಿ ಅತ್ಯಗತ್ಯವಾಗಿದೆ.

ವಿವರವಾದ ಮಾಹಿತಿಯ ಅಭಾವದಿಂದ ನಮ್ಮ ದೇಶದ ಕೃಷಿ ಯೋಜನೆ ವ್ಯಾಪಕ ಆಡಳಿತ ಘಟಕಗಳಲ್ಲಿ ಹಂಚಿ ಹೋಗಿದ್ದು, ಸಮಗ್ರ ಕಾರ್ಯಕ್ರಮದ ಆಧಾರದ ಮೇಲೆ ರೂಪಿತವಾಗುತ್ತಿದೆ. ಈಗ ಜಿಲ್ಲೆ ಹಾಗು ಘಟಕಗಳ ಮಟ್ಟದ ಯೋಜನೆಗೆ ಅಧಿಕಪ್ರಾಮುಖ್ಯತೆ ನೀಡುತ್ತಿರುವುದರಿಂದ ಈ ಮಟ್ಟದಲ್ಲಿ ಯಥಾರ್ಥ ಯೋಜನೆ ರೂಪಿಸಿ, ಯಶಸ್ವಿಯಾಗಿ ಅನುಷ್ಠಾನಕ್ಕೆ ತರಲು ವಿವರವಾದ ಮಾಹಿತಿ ಆಗತ್ಯವಾಗಿದೆ. ಆದ್ದರಿಂದಲೇ ಪ್ರಸ್ತುತ ಕೃಷಿ ಗಣತಿಯಲ್ಲಿ ಸಂಪೂರ್ಣ ಎಣಿಕೆ ಕೈಗೊಳ್ಳಲು ನಿರ್ಣಯ ಕೈಗೊಳ್ಳಲಾಯಿತು.

ಹಿಡುವಳಿಗಳ ವಿಂಗಡಣೆ

ಇಂದಿನ ಕೃಷಿಗಣತಿಯಲ್ಲಿ ಬೇಸಾಯ ಕೈಗೊಂಡಿರುವ ಹಿಡುವಳಿ ಹಾಗು ಮಾಲಿಕತ್ವದ ಹಿಡುವಳಿ ಎಂದು ಪ್ರತ್ಯೇಕಿಸಿರುವುದು ಮುಖ್ಯಾಂಶವಾಗಿದೆ. ಬೇಸಾಯದ ಹಿಡುವಳಿಯೆಂದರೆ ಭಾಗಶಃ ಅಥವಾ ಪೂರ್ಣವಾಗಿ ಕೃಷಿ ಬಳಕೆಗೆ ಒಬ್ಬ ವ್ಯಕ್ತಿ ಅಥವಾ ಜಂಟಿಯಾಗಿ ಉಪಯೋಗಿಸುವ ಏಕ ಘಟಕ; ಹಿಡುವಳಿಯ ಮಾಲಿಕತ್ವ, ಆಳತೆ ಸ್ಥಳ ನಿರ್ದೇಶನವನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಇಂತಹ ಹಿಡುವಳಿಗಳೇ ಕೃಷಿ ಅಭಿವೃದ್ಧಿಯಲ್ಲಿ ಮಹತ್ವದ ನಿರ್ಣಾಯಕ ಪಾತ್ರವಹಿಸುವುದರಿಂದ, ಇದರ ಗಣತಿಗೆ ವಿಶೇಷ ಪ್ರಾಮುಖ್ಯತೆಯಿದೆ.

ಗ್ರಾಮಗಳ ಭೂದಾಖಲೆಯಲ್ಲಿ ಈ ಮಾಹಿತಿಗಳು ದೊರಕುವುದರಿಂದ ಹಿಡುವಳಿಗಳ ಸಂಖ್ಯೆ ಹಾಗು ಆಳತೆ, ಬೆಳೆ ತೆಗೆಯುತ್ತಿರುವ ಪ್ರದೇಶದ ವಿಸ್ತೀರ್ಣ, ಉಪಯೋಗದಲ್ಲಿರುವ ಭೂಮಿ, ನೀರಾವರಿ, ಒಕ್ಕಲು ಹಾಗೂ ಒಕ್ಕಲಿನ ಅವಧಿ ಮುಂತಾದ ವಿವರಣೆಗಳು ದೊರಕುವುದರಿಂದ ಅವುಗಳನ್ನು ಸರ್ವೆ ಸಂಖ್ಯೆಗನುಗುಣವಾಗಿ ಹಿಡುವಳಿಗಳ ಕ್ರಮದಲ್ಲಿ ಪಟ್ಟಿಮಾಡಬಹುದೆಂದು ನಿರ್ಧಾರಕ್ಕೆ ಗೊಳ್ಳಲಾಗಿದೆ. ಮೈಸೂರು, ಆಂಧ್ರ ಪ್ರದೇಶ, ತಮಿಳುನಾಡು, ಆಸ್ಸಾಂ, ಬಿಹಾರ, ಗುಜರಾತ್, ಹರಿಯಾನ, ಜಮ್ಮು–ಕಾಶ್ಮೀರ, ಮಧ್ಯಪ್ರದೇಶ, ಮಹಾರಾಷ್ಟ್ರ, ಪಂಜಾಬ್ ರಾಜಸ್ಥಾನ್, ಹಿಮಾಚಲ ಪ್ರದೇಶ, ಉತ್ತರಪ್ರದೇಶ ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸವಿವರವಾಗಿ ಭೂದಾಖಲೆ ದೊರಕುವುದರಿಂದ ತಖ್ತೆಗಳನ್ನು ಪುನರ್ ವಿಮರ್ಶಿಸಲಾಗುತ್ತದೆ.

ಸವಿವರ ಭೂದಾಖಲೆಗಳ ಮಾಹಿತಿಯಿಂ

(ಮೂವತ್ತನೇ ಪುಟ ನೋಡಿರಿ)

With best compliments from:

VISAWA RESTAURANT,

N. C. KELKAR ROAD,
DADAR, BOMBAY-28

With best compliments from:

Hariram Gobindram,

Manufacturers & Exporters
of
FLORA
Electrical appliances
& accessories

POST BOX 6460
MAHIM,
BOMBAY-16
Phone: 453505

55 ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ
ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್

ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:- ಮೈಸೂರು, ಬೆಂಗಳೂರು ಮತ್ತು ಮಂಗಳೂರು.

ಶ್ರೀ ಶಿವಶಂಕರ, ಮದ್ರಾಸು.

ಸ್ವಾತಂತ್ರ್ಯಕ್ಕೆ ಏಕಾದಶಿಯೋ, ಸಂಕ್ರಾಂತಿಯೋ?

ಸ್ವಾತಂತ್ರ್ಯ ದಿನದಂದು ಗಂಗಾಸಾಗರ ದಂಡೆಯಲ್ಲಿ ಕುಳಿತು ದೂರ-ದೂರಕ್ಕೆ ನೋಡಿದವರ ಮನಸ್ಸು ಉದ್ವಿಗ್ನವಾಯ್ತು. ಸೂರ್ಯೋದಯವನ್ನು ನೋಡುವ ತಹತಹಕಥಿವಾಯ್ತು............

ಆಗೋಸ್ಟ್ ಹದಿನೈದು ಅಲ್ಲದೆ ಆದಿತ್ಯವಾರ ಹೇಗೂ ಬಿಡುವಿನ ದಿನ. ಜನರು ಸ್ವಾತಂತ್ರ್ಯ ದಿನೋತ್ಸವದ ಸಂಭ್ರಮವನ್ನು ಕಾಣಲು ಹೋಗಬಹುದು. ಕಡಲಕರೆಗೆ ಬಿಡುವು ಇರಬಹುದೆಂದು ಭಾವಿಸಿಕೊಂಡು ಸಮುದ್ರ ದಡಕ್ಕೆ ಸಾಗಿದೆ. ಎಂದಿನ ಆದಿತ್ಯವಾರ ಇಂದಲ್ಲವೆಂಬುದು ನಿಜವಾದರೂ ಜನ ಜಂಗುಳಿಯಿಂದ ಹಾಯಾಗಿ ಕುಳಿತು ಸಮುದ್ರದ ಅಲೆಗಳನ್ನು ಕಾಣಲು ಸಾಧ್ಯವಿಲ್ಲ. ಜನರ ಅಲೆಯನ್ನೇ ನೋಡುತ್ತಿರಬೇಕಾಗಿದೆಂಬುದು ಪ್ರತ್ಯಕ್ಷ ಅನುಭವಕ್ಕೆ ಬಂತು. ವಿಶಾಲ—ಉಬ್ಬದ ಮಳಲ ದಂಡೆಯಲ್ಲಿ ನನಗೊಂದಿಷ್ಟು ಸ್ಥಳ ಇಲ್ಲದೆ ಹೋದೀತೇನು? ಬಂದ ಜನರ ಕಾಲು ತೊಳೆಯುತ್ತಿರುವ ಬಂಗಾಲ ಖೊಲ್ಲಿ ಅಥವಾ ಭಾರತೀಯರ ಹೃದಯದಲ್ಲಿ ಸಂಕ್ರಾಂತಿಯನ್ನುಂಟುಮಾಡುವ ಪಾವನ ಗಂಗಾ ಸಾಗರದ ಅಲೆಗಳು ಅಪ್ಪಳಿಸುತ್ತಿರುವ ಕರೆಯಲ್ಲಿ ಜನಜಂಗುಳಿಯಿಂದ ದೂರವಿದ್ದು ಅಲೆಗಳು ಅಪ್ಪಳಿಸುವದನ್ನು ಕಾಣಬೇಕೆಂದು ಕಾಲು ಹಾಕಿದೆ. ಅದ್ಯಾಕೋ ಹಿಂತಿರುಗಿ ನೋಡುವ ಮನಸ್ಸಾಯಿತು. ನೋಡಿದೆ. ಆ ಶೇವಭರಿತ ಮಳಲು ದಡದ ಮೇಲಿರುವ ಹೊಯಿಗೆಯ ಹಾಗಲ್ಲ. ನಾನು ನಡೆಯುತ್ತಿದ್ದಂತೆ ಹಿಂದಕ್ಕೆ ನನ್ನ ಹೆಜ್ಜೆಗಳ ಮುದ್ರೆಗಳು ಹಾಗೆಯೇ ಉಳಿದಿವೆ. ಅದುವೇ ಕುರುಹು. ದೂರ ದಿಗಂತವನ್ನು ದಿಟ್ಟಿಸಿದೆ. ಅಲ್ಲೇ ಕುಸಿದು ಬಿಡೋಣ, ಕುಳಿತು ಬಿಡೋಣವೆನ್ನಿಸಿತು. ಜನಸಾಗರ ನನ್ನನ್ನು ನೋಡಿ ನಗೆಯ ಅಲೆಯನ್ನೇ ಎಬ್ಬಿಸುತ್ತದೆಂಬ ಅರಿವಿನಿಂದಾಗಿ ಮೇಲೆ ದಡದಲ್ಲಿ ಸುಮ್ಮನೆ ಬಿದ್ದುಕೊಂಡಿದ್ದ ಒಂದು ದೋಣಿಗೊರಗಿ ಕುಳಿತು ಸ್ವಲ್ಪ ದೂರದಲ್ಲಿರುವ ಜನಸಾಗರದತ್ತ ಒಮ್ಮೆ, ವಿಶಾಲ ಕಡಲಿನತ್ತ ಇನ್ನೊಮ್ಮೆ ಕಣ್ಣು ಹಾಯಿಸಿದೆ. ಹಿಂದಿನಿಂದ ಯಾರಾದರೂ ಆ ದೋಣಿಯನ್ನು ತಿರುಗಿಸಿ ಬಿಟ್ಟಲ್ಲಿ? ಮನಸ್ಸಿನಲ್ಲಿ ಪ್ರಶ್ನೆಯ ಅಲೆ ಎದ್ದೊಡನೆ ಅಲ್ಲಿಂದೆದ್ದು ಪಕ್ಕದಲ್ಲಿದ್ದ ಕಟಮರದ ದಿಮ್ಮಿಯ ಮೇಲೆ ಕುಳಿತುಕೊಂಡೆ.

ಸಂಜೆ ಸಮುದ್ರ ದಡದಲ್ಲಿ ಜನಜಾತ್ರೆಯೇ ಸೇರುತ್ತದೆ. ಬಿಡುವಿನ ದಿನಗಳಲ್ಲಿ ಅದು ಅಧಿಕ. ಇಂದು ಇನ್ನಷ್ಟು ಹೆಚ್ಚು. ಅದೆಷ್ಟು ವೇಷ-ಭೂಷಣಗಳು! ಮಕ್ಕಳಾಟ, ಜೋಡಿಗಳ ಮೋಡಿ, ಒಂಟೆಗಳ ಓಡಾಟ, ಹಿರಿಯರ ಹಿತೋಪದೇಶ........ಎಲ್ಲಾ ಸಾಗಿತ್ತು. ವಿವಿಧ ವಸ್ತುಗಳ ಮಾರಾಟಗಾರರ ಓಡಾಟ, ಬಾಸುಲಿಯ ನಾದ, ಪಂದ್ಯಾಟಗಾರರ ಪರದಾಟ....ಅದಕ್ಕಿಂತಲೂ ದೂರದಲ್ಲಿ ಆಗೋಸ್ಟ್ ಹದಿನೈದು—ಸ್ವಾತಂತ್ರ್ಯ ದಿನಾಚರಣೆಯೆಂದು ರಾಜಕೀಯವಾದಿಗಳ ಭಾಷಣವೂ ನಡೆಯುತ್ತಿದೆ. ಜನತೆ ಹರಿ ಹಂಚಾಗಿ ಹೋಗಿದೆ; ಒಂದೆಡೆ ನಿಲ್ಲುವದಿಲ್ಲ. ಅನೇಕಾನೇಕ ಆಕರ್ಷಣೆಗಳಿರುವಾಗ ಲಂಗರು ಹಾಕಲು ಸಾಧ್ಯವೇನು? ಆದರೆ ಅದೇ ಸಾಗರ! ಒಂದೇ ಮೊರೆತ, ಒಂದೇ ಹಾಡು! ಇದ್ದರೂ ಆ ರಾಗದಲ್ಲಿ ಅದೇನೋ ವೇದನೆ ಅಡಕವಾಗಿದೆಂಬುದರ ಅನುಭವ ಆಗುತ್ತದೆ, ಸ್ವಲ್ಪ ಗಮನಿಸಿದರೆ. ಏನದು ವೇದನೆ? ಈ ಜನ ಜಂಗುಳಿಗೆ ಅದರ ಅರ್ಥ ಆಗುವದಿಲ್ಲವೇ? ಅಲೆಯೊಡನೆ ಮೀನೊಂದು ಬಂದು ದಡದಲ್ಲಿ ಬಿತ್ತು. ನೀರು ಸರಿಯಿತು; ಮೀನು ಅಲ್ಲೇ. ಅದು ವಿಲಿವಿಲಿ ಒದ್ದಾಡುತ್ತಿರುವಂತೆ ಹದ್ದೊಂದು ಹಾರಿ ಬಂದು ಅದನ್ನೆತ್ತಿಕೊಂಡು ಹಾರಿಹೋಯಿತು. ಜನರಿಗೆ ಅದು ಸಾಧಾರಣ ಘಟನೆಯೇ ಸರಿ. ಕಡಲ ಕರುಳು ಹಿಚುಕಿದಂತಾಗಿ ಅಲೆಗಳು ಅಳುತ್ತಿವೆಯೋ ಅನ್ನುವ ಸ್ವರ ಕೇಳಿ ಬರುತ್ತಿದೆ. ಯಾಕೆ? ದೃಷ್ಟಿಗೆ ಗೋಚರವಾಗುವಷ್ಟು ದೂರ ನೋಡಿದೆ. ಕೇವಲ ನೀರು, ಎಲ್ಲೆಲ್ಲೂ—ಒಂದೆಡೆ. ಇನ್ನೊಂದೆಡೆ ಬಣ್ಣ ಬಣ್ಣದ ದೀಪಗಳು ಮಿನುಗುತ್ತಿವೆ. ಅನ್ಯಾವರ ಪರಿವೆಯೂ ಇಲ್ಲದೆ ಕಾಲಕಳೆಯುತ್ತಿರುವ ಮೇಧಾವಿಗಳು ಮಳಲ ಮೇಲೆ ಬೆರಗುಗಣ್ಣುಗಳಿಂದ ಅಲ್ಲಿಲ್ಲೂ ದೃಷ್ಟಿ ಹಾಯಿಸಿದೆ. ನಿಸರ್ಗಕ್ಕೋ, ವಿಧಿಗೋ ಇದು ಸಹನೆಯಾಗಲಿಲ್ಲವೋ ಏನೋ! ಸ್ವರ್ಗದಲ್ಲಿ ಅಪ್ಸರರು ಅತ್ತರೋ ಏನೋ? ತಟಪಟನೆ ಒಂದೆರಡು ಮಳೆಹನಿಗಳು ಉದುರಿದುವು. ಉಪ್ಪು ಹರಳಿನ ಮೇಲೆ ನೀರ ಹನಿ ಬಿದ್ದಂತಾಯಿತು. ಸ್ವಲ್ಪದೂರದಲ್ಲೇ ಇರುವ ಕಟ್ಟಡಗಳತ್ತ, ಬಸ್ಸನಿಲ್ದಾಣದತ್ತ, ತಮ್ಮ ತಮ್ಮ ಮನೆಯತ್ತ....ಜನಜಂಗುಳಿ ಚದುರಿಹೋಯಿತು ಭಾಷಣವೂ ನಿಂತಿತು ಎಲ್ಲರೂ ತಮ್ಮ ತಮ್ಮ ಭದ್ರತೆಗೆ, ರಕ್ಷಣೆಗಾಗಿ ಕಾಲು ಕೀಳುವವರೇ. ಹೀಗೇಕೆ? ಇದೇ ನಿಸರ್ಗ ಇದುವೇ ವಿಧಿ ಏನು? ಪ್ರಶ್ನಾರ್ಥಕ ನೋಟ ವಿಶಾಲ ಜಲಸಾಗರದತ್ತ ಬೀರಿದೆ ಅಷ್ಟು ದೂರ ಅದೇತಕ್ಕೆ ನೋಡು, ಇಲ್ಲೇ ನೋಡು, ನಿನ್ನ ಕಾಲುಬುಡವನ್ನೇ ನೋಡೆಂದಂ

(ಇಪ್ಪತ್ತೆಂಟನೇ ಪುಟ ನೋಡಿರಿ)

ಸ್ವಾತಂತ್ರ್ಯೋತ್ಸವದ ಶುಭಾಶಯಗಳು !

ಚಂದವಾದ ಮುಖಕಾಂತಿಗೆ ಅಂದವಾದ ಉಡುಪು

ನಿಮ್ಮ ಮನಸ್ಸಿಗೆ ಒಪ್ಪುವ ಜವುಳಿ ಹಾಗೂ ಬಟ್ಟೆಗಳಿಗೆ ಸಂದರ್ಶಿಸಿರಿ!

ಪುತ್ತೂರಲ್ಲಿ ಹೆಸರುವಾಸಿಯಾದ ನಂಬಿಗೆಯ ಜವುಳಿ ಅಂಗಡಿ

ರೆಡಿಮೇಡ್ ಡ್ರೆಸ್ಸು ಕೂಡಾ ದೊರೆಯುತ್ತದೆ

ಎಂ. ಸಂಜೀವ ಶೆಟ್ಟಿ

ಜವುಳಿ ವ್ಯಾಪಾರಿ, ಪುತ್ತೂರು, ದ. ಕನ್ನಡ.

ಫೋನ್ ನಂಬ್ರ: ಬ್ರಾಂಚ್: 84. ಪಿ. ಬಿ. ನಂಬ್ರ: 15

ಸ್ವಾತಂತ್ರ್ಯ ದಿನೋತ್ಸವದ ಶುಭಾಶಯಗಳು !

ಅತ್ಯಾಧುನಿಕ ಸೌಕರ್ಯಗಳಿಂದೊಡಗೂಡಿರುವ ಸಂದರ್ಶಿಸಲೇಬೇಕಾದ ಪ್ರಮುಖ ಹೋಟೆಲ್

ಮಧು ನಿವಾಸ

ವಸತಿ, ಭೋಜನ ಹಾಗೂ ಉಪಾಹಾರ ಮಂದಿರ

ಗಾಂಧಿ ಚೌಕ - - - ಮೈಸೂರು

ಮ್ಯಾಲಕರು :
ಬಿ. ರಾಮದಾಸ ಭಟ್ ಮತ್ತು ಸಹೋದರರು.

ONCE YOU PAY A VISIT
WILL REMEMBER THE CITY'S
POPULAR VEGETARIAN RESTAURANT

MADHU NIVAS

Boarding & Lodging
GANDHI SQUARE
MYSORE

for Quality Vegetarian Preparations and Comfortable Stay in our Double and Single Rooms.

Try for a while and be satisfied.

With best compliments from:

T. T. BLADES

Manufacturers of

Regent Hi-stainless Blades

T. T. BLADES BLDG.,

94, SAKI NAKA,

BOMBAY-72.

ಶ್ರೀ ಮ. ರಾಜೀವ, ಎಂ. ಎ., ಬಿ. ಟಿ.,
ಬೆಂಗಳೂರು.

ನಮ್ಮ ಇತಿಹಾಸಪ್ರಜ್ಞೆ ಬೆಳೆಸಿದ

ಭಾರತದ ಪ್ರಸಿದ್ಧ ಇತಿಹಾಸಕಾರ

೧೯೭೦ರಲ್ಲಿ ಶತಮಾನೋತ್ಸವ ಆಚರಿಸಿದ ಬಂಗಾಳದ ಶ್ರೀ ಜಾದೂನಾಥ ಸರ್ಕಾರರದು ಸತ್ಯ, ನಿಷ್ಪಕ್ಷ ಇತಿಹಾಸಕ್ಕೆ ಪರ್ಯಾಯವಾದ ಹೆಸರು. ಅವರ "ಔರಂಗಜೇಬನ ಇತಿಹಾಸ" ಮತ್ತು "ಮೊಗಲ ಸಾಮ್ರಾಜ್ಯದ ಅವನತಿ" ಸಂಬಂಧದ ಸಂಪುಟಗಳು ಇತಿಹಾಸಕ್ಕೆ ದೈವೀ ದೇಣಿಗೆ.

ಭಾರತೀಯ ಇತಿಹಾಸದ ಬಗ್ಗೆ ಇತ್ತೀಚೆಗೆ ಅನೇಕ ಗ್ರಂಥಗಳು ಪ್ರಕಟವಾಗಿವೆ. ಭಾರತ ಜನರ ಸಾಧನೆ ಹಾಗೂ ಸಾಹಸಗಳ ಬಗ್ಗೆ ಬರೆಹಗಳು ಬಹಳ ಇವೆ. ಆದರೆ ಭಾರತೀಯ ಇತಿಹಾಸದ ಬಗ್ಗೆ ಆಳವಾದ ಅಧ್ಯಯನದ ಕೃತಿಗಳು ಮಾತ್ರ ಕಡಿಮೆ. ವೈಜ್ಞಾನಿಕ ದೃಷ್ಟಿ ಹಾಗೂ ಇತಿಹಾಸ ಶಾಸ್ತ್ರದ ದೃಷ್ಟಿಕೋನದಿಂದ ಬರೆಯಲ್ಪಟ್ಟ ಭಾರತೀಯ ಚರಿತ್ರೆಯ ಗ್ರಂಥಗಳು ವಿರಳ.

ನಮ್ಮ ದೇಶದ ಅನೇಕ ಇತಿಹಾಸ ಗ್ರಂಥಗಳು ಬ್ರಿಟಿಷ್ ಇತಿಹಾಸಕಾರರ ಕೃತಿಗಳು. ಇವುಗಳಲ್ಲಿ ಬ್ರಿಟಿಷ್ ಚಕ್ರಾಧಿಪತ್ಯವು ಚಾರಿತ್ರಿಕ ವಿಧಿಯಾಗಿತ್ತು ಎಂಬ ಅಭಿಪ್ರಾಯ ಇದ್ದೇ ಇದೆ. ಭಾರತೀಯರು ಸ್ವತಂತ್ರರಾಗಿರಲು ಯೋಗ್ಯರಲ್ಲ. ಅವರಲ್ಲಿ ಸ್ತುತ್ಯವಾಗಿರುವ ಯಾವ ಸುಗುಣಗಳೇ ಇಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತ ಮಾಡಲಾಗಿದೆ. ಇನ್ನುಳಿದ ಇತಿಹಾಸ ಗ್ರಂಥಗಳು ಇದರ ವಿರುದ್ಧವಾದ ಅಭಿಪ್ರಾಯಗಳನ್ನೊಳಗೊಂಡಿವೆ. ಭಾರತೀಯರು ಜಗಜ್ಜೇತರು, ಸರ್ವ ಸಂಪನ್ನ ಗುಣವುಳ್ಳರು, ಅವರ ಗತ ಇತಿಹಾಸವು ಉಲ್ಲೇಖನೀಯವಾದುದಾಗಿದೆ. ಬ್ರಿಟಿಷ್ ಪಾರತಂತ್ರ್ಯದ ಕಾಲವು ಅತ್ಯಂತ ಹೇಯವೂ ಕತ್ತಲಿನ ಯುಗವೂ ಆಗಿದೆ ಎಂಬ ಘೋಷಣೆಯು ಈ ಗ್ರಂಥಗಳ ಹೇಳಿಕೆಯಾಗಿರುತ್ತದೆ.

ಆದರೂ ಬ್ರಿಟಿಷ್ ಆಡಳಿತೆಯ ಕಾಲದಲ್ಲಿಯೇ ಕೆಲವು ಉತ್ತಮ ಇತಿಹಾಸ ಗ್ರಂಥಗಳು ಬೆಳಕು ಕಂಡವು. ಅನೇಕ ಮಂದಿ ಭಾರತೀಯ ಇತಿಹಾಸಕಾರರು ಸತತ ಪರಿಶ್ರಮದಿಂದ ಹಾಗೂ ಶ್ರದ್ಧೆಯಿಂದ ಈ ತೆರನಾದ ಸೇವೆಯನ್ನು ಸಲ್ಲಿಸಿರುವರು. ಪ್ರಾದೇಶಿಕ ಪ್ರೀತಿ ಅವೈಜ್ಞಾನಿಕವೂ ಅತಿರೇಕವೂ ಆಗಿರುವ ರಾಷ್ಟ್ರ ಪ್ರೇಮಗಳಿಂದ ವಿಕಾರಗೊಳ್ಳದಿರುವ ಇತಿಹಾಸ ದೃಷ್ಟಿಯುಳ್ಳ ಇತಿಹಾಸಕಾರರು ಕಡಿಮೆ. ಈ ಎಲ್ಲಾ ನ್ಯೂನತೆಗಳಿಂದ ಹೊರತಾಗಿರುವ ಹಾಗೂ ಹೆಸರುಗಳಿಸಿರುವ ಆಧುನಿಕ ಭಾರತೀಯ ಚರಿತ್ರೆಗಾರರು ಕೇವಲ ಕೆಲವೇ ಮಂದಿ. ಸರದಾರ ಪಣಿಕ್ಕರ್, ಸರದೇಸಾಯಿಯವರು ಈ ಸಾಲಿಗೆ ಸೇರಿದವರು. ಈ ಸಾಲಿಗೆ ಸೇರಿದ ಮತ್ತೊರ್ವ ಮಹಾ ಇತಿಹಾಸಕಾರರು ಒಂದು ಶತಮಾನದ ಹಿಂದೆ (೧೮೭೦) ಜನಿಸಿದ ಸರ್ ಜಾದೂನಾಥ್ ಸರ್ಕಾರ್ ಆಗಿರುವರು. ಅವರು ಆಧುನಿಕ ಭಾರತ ಇತಿಹಾಸದ ಪ್ರಸಿದ್ಧ ಇತಿಹಾಸಕಾರರು. ಇತಿಹಾಸ್ತ್ರಜ್ಞರು, ಭಾರತದ ಖ್ಯಾತ ವಿಚಾರವಂತರು.

ಜಾದೂನಾಥ ಸರ್ಕಾರ್‌ರವರು ಡಿಸೆಂಬರ ೧೦-೧೮೭೦ರಲ್ಲಿ ಪಾಕಿಸ್ಥಾನದ ಪೂರ್ವ ಬಂಗಾಳದ ರಾಜಶಾಹಿಯಲ್ಲಿ ಜನಿಸಿದರು. ಪ್ರತಿಭಾವಂತ ವಿದ್ಯಾರ್ಥಿಯಾಗಿ ಅವರು ಆಂಗ್ಲ ಸಾಹಿತ್ಯ ಹಾಗೂ ಚರಿತ್ರೆಯಲ್ಲಿ ಪ್ರೌಢಿಮೆಯನ್ನು ತೋರಿಸಿದರು. ವಿದ್ಯಾಭ್ಯಾಸ ಕೊನೆಗೊಂಡ ನಂತರ ಅವರು ೧೮೯೩ರಲ್ಲಿ ರಿಪನ್ ಕಾಲೇಜಿನಲ್ಲಿ ಆಂಗ್ಲ ಭಾಷೆಯ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಮುಂದೆ ಅವರು ವಿದ್ಯಾಸಾಗರ ಕಾಲೇಜಿನಲ್ಲಿ ಸೇರಿದರು. ೧೮೯೮ರಲ್ಲಿ ಅವರು ಪ್ರಸಿದ್ಧವಾಗಿದ್ದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾದರು, ಆ ಬಳಿಕ ಅಲ್ಲಿಂದ ಪಾಟ್ನಾಕ್ಕೆ ವರ್ಗಾಯಿಸಲ್ಪಟ್ಟರು, ಪುನಃ ಕಲ್ಕತ್ತಾಕ್ಕೆ ಬಂದರು. ಮತ್ತೊಮ್ಮೆ ಪಾಟ್ನಾಕ್ಕೆ ವರ್ಗಾಯಿಸಲ್ಪಟ್ಟರು. ಇಲ್ಲಿ 'ಅವರು ಬ್ರಿಟಿಷ್ ಭಾರತದ ಆರ್ಥಿಕ ಇತಿಹಾಸ' ವನ್ನೂ, 'ಅವರಂಗಜೇಬನ ಕುರಿತಾದ ವೃತ್ತಾಂತಗಳನ್ನೂ, ಇತರ ಚಾರಿತ್ರಿಕ ಲೇಖನ ಮಾಲೆಗಳನ್ನೂ ಬರೆದು ಹೆಸರುಗಳಿಸಿದರು. "ಚೈತನ್ಯ ಮತ್ತು ಆತನ ಯಾತ್ರೆಗಳು ಹಾಗೂ ತತ್ವಗಳು" ಎಂಬ ಗ್ರಂಥವನ್ನೂ ಸರ್ಕಾರ್‌ರವರು ಇಲ್ಲಿ ಬರೆದರು.

'ಔರಂಗ ಜೇಬನ ಇತಿಹಾಸ'ದ ಮೊದಲ ಭಾಗವನ್ನೂ ಸರ್ಕಾರ್ ಇಲ್ಲಿ ಬರೆದು ಮುಗಿಸಿದರು. ಈಗಾಗಲೇ ಇತಿಹಾಸಕಾರರಾಗಿ ಸರ್ಕಾರ್‌ರವರು ಪ್ರಸಿದ್ಧಿಗಳಿಸಿದರು. ಬ್ರಿಟಿಷ್ ಸರ್ಕಾರವು ಅವರನ್ನು ಇಂಪೀರಿಯಲ್ ಎಡ್ಯುಕೇಶನಲ್ ಸರ್ವಿಸಿಗೆ ಸೇರಿಸಿಕೊಂಡು ಸರ್ಕಾರ್‌ರವರ ವಿದ್ವತ್ತು ಹಾಗೂ ವಿದ್ಯಾ ಸೇವೆಯನ್ನು ಗೌರವಿಸಿತು. ಐ. ಈ. ಯಸ್ ಸೇವೆಯಲ್ಲಿರುವ ಸರ್ಕಾರ್‌ರವರನ್ನು ಕಟ್ಟಕ್‌ನಲ್ಲಿರುವ ರಾವೆನ್‌ಷಾ ಕಾಲೇಜಿಗೆ ಕಳುಹಿಸಲಾಯಿತು. ಆದರೆ ಅವರು ಮತ್ತೊಮ್ಮೆ ಪಾಟ್ನಾಕ್ಕೆ ವರ್ಗಾಯಿಸಲ್ಪಟ್ಟರು. ಅಲ್ಲಿ ಅವರು ೧೯೨೬ರಲ್ಲಿ ನಿವೃತ್ತರಾದರು. ಅವರ ಕೀರ್ತಿಯ ಮಹೋನ್ನತಕಾಲದಲ್ಲಿಯೇ ಸರ್ಕಾರ್‌ರವರು ಕಲ್ಕತ್ತಾ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ನೇಮಕಗೊಂಡರು. ಎರಡು ವರ್ಷದ ಅವಧಿಯ ಬಳಿಕ ಪುನರಾಯ್ಕೆಯನ್ನು ಸರ್ಕಾರ್‌ರವರು ನಿರಾಕರಿಸಿದರು. ಅವರು ತನ್ನ ದಿನಗಳನ್ನು ಸಂಶೋಧನೆಗಾಗಿ ಉಪಯೋಗಿಸಲು ನಿರ್ಧರಿಸಿದರು. ೧೯೪೧ರ ವರೆಗೆ ಅವರು ಡಾರ್ಜಿಲಿಂಗ್‌ನಲ್ಲಿ ಮನೆ ಮಾಡಿದರು. ಆದರೆ ಅದು ಅವರ ಆರೋಗ್ಯಕ್ಕೆ ಸರಿಬೀಳಲಿಲ್ಲ. ಆದುದರಿಂದ ಅವರು ಕಲ್ಕತ್ತಾಕ್ಕೆ ಬಂದು ವಾಸಿಸತೊಡಗಿದರು. ೧೯೫೮ರಲ್ಲಿ ಸರ್ಕಾರ್‌ರವರು ಮರಣಹೊಂದಿದರು.

ಭಾರತೀಯ ಇತಿಹಾಸದ ಬರವಣಿಗೆ ಲೋಕಕ್ಕೆ ಸರ್ಕಾರ್‌ರವರ ಕಾಣಿಕೆ ಮಹತ್ತಾದುದೂ ಅಪಾರವಾದದೂ ಆಗಿರುತ್ತದೆ. ಅವರ ಸಂಪಾದನೆ, ಸಂಪಾದಕತನ, ವಿಮರ್ಶೆ ಹಾಗೂ ಕಿರಿಯರಿಗೆ ಅವರು ನೀಡಿದ ಆದರ್ಶ, ತರಬೇತಿ— ಇವೆಲ್ಲವೂ ಬಹಳವಾದ ಸೇವೆಯಾಗಿದೆ. ಭಾರತ ಇತಿಹಾಸದ ಮಧ್ಯಯುಗಗಳ ತಿಳುವಳಿಕೆಯನ್ನು ಹೆಚ್ಚಿಸಿದುದು ಅವರಿಗೆ ಶಾಶ್ವತ ಕೀರ್ತಿಯನ್ನು ಕೊಡುವಂತಹದ್ದಾಗಿದೆ. ಮೊಗಲ ಸಾಮ್ರಾಜ್ಯದ ಪ್ರಮುಖ ಚಕ್ರವರ್ತಿಯಾದ ಅವರಂಗಜೇಬನ, ಜೀವನ ಹಾಗೂ ಸಾಧನೆಗಳನ್ನೂ, ಸಾಮ್ರಾಜ್ಯದ ಅವನತಿಯ ಕಾರಣಗಳನ್ನೂ ತಿಳಿಯಲು ಸರ್ಕಾರ್‌ರವರು ಸಹಾಯಕವಾದಂತೆ ಇನ್ನಾವ ಇತಿಹಾಸಕಾರನೂ ಯಶಸ್ವಿಯಾಗಿಲ್ಲ. 'ಅವರಂಗಜೇಬನ ಇತಿಹಾಸ' ಸರ್ಕಾರ್‌ರವರ ಮೇರುಕೃತಿ, ಮಹಾಗ್ರಂಥ. ಅಂದೊಂದು ಜೀವನ ಸಾಧನೆಯ ಕೃತಿಯೇ ಸರಿ. ಮಧ್ಯಯುಗಗಳ ಚರಿತ್ರೆ ಮಹಾ ಕೌತುಕ ಅವರಂಗಜೇಬನ ಕುರಿತು ಅಧ್ಯಯನ ನಡೆಸುವಂತೆ ಸರ್ಕಾರ್‌ರವರನ್ನು ಪ್ರೇರೇಪಿಸಿತು. ಪ್ರಸಿದ್ಧನೂ, ಸಮರ್ಥನೂ, ಕಟ್ಟುನಿಟ್ಟು ನಿಯಮವನ್ನು ಅನುಸರಿಸುವವನೂ ಆಗಿರುವ ಅವರಂಗಜೇಬನು ಮಹಾಸಾಮ್ರಾಜ್ಯದ ಅವನತಿಗೆ ಹೇಗೆ ಕಾರಣನಾದನು ಎಂಬುದು ಸೋಜಿಗದ ಸಂಗತಿಯೇ ಸರಿ. ಅದು ಕೌತುಕದ ಕಥೆಯೂ ಅಹುದು. ಈ ಅಚ್ಚರಿಯ ಅರ್ಥವನ್ನು ಅನ್ವೇಷಣೆ ಮಾಡಲು ಸರ್ಕಾರ್‌ರವರು ಮುಂದಾದರು. ಅವರ ಜೀವನದ ಅತ್ಯಮೂಲ್ಯ ವರುಷಗಳನ್ನು ಈ ಅಧ್ಯಯನಕ್ಕಾಗಿ ಮೀಸಲು ಮಾಡಿದರು.

"ಮಾನವರು ಸಾಮಾನ್ಯವಾಗಿ ಸುಖದ ಸಾಧನೆಗಾಗಿ ವಿನಿಯೋಗಿಸುವ ಶ್ರದ್ಧೆಯನ್ನು ಸರ್ಕಾರ ನಡೆಸುವ ಕಾರ್ಯಕ್ಕಾಗಿ ವಿನಿಯೋಗಿಸಿದನು.... ಶಿಸ್ತು ಹಾಗೂ ವ್ಯವಸ್ಥೆಗಾಗಿ ಆತನಿಗಿದ್ದ ಮಮತೆ ಆತನ ಶಾಳ್ಮೆ ಹಾಗೂ ಪ್ರಯತ್ನ ಶೀಲ ಬುದ್ಧಿಗೆ ಸರಿಸಮಾನವಾಗಿತ್ತು ... ಯಾವ ಭಯವೂ ಆತನ ಹೃದಯವನ್ನು ಹೆದರಿಸುವಂತಿದ್ದಿಲ್ಲ. ಯಾವ ನಿಶ್ಶಕ್ತಿ ಅಥವಾ ಸಹಾನುಭೂತಿ ಆತನ ಹೃದಯವನ್ನು ಕರಗಿಸುವಂತಿರಲಿಲ್ಲ. ಆದರೆ ಆತನ ಐವತ್ತು ವರ್ಷಗಳ ಆಳ್ವಿಕೆಯ ಪರಿಣಾಮ ವಿಫಲವಾಗಿತ್ತು ಹಾಗೂ ಅರಾಜಕತೆಯಾಗಿತ್ತು." ಒಳ್ಳೆಯ ಉದ್ದೇಶಗಳ ಪರಿಣಾಮಗಳೂ ಅತ್ಯಂತ ಹಾನಿಕಾರಕವಾಗಬಹುದು. ಅಪಾಯಕಾರಿಯೂ ಆಗಬಹುದು. ಅವರಂಗಜೇಬನ ಆಳ್ವಿಕೆ ಅದಕ್ಕೊಂದು ಉದಾಹರಣೆಯಾಗಿದೆ.

ಇತಿಹಾಸಕಾರನು ಬರಿಯ ಬರೆಹಗಾರನಲ್ಲ. ಸಂಗ್ರಹ— ಇತಿಹಾಸದ ಆಧಾರಗಳು, ದಾಖಲೆಗಳು, ಆತ್ಮಕಥೆಗಳು, ತಾಡವಾಲೆಗಳು ಇತ್ಯಾದಿ ಆತನ ಅಂತಿಮ ಗುರಿಯಲ್ಲ. ಅವೆಲ್ಲವೂ ಅಗತ್ಯ. ಆದರೆ ಅವುಗಳಿಂದ ಇತಿಹಾಸ ಉಂಟಾಗಲಾರದು. ಅಧ್ಯಯನ, ಅದರಲ್ಲಿಯೂ ಅರ್ಥಪೂರ್ಣವಾದ ಅಧ್ಯಯನ ಬಹಳ ಅಗತ್ಯವಾಗಿದೆ. ವಿವೇಚನೆ, ತುಲನಾತ್ಮಕ, ವಿಮರ್ಶಾತ್ಮಕ ಬುದ್ಧಿ ಚರಿತ್ರೆಗಾರನ ಅತಿ ಪ್ರಧಾನ ಲಕ್ಷಣ ಸರ್ಕಾರ್‌ರವರಲ್ಲಿ ಈ ಗುಣಗಳು ಬೆಳೆದು

(ಇಪ್ಪತ್ತಾರನೇ ಪುಟ ನೋಡಿರಿ)

Kindly
Contribute generously
to the
NAVAYUGA
GOLDEN JUBILEE FUND 1971

ಶ್ರೀ ಗೌರೀಶ ಕಾಯ್ಕಿಣಿ, ಗೋಕರ್ಣ.

'ಬಹುಸಂಖ್ಯರು' ಮತ್ತು 'ಅಲ್ಪಸಂಖ್ಯರು'

ಪ್ರಜಾಪ್ರಭುತ್ವರಾಷ್ಟ್ರಗಳ ರಾಣಿ ಬ್ರಿಟನ್ನಿನಲ್ಲೂ ಬಹುಸಂಖ್ಯರು-ಅಲ್ಪಸಂಖ್ಯರಿದ್ದಾರೆ. ಆದರೆ, ಅಲ್ಲಿ ಈ ವಿಭಜನೆ ರಾಜ್ಯಕೀಯ ತಳಹದಿಯ ಮೇಲೆ ನಡೆಯುತ್ತದೆ. ಆದರೆ, ಭಾರತದಲ್ಲಿ ಇದು ಜಾತಿಯ ಆಧಾರದ ಮೇಲೆಯೇ ನಡೆದು ಬಂದಿದೆ. ನೂರಾರು ಉಪಜಾತಿಗಳಿರುವ ಹಿಂದೂಗಳೆಲ್ಲರನ್ನೂ ಒಂದೇ ಕೋಮಿನವರೆಂದು ಪರಿಗಣಿಸಿ ಅವರನ್ನು ಬಹುಸಂಖ್ಯರೆಂದು ಜರೆಯುವುದು ಸಾಧುವಾದೀತೆ?

ಶ್ರೀ ಪ್ರಕಾಶರು ಇತ್ತೀಚೆಗೆ ದಿವಂಗತರಾದರು. ಅವರು ನೆಹರೂಜಿಯ ಸಹಪಾಠಿಗಳಾಗಿದ್ದರು. ಆಪ್ತ ಮಿತ್ರರಾಗಿದ್ದರು. ಪ್ರಸಂಗ ಬಿದ್ದಾಗ ಅವರ ಕಿವಿಹಿಂಡುವ ಪ್ರೀತಿಯ ಅಧಿಕಾರವನ್ನೂ ಅವರು ಚಲಾಯಿಸುತ್ತಿದ್ದರು. ರಾಷ್ಟ್ರೀಯ ಆಂದೋಲನದಲ್ಲಿ ಹೇಗೋ ಹಾಗೆಯೇ ರಾಜಕೀಯ ರಂಗದಲ್ಲಿಯೂ ರಾಜ್ಯದ ಆಡಳಿತದಲ್ಲಿಯೂ ತುಂಬು ಜೀವನವನ್ನು ಅವರು ಬಾಳಿ ಯಮಧಾನಿಯ ತೆರೆಯುವರೆಗೆ ತೆರಳಿದರು.

ಡಾ| ಅನ್ನಿಬೆಸಂಟರ ಅನುಯಾಯಿಗಳಾಗಿ, ಗಾಂಧೀಜಿಯ ಪ್ರಭಾವಕ್ಕೆ ಒಳಪಟ್ಟು ಬಂದ ಶ್ರೀ ಪ್ರಕಾಶ ಉತ್ತಮ ವೈಚಾರಿಕ ಲೇಖಕರೂ ಆಗಿದ್ದರು. ವಿಶೇಷತಃ ರಾಜಕೀಯ ಸೇವೆಯಿಂದ ನಿವೃತ್ತರಾದಂದಿನಿಂದ ಅವರ ಪತ್ರಿಕೋದ್ಯಮಿಯ ಲೇಖನ ವಿಪುಲವಾಗಿ ವಿಕಾಸಗೊಂಡಿತು.

ದಿವಂಗತರ ಒಂದು ಇತ್ತೀಚೆಯ ಬರಹದ ಸಾರಾಂಶವನ್ನು ಇಲ್ಲಿ ನೀಡಲಾಗಿದೆ. ಬರಹದ ವಿಷಯ ನಮ್ಮ ರಾಜಕೀಯ ರಂಗದ ಭಾರತದ ಸಾಮಾಜಿಕ ರಾಜಕಾರಣದ ಒಂದು ಜೀವಾಳದ ಸಮಸ್ಯೆ! "ಬಹುಸಂಖ್ಯ ಹಾಗೂ ಅಲ್ಪ ಸಂಖ್ಯರ ಗೊಂದಲ."

ಇವೆರಡೂ ಶಬ್ದಗಳನ್ನು ನಾವು ದೇವರ ನಾಮದಂತೆ ಸದಾಕಾಲವೂ ಜಪಿಸುತ್ತಿರುತ್ತೇವೆ. ನಮ್ಮ ಧುರೀಣರ ಪತ್ರಿಕಾಸಂದರ್ಶನವಿರಲಿ, ಪತ್ರಿಕಾಕರ್ತರ ಅಗ್ರ ಉಗ್ರ ಲೇಖನಗಳಿರಲಿ ಈ ಬಹು ಸಂಖ್ಯ ಅಲ್ಪ ಸಂಖ್ಯ ಸಮಾಜಗಳ ಕೋಮುಗಳ ಪಕ್ಷಗಳ ತಿಕ್ಕಾಟ ತಾಕಲಾಟಗಳ ಬಗೆಗೆ ಒಂದಲ್ಲ ಒಂದು ಚರ್ಚೆ ನಡೆದೇ ಇರುತ್ತದೆ.

ನಮ್ಮಲ್ಲಿ ಬಹು ಸಂಖ್ಯ ಮಂದಿ ಅಲ್ಪ ಸಂಖ್ಯ ಮಂದಿಯನ್ನೂ ಸರಿಯಾಗಿ ಕಾಣುವುದಿಲ್ಲ. ಹಾಗೆ ಕಾಣುವುದು ನಡೆಯಿಸಿಕೊಳ್ಳುವುದು ಬಹು ಸಂಖ್ಯರ ಕರ್ತವ್ಯ. ಅಲ್ಪ ಸಂಖ್ಯರಿಗೆ ಬಹು ಸಂಖ್ಯರ ಬಗೆಗೆ ಪೂರ್ಣ ಅಭಯವಿರಬೇಕು. ಬಹು ಸಂಖ್ಯರು ಅಲ್ಪ ಸಂಖ್ಯರ ರಕ್ಷಣೆ ಮಾಡಬೇಕು. ಅವರ ಭದ್ರತೆಯ ಕುರಿತು ಭರವಸೆ ಹುಟ್ಟಿಸಬೇಕು- ಎಂದು ಮುಂತಾಗಿ ನಮ್ಮ ಮುಂದಾಳುಗಳು— ಹಿಂದಾಳುಗಳು ಹೇಳುತ್ತಲೇ ಇರುತ್ತಾರೆ. ಆದರೆ ನಮ್ಮ ನಿಮ್ಮಂಥ ಹಾದಿಹೋಕ 'ಇಸಮಿ'ಗೆ ಇವೆರಡು ಮಹಾಶಬ್ದಗಳ ಖಚಿತವಾದ ಅರ್ಥ ಇನ್ನೂ ಸ್ಪಷ್ಟವಾದಂತೆ ಇಲ್ಲ.

ಆ ಕುರಿತು ಶ್ರೀ ಪ್ರಕಾಶರ ಹೇಳಿಕೆ ಏನು?

ಸಾಮಾನ್ಯವಾಗಿ ಒಂದು ಗುಂಪಿನ ಜನ ಇನ್ನೊಂದು ಗುಂಪಿಗಿಂತ ಸಂಖ್ಯೆಯಲ್ಲಿ ಹೆಚ್ಚಿದ್ದರೆ ಅದು ಬಹು ಸಂಖ್ಯ ಗುಂಪು. ಆದರೆ ಆ ಗುಂಪನ್ನು ಗಮನಿಸುವುದು ಗುರುತಿಸುವುದು ಹೇಗೆ? ಅದಕ್ಕೆ ಏನು ಲಕ್ಷಣ?

ಒಮ್ಮೆ ಶ್ರೀ ಪ್ರಕಾಶರ ಮಿತ್ರರೊಬ್ಬರು ಬ್ರಿಟನ್‌ದ ಹಳೆಯ ಪ್ರಧಾನಿ (ಭಾರತಕ್ಕೆ ಸ್ವಾತಂತ್ರ್ಯವಿತ್ತ ಮುತ್ಸದ್ಧಿ) ಮೇಜರ್ ಆಟ್ಲಿಯನ್ನು ಕೇಳಿದರಂತೆ:— ಬ್ರಿಟನಿನಲ್ಲಿ ಪ್ರಜಾ ಪ್ರಭುತ್ವವು ಇಷ್ಟೊಂದು ಯಶಸ್ವಿಯಾಗಲು ಕಾರಣವೇನು? ಆಗ ಶ್ರೀ ಆಟ್ಲಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ವಿರೋಧೀ ಪಕ್ಷದ ಧುರೀಣರು— ಲೇಬರ್ ಪಕ್ಷದ ನಾಯಕರಾಗಿದ್ದರು. ಆಗ ಲಾರ್ಡ್ ಆಟ್ಲಿ ಹೀಗೆ ಉತ್ತರವಿತ್ತರು: ಬ್ರಿಟನಿನಲ್ಲಿ ಬಹುಸಂಖ್ಯ ಗುಂಪುಗಳಿಂದ ತಮಗೆ ಏನೇನು ಅನ್ಯಾಯವಾಗಲಾರದೆಂದು ಪೂರ್ಣ ವಿಶ್ವಾಸ ಅಲ್ಪ ಸಂಖ್ಯ ಗುಂಪುಗಳಿಗಿರುತ್ತದೆ.

ಬ್ರಿಟನಿನಲ್ಲಿ ಬಹುಸಂಖ್ಯ ಅಲ್ಪಸಂಖ್ಯ ಗುಂಪನ್ನು ಕೇವಲ ರಾಜಕೀಯವಾಗಿಯೇ ಗಣಿಸಲಾಗುತ್ತದೆ. ಇಂದಿನ ಅಲ್ಪ ಸಂಖ್ಯ ಮುಂಬರುವ ಚುನಾವಣೆಯಲ್ಲಿ ಬಹು ಸಂಖ್ಯ ಆಗ ಬಹುದು; ಆಗ ಬಲ್ಲದು. ಅಲ್ಲಿಯ ಅಲ್ಪ— ಬಹು ಸಂಖ್ಯತ್ವವೂ ಪರಿವರ್ತನೀಯ— ಮತ ಪ್ರಚಾರದಿಂದ ಪರಿವರ್ತನೆ ಹೊಂದಬಲ್ಲ ಸಂಖ್ಯಾಬಲವೇ ಹೊರತು ಸ್ಥಿರಬದ್ಧವಾದ ದೃಢಮೂಲವಾದ ಸಂಖ್ಯಾ ಬಲವಲ್ಲ. ಇದನ್ನು ನಾವು ನೆನಪಿಡಬೇಕು. ಆದರೆ ಭಾರತದಲ್ಲಿ ಹಾಗಿಲ್ಲ. ಇಲ್ಲಿ ಪ್ರಚಂಡ ಹಾಗೂ ಬಲಿಷ್ಟ ಬಹುಸ್ವರೂಪ ಗುಂಪುಗಳು, ತದ್ವಿರುದ್ಧವಾಗಿ ದುರ್ಬಲ ಹಾಗೂ ಅಲ್ಪಸಂಖ್ಯ ಗುಂಪುಗಳೂ ದೇಶದ ಬೇರೆ ಬೇರೆ ಭಾಗಗಳಲ್ಲಿ ಸ್ಥಾಯಿಯಾಗಿಯೇ ಇರುತ್ತವೆ, ಅವುಗಳ ಸಂಖ್ಯಾಬಲ ಹೆಚ್ಚು :ಕಡಿಮೆ ಆಗುವುದು ಸಹಸಾ ಸಾಧ್ಯವಿಲ್ಲ.

ಆದ್ದರಿಂದಲೇ ಈ ಎರಡು ಪದಗಳ ಪ್ರಯೋಗ ಅಗ್ಗವಾಗಿದೆ. ಅವರ ಹುರುಳು ಅಷ್ಟೇ ತುಚ್ಛವಾಗಿದೆ!

ನಮ್ಮಲ್ಲಿ ಕೋಮುವಾರಿನ ವಿಚಾರ ಬಂದಾಗ ನಾವು ಕೇವಲ ಹಿಂದು ಮತ್ತು ಮುಸ್ಲಿಂ ಇವೆರಡೇ ಗುಂಪುಗಳನ್ನು ಗಮನಿಸುತ್ತೇವೆ. ಮುಸ್ಲಿಮರು ಅಲ್ಪ ಸಂಖ್ಯರು. ಅವರಿಗೆ ಬಹುಸಂಖ್ಯ ಹಿಂದುಗಳಿಂದ ರಕ್ಷಣೆ ಭದ್ರತೆಯ ಭರವಸೆ ಬೇಕು. ಜಾತೀಯ ಗಲಭೆಗಳಾದಲ್ಲಿ ಬಹುಸಂಖ್ಯ ಹಿಂದುಗಳೇ ತಪ್ಪುಗಾರರಾಗಲಿಕ್ಕೇ ಬೇಕು ಎಂದು ನಮ್ಮ ತರ್ಕ ಓಡುತ್ತದೆ.

ಆದರೆ ಶ್ರೀ ಪ್ರಕಾಶರ ಅಂಬೋಣವೆಂದ

(ಇಪ್ಪತ್ತೈದನೇ ಪುಟ ನೋಡಿರಿ)

ಸ್ವಾತಂತ್ರ್ಯೋತ್ಸವದ
ಶುಭಾಶಯಗಳು!

25 ವರ್ಷಗಳ ಹಿಂದೆ, 1947ರಲ್ಲಿ ಸ್ವಾತಂತ್ರ್ಯೋತ್ಸವದ ಉದಯದೊಂದಿಗೇ ನಮ್ಮ ಸಂಸ್ಥೆಯು ಉದಯಿಸಿತು. ಅಂದಿನಿಂದ ಇಂದಿನವರೆಗೆ ನಾವು ಸಲಿಸುತ್ತ ಬಂದಿರುವ ಸೇವೆಯು 1971ರ ಸ್ವಾತಂತ್ರ್ಯೋತ್ಸವದ ವರ್ಷವನ್ನು ಪ್ರವೇಶಿಸಲು ನಮ್ಮನ್ನು ಮುನ್ನಡೆಸಿ ತಂದಿದೆ.

ರಜತೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದ ಜಿಲ್ಲೆಯ ಅತ್ಯಾಧುನಿಕ
ಸೌಂದರ್ಯವರ್ಧಕ
ಚಿನ್ನಾಭರಣಗಳ ಭಂಡಾರ

S. L. SHET ಎಸ್. ಎಲ್. ಶೇಟ್
DIAMOND HOUSE ಡಾಯಮಂಡ್ ಹೌಸ್
K. S. RAO ROAD, ಕಾರ್ನಾಡು ಸದಾಶಿವರಾವ್ ರಸ್ತೆ,
MANGALORE-1 ಹಂಪನಕಟ್ಟೆ, ಮಂಗಳೂರು - 1

ವಿದ್ವಾನ್ ಎಸ್. ತಿರುಮಲೇಶ್ವರ ಭಟ್ಟ, ಸೊಡಂಕೂರು.

ಸ್ವಾತಂತ್ರ್ಯ ಮತ್ತು ಸಾಹಿತ್ಯ

ರಾಜ್ಯಕೀಯದಲ್ಲಿ ನಮ್ಮ ಸ್ವಾತಂತ್ರ್ಯ ಸ್ವೈರ ವೃತ್ತಿಯನ್ನೇ ಅಪ್ಪಿಕೊಳ್ಳಲು ಮುಂದರಿಯುತ್ತಿದೆ; ಸಾಹಿತ್ಯದಲ್ಲೂ "ಕವಯೋ ನಿರಂಕುಶ ಮತಯಃ" ಉಕ್ತಿ ಕೊಡಮಾಡಿದ ನಿರಂಕುಶತೆ ಸಮಾಜಕ್ಕೆ ಉಪದ್ರವಿಯಾಗ ತೊಡಗಿದೆ— ಶ್ರೀ ಭಟ್ಟರು 'ನವ್ಯ' ಪರಂಪರೆಯ ವಿರೋಧಿಯಲ್ಲ; ಆದರೂ ನಿರಂಕುಶತೆಗೂ ಅಂಕುಶ ವಿದ್ದರೇನೇ ಚೆನ್ನವೆನ್ನುತ್ತಾರೆ.

ಸ್ವಾತಂತ್ರ್ಯವೆಂಬುದು ಸಮುನ್ನತಿಯ ಸೋಪಾನ. ಈಮಾತು ಬಹು ಜನ ಸಮ್ಮತವಾದುದು. ಸ್ವಾತಂತ್ರ್ಯ ಯಾರಿಗೆ ತಾನೇ ಬೇಡ! ಎಲ್ಲರಿಗೂ ಬೇಕು. ಒಂದು ರಾಷ್ಟ್ರದ, ಜನಾಂಗದ ಏಳಿಗೆ ಸ್ವಾತಂತ್ರ್ಯದಿಂದಲೇ. ಆ ಕಾರಣದಿಂದಲೇ ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹ ನಡೆದು ಭಾರತ ಸ್ವಾತಂತ್ರ್ಯ ಗಳಿಸಿತು; ಭಾರತೀಯರು ಸ್ವತಂತ್ರರಾದರು.

ಜನತೆಗೆ ಸ್ವಾತಂತ್ರ್ಯ ದೊರಕಿದಾಗ ಜನ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಸ್ವಾತಂತ್ರ್ಯದ ಪ್ರಭಾವ ಪ್ರಬಲವಾಗುತ್ತಿರುವುದು ಸಹಜ. ಸಜ್ಜನರ ಕೈಗೆ ದೊರಕಿದ ಕತ್ತಿ ಸ್ವಾತ್ಮರಕ್ಷಣೆಗೆ ಹಾಗೂ ಪರರ ಆತ್ಮರಕ್ಷಣೆಗೆ ಸಹಾಯಕವಾದರೆ, ದುರ್ಜನರ ಕೈಗೆ ದೊರಕಿದ ಕತ್ತಿ ಪರರ ಪ್ರಾಣಾಪಹಾರಕವಾಗ ಬಹುದು. ಅಂತೆಯೇ ಸ್ವಾತಂತ್ರ್ಯ ಸಜ್ಜನರ ಪಾಲಿಗೆ ಬಂದಾಗ ಸಮಾಜದ ಏಳಿಗೆಗೆ ಕಾರಣವಾಗುವಂತೆ ದುರ್ಜನರ ಪಾಲಿಗೆ ಬಂದಾಗ ಸಮಾಜದ ಅವನತಿಗೆ ಕಾರಣವಾಗಬಹುದು.

ಸ್ವಾತಂತ್ರ್ಯವು ವ್ಯಕ್ತಿಸ್ವಾತಂತ್ರ್ಯ 'ಲೇಖನ ಸ್ವಾತಂತ್ರ್ಯ' ವೃತ್ತಿ ಸ್ವಾತಂತ್ರ್ಯ, ವ್ಯವಹಾರ ಸ್ವಾತಂತ್ರ್ಯ ವಾಕ್ ಸ್ವಾತಂತ್ರ್ಯ ಹೀಗೆ ಹಲವು ತೆರನಾಗಿರುವುದು. ಸ್ವಾತಂತ್ರ್ಯ ಪ್ರೇರಕವಾದ ಸಾಹಿತ್ಯದಲ್ಲಿಯೂ ಸ್ವಾತಂತ್ರ್ಯ ಸ್ಥಾನಾಪನ್ನವಾಗದಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಕವಿಹೃದಯಗತ ಸ್ವಾತಂತ್ರ್ಯ ಭಾವನೆಯು ಸಾಹಿತ್ಯ ರೂಪದಿಂದ ಹೊರಹೊಮ್ಮಿ ಜನತೆಯ ಹೃದಯ ಕಾಸಾರದಲ್ಲಿ ಸ್ವಾತಂತ್ರ್ಯದ ತೆರೆಗಳನ್ನು ಹೊಡೆದೆಬ್ಬಿಸಿತು. ದೇಶ ಪ್ರೇಮ, ಸ್ವಾತಂತ್ರ್ಯ ಪ್ರೇಮಗಳನ್ನು ಜನರ ಹೃದಯದಲ್ಲಿ ಮೂಡಿಸುವ ಕತೆ-ಕಾದಂಬರಿ-ಕವನಗಳು ಹೆಚ್ಚು ಹೆಚ್ಚಾಗಿ ಪ್ರಕಟವಾದುವು. ರಾಷ್ಟ್ರೀಯ ಭಾವನೆಯನ್ನು ಬೆಳೆಸುವ ಸಾಹಿತ್ಯದ ನಿರ್ಮಾಣವಾಗಿ ಜನರಲ್ಲಿ ಸ್ವಾತಂತ್ರ್ಯದಾಹ ಅಧಿಕವಾದುದರ ಫಲವಾಗಿ ಪರದಾಸ್ಯದ ಅಂಧಕಾರ ಕವಿದಿದ್ದ ಜನಸಾಮಾನ್ಯರ ಹೃದಯ ಕಂದರದಲ್ಲಿ ಸ್ವಾತಂತ್ರ್ಯರವಿಯ ಮುಂಬೆಳಕು ಬೆಳಗಿತು.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕವಿಗಳ, ಕತೆಗಾರರ ಕಾದಂಬರಿಕಾರರ ಲೇಖನಿಯಿಂದ ಸಾಹಿತ್ಯದ ಹೊನಲು ಸ್ವತಂತ್ರವಾಗಿ ಹರಿಯತೊಡಗಿತು. ಚುನಾವಣೆ, ಅಭಿವೃದ್ಧಿ ಯೋಜನೆ, ಬಡತನದ ನಿರ್ಮೂಲನ ಇತ್ಯಾದಿ ಕತೆ ಕಾದಂಬರಿಗಳಿಗೆ ವಸ್ತುಗಳಾದುವು. ಸ್ವಾತಂತ್ರ್ಯದ ಕಹಳೆಯೂದುವ ವೀರ ಕವನಗಳ ಸೃಷ್ಟಿ ಅಧಿಕವಾಯಿತು. ಈ ರೀತಿ ಸ್ವಾತಂತ್ರ್ಯ ಪೂರ್ವದಲ್ಲಿ ತಲೆಯೆತ್ತಿದ ಸಾಹಿತ್ಯ ಸ್ವಾತಂತ್ರ್ಯೋತ್ತರ ಕಾಲದಲ್ಲಿಯೂ ಅದೇ ಹಾದಿಯಲ್ಲಿ ಮುನ್ನಡೆದು ಬಂದಿದೆ.

ಭಾರತಕ್ಕೆ ಸ್ವಾತಂತ್ರ್ಯ ದೊರೆತ ಬಳಿಕ ರಾಜ್ಯವಿಭಜನೆಯಾಗುವ ವರೆಗೆ ರಾಷ್ಟ್ರೀಯ ಐಕ್ಯ ಭಾವನೆ ಪ್ರಜೆಗಳಲ್ಲಿತ್ತು. ರಾಜ್ಯ ವಿಭಜನೆಯಾಯಿತು. ಭಾಷಾ ವ್ಯಾಮೋಹ ಬೆಳೆಯಿತು. ಗಡಿ ವಿವಾದ ನಡೆಯಿತು. ರಾಷ್ಟ್ರ ವಿಧ್ವಂಸಕ ವಿದ್ರೋಹದ ಕಿಡಿ ಸಿಡಿಯಿತು. ಇಷ್ಟರ ವರೆಗೆ ಭಾರತ ಎಷ್ಟು ಪ್ರಗತಿ ಪಡೆದಿದೆ ಎಂಬುದಕ್ಕೆ ಸಾರಿಗೆ ಸಂಪರ್ಕ, ಶಿಕ್ಷಣ ಸೌಲಭ್ಯ, ಕೃಷಿ ನೀರಾವರಿ, ಕೈಗಾರಿಕೆ ಇತ್ಯಾದಿ ಕ್ಷೇತ್ರಗಳಲ್ಲಿ ಕಂಡು ಬರುವ ಅಭಿವೃದ್ಧಿಯೇ ನಾಕಾದ ಸಾಕ್ಷಿಯಾಗಿದೆ. ಸ್ವಾತಂತ್ರ್ಯ ಸಾಧಿಸಿದ ಫಲ ಒಂದಲ್ಲ ಹಲವಾರು!

ಆದರೆ ಈಗೀಗ ಕಳೆದ ಒಂದು ದಶಕದಲ್ಲಿ ಸಾಗಿ ಬಂದ ಸ್ವಾತಂತ್ರ್ಯದ ಪರಿಸ್ಥಿತಿಯನ್ನು ಕಾಣುವಾಗ ಇದು ಸ್ವಾತಂತ್ರ್ಯವಲ್ಲ, ಸ್ವೇಚ್ಛಾ ಪ್ರವೃತ್ತಿ ಎಂಬುದನ್ನು ಮನಗಾಣುತ್ತೇವೆ. ಶಾಲಾ ಕಾಲೇಜು ವಿದ್ಯಾರ್ಥಿಗಳಿಂದ ಬಸ್ಸುಗಳಿಗೆ ಕಲ್ಲು ತೂರಾಟ, ಜನ ನಾಯಕರೆನಿಸಿದವರಿಂದ ಎಸೆಂಬ್ಲಿಯಲ್ಲಿ ಚಪ್ಪಲಿಗಳ ಎಸೆದಾಟ, ಪಂಚಾಯತ ಅಧ್ಯಕ್ಷರಿಂದ ಹಿಡಿದು ರಾಷ್ಟ್ರಾಧ್ಯಕ್ಷರ ವರೆಗೂ ಟೀಕೆಟಿಪ್ಪಣಿ, ಅಧಿಕಾರದ ದುರುಪಯೋಗ, ಪಕ್ಷ ಪರಿತ್ಯಾಗ, ಇತ್ಯಾದಿಗಳು ಸ್ವೇಚ್ಛಾಚಾರವಲ್ಲದೆ ಮತ್ತೇನು! ಈ ವಿಧದ ಸ್ವಾತಂತ್ರ್ಯ ಭಾರತದ ಭವಿಷ್ಯತ್ತಿಗೆ ಬಾಧಕವಾಗಬಹುದೇ ಎಂಬ ಭೀತಿ ಬಲ್ಲಿದರಿಗುಂಟಾಗಿದೆ.

ಸಾಹಿತ್ಯದಲ್ಲಿ ಕೂಡ ಸ್ವಾತಂತ್ರ್ಯದ ಪರಿಣಾಮವಾಗಿ ಸ್ವೇಚ್ಛಾ ಪ್ರವೃತ್ತಿ ಕಂಡು ಬರುತ್ತಿದೆ. ನವ್ಯ ಸಾಹಿತ್ಯವೆಂಬ ಹೆಸರಿನಿಂದ ಈ ವಿಧದ ಸಾಹಿತ್ಯ ಮೊಳೆತು ಚಿಗುರ ಹತ್ತಿದೆ ಲೇಖಕರಿಗೆ ಸ್ವಾತಂತ್ರ್ಯವಿರಬೇಕು, ನಿಜ. ಆದರೆ ವಾಚಕರ ಹಿತ ದೃಷ್ಟಿಯಿಂದ ಸಾಹಿತ್ಯ ನಿರ್ಮಾಣವಾಗಬೇಕು. ವಾಚಕರಲ್ಲಿ ಕೀಳು ಅಭಿರುಚಿ ಇದ್ದರೆ ಅದನ್ನು ಅಳಿಸಿ ಉತ್ತಮ ಅಭಿರುಚಿಯನ್ನು ಬೆಳೆಸುವ ಸಾಹಿತ್ಯ ನಿರ್ಮಾಣವಾಗಬೇಕಲ್ಲದೆ ಕೀಳು ಅಭಿರುಚಿಗೆ ತಕ್ಕುದಾದ ಕೀಳ್ತರದ ಸಾಹಿತ್ಯವಲ್ಲ.

(ಇಪ್ಪತ್ತನಾಲ್ಕನೇ ಪುಟ ನೋಡಿರಿ)

For your ready & Future Requirements of :

MAIZE, L. S. F. STARCH & DEXTRINES
Of Laxmi Starch Factory Ltd.

SODIUM SULPHATE ANHYDROUS
SULPHATE OF ALUMINA
(Ferric & Non-ferric grade)

SOAPSTONE POWDER
CAUSTIC SODA LYE

and all types of chemical & Auxiliaries for
Paper, Textiles and other Industries

Please Contact :

INDIAN CHEMICAL AGENCY
GENERAL TRADING COMPANY
CHEMICAL SUPPLY AGENCY,

5, KALA BHAVAN, 3, MATHEW ROAD, **BOMBAY-4.**

Gram "INDIGO", Bombay

Phone Office : 360355
Res : 291430

ವರಕವಿ ಪರಮದೇವ

ಬಡತನದಲ್ಲೇ ಹುಟ್ಟಿ, ಬೆಳೆದು, ಕಡುಬಡತನದಲ್ಲೇ ಮೃತ್ಯುವಶನಾದ ಪರಮದೇವ ಪಂಡಿತನಲ್ಲ. ಇದ್ದುದನ್ನೇ ಎಲ್ಲರಿಗೂ ಹಂಚಿ ತಿನ್ನುವ ಆತನ ಆತ್ಮತೃಪ್ತಿಗೆ ತುರಂಗ ಭಾರತ ಜ್ವಲಂತ ಸಾಕ್ಷಿ. ಸರ್ವಜ್ಞ, ಕನಕದಾಸರ ಸಾಲಿನಲ್ಲೇ ಈ ವರಕವಿಗೂ ಪೀಠ ದೊರೆಯುತ್ತದೆ.

ಕನ್ನಡ ಸಾಹಿತ್ಯದಲ್ಲಿ ಬೆರಗನ್ನುಂಟು ಮಾಡುವ ಕವಿಗಳಲ್ಲಿ ಕನಕದಾಸನೊಬ್ಬ, ಪರಮದೇವನು ಮತ್ತೊಬ್ಬ. ಕನಕದಾಸನು ತನ್ನ ಮೋಹನ ತರಂಗಿಣಿ ಎಂಬ ಕಾವ್ಯದಲ್ಲಿ

|| ಸಾಂಗತ್ಯ ||

ಬರಹವ ತಿಳಿಯ ಬೇಡೆನುತೆನ್ನ
ನೊಸಲೊಳು |
ಬರೆದು ನಿರ್ಮಿಸಲದರಿಂದ ||
ಬರಹವನರಿಯೆನಾ ಪದವಿಟ್ಟು
ಕಡಿತದೊಳ್ |
ಬರೆದು ಮಾಡಿದ ಕೃತಿಯಲ್ಲ ||
(೧–೨೧)

ತನಗೆ ಅಕ್ಷರ ಜ್ಞಾನವಿಲ್ಲದೆ ಈ ಕೃತಿಯನ್ನು ರಚಿಸಿದ್ದೇನೆನ್ನುತ್ತಾನೆ. ಆ ಕವಿಗೆ ಈ ಶಕ್ತಿಯು ವ್ಯಾಸರಾಯರಂತಹ ವಿಭೂತಿ ಪುರುಷರ ಮತ್ತು ಕವಿಗಳ ಒಡನಾಟದಿಂದ ಸಾಧ್ಯವಾಯಿತು ಎಂದು ಮನಸ್ಸಿಗೆ ಸಮಾಧಾನ ಹೇಳಿದರೂ ಪರಮದೇವನ ಕುರಿತು ಈತನಿಗೆ ಹೇಗೆಯೇ ಕವಿತಾ ಶಕ್ತಿ ಪ್ರಾಪ್ತವಾಯಿತು ಎನ್ನುವುದು ಕಷ್ಟವಾಗಿದೆ. ಅವನ ಜನ್ಮ ಭೂಮಿ ಸಾಹಿತ್ಯದ ಗಂಧ ಗಾಳಿ ಇಲ್ಲದ ಪ್ರದೇಶ. ಅಲ್ಲಿ ಅಡಕೆಯ ತೋಟಗಳು ಬೆಟ್ಟಗಳ ಬುಡದಲ್ಲಿ ಹೊಡೆ ಹೊಡೆಯಾಗಿ ಹಬ್ಬಿವೆ. ಇವುಗಳ ಮರೆಯಲ್ಲಿ ಕೆಲವು ಚಿಕ್ಕ ಚಿಕ್ಕ ಗುಡಿಸಲುಗಳು; ದಿನದ ಇಪ್ಪತ್ತನಾಲ್ಕು ಗಂಟೆಯೂ ಆ ನಾಡಿನ ವನ ಮೂಲೆಯಲ್ಲಿ ವಾಸ್ತವ್ಯವಿಟ್ಟ ಚೀರುವ ಕೀಟಗಳ ಚೀರುಧ್ವನಿ, ಅಡಕೆಯ ತೋಟಗಳ ಮಗ್ಗುಲಲ್ಲಿ ಅಥವಾ ನಡುವಿನಿಂದ ಕಿರಿ ಕುಣಿತದಿಂದ ಹರಿಯು ನರ್ತನದವರೆಗೆ ಹೆಜ್ಜೆಯಿಡುತ್ತ ಆ ನಿಶ್ಶಬ್ದ ಪ್ರದೇಶಕ್ಕೆ ಜೀವಪೂಡುವ ಚಿಕ್ಕ ದೊಡ್ಡ ಬುಗ್ಗೆ ಸಾಲುಗಳ ಬಳಗಗಳು. ಇಲ್ಲಿ ಸೂರ್ಯನು ಕಾಣಿಸುವುದೇ ಒಂಬತ್ತು ತಾಸಿನ ಮೇಲೆ ಸೂರ್ಯಾಸ್ತಮಾನ ಮಂಜು ಮೋಡಗಳಿಂದ ಐದು ತಾಸಿಗೇ ಆದರಾಯಿತು: ಕೆಲವು ದಿನ ನಾಲ್ಕು ತಾಸಿಗೂ ಆಗಬಹುದು. ಕಟಗುಟ್ಟುವ ಚಳಿಗೆ ಬೆದರಿದ ಜನರು ಮನೆಯಲ್ಲೊಂದು ಅಗ್ಗಿಷ್ಟಿಕೆ ಇಟ್ಟುಕೊಂಡೇ ಇರುವರು. ಮಲೆ ಜ್ವರದ ಹಾವಳಿಯಿಂದ ಅಂದು ಮನುಷ್ಯರೆಲ್ಲಾ ಸೊಪ್ಪಾಗಿದ್ದರು. ಇದರಿಂದ ಅಂದು ಈ ಊರಿನ ಜನತೆಗೆ ಸಾಯುವವರೆಗೆ ಬದುಕುವುದು ಮಾತ್ರ ಗೊತ್ತು. ಅವರಿಗೆ ಜ್ಞಾನವೆಂದರೆ ಅಡಿಕೆಯ ತೋಟಗಳಷ್ಟು; ಇನ್ನು ಬೇಸಾಯ. ಇನ್ನು ವ್ಯವಹಾರವೆಂದರೆ ಸಿಕ್ಕಿದಷ್ಟು ಹಣವನ್ನು ಅನುಭವಿಸಲು ಶಕ್ತಿ ಇಲ್ಲದೆ ಪೆಟ್ಟಿಗೆಯಲ್ಲಿಟ್ಟು ಒಂದು ಹೆಂಡತಿಯ ಕಾಲವಾದ ಅನಂತರ ಮತ್ತೊಂದನ್ನು ದಕ್ಷಿಣೋತ್ತರ ಕನ್ನಡಗಳಿಂದ ಹಣ ಕೊಟ್ಟೋ, ಬೇರೆ ರೀತಿಗಳಿಂದಲೋ ಸಾಗಿಸುವುದು. ಈ ದಂಧೆಯಲ್ಲೇ ಅವರ ಜೀವನವೆಲ್ಲಾ ಸಾಗಿ ಬಿಡುತ್ತಿತ್ತು. ಅವರ ಸಾಹಿತ್ಯವೆಂದರೆ ಹಾರೆ ಕತ್ತಿಗಳ, ಬೇಸಾಯದ ಉಪಕರಣಗಳ ಕಡೆಗೆ ನೋಡುವುದು. ಈ ಜನರ ಮಧ್ಯದಲ್ಲಿ ಪರಮ ದೇವನು ಹುಟ್ಟಿ ತುರಂಗ ಭಾರತದಂತಹ ಕಾವ್ಯವನ್ನು ಬರೆದನೆಂದರೆ ಇದು ವಿಧಿಯ ಬಿಡುಗೈಯೋ ಅಥವಾ ಆರನೆಯ ಆಶ್ಚರ್ಯವೋ ಆಗಿರಬೇಕು.

ಪರಮದೇವನು ಶುದ್ಧ ಬಂಜರು ನೆಲದಲ್ಲಿ ಹುಟ್ಟಿ ಬೆಳೆದು, ಸರಸ ಫಲವಿತ್ತ ಸಿಹಿ ಮಾವಿನ ಮರ! ಇವನ ಹುಟ್ಟೂರಲ್ಲಿ ಈ ಸುಧಾರಣಾ ಯುಗದಲ್ಲೂ ಸೇಕಡಾ ಹತ್ತಕ್ಕಿಂತ ಹೆಚ್ಚು ಓದು ಬರೆಹದ ಪಾಂಡಿತ್ಯವಿದ್ದವರು ಇಲ್ಲವೆನ್ನುವಾಗ ಸುಮಾರು ೨೦೦ ವರ್ಷಗಳ ಹಿಂದೆ? ಅಂದು ಕರ್ನಾಟಕ ಮಾತೆಯೇ ಪರಮದೇವನ ಕಡೆಗೆ ಪ್ರತ್ಯೇಕ ಗಮನವಿತ್ತು ಅವನನ್ನು ಹರಸಿ ಆ ಕಾವ್ಯವನ್ನು ಬರೆಸಿರಬೇಕು. ಇನಕ್ಕೂ ಕಾರಣವಿಲ್ಲದೇ ಇಲ್ಲ. ಪಂಪಭಾರತವು ಪಂಡಿತರ ಸೊತ್ತಾಯಿತು. ಗದುಗಿನ ಭಾರತವು ಗಮಕಕಲೆಯನ್ನು ಬಲ್ಲ ರಸಿಕರ ಆಭರಣವಾಯಿತು. ಇನ್ನು ಆಬಾಲ ಗೋಪಾಲರಿಗೂ, ಪಾಮರ ಜಗತ್ತಿಗೂ ಸಾಹಿತ್ಯ ಎಲ್ಲಿ? ಅದರಲ್ಲೂ ಪಂಚಮ ವೇದದ ಸಾರವನ್ನವರು ಸವಿಯುವುದು ಹೇಗೆ? ಅದಕ್ಕಾಗಿ ಪಾಮರನಾಗಿದ್ದ ಪರಮದೇವನನ್ನು ಪಂಡಿತನನ್ನಾಗಿ ತಿದ್ದಿ ನಾಡ ತಾಯಿಯು ಅವನ ಹೃದಯದಲ್ಲಿ ಕವಿತಾ ಝರಿಯನ್ನು ಹುಟ್ಟಿಸಿ ಜನತಾ ಸಾಹಿತ್ಯದ ಭಾರತವೊಂದನ್ನು ಬರೆಯುವಂತೆ ಪ್ರೋತ್ಸಾಹಿಸಿರಬೇಕು. ಮಾತೆಯ ಆಶೆಗೂ, ದೈವೇಚ್ಛೆಗೂ ವ್ಯತ್ಯಾಸವಿಲ್ಲದುದರಿಂದ ಆ ಕವಿಯಿಂದ ಭಾರತವು ನಿರ್ಮಾಣವಾಯಿತು. ಅಂದು ಕರ್ನಾಟಕ ಸಾಹಿತ್ಯ ಭಂಡಾರಕ್ಕಿದ್ದ ಕೊರತೆಯು ತೊಲಗಿ ಪರಿಪೂರ್ಣವಾಯಿತು. ಅದರೊಂದಿಗೇ ಪರಮದೇವನು ಕವಿಗಳ ಪಂಕ್ತಿಯಲ್ಲಿ ಪರಮ ಪದವಿಯನ್ನು ಪಡೆದನು!

ಪರಮ ದೇವನ ಜನ್ಮಭೂಮಿ ಕುಟಚಾದ್ರಿಯ ಪೂರ್ವದಲ್ಲಿರುವ ಹನ್ನರ ಮಾಗಣೆ. ಇವನ ತಂದೆ ಶಂಕರನಾರಾಯಣಯ್ಯನವರು ಬಡವರಾಗಿದ್ದರೂ ಸಾತ್ತ್ವಿಕರಾಗಿದ್ದರು. ಇವರು ಹವ್ಯಕ ಬ್ರಾಹ್ಮಣ (ಹವೀಕ) ವರ್ಗಕ್ಕೆ ಸೇರಿದವರು. ಪರಮದೇವನೊಂದು ಹುಲ್ಲು ಜೋಪಡಿಯಲ್ಲಿ ಸು. ಕ್ರಿ. ಶ. ೧೭೪೨ರಲ್ಲಿ ಹುಟ್ಟಿದನು. ಇವನು ಆ ಪ್ರಾಂತದ ಪದ್ಧತಿಯಂತೆ ಬಾಲ್ಯದಲ್ಲೇ ತನ್ನ ತಾಯಿಯನ್ನು ಕಳೆದುಕೊಂಡಿ...ತೋರುತ್ತದೆ. ಆ ಮಲೆನಾಡಿನಲ್ಲಿ ಇಂದೂ ಪುರುಷರಿಗಿಂತ ಸ್ತ್ರೀಯರ ಆಯುಷ್ಯ ಕಡಿಮೆ. ಇಂತಹ ಗತಿಯೇ ಪರಮದೇವನ ತಾಯಿಗೆ ಪ್ರಾಪ್ತವಾಗಿರಬಹುದು. ಈ ಕವಿಗೆ ಬಾಲ್ಯದಲ್ಲಿ ಪರಮಯ್ಯ ಅಥವಾ ಪರಮಣ್ಣ ಎಂಬ ಹೆಸರೇ ರೂಢಿಯಾಗಿತ್ತು. ಆದರೆ ಕವಿಯು ಬರೆದ ತುರಂಗ ಭಾರತದಲ್ಲಿ ತನ್ನನ್ನು ಪರಮದೇವ (ನಾಂದಿ ಪದ್ಯ—೪) ನೆಂದುಕೊಂಡಿದ್ದಾನೆ. ಶಂಕರನಾರಾಯಣಯ್ಯನು ಪತ್ನೀ ವಿಯೋಗವಾದ ಮೇಲೆ ಗೃಹಕೃತ್ಯದಲ್ಲಿ ಆಲಸ್ಯ ತೋರಿಸಿದರೆಂದು ತೋರುತ್ತದೆ ಇದರ ಪರಿಣಾಮವಾಗಿ ಇವರು ಸಾಲಂಡಿಗರಾಗಬೇಕಾಯಿತು. ಬಾಲಕ ಪರಮದೇವನು ಕಷ್ಟದಿಂದ ಕನ್ನಡದಲ್ಲಿ ಓದಿ ಬರೆಯುವಷ್ಟು ಜ್ಞಾನವನ್ನು ಮಾತ್ರ ಸಂಪಾದಿಸಿದ್ದನು.

|| ವಾ | ಷ ||

ತಿಳಿದ ಕವಿಯಲ್ಲಮರ ಕಾವ್ಯಂಗಳಂ ಮುನ್ನ | ಹೊಲಬನರಿಯೆನು ಸಂಸ್ಕೃತಂಗಳ ಕನ್ನಡದ | ನೆಲೆಯನರಿಯೆನು ಗ್ರಂಥ ದರ್ಪಂಗಳಂ| ಶಾಸ್ತ್ರಮನ್ನರಿಯೆನು ಜಡನಾನು || ತಿಳಿಯಲಿದರ ಗುಣಾಗುಣಂಗಳಂ ಯೂದವರ | ಕುಲ ಶಿರೋಮಣಿ ಕೃಷ್ಣ ತಿದ್ದಿ ನಡೆಸುವ ಚಿತ್ರದ್ಹಲಿಗೆಯಾರನು ನುಡಿಸಿದಂತಾನು ಪೊಗಳುವೆನು ಶಿರವೆರಗಿ ಗುರುಚರಣಕೆ || ನಾಂ. ಪ. ೧೨ ||

ಕವಿಯು ತಾನು ಸಂಸ್ಕೃತ ಕಾವ್ಯಗಳನ್ನು ಓದಿದವನಲ್ಲ; ಕನ್ನಡ ಮಹಾಗ್ರಂಥಗಳ ಅಭ್ಯಾಸವು ತನಗಿಲ್ಲ. ಶ್ರೀ ಕೃಷ್ಣನ ಅನುಗ್ರಹದಿಂದ ಈ ಪುಣ್ಯ ಕಾವ್ಯ ವಾಹಿನಿಯು ತನ್ನ ಹೃದಯದಿಂದ ಜಿನುಗಿತೆಂದು ಹೇಳುತ್ತಾನೆ.

ಪರಮದೇವನ ತಂದೆಯೂ, ಹಿರಿಯರೂ ಆತನಿಗೆ ಲಗ್ನ ಮಾಡಿಸಿದರು. ಆದರೆ ಕವಿಯು ಸ್ವಾಭಾವಿಕ ವೈರಾಗ್ಯಶಾಲಿ ಆದುದರಿಂದ ತನ್ನ ಪತ್ನೀ ಪುತ್ರರ ಹೆಸರೆತ್ತಿ ಬರೆಯದಿದ್ದರೂ 'ಸತಿ ಸುತರ ಕರಕೊಂಡು ಬರುತ ಇಕ್ಕೇರಿಯೊಳು' (ನಾ. ಪ. ೪) ಎನ್ನುವುದರಿಂದ ಸಂಸಾರಿಯಾಗಿದ್ದುದು ಮಾತ್ರವಲ್ಲದೆ ಮಕ್ಕಳಂದಿಗನಾಗಿದ್ದನೆಂದೂ ತೋರುತ್ತದೆ.

ಪರಮದೇವನಿಗೆ ಜ್ಞಾನ ಸಂಗ್ರಹದಲ್ಲಿ ತುಂಬಾ ಆಸಕ್ತಿ ಇತ್ತು. ಇವನು ತನ್ನ ಬಳಿ ಇದ್ದ ಕೆಲವು ಪುಸ್ತಕಗಳನ್ನೇ ದಿನವೆಲ್ಲಾ ಓದುತ್ತಿದ್ದನಂತೆ. ಇವನ ನೆರೆಹೊರೆಯವರ ನಿತ್ಯದ ಹೋರೆಯಾದ ಬೇಸಾಯ ತೋಟಗಾರಿಕೆಗಳಲ್ಲಿ ಇವನಿಗೆ ಆಸಕ್ತಿ ಇರದುದರಿಂದ ಜೀವನವು ಸಾಲದ ಹಣದಿಂದಲೇ ಸಾಗಬೇಕಾಯಿತು. ಪಿತ್ರಾರ್ಜಿತವಾದ ಸಾಲವು ಇವನ ಕಾಲದಲ್ಲಿ ಇನ್ನೂ ವೃದ್ಧಿಯಾಗಿ ಜನ್ಮ ಭೂಮಿಯನ್ನೇ ಬಿಟ್ಟು ಹೊರಡುವ ಪ್ರಸಂಗವೂ ಬಂತು. ಸಾಲವಿತ್ತ ಶ್ರೀಮಂತರು ಪರಮದೇವನನ್ನು ಸಂಸಾರ ಸಹಿತ ಮನೆಯಿಂದ ಹೊರಡಿಸಿದರು. ಆಗ ಕವಿಯು ಹನ್ನರಕ್ಕೆ ಕೊನೆಯ ಸಾರಿ ನಮಸ್ಕಾರ ಹೊಡೆದು ಇಕ್ಕೇರಿ ಸಾಗರ ಪ್ರಾಂತದ ಚಿಪ್ಪಳಿ ಎಂಬಲ್ಲಿಗೆ ಹೋದನು. ಆಗ ಆ ಊರಿನಲ್ಲಿ ಆಢ್ಯ ವ್ಯಕ್ತಿ ಎನ್ನಿಸಿಕೊಂಡ ಗೋಪಾಲಯ್ಯನ ಮಗ ಲಕ್ಷ್ಮೀ

(ಇಪ್ಪತ್ತಮೂರನೇ ಪುಟ ನೋಡಿರಿ)

Please Visit Once

Sri Nityananda Motor Works

K. K. SHENOY COMPOUND
DARBE, PUTTUR [S. K.]

- Manufacturers of steel furnitures, Office equipments Hospital wares, gates, grills, steel windows, trusses, water tanks, night soil bins and other types of sheet metal works.
- Specialists for Job works like gas and electric weldings, turning, facing, pipe bending etc.
- Spray painting for motor cars and other Vehicles.
- Servicing, body building, tinkering and repairing of all types of Vehicles.
- Repairs of all types of water pumpsets, etc., etc.
- Remember our guarantee of "Full satisfaction, best performance – Quickness in work".

K. SHANKER BHAT, B. E. [MECH]
Proprietor.

ಶ್ರೀ ಗೋಪಾಲಕೃಷ್ಣ ಹೆಗಡೆ ಕೇರೀಮನೆ.

ಸಾಹಿತ್ಯ ಮತ್ತು ವಾಚನಾಭಿರುಚಿ

ಸಾಹಿತ್ಯದ ಮಟ್ಟವೇರಲು ಓದುಗ, ಪ್ರಕಾಶಕ ಮತ್ತು ಲೇಖಕ—ಈ ಮೂವರ ಮಟ್ಟವೂ ಉನ್ನತವಾಗಬೇಕು. ಜನತೆಯಲ್ಲಿ ಉತ್ತಮ ವಾಚನಾಭಿರುಚಿ ಬೆಳೆಯದೆ ಹೋದರೆ ಉತ್ತಮ ಸಾಹಿತ್ಯ ಸೃಷ್ಟಿ ಹೇಗಾದೀತು? ಸಹೃದಯತೆಯನ್ನು ಲೇಖಕನು ಬಯಸುವಂತೆಯೇ ವಾಚಕನೂ ಲೇಖಕನಿಂದ ನಿರೀಕ್ಷಿಸುತ್ತಾನೆ.

ಭುವನ ಮೋಹಕವಾದ ಸೌಂದರ್ಯವೇ ಚೆಲ್ಲುವರಿದಿದ್ದರೂ ಅದನ್ನು ನೋಡಿ ಆಸ್ವಾದಿಸುವ ಕಣ್ಣುಗಳಿಲ್ಲದಿದ್ದರೆ ಆ ಸೌಂದರ್ಯಕ್ಕೆ ಅರ್ಥವಿಲ್ಲ. ಅದು ಕಾಡಿನಲ್ಲಿಯ ಬೆಳದಿಂಗಳಿನ ಹಾಗೆಯೇ ವ್ಯರ್ಥವಾಗುತ್ತದೆ. ಹಣ್ಣಿನ ರುಚಿ ತಿಳಿಯಬೇಕಾದರೆ ಅದನ್ನು ಸವಿದು ನೋಡಬೇಕು. ಇದೇ ಮಾತನ್ನು ನಾವು ಒಳ್ಳೆಯ ಸಾಹಿತ್ಯ ಕೃತಿಯ ಕುರಿತಾಗಿಯೂ ಹೇಳಬಹುದು. ಸಪ್ತವರ್ಣದ ಅಂದವಾದ ಮುಖಪತ್ರವಿದೆಯೆಂದ ಮಾತ್ರಕ್ಕೆ ಆ ಸಾಹಿತ್ಯ ಕೃತಿ ಸರ್ವೋತ್ಕೃಷ್ಟವಾದುದೆಂದು ಹೇಳಲು ಬರುತ್ತದೆಯೇ? ಓದುವ ಉತ್ತಮ ಅಭಿರುಚಿಯಿಲ್ಲದ ಜನಸಮುದಾಯದೆದುರು ಎಂತಹ ವಿಶ್ವಪೂಜ್ಯ ಸಾಹಿತ್ಯಕ ಕೃತಿಯನ್ನಿಟ್ಟರೆ ತಾನೇ ಏನು ಫಲ? ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗೆ, ಅರಸಿಕನೆದುರು ಕಾವ್ಯಶಾಸ್ತ್ರ ವಿನೋದ ಚರ್ಚಿಸಿದಂತೆ ಅದು ನಿಷ್ಪ್ರಯೋಜಕವಾಗುವುದಿಲ್ಲವೇ? ಜನಸಾಮಾನ್ಯರ ವಾಚನಾಭಿರುಚಿ ಉನ್ನತ ಮಟ್ಟದ್ದಾದಾಗಲೇ ಒಳ್ಳೆಯ ಸಾಹಿತ್ಯ ಸಾರ್ಥಕ್ಯವನ್ನು ಪಡೆಯುತ್ತದೆ.

ನಮ್ಮ ವಾಚನಾಭಿರುಚಿ ಹೇಗಿದೆ? ಇದೊಂದು ಸ್ವಾರಸ್ಯವಾದ ಪ್ರಶ್ನೆಯೇ ಸರಿ. ಉತ್ತಮವಾಗಿದೆ ಎಂದರೆ ಸುಳ್ಳುಹೇಳಿದಂತಾಗುತ್ತದೆ. ತೀರ ಕೆಳ ಮಟ್ಟದಲ್ಲಿದೆ ಎಂದರೆ ನಮ್ಮನ್ನು ನಾವೇ ಅವಮಾನ ಮಾಡಿಕೊಂಡ ಹಾಗಾಗುತ್ತದೆ. ಅನಕ್ಷರಸ್ಥರ ಪ್ರಸ್ತಾಪವಿಲ್ಲಿ ಅಸಗತ್ಯ. ಓದು ಬರೆಹ ಬಲ್ಲ ವಿದ್ಯಾವಂತ ಪ್ರಪಂಚದವರ ಮನಸ್ಸಿನ ಒಳಪದರುಗಳನ್ನು ಹಿಂಜಿ ಮಾತ್ರ ನೋಡಿದರೆ ಸಾಕು. ನಾವೆಷ್ಟು ಸಮರ್ಥರಾದ ಓದುಗರು?

ನಮ್ಮಲ್ಲಿ ಹಲವು ಜನರ ವಾಚನಾಭಿರುಚಿ ದಿನಬೆಳಗಾದರೆ ಪತ್ರಿಕೆಗಳನ್ನು ಓದುವಷ್ಟರ ಮಟ್ಟಿಗೆ ಮಾತ್ರ ಸೀಮಿತವಾಗಿದೆ. ಅದನ್ನೂ ನಿಯಮಿತವಾಗಿ ಓದುವ ಹವ್ಯಾಸವಿಲ್ಲದವರ ವಿಷಯ ಪ್ರತ್ಯೇಕವಾಗಿ ಉಳಿಯಿತು. ಗ್ರಂಥ ಭಂಡಾರಗಳಿಂದ ಪುಸ್ತಕಗಳನ್ನು ತಂದು ಸಮಯ ಸಿಕ್ಕಾಗ ಓದಿ ಮತ್ತೆ ನೆನಪಾದಾಗ ಮರಳಿ ಮುಟ್ಟಿಸುವ ವಾಚಕರಿಗೆ ನಮ್ಮಲ್ಲಿ ಕೊರತೆಯಿಲ್ಲ. ಬಹುತೇಕ ವಾಚನಾಲಯಗಳು ಬಾಲ್ಯಾವಸ್ಥೆಯಲ್ಲಿಯೇ ಬಾಗಿಲು ಮುಚ್ಚುವದಕ್ಕೆ ಓದಲು ಒಯ್ದ ಪುಸ್ತಕಗಳು ಮರಳಿ ವಾಚನಾಲಯಗಳ ಕಪಾಟುಗಳನ್ನು ಸೇರದಿರುವದೂ ಮುಖ್ಯ ಕಾರಣವಾಗಿದೆ. ಈ ರೀತಿಯುಳ್ಳಾದರೂ ಓದುವವರ ಪ್ರಮಾಣ ತೀರ ಕಡಿಮೆ ಎನ್ನುವದನ್ನು ನಾವು ಮರೆಯಬಾರದು.

ನಿಯಮಿತವಾಗಿ ಓದುವ ಚಟ ಬಹುತೇಕ ಜನಕ್ಕೆ ಇರುವದಿಲ್ಲ. ಕೈಗೆ ಸಿಕ್ಕಾಗ ಮಾತ್ರ ಏನನ್ನಾದರೂ ಓದುವ ಜನರೇ ಬಹಳ ಮಂದಿ. ಇವರಿಗೆ ಓದಲು ಮಾತ್ರ ಆದರಾಯಿತು. ಸಮಯ ಬಂದರೆ ರೇಲ್ವೆ ಗೈಡೂ ಆಗಬಹುದು. ಅದೇ ಆಗಬೇಕು—ಇದೇ ಆಗಬೇಕು ಎಂಬ ನೇಮ ಇವರಿಗಿಲ್ಲ. ದಿನಾಲು ನಿದ್ರಿಸುವ ಮುನ್ನ ನಿದ್ದೆ ಬೇಗ ಬರದೆಂದು ಏನನ್ನಾದರೂ ಓದುವ ಅಭ್ಯಾಸವನ್ನಿಟ್ಟುಕೊಂಡ ಪುಣ್ಯಾತ್ಮರ ಲೆಖ್ಖ ಇವರಲ್ಲಿ ಸೇರಿಲ್ಲ. ಹೀಗೆ ಓದುಗರಲ್ಲಿ—ಓದುಗಳಲ್ಲಿ ಹಲವು ವಿಧ.

ಓದುಗರಲ್ಲಿ ಹಲವು ವಿಧಗಳಿರುವಂತೆಯೇ ಓದುವವರಲ್ಲಿಯೂ ಹಲವು ವಿಧ. ಓದನ್ನು ಬಲ್ಲವರೆಲ್ಲರೂ ಓದಿಯೇ ಓದುತ್ತಾರೆ. ಅಥವಾ ಏನನ್ನಾದರೂ ಓದಿಯೇ ಇರುತ್ತಾರೆ ಎಂಬುವದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಇವನ್ನು ನಾವು ಸ್ವಲ್ಪ ಆಸಕ್ತಿ ವಹಿಸಿ ತುಸು ಗಂಭೀರವಾಗಿ ಯೋಚಿಸಬೇಕು. ಓದುವವರು ಓದುತ್ತಾರೆ ಎನ್ನುವದಕ್ಕಿಂತಲೂ ಅವರು ಏನನ್ನು ಮತ್ತು ಹೇಗೆ ಓದುತ್ತಾರೆ ಎನ್ನುವದು ಹೆಚ್ಚು ಮಹತ್ವವಾದದ್ದು. ಇಲ್ಲಿಯೇ ಅಭಿರುಚಿಯ ಪ್ರಶ್ನೆ ಏಳುವದು. ಅವರವರ ಅಭಿರುಚಿಗೆ ತಕ್ಕ ಹಾಗಿರುವ ಪುಸ್ತಕಗಳನ್ನು ಜನ ಓದುತ್ತಾರೆ. ಹೋಟೆಲ್ಲಿಗೆ ಹೋಗಿ ತಮಗೆ ಬೇಕಾದ ತಮ್ಮ ಮೆಚ್ಚಿಗೆಯ ತಿಂಡಿ ತಿಂದು ಬೇಕಾದ ಪಾನೀಯ ಕುಡಿದ ಹಾಗೆ. ಜನ ಎಂದೂ ತಮ್ಮ ಮನಸ್ಸೊಪ್ಪುವ ಆಯ್ಕೆಯಲ್ಲಿ ಹಿಂದೆ ಬೀಳುವದಿಲ್ಲ. ಅಭಿರುಚಿಗೆ ಒಗ್ಗದ ಸಾಹಿತ್ಯ ಓದುವದೆಂದರೆ ಅದು ಬಲವಂತದ ಮಾಘಸ್ನಾನವೇ ಆದೀತು ವಾಚಕ ಮಹಾಶಯನಿಗೆ.

ಇಂದು ಅಸಂಖ್ಯವಾಗಿ ಪ್ರಕಟವಾಗುತ್ತಿರುವ ಪುಸ್ತಕಗಳು ಹಾಗೂ ಅವುಗಳ ಮಾರಾಟ ಇವನ್ನು ನಾವು ಗಮನಿಸಿದ್ದಾದರೆ ಓದುಗರ ಅಭಿರುಚಿ ಹೇಗಿದೆ ಎಂಬುದನ್ನು ನಾವು ಗುರುತಿಸಬಹುದು. ಕಥೆ ಕಾದಂಬರಿಗಳಂತಹ ಲಲಿತ ಸಾಹಿತ್ಯವನ್ನೋದಿ ಮನಸ್ಸನ್ನು ಮುದಗೊಳಿಸುವದೊಂದೇ ಬಹುತೇಕ ವಾಚಕರ ಗುರಿ. ವೇಳೆ ಕಳೆಯುವದಕ್ಕೊಂದೇ ಕಾದಂಬರಿ ಓದುವವರಿಲ್ಲವೇ ನಮ್ಮಲ್ಲಿ? ವಿಚಾರ ಸಾಹಿತ್ಯವನ್ನೋದಿ ತಲೆನೋವು ತಂದುಕೊಳ್ಳುವ ಉಸಾಬರಿಗೆ ನಮ್ಮ ಜನ ಕ್ವಚಿತ್ತಾಗಿ ಹೋಗುತ್ತಾರೆ. ಸಾಮಾನ್ಯ ಜನರಿಗೆ ಅದು ಬೇಕಾಗಿಯೂ ಇಲ್ಲವೆಂದು ತೋರುತ್ತದೆ. ಹಗುರಾದ, ತಲೆಗೇನೂ ಒಜ್ಜೆಯೆನಿಸದ ಬಹು ಸುಲಭ

(ಇಪ್ಪತ್ತೆರಡನೇ ಪುಟ ನೋಡಿರಿ)

CANARA BANK CAN HELP YOU TO BE SELF-EMPLOYED

Over the years, Canara Bank has built up a fine tradition of helping experienced and enterprising people who have a desire to be self-employed or those who wish to expand or improve their exisiting business.

We have schemes for

- Doctors, who wish to set up practice, specially in non-urban areas.
- Technically qualified people, who wish to start small scale industries, or service units like workshops, electrical repair shops etc.
- Artisans like those willing to start tailoring units, ready-made dress making units, laundries, flour mills, etc.
- Any other entrepreneurs who wish to set up some enterprise of their own, like a retail shop, running a taxi or autorikshaw etc.

In considering proposals we give due consideration to initiative, expertise and experience. If you have any project in mind and are confident of its success but for which you need financial assistance, approach any one of our Branch nearest to you. The Manager will be glad to furnish you necessary information and try to be of help to you.

CANARA BANK

IN THE SERVICE OF THE PEOPLE.

— As on 1—7—1971, **over 530 branches all over India** —

— More and more branches are being opened —

ಶ್ರೀ "ನವಗಿರಿನಂದ", ಮದ್ರಾಸು.

ಕುಲಗೋತ್ರಗಳು

ಲೇಖಕರು

******

ಕುಲಗೋತ್ರ ತಿಳಿದುಕೊಳ್ಳುವುದು ಇಂದು ಜಟಿಲವೆನಿಸಿದೆ. ಈ ಜಟಿಲ ಅನಾದಿಯಲ್ಲೂ ಇತ್ತು. ಆಚಾರ್ಯ ಕಣ್ವನ ಪುತ್ರ ಮೇಧಾತಿಥಿಯೇ ಇದನ್ನು ಆರಂಭ ಮಾಡಿದವನಿರಬಹುದೆ?

ಕುಲಗೋತ್ರಗಳ ಸಮಸ್ಯೆ ಕೆಲವು ನೂರು ವರುಷಗಳಿಂದ ಇರುವಂತಹುದೇನಲ್ಲ. ವೇದಗಳು ಹುಟ್ಟಿದಂತಹ ಆದಿಕಾಲದಲ್ಲಿಯೂ ಅದಿತ್ತು. ವೇದಕಾಲದಲ್ಲಿ ನಡೆದ ಇದೊಂದು ಕಥೆ, ಅದು 'ಇನ್ನೂ ಹಿಂದಿನಿಂದಲೇ ಇತ್ತೆಂಬುದಕ್ಕೆ ಸಾಕ್ಷಿಯಾಗಿದೆ.

ಆ ಕಾಲದಲ್ಲಿ ಕಣ್ವನೆಂಬೊಬ್ಬ ಋಷಿ ವೇದೋಪಾಧ್ಯಾಯನಾಗಿದ್ದು, ಗುರುಕುಲವನ್ನು ನಡೆಯಿಸುತ್ತಿದ್ದನು. ಅವನಿಗೆ ಅನೇಕ ಮಂದಿ ಶಿಷ್ಯರಿದ್ದರು. ''ಜ್ಞಾನದಾತ ಗುರು'' ಎಂದು ಕಣ್ವನು ಪ್ರಖ್ಯಾತನಾಗಿದ್ದನು.

ಅವನ ಖ್ಯಾತಿಯನ್ನು ಕೇಳಿ ತ್ರಿಶೋಕನೆಂಬ ಮುನಿ ಯುವಕನು ಸಾಮವೇದವನ್ನು ಕಲಿಯುವ ತವಕದಿಂದ ಕಣ್ವಾಶ್ರಮಕ್ಕೆ ಬಂದನು. ಕಣ್ವನು ಅವನ ಯೋಗ್ಯತೆಯನ್ನು ಒಂದೆರಡು ಪ್ರಶ್ನೆಗಳಿಂದಲೇ ಅಳೆದು ನೋಡಿ ಅವನನ್ನು ತನ್ನ ಶಿಷ್ಯವರ್ಗದಲ್ಲಿ ಸೇರಿಸಿಕೊಂಡನು.

ನಿಜಕ್ಕೂ ತ್ರಿಶೋಕನು ವಿದ್ಯಾರ್ಜನೆಯಲ್ಲಿಯ ಅತ್ಯಾಸಕ್ತಿ ಉಳ್ಳವನು. ಆದುದರಿಂದ ಅವನು ಉಳಿದೆಲ್ಲಾ ಶಿಷ್ಯರಿಗಿಂತಲೂ ಬಹು ಚೆನ್ನಾಗಿ ಪಾಠಗಳನ್ನು ಒಪ್ಪಿಸುತ್ತ ಗುರುವಿನ ಮೆಚ್ಚುಗೆ ಪಡೆಯುತ್ತಿದ್ದನು. ಕಣ್ವನು ಅವನನ್ನು ಶಿಷ್ಯೋತ್ತಮನೆಂದು ಹೊಗಳಲೂ ಪ್ರಾರಂಭಿಸಿದನು.

ಕಣ್ವನ ಮಗ ಮೇಧಾತಿಥಿಗೆ ಇದು ಸಹನವಾಗಲಿಲ್ಲ. ಆದುದರಿಂದ ಅವನು ತ್ರಿಶೋಕನಲ್ಲಿ ಏನಾದರೂ ಹುಳುಕು ಹುಡುಕಲು ಪ್ರಾರಂಭಿಸಿದನು.

ಒಂದು ದಿನ ಮೇಧಾತಿಥಿ ತಂದೆಯನ್ನು ಕುರಿತು. "ಅಪ್ಪಾ, ಯಾರು ಈ ತ್ರಿಶೋಕ? ಅವನ ತಂದೆಯ ಹೆಸರೇನು? ಯಾವ ಕುಲದಲ್ಲಿ ಹುಟ್ಟಿದವನು?" ಎಂಬ ಪ್ರಶ್ನೆಗಳನ್ನು ಕೇಳಿದನು.

"ನಾನು ಅದನ್ನೆಲ್ಲ ಕೇಳಲಿಲ್ಲ. ಅವನು ಹೇಳಲೂ ಇಲ್ಲ. ಅವನು ಒಳ್ಳೆಯ ಸಂಸ್ಕಾರವನ್ನು ಅಳವಡಿಸಿಕೊಂಡವನು; ವಿದ್ಯೆಯಲ್ಲಿ ಆಸಕ್ತಿಯುಳ್ಳವನು. ನಮ್ಮ ಶಿಷ್ಯರಲ್ಲಿ ಸಂಸ್ಕಾರಗಳೇ ಮುಖ್ಯವಲ್ಲದೆ ಕುಲಗೋತ್ರಗಳಲ್ಲವೆಂಬುದು ನಿನಗೆ ತಿಳಿಯದೆ?'' ಎಂದ ಕಣ್ವ.

ತಂದೆಯ ಈ ಸಮಾಧಾನದಿಂದ ಮೇಧಾತಿಥಿಗೆ ತೃಪ್ತಿಯಾಗಲಿಲ್ಲ. ಅವನನ್ನು ಕುರಿತು ಬೇರೆಯವರೊಂದಿಗೆ ವಿಚಾರಿಸಲು ತೊಡಗಿದನು. ಆಗ ತ್ರಿಶೋಕನು ಅಸುರಸ್ತ್ರೀಗೆ ಹುಟ್ಟಿದವನೆಂಬ ವದಂತಿ ಅವನ ಕಿವಿಗೆ ಬಿತ್ತು. ಅದನ್ನು ತಂದೆಯೊಡನೆ ಹೇಳಿ ''ಇದರ ನಿಜಾನಿಜಗಳನ್ನು ತಿಳಿದುಕೊಳ್ಳದೆ ಅವನನ್ನು ನಮ್ಮ ಆಶ್ರಮದಲ್ಲಿ ಇಟ್ಟು ಕೊಳ್ಳಕೂಡದು" ಎಂದನು.

"ಆ ವಿಚಾರದಲ್ಲಿ ನನಗೆ ಯಾವ ಚಿಂತೆಯೂ ಇಲ್ಲ. ನಿನಗೆ ತಿಳಿದುಕೊಳ್ಳಬೇಕಾಗಿದ್ದರೆ ನೀನೇ ತಿಳಿದು ಕೋ" ಎಂದು ಹೇಳಿ ಕಣ್ವಮುನಿ ಸುಮ್ಮನಾದನು.

ಆಮೇಲೆ ಮೇಧಾತಿಥಿ ತ್ರಿಶೋಕನ ಬಳಿಗೆ ಹೋಗಿ ''ನೀನು ನಿನ್ನ ತಾಯಿ ತಂದೆಯರನ್ನು ಕುರಿತು ಹೇಳಲೇ ಇಲ್ಲ. ನೀನು ಶುದ್ಧ ಬ್ರಾಹ್ಮಣನಲ್ಲ. ಆದುದರಿಂದ ಮಾತಾಡದೆ ನಮ್ಮ ಆಶ್ರಮದಿಂದ ಹೊರಟು ಹೋಗಿಬಿಡು" ಎಂದನು.

"ಈ ಮಾತು ಗುರುಗಳು ಹೇಳಿದರೆ ಹೊರಟುಹೋಗುತ್ತೇನೆ.''

"ತಂದೆಯಿಂದ ಅನುಜ್ಞೆ ಪಡೆದಿದ್ದೇನೆ. ನೀನು ಸತ್ಕುಲ ಪ್ರಸೂತನು ಹೌದೋ ಅಲ್ಲವೋ ಎಂದು ತಿಳಿದುಕೊಳ್ಳುವ ಕಾರ್ಯವನ್ನು ನನಗೆ ಒಪ್ಪಿಸಿದ್ದಾರೆ.''

''ತಿಳಿದು ಕೊಂಡೆಯೂ?''

"ತಿಳಿಯಪಡಿಸುವಷ್ಟು ಧೈರ್ಯ ನಿನಗಿದ್ದರೆ ನಾನು ಇಡುವ ಪರೀಕ್ಷೆಗೆ ನೀನು ನಿಲ್ಲಬೇಕಾಗುತ್ತದೆ."

''ಆಗಲಿ, ನಿಲ್ಲುತ್ತೇನೆ. ಪರೀಕ್ಷೆಮಾಡು"

"ಅಗ್ನಿ ಪರೀಕ್ಷೆ. ನಾವಿಬ್ಬರೂ ಅಗ್ನಿಯ ಮೇಲೆ ನಡೆಯೋಣ. ಸದ್ಬ್ರಾಹ್ಮಣನನ್ನು ಅಗ್ನಿ ರಕ್ಷಿಸುತ್ತದೆ."

ಹೀಗೆ ಮೇಧಾತಿಥಿ ಹೇಳಲು ತ್ರಿಶೋಕನು ಒಪ್ಪಿದನು. ಅಗ್ನಿಕುಂಡವನ್ನು ನಿರ್ಮಿಸಿ, ಇಬ್ಬರೂ ಅದರಲ್ಲಿ ಇಳಿದು ನಡೆದರು. ತ್ರಿಶೋಕನ ಶರೀರದಲ್ಲಿ ಒಂದೇ ಒಂದು ಮಚ್ಚೆಕೂಡಾ ಕಾಣಿಸಲಿಲ್ಲ, ಆದರೆ ಮೇಧಾತಿಥಿಯ ಕಣ್ಣಿನ ರೆಪ್ಪೆಗಳು ಸುಟ್ಟುವು. ಹುಬ್ಬುಗಳು ಕರಟಿದುವು. ಅವನ ಮುಖ ವಿಕಾರವಾಯಿತು.

(ಇಪ್ಪತ್ತೊಂದನೇ ಪುಟ ನೋಡಿರಿ)

ಕೊಡುವವನಿಗೆ ಹರುಷ
ಪಡೆವವನಿಗೆ ಹರುಷ
ಜನಪ್ರಿಯ ''ಪ್ರಕಾಶ''

ಮೂವತ್ತು ವರ್ಷಗಳಿಗೂ ಮಿಕ್ಕಿ
ದೇಶದ ವಿವಿಧ ರಾಜ್ಯಗಳಲ್ಲಿ
—ತಾರತಮ್ಯ ತಿಳಿವ ಜನರಿಂದ
ಆದರಿಸಲ್ಪಟ್ಟಿವೆ—

ಪ್ರಕಾಶ ಬೀಡಿಗಳು

PRAKASH BEEDIES

ಎಲ್ಲ ಕಾಲಗಳಲ್ಲಿ ಎಲ್ಲ ಜನರಿಗೆ ಸೇವನೆಯ ಆನಂದವೀಯುತ್ತಿವೆ !

ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳನ್ನು ಕೋರುವ—

ಕೆ. ಎಂ. ಆನಂದ ಪ್ರಭು ಎಂಡ್ ಸನ್ಸ್

ಬಂದರ, ಮಂಗಳೂರು-1
ಫೋನ್ : 3718

ಫೆಕ್ಟರಿ: ಕೊಡಿಯಾಲ್‌ಬೈಲ್, ಮಂಗಳೂರು-3
ಫೋನ್ : 3532

ಪ್ರಜಾಪ್ರಭುತ್ವದಲ್ಲಿ ಜನಾನುರಾಗ ಮತ್ತು ವಿಶ್ವಾಸ

> ಪಕ್ಷಸ್ತರ ಸಂಕುಚಿತ ಸ್ವಾರ್ಥದ ಆಚಾರದಿಂದ ದೇಶದಲ್ಲಿ ಪ್ರಜಾಪ್ರಭುತ್ವ ಕಳಾಹೀನವಾಗಿದೆ. ಜನರು ಅನಿವಾರ್ಯವಾಗಿ ಅಲ್ಪಸಂಖ್ಯೆಯಲ್ಲಿ ಮತದಾನ ಮಾಡುತ್ತಾರೆ— ನಾಯಕರನ್ನು ಆರಿಸುತ್ತಾರೆ. ಜನತೆ ಪತಿವ್ರತಾ ನಾರಿಯಂತೆ ಅವರನ್ನೇ ನೆಚ್ಚುತ್ತ ಹೋಗುತ್ತದೆ. ಜನವಂಚನೆ ತಾತ್ಕಾಲಿಕ ವೈಯಕ್ತಿಕ ಲಾಭ ದೊರಕಿಸಿಕೊಟ್ಟೀತು; ಚಿರಸ್ಥಾಯಿಯಾದ ದೇಶಹಿತ ಇದಕ್ಕಿಂತ ಯೋಜನ ಯೋಜನ ದೂರ.

ಪ್ರೊ| ಬಿ. ಎಚ್. ಶ್ರೀಧರ, ಸಿದ್ಧಾಪುರ

ಚಿರಸ್ಥಾಯಿಯಾದ ಜನಾನುರಾಗ ಬಿಟ್ಟ ಮುಖಂಡನಿಗಿರಬೇಕಾದರೆ ಅದಕ್ಕೆ ಅವರಲ್ಲಿ ತನ್ನ ಬಗೆಗೆ ಇರುವ ವಿಶ್ವಾಸ ಉಳಿದಿರುವಂತೆ ವರ್ತಿಸುವುದೊಂದೇ ದಾರಿ. "ವಿಶ್ವಾಸಯಂತಿ ಚ ನರಂ ನತು ವಿಶ್ವಸಂತಿ" ಎಂಬ ಸೂತ್ರವನ್ನು ಹಿಡಿದರೆ ಅದೊಂದೂ ಫಲಿಸದೆಂದು ಕೌಟಿಲ್ಯನು ಸಾರತಃ ಅಭಿಪ್ರಾಯಪಟ್ಟಿದ್ದಾನೆ. ಜೊತೆಗೆ ಸಾರ್ವಜನಿಕ ವಿಶ್ವಾಸಕ್ಕೆ ವೈಯಕ್ತಿಕ ವ್ಯಾಮೋಹಗಳು ಮತ್ತು ಸಂಕುಚಿತ ಸ್ವಾರ್ಥಸಾಧನೆಯ ತಂತ್ರಗಳು ಪರಮ ಶತ್ರುಗಳು ಎಂಬುದನ್ನು ಅವನು ಅರಿತಿರುವುದಗತ್ಯ. ಅಲ್ಲದೆ, ಹಿತ್ತಾಳಿ ಕಿವಿಯನ್ನಿಟ್ಟುಕೊಂಡಿರುವುದೂ ವಿಷ್ನಕಾರಿ, ಆದಕ್ಕೇ ಸರ್ವಜ್ಞಕವಿಯು—
"ಹರಿವ ನೀರೆಳವಳ್ಳಿ ತುರಗ ಭೃತ್ಯಪ್ರಬಂಡಿ ಅರಸಿನಾ ಮನವು ಬೆಲೆವೆಣ್ಣು ಇವು ಏಳು ತಿರುಹುವವರಿಚ್ಛೆ ಸರ್ವಜ್ಞ"

ಎಂಬ ಮಾರ್ಮಿಕವಾದ ಎಚ್ಚರಿಕೆಯನ್ನು ಕೊಟ್ಟಿದ್ದಾನೆ ಕರಟಕ– ದಮನಕರ ನಿದರ್ಶನವು ಪಂಚತಂತ್ರದಲ್ಲಿದೆ ಪಿಂಗಲಕನ ದೌರ್ಬಲ್ಯವು ಅವನಿಗೇ ಹಾನಿಕರವಾಯಿತೆಂಬುದು ಅವನಿಗೆ ಗೊತ್ತಾಗಲಿಲ್ಲ.

ನಿಷ್ಪಕ್ಷಪಾತತೆಯೊಂದೇ ಜನಾನುರಾಗದ ಸ್ಥಿರ ಸೂತ್ರ ತಾತ್ಕಾಲಿಕ ಜನಸ್ತುತಿ ೩—೪ ಗಣ್ಯಂಮನ್ಯ ಜನರಿಂದ ದೊರೆತರೆ ಅದು ಸರ್ವ ಜನಸ್ತುತಿ ಎಂದು ಗ್ರಹಿಸುವ ಜನನಾಯಕತ್ವವೊಂದು ಟೊಳ್ಳುಗಟ್ಟಿ. ಪ್ರಜಾಪ್ರಭುತ್ವದ ಸೋಲು ಗೆಲುವುಗಳಲ್ಲಿ ಬಹ್ವಂಶ ನಾಯಕರನ್ನೇ ಅವಲಂಬಿಸಿದೆ. ಅವರ ದುರಭಿಪ್ರಾಯಗಳೇ ಸಂಸ್ಥಾಘಾತಕಗಳು. ಅಪಾತ್ರರಲ್ಲಿ ಅಂಥ ವಿಶ್ವಾಸವನ್ನು ಯಾವ ಕಾರಣದಿಂದ ಇಟ್ಟರೂ ಅದರಿಂದ ಅನೂಹ್ಯ ಹಾನಿಗಳು ಸಂಭವಿಸುತ್ತವೆ; ಆಗ ಜೀವನದ ಅಸಫಲತೆ ಕ್ರಮೇಣ ಗೊತ್ತಾಗುತ್ತ ಹೋಗುತ್ತದೆ.

ಭೌತಿಕ ಸಂಪತ್ ಸಾಧನೆಯೊಂದೇ ವೈಯಕ್ತಿಕ ಬಾಳಿನ ಗೆಲುವೆಂದೂ ಅದೇ ಸಫಲ ಜೀವನದ ನಿಕಷವೆಂದೂ ಜನಭಾವಿಸದು; ಹೊರಗೆ ಹಾಗೆ ಕೆಲವರೆಂದರೂ ಒಳಗೆ ಅವರ ಅಂತರಾತ್ಮ ಒಪ್ಪದು. ಚಿಲ್ಲರೆತನದ ವ್ಯವಹಾರಗಳು ಸಂಸ್ಥಾಶಾಶ್ವತತೆಗೆ ಮಾರಕಗಳು ಅಲ್ಪತ್ವವು ಜನಜುಗುಪ್ಸಾಕಾರಿ. "ಅಲ್ಪರ ಸಂಗ ಅಭಿಮಾನ ಭಂಗ" ಎಂಬುದು ಗೊತ್ತಿರುವಾಗ ಅಲ್ಪಾನಲ್ಪ ಪಾತ್ರಗಳ ಭೇದವನ್ನು ನಾಯಕತ್ವದ ಅಭ್ಯರ್ಥಿಯು ಅರಿತುಕೊಳ್ಳುವುದಗತ್ಯ. ಅಲ್ಪರಿಗೆ ಮಹಾ ಸ್ಥಾನಗಳನ್ನು ಕೊಡುವುದೇ ಸ್ವಹಾನಿ—ಸಂಸ್ಥಾ ಹಾನಿಗಳಿಗೀಗ ಕಾರಣವಾಗಿರುವುದಕ್ಕೆ ಅಸಂಖ್ಯಾತ ನಿದರ್ಶನಗಳು ದೊರಕುತ್ತವೆ.

ಮಾತನ್ನು ಕೃತಿ ವಿರೋಧಿಸಿದಾಗ ವಚನಭಂಗವೆಂಬ ಜನಾನುರಾಗ ಮಾರಕವಾದ ದೋಷ ಉಂಟಾಗುತ್ತದೆ. ಗುಪ್ತ ಚಟುವಟಿಕೆಗಳ ಸಂಖ್ಯೆ ಅತ್ಯಲ್ಪವಾಗಿರಬೇಕಾದುದನ್ನೂ ಆಡಳಿತ ವ್ಯವಹಾರದಲ್ಲಿರುವ ನಾಯಕರು ಅರಿತಿರಬೇಕು. ಅವು ಅಧಿಕವಾಗುತ್ತ ಹೋದ ಹಾಗೆ ಜನಸಂಶಯ ಹೆಚ್ಚುತ್ತ ಹೋಗುವುದು. ಶಂಕಾವೇತ ನಾಯಕರೇ ಇಲ್ಲ, ಅಧಿಕಾರಿಗಳೇ ಇಲ್ಲ ಎಂಬಂತೆ ತೋರುವಂತಾದ ಖಾಸಗಿ ಹಾಗೂ ಸರಕಾರಿ ಆಡಳಿತ ಕ್ಷೇತ್ರಗಳ ದೆಸೆಯಿಂದಲೇ ಎಲ್ಲರೂ ಪ್ರಜಾಪ್ರಭುತ್ವವಿಂದು ಯಶಸ್ವಿಯಾಗಿಲ್ಲವೆಂದು ಗೊಣಗಲಾರಂಭಿಸಿದ್ದಾರೆ. ಗುಪ್ತ ಮತದಾನ ಪದ್ಧತಿಯು ಬಹಳ ಕಾಲ ಮುಂಬರಿದರೆ ಭಾರತಕ್ಕೆ ಅನಾರೋಗ್ಯಕರ. ಮತದಾನದ ವಯಸ್ಸು ೨೧ರಿಂದ ೩೦ಕ್ಕೆ ಏರುವುದು ಉತ್ತಮ. ಇಲ್ಲವಾದರೆ ದೇಶವನ್ನು ವಿದೇಶಿಯರಿಗೆ ಬಿಟ್ಟುಕೊಡಬೇಕಾದಂಥ ಪ್ರಭುತ್ವವಿಲ್ಲಿ ರೂಪಿತವಾಗುತ್ತದೆ.

ಇಲ್ಲಿ ಜನಾನುರಾಗದ ಬಗೆಗೀಗ ಯಾವ ಗೌರವವೂ ಇಲ್ಲ— ಅದು ಅಷ್ಟು ಅಪೇಕ್ಷಣೀಯವೂ ಅಲ್ಲ. ಆವಶ್ಯಕವಂತೂ ಅಲ್ಲವೇ ಅಲ್ಲ! ಎಷ್ಟು ಕಡಿಮೆ ಜನರು ಮತದಾನ ಮಾಡಿದರೂ ಸಾಕಾಗುತ್ತದೆ ಇಂದಿನ ಚುನಾವಣೆಗೆ! ಬಹು ಸಂಖ್ಯಾತರ ಮತಗಳ ಹಂಗೇ ಇಲ್ಲ! ಇದೂ ಒಂದು ಪ್ರಜಾಸತ್ತೆ! ಇದನ್ನು ಹೀಗೇ ಪಾಶ್ಚಾತ್ಯರು ಮಾಡುತ್ತಾರೆ, ಆದುದರಿಂದ ಇದೊಂದೇ ಪ್ರಭುತ್ವಸತ್ತ್ವ!

ಭಾರತೀಯ ತರ್ಕಶಾಸ್ತ್ರವನ್ನು ವಧೆ ಮಾಡಲು ಮೇಲೆ ಕೊಡಲಾದ ವಾದವೇದಿಕೆಯೊಂದು ಸಾಕು. ಇದೀಗ ಗಣ್ಯಂಮನ್ಯ ವಿದ್ಯಾವಂತರು ಯೋಜಿಸಿದ ಪ್ರಜಾರಾಜ್ಯದ ಬುನಾದಿ. ಪ್ರಜೆಯು ಮತದಾನ ಮಾಡಿದ ಬಳಿಕ "ಸುರೂಪಂ ವಾ ಕುರೂಪಂ ವಾ ಪುಮಾನಿತ್ಯೇವ ಭುಂಜತೇ'' ಮತ್ತು "ಸಮಮುಪಚರ ಭದ್ರೇ ಸುಪ್ರಿಯಂ ವಾ ಅಪ್ರಿಯಂ ವಾ'' ಎಂಬ ನ್ಯಾಯದಂತೆ ತಾನು ವರಿಸಿದ ಮುಖಂಡನು ಒದೆದರೂ ಒದೆಸಿಕೊಳ್ಳಬೇಕು! ಈ "ಪಾತಿವ್ರತ್ಯ" ವನ್ನು ಪ್ರಜಾಪ್ರಭುತ್ವವೆನ್ನಲು ಯಾವ ಪೌರುಷವಂತನೂ ಒಪ್ಪನು. ಇಂಥ ಸಾಧ್ವೀಪ್ರಜೆಗಳ ದೆಸೆಯಿಂದಲೇ ನಾವೀಗ ಪಾಪಾರಾಧನೆಗಿಳಿದಿದ್ದೇವೆ.

ಮತದಾರನು, ಅರಕ್ಷಿತರಿಗೆ ರಕ್ಷಿತರ ಕರ್ತವ್ಯವಿಲ್ಲವೆಂಬುದು ತಿಳಿಯದೆ ಹೋದ ಗ್ರಾಮ ಪತಿವ್ರತೆಯಂತೆಯೇ, ಅರಕ್ಷಿತ ಪ್ರಜೆಯು ತನ್ನ ವಂಚಕ ಮುಖಂಡ ರಚಿಸಿದ ಅನ್ಯಾಯವಾದ ಕಾಯದೆಯ ಕಟ್ಟಡವನ್ನು ಎತ್ತಿ ಹಿಡಿಯ ಬೇಕಾಗಿಲ್ಲ ಎಂಬ ಸಾಮಾಜಿಕ ನ್ಯಾಯಾಧೀಶ ಮಟ್ಟದ ಸತ್ಯಾಗ್ರಹ ಚೇತನೆಯನ್ನು ಜಾಗ್ರತಗೊಳಿಸಿಕೊಳ್ಳದೆಯೇ ಅನಾಮಧೇಯನಾಗಿ ಸಾಯುತ್ತಿದ್ದಾನೆ. ನರಳಿ ನಾಯಲು ಬಹುಶಃ ಅವನಿಗೆ ಜಾಗ್ರತ ಇಚ್ಛೆ ಇಲ್ಲವಾದರೂ ಅಜಾಗ್ರತ ಪ್ರಜ್ಞೆಯ ಯಾವುದೋ ಒಂದು ಕೇಂದ್ರದಲ್ಲಿ ಅದು ಜಾಗ್ರತವಾಗಿರಬಹುದೆಂದು ತೋರುತ್ತದೆ. ಇಲ್ಲವಾದರೆ, ಅವನ ಬಗೆಗೆ ವೈದ್ಯನು ಯಮನಾದಾನೇ? ರಕ್ಷಕನು ಭಕ್ಷಕನಾದಾನೇ? ಇಲ್ಲಿಯ ವರೆಗಾದದ್ದು ಹೀಗೆ. ಮುಂದಿನ ಚುನಾವಣೆ ಏನು ಮಾಡುವುದೋ ನೋಡಬೇಕು.

''ವಚನ''ಕ್ಕೂ ''ಭಂಗ''ಕ್ಕೂ ವ್ಯಾಸವಿರಬೇಕಲ್ಲದೆ, ಸಮಾಸವಿರಬಾರದೆಂಬುದನ್ನು ಗ್ರಹಿಸುವ ಬುದ್ಧಿ ತಲೆದೋರಿದ ದಿನ ಭಾರತದಲ್ಲಿ ಪ್ರಜಾಪ್ರಭುತ್ವವು ಸ್ವಲ್ಪವಾದರೂ ಸಾರ್ಥಕವಾದೀತು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ಶ್ರದ್ಧೆ ವೃಥಾವಾಗ ಬೇಕಾದರೆ ವಚನ ಸಾಹಿತ್ಯವನ್ನು ವಚನಾನುಸಾರಿ ಆಚಾರವು ಮುನ್ನಡೆಸಿಕೊಂಡು ಹೋಗುವಂತೆ ನೋಡಿಕೊಳ್ಳುವ 'ವರ' ಅಥವಾ ಪ್ರಜಾಪ್ರತಿನಿಧಿ ಹುಟ್ಟಬೇಕು. ಆಂ ದೋಷಗಳನ್ನು ಉಳ್ಳ, ಹತ್ತೇ ಗುಣಗಳನ್ನುಳ್ಳ ಒಂದು ಸುಧಾರಣೆಯನ್ನು ಮಾಡಿ ಅದರಿಂದ (ಯಥಾಶಕ್ತಿ?) ಪ್ರಗತಿಯನ್ನು ಸಾಧಿಸಿದ್ದಕ್ಕೆ ಜನತೆ ಎಷ್ಟು ಕೃತಜ್ಞವಾಗಿದ್ದರೂ ಸಾಲದೆಂಬ ದುರಾಶೆಯು ನಾಯಕೋತ್ತಮನ ಲಕ್ಷಣವಲ್ಲ. ಅಧಮನಾಯಕರ ಪ್ರಭುತ್ವವು ಯಾವುದಾದರೂ ಅದರ ಮಟ್ಟ ಅಥವಾ ಗುಣ ಅಧಮ. ಮತದಾರರಲ್ಲಿ ಅದಷ್ಟು ವಿವೇಕೋದಯವು ನಮ್ಮ ಅನೇಕ ರಾಜಕೀಯ ಉಪಪಕ್ಷ–ಪಕ್ಷಗಳ ಅಧ್ಯರ್ಥ್ಯಗಳಲ್ಲಾಗಲಿಲ್ಲ ಪಕ್ಷಾಂತರ್ಗತ ಸದಸ್ಯರ ಆಯ್ಕೆಯನ್ನು ಸರಿಯಾಗಿ ಮಾಡಲು ಅವರಿಂದಾಗಲಿಲ್ಲ; ಆಯ್ದವರನ್ನು ಸರಿಯಾಗಿ ನಡೆಸಿಕೊಂಡು ಹೋಗಲೂ ಸಾಧ್ಯವಾಗಲಿಲ್ಲ. ಅಲ್ಪನಾಯಕತ್ವವು ಅನಾಯಕತೆಗೆ ಅಥವಾ ಅರಾಜಕತೆಗೆ ಕಾರಣ. ಅಲ್ಪನಾಯಕರಿಗೆ ಜನರ ಪೂರ್ಣ ಅನುರಾಗ ಮತ್ತು ಬೆಂಬಲಗಳೆಂದೂ ಸಿಗಲಾರವು. ಅಲ್ಪರಿಗೆ ಐಶ್ವರ್ಯ ಬಂದರೆ ಅರ್ಧರಾತ್ರಿಯಲ್ಲಿ ಕೊಡೆ ಹಿಡಿಯಿರೆನ್ನುತ್ತಾರೆ!

ಮಹಾನಾಯಕರ ನೀತಿಗಳನ್ನು ಅಪ್ರತ್ಯಕ್ಷವಾಗಿ ಹಾಗೂ ಕುಪತರ್ಕದಿಂದ ಖಂಡಿಸುವ ಅಲ್ಪನಾಯಕರು ಮೊಡ್ಡದೇಶವೊಂದರ ಚಿತ್ರವನ್ನು ಇತರ ದೇಶಗಳೆದುರು ಚಿಕ್ಕದನ್ನಾಗಿ ಮಾಡಿ ತೋರಿಸುವವರಾಗುತ್ತಾರೆ. ಪಕ್ಷಗಳ ಅವಾಸ್ತವಿಕ ಅನೇಕೀಕರಣದ ಜೊತೆಗೆ, ಪಕ್ಷಾಚಾರಗಳ ಅನೈತಿಕತೆಯೊಡನೆ ಪಕ್ಷಸ್ಥರ ಸಂಕುಚಿತ ಸ್ವಾರ್ಥದ ಆಚಾರವೂ ಪ್ರಜಾಪ್ರಭುತ್ವವಿಲ್ಲಿ ಕಳಾಹೀನವಾಗಲು ಕಾರಣ ಜನರು ಅನಿವಾರ್ಯವಾಗಿ ಅಲ್ಪ ಸಂಖ್ಯೆಯಲ್ಲಿ ಮತದಾನ ಮಾಡುತ್ತ ಬಂದಿರುವುದು ಇಲ್ಲಿಯವರೆಗೆ ನಡೆದ ಚುನಾವಣೆಗಳಿಂದ ಗೊತ್ತಾಗುತ್ತದೆ ನೆರೆಹೊರೆಯ ಮಹಾರಾಷ್ಟ್ರಗಳ ಒಲಿಷ್ಠ ಸರಕಾರಗಳಿದನ್ನು ಗಮನಿಸದಿಲ್ಲ. ಹಾಗೆ ಗಮನಿಸಿರುವುದನ್ನು ನಮ್ಮ ಜನಸಂಘಟಕ ನಾಯಕರು ಮೊದಲು ಗಮನಿಸಿದರೆ ದೇಶಕ್ಕೆ ಕ್ಷೇಮವುಂಟಾಗುವ ಲಕ್ಷಣ ತೋರೀತು. ದೇಶಕ್ಷೇಮ ಬೇಕೆಂಬ ನಾಯಕರು (ಎಂ. ಪಿ. ಗಳೂ ಎಂ. ಎಲ್. ಎ. –ಎಂ. ಎಲ್. ಸಿ. ಗಳೂ) ಚಿರಸ್ಥಾಯಿಯಾದ ಜನಾನುರಾಗಕ್ಕಾಗಿ ಎಷ್ಟು ದುಡಿದರೂ ಸಾಲದು. ಅನುರಾಗದ ಚಿರಕಾಲೀನತೆಯು ವಿಶ್ವಾಸದ ಆಧಾರ; ವಿಶ್ವಾಸ ಉಳಿಸಿಕೊಳ್ಳುವುದರಿಂದಲೇ ನಿಜವಾದ ಜನ ಬೆಂಬಲದ ಸಂಪಾದನೆ. ಜನವಂಚನೆ ತಾತ್ಕಾಲಿಕ ವೈಯಕ್ತಿಕ ಲಾಭವನ್ನು ದೊರಕಿಸಿಕೊಟ್ಟೀತಲ್ಲದೆ, ಚಿರಸ್ಥಾಯಿಯಾದ ದೇಶ ಹಿತವನ್ನಲ್ಲ.

ನಿಮಗೆ ಬೇಕಾಗುವ
ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,
ಉತ್ತಮ ವಜ್ರಗಳು
ಕಾಲಿಟಿಯಲ್ಲಿ, ಸ್ಟ್ಯಾಜಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂತಾ ಕೆರಟ ತೂಕದಲ್ಲಿ
ಮುಂದಾಗಿ ನಮ್ಮಿಂದ ಪಡೆಯಬಹುದು.
ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

ಸ್ವಾತಂತ್ರ್ಯದ ರಜತೋತ್ಸವ

ಶ್ರೀ ಎಚ್. ಎ. ಪದ್ಮನಾಭ ಭಟ್ಟ
ಕೋಟ.

ಜನತೆ–ರಾಜಕಗಳ ನಡುವೆ ತಿಳುವಳಿಕೆ, ಹೊಂದಾಣಿಕೆಗಳಿಲ್ಲದೆ ಹೋದರೆ, ಸ್ವಾತಂತ್ರ್ಯದ ಅರ್ಥ ಅಪಾರ್ಥವಾಗಿ ಸರ್ವ ನಾಶಕ್ಕೆ ನಾಂದಿಯಾಗುತ್ತದೆ. ಆಳುವವರು–ಆಳಲ್ಪಡುವವರು ಬೇರೆ ಬೇರೆ ವ್ಯಕ್ತಿಗಳಾದರೂ ಅವರೆಲ್ಲರೂ ಒಂದೇ ದೇಶದ ಪ್ರಜೆಗಳು ತಾನೆ? ಇದನ್ನು ಉಭಯತರರೂ ಮರೆತರೆ, ರಾಮರಾಜ್ಯ ತ್ರೇತ್ರಾಯುಗಕ್ಕೇ ಪರಿಸೀಮಿತವಾಗುತ್ತದೆ.

ವ್ಯಕ್ತಿ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವಗಳ ಬಗ್ಗೆ, ಜನತೆಯಲ್ಲಿ ಉತ್ಕಟೇಚ್ಛೆ ಇರುವುದು ಸಹಜ. ಭಾರತದಲ್ಲೂ ಇಂತಹ ಮನೋಭಾವ ಹುದುಗಿದ್ದುದರಿಂದಲೇ ಇಂದು ನಾವು ಸ್ವತಂತ್ರರೆನಿಸಿಕೊಂಡಿದ್ದೇವೆ. ಗಾಂಧೀಜಿಯವರಂತಹ ಆದರ್ಶ ವ್ಯಕ್ತಿಗಳ ಪವಿತ್ರ ಸೇವಾ ಭಾವನೆಯ ಪರಿಣಾಮವಾಗಿ, ನಾವೂ (1947 ಆಗಸ್ಟ 15ರಿಂದ) ಇಂದಿಗೆ 24 ವರ್ಷಗಳಿಂದ ಸ್ವಾತಂತ್ರ್ಯದ ಹಾದಿಯಲ್ಲಿ ಮುನ್ನಡೆಯಲಾರಂಭಿಸಿರುವೆವು.

ನಾವು ಇಂದಿಗೆ 25ನೆಯ ಬೆಳ್ಳಿಹಬ್ಬದ ಸ್ವಾತಂತ್ರ್ಯ ದಿನಾಚರಣೆಯಲ್ಲಿದ್ದೇವೆ. ಆದರೆ ನಮ್ಮ ಸ್ವಾತಂತ್ರ್ಯದ ಸವಿಯನ್ನು ಯಾವ ರೀತಿ ಸವಿಯುತ್ತಿದ್ದೇವೆ ಎಂಬುದನ್ನು ಕೂಲಂಕಷವಾಗಿ ವಿವೇಚಿಸಿದರೆ ಇದರ ಸಿಹಿಕಹಿಗಳ ಅನುಭವದ 'ಸಿಂಹಾವಲೋಕನ'ವನ್ನು ಮಾಡಿದಂತಾಗುವುದು.

ಪ್ರತಿಯೊಬ್ಬ ವ್ಯಕ್ತಿಯೂ ನಾವು ಸ್ವತಂತ್ರರು; ನಮ್ಮದು ಸ್ವರಾಜ್ಯ, ನಾವೆಣಿಸಿದಂತೆ ಎಲ್ಲವೂ ನಡೆಯಬೇಕು. ಇಲ್ಲದಲ್ಲಿ ಬಲಪ್ರಯೋಗ ಎಂದೆಣಿಸಿದರೆ ಇದರ ಪರಿಣಾಮವೇನು? ಆಗ ನಮ್ಮ ಸ್ವರಾಜ್ಯವು ಸ್ವಾರಾಜ್ಯ (ಸ್ವರ್ಗ ರಾಜ್ಯ)ವಾಗಿ ಗೌಣವಾಗಿ ಪರಿಣಮಿಸೀತೆಂಬುದಕ್ಕೆ ಇಂದಿನ'ಬಾಂಗ್ಲಾ' ಹೋರಾಟವೇ ಒಂದು ಮುಖ್ಯ ನಿದರ್ಶನ.

ರಾಜಕವು ಜನತೆಗೆ ಹಿತಕರವಾಗಿರಬೇಕು; ಹಾಗೂ ಜನತೆಯು ರಾಜಕದೊಂದಿಗೆ ಸೇರಿ ಸಹಕಾರದ ಸಹನೆಯ ಮನೋಭಾವವನ್ನು ತಳೆದಿರಬೇಕು. ವ್ಯಕ್ತಿಗಳಲ್ಲಿ ಪರಸ್ಪರತೆ ಇರಬೇಕು. ಶಕ್ತಿಯೇ ಸರ್ವಸ್ವ ಎಂಬವಾದ ಕೆಲಗಾಲದಲ್ಲೇ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳದಿರದು.

ನನ್ನ ಕೈ ಬೀಸುವ ಸ್ವಾತಂತ್ರ್ಯ ನನಗಿದೆ. ಆದರೆ ಅದು ಇನ್ನೊಬ್ಬನ ಮೂಗಿಗೆ ತಾಗಿದರೆ ಆಗ ನನ್ನ ಸ್ವಾತಂತ್ರ್ಯ ಉಳಿಯಲಾರದಷ್ಟೆ? ಈ ತತ್ತ್ವವನ್ನು ಪ್ರತಿಯೊಬ್ಬ ವ್ಯಕ್ತಿಯೂ ಮನವರಿಕೆಮಾಡಿಕೊಳ್ಳಬೇಕಾಗಿದೆ.

ಬಡತನದ ನಿರ್ಮೂಲನವಾಗಬೇಕಾದುದೇನೋ ಸರಿ; ಆದರೆ ಅದು ಇನ್ನೊಬ್ಬನ ಸುಲಿಗೆಯ ಮೂಲಕವಲ್ಲ. ಮನೆ ಮುರಿದು, ದರೋಡೆ ಮಾಡಿ, ಬಲಾತ್ಕಾರದಿಂದ, ವಂಚನೆ, ಕೊಲೆಗಳ ಮೂಲಕ ಬಡತನವನ್ನು ನೀಗಿಸುವ ಸೋಗನ್ನು ತೋರಿಸ ತೊಡಗಿದಾಗ, ಅದನ್ನು ತಡೆಗಟ್ಟುವ ಸಾಮರ್ಥ್ಯ ರಾಜಕಕ್ಕಿರಬೇಕು.

ರಾಜಕೀಯ ವ್ಯಕ್ತಿಗಳಲ್ಲಿ ಹೆಚ್ಚಿನವರು ರಾಜ್ಯದ ಭವಿಷ್ಯವನ್ನು ಉಜ್ವಲಗೊಳಿಸುವ ಹಂಬಲದಿಂದ ತಕ್ಕ ಕೈವಾಡಗಳನ್ನು ನಡೆಸಿರುವರು. ಕಾರ್ಖಾನೆಗಳು, ಸಾರಿಗೆ ಸಂಪರ್ಕ, ಆಹಾರ, ವಿದ್ಯೆ, ಆರ್ಥಿಕ ಸ್ಥಿತಿ ಇತ್ಯಾದಿಗಳಲ್ಲಿ ನಾವಿಂದು ಪುರೋಭಿವೃದ್ಧಿಯ ಪಥದಲ್ಲಿ ಮುನ್ನಡೆಯುತ್ತಿದ್ದೇವೆ ಎನ್ನುವುದು ಸರ್ವವಿದಿತ. ಆದರೆ ಜನತೆಯಲ್ಲಿ ಅನಿವಾರ್ಯ ಕಾರಣಗಳನ್ನುಳಿದೂ, ಹಲವೆಡೆ ಅನವಶ್ಯಕವಾಗಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಮನೋಭಾವವು ಕಾಣಬರುತ್ತಿರುವುದು ತೀರಾ ಶೋಚನೀಯವಾಗಿದೆ.

ಪ್ರಜಾಪ್ರಭುತ್ವದಲ್ಲಿ ಹಿರಿಮೆ ಕಿರಿಮೆಗಳಿಗೆ ಎಡೆಯೇ ಇಲ್ಲ. ಇಂದಿಗೆ ಮುಂಬರಿದ 'ಅಮೇರಿಕ'ದಂತಹ ದೇಶಗಳಲ್ಲಿ; ಕ್ಷೌರಿಕ, ಮಡಿವಾಳ, ಗುಮಾಸ್ತ, ವ್ಯಾಪಾರಿ, ಅಧ್ಯಾಪಕ ಅಥವಾ ನ್ಯಾಯಾಧಿಕಾರಿ ಎಂಬ ಬಗ್ಗೆ ಉದ್ಯೋಗದ ದೃಷ್ಟಿಯಿಂದ ತಾರತಮ್ಯವಿಲ್ಲದಿರುವುದು ಜನಜನಿತವಾಗಿದೆ. ಆದರೆ ಭಾರತದಲ್ಲಿ ಇಂದಿಗೆ ಹೆಚ್ಚಿನ ಅಧಿಕಾರಿಗಳು ತಮ್ಮ ಅಧಿಕಾರದ ದುರುಪಯೋಗ ಮಾಡುತ್ತಿರುವುದು ತೀರಾ ವಿಷಾದಕರವಾಗಿದೆ. ಮುಖ್ಯವಾಗಿ ಸಾರ್ವಜನಿಕ ರಂಗಗಳಲ್ಲೂ ಯಾವನೇ ಒಬ್ಬ ಕಾರ್ಯಾರ್ಥಿಯಾದ ವ್ಯಕ್ತಿಗೆ ತಕ್ಕ ಸಹಕಾರವನ್ನು ಸೂಕ್ತ ರೀತಿಯಲ್ಲಿ ನೀಡದೆ ಆತನನ್ನು ಸತಾಯಿಸುವ ಹಾಗೂ ಆತನ ಮುಂದೆ ತನ್ನ ವ್ಯಕ್ತಿತ್ವವನ್ನು ತೋರುವ ಹಿರಿಮೆಯ ಮನೋಭಾವವೇ ಅಧಿಕಾರಿ ವರ್ಗದವರಲ್ಲಿ ಕಾಣಬರುತ್ತಿದೆ.

ಕಾರ್ಯಾರ್ಥಿಯಾಗಿ ಬಂದ ವ್ಯಕ್ತಿಯ ಮುಂದೆ ಅನಾದರದ ಮನೋಭಾವವನ್ನು ಬೀರಿ ಆತನಿಂದ ಯಾವುದೇ ರೀತಿಯ ಪ್ರತಿಫಲವನ್ನು ಪಡೆಯುವ ಅವ್ಯಕ್ತ ಹಾಗೂ ವ್ಯಕ್ತಮನೋಭಾವವೇ ಇಂದಿನ ಲಂಚಗುಳಿತನದ ಬುನಾದಿಯಾಗಿದೆ. ಇಂತಹ ಮನೋಭಾವವು ಸಾಮಾನ್ಯರಿಂದ ಅಸಾಮಾನ್ಯರವರೆಗಿನ ಎಲ್ಲಾ ಅಧಿಕಾರಿ ವರ್ಗದವರಲ್ಲೂ ಇಲ್ಲದಂತಾಗಿ ಸರ್ವಸಮಾನತೆಯ ಮನೋಭಾವವು ಬೆಳೆದರೆ ಪ್ರಜಾ ವರ್ಗದ ಕ್ಷೇಮ, ಪ್ರಜಾ ಕೋಟಿಯ ವ್ಯಕ್ತಿ ಸ್ವಾತಂತ್ರ್ಯಗಳು ಬೆಳ್ಳಿಯಂತೆ ಇನ್ನಷ್ಟು ಬೆಳಗುವಂತಾಗಬಹುದು.

ಇನ್ನೊಂದು ರೀತಿಯಲ್ಲಿ ಕಂಡರೆ ಪ್ರಜೆಗಳೂ ತಿದ್ದಿಕೊಳ್ಳಬೇಕಾದ ಅಂಶವಿದೆ. ಅಧಿಕಾರಿ ವರ್ಗದವರ ಸ್ಥಾನಮಾನಗಳನ್ನು

(ಹತ್ತೊಂಭತ್ತನೇ ಪುಟ ನೋಡಿರಿ)



ಸಣ್ಣ ಕೈಗಾರಿಕೋದ್ಯಮಿಗಳು, ವಾಣಿಜ್ಯೋದ್ಯಮಿಗಳು,
ವ್ಯಾಪಾರಿಗಳು, ರಫ್ತುದಾರರು ವ್ಯವಸಾಯಕರು,
ತಾಂತ್ರಿಕ ನಿಪುಣರು ಮತ್ತು ಇತರ ಸ್ವಂತ ಉದ್ಯಮವುಳ್ಳವರು,
ಮೋಟಾರು ವಾಹನಗಳನ್ನು ಕೊಳ್ಳ ಬಿಚ್ಛಿಸುವರೆಲ್ಲರೂ
ನಮ್ಮಿಂದ ಆರ್ಥಿಕ ನೆರವನ್ನು ಪಡೆದು ತಮ್ಮ ವೃತ್ತಿಯಲ್ಲಿ ಹೆಚ್ಚಿನ
ಪ್ರಗತಿಯನ್ನು ಸಾಧಿಸಬಹುದು.

ಇತರೇ ಸೌಲಭ್ಯಗಳು

ಉಳಿತಾಯ ಖಾತೆಗಳು, ಫಿಕ್ಸೆಡ್ ಡಿಪಾಜಿಟ್ಟುಗಳು,
ಕ್ಯುಮುಲೇಟಿವ್ ಡಿಪಾಜಿಟ್ಟುಗಳು, ಜನತಾ ಡಿಪಾಜಿಟ್ಟುಗಳು
ಸಾಲದ ಅಂತರ್ದೇಶೀಯ ಪತ್ರಗಳು, ಇನ್‌ಶ್ಯೂರೆನ್ಸ್
ಪ್ರೀಮಿಯಂ ಕಟ್ಟುವಿಕೆ, ಸೇಫ್ ಡಿಪಾಜಿಟ್ ಲಾಕರ್‌ಗಳು
ಹಾಗೂ ಯಥಾವತ್ತಾಗಿ ಲಭಿಸುವ ಇತರ ಬ್ಯಾಂಕ್
ಸೌಲಭ್ಯಗಳು.

—ನಿಮ್ಮ ಗೆಳೆತನದ ಬ್ಯಾಂಕ್

ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ ಲಿಮಿಟೆಡ್

(ಸ್ಥಾ: 1906) ರಿಜಿಸ್ಟರ್ಡ್ ಆಫೀಸ್: ಉಡುಪಿ ಆಡಳಿತ ಕಛೇರಿ: ಮಂಗಳೂರು-1 ಎಮ್. ಆರ್. ಕಾಮತ್ ಛೇರ್ಮನ್

mca/927-M KAN

ಶ್ರೀ ತದ್ದಲಸೆ ವಿಘ್ನೇಶ್ವರ ಶರ್ಮಾ, ಶಿರಸಿ.

ನಮ್ಮ ಜ್ಞಾನ ವಿಕಾಸದ ಸಾಧನ-ಸಾಹಿತ್ಯ

ಸಾಹಿತ್ಯ ಜೀವನಕ್ಕೆ ನಂದಾದೀಪ. ಅದರ ಬೆಳಕಿನಲ್ಲಿ ನಮ್ಮ ಆದರ್ಶನರಸಿ ಅರಗಿಸಿಕೊಳ್ಳುವ ಕಾರ್ಯ ನಡೆಸಬೇಕು. ಸಾಹಿತ್ಯವನ್ನು ಕೂಡಿಸಿ ಕಲೆಹಾಕುವುದೂ ಕಲೆ, ಅದನ್ನು ಓದಿ ಅಧ್ಯಯನಮಾಡಿ ಪ್ರತಿಭೆ ಗಳಿಸುವುದು ಜೀವನಕ್ಕೆ ಚಿತೆ.

ಪ್ರಪಂಚ ಪರಿವರ್ತನಾಶೀಲವುಳ್ಳದ್ದಾಗಿರುವದರಿಂದ ದಿನದಿನಕ್ಕೂ ಹೊಸ ಹೊಸ ಆವಿಷ್ಕಾರಗಳನ್ನು ಹೊಂದುತ್ತಲೇ ಬಂದಿದೆ. ನಿನ್ನೆಯದು ಇಂದು ಹಳತಾಗಿ ಹೊಸತರ ಉದಯಕ್ಕೆ ಪ್ರೇರಕವಾಗಿ ನವೀಕರಣಕ್ಕೆ ಸಾಗುವ ಸಾಧ್ಯತೆಯ ಜಿಜ್ಞಾಸೆ ಮೀಮಾಂಸೆಗಳು ನಡೆಯುತ್ತಲೇ ಬಂದಿದೆ. ಈ ಕಾರಣದಿಂದಾಗಿ ನಮ್ಮ ನಾಗರಿಕತೆ, ಸಂಸ್ಕೃತಿ ವಿಕಾಸ ಹೊಂದುತ್ತ ಬಂದುದನ್ನು ಕಾಣಬಹುದಾಗಿದೆ.

ನಮ್ಮ ಜೀವನದ ಸಾವಿರಾರು ವರ್ಷಗಳ ಹಿಂದಿನ ಸ್ಥಿತಿ-ಅವು ಬೆಳೆದು ಬಂದ ಗತಿ' ಮುಂದಿನ ಲೋಕಾಪೇಕ್ಷೆಯ ಗಮನಕ್ರಮ, ಇವುಗಳ ಸುಪ್ತಜಾಗೃತದ ಸೂಕ್ಷ್ಮ ವಿಚಾರವನ್ನವಲೋಕಿಸಿದರೆ ಮಾನವನು ವೈವಿಧ್ಯಮಯದಿಂದ ವರ್ಣಮಯ ಸಿದ್ಧಾಂತದ ಜಗತ್ತಿಗೆ ಸಾಗಿ ಬಂದದ್ದು ಸ್ಪಷ್ಟ ಕಾಣುತ್ತದೆ. ಕಾಡುತನದಿಂದ ನಾಡುತನಕ್ಕೆ ಬಂದ ಈ ಅವಸ್ಥಾಂತರದ ವ್ಯವಸ್ಥೆಯಲ್ಲಿ ಹಲವು ಆವಿಷ್ಕಾರಗಳು ಉಂಟಾದುದನ್ನು ಕಾಣಬಹುದಾಗಿದೆ

ವಿಕಾಸದ ಹಾದಿಯಲ್ಲಿ

ಮಾನವ ಕುಲ ನೆಲದಲ್ಲಿ ಹುಟ್ಟಿದಾರಭ್ಯ ಲಕ್ಷಾಂತರ ವರ್ಷಗಳಿಂದಲೂ ಅಕ್ಷರಾಭ್ಯಾಸದ ವಿಷಯದತ್ತ, ವಿಚಾರಶೀಲತೆಯತ್ತ ಸಾಗುತ್ತಬಂದು ತನ್ನ ಬಾಳಿಗೊಂದು ಬೆಳಕು, ಬುನಾದಿಯನ್ನು ಸ್ಥಾಪಿಸುವಲ್ಲಿ ಪ್ರಯತ್ನ ನಡೆಸಿದ ಸಂಗತಿ ಇತಿಹಾಸಗಳಿಂದ ವ್ಯಕ್ತವಾಗುತ್ತದೆ. ತನ್ನ ಭಾವನೆಯನ್ನು ಪ್ರಕಟೀಕರಿಸುವಲ್ಲಿ ಸಾಧನೆ—ಸಂಕಲನೆ—ಸಾಹಿತ್ಯವನ್ನು ಸಂಗ್ರಹಿಸುವ ಪ್ರವೃತ್ತಿ ಅಂದಿನಿಂದಲೇ ಆರಂಭವಾಯಿತೆನ್ನಲಡ್ಡಿಯಿಲ್ಲ.

ಇಲ್ಲಿ ಭಾವನೆಯ ಆವಿರ್ಭಾವಕ್ಕೆ ಭಾಷೆ ಬೇಕೆನಿಸಿದರೆ ಭಾಷೆಯನ್ನು ಮನಸ್ಸಿಗೆ, ಬುದ್ಧಿಗೆ ಗೋಚರಿಸುವಂತೆ ಸೂಚಿಸಲು ಲಿಪಿಯೊಂದರ ಆವಶ್ಯಕತೆಯೂ ಆಯಿತು. ಈ ಪ್ರಶ್ನೆ ಮಾನವನ ಪ್ರಗತಿಶೀಲತೆಯ ತಳಹದಿಯಾಗಿ ಬೆಳೆದು ಬಂದಿತು. ಮನುಕುಲಕ್ಕೆ ದೀರ್ಘ ವಯಸ್ಸಾಗಿದೆಯೆಂದು ಅಂದಾಜು ಮಾಡಿದರೂ ಮಾತನಾಡಲು ಕಲಿತು ಒಂದು ಲಕ್ಷ ವರ್ಷಗಳು ಕಳೆದಿವೆಯೆಂತಲೂ ಸುಮಾರು ಹತ್ತು ಸಾವಿರ ವರ್ಷಗಳ ಇತ್ತೀಚಿನ ಲಿಪಿಗಳು ಸ್ಪಷ್ಟವಾಗಿ ತಿಳಿದಿವೆಯೆಂತಲೂ ಕೆಲವರು ಅಂದಾಜು ಮಾಡುತ್ತಾರೆ. ಏನೇ ಇದ್ದರೂ ವೈಚಾರಿಕ ವಿಕಾಸದಲ್ಲಿ ಮಾನವನು ಮುನ್ನಡೆಯುತ್ತ ಬಂದಿನ್ನಾನೆಂಬುದು ನಿರ್ವಿವಾದ.

ಗುರುಕುಲಗಳು

ಈ ವಿಚಾರಶೀಲತೆಯ ದೀರ್ಘ ಇತಿಹಾಸದಲ್ಲಿ 'ಗುರುಕುಲ'ವು ಒಂದು ಮೈಲಿಗಲ್ಲು. ಮಾನವನಿಗೆ ಬದುಕು, ಆದರ್ಶಗಳು, ವುಗಳ ಪರಿ—ಗುರಿಗಳ ಅರಿವಾದೊಡನೆ ಅದಕ್ಕೊಂದು ಸುಸಂಬದ್ಧ ಯೋಜನೆ ರೂಪುಗೊಳ್ಳಬೇಕಾಯಿತು. ಪ್ರಕೃತಿಯಲ್ಲಿ ಸುಪ್ತವಾದುದನ್ನು ಶೋಧಿಸಿ–ಸಾಧಿಸಿ ಇತರ ಪ್ರಯೋಜನವನ್ನು ಪಡೆಯುವದಕ್ಕೆ ಪ್ರಯತ್ನ ನಡೆಯಿತು. ಈ ಪ್ರಯತ್ನದ ಆಶೆ-ಆಕಾಂಕ್ಷೆಗಳು, ವಿಚಾರ—ಆಚಾರಗಳು, ವಿವಾದ–ವಿಕಾಸಗಳು, ಇವುಗಳಿಗೆಲ್ಲ ಗುರುಕುಲಗಳು ಆಶ್ರಯಗಳಾದವು ಹಾಗೆಯೇ ಅಂದಿನ ಶಿಕ್ಷಣ ಕೇಂದ್ರಗಳೂ ಆದವು.

ವಿಚಾರವಂತರು, ಸಿದ್ಧ ಪುರುಷರು ಅಲ್ಲಿ ಬರತಕ್ಕ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಕಾರ್ಯ ಮಾಡತೊಡಗಿದರು. ಅವರವರ ಅಭಿರುಚಿಗೆ ತಕ್ಕಂತೆ ರುಚಿಯಾದ ರೀತಿಯಲ್ಲಿ ನೀತಿ ಬೋಧನೆ ನಡೆಯುತ್ತಿತ್ತು. ಶಿಕ್ಷಣಕ್ಕಾಗಿ ಬರತಕ್ಕವರನ್ನು ಪರೀಕ್ಷಿಸಿ ಅವರ ಹೃದಯವನ್ನು ನಿರೀಕ್ಷಿಸಿ ಸಂಸ್ಕಾರ ನೀಡುವ ಕಾರ್ಯವನ್ನು ಗುರುಕುಲದ ಕುಲಪತಿಗಳು ನಡೆಸುತ್ತಿದ್ದರು. ಕೆಲವೊಂದು ಗುರುಕುಲಗಳಲ್ಲಿ ಹತ್ತು ಸಾವಿರಕ್ಕೂ ಹೆಚ್ಚಿಗೆ ಮುನಿಗಳು ಶಿಕ್ಷಣ ಪಡೆಯುತ್ತಿದ್ದರೆಂದು ಹೇಳಲಾಗಿದೆ.

ಮುನೀನಾಂ ದಶ ಸಾಹಸ್ರಂ ಯೋನ್ನ
ದಾನಾದಿ ಪೋಷಣಾತ್...........
ಸಕುಲಪತಿರಿತ್ಯಭಿಧೀಯತೇ

ಈ ಉಕ್ತಿಯಿಂದ ಹತ್ತು ಸಾವಿರ ಮುಖಗಳಿಗೆ ಅನ್ನದಾನಾದಿ ಪೋಷಣೆಯಿಂದ ವಿದ್ಯಾದಾನಕ್ಕೆ ವ್ಯವಸ್ಥೆ ಮಾಡ ತಕ್ಕವರನ್ನು 'ಕುಲಪತಿ' ಯೆಂದು ಕರೆಯಲಾಗುತ್ತಿತ್ತೆಂದು ತಿಳಿಯಬಹುದು.

ನಾಲಂದಾ—ತಕ್ಷಶಿಲೆ

ಭಾರತದಲ್ಲಿ ಅತ್ಯಂತ ಪ್ರಸಿದ್ಧ ಗುರುಕುಲಗಳೆಂದರೆ ನಾಲಂದಾ–ತಕ್ಷಶಿಲೆಗಳು. ಇಲ್ಲಿ ಲಕ್ಷಾಂತರ ಜನರು ಅಭ್ಯಸಿಸಿ ಜ್ಞಾನವಂತರಾಗಿ ತೆರಳಿದ್ದಾರೆ. ಅಷ್ಟೇ ಅಲ್ಲ, ಗ್ರಂಥಗಳನ್ನು ಸಿದ್ಧಗೊಳಿಸುವ ದೊಡ್ಡ ಕಾರ್ಯ ಅಲ್ಲಿಂದಲೇ ಆರಂಭವಾಯಿತೆಂದೂ ಹೇಳುತ್ತಾರೆ. ಅಲ್ಲಿ ಅಭ್ಯಸಿಸಿದ ಪರದೇಶದವರೂ ಅಲ್ಲಿಂದ ಕೆಲವು ಗ್ರಂಥಗಳನ್ನು ಪಡೆದರೆಂದೂ ಹಾಗೆಯೇ ವಿದೇಶಗಳಿಗೆ ಅವು ಹೋದುವೆಂದೂ ತಿಳಿದು ಬರುತ್ತದೆ.

(ಹದಿನೆಂಟನೇ ಪುಟ ನೋಡಿರಿ)

ನಿಮ್ಮ ಕೈಯಲ್ಲಿ ಉಳಿಯುವ ಕೊನೆಯ ರೂಪಾಯಿಯ ಬೆಲೆ ಬಲ್ಲಿರಿ ?



ರೂಪಾಯಿ ಒಂದಾದರೂ ಅದರ ಬೆಲೆ ಎಷ್ಟೋ ಪಾಲು ಮಿಗಿಲು. ತಿಂಗಳ ಉಳಿದ ದಿನಗಳ ಉದ್ದಕ್ಕೂ ಅದೊಂದೇ ರೂಪಾಯಿ ನಿಮ್ಮ ಪಾಲಿಗೆ ದೊರಕುವುದರಿಂದ ನೀವು ಸಹಜವಾಗಿ ಅದನ್ನು ಜಾಗ್ರತೆಯಿಂದ ಬಳಸಲು ಇಚ್ಛಿಸುವಿರಿ; ಹಾಗೂ ಅದನ್ನು ಅತೀ ಹೆಚ್ಚಿನ ಉಪಯೋಗಕ್ಕಾಗಿ ವಿನಿಯೋಗಿಸುವಿರಿ. ಅಂದರೆ ಅದರ ಬೆಲೆ ಒಂದು ರೂಪಾಯಿಯಾಗಿರದೆ ಬಹಳಷ್ಟು ಪಾಲು ಹೆಚ್ಚಾಗಿ ತೋರುವುದು.

ಆದಾಯ ನಿಮ್ಮ ಕೈಗೆ ಬಂದ ದಿನದಿಂದಲೇ ನಿಮ್ಮ ಪ್ರತಿಯೊಂದು ರೂಪಾಯಿಯನ್ನು ಕೊನೆಯ ರೂಪಾಯಿಯಾಗಿ ಯಾಕೆ ನೀವು ಮಾಡಲಾರಿರಿ? ಹಾಗೆ ಮಾಡಲು ತೀರಾ ಸರಳ ವಿಧಾನವಿದೆ: ಖರ್ಚಿನಲ್ಲಿ ಮಿತಿ, ವಿವೇಕಪೂರ್ಣ ಖರ್ಚು. ನೀವು ಜಾಗ್ರತೆಯಾಗಿ ವೆಚ್ಚಮಾಡುವ ಪ್ರತಿ ರೂಪಾಯಿಯ ಬೆಲೆ ಆ ಮೂಲಕ ಏರುವಂತಾಗುವುದು.

ಸಿಂಡಿಕೇಟ್ ಬ್ಯಾಂಕಿನಲ್ಲಿ ಉಳಿತಾಯ ಖಾತೆಯೊಂದನ್ನು ತೆರೆದು ನಿಮ್ಮ ವರಮಾನದ ಕೊಂಚ ಭಾಗವನ್ನು ಅದರಲ್ಲಿ ಕ್ರಮವಾಗಿ ಕೂಡಿಡುತ್ತಾ ಬನ್ನಿರಿ.

FAITHFUL FRIENDLY

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಚೇರಿ:	ಶಾಖೆಗಳು :	ಕೆ. ಕೆ. ಪೈ
ಮಣಿಪಾಲ	490 ಕ್ಕೂ ಮಿಕ್ಕಿವೆ	ಕಸ್ಟೋಡಿಯನ್

ವಿದ್ವಾನ್ ಕೆ. ವೆಂಕಟ್ರಾಯಾಚಾರ್ಯ, ಸುರತ್ಕಲ್ಲು.

'ಮುಯ್ಯವಟಿ' ವೆಂಕಟರಮಣಯ್ಯನ ಕೃತಿಗಳು

ಮುಯ್ಯವಟಿಯ ವೆಂಕಟರಮಣಯ್ಯನು ಸುರತ್ಕಲ್ಲು ಬಳಿಯ ಈಗಿನ ಮೈಪಾಡಿಗೆ ಸೇರಿದವನು. ಈತನ ಹಲವು ಕೃತಿಗಳಲ್ಲಿ ಯಕ್ಷಗಾನ ಪ್ರಹ್ಲಾದ ಚರಿತ್ರೆ ಪಂಡಿತ ಪಾಮರ ಪ್ರಿಯವಾಗಿದೆ. ಕೂಟ–ಬಯಲಾಟಗಳಲ್ಲಿ ಅದು ಲಕ್ಷಾಂತರ ಪ್ರಯೋಗಗಳನ್ನು ಕಂಡಿದೆ, ಕಾಣುತ್ತಿದೆ.

'ಮುಯ್ಯರವಟಿ– ಮುಯ್ಯರ ಪಾಡಿ– ಮೈಪಾಡಿ'ಯೆಂದರೆ, ಸುರತ್ಕಲ್ಲು ಕೇಂದ್ರದ, ಪಣಂಬೂರು ಮಾಗಣೆಯ ಗ್ರಾಮಗಳಲ್ಲೊಂದಾದ ಕುಳಾಯಿಯ ಒಂದು ವಿಭಾಗವಾಗಿದೆ. ಮಂಗಳೂರಿಂದ ಉಡಗು 7¼ಮೈಲಿಂದ 8½ ಮೈಲಿನ ತನಕ ಮಾರ್ಗದ ಪಡುಬದಿಗೆ ಮೈಪಾಡಿಯೆನ್ನುತ್ತಾರೆ, ಮಾರ್ಗದ ಮೂಡುಬದಿಗೆ ಕುಳಾಯಿ ಎನ್ನುತ್ತಾರೆ.ಪಡುವಣ ಬಯಲು ಗದ್ದೆಗಳ ಪಡುವಲಲ್ಲಿ ಚಿತ್ರಾಪುರವೆನ್ನುತ್ತಾರೆ. (ಈಗ 3 ಗ್ರಾಮಗಳೂ ಒಂದಾಗಿ ಕುಳಾಯಿಯಲ್ಲಿ ಸೇರಿವೆ.)

'ಮುಯ್ಯ'ರೆಂದರೆ ಇಲ್ಲಿಯ ಪ್ರಮುಖ ಕೋಟ ಬ್ರಾಹ್ಮಣ ಮನೆತನದ ಹೆಸರು. 'ಮುಯ್ಯ' ಮೊದಲಾದ ಕೋಟ ಬ್ರಾಹ್ಮಣ ವರ್ಗದವರೆಲ್ಲರೂ ಕುಂದಾಪುರದಿಂದ ಇಲ್ಲಿಗೆ ಬಂದವರೆಂದು ತಿಳಿಯುತ್ತದೆ. ಇಲ್ಲಿ ಆರೇಳು ಮೈಲು ಪ್ರದೇಶದಲ್ಲಿರುವ 'ಕೋಟೇಶ್ವರ' ಬ್ರಾಹ್ಮಣರೂ ಕುಂದಾಪುರದ 'ಕೋಟೇಶ್ವರ'ದಿಂದ ಬಂದವರೆಂದೂ ತಿಳಿಯುತ್ತದೆ. ಈ ಕವಿ ಕೋಟೀಶ್ವರ ವರ್ಗದವನು.

'ಮುಯ್ಯರ ಪಾಡಿ' ಹಾಗೂ ಶ್ಯಾಂಭಟ್ಟರ ಪಳಚಿಲುಗಳು ಒತ್ತಿನಲ್ಲಿ ಇರುವವು. 'ಮುಯ್ಯರ ವಟಿ'ಯ ವೆಂಕಟರಮಣಯ್ಯನವರು ಈ ಶತಕದಲ್ಲಿ ಸಂದ ಕವಿಗಳೊಬ್ಬರು (ರಾಷ್ಟ್ರಪ್ರಶಸ್ತಿ ವಿಜೇತರಾದ, ವಿದ್ಯಾದಾಯಿನೀ ಹೈಸ್ಕೂಲಿನ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ಎಂ. ವಾಸುದೇವರಾಯರು ಈ ಕವಿಯ ಕುಟುಂಬದವರೆನ್ನಲು ಹೆಮ್ಮೆಯೆನ್ನಿಸುತ್ತದೆ.)

'ಮುಯ್ಯವಟಿ' ವೆಂಕಟರಮಣಯ್ಯನವರ ಆರು ಕೃತಿಗಳಲ್ಲಿ ಮೂರು ಯಕ್ಷಗಾನ ಪ್ರಸಂಗಗಳು, ಮೂರು ಖಂಡ ಕಾವ್ಯಗಳು ಸೇರಿವೆ. ೧. ಪ್ರಹ್ಲಾದ ಚರಿತೆ, ೨ ಮದಾಲಸಾ ಕಲ್ಯಾಣಗಳು (ಯಕ್ಷಗಾನಗಳು) ಉಡುಪಿಯಲ್ಲಿ ಅಚ್ಚಾದವು. ೩ನೆಯ ಶೂರ ಪದ್ಮಾಸುರ ಕಾಳಗದ ಹಸ್ತಪ್ರತಿಯು ಎಡನೀರು ಹೈಸ್ಕೂಲಿನಲ್ಲಿರುವ ಶ್ರೀ ಪುಂಡೂರು ವೆಂಕಟರಾಜಪುಣಿಂಚತ್ತಾಯರಲ್ಲಿದೆ, ಅಚ್ಚಾಗಿಲ್ಲ.೧ ವೆಂಕಟ ಗಿರಿಮಹಾತ್ಮ್ಯೆ ೨. ಕಾವೇರೀ ಮಹಾತ್ಮ್ಯೆಗಳು ಉಡುಪಿಯಲ್ಲಿ ಅಚ್ಚಾಗಿವೆ. ೩ನೆಯ ಅನಂತವ್ರತ ಕತೆಯ ಹಸ್ತ ಪ್ರತಿ ಶ್ರೀ ಎಂ. ವಾಸುದೇವರಾಯರಲ್ಲಿ ದೊರಕಿ, ಸುರತ್ಕಲ್ಲು 'ವಿಜಯ ಸಾಹಿತ್ಯ ಮಾಲೆ'ಯಲ್ಲಿ ಪ್ರಕಟವಾಗಿದೆ.

ಈ ಕವಿಯು ಕುಂಬಳೆಯ ಮಾಯಿಪ್ಪಾಡು ಅರಸುಮನೆಯಲ್ಲಿ ಶ್ಯಾನುಭಾಗನಾಗಿ, ಅಡುಗೆಯವನಾಗಿ (ಅಟೀಲುಗಾರನಾಗಿ) ಹಲವು ವರ್ಷ ಇದ್ದನು. ಆದರೆ, ಜೀವಿತದ ಕೊನೆಯ ಕೆಲವು ವರ್ಷಗಳಲ್ಲಿ (1931-6ರಲ್ಲಿ) ಹಟ್ಟೂರಿನ ತನ್ನ ಪೂರ್ವಿಕರ ಮನೆಯಲ್ಲೇ ಇದ್ದನು. ಇಲ್ಲಿಯ ಮಿತ್ರಗೋಷ್ಠಿ'ಯ ಹಲವು ಹಪ್ತೆಗಳ ಸಭೆಗಳಲ್ಲಿ ಭಾಗವಹಿಸಿದ್ದುದಕ್ಕೆ 'ಸಹಿ'ಗಳೇ ಆಧಾರಗಳಾಗಿವೆ. ಈ ಕೆಳಗೆ ಬರೆದಂತೆ, ಇಲ್ಲಿಯ ಆಸುಪಾಸಿನ ಹಲವು ದೇವರ ಹೆಸರುಗಳ ಉಲ್ಲೇಖಗಳೂ ಇವನ ಕೃತಿಯಲ್ಲಿವೆ. (ಈತ 'ಮಾಯಿಪ್ಪಾಡಿ'ಯಲ್ಲಿದ್ದುದರಿಂದಲೆ 'ಮುಯ್ಯವಟಿ'ಯೆಂದು ತನ್ನ ಕೃತಿಯಲ್ಲಿ ಹೇಳಿರುತ್ತಾನೆಂದೂ; ಈತನು ಕುಂಬಳೆಯ—ಕಾಸರಗೋಡಿನ—ಕವಿಗಳಲ್ಲಿ ಲೆಕ್ಕಿಸ ತಕ್ಕವನೆಂದೂ ಶ್ರೀ ಪಿ. ವೆಂಕಟರಾಜ ಪುಣಿಂಚತ್ತಾಯರ ವಾದವಿದೆ. 'ಯಕ್ಷಗಾನ' ಮಾಸ ಪತ್ರಿಕೆಯಲ್ಲಿ ಮತ್ತು ಶ್ರೀ ಬಲಿಪ ನಾರಾಯಣ ಭಾಗವತರ ಸ್ಮಾರಕ ಗ್ರಂಥದಲ್ಲಿರುವ ಶ್ರೀಯುತರ ಲೇಖನಗಳನ್ನು ನೋಡಿರಿ.) 'ಮುಯ್ಯವಟಿ'ಯೆಂಬುದಕ್ಕೂ 'ಮಾಯಿಪ್ಪಾಡಿ'ಗೂ ಶಬ್ದರೂಪದಲ್ಲಿ ಆದಾವ ಸಂಬಂಧವೂ—ಸಾಮೀಪ್ಯವೂ– ಇರುವುದಿಲ್ಲೆಂದು, ನಾನೂ 'ಯಕ್ಷಗಾನ' ಪತ್ರಿಕೆಯಲ್ಲಿ ಬರೆದಿದ್ದೆನು. ಶ್ರೀ ಶಿವರಾಮ ಕಾರಂತರ 'ಯಕ್ಷಗಾನ ಬಯಲಾಟ'ದಲ್ಲಿ ಈ ಕವಿಯ 'ಪ್ರಹ್ಲಾದ ಚರಿತೆ'ಯ ಉಲ್ಲೇಖವಿದೆ. (ಮೈ ಪಾ ರ್ ಡಿ ಯು ಕೊ ಲ್ಲೂ ರ ಬ ಳಿ ಯ ದೆಂ ದು ಶ್ರೀ ಕಾರಂತರು ಮೊದಲ ಆವೃತ್ತಿಯಲ್ಲಿ ಬರೆದಿದ್ದರು; ಈ ಬಗ್ಗೆ ತಕ್ಕ ಸವಿವರ ಲೇಖನಗಳು ಪ್ರಕಟವಾದಾಗ, ಎರಡನೆಯ ಆವೃತ್ತಿಯಲ್ಲಿ, ಮೈಪಾರ್ಡಿಯು ಪಣಂಬೂರಿನ ಒಂದು ಭಾಗವೆಂಬ ಬಗೆ ಎತ್ತಿದ್ದಾರೆ).

ಕವಿಕೃತ ದೇವತಾ ಸ್ತುತಿಗಳು;ಕವಿಯ ಮುದ್ರಿಕೆಗಳು: ಈತನು ತನ್ನ ಹುಟ್ಟೂರಿನ ಕುಲದೇವತೆಯಾದ ಚಿತ್ರಾಪುರದ ದುರ್ಗಾಪರಮೇಶ್ವರಿಯ ಸ್ತುತಿಯನ್ನು ಮಾಡಿದುದು ಕಾಣುತ್ತದೆ:

'ಕೃತ್ತಿವಾಸನ ಭಜಿಸಿ ವಿಧಿಗಡ್ಡ ಬೆಳುತ|ವೃತ್ರರಿಪು ಮೊದಲಾದ ದಿಗಧಿಪರ ಕೊಂಡಾಡಿ| ಚಿತ್ರಪುರ ದುರ್ಗಾಂಬೆಯ ಮ್ಮನಂ ಬಲಗೊಳ್ಳುತೀ ಕೃತಿಯ ವರ್ಣಿಸುವೆನು' (ಪ್ರಹ್ಲಾದ ಚರಿತೆ) ಇದೀಗ ಎರಡನೆಯ ಬಾರಿ ಉಡುಪಿಯಲ್ಲಿ ಅಚ್ಚಾದ ಈ ಕೃತಿಯಲ್ಲಿ ಈ ಪದ್ಯವೇ ಇಲ್ಲ!

'ಚಿತ್ರಾಪುರದಲ್ಲಿ ಮುಖ್ಯವಾಗಿ ಇನ್ನೊಂದು ಆರಾಧ್ಯ ಮೂರ್ತಿಯೆಂದರೆ, 'ಕಾಳೀಯಮರ್ದನ ಕೃಷ್ಣ' ಅದೇ, ಕವಿ ವೆಂಕಟರಮಣಯ್ಯನ ಇಷ್ಟದೇವತೆಯೂ ಹೌದು. ಆವನ 'ಮದಾಲಸಾಕಲ್ಯಾಣ'ದಲ್ಲಿ, 'ಗಿರಿಧರಂ ಧ್ಯಾಯಾಮಿ ಚಿತ್ತೇಸದಾ' ಎಂಬುದಾಗಿಯೂ, 'ಶೂರ ಪದ್ಮಾಸುರ ಕಾಳಗ'ದಲ್ಲಿ 'ದೇವಕೀ ಜಾತ ಕೃಷ್ಣ'ನ ಸ್ತುತಿರೂಪವಾಗಿಯೂ ಹಾಡಿದುದು ಕಾಣುತ್ತದೆ. 'ಅನಂತವ್ರತ ಕತೆ'ಯಲ್ಲೂ, 'ನಂದಕುಮಾರ ಕೊಡು ಕೊಡುಯೆನಗೆ ಸುಮತಿಯ' ಎಂದೂ ಇತರ ಕೃತಿದ್ವಯಗಳಲ್ಲಿ ಪರ್ಯಾಯವಾಗಿಯೂ ಈ ಕೃಷ್ಣನ ಸ್ತುತಿಯಿದೆ.

'ಆವನ ಪ್ರತಿಯೊಂದು ಕೃತಿಗಳ ಕೊನೆಯಲ್ಲೂ ಅವನ ಕವಿ ಪರಿಚಯದ ಮುದ್ರಿಕೆಯಿರುವುದನ್ನು ನಾವು ಗುರುತಿಸಬಹುದು:

'ಮುಯ್ಯವಟಿಯೊಳಗಿರುವ ಪರಿಲ ತಿ|ಮ್ಮಯ್ಯ ಪುತ್ರನು ಮಾಡಿದೀಕೃತಿ' (ಪ್ರ. ಚ.) ಆದರೆ, ಈ ಬಾರಿಯ ಉಡುಪಿಯ ಮುದ್ರಣದಲ್ಲಿದೆ: 'ಪೃಥ್ವಿಯೊಳು ವರ ಮುಯ್ಯವಟಿಯೊಳಗರ್ತಿಯಲಿ ನೆಲಸಿರ್ಪ ವಿಶ್ವಾ|ಮಿತ್ರ ಗೋತ್ರಜ ದ್ವಿಜ ತಿಮ್ಮಯ್ಯನ ಪುತ್ರ ವೆಂಕಟರಮಣನು'

'ಮುಯ್ಯವಟಿಯೊಳಗಿರುವ ವರ ತಿ|ಮ್ಮಯ್ಯನಾತ್ಮಜನಾದ ವೆಂಕ|ಣ್ಣಯ್ಯನಿದ ವಿರಚಿಸಿದ ಮನುಮಥನಯ್ಯನೊಲಿದು' (ಮ. ಕ.)

"ಪೃಥ್ವಿಯೊಳು ಪಣಂಬೂರೊಳ್ ರುತಿಹ| ಧಾತ್ರಿಸುರ ತಿಮ್ಮಯ್ಯನೆಂಬನ|ಪುತ್ರ ವೆಂಕಟರಮಣ ಸಂತಸವೆತ್ತು ಹರಿಯೂ" (ಶೂ. ಪ. ಕಾ).

"ಪೃಥ್ವಿಯೊಳು ಮುಯ್ಯವಟಿಯೆಂಬ ಗ್ರಾಮದಿ ನೆಲಸಿ| ಸುತ್ತಿರ್ದ ತಿಮ್ಮಯ್ಯನೆನುವ ಧಾರಿಣಿಸುರನ|ಪುತ್ರ ವೆಂಕಣ್ಣಯ್ಯನಾದ ನಾನೀ ಕೃತಿಯ ವಿರಚಿಸುತ" (ವೆಂ. ಮ).

'ಮುಯ್ಯವಟಿಯೊಳಗಿರುವ ವರತಿ|ಮ್ಮಯ್ಯನಾತ್ಮಜನಾದ ವೆಂಕ|ಣ್ಣಯ್ಯನೆನ್ನುವ ದ್ವಿಜನು ನಾನಾ' (ಕಾ. ಮ.).

'ಕ್ಷಿತಿಯೊಳಿನ್ನಾರಾದರೀ ವ್ರತ|ವಿತತ ಭಕ್ತಿಯೊಳೆಸಗಿದವರನು|ಸತತ ಪಾಲಿಸ ಶೇಷಗಿರಿವರ ವೇಂಕಟೇಶ್ವರನು' (ಅ.ಕ.)

ಕೃತಿಗಳ ವಸ್ತುಗಳು: ಈ ಆರು ಕೃತಿಗಳ ವಸ್ತು–ಕತೆಗಳು ಬೇರೆ ಬೇರೆ, ಅವೆಲ್ಲಾ ಪುರಾಣಗಳಿಂದ ಆರಿಸಲಾಗಿವೆ. ಪ್ರಹ್ಲಾದನ ಕತೆ, ಶುಕನು ಪರೀಕ್ಷಿತನಿಗೆ ಹೇಳಿದ ವ್ಯಾಸಭಾಗವತದಲ್ಲಿದೆ. ಇದರ ಪದ್ಯಗಳು ಈತನ ಇತರ ಕೃತಿಗಳಿಗಿಂತ ಬಲು ಚೆನ್ನು! 'ಮದಾಲಸಾಕಲ್ಯಾಣ' ವ್ಯಾಸಭಾಗವತದಿಂದಲೇ ಆರಿಸಿದುದು (ಇದಕ್ಕೆ ಪೂರಕವಾಗಿ 'ಸೌದಾಸ ಚರಿತೆ' ಯಕ್ಷಗಾನ ಕೃತಿ ನೋಡ ತಕ್ಕುದು). ಇದು ಈತನ ಪ್ರಾಥಮಿಕ ಕೃತಿ. (ಇದರ ಪರಿಚಯ ಲೇಖನ 1958ರಲ್ಲಿ 'ಯಕ್ಷಗಾನ' ಪತ್ರಿಕೆಯಲ್ಲಿ ಬರೆದಿದ್ದೇನೆ).

'ಈಗ ಪ್ರಚಾರದಲ್ಲಿರುವ 'ಕುಮಾರ ವಿಜಯ'ವೆಂಬ ಶೂರ ಪದ್ಮಾಸುರ ಕಾ

(ಹದಿನೇಳನೇ ಪುಟ ನೋಡಿರಿ)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೇಕ್ಷಕವರಗಳಿಂದ ನಿಮ್ಮನ್ನು ಸದಾ ಸುಸ್ವಾಗತಿಸುತ್ತಿದೆ—

ಹೋಟೆಲ್ ಶಿವಪ್ರಸಾದ



ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಸುಸಜ್ಜಿತಪೂರ್ಣ ಸಿಂಗಲ್ ಮತ್ತು ಡಬ್ಬಲ್ ರೂಮುಗಳು !
ಕಾರ್ ಪಾರ್ಕಿಂಗ್ ಸೌಕರ್ಯ ! ಟೂರಿಸ್ಟ್ ಪಾರ್ಟಿಗಳಿಗೆ ವಿಶೇಷ ವ್ಯವಸ್ಥೆ !
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೇಲ್

Please Visit — ಫೋನ್: 77

HOTEL SHIVAPRASAD
High Class Boarding Lodging & Restaurant
COONDAPUR, S. K.

ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ.ಎ.

ಮದುವೆಗೆ ಅರ್ಥ

ಮದುವೆಗೆ ಬಹಳ ಅರ್ಥವಿದೆಯೆ? ಇದು ತನ್ನ ಅರ್ಥವನ್ನು ಕಳೆದುಕೊಂಡು ಭಾರಿ ಸದ್ದು ಗದ್ದಲ—ಸಂಭ್ರಮ ವಿಭ್ರಮದ ಸಮಾರಂಭವಾಗಿದೆ—ಇಂದು. ಸಮಾಜದ ಶ್ರೇಯಸ್ಸು ಸರಳ ಆದರೆ ಅರ್ಥವತ್ತಾದ ಮದುವೆ ವಿಧಾನದಿಂದಲೇ ಸಾಧ್ಯ. ಪ್ರಕೃತ ಲೇಖನವು ಒಂದು ನಿರ್ದಿಷ್ಟ ಸಮಾಜಕ್ಕೆ ಮಾತ್ರ ಅನ್ವಯವಾಗುವಂತಿದ್ದರೂ ಅದರ ವ್ಯಾಪ್ತಿ ಸರ್ವತ್ರವಿದ್ದೇ ಇದೆ.

ಕಳೆದ ಜೂನ್ ತಿಂಗಳ ಇಪ್ಪತ್ತೇಳನೆಯ ದಿನಾಂಕದಂದು, ಪೂರ್ವಾಹ್ನ ಹತ್ತು ಗಂಟೆಗೆ ಸರಿಯಾಗಿ ಮಂಗಳೂರು ಪುರಭವನದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಜಸ್ಟಿಸ್ ಕೆ. ಎಸ್. ಹೆಗ್ಗಡೆಯವರು ತಮ್ಮ ಕುಮಾರಿ ಉಷಾ ಇವರ ಮದುವೆಯನ್ನು ಕರಿಯಂಗಳಗುತ್ತು ಶ್ರೀ ಕೆ. ಎ. ಪೂಂಜರ ಪುತ್ರ ಶ್ರೀ ಸುಧಾಕರ ಇವರೊಂದಿಗೆ ಸಂಭ್ರಮ ಪೂರ್ವಕ ನೆರವೇರಿಸಿದರು.

ಮುಹೂರ್ತಕ್ಕೆ ಸರಿಯಾಗಿ ಓಲಗ ವಾದ್ಯ ಸಮೇತ ವಧೂವರರನ್ನು ವಿವಾಹ ಮಂಟಪಕ್ಕೆ ಕರೆತರಲಾಯಿತು. ವೇದಿಕೆಯಲ್ಲಿ ಬ್ರಾಹ್ಮಣ ಪುರೋಹಿತರೊಬ್ಬರು ಮಂತ್ರ ಪೂರ್ವಕ ಅಗ್ನಿ ಪ್ರತಿಷ್ಠೆ ಮಾಡಿದರು. ಅವರ ಪೌರೋಹಿತ್ಯದಲ್ಲಿ ವಿಧಿ ಪ್ರಕಾರ ಆ ವಿವಾಹ ಮಹೋತ್ಸವವು ಸಂಭ್ರಮ ಪೂರ್ವಕವಾಗಿ ಆದರೂ ಅತ್ಯಂತ ಸರಳವಾಗಿ ನೆರವೇರಿತು.

ವಿವಾಹ ಒಂದು ವಿಧಿ ಪ್ರಕಾರ— ವೈದಿಕ ರೀತಿಯಲ್ಲಿ— ನಡೆಯಿತು ಎಂಬುದು ಮಾತ್ರ ಸುದ್ದಿಯಲ್ಲ, ಜಸ್ಟಿಸ್ ಹೆಗ್ಡೆಯವರು ತಮ್ಮ ಮಗಳ ವಿವಾಹವನ್ನು ಒಂದು ಕ್ರಮಬದ್ಧವಾಗಿ ನೆರವೇರಿಸಿದರೆಂಬುದು ಒಂದು ಸುದ್ದಿ. ಅದರೊಂದಿಗೆ, ಆಧುನಿಕ ಕಾಲದ ಉಚ್ಚ ಶಿಕ್ಷಣ ಪಡೆದ ಆ ವಧೂವರರೂ ವೇಶ ಭೂಷಣಾದಿಗಳಲ್ಲಿ ಅತ್ಯಂತ ಸರಳತೆಯಿಂದ ಶೋಭಿಸಿದರೆಂಬುದೂ ಗಮನೀಯವಾದ ವಿಷಯವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟರ ಯಾನೆ ನಾಡವರ ಸಮಾಜ ಹಲವಾರು ಕ್ಷೇತ್ರಗಳಲ್ಲಿ ಅತ್ಯಂತ ಪ್ರಗತಿ ಹೊಂದಿದ ಸಮಾಜಗಳಲ್ಲಿ ಒಂದಾಗಿದೆ. ಮೂಲತಃ ಕೃಷಿಕರೂ, ಮಣ್ಣಿನ ಮಕ್ಕಳೂ ಆಗಿದ್ದು ತಮ್ಮ ಹಳ್ಳಿಗಳ ಪರಿಸರಗಳಲ್ಲಿ ಅತ್ಯಂತ ಪ್ರಭಾವ ಬೀರಿದ್ದ ಆ ಜನಾಂಗ, ಮುಂದೆ ಶೈಕ್ಷಣಿಕ, ಸಾಮಾಜಿಕ, ರಾಜಕೀಯ, ಔದ್ಯಮಿಕ ಹೀಗೆ ನಾನಾ ಕ್ಷೇತ್ರಗಳಲ್ಲಿ ಅಗ್ರ ಪಂಕ್ತಿಯಲ್ಲಿ ಇಂದು ಮೆರೆಯುತ್ತಿದೆ. ಹಾಗೆ ಮುಂದುವರಿದುದೇ ಒಂದು ಕಾರಣವಿರಬೇಕು. ಹಳ್ಳಿಯ ಮನೆಗಳಲ್ಲಿ ನೆರವೇರಿಸುತ್ತಿದ್ದ ಆ ಸಮಾಜದ ಮದುವೆಗಳು ಇತ್ತೀಚೆಗೆ ಸುಮಾರು ಅರ್ಧ ಶತಮಾನಕ್ಕೆ ಹತ್ತಿರ ಹತ್ತಿರ ಪೇಟೆ ಪಟ್ಟಣಗಳಲ್ಲಿಯೋ, ವಿದ್ಯಾರ್ಥಿ ಭವನಗಳಲ್ಲಿ, ಸಿನೆಮಾ ಮಂದಿರಗಳಲ್ಲಿ, ಪುರಭವನಗಳಲ್ಲಿ ಅತ್ಯಂತ ಆಡಂಬರ ಪೂರ್ವಕ ನೆರವೇರುತ್ತಾ ಬಂತು. ಇಂತಹ ಅಭೂತಪೂರ್ವ ಆಡಂಬರಗಳ ಗದ್ದಲದಲ್ಲಿ ಮದುವೆಯ ನಿಜವಾದ ಅರ್ಥ ಜನತೆಗೆ ಮರೆತು ಹೋದಂತೆ ತೋರುತ್ತಿತ್ತು. ಹಾಗಿರುವ ವಾತಾವರಣದಲ್ಲಿ ಜಸ್ಟಿಸ್ ಹೆಗ್ಗಡೆಯವರು ಒಂದು ವಿಧಿವತ್ತಾಗಿ ಸರಳ ಗಂಭೀರವಾಗಿ ತಮ್ಮ ಮಗಳ ಮದುವೆ ನೆರವೇರಿಸಿದರೆಂಬುದು ಒಂದು ಆಕರ್ಷಕವಾದ ಸುದ್ದಿಯಾಗಿದೆ; ಅನುಕರಣೀಯವಾದ ಒಂದು ಆದರ್ಶವಾಗಿದೆ.

ಅಳಿಯಕಟ್ಟೇ ಪ್ರಧಾನವಾಗಿದ್ದ ಬಂಟರ ಯಾನೆ ನಾಡವರ ಸಮಾಜಕ್ಕೆ ಹಿಂದಿನಿಂದಲೇ ಬಂದ ಕೆಲವು ವೈವಾಹಿಕ ಕಟ್ಟುಕಟ್ಟಳೆಗಳಿವೆ. ಅದು ಪರಂಪರೆಯಿಂದ ಆಚರಣೆಯಾಗಿ ಬಂದಿತ್ತೆ ಹೊರತು ಹೆಚ್ಚಿನ ಲಿಖಿತ ಆಧಾರ ಗ್ರಂಥಗಳು ಆಗಲಾರವು. ಬಾರಕೂರಿನ ಕೆಲವು ಉಲ್ಲೇಖಗಳು, ಪೊಳಲಿ ಅಮುಣುಂಜೆ ಗುತ್ತಿನ ಶ್ರೀ ಶೀನಪ್ಪ ಹೆಗ್ಗಡೆಯವರು ಸಂಗ್ರಹಿಸಿದ ಕೆಲವು ದಾಖಲೆಗಳಿಂದ ಕೂಡಿದ ಗ್ರಂಥಗಳು, ಬಂಟ್ವಾಳದ ದೇವಸ್ಥಾನದ ಶಾಲೆಯಲ್ಲಿ ಅಧ್ಯಾಪಕರಾಗಿದ್ದ ಶ್ರೀ ಬಿ. ಪಕೀರ ಮುಲಯ ಎಂಬವರು ಬರೆದ ಒಂದು ಪುಸ್ತಕ—ಆ ಮೇಲೆ ಅಲ್ಲಲ್ಲಿ ಹಳ್ಳಿಯ ಹಿರಿಯರು,ಗುರಿಕಾರ ಮನೆತನದವರು ಹೇಳುತ್ತಿದ್ದ ಅನುಭವ—ಇವುಗಳೇ ಆ ಸಮಾಜದ ವೈವಾಹಿಕ ಪದ್ಧತಿಯನ್ನು ತಿಳಿಸುವ ಆಧಾರಗಳಾಗಿವೆ. ಆದರೆ ಕಾಲ ಸಂದಂತೆ, ಅಳಿಯಕಟ್ಟಿನಲ್ಲಿಯೂ ಬದಲಾವಣೆ ಬಂದಂತೆ, ಶೈಕ್ಷಣಿಕ, ಸಾಮಾಜಿಕ ಪ್ರಗತಿ ಹೊಂದಿದಂತೆ ಆ ಹಿಂದಿನ ಕ್ರಮಗಳನ್ನೇ ಆಚರಣೆಗೆ ಪುನಃ ತರುವುದೂ ಸಾಧ್ಯವಿಲ್ಲ. ಯಥಾವತ್ತಾಗಿ ಪ್ರಾಚೀನ ಸಂಪ್ರದಾಯಗಳನ್ನು ಆಚರಿಸಲು ಅನುಕೂಲವೂ, ಅನುಭವವೂ ಇಂದಿನವರಿಗೆ ಸಾಕಷ್ಟು ಇರುವುದೂ ಇಲ್ಲ. ಆದು ಕಾರಣ, ಇತ್ತೀಚೆಗಿನ ವಿವಾಹಗಳಲ್ಲಿ ಯಾವುದೇ ರೀತಿಯ ಒಂದು ಕ್ರಮಾನುಸರಣೆ ಖಿಲಖಿಲವಾಗುತ್ತಾ ಬಂದು, ಕೇವಲ ಆಡಂಬರ, ಗದ್ದಲ, ದುಂದುಗಾರಿಕೆಗಳೇ ವಿಪರೀತಾವಸ್ಥೆಗೆ ಏರಿ ಹೋಗಿ, ಒಂದು ಸಮಾಜದ ಸಂಸ್ಕೃತಿಯ ಪ್ರತೀಕವಾಗಿದ್ದ ಮದುವೆ ಅದರ ನಿಜವಾದ ಅರ್ಥವನ್ನು ಕಳೆದುಕೊಂಡು ಗೊಂದಲಮಯವಾಗಿದ್ದ ಒಂದು ಸಂಧಿಕಾಲದಲ್ಲಿ ಜಸ್ಟಿಸ್ ಹೆಗ್ಗಡೆಯವರು ಒಂದು ಆದರ್ಶವನ್ನು ಮುಂದಿಟ್ಟರು ಎಂಬುದು ಸ್ವಾಗತಾರ್ಹವಾದ ಸುದ್ದಿಯಾಗಿದೆ.

ಮದುವೆಗೆ ಬಹಳ ಅರ್ಥವಿದೆ; ಅಳಿಯಕಟ್ಟಿನ ಹಿಂದಿನ ಸಂಪ್ರದಾಯ ಪದ್ಧತಿಯ

(ಹದಿನಾರನೇ ಪುಟ ನೋಡಿರಿ)

ಒಪ್ಪುವ ಅಂದವಾದ ಖಾದಿ ಬಟ್ಟೆಗಳು ದೇಹಕ್ಕೆ ಚೆಂದ.

ಎಲ್ಲಾ ಸಮಯದಲ್ಲೂ ಖಾದಿ ಬಟ್ಟೆಗಳಲ್ಲಿ ಆಕರ್ಷಕವಾಗಿ ಕಾಣುವಿರಿ.

ಮಹಿಳೆಯರಿಗೆ ಪುರುಷರಿಗೆ ಮತ್ತು ಮಕ್ಕಳಿಗೆ
ಮನಮೋಹಕ
ಅರಳೆ, ರೇಷ್ಮೆ ಮತ್ತು ಉಣ್ಣೆ
ಖಾದಿ ಬಟ್ಟೆಗಳು
ದೊರಕುತ್ತವೆ.

ಮೈಸೂರು ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲ
ಬೆಂಗಳೂರು—9.

ಸ್ವಾತಂತ್ರ್ಯೋತ್ಸವದ ಶುಭಾಶಯಗಳು !

ರಾಷ್ಟ್ರಕ್ಕೆ ಅನ್ನದಾತನಾದ ರೈತನ ಭಾಗ್ಯನಿಧಿ

Kirloskar ಕಿರ್ಲೋಸ್ಕರ್ ಪಂಪ್ ಸೆಟ್ ಗಳನ್ನು ಉಪಯೋಗಿಸಿರಿ.



ಕಿರ್ಲೋಸ್ಕರ ಪಂಪ್ ಸೆಟ್‌ಗಳು ಶ್ರೇಷ್ಠತೆಯಲ್ಲಿ, ದೀರ್ಘ ಬಾಳಿಕೆಯಲ್ಲಿ, ಮಿತವ್ಯಯದ ನಿರ್ವಹಣೆಯಲ್ಲಿ ದೇಶದಲ್ಲೆಲ್ಲಾ ಸುಪ್ರಸಿದ್ಧವಾಗಿವೆ. ಸಣ್ಣ ಹಿಡುವಳಿದಾರರಿಗಂತೂ ಅತ್ಯನುಕೂಲವಾಗಿವೆ.

— ವಿತರಣೆಗಾರರು —

ಕರ್ಕೇರಾ ಸನ್ಸ್ & ಕೊ.
ಮೈದಾನ್ ವೆಸ್ಟ್ ರೋಡು,
ಮಂಗಳೂರು-1
Phone: 3967

ಡಾ! ಪಿ. ಗುರುರಾಜ ಭಟ್, ಕಲ್ಯಾಣಪುರ.

ದ್ವಾದಶ ಶಿಲ್ಪಗಳು

MASTER - PIECES

[A STUDY IN

ಕಂಚಿನ ಶ್ರೀ ಗಣೇಶ

ಚೋಳರ ಶಿಲ್ಪವನ್ನು ತೋರಿಸುವ ಗಣೇಶ

ಉಡುಪಿಯಲ್ಲಿ ಚೋಳರ ಕಾಲದ ಗಣೇಶ ಬಿಂಬವನ್ನು ನೋಡ ಬೇಕಾದರೆ ಐರೋಡಿ ಶ್ರೀ ರಾಧಾಕೃಷ್ಣ ಪೈಗಳ ವಸ್ತು ಸಂಗ್ರಹಾಲಯಕ್ಕೆ ಸಂದರ್ಶನವನ್ನೀಯಬೇಕು. ಈ ಬಿಂಬವು ಚಿಕ್ಕದಾದರೂ ಶಿಲ್ಪ ವೈಖರಿಯಲ್ಲಿ ಪರಿಶುದ್ಧವಾದುದು. 3 ಇಂಚು ಎತ್ತರ, ದೊಡ್ಡದಾದ ಬೀಸಣಿಗೆಯಾಕಾರದ ಕಿವಿಗಳು, ಆನೆಯ ಮುಖವನ್ನೇ ಹೋಲುವ ಮುಖ, ನೀಳವಾದ ಸೊಂಡಿಲು, ಚಿಕ್ಕದಾದ ಕಿರೀಟ, ದೊಡ್ಡ ಹೊಟ್ಟೆ, ಪದ್ಮಪೀಠ ಮತ್ತು ಅಲಂಕಾರವಿರಹಿತ ದೇಹ— ಇವು ಈ ಬಿಂಬದ ಲಕ್ಷಣಗಳಾಗಿವೆ. ಮೇಲ್ಕೈಗಳಲ್ಲಿ ಪಾಶಾಂಕುಶಗಳಿವೆ. ಕೆಳಗಿನ ಎಡ ಕೈಯಲ್ಲಿ ಲಡ್ಡು, ಬಲ ಕೈಯಲ್ಲಿ ದಂತವೂ ಕಂಡು ಬರುತ್ತವೆ. ಒಪ್ಪನ್ನು ತಿನ್ನುವ ನಿರ್ದೇಶವಿಲ್ಲ. ಕಾಲಮಾನದಲ್ಲಿ ಇದನ್ನು ಸು. ಕ್ರಿ. ಶ. 10ನೇ ಶತಮಾನಕ್ಕೆ ಅನ್ವಯಿಸ ಬಹುದು.

ಸದಾಶಿವ ಮೂರ್ತಿಗಳು

ಉಡುಪಿ ತಾಲೂಕಿನ ಕಟಪಾಡಿಯ ಸಮೀಪವಿರುವ ಏಣಗುಡ್ಡೆ ಅಗ್ರಹಾರದಲ್ಲಿ ಒಂದು ಹಳೆಯ ದೇಗುಲವಿದೆ. ಇಲ್ಲಿರುವ ಕಂಚಿನ ಸದಾಶಿವ ಮೂರ್ತಿಯನ್ನು ಕಂಡರೆ ಮನಸ್ಸಿನಾಗ ಬಹುದಾದ



ಏಣಗುಡ್ಡೆ ಅಗ್ರಹಾರದಲ್ಲಿರುವ ಸದಾಶಿವ ಮೂರ್ತಿ

ಆನಂದ ಮಹತ್ತರವಾದುದು. ಇದೊಂದು ಸಮ ಭಂಗಿಯಾಗಿ ನಿಂತ ಮೂರ್ತಿ. ಇದರ ಎಲ್ಲ ಲಕ್ಷಣಗಳೂ ಚೋಳರ ಶಿಲ್ಪ ಶೈಲಿಯನ್ನು ಚೆನ್ನಾಗಿ ಪ್ರತಿ ಬಿಂಬಿಸುತ್ತವೆ. ಮೇಲ್ಕೈಗಳಲ್ಲಿ ಕುಠಾರ ಮತ್ತು ಮೃಗಾಯುಧಗಳಿವೆ. ಇವುಗಳನ್ನು ಧರಿಸಿದ ರೀತಿ ಪ್ರಾಚೀನತೆಯನ್ನು ಸೂಚಿಸುತ್ತದೆ. ದಪ್ಪನಾದ ಯಜ್ಞೋಪವೀತ, ಉದರ ಬಂಧ, ಸರಪಳಿಯಂತಹ ಒಂದು ಕಂಠಾಭರಣ, ಮೂರು ಎಳೆಯ ಕಟಿಬಂಧ, ವಿಶಾಲ ಗಂಭೀರ ಮುಖಮುದ್ರೆ, ಜಟಾ ಮುಕುಟ— ಇವು ಶೈಲಿಯಲ್ಲಿ ಚೋಳರ ಕಾಲದ್ದಿದ್ದು ಮೇಲೆ ನಮೂದಿಸಿದ ಗಣೇಶ ಬಿಂಬಕ್ಕಿಂತ ಸ್ವಲ್ಪ ಅನಂತರದ್ದಿರ ಬಹುದೆನ್ನ ಬಹುದು. ಕಾಲಮಾನದಲ್ಲಿ ಈ ವಿಗ್ರಹವನ್ನು ಸು. ಕ್ರಿ. ಶ. 11ನೇ ಶತಮಾನಕ್ಕೆ ಅನ್ವಯಿಸ ಬಹುದು. ಎತ್ತರದಲ್ಲಿ 10 ಇಂಚು ಇರುವ ಅಭಯ, ವರದ ಹಸ್ತವಾಗಿರುವ ಈ ಮೂರ್ತಿಯು ಭವ್ಯವಾಗಿದೆ.

ಐರೋಡಿ ಶ್ರೀ ರಾಧಾಕೃಷ್ಣ ಪೈಗಳ ಸಂಗ್ರಹಾಲಯದಲ್ಲಿ ಇರುವ ಇನ್ನೊಂದು ಕಲಾ ನೈಪುಣ್ಯವಿರುವ, ಆದರೆ ಭಿನ್ನವಾದ ಬಿಂಬವೆಂದರೆ ಸದಾಶಿವ. ಇದೂ



ಕಲ್ಯಾಣಿ ಚಾಲುಕ್ಯರ ಕಾಲದ ಶಿಲ್ಪವನ್ನು ತೋರಿಸುವ ಸದಾಶಿವ ಬಿಂಬ

ಅಭಯ ವರದವಾಗಿರುವ ಮೂರ್ತಿ. ಮೇಲ್ಕೈಗಳಲ್ಲಿ ಪ್ರಾಯಃಶಃ ಕುಠಾರ, ಮೃಗ ಇದ್ದಿರಬೇಕು. ಈ ಕೈಗಳು ಭಿನ್ನವಾಗಿವೆ. ಸರ್ವಾಲಂಕಾರದಿಂದ ಕೂಡಿದ ಬಿಂಬವಿದು. ಮಕರ ಮತ್ತು ಪತ್ರ ಕುಂಡಲಗಳೂ, ಕಿರೀಟ ಮುಕುಟವೂ, ನೀಳವಾದ ಮುಖ ಕಮಲವೂ, ಪತ್ರ ಪುಷ್ಪಗಳೋಪಾದಿಯಲ್ಲಿರುವ ತೊಡಿಗೆಯೂ, ಆಕರ್ಷಣೀಯವಾಗಿದ್ದು, ಕಲ್ಯಾಣಿ ಚಾಲುಕ್ಯ ಶೈಲಿಯಲ್ಲಿರುವ ಬಿಂಬವಿದು. ಕಾಲಮಾನದಲ್ಲಿ ಸು. ಕ್ರಿ. ಶ. 11—12ನೇ ಶತಕಕ್ಕೆ ಅನ್ವಯಿಸ ಬಹುದು.

ಅದಮಾರಿನ ಎರಡು ವೈಷ್ಣವ ಬಿಂಬಗಳು

ಉಡುಪಿ ತಾಲೂಕಿಗೆ ಸೇರಿದ ಒಂದು ಹಳ್ಳಿ ಅದಮಾರು. ಉಡುಪಿಯ ಅಷ್ಟಮಠಗಳಲ್ಲಿ ಒಂದು ಅದಮಾರಿನಲ್ಲಿದೆ. ಇಲ್ಲಿ ಹಲವಾರು ಕಂಚಿನ ಮೂರ್ತಿಗಳಿವೆ. ಅವುಗಳಲ್ಲಿ ಮೂರು ಶಿಲ್ಪಗಳೂ ಪ್ರತಿಮಾ ವಿಜ್ಞಾನದ ದೃಷ್ಟಿಯಿಂದ ವೈಶಿಷ್ಟ್ಯಪೂರ್ಣವಾದವುಗಳು. ಒಂದನೆಯದು ಕೇಶವ ಮೂರ್ತಿ. ಎರಡನೆಯದು ಪರವಾಸುದೇವ ಮೂರ್ತಿ. ಮೂರನೆಯದು ಶ್ರೀಕರ ಮೂರ್ತಿ.

1) ಕೇಶವ ಮೂರ್ತಿ— ಇದು ಸು. 12 ಇಂಚು ಎತ್ತರವಾಗಿದ್ದು ಎಲ್ಲ ಲಕ್ಷಣಗಳಲ್ಲಿಯೂ ಸು. ಕ್ರಿ.ಶ. 11—12ನೇ ಶತಮಾನದದ್ದೆನ್ನಲು ಅಡ್ಡಿಯಿಲ್ಲ. ದೀರ್ಘವಾದ ಕಿರೀಟ ಅಲಂಕಾರಿಕ ಕಟಿಬಂಧ, ಪದ್ಮಪೀಠ, ಶಾಂತವಾದ ಮುಖಭಾವ— ಇವೆಲ್ಲವೂ ಇದರ ಕಾಲಮಾನದ ನಿರ್ಧಾರಕ್ಕೆ ಅನುಕೂಲಗಳಾಗಿವೆ. ಜಿಲ್ಲೆಯ ಉತ್ತಮವಾದ ಕಂಚಿನ ಬಿಂಬಗಳಲ್ಲಿ ಇದೊಂದಾಗಿದೆ.

2) ಪರವಾಸುದೇವ ಮೂರ್ತಿ–



ಅದಮಾರು ಮಠದ ಪರವಾಸುದೇವ

ಇದು 11 ಇಂಚು ಎತ್ತರವಾಗಿದ್ದು, ಲಲಿತಾಸನದಲ್ಲಿ ಪದ್ಮ ಪೀಠದ ಮೇಲೆ, ಚಕ್ರ ಶಂಖ, ಗದಾ, ಪದ್ಮ ಧಾರಿಯಾಗಿ ನಿರ್ದೇಶಿಸಲ್ಪಟ್ಟ ಮೂರ್ತಿ. ಇದರ ಲಕ್ಷಣಗಳೂ ಈ ವಿಗ್ರಹವನ್ನು ಸು. ಕ್ರಿ.ಶ. 12ನೇ ಶತಕಕ್ಕೆ ಹೊಂದಿಸುವುವು. ಮುಖಭಾವವು ಯೌಗಿಕವಾಗಿದೆ. ಆಯುಧಗಳು ಕಿರಿದಾಗಿದ್ದು ಕಿರೀಟವು ಗೋಪುರಾಕಾರದಲ್ಲಿದೆ. ಈ ಮಾದರಿಯ ಬೇರೊಂದು ಪರವಾಸುದೇವನ ಮೂರ್ತಿ ಇತರತ್ರ ನಮ್ಮ ಜಿಲ್ಲೆಯಲ್ಲಿ ಇಲ್ಲವೆಂದುಹೇಳಿದರೆ ಅತಿಶಯವಾಗಲಾರದು.

3) ಶ್ರೀಕರ ಮೂರ್ತಿ

ಅದಮಾರು ಮಠದ ಶ್ರೀಕರ ಮೂರ್ತಿ

ತಂತ್ರಸಾರದಲ್ಲಿ ಪ್ರತಿಪಾದಿತವಾದ ಶ್ರೀಕರ ಮೂರ್ತಿಗಳು ವಿರಳ. ಅದಮಾರು ಮಠದಲ್ಲಿರುವ ಸುಮಾರು 6 ಇಂಚು ಎತ್ತರದ ಪಂಚಲೋಹದ ಈ ಬಿಂಬವು ಬಹು ಮನೋಹರವಾಗಿಯೂ ಹೃದಯಕ್ಕೆ ಸುಖಕರವಾಗಿಯೂ ಇರುವ ಅಪೂರ್ವ ವಿಗ್ರಹ. ಈ ಮೂರ್ತಿಯ ಧ್ಯಾನ ಹೀಗಿದೆ:

ಆದಿತ್ಯ ಚಂದ್ರಾ ವಪಿಚಕ್ರ ಶಂಖೌ ಶಂಖ ಪ್ರಸೂನಾಖ್ಯ ನಿಧೀದಧಾನಃ | ದ್ವಾಭ್ಯಾಂಕರಾಭ್ಯಾಂ ವಸುತರ್ಷ ಯನ್ ಸಃ ಸ್ವಾಂಕಸ್ಥಗ ಶ್ರೀಃ ಗರುಡಾಂಸ ಸಂಸ್ಥಃ ||

ಎರಡು ಕೈಗಳಲ್ಲಿ ಸೂರ್ಯ ಚಂದ್ರರನ್ನು, ಮತ್ತೆರಡು ಕೈಗಳಲ್ಲಿ ಚಕ್ರ ಶಂಖಗಳನ್ನು, ಇನ್ನೆರಡು ಕೈಗಳಲ್ಲಿ ಶಂಖ, ಪ್ರಸೂನಗಳೆಂಬ ದ್ರವ್ಯ ನಿಧಿಗಳನ್ನು ಧರಿಸಿ ಉಳಿದೆರಡು ಕೈಗಳಿಂದ ಸಂಪತ್ತನ್ನು ಸದಾ ಧಾರೆಯೆರೆಯುತ್ತ ಶೋಭಿಸುವ ಶ್ರೀಕರ ಮೂರ್ತಿಯು ಮಧ್ವಾಚಾರ್ಯ ಕರಾರ್ಚಿತವಾದುದು, ತನ್ನ ತೊಡೆಯಲ್ಲಿ ಲಕ್ಷ್ಮಿಯನ್ನು ಕುಳ್ಳಿರಿಸಿಕೊಂಡು ಗರುಡನ ಹೆಗಲ ಮೇಲೆ ಕಾಲುಗಳನ್ನಿಳಿಯ ಬಿಟ್ಟು ಕುಳಿತು ಶೋಭಿಸುವಂತಹ ಮೂರ್ತಿ.

ಇದೇ ಮಠದಲ್ಲಿರುವ ಇನ್ನೊಂದು ಪಂಚಲೋಹದ ಮೂರ್ತಿಯ ಉಲ್ಲೇಖವನ್ನು ಮಾಡುವುದು ಅಪ್ರಸ್ತುತವಾಗಲಾರದು. ಇದು ಲಕ್ಷ್ಮೀನಾರಾಯಣ ಬಿಂಬ.

ಅದಮಾರು ಮಠದ ಶ್ರೀ ಲಕ್ಷ್ಮೀನಾರಾಯಣ

ಇದರ ಶಿಲ್ಪವು ಎಲ್ಲ ವಿಧದಲ್ಲೂ ವಿಜಯನಗರ ಕಾಲವನ್ನು ಸೂಚಿಸುವುದಲ್ಲದೆ ಇದು ಈ ಕಾಲದ ಉತ್ತಮ ಶಿಲ್ಪ ಮಾದರಿಯಾಗಿದೆ. ಚಕ್ರ, ಶಂಖಗಳನ್ನು ಮೇಲ್ಕೈಗಳಲ್ಲಿ ಧರಿಸಿಕೊಂಡು, ಲಕ್ಷ್ಮಿಯನ್ನು ಎಡತೊಡೆಯಲ್ಲಿ ಕುಳ್ಳಿರಿಸಿ ಅಭಯವನ್ನೀಯುವ ಈ ಮೂರ್ತಿಯು ಸು. 9 ಇಂಚು ಎತ್ತರವೂ, ಸುಂದರವೂ, ಘನವೂ ಆಗಿದೆ.

ಪ್ರತಿಮಾ ವೈಶಿಷ್ಟ್ಯ

IN SCULPTURE

ICONOGRAPHY]

ಕೋಟಿಪ ಮಧುಸೂದನ

ನಮ್ಮ ಜಿಲ್ಲೆಯಲ್ಲಿ ವಿಷ್ಣುವಿನ ಚತುರ್ವಿಂಶತಿ ರೂಪಗಳನ್ನು ಶಿಲ್ಪದಲ್ಲಿ ತೋರಿಸುವ ಬಿಂಬಗಳು ಬಹಳ ವಿರಳ. ಕೋಟದಲ್ಲಿ ಶ್ರೀ ಪರಮೇಶ್ವರ ಸೋಮಯಾಜಿಯವರು ಅರ್ಚನೆ ಮಾಡುವ ಶ್ರೀ ಮಧುಸೂದನ ಮೂರ್ತಿಯು ಹೊಯ್ಸಳರ ಕಾಲದ ಅಂತ್ಯ ಪಾದಕ್ಕೆ ಸೇರಬಹುದಾದ ಬಿಂಬ. ಶಾಸ್ತ್ರೀಯವಾದ ಲಕ್ಷಣಗಳುಳ್ಳ ಶಿಲಾಮೂರ್ತಿ ಇದು. ಸುಷ್ಟವಾದ ನಿರ್ದೇಶ, ದೀರ್ಘವಾದ ಕಿರೀಟ ಮುಕುಟ, ವಿಶಾಲವಾದ ಮಕರ ಕುಂಡಲಗಳು ವಿಶೇಷ ರೀತಿಯ ಕೆತ್ತನೆ, ಮಧುಸೂದನನ ಇಬ್ಬದಿಗಳಲ್ಲಿ ಭೂ ಮತ್ತು ಶ್ರೀ, ಪದ್ಮಪೀಠ, ತೂತುಗಳಿರುವ ಪ್ರಭಾವಳಿ (Perforated Prabhavali) ಇವು ಈ ಮೂರ್ತಿಯ ವಿಶೇಷ ಲಕ್ಷಣಗಳಾಗಿವೆ ಪ್ರಮಾಣ ಕಲ್ಪನೆಯ ಸಂಪೂರ್ಣ ಜ್ಞಾನವಿದ್ದು ರಚಿತವಾದ ಬಿಂಬವಿದು. ಕಿರೀಟವನ್ನು ಆವರಿಸಿ ತೋರಿಸಲ್ಪಟ್ಟ ಪುಷ್ಪದ ಮಾಲೆಯು ಈಗ ತಾನೆ ಇರಿಸಿದ ಮಾಲೆಯಂತಿದೆ ಗದಾ, ಪದ್ಮ, ಶಂಖ ಮತ್ತು ಚಕ್ರಗಳನ್ನು ಪ್ರಯೋಗ ರೀತಿಯಲ್ಲಿ ಧರಿಸಿ, ಸಮಭಂಗದಲ್ಲಿ ನಿಂತಿರುವ, ಹಸನ್ಮುಖಿಯಾದ ಈ ಮೂರ್ತಿಯು 3ಅಡಿ ಎತ್ತರವಾಗಿದ್ದು ಭಾವುಕರಿಗೆ ಮಹದಾನಂದವನ್ನೀಯುವ ದೇವತಾ ಸ್ವರೂಪವಾಗಿದೆ.

ಹೆಬ್ರಿಯ ಆದಿಮೂರ್ತಿ

ಕಾರ್ಕಳ ತಾಲೂಕಿನ ಹೆಬ್ರಿಯಲ್ಲಿ ಅನಂತಪದ್ಮನಾಭನೆಂದು ಕರೆಯಲ್ಪಡುವ ಶ್ರೀ ಆದಿಮೂರ್ತಿ ವಿಷ್ಣುವಿನ ಒಂದು ಪ್ರಸಿದ್ಧ ದೇಗುಲವಿದೆ. ಇದು ರಚನೆಗೊಂಡ ಕಾಲಮಾನ ನಿಶ್ಚಯವಿಲ್ಲವಾದರೂ ಮೂಲ ಮೂರ್ತಿಯ ಅವಲೋಕನದಿಂದ ಇದು ಸು. ಕ್ರಿ ಶ 12—13ನೇ ಶತಮಾನಕ್ಕೆ ಸೇರಬಹುದೆಂದು ಸ್ಥೂಲವಾಗಿ ಹೇಳಬಹುದು ಚಕ್ರ, ಶಂಖ ಮತ್ತು ಅಭಯ ವರದವಾಗಿರುವ, ಆಯುಧಗಳು ಕಿರಿದಾಗಿದ್ದು ಸಮಭಂಗದಲ್ಲಿರುವ, ಅಲಂಕಾರಾಧಿಕ್ಯವಿಲ್ಲದಿರುವ ಈ ಮೂರ್ತಿಯು 2½ ಅಡಿ ಎತ್ತರವಾಗಿದ್ದು ಲಾವಣ್ಯಮಯವಾಗಿದೆ.

ಹೆಬ್ರಿಯಲ್ಲಿ ಅರ್ಧನಾರೀಶ್ವರಮೂರ್ತಿ

ಹೆಬ್ರಿಯಲ್ಲಿ ಒಂದು ಬ್ರಹ್ಮಸ್ಥಾನವಿದೆ. ಇದರಲ್ಲಿ ಒಂದು ಭಿನ್ನವಾದ ಸುಮಾರು ಒಂದಡಿ ಎತ್ತರವಿರುವ ಕಂಚಿನ ಅರ್ಧನಾರೀಶ್ವರ ಬಿಂಬವಿದೆ ಭಿನ್ನವಾಗುವ ಮೊದಲು ಇದು ಇಲ್ಲಿಯ ಮೂಲಸ್ಥಾನ ಮೂರ್ತಿಯಾಗಿತ್ತೆಂದು ತಿಳಿದು ಬಂದಿದೆ ಈಗ ಇದರ ಬದಲು ಒಂದು ಶಿಲಾಮೂರ್ತಿ ಪ್ರತಿಷ್ಠಾ-

ಈ ಲೇಖನದಲ್ಲಿ ಹನ್ನೆರಡು ಮೂರ್ತಿಗಳ ಶಿಲ್ಪವೈಶಿಷ್ಟ್ಯವನ್ನು ನಿರೂಪಿಸಲಾಗಿದೆ ಸೌಂದರ್ಯ, ಕಲೆ, ಇತಿಹಾಸ, ಕಾಲಮಾನ ಮತ್ತು ಧರ್ಮ— ಇವುಗಳ ನೆಲೆಯಲ್ಲಿ ಪರಿಶೀಲಿಸಿದಾಗ ಇವುಗಳ ಪ್ರಾಮುಖ್ಯತೆಯು ಅರಿವಾಗದಿರದು.

ಪಿತವಾಗಿದೆ ಈ ಕಂಚಿನ ಮೂರ್ತಿ ಮೇಲ್ಗೈಗಳೆರಡು ಛಿನ್ನವಾದುದರಿಂದ ಯಾವ ಆಯುಧಗಳ ನಿರ್ದೇಶಿತವಾಗಿದ್ದುವು ಎನ್ನಲು ಕಷ್ಟವಾದರೂ ಕುಠಾರ ಮತ್ತು ಮೃಗವಿದ್ದಿರ ಬಹುದೆಂದು ಊಹಿಸಬಹುದು ಕೆಳಗಿನ ಎಡಕೈಯು ವರದಹಸ್ತವಾಗಿದೆ ಕೆಳಗಿನ ಬಲಕೈಯೂ ಛಿನ್ನವಾಗಿದೆ ಇದು ಅಭಯವಾಗಿದ್ದಿರಬೇಕು ರತ್ನ ಕಿರೀಟ, ದೀರ್ಘ ಮುಖ, ಅರ್ಧಚಂದ್ರಾಕೃತಿಯ ಕರ್ಣಫಲಕ ಪತ್ರ ಕುಂಡಲಗಳು ತೋಳಿನಲ್ಲಿ ನಾಗಾಭರಣ ಮತ್ತು ಫಲಕದ ತೊಡಿಗೆ ಇವು ಈ ಮೂರ್ತಿಯ ವಿಶೇಷ ಲಕ್ಷಣಗಳು ಸೌಮ್ಯ ಹಾಗೂ ಲಾವಣ್ಯದಿಂದ ಕೂಡಿದ ಈ ಬಿಂಬವನ್ನು ಕ್ರಿ ಶ. 13—14ನೇ ಶತಮಾನಕ್ಕೆ ಅನ್ವಯಿಸಲು ಆತಂಕವಿಲ್ಲ

ಬಕ್ರಪುರದ ಶ್ರೀ ವೇಣುಗೋಪಾಲ



ಬಕ್ರಪುರದ
ಶ್ರೀ ವೇಣುಗೋಪಾಲಕೃಷ್ಣ

ಮುದ್ರಾಡಿಯಲ್ಲಿ ಬಕ್ರಪುರವೆಂಬ ಒಂದು ಧರ್ಮಕ್ಷೇತ್ರವಿದೆ. ಇದರ ಅರ್ಚಕರಾದ ಶ್ರೀ ವಿಠಲ ಭಟ್ಟರು ದೇವೀ (ಭದ್ರಕಾಳಿ) ಉಪಾಸನೆಯಲ್ಲಿ ಅನನ್ಯ ಭಕ್ತಿಯುಳ್ಳವರು ಈ ಅರ್ಚಕ ಕುಟುಂಬವು ನಡ್ವಂತಿಲ್ಲಾಯ ಕುಟುಂಬಕ್ಕೆ ಸೇರಿದ್ದೆಂದು ತಿಳಿದು ಬಂದಿದೆ ಇವರ ಪೂರ್ವಿಕರಿಂದ ಅರ್ಚಿಸಲ್ಪಡುತ್ತಿದ್ದ ಸುಮಾರು 7 ಇಂಚು ಎತ್ತರದ ಒಂದು ಕಂಚಿನ ವೇಣುಗೋಪಾಲ ಮೂರ್ತಿಯು ಇಂದಿಗೂ ಇವರಲ್ಲಿ ಕಂಡುಬರುತ್ತದೆ ಶ್ರೀ ಮಧ್ವಾಚಾರ್ಯರ ಕಾಲದ ಪೂರ್ವದ ಶ್ರೀ ಕೃಷ್ಣ ಬಿಂಬವಿದೆಂದು ಶಿಲ್ಪ ಶೈಲಿಯೂ ಎತ್ತಿತೋರಿಸುತ್ತದೆ ಶಿಲ್ಪ ಶೈಲಿಯಲ್ಲಿ ಸ್ವಲ್ಪಮಟ್ಟಿಗೆ ಪಲ್ಲವ ಮತ್ತು ಕಲ್ಯಾಣಿ ಚಾಲುಕ್ಯರ ಕಾಲದ ಲಕ್ಷಣಗಳಿವೆ ದ್ವಿಬಾಹುಗಳು ಗಾನದಲ್ಲಿ ಲೀನವಾದ ಮುಖಮುದ್ರೆ ಚಿಕ್ಕದಾದ ಕಿರೀಟ ಮುಕುಟ, ಮಿತವಾದ ಕಂಠಾಭರಣಗಳು ಅಲಂಕಾರಿಕ ಕಟಿಬಂಧ ಮತ್ತು [illegible] ಇರುವ ತೊಡಿಗೆ [illegible] ಹಾಗು ವಸ್ತ್ರ ಸಹಿತವಾದ ತ್ರಿಭಂಗಿ ಈ ಲಕ್ಷಣಗಳನ್ನು ಹೊಂದಿರುವ ಈ ಮೂರ್ತಿಯು ನಡ್ವಂತಿಲ್ಲಾಯ ಕುಟುಂಬದ ಆದಿದೇವತೆಯು ಶ್ರೀಕೃಷ್ಣನೆಂಬ [illegible] ದೆ ಶ್ರೀ ಮಧ್ವಾಚಾರ್ಯರ ತಂದೆಯು ಆರಾಧಿಸಿದ ಭುಜಂಗಶಯನನೆಂದರೆ ಶ್ರೀ ಕೃಷ್ಣನೆ ಈ ದೇವತೆಯು ಉಡುಪಿಯ ಶ್ರೀಮದನಂತೇಶ್ವರ ದೇವಾಲಯದಲ್ಲಿ ಉಪಸ್ಥಾನ ದೇವರಾಗಿದ್ದು ಈ ಶಿಲಾ ಮೂರ್ತಿ ಈಗ ಉಡುಪಿಯ ಶ್ರೀ ಕೃಷ್ಣಪುರದಲ್ಲಿ ತೈಲ ಕೃಷ್ಣ ಎಂಬ ಅಭಿಧಾನದಿಂದ ಇದೆ ಎಂಬುದನ್ನು ತಿಳಿದುಕೊಳ್ಳಬಹುದು

ಕೆರವಾಸೆಯಲ್ಲಿ ಪದ್ಮಾವತಿ ಬಿಂಬ

ಕಾರ್ಕಳ ತಾಲೂಕಿನ ಕೆರವಾಸೆ ಎಂಬಲ್ಲಿ ಒಂದು ಜೀರ್ಣವಾದ ಚಂದ್ರನಾಥ ಬಸ್ತಿ ಇದೆ ಇದರಲ್ಲಿ ಸು. ಒಂದಡಿ ಎತ್ತರದ ಅತ್ಯಂತ ಭವ್ಯವಾದ ಹಾಗೂ ಕಲಾಪೂರ್ಣವಾದ ಪದ್ಮಾವತಿಯ ಶಿಲಾ ಮೂರ್ತಿ ಇದೆ ಕೆಲವು ಲಕ್ಷಣಗಳು ಹೊಯ್ಸಳರ ಶಿಲ್ಪದ್ದಾದರೂ ಈ ಮೂರ್ತಿಯು ಸು 15ನೇ ಶತಮಾನದ್ದಿದ್ದು, ವಿಜಯನಗರ ಕಾಲದ ಶಿಲ್ಪವನ್ನು ಉತ್ಕೃಷ್ಟವಾದ ರೀತಿಯಲ್ಲಿ ನಿರ್ದೇಶಿಸುವ ಬಿಂಬವಿದು ಪಾಶಾಂಕುಶ, ಪದ್ಮ ಮತ್ತು ನೀಲೋತ್ಪಲಗಳು ಆಯುಧಗಳಾಗಿವೆ ಕುಕ್ಕುಟ ಸರ್ಪದ ನಿರ್ದೇಶ ವಾಹನವಿರದಿದ್ದರೂ ಸರ್ವಾಲಂಕಾರ ಭೂಷಿತವಾದ ಈ ಮೂರ್ತಿಯು ನೇತ್ರಾನಂದವನ್ನೀಯುವ ಬಿಂಬ.

ಕಲ್ಯಾಣಪುರದ ಬಲಮುರಿ ಗಣೇಶ

ಕಲ್ಯಾಣಪುರದ ಬಲಮುರಿ ಗಣೇಶ

ಕಲ್ಯಾಣಪುರದಲ್ಲಿ ಒಂದು ಚಿಕ್ಕ ಗಣಪತಿ ಗುಡಿಯಿದೆ ಇದರಲ್ಲಿ ಒಂದು ಚೊಕ್ಕ-

ಲೇಖಕರು

✤

ದಾದ ಬಲಮುರಿ ಗಣಪತಿ ಬಿಂಬವಿದೆ. ಉದ್ದೇಶಿಸಿದರೂ [illegible] ಮೇಲ್ಕೈಗಳಲ್ಲಿ [illegible] ಕೆಳಗೈಗಳಲ್ಲಿ ದಂತ ಮತ್ತು ಮೋದಕವನ್ನು ಹೊಂದಿರುವ, ನಾಗಬಂಧದಿಂದ ಕೂಡಿದ ಕರಿಶಿಲೆಯಿಂದ ಕೊರೆದ ಈ ಮೂರ್ತಿಯು ಕ್ರಿ. ಶ. 15 16ನೇ ಶತಮಾನದ ಒಂದು ಉತ್ತಮ ಶಿಲ್ಪವೆನ್ನಬಹುದು [illegible] ಗಣಪತಿಯೆಂದು [illegible] ತಿಳಿದು ಬಂದಿದೆ ವಿಜಯನಗರ ಕಾಲದ ಕೋಟೆಯ ಅವಶೇಷಗಳು ಇಂದಿಗೂ ಇರುವುದಲ್ಲದೆ ಕೋಟೆ ಎಂದೇ ಕರೆಯಲ್ಪಡುವ ಸ್ಥಳ ಕಲ್ಯಾಣಪುರದಲ್ಲಿದೆ ಈಗ ಈ ದೇಗುಲದ ಪೂಜೆಯನ್ನು ಗೌಡ ಸಾರಸ್ವತ ಕುಟುಂಬದವರು ಮಾಡುತ್ತಾರೆ

ಕೃತಜ್ಞತೆಗಳು

ಮೇಲಿನ ಮೂರ್ತಿಗಳನ್ನು ಪರಿಶೀಲಿಸಿ ಛಾಯಾಚಿತ್ರಗಳನ್ನು ತೆಗೆಯಲು ಅನುಮತಿ ಇತ್ತು ಸಹಕರಿಸಿದ ಪರಮಪೂಜ್ಯ ಗುರುಗಳಾದ ಶ್ರೀ ಅದಮಾರು ಸ್ವಾಮೀಜಿಯವರಿಗೂ ಶ್ರೀ ಐರೋಡಿ ರಾಮಕೃಷ್ಣ ಶೈ [illegible] ಬಕ್ರಪುರದ ಶ್ರೀ ವಿಠಲ ಭಟ್ಟರಿಗೂ ಕಲ್ಯಾಣಪುರದ ಶ್ರೀ ರಾಮಚಂದ್ರ ಭಟ್ಟರಿಗೂ ಕೋಟದ ಪರಮೇಶ್ವರ ಸೋಮಯಾಜಿಯವರಿಗೂ ಹಾಗೂ ಕೆರವಾಸೆ ಚಂದ್ರನಾಥ [illegible] ಇಂದ್ರರಿಗೂ ನನ್ನ ಕೃತಜ್ಞತೆಗಳು. ಈ ಲೇಖನವನ್ನು ಪ್ರಕಟಿಸಿದ ಶ್ರೀ ಹೊನ್ನಯ್ಯ ಶೆಟ್ಟರಿಗೂ ಕೃತಜ್ಞತೆಗಳು.

✿ ✿

ನವಯುಗದ ಹೊಸ ವರ್ಷ

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 50ನೆಯ ವರ್ಷ ಮುಗಿದು ಸಪ್ಟಂಬರ ತಿಂಗಳಿನಿಂದ 51ನೆಯ ಹೊಸ ವರ್ಷಾರಂಭವಾಗುತ್ತದೆ ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಅಪಷ್ಟು ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸ ಬೇಕಾಗಿ ಅಪೇಕ್ಷಿಸುತ್ತೇವೆ ಚಂದಾ ಹಣವನ್ನು ಮನಿಯಾರ್ಡರು ಮೂಲಕ ಅಥವಾ ಇಂಡಿಯನ್ ಪೋಸ್ಟಲ್ ಆರ್ಡರು ಮೂಲಕ ಕಳುಹಿಸಬಹುದು ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಪಾವತಿ ಮಾಡಬಹುದು ಹಾಗೆ ಪಾವತಿ ಮಾಡುವಾಗ ತಮ್ಮ ಚಂದಾ ನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ಮೆನೇಜರ್

ಮದುವೆಗೆ ಅರ್ಥ

(ಹದಿಮೂರನೇ ಪುಟದಿಂದ)

ಲ್ಲೂ ಅನೇಕ ಅರ್ಥವತ್ತಾದ ಸಂಗತಿಗಳಿದ್ದುವು; ಅವೆಲ್ಲ ಎಲ್ಲರಿಗೂ ಅರ್ಥವಾಗುವಂತೆ ಜನರ ಆಡು ಮಾತಿನಲ್ಲಿಯೇ ಹೇಳುವ ಕ್ರಮವೂ ಇತ್ತು. ವೈದಿಕ ಶ್ರುತಿನುತಿ ವಿಧಿಗಳಲ್ಲಿಯೂ ಪುರೋಹಿತರು ಹೇಳುವ ಮಂತ್ರಗಳಿಗೂ ಒಳ್ಳೆಯ ಅರ್ಥವೇ ಇದೆ. ಹಿಂದೆ ಸಂಸ್ಕೃತ ಭಾಷಾಜ್ಞಾನವುಳ್ಳ ಬ್ರಾಹ್ಮಣರಿಗೆ ಸಹಜವಾಗಿ ಆ ಮಂತ್ರಗಳ ಸರಿಯಾದ ಅರ್ಥ ಆಗುತ್ತಿತ್ತು; 'ಧರ್ಮೆ, ಅರ್ಥೇ, ಕಾ ಮೇ ಚ....ನಾತಿಚರಾಮಿ' ಎಂದು ದಂಪತಿಗಳು ಹೇಳುತ್ತಿದ್ದ ವೈವಾಹಿಕ ಪ್ರತಿಜ್ಞೆಯನ್ನು ಆ ಮಾತಿನ ಅರ್ಥಗ್ರಹಿಸಿಯೇ ಹೇಳುತ್ತಿದ್ದರು. ಆ ಮೇಲೆ ಸಂಸ್ಕೃತಭಾಷಾಜ್ಞಾನ ಇಲ್ಲದೆ ಆದ ಮೇಲೆ ಪುರೋಹಿತರು ಹೇಳಿದ ಹಾಗೆ ಹೇಳಿದರು. ಕೆಲ ಸಂದರ್ಭಗಳಲ್ಲಿ ಹೇಳುವ ಪುರೋಹಿತರಿಗೂ ಅರ್ಥವಾಗದೇ ಇದ್ದರೂ ವಂಶಪರಂಪರಾ ಕ್ರಮವಾಗಿ ಹೇಳಿಸುತ್ತಾ ಬಂದರು. ಅಂತೂ ಅರ್ಥವುಳ್ಳ ಒಂದು ಕ್ರಮಾನುಸರಣೆ ಮದುವೆಯಲ್ಲಿ ಅವಶ್ಯವೆಂಬುದನ್ನು ನಾವಿಂದು ಗಮನದಲ್ಲಿ ಇಟ್ಟುಕೊಳ್ಳಬೇಕಾಗಿದೆ.

ಜಿಲ್ಲಾ ಬಂಟರ ಯಾನೆ ನಾಡವರ ಸಮಾಜ ಸಂಘದ ಅಧ್ಯಕ್ಷರಾಗಿರುವ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರು ನಮ್ಮ ದೇಶದ ಸಾಹಿತ್ಯ ಸಂಸ್ಕೃತಿಯ ಅಭ್ಯಾಸವುಳ್ಳವರು. ಮುಂದೆ ಸಮಾಜದಲ್ಲಿ ಆಗ ತಕ್ಕ ಮದುವೆಗಳೆಲ್ಲವೂ ಒಂದು ಕ್ರಮ ಪದ್ಧತಿಗಳಿಂದ ಕೂಡಿ ಸರಳವೂ ಗಂಭೀರವೂ ಆಗಿ ನಡೆವಂತೆ ಒಂದು ಪದ್ಧತಿ ರೂಪಿಸಲು ಅವರು ಪ್ರಯತ್ನ ಮಾಡಿದರೆ ಆದೀತೆಂದು ನಾನು ಸೂಚಿಸುತ್ತೇನೆ. ವೈದಿಕ ವಿಧಿವಿಧಾನವೇ ಆಗಲಿ; ಅಳಿಯಕಟ್ಟಿನ ಪ್ರಾಚೀನ ಕ್ರಮವೇ ಆಗಲಿ ಯಾವುದೂ ಆದೀತು; ಎರಡಕ್ಕೂ ಒಳ್ಳೆಯ ಅರ್ಥಗಳಿವೆ; ಅಥವಾ ಅವೆರಡನ್ನು ಕ್ರೋಢೀಕರಿಸಿದ ಹೊಸ ಕ್ರಮವಾದರೂ ಆದೀತು. ಅಂತೂ ಕ್ರಮವಿರಹಿತವಾಗಿ ಆಗ ಬಾರದು; ಜಸ್ಟಿಸ್ ಹೆಗ್ಡೆಯವರು ಇಂತಾ ಒಂದು ಕ್ರಮ ಬೇಕೆಂಬ ಸೂಚನೆಯಾಗಿ ಕಾರ್ಯತಃ ಮಾಡಿತೋರಿಸಿದ್ದಾರೆ;ಈ ಸೂಚನೆಯನ್ನು ಸಮಾಜದವರು ಸ್ವಲ್ಪ ಗಂಭೀರವಾಗಿ ತೆಗೆದು ಕೊಂಡು ಆ ಮೂಲಕ ಸಮಾಜದ ಏಳಿಗೆಯ ಬಗ್ಗೆ ಚಿಂತನೆ ಮಾಡಬೇಕು.

ಮದುವೆ ಸಮಾಜದ ಸಂಸ್ಕೃತಿಯ ಕಾರ್ಯ, ಅದಕ್ಕೆ ತುಂಬಾ ಅರ್ಥವಿದೆ; ಅಂತಹ ಅರ್ಥವನ್ನು ತಿಳಿಸುವ ಕ್ರಮವೂ ಬೇಕಾಗಿದೆ. ಇದರಿಂದಲೂ ಸಮಾಜಕ್ಕೆ ಘನತೆ ಗೌರವ ಹೆಚ್ಚುತ್ತದೆ.

ನಾಗರಿಕತೆ

ಸೋಣ ತಿಂಗಳೇ
ಗಲ್ಲಿ ಗಲ್ಲಿಗಳಲ್ಲಿ ನೋಡಿ!
ಆವಳ ಮುಖಕ್ಕೆ ಮೆತ್ತಿದ ಸ್ನೋ, ಪೌಡರುಗಳ
ಕಮಟು ವಾಸನೆ ನಾಸಿಕಕ್ಕೆ ಬಡಿದಾಗ
ಅಹಾ! ಯೋಜನಗಂಧಿ ಎನ್ನುತ್ತಾನೆ
ಒಬ್ಬ ಶಂತನು ಸಾರ್ವಭೌಮ!
ವಿಶ್ವಾಮಿತ್ರ ತಪೋಮಗ್ನ—
ಮೇನಕೆಯ ಕೂಡಿ ಪಡೆದ ಕೂಸು
ಕಣ್ವಮುನಿ ಬೆಳಸಿದ ಶಕುಂತಳೆಗೆ
ತನ್ನ ಕೈ ಬೆರಳ "ಸಾಯಿಬಾಬಾ"
ಮೊಹರಿನುಂಗುರ ತೋರಿ
ಗಂಧರ್ವ ವಿವಾಹ ಮಾಡಿಕೊಳ್ಳೋಣ
ಕರೆಯುತ್ತಾನೆ ಇನ್ನೊಬ್ಬ ದುಷ್ಯಂತ!
ಕುಂತಿ ಹರಸಿದಳು, ವ್ಯಾಸಋಷಿ
ಸಮ್ಮತಿಯಿತ್ತ
ನಾವೆಲ್ಲ ಕೂಡಿಕೊಳ್ಳೋಣ
ಈ ಪಾಂಚಾತಿಯನ್ನ
ಹಾಸಿಗೊಬ್ಬೊಬ್ಬರಂತೆ!
ಅವಳುಟ್ಟ ಸೀರೆ ಸೆರಗು ಬೀಸುಗಾಳಿಗೆ
ಸ್ವಲ್ಪ ಜಾರಿದಾಗ,
ಹತ್ತಿರದವನನ್ನು ಅಪ್ಪಿ, ತನ್ನ ತುಟ್ಟಿ ಬಳಿಗೆ
ಕೈತಂದು ಮುತ್ತನಿಕ್ಕಿ,
"ಮೇರೆ ಮನ್‌ಕೀ ಗಂಗಾ, ಔರ್ ತೇರೆ ಮನ್
ಕೀ ಜಮುನಾ"
ಹಾಡುತ್ತಾನೆ, ತನ್ನನ್ನೆ ಮರೆತು
ಕುಣಿಯುತ್ತಾನೆ!
ಮರುಧರೆಯ ಮರಳಿನಡಿಯಲ್ಲಿ ಮಲಗಲಿಕ್ಕೆ
ಎಲ್ಲಿಹುದು "ಲೈಲಾ ಮಜ್ನೂ" ಪ್ರೇಮಜೋಡಿ?
ಸೋಣ ತಿಂಗಳೇ!
ಗಲ್ಲಿ ಗಲ್ಲಿಗಳಲ್ಲಿ ನೋಡಿ!

ಕವಿ: ಪಿ. ಶ್ಯಾಮ ಭಟ್, ಪೆರಡಾಲ.

ಒಂಟಿ ಬಾಳೆ ಸಾಕು.

—ಶ್ರೀ ಬಿ. ಕೃಷ್ಣ ಭಟ್, ಭದ್ರಾವತಿ.

ನುಡಿಯ ಬೇಕು
ನುಡಿಸ ಬೇಕು
ಉಣ್ಣ ಬೇಕು
ಉಣಿಸ ಬೇಕು
ಕೊಡಲು ಬೇಕು
ಕೊಳ್ಳ ಬೇಕು
ಕೊಂಡು ಕೊಟ್ಟು ಮಾಡ ಬೇಕು
ಕೆಳೆಯರಿಂತು
ನಡೆಯ ಬೇಕು
ಗೆಳೆಯರೆಲ್ಲ
ಗುಣಗಳಾರ ಬೆಳೆಸ ಬೇಕು
ಬೆಳಸನಿದರ
ಬಾಳಿನಲ್ಲಿ
ಬಳಸದವರು
ನಿಜದಿ ಖಳರು
—ನೆಂಟರಿರಲಿ
ಅವರ ತಂಟೆ
ನಿನಗೆ ಬೇಡ
ಒಂಟಿ ಬಾಳೆ ಸಾಕು—

ಸತ್ಯಕ್ಕಿಂತ ಬೇರಿನ್ನಾವ ಧರ್ಮವನ್ನೂ ನಾನರಿಯೆ. —ಮ. ಗಾಂಧಿ

ಬುದ್ಧಿ ಸ್ವಾತಂತ್ರ್ಯವು ಅನ್ನ ಸ್ವಾತಂತ್ರ್ಯವನ್ನು ಅವಲಂಬಿಸಿದೆ. —ಅಲೆಗ್ಜಾಂಡರ್ ಹ್ಯಾಮಿಲ್ಟನ್

ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು!

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ, ಉಡುಪಿ. ಫೋನ್: 366

ಉತ್ತಮ 22 ct ಖಾತ್ರಿ ಚಿನ್ನದ ಆಭರಣಗಳನ್ನು ಮತ್ತು ಬೆಳ್ಳಿಯ ಯಾವತ್ತೂ ಒಡವೆಗಳನ್ನು ಖಾತ್ರಿಯಾಗಿ ಮನಸ್ಸಿಗೆ ಒಪ್ಪುವಂತೆ ತಯಾರಿಸಿ ಕೊಡುತ್ತೇವೆ. ವಿವಿಧ ಮಾದರಿಯ ಪವನು ಬಂಗಾರದ ನೆಕ್ಲೆಸ್, ಬಳೆ, ಉಂಗುರ, ಬೆಂಡೋಲೆ, ಬೊಟ್ಟು, ಟಿಕ್ಕಿ, ಬೇಸಿರಿಗಳು, ಕರಿಮಣಿ, ಲಕ್ಷ್ಮೀತಾಳೆ, ತರುವಾರು ಪೆಂಡೆಂಟು ಇತ್ಯಾದಿಗಳಿಗೆ

● ಇಂದೇ ನಮ್ಮ ಶೋರೂಮನ್ನು ಸಂದರ್ಶಿಸಿರಿ ●

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

Phone: 676 Residence

ತೆಂಕಪೇಟೆ, ಉಡುಪಿ. ಫೋನ್: 366

ರೇಡಿಯೋ ಮತ್ತು ಟ್ರಾನ್ಸಿಸ್ಟರುಗಳು, ಫ್ಯಾನುಗಳು, ಸೋಫಾ ಕಂ-ಬೆಡ್, ಗಡಿಯಾರಗಳು, ಎಲ್ಲಾ ತರದ ಸ್ಟೈನ್‌ಲೆಸ್ ಸ್ಟೀಲಿನ ಪಾತ್ರೆಗಳು, ಉಡುಗೊರೆಯ ಸಾಮಾನುಗಳು, ಟೇಪ್‌ರೆಕೋರ್ಡರ್ ಇನ್ನೂ ಹಲವಾರು ತರದ ಸಾಮಾನುಗಳು

ಇವುಗಳಿಗಾಗಿ

ಇಂದೇ ಸಂದರ್ಶಿಸಿರಿ!

ಜಾತ್ರೆಯ ಸಲುವಾಗಿ ಸ್ಪೆಶಲ್ ರಿಯಾಯತಿ ದರದಲ್ಲಿ ಮಾರಾಟ ಮಾಡುತ್ತೇವೆ.

ಮ್ಯಾನೇಜರು: ಯು. ರಾಘವೇಂದ್ರ ಕೃಷ್ಣ ಭಟ್.

With best compliments from

SHAMA SHETTY

JEEVAN CAFE

MARKET ROAD, DHARWAR.

ಸ್ವಾತಂತ್ರ್ಯೋತ್ಸವದ ಶುಭಾಶಯಗಳು!

ಜೀವನ ಕೆಫೆ

ಮಾರ್ಕೆಟ್ ರಸ್ತೆ, ಧಾರವಾಡ.

ಸ್ವಾತಂತ್ರ್ಯೋತ್ಸವದ ಶುಭಾಶಯಗಳು!

ಮೆಸರ್ಸ್ ಐರೋಡಿ ರಾಧಾಕೃಷ್ಣ ಪೈ

ಪಾತ್ರೆ ವ್ಯಾಪಾರಿ,

ಅನಂತೇಶ್ವರ ಸನ್ನಿಧಿ,

ರಥಬೀದಿ, ಉಡುಪಿ, ದ. ಕನ್ನಡ.

‘ಮಯೂರವಟಿ’ ವೆಂಕಟರಮಣಯ್ಯನ ಕೃತಿಗಳು

(ಹನ್ನೆರಡನೇ ಪುಟದಿಂದ)

ಳಗ ಪ್ರಸಂಗವು ನಂದಳಿಕೆ ಲಕ್ಷ್ಮೀನಾರಣಪ್ಪ (ಮುದ್ದಣ) ನವರದಷ್ಟೆ. ಅದು ಸ್ವಲ್ಪ ಬಿಗುವಾದ ಶೈಲಿ. ಅದನ್ನೋದಿದವರಿಗೆ ಈ ಕೃತಿ ‘ಸರಳ – ಸುಂದರ’ವೆಂದೆನ್ನಿಸದಿರದು, ಅಂತೂ ಯಕ್ಷಗಾನ ಧಾಟಿಗೆ ಇದು ಅವಿರೋಧವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ” (ಇತ್ತೀಚೆಗೆ ಸಂದ ಇಲ್ಲಿ ನೆರೆಯ ಶ್ರೀ ಹತ್ವಾರಿ ನಾರಾಯಣ ರಾಯರು ಇದರ ಲಲಿತ–ಸುಂದರ ಶೈಲಿಯ ವಿಚಾರ ಆಗಾಗ ಹೇಳುತ್ತಿದ್ದರು).

ವೆಂಕಟಗಿರಿ ಮಹಾತ್ಮ್ಯೆಯು‘ವರ ಭವಿಷ್ಯೋತ್ತರ ಪುರಾಣ’ದಿಂದ ಆರಿಸಿದುದು. ಇದರ ಹದಿಮೂರು ಸಂಧಿಗಳಲ್ಲಿ ಸಾಧಾರಣ ಆಯ್ದು ನೂರಕ್ಕೂ ಮಿಕ್ಕಿ ಭಾ. ಷಟ್ಪದಿಗಳಿವೆ, ಈ ಕೃತಿ ಪ್ರೌಢವಾಗಿಲ್ಲ. ಓದುಗರಿಗೆ ಕಥಾ ಪರಿಚಯಕ್ಕೆ ಸಹಕಾರಿಯಾಗುವಂತೆ ಸರಳವಿದೆ.

‘ಕಾವೇರಿ ಮಹಾತ್ಮ್ಯೆ’ಯು ‘ದೊರೆಹರಿಶ್ಚಂದ್ರಾವನೀಶಗೆ ವರ ಮಹಾ ಕಾವೇರಿ ಮಹಿಮೆಯ ನೊರೆದಗಸ್ತ್ಯ ಮುನೀಂದ್ರ ವಿವರಿಸುತಧಿಕ ಹರುಷದಲಿ’ ಎಂಬುದಾಗಿ ಬಿತ್ತರಿಸಿದೆ. ಇದರ ರಚನೆಯ ಪ್ರೇರಣೆಯೇನೆಂದು ಹೇಳಿದೆ. “ಧರೆಯೊಳಗೆ ವರ ತುರಗವಟಿಯೆಂದೊರೆವ ದಿಕ್ಕಿನೊಳಧಿಕ ಸತ್ಯದಿ ಮೆರೆವ ಸಾಧುಗಳರಸ ವಿಷ್ಣೂಶರ್ಮನೆಂದೆನುವ | ಧರಣಿಸುರ ಸಹ್ಯಜೆಯ ಚರಿತವ ವಿರಚಿಸಲು ಬೇಕೆಂದು ನೇಮವ ಕರುಣಿಸಿದ ಕಾರಣದಿ’ ಈ ಕೃತಿ ಬರೆಯಲಾಗಿದೆ (ತುರಗ ವಟಿ–ಕುದುರೆ ಪಾಡಿಯ (?) ವಿಷ್ಣು ಶರ್ಮನ ಜೀವನಾದಿ ವಿಚಾರ ಇಲ್ಲಿ ತಿಳಿಯ ಬೇಕಾದುದು ಬಲ್ಲವರು ತಿಳಿಸಬೇಕಾಗಿದೆ!) ಇದರ ಹದಿನೆಂಟು ಸಂಧಿಗಳಲ್ಲಿ ಆರುನೂರ ಅರುವತ್ತಾರು (666) ಭಾ. ಷಟ್ಪದಿಗಳಿವೆ. ಸಾಧಾರಣ ರೀತಿಯಲ್ಲಿ ಇಲ್ಲಿ ವಾಕ್ಪ್ರವಾಹ ಸಾಗಿದೆ.

‘ಅನಂತವ್ರತ ಕತೆ’ಯು ‘ಭವಿಷ್ಯೋತ್ತರ ಪುರಾಣ’ದಲ್ಲಿ ಹೇಳಿದುದು. ಈ ವ್ರತ (ನೋಂಪು––ನೋಂಪಿ) ಎಲ್ಲೆಡೆ ಆಚರಿಸಲಾಗುತ್ತಿದೆ. ಈ ಕತೆ ಆಗ ವಾಚನೀಯವು. ಈ ಕೃತಿ ಎಪ್ಪತ್ತಮೂರು ಭಾ. ಷಟ್ಪದಿಗಳಲ್ಲಿದೆ. ಇದರ ಹಸ್ತ ಪ್ರತಿ ಸುರತ್ಕಲ್ಲು ‘ವಿಜಯ ಸಾಹಿತ್ಯಮಾಲೆ’ಯ ‘ಪ್ರಾಚೀನ ವಸ್ತು ಸಂಗ್ರಹ’ದಲ್ಲಿದೆ.

‘ಸದ್ಗ್ರಂಥ ರಚನೆ’ಯೂ ‘ಸಪ್ತ ಸಂತಾನ’ಗಳಲ್ಲಿ ಒಂದಾಗಿದೆ. (ವಿವೇಕ ಚಿಂತಾಮಣಿ, ಪುಟ 224). ಈ ಕೃತಿಗಳು ಈ ಕವಿಯ ಕೀರ್ತಿ ಸಂತತಿಯನ್ನು ಕನ್ನಡದಲ್ಲಿ ಚಿರಸ್ಥಾಯಿಯಾಗಿಸ ಬಲ್ಲವು (ಕವಿಯ ಪೀಳಿಗೆ ಮುಂಬರಿದಿಲ್ಲ). ಕವಿಯ ಕುಟುಂಬದವರಿಂದ ದಿ. ಮೈಪಾಡಿ ವೆಂಕಟರಮಣಯ್ಯ (ತೋಡ ಬಳಿ ಮನೆಯ ವೆಂಕಟರಾಯರು) ಬರೆದ ‘ಜಯಂತ ವಿಜಯ’ವು ಮಂಗಳೂರ ‘ಪ್ರಭಾತ’ ವಾರ ಪತ್ರಿಕೆಯವರು ತೊಡಗಿದ ‘ಒಂದಾಣೆ ಮಾಲೆ’ಯಲ್ಲಿ ಪ್ರಕಟವಾಗಿದೆ. ‘ಪ್ರತಾಪ ಚಂದ್ರ ಚರಿತೆ’ಯು ಅಚ್ಚಾಗಿಲ್ಲ. ಹಸ್ತ ಪ್ರತಿಯಾಗಿ ಉಳಿದಿದೆ.

ಸುರಸ ಘಟ್ಟಗಳು: ಇವಲ್ಲಿ “ಪ್ರಹ್ಲಾದ ಚರಿತೆ”ಯಿಂದ ಕೆಲವು ಸುರಸಘಟ್ಟಗಳನ್ನು ಆಯ್ದು ಈ ಬರೆಹ ಪ್ರಕೃತ ಪೂರಯಿಸಲಾಗಿದೆ. ಬೇರೆ ಕವಿಗಳು ಬರೆದ ಪ್ರಹ್ಲಾದ ಚರಿತೆಗಿಂತ ಈ ಕೃತಿಯ ಪ್ರಚುರತೆ–ಬಳಕೆ ಹೆಚ್ಚಾಗಲು ಇಂತಹ ಸುರಸ ಘಟ್ಟಗಳೇ ಕಾರಣಗಳೆಂದರೆ ಅತಿಶಯೋಕ್ತಿಯಲ್ಲ!

ದೇವತೆಗಳು ಹರಿಯ ರೂಪನ್ನು ಕಂಡುದು ಹೀಗೆ ವರ್ಣಿಸಲಾಗಿದೆ: ‘ಸುಳಿಗುರುಳ ವರಪಂತ ಪಂಕ್ತಿಯ | ಥಳಥಳಿಪ ನಗುಮೊಗದ ಮಿಗೆ ಕಳ | ಕಳಿಸುತಿರೆ ನಲಿನಲಿದು ನೆರೆಯುವ ಮಕರ ಕುಂಡಲದ | ಪೊಳೆವ ಹಾರದ ಕೌಸ್ತುಭದ ಪ್ರ | ಜ್ವಲಿಪ ಮುಕುಟದ ಲಲಿತ ತಿಲಕದ | ಚೆಲುವ ದೇವರ ದೇವನನು ಕಂಡೊಡನೆ ಪೊಗಳಿದರು.’ (ಭಾ. ಷ.), ಇಲ್ಲಿಯ ಹಲವಂಗಗಳ ಸೊಬಗಿನ ಬಣ್ಣವೆ ಚೆನ್ನಾದ ಕಾವ್ಯದಂತಿದೆ.

ದೇವದೇವನನ್ನು ದೇವತೆಗಳು ಹೊಗಳಿದ ರೀತಿಯಿದು. (ಕಾಂಭೋಜ–ತ್ರಿವುಡೆ): “ಓಂ ನಮೋ ನಾರಾಯಣ | ಜಯ ಜನಾರ್ದನ| ಓಂ ನಮೋ ನಾರಾಯಣ || ಓಂ ನಮೋ ಶ್ರೀತಪೋಷಹರಿ ಓಂ|ಓಂ ನಮೋ ಭವನಾಶ ಸುರನುತ | ಓಂ ನಮೋ ಜಲಶಾಯಿ ಗಿರಿಧರ | ಓಂ ನಮೋ ದುರಿತೌಘ ಸಂಹರ ||” ಇಲ್ಲಿ ‘ಓಂ’ಕಾರಮಯದಿಂದ ಪದ್ಯಕ್ಕೆ ಅದೊಂದು ಸೌಂದರ್ಯವೊದಗಿದೆ.

ಅದೆಷ್ಟು ಬೇರೆ ತರದಲ್ಲಿ ಹೇಳಿದರೂ ಪ್ರಹ್ಲಾದನು ಹರಿನಾಮ ಸ್ಮರಣೆಯನ್ನು ಬಿಡದಾಗ, ಗುರುಕುಲದಲ್ಲಿ ಆತನಿಗೆ ಶಿಕ್ಷೆಯೊದಗಿತ್ತು. (ಸೌರಾಷ್ಟ್ರ ತ್ರಿವುಡೆ): ‘ತರಳ ಕೇಳ್ ನಾ ಪೇಳಿದಂದದಿ | ಬರೆಯದಿರಲೀಗೊಂಟಿ ಕಾಲಲಿ|ಭರದಿ ನಿಲಿಸುವೆ ಹರ ಹರೆನ್ನುತ ಬರೆಯೊ ಎನಲು || ಮತ್ತು ಮತ್ತಾ ಹರಿಯ ನಾಮವ | ನರ್ತಿಯಲಿ ಬರೆಯುತ್ತಲೋಮತ | ಸ್ವಸ್ಥದಿಂದಿರೆ ಕಾಣುತಿದನಾ ಪೃಥ್ವಿಯಮರ || ಎತ್ತಿರೋ ಕೋದಂಡ ಕೀರ್ತ | ನಿತ್ತ ತನ್ನಿರೊ ಕಸೆಯ ಕೋಲನು | ಒತ್ತಿ ಕುಳಿಸಿ ಪರಂಗಿ ಮಣೆಯೊಳೆನುತ್ತ ನುಡಿದ||’ ಇಲ್ಲಿ ಈ ಕವಿ ತನ್ನ ವಿದ್ಯಾಭ್ಯಾಸದ ಕಾಲದ (ಈ ಶತಕದ ಪ್ರಾರಂಭದ ದಶಕಗಳ) ಐಗಳ ಮಠಗಳಲ್ಲಿ, ಕಿರಿಯ ಸಾಲೆಗಳಲ್ಲಿ ಇದ್ದ ಶಿಕ್ಷೆಗಳನ್ನು ಇಲ್ಲಿ ಅಳವಡಿಸಿದ್ದಾನೆ! ಕಾವ್ಯದಲ್ಲಿ ಕವಿಯ ಜೀವನ –ಅನುಭವ–ವಾತಾವರಣ ಪ್ರತಿಬಿಂಬಿತವಾಗುತ್ತದೆಯಲ್ಲವೇ?

ಪ್ರಹ್ಲಾದನಿಗೆ ತಾಯಿ ಬುದ್ಧಿ ಹೇಳುವುದು, ತಾಯಿಗೆ ಮಗನು ಉತ್ತರಿಸುವುದು, ಈ ತರದ ಸಂವಾದವಿಲ್ಲಿದೆ (ಸೌರಾಷ್ಟ್ರ–ತ್ರಿವುಡೆ): ‘ಮಗನೆ ಬಿಡು ಛಲ ಸರಿಯೆ ನಿನಗದು| ಹಗೆಯ ಕೊಂಡಾಡುವುದು ನಿರತದಿ| ಜಗತಿಯೊಳಗಿಹ ಜನರು ಬಯ್ಯರೆ| ಸುಗುಣ ನಿನಗೆ| ತಂದೆಯುವರೇನೆಂದರದ ನೀ ಹಿಂದು ಗಳೆದಪೆಯಂತೆ ಗ್ರಹಿಸದೆ| ಎಂದಿಗಾದರು ಪೇಳ್ವೆ ನಿನಗಿದು|ಚೆಂದವಲ್ಲ|| ಹರಿಯ ನಾಮವ ಸ್ಮರಿಸದಿದ್ದರೆ| ಬರುವುದೇನೆಲೆ ಕೊರತೆ ನಿನಗದ| ಸಿರಿವರನು ತಾನೇನನೀವನು| ತರಳ ನಿನಗೆ.||” “ಹಿಂದಕೆನ್ನಯ ಪಿತನು ಬಹು ಪರಿ|ಯಿಂದ ಕೊಲಲೆತ್ನವನುಕರಿಸಲು| ನೊಂದು ಬಿಡಿಸಿದರಾರು ಹಸುಮಗು|ವೆಂದುಎನ್ನ||” “ಕಂದನಾಡಿದ ನುಡಿಯ ಕೇಳುತ|ಲೆಂದಳಂಗನೆ ಸುರಮುನೀಂದ್ರನು|ಹಿಂದೆಬಂದೆನ್ನೊಡನೆ ಪೇಳಿದ ಮಾತು ದಿಟವಾಯ್ತು|| ನೊಂದು ಕೊಳಲೇಕೀತ ಶ್ರೀ ಗೋವಿಂದನಡಿದಾವರೆಯ ಸೇವಕ|ನೆಂದು, ಕೊಟ್ಟರೆ ವಿಷವ ಕುಡಿದಲೆ ಸುಖದೊಳಿರುತಿರ್ದ||” (ಭಾ.ಷ.) ನಾರದ ಒಮ್ಮೆ ಪ್ರಹ್ಲಾದನ ಗರ್ಭಾವಸ್ಥೆಯಲ್ಲಿ ಆತನ ತಾಯಿಗೆ ಹೇಳಿದ ಉಪದೇಶವು ಇಲ್ಲಿ ಎತ್ತಿಕೊಳಲಾಗಿದೆ! ತಾಯಿಯಾದರೋ, ಮಗನಿಗೆ ವಿಷಕೊಟ್ಟರೂ, ಏನಾಗದೆ ಅತಿಸುಖದಲ್ಲಿ ಇದ್ದ ಕತೆಗೆ ಇದು ಹಿನ್ನೆಲೆಯಾಗಿ, ಚೆಲುವಾಗಿ ಹೇಳಿದೆ!

ಪ್ರಹ್ಲಾದನನ್ನೂ ತಂದೆ ಕತ್ತಿಯಿಂದ ಕೊಲ್ಲುವೆನೆಂದಾಗ, ತಾಯಿ ತಡೆಯುವಳು “ದಮ್ಮಯ್ಯ ಕೊಲ್ಲದಿರಿ|ಕಂದಯ್ಯನ| ನೊಮ್ಮೆಗೆ ಸೈರಿಸಿರಿ|| ಸುಮ್ಮಗೀ ಪರಿಯದು|ಷ್ಕರ್ಮವಗೆಯ್ಯರಿ|ನಿಮ್ಮುಪ್ರದಪಕೀರ್ತಿ| ನಿಮ್ಮನೆ ನಿಮ್ಮಾಣೆ||××× ಆದರಿನ್ನೊಮ್ಮಿವನ| ಕಳುಹಿಸಿ ಬೇಗ| ಕ್ರೋಧ ತೊರೆದು ಮಗನ||ನೋದದಿ ಗುರುಗೃಹ| ಕಾದರಿಸುತ ತಕ್ಕ|ಹಾದಿಗೆ ಬಹ ನೋಡಿ|ಬಾಧಿಪುದನು ಬಿಡಿ.” ತಾಯಿಕರುಳು ಮಗನನ್ನು ಹಿಂಸಿಸುವುದನ್ನು ತಡೆದು, ಗಂಡನಲ್ಲಿ ಏನೋ ಒಂದು ಸಮಾಧಾನ ಮಾಡುವುದು ಸಂದರ್ಭೋಚಿತವಿದೆ! (ಗಂಡನ ಆಣತಿಯಂತೆ ತಾನೇ ಮಗನಿಗೆ ವಿಷಕೊಟ್ಟಾಗ ‘ಶ್ರೀ ಗೋವಿಂದನಡಿದಾವರೆಯ ಸೇವಕ’ನೆಂದು ತಾನೇ ತನ್ನನ್ನು ಸಂತೈಸಿದ ರೀತಿಗಿಂತ ಇಲ್ಲಿ ವಿಲಕ್ಷಣವಾಗಿದೆ!)

ಪ್ರಹ್ಲಾದನು ಸಹಪಾಠಿಗಳಿಗೆ ಸ್ವವಿಚಾರವನ್ನು ತಿಳುಹುವನು (ಮಧ್ಯಮಾವತಿ–ಏಕ): “ಕೇಳಿ ಬಾಲಕರಿಂದೆನ್ನ ನುಡಿಯ| ಪೇಳುವೆನೀಗೆನ್ನ ಮನಸಿನ ಪರಿಯ || ಜನಿಸಿದಾಗಳೆ ಕೋಪಗೊಂಡು ಮಜ್ಜನಕನು | ತನುಜನಾದೆನಗೆರಡೆಣಿಸಿದನು || ಜನುಮಯನೊಲುಮೆಯೊಳಿಂದಿನ ತನಕನಾ|ತನು ವಿಡಿದಿಳೆಯೊಳು ಬದುಕಿರ್ದೆನಯ್ಯ|| ××× ಇಂದೊ ನಾಳೆಯೊ ಮತ್ತಿನ್ನಿಗಲೊ ನಾಡದೊ| ಎಂದು ಬಪ್ಪುದು ಮೃತ್ಯುವೆಂಬುದನು| ಮುಂದಿನಾಗಮವನ್ನು ಬಲ್ಲವರ್ಯೊರು, ಮು | ಕುಂದ ಧ್ಯಾನದಿ ಭಯವಿಲ್ಲ ನಿಶ್ಚಯವು ||’. ಪ್ರಹ್ಲಾದನು ತಂದೆಯಲ್ಲಿ ಅದೇನೂ ಮುನಿಸದೆ, ತನ್ನ ಅಂತರ್ಯವನ್ನು ಸಾರುತ್ತಾನೆ ! ಪಾತ್ರ ದೃಷ್ಟಿಯಲ್ಲಿ, ಕಾವ್ಯ ದರ್ಶನದಲ್ಲಿ ಇದು ಮಹತ್ತ್ವಪೂರ್ಣವಾದ ಘಟ್ಟವಾಗಿದೆ!

ಪ್ರಹ್ಲಾದ–ತಂದೆಯರ ಸಂವಾದ ಬಲು ಚೊಕ್ಕವಾಗಿದೆ (ಶಂಕರಾಭರಣ–ಏಕ): “ಮತ್ತು ಮತ್ತೆನ್ನರಿಯ ನುತಿಪ| ಪುತ್ರನಲ್ಲನಿವನು ಎನಗೆ | ಸತ್ತು ಪೋಗದುಳಿದನಲ್ಲೆ| ಷ್ಟೆಷ್ಟು ಗೈದರು || ಶತ್ರು ತನಗೆ ತಾನೆ ತನ್ನ | ಚಿತ್ತವನ್ನು ಜಯಿಸದವನೆ | ಯತ್ನ ನಿನ್ನದೆಲ್ಲ ದೈವ | ಯತ್ನಕ್ಕೆ ಸರಿಯೆ||’. ಪ್ರಹ್ಲಾದನ ಮಾತುಗಳೆರಡು ಸೂಕ್ತಿಗಳಂತಿವೆ!

ಪ್ರಹ್ಲಾದನು ನರಸಿಂಹನನ್ನು ಯೋಚಿ

ನಮ್ಮ ಗ್ರಾಹಕರಿಗೂ ಹಿತೈಷಿಗಳಿಗೂ

ಸ್ವಾತಂತ್ರ್ಯೋತ್ಸವದ ಶುಭಾಶಯಗಳು

ಕೆ. ಸಂಜೀವ ರಾವ್

ಮಾಲಕ

ಉಡುಪಿ ಶ್ರೀಕೃಷ್ಣ ವಿಲಾಸ

ಗ್ರಾಹಕರಿಗೆ ಸತ್ಕಾರ ಸಂತೃಪ್ತಿಯನ್ನೀಯುವ

ಉಪಾಹಾರ ಮಂದಿರ

ಮೈನ್ ರೋಡು, ಕಾರ್ಕಳ.

ನಮ್ಮ ಜ್ಞಾನ ವಿಕಾಸದ ಸಾಧನ-ಸಾಹಿತ್ಯ

ಶ್ರೀ

(ಹನ್ನೊಂದನೇ ಪುಟದಿಂದ)

ಗುರುಕುಲದ ಸ್ವರೂಪವು ಅಲ್ಲಿ ತುಸು ಮಟ್ಟಿಗೆ ಬದಲಾಯಿತು. ತಲೆಯಲ್ಲಿಯೇ ಇದ್ದ ವಿಚಾರ ಬಾಯಿಂದ ಬಾಯಿಗೆ, ಕಿವಿಗೆ ಕೇಳಿ– ಹೇಳಿ ಹರಿದು ಬರುತ್ತಿದ್ದ ರೀತಿ ತೀರ ಹಳೆಯದಾಗಿ ಕಂತ ಸಂಗತಿಗಳನ್ನು ತಿಳಿದ ವಿಚಾರಗಳನ್ನು ಮೂಡಿದ ಭಾವನೆಗಳನ್ನು ಬರೆದಿಡುವ ಪ್ರಯತ್ನಕ್ಕೆ ಬದಲಾಯಿತು. ಈ ರೀತಿ ಬರೆಯುವ ಜನರನ್ನು ಅಂದು 'ಲಿಪಿಕಾರ' 'ದಿವಿ-ರಪತಿ' ಎಂದೂ ಕರೆಯಲಾಗುತ್ತಿತ್ತು. ಈ ಗ್ರಂಥಗಳನ್ನು ಸಿದ್ಧಗೊಳಿಸುವವರು ಒಂದು ಕಾರ್ಯವಾಗಿ ಅದನ್ನು ಕೆಲವರು ಕೈಕೊಳ್ಳುತ್ತಿದ್ದರು ಅವರಿಗೆ 'ಕಾ–ಯಸ್ಥ' 'ಲೇಖಕರು' ಎಂದು ಕರೆಯುವದು ರೂಢಿಯಲ್ಲಿತ್ತು.

ಗ್ರಂಥ ಸಾಧನ

ಈ ರೀತಿ ಗ್ರಂಥಗಳನ್ನು ರಚಿಸಿ ಸಿದ್ಧಗೊಳಿಸುತ್ತಿರುವದಕ್ಕೆ ಅಂದಿನ ಸಾಧನಗಳೆಂದರೆ ಭೂರ್ಜಸತ್ರ, ತಾಳೆಗರಿ, ಅಲ್ಪ ಸಂಗತಿಗಳನ್ನು ಶಿಲೆಯಲ್ಲಿ, ತಾಮ್ರದ ತಗಡಿನಲ್ಲಿ, ಇಟ್ಟಿಗೆಯಲ್ಲಿ ಬರೆಯಲಾಗುತ್ತಿತ್ತು. ಆದರೂ ಗಂಥಗಳನ್ನು ತಾಳೆವಾಲೆಯಲ್ಲಿ ಬರೆದು ಸ್ಥಿರಕಾಲ ಇಡುವ ಅಂದಿನ ಪ್ರಯತ್ನ ಬಹುದೊಡ್ಡದೆಂದೇ ಹೇಳಬೇಕು.

ತಾಳೆಯ ಹಾಳೆಯಲ್ಲಿ ಸೀಸದ ಕಂಟಗಳಿಂದ ಅಕ್ಷರಗಳನ್ನು ಲಕ್ಷ್ಯವಿಟ್ಟುಕೊರೆದು ಕಪ್ಪುಪುಡಿ ಅಥವಾ ಮಸಿಯಿಂದ ಉಜ್ಜಿ ಅವನ್ನು ದಾರದಿಂದ ಪೋಣಿಸಿ, ಮೇಲೆ ಲಿಪಿಯಲ್ಲಿ ಹಲಗೆ ಹಾಕಿ ಸುತ್ತಿಡುವ ಅದರ ಕ್ರಮವನ್ನು ಇಂದು ಹೇಳಿದರೆ ಅಷ್ಟೇನೂ ಆಶ್ಚರ್ಯವೆನ್ನಿಸುವದಿಲ್ಲ. ಇಂದು ನಮಗೆ ಮುದ್ರಣ ಹಾಳೆ, ಸಾಹಿತ್ಯಗಳ ನೆರವು ಬೇಕಾದಷ್ಟು ಇರುವಾಗ ಅದರ ಕಲ್ಪನೆಯಾಗಲೀ ಅದೊಂದು ಮಹತ್ವದಸಾಹಸವೆಂದಾಗಲೀ ಅನ್ನಿಸುವದೇ ಇಲ್ಲ. ಆದರೆ ಅಂದು ಯಾವ ಸೌಲಭ್ಯವೂ ಇರದಿದ್ದಾಗ ಬೌದ್ಧಿಕ ಸಂಗತಿಗಳನ್ನೂ ನಶಿಸ ಹೋಗದಂತೆ ಕಾದುಕೊಂಡು ಮುಂದಿನ ಜನಾಂಗಕ್ಕೆ ಉಪಯೋಗವಾಗಲಿ ಎಂದು ಅವರ ಅಂದಿನ ಪ್ರಯತ್ನಕ್ಕೆ ನಾವು ಚಿರಋಣಿಗಳೇ ಆಗಬೇಕಾಗಿದೆ. ಹಿಂದಿನ ಗ್ರಂಥಗಳ ಸಹಾಯ ನಮಗೆ ಸಿಗದಿದ್ದರೆ ನಮ್ಮ ಪೂರ್ವೇತಿಹಾಸದ ಸ್ಥಿತಿ— ಗತಿಗಳನ್ನು ಅರಿಯಲೇ ಸಾಧ್ಯವಿದ್ದಿಲ್ಲ.

ನಮ್ಮ ಪುರಾತನದ, ಸನಾತನದ, ವೇದೋಪನಿಷತ್ತುಗಳು, ಪುರಾಣಗಳು, ಇತಿಹಾಸಗಳು, ದಾರ್ಶನಿಕ ಗ್ರಂಥಗಳು ಇವೆಲ್ಲ ನಮ್ಮ ಜ್ಞಾನವಿಕಾಸದ ಸಹಾಯಕ ಗ್ರಂಥಗಳಾಗಿವೆ. ಅವನ್ನು ಕೇಳಿದ, ತಿಳಿದ, ಸೃಜಿಸಿದ ರೀತಿ ನೀತಿಗಳನ್ನು ಗ್ರಂಥಸ್ಥವಾಗಿ ಉಳಿಸದಿದ್ದರೆ ಸಾವಿರಾರು ವರ್ಷಗಳ ಹಿಂದಿನ ಸಂಗತಿಗಳನ್ನು ನಮಗೆ ಯಾರು ಹೇಳುತ್ತಿದ್ದರು? ನಮ್ಮ ಸಂಸ್ಕೃತಿ, ಪರಂಪರೆ ಇಂಥದೆಂದು ಹೇಗೆ ನಿರ್ಣಯಿಸುತ್ತಿದ್ದೆವು? ಈ ದಾರಿಯಲ್ಲಿ ದೊರೆತ ಗ್ರಂಥಗಳ ಸಹಾಯ ಉದಾರವಾದುದು; ಅಮೂಲ್ಯವಾದುದೂ ಆಗಿದೆ

ಋಣ— ಹೊಣೆ

ಈ ತಾಡವಾಲೆಯ ಅಡುಮಾತುಗಳ ಋಣ ನಮ್ಮ ಮೇಲೆ ಇಂದು ಬಹಳವಾಗಿದೆ. ಅವುಗಳ ಪ್ರಯೋಜನ ಪಡೆದ ನಾವು ಅವುಗಳನ್ನು ಕೊನೆಯ ಮಟ್ಟಿಗೆ 'ಸುರಕ್ಷಿತ'ವಾಗಿಡುವ ಹೊಣೆಯನ್ನಾದರೂ ವಹಿಸದಿದ್ದರೆ ಆ ಋಣ ನೀಗುವದಿಲ್ಲ.

ಇವುಗಳನ್ನು ಹಿಂದೆ ಮಠಗಳಲ್ಲಿ ಆಶ್ರಮಗಳಲ್ಲಿ ಗುಡಿ–ಗುಂಡಾರಗಳಲ್ಲಿ ಪುರೋಹಿತರ ಮನೆಗಳಲ್ಲಿ ರಚಿಸಿ—ರಕ್ಷಿಸುತ್ತಿದ್ದರು. ಅವೇ ದೊಡ್ಡ ಗ್ರಂಥಾಲಯಗಳಾಗಿದ್ದವು. ಕೆಲವು ಕಡೆ ರಾಜರ ಆಶ್ರಯದಿಂದ ಅವನ್ನು ಬೆಳೆಸಿ 'ಭಾರತೀ ಭಂಡಾರ' 'ಸರಸ್ವತಿ ಭಂಡಾರ' ಹೀಗೆ ಕರೆಯುತ್ತಿದ್ದುದು ಉಂಟು. ಅಂತೂ ಜನರ ವಿಚಾರದಾಹಕ್ಕೆ, ಸಂಸ್ಕಾರಕ್ಕೆ ಇವು ಸಾಕಷ್ಟು ತುಷ್ಟಿಯನ್ನೂ, ಪುಷ್ಟಿಯನ್ನೂ ನೀಡುತ್ತಿದ್ದ ಸಂಗತಿ ಮರೆಯುವಂತಿಲ್ಲ.

ಆದರೆ ಇಂದು ಸುಧಾರಣೆಯತ್ತ ಬಂದ ನಾವು ಅವನ್ನು ತೀರ ಅಲಕ್ಷಿಸಿದ್ದೇವೆ ಈ ಸಂಗ್ರಹಗಳಲ್ಲಿಯ ಸಂಗತಿಯನ್ನು ಅರಿಯುವದನ್ನೂ ಬಹಳ ಮಟ್ಟಿಗೆ ಬಿಟ್ಟಿದ್ದೇವೆ. ಆದರೆ ಅವನ್ನು ಸಂಗ್ರಹಿಸಿ ಸಂರಕ್ಷಿಸುವ ಹೊಣೆಯನ್ನಾದರೂ ವಹಿಸದಿದ್ದರೆ ಕಾಲಾಂತರದಲ್ಲಿ ಅವು ಗೆದ್ದಲು, ಹುಳುವಿಗೆ ಆಹಾರವಾಗಬಹುದು. ನಮ್ಮ ಜ್ಞಾನದ ಬಿಂದು ಅಮೂಲ್ಯ ಆಸ್ತಿಯನ್ನೇ ಕಳೆದುಕೊಂಡಂತಾಗಬಹುದು. ಹಿಂದಿನ ಜನ ಮುಂದಿನ ಜನಾಂಗಕ್ಕಾಗಿ ಇಟ್ಟುಕೊಟ್ಟದ್ದನ್ನು ನಷ್ಟಪಡಿಸಿದ ಅಪವಾದಕ್ಕೆ ಗುರಿಯಾಗ ಬೇಕಾದೀತು.

ಗ್ರಂಥಾಲಯದ ಅವಶ್ಯಕತೆ

ನಮ್ಮ ಜ್ಞಾನ ಸಂಪಾದನೆಯ ದಾರಿ ಇಷ್ಟೊಂದು ಕ್ಲಿಷ್ಟ ಪರಿಸ್ಥಿತಿ- ಪರಿಸರಗಳನ್ನು ಎದುರಿಸಿ ಇಂದು ಬೇಕಾದ ಸೌಲಭ್ಯ–ಸಾಧನಗಳನ್ನು ಪಡೆದು ಜ್ಞಾನದಾಹವನ್ನು ನೀಗಿಸುವ 'ಅರವಟಿಗೆ'ಗಳ ಹಾಗೆ ಗ್ರಂಥಾಲಯಗಳ ವ್ಯವಸ್ಥೆ ನಾಡಿನ ತುಂಬಾಬೆಳೆದು ಬಂದಿದೆ. ಗುರುಕುಲಕ್ಕೆ ಹೋಗಿ ಜ್ಞಾನ ಸಂಪಾದಿಸಬೇಕೆನ್ನುವವನಿಗೆ ಶಿಕ್ಷಣ ಸಂಸ್ಥೆಗಳ ಸಂಸ್ಕಾರದ ನಂತರ ಗ್ರಂಥಾಲಯಗಳು ಈ ಆಶೆ ಅಭೀಷ್ಟವನ್ನು ಪೂರೈಸತಕ್ಕ ಕೇಂದ್ರಗಳಾಗಿವೆ.

ಸುಮಾರು ಹತ್ತೊಂಬತ್ತನೆಯ ಶತಮಾನದಲ್ಲಿ ಈ ಗ್ರಂಥಾಲಯದ ಒಂದು ಚಳುವಳಿಯೇ ನಮ್ಮಲ್ಲಿ ನಡೆಯಿತು. ವಿದ್ಯಾಲಯಗಳಲ್ಲಿ, ಜಿಲ್ಲಾ ಮುಖ್ಯ ಕೇಂದ್ರಗಳಲ್ಲಿ ಗ್ರಂಥಾಲಯ ತೆರೆಯುವಂತೆ ವ್ಯವಸ್ಥೆಯಾಯಿತು. ಅಲ್ಲಿ ಗ್ರಂಥಗಳನ್ನು ಸಂಗ್ರಹಿಸುವ, ಸಂಗ್ರಹಿಸಿದ್ದನ್ನು ಓದಲು ನೀಡುವ, ಓದುಗರ ಅಪೇಕ್ಷೆ ಅಭಿರುಚಿಗೆ ತಕ್ಕಂತೆ ಗ್ರಂಥಗಳನ್ನು ಒದಗಿಸಿಕೊಡುವ ಹೀಗೆ ಜ್ಞಾನದಾಹಕ್ಕೆ ಸೂಕ್ತಕ್ರಮಗಳು ಬಂದವು. ಇದರಿಂದಾಗಿ ಜನರಲ್ಲಿ ವಾಚನಾಭಿರುಚಿಗೆ ಯೋಗ್ಯ ಚಾಲನೆ ದೊರೆತಂತಾಯಿತು. ಇದೀಗ ಅದರ ಬೆಳವಣಿಗೆ ನಾನಾಮುಖವಾಗಿ ಬೆಳೆದು ಪ್ರತಿ ಗ್ರಾಮಕ್ಕೂ ಒಂದೊಂದು ವಾಚನಾಲಯಗಳು ಹುಟ್ಟಿದುದಲ್ಲದೇ ಸಂಚಾರಿ ವಾಚನಾಲಯಗಳು ಸಹ ಕಾರ್ಯರೂಪಕ್ಕೆ ಬಂದಿರುತ್ತವೆ.

ಮಾನಸಿಕ ಆಹಾರ

ನಮಗೆ ಶಾರೀರಿಕ ಆಹಾರದಷ್ಟೇ ಮಾನಸಿಕ ಆಹಾರವೂ ಮುಖ್ಯ. ಮನಸ್ಸು ಸಂಸ್ಕಾರ ಹೊಂದುವುದಕ್ಕೆ, ವಿಕಾಸವಾಗುವದಕ್ಕೆ ತಕ್ಕ ಅನುಕೂಲತೆ ಸಮೃದ್ಧ ಸಮತೋಲ ಆಹಾರ ಈ ಗ್ರಂಥಾಲಯಗಳಿಂದಲೇ ಸಿಗಬೇಕಾಗಿದೆ. ಬುದ್ಧಿಗೆ ಮಾರ್ಗದರ್ಶನ ನೀಡುವ ಗ್ರಂಥಾಲಯಗಳು 'ಜ್ಞಾನನಿಧಿ' ಅಥವಾ ಜ್ಞಾನದ ಉಗಮಸ್ಥಾನಗಳೆಂದರೆ ಅತಿಶಯೋಕ್ತಿಯಾಗದು.

ಈ ಗ್ರಂಥಾಲಯಗಳನ್ನು ಅವಶ್ಯವಿರುವಲ್ಲಿ ಸ್ಥಾಪಿಸುವುದೂ ಅದನ್ನು ಸುವ್ಯವಸ್ಥಿತವಾಗಿ ಬೆಳೆಸುವುದೂ ಒಂದು ಪುಣ್ಯಕಾರ್ಯವೇ ಆಗಿದೆ. ಜನರನ್ನು ವಿಚಾರ ಆದರ್ಶದತ್ತ ಒಯ್ಯುವ ಇದು ಯಾವ ಪುಣ್ಯ ಕಾರ್ಯಕ್ಕೂ ಕಡಿಮೆಯೇನೂ ಆಗಿಲ್ಲ. ಹಾಗಾಗಿ ಅನೇಕ ಪುಣ್ಯಾತ್ಮರು ಗ್ರಂಥಾಲಯಗಳನ್ನು ಕಟ್ಟಿಸಿ, ಗ್ರಂಥಗಳನ್ನು ದಾನ ನೀಡಿ, ಈ ಪವಿತ್ರ ಕಾರ್ಯಕ್ಕೆ ನೆರವು ನೀಡಿದ್ದಾರೆ. 'ಗ್ರಂಥದಾನ' ನಮ್ಮ ಶಾಸ್ತ್ರಗಳಲ್ಲೂ ಉಕ್ತವಾಗಿದೆ.

ನಂದಾದೀಪ

ಗ್ರಂಥಗಳು ನಮ್ಮ ಜೀವನಕ್ಕೆ ನಿರಂತರ ಬೆಳಕು ನೀಡುವ ನಂದಾದೀಪಗಳಾಗಿವೆ. ಅದರ ಬೆಳಕಿನಲ್ಲಿ ನಮ್ಮ ಆದರ್ಶವನ್ನು ಅರಸಿ, ಅರಗಿಸಿಕೊಳ್ಳುವ ಕಾರ್ಯ ನಡೆಸಬೇಕಾಗಿದೆ. ಹೆಜ್ಜೆ ಹೆಜ್ಜೆಗೂ ನಮ್ಮ ಪೂರ್ವಿಕರ ಸಂಸ್ಕೃತಿ ಸಾಹಸಗಳನ್ನು ವಿವರಿಸಿ ನಮಗೆ ಸ್ಫೂರ್ತಿ–ಚೇತನ ನೀಡುವ ನೆಲೆ–ನುಡಿಗಳು ಗ್ರಂಥಗಳಿಂದ ದೊರೆಯಬೇಕಲ್ಲದೇ ಅನ್ಯಥಾ ವಸ್ತುವಿನಿಂದ ಅದು ಆಗಲಾರದು

ಇವನ್ನು ಕೂಡಿ ಕಲೆಹಾಕಿ ಇಡುವದೂ ಒಂದು ಕಲೆಯಾದರೆ ಅವನ್ನು ಓದಿ ಅಧ್ಯಯನ ನಡೆಸಿ ಪ್ರತಿಭೆ ಗಳಿಸುವದೂ ಜೀವನಕ್ಕೆ ಬೆಲೆ ಎನ್ನಿಸಿದೆ. ಒಳ್ಳೆಯ ಗ್ರಂಥ ವಾಚನ ಒಳ್ಳೆಯ ಸಂಸ್ಕಾರ ನೀಡುತ್ತದೆ. ವಾಚನಾಭಿರುಚಿ ಹದಗೆಡದೆ ಶುಚಿ–ರುಚಿಯಾಗಿ ಓದುವದು ಓದಿದ್ದನ್ನು ಅರಗಿಸಿಕೊಳ್ಳುವದು ಈ ಪಾವಿತ್ರ್ಯಕ್ಕೆ ಗ್ರಂಥಗಳ ಗ್ರಂಥಾಲಯಗಳ ಚಾರಿತ್ರ್ಯಕ್ಕೊಂದು ಕೀರ್ತಿ ತರುತ್ತದೆ. ಈ ನಂದಾದೀಪದ ಬೆಳಕಿನಲ್ಲಿ ಜೀವನ ಅಬಾಧಿತವಾಗಿ ಬೆಳೆಯ ಬೇಕೆನ್ನುವ ಆಶಯವನ್ನು ಓದುಗ ಅರಿತುಕೊಂಡಷ್ಟೂ ಗ್ರಂಥಾಲಯಗಳ ಅಸ್ತಿತ್ವಕ್ಕೆ ಉದ್ದೇಶಕ್ಕೆ ಸಾರ್ಥಕ, ಪೋಷಕ.

● ●

ವೆಂಕಟರಮಣಯ್ಯನ ಕೃತಿಗಳು

(ಹಿಂದಿನ ಪುಟದಿಂದ)

ಸುವನು (ಸೌರಾಷ್ಟ್ರ–ತ್ರಿಪುಡೆ): "ಶ್ರೀ ಮನೋಹರ ಲಾಲಿಸೆನ್ನಯ| ಕಾಮಿತವನಿನ್ನೇನ ಪೇಳಲಿ| ಕಾಮಿಸಿದೆ ವೈಕುಂಠ ಪದವಿಯ ಪ್ರೇಮದಿಂದೆ||". ಆದರೆ, ದೇವನ ಆಣತಿಯಂತೆ ಹಲಗಾಲ ರಾಜ್ಯವಾಳಿ, ವೈಕುಂಠಕ್ಕೆ ಸಾಗಿದನು! ಈ ಕೃತಿಯು ವಾಚಕರಿಗೆ–ಯಕ್ಷಗಾನ ಕೂಟದವರಿಗೆ-ಬಯಲಾಟದಲ್ಲಿ ಬಳಸುವವರಿಗೆ ರುಚಿತವಾಗಿದೆ. ಪ್ರಾಚೀನ ಕತೆಗಳ ಆಂತರಿಕ ಆದರ್ಶವು ನಮ್ಮಲ್ಲಿ –ಸ್ವಾತಂತ್ರ್ಯ ದಿನಾಚರಣದ ಸಂಭ್ರಮದಲ್ಲಿ–ಪುನಃ ಸ್ಮರಣೀಯವಾಗಿದೆಯೆಂದು ಈ ಲಘು ಪರಿಚಯ ಲೇಖನ ಪೂರಯಿಸಲಾಗಿದೆ! ಇತಿಶಮ್! ●

With best compliments from

THE
CANARA NURSERY
RESEARCH GARDENS

(Well known orchard in South Kanara)

Post : ULIARGOLI,
KAUP, S. Kanara.

(Mysore State)

Founder :
LATE KAUP MUDDANNA SHETTY

Varieties of grafted fruit and flower plants are available for sale.

Phone : 42 Kaup

ಸ್ವಾತಂತ್ರ್ಯದ ರಜತೋತ್ಸವ

(ಹತ್ತನೇ ಪುಟದಿಂದ)

ಮನ್ನಿಸದಿರುವ ಪ್ರಜಾವರ್ಗವು ಅದರ ಅಸ್ತಿತ್ವಕ್ಕೇ ಭಂಗ ತರುತ್ತದೆ. ಇದಕ್ಕೆ ಸ್ವಾರ್ಥ ಹಾಗೂ ಲಂಚಗುಳಿತನವೇ ಮೂಲಕಾರಣವೆಂದು ಬೇರೆ ಹೇಳಬೇಕಿಲ್ಲ ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳ ಹಿತ ಸಾಧನೆಯಾಗ ಬೇಕಾಗಿದೆ. ಆದುದರಿಂದ ಬೇಂಕಿನ ಶಿಬಂದಿಗಳೆಲ್ಲಾ ತಮ್ಮಿಷ್ಟದಂತೆ ಬೇಂಕು ನಡೆಯ ಬೇಕೆಂದೂ, ವಾಹನ ಚಾಲಕರೆಲ್ಲಾ ತಮ್ಮ ಮನ ಬಂದೆಡೆಗೆ ವಾಹನ ಓಡಿಸುವೆವೆಂದೂ, ಶಾಲೆಯ ಮಕ್ಕಳೆಲ್ಲಾ ತಮ್ಮಿಷ್ಟದಂತೆ ಶಾಲೆ ನಡೆಸಬೇಕೆಂದೂ ಹೀಗೆ ಕಟ್ಟಕಡೆಗೆ ಜೈಲಿನ ಕೈದಿಗಳೆಲ್ಲಾ ತಮ್ಮಿಚ್ಛೆಯಂತೆ ಜೈಲಿನ ವ್ಯವಸ್ಥೆಯಾಗ ಬೇಕೆಂದೂ, ಹಟಹಿಡಿದು ಸತ್ಯಾಗ್ರಹದವರೆಗೂ ಮುಂಬರಿಯುವಂತಾಗಿದೆ ಇಂದಿನ ಪರಿಸ್ಥಿತಿ. ಇದು ಸತ್ಯಾಗ್ರಹವಲ್ಲ; ದುರಾಗ್ರಹ.

ಆದುದರಿಂದ ಇಂತಹ ಮುಷ್ಕರಗಳಿಗೆ ತೊಡಗುವ ಜನತೆ ಸ್ವಲ್ಪ ವಿವೇಚಿಸುವಂತಾದರೆ ಆಗ ತಾನೇ ಪ್ರಜಾಪ್ರಭುತ್ವದ ಸದುಪಯೋಗವಾದೀತು ಇಲ್ಲವಾದರೆ ಗಾಂಧೀಜಿಯವರಂತಹ ಮಹಾವ್ಯಕ್ತಿಗಳು, ದೇಶ ಸ್ವಾತಂತ್ರ್ಯದಂತಹ ಮಹತ್ಕಾರ್ಯಕ್ಕೆ ತೊಡಗಿದ ಈ ಸತ್ಯಾಗ್ರಹವು, ಬೀಡಿ ಮಜೂರರ ಮುಷ್ಕರ, ಫೈಲಾದ ವಿದ್ಯಾರ್ಥಿಗಳ ಮುಷ್ಕರ, ಹೋಟೆಲ್ ಕೆಲಸಗಾರರ ಮುಷ್ಕರ, ರಸ್ತೆ ಗುಡಿಸುವವರ ಮುಷ್ಕರ, ಅಧ್ಯಾಪಕರ ಮುಷ್ಕರ, ಆಫೀಸರರ ಮುಷ್ಕರ, ಇತ್ಯಾದಿ ಮುಂಬರಿದರೆ, ರಾಜಕತೆ ಎಲ್ಲಾ ಉಲ್ಲೋಲ ಕಲ್ಲೋಲವಾಗಿ, ರಾಜಕೀಯ ಭದ್ರತೆಯು ಸಡಿಲಾಗುತ್ತಾ ಬರುವುದರ ಮೂಲಕ, ಜನತೆಯ ಮೂಲಭೂತ ಹಕ್ಕುಗಳು ನಿರ್ನಾಮವಾಗುವುದರಲ್ಲಿ ಸಂದೇಹವಿಲ್ಲ.

ಉಳುವವನೇ ಹೊಲದೊಡೆಯ, ವಾಹನ ಚಾಲಕನೇ ವಾಹನದೊಡೆಯ, ವಿದ್ಯಾರ್ಥಿಯೇ ಶಾಲೆಯೊಡೆಯ, ಬೇಂಕಿನ ಸಾಲಗಾರನೇ ಬೇಂಕಿನೊಡೆಯ, ಅಂಗಡಿಯ ಗಿರಾಕಿಯೇ ಅಂಗಡಿಯೊಡೆಯ, ಹೋಟೆಲಿನಲ್ಲಿ ಕಾಫಿಕುಡಿವವನೇ ಹೋಟೆಲಿನೊಡೆಯ ಇತ್ಯಾದಿ ರೀತಿಯಲ್ಲಿ ಮುಂಬರಿದರೆ ಯಾವುದೇ ರೀತಿಯ ವ್ಯವಸ್ಥೆಯೂ ಅಸಾಧ್ಯವಾದೀತು.

ಈ ಬಗ್ಗೆ ಜನತೆಯ ಹಿತ ದೃಷ್ಟಿಯನ್ನವಲಂಬಿಸಿಯೇ ಅಧಿಕಾರಿ ಹಾಗೂ ಮಾಲಿಕ ವರ್ಗದವರು ಹಂಚಿಕೆ ಹೂಡಬೇಕು. ಅದಕ್ಕೆ ತಪ್ಪಿದಲ್ಲಿ ಜನತೆಯ ಸಹಕಾರ ತಪ್ಪಿಹೋಗಿ ತಾನಾಗಿಯೇ ಮೂಲೆಪಾಲಾಗುವಂತಾಗ ಬೇಕು. ಜನತೆಯು ಈ ಬಗ್ಗೆ ತಾಳ್ಮೆಯ ಮನೋಭಾವವನ್ನು ತಳೆಯ ಬೇಕಲ್ಲದೆ, ಕ್ರಾಂತಿ ಪಥವನ್ನವಲಂಬಿಸಬಾರದು.

'ತಾಳುವಿಕೆಗಿಂತನ್ಯ ತಪವು ಇಲ್ಲ' ಎಂಬ ದಾಸರ ಮಾತನ್ನು ಸ್ಮರಿಸಿಕೊಳ್ಳಬಹುದು. ಹೀಗೆ ಪರಸ್ಪರತೆಯು, ಆಳರಸರಲ್ಲಿ ಬೆಳೆದರೆ ಅರ್ಥಾತ್ ಪ್ರಜಾಪ್ರತಿನಿಧಿ ಹಾಗೂ ಪ್ರಜೆಗಳೊಳಗೆ ಬೆಳೆದರೆ, ನಮ್ಮ ರಾಜ್ಯವು ರಾಮರಾಜ್ಯವಾದೀತು. ಪ್ರಜಾವರ್ಗದ ಕಷ್ಟಕಾರ್ಪಣ್ಯಗಳು ನೀಗುವಂತಾಗಿ ಹೊಸಬೆಳಕು ಹರಡೀತು. ಸೌಜನ್ಯದ ಹೊನಲು ಸರ್ವತೋಮುಖವಾಗಿ ಹರಿದೀತು. ಅಂದಿಗೆ ಗಾಂಧೀಜಿಯವರಂತಹ ಆದರ್ಶ ವ್ಯಕ್ತಿಗಳು ಕಂಡ ಕನಸು ನೆನಸಾಗಿ ವಿಶ್ವಪ್ರೇಮದ ಭಾವೈಕ್ಯವು ಸಾಧ್ಯವಾದೀತೆಂದು ಇಂದಿನ ಈ ಸ್ವಾತಂತ್ರ್ಯೋತ್ಸವದ 'ರಜತೋತ್ಸವ'ದ ಆರಂಭದಲ್ಲಿ ಹಾರೈಸೋಣ.

●●

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ

ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಶ್ರೀ ಶಿವಮುಂಜೆ ಪರಾರಿ, ಮುಂಬಾಯಿ

ಒಂದು ಬಾಯಿಬಲ್ ಕಥೆ

ನಂಬಿದವನಿಗೇ ಇಂಬು

ಇಬ್ಬರು ಸಾಲಗಾರರು. ಐವತ್ತರವನೊಬ್ಬ, ಐನೂರರವನಿನ್ನೊಬ್ಬ. ಸಾಲಿಗರಿಬ್ಬರ ಸಾಲವನ್ನೂ ಮಾಫಿ ಮಾಡಿದಾಗ ಹೆಚ್ಚಿನ ಆನಂದ ಯಾರಿಗೆ?–ಪತಿತರನ್ನು ಪಾವನ ಮಾಡಿದ ಯೇಸು ಕ್ರಿಸ್ತನ ಸಾಮಿತಿಯೊಂದು ಸಮಾಧಾನವಿಲ್ಲಿ ಹೇಳುತ್ತದೆ.

ಒಮ್ಮೆ ಯಹೂದೀ ಧರ್ಮದ ಫರೀಸೀ ಸಂಪ್ರದಾಯದ ಮುಂದಾಳು ಶಿಮೌನ್, ಮಹಾತ್ಮಾ ಯೇಸುಕ್ರಿಸ್ತನನ್ನು ಒಂದು ಔತಣಕ್ಕೆ ಆಹ್ವಾನಿಸಿದನು ಶಿಮೌನ್ ಧನ ಮತ್ತು ಧರ್ಮದ ಅಧಿಪತಿಯಾಗಿದ್ದನು ಮಹಾತ್ಮಾ ಯೇಸುಕ್ರಿಸ್ತನನ್ನು ಸನ್ಮಾನಿಸಲೆಂದೇ ಅವನು ಈ ಔತಣವನ್ನು ಏರ್ಪಡಿಸಿದ್ದನು. ನಗರದ ಆಢ್ಯ ಶ್ರೀಮಂತರು, ಹಿರಿಯರು ಎಲ್ಲರೂ ಸಭೆಗೆ ಬಂದಿದ್ದರು. ಯೇಸುಕ್ರಿಸ್ತ ನಿಮ್ನ ವರ್ಗದ ಬಡಜನರ ಒಡನಾಡಿಯಾಗಿದ್ದ ಕಾರಣ, ಬಡಜನರೊಂದಿಗೆ ಮಾತ್ರ ಅವನ ಸಂಪರ್ಕವಿತ್ತು. ಊಟ ಪಾಠಗಳೆರಡರಲ್ಲಿಯೂ ಅವನು ಬಡಜನರೊಂದಿಗೆ ಮಾತ್ರ ಕೂಡಿಕೊಳ್ಳುತ್ತಿದ್ದನು. ಆದ ಕಾರಣ ಸಂಪನ್ನ, ಉಚ್ಚ ವರ್ಗದ ಜನರಿಗೆ ಆತನ ದರ್ಶನ ದುರ್ಲಭವಾಗಿತ್ತು.

ಯೇಸು ತನ್ನ ಹನ್ನೆರಡು ಮಂದಿ ಶಿಷ್ಯರೊಂದಿಗೆ ಸಭೆಗೆ ಆಗಮಿಸಿದನು. ಶಿಮೌನ್ ತನ್ನ ಗಣ್ಯ ಮಾನ್ಯ ರೋಮನ್ ಉಚ್ಚಾಧಿಕಾರಿಗಳ ಸ್ವಾಗತದಲ್ಲಿ ತನ್ಮಯನಾಗಿದ್ದನು ಯೇಸುವಿನ ಆಗಮನ ಅವನಿಗೆ ತಿಳಿಯಲೇ ಇಲ್ಲ ಆದರೆ ಮನೆಯ ಕೆಲಸದಾಳುಗಳು ಯೇಸುವನ್ನು ಒಂದು ಸ್ಥಾನದಲ್ಲಿ ಕುಳ್ಳಿರಿಸಿದರು.

ಇದ್ದಕ್ಕಿಂದ್ದತೆಯೇ ಶಿಮೌನನ ಮಹಾಮನೆಯ ಅಂಗಳದಲ್ಲಿ ಗದ್ದಲವಾಯಿತು ಅನೇಕ ಸ್ತ್ರೀಯರ ಕೋಮಲ ಕಂಠರವ ಕೇಳಿಸಿತು –"ದಾರಿ ಬಿಡಿ .. ದಾರಿಬಿಡಿ.... ಮಗ್ದಲಾ ನಗರದ ಸೌಂದರ್ಯ ಸಾಮ್ರಾಜ್ಞಿ ಮರಿಯಂಗೆ ದಾರಿಬಿಡಿ...."

"ಗಣಿಕೆ– ನಗರವಧು! ಶಿಮೌನ್ ಫರೀಸಿಯ ಮನೆಯಲ್ಲಿ?"

"ಕುಲಟಿ—ಕಾಮಿನಿ !"

"ಪಾಖಂಡೀ ಹೆಂಗಸು "-ಫರೀಸೀ ಸಂಪ್ರದಾಯದ ಧರ್ಮ ಗುರುಗಳು ಟೀಕಿಸಿದರು.

ಮರಿಯಂ ನೇರವಾಗಿ ಯೇಸುವಿನ ಪಾದದ ಬಳಿಸಾರಿ ಕುಳಿತು ಬಿಕ್ಕಿ ಬಿಕ್ಕಿ ಅತ್ತಳು ತನ್ನ ಕಣ್ಣೀರಿನಿಂದ ಯೇಸುವಿನ ಪಾದವನ್ನು ತೊಳೆದಳು. ತನ್ನ ನೀಳ ಕೋಮಲ ಕೇಶರಾಶಿಯಿಂದ ಅವನ ಪಾದವನ್ನು ಒರಸಿದಳು. ಅನಂತರ ಸುಗಂಧ ದ್ರವ್ಯವನ್ನು ಅವನ ಪವಿತ್ರ ಪಾದಗಳಿಗೆ ಪೂಸಿದಳು. ಆ ಮೋಹಕ ಸುಗಂಧದಿಂದ ಜನ ಮುಗ್ಧವಾಯಿತು.

ಯಜಮಾನ ಶಿಮೌನನಿಗೆ ಘೋರ ನಿರಾಶೆಯಾಯಿತು ದೇವಪುತ್ರನೆಂದೂ, ಜನರ ಗುರು, ಮಾರ್ಗದರ್ಶಕನೆಂದೂ ತಾನು ನಂಬಿದ್ದ ಈ ಯೇಸುವಿಗೆ ತನ್ನನ್ನು ಮುಟ್ಟುತ್ತಿರುವ ಹೆಂಗಸು ಯಾರು? ಏನು? ಎಂಬುದೂ ತಿಳಿದಿಲ್ಲ! ಇಂತಹ ಸಾಮಾನ್ಯನಿಗಾಗಿ ತಾನೇಕೆ ಇಂತಹ ಭವ್ಯ ಔತಣವನ್ನು ಮಾಡಿಸುತ್ತಿದ್ದೇನೆ? ಎಂದು ಆತ ಪರಿತಪಿಸ ತೊಡಗಿದನು ಆಗ ಯೇಸುವಿನ ಮೃದುವಾಣಿಯಿಂದ ಅವನ ವಿಚಾರ ಸರಣಿ ಕಡಿಯಿತು ಯೇಸು ಅವನೊಡನೆ ಮಾತಾಡುತ್ತಿದನು —"ಶಿಮೌನ್. ನಾನು ನಿನ್ನಲ್ಲಿ ಒಂದು ವಿಚಾರ ಕೇಳಬೇಕೆಂದಿದ್ದೇನೆ"

"ಕೇಳಿ."

'ಶ್ರೀಮಂತನೊಬ್ಬನಿಗೆ ಇಬ್ಬರು ಸಾಲಗಾರರಿದ್ದರು ಒಬ್ಬನು ಐನೂರು ದಿನಾರುಗಳನ್ನು ಕೊಡಲಿತ್ತು. ಇನ್ನೊಬ್ಬ ಐವತ್ತು. ಸಾಲಗಾರರು ಸಾಲ ತೀರಿಸಲು ಅಸಮರ್ಥರೆನಿಸಿದಾಗ, ಶ್ರೀಮಂತನು ಆ ಇಬ್ಬರನ್ನೂ ಕ್ಷಮಿಸಿ ಬಿಡುವನು ಈಗ ನೀನು ಹೇಳು —ಈ ಇಬ್ಬರೂ ಸಾಲಿಗರಲ್ಲಿ ಯಾರು ಶ್ರೀಮಂತನನ್ನು ಹೆಚ್ಚು ಪ್ರೀತಿಸುವರು?'

'ಆ ಐನೂರು ದಿನಾರುಗಳನ್ನು ಕೊಡಬೇಕಾದವನು.'

'ನಿಜ, ನೀನು ಹೇಳದುದು ಸತ್ಯ ಶಿಮೌನ್' ಎನ್ನುತ್ತಾ ಯೇಸು ಮರಿಯಂ ಕಡೆಗೆ ತಿರುಗಿದನು – 'ಶಿಮೌನ್, ನಾನು ನಿನ್ನ ಅತಿಥಿಯಾಗಿ ಬಂದಿದ್ದೇನೆ.ಆದರೆ ನೀನು ಯಹೂದೀ ರೀತಿಗನುಸಾರವಾಗಿ ನನಗೆ ಕಾಲು ತೊಳೆಯಲು ನೀರನ್ನೂ ಕೊಟ್ಟಿಲ್ಲ, ಚುಂಬಿಸಲಿಲ್ಲ, ತಲೆಗೆ ಜೈತೋನಿನ ಎಣ್ಣೆಯನ್ನೂ ನೀಡಲಿಲ್ಲ. ಆದರೆ ಈ ಹೆಂಗಸನ್ನು ನೋಡು, ಇವಳು ಯಾರು ಎಂಬುದು ನನಗೆ ಗೊತ್ತು ಆದರೆ ಈಕೆ ನನ್ನನ್ನು ಸ್ವಾಗತಿಸಿದ್ದಾಳೆ, ಇವಳು ನನ್ನನ್ನು ನಿನಗಿಂತಲೂ ಹೆಚ್ಚು ಪ್ರೀತಿಸಿದ್ದಾಳೆ. ಆದುದರಿಂದಲೇ ನಿನ್ನೊಡನೆ ಹೋಲಿಸಿದರೆ ಇವಳ ಅಪರಾಧಗಳು ಅಸಂಖ್ಯವಾದರೂ, ಇವಳನ್ನು ಅಧಿಕವಾಗಿ ಕ್ಷಮಿಸಲಾಗಿದೆ ಯೇಸುವು ಕರುಣಾಪೂರ್ಣವಾಗಿ ಮಗ್ದಲದ ಮರಿಯಂಳ ತಲೆಯನ್ನು ನೇವರಿಸಿ–"ಹೋಗು ಮಗೂ ನಿನ್ನೆಲ್ಲ ತಪ್ಪುಗಳನ್ನೂ ಕ್ಷಮಿಸಲಾಗಿದೆ. ನಿನ್ನ ಆಸ್ಥೆ ಮತ್ತು ವಿಶ್ವಾಸಗಳು ನಿನ್ನನ್ನು ಪವಿತ್ರಗೊಳಿಸಿವೆ" ಎಂದನು.

—(ಸಾರಿಕಾ ಕೃಪೆಯಿಂದ)



ಲೇಖಕರು

HOTEL SATKAR
Boarding, Lodging & Restaurant
Behind Corporation Office,
9 Mission Road — Bangalore—27.
Phone No.— 1 72303 2 72304 Grams: HOST SATKAR
Vegetarian Cuisine
Attached Bath Rooms and Phones.
Running H and C water.
Moderate Charges
Railway Station, Laundry, Post office and Entertainment Area Nearby.
Large airy Rooms; Roof garden
Quiet, Calm Atmosphere
Personalised Service.

ಕೇರಳೀಯರ ರಾಷ್ಟ್ರೀಯ ಹಬ್ಬ

ಓಣದ ಔತಣದ ವೈಶಿಷ್ಟ್ಯ

ಶ್ರೀ ಎಚ್. ಎಂ. ನಾರಾಯಣ ಭಟ್, ಪೆರಡಾಲ.

ಸೃಷ್ಟಿಯು ಸೊಬಗಿನಿಂದ ಕಂಗೊಳಿಸುತ್ತಿರುವಾಗ, ಅದರ ಸೌಂದರ್ಯದಿಂದ ಉನ್ಮತ್ತರಾದ ಕೇರಳೀಯರು ಓಣವಾಚರಿಸುತ್ತಾರೆ. ಭೂಮಿತಾಯಿ ನೀಡಿದ ನೂರಾರು ತರಕಾರಿಗಳನ್ನು ಬಳಸಿ ಔತಣವೇರ್ಪಡಿಸುತ್ತಾರೆ. ಪ್ರಕೃತಿಮಾತೆಯ ಉಪಕಾರವನ್ನು ನೆನೆಯುವ ಕೇರಳದ ರಾಷ್ಟ್ರೀಯ ಹಬ್ಬ ಓಣಂ— ಮರೆಯಲಾಗದ್ದು ಅಂದಿನ ಔತಣ.

ನಿಷ್ಕಳಂಕವಾಗಿ ನಗುವ ಸಿಂಹ ಮಾಸದ ಮೇಘಗಳನ್ನೂ ಕರುಣೆಯಿಂದ ವೃಕ್ಷಲತಾದಿಗಳ ಎಲೆಗಳ ನಾಲಿಗೆಯಿಂದ ಜೇನಿನ ಹನಿಗಳು ಬೀಳುವಂತೆನಗುವ ಆಕಾಶವನ್ನೂ ನಾನು ನೋಡಿದೆ. ನಿಸರ್ಗ ದೇವಿಯು ಹೂವಾದ ಹೂಗಳನ್ನೆಲ್ಲಾ ಪಟ್ಟೆನೂಲಿನಲ್ಲಿ ಸುರಿದು ಪೋಣಿಸಿ ತನ್ನ ಕಂಠಾಭರಣವಾಗಿ ಅಲಂಕರಿಸಿದ್ದಾಳೆ. 'ಏನನ್ನೂ ಮಾರಿಯಾದರೂ ಓಣದ ಔತಣ ಉಣ್ಣ ಬೇಕು' ಎಂಬ ನಾಣ್ಣುಡಿಯು ಮಲೆಯೂಳಿಯನ್ನು ಯೂಕೆ ಪ್ರಚೋದಿಸಿತೆಂದು ಅರ್ಥವಾಗತೊಡಗಿತು.

ವಿಭವ ಸಮೃದ್ಧವಾದ ಔತಣಕ್ಕೆ ಅಗತ್ಯವಿರುವ ತರಕಾರಿಗಳೂ ಫಲವಸ್ತುಗಳೂ ನಿಸರ್ಗದಿಂದಲೇ ಸಜ್ಜೀಕರಿಸಲ್ಪಟ್ಟಿವೆ. ಅವುಗಳಿಂದ ಇಷ್ಟಾನುಸಾರ ಆಯ್ದು ಅಳವಡಿಸಬೇಕಾದುದು ಮಾತ್ರವೇ ಉಳಿದುದು.

ರಾಷ್ಟ್ರೀಯ ಹಬ್ಬ

ಓಣಂ ಕೇರಳದ ಹಬ್ಬ; ಕೇರಳೀಯರ ರಾಷ್ಟ್ರೀಯ ಹಬ್ಬ—ಜಗತ್ತಿನಾದ್ಯಂತ ಕೇರಳೀಯರು ಎಲ್ಲೇ ಇದ್ದರೂ ಹಬ್ಬದ. ಔತಣ! ಈ ವಿಶಿಷ್ಟ ಔತಣಕ್ಕೆ ಎಲೆಹಾಕುವ ಮತ್ತು ಅದರಲ್ಲಿ ಇಕ್ಕುವ ವಿಧಾನಗಳಲ್ಲಿಯೂ ಪ್ರತ್ಯೇಕತೆಯಿದೆ. ಇಂದಿನ ಅನೇಕ ಯುವತಿಯರೂ ಈ ಮರ್ಯಾದೆಯ ಪರಂಪರೆಯನ್ನು ತಿಳಿಯರಾದರೂ ಹಿರಿಯರಿಂದ ತಿಳಿದು ಅನುವರ್ತಿಸುವುದು ವಾಡಿಕೆ.

ಅತಿಥಿಗಳು ಆಗಮಿಸುವಾಗಲೇ ಅವರು ಕೈ ಕಾಲುಗಳನ್ನು ತೊಳೆದುಕೊಳ್ಳಲನುಕೂಲವಾಗುವಂತೆ ತಂಬಿಗೆಗಳಲ್ಲಿ ನೀರನ್ನೊದಗಿಸಬೇಕು; ಊಟಕ್ಕೆ ಕುಳಿತುಕೊಳ್ಳುವವನ ಎಡ ಬದಿಗೆ ಬಾಳೆ ಎಲೆಯ ತುದಿಯಿರುವಂತೆ ಎಲೆ ಹಾಕಬೇಕು; ಬಾಳೆ ತುದಿಯ ಪಕ್ಕದಲ್ಲೇ ಒಂದು ಲೋಟಾ ಕುಡಿಯುವ ನೀರಿರಿಸಬೇಕು. 'ಮೆನು'ಗಳಲ್ಲಿ ಕೆಲವನ್ನು ನಿರ್ದಿಷ್ಟ ಭಾಗಗಳಲ್ಲಿ ಇಕ್ಕಿದ ಬಳಿಕವೇ ಎಲೆಯ ಮಧ್ಯ ಭಾಗದಲ್ಲಿ ಅನ್ನ ಬಡಿಸುವ ರೂಢಿ. ಎಲೆಯ ತುದಿಯಲ್ಲಿ ಉಪ್ಪಿನ ಕಾಯಿ, ಉಪ್ಪು, ಚಟ್ನಿ, ಗೊಜ್ಜು, ಹಪ್ಪಳ, ಸಂಡಿಗೆ ವಗೈರೆ....! ಅನ್ನದ ಬಲಭಾಗದಲ್ಲಿ ತುಪ್ಪ, ತೋವೆ, ಸಾರು, ಸಾಂಬಾರು ಇತ್ಯಾದಿಗಳನ್ನು ಇಕ್ಕಿಯಾದರೆ ಊಟ ಪ್ರಾರಂಭ. ಪಾಯಸದ ಸ್ಯಾಂಪಲ್—ಮಾತ್ರವೇಕೆ? ಕಾಳನ್, ಓಲನ್, ಅವಿಯಲ್, ವಿವಿಧ ಪಲ್ಯಗಳು, ಕೋಸಂಬರಿ, ಪುಳಿಂಜಿ, ಹುರಿದ ಬಾಳೆ ಕಾಯಿ ಮುಂತಾದ "ಐಟಂ"ಗಳು ಊಟ ಪ್ರಾರಂಭವಾಗುವ ಮುನ್ನವೇ ಎಲೆಯಲ್ಲಿ ತಂತಮ್ಮ ನಿರ್ದಿಷ್ಟ ಸ್ಥಾನಗಳನ್ನು ಅಲಂಕರಿಸಿರುತ್ತವೆ.

ಮತ್ತೆ ಆವಶ್ಯಕತೆಯನ್ನು ಹೊಂದಿ ಸಾರು, ಸಾಂಬಾರು, ಮೊಸರು, ಮಜ್ಜಿಗೆ!

ವಿವಿಧ ಬಗೆಯ ಪಾಯಸಗಳೂ ಹಣ್ಣುಗಳೂ ಸಿಹಿತಿಂಡಿಗಳೂ ವಿಶೇಷ!

ಸಮೃದ್ಧಿಯ ಪ್ರತೀಕವೂ

ಉಪ್ಪಿನ ಕಾಯಿಗಳು ಹಲವು ಬಗೆಯವು. ತೊಗರಿಯಿಂದ ತಯಾರಿಸಿದ ಮೇಲೋಗರ ಅನಿವಾರ್ಯ. ಸುವರ್ಣಗಡ್ಡೆ–ನೇಂದ್ರ ಬಾಳೆಕಾಯಿ ಇವುಗಳಿಲ್ಲದ ಔತಣ ಓಣಕಿಲ್ಲ. ಹಸಿ ಚೀನಿಕಾಯಿ ಮತ್ತು ಅಳಸಂಡೆ ಬೀಜ ಓಲನ್‌ಗೆ ವಿಶಿಷ್ಟ. ಹಸಿಮೆಣಸು, ತೆಂಗಿನ ಕಾಯಿ ಹಾಲು ಮುಂತಾದವನ್ನು ಸೇರಿಸಿ ಅಡಿಗೆಯಾದ ಬಳಿಕ ತೆಂಗಿನೆಣ್ಣೆಯನ್ನೂ ಹಾಕಿದಾಗ "ಓಲನ್" ತನ್ನ ಆಕರ್ಷಕ ರುಚಿಯನ್ನು ಹೊಂದುತ್ತದೆ.

'ಅವಿಯಲ್' ಸಾಮಾನ್ಯವಾಗಿ ಎಲ್ಲರಿಗೂ ರುಚಿಕರವಾಗಿರುತ್ತದೆ. ಹಲವು ವಿಧದ ತರಕಾರಿಗಳೂ ಇದರಲ್ಲಿ ಒಳಗೊಂಡಿರುವುದರಿಂದ ಪೋಷಕಾಂಶಗಳೂ ಇದರಲ್ಲಿ ಹೇರಳ.

"ಕೂಟುಕ್ಕರಿ"ಯಲ್ಲಿ ಕಡ್ಲೆಬೇಳೆ, ನೇಂದ್ರ ಬಾಳೆಕಾಯಿ, ಸುವರ್ಣಗಡ್ಡೆ ಮುಂತಾದವುಗಳಿರುತ್ತವೆ. ಇದರ ಬದಲಾಗಿ "ಎರಿಶ್ಶೇರಿ" ತಯಾರಿಸುವುದೂ ಇದೆ.

'ಸಾಂಬಾರ್' ಬಗ್ಗೆ ಏನೂ ವಿವರಣೆ ಬೇಕಿಲ್ಲ.

"ಪುಳಿಯಿಂಜಿ"ಯ ರುಚಿಯೂ ಗುಣವೂ ವಿಶಿಷ್ಟ. ಇದರಲ್ಲಿ ಧಾರಾಳವಾಗಿ ಕಬ್ಬಿಣದ ಸತುವು ಸೇರಿರುತ್ತದೆ. ಹುಣಸೆಹುಳಿಯನ್ನು ಬಿಸಿನೀರಲ್ಲಿ ಕಲಸಿ ಬೀಜಗಳನ್ನೂ ನಾರುಗಳನ್ನೂ ಬೇರ್ಪಡಿಸಿ, ಮೆಣಸಿನ ಪುಡಿ, ಅರಸಿನ ಪುಡಿ, ಉಪ್ಪು, ಬೆಲ್ಲ, ಹಸಿ ಶುಂಠಿ, ಹಸಿಮೆಣಸು ಮುಂತಾದವನ್ನು ಹಾಕಿ ಕುದಿಸಿದ ಬಳಿಕ ಬೇವಿನ ಸೊಪ್ಪನ್ನೂ ಸಾಸಿವೆಯನ್ನೂ ಸೇರಿಸಿದ ಒಗ್ಗರಣೆ ಹಾಕಿ ಈ ವಿಭವವನ್ನು ತಯಾರಿಸುವರು. ಔತಣವನ್ನು ಜೀರ್ಣಗೊಳಿಸಲು ಇದು ಸರ್ವ ಸಾಮರ್ಥ್ಯವುಳ್ಳದ್ದಾಗಿಯೂ ಪರಿಗಣಿಸಲ್ಪಡುತ್ತದೆ. ಇದು ಒಂದು ವಾರದವರೆಗೂ ಉಪಯೋಗಿಸಲರ್ಹವಾಗಿದೆ.

ಈಗ ಕೇರಳದಲ್ಲಿ ಪ್ರಾಚೀನ ಅವಿಭಕ್ತ ಕುಟುಂಬ ಪದ್ಧತಿ ಕಡಿಮೆಯಾಗುತ್ತಾ ಬಂದಿದೆ. ನವನಾಗರಿಕತೆಗೆ ಯುವತಿಯರೂ ಯುವಕರೂ ಮರುಳಾಗ ತೊಡಗಿರುವರಾದರೂ ರಾಜಕೀಯವೇನೇ ಇದ್ದರೂ ರಾಷ್ಟ್ರೀಯ ಹಬ್ಬವಾಗಿ— ಸಮೃದ್ಧಿಯ ಹಬ್ಬವಾಗಿ— ಎಷ್ಟೇ ಬಡತನವಿದ್ದರೂ "ಓಣಂ" ಕೇರಳೀಯರಿಂದ ಆಚರಿಸಲ್ಪಡುತ್ತಿದೆ.

ಅತಿಥಿ ಸತ್ಕಾರದ ವೇಳೆ ಉಣಬಡಿಸುವ ಆಸಕ್ತಿ— ಪರಸ್ಪರ ಅಭಿವಂದನೋಪಚಾರ ಮುಂತಾದವುಗಳಲ್ಲಿ ಗೃಹಿಣಿಯರ ಪರಂಪರೆ ಉನ್ನತ ಮಟ್ಟದ್ದಾಗಿರುತ್ತದೆ. ಊಟದ ವೇಳೆ ಸಂತೋಷ–ಉಲ್ಲಾಸ ಭರಿತ ವಾತಾವರಣವನ್ನುಂಟು ಮಾಡುವುದರಲ್ಲಿ ವಿಶೇಷ ಶ್ರದ್ಧೆ ಹರಿದಿರುತ್ತದೆ. ಅಡುಗೆ ಕಾರ್ಯದಲ್ಲಿ ಯುವತಿಯರು ತಾಯಂದಿರ ಸಲಹೆ ನಿರ್ದೇಶಗಳನ್ನು ಅನುಸರಿಸುವರು. ●●

Gram : VISHWA   Tel: 28111 & 28112

When at Bangalore
Stay at

HOTEL NATARAJA

Restaurant Boarding & Lodging.
107 Police Road, City Market.
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಸ್ವಾತಂತ್ರ್ಯ ಬಂದಿದೆ ಸ್ವಾಮೀ, ಸ್ವಾತಂತ್ರ್ಯ ಬಂದಿದೆ!

ಸ್ವಾತಂತ್ರ್ಯ ಬಂದಿದೆ ಸ್ವಾಮೀ,
ಸ್ವಾತಂತ್ರ್ಯ ಬಂದಿದೆ!
ಮಾಡಬಾರದುದ ಮಾಡುವುದಕ್ಕೆ
ಕಡಿಯುವುದಕ್ಕೆ, ಬಡಿಯುವುದಕ್ಕೆ
ಕುಡಿಯುವುದಕ್ಕೆ
ಮತ್ತೊಂದಕ್ಕೆ, ಮಗುದೊಂದಕ್ಕೆ
ಅದೆಂದರೇನು, ಇದೆಂದರೇನು
ಏನೇನು ಮಾಡಬಾರದೆಂದು
ನಮ್ಮ ಶಾಸ್ತ್ರ ಹೇಳುವುದೋ
ನಮ್ಮ ಸಂಸ್ಕೃತಿ ಸಾರುವುದೋ
ಅದೆಲ್ಲವನ್ನೂ ಮಾಡುವುದಕ್ಕೆ
ಮಂಡೆ ಬೋಳಿಸುವುದಕೆ
ಟೋಪಿ ಹಾಕುವುದಕ್ಕೆ

ಸ್ವಾತಂತ್ರ್ಯ ಬಂದಿದೆ ಸ್ವಾಮಿ,
ಸ್ವಾತಂತ್ರ್ಯ ಬಂದಿದೆ!
ಹಾಲಿಗೆ ನೀರು ಬೆರಸುವುದಕ್ಕೆ
ಅಲ್ಲ, ಸ್ವಲ್ಪ ತಪ್ಪಾಯ್ತು,
ನೀರಿಗೆ ಹಾಲು ಬೆರಸುವುದಕ್ಕೆ
ಎಣ್ಣೆಗೆ ತುಪ್ಪಹಾಕಿ ತುಪ್ಪವೆಂದು
ಮಾರುವುದಕ್ಕೆ

ಅಕ್ಕಿಗೆ ಕಲ್ಲು ಹಾಕಲಿಕ್ಕೆ
ಕಲಿಸಿದ ಗುರುವನ್ನೇ ಕೊಲ್ಲಲಿಕ್ಕೆ
ಸ್ವಾತಂತ್ರ್ಯ ಬಂದಿದೆ ಸ್ವಾಮಿ,
ಸ್ವಾತಂತ್ರ್ಯ ಬಂದಿದೆ!
ಜಾತಿ ಮತ ದ್ವೇಷಗಳ
ಬೀಜ ಬಿತ್ತುವುದಕ್ಕೆ

ಸಂಬಳಕಿಂತ ಗಿಂಬಳ ಹೆಚ್ಚು ತಿನ್ನಲಿಕ್ಕೆ
ವಜ್ರವನ್ನು ಬಿಸುಟು ಕಲ್ಲು ತಿಕ್ಕುವುದಕ್ಕೆ
ನೀರನ್ನು ಚುಚ್ಚಿ ದುಡ್ಡು ಮಾಡುವುದಕ್ಕೆ
ದೀನದಲಿತರ ಕೆಡಹಿ ಉದ್ಧರಿಸಲಿಕೆ
ಕೇಳುವರಿಲ್ಲದಿದ್ದರೂ ಕೊರೆಯಲಿಕ್ಕೆ
ಸ್ವಾತಂತ್ರ್ಯ ಬಂದಿದೆ ಸ್ವಾಮಿ,
ಸ್ವಾತಂತ್ರ್ಯ ಬಂದಿದೆ !
ಹಣಕೆ ಬೆಲೆ ಕೊಡುವುದಕೆ
ಗುಣಕೆ ಮೌನಿಗಳಾಗಿ
ಗುಣವಿಲ್ಲದುದಕೆ ಮಣೆ ಹಾಕಲಿಕೆ.
ನ್ಯಾಯ ಮಾಡುವುದಿಲ್ಲ,
ಧರ್ಮ ನಡೆಯುವುದಿಲ್ಲ,
ಸತ್ಯ ಕಾಣುವುದಿಲ್ಲ,
ಎಂಬುದನು ನಂಬುವುದಕೆ !
ಸ್ವಾತಂತ್ರ್ಯ ಬಂದಿದೆ ಸ್ವಾಮಿ,
ಸ್ವಾತಂತ್ರ್ಯ ಬಂದಿದೆ !
ಇಷ್ಟು ಜನ ಕೆಡುವುದಕೆ,
ದುಷ್ಟ ಜನ ಹೆಚ್ಚಲಿಕೆ,
ಬಡತನಕೆ, ಬೂಟಾಟಿಕೆಯ
ಒಣಾಡಂಬರಕೆ,

ಸ್ವಾತಂತ್ರ್ಯ ಬಂದಿದೆ ಸ್ವಾಮಿ,
ಸ್ವಾತಂತ್ರ್ಯ ಬಂದಿದೆ !
ಸರಕಾರದ ಬೊಕ್ಕಸವನು
ಸ್ವಾಹಾ ಮಾಡುವುದಕ್ಕೆ
ನೀಚ, ಹೊಲೆ, ಕೆಟ್ಟ, ಸುಟ್ಟ,
ಕೆಲಸಮಾಡಿ ಮೆರೆವುದಕೆ ,
ಮೋಸ, ಫಾಸಿ, ಕೊಲೆಗೆ, ಬಲೆಗೆ
ಬೇಡದವನ ಜೀವಂತ ಚಟ್ಟಕೇರಿಸುವುದಕೆ
ಬೇಕಾದವನ ಅಟ್ಟಕೇರಿಸುವುದಕೆ
ಸ್ವಾತಂತ್ರ್ಯ ಬಂದಿದೆ ಸ್ವಾಮಿ ,
ಸ್ವಾತಂತ್ರ್ಯ ಬಂದಿದೆ !
ದೊಡ್ಡವರ ಬಾಲಬಡಕರ ಬಾಲಹಿಡಿವುದಕೆ
ಸೋತವನ ಬಾಲವನು ಹಿಡಿದು
ಅಪ್ಪಳಿಸಲಿಕೆ
ಸ್ವಾತಂತ್ರ್ಯ ಬಂದಿದೆ ಸ್ವಾಮಿ,
ಸ್ವಾತಂತ್ರ್ಯ ಬಂದಿದೆ !
ನೆಲವನ್ನೆ ಆಳಲಾರದವರು
ಆಕಾಶಕ್ಕೆ ಹಾರಿ ಹಾಳಾಗುವುದಕೆ
ಯುದ್ಧಕ್ಕೆ, ರಕ್ತಪಾತಕ್ಕೆ
ಪ್ರಾಣಿಗೂ ಕಡೆಯಾದ ವರ್ತನೆಗೆ
ಸ್ವಾತಂತ್ರ್ಯ ಬಂದಿದೆ ಸ್ವಾಮಿ,
ಸ್ವಾತಂತ್ರ್ಯ ಬಂದಿದೆ!
ಕೈಗೆ ಬಂದುದನ್ನು ಬರೆಯುವುದಕ್ಕೆ
ಬಾಯಿ ಬಂದುದನ್ನು ಒದರುವುದಕ್ಕೆ
ಸ್ವಾತಂತ್ರ್ಯ ಬಂದಿದೆ ಸ್ವಾಮೀ,
ಸ್ವಾತಂತ್ರ್ಯ ಬಂದಿದೆ!

—ಗುಂಡ್ಮಿ ಚಂದ್ರಶೇಖರ ಐತಾಳ

ಕುಲಗೋತ್ರಗಳು

(ಎಂಟನೇ ಪುಟದಿಂದ)

"ನೀನು ಸೋತು ಹೋದೆಯಲ್ಲವೆ?" ಎಂದು ತ್ರಿಶೋಕನು ಕೇಳಲು, "ಇಲ್ಲಯಿಲ್ಲ. ನಾನು ಸದ್ಬ್ರಾಹ್ಮಣನಾದುದರಿಂದಲೇ ಅಗ್ನಿ ನನ್ನನ್ನು ಸ್ಪರ್ಶ ಮಾಡಿದ. ಅಗ್ನಿ ದೇವತೆಗಳಲ್ಲಿ ಒಬ್ಬನಾಗಿದ್ದಾನೆ. ನೀನು ಅಸುರ ಸ್ತ್ರೀಗೆ ಹುಟ್ಟಿದವನು. ನಿನ್ನಂತಹ ಕಶ್ಮಲದವನನ್ನು ಅಗ್ನಿ ಸ್ಪರ್ಶಿಸ ಬಲ್ಲನೆ? ಇಷ್ಟು ಚಿಕ್ಕ ಸಂಗತಿ ತಿಳಿಯಲಾರದ ನೀನು ಎಂಥ ಸದ್‌ಬ್ರಾಹ್ಮಣ? ಹೊರಟು ಹೋಗು'.

'ಹಾಗಾದರೆ ನೀರು ಕೂಡಾ ಒಬ್ಬ ದೇವತೆ ತಾನೆ? ನೀರಿನಲ್ಲಿಯೂ ಪರೀಕ್ಷೆ ಮಾಡೋಣ. ಬರುವಿಯೋ?' ಎಂದು ತ್ರಿಶೋಕನು ತಿರುಗಿ ಕೇಳಲು, ಮೇಧಾತಿಥಿ "ಸರಿ, ನಡೆ" ಎಂದನು.

ಇಬ್ಬರೂ 'ರಥಸ್ವಾ' ಎಂಬ ನದಿಯಲ್ಲಿ ಇಳಿದರು. ನದಿಯಲ್ಲಿ ಪ್ರವಾಹವು ತೀವ್ರವಾಗಿತ್ತು. ತ್ರಿಶೋಕನು ನೆಲದ ಮೇಲೆ ನಡೆಯುವ ಹಾಗೆಯೇ ನೀರಿನ ಮೇಲೆ ನಡೆದು ಆ ನದಿಯನ್ನು ದಾಟಿದನು. ಮೇಧಾತಿಥಿ ಪ್ರವಾಹ ವೇಗದಲ್ಲಿ ಬಿದ್ದು ಹೊರಳಾಡಿ ಮುಳುಗೇಳುತ್ತ ಕಷ್ಟಪಟ್ಟು ಬದುಕಿ ತೀರವನ್ನು ಸೇರಿದ.

"ಈಗೇನು ಹೇಳುತ್ತಿ?" ಎಂದು ತ್ರಿಶೋಕನು ಕೇಳಲು ಮೇಧಾತಿಥಿ 'ಅದೇ ಮಾತು. ವರುಣನೂ ಅಗ್ನಿ ದೇವನಂಥವನೇ. ನೀನು ಅಸುರ ಸ್ತ್ರೀಗೆ ಹುಟ್ಟಿದ ಅಪವಿತ್ರನಾದುದರಿಂದಲೇ ನೀರು ನಿನ್ನನ್ನು ಮುಟ್ಟಲಿಲ್ಲ. ನನ್ನನ್ನು ಅನ್ಯೋನ್ಯವಾಗಿ ಅಪ್ಪಿಕೊಂಡು ಬಿಡಲಾರದೆ ಬಿಟ್ಟುಕೊಟ್ಟಿದೆ—ನೀನು ಸದ್ಬ್ರಾಹ್ಮಣನಲ್ಲ. ಹೊರಟುಹೋಗು" ಎಂದ ಮೇಧಾತಿಥಿ.

'ಇನ್ನೊಂದು ಪರೀಕ್ಷೆಯಲ್ಲಿ ಹೊರಟು ಹೋಗುತ್ತೇನೆ. ಆಶ್ರಮಕ್ಕೆ ಸೇರಿದ ಗೋವುಗಳ ಮಂದೆಯನ್ನು ನಾವಿಬ್ಬರೂ ಆಕರ್ಷಿಸೋಣ. ಇದರಲ್ಲಿ ಸೋತು ಹೋದರೆ ಖಂಡಿತ ಹೊರಟು ಹೋಗುತ್ತೇನೆ' ಎಂದು ತ್ರಿಶೋಕನು ಹೇಳಲು, ಮೇಧಾತಿಥಿ ಒಪ್ಪಿಕೊಂಡನು. ಇದು ಬಹಳ ಸುಲಭವಾದ ಪರೀಕ್ಷೆಯೆಂದು ಅವನಿಗೆ ತೋರಿತು. ಏಕೆಂದರೆ ಆಶ್ರಮದ ಗೋವುಗಳೆಲ್ಲವೂ ಅವನವೇ. ಅವನ ಕಂಠ ಸ್ವರವನ್ನು ಕೇಳಿದರೆ ಎಲ್ಲಾ ಗೋವುಗಳೂ ಅವನ ಹತ್ತಿರ ಬಂದು ಬಿಡುತ್ತವೆ.

ಹಸಿರಾದ ಹುಲ್ಲು ಗಾವಲಿನ ಒಂದು ಕಡೆಯಲ್ಲಿ ಮೇಧಾತಿಥಿ ಗೋವುಗಳನ್ನು ಕರೆಯಲಾರಂಭಿಸಿದನು. ಗೋವುಗಳು ಅವನ ಕಡೆಗೆ ಬರತೊಡಗಿದವು. ಅಷ್ಟರಲ್ಲಿ ಇನ್ನೊಂದು ಕಡೆಯಲ್ಲಿ ತ್ರಿಶೋಕನು ಹೊಸದೊಂದು ಸಾಮವನ್ನು ರಚಿಸಿ, ಸುನಾದದಿಂದ ಹಾಡುತ್ತ ಕುಳಿತು ಕೊಂಡನು. ಅವನ ಕಂಠದಿಂದ ಹೊರಡುವ ಸಾಮಗಾನವು ಗಾಳಿಯಲ್ಲಿ ಬೆರೆತು ಗೋವುಗಳ ಕಿವಿಗಳನ್ನು ಸೇರಿ ಅವುಗಳ ಮನಸ್ಸನ್ನು ಆಕರ್ಷಿಸ ತೊಡಗಿತು. ಎಲ್ಲಾ ಗೋವುಗಳೂ ತ್ರಿಶೋಕನ ಬಳಿಗೇ ಬಂದು ಕೂಡಿದುವು.

ಮೇಧಾತಿಥಿ ತಾನೂ ಕೆಲವು ಸಾಮಗಳನ್ನು ರಚಿಸಿ ಹಾಡಿದನಾದರೂ ಅದು ಬರಿಯ ಹರಟೆಯ ಕಂಠ ಶೋಷಣೆಯೇ ಆಯಿತು. ಒಂದು ಗೋವಾದರೂ ಅವನ ಕಡೆಗೆ ತಿರುಗಿ ನೋಡಲಿಲ್ಲ.

ಇನ್ನು ತ್ರಿಶೋಕನು ಹೊರಟುಹೋದರೆ ಆಶ್ರಮದ ಗೋಸಂಪತ್ತೆಲ್ಲವೂ ಅವನೊಂದಿಗೇ ಹೋಗಿಬಿಡುತ್ತವೆಂದು ಮೇಧಾತಿಥಿಗೆ ಭಯವಾಯಿತು. ಹಾಗೇನಾದರೂ ಆದರೆ ತಂದೆಯ ಕೋಪಕ್ಕೆ ಪಾತ್ರನಾಗಬೇಕಾಗುತ್ತದೆ.

ಮೇಧಾತಿಥಿಗೆ ಈಗ ಬುದ್ಧಿ ಬರತೊಡಗಿತ್ತು. ಅವನು ನೆಟ್ಟಗೆ ತಂದೆಯ ಬಳಿಗೆ ಹೋಗಿ ನಡೆದ ಸಂಗತಿಗಳನ್ನು ಹೇಳಿ, ತನ್ನನ್ನು ಕ್ಷಮಿಸ ಬೇಕೆಂದು ಬೇಡಿದನು.

ಕೂಡಲೇ ಕಣ್ವನು ಅದ್ಭುತವಾದೊಂದು ಸಾಮವನ್ನು ರಚಿಸಿ ಗಟ್ಟಿಯಾಗಿ ಹಾಡಿದನು. ಅದರ ಶಕ್ತಿ ಅಪಾರ. ತ್ರಿಶೋಕನ ಸುತ್ತಲೂ ಇದ್ದ ಗೋವುಗಳೆಲ್ಲಾ ಕಣ್ವನ ಬಳಿಗೆ ಬಂದು ಸೇರಿದುವು.

'ನೀನು ಪರಿಶುದ್ಧನಾಗಿದ್ದರೆ ತ್ರಿಶೋಕನ ಕ್ಷಮೆ ಕೇಳು' ಎಂದು ಕಣ್ವನು ಮಗನಿಗೆ ಹೇಳಿದನು. ಅದರಂತೆ ಮೇಧಾತಿಥಿ ಶುದ್ಧ ಹೃದಯದಿಂದ, 'ತ್ರಿಶೋಕ, ನೀನು ನಮ್ಮೆಲ್ಲರಿಗಿಂತಲೂ ಶ್ರೇಷ್ಠನಾಗಿರುವಿ. ನನ್ನ ತಪ್ಪನ್ನು ಕ್ಷಮಿಸು!' ಎಂದು ಕೇಳಿಕೊಂಡನು.

'ಗುರುಗಳ ಮುಂದೆ ನಾವೆಲ್ಲರೂ ಸಮಾನರು, ಹೆಚ್ಚು ಕಡಿಮೆ ಏನಿಲ್ಲ' ಎಂದ ತ್ರಿಶೋಕ.

●●

ದೇಶ ಸೇವೆ ಮಾಡಲಿ

ದೇಶ ಪ್ರೇಮ ಹೆಚ್ಚಲಿ
ಕ್ಲೇಶ ಕಾಮ ಅಳಿಯಲಿ
ಮೋಸ ದ್ವೇಷ ತೊಲಗಲಿ
ಏಕ-ಭಾವ ಬೆಳೆಯಲಿ. ‖ ೧ ‖

ಸ್ವಾರ್ಥ ಬಿಟ್ಟು ಓಡಲಿ
ವ್ಯರ್ಥ ಜೀವ ತ್ಯಜಿಸಲಿ
ವ್ಯಕ್ತಿ—ಶಕ್ತಿಯಾಗಲಿ
ದೇಶ ಭಕ್ತಿ ಬೆಳೆಯಲಿ ‖ ೨ ‖

ಬಡವ-ಜಡವ ತೊರೆಯಲಿ
ಕುರುಡ ಕಣ್ಣು ಪಡೆಯಲಿ
ಬಡವ—ಕುರುಡ ಕೂಡಲಿ
ಸಿರಿಯ ಕೊಳೆಯ ತೊಳೆಯಲಿ ‖ ೩ ‖

ಮತಿಯ ಪ್ರಭೆಯು ಹರಡಲಿ
ಬಡವ ರಾಜ್ಯನಾಳಲಿ
ಬಡವ-ನರಿಯ ತಿಳಿಯಲಿ
ಜೀವ-ಧರ್ಮ ತೋರಲಿ ‖ ೪ ‖

ಕ್ರಾಂತಿ-ಶಾಂತಿಯಾಗಲಿ
ಭ್ರಾಂತಿ-ಭಾವ ಮರೆಯಲಿ,
ಪುಣ್ಯ ಭೂಮಿ ಬಾಳಲಿ
ವಿಶ್ವದಲ್ಲಿ-ಮೆರೆಯಲಿ ‖ ೫ ‖

ಕಲಿತ ವಿದ್ಯೆ ಕಲಿಸಲಿ,
ಬಲಿತ ಜಾಡ್ಯ ನಶಿಸಲಿ,
ರಾಮ-ನಾಮ ಹಾಡಲಿ,
ದೇಶ ಪ್ರೇಮ ಬೆಳಗಲಿ ‖ ೬ ‖

ಸತ್ಯ ಮಾತು ಹೊರಡಲಿ
ಮಿಥ್ಯ ದೂರವಾಗಲಿ
ಬಾಳು-ಬೆಳಕ ಬೀರಲಿ
ಜೀವ-ಸೌಖ್ಯವಾಗಲಿ ‖ ೭ ‖

ಬರುವ ಸಮಯ ಹರಸಲಿ
ಧೈರ್ಯವನ್ನು ಬೆಳೆಸಲಿ
ಕ್ರೌರ್ಯವನ್ನು ತ್ಯಜಿಸಲಿ
ದೇಶ ಸೇವೆ ಮಾಡಲಿ ‖ ೮ ‖

— ಎಸ್. ಜಿ. ಹೆಗಡೆ.

●●

ಸಂಘ ಶಕ್ತಿ

ಕಿರಣಗಳ ಸಮುದಾಯ ಬೆಳಗುತಿಹ
ಸೂರ್ಯ |
ಮಧುರ ರಸ ಮರಿದುಂಬಿ ಸಹಕಾರ
ಕಾರ್ಯ |
ಗಿರಿ ಝರಿಯ ಸಂದೋಹ ಹರಿಯುತಿಹ
ನದಿಯು |
ಘನವಾದ ಅಣುರಾಶಿ ಬೆತ್ತರದ ಶಿಲೆಯು |
ವಾಹಿನಿಯ ಸಮ್ಮಿಲನ ಗಂಭೀರ ಕಡಲು |
ಇರುವ ಗಣ ತಿನ್ನುವುದು
ಹೇರಾನೆಯೊಡಲು |
ಮರವು ಬರಿದಿರಲಾಗಿ ಕೀಳುವುದು
ಸುಳಿಗಾಳಿ |
ದೃಢವಾಗಿ ಬೆಳೆಯುವುದು ವನದ
ವೃಕ್ಷಾವಳಿ |
ಏಕಾಕಿ ವ್ಯಕ್ತಿ ಬಲಿ ದೈನ್ಯವೆಸುವುದು |
ಸಂಘಟಿತ ಜನ ಬಲವು ಸೈನ್ಯವಾಗುವುದು |
ಕೂಡಿ ಬಾಳಲು ಬಲವು ಗೌರವದ
ನೆಲೆಯು |
ಸಂಘ ಶಕ್ತಿಯು ಕರೆಗೆ ದೊರೆಯುವುದು
ಬೆಲೆಯು ‖

" ಗಿರಿಜಾತನಯ "

ನಿನಗಿರಲಿ....

ನಿನಗಿರಲಿ ಸುಖಜಯವು ಬಾಳುವೆ
ಕಷ್ಟದಲು
ನಾನು ಅನುಭವಿಸುವೆನಿಲ್ಲಿ ನನ್ನ ಫಲವ-
ಎಂದೆಂದು ಸಂತಸದ ಚಿಲುಮೆ
ನಿನಗೊದಗಿರಲಿ
ಕಣ್ಣೀರ ಬೇಗುದಿಯೆ ನನ್ನ ಜಯವು-
ಹಸಿರು ತಣ್ಣನೆ ಕವನ ನಿನ್ನ
ಬಾಳುನೆಗಿರಲಿ
ಉರಿವ ಮನವೆ ಸಾಕು ನನ್ನ ಜಗಕೆ-
ಪತಿಯ ಪ್ರೇಮದ ಬೆಳಕು ಆದರ್ಶ
ನಿನಗಿರಲಿ
ಕೊಚ್ಚೆ ಕೊಚ್ಚೆಯೆ ಇರಲಿ ನನ್ನ ಮನಕೆ-
ನಿನ್ನ ಹೊಸ ಜಗವೆಲ್ಲ ಸಗ್ಗವನೆ
ಮೀರಿಸಲಿ
ದೂರ ನರಕದಿ ನಾನು ಇಣುಕುತಿಹೆನು-
ದೂರ ಜಗದಲಿ ಹೊಗರ ಚಂದ್ರಿ
ನೀನಾಗಿರಲಿ
ನಾನಿಹೆನು ಕ್ರಿಮಿ ಹುಳವು ಹೊರಳುತಿಲ್ಲಿ

—ಗುಂಡ್ಮಿ ಭಾಸ್ಕರ ಸೈಯ್ಯ

ಆಹಾರ ಸೇವನೆ, ಜೀರ್ಣ, ಪೋಷಣೆ, ವಿಸರ್ಜನೆ ಎಲ್ಲವೂ
ಅಂಗಾಂಗಗಳ ಸಹಕಾರದಿಂದ ನಡೆಯುವುದು.

ಇದರಿಂದಲೇ

ಆರೋಗ್ಯ, ಬಾಳು, ಬದುಕು.
ಎಲ್ಲವೂ ಸಹಕಾರದ ಸಮ್ಮಿಲನ.

ನಿಮ್ಮ ದೇಹದಲ್ಲಿ ಅಸಹಕಾರದ ಕುರುಹುಳ ತೋರಿದಾಗ
ಉತ್ತಮ, ವಿಶ್ವಾಸದಾಯಕ ಆಯುರ್ವೇದ ಔಷಧಿಗಳ
ಸಹಕಾರದ ಸೇವೆಗೆ
ನಿಮ್ಮ ಪ್ರೀತಿ ವಿಶ್ವಾಸದ ಸಂಸ್ಥೆ:-

ನಾಯಕ ಆಯುರ್ವೇದಾಶ್ರಮ,
ಕಟಪಾಡಿ, ದ. ಕನ್ನಡ.

ಸ್ಥಾಪಕ: ವೈದ್ಯ ಪಾಂಗಾಳ ಲಕ್ಷ್ಮೀನಾರಾಯಣ ನಾಯಕ.

ಸಾಹಿತ್ಯ ಮತ್ತು ವಾಚನಾಭಿರುಚಿ

(ಏಳನೇ ಪುಟದಿಂದ)

ಸಾಹಿತ್ಯಕ್ಕೇ ಸಾಮಾನ್ಯ ಓದುಗನ ಹೊಣೆ.

ನಮ್ಮಲ್ಲಿ ನಿರ್ಮಾಣಗೊಳ್ಳುವದೇ ಕೀಳುದರ್ಜೆಯ ಸಾಹಿತ್ಯವಾದ ಮೇಲೆ ಓದುಗರಾದರೂ ಏನು ಮಾಡುತ್ತಾರೆ ಪಾಪ—ಎಷ್ಟೋ ಜನರ ಇದ್ದಾರೆ. ಸಾಹಿತ್ಯದ ಮಟ್ಟ ಕಡಿಮೆಯಾಯಿತೆಂದು ವಾಚನಾಭಿರುಚಿ ಕೆಳಗಿಳಿಯಿತೇ ಅಥವಾ ವಾಚನಾಭಿರುಚಿಯನ್ನು ಹುಡುಕಲು ಸಾಹಿತ್ಯ ಸಿಂಹಾಸನವಿಳಿದು ಕೆಳಗೆ ಬಂತೇ ಎಂಬುದೂ ಯಕ್ಷಪ್ರಶ್ನೆಯೇ ಆದೀತು. ವಿಚಾರಿಸಿ ನೋಡಿದರೆ ಇವು ಒಂದಕ್ಕೊಂದು ಪೂರಕ. ಜನಸಾಮಾನ್ಯರ ವಾಚನಾಭಿರುಚಿ ಉನ್ನತ ಮಟ್ಟಕ್ಕೇರದ ಹೊರತು ಒಳ್ಳೆಯ ಸಾಹಿತ್ಯ ರಚನೆಯೂ ಆಗದು. ಉತ್ತಮ ಸಾಹಿತ್ಯವೇ ಸಾಕಷ್ಟು ಸಂಖ್ಯೆಯಲ್ಲಿ ಪ್ರಕಟವಾಗದೆ ವಾಚನಾಭಿರುಚಿ ಉನ್ನತವಾಗುವದೂ ಸಾಧ್ಯವಾಗದು. ಸಾಮಾನ್ಯರ ಅಭಿರುಚಿಯನ್ನು ರೂಢಿಸುವಷ್ಟು ಶಕ್ತಿಯುತವಾಗಿ ಸಾಹಿತ್ಯವಿರಬೇಕು. ಅಂದಾಗಲೇ ಜನರ ಅಭಿರುಚಿ ಔನ್ನತ್ಯವನ್ನು ಪಡೆಯುತ್ತದೆ.

ಆದರೆ ಇಂದು ನಡೆದುದು ಬೇರೆ ಆಗಿಯೇ ಬಿಟ್ಟಿದೆ. ಜನರ ಅಭಿರುಚಿಗೆ ಸರಿಯಾದ ಸಾಹಿತ್ಯ ರಚಿಸಲು ಲೇಖಕರು ಮುಂದಾಗುತ್ತಿದ್ದಾರೆ. ಅವರ ಕೋರಿಕೆಗೆ ತಕ್ಕಂತೆ, ಅವರು ಓದಲು ಬಯಸಬಹುದಾದ ಕೃತಿಗಳನ್ನೇ ಇಂದಿನ ಕೃತಿಕಾರ ರಚಿಸತೊಡಗಿದ್ದಾನೆ. ಓದುಗರು ಹಣ ಕೊಟ್ಟುಕೊಂಡು ಓದಬಹುದಾದಂತಹ ಕೃತಿಗಳನ್ನೇ ರಚಿಸದೆ ಹೋದರೆ ಅದನ್ನೇ ಕಸುಬನ್ನಾಗಿಟ್ಟುಕೊಂಡ-ಲೇಖಕನ ಪಾಡೇನು? ಅವನೂ ಸುಖವಾಗಿ ಬದುಕಬೇಡವೇ? ಇದೇ ಇಂದಿನ ವ್ಯವಹಾರಿಕ ನೀತಿಯಾಗಿದೆ. ರೈಲಿನಲ್ಲಿಯೋ ಬಸ್ ಸ್ಟ್ಯಾಂಡುಗಳ ವೇಟಿಂಗ್ ರೂಮಿನಲ್ಲಿಯೋ ಓದಿ ಮುಗಿಸಬಹುದಾದ ಸಣ್ಣಪುಟ್ಟ ಹಗುರಾದ ಕೃತಿಗಳೇ ಇಂದು ಮಾರಾಟವಾಗುವದು ಸಂಖ್ಯೆಯಲ್ಲಿ ಹೆಚ್ಚು. ಅಲ್ಪತೃಪ್ತಿಯ ಮನೋಕಾಮನೆಯ ವಾಚಕರ ಸಂತೋಷಾರ್ಥವಾಗಿಯೇ ಇಂದು ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಅಶ್ಲೀಲ ಕೃತಿಗಳು ಪ್ರಕಟವಾಗಲು ಕಾರಣ.-ಸಮಾಜದಲ್ಲಿ ನಡೆಯುವಂತೆಯೇ ಸಾಹಿತ್ಯದಲ್ಲಿಯೂ ವ್ಯಭಿಚಾರ ಪ್ರಾರಂಭವಾಗಿದೆ. ಜನಜೀವನಕ್ಕೆ ಕನ್ನಡಿಯಾಗಿರಬೇಕಾದ್ದ ಸಾಹಿತ್ಯ, ಜನರ ಬದುಕನ್ನು ರೂಪಿಸಬೇಕಾದ ಸಾಹಿತ್ಯ - ಜನಕ್ಕೆ ಈ ಅತ್ಯಾಚಾರೀ ಕಾಮುಕ ಜೀವನದ ಆದರ್ಶ ಹಾಕಿಕೊಡುವದಾದರೆ ಆ ಸಮಾಜದ ಗತಿಯೇನು ಎಂದು ಯಾರೂ ಯೋಚಿಸುವವರಿಲ್ಲ.

ಸಾರ್ವತ್ರಿಕವಾಗಿ ಜನಸಾಮಾನ್ಯರ ಅಭಿರುಚಿಯೇ ಈ ಮಟ್ಟಕ್ಕಿಳಿದ ಮೇಲೆ ನಾವು ಲೇಖಕರನ್ನು ದೂರಿ ಫಲವಿಲ್ಲ. ಜನಸಾಮಾನ್ಯರ ಬದುಕು ಮೇಲೇರಬೇಕು ಅವರ ಸಾಂಸ್ಕೃತಿಕ ಜೀವನದ ಮಟ್ಟ ಉನ್ನತವಾಗಬೇಕು. ಅವರ ಅಭಿರುಚಿ ಮೇಲ್ಮಟ್ಟದ್ದಾಗಬೇಕು. ಆಗ ಕೀಳು ಸಾಹಿತ್ಯ— ಅಶ್ಲೀಲ ಸಾಹಿತ್ಯ ನೋಡವದಕ್ಕೂ ದೊರೆಯಲಾರದು.

ರಾಮಾಯಣ ಮಹಾಭಾರತ ಭಗವದ್ಗೀತೆಗಳ ದೇಶ ನಮ್ಮದು. ಅವು ನಮ್ಮ ಪರಮ ಆದರ್ಶ. ಆದರೆ ಅವಷ್ಟರಿಂದಲೇ ನಾವು ತೃಪ್ತಗೊಂಡೆವು ಎಂಬ ಹಾಗಿಲ್ಲ. ಇಂದಿಗೂ ಜನಜೀವನಕ್ಕೆ ಆದರ್ಶದ ಹಾದಿ ಹಾಕಿಕೊಟ್ಟ ಅನೇಕಾನೇಕ ಒಳ್ಳೆಯ ಕೃತಿಗಳು ಪ್ರಕಟವಾಗಿವೆ, ಆಗುತ್ತಲಿವೆ. ಆದರೆ ಅವಕ್ಕೆ ಸಾಕಷ್ಟು ಓದುಗರದೇ ಕೊರತೆ-ಹಾಗಾಗಬಾರದು. ಜನ ತಾತ್ಕಾಲಿಕ ಆನಂದ ನೀಡಬಲ್ಲ ಕೃತಿಗಳನ್ನೋದುವದರಲ್ಲಿಯೇ ತಮ್ಮ ಸಮಯವೆಲ್ಲವನ್ನೂ ಕಳೆಯದೆ ನಿರಂತರ ಆನಂದವೀಯುವ ಕೃತಿಗಳತ್ತ ಗಮನ ಹರಿಸಬೇಕು ಅದು ಶಾಶ್ವತ ಆನಂದ. ಅಂತಹ ಸಾಹಿತ್ಯ ನಮ್ಮ ಬದುಕಿನುದ್ದಕ್ಕೂ ದೀವಿಗೆಯಾಗಿರಬಲ್ಲುದು.

ಒಳ್ಳೆಯ ಸಮಾಜ ನಿರ್ಮಾಣ ಬಯಸುವ ಲೇಖಕರು ಜನ ಸಾಮಾನ್ಯರ ಅಭಿರುಚಿಯ ಬೆನ್ನು ಹಿಡಿದು ಹೊರಡದೆ ಅವರಲ್ಲಿ ಸದಭಿರುಚಿಯನ್ನು ರೂಪಿಸುವಲ್ಲಿ ಮುಂದಾಗಬೇಕು ಲೇಖಕ ಸಮಾಜದಲ್ಲಿ ಮಹಾದಾನಿ. ಆತ ಕೊಡುವದೇ ಹೆಚ್ಚು. ಪಡೆಯುವದು ತೀರ ಕಡಿಮೆ.

ಪ್ರಕಾಶಕರ ಹೊಣೆಯ ಕುರಿತು ಈ ಸಂದರ್ಭದಲ್ಲಿ ಎರಡು ಮಾತು ಹೇಳದಿದ್ದರೆ ಅವಚಾರವಾದೀತು ಲೇಖಕರು ಪುಸ್ತಕಗಳನ್ನು ಪ್ರಕಟಿಸಿ ಜನಕ್ಕೆ ಮಾರುವ ಹಾಗೆ ಬಿಡುಗಡೆ ಮಾಡುವ ಹೊಣೆ ಇವರದು. ಪ್ರಕಾಶಕರು ಕೇವಲ ತಮಗೆ ಬರಬಹುದಾದ ಲಾಭದ ಕಡೆಗೇ ಲಕ್ಷ್ಯವೀಯದೆ ತಾವೊಂದು ಸುಸಂಸ್ಕೃತ ಸಮಾಜ ನಿರ್ಮಾಣ ಮಾಡುತ್ತಿದ್ದೇವೆ ಎಂಬುದನ್ನು ಲಕ್ಷ್ಯದಲ್ಲಿಟ್ಟು ಪ್ರಕಟಿಸಲು ಆಯ್ಕೆ ಮಾಡುವಾಗ,ಕೊಂಚ ಜಾಣತನ ವಹಿಸುವದು ಅತ್ಯಗತ್ಯ ಜನ ಸಾಮಾನ್ಯರ ಅಭಿರುಚಿಯನ್ನು ಕೆಳಗೊಯ್ಯುವ ಕೀಳುದರ್ಜೆಯ ಸಾಹಿತ್ಯ ಪ್ರಕಟಿಸಿದರೆ ಲಾಭ ಬರಬಹುದು. ನಿಜ. ಆದರೆ ಅದರಿಂದ ಸಮಾಜದ ಕೊಲೆಯಾಗುತ್ತದೆ ಜನರ ಸಾಂಸ್ಕೃತಿಕ ಜೀವನದ ಸಮಾಧಿಯಾಗುತ್ತದೆ. ಹಾಗಾಗದಂತೆ ಪ್ರಕಾಶಕ ನೋಡಿಕೊಳ್ಳುವದು ಸಾಧ್ಯವಿದೆ.

ಅಶ್ಲೀಲ ಸಾಹಿತ್ಯವನ್ನು ಮಾರಾಟಮಾಡುವ ಪುಸ್ತಕಾಲಯಗಳನ್ನು ಮುತ್ತಿಗೆ ಹಾಕಿ ಅಂತಹ ಸಾಹಿತ್ಯವನ್ನು ವಶಪಡಿಸಿಕೊಳ್ಳುವ ಕ್ರಮವನ್ನು ಸರಕಾರವೇ ಮಾಡುತ್ತಲಿದೆ. ಬಂದ ಮೇಲೆ ಪುಸ್ತಕಾಲಯಗಳ ಜವಾಬುದಾರಿಯ ಕುರಿತು ಬೇರೆ ಹೇಳುವದು ಬೇಡ.

ಕೊನೆಯದಾಗಿ ವಾಚಕನ ಕರ್ತವ್ಯ. ಓದುಗ ಒಳ್ಳೆಯ ಸಾಹಿತ್ಯ ಓದುವೆನೆಂಬ ಪ್ರತಿಜ್ಞೆ ಮಾಡದ ಹೊರತು ಎಂತಹ ಒಳ್ಳೇ ಸಾಹಿತ್ಯ ಪ್ರಕಟವಾದರೆ ತಾನೇ ಏನು ಪ್ರಯೋಜನ? ಅದಕ್ಕಾಗಿ ಓದುಗರ ಮನ ಪರಿವರ್ತನೆಯಾಗಿ ಕೀಳು ಸಾಹಿತ್ಯವನ್ನು ಓದದಿರುವ ನೈತಿಕ ಹಟ ಓದುಗರಿಗೆ ಬರಬೇಕು. ಆಗ ತಾನಾಗಿಯೇ ಅವರ ಅಭಿರುಚಿ ಮೇಲ್ಮಟ್ಟಕ್ಕೇರಲು ನೆರವು ದೊರೆತೀತು.

ಓದುಗರ ಅಭಿರುಚಿ ಉನ್ನತವಾದಾಗಲೇ ವಾಚನಾಲಯಗಳು, ಲೇಖಕರು, ಪ್ರಕಾಶಕರು, ಮಾರಾಟಗಾರರು ಎಲ್ಲರೂ ಬದುಕುತ್ತಾರೆ. ಅಂಥ ಸಮಾಜವೂ ಬದುಕುತ್ತದೆ. ಆ ಸಮಾಜದಲ್ಲಿ ಸಾಹಿತ್ಯ ಜನತೆಯ ಹೃದಯ ಸಿಂಹಾಸನದಲ್ಲಿ ಸುಶೋಭಿತವಾಗಿರುತ್ತದೆ.

● ●

ಶ್ರೀ ಅಮ್ಮೆಂಬಳ ಶಂಕರನಾರಾಯಣ ನಾವಡ.

ಜೇನುಹನಿ

[ಸುಭಾಷಿತ-ನಲ್ನುಡಿ]

[ಸಂಸ್ಕೃತದಲ್ಲಿ ಸುಭಾಷಿತಗಳು ಜೇನುಹನಿಗಳಂತೆ ಮಧುರವಾಗಿ ರಮ್ಯವಾಗಿವೆ. ಸಂಸ್ಕೃತ ಕವಿಗಳು ತಮ್ಮ ಅನುಭವದ ಸಾರವನ್ನು ಸುಭಾಷಿತಗಳಾಗಿ ಬರೆದಿದ್ದಾರೆ. ಅವುಗಳಲ್ಲಿ ಪ್ರತಿಯೊಂದು ನುಡಿಯೂ ಸ್ವಯಂಪೂರ್ಣವಾಗಿ ಮುತ್ತಿನಂತೆ ಕಂಠಭೂಷಣವಾಗಲು ಯೋಗ್ಯವಾಗಿವೆ.]

—೧— ಧೀಮಂತ-ಮೂರ್ಖ

ಕಾವ್ಯ ಶಾಸ್ತ್ರ ವಿನೋದ
ಕಾಲ ಕಳೆಯಲು ವಿಷಯ
ಧೀಮಂತ ಮಾನವರಿಗೆ
ನಿದ್ದೆ ದುಶ್ಚಟ ಜಗಳ
ಕಾಲಕಳೆಯಲು ವಿಷಯ
ಮೂರ್ಖರಹ ಮಾನವರಿಗೆ

—೨— ವಿದ್ವಾಂಸ

ವಿದ್ವಾಂಸರೇ ಮಾತ್ರ ತಿಳಿಯುವರು
ತಮ್ಮಂಥ
ವಿದ್ವಾಂಸರೊರೆದಿರುವ ಕೃತಿಪರಿಶ್ರಮವ
ಬಂಜೆಯೆಂತೂ ತಿಳಿಯಲಾರಳತಿ
ಕಠಿಣ ತಮ-
ವಾಗಿರುವ ಹೆರುವಂಥವೇದನೆಯನು.

—೩— ದುರ್ಜನ

ದುರ್ಜನನೆಸಗಿಹ ದುಷ್ಕೃತ್ಯ
ಸಜ್ಜನನಲಿ ದಿಟ ಫಲಿಸುವುದು.
ರಾವಣನೊಯ್ದನು ಸೀತೆಯನು
ಬಂಧನವಾಯಿತು ಸಾಗರಕೆ.

—೪— ಸಾಹಿತ್ಯ-ಸಂಗೀತ

ಸಾಹಿತ್ಯ-ಸಂಗೀತ ಕಲೆಯ ತಿಳಿಯದ
ನರನು
ಬಾಲಕೋಡುಗಳಿರದ ಪಶುವೆ ಇಹನು
ಹುಲ್ಲುಮೇಯದೆ ಕೂಡ
ಜೀವಿಸಿಹನೆನ್ನುವುದು
ಪಶುಗಳೊಂದುನ್ನತದ ಭಾಗ್ಯವಿಹುದು.

—೫— ಅತಿ ಪರಿಚಯ

ಅತಿಪರಿಚಯದಿಂ ಬೇಸರವಪ್ಪುದು;
ಸಂತತಗಮನ ದಿನಪ್ರೀತಿ
ಮಲಯದ ಬೆಟ್ಟದಿ ಬೇಡತಿಗಪ್ಪುದು
ಶ್ರೀಗಂಧದ ಮರ ಕಟ್ಟಿಗೆಗೆ.

—೬— ಯದ್ವಾ-ತದ್ವಾ

ಮಂಗವು ಕಳ್ಳನು ಕುಡಿದಿರಲು
ಕೊಂಡಿಯ ಚೇಳದ ಕಚ್ಚಿರಲು
ಆದರೆಡೆ ಭೂತವು ಹಿಡಿದಿರಲು
ಏನೋ ಹೇಗೋ ಆಗುವುದು.

—೭— ಗಿಳಿ

ಲೋಕದಿ ಪಕ್ಷಿಗಳೆಲ್ಲಾ
ತಮತಮಗೊಲಿದಂತೆ ಹಾರಿ
ತಿರುಗುತ್ತಿರೆಯುಂ;
ಗಿಳಿಯೆ! ನಿನಗಿದೆ ಗೂಡಿನ
ಸೆರೆಮನೆ, ಸವಿನುಡಿಗಳಿಂದ ದಿಟವೀ
ಫಲವು.

—೮— ಪ್ರಾಣಿ ಬಲಿ

ಕುದುರೆಯನಲ್ಲ, ಆನೆಯನಲ್ಲ,
ಹುಲಿಯನ್ನೆಂತೂ ಅಲ್ಲವೆ ಅಲ್ಲ;
ಆಡಿನ ಮರಿಯನು ಬಲಿಕೊಡುತಿಹರು
ದೇವನು ದುರ್ಬಲ ಘಾತಕನು.

—೯— ಸುಖಭ್ರಾಂತಿ

ಸಾರರಹಿತವಾದ ಜಗದಿ
ಸುಖದ ಭ್ರಾಂತಿ ಜನರಿಗೆ.
ಬೆರಳ ಸವಿದು ಜೊಲ್ಲು ರಸದಿ
ಮೊಲೆಯ ಭ್ರಮೆಯು ಮಗುವಿಗೆ.

—೧೦— ಮುಂಜಾಗ್ರತೆ.

ಬಾವಿಯನು ತೋಡುವುದು
ಯೋಗ್ಯವೆಂದೆನ್ನಿಸದು
ಮನೆಗೆ ಬೆಂಕಿಯು ಹತ್ತಿ
ಉರಿಯುತ್ತಿರಲು;
ಆಪತ್ತು ಕಷ್ಟಗಳು ಬರುವ ಮೊದಲೇ ನಾವು
ಅವುಗಳನು ತಡೆಹಿಡಿಯೆ
ಯೋಚಿಸಿರಬೇಕು.

● ●

ಖಾದಿಯು ಬಡವರ ಜೀವನದಲ್ಲಿ ಒಂದು ಆಶಾಕಿರಣ.

—ಮ. ಗಾಂಧಿ.

○ ○ ○

"ನಮ್ಮ ದೇಶದಲ್ಲಿ ರಾಜಕೀಯ ಕ್ರಾಂತಿಯನ್ನು ಕೈಗೊಂಡು ಸ್ವತಂತ್ರರಾಗಿದ್ದೇವೆ. ನಾವೀಗ ಆರ್ಥಿಕ ಪರಿವರ್ತನೆಯ ಕಾರ್ಯಗತಿಯಲ್ಲಿದ್ದೇವೆ. ಇಷ್ಟೇ ಮುಖ್ಯವಾದ ಇನ್ನೊಂದು ಅಂಶವಿದೆ. ಅದೇ ಸಾಮಾಜಿಕ ಕ್ರಾಂತಿ.ರಾಜಕೀಯ ಸನ್ನಿವೇಶ ಬದಲಾಯಿಸಿದ್ದಲ್ಲಿಅಥವಾ ಆರ್ಥಿಕ ಮುನ್ನೋಟ ಬದಲಾಯಿಸಿದ್ದಲ್ಲಿ ನಾವು ಏನೇ ಅಪೇಕ್ಷಿಸಿದರೂ ಸಾಮಾಜಿಕ ಸನ್ನಿವೇಶ ಸಹ ಬದಲಾಗುವದು. ಆದ್ದರಿಂದ ದೇಶವೊಂದರಲ್ಲಿ ನಡೆಯಬೇಕಾದ ನಿಜವಾದ ಕ್ರಾಂತಿಯು ಈ ಮೂರು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು."

ಜವಾಹರಲಾಲ್ ನೆಹರು.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0-75 ಪೈಸೆ ಮಾತ್ರ.
ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

ವರಕವಿ ಪರಮದೇವ

(ಆರನೇ ಪುಟದಿಂದ)

ನಾರಣಪ್ಪ ಎಂಬ ಧಾರ್ಮಿಕ ವ್ಯಕ್ತಿಯು ಇವರನ್ನು ವಿಚಾರಿಸಿ ತಮ್ಮ ಗೃಹದಲ್ಲೇ ಇಟ್ಟುಕೊಂಡರು. ಮುಂದೆ ಪರಮದೇವನು ಈ ಮನೆಯಲ್ಲೇ ಕೆಲವು ವರ್ಷಗಳ ವರೆಗೆ ಐಗಳ ಕೆಲಸ ನಡೆಸಿಕೊಂಡಿದ್ದನು. ಈಗಲೂ ಸಾಗರದ ಎಲಗಳಲ ಸೀಮೆಯ ಜನರು ಕೆದಲಸರದ ಐಗಳ (ಪರಮದೇವ) ಹೆಸರನ್ನು ಮರೆತುಬಿಟ್ಟಿಲ್ಲ.

ಈ ವರಕವಿಯು ತನ್ನ ಕಾವ್ಯದಲ್ಲಿ ಶುಕ ಶೌನಕವ್ಯಾಸ ಮೊದಲಾದ ಸಂಸ್ಕೃತಜ್ಞ ಮಹರ್ಷಿಗಳನ್ನು ಮಾತ್ರ ಸ್ಮರಿಸಿದ್ದಾನೆ. ಇದರಿಂದ ಈ ಕವಿಗೆ ಅಭ್ಯಾಸ ಮಾಡಲಾಗದ ಸಂಸ್ಕೃತದಲ್ಲಿ ವಿಶೇಷ ಗೌರವವಿದ್ದುದಲ್ಲದೆ, ಕಾಳಿದಾಸನ ಜೀವನವು ಒಪ್ಪಿತವಾಗದೆ ಮುನಿಯ ಜೀವನವೇ ಒಪ್ಪಿಗೆಯಾಗಿತ್ತೆನ್ನ ಬೇಕಾಗುವುದು. ಇವನು ತನ್ನ ಕಾಲದ ಮೊದಲೇ ಹೆಸರ್ಗೊಂಡ ಕುಮಾರವ್ಯಾಸ ಮತ್ತು ಲಕ್ಷ್ಮೀಶರಂತಹ ಪ್ರಸಿದ್ಧ ಕವಿಗಳನ್ನು ಮರೆತೂ ಸ್ಮರಿಸದಿದ್ದುದನ್ನು ಕಂಡರೆ ಅವರ ಶೃಂಗಾರ ರಸಿಕತನವು ಇವನಿಗೆ ಮೆಚ್ಚುಗೆಯಾಗಿರಲಿಲ್ಲವೆಂದೇ ಹೇಳಬೇಕಾಗುವುದು. ಒಟ್ಟಾರೆ ಈ ಕವಿಯು ಕುಮಾರವ್ಯಾಸ ಭಾರತವನ್ನು ಚೆನ್ನಾಗಿ ಓದಿದ್ದಾನೆನ್ನುವುದರಲ್ಲಿ ಸಂದೇಹವಿಲ್ಲ.

ಪರಮದೇವ ಕವಿಯ ಕಾಲದಲ್ಲಿ ಹನ್ನರ ಇಕ್ಕೇರಿ ಪ್ರಾಂತಗಳಲ್ಲಿ ಬೇರೊಂದು ಭಾರತವು ಪ್ರಚಾರದಲ್ಲಿದ್ದು (ಅದು ಈಗ ಮೂಲೆಗುಂಪಾಗಿಯೋ, ಗೆದ್ದಲು ಹುಳುಗಳ ಆಹಾರವಾಗಿಯೋ ಹೋಗಿರಬೇಕು) ಅದರಲ್ಲಿ ಪರ್ವಗಳಲ್ಲೂ ವ್ಯತ್ಯಾಸವಿದ್ದಿರಬೇಕು. ಅದರಲ್ಲಿ ಎಷ್ಟೋ ಹೊಸ ಕತೆಗಳಿದ್ದಿರಬೇಕು. ಇದನ್ನೇ ಈ ಕವಿ ಅನುಸರಿಸಿದ್ದಿರಬೇಕು ಭವನ ಭಿಕ್ಷಾಟನೆ, ಭೀಮನು ಪುರುಷ ಮೃಗ ತಂದದ್ದು, ಕೌರವನು ತನ್ನ ಮಾವಂದಿರನ್ನು ಸೆರೆಹಿಡಿದದ್ದು ಮೊದಲಾದ ಇತರ ಹಲವು ಕತೆಗಳೂ, ಸನ್ನಿವೇಶಗಳೂ ಈ ಸಂಶಯವನ್ನು ಇನ್ನೂ ಬಲಪಡಿಸುತ್ತವೆ. ಅಲ್ಲದೆ ಕನ್ನಡ ಸಂಸ್ಕೃತ ಭಾರತಗಳಲ್ಲಿ ಸಾಮಾನ್ಯವಾಗಿ ಸಮನಾಗಿರುವ, ಆದಿ, ಸಭಾ, ವನ, ವಿರಾಟ, ಉದ್ಯೋಗ, ಭೀಷ್ಮ, ದ್ರೋಣ, ಕರ್ಣ, ಶಲ್ಯ, (ಗದುಗಿನ ಭಾರತದಲ್ಲಿ ಶಲ್ಯ ಪರ್ವ ಆದೊಡನೆ ಗದಾ ಪರ್ವ ಇದೆ) ಸೌಪ್ತಿಕ. ಸ್ತ್ರೀ, ಶಾಂತಿ, ಅನುಶಾಸನ, ಅಶ್ವಮೇಧಿಕ, ಆಶ್ರಮವಾಸಿಕ, ಮೌಸಲ, ಮಹಾಪ್ರಸ್ಥಾನಿಕ, ಸ್ವರ್ಗಾರೋಹಣ ಎಂಬ ಹದಿನೆಂಟು ಪರ್ವಗಳ ಬದಲಿಗೆ ಈ ಕವಿಯ ಭಾರತದಲ್ಲಿ ಪೌಲೋಮ, ಆಸ್ತಿಕ, ಆದಿ, ಸಭಾ, ಅರಣ್ಯ, ವಿರಾಟ, ಉದ್ಯೋಗ, ಭೀಷ್ಮ, ದ್ರೋಣ, ಕರ್ಣ, ಶಲ್ಯ, ಗದಾ, ಶಾಂತಿ, ಅಶ್ವಮೇಧ, ಆಶ್ರಮ, ಮುಸಲ; ಸ್ವರ್ಗಾರೋಹಣ ಎಂಬ ಹದಿನೇಳು ಪರ್ವಗಳು ಇರುವುದು ಈ ಸಂಶಯಕ್ಕೆ ಪೋಷಕಗಳಾಗಿವೆ. ಕುಮಾರವ್ಯಾಸ ಮೊದಲಾದ ಕನ್ನಡ ಕವಿಗಳು ತಮ್ಮ ಇಷ್ಟದೇವತೆಯನ್ನು ಕಾವ್ಯದ ಆರಂಭದಲ್ಲೂ, ಪ್ರತಿಸಂಧಿಗಳ ಅಂತ್ಯದಲ್ಲೂ ಪ್ರಾರ್ಥಿಸಿದ್ದಾರೆ. ಆದರೆ ಪರಮದೇವನು ತನ್ನ ಭಾರತದ ಆರಂಭದಲ್ಲಿ 'ಕಾಮಹೋಮನ ಪುತ್ರ ಗಣಪ ಮಾಡೀ ಕೃತಿಗೆ ಸ್ವಾಮಿ ನಿರ್ವಿಘ್ನತೆಯನು' ಎಂದು ಗಣೇಶನನ್ನು ಪ್ರಾರ್ಥಿಸಿ ಪ್ರತಿ ಸಂಧಿಯ ಅಂತ್ಯದಲ್ಲಿ ಭೀಮನಕೋಣೆ ಲಕ್ಷ್ಮೀರಮಣನನ್ನು ನೆನೆದಿದ್ದಾನೆ. ಆ ಕಾಲದಲ್ಲಿ ಯಲಗಳಲಸೀಮೆಯ ಕೇದಿಗೆಸರು ಎಂಬ ಊರಿನ ಹರವನೆಯ ಸೊಪ್ಪಿನ ಸುಬ್ಬಣ್ಣ ಹೆಗ್ಗಡೆ ಎಂಬ ಬ್ರಾಹ್ಮಣ ಸದ್ಗೃಹಸ್ಥರು ಜ್ಞಾನಿಗಳಾಗಿದ್ದು, ಅತಿಥಿ ಅಭ್ಯಾಗತರಿಗೆ ಆಶ್ರಯದಾತರಾಗಿ ಒಂದು ಗಣಪತಿ ದೇವಾಲಯವನ್ನು ಕಟ್ಟಿಸಿ ಅದಕ್ಕೆ ಅಮೃತಪಡಿ ನಂದಾದೀವಿಗೆಯೊಡನೆ ಅರಮನೆಯಿಂದ ಉತಾರವನ್ನೂ, (ಆಗ ಆ ಪ್ರಾಂತ್ಯದಲ್ಲೊಬ್ಬ ಪಾಳೆಯಗಾರನಿದ್ದನು) ಕೊಡಿಸಿದರು. (ನಾಂ. ಪ. ೭.) ಇವರ ದೇವಾಲಯಕ್ಕೆ ಉತ್ತಮ ಅರ್ಚಕರೊಬ್ಬರು ಬೇಕಾಗಿದ್ದರು. ಅವರು ಪರಮದೇವನ ಸಾತ್ತ್ವಿಕ ಸ್ವಭಾವ, ವೈರಾಗ್ಯ ಮತ್ತು ಜ್ಞಾನದ ಕುರಿತು ಈ ಮೊದಲೇ ತಿಳಿದಿದ್ದುದರಿಂದ ಅವನನ್ನು ಸಂಸಾರ ಸಮೇತ ಕರೆಸಿ, ತಮ್ಮ ಗಣಪತಿ ದೇವಾಲಯದ ಬಳಿಯಲ್ಲೇ ಅವರಿಗೆ ವಾಸ್ತವ್ಯವನ್ನು ಕಲ್ಪಿಸಿ, ಅವನಿಗೆ ದೇವಾಲಯದ ಅರ್ಚಕ ಪದವಿಯನ್ನೊಪ್ಪಿಸಿದರು. ಈ ಮೊದಲೇ ಇವನು ಹಲವು ತುಂಡು ಪದ, ಹಾಡುಗಳನ್ನು ರಚಿಸಿದ್ದರೂ ಯಲಗಳಲ ಸೀಮೆಯ ಆ ಗಣಪತಿ ದೇವಾಲಯದಲ್ಲೇ ವಾರ್ಧಕ ಷಟ್ಪದಿಯಲ್ಲಿ ಭಾರತವನ್ನು ಬರೆಯಲಾರಂಭಿಸಿದನು. (ನಾಂ. ಪ. ೧೦) ಇಲ್ಲಿ ನಾಂದೀ ಪದ್ಯಗಳನ್ನು ಮಾತ್ರ ಮುಗಿಸಿ, ಉಳಿದ ಎಲ್ಲಾ ಪರ್ವಗಳನ್ನು ಭೀಮನಕೋಣೆಯ ಲಕ್ಷ್ಮೀನಾರಾಯಣ ದೇವಾಲಯದಲ್ಲಿ ಮುಗಿಸಿದಂತೆ ನಾವು ಊಹಿಸಬೇಕಾಗುತ್ತದೆ. ಈ ಕವಿಯು ಕೇದಿಗೆಸರುವಿನಲ್ಲೇ ಐವತ್ತನಾಲ್ಕು ಪದ್ಯಗಳುಳ್ಳ ತತ್ತ್ವ ಚೌಪದವನ್ನೂ, ಆ ಪ್ರಾಂತ್ಯದಲ್ಲಿ ಈಗಲೂ ಪ್ರಚಾರದಲ್ಲಿರುವ ನಾರಾಯಣಾಕ್ಷರ ಮಾಲಿಕಾ ಸ್ತೋತ್ರವನ್ನೂ ಬರೆದ ನೀಲೆಯೆ. ಈ ಕವಿಯು ಹೆಸರನ್ನು ಳಿಸತಕ್ಕ ತೊಂಬತ್ತಾರು ಸಂಧಿಯ ೪,೭೨೦ ಪದ್ಯಗಳಿರುವ ತುರಂಗ ಭಾರತವನ್ನು ಬರೆದು ಮುಗಿಸಿದನು.

||ವಾ|ಷ|| ಸ್ವಸ್ತಿ ಶ್ರೀ ಮುಜ್ಜಾಲಿವಾಹನಗೆ ಶಕ ವರುಷ| ಗುತ್ತಿಗೆಗೆ ಸಾವಿರದ ಏಳ್ನೂರು ಪೂರ್ಣ ಸಲು|ತಿತ್ತು ಲೆಕ್ಕಕೆ ಹೇಮಳಂಬಿ ಸಂವತ್ಸರದ ವರ್ಷಋತು ಶ್ರಾವಣದೊಳು||ಉತ್ತಮಂ ಶುಕ್ಲ ಪಕ್ಷದ ಪಂಚಮಿಯ ದಿನಂ| ಹಸ್ತ ನಕ್ಷತ್ರ ಶುಭ ಲಗ್ನದಿಂ ಭಾರತವ| ವಿಸ್ತರಿಸ ತೊಡಗಿದೆನು ಭಾರ್ಗವಾಸರದುದಯ ಕಾಲದೊಳು ಗುರು ಕರುಣದಿಂ||

ತುರಂಗ ಭಾರತವನ್ನು ಈ ಕವಿಯು ಕ್ರಿ.ಶ. ೧೭೭೭ರಲ್ಲಿ ಬರೆಯ ತೊಡಗಿದನೆಂದು ಮೇಲಿನ ಪದ್ಯದಿಂದ ಸ್ಪಷ್ಟವಾಗುವುದು. ಇದಕ್ಕೆ 'ಸಂಕ್ಷೇಪ ಭಾರತ' ಎಂಬ ಹೆಸರಿದ್ದಂತೆಯೂ ತೋರುವುದು. ಆದರೆ ಇದನ್ನೋದಿದವರು ತುರಂಗದ ಹೆಜ್ಜೆಯ ಗತ್ತಿನಲ್ಲಿ ಓದುತ್ತಿದ್ದುದರಿಂದ ಇದಕ್ಕೆ 'ತುರಂಗಭಾರತ' ಎಂಬ ಹೆಸರಾಯಿತೆಂದೂಹೇಳುತ್ತಾರೆ. ಈ ಕವಿಯು ತನ್ನ ಕಾವ್ಯದಲ್ಲಿ ಒಂದೂ ಕಠಿನ ಪದವನ್ನೂ ಪ್ರಯೋಗಿಸದೆ ಆಬಾಲ ಗೋಪಾಲರ ಸಾಹಿತ್ಯವೋ, ಜನಪದ ಸಾಹಿತ್ಯವೋ— ಎಂಬಂತೆ ಸರಳ ಪದಗಳಿಂದಲೇ ಮನೋಹರವಾದ ಸೃಷ್ಟಿಯೊಂದನ್ನು ನಿರ್ಮಿಸಿದ್ದಾನೆ. ಕನ್ನಡ ಸಾಹಿತ್ಯದಲ್ಲೇ ಅತ್ಯಂತ ಸುಲಭ ಕಾವ್ಯಗಳಲ್ಲಿ ತುರಂಗ ಭಾರತವು ಮೊದಲಿನದು. ಇದರಲ್ಲಿ ರಸಗಳೂ ಸಮೃದ್ಧಿಯಾಗಿ ಹರಿದಿವೆ.

ಗದುಗಿನ ನಾರಣಪ್ಪನು ಪಂಪನ ಅನುಸರಣದಿಂದ ಅರ್ಜುನನನ್ನು ಮೇಲಕ್ಕೆತ್ತಿರುವನು; ಪರಮದೇವನು ತನ್ನ ಕಾವ್ಯದಲ್ಲಿ ಭೀಮನನ್ನು ಎತ್ತಿ ಆಡಿರುವನು. ಅವನನ್ನು ರುದ್ರಾವತಾರಿ ಎನ್ನಲೂ ಕವಿಗೆ ಅಳುಕಿಲ್ಲ. ಅವನ ಇಷ್ಟದೇವತೆ ಇರುವುದೂ ಭೀಮನಕೋಣೆಯಲ್ಲಿ. ಇದರಿಂದ ಭೀಮನ ಶೌರ್ಯವನ್ನು ವರ್ಣಿಸುವ ಸಂದರ್ಭ ಬಂದಾಗಲೆಲ್ಲಾ ಕವಿಯು ವೈಮರೆತು ವರ್ಣಿಸುವನು.

ದುಶ್ಶಾಸನನನ್ನು ಭೀಮನು ಚಿತ್ರಹಿಂಸೆಯಿಂದ ಕೊಂದಾಗಿದೆ. ಆಗಲೇ ಅವನು ಉದ್ರಭೀಮನಾಗಿ ಕುರುಸೇನೆಯ ವೀರರನ್ನೆಲಾ ಕರೆದು ದುಶ್ಶಾಸನನನ್ನು ಬಿಡಿಸಿಕೊಳ್ಳುವಂತೆ ಹೇಳಿಯಾಗಿದೆ. ಆದರೆ ಆ ಚೂಣಿಯಲ್ಲಿ ಮುಂದರಿಯುವ ಭಟನೊಬ್ಬನೂ ಇರಲಿಲ್ಲ. ಇದರಿಂದ ಇನ್ನೂ ಕೆರಳಿದ ರುದ್ರ ಭೀಮನು ತನ್ನ ಪಕ್ಷದ ವೀರರನ್ನೇ ಕರೆಯುತ್ತಾನೆ.

||ವಾ|ಷ.|| ಎಲ್ಲಿ ದೃಷ್ಟದ್ಯುಮ್ನ ಸಾತ್ಯಕಿ ಶಿಖಂಡಿ ನೃಪ|ರೆಲ್ಲಿ ಕೃಷ್ಣಾರ್ಜುನರು ವೈರಿಯಂ ಸೆಳೆದು ಕೊಳ|ಲೆಲ್ಲಿ ನೋಡ್ವಪೆನೀಗಳೆಂದು ಭಯ ಬಲವ ಮೂದಲಿಸಿದಂ ಸಂಗರದೊಳು ||೧||

ನೆಲವೊಳಗುವಂತೆ ಬೊಬ್ಬಿರಿದು ದಳವಂ ನೋಡಿ| ಫಲುಗುಣನ ಕರೆದು ಮೂದಲಿಸಿದಂ ತ್ರೈಲೋಕ್ಯ|ದೊಳಗೆಣೆಗಳಿಲ್ಲೆಂಬ ಬಿರುದುಳ್ಳಡಂ ನಿನಗೆ ತನಗೆ ಕೊಡು ಕಾಳಗವನು|| ಗೆಲಿದರಿಯ ಸೆಳೆದು ಕೊಳ್ಳೆಂದು ಕಲಿಪಾರ್ಥನಂ| ಚಲನ ಸಂಭವನು ಮೂದಲಿಸುತಿರೆ ಕೋಪದಿಂ,ದಿಳೆಗೆ ರಥದಿಂದ ಧುಮ್ಮಿಕ್ಕಿದನು ಫಲುಗುಣನು ಭೀಮನೊಳ್ ಕಾದಲೆಂದು ||೨||

ಎಲೆ ಮರುಳೆ ಗಾಂಡೀವಿ ಭೀಮನ ಪ್ರತಾಪವಂ|ತಿಳಿಯದೈದುವೆಯೊ ರಿಪು ಕೌರವ ಸಹೋದರನ| ಸಲಹುವೆಯೊ ದ್ರೋಹಿ ನಿಜಬಲಸಹಿತ ನಿಂದ ನಿಲುಸುತನೊಡನೆ ಗೆಲಲಾಪೆಯೊ|| ಬಲುಹನರಿಯದೆ ಬರಿದೆ ಪೋಗದಿರು ಭೀಮನಂ| ಅಳುಕುವೆನು ತಾನಿಂದು ವಿಗ್ರಹಕೆ ನಿಲುವಡಂ| ಸಲವರಂ ಬಿಡು ನೋಡು ರುದ್ರಾವತಾರನಂ ನಿಲ್ಲೆಂದನಾ ಮುರರಿಪು ||೩||

० ० ०

ತೋರಿಸಿದನಾ ಸವ್ಯಸಾಚಿಗಂ ಪವನಜನ| ಶೌರ್ಯ ಪ್ರತಾಪವಂ ಚಕ್ರವಂ ಮರೆಮಾಡಿ| ತೋರಿಸಲು ರುದ್ರಾವತಾರನಾಗಿರುತಿರಲ್ ಕಲಿಪಾರ್ಥ ಕಡುಭಯದೊಳು| ಜಾರಿದರು ಹರ ಹರಾ ಎಂದು ಮಣಿರಥವ| ನೇರಿದಂ ಇವ ರುದ್ರನೋಲಿ ದಿರಲ್ ಸುರ| ವೈರಿಯಂ ಸೀಳ್ದ ನರಹರಿಯೋ ಕಟ್ಟುಗ್ರತೆಯೊ ಸಾರ್ನೀ ಸುದಿನವರಿಯೆನು ||೪||

ಇಂದು ಕಂಡೆನು ದೇವ ಭೀಮನಾಕೃತಿಯನಾ|ನೆಂದು ಕಾಣೆನೆನಲ್ಕೆ ಮುರಹರಂ ನಗುತ ನಾ|ವಿಂದಿವಂಗಳುಕಿದೆವು ನಿನ್ನವಾಡೇನೆಂದು ಭೀತಿಯಂ ಪಸರಿಸಿದನು........||೫|| (ಕರ್ಣ ಪರ್ವ. ಪು.೨೬೩, ಪದ್ಯ ೪೫—೪೯)

ಗದುಗಿನ ಭಾರತದಲ್ಲಿ ಈ ಭಾವನೆಗಳೇ ಇದ್ದರೂ ಇಲ್ಲಿ ಕವಿಯು ಭೀಮನನ್ನು ಮತ್ತೂ ಚಮಕಿಸಲೆತ್ನಿಸಿರುವನು. ಆ ನಾಡವರಿಗೂ ಆಗ ಬುದ್ಧಿಪ್ರಧಾನನಾದ ಅರ್ಜುನನಿಗಿಂತ, ದೇಹ ಶಕ್ತಿ ಪ್ರಧಾನನಾದ ಭೀಮಸೇನನೇ ಉತ್ಸಾಹದಾಯಕನಾಗಿದ್ದಿರಬಹುದು.

ಈ ಸಾತ್ತ್ವಿಕನಾದ ವರಕವಿಯು ೧೮೦೭ರಲ್ಲಿ ದೈವಾಧೀನನಾದನು. ಭಗವತ್ಕೃಪೆಗೆ ಪಾತ್ರನಾದ ಈತನು ಕೆಲವು ದಿನಗಳಲ್ಲೇ ತನಗೆ ಬರಲಿರುವ ಮರಣವನ್ನು ಬಂಧು ಮಿತ್ರರಿಗೆ ಮೊದಲಾಗಿ ತಿಳಿಸಿ ಅವರನ್ನೆಲ್ಲಾ ಕರೆಸಿಕೊಂಡು ಮಾತನಾಡುತ್ತಾ ಮಾತನಾಡುತ್ತಾ ಸ್ವರ್ಗಸ್ಥನಾದನಂತೆ!

ಈ ಕವಿಯು ತನ್ನೊಡನೆಯೇ ಹುಟ್ಟಿದ ದಾರಿದ್ರ್ಯದ ನಡುವೆ ಕನ್ನಡ ಸಾಹಿತ್ಯ ಸೇವೆಯನ್ನು ಮರೆಯದೆ—ನಾಗವಲ್ಲಿಯ ಕೊಡಲು ಹಣ್ಣು ಹೂಗಳಿಲ್ಲದಿದ್ದರೂ ಪತ್ರವನ್ನಾದರೂ ಜನತೆಗೆ ಸಮರ್ಪಿಸುವಂತೆ— ವಿದ್ವತ್ತಿಲ್ಲದಿದ್ದರೂ ಇದ್ದ ತಿಳಿವನ್ನೇ ಪೋಣಿಸಿ ಸುಂದರವಾದ ಸಾಹಿತ್ಯ ಮಾಲೆ ರಚಿಸಿ, ಕನ್ನಡ ತಾಯಿಯ ಕೊರಳಿಗಿಕ್ಕಿ ಆಕೆಯ ಪ್ರಸನ್ನ ದೃಷ್ಟಿಯನ್ನು ಕಂಡೇ ತೃಪ್ತನಾದ ಪರಮದೇವನು ಪ್ರಾತಃ ಸ್ಮರಣೀಯನಲ್ಲದೆ ಮತ್ತೇನು? ಇವನಿಗೆ ಸಾಹಿತ್ಯರಂಗದಲ್ಲಿ ಸರ್ವಜ್ಞ ಕವಿ, ಕನಕದಾಸರ ಮಗ್ಗುಲಲ್ಲೇ ಪೀಠ ದೊರೆಯಲು ಸಂದೇಹವಿಲ್ಲ. ● ●

For all your seasonal requirements

Please visit

Prakash Footwear House

MAIN ROAD
PUTTUR, S.K.

Props: B. A. BROS.

ಸ್ವಾತಂತ್ರ್ಯ ಮತ್ತು ಸಾಹಿತ್ಯ

(ಐದನೇ ಪುಟದಿಂದ)

ಗದ್ಯಸಾಹಿತ್ಯದಲ್ಲಿ ವಿಶೇಷ ಸ್ವಾತಂತ್ರ್ಯ ಪ್ರಯೋಗ ನಡೆಯದಿದ್ದರೂ ಪದ್ಯಸಾಹಿತ್ಯದಲ್ಲಿ ಸ್ವಾತಂತ್ರ್ಯ ಅರ್ಥಾತ್ ಸ್ವೇಚ್ಛಾಪ್ರವೃತ್ತಿ ಕಂಡುಬರುತ್ತಿದೆ. "ಕವಯೋ ನಿರಂಕುಶ ಮತಯಃ" ಎಂಬ ಮಾತು ನಿಜ, ಸಹಜ. ಆದರೆ ಪದ್ಯದ ಯಾವ ಧರ್ಮವೂ ಇಲ್ಲದಂತೆ ಚಾರು ಚೂರು ಗೆರೆಗಳನ್ನು ಅಕ್ಷರಗಳನ್ನು ಕೆಳಗೆ ಕೆಳಗೆ ಬರೆಯುವ ನವೋನವ್ಯ ಸಂಪ್ರದಾಯ ಈ ಬಗೆಯ ಸಾಹಿತ್ಯದಲ್ಲಿ ಬೆಳೆಯುತ್ತಿರುವ ಸ್ವಾತಂತ್ರ್ಯ ಸಮಂಜಸವಲ್ಲ. ಕವಿಯು ಕೊಡುವ ಉಪಮಾನ, ಬಳಸುವ ವರ್ಣನೆ, ಛಂದಸ್ಸು ಇತ್ಯಾದಿಗಳಲ್ಲಿ ಬದಲಾವಣೆಯಾಗಲಿ! ಹಳೆಯ 'ಷಟ್ಪದಿ' ಸಾಂಗತ್ಯ ಛಂದಸ್ಸುಗಳನ್ನು ಬಿಟ್ಟು ಆಂಗ್ಲಸಾಹಿತದ ಹಾದಿ ಹಿಡಿದು ಹೊಸ ಛಂದಸ್ಸುಗಳನ್ನು ಸಿದ್ಧಗೊಳಿಸಿ ಬಿ ಎಮ್. ಶ್ರೀಯವರು ಕುವೆಂಪು ಅವರು ಕನ್ನಡದಲ್ಲಿ ಕವನಕಟ್ಟಿಲ್ಲವೇ? ಆ ಕವನಗಳಲ್ಲಿ ನವ್ಯತೆಯೂ ಇದೆ ಭವ್ಯತೆ ಹಾಗೂ ದಿವ್ಯತೆಯೂ ಇದೆ. ಆದರೆ ಇಂದಿನ ತರುಣ ನವ್ಯಕವಿಗಳ ಕವನ ಜನ ಸಾಮಾನ್ಯರಿಗೆ ಅರ್ಥವೇ ಆಗದ ಮೇಲೆ ರಸಾಸ್ವಾದವಂತೂ ತೀರಾ ಆಗದೆ ಇರುವ ಈ ತರದ ಕವನಗಳನ್ನು ಬರೆವುದರಿಂದೇನು ಪ್ರಯೋಜನ? ಯಾರ ಸಂತೃಪ್ತಿಗಾಗಿ ಯಾರ ಮೆಚ್ಚಿಗೆಗಾಗಿ ಈ 'ನವ್ಯಕವನ'ಗಳ ರಚನೆ?

'ನಾವು ಬರೆಯುವುದು ಇತರರಿಗಾಗಿ ಅಲ್ಲ ನಮಗಾಗಿಯೆ' ಎಂದು ಹೇಳುವ ನವ್ಯಸಂಪ್ರದಾಯವಾದಿಗಳಿಗೆ ಏನು ಉತ್ತರ ಕೊಡಲಿ! ಕವಿ ಕೇವಲ ಆತ್ಮಸಂತೋಷಕ್ಕಾಗಿ ಕೃತಿರಚಿಸುವುದಲ್ಲ. ತಾನು ರಚಿಸಿದುದನ್ನು ಇತರರು ಓದಿ ಆಸ್ವಾದಿಸಿ ಮೆಚ್ಚಿದಾಗ ಮಾತ್ರ ಕವಿಗೆ ಸಂತೃಪ್ತಿ. ಕಾಲ ಬದಲಾದಂತೆ ಎಲ್ಲ ಕ್ಷೇತ್ರಗಳಲ್ಲೂ ಬದಲಾವಣೆಯಾಗಬೇಕಾದುದು ಸಹಜ, ಸ್ತುತ್ಯ ಹಾಗೂ ಅಗತ್ಯ. ಆದರೆ ಮೂಲಧರ್ಮಕ್ಕೆ ಚ್ಯುತಿಬಾರದಂತೆ ಬದಲಾವಣೆಯಾದಲ್ಲಿ ಸೊಗಸು. ಕೆಲವರು ಮೆಚ್ಚುವರೆಂಬುದರಿಂದ ನಗ್ನನೃತ್ಯ ಹುಚ್ಚು ಕುಣಿತ ಒಂದು ನೂತನ ಕಲೆಯೆಂದು ಪುರಸ್ಕೃತವಾಗಬಹುದೆ? ಮನಬಂದಂತೆ ವರ್ತಿಸುವ ಸ್ವಾತಂತ್ರ್ಯಕ್ಕೂ ನಿರಂಕುಶನಾದಿತ್ವಕ್ಕೂ ಯಾವ ಅಭ್ಯಂತರವಿರುವುದು?

ಕವಿತೆಯನ್ನು ಕಾಮಿನಿಗೆ ಹೋಲಿಸುವುದರಿಂದ ಕವಿತೆ ಬಾಹ್ಯಾಂತಃಸ್ಫುರದ್ರಸವಾಗಿ ಸುಂದರವಾಗಿರಬೇಕು. ಕಾಮಿನಿಗೆ ತೋಳಿಲ್ಲದ ರವಕೆ, ಕತ್ತರಿಗೆ ತುತ್ತಾಗಿಸಿದ ಕುರುಳು, ಮೊಳಕಾಲು ಮುಚ್ಚದ ತುಂಡುಲಂಗ, ಸ್ವೇಚ್ಛಾವಿಹಾರ ಇದೆಲ್ಲ ಭಾರತೀಯತೆಯ ದೃಷ್ಟಿಯಿಂದ ಸೊಗಸಲ್ಲ. ಹಾಗೆಯೇ ಕವಿತಾ ಕಾಮಿನಿಗೂ ಯಾವುದಾದರೊಂದು ಬಗೆಯ ಛಂದೋವಸನ ಸೌಷ್ಠವ ಸೌಂದರ್ಯಬೇಕು ನಾರಿಯರಿಗೂ ಸ್ವಾತಂತ್ರ್ಯವಿದೆಯೆಂದು ನಿರ್ಲಜ್ಜೆಯಾಗಿ ದಾರಿತಪ್ಪಿ ನಡೆಯುವುದು ವಿಹಿತವೇ? ಸ್ವಾತಂತ್ರ್ಯ ಸ್ವೈರವೃತ್ತಿಯಾಗದೆ ಶೀಲಸಂಪದ ಸುಖಶ್ರೇಯಸ್ಸಾಧಕವಾಗಿರಲಿ! ಜನತೆ ಮೆಚ್ಚುವಂತೆ ಜನಹಿತವಾಗುವಂತೆ ಜನನಾಯಕರು ವರ್ತಿಸಲಿ; ಕವಿಗಳು, ಲೇಖಕರು ಸತ್ವಪೂರ್ಣ ಸಾಹಿತ್ಯ ನಿರ್ಮಾಣಗೆಯ್ಯಲಿ! ಎಲ್ಲಾ ಕ್ಷೇತ್ರಗಳಲ್ಲಿಯೂ ಸಲ್ಲದ ಸ್ವೈರವೃತ್ತಿಯಳಿದು ಜನ ಜೀವನ ಹಾಗೂ ಸಾಹಿತ್ಯದಲ್ಲಿ ನವಚೇತನ ಚಿಮ್ಮಿ ನಲಿಯಲಿ !

ಎಲ್ಲಿದೆ 'ಸ್ವಾತಂತ್ರ್ಯ'?*

—ಶಿ. ಜನಾರ್ದನ.

ಎಲ್ಲಿದೆ 'ಸ್ವಾತಂತ್ರ್ಯ'?
ಅಮೆರಿಕೆಯ ಸ್ವಾತಂತ್ರ್ಯದ ರಣಕಣ,
ಫ್ರೆಂಚ್ ವಿಪ್ಲವದಿ ಗೆದ್ದಿಹ ಜನಗಣ—
ವೆಲ್ಲವ ಹುಡುಕಿದೆ, ತಡಕಿದೆ
ಆದರೂ—
ಸಿಗಲೊಲ್ಲದು 'ಸ್ವಾತಂತ್ರ್ಯ'.
ರಷ್ಯದಕ್ರಾಂತಿಯ, ಚೀನದ ಭ್ರಾಂತಿಯ
ಚರಿತೆಗಳರಸಿಯೂ ಸೋತೆ.
ಕೋವಿಯನೆದುರಿಸಿ ಆಂಗ್ಲರ ನಡುಗಿಸಿ
ಭಾರತ ತಂದಿಹುದಂತೆ!
ರಕ್ತವ ಹರಿಸಿ, ವೈರಿಯ ತಣಿಸಿ
ಬಾಂಗ್ಲಾ ಪಡೆಯುವುದಂತೆ!
ಎಲ್ಲಿದೆ ಆ 'ಸ್ವಾತಂತ್ರ್ಯ'?
ಅರಸಿದರೆನಿತೊ—
ಸಿಗಲೊಲ್ಲದ 'ಸ್ವಾತಂತ್ರ್ಯ'
ಸಂವಿಧಾನಗಳ ಪುಟಗಳ ನಡುವೆ,
ಸಂಸತ್ತಿನ ಮಂದಿರದೊಳಹೊರಗೆ,
ನ್ಯಾಯಪೀಠಗಳ ಮೆಟ್ಟಿಲ ಕೆಳಗೆ—
ಅಡಗಿರುವುದೇ 'ಸ್ವಾತಂತ್ರ್ಯ'?
ಸಿಕ್ಕಿತು! ಸಿಕ್ಕಿತು! ಇಲ್ಲಿದೆ ನೋಡಿ—
ಕೊನೆಗೂ ಸಿಕ್ಕಿತು..ಎಂಥಾ ಮೋಡಿ!
ಕಾರಂತರ ಕೋಶದ ಐನೂರಾ--
ಮೂವತ್ತೆಂಟನೇ ಪುಟ ನೋಡಿ.

[*ಕವಿ ವಿ. ಜಿ. ಭಟ್ಟರ ಕ್ಷಮೆಕೋರಿ]

ಪ್ರಜಾರಾಜ್ಯವು ರಾಜ್ಯಗಳಲ್ಲೆಲ್ಲಾ ಬಹಳ ಸುಂದರವಾದುದು.

—(ಪ್ಲೆಟೋ)

o o o

ಸ್ತ್ರೀಯ ನಾಲಗೆಯು ಕೇವಲ ಮೂರೇ ಇಂಚು ಉದ್ದವಿದ್ದರೂ 6 ಅಡಿ ಎತ್ತರದ ಪುರುಷನನ್ನು ವಧಿಸುವ ಶಕ್ತಿ ಉಳ್ಳದ್ದಿದೆ. – (ಜಪಾನೀ ಗಾಥೆ)

o o o

ನಿನ್ನ ದೃಷ್ಟಿ ಅನಂತದಲ್ಲಿದ್ದರೆ ನಿನ್ನ ಬುದ್ಧಿ ಬೆಳೆಯುವುದು. ಆಗ ನಿನ್ನ ಅಭಿಪ್ರಾಯಗಳಿಗೂ ಕೃತಿಗಳಿಗೂ ಒಂದು ಬಗೆಯ ಸೊಬಗು ಬರುವುದು ಎಂತಹ ಪಾಂಡಿತ್ಯವೂ ಅದರ ಮುಂದೆ ನಿಸ್ತೇಜವಾಗಿ ಕಾಣವುದು —ಎಮರ್ಸನ್

Telegram : 'SAHAKARI' Phone : 4637

THE S. K. A. C. M. S. LTD.,
MANGALORE-1

ದ. ಕ. ಕೃಷಿಕರ ಸಹಕಾರಿ
ಮಾರಾಟ ಸಂಘ ಲಿಮಿಟೆಡ್
ಸಹಕಾರಿ ಮಹಲ್,
ಮಂಗಳೂರು-1

ಅಡಿಕೆ, ಯಾಲಕ್ಕಿ, ಕಾಳುಮೆಣಸು, ಗೇರುಬೀಜ,
ತೆಂಗಿನ ಕ್ಯಾ ವಗೈರೆ (ಅಕ್ಕಿ ಭತ್ತ ಹೊರತು)
ವ್ಯವಸಾಯದ ಎಲ್ಲಾ ಉತ್ಪತ್ತಿಗಳನ್ನು
ಕಮಿಶನ್ ವ್ಯಾಪಾರಕ್ಕೆ ಪಡಕೊಂಡು
ಯೋಗ್ಯ ಬೆಲೆಗೆ ವಿಕ್ರಯಿಸುವ
ಜಿಲ್ಲೆಯ ಪ್ರಾಮುಖ್ಯ ಸಹಕಾರಿ ಮಾರಾಟ ಸಂಘ

ಎಸ್. ನರ್ಸಪ್ಪಯ್ಯ, B. A., B. L., ಉಪಾಧ್ಯಕ್ಷ
ಬಿ. ಪ್ರಭಾಕರ ರಾವ್, M. A., B. L., ಅಧ್ಯಕ್ಷ

K. V. SHENOY & CO.,
TRANSPORT CONTRACTORS
STOCKISTS:
A. C. C. CEMENT, TYRES, AUTO PARTS
AGENTS
Esso

PHONES:
Office: 151
Residence: 71
*
Service Stations:
Puttur Phone 61
Panemangalore „ 71

P. O. Box No. 1
PUTTUR
(S. KANARA)
(Mysore State)

With Best Compliments
From
M/s. JYOTHI TALKIES
MANGALORE

‘ಬಹುಸಂಖ್ಯರು’ ಮತ್ತು ‘ಅಲ್ಪಸಂಖ್ಯರು’

(ನಾಲ್ಕನೇ ಪುಟದಿಂದ)

ರೆ ಈ ಹಿಂದೂ ಎಂಬ ಪದವೇ ಸಂದಿಗ್ಧ ಮತ್ತು ಯಥಾರ್ಥವಲ್ಲದ ಹೆಸರು. ಆರಂಭದಿಂದಲೇ ಈ ಪದವನ್ನು ಗ್ರೀಕರು ಆಮೇಲೆ ತುರ್ಕರು, ಮೊಗಲರು, ಅಫಘಾನರು ಇತ್ಯಾದಿ ಭಾರತದ ಹೊರಗಿನವರು ಸಿಂಧೂ ನದಿಯ ಪೂರ್ವಕ್ಕೆ ನೆಲೆಸಿರುವ ಜನಾಂಗಗಳನ್ನು ಒಟ್ಟಾಗಿ ಹೆಸರಿಸಲು ಬಳಸಿದರು.

‘ಹಿಂದೂ’ ಒಂದು ಧರ್ಮದ ಹೆಸರೇ ಇರಲಿಲ್ಲ. ಇಂದಿಗೂ ಭಾರತೀಯರನ್ನು ಅಮೆರಿಕೆಯಲ್ಲಿ ಹಿಂದುಗಳೆಂದೇ ಕರೆಯುತ್ತಾರೆ! ಭಾರತೀಯ ಮುಸ್ಲಿಮರನ್ನು ಹಿಂದೂ ಮುಸ್ಲಿಮರೆಂದೇ ಕರೆಯುತ್ತಾರೆ—ಅನೇಕ ಮುಸ್ಲಿಮ್ ದೇಶಗಳಲ್ಲಿ!

ವಸ್ತುಸ್ಥಿತಿ ಏನೆಂದರೆ ‘ಹಿಂದೂ’ ಜನಾಂಗ ಒಂದು ಕೋಮು ಅಲ್ಲ ಎನ್ನುತ್ತಾರೆ. ಶ್ರೀ ಪ್ರಕಾಶರು. ಈ ಜನಾಂಗದಲ್ಲಿ ಯಾವ ಎರಡು ಗುಂಪೂ ಒಂದನ್ನೊಂದು ಹೋಲುವುದಿಲ್ಲ; ಹೊಂದಿಕೊಳ್ಳುವುದಿಲ್ಲ. ಹಿಂದುಗಳೆಂಬುವವರು ವಿಶಾಲವಾದ ಅಲ್ಪಸಂಖ್ಯ ಗುಂಪುಗಳ ಒಂದು ಸಮುದಾಯ. ಈ ಸಮುದಾಯದ ವಿರುದ್ಧ ಕ್ರೈಸ್ತ, ಪಾರಸಿ ಮತ್ತು ಇತರ ಅಲ್ಪಸಂಖ್ಯ ಸಮಾಜಗಳು ನಿಲ್ಲುತ್ತವೆ. ಇವುಗಳಲ್ಲಿ ಆಂಗ್ಲೊ ಇಂಡಿಯನ್ ಸಮಾಜಕ್ಕೆ ಮಾತ್ರ ದೇಶದ ಶಾಸನ ಸಭೆಗಳಲ್ಲಿ ಪ್ರತ್ಯೇಕ ಪ್ರಾತಿನಿಧ್ಯ ಸಿಕ್ಕಿದೆ. ಇದಕ್ಕೆ ಕಾರಣ, ಬ್ರಿಟಿಷರು ದೇಶವನ್ನು ಬಿಟ್ಟು ಹೋದ ಮೇಲೆ ಈ ಅರೆ-ಬ್ರಿಟಿಷ್ ಜನರು ಅಸಹಾಯ ಸ್ಥಿತಿಯಲ್ಲಿ ಉಳಿಯುವಂತಾಯಿತು. ಆದರೆ ಪಾರಸೀ ಕ್ರೈಸ್ತ ಮುಂತಾದ ಗುಂಪುಗಳು ಮಾತ್ರ ಹೇಗೋ ತಮ್ಮ ಯೋಗಕ್ಷೇಮ ತಾವೇ ನೋಡಿಕೊಳ್ಳಬಲ್ಲರು—ಎಂದು ಎಣಿಸಲಾಯಿತು.

ಬಹುಸಂಖ್ಯ ಅಲ್ಪ ಸಂಖ್ಯ ಎಂಬ ಉಪಾಧಿ ಹಚ್ಚಿದ ಜನರ ಬಗೆಗೂ ಒಳ ವಿರೋಧಗಳೂ ವಿರೋಧಾಭಾಸಗಳೂ ಬಹಳವಿರುತ್ತವೆ. ನಾವು ಸಂಖ್ಯಾಬಲವನ್ನು ಅಧಿಕಾರ ಬಲದೊಂದಿಗೆ ತಳಕು ಹಾಕುತ್ತೇವೆ:— ಹೆಚ್ಚು ಸಂಖ್ಯೆಯ ಗುಂಪು ಹೆಚ್ಚು ಪ್ರಭಾವಶಾಲಿಯೆಂದು ತಿಳಿಯುತ್ತೇವೆ. ಆದರೆ ಅನೇಕ ಕಡೆಗೆ ಅನೇಕ ಸಲ ತೀರ ಅಲ್ಪಸಂಖ್ಯ ಗುಂಪುಗಳೂ ಬಹುಸಂಖ್ಯರನ್ನು ಬಹುಕಾಲ ಆಳಿದ್ದುಂಟು; ತಲೆಮೆಟ್ಟಿ ಕುಣಿದದ್ದುಂಟು. ಮದರಾಸಿನಲ್ಲಿ ಬ್ರಾಹ್ಮಣರ ಸಂಖ್ಯೆ ನೂರಕ್ಕೆ ಮೂರು. ಆದರೂ ಉಳಿದ 97 ಪ್ರತಿಶತ ಜನತೆಯನ್ನು ಆಳಿದರು. ಈ ಬಹುಸಂಖ್ಯರಿಗೆ ಶಾಸನ ಸಭೆಗಳಲ್ಲಿ ಮುಂದೆ ಬರಲಿಕ್ಕೆ ವಿಶೇಷ ನೆರವು ಒದಗಿಸಬೇಕಾಯಿತು. ಮಹಾರಾಷ್ಟ್ರದಲ್ಲಿಯೂ ಹಾಗೆಯೇ ಆಗಿದೆ.

ಇತ್ತೀಚೆಯವರೆಗೆ ತಮ್ಮ ವಿದ್ಯೆ, ದರ್ಪ ಸಾಮಾಜಿಕ ಶ್ರೇಷ್ಠತೆಯ ಬಲದಿಂದ ಕೆಲವು ಅಲ್ಪ ಸಂಖ್ಯ ಸಮಾಜಗಳು ಬಹುಸಂಖ್ಯರನ್ನು ತುಳಿದು ನಿಂತು ಆಳಿದವು. ಅದರ ತೀವ್ರ-ಪ್ರತಿಕ್ರಿಯೆಯೇ ಇಂದು ಆ ಬಹುಸಂಖ್ಯ ಹಿಂದುಳಿದ ಸಮಾಜಗಳ ಸಂಖ್ಯಾಬಲದ ರಾಜಕೀಯ ಪ್ರಭುತ್ವದಲ್ಲಿ ತಾಂಡವವಾಡುತ್ತಿದೆ.

ಹರಿಜನರ ಸಂಖ್ಯೆ ಬೇರೆ ಕೆಲವು ಸಮಾಜಗಳಿಗಿಂತ ಹೆಚ್ಚು. ಆದರೂ ಅವರಿಗೆ ವಿಶೇಷ ರಕ್ಷಣೆ ಅಧಿಕಾರ ಕೊಡಬೇಕಾಯಿತು. ಇನ್ನು ಈ ಹರಿಜನರಲ್ಲಿಯೂ ಅನೇಕ ಉಪಜಾತಿಗಳಿದ್ದು ಅವುಗಳಲ್ಲಿ ಅನೇಕ ಗುಂಪುಗಳಿಗೆ ಉಳಿದ ‘ಮುಂದುವರಿದ’ ಗುಂಪಿನಿಂದ ಸಂರಕ್ಷಣೆ ಬೇಕಾಗಿದೆ!

ಇದೆಲ್ಲವೂ ಈ ಸಮಸ್ಯೆಯನ್ನು ಮತ್ತಷ್ಟು ಜಟಿಲ ಕುಟಿಲಗೊಳಿಸಿದೆ.

ಶ್ರೀ ಪ್ರಕಾಶರ ಸೂಚನೆಯೇನೆಂದರೆ ನಮ್ಮ ಸಂವಿಧಾನದಲ್ಲಿ ಇನ್ನೂ ಒಂದು ಪರಿಶಿಷ್ಟ (ಶೆಡ್ಯೂಲ) ಸೇರಿಸಬೇಕು. ಅದರಲ್ಲಿ ಯಾವ ಯಾವ ಜಾತಿ ಗುಂಪುಗಳು ಇನ್ನೂ ಹೆಚ್ಚಿನ ರಕ್ಷಣೆಗೆ ಬಾಧ್ಯರೆಂಬುದನ್ನು ನಮೂದಿಸತಕ್ಕದ್ದು. ಜತೆಗೆ ಇಂದಿಗೂ ಬಹುಸಂಖ್ಯರನ್ನು ಆಳುವ ಯಜಮಾನಿಕೆ ನಡೆಯಿಸುವ ಅಲ್ಪ ಸಂಖ್ಯ ಗುಂಪುಗಳು ಯಾವವೆಂಬುದರ ಒಂದು ಸೂಚಿಯನ್ನು ಈ ಪರಿಶಿಷ್ಟಕ್ಕೆ ಸೇರಿಸತಕ್ಕದ್ದು.

ಇದರಿಂದ ‘ಹಿಂದೂ’ ಎಂಬುದು ಬಹುಸಂಖ್ಯ ಕೋಮು ಎಂಬ ಅಪನಾಮವನ್ನು ಹೋಗಲಾಡಿಸಲು ಸಹಾಯವಾಗುವುದು. ಹಿಂದುಗಳೆಂಬವರಲ್ಲಿಯೇ ಇಷ್ಟು ಉಗ್ರ, ತೀವ್ರ, ಘೋರ, ವೈಷಮ್ಯ ವೈರವಿರುವುದನ್ನು ನೋಡಿದರೆ ಈ ಹಿಂದುಗಳೆಲ್ಲ ಒಂದು ಕೋಮು ಎಂದು ಹೇಗೆ ಪರಿಗಣಿಸಲಾಗುವುದೋ ನನಗೆ ತಿಳಿಯುವುದಿಲ್ಲ!

●●

ಶ್ರೀ ವಾ. ಅ. ಹೊದಿಕೆ

ಜಗತ್ತಿಗೇ ಪಾಕಿಸ್ತಾನದ ಸವಾಲು

ಪಾಕಿಸ್ತಾನದ ನರಮೇಧವನ್ನು ಪ್ರತ್ಯಕ್ಷ ಪರೋಕ್ಷವಾಗಿ ಬೆಂಬಲಿಸುವವರು ಶಸ್ತ್ರಾಸ್ತ್ರಗಳ ರಾಜ್ಯ ಕಟ್ಟುವವರು— ಇದರಿಂದ ಮಾನವ ಕಲ್ಯಾಣವಾಗದು. ಸಂಪೂರ್ಣ ನಿಶ್ಶಸ್ತ್ರೀಕರಣದಿಂದಲೇ ಮಾನವನ ಸುಖ ಶಾಸನ ರಹಿತ ಸಮಾಜ ತಲೆಯೆತ್ತಬೇಕು; ಗ್ರಾಮ ಸ್ವರಾಜ್ಯಗಳು ನಿರ್ಮಾಣವಾಗಬೇಕು— ಪಾಕ್ ಸವಾಲಿಗೆ ಇದೇ ಉತ್ತರ ಸಮರ್ಪಕ.

ಸ್ವತಂತ್ರ ಭಾರತವು ಅನೇಕ ಸಮಸ್ಯೆಗಳನ್ನು ಎದುರಿಸಿದೆ. ಅನೇಕ ಕುತ್ತುಗಳನ್ನು ದಾಟಿದೆ. ಬಂಗಾಲ ದೇಶದ ಮೇಲಿನ ಪಾಕಿಸ್ತಾನದ ಆಕ್ರಮಣ ಮತ್ತು ಅತ್ಯಾಚಾರಗಳಿಂದ ಭಾರತವು ಇಂದು ಎದುರಿಸಬೇಕಾಗಿ ಬಂದಿರುವಂಥ ಜಟಿಲ ಸಮಸ್ಯೆ ಹಿಂದೆಂದೂ ಬಂದಿರಲಿಲ್ಲ— ಯಾವ ದೇಶಕ್ಕೂ ಬಂದಿರಲಿಲ್ಲ!

ಬಂಗಾಲ ದೇಶದಲ್ಲಿ ಪಾಕಿಸ್ತಾನವು ನಡೆಸಿರುವ ಅನ್ಯಾಯ, ಅತ್ಯಾಚಾರ, ಅನೀತಿ, ಕೊಲೆ, ಸುಲಿಗೆ, ಪಾಪ, ರಾಕ್ಷಸೀ ಕೃತ್ಯಗಳಿಗೆ ಮಿತಿಯೇ ಇಲ್ಲ. ಅವುಗಳನ್ನೆಲ್ಲ ವರ್ಣಿಸುವಷ್ಟು ಶಬ್ದಗಳು ಯಾವದೇ ಭಾಷೆಯ ಶಬ್ದಕೋಶದಲ್ಲಿಲ್ಲ. ಇಂಥ ಅಘೋರ ಪಾಪಿಗಳ ಬಗ್ಗೆ ಯಮಪುರಿಯಲ್ಲಿ ಕೂಡ ಸ್ಥಾನಗಳಿದ್ದಂತಿಲ್ಲ.

ಬಂಗಾಲ ದೇಶದ ಮೇಲಿನ ಪಾಕಿಸ್ತಾನದ ಈ ಪರಿಯ ಆಕ್ರಮಣವು ಭಾರತಕ್ಕಷ್ಟೇ ಅಲ್ಲ; ಇಡೀ ಜಗತ್ತಿಗೇ ಒಂದು ಸವಾಲಾಗಿದೆ!! ಜಗತ್ತಿನಲ್ಲಿ ನೀತಿ ಎಂಬುದಿದೆಯೇ! ಪಾಪ ಪುಣ್ಯಗಳೆಂಬುದಿದೆಯೇ? ಲೋಕ ಮತ ಎಂಬುದಿದೆಯೇ? ದೇವರೆಂಬವನು ಇದ್ದಾನೆಯೇ? ಮನುಷ್ಯತ್ವವಿದೆಯೇ?

ಅಮೇರಿಕ ಇಂಗ್ಲೆಂಡಗಳಂಥ ಪ್ರಜಾತಂತ್ರ ರಾಷ್ಟ್ರಗಳು, ಚೀನ ರಶಿಯಾಗಳಂಥ ಸಾಮ್ಯವಾದೀ ರಾಷ್ಟ್ರಗಳು, ಇರಾಣ ತುರ್ಕಸ್ತಾನಗಳಂಥ ಇಸ್ಲಾಂ ರಾಷ್ಟ್ರಗಳು ಎಲ್ಲವೂ ಪ್ರತ್ಯಕ್ಷ ಅಪ್ರತ್ಯಕ್ಷ ರೀತಿಯಲ್ಲಿ ಪಾಕಿಸ್ತಾನದ ಸಮರ್ಥನೆಯನ್ನೇ ಮಾಡುತ್ತಿವೆಯಲ್ಲ? ಅಂದ ಮೇಲೆ ಪಾಕಿಸ್ತಾನದ ಈ ಪಾಪದಲ್ಲಿ ಅವೂ ಪಾಲುಗಾರರೆಂದಂತಾಯಿತು! (ಪಾಕಿಸ್ತಾನವು ಪ್ರಜಾತಂತ್ರವನ್ನು ತುಳಿದು ಹಾಕಿದೆ! ಸಾಮ್ಯವಾದವನ್ನು ಮಣ್ಣುಗೂಡಿಸಿದೆ! ಇಸ್ಲಾಂ ಧರ್ಮಕ್ಕೆ ಸಮಾಧಿ ಕಟ್ಟಿದೆ!)

ಪಾಕಿಸ್ತಾನದ ಈ ಕೃತ್ಯಕ್ಕೆ ಇದೇ ಪ್ರಕಾರ ಅನಿರ್ಬಂಧವಾಗಿ ನಡೆಯಗೊಟ್ಟರೆ ಪ್ರಜಾತಂತ್ರ, ನ್ಯಾಯವಾದ, ಧರ್ಮ, ನೀತಿ, ನ್ಯಾಯ, ಮನುಷ್ಯತ್ವ ಯಾವದೂ ಜಗತ್ತಿನಲ್ಲೇ ಉಳಿಯಲಿಕ್ಕಿಲ್ಲ. ಶತಮಾನಗಳಿಂದ ಹಾಗೂ ವಂಶ ಪರಂಪರೆಯಿಂದ ಜನತೆಯಲ್ಲಿ ಬಿತ್ತಿ ಬೆಳೆಸುತ್ತ ಬಂದ ಶ್ರದ್ಧೆ ಸದ್ಭಾವಗಳು ನುಚ್ಚು ನೂರಾಗುವವು. ಜಗತ್ತಿನಲ್ಲಿ ನೀತಿ ನ್ಯಾಯಗಳಿಗೆ ಕಾಲೂರಲಿಕ್ಕೂ ಸ್ಥಳವಿಲ್ಲದೆ ಎಲ್ಲ ಕಡೆಗಳಲ್ಲಿ ಪುಂಡರದೇ— ಶಸ್ತ್ರಧಾರಿಗಳದೇ ರಾಜ್ಯವಾದೀತು.

ಹೀಗಾಗಿ ಬಂಗಾಲ ದೇಶದಲ್ಲಿಯ ಪಾಕಿಸ್ತಾನದ ಈ ದುಷ್ಕೃತಿಯು ಧರ್ಮ, ನೀತಿ, ನ್ಯಾಯ ಗಳಲ್ಲಿ ಆಸ್ಥೆ ವಹಿಸುತ್ತಿರುವ ಯಾವತ್ತೂ ಮನುಷ್ಯರಿಗೂ ಸವಾಲಾಗಿದೆ. ಧರ್ಮ ನೀತಿಗಳಿಗೆ ಅಳಿವು ಉಳಿವಿನ—ಜೀವನ ಮರಣದ ಪ್ರಶ್ನೆಯಾಗಿದೆ. ಸಂಘಟಿತ ಸತ್ತೆ—ಸಂಘಟಿತ ಸರಕಾರಗಳು ಯಾವದೇ ಹೆಸರನ್ನು ಇರಿಸಿಕೊಂಡಿದ್ದಾರೂ ಒಂದೇ ಮಾಲೆಯ ಮಣಿಗಳಾಗಿವೆ. ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಏನು ಬೇಕಾದರೂ ಮಾಡಲಿಕ್ಕೆ ಹಿಂದೆ ಮುಂದೆ ನೋಡುವದಿಲ್ಲ!

ಆದ್ದರಿಂದ ಜಗತ್ತಿನಲ್ಲಿ ನಿಃಶಸ್ತ್ರೀಕರಣವೇ ಆಗಬೇಕು. ಕೇಂದ್ರ ಸತ್ತೆಗಳು ಹೋಗಬೇಕು. ಆಧ್ಯಾತ್ಮಿಕ ಅರಾಜಕತೆಯೇ ನೆಲೆನಿಲ್ಲಬೇಕು. ಅದಕ್ಕಾಗಿ ಗ್ರಾಮಸ್ವರಾಜ್ಯಗಳಿಂದಲೇ ಆರಂಭವಾಗಬೇಕು. ಜನತೆಯೇ ಮುಂದಾಗಬೇಕು. ಶಾಸನರಹಿತಸಮಾಜವೇ ತಲೆಎತ್ತಬೇಕು.

ಪಾಕಿಸ್ತಾನವು ಕಲಿಸಿದ ಪಾಠವನ್ನು ಪ್ರತಿಯೊಬ್ಬ ವಿಚಾರವಂತನೂ ಪರಾಂಬರಿಸಬೇಕು. ಇದು ಕೇವಲ ಸರಕಾರಗಳ ಪ್ರಶ್ನೆಯೆಂದು ಉದಾಸೀನ ಮಾಡಬಾರದು. ಇದು ಮನುಷ್ಯತ್ವದ್ದೇ ಅಳಿವು ಉಳಿವಿನ ಪ್ರಶ್ನೆ ಎಂಬುದನ್ನು ಮರೆಯಬಾರದು.

●●

ಸ್ವಾತಂತ್ರ್ಯೋತ್ಸವದ ಶುಭಾಶಯಗಳು !

ಮೈಸೂರು ಟೈಪ್ ಫೌಂಡ್ರಿ

ಎಸ್. ಸಿ. ರೋಡು, ಬಂಡಿ ಶೇಶಮ್ಮ ಚೌಲ್ಟ್ರಿ,

ಬೆಂಗಳೂರು-೯.

ಆಧುನಿಕ ಯಂತ್ರಸಾಧನಗಳಿಂದ ಸುಸಜ್ಜಿತವಾಗಿ "ಮೈಸೂರು ಟೈಪ್ ಫೌಂಡ್ರಿ"ಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.

ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟೈಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ.

ಇಂದೇ ವಿವರಗಳಿಗೆ ಬರೆಯಿರಿ.

The Mysore Type Foundry

LETTERS FOUNDERS

S. C. Road, Bandi Seshamma Choultry

BANGALORE-9.

ಭಾರತದ ಪ್ರಸಿದ್ಧ ಇತಿಹಾಸಕಾರ

(ನೂರನೇ ಪುಟದಿಂದ)

ಬಂದಿದ್ದುವು. ತಾಳ್ಮೆಯು ಇತಿಹಾಸಕಾರನ ಮತ್ತೊಂದು ಮಹತ್ವದ ಆವಶ್ಯಕ್ಯಗುಣವಾಗಿದೆ. ಇಲ್ಲಿಯೂ ಸರ್ಕಾರ್‌ರವರು ತಾಳ್ಮೆಯ ಯೋಗ್ಯ ಪ್ರತಿನಿಧಿಯಾಗಿದ್ದರು.

ಇತಿಹಾಸಕಾರನಿಗೆ ಬೇಕಾಗುವ ಗುಣಗಳನ್ನು ಸರ್ಕಾರ್‌ರವರು ಬೆಳೆಸಿಕೊಂಡು ಬಂದಿದ್ದರು. ಅವರು ಇತಿಹಾಸದ ಅಧ್ಯಯನಕ್ಕೆ, ವಿವರಣೆಗೆ, ಬರವಣಿಗೆಗೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದರು. ಇತಿಹಾಸಕಾರನು ಬರಿಯ ಇತಿಹಾಸಕಾರನಾಗಿದ್ದರೆ ಸಾಲದು. ಆತನು ಭೂಗೋಲ ಶಾಸ್ತ್ರಜ್ಞನೂ ಆಗಿರಬೇಕು. ಇತಿಹಾಸದ ಘಟನೆಗಳು ನಡೆಯುವ ರಂಗಭೂಮಿ ನಾವು ವಾಸಿಸುವ ಭೂಮಿ ತಾನೇ? ಭೂಗೋಲಶಾಸ್ತ್ರದ ವಿಶೇಶ ಅಧ್ಯಯನವನ್ನೂ ಸರ್ಕಾರ್ ಮಾಡಿದ್ದರು. ಯುದ್ಧಗಳು ನಡೆದ ಸ್ಥಳಗಳಿಗೆ ಅವರು ಸ್ವತಃ ಪ್ರವಾಸ ಮಾಡಿದ್ದರು. ಆ ಪ್ರದೇಶಗಳ ಪರಿಚಯವನ್ನು ಮಾಡಿದ ಬಳಿಕವೇ ಅವರು ಯುದ್ಧಭೂಮಿಯ ವಿವರಣೆ ನೀಡುತ್ತಿದ್ದರು, ಸೋಲು ಗೆಲುವುಗಳ, ಯುದ್ಧಗಳ ಪರಿಣಾಮಗಳ ಬಗ್ಗೆ ನಿರ್ಣಯಕ್ಕೆ ಬರುತ್ತಿದ್ದರು. ಇತಿಹಾಸಕಾರನು, ಬೇರೆ ಬೇರೆ ಸಾಹಿತ್ಯಗಳ ಅಭ್ಯಾಸವನ್ನೂ ಮಾಡಬೇಕು. ವಿವಿಧ ಗ್ರಂಥಗಳನ್ನು ಓದಿರಬೇಕು. ಆದಕ್ಕಾಗಿ ಆತನು ಬೇರೆ ಬೇರೆ ಭಾಷೆಗಳನ್ನು ತಿಳಿದಿರಬೇಕು. ಇಲ್ಲಿಯೂ ಸರ್ಕಾರ್‌ರವರು ಹಿಂದಿದ್ದಿಲ್ಲ. ಅವರ ಮಾತೃಭಾಷೆಯಾದ ಬಂಗಾಳಿಯಲ್ಲಿ ಅಲ್ಲದೆ ಅವರಿಗೆ ಸಂಸ್ಕೃತದಲ್ಲಿಯೂ ಪುರಾಣಿಯಲ್ಲಿಯೂ ಪಾಂಡಿತ್ಯವಿತ್ತು. ಅವರು ಪಾರ್ಸಿ, ಪೋರ್ಚುಗೀಸ್ ಮತ್ತು ಫ್ರೆಂಚ್ ಭಾಷೆಗಳನ್ನೂ ಬಲ್ಲವರಾಗಿದ್ದರು. ಇಂಗ್ಲಿಷ್‌ನಲ್ಲಿ ಅವರ ಪಾಂಡಿತ್ಯ ಹಾಗೂ ಪ್ರೌಢಿಮೆ ಅತಿ ಮೇಲ್ಮಟ್ಟದ್ದಾಗಿತ್ತು. ಆದುದರಿಂದಲೇ ಪ್ರಸಿದ್ಧ ಬ್ರಿಟಿಷ್ ಇತಿಹಾಸಕಾರನಾದ ಎಡ್ವರ್ಡ್ ಗಿಬ್ಬನ್‌ನಿಗೆ ಸರ್ಕಾರ್‌ರವರನ್ನು ಹೋಲಿಸಲಾಗಿದೆ. ಸರ್ಕಾರ್‌ರವರು 'ಬಂಗಾಳಿ ಗಿಬ್ಬನ್' ಎಂಬ ಗೌರವ ನಾಮವನ್ನು ಗಳಿಸಿದರು.

ಸರ್. ಜಾದೂನಾಥ್ ಸರ್ಕಾರ್‌ರವರಲ್ಲಿ ಇತಿಹಾಸಕಾರನಲ್ಲಿರಬೇಕಾದ ಅತಿ ಶ್ರೇಷ್ಠಗುಣ ನಿತ್ಯ ಮನೆಮಾಡಿತ್ತು. ಸತ್ಯಸಂಶೋಧನೆ, ಸತ್ಯಪಾಲನೆ ಈ ಪರಮಗುಣವಾಗಿದೆ. "ಪ್ರಚಲಿತ ವಿಚಾರಗಳಿಗೆ ಹೊಂದಿಕೆಯಾಗಿದೆಯೋ ಇಲ್ಲವೋ, ಸತ್ಯವು ಮೆಚ್ಚುಗೆಗಳಿಸುವುದೇ ಇಲ್ಲವೋ? ಇವೆಲ್ಲವನ್ನೂ ನಾನು ಗಮನಿಸುವುದಿಲ್ಲ. ನನ್ನದೇಶದ ಕೀರ್ತಿಗೆ ಸತ್ಯವು ತೊಡಕಾಗುವುದೋ ಎಂದು ಕೂಡಾ ನಾನು ಮನಸ್ಸಿಗೆ ಹಚ್ಚಿಕೊಳ್ಳಲಾರೆ. ಸತ್ಯವನ್ನು ಸಾರುವಲ್ಲಿ ಸಮಾಜದ ಹಾಗೂ ನನ್ನ ಸ್ನೇಹಿತರ ನಿಂದೆ ಅಥವಾ ಅವಹೇಳನಗಳನ್ನೂ ತಾಳ್ಮೆಯಿಂದ ಸಹಿಸಲು ನಾನು ಸಿದ್ಧನಾಗಿರುವೆನು. ಆದರೆ ನಾನು ಸತ್ಯವನ್ನು ನುಡಿಯುವೆನು, ಸತ್ಯವನ್ನು ತಿಳಿಯುವೆನು ಮತ್ತು ಸತ್ಯವನ್ನು ಒಪ್ಪುವೆನು" ಎಂದು ಸರ್ಕಾರ್ ಬರೆದಿರುವರು. ಅವರ ಗ್ರಂಥಗಳ ಉದ್ದಕ್ಕೂ ಅವರು ಸತ್ಯವನ್ನು ಸಾಧಿಸಲು ಮಾಡಿದ ಪ್ರಯತ್ನಗಳನ್ನು ಕಾಣಬಹುದು. ಯಾವ ವಿಷಯವೇ ಆಗಲಿ, ಸಂಗತಿಯೇ ಆಗಲಿ ಆಧಾರವಿಲ್ಲದೆ ಸರ್ಕಾರ್‌ರವರು ಅದನ್ನು ಸ್ವೀಕರಿಸಲು ಸಿದ್ಧರಿರಲಿಲ್ಲ. ಉದಾಹರಣೆಗಾಗಿ ೧೬೬೩ರಲ್ಲಿ ಶಿವಾಜಿಯು ಮೇಲೆ ಆಕಸ್ಮಾತ್ತಾಗಿ ಶಯಿಸ್ತಾಖಾನ್ ನಡೆಸಿದ ದಾಳಿಯ ಬಗ್ಗೆ ಸರ್ಕಾರ್‌ರವರು ಒಂಭತ್ತು ಆಧಾರಗ್ರಂಥಗಳನ್ನು- ಕೆಲವು ಅಂದಿನ ಕಾಲದ ಇಂಗ್ಲಿಷ ಬರೆಹಗಳು, ಕೆಲವು ಪರ್ಶಿಯನ್ ಗ್ರಂಥಗಳು, ಇನ್ನುಳಿದುವು ಮರಾಠಿ ಕೃತಿಗಳಾಗಿದ್ದುವು— ಆಧಾರಗಳನ್ನು ಸೂಚಿಸಿದ್ದಲ್ಲದೆ ಹೇಳಿಕೆಗಳಿಗೆ ಸಂಪಾದಕೀಯ ಸೂಚನೆಗಳನ್ನೂ ಅವರು ಬರೆಯುತ್ತಿದ್ದರು. ಶಿವಾಜಿ ಶಯಿಸ್ತಾಖಾನ್‌ರವರ ಈ ಆಕಸ್ಮಿಕ ದಾಳಿ ಪ್ರಸಂಗಕ್ಕೆ ಕೊಡಲಾದ ಒಂದು ದಾಖಲೆಯು ಖಫಿಖಾನನ ಹೇಳಿಕೆಯಾಗಿದೆ. ಅದನ್ನು ಬರೆದ ವರ್ಷವನ್ನೂ ಸೂಚಿಸಲಾಗಿದೆ. ಅದು ೧೭೩೦ರಲ್ಲಿ ಬರೆಯಲಾದ ದಾಖಲೆ. ಅಂದರೆ ಘಟನೆಯು ನಡೆದು ಅರ್ವತ್ತಾರು ವರ್ಷಗಳ ಬಳಿಕ ಅದು ಬರೆಯಲಾದುದು— ನಂಬಿಕೆಗೆ ಎಷ್ಟು ಅರ್ಹವಾಗಿದೆ ಎಂಬ ಅಂಶವನ್ನು ಇತಿಹಾಸಕಾರ ಸರ್ಕಾರ್ ಇಲ್ಲಿ ಸೂಕ್ಷ್ಮವಾಗಿ ಸೂಚಿಸಿದ್ದಾರೆ. ಖಫಿಖಾನನ ತಂದೆಯು ಶಿವಾಜಿ ಶಯಿಸ್ತಾಖಾನರ ಸಮಕಾಲೀನನು. ಆಗ ನಡೆದ ಘಟನೆಗೂ ಬರೆದ ಬರಹಕ್ಕೂ ಇರುವ ಅಂತರ ಸತ್ಯದ ಸೂಕ್ಷ್ಮತೆಯನ್ನು ಕಾಲಾವಕಾಶದ ಅಂತರದಿಂದ ಕಡಿಮೆಗೊಳಿಸುವುದು ಎಂಬುದನ್ನು ತೋರಿಸುತ್ತದೆ. ಆದರೆ ಆ ಆಧಾರವನ್ನು ಅಲ್ಲಗಳೆಯುವುದು ಸರಿಯಲ್ಲ. ಇದು ಸರ್ಕಾರ್‌ರವರಿಗೆ ಸತ್ಯದ ಮೇಲಿದ್ದ ಮಮತೆಗೆ ಉತ್ತಮ ಉದಾಹರಣೆಯಾಗಿದೆ.

ಈ ಸತ್ಯಪ್ರಿಯ ಇತಿಹಾಸ ಶಾಸ್ತ್ರಜ್ಞರು ಗತಕಾಲದ ಇತಿಹಾಸವನ್ನು ಬರೆಯುವಾಗ ಗತಕಾಲವೆಲ್ಲ ವೈಭವದ ಯುಗವೆಂಬ ಕಲ್ಪನೆಯನ್ನಾಗಲೀ ಆಧುನಿಕ ಕಾಲವೆಲ್ಲಾ ಅವ್ಯವಸ್ಥೆಯ ಕಾಲಾವಧಿಯೆಂಬ ಅಭಿಪ್ರಾಯವನ್ನಾಗಲೀ ನೀಡಿಲ್ಲ. ಅಂತೆಯೇ ತನ್ನ ದೇಶದ್ದಾದುದೆಲ್ಲಾ ಸರಿ; ಇತರ ದೇಶಗಳು ಇತಿಹಾಸ, ಸಂಸ್ಕೃತಿ ಹಾಗೂ ಜನ ಜೀವನದಲ್ಲಿ ಮಾತ್ರ ಹೊಲಸು ಹುಳುಕುಗಳಿರುವುದೆಂಬ ಸಂಕುಚಿತ ಭಾವನೆಗಳಿಗೆ ತನ್ನ ಬರೆಹಗಳಲ್ಲಿ ಎಲ್ಲಿಯೂ ಅವಕಾಶಕೊಡಲಿಲ್ಲ. ಸರ್ಕಾರ್‌ರವರು ಸಣ್ಣ ಮನಸ್ಸಿನ ರಾಷ್ಟ್ರೀಯವಾದಿಯಾಗಿರಲಿಲ್ಲ. ಡಾ| ರಾಜೇಂದ್ರ ಪ್ರಸಾದರಿಗೆ ಬರೆದಿರುವ ಕಾಗದವೊಂದರಲ್ಲಿ ಅವರು "ರಾಷ್ಟ್ರೀಯ ಇತಿಹಾಸವು ಎಲ್ಲಾ ಇತಿಹಾಸಗಳಂತೆ ಅದರ ಹೆಸರಿನಂತೆ ಯೋಗ್ಯವಾಗಿರಬೇಕು. ಅದು ಉಳಿಯುವಂತಹದ್ದಾಗಿರಬೇಕು. ಅರ್ಥವಿವರಣೆಯಲ್ಲಿ ಸಕಾರಣವಾಗಿರತಕ್ಕದ್ದು. ನಮ್ಮ ಚರಿತ್ರೆಯ ಭೂತಕಾಲದಲ್ಲಿ ಅಗೌರಯುತವಾದ ಸಂಗತಿಗಳನ್ನು ಮರೆಮಾಜುವ ಅಥವಾ ಅಳಿಸುವ ಪ್ರಯತ್ನ ಮಾಡುವ ಇತಿಹಾಸವು ರಾಷ್ಟ್ರೀಯವಾಗಲಾರದು. ಅದು ಅವುಗಳನ್ನು ಒಪ್ಪಿಕೊಂಡು ಅದೇ ಕಾಲದಲ್ಲಿ ನಮ್ಮ ಇತಿಹಾಸದ ವಿಕಾಸದ ಹಂತಗಳಲ್ಲಿದ್ದ ಇತರ ಉತ್ತಮ ಅಂಶಗಳನ್ನು ಎತ್ತಿತೋರಿಸುವುದು" ಎಂದಿರುವರು, ಅದು ಸರ್ಕಾರ್‌ರವರ ಚರಿತ್ರೆಯ ಸಮ್ಯಕ್ ದೃಷ್ಟಿ.

ಸರ್ ಜಾದೂನಾಥ್ ಸರ್ಕಾರ್‌ರವರ ಪ್ರತಿಭಾವಂತ ಇತಿಹಾಸ ಶಾಸ್ತ್ರಜ್ಞರು. ಅವರು ಬರಿಯ ಚರಿತ್ರಕಾರರಾಗಿದ್ದಿಲ್ಲ. ಅವರು ಭಾರತೀಯ ಇತಿಹಾಸದ ಎಲ್ಲಾ ಅಂಗಗಳ ಬಗ್ಗೆಯೂ—ಭೂಗೋಲ, ನೀತಿ ಶಾಸ್ತ್ರ, ರಾಜ್ಯ ಶಾಸ್ತ್ರ, ಧರ್ಮ ಶಾಸ್ತ್ರ ಯುದ್ಧವಿದ್ಯೆ ಶಾಸ್ತ್ರ— ಅರ್ಥಶಾಸ್ತ್ರ-ಅಧ್ಯಯನ ನಡೆಸಿದ್ದರು. ಈ ಎಲ್ಲಾ ಶಾಸ್ತ್ರಗಳ ಆಧಾರದಿಂದ ಅವರು ಆಧುನಿಕ ಭಾರತೀಯ ಇತಿಹಾಸವನ್ನು ಶಾಸ್ತ್ರೀಯವನ್ನಾಗಿ ಮಾಡಿದ್ದರು. "ಸರ್ಕಾರ್‌ರವರಲ್ಲಿ ಚರಿತ್ರೆಗಾರನ ನಿಜವಾದ ಪ್ರತಿಭೆಯಿತ್ತು. ಅದನ್ನು ಅವರು ಸತತವಾಗಿ ಬೆಳೆಯಿಸಿದರು; ಅಭಿವೃದ್ಧಿ ಗೊಳಿಸಿದರು....ಅವರ ಸಹಜವಾದ ಗುಣಗಳನ್ನು ಪರಿಪೂರ್ಣತೆಯ ತುತ್ತತುದಿಗೆ ತರಲು" ಪ್ರಯತ್ನಿಸಿದರು.(On Historiography—S. R. Tikekar)

ಮೊಗಲ ಸಾಮ್ರಾಜ್ಯದ, ಅಂತೆಯೇ ಮರಾಟ ಸಾಮ್ರಾಜ್ಯದ ಇತಿಹಾಸಗಾರನಾಗಿ ಸರ್ಕಾರ್ ಭಾರತದ ಇತಿಹಾಸಕ್ಕೆ ಸಲ್ಲಿಸಿದ ಸೇವೆ ಅಮೋಘವಾಗಿದೆ. ಮೊಗಲ ಸಾಮ್ರಾಜ್ಯದ ಇತಿಹಾಸಕಾರನಾಗಿ ಸರ್ಕಾರ್‌ರವರು ಅವರಂಗ ಜೇಬನಿಂದ ತೊಡಗಿ ಎರಡನೇ ಷಾ ಆಲಂನವರೆಗಿನ ಮೊಗಲ ಇತಿಹಾಸದ ಅತಿ ವಿವರ ಪೂರ್ಣವಾದ ಅಧಿಕೃತವಾದ ಇತಿಹಾಸ ಸಂಪುಟಗಳನ್ನು ನಮಗೊದಗಿಸಿದ್ದಾರೆ. ಅದರಷ್ಟೇ ಮಹತ್ವಪೂರ್ಣವಾದ ಮರಾಟ ಇತಿಹಾಸ ಗ್ರಂಥಗಳನ್ನೂ ಸರ್ಕಾರ್‌ರವರು ಬರೆದಿದ್ದಾರೆ. ಸರ್ಕಾರ್‌ರವರು ಅಧ್ಯಯನ ಮಾಡಿದುದನ್ನೆಲ್ಲಾ ಉತ್ತಮ ಬರೆಹವನ್ನಾಗಿ ಮಾರ್ಪಡಿಸಿದ್ದಾರೆ. ಈ ಕಾರಣದಿಂದಲೇ ಜಗತ್ತಿನ ಪ್ರಸಿದ್ಧ ಇತಿಹಾಸ ಶಾಸ್ತ್ರಜ್ಞರ ಪಂಕ್ತಿಯಲ್ಲಿ—ರ್‍ಯಾಂಕ್, ನಿಬ್ಯೂರ್, ಮೊಮ್ಸನ್ ಮತ್ತು ಗಿಬ್ಬನ್—ಸರ್ ಜಾದೂನಾಥ್ ಸರ್ಕಾರ್ ಸೇರಿರುವರು. (The Development of Indian Historiography R. C. Majumdar)

ಜಾದೂನಾಥ್ ಸರ್ಕಾರ್‌ರವರು ಅವರ ಬೃಹತ್ ಗ್ರಂಥಗಳಿಂದ ಭಾರತೀಯ ಇತಿಹಾಸ ವಾಙ್ಮಯವನ್ನು ವಿಸ್ತಾರ ಗೊಳಿಸಿದ್ದಾರೆ. ಅದು ಬರಿಯ ಸಂಖ್ಯೆ ಬಲವನ್ನು ಮಾತ್ರ ಹೊಂದಿಲ್ಲ. ಅವರ "ಅವರಂಗಜೇಬನ ಇತಿಹಾಸ" ಮತ್ತು "ಮೊಗಲ ಸಾಮ್ರಾಜ್ಯದ ಅವನತಿ" ಒಟ್ಟಿಗೆ ಒಂಭತ್ತು ಸಂಪುಟಗಳ ಚಾರಿತ್ರಿಕ ಸಂಪತ್ತು. ವಿಸ್ತಾರವಾಗಿಯೂ ಸುದೀರ್ಘಗಳ ವಿವರಗಳನ್ನು ಬರೆಯಬಲ್ಲ ಸರ್ಕಾರ್‌ರವರು ಅಷ್ಟೇ ಸಂಕ್ಷಿಪ್ತವಾಗಿಯೂ ಬರೆಯ ಬಲ್ಲರು. "ಯುಗ ಯುಗಗಳಲ್ಲಿ ಭಾರತ"(India Through The Ages)ದಲ್ಲಿ ನಮ್ಮ ದೇಶದ ಮೂರು ಸಾವಿರ ವರ್ಷಗಳ ಇತಿಹಾಸದ ಸಾರಸತ್ವವನ್ನು ಬರೇ ನೂರು ಪುಟಗಳಲ್ಲಿ ಸಾರವತ್ತಾಗಿ ಸರ್ಕಾರ್ ಬರೆದಿರುವರು. ಯುದ್ಧ ಇತಿಹಾಸದಲ್ಲಿ ಸರ್ಕಾರರವರದು ಎತ್ತಿದ ಕೈ. ದೇಶ ಸಂಚಾರಗಳ ಅಪೂರ್ವ ಅನುಭವ, ವಿವರಣೆಯ ಅದ್ಭುತ ಹಿಡಿತ ಹಾಗೂ ಭೂಶಾಸ್ತ್ರದ ಆಳವಾದ ಅವರ ಅಧ್ಯಯನ ಸರ್ಕಾರರವರನ್ನು ಅದ್ವಿತೀಯ ಮಿಲಿಟರಿ ಇತಿಹಾಸಕಾರನನ್ನಾಗಿ ಮಾಡಿತ್ತು. ಅವರು ಬರೆದಿರುವ "ಭಾರತದ ಮಿಲಿಟರಿ ಇತಿಹಾಸ"ವೇ ಅದಕ್ಕೆ ಸಾಕ್ಷಿ. ಅದು ಅವರ ಮರಣಾನಂತರ ೧೯೬೦ರಲ್ಲಿ ಪ್ರಕಟವಾಯಿತು.

೧೯೭೦ರಲ್ಲಿ ಅವರ ಜನ್ಮಶತಾಬ್ದಿಯನ್ನು ಕಲ್ಕತ್ತಾದಲ್ಲಿ ಪ್ರಚಾರ ಗದ್ದಲ, ಡಾಣ ಡಂಗುರಗಳಿಲ್ಲದೆ ಆಚರಿಸಲಾಯಿತು. ಭಾರತದ ಇತಿಹಾಸದ ಎಲ್ಲಾ ಅಭಿಮಾನಿಗಳ ಮನಸ್ಸಿನಲ್ಲಿ ಇತಿಹಾಸದ ಪ್ರಜ್ಞೆಯನ್ನು ಬೆಳಗಿಸಿದ ಈ ಪ್ರಸಿದ್ಧ ಇತಿಹಾಸಕಾರನ ಹೆಸರು ಹಚ್ಚ ಹಸುರಾಗಿ ಉಳಿಯುವುದು. ಉಳಿಯ ಬೇಕಾಗಿದೆ.

●●

ಸ್ವಾತಂತ್ರ್ಯೋತ್ಸವದ ಶುಭಾಶಯಗಳು!

ಎಂ. ಚಿಕ್ಕಯ ಶೆಟ್ಟಿ

ಆನಂದ ಉಪಾಹಾರ ಗೃಹ

ನ್ಯೂ ಅರ್ಥರ್ ರೋಡು, ತಾರ್‌ದೇವ್,

ಬೊಂಬಾಯಿ—34

ಲೆಕ್ಕವೊಂದೇ ಸಾಕೆ-?

ಇಳಿಸಿದೆವು ಜನಿಸುವರ ಸಂಖ್ಯೆಯನು; ಇಳಿಮುಖವೇ
ಇನ್ನದಕೆ. ಬೇಡುತಿಹ ಬಾಯಿಗಳ ಬೇಡಿಕೆಯು ಕಡಿಮೆಯಾಯಿತು–ಎಂದು
ಬೀಗಿ ಯೆದೆಗೊಡದಿರಲು–
ಹೊಟ್ಟೆ ತುಂಬಿಪ ಪ್ರಶ್ನೆ ಬಿಟ್ಟು ಹೋಯಿತು ನಮ್ಮ.
ಬೊಮ್ಮನನೆ ಹಿಮ್ಮೆಟ್ಟಿ ನಿಂದವರು ನಾವೆಂದು
ನುಡಿದವರು ಹೆತ್ತೊಡಲ ಪರಿಕಿಪರೆ? ಒಡಲಿಂದ
ಮೂಡಿ ಬಹ, ಹುಟ್ಟಿ ಮಗು ಎಷ್ಟು ದಿನ ಬದುಕುವುದು?
ಶಿಸುವವರ ಗುಣ–ಶೀಲ, ಜೀವ ಸಾಹಸವೆಷ್ಟು?
ಅವನರಿವ ಸಾಧನವು ಇರದಿರಲು, ಇದು ಎಲ್ಲ
ಬರಿ ಗುಲ್ಲು; ಲೆಕ್ಕವೊಂದೇ ಸಾಕು ಎಂಬರನು
ಅಕ್ಕರಿಗ ಲೆಕ್ಕಿಗರು, ಲೆಕ್ಕಿಸರೊ, ಜೀ ತಮ್ಮ

ಬರೆದವರು—ಬಿ. ಕೃಷ್ಣ ಭಟ್,
ಭದ್ರಾವತಿ.

Manufacturers of

Quality

Extruded & Drawn

Copper, Brass, and Bronze Wire & Rods

for

All Industrial Purposes

and

Paper Covered Copper Strips & Winding Wires

BHANDARY METALLURGICAL CORPORATION PVT. LIMITED

BHANDARY ESTATE, KURLA (EAST)

BOMBAY—70

Phones : 521987
: 521515

Grams : "BHANDARYCO"
KURLA
BOMBAY

TO MAXIMISE .... Our Production

with a view

TO MINIMISE .... delay

THE STRENGTH OF OUR TYPE CASTING MACHINES

Have been further increased this year by the addition of :

FIVE MORE "MONOTYPE" TYPE CASTING MACHINES...

For Quicker, Better and Instant Service
DEPEND UPON :

NORTON & CO.

CHOOLAI, MADRAS-7.

The Largest Type Founders in the Eastern Hemisphere.

ಸ್ವಾತಂತ್ರ್ಯಕ್ಕೆ ಏಕಾದಶಿಯೇ, ಸಂಕ್ರಾಂತಿಯೇ?

(ಒಂದನೇ ಪುಟದಿಂದ)

ತೆ ಗಾಳಿ ಬೀಸಿತು ಕಡಲಕರೆಯನ್ನು ಕಂಡೆ ಎಂದಿನಂತೆ ಭೋರ್ಗರೆಯುತ್ತ ಅಲೆ ಬಂದು ದಂಡೆಯನ್ನಪ್ಪಳಿಸಿತು ನೀರು ಹಿಂದಕ್ಕೆ ಸರಿಯಿತು ತೇವ ಭರಿತ ಮಳಲ ಮೇಲೆ ಅದೇನೋ ಅಕ್ಷರ ಕಂಡಂತಾಯಿತು ನೋಡಿದೆ ಗಮನವಿಟ್ಟು ಅದುವೇ 'ಬಂಗಾಲ'

ಇದೇ ಸಮುದ್ರದ ಇನ್ನೊಂದೆಡೆಯಲ್ಲಿ, ಗಂಗಾನದಿಯು ಗಂಗಾಸಾಗರವೆನಿಸುವಲ್ಲಿ, ಬಂಗಾಲದಲ್ಲಿ ಅಂದು ಆಕ್ರಮಣಗಾರ ಆಂಗ್ಲರು ಬಂಗಾಲ ಪ್ರಾಂತ್ಯವನ್ನು ಎರಡು ಮಾಡಿದಾಗ ಭಾರತೀಯರೆಲ್ಲರೂ ಅದನ್ನೆದುರಿಸಿದರು ಆದರೆ ಅದೇ ಜನತೆ ಬಂಗಾಲವನ್ನು ಎರಡು 'ದೇಶ'ವನ್ನಾಗಿ ಮಾಡಲೂ ಹೇಸಲಿಲ್ಲ! ಇನ್ನೊಂದು ಭೂಭಾಗಕ್ಕೆ 'ಪಾಕಿಸ್ಥಾನ'ವೆಂಬ ಹೆಸರನ್ನಿತ್ತರು ನಮ್ಮದೇ ಜನ, ನಮ್ಮ ಆ ಭೂಭಾಗವನ್ನು ಬಿಟ್ಟು, ಇತ್ತ ಓಡಿ ಬರಲಾರಂಭಿಸಿದರು ಅವರನ್ನು ಇದೇ ದೇಶದ ಜನರು 'ನಿರಾಶ್ರಿತರೆ'ಂದು ಕರೆಯಲಾರಂಭಿಸಿದರು ಇದು ಇಪ್ಪತ್ತೈದು ವರ್ಷಗಳಿಂದ ನಡೆದು ಬಂದಿದೆ ಇಂದು ಭಯಂಕರ ರೂಪವನ್ನು ತಳೆದಿದೆ

ರಾಜಕೀಯ ಸಭೆ ನಡೆಯುತ್ತಿದ್ದ ಸ್ಥಳದತ್ತ ಪುನಃ ನೋಡಿದೆ ಎಲ್ಲಾ ಖಾಲಿ! ದೇಶವನ್ನು ವಿಭಜಿಸುವ ಮುನ್ನ ನನ್ನನ್ನು ಹೋಳು ಮಾಡಿರಿ ಖಡ್ಗವನ್ನು ಖಡ್ಗದಿಂದ ಎದುರಿಸಲಾದೀತು . ಪಾಕಿಸ್ಥಾನ ಮುಗಿಲ ಮಲ್ಲಿಗೆ .. ಭೀಷಣ ಭಾಷಣ! ಇಂದು ಖಾಲಿ ಆ ರಾಜಕೀಯ ಇಂದಿಲ್ಲ ಕಡಲ ಕರೆಯಲ್ಲಿ ನನ್ನ ಹೆಜ್ಜೆಗಳಿವೆಯೋನೆಂದು ನೋಡಿದೆ ಇಲ್ಲ ಸಮುದ್ರ ಅದನ್ನು ಎಂದೋ ಅಳಿಸಿ ಬಿಟ್ಟಿದೆ ನೆನಪಿನ ಹೆಜ್ಜೆಗಳೂ ಹಾಗೇನೇ, ಮರೆವು ಅದನ್ನು ಅಳಿಸಿಬಿಡುತ್ತದೆ ಜ್ಞಾಪಿಸಿಕೊಂಡಾಗ ಅದೇನೋ ಅರ್ಥ ಮರ್ಥ ಹೊಳೆದರೂ ಸರಿ ..

ಶಾಂತಿಗಾಗಿ ವಿಭಜನೆ, ಅಖಂಡ ಭಾರತದ ಸೊಲ್ಲೆತ್ತುವವರು ಯುದ್ಧಪ್ರಿಯರು, ಜಾತೀಯವಾದಿಗಳೆನ್ನಲಾಯಿತು 'ನಿರಾಶ್ರಿತರ' ನೆರೆ ಕಮ್ಮಿಯಾಗಲಿಲ್ಲ ಆ ಪಾಕಿಸ್ಥಾನವೆಂಬಲ್ಲಿಂದ ಮನೆ–ಸೊತ್ತು ಬಿಟ್ಟು ಮಾನ ಜೀವದಾಸೆಯಿಂದ ಓಡಿ ಬಂದವರನ್ನು ದೇಶದ್ರೋಹಿಗಳೆನ್ನಲಾಯಿತು ಯಾರೂ ತಮ್ಮ ತಮ್ಮ 'ದೇಶ'ವನ್ನು ಬಿಟ್ಟು ಹೋಗಬಾರದೆಂದು ಹೇಳಲಾಯಿತು ಅದಕ್ಕಾಗಿ ಉಪವಾಸ ನಡೆಯಿತು ಮಹಾತ್ಮಾ ಗಾಂಧೀಜೀಯವರು ನೌಕಾಲಿಗೆ ಹೋಗಿ ಬಂದರು ಆ ರೀತಿ ಹೇಳಿದವರ ಕಾಲ ಮುಗಿದು ಹೋಯಿತು ಒಂದು ತಲೆಮಾರು ಬದಲಾಯಿತು ಪರಿಸ್ಥಿತಿ ಶಾಂತ ಸ್ಥಿತಿಗೆ ಬರುವ ಬದಲು ವಿಪರೀತ ಸ್ಥಿತಿಗೆನೇ ಹೋಗಿದೆ ಆದರೆ ಇಂದು ಯಾರೂ ಉಪವಾಸ ಮಾಡುವವರೂ ಇಲ್ಲ 'ನಿರಾಶ್ರಿತರು' ಬರಕೂಡದೆನ್ನುವವರೂ ಇಲ್ಲ ಆಡಳಿತ ಯಂತ್ರವೇನಾದರೂ ಬದಲಾಗಿದೆಯೇ? ಇಲ್ಲ ಅದೇ ಯಂತ್ರ, ನೆಹರೂ–ಪಂತ–ಶುಕ್ಲ .. ಅದೇ ಕುಟುಂಬ ಆದರೆ ಪಟೇಲರ ಮಗ ಅಲ್ಲಿಲ್ಲ

ಪಟೇಲ ಸರ್ದಾರ ವಲ್ಲಭ ಭಾಯಿ ಪಟೇಲ ಉಕ್ಕಿನ ಮನುಷ್ಯರಿದ್ದಾಗ ಪಾಕಿಸ್ಥಾನದ ಪ್ರಧಾನಿ, ಆಗಿನ ನಮ್ಮ ಪ್ರಧಾನಿ ಪಂಡಿತ ಜವಾಹರಲಾಲ ನೆಹ್ರೂಜೀಯವರ ಬಳಿ ಮಾತಾಡಿ ಒಪ್ಪಂದಕ್ಕೆ ಸಹಿ ಹಾಕಿಕೊಂಡ ಹೆಮ್ಮೆಯಿಂದ ಪಟೇಲರನ್ನು ಕೆಣಕ ಬಂದು, ಅವರಿದ್ದಲ್ಲಿಗೆ ಹೋಗಿ ಸಂಧಾನದ ವಿಷಯ ತಿಳಿಸಿದ ಅದನ್ನು ಕೇಳಿದ ಪಟೇಲರು, ಒಳ್ಳೆಯದು–ನೆನಪಿಸಲ್ಲಿಟ್ಟುಕೊಳ್ಳಿರಿ– ಪಾಕಿಸ್ಥಾನದಿಂದ ಒಬ್ಬ ಹಿಂದೂ ಇತ್ತ ಬಂದಲ್ಲಿ ಇಲ್ಲಿಂದ ಹತ್ತು ಮುಸ್ಲಿಮರನ್ನು ಅಲ್ಲಿಗೆ ಓಡಿಸಲಾಗುತ್ತದೆ ಅಲ್ಲಿ ಓರ್ವ ಹಿಂದೂವಿನ ಕೊಲೆಯಾದಲ್ಲಿ ಇಲ್ಲಿ ಹತ್ತು ಮಹಮ್ಮದೀಯರ ಮಂಡೆಗಳುಉರುಳುತ್ತವೆಂಬುದನು ಜ್ಞಾಪಕದಲ್ಲಿಟ್ಟುಕೊಳ್ಳಿರೆಂದರು ಸಿಟ್ಟಿಗೆದ್ದ ಪಾಕ್ ಪ್ರಧಾನಿ ಹಿಂದಕ್ಕೆ ಹೋದರು ಒಬ್ಬ ಹಿಂದೂ ಅಲ್ಲ, ಪಟೇಲರ ಮರಣದ ನಂತರ, ಪುನರ್ ಹಿಂದೂಗಳ ಹೊಳೆಯೇ ಬರಲಾರಂಭಿಸಿತು ಇದನ್ನು ತಡೆಯಲು ಏನು ಮಾಡುತ್ತೀರೆಂದು ಸಂಸದಿನಲ್ಲಿ ಕೇಳಿದಾಗ ಮಂತ್ರಿಗಳು ನಮ್ಮಿಂದೇನು ಮಾಡಲು ಸಾಧ್ಯವೆಂದು ಕೈಮೇಲೆ ಮಾಡುತ್ತಿದ್ದರು ಇದೀಗ ಹಿಂದೂಗಳು ಮಾತ್ರವಲ್ಲ ಮುಸ್ಲಿಮರೂ ಸೇರಿದಂತೆ ಇತರ ಮತಸ್ಥರ ಪ್ರವಾಹವೇ ಬರುತ್ತಿದೆ ಇದನ್ನು ತಡೆಯುವದೆಂತು? ಅವರನ್ನು ಹಿಂದಕ್ಕೆ ಕಳುಹಿಸಲಾಗುತ್ತದೆನ್ನುತ್ತಾರೆ ನಮ್ಮ ಪ್ರಧಾನಿಗಳು ಯಾವಾಗ–ಆರು ತಿಂಗಳಲ್ಲಿ? ಹೇಗೆ–? ಅತ್ತ ಪಾಕಿಸ್ಥಾನಕ್ಕೆ ಅಮೇರಿಕ–ಚೈನ ಸಹಾಯ ಮಾಡುತ್ತಿದೆ ಪಾಕಿಸ್ಥಾನ ಕಾಲುಕೆದರಿ ಜಗಳವಾಡಲು ಸಿದ್ಧವಾಗಿದೆ ಅವರನ್ನೆದುರಿಸಲು ನಾವು ಸಿದ್ಧರೆನ್ನುತ್ತಿದ್ದಾರೆ ನಮ್ಮ ಸಚಿವ ಸೇನಾನಾಯಕರು, ಅದೇ ಸ್ವರದಲ್ಲಿ ನಾವು ಯುದ್ಧ ಮಾಡುವುದಿಲ್ಲವೆನ್ನುತ್ತಾರೆ ಹಿಂದೆಯೂ ವೀರ ಭಾಷಣಗಳು ಕೇಳಿಬರುತ್ತಿದ್ದುವು ಇಂದೂ ಕೇಳಿ ಬರುತ್ತಿವೆ. ಸಾಗರದಲ್ಲಿ ಅಲೆಗಳೂ ಅರ್ಭಟಿಸುತ್ತಿವೆ ಜನರು ಆ ಕಿವಿಯಿಂದ ಕೇಳಿ ಈ ಕಿವಿಯಿಂದ ಬಿಟ್ಟು ಬಿಡುತ್ತಾರೆ ಇದು ನಡೆಯುತ್ತಾ ಇದೆ ಯಾಹ್ಯಾಖಾನ ಪಟ್ಟದಲ್ಲಿ ಭದ್ರವಾಗಿರುವಂತೆ, ಬಡಸಾಮಾನ್ಯನ ಕಷ್ಟಾಗ್ನಿಯಿಂದ ತಪ್ಪಿಸಿಕೊಳ್ಳಲು ಇಂದಿರಾಜೀಗೆ ಸಹಾಯವಾಗುವಂತೆ ರಷ್ಯಾ ಈ ಆಟವನ್ನು ಆಡಿದೆಯೇ? ಯುದ್ಧದ ಆಟ ನಡೆದು ಕಲ್ಕತ್ತವನ್ನೂ ಕಳೆದುಕೊಳ್ಳುವ ರೀತಿಯಲ್ಲಿ ಶಾಂತಿಗೆರೆ ಎಳೆಯಲ್ಪಟ್ಟೀತೇ? ಅಲೆಗಳೂ ಗೆರೆಯನ್ನು ಹಾಕುತ್ತವೆ, ಇನ್ನೊಂದು ಅಲೆ ಅದನ್ನು ಅಳಿಸಿ ಬಿಡುತ್ತದೆ

ಅಲೆಗಳೇಳುತ್ತಿರುವ ಸಮುದ್ರದತ್ತ ನೋಡಿದೆ ಇಂದು ಹುಣ್ಣಿಮೆಯಾಗಿರುತ್ತಿದ್ದಲ್ಲಿ ಎನಿಸಿತು ಹುಣ್ಣಿಮೆಯೆಲ್ಲಿ? ನಾಳೆ ಸರ್ವೇಕಾದಶಿ, ಸಕ್ರಾಂತಿ ಇದೇ ನಮ್ಮ ಮುಂದಿರುವ ಪ್ರಶ್ನಾಸಾಗರ ಸ್ವಾತಂತ್ರ್ಯಕ್ಕೆ ಏಕಾದಶಿಯೇ ಅಥವಾ ಸಂಕ್ರಾಂತಿಯೇ ಬರುತ್ತಿರುವದೆಂದು ಅದು ಮುಸ್ಸಂಜೆ ರಾಷ್ಟ್ರ ವಿರೋಧಿ ದೈತ್ಯರ ನಾಶಕಾಲ ಅದು ಬೆಳಿಗ್ಗೆಯಾದರೂ ಬರುತ್ತಿದ್ದಲ್ಲಿ ಸೂರ್ಯೋದಯವನ್ನಾದರೂ ಕಾಣಬಹುದಾಗಿತ್ತು. ಆದರೆ ಆ ವೇಳೆ ಕಳೆದು ಹೋಗಿದೆ ಇನ್ನದು ಬರುವದು ನಾಳೆ ಅದರೊಳಗೆ ಸಂಕ್ರಾಂತಿ ನಡೆಯಲೇ ಬೇಕು ಆಗ ಸಮಸ್ಯಾ ಸಾಗರವನ್ನು ದಾಟಲು ರಾಷ್ಟ್ರೀಯತೆಯ ಕಟಮರದಿಂದ ಸಾಧ್ಯವಾದೀತೇ? ಸಾಗರದಲ್ಲಿ ಅನೇಕಾನೇಕ ರೀತಿಯ ಅಲೆಗಳೇಳುತ್ತವೆ ರಾಷ್ಟ್ರ ವಿರೋಧಿ ಮೊಸಳೆಗಳಿವೆ ಇವೆಲ್ಲವುಗಳಿಂದ ತಪ್ಪಿಸಿಕೊಂಡು ಭಾರತದ ಪರಮ ವೈಭವ ಸ್ಥಿತಿಯ ಭಾಸ್ಕರನನ್ನು ತಲಪಲು ರಾಷ್ಟ್ರೀಯತೆಯ ಕಟಮರದ ಮೇಲಿಂದ ಪೂರ್ವ ದಿಗಂತದತ್ತ ಸಾಗಲೇ? ಭಾರತಕ್ಕಾಗಿ ಸ್ವರೂಪಿ ಭಾಸ್ಕರನ ರಾಷ್ಟ್ರಾಂಗಭೂತ ಕಿರಣವಾದಾಗ ಮಾತ್ರ ಅದು ಸಾಧ್ಯ ಇದನ್ನು ನಿನ್ನೆ ಶ್ರೀಕೃಷ್ಣಜಯಂತಿ ಜ್ಞಾಪಕ ಪಡಿಸಿದ್ದು

●●

ಸ್ವಾತಂತ್ರ್ಯೋತ್ಸವದ ಶುಭಾಶಯಗಳು !

ಹೋಟೆಲ್ ಟೂರಿಸ್ಟ್

(ರಿಜಿಸ್ಟರ್ಡ್)

ರೇಸ್ ಕೋರ್ಸ್ ರೋಡು, ಆನಂದರಾವ್ ಸರ್ಕಲ್

ಬೆಂಗಳೂರು-9.

ಕಣ್ಮನ ತಣಿಸುವ ಬೆಂಗಳೂರು ಮಹಾನಗರದ ಅತ್ಯಂತ ಕೇಂದ್ರ ಸ್ಥಾನದಲ್ಲಿರುವ ಮಹೋನ್ನತ ಹೋಟೆಲ್.

ಪ್ರತಿ ಕೋಣೆಗೂ ಸ್ನಾನಾಗಾರದ ವ್ಯವಸ್ಥೆಯಿರುವ 150 ಕೊಠಡಿಗಳ ಅತ್ಯಾಧುನಿಕ ವಸತಿ, ಭೋಜನ ಮತ್ತು ಉಪಾಹಾರ ಮಂದಿರ

●

Please visit

HOTEL TOURIST

(Regd.)

Race Course Road, Ananda Rao Circle,

BANGALORE-9.

High Class Vegetarian Boarding, Lodging & Restaurant

Phone—72381 (5 lines)   Grams—HOTLETOUR

ವೈದ್ಯ ಪಾಂಗಾಳ ಲಕ್ಷ್ಮೀನಾರಾಯಣ ನಾಯಕ

ಪಾಂಗಾಳ ನಾಯಕರ ಮನೆತನವು ಸುಪ್ರಸಿದ್ಧ ಶ್ರೀ ವೈದ್ಯ ಪಾಂಗಾಳ ಲಕ್ಷ್ಮೀನಾರಾಯಣ ನಾಯಕರನ್ನು ತಿಳಿಯದವರು ಅತಿ ವಿರಳ ಮಂದಹಾಸ, ದಯಾರ್ದ್ರ ಹೃದಯ, ತ್ಯಾಗ, ಸೇವಾ ಭಾವನೆಯ ಗಾಂಭೀರ್ಯದ ವ್ಯಕ್ತಿತ್ವ.

ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಯಲ್ಲಿ ತುಂಬಾ ಆಸಕ್ತಿಯಿದ್ದವರು ಸ್ವಾತಂತ್ರ್ಯ ಚಳುವಳಿಯಲ್ಲಿ ತನು, ಮನ, ಧನದಿಂದ ದುಡಿದ ಧುರೀಣರು ತ್ಯಾಗ ಮಾಡಿದವರು

ಇವರಿಗೆ ವೈದ್ಯಕೀಯವೃತ್ತಿ ವಂಶ ಪಾರಂಪರ್ಯವಾಗಿ ಬಂದ ಅನುಭವ ಸಂಪತ್ತು ಗಿಡ ಮೂಲಿಕೆ ಅನುಭವ, ಔಷಧಿ ತಯಾರಿ, ವೈದ್ಯಕೀಯ ಸೇವೆಯಲ್ಲಿ ತುಂಬಾ ನಿಷ್ಣಾತರು

ರೋಗಿಗಳಿಗೆ ಔಷಧೋಪಚಾರ ನೀಡುವುದರಲ್ಲಿ ಎತ್ತಿದ ಕೈ ತನ್ನ ಬಳಿಗೆ ಬರುವ ರೋಗಿಗಳಲ್ಲಿ ಧೈರ್ಯ, ಉತ್ಸಾಹ ತುಂಬಿ ನಿರಾಶೆಯ ಮಬ್ಬು ಕಳೆಯುವುದೇ ಇವರ ಪ್ರಥಮ ಚಿಕಿತ್ಸೆ ಬಡವರಿಗೆ ಧರ್ಮಾರ್ಥ ಚಿಕಿತ್ಸೆ ಮಾತ್ರವಲ್ಲದೆ ಪಥ್ಯ, ಅನುಪಾನಕ್ಕೆ ಅನುಕೂಲವಾಗುವಂತೆ ಧನ ಸಹಾಯ ಮಾಡುವ ಪ್ರವೃತ್ತಿ ವೈದ್ಯಕೀಯ ವೃತ್ತಿಯಿಂದ ಧನಸಂಚಯ ಮಾಡುವ ಬದಲಾಗಿ ತ್ಯಾಗ ಮಾಡಿರುವುದೇ ಹೆಚ್ಚು

ಔಷಧಿ ತಯಾರಿಯಲ್ಲಿ ತುಂಬಾ ಶ್ರದ್ಧೆ ಶಾಸ್ತ್ರೋಕ್ತ ರೀತಿ, ಔಷಧಿಗಳು ಗುಣದಾಯಕವಾಗುವಂತೆ ಯೋಗ್ಯ ವಸ್ತುಗಳನ್ನು ಉಪಯೋಗಿಸುವ ನಿಷ್ಠೆ ಇದರಿಂದ ಶ್ರೀ ನಾಯಕ ಔಷಧಿಯನ್ನು ಸೇವಿಸುವುದೆಂದರೆ ತಮಗೆ ಅಮೃತಪ್ರಾಶನೇ ಎಂಬುದಾಗಿ ರೋಗಿಗಳ ವಿಶ್ವಾಸ

ರೋಗಿಗಳ ಒತ್ತಾಸೆಯಿಂದ ಶ್ರೀಯುತ ನಾಯಕರು ಸ್ಥಾಪಿಸಿದ ತನ್ನ ವೈಯುಕ್ತಿಕ ಸಂಸ್ಥೆಯೆ "ನಾಯಕ ಆಯುರ್ವೇದಾಶ್ರಮ, ಕಟಪಾಡಿ" ಶ್ರೀಯುತ ನಾಯಕರ ಹಿರಿಯ ಪುತ್ರ ಶ್ರೀ ಪಾಂಗಾಳ ಗೋಪಾಲಕೃಷ್ಣ ನಾಯಕರು ದಿವಂಗತ ತನ್ನ ತಂದೆಯವರ ಉನ್ನತ ಧ್ಯೇಯಕ್ಕನುಗುಣವಾಗಿ ಜನಪ್ರಿಯರಾಗಿ ನಡೆಸಿಕೊಂಡು ಬರುತ್ತಿದ್ದಾರೆ ●

ಮಿಲಿಯಾಂತರ ಜನರ ಮೆಚ್ಚಿನ ಆಯ್ಕೆ

ನಂಬ್ರ 30 ಮಾರ್ಕಿನ

ಬೀಡಿಗಳು

ತಯಾರಕರು

ದಿ ಭಾರತ್ ಬೀಡಿ ವರ್ಕ್ಸ್ (ರಿಜಿಸ್ಟರ್ಡ್)

ಆಡಳಿತ ಆಫೀಸು:

ಪೋಸ್ಟು ಬಾಕ್ಸ್ ನಂಬ್ರ 730

ಮಂಗಳೂರು – 3

ESTD: 1930

ತಂತಿ : 'THIRTYBIDI'

ದೂರವಾಣಿ : 3330 3930 5230

ಯೋಜನೆಗಳ ಕೀಲಿ– ಕೃಷಿ ಗಣತಿ

(IIIನೇ ಪುಟದಿಂದ)

ದ ಕೇರಳ, ಒರಿಸ್ಸಾ, ಪಶ್ಚಿಮ ಬಂಗಾಳ, ಮೇಘಾಲಯ, ನಾಗಾಲ್ಯಾಂಡ್, ನೀಫಾ, ಗೋವಾ, ಡಾಮನ್ ಮತ್ತು ದೀವ,ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ವಿಶೇಷ ಪ್ರಾಯೋಗಿಕ ಸಮೀಕ್ಷಾ ಕಾರ್ಯ ಕೈಗೊಳ್ಳಲಾಗುತ್ತದೆ.

ಸಮೀಕ್ಷಾ ಕಾರ್ಯ

ಇವೆರಡು ಮಾರ್ಗಗಳಲ್ಲದೆ ರಾಷ್ಟ್ರೀಯ ಪ್ರಾಯೋಗಿಕ ಸಮೀಕ್ಷಾ ಸಂಸ್ಥೆಯು 26ನೇ ಸುತ್ತಿನಲ್ಲಿ ಕೃಷಿ ಹಿಡುವಳಿಗಳ ಸಮೀಕ್ಷಾ ಕಾರ್ಯ ಕೈಗೊಳ್ಳುತ್ತದೆ. ಇದರಿಂದ ಗೊಬ್ಬರಗಳ ಬಳಕೆ, ಕೀಟನಾಶಕಗಳು, ಅಧಿಕ ಇಳುವರಿ ಬೆಳೆ ತೆಗೆಯುವ ಪ್ರದೇಶ, ಜಾನುವಾರು ಕೃಷಿ ಸಾಧನೋಪಕರಣಗಳು ಮುಂತಾದ ವಿವರಣೆಗಳನ್ನು ಸಿದ್ಧಗೊಳಿಸಬಹುದು.

ಈ ಗಣತಿಗೆ ಜುಲೈ 1970—ಜೂನ್ 1971ರ ಕೃಷಿ ಸಂವತ್ಸರವನ್ನು ಆಧಾರವಾಗಿಟ್ಟುಕೊಳ್ಳಲಾಗುತ್ತದೆ. ಈ ವರ್ಷಾಂತ್ಯದಲ್ಲಿ ಕ್ಷೇತ್ರ ಕಾರ್ಯ ಮುಗಿಯುವ ನಿರೀಕ್ಷೆಯಿದೆ. ಕೃಷಿ ಗಣತಿಯ ತಾತ್ಕಾಲಿಕ ಮಾಹಿತಿ ಮುಂದಿನ ವರ್ಷದ ಮಧ್ಯಭಾಗದಲ್ಲೂ, ಖಚಿತ ಮಾಹಿತಿ 1973ನೇ ಇಸವಿಯ ಅಂತ್ಯದಲ್ಲೂ ದೊರಕುತ್ತದೆ.

ಇದೊಂದು ಬೃಹತ್ ಕಾರ್ಯ. ಒಮ್ಮೆ ಈ ಕಾರ್ಯ ಮುಗಿದರೆ ನಮ್ಮ ಕೃಷಿ ಯೋಜನೆಗಳಿಗೆ ಹೊಸ ದಿಗಂತ ಗೋಚರವಾದಂತಾಗುತ್ತದೆ ಪ್ರಸ್ತುತ ಕಾರ್ಯದ ಅನುಭವದಿಂದ ಗ್ರಾಮಮಟ್ಟದ ಮಾಹಿತಿಯನ್ನು ಸಂಗ್ರಹಿಸುವ ವಿಧಾನವನ್ನು ಸುಧಾರಿಸಬಹುದು ಈ ಮೂಲಕ ಯೋಜನೆ ಸಿದ್ಧಪಡಿಸಲು ಅಗತ್ಯವಾದ ಅಂಕಿ–ಅಂಶಗಳನ್ನು ಸಿದ್ಧಪಡಿಸಬಹುದು. ನಾವು ಕೃಷಿ ಗಣತಿಯನ್ನು ಪಂಚವಾರ್ಷಿಕ ಯೋಜನೆಗಳೊಂದಿಗೆ ವಿಲೀನಗೊಳಿಸಬೇಕು ಕೃಷಿ ಮಾಹಿತಿಯು ಪಂಚವಾರ್ಷಿಕ ಯೋಜನೆ ರೂಪಿಸುವುದಕ್ಕೆ ಒಂದು ವರ್ಷ ಮುಂಚೆಯೇ ದೊರಕುವಂತಿರಬೇಕು. ಕಾಲಾನುಕ್ರಮದಲ್ಲಿ ಕೈಗೊಳ್ಳುವ ಕೃಷಿಗಣತಿ ಕಾರ್ಯವನ್ನು ಶಾಶ್ವತಗೊಳಿಸಲು ಸ್ಥಾಯಿರೂಪ ಕೊಡಬೇಕೆಂಬುದನ್ನು ಪರಿಶೀಲಿಸ ಬೇಕಾಗಿದೆ.

ಬಹುತರ ಜನರಲ್ಲಿ ನ್ಯಾಯಪ್ರಿಯತೆ ಎಂದರೆ ತಮಗಾಗಬಹುದಾದ ಅನ್ಯಾಯದ ಭಯವೇ ಆಗಿದೆ.

—ಲಾರೋ ಜೆಫೋಕಾಲ್ಡ

oo oo oo

ಭಾರತಾಂಬೆ ನೀನೆ ಧನ್ಯಳೌ!

ಭಾರತಾಂಬೆ ಮಾತೆ ನೀನೆ ಧನ್ಯಳೌ।
|| ಪಲ್ಲವಿ ||

ವೇದ ಉಪನಿಷತ್ತುಗಳನು
ಬೋಧಗೈದು ಕೀರ್ತಿಪಡೆದ
ಆರ್ಯ ಋಷಿಯ ಮಾತೃಭೂಮಿ
ಭಾರತಾಂಬೆ ನೀನೆ ಧನ್ಯಳೌ ||೧||

ಹಿಂಸೆ ತೊರೆದ ಹಿಂಸ ಮೂರ್ತಿ
ಶಾಕ್ಯರಾಜ ಬುದ್ಧದೇವ–
ನುದಿಸಿಬಂದ ನಾಡದೇವಿ
ಭಾರತಾಂಬೆ ನೀನೆ ಧನ್ಯಳೌ ||೨||

ಆರ್ಯಧರ್ಮ ಬೆಳೆಸಿದಂಥ
ದ್ವೈತ ಮೀರಿದದ್ವೈತ ಮೂರ್ತಿ
ಶಂಕರಾರ್ಯನಂ ಪಡೆದ ತಾಯಿ
ಭಾರತಾಂಬೆ ನೀನೆ ಧನ್ಯಳೌ ||೩||

ಅರ್ಥಶಾಸ್ತ್ರ ಜಗಕೆ ನೀಡಿ
ಮೌರ್ಯ ರಾಜ ಮಂತ್ರಿಯಾದ
ವಿಷ್ಣುಗುಪ್ತನಿದ್ದ ಭೂಮಿ
ಭಾರತಾಂಬೆ ನೀನೆ ಧನ್ಯಳೌ ||೪||

ಯವನ ಬಲವ ಮುರಿದು ಕಂದ
ಹಿಂದು ರಾಜ್ಯ ರಚಿಸಿನಿಂದ
ವಿದ್ಯಾರಣ್ಯರ ರಾಜಮಾತೆ
ಭಾರತಾಂಬೆ ನೀನೆ ಧನ್ಯಳೌ ||೫||

ಹಿಂದವೀ ಸ್ವರಾಜ್ಯ ಪಡೆಯೆ
ಸಲಹೆ ನೀಡಿ ತಪವ ಗೈದ
ಸಂತ ರಾಮದಾಸ ಜನ್ಮದಾತೆ
ಭಾರತಾಂಬೆ ನೀನೆ ಧನ್ಯಳೌ ||೬||

ಆಂಗ್ಲರಾಳ್ಕೆ ಕೊನೆಯಗೊಳಿಸೆ
ಅಸಹಕಾರ ಅಸ್ತ್ರ ಹಿಡಿದ
ಗಾಂಧಿ ಮಹಾತ್ಮನುದಿಸಿ ಬಂದ
ಭಾರತಾಂಬೆ ನೀನೆ ಧನ್ಯಳೌ ||೭||

—ದಿಗಂಬರ ಜೋಶಿ,
ಬೆಳಗಾವಿ.

ಪುತ್ತೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟನಲ್ಲಿ

O. S 19/71

M. ಕೃಷ್ಣರಾಯ ಶೆಟ್ಟಿ —ವಾದಿ
ಪೊಡಿ ಕುಂಞಾ ಯಾನೆ ಇಸ್ಮಾಯಿಲ್ ಸಹಾ —ಪ್ರತಿವಾದಿರು

11ನೇ ಪ್ರತಿವಾದಿ.—ಜೈನಾಭಿ— K.A. ಕಾದರರ ಹೆಂಡತಿ, ಕ್ಯೊಲ ಗ್ರಾಮ.

ಸದ್ರಿ 11ನೇ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯ ಪಡಿಸುವುದೇನೆಂದರೆ—

ನಿಮ್ಮ ತಂದೆ ಮೃತ H. H. ಇಬ್ರಾಹಿಂ ವಾದಿಗೆ ತಾ 28-12-67ರಲ್ಲು ರೂ.2,000/-ಕ್ಕೆ 2 ಹುಂಡಿಗಳನ್ನು ಬರ ಕೊಟ್ಟ ಬಗ್ಗೆ, ಸದ್ರಿ ಎರಡು ಹುಂಡಿಗಳ ಬಾಬ್ತು ಬರತಕ್ಕ ಅಸಲು ಹಣ ಮತ್ತು ಬಡ್ಡಿ ಕೂಡಾ ರೂ. 5392—75 ಕ್ಕೆ ನಿಮ್ಮ ಮೇಲೆ ಕೂಡಾ ವಾದಿಯು ಮಾಡಿದ ಈ ದಾವೆಯು ತಾ 30-8-71ಕ್ಕೆ ನಿಮ್ಮ ನೋಟಿಸಿನ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಪಡಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಪ್ಪಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/- M. Rammohan Rao
Advocate for Petitioner

Putlur, 7/8/71

With best compliments from:

NARAYAN SHETTY

BHARATH JYOTHI

ICE CREAM

BJ

OUTDOOR CATERERS AND CONTRACTORS

KAILAS DARSHAN BUILDING
KENNEDY BRIDGE NEAR NANA CHOWK
BOMBAY-7. WB.

H. O. NIKADWARI LANE, GIRGAUM, BOMBAY-4. BR.

ಸ್ವಾತಂತ್ರ್ಯೋತ್ಸವದ

ಹಾರ್ದಿಕ ಶುಭಾಶಯಗಳು !

ನಿಮ್ಮ ಮನರಂಜನೆಯ ಸಮಸ್ಯೆಯನ್ನು ನೀಗಿಸಲು

ಉಡುಪಿಯ ಶ್ರೇಷ್ಠ ದರ್ಜೆಯ ಎರಡು ಚಿತ್ರಮಂದಿರಗಳು

ನಿಮ್ಮ ಬೇಸರವನ್ನು ನೀಗಿಸಲು ಇಲ್ಲಿವೆ!

ಅಲಂಕಾರ್ (ಫೋನ್ : 327) ಆಸ್ಪತ್ರೆ ರಸ್ತೆ

ಕಲ್ಪನಾ (ಫೋನ್ : 437) ಉಪೇಂದ್ರಬಾಗ್

ಮತ್ತು

ಕುಂದಾಪುರದ ನವೀಕೃತ ಭವ್ಯ ಚಿತ್ರಮಂದಿರ—

ಗೀತಾಂಜಲಿ

(ಫೋನ್ : 34)

ಅತ್ಯುತ್ತಮ ಚಲಚ್ಚಿತ್ರಗಳ ಪ್ರದರ್ಶಕರು

ವ್ಯವಸ್ಥಾಪಕರು :

ಶ್ರೀ ರಾಮಕೃಷ್ಣ ಥಿಯೆಟರ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ : ಎಸ್. ಆರ್. ಬಿಲ್ಡಿಂಗ್ಸ್, ಉಡುಪಿ (ದ. ಕ.)

ತಂತಿ: 'ಸಂದರ್ಶನ'

ಫೋನ್ : ಹೊಟೆಲ್ – 574, ನಿವಾಸ – 451

ಇತಿಹಾಸ ಪ್ರಸಿದ್ಧ ಹಂಪೆಯನ್ನು ಸಂದರ್ಶಿಸುವ ಮೊದಲು

ಬೆಳೆಯುತ್ತಿರುವ ಹೊಸಪೇಟೆಯಲ್ಲಿ ಸಂದರ್ಶಿಸಲೇಬೇಕಾದ

ಹೊಟೆಲ್ ಸಂದರ್ಶನ

ಅತ್ಯಾಧುನಿಕ ಸುಸಜ್ಜಿತ ವಸತಿ ಸೌಕರ್ಯಗಳಿಗೆ

ಶುಚಿ–ರುಚಿಕರ ಭೋಜನಕ್ಕೆ ಪ್ರಸಿದ್ಧವಾಗಿದೆ.

ರೈಲ್ವೆ ನಿಲ್ದಾಣಕ್ಕೆ ಸಮೀಪವಿರುವ ಏಕಮೇವ ಅತ್ಯುನ್ನತ ಹೊಟೆಲ್

ಹೊಟೆಲ್ ಸಂದರ್ಶನ

ಸ್ಟೇಶನ್ ರೋಡು, ಹೊಸಪೇಟೆ, ಬಳ್ಳಾರಿ ಜಿಲ್ಲೆ.

ಮಾಲೀಕರು: ವಿ. ನರಸಿಂಹ ಹೊಳ್ಳ.

ಸ್ವಾತಂತ್ರ್ಯೋತ್ಸವದ ಶುಭಾಶಯಗಳು !

HOTEL SANDARSHAN

LODGING & BOARDING

STATION ROAD, HOSPET, BELLARY DT.

With best compliments

from

BALLAL MOTOR SERVICE

MOODABIDRI —— MANGALORE

ಯೋಜನೆಗಳ

(O. S. 655/65)

—ಅರ್ಜಿದಾರ

ದ ಕೇರಳ, ಒರಿಸ್ಸಾರ್, ಅಬ್ದುಲ್ ಬ್ಯಾರಿ

ಮೋಘಾಲಯ್ಯ ಗ್ರಾಮ —ಎದ್ರಿ

ಗೋವ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಲಕ ತಿಳಿಯ ಪಡಿಸುವುದೇನೆಂದರೆ:—

ಅರ್ಜಿದಾರನ ಕಡೆಯಿಂದ ದಾಕಲಾದ ಈ ಅಮಲ್ದಾರಿಯಲ್ಲಿ Rule 37 ನೋಟೀಸು ಬಗ್ಗೆ ತಾ 2–9–71ಕ್ಕೆ ಯಿಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಪ್ಪಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/- Rammohan Rao

Advocate for Petitioner

ಪುತ್ತೂರು, 7–8–71

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 433/1968

ವಾದಿ: ಮಹಾಬಲ ಸೆಟ್ಟಿ

ಪ್ರತಿವಾದಿರು: ಮೂಕಮ್ಮ ಸೆಡ್ತಿ ಕೂಡಾ

2ನೇ ಪ್ರತಿವಾದಿ–ಸುಬ್ಬಣ್ಣ ಸೆಟ್ಟಿ, ಲಕ್ಷ್ಮಿ ಸೆಡ್ತಿರ ಮಗ.

7ನೇ ಪ್ರತಿವಾದಿ–ರಾಮಣ್ಣ ಸೆಟ್ಟಿ, 8ನೇ ಪ್ರತಿವಾದಿ–ಬಡಿಯ ಯಾನೆ ವೆಂಕಪ್ಪ ಸೆಟ್ಟಿ. 10ನೇ ಪ್ರತಿವಾದಿ–ಶಂಕರ ಸೆಟ್ಟಿ —ಸುಬ್ಬಕ್ಕ ಸೆಡ್ತಿರ ಮಕ್ಕಳು. ಕುಂದಾಪುರ ತಾಲ್ಲೂಕು ನಾಡ ಗ್ರಾಮದ ಕಚ್ಚೆ ಪಡುಮನೆಯಲ್ಲಿರುವವರು.

ಸದ್ರಿ ಪ್ರತಿವಾದಿರಿಗೆ ತಿಳಿಯಪಡಿಸುವುದೇನೆಂದ್ರೆ—

ಮೇಲಿನ ದಾವೆಯ ಪ್ರಿಲಿಮಿನರಿ ಡಿಕ್ರಿ ವಿಧಿಗನುಸರಿಸಿ ಪಾಲಿ ಬಗ್ಗೆ ಫ್ಯಾನಲ್ ಡಿಕ್ರಿ ಕೊಡಿಸಬೇಕಾಗಿ ವಾದಿಯು ಮಾಡಿದ ಫ್ಯಾನಲ್ ಡಿಕ್ರಿ ಅರ್ಜಿಯು ತಾ. 28–8–1971ಕ್ಕೆ ತನ್ನಿಗೆ ಯಿರುತ್ತದೆ. ಆ ಕುರಿತು ನಿಮ್ಮದೇನಾದರೂ ಅಕ್ಷೇಪವಿದ್ದರೆ ಆ ದಿವಸ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿರುತ್ತದೆ.

ಕೋರ್ಟು ಹುಕುಂ ಪ್ರಕಾರ

Y. Tejappa Shetty

Advocate for Plff.

Coondapoor. 8-8-1971.

In the Court of the Munsif of Buntwal, South Kanara

O.S. No. 29/71

Between:

Pakeerabba Beary —Plaintiff

and

Narayana Bhat —Defendant

Notice to defendant

To

Narayana Bhat, son of Thamrakaje Irumbu Ganapathy Bhat, Landholder, residing at Alike Village, Buntwal Taluk, Post Alike, S. Kanara.

Please take notice that the above suit against you for the reliefs mentioned therein stands posted to 26—8—1971 in the above court at 11 A.M. for your appearance. Should you fail to appear in person or through a pleader on the said date at 11 A.M. you will be declared exparte and the matter will be decided in your absence.

(By order of the court)

Sd/- B. A. SOMAYAJI

Adv. for Plaintiff.

B. C. Road.)
Dt. 11—8—71.)

ನೋಟೀಸು

ಪುತ್ತೂರು ಡಿವಿಜನ್ ಮಹಾಳಿ ಪ್ರಿವೆನ್ಶನ್ ಸಹಕಾರಿ ಸಂಘ, ಲಿಮಿಟೆಡ್, ನಂಬ್ರ L 367, ಇಡ್ಕಿದು: ಕಬಕ ಪೋಸ್ಟು, ದ.ಕ.

ಈ ಸಂಘದ ವಾರ್ಷಿಕ ಮಹಾಸಭೆಯನ್ನು ತಾ. 8-9-71ನೇ ಬುಧವಾರ ಪೂರ್ವಾಹ್ನ ಘಂಟೆ 10—30ಕ್ಕೆ ದ. ಕ. ಸೆಂಟ್ರಲ್ ಬೇಂಕಿನ ಪುತ್ತೂರು ಶಾಖೆಯ ಆಫೀಸಿನಲ್ಲಿ ಜರಗಿಸುವುದಾಗಿ ನಿರ್ಣಯಿಸಿಯದೆ. ಎಲ್ಲಾ ಮೆಂಬರರೂ ಬರಬೇಕಾಗಿ ವಿನಂತಿ.

(Sd). K. Venkappaya

ಅಧ್ಯಕ್ಷ

ಇಡ್ಕಿದು, ತಾ 5-8-1971.

ವಿಷಯಗಳು.

1) 1970–71ರ ವರದಿ ಓದುವುದು.
2) 1971–72ರ ಅಂದಾಜು ಬಜೇಟು ಮಂಜೂರಾತಿ.
3) 1966–67; 1967–68; 1968–69ರ ಲಾಭಾಂಶ ವಿತರಣೆ.
4) ಅಧ್ಯಕ್ಷರ ಅನುಮತಿಯಿಂದ ಇತರ ವಿಷಯಗಳು.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O. S. 462/70.

H. ರಾಮಯ್ಯ ಗೌಡ —ವಾದಿ

— Vs —

H. ಅಂಣಯ್ಯ ಗೌಡ (ಪೌತಿ) ಸಹಾ

—ಪ್ರತಿವಾದಿರು

2. H. ಚಿನ್ನಪ್ಪ ಗೌಡ, S/o. ಅಂಣಯ್ಯ ಗೌಡ, ಸುಳ್ಯ ತಾಲ್ಲೂಕು ತೊಡಿಕಾನ ಗ್ರಾಮದ ಪಂಚಿಕೋಡಿ.

4. ಸದಾನಂದ, S/o ಚಿನ್ನಪ್ಪ ಗೌಡ, ಮ್ಯೈನರ, ಗಾರ್ಡಿಯನ್ ತಂದೆ ಚಿನ್ನಪ್ಪ ಗೌಡ.

ಇವರಿಗೆ—

ಮೇಲಿನ ದಾವೆಯ ವಾದಿಯು ನಿಂಪು ಮೇಲೆ ಹಿಶೆ ಬಗ್ಗೆ ಮಾಡಿದ ಸದ್ರಿ ದಾವೆಯು ನಿಂಮ ಹಾಜರಾತಿ ಬಗ್ಗೆ ತಾ.3–9–71ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ನೀವು ಸ್ವತಹ ವ ವಕೀಲರ ದ್ವಾರಾ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಪ್ಪಾ ಮಾಡಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಕೋರ್ಟು ಹುಕುಂ ಪ್ರಕಾರ.

Sd/- K. Rama Bhat

Advocate for Plaintiff

ಪುತ್ತೂರು, 6–8–1971.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R.R.C. 81/1971

ಲಿಂಗಪ್ಪ ಗೌಡ —ಅರ್ಜಿದಾರ

ಕಲ್ಯಾಣಿ ಹೆಂಗ್ಸು, ನಾರಾಯಣ ಶೆಟ್ಟಿ ಹೆಂಡ್ತಿ, ಬೆಳ್ತಂಗಡಿ ತಾಲ್ಲೂಕು ನವಡಾಲು ಗ್ರಾಮ

—ಎದ್ರಿ

ಇವರೀಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದ್ರೆ ಅರ್ಜಿದಾರನು 1969—70ನೇ ವರುಷದ ಗೇಣಿ ಬಾಕಿ ಬಗ್ಗೆ ನಿಂಮ ಮೇಲೆ ದಾಕ್ಲು ಮಾಡಿದ ಮೇಲ್ಕಂಡ ಗೇಣಿ ಅರ್ಜಿಯು ತಾ 16–9–71ಕ್ಕೆ ಯಿಟ್ಟಿರುವುದರಿಂದ ಅದ್ಕೆ ನಿಂಮ ಆಕ್ಷೇಪಣೆಗಳಿದ್ರೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟಿನ ಮುಂದೆ ನೀವು ಸ್ವತಹ ವ ವಕೀಲರ ಮೂಲ್ಕ ಹಾಜರಾಗಿ ಉದಹರಿಸಕೊಳ್ಳ ತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲ್ಕ ತಿಳಿಸೋಣಾಗಿಯದೆ.

Sd/-B. Ishwara Bhat.

Advocate for Petitioner

ಬೆಳ್ತಂಗಡಿ, ತಾ 10–8–71.

"ನವಯುಗ" ಹೊನ್ನ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ

ಹೊನ್ನ ಹಬ್ಬದ ಸಂಚಿಕೆಗೆ ಜಾಹೀರಾತು ಕೊಟ್ಟು ಸಹಕರಿಸಿರಿ.

ಜನಕೋಟಿಯ
ಕನಸು ನನಸಾದ ದಿನ...
ನಮ್ಮ ಜನತೆಯ ಹೋರಾಟ, ತ್ಯಾಗ ಹಾಗೂ
ಶ್ರದ್ಧಾಪೂರ್ವಕ ಪ್ರಯತ್ನದ ಫಲವಾಗಿ
ಇಂದಿಗೆ 24 ವರ್ಷ ಹಿಂದೆ ಭಾರತಕ್ಕೆ
ಸ್ವಾತಂತ್ರ್ಯ ಲಭಿಸಿತು.
ಆ ಸ್ಫೂರ್ತಿ ನಮ್ಮಲ್ಲಿ ಇನ್ನೂ ಇದೆ.
ಅಂತೆಯೇ ಶಾಂತಿಯುತ ಹಾಗೂ ಸಮೃದ್ಧ
ಭಾರತವನ್ನು ನಿರ್ಮಿಸಲು ನಾವೆಲ್ಲ
ದೃಢ ನಿರ್ಧಾರ ಮಾಡೋಣ.



ಸೌಂದರ್ಯ ರಕ್ಷಣೆಯಲ್ಲಿ

ಮೈಸೂರು ಶ್ರೀಗಂಧದ ಸಾಬೂನಿಗಿಂತ

ಮಿಗಿಲಾದ ಸಾಬೂನು ಮತ್ತೊಂದಿಲ್ಲ

ಈ ಅತ್ಯುತ್ತಮ ಸ್ನಾನದ ಸಾಬೂನಿನಲ್ಲಿರುವ ಶ್ರೀಗಂಧದ ಎಣ್ಣೆಯು

ಚರ್ಮದ ರಕ್ಷಣೆ ಮಾಡುವುದಲ್ಲದೆ ಅದಕ್ಕೆ

ಯೌವನದ ಮೆರಗನ್ನು ನೀಡುತ್ತದೆ.

ಆಯ್ಕೆಯಲ್ಲಿ ಇದಕ್ಕಿಂತ ಮಿಗಿಲಾದ ಸಾಬೂನು ಮತ್ತೊಂದಿಲ್ಲ

ಮೈಸೂರು ಸರಕಾರದ ಸಾಬೂನು ಕಾರ್ಖಾನೆ,

ಬೆಂಗಳೂರು—12.

ಶ್ರೀ ಎಚ್. ಎನ್ ಬಹುಗುಣ
(ಕೇಂದ್ರ ಸಂಪರ್ಕ ಶಾಖಾ ಮಂತ್ರಿಗಳು)

ಭಾರತ-ಮತ್ತು ಉಪಗ್ರಹ ಸಂಪರ್ಕ

ಆರ್ವಿಯಲ್ಲಿನ ಉಪಗ್ರಹ ಸಂಪರ್ಕ ವ್ಯವಸ್ಥೆಯಿಂದ ಸಾಗರೋತ್ತರ ಸಂಪರ್ಕವು ಸುಗಮವಾಗಿದೆ ಇಂತಹ ಉಪಗ್ರಹಗಳನ್ನು ಹೆಚ್ಚು ಹೆಚ್ಚಾಗಿ ಹೊಂದಲು ಭಾರತ ಉದ್ದೇಶಿಸಿದೆ.

ಪೂನಾ ಸಮೀಪದ ಆರ್ವಿಯಲ್ಲಿ ಪ್ರಥಮ ಭೂಕೇಂದ್ರದ ಕಾರ್ಯಾರಂಭದೊಂದಿಗೆ ಭಾರತ ಸಾಗರೋತ್ತರ ಸಂಪರ್ಕ ಸೇವೆಯಲ್ಲಿ ಮಹತ್ತರ ಪ್ರಗತಿಯನ್ನು ಸಾಧಿಸಿದಂತಾಗಿದೆ ಇದೇ ವರ್ಷದ ಫೆಬ್ರುವರಿ 26ರಂದು ಭಾರತ—ಆಸ್ಟ್ರೇಲಿಯಾ ಉಪಗ್ರಹ ಸಂಪರ್ಕ ವ್ಯವಸ್ಥೆಯ ಉದ್ಘಾಟನೆಯೊಂದಿಗೆ ಈ ಕೇಂದ್ರ ಕಾರ್ಯಾರಂಭ ಮಾಡಿತು ಕಳೆದ ಆರುತಿಂಗಳಲ್ಲಿ ಸುಮಾರು 30 ಚಾನಲುಗಳು ಕಾರ್ಯಾರಂಭಮಾಡಿವೆ ಈ ಹಿಂದೆ ಹೆಚ್ಚು ತರಂಗಾಂತರದ ರೇಡಿಯೋ ವ್ಯವಸ್ಥೆಯ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ ಅಧಿಕ ಸಂಖ್ಯೆಯ ಟೆಲಿಗ್ರಾಫ್, ಟೆಲಿಫೋನ್, ಹಾಗೂ ಟೆಲೆಕ್ಸ್ ಸೇವೆಗಳನ್ನು ಈಗ ಈ ಉಪಗ್ರಹ ವ್ಯವಸ್ಥೆಗೆ ಬದಲಾಯಿಸಲಾಗಿದೆ ಈಗ ಭಾರತ ಆಸ್ಟ್ರೇಲಿಯಾ, ಸಿಂಗಪೂರ್, ಸ್ವಿಜರ್‌ಲೆಂಡ್, ಬ್ರಿಟನ್, ಅಮೇರಿಕಾ, ಇಟಲಿ, ಪಶ್ಚಿಮ ಜರ್ಮನಿ, ಹಾಗೂ ಆಸ್ಟ್ರೀಯಾ ದೇಶಗಳೊಡನೆ ಉಪಗ್ರಹ ಟೆಲಿವಿಷನ್ ಸಂಪರ್ಕ ಸೌಲಭ್ಯವನ್ನೂ ಹೊಂದಿದೆ

ಇತ್ತೀಚಿನವರೆಗೆ ಸಾಗರೋತ್ತರ ಸಂಪರ್ಕ ಸೇವೆಯನ್ನು ಹೆಚ್ಚು ತರಂಗಾಂತರದ ಮೇಲೆ ಅಂತರಾಷ್ಟ್ರೀಯ ತಂತಿ ಸಂಪರ್ಕ ಸೇವಾ ಸೌಲಭ್ಯಗಳಲ್ಲಿ ದೊರಕಿಸಲಾಗುತ್ತಿತ್ತು. ಇದರಲ್ಲಿ ಸುಗಮ ಸಂಪರ್ಕ ಸಿಗದು ಈ ವ್ಯವಸ್ಥೆಯಲ್ಲಿ ಧ್ವನಿ ಕೇಳಿಸದೆ ಹೋಗುವುದು, ಶಬ್ದ ಬರುವುದು. ಇತ್ಯಾದಿ ತೊಂದರೆಗಳು ಇರುವುವು. ಉಪಗ್ರಹದ ಮೂಲಕ ದೊರೆಯುವ ಈ ಸಂಪರ್ಕಸೇವೆ ಅತ್ಯಂತ ನವೀನವಾದುದಲ್ಲದೆ ಬಹಳ ಸಹಾಯಕಾರಿ

ಆರ್ವಿ ಕೇಂದ್ರಕ್ಕೆ ವೆಚ್ಚವಾಡಲಾಗಿರುವ ಹಣ 8 ಕೋಟಿ ರೂಗಳಾಗಿದ್ದು, ಅದನ್ನು ಮುಂಬೈನ ವಿದೇಶ ಸಂಚಾರ-ಭವನಕ್ಕೆ ಸಂಪರ್ಕ ಕಲ್ಪಿಸಲಾಗಿದೆ ಪಶ್ಚಿಮ ಬಿಟ್ಟ ಪ್ರದೇಶಗಳಲ್ಲಿ ಈ ಕೇಂದ್ರದ ಮೂರು ಪುನರಾವರ್ತಿಮಾಡುವ ಕೇಂದ್ರಗಳಿವೆ ವಿದೇಶ ಸಂಚಾರ ಭವನದಲ್ಲಿ ಮುಂದಿನ ವರ್ಷದ ಆದಿಯೊಳಗೆ ಅರೆಸ್ವಯಂಚಾಲಿತ ಅಂತರಾಷ್ಟ್ರೀಯ ಟೆಲಿಫೋನ್ ಎಕ್ಸ್‌ಚೇಂಜ್ ಸಿದ್ಧವಾಗಲಿದ್ದು ಅನಂತರ ಸಾಗರೋತ್ತರ ಸಂಪರ್ಕ ಇನ್ನೂ ಸರಳವಾಗಲಿದೆ

ಉತ್ತರ ವಿಭಾಗದಲ್ಲಿ ಆರ್ವಿ ಕೇಂದ್ರದಂತಹ ಇನ್ನೊಂದು ಭೂಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ 1974 – 75ರ ನಂತರ ಸಾಗರೋತ್ತರ ಸಂಪರ್ಕ ಸೇವೆಗೆ ಬೇಡಿಕೆ ಏರಲಿಕ್ಕೂ ಈ ಎರಡನೆ ಕೇಂದ್ರದಿಂದ ಹೆಚ್ಚು ಅನುಕೂಲವಾಗಲಿದೆ, ಡೆಹ್ರಾಡೂನ್ ಬಳಿಯ ನಿವೇಶನವೊಂದನ್ನು ಇಲಾಖಾ ತಾಂತ್ರಿಕ ಸಮಿಯವರು ಈ ಬಗ್ಗೆ ಶಿಫಾರಸು ಮಾಡಿದ್ದಾರೆ ಈ ಯೋಜನೆಗೆ 6 78 ಲಕ್ಷ ರೂ ಗಳ ವೆಚ್ಚಮಾಡಬೇಕಾಗುವುದೆಂದು ನಿರೀಕ್ಷಿಸಲಾಗಿದ್ದು ಅದರಲ್ಲಿ 2 18 ಲಕ್ಷ ವಿದೇಶೀ ವಿನಿಮಯವೂ ಸೇರಿರುವುದು. ವಾಣಿಜ್ಯ ಉದ್ದೇಶಗಳಿಗೂ ಈ ಕೇಂದ್ರ 1974ರ ಅಂತ್ಯದ ವೇಳಗೆ ಕಾರ್ಯಾರಂಭ ಮಾಡುವುದೆಂದು ನಿರೀಕ್ಷಿಸಲಾಗಿದೆ

●

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ 1921 ಚಿನ್ನದ ಹಬ್ಬ. 1971

1971ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ
ಚಿನ್ನದ ಹಬ್ಬದ ಸಂಚಿಕೆಗೆ
ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ
ನವಯುಗದ ನವೀಕರಣಕ್ಕಾಗಿ
ಯೋಜಿಸಲಾಗಿರುವ
ಚಿನ್ನದ ಹಬ್ಬದ ನಿಧಿಗೆ
ಉದಾರ ಸಹಾಯ ಮಾಡಿರಿ!

ಸ್ವಾತಂತ್ರ್ಯೋತ್ಸವದ ಶುಭಾಶಯಗಳು!

ಕಾಮತ್ ಹೋಟೆಲ್

ಬೆಂಗಳೂರಲ್ಲಿ ಸರ್ವರ ಅಚ್ಚುಮೆಚ್ಚಿನ
ಆಪೇಕ್ಷಣೀಯ ಹಾಗೂ ಆಕರ್ಷಣೀಯ
ಉತ್ತಮ ಫಲಾಹಾರ ಮತ್ತು ಭೋಜನ ಮಂದಿರ
ಶೇಷಾದ್ರಿಪುರಂ, ಬೆಂಗಳೂರು-20

ಶುಚಿ ರುಚಿಕರ ತಿಂಡಿ ತಿನಸುಗಳು!
ಆಹ್ಲಾದಕರ ಪಾನೀಯಗಳು!
ವಿನಯಶೀಲ ಉತ್ಸಾಹಿ ಮೆನೇಜರರ ಮೇಲ್ವಿಚಾರಣೆ!
ದಕ್ಷ ಸೇವಾ ಸೌಕರ್ಯ!

ಮಾಲೀಕರು ಆರ್. ಬಿ ಕಾಮತ್

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy
ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಬೆಲೆ. ರೂ 2—00

●

Letter Writing Made Easy ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ ಬೆಲೆ ರೂ 1—50

●

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ
ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ 450 ಪುಟಗಳ ಸುಂದರ ಕೈಹೊತ್ತಗೆ ಬೆಲೆ ರೂ. 2-00

●

ಮನೆ-ಮದ್ದು Home Remedies
ಡಾ| ವಿ ಆರ್ ಕೊರಡ್ಕಲ್‌ರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹವೈದ್ಯ ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನಗಳಿವೆ ಹೆರಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ
—ಬೆಲೆ ರೂ 2-00

ವಿ ಪೂ ವಿ ಪಿ ಮಾಡುವುದಿಲ್ಲ ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಅಂಚೆ ವೆಚ್ಚ ಸೇರಿಸಿ ಮನಿಯಾರ್ಡರು ಮಾಡಿದರೆ ಬುಕ್ ಪೋಸ್ಟ್ ಮಾಡಲಾಗುವುದು
— ಪ್ರತಿಗಳು ಸಿಗುವ ಸ್ಥಳ —
ನವಭಾರತ ಪುಸ್ತಕ ಭಂಡಾರ, ಉಡುಪಿ.

Made out of the Finest Materials

MANGALORE GANESH BEEDIES

Smokers cannot afford to miss them

Daily Production Exceeds 4 Crores Beedies

Head Office :

MANGALORE GANESH BEEDI WORKS

VINOBA ROAD : : MYSORE-5

Telephone: 20241

Telegrams: AROMA

NAVAYUGA
19—8—1971

REGD. No. 176
LICENCE No. 33
Licenced to Post without Prepayment

You benefit in more ways when you bank with

Vijaya Bank



The Vijaya Bank Ltd.
Regd. Office : Mangalore
Admn. Office : Race Course Road, Bangalore-1.
Chairman : M. Sunder Ram Shetty

Total No. of Branches 134

Mysore	98	Maharashtra	3
Kerala	26	Andhra Pradesh	1
Tamil Nadu	5	Delhi	1

Our Total No. of Branches in South Kanara 41.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ 50
ಸಂಚಿಕೆ 50

NAVAYUGA

26—8—1971

ಚಾರುಚಯನ

ತಟಸ್ಥ ನೀತಿಗೆ ಹೊಸತೊಂದು ಅರ್ಥ

ನಾವು ಮೊನ್ನೆ ನಮ್ಮ ಸ್ವಾತಂತ್ರ್ಯದ ೨೪ನೆಯ ವಾರ್ಷಿಕೋತ್ಸವವನ್ನು ಆಚರಿಸಿದೆವು. ಈ ಸಂದರ್ಭದಲ್ಲಿ ದೇಶದ ನಾಯಕಾಗ್ರಣಿ ನಾಯಕರೆಲ್ಲರೂ ತೀವ್ರ ಕಳವಳ ವ್ಯಕ್ತಪಡಿಸಿದ ಏಕಮಾತ್ರ ಪ್ರಶ್ನೆಯೆಂದರೆ, ಬಂಗ್ಲಾದೇಶಕ್ಕೆ ಸಂಬಂಧಿಸಿದ್ದು.

ಬಂಗ್ಲಾದೇಶದ ವಿದ್ಯಮಾನಗಳು ದಿನಗಳೆಂದತೆ ಹೊಸ ಹೊಸ ಸಿಕ್ಕುಗಳನ್ನು ಹಾಕಿಕೊಳ್ಳುತ್ತಿವೆ. ತನ್ನ ಅಸ್ತಿತ್ವಕ್ಕೆ ಧಕ್ಕೆ ಬಂದರೂ ಚಿಂತೆಯಿಲ್ಲ, ಬಂಗ್ಲಾದೇಶವನ್ನು ಮೆಟ್ಟಿಯೇ ಬಿಡುತ್ತೇನೆಂಬುದು ಯಾಹ್ಯಾಖಾನರ ಛಲ. ದೈತ್ಯ ಶಕ್ತಿಯ ಮುಂದೆಂದೂ ತಲೆ ಬಾಗಲಾರವೆಂದು ಬಂಗ್ಲಾ ಜನತೆಯ ದೃಢ ನಿರ್ಧಾರ.

ಇವರಿಬ್ಬರ ನಡುವೆ ಭಾರತಕ್ಕೆ ಬಂಗ್ಲಾ ನಿರಾಶ್ರಿತರ ಆಗಮನ–ನಿರ್ಗಮನಕ್ಕೆಂದೂ ತಯಾರಿಲ್ಲದ ಅವರ ಅಚಲ ಮನೋಭಾವ.

ಈ ನಿರಾಶ್ರಿತರ ಸಂಖ್ಯೆಯೆಷ್ಟು? ಇಪ್ಪತ್ತು– ನಲುವತ್ತು–ಎಂಬತ್ತು ಲಕ್ಷಗಳ ಗಡಿಯನ್ನು ನೆಗೆದು ದಾಟಿ ಎಂದೋ ಹೋಗಿದೆ. ಎಡ್ವರ್ಡ್ ಕೆನೆಡಿಯವರ ಅಭಿಪ್ರಾಯದಲ್ಲಿ ಇದು ಇನ್ನು ಕೆಲವೇ ದಿನಗಳಲ್ಲಿ ೯೦ ಲಕ್ಷ ಮುಟ್ಟುತ್ತದೆ. ಇದುವರೆಗಿನ ಪರಮಾವಧಿ ನಿರೀಕ್ಷೆ ಒಂದು ಕೋಟಿಯನ್ನೂ ಮೆಟ್ಟಿನಿಂತು ತ್ರಿವಿಕ್ರಮಾವತಾರ ತಳೆದಿದೆ; ಈ ನಿರ್ವಾಸಿತರ ಸಂಖ್ಯೆಗೊಂದು ಪೂರ್ಣವಿರಾಮವಿಲ್ಲ–?

ನಮ್ಮ ಜನಸಂಖ್ಯೆಗೆ ಮತ್ತೊಂದೆರಡು ಕೋಟಿ ತುಂಬಿತು; ತುಂಬಿದ ಬಂಡಿಗೆ ಮೊರವು ಹೊರೆಯೇ ಎನ್ನಬಹುದು ಯಾರಾದರೂ.

ನಮ್ಮವರೇ ನಮ್ಮ ಸ್ಫೋಟನೆಗೆ ಕಾರಣರೆಂದು ನಾವೇ ಹೇಳುತ್ತೇವೆ. ಸಂತಾನ ನಿಯಂತ್ರಣಕ್ಕೆಂದು ನಾವೆಷ್ಟು ಹಣ ವ್ಯಯಿಸುವುದಿಲ್ಲ? ವಿವಾಹದ ವಯಸ್ಸು ಎತ್ತರಿಸುವುದು, ಗರ್ಭಪಾತದ ನಿಯಮಗಳನ್ನು ಸಡಿಲಗೊಳಿಸುವುದು– ಇನ್ನೂ ಏನೇನೋ ವಿಧಾನಗಳಿಂದ ದೇಶದಲ್ಲಿ ಮಕ್ಕಳು ಹುಟ್ಟುವುದನ್ನು ಕಡಿಮೆ ಮಾಡಲು ನಾವು ಭಗೀರಥ ಪ್ರಯತ್ನ ಮಾಡುತ್ತಿದ್ದೇವೆ.

ಆದರೆ, ನಮ್ಮ ದುರದೃಷ್ಟ, ಬೇರೆ ದೇಶಗಳ ಹುಟ್ಟಿದ ಮಕ್ಕಳು ಇಲ್ಲಿ ಬಂದು ಮನೆಮಾಡತೊಡಗಿದ್ದಾರೆ!

ಇವರ ಪಾಲನೆಯ ಹೊಣೆಯನ್ನು ನಾವೇ ಹೊರಬೇಕೆ? ಹಾಗೇನೂ ಇಲ್ಲ. ಅಂತಾರಾಷ್ಟ್ರೀಯ ಹೊಣೆಗಾರಿಕೆಯಿಂದ ಉಳಿದವರು ತಪ್ಪಿಕೊಂಡಿದ್ದಾರೆ; ನಮ್ಮ ನೆಲದಲ್ಲಿದ್ದಾರೆ. ಆದುದರಿಂದ ನಾವು ಪೋಷಿಸಬೇಕು– ಅವರ ಮೇಲೆ ಪಾಕಿಸ್ತಾನದಿಂದ ಬಂದವರು ಇವರು!

ನಮ್ಮ ಹೊಟ್ಟೆ ಬಿಗಿಹಿಡಿದು ಅವರ ಹೊಟ್ಟೆಗೆ ಗಂಜಿನೀರು ಸುರಿಯಬೇಕು;' ಇದು ಮಾನವತೆ. ಮಾನವತೆಯನ್ನು ಗುತ್ತಿಗೆಗೆ ಕೊಂಡುಕೊಂಡವರು ನಾವು

ರಾಷ್ಟ್ರಪತಿ ವಿ ವಿ. ಗಿರಿಯವರೂ ಎತ್ತಿ ಹಾಡಿದ್ದು ಇದೇ ನಿರಾಶ್ರಿತರ ಸಮಸ್ಯೆಯನ್ನು. ಪ್ರಧಾನಿ ಗಾಂಧಿಯವರ ಸಫಲಗಾಥೆಯೂ ನಿರಾಶ್ರಿತರ ಪುನರ್ನಿವೇಶನಕ್ಕೆ ಸಂಬಂಧಪಟ್ಟದ್ದು. ಹಳ್ಳಿಯಿಂದ ದಿಲ್ಲಿಯವರೆಗಿನ ಪುಡಾರಿ–ಮರಿಪುಡಾರಿ ಕೊಚ್ಚಿಕೊಂಡದ್ದೂ ಅದನ್ನೇ.

ರಶ್ಯ–ಭಾರತಗಳ ಸಂರಕ್ಷಣಾ ಒಡಂಬಡಿಕೆ ಅತ್ಯಂತ ಮಹತ್ವಪೂರ್ಣವಾದದ್ದೇ. ವಾಸ್ತವವಾಗಿ ಅದಕ್ಕೆ ದೊರೆಯಬೇಕಾದಷ್ಟು ಮಹತ್ವ ಬರಲಿಲ್ಲವೇನೋ ಎನಿಸುತ್ತದೆ. ಆ ಬಗ್ಗೆ ಯಾರೂ ಆಡಿಕೊಳ್ಳುತ್ತಿಲ್ಲ.

ಏಕೆ ಆಡಿಕೊಳ್ಳುತ್ತಿಲ್ಲ? ದಿಲ್ಲಿಯೇ ಆಡುತ್ತಿಲ್ಲ. ಅದರ ದೃಷ್ಟಿಯಲ್ಲಿ ಇದು ಸೈನಿಕ ಒಡಂಬಡಿಕೆಯಲ್ಲ; ನಮ್ಮ ತಟಸ್ಥ ನೀತಿಯಲ್ಲಿ ಮತ್ತೊಂದು ಮೈಲಿಗಲ್ಲು ನಿಜ; ಕೆಂಪು ಬಣ್ಣದ ಮೈಲಿಗಲ್ಲು.

ಬಂಗ್ಲಾ ನಿರಾಶ್ರಿತರ ಎತ್ತರ ಹಿಮಾಲಯವನ್ನೂ ಮೀರಿದೆ—ದೇಶದ ಗೌರವಕ್ಕೆ ಸವಾಲಾಗಿ ನಿಂತಿದೆ. ಆದ್ದರಿಂದ ದೇಶದ ಎಲ್ಲ ಪ್ರಜೆಗಳೂ ಐಕ್ಯದಿಂದ ಒಂದು ಮನಸ್ಸಿನಿಂದ ಇದನ್ನು ಎದುರಿಸಲು ಸಿದ್ಧರಾಗಬೇಕು– ತ್ಯಾಗಕ್ಕೆ ಕರೆ.

ಯಾಹ್ಯಾಖಾನರ ಈ ಅದ್ಭುತ ನರಮೇಧದಿಂದ ಭಾರತದ ಉನ್ನತಿಗೆ, ಭದ್ರತೆಗೆ, ಜನ ಜೀವನಕ್ಕೆ ಆತಂಕ ಬಂದಿದೆ. ನಮ್ಮ ಬಜೆಟ್ಟು ತಲೆಕೆಳಗಾಗಿದೆ.

ಪ್ರಧಾನಿಗಾಂಧಿಗೆ ನಿರಾಶ್ರಿತರ ಪುನರ್ನಿವೇಶನದ ಹೊಣೆಗಾರಿಕೆ– ಗೃಹ ಸಚಿವತನ ಆಸೆಯ ಕೈಗಳಲ್ಲೇ ಇದೆ ತಾನೆ?

ವಿತ್ತ ಸಚಿವ ಚ ವ ನ ರಿ ಗೆ ಹಣ ಕೂಡಿಸುವುದೇ ಚಿಂತೆ. ದಿನನಿತ್ಯ ಸುಮಾರು ಎರಡು ಕೋಟಿ ರೂಪಾಯಿಗಳನ್ನು ಜೋಡಿಸುವುದು ಹೇಗೆ?

ದೇಶದಲ್ಲಿ ಪಟ್ಟದರಿದ್ರರು ಇದ್ದಾರೆ. ಚಿಂದಿಯುಡಲಿಲ್ಲದವರು, ಮನೆಯಿಲ್ಲದವರು, ಕೈಲಾಗದವರು, ಮೈಲಾಗದವರು— ಲಕ್ಷಾಂತರ ಜನ ಸಂಚಾರಿಗಳಿದ್ದಾರೆ. ಇವರ ಯೋಗಕ್ಷೇಮ ನಾವು ನೋಡಲಿಲ್ಲ. ಏಕೆಂದರೆ, ಇವರು ನಮ್ಮ ಮನೆಯವರು ಆದುದರಿಂದ ಆಶ್ರಿತರು ಆದರೆ, ಬಂಗ್ಲಾದೇಶದಿಂದ ಓಡಿಬಂದವರು ನಿರಾಶ್ರಿತರು.

ಬಂಗ್ಲಾದೇಶದ ವಿದ್ಯಮಾನಗಳು ವಿಶಾಲ ಜಗತ್ತಿನ ನಿರೀಕ್ಷೆಗಳೆಲ್ಲವನ್ನೂ ಮೀರಿ ಮುಂದುವರಿದಿವೆ. ಅದು ಪೆಟ್ಟೊಂದು ತುಂಡೆರಡು ಆಗುವ ಸ್ಥಿತಿಯನ್ನು ದಾಟಿದೆ.

ವಿಶ್ವದ ಪ್ರಮುಖ ರಾಷ್ಟ್ರಗಳು ಸಮಸ್ಯೆಯ ಪರಿಹಾರಕ್ಕೆ ನೆರವಾಗುವುದನ್ನು ಬಿಟ್ಟು ಅದರ ಬೆಳವಣಿಗೆಗೆ ಪರಿಪೋಷಕವಾಗಿವೆ.

ರಶ್ಯ—ಭಾರತ ಒಡಂಬಡಿಕೆಯು ತುಂಬ ಅರ್ಥಪೂರ್ಣವಾದದ್ದು. 'ಪಾಕಿಸ್ತಾನ ನಮ್ಮ ಮೇಲೆ ಆಕ್ರಮಣ ಮಾಡಿದರೆ, ನಾವೇನೂ ಏಕಾಕಿಗಳಲ್ಲ' ಎಂದ ಸರ್ದಾರ ಸ್ವರ್ಣಸಿಂಗರ ಗುಡುಗಿನ ಹಿಂದೆಯೇ ಹುಟ್ಟಿಬಂದ ಕೂಸಿದು.

ಇದರಿಂದ ಯುದ್ಧಕ್ಕೆ ಉತ್ತೇಜನ ನೀಡಿದಂತಾಗಲಿಲ್ಲ ಯಾಹ್ಯಾಖಾನರು ಭಾರತವನ್ನು ಕೆಣಕಲು ತುದಿಗಾಲಲ್ಲಿ ನಿಂತಿದ್ದರೂ ಇನ್ನು ತುಸು ಯೋಚನೆ ಮಾಡಬೇಕಾಗಿದೆ. ಪಾಕಿಸ್ತಾನದ ಮಿತ್ರ ಕೆಂಪು ಚೀನಾ ಅದರೊಡನೆ ಇಂತಹುದೇ ಒಡಂಬಡಿಕೆ ಮಾಡಿಕೊಳ್ಳಬಹುದೆ? ಅಮೆರಿಕೆಯು ಖಂಡಿತಕ್ಕೂ ಇಷ್ಟು ಮುಂದೆ ಬರುವುದಿಲ್ಲ. ಅಂದರೆ, ತೆರೆಯ ಮರೆಯಲ್ಲಿ ಶಸ್ತ್ರಾಸ್ತ್ರ ಪಡೆದು, ಭಾರತವನ್ನು ಹಣ್ಣುಗಾಯಿ—ನೀರುಗಾಯಿ ಮಾಡಬೇಕೆಂಬ ಯಾಹ್ಯಾಖಾನರ ರಾಕ್ಷಸಾಭಿಲಾಷೆಗೆ ಈ ಒಪ್ಪಂದ ತಣ್ಣೀರು ಸುರಿಯಿತು.

ಆದುದರಿಂದ ಭಾರತ—ರಶ್ಯಾ ಸಂರಕ್ಷಣಾ ಒಡಂಬಡಿಕೆಯು ನಮ್ಮ ತಟಸ್ಥ ನೀತಿಯನ್ನು ಬಲಿ ತೆಗೆದುಕೊಂಡರೆ ಕೊಳ್ಳಲಿ. ಕವಿದಿದ್ದ ಯುದ್ಧದ ಕಾರ್ಮೋಡಗಳನ್ನು ಓಡಿಸುವ ಬಿರುಗಾಳಿಯಾಯಿತು.

ಇಂತಹ ಒಡಂಬಡಿಕೆಯನ್ನು ರಶ್ಯದೊಡನೆಯೇ ಏಕೆ ಮಾಡಿಕೊಳ್ಳಬೇಕಾಗಿತ್ತು?

ಪಂ. ನೆಹರೂರವರ ಕಾಲದಿಂದಲೂ ನಾವು ಸೋವಿಯತ್ತಿನತ್ತಲೇ ಒಲಿದಿದ್ದೇವೆ. ನಾವು ತಿಂದದ್ದು ಅಮೆರಿಕೆಯ ಗೋಧಿ, ಕುಡಿದದ್ದು ಅಮೆರಿಕನ್ ಹಾಲು ನಿಜ: ಆದರೆ, ಅವು ನಮ್ಮ ವಿಚಾರವನ್ನು ಅಮೆರಿಕನ್ ಪರವಾಗಿ ರೂಪಿಸಲು ಸಂಪೂರ್ಣ ಅಶಕ್ತವಾದುವು. ನಾವು ರಶ್ಯದತ್ತ ಒಲಿಯುತ್ತಲೇ ಬಂದೆವು.

ನಮ್ಮ ಸಮಾಜವಾದವೂ ರಶ್ಯದಿಂದ ಪ್ರೇರಣೆ ಪಡೆದದ್ದು; ಯೋಜನೆಗಳಿಗೂ ಅದೇ ಪ್ರೇರಕ ಶಕ್ತಿ. ನಮ್ಮ ಕಾಶ್ಮೀರವಿದುವರೆಗೂ ನಮ್ಮದಾಗಿಯೇ ಉಳಿದಿರುವುದಾದರೆ; ಅದಕ್ಕೆ ರಶ್ಯದ 'ವೀಟೋ'ವೇ ಮೂಲ ಕಾರಣ. ದೊಡ್ಡ ಪ್ರಜಾಸತ್ತೆ ಭಾರತದ ಸ್ನೇಹವನ್ನು ಅಮೆರಿಕೆ ರಶ್ಯ ಎರಡೂ ಬಯಸಿದುವು—ಎರಡರಲ್ಲೂ ಸ್ವಾರ್ಥವಿಲ್ಲದೆ ಇರಲಿಲ್ಲ

ನಾವು ತಟಸ್ಥರಾದೆವು. ಅವರನ್ನೂ ಕಾಡಿದೆವು; ಇವರೊಡನೆಯೂ ನಲಿದೆವು. ಅವರಲ್ಲಿ ಉಂಡೆವು, ಇವರಲ್ಲಿ ವಿಹರಿಸಿದೆವು ಎಷ್ಟೆಂದರೂ ದೂರದ ದೇಶ! ಅವರಿಗೆ ಇಲ್ಲಿ ನೆಲೆ ಬೇಕಿತ್ತು. ಕಮ್ಯೂನಿಜಂ ವಿರೋಧ ಬೇಕಿತ್ತು. ನಾವು ತಟಸ್ಥರು – ಅವರು ಪಾಕಿಸ್ತಾನವನ್ನು ಓಲೈಸಿದರು.

ಓಲಾಟ ಮುಂದುವರಿಯಿತು. ನಮ್ಮ ರಾಜ್ಯಕೀಯ ಸಂಪೂರ್ಣ ಕಮ್ಯೂನಿಜಂ ಆಯಿತು. ಒಂದೊಂದು ಗುಟುಕು ವಿಷ ಕುಡಿದ ವಿಷಕನ್ಯೆಯನ್ನು ರಮಿಸಲು ವಿಷಪುರುಷನೇ ಬೇಕು. ಅಮೆರಿಕೆ ದೂರ ಸರಿಯಿತು—ರಶ್ಯ ಅಪ್ಪಿಕೊಂಡಿತು.

ತನ್ನ ನೀತಿ– ನಿಲುವುಯನ್ನು ಒಪ್ಪದವರಿಗೆ ತಮ್ಮ ಸಹಾಯವಿಲ್ಲ— ಇದು ಅಮೆರಿಕೆಯ ವಿದೇಶ ಅರ್ಥನೀತಿ. ಅಮೆರಿಕೆಯ ವಿದೇಶ ನೀತಿಯನ್ನು ಭಾರತವೆಂದೂ ಒಪ್ಪಿದ್ದಿಲ್ಲ; ಒಪ್ಪುವಂತಹದೂ ಅಲ್ಲ. ರೂಪಗೊಂಡದ್ದೂ ಇಲ್ಲ.

ನಾವು ಎಂದೋ ಒಂದು ಕಡೆ ಬಾಗಬೇಕಾಗಿತ್ತು. ಬಾಗಿಕೊಂಡೂ ಇದ್ದೆವು. ಆದರೆ, ಅದನ್ನು ಒಪ್ಪಿಕೊಳ್ಳಲಿಲ್ಲ. ಇಂದೂ ಅದನ್ನು ನಾವು ಒಪ್ಪಿಕೊಳ್ಳುವುದಿಲ್ಲ. ಆದರೂ ಸೋವಿಯತ್ತಿನತ್ತ ಒಲಿದಿದ್ದೇವೆ. ಇದು ನಮ್ಮ ತಟಸ್ಥ ನೀತಿಗೆ ವಿರೋಧವಾದುದಲ್ಲವೆನ್ನುತ್ತೇವೆ—ಇದು ಮಿಲಿಟರಿ ಒಡಂಬಡಿಕೆಯಲ್ಲವೆಂದು ಹೇಳುತ್ತೇವೆ.

(ಹನ್ನೆರಡನೇ ಪುಟ ನೋಡಿರಿ)

ಚರಿತ್ರಾರ್ಹ ಮೊಕದ್ದಮೆಗಳು—೧೫

ಕೊಲೆಯೋ? ಆಕಸ್ಮಿಕವೋ?

ಬರೆದವರು : ಬಿ ಕೃಷ್ಣ ಭಟ್, ಭದ್ರಾವತಿ.

ಶ್ರೀ ಚವ್ಹಾಣರು ಆರ್ಡಿನೆನ್ಸ್ ವಿಭಾಗದಲ್ಲಿ ಹಿರಿಯ ಅಧಿಕಾರಿಗಳು. ಓಂ ಪ್ರಕಾಶ ಅವರ ಮಗ ಆತನ ಹರೆಯ ಹದಿನಾಲ್ಕರ ಒಳಗೆ. 1952ರಲ್ಲಿ ಶ್ರೀ ಚವ್ಹಾಣರು ಅಲಹಾಬಾದಿನಲ್ಲಿ ಕೆಲಸದಲ್ಲಿದ್ದರು ಕೈ ತುಂಬಾ ಸಂಬಳ ಬರುತಿತ್ತು ಜೊತೆಗೆ ಅನುಕೂಲವಂತರು.

9—6—52ರಂದು ಓಂ ಪ್ರಕಾಶ ಮನೆಯಿಂದ ಹೊರಬಿದ್ದ. ಹಾಗೆ ಹೋದವನ ಮನೆಗೆ ಹಿಂದಿರುಗಲಿಲ್ಲ. ಮಗ ಮನೆಗೆ ಬಾರದಿರುವುದನ್ನು ಕಂಡು ತಾಯಿ–ತಂದೆ ಗಾಬರಿಗೊಂಡರು. ಅಲ್ಲಿ–ಇಲ್ಲಿ ಹುಡುಕಿದರು. ಪೋಲೀಸರಿಗೆ ದೂರು ಕೊಟ್ಟರು. ದೂರು ಕೈಸೇರುವುದೇ ತಡ–ಅವರು ಹುಡುಗನ ಶೋಧಕ್ಕೆ ಮುಂದಾದರು ಆದರೆ ಓಂ ಪ್ರಕಾಶನ ಸುಳಿವು ಸಿಗಲಿಲ್ಲ ಹೆತ್ತವರು ವಿವಂಚನೆಗೊಳಗಾದರು.

ಹುಡುಗನ ಪತ್ತೆಹಚ್ಚುವ ಕೆಲಸದಲ್ಲಿ ಚವ್ಹಾಣರಿಗೆ ಇಬ್ಬರು ನೆರವಾದರು ರಾಮಚಂದ್ರ ಎನ್ನುವ ಗುಮಾಸ್ತೆ. ರಾಂ ಭರೋಸೆ ಎನ್ನುವ ಮುನಿಸಿಪಲ್ ನೌಕರ. ರಾಂ ಭರೋಸೆ ಚವ್ಹಾಣರಿದ್ದ ಬೀದಿಯಲ್ಲಿಯೇ ವಾಸವಾಗಿದ್ದ.

ಓಂ ಪ್ರಕಾಶನಿಗೆ ಅವರಿಬ್ಬರ ಪರಿಚಯವಿತ್ತು. ಅವರಲ್ಲಿಗೆ ಹೋಗಿ ಬಂದು ಮಾಡುತಿದ್ದ. ಅವರಿಬ್ಬರಲ್ಲಿ ರಾಮಚಂದ್ರನನ್ನು ಹೆಚ್ಚಾಗಿ ಹಚ್ಚಿಕೊಂಡಿದ್ದ.

ಪೋಲೀಸರಿಗೆ ಓಂಪ್ರಕಾಶನ ಹೊಲಬು ಸಿಗಲಿಲ್ಲ. ಆತ ಕಾಣೆಯಾಗಿ ಕೆಲವು ದಿನಗಳುರುಳಿದುವು. ಅಷ್ಟರಲ್ಲಿ ಚವ್ಹಾಣರಿಗೊಂದು ಕಾಗದ ಬಂತು. ಅದನ್ನೋದಿ ಚವ್ಹಾಣರು ಭೂಮಿಗಿಳಿದು ಹೋದರು. ಆ ಪತ್ರದಲ್ಲಿ ಹೀಗೆ ಬರೆದಿತ್ತು.

'ನಮ್ಮ ಅನುಯಾಯಿಗಳು ನಿಮ್ಮ ಮಗನನ್ನು ನಮ್ಮಲ್ಲಿಗೆ ಕಳಿಸಿದ್ದಾರೆ— ನಿಮ್ಮ ಪುತ್ರ ಈಗ ನಿಮ್ಮಿಂದ ನೂರಾರು ಮೈಲಿಗಳ ದೂರದಲ್ಲಿದ್ದಾನೆ. ನಿಮಗೆ ಅವನನ್ನು ಕಾಣುವ ಆಸೆಯಿದ್ದರೆ, ನಾವು ಸೂಚಿಸುವ ಸ್ಥಳದಲ್ಲಿ ಹತ್ತು ಸಾವಿರ ರೂಪಾಯಿಗಳನ್ನು ತಂದಿಡಬೇಕು ಈ ವಿಚಾರವನ್ನು ನೀವು ಪೋಲೀಸರಿಗೆ ತಿಳಿಸಿದರೆ, ನಿಮ್ಮ ಮಗನನ್ನು ಕೊಂದು ಅವನ ರುಂಡವನ್ನು ನಿಮಗೆ ಉಡುಗೊರೆಯಾಗಿ ಕಳಿಸಲಾಗುವುದು. ನಿಮಗೆ ಹಣ ಕೊಡುವ ಆಸೆಯಿದ್ದರೆ, ನಿಮ್ಮ ಮನೆಯ ಗೋಡೆಯಲ್ಲಿ = ಹೀಗೆ ಬರೆಯುವುದು.

ನಿಮಗೆ ಒಪ್ಪಿಗೆ ಇಲ್ಲದಿದ್ದರೆ × ಹೀಗೆ ಬರೆಯಬೇಕು. ನಿಮ್ಮ ಮನೆಯ ಗೋಡೆಯಲ್ಲಿ ನಿಮ್ಮ ಅನುಮತಿ ಸೂಚಿಸುವ = ಗುರುತು ಕಂಡುಬಂದಲ್ಲಿ ನಿಮಗೆ ಪುನಃ ಬರೆಯಲಾಗುವುದು. ಆ ಕಾಗದದಲ್ಲಿ ಈ ಹಣವನ್ನು ಎಂದು, ಎಲ್ಲಿ ತಂದು ತಲುಪಿಸಬೇಕೆಂದು ನಿರ್ದೇಶಿಸಲಾಗುವುದು ನಾವು ಹೇಳುವ ರೀತಿಯಲ್ಲಿ ನಾವು ತಿಳಿಸುವ ಮನುಷ್ಯನ ಕೈಯಲ್ಲಿ ಈ ಹಣವನ್ನು ಮುಟ್ಟಿಸಬೇಕು ನೀವು ಕೊಡಲು ಹಿಂದೆಗೆದರೆ ನಿಮ್ಮ ಮಗನ ರುಂಡವನ್ನು ನಿಮ್ಮಲ್ಲಿಗೆ ಕಳಿಸಲಾಗುವುದು."

ಝುಲೀಂ ಥಾಕು

ಇದು ಕೈಗೆ ಸಿಕ್ಕಿದ ಕೆಲವು ದಿನಗಳಲ್ಲಿ ಮತ್ತೊಂದು ಕಾಗದ ಬಂತು ಒಕ್ಕಣೆ ಥಾಟ, ಎಲ್ಲ ಮೊದಲಿನಂತೆ, ಅವುಗಳಿಂದ ಒಂದು ಸಂಗತಿ ಹೊರಬಿತ್ತು–ಕಾಗದಗಳನ್ನು ಬರೆದವರು ಚವ್ಹಾಣರ ನಿಕಟವರ್ತಿಗಳೆಂಬುದು; ಅವರ ಚಲನ–ವಲನಗಳನ್ನು ಹತ್ತಿರದಿಂದ ನೋಡುವವರೆಂಬುದು—

ಎರಡನೆಯದರ ಬೆನ್ನಿಗೇ ಬಂತು ಇನ್ನೊಂದು ಪತ್ರ. ಅದರಲ್ಲಿ ಕೇಳಿಕೆಯನ್ನು ಹತ್ತರಿ-ದ, ಐದುಸಾವಿರಕ್ಕೆ ಇಳಿಸಲಾಗಿತ್ತು. ಈ ರಿಯಾಯತಿಯನ್ನು ಚವ್ಹಾಣರ ಸ್ಥಿತಿಯನ್ನು ಗಮನಿಸಿ ಕಡಿಮೆ ಮಾಡಲಾಗಿದೆ ಎಂದು ಎಚ್ಚರಿಸಲಾಗಿತ್ತು

ಈ ಮೊಬಲಗನ್ನು ತೆರಲು ಶ್ರೀ ಚವ್ಹಾಣರು ಸಿದ್ಧರಾದರು. ತಮ್ಮ ಒಪ್ಪಿಗೆ ಸೂಚಿಸಿ ಗೋಡೆಯಲ್ಲಿ— ಗುರುತನ್ನು ಮಾಡಿದರು. ಮರು ಟಪ್ಪಾಲಿಗೇ ಅವರಿಗೆ ಉತ್ತರ ಬಂತು. '5000–00 ಕ್ಕಿಂತ ಕಡಿಮೆ. ಅದನ್ನು ಕೊಟ್ಟೇ ತೀರಬೇಕು. ಹಣವನ್ನು ಯಮುನಾ ನದಿಗೆ ಅಡ್ಡವಾಗಿ ಹಾಕಿದ ರೈಲ್ವೇ ಸೇತುವೆಯನ್ನು ದಾಟಿದ ಬಳಿಕ ಸಿಗುವ ಮೋರಿಯ ಕೆಳಗೆ ಇಡತಕ್ಕದ್ದು. ಬರುತ್ತಾ ರಾಮಚಂದ್ರ, ರಾಂ ಭರೋಸೆಯವರನ್ನು ಕರೆದು ಕೊಂಡು ಬರಬೇಕು".

ಈ ರೀತಿಯ ಇನ್ನೆರಡು ಕಾಗದಗಳು ಆ ನತದೃಷ್ಟ ತಂದೆಯ ಕೈಗೆ ಬಂದವು. ಓಲೆಯಲ್ಲಿ ಸೂಚಿಸಿದಂತೆ ಚವ್ಹಾಣರು ಹಣದ ಗಂಟನೊಡನೆ ಆ ಸ್ಥಳಕ್ಕೆ ಹೊರಟರು. ರಾಮ ಚಂದ್ರ, ರಾಂ ಭರೋಸೆಯರನ್ನು ಜೊತೆಯಲ್ಲಿ ಕರೆದು ಕೊಂಡರು. ತಾವು ಒಯ್ದ ನೋಟುಗಳ ಕ್ರಮ ಸಂಖ್ಯೆಯನ್ನು, ಸಹಾಯಕ ಜಿಲ್ಲಾ ಮ್ಯಾಜಿಸ್ಟ್ರೇಟರ ಸಮಕ್ಷಮ 3–7–52 ಮತ್ತು 4–7–52ರಂದು ಹಾಜರು ಪಡಿಸಿ, ಅವುಗಳ ನಂಬರುಗಳನ್ನು ಅಲ್ಲಿ ಬರೆದಿರಿಸಿದ್ದರು. ನೋಟುಗಳಿಗೆ ಆ ಕಛೇರಿಯ ಮೊಹರು ಹಾಕಿದ್ದರು.

ಸೂಚಿತ ಸ್ಥಳದಲ್ಲಿ ಚವ್ಹಾಣರು ಹಣವನ್ನಿಟ್ಟರು. ಹಣವಿರಿಸಿದ ಜಾಗದಲ್ಲಿ ಅವರಿಗೆ ನಿಲ್ಲಲು ಅನುಮತಿ ಇರಲಿಲ್ಲ. ಅವರು ಸೇತುವೆಯ ಅಂಚಿಗೆ ನಡೆದು ಬಂದರು. ಮುಂದಾಗುವುದನ್ನು ನೋಡಲು ಸೇತುವೆಯ ಮೇಲೆ ತುದಿಗಾಲಿನಲ್ಲಿ ನಿಂತರು ಭರೋಸೆ—ರಾಮಚಂದ್ರ ಸೇತುವೆಯ ಇನ್ನೊಂದು ತುದಿಯಲ್ಲಿ ನಿಂತಿದ್ದರು. ಆಗ ರಾತ್ರಿ 8–30 ಗಂಟೆಯಾಗಿತ್ತು. ಯಾರೋ ಹಣವಿರಿಸಿದ ತಾಣಕ್ಕೆ ನಡೆದು ಬರುವುದು ಕಾಣಿಸಿತು. ಬಂದ ವ್ಯಕ್ತಿ ಗಂಟನ್ನು ಕೈಗೆತೆಗೆದು ಕೊಂಡು, ಕತ್ತಲಲ್ಲಿ ಮಾಯವಾಯಿತು. ಬಹುದೂರದಲ್ಲಿದ್ದ ಚವ್ಹಾಣರಿಗೆ, ಆ ವ್ಯಕ್ತಿಯನ್ನು ಗುರುತಿಸುವುದು ಆಗಲಿಲ್ಲ. ಆಗಂತುಕ ಹೊರಟು ಹೋದ ಮೇಲೆ, ಚವ್ಹಾಣರು, ತಮ್ಮ ಸಂಗಡಿಗರೊಡನೆ ಆ ಸ್ಥಳಕ್ಕೆ ಹೋದರು ಹಣವಿಟ್ಟ ಸ್ಥಳದಲ್ಲಿ ಅವರಿಗೊಂದು ಚೀಟಿ ಸಿಕ್ಕಿತು 4–7–52 ರಂದು ಆ ಚೀಟಿಯನ್ನು ಬರೆಯಲಾಗಿತ್ತು. ಅದರಲ್ಲಿ 'ನಾಳೆ ಸಂಜೆ 3ರ ಸುಮಾರಿಗೆ ಅಲಹಾಬಾದ್ ಜಂಕ್ಷನ್ನಿಗೆ ಬಾ. ನಿನ್ನ ಮಗನನ್ನು ಅಲ್ಲಿ ನಿನಗೆ ಒಪ್ಪಿಸುತ್ತೇವೆ' ಎಂದಿಷ್ಟೆ ಬರೆದಿತ್ತು.

ಮಗ ಸಿಕ್ಕುವ ಭರವಸೆಯೊಡನೆ ಚವ್ಹಾಣರು ಮರುದಿನ ಸಂಜೆ 3ರ ಸುಮಾರಿಗೆ ಜಂಕ್ಷನಿಗೆ ಹೋದರು. ಆದರೆ ಓಂ ಪ್ರಕಾಶನ ಪತ್ತೆಯಿಲ್ಲ ಆತ ಅವರನ್ನು ಕೂಡಿಕೊಳ್ಳಲಿಲ್ಲ. ಅವನ ಭರವನ್ನೇ ಕಾಯುತ್ತ ಅವರು ಅಲ್ಲಿಯೇ ಕುಳಿತರು. ಹೊತ್ತು ತಿರುಗಿತು; ಕತ್ತಲಾಯಿತು. ಬಾನಿನಲ್ಲಿ ತಾರಗೆಗಳು ಮಿನುಗಲಾರಂಭಿಸಿದುವು. ರಾತ್ರಿ ಮುಗಿಯುತ್ತ ಬಂತು ಚವ್ಹಾಣರಿಗೆ ಅದರ ಪರಿವೆ ಇರಲಿಲ್ಲ. ಮಗನ ನಿರೀಕ್ಷಣೆಯಲ್ಲಿ ಬೆಳಗಿನ ಮೂರರ ತನಕ ಅಲ್ಲಿ ಉಳಿದರು ರಾಂ ಭರೋಸೆ, ರಾಮಚಂದ್ರ ಅಂದೂ ಅವರೊಡನಿದ್ದರು.

ಅಷ್ಟರಲ್ಲಿ ಪೋಲಿಸರು ಅಲ್ಲಿಗೆ ಬಂದರು. ರಾಂ ಭರೋಸೆ, ರಾಮಚಂದ್ರನನ್ನು ಬಂಧಿಸಿದರು.

ಚವ್ಹಾಣರು ಕಾದು ನಿಂತಿದ್ದ ಸ್ಥಳದಿಂದ ತುಸು ದೂರದಲ್ಲಿ ಒಂದು ಬೀಡದ ಅಂಗಡಿ. ಕಾದು ಕಾದು ಬೇಸತ್ತ ರಾಂ ಭರೋಸೆ ಆ ಅಂಗಡಿಗೆ ಬೀಡ ಕೊಳ್ಳಲು ಹೋದ. ಬೀಡ ಕೊಂಡು ಕೊಂಡ. ಜೇಬಿಗೆ ಕೈ ಹಾಕಿದ. ಅವನ ದುರದೃಷ್ಟಕ್ಕೆ ಅವನ ಬಳಿ ಚಿಲ್ಲರೆ ಇರಲಿಲ್ಲ, ಹತ್ತು ರೂಪಾಯಿಯ ಒಂದು ನೋಟನ್ನು ಅಂಗಡಿಯವನಿಗೆ ಕೊಟ್ಟು ಚಿಲ್ಲರೆ ಪಡೆದ. ಪೋಲಿಸರು ಅಲ್ಲಿ ಹೊಂಚು ಹಾಕುತ್ತ ನಿಂತುದನ್ನು ಆತ ಗಮನಿಸಲಿಲ್ಲ. ಪೋಲಿಸರ ಕಣ್ಣು ಆತ ಕೊಟ್ಟ ನೋಟಿನ ಮೇಲೆಯೇ ಇತ್ತು. ಭರೋಸೆ, ಬೀಡವನ್ನು ಜಗಿಯುತ್ತ ಮೊದಲಿದ್ದ ಸ್ಥಳಕ್ಕೆ ಹೆಜ್ಜೆ ಹಾಕಿದ. ಪೋಲೀಸರು ಅಂಗಡಿಯವನ ಕೈಯಿಂದ ಆ ನೋಟನ್ನು ಪಡೆದು, ದೀಪದ ಬೆಳಕಿನಲ್ಲಿ ಪರೀಕ್ಷಿಸಿದರು. ಆ ನೋಟು, ಚವ್ಹಾಣರು ಸಹಾಯಕ ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದು 3/4–7–52ರಂದು ಹಾಜರುಪಡಿಸಿದ್ದ ನೋಟೇ ಆಗಿತ್ತು.

ಪೋಲೀಸರು ಅಲ್ಲಿ ಹೆಚ್ಚು ಕಾಲ ನಿಲ್ಲಲಿಲ್ಲ. ಬಂಧಿತರೊಡನೆ ರಾಮಚಂದ್ರನ ಮನೆಗೆ ಹೋದರು. ಅವನ ಮನೆಯನ್ನು ಶೋಧಿಸಿದರು. ಹುಡುಕಿದಾಗ ಅವನ ಮನೆಯಲ್ಲಿ ಹನ್ನೊಂದು ಹತ್ತು ರೂಪಾಯಿಯ ನೋಟುಗಳು ಸಿಕ್ಕಿದುವು. ಅವುಗಳ ಕ್ರಮಸಂಖ್ಯೆಯೂ ನ್ಯಾಯಾಧೀಶರ ಮುಂದು ಹಾಜರುಪಡಿಸಿದ ನೋಟುಗಳ ಕ್ರಮಸಂಖ್ಯೆಯೂ ಒಂದೇ ಇದ್ದುವು. ಪೋಲಿಸರು ಅವನ್ನು ತಮ್ಮ ವಶ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
134 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರರಾಮ್ ಶೆಟ್ಟಿ,
ಚೇರ್‌ಮೆನ್.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು–4

ಪುತ್ತೂರು ಮುನ್ಸಿಫ್ ಕೋರ್ಟನಲ್ಲಿ

O. S 143/1971

ಪರಮೇಶ್ವರ ಭಟ್ಟ —ವಾದಿ
ಪೊನ್ನಕ್ಕೆ ಕೂಡಾ —ಪ್ರತಿವಾದಿರು
2. ರಾಮಣ್ಣ, ಹುಕ್ರಪ್ಪ ನ್ಯಾಕನ ಮಗ.
8. ಚೆನ್ನಪ್ಪ ನ್ಯಾಕ, ಚೋಮನ್ಯಾಕನ ಮಗ.
ಕೊಳ್ತಿಗೆ ಗ್ರಾಮದಲ್ಲಿರುವವರು, ಪುತ್ತೂರು ತಾಲ್ಲೂಕು.

ಇವರೀಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದ್ರೆ–

ವಾದಿಯು ನೀವು ವಗೈರೆಯರ ಮೇಲೆ ಹಿಸೆ ಬಗ್ಗೆ ಮಾಡಿದ ಮೇಲ್ಕಂಡ ದಾವೆಯು ತಾ. 16—9—1971ಕ್ಕೆ ಯಿಟ್ಟಿರುವುದರಿಂದ ಅದ್ಕೆ ನಿಂಪುದೇನಾದರೂ ಆಕ್ಷೇಪಣೆಗಳಿದ್ರೆ ಸದ್ರಿ ದಿವ್ಸ ಮಜ್ಕೂರು ಕೋರ್ಟು ಮುಂದೆ ನೀವು ಸ್ವತಹ ನಾಗಿಯಾಗ್ಲೀ ವಕೀಲರ ಮುಖಾಂತ್ರ ವಾಗಿಯಾಗ್ಲೀ ಹಾಜ್ರು ಆಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಪು ಗೈರು ಹಾಜರಿಯಿಂದ್ಲ ತೀರ್ಮಾನಿಸಲಾದೀತು ಎಂತ ಈ ಮೂಲ್ಕ ತಿಳಿಸೋಣಾಗಿದೆ.

(Sd) C. V. Shastry
Advocate for Plff.

ಪುತ್ತೂರು, ತಾ. 16—9—71

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 50

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಎಡ್ವರ್ಡ್ ಕೆನ್ನೆಡಿ ಕಂಡ ಬಂಗ್ಲಾದೇಶದ ಭೀಕರ ಭವಣೆ

ಅಮೆರಿಕೆಯಲ್ಲಿ ಜನಪ್ರಿಯ ಅಧ್ಯಕ್ಷರಾಗಿ ವಿಶ್ವಶಾಂತಿಗೆ ಅತ್ಯಮೂಲ್ಯ ಸೇವೆ ಸಲ್ಲಿಸಿ ಹಂತಕನ ಗುಂಡಿಗೆ ಬಲಿಯಾದ ಜಾನ್ ಕೆನ್ನೆಡಿಯವರನ್ನು ಜಗತ್ತು ಇಷ್ಟು ಬೇಗನೆ ಮರೆಯಲಾರದು. ಅವರ ಒಬ್ಬ ತಮ್ಮ ರಾಬರ್ಟ್ ಕೆನೆಡಿ ಸೆನೇಟರರಾಗಿದ್ದು ಶಾಂತಿಯ ಬಗ್ಗೆ ತುಂಬ ಮಾತನಾಡಿದ್ದು ಮಾತ್ರವಲ್ಲ, ಕಾರ್ಯಮಗ್ನರೂ ಆಗಿದ್ದುದರಿಂದ ಅವರೂ ಕೆಲವು ವರ್ಷಗಳ ಮೊದಲು ಪ್ರಾಣಕ್ಕೆರವಾಗಬೇಕಾಯ್ತು. ಅದೇ ಕೆನ್ನೆಡಿ ಕುಟುಂಬದ ಕೊನೆಯ ಸಹೋದರ ಎಡ್ವರ್ಡ್ ಕೆನ್ನೆಡಿ ಕೂಡ ಮಾನವತೆ-ಶಾಂತಿಗಳ ಬಗ್ಗೆ ತುಂಬ ತಲೆಕೆಡಿಸಿಕೊಂಡಿರುತ್ತಾರೆ. ಇವರೂ ಸೆನೇಟರ್. ಮುಂದಿನ ಬಾರಿ ಅಧ್ಯಕ್ಷ ಪದವಿಗೆ ಸ್ಪರ್ಧಿಸುತ್ತೀರಾ ಎಂದು ಕೇಳಿದವರಿಗೆ ಅವರು ನೀಡಿದ ಉತ್ತರವೊಂದು (ಪ್ರಾಣಭಯದಿಂದಾಗಿ ಸ್ಪರ್ಧಿಸುವುದಿಲ್ಲ). ಅಮೆರಿಕನ್ನರ ಶಾಂತಿಪ್ರಿಯತೆಗೊಂದು ಕನ್ನಡಿ ಹಿಡಿಯುತ್ತದೆ.

ನವದೆಹಲಿಯಲ್ಲಿ ಸ್ವಾತಂತ್ರ್ಯೋತ್ಸವ ಆಚರಿಸಿದಾಗ ಅಲ್ಲಿ ಈ ಬಾರಿ ಎಡ್ವರ್ಡ್ ಕೆನ್ನೆಡಿಯವರು ಹಾಜರಿದ್ದರು. ಅದಕ್ಕೆ ಮೊದಲು ಅವರು ಬಂಗ್ಲಾ ನಿರಾಶ್ರಿತರ ಶಿಬಿರಗಳಿಗೆ ಭೆಟ್ಟಿ ನೀಡಿದರು. ಬಂಗ್ಲಾದೇಶದ ವಸ್ತುಸ್ಥಿತಿಯನ್ನು ಅವರು ಮಾರನೆಯವರ ಮುಖದಿಂದ ಕೇಳಿ ತಿಳಿದುಕೊಂಡು ದಂಗುಬಡೆದವರಂತಾಗಿದ್ದರು. ಮಾನವ ಪ್ರೇಮಿಯೂ ಶಾಂತಿಪ್ರಿಯರೂ ಆದವರು ಅದರ ಸತ್ಯಾಸತ್ಯತೆಯನ್ನು ಕಣ್ಣಾರೆ ಕಂಡು ನಿರಾಶ್ರಿತರ ಸಂಕಟಗಳನ್ನು ದೂರ ಮಾಡಲು ಸರಕಾರದ ಹೊರಗೂ ಒಳಗೂ ಕಾರ್ಯತತ್ಪರರಾಗುವ ಉದ್ದೇಶದಿಂದ ಇಲ್ಲಿಗೆ ತಮ್ಮ ಪುಟ್ಟ ತಂಡದೊಡನೆ ಆಗಮಿಸಿದ್ದರು. ಬಂಗ್ಲಾದೇಶದಲ್ಲಿ ಯಾಹ್ಯಾಖಾನರು ನರಮೇಧವನ್ನೇ ನಡೆಸಿದ್ದಾರೆ—ಇದು ಅವರ ಅನುಭವದ ಮಾತು! ಬಂಗ್ಲಾ ಬಂಧು ಶೇಖ ಮುಜಿಬುರ್ ರೆಹಮಾನರು ಚುನಾವಣೆಗಳಲ್ಲಿ ಅತ್ಯಧಿಕ ಬಹುಮತ ಗಳಿಸಿ ಗೆದ್ದು ಬಂದದ್ದೇ ಅವರು ಮಾಡಿದ ದೊಡ್ಡ ತಪ್ಪು.... ಅವರ ರಹಸ್ಯ ವಿಚಾರಣೆ ನಡೆಸುವುದು ಅಂತಾರಾಷ್ಟ್ರೀಯ ಕಾಯದೆಯ ಎಲ್ಲ ವಿಧಿಗಳಿಗೂ ಮೂಲತತ್ವಗಳಿಗೂ ವಿರುದ್ಧ.... ಪಾಕಿಸ್ತಾನಿ ಆಡಳಿತದಿಂದ ತಾವು ವಿಮೋಚನೆ ಹೊಂದಬೇಕೆಂಬುದೇ ನಿರಾಶ್ರಿತರೆಲ್ಲರ ಏಕಕಂಠದ ಅಭಿಮತ.... ಎಡ್ವರ್ಡ್ ಕೆನ್ನೆಡಿಯವರ ಈ ಅಭಿಪ್ರಾಯಗಳಿಗೂ ಭಾರತದ ಅಭಿಪ್ರಾಯಗಳಿಗೂ ಸಾಮ್ಯ ತುಂಬವಿದೆ. ಮುಜಿಬುರ್ ರೆಹಮಾನವರನ್ನು ಮೊತ್ತಮೊದಲಿಗೆ ಬಿಡುಗಡೆ ಮಾಡಬೇಕು; ಆ ಬಳಿಕ ರಾಜ್ಯಕೀಯ ಇತ್ಯರ್ಥವೊಂದರ ಮೂಲಕವೇ ಈ ಪ್ರಶ್ನೆಯನ್ನು ಕೊನೆಗಾಣಿಸಬೇಕು—ಇದು ಕೆನ್ನೆಡಿಯವರು ಕಂಡುಕೊಂಡ ಪರಿಹಾರ ಮಾರ್ಗ. ಆದರೆ, ಪಾಕ್ ಮಿಲಿಟರಿ ಆಡಳಿತವು ಇದನ್ನು ಮನ್ನಿಸುವುದಿಲ್ಲ, ಸೆನೇಟರ್ ಕೆನ್ನೆಡಿಯವರು ಭಾರತದ ಬಗ್ಗೆ ಪಕ್ಷಪಾತ ತೋರಿಸಿದವರು ಎಂದು ಬಣ್ಣ ಹಚ್ಚಿ ವರ್ಣಿಸತೊಡಗುವುದು ತಪ್ಪಲ್ಲ. ಕಠೋರ ಸತ್ಯವಾದರೂ ಪ್ರಿಯವಲ್ಲದ, ಅಪತ್ಯವಾದವನ್ನು ಯಾರೂ ಮೆಚ್ಚುವುದಿಲ್ಲ. ಯಾಹ್ಯಾಖಾನರು ಇದಕ್ಕೊಂದು ಅಪವಾದವಾಗುವುದು ಹೇಗೆ?

ಭಾರತ—ರಷ್ಯಾ ರಕ್ಷಣಾ ಒಡಂಬಡಿಕೆಯ ಬಗ್ಗೆಯೂ ಕೆನ್ನೆಡಿಯವರು ಭಾರತಪರ ಮಾತಾಡಿದರು. ಸದ್ಯದ ಪರಿಸ್ಥಿತಿಯಲ್ಲಿ ಅದು ಒಳ್ಳೆಯ ಕೆಲಸವೆಂದು ಹೇಳಿದರು. ಅಮೆರಿಕೆಯೂ ಇಂತಹದೇ ಒಡಂಬಡಿಕೆ ಮಾಡಿಕೊಳ್ಳಲು ಮುಂದೆ ಬರುವುದಾದರೆ, ಭಾರತ ಸದಾಸಿದ್ಧವಿದೆಯೆಂಬುದನ್ನೂ ಅವರು ಸ್ವಾಗತಿಸಿದರು. ಸೆನೇಟರರೊಬ್ಬರಿಂದ ಇಂತಹ ಒಡಂಬಡಿಕೆ ಮಾಡಿಕೊಳ್ಳುವಂತೆ ಒತ್ತಡ ಹೇರುವುದು ಸಾಧ್ಯವಿಲ್ಲವೆಂಬುದನ್ನವರು ಒಪ್ಪಿಕೊಂಡರೂ ಸೆನೇಟಿನ ಮುಂದೆ ಈ ಪ್ರಶ್ನೆ ಬಂದಾಗ ಖಂಡಿತ ಬೆಂಬಲಿಸುವ ಭರವಸೆ ನೀಡಿದರು. ಆದರೆ, ಪಾಕಿಸ್ತಾನವನ್ನು ಶಸ್ತ್ರಸಜ್ಜಿತಗೊಳಿಸುವ ದುರುದ್ದೇಶದಿಂದ ಕೂಡಿದ ನಿಕ್ಸನ್ ಸರಕಾರ ಭಾರತದೊಡನೆ ರಕ್ಷಣಾ ಒಪ್ಪಂದ ಮಾಡಿಕೊಳ್ಳಲು ಮುಂದೆ ಬಾರದು. ಕೆಂಪು ಚೀನಾದೊಡನೆ ಪಾಕಿಸ್ತಾನವೀಬಗೆಯ ಒಡಂಬಡಿಕೆ ಮಾಡಿಕೊಳ್ಳುವುದೆಂದು ದಟ್ಟವಾದ ವದಂತಿಗಳು ಬಂದಿವೆ. ಅದೇ ಹೊತ್ತು ಸೋವಿಯತ್ತು ಕೂಡ ಪಾಕಿಸ್ತಾನದೊಡನೆಯೂ ಭಾರತ-ಸೋವಿಯತ್ ಒಪ್ಪಂದದಂತೆಯೇ ಒಡಂಬಡಿಕೆಗೆ ಸಿದ್ಧವಿದೆಯೆಂದು ಹೇಳಲಾಗುತ್ತದೆ. ಅಂತಹ ಸಂದರ್ಭದಲ್ಲಿ ಅಮೆರಿಕೆಯೂ ಉಪಖಂಡದಲ್ಲಿ ಶಾಂತಿಸ್ಥಾಪನೆಯ ಹೆಸರಲ್ಲಿ ತಾನು ಪಾಕ್-ಭಾರತಗಳೊಡನೆ ಒಡಂಬಡಿಕೆಗೆ ಸಿದ್ಧವಾದರೂ ಆಗಬಹುದು. ಆದರೆ, ಪಾಕ್ ಆಕ್ರಮಣ ನೀತಿಯ ಮುಂದೆ ಇಂತಹ ಒಡಂಬಡಿಕೆಗಳು ನಿಷ್ಪ್ರಯೋಜಕ. ತಾನು ನೀಡಿದ ಭರವಸೆಗಳನ್ನು ಈಡೇರಿಸುವ ಗೋಜಿಗೆ ಹೋಗದ ಪಾಕಿಸ್ತಾನ ಒಡಂಬಡಿಕೆಗೆ ಮುಂದೆ ಬಂದರೂ ಅದನ್ನು ಪಾಲಿಸಿಕೊಂಡು ಬರುವಲ್ಲಿ ಅದಕ್ಕೆ ಮನವಿಲ್ಲ. ಪಾಕಿಸ್ತಾನಕ್ಕೆ ಶಸ್ತ್ರಬೇಕು; ಅಸ್ತ್ರ ಬೇಕು; ಯುದ್ಧ ಬೇಕು; ಹೋರಾಟ ಬೇಕು. ಅದು ಬೇಕೆಂದವರು ಅವರ ಮಿತ್ರರು; ಬೇಡವೆಂದವರು ಅದರ ಶತ್ರುಗಳು. ಪ್ರಭಾವಿ ಸೆನೇಟರ್ ಎಡ್ವರ್ಡ್ ಕೆನ್ನೆಡಿಯವರು ತಮ್ಮ ಭಾರತ ಸಂದರ್ಶನದಲ್ಲಿ ಯಾಹ್ಯಾಖಾನರ ನರಮೇಧವನ್ನು ಕಣ್ಣಾರೆ ಕಂಡಿದ್ದಾರೆ. ನಿರಾಶ್ರಿತರ ಅಭಿಪ್ರಾಯವನ್ನು ಕಿವಿಯಾರೆ ಕೇಳಿದ್ದಾರೆ; ಭಾರತದ ಕಳಕಳಿಯನ್ನು ಹೃದಯಾಂತರಾಳದಲ್ಲಿ ತುಂಬಿಕೊಂಡಿದ್ದಾರೆ. ನಿರಾಶ್ರಿತರ ನೆರವಿಗಾದರೂ ಅಮೆರಿಕೆಯಿಂದ ಹೇರಳ ಕಾಣಿಕೆ ಕೂಡಿಸಿ ಕಳುಹಿಸುವುದನ್ನು ಬಿಟ್ಟು ಅವರಿಂದೇನಾದೀತು? ಅವರೂ ಯಾಹ್ಯಾ ನರಮೇಧವನ್ನು ಕೆನ್ನೆಡಿ ಅಮೆರಿಕನ್ನರಿಗೆ ಮನದಟ್ಟು ಮಾಡಿಕೊಡುವಲ್ಲಿ ಯಶಗಳಿಸಿದರೆ, ಅದರ ಪರಿಣಾಮ ಉತ್ತಮವಾಗುತ್ತದೆ. ಅಜ್ಞಾನವೇ ಅವಜ್ಞೆಗೆ ಮೂಲವಾಗಿರುವುದರಿಂದ ಪರಿಸ್ಥಿತಿ ಬದಲಾಗಲು ಇದು ನೆರವಾಗುತ್ತದೆ.

ನವಯುಗವು ಹೊನ್ನ ಹಬ್ಬವನ್ನು ಆಚರಿಸುತ್ತದೆ

ಈ ಸಂಚಿಕೆಯೊಡನೆ 'ನವಯುಗ' ತನ್ನ ಐವತ್ತು ವರ್ಷಗಳ ಬದುಕನ್ನು ಸಾರ್ಥಕವಾಗಿ ಬದುಕಿ ಐವತ್ತೊಂದನೆಯ ವರ್ಷಕ್ಕೆ ಪಾದಾರ್ಪಣ ಮಾಡಲು ಮುಂದುವರಿಯಲಿದೆ. ಕನ್ನಡದ ಪತ್ರಿಕಾ ವ್ಯವಸಾಯದಲ್ಲಿ ಅರ್ಧ ಶತಮಾನದ ಕಾಲ ತೊಡಗುವುದೆಂದರೆ, ಅದು ದೊಡ್ಡ ಹೋರಾಟವೇ. 'ನವಯುಗ'ವು ಇಷ್ಟೊಂದು ದೀರ್ಘ ಕಾಲ ತಲೆಯೆತ್ತಿ ನಿಲ್ಲುವಂತಾದುದು ನಿಮ್ಮೆಲ್ಲರ ಸಂಪೂರ್ಣ ಸಹಕಾರದಿಂದಲೇ ಎಂಬುದು ಸತ್ಯ.

ಐವತ್ತನೆಯ ವರ್ಷದಲ್ಲಿಯೇ 'ಸುವರ್ಣ ಮಹೋತ್ಸವ'ವನ್ನು ಆಚರಿಸಬೇಕು; ಈ ಸಂದರ್ಭದಲ್ಲಿ 'ಹೊನ್ನ ಸಂಚಿಕೆ'ಯೊಂದನ್ನು ಸಿದ್ಧಪಡಿಸಬೇಕು ಎಂದು ನಾವು ಎಂದೋ ನಿರ್ಧರಿಸಿದ್ದೆವು. ಇದೇ ಹೊತ್ತು 'ನವಯುಗ'ವನ್ನು ನವೀಕರಿಸಬೇಕೆಂದೂ ಆಲೋಚಿಸಿದ್ದೆವು. ಇದಕ್ಕಾಗಿ ನಿಧಿ ಸಂಗ್ರಹಿಸಲು, ಉತ್ಸವವನ್ನು ಆಚರಿಸಲು, ಹೊನ್ನ ಸಂಚಿಕೆಯನ್ನು ಹೊರತರಲು ನಾಡಿನ ಸುಪ್ರಸಿದ್ಧ ಉದ್ಯಮಿಗಳು, ಶಿಕ್ಷಣ ತಜ್ಞರು, ಸಾಹಿತಿಗಳು—ಪ್ರತಿಷ್ಠಿತ ವ್ಯಕ್ತಿಗಳು— ಮೊದಲಾದವರಿಂದ ಕೂಡಿದ ಸಮಿತಿಯೊಂದನ್ನು ರಚಿಸಿಕೊಂಡಿದ್ದೆವು. ಆದರೆ, ಈ ಹಬ್ಬದ ಆಚರಣೆಯು ನಮ್ಮ ನಿರೀಕ್ಷೆಯನ್ನು ಮೀರಿ ಮುಂದೆ ಬಿತ್ತು. ಈ ವರ್ಷದ ಕೊನೆಯೊಳಗೆ ಇದನ್ನು ಆಚರಿಸುವ ಆಶಯ ನಮ್ಮದು, ಸದ್ಯಕ್ಕೆ.

'ನವಯುಗ'ದ ಅಭಿಮಾನಿಗಳು ಸಾವಿರಾರು ಜನರಿದ್ದಾರೆ. ಇವರೆಲ್ಲರ ಸಹಾಯ—ಸಹಾನುಭೂತಿಯಿಂದಲೇ ಇದು ಬದುಕಿನ ದಾರಿಯಲ್ಲಿ ಇಷ್ಟೊಂದು ದೂರ ನಡೆದು ಬರುವಂತಾಯ್ತು. ಇನ್ನೂ ಬಹುದೂರ ಅದು ನಡೆದು ದೇಶದ ಪುನಾರಚನಾ ಕಾರ್ಯದಲ್ಲಿ ಕ್ರಿಯಾತ್ಮಕವಾಗಿ ದುಡಿಯಬೇಕಾಗಿದೆ. ಇದಕ್ಕಾಗಿ ಕಾಯಾಕಲ್ಪ ಚಿಕಿತ್ಸೆ ನಡೆಸಬೇಕಾಗಿದೆ. ಇದರಲ್ಲಿ ಪ್ರತಿಯೊಬ್ಬರೂ ತಮತಮಗೆ ಒಪ್ಪುವಂತೆ ಸಹಯೋಗ ನೀಡಬೇಕು.

ಹಣವಂತರು ನವಯುಗದ ಸುವರ್ಣ ಮಹೋತ್ಸವ ನಿಧಿಗೆ ಉದಾರವಾಗಿ ದಾನ ನೀಡಬಹುದು; ಉದ್ಯಮಿಗಳು ತಮ್ಮ ಸಂಸ್ಥೆಗಳ ಜಾಹಿರಾತುಗಳನ್ನು ನೀಡಬಹುದು; ಶ್ರೀಸಾಮಾನ್ಯರು ಚಂದಾದಾರರಾಗಿ ಸಹಕರಿಸಬಹುದು; ಬುದ್ಧಿಜೀವಿಗಳು ತಮ್ಮ ಲೇಖನಗಳ ಮೂಲಕ ಜನಜಾಗ್ರತಿಗೆ 'ನವಯುಗ'ದ ಸಾಧ್ಯಮವನ್ನು ಸ್ವೀಕರಿಸಬಹುದು. ಹೀಗೆ ಯಾರು ಯಾರಿಂದ ಹೇಗೆ ಸಾಧ್ಯವೋ ಹಾಗೆ ತಮ್ಮ ಸಹಕಾರವನ್ನು ನೀಡುವರೆಂದು ನಮ್ಮ ವಿಶ್ವಾಸ.

ಈ ಐವತ್ತು ವರ್ಷಗಳಲ್ಲಿ ನಮ್ಮೊಡನೆ ಸಹಕರಿಸಿದ ಸಾವಿರಾರು ಅಭಿಮಾನಿಗಳ ಉಪಕಾರವನ್ನು ಸ್ಮರಿಸಿ, ಮುಂದೆಯೂ ಈ ಪ್ರೀತ್ಯಭಿಮಾನಗಳು ಇಮ್ಮಡಿಸಿ ಮುಮ್ಮಡಿಸಿ ಬೆಳೆಯುವವೆಂದು ದೃಢವಾಗಿ ನಂಬಿ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ದ್ವಿತೀಯ ಜಾಗತಿಕ ಯುದ್ಧ—

ತೊಡಗಿಸಿದವರು—ಮಾಡಿದವರು ಯಾರು?

ಎರಡನೆಯ ಪ್ರಪಂಚ ಯುದ್ಧ ಕಾಲಾವಧಿಗೆ ಸಂಬಂಧಿಸಿದ ಅನೇಕ ರಹಸ್ಯ ದಸ್ತೈವಜುಗಳನ್ನು ಸ್ವಲ್ಪ ಸಮಯದ ಹಿಂದೆ ಬ್ರಿಟನ್ನಿನಲ್ಲಿಯೂ ಅಮೆರಿಕದಲ್ಲಿಯೂ ಲಭ್ಯಗೊಳಿಸಲಾಯಿತು. ಇದರ ಪರಿಣಾಮವಾಗಿ, ಯುದ್ಧದ ನಿಜವಾದ ಕಾರಣಗಳನ್ನು ಮರೆ ಮಾಡುವುದಕ್ಕಾಗಿಯೂ, ಅದಕ್ಕೆ ಹೊಣೆಗಾರರಾದವರ ತಪ್ಪನ್ನು ಲೆಕ್ಕಿಸದೆ ಮುಚ್ಚಿಡುವುದಕ್ಕಾಗಿಯೂ ಪಾಶ್ಚಾತ್ಯ ಜಗತ್ತಿನಲ್ಲಿ ತೀವ್ರ ಚಳವಳಿಯು ನಡೆಯತೊಡಗಿತು ಯುದ್ಧವನ್ನು ಹೂಡಿದ ಸಾಮ್ರಾಜ್ಯವಾದೀ ಶಕ್ತಿಗಳ ಪ್ರಯತ್ನಗಳೂ ಅದರ (ಯುದ್ಧದ) ಬಗೆಗೆ ಹೊಣೆಗಾರಿಕೆಯನ್ನು ಸೋವಿಯತ್ ಒಕ್ಕೂಟದ ಮೇಲೆ ಹೊರಿಸುವ ಪ್ರಯತ್ನಗಳೂ, ಈಗ ಪ್ರತಿಗಾಮಿ ಇತಿಹಾಸಕಾರರೂ ಪ್ರಚಲಿತ ವಿಚಾರಗಳ ಪತ್ರಿಕಾ ಲೇಖನಕರ್ತರೂ ಹಬ್ಬಿಸತೊಡಗಿರುವುದು ಸ್ಪಷ್ಟವಾಗಿ ವ್ಯಕ್ತಪಡುತ್ತವೆ.

ಉಭಯತಃ ಜರ್ಮನ್ ಮತ್ತು ಜಪಾನೀಸ್ ಸೈನಿಕವಾದವನ್ನು ಆಂಗ್ಲೋ—ಅಮೆರಿಕನ್ ಏಕಸ್ವಾಮ್ಯವಾದಿಗಳೇ ಪೋಷಿಸಿದರೆಂಬ ಅಂಶವನ್ನು ಮಿಥ್ಯಾವಾದಿಗಳು ಜನತೆಯಿಂದ ಬಚ್ಚಿಡಬಯಸುತ್ತಾರೆ. ವಾಸ್ತವಾಂಶಗಳ ಕಡೆಗೆ ಗಮನ ಹರಿಸೋಣ. ನಾಲ್ಕನೆಯ ದಶಕದ ನಡುಗಾಲದಲ್ಲಿ ಜರ್ಮನ್ ಆರ್ಥಿಕ ವ್ಯವಸ್ಥೆಯಲ್ಲಿ ತೊಡಗಿಸಲಾದ ವಿದೇಶೀ ಬಂಡವಾಳವು 27,000 ಮಿಲಿಯ ಮಾರ್ಕುಗಳಷ್ಟಾಗಿತ್ತು. ದೀರ್ಘಾವಧಿಯ ಸಾಲಗಳಲ್ಲಿ ಸೇಕಡಾ 70 ರಷ್ಟಕ್ಕಿಂತಲೂ ಕಡಮೆಯಿಲ್ಲದಷ್ಟು ಭಾಗವು ಅಮೆರಿಕನ್ ಬಂಡವಾಳದ ಪಾಲಾಗಿತ್ತು. ಸಂ.ರಾ. ಅಮೆರಿಕದ ಕಾಂಗ್ರೆಸ್ ಶಾಸನ ಸಭೆಯು ಅಂಗೀಕರಿಸಿದ "ತಾಟಸ್ಥ್ಯದ ಕಾನೂನು" ಆಕ್ರಮಣಕಾರರಿಗೆ ಸಹಾಯಕವಾಯಿತು ಹೆಚ್ಚು ಧೈರ್ಯದಿಂದ ನಿಮ್ಮ ಕೆಲಸ ಮಾಡಿಕೊಳ್ಳಿ; ನಿಮ್ಮನ್ನು ನಾವು ಅಡ್ಡಿಪಡಿಸುವುದಿಲ್ಲ— ಎನ್ನುವುದೇ ಅದರ ಸಾರಾಂಶವಾಗಿತ್ತು. ಆ ವೇಳೆಯಲ್ಲಿ ಜರ್ಮನಿಯ ಯುದ್ಧೋದ್ಯಮಗಳಿಗೆ ಬೇಕಾಗಿದ್ದ ಸರಕುಗಳಲ್ಲಿ ಸೇಕಡಾ 60—70ರಷ್ಟು ಪಾಲನ್ನು ಬ್ರಿಟಿಷ್ ಚಕ್ರಾಧಿಪತ್ಯವು ಮತ್ತು ಸಂ ರಾ ಅಮೆರಿಕವೂ ಜರ್ಮನಿಗೆ ಒದಗಿಸುತ್ತಿದ್ದುವು.

ಆಕ್ರಮಣಕ್ಕೆ ಪರೋಕ್ಷ ಪ್ರೋತ್ಸಾಹ

ಹಿಟ್ಲರ್ ಜರ್ಮನಿಯ ದಂಡಯಾತ್ರೆ ಚರ್ಯೆಗಳಿಗೆ ಪರೋಕ್ಷ ಸಮ್ಮತಿ, ಎಥಿಯೋಪಿಯದ ವಿರುದ್ಧ ಇಟಲಿ ನಡೆಸಿದ ಆಕ್ರಮಣಕ್ಕೂ ಚೀಣದ ವಿರುದ್ಧ ಜಪಾನ್ ನಡೆಸಿದ ಧಾಳಿಗೂ ಪ್ರೋತ್ಸಾಹ, ಸ್ಪೈನ್ ಗಣರಾಜ್ಯದ ವಿರುದ್ಧ ಜರ್ಮನಿ ಮತ್ತು ಇಟಲಿ ನಡೆಸಿದ ಹಸ್ತಕ್ಷೇಪದಲ್ಲಿ ತಾಟಸ್ಥ್ಯ—ಇವೆಲ್ಲವೂ ಒಂದೇ ಶೃಂಖಲೆಯ ಕೊಂಡಿಗಳು. ಸಾಮ್ರಾಜ್ಯವಾದಿ ರಾಜ್ಯಶಕ್ತಿಗಳ ಸೋವಿಯತ್—ವಿರೋಧಿ ರಂಗವನ್ನು ಬಡಿದೆಬ್ಬಿಸಿ ಕೂಡಿಸುವ, ಕಾರ್ಮಿಕರ ಮತ್ತು ರಾಷ್ಟ್ರೀಯ ವಿಮೋಚನೆಯ ಚಳವಳಿಗಳನ್ನು ಉಸಿರು ಕಟ್ಟಿಸುವ ನೀತಿಯೊಂದಿಗೆ ಅವುಗಳ ನಿಕಟ ಸಂಬಂಧವಿದ್ದಿತು. ತಾಟಸ್ಥ್ಯದ (ವ್ಯವಹಾರಗಳಲ್ಲಿ ಕೈ ಹಾಕದಿರುವ) ನೀತಿಯೆಂದರೆ ಆಕ್ರಮಣಕ್ಕೆ ಪರೋಕ್ಷ ಸಮ್ಮತಿಯೆಂದೇ ವಸ್ತುತಃ ಅರ್ಥವಾಗಿತ್ತು ಫಾಸಿಸ್ಟ್ ಜರ್ಮನಿಯ ರೈಕ್ಸ್ ಬ್ಯಾಂಕಿನ ಅಧ್ಯಕ್ಷ ಶಾಕ್ಟ್ ಹಿಂದೆ ನ್ಯೂರೆಂಬರ್ಗ್ ವಿಚಾರಣೆಯ ಕಾಲದಲ್ಲಿ ಅಮೆರಿಕನ್ ಪ್ರತಿನಿಧಿಯೊಡನೆ ಮಾತನಾಡುತ್ತ. 'ಜರ್ಮನಿಯ ಶಸ್ತ್ರಾಸ್ತ್ರ ಸನ್ನದ್ಧತೆಗೆ ಸಹಾಯಮಾಡಿದ ಉದ್ಯೋಗಪತಿಗಳನ್ನು ನೀವು ವಿಚಾರಣೆಗೆ ಗುರಿಪಡಿಸುತ್ತೀರಾದರೆ, ಆಗ ನೀವು ನಿಮ್ಮ ಸ್ವದೇಶೀ ಉದ್ಯೋಗಪತಿಗಳನ್ನೇ ವಿಚಾರಣೆಗೆ ಗುರಿಪಡಿಸಬೇಕಾಗುತ್ತದೆ' ಎಂದು ಹೇಳಿದುದು ಎಷ್ಟು ಮಾತ್ರಕ್ಕೂ ಆಕಸ್ಮಿಕ ವಿಷಯವಾಗಿರಲಿಲ್ಲ.

ಯುದ್ಧದ ರಾಜನಯಿಕ ಪೂರ್ವೇತಿಹಾಸವು, ಮತ್ತು ಎಲ್ಲಕ್ಕೂ ಮೊದಲು ಮ್ಯೂನಿಚ್ ಒಪ್ಪಂದದ (1938) ಮತ್ತು ಸೋವಿಯತ್—ಜರ್ಮನ್ ನಿರಾಕ್ರಮಣ ಒಪ್ಪಂದದ (1939) ಲಕ್ಷ್ಯಗಳ ಕುರಿತಾದ ಮಿಥ್ಯಾನಿರೂಪಣೆಯು ಬಂಡವಾಳವಾದಿ ಇತಿಹಾಸಕಾರರ ಮತ್ತು ಪ್ರಚಲಿತ ರಾಜಕೀಯ ವಿಚಾರ ಲೇಖಕರ ಅಂದಾಜುಗಳಿಗೆ ಒಂದು ರೀತಿಯ ಪ್ರಧಾನ ಕೇಂದ್ರವಾಗಿದೆ

ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮತ್ತು ಇಟಲಿ ದೇಶಗಳು ಮಾಡಿಕೊಂಡ, ಮತ್ತು ಸಂ ರಾ ಅಮೆರಿಕದ ಸಮ್ಮತಿಯನ್ನು ಪಡೆದ ಮ್ಯೂನಿಚ್ ಒಪ್ಪಂದದ ಬಗೆಗೆ ನೀಡಲಾಗುತ್ತಿರುವ ವ್ಯಾಖ್ಯೆಯಲ್ಲಿ, ಪಾಶ್ಚಾತ್ಯ ರಾಜ್ಯ ಶಕ್ತಿಗಳಿಗೆ ಶಾಂತಿಸ್ಥಾಪಕರ ಪಾತ್ರವನ್ನು ಕೊಡಲಾಗುತ್ತಿದೆ ಮತ್ತು ಜೆಕೊಸ್ಲೊವಾಕಿಯದ ವಿಷಯದಲ್ಲಿ ಅವು ಬಗೆದ ದ್ರೋಹವನ್ನು ಸಮರ್ಥಿಸಿಕೊಳ್ಳುವ ಪ್ರಯತ್ನ ನಡೆದಿದೆ

ಮ್ಯೂನಿಚ್ ಕೂಟಾಚರಣೆಯ ದುರ್ದಿನಗಳಲ್ಲಿ ಜೆಕೊಸ್ಲೊವಾಕಿಯಕ್ಕೆ ಸ್ನೇಹಹಸ್ತವನ್ನು ಚಾಚಿದ ಏಕಮಾತ್ರ ದೇಶವು ಸೋವಿಯೆತ್ ಒಕ್ಕೂಟವೇ ಜೆಕೊಸ್ಲೊವಾಕಿಯದ ಪ್ರಶ್ನೆಗಳಿಗೆ ಉತ್ತರವಾಗಿ, ಯಾವ ಸಂದರ್ಭಗಳಲ್ಲಿಯಾದರೂ ತಾನು ಜೆಕೊಸ್ಲೊವಾಕಿಯಕ್ಕೆ ಸಹಾಯವನ್ನು ನೀಡಲು ಸಿದ್ಧನೆಂದು ಸೋವಿಯೆತ್ ಸರಕಾರವು ಅಸಂದಿಗ್ಧವಾಗಿ ಸೂಚಿಸಿತು. ಆದರೆ ಜೆಕೊಸ್ಲೊವಾಕಿಯದಲ್ಲಿ ಆಗ ಇದ್ದ ಬಂಡವಾಳವಾದಿ ಸರಕಾರವು ನಾಡಿನ ರಾಷ್ಟ್ರೀಯ ಹಿತಗಳನ್ನು ದುರ್ಲಕ್ಷಿಸಿ, ಹಿಟ್ಲರ್ ಕಡೆಗೆ ಶರಣಾಗತಿಯಾಗುವುದನ್ನೆ ಒಪ್ಪಿಕೊಂಡಿತು.

ಮ್ಯೂನಿಚ್ ಒಪ್ಪಂದದ ಪರಿಣಾಮವಾಗಿಯೂ ಆ ತರುವಾಯ ಜೆಕೊಸ್ಲೊವಾಕಿಯದ ಆಕ್ರಮಣ ನಡೆದುದರ ಪರಿಣಾಮವಾಗಿಯೂ ಯುದ್ಧದ ಅಂತಃಶಕ್ತಿಯು ಜರ್ಮನಿಗೆ ಅನುಕೂಲಕರವಾಗಿ ಬದಲಾಯಿಸಿತು. ಜೆಕೊಸ್ಲೊವಾಕಿಯದ ಆಕ್ರಮಣವನ್ನು ಸೋವಿಯತ್ ಸರಕಾರವು ನಿರ್ಣಾಯಕವಾಗಿ ಖಂಡಿಸಿತು. ಈ ದೇಶದ ವಿರುದ್ಧ ನಡೆದ ಅನ್ಯಾಯಪೂರ್ಣವಾದ ಆಕ್ರಮಣ ಕಾರ್ಯಾಚರಣೆಗಳು ಪ್ರಪಂಚ ಶಾಂತಿಗೆ ಗಂಡಾಂತರವನ್ನು ತೀವ್ರಗೊಳಿಸಿದುವು, ಯುರೋಪಿನಲ್ಲಿ ರಾಜಕೀಯ ಸ್ಥಿರತೆಯನ್ನು ತಲೆಕೆಳಗು ಮಾಡಿದುವು.

ಜರ್ಮನಿಯು ಜೆಕೊಸ್ಲೊವಾಕಿಯವನ್ನು ಆಕ್ರಮಿಸಿದ ತರುವಾಯವೂ ಸೋವಿಯತ್ ಸರಕಾರವು ಫಾಸಿಸ್ಟ್ ಕೂಟದ ದೇಶಗಳು ಇನ್ನೂ ವಿಸ್ತಾರಗೊಳ್ಳುವುದನ್ನು ಸಂಯುಕ್ತ ಪ್ರಯತ್ನದಿಂದ ವಿರೋಧಿಸಲು ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳೊಡನೆ ಒಪ್ಪಂದಕ್ಕೆ ಬರಲು ತನ್ನ ಪ್ರಯತ್ನಗಳನ್ನು ಮುಂದುವರಿಸಿತು ಈ ಉದ್ದೇಶ ಸಾಧನೆಗಾಗಿ ಸೋವಿಯತ್ ಸರಕಾರವು ಗ್ರೇಟ್ ಬ್ರಿಟನ್, ಫ್ರಾನ್ಸ್ ಮತ್ತು ಸೋವಿಯತ್ ಒಕ್ಕೂಟ ದೇಶಗಳ ಮಧ್ಯೆ ಪರಸ್ಪರ ಸಹಾಯದ ಒಪ್ಪಂದವನ್ನು ಮಾಡಿಕೊಳ್ಳುವುದಕ್ಕೂ, ಸೈನಿಕ ಕೌಲಿನ ಮೂಲಕ ಈ ಒಪ್ಪಂದವನ್ನು ಬಲಪಡಿಸಿಕೊಳ್ಳುವುದಕ್ಕೂ, ಸಣ್ಣ ದೇಶಗಳ ಭದ್ರತೆಯ ಭರವಸೆಯನ್ನು ನೀಡುವುದಕ್ಕೂ ತನ್ನ ಸಮ್ಮತಿಯನ್ನು ಸೂಚಿಸಿತು. ಆದರ ಇಂತಹ ಒಪ್ಪಂದ ಅಸಾಧ್ಯವಾಗಿತು ಅದಕ್ಕೆ ಪಾಶ್ಚಾತ್ಯ ರಾಜ್ಯ ಶಕ್ತಿಗಳ ಆಡಳಿತ ವಲಯಗಳ ಮೇಲೆಯೇ ದೋಷದ ಹೊಣೆಗಾರಿಕೆಯನ್ನು ಹೊರಿಸಬೇಕಾಗುತ್ತದೆ

ಮಾಸ್ಕೋದಲ್ಲಿ ನಡೆಯುತ್ತಿದ್ದ ಮಾತುಕತೆಗಳ ಜತೆಗೆ ಏಕ ಕಾಲದಲ್ಲಿಯೇ ಬ್ರಿಟಿಷ್ ಸರಕಾರವು ಜರ್ಮನ್ ಸರಕಾರದ ಪ್ರತಿನಿಧಿಗಳೊಡನೆಯೂ ಮಾತುಕತೆಗಳನ್ನು ನಡೆಸಿತು ವಸಾಹತುಗಳ ಪ್ರಶ್ನೆಯನ್ನೂ ಸೋವಿಯತ್ ಒಕ್ಕೂಟಕ್ಕೂ, ಪೂರ್ವಯುರೋಪಿನ ಮತ್ತು ಆಗ್ನೇಯ ಯುರೋಪಿನ ಇತರ ದೇಶಗಳಿಗೂ ಹಾನಿಯಾಗುವಂತೆ ಜರ್ಮನಿಯ ಹಕ್ಕಿನ ವಾದಗಳನ್ನು ತೃಪ್ತಿಪಡಿಸುವ ಪ್ರಶ್ನೆಯನ್ನೂ ಅಲ್ಲಿ ಚರ್ಚಿಸಲಾಯಿತು.

ಪಾಶ್ಚಾತ್ಯ ರಾಜ್ಯ ಶಕ್ತಿಗಳ ಇಬ್ಬಗೆಯ ಮೋಸದ ನೀತಿಯನ್ನು ವಿರೋಧಿಸುತ್ತ ಸೋವಿಯತ್ ಒಕ್ಕೂಟವು, ನಿರಾಕ್ರಮಣ ಒಪ್ಪಂದವನ್ನು ಮಾಡಿಕೊಳ್ಳುವುದಕ್ಕಾಗಿ ಜರ್ಮನ್ ಸರಕಾರವು ಮಂಡಿಸಿದ ಪ್ರಸ್ತಾಪವನ್ನು— ಅಂಗೀಕರಿಸಿತು ಮತ್ತು ಆ ಮೂಲಕ ಸಾಮ್ರಾಜ್ಯವಾದಿ ರಾಜ್ಯ ಶಕ್ತಿಗಳ ರಂಗವನ್ನು ಒಡೆಯಲು ಮತ್ತು ನೇರವಾದ ಸೈನಿಕ ಗಂಡಾಂತರವನ್ನು ತಾತ್ಕಾಲಿಕವಾಗಿ ತಪ್ಪಿಸಲು ಸಮರ್ಥವಾಯಿತು

ಬಂಡವಾಳವಾದಿ ಇತಿಹಾಸಕಾರರ ಸ್ವಪ್ನನೆಗಳು ಯಾವುವೂ ಸಾರ್ವತ್ರಿಕವಾಗಿ ಪರಿಚಿತವಾಗಿರುವ ಈ ವಾಸ್ತವಾಂಶಗಳನ್ನು ಮರೆಮಾಡಲಾರವು

ಪೋಲೆಂಡಿನ ಮೇಲೆ ದಾಳಿ

1939ರ ಸೆಪ್ಟೆಂಬರ್ ದಿನಾಂಕ 1ರಂದು ಜರ್ಮನಿಯು ಪೋಲೆಂಡಿನ ಮೇಲೆ ದಾಳಿ ನಡೆಸಿತು ಪೋಲೆಂಡ ದೇಶವು ಪಾಶ್ಚಾತ್ಯ ರಾಜ್ಯಶಕ್ತಿಗಳಿಂದ ತಥಾ ಕಥಿತ ಸೈನಿಕ ಭರವಸೆಗಳನ್ನು ಪಡೆದಿದ್ದಿತಾದರೂ ಈ ದಾಳಿ ನಡೆಯಿತು ಇಂಗ್ಲೆಂಡಿಗಾಗಲಿ ಫ್ರಾನ್ಸಿಗಾಗಲಿ ತಮ್ಮ ವಾಗ್ದಾನವನ್ನು ನಡೆಸಿಕೊಡುವ ಯಾವ ಉದ್ದೇಶವೂ ಇರಲಿಲ್ಲ. ಹೀಗಾಗಿ ಪೋಲೆಂಡ್ ದೇಶವೂ ಜೆಕೊಸ್ಲೊವಾಕಿಯದಂತೆಯೇ ಸೋವಿಯೆತ್ ಒಕ್ಕೂಟದ ವಿರುದ್ಧವಾಗಿ ಫಾಸಿಸ್ಟ್ ಆಕ್ರಮಣವನ್ನು ಮುಂದಕ್ಕೆ ದೂಡುವ ನೀತಿಗೆ ಬಲಿಯಾಯಿತು,

1939ರ ಸೆಪ್ಟೆಂಬರ್ ದಿನಾಂಕ 3ರಂದು ಜರ್ಮನಿಯ ಮೇಲೆ ಯುದ್ಧವನ್ನು ಘೋಷಿಸುವುದರ ಮೂಲಕ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳು ಫಾಸಿಸ್ಟರ ಮೇಲೆ ಸಾಕಾದಷ್ಟು ಶಕ್ತಿಯುತವಾದ ಪ್ರಹಾರವನ್ನು ನೀಡುವ ನಿಜವಾದ ಸಾಧ್ಯತೆ ಇದ್ದಿತು. ಅಂತಹ ಘಟನೆಯು ಪೋಲೀಷ್-ಜರ್ಮನ್ ರಂಗದ ಮೇಲಿನ ಪರಿಸ್ಥಿತಿಯನ್ನು ಗಣನೀಯವಾಗಿ ಬದಲಾಯಿಸಬಹುದಾಗಿತ್ತು ಆದರೆ ಇಂತಹುವುದೇನೂ ಸಂಭವಿಸಲಿಲ್ಲ. ಅದಕ್ಕೆ ಬದಲಾಗಿ ಆಂಗ್ಲೋ-ಫ್ರೆಂಚ್ ಆಡಳಿತ ವಲಯಗಳ ಪ್ರಯತ್ನಗಳ ಮೂಲಕ, ಜರ್ಮನಿಯ ನಿರ್ಣಾಯಕ ಸೈನಿಕ ಶ್ರೇಷ್ಠತೆಯ ಕಟ್ಟುಕತೆಯ ಫಾಸಿಸ್ಟ್ ಪ್ರಚಾರದ ವಾದವನ್ನು ಹಬ್ಬಿಸಲಾಯಿತು ಇತ್ತೀಚೆಗೆ ಕೋಲಾಹಲಕರವಾದ ವಾಸ್ತವಾಂಶವೊಂದು ತಿಳಿದುಬಂದಿದೆ ಪೋಲೆಂಡಿಗೆ ಸೈನಿಕ ಸಹಾಯವನ್ನು ನೀಡುವುದಕ್ಕಾಗಿ,ನಿರ್ದಿಷ್ಟ ಚರ್ಯೆಗಳ ಚರ್ಚೆಯನ್ನು ತಪ್ಪಿಸಿಕೊಳ್ಳಲು ಚೆಂಬರ್ಲೇನರು ತಮ್ಮ ಮಂತ್ರಿ ಮಂಡಲಿಯ ಸಭೆಯಲ್ಲಿ, ಬ್ರಿಟಿಷ್ ಗೂಢಾಚಾರ ಪಡೆಯು ತಮಗೆ ಜರ್ಮನ್ ವಾಯುಸೇನೆಯ ಕುರಿತು ಒದಗಿಸಿದ್ದ ಅಭಿಪ್ರಾಯದಲ್ಲಿ ಒಂದು 'ತಿದ್ದುಪಡಿ'ಯನ್ನು ವ್ಯಕ್ತಿಗತವಾಗಿ ಮಾಡಿದರು. ತತ್ಪರಿಣಾಮವಾಗಿ, ಜರ್ಮನ್ ವಾಯುಸೇನೆಗೆ ಸಂಬಂ

(ಒಂಭತ್ತನೇ ಪುಟ ನೋಡಿರಿ)

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೊಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು—1

Tele: GOLDKING Estd: 1947 Phone: 3242 Res: 3272

ಭಾಷಾ ಪಂಡಿತರು ಹೇಳುತ್ತಾರೆ—

ಕೂಗದ ಮಗುವಿಗೆ ಹಾಲಿಲ್ಲ

ಮೈಸೂರು ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ಆಶ್ರಯದಲ್ಲಿ ಬೆಂಗಳೂರಲ್ಲಿ ಕೆಲವು ದಿನಗಳಿಗೆ ಮೊದಲು ಮಾಧ್ಯಮಿಕ ಶಾಲಾ ಭಾಷಾ ಪಂಡಿತರು ಸಭೆ ಸೇರಿದರು. ಸಂಘದ ಉಪಾಧ್ಯಕ್ಷ ಶ್ರೀ ಬಿ. ವೀರಣ್ಣರು ಅಧ್ಯಕ್ಷ ಪೀಠದಲ್ಲಿದ್ದರು.

ತಮ್ಮ ವೇತನ ಶ್ರೇಣಿಯನ್ನು ನಿಗದಿಗೊಳಿಸುವಾಗ ಸರಕಾರವು ತಳೆದ ಮಲತಾಯಿ ಧೋರಣೆಯನ್ನು ಸುಸಂಘಟಿತರಾಗಿ ವಿರೋಧಿಸಿ, ಅದನ್ನು ಸರಿಗೊಳಿಸುವಂತೆ ಪ್ರಜಾಸತ್ತಾತ್ಮಕ ವಿಧಾನಗಳಿಂದ ಸರಕಾರದ ಮೇಲೆ ಒತ್ತಡ ಹೇರಲು ಕಾರ್ಯ ಕ್ರಮಗಳನ್ನು ಗೊತ್ತು ಮಾಡುವುದೇ ಈ ಸಭೆಯ ಮುಖ್ಯ ಉದ್ದೇಶ.

ಸಮ್ಮೇಳನದಲ್ಲಿ ಹೊರ ಪಟ್ಟ ಅಭಿಪ್ರಾಯಗಳಿವು.

ರಾಜ್ಯದ ಎರಡು ಸಾವಿರ ಪ್ರೌಢಶಾಲೆಗಳಲ್ಲಿ ದುಡಿಯುತ್ತಿರುವ ಸುಮಾರು ೫ ಸಾವಿರ ಭಾಷಾ ಶಿಕ್ಷಕರಿದ್ದಾರೆ. ಇವರಿಗೆ ತರಬೇತಿ ಪಡೆದ ಪದವೀಧರ ಶಿಕ್ಷಕರ ವೇತನ ಶ್ರೇಣಿಯನ್ನು ಗೊತ್ತು ಮಾಡ ಬೇಕೆಂಬುದು ನ್ಯಾಯ ಸಮ್ಮತವಾದ ಬೇಡಿಕೆ. ಇದನ್ನು ಸರಕಾರ ಕಡೆಗಣಿಸಿ ಪಂಡಿತರನ್ನು ಒಡೆದು ಆಳುವ ನೀತಿಯಂತೆ ಬೇರೆ ಬೇರೆ ವೇತನ ಶ್ರೇಣಿಯನ್ನು ಇವರಿಗೆ ಗೊತ್ತು ಮಾಡಿದೆ.

ಶಿಕ್ಷಕರು ತಮಗಾದ ಅನ್ಯಾಯವನ್ನು ಹತ್ತು ಹಲವು ವಿಧಾನಗಳಿಂದ ಸರಕಾರದ ಮತ್ತು ವರಿಷ್ಠ ಅಧಿಕಾರಿಗಳ ಗಮನಕ್ಕೆ ತಂದರು. ಆಗ ಸರಕಾರವು ನ್ಯಾಯವೊದಗಿಸುವ ಆಶ್ವಾಸನ ನೀಡಿತು. ವಿಧಾನ ಪರಿಷತ್ತಿನಲ್ಲಿ ರಾಜ್ಯ ಶಿಕ್ಷಣ ಸಚಿವರೂ ಅರ್ಥ ಸಚಿವರೂ ಭರವಸೆ ನೀಡಿದರು. ಆದರೆ, ಇವೆಲ್ಲವನ್ನೂ ಮರೆತು ಭಾಷಾ ಶಿಕ್ಷಕರಿಗಾದ ಅನ್ಯಾಯವನ್ನು ಯಾರೂ ಸರಿಮಾಡುವ ಗೋಜಿಗೇ ಹೋಗಲಿಲ್ಲ.

ಆದುದರಿಂದ, ಮುಂದಿನ ಹೋರಾಟ ಅನಿವಾರ್ಯವಾಗಿದೆ. ಇದರಂತೆ—

● ಅನ್ಯಾಯವನ್ನು ಸರಕಾರಕ್ಕೆ ಅರಿವು ಮಾಡಿಕೊಡಲು ಮತ್ತು ಆ ಮೂಲಕ ನ್ಯಾಯ ದೊರಕಿಸುವಂತೆ ಪ್ರಾರ್ಥಿಸಿ ರಾಜ್ಯದಾದ್ಯಂತ ಅಂಚೆ ಕಾರ್ಡು ಚಳುವಳಿ ನಡೆಸುವುದು— ಶಿಕ್ಷಕರ ದಿನ (ಸಪ್ಟೆಂಬರ ೫)ರಂದು ಈ ಬೇಡಿಕೆಯನ್ನು ರಾಜ್ಯಪಾಲರಿಗೆ ಸಲ್ಲಿಸುವುದು.

● ಬೇಡಿಕೆಯನ್ನು ಸರಕಾರ ಮಾನ್ಯ ಮಾಡಲಿಲ್ಲವೆಂದಾದರೆ, ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಲು ಅಕ್ಟೋಬರ ತಿಂಗಳಲ್ಲಿ 'ಸಹಿ ಸಂಗ್ರಹ' ಚಳುವಳಿ ನಡೆಸಿ ಆ 'ಸಹಿ ಪತ್ರ'ಗಳನ್ನು 'ಮೌನ ಮೆರವಣಿಗೆ'ಯಲ್ಲಿ ತೆರಳಿ ರಾಜ್ಯಪಾಲರಿಗೆ ಸಲ್ಲಿಸುವುದು.

● ವಿಧಾನ ಪರಿಷತ್ ಸದಸ್ಯರ (ವಿಧಾನ ಸಭೆ ವಿಸರ್ಜನೆಗೊಂಡಿದೆ) ಮೂಲಕ ರಾಜ್ಯಪಾಲರಿಗೆ ಮನವಿ ಒಪ್ಪಿಸುವುದು.

● ಈಯೆಲ್ಲ ಕ್ರಮಗಳು ವಿಫಲವಾದರೆ, ಅನಿವಾರ್ಯವಾಗಿ ಸಾಮೂಹಿಕ ನಿರಶನ ಸತ್ಯಾಗ್ರಹ ನಡೆಸುವುದು.

ಭಾಷಾ ಪಂಡಿತರು ಸುಸಂಘಟಿತರಾಗುವುದು ಅಗತ್ಯವಿದೆ. ಅವರು ಸರ್ವತ್ಯಾಗಕ್ಕೂ ಸಿದ್ಧರಾಗ ಬೇಕಾಗಿದೆ. ತಮಗಾದ ಅನ್ಯಾಯ ಮತ್ತು ವಂಚನೆಯ ವಿರುದ್ಧ ಒಕ್ಕೊರಲಿನ ಅಭಿಪ್ರಾಯ ತಳೆಯ ಬೇಕಾಗಿದೆ.

ಈ ಹೋರಾಟಕ್ಕಾಗಿ ಹಣವೂ ಅಗತ್ಯವಾಗಿರುವುದರಿಂದ ಪ್ರತಿಯೊಬ್ಬ ಪಂಡಿತರೂ ಐದು ರೂಪಾಯಿಗಳನ್ನಾದರೂ ಪ್ರಧಾನ ಕಾರ್ಯದರ್ಶಿ, ಮೈಸೂರು ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘ, ಹಿರಿಯೂರು (ಚಿತ್ರದುರ್ಗ ಜಿಲ್ಲೆ) ಇವರಿಗೆ ಕಳಿಸಿಕೊಡಬೇಕೆಂದು ಎಂ. ಆನಂದ ರಾವ್, ಎಂ.ಎಲ್.ಸಿ. ಯವರು ಕೇಳಿಕೊಂಡಿದ್ದಾರೆ. ●

ಬಂಟ್ವಾಳ ಮುನ್ಸಿಫ್ ಕೋರ್ಟಿನಲ್ಲಿ

Ex. C. 78/1970

ಬಡೆಕಿಲ ವೆಂಕಟ್ರಮಣ ಭಟ್ಟ —ಅರ್ಜಿದಾರ

ರಾಮಗೌಡ. ದೂಮಗೌಡರ ಮಗ ಬಂಟ್ವಾಳ ತಾಲ್ಲೂಕು ಕೆದಿಲಾ ಗ್ರಾಮದಲ್ಲಿ —ಎದ್ರಿ

ಎದ್ರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದ್ರೆ:—

ಮೇಲ್ಕಂಡ ವ್ಯವಹರಣೆಯಲ್ಲಿ ಅರ್ಜಿದಾರನು ದಾಖಲ್ಲು ಮಾಡಿದ ಯೇಲಂ ಯಿಸ್ತಿಹಾರಿನ ಶರತಗಳನ್ನು ನಿರ್ಣಯಿಸುವರೆಯೂ, ಏಲಂ ಸಮಯ ಅರ್ಜಿದಾರಗೆ ದರ್ಕಾಸ್ತಿಗೆ ನಿಲ್ಲುವರೆ ಪರ್ಮಿಶನ್ ಕೊಡಿಸಬೇಕಾಗಿ ವಗೈರೆ ಸಹಾ ಮಾಡಿಪ ಅರ್ಜಿ, ವ ಮೇಲಿನ ಅಮ್ಲುಜ್ಯಾರಿ ಸಹ ತಾ. 30—8—1971ಕ್ಕೆ ಯಿಟ್ಟಿರುವುದರಿಂದ ಅದ್ಕೆ ಆಕ್ಷೇಪಣೆಗಳಿದ್ರೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟು ಮುಂದೆ ನೀವು ಸ್ವತಹ ವ ವಕೀಲರ ಮೂಲ್ಕ ಹಾಜರಾಗಿ ಉದಪರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು.

(Sd) M. N. Shankara Bhat
Advocate for Petitioner.

ಬಂಟ್ವಾಳ, ತಾ. 16—8—71

ಹವಾ ಮಲಿನತೆಯ ಪರಿಣಾಮಗಳು

ವಿಜ್ಞಾನದ ಮುನ್ನಡೆಯು ವೇಗ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಈ ಕಾಲದಲ್ಲಿ, ಜೀವನದ ಅಭಿವೃದ್ಧಿಗೆ ಸಹಾಯಕವಾಗುವ ಎಲ್ಲ ಪ್ರಯೋಜನಗಳು ನಮಗೆ ಲಭಿಸಿವೆ ನಿಜ. ಲಾಭಗಳ ಜೊತೆಗೆ ಅಲ್ಲಲ್ಲಿ ನಷ್ಟಗಳೂ ಉಂಟಾಗಿವೆ. ವಿಜ್ಞಾನದ ಸಂಶೋಧನೆಗಳಿಂದ ಲಾಭ—ನಷ್ಟ ಎರಡೂ ಲಭಿಸಿವೆ ಎನ್ನುವುದರಲ್ಲಿ ಸತ್ಯಾಂಶವಿದೆ. ಉದಾಹರಣೆಗಾಗಿ ನಮ್ಮ ಪ್ರಯಾಣ, ಸಾರಿಗೆಗಳಿಗೆ ನೆರವಾಗುವ ವಿವಿಧ ವಾಹನಗಳು, ನಮ್ಮ ಜೀವನೋಪಯೋಗಿ ಸಾಧನಗಳನ್ನು ಸಿದ್ಧಗೊಳಿಸಲು ಕಾರ್ಖಾನೆಗಳು ಹೆಚ್ಚಿನ ಸಂಖ್ಯೆಯಲ್ಲಿ ಅಭಿವೃದ್ಧಿ ಹೊಂದುತ್ತಿವೆ. ಈ ಕಾರ್ಖಾನೆಗಳಿಂದ ಮತ್ತು ವಾಹನಗಳಲ್ಲಿನ 'ಗ್ಯಾಸೋಲಿನ್', 'ಪೆಟ್ರೋಲ್' ಮುಂತಾದ 'ಚಲನದ್ರವ್ಯ'ಗಳ ದಹನ ಕ್ರಿಯೆಯಿಂದ ದಟ್ಟವಾಗಿ ಹೊರಬರುವ ಕಪ್ಪು ಹೊಗೆ, ನಗರಗಳ ಕೊಳಚೆ ನೀರಿನ ವಾಸನೆ ಮುಂತಾದವುಗಳಿಂದ ಹವೆ ಕಲುಷಿತವಾಗಿ ಉಂಟಾಗುವ ನಷ್ಟ—ಹಾನಿ ಸಣ್ಣದೇನೂ ಅಲ್ಲ.

ಗಣಿಗಳಲ್ಲಿ ವಿಷಾನಿಲಗಳು ಸಿಡಿದಾಗ ಅಥವಾ ದೊಡ್ಡ ಕಾರ್ಖಾನೆಗಳಲ್ಲಿ ಯಂತ್ರಗಳ ಘರ್ಷಣೆಯಿಂದ ಉತ್ಪನ್ನವಾಗುವ ವಿಷಪೂರಿತ ಅನಿಲಗಳಿಂದ ಎಷ್ಟೋ ಜನರು ತಕ್ಷಣ ಸಾವಿಗೀಡಾಗಿರುವುದನ್ನು ನಾವು ಆಗಾಗ್ಗೆ ಪತ್ರಿಕೆಗಳಲ್ಲಿ ಓದುತ್ತೇವೆ. ಆದರೆ ವಾಯುಮಂಡಲದಲ್ಲಿ ಹವಾ ಮಲಿನತೆಯಿಂದ ಜೀವಿಗಳ ಮೇಲೆ ಸಾವು ತಕ್ಷಣ ಸಂಭವಿಸದಿದ್ದರೂ, ದೇಹವು ಅನೇಕ ರೋಗಗಳಿಗೆ ತುತ್ತಾಗುತ್ತದೆ. ಇವುಗಳಲ್ಲಿ ಶ್ವಾಸಕೋಶದ ಅರ್ಬುದ ರೋಗಕ್ಕೆ ಬಲಿಯಾಗುವವರು ಹೆಚ್ಚು ಎಂದು ಅಂಕಿ ಅಂಶಗಳಿಂದ ತಿಳಿದು ಬಂದಿದೆ. 1914ರಿಂದ ಶ್ವಾಸಕೋಶದ ಅರ್ಬುದ ರೋಗದಿಂದ ನರಳುವವರ ಸಂಖ್ಯೆ ಹೆಚ್ಚಿದೆ. ಭರದಿಂದ ಹೆಚ್ಚುತ್ತಿರುವ ಹವಾಮಲಿನತೆ ಇದಕ್ಕೆ ಮೂಲವೆಂಬುದನ್ನು ಕಂಡುಕೊಂಡಿದ್ದಾರೆ.

ಮಲಿನ ಹವೆಯ ಪರಿಣಾಮ ಎಲ್ಲ ಜೀವಿ ವರ್ಗಗಳಲ್ಲಿ ಕಾಣಿಸಿಕೊಳ್ಳುತ್ತವೆ. ಸಸ್ಯಗಳ ಬೆಳವಣಿಗೆಗೂ ಇದು ಮಾರಕವಾಗಿದೆ. ದಟ್ಟವಾಗಿ ಕವಿದು ನಿಂತ ಕೆಟ್ಟ ಹೊಗೆಯಿಂದಾಗಿ ವಿಮಾನ ಪ್ರಯಾಣಕ್ಕೆ ಕೆಲವೊಂದು ಬಾರಿ ಅಡ್ಡಿಯಾಗುವುದುಂಟು. ಪ್ರಕೃತಿಯಲ್ಲಿ ಹವೆ ಕಲುಷಿತವಾದ ಸನ್ನಿವೇಶ ಕಾಣಿಸಿಕೊಂಡಾಗ ಪೂರ್ವ ನಿಶ್ಚಿತವಾದ ವಿಮಾನಯಾನಗಳನ್ನು ನಿಲ್ಲಿಸಬೇಕಾದ ಪ್ರಸಂಗಗಳೂ ಅನೇಕ ಬಾರಿ ಆಗಿವೆ. ಈ ಎಲ್ಲ ಕಾರಣಗಳಿಂದ ಮತ್ತು ಹವಾಮಲಿನತೆಯಿಂದ ಉತ್ಪನ್ನವಾಗುವ ರೋಗಗಳ ಚಿಕಿತ್ಸೆಗಾಗಿ ಔಷಧಗಳ ತಯಾರಿಕೆಯಲ್ಲಿ ಕಳೆದ ವರ್ಷ ಸಂ. ರಾ. ಅಮೇರಿಕದಲ್ಲಿ 1000 ಮಿಲಿಯ ಡಾಲರುಗಳು ನಷ್ಟವಾಗಿದ್ದವು.

ಪ್ರಾಣಿತಜ್ಞರು ಹವಾಮಲಿನತೆಯ ಪರಿಣಾಮವನ್ನು ಕೋತಿಗಳ ಮೇಲೆ ಪ್ರಯೋಗಿಸಿ ಪರೀಕ್ಷಿಸಿದಾಗ ಕೋತಿಗಳು ಶ್ವಾಸಕೋಶದ ತೊಂದರೆಗಳಿಂದ ನರಳುವುದು ಕಂಡುಬಂತು. ನಮ್ಮ ಉಸಿರಾಟ ಕ್ರಿಯೆಯಲ್ಲಿ ಕೆಟ್ಟ ಗಾಳಿಯು ಮಿಶ್ರಿತಗೊಂಡಿದ್ದರೆ ಉಸಿರು ಕಟ್ಟುವುದು ನಮ್ಮ ಅನುಭವಕ್ಕೆ ಬರುತ್ತದೆ. 1952ರಲ್ಲಿ ಲಂಡನ್ನಿನಲ್ಲಿ ತಲೆದೋರಿದ ಘೋರ ಪ್ರಕಾಪಳದಲ್ಲಿ ಸುಮಾರು 4000 ಜನ ಅಸುನೀಗಿದ ಘಟನೆ ಹವಾಮಲಿನತೆಯ ಕೆಟ್ಟ ಪರಿಣಾಮಕ್ಕೆ ಪ್ರಬಲ ಸಾಕ್ಷಿ.

ಈ ಹವಾಮಲಿನತೆಯನ್ನು ನಿಯಂತ್ರಿಸಲು ಸೂಕ್ತ ಸಲಹೆಗಳಿಂದ ಕೂಡಿದ ಗಂಭೀರ ಆಲೋಚನೆ ಅಗತ್ಯ. ಈ ದಿಶೆಯಲ್ಲಿ ಸೋವಿಯತ್ ಒಕ್ಕೂಟವು ಉಳಿದೆಲ್ಲ ರಾಷ್ಟ್ರಗಳಿಗಿಂತ ಮುಂದುವರಿದಿರುವುದು. ತಿಬಿಲಿ, ಮಾಸ್ಕೋ, ಲೆನಿನ್‌ಗ್ರಾಡ್ ಗಳಲ್ಲಾದ ಸುಧಾರಣೆ ಇದಕ್ಕೆ ಆಧಾರ. 1967ರಲ್ಲಿ ನಿರ್ಮಿಸಿದ ವಿಶೇಷ ಉಪಕರಣಗಳಿಂದ ಮಾಸ್ಕೋದ ಹವೆ ಸಾಕಷ್ಟು ಪಾಲು ಶುದ್ಧಿಗೊಂಡಿತ್ತು. ಆದರೂ ವಾಹನ, ಕೈಗಾರಿಕೆಗಳ ನಿರ್ಮಾಣ ಭರದಿಂದ ಸಾಗುತ್ತಿರುವುದರಿಂದ, ಪೂರ್ಣ ನಿಯಂತ್ರಣ ಸಾಧ್ಯವಾಗದೇ, ಹವಾಮಲಿನತೆಯ ಪ್ರಶ್ನೆ ಇಂದು ಎಲ್ಲ ರಾಷ್ಟ್ರಗಳಲ್ಲಿಯೂ ಜೀವಂತ ಪ್ರಶ್ನೆಯಾಗಿಯೇ ಉಳಿದಿದೆ. ಇದನ್ನು ಪೂರ್ಣ ನಿಯಂತ್ರಿಸಲು ನಾವು ಸಫಲರಾದರೆ ಜೀವನ ಶುದ್ಧತೆಯಲ್ಲಿ ಹೊಸ ಮೈಲಿಗಲ್ಲನ್ನು ದಾಟಿದಂತೆ ಆಗುತ್ತದೆ.

—ಬಿ. ವಿ. ನಾಯಕ್, ಉಡುಪಿ.

● ●

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ

. ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ

ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTLE SHIVAPRASAD

High Class Boarding, Lodging & Restaurant

COONDAPUR, S. K.

ಮಿತ ಕುಟುಂಬ ಯೋಜನೆಗೆ

ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ,

ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, ದ. ಕ.

ಉರ್ದೂ ಪತ್ರಿಕೆಗಳು

ಜಾತೀಯತೆಯ ಜ್ವಾಲೆ ಜ್ವಲಿಸದಿರಲಿ

ಬೆಂಗಳೂರಿನಲ್ಲಿ ಪ್ರಕಟವಾಗುತಿದ್ದ ಉರ್ದೂ ಪತ್ರಿಕೆಯೊಂದರ ಎಲ್ಲ ಪ್ರತಿಗಳನ್ನು ಕಾನಪುರದ ಪೋಲೀಸರು ಬಂದು ವಶಪಡಿಸಿಕೊಂಡು ಹೋದರು. ಆ ಪತ್ರಿಕೆಯಲ್ಲಿ ದೇಶದ್ರೋಹಕರ ಲೇಖನ ಪ್ರಕಟವಾಗಿತ್ತೆಂದು ಹೇಳಲಾಗಿದೆ. ಉರ್ದೂ ಪತ್ರಿಕೆಗಳು ಏನು ಮಾಡುತ್ತಿವೆ? ಒಂದು ಉದಾಹರಣೆ ಇಲ್ಲಿದೆ.

ರಾಜ್ಯಸಭೆಯಲ್ಲಿ ಕೆಲವು ಸದಸ್ಯರು ಪ್ರಧಾನಿಯವರ ಗಮನವನ್ನು 'ಜಮಾಯತ್ ಟ್ಯಾಮ್ಸ್'ಮತ್ತು 'ಸಂಗಂ'ಪತ್ರಿಕೆಗಳ ಬರಹಗಳತ್ತ ಸೆಳೆದರು. ಇದರಲ್ಲಿ 'ಜಮಾಯತ್ ಟ್ಯಾಮ್ಸ್ ಜಮಾಯತಿನ ಮುಖಪತ್ರಿಕೆ. ಇದು ದಿಲ್ಲಿಯಿಂದ ಹೊರಡುತ್ತಿರುವ ಉರ್ದು ವಾರಪತ್ರಿಕೆ. 'ಸಂಗಂ' ಪಾಟ್ನಾದಿಂದ ಹೊರಡುತ್ತಿರುವ ಉರ್ದು ದೈನಿಕ. ಈ ಪತ್ರಿಕೆಗಳೂ, ಇಂತಹ ಇನ್ನು ಕೆಲವು ಪತ್ರಿಕೆಗಳೂ ಎಡೆಬಿಡದೆ ಇಸ್ಲಾಮಿ ಜಾತೀಯತೆಯನ್ನು ಪ್ರಚೋದಿಸುತ್ತ ರಾಷ್ಟ್ರೀಯತೆಯ ಕುರಿತು ಹೀನ ರೀತಿಯಲ್ಲಿ ಬರೆಯುತ್ತಿವೆ. ಇದೀಗ ಅವುಗಳ ಬಾಯಿಗೆ 'ಬಂಗ್ಲಾದೇಶ'ದ ಎಲುಬಿನ ಚೂರು ಸಿಕ್ಕಿರುತ್ತದೆ; ಇವು 'ಬಂಗ್ಲಾದೇಶ' ಚಳವಳಿಯನ್ನು ಬಂಡಾಯವೆಂದು ಬರೆದು ಯಾಹ್ಯಾಖಾನನನ್ನು ಹೊಗಳುತ್ತಿವೆ. ಪಾಕಿಸ್ತಾನ ಒಡೆದು ಹೋಗುತ್ತಿದೆಯಲ್ಲಾವೆಂದು ಅವು ಅತೀವ ಪಶ್ಚಾತ್ತಾಪಪಡುತ್ತಿವೆ. ಇತ್ತೀಚೆಗಿನ ಸಂಚಿಕೆಗಳಲ್ಲಿ ಅವು ಭಾರತ ಸರಕಾರದ ಧೋರಣೆಯನ್ನೂ ಖಂಡಿಸಿವೆ. ಇಂದಿರಾಜೀಯವರು ಕೋಲು ಮುರಿಯಲೇಬಾರದು, ಹಾವು ಸಾಯಬೇಕೆನ್ನುವ ಮೆದುನೀತಿಯನ್ನು ಅನುಸರಿಸುತ್ತಿರುವುದನ್ನೂ ಆ ಪತ್ರಿಕೆಗಳಿಗೆ ಸಹಿಸಲು ಸಾಧ್ಯವಾಗಿರುವದಿಲ್ಲ. ಇಂದಿರಾಜೀಯವರೂ 'ಬಂಗ್ಲಾದೇಶ'ವನ್ನು ಒಪ್ಪುವಂತೆ ಕಂಡುಬರುವದಿಲ್ಲ; 'ನಿರಾಶ್ರಿತ'ರ ನೆರೆಗೆ ಮಾನವೀಯತೆಯ ಮುಸುಕು ಹಾಕಿ ತಮ್ಮ ಸಮಾಜವಾದಿ ಸ್ವರ್ಗ ಸ್ಥಾಪನೆಯ ಕೋಲನ್ನು ಮರೆಸಲು ಅವರು ಬಹಳ ಪ್ರಯತ್ನ ನಡೆಸುತ್ತಿದ್ದಾರೆ. ಪೂರ್ವ ಪಾಕಿಸ್ತಾನದಲ್ಲಿ ಶಾಂತ ಪರಿಸ್ಥಿತಿ ಉಂಟಾದೊಡನೆ 'ನಿರಾಶ್ರಿತ'ರನ್ನು ಹಿಂದಕ್ಕೆ ಕಳುಹಿಸಿಕೊಡುವದಾಗಿ ಅವರನ್ನುತ್ತಿದ್ದಾರೆ. ಅತ್ತೆ ಮನೆಯಲ್ಲಿ ಹಿಂಸೆ ತಾಳಲಾರದೆ ತವರು ಮನೆಗೆ ಬಂದಿರುವ ಸೊಸೆಯನ್ನು ಹಿಂದಕ್ಕೆ ಕಳುಹಿಸಿಕೊಡುವಂತೆ! ಇದು ಅವರ ಮನೋಭಾವನೆಯನ್ನು ಸ್ಪಷ್ಟಪಡಿಸುತ್ತದೆ. ಆದರೆ ಶ್ರೀ ಸಾಮಾನ್ಯನ ಕಣ್ಣಿಗೆ ಬೂದಿ ಹಾಕಲಿಕ್ಕಾಗಿ 'ಸಮಯಕ್ಕೆ ಸರಿಯಾಗಿ ವರ್ತಿಸಲಾಗುತ್ತದೆ'ಂದು ಸಮಜಾಯಿಷಿ ಕೊಡುತ್ತಿದ್ದಾರೆ; ಕಾಲಕ್ಕೆ ತಕ್ಕ ಕೋಲ ಕಟ್ಟುತ್ತಾ, ಮಳೆ ಬಂದತ್ತ ಕೊಡೆ ಹಿಡಿಯುತ್ತಿದ್ದಾರೆ. ಇದನ್ನು ಸ್ಪಷ್ಟವಾಗಿ ಅರಿತುಕೊಂಡಿರುವ ಪಾಕ್‌ಪರ ಪತ್ರಿಕೆಗಳು ಬಂಗ್ಲಾ ಚಳುವಳಿಯನ್ನು ಖಂಡಿಸುತ್ತಿದ್ದು ಈಗ ನೇರವಾಗಿ ಸರಕಾರೀ ಧೋರಣೆಯನ್ನೂ ಖಂಡಿಸಲಾರಂಭಿಸಿವೆ. ಇಂದಿರಾಜೀಯವರ ರಾಜಕೀಯ ಶಾಂತ ನೆಲೆಯೇ ತಪ್ಪು, ಅರ್ಥ ಶೂನ್ಯವೆಂದು ಆ ಪತ್ರಿಕೆಗಳು ಪ್ರಚಾರ ಮಾಡುತ್ತಿವೆ. ಅಲ್ಲಿ ಸಂಪೂರ್ಣ ಜಯಶಾಲಿಯಾಗಿರುವ ಅವಾಮಿ ಲೀಗಿನೊಡನೆ ಅಧಿಕಾರದ ಅತಿ ಎತ್ತರದ ಸ್ಥಾನದಲ್ಲಿರುವ ಯಾಹ್ಯಾಖಾನ್ ಮಾತುಕತೆ ನಡೆಸುವದು ಅಪಮಾನವೆಂಬುದು ಅವುಗಳ ಅಭಿಪ್ರಾಯ. ಸಂಸತ್‌ನಲ್ಲಿ ಕಾರ್ಯಕ್ರಮ ನಡೆಯುತ್ತಿರುವಾಗ ಒಳ ಪ್ರವೇಶಿಸುವ ಸದಸ್ಯರು ಅಧ್ಯಕ್ಷರಿಗೆ ತಲೆ ತಗ್ಗಿಸುವದು, ಗೌರವ ಸೂಚಿಸುವದು ವಾಡಿಕೆ; ಅದು ತಮ್ಮ ಮತೀಯ ಭಾವನೆಗೆ ವಿರುದ್ಧವಿರುವದರಿಂದ ಮುಸ್ಲಿಂ ಲೀಗಿನವರು ನೇರ ಒಳ ಪ್ರವೇಶಿಸುತ್ತಿದ್ದಾರೆ. ಹಾಗಿರುವದರಿಂದ ಅವಾಮಿ ಲೀಗಿನೊಂದಿಗೆ ಯಾಹ್ಯಾಖಾನ್ ಮಾತುಕತೆ ನಡೆಸುವದನ್ನು ಅವು ಖಂಡಿಸುತ್ತಿವೆ. ಅಂತಹ ಶರ್ತಗಳನ್ನು ಹಾಕದೆ 'ನಿರಾಶ್ರಿತ'ರನ್ನು ಹಿಂದಕ್ಕೆ ಕಳುಹಿಸಬೇಕೆಂದು ಅವು ಸೂಚಿಸಿವೆ. ನಿರಾಶ್ರಿತರನ್ನು ಇಲ್ಲಿಗೆ ಬರಲು ಬಿಡಬಾರದೆಂದು ಮುಸ್ಲಿಂ ಲೀಗ್ ಹೇಳುತ್ತಾ ಬಂದಿರುವದನ್ನೇ ಆ ಪತ್ರಿಕೆಗಳು ಪ್ರಕಟಿಸಿವೆ. ಬಂಗ್ಲಾ ದೇಶದ ರಾಜಕೀಯ ಒಪ್ಪಂದದ ಕುರಿತು ಎಡೆಬಿಡದೆ ಇಂದಿರಾ ಸರಕಾರ ಸೂಚಿಸುತ್ತ ಬಂದಿರುವದು ತಪ್ಪೆಂದು ಆ ಪತ್ರಿಕೆಗಳು ಸ್ಪಷ್ಟವಾಗಿ ಸೂಚಿಸಿವೆ.

ಬಂಗ್ಲಾ ದೇಶದ ಕುರಿತು ಮಾತ್ರ ಸರಕಾರದ ಧೋರಣೆಯನ್ನು 'ಜಮಾಯತ್ ಟ್ಯಾಮ್ಸ್' ಖಂಡಿಸಿರುವುದಲ್ಲದೆ ಸರಕಾರದ ಸಹಾಯದಿಂದ ನಡೆದ ಮುಸ್ಲಿಂ ಸಂಪಾದಕರ ಸಮ್ಮೇಳನವನ್ನೂ ಅದು ಟೀಕಿಸಿರುತ್ತದೆ. ರಾಷ್ಟ್ರೀಯತಾ ಗಂಗಾಪ್ರವಾಹದಲ್ಲಿ ಮಹಮ್ಮದೀಯ ನದಿ ಒಂದಾಗಲು ಸಾಧ್ಯವೇ ಇಲ್ಲ, ಆಗಲೇಬಾರದೆಂದು ಅದು ಪ್ರಚಾರ ನಡೆಸುತ್ತಿದೆ. ಸರಕಾರೀ ಧೋರಣೆಯಿಂದ ಜಾತೀಯತೆಯ ಜ್ವಾಲೆ ಜ್ವಲಿಸುವ ಭಯವಿದೆಯೆಂದು ಅದು ತನ್ನ ಮನಸ್ಸನ್ನು ತೆರೆದು ತೋರಿಸಿದೆ. ಅಂದರೆ ಜಾತೀಯ ಚಟಾಪಟಿಗೆ ಮಹಮ್ಮದೀಯ ಮತೀಯ ಮುಂದಾಳುಗಳಲ್ಲಿ ಕೆಲವರು ಪ್ರಯತ್ನಿಸುತ್ತಿದ್ದಾರೆಂಬುದು ಸ್ಪಷ್ಟವಾಯಿತು. ಅಂತಹ ಸಂದರ್ಭದಲ್ಲಿ ಇಂದಿರಾಜೀಯವರು ಅವರ ಪಕ್ಕಕ್ಕಿದ್ದು ರಾಷ್ಟ್ರೀಯತಾ ಪ್ರವಾಹಕ್ಕೆದುರಾಗಿ ವರ್ತಿಸುತ್ತಾರೆಂಬುದು ಅವರಿಗೆ ಚೆನ್ನಾಗಿ ಗೊತ್ತು.

'ಸಂಗಮ್'ಪತ್ರಿಕೆಯು ಬಂಗ್ಲಾ ಚಳುವಳಿಗೆ ಬೇರೆಯೇ ಬಣ್ಣವನ್ನು ಕೊಡುತ್ತ ಬಂದಿರುತ್ತದೆ. ಅದು ಬಿಹಾರಿ ಮುಸ್ಲಿಮರಿಗೂ ಬೆಂಗಾಲಿ ಮುಸ್ಲಿಮರಿಗೂ ನಡುವಿನ ಘರ್ಷಣೆ. ಅಂದರೆ ಭಾರತದಿಂದ ಪ್ರಚೋದಿತರಾದ ಬಂಗಾಲಿ ಮುಸ್ಲಿಮರು ಬಿಹಾರಿ ಮುಸ್ಲಿಮರ ಮೇಲೆ ನಡೆಸುತ್ತಿರುವ ದೌರ್ಜನ್ಯ! ಎಂತಹ ಸಂಶೋಧನೆ!! ಇಷ್ಟರ ವರೆಗೆ ಬಲರಾಜ ಮಧೋಕ, ಅಟಲ ಬಿಹಾರಿ ವಾಜಪೇಯಿಯವರ ಮೇಲೆ ಕೆಂಡವನ್ನುಗುಳುತ್ತಿದ್ದ ಈ ಪತ್ರಿಕೆಯು ಈಗ ಜಯಪ್ರಕಾಶ ನಾರಾಯಣರನ್ನು ಜರೆಯಲಾರಂಭಿಸಿದೆ. ಇಂತಹ ರಾಜಕೀಯ ಮುಂದಾಳುಗಳು ಮಾತಾಡುವ ರೀತಿಯಲ್ಲೇ ಜಯಪ್ರಕಾಶ ನಾರಾಯಣರು ಮಾತಾಡುತ್ತ 'ಈ ದೇಶಕ್ಕೆ ನಿಷ್ಠೆಯನ್ನು ಸ್ಪಷ್ಟಪಡಿಸುವ ಸಮಯ ಮುಸ್ಲಿಮರಿಗೆ ಬಂದಿದೆ' ಯೆಂದು ಹೇಳಿರುವದನ್ನು ಖಂಡಿಸುತ್ತ ಅವರನ್ನು ತರಾಟೆಗೆ ತೆಗೆದುಕೊಂಡಿದೆ. ಈ ದೇಶಕ್ಕೆ ಆದ್ಯಾಕೆ ನಿಷ್ಠೆಯಿಂದಿರಬೇಕೆಂಬುದೇ ಆ ಪತ್ರಿಕೆಯ ಪ್ರಶ್ನೆ. ರಾಷ್ಟ್ರೀಯತೆಯ ಪ್ರವಾಹದೊಂದಿಗೆ ಒಂದಾಗುವದನ್ನು ಆ ಪತ್ರಿಕೆಯು ಪರಿಹಾಸ್ಯ ಮಾಡಿರುತ್ತದೆ. ಆ ರೀತಿ ಹೇಳಲು ಜಯಪ್ರಕಾಶನಾರಾಯಣರು ಇಂಡಿಯಾದ ರಾಜರೇನೆಂದು ಆ ಪತ್ರಿಕೆಯು ಪ್ರಶ್ನೆ ಹಾಕಿರುತ್ತದೆ.

'ಮುಸಲ್ಮಾನರ ಶಾಸ್ತ್ರಗಳ ರೀತ್ಯಾ ಈ ವಿಶ್ವವನ್ನು ೩ ಭಾಗಗಳಾಗಿ ವಿಂಗಡಿಸಬಹುದು. (೧) ದಾರ್-ಉಲ್-ಇಸ್ಲಾಂ:. ಇಸ್ಲಾಮಿಗೆ ಸೇರಿದ ರಾಜ್ಯ. ೨) ದಾರ್—ಉಲ್--ಉಲೇಮಾನ್—ಇಸ್ಲಾಮಿ ಧರ್ಮವನ್ನು ತೊಂದರೆ ಇಲ್ಲದೆ ಅಭ್ಯಾಸ ಮಾಡಬಹುದಾದ ರಾಜ್ಯ. ೩) ದಾರ್-ಉಲ್-ಹರಬ್— ಇಸ್ಲಾಮಿನ ಶತ್ರುಗಳ ರಾಜ್ಯ. (ಸಿ. ಆರ್. ಗುರುರಾಜ ರಾಯರ 'ಹಿಂದು ಸಂಘಟನೆ'ಯಿಂದ ಇದನ್ನು ಆರಿಸಿಕೊಳ್ಳಲಾಗಿದೆ.)

ಭಾರತವು ದಾರ್-ಉಲ್-ಇಸ್ಲಾಂ ಇರುವುದಿಲ್ಲ. ಪಾಕಿಸ್ತಾನದ ನಿರ್ಮಾಣವೇ ಅದಕ್ಕೆ ಸಾಕ್ಷಿ. ಹಾಗಿರುವಾಗ ಅದಕ್ಕೆ ನಿಷ್ಠೆಯನ್ನು ತೋರಿಸಬೇಕೆಂದರೆ ಅಂತಹವರಿಗೆ ಸಹಿಸಿಕೊಳ್ಳಲು ಸಾಧ್ಯವಾದೀತೇ?

'ಸಂಗಮ್'ಗೆ ಇಷ್ಟರಿಂದಲೇ ತೃಪ್ತಿಯಿಲ್ಲ. ಅದೀಗ ಇಂದಿರಾಜೀಯವರ ಜೀವಕ್ಕೆ ಅಪಾಯವೆಂಬ ಸ್ವರವನ್ನೆತ್ತಿರುತ್ತದೆ. ಆದರೆ ಪ್ರಧಾನಿಯವರು ಹೇಳುತ್ತಿರುವ ಆಪತ್ತು ಬೇರೆ ರೀತಿಯದ್ದು. 'ಸಂಗಮ್' ಕಂಡುಕೊಂಡಿರುವ ಆಪತ್ತು ಬೇರೆ ರೀತಿಯದ್ದು. ಚೈನ ಭಾರತದ ನಡುವೆ ೧೯೬೨ರಲ್ಲಿ ನಡೆದ ಜಗಳವು ನೆಹರೂರವರನ್ನು ಕೊಂದಿತು, ೧೯೬೫ರ ಭಾರತ—ಪಾಕ್ ಯುದ್ಧವು ಲಾಲ ಬಹದ್ದೂರ್ ಶಾಸ್ತ್ರಿಯವರ ಶವಸಂಸ್ಕಾರದ ಫಲಿತಾಂಶವನ್ನಿತ್ತಿರುತ್ತದೆ. ಇಂತಹ ಇನ್ನೊಂದು ಯುದ್ಧವಾಗದಂತೆ ದೇವರು ತಡೆಹಿಡಿಯಲಿ.' ಇದರ ಅರ್ಥವೇನು? ಇನ್ನೊಂದು ಯುದ್ಧವಾದಲ್ಲಿ ಇಂದಿರಾಜೀಯವರ ಇತಿಶ್ರೀ! ಈ ಭಯದಿಂದ ಅವರು ಪಾಕಿಸ್ತಾನದ ಪ್ರೀತಿಗಾಗಿ ಪರಿತಪಿಸಬೇಕು. ಚೈನಾ—ಭಾರತದ ನಡುವೆ ಜಗಳ ನಡೆಯಿತು! ಆಗ ಭಾರತವು ಪಾಕಿಸ್ಥಾನದ ಮೇಲೆ ಯುದ್ಧ ಮಾಡಿದೆ! ಜಾತೀಯ ಪ್ರೇಮಕ್ಕೆ ಉದಾಹರಣೆ ಬೇರೆ ಬೇಕೇನು? ಭಾರತದಲ್ಲಿರುವ ಒಂದು ಪತ್ರಿಕೆಯು ಪಾಕಿ

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

Ex. C. No. 76/1971

(O. S. 162/62)

ಶೇಖ್ ಅಬ್ದುಲ್ ಲತೀಫ್ ಸಾಹೇಬ್ —ಅರ್ಜಿದಾರ (ವಾದಿ)

ಮತ್ತು

ಕರೀಮ್ ಸಾಹೇಬ ಕೂಡಾ —ಎದ್ರಿರು (ಪ್ರತಿವಾದಿರು)

ಯಿನರೊಳಗೆ

9ನೇ ಎದ್ರಿ:. ಲಚ್ಚ ಮರಕಾಲ. ಶೇಷಮರಕಾಲರ ಮಗ, ಉಡ್ಪಿ ತಾಲೂಕು ಮೂಡನಿಡಂಬೂರು ಗ್ರಾಮ. ಯಿವರಿಗೆ—

ಅರ್ಜಿದಾರರು ಮೇಲ್ಕಂಡ ಅರ್ಜಿಗೆ ಕಾರಣ ವಾಹ ಸ್ಥಿರಾಸ್ತಿ ದಿಲಿವರಿ ಕೇಳಿ ದಾಖ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 30-8-71ಕ್ಕೆ ಇಟ್ಟಿದೆ. ಆ ದಿವ್ಸ ಬೆಳಿಗ್ಯೆ 10 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಉದಾಹರಿಸುವರೆ ತಪ್ಪಿದ್ರೆ ನಿಂಮ ಗೈರ್ ಹಾಜರಿಯಲ್ಲಿ ಸದ್ರಿ ಅರ್ಜಿಯನ್ನು ತೀರ್ಮಾನಿಸಲಾಗುವುದು.

By order of court

Sd. V.G. KEDLAYA,
M. A., LL. B.,
Advocate for Petitioner

ಉಡ್ಪಿ, ತಾ. 18-8-71

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303, 2 72304 — Grams: HOST SATKAR

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 154/1971

ಶ್ರೀ ಸೋಟೆ ವಾದಿರಾಜ ಮಠ —ವಾದಿರು

ಮತ್ತು

ಕ್ಯಾಟುನ್ಯಾಕ ಕೂಡಾ —ಪ್ರತಿವಾದಿರು

ಯಿವರೊಳಗೆ.

2ನೇ ಪ್ರತಿವಾದಿ:- ಎಡ್ವರ್ಡ್ ಡಿ'ಸೋಜ, ಅಬ್ರಹಾಮ್ ಡಿ'ಸೋಜರ ಮಗ, ಉಡ್ಪಿ ತಾಲೂಕು ಶಿರ್ವ ಗ್ರಾಮ—ಯಿವರಿಗೆ.

ವಾದಿರು ಗೇಣಿ ಬಾಕಿ ಕೇಳಿ ನಿಂಮ ಮೇಲೆ ದಾಖ್ಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 14-9-71ಕ್ಕೆ ತನ್ಕಿಗೆ ಯಿಟ್ಟಿದೆ. ಆ ದಿವ್ಸ ಬೆಳಿಗ್ಗೆ 10 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಉದಾಹರಿಸುವರೆ ತಪ್ಪಿದ್ರೆ ನಿಂಮ ಗೈರ್ ಹಾಜರಿಯಲ್ಲಿ ಸದ್ರಿ ದಾವೆ ತೀರ್ಮಾನಿಸಲ್ಪಡುವುದು.

By order of court

Sd. V. G. KEDLAYA,
M. A., LL. B.,
Advocate for Plaintiff.

ಉಡ್ಪಿ, ತಾ. 18-8-71

ಸ್ಥಾನದ ಮೇಲೆ ಭಾರತ ಯುದ್ಧ ಹೂಡಿತು. ಅದರಿಂದಾಗಿ ಅಂದಿನ ಪ್ರಧಾನಿ ಸತ್ತು ಹೋಗಬೇಕಾಯಿತು; ಆ ಕಾರಣ ಜೀವದ ಮೇಲೆ ಆಶೆ ಇದ್ದರೆ ಪಾಕಿಸ್ಥಾನದ ಮೇಲೆ ಯುದ್ಧ ಘೋಷಿಸ ಬೇಡಿರೆಂದು ಹೆದರಿಸುತ್ತಿದೆ! ಭಾರತವನ್ನು ಯುದ್ಧಖೋರ ರಾಷ್ಟ್ರವೆಂದು ಬೆಟ್ಟು ಮಾಡಿ ತೋರಿಸುತ್ತಿದೆ! ಇದನ್ನು ಪ್ರಧಾನಿಯವರ ಗಮನಕ್ಕೆ ರಾಜ್ಯ ಸಭಾ ಸದಸ್ಯರು ತಂದಾಗ, ಅಪಾಯ ಎಲ್ಲಿದೆಂಬುದನ್ನು ಅವರು ಅರಿತುಕೊಳ್ಳಬೇಕಾಗಿತ್ತು. ಆ ಪತ್ರಿಕೆಗಳು ತಪ್ಪೇನೂ ಇಲ್ಲವೆನ್ನುವ ರೀತಿಯಲ್ಲೇ ಇಂದಿರಾಜೀ ಹೇಳಿ ತೃಪ್ತಿಹೊಂದಿದರು.

ನೀತಿ, ನ್ಯಾಯ ಏನೇ ಇರಲಿ. ಇಂದಿರಾಜೀಯವರ ವಿಷಯ ಭಾರತೀಯರಿಗೆ ಚೆನ್ನಾಗಿ ಗೊತ್ತು. ಇದೇ ಇಂದಿರಾ ಪ್ರಿಯದರ್ಶಿನಿಯವರು ಸತ್ತು ಹೋಗುವ ಸ್ಥಿತಿಯಲ್ಲಿ ಬಿದ್ದು ಕೊಂಡಿದ್ದ ಮುಸ್ಲಿಂ ವಿಷಹಾವಿಗೆ ಹಾಲೂಡಿಸಿ ಬೆಳೆಸಿದವರಿದ್ದಾರೆ. ಅವರೆದುರು ಕಾಳಿಯಮರ್ದನದ ವಿಷಯ ಹೇಳಿದಲ್ಲಿ ಶ್ರೀ ಕೃಷ್ಣನನ್ನು ಜಾತೀಯವಾದಿಯೆಂದು ಸುಲಭವಾಗಿ ಹೇಳಿಯಾರು. ಸ್ವಾತಂತ್ರ್ಯ ಸಿಕ್ಕಿ ನಮ್ಮದೇ ಸರಕಾರ ಅಸ್ತಿತ್ವಕ್ಕೆ ಬಂದ ಮೇಲಂತೂ ಕೇವಲ ಹಿಂದೂಗಳ ಮೇಲೆ ಕಾನೂನಿನ ಮೇಲೆ ಕಾನೂನು ಹೇರಿಸಲಾಗುತ್ತಿದೆ. ಮದುವೆಗೆ ಸಂಬಂಧ ಪಟ್ಟಿರಲಿ, ಮಕ್ಕಳಾಗುವದಕ್ಕೆ ಸಂಬಂಧ ಪಟ್ಟದ್ದಿರಲಿ, ಮಕ್ಕಳಾಗದಿರುವದಕ್ಕೆ ಸಂಬಂಧ ಪಟ್ಟದ್ದಿರಲಿ, ಭ್ರೂಣಹತ್ಯೆಗೆ ಸಂಬಂಧ ಪಟ್ಟದ್ದಿರಲಿ, ಪೂಜಾ ವಿಧಾನಕ್ಕೆ ಸಂಬಂಧ ಪಟ್ಟಿರಲಿ ಹಿಂದೂ ಕಾನೂನಿಗೊಳಪಟ್ಟು ಇರಬೇಕು. ಇತರರ ಮೇಲೆ ಈ ಸರಕಾರಕ್ಕೆ ಕಾನೂನು ಮಾಡುವ ಹಕ್ಕು ಅಧಿಕಾರ ಇಲ್ಲವೆಂದು ಅವರೆದುರು, ಸಂಸದಿನಲ್ಲೇ ಸದಸ್ಯರಾಡಿದರೂ ಅವರು ತುಟಿ ಎರಡು ಮಾಡುವಂತಿಲ್ಲ.

ವಾಸ್ತವ್ಯ ಪರಿಸ್ಥಿತಿ ಹೀಗಿದೆ. ಚುನಾವಣೆಯಲ್ಲಿ ದೇಶ ವಿಭಜನೆಗೆ ಕಾರಣವಾದ ಮುಸ್ಲಿಂ ಲೀಗಿನೊಡನೆ ಕೈಮಿಲಾಯಿಸಿಕೊಂಡ ಇಂದಿರಾಜಿಯವರು, ಎದುರು ಪಕ್ಷಗಳನ್ನು ಬಗ್ಗು ಬಡೆಯುವೆನೆಂದು ಯಾಹ್ಯಾಖಾನನೊಂದಿಗೆ ಸೇರಿಕೊಳ್ಳದಿರಲಿ. ಇದೋ ಇಲ್ಲಿ ಅಪಾಯದ ಬೆಂಕಿ ಇದೆ, ಅದು ಮನೆಯನ್ನು ಸುಡುತ್ತದೆಂದು ಯಾರಾದನೊಬ್ಬನು ತೋರಿಸಿಕೊಟ್ಟಾಗ ಅವನನ್ನು ಜರೆದು, ಬೆಂಕಿಯ ವಿಷಯ ಹೇಳಬೇಡ, ನಿನ್ನ ಮಾತಿನಿಂದ ಮನೆಯೇ ಸುಟ್ಟು ಹೋಗುತ್ತದೆಂದು ಹೇಳಿ ಅವನನ್ನು ಥಳಿಸಲು ಮುಂದಾಗುವವರಿಗೆ ಏನು ಹೇಳುವದು? ಜಾತೀಯತೆಯ ಜ್ವಾಲೆ ಜ್ವಲಿಸದಿರಲಿ.

—ಶಿವಶಂಕರ

● ●

ಪೆಪ್ಪರಮಿಂಟಿನಿಂದ ಹೊಟ್ಟೆ ತುಂಬುವುದಿಲ್ಲ

ದೀಪಾವಳಿಯಂದು ಹಿಂದು ಹೊಸ ಬಟ್ಟೆಹಾಕಿ ಹೊಟ್ಟೆ ತುಂಬ ತಿಂಡಿ ತೀರ್ಥ ತುಂಬಿಸಿ ಪ್ರಫುಲ್ಲ ಮನಸ್ಸಿನಿಂದ ದೇವಸ್ಥಾನಕ್ಕೆ ಹೋಗುತ್ತಾನೆ.

ರಮ್ಜಾನದ ದಿನ ಮುಸಲ್ಮಾನರು ಅಂಥಹುದೇ ಬಣ್ಣ ಬಣ್ಣದ ಅಂಗಿ ತೊಟ್ಟು ಮಸೀದಿಗೆ ಹೋಗಿ ನಮಾಜು ಮಾಡುತ್ತಾರೆ.

ಕ್ರಿಸ್‌ಮಸ್ ದಿನ ಕ್ರಿಸ್ತೀಯರಿಗೆ ಹೃದಯ ತುಂಬುವ ಹಬ್ಬ. ಅವರು ಇಗರ್ಜಿಗೆ ಹೋಗಿ ದೇವರಲ್ಲಿ ಪ್ರಾರ್ಥಿಸುತ್ತಾರೆ.

ದೀಪಾವಳಿ—ರಂಜಾನ ಅಥವಾ ಕ್ರಿಸ್‌ಮಸ್ ಮೊದಲಾದುವು ಒಂದೊಂದು ಮತೀಯರ ಹಬ್ಬದ ದಿನಗಳು. ಆಯಾ ಮತೀಯರು ಸಸಂಭ್ರಮ ಅದನ್ನು ಆಚರಿಸುತ್ತಾರೆ.

ಸ್ವಾತಂತ್ರ್ಯದಿನ– ಪ್ರಜಾಪ್ರಭುತ್ವದಿನಗಳು ರಾಷ್ಟ್ರೀಯ ಹಬ್ಬದ ದಿನಗಳು. ಇವನ್ನು ರಾಷ್ಟ್ರೀಯರೆಲ್ಲರೂ ಆಚರಿಸಬೇಕು.

ಆದರೆ ನಮ್ಮ ರಾಷ್ಟ್ರೀಯರು ಯಾರು?

ಐದರಿಂದ ತೊಡಗಿ ಹದಿನೈದರವರೆಗಿನ ಶಾಲೆಗೆ ಹೋಗುವ ಮಕ್ಕಳು ಮತ್ತು ಅವರನ್ನು ಮೇಯಿಸುವವರು, ಪಂಚಾಯತು–ನಗರ ಸಭೆಗಳ ಪುಡಾರಿಗಳು– ಅಪ್ಪಿತಪ್ಪಿ ದಾರಿ ತಪ್ಪಿ ಬಂದ ಬೆರಳೆಣಿಕೆಯವರು.

ಉಳಿದವರು? ಸಂವಿಧಾನ ಅವರಿಗೂ ರಾಷ್ಟ್ರೀಯತೆ ನೀಡುತ್ತದೆ; ಮತ ಚಲಾಯಿಸುವ ವೇಳೆಯಲ್ಲದೆ ಉಳಿದ ದಿನಗಳಲ್ಲಿ ಅವರಿಗೆ ಆ ಮಾತು ನೆನಪಿರುವುದಿಲ್ಲ; ತಾವು ರಾಷ್ಟ್ರೀಯನೆಂದು ತಿಳಿದರೂ ರಾಷ್ಟ್ರೀಯ ಹಬ್ಬಗಳ ಆಚರಣೆ ತಾನು ಮಾಡಬೇಕಾಗಿಲ್ಲವೆಂದು ತಿಳಿದವರು.

ರಾಷ್ಟ್ರೀಯ ಹಬ್ಬದ ಮಹತ್ವವನ್ನವರು ಜೀರ್ಣಮಾಡಿಕೊಂಡಿರುತ್ತಾರೆ. ಚಿಕ್ಕ ಮಕ್ಕಳು ಶಾಲೆಗೆ ಹೋಗುವಂತೆ ಹಿರಿಯರು ಹೋಗ ಬೇಕೆ? ಹೆಂಗಸರು ದೇವಾಲಯಕ್ಕೆ ಹೋಗುವಂತೆ ಗಂಡಸರು ಏಕೆ ಹೋಗಬೇಕು?

ನಮ್ಮ ರಾಷ್ಟ್ರೀಯರು ಎಲ್ಲ ಬಲ್ಲವರು. ಶುಷ್ಕ ರಾಷ್ಟ್ರೀಯತೆಯಿಂದ ಒಂದೋ ಎರಡೋ ಪೆಪ್ಪರಮಿಂಟು ಸಿಕ್ಕಿತೇ ಹೊರತು ಹೊಟ್ಟೆ ತುಂಬುವುದುಂಟೆ?

ಬುದ್ಧಿ ಜೀವಿಗಳು ಹಣಮಾಡುತ್ತಾರೆ. ಅದು ಪಾಪ ಮಾರ್ಗದಿಂದಾದರೇನಂತೆ? ಅದಕ್ಕೆ ಕಂಟಕವಿರದಿರಲು ಅವರಿಗಾಗಿ ದೇವರಲ್ಲಿ ಪ್ರಾರ್ಥಿಸುತ್ತಾರೆ. ಅದೂ ಸಾಕಾಗದೆ ಹೋದರೆ ದೇವರು—ಮಂದಿರ ಮೆರವಣಿಗೆ ತೆಗೆಸುತ್ತಾರೆ, ಊರಿಗೆ ಅನ್ನ ಹಾಕುತ್ತಾರೆ, ಪಾಪಕ್ಕೆ ಪ್ರಾಯಶ್ಚಿತ್ತಮಾಡಿಕೊಳ್ಳುತ್ತಾರೆ.

ಅರೆಬುದ್ಧಿಯವರೂ ಇದಕ್ಕಿಂತ ಹಿಂದೆಯಿಲ್ಲ. ತಾವಾಯ್ತು, ತಮ್ಮ ಹೊಟ್ಟೆಯಾಯ್ತು. ಸ್ವತಂತ್ರವೆಂದು ಹೆಂಡಕುಡಿಯದಿದ್ದರಾದೀತೆ?

ಬುದ್ಧಿಗೇಡಿಗಳೂ ಮುಂದೆಯೇ. ತಮ್ಮ ಇದ್ದುದನ್ನು ಕಳೆದುಕೊಳ್ಳುವಲ್ಲಿ, ಮೋಸ ಹೋಗುವಲ್ಲಿ ಇವರೂ ಮುಂದೆಯೇ.

ನಾಗರ ಪಂಚಮಿಯನ್ನು ನೆಲವಗೆಯುವುದಿಲ್ಲ. ಸಂಕ್ರಾಂತಿಯಂದು ಉಳುವುದಿಲ್ಲ. ಭರಣಿ ಕೃತ್ತಿಕೆಯಂದು ಶುಭಕಾರ್ಯವಾರಂಭಿಸುವುದಿಲ್ಲ.....

ಆದರೆ, ಇವು ಧಾರ್ಮಿಕ ಅಂಧಶ್ರದ್ಧೆ. ಆದುದರಿಂದಲೇ ನಮ್ಮ 'ಮಹಾರಾಷ್ಟ್ರೀಯರು' ಎಲ್ಲ ದಿನಗಳಲ್ಲೂ ಲಂಚಕ್ಕೆ ಕೈಯೊಡ್ಡುತ್ತಾರೆ. ಮೋಸ ಮಾಡುತ್ತಾರೆ. ವಂಚಿಸುತ್ತಾರೆ, ಸರಕಾರದ ಕಾನೂನುಗಳನ್ನು ಉಲ್ಲಂಘಿಸುತ್ತಾರೆ, ಸಿಕ್ಕಿ ಬಿದ್ದರೂ ತಪ್ಪಿಸಿಕೊಳ್ಳುತ್ತಾರೆ.... ಅನ್ಯಾಯ–ಅತ್ಯಾಚಾರಗಳಿಗೆ ಗಳಿಗೆ ಗಳಿಗೆ ಕೇಳುವುದಿಲ್ಲ, ಹೇಳುವುದೂ ಇಲ್ಲ.

ಧಾರ್ಮಿಕ ಹಬ್ಬಗಳ ಆಚರಣೆ ಅಂಧ ಶ್ರದ್ಧೆಯಿರಬಹುದು. ಆದರೆ, ಅಂದು ಅಧಾರ್ಮಿಕತೆಗೊಂದು ವಿರಾಮವಾದರೂ ಇದೆ. ಹಬ್ಬವಾಗಿ ಮಗುವಿಗೆ ಬೈಯುವುದೆ?— ಎಂಬಷ್ಟಾದರೂ ಅದಕ್ಕೆ ಮರ್ಯಾದೆಯುಳಿದಿದೆ.

ರಾಷ್ಟ್ರೀಯ ಹಬ್ಬಗಳಂದಾದರೂ ಅರಾಷ್ಟ್ರೀಯತೆಗೊಂದು ಬೇಲಿಯಿದೆಯೆ? ಸರಕಾರಿ ಕಛೇರಿಗಳಿಗೆ ರಜೆಯಾದ್ದರಿಂದ ಎಲ್ಲವೂ ಅಪ್ರೂಪ್ತ ಮುಂದೆಯೇ ನಡೆಯುತ್ತದೆ—ಸ್ವತಂತ್ರ ಉದ್ಯೋಗಸ್ಥರಿಗೆ ಅಂದು ದೊಡ್ಡದೇ ಕೇಪು.

ನಮಗೆ ಸ್ವಾತಂತ್ರ್ಯ ಬಂದಿದೆ— ಅದನ್ನು ಕಾನೂನಿನ ಬಲದಿಂದ ಆಚರಿಸುತ್ತಿದ್ದೇವೆ—ಹೃದಯದ ಬಲದಿಂದಲ್ಲ.

ಸರಕಾರ ಸಕ್ರ್ಯೂಲಾರು ಹೊರಡಿಸುತ್ತದೆ. ಸರಕಾರದ ಅನ್ನ ತಿನ್ನುವವರು ಅದರ ಮುಂದೆ ತಲೆಬಾಗಿದಂತೆ ನಟಿಸುತ್ತಾರೆ.

ಉಳಿದವರಿಗೆ?

ಅವರಿಗೂ ಸ್ವಾತಂತ್ರ್ಯ ಬಂದಿದೆ. ಕಳ್ಳತನ—ಭ್ರಷ್ಟಾಚಾರ— ಅತ್ಯಾಚಾರ– ಅನ್ಯಾಯ– ವಂಚನೆಗಳನ್ನು ಮೆಲುಮಾತಿನ ಆವರಣದಲ್ಲಿ ಮುಚ್ಚಿಡುತ್ತಾರೆ.

ತಮ್ಮ ಹೊಟ್ಟೆ ತುಂಬಿಸುತ್ತಾರೆ ಮಡದಿ ಮಕ್ಕಳ ಹೊಟ್ಟೆಗೂ ಒಂದಷ್ಟು ಸುರಿಯುತ್ತಾರೆ.

ಬೇರೆಯವರ ಹೊಟ್ಟೆಗೆ ಬಡಿದೇ ತಮ್ಮದನ್ನು ತುಂಬಿಸುವ ಸ್ವಾತಂತ್ರ್ಯ ತಮಗಿದೆಯೆಂದು ನಂಬಿದ್ದಾರೆ.

ಇದೇ ನಮ್ಮ ರಾಷ್ಟ್ರ—ಇದೇ ನಮ್ಮ ರಾಷ್ಟ್ರೀಯತೆ. ಆದುದರಿಂದಲೇ ನಾವು ಇನ್ನೂ ಹಿಂದೆ ಹಿಂದೆ ಹೋಗುತ್ತಿದ್ದೇವೆ— ವಾಸ್ತವಿಕವಾಗಿ—ಅಂಕೆಸಂಖ್ಯೆಗಳು ಮಾತ್ರ ನಮ್ಮನ್ನು ಮೇಲೆತ್ತಿವೆ.

● ●

ಉಡುಪಿ ಶಿವಿಲ್ ಜಡ್ಜರ ಕೋರ್ಟಿನಲ್ಲಿ

Ex. Case 32/71

In O. S. No. 28/65

The General Investment and Commercial Corporation Private Ltd. Udipi by its Managing Director T. Ramesh U. Pai.

—Petitioner

and

1. Abdul Sattar, S/o Ibrahim, General Merchant, N. R. Pura, Chikkamagalore Dt.

2. K. Sarvothama Pai, S/o K. Venkatesha Pai Contractor. Shimoga. —Respondentts

ಯಾವರೊಳಗೆ

ಸದ್ರಿ 2ನೇ ಯದ್ರಿಗೆ ಯಾ ಮೂಲ್ಕ ತಿಳಿಯಪಡಿಸುವುದೇನಂದ್ರೆ:-

ಮೇಲ್ಕಂಡ ಅಮಲ್‌ಜ್ಯಾರಿಯಲ್ಲಿ ಅಮಲ್‌ಜ್ಯಾರಿ ಪಟ್ಟೆಗೆ ಹಾಜ್ರು ಮಾಡಿದ ಜ್ಯಾದಿಕೆಯಿಂದ ಕಾಣುವ ಸ್ಥಿರಾಸ್ತಿ ಜಪ್ತು ಮಾಡಿಸುವಂತೆಯೂ, ನಂತ್ರ ಸದ್ರಿ ಸ್ಥಿರಾಸ್ತಿಯನ್ನು ಯಾ ಕೋರ್ಟಿಗೆ ಡಿಕ್ರಿ ಹಣದ ಪಾವತಿ ಬಗ್ಗೆ ಅರ್ಜಿದಾರಗೆ ಕೊಡಿಸುವಂತೆಯೂ ಸಹಾ ಮೇಲಿನ ಅಮಲ್‌ಜ್ಯಾರಿ ಮಾಡಿ ಅದು ನಿಮಗೆ ಅಗತ್ಯ ಜಪ್ತಿ ನೋಟೀಸ್ (Pro-order)ನ ಬಗ್ಗೆ ತಾರೀಕು 9–9–71ಕ್ಕೆ ಅಪ್ಪೈರು ನೋಟ್ಸು ಬಗ್ಗೆ ಯಿಟ್ಟಿರುತ್ತದೆ. ಆಕ್ಷೇಪಣೆಯಿದ್ದಲ್ಲಿ ಆ ದಿವಸ ಹಗಲು 11 ಗಂಟೆಗೆ ಸರಿಯಾಗಿ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ನಿಮಗೆ ಯಾ ಮೂಲ್ಕ ತಿಳಿಸಲಾಗುತ್ತದೆ.

By order of the court

(Sd) B. KRISHNA BHAT

Advocate for Petitioner

Udipi. 17—8—71



ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ತ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಸಣ್ಣ ಕೃಷಿಕ–ಕೃಷಿ ಕಾರ್ಮಿಕರ ವ್ಯವಸಾಯಾಭಿವೃದ್ಧಿ ಯೋಜನೆ ಉದ್ಘಾಟನೆ

ಉಡುಪಿ ಮತ್ತು ಕುಂದಾಪುರ ತಾಲೂಕುಗಳಲ್ಲಿ ಕಾರ್ಯಗತಗೊಳಿಸಲಿರುವ ಭಾರತಸರಕಾರದಿಂದ ಮಂಜೂರಾದ ಸಣ್ಣ ಕೃಷಿಕರ ಮತ್ತು ಕೃಷಿ ಕಾರ್ಮಿಕರ ವ್ಯವಸಾಯಾಭಿವೃದ್ಧಿ ಯೋಜನೆಯನ್ನು ಮೈಸೂರು ಡಿವಿಜನಲ್ ಕಮಿಶನರ್, ಶ್ರೀ ಬಾಲಸುಬ್ರಹ್ಮಣ್ಯರು ತಾ. 12ರಂದು ಉದ್ಘಾಟಿಸಿದರು. ಸಮಾರಂಭವು ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿಯ ಸಭಾಸದನದಲ್ಲಿ ಜರಗಿತು.

ಆರಂಭದಲ್ಲಿ ಕುಂದಾಪುರ ಅಸಿಸ್ಟಾಂಟ್ ಕಮಿಷನರ್ ಶ್ರೀ ಟಿ. ಜಿ. ಬಂಗೇರರು ಸ್ವಾಗತಿಸಿ ಯೋಜನೆಯ ಮೂಲೋದ್ದೇಶಗಳನ್ನು ವಿವರಿಸಿದರು. ಉದ್ಘಾಟಕ ಶ್ರೀ ಬಾಲಸುಬ್ರಹ್ಮಣ್ಯರು ಮಾತನಾಡುತ್ತಾ, ಸಣ್ಣ ಕೃಷಿ ಕಾರ್ಮಿಕರಿಗೆ ನೆರವು ನೀಡಿ, ಅವರ ಜೀವನದಲ್ಲಿ ತಲೆದೋರಿರುವ ನೈರಾಶ್ಯವನ್ನು ಹೋಗಲಾಡಿಸುವುದಕ್ಕೂ ಅವರಲ್ಲಿ ಆತ್ಮ ವಿಶ್ವಾಸ ಹುಟ್ಟುವಂತೆ ಮಾಡುವುದಕ್ಕೂ ನಾವು ಪ್ರಯತ್ನಿಸಬೇಕಾಗಿದೆ ಎಂದರು. ಇದೊಂದು ಪ್ರಾಯೋಗಿಕ ಯೋಜನೆ. ಈ ಯೋಜನೆ ಫಲಕಾರಿಯಾಗಲು ಸಾರ್ವಜನಿಕರು, ಸಹಕಾರಿ ಸಂಸ್ಥೆಗಳೂ ಸ್ಥಳೀಯ ಜನರೂ ಸಹಕಾರ ನೀಡಬೇಕು ಎಂದು ಹೇಳಿ ಇದು ಯಶಸ್ವಿಯಾದರೆ ಇದಕ್ಕಿಂತಲೂ ಹೆಚ್ಚಿನ ಆರ್ಥಿಕ ನೆರವನ್ನು ಸರಕಾರದಿಂದ ಒದಗಿಸುವುದಾಗಿ ನುಡಿದರು.

ಸಹಕಾರಿ ಸಂಸ್ಥೆಗಳ ಜ್ಯೊಂಟ್ ರಿಜಿಸ್ಟ್ರಾರ್ ಶ್ರೀ ಪಿ. ಡಿ. ಶ್ಯಾಮಸುಂದರರು ಮಾತನಾಡುತ್ತ ಈ ಯೋಜನೆಯ ರೂಪರೇಖೆಗಳನ್ನು ವಿವರಿಸಿ ಸಂಬಂಧಪಟ್ಟವರು ಇದರ ಪ್ರಯೋಜನ ಪಡೆಯುವಂತಾಗಬೇಕೆಂದರು.

ಈ ಯೋಜನಾ ಮಂಡಳಿಯ ಓರ್ವ ಆಡಳಿತ ಸದಸ್ಯರೂ ದ. ಕ. ಜಿಲ್ಲಾ ಎಸ್. ಕೆ. ಸಿ. ಸಿ. ಬ್ಯಾಂಕಿನ ಅಧ್ಯಕ್ಷರೂ ಆಗಿರುವ ಶ್ರೀ ಬಿ. ನಾರಾಯಣ ನಾಯಕರು ಕೃಷಿ ಹಾಗೂ ಸಹಕಾರಿ ಕ್ಷೇತ್ರದಲ್ಲಿ ಆಗಿರುವ ಪ್ರಗತಿಯನ್ನು ವಿವರಿಸಿ ಧನ್ಯವಾದ ಸಮರ್ಪಿಸಿದರು.

ಈ ಯೋಜನೆ ಜಿಲ್ಲೆಯ ಉಡುಪಿ ಮತ್ತು ಕುಂದಾಪುರ ತಾಲೂಕುಗಳಲ್ಲಿ ಕಾರ್ಯಗತಗೊಳಿಸಬೇಕಾಗಿದ್ದು ಇದು 2.5 ಎಕರೆಗಳಿಗಿಂತ ಕಡಿಮೆಯಿರುವ ಸುಮಾರು 20 ಸಾವಿರ ಮಂದಿ ಸಣ್ಣ ಕೃಷಿಕರು ಮತ್ತು ಅಷ್ಟೇ ಮಂದಿ ಕೃಷಿ ಕಾರ್ಮಿಕರಿಗೆ ಅನ್ವಯವಾಗುತ್ತದೆ.

ಭಾರತ ಸರಕಾರವು ಸಣ್ಣ ಕೃಷಿಕರು ಮತ್ತು ಕೃಷಿ ಕಾರ್ಮಿಕರಿಗೆ ನೆರವು ನೀಡುವ ದೃಷ್ಟಿಯಿಂದ ರಾಜ್ಯದಲ್ಲಿ ಐದು ಮಾರ್ಗದರ್ಶಕ ಯೋಜನೆಗಳನ್ನು ಮಂಜೂರುಮಾಡಿದೆ. ಅಲ್ಲದೆ ರಾಜ್ಯ ಸರಕಾರ್ರ ತನ್ನ ಸ್ವಂತ ನಿಧಿಯಿಂದ ಇನ್ನೂ ಎರಡು ಯೋಜನೆಗಳನ್ನು ಮಂಜೂರುಮಾಡಿದೆ. ಹೀಗೆ ಮೈಸೂರುರಾಜ್ಯಕ್ಕೆಏಳುಯೋಜನೆಗಳುದೊರಕಿವೆ.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 128/1971

ಸುಂದರಿ ಸೆಡ್ತಿ ಕೂಡಾ —ವಾದಿರು.

ಮತ್ತು

ನಾರಾಯಣ ಸೆಟ್ಟಿ ಕೂಡಾ —ಪ್ರತಿವಾದಿರು.

ಇವರೊಳಗೆ

37ನೇ ಪ್ರತಿವಾದಿ—ಸುರೇಂದ್ರ ಸೆಟ್ಟಿ–ರತಿ ಸೆಡ್ತಿ ಮಗ, residing at 75/2684 Tilak Nagar, Chembur—Bombay-71–ಇವರ ಅಷ್ಟೆರು ವಾಸಸ್ಥಾನಕ್ಕೆ ತಿಳಿಯಪಡಿಸುವುದೇನೆಂದರೆ:—

ವಾದಿರು ನಿಮ್ಮ ಮೇಲೆ ಕೂಡಾ ಒಟ್ಟು 46 ಜನರ ಮೇಲೆ ಮಾಡಿದ ಮೇಲಿನ ಪಾಲಿನ ವ್ಯಾಜ್ಯವು ನಿಂಮು (37ನೇ ಪ್ರತಿವಾದಿಯು) ಅಷ್ಟೆರು ನೋಟೀಸಿನ ಬಗ್ಗೆ ತಾರೀಖು 10—9—71ಕ್ಕೆ ಇಟ್ಟಿರುವುದರಿಂದ ಸದ್ರಿ 37ನೇ ಪ್ರತಿವಾದಿಯು ಉದಹರಿಸತಕ್ಕದ್ದು ಇದ್ದಲ್ಲಿ ಸದ್ರಿ ಮೇಲೆ ಹೇಳಿದ 10—9—71ನೇ ತಾರೀಕಿನ ದಿವಸ ಮೇಲ್ಕಂಡ ಕೋರ್ಟಿಗೆ ಹಗಲು 11ಗಂಟೆಯ ಒಳಗೆ ಹಾಜರಾಗಿ ಜಾಹೀರು ಮಾಡಿಕೊಳ್ಳ ತಕ್ಕದ್ದು. ತಪ್ಪಿದರೆ ನಿಂಮು ಗೈರುಹಾಜರಿಯಲ್ಲಿ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

ಕೋರ್ಟು ಹುಕ್ಕುಂ ಪ್ರಕಾರ

Sd. B. Ananda Shetty
Advocate for Plaintiffs.

ಉಡ್ಪಿ, ತಾ. 19-8-71

ಎಂ. ಜಿ. ಎಂ. ಕಾಲೇಜು ವಿದ್ಯಾರ್ಥಿ ಪರಿಷತ್ತಿನ ಉದ್ಘಾಟನೆ

ಇದೇ ತಾ. 10-8-71ರಂದು ಉಡುಪಿಯ ಎಂ. ಜಿ. ಎಂ. ಕಾಲೇಜಿನ ವಿದ್ಯಾರ್ಥಿ ಕೌನ್ಸಿಲನ್ನು ಮಂಗಳೂರಿನ ಸುಪ್ರಸಿದ್ಧ ಸರ್ಜನ್ ಡಾ| ಎಂ. ವಿ. ಶೆಟ್ಟರು ಉದ್ಘಾಟಿಸುತ್ತಾ ಶಿಕ್ಷಣ ಸುಧಾರಕರು ವಿದ್ಯಾರ್ಥಿಗಳಲ್ಲಿ ಪಾಠೇತರ ಚಟುವಟಿಕೆಗಳನ್ನು ಮೂಡಿಸಿ ರೂಢಿಸಲು ಅತಿ ಗಮನ ಕೊಡಬೇಕೆಂದೂ, ಶಿಕ್ಷಣಾನಂತರದ ಕಾಲೇಜಿನ ಹೊರಗಿನ ಬದುಕು ವಿದ್ಯಾರ್ಥಿಗಳು ನಿರೀಕ್ಷಿಸಿದಷ್ಟು ಸುಲಭವಾಗಿರದೆ ಬದುಕಿನುದ್ದಕ್ಕೂ ಬರುವ ಎಡರು ತೊಡರುಗಳನ್ನು ಸಹಿಸಿಕೊಳ್ಳಬೇಕಾಗುತ್ತದೆಂದೂ ಈ ಬಗ್ಗೆ ಪಾಠದ ಜತೆಗೆ ಪಾಠೇತರ ಸಂಗೀತ, ಭಾಷಣ, ಆಟ, ನಾಟಕ ಇತ್ಯಾದಿ ಕಲೆಗಳಲ್ಲಿ ನೈಪುಣ್ಯಗಳಿಸಬೇಕೆಂದೂ ಹೇಳಿದರು. ಮುಂದುವರಿಯುತ್ತಾ ಪಾಠೇತರ ಚಟುವಟಿಕೆಗಳಿಗೆ ಗಮನ ಕೊಡದ ವಿದ್ಯಾರ್ಥಿಗಳು ಸರಕಾರಿ ನೌಕರಿಗೆ ಮಾತ್ರ ಯೋಗ್ಯರಾದಾರು ಎಂದು ಅಭಿಪ್ರಾಯಪಟ್ಟರು. ಎಂ. ಜಿ. ಎಂ. ಕಾಲೇಜಿನ ಉನ್ನತ ಶಿಕ್ಷಣ ಪರಂಪರೆಗಾಗಿ ವಿದ್ಯಾರ್ಥಿಗಳು ಅಭಿಮಾನ ಪಡ ಬೇಕೆಂದರು.

ವಿದ್ಯಾರ್ಥಿ ಉಪಾಧ್ಯಕ್ಷ ಕೆ. ಜಯರಾಮ ಶೆಟ್ಟರು ಸ್ವಾಗತಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು ಪ್ರಾಸ್ತಾವಿಕವಾಗಿ ಡಾ| ಶೆಟ್ಟರ ಸೌಜನ್ಯವನ್ನು ಸ್ಮರಿಸಿದರಲ್ಲದೆ ವಿದ್ಯಾರ್ಥಿಗಳು ಪಾಠಗಳಲ್ಲಿಯೂ, ಪಾಠೇತರ ವಿಷಯಗಳಲ್ಲಿಯೂ ಉನ್ನತಮಟ್ಟ ಸಾಧಿಸುವಂತಾಗಲೆಂದು ಹಾರೈಸಿದರು. ಅಂತ್ಯದಲ್ಲಿ ಕಾರ್ಯದರ್ಶಿ ಗಣಪತಿ ಅಯ್ಯರ್ ಕೃತಜ್ಞತೆಗಳನ್ನರ್ಪಿಸಿದರು.

ಕವಿಶ್ರೇಷ್ಠ ಪ್ರೊ| ಪರಮೇಶ್ವರ ಭಟ್ಟರಿಗೆ ಹೃದಯ ಸ್ಪರ್ಶಿ ಸನ್ಮಾನ ಸಮಾರಂಭ

ಕನ್ನಡದ ಕವಿಶ್ರೇಷ್ಠ, ವಾಗ್ಮಿ, ವಿದ್ವಾಂಸ, ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ವಿಜೇತ, ಮಂಗಳೂರು ಮಂಗಳ ಗಂಗೋತ್ರಿಯ ನಿರ್ದೇಶಕ ಪ್ರೊ| ಪರಮೇಶ್ವರ ಭಟ್ಟರನ್ನು ತಾ. 14—8—71ರಂದು ಮಂಗಳೂರಿನ ಗಣಪತಿ ಹಾಯರ್ ಸೆಕೆಂಡರಿ ಶಾಲೆಯ ಸಭಾಮಂದಿರದಲ್ಲಿ ಪ್ರೊ| ಎಸ್. ವಿ. ಪಿ. ಸನ್ಮಾನ ಸಮಿತಿಯವರು ಡಾ| ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಸನ್ಮಾನಿಸಿ ಗೌರವಿಸಿದರು. ಸನ್ಮಾನ ಸಮಿತಿಯ ಅಧ್ಯಕ್ಷ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರು ಸ್ವಾಗತಿಸುತ್ತಾ ಪ್ರೊ| ಪರಮೇಶ್ವರ ಭಟ್ಟರ ವಿದ್ವತ್ತು, ಪ್ರತಿಭೆ, ಸರಳತೆಯೇ ಮೊದಲಾದ ಅಪೂರ್ವ ಗುಣಗಳನ್ನು ವಿವರಿಸಿ ಈ ಸನ್ಮಾನವು ಒಬ್ಬ ಕವಿಗೆ, ಸಾಹಿತಿಗೆ ಕೊಡುವ ಸನ್ಮಾನವಲ್ಲವೆಂದೂ, ಸಮಾಜಕ್ಕೆ ಬಂದವರನ್ನು ಮಾನವೀಯ ಪ್ರೇಮಾದರಗಳಿಂದ ಉಪಚರಿಸುವ ದೊಡ್ಡ ಮನಸ್ಸಿನ ಮಹಾನುಭಾವರಿಗೆ ನೀಡುವ ಸನ್ಮಾನವಾಗಿದೆಯೆಂದೂ ಹೇಳಿದರು.

ಶ್ರೀ ಪ್ರೇಮಾನಂದ ಕಿಶೋರ್ ಸಂದೇಶಗಳನ್ನೂ ಶ್ರೀ ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರು ಸನ್ಮಾನ ಸಮಿತಿಯ ಮಾನಪತ್ರವನ್ನೂ ಓದಿದರು.

ಶ್ರೀ ಕಯ್ಯಾರ ಕಿಞ್ಞಣ್ಣ ರೈಯವರೂ, ಡಾ| ಎಂ. ಪಿ. ಪೈಯವರೂ ಅಭಿನಂದನ ಭಾಷಣ ಮಾಡಿ ಪ್ರೊ| ಭಟ್ಟರ ವಿಶಿಷ್ಟ ಸಾಹಿತ್ಯ ಸೇವೆಯನ್ನು ಶ್ಲಾಘಿಸಿದರು. ಪ್ರೊ| ಭಟ್ಟರು ತಮಗೆ ಕೊಟ್ಟ ಸನ್ಮಾನಕ್ಕೆ ಕೃತಜ್ಞತೆ ಸೂಚಿಸಿ ಮಾತನಾಡುತ್ತಾ ಮಂಗಳೂರಿನ ಜನತೆ ನನ್ನನ್ನು ಪ್ರೀತಿಯಿಂದ ನೋಡಿದ್ದಾರೆ. ಇವರೆಲ್ಲರ ಕೃಪಾಶ್ರಯದಿಂದಲೇ ಕನ್ನಡ ಸೇವೆ ಮಾಡಲು ನನಗೆ ಸಾಧ್ಯವಾಯಿತು. ಇವರೆಲ್ಲರ ಪ್ರೇಮಾದರಗಳಿಗೆ ನಾನು ಆಭಾರಿಯಾಗಿದ್ದೇನೆ ಎಂದು ಹೇಳಿದರು.

ಅಧ್ಯಕ್ಷ ಡಾ| ಕಾರಂತರು ಮಾತನಾಡುತ್ತಾ, ಪ್ರೊ| ಭಟ್ಟರು ನಮ್ಮ ಜಿಲ್ಲೆಗೆ ಮನೆಯಳಿಯನಂತೆಯೇ ಬಂದು ಇಷ್ಟೊಂದು ಸೇವೆ ಗೈದು ಇಲ್ಲಿಯ ಜನತೆಯೊಡನೆ ಬೆರೆತುಕೊಂಡುದು ಅವರ ಹಿರಿತನವಾಗಿದೆಯೆಂದೂ ಈ ಸನ್ಮಾನ ಸಮಾರಂಭದಲ್ಲಿ ಇಷ್ಟೊಂದು ದೂರದ ಜನರು ಬಂದು ಅವರನ್ನು ಗೌರವಿಸಿದ್ದೇ ಇದಕ್ಕೊಂದು ನಿದರ್ಶನವೆಂದೂ, ಭಟ್ಟರು ಬರವಣಿಗೆಯಲ್ಲಿ ಅತಿ ನಿಷ್ಠೆಯಿಂದ ದುಡಿದವರೆಂದೂ, ಇಂತಹ ಸನ್ಮಾನಕ್ಕಿಂತಲೂ ಅವರ ಕೃತಿಗಳನ್ನು ಖರೀದಿಸಿ ಓದುವುದರ ಮೂಲಕ ಅವರನ್ನು ಗೌರವಿಸಲು ಜನ ಮುಂದಾಗಬೇಕೆಂದೂ ಅವರಿಂದ ಇನ್ನೂ ಹೆಚ್ಚಾದ ಸಾಹಿತ್ಯ ಸೇವೆ ಆಗಲೆಂದೂ ಹೇಳಿ ಸನ್ಮಾನ ಸಮಿತಿಯವರನ್ನು ಅಭಿನಂದಿಸಿದರು. ಶ್ರೀಗಳಾದ ಬಿ. ಎಂ. ಇದಿನಬ್ಬ, ದಾಮೋದರಕೃಷ್ಣ ಹೊದ್ವಾಳ್ ಇವರು ಪ್ರೊ| ಭಟ್ಟರ ಕೆಲವು ಗೀತೆಗಳನ್ನು ಓದಿದ ಬಳಿಕ ಸಮಿತಿಯ ಕಾರ್ಯದರ್ಶಿ ಶ್ರೀ ಎಲ್ಲೂರು ಉಮೇಶರಾಯರು ವಂದನಾರ್ಪಣೆ ಗೈದರು.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಜನಪ್ರಿಯ ಆಂಗ್ಲ ಸ್ವಯಂಬೋಧಿನಿ ಬೆಲೆ: ರೂ. 2 00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಸಮೂಲ ಅನುವಾದ. 450 ಪುಟಗಳ ಸುಂದರ ಕೃಹೊತ್ತಗೆ ಬೆಲೆ: ರೂ. 2-00

ಮನೆ-ಮದ್ದು Home Remedies

ಡಾ| ವಿ. ಆರ್. ಕೊರಡ್ಕರ್‌ರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ಸುಲಭ ವಿಧಾನಗಳಿವೆ. ಹೆರಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟ ಸಂಗ್ರಾಹ್ಯ ಪುಸ್ತಕ. ಬೆಲೆ: ರೂ. 2-00

ವಿ. ಪೊ. ಪಿ. ಮಾಡುವುದಿಲ್ಲ. ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಅಂಚೆ ವೆಚ್ಚ ಸೇರಿಸಿ ಮನಿಯಾರ್ಡರು ಮಾಡಿದರೆ ಬುಕ್ ಪೋಸ್ಟ್ ಮಾಡಲಾಗುವುದು.

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಪಾಲುಕೋಟೆ, ಉಡುಪಿ.

ಶಿರ್ವ ರೋಟರಿ ಕ್ಲಬ್ಬಿನಲ್ಲಿ ಡಾ| ಸಿ. ಸಿ. ವಾರ್ಕಿಯವರು

ರೊಟೇರಿಯನ್ ರೆ. ಫಾ. ಸಲ್ದಾನ್ಹರ ಅಧ್ಯಕ್ಷತೆಯಲ್ಲಿ ಶಿರ್ವ ರೋಟರೀ ಕ್ಲಬ್ಬಿನಲ್ಲಿ ಕಸ್ತೂರ್ ಬಾ ಮೆಡಿಕಲ್ ಕಾಲೇಜಿನ ಸಹ ಪ್ರೊಫೆಸರ್ ಡಾ| ಸಿ. ಸಿ. ವಾರ್ಕಿಯವರು ಹೃದ್ರೋಗಗಳು ಮತ್ತು ಅವುಗಳ ನಿವಾರಣೆ ಎಂಬ ವಿಷಯಗಳ ಕುರಿತು ಭಾಷಣವಿತ್ತರು.

ಆರಂಭದಲ್ಲಿ ರೋ. ಡಾ| ಕೆ. ಆರ್. ವಿ. ಕೃಷ್ಣ ಅವರು ಡಾ| ವಾರ್ಕಿಯವರ ಪರಿಚಯ ಮಾಡುತ್ತ ಕೇರಳದಲ್ಲಿ ಜನಿಸಿ, ಮುಂಬಾಯಿ, ಇಂಗ್ಲೆಂಡ್, ಸ್ಕೋಟ್‌ಲೆಂಡ್ ಮತ್ತು ಸಂಯುಕ್ತ ಅಮೇರಿಕಾದಲ್ಲಿ ಹೃದ್ರೋಗಗಳ ಕುರಿತು ವಿಶೇಷ ಅಧ್ಯಯನ ನಡೆಸಿದ ಡಾ| ವಾರ್ಕಿಯವರು ನಮ್ಮ ಜಿಲ್ಲೆಗೆ ಹೆಮ್ಮೆಯ ಮೂಲಧನವಾಗಿರುವರು ಎಂದು ಹೇಳಿದರು. ಡಾ| ವಾರ್ಕಿಯವರು ಸಾಮಾನ್ಯ ರಕ್ತ ಪರಿಚಲನೆಯ ಕುರಿತು ಮಾತಾಡಿ ಪ್ರಧಾನವಾದ ಮೂರು ವಿಧಗಳ ಹೃದಯ ರೋಗಗಳನ್ನು ಹೆಸರಿಸಿದರು. ದುರ್ಬಲ ಹೃದಯ, ರಕ್ತನಾಳಗಳ ಒಳಗೆ ಮುದ್ದು ಕುಳಿತುಕೊಂಡು ರಕ್ತ ಪರಿಚಲನೆಗೆ ತಡೆ, ಮತ್ತು ರಕ್ತ ಹೆಪ್ಪುಗಟ್ಟುವುದು.

ಇಂತಹ ಹೃದ್ರೋಗಗಳಿಗೆ ಅನೇಕ ಕಾರಣಗಳಿವೆ ಎಂದೂ, ಮಧುಮೇಹ ಅಥವಾ ಸಿಹಿಮೂತ್ರ, ಅಧಿಕ ಕೊಬ್ಬು, ಧೂಮ್ರಪಾನ, ಬೇಕಾದ್ದಕ್ಕಿಂತ ಹೆಚ್ಚಿನ ದೇಹ ಬೆಳವಣಿಗೆ ಇವು ಮುಖ್ಯವಾದ ಕಾರಣಗಳೆಂದೂ, ವಿವರಿಸಿದರು. ಆದರೆ ವೈಯುಕ್ತಿಕ ರೋಗಗಳ ಪೂರ್ವ ಚರಿತ್ರೆಯನ್ನು ತಿಳಿದೇ ನಿರ್ಣಯಿಸಬೇಕಲ್ಲದೆ, ಇಂತಹದೇ ಕಾರಣವೆಂದು ಸ್ಪಷ್ಟ ಹೇಳಲು ಸಾಧ್ಯವಿಲ್ಲವೆಂದರು. ಹೃದಯರೋಗ ಗುಣವಾದ ಬಳಿಕ ರೋಗಿಗಳು ಅನುಸರಿಸಬೇಕಾದ ವ್ಯಾಯಾಮ, ಆಹಾರ, ಇತ್ಯಾದಿಗಳ ವಿಷಯವನ್ನೂ ವಿವರಿಸಿದರು. ಕೊನೆಗೆ ಸಭಿಕರು ಕೇಳಿದ ಬದಲಿ ಹೃದಯ ಜೋಡಣೆ, ಸಾಮಾನ್ಯ ಎದೆ ನೋವು, ರಕ್ತನಾಳಗಳು ಗಟ್ಟಿಕಟ್ಟುವಿಕೆ, ಜೀರ್ಣಶಕ್ತಿ ಕುಗ್ಗುವುದರಿಂದ ಉಂಟಾದ ಕಾಯಿಲೆಗಳು, ರಕ್ತನಾಳಗಳ ರೋಗಗಳು ಇತ್ಯಾದಿ ವಿಚಾರಗಳ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ನೀಡಿದರು. ರೋ. ವಿಠಲ ಶೆಣೈಯವರು ಅತಿಥಿಗಳ ಇಂಗ್ಲೀಷ್ ಭಾಷಣವನ್ನು ಕನ್ನಡಕ್ಕೆ ಭಾಷಾಂತರಿಸಿದರು.

ಕೊನೆಗೆ ಜತೆಕಾರ್ಯದರ್ಶಿ ರೋ. ಬಿ. ಶಂಭು ಶೆಟ್ಟಿಯವರು ಧನ್ಯವಾದವಿತ್ತರು. ಅಂತ್ಯದಲ್ಲಿ ಕ್ಲಬ್ಬಿನ ಅಧ್ಯಕ್ಷ ರೋ. ರೆ. ಫಾ. ಸಲ್ದಾನ್ಹರು ತನ್ನ ಹುಟ್ಟುಹಬ್ಬದ ನಿಮಿತ್ತ ಭೋಜನಕೂಟವನ್ನು ಏರ್ಪಡಿಸಿದ್ದರು.

ನವಯುಗ

ಹೊನ್ನ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ

ಹೊನ್ನ ಹಬ್ಬದ ವಿಶೇಷ ಸಂಚಿಕೆಗೆ ಜಾಹೀರಾತು ಕೊಟ್ಟು ಸಹಕರಿಸಿರಿ.

ತೊಡಗಿಸಿದವರು– ಮಾಡಿದವರು ಯಾರು?

(ನಾಲ್ಕನೇ ಪುಟದಿಂದ)

ಧಪಟ್ಟಿದ್ದ ಸಂಖ್ಯೆಗಳು ಇಮ್ಮಡಿಯಾದುವು.

ಸೆಪ್ಟೆಂಬರ್ ದಿನಾಂಕ 10ರಂದು ತುರ್ತು ಸಹಾಯಕ್ಕಾಗಿ ಪೋಲೆಂಡಿನಿಂದ ಬಂದ ಕೋರಿಕೆಗೆ ಉತ್ತರವಾಗಿ, (ಜರ್ಮನಿಯ ಫಾಸಿಸ್ಟ್ ಪಡೆಗಳ ಅಗ್ರ ರಂಗದ ತುಕಡಿಗಳು ಆ ವೇಳೆಗಾಗಲೇ ನೇರವಾಗಿ ವಾರ್ಸಾ ಸಮೀಪದಲ್ಲಿದ್ದುವು) ಬ್ರಿಟನ್ನಿನ ಸರ್ವಸೇನಾಧ್ಯಕ್ಷರಾಗಿದ್ದ ಫೀಲ್ಡ್ ಮಾರ್ಷಲ್ ಅಯರ್ನ್‌ಸೈಡ್ ಅವರು ಭೂಖಂಡದ ಮೇಲಿನ ಕಾರ್ಯಾಚರಣೆಯು ಫ್ರೆಂಚ್ ಸೈನ್ಯಕ್ಕೆ ಸಂಬಂಧಪಟ್ಟ ವ್ಯವಹಾರವೆಂದು ಹೇಳಿದರು, ತಟಸ್ಥ ದೇಶಗಳಿಂದ ಕೆಲವು ಶಸ್ತ್ರಾಸ್ತ್ರಗಳನ್ನು ಕೊಳ್ಳಬೇಕೆಂದು ತಮ್ಮ ಕಡೆಯಿಂದ ಸಲಹೆಯನ್ನು ನೀಡಿದರು.

ಪೋಲೆಂಡಿನ ಪಾಶ್ಚಾತ್ಯ ಮಿತ್ರರಾಜ್ಯಗಳು ಅಪಾಯದ ಸಮಯದಲ್ಲಿ ಅದನ್ನು ಕೈ ಬಿಟ್ಟರು. ಹಿಟ್ಲರ್ ಸೇನೆಗಳು ಪೂರ್ವ ದಿಶೆಗೆ ವೇಗವಾಗಿ ಚಲಿಸುತ್ತ ಸೋವಿಯತ್ ಒಕ್ಕೂಟದ ಮೇಲೆ ಹಾಗೆಯೇ ನೇರವಾಗಿ ದಾಳಿ ನಡೆಸುವುವೆಂದು ಪಾಶ್ಚಾತ್ಯ ಆಡಳಿತ ವಲಯಗಳು ನಂಬಿ ಕೊಂಡಿದ್ದುವು. ತನ್ನ ಹಿಂಬದಿಯ ಭೀತಿಯಿಲ್ಲದೆಯೇ ಹಿಟ್ಲರನು ಸೋವಿಯತ್ ಒಕ್ಕೂಟದ ಮೇಲೆ ದಾಳಿ ನಡೆಸಬಹುದೆಂದು ಅವು ಹಿಟ್ಲರನಿಗೆ ಸ್ಪಷ್ಟವಾಗಿ ಸೂಚಿಸಿದ್ದುವು. ಸೋವಿಯತ್ ರಾಜ್ಯದ ಬಗೆಗೆ ತಮಗಿದ್ದ ವರ್ಗ ದ್ವೇಷದಿಂದ ಕುರುಡರಾಗಿ, ಜರ್ಮನಿಯೊಡನೆ ಯುದ್ಧ ಸ್ಥಿತಿಯಲ್ಲಿದ್ದ ಪಾಶ್ಚಾತ್ಯ ದೇಶಗಳು ಸೋವಿಯತ್ ಒಕ್ಕೂಟದ ವಿರುದ್ಧವಾಗಿ ದಾಳಿಯ ಯೋಜನೆಗಳನ್ನು ವಿಸ್ತಾರವಾಗಿ ರೂಪಿಸುತ್ತಿದ್ದುವು.

ಆದರೆ, ಇಂಗ್ಲೆಂಡ್, ಫ್ರಾನ್ಸ್ ಮತ್ತು ಸಂ. ರಾ. ಅಮೆರಿಕ ದೇಶಗಳ ಆಡಳಿತ ವಲಯಗಳು ತಮ್ಮ ಸ್ವಂತ ಹ್ರಸ್ವ ದೃಷ್ಟಿ ದೋಷದ ನೀತಿಗೆ, ಸ್ವತಃ ತಾವೇ ಬೇಗ ತುತ್ತಾಗಬೇಕಾಯಿತು. ಅವರ ಲೆಕ್ಕಾಚಾರಗಳಿಗೆ ವಿರುದ್ಧವಾಗಿ, ಹಿಟ್ಲರನು ಪಾಶ್ಚಾತ್ಯ ಜಗತ್ತಿನ ಕಡೆಗೆ ತಿರುಗಿದನು.

ಇಂಗ್ಲೆಂಡ್, ಫ್ರಾನ್ಸ್ ಮತ್ತು ಸಂ. ರಾ. ಅಮೆರಿಕ ದೇಶಗಳ ಪ್ರತಿಗಾಮಿ ವಲಯಗಳು ಕಟ್ಟಕಡೆಗೆ ತಾವು ಬಯಸಿದುದನ್ನು ಪಡೆದುವು. ಜರ್ಮನಿಯು ಸೋವಿಯೆತ್ ಒಕ್ಕೂಟದ ವಿರುದ್ಧವಾಗಿ ದಾಳಿ ಮಾಡಿತು. ಆದರೆ ಆ ವೇಳೆಗೆ ಅವರ ಸ್ವಂತ ಅಸ್ತಿತ್ವವೇ ಸೋವಿಯೆತ್ ಒಕ್ಕೂಟವು ಯುದ್ಧ ನಿಭಾಯಿಸಿ ವಿಜಯ ಸಾಧಿಸುವ ಸಾಮರ್ಥ್ಯವನ್ನು ಅವಲಂಬಿಸಿಕೊಂಡಿತ್ತು. ಹಿಟ್ಲರ್ ವಿರೋಧಿ ಮೈತ್ರಿಯ ಕೂಟದ ರಚನೆಗೆ ಇದೇ ನಿರ್ಣಾಯಕವಾದ ಪೂರ್ವ ಕಾರಣವಾಯಿತು.

ಇತಿಹಾಸದ ಸತ್ಯವನ್ನು ತಿರಸ್ಕರಿಸಲಾಗದು. ಎರಡನೆಯ ಪ್ರಪಂಚ ಯುದ್ಧದ ನೇರವಾದ ಹೂಡಿಕೆಗೆ ಜವಾಬುದಾರಿಯು ಹಿಟ್ಲರ್ ಜರ್ಮನಿಯ ನೇತೃತ್ವದಲ್ಲಿದ್ದ ಫಾಸಿಸ್ಟ್ ರಾಜ್ಯ ಶಕ್ತಿಗಳ ಮೇಲೆಯೂ ಪ್ರತಿಗಾಮಿ ಆಡಳಿತ ವಲಯಗಳ ಮೇಲೆಯೂ ಇದ್ದಿತು ಸಾಮ್ರಾಜ್ಯವಾದೀ ಪಾಶ್ಚಾತ್ಯ ರಾಜ್ಯ ಶಕ್ತಿಗಳ ಸಹಾಯದಿಂದ ಜರ್ಮನಿಯಲ್ಲಿ ಸೈನಿಕವಾದವನ್ನೂ ಸೈನಿಕ ಔದ್ಯೋಗಿಕ ಅಂತಃಶಕ್ತಿಯನ್ನೂ ಪುನಃ ಸ್ಥಾಪಿಸುವುದು ಫಾಸಿಸ್ಟ್ ಆಕ್ರಮಣಕ್ಕೆ ಅತ್ಯಂತ ಮುಖ್ಯವಾದ ಪೂರ್ವಾವಶ್ಯಕತೆಯಾಗಿತ್ತು. ಇಂಗ್ಲೆಂಡ್, ಫ್ರಾನ್ಸ್ ಮತ್ತು ಸಂ. ರಾ. ಅಮೆರಿಕ ದೇಶಗಳು ಅನುಸರಿಸಿದ ತಥಾಕಥಿತ 'ಸಮಾಧಾನ' ನೀತಿಯು, ಸೋವಿಯೆತ್ ಒಕ್ಕೂಟದ ವಿಷಯದಲ್ಲಿ ಜರ್ಮನಿಯ ದಂಡಯಾತ್ರೆಯ ಯೋಜನೆಗಳಿಗೆ ಪ್ರೋತ್ಸಾಹ ನೀಡಿದ ನೀತಿಯು. ಆಕ್ರಮಣಕ್ಕೆ ಮಾರ್ಗವನ್ನು ತೆರೆಯಿತು.

ಇತಿಹಾಸದ ಸತ್ಯ ಇಂತಹುದು. ಐವತ್ತು ಮಿಲಿಯಕ್ಕಿಂತಲೂ (5 ಕೋಟಿಗಿಂತಲೂ) ಹೆಚ್ಚು ಮಾನವ ಜೀವಗಳನ್ನು ಆಹುತಿ ತೆಗೆದುಕೊಂಡ ಯುದ್ಧದ ಬಗೆಗೆ ಹೊಣೆಯನ್ನು ಹೊರಬೇಕಾದ ಸಾಮ್ರಾಜ್ಯವಾದಕ್ಕೆ ಈ ಇತಿಹಾಸ ಸತ್ಯವು ಚೀಲಪಟ್ಟಿಯನ್ನು (ಬಿಲ್) ಒಪ್ಪಿಸುತ್ತಿದೆ. ಇದನ್ನು ಸಂದಾಯ ಮಾಡುವುದು, ಈ ಸಾಲವನ್ನು ತೀರಿಸುವುದು ಎಂದಿಗೂ ಸಾಧ್ಯವಿಲ್ಲ. ●

ಗೇಹರಾಜ್ಯದಲ್ಲಿ

ಖಾನರ ಹಾವಿಗೆ ನಿಕ್ಸನರ ವಿಷದೌತಣ

'ಅಲ್ರಿ, ತ್ರಿಪುರಾದ ಗಡಿ ನುಗ್ಗಿ ಪಾಕಿಸ್ತಾನಿಗಳು ಹದಿಮೂರು ಜನ ಭಾರತೀಯರನ್ನು ಕೊಂದು ಹಾಕಿದರಂತಲ್ಲಾ....'

"ಬಂಗ್ಲಾದೇಶದಲ್ಲಿ ಲಕ್ಷಾಂತರ ಸ್ವದೇಶಿಗಳನ್ನೆ ಸಮಾಧಿ ಮಾಡಿದವರಿಗೆ ಇದೇನು ಕೀರ್ತಿ ತರುತ್ತದೆ?'

"ಕೀರ್ತಿ ತರೋ ವಿಷ್ಯ ಬಿಡಿ, ನಮ್ಮ ಗಡಿ ನುಗ್ಗಿದಕ್ಕೆ, ನಮ್ಮ ಜನರನ್ನು ಕೊಂದದ್ದಕ್ಕೆ ನಾವೇನು ಮಾಡ್ತೇವೆ?"

'ಅಲ್ವೆ, ಜನಸಂಖ್ಯೆ ಸ್ಫೋಟಕ ಗಟ್ಟಕ್ಕೆ ಬಂದಿರುವಾಗ, ಹದಿಮೂರು ಜನವಾದ್ರೂ ಕಡಿಮೆಯಾಯ್ತೆಂದು ಸಂತೋಷ ಪಡಬೇಕು; ಒಳಗಿಂದೊಳಗೇ ಅನ್ನು. ಮತ್ತೆ ಹೊರಗಿನವರ ಕಣ್ಣಿಗೆ ಮಣ್ಣೆರಚಲೆಂದು ತೀವ್ರ ಪ್ರತಿಭಟನೆ ಸಲ್ಲಿಸಿದರೆ ನಮ್ಮ ಕೆಲಸ ಮುಗಿದು ಹೋಯ್ತು....'

'ಯಾಹ್ಯಾಖಾನರು ಭಾರೀ ಸೊಕ್ಕಿದವರಂತೆ ಕಾಣಿಸ್ತಾರೆ....'

'ಹಾವಿಗೆ ಹಾಲೆರೆದು ಸಾಕಿದರೂ ಅದು ತನ್ನ ವಿಷಬಿಡುವುದಿಲ್ಲ; ಮತ್ತೆ ವಿಷವನ್ನೇ ಊಡಿಸಿದರೆ ಗತಿಯೇನಾದೀತು?

'ಅಂದರೆ?'

'ನೋಡಮ್ಮ, ಪ್ರಜಾಸತ್ತೆಯ ಪ್ರಬಲ ಸಂರಕ್ಷಕವೆನಿಸಿದ ಅಮೆರಿಕೆ ಸರ್ವಾಧಿಕಾರಿ ಖಾನರಿಗೆ ಶಸ್ತ್ರಾಸ್ತ್ರಗಳನ್ನು ಕೊಟ್ಟು ಕೊಬ್ಬಿಸುತ್ತಲೇ ಬಂದಿದೆ; ಬರುತ್ತಲೂ ಇದೆ.'

'ಹೌದು.'

'ಅದರ ಬಲದಿಂದ ಯಾಹ್ಯಾಖಾನರ ಪಿತ್ತ ಕೆದರಿ ಹೋಗಿದೆ. ಭಾರತ ಶತ್ರುತ್ವ ಪಾಕಿಸ್ತಾನದ ಜನ್ಮಸಿದ್ಧ ಹಕ್ಕು. ಅದರ ಬಲದಿಂದಲೇ ಪ್ರಾಯಃ ಅದು ಉಳಿದುಕೊಂಡಿದೆ. ಒಂದು ವೇಳೆ ಪಾಕಿಸ್ತಾನ ಭಾರತ ವಿರೋಧವನ್ನು ಬಿಟ್ಟುಕೊಟ್ಟರೆ, ಅದರ ಅಸ್ತಿತ್ವವೇ ಇಲ್ಲವಾಗಬಹುದೋ ಏನೋ ಎನಿಸುತ್ತದೆ.'

'ಅದಕ್ಕೆ?'

'ಅಮೆರಿಕೆಯು ಕಾಲಕಾಲಕ್ಕೆ ಶಸ್ತ್ರಾಸ್ತ್ರಗಳ ವಿಷದೌತಣ ಹಾಕಿ ಪಾಕ್ ಹಾವನ್ನು ಸಾಕುತ್ತ ಬಂದಿದೆ. ಮತ್ತೀಗ ಅದು ಮದೋನ್ಮತ್ತನಾಗಿ ಕಿವಿಯೊಳಗೆ ಗಾಳಿಹೊಕ್ಕ ಗೂಳಿಯಂತೆ ಯದ್ವಾತದ್ವಾ ಆಡುವುದರಲ್ಲಿ ತಪ್ಪೇನಿದೆ?'

'ಅಲ್ರಿ, ಯಾಹ್ಯಾಖಾನರು ಭಾರತದ ಮೇಲೆ ಯುದ್ಧ ಮಾಡಲು ಸರ್ವ ಸಿದ್ಧತೆಗಳನ್ನೂ ನಡೆಸಿದ್ದಾರಂತೆ....'

'ಖಂಡಿತಕ್ಕೂ, ಯುದ್ಧವನ್ನು ಪ್ರಚೋದಿಸುವ ಸರ್ವಕಾರ್ಯವನ್ನೂ ಮಾಡಿಬಿಟ್ಟಿದ್ದಾರೆ. ಕೊನೆಯ ಆಜ್ಞೆ ಹೊರಡುವುದು ಮಾತ್ರ ಬಾಕಿಯಿತ್ತು....'

'ಮತ್ತೆ?'

'ಇವರ ಸುಳಿವು ದೊರೆತದ್ದರಿಂದಲೇ ಶ್ರೀಮತಿ ಗಾಂಧಿಯವರು ಕೊಸಿಗಿನ್ನರೊಡನೆ ರಕ್ಷಣಾ ಒಡಂಬಡಿಕೆ ಮಾಡಿಕೊಂಡರು....'

'ಹ್ಞಾಂ....'

'ಈಗ ಯಾಹ್ಯಾರ ಯೋಜನೆ ತಲೆಕೆಳಗಾಯ್ತು. ಆದ್ದರಿಂದ ಮತ್ತಷ್ಟು ಶಸ್ತ್ರಾಸ್ತ್ರಗಳನ್ನು ಕೂಡಿ ಹಾಕಲು ತೊಡಗಿದ್ದಾರೆ.'

'ಅವರಿಗೇನು? ಅವರೂ ಕೊಡುತ್ತಾರೆ, ಇವರೂ ಕೊಡುತ್ತಾರೆ....'

'ಹ್ಞಾಂ. ಇನ್ನೀಗ ನಿಯತನಾಮದಲ್ಲಿರುವ ಅಮೆರಿಕನ್ ಶಸ್ತ್ರಾಸ್ತ್ರಗಳೆಲ್ಲ ಪಾಕಿಸ್ತಾನಕ್ಕೆ ಬಳುವಳಿಯಾಗಿ ಬರಲಿವೆಯಂತೆ....'

'ಸರಿ ಹೋಯ್ತು ಬಿಡಿ. ಇನ್ನೂ ಯುದ್ಧದ ಆಶೆಯನ್ನು ಯಾಹ್ಯಾ ಬಿಟ್ಟು ಕೊಡಲಿಲ್ಲ....'

'ಯಾಕೆ ಕೊಡಬೇಕು? ಅಮೆರಿಕೆ—ಕೆಂಪು ಚೀನಾಗಳು ವಿಪುಲ ಪ್ರಮಾಣದ ಸೈನಿಕ ನೆರವು ನೀಡುವಾಗ, ಅವುಗಳನ್ನು ಉಪಯೋಗಿಸದಿರುವುದು....'

'ಅದು ಸರೀನ್ನಿ. ಆದರೆ, ಒಂದು ಸಂಗತಿ....'

'ಏನು?'

'ಯಾಹ್ಯಾಖಾನರು ಭಾರತದ ಮೇಲೆ ಯುದ್ಧ ಸಾರುವುದಾದರೂ ಏತಕ್ಕೆ?'

'ಏತಕ್ಕೆ? ಅಯ್ಯೂಬಖಾನರು ಏತಕ್ಕೆ ದುರಾಕ್ರಮಣ ಮಾಡಿದರು?'

'ಕಾಶ್ಮೀರ ಕಬಳಿಸುವುದಕ್ಕೆ....'

'ಇದೂ ಅದಕ್ಕೇ ಅನ್ನು....'

'ಕಾಶ್ಮೀರ ಭಾರತದಲ್ಲಿ ವಿಲೀನವಾಗಿ ಹೋಗಿರುವಾಗ....'

'ಪಾಕಿಸ್ತಾನದ ದೃಷ್ಟಿಯಲ್ಲಿ ಕಾಶ್ಮೀರದಲ್ಲಿ ಭಾರತ ಆಕ್ರಮಣ ಮಾಡಿ ಕೂತಿದೆ..'

'ಗೂಗೆಗೆ ಹಗಲೇ ಇಲ್ಲ....'

'ಹ್ಞಾಂ....ಹಾಗೇ ಅಂದುಕೋ, ಯಾಹ್ಯಾಖಾನರು ಇನ್ನೇನು; ತಿಂಗಳೆರಡು ತಿಂಗಳಲ್ಲಿ ಧಾಳಿ ಮಾಡುತ್ತಾರೆ. ಇದಕ್ಕೆ ಬೇಕಾದ ಎಲ್ಲ ಸಿದ್ಧತೆಗಳೂ ನಡೆದಿವೆ....'

ಈಗಲೇ ಏಕೆ ಮಾಡಬಾರದು?'

'ಮಳೆಗಾಲ ತಾನೆ? ಅದರ ಮೇಲೆ ಆಗಿನ ರಾಜ್ಯಕೀಯ ಧೋರಣೆ ಹೇಗಿರುವುದೋ ಮುಟ್ಟುತ್ತದೋ ನೋಡಬಹುದಲ್ಲಾ?'

"ಹ್ಞಾಂ ನೋಡಬಹುದು ..."

"ಏನನ್ನು?"

'ಮತ್ತೇನನ್ನು ಬೇರೆ ಬೇರೆ ಮುಖಗಳನ್ನು....'

'ಬೇರೆ ಯಾಕೆ....'

"ಅಯ್ಯೋ! ...."

— ಗೋಪಾ.

ನವಯುಗದ ಹೊಸ ವರ್ಷ

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 50ನೆಯ ವರ್ಷ ಮುಗಿದು ಸೆಪ್ಟೆಂಬರ ತಿಂಗಳಿನಿಂದ 51ನೆಯ ಹೊಸ ವರ್ಷಾರಂಭವಾಗುತ್ತದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಅವಶ್ಯ ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಚಂದಾ ಹಣವನ್ನು ಮನಿಯಾರ್ಡರು ಮೂಲಕ ಯಾ ಇಂಡಿಯನ್ ಪೋಸ್ಟಲ್ ಆರ್ಡರು ಮೂಲಕ ಕಳುಹಿಸಬಹುದು. ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ ಉಡುಪಿ ಲೋಕಲ್ ಆಫೀಸಿನ 283/1ನೇ "ನವಯುಗ"ದ ಖಾತೆಗೆ ಪಾವತಿ ಮಾಡಬಹುದು. ಹಾಗೆ ಪಾವತಿ ಮಾಡುವಾಗ ತಮ್ಮ ಚಂದಾ ನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ವಿ. ಪಿ. ಮಾಡಿದರೆ ರೂ 1-50ರಷ್ಟು ಹೆಚ್ಚು ವೆಚ್ಚ ಬರುವುದರಿಂದ ಚಂದಾದಾರರು ದಯಮಾಡಿ ಮುಂದಾಗಿ ಹಣ ಪಾವತಿಮಾಡಬೇಕಾಗಿ ವಿಜ್ಞಾಪಿಸುತ್ತೇವೆ.

ಅಂತೂ ಸಪ್ಟಂಬರ ಪ್ರಥಮ ವಾರದೊಳಗಾದರೂ ಹಣ ಪಾವತಿಯಾಗದಿದ್ದರೆ ವಿ. ಪಿ. ಮಾಡಲು ತಮ್ಮ ಸಮ್ಮತಿಯೆಂದು ಭಾವಿಸಿ ಕ್ರಮಶಃ ಪತ್ರಿಕೆಯನ್ನು ಚಂದಾ ಹಣಕ್ಕೆ ವಿ. ಪಿ. ಮಾಡುತ್ತೇವೆ.

ಮೆನೇಜರ್

Kindly

Contribute generously

to the

NAVAYUGA

GOLDEN JUBILEE FUND 1971

ಶ್ರೀ ವೀರೇಂದ್ರ ಪಾಟೀಲರ ಜಿಲ್ಲಾ ಸಂಚಾರ

ಒಮ್ಮೆ ಸೋತರೇನು, ಮುಂದೆ ಗೆಲಲಾರೆವೆ?

ಮಾಜಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಪ್ರಾದೇಶಿಕ ಕಾಂಗ್ರೆಸ್ (ಸಂಸ್ಥಾ) ಅಧ್ಯಕ್ಷತೆಯನ್ನು ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸಂಚರಿಸಿದರು ರಾಜ್ಯವಿಧಾನ ಸಭೆಗೆ ಮುಂದಿನ ಜನವರಿ– ಫೆಬ್ರವರಿಯೊಳಗಾದರೂ ಚುನಾವಣೆ ನಡೆಯುವುದು ಅನಿವಾರ್ಯವಾಗಿರುವುದರಿಂದ ಇದು ಶ್ರೀ ಪಾಟೀಲರ ಚುನಾವಣಾ ಪ್ರಚಾರದ ಮೊದಲ ಸುತ್ತು ಎಂದು ಹೇಳ ಬಹುದು

ಶ್ರೀ ಪಾಟೀಲರು ಮಂಗಳೂರು, ಉಡುಪಿ ಮುಂತಾದ ತಾಲೂಕು ಕೇಂದ್ರಗಳನ್ನೂ ಮೂಡಬಿದರೆ ಮೊದಲಾದ ಚಿಕ್ಕ ಪಟ್ಟಣಗಳನ್ನೂ ಸಂದರ್ಶಿಸಿದರು. ಅವರಿಗೆ ಸಿಕ್ಕ ಸ್ವಾಗತದ ವೈಭವವು ಅವರು ಅಧಿಕಾರದಿಂದುರುಳಿದರೂ ಜನಪ್ರಿಯತೆಗೆ ಎರವಾಗಲೇ ಇಲ್ಲ ಎಂಬುದನ್ನು ತೋರಿಸುತಿತ್ತು.

ಶ್ರೀ ಪಾಟೀಲರು ಹಲವು ವಿಲಕ್ಷಣ ಪರಿಸ್ಥಿತಿಗಳನ್ನು ದಾಟಿ, ಚುನಾವಣೆಗಳನ್ನು ಮುಂದಿಟ್ಟುಕೊಂಡು ಬಂದಿದ್ದಾರೆ ಮಾರ್ಚ್ ತಿಂಗಳಲ್ಲಿ ಲೋಕ ಸಭೆಗೆ ನಡೆದ ಮಧ್ಯಾವಧಿ ಚುನಾವಣೆಗಳಲ್ಲಿ ಅವರ ಪಕ್ಷವು ಇಡಿಯ ರಾಜ್ಯದಲ್ಲಿ ಒಂದೇ ಒಂದು ಸ್ಥಾನವನ್ನು ಗೆಲ್ಲುವುದು ಸಾಧ್ಯವಾಗಲಿಲ್ಲ ಅವರು ಕೂಡಿಕೊಂಡ ಮೈತ್ರಿಕೂಟದವರೂ ನೂರಕ್ಕೆ ನೂರರಷ್ಟು ಸೋಲುಂಡಿತ್ತು. ಇದಾದ ಕೆಲವೇ ದಿನಗಳಲ್ಲಿ ಅವರ ಪಕ್ಷದ ಎಂಎಲ್ಎಗಳಲ್ಲಿ ಛಲ ಜನರು ಪಕ್ಷಾಂತರಗೊಂಡುದರಿಂದ ಮರುಕ್ಷಣದಲ್ಲೇ ಅವರು ಮುಖ್ಯ ಮಂತ್ರಿ ಪದವಿಗೆ ರಾಜಿನಾಮೆ ನೀಡ ಬೇಕಾಯ್ತು ಇದೀಗ ಮುಂದಿನ ಚುನಾವಣೆಗಳನ್ನು ಎದುರಿಸ ಬೇಕಾಗಿದೆ, ಈ ನಡುವೆ ವಿರೋಧಿ ಪಕ್ಷೀಯರ ಕುಹಕದ ವದಂತಿಗಳಿಗೆ ಧೀಮಂತೆ ಉತ್ತರ ಕೊಡ ಬೇಕಾಗಿದೆ

ಲೋಕ ಸಭಾ ಚುನಾವಣೆಗಳಲ್ಲಿನ ಪರಾಜಯಕ್ಕೆ ಶ್ರೀ ಪಾಟೀಲರು ಜನತೆಯನ್ನು ದೊಷ್ಟು ಮಾಡಲಿಲ್ಲ 'ನಮ್ಮಲ್ಲೇ ಏನೋ ತಪ್ಪಿದೆ, ಆಡಳಿತ ಕಾಂಗ್ರೆಸ್ ವಿವಿಧ ಭರವಸೆ ನೀಡಿತು, ಅವರತ್ತ ಜನವೊಲಿಯಿತು' ಎಂದ ಅವರು 'ಮೈತ್ರಿಕೂಟದಲ್ಲಿ ಸೇರಿಕೊಂಡದ್ದೇ ನಮಗೆ ಮುಳುವಾಯಿತು' ಎಂಬುದನ್ನು ಒಪ್ಪಿಕೊಂಡರು ಪಕ್ಷದಲ್ಲಿನ ಲೋಪದೋಷಗಳನ್ನು ದೂರಮಾಡಿ ಜನ ಸೇವೆಗೆ ಸದಾ ಅಣಿಯಾಗ ಬೇಕೆಂದವರು ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು.

ತನ್ನ ರಾಜಿನಾಮೆಕೊಡಬೇಕಾಗಿ ಬಂದ ಪರಿಸ್ಥಿತಿಯ ಶೋಚನೀಯತೆಯನ್ನವರು ವರ್ಣಿಸಿದರು. "ಛಲ ತಾಸುಗಳಲ್ಲಿ ಛಲ ಶಾಸಕರು ಪಕ್ಷಾಂತರಮಾಡಿ ದಾಖಲೆ ನಿರ್ಮಿಸಿದರು ಪಕ್ಷಾಂತರ ಪ್ರಜಾಸತ್ತೆಗೆ ಮಾರಕ. ಹಾಗೂ ಹೀಗೂ ಕೇವೆಹಚ್ಚಿ ಮತ್ತೊಂದು ತಿಂಗಳು ನಾನು ದೂಡ ಬಹುದಿತ್ತೋ ಏನೋ! ಆದರೆ ದ್ರೋಹಿಗಳನ್ನು ನಂಬಿ ಕೆಡ ಬಯಸದೆ ರಾಜಿನಾಮೆ ನೀಡಲು ನಿರ್ಧರಿಸಿದೆ" ಎಂದ ಪಾಟೀಲರಿಗೆ ಅಧಿಕಾರಕ್ಕೆ ಅಂಟುವ ಇರಾದೆಯಿಲ್ಲವೆಂಬುದು ಲೋಕಕ್ಕೇ ಗೊತ್ತು.

ಶ್ರೀ ಸಾಮಾನ್ಯನಿಗೆ ಅಲ್ಲಸಲ್ಲದ ಭರವಸೆ ನೀಡಿ ವಿಜಯ ಭೇರಿ ಬಾರಿಸಿದ ಆಡಳಿತ ಕಾಂಗ್ರೆಸ್ ತನ್ನ ಭರವಸೆಗಳನ್ನು ಈಡೇರಿಸುವಲ್ಲಿ ಸಂಪೂರ್ಣ ಅಸಫಲವಾಗಿದೆಯೆಂಬ ಅಂಶವನ್ನು ಶ್ರೀ ಪಾಟೀಲರು ವಿವರಿಸಿದರು. ಅಧಿಕ ಕರಭಾರ, ಬೆಲೆಯೇರಿಕೆಯನ್ನು ತಡೆಯುವಲ್ಲಿ ಸಂಪೂರ್ಣ ವಿಫಲತೆ, ಕೊರತೆ ಧನಕ್ಕೇ ಹೆಚ್ಚು ಹೆಚ್ಚಾಗಿ ಆಧರಿಸಿ ಮುಂದುವರಿಯುವಿಕೆ, ರಾಷ್ಟ್ರೀಕೃತ ಉದ್ಯಮಗಳ ಅಸಮರ್ಪಕ ಸೇವೆ– ಮೊದಲಾದುವುಗಳನ್ನು ಎತ್ತಿಕೊಂಡು ಶ್ರೀ ಪಾಟೀಲರು 'ಭರವಸೆಗಳನ್ನು ನೀಡಿ–ಜನತೆಯನ್ನು ಮರಳು ಮಾಡುವುದು ಸುಲಭವಾದರೆ, ಅವನ್ನು ಕಾರ್ಯ ರೂಪಕ್ಕೆ ತರುವುದು ಸಾಧ್ಯವಾಗಲಿಲ್ಲ'ವೆಂದು ಉದ್ಗರಿಸಿದರು.

ದೇಶದ ಮುಖ್ಯ ಸಮಸ್ಯೆ 'ಬಂಗ್ಲಾ'ದ ಕುರಿತು ಮಾತನಾಡುತ್ತ ಬಂಗ್ಲಾ ದೇಶಕ್ಕೆ ಮನ್ನಣೆಯನ್ನು ಜಾಗ್ರತೆಯಾಗಿ ನೀಡಬೇಕೆಂದರು. ಅಮೆರಿಕೆಯ ಮೋಸನೀತಿಯೊಡನೆ ಸರಸಾಟವಾಡುವುದಕ್ಕಿಂತ 'ರಶ್ಯದೊಡನೆ ಮಾಡಿಕೊಂಡ ಒಪ್ಪಂದವು ಸಕಾಲಿಕವಾದದ್ದು; ಸ್ವಾಗತಾರ್ಹವಾದದ್ದು' ಎಂದರು.

ತನ್ನ ಪಕ್ಷದ ನೀತಿಗಳ ಬಗೆಗೆ ಹೇಳುತ್ತ ಯಾವುದೇ ಪ್ರಗತಿಪರ ಕಾರ್ಯಕ್ರಮಕ್ಕೆ ತಮ್ಮ ಬೆಂಬಲವಿದೆಯೆಂದೂ ಮೈಸೂರಿನಲ್ಲಿದ್ದ ಸರಕಾರವು ಪ್ರಗತಿಪರವಾಗಿತ್ತೆಂದು ವಿರೋಧಿ ಪಕ್ಷಗಳೂ ಕೊಂಡಾಡಿರುವವೆಂದೂ ಹೇಳಿ, ಶ್ರೀ ಸಾಮಾನ್ಯನ ಪ್ರಗತಿಯೇ ತಮ್ಮ ಪಕ್ಷದ ಏಕೈಕ ಗುರಿಯೆಂದರು.

ಶ್ರೀ ಪಾಟೀಲರೊಡನೆ ರಾಜ್ಯಸಭಾ ಸದಸ್ಯ ಡಾ|ಕೆ ನಾಗಪ್ಪ ಆಳ್ವ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಗಂಗಾಧರ ದಾಸ್ ಮೊದಲಾದವರೂ ಸಂಚಾರದಲ್ಲಿ ಭಾಗವಹಿಸಿದ್ದರು ಸೋಲೊಪ್ಪಿಕೊಂಡರೂ ಉತ್ಸಾಹದಿಂದ ತುಂಬಿ ತುಳುಕಾಡುವ ಶ್ರೀ ಡಾಪಟುತ್ವ ಶ್ರೀ ವೀರೇಂದ್ರ ಪಾಟೀಲರಲ್ಲಿತ್ತು ಮುಂದಿನ ಚುನಾವಣೆಗಳಲ್ಲಿ ಗೆಲ್ಲಬಲ್ಲೆವೆಂಬ ವಿಶ್ವಾಸವೂ ಇತ್ತು.

● ●

ಮೂಡಬಿದರೆಯಲ್ಲಿ ಹೊಂಬುಜ ಶ್ರೀಗಳವರಿಗೆ ಶ್ರದ್ಧಾಂಜಲಿ

ಇದೇ ತಾ 15–8–71ರಂದು ಮೂಡಬಿದರೆಯ ತ್ರಿಭುವನ ತಿಲಕ ಚೂಡಾಮಣಿ ಬಸದಿಯಲ್ಲಿ ಜಿಲ್ಲೆಯ ಜೈನ ಬಾಂಧವರು, ಜನಪದವನ್ನೈದಿದ ಹೊಂಬುಜ ಮಠಾಧೀಶ ಸ್ವಸ್ತಿ ಶ್ರೀ ದೇವೇಂದ್ರ ಕೀರ್ತಿ ಭಟ್ಟಾರಕ ಸ್ವಾಮಿಗಳವರ ಆತ್ಮಕ್ಕೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಶ್ರೀ ಧರ್ಮಸ್ಥಳ ವೀರೇಂದ್ರ ಹೆಗ್ಗಡೆಯವರಿಂದ ಕರೆಯಲಾದ ಈ ಸಭೆಯ ಅಧ್ಯಕ್ಷತೆಯನ್ನು ಶ್ರೀ ಎಂ. ಡಿ. ಅಧಿಕಾರಿಯವರು ವಹಿಸಿದ್ದರು. ಶ್ರೀಗಳವರು ಹೊಂಬುಜ ಕ್ಷೇತ್ರದ ಅಭಿವೃದ್ಧಿ, ಧರ್ಮ ಮತ್ತು ಶಿಕ್ಷಣ ರಂಗದಲ್ಲಿ ಸಲ್ಲಿಸಿದ ಸೇವೆ, ಹೈಸ್ಕೂಲು, ವಿದ್ಯಾರ್ಥಿ ಭವನ, ಸಂಸ್ಕೃತ ವಿದ್ಯಾಪೀಠ, ಬ್ರಹ್ಮಚರ್ಯಾಶ್ರಮ ಸ್ಥಾಪನೆ ಮೊದಲಾದವು ಅವರ ಜೀವಂತ ಸ್ಮಾರಕಗಳಾಗಿವೆ ಎಂಬಿತ್ಯಾದಿಯಾಗಿ ಕೊಂಡಾಡಲಾಯಿತು ಶ್ರೀಗಳಾದ ಡಿ. ವೀರೇಂದ್ರ ಹೆಗ್ಗಡೆ, ಎಸ್ ಧರ್ಮಸಾಮ್ರಾಜ್ಯ, ಭುಜಬಲಿ ಶಾಸ್ತ್ರಿ, ಜಿನರಾಜ ಶಾಸ್ತ್ರಿ, ನಾಗರಾಜ ಶಾಸ್ತ್ರಿ, ಬಿ ದೇವಕುಮಾರ ಜೈನ್, ಎಂ ಧರ್ಮಪಾಲ ಇಂದ್ರ ಮೊದಲಾದವರು ಸ್ವಸ್ತಿ ಶ್ರೀ ಚಾರುಕೀರ್ತಿ ಸ್ವಾಮಿಗಳ ಗುಣಗಾನ ಮಾಡಿ ಮಾತನಾಡಿದರು. ಅಧ್ಯಕ್ಷ ಶ್ರೀ ಎಂ. ಡಿ ಅಧಿಕಾರಿಯವರು ತಮ್ಮ ಭಾಷಣದಲ್ಲಿ ಶ್ರೀಗಳವರು ಒಬ್ಬ ಮಹಾಪುರುಷರಾಗಿದ್ದರೆಂದರು.

ಇದೇ ಸಭೆಯಲ್ಲಿ, ಸಾಹಿತಿಗಳೂ, ವಾಗ್ಮಿಗಳೂ, ಸಮಾಜಸೇವಾಸಕ್ತರೂ ಆಗಿದ್ದ ಶ್ರೀ ಕೆ ಎಸ್. ಧರಣೇಂದ್ರಯ್ಯನವರ ನಿಧನಕ್ಕೆ ಸಂತಾಪ ಸೂಚಿಸಲಾಯಿತು.

ಪಾಂಗಾಳದಲ್ಲಿ ಕೃಷಿ-ವಿಚಾರ ವಿನಿಮಯ ಕೇಂದ್ರದ ಉದ್ಘಾಟನೆ

ತಾ 15–8–71ರಂದು ಸಿಂಡಿಕೇಟ್ ಎಗ್ರಿಕಲ್ಚರಲ್ ಫೌಂಡೇಶನಿನ ಅಂಗವಾಗಿ ಉಡುಪಿಗೆ ಸುಮಾರು 5–6 ಮೈಲು ದೂರದಲ್ಲಿರುವ ಪಾಂಗಾಳದಲ್ಲಿ 'ಯೂತ್ ಕ್ಲಬ್ ಹಾಲ್'ನಲ್ಲಿ ಕೃಷಿ ವಿಚಾರ ಕೇಂದ್ರದ ಉದ್ಘಾಟನೆಯನ್ನು ಮಾಜಿ ವಿಧಾನ ಸಭಾ ಸದಸ್ಯ ಶ್ರೀ ಬಿ. ಭಾಸ್ಕರ ಶೆಟ್ಟರು ನೆರವೇರಿಸುತ್ತಾ ಕೃಷಿಯ ಕುರಿತು ನಾವು ಆರಂಭದಲ್ಲಿ ಅಲಕ್ಷ್ಯ ತೋರಿದ್ದರಿಂದ ಹಲವಾರು ಸಮಸ್ಯೆಗಳನ್ನು ಎದುರಿಸ ಬೇಕಾಯಿತೆಂದೂ ಮೊದಲಾಗಿ ಕೃಷಿಗೆ ಪ್ರಾಧಾನ್ಯತೆ ಕೊಟ್ಟ ಕೀರ್ತಿ ಸಿಂಡಿಕೇಟ್ ಬೇಂಕಿಗೆ ಸಲ್ಲಬೇಕಾಗಿದೆಯೆಂದೂ ಹೇಳಿದರು

ಸಭಾಧ್ಯಕ್ಷತೆ ವಹಿಸಿದ್ದ ಸಿಂಡಿಕೇಟ್ ಬೇಂಕಿನ ಕಸ್ಟೋಡಿಯನ್ ಶ್ರೀ ಕೆ. ಕೆ ಪೈಗಳು ಮಾತನಾಡುತ್ತಾ, ಕೃಷಿ ಪ್ರಗತಿಗೆ ವೈಯುಕ್ತಿಕ ದುಡಿಮೆ ಹಾಗೂ, ಲಕ್ಷ್ಯಪೂರ್ಣ ಪ್ರಯತ್ನ ಅಗತ್ಯವೆಂದೂ, ಅನುಭವವಿಲ್ಲದಿದ್ದರೆ ವಿಶೇಷ ಬಂಡವಾಳವಿದ್ದೂ ಕೃಷಿಯಲ್ಲಿ ಹೆಚ್ಚಿನದನ್ನು ಸಾಧಿಸಲು ಅಸಾಧ್ಯವೆಂದೂ ಆಧುನಿಕ ಕೃಷಿ ಸೌಲಭ್ಯಗಳಿದ್ದರೂ ಕೆಲವೊಮ್ಮೆ ಕೃಷಿಕನು ಪ್ರಕೃತಿ ವಿಕೋಪಕ್ಕೆ ಒಳಗಾಗ ಬೇಕಾಗುತ್ತದೆಂದೂ ನಾವು ಕೃಷಿಕರನ್ನು ಅಲಕ್ಷಿಸಬಾರದೆಂದೂ ಹೇಳಿದರು.

ಕೇಂದ್ರದ ಕಾರ್ಯದರ್ಶಿ ಶ್ರೀ ಪಿ ಕೆ. ಸಂಜೀವ ಶೆಟ್ಟರು ಸ್ವಾಗತಿಸಿ ಈ ಕೇಂದ್ರದ ಧ್ಯೇಯೋದ್ದೇಶಗಳನ್ನು ವಿವರಿಸಿದರು ಫೌಂಡೇಶನಿನ ಅಧಿಕಾರಿ ಶ್ರೀ ಕೆ. ವಿ. ಬೆಳಿರಾಯರು 1966ರಿಂದ ಕೃಷಿ ಕ್ಷೇತ್ರದಲ್ಲಿ ಫೌಂಡೇಶನ್ ಮಾಡಿರುವ ಸೇವೆಯನ್ನು ವಿವರಿಸಿದರು ಇನ್ನಂಜೆ ಹೈಸ್ಕೂಲಿನ ಹೆಡ್‌ಮಾಸ್ಟರ್ ಶ್ರೀ ವಿರಲ ಶೆಟ್ಟಿಯವರು ಕೆಲವು ಸೂಚನೆಗಳನ್ನಿತ್ತು ಶುಭ ಕೋರಿದರು. ಶ್ರೀ ರಾಮಕೃಷ್ಣ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಉಡುಪಿಯಲ್ಲಿ ಶ್ರೀ ವೀರೇಂದ್ರ ಪಾಟೀಲರ ಭಾಷಣ

ತಾ. 22–8–71ರಂದು ಉಡುಪಿ ರಥಬೀದಿಯಲ್ಲಿ ಮೈಸೂರು ಸಂಸ್ಥಾ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಡಾ| ಕೆ ನಾಗಪ್ಪ ಆಳ್ವ ಎಂ ಪಿ. ಇವರ ಅಧ್ಯಕ್ಷತೆಯಲ್ಲಿ ಭಾಷಣ ಮಾಡುತ್ತಾ ಬರೇ ಭಾಷಣ, ಘೋಷಣೆ, ಠರಾವುಗಳಿಂದ ಸಮಾಜವಾದ ಸಾಧಿಸಲಾರದು, ಶ್ರೀಮಂತರ ಹಣವನ್ನು ವಿತರಿಸುವುದರಿಂದ ಬಡತನ ಹೆಚ್ಚಿದಂತೆಯೇ ಆಗುವುದಲ್ಲದೆ ಬಡವ ಶ್ರೀಮಂತನಾಗಲಾರ ಪೊಳ್ಳು ಆಶ್ವಾಸನೆಗಳಿಂದ ಜನತೆಯನ್ನು ನಂಬಿಸಿ ವಂಚಿಸುವುದು ಸಮಾಜವಾದವೆನಿಸುವುದಿಲ್ಲ ಹೀಗೆ ಮಾಡಿದರೆ ರಾಜಕೀಯ ಶೋಷಣೆ ಮಾಡಿದಂತಾಗುವುದು ಜನವಂಚನೆಯೊವಾಗಲೂ ಸಾಧ್ಯವಿಲ್ಲ ಇದರಿಂದ ಜನತೆ ಬಿಗುಪ್ಸೆಗೊಂಡು ಪ್ರಜಾಪ್ರಭುತ್ವಕ್ಕೆ ಧಕ್ಕೆ ಒದಗುತ್ತದೆ ಎಂದು ನಯಂತಾಗಿ ಹೇಳಿ ಸ್ವಾರ್ಥಿ ಪಕ್ಷಾಂತರಿಗಳಿಂದ ತನ್ನ ಮಂತ್ರಿಮಂಡಲ ಹೇಗೆ ಉರುಳಿತು ಎಂಬುದನ್ನು ವಿವರಿಸಿದರು.

ಪುತ್ತೂರು IIIrd Adle ಮುನ್ಸಿಫ್ ಕೋರ್ಟಿನಲ್ಲಿ

R. R. C 111/71

ಕೃಷ್ಣ ಬಾಳ್ತಿಲ್ಲಾಯ —ಅರ್ಜಿದಾರ

ಬೀಫಾತುಮ್ಮ ಕೂಡಾ —ಎದ್ರಿರು

ಎದ್ರಿರು:- 3 ಸಾದಮ್ಮ } ಇಬ್ರಾಯಿ ಬ್ಯಾರಿ
4 ಹಸನಬ್ಬ } ಮಕ್ಕಳು

ನೆಲ್ಯಾಡಿ ಗ್ರಾಮಸ್ಥರು—ಸದ್ರಿ 3, 4ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ

69–70ನೇ ವರ್ಷಕ್ಕೆ ಅರ್ಜಿದಾರನಿಗೆ ನಿಮ್ಮಿಂದ ಕೂಡಾ ಬರಬೇಕಾದ ಗೇಣಿ ಬಾಕಿಗೆ ಮಾಡಿದ ಮೇಲಿನ ಅರ್ಜಿಯನ್ನು ತಾರೀಕು 21–9–71ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉಜರು ಹರಿಸತಕ್ಕದ್ದು ತಪ್ಪಿದ್ದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/- M. Rammohan Rao
Advocate for Petitioner

Puttur, 9—8—71

ಪುತ್ತೂರು IIIrd Adle ಮುನ್ಸಿಫ್ ಕೋರ್ಟಿನಲ್ಲಿ

R. R. C. 408/70

ಪುಟ್ಟ ಗೌಡ —ಅರ್ಜಿದಾರ

ಕರಿಯ ಪೂಜಾರಿ ಕೂಡಾ —ಎದ್ರಿರು

3ನೇ ಎದ್ರಿ – ಶೀನಪ್ಪ ಪೂಜಾರಿ, ಕರಿಯ ಪೂಜಾರಿಯ ಮಗ, ಅಲಂಕಾರು ಗ್ರಾಮ

ಸದ್ರಿ 3ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

66–67ನೇ ವರ್ಷದ ಗೇಣಿ ಕೇಳಿ ಅರ್ಜಿದಾರನು ನಿಮ್ಮ ಮೇಲೆ ಕೂಡಾ ಮಾಡಿದ ಗೇಣಿ ಅರ್ಜಿಯನ್ನು ತಾ 21–9–71ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉಜರು ಹರಿಸ ತಕ್ಕದ್ದು ತಪ್ಪಿದ್ದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು

Sd/- M. Rammohan Rao
Advocate for Petitioner

Puttur, 13—8—71

ಪುತ್ತೂರು ಪ್ರಿ. ಮುನ್ಸಿಫ್ ಕೋರ್ಟಿನಲ್ಲಿ

O S 219/71

ರುಕ್ಮಿಣಿ ಅಮ್ಮ —ವಾದಿ

ಗೌರಮ್ಮ ಕೂಡಾ —ಪ್ರತಿವಾದಿರು

3ನೇ ಪ್ರತಿವಾದಿ – B. ಸುಬ್ಬರಾವ್, ಗಂಗಾಧರಯ್ಯನವರ ಮಗ– ಬೀರಾವು, ಕಬಕಗ್ರಾಮ.

ಸದ್ರಿ 3ನೇ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯ ಪಡಿಸುವುದೇನೆಂದರೆ –

ನಿಮ್ಮಿಂದ ಕೂಡಾ ತಾ. 26–11–63ನೇ ವಿಭಾಗ ಪತ್ರ ಪ್ರಕಾರ ವಾದಿಗೆ ತಾ 30 4 70, 30–4–71ಕ್ಕೆ ಬರತಕ್ಕ 44 ಮಣ ಅಡಿಕೆಯ ಕ್ರಯ ಕೇಳಿ ಮಾಡಿದ ಈ ದಾವೆಯಲ್ಲಿ ನಿಮ್ಮ ನೋಟೀಸಿನ ಬಗ್ಗೆ ತಾರೀಕು 11—9—71ಕ್ಕೆ ಇಟ್ಟಿರುತ್ತದೆ ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉಜರು ಹರಿಸ ತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/- M Rammohan Rao
Advocate for Plff.

Puttur, 13—8—71

ಪುತ್ತೂರು IInd Adle ಮುನ್ಸಿಫ್ ಕೋರ್ಟಿನಲ್ಲಿ

Ex C 403/70

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವರ ಭಂಡಾರ —ಅರ್ಜಿದಾರ

ಕೆ ನಾರಾಯಣ ರೈ—ಅಮ್ಮು ರೈಗಳ ಮಗ, ಸುಬ್ರಹ್ಮಣ್ಯ ಗ್ರಾಮ —ಎದ್ರಿ

ಸದ್ರಿ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ–

ಈ ಅಮಲ್ದಾರಿಯಲ್ಲಿ Rule 22 ಮತ್ತು 37ರ ನೋಟೀಸಿನ ಬಗ್ಗೆ ತಾ 7–9–71ಕ್ಕೆ ಇಟ್ಟಿರುತ್ತದೆ ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉಜರು ಹರಿಸ ತಕ್ಕದ್ದು ತಪ್ಪಿದ್ದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು

Sd/- M. Rammohan Rao
Advocate for Petitioner

Puttur, 9—8—71

ಕೊಲೆಯೋ? ಆಕಸ್ಮಿಕವೋ?

(ಎರಡನೇ ಪುಟದಿಂದ)

ತೆಗೆದುಕೊಂಡರು. ಅದಕ್ಕೊಂದು ಪಂಚನಾಮೆಯನ್ನು ಬರೆದು ಕೇವರ ಸಹಿ ತೆಗೆದುಕೊಂಡರು.

ಬಂಧನದಲ್ಲಿದ್ದ ರಾಮಚಂದ್ರ-ಭರೋಸೆಯರನ್ನು ಪೋಲಿಸರು ಅಹೋರಾತ್ರಿ ಪ್ರಶ್ನಿಸಲಾರಂಭಿಸಿದರು. ರಾಮಚಂದ್ರ ನೋಟುಗಳನ್ನು ಅಡಗಿಸಿಟ್ಟ ಸ್ಥಳವನ್ನು ತೋರಿಸಲು ಒಪ್ಪಿಕೊಂಡು, ಅವರನ್ನು ತನ್ನ ವಾಸದ ಮನೆಗೆ ಕರೆದುಕೊಂಡು ಹೋದ ಮನೆಯೊಳಗಿನ ಒಂದು ಮೂಲೆಯನ್ನು ತೋರಿಸಿ, ಅಗೆಯಲು ಹೇಳಿದ. ಆ ಸ್ಥಳವನ್ನು ಅಗೆಯಲಾಯಿತು ಆ ಸ್ಥಳದಲ್ಲಿ ಹತ್ತು ರೂಪಾಯಿ ನೋಟುಗಳ ಎರಡು ಪಿಂಡಿಗಳು ಸಿಕ್ಕಿದವು. ಅವುಗಳ ಮೊತ್ತ 4650- ಇದ್ದಿತು.ಅವು ಶ್ರೀ ಚವ್ಹಾಣರು ಮೋರಿಯ ಬಳಿ ಇಟ್ಟ ನೋಟುಗಳೇ ಇದ್ದುವು. ಅದಕ್ಕೂ ಒಂದು ಮಹಜರನ್ನು ಸಿದ್ಧಪಡಿಸಲಾಯಿತು.

ಈ ಮಧ್ಯೆ ಝುಲೀಂ ಥಾಕುವಿನಿಂದ ಚವ್ಹಾಣರಿಗೆ ಇನ್ನೊಂದು ಪತ್ರ ಬಂತು. ಆ ಪತ್ರದಲ್ಲಿ ಓಂ ಪ್ರಕಾಶ ಆರೋಗ್ಯದಿಂದಿರುವನೆಂದೂ, ಅವರನ್ನು ಕಾಣಲು ಆತುರಪಡುತ್ತಿರುವನೆಂದೂ, ಬೇಗನೆ ಅವರ ಬಳಿಗೆ ಕಳಿಸಲಾಗುವುದೆಂದೂ ಬರೆದಿತ್ತು.

ತನಿಖೆಯ ಕೆಲಸ ಬಿರುಸಿನಿಂದ ಮುಂದರಿಯಿತು. 13—7—52ರಂದು ರಾಮಚಂದ್ರನನ್ನು ಪೋಲೀಸರು ಸೈನಿತಾಲಿನ ಸೆರೆಮನೆಗೆ ಕಳುಹಿಸಿ ಕೊಡುವಂತೆ ಪ್ರಾರ್ಥಿಸಿದರು. ರಾಮಚಂದ್ರ ಜೈಲಿನಲ್ಲಿದ್ದಾಗ ತನ್ನ ತಪ್ಪೊಪ್ಪಿಗೆಯ ಹೇಳಿಕೆ ಕೊಡುವುದಾಗಿ ತಿಳಿಸಿದ. ಅವನನ್ನು ಮ್ಯಾಜಿಸ್ಟ್ರೇಟರ ಮುಂದು ಹಾಜರುಪಡಿಸಿದರು ಆತ ಹಿಂದಲೇಟುಹಾಕಿದ. ಹೀಗೆ ಕೆಲವು ಸಲ ನಡೆಯಿತು.ಕೊನೆಯಲ್ಲಿ ಹೇಳಿಕೆ ಕೊಡಲು ಮುಂದಾದ. ಆತನ ತಪ್ಪೊಪ್ಪಿಗೆಯನ್ನು 7-10-52ರಂದುನ್ಯಾಯಾಧೀಶರು ಬರೆದುಕೊಂಡರು.ಬರೆದು ಕೊಳ್ಳುವ ಮೊದಲುಎಲ್ಲ ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳಲು ಜಾಗ್ರತ ವಹಿಸಿದರು. ಆ ಹೇಳಿಕೆಯ ವಿವರ—

"ಓಂ ಪ್ರಕಾಶನನ್ನು ಅಪಹರಿಸಿ, ಅವನ ತಂದೆಯಿಂದ ಹಣ ಸುಲಿಯಲು ನಾನು ಭರೋಸೆ ಹಂಚಿಕೆ ಹಾಕಿದೆವು. 8-6-52ರಂದು ಓಂ ಪ್ರಕಾಶನನ್ನ ಪುಸಲಾಯಿಸಿ, ಈಜು ಕಲಿಸುವುದಾಗಿ ನಂಬಿಸಿ ಯಮುನಾ ನದಿಗೆ ಕರೆದು ಕೊಂಡು ಹೋದೆವು. ಈಜು ಕಲಿಸುವ ನೆಪದಲ್ಲಿ ಆತನನ್ನು ನೀರಿನಲ್ಲಿ ಮುಣುಗಿಸಿ ಸಾಯಿಸಿ, ಅವನನ್ನು ಅವನತಂದೆಗೆ ತಂದೊಪ್ಪಿಸುವುದಾಗಿ ತಿಳಿಸಿ, ಅವರಿಂದ ಹಣ ಕೀಳಬೇಕೆಂದು ಲೆಖ್ಖಿಹಾಕಿದೆವು.ಆದರೆ 8 2 – 52ರಂದು ನಾವು ತರ್ಕಿಸಿದಂತೆ ಯಾವುದೂ ನಡೆಯಲಿಲ್ಲ.

9-2-52ರಂದು ಅದೇ ಉದ್ದಿಶ್ಯ ಸಾಧನೆಗೆ ಕಲೆತೆವು. ಸಂಜೆ 4—30ರ ಸುಮಾರಿಗೆ ಓಂ ಪ್ರಕಾಶನನ್ನು ನದಿಗೆ ಕರೆದು ಕೊಂಡು ಹೋದೆವು. ನಾವು ನಮ್ಮ ಸ್ನಾನ ಮುಗಿಸಿ, ಓಂ ಪ್ರಕಾಶನನ್ನು ಈಜು ಕಲಿಸಲೆಂದು ನದಿಗೆ ಕರೆದು ತಂದೆವು— ಆತನ ಕಾಲುಗಳನ್ನು ನಾನು ಮೇಲಕ್ಕೆತ್ತಿದೆ— ಆತನೆಲೆ ತಪ್ಪಿ ನೀರಿನಲ್ಲಿ ಬಿದ್ದ. ನಾನು ನನ್ನ ಪತ್ತನ್ನು ಬಿಡಲಿಲ್ಲ. ಆಯ ತಪ್ಪಿ ಬಿದ್ದ ಹುಡುಗನ ಗಂಟಲನ್ನು ಭರೋಸೆ ಗಟ್ಟಿಯಾಗಿ ಕಾಲಿನಿಂದ ಒತ್ತಿದ. ಹುಡುಗ ಉಸಿರು ಕಟ್ಟಿ ಸತ್ತು ಹೋದ ಅವನ ಹೆಣವನ್ನು ದಡಕ್ಕೆ ಎಳೆದು ತಂದೆವು ಭರೋಸೆ ಹುಡುಗನ ಹೊಟ್ಟೆಯನ್ನು ಚೂರಿಯಿಂದ ತಿವಿದ. ಅನಂತರ ದೇಹವನ್ನು ನದಿಯಲ್ಲಿ ಹಾಕಿದೆವು. ಓಂಪ್ರಕಾಶ ಧರಿಸಿದ್ದ ಬೂಟ್ಸುಗಳಿಗೆ ಮರಳು ತುಂಬಿ, ಅವನ್ನೂ ನದಿಗೆಸೆದೆವು. ಚೂರಿಗೂ ಅದೇ ಗತಿ ಕಾಣಿಸಿದೆವು. ಆ ಮೇಲೆ ಮಗನನ್ನು ಹಿಂದಿರುಗಿಸುವ ಆಮಿಷ ತೋರಿಸಿ, ಚವ್ಹಾಣರಿಂದ ಹಣ ಕೀಳಲು ಹವಣಿಸಿದೆವು ಈ ತೀರ್ಮಾನದಂತೆ, ಅವರಿಗೆ ಕಾಗದಗಳನ್ನು ಬರೆಯಲಾರಂಭಿಸಿದೆವು".

ಓಂ ಪ್ರಕಾಶನನ್ನು ಅಪಹರಿಸಿ ಕೊಲ್ಲುವ ಸಂಚು ನಡೆಸಿದರೆಂದೂ, ಕೊಲೆ ಮಾಡಿದರೆಂದೂ, ರಾಮಚಂದ್ರ ಭರೋಸೆ, ಅವರ ಐವರು ಸಹಾಯಕರ ಮೇಲೆ, ಪೋಲಿಸರು ಆಪಾದನೆ ಹೊರಿಸಿ, ಆವರನ್ನು ವಿಚಾರಣೆಗೆ ಗುರಿ ಗೊಳಿಸಿದರು. ಆ ತಕ್ಸೀರುಗಳನ್ನು ಹೀಗೆ ಸಂಗ್ರಹಿಸಿ ಹೇಳಬಹುದು –1) ಓಂಪ್ರಕಾಶನನ್ನು ಅವಹರಿಸಲು ಸಂಚುನಡೆಸಿದ್ದು 2) ಅಪಹರಿಸಿ ನೀರಿನಲ್ಲಿ ಮುಣುಗಿಸಿ ಸಾಯಿಸಿದ್ದು 3) ಆತ ಸತ್ತಿರುವನೆಂದು ತಿಳಿದೂ, ಹಿಂದಿರುಗಿಸುವುದಾಗಿ ತಂದೆಗೆ ಕಾಗದ ಬರೆದು ಅವರಿಂದ 5000-00ರೂ.ಗಳನ್ನು ಸುಲಿದುದು.

ಸೆಷನ್ಸ್ ಜಡ್ಜರ ಮುಂದು ವಿಚಾರಣೆ ಆರಂಭವಾಯಿತು ವಿಚಾರಣೆಯ ಕಾಲದಲ್ಲಿ ರಾಮಚಂದ್ರ ತಪ್ಪೊಪ್ಪಿಗೆಯ ಹೇಳಿಕೆಯನ್ನು ನಿರಾಕರಿಸಿದ; ಝುಲೀಂ ಥಾಕುವಿನಿಂದ ಬಂದ ಪತ್ರಗಳು ಕೋರ್ಟಿನಲ್ಲಿ ದಾಖಲೆಗಳಾಗಿ ಸ್ವೀಕರಿಸಲ್ಪಟ್ಟುವು. ಆ ಕಾಗದಗಳು ರಾಮಚಂದ್ರನ ಬರವಣಿಗೆಯಲ್ಲಿದೆ ಎಂದು ಕೈ ಬರಹಗಳ ತಜ್ಞರು ಸಾಕ್ಷಿ ನುಡಿದರು. ಮೋರಿಯ ಬಳಿ ಚವ್ಹಾಣರಿಟ್ಟ 5000-00ರೂ ಗಳು, ಮರುದಿನ ಭರೋಸೆ- ರಾಮಚಂದ್ರರ ಸ್ವಾಧೀನ ಸಿಕ್ಕಿದುವು. ಅಂದು ಇಟ್ಟ ನೋಟುಗಳೇ ಎನ್ನುವುದಕ್ಕೆ ಸಹಾಯಕ ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದು ಸಿದ್ಧ ಪಡಿಸಿದ ಪಟ್ಟಿ ನಿರ್ಣಾಯಕ ಪುರಾವೆಯಾಯಿತು. ಕಾಗದಗಳಿಂದ ಮತ್ತೊಂದು ಅಂಶ ಹೊರ ಬಂತು. ಮಗ ನಾಪತ್ತೆಯಾದಂದಿನಿಂದ ಅವನ ಶೋಧಕ್ಕಾಗಿ ಚವ್ಹಾಣರು ನಡೆಸುತಿದ್ದ ಪ್ರಯತ್ನಗಳ ವಿವರ ಆ ಕಾಗದಗಳಲ್ಲಿತ್ತು. ಅಪರಿಚಿತರಿಗೆ ಆ ವಿವರಗಳು ಸಿಗುವುದು ತೀರ ಅಸಂಭವ. ಈ ಅವಧಿಯಲ್ಲಿ ವಿಶ್ವಾಸಿಕರಂತೆ ನಟಿಸಿ, ಚವ್ಹಾಣರೊಡನೆ ಓಡಿಯಾಡಿದವರು ರಾಮಚಂದ್ರ - ರಾಂ ಭರೋಸೆ ಎನ್ನುವುದರಲ್ಲಿ ಅನುಮಾನ ಇರಲಿಲ್ಲ. ಈ ಸಂದರ್ಭ, ತಜ್ಞರ ಮಾತಿಗೆ ಪುಷ್ಟಿ ಕೊಟ್ಟಿತು ಜಡ್ಜರು ಆ ಪರಿಬ್ಬರಿಗೆ ಮರಣ ದಂಡನೆಯನ್ನು ವಿಧಿಸಿ, ಉಳಿಕೆಯವರನ್ನು ಬಿಡುಗಡೆ ಮಾಡಿದರು.

ತೀರ್ಪಿನ ವಿರುದ್ಧ ಆಪಾದಿತರು ಅಲಹಾಬಾದ್ ಹೈಕೋರ್ಟಿಗೆ ಅಪೀಲು ಮಾಡಿ ಕೊಂಡರು. ಹೈ ಕೋರ್ಟು ಅಪೀಲನ್ನು ತಳ್ಳಿ ಹಾಕಿತು. ಮೂಲ ಕೋರ್ಟಿನ ಶಿಕ್ಷೆಯನ್ನು ಖಾಯಂಗೊಳಿಸಿತು.

ಈ ತೀರ್ಮಾನದ ವಿರುದ್ಧ. ರಾಮಚಂದ್ರ—ರಾಂ ಭರೋಸೆ ಸುಪ್ರೀಂ ಕೋರ್ಟಿಗೆ ಅಪೀಲು ಸಲ್ಲಿಸಿದರು ಸರ್ವೋಚ್ಚ ನ್ಯಾಯಪೀಠ, ವಿದ್ಯಮಾನವನ್ನು ಹೀಗೆ ವಿಮರ್ಶಿಸಿತು.

ಆರೋಪಿಯರು ಓಂ ಪ್ರಕಾಶನನ್ನು ಅಪಹರಿಸಿರುವುದು ನಿಜ. ಅವನ ಅಸು ತೆಗೆದಿರುವರೆಂಬುವರಲ್ಲಿಯೂ ಅನುಮಾನವಿಲ್ಲ. ಕಾಣೆಯಾದ ಹುಡುಗನ ಕಳೇಬರ ಇದುವರೆಗೂ ಸಿಕ್ಕಿಲ್ಲ. ಶವ ಸಿಗಲಿಲ್ಲ ಎನ್ನುವ ಕಾರಣದಿಂದಲೇ ಹುಡುಗ ಇನ್ನೂ ಬದುಕಿದ್ದಾನೆ ಎಂದು ಸಂದೇಹಿಸಲು ಬರುವುದಿಲ್ಲ. ಆತ ಕಣ್ಮರೆಯಾಗಿ ಎಷ್ಟುಕಾಲ ಕಳೆದಿದೆ-? ಜೀವದಿಂದಿರುತ್ತಿದ್ದರೆ ಬಾರದಿರುತಿದ್ದನೇ-? ಓಂ ಪ್ರಕಾಶ ಅಸಹಜ, ಸಾವಿಗೆ ಬಲಿಯಾದನೆನ್ನುವುದು ನಿಸ್ಸಂಶಯ. ಅದನ್ನು ತಿಂದ ಆರೋಪಿಯರು ಆ ಮೂಲಕ ಹಣ ಸುಲಿಗೆಗೆ ತೊಡಗಿದರೆಂಬುದು ನಿಸ್ಸಂದೇಹ. ಆದರೆ ಹುಡುಗನನ್ನು ಎಲ್ಲಿ, ಎಂದು, ಹೇಗೆ ಕೊಂದರೆಂಬುದೇ ಸ್ಪಷ್ಟವಾಗಿ ತಿಳಿದು ಬರುವುದಿಲ್ಲ. ರಾಮಚಂದ್ರನ ತಪ್ಪೊಪ್ಪಿಗೆಯ ಹೇಳಿಕೆಯನ್ನು ಕೃತ್ಯ ನಡೆದ ಮೂರು ತಿಂಗಳ ಮೇಲೆ, ಜೈಲಿನ ಆವರಣದಲ್ಲಿ ತೆಗೆದುಕೊಳ್ಳಲಾಯಿತು ಅದನ್ನು ನಂಬಲುಬರುವುದಿಲ್ಲ. ಅದು ಮೇಲುನೋಟಕ್ಕೇ ಕಲ್ಪಿತ ಕತೆಯಂತೆ ಕಾಣುತ್ತದೆ. ಕೊಲೆಗೆ ಸಂಬಂಧಿಸಿದ ವಿವರಗಳೇ ಅದರಲ್ಲಿಲ್ಲ. ಇದು ನಿಜವಿದ್ದರೆ, ನೀರಿನಲ್ಲಿ ಮುಳುಗಿಸಿ ಸಾಯಿಸಿದ ಓಂ ಪ್ರಕಾಶನ ದೇಹವನ್ನು ದಡಕ್ಕೆ ತರುವ, ತಂದ ಮೇಲೆ ಚೂರಿಯಿಂದ ತಿವಿಯುವ ಅಗತ್ಯವೇನಿದೆ ? ಇದು ಆಕಸ್ಮಿಕ ಸಾವೇ? ಹೇಳಲು ಬರುವುದಿಲ್ಲ. ಅಪಘಾತದಿಂದ ಈ ಅಪಮೃತ್ಯು ಸಂಭವಿಸಿಲ್ಲವೆಂದು ಪೂರ್ತಿಯಾಗಿ ತಳ್ಳಿ ಕೊಡಲು ಬರುವುದಿಲ್ಲ. ಕೊಲೆಯ ಕುರುಹುಗಳು ಪೂರ್ತಿಯಾಗಿ ನಶಿಸಿಹೋಗುವ ಮೊದಲು ಹುಡುಗನ ತಂದೆಗೆ ಪತ್ರ ಬರೆಯುವುದರ ಔಚಿತ್ಯ ಅರ್ಥವಾಗುವುದಿಲ್ಲ ಕೆಲವು ಬಲವತ್ತರವಾದ ಸಂದರ್ಭಗಳಿಂದ ಆರೋಪಿಗಳನ್ನು ನಿರ್ದೋಷಿಗಳೆಂದು ಹೇಳಲು ಸಾಧ್ಯವಿಲ್ಲ.

ಈ ಕಾರಣಗಳನ್ನು ಮುಂದು ಮಾಡಿ, ಮೂಲ ಕೋರ್ಟು ವಿಧಿಸಿದ –ಕೊಲೆಯ ಅಪರಾಧಕ್ಕೆ—ಶಿಕ್ಷೆಯನ್ನು ರದ್ದು ಪಡಿಸಿ, ಓಂ ಪ್ರಕಾಶನನ್ನು ಅಪಹರಿಸಿದ ತಪ್ಪಿಗೆ ಅಪರಿಬ್ಬರಿಗೂ ಜೀವಾವಧಿ ಶಿಕ್ಷೆ ವಿಧಿಸಿತು.

(ಈ ಲೇಖನಮಾಲೆ ಮುಗಿಯಿತು)

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 64/1971

ಶ್ರೀನಿವಾಸ ಭಟ್ಟ — ವಾದಿ.

ಮತ್ತು

ಭೋಜ ಪೂಜಾರಿ — ಪ್ರತಿವಾದಿ.

ಇವರೊಳಗೆ

ಈ ಮೂಲಕ ಪ್ರತಿವಾದಿ ಭೋಜ ಪೂಜಾರಿ— ಕರಿಯ ಪೂಜಾರಿರ ಮಗ, ಕಾರ್ಕಳ ತಾಲೂಕು, ಪಳ್ಳಿ ಗ್ರಾಮದ ದೂಮೊಟ್ಟು ಎಂಬಲ್ಲಿರುವವ, ಇವರಿಗೆ ತಿಳಿಸುವುದೇನೆಂದ್ರೆ:-

ವಾದಿಯು ನಿಮ್ಮ ಮೇಲೆ ಮಾಡಿದ ಮೇಲಿನ ದಾವೆ ನಿಮ್ಮ ಹಾಜರಿಗೆ ತಾರೀಕು 28.8.1971 ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 11 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹ ಯಾ ವಕೀಲ್ ದ್ವಾರಾ ಹಾಜರಾಗಿ ಉಡಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಸಿವ್ವಾ ಮಾಡಿ ಮೇಲಿನ ದಾವೆ ಯೇಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗುತ್ತದೆ.

By order of the Court.

(Sd) N. Bhasker Hegde,
Advocate for the Plaintiff.

Karkala, Date 12-8-71.

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Mraket,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ನೋಟೀಸು

ಪುತ್ತೂರು ಡಿವಿಜನ್ ಮಹಾಳಿ
ಸ್ಪಿನ್ನರ್ಸ್ ಸಹಕಾರಿ ಸಂಘ
ಲಿಮಿಟೆಡ್, ನಂಬ್ರ L 367, ಇಡ್ಕಿದು.
ಕಟಕ ಪೋಸ್ಟು, ದ.ಕ

ಈ ಸಂಘದ ವಾರ್ಷಿಕ ಮಹಾಸಭೆಯನ್ನು ತಾ. ..-9-71ನೇ ಬುಧವಾರ ಪೂರ್ವಾಹ್ನ ಘಂಟೆ 10-30ಕ್ಕೆ ದ. ಕ. ಸೆಂಟ್ರಲ್ ಬ್ಯಾಂಕಿನ ಪುತ್ತೂರು ಶಾಖೆಯ ಆಫೀಸಿನಲ್ಲಿ ಜರಗಿಸುವುದಾಗಿ ನಿರ್ಣಯಿಸಿರುದೆ. ಎಲ್ಲಾ ಮೆಂಬರರೂ ಬರಬೇಕಾಗಿ ವಿನಂತಿ.

(Sd). K. Venkappaya
ಅಧ್ಯಕ್ಷ

ಇಡ್ಕಿದು, ತಾ 5-8-1971.

ವಿಷಯಗಳು.

1) 1970-71ರ ವರದಿ ಓದುವುದು.
2) 1971-72ರ ಅಂದಾಜು ಬಜೆಟು ಮಂಜೂರಾತಿ.
3) 1966-67; 1967-68; 1968-69 ರ ಲಾಭಾಂಶ ವಿತರಣೆ.
4) ಅಧ್ಯಕ್ಷರ ಅನುಮತಿಯಿಂದ ಇತರ ವಿಷಯಗಳು.

ದಯಮಾಡಿ
ನಿಮ್ಮ ಬಾಕಿ ಚಂದಾ
ಹಣವನ್ನು ಕಳುಹಿಸಿರಿ

NAVAYUGA 26-8-1971

Registered with the Registrar
of News Papers for India
under No R. N 3546/'57

REGD. No B. G. 176
LICENCE No. 33
Licensed to Post without Prepayment

ಪ್ರೊ। ಷೇರ್ ಸಿಂಗ್
(ಬೇಸಾಯ ಶಾಖೆಯ ಕೇಂದ್ರ ಸ್ಟೇಟ್ ಸಚಿವರು)

ಭೂಲೋಕದ ಅಮೃತ - ಹಾಲು

ದೇಶದಲ್ಲಿನ ಅಪಾರ ಜಾನುವಾರುಗಳಿಂದ ಅಮೃತಸಮಾನವಾದ ಹಾಲು ಹೆಚ್ಚಾಗಿ ಪಡೆಯಲು ಹಲವಾರು ಯೋಜನೆಗಳು ಇವೆ. ಸಸಾರಜನಕದ ಅಭಾವವನ್ನು ತಡೆಯಲು ಇದು ಪ್ರಬಲ ಅಸ್ತ್ರವಾಗುವುದು

ಹಸಿರು ಕ್ರಾಂತಿ ನಮ್ಮ ಆಹಾರ ಉತ್ಪಾದನಾ ಕ್ರಮವನ್ನೇ ಬದಲಾಯಿಸಿದೆ ಆದಾಗ್ಯೂ ಆಹಾರದಲ್ಲಿ ಸಸಾರಜನಕ ಕೊರತೆ ಇನ್ನೂ ಪೀಡಿಸುತ್ತಲೇ ಇದೆ. ಹೆಚ್ಚಿನ ಪ್ರಮಾಣದಲ್ಲಿ ಪ್ರಾಣಿಜನ್ಯ ಸಸಾರಜನಕವನ್ನು ಉತ್ಪಾದಿಸುವುದರಿಂದ ಈ ಕೊರತೆಯನ್ನು ಕೊನೆಗಾಣಿಸಬಹುದು ...ಚೆಗೆ ನಡೆದ ರಾಜ್ಯಗಳ ಪಶುಸಂಗೋಪನಾ ಖಾತೆ ಮಂತ್ರಿಗಳ ಸಮ್ಮೇಳನದಲ್ಲಿ ಒತ್ತಿ ಹೇಳಲಾಗಿದೆ ಅಲ್ಲದೆ ...ವೃದ್ಧಿ ಯೋಜನೆಗಳ ಗುರಿಸಾ... ಸಂಗೋಪನೆಯೂ ಎತಿ ಮು... ದೆ ಎಂದೂ ಸಮ್ಮೇಳನ ಅಭಿಪ್ರಾಯಪಟ್ಟಿದೆ.

ದೇಶದಲ್ಲಿ 17 6 ಕೋಟಿ ಜಾನುವಾರುಗಳು ಹಾಗೂ 5 29 ಎಮ್ಮೆಗಳು ಇದ್ದುವು ಎಂಬುದಾಗಿ 1966ರ ಜಾನುವಾರ ಗಣತಿ ತಿಳಿಸಿದೆ ಭಾರತದಲ್ಲಿ ಇಡಿ ವಿಶ್ವದ ಯಾವುದೇ ರಾಷ್ಟ್ರಕ್ಕಿಂತ ಜಾನುವಾರುಗಳ ಸಂಖ್ಯೆ ಹೆಚ್ಚಿದೆಯಾದರೂ ಅವುಗಳಿಂದಾಗುವ ಹಾಲು ಮತ್ತಿತರ ಉತ್ಪಾದನೆ ಸಾಕಷ್ಟು ಪ್ರಮಾಣದಲ್ಲಿಲ್ಲ ಹಾಲು ಉತ್ಪಾದನಾ ವಿಷಯದಲ್ಲಿ ನಮ್ಮ ದೇಶವಿನ್ನೂ ಬಹಳಷ್ಟು ಮುನ್ನಡೆಯಬೇಕು 1970—71ರಿಂದ 1974—75ರ ಐದು ವರ್ಷಗಳ ಅವಧಿಯಲ್ಲಿ ವಿಶ್ವ ಆಹಾರ ಕಾರ್ಯಕ್ರಮದಲ್ಲಿ 95.40 ಕೋಟಿ ರೂ ಬೆಲೆಯ ಕೆನೆ ತೆಗೆದ ಹಾಲುಪುಡಿ ಮತ್ತು ತುಪ್ಪವನ್ನು ಒದಗಿಸಲಾಗುವುದು ಇದರಿಂದ ಬರುವ ಹಣವನ್ನೂ ಸರ್ಕಾರಿ ಕ್ಷೇತ್ರದಲ್ಲಿನ ಮುಂಬೈ, ಕಲ್ಕತ್ತಾ, ದೆಹಲಿ ಮತ್ತು ಮದರಾಸು ಹಾಲು ಸಂಸ್ಕರಣಾ ಡೈರಿಗಳ ಪೋಷಣೆ ಮತ್ತು ಅಭಿವೃದ್ಧಿಗಾಗಿ ಬಳಸಲಾಗುವುದು. ಅವುಗಳ ಸದ್ಯದ ಸಂಸ್ಕರಣಾ ಸಾಮರ್ಥ್ಯವನ್ನು ಹೆಚ್ಚಿಸಲಾಗುವುದು ಈ ಹಣವನ್ನು ದೇಶದ ಹತ್ತು ರಾಜ್ಯಗಳು ಅಂದರೆ ಆಂಧ್ರಪ್ರದೇಶ, ಬಿಹಾರ, ಗುಜರಾತ, ಹರಿಯಾಣ, ಮಹಾರಾಷ್ಟ್ರ, ಪಂಜಾಬ್, ರಾಜಾಸ್ಥಾನ, ತಮಿಳು ನಾಡು, ಉತ್ತರ ಪ್ರದೇಶ ಮತ್ತು ಪಶ್ಚಿಮಬಂಗಾಳ ಹಾಗೂ ಕೇಂದ್ರಾಡಳಿತ ಪ್ರದೇಶವಾದ ದೆಹಲಿಯಲ್ಲಿನ ಹಾಲು ಉತ್ಪಾದನೆ ಮತ್ತು ಕೊಳ್ಳುವ ವ್ಯವಸ್ಥೆಯನ್ನು ಉತ್ತಮ ಪಡಿಸುವುದಕ್ಕಾಗಿಯೂ ಬಳಸಲಾಗುವುದು

ದೇಶದಲ್ಲಿ ಸದ್ಯ 46 ತೀವ್ರ ಪಶು ಅಭಿವೃದ್ಧಿ ಯೋಜನೆಗಳಿದ್ದು ಅವುಗಳ ಸಂಖ್ಯೆಯನ್ನು ಇನ್ನೂ ಹೆಚ್ಚಿಸಲು ಉದ್ದೇಶಿಸಲಾಗಿದೆ ಪ್ರತಿಯೊಂದು ಪಶು ಅಭಿವೃದ್ಧಿ ಯೋಜನೆಯಲ್ಲಿ ಸಂತಾನಾಭಿವೃದ್ಧಿ ಮಾಡತಕ್ಕ ಸುಮಾರು ಒಂದುಲಕ್ಷ ಹಸುಗಳು ಅಥವಾ ಎಮ್ಮೆಗಳಿವೆ ನಿಯಂತ್ರಣ ಸಂತಾನ, ಸಾಕಷ್ಟು ಪ್ರಮಾಣದಲ್ಲಿ ಪಶುಗಳಿಗೆ ಮೇವು ಪೂರೈಕೆ,ತೀವ್ರ ರೋಗ ನಿಯಂತ್ರಣ, ಸುವ್ಯವಸ್ಥಿತ ಆಡಳಿತ, ಮಾರುಕಟ್ಟೆ, ಗ್ರಾಮಾಂತರ ಡೈರಿ ವಿಸ್ತರಣಾ ಕಾರ್ಯಕ್ರಮಗಳಿಗೆ ಪ್ರಾಮುಖ್ಯತೆ ನೀಡಲಾಗುತ್ತಿದೆ. ಹಾಲು ಪೂರೈಕೆ ವಿಷಯದಲ್ಲಿ ಈ ಯೋಜನೆ ಮಹತ್ವದ ಸೇವೆ ಸಲ್ಲಿಸುತ್ತಿದೆ ಹಾಲು ಡೈರಿಗಳಿರುವ ಪ್ರದೇಶಗಳಲ್ಲಿ ಇನ್ನೂ 15 ಇಂತಹ ಬೃಹತ್ ಯೋಜನೆಗಳನ್ನು ಮತ್ತು 20 ಮಧ್ಯಮ ಪ್ರಮಾಣದ ಯೋಜನೆಗಳನ್ನೂ ಪ್ರಾರಂಭಿಸಲು ಉದ್ದೇಶಿಸಲಾಗಿದೆ ಇವುಗಳ ಸಾಮರ್ಥ್ಯ ಕ್ರಮವಾಗಿ 20,000 ಲೀಟರ್ ಮತ್ತು 15,000 ಲೀಟರ್‌ಗಳಷ್ಟಿರುವುದು. ಇದರ ಜೊತೆಗೆ ಕೇಂದ್ರ ಸರ್ಕಾರಿ ಕ್ಷೇತ್ರದಲ್ಲಿ ನಾಲ್ಕು ಹಾಲು ಉತ್ಪಾದನಾ ಯೋಜನೆಗಳನ್ನು ಕೈಗೊಳ್ಳಲಾಗುವುದು

ಪಶು ಸಂತಾನಾಭಿವೃದ್ಧಿಗೆ ಉತ್ತಮಜಾತಿಯ ಹೋರಿಗಳು ಅಗತ್ಯ. ದೇಶೀಯ ಪಶುಗಳ ತಳಿ ಅಭಿವೃದ್ಧಿಗಾಗಿ ಐದು ಫಾರಂಗಳಿಗೆ ಕೇಂದ್ರ ಸರ್ಕಾರದ ಅನುಮತಿ ದೊರತಿದೆ ಕೆಂಪು–ಸಿಂಧಿ ಹಸುಗಳಿಗೆ ಒರಿಸ್ಸಾದ ಚಿಪ್‌ಲಿಯಾ, ಫಾರಂ, ಥಾರ್‌ಪಾರ್ಕರ್ ಹಸುಗಳಿಗೆ ರಾಜಾಸ್ಥಾನದ ಸುರತ್‌ಘಟ್‌ಫಾರಂ, ಸುರ್ತಿ ಎಮ್ಮೆಗಳಿಗೆ ಗುಜರಾತಿನ ದಾಮರೋದ್, ಫಾರಂ, ಮುರ್ರಾ ಎಮ್ಮೆಗಳಿಗೆ ತಮಿಳುನಾಡಿನ ಅಲಮಡಿ ಫಾರಂ ಮತ್ತು ಜೆರ್ಸಿ ಹಸುಗಳಿಗೆ ಒರಿಸ್ಸಾದ ಕೋರಾಪುತ್‌ನಲ್ಲಿ ಈ ಯೋಜನೆಗಳ ಕಾರ್ಯೋನ್ಮುಖವಾಗಿದೆ. ಬೆಂಗಳೂರು ನಗರದ ಸಮೀಪದಲ್ಲಿರುವ ಹೆಸರುಘಟ್ಟದಲ್ಲಿ ಜೆರ್ಸಿ ಹಳುಗಳಿಗೆ ಸಂತಾನ ವೃದ್ಧಿಗೆ ಅನುಕೂಲವಾಗುವಂತವ ಒಂದು ಸಣ್ಣ ಪಶುತಳಿಫಾರಂ ಇದೆ ಫ್ರೀಜಿಯಂ ಹಸುಗಳಿಗೆ ಸಂತಾನವೃದ್ಧಿಗೆ ನೆರವಾಗುವ ಒಂದು ಯೋಜನೆಯನ್ನು ನಾಲ್ಕನೆಯೋಜನೆಯಲ್ಲಿ ಆರಂಭಿಸಲು ಉದ್ದೇಶಿಸಲಾಗಿದೆ ಜಾನುವಾರುಗಳಿಗೆ ಮೇವು ಪೂರೈಸುವ ಅಗತ್ಯವನ್ನು ಮನಗಂಡು ಈ ದಿಶೆಯಲ್ಲೂ ಸೂಕ್ತ ಕ್ರಮಗಳನ್ನೂ ಕೈಗೊಳ್ಳಲಾಗಿದೆ ಜಾನ್ಸಿಯಲ್ಲಿರುವ ಭಾರತದ ಹುಲ್ಲುಗಾವಲುಮತ್ತು ದನಕರುಗಳ ಮೇವು ಸಂಶೋಧನಾ ಕೇಂದ್ರವನ್ನು ಅಭಿವೃದ್ಧಿ ನೆರವಿಗಾಗಿ ವಿಶ್ವ ಸಂಸ್ಥೆಯ ಅಭಿವೃದ್ಧಿ ಯೋಜನೆ ಒಪ್ಪಂದ ಕೈಗೊಳ್ಳಲಾಗಿದೆ ದನಕರುಗಳಿಗೆ ಅಗತ್ಯವಾದ ಉತ್ತಮ ಮೇವು ಬೆಳೆಯಲು ಅವಶ್ಯಕವಾದ ಬೀಜಗಳನ್ನು ರಾಷ್ಟ್ರೀಯ ಬೀಜಗಳ ಕಾರ್ಪೋರೇಷನ್ ಇದೀಗ ಬೆಳೆಯುತ್ತಿದೆ. ಸರ್ಕಾರ ಹಾಗೂ ಖಾಸಗಿ ಬಂಡವಾಳ ಹೂಡಿಕೆಯಿಂದಾಗಿ 1968-69ರಲ್ಲಿದ್ದ ಹಾಲು ಉತ್ಪಾದನೆ 21 20 ದಶಲಕ್ಷ ಟನ್‌ಗಳಿಂದ 25 86 ದಶಲಕ್ಷಗಳಿಗೆ ಏರುವ ನಿರೀಕ್ಷೆ ಇದೆ

●●

(ಒಂದನೇ ಪುಟದಿಂದ)

ಇರಬಹುದು, 'ಸಮಾಜವಾದ'ದ ಅರ್ಥವೂ ದಿನದಿನಕ್ಕೆ ಬದಲಾಗುವಾಗ, 'ತಟಸ್ಥ ನೀತಿ'ಯ ಅರ್ಥ ಮಾತ್ರ ಓಬೀರಾಯನ ಕಾಲದಲ್ಲೇ ಉಳಿಯಬೇಕೆ?

—ಪ್ರಧಾನಿ ಗಾಂಧಿ ಚುನಾವಣಾ ನಂತರ ಸಾಧಿಸಿದ ಏಕಮಾತ್ರ ಮಹತ್ವದ ಸಾಧನೆ ರಶ್ಯ– ಭಾರತ ರಕ್ಷಣಾ ಒಡಂಬಡಿಕೆ.

●●

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O S. No 242/1963

ಪಾಸ್ಕಲ್ ಫಿಲಿಪ್ ಮಾರ್ಟಿಸ್ —ವಾದಿ.

ಮತ್ತು

ಅನಂತಪದ್ಮನಾಭ ಆಚಾರ್ಯ "ಜ್ಯೋತಿ" ಕೂಡಾ —ಪ್ರತಿವಾದಿರು

ಯಿವರೊಳಗೆ

ಉಡುಪಿ ತಾಲೂಕು ಯೇಣಗುಡ್ಡೆ ಗ್ರಾಮದ ಅಜ್ಜಡ ಅನಂತಪದ್ಮನಾಭ ಆಚಾರ್ಯರ ಮಗ–ರಾಜಾರಾಮ ಆಚಾರ್ಯರಿಗೆ ಈ ಮೂಲಕ ತಿಳಿಸುವುದೇನಂದ್ರೆ –

ಮೇಲ್ಕಂಡ ನ್ಯಾಜ್ಯದ 1ನೇ ಪ್ರತಿವಾದಿ ಮೃತ—ಅನಂತ ಪದ್ಮನಾಭ ಆಚಾರ್ಯರ ವಾರೀಸುದಾರರನ್ನಾಗಿ ನಿಮ್ಮನ್ನು ಮೇಲ್ಕಂಡ ವ್ಯಾಜ್ಯದಲ್ಲಿ ಸಪ್ಲಿಮೆಂಟು 8ನೇ ಪ್ರತಿವಾದಿಯನ್ನಾಗಿ ಕಕ್ಷಿಯಲ್ಲಿ ಸೇರಿಸಿ ಪ್ಲೇಂಟು ದುರಸ್ತಿಪಡಿಸಬೇಕಾಗಿ ವಾದಿಯು ದಾಖಲ್ಲು ಮಾಡಿರುವ ಅರ್ಜಿಗಳನ್ನು ತಾ 30—8—1971ಕ್ಕೆ ನಿಮ್ಮ ನೋಟೀಸು ಬಗ್ಗೆ ಮುಖೋಣಾಗಿದೆ. ಆ ಕುರಿತು ನಿಮಗೇನಾದರೂ ಆಕ್ಷೇಪಯಿದ್ದಲ್ಲಿ ಸದ್ರಿ ತಾ. 30—8—1971ನೇ ದಿವಸ ಬೆಳಿಗ್ಗೆ 11ಘಂಟೆಗೆ ನೀವು ಸ್ವತಹಾ ಯ ವಕೀಲರ ಮುಖಾಂತರ ಹಾಜರಾಗಿ ಪ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಪ್ಪಾಮಾಡಿ ಸದ್ರಿ ವ್ಯಾಜ್ಯವು ಪೈಸಲು ಮಾಡಲಾದೀತು.

P. V. Acharya
Vakil for Plaintiff

ಉಡುಪಿ ತಾ 10—8—71

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 200/1970

ವಾದಿ — ರಾಜೀವ ಸೆಟ್ಟಿ

ಪ್ರತಿವಾದಿ— ವೆಂಕಪ್ಪ ಮೇಸ್ತ, ಪುಟ್ಟಯ್ಯ ಮೇಸ್ತ್ರರ ಮಗ, ಕುಂದಾಪುರ ತಾಲ್ಲೂ ಶಿರೂರು ಗ್ರಾಮದ ಕಳಿಹಿತ್ಲಲ್ಲಿರುವವನ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ –

ನೀವು ವಾದಿಗೆ ತಾ 23–6–1966ರಲ್ಲು ರೂಪಾಯಿ 125–00ಕ್ಕೆ ಬರೆಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿಗಳ ಬಗ್ಗೆ ವಾದಿಯು ಮಾಡಿದ ಮೇಲಿನ ದಾವೆಯು ತಾ. 1–10–1971 ಕ್ಕೆ ತಪ್ಸಿಗೆಯಿದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪಯಿದ್ದರೆ ಆ ದಿವಸ ಬೆಳಿಗ್ಗೆ 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿರುತ್ತದೆ.

ಕೋರ್ಟು ಹುಕುಂ ಪ್ರಕಾರ.

Y. Tejappa Shetty,
Advocate for Plaintiff.

Coodapoor. 13-8-1971.

**READ &
ADVERTISE IN
NAVAYUGA WEEKLY**

Edited, Printed & Published by K. H. Shetty at the Navayuga Press, Udipi, S. India.

ನವ ಯುಗ

1)	2-9-1971	12	
2)	9-9-1971	12	
3)	16-9-1971	12	
4)	30-9-1971	12	
5)	7-10-1971	12	
6)	14-10-1971	12	
7)	21-10-1971	28	ದೀಪಾವಳಿ ಸಂಚಿಕೆ
8)	28-10-1971	10	
9)	4-11-1971	12	
10)	11-11-1971	16	
11)	18-11-1971	12	
12)	25-11-1971	12	
13)	2-11-1971	12	
14)	9-12-1971	12	
15)	16-12-1971	12	
16)	23-12-1971	12	
17)	30-12-1971	12	
18)	6-1-1972	12	
19)	13-1-1972	12	
20)	20-1-1972	10	
		256	

ಸ್ಥಾಪಕರು : ಡಾ| ಎ. ಬಿ. ಶೆಟ್ಟಿ

ಸಂಪಾದಕ : ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಸಂಪುಟ ೫೧ ಸಂಚಿಕೆ ೧

Vol. 51 No. 1

ಉಡುಪಿ, ೨-೯-೧೯೭೧

ಚಾರುಚಯನ

ಕೃಷ್ಣಗಿರಿ ಉಪಚುನಾವಣೆಯ ಭವಿಷ್ಯವಾಣಿ

ತಮಿಳುನಾಡಿನ ಇಂಡಿಕೇಟ್ ನಾಯಕ ಶ್ರೀ ಸಿ. ಸುಬ್ರಹ್ಮಣ್ಯಂ ಬಹು ಬಣ್ಣದ ವ್ಯಕ್ತಿ. ಹಿಂದಿನ ಮದ್ರಾಸ ರಾಜ್ಯದಲ್ಲಿ ಯಶಸ್ವೀ ಯುವ ಮಂತ್ರಿಗಳೆಂದು ಹೆಸರು ಗಳಿಸಿದ ಮನುಷ್ಯ.

ಮದ್ರಾಸದ ಮತ್ತೊಬ್ಬ ಪ್ರಭಾವಿ ನಾಯಕ ಶ್ರೀ ಕಾಮರಾಜ ಮತ್ತು ಇವರ ನಡುವೆ ಮುಖ್ಯ ಮಂತ್ರಿತನಕ್ಕೇ ಪೈಪೋಟಿ. ಕಾಮರಾಜರ ವಿಜಯ—ಸಿಸುರವರೂ ಅವರ ಸಂಪುಟದ ಅಗ್ರೇಸರ–ಅಪೂರ್ವ ಶಕ್ತಿ.

ಕಾಮರಾಜರು ಡಿಲ್ಲಿಗೆ ಹೋದ ಬಳಿಕ ಸಿಸುರವರೂ ಡಿಲ್ಲಿಗೆ ಅವರನ್ನು ಹಿಂಬಾಲಿಸಿದರು. ಮೊದಲಿನವರು ಪಕ್ಷದ ಅಧ್ಯಕ್ಷಗಿರಿಗೆ, ಮತ್ತೊಬ್ಬರು ಮಂತ್ರಿಪದವಿಗೆ.

ಅಧಿಕೃತ ಭಾಷಾ ಸಂಬಂಧದಲ್ಲಿ ಹಿಂದೀ ವಿರೋಧ ಚಳುವಳಿಯ ವೇಳೆ ಮಂತ್ರಿಪದವಿಗೆ ರಾಜಿ ನೀಡಿ ಹಿಂದಿನಿಂದ ಅದನ್ನು ಹಿಂತೆಗೆದು ಕೊಂಡ ಜನಪ್ರಿಯ ಮಂತ್ರಿ ಸಿಸು.

ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ ಸೋಲುಂಡ ಹಲವಾರು ನಾಯಕಮಣಿಗಳಲ್ಲಿ ಸಿ.ಸು. ಕೂಡ ಒಬ್ಬರು. ತಮಿಳುನಾಡಿನಲ್ಲಿ ದ್ರಾಮುಕದ ರಾಜ್ಯ ಸ್ಥಾಪನೆಯಾದ ಬಳಿಕ ರಾಜ್ಯ ಸಭೆಗೂ ಅವರಿಗೆ ಟಿಕೇಟು ಸಿಗಲಿಲ್ಲ. ಒಂದೆರಡು ಪ್ರಯತ್ನಗಳನ್ನು ಅವರು ನಡೆಸಿದರಾದರೂ ಅವು ವಿಫಲವಾಯ್ತು.

ಇದಕ್ಕೆ ದ್ರಾಮುಕ ಮಾತ್ರ ಕಾರಣವಲ್ಲ; ಕಾಂಗ್ರೆಸ್ ವಿಭಜನೆಯೂ ಮುಖ್ಯ ಹೇತು ಸಿಸು ಕಾಮರಾಜರ ಪ್ರಬಲ ರಾಜ್ಯಕೀಯ ಶತ್ರುವಾದರು; ಶ್ರೀಮತಿ ಗಾಂಧಿಯನ್ನು ಬೆಂಬಲಿಸಿದರು.

ಅಲ್ಪಾವಧಿಯವರೆಗೆ ಇಂಡಿಕೇಟಿನ ಅಧ್ಯಕ್ಷ ಪೀಠವನ್ನೂ ಏರಿದರು; ಪಕ್ಷ ವಿಭಜನೆಯನ್ನು ಪೂರ್ಣ ಮಾಡುವಲ್ಲಿ ಶ್ರೀಮತಿ ಗಾಂಧಿಯ ಭುಜಕ್ಕೆ ಭುಜಕೊಟ್ಟು ದುಡಿದರು.

ಅದೇಕೋ ಅವರಿಗೂ ಅವರನ್ನು ನಂಬಿದವರಿಗೂ ಅವರು ಪಕ್ಷದ ಅಧ್ಯಕ್ಷನಾಗಿರುವುದು ಬೇಡವಾಯ್ತು. ಮತ್ತೆ ಹೊರಬಂದು ತಮಿಳು ನಾಡಿನಲ್ಲಿ ಸಂಘಟನೆಗೆ ಹೆಣಗಾಡಿದರು.

ಕಾಮರಾಜರ ಪ್ರಭಾವ–ವ್ಯಕ್ತಿತ್ವವನ್ನು ಸಂಪೂರ್ಣ ಮಸುಳಿಸುವುದಕ್ಕಾಗಿ ದ್ರಾಮುಕದೊಂದಿಗೆ ಚುನಾವಣಾ ಮೈತ್ರಿ ಮಾಡಬೇಕಾಯ್ತು ಈ ವೇಳೆ ಪಕ್ಷದಲ್ಲಿ ದೊಡ್ಡ ಬಿರುಕೇ . ಮೂಡಿದಂತೆ ಭಾಸವಾಯ್ತು.

ದಿಲ್ಲೀಶ್ವರರ ಒತ್ತಡದಿಂದ ಬೆರಳೆಣಿಕೆಯ ಲೋಕ ಸಭಾ ಸ್ಥಾನಗಳಿಗಾಗಿ ಅವರು ಎಲ್ಲ ವಿಧಾನ ಸಭಾಸ್ಥಾನಗಳನ್ನು ಬಿಟ್ಟುಕೊಡಬೇಕಾಯ್ತು; ಇದನ್ನು ಇಂಡಿಕೇಟಿನ ಅನನ್ಯ ಶರಣಾಗತಿಯೆಂದು ಬಣ್ಣಿಸಲಾಯ್ತು.

ಚುನಾವಣೆಯ ಪರಿಣಾಮ ಕೆಟ್ಟದಾಗಲಿಲ್ಲ. ಸಿಸು ತಾನು ಸ್ಪರ್ಧಿಸುವುದೇ ಇಲ್ಲವೆಂದು ಕೈಕಟ್ಟಿ ಕುಳಿತರು. ಫಲಿತಾಂಶದ ಬಗ್ಗೆ ಸಂದೇಹ ಪಟ್ಟು ಅವರು ಈ ನಿರ್ಧಾರ ಕೈಕೊಂಡರೆಂದೂ ಯಾರು ಯಾರೋ ಅಂದು ಕೊಂಡರು

ಆದರೆ, ಇಂಡಿಕೇಟು ಚುನಾವಣೆಗಳಲ್ಲಿ ಒಳ್ಳೆಯದಾಗಿಯೇ ಮಾಡಿತು. ಇದರಿಂದ ಸಿಸುವಿಗೂ ತುಸು ಹುಮ್ಮಸ್ಸು ಬಂದಿತು. ಕಾಮರಾಜರೊಬ್ಬರನ್ನು ಬಿಟ್ಟು ಅವರವರಾರೂ ಗೆಲ್ಲಲೇ ಇಲ್ಲ! ವಾತಾವರಣ ತನಗೆ ಅನುಕೂಲವಾಗಿದೆಯೆಂಬುದು ಸಿಸುವಿಗೆ ಮನವರಿಕೆಯಾಯ್ತು.

ಶ್ರೀಮತಿ ಗಾಂಧಿ ಸಿಸುವನ್ನು ಕೈಬಿಡಲು ಸಿದ್ಧರಾಗಲಿಲ್ಲ ಒಂದೊಮ್ಮೆ ಕೈ ಬಿಟ್ಟರೆ ಏನಾದೀತೋ ಎಂಬ ಹೆದರಿಕೆಯಿರಬಹುದು ಪದಚ್ಯುತ ರಾಜಕಾರಣಿಯನ್ನೂ ಹಸಿದ ಹುಲಿಯನ್ನೂ ನಂಬುವುದು ಕಷ್ಟ.

ಸಂಸತ್ತಿನ ಉಭಯ ಸಭೆಗಳ ಸದಸ್ಯರಲ್ಲವಾದರೂ ಸಿಸುವನ್ನು ಯೋಜನಾ ಸಚಿವರೆಂದು ನೇಮಿಸಿಕೊಂಡರು. ತಮಿಳುನಾಡಿನಲ್ಲಿ ಪಕ್ಷವು ಬೇರು ಬಿಡಬೇಕಾದರೆ ಸಿಸುವನ್ನು ಹತ್ತಿರದಲ್ಲೇ ಇಟ್ಟುಕೊಳ್ಳಬೇಕು. ಏಕೆಂದರೆ, ಕಾಮರಾಜರು ಹಳೆಯ ಹುಲಿಯಾಗುತ್ತಲೇ ಬಂದಿದ್ದಾರೆ.

ಸಿ.ಸು.ವಿಗೊಂದು ಸ್ಥಾನ ಒದಗಿಸಲು ಒಬ್ಬ ನಿಜಯಿ ಎಂ.ಪಿ. ಶ್ರೀ ಗೌಂಡರ್ ಮುಂದೆ ಬಂದರು ಕೃಷ್ಣಗಿರಿಯಲ್ಲಿ ಉಪಚುನಾವಣೆಗೆ ಏರ್ಪಾಟಾಯ್ತು.

ಇಂಡಿಕೇಟಿನ ಪತಿಯಿಂದ ಸಿಸು ಸ್ಪರ್ಧಿಸಿದರು. ಅವಿರೋಧ ಆಯ್ಕೆಯಾದರೆ ಪ್ರಜಾಪ್ರಭುತ್ವಕ್ಕೆ ಕೀರ್ತಿಯೆಲ್ಲಿಂದ? ಸ್ವತಂತ್ರ ಉಮೇದ್ವಾರ ಶ್ರೀ ದೇಶಿಕನ್ ನಾಮಪತ್ರಸಲ್ಲಿಸಿದರು.

ಸಿಸುವಿಗೆ ಇಂಡಿಕೇಟ್–ದ್ರಾಮುಕ ಮತ್ತಿತರ ಎಡವೆಂದು ಕರೆದುಕೊಳ್ಳುವ ಪಕ್ಷಗಳು ಒಂದಾಗಿ ಬೆಂಬಲ ನೀಡಿದುವು ಶ್ರೀ ದೇಶಿಕನ್ ಏಕಾಕಿಯಾದರು.

ಪರಿಣಾಮ ಒಂದು ಲಕ್ಷ ಎಪ್ಪತ್ತು ಸಾವಿರ ಅಧಿಕ ಬಹುಮತದಿಂದ ಸಿಸು ಗೆದ್ದು ಬಂದರು. ಅವರ ವಿಜಯ ನಿರೀಕ್ಷಿತವೇ.

ಸುಮಾರು ಐದು ವರ್ಷಗಳ ನಂತರ ಸಿಸು ಮತ್ತೀಗ ಎಂಪಿ ಆಗಿದ್ದಾರೆ, ತನ್ನ ಸಚಿವ ಪದವನ್ನುಳಿಸಿಕೊಳ್ಳುವಲ್ಲಿ ಯಶಗಳಿಸಿದ್ದಾರೆ.

ಕೃಷ್ಣಗಿರಿ ಚುನಾವಣೆಯಲ್ಲಿ ಉಳಿದ ರಾಜ್ಯಕೀಯ ಪಕ್ಷಗಳು ಆಸಕ್ತಿ ತೋರಲಿಲ್ಲ. ಇದಕ್ಕೆ ಕಾರಣವೂ ಸುಸ್ಪಷ್ಟ.

ಮಧ್ಯಾವಧಿ ಚುನಾವಣೆಯಲ್ಲಿ ಸಿಂಡಿಕೇಟ್ ನೇತೃತ್ವದ ಮೈತ್ರಿಕೂಟ ಸಂಪೂರ್ಣ ಸೋಲುಂಡಿತು. ಮೈತ್ರಿಕೂಟದ ವಿಜಯಕ್ಕೆ ಬೇಕೆಂಬಷ್ಟು ಅನುಕೂಲ ವಾತಾವರಣವಿದ್ದರೂ ವಿಜಯ ಅದಕ್ಕೆ ಕೈಕೊಟ್ಟಿತು.

ಮೈತ್ರಿಕೂಟ ಸೇರಿದ್ದರಿಂದಲೇ ತಮ್ಮ ಸೋಲಾಯಿತೆಂದು ಅದರಲ್ಲಿ ಸೇರಿದ್ದ ವಿವಿಧ ಪಕ್ಷಗಳು ಖಚಿತ ಅಭಿಪ್ರಾಯ ತಳೆದುವು

ಒಂದೊಂದು ಪಕ್ಷಕ್ಕೆ ಅಲ್ಲಿ ಬೆಂಬಲವಿಲ್ಲ—ಮೊದಲೇ ಇಂಡಿಕೇಟ್ ಗೆದ್ದುಕೊಂಡ ಸ್ಥಾನವದು.

ಕೃಷ್ಣಗಿರಿಯ ಉಪ ಚುನಾವಣೆಯ ಪರಿಣಾಮ ಯಾವ ಭವಿಷ್ಯವನ್ನು ಹೇಳುತ್ತದೆ?

ಇಂಡಿಕೇಟೊಂದೇ ಅಲ್ಲಿ ಸುಸಂಘಟಿತವಾದ ರಾಜ್ಯಕೀಯ ಪಕ್ಷವೆಂದೆ?

ಅದು ಸಾಧ್ಯವಿಲ್ಲ. ದ್ರಾಮುಕ ಮತ್ತಿತರ ಎಡಪಕ್ಷಗಳು ಸಿಸುವನ್ನೇ ಬೆಂಬಲಿಸಿದ್ದರಿಂದ ದೇಶಿಕನ್ ಏಕಾಕಿಯಾದದ್ದರಿಂದ ಅವರ ವಿಜಯ ಸುನಿಶ್ಚಿತವಾಯ್ತು.

ಉಳಿದ ಪಕ್ಷಗಳ ಸಂಘಟನೆ ತೃಪ್ತಿಕರವಾಗಿ ಸಾಗಿಲ್ಲವೆಂಬುದಂತೂ ಸತ್ಯ. ಪಕ್ಷದ ಸಂಘಟನೆಯಲ್ಲಿ ಹೊಸ ಹುಮ್ಮಸ್ಸು, ಹೊಸ ರಕ್ತದ ಬಳಕೆ ಅನಿವಾರ್ಯವೆಂಬುದೂ ಸ್ಪಷ್ಟ.

ಶ್ರೀ ದೇಶಿಕನ್‌ರ ಪ್ರಚಾರ ವೈಖರಿಯನ್ನು ನೋಡಿದಾಗ ಅವರದ್ದು ನಾಮಮಾತ್ರ ವಿರೋಧವೆಂಬುದು ವೇದ್ಯ ಒಂದು ಪ್ರಚಾರ ಸಭೆಯಿಲ್ಲ, ಒಂದು ಸದ್ದು ಗದ್ದಲವಿಲ್ಲ. ಎಲ್ಲೊ ಒಂದೆರಡು ಕಡೆ ಕರಪತ್ರ ಹಂಚಿ ಅವರು ತೃಪ್ತಿ ಹೊಂದಿದರು. ಇದೇ ಪ್ರಚಾರ ತುಸು ಬಿರುಸಿನಿಂದ ನಡೆದಿದ್ದರೆ?

ಗೆಲ್ಲುವುದೇನೋ ದೂರದ ಬೆಟ್ಟ. ಆದರೆ ಅವರ ಸೋಲು ಇಷ್ಟೊಂದು ದಯನೀಯವಾಗಿರುತ್ತಿರಲಿಲ್ಲವೇನೋ!

ಶ್ರೀ ದೇಶಿಕನ್ ಜಯಾ ಜಯಗಳ ಬಗ್ಗೆ ತಲೆಗೆಡಿಸಿಕೊಳ್ಳುವವರಲ್ಲ; ಹಾಗಿನವರಿರುತಿದ್ದರೆ, ಅಷ್ಟು ಕೆಲಸದಿಂದಲೇ ತೃಪ್ತರಾಗುತ್ತಿರಲಿಲ್ಲ.

ಪ್ರಜಾಸತ್ತೆಯ ಉಳಿವಿಗೆ ಪ್ರಬಲ ವಿರೋಧ ಪಕ್ಷ ಬೇಕೇ ಬೇಕು. ಸಶಕ್ತ ಆಟಗಾರರೆಲ್ಲರೂ ಒಂದೇ ದಳ ಸೇರಿದಾಗ ಆಟ ನೀರಸವಾಗುತ್ತದೆ, ವಿರೋಧ ಪಕ್ಷಗಳ ದೌರ್ಬಲ್ಯದಿಂದ ಪ್ರಜಾಸತ್ತೆ ನಿರಂಕುಶ ಸತ್ತೆಯಾಗುತ್ತದೆ.

ಸ್ವಾತಂತ್ರ್ಯ ಪ್ರಾಪ್ತಿಯಾದಂದಿನಿಂದಲೂ ನಮ್ಮಲ್ಲಿ ಪ್ರಬಲ ವಿರೋಧ ಪಕ್ಷದ ಅಭಾವವಿತ್ತು; ಅದನ್ನು ದೂರ ಮಾಡಲು ಹಲವಾರು ಮೇಧಾವಿ ರಾಜ್ಯಕೀಯ ನಾಯಕರು ಹಲವಾರು ಪ್ರಯತ್ನ ಮಾಡಿದರು.

ಯಾರೊಬ್ಬರೂ ಸಫಲರಾಗಲಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರ ದಿಟ್ಟತನವಾದರೂ ಇದಕ್ಕೆ ಪ್ರೇರಕ ಶಕ್ತಿಯಾಗಬಹುದೆಂದು ಊಹಿಸಲಾಯ್ತು. ಆದರೆ, ಲೋಕ ಸಭೆಗೆ ನಡೆದ ಮಧ್ಯಾವಧಿ ಚುನಾವಣೆಗಳು ಈ ಆಸೆಯನ್ನೂ ಇಲ್ಲವಾಗಿಸಿದುವು.

ಗೆಲ್ಲುವ ಪಕ್ಷ ಸೇರುವುದೊಂದೇ ನಮ್ಮ ರಾಜ್ಯಕೀಯದ ಮರ್ಮ. ಇದರಿಂದಲೇ ಪಕ್ಷಾಂತರದ ಸಿಡುಗು. ಇದು ಪ್ರಜಾಪ್ರಭುತ್ವವನ್ನು ಅಳಿಸಿ ನಿರಂಕುಶ ಪ್ರಭುತ್ವಕ್ಕೆ ದಾರಿ ಹಸನು ಮಾಡುತ್ತದೆ–ಎಂಬುದೀಗ ಹಗಲಿನಷ್ಟು ಬೆಳ್ಳಗಾಗಿ ಕಾಣುತ್ತದೆ.

● ●

ವಾದ ವಿವಾದ ಮಾಡುವುದು ನಮ್ಮ ಕೆಲಸವಲ್ಲ. ನಾವು ಸೇವೆ ಮಾಡುತ್ತಲೇ ಸಾಯಲಿಚ್ಛಿಸುತ್ತೇವೆ. ಸೇವೆಯೇ ನಮ್ಮ ಪ್ರಚಾರ ಕಾರ್ಯದ ಹೆಚ್ಚಿನ ಸಾಧನೆ. ಪರರ ದೋಷಗಳನ್ನು ಹೊರಗೆಳೆಯುವ ಮತ್ತು ನಮ್ಮ ವಿಚಾರಗಳನ್ನು ವರ್ಣಿಸುವ ಮೋಹಕ್ಕೆ ನಾವು ಬೀಳಬಾರದು ತಾಯಿಯು ತನ್ನ ಮಕ್ಕಳ ದೋಷಗಳನ್ನು ತೋರಿಸುತ್ತಾ ಕೂಡುವುದಿಲ್ಲ. ಅವರ ಮೇಲೆ ಪ್ರೇಮದ ಮಳೆಗರೆಯುತ್ತಿರುತ್ತಾಳೆ. ಅನಂತರವೇ ದೋಷಗಳನ್ನು ತೋರಿಸುತ್ತಾಳೆ. ಪ್ರೇಮಮಯ ಸೇವೆಯ ರೀತಿಯೇ ಇದು.

० ० ०

ಶ್ರದ್ಧೆಯಿಂದ ಉತ್ಸಾಹವು ವರ್ಧಿಸುತ್ತದೆ; ಸಂದೇಹದಿಂದ ಅದು ಹಾಳಾಗುತ್ತದೆ. ಕಾರಣ ಶ್ರದ್ಧೆಯೇ ಬಲವು.

० ० ०

	27-1-1972	44 [illegible]
21)	3-2-1972	12
22)	10-2-1972	12
23)	17-2-1972	12
24)	24-2-1972	12
25)	2-3-1972	12
26)	9-3-1972	12
27)	16-3-1972	12
28)	23-3-1972	12
29)	30-3-1972	12
30)	6-4-1972	12
31)	13-4-1972	12
32)	20-4-1972	12
33)	27-4-1972	12
34)	4-5-1972	12
35)	11-5-1972	12
36)	18-5-1972	12
37)	25-5-1972	12
38)	8-6-1972	12
39)	15-6-1972	12
40)		
		272

ಸ್ಥಾಪಕರು :
ದಿ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಸಂಪುಟ ೫೧
ಸಂಚಿಕೆ ೧

Vol. 51
No. 1

ಉಡುಪಿ, ೨—೯—೧೯೭೧

ಚಾರುಚಯನ

ಕೃಷ್ಣಗಿರಿ ಉಪಚುನಾವಣೆಯ ಭವಿಷ್ಯವಾಣಿ

ತಮಿಳುನಾಡಿನ ಇಂಡಿಕೇಟ್ ನಾಯಕ ಶ್ರೀ ಸಿ. ಸುಬ್ರಹ್ಮಣ್ಯಂ ಬಹು ಬಣ್ಣದ ವ್ಯಕ್ತಿ. ಹಿಂದಿನ ಮದ್ರಾಸ ರಾಜ್ಯದಲ್ಲಿ ಯಶಸ್ವೀ ಯುವ ಮಂತ್ರಿಗಳೆಂದು ಹೆಸರು ಗಳಿಸಿದ ಮನುಷ್ಯ.

ಮದ್ರಾಸದ ಮತ್ತೊಬ್ಬ ಪ್ರಭಾವಿ ನಾಯಕ ಶ್ರೀ ಕಾಮರಾಜ ಮತ್ತು ಇವರ ನಡುವೆ ಮುಖ್ಯ ಮಂತ್ರಿತನಕ್ಕೇ ಪೈಪೋಟಿ. ಕಾಮರಾಜರ ವಿಜಯ—ಸಿಸುರವರೂ ಅವರ ಸಂಪುಟದ ಅಗ್ರೇಸರ–ಅಪೂರ್ವ ಶಕ್ತಿ.

ಕಾಮರಾಜರು ಡಿಲ್ಲಿಗೆ ಹೋದ ಬಳಿಕ ಸಿಸುರವರೂ ಡಿಲ್ಲಿಗೆ ಅವರನ್ನು ಹಿಂಬಾಲಿಸಿದರು. ಮೊದಲಿನವರು ಪಕ್ಷದ ಅಧ್ಯಕ್ಷಗಿರಿಗೆ, ಮತ್ತೊಬ್ಬರು ಮಂತ್ರಿಪದವಿಗೆ.

ಅಧಿಕೃತ ಭಾಷಾ ಸಂಬಂಧದಲ್ಲಿ ಹಿಂದೀ ವಿರೋಧ ಚಳುವಳಿಯ ವೇಳೆ ಮಂತ್ರಿಪದವಿಗೆ ರಾಜಿ ನೀಡಿ ಹಿಂದಿನಿಂದ ಅದನ್ನು ಹಿಂತೆಗೆದು ಕೊಂಡ ಜನಪ್ರಿಯ ಮಂತ್ರಿ ಸಿಸು.

ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ ಸೋಲುಂಡ ಹಲವಾರು ನಾಯಕಮಣಿಗಳಲ್ಲಿ ಸಿ.ಸು. ಕೂಡ ಒಬ್ಬರು. ತಮಿಳುನಾಡಿನಲ್ಲಿ ದ್ರಾಮುಕದ ರಾಜ್ಯ ಸ್ಥಾಪನೆಯಾದ ಬಳಿಕ ರಾಜ್ಯ ಸಭೆಗೂ ಅವರಿಗೆ ಟಿಕೇಟು ಸಿಗಲಿಲ್ಲ. ಒಂದೆರಡು ಪ್ರಯತ್ನಗಳನ್ನು ಅವರು ನಡೆಸಿದರಾದರೂ ಅವು ವಿಫಲವಾಯ್ತು.

ಇದಕ್ಕೆ ದ್ರಾಮುಕ ಮಾತ್ರ ಕಾರಣವಲ್ಲ; ಕಾಂಗ್ರೆಸ್ ವಿಭಜನೆಯೂ ಮುಖ್ಯ ಹೇತು. ಸಿಸು ಕಾಮರಾಜರ ಪ್ರಬಲ ರಾಜ್ಯಕೀಯ ಶತ್ರುವಾದರು; ಶ್ರೀಮತಿ ಗಾಂಧಿಯನ್ನು ಬೆಂಬಲಿಸಿದರು.

ಅಲ್ಪಾವಧಿಯವರೆಗೆ ಇಂಡಿಕೇಟಿನ ಅಧ್ಯಕ್ಷ ಪೀಠವನ್ನೂ ಏರಿದರು; ಪಕ್ಷ ವಿಭಜನೆಯನ್ನು ಪೂರ್ಣ ಮಾಡುವಲ್ಲಿ ಶ್ರೀಮತಿ ಗಾಂಧಿಯ ಭುಜಕ್ಕೆ ಭುಜಕೊಟ್ಟು ದುಡಿದರು.

ಆದೇಕೋ ಅವರಿಗೂ ಅವರನ್ನು ನಂಬಿದವರಿಗೂ ಅವರು ಪಕ್ಷದ ಅಧ್ಯಕ್ಷನಾಗಿರುವುದು ಬೇಡವಾಯ್ತು. ಮತ್ತೆ ಹೊರಬಂದು ತಮಿಳು ನಾಡಿನಲ್ಲಿ ಸಂಘಟನೆಗೆ ಹೆಣಗಾಡಿದರು.

ಕಾಮರಾಜರ ಪ್ರಭಾವ–ವ್ಯಕ್ತಿತ್ವವನ್ನು ಸಂಪೂರ್ಣ ಮಸುಳಿಸುವುದಕ್ಕಾಗಿ ದ್ರಾಮುಕದೊಂದಿಗೆ ಚುನಾವಣಾ ಮೈತ್ರಿ ಮಾಡಬೇಕಾಯ್ತು. ಈ ವೇಳೆ ಪಕ್ಷದಲ್ಲಿ ದೊಡ್ಡ ಬಿರುಕೇ ಮೂಡಿದಂತೆ ಭಾಸವಾಯ್ತು.

ದಿಲ್ಲೀಶ್ವರರ ಒತ್ತಡದಿಂದ ಬೆರಳೆಣಿಕೆಯ ಲೋಕ ಸಭಾ ಸ್ಥಾನಗಳಿಗಾಗಿ ಅವರು ಎಲ್ಲ ವಿಧಾನ ಸಭಾಸ್ಥಾನಗಳನ್ನು ಬಿಟ್ಟುಕೊಡಬೇಕಾಯ್ತು; ಇದನ್ನು ಇಂಡಿಕೇಟಿನ ಅನನ್ಯ ಶರಣಾಗತಿಯೆಂದು ಬಣ್ಣಿಸಲಾಯ್ತು.

ಚುನಾವಣೆಯ ಪರಿಣಾಮ ಕೆಟ್ಟದಾಗಲಿಲ್ಲ. ಸಿಸು ತಾನು ಸ್ಪರ್ಧಿಸುವುದೇ ಇಲ್ಲವೆಂದು ಕೈಕಟ್ಟಿ ಕುಳಿತರು. ಫಲಿತಾಂಶದ ಬಗ್ಗೆ ಸಂದೇಹ ಪಟ್ಟು ಅವರು ಈ ನಿರ್ಧಾರ ಕೈಕೊಂಡರೆಂದೂ ಯಾರು ಯಾರೋ ಅಂದು ಕೊಂಡರು.

ಆದರೆ, ಇಂಡಿಕೇಟು ಚುನಾವಣೆಗಳಲ್ಲಿ ಒಳ್ಳೆಯವಾಗಿಯೇ ಮಾಡಿತು. ಇದರಿಂದ ಸಿಸುವಿಗೂ ತುಸು ಹುಮ್ಮಸ್ಸು ಬಂದಿತು. ಕಾಮರಾಜರೊಬ್ಬರನ್ನು ಬಿಟ್ಟು ಅವರವರಾರೂ ಗೆಲ್ಲಲೇ ಇಲ್ಲ! ವಾತಾವರಣ ತನಗೆ ಅನುಕೂಲವಾಗಿದೆಯೆಂಬುದು ಸಿಸುವಿಗೆ ಮನವರಿಕೆಯಾಯ್ತು.

ಶ್ರೀಮತಿ ಗಾಂಧಿ ಸಿಸುವನ್ನು ಕೈಬಿಡಲು ಸಿದ್ಧರಾಗಲಿಲ್ಲ. ಒಂದೊಮ್ಮೆ ಕೈ ಬಿಟ್ಟರೆ ಏನಾದೀತೋ ಎಂಬ ಹೆದರಿಕೆಯಿರಬಹುದು. ಪದಚ್ಯುತ ರಾಜಕಾರಣಿಯನ್ನೂ ಹಸಿದ ಹುಲಿಯನ್ನೂ ನಂಬುವುದು ಕಷ್ಟ.

ಸಂಸತ್ತಿನ ಉಭಯ ಸಭೆಗಳ ಸದಸ್ಯರಲ್ಲವಾದರೂ ಸಿಸುವನ್ನು ಯೋಜನಾ ಸಚಿವರೆಂದು ನೇಮಿಸಿಕೊಂಡರು. ತಮಿಳುನಾಡಿನಲ್ಲಿ ಪಕ್ಷವು ಬೇರು ಬಿಡಬೇಕಾದರೆ ಸಿಸುವನ್ನು ಹತ್ತಿರದಲ್ಲೇ ಇಟ್ಟುಕೊಳ್ಳಬೇಕು. ಏಕೆಂದರೆ, ಕಾಮರಾಜರು ಹಳೆಯ ಹುಲಿಯಾಗುತ್ತಲೇ ಬಂದಿದ್ದಾರೆ.

ಸಿ.ಸು.ವಿಗೊಂದು ಸ್ಥಾನ ಒದಗಿಸಲು ಒಬ್ಬ ವಿಜಯೀ ಎಂ.ಪಿ. ಶ್ರೀ ಗೌಂಡರ್ ಮುಂದೆ ಬಂದರು. ಕೃಷ್ಣಗಿರಿಯಲ್ಲಿ ಉಪಚುನಾವಣೆಗೆ ಏರ್ಪಾಟಾಯ್ತು.

ಇಂಡಿಕೇಟಿನ ಪತಿಯಿಂದ ಸಿಸು ಸ್ಪರ್ಧಿಸಿದರು. ಅವಿರೋಧ ಆಯ್ಕೆಯಾದರೆ ಪ್ರಜಾಪ್ರಭುತ್ವಕ್ಕೆ ಕೀರ್ತಿಯೆಲ್ಲಿಂದ? ಸ್ವತಂತ್ರ ಉಮೇದ್ವಾರ ಶ್ರೀ ದೇಶಿಕನ್ ನಾಮಪತ್ರಸಲ್ಲಿಸಿದರು.

ಸಿಸುವಿಗೆ ಇಂಡಿಕೇಟ್–ದ್ರಾಮುಕ ಮತ್ತಿತರ ಎಡವೆಂದು ಕರೆದುಕೊಳ್ಳುವ ಪಕ್ಷಗಳು ಒಂದಾಗಿ ಬೆಂಬಲ ನೀಡಿದುವು. ಶ್ರೀ ದೇಶಿಕನ್ ಏಕಾಕಿಯಾದರು.

ಪರಿಣಾಮ ಒಂದು ಲಕ್ಷ ಎಪ್ಪತ್ತು ಸಾವಿರ ಅಧಿಕ ಬಹುಮತದಿಂದ ಸಿಸು ಗೆದ್ದು ಬಂದರು. ಅವರ ವಿಜಯ ನಿರೀಕ್ಷಿತವೇ.

ಸುಮಾರು ಐದು ವರ್ಷಗಳ ನಂತರ ಸಿಸು ಮತ್ತೀಗ ಎಂಪಿ ಆಗಿದ್ದಾರೆ; ತನ್ನ ಸಚಿವ ಪದವನ್ನುಳಿಸಿಕೊಳ್ಳುವಲ್ಲಿ ಯಶಗಳಿಸಿದ್ದಾರೆ.

ಕೃಷ್ಣಗಿರಿ ಚುನಾವಣೆಯಲ್ಲಿ ಉಳಿದ ರಾಜ್ಯಕೀಯ ಪಕ್ಷಗಳು ಆಸಕ್ತಿ ತೋರಲಿಲ್ಲ. ಇವಕ್ಕೆ ಕಾರಣವೂ ಸುಸ್ಪಷ್ಟ.

ಮಧ್ಯಾವಧಿ ಚುನಾವಣೆಯಲ್ಲಿ ಸಿಂಡಿಕೇಟ್ ನೇತೃತ್ವದ ಮೈತ್ರಿಕೂಟ ಸಂಪೂರ್ಣ ಸೋಲುಂಡಿತು. ಮೈತ್ರಿಕೂಟದ ವಿಜಯಕ್ಕೆ ಬೇಕೆಂಬಷ್ಟು ಅನುಕೂಲ ವಾತಾವರಣವಿದ್ದರೂ ವಿಜಯ ಅದಕ್ಕೆ ಕೈಕೊಟ್ಟಿತು.

ಮೈತ್ರಿಕೂಟ ಸೇರಿದ್ದರಿಂದಲೇ ತಮ್ಮ ಸೋಲಾಯಿತೆಂದು ಅದರಲ್ಲಿ ಸೇರಿದ್ದ ವಿವಿಧ ಪಕ್ಷಗಳು ಖಚಿತ ಅಭಿಪ್ರಾಯ ತಳೆದುವು.

ಒಂದೊಂದು ಪಕ್ಷಕ್ಕೆ ಅಲ್ಲಿ ಬೆಂಬಲವಿಲ್ಲ—ಮೊದಲೇ ಇಂಡಿಕೇಟ್ ಗೆದ್ದುಕೊಂಡ ಸ್ಥಾನವದು.

ಕೃಷ್ಣಗಿರಿಯ ಉಪ ಚುನಾವಣೆಯ ಪರಿಣಾಮ ಯಾವ ಭವಿಷ್ಯವನ್ನು ಹೇಳುತ್ತದೆ?

ಇಂಡಿಕೇಟೊಂದೇ ಅಲ್ಲಿ ಸುಸಂಘಟಿತವಾದ ರಾಜ್ಯಕೀಯ ಪಕ್ಷವೆಂದೆ?

ಅದು ಸಾಧ್ಯವಿಲ್ಲ. ದ್ರಾಮುಕ ಮತ್ತಿತರ ಎಡಪಕ್ಷಗಳು ಸಿಸುವನ್ನೇ ಬೆಂಬಲಿಸಿದ್ದರಿಂದ ದೇಶಿಕನ್ ಏಕಾಕಿಯಾದದ್ದರಿಂದ ಅವರ ವಿಜಯ ಸುನಿಶ್ಚಿತವಾಯ್ತು.

ಉಳಿದ ಪಕ್ಷಗಳ ಸಂಘಟನೆ ತೃಪ್ತಿಕರವಾಗಿ ಸಾಗಿಲ್ಲವೆಂಬುದಂತೂ ಸತ್ಯ. ಪಕ್ಷದ ಸಂಘಟನೆಯಲ್ಲಿ ಹೊಸ ಹುಮ್ಮಸ್ಸು, ಹೊಸ ರಕ್ತದ ಬಳಕೆ ಅನಿವಾರ್ಯವೆಂಬುದೂ ಸ್ಪಷ್ಟ.

ಶ್ರೀ ದೇಶಿಕನ್‌ರ ಪ್ರಚಾರ ವೈಖರಿಯನ್ನು ನೋಡಿದಾಗ ಅವರದ್ದು ನಾಮ ಮಾತ್ರ ವಿರೋಧವೆಂಬುದು ವೇದ್ಯ. ಒಂದು ಪ್ರಚಾರ ಸಭೆಯಿಲ್ಲ, ಒಂದು ಸದ್ದು ಗದ್ದಲವಿಲ್ಲ. ಎಲ್ಲೋ ಒಂದೆರಡು ಕಡೆ ಕರಪತ್ರ ಹಂಚಿ ಅವರು ತೃಪ್ತಿ ಹೊಂದಿದರು. ಇದೇ ಪ್ರಚಾರ ತುಸು ಬಿರುಸಿನಿಂದ ನಡೆದಿದ್ದರೆ?

ಗೆಲ್ಲುವುದೇನೋ ದೂರದ ಬೆಟ್ಟ. ಆದರೆ ಅವರ ಸೋಲು ಇಷ್ಟೊಂದು ದಯನೀಯವಾಗಿರುತ್ತಿರಲಿಲ್ಲವೇನೋ!

ಶ್ರೀ ದೇಶಿಕನ್ ಜಯಾ ಜಯಗಳ ಬಗ್ಗೆ ತಲೆಗೆಡಿಸಿಕೊಳ್ಳುವವರಲ್ಲ; ಹಾಗಿನವರಿರುತಿದ್ದರೆ, ಅಷ್ಟು ಕೆಲಸದಿಂದಲೇ ತೃಪ್ತರಾಗುತ್ತಿರಲಿಲ್ಲ.

ಪ್ರಜಾಸತ್ತೆಯ ಉಳಿವಿಗೆ ಪ್ರಬಲ ವಿರೋಧ ಪಕ್ಷ ಬೇಕೇ ಬೇಕು. ಸಶಕ್ತ ಆಟಗಾರರೆಲ್ಲರೂ ಒಂದೇ ದಳ ಸೇರಿದಾಗ ಆಟ ನೀರಸವಾಗುತ್ತದೆ; ವಿರೋಧ ಪಕ್ಷಗಳ ದೌರ್ಬಲ್ಯದಿಂದ ಪ್ರಜಾಸತ್ತೆ ನಿರಂಕುಶ ಸತ್ತೆಯಾಗುತ್ತದೆ.

ಸ್ವಾತಂತ್ರ್ಯ ಪ್ರಾಪ್ತಿಯಾದಂದಿನಿಂದಲೂ ನಮ್ಮಲ್ಲಿ ಪ್ರಬಲ ವಿರೋಧ ಪಕ್ಷದ ಅಭಾವವಿತ್ತು; ಅದನ್ನು ದೂರ ಮಾಡಲು ಹಲವಾರು ಮೇಧಾವಿ ರಾಜ್ಯಕೀಯ ನಾಯಕರು ಹಲವಾರು ಪ್ರಯತ್ನ ಮಾಡಿದರು.

ಯಾರೊಬ್ಬರೂ ಸಫಲರಾಗಲಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರ ದಿಟ್ಟತನವಾದರೂ ಇದಕ್ಕೆ ಪ್ರೇರಕ ಶಕ್ತಿಯಾಗಬಹುದೆಂದು ಊಹಿಸಲಾಯ್ತು. ಆದರೆ, ಲೋಕ ಸಭೆಗೆ ನಡೆದ ಮಧ್ಯಾವಧಿ ಚುನಾವಣೆಗಳು ಈ ಆಸೆಯನ್ನೂ ಇಲ್ಲವಾಗಿಸಿದುವು.

ಗೆಲ್ಲುವ ಪಕ್ಷ ಸೇರುವುದೊಂದೇ ನಮ್ಮ ರಾಜ್ಯಕೀಯದ ಮರ್ಮ. ಇದರಿಂದಲೇ ಪಕ್ಷಾಂತರದ ಪಿಡುಗು. ಇದು ಪ್ರಜಾಪ್ರಭುತ್ವವನ್ನು ಅಳಿಸಿ ನಿರಂಕುಶ ಪ್ರಭುತ್ವಕ್ಕೆ ದಾರಿ ಹಸನು ಮಾಡುತ್ತದೆ–ಎಂಬುದೀಗ ಹಗಲಿನಷ್ಟು ಬೆಳ್ಳಗಾಗಿ ಕಾಣುತ್ತದೆ.

● ●

ವಾದ ವಿವಾದ ಮಾಡುವುದು ನಮ್ಮ ಕೆಲಸವಲ್ಲ. ನಾವು ಸೇವೆ ಮಾಡುತ್ತಲೇ ಸಾಯಲಿಚ್ಛಿಸುತ್ತೇವೆ ಸೇವೆಯೇ ನಮ್ಮ ಪ್ರಚಾರ ಕಾರ್ಯದ ಹೆಚ್ಚಿನ ಸಾಧನೆ. ಪರರ ದೋಷಗಳನ್ನು ಹೊರಗೆಳೆಯುವ ಮತ್ತು ನಮ್ಮ ವಿಚಾರಗಳನ್ನು ವರ್ಣಿಸುವ ಮೋಹಕ್ಕೆ ನಾವು ಬೀಳಬಾರದು ತಾಯಿಯು ತನ್ನ ಮಕ್ಕಳ ದೋಷಗಳನ್ನು ತೋರಿಸುತ್ತಾ ಕೂಡುವುದಿಲ್ಲ. ಅವರ ಮೇಲೆ ಪ್ರೇಮದ ಮಳೆಗರೆಯುತ್ತಿರುತ್ತಾಳೆ. ಅನಂತರವೇ ದೋಷಗಳನ್ನು ತೋರಿಸುತ್ತಾಳೆ. ಪ್ರೇಮಮಯ ಸೇವೆಯ ರೀತಿಯೇ ಇದು.

○ ○ ○

ಶ್ರದ್ಧೆಯಿಂದ ಉತ್ಸಾಹವು ವರ್ಧಿಸುತ್ತದೆ; ಸಂದೇಹದಿಂದ ಅದು ಹಾಳಾಗುತ್ತದೆ. ಕಾರಣ ಶ್ರದ್ಧೆಯೇ ಬಲವು.

○ ○ ○

41)	22-6-1972	12
42)	29-6-1972	12
43)	6-7-1972	12
44)	13-7-1972	12
45)	20-7-1972	12
46)	27-7-1972	12
47)	3-8-1972	12
48)	17-8-1972	44 శ్రీ [illegible]
49)	24-8-1972	12
50)	31-8-1972	12
		152

1) 256
2) 272
3) 152

680

ಸ್ಥಾಪಕರು :
ದಿ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಸಂಪುಟ ೫೧
ಸಂಚಿಕೆ ೧

Vol. 51
No. 1

ಉಡುಪಿ, ೨—೯—೧೯೭೧

ಚಾರುಚಯನ

ಕೃಷ್ಣಗಿರಿ ಉಪಚುನಾವಣೆಯ ಭವಿಷ್ಯವಾಣಿ

ತಮಿಳುನಾಡಿನ ಇಂಡಿಕೇಟ್ ನಾಯಕ ಶ್ರೀ ಸಿ. ಸುಬ್ರಹ್ಮಣ್ಯಂ ಬಹು ಬಣ್ಣದ ವ್ಯಕ್ತಿ. ಹಿಂದಿನ ಮದ್ರಾಸ ರಾಜ್ಯದಲ್ಲಿ ಯಶಸ್ವೀ ಯುವ ಮಂತ್ರಿಗಳೆಂದು ಹೆಸರು ಗಳಿಸಿದ ಮನುಷ್ಯ.

ಮದ್ರಾಸದ ಮತ್ತೊಬ್ಬ ಪ್ರಭಾವಿ ನಾಯಕ ಶ್ರೀ ಕಾಮರಾಜ ಮತ್ತು ಇವರ ನಡುವೆ ಮುಖ್ಯ ಮಂತ್ರಿತನಕ್ಕೇ ಪೈಪೋಟಿ ಕಾಮರಾಜರ ವಿಜಯ—ಸಿಸುರವರೂ ಅವರ ಸಂಪುಟದ ಅಗ್ರೇಸರ-ಅಪೂರ್ವ ಶಕ್ತಿ.

ಕಾಮರಾಜರು ಡಿಲ್ಲಿಗೆ ಹೋದ ಬಳಿಕ ಸಿಸುರವರೂ ಡಿಲ್ಲಿಗೆ ಅವರನ್ನು ಹಿಂಬಾಲಿಸಿದರು. ಮೊದಲಿನವರು ಪಕ್ಷದ ಅಧ್ಯಕ್ಷಗಿರಿಗೆ, ಮತ್ತೊಬ್ಬರು ಮಂತ್ರಿಪದವಿಗೆ

ಅಧಿಕೃತ ಭಾಷಾ ಸಂಬಂಧದಲ್ಲಿ ಹಿಂದೀ ವಿರೋಧ ಚಳುವಳಿಯ ವೇಳೆ ಮಂತ್ರಿಪದವಿಗೆ ರಾಜಿ ನೀಡಿ ಹಿಂದಿನಿಂದ ಅದನ್ನು ಹಿಂತೆಗೆದು ಕೊಂಡ ಜನಪ್ರಿಯ ಮಂತ್ರಿ ಸಿಸು.

ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ ಸೋಲುಂಡ ಹಲವಾರು ನಾಯಕಮಣಿಗಳಲ್ಲಿ ಸಿಸು ಕೂಡ ಒಬ್ಬರು. ತಮಿಳುನಾಡಿನಲ್ಲಿ ದ್ರಾಮುಕದ ರಾಜ್ಯ ಸ್ಥಾಪನೆಯಾದ ಬಳಿಕ ರಾಜ್ಯ ಸಭೆಗೂ ಅವರಿಗೆ ಟಿಕೇಟು ಸಿಗಲಿಲ್ಲ. ಒಂದೆರಡು ಪ್ರಯತ್ನಗಳನ್ನು ಅವರು ನಡೆಸಿದರಾದರೂ ಅವು ವಿಫಲವಾಯ್ತು.

ಇದಕ್ಕೆ ದ್ರಾಮುಕ ಮಾತ್ರ ಕಾರಣವಲ್ಲ; ಕಾಂಗ್ರೆಸ್ ವಿಭಜನೆಯೂ ಮುಖ್ಯ ಹೇತು ಸಿಸು ಕಾಮರಾಜರ ಪ್ರಬಲ ರಾಜ್ಯಕೀಯ ಶತ್ರುವಾದರು; ಶ್ರೀಮತಿ ಗಾಂಧಿಯನ್ನು ಬೆಂಬಲಿಸಿದರು.

ಅಲ್ಪಾವಧಿಯವರೆಗೆ ಇಂಡಿಕೇಟಿನ ಅಧ್ಯಕ್ಷ ಪೀಠವನ್ನೂ ಏರಿದರು; ಪಕ್ಷ ವಿಭಜನೆಯನ್ನು ಪೂರ್ಣ ಮಾಡುವಲ್ಲಿ ಶ್ರೀಮತಿ ಗಾಂಧಿಯ ಭುಜಕ್ಕೆ ಭುಜಕೊಟ್ಟು ದುಡಿದರು.

ಅದೇಕೋ ಅವರಿಗೂ ಅವರನ್ನು ನಂಬಿದವರಿಗೂ ಅವರು ಪಕ್ಷದ ಅಧ್ಯಕ್ಷನಾಗಿರುವುದು ಬೇಡವಾಯ್ತು. ಮತ್ತೆ ಹೊರಬಂದು ತಮಿಳು ನಾಡಿನಲ್ಲಿ ಸಂಘಟನೆಗೆ ಹೆಣಗಾಡಿದರು.

ಕಾಮರಾಜರ ಪ್ರಭಾವ-ವ್ಯಕ್ತಿತ್ವವನ್ನು ಸಂಪೂರ್ಣ ಮಸುಳಿಸುವುದಕ್ಕಾಗಿ ದ್ರಾಮುಕದೊಂದಿಗೆ ಚುನಾವಣಾ ಮೈತ್ರಿ ಮಾಡಬೇಕಾಯ್ತು. ಈ ವೇಳೆ ಪಕ್ಷದಲ್ಲಿ ದೊಡ್ಡ ಬಿರುಕೇ ಮೂಡಿದಂತೆ ಭಾಸವಾಯ್ತು.

ದಿಲ್ಲೀಶ್ವರರ ಒತ್ತಡದಿಂದ ಬೆರಳೆಣಿಕೆಯ ಲೋಕ ಸಭಾ ಸ್ಥಾನಗಳಿಗಾಗಿ ಅವರು ಎಲ್ಲ ವಿಧಾನ ಸಭಾಸ್ಥಾನಗಳನ್ನು ಬಿಟ್ಟುಕೊಡಬೇಕಾಯ್ತು; ಇದನ್ನು ಇಂಡಿಕೇಟಿನ ಅನನ್ಯ ಶರಣಾಗತಿಯೆಂದು ಬಣ್ಣಿಸಲಾಯ್ತು.

ಚುನಾವಣೆಯ ಪರಿಣಾಮ ಕೆಟ್ಟದಾಗಲಿಲ್ಲ ಸಿಸು ತಾನು ಸ್ಪರ್ಧಿಸುವುದೇ ಇಲ್ಲವೆಂದು ಕೈಕಟ್ಟಿ ಕುಳಿತರು ಫಲಿತಾಂಶದ ಬಗ್ಗೆ ಸಂದೇಹ ಪಟ್ಟು ಅವರು ಈ ನಿರ್ಧಾರ ಕೈಕೊಂಡರೆಂದೂ ಯಾರು ಯಾರೋ ಅಂದು ಕೊಂಡರು

ಆದರೆ, ಇಂಡಿಕೇಟು ಚುನಾವಣೆಗಳಲ್ಲಿ ಒಳ್ಳೆಯವಾಗಿಯೇ ಮಾಡಿತು. ಇದರಿಂದ ಸಿಸುವಿಗೂ ತುಸು ಹುಮ್ಮಸ್ಸು ಬಂದಿತು ಕಾಮರಾಜರೊಬ್ಬರನ್ನು ಬಿಟ್ಟು ಅವರವರಾರೂ ಗೆಲ್ಲಲೇ ಇಲ್ಲ! ವಾತಾವರಣ ತನಗೆ ಅನುಕೂಲವಾಗಿದೆಯೆಂಬುದು ಸಿಸುವಿಗೆ ಮನವರಿಕೆಯಾಯ್ತು.

ಶ್ರೀಮತಿ ಗಾಂಧಿ ಸಿಸುವನ್ನು ಕೈಬಿಡಲು ಸಿದ್ಧರಾಗಲಿಲ್ಲ ಒಂದೊಮ್ಮೆ ಕೈ ಬಿಟ್ಟರೆ ಏನಾದೀತೋ ಎಂಬ ಹೆದರಿಕೆಯಿರಬಹುದು ಪದಚ್ಯುತ ರಾಜಕಾರಣಿಯನ್ನೂ ಹಸಿದ ಹುಲಿಯನ್ನೂ ನಂಬುವುದು ಕಷ್ಟ

ಸಂಸತ್ತಿನ ಉಭಯ ಸಭೆಗಳ ಸದಸ್ಯರಲ್ಲವಾದರೂ ಸಿಸುವನ್ನು ಯೋಜನಾ ಸಚಿವರೆಂದು ನೇಮಿಸಿಕೊಂಡರು. ತಮಿಳುನಾಡಿನಲ್ಲಿ ಪಕ್ಷವು ಬೇರು ಬಿಡಬೇಕಾದರೆ ಸಿಸುವನ್ನು ಹತ್ತಿರದಲ್ಲೇ ಇಟ್ಟುಕೊಳ್ಳಬೇಕು. ಏಕೆಂದರೆ, ಕಾಮರಾಜರು ಹಳೆಯ ಹುಲಿಯಾಗುತ್ತಲೇ ಬಂದಿದ್ದಾರೆ.

ಸಿ.ಸು.ವಿಗೊಂದು ಸ್ಥಾನ ಒದಗಿಸಲು ಒಬ್ಬ ವಿಜಯಿ ಎಂ.ಪಿ. ಶ್ರೀ ಗೌಂಡರ್ ಮುಂದೆ ಬಂದರು ಕೃಷ್ಣಗಿರಿಯಲ್ಲಿ ಉಪಚುನಾವಣೆಗೆ ಏರ್ಪಾಟಾಯ್ತು.

ಇಂಡಿಕೇಟಿನ ಪರಿಯಿಂದ ಸಿಸು ಸ್ಪರ್ಧಿಸಿವರು. ಅವಿರೋಧ ಆಯ್ಕೆಯಾದರೆ ಪ್ರಜಾಪ್ರಭುತ್ವಕ್ಕೆ ಕೀರ್ತಿಯೆಲ್ಲಿಂದ? ಸ್ವತಂತ್ರ ಉಮೇದ್ವಾರ ಶ್ರೀ ದೇಶಿಕನ್ ನಾಮಪತ್ರ ಸಲ್ಲಿಸಿದರು.

ಸಿಸುವಿಗೆ ಇಂಡಿಕೇಟ್—ದ್ರಾಮುಕ ಮತ್ತಿತರ ಎಡವೆಂದು ಕರೆದುಕೊಳ್ಳುವ ಪಕ್ಷಗಳು ಒಂದಾಗಿ ಬೆಂಬಲ ನೀಡಿದುವು. ಶ್ರೀ ದೇಶಿಕನ್ ಏಕಾಕಿಯಾದರು.

ಪರಿಣಾಮ ಒಂದು ಲಕ್ಷ ಎಪ್ಪತ್ತು ಸಾವಿರ ಅಧಿಕ ಬಹುಮತದಿಂದ ಸಿಸು ಗೆದ್ದು ಬಂದರು. ಅವರ ವಿಜಯ ನಿರೀಕ್ಷಿತವೇ.

ಸುಮಾರು ಐದು ವರ್ಷಗಳ ನಂತರ ಸಿಸು ಮತ್ತೀಗ ಎಂಪಿ ಆಗಿದ್ದಾರೆ; ತನ್ನ ಸಚಿವ ಪದವನ್ನುಳಿಸಿಕೊಳ್ಳುವಲ್ಲಿ ಯಶಗಳಿಸಿದ್ದಾರೆ.

ಕೃಷ್ಣಗಿರಿ ಚುನಾವಣೆಯಲ್ಲಿ ಉಳಿದ ರಾಜ್ಯಕೀಯ ಪಕ್ಷಗಳು ಆಸಕ್ತಿ ತೋರಲಿಲ್ಲ ಇದಕ್ಕೆ ಕಾರಣವೂ ಸುಸ್ಪಷ್ಟ.

ಮಧ್ಯಾವಧಿ ಚುನಾವಣೆಯಲ್ಲಿ ಸಿಂಡಿಕೇಟ್ ನೇತೃತ್ವದ ಮೈತ್ರಿಕೂಟ ಸಂಪೂರ್ಣ ಸೋಲುಂಡಿತು ಮೈತ್ರಿಕೂಟದ ವಿಜಯಕ್ಕೆ ಬೇಕೆಂಬಷ್ಟು ಅನುಕೂಲ ವಾತಾವರಣವಿದ್ದರೂ ವಿಜಯ ಅದಕ್ಕೆ ಕೈಕೊಟ್ಟಿತು

ಮೈತ್ರಿಕೂಟ ಸೇರಿದ್ದರಿಂದಲೇ ತಮ್ಮ ಸೋಲಾಯಿತೆಂದು ಅದರಲ್ಲಿ ಸೇರಿದ್ದ ವಿವಿಧ ಪಕ್ಷಗಳು ಖಚಿತ ಅಭಿಪ್ರಾಯ ತಳೆದುವು.

ಒಂದೊಂದು ಪಕ್ಷಕ್ಕೆ ಅಲ್ಲಿ ಬೆಂಬಲವಿಲ್ಲ—ಮೊದಲೇ ಇಂಡಿಕೇಟ್ ಗೆದ್ದುಕೊಂಡ ಸ್ಥಾನವದು

ಕೃಷ್ಣಗಿರಿಯ ಉಪ ಚುನಾವಣೆಯ ಪರಿಣಾಮ ಯಾವ ಭವಿಷ್ಯವನ್ನು ಹೇಳುತ್ತದೆ?

ಇಂಡಿಕೇಟೊಂದೇ ಅಲ್ಲಿ ಸುಸಂಘಟಿತವಾದ ರಾಜ್ಯಕೀಯ ಪಕ್ಷವೆಂದೆ?

ಅದು ಸಾಧ್ಯವಿಲ್ಲ. ದ್ರಾಮುಕ ಮತ್ತಿತರ ಎಡಪಕ್ಷಗಳು ಸಿಸುವನ್ನೇ ಬೆಂಬಲಿಸಿದ್ದರಿಂದ ದೇಶಿಕನ್ ಏಕಾಕಿಯಾದದ್ದರಿಂದ ಅವರ ವಿಜಯ ಸುನಿಶ್ಚಿತವಾಯ್ತು

ಉಳಿದ ಪಕ್ಷಗಳ ಸಂಘಟನೆ ತೃಪ್ತಿಕರವಾಗಿ ಸಾಗಿಲ್ಲವೆಂಬುದಂತೂ ಸತ್ಯ. ಪಕ್ಷದ ಸಂಘಟನೆಯಲ್ಲಿ ಹೊಸ ಹುಮ್ಮಸ್ಸು, ಹೊಸ ರಕ್ತದ ಬಳಕೆ ಅನಿವಾರ್ಯವೆಂಬುದೂ ಸ್ಪಷ್ಟ.

ಶ್ರೀ ದೇಶಿಕನ್‌ರ ಪ್ರಚಾರ ವೈಖರಿಯನ್ನು ನೋಡಿದಾಗ ಅವರದ್ದು ನಾಮಮಾತ್ರ ವಿರೋಧವೆಂಬುದು ವೇದ್ಯ ಒಂದು ಪ್ರಚಾರ ಸಭೆಯಿಲ್ಲ, ಒಂದು ಸದ್ದು ಗದ್ದಲವಿಲ್ಲ ಎಲ್ಲೋ ಒಂದೆರಡು ಕಡೆ ಕರಪತ್ರ ಹಂಚಿ ಅವರು ತೃಪ್ತಿ ಹೊಂದಿದರು ಇದೇ ಪ್ರಚಾರ ತುಸು ಬಿರುಸಿನಿಂದ ನಡೆದಿದ್ದರೆ?

ಗೆಲ್ಲುವುದೇನೋ ದೂರದ ಬೆಟ್ಟ. ಆದರೆ ಅವರ ಸೋಲು ಇಷ್ಟೊಂದು ದಯನೀಯವಾಗಿರುತ್ತಿರಲಿಲ್ಲವೇನೋ!

ಶ್ರೀ ದೇಶಿಕನ್ ಜಯಾ ಜಯಗಳ ಬಗ್ಗೆ ತಲೆಗೆಡಿಸಿಕೊಳ್ಳುವವರಲ್ಲ; ಹಾಗಿನವರಿರುತಿದ್ದರೆ, ಅಷ್ಟು ಕೆಲಸದಿಂದಲೇ ತೃಪ್ತರಾಗುತ್ತಿರಲಿಲ್ಲ.

ಪ್ರಜಾಸತ್ತೆಯ ಉಳಿವಿಗೆ ಪ್ರಬಲ ವಿರೋಧ ಪಕ್ಷ ಬೇಕೇ ಬೇಕು. ಸಶಕ್ತ ಆಟಗಾರರೆಲ್ಲರೂ ಒಂದೇ ದಳ ಸೇರಿದಾಗ ಆಟ ನೀರಸವಾಗುತ್ತದೆ; ವಿರೋಧ ಪಕ್ಷಗಳ ದೌರ್ಬಲ್ಯದಿಂದ ಪ್ರಜಾಸತ್ತೆ ನಿರಂಕುಶ ಸತ್ತೆಯಾಗುತ್ತದೆ

ಸ್ವಾತಂತ್ರ್ಯ ಪ್ರಾಪ್ತಿಯಾದಂದಿನಿಂದಲೂ ನಮ್ಮಲ್ಲಿ ಪ್ರಬಲ ವಿರೋಧ ಪಕ್ಷದ ಅಭಾವವಿತ್ತು; ಅದನ್ನು ದೂರ ಮಾಡಲು ಹಲವಾರು ಮೇಧಾವಿ ರಾಜ್ಯಕೀಯ ನಾಯಕರು ಹಲವಾರು ಪ್ರಯತ್ನ ಮಾಡಿದರು.

ಯಾರೊಬ್ಬರೂ ಸಫಲರಾಗಲಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರ ದಿಟ್ಟತನವಾದರೂ ಇದಕ್ಕೆ ಪ್ರೇರಕ ಶಕ್ತಿಯಾಗಬಹುದೆಂದು ಊಹಿಸಲಾಯ್ತು. ಆದರೆ, ಲೋಕ ಸಭೆಗೆ ನಡೆದ ಮಧ್ಯಾವಧಿ ಚುನಾವಣೆಗಳು ಈ ಆಸೆಯನ್ನೂ ಇಲ್ಲವಾಗಿಸಿದುವು.

ಗೆಲ್ಲುವ ಪಕ್ಷ ಸೇರುವುದೊಂದೇ ನಮ್ಮ ರಾಜ್ಯಕೀಯದ ಮರ್ಮ. ಇದರಿಂದಲೇ ಪಕ್ಷಾಂತರದ ಪಿಡುಗು ಇದು ಪ್ರಜಾಪ್ರಭುತ್ವವನ್ನು ಅಳಿಸಿ ನಿರಂಕುಶ ಪ್ರಭುತ್ವಕ್ಕೆ ದಾರಿ ಹಸನು ಮಾಡುತ್ತದೆ-ಎಂಬುದೀಗ ಹಗಲಿನಷ್ಟು ಬೆಳ್ಳಗಾಗಿ ಕಾಣುತ್ತದೆ.

● ●

ವಾದ ವಿವಾದ ಮಾಡುವುದು ನಮ್ಮ ಕೆಲಸವಲ್ಲ. ನಾವು ಸೇವೆ ಮಾಡುತ್ತಲೇ ಸಾಯಲಿಚ್ಛಿಸುತ್ತೇವೆ ಸೇವೆಯೇ ನಮ್ಮ ಪ್ರಚಾರ ಕಾರ್ಯದ ಹೆಚ್ಚಿನ ಸಾಧನೆ. ಪರರ ದೋಷಗಳನ್ನು ಹೊರಗೆಳೆಯುವ ಮತ್ತು ನಮ್ಮ ವಿಚಾರಗಳನ್ನು ವರ್ಣಿಸುವ ಮೋಹಕ್ಕೆ ನಾವು ಬೀಳಬಾರದು ತಾಯಿಯು ತನ್ನ ಮಕ್ಕಳ ದೋಷಗಳನ್ನು ತೋರಿಸುತ್ತಾ ಕೂಡುವುದಿಲ್ಲ. ಅವರ ಮೇಲೆ ಪ್ರೇಮದ ಮಳೆಗರೆಯುತ್ತಿರುತ್ತಾಳೆ. ಅನಂತರವೇ ದೋಷಗಳನ್ನು ತೋರಿಸುತ್ತಾಳೆ. ಪ್ರೇಮಮಯ ಸೇವೆಯ ರೀತಿಯೇ ಇದು.

○ ○ ○

ಶ್ರದ್ಧೆಯಿಂದ ಉತ್ಸಾಹವು ವರ್ಧಿಸುತ್ತದೆ; ಸಂದೇಹದಿಂದ ಅದು ಹಾಳಾಗುತ್ತದೆ ಕಾರಣ ಶ್ರದ್ಧೆಯೇ ಬಲವು.

○ ○ ○

ಸಣ್ಣ ಕತೆ

ನನ್ನಿಂದಾಗದು

ಎಚ್. ಎಂ. ನಾರಾಯಣ ಭಟ್

ನಿಮಗೀಗ ರೂ. ಎರಡು ಸಾವಿರ ಸಿಕ್ಕಿದರೆ, ನಿಮ್ಮ ಈಗಿನ ಅಗತ್ಯಕ್ಕೆ ಸಾಕೆಂದು ನನಗೆ ಗೊತ್ತು. ಈ 'ಸೇಫ್'ನಲ್ಲಿಮತ್ತೂ ಎಷ್ಟೋ ಸಾವಿರ ರೂಪಾಯಿಗಳಿವೆ. ಸಾಲದಿದ್ದರೆ ಸೇಟು ದಸ್ಕತು ಮಾಡಿ ಇರಿಸಿದ ಖಾಲಿ 'ಚೆಕ್'ಗಳಿವೆ ಸೇಫಿನ ಬೀಗದ ಕೈಯೂ ನನ್ನ ಬಳಿಯಿದೆ. ಕಳೆದ ಇಪ್ಪತ್ತು ವರ್ಷಗಳಿಂದಲೂ ನನಗೆ ನೀವು ಪರಿಚಿತರು. ನೀವು ಹೇಳಿದ ವ್ಯಾದೆಗೆ ಹಣ್ಣವನ್ನು ಮರುಪಾವತಿ ಮಾಡದವರಲ್ಲ, ತೆಗೆದ ಸಾಲವನ್ನು ಹೇಗಾದರೂ ಮಾಡಿ— ಇದ್ದುದನ್ನೆಲ್ಲಾ ಮಾರಿಯಾದರೂ—ಸಂದಾಯ ಮಾಡುವ ಸ್ವಭಾವ ನಿಮ್ಮದು. ಕಂಠಾಭರಣವನ್ನೇ ಈ ಬಗ್ಗೆ ಬೇಕಾದರೆ ವಿಕ್ರಯಿಸಲು ನಿಮ್ಮ ಶ್ರೀಮತಿಯೂ ಒಪ್ಪಿಯಾರು. ಈ ಬಗ್ಗೆ ನನಗೆ ಯಾವುದೇ ಬಗೆಯ ಸಂದೇಹವಿಲ್ಲ. ನೀವು ನನ್ನ ಮಿತ್ರರು! 'ನಿಮ್ಮ ಶ್ರೀಮತಿ ನನಗೆ 'ರಕ್ಷಾಬಂಧನ' ಮಾಡಿದವರು. ನಾನು ನಿಮ್ಮ ಮನೆಯ ಪಕ್ಕದ ಕಟ್ಟಡದಲ್ಲಿದ್ದಾಗ— ಕಠಿಣ ಜ್ವರ ಹಿಡಿದು ಮಲಗಿದ್ದಾಗ— ನನಗೆ ಬೇರೆ ಯಾರೂ ಗತಿಯಿಲ್ಲದಿದ್ದಾಗ— ಔಷಧವನ್ನೂ ಪಾನೀಯವನ್ನೂ ಒದಗಿಸಿದವರು. ಈ ಬಗ್ಗೆ ನಾನು ನಿಮಗೆಲ್ಲರಿಗೂ ಅನಂತ ಕೃತಜ್ಞನು. ಆಗಾಗ ನನಗೆ ನೀವು ಧನ ಸಹಾಯ ಮಾಡಿದ್ದೀರಿ. ಸಾಲ ಕೊಟ್ಟಿದ್ದೀರಿ. ನಿಮ್ಮ ಸಹಾಯ ಸಹಕಾರಗಳಿಲ್ಲದೆ ಹೋಗಿದ್ದರೆ ನಾನು ಮನುಷ್ಯನಂತೆ ಬದುಕಲು ಸಾಧ್ಯವಾಗುತ್ತಿರಲಿಲ್ಲ. ನೀವು ನನ್ನ ಗುರು—ರಕ್ಷಕ.

ಆದರೂ ನಿಮ್ಮ ಆವಶ್ಯಕತೆಯನ್ನು ಪೂರೈಸಲು ನಾನು ಅಸಮರ್ಥನಾಗಿರುವ ಬಗ್ಗೆ ಬೇಸರವಾಗುತ್ತದೆ.

ನಿಮಗೆ ಎರಡು ಸಾವಿರ—ಅಥವಾ ಬರೇ ಒಂದು ಸಾವಿರ ರೂಪಾಯಿಯಾದರೂ ಈಗ ಸಾಕಾಗಬಹುದು. ನಿನ್ನೆ ಸಂಜೆ ನಿಮ್ಮಲ್ಲಿ 'ಕೇಶ್ ಬೇಲೆನ್ಸ್'ಗೆ ರೂಪಾಯಿ ಒಂದು ಸಾವಿರ ಕಡಿಮೆಯಿತ್ತು. ಇಂದು ಭಾನುವಾರ. ನಾಳೆ ಬೆಳಗ್ಗೆ 'ಕಡಿಮೆ' ಬಿದ್ದ ಹಣವನ್ನು ಭರ್ತಿಮಾಡದಿದ್ದರೆ ನಿಮ್ಮ ಉದ್ಯೋಗಕ್ಕೇ ಸಂಚಕಾರ. ಹಣಾಪಹರಣದ ಆರೋಪ ಬೇರೆ, 'ಪೆನ್ಶನ್' ಹೊಂದಲು ಇನ್ನು ಕೇವಲ ಎರಡೂವರೆ ವರ್ಷವಿರುವಾಗ ಉದ್ಯೋಗ ಕಳಕೊಂಡರೆ ಅಪಕೀರ್ತಿಯೊಂದಿಗೆ ತುಂಬಾ ತರದ ನಷ್ಟಗಳೂ ಬೇರೆ! ಇನ್ನು ಬೇರೆ ಉದ್ಯೋಗ ಈ ಇಳಿವಯಸ್ಸಿನಲ್ಲಿ ಗಳಿಸುವುದಾದರೂ ಹೇಗೆ? ನಿಮಗೂ ನಿಮ್ಮ ಕುಟುಂಬಕ್ಕೂ ಇದರಿಂದಾಗಿ ಸಹಿಸಲಾರದ ಕಷ್ಟ ನಷ್ಟಗಳಿಗೆ ಆಸ್ಪದವಿದೆ.

ಇವೆಲ್ಲಾ ನನಗೆ ತಿಳಿಯುತ್ತವೆ.

ನಾನು ಈ ಸೇಫಿನಿಂದ ನಿಮಗೆ ಅತಿ ಜರೂರಾಗಿ ಬೇಕಾಗಿರುವ ಹಣ ತೆಗೆದು ಕೊಡುತ್ತೇನೆಂದು ಭಾವಿಸೋಣ.

ನಾಳೆ ಬೆಳಗ್ಗೆ ಸೇಟ್ ಬರುವರು. ಸೇಫಿನಲ್ಲಿ ನಗದಿ ಹಣ ಎಷ್ಟಿದೆಯೆಂದು ಅವರು ವಿಚಾರಿಸಬಹುದು.

ನಾನು ಬೇಕಾದರೆ ಒಮ್ಮೆ ಸುಳ್ಳನ್ನೂ ಹೇಳಬಹುದು ಒಂದು ವೇಳೆ ಸೇಟ್ ನಂಬಲೂ ಸಾಕು—ನಂಬದಿರಲೂ ಸಾಕು.

ಸ್ವತಃ ಪರಿಶೋಧನೆ ನಡೆಸಬಹುದು. ಹಣ—ಸರ್ವಸ್ವವೂ ಅವರದೇ! ಅಥವಾ ಪರಿಶೋಧಿಸದಿದ್ದರೂ ಇದ್ದ ಹಣವೆಲ್ಲಾ ಒಂದು ಅಗತ್ಯಕ್ಕೆ ಈಗ ಬೇಕೆನ್ನಬಹುದು. ಆಗ ನಾನು ಸಿಕ್ಕಿ ಬೀಳಬಹುದು—ನನ್ನ ಕಳ್ಳತನ ಬಯಲಾಗ ಬಹುದು.

ಅಥವಾ ನಾನು ಸತ್ಯವನ್ನೇ ಹೇಳಬಹುದು. ಆದರಲ್ಲೂತಕರಾರಿದೆ.

ಈ ವರ್ಷದ ಪ್ರಾರಂಭದಿಂದಲೇ ಸೇಟಿನ 'ಸಾಲ ನೀಡುವ ಧೋರಣೆ'ಯಲ್ಲಿ ಸ್ವಲ್ಪ ಬದಲಾವಣೆಯಾಗಿದೆ. ಅದೂ ನನ್ನ ಸೂಚನೆ ಮೇರೆಗೆ. ಸಣ್ಣ ಸಣ್ಣ ಸಂಖ್ಯೆ ಸಾಲ ನೀಡುವುದು ಒಂದು ಅನಗತ್ಯ ತಲೆ ನೋವು. ಸಾಲದ ಸಂಖ್ಯೆ ಸಣ್ಣದಾದರೂ ದೊಡ್ಡದಾದರೂ ಕಾಗದ ಪತ್ರಗಳನ್ನು ಬರೆಯುವ ಮತ್ತು ಅವುಗಳ ಲೆಕ್ಕಾಚಾರ ಇರಿಸುವ ಕೆಲಸ ಸಮಾನವಿರುವಾಗ ಸಾಲ ವಸೂಲಿಯ ಸಮಸ್ಯೆಗಳೂ ಸಮಾನವಿರುವಾಗ—ಬಡ್ಡಿ ಮೂಲಕದ ವರಮಾನವು ಸಮಾನವಿರುವಾಗ—ಸೇಟ್ ಕೆಲವೇ ನಿಮಿಷಗಳ ಆಲೋಚನಾ ನಂತರ ಒಪ್ಪಿದ್ದಾಗಿತ್ತು—ಆ ಪೋಲಿಸಿ!

ಈಗ ಸಾಲ ತೆರುವ ಕನಿಷ್ಠ ಮಿತಿ ರೂ. 25000.

ಹೀಗಿರುವಾಗ ನಿಮಗೆ ಈಗ ನಾನು ಸಾಲ ಕೊಟ್ಟರೆ ಕರ್ತವ್ಯಲೋಪವಾಗದೆ? ಸಾಧಾರಣ ನಿರ್ಧಾರದ ವಿರುದ್ಧ ವರ್ತಿಸುವುದು;—ಅದೂ ಒಬ್ಬ ಸ್ನೇಹಿತನಿಗೆ ಸಹಾಯ ಮಾಡುವುದಕ್ಕೆ! ಸ್ವಜನ ಪಕ್ಷಪಾತತನದ ಧೋರಣೆಗಳನ್ನು—ಆಡಳಿತೆಗಾರನವಾಗಿದ್ದರೂ ನಾವು ಖಂಡಿಸುತ್ತಿಲ್ಲವೆ?

ನಾನು ವಹಿವಾಟು ನಡೆಸುವ ಹಣ ನನ್ನದಲ್ಲ. ಪರದ್ರವ್ಯ. ಸೇಟಿನ ಹಣ ಅವರಿಗೆ ಹಿಡಿಸದ—ಅವರ ಅಭಿಪ್ರಾಯಕ್ಕೆ ವಿರುದ್ಧವಾದ ಒಂದು ಕೆಲಸವನ್ನೂ ನಾನು ಈವರೆಗೂ ಮಾಡಿಲ್ಲ. ಅದ್ದರಿಂದಲೇ ನಾನು ಇಂದು ಈ ಕುರ್ಚಿಯನ್ನು ಅಲಂಕರಿಸುತ್ತೇನೆ. ನನಗಿಂತ ಮೊದಲು ಈ ಸ್ಥಾನದಲ್ಲಿ ಮೂರು ತಿಂಗಳು ಪೂರ್ತಿಯಾದವರಿಲ್ಲ. ನಾನು ಹತ್ತನೇ ವರ್ಷದಲ್ಲಿದ್ದೇನೆಂಬುದು ನಿಮಗೂ ಗೊತ್ತು.

ಉದ್ಯೋಗದ ಮಟ್ಟಿಗೆ ಮಾತ್ರವಲ್ಲ—ಸರ್ವವಿಧದಲ್ಲೂ ನಾನು ಸೇಟಿಗೆ ಋಣಿ.

ಬರೇ ಕೈಯಲ್ಲಿ ನಾನು ಈ ಮಹಾನಗರವನ್ನು ಪ್ರವೇಶಿಸಿದ್ದೆ. ಆಗ ನನಗೆ ವಿದ್ಯಾಭ್ಯಾಸವಿರಲಿಲ್ಲ. ಅಕ್ಷರ ಪರಿಚಯ ಮಾತ್ರವಿತ್ತು. ರಸ್ತೆ—ಬೀದಿಗಳ ಬಳಿಯ ಕಾಲು ದಾರಿಗಳಲ್ಲೂ ಅಂಗಡಿ ಜಗಲಿಗಳಲ್ಲೂ ಮಲಗಿ ನಾನು ನಿದ್ರಿಸುತ್ತಿದ್ದೆ. ಜೀವನ ಬಹಳ ಕಷ್ಟವಾಗಿತ್ತು. ಉದ್ಯೋಗ ಲಭಿಸಿರಲಿಲ್ಲ. ಬೇಡಿ ತಿನ್ನುವ ಅವಸ್ಥೆಯಲ್ಲಿ ನಾನು ಅಲೆದಾಡುತ್ತಿದ್ದೆ. ಯಾರ ಕೈ—ಯಾರ ಬಾಯಿ ಉತ್ತಮವೆಂದು ಹುಡುಕಾಡುತ್ತಿದೆ. ಆಗ ನನ್ನ ಭಾಗ್ಯೋದಯವಾಗಿ ಒಂದು ದಿನ ನಾನು ಸೇಟನ ಕಣ್ಣಿಗೆ ಬಿದ್ದೆ.

ಉಣ್ಣಲೂ ತಿನ್ನಲೂ ಉಳಕೊಳ್ಳಲೂ ನನಗೆ ಅವರು ವ್ಯವಸ್ಥೆಮಾಡಿ ಆಶ್ರಯವಿತ್ತರು. ಒಂದು ಉದ್ಯೋಗ—ಅಡಿಯವನ ಸಹಾಯಕ. ತುಂಬಾ ಶಿಥಿಲವಾಗಿದ್ದ ನನ್ನಶರೀರ ಕೆಲವೇ ದಿನಗಳಲ್ಲಿ ಪರಿಪುಷ್ಟವಾಯ್ತು. ಬಿಡು ಸಮಯದಲ್ಲಿ ನಾನು ನನ್ನ ಭವಿಷ್ಯದ ಬಗ್ಗೂ ಚಿಂತಿಸಬೇಕೆಂದು ಒಮ್ಮೆ ಸೇಟ್ ಹೇಳಿದರು. ನನಗೆ ಅರ್ಥವಾಗಲಿಲ್ಲ. ನಾನು ಸ್ವಲ್ಪ ವಿದ್ಯಾಭ್ಯಾಸವನ್ನು ತಾನಾಗಿ ಮಾಡಿಕೊಂಡರೆ ಅವನುಯೋಗ್ಯವಾದ ಬೇರೆ ಹುದ್ದೆ ಕೊಡುವುವಾಗಿ ತಿಳಿಸಿದರು. ಪ್ರಯತ್ನಿಸಿ ಹೇಗೋ ಕನ್ನಡ—ಹಿಂದಿ—ಇಂಗ್ಲಿಷ್ ಸ್ವಯಂಬೋಧಿನಿಗಳ ಹಾಗೂ ವೃತ್ತಾಂತ ಪತ್ರಿಕೆಗಳ ಸಹಾಯದಿಂದ ಸರಿಯಾಗಿ ಓದಲೂ ಬರೆಯಲೂ ಕಲಿತೆ. ಸೇಟನ ಕಚೇರಿಯಲ್ಲಿ ಸಿಪಾಯಿಯಾದೆ. ಕೆಲವೇ ತಿಂಗಳಲ್ಲಿ "ಡಿಸ್ಪೇಚಿಂಗ್ ಕ್ಲಾರ್ಕ್" ಆಗಿ ಭಡ್ತಿ ಹೊಂದಿದೆ. ವಿದ್ಯಾರ್ಜನೆಯ ಸಾಹಸವನ್ನು ಕೈ ಬಿಡದೆ ಮತ್ತೂ ಪರಿಶ್ರಮಿಸಿದೆ. ಸೇಟಿನ ನಿರ್ದೇಶಾನುಸಾರವಾಗಿ 'ಎಕೌಂಟೆನ್ಸಿ'ಯನ್ನು ಬಿಡು ಸಮಯದಲ್ಲಿ ಟ್ಯುಟೋರಿಯಲ್ ಶಾಲೆಗೆ ಹೋಗಿ ಕಲಿತೆ. "ಸ್ಟೋರ್ ಕೀಪರ್" ಆಗಿ ನನಗೆ ಭಡ್ತಿ ಸಿಕ್ಕಿತು. "ಟೈಪ್‌ರೈಟಿಂಗ್" ಕೂಡಾ ಕಲಿತೆ. "ಕರಿಸ್ಪೋಂಡೆನ್ಸ್" ವಿಭಾಗವನ್ನು ಸ್ವತಂತ್ರವಾಗಿ ವಹಿಸಲು ಶಕ್ತನೆಂದು ತೋರಿದಾಗ ಸೇಟಿನ ಬಟ್ಟೆಗಿರಣಿಯ "ಎಕೌಂಟೆಂಟ್" ಆದೆ. ಮತ್ತೆರಡುವರ್ಷದಲ್ಲಿ ಸೇಟನ ಮನೆಯಲ್ಲಿ ಆಪ್ತ ಕಾರ್ಯದರ್ಶಿ ಮತ್ತು "ಕೇಶಿಯರ್".

(ಹನ್ನೊಂದನೇ ಪುಟ ನೋಡಿರಿ)

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. C. 47/1971

ಯಂ. ಪಾಂಡುರಂಗ ಶೆಣೈ —ಅರ್ಜಿದಾರ

ನಾರಾಯಣ ಶೆಟ್ಟಿ ಕೂಡಾ —ಎದ್ರಿರು.

3ನೇ ಎದ್ರಿ:- ಬೆಳ್ತಂಗಡಿ ತಾಲೂಕು ಉಜ್ರೆ ಗ್ರಾಮದಲ್ಲಿರುವ ಕೊರಪೂಳು ಹೆಂಗ್ಸಿನ ಮಗ ಶ್ರೀನಿವಾಸರಿಗೆ—P. O. ಉಜ್ರೆ, ದ. ಕ.

ಮೇಲ್ಕಂಡ ವ್ಯವಹರಣೆಯಲ್ಲಿ ಮೈಸೂರು ಲೇಂಡ್ ರಿಫೋರ್ಮ್ಸ್ ಆಕ್ಟಿನ ಪ್ರಕಾರ ಗೇಣಿ ವಸೂಲಿ ಬಗ್ಗೆ ಅರ್ಜಿದಾರನು ಅರ್ಜಿಕೊಟ್ಟಿರುವುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಣೆ ಇದ್ದ ಪಕ್ಷದಲ್ಲಿ ಅದನ್ನು ಈ 1971ನೇ ಇಸವಿ ಸಪ್ಟೆಂಬರ ತಿಂಗಳ ತಾರೀಕು 20ರಲ್ಲಿ ಪೂರ್ವಾಹ್ನ 11ಗಂಟೆಗೆ ನೀವು ಖುದ್ದಾಗಲೀ ಯಾ ವಕೀಲರ ದ್ವಾರಾ ಆಗಲೀ ಹಾಜರಾಗತಕ್ಕದ್ದು. ತಪ್ಪಿದರೆ ಸದರಿ ವಿಷಯದಲ್ಲಿ ಏಕ ಪಕ್ಷೀಯವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟು ಹುಕುಂ ಪ್ರಕಾರ)

U. M. Raveendra

Advocate for Applicant

ಬೆಳ್ತಂಗಡಿ, 20-8-1971

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :

ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು-4

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 1

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು
ಸರಕಾರಗಳಲ್ಲಿ ಆರೋಗ್ಯ
ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦–೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು
ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ
ಬೇಕಾದ ಯಾವದೇ ಪ್ರಕಟಣೆಗಳು
ಕನಿಷ್ಟ ನಾಲ್ಕು ದಿನ ಮುಂಚಿತ
ವಾಗಿಯೇ ನಮ್ಮ ಕೈಸೇರಬೇಕು.

ಅಮೆರಿಕೆಯು ಪಾಕಿಸ್ತಾನದ ಸ್ನೇಹವನ್ನು ಕಳೆದುಕೊಳ್ಳದು

ಅಮೆರಿಕೆಯು ಪಾಕಿಸ್ತಾನಕ್ಕೆ ನೀಡುತ್ತಿರುವ ಸೈನಿಕ ಸಹಾಯವನ್ನು ನಿಲ್ಲಿಸಬೇಕೆಂಬುದು ಭಾರತದ ಮತ್ತು ಅದರ ಮಿತ್ರ ರಾಷ್ಟ್ರಗಳ ಆಂತರ್ಯದ ಬಯಕೆ. ಬಂಗ್ಲಾ ದೇಶದ ವಿದ್ಯಮಾನಗಳನ್ನು ಗಣನೆಗೆ ತೆಗೆದುಕೊಂಡರೆ, ಈ ಬಯಕೆಯೇನೂ ಅವಾಸ್ತವವಾದುದಲ್ಲ. ಈ ಸೈನಿಕ ಸಹಾಯದಿಂದ ಅಧ್ಯಕ್ಷ ಯಾಹ್ಯಾಖಾನರು ದೈತ್ಯ ಶಕ್ತಿಯನ್ನು ಹೊಂದುತ್ತಾರೆ. ಅದರ ಬಲದಿಂದಲೇ ಬಂಗ್ಲಾ ದೇಶದಲ್ಲಿ ಅವರು ಭೀಕರ ನರಮೇಧವನ್ನೂ ಮುಂದುವರಿಸುತ್ತಿದ್ದಾರೆ. ಇದು ಅಮೆರಿಕೆಗೂ ತಿಳಿಯದ ಸಂಗತಿಯಲ್ಲ. ಹಾಗಿದ್ದರೂ ಅಧ್ಯಕ್ಷ ನಿಕ್ಸನ್ ತಮ್ಮ ನಿಲುಮೆಯಲ್ಲಿ ಎಳ್ಳಿನಷ್ಟೂ ಮಾರ್ಪಾಟು ಮಾಡಲು ಸಿದ್ಧರಿಲ್ಲ. ಇವರು ಪಾಕಿಗೆ ಶಸ್ತ್ರಾಸ್ತ್ರ ಪೂರೈಕೆಯನ್ನು ನಿರಂತರವಾಗಿ ಮುಂದುವರಿಸುವುದರಲ್ಲೇ ಆಸಕ್ತರಾಗಿದ್ದಾರೆ. ಅಮೆರಿಕೆಯ ಸ್ಟೇಟ್ ಮಂತ್ರಾಲಯವು ತನ್ನ ನಿಲುವನ್ನು–ಪಾಕ್‌ಪರ–ಬಲವಾಗಿ ಸಮರ್ಥಿಸಿ ಕೊಂಡುದನ್ನು ಕಾಣುವಾಗ, ನಿಕಟ ಭವಿಷ್ಯದಲ್ಲಿ ಇದು ಬದಲಾಗುವುದೂ ಸಾಧ್ಯವಿಲ್ಲವೆಂಬುದು ವೇದ್ಯವಾಗುತ್ತದೆ.

ಬಂಗ್ಲಾದೇಶದ ಸಮಸ್ಯೆ ಉದ್ಭವವಾಗುವುದಕ್ಕೆ ಮೊದಲು, ಅಂದರೆ, ಇದೇ ಮಾರ್ಚ್ ತಿಂಗಳಿಗೆ ಪೂರ್ವದಲ್ಲಿಯೇ ನೀಡಲಾದ ಶಸ್ತ್ರಾಸ್ತ್ರ ಲೈಸನ್ಸುಗಳನ್ನು ತಡೆಹಿಡಿಯಲು ಅಮೆರಿಕೆ ಸ್ಪಷ್ಟವಾಗಿ ನಿರಾಕರಿಸಿದೆ. ಈಗಾಗಲೇ ಮೂವತ್ತಾರು ಲಕ್ಷ ಡಾಲರ್ ಬೆಲೆ ಬಾಳುವ ಶಸ್ತ್ರಾಸ್ತ್ರಗಳನ್ನು ತಾನು ಸರಬರಾಜು ಮಾಡಿರುವುದಾಗಿ ಅದು ಘೋಷಿಸಿದೆ. ಇನ್ನೂ ಇಪ್ಪತ್ತಾರು ಲಕ್ಷ ಡಾಲರ್ ಬೆಲೆಬಾಳುವ ಸೈನಿಕೋಪಕರಣಗಳನ್ನು ಪೂರೈಸಲಿರುವುದಾಗಿ ಬಹಿರಂಗವಾಗೇ ಒಪ್ಪಿಕೊಂಡಿದೆ. ತನ್ನ ನಿರ್ಧಾರಕ್ಕೆ ಅಥವಾ ನಿಲುಮೆಯಲ್ಲಿ ಬದಲಾವಣೆ ಮಾಡದಿರುವುದಕ್ಕೆ ತನಗೆ ಪಾಕಿಸ್ತಾನದ ಸ್ನೇಹ ಅತ್ಯಂತ ಪ್ರಮುಖವಾದದ್ದು ಎಂದು ಅದು ಸಮರ್ಥಿಸಿಕೊಂಡಿದೆ. ತಾನು ಬಯಸಿದ ಯಾವುದೇ ದೇಶಕ್ಕೆ ಯಾವುದೇ ರೀತಿಯ ಸಹಾಯನೀಡಲು ಪ್ರತಿ ದೇಶವೂ ಸ್ವತಂತ್ರವಿದೆಯೆಂಬುದು ನಿಜ. ಅಮೆರಿಕೆಗೆ ಪಾಕ್ ಮಿತ್ರರಾಷ್ಟ್ರವೆಂಬುದೂ ದಿಟ. ಭಾರತವೇನೂ ಅದರ ಶತ್ರು ರಾಷ್ಟ್ರವಲ್ಲ. ಆದರೆ,:ಹಿಂದಿನಿಂದಲೂ ಅಮೆರಿಕನ್ ನಿಲುವು ಪಾಕ್‌ಪರವಾಗಿಯೇ ಬೆಳೆದು ಬಂದಿರುವುದು ಸುಸ್ಪಷ್ಟ. ತಾನು ಕಮ್ಯುನಿಜಂ ಆಕ್ರಮಣ ವಿರೋಧಿಸಲು ನೀಡಿದ ಶಸ್ತ್ರಾಸ್ತ್ರಗಳನ್ನು ಪಾಕಿಸ್ತಾನ ಭಾರತದ ವಿರುದ್ಧ ಬಳಸಿಕೊಂಡಾಗ, ತನ್ನ ವಿವಶತೆಯನ್ನಷ್ಟೇ ಅಮೆರಿಕೆ ವ್ಯಕ್ತಪಡಿಸಿ ತೃಪ್ತಿಯಾಯಿತು. ಯಾವುದೋ ಒಂದು ಉದ್ದೇಶಕ್ಕಾಗಿ ಮೀಸಲಿಟ್ಟ ಸೈನ್ಯಶಕ್ತಿ ದುರುಪಯೋಗವಾದಾಗ ತುಟಿಯೆರಡು ಮಾಡದ ಅಮೆರಿಕೆಯಿಂದ ಭಾರತ ಸಹಾನುಭೂತಿಯಹೊರತು ಮತ್ತೇನನ್ನೂ ನಿರೀಕ್ಷಿಸುವುದು ತಪ್ಪಾದೀತೋ ಏನೋ! ಭಾರತ ಉಪಖಂಡದಲ್ಲಿ ಶಾಂತಿ ನೆಲಸಬೇಕು; ಭಾರತ ಪಾಕಿಸ್ತಾನಗಳು ಸಹಬಾಳ್ವೆ ಬದುಕಬೇಕು ಎಂದು ಬಯಸುವ ಅಮೆರಿಕೆಯು ತನ್ನ ಬಯಕೆಗೆ ತದ್ವಿರುದ್ಧವಾಗಿ ವರ್ತಿಸುತ್ತಿದೆಯೆಂಬುದಕ್ಕೆ ಬೇರೆ ಕನ್ನಡಿ ಹಿಡಿಯ ಬೇಕಿಲ್ಲ. ಅದರ ಮನೀಶೆ ಪಾಕಿಸ್ತಾನವನ್ನು ತನ್ನ ಸ್ನೇಹಿತ ದೇಶವನ್ನಾಗಿಯೇ ಇಟ್ಟುಕೊಳ್ಳಬೇಕು ಎಂಬುದು. ಪಾಕ್ ನಾಯಕರ ಮಿತ್ರತ್ವ ಶಸ್ತ್ರಾಸ್ತ್ರಗಳ ಸರಬರಾಜಿನಿಂದ ಮಾತ್ರ ಲಭ್ಯವೆಂಬುದನ್ನು ಎಂದೋ ಕಂಡುಕೊಂಡ ಅಮೆರಿಕನ್ ಸರಕಾರಗಳು ಒಂದೊಂದು ನೆಪವೊಡ್ಡಿ ನಿರಾತಂಕವಾಗಿ ಸೈನ್ಯ ಶಕ್ತಿಯನ್ನು ರವಾನಿಸುತ್ತಲೇ ಇವೆ. ಇಂದೀಗ ಅದನ್ನು ಬಹಿರಂಗವಾಗಿ ಒಪ್ಪಿಕೊಂಡಿದೆಯಷ್ಟೆ. ಭಾರತಕ್ಕೆ ತನ್ನದೇ ಆದ ನೀತಿಯೊಂದಿದ್ದು ಅದನ್ನೆಂದೂ ಮೀರಿ ಹೋಗುವುದಿಲ್ಲವೆಂಬುದೂ ಅಮೆರಿಕ ದೃಢವಾಗಿ ತಿಳಿದುಕೊಂಡಿದೆಯಾದುದರಿಂದಲೇ ಅದು ಪಾಕಿಸ್ತಾನದ ಸ್ನೇಹವನ್ನುಳಿಸಿಕೊಳ್ಳುವುದಕ್ಕಾಗಿ ಭಾರತದ ವಾಸ್ತವಿಕ ದೃಷ್ಟಿಯನ್ನು ಕಡೆಗಣಿಸ ಹೊರಟಿದೆ.

ಅಮೆರಿಕದ ಪಾಕ್ ಪರತೆಗೆ ಅದು ನಿರಾಶ್ರಿತರಿಗೆ ನೀಡುತ್ತಿರುವ ನೆರವಿನ ಪ್ರಮಾಣವೂ ಒಂದು ಉದಾಹರಣೆ. ಬಂಗ್ಲಾ ನಿರಾಶ್ರಿತರನ್ನು ಭರಿಸುವುದು ಭಾರತದ ಮಾನವೀಯ ಕರ್ತವ್ಯವೆಂಬುದು ಸತ್ಯವೇ. ಆದರೆ, ಈಯೆಲ್ಲ ಹೊರೆಯನ್ನು ಭಾರತವೊಂದೇ ಹೊತ್ತುಕೊಳ್ಳುವುದು ಅಸಾಧ್ಯವೆಂಬುದೂ ಈ ಕಾರ್ಯದಲ್ಲಿ ಅದಕ್ಕೆ ವಿಶ್ವದ ಎಲ್ಲ ದೇಶಗಳ ಸಹಾಯ—ಸಹಕಾರಗಳು ಬೇಕು ಎಂಬುದೂ ಅಷ್ಟೇ ಸತ್ಯ. ಮಾನವೀಯತೆಯೆಂಬುದು ಬರಿಯ ಒಂದು ದೇಶಕ್ಕೆ ಮಾತ್ರ ಇರುವ ಗುತ್ತೇದಾರಿಕೆಯಲ್ಲ. ಬರಿಯ ಸಹಾನುಭೂತಿಯಿಂದ ಹೊಟ್ಟೆಯ ಹಸಿವೆ ಹಿಂಗುವುದಿಲ್ಲ. ಸೆನೇಟರ್ ಎಡ್ವರ್ಡ್ ಕೆನ್ನಡಿಯವರು ಇದನ್ನೇ ಪರ್ಯಾಯವಾಗಿ ಹೇಳಿದ್ದಾರೆ. ವಿಶ್ವದ ಇನ್ನೂ ಹೆಚ್ಚಿನ ಮಾನವೀಯ ನೆರವು ಅಗತ್ಯವೆಂದವರು ಕರೆ ನೀಡಿದ್ದಾರೆ. ಕೆನ್ನಡಿಯವರ ಮಾತನ್ನು ಅಮೆರಿಕೆ ಒಪ್ಪುತ್ತದೆ; ಆದರೆ, ಅದು ನೀಡುತ್ತಿರುವ ಸಹಕಾರ ಅದರ ಹೇಳಿಕೆ, ಘನತೆಗೆ ತಕ್ಕ ಪ್ರಮಾಣದಲ್ಲಿಲ್ಲವೆಂಬುದು ಗಮನಾರ್ಹ. ಅಮೆರಿಕೆಯ ಸ್ಟೇಟ್ ಮಂತ್ರಿ ಶಾಖೆಯ ಲೆಕ್ಕಾಚಾರದಂತೆ ಬಂಗ್ಲಾದಿಂದ ಭಾರತಕ್ಕೆ ಓಡಿ ಹೋದ ನಿರಾಶ್ರಿತರ ಸಂಖ್ಯೆ ೭೦ ಲಕ್ಷ ದಾಟಿದೆ. ಇವರಿಗೆಂದದು ಎಪ್ಪತ್ತು ಲಕ್ಷ ಡಾಲರ್‌ಗಳನ್ನು ನೀಡಿದೆ. ಅದೇ ಕಾಲಕ್ಕೆ ಬಂಗ್ಲಾದೇಶದಲ್ಲೇ ಉಳಿದುಕೊಂಡಿರುವ ನಿರಾಶ್ರಿತರಿಗೆ ಆರುಕೋಟಿ ಡಾಲರ್‌ಗಳ ನೆರವು ನೀಡಿದೆ. ಈ ನೆರವು ಯಾವ ರೂಪದ್ದೆಂದು ಕೇಳಬಾರದು. ಲೆಕ್ಕಾಚಾರದಂತೆ ತಮ್ಮ ದೇಶದಲ್ಲೇ ನಿರಾಶ್ರಿತರಾದ ಸುಮಾರು ಏಳುಕೋಟಿ ಬಂಗ್ಲಾ ದೇಶೀಯರಿದ್ದಾರೆಂದಾಯ್ತು. ಪ್ರಾಯಃ ಬಂಗ್ಲಾ ದೇಶದ ಜನರೆಲ್ಲರೂ ನಿರಾಶ್ರಿತರೇ ಆಗಿ ಹೋಗಿದ್ದಾರೆಂದು ಅಮೆರಿಕೆ ತಿಳಿದುಕೊಂಡಿರಬಹುದು. ಹಾಗಿದ್ದರೂ ಪರಿಸ್ಥಿತಿಯ ಭೀಕರತೆ ಮತ್ತು ರುದ್ರಭಯಾನಕತೆಗಳನ್ನು ತಡೆಹಿಡಿಯಲು ಅದು ಯಾವ ಪರಿಣಾಮಕಾರಿ ಹೆಜ್ಜೆಯಿಡಲು ಮುಂದೆ ಬರಲಿಲ್ಲ; ಬರುವ ಮುನ್ಸೂಚನೆಗಳೂ ದೃಗ್ಗೋಚರವಾಗುತ್ತಿಲ್ಲ. ಅಂದರೆ ಪಾಕಿಸ್ತಾನದ ಸ್ನೇಹವನ್ನುಳಿಸಿಕೊಳ್ಳಲು ಅದನ್ನು ಬೆಳೆಸಿಕೊಳ್ಳಲು ಅಮೆರಿಕೆ ಏನು ಮಾಡುವುದಕ್ಕೂ ಹೇಸದೆಂಬುದು ಜಗಜ್ಜಾಹೀರಾಯ್ತು.

ಇದನ್ನು ಗಮನಿಸಿಯೇ ಇರಬೇಕು, ನಮ್ಮ ವಿದೇಶ ಸಚಿವ ಸರ್ದಾರ ಸ್ವರ್ಣಸಿಂಗರು ಅಮೆರಿಕೆಯನ್ನು ಖಂಡ ತುಂಡವಾಗಿ ಟೀಕಿಸಿದ್ದು. ಸದ್ಯದಲ್ಲೇ ಪ್ರಧಾನಿ ಇಂದಿರಾಗಾಂಧಿಯವರು ನ್ಯೂಯಾರ್ಕನ್ನು ಸಂದರ್ಶಿಸಲಿದ್ದಾರೆ. ಎರಡೂ ದೇಶಗಳ ಬಂಧುತ್ವ ಹದಗೆಡುತ್ತಿರುವ ಈ ಸಂಕಟಮಯ ಸನ್ನಿವೇಶದಲ್ಲಿ ಉಭಯ ದೇಶಗಳ ನಡುವಣ ಭಿನ್ನಮತ ಅಥವಾ ತಪ್ಪು ತಿಳುವಳಿಕೆಗಳನ್ನು ದೂರ ಮಾಡಿಕೊಳ್ಳುವುದಕ್ಕೆ ಈ ಭೆಟ್ಟಿ ಸಹಾಯಕವಾದೀತು. ಅದೇನಿದ್ದರೂ ಒಂದು ವಿಷಯವಂತೂ ಈಗ ಹಗಲಿನಷ್ಟು ಸ್ಪಷ್ಟ—ಅಮೆರಿಕೆಯು ಪಾಕಿಸ್ತಾನದ ಸ್ನೇಹವನ್ನು ಕಳೆದುಕೊಳ್ಳಲು ಅಥವಾ ಆ ಸ್ನೇಹತಂತು ಕಡಿಯಬಹುದಾದ ಸನ್ನಿವೇಶವನ್ನು ನಿರ್ಮಿಸಲು ಎಂದೆಂದಿಗೂ ಸಿದ್ಧವಿಲ್ಲ. ಅದು ಭಾರತವನ್ನೆಂದೂ ಎದೆಗೆ ಅಪ್ಪಿಕೊಳ್ಳಲು ಮುಂದೆ ಬರುವುದಿಲ್ಲ. ಇದಕ್ಕೆ ಭಾರತದ ಸ್ವತಂತ್ರ ನೀತಿ—ನಿಲುಮೆಗಳೇ ಮುಖ್ಯ ಕಾರಣ.

ಕಾವೇರಿ ಬಗ್ಗೆ ಮಾರ್ಕ್ಸಿಸ್ಟರ ಸ್ವಾಗತಾರ್ಹ ನೀತಿ

ಕಾವೇರೀ ನದೀ ನೀರಿನ ವಿವಾದವೀಗ ನ್ಯಾಯಾಲಯದ ಕಟ್ಟೆಯಲ್ಲಿದೆ. ತಮಿಳುನಾಡು ಸರಕಾರವು ಕೇಂದ್ರ ಸರಕಾರದ ಮೇಲೆ ವ್ಯಾಜ್ಯ ದಾಖಲು ಮಾಡಿದೆ. ಕರ್ನಾಟಕ ಸರಕಾರವನ್ನೂ ಅದು ವಿವಾಹಕ್ಕೆಳೆದಿದೆ. ಕೇರಳ ಸರಕಾರವು ಸರ್ವೋಚ್ಚ ನ್ಯಾಯಾಲಯದ ವಿಚಾರಣೆಯಲ್ಲಿ ಪಾಲುಗೊಳ್ಳುವ ಅವಕಾಶ ತನಗೂ ಬೇಕೆಂದು ಕೇಳಿಕೊಂಡು ಅರ್ಜಿ ಗುಜರಾಯಿಸಿದೆ. ತಮಿಳುನಾಡಿನ ಹಠಮಾರಿತನ, ಕೇರಳದ ಒತ್ತಾಸೆ ಮತ್ತು ಕೇಂದ್ರ ಸರಕಾರದ ಸ್ವಾರ್ಥಜನ್ಯ ದುರ್ಬಲತೆಗಳು ಮುಪ್ಪುಗೊಂಡು, ಕರ್ನಾಟಕದ ತಲೆಯನ್ನು ಮೆಟ್ಟನಿಂತಿವೆ. ಈ ವಿವಾದವು ವಾಸ್ತವಿಕವಾಗಿ ನೀರಿನ ಮಟ್ಟವನ್ನು ಮೀರಿ ಹೋಗಿ, ಸ್ವಾರ್ಥ ದುರ್ಭಾವನೆಗಳ ಹೊದಿಕೆ ಹೊದ್ದಿದೆಯೆಂದು ಹೇಳಬಹುದು. ಏಕೆಂದರೆ, ದೇಶದ ಯಾವುದೇ ಪಕ್ಷವಾದರೂ ಈ ಬಗ್ಗೆ ರಾಷ್ಟ್ರೀಯ ನೀತಿಯೊಂದನ್ನು ತಳೆದಂತೆ ಭಾಸವಾಗುವುದಿಲ್ಲ. ಪ್ರಾದೇಶಿಗ ಹಿತಾಸಕ್ತಿಗನುಗುಣವಾದ ನೀತಿಯು ವಿವಾದದ ಪರಿಹಾರಕ್ಕೆಂದೂ ಕಾರಣವಾಗುವುದಿಲ್ಲ, ಮಾತ್ರವಲ್ಲ.ಅದನ್ನುಉಲ್ಬಣಗೊಳಿಸುವುದಕ್ಕೂ ಪ್ರೇರಕ ಶಕ್ತಿಯಾಗಿ ನಿಲ್ಲುತ್ತವೆ ಈ ಸಂಧಿಗ್ಧ ವೇಳೆಯಲ್ಲಿ ಮಾರ್ಕ್ಸಿಸ್ಟ್ ಕಮ್ಯೂನಿಸ್ಟ್ ಪಕ್ಷವು ಇದಕ್ಕೆಅಪವಾದವಾಗಿ ನಿಂತುದು ಸೋಜಿಗವೆನಿಸಿದರೂ ಅದು ಸ್ವಾಗತಾರ್ಹ.

ಕೇಂದ್ರದ ಆಡಳಿತ ಪಕ್ಷಕ್ಕೆ ತಮಿಳುನಾಡು, ಕರ್ನಾಟಕ ಮತ್ತು ಕೇರಳಗಳ ಹಿತಾಸಕ್ತಿಯಲ್ಲಿ ಏನೇನೂ ಕಾಳಜಿಯಿಲ್ಲ. ಈ

(ನಾಲ್ಕನೇ ಪುಟ ನೋಡಿರಿ)

(ಮೂರನೇ ಪುಟದಿಂದ)

ಮೂರು ರಾಜ್ಯಗಳಲ್ಲೂ ತನ್ನ ಪಕ್ಷವನ್ನು ಭದ್ರ ಬುನಾದಿಯ ಮೇಲೆ ಕಟ್ಟುವುದು ಅದಕ್ಕೆ ಬೇಕಾಗಿದೆ. ಅದಕ್ಕೆಂದೇ ವಿವಾದಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನಗಳನ್ನು ಅದು ಮಾಡದೆ, ಅದನ್ನು ಎಳೆದಾಡಿ ಹಾವು ಸಾಯದಂತೆ— ಕೋಲು ಮುರಿಯದಂತೆ ನೋಡಿಕೊಳ್ಳುತ್ತಿದೆ. ಇದನ್ನೇ ಕೇಂದ್ರವನ್ನಾಗಿ ಮಾಡಿಕೊಂಡು, ಮೂರು ರಾಜ್ಯಗಳ ನಡುವೆ ಪಾರಸ್ಪರಿಕ ದ್ವೇಷ ಭಾವನೆಯನ್ನು ಬೆಳೆಸಲು ಅದು ಮನಸ್ಸು ಮಾಡಿದೆ. —ಇದು ಮಾರ್ಕ್ಸಿಸ್ಟರ ನಿಲುವು. ಕರ್ನಾಟಕದ ಯೋಜನೆಗಳಿಗೆ ಕೇಂದ್ರ ಸರಕಾರವು ಬಜೆಟ್ಟಿನಲ್ಲಿ ಹಣ ಒದಗಿಸಿದೆ, ಪಾರ್ಲಿಮೆಂಟು ಅದನ್ನು ಸ್ವೀಕರಿಸಿದೆ; ಹಾಗಿರುವಾಗ ಯೋಜನೆಗಳಿಗೆ ಮಂಜೂರಾತಿಯಿಲ್ಲವೆಂದರೇನೆಂಬುದು ಮಾರ್ಕ್ಸಿಸ್ಟರ ಸವಾಲು. ಇದಕ್ಕಿಂತ ಹಾಸ್ಯಾಸ್ಪದವಾದದ್ದು ಮತ್ತೇನಾದರೂ ಇದೆಯೆ? ಎಂದು ಪ್ರಶ್ನಿಸುತ್ತಾರೆ ಅವರು. ೧೯೨೪ರ ಒಡಂಬಡಿಕೆಯ ಮಿತಿಯನ್ನು ಮೀರಿ ತಮಿಳುನಾಡು ಈಗಾಗಲೇ ನೀರನ್ನು ಬಳಸಿಕೊಂಡಿದೆಯೆಂಬ ಕರ್ನಾಟಕದ ಆರೋಪವನ್ನು ತಮಿಳುನಾಡು ಅಲ್ಲಗಳೆದಿಲ್ಲ. ಈ ಆರೋಪದ ಸತ್ಯಾಸತ್ಯತೆಯನ್ನು ಕೇಂದ್ರ ಸರಕಾರ ಪರಿಶೀಲಿಸಿಯೂ ಇಲ್ಲ. "ಕೇರಳ ಮತ್ತು ಕರ್ನಾಟಕದ ಎಲ್ಲ ಯೋಜನೆಗಳಿಗೂ ಕೇಂದ್ರ ಅನುಮತಿ ನೀಡಬೇಕು; ವಿವಾದವನ್ನು ಮಾತುಕತೆಗಳ ಮೂಲಕವೇ ಪರಿಹರಿಸಬೇಕು. ಮನಸ್ಸಿದ್ದಲ್ಲಿ ಇದು ಎಂದೋ ಸಾಧ್ಯವಾಗುತ್ತಿತ್ತು, ಇಂದೂ ಸಾಧ್ಯ"—ಇದು ಅವರ ನಿರ್ಧಾರ. ಕರ್ನಾಟಕ, ತಮಿಳುನಾಡು ಮತ್ತು ಕೇರಳದ ಮಾರ್ಕ್ಸಿಸ್ಟ್ ನೇತಾರರು ಒಂದುಗೂಡಿ ನೀಡಿದ ಹೇಳಿಕೆಯು ಕರ್ನಾಟಕದ ನಿಲುವೆಯನ್ನೇ ಹೋಲುತ್ತದೆ. ಉಳಿದ ರಾಜ್ಯಕೀಯ ಪಕ್ಷಗಳೂ ರಾಜ್ಯಕ್ಕೊಂದು ನೀತಿಯನ್ನು ರೂಪಿಸುವ ಸ್ವಾರ್ಥ ಪ್ರೇರಿತ ನೀತಿಯನ್ನು ಬಿಟ್ಟುಕೊಟ್ಟು ಯಾವುದೇ ರೂಪದ ರಾಷ್ಟ್ರೀಯ ನೀತಿಯೊಂದನ್ನು ಅಳವಡಿಸಿದರೆ, ವಿವಾದದ ಪರಿಹಾರ ಸುಲಭ ಸಾಧ್ಯವಾಗುತ್ತದೆ.

●●

ಆರೋಗ್ಯವೆ ಮುಖ್ಯ ಲಕ್ಷ್ಯ

ಕ್ರೀಡೆಗಳು ವ್ಯಾಪಕ ಪ್ರಮಾಣದಲ್ಲಿ ಬೆಳೆಯುವಂತೆ ಸೋವಿಯೆತ್ ಒಕ್ಕೂಟದಲ್ಲಿ ನಿರಂತರವಾಗಿ ಕಾಳಜಿ ವಹಿಸಲಾಗುತ್ತಿದೆ. ಎಲ್ಲಾ ವಯೋಗುಂಪಿನ ಮತ್ತು ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯ ಮಿಲಿಯಂತರ ಜನರು ಇತ್ತೀಚಿನ ವರ್ಷಗಳಲ್ಲಿ ಸೋವಿಯೆತ್ ಒಕ್ಕೂಟದಲ್ಲಿ ಶಾರೀರಿಕ ಶಿಕ್ಷಣದಲ್ಲೂ ಕ್ರೀಡಾ ಚಳುವಳಿಯಲ್ಲೂ ಸೇರಿಕೊಂಡಿದ್ದಾರೆ. ಮತ್ತೆ ಇವರಲ್ಲಿ ಹೆಚ್ಚಿನವರು ದಿವ್ಯ ವಿಜಯಗಳ ಅಥವಾ ಜಾಗತಿಕ ವಿಕ್ರಮಗಳ ಕನಸು ಕಾಣುತ್ತಿಲ್ಲವೆಂಬುದನ್ನೂ ಹೇಳಬೇಕಾದುದೇ ಇಲ್ಲ. ಕ್ರೀಡೆಗಳು ಅವರ ದೇಹವನ್ನೂ, ಮನಸ್ಸನ್ನೂ ಶಕ್ತಿವತ್ತಾಗಿ ಮಾಡುತ್ತವೆ. ಉಲ್ಲಸಿತ ಭಾವನೆಯುವರನ್ನಾಗಿಡುತ್ತವೆ.

ದೇಶದ ಅನೇಕ ನಗರ, ಪಟ್ಟಣಗಳಲ್ಲಿ ಪ್ರಾತಃಕಾಲ ತರಬೇತಿ ಉಡುಪಿನಲ್ಲಿ ಸ್ತ್ರೀಪುರುಷರು, ಆಟಪಾಟಗಳಿಗೆ ಮೀರಿದ ವಯಸ್ಸು ಎಂದು ಸಾಮಾನ್ಯವಾಗಿಯೆ ಭಾವಿಸುವ ವಯಸ್ಸಿನ ಸ್ತ್ರೀಪುರುಷರು, ಗುಂಪು ಗುಂಪಾಗಿ ಓಡುತ್ತಿರುವುದನ್ನೋ, ಅಥವಾ ಒಬ್ಬಂಟಿಗರಾಗಿ ಪಾರ್ಕುಗಳಲ್ಲಿ, ಕ್ರೀಡಾಂಗಣಗಳಲ್ಲಿ ಓಡುತ್ತಿರುವುದನ್ನೋ ಕಾಣಬಹುದು. ಕುಕ್ಕುಲೋಟವೂ ಅತ್ಯಂತ ಜನಪ್ರಿಯವಾಗುತ್ತಿರುವುದನ್ನು ನಾವು ಕಾಣುತ್ತೇವೆ

ಬೆಳಗಿನ ಜಾವದಲ್ಲಿ ಬಾನುಲಿ ಬಿತ್ತರಣೆಗಳು ಸುಮಧುರ ಸಂಗೀತದೊಡನೆಯೆ ಜನರು ತಮ್ಮ ಪ್ರಾತಃಕಾಲದ ವ್ಯಾಯಾಮಗಳಿಗೆ ತೊಡಗಬೇಕೆಂದೂ ಕರೆಕೊಡುತ್ತವೆ. ಶಾರೀರಿಕ ಶಿಕ್ಷಕರು ಬಾನುಲಿಯ ಮೂಲಕವೆ ಸರ್ವಾಂಗಸುಂದರ ವ್ಯಾಯಾಮಗಳನ್ನು ನಿರ್ದೇಶಿಸುತ್ತಾರೆ ಮತ್ತು ದಿನನಿತ್ಯದ ಕೆಲಸಕ್ಕೆ ಸಿದ್ಧತೆ ಮಾಡಿಕೊಳ್ಳಲು ನಿಯಮಿತವಾಗಿ ಹೊಸ ಹೊಸ ವ್ಯಾಯಾಮಗಳನ್ನು ಮಿಲಿಯಂತರ ಜನರಿಗೆ ತಿಳಿಸುತ್ತಿರುತ್ತಾರೆ.

ದಿನದಲ್ಲಿ ಮತ್ತೆ ಎರಡು ಬಾರಿ ಬಾನುಲಿಯು ಕಛೇರಿ ಕಾರ್ಖಾನೆಗಳಲ್ಲಿ ಕೆಲಸಮಾಡುತ್ತಿರುವವರ ಗಮನ ಸೆಳೆಯುತ್ತದೆ. ಇದರಿಂದ ಏಳು ನಿಮಿಷಗಳವರೆಗೆ ನಡೆಯುವ ಈ ಅಂಗಸೌಷ್ಠವ ವ್ಯಾಯಾಮವು ಬಳಲಿಕೆಯನ್ನು ನಿವಾರಿಸಿ ಎಲ್ಲಾ ಶರೀರಾಂಗಗಳು ತಮ್ಮ ಜೀವನ ವ್ಯಾಪಾರವನ್ನು ಸರಳವಾಗಿ ನಡೆಸುವಂತೆ ಸಹಾಯಕವಾಗುತ್ತವೆ.

ಶಾಲೆಯು ಮುಗಿದಾಗ ಶಾರೀರಿಕ ಶಿಕ್ಷಣದ ಸಂಘಟಕರು ತರುಣ ಜನರು ಕ್ರೀಡಾಂಗಣಗಳಿಗೂ ಸ್ಪೋರ್ಟ್ಸ್, ಕೋರ್ಟುಗಳಿಗೂ ತೆರಳುವಂತೆ ಕೇಳಿಕೊಳ್ಳುತ್ತಾರೆ. ಮತ್ತೆ ಅವರೇನು ಬಹಳ ದೂರ ಹೋಗಬೇಕಾಗಿಲ್ಲ. ಕಾರ್ಖಾನೆಗಳೂ, ಕಛೇರಿಗಳೂ ತಮ್ಮ ಕ್ರೀಡಾ ಮೈದಾನಗಳನ್ನು ಹತ್ತಿರದಲ್ಲೇ ಕಟ್ಟಿಕೊಂಡಿರುತ್ತವೆ. ಸಾಮೂಹಿಕ ವ್ಯಾಪ್ತಿಯಲ್ಲಿ ಕ್ರೀಡಾಭ್ಯಾಸವನ್ನು ಬೆಳೆಸಲು ಇದು ಅನುಕೂಲವೇ ಆಗುತ್ತದೆ.

ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಪುರುಸೊತ್ತಿನ ಕಾಲವನ್ನು ತನಗನುಕೂಲವಾದ ರೀತಿಯಲ್ಲಿ ಬಳಸಿಕೊಳ್ಳಲು ಅವಕಾಶವಿರುತ್ತವೆ. "ಕಾರ್ಖಾನೆ ದ್ವಾರದ ಹೊರಗಡೆಯೆ ಕ್ರೀಡಾಸೌಲಭ್ಯಗಳಿರುವುದೇನೋ ತುಂಬಾ ಒಳ್ಳೆಯದೆ. ಆದರೆ ಮನೆಯ ಹತ್ತಿರದಲ್ಲೇ ಇರುವುದು ಇನ್ನಷ್ಟು ಒಳ್ಳೆಯದು" ಎಂದು ಕುಟುಂಬದ ಜನರು ಕೇಳುತ್ತಿದ್ದಾರೆ. ಹೌದು, ಅದು ನಿಜವೆ. ಇಂದು ಎಲ್ಲಾ ನೆರೆಹೊರೆಗಳವರೂ ತಮ್ಮವೇ ಆದ ಕ್ರೀಡಾಂಗಣಗಳನ್ನು ಟೆನ್ನಿಸ್, ವಾಲಿಬಾಲ್ ಮತ್ತು ಬಾಸ್ಕೆಟ್‌ಬಾಲ್ ಕೋರ್ಟುಗಳನ್ನು ನಿರ್ಮಿಸಿಕೊಳ್ಳುತ್ತವೆ ಮತ್ತು ಚಳಿಗಾಲದಲ್ಲಿ ಸ್ಪೀಡ್‌ಸ್ಕೇಟರ್ಸ್, ವಾಲಿಬಾಲ್ ಆಟಗಾರರು ಮತ್ತು ಫಿಗರ್ ಸ್ಕೇಟರ್ಸ್ ಇವರುಗಳಿಗೂ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತಾರೆ ಪ್ರಾದೇಶಿಕ ವಸತಿಯ ಸೂತ್ರಗಳಿಗೆ ಅನುಸಾರವಾಗಿ ಸಾಮೂಹಿಕ ಕ್ರೀಡಾ ಚಟುವಟಿಕೆಗಳು ಅದರಲ್ಲೂ ಮುಖ್ಯವಾಗಿ ಹೊಸ ಪಟ್ಟಣಗಳಲ್ಲಿ— ಸಲಾವತ್, ಸೆವೆರೊಡೊನೆತ್‌ಸ್ಕ್ ಮತ್ತು ದ್ಸೆರ್ಜಿನ್‌ಸ್ಕ್ ಮತ್ತು ಲೆನಿನ್‌ಗ್ರಾಡ್, ಜಪೊರೋಜಿ, ಬಕೂ, ರೀಗಾ ಮತ್ತು ತಾಲ್ಲಿನ್‌ಗಳಲ್ಲಿ ಕೂಡ ವ್ಯಾಪಕವಾಗಿ ಬೆಳೆದಿವೆ.

ಸೋವಿಯೆತ್ ರೈತರು ಕೂಡ, ತಮ್ಮ ಪುರುಸೊತ್ತಿನ ಕಾಲದ ಅಧಿಕ ಭಾಗವನ್ನು ಶಾರೀರಿಕ ವ್ಯಾಯಾಮಕ್ಕೂ ಕ್ರೀಡೆಗಳಿಗೂ ನೀಡುತ್ತಿದ್ದಾರೆ. ಇತ್ತೀಚೆಗೆ ಯಾರೊಸ್ಲಾವ್ಲ್ ಪ್ರದೇಶದ ನೆರೇದಾ ಗ್ರಾಮದಲ್ಲಿ ವೈಭವೇತ ಕ್ರೀಡಾಕೂಟವೊಂದು ನಡೆಯಿ

(ಒಂಭತ್ತನೇ ಪುಟ ನೋಡಿರಿ)

PUBLICATION NOTICE

Hearing Date 20—9—1971

In the High Court of Mysore at Bangalore

Civil Revision Petition No. 1063/1967

Sri Sode Vadiraja Mutt

Vs.

Pijina Shetty (Deceased)

To

L. R. No. 2) Jaya Shetty,
S/o Late Pijina Shetty,
Innanje (Village)
Udipi (Taluk) S. K.

Whereas the above named petitioner has preferred a revision Petition to the Court against the order dated 28—2—1967 passed by the Civil Judge, Udipi (S. K.) in Small Cause Suit No. 176/1966 and whereas the petitioner has sought to bring you on record as a legal representative of respondent Pijina Shetty who died on 3—10—1967.

You are hereby warned to appear in this Court in person or by a pleader duly instructed on 20th day of September 1971 at 11 O'Clock in the forenoon, to show cause against the application failing wherein, the said application will be heard and determined ex-parte.

Given under my hand and the seal of the Court this, 28th day of August 1971.

Sd/- (R. S. Chakrabhavi)
First Assistant Registrar,
High Court of Mysore,
Bangalor.

PUBLICATION NOTICE

Hearing Date 20—9—1971

In the High Court of Mysore at Bangalore

Civil Revision Petition No. 1062/67

Sri Sode Vadiraja Mutt

VS.

Ramannu Sheragara (Dead) and others

To

L. R. No 3) Chandayya Sheregara,
R/O Innanje Village,
Udipi Taluk, S. K.

Whereas the above named petitioner has preferred a revision Petition to the Court against the order dated 28—2—1967 passed by the Civil Judge, Udipi, South Kanara, in Small Cause Suit No 202 of 1966 and whereas the petitioner has sought to bring you on record as a legal representative of respondent—Ramannu Sheragara, who died on 11—2—1970.

You are hereby warned to appear in this Court in person or by a pleader duly instructed on the 20th day of September 1971 at 11 O'clock in the forenoon, to show cause against the application failing wherein, the said application will be heard and determined ex-parte.

Given under my hand the seal of the Court this 28th day of August 1971.

Sd/- (R. S. Chakrabhavi)
First Asst. Registrar,
High Court of Mysore,
Bangalore—1.

Kindly

Contribute generously

to the

NAVAYUGA

GOLDEN JUBILEE FUND 1971

ಬ್ರಹ್ಮಾನಂದರ ಬೇರು ಅತಳದಲ್ಲಿದೆ

ಆಂಧ್ರ ಪ್ರದೇಶದ ಮುಖ್ಯಮಂತ್ರಿ ಶ್ರೀ ಬ್ರಹ್ಮಾನಂದ ರೆಡ್ಡಿಯವರು ನಿಜಕ್ಕೂ ಅತಳಕ್ಕೆ ಬೇರುಬಿಟ್ಟ ಗೋಳೀಮರ. ಅವರ ಮೇಲೆ ಹಲವು ಬಗೆಯ ಬಿರುಗಾಳಿ ಬಲವಾಗಿಯೇ ಬೀಸಿತು. ಆದರೆ, ಅದವರ ತಲೆಯ ಮೇಲಿಂದಲೇ ಹಾದುಹೋಯ್ತು. ಪ್ರತ್ಯೇಕ ತೆಲಂಗಾಣ ರಾಜ್ಯದ ಬೇಡಿಕೆ—ಆ ಸಂಬಂಧ ನಡೆದ ಚಳುವಳಿ—ಇವು ಶ್ರೀ ರೆಡ್ಡಿಯವರನ್ನು ಉರುಳಿಸಿಯೇ ಬಿಟ್ಟವು ಎಂದು ಎಲ್ಲರೂ ನಂಬಿದ್ದರು. ಆದರೆ, ತನ್ನ ಡೊಂಬರಾಟದ ಚಾತುರ್ಯದಿಂದ ಅವರು ಸಮತೋಲ ತಪ್ಪಲಿಲ್ಲ. ಎಸ್‌ಜಿವೋಗಳ ಸಾಮೂಹಿಕ ಸಂಪು ಪಕ್ಷಗಟ್ಟಲೆ ನಡೆದಾಗ, ಸರಕಾರದವರ ಯಂತ್ರ ನಿಷ್ಕ್ರಿಯವಾಗಿ ನಿಂತಾಗ ರೆಡ್ಡಿ ಕಾಲು ಕೀಳಲು ರೆಡಿಯಾಗಿದ್ದರೆನ್ನಲಾಗಿತ್ತು. ಆದರೆ, ಯಾವ ಮಂತ್ರಿಯೂ ತೋರಿಸದ ದಿಟ್ಟತನದಿಂದ ಅವರು ಸಂಪುಗಾರರು ಶರಣು ಬರುವಂತೆ ಮಾಡಿದರು.

ಶ್ರೀ ಬ್ರಹ್ಮಾನಂದ ರೆಡ್ಡಿಯವರು ಇಷ್ಟೊಂದು ಆಳದಲ್ಲಿದ್ದಾರೆಂಬುದು ಪ್ರಧಾನಿ ಗಾಂಧಿಗೂ ತಿಳಿದುದು ಮೊನ್ನೆಮೊನ್ನೆಯೇ. ಇಲ್ಲವಾದರೆ, ಅವರ ಪ್ರಬಲ ವಿರೋಧವನ್ನು ಎದುರಿಸಿ ಶ್ರೀ ಡಿ. ಸಂಜೀವಯ್ಯನವರನ್ನು ಇ ಡಿಕೇಟಿನ ಅಧ್ಯಕ್ಷ ಪೀಠಕ್ಕೆ ಏರಿಸುತ್ತಿರಲಿಲ್ಲ. ಶ್ರೀ ರೆಡ್ಡಿಯವರಿಗೂ ಲತ್ತೆ ಕೊಟ್ಟು ಮನೆಗೆ ಕಳಿಸಬೇಕೆಂಬುದಕ್ಕಾಗಿಯೇ ಆಕೆ ಶ್ರೀ ಸಂಜೀವಯ್ಯನವರನ್ನು ಬಹಳ ಹತ್ತಿರಕ್ಕೆ ಕರೆದುಕೊಂಡರು. ಈ ಕೈಗುಳಿಗೆ ಯಿಂದ ಶ್ರೀ ಬ್ರಹ್ಮಾನಂದರು ನೀಲಕಂಠನೇ ಆದರು. ಅವರು ಜಪ್ಪೆನ್ನಲಿಲ್ಲ. ಮೇಲೆ ಶ್ರೀ ಸಂಜೀವಯ್ಯನವರಿದ್ದರೂ ಶ್ರೀ ರೆಡ್ಡಿಯವರಿಗೆ ಅವರಿಲ್ಲವೆಂದೇ ಲೆಕ್ಕ. ಶ್ರೀ ಸಂಜೀವಯ್ಯನವರೂ ಬಾಯ್ಮುಚ್ಚಿ ತೆಪ್ಪಗುಳಿದಿದ್ದಾರೆ. ಸಮಯ ಸಾಧಕತನದ ಗತ್ತುಗಾರಿಕೆಯೂ ಇರಬಹುದು.

ಡಾ| ಚೆನ್ನಾರೆಡ್ಡಿಯವರು ಪ್ರತ್ಯೇಕ ತೆಲಂಗಾಣದ ಪ್ರಬಲ ಸಮರ್ಥಕರು. ರೆಡ್ಡಿ-ರೆಡ್ಡಿಗಳನ್ನೇ ಹೋರಾಡುವಂತೆ ಮಾಡಿ ಹಳೆಯ ರೆಡ್ಡಿಯನ್ನು ಕಂಬಿಕೀಳಿಸುವುದು ಆಂಧ್ರದ ಜಾಯಮಾನ. ಗೋಪಾಲ ರೆಡ್ಡಿ—ಸಂಜೀವ ರೆಡ್ಡಿ—ಬ್ರಹ್ಮಾನಂದ ರೆಡ್ಡಿ........ಮತ್ತೀಗ ಚೆನ್ನಾರೆಡ್ಡಿ. ಪ್ರಧಾನಿ ಗಾಂಧಿಯವರೂ ಎಲ್ಲೆಲ್ಲಿಯ ಹಳೆಯ ಹುಲಿಗಳನ್ನು ಮನೆಗಟ್ಟಲು ಯೋಚಿಸಿದ್ದರು. ಆದರೆ, ಬಂಗ್ಲಾದೇಶದ ಸಮಸ್ಯೆಯೊಂದು ತಲೆಸವಾರಿ ಮಾಡಹೊರಟದ್ದರಿಂದ ಇತ್ತ ಹೆಚ್ಚು ಗಮನ ನೀಡಲು ಸಮಯ ದೊರಿಯುತ್ತಿಲ್ಲ. ಇಲ್ಲವಾದರೆ, ಮಹಾರಾಷ್ಟ್ರದ ಚವನನಿಷ್ಠ ವಿ. ಪಿ. ನಾಯಕರೂ ಆಂಧ್ರದ ಬ್ರಹ್ಮಾನಂದ ರೆಡ್ಡಿಯವರೂ ಮಧ್ಯಪ್ರದೇಶದ ಶ್ಯಾಮ ಚರಣ ಶುಕ್ಲರೂ ತಮ್ಮ ನಾಯಕತ್ವವನ್ನು ಕಳೆದುಕೊಳ್ಳಬೇಕಾಗುತಿತ್ತು.

ಆದರೆ, ಬ್ರಹ್ಮಾನಂದ ರೆಡ್ಡಿಯವರು ಆಂಧ್ರ ರಾಜನೀತಿಯ ಚಾಣಕ್ಯರಾಗಿದ್ದಾರೆ. ಅವರು ತಮ್ಮ ಹಿಂದೆ ತಮ್ಮದೇ ಆದ ದೊಡ್ಡ ಗುಂಪೊಂದನ್ನು ಕಟ್ಟಿ ಅದನ್ನು ಪರಿಪೋಷಿಸಿಕೊಂಡು ಬಂದಿದ್ದಾರೆ. ಅವರಿಗೆ ವಿರೋಧವಾಗಿ ಅವರ ವಿಧಾನ ಸಭೆ ಎಂದೂ ನಡೆದುಕೊಳ್ಳದಂತೆ ತುಂಬ ಎಚ್ಚರಿಕೆ ವಹಿಸಿದ್ದಾರೆ. ತೆಲಂಗಾಣ ಪ್ರಶ್ನೆಯ ಸಂಬಂಧದ ಮಾತುಕತೆಗೆಂದು ಶ್ರೀಮತಿ ಗಾಂಧಿಯವರು ಡಾ| ಚೆನ್ನಾರೆಡ್ಡಿ—ಡಾ| ಬ್ರಹ್ಮಾನಂದ ರೆಡ್ಡಿಗಳಿಗೆ ಪ್ರತಿ ಪ್ರತ್ಯೇಕವಾಗಿ ಕರೆಕಳಿಸುತ್ತಿದ್ದಾರೆ. ಇದರ ರಹಸ್ಯವೇನು? ಏಂತಾದರೂ ಮಾಡಿ ಶ್ರೀ ಬ್ರಹ್ಮಾನಂದರ ಆಂಧ್ರ ಪ್ರದೇಶದಲ್ಲಿ ಅವರದೊಂದೂ ನಡೆಯದಂತೆ ಮಾಡುವುದೆ? ಮುಂದಿನ ಚುನಾವಣೆಗಳ ಹೊತ್ತಿಗೆ ಏನಾದರೊಂದು ನಿರ್ಣಯವಾಗಬೇಕು.

ಆದರೆ, ಡಾ| ಚೆನ್ನಾರೆಡ್ಡಿಯವರು ಚರಿತ್ರಹೀನರು. ಆಂಧ್ರದಲ್ಲಿ ಮಂತ್ರಿಯಾಗಿದ್ದ ಚರಿತ್ರಹೀನತೆಯಿಂದಲೇ ಹೊರಬಂದವರು. ಮುಂದವರು ದಿಲ್ಲಿಗೆ ಹೋದರೂ ಚುನಾವಣೆಯಲ್ಲಿ ಭ್ರಷ್ಟಾಚಾರ ನಡೆಸಿದರೆಂದು ಅವರ ಆಯ್ಕೆ ರದ್ದಾಗಬೇಕೆ? ಇಂಥ ಮನುಷ್ಯನನ್ನು ಶ್ರೀಮತಿ ಗಾಂಧಿ ಎತ್ತಿ ಹಿಡಿದದ್ದರಿಂದಲೇ ಬ್ರಹ್ಮಾನಂದರ ಪಟ್ಟ ಪ್ರಶ್ನಾತೀತವಾಗಿಯೇ ಮುಂದುವರಿಯಬಹುದು. ಆದರೆ ದಿನದಿನಕ್ಕೂ ರಾಜ್ಯಕೀಯದಲ್ಲಿ ಚರಿತ್ರಹೀನತೆ ಹೆಚ್ಚುತ್ತ ಬರುತ್ತಲಿದೆ; ಅದಕ್ಕೇ ಪುರಸ್ಕಾರವೂ ದೊರೆಯುತ್ತಿದೆ. ಹಾಗಿರುವಾಗ, ಡಾ| ಚೆನ್ನಾರೆಡ್ಡಿಯವರ ಬ್ರೆಡ್ಡು ಬೆಣ್ಣೆಗೆ ಉರುಳಿದರೂ ಆಶ್ಚರ್ಯವಲ್ಲ. ಡಾ| ಬ್ರಹ್ಮಾನಂದರು ತನ್ನ ಸುತ್ತಮುತ್ತ ಕಟ್ಟಿರುವ ಏಳು ಸುತ್ತಿನ ಕೋಟೆಯನ್ನು ಮುರಿಯಲು ಡಾ| ಚೆನ್ನಾರೆಡ್ಡಿ ಸಮರ್ಥರೆ? ಅವರ ಕೈಗೆ ಶ್ರೀಮತಿ ಗಾಂಧಿ ಟ್ಯಾಂಕರ್ ನೀಡುವರೆ? ಪ್ರತ್ಯೇಕ ತೆಲಂಗಾಣವನ್ನು ಆಕೆ ಮನ್ನಿಸಿದ ಮಾತ್ರಕ್ಕೇ ಡಾ| ಚೆನ್ನಾರೆಡ್ಡಿಯವರಿಗೆ ವಜ್ರಕವಚ ತೊಡಿಸಿದಂತಾಗುತ್ತದೆ. ಆದರೆ, ಬರಿಯ ಕವಚದಿಂದಲೇ ಹೋರಾಡುವುದು ಸಾಧ್ಯವಾಗುವುದಿಲ್ಲ.

ಡಾ| ಬ್ರಹ್ಮಾನಂದ ರೆಡ್ಡಿಯವರಿಗೂ ಈ ರಹಸ್ಯ ತಿಳಿಯದಿಲ್ಲ. ಇದುದರಿಂದ ಮುಂದಿನ ದಿನಗಳಲ್ಲಿ ತನ್ನ ತ್ರಿವಿಕ್ರಮತನವನ್ನು ತೋರಿಸಲು ಅವರು ಸಿದ್ಧತೆ ಮಾಡುತಿದ್ದಾರೆ. ಅಧಿಕಾರದಿಂದ ಇಳಿಯಲು ಅವರು ತಯಾರಿಲ್ಲ; ಇದಕ್ಕಾಗಿ ಅ ವ ರು ವಿಶ್ವರೂಪವನ್ನು ಬೇ ಕಾ ದ ರೂ ಧರಿಸಬಲ್ಲರು. ಮುಂದಿನಾರು ತಿಂಗಳುಗಳಲ್ಲಿ ಬರಬಹುದಾದ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸಲು ಸಶಕ್ತರಾದರೆ, ಅವರ ಕೋಟೆಯನ್ನು ಮುರಿಯಲು ಮುತ್ತಿ ನಾಲ್ಕಾರು ವರ್ಷ ಅಸಾಧ್ಯ. ಶ್ರೀ ಸಂಜೀವ ರೆಡ್ಡಿಯವರ ಒಲವು ಆಂಧ್ರದಲ್ಲಿ ನೆಲೆಯೂರದ ನಾಣ್ಯವಾಗಿ ಹೋಗಿದೆ; ಅವರೀಗ ನಿವೃತ್ತ ಜೀವನವೆಂದರೂ ಸರಿಯೇ.

●●

ನಿಂಬೆ ಹಣ್ಣು ಸೌಂದರ್ಯವರ್ಧಕ

ನೀವು ಸುಂದರವಾಗಿರಲು ಹಾಗೂ ನಿಮ್ಮ ದೇಹಾಕೃತಿಯನ್ನು ಸುಧಾರಿಸಿಕೊಳ್ಳಲು ಅನಿವಾರ್ಯವಾದ ನಿಂಬೆಹಣ್ಣು ತುಂಬ ಉಪಯುಕ್ತವಾದುದು. ಬೇಸಿಗೆಯಲ್ಲಿ ಮುಖ್ಯವಾಗಿ ಮತ್ತು ಚಳಿಗಾಲದಲ್ಲಿ ಅಧಿಕವಾಗಿ ಈ ಹಣ್ಣಿನಿಂದ ಲಾಭ ಪಡೆಯಿರಿ.

ನಿಂಬೆಯಲ್ಲಿಯ ಆಮ್ಲತೆಯಿಂದ ತೊಂದರೆಯುಂಟಾಗುವುದಿಲ್ಲ. ನಿಮ್ಮ ಆರೋಗ್ಯ ಚೆನ್ನಾಗಿ ಬೆಳೆಯುತ್ತದೆ.

ನಿಂಬೆಯರಸವು ನಿಮ್ಮ ಪಚನ ಶಕ್ತಿಯನ್ನು ಸುಧಾರಿಸಿ, ಮಲಬದ್ಧತೆಯನ್ನು ತಡೆಯುತ್ತದೆ.

ಪ್ರತಿದಿನ ನಿಂಬೆಯ ರಸವನ್ನು ಸಮಾನ ಪ್ರಮಾಣದಲ್ಲಿ ತೆಗೆದುಕೊಳ್ಳುವುದರಿಂದ ನಿಮ್ಮ ಮುಖದ ಮೇಲಿನ ಮೊಡವೆಗಳು ಕಡಿಮೆಯಾಗಿ ಕಾಂತಿ ಹೆಚ್ಚುತ್ತದೆ.

ಪ್ರತಿದಿನ ಮುಂಜಾನೆ ಒಂದು ಗ್ಲಾಸು ಬಿಸಿ ನೀರಿನಲ್ಲಿ ಅರ್ಧನಿಂಬೆ ಹಣ್ಣಿನ ರಸವನ್ನು ಹಾಕಿ ಕುಡಿಯುವುದರಿಂದ ಕೊಬ್ಬು ಹೆಚ್ಚಾಗಿ ಬೆಳೆಯದೇ ನಿಮ್ಮ ದೇಹಾಕೃತಿ ಸುಂದರವಾಗುತ್ತದೆ.

ಒಂದು ಚಮಚೆ ಜೇನುತುಪ್ಪವನ್ನು ಅದಕ್ಕೆ ಸೇರಿಸಿ ಕುಡಿಯುವುದರಿಂದ ನಿಮ್ಮ ಧ್ವನಿ ಮಧುರವಾಗುತ್ತದೆ.

ನೀರಿನಲ್ಲಿ ಸ್ವಲ್ಪ ನಿಂಬೆಹಣ್ಣಿನ ರಸವನ್ನು ಹಾಕಿ ಮುಖ ತೊಳೆಯುವುದರಿಂದ ನಿಮ್ಮ ಮುಖ ಕಾಂತಿ ಹೆಚ್ಚುವುದು.

ನಿಂಬೆಹಣ್ಣಿನಲ್ಲಿಯ 'ಸಿ' ಜೀವಸತ್ವ ನಿಮ್ಮ ತಲೆಗೂದಲು ಮತ್ತು ಹಲ್ಲುಗಳಿಗೆ ಒಳ್ಳೆಯದು.

ನಿಂಬೆಹಣ್ಣಿನ ಸಿಪ್ಪೆಯನ್ನು ಒಣಗಿಸಿ ಪುಡಿಮಾಡಿ ಸಮ ಪ್ರಮಾಣದಲ್ಲಿ ಸೀಗೆಯೊಡನೆ ಸೇರಿಸಿ ಪಾತ್ರೆಯಲ್ಲಿ ಇಟ್ಟುಕೊಂಡು ತಲೆತೊಳೆದುಕೊಳ್ಳಲು ಉಪಯೋಗಿಸಬಹುದು. ಇದು ಉತ್ತಮ ಶಾಂಪೂ ಆಗುವುದು.

[—ಸ್ತ್ರೀ]

●●

ನೋಟೀಸು

ಪುತ್ತೂರು ಡಿವಿಜನ್ ಮಹಾಲಿ ಕ್ರಿವೆನ್ಮನ್ ಸಹಕಾರಿ ಸಂಘ ಲಿಮಿಟೆಡ್, ನಂಬ್ರ L 367, ಇಡ್ಕಿದು. ಕಬಕ ಪೋಸ್ಟು, ದ.ಕ.

ಈ ಸಂಘದ ವಾರ್ಷಿಕ ಮಹಾಸಭೆಯನ್ನು ತಾ. 8–9–71ನೇ ಬುಧವಾರ ಪೂರ್ವಾಹ್ನ ಘಂಟೆ 10–30ಕ್ಕೆ ದ. ಕ. ಸೆಂಟ್ರಲ್ ಬೇಂಕಿನ ಪುತ್ತೂರು ಶಾಖೆಯ ಆಫೀಸಿನಲ್ಲಿ ಜರಗಿಸುವುದಾಗಿ ನಿರ್ಣಯಿಸಿಯದೆ. ಎಲ್ಲಾ ಮೆಂಬರರೂ ಬರಬೇಕಾಗಿ ವಿನಂತಿ.

(Sd).-K· Venkappaya
ಅಧ್ಯಕ್ಷ

ಇಡ್ಕಿದು, ತಾ 6–8–1971.

ವಿಷಯಗಳು.

1) 1970–71ರ ವರದಿ ಓದುವುದು.
2) 1971–72ರ ಅಂದಾಜು ಬಜೇಟು ಮಂಜೂರಾತಿ.
3) 1966–67; 1967–68; 1968–69 ರ ಲಾಭಾಂಶ ವಿತರಣೆ.
4) ಅಧ್ಯಕ್ಷರ ಅನುಮತಿಯಿಂದ ಇತರ ವಿಷಯಗಳು.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 134 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ "ಜೀವನ-ನಿಧಿ"ಯಲ್ಲಿ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, ರೇಸ್ ಕೋರ್ಸ್ ರೋಡ್, ಬೆಂಗಳೂರು–1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಮಿತ ಕುಟುಂಬ ಯೋಜನೆಗೆ ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0–75 ಪೈಸೆ ಮಾತ್ರ.
ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

ಇತಿಹಾಸದ ಮೇಲೆ ಹೊಸ ಬೆಳಕು

ತೋಂಕಿನ್ ಖಾರಿಯಲ್ಲಿ ನಡೆದದ್ದೇನು?

'ನ್ಯೂಯಾರ್ಕ್ ಟೈಂಸ್' ಪತ್ರಿಕೆಯಲ್ಲಿ ಪೆಂಟಗನ್ನಿನ ರಹಸ್ಯ ವಿಷಯಗಳ ಪ್ರಕಟನೆಯನ್ನು ಸಂ. ರಾ. ಅಮೆರಿಕದ ನ್ಯಾಯಾಂಗ ಶಾಖೆಯು ತನ್ನ ದಬ್ಬಾಳಿಕೆಯ ಮೂಲಕ ನಿಲ್ಲಿಸಿದೆ. ಇಂಡೋಚೀಣದ ಬಗೆಗೆ ಹಿಂಬದಿಯಲ್ಲಿ ನಡೆದ ಅಮೆರಿಕನ್ ದುಸ್ಸಾಹಸದ ಕುತಂತ್ರಗಳನ್ನು ಈ ಪ್ರಕಟನೆಯು ಅಧಿಕೃತ ದಸ್ತೈವಜಿನ ಆಧಾರದ ಮೇಲೆ ಹೊರಗೆಡಹತೊಡಗಿತ್ತು. ವಾಷಿಂಗ್ಟನ್ನಿನ ಅಧಿಕೃತ ವಲಯಗಳು ಎಂತಹ ಭಾರಿ ಪ್ರಮಾಣದ ಸೃಷ್ಟನೆಯನ್ನು ನಡೆಸಿದುವೆಂಬುದನ್ನು ತಿಳಿದುಕೊಳ್ಳಲು ಸಂಪೂರ್ಣ ಆಧಾರಗಳನ್ನು ಈಗಾಗಲೇ ಬೆಳಕಿಗೆ ಬಂದಿರುವ ವಾಸ್ತವಾಂಶಗಳು ಒದಗಿಸಿಕೊಟ್ಟಿವೆಯಾದರೂ ನ್ಯೂಯಾರ್ಕ್ ಟೈಂಸ್ ಪತ್ರಿಕೆಯ ಸಂಪಾದಕರುಗಳಿಗೆ ಎಟುಕದ ಅನೇಕ ಪ್ರಶ್ನೆಗಳು ಇನ್ನೂ ಉಳಿದಿವೆ. ಪ್ರಾಯಶಃ ಅವರಿಗೆ ಇನ್ನು ಅವು ಲಭಿಸಲಾರವು ಕೂಡ.

ಅವುಗಳಲ್ಲಿ ಅತ್ಯಂತ ಮುಖ್ಯವಾದ ವಿಷಯವನ್ನು ಸ್ಥೂಲವಾಗಿ ಹೀಗೆ ಹೇಳಬಹುದು: 1964ರ ಅಗಸ್ಟ್ ತಿಂಗಳ ಆದಿಭಾಗದಲ್ಲಿ ತೋಂಕಿನ್ ಖಾರಿಯಲ್ಲಿ ವಸ್ತುತಃ ಸಂಭವಿಸಿದ್ದಾದರೂ ಏನು? 'ನ್ಯೂಯಾರ್ಕ್ ಟೈಂಸ್' ಪತ್ರಿಕೆಯಲ್ಲಿಯೂ ಇತರ ಅಮೆರಿಕನ್ ವಾರ್ತಾ ಪತ್ರಿಕೆಗಳಲ್ಲಿಯೂ ಪ್ರಕಟವಾದ ದಸ್ತೈವಜುಗಳಲ್ಲಿ 'ತೋಂಕಿನ್ ಘಟನೆಯ ದೃಶ್ಯವಿವರ' ಎಂಬ ಶಬ್ದಗಳು ಕಂಡುಬರುತ್ತವೆ. ಇಲ್ಲಿ ಸೂಚಿಸಲಾಗಿರುವ ದೃಶ್ಯಾವಳಿ ಯಾವುದು? ಅದನ್ನು ರಚಿಸಿದವರು ಯಾರು? ಅದನ್ನು ನೆರವೇರಿಸಿದವರು ಯಾರು? ಕುಪ್ರಸಿದ್ಧ 'ಯುದ್ಧವಿಸ್ತಾರ'ದ (ಎಸ್ಕಲೇಷನ್) ಸಿದ್ಧತೆಯ ಇತರ ಘಟ್ಟಗಳ ರಹಸ್ಯೋದ್ಘಾಟನೆಯ ಬಗೆಗೆ ಜಗತ್ತಿನ ಜನತೆಗಳು ನೀಡುವ ಮಹತ್ವಕ್ಕಿಂತಲೂ ಈ ಪ್ರಶ್ನೆಗಳಿಗೆ ನೀಡುವ ಮಹತ್ವವು ಕಡಮೆಯಾದುದೇನೂ ಅಲ್ಲ.

ಅಪರಾಧ

ಈ ವಿಷಯದ ಕ್ಲಿಷ್ಟಾಂಶ ಹೀಗಿದೆ:

1964ರ ಅಗಸ್ಟ್ ತಿಂಗಳ ಆದಿಭಾಗದಲ್ಲಿ ತೋಂಕಿನ್ ಖಾರಿಯಲ್ಲಿ ಸಹರಿ ನಡೆಸುತ್ತಿದ್ದುವೆಂದು ಹೇಳಲಾದ ಅಮೆರಿಕನ್ ಏಳನೆಯ ಪಡೆಯ ರಕ್ಷಣಾರಹಿತ ನೌಕೆಗಳ ಮೇಲೆ ವಿಯೆತ್ನಾಂ ಜನವಾದಿ ಗಣರಾಜ್ಯದ ನೌಕಾಪಡೆಯು ಇದ್ದಕ್ಕಿದ್ದಂತೆಯೇ "ಯಾವ ಕಾರಣವೂ ಇಲ್ಲದೆ ದಾಳಿ" ನಡೆಸಿತೆಂದು ಅಮೆರಿಕನ್ ಪ್ರಚಾರವು ಜಗತ್ತಿನಲ್ಲಿ ಎಲ್ಲ ಕಡೆಯೂ ಅಬ್ಬರಿಸತೊಡಗಿತು ಅಗಸ್ಟ್ ದಿನಾಂಕ 5ರಂದು ಅಮೆರಿಕನ್ ವಾಯು ಸೇನೆಯು ಜನವಾದಿ ವಿಯೆತ್ನಾಂ ಗಣರಾಜ್ಯದ ಭೂಭಾಗದ ಮೇಲೆ ತನ್ನ ಮೊದಲನೆಯ ಸಾಮುದಾಯಿಕ ಪ್ರಹಾರವನು ನೀಡಿತು. ಅದೇ ವೇಳೆಯಲ್ಲಿ ಅಮೆರಿಕನ್ 'ಕಾಂಗ್ರೆಸ್' ಶಾಸನ ಸಭೆಯು ಆಗ್ನೇಯ ಏಶಿಯದಲ್ಲಿ ಅಮೆರಿಕನ್ ವಾಯುಸೇನೆಗಳನ್ನು ತನ್ನ ಸ್ವಂತದ ನಿರ್ಧಾರದಂತೆ ಬಳಸಲು ಅಮೆರಿಕಾಧ್ಯಕ್ಷರಿಗೆ ಅನುಮತಿಯನ್ನು ನೀಡುವ ಗೊತ್ತುವಳಿಯನ್ನು ಸ್ವೀಕರಿಸಿತು.

ಅಮೆರಿಕದ ರಾಜಧಾನಿಯ ಅಧಿಕೃತ ಪ್ರಕಟನೆಯಲ್ಲಿ ನೀಡಲಾದ ವಿವರಣೆಯಲ್ಲಿ ಹೀಗೆ ಹೇಳಲಾಗಿದೆ. ಆದರೆ 1964ರ ಅಗಸ್ಟಿನಷ್ಟು ಹಿಂದೆಯೇ ಸಂ. ರಾ. ಅಮೆರಿಕದಲ್ಲಿಯೂ ಮತ್ತು ಅದರ ಗಡಿಗಳಿಂದಾಚೆಯೂ ಅನೇಕ ಜನರು ಅಮೆರಿಕನ್ ಪ್ರಚಾರದ ಬಗೆಗೆ ಮುಚ್ಚುಮರೆಯಿಲ್ಲದೆ ಸಂದೇಹವನ್ನು ಸೂಚಿಸಿದರು. 'ತೋಂಕಿನ್ ಘಟನೆ'ಯ ಬಗೆಗೆ ಮೊದಲನೆಯ ಸೆನೆಟ್ ತನಿಖೆಯು ಆತುರದಿಂದ ಆ ತುರ್ತು ಪರಿಸ್ಥಿತಿಯಲ್ಲಿಯೇ ನಡೆಯಿತು. ಈ ತನಿಖೆಯ ವರದಿಯನ್ನು ಸಂಪೂರ್ಣವಾಗಿ 'ಸೆನ್ಸರ್' ಇಲಾಖೆಯವರು ತಿದ್ದಿ ಪ್ರಕಟಿಸಿದರಾದರೂ ಅದು ರಾಜಧಾನಿಯ ಅಧಿಕೃತ ಪ್ರಕಟನೆಯನ್ನು ಗಂಭೀರವಾಗಿ ಅಲುಗಾಡಿಸಿಬಿಟ್ಟಿತು. 1968ರಲ್ಲಿ ಮತ್ತೊಂದು ಸೆನೇಟ್ ತನಿಖೆ ನಡೆಯಿತು. ಆದರಲ್ಲಿಯೂ ಸಹ 'ಸೆನ್ಸರ್' ಅಡೆತಡೆಗಳನ್ನು ದಾಟಿ ಅನೇಕ ವಾಸ್ತವಾಂಶಗಳು ಬೆಳಕಿಗೆ ಬಂದುವು. ಅವೂ ಅಮೆರಿಕನ್ ಸರಕಾರದ ಅಧಿಕೃತ ವರದಿಯನ್ನು ಶಿಥಿಲಗೊಳಿಸಿದುವು. ಕಡೆಯದಾಗಿ ಅದೇ ವರ್ಷ ಸೆನೇಟಿನ ತನಿಖೆಗಳ–ಭದ್ರವಾದ ಉಕ್ಕಿನ ಕವಚದ ಎಸ್ 16 ಕೋಣೆಯಲ್ಲಿಡಲಾಗಿದ್ದ–ಲಘು ನಿರೂಪಣೆಯಲ್ಲಿದ್ದ (20 ಪುಟಗಳ) ವಿಷಯಗಳು ಅನೇಕ ಅಮೆರಿಕನ್ ವಾರ್ತಾಪತ್ರಿಕೆಗಳ ಪುಟಗಳಲ್ಲಿ ಪ್ರಕಟವಾದುವು. ಮೇಲ್ಕಾಣಿಸಲಾದ ನಿರೂಪಣೆಯು ಕೆಲವು ತೀರ್ಮಾನಗಳನ್ನು ವರದಿಮಾಡುತ್ತ, ತೋಂಕಿನ್ ಖಾರಿಯ ವಿಷಯದಲ್ಲಿ ಅಮೆಕನ್ ಆಡಳಿತವು ಮೋಸದ ಅಪರಾಧವೆಸಗಿದೆಯೆಂಬುದನ್ನು ಅವು ವಸ್ತುತಃ ರುಜುವಾತು ಪಡಿಸಿವೆಯೆಂದು ಪತ್ರಿಕೆಗಳು ಬರೆದುವು.

ಎರಡು ಕಾರ್ಯಾಚರಣೆಗಳು

ಆದುದರಿಂದ, ಮೇಲ್ಕಾಣಿಸಲಾದ ಆಧಾರಾಂಶಗಳ ಮೇಲಿನಿಂದಲೂ, ಅಮೆರಿಕನ್ ಪತ್ರಿಕೆಗಳಲ್ಲಿ ಆ ಕಾಲದಲ್ಲಿ ಪ್ರಕಟವಾದ ಕೆಲವು ಇತರ ಆಧಾರಾಂಶಗಳ ಮೇಲಿನಿಂದಲೂ, 1964ರ ಅಗಸ್ಟ್ ತಿಂಗಳಿನ ಆದಿಭಾಗದಲ್ಲಿ ತೋಂಕಿನ್ ಖಾರಿಯಲ್ಲಿ ವಸ್ತುತಃ ಏನು ಸಂಭವಿಸಿತೆಂಬುದನ್ನು ಯಾರಾದರೂ ಸುಲಭವಾಗಿ ತೀರ್ಮಾನಿಸಬಹುದು.

"ತೋಂಕಿನ್ ಘಟನೆಯ" ಕಟ್ಟಕಡೆಯ ದೃಶ್ಯ ವಿವರಣೆ"ಯನ್ನು ಅಮೆರಿಕನ್ ರಾಜಧಾನಿಯ ವಲಯಗಳು ಹೆಚ್ಚು ಕಡಿಮೆ 1964ರ ಜುಲೈ ನಡುಭಾಗದಲ್ಲಿ ಅಂಗೀಕರಿಸಿದುವು. ಅನುಕೂಲತೆಗಾಗಿಯೂ ಕಾರ್ಯಾಚರಣೆಯ ರಹಸ್ಯವನ್ನು ಉಳಿಸಿಡುವುದಕ್ಕಾಗಿಯೂ ಅದನ್ನು ಎರಡು ಸ್ವತಂತ್ರ ಭಾಗಗಳಾಗಿ ವಿಂಗಡಿಸಲಾಯಿತು. ನ್ಯೂಯಾರ್ಕ್ ಟೈಂಸ್ ಪತ್ರಿಕೆಯು ಆ ಮೇಲೆ ವರದಿ ಮಾಡಿದ ಪ್ರಕಾರ, (1968ರ ಫೆಬ್ರವರಿ ದಿನಾಂಕ 28) ಮೊದಲನೆಯ ಭಾಗಕ್ಕೆ "ಡಿ ಸೋಟೊ" ಎಂಬ ಸಾಂಕೇತಿಕ ನಾಮವನ್ನು ನೀಡಲಾಗಿತ್ತು. ಅಮೆರಿಕನ್ ಯುದ್ಧನೌಕೆಗಳು ತೋಂಕಿನ್ ಖಾರಿಯಲ್ಲಿ ಜನವಾದಿ ವಿಯೆತ್ನಾಮಿನ ಪ್ರಾದೇಶಿಕ ಜಲರಾಶಿಗೆ ಮುತ್ತಿಗೆ ಹಾಕಬೇಕೆಂಬುದೇ ಅದರಲ್ಲಿ ಗೊತ್ತುಪಡಿಸಲಾಗಿದ್ದ ವಿಷಯ. ದಕ್ಷಿಣ ವಿಯೆತ್ನಾಮಿನ 'ಪಿ.ಟಿ' ದೋಣಿಗಳು ಪ್ರತೀಕಾರಾತ್ಮಕ ಚರ್ಯೆಯನ್ನು ಕೆರಳಿಸುವುದಕ್ಕಾಗಿಯೇ ಜನವಾದಿ ವಿಯೆತ್ನಾಂ ಗಣರಾಜ್ಯದ ಕರಾವಳಿಯ ಮೇಲೆ ದಾಳಿಯನ್ನು ನಡೆಸಬೇಕೆಂದೂ, ಪ್ರತೀಕಾರ ಚರ್ಯೆಯನ್ನು "ಉದ್ರೇಕ ಕಾರಣವಿಲ್ಲದೆಯೇ ನಡೆಸಲಾದ ದಾಳಿ"ಯೆಂದು ಹೇಳಬೇಕೆಂದೂ ಮತ್ತೊಂದು ಭಾಗದಲ್ಲಿ ಗೊತ್ತುಪಡಿಸಲಾಗಿತ್ತು. '34—ಎ' ಕಾರ್ಯಾಚರಣೆ ಯೋಜನೆಯೆಂದು ಹೆಸರಿಡಲಾಗಿದ್ದ ಈ ಎರಡನೆಯ ಭಾಗವನ್ನೂ ಏಕಕಾಲದಲ್ಲಿಯೇ ಮೊದಲನೆಯ"ಡಿ ಸೋಟೊ" ಕಾರ್ಯಾಚರಣೆಯ ಜತೆಗೆ ಅದೇ ಕ್ಷೇತ್ರದಲ್ಲಿಯೇ ನಡೆಸತಕ್ಕದೆಂತಲೂ ಗೊತ್ತುಪಡಿಸಲಾಗಿತ್ತು.

ಈ ಎರಡೂ ಕಾರ್ಯಾಚರಣೆಗಳಿಗೆ ಸಿದ್ಧತೆಗಳು ಕೆಲವು ಸಮಯದವರೆಗೆ ಏಕಕಾಲದದಲ್ಲಿಯೇ ಬೇರೆಬೇರೆಯಾಗಿ ನಡೆದುವು. ಜುಲೈ ತಿಂಗಳ ಕೊನೆಯಲ್ಲಿ ಮಾತ್ರವೇ "ಡಿ ಸೋಟೊ" ಗುಂಪಿನ ನೌಕಾಧಿಕಾರಿಗಳು, "34-ಎ" ಕಾರ್ಯಾಚರಣೆಗಾಗಿ ದಕ್ಷಿಣ ವಿಯೆತ್ನಾಮಿ ನೌಕೆಗಳನ್ನು ಸೈಗಾನಿನಲ್ಲಿ ಸಿದ್ಧಪಡಿಸುತ್ತಿದ್ದ ಅಮೆರಿಕನ್ ಸೈನಿಕ ಸಹಾಯಕ ವೃಂದದ ಕಾರ್ಯನಿರ್ವಾಹಕರೊಡನೆ ಸಂಪರ್ಕಪಡೆಯುವುದಕ್ಕೆ ಅವಕಾಶವನ್ನು ನೀಡಲಾಯಿತು.

ಇಂಡೋಚೀಣದ ಮೇಲೆ ವ್ಯಾಪಕ ಪ್ರಮಾಣದ ಅಮೆರಿಕನ್ ಮುತ್ತಿಗೆಯನ್ನು ನಡೆಸುವುದಕ್ಕೆ ಜುಲೈ ತಿಂಗಳ ಕೊನೆಯ ವೇಳೆಗೆ ಎಲ್ಲವೂ ಸಿದ್ಧವಾಗಿತ್ತು. ಅಮೆರಿಕದ 6ನೆಯ ನೌಕಾಪಡೆಯ ನೌಕೆಗಳು ದಾಳಿ ನಡೆಸಲು ಅನುಕೂಲಕರವಾದ ಸ್ಥಾನಕ್ಕೆ ಬಂದಿದ್ದುವು. ವಿಮಾನಗಳು ಕದನ ಸಿದ್ಧತೆಯಲ್ಲಿದ್ದುವು. ತಮ್ಮ ಸರಿಯಾದ ವಾಯುಮಾರ್ಗಗಳು ಮತ್ತು ಲಕ್ಷ್ಯ ಸ್ಥಾನಗಳು ವಿಮಾನ ಚಾಲಕರಿಗೆ ತಿಳಿದಿದ್ದುವು. ಇದಲ್ಲದೆ, ಯೋಚಿಸಲಾಗಿದ್ದ "ತೋಂಕಿನ್ ಖಾರಿಯ ಘಟನೆಯ" ತರುವಾಯ ಅಮೆರಿಕನ್ ಕಾಂಗ್ರೆಸ್ ಶಾಸನಸಭೆಯಲ್ಲಿ ಮಂಜೂರಾತಿಗಾಗಿ ಮುಂದಿಸಲಿದ್ದ ಗೊತ್ತುವಳಿಯ ಪಾಠದೊಂದಿಗೆ ಅಮೆರಿಕಾಧ್ಯಕ್ಷರು ಅನೇಕ ವಾರಗಳಷ್ಟು ಮುಂಚಿತವಾಗಿಯೇ ಸಿದ್ಧರಾಗಿದ್ದರು. (ಈ ವಾಸ್ತವಾಂಶವು 1965ರಷ್ಟು ಹಿಂದೆಯೇ ಬೆಳಕಿಗೆ ಬಂದಿತೆಂಬುದನ್ನು ಈ ಸಂದರ್ಭದಲ್ಲಿ ಇಲ್ಲಿ ಸೂಚಿಸಬಹುದಾಗಿದೆ. 'ಎಸ್ಕ್ವೈರ್' ಪತ್ರಿಕೆಯ 1965ರ ನವೆಂಬರ್ ತಿಂಗಳ ಸಂಚಿಕೆಯಲ್ಲಿ ಗಣ್ಯ ಲೇಖಕರೊಬ್ಬರು ಈ ವಿಷಯವನ್ನು ಮೊದಲು ವರದಿ ಮಾಡಿದರು.)

ಹೀಗಾಗಿ ಸೈನಿಕ 'ಯುದ್ಧವಿಸ್ತಾರ' ಕಾರ್ಯವು ಸಿದ್ಧವಾಗಿತ್ತು. ಕಾರ್ಯಾಚರಣೆ ನಡೆಸುವುದಕ್ಕೆ ಒಂದು ನೆಪ ಮಾತ್ರವಷ್ಟೇ ಅವರಿಗೆ ಬೇಕಾಗಿತ್ತು. ಆದರೆ ಜನವಾದೀ ವಿಯೆತ್ನಾಂ ಗಣರಾಜ್ಯವು ಉದ್ರೇಕಗೊಳ್ಳಲು ನಿರಾಕರಿಸಿತು. ಆ ವೇಳೆಯಲ್ಲಷ್ಟೇ 'ದೃಶ್ಯವಿವರಣೆ'ಯಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಲಾಯಿತು. ಜುಲೈ ತಿಂಗಳ 30ರಿಂದ 31ರ ವರೆಗಿನ ರಾತ್ರಿಯಲ್ಲಿ ದಕ್ಷಿಣ ವಿಯೆತ್ನಾಮಿನ ಕಡಲ್ಗಳ್ಳರು ಜನವಾದಿ ವಿಯೆತ್ನಾಂ ಗಣರಾಜ್ಯದ ಹೋನ್ ಮೆ ಮತ್ತು ಹೋನ್ ನಿಯೆಯು ದ್ವೀಪಗಳ ಮೇಲೆ ತಮ್ಮ ಮೊದಲನೆಯ ದಾಳಿಯನ್ನು ನಡೆಸಿದರು. ಎರಡು ದಿನಗಳ ತರುವಾಯ ಅಮೆರಿಕನ್ 'ಮ್ಯಾಡಕ್ಸ್' ಮತ್ತು "ಟರ್ನರ್ ಜಾಯ್" ವಿನಾಶಿಕೆ ನೌಕೆಗಳು ತೋಂಕಿನ್ ಖಾರಿಯನ್ನು ಪ್ರವೇಶಿಸಿದುವು ಮತ್ತು ಜನವಾದಿ ವಿಯೆತ್ನಾಂ ಗಣರಾಜ್ಯದ ಪ್ರಾದೇಶಿಕ ಜಲರಾಶಿಗೆ ಹೋನ್‌ಮೆ ಮತ್ತು ಹೋನ್ ನಿಯೆಯು ದ್ವೀಪಗಳ ಸಮೀಪದಲ್ಲಿ ಮುತ್ತಿಗೆ ಹಾಕಿದುವು. ದಕ್ಷಿಣ ವಿಯೆತ್ನಾಮಿನ ಟಾರ್ಪಿಡೊ ದೋಣಿಗಳು ಅವುಗಳಿಗಾಗಿ ಆ ವೇಳೆಗಾಗಲೇ ಅಲ್ಲಿ ಕಾಯುತ್ತಿದ್ದುವು.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ದೇಶಸೇವೆಯಲ್ಲಿ ರೈಲ್ವೆಯ ಪಾತ್ರ

ಲೇಖಕರು: ಶ್ರೀ ಬಿ.ಸಿ. ಗಂಗೂಲಿ

ಇತಿಹಾಸದ ಆರಂಭದಿಂದಲೂ ಸಾರಿಗೆ ವ್ಯವಸ್ಥೆ ನಾಗರಿಕತೆಯ ಕುರುಹಾಗಿದೆ. ಮಾನವಕೋಟಿಯ ಪ್ರಗತಿಗೆ ಸಾರಿಗೆ ವ್ಯವಸ್ಥೆಯ ವೇಗವೇ ಮಾಪಕವಾಗಿದೆ. ಈ ದಿಸೆಯಲ್ಲಿ ರೈಲ್ವೆಯ ಪಾತ್ರ ಮಹತ್ವಪೂರ್ಣವಾಗಿದೆ.

ಈಗ 118 ವರ್ಷಗಳ ಹಿಂದೆ 1853 ನೇ ಇಸವಿ ಎಪ್ರಿಲ್ 16ರಂದು ಬೊಂಬಾಯಿಯಿಂದ ಥಾನಾವರೆಗೆ 21ಮೈಲಿ ದೂರದ ರೈಲು ಸಂಚಾರ ಆರಂಭವಾಯಿತು. ಇಂದು ರೈಲ್ವೆ ಶಾಖೆ ದಿನಂಪ್ರತಿ 10,800 ರೈಲುಬಂಡಿಗಳನ್ನು ಓಡಿಸುತ್ತದೆ; 66ಲಕ್ಷ ಪ್ರಯಾಣಿಕರನ್ನು,6 ಲಕ್ಷ ಟನ್ ಸರಕನ್ನು ಸಾಗಿಸುತ್ತದೆ. ರೈಲ್ವೆಶಾಖೆ 1970—71 ರಲ್ಲಿ 125,700ದಶಲಕ್ಷ ಟನ್ ಸರಕನ್ನು ಸಾಗಿಸಿತು.

ರೈಲ್ವೆಶಾಖೆ 9436 ಉಗಿ ಎಂಜಿನ್, 1202 ಡೀಸೆಲ್ ಇಂಜಿನ್, 604 ವಿದ್ಯುತ್ ಎಂಜಿನ್, 3.87 ಲಕ್ಷ ಗೂಡ್ಸ್ ವ್ಯಾಗನ್, 24,500 ಪ್ರಯಾಣಿಕರ ಬಂಡಿಗಳು ಹಾಗೂ 1830 ವಿದ್ಯುತ್ ಬಂಡಿಗಳನ್ನು ಹೊಂದಿದೆ. ಬಂಡವಾಳ ಹೂಡಿಕೆ ಮತ್ತು ಉದ್ಯೋಗ ನೀಡಿಕೆಯಲ್ಲಿ ರೈಲ್ವೆ ಶಾಖೆ ದೇಶದಲ್ಲೇ ಅತ್ಯಂತ ಬೃಹತ್ತಾದ ಸರಕಾರಿ ಉದ್ಯಮವಾಗಿದೆ.

ಈ ವರ್ಷ ಮಾರ್ಚಿ ಮಾಸಾಂತ್ಯದಲ್ಲಿ ರೈಲ್ವೆಶಾಖೆ 3321 69 ಕೋಟಿ ರೂಪಾಯಿ ಬಂಡವಾಳ ಹೊಂದಿತ್ತು. ರೈಲ್ವೆಯು 1970—71ರಲ್ಲಿ ರಾಷ್ಟ್ರೀಯ ಬೊಕ್ಕಸಕ್ಕೆ 165,81 ಕೋಟಿ ರೂಪಾಯಿ ನೀಡಿತು. ರೈಲ್ವೆಯು 1970—71ರಲ್ಲಿ 1002 ಕೋಟಿ ರೂಪಾಯಿ ವರಮಾನ ಹೊಂದಿತ್ತು; ರೈಲ್ವೆಯ ಕಾರ್ಯ ನಿರ್ವಾಹಕ ವೆಚ್ಚ 860 ಕೋಟಿ ರೂಪಾಯಿಯಿದ್ದಿತು.

ರೈಲ್ವೆಯ ಆರ್ಥಿಕ ಸ್ಥಿತಿ

ರೈಲ್ವೆಯ ಹಣಕಾಸಿನ ಪರಿಸ್ಥಿತಿ ಉತ್ತಮ ಪಡಿಸಿಕೊಳ್ಳಲು ಸರಕುಗಳನ್ನು ಮನೆ ಬಾಗಿಲಿಗೆ ತಲುಪಿಸುವಿಕೆ, ಮಾರುಕಟ್ಟೆ ಹಾಗೂ ಮಾರಾಟ ಇತ್ಯಾದಿ ನವೀನ ಕ್ರಮಗಳಲ್ಲಿ ತೊಡಗಿದೆ. ಅಧಿಕ ಪ್ರಮಾಣದ ಸರಕು ಸಾಗಾಣಿಕೆ ವಲಯದಲ್ಲಿ ವಾಣಿಜ್ಯ ವಸ್ತು ಸಾಗಾಣಿಕೆ ಉತ್ತಮಪಡಿಸಲು ಶ್ರಮಿಸುತ್ತಿದೆ.

ರೈಲ್ವೆಶಾಖೆ ವಾಣಿಜ್ಯ ಹಾಗು ವ್ಯವಹಾರ ಸಂಸ್ಥೆಯಂತೆ ಕಾರ್ಯ ನಿರ್ವಹಿಸ ಬೇಕೆಂದು ಆಡಳಿತ ಸುಧಾರಣಾ ಆಯೋಗ ಶಿಫಾರಸು ಮಾಡಿದೆ. ರೈಲ್ವೆಶಾಖೆಗೆ ಕೆಲವು ಸಾಮಾಜಿಕ ಹೊಣೆಗಾರಿಕೆಗಳಿವೆ. ರೈಲ್ವೆ ಆಹಾರಧಾನ್ಯ, ಕಲ್ಲಿದ್ದಲು, ಮೇವು, ಲವಣ ಇತ್ಯಾದಿ 52ಕೋಟಿ ರೂಪಾಯಿ ಬೆಲೆಯ ಸರಕುಗಳನ್ನು ಸಾಗಾಣಿಕೆ ಮಾಡುತ್ತಿದೆ. ಉಪನಗರಗಳ ರೈಲು ಪ್ರಯಾಣಿಕರ ಸೇವೆಗಾಗಿ 59 ಕೋಟಿ ರೂಪಾಯಿ ವೆಚ್ಚ ಮಾಡುತ್ತಿದೆ. ರಫ್ತು ಮಾಡುವ ಸರಕುಗಳ ಮೇಲೆ 1 ಕೋಟಿ ರೂಪಾಯಿ ರಿಯಾಯಿತಿ ತೋರಿಸುತ್ತಿದೆ. ಲಾಭಕರವಲ್ಲದ ರೈಲು ಮಾರ್ಗಗಳ ನಿರ್ವಹಣೆಗಾಗಿ 8 ಕೋಟಿ ರೂಪಾಯಿ ವೆಚ್ಚ ಮಾಡುತ್ತಿದೆ. ಪ್ರಯಾಣಿಕರ ಸಂಚಾರದ ವರಮಾನ ವೆಚ್ಚವನ್ನು ಸರಿ ತೂಗಿಸುತ್ತಿಲ್ಲ. ಆದ್ದರಿಂದ ರೈಲ್ವೆಯು ಲಾಭಗಳಿಕೆಯ ವಾಣಿಜ್ಯ ಸಂಸ್ಥೆಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವಂತೆ ಮಾಡಬೇಕಾಗಿದೆ.

ರೈಲ್ವೆಯ ಕಾರ್ಯನಿರ್ವಹಣೆಯಲ್ಲಿ ಕಾರ್ಮಿಕರ ಪಾತ್ರ ಮಹತ್ವಪೂರ್ಣವಾಗಿದೆ. ಕಾರ್ಮಿಕರ ಹೊಣೆಗಾರಿಕೆಯಿಂದ ರೈಲ್ವೆಯ ಕಾರ್ಯಕ್ಷಮತೆ ಉತ್ತಮವಾಗುತ್ತದೆ. ರೈಲ್ವೆಯು ಜನರ ಅನುಕೂಲಕ್ಕೆ ದುಡಿಯ ಬೇಕಾದರೆ ಕಾರ್ಮಿಕ ಬಾಂಧವ್ಯದಲ್ಲಿ ಉತ್ಪಾದನೆ ಹಾಗೂ ಸಾಧನೆಗೆ ಅಗ್ರಸ್ಥಾನ ನೀಡ ಬೇಕಾಗುತ್ತದೆ.

ವಿವಿಧ ಕ್ರಮಗಳು

ರೈಲ್ವೆ ಶಾಖೆಯು 3000 ಕಿಲೋಮೀಟರ್ ದೂರದ ಮೀಟರ್‌ಗೇಜ್ ರೈಲುಮಾರ್ಗವನ್ನು ಬ್ರಾಡ್‌ಗೇಜ್‌ಗೆ ಪರಿವರ್ತಿಸಲು 15 ವರ್ಷಗಳ ಯೋಜನೆಯೊಂದನ್ನು ರೂಪಿಸಿದೆ. ನಮ್ಮ ದೇಶದ ರೈಲುಮಾರ್ಗಗಳಲ್ಲಿ 41 ಸಾವಿರ ಲೆವೆಲ್ ಕ್ರಾಸಿಂಗ್‌ಗಳಿವೆ. ಈ ಸ್ಥಳಗಳಲ್ಲಿ ಓವರ್ ಬ್ರಿಡ್ಜ್ ಅಥವಾ ಅಂಡರ್ ಬ್ರಿಡ್ಜ್ ಮಾರ್ಗಗಳನ್ನು ರಚಿಸಲು ಬೇಡಿಕೆಗಳಿವೆ. ಪ್ರತಿ ಬ್ರಿಡ್ಜ್ ರಚನೆಯ ಕಾರ್ಯದಲ್ಲಿ 6–9 ತಿಂಗಳ ಕಾಲ ಸುಮಾರು 400 ಮಂದಿಗೆ ಉದ್ಯೋಗ ದೊರಕುತ್ತದೆ.

ರಸ್ತೆ ಸಾರಿಗೆಯ ತೀವ್ರ ಬೆಳವಣಿಗೆಯಿಂದ ರೈಲ್ವೆ ಸಾಗಣಿಕೆ ಇಳಿಮುಖವಾಗಿದೆ. ಈ ಪರಿಸ್ಥಿತಿ ಸುಧಾರಿಸಿ ರೈಲ್ವೆ ಸಾಗಣಿಕೆ ಸುಧಾರಿಸುವಂತೆ ಮಾಡಲು ಅನೇಕ ನವೀನ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಭಾರತದ ಪೂರ್ವ ಹಾಗು ಈಶಾನ್ಯ ವಲಯದಲ್ಲಿ ಟಿಕೆಟ್ ರಹಿತ ಪ್ರಯಾಣ ಹೆಚ್ಚಾಗಿದೆ. ಇದರಿಂದ ವರ್ಷಂಪ್ರತಿ 25ಕೋಟಿ ರೂಪಾಯಿ ನಷ್ಟ ಸಂಭವಿಸುತ್ತಿದೆ. ಈ ವ್ಯಾಪಕ ಪಿಡುಗನ್ನು ಪರಿಹರಿಸಲು ಜನತಾ ಸಹಕಾರ ಅತ್ಯಗತ್ಯವಾಗಿದೆ.

ದೇಶದ ಶಿಸ್ತು ಹಾಗು ಕಾನೂನು ವಾಲಣೆಯಲ್ಲಿರುವ ಅಸಮರ್ಪಕ ಪರಿಸ್ಥಿತಿಯಿಂದ ರೈಲು ಶಾಖೆಯ ಸಾಧನೋಪಕರಣಗಳ ಕಳವು ಹೆಚ್ಚಾಗಿದೆ. ಇದು ಪೂರ್ವ ವಲಯದಲ್ಲಿ ಹೆಚ್ಚಾಗಿದೆ. ಇದರಿಂದ ರೈಲ್ವೆಗೆ ನಷ್ಟವಲ್ಲದೆ, ಪ್ರಯಾಣಿಕರಿಗೆ ಅನಾನುಕೂಲವಾಗಿದೆ. 1970–71ರಲ್ಲಿ ರೈಲ್ವೆಯು ಲ್ಲಾದ ಕಳ್ಳತನದ ಮೌಲ್ಯ 4.95ಕೋಟಿ ರೂಪಾಯಿಯಷ್ಟಿತ್ತು. ರೈಲ್ವೆ ನೀಡಿದ ಪರಿಹಾರ 14ಕೋಟಿ ರೂಪಾಯಿಯಾಗಿತ್ತು. ಹೆಚ್ಚುತ್ತಿರುವ ಕಳ್ಳತನದ ವಿರುದ್ಧ ರೈಲ್ವೆ ಶಾಖೆ ವಿವಿಧ ಕ್ರಮಗಳನ್ನು ಕೈಗೊಳ್ಳುತ್ತಿದೆ.

ರೈಲ್ವೆ ಉದ್ಯೋಗಿಗಳು 1962 ಹಾಗು 1965ರಲ್ಲಿ ಸಂಭವಿಸಿದ ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಕಾಲದಲ್ಲಿ ಅದ್ವಿತೀಯ ಸೇವೆ ಸಲ್ಲಿಸಿದರು. ಅವರು ಈ ಬೃಹತ್ ಸರ್ಕಾರಿ ಉದ್ಯಮದ ಆರ್ಥಿಕ ಪರಿಸ್ಥಿತಿ ಉತ್ತಮಪಡಿಸುವುದರಲ್ಲಿ ಮಹತ್ವಪೂರ್ಣ ಪಾತ್ರವಹಿಸುವರೆಂಬ ಭರವಸೆ ನನಗಿದೆ.

●●

ಭಾರಿ ಮೋಸ

ತೋಂಕಿನ್ ಘಟನೆಯ ಬಗೆಗೆ ಅಮೆರಿಕನ್ ಸೆನೇಟ್ ನಡೆಸಿದ ಎರಡು ತನಿಖೆಗಳ ತೀರ್ಮಾನಗಳೂ 'ಸೆನ್ಸರ್' ಕೈವಾಡ ದಾಟಿ ಬಂದಿದ್ದು, "ಡಿ ಸೋಟೊ" 'ಮತ್ತು'34-ಎ' ಗುಂಪುಗಳ ಮಧ್ಯೆ ಹುಸಿದಾಳಿಯನ್ನು ನಡೆಸಲಾಯಿತೆಂಬುದೂ, ಆಮೇಲೆ ಅದನ್ನು ಇಡೀ ಜಗತ್ತಿಗೆ ತಮ್ಮ ಮೇಲೆ 'ಉದ್ರೇಕ ಕಾರಣವಿಲ್ಲದೆಯೇ ನಡೆದ ದಾಳಿ'ಯೆಂದು ಜನವಾದಿ ವಿಯೆತ್ನಾಮಿನ ವಿರುದ್ಧವಾಗಿ ಆರೋಪಿಸಲಾಯಿತೆಂಬುದೂ ಅದರಿಂದ ಸ್ಪಷ್ಟವಾಗಿ ಸೂಚಿತವಾಗುತ್ತದೆ.

ಹೀಗಾಗಿ "ತೋಂಕಿನ್ ಘಟನೆ'ಯೆಂಬುದು ಯಾವುದೂ ನಡೆಯಲೇ ಇಲ್ಲ. ಅಮೆರಿಕನ್ ಸೇನೆಯ ಅಧಿಕಾರಿಗಳೂ ಮತ್ತು ಅಮೆರಿಕನ್ ರಾಜಧಾನಿ ವಲಯಗಳ 'ಗಿಡುಗಗಳೂ' (ಯುದ್ಧ ಕೋರರೂ) ಇಂಡೋ—ಚೀಣದ ಪರ್ಯಾಯ ದ್ವೀಪದ ಮೇಲೆ ಅಪರಿಮಿತ ಆಕ್ರಮಣವನ್ನು ನಡೆಸುವುದಕ್ಕಾಗಿ ಕುತಂತ್ರದ ಮೂಲಕ ನಡೆಸಿದ ಭಾರಿ ಪ್ರಮಾಣದ ಚಿತಾವಣಿ ಚರ್ಯೆ ಅದು.

ಆ ಘಟನೆಗಳ ರಹಸ್ಯೋದ್ದೇಶಗಳು ಏನಾಗಿದ್ದುವೆಂಬ ವಿಚಾರದಲ್ಲಿ ತಮಗೆ ಲೇಶಾಂಶದಷ್ಟೂ ಕಲ್ಪನೆಯೇ ಇಲ್ಲವೆಂದು ಈಗಿನ ಅಮೆರಿಕನ್ ಆಡಳಿತ ವಲಯಗಳವರು ಹೇಳಿಕೊಳ್ಳುತ್ತಾರೆ. ಪೆಂಟಗನ್ನಿನಿಂದ ಮಾಯವಾದ ಅತ್ಯಂತ ರಹಸ್ಯ ಪತ್ರಗಳನ್ನು ತಾವು ಓದಿಯೇ ಇರಲಿಲ್ಲವೆಂದು ಕೂಡ ಅವರು ವಾದಿಸುತ್ತಾರೆ. ಮೇಲ್ಕಾಣಿಸಲಾದ ವಾಸ್ತವಾಂಶಗಳ ಮುಂದೆ ಈ ವಾದಗಳೆಲ್ಲವೂ ಪೂರ್ಣತಃ ಬೂಟಾಟಿಕೆಯವೆಂದು ಕಂಡುಬರುತ್ತವೆ.

'ತೋಂಕಿನ್ ಘಟನೆ'ಯ ಕುರಿತು ಸಂತ್ಯಾಂಶವನ್ನು ತಿಳಿದುಕೊಳ್ಳಲು ಈ ದಸ್ತೈವಜುಗಳ ಪರಿಚಯವನ್ನು ಪಡೆಯಬೇಕಾದ ಆವಶ್ಯಕತೆಯೇನೂ ಇಲ್ಲ. 'ತೋಂಕಿನ್ ಘಟನೆ'ಯು ಆದಿಯಿಂದ ಅಂತ್ಯದವರೆಗೂ ಪೂರ್ತಿಯಾಗಿ ಭಾರಿ ಮೋಸವೆಂಬುದನ್ನು ಸೆನೇಟಿನ ಎರಡು ತನಿಖೆಗಳ ತೀರ್ಮಾನಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವರದಿಗಳು ನಿಸ್ಸಂದಿಗ್ಧವಾಗಿ ರುಜುವಾತು ಪಡಿಸುತ್ತವೆ.

—ಶ್ರೀ ವ್ಲದಿಮಿರ್ ಝುಕೋವ್

●●

ಶ್ರೀ ವೀರೇಂದ್ರ ಪಾಟೀಲರ ಜಿಲ್ಲಾ ಸಂದರ್ಶನ

ನಮ್ಮದು ಶ್ರೀಮಂತರ ಪಕ್ಷವೇ ಅಲ್ಲ; ಪ್ರತಿಗಾಮಿ ಮೊದಲೇ ಅಲ್ಲ

ಮೈಸೂರು ಪ್ರಾದೇಶಿಕ ಕಾಂಗ್ರೆಸ್‌ನ (ಸಂಸ್ಥಾ) ಅಧ್ಯಕ್ಷ, ರಾಜ್ಯದ ಮಾಜಿ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ತಮ್ಮ ದಕ್ಷಿಣ ಕನ್ನಡ ಜಿಲ್ಲಾ ಸಂಚಾರದ ವೇಳೆ ಕುಂದಾಪುರವನ್ನೂ ಸಂದರ್ಶಿಸಿದರು.

ಶ್ರೀ ಪಾಟೀಲರು ತಮ್ಮ ಪಕ್ಷದ ಬಗ್ಗೆ ಹೊರಿಸಲಾಗಿದ್ದ "ಪ್ರತಿಗಾಮಿ"ಯೆಂಬ ಹೆಸರನ್ನು ಅಲ್ಲಗಳೆದರು. "ನಮ್ಮದು ಶ್ರೀಮಂತರ ಪಕ್ಷವಲ್ಲ; ನಿಜವಾಗಿಯೂ ಶ್ರೀಮಂತರೆಲ್ಲ ತಮ್ಮ ಸಂಪತ್ತನ್ನು ಉಳಿಸಿಕೊಳ್ಳುವುದಕ್ಕಾಗಿ ಆಡಳಿತ ಕಾಂಗ್ರೆಸ್ಸಿನಲ್ಲಿ ನುಸುಳಿಕೊಂಡಿದ್ದಾರೆ." ಎಂದು ಅವರು ವಿವರಿಸಿದರು.

"ಮೊನ್ನೆಯ ಚುನಾವಣೆಗಳ ವೇಳೆ ಮೈತ್ರಿ ಕೂಟವನ್ನು ಸೇರಿಕೊಂಡಿದ್ದರೂ ಈಗ ತಮ್ಮ ಪಕ್ಷವು ಸ್ವತಂತ್ರವಾಗಿಯೇ ಚುನಾವಣೆಗಳಲ್ಲಿ ಸ್ಪರ್ಧಿಸುವುದು" ಎಂಬ ನಿಲುಮೆಯನ್ನವರು ಸುಸ್ಪಷ್ಟಪಡಿಸಿದರು.

ಆಡಳಿತ ಕಾಂಗ್ರೆಸ್ಸಿನ ನೀತಿಯನ್ನು ಖಂಡಿಸುತ್ತ 'ಅದು ಸಮಾಜವಾದದ ಜಪವನ್ನು ಸದಾ ಪಠಿಸುತ್ತಿದೆ; ಆದರೆ, ಶಾಸ್ತ್ರವೋದಿದವನು ಗಾಳ ಹಾಕುತ್ತಿರುವಂತೆ ಅದರ ಅನುಷ್ಠಾನಕ್ಕೆ ನೈಜವಾದ ವ್ಯಾವಹಾರಿಕ ಪ್ರಯತ್ನಗಳನ್ನು ಮಾಡಿದ್ದೆಂಬುದಿಲ್ಲ; ಮಾಡುವ ಯೋಚನೆಯೂ ಅದಕ್ಕಿಲ್ಲ'ವೆಂದರು.

'ದಾರಿದ್ರ್ಯವನ್ನು ಹಂಚುವುದರಿಂದ, ಶ್ರೀಮಂತರನ್ನು ಲೂಟಿ ಮಾಡುವುದರಿಂದ ಅಥವಾ ಅವರನ್ನು ಬಡವರಾಗಿ ಮಾಡುವುದರಿಂದ ಸಮಾಜವಾದ ಹೇಗೆ ಸಾಧ್ಯವಾದೀತು?' ಎಂದು ಪ್ರಶ್ನಿಸಿದ ಶ್ರೀ ಪಾಟೀಲರು 'ಶ್ರೀಮಂತರ ಸಂಪತ್ತೆಲ್ಲವನ್ನೂ ಕೂಡಿಸಿ ಪ್ರತಿ ಭಾರತೀಯನಿಗೆ ಹಂಚಿದರೆ ತಲಾ ಐದು ರೂಪಾಯಿಗಳಿಗಿಂತ ಹೆಚ್ಚು ದೊರೆಯದು' ಎಂದರು. "ಅಧಿಕ ಸಂಪತ್ತನ್ನು ಉತ್ಪಾದಿಸುವುದು ಮತ್ತು ಇದನ್ನು ಸಮಾನವಾಗಿ ಹಂಚುವುದು ಸಮಾಜವಾದ"ವೆಂದು ಸಮಾಜವಾದಕ್ಕೆ ವ್ಯಾಖ್ಯಾನ ಮಾಡಿದರು.

"ಬಡತನ ತೊಲಗಿಸಿರಿ" ಎಂದು ಘೋಷಿಸಿ ಅಧಿಕಾರಕ್ಕೆ ಬಂದವರು ಮರುದಿನದಲ್ಲೇ ಸೂ

(ಒಂಭತ್ತನೇ ಪುಟ ನೋಡಿರಿ)

Gram: VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಹಸುರು ಕ್ರಾಂತಿ ಯಶಸ್ವಿಯಾಗುತ್ತಿದೆ—

ಆಹಾರಧಾನ್ಯಗಳ ಉತ್ಪಾದನೆಯಲ್ಲಿ ಹೊಸ ಮಜಲು

ಭಾರತದ ಬೇಸಾಯರಂಗದ ಇತಿಹಾಸದಲ್ಲಿ ಪ್ರಪ್ರಥಮವಾಗಿ ಈ ವರ್ಷ ಭತ್ತ, ಗೋಧಿ, ಸಜ್ಜೆ, ಮೆಕ್ಕೆ ಜೋಳ ಮತ್ತು ರಾಗಿಯ ಬೆಳೆಯಲ್ಲಿ ಅತ್ಯಧಿಕ ಉತ್ಪಾದನೆಯಾಗಿ ಸರ್ವಕಾಲಿಕ ಹೊಸದಾಖಲೆ ಸ್ಥಾಪಿಸಲಾಗಿದೆ. ದೇಶದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸತತವಾಗಿ ಎರಡನೇ ವರ್ಷ ದಾಖಲೆ ಸ್ಥಾಪಿಸಲಾಗಿದೆ. 1970—71ರಲ್ಲಿ 107.81 ದಶಲಕ್ಷ ಟನ್ ಆಹಾರಧಾನ್ಯ ಉತ್ಪಾದನೆಯಾಗಿದೆ.

ಗೋಧಿ ಉತ್ಪಾದನೆ ಸತತವಾಗಿ ನಾಲ್ಕನೇ ವರ್ಷ ಹೊಸ ಮಜಲನ್ನು ಮುಟ್ಟಿದೆ. ಈ ವರ್ಷ ಗೋಧಿ ಉತ್ಪಾದನೆ 23.2 ದಶಲಕ್ಷ ಟನ್. ನಾಲ್ಕನೇ ಯೋಜನೆಯಲ್ಲಿ 1973–74ನೇ ಸಾಲಿನ ವೇಳೆಗೆ 24 ದಶಲಕ್ಷ ಟನ್ ಗೋಧಿ ಉತ್ಪಾದಿಸುವಂತೆ ಗುರಿ ನಿರ್ಧರಿಸಲಾಗಿತ್ತು. ಈ ಉತ್ಪಾದನೆ ಹಿಂದಿನ ವರ್ಷಕ್ಕಿಂತ ಶೇಕಡ 15.7ರಷ್ಟು ಹೆಚ್ಚಾಗಿದೆ.

1970–71ರಲ್ಲಿ ಭತ್ತದ ಬೆಳೆ ಹಿಂದಿನ ವರ್ಷಕ್ಕಿಂತ ಶೇಕಡ 5.7ರಷ್ಟು ಹೆಚ್ಚಾಗಿತ್ತು. ನಾಲ್ಕನೇ ಯೋಜನೆಯಲ್ಲಿ 1973–74ರ ವೇಳೆಗೆ 7 ದಶಲಕ್ಷ ಟನ್ ಸಜ್ಜೆ ಬೆಳೆ ತೆಗೆಯುವ ಗುರಿ ನಿರ್ಧರಿಸಿದ್ದರೂ, ಈ ವರ್ಷವೇ 8 ದಶಲಕ್ಷ ಟನ್ ಸಜ್ಜೆ ಬೆಳೆ ಬಂದಿದೆ. ಇದು ಗುರಿ ಮೀರಿದ ಸಾಧನೆಯಾಗಿದೆ.

ಆಹಾರಧಾನ್ಯಗಳ ಉತ್ಪಾದನೆಯು 1970—71ರಲ್ಲಿ 8.31 ದಶಲಕ್ಷ ಟನ್ ಹೆಚ್ಚಾಗಿತ್ತು. ಅಂದರೆ ಹಿಂದಿನ ವಾರ್ಷಿಕ ಸಾಲಿನ ಉತ್ಪಾದನೆಗಿಂತ ಶೇಕಡ 8.4ರಷ್ಟು ಹೆಚ್ಚಾಗಿತ್ತು. ಈ ಉತ್ಪಾದನಾ ಏರಿಕೆಗೆ ಅಧಿಕ ಪ್ರಮಾಣದ ಕಾಳುಗಳ ಬೆಳೆಯೇ ಕಾರಣ ರಾಜಾಸ್ಥಾನ, ಉತ್ತರಪ್ರದೇಶ, ಗುಜರಾತ್, ಮಧ್ಯಪ್ರದೇಶ, ತಮಿಳುನಾಡು, ಬಿಹಾರ ಮತ್ತು ಹರಿಯಾನ ರಾಜ್ಯಗಳಲ್ಲಿ ಆಹಾರಧಾನ್ಯ ಉತ್ಪಾದನೆಯ ಏರಿಕೆ ಹೊಸ ದಾಖಲೆಗೆ ಕಾರಣವಾಯಿತು.

1970—71ರಲ್ಲಿ ಭತ್ತ, ಗೋಧಿ, ಸಜ್ಜೆ, ಮೆಕ್ಕೆಜೋಳ ಮತ್ತು ರಾಗಿ ಬೆಳೆಗಳ ಅಖಿಲ ಭಾರತ ಮಟ್ಟದ ಉತ್ಪಾದನೆ ಹಾಗು ಎಕರೆವಾರು ಉತ್ಪಾದನೆಯಲ್ಲಿ ಸರ್ವಕಾಲಿಕ ದಾಖಲೆ ಸ್ಥಾಪಿಸಲಾಗಿದೆ.

ಕಳೆದ ವರ್ಷ ಭತ್ತದ ಬೆಳೆಯಲ್ಲಿ ಹೊಸ ದಾಖಲೆಯಾಯಿತು ಭತ್ತದ ಉತ್ಪಾದನಾ ಪ್ರಮಾಣ 42.45 ದಶಲಕ್ಷ ಟನ್‌ಗಳಾಗಿತ್ತು. ಇದು 1960—70ರ ಉತ್ಪಾದನೆಗಿಂತ ಶೇಕಡ 5ರಷ್ಟು ಹೆಚ್ಚಾಗಿತ್ತು. ತಮಿಳುನಾಡು, ಬಿಹಾರ, ಮಧ್ಯಪ್ರದೇಶ, ಮಹಾರಾಷ್ಟ್ರ, ಉತ್ತರಪ್ರದೇಶ, ಗುಜರಾತ್ ಮತ್ತು ಪಂಜಾಬ್ ರಾಜ್ಯಗಳಲ್ಲಿ ಭತ್ತದ ಎಕರೆವಾರು ಉತ್ಪಾದನಾ ಪ್ರಮಾಣದಲ್ಲಿ ಏರಿಕೆಯಾಯಿತು.

1970–71ರಲ್ಲಿ ಗೋಧಿ ಉತ್ಪಾದನೆಯ ಏರಿಕೆಗೆ ಉತ್ತರಪ್ರದೇಶ, ರಾಜಾಸ್ಥಾನ, ಗುಜರಾತ್ ರಾಜ್ಯಗಳ ಕಾಣಿಕೆ ಅಪಾರ. ಈ ಸಾಲಿನಲ್ಲಿ ಹೆಕ್ಟೇರಿಗೆ 1299 ಕಿಲೋಗ್ರಾಂ ಗೋಧಿ ಬೆಳೆದು ದಾಖಲೆ ಸ್ಥಾಪಿಸಲಾಯಿತು.

ಕಳೆದ ವಾರ್ಷಿಕ ಸಾಲಿನಲ್ಲಿ 8 ದಶಲಕ್ಷ ಟನ್ ಸಜ್ಜೆ ಬೆಳೆ ತೆಗೆದು 1969–70ರ ಸಾಲಿಗಿಂತ ಶೇಕಡ 50ರಷ್ಟು ಉತ್ಪಾದನೆ ಮಾಡಲಾಗಿದೆ. ಈ ಬೆಳೆಯ ಏರಿಕೆಗೆ ರಾಜಾಸ್ಥಾನದ ಕಾಣಿಕೆ ಮಹತ್ವಪೂರ್ಣ. ಮೈಸೂರು, ಗುಜರಾತ್, ಹರಿಯಾನ, ಉತ್ತರಪ್ರದೇಶ, ಮಹಾರಾಷ್ಟ್ರ, ಪಂಜಾಬ್ ಮತ್ತು ತಮಿಳುನಾಡಿನಲ್ಲಿ ದಾಖಲೆ ಸ್ಥಾಪಿಸುವ ಪ್ರಮಾಣದಲ್ಲಿ ಸಜ್ಜೆ ಬೆಳೆ ತೆಗೆಯಲಾಗಿದೆ.

1970—71 ರಲ್ಲಿ 7.41 ದಶಲಕ್ಷ ಟನ್ ಮೆಕ್ಕೆಜೋಳದ ಬೆಳೆ ತೆಗೆಯಲಾಯಿತು. ಇದು 1969–70 ರಲ್ಲಿ ತೆಗೆದ ಬೆಳೆಗಿಂತ ಶೇಕಡ 30ರಷ್ಟು ಹೆಚ್ಚಾಗಿತ್ತು. ಮೆಕ್ಕೆಜೋಳದ ಅಧಿಕ ಬೆಳೆಗೆ ಮೈಸೂರು, ಗುಜರಾತ್, ಬಿಹಾರ, ಉತ್ತರಪ್ರದೇಶ, ರಾಜಾಸ್ಥಾನ, ಮತ್ತು ಮಧ್ಯಪ್ರದೇಶ ರಾಜ್ಯಗಳೇ ಕಾರಣ.

ಕಳೆದ ವರ್ಷ ಜೋಳದ ಬೆಳೆಯ ಪ್ರಮಾಣ 8.19 ದಶಲಕ್ಷ ಟನ್. ಇದು 1969—70ರಲ್ಲಿ ತೆಗೆದ 9.72 ದಶಲಕ್ಷ ಟನ್ ಬೆಳೆಗಿಂತ ಕಡಿಮೆ ಮಟ್ಟದಲ್ಲಿತ್ತು. ಜೋಳದ ಬೆಳೆ ಇಳಿಮುಖವಾಗಲು ಮಹಾರಾಷ್ಟ್ರ, ಆಂಧ್ರಪ್ರದೇಶ, ಮಧ್ಯಪ್ರದೇಶ ಮತ್ತು ತಮಿಳುನಾಡಿನ ಪ್ರತಿಕೂಲ ಹವಾಮಾನವೇ ಕಾರಣವಾಯಿತು.

ರಾಗಿ ಬೆಳೆ ಕಳೆದ ವರ್ಷ 2 20 ದಶಲಕ್ಷ ಟನ್‌ಗಳಷ್ಟಿತ್ತು. 1969—70 ರಲ್ಲಿ 2.12 ದಶಲಕ್ಷ ಟನ್ ರಾಗಿ ಉತ್ಪಾದಿಸಲಾಗಿತ್ತು. ಈ ಏರಿಕೆಗೆ ಮೈಸೂರು, ತಮಿಳುನಾಡು, ಬಿಹಾರ, ಮಹಾರಾಷ್ಟ್ರ ರಾಜ್ಯಗಳೇ ಕಾರಣ.

1970—71ರಲ್ಲಿ 2.87 ದಶಲಕ್ಷ ಟನ್ ಬಾರ್ಲಿ ಬೆಳೆ ತೆಗೆಯಲಾಯಿತು. 1969—70ರಲ್ಲಿ 2.72 ದಶಲಕ್ಷ ಟನ್ ಬೆಳೆ ಬಂದಿತ್ತು. ಈ ಏರಿಕೆಗೆ ರಾಜಾಸ್ಥಾನ, ಬಿಹಾರ ರಾಜ್ಯಗಳೇ ಕಾರಣ.

● ●

ವಯಸ್ಸು ಮೀರಿದರೂ ಚಿಂತೆಯಿಲ್ಲ

ಪಂಢರಾಪುರದ ಗೋಪಾಲರಾವ್ ಉತ್ಪಳ್‌ರಿಗೆ 50ರವಯಸ್ಸು. ಈ ಇಳಿ ವಯಸ್ಸಿನಲ್ಲೂ ಸುಖ ಜೀವನದ ಮಾರ್ಗ ಕಂಡುಕೊಳ್ಳಬಹುದು. ಸುಧಾರಣೆಗೆ ವಯಸ್ಸು ಮೀರಿದ್ದರೂ ತಮ್ಮ ಅನುಭವದಿಂದ ಇತರರಿಗೆ ಪ್ರಯೋಜನ ಎಂಬುದು ಅವರ ಅಭಿಪ್ರಾಯ.

ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯಲ್ಲಿರುವ ಪಂಢರಾಪುರದ ಗೋಪಾಲರಾವ್ ಉತ್ಪಳ್ ಅಲ್ಲಿನ ವಿಠೋಬಾ ದೇವಾಲಯದ ಅರ್ಚಕರು. ಈ ವೃತ್ತಿ ಅವರ ವಂಶಪರಂಪರೆ. ಅರ್ಚಕ ವೃತ್ತಿಯ ಜೊತೆಗೆ ಊರಿನಲ್ಲೂ ಕುಟುಂಬಯೋಜನಾ ಪ್ರಚಾರ ಕಾರ್ಯವನ್ನು ಅವರು ಕೈಗೊಂಡಿದ್ದಾರೆ. ಪಂಢರಾಪುರದ ಮುನಿಸಿಪಾಲಿಟಿಯ ಸಂಚಾಲಕರಾಗಿಯೂ ಅವರು ಸೇವೆ ಸಲ್ಲಿಸುತ್ತಿದ್ದಾರೆ. ದೇವಾಲಯದ ಅರ್ಚಕರು ಕುಟುಂಬ ಯೋಜನಾ ಕಾರ್ಯನಿರ್ವಹಿಸುತ್ತಿರುವುದು ಕೆಲವರಿಗೆ ಆಶ್ಚರ್ಯವಾಗಿ ಕಾಣಬಹುದು ಆದರೆ ಅವರ ಸ್ವೈಜಕಥೆಯನ್ನು ತಿಳಿಸಿದರೆ ಆಶ್ಚರ್ಯ ಮಾಯವಾಗುವುದು.

ಗೋಪಾಲರಾವ್ ತನ್ನ ಜೀವನವನ್ನು ಸುಧಾರಿಸಲು ಬಹಳಷ್ಟು ಕಷ್ಟಪಟ್ಟಿದ್ದಾರೆ. ತನ್ನ ಯೌವನದಲ್ಲಿ ಅವರು ತಮ್ಮ ಜವಾಬ್ದಾರಿಯನ್ನು ಮರೆತಿದ್ದರು. ಸಣ್ಣ ಕುಟುಂಬದಿಂದ ಲಭಿಸುವ ಸೌಲಭ್ಯಗಳ ಬಗ್ಗೆ ಅವರು ಆಗ ತಿಳಿದಿರಲಿಲ್ಲ. ರೈಲ್ವೆ ಇಲಾಖೆಯಲ್ಲಿ ಗುಮಾಸ್ತರಾಗಿ ಕೆಲಸಕ್ಕೆ ಸೇರಿದ್ದರು.

ಗೋಪಾಲರಾವ್ ಕುಟುಂಬ ದಿನೇ ದಿನೇ ಬೆಳೆಯಿತು. ಅವರ ಆರೋಗ್ಯವೂ ಅಷ್ಟೇನೂ ಸುಧಾರಿಸಿರಲಿಲ್ಲ. ತಮ್ಮ ಮಕ್ಕಳ ಶಿಕ್ಷಣಕ್ಕೆ ತಾವೇನೂ ಹೆಚ್ಚಿಗೆ ಸಹಾಯ ಮಾಡಲಾರರೆಂಬ ಕೊರತೆ ಅವರಲ್ಲಿ ಬಂದಿತು. ಆಗ ಮಾತ್ರ ತಾವು ಮಾಡಿದ ತಪ್ಪು ಅವರಿಗೆ ಅರಿವಾಯಿತು. ಕುಟುಂಬವನ್ನು ನಿಯಂತ್ರಿಸಲು ತಮಗೆ ಕಾಲವಿಂಚಿದೆಯಾದರೂ ತಮ್ಮ ಅನುಭವವನ್ನು ಇತರರಿಗೆ ತಿಳಿಸಲು ಅವರು ಆಶಿಸಿದರು. ಇದೇ ಉದ್ದೇಶದಿಂದ ಅವರು ತಮ್ಮ ಊರಿನ ಮುನಿಸಿಪಾಲಿಟಿ ಆಸ್ಪತ್ರೆಯ ಕುಟುಂಬಯೋಜನಾ ಕಾರ್ಯಕರ್ತರಾಗಿ ಕೆಲಸಕ್ಕೆ ಸೇರಿಕೊಂಡರು. ರೈಲ್ವೆ ಇಲಾಖೆಯ ಹುದ್ದೆಗೆ ರಾಜೀನಾಮೆ ನೀಡಿದರು

ಕುಟುಂಬವನ್ನು ನಿಯಂತ್ರಿಸಬೇಕು. ಪ್ರಾಚೀನರೂ ಈ ಬಗ್ಗೆ ತಿಳಿಸಿದ್ದರು. ಕುಟುಂಬದ ಗಾತ್ರ ಮತ್ತು ಗುಣಮಟ್ಟ ಎರಡೂ ತುಲನಾತ್ಮಕವಾಗಿರಬೇಕೆಂಬುದು ಅವರ ಅಭಿಪ್ರಾಯ. ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡುವುದರಲ್ಲಿ ಗೋಪಾಲರಾವ್ ನಿಪುಣರು. ತಮ್ಮ ಭಾಷಣಗಳಲ್ಲಿ ಕುಟುಂಬಯೋಜನೆ ಬಗ್ಗೆ ಹೇಳುವಾಗ ಪುರಾಣಗಳಲ್ಲಿ ಈ ಬಗ್ಗೆ ಇರುವ ಹೇಳಿಕೆಗಳನ್ನು ತಿಳಿಸುತ್ತಾರೆ. ತಾವು ಕುಟುಂಬ ಯೋಜನೆಯನ್ನು ಅನುಸರಿಸುವುದಲ್ಲದೆ ಇತರರಿಗೂ ಮಾರ್ಗದರ್ಶನ ನೀಡಬೇಕೆಂದೂ ಗೋಪಾಲರಾವ್ ಒತ್ತಿಹೇಳುತ್ತಾರೆ.

ಕಳೆದ 5 ವರ್ಷಗಳಿಂದ ಗೋಪಾಲರಾವ್ ಅನೇಕ ಮಂದಿಯನ್ನು ಕುಟುಂಬ ಯೋಜನೆಯನ್ನು ಅನುಸರಿಸಲು ಉತ್ತೇಜಿಸಿ ಯಶಸ್ವಿಯಾಗಿದ್ದಾರೆ.

●

ನವಯುಗದ ಹೊಸ ವರ್ಷ

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 50ನೆಯ ವರ್ಷ ಮುಗಿದು ಸಪ್ಟಂಬರ ತಿಂಗಳಿನಿಂದ 51ನೆಯ ಹೊಸ ವರ್ಷಾರಂಭವಾಗಿದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಚಂದಾ ಹಣವನ್ನು ಮನಿಯಾರ್ಡರು ಮೂಲಕ ಯಾ ಇಂಡಿಯನ್ ಪೋಸ್ಟಲ್ ಆರ್ಡರು ಮೂಲಕ ಕಳುಹಿಸಬಹುದು. ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ ಉಡುಪಿ ಲೋಕಲ್ ಅಫೀಸಿನ 283/1ನೇ "ನವಯುಗ"ದ ಖಾತೆಗೆ ಪಾವತಿ ಮಾಡಬಹುದು. ಹಾಗೆ ಪಾವತಿ ಮಾಡುವಾಗ ತಮ್ಮ ಚಂದಾ ನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ವಿ. ಪಿ. ಮಾಡಿದರೆ ರೂ 1–50ರಷ್ಟು ಹೆಚ್ಚು ವೆಚ್ಚ ಬರುವುದರಿಂದ ಚಂದಾದಾರರು ದಯಮಾಡಿ ಮುಂದಾಗಿ ಹಣ ಪಾವತಿಮಾಡಬೇಕಾಗಿ ವಿಜ್ಞಾಪಿಸುತ್ತೇವೆ.

ಅಂತಾ ಸಪ್ಟಂಬರ ಪ್ರಥಮ ವಾರದೊಳಗಾದರೂ ಹಣ ಪಾವತಿಯಾಗದಿದ್ದರೆ ವಿ. ಪಿ. ಮೂಲಕ ತಮ್ಮ ಸಮ್ಮತಿಯೆಂದು ಭಾವಿಸಿ ಕ್ರಮಶಃ ಪತ್ರಿಕೆಯನ್ನು ಚಂದಾ ಹಣಕ್ಕೆ ವಿ. ಪಿ. ಮಾಡುತ್ತೇವೆ.

ಮೆನೇಜರ್

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೇಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೇಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

READ & ADVERTISE IN NAVAYUGA WEEKLY

ಆರೋಗ್ಯವೆ ಮುಖ್ಯ ಲಕ್ಷ್ಯ

(ನಾಲ್ಕನೇ ಪುಟದಿಂದ)

ತು. ಸ್ವತಃ ಸಾಮೂಹಿಕ ಕೃಷಿಕರೇ ಕಟ್ಟಿದ್ದ ಕ್ರೀಡಾಂಗಣದಲ್ಲಿ 1,500ಕ್ಕೂ ಹೆಚ್ಚು ಆಟಗಾರರು ಸೇರಿದ್ದರು. ಮಾಮೂಲು ಸ್ಪರ್ಧೆ ಮತ್ತು ಪಂದ್ಯಾಟಗಳೇ ಅಲ್ಲದೆ ಮಹಿಳೆಯರ ಆರೋಗ್ಯ ರಿಲೇ ಹಾಗೂ ಶ್ರಮಿಕಾಗ್ರಣಿಗಳ ಅಸಾಧಾರಣ ಸ್ಪರ್ಧೆಗಳೂ ನಡೆದುವು. ಗೆದ್ದವರಿಗೆ ನೀಡಿದ ಬಹುಮಾನಗಳು—ಸಮೋವಾರ್!

1957ರಲ್ಲಿ ಹೊಸ ಟ್ಬಿಲೀಸಿ ಕಡಲ ಕರೆಯಲ್ಲಿ ಸ್ಥಾಪಿಸಲಾಗಿರುವ ಜಾರ್ಜಿಯನ್ ರಾಜ್ಯ ಕೃಷಿಕ್ಷೇತ್ರ ಪರ್ಕೀತ್ಲಿಯಲ್ಲಿ ಒಂದು ಅತ್ಯಂತ ಉತ್ಕೃಷ್ಟವಾದ ಕ್ರೀಡಾನೆಲೆ ಇದೆ. ಆಟದ ಮನೆ, ಜಿವರ್, ಈಜುವ ಕೊಳ, ಮತ್ತು 5,000 ಜನರು ಕೂರಬಹುದಾದಷ್ಟು ಫುಟ್‌ಬಾಲ್ ಪಿಚ್ ಮತ್ತು ಟ್ರ್ಯಾಕ್ ಅಂಡ್ ಫೀಲ್ಡ್ ವಿಭಾಗಗಳುಳ್ಳ ಒಂದು ವಿಸ್ತೃತ ಕ್ರೀಡಾಂಗಣ ಇದರಲ್ಲಿವೆ.

ಸ್ವಲ್ಪದರಲ್ಲೇ ಹೇಳುವುದಾದರೆ, ಕ್ರೀಡೆಗಳಿಲ್ಲದೆ ಸೋವಿಯೆತ್ ಜನರ ಜೀವನವನ್ನು ಕಲ್ಪಿಸುವುದು ಕೂಡ ಕಷ್ಟ. ಸಮಾಜದ ಮತ್ತು ಅದರ ಉತ್ಪಾದಕ ಶಕ್ತಿಗಳ ಅಭಿವೃದ್ಧಿಯಲ್ಲಿ ಶಾರೀರಿಕ ಶಿಕ್ಷಣ ಮತ್ತು ಕ್ರೀಡೆಗಳು ಇಂದು ಬಹು ಮಹತ್ವದ ಸಾಮಾಜಿಕ—ಆರ್ಥಿಕ ಸಂಗತಿಗಳಾಗಿವೆ. ಬೆರ್ದಿಚೇವ್ ರಾಸಾಯನಿಕ ಎಂಜಿನೀಯರಿಂಗ್ ಕಾರ್ಖಾನೆಯಲ್ಲಿ ನಡೆಸಿದ ಒಂದು ಸಾಮಾಜಿಕ ಸಮೀಕ್ಷೆಯಿಂದ ಪಡೆದ ಕೆಲವೊಂದು ಸ್ವಾರಸ್ಯಕರ ಮಾಹಿತಿಗಳು ಇಲ್ಲಿವೆ: ಸಾಮೂಹಿಕ ಕ್ರೀಡಾ ಚಟುವಟಿಕೆಗಳ ಪರಿಣಾಮವಾಗಿ, ಶ್ರಮಿಕ ಉತ್ಪಾದನಾ ಕ್ಷಮತೆಯು ಹೆಚ್ಚಿತು, ಕಾಹಿಲೆ ಪ್ರಸಂಗಗಳು ಸೇ.13ರಷ್ಟು ಕಡಿಮೆಯಾದುವು ಮತ್ತು ಗಾಯನೋವುಗಳ ಪ್ರಮಾಣವೂ ಬಹಳಷ್ಟು ಕಡಮೆಯಾಯಿತು. ಇವಾನೋವೊ ಜವಳಿ ಗಿರಣಿಯಲ್ಲಿ ಚೆಲ್ಯಾಬಿನ್‌ಸ್ಕ್ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯಲ್ಲಿ, ಲೆನಿನ್‌ಗ್ರಾಡಿನ ಎಲೆಕ್ಟ್ರೊಸಿಲಾ ಕಾರ್ಖಾನೆಯಲ್ಲಿ ಮತ್ತು ಅಲ್ಮ ಆತಾದಲ್ಲಿರುವ ಒಂದನೇ ಮೋಬಟ್ಟೆ ಕಾರ್ಖಾನೆಯಲ್ಲಿ ಕೂಡ ಇಂಥವೇ ಫಲಿತಾಂಶಗಳು ದೊರೆತುವು. ಶಾರೀರಿಕ ವ್ಯಾಯಾಮ, ಕ್ರೀಡಾ ಸೌಲಭ್ಯಗಳ ನಿರ್ಮಾಣ ಮತ್ತು ಚಟುವಟಿಕೆಯ ವಿಶ್ರಾಂತಿ ಇವುಗಳಿಗಾಗುತ್ತಿರುವ ವೆಚ್ಚವು ದೊರೆತ ಪ್ರತಿಫಲಕ್ಕಿಂತ ಕಡಿಮೆಯಾಗಿದೆಯೆಂಬುದನ್ನು ಕಾಣಬಹುದು.

ದೇಶದ ಕ್ರೀಡಾಪಂಚಾಂಗದಲ್ಲಿ ಬೃಹತ್ ಸಾಮೂಹಿಕ ಕ್ರೀಡೆಗಳ ದಿನವೆನಿಸಿರುವ, ಸೋವಿಯೆತ್ ಒಕ್ಕೂಟದ ಜನತೆಗಳ ಐದನೇ ಬೇಸಗೆಯ ಸ್ಪಾರ್ತಕೈಡ್‌ಗೆ ಈಗ ಎಲ್ಲೆಲ್ಲೂ ಸಿದ್ಧತೆಗಳು ನಡೆದಿವೆ. ಕಳೆದ ನಾಲ್ಕು ವರ್ಷಗಳ ಫಲಿತಾಂಶಗಳನ್ನು ಸಮೀಕ್ಷಿಸಲು ಇದು ಸಹಾಯಕವಾಗುವುದರೊಡನೆಯೆ, ಮುಂದಿನ ಒಲಿಂಪಿಕ್ ಕ್ರೀಡೆಗಳಿಗೆ ಆಟಗಾರರು ಸಿದ್ಧತೆ ಮಾಡಿಕೊಳ್ಳುವುದರಲ್ಲೂ ಇದು ನಿರ್ಣಾಯಕವಾದ ಘಟ್ಟವಾಗುತ್ತದೆ. ಈಗಾಗಲೇ ಮಿಲಿಯಾಂತರ ಜನರು ಇವುಗಳಲ್ಲಿ ಭಾಗವಹಿಸಿದ್ದಾರೆ. ಉಪಾಂತ್ಯ ಕ್ರೀಡೆಗಳು ಜುಲೈ ತಿಂಗಳಲ್ಲಿ ನಡೆಯುತ್ತವೆ.

ಸೋವಿಯೆತ್ ಒಕ್ಕೂಟದಲ್ಲಿ ಎಲ್ಲಾ ಕ್ರೀಡಾಚಟುವಟಿಕೆಗಳಿಗೂ ಒಂದೇ ಸಾಮಾನ್ಯ ಗುರಿ ಇದೆ: ಆತ್ಮಿಕ ಸಂಪತ್ತಿಯಿಂದ, ನೈತಿಕ ಶುದ್ಧತೆಯಿಂದ ಮತ್ತು ಶಾರೀರಿಕ ಪರಿಪೂರ್ಣತೆಯಿಂದ ಸಮರಸ ಸರ್ವಾಂಗ ಸುಂದರವಾಗಿ ಉದಯೋನ್ಮುಖ ಪೀಳಿಗೆಯನ್ನು ಬೆಳೆಸುವುದು. ಎಲ್ಲವೂ ಮನುಷ್ಯನಿಗಾಗಿಯೇ, ಅವನ ಕ್ಷೇಮಕ್ಕಾಗಿಯೇ.

PUBLICATION NOTICE

Hearing Date 20—9—1971

In the High Court of Mysore at Bangalore

Civil Revision Petition No. 61 of 1968

Sri Sode Vadiraja Mutt
Vs.
Izidoxe Fernades and other.

To
Resptd. No. 3) Binjamin Fernandes,
R/O Dadamba in Shirva Village, Udipi Taluk, S.K.

Whereas the above named petitioner has preferred a rivision Petition to the Court against the order dated 31—8—1967 passed by the Civil Judge, Udipi, South Kanara in Small Cause Suit No. 208 of 66;

You are hereby warned to appear in this Court in person or by a pleader duly instructed on the 20th day of September 1971 at 11 O'clock in the forenoon, to show cause against the Petition failing wherein, the said Petition will be heard and determined ex-parte.

Given under my hand and the seal of the Court, this 28th day of August 1971.

Sd/- (R. S. Chakrabhavi)
First Asst. Registrar,
High Court of Mysore, B'lore.

●●

(ಏಳನೇ ಪುಟದಿಂದ)

ರು ಕೋಟಿ ರೂಪಾಯಿಯ ಕರಭಾರವನ್ನು ಹೇರಿದರು. ಇನ್ನು ಮುಂದಿನ ದಿನಗಳಲ್ಲಿ ಇನ್ನೂ ಕರಭಾರದ ಹೊರೆಯು ಹೆಚ್ಚಲಿದೆ; ಶ್ರೀ ಸಾಮಾನ್ಯನಿಗೆ ಮತ್ತಷ್ಟು ಸಂಕಷ್ಟದ ದಿನಗಳು ಬರಲಿವೆ. ಎಂದು ಮುನ್ನೆಚ್ಚರಿಕೆ ನೀಡಿದರು.

ಬಂಗ್ಲಾದೇಶಕ್ಕೆ ತೀವ್ರ ಮನ್ನಣೆ ನೀಡದ ಬಗ್ಗೆ ತಮ್ಮ ವಿವಂಚನೆಯನ್ನವರು ವ್ಯಕ್ತಪಡಿಸಿದರು. "ಈಗ ಯುದ್ಧ ನಡೆಯುತ್ತಿರಲಿ, ನಡೆಯದೇ ಇರಲಿ, ನಾವು ಯುದ್ಧದ ಸಂಕಟಗಳನ್ನು ಅನುಭವಿಸುತ್ತಿದ್ದೇವೆಂಬುದು ಸತ್ಯ. ಇದಕ್ಕೆ ಬಂಗ್ಲಾದೇಶಕ್ಕೆ ಮನ್ನಣೆ ನೀಡದಿರುವುದೇ ಕಾರಣ. ಅದನ್ನು ನೀಡುವವರೆಗೂ ನಮ್ಮ ಈ ಕಷ್ಟಗಳು ಹೆಚ್ಚುತ್ತಲೇ ಹೋಗುತ್ತವೆ." ಎಂದರವರು.

ತಮ್ಮ ಪಕ್ಷವನ್ನು ಯುವಕರಿಗೆ ಅಧಿಕಾಧಿಕ ಆಕರ್ಷಕವಾಗುವಂತೆ ತೀವ್ರ ಕ್ರಮ ತೆಗೆದುಕೊಳ್ಳುವ ಅಗತ್ಯವನ್ನವರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಒತ್ತಿ ಹೇಳಿದರು. ತಮ್ಮ ಪಕ್ಷವು ಅಧಿಕಾರದಲ್ಲಿರುವಾಗ, ಮೈಸೂರು ರಾಜ್ಯದಲ್ಲಿ ಯುವಜನ ಕಲ್ಯಾಣಕ್ಕಾಗಿ ಪ್ರತ್ಯೇಕ ಮಂತ್ರಿ ಶಾಖೆಯನ್ನು ತೆರೆದಿದ್ದುದನ್ನು ಅವರು ಪ್ರಸ್ತಾಪಿಸುತ್ತ ಈ ಹೆಜ್ಜೆ ಇಡಿಯ ಭಾರತದಲ್ಲೇ ಮೊತ್ತಮೊದಲನೆಯದೆಂಬುದನ್ನು ಜ್ಞಾಪಿಸಿಕೊಟ್ಟರು.

ಶ್ರೀಮಂತರ ಬಗ್ಗೆ ವಿಶ್ಲೇಷಿಸುತ್ತ "ಶ್ರೀಮಂತರ ಮೇಲೆಲ್ಲ ನಮ್ಮ ಪಕ್ಷಕ್ಕೆ ಸಹಾನುಭೂತಿಯಿದೆಯೆಂಬುದು ಶುದ್ಧಾಂಗ ಸುಳ್ಳು. ಅವರ ಮೇಲೆ ಹೇರಲಾಗುವ ಯಾವುದೇ ತೆರಿಗೆಯನ್ನು ನಾವು ಸ್ವಾಗತಿಸುತ್ತೇವೆ. ಆದರೆ, ಬಡವರ ಮೇಲೆ ಇನ್ನೂ ಇನ್ನೂ ತೆರಿಗೆ ಹೊರಿಸುತ್ತ ಹೋಗುವುದನ್ನು ಸಹಿಸುವುದು ಸಾಧ್ಯವಿಲ್ಲ. ನಮ್ಮ ಪಕ್ಷವು ಅಧಿಕಾರದಲ್ಲಿದ್ದಾಗ, ಹತ್ತು ಎಕ್ರೆಗಿಂತ ಕಡಿಮೆ ಜಮೀನಿನ ಮೇಲೆ ಕಂದಾಯವನ್ನು ರದ್ದು ಮಾಡಿದ್ದೇವೆ; ಇದು ಬಡವರ ಮೇಲಿರುವ ಸಹಾನುಭೂತಿಯಿಂದ, ಅನುಕಂಪದಿಂದ" ಎಂದರು ಶ್ರೀ ಪಾಟೀಲರು.

ಶ್ರೀ ವೀರೇಂದ್ರ ಪಾಟೀಲರ ಬಿರುಸಿನ ಸಂಚಾರದ ವೇಳೆ ಜನತೆ ತಮ್ಮ ಹಿಂದಿನ ಪ್ರಿಯ ಮುಖ್ಯಮಂತ್ರಿಯನ್ನು ವೈಭವದಿಂದ ತುಂಬಿದ ಹೃದಯದಿಂದ ಸ್ವಾಗತಿಸಿತು. ಜನರಲ್ಲಿ ಹೊಸ ಉತ್ಸಾಹವು ಮೂಡಿದಂತೆನಿಸುತ್ತಿತ್ತು. ಜಿಲ್ಲೆಯ ಚಿಕ್ಕ ಪಟ್ಟಣ—ಹಳ್ಳಿಗಳನ್ನೂ ಭೇಟಿ ಮಾಡಿದ ಶ್ರೀ ಪಾಟೀಲರೊಡನೆ ಪಕ್ಷದ ನಾಯಕರಲ್ಲಿ ಶ್ರೀಗಳಾದ ವೈ. ಮಂಜಯ್ಯ ಶೆಟ್ಟಿ, ಬಿ. ಗಂಗಾಧರದಾಸ, ಬಿ. ವೀರರಾಜೇಂದ್ರ ಹೆಗ್ಡೆ, ಡಾ| ನಾಗಪ್ಪ ಆಳ್ವ ಮತ್ತು ಶ್ರೀಮತಿ ಒಕ್ಟೇವಿಯಾ ಅಲ್ಬುಕರ್ಕ್ ಮೊದಲಾದವರೂ ಇದ್ದರು. ●

ವಿದ್ಯಾಕ್ಷೇತ್ರದ ಪ್ರಯೋಗಗಳು— ಪಿ. ಗುರುರಾಜ ಭಟ್

ಮಂಗಳೂರು ಉತ್ತರ ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯು ತಾ. 24ರಂದು ನಗರದ ಮೋತಿಮಹಲ್‌ನಲ್ಲಿ ಉಪಾಧ್ಯಕ್ಷ ರೊಟೇರಿಯನ್ ಎಂ. ಅನಂತ ಪ್ರಭುರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಆರಂಭದಲ್ಲಿ ಅಧ್ಯಕ್ಷರು ಅತಿಥಿಗಳನ್ನು ಸ್ವಾಗತಿಸಿದ ಬಳಿಕ ಮುಖ್ಯ ಅತಿಥಿ ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ಪ್ರಿನ್ಸಿಪಾಲ್ ಡಾ| ಪಿ. ಗುರುರಾಜ ಭಟ್‌ರವರ ಪರಿಚಯವನ್ನು ರೊಟೇರಿಯನ್ ಗಣಪತಿ ಭಂಡಾರ್‌ಕಾರ್‌ರವರು ಮಾಡಿಸಿದರು.

ಡಾ|. ಗುರುರಾಜ ಭಟ್ಟರು "ಇಂದಿನ ವಿದ್ಯಾಕ್ಷೇತ್ರದಲ್ಲಿ ನಡೆಯುತ್ತಿರುವ ಪ್ರಯೋಗಗಳು" ಎಂಬ ಕುರಿತು ಭಾಷಣ ಮಾಡಿ ಹೆತ್ತವರು ತಮ್ಮ ಮಕ್ಕಳ ಶಿಕ್ಷಣದ ವಿಚಾರದಲ್ಲಿ ಆಸಕ್ತಿ ವಹಿಸಬೇಕಾದುದು ಅವಶ್ಯವೆಂದು ಹೇಳಿದರು.

ಅಂತ್ಯದಲ್ಲಿ ರೊಟೇರಿಯನ್ ಎಂ. ದೇವದಾಸ ಕುಡ್ವರು ಧನ್ಯವಾದ ಅರ್ಪಿಸಿದ ಬಳಿಕ ಶ್ರೀ ಆರ್. ಎನ್. ಮಡೀಲ್‌ರಿಂದ 'ಕೊನೆಯ ನಗು' ಕಾರ್ಯಕ್ರಮ ಜರಗಿತು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 191/71

ಸೀನಪ್ಪ ಶೆಟ್ಟಿ —ವಾದಿ
ಮುಕಾಂಬಿಕೆ ಶೆಡ್ತಿ —ಪ್ರತಿವಾದಿಳು

ಸದ್ರಿ ವಾದಿ ಕಡೆಯಿಂದ ಈ ಮೂಲ್ಕ ಜಾಹೀರ್ ಮಾಡಿಕೊಳ್ಳುವದೇನೆಂದ್ರೆ—

ಮುಕಾಂಬಿಕೆ ಶೆಡ್ತಿ—ಸದ್ಯಮ್ಮ ಶೆಡ್ತಿರ ಮಗಳು. ಕುಂದಾಪುರ ತಾಲ್ಲೂ ಕೆರಾಡಿ ಗ್ರಾಮದ ಹಾಲಾಡಿಯಲ್ಲಿರುವವಳು.

ವಾದಿಗೆ ಪ್ರತಿವಾದಿಳು ತಾ. 27—5—68 ರಲ್ಲು ರಿಜಿಸ್ಟ್ರಿ ನಿಶಿ ರೂ. 2000—00ಕ್ಕೆ ಬರ್ಸಿ ಕೊಟ್ಟ ದಿನೂಂಡ ನೋಟಿನ ಅಸ್ಲು ಬಡ್ಡಿ ಬರ ಮಾಡಿ ಕೊಳ್ಳುವರೆ ವಾದಿ ಪ್ರತಿವಾದಿಳ ಮೇಲೆ ಮಾಡಿದ ದಾವೆಯು 16—10—71ಕ್ಕೆ ಆಖೈರೆ ತನ್ಕಿಗೆಯಿಟ್ಟಿದೆ. ಆ ಕುರಿತು ನಿಮ್ಮದೇನಾದ್ರೂ ಉಜಾಪರಣೆಯಿದ್ರೆ ಸದ್ರಿ ದಿನ್ಸ ಹಗ್ಲು 11 ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರ ಮಾಡಿಕೊಳ್ಳ ತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ವಾದಿ ಕಡೆಯಿಂದ ಈ ಮೂಲ್ಕ ತಿಳಿಯ ಪಡ್ಸಿದೆ.

M. M. Hebbar
Advocate for Plff.
Kundapur, Date 30-8-71.

ಜೀವನದ ಗೊತ್ತು ಗುರಿ ಇಲ್ಲದಿರುವುದೇ ಗೊಂದಲಕ್ಕೆ ಕಾರಣ

ಮಂಗಳೂರು ಸ್ನಾತಕೋತ್ತರ ಕೇಂದ್ರದ ಕನ್ನಡ ಸಂಘದ ಉದ್ಘಾಟನೆಯನ್ನು ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ಪ್ರಿನ್ಸಿಪಾಲ್ ಡಾ| ಪಿ. ಗುರುರಾಜ ಭಟ್ಟರು, ಸ್ನಾತಕೋತ್ತರ ಕೇಂದ್ರದ ಕನ್ನಡ ಸಂಘದ ಅಧ್ಯಕ್ಷರೂ, ಕೇಂದ್ರದ ನಿರ್ದೇಶಕರೂ ಆದ ಪ್ರೊ| ಎಸ್. ವಿ. ಪರಮೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ತಾ. 28 ರಂದು ನೆರವೇರಿಸಿದರು.

ಡಾ| ಭಟ್ಟರು ತಮ್ಮ ಉದ್ಘಾಟನಾ ಭಾಷಣದಲ್ಲಿ, ಸಾಹಿತ್ಯವು ಜಗತ್ತಿನ ಅತ್ಯಂತ ಬಲಶಾಲಿಯಾದ ಆಯುಧವಾಗಿದ್ದು ಅದರ ಸದುಪಯೋಗವಾಗುವಂತೆ ಜಾಗ್ರತೆ ವಹಿಸಬೇಕು ಎಂದರು. ಮುಂದುವರಿಯುತ್ತಾ ಶಿಕ್ಷಣವು ನಮ್ಮ ಸಂಸ್ಕೃತಿಗೆ ಒಪ್ಪುವಂತಿರಬೇಕೆಂದೂ, ಅದರಿಂದ ನಮಗೆ ದೈಹಿಕ, ಬೌದ್ಧಿಕ ಮತ್ತು ನೈತಿಕ ಮೂರೂ ಬಗೆಯ ಪ್ರಯೋಜನ ದೊರೆಯಬೇಕೆಂದೂ, ಜೀವನದ ಗುರಿಯೇನೆಂಬ ಕುರಿತು ಖಚಿತವಾದ ಅರಿವು ಇಲ್ಲದಿರುವುದೇ ಇಂದಿನ ಗೊಂದಲಗಳಿಗೆ ಕಾರಣವೆಂದವರು ವಿವರಿಸಿದರು. ಅವರು ಯಾವ ಕಾರಣವನ್ನಾದರೂ ಇತಿ ಮಿತಿ ಅರಿತು ಸಾಧಿಸಲು ಪ್ರಯತ್ನಿಸಬೇಕೆಂದು ನುಡಿದರು. ಇತಿಹಾಸ ಸಂಶೋಧನೆಗೆ ಸರಕಾರ ತೋರುವ ಅನಾಸಕ್ತಿ ಬಗ್ಗೆ ಡಾ| ಭಟ್ಟರು ವಿಷಾದ ವ್ಯಕ್ತಪಡಿಸಿದರು.

ಶ್ರೀ ಬಡೆಕಿಲ ಕೃಷ್ಣ ಭಟ್ಟರು ಸಂಗ್ರಹಿಸಿದ
ಕನ್ನಡದಲ್ಲಿ ಇದುವರೆಗೆ ಪ್ರಕಟವಾಗದ ವಿವರಗಳನ್ನೊಳಗೊಂಡ
ಗಾಂಧೀಜಿಯ ಕೊಲೆ
ಲೇಖನ ಮಾಲೆ ಬರುವ ವಾರದಿಂದ ಪ್ರಕಟವಾಗುವುದು.

PUBLICATION NOTICE

Hearing Date 20th Sep. 1971

In the High Court of Mysore at Bangalore

Civil Revision Petition No. 60/1968

Sri Sode Vadiraja Mutt
Vs.
Ales Castelino and others

To
Respondent No. 6) Lores Kamthy, 7) Lewis Kamthy, 8) Lilly Bai and 10) Benni Kamthy, All are residing at Panjimar in Shirva (Village) Udipi Tq.

Whereas the above named petitioner has preferred a revision petition to the Court against the order dated 31—8—1967 passed by the Civil Judge, Udipi in Small Cause Suit No. 196/1966;

You are hereby warned to appear in this Court in person or by a pleader duly instructed on the 20th day of September 1971 at 11 O'clock in the forenoon, to show cause against the Petition failing wherein, the said Petition will be heard and determined ex-parte.

Given under my hand and seal of the Court, this 28th day of August 1971.

Sd/- (R. S. Chakrabhavi)
First Assistant Registrar,
High Court of Mysore,
Bangalore.

ಅರ್ಬುದ: ಅಂಟು ರೋಗವೆ?

ಅರ್ಬುದ ರೋಗಕಾರಕ ವೈರಸ್‌ಗಳ ಪಾತ್ರದ ಬಗ್ಗೆ ಈ ದಿನಗಳಲ್ಲಿ ಬಹಳಷ್ಟು ಮಾತನಾಡಲಾಗುತ್ತಿದೆ, ಬರೆಯಲಾಗುತ್ತಿದೆ. ಅದೇ ಕಾಲಕ್ಕೆ ಕೆಲವೊಂದು ಜನ ವಿಜ್ಞಾನಿಗಳು ಅರ್ಬುದವು ಅಂಟು ರೋಗವಲ್ಲವೆಂದೂ ಅಭಿಪ್ರಾಯಪಡುತ್ತಾರೆ. ಆದರೆ ಈ ಎರಡು ವಿರೋಧಾಭಾಸಗಳನ್ನು ಅರ್ಥ ಮಾಡಿಕೊಳ್ಳುವುದೆಂತು? ಸೋವಿಯೆತ್ ವೈದ್ಯಕೀಯ ವಿಜ್ಞಾನಿಗಳ ಅಕಾಡಮಿಯ ಸದಸ್ಯರಾಗಿರುವ ಪ್ರಾ. ನಿಕೋಲಾಯಿ ಬ್ಲೋಖಿನ್ ಈ ಪ್ರಶ್ನೆಗೆ ಇಲ್ಲಿ ಉತ್ತರ ನೀಡಿದ್ದಾರೆ.

ಅರ್ಬುದ ರೋಗದ ವೈರಸುಗಳ ವಿಚಾರ ಬಹುಕಾಲದಿಂದಲೂ ಚರ್ಚೆಯಲ್ಲಿದೆ. ಈ ಶತಮಾನದ ಆರಂಭದಷ್ಟು ಹಿಂದೆಯೆ ಉಗ್ರ ಮಾರಕ ದುರ್ಮಾಂಸ ಮತ್ತು ಸೂಕ್ಷ್ಮಾತಿಸೂಕ್ಷ್ಮ ರೋಗಕಾರಕಗಳ ನಡುವಿನ ಸಂಬಂಧಗಳ ಬಗ್ಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಾಗಿದೆ. ಕೋಳಿಮರಿ ಲ್ಯೂಕೆಮಿಯ (ರಕ್ತ ಬಳಿಸಿಕೊಳ್ಳುವ ರೋಗ)ದ ವೈರಲ್ (ವೈರಸ್) ಸ್ವಭಾವವನ್ನು 1908ರಷ್ಟು ಹಿಂದೆಯೆ ಕಂಡುಹಿಡಿಯಲಾಯಿತು ಮುಂದೆ ಮೂರು ವರ್ಷಗಳ ಬಳಿಕ, ರೌಸ್ ಅನರು ಕೋಳಿಮರಿ ಸಾರ್ಕೋಮಾಗೆ ಕಾರಣವಾಗುವ ವೈರಸನ್ನು ಕಂಡುಹಿಡಿದರು. ಅನಂತರ ಪ್ರಾಣಿಗಳಲ್ಲಿ ಅರ್ಬುದಕ್ಕೆ ಕಾರಣವಾಗುವ ಅನೇಕಾನೇಕ ದುರ್ಮಾಂಸ ವೃದ್ಧಿಕಾರಕ ವೈರಸುಗಳನ್ನು ಕಂಡುಹಿಡಿಯಲಾಯಿತು. ಅವುಗಳಲ್ಲಿ ಸಣ್ಣಿಳಿಗಳ ಸ್ತನಗಳ ಅರ್ಬುದ ರೋಗದ ವೈರಸುಗಳು, ಸಣ್ಣಿಲಿ ಮತ್ತು ದೊಡ್ಡಿಲಿಗಳಲ್ಲಿ ನಾನಾ ರೀತಿಯ ಲ್ಯೂಕೆಮಿಯಕ್ಕೆ ಕಾರಣವಾಗುವ ವೈರಸುಗಳು ಹಾಗೂ ದಂಶಕ ಮತ್ತು ಪ್ರಯೋಗಶಾಲೆಯ ಬೇರೆ ಪ್ರಾಣಿಗಳಲ್ಲಿ ನಾನಾ ಬಗೆಯ ದುರ್ಮಾಂಸ ವೃದ್ಧಿಕಾರಕ ಪೋಲ್ಯಾಮಾ ವೈರಸುಗಳು ಮೊದಲಾದವು ಇವೆ.

ಯಂತ್ರ—ತಂತ್ರ ವಿದ್ಯೆಯಲ್ಲಿಯ ರಭಸದ ಪ್ರಗತಿ, ಪ್ರಚಂಡವಾದ ಎಲೆಕ್ಟ್ರಾನಿಕ್ ಸೂಕ್ಷ್ಮದರ್ಶಕಗಳು ಕಾಣಿಸಿಕೊಂಡಿರುವುದು, ಜೀವ ರಸಾಯನ ಶಾಸ್ತ್ರ ಮತ್ತು ಸೋಂಕು ರಕ್ಷಾ ಶಾಸ್ತ್ರದಲ್ಲಿಯ ಯಶಸ್ಸುಗಳು, ಈ ಮೊದಲಾದುವುಗಳಿಂದಾಗಿ ಈ ರಂಗದಲ್ಲಿ ಹೆಚ್ಚು ಮೂಲಭೂತವಾದ ಅಧ್ಯಯನವನ್ನು ಈಗ ನಡೆಸಲು ಸಾಧ್ಯವಾಗಿದೆ

ಅರ್ಬುದದ ವೈರಸು ಮನುಷ್ಯ ದೇಹದಲ್ಲಿ ಆಡುವ ಪಾತ್ರ ಏನೆಂಬುದನ್ನು ಕಂಡುಹಿಡಿಯುವುದೇ ಇಲ್ಲಿ ಬಹು ಮುಖ್ಯವಾದ ಸಂಗತಿಯಾಗಿದೆ. ನಾನಾ ರೀತಿಯ ಪ್ರಾಣಿಗಳಲ್ಲಿ ವೈರಸುಗಳೇ ದುರ್ಮಾಂಸ ವೃದ್ಧಿಗೆ ಕಾರಣವೆಂದು ಸ್ಥಾಪಿತವಾದ ಬಳಿಕ ಈ ಪ್ರಶ್ನೆಯು ಉದ್ಭವಿಸಿದೆ. ಎ.ಡಿ. ತಿಮೊಫೆಯೆವ್‌ಸ್ಕಿ ಮತ್ತು ಬೇರೆ ಅನೇಕ ಜನ ವಿದೇಶೀ ವಿಜ್ಞಾನಿಗಳು ಎಲೆಕ್ಟ್ರಾನಿಕ್ ದೂರದರ್ಶಕಗಳ ಮೂಲಕ ಅನೇಕಾನೇಕ ಮನುಷ್ಯ ದುರ್ಮಾಂಸಗಳನ್ನು ಪರೀಕ್ಷಿಸುತ್ತಿದ್ದಾಗ ವೈರಸಿನಂತಹ ಶರೀರಗಳನ್ನು ಕಂಡುಹಿಡಿದರು. ಬಿ.ಎಂ. ಬೇರ್ಗೋಲ್ಟ್‌ಸ್ರು, ಮನುಷ್ಯ ದುರ್ಮಾಂಸದ ಅಂಗ ಕಟ್ಟುಗಳಿಂದ ತೆಗೆದ ಕೋಶರಹಿತ ಸೋಸುದ್ರವಗಳನ್ನು ಕೆಲವೊಂದು ಪ್ರಯೋಗ ಶಾಲೆ ಪ್ರಾಣಿಗಳಲ್ಲಿ ಇಂಜೆಕ್ಷನ್ ಮೂಲಕ ಸೇರಿಸಿ ಲ್ಯೂಕೆಮಿಯ ಮತ್ತು ಸಾರ್ಕೋಮಗಳನ್ನು ಹುಟ್ಟಿಸಿದರು. ಸುಮಾರು ಹತ್ತು ವರ್ಷಗಳ ಹಿಂದೆ ಅಮೆರಿಕನ್ ಸಂಶೋಧಕ ಕೂಡ ಪ್ರಯೋಗ ಶಾಲೆ ಪ್ರಾಣಿಗಳಲ್ಲಿ, ಆರೋಗ್ಯವಂತ ಜನರಿಂದ ಪಡೆದ ಕೆಲವೊಂದು ವೈರಸುಗಳನ್ನು ಸೇರಿಸಿ ದುರ್ಮಾಂಸವನ್ನು ಬೆಳೆಸಬಹುದೆಂದು ಸಿದ್ಧಪಡಿಸಿದರು ಆರೋಗ್ಯವಂತ ಜನರು ಕೂಡ ಸುಪ್ತ ದುರ್ಮಾಂಸ ವೃದ್ಧಿಕಾರಕ ವೈರಸುಗಳ ವಾಹಕರಾಗಬಲ್ಲರೆಂಬುದನ್ನು ಇದು ತೋರಿಸಿಕೊಡುತ್ತದೆ.

ನಾನಾ ಜಾತಿಯ ಪ್ರಾಣಿಗಳಲ್ಲಿ ದುರ್ಮಾಂಸಗಳನ್ನು ಬೆಳೆಸಬಹುದು, ಆಷ್ಟೇಕೆ, ಕೋಳಿಮರಿಗಳ ಸಾರ್ಕೋಮಕ್ಕೆ ಕಾರಣವೆಂದು ಭಾವಿಸಲಾಗಿದ್ದ ಖಚಿತ ವೈರಸು ಸುಪ್ರಸಿದ್ಧ ರಾಸ್ ವೈರಸಿನಿಂದಲೂ ಬೆಳೆಸಬಹುದೆಂಬುದನ್ನು ಕಂಡುಹಿಡಿದುದಕ್ಕಾಗಿ ಇಬ್ಬರು ಸೋವಿಯೆತ್ ವಿಜ್ಞಾನಿಗಳಾದ ಎಲ್.ಎ ಜಿಲ್ಬರ್ ಮತ್ತು ಜ ವೈ ಸ್ವೆತ್–ಮೋಲ್ದಾವ್‌ಸ್ಕಿಯವರಿಗೆ ರಾಜ್ಯ ಪ್ರಶಸ್ತಿಯನ್ನು ನೀಡಲಾಗಿತ್ತೆಂಬುದನ್ನೂ ನಾವಿಲ್ಲಿ ನೆನಪಿಸಿಕೊಳ್ಳಬಹುದು. ಈ ವೈರಸು ಮನುಷ್ಯ ದೇಹದ ಕೋಶಗಳನ್ನು ಅಂಗಾಂಶ ಬೆಳವಣಿಗೆಯಲ್ಲಿ ರೂಪಾಂತರಿಸಬಹುದೆಂದೂ ಕಂಡುಬಂದಿತು. ಈ ಎಲ್ಲ ಸಂಶೋಧನೆಗಳ ಫಲವಾಗಿ, ಪೇಟನ್ ರಾಸ್‌ರು ಕೋಳಿಮರಿ ಸಾರ್ಕೋಮಾ ವೈರಸುಗಳನ್ನು ಕಂಡುಹಿಡಿದ ಐವತ್ತೈದು ವರ್ಷಗಳ ಬಳಿಕ ನೋಬೆಲ್ ಪ್ರಶಸ್ತಿಯನ್ನು ಪಡೆದರೆಂಬುದೂ ಇಲ್ಲ ನೆನಪಿಸಿಕೊಳ್ಳಬೇಕಾದ ಒಂದು ಸಂಗತಿ.

ಇತ್ತೀಚಿನ ಸಂಶೋಧನಾ ಪ್ರಗತಿಗಳಂತೂ ಕನಿಷ್ಠ ಮಾನವನ ಕೆಲವು ದುರ್ಮಾಂಸಗಳಿಗೆ ಕಾರಣವಾಗುವ ವೈರಸುಗಳನ್ನು ಶೀಘ್ರವಾಗಿ ಕಂಡು ಹಿಡಿಯಬಹುದೆಂಬ ಭರವಸೆ ನೀಡುತ್ತಿವೆ ಇವುಗಳಲ್ಲಿ ಬಿ.ಎ. ಲಪಿನ್ ಮತ್ತು ಅವರ ತಂಡದವರು ನಡೆಸುತ್ತಿರುವ ಅಧ್ಯಯನಗಳು ತುಂಬಾ ಮಹತ್ವದ್ದಾಗಿವೆ. ಈ ಬಗೆಯ ಅರ್ಬುದ ರೋಗವಿರುವ ರೋಗಿಗಳಿಂದ ಪಡೆದುಕೊಂಡ ಕೋಶ ರಹಿತ ಸೋಸುದ್ರವಗಳನ್ನು ಕೋತಿಗಳಿಗೆ ಸೇರಿಸಿ ಲ್ಯೂಕೆಮಿಯವನ್ನು ಹುಟ್ಟಿಸಲು ಪ್ರಯತ್ನಿಸುತ್ತಿದ್ದಾರೆ ಈ ಅಧ್ಯಯನಗಳು ಇನ್ನೂ ಪೂರ್ಣಗೊಂಡಿಲ್ಲ. ಆದರೆ ಈ ರೋಗಕ್ಕೆ ಕಾರಣವಾದ ವೈರಸುಗಳನ್ನು ಪ್ರತ್ಯೇಕಗೊಳಿಸುವ ಪ್ರತೀಕ್ಷೆಗಳು ಮಾತ್ರ ಬಹಳ ದೂರೀನಿಲ್ಲ.

ಮನುಷ್ಯ ಸಾರ್ಕೋಮದ ವೈರಸುಗಳನ್ನು ಬೇರ್ಪಡಿಸುವಲ್ಲಿ ಡಿ. ಮೋರ್ಟನ್ ಮತ್ತು ಎಸ್ ಅಲೆಬೆರ್ಗ್ ಅವರುಗಳು ಅಮೆರಿಕದಲ್ಲಿ ನಡೆಸಿರುವ ಸಂಶೋಧನೆಗಳೂ ತುಂಬಾ ಕುತೂಹಲಕಾರಿಯಾಗಿವೆ.

ಬರ್ಕಿಟ್ ದುರ್ಮಾಂಸ ಎಂದು ಹೇಳಲಾಗುವುದಕ್ಕೆ ಸಂಬಂಧಿಸಿದ ವೈರಸುಗಳ ಅಧ್ಯಯನವೂ ಅಷ್ಟೇ ಆಸಕ್ತಿಕರವಾಗಿದೆ. ಇದರ ಪ್ರಸಂಗಗಳು ಮುಖ್ಯವಾಗಿ ಆಫ್ರಿಕದಲ್ಲಿ ಕಂಡುಬರುತ್ತಿದ್ದು ಅನೇಕ ದೇಶಗಳ ವಿಜ್ಞಾನಿಗಳು ಇದನ್ನೂ ಅಭ್ಯಸಿಸುತ್ತಿದ್ದಾರೆ.

ಮನುಷ್ಯ ದುರ್ಮಾಂಸ ವೃದ್ಧಿಗಳಿಗೆ ಸಂಬಂಧಪಟ್ಟ ವೈರಸುಗಳ ಅಧ್ಯಯನವು ಇಂದು, ಸಾಪೇಕ್ಷವಾಗಿ ಸಮೀಪ ಭವಿಷ್ಯತ್ತಿನಲ್ಲಿಯೆ ಹಲವಾರು ಮುಖ್ಯ ಪ್ರಶ್ನೆಗಳನ್ನು ಬಿಡಿಸಬಹುದಾಗಿದೆಯೆಂಬ ವಿಶ್ವಾಸದ ಘಟ್ಟವನ್ನು ತಲುಪಿದೆ.

ಆದರೆ, ಮಾರಕ ದುರ್ಮಾಂಸ ವೃದ್ಧಿಕಾರಕ ವೈರಸುಗಳ ಶೋಧನೆ ಮತ್ತು ಅದನ್ನು ಪ್ರತ್ಯೇಕಗೊಳಿಸುವಿಕೆಗಳು ಕೂಡಲೆ ಅರ್ಬುದ ರೋಗದ ಎಲ್ಲಾ ಪ್ರಶ್ನೆಗಳನ್ನೂ ಬಿಡಿಸುತ್ತವೆಯೆಂದು ಭಾವಿಸುವುದು ತಪ್ಪಾಗುತ್ತದೆ. ಆದರೆ ಅದೇ ಕಾಲಕ್ಕೆ ಈ ಎಲ್ಲ ಸಂಶೋಧನೆಗಳ ಮಹತ್ವವನ್ನೂ ನಾವು ಅಲ್ಪವಾಗಿ ಕಾಣುವಂತಿಲ್ಲ. ಅರ್ಬುದ ರೋಗ ಸೋಂಕು ರಕ್ಷಾಶಾಸ್ತ್ರದಕ್ಷೇತ್ರದಲ್ಲಿಯ ಅಧ್ಯಯನಗಳು ಒಂದು ವಿಶಿಷ್ಟ ಮಾರಕ ದುರ್ಮಾಂಸ ರೋಗ ನಿರೋಧಕ ಪದ್ಧತಿಗಳನ್ನಾದರೂ ವಿಕಾಸಗೊಳಿಸಲು (ವೈರಸನ್ನು ಪ್ರತ್ಯೇಕಗೊಳಿಸಲಾಗಿದ್ದರೆ ಮಾತ್ರವೆ) ಸಾಧ್ಯವೆಂಬುದನ್ನು ಸೂಚಿಸುತ್ತವೆ. ಇದನ್ನು ನಾವು ಕಾದು ನೋಡಬೇಕಾಗಿದೆ.

ಅರ್ಬುದವು ಅಂಟುರೋಗವೆ ಅಲ್ಲವೆ ಎಂಬುದು ಈಗ ಪ್ರಶ್ನೆ. ಮಾರಕ ದುರ್ಮಾಂಸ ವೃದ್ಧಿಗಳು ವಾಸ್ತವಿಕವಾಗಿ ಸೋಂಕು ರೋಗಗಳಲ್ಲವೆಂದು ನಾವು ಹೇಳಬಹುದಾಗಿದೆ. ಅರ್ಬುದ ರೋಗ ಶಾಸ್ತ್ರಾಧ್ಯಯನಕ್ಕೆ ತಮ್ಮ ಜೀವವನ್ನೇ ಅರ್ಪಿಸಿರುವ ಜನರಲ್ಲಿ, ಆ ರೋಗವನ್ನು ಚಿಕಿತ್ಸಿಸುವ ಡಾಕ್ಟರು ಹಾಗೂ ನರ್ಸುಗಳ ಮಧ್ಯದಲ್ಲಿ, ಹೀಗೆ ನಿತ್ಯವೂ ಅರ್ಬುದ ರೋಗಿಗಳ ಸಂಪರ್ಕವನ್ನು ಹೊಂದಿದವರ ಮಧ್ಯದಲ್ಲಿ ಅರ್ಬುದ ರೋಗಗಳು ತಗಲಿರುವ ಪ್ರಸಂಗಗಳು ಬೇರೆ ದರ್ಜೆಯವರಲ್ಲಿಯಗಿಂತ ಕೀಂ ಅಲ್ಪವಾಗಿವೆ.

ಪ್ರಾಣಿಗಳಲ್ಲಿಯ ವೈರಲ್ ದುರ್ಮಾಂಸಗಳ ಬಗ್ಗೆ ಮತ್ತು ದುರ್ಮಾಂಸ ವೃದ್ಧಿಕಾರಕ ವೈರಸುಗಳು ವಹನಗೊಳ್ಳುವ ದಾರಿಗಳ ಬಗ್ಗೆ ನಡೆಸಿದ ಅಧ್ಯಯನದಿಂದ ಇವು ಸಾಮಾನ್ಯವಾಗಿ ತಾಯಿಯಿಂದ ಸಂತಾನೋತ್ಪತ್ತಿ ಕಾಲದಲ್ಲಿ ವಹನ ಮಾಡಲ್ಪಡುತ್ತದೆಯೆಂದೂ ಮತ್ತು ಸಣ್ಣಿಲಿಗಳ ಸ್ತನ ಗ್ರಂಥಿಗಳ ಅರ್ಬುದ ರೋಗದ ವೈರಸುಗಳು ತಾಯಿಯ ಹಾಲಿನ ಮೂಲಕ ಸಂತಾನಕ್ಕೆ ಸೇರುತ್ತವೆಯೆಂದೂ ತಿಳಿದುಬಂದಿದೆ. ಹೀಗೆ ಅನೇಕ ಜನರಲ್ಲಿ ಬಾಲ್ಯದಿಂದಲೇ ದುರ್ಮಾಂಸ ವೃದ್ಧಿಕಾರಕ ವೈರಸುಗಳು (ಅವರ ದೇಹದಲ್ಲಿ) ಇರುತ್ತವೆಯೆಂದು ನಂಬಲು ಕಾರಣಗಳು ಇವೆ. ಇದರರ್ಥ ಇಂಥ ಮನುಷ್ಯ ಅಗತ್ಯವಾಗಿಯೆ ಮಾರಕ ದುರ್ಮಾಂಸ ವೃದ್ಧಿಗೆ ಪಕ್ಕಾಗುತ್ತಾನೆಂದು ಅಲ್ಲ, ಎನ್ಫ್ಲೂಯೆಂಜ ಹಾಗೂ ದಡಾರಗಳಲ್ಲಿಯಂತೆ ಇದರಲ್ಲಿ, ದೇಹದಲ್ಲಿ ವೈರಸುಗಳ ಪ್ರವೇಶ ಮತ್ತು ರೋಗಗಳ ನಡುವೆ ನೇರ ಅವಲಂಬನೆಯೇನೂ ಇಲ್ಲ.

ಉದಾಹರಣೆಗೆ ಸ್ತನಗ್ರಂಥಿ ಅರ್ಬುದ ರೋಗಕಾರಕ ವೈರಸುಗಳನ್ನು ಪಡೆದ ಪ್ರಾಣಿಗಳು ಬಾಲ್ಯದಲ್ಲಿ ಕಾಹಿಲೆ ಬೀಳುವುದಿಲ್ಲ ಆದರೆ ತಮ್ಮ ಜೀವನದ ಉತ್ತರಾರ್ಧದಲ್ಲಿ ಬೀಳುತ್ತವೆ ಅಂದರೆ ವೈರಸುಗಳ ಹಾಜರಾತಿಯೊಂದೇ ಮುಖ್ಯವಲ್ಲ, ಅರ್ಬುದರೋಗ ವೃದ್ಧಿಗೆ ಇನ್ನೂ ಬೇರೆ ಕೆಲವು ಸಂಗತಿಗಳೂ ಕಾರಣವೆಂದು ಇದರಿಂದ ಸ್ಪಷ್ಟಪಡುತ್ತದೆ ದುರ್ಮಾಂಸಗಳನ್ನು ಬೆಳೆಸಿಕೊಂಡಿವೆಯೆಂದು ತಿಳಿದು ಬಂದ ಪ್ರಾಣಿಗಳು ಬೇರೆ ಪ್ರಾಣಿಗಳೊಡನೆ ನಿರಂತರ ಸಂಪರ್ಕದಲ್ಲಿದ್ದಾಗಲೂ ಆ ಪ್ರಾಣಿಗಳಲ್ಲಿ ಅಂಥ ಸೋಂಕು ಇಲ್ಲದಿರುವುದೂ ಸಮೀಕ್ಷೆಗಳಿಂದ ವ್ಯಕ್ತಪಟ್ಟಿದೆ.

●●

ಬೆಳ್ತಂಗಡಿ ಮುನ್ಸಿಫ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ

R. L. C. ಅರ್ಜಿ ನಂಬ್ರ 135/1970

ನೇಮಿರಾಜ ಪಡಿವಾಳ —ಅರ್ಜಿದಾರ(ವಾದಿ)

ಮತ್ತು

ಬೊಲ್ಟಿಡಿ'ಸೋಜಾ ಸಹಾ —ಎದ್ರಿ(ಪ್ರತಿವಾದಿ)

ಮೇಲ್ಕಂಡ ವ್ಯವಹರಣೆಯಲ್ಲಿ ಮೈಸೂರು ಲೇಂಡ್ ರಿಫೋರ್ಮ್ಸ್ ಸೆಕ್ಷನ್ 14ರ ಪ್ರಕಾರ ಅಸ್ತ್ಯ ಸ್ವಾಧೀನತೆ ಬಗ್ಗೆ ಸದರಿ ಅರ್ಜಿದಾರನು ಅರ್ಜಿ ಕೊಟ್ಟಿರುವುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಣೆ ಇದ್ದ ಪಕ್ಷದಲ್ಲಿ ಅದನ್ನು ಈ 1971ನೇ ಇಸವಿ ಒಕ್ಟೋಬರ ತಿಂಗಳ 4ನೇ ತಾರೀಕು ಹಗಲು 10 ಗಂಟೆಗೆ ಈ ಕೋರ್ಟಿನಲ್ಲಿ ಖುದ್ದಿನಿಂದಾಗಲೀ, ವಕೀಲ ದ್ವಾರಾ ಆಗಲೀ ಹಾಜರಾಗಿ ತಿಳಿಸಿಕೊಳ್ಳಬೇಕು; ತಪ್ಪಿದರೆ ಸದ್ರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟಿನ ಹುಕ್ಕುಂ ಮೇರೆಗೆ

N. J. Kadamba

Advocate

ಬೆಳ್ತಂಗಡಿ, 27-8-71.

ನಿಮಗೆ ಬೇಕಾಗುವ

ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಕೊಲೆಟಿಯಲ್ಲಿ, ಸ್ಕ್ಯಾಚಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ

ಈಗಿನ ನ್ಯಾಯ ಬೆಲೆಗೆ ಧರ್ಮಕಾಂಟಾ ಕೆರೆಟ ತೂಕದಲ್ಲಿ

ಮುಂದಾಗಿ ನಮ್ಮಿಂದ ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್

ರಥಬೀದಿ—ಉಡುಪಿ, ದ.ಕ.

ನನ್ನಿಂದಾಗದು

(ಎರಡನೇ ಪುಟದಿಂದ)

ಒಮ್ಮೆ ಸೇಟ್ ಹೀಗೆ ಹೇಳಿದ್ದರು:— "ನೀನು ಹೆಚ್ಚಿನ ಹೊಣೆಗಾರಿಕೆಯ ಸ್ಥಾನಕ್ಕೆ ನೇಮಿಸಲ್ಪಟ್ಟಿರುವೆ. ನಿತ್ಯಲೂ ನೀನು ನಿನ್ನ ಕಚೇರಿಯನ್ನು ಪ್ರವೇಶಿಸಿದೊಡನೆಯೇ ಗೋಡೆಯಲ್ಲಿ ತೂಗಹಾಕಲಾದ ದೇವರ ಚಿತ್ರಕ್ಕೆ ನಮಸ್ಕರಿಸಬೇಕು; ಆ ವೇಳೆ ಒಂದು ವಿಚಾರವನ್ನು ಸ್ಮರಿಸಲೂ ಬೇಕು— ಮೊತ್ತಮೊದಲು ನೀನು ನನ್ನಲ್ಲಿಗೆ ಬಂದ ದಿನ. ಅಂದು ನೀನು ಹೇಗಿದ್ದೆ? ಏನಾಗಿದ್ದೆ? ಈಗ ಹೇಗಿರುವೆ? ಏನಾಗಿರುವೆ? ಆ ಸ್ಮರಣೆಯಿಂದ ಸ್ಫೂರ್ತಿಗೊಂಡು ನೀನು ಸದಾ ಕಾರ್ಯಪ್ರವೃತ್ತನಾಗಲೂ ಬೇಕು...."

ಈ ಬುದ್ಧಿವಾದವನ್ನು ಶಿರಸಾವಹಿಸಿ ನಾನು ಈವರೆಗೂ ದುಡಿದೆ.

ಇದನ್ನು ನೆನವರಿಸುತ್ತಿರುವುದರಿಂದಾಗಿಯೇ ನಾನು ನಿಮಗೆ ಈಗ ಸಹಾಯ ಹಸ್ತ ನೀಡಲು ಸಾಧ್ಯವಿಲ್ಲದಾಗಿರುವುದು.

ಇಷ್ಟೆಲ್ಲಾ ನಿಮ್ಮಲ್ಲಿ ಹೇಳುವುದಕ್ಕೂ ಕಾರಣವಿದೆ. ನೀವು ನನಗೆ ಆಪದ್ಬಾಂಧವ. ಒಂದು ಆವಶ್ಯಕತೆ ನೀವು ನನ್ನನ್ನು ಸಮೀಪಿಸುವಂತೆ ಪ್ರೇರೇಪಿಸಿತು. ಆದರೆ ನನ್ನ ಅಸಹಾಯಕತೆಯೂ ನಿಮಗೆ ಮನದಟ್ಟಾಗಬೇಕು.

ನಾನು ಈ ಸ್ಥಿತಿಗೆ ತಲಪಿದ ಬಗ್ಗೆ ಅನೇಕರಿಗೂ ಅಸೂಯೆಯಿದೆ. ಕೆಲವರು ಆಶ್ಚರ್ಯ ಚಕಿತರಾಗಿದ್ದಾರೆ. ಈಗ ನನಗೆ ತಿಂಗಳೊಂದರ ರೂ. 800 ಸಂಬಳವಿದೆ. ಸೇಟಿನ ಕಟ್ಟಡದಲ್ಲೇ ಕನಿಷ್ಠ ಬಾಡಿಗೆಯಲ್ಲಿ ಬಿಡಾರ ಮಾಡಿದ್ದೇನೆ. ಲಕ್ಷಗಟ್ಟಲೆ ರೂಪಾಯಿ ವಹಿವಾಟು ನನ್ನ ಕೈಗಳ ಮೂಲಕ ಸಾಗುತ್ತಿದೆ. ಈಗ ನಾನು ಸಂತೃಪ್ತ ಕುಟುಂಬ ಜೀವನ ನಡೆಸುತ್ತಿದ್ದೇನೆ. ವಿವಾಹದ ಬಗ್ಗೂ ಸೇಟ್ ಸಹಾಯ ನೀಡಿದ್ದರು. ನನ್ನ ಜೀವನದ ಪ್ರತಿ ಹೆಜ್ಜೆಯಲ್ಲೂ ಸೇಟನ ಪ್ರೋತ್ಸಾಹ ಲಭಿಸಿತ್ತು.

ಇಂತಹ ರಕ್ಷಕನನ್ನು ವಂಚಿಸುವುದೆ? ವಂಚಿಸಲೆತ್ನಿಸುವುದೆ? ಸೇಟೇ ನನಗೆ ಪ್ರತ್ಯಕ್ಷ ದೇವರು. ದೇವರಿಂದ ತಪ್ಪಿಸಿ ಕೊಳ್ಳಲು ಸಾಧ್ಯವೆ?

ನಿಮ್ಮ ಸಮಸ್ಯೆ ನನಗೆ ಅರ್ಥವಾಗದೆ ಇಲ್ಲ. ನಿಮಗೆ ಈಗ ಹಣವೂ ಅಗತ್ಯ. ಇಂತಹ ಸಂದರ್ಭದಲ್ಲಿ ಒದಗದ ಸಹಾಯ ಮತ್ತೆ ಎಂದಾದರೂ ದೊರೆತೂ ಪ್ರಯೋಜನವಿಲ್ಲ. ನಿಮ್ಮ ಮಟ್ಟಿಗೆ ಅಷ್ಟೇ. ಈಗ ಭರ್ತಿ ಮಾಡಲು ಹಣ ಸಿಗದೆ ಹೋದರೆ ನಿಮ್ಮ ಭವಿಷ್ಯ— ನಿಮ್ಮ ಕುಟುಂಬದ ಭವಿಷ್ಯ ಗಂಡಾಂತರಕ್ಕೀಡಾಗುವುದು. ಹಣ ಕೊಡಲು ನನಗೆ ಸಾಧ್ಯ. ಹಣ ವಹಿವಾಟಿನ ಮೂಲಕವೇ ಸೇಟಿಗೆ ವಾರ್ಷಿಕ ವರಮಾನ ಅನೇಕ ಲಕ್ಷ ರೂಪಾಯಿಗಳು ಅವರೇ ತೆತ್ತರೆ ಸರಿ. ಆದರೆ ಅದನ್ನೇ ನಾನು ಕೊಟ್ಟರೆ ಅಕ್ಷಮ್ಯ ಅಪರಾಧವೂ!

ನೀವು ಸತ್ತರೂ ಮರೆಯಲಾರಿರಿ. ನೀವು ಕೃತಘ್ನರಲ್ಲ. ನನಗೇನಾದರೂ ಕಷ್ಟ ಬಂದಾಗ ನೀವು ಸಹಾಯವೆಸಗಬೇಕವೆ? ಹಾಗೆ ನಾವು ಪರಸ್ಪರ ಸಹಾಯ ಮಾಡಲೂ ಬೇಕು.

ಮುಂದೆಂದಾದರೂ ನಿಮ್ಮ ಸಹಾಯ ಲಭಿಸುವುದಕ್ಕಾಗಿ ನಾನು ಸೇಟನ ಹಣವನ್ನು ವಿನಿಯೋಗಿಸಬೇಕು. ಈ ಸಹಾಯ ಮಾಡಲು ನನಗೆ ಯೋಗ್ಯತೆಯಿದೆಯೆ? ಸೇಟ್ ಭಾವಿಸಿದರೆ ಮಾಡಲು ಶಕ್ತರು.

ನಿಮ್ಮಿಂದ ಪ್ರತ್ಯುಪಕಾರವನ್ನು ನಿರೀಕ್ಷಿಸುವುದೂ ಒಂದು ಬಗೆಯ ವಂಚನೆಯಲ್ಲವೆ? ನಾನದಕ್ಕೆ ಸಿದ್ಧನಿಲ್ಲ. ದೇವರನ್ನು ವಂಚಿಸಲಿಕ್ಕಿಲ್ಲ.

ಇದೊಂದು ಪರೀಕ್ಷೆಯಾಗಿರಲೂ ಬಹುದು. ನಿಮಗೀಗ ಹಣ ಕೊಟ್ಟರೆ ಈ ಪರೀಕ್ಷೆಯಲ್ಲಿ ನಾನೂ ಸೋತಂತೆ.

ಆದ್ದರಿಂದ ನೀವು ನೀದಾ ಸೇಟನ್ನು ಭೇಟಿಯಾಗಿ ನಿಮ್ಮ ಸಮಸ್ಯೆಗೆ ಪರಿಹಾರವಾಗುವುದೋ ನೋಡಬಹುದು.

●

ವಿಶ್ವ ಜನಪ್ರಿಯ ರಾಮ ಕಥೆ

ಭಾರತದ ಪ್ರಾಚೀನ ವಾಙ್ಮಯದಲ್ಲಿ ರಾಮಾಯಣದ ಪ್ರಭಾವ ಊಹನಾತೀತವಾಗಿದೆ. ಅರ್ವಾಚೀನ ಕಾಲದ ಸಾಹಿತ್ಯವೂ ಈ ರಾಮಾಯಣದ ಸ್ಪರ್ಶದಿಂದ ದೂರವಿಲ್ಲ. ಆದಿಕವಿ ವಾಲ್ಮೀಕಿಯಿಂದಲೇ ರಾಮಕಥೆಯ ಪ್ರೇರಣೆ ಲೋಕಕ್ಕಾಯಿತೆಂಬುದು ನಿರ್ವಿವಾದ. ರಾಮಕಥೆ ಅಥವಾ ರಾಮಾಯಣವು ಜಗತ್ತಿನ ಹಲವಾರು ದೇಶಗಳಲ್ಲಿ ಪ್ರಚಾರವಾಯ್ತು. ಅದರಲ್ಲಿ ಸಾಕಷ್ಟು ಪರಿವರ್ತನೆಯೂ ಆಗುತ್ತ ಬಂತು. ಶತಕೋಟಿ ರಾಮಾಯಣಗಳೊಳವು; "ತಿಣುಕಿದನು ಫಣಿರಾಯ ರಾಮಾಯಣದ ಭಾರದಲಿ"— ಎಂದು ಮುಂತಾದ ಉಕ್ತಿಗಳು ಉತ್ಪ್ರೇಕ್ಷೆಯೆನಿಸಿದರೂ ಈ ಉತ್ಪ್ರೇಕ್ಷೆಯಲ್ಲಿಯೂ ಸ್ವಾಭಾವಿಕತೆಯಿದೆಯೆನಿಸುತ್ತದೆ. ರಾಮಾಯಣದ ಕತೆ ಜನಪ್ರಿಯವಾದಷ್ಟು ಮಹಾಭಾರತದ ಕತೆ ಮೆಚ್ಚುಗೆ ಪಡೆದಿಲ್ಲವೆಂಬಂಶವನ್ನೂ ಅಲ್ಲಗಳೆಯಲಾಗದೆನಿಸುತ್ತದೆ.

ಚೀನಿ ರಾಮಾಯಣ

ಸುಪ್ರಸಿದ್ಧ ಬೌದ್ಧ ಗ್ರಂಥ 'ಅನಾಮಕಂ ಜಾತಕಮ್' ಮತ್ತು 'ದಶರಥ ಜಾತಕಂ' ಮೂರನೆಯ ಮತ್ತು ಐದನೆಯ ಶತಮಾನದಲ್ಲಿ ಚೀನೀ ಭಾಷೆಗೆ ಅನುವಾದವಾದುವು. ತಿಬೇಟಿನಲ್ಲಿ ಪ್ರಚಲಿತವಿರುವ ರಾಮಾಯಣದಲ್ಲಿ ರಾವಣ ಚರಿತ್ರೆ, ಸೀತಾ ಪರಿತ್ಯಾಗ ಮತ್ತು ರಾಮ—ಸೀತೆಯರ ಮಿಲನದ ಕಥೆಗಳಿವೆ. ಭಗವಾನ್ ವಿಷ್ಣುವು ದಶರಥನ ಮಗ ಶ್ರೀರಾಮನಾಗಿ ಹುಟ್ಟುವ ಅಂಶ ಇದರಲ್ಲಿದೆ. ತಿಬೇಟಿನ ರಾಮಾಯಣದಂತೆ ಮಹಾರಾಜ ದಶರಥನಿಗೆ ಮೂವರು ಹೆಂಡಂದಿರಲ್ಲ; ಇಬ್ಬರು ಮಾತ್ರ. ವಿಷ್ಣುವು (ಶ್ರೀರಾಮ) ಮೊದಲ ಹೆಂಡತಿ ಕನಿಷ್ಠೆಯಲ್ಲೂ ಲಕ್ಷ್ಮಣನು ಎರಡನೆಯ ಹೆಂಡತಿ ಜ್ಯೇಷ್ಠೆಯಲ್ಲೂ ಹುಟ್ಟುತ್ತಾರೆ. ರಾಮನ ಹೆಸರು ರಾಮನ್ ಎಂದಿದೆ. ಈ ರಾಮಾಯಣದಂತೆ ಸೀತೆಯು ರಾವಣನ ಮಗಳು. ರಾವಣನ ಮಡದಿ ಮಂಡೋದರಿಯ ಗರ್ಭದಲ್ಲಿ ಒಬ್ಬಾಕೆ ಮಗಳು ಹುಟ್ಟಿದಳು. ಆಕೆಯ ಜಾತಕವೋದಿದ ಜ್ಯೋತಿಷಿಗಳು ಮಗಳು ಅವಲಕ್ಷಣದವಳೆಂದು ಅಭಿಪ್ರಾಯ ಪಟ್ಟರು. ಹೆಣ್ಣುಮಗುವನ್ನು ಸಮುದ್ರಕ್ಕೆ ಎಸೆದು ಬಿಟ್ಟರು. ಆದರೆ ಅದು ಒಬ್ಬಾನೊಬ್ಬ ರೈತನ ಕೈ ಸೇರಿ ಬಳೆಯಲಾರಂಭಿಸಿತು. ಆ ಮಗುವಿಗೆ ಸೀತೆಯೆಂದು ನಾಮಕರಣ ಮಾಡಲಾಯ್ತು.

ರಾಮನು ಕಾಡಿಗೆ ಹೊರಟು ಹೋಗಬೇಕಾಗಿ ಬಂದ ಪ್ರಮೇಯವೂ ತಿಬೇಟಿಯನ್ ರಾಮಾಯಣದಲ್ಲಿ ಬೇರೆಯೇ. ಸುಲಕ್ಷಣರಾದ ಸರ್ವಸಮರ್ಥರಾದ ತನ್ನಿಬ್ಬರು ಮಕ್ಕಳಲ್ಲಿ ರಾಜ್ಯಾಧಿಕಾರವನ್ನಾರಿಗೆ ಒಪ್ಪಿಸಬೇಕೆಂದು ದಶರಥನಿಗೆ ಚಿಂತೆಯಾಯ್ತು. ಇದನ್ನು ತಿಳಿದುಕೊಂಡ ರಾಮನು ಸ್ವೇಚ್ಛೆಯಿಂದಲೇ ರಾಜ್ಯ ತ್ಯಜಿಸಿ ತಪಸ್ಸು ಮಾಡುವ ಉದ್ದೇಶದಿಂದ ಕಾಡು ಸೇರಿದನು. ಲಕ್ಷ್ಮಣನಿಗೆ ಸಿಂಹಾಸನ ನಿರಾಯಾಸವಾಗಿ ದೊರೆಯಿತು. ರೈತನ ಬೇಡಿಕೆಯಂತೆ ರಾಮನು ಅರಣ್ಯದಲ್ಲಿಯೇ ಸೀತೆಯನ್ನು ವಿವಾಹವಾಗಿ, ಮತ್ತೆ ವನವಾಸವನ್ನು ಬಿಟ್ಟು ನಗರಕ್ಕೆ ಆಗಮಿಸಿದನು.

ತುರ್ಕಿ ರಾಮಕಥೆ

ಪೂರ್ವ ತುರ್ಕಿಸ್ಥಾನದಲ್ಲಿ ರಾಮಕಥೆಯನ್ನು 'ಖೋತಾನಿ' ಎನ್ನುತ್ತಾರೆ. ಇದು ಚೀನೀ ರಾಮಾಯಣವನ್ನು ಹೋಲುತ್ತದೆ. ಬುದ್ಧನನ್ನು ರಾಮನೆಂದು ಉಲ್ಲೇಖಿಸಿರುವುದು ಇದರ ವೈಶಿಷ್ಟ್ಯ.

ದಶರಥನ ಪುತ್ರ ಸಹಸ್ರಬಾಹು ಪರಶುರಾಮನ ತಂದೆ (ಜಮದಗ್ನಿ)ಯ ಕಾಮಧೇನುವನ್ನು ಅಪಹರಿಸಿದನು. ಆನುದರಿಂದ ಪರಶುರಾಮನು ಸಹಸ್ರಬಾಹುವನ್ನು ಸಂಹರಿಸಿದನು. ಸಹಸ್ರಬಾಹುವಿನ ಮಕ್ಕಳಾದ ರಾಮ ಲಕ್ಷ್ಮಣರು ಯುವಕರಾಗಿದ್ದು, ಪರಶುರಾಮನ ಸೇಡು ತೀರಿಸಿಕೊಂಡರು. ರಾಮವನಗಮನ ಪ್ರಸಂಗವಿದರಲ್ಲೂ ಇದೆ. ರಾಮನು ಲಕ್ಷ್ಮಣನಿಗಾಗಿಯೇ ಕಾಡು ಸೇರಿದನು. ರಾಮ ಲಕ್ಷ್ಮಣರು ಸೀತೆಯನ್ನು ವಿವಾಹವಾದ ಉಲ್ಲೇಖವಿದರಲ್ಲಿದೆ. ವನಗಮನ ಸಂದರ್ಭದಲ್ಲಿ ರಕ್ಷಣೆಗಾಗಿ ಎಳೆದ ಲಕ್ಷ್ಮಣರೇಖೆಯ ವರ್ಣನೆಯೂ ತುರ್ಕಿ ರಾಮಕಥೆಯಲ್ಲಿ ದೊರೆಯುತ್ತದೆ.

ಇಂಡೊನೇಶಿಯನ್ ರಾಮಾಯಣ

ಇಂಡೋನೇಶಿಯಾದಲ್ಲಿ ಯೋಗೀಶ್ವರನೆಂಬ ಕವಿಯು ಬರೆದ ರಾಮಕಥೆ ಪ್ರಚಲಿತವಿದೆ. ಇದನ್ನು 'ಕಾಕಾವಿನ್' ಎನ್ನುತ್ತಾರೆ. ಈ ಕಥೆಯು ವಾಲ್ಮೀಕಿಯ ರಾಮಾಯಣವನ್ನೇ ಹೋಲುತ್ತದೆಂಬುದು ನಿರ್ವಿವಾದ; ಆದರೂ ಕೆಲವೆಡೆ ಅಲ್ಪ ಸ್ವಲ್ಪ ಬದಲಾವಣೆಗಳೂ ಇವೆ. ಹನುಮಂತನ ಮೂಲಕ ರಾಮನು ಸೀತೆಗೆ ಮುದ್ರಿಕೆಯನ್ನು ಕಳಿಸಿದ ಪ್ರಸಂಗವನ್ನು ವಾಲ್ಮೀಕಿ ವರ್ಣಿಸಿದನು. ಮುದ್ರಿಕೆಗೆ ಯೋಗೀಶ್ವರನು ಪತ್ರದ ರೂಪವನ್ನಿತ್ತನು. ವಾಲ್ಮೀಕಿಯ ಸೀತೆಯು ಚೂಡಾಮಣಿ ಗುರುತಿಗೆಂದು ಕಳಿಸಿದ್ದರೆ, ಯೋಗೀಶ್ವರನ ಸೀತೆಯು ಉತ್ತರ ರೂಪದ ಪತ್ರವನ್ನೇ ಬರೆದು ಕೊಟ್ಟಳು.

ಶಬರಿಯ ಪ್ರಸಂಗದಲ್ಲೂ ತುಸು ವೈಶಿಷ್ಟ್ಯವಿದೆ. ಯೋಗೀಶ್ವರನ ಶಬರಿ ರಾಮದರ್ಶನವಾದೊಡನೆಯೇ ಆತನೊಡನೆ ಹೇಳಿದಳು—ವರಾಹಾವತಾರದ ವೇಳೆ ವಿಷ್ಣುವು ನನ್ನ ಮಾಲೆಯನ್ನು ತಿಂದನು. ದುರ್ದೈವದಿಂದ ಸತ್ತು ಹೋದನು. ವಿಷ್ಣುವು ಸತ್ತ ಬಳಿಕ ನಾನವನ ಹೆಣವನ್ನು ಸವಿದೆನು. ಆದುದರಿಂದಲೇ ನನ್ನ ಮುಖಮಂಡಲ ಕಪ್ಪಾಯಿತು. ದಯವಿಟ್ಟು ನೀನು ನನ್ನ ಮುಖವನ್ನೊಂದು ಬಾರಿ ಸವರಿ ಬಿಡು; ಅದು ತೇಜೋವಂತವಾಗಲಿ.

ರಾವಣನ ಮಗ ಮೇಘನಾದನಿಗೆ ಏಳು ಜನ ಹೆಂಡಂದಿಯರಿದ್ದರೆಂದೂ ಇವರೆಲ್ಲರೂ ಲಕ್ಷ್ಮಣನೊಡನೆ ಯುದ್ಧ ಮಾಡುತ್ತಲೇ ಮೃತ್ಯುವನ್ನಪ್ಪಿದರೆಂದೂ ಯೋಗೀಶ್ವರನು ಹೇಳಿದ್ದಾನೆ.

ಜಾವನ್ ರಾಮಾಯಣ

ರಾಮ ಕಥೆಗೆ ಸಂಬಂಧಿಸಿದ ಗ್ರಂಥ 'ಸೇರತ್‌ರಾಮ್' ಜಾವಾದಲ್ಲಿ ಪ್ರಸಿದ್ಧ. ವಾಲ್ಮೀಕಿ ರಾಮಾಯಣ ಮತ್ತು 'ಸೇರತ್ ರಾಮ್'ಗಳಲ್ಲಿ ವರ್ಣಿಸಲಾದ ರಾಮಕಥೆಗಳಲ್ಲಿ ಬಹಳಷ್ಟು ಸಾಮ್ಯವಿದೆ. ಆದರೂ ಕೆಲವೊಂದು ವೈಚಿತ್ರ್ಯಗಳು ಉಲ್ಲೇಖನೀಯವಾಗಿವೆ. ಸೀತೆಯು ಜಾಟಾಯುವಿಗೆ ತನ್ನ ಉಂಗುರವನ್ನಿತ್ತು ಅದನ್ನು ರಾಮನಿಗೆ ಮುಟ್ಟಿಸುವಂತೆ ಕೇಳಿಕೊಳ್ಳುತ್ತಾಳೆ. ದಶರಥನಿಗೆ ಶಾಂತಾಳೆಂಬ ಮಗಳಿದ್ದಾಳೆ. ಲಕ್ಷ್ಮಣನ ಬತ್ತಳಿಕೆಯಲ್ಲಿ ಸುಗ್ರೀವನ ಕಣ್ಣೀರು ಒಟ್ಟು ಸೇರುತ್ತದೆ. ಕಿಷ್ಕಿಂಧೆಯಲ್ಲಿ ಸುಗ್ರೀವನನ್ನು ಪತ್ತೆ ಮಾಡುತ್ತಾರೆ—ಇದು ಜಾವಾದ ರಾಮಕಥೆಯ ವಿಲಕ್ಷಣಗಳು.

ಜಾವಾಕ್ಕೆ ಪೂರ್ವದಲ್ಲಿರುವ 'ಪನತರನ'ವೆಂಬಲ್ಲಿ ಒಂದು ಶಿವಮಂದಿರವಿದೆ. ಇದನ್ನು ೧ನೆಯ ಶತಮಾನದಲ್ಲಿ ನಿರ್ಮಿಸಲಾಯ್ತು. ಈ ಮಂದಿರದ ಕಟ್ಟೆಯೊಂದರಲ್ಲಿ ಸಂಪೂರ್ಣ ರಾಮಕಥೆಯನ್ನು ಕೆತ್ತಿದ್ದಾರೆ. ಇಂಡೋನೇಶ್ಯಾದ 'ಕಾಕಾವಿನ'ನ ರಾಮಕಥೆಗಿಂತ ಈ ಕೆತ್ತನೆಯ ರಾಮಕಥೆ ಸಂಪೂರ್ಣ ಬೇರೆಯಾಗಿದೆ. (—ಸರೇಷ)

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

NAVAYUGA 2-9-1971

Registered with the Registrar of News Papers for India under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಪಕ್ಷಾಂತರಿಗಳಿಗೆ ಸದಸ್ಯತ್ವ ನೀಡಿದರು

ಕರ್ನಾಟಕದಲ್ಲಿ ಇಂಡಿಕೇಟು ಸರಕಾರ ರಚನೆಯಾಗಬೇಕೋ ಬೇಡವೋ ಎಂಬ ಪ್ರಶ್ನೆ ಉದ್ಭವವಾದದ್ದು ಪಕ್ಷಾಂತರಗೊಂಡು ಬಂದ ಶಾಸಕರಿಗೆ ಪಕ್ಷದ ಸದಸ್ಯತ್ವ ನೀಡಬೇಕೋ ಬೇಡವೋ ಎಂಬಲ್ಲಿಂದ. ಶ್ರೀ ಸಿದ್ಧವೀರಪ್ಪ ಮೊದಲಾದವರು ನೀಡಬೇಕೆಂದು ವಾದಿಸಿ ಸರಕಾರ ರಚಿಸುವುದು ಖಚಿತವಾಗಿ ಮಂತ್ರಿಗಳನ್ನೂ ಆರಿಸಲು ತೊಡಗಿದ್ದರು. ಆದರೆ, ಶ್ರೀ ದೇವರಾಜ ಅರಸು ಮೊದಲಾದವರು ಅದನ್ನು ಪ್ರಬಲವಾಗಿ ವಿರೋಧಿಸಿದರು. ಬೆಂಗಳೂರಿನ ವಿವಾದ ಹೊಸದಿಲ್ಲಿಯಲ್ಲಿ ತೀರ್ಮಾನವಾಯ್ತು, ಅರಸರು ಗೆದ್ದರು; ಸಿದ್ಧವೀರಪ್ಪನವರು ತಲೆತಗ್ಗಿಸಿದರು.

ಇಂಡಿಕೇಟಿನ ಚುನಾವಣಾ ಸಮಿತಿಯ ರಚನೆಯ ವೇಳೆಯಲ್ಲೂ ಆ ಜಟಾಪಟಿ ಕಾಣಿಸಿಕೊಳ್ಳದಿರಲಿಲ್ಲ. ಅವರಿವರನ್ನು, ಇವರವರನ್ನು ಬೊಟ್ಟು ಮಾಡಿದರು. ಮೂರನೆಯವರ ರೊಟ್ಟಿಯೂ ಜಾರಿ ತುಪ್ಪಕ್ಕೆ ಬಿದ್ದೀತೋ ಎಂಬ ಶಂಕೆ- ಅಸಮಾಧಾನಗಳು ತಲೆದೋರಿದುವು. ರಾಜ್ಯಕೀಯ ಚತುರಂಗದಾಟ ಚತುರೆ ಶ್ರೀಮತಿ ಗಾಂಧಿಯವರು ಅದೇನೋ ಸಿಂಪಿಗತನ ಮಾಡಿದರು; 'ಎಲ್ಲರೂ ಗೆದ್ದರು; ಎಲ್ಲರೂ ಸೋತ್ತರು' ಕಥೆಯನ್ನು ಹೇಳಿದರು. ಈ ಬಾರಿಯೂ ಶ್ರೀ ಡಿಲ್ಲೀಶ್ವರರು ಅರಸರ ಅರಸುಗಿರಿಯನ್ನು ಮನ್ನಿಸಿದರಲ್ಲದೆ ಸಿದ್ಧವೀರಪ್ಪನವರ ವೀರ್ಯಕ್ಕೆ ಪ್ರಶಸ್ತಿ ನೀಡಲಿಲ್ಲ.

ಈಗ ಎಲ್ಲರೂ ರಾಜಿಯಾಗಿದ್ದಾರೆ. ಎಲ್ಲ ನಡೆದು ಅರಸರು ತಮ್ಮ ಸ್ಥಾನವನ್ನು ಧೃಢಮಾಡಿಕೊಂಡಿದ್ದಾರೆ. ಇಂಡಿಕೇಟ್ ನಾಯಕರಲ್ಲಿ ಒಬ್ಬರಾದ ಶ್ರೀ ಕೋಲೂರು ಮಲ್ಲಪ್ಪನವರು ಒಂದೆಡೆ ಮಾತನಾಡುತ್ತ ಸಂಸ್ಥಾ ಕಾಂಗ್ರೆಸ್ಸಿನಿಂದ ಮತ್ತು ಪಿಎಸ್‌ಪಿಯಿಂದ ಪಕ್ಷಾಂತರ ಮಾಡಿಕೊಂಡು ಬಂದವರಿಗೆಲ್ಲ ಸದಸ್ಯತ್ವ ನೀಡಲಾಗಿದೆ; ಇಂಥವರಲ್ಲಿ— ಮಂದಿಯನ್ನು ಎಐಸಿಸಿಯ ಸಕ್ರಿಯ ಸದಸ್ಯರನ್ನಾಗಿಯೂ ಮಾಡಿಕೊಳ್ಳಲಾಗಿದೆ'—ಎಂದರು. ಇದನ್ನು ಶ್ರೀ ಅರಸರು ಇದುವರೆಗೆ ಅಲ್ಲಗಳೆಯಲಿಲ್ಲ.

ಈಗ ಇಂತಹ ಸದಸ್ಯತ್ವ ನೀಡುವುದರ ಬದಲಿಗೆ ಆಗಲೇ ನೀಡುತ್ತಿದ್ದರೆ ಏನಾಗುತಿತ್ತು? ಇಂಡಿಕೇಟು ಸರಕಾರ ರಚಿಸುತಿತ್ತು! ಆಗ ಉದ್ಭೂತವಾಗಬಹುದಾಗಿದ್ದ ಪ್ರಶ್ನೆ 'ಮುಖ್ಯಮಂತ್ರಿ ಯಾರಾಗಬೇಕು?' ಎಂಬುದೆಂಬುವಕ್ಕೆ ಈಗ ಮತ್ತಷ್ಟು ಸಮರ್ಥನೆ ದೊರೆಯಿತು. ಶ್ರೀ ಸಿದ್ಧವೀರಪ್ಪನವರು ತಾನು ಮೊದಲೇ ಪಕ್ಷದ ನಾಯಕನಾಗಿರುವುದರಿಂದ ತನಗೇ ಆ ಪಟ್ಟ ಸಲ್ಲಬೇಕೆಂದು ಪಟ್ಟು ಹಿಡಿಯದಿರುತ್ತಿದ್ದರೆ, ಪ್ರಾಯಃ ಶ್ರೀ ಅರಸರು ಅಂದೇ ಪಕ್ಷಾಂತರಿಗಳಿಗೆಲ್ಲ ಸದಸ್ಯತ್ವ ನೀಡುತಿದ್ದರು. ಹಾಗಾಗದೆ ಇದ್ದುದರಿಂದ 'ಪಕ್ಷಾಂತರಿಗಳನ್ನು ಬಹಿಷ್ಕರಿಸುವ' ವೀರ ಘೋಷಣೆ ಮಾಡಿದರು.

ಇಂದು ಪರಿಸ್ಥಿತಿ ಬದಲಾಗಿದೆ. ಚುನಾವಣೆಗಳಿಗೆ ಹುದ್ದರಿಗಳನ್ನು ಆಯುವ ಸಮಿತಿಯ ಅಗ್ರೇಸರ ಛತ್ರವೂ ಅರಸರ ತಲೆ ಮೇಲಿದೆ. ಚುನಾವಣೆಗಳಲ್ಲಿ ಬಹುಮತ ಗಳಿಸುವುದು ಅವರದ್ದು ಆಶಯ. ಇಂತಹ ವಿಜಯ ಪಡೆಯಬೇಕಾದರೆ, ಕೆಲವು 'ಮಹಾವ್ಯಕ್ತಿ'ಗಳನ್ನು ಬಳಗು ಮಾಡಿಕೊಳ್ಳಲೇಬೇಕು, ಅದಕ್ಕಾಗಿ ಪಕ್ಷಾಂತರಿಗಳನ್ನು ಪುರಸ್ಕರಿಸಲೇಬೇಕು. ಅಂದಿಗೆ ತನ್ನ ಸ್ಥಾನದ ಭದ್ರತೆಗಾಗಿ ಅವರನ್ನು ತ್ರಿಶಂಕುವಿನಲ್ಲಿಟ್ಟವರೇ ಇಂದು ಅದೇ ಉದ್ದೇಶದಿಂದ ಪುರಸ್ಕರಿಸಲು ಮುಂದೆ ಬಂದಿದ್ದಾರೆ.

ಇದರಿಂದ ಒಂದು ಮಾತು ಹೊರಪಡುತ್ತದೆ ಶ್ರೀ ದೇವರಾಜ ಅರಸರು ಮುಖ್ಯಮಂತ್ರಿಯಾಗುವ ಕನಸು ಕಂಡಿದ್ದರು; ಅದು ನನಸಾಗದ್ದರಿಂದ, ಯಾರಿಗೂ ಬೇಡವೆಂಬ ನೀತಿ ತಳೆದರು. ಇದೀಗ ಅವರ ಪಕ್ಷ ಬಹುಮತ ಗಳಿಸಿತೆಂದರೆ, ಅವರು ಮುಖ್ಯಮಂತ್ರಿಯಾಗುವ ಸಲ್ಲಕ್ಷಣಗಳು ಸ್ಪಷ್ಟವಾಗಿವೆ. ತನಗೆ ಬೇಕಾದವರೇ ಟಿಕೇಟು ಪಡೆಯುವಂತೆ ಅವರು ಮಸಲತ್ತು ಮಾಡುತ್ತಾರೆ. ಬೇರೆಬೇರೆ ಪಕ್ಷಗಳಲ್ಲಿರುವ ಪ್ರತಿಷ್ಠಿತ, ಆದರೆ ಬಾಲಂಗೋಚಿಗಳಿಗೆ, ಮಂತ್ರಿಪಟ್ಟದ ಅಥವಾ ಯಾವುದಾದರೊಂದು ಬೋರ್ಡಿನ, ಟ್ರಸ್ಟಿನ ಲಾಭಬಡಕ ಹುದ್ದೆಯ ಆಮಿಷ ತೋರಿಸಿ ಪಕ್ಷಾಂತರಕ್ಕೆ ಉತ್ತೇಜನ ನೀಡುತ್ತಾರೆ. ಕೇಂದ್ರದಲ್ಲಂತೂ ಶ್ರೀ ಅರಸರು ಅಂದರೆ, ರಾಜಪ್ರಭುತ್ವದ ವೇಳೆಯ ಮೈಸೂರರಸರಿಗಿಂತಲೂ ಪ್ರಭಾವಿ ವ್ಯಕ್ತಿಯೆನಿಸಿದ್ದಾರೆ. ಅದರಿಂದಲೇ ನೂರಕ್ಕೆ ನೂರು ದಿಗ್ವಿಜಯ ಇಂಡಿಕೇಟು ಪಡೆದದ್ದು ಎಂಬುದಿನ್ನೂ ಮಸುಳಿಸಿ ಹೋಗಿಲ್ಲ.

ಶ್ರೀ ನಿಜಲಿಂಗಪ್ಪ ಮತ್ತು ಶ್ರೀ ವೀರೇಂದ್ರ ಪಾಟೀಲರ ಮೇಲೆ ವ್ಯಕ್ತಿಗತ ದ್ವೇಷ ಕಟ್ಟಿಕೊಂಡದ್ದರಿಂದ ಶ್ರೀ ಅರಸರಿಂದು ಇಂಡಿಕೇಟಿನ ಪ್ರಶ್ನಾತೀತ ನಾಯಕರಾಗಿದ್ದಾರೆ. ಈ ನಾಯಕತ್ವದ ಹಿಂದೆ ಮುಖ್ಯವಾಗಿ ಎರಡು ಶಕ್ತಿಗಳವೆಯೆಂಬುದು ಮುಂದಿನ ಕೆಲವು ವರ್ಷಗಳಲ್ಲೇ ದೃಗ್ಗೋಚರವಾಗದಿರದು. ಮೊದಲನೆಯದಾಗಿ ಅಧಿಕಾರದ ಮೇಲಿನ ಮೋಹ; ಎರಡನೆಯದು ಒಂದಾದ ಕರ್ನಾಟಕವನ್ನು ಎರಡು ಮಾಡುವುದು.

●●

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ.

O. S. 126/1971

ಉಡುಪಿ ಅದಮಾರು ಮಠದ ಶ್ರೀ ವಿಭುದೇಶ ತೀರ್ಥ ಸ್ವಾಮಿಯರು —ವಾದಿರು

ಮತ್ತು

ಸೀತಾರಾಮ ಬಲ್ಲಾಳ ಕೂಡಾ —ಪ್ರತಿವಾದಿರು

ಇವರೊಳಗೆ

1ನೇ ಪ್ರತಿವಾದಿ ಸೀತಾರಾಮ ಬಲ್ಲಾಳ-ಕಾವು ಸೆಡ್ತಿ ಮಗ.

2ನೇ ಶಿವರಾಮ ಬಲ್ಲಾಳ, 3ನೇ ಕಮಲ, 4ನೇ ಜಾಹ್ನವಿ, 6ನೇ ದೇವರಾಯ ಬಲ್ಲಾಳ—ಕೃಷ್ಣಂಮ ಸೆಡ್ತಿ ಮಕ್ಕಳು.

ಉಡುಪಿ ತಾಲ್ಲೂಕು ಮೂಡಬೆಟ್ಟು ಗ್ರಾಮದ ಕಟಪಾಡಿ.

ಸದ್ರಿ ಪ್ರತಿವಾದಿರಿಗೆ ಯೀ ಮೂಲ್ಕ ತಿಳಿಯಪಡಿಸುವದೇನಂದ್ರೆ

ವಾದಿರ ಮಠಕ್ಕೆ ಪ್ರತಿವಾದಿರಿಂದ ಬರತಕ್ಕ ಮೂಲಗೇಣಿ ಬಾಕಿ ಅಸಲು ಬಡ್ಡಿಗೆ ಮಾಡಿದ ಮೇಲ್ಕಂಡ ದಾವೆಯು ತಾ. 7-9-71ಕ್ಕೆ ಯಿಡೋಣಾಗಿಯದೆ. ಆ ಕುರಿತು ಸದ್ರಿ 1, 2 to 4 ಮತ್ತು 6ನೇ ಪ್ರತಿವಾದಿರಿಗೆ ಆಕ್ಷೇಪ ಹೇಳತಕ್ಕದ್ದು ಯಿದ್ರೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟಿನ ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಯೆಂಬ ಸಂಗ್ತಿ ತಿಳಿಸೋಣಾಗಿಯದೆ.

V. R. Kidyoor
Advocate for Plaintiff

ಉಡುಪಿ, 16-8-71

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಜನಪ್ರಿಯ ಆಂಗ್ಲ ಸ್ವಯಂಬೋಧಿನಿ ಬೆಲೆ: ರೂ. 2-00

●

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ. ಬೆಲೆ: ರೂ. 1-50

●

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಸಮೂಲ ಅನುವಾದ. 450 ಪುಟಗಳ ಸುಂದರ ಕೈಹೊತ್ತಗೆ ಬೆಲೆ: ರೂ. 2-00

●

ಮನೆ-ಮದ್ದು Home Remedies

ಡಾ|| ವಿ. ಆರ್. ಕೊರಡ್ಕಲ್‌ರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ಸುಲಭ ವಿಧಾನಗಳಿವೆ, ಹೆಂಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟ ಸಂಗ್ರಾಹ್ಯ ಪುಸ್ತಕ. ಬೆಲೆ: ರೂ. 2-00

ವಿ. ಸೂ. ವಿ. ಪಿ. ಮಾಡುವುದಿಲ್ಲ. ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಅಂಚೆ ವೆಚ್ಚ ಸೇರಿಸಿ ಮನಿಯಾರ್ಡರು ಮಾಡಿದರೆ ಬುಕ್ ಪೋಸ್ಟ್ ಮಾಡಲಾಗುವುದು.

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ವಾಲುಕೋಟಿ, ಉಡುಪಿ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 184/1962 I. A. II

ವಾದಿ— ನಾರಾಯಣ ಪೈ.

ಪ್ರತಿವಾದಿರು— ಮೀರಾಬ್ಯಾ ಕೂಡಾ

ಕುಂದಾಪುರ ತಾಲ್ಲೂಕು ಕೋಟೇಶ್ವರ ಗ್ರಾಮದಲ್ಲಿರುವ ನಾರಾಯಣ ಪೈಗಳ ಮಕ್ಕಳು ಮೀರಾಬ್ಯಾ! ರಾಧುಬ್ಯಾ! ಲಕ್ಷ್ಮೀದೇವಿ! ಹಸನ್ ಸಾಹೇಬರ ಮಗ ಸುಲ್ತಾನ್ ಸಾಹೇಬ! ವಾಮನ ಪೈಗಳ ಮಗ ವಿಟ್ಠಲ ಪೈ! ಕೂಡಾ ಜನರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ.

ಮೇಲ್ಕಂಡ ಡಿಕ್ರಿಯ ಬಾಬ್ತು ಹಣ ಡಿಕ್ರಿಯಿಂದ ಕಾಣುವ ಆಸ್ತಿ ಮಾರಾಟದಿಂದ ಬರ ಮಾಡಿಕೊಳ್ಳುವರೆ ಸದ್ರಿ ಪ್ರಿಲಿಮಿನರಿ ಡಿಕ್ರಿಯ ಮೇರೆಗೆ ಫೈನಲ್ ಡಿಕ್ರಿ ಕೊಡಿಸಬೇಕೆಂತ ಅರ್ಜಿದಾರನು ದಾಖಲ್ಲು ಮಾಡಿದ ಮೇಲಿನ ಅರ್ಜಿಯು ತಾರೀಕು 4-9-1971ಕ್ಕೆ ತನ್ಕಿಗೆ ಇರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಹಗಲು 11ಗಂಟೆಗೆ ಮೇಲಿನ ಕೋರ್ಟಿನ ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿಯದೆ.

Sd/ N. S. Parameshwariah
Advocate for Petr.
Date 17-8-71 Coondapoor

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ಸ್ಥಾಪಕರು :
ದಿ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಸಂಪುಟ ೫೧
ಸಂಚಿಕೆ ೨

Vol. 51
No. 2

ಉಡುಪಿ, ೯—೯—೧೯೭೧

ಅಚ್ಯುತ ಮೆನನ್ನರೊಡನೆ

ಇಂಡಿಕೇಟ್ ಬೆಕ್ಕಿನ ಚಿನ್ನಾಟ ನಡೆದಿದೆ

ಕೇರಳ ವಿಧಾನ ಸಭೆಯಲ್ಲಿ ಅಧಿಕ ಸ್ಥಾನಪನ್ನ ಪಕ್ಷ ಇಂಡಿಕೇಟು. ಆದರೆ, ಅದು ತಾನು ಸರಕಾರವನ್ನು ರಚಿಸುವ ಗೋಜಿಗೆ ಹೋಗದೆ ಅಚ್ಯುತ ಮೆನನ್ನರ ಸಂಯುಕ್ತ ರಂಗದ ಸರಕಾರಕ್ಕೆ ಬೆಂಬಲ ನೀಡಲು ನಿರ್ಧರಿಸಿತು. ನಿಚ್ಚಳ ಬಹುಮತವಿಲ್ಲದೆ ಸರಕಾರ ರಚಿಸಬಾರದೆಂಬುದೇ ಅದರ ನಿರ್ಧಾರವಾಗಿತ್ತು. ಇಂಡಿಕೇಟಿನ ಬೆಂಬಲವಿಲ್ಲದೇನೇ ಅಧಿಕಾರದಲ್ಲಿ ಉಳಿಯಲು ಸಾಧ್ಯವಿಲ್ಲದ ಮೆನನ್ನರು ಸರಕಾರದಲ್ಲಿ ಪಾಲ್ಗೊಳ್ಳುವ ಕರೆಯನ್ನು ಅದಕ್ಕೆ ಬಹು ಹಿಂದೆಯೇ ನೀಡಿದ್ದರು. ಆದರೂ ರಾಜ್ಯಕೀಯ ಪರಿಸ್ಥಿತಿಗಳನ್ನು ಕಾದು ನೋಡಿದ ಇಂಡಿಕೇಟು ಮೊನ್ನೆ ಮೊನ್ನೆ ತಾನೇ ತನ್ನ ಶರ್ತಗಳನ್ನು ಹೇರಿತು.

ಈ ಶರ್ತಗಳಂತೆ ಸಚಿವ ಸಂಪುಟದಲ್ಲಿ ಇಂಡಿಕೇಟಿಗೆ ಉಪ ಮುಖ್ಯಮಂತ್ರಿ ಸ್ಥಾನವನ್ನು ಕೊಡಬೇಕು. ಗೃಹ, ಕಂದಾಯ ಮತ್ತು ಕೈಗಾರಿಕೆಗಳಂತಹ ಪ್ರಮುಖ ಮಂತ್ರಿ ಶಾಖೆಗಳನ್ನೇ ತಮ್ಮವರಿಗೆ ನೀಡಬೇಕು. ಪೂರ್ಣ ಮಂತ್ರಿ ಮಂಡಳದ ಗಾತ್ರ ೧೩ ಜನ ಮಂತ್ರಿಗಳಿಗೆ ಪರಿಮಿತವಿರಬೇಕು, ಮತ್ತು ಇವರಲ್ಲಿ ಆರು ಇಂಡಿಕೇಟಿಗರಾಗಬೇಕು.

ಇದನ್ನು ಸಂಯುಕ್ತರಂಗವು ಮಾನ್ಯ ಮಾಡುವುದಾದರೆ, ಅಚ್ಯುತ ಮೆನನ್ನರು ಕೆಲವು ಹೊಸ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅವರ ಪಕ್ಷವು ಒಬ್ಬ ಸಚಿವರನ್ನು ಹಿಂದೆಗೆತುಕೊಳ್ಳುವುದು ಆಗತ್ಯ. ಹಾಗೆ ಮಾಡಿದರೂ ಪರಿಮಿತಿಯಿಂದಾಗಿ ಇಂಡಿಕೇಟಿಗೆ ಆರು ಸ್ಥಾನಗಳನ್ನು ನೀಡುವುದು ಸಾಧ್ಯವಾಗಲಾರದು. ಅದು ಐದರಿಂದಲೇ ತೃಪ್ತಿ ಪಡಬೇಕು.

ಇಂಡಿಕೇಟಿನ ಬೇಡಿಕೆಗಳಲ್ಲಿ ಬರಿಯ ಒಂದನ್ನು ಮಾತ್ರ ಅಚ್ಯುತ ಮೇನನ್ನರು ಒಪ್ಪಲಿಲ್ಲ. ಉಪ ಮುಖ್ಯಮಂತ್ರಿ ಹುದ್ದೆಯನ್ನು ನಿರ್ಮಾಣ ಮಾಡಿ ಅದನ್ನು ಇಂಡಿಕೇಟಿಗೆ ನೀಡಲು ಅವರದ್ದೇನೂ ಅಭ್ಯಂತರವಿಲ್ಲ. ಸದ್ಯ ತನ್ನ ಪಕ್ಷದ ಕೈಯಲ್ಲಿರುವ ಅರ್ಥ ಶಾಖೆಯನ್ನು ಅವರು ಬಿಟ್ಟುಕೊಡಲು ತಯಾರಿದ್ದಾರೆ. ಗೃಹ ಶಾಖೆಯನ್ನು ಬಿಟ್ಟುಕೊಡುವಂತೆ ಮುಸ್ಲಿಂ ಲೀಗಿನ ಮನವೊಲಿಸುವಲ್ಲವರು ಸಮರ್ಥರಾಗಿದ್ದಾರೆ. ಆದರೆ, ಸಂಪುಟದಲ್ಲಿ ೧೩ ಮಂತ್ರಿಗಳಿಗಿಂತ ಹೆಚ್ಚಿರಬಾರದೆಂಬ ಒಂದಂಶ ಮಾತ್ರ ಅವರಿಗೂ ಅವರ ನಾಯಕತ್ವದ ಸಂಯುಕ್ತರಂಗಕ್ಕೂ ಸಮ್ಮತವಿಲ್ಲ. ಇದನ್ನು ಒಪ್ಪಿಕೊಳ್ಳುವುದರಿಂದ ಅಂಗಪಕ್ಷಗಳಲ್ಲಿ ಅತೃಪ್ತಿ ಮೂಡಿ, ಸರಕಾರದ ಭದ್ರತೆಗೂ ಹಾನಿ ಸಂಭವಿಸಿದರೆ?

ಇಂಡಿಕೇಟ್ ನಾಯಕ ಅಂಟನಿಯವರು ಅಚ್ಯುತ ಮೆನನ್ನರ ನಿರ್ಧಾರದಿಂದ ಕುಪಿತರಾಗಲಿಲ್ಲ. ಪರಿಸ್ಥಿತಿಯನ್ನು ಕೇಂದ್ರಕ್ಕೆ ವಿವರಿಸುವುದಾಗಿ ಸಣ್ಣ ಹೇಳಿಕೆ ನೀಡಿ ಸುಮ್ಮನುಳಿದಿದ್ದಾರೆ. ಸದ್ಯಕ್ಕೆ ತಮ್ಮ ಬೆಂಬಲ ಹಿಂದಿನಂತೆಯೇ ಮುಂದುವರಿಯುವ ಭರವಸೆಯನ್ನೂ ಅವರು ನೀಡಿದ್ದಾರೆ. 'ಆದರೆ, ತಮ್ಮ ಬೇಡಿಕೆಗಳು ಪೂರ್ಣವಾಗಿ ಅಂಗೀಕಾರವಾಗದೆ ಇಂಡಿಕೇಟು ಸಚಿವ ಸಂಪುಟದಲ್ಲಿ ಪಾಲುಗೊಳ್ಳುತ್ತದೆಂದು ಮಾತ್ರ ನಿರೀಕ್ಷಿಸಲಾಗದು.

ಇಂಡಿಕೇಟ್ ಬೆಕ್ಕು ಸಂಯುಕ್ತರಂಗದ ಇಲಿಯೊಡನೆ ಚಿನ್ನಾಟವಾಡುವಂತೆ ಭಾಸವಾಗುತ್ತದೆ. ತಮ್ಮದು ಇಲಿಯ ಸ್ಥಾನವೆಂಬುದು ಮೆನನ್ನರಿಗೂ ತಿಳಿದಿದೆ. ಆದುದರಿಂದಲೇ 'ನಾವು ಇಂಡಿಕೇಟಿನ ಮಹತ್ವವನ್ನು ಮನಗಂಡಿಲ್ಲವೆನ್ನುವುದು ತಪ್ಪು ತಿಳುವಳಿಕೆ' ಎಂದವರು ಹೇಳಿದ್ದಾರೆ. ನಿಜವಾಗಿಯೂ ಇಂಡಿಕೇಟು ಸರಕಾರದಲ್ಲಿ ಪಾಲುಗೊಳ್ಳಲು ಬಯಸುತ್ತಿದೆಯೋ ಎಂಬುದು ಪ್ರಶ್ನಾರ್ಥಕವಾಗಿಯೇ ನಿಲ್ಲುತ್ತದೆ. ಒಂದುವೇಳೆ, ಹಾಗದು ಬಯಸುತಿದ್ದರೆ, ಹೊಸ ಸಚಿವ ಸಂಪುಟ ರಚನೆಯ ವೇಳೆಯಲ್ಲೇ ಸೇರಿಕೊಳ್ಳಬಹುದಾಗಿತ್ತು. ಅಥವಾ ಸಂಯುಕ್ತರಂಗದ ನಾಯಕತ್ವವನ್ನೇ ತಾನು ಇಟ್ಟುಕೊಳ್ಳಬಹುದಿತ್ತು. ಕಮ್ಯುನಿಸ್ಟರನ್ನೂ ಮುಸ್ಲಿಂ ಲೀಗಿಗಳನ್ನೂ ಕೂಡಿಕೊಂಡು ಅದು ಸರಕಾರ ರಚಿಸಲು ಮನಸ್ಸು ಮಾಡಲಿಲ್ಲ. ಕಾರಣ ಸ್ಪಷ್ಟ—ಕಮುನಿಸ್ಟರು ವಿದೇಶೀನಿಷ್ಠರು; ಮುಸ್ಲಿಂ ಲೀಗಿಗಳು ಜಾತೀಯವಾದಿಗಳು. ಚುನಾವಣೆಯ ವೇಳೆಯೇ ನುಂಗಿದ ವೈತ್ರಿಯ ಕಹಿಗುಳಿಗೆಯನ್ನು ಅರಗಿಸಿಕೊಳ್ಳಲು ಅದಕ್ಕೆ ಕಷ್ಟವಾಯ್ತು. ಮತ್ತೆ ಸರಕಾರವನ್ನೂ ರಚಿಸಿದರೆ, ರಕ್ತವೆಲ್ಲಾ ಕಹಿಯೇ ಕಹಿ. ಅದಕ್ಕೆಂದೇ ಅದು ಹೊಸ ತಂತ್ರ ಹೂಡಿತು. ಹೊರಗುಳಿದೇ ಬೆಂಬಲ ನೀಡುವ ಭರವಸೆ ನೀಡಿತು. ಅನುಕೂಲ ವಾತಾವರಣವೇರ್ಪಟ್ಟಾಗ ಮುಂದಿನ ಹೆಜ್ಜೆಯಿಡುವುದಾಗಿ ನಂಬಿಸಿತು.

ಶ್ರೀಮತಿ ಇಂದಿರಾಗಾಂಧಿಯವರು ಅಚ್ಯುತ ಮೆನನ್—ಮಹಮ್ಮದ ಕೋಯಾರಿಂದ ತನಗಾವಶ್ಯಕವಾದುದನ್ನು ಧಕ್ಕಿಸಿಕೊಂಡರು. ಇದೀಗ ಅವರನ್ನು ನುಂಗಿಬಿಟ್ಟು, ತನ್ನದೇ ಸರಕಾರ ಸ್ಥಾಪಿಸಬಲ್ಲೆನೆಂಬ ಅಚಲ ವಿಶ್ವಾಸವವರದು. ಆದಕ್ಕೆಂದು ಅಚ್ಯುತಮೆನನ್ನರ ಸರಕಾರವುರುಳಬೇಕು; ೧೯೭೨ರ ಆರಂಭದಲ್ಲೇ ಅಲ್ಲಿಯೂ ಚುನಾವಣೆ ನಡೆಯಬೇಕು. ಅದರಲ್ಲಿ ಬಹುಮತಗಳಿಸಬಲ್ಲೆನೆಂಬ ಧೈರ್ಯ ಆಕೆಯದ್ದು.

ಆದುದರಿಂದಲೇ ಮಂತ್ರಿಮಂಡಳ ಸೇರುವ ಪ್ರಸ್ತಾಪ–ಸ್ವೀಕಾರಕ್ಕೆ ಅಯೋಗ್ಯವಾದ ಶರ್ತಗಳು. ಮುಂದೆ, ಬೆಂಬಲದ ಹಿಂದೆಗೆತ ನಡೆದು ಮೆನನ್ನರು ರಾಜೀನಾಮೆ ನೀಡುವಂತೆ ಮಾಡುವ ಸುವ್ಯವಸ್ಥಿತ ಕಾರ್ಯಕ್ರಮ. ಇದು ಮುಂದಿನ ಎರಡು—ಮೂರು ತಿಂಗಳೊಳಗೆಯೇ ನಡೆಯಬೇಕು. ಆದರೆ, ಇದರ ಸುಳಿವು ಮತ್ತಾರಿಗೂ ತಿಳಿಯಬಾರದು.

ಹಲವಾರು ಸರಕಾರಗಳನ್ನು ಬೇರೆ ಬೇರೆ ರೀತಿ—ವಿಧಾನಗಳಿಂದ ಮನೆಗೆ ಕಳಿಸಿದ ಶ್ರೀಮತಿ ಗಾಂಧಿಯವರಿಗೆ ಅಚ್ಯುತ ಮೆನನ್ನರನ್ನೂ ಅಟ್ಟಿ ಬಿಡುವುದು ಕಷ್ಟದಾಯಕವಲ್ಲ. ಅವರ ಕೈಯಲ್ಲೇ ಬಲವಾದ ದೊಣ್ಣೆಯಿದೆ. ಒಂದೊನ್ಮೆ ಬೀಸಿಬಿಟ್ಟರೆ ಮುಗಿಯಿತು. ಇದಕ್ಕೊಂದು ಸುವರ್ಣಾವಕಾಶವನ್ನೇ ಆಕೆ ಕಾಯುತಿದ್ದಾರೆ.

ಇಂತಹ ಸಂದೇಹ ಬರುವುದಕ್ಕೆ ಬಲವಾದ ಕಾರಣಗಳಿವೆ. ಇಂಡಿಕೇಟು ಮೆನನ್ನರ ಸರಕಾರವುರುಳಬಾರದೆಂದು ಪ್ರಾಮಾಣಿಕವಾಗಿ ಬಯಸುತ್ತಿರುವುದಾದರೆ, ಅದು ಈಗಿನಂತೆಯೇ ಸಂಪೂರ್ಣ ಬೆಂಬಲ ನೀಡಿಯೇ ತೃಪ್ತಿಗೊಳ್ಳಬಹುದು. ಅಥವಾ ಸಂಯುಕ್ತ ರಂಗದ ಅಂಗ ಪಕ್ಷಗಳನ್ನೂ ಕೂಡಿಕೊಂಡು ಯಾವುದಾದರೂ ಒಮ್ಮತದ ನಿರ್ಧಾರಕ್ಕೆ ಬರಬಹುದು. ಅದೂ ಅಸಾಧ್ಯವಾದರೆ, ವಿವಿಧ ಪಕ್ಷಗಳ ಬಲದ ಪ್ರಮಾಣದಲ್ಲಿ ಮಂತ್ರಿ ಸ್ಥಾನಗಳನ್ನು ಹಂಚಿಕೊಳ್ಳಬಹುದು; ೧೩ರ ಪರಿಮಿತಿಯನ್ನು ಹಿಂದೆಗೆದುಕೊಂಡರೆ ಎಲ್ಲವೂ ಸರಿಹೊಂದುತ್ತದೆ. ಕೇಂದ್ರದಲ್ಲಿ ಇಂತಹ ಪರಿಮಿತಿಯಿರಬೇಕೆಂಬುದನ್ನು ತಾತ್ವಿಕವಾಗಿ ಒಪ್ಪಿಕೊಂಡರೂ ಅದನ್ನು ಕಾರ್ಯರೂಪಕ್ಕೆ ತರಲು ನಿರಾಕರಿಸಿದ ಇಂಡಿಕೇಟು ಕೇರಳದಲ್ಲಿ ಆ ಬಗ್ಗೆ ಪಟ್ಟು ಹಿಡಿಯುವುದರ ಅರ್ಥವೊಂದೇ—ಅಲ್ಲಿ ಮರುಚುನಾವಣೆಗಳಿಗೆ ದೂರವಿಲ್ಲ.

●●

ತಮಿಳುನಾಡೂ ಒಪ್ಪಿಕೊಂಡಿತು

ಮುಕ್ತಪಾನ - ಸಂಪತ್ತಿಗೆ ಕಾಮಧೇನು

ಪಾನನಿರೋಧವನ್ನು ಅವಿಭಾಜ್ಯ ಕಾಂಗ್ರೆಸ್ಸು ತನ್ನ ಪ್ರಮುಖ ನೀತಿಯನ್ನಾಗಿಟ್ಟುಕೊಂಡು ಸ್ವಾತಂತ್ರ್ಯಾನಂತರ ಬೇರೆ ಬೇರೆ ರಾಜ್ಯಗಳಲ್ಲಿ ತಾನು ಅಧಿಕಾರಕ್ಕೆ ಬಂದಾಗ ಶಾಸನ ರೀತ್ಯಾ ಜ್ಯಾರಿಗೊಳಿಸಿತು. ಆದರೆ, ಕೆಲಕಾಲಾನಂತರ, ಕಾಂಗ್ರೆಸ್ಸು ಸರಕಾರಗಳಿಗೇ ತಾವು ಮಾಡಿದ ಶಾಸನವು ಅಯಶಸ್ವಿಯಾದುದು ಅಥವಾ ಅದನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರುವುದು ಅಸಾಧ್ಯವೆಂಬುದು ಮನವರಿಕೆಯಾಯ್ತು. ಪಾನ-ಪ್ರತಿಬಂಧ ಸಂಬಂಧದಲ್ಲಿ ದಿಟ್ಟಹೆಜ್ಜೆಯನ್ನು ಮೊತ್ತ ಮೊದಲಿಟ್ಟ ಮಹಾರಾಷ್ಟ್ರಸರಕಾರವೇ ಆದನ್ನುಸಡಿಲುಗೊಳಿಸಲು ಮೊದಲಾಯ್ತು. ಅದನ್ನು ಅನುಸರಿಸಿ ಉಳಿದ ಕೆಲವು ರಾಜ್ಯಗಳೂ ಮೊದ ಮೊದಲಿಗೆ ಶಾಸನವನ್ನು ಸಡಿಲು ಗೊಳಿಸಿ, ಮುಂದೆ ಮುಕ್ತ ಪಾನಕ್ಕೆ ಆಸ್ಪದ ನೀಡಿದುವು. ಅಂದರೆ, ಭಾರತದಲ್ಲಿ ಪಾನ ಪ್ರತಿಬಂಧವು ಸಪೂರ್ಣ ಅಯಶಸ್ವಿಯಾದುದನ್ನು ನಾವು ಕಣ್ಣಾರೆ ಕಂಡೆವು.

ಮಹಾತ್ಮಾಗಾಂಧಿಯವರ ಆದರ್ಶಗಳಲ್ಲಿ ಪಾನಪ್ರತಿಬಂಧಕ್ಕೆ ಮಹತ್ವ ಹೆಚ್ಚು. ಸ್ವಾತಂತ್ರ್ಯ ಪೂರ್ವದಲ್ಲಿ ಕಳ್ಳಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದವರೇ ಸ್ವಾತಂತ್ರ್ಯದ ಉದಯಕಾಲದಲ್ಲಿ ಶಾಸನವನ್ನು ಜ್ಯಾರಿಗೆ ತಂದವರೇ ಅದರ ತಾರುಣ್ಯದಲ್ಲಿ ಪಾನಾಸಕ್ತರಿಗೆ ಮುಕ್ತಾವಕಾಶ ಒದಗಿಸಿಕೊಟ್ಟರು ಆದರ್ಶ ಒತ್ತಟ್ಟು, ವ್ಯವಹಾರ ಮತ್ತೊತ್ತಟ್ಟು ಎಂಬುವಕ್ಕೆ ಇದಕ್ಕಿಂತ ಬೇರೆ ನಿದರ್ಶನ ಅನಗತ್ಯ.

ತಮಿಳುನಾಡಿನಲ್ಲಿ ಕಾಂಗ್ರೆಸ್ಸು ಬಹುಮತವನ್ನು ಕಳೆದು ಕೊಂಡು ದ್ರಾವಿಡ ಮುನ್ನೇತ್ರ ಕಳ್ಗಗಂ ಸರಕಾರ ಬಂದು ಸುಮಾರು ಐದು ವರ್ಷವಾಗುತ್ತ ಬಂತು. ಅಧಿಕಾರಸೂತ್ರ ಹಿಡಿದ ಮೊದಲಿಗೆ ಮುಖ್ಯಮಂತ್ರಿಯಾಗಿದ್ದ ಅಣ್ಣಾದೊರೈಯವರು ಪಾನನಿರೋಧ ನೀತಿಯನ್ನು ಬಿಟ್ಟುಕೊಡಲು ಸಿದ್ಧರಾಗಲಿಲ್ಲ. ಅವರು ಅಧಿಕಾರದಲ್ಲಿರುವಾಗಲೇ ನೆರೆಯ ರಾಜ್ಯಗಳೆಲ್ಲವೂ ಶಾಸನವನ್ನು ಸಡಿಲಗೊಳಿಸಿದುವು; ಅಥವಾ ಸಂಪೂರ್ಣ ಕಿತ್ತು ಹಾಕಿದುವು. ಹಾಗಿದ್ದರೂ ಅಣ್ಣಾದೊರೈ ವಿಚಲಿತರಾಗಲಿಲ್ಲ; ತಿವರು ತಮ್ಮ ನಿಲುವಿಗೆ ದೃಢವಾಗಿ ಅಂಟಿಕೊಂಡರು.

ಅಣ್ಣಾದೊರೈ ನಿಧನಾನಂತರ ದ್ರಾಮುಕದ ಗತಿವಿಧಿಗಳೇ ಬದಲಾದುವು. ರಾಜ್ಯಕಾರಣಿಗಳಿಗೆ ಸಹಜವಾದ ಅಧಿಕಾರ ವ್ಯಾಮೋಹ ಮತ್ತು ತಜ್ಜನ್ಯ ಬಿರುಕುಗಳು ಮಾತ್ರವಲ್ಲ, ಪಾನ ನಿರೋಧದ ಬಗ್ಗೆಯೂ ಪಕ್ಷದಲ್ಲಿ ಭಿನ್ನಮತ ತಲೆದೋರಿತು. ಈ ಶಾಸನದಿಂದ ರಾಜ್ಯ ಸರಕಾರಕ್ಕೆ ಸುಮಾರು ೨೫ ಕೋಟಿ ರೂಪಾಯಿಗಳು ಪ್ರತಿ ವ

(ಎಂಟನೇ ಪುಟ ನೋಡಿರಿ)

‘ಗಾಂಧಿಜಿಯ ಕೊಲೆ’

(ಭಾಗ ಒಂದು)

ಬರೆದವರು— ಶ್ರೀ ಬಿ ಕೃಷ್ಣ ಭಟ್, ಭದ್ರಾವತಿ

ಮನೋರಮ ಸಲ್ವಿ ಜನಿಸಿದ್ದು ಅಹಮದ್ ನಗರದಲ್ಲಿ. ಆಕೆ ಹುಟ್ಟಿದ್ದು ಒಂದು ಕ್ರಿಶ್ಚಿಯನ್ ಕುಟುಂಬದಲ್ಲಿ ಅವಳ ತಂದೆ ಜೌಲತ್‌ರಾವ್ ಸಲ್ವಿ -ವೃತ್ತಿಯಿಂದ ವೈದ್ಯರು. ಅವರು ಬೈಕುಲದ ಪೋಲಿಸ್ ಆಸ್ಪತ್ರೆಯಲ್ಲಿ 1948ರಲ್ಲಿ ಕೆಲಸದಲ್ಲಿದ್ದರು.

ಆಕೆ ನಾರಾಯಣ ದತ್ತಾತ್ರೇಯ ಆಪ್ಟೆಯ ಪ್ರೇಯಸಿ. ಈ ಪ್ರೇಮ ಬಂಧನದಲ್ಲಿ ಸಿಲುಕಿಕೊಂಡಾಗ ಆಕೆಯ ವಯಸ್ಸು 20ರ ಒಳ-ಹೊರಗೆ. ಆಕೆ ಮುಂಬಯಿಯ ವಿಲ್ಸನ್ ಕಾಲೇಜಿನಲ್ಲಿ ದ್ವಿತೀಯ ಬಿ.ಎ ತರಗತಿಯಲ್ಲಿ ಓದುತ್ತಿದ್ದಳು ಆಕೆ ತುಂಬು ಚೆಲುವೆ.

ನಾರಾಯಣ ಆಪ್ಟೆ ಮುಂಬಯಿ ವಿಶ್ವವಿದ್ಯಾನಿಲಯದ ಬಿ. ಯಸ್. ಸಿ. ಪದವೀಧರ ಬಿ.ಟಿ. ಬೇರೆ ಆಗಿದ್ದ. ಆತ ಅಹಮದ್ ನಗರದ ಅಮೆರಿಕನ್ ಮಿಶನ್ ಹೈಸ್ಕೂಲಿನಲ್ಲಿ ಏಳು ವರ್ಷಕಾಲ ಶಿಕ್ಷಕನಾಗಿದ್ದ. 1943ರಲ್ಲಿ ಆತ ಯುದ್ಧ ಖಾತೆಯಲ್ಲಿ ಕಮಿಷನ್ ಹುದ್ದೆಗಿಟ್ಟಿಸಿಕೊಂಡ. ಆತ ಸಹಾಯಕ ರಿಕ್ರೂಟಿಂಗ್ ಆಫೀಸರನಾಗಿ, ಯುದ್ಧ ಮುಗಿಯುವವರೆಗೂ ಕೆಲಸದಲ್ಲಿ ಮುಂದುವರಿದ. ಯುದ್ಧ ಮುಗಿಯಿತು. ಆವನ ದಕ್ಷತೆಯನ್ನು ಮನಗಂಡು, ಅವನನ್ನು ವಾಯು ಪಡೆಯಲ್ಲಿ ಅಧಿಕಾರಿಯಾಗಿ ನೇಮಿಸಿತು. ಅದು ಖಾಯಂ ನೌಕರಿಯಿದ್ದರೂ, ಆತ ಬಹಳ ಕಾಲ ಕೆಲಸದಲ್ಲುಳಿಯಲಿಲ್ಲ. ತಂದೆಯ ಸಾವಿನಿಂದ ತೆರವಾದ ಕುಟುಂಬದ ಜವಾಬ್ದಾರಿಯನ್ನು ಹೊರಲು ಕೆಲಸಕ್ಕೆ ರಾಜೀನಾಮೆ ಬರೆದು ಹಾಕಿ ಪುಣೆಗೆ ಬಂದ.

ಪುಣೆಗೆ ಬಂದವನು ತೆಪ್ಪಗೆ ಕುಳಿತುಕೊಳ್ಳಲಿಲ್ಲ. 1944ರಲ್ಲಿ ಆತನಿಗೆ ಗೋಡ್ಸೆಯ ಪರಿಚಯವಾಯಿತು. ಅವರೀರ್ವರು ನಿಕಟವರ್ತಿಗಳಾದರು ಅವರೊಂದು ಪತ್ರಿಕೆ ಹೊರಡಿಸಲು ತೀರ್ಮಾನಿಸಿದರು. ಅವರು ಸಂಪಾದಿಸಿ, ಪ್ರಕಟಿಸುತಿದ್ದ ಪತ್ರಿಕೆಯ ಹೆಸರು ‘ಅಗ್ರಣಿ’. ಅನಂತರ ‘ಹಿಂದೂ ರಾಷ್ಟ್ರ’ ಎನ್ನುವ ಹೊಸ ಹೆಸರಿನಲ್ಲಿ ಪ್ರಚಾರಕ್ಕೆ ಬಂತು. ಹಿಂದೂ ಮಹಾಸಭೆಯ ನಾಯಕರ ಅಭಿಪ್ರಾಯಗಳನ್ನು ಪ್ರಚುರ ಪಡಿಸಿ, ಹಿಂದುಗಳ ಸಂಘಟನೆ ಮಾಡುವುದು ಅವರ ಧ್ಯೇಯ.

ಆಪ್ಟೆಯ ಮದುವೆ ಚಂಪಾ ತಾಯಿಯ ಕೂಡೆ ನಡೆದಿತ್ತು. ಆತ ಆಗಲೇ ಎರಡು ಮಕ್ಕಳ ತಂದೆಯಾಗಿದ್ದ. ಈ ಆಪ್ಟೆ ಬೇರೆ ಯಾರೂ ಅಲ್ಲ. ಗಾಂಧಿಜಿಯ ಕೊಲೆಯ ಮೊಕದ್ದಮೆಯಲ್ಲಿನ ಮೂರನೆಯ ಆರೋಪಿ ಆತನನ್ನು ಗಲ್ಲಿಗೇರಿಸಿರುವುದು ಈಗ ಎಲ್ಲರಿಗೂ ತಿಳಿದಿರುವ ವಿಚಾರ. ಆದರೆ ಆಪ್ಟೆ- ಮನೋರಮ ಪ್ರಣಯ ಪ್ರಸಂಗ ಬೆಳಕಿಗೆ ಬಂದಿಲ್ಲ.

ಆಪ್ಟೆ ಕೊಲೆಯ ಸಂಚಿನಲ್ಲಿ ಸೇರಿಕೊಂಡ. ಅವನಿಗೆ ತನ್ನ ಯೋಜನೆಗಳನ್ನು ಕಾರ್ಯಗತಗೊಳಿಸುವ ಹುಚ್ಚು ಹುಮ್ಮಸ. ಅದನ್ನು ಬಿಟ್ಟುಕೊಡಲು ಆತ ಸಿದ್ಧನಿರಲಿಲ್ಲ. ತನ್ನ ನಾಯಕ ವಿನಾಯಕ ದಾಮೋದರ ಸಾವರ್ಕರರಲ್ಲಿದ್ದ ನಿಷ್ಠೆಯನ್ನು ಕದಲಿಸುವಂತಿರಲಿಲ್ಲ. ಅವರೊಪ್ಪಿಸಿದ ಹೊಣೆಯಿಂದ ನುಣುಚಿ ಕೊಳ್ಳುವ ಬಯಕೆ ಇರಲಿಲ್ಲ. ಆದರೆ ಬದುಕಿ ಉಳಿಯುವ ಆಸೆ ಅದಮ್ಯವಾಗಿತ್ತು

ಒಪ್ಪಿಸಿದ ಹತ್ಯೆಯ ಕೆಲಸವನ್ನು ಪೂರೈಸ ಬೇಕು; ಪೂರೈಸಿ ಕೃತಕೃತ್ಯನಾಗಬೇಕು. ಆದರೂ ಕೊಲೆಗೆಲಸದ ಅಪಾಯದಿಂದ ತಪ್ಪಿದಂತೆ ನೋಡಿಕೊಂಡು ಜೀವದಿಂದುಳಿಯ ಬೇಕು. ಇದಕ್ಕಾಗಿ ಆತ ತುಂಬ ಚಡಪಡಿಸಿದ; ತೊಳಲಾಡಿದ. ಅದಕ್ಕಿದ್ದ ಮುಖ್ಯ ಆಕರ್ಷಣೆ - ಮನೋರಮೆ 30-1-48ರಂದು ಗಾಂಧಿಜಿಯ ಕೊಲೆಯಾಯಿತು ಆತ ಅಂದು ಗೋಡ್ಸೆಯ ಜೊತೆಯಲ್ಲಿದ್ದ. ರೈಲು ನಿಲ್ದಾಣದ ಒಂದು ಕೋಣೆಯಲ್ಲಿ ಇಬ್ಬರೂ ತಂಗಿದ್ದರು – ಜನವರಿ 27ರ ರಾತ್ರಿ ಜೊತೆಯಾಗಿಯೇ ಗ್ವಾಲಿಯರಿಗೆ ಹೋಗಿದ್ದರು. ಜನವರಿ 28ರ ರಾತ್ರಿ ಅವರಿಬ್ಬರು ಅಲ್ಲಿಯ ಹಿಂದೂ ಮಹಾಸಭೆಯ ಪ್ರಮುಖ ನಾಯಕ ಡಾಕ್ಟರ್ ಸದಾಶಿವ ದತ್ತಾತ್ರೇಯ ಪರಚುರೆಯ ಮನೆಯಿಂದ-ಗಾಂಧಿಜಿಯನ್ನು ಗುಂಡಿಟ್ಟು ಕೊಂದ ಪಿಸ್ತೂಲನ್ನು ದೊರಕಿಸಿ ಕೊಂಡು—ಹೊರಬಿದ್ದರು ಪೋಲಿಸರಿಗೆ 14-2-48ರ ತನಕ ಆಪ್ಟೆಯನ್ನು ಬಂಧಿಸುವುದಾಗಲಿಲ್ಲ. ಆತ ತಲೆಮರೆಸಿಕೊಂಡು ತಿರುಗಿದ. 30-1-48ರಂದು ದೆಹಲಿಯಲ್ಲಿ ಇದ್ದಿಲ್ಲವೆಂದು ಸಾಧಿಸಲು ಸಜ್ಜು ನಡೆಸಿದ. ಪೂರ್ವಭಾವಿಯಾಗಿ ದಾಖಲೆಗಳನ್ನು ಸೃಷ್ಟಿ ಮಾಡಿದ. ಆದರೆ ಯಾವುದೂ ಪ್ರಯೋಜನಕ್ಕೆ ಬರಲಿಲ್ಲ. ಆಪ್ಟೆಯನ್ನು ಹೆಣ್ಣಾಗಿ ಕಾಡಿತ್ತು ಮಾಯೆ.

ಆಪ್ಟೆ—ಮನೋರಮಾ ಪ್ರೇಮ ಕದ್ದು, ಮುಚ್ಚಿ ನಡೆದ ವ್ಯವಹಾರ. ಅನ್ಯರಿಗೆ ತಿಳಿದಿಲ್ಲವೆಂದು ಅವರು ಭಾವಿಸಿದ್ದರು—ಆದರೂ ಅದನ್ನು ತಿಳಿದವರಿದ್ದರು. ಅವರಿಬ್ಬರ ಪರಿಚಿತರಿಗಂತೂ ಅದು ನಿಚ್ಚಳವಾಗಿ ತಿಳಿದಿತ್ತು. ಜನವರಿ 31ರ ಬೆಳಗಿನ ಜಾವ ಪೋಲಿಸರು ಬಾಡ್ಗೆಯನ್ನು ಬಂಧಿಸಿದರು. ಅವನ ಬಂಧನದಿಂದ ತನಿಖೆಯ ಕೆಲಸ ಸುಲಭವಾಯಿತು ಅವರು ಆಪ್ಟೆಯ ಶೋಧಕ್ಕೆ ಸೆಟೆದು ನಿಂತರು. ಮುಂಬಯಿಯ ಜಿಲ್ಲಾ ರಕ್ಷಣಾಧಿಕಾರಿ ಜಿಮ್ಮಿ ನಗರ್‌ವಾಲಾ ಮನೋರಮೆಯ ಚಲನ—ವಲನಗಳ ಮೇಲೆ ಕಣ್ಣಿಟ್ಟರು. ಪ್ರಣಯಿನಿಯನ್ನು ಕಾಣಲು ಆಪ್ಟೆ ಬಂದೇ ಬರುತ್ತಾನೆ. ಆಗ ಬಂಧಿಸಿದರಾಯಿತು ಎಂದು ಅವರು ಲೆಖ್ಖ ಹಾಕಿದರು. ‘ಹೆಣ್ಣಿನ ಪತ್ತೆಯಾದರೆ, ಅವಳ ಗಂಡು ಕೈಗೆ ಸಿಕ್ಕಿದಂತೆ’ ಎನ್ನುವ ವಿಷಯವನ್ನು ಅವರು ತಿಳಿದಿದ್ದರು. ಬೈಕುಲಾ ಪೋಲಿಸ್ ಆಸ್ಪತ್ರೆಯ ಫೋನಿನ ಮೂಲಕ ಏನು ಸಂಭಾಷಣೆ ನಡೆದರೂ, ಅದು ತನಗೆ ಕೇಳಿಸುವಂತೆ ವ್ಯವಸ್ಥೆ ಮಾಡಿದ್ದರು. ಅವರ ನಿರೀಕ್ಷೆ ಸುಳ್ಳಾಗಲಿಲ್ಲ. ಮನೋರಮೆ ತನ್ನ ಇನಿಯನ ಬರವನ್ನು ನಿರೀಕ್ಷಿಸುತ್ತಿದ್ದಳು. ಆತ ಹೇಳಿದ ತಾಣಕ್ಕೆ ಸುರಕ್ಷಿತವಾಗಿ ತಲುಪಿದನೇ–ಇಲ್ಲವೇ ಎಂಬುದನ್ನು ತಿಳಿದುಕೊಳ್ಳಲು, ಆಕೆ ಮುಂಬಯಿಯ ಅಪೋಲೋ ಹೋಟೆಲಿಗೆ ಫೋನು ಮಾಡಿದಳು. ಆ ಸಮಯಕ್ಕೆ ಆತ ಅಲ್ಲಿರಲಿಲ್ಲ ಆಪ್ಟೆ- ಮನೋರಮೆ ಪರಸ್ಪರ ಸಂಧಿಸುವ ಸ್ಥಳದ ಸುಳಿವು ಪೋಲಿಸರಿಗೆ ಇದರಿಂದ ದೊರಕಿತು. ಆಪ್ಟೆಗಾಗಿ ಅವರು ಅಲ್ಲಿ ಕಾದರು—ಫೆಬ್ರವರಿ 14ರಂದು ಆತ ಅಲ್ಲಿ ಪ್ರತ್ಯಕ್ಷನಾದ. ಅವನನ್ನು ಸ್ವಾಗತಿಸಲು ಅಲ್ಲಿ ಮನೋರಮೆ ಇರಲಿಲ್ಲ. ಅವಳ ತೋಳ ತೆಕ್ಕೆಯಲ್ಲಿ ಹಾಯಾಗಿರಲು ಬಯಸಿ ಬಂದ ಆಪ್ಟೆಯ ಕೈಗೆ ಕೋಳಗಳನ್ನು ತೊಡಿಸಲಾಯಿತು.

ಪೋಲಿಸರು ಮನೋರಮೆಯನ್ನು 20—2—48ರಂದು ಮುಂಬಯಿಯ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಶ್ರೀ ಬ್ರೌನರ ಮುಂದು ಹಾಜರು ಪಡಿಸಿದಾಗ ಆಕೆ ಬೈಬಲ್ಲಿನ ಮೇಲೆ ಆಣೆ ಹಾಕಿ ಒಂದು ಹೇಳಿಕೆ ಕೊಟ್ಟಳು. ಆ ಹೇಳಿಕೆ ಗಾಂಧಿಜಿಯ ಕೊಲೆ ಮೊಕದ್ದಮೆಯಲ್ಲಿ ಒಂದು ದಾಖಲೆಯಾಗಿ ಸೇರಿಕೊಂಡಿತು. ಅದನ್ನು ಸಂಗ್ರಹಿಸಿ ಕೆಳಗೆ ಕೊಟ್ಟಿದೆ.

‘ನಾನು ಅಹಮದಾಬಾದಿನ ಅಮೆರಿಕನ್ ಮಿಶನ್ ಹೈಸ್ಕೂಲಿನಲ್ಲಿ 5ನೆಯ ತರಗತಿಯಲ್ಲಿ ಓದುತ್ತಿದ್ದೆ. ನಾನು ಆಪ್ಟೆಯವರನ್ನು ಮೊದಲು ಕಂಡಿದ್ದು ಆಗಲೇ. ಅವರು ಆ ಹೈಸ್ಕೂಲಿನಲ್ಲಿ ಗಣಿತದ ಶಿಕ್ಷಕರಾಗಿದ್ದರು. ಅಲ್ಲಿದ್ದಾಗಲೇ ಅವರು ತರಬೇತಿಗೆಂದು ಪುಣೆಗೆ ಹೋದರು. ಬಿ. ಟಿ. ಮುಗಿಸಿಕೊಂಡು ಅವರು ಪುನಃ ನಮ್ಮ ಹೈಸ್ಕೂಲಿಗೇ ಬಂದರು. 1943ರ ಸುಮಾರಿನಲ್ಲಿ ಅವರಿಗೆ ಯುದ್ಧ ಖಾತೆಯಲ್ಲಿ ಒಂದು ಕಮಿಷನ್ ಹುದ್ದೆ ಸಿಕ್ಕಿತು. ಅವರು ಸ್ಕೂಲನ್ನು ಬಿಟ್ಟು ಹೋದರು. ಕೆಲಕಾಲ ನಾನು ಅವರನ್ನು ಕಾಣಲಿಲ್ಲ.

1944ರಲ್ಲಿ ನಾನು ಯಸ್. ಯಸ್. ಯಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ, ಮುಂದಿನ ವಿದ್ಯಾಭ್ಯಾಸಕ್ಕೆಂದು ಮುಂಬಯಿಯ ವಿಲ್ಸನ್ ಕಾಲೇಜು ಸೇರಿದೆ—ಆಗ ನಮ್ಮ ತಂದೆ ಶೇಗಾಂನಲ್ಲಿ ಕೆಲಸದಲ್ಲಿದ್ದರು. ನಾನು ಮುಂಬಯಿಯ ಪಂಡಿತ ರಮಾಭಾಯಿ ಹಾಸ್ಟೆಲಿನಲ್ಲಿ ಉಳಿಕೆ ವಿದ್ಯಾರ್ಥಿನಿಯರೊಡನಿದ್ದೆ. ಪ್ರಕೃತ ನಾನು ಸೀನಿಯರ್ ಬಿ.ಎ. ತರಗತಿಯಲ್ಲಿ ಓದುತಿದ್ದೇನೆ. ನನಗೀಗ ಇಪ್ಪತ್ತು ವರುಷ.

ನಾನು ಮತ್ತು ಇನ್ನು ಕೆಲವರು ಆಪ್ಟೆಯವರ ಪ್ರೀತಿಯ ಶಿಷ್ಯೆಯರು. ಅವರು ಅಹಮದಾಬಾದ್ ಬಿಟ್ಟು ಹೋಗುವ ಕಾಲದಲ್ಲಿ ತಮ್ಮ ಪತ್ತೆಕೊಟ್ಟಿದ್ದರು. ನಾನು ಕಾಲೇಜು ಸೇರಿದೊಡನೆ ನನ್ನ ಗುರು ಆಪ್ಟೆಯವರಿಗೊಂದು ಕಾಗದ ಬರೆದೆ. ಅದರಲ್ಲಿ ನನ್ನ ವಿಳಾಸ ತಿಳಿಸಿದ್ದೆ.

1944ರ ಜುಲೈ ಮಧ್ಯಭಾಗದಲ್ಲಿ ನನಗೆ ಆಪ್ಟೆಯಿಂದ ಒಂದು ಪತ್ರ ಬಂತು. ಮುಂಬಯಿಗೆ ಬರುವುದಾಗಿಯೂ, ಹಾಸ್ಟೆಲಿಗೇ ಬಂದು ಭೆಟ್ಟಿಯಾಗುವುದಾಗಿಯೂ ಅವರು ಆ ಕಾಗದದಲ್ಲಿ ತಿಳಿಸಿದ್ದರು. ತಿಳಿಸಿದಂತೆ ಅವರು ಮುಂಬಯಿಗೆ ಬಂದರು. ನಮ್ಮನ್ನು ಸಂಧಿಸಿದರು. ರಾಕ್ಸಿ ಸಿನೆಮ ಮಂದಿರದಲ್ಲಿ ನಡೆಯುತಿದ್ದ ‘ಕಾದಂಬರಿ’ ಎನ್ನುವ ಚಿತ್ರಕ್ಕೆ ನನ್ನನ್ನೂ ಶಕುಂತಲಾ, ಸರಸ್ವತಿ ಎನ್ನುವ ಹೆಸರಿನ ಇನ್ನಿಬ್ಬರು ಶಿಷ್ಯೆಯರನ್ನೂ ಕರೆದುಕೊಂಡು ಹೋದರು. ಮ್ಯಾಟಿನಿ ಷೋ ಮುಗಿಸಿ ಕೊಂಡು ನಾವೆಲ್ಲ ಚೌಪಾತಿಯ ಕಡೆಗೆ ಹೊರಟೆವು. ಮರಳ ಹಾಸಿಗೆಯಲ್ಲಿ ಓಡಿಯಾಡಿದೆವು. ಅನಂತರ, ಅವರು ನಮ್ಮನ್ನು ಹಾಸ್ಟೆಲಿಗೆ ಕರೆತಂದರು.

(ಹನ್ನೊಂದನೇ ಪುಟ ನೋಡಿರಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 2

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು
ಸರಕಾರಗಳಲ್ಲಿ ಆರೋಗ್ಯ
ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು
ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಠ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಶ್ರೀಮತಿ ಗಾಂಧಿಯವರು ಕಾಂಡವನ್ನೇ ಕಡಿಯುತ್ತಿದ್ದಾರೆ

ಪ್ರಧಾನಿ ಗಾಂಧಿಯವರು ತಮ್ಮ ಸಚಿವ ಸಂಪುಟವನ್ನು ಪುನಾರಚಿಸಲಿರುವರೆಂಬುದು ದಟ್ಟವಾದ ವಾರ್ತೆ. ಸಂಸತ್ತಿನ ಅಧಿವೇಶನ ಆರಂಭವಾಗುವುದಕ್ಕೆ ತುಸು ಮೊದಲು ಮೊದಲಾಗಿ ಕೊನೆಗೊಂಡ ಈ ಸುದ್ದಿಗೆ ಈಗ ಮತ್ತೊಮ್ಮೆ ಜೀವ ಬಂದಿದೆ. ಶ್ರೀಮತಿ ಗಾಂಧಿಯವರ ಅಂತರ್ಯವನ್ನು ಇದುವರೆಗೆ ತಿಳಿದುಕೊಂಡವರು ಯಾರೊಬ್ಬರೂ ಇಲ್ಲ. ಒಂದು ವೇಳೆ ಯಾರಾದರೂ ಏನಾದರೂ ತಿಳಿದುಕೊಂಡಿದ್ದರೆ, ಪ್ರಾಯಃ ಅವರ ಹೂರಣವೆಲ್ಲ ಯಾವಾಗಲೋ ಪೋಳಿಗೆಯಾಗಿ ಹೋಗುತಿತ್ತು. ತನ್ನ ಅಂತರಾಳವನ್ನು ಯಾರಿಗೂ ತೋರಗೊಡದೆ ಮುಚ್ಚಿಟ್ಟುಕೊಂಡು ಬಂದಿರುವುದರಿಂದಲೇ ಆಕೆಯ ಕಾರುಬಾರು ಲೀಲಾಜಾಲವಾಗಿ ನಡೆಯುತ್ತಿದೆ. ಅತಿರಥ-ಮಹಾರಥರೆಲ್ಲರನ್ನೂ ಅವರು ವಿರಥರನ್ನಾಗಿ ಮಾಡುವಲ್ಲಿ ಸಶಕ್ತರಾಗಿದ್ದಾರೆ. ಈಯೊಂದು ಶಕ್ತಿಯಿಂದಲೇ ಅವರು ಬಣ್ಣದ ವ್ಯಕ್ತಿಯಾಗಿ ಮೆರೆದಾಡುತಿದ್ದಾರೆ; ಇದಿಲ್ಲದೆ ಹೋಗಿದ್ದರೆ, ಪ್ರಾಯಃ ಆಕೆಯ ಪ್ರಭಾವ ನಿಷ್ಪ್ರಭವಾಗಿ ಹೋಗುತಿತ್ತು.

ಮೊದಲಿನ ಊಹಾಪೋಹ ಮತ್ತಿಂದಿನ ಕಾಲ್ಪನಿಕ ವರದಿಗಳಲ್ಲಿ ಸಂಪೂರ್ಣ ಹುರುಳಿಲ್ಲವೆನ್ನುವುದು ಸತ್ಯ. ಕರ್ನಾಟಕದ ಶ್ರೀ ಕೆಂಗಲ್ ಹನುಮಂತಯ್ಯನವರನ್ನು ಮಂತ್ರಿ ಪದದಿಂದ ಮುಕ್ತಗೊಳಿಸಿ ಯಾವುದಾದರೊಂದು ರಾಜ್ಯದ ಪಾಲರನ್ನಾಗಿ ಕಳಿಸಲಾಗುವುದೆಂದು ಮೊದಲುಹೇಳಲಾಯ್ತು. ಆದರೆ, ಶ್ರೀ ಕೆಂಗಲ್ಲರಂತಹ ನಿರಂತರ ತೀವ್ರ ಚಟುವಟಿಕೆಯ ವ್ಯಕ್ತಿಗಳಿಗೆ ರಾಜ್ಯಪಾಲ ಹುದ್ದೆಯು ತೀವ್ರ ನಿಷ್ಕ್ರಿಯವೆನಿಸಿದ್ದರಿಂದ ಅದನ್ನವರು ಒಪ್ಪಿಕೊಳ್ಳಲಿಲ್ಲವೆಂದೂ ಹೇಳಲಾಯಿತು. ಶ್ರೀ ಕೆಂಗಲ್ಲರ ಸಹಕಾರವನ್ನು ಮುಂದಿನ ಚುನಾವಣೆಗಳು ನಡೆಯುವ ಹೊತ್ತಿನೊಳಗೆ ಕಳೆದುಕೊಳ್ಳಲು ತಯಾರಿಲ್ಲದ ಶ್ರೀಮತಿ ಗಾಂಧಿಯವರು ಯಾವುದಾದರೊಂದು ದೇಶಕ್ಕೆ ಅವರನ್ನು ರಾಯಭಾರಿಯಾಗಿ ನೇಮಿಸ ಬಹುದೆಂದೂ ಇದನ್ನು ಅವರು ತಿರಸ್ಕರಿಸಲಾರರೆಂದೂ ಊಹಿಸಲಾಯ್ತು. ಆದರೆ, ಶ್ರೀ ಕೆಂಗಲ್ಲರು ಇನ್ನೂ ತಮ್ಮ ರಾಜ್ಯದಲ್ಲಿ ಪ್ರತಿಷ್ಠಿತ ರಾಜ್ಯಕಾರಣಿಯಾಗಿ ಉಳಿದಿದ್ದು, ಅವರ ಪ್ರತಿಷ್ಠೆಯಿಂದ ಶ್ರೀಮತಿ ಗಾಂಧಿ ಪೂರ್ಣ ಲಾಭ ಹೊಂದದೆ ಇರುವುದರಿಂದ, ಅವರನ್ನು ಬಿಡುಗಡೆ ಮಾಡುವ ಗೋಜನ್ನು ಬಿಟ್ಟುಕೊಟ್ಟರೆಂದು ನಂಬಬಹುದು. ಇನ್ನಾರು ತಿಂಗಳೊಳಗೆ ಕರ್ನಾಟಕದಲ್ಲಿ ಚುನಾವಣೆಗಳು, ನಡೆಯುವುದರಿಂದ, ಈ ವೇಳೆಯಲ್ಲಿ ಶ್ರೀಮತಿಗೆ ಶ್ರೀ ಕೆಂಗಲ್ಲರ ಹೃದಯಪೂರ್ವಕ ನೆರವು ಅತ್ಯವಶ್ಯವಿರುವುದರಿಂದ, ಅಲ್ಲಿಯವರೆಗಾದರೂ ಅವರು ಮಂತ್ರಿಯಾಗಿಯೇ ಮುಂದುವರಿಯುವುದು ನಿಸ್ಸಂದೇಹ. ಶ್ರೀಮತಿಯವರ ಸಂಪುಟದಲ್ಲಿ ಮಂತ್ರಿಯಾಗುವುದು ಎಂದರೆ, ಬೆಕ್ಕಿನ ತಲೆಯಲ್ಲಿ ದೀಪವಿಟ್ಟಂತೆಯೆಂಬುದು ಶ್ರೀ ಕೆಂಗಲ್ಲರಿಗೂ ಗೊತ್ತಾಗಿದೆ. ಆದುದರಿಂದಲೇ ಅವರು ಮುಂದಿನ ಚುನಾವಣೆಯ ವೇಳೆ ರಾಜ್ಯದ ರಾಜ್ಯಕೀಯದಲ್ಲಿ ತನ್ನ ಕಳೆದುಕೊಂಡ ಸ್ಥಾನವನ್ನು ದೃಢಪಡಿಸಿಕೊಂಡು ಅಲ್ಲಿಂದ ಇಲ್ಲಿಗೆ ನೆಗೆಯಲೆತ್ನಿಸಿದರೆ ಯಾವ ಸಂದೇಹವೂ ಇಲ್ಲ.

ಇನ್ನೊಂದು ಹೆಸರು ಭಾರಿ ಕೇಳಿ ಬರುತ್ತಿರುವುದು ಫಕ್ರುದ್ದೀನ್ ಅಲಿ ಅಹಮ್ಮದರದ್ದು. ಶ್ರೀ ಅಹಮ್ಮದರು ಶ್ರೀಮತಿ ಗಾಂಧಿಯವರ ನಮ್ರ ಸಚಿವರಾಗಿ. ದುಡಿದ ಮಹಾವ್ಯಕ್ತಿ. ಹೊಸ ಪೀಳಿಗೆಗೆ ಅವಕಾಶ ಒದಗಿಸುವ ನೆಪದಲ್ಲಿ ಆಕೆ ಶ್ರೀ ಅಹಮ್ಮದರನ್ನು ಮಂತ್ರಿತನದಿಂದ ನಿವೃತ್ತಗೊಳಿಸಿ, ರಾಜ್ಯಪಾಲ ಪದವಿ ನೀಡಿ ತೃಪ್ತಿಪಡಿಸುವುದು ಇನ್ನೂ ದೃಢವಾಗಿದೆ. ಎಪ್ಪತ್ತರ ಗಡಿಯನ್ನು ಅದೆಂದೋ ದಾಟಿದ ಅಹಮ್ಮದರು ನಿವೃತ್ತವೇತನದ ಹುದ್ದೆಯನ್ನು ಸ್ವೀಕರಿಸಲು ಸಿದ್ಧರಿರ ಬಹುದು. ಕೊಳಕು ರಾಜ್ಯಕೀಯದ ರಾಡಿಯಲ್ಲೇ ಬಹುಕಾಲ ಕಳೆದ ಅವರು ಈ ಇಳಿವಯಸ್ಸಿನಲ್ಲಾದರೂ ಕುರ್ಚಿಗಂಟಿಕೊಂಡಿರುವುದನ್ನು ಯಾರೂ ಮರೆತಿರಲಾರರು. ಆದರೆ ಅಹಮ್ಮದರನು ಸಚಿವಪದದಿಂದ ಬಿಡುಗಡೆ ಮಾಡುವುದು ಮಾತ್ರ ಖಂಡಿತಕ್ಕೂ ಸತ್ಯವೇ. ಕಾಂಗ್ರೆಸ್ ವಿಭಜನೆಗೆ ಶ್ರೀಮತಿ ಗಾಂಧಿಯನ್ನು ಎತ್ತಿಹಿಡಿದ ನಾಲ್ಕು ಕೈಗಳಲ್ಲಿ ಎರಡು ಫಕ್ರುದ್ದೀನರದ್ದು; ಉಳಿದೆರಡು ಜಗಜ್ಜೀವನರಾಂರದ್ದು. ದೀರ್ಘಕಾಲಮಂತ್ರಿಯಾಗಿಯೇ ಆಯುಷ್ಯ ಸವೆಸಿದ ಮಹಾವ್ಯಕ್ತಿಗಳಲ್ಲಿ ಶ್ರೀ ರಾಮರನ್ನು ಬಿಟ್ಟರೆ ಮತ್ತೊಂದು ಉದಾಹರಣೆ ದೊರೆಯುವುದಿಲ್ಲ. ಅಹಮ್ಮದ್ ಮತ್ತು ರಾಮರಲ್ಲದಿರುತ್ತಿದ್ದರೆ, ಶ್ರೀಮತಿ ಗಾಂಧಿಗಿಂದು ಸಿಂಹಾಸನ ದೊರೆಯುತ್ತಲೂ ಇರಲಿಲ್ಲ. ಆದರೆ ಈ ಇಬ್ಬರನ್ನೂ ಶ್ರೀಮತಿ ಗಾಂಧಿ ನಿಕಟ ಭವಿಷ್ಯದಲ್ಲಿಯೇ ಸಂಪುಟದಿಂದ ಕಿತ್ತು ಹಾಕಲು ದೃಢವಾದ ನಿರ್ಧಾರ ಮಾಡಿದಂತಿದೆ. ಇವರಿಬ್ಬರನ್ನು ಉಪಯೋಗಿಸಿಕೊಂಡು ತನ್ನ ಬೇರು ಬಲಪಡಿಸಿಕೊಂಡು ಈಗ ಇಬ್ಬರನ್ನೂ ಕೈ ಬಿಡುವುದರ ಮುನ್ಸೂಚನೆಯಿದೆ. ಶ್ರೀ ಅಹಮ್ಮದರನ್ನು ರಾಜ್ಯಪಾಲರಾಗಿ ನೇಮಿಸುವ ಮಾತಿಗೆ ಒಂದು ವರ್ಷವಾಗುತ್ತ ಬಂತು. ಆದರೆ, ಈ ಬಾರಿ ಅದು ಸತ್ಯವಾಗುತ್ತದೆ. ಶ್ರೀ ರಾಮರಿಗೆ ಬೇಕಾದುದು ಮಂತ್ರಿತನವೇವೆಂಬುದು ಸ್ಪಷ್ಟ. ಕಾಮರಾಜೀಕರಣಗೊಂಡವರು ನೆಹರು ನಿಧನಾನಂತರ ಮತ್ತೆ ಸಂಪುಟದಲ್ಲಿ ತಲೆ ತುರುಕಿಸಿಕೊಂಡರು. ಇಂಡಿಕೇಟಿನ ಅಧ್ಯಕ್ಷಗಿರಿಗಿಂತಲೂ ಮಂತ್ರಿಪಟ್ಟವೇ ತನಗೆ ಹಿತವೆಂದು ಎರಡನ್ನೂ ನಿಭಾಯಿಸಿಕೊಂಡು ಬಂದ ವಿಧಾನದಿಂದಲೇ ತಿಳಿಯ ಬಹುದು. ಇಂದು ಅವರನ್ನು ಕೈಬಿಡುವ ವಿಚಾರವನ್ನು ಮಾಡಿದ್ದರೆ, ಹಳೆಯರೆಲ್ಲರನ್ನೂ ದೂರ ಮಾಡಿ ಕಿರಿಯರನ್ನು ಹಿರಿಯರಿಗೆ ದುರು ಎತ್ತಿ ಕಟ್ಟುವ ತಂತ್ರದ ಬಲದಿಂದಲೇ ಎಂಬುದು ಸ್ಪಷ್ಟ.

ಎಲ್ಲರಿಗಿಂತ ದಯನೀಯ ಪರಿಸ್ಥಿತಿಗೊಳಗಾದವರಲ್ಲಿ ಯಶವಂತರಾವ್ ಬಲವಂತರಾವ್ ಚವನರ ಹೆಸರು ಚಿರಸ್ಮರಣೀಯ. ಜವಾಹರ-ಶಾಸ್ತ್ರಿ ಸಂಪುಟಗಳಲ್ಲಿ ಅತ್ಯಂತ ಯಶಸ್ವಿ ಮಂತ್ರಿಯೆಂದವರು ಹೆಸರು ಪಡೆದವರು. ಮಹಾರಾಷ್ಟ್ರದಲ್ಲಿ ಅವರು ಛತ್ರರಹಿತ ಚಕ್ರವರ್ತಿಯಾಗಿ ಪ್ರಬಲರಾಗಿ ಮೆರೆದಾಡಿದ್ದವರು. ಶ್ರೀಮತಿ ಗಾಂಧಿಯ ಪ್ರಬಲ ವಿರೋಧಿಯೆಂಬ ಅಪಕೀರ್ತಿಗೆ ಅವರು ಒಳಗಾದರು. ಅಥವಾ ಅವರಿಗಿರುವ ಜನಪ್ರಿಯತೆ ಅವರ ವ್ಯಕ್ತಿತ್ವ ಸಾಮರ್ಥ್ಯಗಳನ್ನು ಕಂಡು ಬೆದರಿಯೇ ಶ್ರೀಮತಿ ಗಾಂಧಿ ತನ್ನ ಪ್ರತಿಸ್ಪರ್ಧಿಯೆಂದು ತಿಳಿದರು. ಆದಕ್ಕಾಗಿ ಶ್ರೀಮತಿಯವರು ಅವರನ್ನು ಮೈದಾನದ ಕಾಲ್ಚೆಂಡಿನಂತೆ ಬಳಸಿದರು. ಅವರ ಹೆಸರಿಗೆ ಯಾವ ರೀತಿಯಲ್ಲಿ ಕಲಂಕ ಹಚ್ಚಬಹುದೋ ಅವೆಲ್ಲವನ್ನೂ ಮಾಡಿದರು. ಅವರ ಕೈಗಳಲ್ಲಿದ್ದ ಗೃಹಶಾಖೆಯನ್ನು ಕಿತ್ತುಕೊಂಡರು. ತನ್ನಲ್ಲಿದ್ದ ವಿತ್ತಶಾಖೆ ನೀಡಿದವರು. ಇದು ಚವನರಿಗೂ ಬೇಡವಾಗಿತ್ತು; ಅವರ ಹಿತೈಷಿಗಳಿಗೂ ಬೇಡವಾಗಿತ್ತು; ಆದರೆ, ಶ್ರೀಮತಿ ಗಾಂಧಿಗೆ ಮಾತ್ರ ಬೇಕಾಗಿತ್ತು. ಸಮಾಜವಾದದ ಸಾಕ್ಷಾತ್ ಪ್ರತಿರೂಪವೆಂದು ವರ್ಣಿಸಿದ ರಾಷ್ಟ್ರೀಕೃತ ಬ್ಯಾಂಕುಗಳು ಯಮರಾಜನ ಪುನರವತಾರವಾಗುತ್ತ ಬರುತ್ತಿವೆ. ದೇಶದ ಅರ್ಥವ್ಯವಸ್ಥೆಯು ತೀವ್ರ ಅಸ್ತವ್ಯಸ್ತವಾಗಿ ರೂಪಾಯಿಯ ಬೆಲೆ ಡೋಲಾಯಮಾನವಾಗುತ್ತಿದೆ. ಇದಕ್ಕೆ ಬಂಗ್ಲಾದೇಶದ ವಿದ್ಯಮಾನಗಳು ಪುಟವಿಡಹತ್ತಿವೆ. ಸಮಾಜವಾದ ಕಾಗದದ ಸಮಾಜವಾದ ಮಾತ್ರವಾಗಿಯೇ ಉಳಿದಿದೆ. ಇದಕ್ಕೆ ಶ್ರೀಮತಿ ಗಾಂಧಿಯವರು ಚವನರನ್ನು ಬೊಟ್ಟುಮಾಡುತ್ತಾರೆ. ಸಮಾಜವಾದದಲ್ಲಿ ಚವನರ ನಿಷ್ಠೆ ನೂರರಷ್ಟಿಲ್ಲವೆಂದು ಹೇಳಿ ಅವರನ್ನು ಕಿತ್ತು ಹಾಕಿ ಅಲ್ಲಿಗೆ ಸುಬ್ರಹ್ಮಣ್ಯಂ ನೇಮಕವೀಗ ಸ್ಪಷ್ಟ. ಆಗ ಚವನರಿಗೆ ಸಂರಕ್ಷಣಾ ಶಾಖೆ ದೊರೆಯ ಬಹುದು. ಚೀನೀ ಆಕ್ರಮಣದ ವೇಳೆ ಸಂರಕ್ಷಣಾ ಸಚಿವರಾಗಿ ಡಿಲ್ಲಿಗೆ ಹೋದ ಚವನರು ಮತ್ತೆ ಅದೇ ಸಚಿವ ಪದವಿಗಿಳಿದು ಬೊಂಬಾಯಿಗೆ ಮರಳುವುದೂ ಅಸಹಜವಲ್ಲ—ಶ್ರೀಮತಿ ಗಾಂಧಿಯವರು ಸಚಿವರೊಡನೆ ಕಣ್ಣು ಮುಚ್ಚಾಲೆಯಾಡುತ್ತಲೇ ತಾನೊಬ್ಬರೇ ಆಟವಾಡುತಿದ್ದಾರೆ; ಅದೇ ಸಮಾಜವಾದವೆಂದೂ ಪ್ರ

(ಹತ್ತನೇ ಪುಟ ನೋಡಿರಿ)

ನವಯುಗದ ಹೊಸ ವರ್ಷ

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 50ನೆಯ ವರ್ಷ ಮುಗಿದು ಸಪ್ಟಂಬರ ತಿಂಗಳಿನಿಂದ 51ನೆಯ ಹೊಸ ವರ್ಷಾರಂಭವಾಗಿದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಚಂದಾ ಹಣವನ್ನು ಮನಿಯಾರ್ಡರು ಮೂಲಕ ಯಾ ಇಂಡಿಯನ್ ಪೋಸ್ಟಲ್ ಆರ್ಡರು ಮೂಲಕ ಕಳುಹಿಸಬಹುದು. ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ ಉಡುಪಿ ಲೋಕಲ್ ಆಫೀಸಿನ 283/1ನೇ "ನವಯುಗ"ದ ಖಾತೆಗೆ ಪಾವತಿ ಮಾಡಬಹುದು. ಹಾಗೆ ಪಾವತಿ ಮಾಡುವಾಗ ತಮ್ಮ ಚಂದಾ ನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ವಿ. ಪಿ. ಮಾಡಿದರೆ ರೂ 1-50ರಷ್ಟು ಹೆಚ್ಚು ವೆಚ್ಚ ಬರುವುದರಿಂದ ಚಂದಾದಾರರು ದಯಮಾಡಿ ಮುಂದಾಗಿ ಹಣ ಪಾವತಿಮಾಡಬೇಕಾಗಿ ವಿಜ್ಞಾಪಿಸುತ್ತೇವೆ.

ಅಂತೂ ಸಪ್ಟಂಬರ ಪ್ರಥಮ ವಾರದೊಳಗಾದರೂ ಹಣ ಪಾವತಿಯಾಗದಿದ್ದರೆ ವಿ. ಪಿ. ಮಾಡಲು ತಮ್ಮ ಸಮ್ಮತಿಯೆಂದು ಭಾವಿಸಿ ಕ್ರಮಶಃ ಪತ್ರಿಕೆಯನ್ನು ಚಂದಾ ಹಣಕ್ಕೆ ವಿ. ಪಿ. ಮಾಡುತ್ತೇವೆ.

ಮೆನೇಜರ್

ಬಂಗ್ಲಾದೇಶದಲ್ಲಿ ಶಾಂತಿ ಸ್ಥಾಪನೆ

ಮುಜಿಬುರರಿಂದ ಮಾತ್ರ ಸಾಧ್ಯ

ಬಂಗ್ಲಾ ದೇಶದಿಂದ ಬಂದಿರುವ ನಿರಾಶ್ರಿತರನ್ನು ಭಾರತದಿಂದ ಓಡಿಸುವುದಿಲ್ಲವೆಂದು ಪ್ರಧಾನಿ ಗಾಂಧಿಯವರು ಭರವಸೆ ನೀಡಿದರು. ಈ ನಿರಾಶ್ರಿತರು ಬಂಗ್ಲಾಕ್ಕೆ ಮರಳಲು ಬಂದವರಲ್ಲ, ಭಾರತದಲ್ಲೇ ಭದ್ರವಾಗಿ ತಳವೂರ ಬಂದವರೆಂಬುದು ಅವರಿಗೂ ಗೊತ್ತು.

ಪಾಕ್ ಸರ್ವಾಧಿಕಾರಿ ಯಾಹ್ಯಾಖಾನರು ನಿರಾಶ್ರಿತರೆಂದು ಓಡಿ ಹೋದವರನ್ನು ಬಂಗ್ಲಾಕ್ಕೆ ಆಮಂತ್ರಿಸಿದ್ದಾರೆ; ಮರಳುವವರನ್ನು ಸ್ವಾಗತಿಸಲು ಎರಡೂ ಕೈಗಳನ್ನೆತ್ತಿದ್ದಾರೆ. ಆದರೂ ಅದೇಕೋ ಒಬ್ಬನೇ ಒಬ್ಬ ನಿರಾಶ್ರಿತರ ಪಿಳ್ಳೆ ಅವರತ್ತ ಕಣ್ಣೆತ್ತಲೂ ಸಿದ್ಧನಿಲ್ಲ. ಯಾಹ್ಯಾಖಾನರು ಭಾರತವನ್ನು ನುಗ್ಗಿ ಒಲ್ಲದ ಜನರನ್ನು ಎಳೆದುಕೊಂಡು ಹೋಗುವುದಕ್ಕಾದೀತೆ?

ಬಂಗ್ಲಾದಿಂದ ಬರುತ್ತಿರುವ ನಿರಾಶ್ರಿತರ ಸಂಖ್ಯೆ ಆಗಸ್ತ ತಿಂಗಳಲ್ಲಿ ಮತ್ತೆ ಹೆಚ್ಚಿದೆ. ಯಾಹ್ಯಾಖಾನರು ತನ್ನ ನರಮೇಧವನ್ನು ಇನ್ನೂ ಬಹುದೀರ್ಘಕಾಲ ಮುಂದುವರಿಸ ಬಯಸುತಿದ್ದಾರೆ. ಅಥವಾ ಬಂಗ್ಲಾದೇಶದ ಸರ್ವನಾಶ ಸಾಧಿಸಿಯಾದರೂ ತಮ್ಮ ಮೀಸೆಯ ಮೇಲೆ ನಿಂಬೆ ಹಣ್ಣು ಕುಣಿಪಾಡಿಸ ಬಯಸುತ್ತಾರೆ.

ಜಗತ್ತಿನ ಜನತೆಯ ದೃಷ್ಟಿಯಲ್ಲಿ ಯಾಹ್ಯಾಖಾನರು ಅಭಿನವ ಕಂಸ. ಅವರು ನರಹತ್ಯೆಗೆಂದೂ ಹೇಸರು. ಈ ಜಾಗತಿಕ ದೃಷ್ಟಿಯನ್ನು ತುಸುವಾದರೂ ಬದಲಿಸುವಂತೆ ಮಾಡಲು ಯಾಹ್ಯಾ ಹೊಸ ತಂತ್ರಗಳನ್ನು ಬಳಸಿದ್ದಾರೆ. ಭಾರತವು ಪಾಕಿಸ್ತಾನದ ಮೇಲೆ ಆಕ್ರಮಣ ಮಾಡಲಿದೆಯೆಂಬ ಮಿಥ್ಯಾಭೀತಿಯನ್ನು ಹಬ್ಬಿಸುವುದೊಂದು; ಬಂಗ್ಲಾದಲ್ಲಿ ಏನೇನೂ ಅನಾಚಾರ ನಡೆದಿಲ್ಲವೆಂದು ಪ್ರಚಾರ ನಿರತರಾಗುತ್ತಿರುವುದೆರಡು.

ಬಂಗ್ಲಾ ದೇಶೀಯರು ತನಗೆದುರು ನಿಲ್ಲತೊಡಗಿದನಂತರ ಯಾಹ್ಯಾಖಾನರು ಅದಕ್ಕೆ ಭಾರತವೇ ಪ್ರೇರಕ ಶಕ್ತಿಯೆಂದು ತೀವ್ರ ಅಪಪ್ರಚಾರ ನಿರತರಾಗಿದ್ದಾರೆ. ತಾನು ಭಾರತದ ಗಡಿಯೊಳಕ್ಕೆ ನುಗ್ಗಿ ನಾಗರಿಕರನ್ನು ಕೊಂದು, ಭಾರತವೇ ಆಕ್ರಮಣಶೀಲವೆಂದು ಉಗ್ಗಡಿಸ ಹೊರಟಿದ್ದಾರೆ. ಭಾರತವು ತನ್ನ ಮೇಲೆ ಆಕ್ರಮಣ ಮಾಡುವ ಸಿದ್ಧತೆಯನ್ನು ಹೊಂದಿದೆಯೆಂದು ಭಯ ವೃಕ್ಷವನ್ನು ಕಲ್ಪಿಸಿ ತೋರಿಸುತಿದ್ದಾರೆ.

ವಿಶ್ವಸಂಸ್ಥೆಯಲ್ಲಿ ಬಂಗ್ಲಾ ಪ್ರಶ್ನೆಯನ್ನು ಎತ್ತಬಹುದೆಂದು ಭಾರತ ಯೋಚಿಸುತ್ತಿದೆ. ಈಗಾಗಲೇ ಹದ್ದುಮೀರಿ ಬಂಗ್ಲಾ ಪ್ರಶ್ನೆಗೆ ಉತ್ತರವರಸುವಲ್ಲಿ ವಿಳಂಬವಾಗಿದೆಯೆಂಬುದು ಎಲ್ಲರಿಗೂ ಗೊತ್ತು. ಯಾಹ್ಯಾಖಾನರಿಗೆ ಹೊರಗಣಿಂದ ಶಸ್ತ್ರಾಸ್ತ್ರಗಳ ಸಹಾಯವು ದೊರೆಯುತ್ತಿರುವವರೆಗೂ ಇದು ಮುಂದುವರಿಯುವ ಭೀತಿಯಿದೆ. ಆದರೆ, ಬಂಗ್ಲಾದೇಶದ ಜನತೆಯ ದೃಢನಿರ್ಧಾರದ ಮುಂದೆ ಯಾಹ್ಯಾಖಾನರು ಒಂದಲ್ಲ ಒಂದು ದಿನ ತಲೆತಗ್ಗಿಸಲೇ ಬೇಕು.

ಬಂಗ್ಲಾ ದೇಶೀಯರು ಧೈರ್ಯಶಾಲಿಗಳು; ಎಂಟೆದೆಯರು. ಅವರು ಪಶ್ಚಿಮ ಪಾಕಿಸ್ತಾನದ ಸುಲಿಗೆ–ಲೂಟಿಗಳನ್ನು ಇನ್ನು ಸಹಿಸಲಾರರು. ಅವರ ಶಕ್ತಿ ಸೈನಿಕ ಶಕ್ತಿಯಲ್ಲ; ಇಚ್ಛಾಶಕ್ತಿ. ಇದು ಎಷ್ಟು ಪ್ರಬಲವಾಗಿದೆ, ಸಶಕ್ತವಾಗಿದೆಯೆಂಬುದಕ್ಕೆ ಯಾಹ್ಯಾಖಾನರ ದೈತ್ಯಶಕ್ತಿಯನ್ನು ಐದು ತಿಂಗಳುಗಳ ಕಾಲ ಎದುರಿಸಿಕೊಂಡು ಬಂದಿರುವುದೇ ಉದಾಹರಣೆ ಸಾಕು.

ಯಾಹ್ಯಾಖಾನರಲ್ಲಿ ಅಮೆರಿಕನ್ ಸೈನ್ಯಬಲವಿರಬಹುದು; ಕೆಂಪು ಚೀನಾದ ಶಸ್ತ್ರಬಲವಿರಬಹುದು; ಅದರ ಸ್ನೇಹಿತರು ನೀಡಿದ ನಾನಾ ಶಕ್ತಿ ಸಂಪದಗಳಿರ ಬಹುದು. ಇವೆಲ್ಲವನ್ನೂ ಮೆಟ್ಟಿ, ಬಂಗ್ಲಾದೇಶೀಯರ ಇಚ್ಛಾಶಕ್ತಿ ನಿಂತಿದೆಯೆಂಬುದು ಅಂಧನಿಗೂ ಗೋಚರವಾಗುತ್ತದೆ.

ವಿಶ್ವಸಂಸ್ಥೆಯ ಅಧಿವೇಶನವಿನ್ನೇನು, ಸೇರಲಿದೆ. ಈ ವೇಳೆ ತನ್ನ ವಿರುದ್ಧವೇಳಬಹುದಾದ ಅಪಸ್ವರಗಳನ್ನು ಡೋಲುಬಾರಿಸಿ ತಡೆಯಲು ಯಾಹ್ಯಾಖಾನ್ ಈಗಿಂದೀಗಲೇ ಅಣಿಯಾಗಿದ್ದಾರೆ. ಬಂಗ್ಲಾದೇಶಿಯರ ಸ್ವಾತಂತ್ರ್ಯದ ಬಯಕೆಯನ್ನು ಅದುಮಲು ಅವರು ಟಿಕ್ಕಾಖಾನರನ್ನು ಮಿಲಿಟರಿ ಗವರ್ನರರೆಂದು ನೇಮಿಸಿದ್ದರು. ಅವರು ತಮ್ಮ ನೇಮಕದ ಹಿಂದೆ ಯಾಹ್ಯಾಖಾನರಿಟ್ಟಿದ್ದ ನಂಬುಗೆಯನ್ನು ಸತ್ಯ ಮಾಡಲಿಲ್ಲ. ಬಂಗ್ಲಾದೇಶೀಯರನ್ನು ಯಾಹ್ಯಾ ಕಪಿಮುಷ್ಟಿಗೆ ತುರುಕಲು ಶಕ್ತರಾಗಲಿಲ್ಲ.

ಈಗ ಬಂಗ್ಲಾದೇಶ ಸಂಪೂರ್ಣ ತನ್ನ ಹಿಡಿತದಲ್ಲಿದೆ; ಅಲ್ಲಿನ ವಾತಾವರಣ ಅತ್ಯಂತ ತಿಳಿಯಾಗಿದೆಯೆಂಬುದನ್ನು ಲೋಕದ ಮುಂದೆ ತೋರಿಸುವುದಕ್ಕಾಗಿ, ಅದರ ಕಣ್ಣಿಗೆ ಮಣ್ಣೆರಚುವುದಕ್ಕಾಗಿ ಜನರಲ್ ಟಿಕ್ಕಾಖಾನರನ್ನು ಹಿಂದೆ ಕರೆದುಕೊಂಡು ಡಾ| ಎ. ಎಂ. ಮಾಲಿಕರನ್ನು ರಾಜ್ಯಪಾಲರೆಂದು ನೇಮಿಸಿದ್ದಾರೆ. ಅಂದರೆ ಮಾರ್ಶಲ್‌ಲಾದ ಬದಲು ನಾಗರಿಕ ಆಡಳಿತ ಪುನರಾರಂಭವಾಗುವ ಮುನ್ಸೂಚನೆಯಿದೆಂಬ ಭ್ರಮೆಯನ್ನು ಹರಡಿದ್ದಾರೆ.

ಡಾ| ಮಾಲಿಕರಿಗೆ, ಸಚಿವ ಸಂಪುಟದ ಪಟ್ಟಿಯನ್ನು ಕಳಿಸಲು ಆಜ್ಞೆ ಮಾಡಿದ್ದಾರೆ. ಆದರೆ, ರಾಜ್ಯಪಾಲರು ಜನತೆಯ ಹಿತಾಸಕ್ತಿಗಳನ್ನು ತಿಳಿದು ಅವುಗಳಿಗನುಸಾರವಾಗಿ ಸಚಿವರನ್ನು ನೇಮಿಸುವುದು ಸಾಧ್ಯವಾದೀತೆಂದು ನಂಬುವುದು ಸಾಧ್ಯವೇ ಇಲ್ಲ. ಮಾರ್ಶಲ್‌ಲಾ ಆಡಳಿತಕ್ಕೆ ಒಪ್ಪಿಗೆಯಾಗುವ ಹೆಸರುಗಳೇ ಸಚಿವ ಪಟ್ಟಿಯಲ್ಲಿರಬೇಕಷ್ಟೆ. ಅಂದರೆ, ಬಂಗ್ಲಾ ದೇಶೀಯರ ಹೆಸರು ಅದರಲ್ಲಿ ಅಡಕವಾಗುವುದೆಂತು?

ಇದರ ಜತೆಗೆ ಇನ್ನೊಂದು ನೇಮಕವನ್ನೂ ಯಾಹ್ಯಾಖಾನರು ಮಾಡಿದ್ದಾರೆ. ಜನರಲ್ ಅಮೀರ್ ಅಬ್ದುಲ್ಲಾಖಾನರನ್ನು ಮಿಲಿಟರಿ ಮುಖ್ಯಾಧಿಕಾರಿಯನ್ನಾಗಿ ನೇಮಿಸಿದ್ದಾರೆ. ಅಂದರೆ, ಇದುವರೆಗೆ ಟಿಕ್ಕಾಖಾನರೊಬ್ಬರು ಮಾಡುತಿದ್ದ ಕೆಲಸವನ್ನು ಡಾ| ಮಲಿಕ್ ಮತ್ತು ಜನರಲ್ ಅಬ್ದುಲ್ಲಾಖಾನರಲ್ಲಿ ಹಂಚಿಹಾಕಿದ್ದಾರೆ. ಇವರಿಬ್ಬರೂ ರಾವಲ್ಪಿಂಡಿಗೆ ವಿಧೇಯರಾಗಿರಬೇಕಾದದ್ದು ಅನಿವಾರ್ಯ. ಅಂದರೆ, ಮಾರ್ಶಲ್‌ಲಾ ಆಡಳಿತದಲ್ಲಿ ನಾಗರಿಕ ಆಡಳಿತವೆಂಬುದು ಬರಿಯ ಬೂಟಾಟಿಕೆ; ವಿಭ್ರಮೆ.

ಬಂಗ್ಲಾ ದೇಶಕ್ಕೆ ಯಾಹ್ಯಾಖಾನರು ಮಾಡಿದ ಹೊಸ ನೇಮಕಗಳಿಂದ ಅಲ್ಲಿನ ಪರಿಸ್ಥಿತಿ ಸುಧಾರಿಸುವುದಿಲ್ಲ. ಜನರಲ್ ಟಿಕ್ಕಾಖಾನರು ತಮ್ಮ ಜೀವವುಳಿಸಿ ಕೊಂಡದ್ದೇ ಮಹಾ ಸಾಹಸದ ಕೆಲಸ. ಡಾ| ಮಲಿಕ್ ಮತ್ತು ಜ| ಅಬ್ದುಲ್ಲಾಖಾನರು ಇನ್ನಾವರೂ ಮಾಡುತ್ತಾರೆಯೋ ಕಾದು ನೋಡಬೇಕು.

ಬಂಗ್ಲಾದೇಶದಲ್ಲಿ ಪರಿಸ್ಥಿತಿ ತಿಳಿಗೊಳಿಸುವುದು ಶೇಖ ಮುಜಿಬುರ್ ರೆಹಮಾನರೊಬ್ಬರಿಂದ ಮಾತ್ರ ಸಾಧ್ಯ. ಅವರ ವಿಚಾರಣೆಯ ನಾಟಕಕ್ಕೆ ಕೂಡಲೇ ಅಂಕದ ಪರದೆಯನ್ನು ಹಾಕಬೇಕು; ಅವರ ಬಂಧ

(ಒಂಭತ್ತನೇ ಪುಟ ನೋಡಿರಿ)

ರಾಜ್ಯಪಾಲರ ಮತ್ತೊಂದು ಅವಸರದ ಕ್ರಮ—

ಭೂ ಸುಧಾರಣಾ ಶಾಸನಕ್ಕೆ ತಿದ್ದುಪಡಿ

ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಅತ್ಯಂತ ಸಹಾಯಕವಾದುದು ಭೂಸುಧಾರಣಾ ಶಾಸನ. ಆದರೆ, ಕಾಯದೆಯ ಜಟಿಲತೆ, ಅಧಿಕಾರಿಗಳ ಅದಕ್ಷತೆಗಳಿಂದ ಇದು ಭೂಮಾಲಿಕರಿಗೂ ಒಕ್ಕಲುಗಳಿಗೂ ಬೂಸು (ಕೆಟ್ಟ) ಧಾರಣೆ (ತಿಳುವಳಿಕೆ) ಕಾಯದೆಯಾಗಿ ಮಾರ್ಪಟ್ಟಿದೆ. ಇದರಿಂದ ಭೂಮಾಲಿಕರಿಗೂ ಒಕ್ಕಲುಗಳಿಗೂ ಕೂಡಿಯೇ ತುಂಬಿಬಾರದ ಹಾನಿಯಾಗಿದೆ.

ರಾಜ್ಯ ಸರಕಾರವು ೧೯೭೦ರ ಅಕ್ಟೋಬರ ಎರಡ (ಗಾಂಧಿ ಜಯಂತಿ)ರಂದೇ ಈ ಶಾಸನವನ್ನು ಲಾಗು ಮಾಡಿದ್ದರೂ ಈ ಆರು ವರ್ಷಗಳಲ್ಲಿ ದನಿ–ಒಕ್ಕಲುಗಳ ಹಿತಾಸಕ್ತಿ ನನೆಗುದಿಯಲ್ಲೇ ಕೊಳೆಯುತ್ತಿದೆ. ಇದನ್ನು ಮನಗಂಡ ರಾಜ್ಯಪಾಲರು ತಮ್ಮ ಸರ್ವಾಧಿಕಾರದ ಈ ವೇಳೆಯಲ್ಲಿ ಏನೇನೋ ಪರಿಹಾರಕ್ಕೆಂದು ಹೊರಟಿದ್ದಾರೆ. ಮೂರು ತಿಂಗಳಿಗೆ ಮೊದಲು ಅವರೊಂದು ಹೇಳಿಕೆ ನೀಡಿ, ಭೂಸುಧಾರಣಾ ಶಾಸನವನ್ನು ತ್ವರಿತಗತಿಯಿಂದ ಅನುಷ್ಠಾನಕ್ಕೆ ತರಲು ಶಾಸನದ ಪುನರ್ವಿಮರ್ಶೆ ನಡೆಸಲು ಒಂದು ಸಮಿತಿಯನ್ನು ನೇಮಿಸಿರುವುದಾಗಿ ಹೇಳಿದ್ದಾರೆ. ಈ ಸಮಿತಿಯು ಭೂಹಿಡುವಳಿಯ ಮಿತಿ, ಗೇಣಿ ಮತ್ತು ಪರಿಹಾರದ ಪ್ರಶ್ನೆಗಳನ್ನು ವಿಮರ್ಶಿಸಿ, ಪಾರ್ಲಿಮೆಂಟಿನ ಮುಂದೆ ತರುವುದಕ್ಕೆ ತಿದ್ದುಪಡಿ ಮಸೂದೆಯೊಂದನ್ನು ತಯಾರಿಸುವುದು. ಭೂಮಿಯೊಡೆಯರಿಗೆ ಇದುತನಕವೂ ಪರಿಹಾರ ಸಂದಾಯವಾಗಲಿಲ್ಲ; ಆದುದರಿಂದ ಉಳುವವನೇ ಹೊಲದೊಡೆಯನಾಗಲಿಲ್ಲ. ಇತೋಭ್ರಷ್ಟ ತತೋಭ್ರಷ್ಟ ಎಂಬ ಪರಿಸ್ಥಿತಿ.

ಈ ವಿಷಯದಲ್ಲಿ ಮಂತ್ರಿಮಂಡಳವು ಸಂಪೂರ್ಣ ಅಲಕ್ಷ್ಯ ತೋರಿಸಿದ್ದು ಸರ್ವಶ್ರುತ. ಅಧಿಕಾರಿಗಳೂ ಕರ್ತವ್ಯ ಭ್ರಷ್ಟರಾದುದು ಸುವೇದ್ಯ. ಇದರ ಪರಿಣಾಮ ಕಳೆದ ೫—೬ ವರ್ಷಗಳಿಂದ ಒಕ್ಕಲುಗಳು ಗೇಣಿಸಂದಾಯ ಮಾಡುವ ಅಭ್ಯಾಸಕ್ಕೇನೇ ತಿಲಾಂಜಲಿ ನೀಡ ಹೊರಟಿದ್ದಾರೆ. ಇದಕ್ಕೆ ಹಲವು ಕಾರಣಗಳಿರಬಹುದು; ಆದರೆ ಭೂ ಶಾಸನದ ಜಟಿಲತೆ ಮತ್ತು ಅಧಿಕಾರಿಗಳ ಕರ್ತವ್ಯ ಶೂನ್ಯತೆಗಳೇ ಮುಖ್ಯಹೇತುಗಳು.

ಭೂಶಾಸನದ ೮ನೇ ಅನುಚ್ಛೇದದಂತೆ ಭೂಮಾಲಿಕನು ಒಕ್ಕಲಿನಿಂದ ಗೇಣಿ ವಸೂಲಿ ಮಾಡಬೇಕಾದರೆ, ಗೇಣಿಯೆಷ್ಟೆಂಬುದು ಮೊದಲಿಗೆ ನಿರ್ಣಯವಾಗ ಬೇಕು. ಇದಾಗ ಬೇಕಾದರೆ ಕೆಲವು ಕ್ರಮಗಳು ನಡೆಯ ಬೇಕಾಗುತ್ತದೆ. ಅಸಿಸ್ಟೆಂಟ್ ಕಮಿಶನರು ಭದ್ರ ನೀರಾಶ್ರಯವುಳ್ಳ ಕೃಷಿ ಭೂಮಿ ಯಾವುವೆಂಬುದನ್ನು ಜಾಹೀರು ಮಾಡಬೇಕು. ತಹಸೀಲ್ದಾರರು ಭೂಮಿಯ ಎಕ್ರೆವಾರು ಒಟ್ಟು ಉತ್ಪತ್ತಿಯನ್ನು ನಿರ್ಣಯಿಸಿ ಪ್ರಕಟಿಸ ಬೇಕು. ಮಾರುಕಟ್ಟೆಯ ಮುಖ್ಯಾಧಿಕಾರಿಯು ಉತ್ಪತ್ತಿಗಳ ಧಾರಣೆಯನ್ನು ಗೊತ್ತುಮಾಡಬೇಕು. ಈ ಅಧಿಕಾರಿಗಳ ನಿರ್ಣಯಗಳಲ್ಲವೂ ಅಸಮರ್ಪಕವಾಗಿ ನಡೆದುವೆಂದೇ ಹೇಳಬೇಕು. ಉಚ್ಚ ನ್ಯಾಯಾಲಯದ ನಿರ್ಣಯ ಹೊರಬಿದ್ದ ಬಳಿಕವೂ ಅವರು ತಪ್ಪು ಮಾಡುವುದನ್ನು ಬಿಡಲಿಲ್ಲ. ದನಿಗಳು ಗೇಣಿ ವಸೂಲಿಗೆಂದು ಒಕ್ಕಲುಗಳ ಮೇಲೆ ವ್ಯವಹರಿಸಿ ನ್ಯಾಯಾಲಯಗಳ ಮೆಟ್ಟಲು ಹತ್ತಿದರೂ ಗೇಣಿ ಸಂಬಂಧದ ಅಧಿಸೂಚನೆ ಹೊರಬಾರದಿರುವುದರಿಂದ ತೀರ್ಮಾನವಾಗಲು ಸಾಧ್ಯವಿಲ್ಲವಾಗಿದೆ. ತಪ್ಪಿತಸ್ಥರಾದ ಒಕ್ಕಲುಗಳಿಂದ ತೀರ್ವೆ ವಸೂಲು ಮಾಡುವ ಅಧಿಕಾರ ಕಂದಾಯಾಧಿಕಾರಿಗಳಿಗಿದ್ದರೂ ಅವರು ದನಿಗಳನ್ನೇ ಪೀಡಿಸುತ್ತ ಬಂದಿದ್ದಾರೆ.

ಕರ್ನಾಟಕದ ಭೂಸುಧಾರಣೆಗಿಂತಲೂ ಕೇರಳದ್ದು ಬಹಳಷ್ಟು ಕ್ರಾಂತಿಕಾರಿ. ಇದರಲ್ಲಿ ತಪ್ಪುಗಾರ ಒಕ್ಕಲು ಹೊಸ ಗೇಣಿ ನಿರ್ಣಯವಾಗುವ ತನಕ ಹಿಂದಿನಂತೆಯೇ ಗೇಣಿ ತೆರುತ್ತ ಬರುವ ಮತ್ತು ನ್ಯೂನಾತಿರೇಕಗಳನ್ನು ಮುಂದೆ ಸರಿಪಡಿಸಿಕೊಳ್ಳಬಹುದೆಂಬ ಅಂಶ ಅಡಕವಾಗಿದೆ. ಇದರಿಂದ ಅಲ್ಲಿ ಭೂಮಾಲಿಕರೂ ಒಕ್ಕಲುಗಳೂ ತಂತಮ್ಮ ಹಿತವನ್ನು ರಕ್ಷಿಸಿಕೊಳ್ಳುವುದು ಸಾಧ್ಯವಾಗಿದೆ.

೧೯೭೦ರ ಜನವರಿಯಲ್ಲಿ ಬೆಂಗಳೂರಿನಲ್ಲಿ ಭೂ ಹಿಡುವಳಿದಾರರ ಸಭೆಯೊಂದು ನಡೆಯಿತು. ಆದರ ಬಳಿಕ ಶ್ರೀ ಕೋಟ ರಾಮಕೃಷ್ಣ ಕಾರಂತ, ಸಚಿವ ವಿಟ್ಠಲದಾಸ ಶೆಟ್ಟಿ ಮತ್ತಿತರರು ಕಂದಾಯ ಮತ್ತು ಕಾನೂನು ಮಂತ್ರಿಗಳನ್ನೂ ಅವರ ಕಾರ್ಯದರ್ಶಿಗಳನ್ನೂ ಭೆಟ್ಟಿ ಮಾಡಿ ಭೂಶಾಸನದ ಲೋಪ ದೋಷಗಳ ಬಗ್ಗೆ ತಿಳಿಸಿ, ಅವನ್ನು ಹೇಗೆ ನಿವಾರಿಸಬಹುದೆಂಬುದರ ಬಗ್ಗೂ ಸಲಹೆ ಸೂಚನೆಗಳನ್ನು ನೀಡಿದರು. ಅಂದಿನ ಶಾಸಕ ಬೋಳ ರಘುರಾಮ ಶೆಟ್ಟಿ ಮತ್ತು ಶ್ರೀ ಕಾರಂತರು ಮತ್ತೊಮ್ಮೆ ಆ ವಿಭಾಗದ ಕಾರ್ಯದರ್ಶಿಗಳೊಡನೆ ವಿಚಾರ ವಿನಿಮಯ ಮಾಡಿಕೊಂಡರು.

'ಜಾಹೀರು' ಸಂಬಂಧದ ಸಂಕಟಗಳ ನಿವಾರಣೆ, ದನಿ–ಒಕ್ಕಲುಗಳಿಬ್ಬರಿಗೂ ಹಿತಕಾರಿಯಾಗುವಂತೆ ಅತಿ ಶೀಘ್ರವಾಗಿ ಭೂಶಾಸನದ ತಿದ್ದುಪಡಿಯ ಆಶ್ವಾಸನೆ ಆಗ ದೊರೆಯಿತು. ಆದರೆ, ಇದುವರೆಗೂ ಯಾವುದೇ ಪರಿಹಾರ ನಡೆಯಲಿಲ್ಲ. ಇದಕ್ಕೆ ಮಂತ್ರಿಮಂಡಳವು ಹೊಣೆಯಾಗಿರಬಹುದು; ಅಥವಾ ಕಾರ್ಯದರ್ಶಿಗಳೇ ಹೊಣೆಗೇಡಿಗಳಾಗಿರಲೂ ಬಹುದು.

ಅದೇನಿದ್ದರೂ ಕಳೆದ ಮಾರ್ಚಿ ತಿಂಗಳಲ್ಲಿ ಶಾಸನ ಸಭೆಯು ಬರ್ಖಾಸ್ತುಗೊಂಡಿತು. ಈಗ ರಾಜ್ಯಪಾಲರು ಆಡಳಿತ ನಡೆಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಅವರು ಹಲವಾರು ಆತುರದ ಕಾರ್ಯಕ್ರಮಗಳನ್ನು ಕೈಕೊಂಡರು. ಆದರೆ, ಜನಪ್ರಿಯ ಸರಕಾರವಿಲ್ಲದೆ ಒಂದು ರೀತಿಯ ನಿರಂಕುಶ ಅಧಿಕಾರಿಯು ಪ್ರಜೆಗಳನ್ನು ಯಾವುದೇ ಬಂಧನದಲ್ಲಿ ಒಡ್ಡುವುದು ನ್ಯಾಯೋಚಿತವೆ? ಕಾವೇರೀ ನದೀನೀರಿನ ವಿಷಯದಲ್ಲಿಯೂ ರಾಜ್ಯಪಾಲರು ಆರಂಭದಲ್ಲಿ ತುಸು ದುಡುಕಿಯೇ ಮಾತಾಡಿದರು. ಆದರೆ, ಪ್ರಜೆಗಳ ಆತಂಕದಿಂದ ಯಥಾಸ್ಥಿತಿಗೆ ಬಂದು ನಿಂತರು. ಅದೇ ರೀತಿ ಭೂಸುಧಾರಣೆಯಂತಹ ಮಹತ್ವಪೂರ್ಣ ಶಾಸನಕ್ಕೆ ಮಾಡಲು ಯೋಜಿಸಿರುವ ತಿದ್ದುಪಡಿ ಇತ್ಯಾದಿಗಳು ಕಾರ್ಯದರ್ಶಿಗಳ ತಲೆಯಿಂದಲೇ ರೂಪಿತವಾಗುತ್ತವೆ; ಅದನ್ನು ಪ್ರಜೆಗಳ ತಲೆಯ ಮೇಲೆ ಹೇರಲಾಗುತ್ತದೆ. ರಾಜ್ಯಪಾಲರು ಕಳಿಸಿದ ಯಾವುದೇ ತಿದ್ದುಪಡಿ ಶಾಸನವನ್ನು ಪಾರ್ಲಿಮೆಂಟು ಯಾವ ಆತುರವೂ ಇಲ್ಲದೆ ಮಂಜೂರು ಮಾಡಿ ಬಿಡುತ್ತದೆ. ನಮ್ಮ ರಾಜ್ಯದ ಬೆರಳೆಣಿಕೆಯ ಎಂ. ಪಿಗಳೂ ನಾನಾ ಕಾರಣಗಳಿಂದಾಗಿ ಆಡಳಿತ ಪಕ್ಷದ ಶಿಸ್ತಿನ ಮುಂದೆ ತಲೆಬಾಗಿಯೇ ಬಾಗುತ್ತಾರೆ. ಆಗ ರಾಜ್ಯದ ಸಂಪೂರ್ಣ ಹಿತಕ್ಕೆ ಬಾಧೆಯೊದ್ದಿದಂತಾಗುತ್ತದೆ.

ಕಾವೇರಿ ನೀರಿನ ವಿವಾದದ ಬಗ್ಗೆ ಬೇರೆ ಬೇರೆ ರಾಜ್ಯಕೀಯ ಪಕ್ಷಗಳು ರಾಜ್ಯಪಾಲರ ಕೈ ತಡೆದುವು. ವಿವಿಧ ಬೋರ್ಡು—ಮಂಡಳಿಗಳ ಅಧ್ಯಕ್ಷ—ಸದಸ್ಯಸ್ಥಾನಗಳ ನೇಮಕದ ಬಗ್ಗೆ ಅವು ಡಿಲ್ಲಿಯ ತನಕವೂ ದೂರೊಯ್ದುವು. ಆದರೆ, ಭೂಸುಧಾರಣೆಯ ಬಗ್ಗೆ ರಾಜ್ಯಪಾಲರ ಅವಸರದ ಕ್ರಮಗಳನ್ನು ಸಿಂಡಿಕೇಟಾಗಲೀ ಇಂಡಿಕೇಟಾಗಲೀ ಏಕೆ ತಡೆಯಹೊರಡಲಿಲ್ಲ? ಜನಸಂಘವೂ ಮೌನವಾಗಿದೆಯೇಕೆ?

ನಮ್ಮ ರಾಜ್ಯಕೀಯ ಪಕ್ಷಗಳೆಲ್ಲವೂ ತಮ್ಮನ್ನು ಅಪ್ಪಟ ಸಮಾಜವಾದಿಗಳೆಂದು ಕರೆದು ಕೊಳ್ಳುತ್ತಿವೆ. ರಾಜ್ಯಪಾಲರ ಕ್ರಮಗಳ ಬಗ್ಗೆ ತುಟಿಯೆರಡು ಮಾಡಿದರೆ, ಅದರಿಂದ ತಮ್ಮ ಸಮಾಜವಾದದ ಮಡಿವಂತಿಗೆಗೆ ಮೈಲಿಗೆಯಡರೀತೆಂದು ಅವುಗಳಿಗೆ ಭಯವೆ? ತಮ್ಮಿಂದಾಗದ್ದು ತಾವು ಮಾಡಲಾರದ್ದು ರಾಜ್ಯಪಾಲರ ಆಳಿಕೆಯಲ್ಲೇ ನಡೆದು ಹೋಗಲೆಂದು ಅವರು ಆಶಿಸುತ್ತಿದ್ದಾರೆಯೆ? ಇಲ್ಲವಾದರೆ ಅವರೇಕೆ ಬಾಯಿ ತೆರೆಯುವುದಿಲ್ಲ? ಇದು ನಿಜಕ್ಕೂ ಸೋಜಿಗದ ರಾಜ್ಯಕೀಯ ಸ್ವಾರ್ಥ ಸಾಧನೆಯ ದುರ್ವರ್ತನೆಯೆಂಬುದು ನಿಸ್ಸಂಶಯ. ರಾಜ್ಯಪಾಲರು ಮುಂದಿನ ಕ್ರಮಗಳನ್ನು ಕೈಗೊಳ್ಳುವುದಕ್ಕೆ ದುಡುಕದೆ, ಮುಂದೆ ಬರ ಬಹುದಾದ ಜನಪ್ರಿಯ ಸರಕಾರಕ್ಕೆ ಈ ಕೆಲಸವನ್ನು ಬಿಟ್ಟುಕೊಡುವುದು ಅಗತ್ಯ. ಆಗ ಜನಪ್ರತಿನಿಧಿಗಳು ಜನಾಭಿಪ್ರಾಯ ಕ್ರೋಢೀಕರಿಸಿ ಸೂಕ್ತ ಶಾಸನ ತಯಾರಿಸುವುದು ಸಾಧ್ಯವಾಗುತ್ತದೆ. ಇಲ್ಲವಾದರೆ ರಾಷ್ಟ್ರಪತಿ ಆಳ್ವಿಕೆಯು ಸರ್ವಾಧಿಕಾರವೇ ಎಂಬುದಕ್ಕೆ ಬೇರೆ ಉತ್ತಮ ನಿದರ್ಶನ ದೊರೆಯುವುದಿಲ್ಲ.

●●

We Treasure Your Account ‡ with Love

FAITHFUL · FRIENDLY

Syndicate Bank

Branches: 499

K. K. Pai
Custodian

‡ Two million, two hundred fifteen thousand, six hundred and eighty nine people had their accounts with us on the thirty-first day of December, Nineteen hundred and Seventy.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಒಕ್ಕಲತನವು ಸಾಕ್ಷಾತ್ ಬ್ರಹ್ಮಕರ್ಮವಾಗಿದೆ

(ವಿನೋಬಾ)

ನಮ್ಮ ಸಮಾಜದಲ್ಲಿ ಸಾರ್ವಜನಿಕವಾಗಿ ಗುಣ ವಿಕಾಸ ಆಗಿಯೇ ಇಲ್ಲ ಎಂಬ ವಿಚಾರವು ನನ್ನ ಮನಸ್ಸಿನಲ್ಲಿ ತಿರು ತಿರುಗಿ ಸುಳಿಯುತ್ತಿರುತ್ತದೆ. ಕೆಲವೊಂದು ವರ್ಗಗಳಲ್ಲಷ್ಟೇ ಕೆಲವು ಗುಣಗಳ ವಿಕಾಸವಾಗಿದೆ ಬೇರೆ ವರ್ಗಗಳಲ್ಲಿ ಬೇರೆ ಕೆಲವು ಗುಣಗಳ ವಿಕಾಸವಾಗಿದೆ. ಈ ಪ್ರಕಾರ ವರ್ಗಗಳಲ್ಲಿ ವಿಕಾಸವಾಗಿದೆ. ಇಡೀ ಜಗತ್ತಿನಲ್ಲಿಯೂ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಹೀಗೇ ಆಗಿದೆ. ಆದರೆ ನಮ್ಮಲ್ಲಿ ಇದು ಎದ್ದು ಕಾಣಿಸುತ್ತದೆ. ನಮ್ಮಲ್ಲಿ ಜಾತಿ ಸಂಸ್ಥೆ ಇತ್ತು; ಅದುಇಂದಿಗೂ ಇದೆ ಅದೇ ಇದಕ್ಕೆ ಕಾರಣ ಈ ವಿಷಯವಾಗಿ ಜನರಲ್ಲಿದ್ದ ಶ್ರದ್ಧೆಯು ಈಗ ಸ್ಥಿರ ಉಳಿದಿಲ್ಲ. ಡೋಲಾಯಮಾನವಾಗಿದೆ ಆದರೂ ಜಾತಿ ಸಂಸ್ಥೆಯು ಹೋಗಿಲ್ಲ. ಆದ್ದರಿಂದ ಇಲ್ಲಿ ಗುಣ ವಿಕಾಸವು ಸ್ಪಷ್ಟ ರೂಪದಲ್ಲಿ ಭಿನ್ನ ಭಿನ್ನವಾಗಿರುವದು ಕಾಣುತ್ತದೆ. ಒಂದೊಂದು ಜಾತಿಯಲ್ಲಿ ಒಂದೊಂದು ಬಗೆಯ ಗುಣಗಳ ವಿಕಾಸವಾಗಿದೆ ಜನರ ಮುಖಾಂತರ ಭಿನ್ನ ಭಿನ್ನ ಕೆಲಸ ಮಾಡಿಸುವದಕ್ಕೆ ನಾವು ವ್ಯವಸ್ಥೆ ಅನ್ನುತ್ತೇವೆ. ಆದರೆ ಅದರಿಂದ ಗುಣ ವಿಕಾಸವೂ ಹರಿದು ಹಂಚಿ ಹೋದರೆ ನಮ್ಮ ಸಮಾಜವೆಂದೂ ಸಮರ್ಥವಾಗಲಾರದು. ಆದ್ದರಿಂದ ಗುಣ ವಿಕಾಸವು ಸಾರ್ವಜನಿಕ ಸ್ವರೂಪದ್ದೇ ಆಗಬೇಕು.

ಸತ್ಯನಿಷ್ಠೆ, ಪ್ರೇಮ, ಸಹಕಾರ, ಪರಾಕ್ರಮ ಶೀಲತೆ, ಸಾಹಸ ಈ ಯಾವತ್ತೂ ಗುಣಗಳು, ಯಾವತ್ತೂ ವರ್ಣಗಳಲ್ಲಿಯೂ ಯಾವತ್ತೂ ಜನರಲ್ಲಿಯೂ ವ್ಯಾಪಿಸಿರಲೇಬೇಕು. ಇವೆಲ್ಲ ಹರಿದು ಹಂಚಿ ಹೋಗುವದು ಸರಿಯಲ್ಲ ಆದರೆ ನಮ್ಮ ಸಮಾಜದಲ್ಲಿ ಹೀಗೆ ಆಗಿಲ್ಲ. ಅಪರಿಗ್ರಹವು ಸನ್ಯಾಸಿಗಳಿಗೆ ಗುಣವಾಗಿದ್ದರೆ, ಅದೇ ಗುಣವು ವೈಶ್ಯರಲ್ಲಿದ್ದರೆ ದೋಷವೆಂದು ತಿಳಿಯಲಾಗುತ್ತದೆ ಈ ಪ್ರಕಾರ ತಿಳಿಯುವದರಿಂದ ಆಗುವ ಮೂಲಭೂತ ತಪ್ಪನ್ನು ಲಕ್ಷ್ಯದಲ್ಲಿ ತೆಗೆದುಕೊಳ್ಳಬೇಕು. ಇಲ್ಲವಾದರೆ ನಮ್ಮ ರಾಷ್ಟ್ರದ ಸರ್ವಾಂಗ ವಿಕಾಸ ಮಾಡುವದು ಸಾಧ್ಯವಾಗಲಿಕ್ಕಿಲ್ಲ.

ಒಕ್ಕಲತನದಲ್ಲಿ ಎಲ್ಲರದೂ ಕೈ ಇರಬೇಕು

ಈ ವಿಷಯವಾಗಿ ವಿಚಾರ ಮಾಡ ಮಾಡುತ್ತ ಒಕ್ಕಲತನದಲ್ಲಿ ಎಲ್ಲರದೂ ಕೈ ಇರಬೇಕು ಎಂದು ನನ್ನ ಅನುಭವಕ್ಕೆ ಬರುತ್ತಲಿದೆ. ಒಕ್ಕಲತನ ಒಂದೇ ಸರ್ವ ವ್ಯಾಪಕ ಧಂದೆಯಾಗಿದ್ದು ಅದರಲ್ಲಿಯೇ ಯಾವತ್ತೂ ಗುಣಗಳ ವಿಕಾಸವಾಗಲಿಕ್ಕೆ ಅವಕಾಶವಿದೆ. ಸೃಷ್ಟಿ ಹಾಗೂ ಪಶುಗಳೊಡನೆ ಏಕರೂಪತೆ, ಸಹಕಾರದ ಅವಶ್ಯಕತೆ, ಪರಿಶ್ರಮನಿಷ್ಠೆ, ಎಲ್ಲಾ ಪ್ರಕಾರದ ಲೆಕ್ಕ ಪತ್ರ, ಮೊದಲಾದ ಅನೇಕ ಸಂಗತಿಗಳು ಒಕ್ಕಲತನದಲ್ಲಿ ಸಾಧಿಸುತ್ತವೆ. ಒಕ್ಕಲತನದಲ್ಲಿ ಒಂದೇ ಧಾನ್ಯ ಒಂದೇ ಬೆಳೆ ತೆಗೆಯದೆ ಎಷ್ಟೋ ಜೀನಸುಗಳ ಎಷ್ಟೋ ಬೆಳೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದೂ ಸಹ ತನ್ನೊಬ್ಬನ ಬಗ್ಗೆ ಮಾತ್ರವಲ್ಲ, ಎಲ್ಲರ ಸಲುವಾಗಿ ಮಾಡಬೇಕಾಗುತ್ತದೆ ಮತ್ತು ಅದನ್ನು ಹಂಚಬೇಕಾಗುತ್ತದೆ. ಆದ್ದರಿಂದಲೇ ಒಕ್ಕಲತನದೊಂದಿಗೆ ಪ್ರತಿಯೊಬ್ಬರದೂ ಸ್ವಲ್ಪವಾದರೂ ಸಂಬಂಧ ಇರಿಸಲೇಬೇಕು. ಒಕ್ಕಲತನ ಒಂದೇ ಅಲ್ಲದೆ ಜತೆಯಲ್ಲಿ ಅನ್ಯ ಉದ್ಯೋಗಗಳನ್ನೂ ಮಾಡಬಹುದು ಸಮಾಜದಲ್ಲಿ ಈ ತರಹದ ವ್ಯವಸ್ಥೆ ಆದಾಗಲೇ ಎಲ್ಲಾ ಜನರಿಗೆ ಎಲ್ಲ ತರಹದ ಗುಣಗಳೂ ಪ್ರಾಪ್ತವಾದಾವು. ಆದರೆ ಒಕ್ಕಲತನವು ಕೆಲವೊಂದು ನಿರ್ದಿಷ್ಟ ಜನರದಷ್ಟೇ ಉದ್ಯೋಗವಾಗಿದ್ದು ಬಿಟ್ಟರೆ, ಸರ್ವತ್ರ ಸಮಗ್ರ ಗುಣ ವಿಕಾಸವಾಗಲಾರದು ಎಂಬುದು ನಿಶ್ಚಿತ. ಎಲ್ಲರೂ ಎಂಟೆಂಟು ತಾಸು ಒಕ್ಕಲತನ ಮಾಡಬೇಕೆಂದೇನೂ ಇದರ ಅರ್ಥವಲ್ಲ. ಪ್ರತಿಯೊಬ್ಬರೂ ಕೊನೆಯ ಪಕ್ಷ ಒಂದು ಗಂಟೆಯಾದರೂ ಒಕ್ಕಲತನ ಮಾಡಬೇಕು. ಅರ್ಥಾತ್ ಒಕ್ಕಲತನವು ಒಂದು ಸಾರ್ವಜನಿಕ ಧರ್ಮವಾಗಬೇಕು. ಮತ್ತು ಕೇವಲ ಒಕ್ಕಲತನವನ್ನೇ ಮಾಡುವವರ ಮಟ್ಟಿಗೆ ಮಾತ್ರ ಒಂದು ಧಂದೆಯೂ ಆಗಬೇಕು. ಈ ಪ್ರಕಾರವಾಗಿ ಎರಡು ವಿಭಾಗ ಆಗಬೇಕು. ಗ್ರಾಮದಾನದಲ್ಲಿ ಪ್ರತಿಯೊಬ್ಬರದೂ ಒಕ್ಕಲತನದೊಡನೆ ಸಂಬಂಧವಿರಬೇಕು. ಅದಕ್ಕಾಗಿ ಪ್ರತಿಯೊಂದು ಕುಟುಂಬಕ್ಕೂ ಸ್ವಲ್ಪಲ್ಲ ಸ್ವಲ್ಪ ಭೂಮಿ ಹಂಚುವ ಯೋಜನೆ ಆಗಬೇಕು. ಇನ್ನಿತರರು ಒಕ್ಕಲತನ ಧಂದೆಯನ್ನೇ ನಡಿಸಿಯಾರು. ಊರ ಭೂಮಿಯನ್ನೆಲ್ಲ ಒಟ್ಟುಗೂಡಿಸಬೇಕೋ? ಕೆಲವು ಗುಂಪುಗಳಾಗಿ ಹಂಚಬೇಕೋ? ಪ್ರತಿಯೊಂದು ಕುಟುಂಬಕ್ಕೂ ಸ್ವಲ್ಪ ಸ್ವಲ್ಪ ಹಂಚಬೇಕೋ? ಏನೆಂಬುದನ್ನು ಊರ ಜನರೇ ನಿರ್ಣಯಿಸಬೇಕು

ಒಕ್ಕಲುತನವು ಒಂದು ನಿರ್ಮಾಣ ಕಾರ್ಯವೇ

ಇಂದು ಅಸಂಖ್ಯ ಹುಡುಗ ಹುಡುಗಿಯರ ಕೈ ಒಕ್ಕಲತನಕ್ಕೆ ಹತ್ತುವದೇ ಇಲ್ಲ. ಇದು ದುರ್ದೈವ ಆದ್ದರಿಂದಲೇ ಮನುಷ್ಯನ ವಿಕಾಸಕ್ಕೆ ತಡೆ ಬೀಳುತ್ತದೆ. ಒಕ್ಕಲತನವು ಪ್ರತ್ಯಕ್ಷ ಬ್ರಹ್ಮಕರ್ಮ ಇರುತ್ತದೆ. ಆದ್ದರಿಂದ ನಿರ್ಮಾಣ ಕಾರ್ಯವೂ ಆಗಿದೆ. ಅರ್ಥ ಶಾಸ್ತ್ರಜ್ಞರು ಇದಕ್ಕೆ ಉತ್ಪಾದಕ ಕಾರ್ಯ ಅನ್ನುತ್ತಾರೆ ಆದರೆ ಶಬ್ದ ಗೌಣ. "ಬ್ರಹ್ಮ ಕರ್ಮ" ಎನ್ನುವದೇ ಸರ್ವೋತ್ತಮ ಶಬ್ದ. ಬ್ರಹ್ಮ ಕರ್ಮವೆಂದರೆ ಬ್ರಹ್ಮದೇವನ ಕೆಲಸ. ಸೃಷ್ಟಿಯಲ್ಲಾಗುವ ಉತ್ಪಾದನೆ ಎಲ್ಲವೂ ಬ್ರಹ್ಮಕರ್ಮವೇ. ಗೋಧಿ ಬಿತ್ತಿದರೆ ಬೆಳೆಯುತ್ತದೆ. ಲಕ್ಷ್ಮೀ ಉತ್ಪನ್ನವಾಗುತ್ತಾಳೆ. ಇದು ಬ್ರಹ್ಮಕರ್ಮವೇ ಇದರ ಲಾಭವು ಪ್ರತಿಯೊಬ್ಬನಿಗೂ ಮುಟ್ಟಲೇಬೇಕು. ಇದರಲ್ಲಿ ಸಾಕ್ಷಾತ್ ಸೃಷ್ಟಿ ದೇವತೆಯೊಡನೆ ಸಂಬಂಧ ಬರುತ್ತದೆ. ಆದ್ದರಿಂದಲೇ ಇದರ ಮುಖಾಂತರ ಎಲ್ಲಾ ಜನರ ಗುಣವಿಕಾಸವಾದಾವು. ಎಲ್ಲರ ಮನಸ್ಸು ಉದಾರವಾದಾವು.

ಇಂದು ಕೆಲವೊಂದು ಧಂದೆಗಳು ತೀರಾ ಸಂಕುಚಿತವಾಗಿದ್ದು ಅವುಗಳಲ್ಲಿ ಮಾನಸಿಕ ಉದಾರತೆಯೇ ಬಾರದಂತಾಗಿದೆ. ಸೃಷ್ಟಿಯಲ್ಲಿ ನಾವು ಒಂದು ಕಾಳು ಬಿತ್ತಿದರೆ ಸಾವಿರಾರು ಕಾಳು ಬೆಳೆಯುತ್ತವೆ. ಇದರಲ್ಲಿರುವ ಉದಾರತೆಯು ವ್ಯಾಪಾರಿಯ ಅಂಗಡಿಯಲ್ಲಿ ಇರುವದಿಲ್ಲ. ಅಲ್ಲಿ ಪ್ರತಿಯೊಂದೂ ಅಳೆದು ತೂಕ ಮಾಡಿ ದೊರೆಯುತ್ತದೆ. ತಕ್ಕಡಿಯಿಂದ ತೂಗಿ ಕೊಡುವದೇ ನ್ಯಾಯ ಎಂದು ತಿಳಿಯಲಾಗುತ್ತದೆ. ಇದೇ ವ್ಯಾಪಾರದ ಮಹಿಮೆ! ಆದರೆ ಒಕ್ಕಲತನದಲ್ಲಾದರೋ ಕೊಡುವದು ಸ್ವಲ್ಪ ಪಡೆಯುವದು ವಿಪುಲ! ಇಂಥ ಉದಾರತೆ ಬೇರೆ ಯಾತರಲ್ಲಿಯೂ ಇಲ್ಲ! ಇದು ಮನುಷ್ಯ ಕೃತಿಯಲ್ಲ ದೇವ ಕೃತಿ! ಅರ್ಥಾತ್ ಇದರಲ್ಲಿ ಮನುಷ್ಯ ನಿಮಿತ್ತ ಮಾತ್ರ! ನಾನು ಒಂದು ಕಾಳು ಗೋಧಿ ಬಿತ್ತಿದೆನೆನ್ನಿ; ಅದರಿಂದ ನೂರು ಕಾಳು ಹೊರಡುವ ಕೆಲಸ ದೇವರು ಮಾಡುತ್ತಾನೆ. ಸೃಷ್ಟಿ ಮಾಡುತ್ತದೆ. ಆದ್ದರಿಂದಲೇ ಇದು ನಿಜವಾದ ದೇವಕೃತಿ ಇರುತ್ತದೆ ಇತರ ಕೃತಿಗಳಲ್ಲಿ ಹೀಗಿಲ್ಲ.

ನಾನು ಒಂದು ಗಡಿಯಾರ ತಯಾರಿಸಿದೆನೆಂದು ತಿಳಿಯಿರಿ. ಅದರಲ್ಲಿ ದೇವರ ಕೃತಿ ಎಷ್ಟು? ಅವನು ನನಗೆ ಬುದ್ಧಿ ಕೊಟ್ಟಿದ್ದಾನೆ ಎಂಬುದೊಂದೇ ಆತನ ಕೃತಿ. ಆದರೆ ಆ ಕೆಲಸದಲ್ಲಿ ಪ್ರತ್ಯಕ್ಷ ಪರಮೇಶ್ವರ ಸ್ಪರ್ಶವಾಗುತ್ತಿರುವದಿಲ್ಲ. ಅವನು ಸರ್ವಾಂತರ್ಯಾಮಿಯೂ ಸರ್ವ ಪ್ರೇರಕನೂ ಇರುವದರಿಂದ ನನ್ನಲ್ಲಿಯೂ ಇದ್ದಾನೆ ಎಂಬ ದೃಷ್ಟಿಯಿಂದ ಎಲ್ಲವೂ ಅವನದೇ ಕೆಲಸ ಎಂಬುದೇನೋ ಸರಿ ಆದರೆ ಈ ಕೆಲಸದಲ್ಲಿ ಆತನ ಪ್ರತ್ಯಕ್ಷ ಕಾರ್ಯವಿಲ್ಲ. ಅರ್ಥಾತ್ ಇದರಲ್ಲಿ ಈಶ್ವರನ ಉಪಯೋಗ ತೆಗೆದುಕೊಳ್ಳಲಾಗಿದೆ ಎಂದು ಹೇಳಲಿಕ್ಕೆ ಶಕ್ಯವಿಲ್ಲ. ನೇಯಿಗೆಯ ಕೆಲಸ ಮಾಡಿದರೆ ಅದರಲ್ಲಿಯೂ ನೂಲು, ಮಗ್ಗ ಮೊದಲಾದ ಓಡವೆಗಳದೇ ಉಪಯೋಗ ಮಾಡಿಕೊಳ್ಳಲಾಗುತ್ತದೆ. ಆದರೆ ಒಕ್ಕಲುತನದಲ್ಲಿ ಇಂಥ ಹತ್ತು ಉಪಕರಣಗಳ ಜತೆಯಲ್ಲೂ, ದೇವರ ಹೆಸರನ್ನೂ ತೆಗೆದುಕೊಳ್ಳಲೇ ಬೇಕಾಗುತ್ತದೆ.

ಡಾಕ್ಟರರು ಆಪರೇಶನ್ ಮಾಡುತ್ತಾರೆಂದರೆ ಏನು? ಆಪರೇಶನ್ ಮಾಡಿ ಹೊಲಿದು ಬಿಡುತ್ತಾರೆ. ಮರುದಿನ ಹೋಗಿ ಅದರಲ್ಲಿ ಕೀವು ವಗೈರೆ ಆಗಿಲ್ಲವಷ್ಟೇ ಎಂಬುದನ್ನು ನೋಡುತ್ತಾರೆ. ಆಗಿರದಿದ್ದರೆ ಒಳ್ಳೆಯದೇ ಅರ್ಥಾತ್ ಆ ಕೆಲಸ ದೇವರೇ ಮಾಡುತ್ತಾನೆ. ಆಪರೇಶನ್ ಕೆಲಸದಲ್ಲಿ ಡಾಕ್ಟರರು ನಿಮಿತ್ತ ಮಾತ್ರರು. ಸಾಕ್ಷಾತ್ ಕಾರಣರು ದೇವರೇ. ಅದೇ ಪ್ರಕಾರ ಒಕ್ಕಲತನದಲ್ಲಿ ನಾನು ನಿಮಿತ್ತ ಮಾತ್ರ. ನಾನು ಮಾಡುವದಿಷ್ಟೇ—ಅನುಕೂಲ ಕಾಲ ನೋಡಿ ನಾನಿಷ್ಟು ಕಾಳು ಬಿತ್ತುತ್ತೇನೆ. ಆದರೆ ಒಂದಕ್ಕೆ ನೂರು ಕಾಳು ಆಗಲಿಕ್ಕೆ ದಿನಗಳನ್ನು ಎಣಿಸುತ್ತ ಕೂಡ್ರಬೇಕಾಗುತ್ತದೆ. ಇದೆಲ್ಲ ಗಾರುಡೀ ವಿದ್ಯೆ ಯಾರು ಮಾಡುತ್ತಾರೆ? ದೇವರೇ ಮಾಡುತ್ತಾನೆ ಎಂದು ಹೇಳಬೇಕಾಗುತ್ತದೆ.

ಇನ್ನೊಂದು ರೀತಿಯಲ್ಲಿ ಹೇಳಬೇಕಾದರೆ ಬರೆಯಲಿಕ್ಕೆ ಲೆಕ್ಕಣಿಕೆ ಎಂಬ ಸಾಧನ ಉಪಯೋಗಿಸುವಂತೆ ಒಕ್ಕಲತನದಲ್ಲಿ ದೇವರೆಂಬ ಉಪಕರಣವನ್ನು ಉಪಯೋಗಿಸಿಕೊಳ್ಳಲಾಗುತ್ತದೆ ಆದರೆ ದೇವರು ಅಂತರ್ಯಾಮಿಯಾಗಿರುವದರಿಂದ ನಾನು ಬಿತ್ತಿದೆನೆಂದರೂ ಆತನೇ ಬಿತ್ತಿದನೆಂದಂತೆ. ಇದು ಎಲ್ಲ ಕೆಲಸಗಳಿಗೂ ಅನ್ವಯಿಸುತ್ತದೇನೋ ನಿಜ. ಆದರೆ ಒಕ್ಕಲತನದಲ್ಲಿ ದೇವರ ಸಾಕ್ಷಾತ್ ಕರ್ತೃತ್ವವಿರುತ್ತದೆ ಮತ್ತು ಕರಣತ್ವವೂ ಸಹ. ಅಲ್ಲಿ ಆತ ಉಪಕರಣವೂ ಸಹ ಆಗಿರುತ್ತಾನೆ. ಇಷ್ಟೇ ಅಲ್ಲದೆ ಮೇಲಿನಿಂದ ಮಳೆಗರೆಯುವಾತ ಹಾಗೂ ಒಳಗಿನಿಂದ ಭೂಮಿಗೆ ಕಸುವನ್ನು ಕೊಡುವಾತನೂ ಅವನೇ. ಮೇಲಿನಿಂದ ಮಳೆಯ ರೂಪದಲ್ಲಿ ನೀರು ಹನಿಸುತ್ತಾನೆ ಮತ್ತು ಒಳಗಿನಿಂದ ಬೀಜಗಳನ್ನು ಸಸಿಗಳನ್ನಾಗಿ ಪರಿವರ್ತನೆ ಮಾಡುವ ಕೆಲಸವನ್ನೂ ಮಾಡುತ್ತಾನೆ. ಮತ್ತು ನನ್ನ ಕೈಗಳಿಂದ ಯಾವಾಗಲೂ ಕೆಲಸ ಮಾಡಿಸುವವನೂ ಆತನೇ.

ಒಕ್ಕಲಿಗನ ಹೊಲದಲ್ಲಿ ದೇವರು ಕುಣಿಯುತ್ತಾನೆ

ಒಟ್ಟಿಗೆ ಒಕ್ಕಲತನ ಧಂದೆಯಲ್ಲಿ ಮನುಷ್ಯನ ಗುಣವಿಕಾಸವಾಗುವಷ್ಟು ಬೇರೆ ಯಾತರಲ್ಲಿಯೂ ಆಗುವದಿಲ್ಲ. ಇದರಲ್ಲಿ ಪ್ರತ್ಯಕ್ಷ ಪರಮೇಶ್ವರನ ಗುಣಸಂಪರ್ಕವಾಗು

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant. Boarding & Lodging.
107 Police Road, City Market.
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ತ್ತದೆ. ಹೊರಗೆ ಎಷ್ಟೋ ಉತ್ಸವಗಳು ನಡೆಯುತ್ತಿರುತ್ತವೆ. ಒಮ್ಮೆ ಕೃಷ್ಣ ಜನ್ಮಾಷ್ಟಮಿ ನಡೆಯುತ್ತಿದ್ದರೆ ಇನ್ನೊಮ್ಮೆ ರಾಮನವಮಿ ನಡೆಯುತ್ತದೆ. ಒಮ್ಮೆ–ಕೃಷ್ಣನ ಭಜನೆ ನಡೆದರೆ ಇನ್ನೊಮ್ಮೆ ರಾಮನ ಭಜನೆ ನಡೆಯುತ್ತದೆ. ಭಕ್ತಿಯಲ್ಲಿ ಈ ಪ್ರಕಾರದ ವಿವಿಧತೆ ತರಬೇಕಾಗುತ್ತದೆ. ಆದರೆ ಒಕ್ಕಲತನದಲ್ಲಿ ಈ ಪ್ರಕಾರದ ವಿವಿಧತೆ ತರಬೇಕಾಗುವದೇ ಇಲ್ಲ. ಪರಮೇಶ್ವರನೇ ಅದರಲ್ಲಿ ವಿವಿಧತೆ ಇರಿಸಿ ಬಿಟ್ಟಿದ್ದಾನೆ.

ನಾಮದೇವ ಕೀರ್ತನ ಕರೀ, ತಿಥೇ ದೇವಾ ನಾಚೇ ಪಾಂಡುರಂಗ| ನಾಮ ದೇವನ ಕೀರ್ತನದಲ್ಲಿ ಪಾಂಡುರಂಗ ಕುಣಿಯುತ್ತಾನೆ. ಆದರೆ ರೈತನ ಹೊಲದಲ್ಲಿ ಪರಮೇಶ್ವರನು ಸದಾ ಕಾಲವೂ ಕುಣಿಯುತ್ತಿರುತ್ತಾನೆ. ಆದ್ದರಿಂದಲೇ ನಾಮದೇವನ ಕೀರ್ತನದಲ್ಲಿದ್ದ ಗುಣ ವಿಕಾಸ ಶಕ್ತಿಯು–ಒಕ್ಕಲತನದಲ್ಲಿಯೂ ಇರುತ್ತದೆ. ಆದ್ದರಿಂದ ಪ್ರತಿಯೊಬ್ಬನಿಗೂ ಅದರ ಲಾಭ ಮುಟ್ಟ ಬೇಕು.

ಇದಕ್ಕಾಗಿಯೇ ಪ್ರತಿಯೊಂದು ಕುಟುಂಬಕ್ಕೆ ಐದೇ ಗುಂಠೆ ಭೂಮಿ ಕೊಟ್ಟರೂ ಸಾಕು. ಅದರಲ್ಲಿ ಪ್ರತಿಯೊಬ್ಬನೂ ಏನಾದರೂ ಧಾನ್ಯ, ಕಾಯಿಪಲ್ಯ, ಹಣ್ಣು, ಹತ್ತಿ, ಮಸಾಲೆಯ ಪದಾರ್ಥ ಬೆಳೆಸಿಕೊಳ್ಳಲಿ. ಅರ್ಥಾತ್ ಪ್ರತಿಯೊಬ್ಬರೂ ಏನನ್ನಾದರೂ ಬಿತ್ತಲಿ. ಇದರಿಂದ ವ್ಯಾಯಾಮವಾಗಿ ಆರೋಗ್ಯಕ್ಕೂ ಲಾಭವಾದೀತು. ಆದರೆ ಇಂದಾದರೋ ಜನರು ವ್ಯಾಯಾಮದ ಹೆಸರಿನಲ್ಲಿ ದಂಡ ಬೈಠಕ ಮೊದಲಾದ ಕೂಡ್ರುವ ಏಳುವ ಕಸರತ್ತು ಮಾಡುತ್ತಾರೆ. ಇದರಂತೆ ಸುಮ್ಮ ಸುಮ್ಮನೆ ಕೂಡ್ರುವದು ಏಳುವದೂ ಮಾಡುವ ಬೇರೆ ಒಂದಾದರೂ ಜಾನುವಾರವಿದೆಯೆ? ಆದರೆ ಮನುಷ್ಯನೇ ಮಾತ್ರ ವ್ಯಾಯಾಮ ಶಾಲೆಯಲ್ಲಿ ಹೋಗಿ ವ್ಯಾಯಾಮ ಮಾಡುತ್ತಾನೆ. ಮೇಲಾಗಿ ಇಷ್ಟೆಲ್ಲ ಪರಿಶ್ರಮ ಮಾಡಿಯೂ ಅಲ್ಲಿ ಆತ ಕೆಲವೊಂದು ಫೀ ಬೇರೆ ಕೊಡಬೇಕಾಗುತ್ತದೆ! ಇಂದು ಮಧ್ಯಮ ವರ್ಗದ ಜನ ದಂಡ ಬೈಠಕ, ಮಲಖಂಬ ಮೊದಲಾದ ತರಹ ತರಹದ ವ್ಯಾಯಾಮ ಮಾಡುತ್ತಾರೆ. ಇದರ ಬದಲು ಹೊಲದಲ್ಲಿ ಕೆಲಸ ಮಾಡಿದರೆ ಹಾನಿ ಏನು? ಮಲಖಂಬದ ಬದಲು ಮರವನ್ನೇಕೆ ಏರ ಬಾರದು?

ಒಕ್ಕಲತನ ಸೇವೆಯೇ ಒಂದು ಉಪಾಸನೆ–ಒಕ್ಕಲತನದಲ್ಲಿ ಸ್ವಾಭಾವಿಕವಾಗಿಯೇ ವ್ಯಾಯಾಮವಾಗಿ ಬಿಡುತ್ತದೆ. ಒಕ್ಕಲತನದ ಸೇವೆಯು ಒಂದು ಪ್ರಕಾರದ ಉಪಾಸನೆಯೇ ಇರುತ್ತದೆ. ರಾಮಾಯಣದಲ್ಲೊಂದು ಕಥೆ ಇದೆ. ಲಂಕೆಯಲ್ಲಿ ರಾವಣನನ್ನು ಕೊಂದು ರಾಮನು ಪುಷ್ಪಕ ವಿಮಾನ ಹತ್ತಿ ಅಯೋಧ್ಯೆಗೆ ಹೊರಟ. ಇನ್ನೂ ಕೆಲವು ದಿನ ತನ್ನ ರಾಜ್ಯಾಭಿಷೇಕ ಸಮಾರಂಭದ ಬಗ್ಗೆ ನಿಲ್ಲಿರಿ ಎಂದು ವಿಭೀಷಣ ಆಗ್ರಹ ಮಾಡಿದ. ಆದರೆ ರಾಮ ಹೇಳಿದ 'ನಾನು ನಾಳೆಯೇ ಅಯೋಧ್ಯೆಗೆ ಹೋಗಿ ಮುಟ್ಟಲೇ ಬೇಕು. ಯಾಕೆಂದರೆ ನಿರ್ದಿಷ್ಟ ದಿನ ನಾನು ಹೋಗಿ ಮುಟ್ಟದೇ ಹೋದರೆ ಭರತನು ಪ್ರಾಣ ತ್ಯಾಗವನ್ನೂ ಮಾಡಬಹುದು ಎಂದು ಹೇಳಿ ರಾಮ ಲಗುಬಗೆಯಿಂದ ವಿಮಾನ ಹತ್ತಿದ. ಆದರೆ ದಾರಿಯಲ್ಲಿ ಪಂಚವಟಿಯ ಹತ್ತಿರ ವಿಮಾನ ಬಂದಾಗ ಸೀತೆ ಹೇಳಿದಳು. ಇಲ್ಲಿ ಇದ್ದಾಗ ನಾನು ಎಷ್ಟೋ ಗಿಡಗಳನ್ನು ನೆಟ್ಟಿದ್ದೆ. ಈಗ ಅವು ಹೇಗಿವೆ ನೋಡಬೇಕೆಂಬ ಬಯಕೆ ಬಲವಾಗಿದೆ ಎಂದು. ಇದನ್ನು ಕೇಳಿ ಅವಸರದಲ್ಲಿದ್ದರೂ ಕೂಡ ರಾಮನು ವಿಮಾನವನ್ನು ಕೆಳಗೆ ಇಳಿಸಲೇ ಬೇಕಾಯಿತು. ಸೀತೆಯು ತಾನು ನೆಟ್ಟ ಗಿಡಗಳನ್ನು ನೋಡಿದಳು ಅವು ಚನ್ನಾಗಿ ಬೆಳೆದಿದ್ದವು. ಅದನ್ನು ನೋಡಿಯೇ ಅವರು ಮುಂದೆ ಅಯೋಧ್ಯೆಯ ಕಡೆಗೆ ಹೊರಟರು. ಸೀತೆಗೆ ಆ ಗಿಡಗಳ ಬಗ್ಗೆ ಇಷ್ಟೊಂದು ಚಿಂತೆ ಇತ್ತು. ಯಾಕೆಂದರೆ ಅವುಗಳ ಕಡೆಗೆ ಅವಳು ಉಪಾಸನೆಯ ದೃಷ್ಟಿಯಿಂದ ನೋಡುತಿದ್ದಳು. ಆ ಗಿಡಗಳಿಗೆ ನಾನು ನೀರು ಹನಿಸುತ್ತಿದ್ದೆ. ಈಗ ಅವು ಹೇಗಿರಬಹುದು? ಎಂಬ ವಿಚಾರ ಅವಳಿಗೆ ಬರುತ್ತಿದ್ದವು. ಅರ್ಥಾತ್ ಅವಳಲ್ಲಿ ವಾತ್ಸಲ್ಯ ಭಾವನೆಯೂ ಇತ್ತು. ಸೀತೆಯಿಂದಾಗಿಯೇ ಆ ಗಿಡ ಬೆಳೆದವು. ಇಷ್ಟೇ ಅಲ್ಲ ಆ ಗಿಡಗಳಿಂದಾಗಿಯೇ ಸೀತೆಯಲ್ಲಿ ಗುಣವಿಕಾಸವೂ ಆಯಿತು. ಅವಳ ವಾತ್ಸಲ್ಯ ಭಾವನೆ ಬೆಳೆಯಿತು. ಅವಳ ಮೇಲೆ ಆ ಗಿಡಗಳು ಮಾಡಿದ ಇದು ಎಷ್ಟೊಂದು ದೊಡ್ಡ ಉಪಕಾರ ನೋಡಿರಿ. ಆ ಗಿಡಗಳು ಚನ್ನಾಗಿವೆ ಮತ್ತು ಬೆಳೆಯುತ್ತಲಿವೆ ಎಂಬುದನ್ನು ಕಂಡಾಗಲೇ ಸೀತೆಗೆ ಸಮಾಧಾನವಾಯಿತು. ಇದನ್ನು ಓದಿದಾಗ ನನಗೊಂದು ಅಂಜಿಕೆಯೂ ಅನಿಸಿತು. ಆ ಗಿಡಗಳು ಸರಿಯಾಗಿ ಬೆಳೆದಿರದಿದ್ದರೆ 'ನಾನು ಇಲ್ಲೇ ಇದ್ದು ಬಿಡುತ್ತೇನೆ' ಎಂದು ಸೀತೆಯು ಹಟ ಹಿಡಿಯುತ್ತಿದ್ದಳೋ ಏನೋ! ಅದರಿಂದ ರಾಮನಿಗೆ ಧರ್ಮ ಸಂಕಟವೇ ಉಂಟಾಗ ಬಹುದಿತ್ತು! ಆದರೆ ಸೀತೆಯ ಗೈರಹಾಜರಿಯಲ್ಲಿ ಅಲ್ಲಿಯ ಋಷಿಗಳು ಆ ಗಿಡಗಳ ಉಪಾಸನೆಯನ್ನು ವಿಧಿವತ್ ನಡಸಿದ್ದರಿಂದೇ ಆ ಸಂಕಟ ತಪ್ಪಿತು.

ಗಿಡಗಳೂ ಉಪಾಸನೆಯ ಅಧಿಷ್ಠಾನಗಳೇ

ಜನರು ಉಪಾಸನೆ ಮಾಡಲು ಮಂದಿರಕ್ಕೆ ಹೋಗುತ್ತಾರೆ. ಅಲ್ಲಿ ಬೈಲು ಹವೆ ಕೂಡ ಇರುತ್ತಿರುವದಿಲ್ಲ. ಗಿಡಗಳ ಮೇಲಿನ ಹೂವು ಹರಿದು ಅಲ್ಲಿ ಮೂರ್ತಿಯ ತಲೆಯ ಮೇಲೆ ಏರಿಸುತ್ತಾರೆ. ಮತ್ತು ಅದಕ್ಕೆ ಉಪಾಸನೆ ಎಂದೆನ್ನುತ್ತಾರೆ; ಆದರೆ ಗಿಡಗಳೂ ಸಹ ಉಪಾಸನೆಯ ಪ್ರಮುಖ ಅಧಿಷ್ಠಾನವಾಗಿವೆ ಎಂಬುದು ರಾಮಾಯಣದಲ್ಲಿಯ ಮೇಲಿನ ಘಟನೆಯಿಂದ ಸ್ಪಷ್ಟವಾಗುತ್ತದೆ. ಹೀಗೆಂದೇ ಭಗಿನಿಯರು ವಟಸಾವಿತ್ರಿಯ ದಿನ ವಟವೃಕ್ಷದ ಪೂಜೆ ಮಾಡುತ್ತಾರೆ. ಅದೊಂದು ಒಳ್ಳೆಯ ಉಪಾಸನೆ. ಗಿಡವಿರುವಲ್ಲಿ ಪೂಜೆಯು ಸಜ್ಜಾಗಿ ಇದ್ದೇ ಇರುತ್ತದೆ. ಅಲ್ಲಿ ಭಗವಂತನ ದರ್ಶನ ತೆಗೆದುಕೊಳ್ಳಬೇಕು. ಭಗವಂತನಿಗಾಗಿ ಹೂವನ್ನು ಹರಿಯಬೇಕೇ? ಗಿಡಕ್ಕೆ ನಾವು ನೀರೆರೆದರೆ ಅದೇ ಅದರ ಪೂಜೆ. ಗಿಡಕ್ಕೆ ಹೂವು ಹತ್ತಿದವೆಂದರೆ ಪೂಜೆಯು ಸರಿಯಾಗಿ ನಡೆದು ಸಾರ್ಥಕವಾಯಿತು ಎಂದು ತಿಳಿಯಬೇಕು.

ಗಿಡದ ಉಪಾಸನೆ ಮಾಡಬೇಕು. ಅದಕ್ಕೆ ತಪ್ಪದೆ ನೀರು ಹನಿಸಬೇಕು. ಅನಂತರ ಅದರ ಮೇಲೆ ಹೂವು ಅರಳುವವು. ಅದೇ ಪೂಜೆ. ಮರುದಿನ ಆ ಹೂವುಗಳೆಲ್ಲ ಉದುರಿ ಬೀಳುವವು. ಅವೇ ನಿರ್ಮಾಲ್ಯವಾಗುವವು. ಅನಂತರ ಬೇಕಾದರೆ ಆ ನಿರ್ಮಾಲ್ಯವನ್ನು ಮೂರ್ತಿಯ ಮೇಲೆ ಏರಿಸಬಹುದು. ಆದರೆ ಆ ನಿರ್ಮಾಲ್ಯ (ಬಿದ್ದ ಹೂ)ಗಳನ್ನು ತೆಗೆಯದೇ ಅಲ್ಲೇ ಬಿಟ್ಟರೆ ಅದರಿಂದ ಆ ಗಿಡಕ್ಕೆ ಉತ್ತಮವಾದ ಗೊಬ್ಬರ ಸಿಗುವಂತಾದೀತು. ಅದರೊಳಗಿಂದ ನಿತ್ಯನೂತನ ಸೌಂದರ್ಯ ನಿರ್ಮಾಣವಾದೀತು. ಗಿಡದ ಪೂಜೆಯು ಬಹು ಸುಂದರ ವಿಚಾರ. ನನಗೆ ಹರಸಿಂಗಾರದ ಗಿಡ ಸರ್ವೋತ್ಕೃಷ್ಟ ಅನಿಸುತ್ತವೆ. ಆ ಗಿಡದಿಂದ ತುಂಬಾ ಹೂವುಗಳು ಉದುರುತ್ತವೆ. ಗಿಡವು ಭೂಮಿಯ ಮೇಲೆ ತನ್ನ ಹೂವುಗಳನ್ನೇ ಹಾಸಿದಂತೆ ಕಾಣುತ್ತದೆ. ಅಲ್ಲಿಂದ ನೀವು ಬೇಕಷ್ಟು ಹೂವು ಎತ್ತಿಕೊಳ್ಳಬಹುದು. ಹರಿದುಕೊಳ್ಳುವ ಆವಶ್ಯಕತೆ ಇಲ್ಲ.

ಸಮರ್ಥ ಜನರ ಸರಕಾರ ಬೇಕು

ಒಕ್ಕಲತನದೊಡನೆ ಎಲ್ಲರದೂ ಸಂಪರ್ಕವಿದ್ದರೆ ಆರೋಗ್ಯ ಲಾಭವಾದೀತು. ಉಪಾಸನೆಯ ಪುಣ್ಯ ಲಭಿಸೀತು. ಎಲ್ಲರದೂ ಗುಣ ವಿಕಾಸಕ್ಕೆ ಸಮಾನ ಅವಕಾಶ ದೊರೆತೀತು. ಇಲ್ಲವಾದರೆ ವಿಷಮ ವಿಕಾಸವಾದೀತು. ಮತ್ತು ವಿಕಾಸ ಹೊಂದದ ಜನರೊಂದಿಗೆ ಅಂಧ ಪಂಗು (ಕುರುಡ ಕುಂಟ)ನ್ಯಾಯದಂತೆ ಸಹಕಾರ ಲಭಿಸೀತು. ಇಂದು ಅದೇ ರೀತಿ ನಡೆದಿದೆ. ಶಹರದ ಜನ ಪಂಗು (ಕುಂಟ)ರಿದ್ದಾರೆ. ಹಳ್ಳಿಯ ಜನ ಕುರುಡರಿದ್ದಾರೆ. ಕುರುಡರು ಕುಂಟರನ್ನು ತಮ್ಮ ಹೆಗಲ ಮೇಲೆ ಹೊತ್ತಿದ್ದಾರೆ. ಕುಂಟರು ತೋರಿಸುವ ದಿಕ್ಕಿಗೇ ಕುರುಡರು ಹೊತ್ತು ಒಯ್ಯುತ್ತಾರೆ. ಇದರ ಬದಲು ನಮಗೆ ಸಮರ್ಥರೂ ಸಕ್ಷಮರೂ ಆಗಿರುವವರ ಸಹಕಾರ ಬೇಕು. ಆದಕ್ಕಾಗಿಯೇ ಈ ಯೋಜನೆ ಸೂಚಿಸುತ್ತಿದ್ದೇನೆ. "ನೀನೂ ಅಪೂರ್ಣ, ನಾನೂ ಅಪೂರ್ಣ, ಇಬ್ಬರೂ ಕೂಡಿ ಪೂರ್ಣರಾಗೋಣ" ಎಂಬ ಗಣಿತದ ಪೂರ್ಣತೆ ನಮಗೆ ಬೇಡ. ಉಪನಿಷತ್ತಿನಲ್ಲಿ ಹೇಳಿದೆ "ಅದೂ ಪೂರ್ಣ. ಇದೂ ಪೂರ್ಣ. ಪೂರ್ಣದೊಳಗಿಂದ ಪೂರ್ಣ ಹುಟ್ಟುತ್ತದೆ" ಎಂದು. ನಮ್ಮ ಜೀವನದಲ್ಲಿ ಇಂಥ ಪರಿಪೂರ್ಣತೆಯೇ ಬರಬೇಕು. ಪ್ರತಿಯೊಬ್ಬನಿಗೂ ವಿದ್ಯೆ, ಆರೋಗ್ಯ, ಆಹಾರ, ಹವೆಗಳು ಅವಶ್ಯವಿರುವಂತೆ ಪ್ರತಿಯೊಬ್ಬನಿಗೂ ಒಕ್ಕಲತನದ ಉಪಾಸನೆಯೂ ಅವಶ್ಯವಿದೆ. ಇದು ಮನುಷ್ಯ ಮಾತ್ರರ ಆಧ್ಯಾತ್ಮಿಕ ಹಾಗೂ ಆದಿಭೌತಿಕ ಅವಶ್ಯಕತೆ ಇರುತ್ತದೆ.

(ಅನುವಾದ. ವಾ. ಅ. ಹೊದಿಕೆ)

(ಭೂದಾನ)

●●

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
134 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು_1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಮನೆಯೆಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2–00

❖ ❖ ❖

ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಸಮೂಲ ಅನುವಾದ

ಗೀತೆಯ ಕೈಗನ್ನಡಿ

ಪಾಕೆಟ್ ಎಡಿಶನ್ ಬೆಲೆ ರೂ. 2–00

❖ ❖ ❖

ಸುಲಭದಲ್ಲಿ ಇಂಗ್ಲೀಷ್

ಆಂಗ್ಲ ಸ್ವಯಂಬೋಧಿನಿ ರೂ. 2–00

❖ ❖ ❖

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು
ಸಹಕಾರಿಯಾದ ದಿನವಹಿ ಪತ್ರಸಂಕಲನ
ಬೆಲೆ ರೂ. 1-50.

ಪುಸ್ತಕ ಬೇಕಾದವರು ಆಯಾಯ ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಬುಕ್ ಪೋಸ್ಟ್ ವೆಚ್ಚ ಸೇರಿಸಿ ಮನಿಯಾರ್ಡರು ಮಾಡುವುದು. ವಿಶೇಷ ಅಂಚೆವೆಚ್ಚ ತಗಲುವುದರಿಂದ ವಿ. ಪಿ. ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ದುಡಿಯದೆ ಗಳಿಸಿದರೆ—

ಕಾಗದವನ್ನೇ ತಿನ್ನಬೇಕಾಗುತ್ತದೆ

ಕರ್ನಾಟಕದ ಹೆಮ್ಮೆಯ ಬ್ಯಾಂಕುಗಳಲ್ಲಿ ಒಂದಾದ ವಿಜಯಾ ಬ್ಯಾಂಕಿನ ನೌಕರರ ಸ್ನೇಹ ಕೂಟವು ಇತ್ತೀಚೆಗೆ ಬೆಂಗಳೂರಲ್ಲಿ ನಡೆಯಿತು. ಇದರ ಅಧ್ಯಕ್ಷಸ್ಥಾನದಿಂದ ಮಾತನಾಡುತ್ತ ಪ್ರೊ| ಗೋಪಾಲಕೃಷ್ಣ ಅಡಿಗರು ಜನತೆಗೆ ಗಂಭೀರವಾದ ಎಚ್ಚರಿಕೆಯನ್ನು ನೀಡಿದರು. ಅವರ ವಾಗ್ಬಾಣಗಳು ಕರ್ತವ್ಯಚ್ಯುತರ ಮೇಲೆ ಕವಿದುಬಿದ್ದುವು.

"ಬ್ಯಾಂಕಿನ ಆಡಳಿತ ಮತ್ತು ನೌಕರರ ನಡುವೆ ಸಂಘರ್ಷ ಅನಿವಾರ್ಯ ಎಂದು ಪ್ರಚಾರ ನಡೆಯುತ್ತದೆ. ಅದರಿಂದಲೇ ಪ್ರಗತಿಯೆಂದು ಹೇಳಲಾಗುತ್ತಿದೆ. ಬ್ಯಾಂಕ್ ಭದ್ರವಾಗಿದ್ದರೆ ಮಾತ್ರ ತಾನೂ ಭದ್ರವೆಂದು ಕೆಲಸಗಾರ ತಿಳಿಯಬೇಕು. ಅದೇ ರೀತಿ ನೌಕರರು ಚೆನ್ನಾಗಿದ್ದರೆ ಮಾತ್ರ ಬ್ಯಾಂಕ್ ಭದ್ರವೆಂದು ಆಡಳಿತ ವರ್ಗ ತಿಳಿಯಬೇಕು. ಇಬ್ಬರ ಹಿತಗಳೂ ಪರಸ್ಪರ ಪೂರಕವಾಗಿರುವಾಗ ಸಂಘರ್ಷವೇಕೆ?" ಎಂದವರು ಪ್ರಶ್ನಿಸಿದರು.

"ಯಜಮಾನಿಕೆ ಹಿಂದಿನ ಕಾಲದ ಮಾತು. ಅಧೀನವಿರುವವನ ಮೇಲೆ ತನ್ನ ಸರ್ವಾಧಿಕಾರವಿದೆಯೆಂದು ಭಾವಿಸುವವರು, ನೌಕರರು ಮನುಷ್ಯರೇ ಅಲ್ಲ. ಆತ ಬರಿಯ ಆಳು—ಎಂದು ಮಾತ್ರ ತಿಳಿಯುವುದು ಪ್ರಜಾತಂತ್ರಕ್ಕೇ – ಮಾನವತೆಗೇ— ವಿರುದ್ಧವಾದದ್ದು. ನಾವೆಲ್ಲರೂ ದೇವರ ಮಕ್ಕಳು-ಸರ್ವ ಸಮಾನರು. ನಮ್ಮ ನಮ್ಮ ಸ್ಥಾನಗಳಲ್ಲಿ ವಹಿಸಿದ ಕರ್ತವ್ಯಗಳನ್ನು ಪ್ರಾಮಾಣಿಕತೆ ಮತ್ತು ಪರಿಶ್ರಮದಿಂದ ಮಾಡಿದರೆ, ಅದರಿಂದಲೇ ಪ್ರಜಾತಂತ್ರ ಭದ್ರವಾಗುತ್ತದೆ. ಆಡಳಿತ ಮತ್ತು ನೌಕರ ವರ್ಗಗಳೆರಡೂ ತಂತಮ್ಮ ಸ್ಥಾನ ಜವಾಬ್ದಾರಿಗಳ ದೃಷ್ಟಿಯಿಂದ ಪ್ರಮುಖರೇ, ಸಮಾನರೇ. ನಾವು ಅಧಿಕಾಧಿಕ ಸಂಬಳವನ್ನೇ ಬಯಸುತ್ತ ಹೋದರೆ, ಸಾಲದು. ಸಂಬಳಕ್ಕೆ ಅರ್ಹತೆಯನ್ನು ಗಳಿಸಬೇಕು. ಇಲ್ಲವಾದರೆ, ಕೆಲಸ ಮಾಡದೆ ನಾವು ರೂಪಾಯಿಗಳನ್ನೇ ಗಳಿಸುತ್ತ ಹೋದರೆ, ನಾವು ಕಾಗದದ ನೋಟುಗಳನ್ನೇ ತಿನ್ನ ಬೇಕಾದೀತು."

'ನಾವು ದುಡಿಯದೆ ರಾಷ್ಟ್ರವು ಸಮೃದ್ಧಿಸಾಧಿಸದು; ಪ್ರಗತಿ ಹೊಂದಲಾರದು. ರಾಷ್ಟ್ರ ಸಮೃದ್ಧವಾಗದೆ ನಾವು ಹೇಗೆ ಸಮೃದ್ಧರಾದೇವು? ಸರಕಾರವು ಇಂದಿನ ನೀತಿಗಳನ್ನೇ ಟೊಳ್ಳು ಘೋಷಣೆಗಳನ್ನೇ ಮುಂದುವರಿಸಿದರೆ, ರೂಪಾಯಿಯ ಬೆಲೆಯನ್ನೂ ಕುಸಿದು ಹೋಗುತ್ತದೆ. ನಮ್ಮಲ್ಲಿ ವಿಚಾರವಂತರ ಸಂಖ್ಯೆ ಕಡಮೆ; ಘೋಷಣ ಪ್ರಿಯರೇ ಹೆಚ್ಚು. ಈ ಘೋಷಣೆಗಳಿಗೇ ಹಿಂಬಾಲಕರು ಹೆಚ್ಚು. ದೇಶಪ್ರೇಮವೆಂದರೆ, ನಮ್ಮ ನಮ್ಮ ಸ್ಥಾನಗಳಲ್ಲಿ ಅಂಗೀಕರಿಸಿದ ಕರ್ತವ್ಯ ಮತ್ತು ಹೊಣೆಗಳನ್ನು ಪ್ರಾಮಾಣಿಕತೆ ಮತ್ತು ಪರಿಶ್ರಮದಿಂದ ನಿರ್ವಹಿಸುವುದು."

"ಬದುಕು ನಿರಂತರ ಹೋರಾಟಕ್ಕಾಗಿ ಮಾತ್ರವಲ್ಲ; ನಿರಂತರ ಸಮೃದ್ಧಿ, ಶಾಂತಿ ಮತ್ತು ಪ್ರಗತಿಯ ಸಮಾಧಾನ ಅನುಭವಿಸುವುದಕ್ಕಾಗಿಯೂ ಇದೆ. ನಾವು ಕೆಲಸ ಕಾಲವಿದ್ದು ಹೋಗುವವರು. ಕರ್ತವ್ಯ ಮತ್ತು ಹೊಣೆಗಾರಿಕೆಯ ಅರಿವಿನಿಂದ, ಪರಿಶ್ರಮ ಮತ್ತು ಪ್ರಾಮಾಣಿಕತೆಯಿಂದ ಉನ್ನತ ಜೀವನದ ಮೌಲ್ಯಗಳನ್ನು ಆದರ್ಶಗಳನ್ನು ಸ್ಥಾಪಿಸುವುದೇ ಮುಂದಿನ ನಮ್ಮ ಸಂತತಿಗೆ ನಾವು ಬಿಡುವ ಉತ್ತಮ ಫಲಕಾರಿ ಆಸ್ತಿ ಎಂಬುದನ್ನು ಮರೆತಿದ್ದೇವೆ." ಎಂದು ಪ್ರೊ| ಅಡಿಗರು ಹೇಳಿದರು.

ಆರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಎಚ್. ಸುಬ್ಬಯ್ಯ ಶೆಟ್ಟಿ ಅವರು ಸ್ವಾಗತ ಭಾಷಣ ಮಾಡಿದರು. ತಮ್ಮ ಸಂಘವು ಯಾವುದೇ ರಾಜಕೀಯ ಕಪಿಮುಷ್ಟಿಯಿಂದ ಸ್ವತಂತ್ರವಾಗಿದ್ದು, ನೌಕರರ ಹಾಗೂ ಬ್ಯಾಂಕಿನ ಹಿತಾಭಿಸಾಧನೆಗಾಗಿ ಪ್ರಾಮಾಣಿಕವಾಗಿ ದುಡಿದು ಯಶಗಳಿಸಿದೆಯೆಂದವರು ಹೇಳಿದರು. ನೌಕರರ ಸಮಸ್ಯೆಗಳನ್ನು ಪರಸ್ಪರ ಸಹಕಾರ ಭಾವನೆಯಿಂದ ಬಗೆಹರಿಸುವಲ್ಲಿ ಆಡಳಿತ ವರ್ಗವು ಪೂರ್ಣ ಸಹಯೋಗ ನೀಡಿದ ಬಗ್ಗೆ ಅವರು ಅಭಿನಂದಿಸಿದರು.

ಕೊನೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಪಿ. ಶೆಟ್ಟಿಯವರು ಧನ್ಯವಾದವರ್ಪಿಸಿದರು. ಈ ಸ್ನೇಹಕೂಟದಲ್ಲಿ ಬ್ಯಾಂಕಿನ ಅಧ್ಯಕ್ಷ-ಶ್ರೀ ಎಂ. ಸುಂದರರಾಮ ಶೆಟ್ಟಿ, ಕಾರ್ಯದರ್ಶಿ ಶ್ರೀ ಪಿ. ಜಯರಾಮ ಶೆಟ್ಟಿ ಮತ್ತು ಬ್ಯಾಂಕಿನ ಇತರ ಹಲವರು ಉನ್ನತ ಅಧಿಕಾರಿಗಳೂ ಪಾಲ್ಗೊಂಡಿದ್ದು ಕೂಟದ ಶೋಭೆಯನ್ನು ಹೆಚ್ಚಿಸಿದರು.

●●

ದಯಮಾಡಿ
ನಿಮ್ಮ ಬಾಕಿ ಚಂದಾ
ಹಣವನ್ನು ಕಳುಹಿಸಿರಿ

ಮುಕ್ತಪಾನ—
ಸಂಪತ್ತಿಗೆ ಕಾಮಧೇನು

(ಒಂದನೇ ಪುಟದಿಂದ)

ಷ್ಟವೂ ನಷ್ಟವಾಗುತ್ತಿತ್ತು. ಅಥವಾ ಹೀಗೆ ಹೇಳುವುದಾದರೆ, ಪಾನ ನಿರೋಧದ ಆದರ್ಶಕ್ಕಾಗಿ ಸರಕಾರ ವಾರ್ಷಿಕ ೧೫ ಕೋಟಿ ರೂಪಾಯಿಗಳಿಗೆ ತಿಲಾಂಜಲಿ ನೀಡಬೇಕಾಗುತಿತ್ತು. ಹಾಗಿದ್ದರೂ ಕಳ್ಳಬಟ್ಟಿಗಳ ಸಂಖ್ಯೆ ದಿನೇ ದಿನೇ ಹೆಚ್ಚಿ ಆದರ್ಶಪ್ರೇರಿತ ಶಾಸನವು ದುರ್ಬಲವಾಗುತ್ತಿರುವುದನ್ನು ಮುಖ್ಯ ಮಂತ್ರಿ ಕರುಣಾನಿಧಿಯವರು ಕಂಡರು; ಅವರ ಮನಸ್ಸೊಂದಿತು. ಪಾನ ಪ್ರತಿಬಂಧವನ್ನು ಕಿತ್ತು ಹಾಕಲು ಅವರು ಅಂದೇ ನಿರ್ಧರಿಸಿದ್ದರೆನ್ನ ಬೇಕು. ಆದರೆ, ಏಕಾಏಕಿಯಾಗಿ ಅದನ್ನು ಕಾರ್ಯರೂಪಕ್ಕೆ ತಂದು ಶಾಸನ ಪ್ರಿಯರ ಅಪಕೃಪೆಗೆ ಒಳಗಾಗಲು ಅವರು ಬಯಸಲಿಲ್ಲ. ಆದುದರಿಂದಲೇ ಕೇಂದ್ರ ಸರಕಾರವು ರಾಜ್ಯ ಬೊಕ್ಕಸಕ್ಕಾಗುವ ನಷ್ಟವನ್ನು ತುಂಬಿಕೊಡಬೇಕೆಂದು ಅವರು ಹೇಳತೊಡಗಿದರು.

ಕೇಂದ್ರ ಸರಕಾರವು ಇತರ ರಾಜ್ಯಗಳ ಈ ರೀತಿಯ ಬೇಡಿಕೆಯನ್ನು ಸ್ಪಷ್ಟವಾಗಿಯೇ ನಿರಾಕರಿಸಿದ್ದ ನಿದರ್ಶನಗಳು ತನ್ನ ಮುಂದಿದ್ದೂ ಕರುಣಾನಿಧಿಯವರು ಹೀಗೇಕೆ ಹೇಳಿದರು? ಅವರಿಗೆ ಪಾನ ಪ್ರತಿಬಂಧ ಶಾಸನವನ್ನು ಕಿತ್ತುಹಾಕಲೊಂದು ಕಾರಣ ಬೇಕಿತ್ತು. ಅದಕ್ಕೆ ಕೇಂದ್ರವನ್ನು ಬೊಟ್ಟು ಮಾಡುವ ದುಸ್ಸಾಹಸಕ್ಕಿಳಿದರು. ಉಳಿದ ರಾಜ್ಯಗಳಿಗೆ ಉತ್ತರಿಸಿದಂತೆಯೇ ಕೇಂದ್ರವು ತಮಿಳು ನಾಡಿಗೂ ಉತ್ತರ ನೀಡಿತು.

ಇಷ್ಟರಲ್ಲೇ ರಾಜ್ಯ ವಿಧಾನ ಸಭೆಯ ವಿಸರ್ಜನೆ-ಮಧ್ಯಾವಧಿ ಚುನಾವಣೆಗಳು ನಡೆದುವು. ಚುನಾವಣೆಯ ಪೂರ್ವ ಸಂಧ್ಯೆಯಲ್ಲಿ ಪಕ್ಷದ ನೀತಿ ನಿರೂಪಣೆಯಲ್ಲಿ ಪಾನ ಪ್ರತಿಬಂಧವೂ ಮುಖ್ಯ ವಿಷಯವಾಗಿತ್ತು. ಈ ಶಾಸನ ಬೇಕು ಬೇಡಗಳ ನಡುವೆಯೇ ನಡುಗಾಲದ ಚುನಾವಣೆಗಳು ಮುಗಿದುವು. ಚುನಾವಣೆಗಳಲ್ಲಿ ಯಾವುದೇ ಪಕ್ಷವು ಅಧಿಕಾರಾರೂಢವಾಗುತ್ತಿದ್ದರೂ ಪಾನ ಪ್ರತಿಬಂಧ ಶಾಸನದ ಪುನರ್ವಿಮರ್ಶೆ ನಡೆಯಲೇ ಬೇಕೆಂಬ ಪರಿಸ್ಥಿತಿಯೂ ಆಗ ನಿರ್ಮಾಣವಾಗಿತ್ತು. ಸುದೈವದಿಂದ ಕರುಣಾನಿಧಿಯವರೇ ಮತ್ತೆ ಮುಖ್ಯಮಂತ್ರಿಯಾಗಿ ಸರಕಾರ ರಚಿಸಿದರು. ಆದುದರಿಂದ ಅವರ ಪೂರ್ವ ನಿರ್ಧಾರ ಕಾರ್ಯರೂಪಕ್ಕೆ ಬರಲು ಹೆಚ್ಚಿನ ತಡವಾಗಲಿಲ್ಲ.

ರಾಜ್ಯಪಾಲರೊಂದು ಸುಗ್ರೀವಾಜ್ಞೆಯನ್ನು ಹೊರಡಿಸಿ (ಇದಕ್ಕೆ ಕೇಂದ್ರದ ಆಕ್ಷೇಪ ಬೇರೆ) ಆಗಸ್ಟ್ ೩೦ರ ಮಧ್ಯರಾತ್ರಿಯಿಂದ ಪಾನ ನಿರೋಧ ಶಾಸನವನ್ನು ಹಿಂತೆಗೆದುಕೊಳ್ಳುವ, ಪಾನವನ್ನು ಮತ್ತೆ ಆರಂಭಿಸಲು ಅವಕಾಶವನ್ನು ಕಲ್ಪಿಸಿಕೊಟ್ಟರು. ಮದ್ಯಪಾನಕ್ಕಿದ್ದ ಇಪ್ಪತ್ತಮೂರು ವರ್ಷಗಳ ನಿಷೇಧವು ಆ ಗಳಿಗೆಯಿಂದ ಇಲ್ಲವಾಯ್ತು. ಸುಗ್ರೀವಾಜ್ಞೆಗೆ ಕೆಲವರ ವಿರೋಧ ಕಂಡು ಬಂದರೂ ಹೆಚ್ಚಿನವರು ದುರುಸು-ಬಾಣಗಳನ್ನು ಬಿಟ್ಟು ಸಸಂಭ್ರಮ ಅದನ್ನು ಸ್ವಾಗತಿಸಿದರೆಂದು ವರದಿ ಬಂದಿದೆ.

ಇದೀಗ ತಮಿಳುನಾಡಿನಾದ್ಯಂತ ೧೧ ಸಾವಿರ ಹೆಂಡದಂಗಡಿಗಳು ಮತ್ತು ಶರಾಬಿನಂಗಡಿಗಳು ತೆರೆದಿವೆ. ವ್ಯಾಪಾರವನ್ನು ಗಮನಿಸುವಾಗ, ಇದು ಬಹು ಜನಪ್ರಿಯವೂ ರಾಜ್ಯಸರಕಾರಕ್ಕೆ ಸಂಪನ್ಮೂಲವೊದಗಿಸಬಲ್ಲ ಕಾಮಧೇನೂ ಆಗುತ್ತದೆಂಬುದು ಸ್ವಯಂಸಿದ್ಧ.

ದಕ್ಷಿಣದ ರಾಜ್ಯಗಳಲ್ಲಿ ಪಾನ ನಿರೋಧವನ್ನು ಮೊತ್ತಮೊದಲಿಗೆ ಜ್ಯಾರಿಗೆ ತಂದ ತಮಿಳುನಾಡು ಕೊನೆಗೂ ತನ್ನ ಸೋಲೊಪ್ಪಿಕೊಂಡಿತು; ಅಥವಾ ತಾನೇ ಸೋತಂತೆ ತೋರಿಸಿತು. ಇನ್ನೀಗ ಉತ್ತರದ ಗುಜರಾತ ರಾಜ್ಯವೊಂದರಲ್ಲಿ ಪಾನ ಪ್ರತಿಬಂಧವಿದೆ. ಅಲ್ಲಿ ಸದ್ಯಕ್ಕೆ ಜನಪ್ರಿಯ ಸರಕಾರವಿಲ್ಲದಿರುವುದರಿಂದ ಮುಂದಿನ ಕ್ರಮಗಳನ್ನು ಅದು ಕೈಕೊಳ್ಳುವಾಗ ತಡವಾಗಬಹುದೇನೋ! ಆದರೂ ೧೯೭೨ರ ಆರಂಭದಲ್ಲಿ ನಡೆಯುವ ಚುನಾವಣೆಗಳ ವೇಳೆ 'ಪಾನ ಪ್ರತಿಬಂಧ'ವೂ ಅಲ್ಲಿ ತನ್ನ ದಾಳ ಉರುಳಿಸುವ ಸಾಧ್ಯತೆಯನ್ನು ಅಲ್ಲಗಳೆಯಲಾದೀತೆ?

●●

ರಾಜ್ಯದ ಹೈಸ್ಕೂಲುಗಳಿಗೆ
ನವಯುಗ

ಮೈಸೂರು ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65-66ರ ಪತ್ರದಂತೆ ತರಿಸಿಕೊಳ್ಳಲು ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

2 ವಿಶೇಷ ಸಂಚಿಕೆ ಸಹಿತ ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

ಮೂರು ಬಗೆಯ ರಾಮಾಯಣಗಳು

ಆಗ್ನೇಯ ಏಶ್ಯಾದ ರಾಮಾಯಣಗಳು

'ಹಿಕಾಯತ್ ಸೇರೀ ರಾಮ್' ಎಂಬುದು ಮಲಯಾದಲ್ಲಿನ ರಾಮಕಥೆ. ಇದರ ನಿರ್ಮಾಣವೆಂದಾಯಿತೆಂದು ನಿಶ್ಚಯವಾಗಿ ತಿಳಿದಿಲ್ಲ. ಆದರೂ ಸುಮಾರು ೧೬ನೆಯ ಶತಮಾನದಲ್ಲಿ ರಚನೆಗೊಂಡಿರಬಹುದೆಂದು ವಿದ್ವಾಂಸರ ಅಭಿಪ್ರಾಯ. ಈ ಗ್ರಂಥದ ರಾಮನಿಗೂ ಭಾರತದ ಶ್ರೀರಾಮನಿಗೂ ಏನೇನೂ ಸಂಬಂಧವಿಲ್ಲ. ಇದರಲ್ಲಿ ರಾವಣ ಚರಿತ್ರೆ, ರಾಮಜನನ, ಸೀತಾವಿವಾಹ, ವನವಾಸ, ಸೀತಾಪಹರಣ, ರಾಮ ರಾವಣ ಯುದ್ಧ ಮತ್ತು ರಾಮ-ಸೀತಾ ಮಿಲನಗಳ ವಿಶದ ವರ್ಣನೆಯಿದೆ.

ತನ್ನ ದುರಾಚಾರಗಳಿಂದಾಗಿ ತಂದೆಯಿಂದ ಹೊರದೂಡಲ್ಪಟ್ಟ ರಾವಣನು ಸಿಂಹಳಕ್ಕೆ ಬಂದು ಅಲ್ಲಿ ನಗರವೊಂದನ್ನು ಕಟ್ಟಿದನು. ಕುಂಭಕರ್ಣನನ್ನು ತನ್ನ ಸೇನಾಪತಿಯೆಂದೂ ವಿಭೀಷಣನನ್ನು ರಾಜ-ಜ್ಯೋತಿಷಿಯೆಂದೂ ತಂಗಿ ಶೂರ್ಪಣಖಿಯ ಪತಿ ಬೆರ್ಗಾಸಿಂಗನನ್ನು ಗುಪ್ತಚಾರನೆಂದೂ ನೇಮಿಸಿಕೊಂಡನು.

ಇತ್ತ ಮಹಾರಾಜ ದಶರಥನು ಪುತ್ರೇಷ್ಟಿಯಾಗ ಮಾಡಿದನು. ಮಂಡೋದರಿ ಮತ್ತು ಬಲಿಯೂದರಿಯರು ಅವನ ರಾಣಿಯರು. ಯಜ್ಞಾಂತ್ಯದಲ್ಲಿ ದೇವತೆಗಳು ಬಲಿಯೂದರಿಗೆ ಪ್ರದಾನ ಮಾಡಿದ ಪಾಯಸದ ಒಂದಂಶ ತೆಗೆದು ಲಂಕಾನಗರದತ್ತ ಹಾರಿ ಹೋಯಿತು. ದಶರಥನಿಗೆ ರಾಮ, ಲಕ್ಷ್ಮಣ, ವರ್ದನ ಮತ್ತು ಚಿತ್ರದನರೆಂಬ ನಾಲ್ವರು ಮಕ್ಕಳು ಹುಟ್ಟಿದರು. ಒಬ್ಬಾಕೆ ಮಗಳೂ ಜನಿಸಿದಳು. ಆಕೆಯ ಹೆಸರು ಕಿಕವಿ.

ಕಿರಿಯ ರಾಣಿ ಬಲಿಯೂದರಿಯ ಹೇಳಿಕೆಯಂತೆ ದಶರಥನು ರಾಮನನ್ನು ಕಾಡಿಗೆ ಕಳಿಸಿಕೊಟ್ಟನು. ಅಲ್ಲಿ ರಾಮನು ದರ್ಭೆಹುಲ್ಲಿನಿಂದ ಏಳ್ವರು ಹುಡುಗಿಯರನ್ನೂ ಐವರು ಹುಡುಗರನ್ನೂ ಸೃಷ್ಟಿಸಿದನು.

ಆ ಮೇಲೆ ವಾಲಿ—ಸುಗ್ರೀವರ ಕಥೆಯಿದೆ. ಇವರಿಬ್ಬರೂ ಗೌತಮನಪತ್ನಿ ಅಹಲ್ಯೆಯ ಮಕ್ಕಳು. ಹನುಮಂತನು ರಾಮನ ಮಗನು. ಶೂರ್ಪಣಖಿಯ ಮಗ ದರ್ಸಾಸಿಂಗನನ್ನು ಲಕ್ಷ್ಮಣನು ಕೊಲೆಮಾಡಿದನು. ಮಾತ್ರವಲ್ಲ, ಆಕೆಯನ್ನೂ ಅಪಮಾನಿಸಿದನು. ಇದರಿಂದ ನೊಂದ ಶೂರ್ಪಣಖಿ ರಾವಣನ ಬಳಿಗೆ ಹೋದಳು. ಮುಂದಿನ ಕಥೆಯೆಲ್ಲ ಭಾರತದ ರಾಮಾಯಣದಂತೆಯೇ ಮುಂದುವರಿಯುತ್ತದೆ.

ಮಲಾಯಿ ರಾಮಾಯಣದ ಯುದ್ಧಕಾಂಡದಲ್ಲೇನೂ ವಿಶೇಷತೆಯಿಲ್ಲ. ರಾವಣನಿಗೆ ಹನ್ನೊಂದು ತಲೆ; ಹನ್ನೊಂದನೆಯ ತಲೆಗೆ ಬಾಣ ತಾಗುತ್ತಲೇ ಆತ ಸತ್ತು ಬಿದ್ದ; ವಿಭೀಷಣನಿಗೆ ರಾಜ್ಯ ಲಭಿಸಿತು. ರಾಮನ ತಂಗಿ ಕಿಕವಿಯನ್ನು ವಿಭೀಷಣನಿಗೆ ಮದುವೆಯಾಯಿತು.

ತಾಡಪತ್ರದಲ್ಲಿ ರಾವಣನ ಚಿತ್ರ ಬಿಡಿಸಿದ್ದರಿಂದ ರಾಮನು ಸೀತೆಯನ್ನು ಪರಿತ್ಯಜಿಸಿದನು. ಲವ-ಕುಶರೊಡನೆ ಅವನು ಹೋರಾಡಿದನು. ಮಲಾಯಿ ರಾಮಾಯಣದ ಕೊನೆಯಲ್ಲಿ ಲವ-ಕುಶ ಮತ್ತು ವಾನರ ಸೇನೆಯು ರಾಕ್ಷಸಿಯರನ್ನು ಮದುವೆ ಮಾಡಿಕೊಂಡಂತೆ ಹೇಳುತ್ತದೆ.

ಕಂಬೋಡಿಯಾದಲ್ಲಿ

ಕಂಬೋಡಿಯಾದಲ್ಲಿ ಪ್ರಚಾರವಿರುವ ರಾಮಾಯಣವನ್ನು 'ರೇಯಾಮ್ ಕೇರ್' ವೆಂದು ಕರೆಯುತ್ತಾರೆ. ಈ ರಾಮಾಯಣದಲ್ಲೂ ಹಲವು ವೈಶಿಷ್ಟ್ಯಗಳಿವೆ.

ಯಮುನಾನದಿಯಲ್ಲಿ ಒಂದು ತೆಪ್ಪ ತೇಲುತ್ತ ಹೋಗುತಿತ್ತು. ಅದರಲ್ಲಿ ಸೀತೆಯಿದ್ದಳು. ತೆಪ್ಪವನ್ನು ಹಿಡಿದು ಜನಕನು ಸೀತೆಯನ್ನು ಕರೆತಂದು ಬೆಳೆಸಿದನು.

ರಾಮ ಲಕ್ಷ್ಮಣರು ವಿಶ್ವಾಮಿತ್ರನ ಯಜ್ಞ ಕಂಟಕಿಯಾಗಿ ಬಂದ ತಾಟಕಿಯನ್ನು ಕೊಲ್ಲುವ ಘಟನೆಯಿಲ್ಲ. ವಿಶ್ವಾಮಿತ್ರನು ಕೊಟ್ಟ ಅಮೋಘ ಬಾಣಗಳಿಂದ ಯಾರೋ ಒಬ್ಬ ರಾಕ್ಷಸನನ್ನು ಕೊಂದರೆಂಬ ಉಲ್ಲೇಖವಿದೆ.

ತಾಡಪತ್ರದಲ್ಲಿ ರಾವಣನ ರೇಖಾಚಿತ್ರವನ್ನು ಬರೆದುದರಿಂದಲೇ ರಾಮನು ಸೀತೆಯನ್ನು ತ್ಯಜಿಸಿದನೆಂದು ಹೇಳುವಲ್ಲಿ ಕಾಂಬೋಡಿಯಾದ ರಾಮಾಯಣವು ಮಲಾಯಿ ರಾಮಾಯಣವನ್ನು ಹೋಲುತ್ತದೆ.

ಇನ್ನೊಂದು ವಿಚಿತ್ರ ಕಾಂಬೋಜ ರಾಮಾಯಣದಲ್ಲಿದೆ. ಸೀತೆಯು ಅಯೋಧ್ಯೆಗೆ ರಾಮನೊಂದಿಗೆ ಮರಳಲು ನಿರಾಕರಿಸಿದಳು. ತಾನು ಹಿಂದಿರುಗುವುದಾದರೆ, ರಾಮನು ಮೃತ್ಯುಮುಖನಾದ ಮೇಲೆ ಮಾತ್ರವೇ ಎಂದು ಹಠಹಿಡಿದಳು. ಶ್ರೀ ರಾಮನು ಹನುಮಂತನ ಮೂಲಕ, ಕಾಡಿನಲ್ಲಿ ಉಳಿದ ಸೀತೆಗೆ ತನ್ನ ಮೃತ್ಯುವಿನ ಸುಳ್ಳುಸುದ್ದಿಯನ್ನು ಮುಟ್ಟಿಸಿದನು. ಇದನ್ನು ಕೇಳಿದ ಸೀತೆಯು ತಕ್ಷಣ ಅಯೋಧ್ಯೆಯ ಅರಮನೆಗೆ ಬಂದಳು. ರಾಮನಿಲ್ಲದುದನ್ನು ಕಂಡು ಮೂರ್ಛೆ ಬಿದ್ದಳು. ಅಷ್ಟರಲ್ಲಿ ಶ್ರೀ ರಾಮನು ಬಂದು ಆಕೆಯನ್ನು ತನ್ನ ತೊಡೆಗಳ ಮೇಲಿಟ್ಟು, ಕಣ್ಣೀರು ಒರಸಿದನು. ಶೈತ್ಯೋಪಚಾರ ಮಾಡಿದನು. ಆ ಬಳಿಕ ಎಚ್ಚರವಾದ ಸೀತೆಯು ರಾಮನನ್ನು ಮನಸ್ವಿಯಾಗಿ ನಿಂದಿಸಿದಳು; ಭೂಗರ್ಭದಲ್ಲಿ ಸಮಾವೇಶ ಹೊಂದಿದಳು.

ಸಯಾಮ ರಾಮ

ಸಯಾಮ ಅಥವಾ ಥಾಯಿಲೆಂಡದ ರಾಮಕಥೆಯ ಹೆಸರು 'ರಾಮಕಿಯೇನ್' ಇಂಡೋನೇಶ್ಯನ್ ಮತ್ತು ಥಾಯಿ ರಾಮಾಯಣಗಳಲ್ಲಿ ನಿಕಟ ಸಾಮ್ಯವಿದೆ. ಇದರಲ್ಲಿ ರಾಮ ಜನ್ಮ, ರಾವಣವಧ, ಹನುಮಂತ, ವಾಲಿ ಮತ್ತು ಸುಗ್ರೀವರ ಕಥೆಗಳಿವೆ. ಸೀತಾ ಸ್ವಯಂವರದಿಂದ ತೊಡಗಿ ಸೀತಾ ಪರಿತ್ಯಾಗದ ವರೆಗಿನ ಕಥೆಯೂ ಇದೆ. 'ರಾಮಕಿಯೇನ'ದಲ್ಲಿ ಈ ಕೆಳಗಿನ ವೈಶಿಷ್ಟ್ಯಗಳಿವೆ.

೧. ಲಕ್ಷ್ಮಣ—ಹನುಮಂತರ ನಡುವಣ ಯುದ್ಧ.

೨. ಸೇತು ಬಂಧನಕ್ಕೆ ಮೊದಲು ಬ್ರಾಹ್ಮಣ ರೂಪದಲ್ಲಿ ರಾಮನ ಬಳಿಗೆ ರಾವಣನು ಬಂದು ಯುದ್ಧ ಸ್ಥಳವನ್ನು ತಿಳಿದುಕೊಳ್ಳುವುದು.

೩. ವಿಭೀಷಣನ ಮಗಳಾದ ಬೆಂಜಕಾಯಳು ಸೀತೆಯ ರೂಪ ತಾಳಿ ಸಮುದ್ರದಲ್ಲಿ ಮುಳುಗಿ ಹೋಗುವುದು.

೪. ರಾವಣನು ಬ್ರಹ್ಮನ ಬಳಿಗೆ ಹೋಗಿ ರಾಮನ ಮೇಲೆ ಆರೋಪ ಹೊರಿಸುವುದು.

೫. ರಾವಣ ವಧಾನಂತರ ಆತನ ಒಬ್ಬ ಮಗನು ವಿಭೀಷಣನಿಗೆ ವಿರುದ್ಧ ಬಂಡೇಳುವುದು, ಭರತನು ಅವನನ್ನು ಸಂಹರಿಸುವುದು.

೬. ಬೆಂಜಕಾಯ, ನಾಗಕನ್ಯಾ ಮತ್ತು ಮಂಡೋದರಿಯರೊಡನೆ ಹನುಮಂತನ ಪ್ರೇಮಲೀಲೆ.

ಹೀಗೆ ಪೂರ್ವಭಾರತ ದ್ವೀಪ ಸಮುದಾಯದಲ್ಲಿ ಮತ್ತು ಆಗ್ನೇಯ ಏಶ್ಯಾದ ಹೆಚ್ಚಿನ ದೇಶಗಳಲ್ಲಿ ಭಾರತದ ರಾಮ ಕಥೆ ಅತ್ಯಂತ ಜನಪ್ರಿಯವಾಗಿತ್ತೆಂಬುದು ನಿರ್ವಿವಾದ. ಆಯಾದೇಶದ ಕಾಲ- ಸಂಸ್ಕೃತಿಗಳಿಗನುಗುಣವಾಗಿ, ಅಭಿರುಚಿಗೆ ತಕ್ಕಂತೆ ಅದರಲ್ಲಿ ಪರಿವರ್ತನೆಯನ್ನು ತಂದುಕೊಂಡದ್ದು ಸಹಜವೇ. ಇಂದಿಗೂ ಅಲ್ಲಿನ ಗೊಂಬೆಯಾಟಾದಿಗಳಿಗೆ ಕಥಾನಕವೊದಗಿಸಲು ರಾಮಾಯಣ ಮುಂದೆ ಬರುತ್ತಿದೆ.

ಆಕಾರದಲ್ಲಿ ಮಹಾಭಾರತ ಹಿರಿಯ ಕಾವ್ಯವಾದರೂ ಜನಪ್ರಿಯತೆಯಲ್ಲಿ ರಾಮಾಯಣಕ್ಕೆ ಹೆಗಲೆಣೆಯಾದ ಕಾವ್ಯ ಅಪರೂಪ. ● ●

(ನಾಲ್ಕನೇ ಪುಟದಿಂದ)

...ಮುಕ್ತಿಯಾಗಬೇಕು; ಅವರ ಮೂಲಕ ಬಂಗ್ಲಾ ದೇಶೀಯರು ವ್ಯಕ್ತ ಪಡಿಸಿದ ಆಶೋತ್ತರಗಳು ಈಡೇರಬೇಕು.

ಯಾಹ್ಯಾಖಾನರು ಜಾರಿ ಹೋಗುತ್ತಿರುವ ಬಂಗ್ಲಾ ದೇಶವನ್ನು ಹೇಗಾದರೂ ಹಿಡಿದುಕೊಳ್ಳಲು ಆಕಾಶ—ಪಾತಾಳವೊಂದು ಮಾಡುತ್ತಿದ್ದಾರೆ. ಈ ಭರಾಟೆಯಲ್ಲಿ ವಿಭ್ರಾಂತರಂತೆ ವರ್ತಿಸತೊಡಗಿದ್ದಾರೆ. ಅವರ ಕಾರ್ಯ ನೀತಿಯು ಪಾಕಿಸ್ತಾನದಿಂದ ಸಿಡಿದು ಹೋಗುತ್ತಿರುವ ಬಂಗ್ಲಾದ ಕಾವನ್ನು ಕಡಮೆ ಮಾಡುವುದಿಲ್ಲ. ಮತ್ತಷ್ಟು ಧಗಧಗಿಸುವಂತೆ ಮಾಡುತ್ತದೆ. ಈ ವಿಷಯದಲ್ಲಿ ತಡವಾಗುತ್ತಿರುವ ಒಂದೊಂದು ದಿನವೂ ಒಂದು ಹರದಾರಿ ದೂರಕ್ಕೆ ಬಂಗ್ಲಾ ದೇಶವನ್ನು ದೂರ ಓಡಿಸುತ್ತದೆ.

● ●

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 87/1971.

ಅಪ್ಪಿ ಯಾನೆ ಚೆನ್ನಮ್ಮ —ವಾದಿ.
ಮರುದೇವಿ ಕೂಡಾ —ಎದ್ರಿರು.

5ನೇ ಪ್ರತಿವಾದಿ– ಜಗತ್ಪಾಲ, ಶಿವದೇವಿಯವರ ಮಗ, ಬೆಳ್ತಂಗಡಿ ತಾಲ್ಲೂಕು ತಣ್ಣೀರುಪಂತ ಗ್ರಾಮದ ಅಲಪುರ ಎಂಬಲ್ಲಿ ಪೋಸ್ಟು: ತಣ್ಣೀರುಪಂತ ದ. ಕ. ಇವರಿಗೆ—

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ ವಾದಿಯು ದಾಖಲು ಮಾಡಿದ ಮೇಲ್ಕಾಣಿಸಿದ ದಾವೆಯು ತಾ. 21—9—1971ಕ್ಕೆ ನಿಮ್ಮ ಹಾಜರಾತಿಯ ಬಗ್ಗೆ ಇರುತ್ತದೆ. ನೀವು ತಾ. 21—9—1971ಕ್ಕೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ಬೆಳಿಗ್ಗೆ 11 ಗಂಟೆಗೆ ಖುದ್ದು ಯಾ ವಕೀಲರ ಮುಖಾಂತರ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ಮುಂದುವರಿಸಲಾದೀತು.

(By Order of Court)

Pulu Narayana Bhat
Advocate for Plaintiff

Belthangady, 31—8—1971

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR. S. K.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O. S. No. 288/70 I. A. No. III

ಸುಬ್ರಾಯ ಭಟ್ಟ ಕೂಡಾ –ಅರ್ಜಿದಾರರು.
ರಾಮಕೃಷ್ಣ ಶರ್ಮ ಅಲಿಯಾಸ್ ಸರಳಾಯ ಕೂಡಾ —ಎದ್ರಿಯರು.

ಎದ್ರಿ ರಾಮಕೃಷ್ಣ ಶರ್ಮ ಅಲಿಯಾಸ್ ಸರಳಾಯರಿಗೆ–ಉಬ್ರಂಗುಳಿ, ಮಾಡ್ನೂರು ಗ್ರಾಮ ಪುತ್ತೂರು ತಾಲೂಕು. ದ. ಕ. ಈ ಮೂಲಕ ತಿಳಿಯಪಡಿಸುವುದೇನೆಂದರೆ–

ಮೇಲ್ಕಂಡ ವ್ಯವಹರಣೆಯಲ್ಲಿ ಫೈನಲ್ ಡಿಕ್ರಿ ಕೊಡಿಸಬೇಕೆಂತ ಸದರಿ ಅರ್ಜಿದಾರರು ಅರ್ಜಿ ಮಾಡಿರುವುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಣೆ ಇದ್ದ ಪಕ್ಷದಲ್ಲಿ ಅದನ್ನು ಇದೇ 1971ನೇ ಇಸವಿ ಅಕ್ಟೋಬರ ತಿಂಗಳು 4ನೇ ತಾರೀಖು ಹಗಲು 11ಗಂಟೆಗೆ ಈ ಕೋರ್ಟಿನಲ್ಲಿ ಖುದ್ದಿನಿಂದಾಗಲೀ ವಕೀಲರ ದ್ವಾರಾ ಆಗಲೀ ಹಾಜರಾಗಿ ತಿಳಿಸಿಕೊಳ್ಳಬೇಕು. ತಪ್ಪಿದರೆ ಸದರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟು ಹುಕುಂ ಪ್ರಕಾರ)

ಎ. ಪಿ. ಗೌರಿಶಂಕರ್
ಅರ್ಜಿದಾರರ ಕಡೆ ಎಡ್ವಕೇಟ್

ಪುತ್ತೂರು, ದ. ಕ. 2–9–1971

(ಮೂರನೇ ಪುಟದಿಂದ)

ಜಾಸತ್ತೆಯೆಂದೂ ನಂಬಿಸ ಹೊರಟಿದ್ದಾರೆ. ಆದರೆ, ಈ ಏಕ ವ್ಯಕ್ತಿಯ ಶಕ್ತಿಗೂ ಮಿತಿಯೊಂದಿದೆ, ಅದೂ ಒಂದು ದಿನ ನಡೆಯದ ನಾಣ್ಯವಾಗುತ್ತದೆ ಎಂಬುದನ್ನು ಅವರು ನಂಬಿದಂತಿಲ್ಲ. ಹಳೆಯ ಕಾಂಡವನ್ನೇ ಕಿತ್ತರೆ ಚಿಗುರುವುದಂಟೆ?

ಎಸ್ಸೆಲ್ಲರ ರಾಯಭಾರಿಗೆ ಸ್ವಾಗತ

ಕಳೆದ ಇಪ್ಪತ್ತು ವರ್ಷಗಳಿಂದ ಉಡುಪಿಯಿಂದ ಹೊರಡುತಿದ್ದ 'ರಾಯಭಾರಿ' ಸಾಪ್ತಾಹಿಕವನ್ನು ಆರಂಭಿಸಿದವರು ಕಾರಣಾಂತರದಿಂದ ಅದನ್ನು ನಿಲ್ಲಿಸಿದರು. ಆದರೆ, ಅದರ ಸಂಪಾದಕರಾದ ಶ್ರೀ ಎಸ್. ಎಲ್. ನಾರಾಯಣ ಭಟ್ಟರಿಗೆ ಅದರ ಸಂಪೂರ್ಣ ಹೊಣೆಗಾರಿಕೆಯನ್ನು ಒಪ್ಪಿಸಿದರು. ಪತ್ರಿಕಾರಂಗದಲ್ಲಿ ಸಾಕಷ್ಟು ದುಡಿಯುತ್ತಿರುವ ಶ್ರೀ ಭಟ್ಟರು ಈಗ ಪತ್ರಿಕೆಯನ್ನು ಮತ್ತೆ ಪ್ರಕಟಿಸಲು ಆರಂಭ ಮಾಡಿದ್ದಾರೆ. ಶ್ರೀ ಭಟ್ಟರು "ರಾಯಭಾರಿ"ಗೆಂದೇ ತಮ್ಮ ಬದುಕನ್ನು ಮೀಸಲಿಟ್ಟವರು; ಅದರ ಏಳು—ಬೀಳುಗಳೊಡನೆಯೇ ತಮ್ಮ ಏಳು-ಬೀಳುಗಳನ್ನು ಕಂಡವರು. ಕನ್ನಡದಲ್ಲಿನ ಪತ್ರಿಕಾರಂಗವು ಬಹಳಷ್ಟು ವಿಘ್ನವಿಡ್ಡೂರಗಳನ್ನೂ ಆರ್ಥಿಕ ಮುಗ್ಗಟ್ಟನ್ನೂ ಎದುರಿಸ ಬೇಕೆಂಬುದನ್ನೂ ಅವರು ಚೆನ್ನಾಗಿ ತಿಳಿದವರು. ಆದರೂ ಕನ್ನಡಿಗರ ಮೇಲೆ ವಿಶ್ವಾಸವಿಟ್ಟು ಅವರು ಸಾಹಸಕ್ಕೆ ಇಳಿದಿದ್ದಾರೆ. ಪತ್ರಿಕಾ ಪ್ರಪಂಚದಲ್ಲಿ ಬಹಳಷ್ಟನ್ನು ಮಾಡಬೇಕೆಂದು ಅವರು ಬಯಸಿದ್ದಾರೆ. ಅವರ ಬಯಕೆಗಳು ಈಡೇರಲೆಂದು ಹಾರೈಸಿ, ಅವರಿಗೆ ಕನ್ನಡಿಗರೆಲ್ಲರೂ ತುಂಬು ಹೃದಯದ ಸಹಾಯ ನೀಡುವರೆಂದು ನಂಬುತ್ತೇವೆ. ಶ್ರೀ ಎಸ್ಸೆಲ್‌ರ 'ರಾಯಭಾರಿ'ಗೆ "ನವಯುಗ"ದ ಹಾರ್ದಿಕ ಸ್ವಾಗತ. ●

ಕುಂದಾಪುರ IInd ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C. 483/1971

ಅರ್ಜಿದಾರಳು— Y. ಗಿರಿಜಮ್ಮ ಸೆಡ್ತಿ

ಎದ್ರಿರು—1. ಪರಮೇಶ್ವರ, ಮರ್ಲಿಯ ಮೊಮ್ಮಗ

2. ಪುಟ್ಟಯ್ಯ ವೆಂಕಿಮಗ.

3. ಅಮ್ಮಕ್ಕ, 4. ನಾಗ, 5. ಮರ್ಲಿ, 6. ದೇವಿ, 7. ಗಣಪ, 8. ಗೋವಿಂದ, 9. ಮಂಜ, 10. ಮುತ್ತಯ್ಯ, 11. ಹೆರಿಯಣ್ಣ, 12. ಚೆನ್ನಯ್ಯ, 13. ನಾರಾಯಣ, 14. ಅಣ್ಣಪ್ಪ, 15. ಮಂಜಿ—2ನೇ ಲಾಗಾಯ್ತಿನವರು 1ನೇ ಎದ್ರಿಯ ಕುಟುಂಬಸ್ತರು.

ಕುಂದಾಪುರ ತಾಲ್ಕು ಬಿಜೂರು ಗ್ರಾಮದಲ್ಲಿರುವವರು.

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ನಿಮ್ಮಿಂದ ಅರ್ಜಿದಾರಳಿಗೆ ತಾ.31.3.1969ಕ್ಕೆ ಬರತಕ್ಕ ಗೇಣಿ ಬಾಕಿ ಬಗ್ಗೆ ಅರ್ಜಿದಾರಳು ದಾಖಲು ಮಾಡಿದ ಮೇಲಿನ ಅರ್ಜಿಯನ್ನು ತಾರೀಕು 21—9—1971ಕ್ಕೆ ತನಿಕೆಗೆ ಇಟ್ಟಿರುತ್ತಾರೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪ ಇದ್ದರೆ ಆ ದಿನ ಹಗಲು ಘಂಟೆ 11ಕ್ಕೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳ ತಕ್ಕದ್ದು ಎಂಬ ಸಂಗ್ತಿಯನ್ನು ತಿಳಿಸಿರುತ್ತದೆ.

ಕೋರ್ಟು ಹುಕ್ಕುಂ ಪ್ರಕಾರ

Y. Tejappa Shetty

Advocate for applicant

Coondapoor, 31—8—1971

ಪಾಶವೀಕೃತ್ಯದ ಪರಿಣಾಮ; ನಿರಾಶ್ರಿತರ ಸಮಸ್ಯೆ



ಪಾಕಿಸ್ಥಾನದ ಸೇನಾಧಿಕಾರಿಗಳ ದಬ್ಬಾಳಿಕೆ ಮತ್ತು ಹತ್ಯಾಚಾರಗಳ ಪರಿಣಾಮವಾಗಿ ಪೂರ್ವ ಬಂಗಾಳದ 81 ಲಕ್ಷಕ್ಕೂ ಹೆಚ್ಚಿನ ಜನತೆ ಭಾರತಕ್ಕೆ, ನಿರಾಶ್ರಿತರಾಗಿ ಬಂದಿದ್ದಾರೆ. ಅಂದರೆ ಪೂರ್ವ ಬಂಗಾಳದ ಒಟ್ಟು ಜನಸಂಖ್ಯೆಯ ಶೇಕಡಾ 11 ರಷ್ಟು ಜನಸಂಖ್ಯೆ ತಮ್ಮ ಮಾತೃಭೂಮಿಯನ್ನು ತ್ಯಜಿಸಿದಂತಾಗಿದೆ. ಭಾರತಕ್ಕೆ ನಿರಾಶ್ರಿತರ ವಲಸೆ ಕಳೆದ ಐದುತಿಂಗಳ ಹಿಂದೆಯೇ ಆರಂಭವಾಯಿತು. ಇಂದೂ ನಿರಾಶ್ರಿತರ ವಲಸೆ ಮುಂದುವರೆಯುತ್ತಲೇ ಇದೆ. ಪ್ರತಿದಿನ ನಮ್ಮ ದೇಶಕ್ಕೆ 40,000ಕ್ಕೂ ಮೀರಿ ಬಂಗ್ಲಾ ದೇಶದ ನಿರಾಶ್ರಿತರು ಬರುತ್ತಿದ್ದಾರೆ.

ಪಾಕಿಸ್ಥಾನದ ಶಸ್ತ್ರಾಸ್ತ್ರ ಸೈನಿಕರ ಪಾಶವೀಕೃತ್ಯಗಳಿಗೆ ಬಲಿಯಾದವರೇ ಈ ನಿರಾಶ್ರಿತರು. ತಮ್ಮ ನ್ಯಾಯವಾದ ಹಕ್ಕು ಭಾದ್ಯತೆಗಳಿಗಾಗಿ ಹೋರಾಡಿದವರ ಮೇಲೆ ನಡೆದ ಹತ್ಯಾಚಾರ ಮಾನವ ಚರಿತ್ರೆಯಲ್ಲೆ ಹೀನಕೃತ್ಯ. ಈ ಲಕ್ಷಾಂತರ ಮಂದಿ ನಿರಾಶ್ರಿತರಿಗೆ ಆಹಾರ ಮತ್ತು ವಸತಿ ಸೌಲಭ್ಯಗಳನ್ನು ಒದಗಿಸಲು ಭಾರತ ಸರ್ಕಾರ ತನ್ನ ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಕೋಟ್ಯಾಂತರ ರೂಪಾಯಿಗಳನ್ನು ಅವರಿಗಾಗಿ ವೆಚ್ಚ ಮಾಡಲಾಗುತ್ತಿದೆ. ವೈದ್ಯಕೀಯ ನೆರವು ಹಾಗೂ ಸಾರಿಗೆ ವ್ಯವಸ್ಥೆಯನ್ನೂ ನಿರಾಶ್ರಿತರ ಶಿಬಿರಗಳಿಗೆ ಒದಗಿಸಲಾಗಿದೆ. ನಿರಾಶ್ರಿತರಿಗೆ ಪಶ್ಚಿಮಬಂಗಾಳ, ಅಸ್ಸಾಂ,ತ್ರಿಪುರ ಮತ್ತು ಮೇಘಾಲಯಗಳಲ್ಲಿ ಶಿಬಿರಗಳನ್ನು ನಿರ್ಮಿಸಲಾಗಿದೆ.

ಮುಂಡ್ರಾಡಿ ಕೊರಗಪ್ಪ ರೈಗಳ ನಿಧನ

ಪುತ್ತೂರು ತಾಲೂಕಿನ ಬಂಟ್ರಗ್ರಾಮದಲ್ಲಿ ಸುದೀರ್ಘಕಾಲ ಪಟೇಲರಾಗಿದ್ದು ನಿಷ್ಠ ಹಾಗೂ ನಿಸ್ವಾರ್ಥ ಸೇವೆ ಸಲ್ಲಿಸಿ ಜನಾದರಣೀಯರಾಗಿದ್ದ ಮುಂಡ್ರಾಡಿ ಕೊರಗಪ್ಪ ರೈಗಳು ತಾ 21-8-71 ರಂದು ತಮ್ಮ 85ನೇ ವಯಸ್ಸಿನಲ್ಲಿ ದೈವಾಧೀನರಾದರು. ಅವರ ಉತ್ತರಕ್ರಿಯೆಯು 3-9-71 ರಂದು ಆಳೇರಿ ಮನೆಯಲ್ಲಿ ಯಥಾವಿಧಿಯಾಗಿ ನೆರವೇರಿತು.

ಬಂಟ್ವಾಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 80/1971

ಬೈಪದವು ಮಹಾಲಿಂಗ ಭಟ್ಟ —ವಾದಿ

ಮತ್ತು

ಗೌರಂಮ ಕೂಡಾ —ಪ್ರತಿವಾದಿರು

3ನೇ ಪ್ರತಿವಾದಿ—ಸೀತಂಮ ಯಾನೆ ಲಕ್ಷ್ಮಿ, ವಿ. ಶಂಕರ ಭಟ್ಟರ ವಿಧವೆ, ಬಂಟ್ವಾಳ ತಾಲ್ಕು ವಿಟ್ಲ ಕಸಬಾ ಗ್ರಾಮದಲ್ಲಿ—ಇವರಿಗೆ ಕೋರ್ಟು ಹುಕ್ಕುಂ ಪ್ರಕಾರ ತಿಳಿಸುವುದೇನೆಂದರೆ-

ವಾದಿಯು ನೀವು ವಗೈರೆಯರ ಮೇಲೆ ಮಾಡಿದ ಮೇಲ್ಕಂಡ ದಾವೆಯು ನಿಂಮ ಹಾಜರಾತಿಯ ಬಗ್ಗೆ ತಾ. 4-10-1971ಕ್ಕೆ ಇಟ್ಟಿರುವುದರಿಂದ, ಅದ್ಕೆ ನಿಂಮದೇನಾದರೂ ಆಕ್ಷೇಪಣೆಗಳಿದ್ರೆ ಸದ್ರಿ ದಿವ್ಸ ಮಜ್ಕೂರು ಕೋರ್ಟು ಮುಂದೆ ನೀವು ಸ್ವತಹ ಯಾ ವಕೀಲರ ದ್ವಾರಾ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರುಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲ್ಕ ತಿಳಿಸಿಯೋಣಾಗಿದೆ.

(Sd)- C. V. Shastry

Advocate for Plff.

ಬಂಟ್ವಾಳ, ತಾ. 2—9—1971

ಬೆಳಗಾಂನಲ್ಲಿ ಬ್ಯಾಂಕರರ ಸಭೆ

ಬೆಳಗಾಂ ಜಿಲ್ಲೆಯ ಲೀಡ್ ಬ್ಯಾಂಕ್ ಆದ ಸಿಂಡಿಕೇಟ್ ಬ್ಯಾಂಕು 30-8-71 ರಂದು ಬೆಳಗಾಂ ಜಿಲ್ಲೆಯಲ್ಲಿ ಶಾಖಾ ವಿಸ್ತರಣೆಯ ಕಾರ್ಯಯೋಜಕ ಸಭೆಯೊಂದನ್ನು ಏರ್ಪಡಿಸಿತ್ತು. ಇದರಲ್ಲಿ ರಾಷ್ಟ್ರೀಕೃತ ಮತ್ತು ಅರಾಷ್ಟ್ರೀಕೃತ 12 ಬ್ಯಾಂಕುಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಿಂಡಿಕೇಟ್ ಬ್ಯಾಂಕಿನ ಜನರಲ್ ಮೆನೇಜರ್ ಶ್ರೀ ಎಚ್. ಎಸ್. ಪೈಗಳು ಸ್ವಾಗತ ಭಾಷಣ ಮಾಡುತ್ತಾ ಗ್ರಾಮಾಂತರ ಪ್ರದೇಶಗಳಲ್ಲಿ ತೀವ್ರ ಆರ್ಥಿಕ ಪ್ರಗತಿಗಾಗಿ ಬ್ಯಾಂಕಿಂಗ್ ಚಟುವಟಿಕೆಗಳನ್ನು ವಿಸ್ತರಿಸುವ ಆವಶ್ಯಕತೆಗಳನ್ನು ವಿವರಿಸಿದರು. ಬೆಳಗಾಂವಿನ ಡೆಪ್ಯುಟಿ ಕಮಿಷನರ್ ಶ್ರೀ ಸಿದ್ಧಯ್ಯ ಪುರಾಣಿಕರು ಸಭೆಯನ್ನು ಉದ್ಘಾಟಿಸುತ್ತಾ ಜಿಲ್ಲೆಯ ಆರ್ಥಿಕೋನ್ನತಿಗಾಗಿ ಅಧಿಕ ಠೇವಣಿ ಸಂಗ್ರಹ ಮತ್ತು ಕೃಷಿಗೂ, ಕೈಗಾರಿಕೆಗೂ ಸಾಲ ವಿತರಣೆ ಮಾಡುವಂತೆ ಬ್ಯಾಂಕುಗಳಿಗೆ ಕರೆಯಿತ್ತರು. ಬೆಂಗಳೂರಿನ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಬ್ಯಾಂಕಿಂಗ್ ಆಫೀಸರ್ ಶ್ರೀ ಎಸ್. ಕೆ. ಜಿ. ವಾಲೆಂಟೈನ್ ಅವರು ಸಭಾಧ್ಯಕ್ಷತೆ ವಹಿಸಿದ್ದರು. ಸಿಂಡಿಕೇಟ್ ಬೇಂಕಿನ ಆರ್ಥಿಕ ತಜ್ಞ ಡಾ| ಎಸ್. ಕೆ. ತಿಂಗಳಾಯರು ಬ್ಯಾಂಕು ಯೋಚಿಸಿರುವ ಬ್ಯಾಂಕುಗಳಿಲ್ಲದ ಕೇಂದ್ರಗಳಾವುವು ಎಂಬುದನ್ನು ಸೂಚಿಸಿದರು.

ಪ್ರಾದೇಶಿಕ ಅಭಿವೃದ್ಧಿ ಮೆನೇಜರ್ ಶ್ರೀ ಎಸ್. ಬಿ ಹರಿಬಾಲ್ ಅವರು ಧನ್ಯವಾದಗಳನ್ನರ್ಪಿಸಿದರು.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 111/71

ಓಬಯ್ಯ ಪೂಜಾರಿ —ವಾದಿ

ಮತ್ತು

ಜನಾರ್ಧನ ರಾವ್ ಸಹಾ —ಪ್ರತಿವಾದಿ

ಬೆಳ್ತಂಗಡಿ ತಾಲ್ಕು ಸುಳ್ಕೇರಿ ಗ್ರಾಮದ ನೆಕ್ಕಿನಡ್ಕ ಎಂಬಲ್ಲಿರುವ ಕಮಲ ಹೆಂಗ್ಸಿನ ಮಗ 1ನೇ ಪ್ರತಿವಾದಿ ಜನಾರ್ಧನ ರಾವ್ ಇವರಿಗೆ—

ವಾದಿಯು ನಿಮ್ಮ ಮೇಲೆ ಮಾಡಿದ ದಾವೆಯು ತಾ. 21.9.1971ರಂದು ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುವುದರಿಂದ ನೀವು ಆ ದಿವ್ಸ ಬೆಳಿಗ್ಗೆ ಗಂಟೆ 11ಕ್ಕೆ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿವ್ಯಾಮಾಡಿ ಕೈಪೇತು ಮುಂದುವರಿಸಲಾಗುವುದು.

ಕೋರ್ಟು ಹುಕ್ಕುಂ ಮೇರೆಗೆ

N. J. Kadamba

Advocate, Belthangady

ಬೆಳ್ತಂಗಡಿ, 4-9.71.

ರಾಷ್ಟ್ರೀಯ ಸೇವಾ ಯೋಜನೆಯ ಉದ್ಘಾಟನೆ

ತಾ. 31—8—71ರಂದು ಎಂ. ಜಿ. ಎಂ. ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯನ್ನು ಸಿಂಡಿಕೇಟ್ ಬೇಂಕಿನ ಕಸ್ಟೋಡಿಯನ್ ಶ್ರೀ ಕೆ.ಕೆ. ಪೈಗಳು ಉದ್ಘಾಟಿಸುತ್ತಾ ಜೀವನದಲ್ಲಿ ಸೇವಾ ಗುಣವು ಹುಟ್ಟುಗುಣವಾಗಿ ಬರಬೇಕು, ಒತ್ತಾಯ ಪೂರ್ವಕವಾಗಿ ಬಂದರೆ ಶಾಶ್ವತವಾಗಿ ಉಳಿಯುವುದಿಲ್ಲ. ನಮ್ಮ ದೇಶದಲ್ಲಿ ಇಂಥ ಸೇವಾಮನೋವೃತ್ತಿ ಬೆಳೆಯ ಬೇಕಾದ್ದು ತೀರ ಅವಶ್ಯ ಎಂದರು. ಎನ್.ಸಿ.ಸಿ. ಮತ್ತು ಸ್ಕೌಟ್‌ಗಳ ಕುರಿತು ಅವರು ಪ್ರಸ್ತಾಪಿಸಿದರು.

ಎನ್.ಎಸ್.ಸಿ. ಅಧಿಕಾರಿ ಶ್ರೀ ಎನ್. ವಜ್ರಕುಮಾರರು ಸ್ವಾಗತಿಸಿ ಈ ಯೋಜನೆಯ ಉದ್ದೇಶವನ್ನು ವಿವರಿಸಿದರು. ಈ ಯೋಜನೆಗಾಗಿ ಮೈಸೂರು ವಿಶ್ವವಿದ್ಯಾಲಯವು 11 ಕಾಲೇಜುಗಳನ್ನು ಆಯ್ಕೆಮಾಡಿದ್ದು ಅವರಲ್ಲಿ ಎಂ.ಜಿ. ಎಂ. ಒಂದಾಗಿರುತ್ತದೆ ಎಂದು ತಿಳಿಸಿದರು.

ಬಾಂಗ್ಲಾ ನಿರಾಶ್ರಿತರ ಪರಿಹಾರ ನಿಧಿಗಾಗಿ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರಿಂದ ಸಂಗ್ರಹಿಸಲಾದ ರೂ. 885-75ನ್ನು ಈ ಸಂದರ್ಭದಲ್ಲಿ ಅರ್ಪಿಸಲಾಯಿತು.

ನವಯುಗ

ಹೊನ್ನ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ

ಹೊನ್ನ ಹಬ್ಬದ ವಿಶೇಷ ಸಂಚಿಕೆಗೆ

ಜಾಹೀರಾತು ಕೊಟ್ಟು ಸಹಕರಿಸಿರಿ.

In the Court of the Munsif of Buntwal, South Kanara.

P. & S. C. No. 1 of 71

1. Smt Laxmi a Rathanavathi Amma.
2. Subramanya Saralaya.
3. Dinakara Saralaya.
4. Lalitha Devi.

—Petitioners.

NOTICE

Please take notice that an application has been filed under Section 372 of the Indian Succession Act for the issue of a Succession Certificate in respect of the assets of Shankernarayana Saralaya. If any one has got any objection for the date he has to appear before the Court and filed his objections on 13—9—71 at 11 A. M. by the order of the Court.

(By the order of the Court)

B. A. Somayaji,

Adv. for Petitioners.

Buntwal. S. K. Date 27—8—71.

‘ಗಾಂಧಿಜಿಯ ಕೊಲೆ’

(ಎರಡನೇ ಪುಟದಿಂದ)

ಇದು ನಡೆದ ಒಂದು ವಾರದ ನಂತರ, ಆಪ್ಟೆ ಪುಣೆಯಿಂದ ಮುಂಬಯಿಗೆ ಬಂದರು. ಬಂದವರು ನೇರ ನಮ್ಮ ಹಾಸ್ಟೆಲಿಗೆ ಬಂದು ನನ್ನನ್ನು ಸಿನೆಮಕ್ಕೆ ಬರುವಂತೆ ಒತ್ತಾಯಿಸಿದರು. ರಾತ್ರಿ ಷೋ ಎಂಬ ಕಾರಣದಿಂದ ನಾನು ಹೋಗಲೊಪ್ಪಲಿಲ್ಲ. ಆದರೂ ಆವರನ್ನು ಕಳುಹಿಸಿಕೊಡಲೆಂದು ಚೌಪಾತಿಯವರೆಗೂ ಹೋದೆ–ನನ್ನನ್ನು ಬಿಟ್ಟು ಹೋಗುವ ಹೊತ್ತಿನಲ್ಲಿ ಮರುದಿನ ಮಧ್ಯಾಹ್ನದ ಊಟಕ್ಕೆ ಅವರೊಡನಿರಲು ಕೇಳಿ ಕೊಂಡರು. ನಾನು ಸಮ್ಮತಿಸಿದೆ. ಮರುದಿನ ಮಧ್ಯಾಹ್ನ 11.30ರ ಸುಮಾರಿಗೆ ಅವರು ಹಾಸ್ಟೆಲಿಗೆ ಬಂದರು. ಅವರೂ ನಾನೂ ಕೂಡಿಯೇ ಆರ್ಯ ನಿವಾಸಕ್ಕೆ ಹೋದೆವು. ಅಲ್ಲಿ ಭೋಜನ ಮುಗಿಸಿದೆವು. ನಾವಿಬ್ಬರು ಸಂಜೆಯ ತನಕ ಜೊತೆಯಲ್ಲಿದ್ದೆವು. ಅವರು ಪುಣೆಗೆ ಹೋದರು. ನಾನು ಹೊಂಗನಸುಗಳನ್ನು ಹೊಸೆಯುತ್ತ ಹಾಸ್ಟೆಲಿಗೆ ಬಂದೆ’

ಶಿಷ್ಯೆಯ ಭೇಟಿಗಾಗಿ ಆಪ್ಟೆ ಅನೇಕ ಸಲ ಪುಣೆಯಿಂದ ಮುಂಬಯಿಗೆ ಬಂದರು. ಹಾಗೆ ಬಂದಾಗಲೆಲ್ಲ ಮನೋರಮೆ ಆಪ್ಟೆಯ ಸಂಗಾತಿಯಾಗಿರುತ್ತಿದ್ದಳು. ಊಟ, ವಸತಿ, ವಿಹಾರ ಎಲ್ಲ ಒಟ್ಟಿಗೆ ನಡೆಯಿತು. ಸಿನೆಮ ನೋಡಲು ಮರೆಯುತ್ತಿರಲಿಲ್ಲ. ಅವರಿಬ್ಬರ ವೈವ ವಸ್ನಗಳು ತೀರ ಹತ್ತಿರಕ್ಕೆ ಬಂದುವು.

ಅಷ್ಟರಲ್ಲಿ ರಜೆ ಬಂತು. ಅವಳು ತಂದೆ ಕೆಲಸದಲ್ಲಿದ್ದ ಶೇಗಾಂಗೆ ಹೊರಟು ನಿಂತಳು. ಶೇಗಾಂನಿಂದ ಅವಳು ಆಪ್ಟೆಗೆ ಎರಡು, ಮೂರು ಪತ್ರ ಬರೆದಳು. ಆಪ್ಟೆ ಅವುಗಳಿಗೆ ಉತ್ತರ ಬರೆಯದಿರಲಿಲ್ಲ. ಸಂಶಯ ಬರದಿರಲಿ ಎಂದು ಆ ಕಾಗದಗಳಲ್ಲಿ ನಿರ್ಮಲಾ ಎಂದು ಸಹಿ ಹಾಕಿದ ಹೆಣ್ಣಿಗೆ, ಹೆಣ್ಣೊಬ್ಬಳು ಬರೆದ ಕಾಗದವನ್ನು ಯಾರು ಅನುಮಾನದಿಂದ ಕಾಣುತ್ತಾರೆ?

ತನ್ನ ಹೇಳಿಕೆಯಲ್ಲಿ ಅದನ್ನು ಮನೋರಮೆ ಹೀಗೆ ವಿವರಿಸಿದಳು.

‘ನನ್ನ—ಆಪ್ಟೆ ಸ್ನೇಹ ಬೆಳೆದು ಬಂದುದನ್ನು ಗಮನಿಸಿದ ಹಾಸ್ಟೆಲ್ ವಾರ್ಡನ್ ಡಾ(ಕು) ಹೀವರ್ತ್, ವಿಷಯವನ್ನು ತಂದೆಗೆ ವರದಿ ಮಾಡಿದಳು. ಆಪ್ಟೆಯೊಡನೆ ವ್ಯವಹರಿಸ ಬಾರದೆಂದು, ತಂದೆ ನನಗೆ ಆಜ್ಞೆ ಮಾಡಿದರು. ಆದ್ದರಿಂದ ನಿರ್ಮಲಾ ಎನ್ನುವ ಹೆಸರಿನಲ್ಲಿ ನನಗೆ ಬರೆಯುವಂತೆ ನಾನು ಆಪ್ಟೆಗೆ ಮುಂಬಯಿ ಬಿಡುವಾಗ ಸೂಚಿಸಿದೆ.’

ನವೆಂಬರ್ ತಿಂಗಳು ಬಂತು. ಕಾಲೇಜುಗಳು ಪ್ರಾರಂಭವಾದುವು. ಮನೋರಮೆ ಮುಂಬಯಿಗೆ ಮರಳಿ ಬಂದಳು. ಆಪ್ಟೆಯ ಪುಣೆ—ಮುಂಬಯಿ ಓಡಾಟ ಹೆಚ್ಚಿತು. ಆರ್ಯನಿವಾಸ, ತಪ್ಪಿದರೆ, ಆರ್ಯ ಪಥಿಕಾಶ್ರಮದಲ್ಲಿ, ಅವರೀರ್ವರು–ಪರಸ್ಪರ ಸಂಧಿಸಿ ಹೊತ್ತು ಕಳೆಯುತ್ತಿದ್ದರು. ಅವರ ವ್ಯವಹಾರಕ್ಕೆ ಆಗ ಯಾರ ಅಡ್ಡಿಯೂ ಇರಲಿಲ್ಲ.

‘ಮೊದಲ ವಾರ್ಷಿಕ ಪರೀಕ್ಷೆ ಮುಗಿಯಿತು. ಅಂದೇ ನಾನು ಆರ್ಯ ಪಥಿಕಾಶ್ರಮಕ್ಕೆ ಹೋದೆ. ಅಲ್ಲಿ ನನಗಾಗಿ ಕಾದಿದ್ದರು ನನ್ನ ಇನಿಯ. ಅಂದು ನಾನೂ–ಅವರೂ ಅಲ್ಲಿಂದ ಗುಜರಾಥೀ ನಿವಾಸಕ್ಕೆ ಹೋದೆವು. ಆ ರಾತ್ರಿಯನ್ನು ನಾನು ಅಲ್ಲಿ ಅವರೊಡನೆ ಕಳೆದೆ. ಮರುದಿನ ಅವರು ಪುಣೆಗೆ ಹೋದರು. ನಾನು ಹಾಸ್ಟೆಲಿಗೆ ಹಿಂದಿರುಗಿದೆ.’

ಆ ರಾತ್ರಿ ತನ್ನ ನಾಯಕ ಸಾವರ್ಕರರನ್ನು ನೋಡುವಂತೆ ಆಪ್ಟೆ ಒತ್ತಾಯಿಸಿದ. ಆಕೆಗೆ ಅದು ಹಿಡಿಸಲಿಲ್ಲ. ಅವಳು ನಿರಾಕರಿಸಿದಳು. ಬೇಸಿಗೆಯ ರಜೆಯಿದ್ದುದರಿಂದ ಶೇಗಾಂಗೆ ಹೊರಟು ಹೋದಳು.

ಪುನಃ ಪ್ರಾರಂಭವಾಯಿತು, ನಿರ್ಮಲಾ ಮನೋರಮೆ ಪತ್ರವ್ಯವಹಾರ. ರಜೆ ಮುಗಿಯಿತು. ಮನೋರಮೆಯ ಮನಸ್ಸಿನ ರುಜೆಯೂ ಮಾಸಲಾರಂಭಿಸಿತು. 1945ರ ಜೂನ್ 17 ರಂದು ಆಕೆ ಪುಣೆಯ ಮೂಲಕ ಮುಂಬಯಿಗೆ ಬಂದಳು. ಪುಣೆಯ ರೈಲು ನಿಲ್ದಾಣದಲ್ಲಿ ಆಪ್ಟೆ ಅವಳನ್ನು ಕಂಡು ಮಾತನಾಡಿದ. ಮುಂಬಯಿಯ ತಿಲಕ ಚೌಕದಲ್ಲಿ ಸಿಗುವುದಾಗಿ ತಿಳಿಸಿದ.

‘ಹೇಳಿದಂತೆ ಆಪ್ಟೆ ನನಗಾಗಿ ತಿಲಕ ಚೌಕದಲ್ಲಿ ಕಾದು ನಿಂತಿದ್ದರು. ಆ ರಾತ್ರಿಯನ್ನು ನಾನು ಅವರೊಡನೆ ಆರ್ಯನಿವಾಸದಲ್ಲಿ ಕಳೆದೆ’

ಆ ರಾತ್ರಿ ಆಪ್ಟೆ ಅವಳಿಗೆ ಸಾವರ್ಕರರ ಜೀವನ ಚರಿತ್ರೆಯನ್ನು ತಿಳಿಸಿದ. ಭಾರತವನ್ನು ರೂಪಿಸ ಬಲ್ಲ ನಾಯಕರೆಂದು ಹೊಗಳಿದ. ಆದರೆ ಅವಳು ಅದರಿಂದ ಪುಲಕಿತಳಾಗಲಿಲ್ಲ. ಸಾವರ್ಕರರ ಯೋಜನೆಗಳು ಅವಳಿಗೆ ಸರಿ ಬೀಳಲಿಲ್ಲ. ಅವಳು ಬ್ರೌನರಿಗಿತ್ತ ಹೇಳಿಕೆಯ ಪ್ರಕಾರ, ಆಕೆ ಅನೇಕ ರಾತ್ರಿಗಳನ್ನು ಆಪ್ಟೆಯೊಡನೆ ಮುಂಬಯಿಯ ಬೇರೆ ಬೇರೆ ಹೋಟೆಲುಗಳಲ್ಲಿ ಕಳೆದಿದ್ದಳು.

‘1945ರ ಸುಮಾರಿನಲ್ಲಿ ಅವರು ದೆಹಲಿಯಿಂದ ನನಗೊಂದು ಕಾಗದ ಬರೆದಿದ್ದರು. ದೆಹಲಿಯ ಹಿಂದೂ ಮಹಾಸಭಾ ಭವನದಲ್ಲಿ ಅವರು ಆಗ ಉಳಿದುಕೊಂಡಿದ್ದರು. ಸಭೆಯ ಯಾವುದೋ ಕಾರ್ಯ ನಿಮಿತ್ತ ಅವರು ಅಲ್ಲಿಗೆ ಹೋಗಿದ್ದರು. ತಮ್ಮ ಪತ್ರಿಕೆಗೆ ಕಾಗದದ ಪೂರೈಕೆ ಆಗ ಬೇಕಾಗಿದೆ. ಅದಕ್ಕೆ ಅಧಿಕಾರಿಗಳನ್ನು ಕಾಣಬೇಕಾಗಿದೆ. ಬರುವುದು ವಿಳಂಬ ಆದೀತು ಎಂದು ತಿಳಿಸಿದ್ದರು. ನನ್ನನ್ನು ಸಂಧಿಸಿದಾಗಲೆಲ್ಲಾ ಅವರು ತಮ್ಮ ಪತ್ರಿಕೆಯನ್ನು ಓದಲು ನನಗೆ ಕೊಡುತಿದ್ದರು. ಆದರೆ ಆ ಅಭಿಪ್ರಾಯಗಳು ನನಗೆ ಹಿಡಿಸುತ್ತಿರಲಿಲ್ಲ.’

ಕೊನೆಗೊಂದು ದಿನ ಮನೋರಮೆ ತನ್ನ ಇನಿಯನ ಆರಾಧ್ಯ ಮೂರ್ತಿಯನ್ನು ಪ್ರತ್ಯಕ್ಷ ನೋಡಿದಳು. 1946ರ ಬೇಸಿಗೆಯ ರಜ ಮುಗಿಸಿಕೊಂಡು ಮುಂಬಯಿಗೆ ಬರುವ ದಾರಿಯಲ್ಲಿ ಆಕೆ ಪುಣೆಯ ಹೋಟೆಲೊಂದರಲ್ಲಿ ಇಳಿದು ಕೊಂಡಳು. ಆಪ್ಟೆ ಅವಳನ್ನು ಕೂಡಿ ಕೊಂಡ. ಅದೇ ಹೋಟೆಲಲ್ಲಿ ಶ್ರೀ ಸಾವರ್ಕರ್ ತಂಗಿದ್ದರು. ಅವಳನ್ನು ಶ್ರೀಮತಿ ಆಪ್ಟೆ ಎಂದು ಸಾವರ್ಕರರಿಗೆ ಪರಿಚಯ ಮಾಡಿಸಿದರು. ಅಲ್ಲಿಯೇ ಅವಳು ಗೋಡ್ಸೆಯನ್ನು ಮೊದಲ ಬಾರಿಗೆ ನೋಡಿದ್ದು. ಆಪ್ಟೆ—ಗೋಡ್ಸೆ ತುಂಬ ಆತ್ಮೀಯರಿರುವಂತೆ ಅವಳಿಗನಿಸಿತು. ಸಾವರ್ಕರ್ ಅವಳನ್ನು ಆಕರ್ಷಿಸಲಿಲ್ಲ. ಅದನ್ನು ಆಪ್ಟೆಗೆ ಬರೆದ ಒಂದು ಕಾಗದದಲ್ಲಿ ಆಕೆ ಸ್ಪಷ್ಟ ಪಡಿಸಿದ್ದಳು. ಸಿಡಿಮಿಡಿಗೊಂಡ ಆಪ್ಟೆ ಅವಳಿಗೆ ಛೀಮಾರಿ ಹಾಕಿದ.

‘ಆದರೆ ನಮ್ಮ ಪರಸ್ಪರ ಅನುರಾಗಕ್ಕೆ ಅದರಿಂದ ಚ್ಯುತಿ ಬರಲಿಲ್ಲ. ಅನಂತರವೂ ನಾವು ಆತ್ಮೀಯರಾಗಿಯೇ ಉಳಿದು ಕೊಂಡೆವು ಅವರು ಮುಂಬಯಿಗೆ ಬಂದಾಗಲೆಲ್ಲ ನಾನು ಅವರ ಜೊತೆ ಹೋಟೆಲಲ್ಲಿ ಉಳಿಯುತಿದ್ದೆ. ಹಾಗೆ ಉಳಿದು ಕೊಂಡಾಗ, ಹೋಟೆಲಿನ ಮಾಲಿಕರಿಗೆ ನಾವು ಗಂಡ—ಹೆಂಡಿರೆಂದು ಹೇಳುತಿದ್ದೆವು. 1946ರ ಅಕ್ಟೋಬರಿನಲ್ಲಿ ನಾನು ಶೇಗಾಂಗೆ ಹೋದೆ ಅಲ್ಲಿಂದ ಹಿಂದಿರುಗುತಿದ್ದ ನನ್ನನ್ನು ಆಪ್ಟೆ ಭೆಟ್ಟಿಯಾದರು. ನನ್ನ ಕೂಡೆ ಮುಂಬಯಿಗೆ ಬಂದರು. ಮುಂಬಯಿಯಿಂದ ಅವರು ದೆಹಲಿಗೆ ವಿಮಾನ ಯಾನ ಮಾಡಿದರು. ದೆಹಲಿಯ ತನ್ನ ವಿಳಾಸಕ್ಕೆ ಬರೆಯುವಂತೆ ಕೇಳಿ ಕೊಂಡರು. ಅವರು ದೆಹಲಿಯಲ್ಲಿ ಹಿಂದೂ ಮಹಾಸಭಾ ಭವನದಲ್ಲಿ ಇಳಿದು ಕೊಳ್ಳುವುದಾಗಿ ತಿಳಿಸಿದ್ದರು. ಅಲ್ಲಿಂದ ಮರಳಿ ಬಂದವರು ‘ನಾನು ಗಾಂಧಿಯನ್ನು ಕಂಡಿದ್ದೆ. ಅವರಿಗೆ ಕೆಲವು ಪ್ರಶ್ನೆಗಳನ್ನು ಹಾಕಿದೆ. ಅವರಿಗೆ ಅದನ್ನು ಉತ್ತರಿಸುವುದಾಗಲಿಲ್ಲ’ಎಂದು ಮುಂತಾಗಿ ತಿಳಿಸಿದರು. ಹೀಗೆ ತಿಳಿಸಿ ಹೋದವರು ಆಗಾಗ್ಯೆ ಮುಂಬಯಿಗೆ ಬರುತಿದ್ದರು. ಹೋಟೆಲಲ್ಲಿ ರಾತ್ರಿಯನ್ನು ನನ್ನ ಜೊತೆ ಕಳೆಯುತಿದ್ದರು. ಆದರೂ ಅವರ ನಡತೆಯಲ್ಲಿ, ಮಾತು–ಕತೆಯಲ್ಲಿ ಏನೋ ಊನ ಕಾಣ ಬಂತು. ಅವರ ತಲೆತುಂಬ ಯೋಜನೆಗಳಿರುವಂತೆ ತೋರಿತು. ಅವರ ಅಂತರಂಗದ ತುಡಿತವನ್ನು ಅಳೆಯಲಾಗಲಿಲ್ಲ. ಮುಸ್ಲಿಮರೇ ಹೆಚ್ಚಾಗಿ ನೆಲಸಿರುವ ಮುಂಬಯಿಯ ಕೆಲ ಭಾಗಗಳನ್ನು ಬೆಂಕಿ ಹಚ್ಚಿ ಭಸ್ಮ ಗೊಳಿಸುವ ಹಂಚಿಕೆ ಹಾಕಿರುವಂತೆ ಕಂಡಿತು ಅವುಗಳನ್ನು ಬಿಟ್ಟುಕೊಡಲು ನಾನು ಒತ್ತಾಯಿಸಿದೆ ಅವರ ಸಂಕಲ್ಪ ಸಡಿಲಾದಂತೆ ಕಾಣಲಿಲ್ಲ. ಅನಂತರ ಅವರನ್ನು ಬಂಧಿಸಲಾಯಿತು. ಅವರ ಮೇಲಿದ್ದ ಕೇಸುಗಳು ಆ ಮೇಲೆ ವಜಾ ಆದುವು.’

ದೆಹಲಿಗೆ ಹೊರಟು ನಿಂತ ಆಪ್ಟೆ ತನ್ನ ಇನಿಯಳಿಂದ ಯಾವುದನ್ನೂ ಬಚ್ಚಿಡಲಿಲ್ಲ. ನಾಯಕರ ಅಣತಿಯನ್ನು ಅಲ್ಲಗಳೆಯುವಂತಿಲ್ಲ. ಅದನ್ನು ಮಾಡಿ ಮುಗಿಸಲು ಹೊರಟು ನಿಂತಿರುವುದಾಗಿ ಹೇಳಿ ಹೊರಟ. ಆ ಹೇಳಿಕೆಯ ಭಾಗ ಹೀಗಿದೆ—

‘ಜನವರಿ 1948ರ ಮಧ್ಯ ಭಾಗದಲ್ಲಿ ದೆಹಲಿಗೆ ಹೋಗುವುದಾಗಿ ತಿಳಿಸಿದರು. ನನಗೆ ಆಕಾಶವೇ ಕಳಚಿ ಕೊಂಡು ಬಿದ್ದಂತಾಯಿತು. ನಾನು ಬಹಳವಾಗಿ ಅತ್ತೆ. ಅವರು ಅಳುತ್ತಳುತ್ತಲೇ ನನ್ನನ್ನು ಸಂತೈಸಿದರು. ತನಗೆ ಅಪಾಯ ಸಂಭವಿಸಿದರೆ, ಅದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ನಗುನಗುತ್ತಲೇ ಇರುವಂತೆ ತಿಳಿಸಿ ಹೋದರು.’

ಒಬ್ಬರನ್ನೊಬ್ಬರು ತಬ್ಬಿಕೊಂಡರು. ದುಃಖದಿಂದ ಪರಸ್ಪರ ಅಗಲಿದರು, ಆದರೆ ಬದುಕಿ ಬರುವ ಭರವಸೆಯನ್ನಿಟ್ಟುಕೊಂಡೇ ಆಪ್ಟೆ ವಿಮಾನ ಹತ್ತಿದ. ಕೊಲೆ ನಡೆದ ದಿನ ತಾನು ದೆಹಲಿಯಲ್ಲಿ ಇರಲಿಲ್ಲವೆಂದು ಸಾಧಿಸಲು ಬೇಕಾದ ಸಿದ್ಧತೆಗಳನ್ನು ಮಾಡಿಕೊಂಡೇ ಆತ ಹೊರಟಿದ್ದ.

ಆಕೆ ತನ್ನ ಹೇಳಿಕೆಯನ್ನು ಹೀಗೆ ಮುಗಿಸಿದಳು.

‘31—1—48ರಂದು ಗೋಡ್ಸೆಗೆ ಏನಾದರೂ ಸಂಭವಿಸಿದರೆ, ನನ್ನ ಹೆಸರಿನಲ್ಲಿ, ನಾನೇ ಕಳುಹಿಸಿರುವಂತೆ, ಹಿಂದೂ ಮಹಾಸಭೆಯ ಕಚೇರಿಗೆ ಒಂದು ತಂತಿ ಕಳುಹಿಸು, "ದೆಹಲಿಗೆ ಬರುತ್ತೇನೆ–ಗೋಡ್ಸೆಯ ಪರ ವಾದಿಸಲು ವ್ಯವಸ್ಥೆ ಮಾಡುತ್ತೇನೆ–ಆಪ್ಟೆ." 30—1—48ರಂದು ಗಾಂಧಿಜಿಯ ಕೊಲೆಯ ಸುದ್ದಿ ತಿಳಿದು ದಿಗಿಲುಗೊಂಡೆ–ಆದರೂ ಒಪ್ಪಿಕೊಂಡಂತೆ ತಂತಿಯನ್ನು ಕಳಿಸಿದೆ. ಫೆಬ್ರವರಿ 3 ಅಥವಾ 4ರಂದು ನನಗೆ ಕರೆಕರೆಯವರನ್ನು ಕಾಣುವ ಕೆಲಸವಿದೆ ಎಂದು ತಿಳಿಸಿದ್ದರು.’

ಈ ಕರಕರೆ ಬೇರೆ ಯಾರೂ ಅಲ್ಲ ಗಾಂಧಿಜಿಯ ಕೊಲೆಯ ಕೇಸಿನಲ್ಲಿಯ ಇನ್ನೊಬ್ಬ ಅಪಾದಿತ. ಈ ಹೇಳಿಕೆಯನ್ನು ಕ್ರಿಮಿ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303 2 72304 Grams: HOST SATKAR

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು–4

NAVAYUGA 9-9-1971

Registered with the Registrar of News Papers for Indi^ under No. R. N. 3546/'57

REGD. No B. G. 176
LICENCE No. 33
Licensed to Post without Prepayment

ಅಂತರಿಕ್ಷದಲ್ಲಿ ಹೊಳೆಯುತ್ತಿರುವ

ಅಂಗಾರಕ ಗ್ರಹವು ಹೇಗಿದೆ?

1971ರ ಆಗಸ್ಟ್ ತಿಂಗಳಲ್ಲಿ ಅಂಗಾರಕ ಗ್ರಹದ ಮಹಾ ಪ್ರತಿಯೋಗವು ಘಟಿಸಿತು. ಈ ಕಾಲದಲ್ಲಿ ಅಂಗಾರಕ ಗ್ರಹವು ಭೂಮಿಗೆ ಸಮೀಪವಾಗಿತ್ತು. ಅವುಗಳ ನಡುವಣ ಅಂತರ ಸರಿಸುಮಾರು 56 ಮಿಲಿಯ ಕಿಲೋಮೀಟರುಗಳಷ್ಟು. ಇಂಥ ಸ್ಥಾನಪಲ್ಲಟಗಳು 15–17 ವರ್ಷಗಳಲ್ಲಿ ಒಮ್ಮೆ ನಡೆಯುತ್ತಿರುತ್ತವೆ. ಜಗತ್ತಿನ ಖಗೋಲ ಶಾಸ್ತ್ರಜ್ಞರೆಲ್ಲ ಈಗ ಭೂಮಿಗೆ ನೆರೆಯಾಗಿರುವ ಈ ಗ್ರಹದ ಸಂದರ್ಶನದ ಬಗ್ಗೆ ಸಿದ್ಧತೆಗಳನ್ನು ಮಾಡುತಿದ್ದಾರೆ. ಅವರು ಈ ಮೊದಲಿನ ಸಮೀಕ್ಷೆಗಳನ್ನು ವಿಶ್ಲೇಷಿಸಿ ಸೂತ್ರೀಕರಿಸುತಿದ್ದಾರೆ.

ಸ್ವತಶ್ಚಲಿ ಗ್ರಹಾಂತರ ನಿಲ್ದಾಣಗಳ ಮತ್ತು ಅನ್ವೇಷಕಗಳ ಸಹಾಯದಿಂದ ಗ್ರಹಗಳ ಬಗ್ಗೆ ನಡೆಸಿದ ಸಂಶೋಧನೆಗಳಲ್ಲಿ ಮಾಡಲಾದ ಸಾಧನೆಗಳೂ, ಭೂಮಿಯ ಮೇಲಿನ ಖಗೋಲ ಶಾಸ್ತ್ರೀಯ ವೇಧಶಾಲೆಗಳಲ್ಲಿಯ ತಾಂತ್ರಿಕ ಸಜ್ಜುಗಳಲ್ಲಾದ ಸುಧಾರಣೆಯೂ, 1971ರ ಮಹಾಪ್ರತಿಯೋಗದ ಕಾಲದಲ್ಲಿ ಅಂಗಾರಕ ಗ್ರಹದ ಮೇಲಿನ ಪ್ರಾಕೃತಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಭೂಮಿಯ ಮೇಲಿಂದ ಮತ್ತು ಅಂತರಿಕ್ಷದಿಂದ ಮಹತ್ವಪೂರ್ಣವಾದ ಪ್ರಯೋಗಗಳನ್ನು ಕೈಕೊಳ್ಳಲು ಸಾಧ್ಯವಾಗುತ್ತದೆಯೆಂದು ಪ್ರತಿಯೊಂದು ರೀತಿಯಲ್ಲೂ ಆಶಿಸಲಾಗುತ್ತಿದೆ. ಮುಖ್ಯವಾಗಿ ದಕ್ಷಿಣ ಭಾಗದಲ್ಲಿಯ ವೇಧಶಾಲೆಗಳಿಂದ ಸೋವಿಯೆತ್ ಖಗೋಲ ಶಾಸ್ತ್ರಜ್ಞರು ಮಹಾ ಪ್ರತಿಯೋಗ ಕಾಲದಲ್ಲಿ ಅಂಗಾರಕ ಗ್ರಹದ ಸಮೀಕ್ಷೆ ನಡೆಸಿದರು. ಯಾಕೆಂದರೆ ಇಲ್ಲಿ ಅಂಗಾರಕ ಗ್ರಹವು ದಿಗಂತದ ಮೇಲೆ ಗರಿಷ್ಠ ಎತ್ತರದಲ್ಲಿ ಕಾಣಿಸಿಕೊಂಡಿತು. ಕ್ರಿಮಿಯನ್ ಜ್ಯೋತಿರ್ಭೌತ ವಿಜ್ಞಾನ ವೇಧಶಾಲೆ, ಆಜರ್‌ಬೈಜಾನ್ ವಿಜ್ಞಾನಗಳ ಅಕಾಡೆಮಿಯ ವೇಧಶಾಲೆ ಮತ್ತು ತಾಜಿಕ್ ವಿಜ್ಞಾನಗಳ ಅಕಾಡೆಮಿಯ ಜ್ಯೋತಿರ್ಭೌತ ಪೀಠದ ವೇಧಶಾಲೆಗಳು ಈ ಕಾರ್ಯ ನಿರತವಾದುವು.

ಅಂಗಾರಕ ಗ್ರಹದ ಪ್ರಾಕೃತಿಕ ಸ್ಥಿತಿಗತಿಗಳ ಬಗ್ಗೆ ಈ ವರೆಗೆ ವಿಜ್ಞಾನಿಗಳು ಭಾವಿಸಿರುವುದೇನು? ಆಧುನಿಕ ದೂರದರ್ಶಕಗಳಿಂದ ಅಂಗಾರಕ ಗ್ರಹದ ಹೊರಮೈ ಮೇಲೆ ಕನಿಷ್ಠ 50 ಕಿಲೋ ಮೀಟರುಗಳಾಚೆಗೆ ಪರೀಕ್ಷಿಸಲು ಸಾಧ್ಯವಿದೆ. ಇಷ್ಟು ಶಕ್ತಿಯು ಕೂಡ, ಅಂಗಾರಕ ಗ್ರಹದ ಹೊರ ಮೈಯ ಒಂದಿಷ್ಟೂ ವಿವರವಾದ ನಕಾಶೆಯನ್ನು ತಯಾರಿಸಲು, ಹೊರಮೈಯ ಹೊಳಪು, ರೂಪಗಳು, ವಾತಾವರಣದ ರಚನೆ ಮೊದಲಾದುವುಗಳನ್ನು ಅರಿತುಕೊಳ್ಳಲು ಸಹಾಯಕವಾಗಿವೆ.

ಚಂದ್ರನ ಪೃಷ್ಠ ಭಾಗದಂತೆಯೆ ಅಂಗಾರಕ ಗ್ರಹದ ಪೃಷ್ಠ ಭಾಗವೂ ಹಲವು ನೂರಾರು ಕಿಲೋಮೀಟರು ವ್ಯಾಸಗಳುಳ್ಳ ಅನೇಕಾನೇಕ ಕುಳಿಗಳಿಂದ ಕೂಡಿದೆಯೆಂದು ವಿಜ್ಞಾನಿಗಳು ಸಾಧಿಸಿದ್ದಾರೆ. ರೇಡಾರ್ ಮತ್ತು ಬೇರೆ ಅನ್ವೇಷಣೆಗಳಿಂದ ಪೃಷ್ಠಭಾಗದ ಒಂದೊಂದು ಪ್ರದೇಶದ ಸ್ವಾಭಾವಿಕ ಲಕ್ಷಣಗಳ ನಕ್ಷೆಗಳನ್ನು ರಚಿಸಲಾಗಿದೆ. ಅಂಗಾರಕ ಗ್ರಹದ ಮೇಲಿನ ದಿಬ್ಬಗಳ ನಡುವಣ ಅಂತರವು ಹತ್ತು ಮತ್ತು ಅದಕ್ಕೂ ಮೇಲ್ಪಟ್ಟು ಕಿಲೋಮೀಟರುಗಳಷ್ಟಿದೆಯೆಂದು ಕಂಡುಹಿಡಿಯಲಾಗಿದೆ. ಅಂಗಾರಕ ಗ್ರಹದ ಸ್ವಾಭಾವಿಕ ಲಕ್ಷಣಗಳ ನಿಖರವಾದ ನಕಾಶೆಗಳನ್ನು ತಯಾರಿಸುವುದೇ ಮುಂದಿನ ಅಂತರಿಕ್ಷ ಪ್ರಯೋಗಗಳ ಗುರಿಯಾಗಿರುತ್ತದೆ. ಹೀಗಿದ್ದರೂ ಭೂಮಿಯನ್ನಾಧರಿಸಿ ನಡೆಯುವ ಪ್ರಯೋಗಗಳೇ ತುಂಬಾ ಮಹತ್ವದವಾಗಿರುತ್ತವೆ. ಅಂಗಾರಕ ಗ್ರಹದ ದಕ್ಷಿಣಾರ್ಧದಲ್ಲಿಯ ಎತ್ತರಗಳಲ್ಲಿಯ ಅಂತರವನ್ನು ನಿರ್ಧರಿಸಲು ವರ್ಣಪಟಲದಲ್ಲಿಯ ರಕ್ತವರ್ಣಾತೀತ ಪ್ರದೇಶದ ಸ್ಪೆಕ್ಟ್ರೊಫೋಟೊಮೆಟ್ರಿಕ್ ಸಮೀಕ್ಷೆಗಳು ತುಂಬಾ ಮಹತ್ವದವಾಗಿವೆ. ಸೋವಿಯೆತ್ ಒಕ್ಕೂಟದಲ್ಲಿ ಬೃಹತ್ ದೂರದರ್ಶಕಗಳಿಂದ ಈ ಸಮೀಕ್ಷೆಗಳನ್ನು ನಡೆಸಲಾಗುತ್ತದೆ.

ಅಂಗಾರಕ ಗ್ರಹದ ಮಹಾ ಪ್ರತಿಯೋಗದ ಕಾಲದಲ್ಲಿ— 'ಸಮುದ್ರ'ಪ್ರದೇಶಗಳು ಇರುವ ಗ್ರಹದ ಸಾದೃಶಗಳ, ಅದರಲ್ಲೂ ವಿಶೇಷವಾಗಿ ಅಂಗಾರಕ ಗ್ರಹದ ಮೇಲಿನ 'ನೀಲಿ ಶುಭ್ರತೆಗಳ' ರೇಡಾರ್ ಅನ್ವೇಷಣೆಗೆ ವಿಶೇಷ ಆದ್ಯತೆ ನೀಡಲಾಯಿತು. ಅಂಗಾರಕ ಗ್ರಹದ ಮೇಲಿನ ಖಂಡಗಳು ಮತ್ತು 'ಸಮುದ್ರ'ಗಳು ಇವುಗಳ ನಡುವಿನ ಹೊಳಪಿನ ಹೋಲಿಕೆಯಲ್ಲಿ ಸರಿಸುಮಾರು ನೇಕಡಾ 50ರಷ್ಟು ಕೆಂಪು ಕಿರಣಗಳು ಇವೆ. ಕೆಲವೊಂದು ಕ್ಷಣಗಳಲ್ಲಂತೂ, ಪ್ರತಿಯೋಗವು ದಿನಕ್ಕೆ ಹತ್ತಿರವಾದ ಕಾಲಗಳಲ್ಲಿ ಅಂಗಾರಕ ಗ್ರಹದ ಮೇಲಿನ 'ಸಮುದ್ರ'ಗಳು ನೀಲಿ ಕಿರಣ ಶ್ರೇಣಿಯಲ್ಲಿ ಅತ್ಯಂತ ಸ್ಫುಟವಾಗಿರುತ್ತವೆ. "ನೀಲಿ ಶುಭ್ರತೆಗಳ" ಪ್ರಶ್ನೆಯಂತೂ ತುಂಬಾ ಮಹತ್ವದ್ದಾಗಿದೆ. ಅಂಗಾರಕ ಗ್ರಹದ ಮೇಲೆ ಭಿನ್ನ ಭಿನ್ನ ಅವಧಿಗಳಲ್ಲಿ ಕೆಂಪು ಮತ್ತು ನೀಲಿ ಕಿರಣಗಳಲ್ಲಿ ನಡೆಯುತ್ತಿರುವ ವೈದೃಶ್ಯಗಳ ವಾತಾವರಣ ಮಾಪನಗಳ ಅಧಿಕಗೊಂಡ ಪಾರದರ್ಶಕತೆಯ ಪರಿಣಾಮವು ಇದಾಗಿದ್ದರೆ ಅಂಗಾರಕ ವಾತಾವರಣದ ಪಾರದರ್ಶಕತೆ ಕುರಿತು ಮಾಹಿತಿ ಪಡೆಯಲು ಇದರಿಂದ ಸಾಧ್ಯವಾಗುತ್ತದೆ.

ಅಂಗಾರಕ ಗ್ರಹದ ಬಗ್ಗೆ ನಡೆಸಲಾದ ಇತ್ತೀಚಿನ ಅಧ್ಯಯನಗಳಿಂದ, ಆ ಗ್ರಹದ ಮೇಲಿನ ವಾತಾವರಣದ ಆಳವು ಭೂಮಿಯ ವಾತಾವರಣದ ಆಳಕ್ಕಿಂತ ಅಲ್ಪವಾಗಿದೆಯೆಂದು ಕಂಡುಬಂದಿದೆ. 'ನೀಲಿ ಶುಭ್ರತೆ'ಗಳು ಪ್ರಾಯಶಃ ಅಂಗಾರಕ ವಾತಾವರಣದ ಪಾರದರ್ಶಕತೆಯಲ್ಲಾಗುತ್ತಿರುವ ಬದಲಾವಣೆಗಳ ಪರಿಣಾಮವಾಗಿರಬಹುದು. ನಾವು ಇದೇ ತೀರ್ಮಾನಕ್ಕೆ ಬರುವುದಾದರೆ, ಅಂಗಾರಕದ 'ಸಮುದ್ರ'ಗಳು ಖಂಡಗಳ ಮಟ್ಟದಿಂದ ಅನೇಕ ಕಿಲೋಮೀಟರುಗಳ ಕೆಳಕ್ಕಿವೆಯೆಂದು ಭಾವಿಸಬೇಕಾಗುತ್ತದೆ. ಇತ್ತೀಚಿನ ಸ್ಥಳ—ಲಕ್ಷಣ ಅನ್ವೇಷಣೆಗಳು ಮಾತ್ರ ಈ ಕಲ್ಪನೆಯನ್ನು ದೃಢಪಡಿಸಿಲ್ಲ. ಯಾಕೆಂದರೆ 'ಸಮುದ' ಪ್ರದೇಶಗಳಲ್ಲಿ ತಗ್ಗು ಮತ್ತು ಎತ್ತರದ ಪ್ರದೇಶಗಳೆರಡನ್ನೂ ಕಾಣಲಾಗಿದೆ.

ಹೀಗೆ ಅಂಗಾರಕ ಗ್ರಹದ ಮಹಾ ಪ್ರತಿಯೋಗದ ಕಾಲದಲ್ಲಿ ದೊಡ್ಡ ಪ್ರಮಾಣದಲ್ಲಿ ಸ್ಥಳ ಲಕ್ಷಣ ಪರಿಶೀಲನಾ ಕಾರ್ಯವನ್ನು, ವರ್ಣಪಟಲದ ಭಿನ್ನ ಭಿನ್ನ ಕಿರಣಗಳಲ್ಲಿ ಗ್ರಹದ ಛಾಯಾ ಚಿತ್ರ ತೆಗೆದುಕೊಳ್ಳುವುದು ಮತ್ತು ಕನಿಷ್ಠ 40 ದಿನಗಳ ಅವಧಿಯಲ್ಲಿ, ಎಂದರೆ ಅಂಗಾರಕ ಗ್ರಹದ ಸಂಪೂರ್ಣ ದೃಶ್ಯ ತಿರುವಿನ ಕಾಲದಲ್ಲಿ ಸ್ಪೆಕ್ಟ್ರೊ—ಫೋಟೊಮೆಟ್ರಿಕ್ ಮಾಪನಗಳನ್ನು ಕೈಕೊಳ್ಳಲಾಯಿತು.

ಪ್ರತಿಯೋಗದ ಕಾಲದಲ್ಲಿ ಅಂಗಾರಕ ಗ್ರಹದ ಸಮೀಕ್ಷೆಗೆ ಎಲ್ಲಾ ಪ್ರಯತ್ನಗಳನ್ನೂ ಕೇಂದ್ರೀಕರಿಸಲಾಯಿತು. ಖಗೋಲ ವಿಜ್ಞಾನಿಗಳು ಮಾತ್ರ ಈ ಕಾಲಕ್ಕೆ ಮೊದಲೇ ಹಲವು ಸಮಸ್ಯೆಗಳ ಬಗ್ಗೆ ಕಾರ್ಯವನ್ನಾರಂಭಿಸಿದರು. ಉದಾಹರಣೆಗೆ ವಾತಾವರಣದಲ್ಲಿ ಭೂಮಂಡಲ ಬದಲಾವಣೆಗಳ ಮೇಲೆ ಮತ್ತು ಗ್ರಹದ ಹೊರ ಮೈ ಭಾಗದ ಮೇಲಿನ ಬದಲಾವಣೆಗಳ ಮೇಲೆ ಹತೋಟಿಯಿಟ್ಟುಕೊಳ್ಳಲು ಪ್ರಯತ್ನಿಸಿದರು.

ಧೂಳಿನ ಮೋಡಗಳೇ ಎಂದು ಸ್ಪಷ್ಟವಾಗಿರುವ, ತಥಾಕಥಿತ ಹಳದಿ ಮೋಡಗಳಂತೂ ಖಗೋಲ ಶಾಸ್ತ್ರಜ್ಞರಿಗೆ ತುಂಬಾ ಆಸಕ್ತಿಯ ಸಂಗತಿಗಳಾಗಿವೆ. ಅನ್ವೇಷಣಾ ಕಾರ್ಯಕ್ರಮದಲ್ಲಿ ಹಳದಿ ಮೋಡಗಳ ಸಾಂದ್ರತೆ ಮತ್ತು ಚಟುವಟಿಕೆಗಳ ಮೇಲೆ ದೃಶ್ಯ ಮತ್ತು ಛಾಯಾ ಚಿತ್ರಗ್ರಾಹಕ ನಿಯಂತ್ರಣವನ್ನಿಟ್ಟುಕೊಳ್ಳುವುದು ತುಂಬಾ ಮಹತ್ವದ್ದಾಗಿತ್ತು.

ಸೋವಿಯೆತ್ ಒಕ್ಕೂಟ ಮತ್ತು ಬೇರೆ ದೇಶಗಳಲ್ಲಿ ನಡೆಸಲಾದ ಫೋಟೊಮೆಟ್ರಿಕ್ ಹಾಗೂ ಪೋಲಾರಿಮೆಟ್ರಿಕ್ ಸಮೀಕ್ಷೆಗಳು—ಗ್ರಹದ ಹೊರಮೈ ಭಾಗದಲ್ಲಿ ಫೆರಮ್ ಹೈಡ್ರೊಕ್ಸೈಡ್ (ಖನಿಜ ಲೈಮೊನೈಟ್)ದಿಂದ ಬಣ್ಣಗೊಂಡ ಸಿಲಿಕೇಟುಗಳಿರುವುವೆಂದೂ ಅಂಗಾರಕ ಗ್ರಹಕ್ಕೆ ಇದೇ ಕೆಂಪು ಛಾಯೆಯನ್ನು ನೀಡುತ್ತದೆಯೆಂದೂ ಭಾವಿಸಲಾಗಿದೆ. ಆದರೆ ಈ ದೃಗ್ಗೋಚರ ಸಮೀಕ್ಷೆಯು ಕೇವಲ ಗ್ರಹದ ಹೊರಮೈ ಪದರನ್ನು ಮಾತ್ರವೇ ವ್ಯಾಪಿಸುತ್ತದೆಯೆಂಬುದನ್ನೂ ಒಂದೆರಡು ಮೀಟರುಗಳ ಆಳದಲ್ಲಿಯ ನೆಲ ಎಂಥದೆಂಬ ಬಗ್ಗೆ ಯಾವ ಮಾಹಿತಿಯನ್ನೂ ನೀಡುವುದಿಲ್ಲವೆಂಬುದನ್ನೂ ನಾವು ಗಣನೆಗೆ ತೆಗೆದುಕೊಳ್ಳಬೇಕು. ಪೃಷ್ಠಭಾಗದ ಪದರುಗಳ ರಚನೆಯನ್ನೂ ಅದರ ಗುಣಧರ್ಮಗಳನ್ನೂ, ಅಲ್ಲಿಗೆ ರವಾನಿಸಲಾದ ಸ್ವತಶ್ಚಲಿ ಉಪಕರಣಗಳಿಂದ ಪ್ರತ್ಯಕ್ಷ ಅಳೆದು ನೋಡುವವರೆಗೆ ಮತ್ತು ಅಭ್ಯಸಿಸುವ ವರೆಗೆ ಇಂಥ ಅನ್ವೇಷಣೆಗಳಿಗೆ ರೇಡಿಯೋ ಖಗೋಲ ವೈಜ್ಞಾನಿಕ ಸಮೀಕ್ಷೆಗಳು ಮಾತ್ರವೇ ಸಾಧನಗಳಾಗಿವೆ.

—ಶ್ರೀ ಇವಾನ್ ಕೋವಲ್.

ನಲ್ ಪ್ರೊಸೀಜರ್ ಕೋಡಿನ 164ನೇ ವಿಧಿಯಂತೆ ರಿಕಾರ್ಡು ಮಾಡಿಕೊಳ್ಳಲಾಯಿತು. ಕೊಲೆಯ ಕೇಸಿನಲ್ಲಿ, ಮನೋರಮೆಯ ಹೆಸರು ಸಾಕ್ಷಿಗಳ ಪಟ್ಟಿಯಲ್ಲಿ ಸೇರಿತ್ತು. ತನ್ನ ವಿಚಾರಣೆಯ ಸರದಿಗಾಗಿ ಆಕೆ ಕೆಂಪು ಕೋಟೆಯ ಮುಂದು ಕಾದು ನಿಂತಿದ್ದಳು ಆದರೆ ಸರಕಾರಿ ವಕೀಲರಾದ ಶ್ರೀ ಸಿ ಕೆ. ದಪ್ತರಿ—ಅನಂತರ ಭಾರತದ ಅಟರ್ನಿ ಜನರಲ್—ಅವಳನ್ನು ಅನಗತ್ಯವೆಂದು ವಿಚಾರಿಸದೆ ಕೈ ಬಿಟ್ಟರು.

ತನ್ನ ಪ್ರಿಯಕರನ ವಿರುದ್ಧ ಸಾಕ್ಷಿ ಹೇಳುವ ಇಕ್ಕಟ್ಟಿನಿಂದ ಮನೋರಮೆ ಉಳಿದುಕೊಂಡಳು. ಗಾಂಧಿಜಿ ಕೊಲೆಯ ವಿಚಾರಣೆಯ ಕಾಲದಲ್ಲಿ ಮನೋರಮೆ ಮಗುವೊಂದರ ತಾಯಿ. ಈ ಅವಿವಾಹಿತ ಕನ್ಯೆಯ ಹೊಟ್ಟೆಯಲ್ಲಿ ಹುಟ್ಟಿದ ಕಂದನ ತಂದೆ—ಆಪ್ಟೆ.

ಈ ಕ್ರಿಶ್ಚಿಯನ್ ಹುಡುಗಿಯ ನೈಸೋಂಕಿನಿಂದ ಹಿಂದುತ್ವಕ್ಕೆ ಮೈಲಿಗೆಯೂ ಆಗಲಿಲ್ಲ. ಆರ್ಯ ಪಥಿಕಾಶ್ರಮದ ಮ್ಯಾನೇಜರ್ ಗಯಾಪ್ರಸಾದ ಹೋಟೆಲಿನ ದಾಖಲಾತಿಗಳನ್ನು ಹಾಜರು ಪಡಿಸಿ ಆಪ್ಟೆ–ಮನೋರಮೆ ಅವರ ಹೋಟೆಲಿನಲ್ಲಿ ಇಳಿದುಕೊಂಡಿದ್ದ ವಿವರವನ್ನು ಕೋರ್ಟಿಗೆ ತಿಳಿಸಿದ. ಗಯಾ ಪ್ರಸಾದ ಕೊಲೆ ಮೊಕದ್ದಮೆಯಲ್ಲಿ ಪ್ರಾಸಿಕ್ಯೂಷನ್ ಪರ ವಿಚಾರಣೆ ಮಾಡಿದ 10ನೆಯ ಸಾಕ್ಷಿ.

(ಆಧಾರಿತ)

●●

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೊಟೋ ಹೌಸ್ PHONE: 3131

ಆಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

Edited, Printed & Published by K. H. Shetty at the Navayuga Press, Udipi. S. India.

ಸ್ಥಾಪಕರು :
ದಿ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಸಂಪುಟ ೫೧
ಸಂಚಿಕೆ ೩

Vol. 51
No. 3

ಉಡುಪಿ, ೧೬—೯—೧೯೭೧

ವಿದರ್ಭ ಚಳುವಳಿಯಿಂದ

ಚವನ ಭಕ್ತರಿಗೆ ಸಿಂಹಾಸನ ಪ್ರಾಪ್ತಿ?

ಆಂಧ್ರಪ್ರದೇಶದಲ್ಲಿ ಭುಗಿಲೆದ್ದಿದ್ದ ಪ್ರತ್ಯೇಕ ತೆಲಂಗಾಣ ರಾಜ್ಯ ಬೇಡಿಕೆಯೀಗ ತುಸು ತಣ್ಣಗಾಗಿದೆ. ಮುಖ್ಯ ಮಂತ್ರಿ ಡಾ| ಬ್ರಹ್ಮಾನಂದ ರೆಡ್ಡಿ ಮತ್ತು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ತೆಲಂಗಾಣ ನಾಯಕರೊಡನೆ ಯಾವುದೋ ಒಂದು ವಿಧದ ಒಡಂಬಡಿಕೆ ಮಾಡಿಕೊಳ್ಳಲು ಮನಸ್ಸು ಮಾಡಿದಂತಿದೆ. ಆದರೆ, ನಿಜವಾದ ಒಪ್ಪಂದವಾಗ ಬೇಕಾದದ್ದು ಬ್ರಹ್ಮಾನಂದ ರೆಡ್ಡಿ ಮತ್ತು ಚೆನ್ನಾರೆಡ್ಡಿಯವರ ನಡುವೆ. ಪ್ರಧಾನಿ ಗಾಂಧಿಯವರು ಇವರ ಮಧ್ಯವರ್ತಿಗಳು. ಆದುದರಿಂದಲೇ ಅವರು ರೆಡ್ಡಿದ್ವಯರನ್ನು ಪ್ರತಿ ಪ್ರತ್ಯೇಕವಾಗಿ ಭೇಟಿಮಾಡಿ ಮಾತುಕತೆಯಾಡುತ್ತಿದ್ದಾರೆ. ರಾಜ್ಯದಲ್ಲಿ ತೆಲಂಗಾಣ ಪ್ರಜಾಸಮಿತಿಯು ಇಂಡಿಕೇಟಿಗೆ ಲೋಕಸಭಾ ಮಧ್ಯಾವಧಿ ಚುನಾವಣೆಯ ವೇಳೆ ತೀವ್ರ ಪ್ರತಿರೋಧ ಒಡ್ಡಿದ್ದರಿಂದ, ಮುಂದಿನ ಜನವರಿ-ಫೆಬ್ರವರಿಯಲ್ಲಿ ರಾಜ್ಯವಿಧಾನ ಸಭೆಗೆ ಚುನಾವಣೆಗಳು ನಡೆಯಲಿದ್ದು ಈ ವೇಳೆ ತಮ್ಮ ಬೇರು ಕೊಂಕದಂತೆ ನೋಡಿಕೊಳ್ಳ ಬೇಕಾದ್ದರಿಂದ ಈ ಮಾತುಕತೆಗಳು ಪ್ರಧಾನಿ ಗಾಂಧಿಗೂ ಮುಖ್ಯಮಂತ್ರಿ ರೆಡ್ಡಿಗೂ ಅನಿವಾರ್ಯವೇ ಆಗಿವೆ. ಒಡಂಬಡಿಕೆ-ತತ್ಪೂರ್ವ ಮಾತುಕತೆಯ ನೆಪದಲ್ಲಿ ಶ್ರೀಮತಿ ಗಾಂಧಿ ಎರಡು ಹಣ್ಣು ಉದುರಿಸ ಹೊರಟಂತಿದೆ. ಮೊದಲನೆಯದಾಗಿ, ತನ್ನ ಪಕ್ಷದ ಬೇರನ್ನು ಮತ್ತಷ್ಟು ಆತಲಕ್ಕೆ ಇಳಿಸುವುದು ಮತ್ತೆರಡನೆಯದಾಗಿ ಡಾ| ಕಾಸು ಬ್ರಹ್ಮಾನಂದ ರೆಡ್ಡಿಯನ್ನು ಗದ್ದುಗೆಯಿಂದ ಇಳಿಸುವುದು.

ಆಂಧ್ರದ ರಾಜ್ಯಕೀಯ ಹಾಗೆ ನಡೆಯುತ್ತಿದ್ದರೆ, ಮಹಾರಾಷ್ಟ್ರದ ರಾಜ್ಯಕೀಯ ಬೇರೊಂದು ದಾರಿ ತುಳಿಯ ಹತ್ತಿದೆ. ಪ್ರತ್ಯೇಕ ವಿದರ್ಭರಾಜ್ಯದ ಬೇಡಿಕೆ ಇಂದು ನಿನ್ನೆಯದಲ್ಲ. ೧೯೫೬ರಲ್ಲಿ ರಾಜ್ಯ ಪುನರ್ಘಟನೆಗೆ ಮೊದಲೇ ಇದು ಮುಂದೆ ಬಂದಿತ್ತು. ಆದರೆ, ಪುನರ್ಘಟನೆಯ ಮುಖ್ಯತತ್ವ ಭಾಷೆಯಾದದ್ದರಿಂದ, ಮತ್ತು ಪ್ರತ್ಯೇಕ ವಿದರ್ಭರಾಜ್ಯವು ವ್ಯವಹಾರ್ಯವಲ್ಲವೆಂಬುದ್ದರಿಂದ ಅಂದು ಅದು ತಿರಸ್ಕೃತವಾಯ್ತು. ಆದರೆ, ಅಂದಿನಿಂದಲೂ ಈ ಬೇಡಿಕೆ ಆಮೆಯಂತೆ ಆಗಾಗ ತಲೆಮೇಲೆ ಹಾಕುತ್ತದೆ, ಆ ಮೇಲೆ ನೀರಲ್ಲಿ ಮುಳುಗಿ ಅಗೋಚರವಾಗುತ್ತದೆ.

೧೯೫೬ರ ನಂತರ ಹಲವು ರಾಜ್ಯಗಳು ಮತ್ತೆ ವಿಭಜನೆಗೊಂಡುವು. ಕೆಲವು ಕೇಂದ್ರೀಯಾಡಳಿತ ಪ್ರದೇಶಗಳು ರಾಜ್ಯದ ಸ್ಥಾನಮಾನ ಪಡೆಯಲು ಮುಂದಾದುವು. ದ್ವಿಭಾಷಾ ರಾಜ್ಯ ಬೊಂಬಾಯಿಯೇ ಎರಡು ಹೋಳಾಯ್ತು. ವಿದರ್ಭ ಮಹಾರಾಷ್ಟ್ರದಲ್ಲೇ ಉಳಿಯಿತು. ಅಸ್ಸಾಮುರಾಜ್ಯವು ತುಂಡು ತುಂಡಾಯ್ತು. ರಾಜ್ಯದೊಳಗೆ ಮತ್ತೆ ರಾಜ್ಯಗಳು ನಿರ್ಮಾಣವಾದುವು. ಆದರೂ ವಿದರ್ಭಕ್ಕೆ ಪ್ರತ್ಯೇಕ ರಾಜ್ಯದ ಕೇಂದ್ರಾಡಳಿತ ಪ್ರದೇಶದ ಅಥವಾ ರಾಜ್ಯದೊಳಗಣ ನೊಟ್ಟೆ ರಾಜ್ಯದ ಸ್ಥಾನಮಾನಗಳು ಇನ್ನೂ ಲಭ್ಯವಾಗಲಿಲ್ಲ. ಆದುದರಿಂದಲೇ ಅಲ್ಲಿ ಬಿರುಗಾಳಿ ಬೀಸಿದಂತೆ ಚಳುವಳಿ ಆಗಾಗ ಎದ್ದು ಹತ್ತಾರು ನರಮೇಧಗಳು ನಡೆದು ಮತ್ತೆ ಶಾಂತವಾಗುತ್ತದೆ.

ಪ್ರತ್ಯೇಕ ವಿದರ್ಭದ ಬೇಡಿಕೆಯನ್ನು ಗಾಳಿಯಲ್ಲಿ ತೂರಿ ಬಿಡಲು ಮುಖ್ಯಮಂತ್ರಿ ವಿ ಪಿ ನಾಯಕರು ಕೆಲವಾರು ಹುಸಿಗುಂಡು ಹರಿಸಿದ್ದರು. ವಿಧಾನ ಸಭಾಧಿವೇಶನವನ್ನು ವರ್ಷದಲ್ಲೊಂದು ಬಾರಿ ನಾಗಪುರದಲ್ಲಿ ನಡೆಯುವಂತೆ ವ್ಯವಸ್ಥೆ ಮಾಡಿದ್ದು ಇವುಗಳಲ್ಲಿ ಒಂದು ವಿದರ್ಭದ ಶಾಸಕರಿಗೆ ಸಚಿವ ಸಂಪುಟದಲ್ಲಿ ಸೂಕ್ತ ಪ್ರಾತಿನಿಧ್ಯವನ್ನು ಅವರು ಎಂದೂ ತಪ್ಪಿಸಲಿಲ್ಲ. ತತ್ಪರ ರಾಜ್ಯಕಾರಣಿಗಳೇ ಎಲ್ಲ ಅಶಾಂತಿ-ಗಲಭೆಗಳಿಗೆ ಕಾರಣರೆಂಬುವದನ್ನು ಅವರೆಂದೂ ಮರೆತವರಲ್ಲ. ಅದೆಷ್ಟು ಎಚ್ಚರಿಕೆ ವಹಿಸಿದರೂ ಕೆಲವೊಮ್ಮೆ ಅವರ ಹೆಜ್ಜೆ ತಾಳ ತಪ್ಪಿ ಗಡಿಬಿಡಿಯಾಗುವುದುಂಟು.

ಮೊನ್ನೆ ನಾಗಪುರದಲ್ಲಿ ಅಶಾಂತಿಯೇ ಅಶಾಂತಿ, ಗೊಂದಲವೇ ಗೊಂದಲ ಪ್ರತ್ಯೇಕ ವಿದರ್ಭ ರಾಜ್ಯದ ಬೇಡಿಕೆಗಾರರಿಗೆ ಅಂದು ಹೊಸ ಗರಿ ಮೂಡಿದಂತಿತ್ತು. ಹೇಳಿ ಕೇಳಿ ವಿಧಾನ ಸಭಾಚುನಾವಣೆಗಳು ಹತ್ತಿರಬಂದುವು. ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಲು ವಿವಿಧ ಪಕ್ಷಗಳು ಈಗಿಂದೀಗಲೇ ತಯಾರು ಮಾಡತೊಡಗುವುದು ಅಸ್ವಾಭಾವಿಕವಲ್ಲ. ಅದರಂತೆ ಪ್ರತ್ಯೇಕ ಮಹಾವಿದರ್ಭ ರಾಜ್ಯ ಸಂಘರ್ಷ ಸಮಿತಿಯು 'ನಾಗಪುರ ಬಂದ್'ಗೆ ಕರೆನೀಡಿತು. 'ಬಂದ್' ಯಶಸ್ವಿಯಾಯಿತೇ ಇಲ್ಲವೇ ಎಂಬುದು ತಿಳಿಯುವ ಕೆಲವೊಂದು ಅಂಶಗಳಿವೆ. ಅಂಗಡಿ-ಹೋಟೆಲು-ಶಾಲೆ-ಕಾಲೇಜುಗಳ ಮುಚ್ಚುವಿಕೆ, ಮೆರವಣಿಗೆ, ಘೋಷಣೆ, ಘರ್ಷಣೆ-ಪೋಲೀಸರ ಮಧ್ಯ ಪ್ರವೇಶ- ಚಳುವಳಿಗಾರ-ಪೋಲೀಸರ ನಡುವೆ ಹೋರಾಟ- ಲಾಠಿ ಚಾರ್ಜು-- ಅಶ್ರುವಾಯು ಪ್ರಯೋಗ— ಗೋಲಿಬಾರ್ — ಗಾಯ- ಮೃತ್ಯು— ಚದರಿಕೆ- ನಿಷೇಧಾಜ್ಞೆ- ಕರ್ಫ್ಯೂ... ಹೀಗೆ ಈ ಪಟ್ಟಿ ಮುಂದರಿಯುತ್ತದೆ. ಈ ಅಂಶಗಳನ್ನು ಗಮನದಲ್ಲಿಟ್ಟರೆ, 'ನಾಗಪುರ ಬಂದ್' ಪೂರ್ಣ ಯಶಗಳಿಸಿದೆಯೆನ್ನಲು ಸಂದೇಹವಿಲ್ಲ. ವಿಧಾನ ಸಭಾಧಿವೇಶನವೂ ಸದ್ಯ ನಾಗಪುರದಲ್ಲೇ ನಡೆಯುತ್ತಿರುವುದರಿಂದ ಈ ಗೋಲಿಬಾರಿನ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ವಿರೋಧಿಪಕ್ಷಗಳು ಪಟ್ಟು ಹಿಡಿಯ ಬಹುದು. ಮುಖ್ಯಮಂತ್ರಿಯವರೂ ತನ್ನ ಸ್ಥಾನ ಭದ್ರತೆಯ ಬಗ್ಗೆ ಉದಾರ ನೀತಿಯನ್ನೂ ಅನುಸರಿಸ ಬಹುದು.

ಇದೇ ಬಗೆಯ ವಿದರ್ಭ ಚಳುವಳಿ ಈ ಮೊದಲೂ ಹಲವು ಬಾರಿ ನಡೆದಿದೆ. ಇದೂ ಆ ಮಾಲಿಕೆಯ ಮತ್ತೊಂದು ಹೂವಾಗಿ ಹೋಗುವ ಸಾಧ್ಯತೆಯಿದೆ. ಚಳುವಳಿಯಲ್ಲಿ ಸೇರಿಕೊಂಡವರಲ್ಲಿ ಹಲವರು ಮಾಜಿ ಶಾಸಕರೂ ಇದ್ದಾರೆ. ಮಾಜಿ ಸಂಸತ್ಸದಸ್ಯ ಶ್ರೀ ನರೇಂದ್ರ ದೇವ್‌ಘರ್, ಹಾಲಿ ಎಂಪಿ ಶ್ರೀ ಜಾಂಬವಂತರಾವ್ ಧೋತೆ ಮೊದಲಾದವರು ಗಣ್ಯರು. ವಿಧ್ವಂಸಕ ಕೃತ್ಯಗಳೂ ಚಳುವಳಿಗಾರರಿಂದ ನಿರಾತಂಕವಾಗಿ ನಡೆದು ಬಂದಿವೆ. ಇದರ ಹಿನ್ನೆಲೆಯೇನು? ಪ್ರತ್ಯೇಕ ವಿದರ್ಭವೇ ಈ ಚಳುವಳಿಗಾರರ ಅಂತಿಮ ಗುರಿಯಾಗಿದ್ದರೆ, ಚಳುವಳಿಯು ನಿರಂತರವಾಗಿ ನಡೆಯ ಬಹುದಿತ್ತು ಎಂದೋ ಗುರಿ ಸೇರಬಹುದಿತ್ತು. ಆದರೆ, ಈ ಚಳುವಳಿಯು ಕಳೆದ ಹದಿನೈದು ವರ್ಷಗಳಿಂದಲೂ ಕೊಂಡಿ ತಪ್ಪಿದ ಸಂಕಲೆಯಂತೆ ನಡೆದು ಬರುತ್ತಿವೆ. ಆದುದರಿಂದ ಮುಂದಿನ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡೇ ಇದು ಆರಂಭವಾಗಿದೆಂಬುದು ನಿಸ್ಸಂದೇಹ.

ಪ್ರಧಾನಿ ಗಾಂಧಿಯವರೂ ಈ ಚಳುವಳಿಯಿಂದ ಲಾಭ ಪಡೆಯಲೆಳಸಿದರೆ ಆಶ್ಚರ್ಯವಿಲ್ಲ. ಮಹಾರಾಷ್ಟ್ರದ ಸಿಂಹಾಸನದಲ್ಲಿ ಶ್ರೀ ವಿ. ಪಿ. ನಾಯಕರು ರಾರಾಜಿಸುವುದು ಅವರಿಗೆ ಬೇಕಾಗಿಲ್ಲ. ಅಂದರೆ, ಶ್ರೀ ನಾಯಕರು ಶ್ರೀಮತಿ ಗಾಂಧಿಯ ವಿರೋಧಿಗಳೆಂದು ಅರ್ಥವಲ್ಲ. ಅವರು ಶ್ರೀ ಚವನರ ಪರಮ ಭಕ್ತರು ಎಂಬುದಷ್ಟೇ ಶ್ರೀಮತಿ ಗಾಂಧಿಗೆ ಅಸಮಾಧಾನ. ಪ್ಲಾಸ್ಟಿಕ್ ಛತ್ರಪತಿಯಾಗಿ ತನ್ನಿಂದ ರೂಪಾಂತರ ಹೊಂದಿದ ಚವನರನ್ನೇ ಶ್ರೀ ನಾಯಕರು ಇನ್ನೂ ಇನ್ನೂ ಆರಾಧಿಸುವುದನ್ನು ಬಿಟ್ಟು ತನ್ನನ್ನೇ ತದೇಕ ಚಿತ್ತದಿಂದ ಭಜಿಸಬೇಕೆಂದವರು ಬಯಸುತ್ತಾರೆ. ಮುರಾರ್ಜಿ ಭಾಯಿಯಿಂದ ವಾರಕಲಿತ ಚವನರು ಅದೇ ಗುರುವಿಗೆ ತಿರುಮಂತ್ರ ನೀಡಲು ಹಿಂಜರಿಯುವಾಗ ನಾಯಕರೇಕೆ ಮೀನಮೇಷವೆಣಿಸುತ್ತಿದ್ದಾರೆ ಎಂಬುದು ಆಕೆಗೆ ತಿಳಿಯದು. ಆದುದರಿಂದಲೇ ಆಕೆ ಚವನರನ್ನೂ ನಂಬುವುದಿಲ್ಲ, ನಾಯಕರಲ್ಲೂ ವಿಶ್ವಾಸವಿಡುವುದಿಲ್ಲ ಸಂರಕ್ಷಣಾ ಮಂತ್ರಿಯೆಂದು ದಿಲ್ಲಿಗೆ ಹಾರಿ ಹೋದ ಚವನರನ್ನು ಹಲವು ಪ್ರಮುಖ ಖಾತೆಗಳಲ್ಲಿ ಸುಳಿದಾಡಿಸಿ, ಈಗ 'ಯಥಾ ಸ್ಥಾನಂ ಉದ್ವಾಸಯಾಮಿ' ಎನ್ನತೊಡಗಿದ್ದಾರೆ.

ಆದುದರಿಂದ ಈ ಬಾರಿ ಆರಂಭವಾದ ವಿದರ್ಭ ಚಳುವಳಿಯನ್ನು ಕ್ಷಿಪ್ರದಲ್ಲಿ ಅದುಮಲು ನಾಯಕರು ಹಿಂದು ಮುಂದು ಮಾಡಿದರೆ, ಇದು ಅವರಿಗೇ ಮುಳುವಾದೀತು. ತನ್ನನ್ನು ನಂಬದವರಿಗೆ ಇತ್ತ ಪ್ರಹಾರವನ್ನೇ ನಂಬಿದಂತೆ ತೋರಿಸಿದವರ ಮೇಲೂ ಇಡುವುದು ಶ್ರೀಮತಿ ಗಾಂಧಿಯ ಜಾಯಮಾನ. ಆದುದರಿಂದಲೇ ಮುಂದಿನ ಆರು ತಿಂಗಳುಗಳು ಚವನ—ನಾಯಕರಿಗೆ ಸಂಕ್ರಾಂತಿ ಕಾಲ. ಈ ವೇಳೆ ಯಾರ ಬೇಳೆ ಬೇಯುವುದೋ ಕಾದು ನೋಡ ಬೇಕಷ್ಟೆ.

● ●

ಗುಣ ಹೀನರ ಸಿರಿಯಿಂದಂ| ಗುಣಿಗಳ ಬಡತನವೆ ಲೇಸು ಚೂಡಾರತ್ನಾ.

○ ○ ○

ಕೆಲ ಸಮಯ ದೈವೇಚ್ಛೆಯಿಂದ ವಿಷವೂ ಅಮೃತವಾಗ ಬಹುದು; ಅಮೃತವೂ ವಿಷವಾಗ ಬಹುದು.

○ ○ ○

ತುಂಬಿದುದು ತುಳುಕದು ನೋಡಾ|
ನಂಬಿದುದು ಸಂದೇಹಿಸದು ನೋಡಾ|

○ ○ ○

ಲೋಕ ವನನ್ನು ವಿಜಯಿಸುವೆನ್ನುವನೋ ಅದು ವಿಜಯವಲ್ಲ, ಏಕೆಂದರೆ ಅದು ಇನ್ನಷ್ಟು ದ್ವೇಷವನ್ನುಂಟು ಮಾಡುತ್ತದೆ.

○ ○ ○

ದೈವದೂರರು ಧರ್ಮದೂರರು.

○ ○ ○

'ಗಾಂಧಿಜಿಯ ಕೊಲೆ'

(ಭಾಗ ಎರಡು)

ಬರೆದವರು— ಶ್ರೀ ಬಿ. ಕೃಷ್ಣ ಭಟ್ ಭದ್ರಾವತಿ

ಗಾಂಧಿಜಿ ಕೊಲೆ ಮೊಕದ್ದಮೆಯಲ್ಲಿ ಆಪಾದಿತರಾಗಿದ್ದ— ಹೈಕೋರ್ಟಿನ ತೀರ್ಪಿನಂತೆ ಬಿಡುಗಡೆ ಹೊಂದಿದ–ದತ್ತಾತ್ರೇಯ ಸದಾಶಿವ ಪರಚುರೆಯವರನ್ನು ಫೆಬ್ರವರಿ 3ರಂದು ಬಂಧಿಸಿದರು 18 2.48ರಂದು ಅವರನ್ನು ಲಷ್ಕರಿನ ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟರ ಮುಂದು ಹಾಜರುಪಡಿಸಿದರು ಅವರ ಮುಂದೆ ಡಾ. ಪರಚುರೆ ತಪ್ಪೊಪ್ಪಿಗೆಯ ಹೇಳಿಕೆಕೊಟ್ಟರು. ಆ ಹೇಳಿಕೆಯನ್ನು ವಿಚಾರಣೆಯ ಕಾಲದಲ್ಲಿ ಒಂದು ದಾಖಲೆಯಾಗಿ ಅಂಗೀಕರಿಸಲಾಯಿತು. ಅದರ ಕ್ರಮ ಸಂಖ್ಯೆ— Ex. 886

ಹೇಳಿಕೆಯನ್ನು ಬರದುಕೊಳ್ಳುವಮೊದಲು ಪ್ರಥಮ ನ್ಯಾಯಾಧೀಶ ಶ್ರೀ ಬಿ ಆರ್. ಅತುಲ್, ಅವರಿಗೆ ಕೆಲವು ಪ್ರಶ್ನೆಗಳನ್ನು ಹಾಕಿದರು. ಹಾಗೆ ಮಾಡದೆ ಹೋದರೆ, ತಪ್ಪೊಪ್ಪಿಗೆಯ ಹೇಳಿಕೆಯ ಬೆಲೆತಗ್ಗುತ್ತದೆ ನ್ಯಾಯಸ್ಥಾನಗಳು ಅಂತಹ ಹೇಳಿಕೆಗಳನ್ನು ಬಹಳ ಅನುಮಾನದಿಂದ ಕಾಣುತ್ತವೆ.

ದತ್ತಾತ್ರೇಯ ಸದಾಶಿವ ಪರಚುರೆ ವೃತ್ತಿಯಿಂದ ವೈದ್ಯರು. ತಮ್ಮ ಸಮ್ಮುಖಕ್ಕೆ ಕರೆದು ತಂದ ಪರಚುರೆಯವರಿಗೆ ನ್ಯಾಯಾಧೀಶರು ಹಾಕಿದ ಪ್ರಶ್ನೆ, ಅದಕ್ಕೆ ಅವರಿಂದ ಬಂದ ಉತ್ತರ ಹೀಗಿದೆ

ಪ್ರಶ್ನೆ— ನೀವು ಎಷ್ಟು ದಿನದಿಂದ ಬಂಧನದಲ್ಲಿರುವಿರಿ?

ಉ— 3 2 48ರಿಂದ ನಾನು ಪೋಲಿಸರ ವಶದಲ್ಲಿರುವೆ

ಪ್ರಶ್ನೆ— ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳಲು ಸಿದ್ಧರಿರುವಿರಿ ಎಂದು ಕೇಳಿದೆ

ಉ— ಹೌದು

ಪ್ರಶ್ನೆ—ನೀವೇಕೆ ತಪ್ಪೊಪ್ಪಿ ಕೊಳ್ಳುತ್ತೀರಿ?

ಉ— ನನ್ನ ಮತ್ತು ನನ್ನ ಸಹಾಯಕರ ನಿಲುವನ್ನು ನಿಚ್ಚಳಗೊಳಿಸಲು

ಪ್ರಶ್ನೆ— ನೀವು ವಹಿಸಿದ ಪಾತ್ರದ ಬಗ್ಗೆ ನಿಮಗೆ ನಿಜಕ್ಕೂ ಬೇಸರವಾಗಿದೆಯೇ? ಈ ಹೇಳಿಕೆ ಕೊಡುವುದರಿಂದ ನಿಮಗೆ ಒಳ್ಳೆಯದಾಗುತ್ತದೆ ಎಂಬ ಭರವಸ ಕೊಟ್ಟಿದ್ದಾರೆಯೇ?

ಉ— ನನಗೆ ಯಾರೂ, ಯಾವ ಆಶ್ವಾಸನೆಯನ್ನೂ ಕೊಟ್ಟಿಲ್ಲ ಆಗಲೇ ತಿಳಿಸಿದ ಹಾಗೆ ನನಗ ನನ್ನ ನಿಲುವನ್ನು ಸ್ಪಷ್ಟಪಡಿಸಬೇಕಾಗಿದೆ

ಪ್ರಶ್ನೆ— ಪೋಲಿಸರ ಮೇಲೆ ನಿಮ್ಮದೇನಾದರೂ ದೂರುಗಳಿವೆಯೇ? ಹೆದರಿಸಿದರೆ? ಹಿಂಸ ಕೊಟ್ಟರೆ? ಏನಾದರೂ ಆಸೆ ಹಚ್ಚಿದರ—?

ಉ—ಇಲ್ಲ ಅವರು ನನ್ನನ್ನು ಹಿಂಸಿಸಿಲ್ಲ ಆಮಿಷವನ್ನು ತೋರಿಸಿಲ್ಲ.

ಪ್ರಶ್ನೆ—ಪರಚುರೆ, ನಿಮಗೆ ನಾನು ಯಾರೆಂಬುದು ತಿಳಿದಿದೆಯೋ —ಇಲ್ಲವೊ? ಇದರೆ ತಿಳಿಸ ಬೇಕಾದ್ದು ನನ್ನ ಕರ್ತವ್ಯ. ನಾನು ಇಲ್ಲಿಯ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನೀವು ಹೇಳಿಕೆ ಕೊಡಬೇಕೆಂಬ ನಿಯಮವಿಲ್ಲ ಅನ್ಯರ ಬಲವಂತಕ್ಕೆ ನೀವು ಬಾಗ ಬೇಕಾಗಿಯೂ ಇಲ್ಲ. ನೀವು ಈಗ ಕೊಡುವ ಹೇಳಿಕೆಯನ್ನು, ನಾಳೆ ನಿಮ್ಮ ಮೇಲೆ ಕೋರ್ಟಿನಲ್ಲಿ ಬಳಸಲಾಗುವುದೆಂಬುದು ನಿಮಗೆ ಗೊತ್ತಿದೆಯೇ?

ಉತ್ತರ—ಗೊತ್ತಿದೆ. ಸ್ವ ಇಚ್ಛೆಯಿಂದ ಈ ಹೇಳಿಕೆ ಕೊಡುತಿದ್ದೇನೆ. ಅದನ್ನು ನಾಳೆ ನನ್ನ ವಿರುದ್ಧ ಧಾರಾಳವಾಗಿ ಉಪಯೋಗಿಸ ಬಹುದು ಅಂಜಿಕೆಯಿಂದಾಗಲೀ, ಪ್ರಚೋದನೆಯಿಂದಾಗಲೀ ನಾನು ಹೇಳಲೊಪ್ಪಿಲ್ಲ. ನೀವು ನನ್ನ ಹೇಳಿಕೆಯನ್ನು ಬರೆದುಕೊಳ್ಳಬಹುದು.

ಇದು ಅವರೊಳಗೆ ನಡೆದ ಸಂಭಾಷಣೆ. ಮ್ಯಾಜಿಸ್ಟ್ರೇಟರ ಮುಂದು ಪರಚುರೆ ಕೊಟ್ಟ ಹೇಳಿಕೆ ಇಂತಿದೆ —

'ನಾನೊಬ್ಬ ಖಾಸಗಿ ವೈದ್ಯ. 1939 ರಿಂದಲೂ ಗ್ವಾಲಿಯರಿನಲ್ಲಿ ಈ ವೃತ್ತಿಯಿಂದ ಜೀವನ ನಡೆಸುತಿದ್ದೇನೆ. ಆದಕ್ಕೂ ಮೊದಲು ಸರಕಾರದ ವೈದ್ಯ ಖಾತೆಯಲ್ಲಿ ಕೆಲಸದಲ್ಲಿದ್ದೆ ನೌಕರಿಯಲ್ಲಿದ್ದಾಗ ಖಾಯಿಲೆ ಬಿದ್ದೆ ರಜೆ ಕೊಡಲು ಮೇಲಧಿಕಾರಿಗಳನ್ನು ಪ್ರಾರ್ಥಿಸಿದೆ ಆದರೆ ರಜೆ ಮಂಜೂರಾಗಲಿಲ್ಲ ಅದನ್ನು ತಿಳಿದೂ ನಾನು ಕೆಲಸದ ಜಾಗವನ್ನು ಬಿಟ್ಟುಬಂದೆ ಈ ಕಾರಣಕ್ಕಾಗಿ ನನ್ನನ್ನು ಕೆಲಸದಿಂದ ತೆಗೆದು ಹಾಕಿದರು

1939ರಿಂದಲೂ ಹಿಂದೂ ಮಹಾಸಭೆಯ ಕೆಲಸಗಾರ ನಾನು ಗ್ವಾಲಿಯರಿನಲ್ಲಿ ಹಿಂದೂ ಮಹಾಸಭೆಯ ರಾಜ್ಯ ಶಾಖೆಯನ್ನು ಸ್ಥಾಪಿಸಿದೆ. ನಾಥೂರಾಮ ಗೋಡ್ಸೆಯನ್ನು 1941ರಿಂದ ಬಲ್ಲೆ. 1939ರ ಸುಮಾರಿಗೇ ಅವರ ಹೆಸರು ಕೇಳಿದ್ದೆ ನಾನು ಸಭೆಯ ಸಂಬಂಧ, ಪುಣೆ–ಮುಂಬಯಿಗಳಿಗೆ ಹೋಗಿ ಬಂದು ಮಾಡುತಿದ್ದೆ– ನಾನು ಕಟ್ಟಿದ ಹಿಂದೂ ರಾಷ್ಟ್ರ ಸೇನೆಯನ್ನು,ಹಿಂದೂರಾಷ್ಟ್ರದಲದೊಡನೆವಿಲೀನಗೊಳಿಸುವ ಉದ್ದಿಶ್ಯ, ಅಲ್ಲಿಯ ಕಾರ್ಯಕರ್ತರೊಡನೆ ಸಂಧಾನ ನಡೆಸಲು ಹೋಗುತಿದ್ದೆ. ಪುಣೆಗೆ ಹೋದಾಗಲೆಲ್ಲ ನಾನು ಗೋಡ್ಸೆಯನ್ನು ಕಂಡು ಚರ್ಚಿಸಿದ್ದುಂಟು ಆದರೆ ವಿಲೀನೀಕರಣ ಸಾಧ್ಯವಾಗಲಿಲ್ಲ. ನಮ್ಮೊಳಗೆ ಹೊಂದಾಣಿಕೆಯಾಗಲಿಲ್ಲ. ಪ್ರಯತ್ನವನ್ನು ಅರ್ಧಕ್ಕೇ ಕೈ ಬಿಟ್ಟೆವು. ಅಂದು ಮೊದಲುಗೊಂಡು, ನನ್ನ–ಗೋಡ್ಸೆ ಸಂಬಂಧ ಅಷ್ಟಕ್ಕಷ್ಟೆ ಉಳಿಯಿತು.

27–1–48ರ ರಾತ್ರಿ ಹನ್ನೊಂದರ ಸುಮಾರಿಗೆ ನಾನು ನನ್ನ ಕೆಲಸ ಮುಗಿಸಿ ಮಲಗಲೆಂದು ಮಹಡಿಯನ್ನೇರಿದೆ. ಇನ್ನೂ ನಿದ್ದೆ ಹತ್ತಿರಲಿಲ್ಲ. ಅಷ್ಟರಲ್ಲಿ ನನ್ನ ಹಿರಿಯ ಮಗ ನೀಲಕಂಠ ಯಾರೋ ಇಬ್ಬರು ಅತಿಥಿಗಳು ಬಂದಿದ್ದಾರೆ ಎಂದು ತಿಳಿಸಿದ. ಬಾಗಿಲು ತೆಗೆದು ಅವರನ್ನು ಒಳಕ್ಕೆ ಕರೆ. ಅಷ್ಟರಲ್ಲಿ ಕೆಳಕ್ಕೆ ಬರುವುದಾಗಿ ತಿಳಿಸಿದೆ. ನಾನು ಮಹಡಿ ಇಳಿದು ಬರುವುದರಲ್ಲಿ ಅತಿಥಿಗಳು ಒಳ ಮನೆಗೆ ಬಂದಿದ್ದರು. ನನ್ನ ಅತಿಥಿಗಳನ್ನು ನೋಡಿ ನನಗೆ ಆಶ್ಚರ್ಯವಾಯಿತು. ಅವರು ನನ್ನ ಪರಿಚಯಸ್ಥರಾದ ಗೋಡ್ಸೆ—ಆಪ್ಟೆಯವರೇ ಇದ್ದರು. ಯಾವ ಮುನ್ಸೂಚನೆಯೂ ಇಲ್ಲದೆ ಏನು ಬಂದಿರಿ ಎಂದು ಅವರನ್ನು ಪ್ರಶ್ನಿಸಿದೆ. ಈ ಪ್ರಶ್ನೆಗೆ ಕಾರಣ ಇಲ್ಲದಿಲ್ಲ. ಗೋಡ್ಸೆ ನನ್ನಲ್ಲಿಗೆ ಬರುವವರೆಂದು ನಾನು ಕನಸಿನಲ್ಲಿಯೂ ಭಾವಿಸಿರಲಿಲ್ಲ. ಗೋಡ್ಸೆ ಒಂದು ಮಹತ್ವದ ಕೆಲಸಕ್ಕಾಗಿ ಬಂದುದೆಂದು ತಿಳಿಸಿದ. ಫೆಬ್ರವರಿ 2ರೊಳಗಾಗಿ ಒಂದು ಅಭೂತಪೂರ್ವವಾದ ಕೆಲಸವನ್ನು ಪೂರೈಸಲಿರುವುದಾಗಿ ಅವರು ನನಗೆ ತಿಳಿಸಿದರು. ಆ ಸಾಹಸದ ಕೆಲಸ ಬೇರಾವುದೂ ಆಗಿರಲಿಲ್ಲ —ಗಾಂಧಿಜಿಯ ಕೊಲೆ ಮಾಡಲು ಅವರು ಹೊರಟಿದ್ದರು—ಅನಂತರ ಗೋಡ್ಸೆ ತನ್ನ ಬಳಿಯಿದ್ದ ರಿವಾಲ್ವರನ್ನು ನನಗೆ ತೋರಿಸಿದ. ಅದಕ್ಕಿಂತ ಉತ್ತಮವಾದ ರಿವಾಲ್ವರನ್ನು ಸಂಗ್ರಹಿಸಿ ಕೊಡಬೇಕೆಂದು ಒತ್ತಾಯಿಸಿದ. ಅವನ ಬಳಿಯಿದ್ದ ರಿವಾಲ್ವರ್ ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ. ಅದರ ಕಳ್ಳನನ್ನು ಸರಿಯಾಗಿ ಅದುಮಲು ಬರುತ್ತಿರಲಿಲ್ಲ ನಾನು ನನ್ನ ಪಿಸ್ತೂಲನ್ನು ಕೊಡಲು ನಿರಾಕರಿಸಿದೆ ಆಗಲೇ ವೇಳೆಯಾದ್ದರಿಂದ ಒಂದು ಪಿಸ್ತೂಲು ಅಥವಾ ರಿವಾಲ್ವರನ್ನು ಮರುದಿನ ಒದಗಿಸಲು ಪ್ರಯತ್ನಿಸುವುದಾಗಿ ಅವರಿಗೆ ಮಾತುಕೊಟ್ಟೆ. ಅನಂತರ ಇಬ್ಬರಿಗೂ ಚಹಾ ಮಾಡಿಸಿ ಕೊಟ್ಟೆ ಗೋಡ್ಸೆ ನಾನು ಕೊಟ್ಟ ಟೀ ಕುಡಿಯಲಿಲ್ಲ. ಆಗಲೇ ಹೊತ್ತಾದ್ದರಿಂದ ನಾನು ಹೋಗಿ ಮಲಗಿಕೊಂಡೆ.

ಮರುದಿನ ನಾನು ನನ್ನ ಮಗ ನೀಲಕಂಠನನ್ನೂ, ಅಂಗರಕ್ಷಕ ರೂಪಾನ ಜೊತೆಯಲ್ಲಿ ನಾನಾದಂಡಾವತೆಯ ಮನೆಗೆ ಕಳಿಸಿದೆ. ದಂಡಾವತೆಯ ಹತ್ತಿರ ಒಳ್ಳೆಯ ಪಿಸ್ತೂಲು ಯಾ ರಿವಾಲ್ವರ್ ಇದೆಯೇ ಎಂದು ವಿಚಾರಿಸಿ ಕೊಂಡು ಬರಲು ಹೇಳಿದೆ—ಆದರೆ ದಂಡಾವತೆ ಸಿಗಲಿಲ್ಲವೆಂದು ಅವರು ಹಿಂದಿರುಗಲು, ನಾನು ಆಸ್ಪತ್ರೆಗೆ ಹೊರಟೆ ಮಧ್ಯಾಹ್ನ 12ರ ಸುಮಾರಿಗೆ ಮನೆಗೆ ಬಂದೆ. ಆಗ ನನ್ನ ಮನೆಯಲ್ಲಿ ದಂಡಾವತೆ, ಗೋಡ್ಸೆ ಮತ್ತು ಆಪ್ಟೆ ಪರಸ್ಪರ ಸಂಭಾಷಿಸುತಿದ್ದುದನ್ನು ಕಂಡೆ. ನಾನಿಲ್ಲದ ಸಮಯದಲ್ಲಿ ದಂಡಾವತೆ ಬಂದರೆ, ಅವನೊಡನೆ ನೇರವಾಗಿ ವಿಷಯ ಪ್ರಸ್ತಾಪಿಸಲು, ನಾನು ಗೋಡ್ಸೆಗೆ ಹೇಳಿದ್ದೆ ಆತ ನ–ಬಿಕೆಯ ಕಾರ್ಯಕರ್ತ. ನಿನ್ನೊಡನೆ ಖಂಡಿತ ಸಹಕರಿಸುತ್ತಾನೆ ಎಂದು ತಿಳಿಸಿದ್ದೆ ನಾನು ಮನೆಗೆ ಬರುವುದರಲ್ಲಿ ಅವರೊಂದು ದೇಶೀಯ ರಿವಾಲ್ವರನ್ನು ಪರೀಕ್ಷಿಸುತ್ತಿದ್ದರು. ನಾನು ಬಟ್ಟೆ ಬದಲಾಯಿಸಲು ಮಹಡಿಯ ಮೇಲಕ್ಕೆ ನೋಡಿದೆ—ಕೆಳಗಿಳಿದು ಬರುವಷ್ಟರಲ್ಲಿ ಮನೆಯ ಹಿಂಭಾಗದ ಆವರಣದ ಹತ್ತಿರದಿಂದ ಗುಂಡು ಹಾಕಿದ ಸದ್ದು ಕೇಳಿಸಿತು ಆ ದೇಶೀಯ ರಿವಾಲ್ವರು ಚೆನ್ನಾಗಿಲ್ಲವೆಂಬ ಅಭಿಪ್ರಾಯಕ್ಕೆ ಗೋಡ್ಸೆ–ಆಪ್ಟೆ ಬಂದರು.

(ಹನ್ನೊಂದನೇ ಪುಟ ನೋಡಿರಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು .
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು–4

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 3

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 626

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : 0-20

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವುದೇ ಪ್ರಕಟಣೆಗಳು ಕನಿಷ್ಠ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ದೇವರಾಜ ಅರಸು ಹೇಳಿದ್ದೇನು?

ಬಿಜಾಪುರ ಮತ್ತು ಗದಗಗಳಲ್ಲಿ ಇತ್ತೀಚೆಗೆ ಹಿಂದುಳಿದ ವರ್ಗಗಳ ಮಹಾ ಸಮ್ಮೇಳನಗಳು ನಡೆದುವು. ಇವುಗಳ ಅಧ್ಯಕ್ಷತೆಯನ್ನು ವಹಿಸಿದವರು ಇಂಡಿಕೇಟಿನ ಪ್ರಶ್ನಾತೀತ ರಾಜ್ಯನಾಯಕ ಶ್ರೀ ದೇವರಾಜ ಅರಸರು. ಅಲ್ಪಸಂಖ್ಯಾತರನ್ನೂ ಹಿಂದುಳಿದ ವರ್ಗಗಳನ್ನೂ ವಿಶೇಷ ಸಹಾನುಭೂತಿಯಿಂದ ನೋಡಿಕೊಂಡು ಬಂದ ಹೆಗ್ಗಳಿಕೆ ಕಾಂಗ್ರೆಸ್ಸಿನದ್ದು; ಇದೇ ಅಗ್ಗಳಿಕೆಯನ್ನು ಇಂಡಿಕೇಟೂ ಇಟ್ಟುಕೊಂಡಿದೆ. ಅಲ್ಪ ಸಂಖ್ಯಾತರ ತುಷ್ಟೀಕರಣಕ್ಕಾಗಿ ಬಹು ಸಂಖ್ಯಾತರ ಮನಸ್ಸಿಗೆ ನೋವುಂಟು ಮಾಡಿದ ಉದಾಹರಣೆಗಳೂ ಉಂಟು. ಅವರನ್ನು ಅಲ್ಲಗಳೆದದ್ದೂ ಉಂಟು; ಅವರ ಸಂಘಟನೆಗಳು ಮಾತ್ರವೇ ಜಾತೀಯವೆಂದು ಪ್ರಚಾರ ಮಾಡಿದ್ದೂ ಉಂಟು. ಜಾತೀಯತೆಯ ನಿರ್ಮೂಲನಕ್ಕೆ ಸೊಂಟಕಟ್ಟಿದವರೇ ಜಾತಿಯ ಆಧಾರದಲ್ಲಿ ಹಿಂದುಳಿದವರನ್ನು ವರ್ಗೀಕರಿಸಿದ ನಿದರ್ಶನಗಳುಂಟು. ಅದೇನಿದ್ದರೂ ದೇಶದಲ್ಲಿ ಆರ್ಥಿಕವಾಗಿ—ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದವರು ಎಲ್ಲೆಲ್ಲೂ ಇದ್ದಾರೆಂಬುದು ನಿಸ್ಸಂದೇಹ. ಪ್ರಾಯಃ ನಮ್ಮ ದೇಶದಲ್ಲಿ ಸಾಮಾಜಿಕತೆ ಮತ್ತು ಜಾತೀಯತೆಗಳು ಅನ್ಯೋನ್ಯವಾಗಿಯೇ ಬೆಳೆದು ಬಂದಿರಬೇಕು; ಆದುದರಿಂದಲೇ ಉತ್ತಮ ಜಾತಿಯವರೆಂದು ಹೇಳಿಕೊಳ್ಳುವವರು ಸಾಮಾನ್ಯವಾಗಿ ಉತ್ತಮ ಸಾಮಾಜಿಕರೂ ಆಗಿದ್ದಾರೆಂದು ಹೇಳಬಹುದು.

ಹಿಂದುಳಿದವರಿಗೆ ವಿವಿಧ ಸೌಲಭ್ಯಗಳನ್ನು ನೀಡಿ ಅವರನ್ನೂ ಮುಂದೆ ತರುತ್ತಿರುವುದು ಕಳೆದ ಹಲವಾರು ವರ್ಷಗಳಿಂದಲೂ ನಡೆದು ಬರುತ್ತಿದೆ. ನಮ್ಮ ಸಂವಿಧಾನದಲ್ಲೂ ಇದಕ್ಕೆ ಅವಕಾಶವಿದೆ. ಆದರೂ ಮೇಲೆ ಹೇಳಿದ ಎರಡೂ ಸಮ್ಮೇಳನಗಳಲ್ಲಿ ಶ್ರೀ ದೇವರಾಜ ಅರಸರು ಹಿಂದುಳಿದ ವರ್ಗಗಳವರಿಗೆ ಕಾಯ್ದಿಟ್ಟ ಅವಕಾಶಗಳನ್ನು ವಿರೋಧಿಸಿದರೆಂದು ವರದಿ ಬಂದಿದೆ. "ಇಂತಹ ಅವಕಾಶಗಳು ಈಗ ಬಹಳ ಕಡಿಮೆಯಾಗಿವೆ; ಇವನ್ನು ಅವಶ್ಯ ಹೆಚ್ಚಿಸಬೇಕು" ಎಂದು ಕೆಲ ಸಮಯಕ್ಕೆ ಮೊದಲು ನಾಯಕ ಶಿರೋಮಣಿ ಶ್ರೀ ಜಗಜ್ಜೀವನ ರಾಮರು ಮತ್ತೊಂದು ಸಮ್ಮೇಳನದಲ್ಲಿ ಹೇಳಿದ್ದುಂಟು. ಈ ಎರಡೂ ಅವರವರ ವ್ಯಕ್ತಿಗತ ಅಭಿಪ್ರಾಯಗಳೆಂದೇ ಹೇಳಬೇಕಾದರೂ ಇಂಡಿಕೇಟಿನಲ್ಲಿನ ನಾಯಕರ ಮೂರ್ಖತನಕ್ಕೆ ನಗಬೇಕಾಗಿದೆ. ಹಿಂದುಳಿದ ವರ್ಗಗಳಿಗೆ ವಿಶೇಷ ಸವಲತ್ತುಗಳನ್ನು ಬ್ರಿಟಿಷರೂ ಕೊಡಮಾಡಿದ್ದರು. ಸ್ವಾತಂತ್ರ್ಯಾನಂತರ ಡಾ| ಅಂಬೇಡಕರ ಮತ್ತು ಡಾ| ರಾಮಮನೋಹರ ಲೋಹಿಯಾ ಮೊದಲಾದ ಹೆಸರಾಂತ ಸಾರ್ವಜನಿಕ ವ್ಯವಹಾರಗಳ ಮಹಾಪಂಡಿತರು ಈ ರೀತಿಯ ವಿಶೇಷ ಏರ್ಪಾಡಿನ ಆಗತ್ಯತೆಯನ್ನೂ ಅನಿವಾರ್ಯತೆಯನ್ನೂ ಎತ್ತಿ ಹೇಳಿದರು. ಶ್ರೀ ದೇವರಾಜ ಅರಸರು ಅವರನ್ನೂ ಮೀರಿದ ಸಮಾಜಪಂಡಿತರಾಗಿ ಅವರ ಅಭಿಪ್ರಾಯಗಳನ್ನು ತಳ್ಳಿಹಾಕಿದ್ದರೆ, ಅದನ್ನು ಅವರು ಮಾತ್ರವೇ ಮೆಚ್ಚಬೇಕು.

"ಹಿಂದುಳಿದವರನ್ನು ಮುಂದೆ ತರುವುದು" ಎಂಬುದು ಅರ್ಥವಿಲ್ಲದ 'ಸಮಾಜವಾದ'ದ ಘೋಷಣೆಯಂತೆ ಅಗ್ಗದ ಜನಪ್ರಿಯತೆ ಗಳಿಸುವ ಉಗ್ಗಡಣೆ ಮಾತ್ರವೆನಿಸಿರುವುದು ಸತ್ಯ. ಮುಂದುವರಿದವರೆಲ್ಲ ಹಿಂದುಳಿದವರ ಹೆಸರಲ್ಲಿ ಹೊಲ-ಮನೆಮಾಡಿಕೊಂಡರು. ನಿಜವಾದ ಹಿಂದುಳಿದವರನ್ನು ಸುಲಿದು ತಿಂದರು. ಯಾರಿಗೆ ನಿಜವಾಗಿ ಅವಕಾಶಗಳ ಅಗತ್ಯವಿದೆಯೋ ಅವರಿಗೆ ಅವು ದೊರೆಯುವುದು ದುಸ್ತರವಾಗಿ, ಬಕಪಕ್ಷಿಗಳ ಹೊಟ್ಟೆ ಮಾತ್ರ ತುಂಬುತ್ತ ಬಂದಿತು. ಹಿಂದುಳಿದವರಲ್ಲೂ ನಾಯಕರೆಂಬವರು ಎಲ್ಲವನ್ನೂ ಸ್ವಾಹಾಮಾಡಿಯೂ ತಮ್ಮ ನಾಯಕ ಪದವಿಯನ್ನು ಉಳಿಸಿಕೊಳ್ಳಲು ಸಶಕ್ತರಾಗಿದ್ದಾರೆಂದರೆ, ಹಿಂದುಳಿದವರ ಹಿಂದುಳಿಕೆ ಎಷ್ಟಿದೆಯೆಂಬುದು ವೇದ್ಯವಾಗುತ್ತದೆ. ಇತ್ತೀಚೆಗಿನ ದಿನಗಳಲ್ಲಿ ಈ ಪರಿಸ್ಥಿತಿ ತುಸು ಬದಲಾಗುತ್ತ ಬರುತ್ತಿದೆಯೆಂಬುದು ಸಂತೋಷದ ಸಂಗತಿ. ಈ ವರ್ಗವೂ ಜಾಗೃತವಾಗತೊಡಗಿದೆ; ಎಚ್ಚತ್ತಿದೆ. ಸಮಾಜದ ಗುತ್ತೇದಾರಿಗಳ ಡೊಂಕಿನಿಂದ ನೊಂದ ಯುವ ಜನಾಂಗವು ಅವರ ಮೇಲೆ ಮುನಿದು ಸಮಾಜ ಸುಧಾರಣೆಯ ಹೆಸರಿನಲ್ಲಿ, ಕ್ರಾಂತಿಯೇಳಲು ಹಾತೊರೆಯುತ್ತಿರುವ ಸಮಯವಿದು. ಪ್ರಧಾನಿ ಶ್ರೀಮತಿ ಗಾಂಧಿಯವರ ಮಾತಿನಲ್ಲೇ ಹೇಳುವುದಾದರೆ, ನಕ್ಸಲೀಯರೂ ದೇಶ ಪ್ರೇಮಿಗಳೇ. ಒಂದು ವರ್ಗದ ತೀವ್ರತಮ ದಮನನೀತಿಯಿಂದ ನೊಂದ ಅವರ ನೋವು ಹಿಂಸಾ ರೂಪದಲ್ಲಿ ವ್ಯಕ್ತವಾಗುತ್ತಿದೆ. ಇದು ಖಂಡನೀಯವಾದರೂ ಅದರ ಹಿಂದಿರುವ ಕಠೋರ ಸತ್ಯವನ್ನುಮರೆಮಾಜುವುದು ಸಾಧ್ಯವಿಲ್ಲ ಇದೇ ಮಾತನ್ನು ಹಿಂದುಳಿದ ವರ್ಗಗಳಿಗೂ ಅನ್ವಯಿಸ ಬಹುದು. ಕಾಲ-ಕಾಲಾಂತರದಿಂದ, ನಾನಾ ಕಾರಣಗಳಿಂದ ದಮನಗೊಂಡು ಬಂದು ಇಂದು ಹಿಂದುಳಿದವರು ಎಂದು ಕರೆಯಲ್ಪಡುವ ಒಂದು ವರ್ಗವಿದೆಯೆಂಬುದು ನಿಸ್ಸಂಶಯ. ಬ್ರಿಟನ್ ಮತ್ತಿತರ ಯೂರೋಪ್ಯ ದೇಶಗಳಲ್ಲೂ ಇಂಥ ವರ್ಗಾವಣೆಯಿದ್ದು ಇಂದಿಗೂ ಈ ವರ್ಗಕ್ಕೆ ಕೆಲವೊಂದು ರಕ್ಷಣೆಯಿದೆ. ಈ ರಕ್ಷಣೆಯು ಅಕಾಲಿಕವೆಂದಾಗಲೀ ಅನ್ಯಾಯವೆಂದಾಗಲೀ ಹೇಳಬರುವುದಿಲ್ಲ ಭೂಮಿಯು ಏರು—ತಗ್ಗುಗಳಿಂದ ಕೂಡಿರುವುದು ಸಹಜ. ಅದನ್ನು ಸಮತಲ ಮಾಡುವಾಗ ಹೆಚ್ಚು ತಗ್ಗುಗಳಿಗೆ ಹೆಚ್ಚು ಮಣ್ಣು ತುಂಬಿಸುವುದು ಅನಿವಾರ್ಯವಾಗುತ್ತದೆ. ಅದೇ ರೀತಿಯಲ್ಲಿ ದೇಶದ ಪ್ರಗತಿಯೆಂದರೆ ಹಿಂದುಳಿದವರ ಪ್ರಗತಿಯೂ ಅನಿವಾರ್ಯ; ಇದಕ್ಕಾಗಿ ಅವರಿಗೆ ಕೆಲವೊಂದು ವಿಶೇಷ ಸೌಲಭ್ಯಗಳನ್ನು ಒಂದಗಿಸುವುದೂ ಆಗತ್ಯವೇ.

ಇಲ್ಲಿ ನಾವು ಗಮನಿಸ ಬೇಕಾದದ್ದು ಒಂದಂಶ ಮಾತ್ರ. ಹಿಂದುಳಿದ ವರ್ಗಗಳಿಗೆ ನೀಡುತ್ತಿರುವ ಸೌಲಭ್ಯಗಳನ್ನು ಇದುವರೆಗೆ ಯಾರೂ ವಿರೋಧಿಸಿದ್ದೆಂಬುದಿಲ್ಲ. ಹಾಗಿರುವಾಗ ಏಕಾಏಕಿಯಾಗಿ ಶ್ರೀ ಅರಸರು ಏಕೆ ತುಟಿಯೆರಡು ಮಾಡಿದರು? ಅಪಸ್ವರವೆಬ್ಬಿಸಿದರು? ಪಕ್ಷವೇ ತಾನು. ತಾನೇ ಪಕ್ಷವೆಂದು ಅಹರ್ನಿಶಿ ದುಡಿಯುತ್ತಿರುವ ಶ್ರೀ ಅರಸರ ಮಾತಿನ ಖಚಿತ ಅಭಿಪ್ರಾಯವೇನು? ಅವರು ಕರ್ನಾಟಕದ ಸರಕಾರದಲ್ಲಿಮಂತ್ರಿಗಳಾಗಿದ್ದಾಗಲೂ 'ಹಿಂದುಳಿದವರ ಯಾದಿ' ಪ್ರಕಟವಾಗುತಿತ್ತು. ಆಗ ಅದನ್ನವರು ವಿರೋಧಿಸಲೇ ಇಲ್ಲವೆಂಬುದನ್ನು ಮರೆಯುವುದೆಂತು? ಶ್ರೀ ದೇವರಾಜರ ಮಾತಿಗೆ ಪ್ರಾಯಃ ಹೀಗೆ ವ್ಯಾಖ್ಯಾನಮಾಡಬಹುದೋ ಏನೋ —ಸಾಮಾನ್ಯವಾಗಿ ಈಗ ನಮ್ಮಲ್ಲಿ ಹಿಂದುಳಿದವರನ್ನು ಜಾತಿಯ ಆಧಾರದಿಂದಲೇ ನಿರ್ಧರಿಸಲಾಗುತ್ತಿದೆ. ಆದರೆ, ಜಾತಿಯು ಹಿಂದುಳಿಯುವಿಕೆಗೆಂದೂ ಮಾನದಂಡವಾಗಬಾರದು; ಆಗಲಾರದು. ಇದು ಅರ್ಥಪ್ರಪಂಚ, ಹೊಟ್ಟೆ ಬಟ್ಟೆಗಾಗಿ ಪರದಾಡುವ ಕಾಲ. ಆದುದರಿಂದ ಹಿಂದುಳಿಯುವಿಕೆಯನ್ನು 'ಜಾತಿ'ಯೆಂಬ ಬೃಹತ್ ಸಮುದಾಯದ ಸ್ಥಿತಿಗತಿಯಿಂದ ಅಳೆಯುವುದು ನ್ಯಾಯೋಚಿತವಲ್ಲ. ಕುಟುಂಬವನ್ನು ಘಟಕವಾಗಿಟ್ಟುಕೊಂಡೇ ಈ ವಿಭಜನೆ ಅಪೇಕ್ಷಣೀಯ. ಜಾತಿಯಲ್ಲಿ ಉತ್ತಮನಾದ ಮಾತ್ರಕ್ಕೆ ಸಾಮಾಜಿಕವಾಗಿಯೂ ಆತ ಉತ್ತಮನಾಗುತ್ತಾನೆಂಬುದು ಒಣಸಿದ್ಧಾಂತ. ಬಡವರು-ಹಿಂದುಳಿದವರು ಎಲ್ಲ ಕೋಮುಗಳಲ್ಲಿಯೂ ಹರಡಿಕೊಂಡಿದ್ದಾರೆ. ಆದುದರಿಂದ ಹಿಂದುಳಿಯುವಿಕೆಯನ್ನು ಅಳೆಯುವ ಮಾನದಂಡ ಬದಲಾಗಬೇಕು ಎಂಬುದನ್ನು ಎಲ್ಲ ವಿಚಾರಶೀಲರೂ ಒಪ್ಪುತ್ತಾರೆ. ಈ ರೀತಿ ಹಿಂದುಳಿದ ವರ್ಗಗಳಿಗೆ ಸಾಕಷ್ಟು ಕಾಲ ವಿಶೇಷ ಅವಕಾಶಗಳನ್ನು ಒದಗಿಸುವುದರಿಂದ

(ಹತ್ತನೇ ಪುಟ ನೋಡಿರಿ)

ನವಯುಗದ ಹೊಸ ವರ್ಷ

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 50ನೆಯ ವರ್ಷ ಮುಗಿದು ಸಪ್ಟಂಬರ ತಿಂಗಳಿನಿಂದ 51ನೆಯ ಹೊಸ ವರ್ಷಾರಂಭವಾಗಿದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಚಂದಾ ಹಣವನ್ನು ಮನಿಯಾರ್ಡರು ಮೂಲಕ ಯಾ ಇಂಡಿಯನ್ ಪೋಸ್ಟಲ್ ಆರ್ಡರು ಮೂಲಕ ಕಳುಹಿಸಬಹುದು. ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಉಡುಪಿ ಲೋಕಲ್ ಆಫೀಸಿನ 283/1ನೇ "ನವಯುಗ"ದ ಖಾತೆಗೆ ಪಾವತಿ ಮಾಡಬಹುದು. ಹಾಗೆ ಪಾವತಿ ಮಾಡುವಾಗ ತಮ್ಮ ಚಂದಾ ನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ವಿ. ಪಿ. ಮಾಡಿದರೆ ರೂ 1-50ರಷ್ಟು ಹೆಚ್ಚು ವೆಚ್ಚ ಬರುವುದರಿಂದ ಚಂದಾದಾರರು ದಯಮಾಡಿ ಮುಂಗಡವಾಗಿ ಹಣ ಪಾವತಿಮಾಡಬೇಕಾಗಿ ವಿಜ್ಞಾಪಿಸುತ್ತೇವೆ.

ಅಂತೂ ಸಪ್ಟಂಬರ ಎರಡನೆ ವಾರದೊಳಗಾದರೂ ಹಣ ಪಾವತಿಯಾಗದಿದ್ದರೆ ವಿ. ಪಿ. ಮಾಡಲು ತಮ್ಮ ಸಮ್ಮತಿಯೆಂದು ಭಾವಿಸಿ ಕ್ರಮದಿ ಪತ್ರಿಕೆಯನ್ನು ಚಂದಾ ಹಣಕ್ಕೆ ವಿ. ಪಿ. ಮಾಡುತ್ತೇವೆ.

ಮೆನೇಜರ್

ಪ್ರೇಮದ ಪ್ರಕೃತಿ

ನಿವೇದಕರು. ಶ್ರೀ ಕೆ. ಜಿ ಹೆಗಡೆ.

ಸಾವಿರಾರು ವರ್ಷಗಳ ಹಿಂದೆ, ಅಂದರೆ ವೇದಕಾಲಾನಂತರದಲ್ಲಿ ಯಾಜ್ಞವಲ್ಕ್ಯನೆಂಬ ಒಬ್ಬ ಬಹುದೊಡ್ಡ ಬ್ರಾಹ್ಮಣ ಮುನಿಯು ವಾಸಿಸುತ್ತಿದ್ದನು ಅವನು ಶಾಸ್ತ್ರಪಾರಂಗತನಾಗಿದ್ದಂತೆ, ಜ್ಞಾನ ವೃದ್ಧನೂ ಆಗಿದ್ದನು. ಅಂದಿನ ಕಾಲದಲ್ಲಿ ಜನರು ಒಂದಕ್ಕಿಂತ ಹೆಚ್ಚಿನ ಹೆಂಡಂದಿರನ್ನು ಮದುವೆಯಾಗುವ ಸಂಪ್ರದಾಯ ರೂಢಿಯಲ್ಲಿತ್ತು ಅದೇಕೆ ಋಷಿ ಮುನಿಗಳಿಗೂ ಮಡದಿಯರು ಇರುತಿದ್ದರು ನಮ್ಮ ಯಾಜ್ಞವಲ್ಕ್ಯನಿಗೆ ಇಬ್ಬರು ಹೆಂಡಂದಿರು ಇದ್ದರು.

ಒಬ್ಬಳ ಹೆಸರು ಮೈತ್ರೇಯಿ. ಮಗುದೊಬ್ಬಳದು ಕಾತ್ಯಾಯನಿ ಕಾತ್ಯಾಯನಿಗೆ ಪಾಕಶಾಸ್ತ್ರದಲ್ಲಿ ಬಹುಪ್ರೀತಿ. ಹೊಲಿಗೆಯೆಂದರೆ ಅನುರಾಗ. ಮನೆಯಲ್ಲೇ ಅತ್ತಿಂದಿತ್ತ ಅಡ್ಡಾಡುವದೆಂದರೆ ಬಲು ಇಷ್ಟ. ಮನೆಯಲ್ಲಿ ಒಲೆ ಉರಿಸಿ ಗೃಹಕೃತ್ಯಗಳನ್ನೆಲ್ಲಾ ಅವಳೇ ನಿಷ್ಠೆಯಿಂದ ನಿರ್ವಹಿಸುತಿದ್ದಳು. ಮೈತ್ರೇಯಿಗೆ ಅವಳ ಪತಿ ದೇವನೊಡನೆ ಕೂತು ಕಾಲ ಕಳೆಯುವದರಲ್ಲೇ ಸಂತೋಷ. ತನ್ನ ಗಂಡ ಗುರುದೇವ ಶಿಷ್ಯರಿಗೆ ಪಾಠ ಹೇಳಿಕೊಡುವದನ್ನು ಸಂಪೂರ್ಣ ಕೇಳುವದೆಂದರೆ ಪಂಚಪ್ರಾಣ. ಋಷಿ-ಮುನಿಯಾದರೇನು? ಯಾಜ್ಞವಲ್ಕ್ಯ ಮೈತ್ರೇಯಿಯನ್ನೇ ಹೆಚ್ಚಿಗೆ ಮೆಚ್ಚುತಿದ್ದನು. ಕಾತ್ಯಾಯನಿಗಿಂತಲೂ ಮಿಗಿಲಾಗಿ ತನ್ನ ಪ್ರೇಮವನ್ನು ಮೈತ್ರೇಯಿಗೆ ತೋರಿಸುತಿದ್ದನು. ಆದರೆ ಈ ವಿಷಯ ಬಹಿರಂಗವಾಗಿ ಪ್ರಕಟಪಡಿಸಿದ್ದಿಲ್ಲ. ಹೀಗಾಗಿ ಅವನ ಗೃಹ ಆಶ್ರಮದಲ್ಲಿ ಶಾಂತಿ ನೆಲೆ ನಿಂತಿತ್ತು.

ಯಾಜ್ಞವಲ್ಕ್ಯ ವದ್ಧಾಪ್ಯವನ್ನು ಮುಟ್ಟಿದಾಗ ಸಂಸಾರವನ್ನು ಸಂಪೂರ್ಣ ತ್ಯಜಿಸಿ ಕಾನನದಲ್ಲಿ ಕೂತು ತಪಸ್ಸು ಮಾಡುವ ವಿಚಾರವನ್ನು ಮಾಡಿದನು ಅವನ ಬಳಿ ಚರಾ ಚರ ಸೊತ್ತುಗಳೆಂದು ಹೇಳುವಂತಹ ಹೆಚ್ಚಿನದೇನೂ ಇರಲಿಲ್ಲ ಇದ್ದುದೆಂದರೆ ಒಂದು ಆಶ್ರಮದ ಗುಡಿ. ಕೆಲವೇ ಪಾತ್ರೆ ಪರಡಿಗಳು. ಸಣ್ಣ ಮಟ್ಟಿನ ಭೂಮಿ ಮತ್ತು ಆರೆಂಟು ಆಕಳಗಳು ಅದೇನೇ ಇದ್ದರೂ, ಇದ್ದುದನ್ನೆಲ್ಲ ಇಬ್ಭಾಗ ಮಾಡಿ ತನ್ನ ಇಬ್ಬರು ಭಾರ್ಯೆಯರಿಗೆ ಕೊಡುವ ನಿರ್ಧಾರವನ್ನು ಅವನು ಮಾಡಿದನು. ಅವರೀರ್ವರನ್ನೂ ಕರೆದು— "ನಾನು ಕಾಡಿಗೆ ಹೋಗಬೇಕಾದ ಸಮಯ ಸಮೀಪಿಸಿದೆ. ಬ್ರಾಹ್ಮಣರಾದ ನಮಗೆ ಇದು ಶಾಸ್ತ್ರ ಸಮ್ಮತವಾದುದು. ನನ್ನ ಆಸ್ತಿಪಾಸ್ತಿಗಳನ್ನೆಲ್ಲ ಎರಡು ಪಾಲು ಮಾಡಿರುತ್ತೇನೆ ಅದನ್ನು ನೀವು ನಿಮ್ಮ ಜೀವಮಾನದ ವರೆಗೆ ನಿರಾಯಾಸ ಮತ್ತು ನಿರಾತಂಕದಿಂದ ಅನುಭವಿಸುವದು. ಆದ್ದರಿಂದ ಪ್ರಿಯ ಮಡದಿಯರೇ ನಿಮಗೆ ಮಂಗಳವಾಗಲಿ. ನಾನು ಹೋಗುವೆನು"

ಇದನ್ನು ಕೇಳಿದ ಕಾತ್ಯಾಯನಿ ಸಂತೃಪ್ತಿಯಿಂದ ಸುಮ್ಮನಾದಳು ಆದರೆ ಮೈತ್ರೇಯಿ ತನ್ನ ಗಂಡನಂತೆ ವಿವೇಕ ತರಂಗಿಣಿಯಾಗಿದ್ದಳು ಆಕೆ ಪತಿದೇವನ ಪರಿಸರದಲ್ಲಿ, ವೇದ ವಿದ್ಯಾ-ವಿಚಾರ ಧಾರೆಗಳಲ್ಲಿ ಪರಿಣತಿಯನ್ನೂ ಪಡೆದಿದ್ದಳು. ಆಕೆ ಕೇಳಿದಳು. "ಪತಿದೇವ, ನೀವು ನನ್ನ ಪಾಲಿಗೆ ಬಿಟ್ಟು ಕೊಟ್ಟ ಸಂಪತ್ತಿನಿಂದ ಅಮರತ್ವವನ್ನು ಪಡೆಯಲು ಸಾಧ್ಯವೇ?''

ಯಾಜ್ಞವಲ್ಕ್ಯ ಉತ್ತರಿಸಿದ, "ಇಲ್ಲ ಪ್ರಿಯೇ ಇಲ್ಲ ಈ ಸಂಪತ್ತಿನ ಮಾತು ಬಿಡು. ವಿಶ್ವದಲ್ಲಿನ ಎಲ್ಲಾ ಐಶ್ವರ್ಯ ನಿನ್ನ ಕಾಲಬುಡದಲ್ಲಿ ಇದ್ದರೂ ಅದರಿಂದ ಅಮರತ್ವವನ್ನು ಪಡೆಯಲು ಸಾಧ್ಯವಿಲ್ಲ."

"ಹಾಗಾದರೆ, ಪತಿದೇವಾ, ನೀವು ಬಿಟ್ಟ ಸಂಪತ್ತಿನಿಂದ ನನಗೇನು ಪ್ರಯೋಜನ? ನಾನು ನಿಮ್ಮನ್ನು ನಿಜಕ್ಕೂ ಪ್ರೇಮಿಸುತ್ತೇನೆ. ಆದ್ದರಿಂದ ನಾನು ನಿಮ್ಮೊಡನೆ ವನವಾಸಕ್ಕೂ ಬರುತ್ತೇನೆ."

ಯಾಜ್ಞವಲ್ಕ್ಯ ಮೈತ್ರೇಯಿಯನ್ನು ತನ್ನ ಬಳಿ ಸೆಳೆದುಕೊಂಡನು. "ಮಧುರ ಭಾಷಿಣಿ, ಪ್ರಿಯಂವದೆ, ನೀನು ನಿಜಕ್ಕೂ ನನಗೆ ಬೇಕಾದವಳು. ವಿವೇಕದಿಂದ ತುಂಬಿದ ಜ್ಞಾನರತ್ನವಾಗಿರುವೆ ನಿನ್ನ ಈ ಮಾತುಗಳಿಂದ ನಾನು ನಿಜಕ್ಕೂ ಧನ್ಯನಾದೆನು. ನಿನ್ನ ನಿಷ್ಕಾಮ ಪ್ರೇಮಕ್ಕೆ ಸೋತೆನು. ಆದರೆ ಕೇಳು, ಪ್ರೇಮದ ಪ್ರಕೃತಿಯನ್ನು ನೀನು ಬಲ್ಲೆಯೇನು? ಹೆಂಡತಿ ಗಂಡನನ್ನು ಏಕೆ ಪ್ರೇಮಿಸುವಳು? ಗಂಡನಿಗಾಗಿ ಅಲ್ಲ; ಅವಳ ಸಲುವಾಗಿ ಮಾತ್ರ. ಪತಿಯನ್ನು ರಮಿಸುವಾಗ ಅವಳು ಯಾರನ್ನು ರಮಿಸುವಳು? ಅವಳಲ್ಲೂ, ಅವನಲ್ಲೂ ಇದ್ದ ಒಬ್ಬಾತನನ್ನು ಮಾತ್ರ ಅವಳು ಪ್ರೀ ಬ್ಬಾತನನ್ನೇ ಅವಳು ಸಹಜವಾಗಿ ಪ್ರೇಮಿಸುತ್ತಾಳೆ. ಇದೇ ರೀತಿಯಲ್ಲಿ ಗಂಡನು ಕೂಡಾ. ಜಗತ್ತಿನಲ್ಲಿನ ಎಲ್ಲಾ .ಪ್ರೇಮವೂ ಇದೇ ಮಾದರಿಯದು. ತಂದೆ ಮತ್ತು ಮಗನ, ತಾಯಿ ಮತ್ತ ಮಗಳ, ಮಿತ್ರ ಮತ್ತು ಮಿತ್ರನ, ಅಂದರೆ ಎಲ್ಲಾ ಪ್ರೇಮದ-ಅನುರಾಗದ ಸ್ವರೂಪವೂ ಒಂದೇ-ಇಂತಹುದೇ. ನಾವೆಷ್ಟು ದಿನ ಬದುಕಿರುತ್ತೇವೋ ಅಷ್ಟು ಕಾಲ ನಾವೆಲ್ಲ ಬೇರೆ ಬೇರೆ. ಆದರೆ ಸಾವಿನ ಬಳಿಕ ನಾವೆಲ್ಲ ಆ ಒಂದರೊಡನೆ ಸೇರುತ್ತೇವೆ ಸತ್ತ ಬಳಿಕ 'ನಾನು' ಅಥವಾ 'ನೀನು' ಎಂಬ ಪ್ರಶ್ನೆಯೇ ಇಲ್ಲ. ನಾವೆಲ್ಲರೂ ಒಂದೇ?''

"ಪತಿದೇವ, ನೀವು ಹೇಳಿದುದನ್ನೆಲ್ಲ ಕೇಳಿದೆನು ಆದರೆ ನನ್ನ ಮನಸ್ಸಿನಲ್ಲಿ ಅಲ್ಲೋಲ .ಕಲ್ಲೋಲವಾಗುತ್ತದೆ. ಸತ್ತ ನಂತರ 'ನಾನು' ಮತ್ತು 'ನೀನು' ಎಂಬುವದು ಇಲ್ಲ ಎಂಬ ಸಂಗತಿ ಕೇಳಿ ನಾನು ಕಂಗೆಟ್ಟಿರುವೆನು' ಮೈತ್ರೇಯಿ ನುಡಿದಳು

'ನನ್ನ ಪ್ರಿಯೇ ಕೇಳು' ಯಾಜ್ಞವಲ್ಕ್ಯನೆಂದನು.

ಒಂದು ಮದ್ದಲೆ ಅಥವಾ ಮೃದಂಗವನ್ನು ಬಡೆಯುತ್ತಾರೆ ಅಥವಾ ಬಾರಿಸುತ್ತಾರೆ ಎಂದು ಊಹಿಸುವ, ಆಗ ಏನಾಗುವದು? ಅನೇಕ ನಾದ ತರಂಗಗಳು ಒಂದರ ಹಿಂದೆ ಒಂದು ಎಂಬಂತೆ ಉದ್ಭವಿಸುತ್ತವೆ. ಈ ಒಂದೊಂದು ನಾದ ತರಂಗಗಳೆಂದರೆ ನಮ್ಮಂತೆ ಅಥವಾ ನಾವೆಂಬುದನ್ನು ತಿಳಿದು ಕೊ. ಅವೆಲ್ಲ ಒಂದು ಕ್ಷಣ ಇರುತ್ತವೆ. ಅನಂತರ ಅದೃಶ್ಯವಾಗುತ್ತವೆ ಅವೆಲ್ಲ ಅಂತರಿಕ್ಷದಿಂದ ಬರುತ್ತವೆ ಮ.ತ್ತು ಅಂತರಿಕ್ಷಕ್ಕೇನೇ ಮರಳುತ್ತವೆ ಅದೇಕೆ, ಭೂಮಿಯಲ್ಲಿ ಅನೇಕ ನದಿಗಳು ಇವೆಯೆಂಬುದನ್ನು ನೀನು ಬಲ್ಲೆಯಷ್ಟೆ. ಅವನ್ನು ಸ್ವಲ್ಪ ವಿಚಾರ ಮಾಡಿ ನೋಡೋಣ. ಅವೆಲ್ಲ ಎಲ್ಲಿ ಉಗಮವಾದರೂ ಎಲ್ಲೆಲ್ಲೋ ಹರಿದೋಡಿದರೂ ಕೊನೆಗೆ ವಿಶಾಲವಾದ ಒಂದೇ ಸಾಗರವನ್ನು ಸೇರುತ್ತವೆ. ಅದೊಮ್ಮೆ ಅವು ಸಮುದ್ರವನ್ನು ಸೇರಿದ ಬಳಿಕ ಬೇರೆ ಬೇರೆ ನದಿಗಳ ನೀರಿದು ಎಂದು ಬಿಡಿಸಿ ಅಥವಾ ವಿಭಜಿಸಿ ಹೇಳಲು ಸಾಧ್ಯವಿಲ್ಲ. ನಮ್ಮ ವೈಯಕ್ತಿಕತೆಯೆಂಬುವದು ಅದೇ ರೀತಿಯಲ್ಲಿದೆ. ಮರಣಾನಂತರ ನಾವೆಲ್ಲ ಸಾಗರದಂತಹ ಒಂದೇ —ಏಕೈಕದೊಡನೆ ಐಕ್ಯವಾಗುತ್ತೇವೆ. ಹಾಗಾದರೆ ಆ ಒಂದು ಅಥವಾ ಏಕೈಕ ವ್ಯಕ್ತಿಯೆಂದರೆ ಯಾರು? ಆ ಒಂದು ಅಥವಾ ಏಕೈಕ ವ್ಯಕ್ತಿಯನ್ನು ಯಾರು ನೋಡಬಲ್ಲರು? ಅಂದರೆ ಯಾರು ಯಾರೊಡನೆ ಸೇರುತ್ತಾರೆ ಅಥವಾ ಯಾರು ಯಾರನ್ನು ನೋಡುತ್ತಾರೆ. ಆದ್ದರಿಂದಲೇ ನಾನು, ಪ್ರಿಯ ಮೈತ್ರೇಯಿ, ಎಲ್ಲರೂ ಒಬ್ಬರನ್ನೊಬ್ಬರು ಪ್ರೀತಿ ಮಾಡುತ್ತಾರೆ ಎಂಬುದನ್ನು ಹೇಳಿದುದು. ಅದೇನೇ ಇರಲಿ ಹೇಗೂ ಇರಲಿ. ಅದುವೆ ಪ್ರೇಮವೆಂಬುವದು. ಪ್ರೇಮವೆಂದರೆ ದೇವರು. ಈ ಪ್ರೇಮ ನಿಷ್ಕಾಮವಾದುದಾದರೆ ಅದು ದೇವರಿಗೆ ಬಹಳ ಸನಿಹವಾದುದು. ಅತ್ಯಂತ ಪ್ರಿಯವಾದುದು. ನಿಸ್ವಾರ್ಥದಿಂದ ಕೂಡಿದುದಾದರೆ ನಿಜಕ್ಕೂ ಆ ಪ್ರೇಮವೆಂದರೆ ದೇವರೇ. ಅದು ಯಾವ ರೂಪದಲ್ಲೇ ಬೇಕಾದರಿರಲಿ; ರೂಪು ಬಿಡಲಿ. ಮೈತ್ರೇಯಿ, ತಿಳಿಯಿತೇ!

ಉತ್ತರ ರೂಪವಾಗಿ ಮೈತ್ರೇಯಿ ಮಹಾ ಜ್ಞಾನಿ ಯಾಜ್ಞವಲ್ಕ್ಯನ ಸಮೀಪ ಬಂದಳು. ಅವನ ಕರಗಳನ್ನು ತನ್ನ ಕೈಯಲ್ಲಿ ಸೆಳೆದುಕೊಂಡಳು. ಸಂಧ್ಯಾಕಾಲದ ಸುಂದರ ಶಾಂತಿ ಅಲ್ಲೆಲ್ಲ ಆವರಿಸಿತ್ತು. ಅವರೀರ್ವರೂ ಪರಿಪೂರ್ಣ ಪ್ರೇಮದಲ್ಲಿ ಮಿಲನವಾದರು.

●●

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S C. 71/1971

G. ವೆಂಕಟ್ರಮಣಾಚಾರ್ಯ —ವಾದಿ

ಮತ್ತು

(1) ಜಲಜ ಶೆಡ್ತಿ (2) ಕೊರ್ಗ ಶೆಟ್ಟಿ (3) ಶಿವರಾಮ ಶೆಟ್ಟಿ (4) ಚೀಂಕ ಶೆಟ್ಟಿ—ಮೈನರ್— ಗಾರ್ಡಿಯನ್——1ನೇಯವಳು. (5) ಗುಲಾಬಿ ಶೆಡ್ತಿ.

—ಬಾಗಿ ಶೆಡ್ತಿ ಮಕ್ಕಳು ಉಡ್ಪಿ ತಾಲ್ಲೂ ಫೀಲಾವರ ಗ್ರಾಮದ ಕೆಳ ಕುಂಜಾಲು ಪಡುಬೆಟ್ಟಿನಲ್ಲಿರುವವರು.

—ಪ್ರತಿವಾದಿರು.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ನಿಮ್ಮ ತಾಯಿ ಮೃತ ಬಾಗಿ ಶೆಡ್ತಿ ಮತ್ತು 3ನೇ ಪ್ರತಿವಾದಿ ಶಿವರಾಮ ಶೆಟ್ಟಿ ಸಹಾ ತಾರೀಕು 3—5—1968ರಲ್ಲು ಬರಕೊಟ್ಟ ಡಿಮಾಂಡು ನೋಟಿನ ಅಸ್ಲು ಬಡ್ಡಿ ಖೈವೇಜುಗಳನ್ನು ಬರಮಾಡಿಕೊಳ್ಳುವರೆ ಸದ್ರಿ ಮೃತಳ ವಾರೀಸುದಾರರಾದ ನಿಮ್ಮ ಮೇಲೆ ಮಾಡಿದ ಮೇಲ್ಕಂಡ ದಾವೆಯು ತಾರೀಕು 21—9—1971 ಕ್ಕೆಯಿಟ್ಟಿದೆ. ಉದಾಹರಿಸುವಂಥಾದ್ದು ಯಿದ್ದರೆ ಆ ದಿನ್ನ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳಬಹುದು. ತಪ್ಪಿದರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

ಕೋರ್ಟು ಹುಕುಂ ಪ್ರಕಾರ.

K. BALACHANDRA RAO

Advocate for Plaintiff

ಹೊಸ ದಾಖಲೆ

ಅಜ್ಜಮ್ಮನಿಗೆ ಡಾಕ್ಟರೇಟ್!

ಜರ್ಮನಿಯ ಬಾಡೆನ್ ಬಾಡೆನ್‌ನ ಶ್ರೀಮತಿಹಿಲ್ಡಾ ಸ್ಟ್ರಿಂಗರ್‌ಗೆ ಈಗ ಎಪ್ಪತ್ತೆಂಟು ವರ್ಷ ವಯಸ್ಸು. ಪ್ರೌಢಶಾಲಾ ಉಪಾಧ್ಯಾಯಿನಿಯಾಗಿದ್ದು, ನಿವೃತ್ತರಾಗಿಯೇ ಎರಡು ದಶಕಗಳು ಕಳೆದುಹೋದುವು. ಶಾಲೆಗಳಲ್ಲಿ ಅವರು ಪಾಠ ಕಲಿಸಿದ ಹುಡುಗರಿಗೆ ಪಾಠ ಕಲಿಯುವ ಆಸಕ್ತಿ ಇತ್ತೋ ಇಲ್ಲವೋ, ಶ್ರೀಮತಿಯವರಿಗೆ ಮಾತ್ರ ಇನ್ನೂ ಕಲಿಯಬೇಕೆನ್ನುವ ಹಂಬಲ ಹಿಂಗಲಿಲ್ಲ. ವಿದ್ಯಾನ್ವೇಷಣೆಗೆ ವಯೋಮಿತಿಯುಂಟೇ ?

ಸ್ಟ್ರಿಂಗರ್‌ಗೆ ಎರಡೂ ಕಟ್ಟಡ ಕಲೆಯಲ್ಲಿ ಆಸಕ್ತಿ. ನಿವೃತ್ತರಾದ ಮೇಲೆ ಅದರ ಅಭ್ಯಾಸದಲ್ಲಿ ಅವರು ನಿರತರಾದರು. ಅಲ್ಲದೆ, ಈಚೆಗೆ ಕಾರ್ಲ್ಸ್‌ರೂಹಿ ವಿಶ್ವವಿದ್ಯಾಲಯದ ಪರೀಕ್ಷೆಗೆ ಕುಳಿತು ಅವರು ತೇರ್ಗಡೆ ಹೊಂದಿದ್ದರು 78 ವಯಸ್ಸಿನಲ್ಲಿ ಹೀಗೆ ತೇರ್ಗಡೆ ಹೊಂದಿ, ಇಡೀ ಮಹಿಳಾ ಜಗತ್ತಿಗೇ ಮಾನ್ಯತೆ ತಂದುಕೊಟ್ಟಿದ್ದಾರಲ್ಲದೆ, ಇತಿಹಾಸದಲ್ಲಿಯೇ ತಮಗಾಗಿ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದಾರೆ.

ಸ್ಟ್ರಿಂಗರ್‌ರವರ ತಂದೆ ತರ್ಕಶಾಸ್ತ್ರದಪ್ರಾಧ್ಯಾಪಕರಾಗಿದ್ದರು. ಅತೀ ಚಿಕ್ಕ ವಯಸ್ಸಿನಿಂದಲೇ ಮಗಳಿಗೆ ವಿದ್ಯಾಸಕ್ತಿ ಹುಟ್ಟುವಂತೆ ಮಾಡಿದ ಸಾಹಸ ಅವರದು. ಸ್ಟ್ರಿಂಗರ್ ಹುಡುಗಿಯಾಗಿದ್ದಾಗಲೇ ಮ್ಯೂನಿಚ್ಚಿನ ಪಾಲಿಟೆಕ್ನಿಕ್‌ಗೆ ಸೇರಿದರು. ಔದ್ಯೋಗಿಕ ಶಾಲೆಗಳಲ್ಲಿ ಕಲಿಯ ಬಂದ ಮೊದಲ ಜರ್ಮನ್ ಹೆಣ್ಣು ಮಕ್ಕಳಲ್ಲಿ ಅವರೂ ಒಬ್ಬರು. 1918ರಲ್ಲಿ ಕಾರ್ಲ್ಸ್‌ರೂಹಿ ವಿಶ್ವವಿದ್ಯಾನಿಲಯವನ್ನು ಅವರು ಸೇರಿದರು. ಆದರೆ ಮಧ್ಯೆ ಪ್ರೌಢಶಾಲೆಯಲ್ಲಿ ಅವರು ಅಧ್ಯಾಪಕಿಯಾಗಿ ಸೇರಬೇಕಾಗಿಬಂದುದರಿಂದವಿದ್ಯಾಭ್ಯಾಸವನ್ನು ಮುಂದುವರಿಸಲಾಗಲಿಲ್ಲ ತಮ್ಮ ಹಂಬಲ ಪೂರೈಕೆಯನ್ನು ಕಾಣಲು ಅವರಿಗೆ ನಿವೃತ್ತರಾದ ಮೇಲೆಯೇ ವ್ಯವಧಾನ ದೊರೆತದ್ದು.

ಡಾಕ್ಟರೇಟ್ ಪಡೆದ ಶ್ರೀಮತಿಯವರಿಗೆ ವಿಶ್ವಾದ್ಯಂತ ಅಭಿನಂದನೆ ದೊರೆತಿದೆ. ಅವರ ಸಾಹಸವನ್ನು ಅಭಿನಂದಿಸಿ ಎಲ್ಲೆಡೆಯಿಂದಲೂ ಪತ್ರಗಳು ಬರುತ್ತಲೇ ಇವೆ. ಇನ್ನಾದರೂ ವಿಶ್ರಾಂತಿ ತೆಗೆದುಕೊಳ್ಳೋಣವೆಂಬ ಯೋಚನೆಯೇ ಅವರಿಗಿಲ್ಲ. ನಗರ ನಿರ್ಮಾಣ ಯೋಜನೆಗಳನ್ನು ಹಾಕಿಕೊಟ್ಟು ನಗರ ಸೌಂದರ್ಯಾಭಿವೃದ್ಧಿ ಕಾರ್ಯಗಳಲ್ಲಿ ತೊಡಗುತ್ತಾರಂತೆ ಉತ್ಸಾಹಿ ಸ್ಟ್ರಿಂಗರ್ (ಯು ಪಿ. ಎಸ್.)

●

ವಿಶೇಷ ಲೇಖನ

ಮುಂಬೆಳಗಿನಲ್ಲಿ ಮುಂಬಯಿ

ಮುಂಬಯಿ ಅಂದ ತಕ್ಷಣ ನಮಗೆ ಮೊತ್ತಮೊದಲು ನೆನಪಿಗೆ ಬರುವುದು ಅಲ್ಲಿನ ಅಗಾಧವಾದ ಜನಸಂಖ್ಯೆ ಈ ಮಹಾನಗರಿ ಲಕ್ಷಾಂತರ ಜನರಿಗೆ ಆಶ್ರಯ ನೀಡಿರುವಂತೆಯೇ ಅವರಿಗೆ ಸುಖಜೀವನ ನೀಡುವ ಹೊಣೆಯನ್ನೂ ಹೊತ್ತುಕೊಂಡಿದೆ. ಈ ಕಾರ್ಯಕ್ರಮದನ್ವಯ 1966ರ ವರೆಗಿನ ದಶಕದಲ್ಲಿ ಸುಮಾರು 1748 ಮಂದಿ ಸಂತಾನಶಕ್ತಿಹರಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡರು 1967–68ರಲ್ಲಿ ಈ ಸಂಖ್ಯೆ 64,408ರಷ್ಟಿತ್ತು. ಕುಟುಂಬಯೋಜನಾ ಕ್ಷೇತ್ರದಲ್ಲಿನ ಈ ಸಾಧನೆ ಮುಂಬಯಿಗೆ "ಶ್ರೇಷ್ಠ ನಗರ" ವೆಂಬ ಖ್ಯಾತಿಯನ್ನು ತಂದುಕೊಟ್ಟಿದೆ.

ಈ ಸಾಧನೆಯ ಹಿಂದೆ ಮುಂಬಯಿ ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕರಾಗಿರುವ ಡಾ ದತ್ತ ಪೈ ಹಾಗೂ ಅವರ ತಂಡದ ಅವಿಶ್ರಾಂತ ಸೇವೆಯ ಕಥೆಯಿದೆ 1964 ಮೇ ತಿಂಗಳು ಮುಂಬಯಿ ನಗರವನ್ನು ಕಾಲರಾರೋಗದ ಭೀತಿ ಕಾಡುತ್ತಿದ್ದಿತು ನಗರದ ಕಾರ್ಪೊರೇಷನ್ ಈ ರೋಗದ ವಿರುದ್ಧ ಹೋರಾಡಲು, ಡಾ| ಪೈ ಅವರ ಸೇವೆಯನ್ನು ಪಡೆಯಿತು ಡಾ ಪೈ ಈ ರೋಗ ನಿಯಂತ್ರಣದಲ್ಲಿ ಪ್ರಶಂಸನೀಯ ಕಾರ್ಯ ನಿರ್ವಹಿಸಿದರು ಮುಂಬಯಿಯ ಸಾರಿಗೆ ಸಂಸ್ಥೆಯಲ್ಲಿ ಮೂಲೆಗುಂಪಾಗಿದ್ದ ಮೂರು ಬಸ್‌ಗಳನ್ನು ಪಡೆದು ಅವುಗಳನ್ನೇ ಸಂಚಾರಿ ಆಸ್ಪತ್ರೆಯಾಗಿ ಮಾರ್ಪಡಿಸಿದರು ಕರ್ತವ್ಯನಿಷ್ಠೆ ಅವರಿಗೆ ಅಭೂತಪೂರ್ವ ಯಶಸ್ಸನ್ನು ನೀಡಿತು

1963ರ ಮಾತು ಕುಟುಂಬಯೋಜನೆ ಮುಂಬಯಿಯಲ್ಲಿ ಅಷ್ಟಾಗಿ ಜನಪ್ರಿಯವಾಗಿರಲಿಲ್ಲ ಈ ಕಾರ್ಯಕ್ರಮವನ್ನು ಜನಪ್ರಿಯಗೊಳಿಸುವ ಹೊಣೆಯು ಡಾ| ಪೈ ಅವರ ಮೇಲೆಯೇ ಬಿದ್ದಿತು 1966ರಲ್ಲಿ ಒಂದು ಲಕ್ಷ ಜನರಿಗೆ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯನ್ನು ಮಾಡಬೇಕೆಂದೂ, ಮಂಕಿಚಳವಡಿಸಬೇಕೆಂದೂ, ಡಾ| ಪೈ ಅವರಿಗೆ ತಿಳಿಸಲಾಯಿತು ಅವರು ಈ ಸವಾಲನ್ನು ಅಂಗೀಕರಿಸಿದರು ಮುಂಬಯಿ ಉಪನಗರದ ಖೇರ್‌ನಗರ ಕಾಲೋನಿಯಲ್ಲಿ ಸ್ಥಳೀಯ ರೋಟರಿ ಕ್ಲಬಿನ ಸಹಾಯ ಪಡೆದು ಕುಟುಂಬ ಯೋಜನಾ ಶಿಬಿರವನ್ನು ಏರ್ಪಡಿಸಿದರು ಮುಂದೆ ಏಳು ದಿನಗಳೊಳಗಾಗಿಯೇ, 79 ಮಹಿಳೆಯರು ಮಂಕಿಧಾರಣೆ ಮಾಡಿದರಲ್ಲದೇ, ಆರು ಜನರು ಸಂತಾನಶಕ್ತಿಹರಣ ಚಿಕಿತ್ಸೆ ಮಾಡಿಸಿಕೊಂಡರು ಸಮೀಪದಲ್ಲೇ ಇದ್ದ ಪೌರಸಭೆಯ ಪ್ರಸೂತಿಗೃಹ ಹಾಗೂ ಕುಟುಂಬ ಯೋಜನಾ ಕೇಂದ್ರ ಇದಕ್ಕೂ ಮುಂಚೆ 27 ಮಂದಿ ಮಹಿಳೆಯರಿಗೆ ಮಂಕಿಧಾರಣ ಮಾಡಿಸಿತ್ತು.

ಸಂಚಾರಿ ಆಸ್ಪತ್ರೆಗಳು

ಆರೋಗ್ಯ ಹಾಗೂ ಕುಟುಂಬಯೋಜನಾ ಕ್ರಮಗಳಿಗೆಲ್ಲ ಈ ಮುಂಚೆ ಮಧ್ಯಮ ವರ್ಗದ ಜನರನ್ನೇ ಆರಿಸಿಕೊಳ್ಳಲಾಗುತ್ತಿತ್ತು ಹಾಗಾದರೆ ಕೊಳಚೆ ಪ್ರದೇಶಗಳ ನಿವಾಸಿಗಳ ಗತಿ ಏನು? ಎಂಬ ಪ್ರಶ್ನೆ ಉದ್ಭವಿಸಿತು ಕುಟುಂಬ ಯೋಜನಾ ಸಂದೇಶವನ್ನು ಈ ಪ್ರದೇಶಗಳಿಗೆ ತಲುಪಿಸುವ ಕಾರ್ಯ ಆರಂಭವಾಯಿತು ಸಂಚಾರಿ ಆರೋಗ್ಯ ಕೇಂದ್ರ, ಸಂಚಾರಿ ಕುಟುಂಬಯೋಜನಾ ಆಸ್ಪತ್ರೆಯಾಗಿ ಕಾರ್ಯ ನಿರ್ವಹಿಸಲು ಆರಂಭಿಸಿತು ಈ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುವುದು ಸುಲಭವಾಗಿರಲಿಲ್ಲ.

ಅನೇಕ ಸಲ ಕುಟುಂಬಯೋಜನಾ ಕಾರ್ಯಕರ್ತರನ್ನು ಜನರು ಬೆನ್ನಟ್ಟುತ್ತಿದ್ದರು ಇನ್ನು ಕೆಲವು ಕಡೆಗಳಲ್ಲಿ ಕಾರ್ಯಕರ್ತರ ಮುಖ ಕಂಡ ತಕ್ಷಣ ದಢಾರನೇ ಬಾಗಿಲು ಹಾಕುತ್ತಿದ್ದರು ಇನ್ನು ಕೆಲವು ಕಡೆಗಳಲ್ಲಿ ಸಮಾಜವಿರೋಧಿಗಳು ಸಲ್ಲದ ಕಿರುಕುಳ ಕೊಡುತ್ತಿದ್ದರು ಇಷ್ಟೆಲ್ಲಾ ಅಡಚಣೆಗಳನ್ನು ಸಹನೆಯಿಂದ ಜಯಿಸಲಾಯಿತು ಹೀಗೆ ಕುಟುಂಬಯೋಜನೆ ಜನಪ್ರಿಯತೆಗಳಿಸತೊಡಗಿತು ಸಂಚಾರಿ ಕುಟುಂಬ ಯೋಜನಾ ಆಸ್ಪತ್ರೆ ಈ ಪ್ರದೇಶಗಳಲ್ಲಿ ದಿನಾಲು 20 ಮಂದಿ ಮಹಿಳೆಯರಿಗೆ ಮಂಕಿಧಾರಣೆ ಮಾಡತೊಡಗಿತು ಹೀಗೆ ಆರಂಭವಾದ ಕಾರ್ಯಕ್ರಮವನ್ನು ಸಾಮೂಹಿಕ ಚಳುವಳಿಯಾಗಿ ಪರಿವರ್ತಿಸಲು ಡಾ| ಪೈ ಯೋಜನೆ ಹಾಕಿಕೊಂಡರು

ಈ ದಿಶೆಯಲ್ಲಿ ಅವರಿಗೆ ಒಂದು ಆಕರ್ಷಕ ವಿಚಾರ ಹೊಳೆಯಿತು ರೈಲ್ವೆ ಸ್ಟೇಷನ್‌ಗಳಲ್ಲಿ ಏಕೆ ಕುಟುಂಬಯೋಜನಾ ಪ್ರದರ್ಶನ ಏರ್ಪಡಿಸಬಾರದು? ಎಂಬುದೇ ಆ ವಿಚಾರ ಈ ದಿಶೆಯಲ್ಲಿ ಚರ್ಚ್‌ಗೇಟ್ ರೈಲ್ವೆ ಸ್ಟೇಷನ್‌ನಲ್ಲಿ ಕುಟುಂಬಯೋಜನಾ ಪ್ರದರ್ಶನ ನಡೆಯಿತು ಮುಂದೆ 1967ರ ಮಾರ್ಚಿ ತಿಂಗಳಲ್ಲಿ ಮುಂಬಯಿ ವಿಕ್ಟೋರಿಯಾ ಟರ್ಮಿನಸ್‌ನಲ್ಲಿ ಪ್ರದರ್ಶನವನ್ನು ಏರ್ಪಡಿಸಲಾಯಿತು ಪ್ರದರ್ಶನ ಏರ್ಪಡಿಸಿದ ನಂತರ ಮುಂದೇನು? ಎಂಬ ಪ್ರಶ್ನೆ ಬಂತು ಈ ಪ್ರಶ್ನೆಯ ಬೆನ್ನ ಹಿಂದೆಯೇ ಸಂತಾನಶಕ್ತಿಹರಣ ಶಸ್ತ್ರಕ್ರಿಯೆ ಶಿಬಿರವೂ ಏರ್ಪಟ್ಟಿತ್ತು ಸಾವಿರಾರು ಜನ ಈ ಪ್ರದರ್ಶನವನ್ನು ನೋಡಿದರು ಅನೇಕರು ಕುಟುಂಬಯೋಜನೆಗಾಗಿ ಶಸ್ತ್ರಕ್ರಿಯೆ ಮಾಡಿಸಿಕೊಂಡರು ಪುರುಷರ ಸಂತಾನಶಕ್ತಿಹರಣ ಚಿಕಿತ್ಸೆಗೆ ಜನತೆಯಲ್ಲಿ ಭೀತಿಯಿತ್ತು ಚಿಕಿತ್ಸೆಮಾಡಿಸಿಕೊಂಡರೆ ಪುರುಷತ್ವವೇ ನಾಶವಾಗುತ್ತದೆ ಎಂಬ ಭಯವೂ ಇತ್ತು ಈ ಭಯವನ್ನು ನಿವಾರಿಸಿ, ಸಂತಾನ ಉತ್ಪತ್ತಿಯ ಶಕ್ತಿಗೆ ಯಾವುದೇ ಅಪಾಯವಾಗುವುದಿಲ್ಲವೆಂದೂ ಬೇಕೆಂದಾಗ ಈ ಶಕ್ತಿಯನ್ನು ಮತ್ತೆ ಪಡೆಯಬಹುದೆಂದೂ ಖಚಿತಪಡಿಸಲಾಯಿತು

ವೈದ್ಯರ ಮತ್ತು ಸಿಬ್ಬಂದಿಯ ಅಚಲವಾದ ವಿಶ್ವಾಸ, ಹಾಗೂ ನಿಷ್ಠೆ ಮತ್ತು ನಿಸ್ಪೃಹ ಸೇವೆಯಿಂದ ಕುಟುಂಬಯೋಜನಾ ಕಾರ್ಯಕ್ರಮ ಗಮನಾರ್ಹ ಪ್ರಗತಿ ಸಾಧಿಸಿದೆ ಜನಸಂಖ್ಯೆ ನಿಯಂತ್ರಣ ಮುಂಬಯಿಗೆ ಒಂದು ಸಮಸ್ಯೆಯಲ್ಲ ಈಗ ಅಲ್ಲಿ ದಿನಂಪ್ರತಿ 100 ಸಂತಾನಶಕ್ತಿಹರಣ ಶಸ್ತ್ರಕ್ರಿಯೆಗಳನ್ನು ಮಾಡಲಾಗುತ್ತಿದ 1967ರ ಎಪ್ರಿಲ್ ತಿಂಗಳಲ್ಲಿ ನೂರು ನಿರೋಧಗಳನ್ನು ಹಂಚಲಾಗುತ್ತಿದ್ದರೆ ಈಗ 35 000 ನಿರೋಧಗಳ ಹಂಚಿಕೆಯಾಗುತ್ತಿದೆ ಮುಂಬಯಿ ಕುಟುಂಬ ಸರಾಸರಿ ಜನನ ಪ್ರಮಾಣ 2 5 ಮಕ್ಕಳು ಭಾರತ ಸರ್ಕಾರ 1978ರ ಹೊತ್ತಿಗೆ ಜನನ ಪ್ರಮಾಣವನ್ನು ಒಂದು ಸಾವಿರಕ್ಕೆ 23ಕ್ಕೆ ಇಳಿಸಬೇಕೆಂಬ ಗುರಿ ಇಟ್ಟುಕೊಂಡಿದೆ. ಮುಂಬಯಿ ನಗರದಲ್ಲಿ ಜನನ ಪ್ರಮಾಣ 1969ರಲ್ಲೇ 1000ಕ್ಕೆ 23ರಷ್ಟಿದ್ದಿತು ಹೀಗೆ ಪ್ರಗತಿ ಸಾಧಿಸಿರುವ ಮುಂಬಯಿ ಸುಖ ಜೀವನದ ಮಾರ್ಗವನ್ನು ಕಂಡಿದೆ

●●

'ಸ್ಪಿನ್ ಪವಾಡ' ನಡೆಸಬಲ್ಲ ಆ ಕೈ ನಿಮ್ಮ ಬ್ಯಾಂಕ್ ಖಾತೆಯನ್ನು ಬೆಳೆಸುವ ಮೋಡಿ ಹೊಂದಿದೆ.

ಬಿ. ಎಸ್. ಚಂದ್ರಶೇಖರ

ಆಟದಲ್ಲಿ

ಕೆಲಸದಲ್ಲಿ

ಸಿಂಡಿಕೇಟ್ ಬ್ಯಾಂಕ್

ದಿನಾಂಕ 23-8-1971ರಂದು ಕೆನ್ನಿಂಗ್‌ಟನ್ ಓವಲ್‌ನಲ್ಲಿ 18 3-9-38-6ರ ಮೋಡಿಯ ಸಂಖ್ಯೆಗಳನ್ನು ಹೊಂದಿದ್ದ ಲೆಗ್‌ಸ್ಪಿನ್ ಗೂಗ್ಲಿ ಬೌಲರ್ ಚಂದ್ರಶೇಖರ್ ಸಿಂಡಿಕೇಟ್ ಬ್ಯಾಂಕಿನ ಒಬ್ಬ ಆಫೀಸರ್ ಆಗಿ ಬೆಂಗಳೂರಿನ ಕಂಟೋನ್ಮೆಂಟ್ ಶಾಖೆಯಲ್ಲಿ ದುಡಿಯುತ್ತಿದ್ದಾರೆ

In the Court of the Munsif of Buntwal, South Kanara

P & S. C. No. 2/71

Subba Rao —Petitioner.

NOTICE

Please take notice that an application has been filed under Section 372 of the Indian Succession Act for the issue of a Succession Certificate in respect of the assets of Smt Bhagirathiamma If any one has got any objection for the date he has to appear before the Court and filed his objections on 21—9—71 at 11 A. M. by the order of the Court.

(By the order of the Court)

B. A. Somayaji,
Adv for Petitioner

Buntwal, S K Date 3—9—71

ನವಯುಗ

ಹೊನ್ನ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ

ಹೊನ್ನ ಹಬ್ಬದ ವಿಶೇಷ ಸಂಚಿಕೆಗೆ ಜಾಹೀರಾತು ಕೊಟ್ಟು ಸಹಕರಿಸಿರಿ.

ರಶ್ಯ—ಭಾರತ ಸಂರಕ್ಷಣಾ ಒಡಂಬಡಿಕೆ—

ಹಳೆಯ ಹೆಣಕ್ಕೆ ಹೊಸ ಹೊದಿಕೆ

'೧೯೬೨ರ ಚೈನೀ—ಭಾರತ ಜಗಳವು ನೆಹ್ರೂರವರನ್ನು ಕೊಂದಿತು. ೧೯೬೫ರ ಭಾರತ—ಪಾಕ್ ಯುದ್ಧವು ಲಾಲ ಬಹದೂರ ಶಾಸ್ತ್ರಿಯವರ ಶವಸಂಸ್ಕಾರದ ಫಲಿತಾಂಶವನ್ನಿತ್ತಿತು. ಅಯ್ಯೋ! ದೇವರೇ! ಇನ್ನೊಂದು ಯುದ್ಧವಾಗದಿರಲಿ. ನಮಗೆ ಇಂದಿರಾಜೀಯವರ ಜೀವಬೇಕೆಂದು ಪಾಟ್ನಾದಿಂದ ಪ್ರಕಟವಾಗುತ್ತಿರುವ ಉರ್ದು ದೈನಿಕ ಪ್ರಕಟಿಸಿರುವದನ್ನು ಪ್ರಧಾನಿ ಇಂದಿರಾಜೀಯವರ ಗಮನಕ್ಕೆ ತಂದಾಗ ಅವರು ಹೌಹಾರಿದರು- ಪ್ರಕಟಿಸಿದವರ ಮೇಲಲ್ಲ; ಗಮನ ಸೆಳೆದವರ ಮೇಲೆ. ತನ್ನ ಮನಸ್ಸಿನ ಮೇಲೆ ಅದೇನೂ ಪರಿಣಾಮವನ್ನುಂಟು ಮಾಡಿರುವದಿಲ್ಲವೆಂಬುದನ್ನು ಅವರಿಗೆ ವ್ಯಕ್ತಪಡಿಸಬೇಕಾಗಿತ್ತು. ಆದರ ಫಲಿತಾಂಶ ಬೇರೆಯೇ ಆಯಿತು.

ಎಡಪಿದ ಬೆರಳಿಗೆನೇ ಪುನಃ ತಾಗುತ್ತದಂತೆ. ಹಾಗೆನೇ ಎಡಪಿದ ಮನಸ್ಸಿಗೆ ಇನ್ನೊಂದು ಆಘಾತವನ್ನುಂಟುಮಾಡುವ ಸಮಾಚಾರ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಬದ್ಧ ವಿರೋಧಿಗಳಾಗಿರುವ ಬಂಡವಾಳಶಾಹಿ ಮತ್ತು ಕಮ್ಯೂನಿಸ್ಟರು ಕೈಮಿಲಾಯಿಸಿಕೊಳ್ಳುತ್ತಿದ್ದಾರೆ! ಭಾರತ—ಪಾಕಿಸ್ಥಾನಕ್ಕೆ ಬಂದಿದ್ದ ಕಿಸ್ಸಿಂಗರ್ ರಹಸ್ಯವಾಗಿ ಚೈನಾಕ್ಕೆ ಹೋಗಿ ನಿಕ್ಸನ್--ಮಾವೋರ ಭೇಟಿಗೆ ಏರ್ಪಾಡುಮಾಡಿ ಬಂದರು. ಇತ್ತ ಪಾಕಿಸ್ಥಾನವು ಕಾಲುಕೆದರಿ ಭಾರತದೊಂದಿಗೆ ಡಿಕ್ಕಿ ಹೊಡೆಯಲು ಪ್ರಯತ್ನಿಸುತ್ತಿದೆ. ಪಾಕಿಸ್ಥಾನಕ್ಕೆ ಚೈನಾದ ಪೂರ್ಣ ಬೆಂಬಲ ಇದೆ. ಚೈನಾದೊಂದಿಗೆ ಅಮೇರಿಕ ಚೆಲ್ಲಾಟಕ್ಕೆ ಅಡಿಯ ಮುಂದಿಟ್ಟಿದೆ. ಇಂತಹ ಸಮಯದಲ್ಲಿ ಯುದ್ಧ ನಡೆದರೆ, ಪಾಕಿಸ್ಥಾನಕ್ಕೆ ಚೈನಾ ಸಹಾಯಮಾಡಿದರೆ, ಭಾರತಕ್ಕೆ ಅಮೇರಿಕ ಅದ್ಯಾವ ರೀತಿಯಲ್ಲೂ ಸಹಾಯ ಮಾಡುವದಿಲ್ಲವೆಂಬು ಅಮೇರಿಕ ಸ್ಪಷ್ಟವಾಗಿ ಸಾರಿತು.

ಈ ಎರಡು ಘಟನೆಗಳು ಜೀವದ ಮೇಲೆ ಆಶೆ ಇರುವವರ, ಅಧಿಕಾರದ ಮೇಲೆ ಮೋಹ, ಪ್ರೀತಿ ಇರುವವರ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡದಿರಲಾರದು. ಈಗೇನು ಮಾಡುವದು? ಕ್ಷಣಕಾಲ ಮೂಗುಹಿಡಿದು, ಮಾಲೆಯ ರುದ್ರಾಕ್ಷಿಗಳನ್ನೆಣಿಸಿದಾಗ ಹಿಂದಿನ ಒಂದು ಮಾತು ಜ್ಞಾಪಕಕ್ಕೆ ಬರದಿರಲಾರದು. ಬುಲ್ಗೇನಿನ್—ಕ್ರುಶ್ಚೆವ್ ಸ್ವಾಗತವನ್ನು ಸ್ವೀಕರಿಸಿಕೊಂಡು ಹಿಂದಕ್ಕೆ ಹೋಗುವಾಗ ಹೇಳಿರುವ ಮಾತುಗಳು: ಭಾರತ—ರಷ್ಯಾ ಅಕ್ಕಪಕ್ಕದ ರಾಷ್ಟ್ರಗಳು. ನೀವು ಹಿಮಾಲಯದ ಮೇಲೆ ನಿಂತು ಕೂಗಿದಲ್ಲಿ ನಮಗೆ ಕೇಳಿಸುತ್ತದೆ. ಸಹಾಯ ಬೇಕಾದಾಗ ಕರೆದರೆ ಸರಿ, ಒಡನೆ ಬಂದುಬಿಡುತ್ತೇವೆ....

ಇನ್ನುಳಿದ ದಾರಿ? ಅಮೆರಿಕ ಕೈಬಿಟ್ಟ ಮೇಲೆ ಇನ್ನೇನು ಮಾಡುವದು? ಹಿಮಾಲಯದ ಮೇಲೆ ಕೂಗಿ ಕರೆಯುವದೇ? ಇತರರಿಗೂ ಕೇಳಿಸುತ್ತದಲ್ಲವೆ? ಇಲ್ಲಿಂದ ಓರ್ವ ಒಪ್ಪಂದಗಾರರನ್ನು ಕಳುಹಿಸಿದಲ್ಲಿ? ಬಹಳ ಒಳ್ಳೆಯದು. ಹಾಗೆಯೇ ಧಾರರನ್ನು ಕಳುಹಿಸಿ ಬೀಜಾರೋಪಣೆ ಮಾಡಿಯಾಯಿತು. ರಷ್ಯಾದಿಂದ ಪರದೇಶ ಮಂತ್ರಿ ಏಂಡ್ರಿ ಗ್ರೋಮಿಕೋ ಇಲ್ಲಿಗೆ ಬಂದರು. ಇಲ್ಲಿನ ಪರದೇಶ ಮಂತ್ರಿ, ಪ್ರಧಾನಿಗಳೊಂದಿಗೆ ಮಾತುಕತೆ ನಡೆಯಿತು. ಒಪ್ಪಂದಕ್ಕೆ ಇಬ್ಬಣದವರೂ ಸಹಿಹಾಕಿದರು. ಒಪ್ಪಂದದಲ್ಲಿ ಹನ್ನೆರಡು ನಿಬಂಧನೆಗಳಿವೆ. [ಹದಿನೆರಡಕ್ಕೆ ತುಳು ಭಾಷೆಯಲ್ಲಿ ಪದ್ರಾಡೆಂದು ಹೇಳುತ್ತಾರೆ. ಪದ್ರಾಡೆಂದರೆ ಇನ್ನೊಂದರ್ಥ ಪರಾರಿಯೆಂದು.] ಇದಕ್ಕೆ ಭಾರತದ ಪರದೇಶ ಮಂತ್ರಿಯೂ ರಷ್ಯಾದ ಪರದೇಶ ಮಂತ್ರಿಯೂ ಸಹಿ ಹಾಕಿರುವರು.

ಮೊದಲ ನಿಬಂಧನೆಯ ಸಾರಾಂಶ: ಈ ಎರಡು ದೇಶಗಳ ಮತ್ತು ಜನರ ನಡುವೆ ಮಿತ್ರತ್ವ ಮತ್ತು ಶಾಂತಿ ಪ್ರಬಲಗೊಳ್ಳಬೇಕೆಂದು ಗಂಭೀರವಾಗಿ ನಾವು ಸಾರುತ್ತೇವೆ ಇಬ್ಬಣದವರೂ ಸ್ವಾತಂತ್ರ್ಯ, ಸಾರ್ವಭೌಮತೆ, ಮತ್ತು ಒಕ್ಕಟ್ಟನ್ನೂ ಮರ್ಯಾದಿಸ ಬೇಕು. ಇನ್ನೊಬ್ಬರ ಒಳ ವ್ಯವಹಾರದಲ್ಲಿ ತಲೆಹಾಕ ಬಾರದು. ಇವನ್ನು ಗಮನದಲ್ಲಿಟ್ಟುಕೊಂಡು ಪ್ರಾಮಾಣಿಕ ಮಿತ್ರತ್ವವನ್ನು, ಸಂಬಂಧವನ್ನು ಇನ್ನು ಮುಂದಕ್ಕೂ ಬೆಳೆಸಬೇಕು....

ಮಾತಿಗೂ ಕೃತಿಗೂ, ಮಲೆಗೂ ಕಡಲಿಗಿರುವ ಸಂಬಂಧದಂತಿದೆ ಮೊದಲ ಮಾತು. ಯೋಚನೆ ಒಳ್ಳೆಯದು. ನಮ್ಮ ಮುಂದಿರುವ ಕೃತಿ ಹೇಗಿದೆ? ಭಾರತದ ಭೂಭಾಗವನ್ನು ಚೈನಾದ ಭೂ ಪ್ರದೇಶವೆಂದು ಆಕ್ರಮಣ ನಡೆದಂದಿನಿಂದ ರಷ್ಯಾ ತನ್ನ ಭೂಪಠದಲ್ಲಿ ತೋರಿಸುತ್ತ ಬಂದಿದೆ. ಈ ವಿಷಯ ಭಾರತದ ಲೋಕ ಸಭೆಯಲ್ಲಿ ಬಿರುಗಾಳಿ ಎಬ್ಬಿಸಿರುತ್ತದೆ. ಇಬ್ಬಣದ ಸರಕಾರಗಳ ನಡುವೆ ಮಾತುಕತೆಯ ವ್ಯವಹಾರ ನಡೆಯುತ್ತಿದೆಯಂತೆ. ಇದುವರೆಗೂ ರಷ್ಯಾ ತನ್ನ ಭೂಪಠವನ್ನು ತಿದ್ದಿರುವದಿಲ್ಲ. ಇದು ಸಾರ್ವಭೌಮತೆಯನ್ನು ಮರ್ಯಾದಿಸುವ ಲಕ್ಷಣವೇನು? ಅಲ್ಲಿ ರಷ್ಯಾವೇ ಸರಿ ಏನು? ಸಹಿಹಾಕಿದ ನಮ್ಮ ಅಮಾತ್ಯರು ನಮ್ಮಿಂದ ಚೈನೀ ನೆಲದ ಮೇಲೆ ಆಕ್ರಮಣ ನಡೆದಿದೆ ಎಂಬುದನ್ನು ಒಪ್ಪಿಕೊಂಡು ಬಿಟ್ಟರೇನು? ಇನ್ನು ಆ ಸ್ಥಳಕ್ಕೆ ಎಳ್ಳು ನೀರು ಬಿಟ್ಟಂತೆಯೇ ಸರಿ. ಒಪ್ಪಂದದ ಮೊದಲ ಕೊಡುಗೆ ಇದು! ಆಕ್ರಮಣಕ್ಕೊಳಗಾದ ರಾಷ್ಟ್ರವು ತಾನೇ ಆಕ್ರಮಣ ನಡೆಸಿದವನೆಂದು ಬರೆದು ಕೊಡುವದು....ಪೋಲಿಸ್ ಸ್ಟೇಷನುಗಳಲ್ಲಿ ಹಾಗೆ ನಡೆಯುತ್ತದಂತೆ. ಪೋಲಿಸರ ಪೆಟ್ಟಿಗೆ ಭಯಪಟ್ಟು ತಾನೇ ಕದ್ದಿದ್ದೇನೆ, ಖೂನಿ ಮಾಡಿದ್ದೇನೆಂದು ಬರೆದುಕೊಡುತ್ತಾರಂತೆ! ಅಂತರಾಷ್ಟ್ರೀಯ ಒಪ್ಪಂದಗಳಲ್ಲಿ ಇದೇ ಪ್ರಪ್ರಥಮ ಬಾರಿಗೆ ಇರಬಹುದು, ಓಂ ಶಾಂತಿ, ಶಾಂತಿ, ಶಾಂತಿಯೆನ್ನುವ ರಾಷ್ಟ್ರ ತಾನು ಆಕ್ರಮಣಗಾರನೆಂದು ಬರೆದುಕೊಟ್ಟಿರುವದು.

ಇನ್ನೊಬ್ಬರ ಒಳ ವ್ಯವಹಾರದಲ್ಲಿ ಕೈಹಾಕಬಾರದು. ರಷ್ಯಾದ ಒಳವ್ಯವಹಾರದಲ್ಲಿ ನಾವು ಕೈಹಾಕಿದ್ದೇವೇನು? ಅದರಬದಲು ರಷ್ಯಾ? ಅಲ್ಲಿಯ ಪತ್ರಿಕೆಗಳು, ಆಕಾಶವಾಣಿ ಬಿಡದೆ ನಮ್ಮ ದೇಶದ ಕೆಲವು ಪಕ್ಷ—ಸಂಘಟನೆಗಳ ಕುರಿತು ಅಪಪ್ರಚಾರ ಮಾಡುತ್ತ ಬಂದಿವೆ. ಅವುಗಳ ಮೇಲೆ ತೀವ್ರ ಕ್ರಮ ಕೈಗೊಳ್ಳಬೇಕೆಂದು ರಷ್ಯಾ ಹೇಳಿದುದನ್ನು ಟೀಕಿಸಿರುವದರಿಂದಾಗಿ ಮುರಾರ್ಜಿ ದೇಸಾಯಿಯವರಿಗೆ ಅರ್ಧಚಂದ್ರ ಪ್ರಯೋಗ ನಡೆಯಿತು. ಕಳೆದ ಸಲದ ಲೋಕ ಸಭಾ ಚುನಾವಣೆಯಲ್ಲಿ ರಷ್ಯಾ ರಾಯಭಾರಿ ಖಚೇರಿಗೆ ಇಲ್ಲಿ ಕಾರುಬಾರು ನಡೆಸಿರುವದು ಬಹಿರಂಗವಾಗಿದೆ. ಇವೆಲ್ಲಾ ಒಳ ವ್ಯವಹಾರದಲ್ಲಿ ಕೈ ಹಾಕದೆ ಇರುವದೆಂದೇನು?

ಇವನ್ನು ಗಮನದಲ್ಲಿಟ್ಟುಕೊಂಡು ನಮ್ಮವರು ಒಪ್ಪಂದಕ್ಕೆ ಒಪ್ಪಿಕೊಳ್ಳಬೇಕಾಗಿತ್ತು. ಅದರ ಬದಲು ಪುನಃ ಪುನಃ ಮಿತ್ರತ್ವದ ಮಾತನ್ನೆತ್ತಲಾಗಿರುತ್ತದೆ. ಚೈನಾ ಆಕ್ರಮಣ ನಡೆಸಿದಾಗ ಇದೇ ರಷ್ಯಾ ಹೇಳಿದ್ದೇನು? —ಹೌದು ಭಾರತ ನಮಗೆ ಮಿತ್ರರಾಷ್ಟ್ರ, ಚೈನಾ ನಮ್ಮ ಸಹೋದರ ರಾಷ್ಟ್ರ; ಇದನ್ನೆಂತು ಮರೆಯಲು ಸಾಧ್ಯ? ಪುನಃ ನಾವು ಅದೇ 'ಮಿತ್ರ'ನ ಬಳಿ ಹೋಗುತ್ತಿದ್ದೇವೆ. ಅವನ 'ಸಹೋದರ' ನಮ್ಮ ಮೇಲೆ ಆಕ್ರಮಣ ನಡೆಸಿದಲ್ಲಿ ನಮಗೆ ರಷ್ಯಾ ಸಹಾಯ ಮಾಡೀತೇ?

ಎರಡನೆಯ ನಿಬಂಧನೆಯ ಸಾರಾಂಶ: ಒಪ್ಪಂದದ ಇಬ್ಬಣದವರೂ ಆಯಾಯಾ ದೇಶದ ಜನರ ಶಾಂತಿ ಮತ್ತು ಭದ್ರತೆಯ ಬಾಳಿಕೆಯ ದಾರಿಯನ್ನು ಸರಿಗೊಳಿಸಲು ಏಷ್ಯಾದಲ್ಲಿ ಶಾಂತಿ ಬಲಪಡುವಂತೆ, ವಿಶ್ವ ಶಾಂತಿಗಾಗಿ ಎಲ್ಲಾ ತರಹಗಳ ಶಸ್ತ್ರಗಳ ನಿಶ್ಶಸ್ತ್ರೀಕರಣಕ್ಕಾಗಿ ಕರೆಯನ್ನೀಯುತ್ತಾರೆ

ಅನೇಕಾನೇಕ ಅಣ್ವಸ್ತ್ರಗಳನ್ನು ತಯಾರಿಸುತ್ತಿರುವ ರಾಷ್ಟ್ರ ನಿಶ್ಶಸ್ತ್ರೀಕರಣದ ಕುರಿತು ಒಪ್ಪಂದಕ್ಕೆ ಸಹಿಹಾಕುತ್ತಿದೆ! ಯಾರ ಒಟ್ಟಿಗೆ? ಅಣ್ವಸ್ತ್ರ ಅಂದರೇನೆಂದು ಗೊತ್ತಿಲ್ಲದ ಶಾಂತ ರಾಷ್ಟ್ರದ ಬಳಿ! ನಾವು ತಯಾರಿಸಲೇ ಬಾರದು. ಭಾರತ ಅಣ್ವಸ್ತ್ರ ತಯಾರಿಸದಿದ್ದಲ್ಲಿ ಏಷ್ಯಾದಲ್ಲೇ ಏಕೆ, ವಿಶ್ವದಲ್ಲೇ ಶಾಂತಿ ನೆಲೆಸುತ್ತದೆ! ಎಂತಹ ಬೆಣ್ಣೆ!!

ಮೂರನೆಯ ನಿಬಂಧನೆಯ ಸಾರಾಂಶ. ಜಾತಿ-ಜನಾಂಗಗಳ ಮಾತನ್ನು ಬದಿಗೊತ್ತಿ, ರಾಷ್ಟ್ರಗಳ ಮತ್ತು ಎಲ್ಲಾ ಜನರ ಸಮಾನತೆಯ ತತ್ವದ ಮೇಲಿನ ನಿಷ್ಠೆಯ ಮಾರ್ಗದರ್ಶನದಲ್ಲಿ ವಸಾಹತುಗಾರಿಕೆ ವರ್ಗಾ ಆಡಳಿತವನ್ನು ಇಬ್ಬಣದವರೂ ಟೀಕಿಸುತ್ತಾರೆ. ಇವುಗಳ ಬಂಧನದಿಂದ ಬಿಡುಗಡೆ ಹೊಂದಲು ಪ್ರಯತ್ನಿಸುತ್ತಿರುವ ಜನರಿಗೆ ಇಬ್ಬಣದವರೂ ಸಹಾಯ ಮಾಡಲು ಇತರರೊಂದಿಗೆ ಕೂಡಿಕೊಳ್ಳಬೇಕು.

ಹಂಗೇರಿ, ಪೋಲೇಂಡ್, ಝೆಕೊಸ್ಲೋವೇಕಿಯಾ.... ಎಲ್ಲಿ? ಎಲ್ಲಿ? ರಷ್ಯಾದ ಕರಡಿ ಅವನ್ನು ಗುಳಂಕರಿಸಿಕೊಂಡಿಲ್ಲವೇನು? ಇಂತಹ ರಷ್ಯಾ ನಮಗೆ ವಸಾಹತುಗಾರಿಕೆ, ವರ್ಣ ಆಡಳಿತದ ಮೇಲೆ ಭಾಷಣಕೊಡುತ್ತಿದೆ! ನಾವೂ ಸರಿಯೆಂದು ಸಹಿಹಾಕುತ್ತಿದ್ದೇವೆ. ರಷ್ಯಾದ ಕೆಂಪು ಕಣ್ಣಿಗೆ ಯಾವದು ರೇಷಿಯಾಲಿಸಂ, ಕೊಲನಿಯಾಲಿಸಮೆಂದು ಕಂಡುಬರುತ್ತದೋ ಅದನ್ನು ನಾವು ಟೀಕಿಸಬೇಕು. ಅದು ಸರಿಯೆಂದಲ್ಲಿ ನಾವು ತಲೆ ಅಲ್ಲಾಡಿಸಬೇಕು. ಚೈನಾ ತ್ರಿವಿಷ್ಟಪವನ್ನು (ಟಿಬೇಟನ್ನು)ನುಂಗಲಿ, ಯಾರೂ ತುಟಿ ಎರಡು ಮಾಡಬಾರದು! ಪೂರ್ವ ಬಂಗಾಲದ ಜನತೆ ಕ್ರೂರತೆಯನ್ನು ಸಹಿಸಲಾರದೆ ಸ್ವಾತಂತ್ರ್ಯ ಕೇಳಿದರೆ ಅದಕ್ಕೆ ತುಟಿಸಹಾಯಕ್ಕಿಂತ ಅಧಿಕ ಇನ್ನೇನೂ ಮಾಡಬಾರದು! ಈ ನಿಬಂಧನೆಯತ್ತ :ರಷ್ಯಾದ ಗಮನವನ್ನೇಕೆ ಸೆಳೆಯಲಿಲ್ಲ?

ನಾಲ್ಕನೆಯ ನಿಬಂಧನೆಯ ಸಾರಾಂಶ: ಭಾರತದ ಗಣರಾಜ್ಯವು ಎಲ್ಲಾ ರಾಷ್ಟ್ರಗಳೊಂದಿಗೆ ಸಹಕಾರ ಮತ್ತು ಸ್ನೇಹತ್ವಗಳನ್ನು ಬಲಪಡಿಸುವದನ್ನು ಗುರಿಯಾಗಿಟ್ಟು

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
134 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:- **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಕೊಂಡಿರುವ ಸೋವಿಯಟ್ ಸೋಶ್ಯಾಲಿಸ್ಟ್ ಗಣರಾಜ್ಯಗಳ ಒಕ್ಕೂಟದ ಶಾಂತಿ-ಪ್ರೇಮಿ ಧೋರಣೆಯನ್ನು ಮರ್ಯಾದಿಸುತ್ತದೆ.

ಸೋವಿಯಟ್ ಸೋಶ್ಯಾಲಿಸ್ಟ್ ಗಣರಾಜ್ಯಗಳ ಒಕ್ಕೂಟವು ಭಾರತದ ನಿರ್ಲಿಪ್ತ ಧೋರಣೆಯನ್ನು ಮರ್ಯಾದಿಸುತ್ತದೆ. ಇದರಿಂದ ವಿಶ್ವಶಾಂತಿ ಸಾಧ್ಯ.

ರಷ್ಯಾ ಶಾಂತಿ ಪ್ರೇಮಿ ದೇಶ! ಅದರ ಮಾತಿನಲ್ಲಿ ಹೇಳುವದಿದ್ದಲ್ಲಿ ಅದೊಂದು ದೇಶವಲ್ಲ, ದೇಶಗಳ ಒಕ್ಕೂಟ. ಅದು ಸುತ್ತಮುತ್ತಲಿನ ರಾಜ್ಯಗಳನ್ನು ಆದಾಗಲೇ ನುಂಗಿ ನೀರು ಕುಡಿದಿರುತ್ತದೆ. ಅದರ ಸಹೋದರ-ರಾಷ್ಟ್ರ ಚೈನಾವೇ ರಷ್ಯಾವು ಯುದ್ಧಖೋರವೆಂದು ಕರೆದಿರುತ್ತದೆ. ನಮ್ಮ ನಿರ್ಲಿಪ್ತತೆಗೆ ಅದು ಪ್ರಶಂಸನಾ ಪತ್ರವನ್ನೀಯುತ್ತದೆ-ಅದು ಆಕ್ರಮಣ ನಡೆಸಿದಾಗ ನಾವು ಖಂಡಿಸದೆ ಇದ್ದುದಕ್ಕೆ! ಮತ್ತು ಅದಕ್ಕೆ ಸಂತೋಷವಾಗುವಂತೆ ಇತರ ರಾಷ್ಟ್ರಗಳನ್ನು ಖಂಡಿಸಿರುವದಕ್ಕೆ! ರಷ್ಯಾದ ಸ್ನೇಹ—ಸಹಕಾರವೆಂದರೆ ತೋಳ-ಕುರಿಗಳ ಸ್ನೇಹ-ಸಹಕಾರವೇ ಸರಿ. ಒಂದು ದೇಶ ಕಮ್ಯೂನಿಸ್ಟ್ ದೇಶವಾಗಬೇಕಾಗಿದ್ದಲ್ಲಿ ಅದು ರಷ್ಯಾದ ನೆರವನ್ನು ಕೋರಬಹುದು.

ಐದನೆಯ ನಿಬಂಧನೆಯ ಸಾರಾಂಶ: ವಿಶ್ವಶಾಂತಿ-ಭದ್ರತೆಗೆ ಮುಖ್ಯತ್ವವನ್ನೀಯಬೇಕು. ಇದನ್ನು ಗಮನದಲ್ಲಿಟ್ಟುಕೊಂಡು ಒಪ್ಪಂದಗಾರರ ನಡುವಣ ಸಂಪರ್ಕ ಬೆಳೆಯಬೇಕು. ಈ ಎರಡು ದೇಶಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಪ್ರಮುಖ ರಾಜಕಾರಣಿಗಳ ಅಭಿಪ್ರಾಯಗಳನ್ನು ಕೇಳಿಕೊಳ್ಳಬೇಕು, ವಿಶೇಷ ರಾಯಭಾರಿಗಳನ್ನು ಬರಮಾಡಿಕೊಳ್ಳಬೇಕು, ಸರಕಾರಿ ಪ್ರತಿನಿಧಿಗಳು ಆಗಾಗ್ಗೆ ಭೇಟಿಯಾಗಬೇಕು.

ಹೊರ ನೋಟಕ್ಕಿದು ಬಹಳ ಚೆನ್ನಾಗಿದೆ. ರಷ್ಯಾದ ರಾಯಭಾರಿ ಕಚೇರಿಗಳು ಇಲ್ಲೇನು ಮಾಡುತ್ತಿವೆ? ಅಲ್ಲಿಂದ ಬರುತ್ತಿರುವ ಅನ್ಯಾನ್ಯ ರಂಗಗಳ ಪ್ರತಿನಿಧಿಗಳು ಇಲ್ಲೇನು ಮಾಡುತ್ತಿದ್ದಾರೆ? ಅವರಿಗೆ ಇಲ್ಲಿನ ಕಮ್ಯೂನಿಸ್ಟರ ಕಾರ್ಯಾಲಯಗಳಲ್ಲಿ ಏನು ಕೆಲಸ? ಇಲ್ಲಿಯ ಕಮ್ಯೂನಿಸ್ಟರನ್ನೇತಕ್ಕೆ ರಹಸ್ಯವಾಗಿ ಕಂಡು, ಗುಪ್ತ ಮಾತುಕತೆಗಳನ್ನಾಡಬೇಕು? ಇದು ದೇಶದೊಳವ್ಯವಹಾರದಲ್ಲಿ ತಲೆ ಹಾಕುವದೇ ಇದೆ. ಇನ್ನು ಹೆಚ್ಚಿನ ಪ್ರತಿನಿಧಿಗಳು ಬಂದಲ್ಲಿ ಅವರು ಪ್ರಭಾವ ಬೀರುವದರಲ್ಲಿ ಸಂದೇಹವಿಲ್ಲ.

ಅದೇ ಇಲ್ಲಿಂದ ಅಲ್ಲಿಗೆ ಹೋಗುವ ಪ್ರತಿನಿಧಿಗಳಿಗೆ ಅಲ್ಲಿ ಮನಸೇಚ್ಛೆ ತಿರುಗಾಡುವ ಎಲ್ಲರೊಡನೆ ಮಾತಾಡುವ ಸಂದರ್ಭಗಳು ಸಿಗುತ್ತವೆಯೇ? ಇಲ್ಲವೇ ಇಲ್ಲ. ಸರಕಾರಿ ನಿಯೋಜಿತ ಕಾರ್ಯಕ್ರಮದಂತೆ ನಡೆದು ಮಜಾಮಾಡಿ ಹಿಂತಿರುಗಬೇಕು, ಅಷ್ಟೇ. ಇಂತಹ ಬದಲಾವಣೆಯೇ ನಮಗೆ ಬೇಕಾಗಿದೆ ಏನು?

ಆರನೆಯ ನಿಬಂಧನೆಯ ಸಾರಾಂಶ: ಆರ್ಥಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಸಹಕಾರಗಳಿಗೆ ಮುಖ್ಯತ್ವವನ್ನಿತ್ತು ಒಪ್ಪಂದದ ಎರಡೂ ಬಣಗಳು ಸಹಕಾರವನ್ನು ಸಂವರ್ಧಿಸಬೇಕು, ಇದಕ್ಕೆ ವಿಶೇಷ ಏರ್ಪಾಡು ಮಾಡಬೇಕು

ಆರ್ಥಿಕ ರಂಗದಲ್ಲಿ ಅಮೇರಿಕ ನಮಗೆ ಬಹಳಷ್ಟು ಸಹಾಯ ಮಾಡಿದೆ. ಬಂಗ್ಲಾ ಬನ್ನದ ಈ ವೇಳೆಯಲ್ಲಿ ಅದ್ಯಾವ ಆರ್ಥಿಕ ನೆರವನ್ನು ನಮಗೆ ರಷ್ಯಾ ಕೊಟ್ಟಿರುತ್ತದೆ? ಕಿಡ್ವಾಯಿ ಇಲ್ಲವಾದರೂ ರಷ್ಯಾ ಗೋಧಿ ಕೊಟ್ಟು ನಮ್ಮನ್ನು ಮೋಸಗೊಳಿಸಿರುವದನ್ನು ಇಷ್ಟು ಬೇಗನೆ ಮರೆಯಲು ಸಾಧ್ಯವಿರುವದಿಲ್ಲ. ಇನ್ನು ವೈಜ್ಞಾನಿಕ-ತಾಂತ್ರಿಕ ರಂಗಗಳಲ್ಲೂ ಹಾಗೆನೇ. ನಮಗೆ 'ಮಿಗ' ಕೊಡುತ್ತೇನೆಂದು ರಷ್ಯಾ ಮರುಳುಗೊಳಿಸಿತು. ನಿರ್ದಿಷ್ಟ ಸಮಯಕ್ಕೆ ಸರಿಯಾಗಿ ಅವು ಬರದೆ ಇದ್ದದ್ದು ಅವುಗಳ ಬಿಡಿ ಭಾಗಗಳು ದೊರಕದಿರುವದು ಇವೆಲ್ಲವನ್ನು ಕಂಡಿರುವ ನಾವು ಇನ್ನು ಮಿಗಗಳಾಗಿಲ್ಲ. ಯೋಚನಾಶಕ್ತಿಯುಳ್ಳ ಮಾನವರಿದ್ದೇವೆ. ಸ್ವತಂತ್ರ ಭಾರತದ ಪ್ರಜೆಗಳಿದ್ದೇವೆ.

ಒಂದೆಡೆ ಸಚಿವ ಮಂಡಳಿಗಳು ಇಂತಹ ನೆರವನ್ನು ಸ್ವೀಕರಿಸುವದಿಲ್ಲ. ಅದರಲ್ಲಿ ಏನಾದರೂ ಗಂಟು ಇದ್ದೇ ಇರುತ್ತದೆ. ನಾವು ಕ್ರಯಕ್ಕೆ ತೆಗೆದುಕೊಳ್ಳುತ್ತೇವೆಂದು ಸಾರುತ್ತಾರೆ, ಇನ್ನೊಂದೆಡೆ ಇಂತಹ ಒಪ್ಪಂದಗಳಿಗೆ ಬಂಧನಕ್ಕೊಳಗಾಗುತ್ತಿದ್ದಾರೆ. ಅವರು ಮಾತ್ರವಲ್ಲ ಇಡಿ ರಾಷ್ಟ್ರವನ್ನು ಬಂಧನಕ್ಕೊಳಗಾಗಿಸುತ್ತಿದ್ದಾರೆ.

ಏಳನೆಯ ನಿಬಂಧನೆಯಲ್ಲಿ ಪಂದ್ಯಾಟ, ಸಂಚಾರ, ಚಲಚಿತ್ರ, ದೂರದೃಶ್ಯ, ಆಕಾಶವಾಣಿ, ಪತ್ರಿಕೆ, ಸಾರ್ವಜನಿಕ ಆರೋಗ್ಯ, ವಿದ್ಯೆ, ಸಾಹಿತ್ಯ, ಕಲೆ, ವಿಜ್ಞಾನಗಳ ರಂಗಗಳಲ್ಲಿ ಸಂಪರ್ಕ— ಸಂಬಂಧ ಈ ಎರಡು ಬಣಗಳ ನಡುವೆ ಬೆಳೆಯಬೇಕೆಂದಿದೆ.

ಈಗಾಗಲೇ ಅಲ್ಲಿಯ ಆಕಾಶವಾಣಿ ಇಲ್ಲಿನ ಪಕ್ಷಗಳನ್ನು ಕಟುವಾಗಿ ಟೀಕಿಸುತ್ತಿದೆ. ಕಮ್ಯೂನಿಸಮಿನ ಪ್ರಚಾರ ಎಲ್ಲಾ ರೀತಿಯಲ್ಲೂ ನಡೆಯುತ್ತಿದೆ. ಇಲ್ಲಿನ ಕಮ್ಯೂನಿಸ್ಟರ ಪತ್ರಿಕೆಗಳಿಗೆ ಜಾಹಿರಾತುಗಳನ್ನು ಕೊಡುವದು ನಡೆದೇ ಇದೆ. ಪುಕ್ಕಟೆ ಸಾಹಿತ್ಯಗಳನ್ನು ಇಲ್ಲಿನ ಕಮ್ಯೂನಿಸ್ಟ್ ಪಾರ್ಟಿಗೆ ಒದಗಿಸುತ್ತಿದ್ದು, ಅದನ್ನು ಮಾರಿ ಬಂದ ಹಣವನ್ನು ಇಲ್ಲಿಯ ಕಮ್ಯೂನಿಸ್ಟ್ ಪಾರ್ಟಿ ಉಪಯೋಗಿಸಿಕೊಳ್ಳುತ್ತಿದೆ. ಇದೆಲ್ಲಾ ಇನ್ನೂ ಹೆಚ್ಚಾಗಬೇಕು!

ಎಂಟನೆಯ ನಿಬಂಧನೆಯಲ್ಲಿ ದೇಶದ ರಕ್ಷಣೆಯ ವಿಷಯವಿದೆ. ಈ ಎರಡು ಬಣಗಳೊಳಗೆ ಸಾಂಪ್ರದಾಯಿಕ ಸ್ನೇಹ ಸಂಬಂಧ ಬೆಳೆದಿರುತ್ತದೆ. ಅದನ್ನಿನ್ನು ಸಂವರ್ಧಿಸಬೇಕು. ಇನ್ನೊಂದು ಬಣಕ್ಕೆ ವಿರುದ್ಧವಾಗುವ ರೀತಿಯಲ್ಲಿ ಯಾವ ಬಣವೂ ಸೈನಿಕ ಮೈತ್ರಿಗೊಪ್ಪಬಾರದು. ಒಂದು ಬಣವು ಇನ್ನೊಂದರ ಮೇಲೆ ಆಕ್ರಮಣ ನಡೆಸಕೂಡದು, ಸೈನಿಕ ಸಂಘರ್ಷಣೆ ನಡೆಯುವ ರೀತಿಯಲ್ಲಿ ವರ್ತಿಸಬಾರದು.

ಒಂಬತ್ತು ಮತ್ತು ಹತ್ತನೆಯ ನಿಬಂಧನೆಗಳೂ ರಕ್ಷಣೆಗೆ ಸಂಬಂಧಪಟ್ಟವಿವೆ.

ರಷ್ಯಾದ ಅಥವಾ ಭಾರತದ ಮೇಲೆ ಯಾರಾದರೂ ಆಕ್ರಮಣ ನಡೆಸಿದಲ್ಲಿ ಆಕ್ರಮಣ ನಡೆಸಿದವರಿಗೆ ಇವರ್‍ಯಾರೂ ಯಾವ ರೀತಿಯ ಸಹಾಯವನ್ನೂ ಮಾಡಕೂಡದು. ಈ ರೀತಿಯ ಆಕ್ರಮಣ ನಡೆದಾಗ ಈ ಎರಡು ಬಣಗಳು ಒಡನೆ ವಿಚಾರ-ವಿನಿಮಯ ಮಾಡಿಕೊಳ್ಳಬೇಕು. ಅವರವರ ದೇಶಗಳ ಶಾಂತಿ ಮತ್ತು ಭದ್ರತೆಗೆ ಸೂಕ್ತ ಪರಿಣಾಮಕಾರಿ ಕ್ರಮವನ್ನು ಕೈಗೊಳ್ಳಬೇಕು.

ಇಬ್ಬಣಗಳೂ ಬೇರಿನ್ನಾವ ರಾಷ್ಟ್ರಗಳೊಂದಿಗೂ ರಹಸ್ಯವಾಗಿಯಾಗಲೀ, ಬಹಿರಂಗವಾಗಿಯಾಗಲೀ, ಈ ಒಪ್ಪಂದಕ್ಕೆ ಒಪ್ಪಂದವನ್ನು ಮಾಡಿಕೊಳ್ಳ ಕೂಡದು.

ಪಾಕಿಸ್ತಾನ ಬಹಿರಂಗವಾಗಿ ಯುದ್ಧಘೋಷಣೆಯನ್ನು ಮಾಡಿತೆಂದು ಭಾವಿಸೋಣ ಆಗ ನಾವು ರಷ್ಯಾಕ್ಕೆ ರಾಯಭಾರಿಗಳನ್ನು ಕಳುಹಿಸಿ ಮಾತುಕತೆ ಆಡುತ್ತಾ ಇರಬೇಕು. [ಗೋಧಿ, ಮಿಗ್....ಮರೆತಿಲ್ಲ] ರಷ್ಯಾದಿಂದ ಶಸ್ತ್ರಾಸ್ತ್ರ ಬರಲಿಲ್ಲ. ಅದು ಕಳುಹಿಸಿಕೊಡುವವಷ್ಟು ತಯಾರಿಸುವದಿಲ್ಲವೆಂದು ಬಿಟ್ಟಿತು. ಆಗ ಇತರ ರಾಷ್ಟ್ರಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವ ಹಕ್ಕು ನಮಗಿರುವದಿಲ್ಲ. ರಷ್ಯಾಕ್ಕೆ ನಮ್ಮ ನೆರವು ಬೇಕಾಗಿಲ್ಲ. ಸರಕಾರದ ಶಾಂತಧೋರಣೆಯಿಂದಾಗಿ ಅಣುಗುಂಡುಗಳನ್ನು ನಾವಿಂದು ದೀಪಾವಳಿಯ ಸಿಡಿಮದ್ದುಗಳಂತೆ ಎದುರಿಸಬೇಕು. ಇದು ಸಹಾಯ ಸ್ವೀಕಾರದ ಸಂಗತಿ.

ಕಳೆದ ಸಲ ಪಾಕಿಸ್ತಾನ ಆಕ್ರಮಣ ನಡೆಸಿದಾಗ ಅಮೇರಿಕದ ಪ್ಯಾಟ್ನದ ಟ್ಯಾಂಕುಗಳನ್ನು ನಮ್ಮ ಶೂರಸೈನಿಕರು ಪಟಪಟನೆಹುಡಿಪುಡಿ ಮಾಡಿಲ್ಲವೇನು? ಈ ಒಪ್ಪಂದ ಅವರ ಮುಖಕ್ಕೆ ನಮ್ಮ ರಾಜಕಾರಣಿಗಳು ಬಳಿದ ಮಸಿಯೇ ಅಲ್ಲವೇನು? ಅಮೇರಿಕದ ಭೀಕರ ಶಸ್ತ್ರಾಸ್ತ್ರಗಳನ್ನೆದುರಿಸಿದ ನಮ್ಮ ವೀರರು ರಷ್ಯಾದ ಶಸ್ತ್ರಾಸ್ತ್ರಗಳಿಗೆ ಬೆದರುತ್ತಾರೆಂದು ಈ ಒಪ್ಪಂದವೇನು? ಈ ಒಪ್ಪಂದದ ಔಚಿತ್ಯವೇನು?

ಹನ್ನೊಂದನೆಯ ನಿಬಂಧನೆಯು ಒಪ್ಪಂದ ಜೀವಮಾನವನ್ನು ಸೂಚಿಸುತ್ತದೆ. ಸ್ವಾತಂತ್ರ್ಯ ಪ್ರೇಮಿಗಳಿಗೆ ಜೀವಾವಧಿ ಶಿಕ್ಷೆಯ ಹಾಗೆ ಈ ಒಪ್ಪಂದಕ್ಕೆ ಇಪ್ಪತ್ತು ವರ್ಷ ಕಾಲ ಸಮಯವಿದೆ. ಈ ಒಪ್ಪಂದ ಯಾವ ಬಣಕ್ಕಾದರೂ ಬೇಡವಾದಲ್ಲಿ ಒಂದು ವರ್ಷ ಅವಕಾಶವನ್ನೀಯಬೇಕು.

ಈ ಒಪ್ಪಂದದ ನಿಬಂಧನೆ ಹಾಗೂ ನಿಬಂಧನೆಗಳ ಕುರಿತು ಅಭಿಪ್ರಾಯ ಭೇದವಿದ್ದಲ್ಲಿ ಶಾಂತ ರೀತಿಯಲ್ಲಿ ಅದನ್ನು ಪರಿಹರಿಸಿಕೊಳ್ಳತಕ್ಕದ್ದೆಂದು ಕೊನೆಯ ನಿಬಂಧನೆ ಸೂಚಿಸುತ್ತದೆ.

ಈ ಒಪ್ಪಂದಕ್ಕೆ ಇಬ್ಬಣದವರೂ ಸಹಿ ಹಾಕಿ ಅದು ಬಳಕೆಗೆ ಬಂದಿರುತ್ತದೆ. ಅದನ್ನು ಕಮ್ಯೂನಿಸ್ಟ್ ಪಾರ್ಟಿಗಳೂ ರಾಜಾಜಿಯವರೂ ಸ್ವಾಗತಿಸಿದ್ದಾರೆ. ಕಮ್ಯೂನಿಸ್ಟ್ ಪಾರ್ಟಿಗಳು ಅದನ್ನು ಸ್ವಾಗತಿಸುವದರಲ್ಲಿ ಆಶ್ಚರ್ಯವಿಲ್ಲ. ಶ್ರೀ ಸಾಮಾನ್ಯನು ಈ ಒಪ್ಪಂದದ ಪ್ರಚಲಿತ ಔಚಿತ್ಯದ ಕುರಿತು ಯೋಚಿಸುವಂತಾಗಿದೆ.

ಅಮೇರಿಕ ಸಹಾಯಮಾಡುವದಿಲ್ಲವೆಂದದ್ದು ಈ ಒಪ್ಪಂದಕ್ಕೆ ಕಾರಣವಲ್ಲ, ಎರಡು ವರ್ಷದಿಂದ ರಹಸ್ಯವಾಗಿ ಮಾತುಕತೆ ನಡೆಯುತ್ತ ಬಂದಿದೆಯೆಂದು ಅಮಾತ್ಯರು ಹೇಳಿದ್ದಾರೆ. ಇದನ್ನು ಸೂಚಿಸಲಿಕ್ಕಾಗಿಯೇ ಅನ್ನುವಂತೆ ಪೂರ್ವ ಬಂಗಾಲದ ಕುರಿತು ಒಪ್ಪಂದದ ಸಮಯ ಆ ಮಾತುಕತೆ ನಡೆದಂತೆ ಕಂಡುಬರುವದಿಲ್ಲ. ಪ್ರಚಲಿತ ಭಯಂಕರ ಪರಿಸ್ಥಿತಿಗೆ ಇದರಿಂದೇನೂ ಪ್ರಯೋಜನವಿಲ್ಲವೆಂದಾದರೆ ಮುಂದಕ್ಕೆ ಇದು ಉಪಯೋಗವಾದೀತೇ?

ಪಾಕಿಸ್ತಾನ ನಮ್ಮೊಡನೆ ಪಲವಾರು ಒಪ್ಪಂದಗಳನ್ನು ಮಾಡಿಕೊಂಡಿದೆ. ಚೀನಾದ ಬಳಿ ಪಂಚಶೀಲಕ್ಕೆ ಒಪ್ಪಿದ್ದೇವೆ. ಆ ರಾಷ್ಟ್ರಗಳೇ ತಮ್ಮ ಮೇಲೆ ಆಕ್ರಮಣ ನಡೆಸಿಲ್ಲವೇನು?

ವ್ಯಾಪಾರಿ ಆಂಗ್ಲೇಯರು ಇಲ್ಲಿ ಕಾಲಿಟ್ಟಾಗ ಇಂತಹ ಒಪ್ಪಂದಗಳನ್ನು ಇಲ್ಲಿಯ ರಾಜರ ಬಳಿಮಾಡಿಕೊಳ್ಳುತ್ತಿದ್ದರು. ಒಪ್ಪಂ

ಮಿತ ಕುಟುಂಬ ಯೋಜನೆಗೆ
ಅತ್ಯವಶ್ಯಕ ಪುಸ್ತಕ—
ಮಿತ ಸಂತತಿ
ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0-75 ಪೈಸೆ ಮಾತ್ರ.
ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—
ಹೋಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್
Please Visit ಫೋನ್: 77
HOTEL SHIVAPRASAD
High Class Boarding, Lodging & Restaurant
COONDAPUR, S. K.

ಧನಿಕರ್ಗಳಾದ ರಾಜರನ್ನು - ನೀರುಕುಡಿದ ಹಾಗೆ ಹೀರಿ ಹಿಪ್ಪೆಗೊಳಿಸಿಲ್ಲವೇನವರು? ಪೋಲೇಂಡ್, ಹಂಗೇರಿ, ಝೆಕೊಸ್ಲೋವೇಕಿಯಗಳಲ್ಲಿ ರಷ್ಯಾ ಮಾಡಿದ್ದಾದರೂ ಏನು? ಒಪ್ಪಂದ-ಒಪ್ಪಂದವಾಗಿ ಅವುಗಳನ್ನು ತನ್ನೊಂದಿಗೆ ಒಂದಾಗಿ ಮಾಡಿಕೊಂಡಿದೆ ಕೇರಿ— ತೋಳ ಸಹ— ಇರುವಿಕೆಯ ಹಾಗೆ ರಾತ್ರಿ ಕಂಡ ಈ ಬಾವಿಯಲ್ಲಿ ಹಚ್ಚಹಗಲಿನಲ್ಲಿ ನಾವೀಗ ಬಿದ್ದಿದ್ದೇವೆ

'ಸಂಗಮ'ನ ಬೆದರಿಕೆಯ ಮಾತುಗಳಿಗೆ ಬೆದರಿ ಇಂದಿರಾಜೀಯವರು ಈ ಒಪ್ಪಂದಕ್ಕೆ ಒಪ್ಪಿರುವರಾದಲ್ಲಿ, ಒಪ್ಪಂದಕ್ಕೆ ಪಾಕಿಸ್ತಾನ ಬೆದರುವದಿಲ್ಲ ಎಂದು ದೌರ್ಜನ್ಯವನ್ನು ಮುಂದರಿಸುತ್ತಿದ್ದು ರಷ್ಯಾದ ಬಳಿ ಶಸ್ತ್ರಾಸ್ತ್ರವಿಗಾಗಿ ಪ್ರಯತ್ನಿಸುತ್ತಿರುವದೇ ಅದಕ್ಕೆ ಸಾಕ್ಷಿ. ಒಪ್ಪಂದದಿಂದ ಪಾಕಿಸ್ತಾನದ ಆಕ್ರಮಣವನ್ನು ತಡೆಯಲು ಸಾಧ್ಯವೇ ಇಲ್ಲ ಒಪ್ಪಂದಕ್ಕೆ ಸಹಿಹಾಕುವ ಮುಂಚೆ ಇಷ್ಟನ್ನಾಗಿ ಮುಂತಾದವರನ್ನು ಜ್ಞಾಪಿಸಿಕೊಳ್ಳಬೇಕಾಗಿತ್ತು ಈ ರಾಜಕೀಯ ಒಪ್ಪಂದದ ಪರಿಣಾಮವಾಗಿ ತಮ್ಮ ಹಳೆಯ ನಿಷ್ಠಾವಂತ ಕಾಂಗ್ರೆಸ್ಸಿಗರನ್ನು ಇಂದಿರಾಜೀ ದೂರ ಓಡಿಸುತ್ತಾ ಇದ್ದು, ಕಮ್ಯೂನಿಸ್ಟರನ್ನು ಕಾಂಗ್ರೆಸ್ಸಿಗರೆಂದು ಕರೆದು ಮಂತ್ರಿಮಂಡಲದೊಳಗೆ ಸೇರಿಸಿಕೊಳ್ಳುತ್ತಾ ಇದ್ದಾರೆ ಅವರು ಮುಖ್ಯ ಸ್ಥಾನಗಳನ್ನು ಕಬಳಿಸಿಕೊಳ್ಳುವದೇ ತಡ, ಈ ಒಪ್ಪಂದ ಮಾತುಗಳ ಪ್ರಕಾರ 'ರಾಷ್ಟ್ರೀಯ ಭದ್ರತೆ'ಯ ಹೆಸರಿನಲ್ಲಿ ರಷ್ಯಾವು ಸಹಾಯ ಮಾಡುವಂತೆ ವರ್ತಿಸಿ, ಇಂದಿರಾಜೀಯವರನ್ನು ಛಾಂದಸಿ ಚೌಕದಲ್ಲೊಂದು ಕಂಭಕ್ಕೆ ನೇಣು ಹಾಕಿದರೂ ಆಶ್ಚರ್ಯವಿಲ್ಲ ಅವರು ಬಿಸಿ ಕಾವಲಿಗೆ ಹೆದರಿ ಬೆಂಕಿಗೆ ಹಾರಿಬಿಟ್ಟಿದ್ದಾರೆ ಪಾಪ!

ಈ ಒಪ್ಪಂದ ಹಳೆಯ ಹೆಣಕ್ಕೆ ಹೊಸ ಹೊದಿಕೆಯೇ ಹೌದು.

—ಶ್ರೀ ಶಿವಶಂಕರ

●●

READ & ADVERTISE IN NAVAYUGA WEEKLY

ವಿಶೇಷ ಲೇಖನ—

ಪ್ರಗತಿ ಪಥದಲ್ಲಿ ಒಳನಾಡಿನ ಜಲಸಾರಿಗೆ

—ಶ್ರೀ ಓಂ ಮೆಹ್ತಾ

(ಕೇಂದ್ರ ಸರ್ಕಾರದ ಪಾರ್ಲಿಮೆಂಟರಿ ವ್ಯವಹಾರಗಳು ಸಾರಿಗೆ ಮತ್ತು ನೌಕಾಯಾನ ಶಾಖಾ ಮಂತ್ರಿಗಳು)

ಒಳನಾಡಿನ ಜಲಸಾರಿಗೆಯ ಅಭಿವೃದ್ಧಿಗೆ ನಮ್ಮ ದೇಶದಲ್ಲಿ ವಿಪುಲ ಅವಕಾಶಗಳಿವೆ ಈ ಸಾರಿಗೆ ಅತ್ಯಂತ ಪುರಾತನವಾದುದು ಮಾತ್ರವಲ್ಲ ಅತ್ಯಂತ ಪ್ರಯೋಜನಕಾರಿಯೂ ಹೌದು ಕಡಿಮೆ ವೆಚ್ಚದಲ್ಲಿ ಅಧಿಕ ಸೌಕರ್ಯ ನೀಡುವ ಈ ಸಾರಿಗೆ ಕಾಲದ ಅಗ್ನಿಪರೀಕ್ಷೆಗೆ ಒಳಪಟ್ಟು ಸತ್ವಶಾಲಿಯಾಗಿ ಬೆಳೆದು ಬಂದಿದೆ ರೈಲ್ವೆ, ರಸ್ತೆ ಮತ್ತು ವಿಮಾನಸಾರಿಗೆ ಒಂದು ವ್ಯಾಪಕವಾದ ಚೌಕಟ್ಟಿನಲ್ಲಿ ಒಳನಾಡಿನ ಸಾರಿಗೆಯು ಪ್ರಯೋಜನ ಪಡೆದಾಗ ಸಾರಿಗೆ ವೆಚ್ಚ ತಗ್ಗುವುದಲ್ಲದೇ, ಬೆಲೆಗಳ ಸ್ಥಿರೀಕರಣ ಸಾಧ್ಯವಾಗ ಬಲ್ಲದು

ಕೈಗಾರಿಕೆ ಹಾಗೂ ವಾಣಿಜ್ಯ ರಂಗದಲ್ಲಿ ಬೆಲೆಗಳು ಸಾರಿಗೆಯ ವೆಚ್ಚವನ್ನು ಅವಲಂಬಿಸಿವೆ ಅಂತಿಮವಾಗಿ ಇಂದು ಗ್ರಾಹಕರೇ ಈ ಹೆಚ್ಚುವರಿ ವೆಚ್ಚವನ್ನು ಭರಿಸಬೇಕಾಗಿದೆ ಗ್ರಾಹಕರು ಈಗ ಹೆಚ್ಚು ಬೆಲೆಗಳನ್ನು ತೆರ ಬೇಕಾಗಿರುವುದನ್ನು ಗಮನಿಸಿದಾಗ, ಸಾರಿಗೆ ವೆಚ್ಚವನ್ನು ಸಾಧ್ಯವಾದಷ್ಟು ಕಡಿಮೆ ಮಾಡುವುದು ಅತ್ಯಾವಶ್ಯಕವಾಗಿದೆ. ಈ ಒಂದು ಸಂದರ್ಭದಲ್ಲಿ ಒಳನಾಡಿನ ಜಲಸಾರಿಗೆ ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕ ವ್ಯವಸ್ಥೆಯಲ್ಲಿ ಮಹತ್ವಪೂರ್ಣ ಪಾತ್ರವನ್ನು ನಿರ್ವಹಿಸುತ್ತದೆ

ಬಹುತೇಕ ಜಲಮಾರ್ಗಗಳು ನಿಸರ್ಗದ ಕೊಡುಗೆಯಾಗಿವೆ ಅಲ್ಪವೆಚ್ಚದಲ್ಲಿ ಈ ಜಲಮಾರ್ಗಗಳಲ್ಲಿ ಸಾರಿಗೆಯನ್ನು ಆರಂಭಿಸಬಹುದಾಗಿದೆ ರೈಲು ಹಾಗೂ ರಸ್ತೆ ಸಾರಿಗೆಯ ಮಾತು ಹಾಗಲ್ಲ ಇವಕ್ಕೆ ಹೆಚ್ಚಿನ ಬಂಡವಾಳವನ್ನು ತೊಡಗಿಸ ಬೇಕಾಗುತ್ತದೆ ಕಡಿಮೆ ವೆಚ್ಚ ಒಳನಾಡಿನ ಜಲಸಾರಿಗೆ ವ್ಯವಸ್ಥೆಯಲ್ಲಿ ಅತ್ಯಂತ ಮಹತ್ವದ ಕೊಡುಗೆ ಜಲಮಾರ್ಗಗಳಲ್ಲಿ ಸಾರಿಗೆ ವಿದ್ಯುಚ್ಛಕ್ತಿಯೂ ಅಷ್ಟೊಂದು ವ್ಯಯವಾಗುವುದಿಲ್ಲ

ಅಭಿವೃದ್ಧಿಯ ಅವಶ್ಯಕತೆಗಳು

ಭಾರತದಲ್ಲಿ ಒಳನಾಡಿನ ಜಲಸಾರಿಗೆಯ ಅಭಿವೃದ್ಧಿಗಾಗಿ ಕೆಲವೊಂದು ಕ್ರಮಗಳು ಅತ್ಯಗತ್ಯವಾಗಿವೆ ಜಲಮಾರ್ಗಗಳ ಅಭಿವೃದ್ಧಿ ಹಾಗೂ ಉಸ್ತುವರಿಗೆ ತಗಲುವ ವೆಚ್ಚವನ್ನು ನಿರ್ದಿಷ್ಟವಾಗಿ ತಿಳಿಸುವ ಕಾರ್ಯಯೋಜನೆಗಳು, ನದೀಮಾರ್ಗಗಳ ನಿರ್ವಹಣೆಗಾಗಿ ಮತ್ತು ಸಾರಿಗೆ ಹಾಗು ಹೈಡ್ರೋಗ್ರಾಫಿಕ್ ಸಮೀಕ್ಷೆ ಕೈಗೊಳ್ಳಲು ಸಮರ್ಥವಾದ ಸಂಸ್ಥೆಯ ಸ್ಥಾಪನೆ, ಸರಿಯಾದ ನೌಕೆಯ ಆಯ್ಕೆ ಹಾಗು ವಾಣಿಜ್ಯ ಉದ್ದೇಶಗಳಿಗಾಗಿ ಸಾಕಷ್ಟು ಸಾರಿಗೆ ಸೌಕರ್ಯ ನೀಡುವ ವ್ಯವಸ್ಥೆ ಇವೇ ಆ ಕ್ರಮಗಳಾಗಿವೆ ವಾಣಿಜ್ಯ ಉದ್ದೇಶಗಳಿಗಾಗಿ ಸಾಕಷ್ಟು ಸಾರಿಗೆ ಸೌಕರ್ಯ ದೊರೆತಾಗ ಒಳನಾಡಿನ ಜಲಸಾರಿಗೆಯೂ ಸಮ್ಮಿಶ್ರ ಸಾರಿಗೆ ವ್ಯವಸ್ಥೆಯ ಅಂಗವಾಗಿ ಪರಿಣಾಮಕಾರಿಯಾಗಿ ಸೇವೆ ಸಲ್ಲಿಸುವುದು

ಸಮಗ್ರ ಅಭಿವೃದ್ಧಿ ಯೋಜನೆಗಳಿಗೆ ಒಳಪಟ್ಟಂತೆ, ಪ್ರತಿಯೊಂದು ಪ್ರದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು ಒಳನಾಡಿನ ಸಾರಿಗೆಯನ್ನು ಅಭಿವೃದ್ಧಿಗೊಳಿಸಬೇಕು

ಜಲಮಾರ್ಗಗಳ ಮುಖಾಂತರ ಸಾಗಿಸಲು ಸಾಕಷ್ಟು ಸೌಕರ್ಯವಿರುವ ಕಡೆಯಲ್ಲಿ, ಆರ್ಥಿಕವಾಗಿ ಲಾಭದಾಯಕವಾಗುವ ಮಾರ್ಗಗಳನ್ನು ನಿರ್ವಹಿಸಲು ಕಾರ್ಯಯೋಜನೆಗಳನ್ನು ರೂಪಿಸುವುದು ಮಹತ್ವದ್ದಾಗಿದೆ

ಗೋವಾದ ಜಲಮಾರ್ಗ ಕೇರಳದ ಪಶ್ಚಿಮ ಕರಾವಳಿಯ ಹಿನ್ನೀರು, ಆಂಧ್ರ ಪ್ರದೇಶದ ಕೃಷ್ಣಾನದಿ ಕಾಲುವೆಯ ಜಾಲ ಇವೇ ಮೊದಲಾದ ಜಲಮಾರ್ಗಗಳಲ್ಲಿ ಒಳನಾಡಿನ ಜಲಸಾರಿಗೆ ಅತ್ಯಂತ ಪ್ರಯೋಜನಕಾರಿಯಾಗಿ ಸೇವೆ ಸಲ್ಲಿಸುತ್ತಿದೆ ಕಬ್ಬಿಣದ ಅದಿರಿನ ಗಣಿಗಳಿಂದ ಮರ್ಮಗೋವಾ ಬಂದರಕ್ಕೆ ಪ್ರತಿವರ್ಷವೂ ಜಲಮಾರ್ಗದಿಂದ 80 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಕಬ್ಬಿಣದ ಅದಿರನ್ನು ಸಾಗಿಸಲಾಗುತ್ತಿದೆ ಕೇರಳದ ಜಲಮಾರ್ಗ ಮೂಲಕ ಪ್ರತಿವರ್ಷವೂ 15 ಲಕ್ಷ ಪ್ರಯಾಣಿಕರನ್ನೂ, 20 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಸರಕುಗಳನ್ನೂ ಸಾಗಿಸಲಾಗುತ್ತಿದೆ ಆಂಧ್ರ ಪ್ರದೇಶದ ಕೃಷ್ಣಾ ಮತ್ತು ಗೋದಾವರಿ ನದಿ, ಕಾಲುವೆಗಳು ಹಾಗು ತಮಿಳುನಾಡಿನ ಬಂಕಿಗಹ್ಯಾಮ್ ಕಾಲುವೆ ಇವೇ ಮೊದಲಾದವು ಒಳನಾಡಿನ ಸಾರಿಗೆಯಲ್ಲಿ ಅಮೌಲ್ಯ ಸೇವೆ ಸಲ್ಲಿಸುತ್ತಿದೆ.

ರಾಜ್ಯಗಳ ಮಟ್ಟದಲ್ಲಿ ಸಾಧನೆ

ಒಳನಾಡಿನ ಜಲಸಾರಿಗೆಯಿಂದ ಹೆಚ್ಚಿನ ಲಾಭ ಪಡೆಯಬೇಕಾದರೆ, ಒಳನಾಡಿನ ದೋಣಿ ಅಥವಾ ನೌಕೆಗಳನ್ನು ಆಧುನಿಕ ರೀತಿಯಲ್ಲಿ ಸಜ್ಜುಗೊಳಿಸಬೇಕು ನಮ್ಮ ಒಳನಾಡಿನ ಜಲಮಾರ್ಗಗಳಲ್ಲಿ ಬಹುತೇಕ ಅಷ್ಟೊಂದು ಆಳವಾಗಿಲ್ಲವಾದ ಕಾರಣ ಹಡಗುಗಳ ಸಂಚಾರಕ್ಕೆ ಉಪಯುಕ್ತವಾಗಿಲ್ಲ ಸಾಕಷ್ಟು ಸಾರಿಗೆ ಸಾಮರ್ಥ್ಯವುಳ್ಳ ಜಲಮಾರ್ಗಗಳಲ್ಲಿ ಅವುಗಳ ಆಳವನ್ನು ಹೆಚ್ಚಿಸಲು ಹಾಗು ಸಿಬ್ಬಂದಿಗೆ ಅಗತ್ಯವಾದ ತರಪೇತಿ ಕೊಡಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು

ದೇಶೀ ದೋಣಿಗಳು ಹಾಗು ಅವುಗಳ ಆವಶ್ಯಕತೆಗಳು ಇತ್ಯಾದಿಗಳನ್ನು ಕುರಿತು ಸುವ್ಯವಸ್ಥಿತ ರೀತಿಯಲ್ಲಿ ಅಧ್ಯಯನ ಮಾಡುವುದು, ಸರಳವಾದ ಹಾಗೂ ಸಾಮಾನ್ಯ ದೇಶೀ ದೋಣಿಗಳ ನಿರ್ಮಾಣಕ್ಕೆ ಒಂದು ಅಂಗೀಕೃತ ವಿನ್ಯಾಸವನ್ನು ರೂಪಿಸುವುದು ಅಷ್ಟೇ ಅಪೇಕ್ಷಣೀಯ ಹೀಗೆ ಸಜ್ಜುಗೊಳಿಸಲಾಗುವ ದೋಣಿಗಳ ಯಾಂತ್ರೀಕರಣಕ್ಕೂ ಗಮನಕೊಡಬೇಕು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಧನಸಹಾಯ ಪಡೆಯಲು ನಾಡ ದೋಣಿಗಳ ಮಾಲೀಕರು ಸಹಕಾರ ಸಂಘಗಳನ್ನು ರಚಿಸಿಕೊಳ್ಳುವಂತೆ ಅವರಿಗೆ ಉತ್ತೇಜನವನ್ನು ನೀಡಬೇಕು

ನಮ್ಮ ಸಂವಿಧಾನದ ಪ್ರಕಾರ ಒಳನಾಡಿನ ಜಲಮಾರ್ಗಗಳು ರಾಜ್ಯದ ಅಧಿಕಾರ ವ್ಯಾಪ್ತಿಗೆ ಸೇರಿವೆ ಕಾರಣ ಈ ಮಾರ್ಗಗಳ ಅಭಿವೃದ್ಧಿ ರಾಜ್ಯಸರ್ಕಾರಗಳ ಯತ್ನವನ್ನೇ ಅವಲಂಬಿಸಿದೆ ದೇಶದಲ್ಲಿ ಅಗ್ಗದರದ ಸಾರಿಗೆ ವ್ಯವಸ್ಥೆ ಅಭಿವೃದ್ಧಿಗಾಗಿ ಸುಯೋಜಿತ ಕಾರ್ಯಕ್ರಮಗಳನ್ನು ರೂಪಿಸಲು ರಾಜ್ಯಗಳಲ್ಲಿ ಸೂಕ್ತವಾದ ಸಂಸ್ಥೆಯ ಸ್ಥಾಪನೆ ಅಗತ್ಯ ರಾಜ್ಯ ಸಂಸ್ಥೆಗಳ ಒಳನಾಡಿನ ಜಲಸಾರಿಗೆ ಸಂಸ್ಥೆಗಳ ಕಾರ್ಯಚಟುವಟಿಕೆಗಳಲ್ಲಿ ಸಮನ್ವಯ ಸಾಧಿಸಲು ಹಾಗು ರಾಜ್ಯಗಳಿಗೆ ತಾಂತ್ರಿಕ ಸಲಹೆ ನೀಡಲು ಮತ್ತು ಈ ದಿಶೆಯಲ್ಲಿ ಅಭಿವೃದ್ಧಿ ಯೋಜನೆಗಳನ್ನು ಪರಿಶೀಲಿಸಲು ಕೇಂದ್ರ ಸರ್ಕಾರದವರು ಒಳನಾಡಿನ ಜಲಸಾರಿಗೆಯ ಕೇಂದ್ರ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ ಒಳನಾಡಿನ ಜಲಸಾರಿಗೆ ಅಭಿವೃದ್ಧಿಯ ಬಗ್ಗೆ ಆಲೋಚಿಸುವಾಗ ನಾಡ ದೋಣಿಗಳನ್ನು ಕಟ್ಟುವ ಕೈಗಾರಿಕೆಯತ್ತ ಆದ್ಯ ಗಮನವನ್ನು ನೀಡುವುದು ಅಗತ್ಯ. ●

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303 / 2 72304 Grams HOST SATKAR

Vegetarian Cuisine

Attached Bath Rooms and Phones

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms, Roof garden

Quiet, Calm Atmosphere

Personalised Service.

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 8242 Res: 3272

ಲಖನೌವಿನ ಅನ್‌ಲಕ್—

ಗೋಮತಿ ನಗರ ನುಗ್ಗಿದಳು

ಪಶ್ಚಿಮ ಬಂಗಾಳಕ್ಕೆ ಪೂರ್ವದಿಂದ ನಿರಾಶ್ರಿತರ ಭಾರೀ ಪ್ರವಾಹ ಹರಿದು ಬಂದು ದೇಶದ ಅರ್ಥ ವ್ಯವಸ್ಥೆಯನ್ನು ಕಂಪಾಯಮಾನಗೊಳಿಸಿತು.

ಮೊನ್ನೆ ತಾನೇ ಬಿಹಾರದಲ್ಲಿ ಭಾರಿ ನೀರಿನ ಪ್ರವಾಹ ಹರಿದು ವಿಪುಲ ಪ್ರಮಾಣದ ವಿತ್ತಜೀವಿತಗಳು ಗಂಗೆಯ ಪಾಲಾದುವು.

ಇದೀಗ,ಉತ್ತರಪ್ರದೇಶದಲ್ಲೂ ಗೋಮತಿನದಿಯು ತುಂಬಿ ಹರಿದು ಲಖನೌ ನಗರವನ್ನು ನುಗ್ಗಿ ಅಪಾಯ ಭೀತಿಯನ್ನು ತಂದೊಡ್ಡಿತು.

ದಕ್ಷಿಣದ ಒಂದೆರಡು ರಾಜ್ಯಗಳಲ್ಲಿ ಮಳೆಯಿಲ್ಲದೆ ಬೆಳೆಬೆಳೆಯದೆ ಅಭಾವ ಪರಿಸ್ಥಿತಿ ಕಾಣಿಸಿಕೊಂಡಾಗ, ಉತ್ತರದ ಎರಡು ರಾಜ್ಯಗಳು ಜಲಮಯವಾದುದು ದೈವಯೋಗವೆಂದೇ ಹೇಳಬೇಕು.

ನಾಗರಿಕ ಅಧಿಕಾರಿಗಳು, ಸ್ವಯಂ ಸೇವಕರು, ಜತೆಗೆ ಸೇನೆಯೂ ಕೂಡಿಕೊಂಡು ಪ್ರವಾಹ ನಿಯಂತ್ರಣಾಸಕ್ತರಾಗಿದ್ದುದು ಸ್ತುತ್ಯಾರ್ಹ.

ಪ್ರವಾಹವನ್ನು ನಿಯಂತ್ರಿಸುವುದೆಂದರೇನು? ಒಡ್ಡುಹಾಕುವುದಲ್ಲ; ನಗರವನ್ನು ನುಗ್ಗಿದ ನೀರಿಗೆ ಹರಿದು ಹೋಗಲು ದಾರಿಮಾಡಿಕೊಡುವುದು; ಪ್ರವಾಹ ಪೀಡಿತರನ್ನು ಸುರಕ್ಷಿತ ಸ್ಥಾನಕ್ಕೆ ಒಯ್ದು ಮುಟ್ಟಿಸುವುದು.

ಈ ಅನಾಹುತಕ್ಕೆ ಕಾರಣವೇನು? ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ ಇಂಡಿಕೇಟ್ ನೇತೃತ್ವದ ಸರಕಾರವಿರುವುದೇ ಕಾರಣವಾಗಿರ ಬಹುದೆ? ಬಿಹಾರದಲ್ಲಿ ನೆರೆ ಬಂತು; ಜತೆಯಲ್ಲಿ ಹಲವಾರು ಮಂತ್ರಿಗಳೂ ಹೊಸತಾಗಿ ಬಂದು ಬಿಟ್ಟರು.

ಉತ್ತರ ಪ್ರದೇಶದಲ್ಲಿ ಹಾಗಾಗಲಿಲ್ಲ. ಅದುದರಿಂದಲೇ ಅಪಾಯದ ಭೀತಿ ರಾಜಧಾನಿ ಲಖನೋನಗರದ ಆಕಾಶದ ಮೇಲೆ ತೀವ್ರವಾಗಿ ಕವಿದು ಬಿಟ್ಟಿತು.

ಮುಖ್ಯಮಂತ್ರಿ ಕಮಲಾಪತಿ ತ್ರಿಪಾಠಿಯವರು ತ್ರಿಕರಣ ಪೂರ್ವಕ ತಾಪತ್ರಯ ಪಟ್ಟು ಚಂದ್ರಭಾನು ಗುಪ್ತರ ಮೇಲೆ ವಿಜಯಗಳಿಸಲು ಶಕ್ತರಾದರು. ಸಿಂಡಿಕೇಟಿನ ಬಲೆಯಲ್ಲಿ ಸಿಕ್ಕಿಬಿದ್ದಿದ್ದ ಮೀನುಗಳಲ್ಲಿ ಒಂದೊಂದನ್ನೆ ಎತ್ತಿ ನುಂಗಿದರು. ಈ ದೋಷವನ್ನು ಹೋಗಲಾಡಿಸಲೆಂದೇ ಗೋಮತಿ ಉಕ್ಕಿ ಬಂದಿರಬಹುದೋ ಏನೋ!

ಬಹಳ ಇಳಿವಯಸ್ಸಿನಲ್ಲಾದರೂ ಸುಖವುಣ್ಣುವ ಮುಖ್ಯಮಂತ್ರಿ ಪದವಿಯನ್ನು ಗಿಟ್ಟಿಸಿಕೊಂಡವರ ಮಜಭೂತ ಆತ್ಮಕ್ಕೆ ಇದೊಂದು ಶನಿಪೀಡೆ ಎಲ್ಲಿಂದ ಅಂಟಿ ಬಂದಿತೋ! ಲಖನೌ ನಗರದ ನಡುವೆ ಹರಿಯುವ ಗೋಮತಿಯು ಅದನ್ನು ಇಬ್ಭಾಗಿಸಿತು. ತಾಸಿಗೆ ಆರಂಗಲದಷ್ಟು ತೀವ್ರವಾಗಿಯೇರುತಿದ್ದ ಗೋಮತಿಯ ಪ್ರವಾಹವು ನಗರಕ್ಕೂ ತನ್ನ ಪಾತ್ರಗಳಿಗೂ ಅದೆಷ್ಟು ಪ್ರಹಾರ ನೀಡಿತೆಂದು ತಿಳಿಯಲು ಕೆಲವು ದಿನಗಳೇ ಬೇಕಷ್ಟೆ. ಬಿಹಾರದ ನಂತರ ಉತ್ತರ ಪ್ರದೇಶದಲ್ಲಿ ತಲೆದೋರಿದ ಈ ಪ್ರವಾಹ ಹಿಮಾಲಯದ ತಪ್ಪಲಿನಿಂದ ಹುಟ್ಟಿ ಬರುವ ನದಿಗಳ ಮಹಾಪೂರದಿಂದಯೆಂಬುದೂ ಸತ್ಯ. ಗಂಗೆ–ಯಮುನೆಯರೂ ತುಂಬಿ ಹರಿದರೂ ಅದು ಸ್ವಾಭಾವಿಕವೇ.

ಭಾರತದ ರಾಜ್ಯಗಳಲ್ಲೆಲ್ಲ ವಿಸ್ತಾರದಲ್ಲೂ ಜನಸಂಖ್ಯೆಯಲ್ಲೂ ಬಡತನದಲ್ಲೂ ದೊಡ್ಡದು ಉತ್ತರ ಪ್ರದೇಶ. ಇದರ ಕಾಲಂಶದಷ್ಟು ಭಾಗ ಪ್ರವಾಹದಿಂದ ತಲ್ಲಣಿಸಿ ಹೋಯಿತು. ಅಂದರೆ, ಅಲ್ಲಿನ ವಿತ್ತ ಜೀವಿತಗಳಿಗೂ ಬೆಳೆನೆಲೆಗಳಿಗೂ ಹಾನಿ ತಟ್ಟಿತು. ಮುಂದಿನ ಸುಗ್ಗಿಯ ವೇಳೆ ಇದರ ಪರಿಣಾಮವನ್ನು ಅಂಕೆ ಸಂಖ್ಯೆಗಳಿಂದ ನಿರ್ದುಷ್ಟವಾಗಿ ಅಳೆಯಬಹುದಷ್ಟೆ.

ವಿಶಾಲಕಾಯ ದೇಶ ಭಾರತದಲ್ಲಿ ಅನಾವೃಷ್ಟಿ–ಅತಿವೃಷ್ಟಿಗಳು ಒಂದಲ್ಲೊಂದು ಕಡೆ ತಲೆದೋರುವುದು ವಾಸ್ತವಿಕ. ಆದರೂ ಈ ಬಾರಿ ದಕ್ಷಿಣದ ಅಭಾವ ಪರಿಸ್ಥಿತಿಗೆ ಉತ್ತರದ ನೆಗೆ–ನಿರಾಶ್ರಿತರ ಪ್ರವಾಹ ನಿಜಕ್ಕೂ ಕಲಶವಿಟ್ಟಿತು. ಆಹಾರ ಸ್ವಾವಲಂಬನೆಯಲ್ಲಿ ನಾವು ಗುರಿಮುಟ್ಟಿದ್ದೇವೆಂದು ಹೇಳಿಕೊಳ್ಳುತ್ತಿರುವಾಗಲೇ ತಲೆಗೆ ಬಿದ್ದ ಈ ಏಟಿನಿಂದ ಸುಧಾರಿಸಿಕೊಳ್ಳಲು ಇನ್ನೂ ಕೆಲಕಾಲ ಬೇಕು. ಪ್ರಕೃತಿ ಮತ್ತು ಪರಿಸ್ಥಿತಿಗಳು ನಮ್ಮನ್ನು ಹಾಯೆಂದು ಉಸಿರಾಡಲು ಅದೇಕೆ ಬಿಡುವುದಿಲ್ಲವೋ! ನಮ್ಮಲ್ಲಿ ಪೌರುಷ ಪ್ರಯತ್ನದ ಅಭಾವ ಪರಿಪೂರ್ಣವಾಗಿದೆಯೆನ್ನೋಣವೆ?

ತನ್ನ ರಾಜ್ಯವನ್ನು ಕವಿದ ಪ್ರವಾಹದಿಂದ ನೊಂದವರನ್ನು ಮುಖ್ಯಮಂತ್ರಿ ತ್ರಿಪಾಠಿಯವರು ಉದಾರರಾಗಿ ಸಂತಯಿಸಬೇಕು. ಅವರ ಉದಾರ ನೀತಿಯೇ ಮುಂದಿನ ಅವರ ಗೆಲವಿನ ಸಂಕೇತ. ಪ್ರಧಾನಿ ಗಾಂಧಿಯವರು ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲೂ ಸಾಧ್ಯವಾದರೆ ಮುಂದಿನ ವರ್ಷವೇ ಚುನಾವಣೆ ನಡೆಸಲು ಸಿದ್ಧರಿದ್ದಾರೆ. ಆಗ ನಾಮನ್ಯವಾಗಿ ಇಡಿಯ ದೇಶದಲ್ಲಿ ಒಂದೇ ಬಾರಿಗೆ ಚುನಾವಣೆ ನಡೆದಂತಾಗುವುದು

ಪಶ್ಚಿಮ ಬಂಗಾಳದಲ್ಲಿ ಮಾತ್ರ ಪರಿಸ್ಥಿತಿ ಚೆನ್ನಾಗಿಲ್ಲ. ಅದು ಗೀಟ್ಟರಿಂದಲೂ ಹಾಗೆಯೇ ನಡೆದು ಬಂದದ್ದು. ಉತ್ಕಲ ಮತ್ತು ಕೇರಳಗಳ ಸರಕಾರಗಳನ್ನೂ ಉರುಳಿಸುವ ಭಗೀರಥ ಪ್ರಯತ್ನ ಶ್ರೀಮತಿ ಗಾಂಧಿಯವರು ಮಾಡುವುದಿಲ್ಲವೆನ್ನಲಾಗದು. ಒಂದು ವೇಳೆ ಇವೆರಡರ ಸರಕಾರಗಳು ಅಚಲವಾಗಿಯೇ ಉಳಿದರೆ ತಮಿಳುನಾಡು, ಬಂಗಾಳಗಳನ್ನೂ ಕೂಡಿಸಿ, ಮುಂದಿನ ಚುನಾವಣೆಗಳಿಗೆ ಮೊದಲು ಹೇಗಾದರೂ ಹೊಂದಿಸಿತರಬಹುದು.

ಶ್ರೀ ತ್ರಿಪಾಠಿಯವರು ಬಹಳ ಆಸೆಪಟ್ಟು ಪಡೆದ ಮುಖ್ಯಮಂತ್ರಿ ಪದ ತನಗೇ ಮುಳುವಾಗದಂತೆ ಎಚ್ಚರವಿರಬೇಕು. ಏಕೆಂದರೆ, ಪ್ರಧಾನಿಗೆ ಅವರು ಮುಖ್ಯಮಂತ್ರಿಯಾಗಿರುವುದು ಸುತರಾಂ ಇಷ್ಟವಿಲ್ಲ. ಇಂಡಿಕೇಟ್ ಸರಕಾರವನ್ನು ಉರುಳಿಸಿದ ಸಾಹಸಕ್ಕೆ ಪ್ರತಿಫಲವೆಂದು ಅವರನ್ನು ಮುಖ್ಯಮಂತ್ರಿಯಾಗಲು ಅವರು ಅಡ್ಡಿಬರಲಿಲ್ಲ ಮಾತ್ರ. ಸರ್ವಕಾಲಕ್ಕೂ ಅದೇ ಮುಂದರಿಯ ಬೇಕೆಂದರೆ ಹೇಗಾದೀತು?

●●

ಶೆಟ್ಟೀಸ್ ಸೋ ಮಿಲ್ಸ್‌ನ ಉದ್ಘಾಟನೆ

ಮಂಗಳೂರಿಂದ ಸುಮಾರು 12 ಮೈಲು ದೂರವಿರುವ ತುಂಬೆಯಲ್ಲಿ ಡಾ। ಕೆ. ಕರುಣಾಕರ ಶೆಟ್ಟಿ, ಶ್ರೀ ಪಿ. ರಾಮಣ್ಣ ಶೆಟ್ಟಿ ಮತ್ತು ಶ್ರೀ ಬಿ. ಜಯರಾಮ ಶೆಟ್ಟಿ ಇವರು ಜತೆಯಾಗಿ ಪ್ರಾರಂಭಿಸಿದ "ಶೆಟ್ಟೀಸ್ ಸೋ ಮಿಲ್ಸ್ ಎಂಡ್ ಇಂಡಸ್ಟ್ರೀಸ್"ನ ಉದ್ಘಾಟನೆಯನ್ನು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಸಿಂಡಿಕೇಟ್ ಬ್ಯಾಂಕಿನ ಚೆಯರ್‌ಮನ್ ಶ್ರೀ ಎಂ. ಸುಂದರ ರಾಮ ಶೆಟ್ಟರು ತಾ. 11ರಂದು ನೆರವೇರಿಸಿದರು. ಆರಂಭದಲ್ಲಿ ಪಾಲುಗಾರರ ಪರವಾಗಿ ಶ್ರೀ ಹಿರಿಯ ಲಕ್ಷ್ಮೀನಾರಾಯಣ ಆಳ್ವರು ಸ್ವಾಗತಿಸಿದರು.

ಶ್ರೀ ಎಂ. ಸುಂದರರಾಮ ಶೆಟ್ಟರು ಉದ್ಘಾಟಿಸುತ್ತಾ ನಮ್ಮ ದೇಶದ ಅಭಿವೃದ್ಧಿ ಯೋಜನೆಗಳಲ್ಲಿ ಕೃಷಿಗೆ ಸಾಕಷ್ಟು ಪ್ರಾಮುಖ್ಯತೆ ಕೊಡಬೇಕಾದುದು ನಮ್ಮ ಕರ್ತವ್ಯ. ಹಾಗೆಯೇ ದೇಶದ ಸರ್ವತೋಮುಖ ಅಭಿವೃದ್ಧಿಯಾಗ ಬೇಕಾದರೆ ಕೈಗಾರಿಕೆಗಳ ಬೆಳವಣಿಗೆಗೆ ಪ್ರಮುಖ ಸ್ಥಾನ ಕೊಡಬೇಕಾಗುತ್ತದೆ. ಅಭಿವೃದ್ಧಿಯ ಹಾದಿಯಲ್ಲಿರುವ ದ. ಕ. ಜಿಲ್ಲೆಯಲ್ಲಿ ಮರದ ಗಿರಣಿಗಳಿಗೆ ಉತ್ತಮ ಭವಿಷ್ಯವಿದೆಯೆಂದೂ ಈ ಕೈಗಾರಿಕೆ ಬೆಳೆಯಬೇಕಾದರೆ ನಮ್ಮ ಜನರು ಪ್ರಯತ್ನಿಸಬೇಕೆಂದೂ ಹೇಳಿದರು.

ಶ್ರೀ ವೀರೇಂದ್ರಹೆಗ್ಗಡೆಯವರು ನೂತನ ಸಂಸ್ಥೆಗೆ ಶುಭಕೋರಿ ಭಾಷಣ ಮಾಡುತ್ತಾ ಈ ಮೂವರು ಉತ್ಸಾಹೀ ಕಾರ್ಯಕರ್ತರಿಂದ ಪ್ರಾರಂಭವಾದ ಈ ಗಿರಣಿ ಸರ್ವತೋಮುಖ ಅಭಿವೃದ್ಧಿ ಹೊಂದಲಿ ಎಂದು ಹಾರೈಸಿದರು.

ವಿದೇಶ ಪ್ರವಾಸ

ಮಂಗಳೂರಿನ ಹೆಸರಾಂತ ಮೆ। ಎಸ್. ಎಲ್. ಶೇಟ್ ಜ್ಯುವೆಲ್ಲರ್ ಹೌಸ್‌ನ ಮೆನೇಜಿಂಗ್ ಪಾರ್ಟನರ್ ಹಾಗೂ ಮಂಗಳೂರು ಚಿನ್ನ ಬೆಳ್ಳಿ ವ್ಯಾಪಾರಿಗಳ ಎಸೋಸಿಯೇಶನ್ ಕಾರ್ಯದರ್ಶಿಗಳಾದ ಶ್ರೀ ಎಂ. ರಘುನಾಥ ಶೇಟ್ ಇವರು ಒಂದು ತಿಂಗಳ ಯೂರೋಪು ದೇಶಗಳ ಅಧ್ಯಯನ ಪ್ರವಾಸವನ್ನು ಕೈಗೊಂಡಿರುವರು.

ಇವರ ಪ್ರಯಾಣ ಮತ್ತಿತರ ವ್ಯವಸ್ಥೆಗಳನ್ನು ಮಂಗಳೂರಿನ ಟ್ರೇಡ್‌ವಿಂಗ್ಸ್ ಪ್ರೈವೇಟ್ ಲಿಮಿಟೆಡ್ ಇವರು ಮಾಡಿರುವರೆಂದು ತಿಳಿದು ಬರುತ್ತದೆ.

ಬರುವ ವಾರ ರಜೆ

ನವರಾತ್ರಿ ಸಂಬಂಧ ಬರುವ ವಾರದ (ತಾ. 23—9—71ರ) ಸಂಚಿಕೆ ಹೊರಡುವುದಿಲ್ಲ. ವಾಚಕರು ಗಮನಿಸ ಬೇಕಾಗಿ ವಿನಂತಿ.

—ಮೆನೇಜರ್, ನವಯುಗ.

ಅಭಿನಂದನೆ

ತಾ. 29–8–71ರಂದು ಬೆಂಗಳೂರಿನಲ್ಲಿ ಸೇರಿದ ಕರ್ನಾಟಕ ಪ್ರಾದೇಶಿಕ ಆಯುರ್ವೇದ ಮಂಡಲದ ಸ್ವಾಯೀ ಸಮಿತಿಯ ವಾರ್ಷಿಕ ಅಧಿವೇಶನದಲ್ಲಿ ಸರ್ವಾನುಮತದಿಂದ ಈ ಕೆಳಗಿನ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆಯೆಂದು ತಿಳಿದು ಬಂದಿದೆ:–

"ವಿಟ್ಲದಲ್ಲಿ 27ನೇ ಆಯುರ್ವೇದ ಸಮ್ಮೇಳನವನ್ನು ಅದ್ದೂರಿಯಾಗಿ ನಡೆಸಿದ ಜಿಲ್ಲೆಯ ಸ್ವಾಗತ ಸಮಿತಿಯವರಿಗೂ ಮತ್ತು ಅಧ್ಯಕ್ಷರಾದ ಶ್ರೀ ವೀರೇಂದ್ರ ಹೆಗ್ಗಡೆಯವರಿಗೂ ಈ ಸ್ಥಾಯೀ ಸಮಿತಿಯು ತನ್ನ ಅಭಿನಂದನೆಯನ್ನು ಸಲ್ಲಿಸುವುದಲ್ಲದೆ–ಇನ್ನು ಮುಂದೆಯೂ ಸದಾ ಆಯುರ್ವೇದದ ಅಭಿವೃದ್ಧಿಗೆ ಸಲಹೆ, ಸಹಕಾರ–ಸೇವೆಯನ್ನು ನೀಡಲು ಶ್ರೀ ಹೆಗ್ಗಡೆಯವರನ್ನು ಮತ್ತು ಮಹಾ ಕಾರ್ಯದರ್ಶಿಗಳಾದ ಡಾ। ಅಲ್ಲದ ಭಟ್ಟರವರನ್ನು ಅತಿ ಗೌರವದಿಂದ ವಿನಂತಿಸುತ್ತದೆ."

ಬೇಕಾಗಿದ್ದಾರೆ

ಪ್ರಿಂಟಿಂಗ್ ಪ್ರೆಸ್‌ನ ನಾನಾ ವಿಭಾಗಗಳಲ್ಲಿ ತರಬೇತಿಗಾಗಿ ಕನಿಷ್ಠ ಎಂಟನೇ ತರಗತಿ ವರೆಗೆ ಓದಿದ ಸ್ಥಳೀಯ ಯುವಕರನ್ನು ತೆಗೆದುಕೊಳ್ಳಲಾಗುವುದು. ಒಂದೆರಡು ವರ್ಷಗಳ ಅನುಭವವುಳ್ಳವರನ್ನೂ ಸೇರಿಸಿಕೊಳ್ಳಲಾಗುವುದು.

ನವಯುಗ ಪ್ರೆಸ್, ಉಡುಪಿ

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 101/1971

ಹಮ್ಮದ್ ಬ್ಯಾರಿ —ವಾದಿ.

Vs.

ಹಾಮದ್ ಕುಂಞ ಬ್ಯಾರಿ, ಎಮ್ಮೆಡಿ ಮೂಸೆ ಬ್ಯಾರಿ ಮಗ, ಬೆಳ್ತಂಗಡಿ ತಾಲ್ಲೂಕ ಕಳಿಂಜ ಗ್ರಾಮದ ವಕ್ಕರೆ ಎಂಬಲ್ಲಿ –ಪ್ರತಿವಾದಿ

ಇವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ–

ವಾದಿಯು ನಿಂಮ ಮೇಲೆ ಡಿ. ಪ್ರೋ। ನೋಟಿನ ಹಣ ವಸೂಲು ಬಗ್ಗೆ ಹೂಡಿದ ಮೇಲ್ಕಂಡ ದಾವೆಯು ನಿಂಮ ಹಾಜರಾತಿ ಬಗ್ಗೆ ತಾ.11–10–71ಕ್ಕೆ ಇಟ್ಟಿರುವುದರಿಂದ ಅದ್ಕೆ ಆಕ್ಷೇಪಣೆಯಿದ್ರೆ ಸದ್ರಿ ದಿವಸ ಮೇಲ್ಕಂಡ ಕೋರ್ಟು ಮುಂದೆ ನೀವು ಸ್ವತಃ ವ ವಕೀಲರ ಮೂಲಕ ಹಾಜರಾಗಿ ಉದಪಡಿಸಿಕೊಳ್ಳ ತಕ್ಕದ್ದು. ತಪ್ಪಿದ್ರೆ ನಿಂಮ ಗೈರ ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗಿಯದೆ.

(Sd) B. Ishwara Bhat
Advocate for Plff.

ಬೆಳ್ತಂಗಡಿ, ತಾ. 11–9–71

Kindly

Contribute generously

to the

NAVAYUGA

GOLDEN JUBILEE FUND 1971

ದಯಮಾಡಿ

ನಿಮ್ಮ ಬಾಕಿ ಚಂದಾ

ಹಣವನ್ನು ಕಳುಹಿಸಿರಿ

(ಮೂರನೇ ಪುಟದಿಂದ)

ಸಮಾಜದ ಅಲಕ್ಷ್ಯಿತ ಅಂಗವೊಂದರ ಕಡೆಗೆ ಗಮನ ಹರಿಸಿದಂತಾಗುತ್ತದೆ ಶ್ರೀ ದೇವರಾಜರ ಅಭಿಪ್ರಾಯವಿದಕ್ಕೆ ವ್ಯತಿರಿಕ್ತವಾಗಿದ್ದು, 'ಹಿಂದುಳಿದವರೇ ಇಲ್ಲ'ವೆಂದಾಗಿದ್ದರೆ, ಅದು ಸತ್ಯಕ್ಕೆ ಬಹಳ ದೂರವಾದದ್ದೆಂದು ಹೇಳಲೇಬೇಕು.

ಡಾ|| ಕಾಸು ನಡೆಯದ ಕಾಸು

ಪ್ರಧಾನಿ ಶ್ರೀಮತಿ ಗಾಂಧಿಯವರು ತಮ್ಮ ಪಕ್ಷವು ಅಧಿಕಾರದಲ್ಲಿರುವ ರಾಜ್ಯಗಳಲ್ಲಿನ ನಾಯಕತ್ವದಲ್ಲಿ ಬದಲಾವಣೆ ಮಾಡಲು ಅಣಿಯಾಗಿದ್ದಾರೆಂಬುದನ್ನು ನಾವು ಕೆಲ ಸಮಯಕ್ಕೆ ಮೊದಲೇ ಹೇಳಿದ್ದೇವೆ. ಈ ಮಾಸದ ಸರದಿ ಆಂಧ್ರಪ್ರದೇಶದ ಡಾ|| ಬ್ರಹ್ಮಾನಂದ ರೆಡ್ಡಿಯವರದ್ದೆಂದೂ ಬರೆದಿದ್ದೇವೆ ಸುದೈವದಿಂದ ಆ ಮಾತು ಇದೀಗ ಸತ್ಯವಾಯ್ತು. ಶ್ರೀ ನೀಲಂ ಸಂಜೀವ ರೆಡ್ಡಿಯವರು ನ್ಯಾಯಾಲಯದ ತೀರ್ಮಾನವೊಂದರ ಪರಿಣಾಮವಾಗಿ ಮುಖ್ಯಮಂತ್ರಿ ಪದಕ್ಕೆ ರಾಜೀನಾಮೆ ನೀಡಿದಾಗ ೧೯೬೪ರಲ್ಲಿ ಮುಖ್ಯಮಂತ್ರಿಯಾದ ಡಾ|| ಬ್ರಹ್ಮಾನಂದ ರೆಡ್ಡಿ ಅಂದಿನಿಂದಲೂ ಭದ್ರವಾಗೇ ಬೇರೂರಿಕೊಂಡು ಬಂದಿದ್ದಾರೆ. ತನ್ನ ಬೇರು ಆತಲಕ್ಕೆ ಊರಿ ಹೋಗಿದೆಯೆಂದ್ದರಿಂದ ಇಂದಿರಾ ಬಿರುಗಾಳಿಗೂ ತನ್ನನ್ನು ಉರುಳಿಸಲು ಅಶಕ್ಯವೆಂಬ ಅವರ ನಂಬಿಕೆ ಮಾತ್ರ ಸುಳ್ಳಾಯ್ತು. 'ತೆಲಂಗಾಣ ಸಮಸ್ಯೆ'ಯ ಹೆಸರಿನಲ್ಲಿ ತಾನೆಂದೂ ರಾಜೀನಾಮೆಕೊಡಲಾರೆನೆಂಬ ಗಂಡುನುಡಿಯಾಡುತಿದ್ದ ಅವರು ಶ್ರೀಮತಿ ಗಾಂಧಿಯವರ ಕೇಳಿಕೆಯಂತೆ ತುಟಿಪಿಟಿಕ್ಕೆನ್ನದೆ ರಾಜೀನಾಮೆ ನೀಡಿ ತಮ್ಮ ಮಾತನ್ನೇನೋ ಉಳಿಸಿಕೊಂಡರು. ಡಾ|| ಬ್ರಹ್ಮಾನಂದರ ರಾಜೀನಾಮೆಯೇ ತೆಲಂಗಾಣವಾದಿಗಳ ಪ್ರಮುಖ ಬೇಡಿಕೆಯೆಂಬುದನ್ನು ಮರೆಯಬಾರದು.

ಆಂಧ್ರದ ರಾಜ್ಯಕೀಯದಿಂದ ಡಾ|| ಕಾಸು ನಿರ್ಗಮನವಾಯ್ತು. ಮುಂದವರ ಭವಿಷ್ಯವೇನು? ಡಾ|| ಕಾಸುರವರು ತೆಲಂಗಾಣದವರಿಗೆ ತೋರಿಕೆಗಾದರೂ ಅಪ್ರಿಯರೆನಿಸಿದರೂ ಆಂಧ್ರದಲ್ಲಿ ಅವರು ಪ್ರಶ್ನಾತೀತ ನಾಯಕರೇ. ಇದೇ ಅವರ ಮುಳುವಿಗೆ ಕಾರಣವಾಯ್ತು. ಪ್ರಧಾನಿ ಗಾಂಧಿಗೆ ಡಾ|| ಕಾಸುರಲ್ಲಿ ನೈಜ ವಿಶ್ವಾಸವಿರುವುದಾದರೆ, ಡಿಲ್ಲಿಗೆ ಎಳೆಯೊಯ್ಯಲೇ ಬೇಕು. ಇದು ಸಂಭವವೆಂದು ತೋರುವುದಿಲ್ಲ. ಆದರೆ, ಮುಂದಿನ ಜನವರಿ - ಫೆಬ್ರವರಿಯಲ್ಲಿ ಆಂಧ್ರದಲ್ಲಿ ವಿಧಾನ ಸಭಾ ಚುನಾವಣೆಗಳು ನಡೆಯಲಿರುವುದರಿಂದ ಡಾ|| ಕಾಸುರನ್ನು ಸಂಪೂರ್ಣ ತಿರಸ್ಕರಿಸಲೂ ಆಕೆ ಸಿದ್ಧರಿಲ್ಲ. ಅದುವರೆಗೆ ಅವರನ್ನು ಸಮಾಧಾನ ಪಡಿಸಿದರೆ, ಆ ಬಳಿಕ ಅವರ ಚಲಾವಣೆಯನ್ನು ತಡೆ ಹಿಡಿಯುವುದು ಆಕೆಗೆ ತ್ರಾಸವಲ್ಲ. ಅಧಿಕಾರ ಚ್ಯುತರಾದವರು ಮರುಗಳಿಗೆಯಲ್ಲೇ ನಡೆಯದ ನಾಣ್ಯವಾಗುತ್ತಾರೆ. ಅಸ್ಸಾಮು, ರಾಜಸ್ಥಾನಗಳ ಮಾಲಿಕೆಯಲ್ಲಿ ಆಂಧ್ರವೂ ಸೇರಿತು; ಮುಂದಿನದು ಶ್ರೀ ಚವನ ಭಕ್ತ ವಿ. ಪಿ. ನಾಯಕರ ಸರದಿ. ವಿದರ್ಭಕ್ಕೇ ಸೇರಿದ ಶ್ರೀ ನಾಯಕರನ್ನು ವಿದರ್ಭ ಚಳುವಳಿ ಎತ್ತಿ ಹಾಕದು. ಅದಕ್ಕಾಗಿ ಮರಾಠಾವಾಡಾವನ್ನೇ ಎತ್ತಿ ಕಟ್ಟಬೇಕು. ಶ್ರೀ ಎಸ್. ವಿ. ಚವನರಿಗೆ ರೆಕ್ಕೆ ಕಟ್ಟುವ ಪ್ರಯತ್ನ ನಡೆಯುತ್ತಿದೆ.

●●

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ನೊಂದ ಹೃದಯದ ಮಿಡಿತ

ಯಜ್ಞ ಪಶುವಾದ ಶ್ರೀಸಾಮಾನ್ಯ

ನಮ್ಮದು ಭಾರತ ವರ್ಷ. ಭರತ ಖಂಡ. ಪರಮ ಋಷಿಗಳ ತಪೋಭೂಮಿ. ವರನದಿಗಳ ಸಂಗಮ. ಪುಣ್ಯ ಕ್ಷೇತ್ರಗಳ ಪ್ರಾಣಾಯಾಮ. ಮಹಾ ಮಹಾ ಚಕ್ರವರ್ತಿಗಳು ಬಳ್ಳದಿಂದ ಮುತ್ತು ರತ್ನಗಳನ್ನು ಅಳೆದು ಮಾರಿದ ಚಾರಿತ್ರಿಕ ಕ್ಷೇತ್ರ. ವಿಶ್ವ ಪ್ರಸಿದ್ಧ ದೇಶ.

ಆದರೆ ಭಾರತ ಇಂದು ಬಡವಾಗಿದೆ. ಅನೇಕ ಸ್ವಾತಂತ್ರ್ಯ ವೀರರ ರಕ್ತ ಹರಿಸಿ, ಗಳಿಸಿದ ಈ ಸ್ವಾತಂತ್ರ್ಯ ನಿಷ್ಫಲವಾಗಿದೆ. ಜಾತೀಯತೆಯ ಜ್ವಾಲಾ ಮಾಲಿನಿಗೆ ಬಲಿ ಕೊಡಲು ಯಜ್ಞಕಂಭಕ್ಕೆ ಕಟ್ಟಿದ ಬಲಿಯ ಪಶುಗಳುನಾವಾಗಿರುವುದು ಶೋಚನೀಯ. ಇದಕ್ಕೆ ಪ್ರಾಮುಖ್ಯ ಕಾರಣ ಇಂದಿನ ರಾಜಕಾರಣ.

ನೇತಾಜಿ, ತಿಲಕ, ಭಗತ್‌ಸಿಂಗ್–ಮೊದಲಾದವರ ಸ್ಥೈರ್ಯವೀರ್ಯ,ಸ್ಥಾನ–ಮಾನಗಳು ಈ ಭಾರತಕ್ಕಾಗಿ ಮೀಸಲಾಗಿ, ಅದರ ಪಾವಿತ್ರ್ಯ ತನವನ್ನು ಉಳಿಸಿಕೊಟ್ಟು ಅವರೆಲ್ಲ ಹೃತಾತ್ಮರಾದರು. ಆದರೆ ಹಾಸಿಗೆ ಇದ್ದಷ್ಟು ಕಾಲು ಚಾಚ ಸುಖವುಣ್ಣುವ ಭಾಗ್ಯ ನಮಗಿಲ್ಲ ದಧೀಚಿ ಮಹರ್ಷಿ ತನ್ನ ಬೆನ್ನಿನ ಎಲುಬನ್ನು ತೆಗೆದು ದೇವೇಂದ್ರನಿಗೆ ಅಸುರ ಸಂಹಾರಕ್ಕೆ ವಜ್ರಾಯುಧವಾಗಿ ಕೊಟ್ಟ. ಆದರೆ ಇಂದು ದೇಶಕ್ಕೆ ಬೆನ್ನೆಲುಬಾಗಿರುವ ಈ ಬಡರೈತನ ಬೆನ್ನೆಲುಬೇ ಈ ಮಂತ್ರಿಗಳಿಗೆವಜ್ರಾಯುಧವಾಗಬೇಕೇನು?

ಮುನ್ನುಗ್ಗಿ; ದೇಶಕ್ಕಾಗಿ ಹೋರಾಡಿ; ಶತ್ರುಗಳನ್ನು ಎದುರಿಸಿರಿ—

ಎಂದು ಮಂತ್ರಿಗಳು ಕೂಗಿ ಹೇಳುತ್ತಾರೆ. ಯಾವ ರೈತನಿಗೆ ಈ ಕಸುವಿದೆ? ಸರಕಾರದ ದಿನಕ್ಕೊಂದು ಕಾನೂನಿನಿಂದ, ಹೊಸ ತೆರಿಗೆಗಳ ಜಂಜಡದಿಂದ ಜರ್ಝರಿತನಾಗಿರುವ ಆ ಅಸ್ಥಿಪಂಜರಕ್ಕೆ ಭೀಮಬಲ ಬಂದೀತೆ? ಭಾರತೀಯರ ಹೃದಯವಷ್ಟೇ ಶ್ರೀಮಂತ. ಉಳಿದುದೆಲ್ಲವೂ ಬಡ. ರೈತ ಕಷ್ಟಪಟ್ಟು ಬೆಳೆಸುತ್ತಾನೆ. ಅದರಲ್ಲಿ ಅವನಿಗೆ ಏನು ಫಲವಿದೆ? ಸರಕಾರ ಕೊಡುವ ಬ್ಯಾಂಕಿನ ಸಾಲಕ್ಕೆ ಮೊದಲು ಸೇರು ತೆರಬೇಕು. ಸಾವಿರ ಸಲ ಬ್ಯಾಂಕಿನೆಡೆ ಕುಣಿದಾಡಬೇಕು. ಆ ಹಣಕ್ಕಾಗಿ ಬಾಯಿ ಬಿಟ್ಟೂ ಬಿಟ್ಟು ಕೊನೆಗೊಂದು ದಿನ ಆತಸಣ್ಣ ಹಿಡುವಳಿದಾರನಾಗಿದ್ದಲ್ಲಿ ಬರುವ ಉತ್ತರವೇ ಪ್ರತ್ಯೇಕ. 'ನಿನ್ನ ಜಮೀನಿಗೆ ಜವಾಬ್ದಾರಿ ಸಾಲದುದರಿಂದ ಸಾಲದ ಅರ್ಜಿಯನ್ನು ಕ್ಯಾನ್ಸಲ್ ಮಾಡಿದ್ದಾರೆ. ಈ ಜಮೀನಿಗೆ ಸಾಲ ಸಿಗಬೇಕಾದರೆ ಹತ್ತು ರೂಪಾಯಿ ತೆರಿಗೆ ಬರುವ ಜಮೀನಿನ ಬಾಂಡ್ ಕೊಡಬೇಕು' ಎನ್ನುತ್ತಾರೆ. ಆತ ತಲೆಗೆ ಕೈ ಹೊತ್ತು ಕೊಂಡು ಬರುತ್ತಾನೆ. ಒಂದು ವರ್ಷ ಸಾಲಕ್ಕಾಗಿ ಪರದಾಟ, ಲ್ಯಾಂಡ್ ಮಾರ್ಗೇಜ್ ಬ್ಯಾಂಕಿನಿಂದ ನಾನೇ ಈ ಉತ್ತರ ಪಡೆದಿದ್ದೇನೆ.

ಬೆಳೆ ಕಟಾವಿನ ಕಾಲದಲ್ಲಿ ಭತ್ತಕ್ಕೆ ಬೆಲೆಯೇ ಇಲ್ಲ. ಬತ್ತದ ಕಾಲ ಮುಗಿದೊಡನೆಯೇ ಏಕ್‌ದಂ ಬೆಲೆ ಏರುತ್ತದೆ. ಲೆವಿ ಭತ್ತಕ್ಕೆ ಸರಕಾರ ಕೊಡುವ ಬೆಲೆಗೂ ಮಾರ್ವಾಡಿಗಳು ಕೊಡುವ ಬೆಲೆಗೂ ಅಜಗಜಾಂತರ, ಸರಕಾರದ್ದು ಕೊಳ್ಳುವ ಕ್ರಯ ಯಾವಾಗಲೂ ಕಮ್ಮಿಯೇ. ಲಾಭಕೋರರನ್ನು ಅದು ಹದ್ದುಬಸ್ತಿನಲ್ಲಿಟ್ಟಿಲ್ಲ. ರೈತನಿಗೆ ಆಗುತ್ತಿರುವ ಅನ್ಯಾಯವನ್ನು ಗಮನಿಸುತ್ತಿಲ್ಲ.

ಮೊರಾರ್ಜಿ ತಪ್ಪಿದರೆ ಚವ್ಹಾಣ್, ಚವ್ಹಾಣ್ ತಪ್ಪಿದರೆ ಮೊರಾರ್ಜಿ– ಇದು ನಮ್ಮ ಸಚಿವ ಸಂಪುಟದ ರೀತಿ. ಅವರಿಬ್ಬರೂ ಮಹಾಲಕ್ಷ್ಮಿಯ ಪಾದಾರವಿಂದದಿಂದಲೇ ಬಂದವರು. ಎಷ್ಟು ತೆರಿಗೆ ವಿಧಿಸಿದರೂ ಅಲ್ಪವೇ ಎನಿಸುವುದವರಿಗೆ. ತಂಗಳ ಭಾರ ಹೊತ್ತು ಹೊತ್ತು ಭಾರತೀಯನ ಬೆನ್ನು ಬಾಗಿ ಹೋದರೂ ಇನ್ನೂ ಇನ್ನೂ ತೆರಿಗೆ.ಕುಡಿಯುವ ನೀರಿಗೆ, ಮನೆಯಲ್ಲಿ ಹಚ್ಚುವ ದೀಪಕ್ಕೂ ತೆರಿಗೆಯೇ.

ಚವ್ಹಾಣ್, ಇಂದಿರಾಗಾಂಧಿ ಮೊದಲಾದವರು ಒಂದು ವಿದೇಶದ ಪ್ರವಾಸ ಮುಗಿಸಿ ಬರಲು ಕನಿಷ್ಠ ಪಕ್ಷ ಐವತ್ತು ಸಹಸ್ರ ರೂಪಾಯಿಯಾದರೂ ಬೇಕಾಗುತ್ತದೆ. ಇದು ಪ್ರಜೆಗಳ ಹಣವೆಂದು ಯಾರೂ ಮರೆಯಬಾರದು. ಮಿತ ಸಂತಾನದ ಪ್ರಚಾರಕ್ಕೆ, ಕೋಟಿಗಟ್ಟಲೆ ಕಟ್ಟಿಕೊಡುವ ಈ ಸರಕಾರಕ್ಕೆ ಬೇರೆ ಯಾವ ವಿಧದಿಂದಲೂ ಪ್ರಜೆಗಳ ರಕ್ಷಣೆ ಸಾಧ್ಯವಿಲ್ಲವೆ?

ಉದ್ಯೋಗ ಸಮಸ್ಯೆಯನ್ನು ಸರಕಾರ ಇನ್ನೂ ನಿವಾರಿಸಿಲ್ಲ. ಹಲವಾರು ಪದವೀಧರ ಯುವಕರು ಉದ್ಯೋಗವಿಲ್ಲದೆ ರಿಕ್ಷಾವಾಲರಾಗಿದ್ದಾರೆ, ಹಜಾಮರಾಗಿದ್ದಾರೆ. ಕೆಲವು ಯುವತಿಯರು ಅನೈತಿಕ ಬಾಳುವೆ ನಡೆಸಬೇಕಾಗಿದೆ. ಅಮೆರಿಕದಿಂದ ತರಿಸುವ ಅಶ್ಲೀಲ ಸಿನೇಮಗಳಿಗೆ ಸರಕಾರ ಕೋಟಿಗಟ್ಟಲೆ ಡಾಲರ ತೆತ್ತು, ಯುವಜನಾಂಗವನ್ನು ನೈತಿಕ ಅಧಃಪತನಕ್ಕಿಳಿಸುತ್ತಿದೆ. ಇವರ ಕಡೆಗೆ ಆದರ ಗಮನವೇ ಇಲ್ಲ.

ಗುಲ್ಜಾರಿಲಾಲ್ ನಂದಾ ಭ್ರಷ್ಟಾಚಾರಕ್ಕಾಗಿ ಕುಣಿದಾಡಿದ್ದೇ ಬಂತು. ಇಂದು ಲಂಚವಿಲ್ಲದೆ ಯಾವ ಕಾರ್ಯವೂ ನಡೆಯುವುದಿಲ್ಲ ಇದಕ್ಕೂ ಸರಕಾರವೇ ಕಾರಣ. ನೌಕರರಿಗೆ ಕಡಿಮೆ ಸಂಬಳ; ಕಡಿಮೆ ಸೌಲಭ್ಯ ಹಾಗೂ ಏರುತ್ತಿರುವ ದಿನಸುಗಳ ಬೆಲೆಯನ್ನು ಸರಕಾರ ಹತೋಟಿಗೆ ತರದಿರುವುದರಿಂದ ಅವರು ಅನೀತಿಗಿಳಿದಿದ್ದಾರೆ. ಬಸ್ಸು ರಾಷ್ಟ್ರೀಕರಣವಾಗಿದೆ. ಟಿಕೇಟು ಪಡೆಯದವನಿಗೆ ಶಿಕ್ಷೆಯೂ ಇದೆ. ಆದರೆ ಎಷ್ಟು ಪ್ರಯಾಣಿಕರಿಗೆ ಯಾವ ಕಂಡಕ್ಟರರು ಟಿಕೇಟು ಕೊಟ್ಟಿದ್ದಾರೆಂದು ಪರೀಕ್ಷೆ ಮಾಡಿದ್ದಾರೆಯೆ? ಯಾವ ಇಲಾಖೆಯಲ್ಲೂ ಈಗ ದಕ್ಷತೆಯಿಲ್ಲ.

ಬಂಗ್ಲಾದೇಶ ಸಮಸ್ಯೆಯ ಕುರಿತು ಸರಕಾರ ಔದಾಸೀನ್ಯ ತಾಳಿದೆ. ಪಾಕಿಸ್ತಾನ ಮುನ್ನುಗ್ಗುತ್ತಿರುವುದರೊಂದಿಗೆ ರೈಲುಗಳಿಗೆ ಸ್ಫೋಟಕಗಳನ್ನಿಡಲು ಸೈನಿಕರಿಗೆ ತರಬೇತಿ ನೀಡುತ್ತಿರುವ ಸಂಗತಿ ಈಚೆಗೆ ಗೊತ್ತಾಗಿದೆ. ಈ ನಿರಾಶ್ರಿತರಿಗಾಗಿ ಭಾರತ ಕೋಟಿ ಕೋಟಿ ರೂಪಾಯಿ ನುಂಗಿಸುತ್ತದೆ. ಎಲ್ಲ ಬಡ ಭಾರತೀಯನ ಬೆವರು. ಅವನ ಬಲಿಯ ದಿನ ದೂರವಿಲ್ಲ. ಈ ಆಡಳಿತವರಿಯದ ರಾಜಕಾರಣಿಗಳಿಂದ ಭಾರತ ಅಧೋಗತಿಗಿಳಿಯುತ್ತಿದೆ.

—ಶ್ರೀ ಪ. ರಾಮಕೃಷ್ಣ ಶಾಸ್ತ್ರಿ

●●

ಯಾರನ್ನು ಶತ್ರುಗಳು ಮತ್ತು ಮಿತ್ರರೂ ಸೇರಿಯೇ ಅಪರಾಧಿಗಳೆಂದು ಸಾರುತ್ತಾರೋ ಅಂಥವರನ್ನು ಮಾತ್ರ ನ್ಯಾಯಶಾಸ್ತ್ರವು ದಂಡಿಸಬೇಕು.

o o o

ಹಿಂಸಾತ್ಮಕ ಆಕಾಂಕ್ಷೆಗಳು ಹಿಂಸಾತ್ಮಕ ಅಂತ್ಯವನ್ನೇ ಕಾಣುವವು; ಅವುಗಳಿಗೆ ಲವಿನೊಡನೆ ಸಾವೂ ಬರುವುದು.

ಶೇಕ್ಸ್‌ಪಿಯರ್

o o o

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant Boarding & Lodging

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

'ಗಾಂಧೀಜಿಯ ಕೊಲೆ'

(ಎರಡನೇ ಪುಟದಿಂದ)

ಅದನ್ನು ದಂಡಾವತೆಗೆ ಹಿಂದಿರುಗಿಸಿದರು

ಅನಂತರ ಅವರು ನನ್ನೊಡನೆ ನನಗೆ ಇಂದೇ ಊರು ಬಿಡಬೇಕಾಗಿದೆ—ಊರು ಬಿಡುವುದರಲ್ಲಿ ರಿವಾಲ್ವರ್ ಒದಗಿಸಿಯೇ ತೀರ ಬೇಕೆಂದು ಹಟ ಹಿಡಿದರು ಅದು ಸಾಧ್ಯವಿಲ್ಲವೆಂದು ನಾನು ಉತ್ತರಿಸಿದ ಹಿಂತಿರುಗುವುದಕ್ಕೆ ನನ್ನದೇನೂ ಅಭ್ಯಂತರ ವಿಲ್ಲವೆಂದು ಹೇಳಿದೆ—ಆಗ ಸಿಗುವ ಸಂಭವ ವಿದ್ದಲ್ಲಿ ರಾತ್ರಿಯ ತನಕ ಉಳಿದುಕೊಳ್ಳುವುದಾಗಿ ಹೇಳಿದರು ಒಂದು ನಾವೆಲ್ಲ ಒಟ್ಟಿಗೆ ಭೋಜನ ತೀರಿಸಿದೆವು

28ರ ರಾತ್ರಿ ನಮ್ಮಲ್ಲಿಗೆ ದಂಡಾವತೆ ಪುನಃ ಬಂದ ಆಗ ಅವನ ಕೈಯಲ್ಲೊಂದು ಪಿಸ್ತೂಲು ಇತ್ತು ಎಲ್ಲಿ ದೊರಕಿತೋ ನನಗೆ ತಿಳಿಯದು ಅದೊಂದು ಸ್ವಯಂಚಾಲಿತ ಪಿಸ್ತೂಲು ತುಂಬ ಚೆನ್ನಾಗಿರುವಂತೆ ಕಂಡಿತು ದಂಡಾವತೆ ಆ ಪಿಸ್ತೂಲಿನ ಬೆಲೆ 500—ಎಂದು ತಿಳಿಸಿದ ಆಪ್ಟೆ 300—ರೂ ಗಳನ್ನು ಕೊಟ್ಟು ಬಾಕಿಯನ್ನು ಅನಂತರ ಕಳುಹಿಸಿಕೊಡುವುದಾಗಿ ಹೇಳಿದ ಅದರ ಭದ್ರತೆಗಾಗಿ ನಾವು ತಂದ ರಿವಾಲ್ವರನ್ನು ದಂಡಾವತೆಗೆ ಕೊಟ್ಟೆವು. ರಾತ್ರಿ 10-30ರ ಸುಮಾರಿಗೆ ಗೋಡ್ಸೆ, ಆಪ್ಟೆ ರೈಲು ನಿಲ್ದಾಣಕ್ಕೆ ಹೊರಟು ಹೋದರು ದಂಡಾವತೆ ಅವನ ಮನೆಗೆ ನಡೆದ, ನಾನು ಮಲಗಿಕೊಂಡೆ

30-1-48ರಂದು ಸಂಜೆ ಆಸ್ಪತ್ರೆಗೆಂದು ಮನೆಯಿಂದ ಹೊರಟೆ ಮಧುಕರ ಕಾಳೆ ದಾರಿಯಲ್ಲಿ ಇದಿರಾದರು—ಅವನಿಂದ ಗಾಂಧೀಜಿಯ ಕೊಲೆಯ ಸುದ್ದಿ ತಿಳಿಯಿತು ಆಸ್ಪತ್ರೆಗೆ ಹೋದವನು, ಕೆಲಸದಾಳಿನ ಮೂಲಕ ಸಿಹಿ ತಿಂಡಿ ತರಿಸಿದೆ ಆಸ್ಪತ್ರೆಯಲ್ಲಿದ್ದವರಿಗೆ ಅದನ್ನು ಹಂಚಿದೆ—ಶಾರು ತಂದ ರಿವಾಲ್ವರನ್ನು ಗೋಡ್ಸೆ ಒಯ್ದನೋ, ಅಥವಾ ದಂಡಾವತೆಯ ಕೈಯಲ್ಲಿ ಬಿಟ್ಟು ಹೋದನೋ, ಅದನ್ನು ಖಚಿತವಾಗಿ ಹೇಳಲಾರೆ

ಡಿ ಯಸ್ ಪರಚುರೆ (ಸಹಿ)

18-2-48

ಬಿ ಆರ್ ಅತುಲ್

ಸ್ಪೆಷಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಲಷ್ಕರ್-ಗ್ವಾಲಿಯರ್ ಮತ್ತು ಮೊರಾನ್

18-2-48

ಈ ರೀತಿ ಹೇಳಿಕೆ ಕೊಡುವ ಅಗತ್ಯವಿಲ್ಲವೆಂದೂ, ಈ ಹೇಳಿಕೆಯನ್ನು ಅವರ ವಿರುದ್ಧ ಉಪಯೋಗಿಸಲಾಗುವುದೆಂದೂ ನಾನು ಡಾಕ್ಟರ್ ಪರಚುರೆಗೆ ವಿವರಿಸಿದೆ ಈ ತಪ್ಪೊಪ್ಪಿಗೆಯ ಹೇಳಿಕೆ ಬಲವಂತದ್ದಲ್ಲವೆಂದೂ, ಸ್ವ ಪ್ರೇರಣೆಯಿಂದ ಕೊಟ್ಟದ್ದೆಂದೂ ನನಗೆ ಮನವರಿಕೆಯಾಗಿದೆ ಈ ಹೇಳಿಕೆಯನ್ನು ನನ್ನಿದಿರು ಕೊಟ್ಟದ್ದು ಅದು ನನಗೆ ಕೇಳಿಸುತಿತ್ತು ಬರೆದುದನ್ನು ಪುನಃ ಅವರಿಗೆ ಓದಿ ಹೇಳಿದೆ ಅದು ಸರಿಯಾಗಿದೆ ಎಲ್ಲಿಯೂ ಹೆಚ್ಚು ಕಡಿಮೆಯಾಗಿಲ್ಲವೆಂದು ಅವರು ಒಪ್ಪಿ ಕೊಂಡರು

ಕೋರ್ಟಿನ ಮುದ್ರೆ

18-2-48

ಬಿ ಆರ್ ಅತುಲ್

ಸ್ಪೆಷಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್, ಲಷ್ಕರ್

18-2-48

ಡಾಕ್ಟರ್ ಪರಚುರೆಯವರ ಮನೆಯಲ್ಲಿ ಗೋಡ್ಸೆಗೆ ಪಿಸ್ತೂಲನ್ನು ದೊರಕಿಸಿಕೊಟ್ಟ ನಾನಾ ದಂಡಾವತೆ ಪೋಲೀಸರ ಕೈಗೆ ಇದುವರೆಗೂ ಸಿಗಲಿಲ್ಲ ಆತನೂ ಕೊಲೆ ಮೊಕದ್ದಮೆಯಲ್ಲಿನ ಒಬ್ಬ ಆರೋಪಿ. ಪಿಸ್ತೂಲು ಪ್ರಾಸಿಕ್ಯೂಶನ್ ಪರ ವಿಚಾರಣೆಯಾದ 39ನೆಯ ಸಾಕ್ಷಿ ಜಗದೀಶ ಪ್ರಸಾದ ಗೋಯಲ್ಲರಿಗೆ ಸೇರಿತ್ತು ಅದನ್ನಿಟ್ಟುಕೊಳ್ಳಲು ಆತನಲ್ಲಿ ಲೈಸೆನ್ಸ್ ಇರಲಿಲ್ಲ ಈ ಪಿಸ್ತೂಲನ್ನು ಆತ ಡಾಕ್ಟರ್ ಪರಚುರೆಯವರ ಮನೆಯಲ್ಲಿ ಗೋಡ್ಸೆ—ಆಪ್ಟೆಯವರಿಗೊಪ್ಪಿಸಿದ ಈ ವ್ಯಾಪಾರ ಕುದುರಿದ್ದು ದಂಡಾವತೆಯ ಮಧ್ಯಸ್ಥಿಕೆಯಿಂದ ಗೋಡ್ಸೆ ಗ್ವಾಲಿಯರಿಗೆ ತಂದ ರಿವಾಲ್ವರನ್ನು ತಾನು ತೆಗೆದು ಕೊಂಡಿಲ್ಲವೆಂದು ಆತ ಸ್ಪಷ್ಟ ತಿಳಿಸಿದ ಆಪ್ಟೆ, ಗೋಡ್ಸೆ, ಪರಚುರೆ ಗೋಯಲ್ ಗೋಡ್ಸೆಯರನ್ನು ಗುರ್ತಿಸಿದ ಆತನ ಪಾಟೀ ಸವಾಲನ್ನು ಪರಚುರೆ ಪರ ಹಾಜರಾದ ಯಾವ ಲಾಯರೂ ಮಾಡಲಿಲ್ಲ ಆತನ ಶಿಕ್ಷಣ ಉದ್ಯೋಗ ಆ ಕುರಿತು ಹಲವಾರು ಪ್ರಶ್ನೆಗಳನ್ನು ಹಾಕಿದ್ದರು ಅವರ ಆತ ತಿಳಿಸಿದ ಸಂಗತಿಗಳ ಸತ್ಯಾಸತ್ಯತೆಯನ್ನು ಪರ ಹಚ್ಚಲು ಯಾರೂ ಪ್ರಯತ್ನಿಸಲಿಲ್ಲ ಅವನು ಕೊಟ್ಟ ಸಾಕ್ಷ್ಯವನ್ನು ಮೂಲ ಕೋರ್ಟು ಪೂರ್ಣವಾಗಿ ಅಂಗೀಕರಿಸಿತು ನಂಬಲರ್ಹವಾದ ಸಾಕ್ಷಿಯೆಂಬ ನಿಲುವಿಗೆ ಬಂದಿತು—ಆತನ ವಿಚಾರಣೆಯಾದ ಎಷ್ಟೋ ದಿನಗಳ ಮೇಲೆ ಡಾಕ್ಟರ್ ಪರಚುರೆ ಮ್ಯಾಜಿಸ್ಟ್ರೇಟರ ಮುಂದೆ ನೀಡಿದ ತಪ್ಪೊಪ್ಪಿಗೆಯ ಹೇಳಿಕೆಯ ವಿರುದ್ಧ ತಿರುಗಿ ಬಿದ್ದು, ಅದು ಬಲಾತ್ಕಾರದಿಂದ ಪಡೆದ ಹೇಳಿಕೆಯೆಂದು ಹೇಳಿದರು

ಬಂಧನದಲ್ಲಿದ್ದ ಗೋಡ್ಸೆ ಕೊಟ್ಟ ಹೇಳಿಕೆಯಂತೆ ದಹಲಿಯ ಪೋಲೀಸರು ಗ್ವಾಲಿಯರಿಗೆ ಹೋದರು ಗೋಡ್ಸೆಯ ಇದಿರಿನಲ್ಲಿ ಪರಚುರೆಯ ಹಿತ್ತಲನ್ನು ಶೋಧಿಸಿದಾಗ ಅಲ್ಲಿ ಉಪಯೋಗಿಸಿದ ಗುಂಡು ದೊರಕಿತು. ಹಿತ್ತಲ ಗೋಡೆಯಲ್ಲಿ ಮದ್ದು ಗುಂಡು ತಗುಲಿ ಆದ ಗುರುತುಗಳಿದ್ದುವು ಆ ವಿವರಗಳನ್ನು ಕಾಣಿಸಿ ಅವರೊಂದು ಪಂಚನಾಮೆಯನ್ನು ಸಿದ್ಧಪಡಿಸಿದ್ದರು ಆ ಪಂಚನಾಮೆಯೂ ಮೊಕದ್ದಮೆಯಲ್ಲಿ ಒಂದು ದಾಖಲೆಯಾಗಿ ಅಂಗೀಕರಿಸಲ್ಪಟ್ಟಿತ್ತು.

ಸೆಷನ್ಸ್ ಜಡ್ಜಿಗಳು ತಮ್ಮ ತೀರ್ಪಿನಲ್ಲಿ ಡಾ ಪರಚುರೆಯವರಿಗೆ ಜೀವಾವಧಿ ಶಿಕ್ಷೆ ವಿಧಿಸಲು ಕೊಟ್ಟ ಕಾರಣಗಳು ಸಬಲವಾಗಿದ್ದುವು ಆ ತೀರ್ಮಾನದಲ್ಲಿ ಯಾವ ನ್ಯೂನತೆಗಳೂ ಕಂಡು ಬರುವುದಿಲ್ಲ ಬಂದ ಸಾಕ್ಷಿ ಹಾಜರು ಪಡಿಸಿದ ದಾಖಲೆಗಳು ಅವರ ತೀರ್ಪನ್ನು ಸಮರ್ಥಿಸುತ್ತವೆ

ಸಿಮ್ಲಾ ಹೈಕೋರ್ಟು ಪರಚುರೆಯ ಅಪೀಲನ್ನು ಅಂಗೀಕರಿಸಿತು ಕೆಳಗಿನ ಕೋರ್ಟು ವಿಧಿಸಿದ್ದ ಶಿಕ್ಷೆಯನ್ನು ರದ್ದುಗೊಳಿಸಿತು ಈ ತೀರ್ಮಾನ ನೀಡುವಲ್ಲಿ ಪರಚುರೆಯವರ ವಿಷಯದಲ್ಲಿ ಅದು ಆರೋಪಿಯ ಸ್ಥಾನ ಮಾನಗಳಿಗೆ ಹೆಚ್ಚಿನ ಮಹತ್ವಕೊಟ್ಟಂತೆ ಕಾಣುತ್ತದೆ ಗೋಡ್ಸೆ-ಆಪ್ಟೆ ಡಾಕ್ಟರ್ ಪರಚುರೆಯವರಲ್ಲಿ ಜನವರಿ 27 ಮತ್ತು 28ರಂದು ಇದ್ದರೆಂಬುದಕ್ಕೆ ದಂಡಾವತೆಯ ಮಧ್ಯಸ್ಥಿಕೆಯಿಂದ ಗಾಂಧಿಜಿಯನ್ನು ಕೊಂದ ಪಿಸ್ತೂಲನ್ನು ದೊರಕಿಸಿ ಕೊಂಡರೆಂಬುದಕ್ಕೆ ಪಿಸ್ತೂಲನ್ನು ಅವರಲ್ಲಿ ಪರೀಕ್ಷಿಸಲಾಯಿತೆಂಬುದಕ್ಕೆ ಜಗದೀಶ ಪ್ರಸಾದ ಗೋಯಲ್ಲರ ಸಾಕ್ಷಿಯನ್ನು ಅಂಗೀಕರಿಸಿದ ನ್ಯಾಯ ಪೀಠ, ಪರಚುರೆಯ ವಿಷಯದಲ್ಲಿ ಯಾಕೆ ತಿರಸ್ಕರಿಸಿತು? ಇದು ಸಾಕ್ಷಿಗಳಿಗೆ ಸಂಬಂಧಿಸಿದಂತೆ ಇರುವ ಶಾಸನಕ್ಕೇ ವಿರೋಧವಾದ ನಿಲುವು ಸಾಕ್ಷಿಯೊಬ್ಬನ ಹೇಳಿಕೆಯನ್ನು ಒಬ್ಬ ಆರೋಪಿಯ ವಿಷಯದಲ್ಲಿ ಸ್ವೀಕರಿಸಿ, ಇನ್ನೊಬ್ಬ ಆರೋಪಿಯ ವಿಷಯಕ್ಕೆ ಆತನ ಹೇಳಿಕೆ ನಂಬಿಕೆಗೆ ಅನರ್ಹವೆಂದು ಹೇಳುವುದು ತೀರ ಹಾಸ್ಯಾಸ್ಪದ ಈ ನಿಲುವನ್ನು ಸಮರ್ಥಿಸಿಕೊಳ್ಳುವ ಪ್ರಯತ್ನ ಪ್ರಯಾಸದ ಕೆಲಸ

(ಆಧಾರಿತ)

ಕುಟುಂಬ ಯೋಜನೆಯಿಂದ ಸಂಸಾರದ ಖರ್ಚು ಕಡಿಮೆ

ಹೆಚ್ಚಿನ ವಿವರಗಳಿಗಾಗಿ ಹತ್ತಿರವಿರುವ ಕುಟುಂಬ ಯೋಜನಾ ಕೇಂದ್ರಕ್ಕೆ ಅಥವಾ ಪ್ರಸೂತಿ ಮತ್ತು ಶಿಶು ಆರೋಗ್ಯ ಕೇಂದ್ರಕ್ಕೆ ಹೋಗಿ ವಿಚಾರಿಸಿ.

NAVAYUGA 16-9-1971

Registered with the Registrar
of News Papers for India
under No R. N. 3546/'67

REGD. No. B. G. 176
LICENCE No. 33
Licensed to Post without Prepayment

ಸಮುದ್ರ-ಭೂಮಿಯ ಕೊನೇ ಗಡಿ!

ಮೈಸೂರು ಮತ್ತು ಕೇರಳದ ವಿಜ್ಞಾನಿಗಳು ಮತ್ತು ವಿದ್ವಾಂಸರಿಗಾಗಿ 1971ನೆಯ ಸೆಪ್ಟೆಂಬರ್ 13 ಮತ್ತು 14ರಂದು ಕೊಚ್ಚಿಯಲ್ಲಿ "ಸಮುದ್ರದ ಉಪಯೋಗ"ಗಳ ಬಗೆಗೆ ಒಂದು ಅಧ್ಯಯನ ಗೋಷ್ಠಿಯನ್ನು ಅಮೆರಿಕದ ನೌಕಾ ಬಲದ ಕಮಾಂಡರ್ ಡಾನ ವಾಲ್ಶ ಅವರ ನೇತೃತ್ವದಲ್ಲಿ ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಸಿದ್ಧಗೊಳಿಸಲಾದ ವಿಶೇಷ ಲೇಖನವಿದು.

ಮನುಷ್ಯ ಈಚೆಗೆ ಅದ್ಭುತವಾದ ಗಗನಯಾನ ಪ್ರಯೋಗಗಳನ್ನು ಕೈಗೊಂಡು ಅಂತರಿಕ್ಷದ ರಹಸ್ಯಗಳಲ್ಲಿ ಕೆಲವನ್ನಾದರೂ ಭೇದಿಸಿದ್ದಾನೆ. 2,50,000 ಮೈಲಿ ದೂರವಿರುವ ಚಂದ್ರನ ಮೇಲೆ ನಡೆದಿದ್ದಾನೆ.

ಆದರ ಕೇವಲ ಏಳು ಮೈಲಿ ಆಳವಿರುವ ಸಮುದ್ರ ಮಾತ್ರ ನಮಗೆ ಇಂದಿಗೂ ಬಿಡಿಸಲಾಗದ ಒಗಟೇ ಆಗಿದೆ. ಸಮುದ್ರ ತಳವನ್ನು ಮನುಷ್ಯ ಇನ್ನೂ ನೋಡಲಾಗಿಲ್ಲ.

ಈಚೆಗೆ ಈ ಸಾಗರ ಪರಿಶೋಧನೆ ಕೆಲಸ ಹೆಚ್ಚು ಬಿರುಸಿನಿಂದ ಸಾಗಿದ್ದು, ಮನುಷ್ಯನ ಸಾಗರ ಜ್ಞಾನ ಬೆಳೆಯುತ್ತಿದೆ ಸಾಗರದಲ್ಲಿ ನಮಗೆ ಪ್ರಯೋಜನಕ್ಕೆ ಬರುವ ಅನೇಕ ವಸ್ತುಗಳು ಅಗಾಧ ಪ್ರಮಾಣದಲ್ಲಿವೆಯೆಂದು ತಿಳಿದಿದ್ದು ಅವನ್ನು ರೂಢಿಸುವುದು ಹೇಗೆಂಬ ಬಗೆಗೆ ಈಗ ಅನೇಕ ಪ್ರಯತ್ನಗಳು ನಡೆಯುತ್ತಿವೆ.

ಕಳೆದ 2000 ವರ್ಷಗಳಲ್ಲಿ ಪ್ರಪಂಚ ಬಳಸಿದುದಕ್ಕಿಂತ ಲೋಹ ಬರುವ 35 ವರ್ಷಗಳಲ್ಲಿ ಬೇಕಾಗುತ್ತದೆ. ಕಳೆದ 100 ವರ್ಷಗಳಲ್ಲಿ ಪ್ರಪಂಚ ಬಳಸಿದ ವಿದ್ಯುಚ್ಛಕ್ತಿಯ ಮೂರರಷ್ಟು ಪ್ರಮಾಣದ ಶಕ್ತಿ ಬರುವ 20 ವರ್ಷಗಳಿಗೆ ಬೇಕಾಗುತ್ತದೆ. ಮುಂದಿನ 20 ವರ್ಷಗಳಲ್ಲಿ ಪ್ರಪಂಚದ ಏರುತ್ತಿರುವ ಜನಸಂಖ್ಯೆಯ ಹಸಿವು ನೀಗಿಸಲು ಪ್ರಪಂಚ ಆಹಾರ ಉತ್ಪಾದನೆ ಶೇಕಡ 50ರಷ್ಟು ಹೆಚ್ಚಬೇಕಾಗಿದೆ. ಭಾರತ, ಪಾಕಿಸ್ತಾನ ಮತ್ತಿತರ ಕೆಲ ದೇಶಗಳಲ್ಲಿ ಆಹಾರ ಉತ್ಪಾದನೆ ದ್ವಿಗುಣಗೊಳ್ಳಬೇಕಾಗಿದೆ.

ಇವೆಲ್ಲ ಅಗತ್ಯಗಳ ಒತ್ತಡದಿಂದ ಸಾಗರದ ಸಂಪನ್ಮೂಲಗಳ ರೂಢಣೆಗೆ ಈಗ ತೀವ್ರ ಪ್ರಯತ್ನಗಳು ನಡೆಯುತ್ತಿವೆ.

ಸಾಗರದ ಉತ್ಪಾದನಾ ಸಾಮರ್ಥ್ಯವು ಸಾಗುವಳಿ ಯೋಗ್ಯ ಭೂಮಿಗಿಂತ 100 ಪಟ್ಟು ಅಧಿಕವೆಂದು ವಿಜ್ಞಾನಿಗಳು ಹೇಳುತ್ತಾರೆ. ಸಾಗರ ಸಸ್ಯಗಳ ಆಹಾರವನ್ನು ವ್ಯಾಪಕವಾಗಿ ಬಳಸುವ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ.

ಪ್ರಪಂಚದ ಸಮುದ್ರಗಳ ನೀರಿನಲ್ಲಿ ಸುಮಾರು 60 ಲಕ್ಷ ಟನ್‌ಗಳಷ್ಟು ಚಿನ್ನ ಕರಗಿ ಹೋಗಿದೆಯೆಂದು ಅಂದಾಜು ಮಾಡಲಾಗಿದೆ. ಅದನ್ನು ರೂಢಿಸಲು ಇನ್ನೂ ಯಾರೂ ಪ್ರಯತ್ನಿಸಿಲ್ಲವಾದರೂ ಇತರ ಹಲವು ಲೋಹ ವಸ್ತುಗಳ ರೂಢಣೆಗೆ ಪ್ರಯತ್ನಗಳು ನಡೆಯುತ್ತಿವೆ. ಕೋಟ್ಯಂತರ ಟನ್ನುಗಳಷ್ಟು ಮ್ಯಾಂಗನೀಸ್, ಸತು, ಕೋಬಾಲ್ಟ್, ತಾಮ್ರ ಮತ್ತು ಫಾಸ್ಫೇಟ್‌ಗಳು ಸಾಗರ ತಳದಲ್ಲಿವೆ.

ಇವೆಲ್ಲ ಪ್ರಯತ್ನಗಳು ಸಫಲವಾಗಿ ಸಾಗರದಿಂದ ನಮಗೆ ಹೆಚ್ಚು ಪ್ರಯೋಜನವಾಗ ಬೇಕಾದರೆ ಸಾಗರ ಸನ್ನಿವೇಶದ ತಿಳಿವಳಿಕೆ ಹೆಚ್ಚಬೇಕು. ಅತ್ಯಂತ ಆಳವಾದ 38, 400 ಅಡಿಗಳವರೆಗೆ ಸಾಗರದಲ್ಲಿ ಕೆಲಸ ಮಾಡಲು ಅವಕಾಶವಾಗುವುದಕ್ಕೆ ಸಾಗರ ಯಂತ್ರ ಶಾಸ್ತ್ರ ಇನ್ನೂ ಬೆಳೆಯಬೇಕಾಗಿದೆ.

ಈ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಸಹಕಾರದ ಪ್ರಥಮ ಪ್ರಯತ್ನವಾಗಿ 1960 ರಲ್ಲಿ ಐದು ವರ್ಷಗಳ ಅಂತರರಾಷ್ಟ್ರೀಯ ಹಿಂದೂ ಸಾಗರ ಪರಿಶೋಧನ ಕಾರ್ಯಕ್ರಮ ಆರಂಭವಾಯಿತು. ಆ ಮೇಲೆ 1968 ರಲ್ಲಿ ಅಮೆರಿಕವು 1970ರ ದಶಕವು ಸಾಗರ ಪರಿಶೋಧನೆಯ ಅಂತರರಾಷ್ಟ್ರೀಯ ದಶಕವಾಗಲೆಂದು ಸಲಹೆ ಮಾಡಿತು.

ಹಿಂದೂ ಸಾಗರ ಅನ್ವೇಷಣೆಯಿಂದ ಅದರ ಅಂಚಿನಲ್ಲಿರುವ ದೇಶಗಳಿಗೆ ಸಮೃದ್ಧ ಮೀನುಗಾರಿಕೆ ಉದ್ಯಮಗಳ ಸಾಧ್ಯತೆ ಲಭಿಸಿತು. ಈಗ ಹಿಂದೂ ಸಾಗರದಿಂದ ವರ್ಷಕ್ಕೆ 20 ಲಕ್ಷ ಟನ್‌ಗಳಷ್ಟು ಮೀನನ್ನು ಹಿಡಿಯಲಾಗುತ್ತಿದೆ. ಇದನ್ನು 2 ಕೋಟಿ ಟನ್‌ಗಳಿಗೆ ಹೆಚ್ಚಿಸಲು ಸಾಧ್ಯವೆಂದು ಈ ಅನ್ವೇಷಣೆಯಿಂದ ವ್ಯಕ್ತಪಟ್ಟಿದೆ. ಇದು ಈಗಿನ ಪ್ರೋಟೀನ್ ಕೊರತೆಯನ್ನು ನೀಗಬಲ್ಲುದು.

ಮೀನು ಸತ್ವಪೂರ್ಣವಾದ ಪ್ರೋಟೀನ್ ಭರಿತ ಆಹಾರವಾಗಬಲ್ಲದು. ಅದರ ಬೆಲೆಯೂ ಅಗ್ಗವಾಗಿರುತ್ತದೆ. ಭಾರತದಲ್ಲಿ ಶೇ.60 ಜನ ಮೀನು ತಿನ್ನುತ್ತಾರೆ ಅರಬ್ಬೀ ಸಮುದ್ರವೊಂದರಿಂದಲೇ 1 ಕೋಟಿ ಟನ್ ಮೀನು ದೊರೆಯಬಹುದೆಂದು ಅಮೆರಿಕದ ರಾಷ್ಟ್ರೀಯ ವಿಜ್ಞಾನಗಳ ಅಕಾಡಮಿಯ ಅಧ್ಯಯನ ತಂಡವೊಂದು ಲೆಕ್ಕಾಚಾರ ಮಾಡಿದೆ. ಸರಿಯಾಗಿ ಮೀನನ್ನು ರೂಢಿಸಿದರೆ ಈ ಪ್ರದೇಶದ ಮೀನುಗಾರರ ವಾರ್ಷಿಕ ಸಂಪಾದನೆ 750 ಕೋಟಿ ರೂ. ಗಳಷ್ಟು ಹೆಚ್ಚಬಹುದು. ರಫ್ತಿನಿಂದ 500 ಕೋಟಿ ರೂ. ಗಳಿಗೂ ಹೆಚ್ಚು ವಿದೇಶಿ ವಿನಿಮಯ ಗಳಿಸಬಹುದು.

ಈಚೆಗೆ ಸಮುದ್ರದಂಚಿನಲ್ಲಿರುವ ಪ್ರದೇಶಗಳಲ್ಲಿ ಸಣ್ಣ ಸಣ್ಣ ಹರವುಗಳನ್ನು ರಚಿಸಿ ಅವುಗಳಲ್ಲಿ ಸಮುದ್ರದ ನೀರಿನಲ್ಲಿ ಮೀನು ಬೆಳೆಸುವ ವಿಧಾನ ವ್ಯಾಪಿಸುತ್ತಿದೆ. ಪೂರ್ವ ಮತ್ತು ದಕ್ಷಿಣ ಏಷ್ಯದಲ್ಲಿ ಸುಮಾರು 1,40,000 ಚದರ ಮೈಲಿಗಳಷ್ಟು ಭೂ ಪ್ರದೇಶವನ್ನು ಈ ಬಗೆಯ ಮೀನು ಉತ್ಪಾದನೆಗೆ ಬಳಸಲು ಅವಕಾಶವಿದೆಯೆಂದು ವಿಶ್ವ ಆಹಾರ ಸಂಸ್ಥೆ (ಎಫ್.ಎ.ಓ.) ಅಂದಾಜುಮಾಡಿದೆ.

ಸಾಗರದ ಅಡಿಯಲ್ಲಿ 2000 ಅಡಿ ಆಳಕ್ಕೆ ಹೋಗಿ ಹಲವು ವಾರಗಳು, ಹಲವು ತಿಂಗಳುಗಳು ಬಿಡಾರ ಮಾಡಬಹುದಾದ ಸಾಧನಗಳ ತಯಾರಿಕೆಗೆ ಹೊಸ ತಂತ್ರಗಳು ಮತ್ತು ಸಾಧನಗಳನ್ನು ಸಾಗರ ವಿಜ್ಞಾನಿಗಳು ಕಂಡುಹಿಡಿಯುತ್ತಿದ್ದಾರೆ. ಸಾಗರ ತಳದ ಶೇಕಡ 98 ರಷ್ಟು ಭಾಗ 20,000 ಅಡಿ ಆಳವಿದೆ ಅಷ್ಟು ಆಳದಲ್ಲಿ ಕೆಲಸ ಮಾಡಲು ಸಾಧ್ಯವಾಗುವಂಥ ಸಬ್ ಮೆರೀನ್ (ಜಲಾಂತರ್ಗಾಮಿ)ಗಳನ್ನು ನಿರ್ಮಿಸುವ ಪ್ರಯತ್ನ ನಡೆದಿದೆ. ಸಾಗರದೊಡನೆ ಹೊಸದೊಂದು ದಿಟ್ಟ ಸಂಪರ್ಕ ಬೆಳೆಸುವುದರಲ್ಲಿದ್ದೇವೆ ನಾವು.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ **English Made Easy**

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಜನಪ್ರಿಯ ಆಂಗ್ಲ ಸ್ವಯಂಬೋಧಿನಿ ಬೆಲೆ : ರೂ. 2 -00

Letter Writing Made Easy **ಸುಲಭದಲ್ಲಿ ಪತ್ರಲೇಖನ**

ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ ಬೆಲೆ : ರೂ. 1—50

ಗೀತೆಯ ಕೈಗನ್ನಡಿ **ಭಗವದ್ಗೀತೆಯ ಸಮೂಲ ಭಾಷಾಂತರ**

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಸಮೂಲ ಅನುವಾದ. 450 ಪುಟಗಳ ಸುಂದರ ಕೈಹೊತ್ತಗೆ ಬೆಲೆ: ರೂ. 2-00

ಮನೆ-ಮದ್ದು **Home Remedies**

ಡಾ| ವಿ. ಆರ್. ಕೊರಡ್ಕಲ್‌ರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ಸುಲಭ ವಿಧಾನಗಳಿವೆ. ಹೆರಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟ ಸಂಗ್ರಾಹ್ಯ ಪುಸ್ತಕ. ಬೆಲೆ : ರೂ. 2-00

ವಿ. ಪೀ. ಪಿ. ಮಾಡುವುದಿಲ್ಲ. ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಅಂಚೆ ವೆಚ್ಚ ಸೇರಿಸಿ ಮನಿಯಾರ್ಡರು ಮಾಡಿದರೆ ಬುಕ್ ಪೋಸ್ಟ್ ಮಾಡಲಾಗುವುದು.

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಪಾಲುಕೋಟೆ, ಉಡುಪಿ.

ಶಿರ್ವ ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆ.

ತಾ. 27-8-71ರಂದು ಕ್ಲಬ್ಬಿನ ಉಪಾಧ್ಯಕ್ಷ ರೊಟೇರಿಯನ್ ಪಿ. ಸೀತಾರಾಮ್ ಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು. ಮುಖ್ಯ ಅತಿಥಿಯಾಗಿ ಮಂಗಳೂರಿನ ಮೆಡಿಕಲ್ ರೆಪ್ರಸೆಂಟೇಟಿವ್ಸ್ ಎಸೋಸಿಯೇಶನಿನ ಅಧ್ಯಕ್ಷ ಲಯನ್ ದಿವಾಕರ ಶೆಟ್ಟರು ಆಗಮಿಸಿದ್ದರು. ರೊಟೇರಿಯನ್ ಬಿ. ಜಯರಾಮ ಶೆಟ್ಟರು ಸ್ವಾಗತಿಸಿದರು. ಕಾರ್ಯದರ್ಶಿ ರೊಟೇರಿಯನ್ ಡಾ| ವೆಂಕಟಕೃಷ್ಣನವರು ವರದಿ ಮತ್ತು ಬಂದ ಅತಿಥಿಗಳೆಲ್ಲರ ಪರಿಚಯ ಮಾಡಿದರು.

ಲಯನ್ ದಿವಾಕರ ಶೆಟ್ಟರು "ಸೇವಾ ಸಂಸ್ಥೆಗಳೂ ಅವುಗಳ ಪ್ರಚಾರವೂ" ಎಂಬ ವಿಷಯದಲ್ಲಿ ಭಾಷಣವಿತ್ತರು

ಶ್ರೀ ಸುಬ್ರಹ್ಮಣ್ಯ ಶರ್ಮರು ಕನ್ನಡ ಗೀತೆಗಳನ್ನು ವಾಚನಮಾಡಿದರು. ಶ್ರೀ ಕೆ.ಎಂ. ಹೊಳ್ಳರು ಅತಿಥಿಗಳ ಭಾಷಣವನ್ನು ಕನ್ನಡಿಸಿದರು.

ಅಧ್ಯಕ್ಷರ ಭಾಷಣದ ಬಳಿಕ ಉಪಾಧ್ಯಕ್ಷ ರೊಟೇರಿಯನ್ ವಿಠಲ್ ಶೆಣೈಯವರು ಧನ್ಯವಾದವಿತ್ತರು. ಕೊನೆಗೆ ರೊಟೇರಿಯನ್ ಸೀತಾರಾಮ್ ಶೆಟ್ಟರು ಹಾಗೂ ವೇದವ್ಯಾಸ ಭಟ್ಟರು ನೀಡಿದ ಭೋಜನ ಕೂಟದೊಂದಿಗೆ ಸಭೆ ಮುಕ್ತಾಯವಾಯಿತು.

ರಾಜ್ಯದ ಹೈಸ್ಕೂಲುಗಳಿಗೆ

ನವಯುಗ

ಮೈಸೂರು ರಾಜ್ಯದ ಡಿ. ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65-56ರ ಪತ್ರದಂತೆ ತರಿಸಿಕೊಳ್ಳಲು ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

2 ವಿಶೇಷ ಸಂಚಿಕೆ ಸಹಿತ ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

Edited, Printed & Published by K. H.Shetty at the Navayuga Press, Udipi, S. India.

ಸ್ಥಾಪಕರು :
ಡಾ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಸಂಪುಟ ೫೧
ಸಂಚಿಕೆ ೪

Vol. 51
No. 4

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ೩೦–೯–೧೯೭೧

ಇಂಡಿಕೇಟ್ ಹೈಕಮಾಂಡಿನ ಆಶ್ರಯದಲ್ಲಿ

ಹೊಸ ಹೊಸ ನಾಟಕಗಳ ರಿಹರ್ಸಲ್ಲು

ಕಾಂಗ್ರೆಸ್ ಪಕ್ಷವು ಒಡೆದುದು ಏಕೆಂಬುದಕ್ಕೆ ಬಹುಸಂಖ್ಯಾಕರಾದ ಇಂಡಿಕೇಟಿಗರು ನೀಡುವ ಉತ್ತರ ಒಂದು–ಸಮಾಜವಾದಿ ಸಮಾಜ ಸ್ಥಾಪನೆಯ ಉತ್ಕಟೇಚ್ಛೆ. ಈ ಇಚ್ಛೆಯಿದ್ದವರು ಇಂಡಿಕೇಟಿಗರಾದರು. ಇಲ್ಲದವರು ಸಿಂಡಿಕೇಟನ್ನು ಬೆಂಬಲಿಸಿದರು.

ಇನ್ನೊಂದು ಗುಂಪಿನವರು ಮುಂದೆ ಮಾಡುವ ಕಾರಣ ಇದಕ್ಕೆ ತದ್ವಿರುದ್ಧವಾದದ್ದು. ಅವರದ್ದು ಅಂದಿಗೂ ಇಂದಿಗೂ ಅಲ್ಪಮತವಾದದ್ದರಿಂದ ಅದನ್ನು ತಿಳಿಯಬೇಕಾದ್ದು, ವಿವೇಚಿಸಬೇಕಾದ್ದು ಅನಗತ್ಯ–ಬಹುಸಂಖ್ಯೆಯೇ ಸತ್ಯವಾಗಿರುವ ಈ ಯುಗದಲ್ಲಿ.

ಲೋಕಸಭೆಗೆ ನಡೆದ ಮಧ್ಯಾವಧಿ ಚುನಾವಣೆಗಳಲ್ಲಿ ಇಂಡಿಕೇಟು ತುಂಬಿತುಳುಕುವ ಬಹುಮತ ಗಳಿಸಿತು. ತನ್ನ ವಿರೋಧಿ ಪಕ್ಷಗಳನ್ನು ಹತಪ್ರಭಗೊಳಿಸಿತು.

ಇದಕ್ಕೆ ಕಾರಣವೇನು? ಶ್ರೀಮತಿ ಇಂದಿರಾಗಾಂಧಿಯವರಲ್ಲಿ, ಆಕೆಯ ನೀತಿಯಲ್ಲಿ ಆಕೆಯ ಸಮಾಜವಾದದಲ್ಲಿ ಜನತೆಗೆ ವಿಶ್ವಾಸ ಮೂಡಿದ್ದು–ಇದು ಇಂಡಿಕೇಟಿಗರ ಸ್ಪಷ್ಟ ಅಭಿಮತ.

ಅದೆಂತದೋ ಒಂದು ಬಗೆಯ ಬಿರುಗಾಳಿ ಬೀಸಿ ಮತ ಚೀಟಿಗಳನ್ನೆಲ್ಲ ಇಂಡಿಕೇಟ್ ಪರದೋಚಿಬಿಟ್ಟಿತು; ನಮ್ಮ ಮೇಲೆ ಜನಕ್ಕೆ ವಿಶ್ವಾಸವಿಲ್ಲವೆಂಬುದು ಶುದ್ಧಾಂಗ ಸುಳ್ಳು–ಇದು ಉಳಿದವರ ವಿಶ್ವಾಸ.

ಇಬ್ಬರೂ ಸರಿ; ಇಬ್ಬರೂ ತಪ್ಪು.

ಇಂಡಿಕೇಟಿನ ಪ್ರಾದೇಶಿಕ ಸಮಿತಿಗಳೂ ಆಡ್ ಹಾಕ್ ಸಮಿತಿಗಳೂ ಹೊಸ ಉತ್ಸಾಹದಿಂದ ನಾನಾ ಆಶೆ–ಆಮಿಷಪ್ರೇರಿತರಾಗಿ– ದುಡಿದರು; ಜನತೆಯನ್ನು ಮರುಳು ಮಾಡಿದರು; ಮತಗಳನ್ನು ಗಿಟ್ಟಿಸಿಕೊಂಡರು. ಶಹಬಾಸ್ ಎನ್ನಲೇ ಬೇಕು.

ಅಧಿಕಾರಕ್ಕೆ ಬಂದ ಇಂಡಿಕೇಟ್, ತಾನು ನೀಡಿದ ಆಶ್ವಾಸನೆಗಳನ್ನು ಪೂರಯಿಸುವ ಪ್ರಾಮಾಣಿಕ ಪ್ರಯತ್ನ ಮಾಡಲೇ ಇಲ್ಲ. ಹೆಚ್ಚೇಕೆ, ಏರುತ್ತಿರುವ ಬೆಲೆಗಳನ್ನು ಅಂಕೆಯಲ್ಲಿಡಲು ಅದು ಸಂಪೂರ್ಣ ಅಶಕ್ತವಾಗಿದೆ.

ಆಹಾರ ದಿನಸುಗಳು, ಬೇಳೆ ಕಾಳುಗಳು, ಬೆಲ್ಲ–ಸಕ್ಕರೆಗಳು, ಅದು ಇದು ಎಂದೇನು, ಎಲ್ಲವುಗಳ ಬೆಲೆಯೂ ಈಗ್ಗೆ ಆರು ತಿಂಗಳಿಂದ ಇನ್ನೂ ಏರುತ್ತಲೇ ಇದೆ.

'ಸಮಾಜವಾದ' ಕಾಗದ ಪತ್ರಗಳಲ್ಲಿ, ಗೊತ್ತುವಳಿಗಳಲ್ಲಿ, ಜನರನ್ನು ಬೋಳೈಸುವಲ್ಲಿ ಮಾತ್ರ ಉಳಿದಿದೆ; ಅದರ ಕಾರ್ಯಾಚರಣೆಯ ದಾರಿಯಲ್ಲಿ ಎಳ್ಳಿನಷ್ಟೂ ಯಾರೂ ಮುನ್ನಡೆದಿಲ್ಲ.

ಬಂಗ್ಲಾ ಸಮಸ್ಯೆಯಲ್ಲಿ ಪ್ರಧಾನಿ ಗಾಂಧಿಯವರು ತಮ್ಮನ್ನು ಸಿಕ್ಕು ಹಾಕಿಕೊಂಡರು. ಹೀಗಾಗದೆ ಹೋಗುತ್ತಿದ್ದರೆ ಏನಾದರೂ ಆಗುತಿತ್ತೋ ಏನೋ! ಬಂಗ್ಲಾ ಪ್ರಶ್ನೆಯೊಂದು ಉದ್ಭವಿಸಿ ಸಮಾಜವಾದವನ್ನೇ ಕಬಳಿಸಿತು.

ಮುಂದಿನ ವರ್ಷಾರಂಭದಲ್ಲಿ ಸುಮಾರು ಒಂಭತ್ತು ರಾಜ್ಯಗಳಲ್ಲಿ ವಿಧಾನ ಸಭಾ ಚುನಾವಣೆಗಳು ನಡೆಯಲಿವೆ. ಈ ಮಾಲಿಕೆಗೆ ಇನ್ನೂ ಒಂದೆರಡು ರಾಜ್ಯಗಳು ಸೇರಿದರೂ ಸೇರಬಹುದು.

ಲೋಕ ಸಭಾ ಚುನಾವಣೆಯ ವೇಳೆ ಬಳಸಿದ ಸಮಾಜವಾದದ ನಾಣ್ಯ ಈಗಾಗಲೇ ಕಳಪೆಯಾಗಿ ಬಿಟ್ಟಿದೆ. ಆದುದರಿಂದ ಹೊಸತೊಂದು ನಾಣ್ಯ ಇಂಡಿಕೇಟ್ ಟಂಕಸಾಲೆಯಲ್ಲಿ ತಯಾರಾಗಬೇಕಾಗಿದೆ.

ಇಂಡಿಕೇಟ್ ಸ್ವೀಕರಿಸಿದ ನೀತಿಗಳನ್ನು ಅನುಷ್ಠಾನಕ್ಕೆ ತಂದಿಲ್ಲವೆಂದು ಆ ಪಕ್ಷದಲ್ಲೇ ಒಂದು ಗುಂಪು ದೂರತೊಡಗಿದೆ. ಪ್ರಾದೇಶಿಕ ಸಮಿತಿ, ಚುನಾವಣಾ ಸಮಿತಿಗಳಿಗೆ ನೇಮಕವಾಗುವಾಗ, ಪರಸ್ಪರ ಹೊಡೆದಾಟ ನಡೆದಿದೆ. ಸಮಾಜವಾದದ ಅನುಷ್ಠಾನಕ್ಕೆ 'ಹಿರಿಯ'ರು ಹಿಂಜರಿಯುತ್ತಿದ್ದಾರೆಂದು 'ಕಿರಿಯ'ರು ಹುಯಿಲೆಬ್ಬಿಸ ಹೊರಟಿದ್ದಾರೆ. ತಮಗೆ ಸಾಕಷ್ಟು ಪ್ರಾತಿನಿಧ್ಯವಿಲ್ಲವೆಂದವರು ಮರುಗ ತೊಡಗಿದ್ದಾರೆ.

ಎಲ್ಲವಲ್ಲಿಯೂ ಎಳ್ಳಿನಷ್ಟಾದರೂ ಸತ್ಯಾಂಶವಿದೆ. 'ಸಿಂಡಿಕೇಟ್' ತನ್ನ ಪ್ರಗತಿಶೀಲ ಕಾರ್ಯಕ್ರಮಗಳನ್ನು ತಡೆಯುತ್ತಿದೆ' ಎಂದು ಗೊಣಗೊಣಗುತ್ತಲೇ ಶ್ರೀಮತಿ ಗಾಂಧಿಯವರು ತಮ್ಮದೇ ಗುಂಪನ್ನು ಕಟ್ಟಿ ದಿಟ್ಟೆಯಾಗಿ ನಿಂತು ಅದರಲ್ಲಿ ಯಶಸ್ಸನ್ನೂ ಗಳಿಸಿದರು. ಈಗ ಮತ್ತೆ ಅಂತಹುದೇ 'ದಿಟ್ಟತನ' ಅವರಿಗಿಂತ ಕಿರಿಯರಾದವರು ತೋರಿಸ ಹೊರಟರೆ ವಿಸ್ಮಯವಿಲ್ಲ.

ಶಾಸನ ಸಭಾ ಚುನಾವಣೆಗಳು ತನಗೆ ಅನುಕೂಲವಾಗಿ ಪರಿಣಮಿಸುವುದು ಕಷ್ಟಸಾಧ್ಯವೆಂದು ಇಂಡಿಕೇಟಿಗೆ ಮನವರಿಕೆಯಾಗಿದೆ. ಆದುದರಿಂದ ತನ್ನ ಪ್ರಾದೇಶಿಕ ಸಮಿತಿಗೆ ಹೊಸರಕ್ತದಾನ ಮಾಡುವುದು ಅದಕ್ಕೆ ಅಗತ್ಯವೆನಿಸಿದೆ. ಇದಕ್ಕೆಂದೇ ರಾಜಸ್ಥಾನವೇ ಮೊದಲಾದ ಐದು ರಾಜ್ಯಗಳ ಪ್ರಾದೇಶಿಕ ಸಮಿತಿಗಳನ್ನು ಅದು ವಿಸರ್ಜಿಸಿ ಆಡ್ ಹಾಕ್ ಸಮಿತಿಗಳನ್ನು ನೇಮಿಸಿದೆ. ಇನ್ನೂ ಕೆಲವು ರಾಜ್ಯಗಳಲ್ಲಿಯೂ ಬದಲಾವಣೆಗಳಾಗುವುದು ಅನಿರೀಕ್ಷಿತವಲ್ಲ.

ಪ್ರಾದೇಶಿಕ ಸಮಿತಿ–ಚುನಾವಣಾ ಸಮಿತಿಗಳಲ್ಲಿ ಅಂತಃಕಲಹವು ಎದ್ದು ಕಾಣುತ್ತಿದೆ. ಇದೆಲ್ಲ ಮುಂದಿನ ಅಧಿಕಾರ ಸೂತ್ರದ ಬಗ್ಗೆಯೆಂಬುದು ಸುಸ್ಪಷ್ಟ. ಕಾಂಗ್ರೆಸ್ ವಿಭಜನೆಯಾದಾಗ, ಅಧಿಕಾರವಂಚಿತರಾಗಿದ್ದ ಅಧಿಕಾರಪ್ರಿಯರು ಅಧಿಕಾರ ವ್ಯಾಮೋಹದಿಂದಲೇ ಇಂಡಿಕೇಟಿನಲ್ಲಿ ಸೇರಿಕೊಂಡರೆಂಬುದೂ, ಮುಂದೆ ತಮ್ಮ ಅಧಿಕಾರದ ಸುರಕ್ಷೆಗೆಂದೇ ಪಕ್ಷಾಂತರಗೊಂಡರೆಂಬುದೂ ಹಗಲಿನಷ್ಟು ಸ್ಪಷ್ಟ.

ಈ ಸ್ವಾರ್ಥಲಾಲಸಿಗಳನ್ನು ಕಟ್ಟಿಕೊಂಡು, ಶ್ರೀಮತಿ ಗಾಂಧಿ ದೆಹಲಿಯಲ್ಲಿ ತಮ್ಮ ಸಿಂಹಾಸನವನ್ನು ಭದ್ರ ಪಡಿಸಿಕೊಂಡರು; ಇದು ಆಕೆಗೆ ಅಗತ್ಯವಾಗಿತ್ತು.

ಶಾಸನ ಸಭಾ ಚುನಾವಣೆಗಳಲ್ಲಿ, ಅನಂತರ ಕೂಡ ಪ್ರಾದೇಶಿಕ ಸಮಿತಿಗಳ ದಾಳ ಲೀಲಾಜಾಲವಾಗಿ ಉರುಳುತ್ತದೆ. ಡಿಲ್ಲಿಗೂ ಹಳ್ಳಿಗೂ ಸಂಬಂಧ ಕಡಿಮೆ. ಡಿಲ್ಲಿಯ ನಾಯಕರನ್ನು ಹಳ್ಳಿಯ ಜನ ಅರ್ಥ ಮಾಡಿಕೊಂಡಿಲ್ಲ—ಆದುದರಿಂದಲೇ ಕಾಗದದ ಬದನೇ ಕಾಯನ್ನವರು ತೋರಿಸಿದಾಗ ಮತದಾರರ ಬಾಯಲ್ಲಿ ನೀರೊಸರಿತು.

ಈ ನಾಟಕ ಶಾಸನ ಸಭಾ ಚುನಾವಣೆಗಳ ವೇಳೆ ನಡೆಯುವುದಿಲ್ಲ. ಅದಕ್ಕೆಂದೇ ಕೇಂದ್ರದ ಹೈ ಕಮಾಂಡು ಹೊಸ ನಾಟಕಗಳನ್ನು ಬರೆದು ರಿಹರ್ಸಲ್‌ಗೆ ತೊಡಗಿದೆ. ಪ್ರಾದೇಶಿಕ ಸಮಿತಿಗಳನ್ನು ವಿಸರ್ಜಿಸಿ ಆಡ್ ಹಾಕ್ ಸಮಿತಿ ನೇಮಿಸುವುದೂ ಇವುಗಳಲ್ಲಿ ಒಂದು.

ಹಳೆಯವರು ಹೋಗಿದ್ದಾರೆ; ಹೊಸಬರು ಬಂದಿದ್ದಾರೆ, ಅವರು ಸಮಾಜವಾದ ತರುತ್ತಾರೆ–ಎಂದು ಮೊಣಕೈಗೆ ಬೆಲ್ಲ ಅಂಟಿಸುವ ಹೊಸ ಬಗೆಯ ತಂತ್ರವಿದು. ಮತ ಚೀಟಿಯನ್ನು ಕಬಳಿಸುವ ದೈತ್ಯೋಪರಣಿದು.

ಇಂಡಿಕೇಟಿಗಾದರೂ ಸಮಾಜವಾದವನ್ನು ಅನುಷ್ಠಾನಕ್ಕೆ ತರಲೇಬೇಕೆಂಬ ಹಠವಿಲ್ಲ. ಸಮಾಜವಾದದ ಜಪ ಮಾಡುತಿದ್ದರೆ ಸಾಕು—ಅದು ತನ್ನ ಶತ್ರುಗಳನ್ನು ಪಲಾಯನ ಗೊಳಿಸಿದರೆ ಸಾಕು.

ಸಮಾಜದ ದುರ್ಬಲ ಅಂಗಗಳು ನವೆದು ಕೊಳೆಯುತ್ತಿರುವಾಗ ಅವನ್ನು ಎತ್ತರಿಸುವ ಕಾರ್ಯಪ್ರಣಾಳಿ ರೂಪಿಸುವುದನ್ನು ಬಿಟ್ಟು, ಶ್ರೀಮಂತರನ್ನು ಪದಿಭ್ರಷ್ಟನ್ನಾಗಿಸುವತ್ತ ಅವರ ದೃಷ್ಟಿ ಹರಿದಿದೆ. ರಾಜಧನ ರದ್ದತಿಯ ಬಗ್ಗೆ ಅವರ ಗಮನ ಕೇಂದ್ರೀಕೃತವಾಗಿದೆ.

ಸಂವಿಧಾನ ಬದ್ಧವಾಗಿ ಶ್ರೀಮಂತರ ಗುತ್ತೇದಾರಿಯನ್ನು ಕೊನೆಗೊಳಿಸುವುದೇ ಬಡತನದ ನಿರ್ಮೂಲನಕ್ಕೆ ಸಂಜೀವಿನಿಯೆಂಬ ಅಪಪ್ರಚಾರದಲ್ಲಿ ಅವರು ನಿರತರಾಗಿದ್ದಾರೆ. ಅದು ಕಾರ್ಯರೂಪಕ್ಕೆ ಬರುವಷ್ಟರಲ್ಲಿ ರಸಾತಳದಲ್ಲಿ ಮುಳುಗುತ್ತಿರುವ ಶ್ರೀ ಸಾಮಾನ್ಯ ಪಾತಾಳಕ್ಕೆ ಕುಸಿದು ಬೀಳುತ್ತಾನೆ.

ಹೇಳಿ ಕೇಳಿ ಇದು ಚುನಾವಣಾ ಪೂರ್ವ ವರ್ಷ. ಅಧಿಕಾರ ಗಳಿಸಲು ನಾನಾ ಬಗೆಯ ಆಶೆ—ಆಮಿಷಗಳನ್ನು ಮತದಾರರಿಗೆ ನೀಡುವ ಪರ್ವಕಾಲ. ಬಿರುಗಾಳಿಯಿರಲಿ, ಬಲು ನೆರೆಯಿರಲಿ, ತನ್ನ ಒಳಿತು ಯಾರಿಂದ ಸಾಧ್ಯವೆಂಬುದನ್ನು ಮತದಾತ ವಿವೇಚಿಸಬೇಕು.

ಆಡು ತಾನು ಪೊಂಪಕ್ಕೆ ಬೀಳುತ್ತದೆ—ತನ್ನ ಹಿಂದಿರುವ ಕುರಿಗಳನ್ನು ಬೀಳಿಸುವುದಕ್ಕಾಗಿ ಮಾತ್ರ. ಆ ಬಳಿಕ ಅವೇ ಕುರಿಗಳ ತಲೆ ಮೆಟ್ಟಿ ತಾನು ಹೊಂಡದಿಂದ ಮೇಲೆ ನೆಗೆದು ತನ್ನ ರಕ್ಷಿಸಿಕೊಳ್ಳುತ್ತದೆ.

ಇಂತಹ ಜಾಣ ಆಡನ್ನು ನಾವು ಹಿಂಬಾಲಿಸಬೇಕೆ? ನಮ್ಮ ಗೋರಿಯನ್ನು ನಾವೇ ಕಟ್ಟಿಕೊಳ್ಳಬೇಕೆ?

ಅಧಿಕಾರ ವ್ಯಾಮೋಹಿಗಳ ಕಾದಾಟ ಇಂಡಿಕೇಟಿನಲ್ಲಿ ತೀವ್ರವಾಗಿದೆ; ಗುಂಪುಗಾರಿಕೆ ಬೆಳೆಯುತ್ತಿದೆ. ಈ ಚುನಾವಣೆಗಳ ಮಟ್ಟಿಗಾದರೂ ಅವುಗಳಲ್ಲಿ ಹೊಂದಾಣಿಕೆ ನಡೆಯದೆ ಹೋದರೆ, ಅದು ಮತ್ತೆ ತುಂಡಿಯಾದೀತೆನಿಸುತ್ತದೆ.

ಕಾಂಗ್ರೆಸ್ ವಿಭಜನೆಗೆ ಮೂಲ ಕಾರಣ 'ಸಮಾಜವಾದ'ವಲ್ಲ; 'ಅಧಿಕಾರದ ಮೇಲಿನ ಮೋಹ'ವೆಂಬುವದನ್ನು ಇಂಡಿಕೇಟು ತನ್ನ ಕೃತಿಗಳಿಂದಲೇ ಇಂದು ತೋರಿಸಿಕೊಡುತ್ತಿದೆ.

ಬಂಗ್ಲಾ ಸಮಸ್ಯೆಯೊಂದಿಲ್ಲವಾಗಿದ್ದರೆ, ಪ್ರಧಾನಿ ಗಾಂಧಿ ಇವನ್ನೆಲ್ಲ ಸರಿತೂಗಿಸಿಕೊಳ್ಳುತಿದ್ದರು. ಅದರೂ ಆಕೆ ಧೃತಿಗೆಡದೆ ಪರಿಸ್ಥಿತಿಯನ್ನು ಸಮತೋಲನದಲ್ಲಿರಿಸಲು ಹೆಣಗುತಿದ್ದಾರೆ. ಪರಿಣಾಮ ಚುನಾವಣಾ ನಂತರ ಹೊರಬೀಳುತ್ತದೆ.

ಮತದಾರರನ್ನು ಕುರಿಹಿಂಡೆಂದು ನಂಬಿದವರು ಅವಶ್ಯ ಮೋಸಹೋಗುತ್ತಾರೆ. ●

ನವದೆಹಲಿಯಲ್ಲಿ

ಸ್ವತಂತ್ರ ಬಂಗ್ಲಾದೇಶಕ್ಕೆ ಒತ್ತಾಯ

ಶೇಕ್ ಮುಜಿಬುರ್ ರೆಹಮಾನರ ಮೇಲೆ ದೇಶದ್ರೋಹದ ಆರೋಪ. ಅದರ ರಹಸ್ಯ ವಿಚಾರಣೆ. ಆರೋಪ ಸಿದ್ಧಗೊಳಿಸಿ ಅವರಿಗೆ ನೀಡುವ ದಂಡನೆ — ಅದು ರುದ್ರ ಭಯಾನಕ.

ದಂಡನೆಯನ್ನು ಮೊದಲಾಗಿ ಗೊತ್ತುಪಡಿಸಿಯೇ ಆರೋಪ ಹೊರಿಸಿ ವಿಚಾರಣೆಯ ಪ್ರನಾಟಕವಾಡುವುದು ಸಾಮ್ರಾಜ್ಯವಾದಿ-ಸರ್ವಾಧಿಕಾರಿಗಳಿಗೆ ಸಹಜ, ಸ್ವಾಭಾವಿಕ.

ಬಂಗ್ಲಾ ನಿರಾಶ್ರಿತರ ಸಂಖ್ಯೆ ಕೋಟಿ ಮುಟ್ಟಿದೆ. ಇವರ ಸಂರಕ್ಷಣೆಗೆ ಹೊಸಹೊಸ ನೋಟುಗಳನ್ನು ಅಚ್ಚು ಮಾಡುವುದೊಂದೇ ನಮ್ಮ ವಿತ್ತ ಸಚಿವರಿಗಿರುವ ಏಕಮಾತ್ರ ಸಾಧನ. ಯೋಜನಾ ಸಚಿವರ ಯೋಜನೆಗಳು ತಲೆಕೆಳಗು. ಪ್ರಧಾನಿಯ ಸಮಾಜವಾದ-ಶ್ರೀ ಸಾಮಾನ್ಯನ ಉದ್ಧಾರವಾದಗಳಿಗೆ ಮುಂದಿನ ಚುನಾವಣೆಗಳ ವರೆಗೆ ರಜೆ.

ಪ್ರಧಾನಿ ಬಂಗ್ಲಾ ನಿರಾಶಿತ್ರರಿಗೆ ಭರವಸೆ ನೀಡುತ್ತಾರೆ— "ನಿಮ್ಮನ್ನು ಬಲಾತ್ಕಾರವಾಗಿ ಬಂಗ್ಲಾ ದೇಶಕ್ಕೆ ದೂಡುವುದಿಲ್ಲ".

ಭಾರತೀಯರಿಗೆ ಅವರೇ ಸಮಾಧಾನ ಹೇಳುತ್ತಾರೆ— "ನಿರಾಶ್ರಿತರು ದೀರ್ಘ ಕಾಲ ಇಲ್ಲಿ ಉಳಿಯುವುದಿಲ್ಲ."

'ಬಂಗ್ಲಾ ನಿರಾಶ್ರಿತರು ಸ್ವದೇಶಕ್ಕೆ ಮರಳುವಂತಾಗಬೇಕು. ಇದಕ್ಕೆ ತಕ್ಕ ವಾತಾವರಣ ಯಾಹ್ಯಾಖಾನ್ ನಿರ್ಮಿಸಬೇಕು". ಇದು ವಿಶ್ವ ರಾಜ ತಂತ್ರಜ್ಞರ ಹಳೆಯ ಪಲ್ಲವಿ.

ಬಂಗ್ಲಾ ದೇಶೀಯ ನರಪಿಳ್ಳೆಯ ಪ್ರಾಣವನ್ನೂ ಹೀರುವ ಸಂಕಲ್ಪ ಹೊಂದಿದ ಯಾಹ್ಯಾಖಾನರು ಈ ಪಲ್ಲವಿಯನ್ನೇಕೆ ಕೇಳುತ್ತಾರೆ? ಈ ಆರು ತಿಂಗಳಲ್ಲಿ ಅವರು ಬಂಗ್ಲಾ ದೇಶದ ನರಮೇಧ ಶಾಲೆಯಲ್ಲಿ ಅದೆಷ್ಟು ನಿರೀಹ ನಿಸ್ಪೃಹ ಜೀವಗಳನ್ನು ಬಲಿತೆಗೆದುಕೊಳ್ಳಲಿಲ್ಲ?

ನರಮೇಧ ಸಲ್ಲದೆಂಬುದು ಎಲ್ಲರ ಬಾಯಲ್ಲೂ ಬರುತ್ತದೆ; ಇದನ್ನು ತಡೆಗಟ್ಟುವ ಹೃದಯದ ಪ್ರಯತ್ನವಿನ್ನೂ ನಡೆದಿಲ್ಲ.

ಬಂಗ್ಲಾ ದೇಶದ ವಿದ್ಯಮಾನಗಳು ಪಾಕಿಸ್ತಾನದ ಆಂತರಿಕ್ಯಪ್ರಶ್ನೆಯೆಂದು ಕೋಟಿ-ಕೋಟಿ ಜೀವಗಳು ಹತಪ್ರಭರಾಗುವುದನ್ನು, ಗತಪ್ರಾಣರಾಗುವುದನ್ನು ಕಣ್ಣಾರೆ ಕಂಡೂ ಕುರುಡರಾಗುವುದು ಮಾನವತೆಯೇನು?

'ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರೆ ದಡದಲ್ಲಿ ಮಿಡುಕುತ್ತ ನಿಂತಿರುವ ನಾನು ಮುಟ್ಟಿದರೆ ಬ್ರಹ್ಮತ್ವ ಕೆಟ್ಟು ಹೋಗುವುದೆಂದು ಸುಮ್ಮನಿದ್ದರೆ ಧರ್ಮಸಮ್ಮತವದೇನು?"

ಕನ್ನಡದ ಕವಿಪುಂಗವ ಕೇಳಿದ ಈ ಪ್ರಶ್ನೆಗೆ ನಾಗರಿಕ-ಸಭ್ಯ ಜಗತ್ತು ಉತ್ತರ ಕೊಡಬೇಕು.

ದಕ್ಷಿಣ ಆಫ್ರಿಕೆಯ ವರ್ಣಭೇದ ನೀತಿಯನ್ನು ಮುಂದುಗಡೆ ಖಂಡಿಸಿ ಹಿಂದುಗಡೆ ಪುರಸ್ಕರಿಸುವ ರಾಜ್ಯಕೀಯ ಗುಳ್ಳೆನರಿಗಳು ಇವೆ. ಯಾಹ್ಯಾಖಾನರ ನರಮೇಧವನ್ನೂ ಒಳಗಿಂದೊಳಗೆ ಹೊಗಳುವವರು ಮಾತ್ರವಲ್ಲ. ಬಹಿರಂಗವಾಗಿಯೇ ಪ್ರಶಂಸಿಸುವವರೂ ಇದ್ದಾರೆ.

ರಾಜ್ಯಕಾರಣಿಗಳು ಬಂಗ್ಲಾದೇಶೀಯರನ್ನು ತಮ್ಮ ಪಗಡೆಯಾಟದ ದಾಳವಾಗಿ ಬಳಸಿಕೊಳ್ಳುತ್ತಿದ್ದಾರೆ. ಜಗತ್ತಿನ ಶಾಂತಿಪ್ರಿಯರಲ್ಲಿ ಕೆಲವರಾದರೂ ಅತ್ಯಂತ ಕಾಳಜಿ ತೋರಿಸುತ್ತಾರೆ. ಮುಳುಗುವವನಿಗೆ ಹುಲ್ಲುಕಡ್ಡಿ ಆಸರೆಯಾದಂತೆ ಈ ಅಧಿಕಾರೇತರ ವರ್ಗದ ಸಹಾನುಭೂತಿಯಾದರೂ ಬಂಗ್ಲಾದೇಶೀಯರ ಕಡೆಗಿದೆಯಲ್ಲಾ—ಅದೇ ಸಂತೋಷ.

ಬಂಗ್ಲಾದೇಶೀಯರು ಸಂಪೂರ್ಣ ಅನಾಥರಾಗಲಿಲ್ಲ. ಅವರ ನಾಥರು ಅಶಕ್ತರೆಂಬುದನ್ನೂ ಅಲ್ಲಗಳೆಯಲಾಗುವುದಿಲ್ಲ.

ಬಂಗ್ಲಾ ನಾಥರ ಸಮ್ಮೇಳನವೊಂದು ನವದೆಹಲಿಯಲ್ಲಿ ನಡೆಯಿತು. ವಿಶ್ವದ ಬೇರೆ ಬೇರೆ ಮೂವತ್ತು ದೇಶಗಳು ಇದರಲ್ಲಿ ಭಾಗವಹಿಸಿದ್ದುವು. ಬಂಗ್ಲಾ ಸಂಬಂಧದ ಅಂತಾರಾಷ್ಟ್ರೀಯ ಸಮ್ಮೇಳನವೆಂದು ಇದಕ್ಕೆ ಹೆಸರು. ೧೫೦ ಜನ ಪ್ರತಿನಿಧಿಗಳು ಈ ಮಹತ್ವದ ಸಮ್ಮೇಳನದಲ್ಲಿ ಪಾಲುಗೊಂಡಿದ್ದರು.

ಮೂವತ್ತು ದೇಶಗಳಲ್ಲಾದರೂ ಬಂಗ್ಲಾದೇಶೀಯರ ಬಗ್ಗೆ ಅನುಕಂಪ ತೋರಿಸುವವರಿದ್ದಾರೆಂದಾಯ್ತು.

ಸಮ್ಮೇಳನದ ಉದ್ಘಾಟನೆ ನಡೆಸಿದ್ದು ಭಾರತದ ಸರ್ವೋದಯ ನಾಯಕ ಜಯಪ್ರಕಾಶ ನಾರಾಯಣ.

"ಬಂಗ್ಲಾದೇಶದಿಂದ ಭಾರತಕ್ಕೆ ನುಗ್ಗಿ ಬಂದ ನಿರಾಶ್ರಿತರು ಸ್ವದೇಶಕ್ಕೆ ಹೋಗಬೇಕಾದರೆ, ಸ್ವತಂತ್ರ ಬಂಗ್ಲಾದೇಶ ನಿರ್ಮಾಣವಾಗಬೇಕು"—ಈ ಅಂಶ ಜೆ. ಪಿ.ಯವರ ಭಾಷಣದ್ದು. ಪ್ರಧಾನಿ ಗಾಂಧಿಗೆ ಈ ಮಾತು ಅಪಥ್ಯವೆನಿಸಿದರೂ ಅದು ಆಕೆಗೂ ಗೊತ್ತಿಲ್ಲದ ಸಂಗತಿಯಲ್ಲ. ಸ್ವತಂತ್ರ ಬಂಗ್ಲಾದೇಶ ನಿರ್ಮಾಣಗೊಂಡ ಮೇಲೂ ಮರಳ ಬಯಸದವರು ಎಷ್ಟೋ ಮಂದಿ-ಜನಗಣತಿಗೆ ಸಿಗದ ಸಂಗತಿ.

'ಬಂಗ್ಲಾದೇಶದ ಮುಕ್ತಿಗಾಗಿ ಅಂತಾರಾಷ್ಟ್ರ ಸಶಸ್ತ್ರ ಪಡೆಯೊಂದನ್ನು ನಿರ್ಮಿಸುವುದು ಅಗತ್ಯ'ವೆಂದ ಜೆ. ಪಿ. ಹಿಂದೆ ಸ್ಪೇನಿನ ಅಂತರ್ಯುದ್ಧದ ಸಮಯದಲ್ಲಿ ಇಂತಹುದೇ ಸೇನೆಯನ್ನು ರಚಿಸಿದ್ದನ್ನು ನೆನಪಿಸಿಕೊಂಡರು.

ಸಮ್ಮೇಳನ ಗೊತ್ತುವಳಿಯನ್ನು ಅವಿರೋಧವಾಗಿ ಸ್ವೀಕರಿಸಿತು—'ಬಂಗ್ಲಾ ದೇಶ ಸ್ವತಂತ್ರವಾಗಬೇಕು; ಮುಜಿಬುರ್ ರೆಹಮಾನರು ಮುಕ್ತರಾಗಬೇಕು. ಚುನಾಯಿತ ಪ್ರತಿನಿಧಿಗಳಿಗೆ ಯಾಹ್ಯಾಖಾನರು ತಕ್ಷಣ ಅಧಿಕಾರ ಬಿಟ್ಟುಕೊಡಬೇಕು.'

ಈ ಬಗೆಯ ಬೇಡಿಕೆ— ಕೇಳಿಕೆಗಳನ್ನು ಯಾಹ್ಯಾಖಾನರು ಅದೆಷ್ಟು ಬಾರಿ ಕೇಳಿದ್ದಾರೆ! ಇನ್ನು ಮುಂದಕ್ಕೂ ಅವರ ನರಮೇಧ ನವಚೇತನ ಹೊಂದಿ ನಡೆಯುತ್ತದೆ.

ಅಮೆರಿಕೆಯ ನಿಕ್ಸನ್ ಸರಕಾರ ಯಾಹ್ಯಾಖಾನರಿಗೆ ಪ್ರತ್ಯಕ್ಷವಾಗಿಯೇ ಒತ್ತಾಸೆ ನೀಡುತ್ತಿದೆ. ಚೈನೀ ಮಾವನ ಕೃಪಾಕಟಾಕ್ಷ ಯಾಹ್ಯಾಖಾನರ ಮೇಲಿದೆ. ಅದುವರೆಗೆ ಯಾಹ್ಯಾ ಯಾರಿಗಾದರೂ ಏಕೆ ಮಣಿಯಬೇಕು?

ಪಾಕಿಸ್ತಾನದ ರಾಜ್ಯಕೀಯದಲ್ಲಿ ಮತ್ತೆ ಕಾಣಿಸಿಕೊಂಡ ಭುಟ್ಟೋ ಮಹಾಶಯರು ಈಗ ಮತ್ತೆ ಬುಸುಗುಟ್ಟ ತೊಡಗಿದ್ದಾರೆ ಚುನಾಯಿತ ಪ್ರತಿನಿಧಿಗಳಿಗೆ ಅಧಿಕಾರ ವಹಿಸಿಕೊಡಬೇಕೆಂದು ಅವರು ಕೇಳುತ್ತಾರೆ. ಶೇಕ್ ಮುಜಿಬುರ್ ರೆಹಮಾನರನ್ನೇ ಮೆಟ್ಟಿ ನಿಂತ ಯಾಹ್ಯಾಖಾನರು ಭುಟ್ಟೋರನ್ನು ಸರಕಿಕೊಳ್ಳುವುದುಂಟೆ?

ಪಾಕಿಸ್ತಾನದ ನಾಯಕರು ಯಾದವೀ ಕಲಹಾಸಕ್ತರಾಗಿದ್ದಾರೆ. 'ಅವ ಕೊಡ, ಇವ ಬಿಡ'ವೆಂದಾಗಿದ್ದಾರೆ. ಆಸಕ್ತ ರಾಷ್ಟ್ರಗಳು ಯಾಹ್ಯಾ ಬೆಲೂನಿಗೆ ಗಾಳಿ ತುಂಬುತಿದ್ದಾರೆ. ಪರಿಣಾಮ?

ಭಾರತವೊಡೆದು ಪಾಕಿಸ್ತಾನ ನಿರ್ಮಾಣ, ಪಾಕಿಸ್ತಾನದಿಂದ ಬಂಗ್ಲಾ ಮತ್ತು ಪಂಜಾಬಗಳ ನಿರ್ಮಾಣವೆ?

●●

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

Gram: VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 31/1971

ಕೆ. ಗೋಪಾಲ ಕಾಮತ್ —ವಾದಿ
ಮತ್ತು
ಅಕ್ಕಮ್ಮ ಪೂಜಾರ್ತಿ ಕೂಡಾ-ಪ್ರತಿವಾದಿರು
ಇವರೊಳಗೆ

ನೋಟೀಸು

ಉಡುಪಿತಾಲ್ಲೂಕು ಪಣಗುಡ್ಡೆ ಗ್ರಾಮದಲ್ಲಿರುವ ಅಕ್ಕಮ್ಮ ಪೂಜಾರ್ತಿ ಮಗ 2ನೇ ಪ್ರತಿವಾದಿ ಶಂಕರ ಪೂಜಾರ್ರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:-

ವಾದಿಯು ನಿಮ್ಮ ಮೇಲೆ ಪ್ಲೈಂಟು ನಿವೃತ್ತಿ ಕೇಳಿ ದಾಖಲು ಮಾಡಿದ ಮೇಲಿನ ವ್ಯಾಜವನ್ನು ನಿಮ್ಮ ಹಾಜರಿ ಬಗ್ಗೆ ತಾ. 15-10-1971ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮ್ಮದೇನಾದ್ರೂ ಉದಾಹರಣೆಯಿದ್ದಲ್ಲಿ ಈ ಕೋರ್ಟು ಮುಂದೆ ಆ ದಿನ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ಇಲ್ಲವಾದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ನಂಬ್ರವನ್ನು ತೀರ್ಮಾನಿಸಲಾಗುವುದು.

ಕೋರ್ಟು ಹುಕ್ಕುಂ ಪ್ರಕಾರ
ಪಿ. ಎನ್. ಕೃಷ್ಣಮೂರ್ತಿ ರಾವ್
ವಾದಿ ಕಡೆ ಎಡ್ವಕೇಟ್

ಉಡುಪಿ, ದ. ಕ. ತಾರೀಕು, 20-9-71

MISL ರವರ ಉಕ್ಕನ್ನೇ ಏಕೆ ಕೊಳ್ಳಬೇಕು? ಒಂದೇ ಒಂದು ಕಾರಣ ಕೊಡಿ



ಒಂದೇ ಏಕೆ? ಮೂರು ಕಾರಣಗಳನ್ನು ಕೊಡುವೆವು

1 ಯಾವುದೇ ವಿಶೇಷ ರೀತಿಯ ಅಥವಾ [illegible]

ಈಗಾಗಲೇ ಸಿದ್ಧವಿರುವ ಸುಮಾರು 200 [illegible] ನಾವು ಪಡೆದಿದ್ದೇವೆ.

2 ನಿಯಂತ್ರಿತವಾದ ಉತ್ತಮ ಗುಣಮಟ್ಟ

ಉತ್ತಮ ದರ್ಜೆಯ ಗುಣಮಟ್ಟವನ್ನು ಖಾತ್ರಿ ಮಾಡಿಕೊಳ್ಳಲು [illegible] ಅಲ್ಲದೆ ನಿಮ್ಮ ಬೇಡಿಕೆಯಂತೆಯೇ ಪರಿಶುದ್ಧವಾದ [illegible] ರಚಿತವಾದ ಅಭಿವೃದ್ಧಿ ಪಡೆದ ಉಪಕರಣಗಳನ್ನು [illegible]

3 ಉತ್ತಮ ಸೇವೆ

ನಿಮ್ಮ ಉತ್ಪಾದನೆಯು ಕುಂಠಿತವಾಗದಂತೆ ನಿಮ್ಮ [illegible] 700 ವಿವಿಧ ಶ್ರೇಣಿಯ ಉಕ್ಕು ತಯಾರಿಕೆಯು ನಮ್ಮ [illegible] ನಿಮ್ಮ ಉಕ್ಕಿನ ಕೊರತೆಯನ್ನು ನಿವಾರಿಸಲು ನಾವು [illegible]

ಮೈಸೂರು
ಐರನ್ ಅಂಡ್ ಸ್ಟೀಲ್
ಲಿಮಿಟೆಡ್

MISL ಉಕ್ಕು ಇಂದು ಮತ್ತು ಎಂದೆಂದೂ

ಪೇರಂಪಳ್ಳಿಯ ಶ್ರೀ ಮಹಾಲಿಂಗೇಶ್ವರ ದೇವಾಲಯದ ಐತಿಹಾಸಿಕ ಹಿನ್ನೆಲೆ

ಲೇ: ಡಾ| ಪಿ. ಗುರುರಾಜ ಭಟ್.

ಪೆರಂಪಳ್ಳಿಯ ಮಹಾಲಿಂಗೇಶ್ವರ ದೇವಾಲಯದ ಬಲಿಮೂರ್ತಿಯಾದ ಸದಾಶಿವ
(ಕ್ರಿ ಶ. 11ನೇ ಶತಮಾನ)

ಉಡುಪಿ – ಶಿವಳ್ಳಿ

ಉಡುಪಿ ಭಾರತದಲ್ಲಿ ಸಾಕಷ್ಟು ಪ್ರಸಿದ್ಧವಾದ ಊರಾಗಿದೆ ಇದು ಐತಿಹಾಸಿಕವಾಗಿಯೂ ಸಾಂಸ್ಕೃತಿಕವಾಗಿಯೂ ಖ್ಯಾತಿ ಪಡೆದ ಪ್ರದೇಶ ಪ್ರಾಯಶಃ ದಕ್ಷಿಣ ಭಾರತದಲ್ಲೇ ಕೃಷ್ಣಾರಾಧನೆ ಶಿಲ್ಪದಲ್ಲಿ ಪ್ರಥಮವಾಗಿ ‥ ‥ಗೆ ಬಂದುದು ಉಡುಪಿಯಲ್ಲಿ ಎಂದು ಅನುಮಾನಿಸಬಹುದು. ಇತಿಹಾಸ ಕಾಲದಲ್ಲಿ ಉಡುಪಿಯು ಶಿವಳ್ಳಿಯ ಒಂದು ನಿರ್ದಿಷ್ಟವಾದ, ಸೀಮಿತಗೊಂಡ ಭಾಗ ಮಾತ್ರವಾಗಿತ್ತು. ಕ್ರಿ. ಶ. 7–8ನೇ ಶತಮಾನದಿಂದಲೂ ಶಿವಳ್ಳಿಯು ಒಂದು ಹಿರಿದಾದ ಸಾಂಸ್ಕೃತಿಕ ಕೇಂದ್ರವಾಗಿದ್ದುದು ಕಂಡುಬರುತ್ತದೆ. ಶಿವನ ಹಳ್ಳಿ ಶಿವಳ್ಳಿಯಾಗಿದೆ ಶಿವಳ್ಳಿಯು ದಕ್ಷಿಣ ಕನ್ನಡ ಜಿಲ್ಲೆಯ ಬ್ರಾಹ್ಮಣ ವರ್ಗದ ಪ್ರಾಮುಖ್ಯವಾದ ಒಂದು ವಿಭಾಗಕ್ಕೆ ಕೇಂದ್ರವಾಗಿದೆ. ಇಲ್ಲಿಂದಲೇ ಜಿಲ್ಲೆಯ ಹಲವಾರು ಕಡೆಗೆ ಬ್ರಾಹ್ಮಣರು ವಲಸೆ ಹೋದುವಾಗಿದೆ. ಶಿವಳ್ಳಿಯು ಒಂದು ದೊಡ್ಡ ಗ್ರಾಮ. ಇತಿಹಾಸ ಕಾಲದಲ್ಲಿ ಇದಕ್ಕೆ 20 ಅಧಿವಾಸಗಳು ಸೇರಿದ್ದುವೆಂದು ದಾಖಲೆಗಳಿಂದ ತಿಳಿದುಬರುತ್ತದೆ ಶಿವಳ್ಳಿಗೆ ಸೇರಿದ್ದ ಕೆಲವು ಸ್ಥಳೀಯ ವಿಭಾಗಗಳನ್ನು ನೆನಪಿಸಿಕೊಳ್ಳಬಹುದು; ಚಿಟ್ಟಿಪಾಡಿ, ನಿಡಂಬೂರು, ಕೊಡವೂರು, ಪಡುವಮುನ್ನೂರು, ಇಂದ್ರಾಣಿ, ನಗುರಿ, ಉದಯಪುರ (ಉದ್ಯಾವರ), ಸಯ್ಯಂಪಳ್ಳಿ, ಪೇರಂಪಳ್ಳಿ, ಪುತ್ತೂರು ಇತ್ಯಾದಿ.

ಪೇರಂಪಳ್ಳಿಯು ಶಿವಳ್ಳಿಯ ಬ್ರಹ್ಮಪುರವಾಗಿತ್ತೇ?

ಪೇರಂಪಳ್ಳಿಯು ಈಗಲೂ ಶಿವಳ್ಳಿಗ್ರಾಮದ ಒಂದು ಭಾಗವಾಗಿದೆ ಈ ಹೆಸರು ತುಂಬ ಸ್ವಾರಸ್ಯವುಳ್ಳದಾಗಿದೆ ಇದು ಪ್ರಾಚೀನ ಹೆಸರೆಂಬುದಾಗಿ ತಿಳಿಯಲವಕಾಶವಾಗಿದೆ ಪೂರ್ವರ ಪಳ್ಳಿಯು ಪೇರಂಪಳ್ಳಿಯಾಯಿತೇ? ಪೂರ್ವರೆಂದರೆ ಬ್ರಾಹ್ಮಣರು ಹಳೆಗಾಲದಲ್ಲಿ ಬ್ರಾಹ್ಮಣರು ವಾಸವಾಗಿದ್ದು ಅವರಿಂದ ಬಳಿಕಗೆ ಬಂದ ಪೂರ ಹೆಸರು ಪೇರಂಪಳ್ಳಿ ಎಂದೂಹಿಸಿದರೆ ತಪ್ಪಾಗಲಿಕ್ಕಿಲ್ಲ ಈ ರೀತಿಯ ಊಹೆಗೆ ಕಾರಣವೂ ಇದೆ. ಉದ್ಯಾವರದಲ್ಲಿ ದೊರಕಿದ ಕ್ರಿ ಶ. 8—9ನೇ ಶತಕದ ಎರಡು–ಮೂರು ಶಾಸನಗಳಲ್ಲಿ ಶಿವಳ್ಳಿಯ ಬ್ರಹ್ಮಪುರಕ್ಕೆ ಉಲ್ಲೇಖವಿದೆ ಈ ಬ್ರಹ್ಮಪುರವಾದರೂ ಯಾವುದು? ಇದು ಈಗಣ ಪೇರಂಪಳ್ಳಿಯೇ ಇರಬೇಕು. ಇತ್ತೀಚೆಗಿನವರೆಗೆ ಪೇರಂಪಳ್ಳಿಯು ಬ್ರಾಹ್ಮಣರ ಪೂರೆಂಬುದಾಗಿಯೇ ವ್ಯವಹಾರದಲ್ಲಿ ತಿಳಿಯಲ್ಪಟ್ಟಿತು. ಇನ್ನೊಂದು ದೃಷ್ಟಾಂತವನ್ನೂ ಈ ಸಂದರ್ಭದಲ್ಲಿ ಕೊಡಬಹುದು ಪೇರಂಪಳ್ಳಿಯಲ್ಲಿ ಕುಕ್ಕುಂಜೆ ಎಂಬಲ್ಲಿ ಒಂದು ವಿಷ್ಣುಮೂರ್ತಿ ಎಂದು ಕರೆಯಲ್ಪಡುವ ಜನಾರ್ದನ ದೇಗುಲವಿದೆ. ಇದರಲ್ಲಿರುವ ಪ್ರಧಾನ ಮೂರ್ತಿಯು ಪ್ರಾಚೀನ ಶಿಲ್ಪವನ್ನೊಳಗೊಂಡು ನಮ್ಮ ಜಿಲ್ಲೆಯ ಅತ್ಯಂತ ಪ್ರಾಚೀನ ಜನಾರ್ದನವೆಂಬುದಾಗಿ ತಿಳಿಯಬಹುದು ಶಿವಳ್ಳಿಯ ಅನಂತೇಶ್ವರದಷ್ಟೆ ಪ್ರಾಚೀನ ಮೂರ್ತಿ ಇದೆಂಬುದಾಗಿ ಅನುಮಾನಿಸಬಹುದು ಎಂದರೆ ಕ್ರಿ ಶ 8-9ನೇ ಶತಮಾನ ಬ್ರಾಹ್ಮಣರ ವಸಾಹತು, ವಾಸ್ತವ್ಯವಿದ್ದುದರಿಂದ ಅವರಿಗೆ ಯಜ್ಞಾಧಿಪತಿಯಾಗಿ ಈ ವಿಷ್ಣು ಸ್ವರೂಪಿಯಾದ ಜನಾರ್ದನ ಮೂರ್ತಿಯು ಪ್ರತಿಷ್ಠೆಯಾಯಿತೆನ್ನಬಹುದು (ಯಜ್ಞ ನಾರಾಯಣ) ಪೇರಂಪಳ್ಳಿಗೆ ಸೇರಿದ ಇನ್ನೊಂದು ಭಾಗವಾದ ಮಲ್ಲಂಪಳ್ಳಿಯೆಂಬಲ್ಲಿ ಇನ್ನೊಂದು ಸಮಕಾಲೀನ ಜನಾರ್ದನ ಬಿಂಬವಿದೆ ಈ ದೃಷ್ಟಾಂತಗಳಿಂದ ಪೇರಂಪಳ್ಳಿಯು ಬ್ರಾಹ್ಮಣರ ಊರು—ಬ್ರಹ್ಮಪುರ–ಆಗಿತ್ತೆಂದು ತಿಳಿದುಕೊಳ್ಳಬಹುದು

ಪೇರಂಪಳ್ಳಿಯ ಮಹಾಲಿಂಗೇಶ್ವರ ದೇವಾಲಯ

ಪೇರಂಪಳ್ಳಿಯಲ್ಲಿ ಮಹಾಲಿಂಗೇಶ್ವರವೆಂಬ ಪ್ರಾಚೀನ ದೇವಾಲಯವೊಂದಿದೆ. ಇದು ಬಹು ಜೀರ್ಣಾವಸ್ಥೆಯಲ್ಲಿದೆ. ಅರ್ಚನೆಯು ಸಹ ಬಹು ಕಷ್ಟದಲ್ಲಿ ನಡೆಯುವಂತಹುದಾಗಿದೆ ದೇವಾಲಯವು ಪ್ರಕೃತಿ ಸೌಂದರ್ಯವನ್ನೊಳಗೊಂಡ ಸನ್ನಿವೇಶದಲ್ಲಿ ನಿರ್ಮಾಣಗೊಂಡಿದೆ. ಇದರ ಪ್ರಾಚೀನತೆಯ ಬಗ್ಗೆ ನಮಗಿಷ್ಟರ ತನಕ ಯಾವ ದಾಖಲೆಗಳು ದೊರಕದಿದ್ದರೂ ಉಳಿದು ಬಂದ ಅವಶೇಷಗಳನ್ನವಲೋಕಿಸಿದಾಗ ಈ ದೇಗುಲವು ಸು. ಕ್ರಿ ಶ. 10–11ನೇ ಶತಮಾನದಲ್ಲಿ ನಿರ್ಮಾಣಗೊಂಡಿರಬೇಕೆಂದು ಹೇಳಬಹುದು ಅಂತೂ ಕ್ರಿ. ಶ. 12ನೇ ಶತಮಾನಕ್ಕಿಂತ ಅರ್ವಾಚೀನ ದೇಗುಲವಲ್ಲ ಕೆಲವು ದಶಕಗಳ ಹಿಂದೆ ಈ ದೇವಾಲಯವು ಜೀರ್ಣೋದ್ಧಾರಗೊಂಡಿದ್ದರೂ ಈಗ ಇದು ಬಹು ನಾದುರಸ್ತಿಯಲ್ಲಿದ್ದು ಅವ್ಯವಸ್ಥೆಯಲ್ಲಿದೆ.

ದೇವಾಲಯದ ಗರ್ಭಗೃಹವು ಚತುರಸ್ರವಾಗಿದ್ದು, ಇತರ ಹೆಚ್ಚಿನ ದೇಗುಲಗಳಲ್ಲಿದ್ದಂತೆಯೇ ಒಂದು ಕತ್ತಲೆ ಪ್ರದಕ್ಷಿಣ ಪಥವಿದೆ ಅದರ ಎದುರು ಒಂದು ನವರಂಗವಿದೆ. ನವರಂಗದ ಎದುರು ಭಾಗದಲ್ಲಿ ತೀರ್ಥ ಮಂಟಪವಿದೆ ತೀರ್ಥ ಮಂಟಪವು ಅರ್ವಾಚೀನ ಕಟ್ಟಡ. ಹೊರ ಸುತ್ತಿನ ಪೌಳಿಯು ಸಂಪೂರ್ಣ ಬಿದ್ದುಹೋಗಿದೆ ಒಳಗಿನ ಪ್ರಧಾನ ಪ್ರದಕ್ಷಿಣ ಪಥದ ಆಗ್ನೇಯ ದಿಕ್ಕಿನಲ್ಲಿ ಎಂದರೆ ತೀರ್ಥ ಮಂಟಪದ ದಕ್ಷಿಣ ಭಾಗದಲ್ಲಿ ಒಂದು ಹೊಸತಾಗಿ ನಿರ್ಮಿಸಿದ ಗುಡಿಯಲ್ಲಿ ಎರಡು ಗಣಪತಿ ವಿಗ್ರಹಗಳು ಇವೆ ಇವುಗಳಲ್ಲಿ ಒಂದು ಸಮೀಪವೇ ಇರುವ ಶೀಪ್ರ ಎಂಬಲ್ಲಿಂದ ತಂದ ಬಿಂಬವೆಂದೂ ಇನ್ನೊಂದು ಈ ದೇವಾಲಯದ ಉಪಸ್ಥಾನ ಮೂರ್ತಿ ಎಂದೂ ತಿಳಿಯಲಾಗಿದೆ ಈ ದೇವಾಲಯದ್ದೇ ಆದ ಗಣೇಶ ಬಿಂಬವು ಕ್ರಿ ಶ 11—12ನೇ ಶತಮಾನಕ್ಕಿಂತ ಅರ್ವಾಚೀನವಾದ ಬಿಂಬವಲ್ಲ ಇದು 22" ಎತ್ತರವಾಗಿದ್ದು ಜಟಾಮುಕುಟವಾಗಿ ಪ್ರಾಚೀನ ಶಿಲ್ಪದ ಲಕ್ಷಣಗಳನ್ನೊಳಗೊಂಡಿದೆ ದೇಗುಲದ ನಿರ್ಮಾಣ ಕಾಲದಲ್ಲಿಯೇ ಪ್ರತಿಷ್ಠಾಪಿಸಿದ ಬಿಂಬವೆಂದು ತಿಳಿದರೂ ತಪ್ಪಾಗದು

ಪೇರಂಪಳ್ಳಿಯ ಮಹಾಲಿಂಗೇಶ್ವರ ದೇವಾಲಯದ ಮೂಲಸ್ಥಾನ ದೇವತೆಯಾದ ಶ್ರೀ ಮಹಾಲಿಂಗೇಶ್ವರ ಲಿಂಗವು ಒಂದು ವಿಶಿಷ್ಟವಾದ ಲಿಂಗವಾಗಿದೆ. ಇದರಲ್ಲಿ ಒಂದು ತೆರನಾದ ಸುವರ್ಣ ರೇಖೆ ಇರುವುದು ಕಂಡುಬರುತ್ತದೆ. ಲಕ್ಷಣದಲ್ಲಿ ಇದನ್ನು ಬಾಣಲಿಂಗವೆಂದು ಹೇಳಬಹುದು ಈ ದೇವಾ

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
137 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¾% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:– **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.**
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಲಯದ ಪ್ರಾಚೀನತೆಯನ್ನು ಎತ್ತಿತೋರಿಸುವ ಪ್ರಾಮುಖ್ಯವಾದ ಕಲಶೇಷವೆಂದರೆ ಇಲ್ಲಿಯ ಬಲಿದೇವತಾ ಮೂರ್ತಿಯೊದ ಸದಾಶಿವ ಇದು ಸುಮಾರು 7' ಎತ್ತರದ ಪಂಚಲೋಹದ ಮೂರ್ತಿ ಇದರ ಎಲ್ಲ ಲಕ್ಷಣಗಳು ಚೋಳರ ಶಿಲ್ಪ ಶೈಲಿಯನ್ನು ನಿರ್ದೇಶಿಸುತ್ತವೆ ಇದನ್ನು ಎಷ್ಟೆಂದರೂ ಕ್ರಿ ಶ 10—11ನೇ ಶತಕಕ್ಕೆ ಅನ್ವಯಿಸಬಹುದು ವಿಶಿಷ್ಟವಾದ ಪದ್ಮಾಸನದ ಮೇಲೆ ಸುಖಾಸೀನನಾಗಿ ಸದಾಶಿವನ ನಿರ್ದೇಶವಿದೆ ಮೇಲಿನ ಎರಡು ಕೈಗಳಲ್ಲಿ ಕುಠಾರ ಮತ್ತು ಮೃಗವೂ ಕೆಳಗಿನ ಕೈಕೆಳಗಿನ ಕೈಗಳು ಅಭಯ, ವರದವಾಗಿಯೂ ಇವೆ ಸದಾಶಿವನ ಅನುಗ್ರಹ ಮೂರ್ತಿ ಎನ್ನಬಹುದು ಜಟಾಮುಕುಟವೂ ಜಟೆಯಲ್ಲಿ ಚಂದ್ರ ಹಾಗೂ ಗಂಗೆಯೂ ನಿರ್ದೇಶಿಸಲ್ಪಟ್ಟಿವೆ ಅಲಂಕಾರಿಕ ವೈಲಕ್ಷಣ್ಯಗಳನ್ನೂ ಕರ್ಣಕುಂಡಲಗಳನ್ನು ನಿರ್ದೇಶಿಸಿದ ಕ್ರಮವನ್ನೂ ಮುಖದ ಲಾವಣ್ಯವನ್ನೂ ವಿಗ್ರಹದ ತಿರಶ್ಚಕ್ರ ಹಾಗೂ ಕೇಶರಾಶಿಯ ನಿರ್ದೇಶವನ್ನೂ ಅವಲೋಕಿಸಿದಾಗ ಈ ಬಿಂಬವು ಕ್ರಿ ಶ 10—11ನೇ ಶತಮಾನದ್ದೆಂದು ತಜ್ಞರು ಒಪ್ಪಬೇಕಾಗುತ್ತದೆ ಚಿಕ್ಕದಾದರೂ ನಮ್ಮ ಜಿಲ್ಲೆಯ ಶ್ರೇಷ್ಠ ಸದಾಶಿವ ಬಿಂಬಗಳಲ್ಲಿ ಒಂದೆಂಬುದಾಗಿ ಇದನ್ನು ಸ್ವೀಕರಿಸಬಹುದು ಪ್ರಾಚೀನತೆಯಿಂದಾಗಿ ಪೀಠದಲ್ಲಿ ತೂತುಗಳು ಬಿದ್ದಿವೆ

ಈ ದೇವಾಲಯಕ್ಕೆ ಸಂಬಂಧಿಸಿದ ಒಂದು ಶಕ್ತಿ ಗುಡಿ ಇತ್ತೆಂದೂ ಸಂಬಲಾಗಿದೆ ಈಗ ಇದು ಸಂಪೂರ್ಣವಾಗಿ ಬಿದ್ದು ಹೋಗಿದೆ ದೇವಾಲಯದ ಎದುರು ಇದ್ದ ಕೆರೆಯೂ ಸಂಪೂರ್ಣವಾಗಿ ಮುಚ್ಚಿದೆ ಪ್ರಶಾಂತವಾದ ಸನ್ನಿವೇಶದಲ್ಲಿ ನಿರ್ಮಾಣಗೊಂಡ ಈ ದೇಗುಲವು ಬಹು ಜೀರ್ಣವಾದುದರಿಂದ ಈ ಊರಿನ ಪ್ರಧಾನ ದೇವಮಂದಿರವಿದಾದುದರಿಂದ ಇದರ ಪುನರುಜ್ಜೀವನ ಅತ್ಯಗತ್ಯವೆಂಬುದರಲ್ಲಿ ಅನುಮಾನವಿಲ್ಲ ಈ ದೇಗುಲಕ್ಕೆ ಸಂಬಂಧಿಸಿದ ಬಾವುಕರೆಲ್ಲರೂ ಸಹಕಾರವನ್ನೀಯುವುದು ದರ್ಮದೃಷ್ಟಿಯೂಗಿದೆ ಪೇರಂಪಳ್ಳಿಯ ಏಳಿಗೆಗೆ ಇದು ಕಾರಣವಾಗುವುದು

●●

ದ.ಕ. ಜಿಲ್ಲಾ ಸಾಹಿತ್ಯ ಸಮ್ಮೇಳನ

ಸ್ವಾ। ಸಮಿತಿ ಅಧ್ಯಕ್ಷ ವೀರೇಂದ್ರ ಹೆಗ್ಗಡೆಯವರ ಪತ್ರಿಕಾ ಗೋಷ್ಠಿ

ಇದೇ ಬರುವ ಅಕ್ಟೋಬರ 31 ಮತ್ತು ನವಂಬರ 1ರಂದು ಕಾರ್ಕಳದಲ್ಲಿ ಸೇರಲಿರುವ ದ ಕ ಜಿಲ್ಲಾ ಸಾಹಿತ್ಯ ಸಮ್ಮೇಳನದ ವಿವರಗಳನ್ನು ತಿಳಿಸುವ ಸಲುವಾಗಿ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ವೀರೇಂದ್ರ ಹೆಗ್ಗಡೆಯವರು ಇದೇ ತಾ 18 ರಂದು ಮಂಗಳೂರಿನ ತಮ್ಮ ನಿವಾಸದ ಲಾಲ್‌ಬಾಗಿನ "ವೀರ ಭವನ"ದಲ್ಲಿ ಕರೆದ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ, ಇದು ಮೊತ್ತ ಮೊದಲಿನ ಸಾಹಿತ್ಯ ಸಮ್ಮೇಳನವಾಗಿರುವ ಕಾರಣ ಸ್ವಾಗತ ಸಮಿತಿ ವಹಿಸಿಕೊಂಡಿರುವ ಈ ಗುರುತರ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸುವಂತೆ ನೆರವಾಗಲು ನಾಡಿನ ಮಹಾಜನರನ್ನೂ ಸಂಘ ಸಂಸ್ಥೆಗಳನ್ನೂ ವಿನಂತಿಸಿದರು ಮುಂದುವರಿಯುತ್ತಾ, ಪ್ರಾಚೀನ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸುಪ್ರಸಿದ್ಧ ಕವಿಯಾದ ರತ್ನಾಕರ ವರ್ಣಿಯು ಕಾರ್ಕಳ ತಾಲೂಕಿನವನಾದುದರಿಂದ ಕಾರ್ಕಳದಲ್ಲಿ ಸೇರುವ ಸಮ್ಮೇಳನದ ಮಂಟಪಕ್ಕೆ "ರತ್ನಾಕರವರ್ಣಿ ಮಂಟಪ" ಎಂದು ಹೆಸರಿಸಲಾಗುವುದೆಂದು ತಿಳಿಸಿದರು

ಸಮ್ಮೇಳನವನ್ನು ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ। ಜವರೇ ಗೌಡರು ಉದ್ಘಾಟಿಸಲಿದ್ದು ಉದ್ಘಾಟನ ಸಾಹಿತಿ ಶ್ರೀ ಜಿ ಪಿ ರಾಜರತ್ನಂರವರು ಅಧ್ಯಕ್ಷರ ಪದವಿ [illegible] ಶ್ರೀ [illegible] ಸ್ಮರಣ [illegible] ಸಮ್ಮೇಳನದಲ್ಲಿ [illegible]

ಕವಿಗೋಷ್ಠಿ, ಚಿತ್ರ, ಪತ್ರಿಕೋದ್ಯಮ [illegible]

ಸಮ್ಮೇಳನದ [illegible] ಶ್ರೀ [illegible] ಹೆಗ್ಗಡೆಯವರು [illegible]

[illegible] ಸಮ್ಮೇಳನದ [illegible]

ಸಮ್ಮೇಳನದ ಜತೆಗೆ ಕನ್ನಡ ರಾಜ್ಯೋತ್ಸವ [illegible] ಶ್ರೀ [illegible] ಎಚ್ ಎಲ್ [illegible] ಗೌಡರು ವಹಿಸುವರು

ಶ್ರೀ [illegible] ಪ್ರದರ್ಶನ [illegible] ಕಾರ್ಯಕ್ರಮಗಳನ್ನು [illegible]

[illegible] 100 [illegible], 25 [illegible] ಸಮ್ಮೇಳನ [illegible] ಶ್ರೀ ಹೆಗ್ಗಡೆಯವರು ವಿನಂತಿಸಿರುವರು

ಸದಾ ಶಿವ ಮೂರ್ತಿಯ ಇನ್ನೊಂದು ದೃಶ್ಯ

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್.
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಬೆಳ್ತಂಗಡಿ ಮುನ್ಸಿಫ಼ ಕೋರ್ಟಿನಲ್ಲಿ

R R C 447/1971

[illegible] — [illegible]

[illegible] — [illegible]

P O [illegible]

[illegible] 1971ನೆ [illegible] ಅಕ್ಟೋಬರ ತಾರೀಕು 12ನೆ [illegible] 11 [illegible] ತಪ್ಪಿದರೆ [illegible] ವಿಷಯದಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು

(ಕೋರ್ಟಿನ ಮುಖಾಂತರ)

U. M Raveendra
Advocate for Applicant

ಬೆಳ್ತಂಗಡಿ, ತಾ 14—9—1971

ಸಿಂಡಿಕೇಟಿನ ಭವಿಷ್ಯ ಲೇಖಕರು—

ಕರ್ನಾಟಕ-ಗುಜರಾತಗಳ ಇಂದ್ರರು

೧೯೭೨ರ ಸಾರ್ವತ್ರಿಕ ಚುನಾವಣೆಗಳು ಹತ್ತಿರವಾಗುತ್ತಿರುವಂತೆ ರಾಜ್ಯಕೀಯ ಪಕ್ಷಗಳ ಚಟುವಟಿಕೆಗಳು ಹೆಚ್ಚತೊಡಗಿವೆ ಇಂಡಿಕೇಟು ತನ್ನನ್ನು ಸಮಾಜವಾದದ ಏಕಮಾತ್ರ ಕೈವಾರಿಯೆಂಬ ವಿಭ್ರಮೆಯ ಮಂಕು ಬೂದಿಯನ್ನೆರಚಿ, ಉಳಿದವರೆಲ್ಲ ಸಮಾಜವಾದದ ದ್ರೋಹಿಗಳೆಂಬರ್ಥ ಬರುವಂತೆ ಕಾರ್ಯಕ್ರಮ ರೂಪಿಸಿಕೊಂಡು ಬರುತ್ತಿದೆ ಹಳೆಯ ಹುಲಿಗಳನ್ನೆ ದೂರವಿಟ್ಟು ತಮ್ಮದು ಹಳೆಬರ, ಹಳೆಯ ವಿಚಾರವಂತರ ಪಕ್ಷವಲ್ಲ, ಹೊಸ ಪೀಳಿಗೆಯ ಪಕ್ಷವೆಂದು ಹೇಳಿಕೊಳ್ಳಲು ಅನುಕೂಲವಾಗುವಂತೆ ನಾನಾ ರೀತಿಯ ಡೊಂಬರಾಟದಲ್ಲಿ ತೊಡಗಿದೆ ತನ್ನ ಪ್ರಾದೇಶಿಕ ಸಮಿತಿಗಳ ಪುನರ್ಘಟನೆ, ಸಚಿವ ಸಂಪುಟದ ಪುನಾರಚನೆಗಳಲ್ಲೇ ಅದು ತಲ್ಲೀನವಾಗಿದೆ

ಈ ನಡುವೆ ಸಿಂಡಿಕೇಟು ಏನುಮಾಡುತ್ತಿದೆ? ಲೋಕಸಭಾ ಮಧ್ಯಾವಧಿ ಚುನಾವಣೆಗಳ ಭೀಕರ ಪರಿಣಾಮದಿಂದ ಸಿಂಡಿಕೇಟು ಭಯಾನಕ ಪಕ್ಷಾಂತರ ಪಿಡುಗಿಗೆ ಗುರಿಯಾದದ್ದು, ಕರ್ನಾಟಕ, ಗುಜರಾತ ಮತ್ತು ಉತ್ತರ ಪ್ರದೇಶಗಳಲ್ಲಿದ್ದ ಸಿಂಡಿಕೇಟ್ ಸರಕಾರಗಳು ದರಲೆಗಳುರುಳುವಂತೆ ಉದುರಿ ಹೋದದ್ದು ಸರ್ವಶ್ರುತ ಉತ್ತರ ಪ್ರದೇಶದಲ್ಲಿ ಇಂಡಿಕೇಟು ಸರಕಾರ ರಚಿಸಿದರೂ ಉಳಿವೆಡೆ ರಾಷ್ಟ್ರಪತಿ ಆಳಿಕೆಯೇ ಬಂತು.

ಉತ್ತರ ಪ್ರದೇಶದ ಚಂದ್ರಭಾನು ಗುಪ್ತರು ಏನೇನೋ ಲೆಕ್ಕಾಚಾರ ಹಾಕಿದ್ದರು. ಕಮಲಾಪತಿ ತ್ರಿಪಾಠಿಯವರಿಗೂ ಗುಪ್ತರಿಗೂ ಅಧಿಕಾರಕ್ಕಾಗಿ ಪ್ರಬಲ ಹೋರಾಟ ಹಿಂದಿನಿಂದಲೂ ನಡೆದೇ ಇತ್ತು ಕಾಂಗ್ರೆಸ್ ವಿಭಜನೆಯ ವೇಳೆ ಗುಪ್ತರು ಅಧಿಕಾರ ಬಲದಿಂದ ಸಿಂಡಿಕೇಟಿನಲ್ಲಿ ಉಳಿದರು, ಆಗ ತ್ರಿಪಾಠಿಯವರು ಇಂಡಿಕೇಟಿಗರಾಗುವುದು ಅನಿವಾರ್ಯವೇ ಆಯ್ತು ಮುಂದೆ ಒಬ್ಬರು ಅಧಿಕಾರದಿಂದ ಇಳಿಸಲು, ಇನ್ನೊಬ್ಬರು ಅಧಿಕಾರದಲ್ಲಿ ಉಳಿಯಲು ಭಾರತ ಯುದ್ಧವನ್ನೇ ಹೂಡಿದರು. ಕೊನೆಗೂ ಗುಪ್ತ ಪರಾಜಯವನ್ನೊಪ್ಪಿಕೊಳ್ಳಲೇ ಬೇಕಾಯ್ತು ಇನ್ನೂ ಎರಡೂವರೆ ವರ್ಷ ತ್ರಿಪಾಠಿ ಅಧಿಕಾರದಲ್ಲಿ ಮುಂದುವರಿಯಬಹುದು, ಅಥವಾ ಈ ನಡುವೆ ಇಂದಿರಾ ನಾಟಕದ ಖಳನಾಯಕರೂ ಆಗಬಹುದು ಆದರೆ, ಗುಪ್ತರಿಗೆ ಸಿಂಹಾಸನವಿನ್ನು ಎಟುಕದ ದ್ರಾಕ್ಷಿ—ಸದ್ಯಕ್ಕಾದರೂ

ಇದೇವೇಳೆ ಸಿಂಡಿಕೇಟಿನ ಅಧ್ವರ್ಯುಗಳು ಒಂದೊಂದು ಸ್ವರ ಹೊರಡಿಸ ಹೊರಟಿದ್ದಾರೆ. ಡಾ| ರಾಮಸುಭಗ ಸಿಂಗರು ಸಿಂಡಿಕೇಟ್ ಗೂಡಿನಲ್ಲಿ ಸಿಕ್ಕಿ ಹಾಕಿಕೊಂಡ ಹುಲಿ ದೇವತಾ ಮನುಷ್ಯರೆಂದು ಹೆಸರಾದ ಇವರು ಪಕ್ಷದ ಶಿಸ್ತಿಗೆ ಕಟ್ಟು ಬಿದ್ದು ಇಂಡಿಕೇಟು ಸೇರಲಿಲ್ಲ ಇವರ ದುರವಸ್ಥೆಯೆಲ್ಲಿಯವರೆಗಾಯಿತೆಂದರೆ, ಮಧ್ಯಾವಧಿ ಚುನಾವಣೆಗಳಲ್ಲಿ ಅವರು ಗೆಲ್ಲಲಿಲ್ಲ ನಿಜಲಿಂಗಪ್ಪನವರು ಅಧ್ಯಕ್ಷ ಪೀಠದಿಂದ ಇಳಿಯುವಾಗ, ಆ ಪದವಿಗೆ ಸೂಚಿತವಾದ ಒಂದು ಹೆಸರು ಸಿಂಗರದು ಆದರೆ, ಒಮ್ಮತದ ಆಯ್ಕೆಯ ಹೆಸರಲ್ಲಿ ಸಾದಿಕ್ ಅಲಿಯವರಿಗೆ ಪ್ರಧಾನ ಕಾರ್ಯದರ್ಶಿ ಸ್ಥಾನದಿಂದ ಭಡತಿ ದೊರಯಿತು

ಸಾದಿಕ್ ಅಲಿಯವರು ಸಿಂಡಿಕೇಟಿನ ಅಧ್ಯಕ್ಷರಾದ ಮೇಲೆ, ಪ್ರಾಯಃ ಆದರ ಅಖಿಲ ಭಾರತ ಚಟುವಟಿಕೆಗಳು ಸ್ಥಗಿತಗೊಳುತ್ತ ಬರತೊಡಗಿವೆ ಪಕ್ಷದ ಉನ್ನತ ನಾಯಕರಲ್ಲೇ ಸಾಕಷ್ಟು ಭಿನ್ನಮತಗಳು ಮೂಡಿವೆ ಈ ನಾಯಕರನ್ನು ಸಾಮಾನ್ಯವಾಗಿ ಮೂರು ಪಂಗಡಗಳಲ್ಲಿ ವಿಂಗಡಿಸಬಹುದು

ಶ್ರೀಮತಿ ಇಂದಿರಾಗಾಂಧಿಯವರಿಂದ ವೈಯಕ್ತಿಕವಾಗಿ ಅಪಮಾನಿತರಾದ ಅತ್ಯಂತ ಹಿರಿಯ ನಾಯಕರು ಕೆಲವರು ಮುರಾರ್ಜಿ ದೇಸಾಯಿ ಮತ್ತು ನಿಜಲಿಂಗಪ್ಪ. ಕೆಲವರು ಮಾತ್ರ ಈ ಶ್ರೇಣಿಯಲ್ಲಿ ನಿಲ್ಲುತ್ತಾರೆ ಮುರಾರ್ಜಿಭಾಯಿ ಶಿಸ್ತಿನ ಸಿಪಾಯಿಯೆಂದು ಹೆಸರಾದವರು, ಇವರ ಮಾತು ಕಟುವಾದರೂ ಅದು ಪರಿಸರವನ್ನು ನೋಡಿಕೊಂಡೇ ಹೊರಡುತ್ತದೆ. ಆದರೆ, ಪಕ್ಷ ವಿಘಟನೆಯ ಖಳನಾಯಕ ನಿಜಲಿಂಗಪ್ಪನವರಿಗಷ್ಟು ತಾಳ್ಮೆಯಿಲ್ಲ. ಅವರು ಶ್ರೀಮತಿ ಗಾಂಧಿ—ಆಕೆಯ ನಡವಳಿಕೆ—ನೀತಿಯೆಲ್ಲವನ್ನೂ ಟೀಕಿಸುತ್ತಲೇ ಈ ಯೆರಡು ವರ್ಷ ಕಳೆದಿದ್ದಾರೆ ಜಂತರ—ಮಂತರವನ್ನು ಇವರಿಬ್ಬರೂ ತಮ್ಮ ಮುಷ್ಟಿಯಲ್ಲಿ ಇಟ್ಟುಕೊಂಡಿದ್ದಾರೆ ಆದಕ್ಕೆಂದೇ ಸಾದಿಕ್ ಅಲಿಯನ್ನು ಗದ್ದುಗೆಗೇರಿಸಿ ಹೂಮಾಲೆ ಹಾಕಿದ್ದಾರೆ ಸಾದಿಕ್ ಈ ಇರ್ವರ ಕೈಗೊಂಬೆಯಾಗಿಯೇ ವರ್ತಿಸುತ್ತಿದ್ದಾರೆ, ಆದರೆ, ಬಾಯಿ ಮಾತ್ರ ಬಡಕೊಳ್ಳುವುದಿಲ್ಲ

ಎರಡನೆಯ ಗುಂಪು ಹಿತೇಂದ್ರ ದೇಸಾಯಿ, ವಿರೇಂದ್ರ ಪಾಟೀಲರದ್ದು ತಮ್ಮ ಪಕ್ಷವು ಬಹುಮತ ಕಳದು ಕೊಂಡದ್ದರಿಂದ ಅಧಿಕಾರಕ್ಕೆರವಾದವರಿವರು ಮೊದಲನೆಯವರು ಮುರಾರ್ಜಿಯ ಅನುಯಾಯಿಗಳೆಂದೂ ಎರಡನೆಯವರು ನಿಜಲಿಂಗಪ್ಪನವರ ಹಿಂಬಾಲಕರೆಂದೂ ಹೆಸರು ಪಡೆದವರು ಇವರಿಬ್ಬರ ಬಗೆಗೆ ಆಗಾಗ ಹಲವಾರು ಕಲ್ಪಿತವಾರ್ತೆಗಳು ಬರುತ್ತಲಿವೆ ಇಂಡಿಕೇಟಿಗೆ ಇವರನ್ನು ಎಳೆದುಕೊಳ್ಳುವ ಪ್ರಯತ್ನ ಉನ್ನತ ವಲಯದಲ್ಲೇ ನಡೆದಿತ್ತು ಆದರೆ, ಪಕ್ಷಾಂತರಕ್ಕೆ ಇವರಿಬ್ಬರೂ ಒಪ್ಪಲಿಲ್ಲ

ಸದ್ಯ ಸಿಂಡಿಕೇಟ್ ಬಲೆ ಹರಿದು ಹೋಗಿದೆ ಅದನ್ನು ಮತ್ತೆ ಹೊಲಿಯುವ ತಾಕತ್ತು ಸಾದಿಕ್ ಅಲಿಯವರಲ್ಲಿಲ್ಲ. ಅವರ ಮಾರ್ಗದರ್ಶಕರಿಬ್ಬರೂ ತಮ್ಮ ಹಳೆಯ ಮಾದರಿಯಲ್ಲಿ ಹೊಲಿದರೆ, ಅದು ಇಂದಿನ ಫ್ಯಾಷನ್ ಯುಗಕ್ಕೆ ಮೆಚ್ಚುಗೆಯಾಗುವುದಿಲ್ಲ ಈ ಬಿಕ್ಕಟ್ಟು ಮುಂದುವರಿದರೆ, ಹಿತೇಂದ್ರ—ವೀರೇಂದ್ರರು ತಮ್ಮದೇ ಪಕ್ಷವೊಂದನ್ನು ರಾಜ್ಯ ಪಟ್ಟದಲ್ಲಿ ಸಂಘಟಿಸಬಹುದು ಮುರಾರ್ಜಿಯ ಹೆಜ್ಜೆಯಲ್ಲಿ ನಡೆಯುತ್ತಿರುವಾಗಲೇ ತನ್ನ ಬೇರು ಬಿಡುತ್ತ ಹೋದ ಹಿತೇಂದ್ರರು ಮುರಾರ್ಜಿಯನ್ನು ತಿರಸ್ಕರಿಸಲೂ ಸಿದ್ಧರೇ, ಆದರೆ, ವೀರೇಂದ್ರರು ನಿಜಲಿಂಗಪ್ಪನವರನ್ನು ಅಗಲಲು ತಯಾರಾಗುವುದು ಸಂದೇಹಾಸ್ಪದ. ಸಿಂಡಿಕೇಟಿನ ಉಸಿರು ಇರುವುದೀಗ ಇಬ್ಬರು ಇಂದ್ರರಲ್ಲಿ ಇವರೇನು. ಮಾಡುತ್ತಾರೆ ಎಂಬುದೇ ಅದರ ಆಯುಷ್ಯ ಬರೆಯುತ್ತದೆ

ಇತ್ತೀಚೆಗೆ ಮೂರನೆಯ ಗುಂಪು ತನ್ನ ಅಸಮಾಧಾನ ಬಹಳವಾಗಿ ತೋರ್ಪಡಿಸುತ್ತಿದೆ ಇದರಲ್ಲಿ ಹೆಚ್ಚಿನವರು ಮಾಜಿಗಳು. ಡಾ| ರಾಮಸುಭಗ ಸಿಂಗ, ಶ್ರೀ ಚಂದ್ರಭಾನು ಗುಪ್ತ ಶ್ರೀ ಹರಿಕೃಷ್ಣ ಶಾಸ್ತ್ರಿ ಮತ್ತು ಶ್ರೀಮತಿ ತಾರಕೇಶ್ವರಿ ಸಿಂಹ—ಎಲ್ಲರೂ ಉತ್ತರದವರೇ—ಇವರಲ್ಲಿ ಮುಖ್ಯರು ಪಕ್ಷದ ಉನ್ನತ ನಾಯಕರನ್ನು ಇವರು ಸಲೀಸಾಗಿ ಟೀಕಿಸುತ್ತಾರೆ ಜಂತರ-ಮಂತರದ ಒಳಗಿರುವವರಲ್ಲಿ ತಮ್ಮ ಅವಿಶ್ವಾಸವನ್ನು ತೋರ್ಪಡಿಸುತ್ತಾರೆ ಒಂದೊಮ್ಮೆ ಕಾಂಗ್ರೆಸ್ಸಿನ ಎರಡೂ ತುಕುಡಿಗಳು ಒಂದುಗೂಡಬೇಕೆಂಬ ಅಭಿಲಾಷೆಯನ್ನೂ ಇವರು ವ್ಯಕ್ತಪಡಿಸಿದ್ದುಂಟು. ಇವರಿಗೆ ಸರಕಾರದಲ್ಲಾಗಲೀ ಪಕ್ಷದಲ್ಲಾಗಲೀ ಅಧಿಕಾರವಿಲ್ಲ ಆದರೂ ಇವರ ಟೀಕೆ—ಟಿಪ್ಪಣಿಗಳು ದಿನದಿಂದ ದಿನಕ್ಕೆ ತೀವ್ರವಾಗುತ್ತ ನಡೆದಿದ್ದು ಅದು ಪಕ್ಷದ ಸರ್ವನಾಶಕ್ಕೆ ನಾಂದಿಯಾದರೂ ಆದೀತು ಅವರ ಈ ಅನಪೇಕ್ಷಿತ ಕೃತಿಗಳ ಬಗ್ಗ ಚರ್ಚಿಸಲು ಎಐಸಿಸಿ ಸೇರಿಸುವ ವಿಷಯದಲ್ಲೇ ಭಿನ್ನಮತವಿದೆ. ಎಂದರೆ, ಪೆಟ್ಟೊಂದು—ತುಂಡೆರಡು ಮಾಡುವುದು ಅನಿವಾರ್ಯವಾದರೆ ಎಂಬ ಮಹಾಭೀತಿ

ಈ ನಡುವೆ ಕಾಮರಾಜರದೊಂದು ಪ್ರತ್ಯೇಕ ವ್ಯಕ್ತಿತ್ವ ಅವರು ಸಂಪ್ರದಾಯವಾದಿಗಳೆಂದೂ ಆಗಿರಲಿಲ್ಲ ಪ್ರಾಯಃ ಸಿಂಡಿಕೇಟಿನಲ್ಲಿನ ಸಮಾಜವಾದ- ಪ್ರಗತಿಶೀಲ ಮನೋವೃತ್ತಿಯವರಿಗೆಲ್ಲ ಇವರು ತಿಲಕಪ್ರಾಯರು ಪಕ್ಷದ ನಾಯಕರ ಹೊಲಬುಗೆಟ್ಟ ಕಾರ್ಯನೀತಿಯಿಂದ ಕಾಮರಾಜರು ನೊಂದಿದ್ದಾರೆಂದೂ ಅವರು ಸಿಂಡಿಕೇಟನ್ನು ಬಿಟ್ಟು ಇಂಡಿಕೇಟನ್ನು ಸೇರಲು ಅವಕಾಶವರಸುತಿದ್ದಾರೆಂದೂ ವರದಿ ಹರಡಿದೆ ಇದರಲ್ಲಿ ಸತ್ಯಾಂಶವಿರಲಾರದಾದರೂ ಪಕ್ಷದ ಅನಿರ್ದಿಷ್ಟ ಕ್ರಮಗಳಿಂದ ಅವರು ನೊಂದುಕೊಂಡಿದ್ದಾರೆಂಬುದು ಮಾತ್ರ ಸತ್ಯವೇ. ತಮಿಳುನಾಡಿನಲ್ಲಿ ಕಾಮರಾಜರು ಇನ್ನೂ ಬೇಕಾದ ವ್ಯಕ್ತಿಯಾಗಿರುವುದರಿಂದ, ಅಲ್ಲಿಯೇ ಕಾಂಗ್ರೆಸ್ ಒಂದಾಗುವ ಪ್ರಯತ್ನ ಆರಂಭವಾಗಿದೆಯೆಂದು ಸುದ್ದಿಯಿದೆ

ಸಿಂಡಿಕೇಟಿನಿಂದ ನೀಲಂ ರೆಡ್ಡಿ ಅದೆಂದೋ ನಿರ್ಗಮಿಸಿದ್ದಾರೆ ಯಾರಿಗಾಗಿ ಪಕ್ಷ ಹೋಳಾಯ್ತೋ ಅವರೇ ತನ್ನ ವಿರೋಧಿಗಳತ್ತ ದಯನೀಯವಾಗಿ ದೃಷ್ಟಿಸುವಾಗ, ಉಳಿದವರದ್ದೇನು? ರಾಜ್ಯ ವಿಧಾನ ಸಭಾ ಚುನಾವಣೆಗಳಿಗೆ ಮೊದಲು ಸಿಂಡಿಕೇಟಿನ ಭವಿಷ್ಯ ಬರೆಯದೆ ಹೋದರೆ, ಆನಂತರದ ಕೆಲವು ತಿಂಗಳಲ್ಲಾದರೂ ಬರೆಯಲ್ಪಡುತ್ತದೆ ಅದೇನಿದ್ದರೂ "ಅಖಿಲ ಭಾರತೀಯ ಪಕ್ಷ"ವೆಂದು ಅದು ತನ್ನನ್ನು ಕರೆದು ಕೊಳ್ಳಬೇಕಾದರೆ, ಮಹಾಪವಾಡವೇ ನಡೆಯಬೇಕು, ಎಲ್ಲೆಡೆಯೂ ಇಂದ್ರರು ಹುಟ್ಟಿಕೊಳ್ಳಬೇಕು. ●

ಬೆಳ್ತಂಗಡಿ ಮುನ್ಸಿಫ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ

O. S. 102/71

ಯಂ ಜಿ ಪಡಿವಾಲ್ (ರಿಸೀವರ್)
—ವಾದಿ

ಮತ್ತು

ಸೇಸಪ್ಪ ಪೂಜಾರಿ —ಪ್ರತಿವಾದಿ

ಬೆಳ್ತಂಗಡಿ ತಾಲ್ಲೂಕು ಬಜ್ರೆ ಗ್ರಾಮದ ತುಕ್ರ ಪೂಜಾರಿಯವರ ಮಗ ಸೇಸಪ್ಪ ಪೂಜಾರಿಯವರಿಗೆ-

ವಾದಿಯು ನಿಮ್ಮ ಮೇಲೆ ಮಾಡಿದ ದಾವೆಯು ತಾ 19—10—71ರಂದು ನಿಮ್ಮ ಹಾಜರಾತಿ ಗಾಗ್ಗಿ ಇಟ್ಟಿರುವುದರಿಂದ, ನೀವು ಆ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗ ತಕ್ಕದ್ದು ತಪ್ಪಿದಲ್ಲಿ ನಿಮ್ಮನ್ನು ಶಿಷ್ಟಾ ಮಾಡಿ ಕೈಪೇತು ಮುಂದುವರಿಸಲಾಗುವುದು

ಕೋರ್ಟು ಹುಕ್ಕುಂ ಮೇರೆಗೆ

N. J. Kadamba
Advocate, Belthangady

ಬೆಳ್ತಂಗಡಿ, 21—9—71

ಗಾಜಿನ ಮನೆಯಲ್ಲಿ ಟೋಮೇಟೋ ಬೆಳೆ

೧

ಲೇಖಕರು: ಶ್ರೀ ಕೆ. ಎಂ. ಉಡುಪ
(ಕೃಷಿ ಆರ್ಥಿಕ ವಿಭಾಗ, ಸಿಂಡಿಕೇಟ್ ಬ್ಯಾಂಕ್, ಮಣಿಪಾಲ)

ಅಮೇರಿಕಾದ ಸಂಯುಕ್ತ ಸಂಸ್ಥಾನ ತಾಂತ್ರಿಕವಾಗಿ ಅದ್ಭುತ ಪ್ರಗತಿಯನ್ನು ಸಾಧಿಸಿದ ದೇಶವೆಂಬುದು ಎಲ್ಲರಿಗೂ ತಿಳಿದ ವಿಚಾರ. ಇಲ್ಲಿಯ ಜನಜೀವನದ ಬಹು ಭಾಗ ಯಂತ್ರಮಯ. ಇದರಿಂದಾಗಿಯೇ ಇಲ್ಲಿ ಮಾನವೀಯ ಮೌಲ್ಯಗಳಿಗೆ ಬೆಲೆ ಕಡಿಮೆಯಾಗುತ್ತದೆಯೋ ಎಂದೆನಿಸುತ್ತದೆ. ಸಿಗರೇಟು ಮಾರುವ ಅಂಗಡಿಗಳಿಂದ ಹಿಡಿದು ಬೃಹತ್ ಕಾರ್ಖಾನೆಗಳೆಲ್ಲಾ ಸ್ವಯಂ ಚಾಲಿತ ಯಂತ್ರಗಳಿಂದಲೇ ನಡೆಸಲ್ಪಡುತ್ತಿದೆ. ದೈಹಿಕ ಶ್ರಮ ಬಹಳ ಅಲ್ಪ. ಮಾನವ ಶ್ರಮದ ಬೆಲೆ ಅತ್ಯಂತ ಅಧಿಕವಾದುದರಿಂದ ಉತ್ಪಾದನಾ ವೆಚ್ಚ ಮೇರೆ ಮೀರುತ್ತಿರುವುದು ಸಾಮಾನ್ಯವಾಗಿ ಕಂಡು ಬರುತ್ತಿರುವ ವಿಚಾರ. ಆದುದರಿಂದ ಔದ್ಯಮಿಕ ಸಂಸ್ಥೆಗಳಲ್ಲಿ ಹಾಗೂ ಕೃಷಿ ಕ್ಷೇತ್ರಗಳಲ್ಲಿ ವಿವಿಧ ಕೆಲಸಗಳನ್ನು ಕಡಿಮೆ ವೆಚ್ಚದಲ್ಲಿ ಮಾಡಲು ಅನುಕೂಲವಾಗುವ ಅನೇಕ ಯಂತ್ರಗಳನ್ನು ಅಳವಡಿಕೊಳ್ಳಲಾಗಿದೆ.

ಕೃಷಿ ಅಮೇರಿಕಾದ ಅನೇಕ ಉದ್ಯಮಗಳಲ್ಲಿ ಒಂದು. ಪ್ರಾಯಶಃ ಇಲ್ಲಿಯ ಕೃಷಿ ವಿಧಾನಗಳು ನಮಗೆ ತೀರಾ ವಿಚಿತ್ರವೆನಿಸಬಹುದಾಗಿದೆ. ಒಹಯೋ ರಾಜ್ಯದಲ್ಲಿ ಮತ್ತು ಅಮೇರಿಕಾದ ಇನ್ನಿತರ ಕಡೆಗಳಲ್ಲಿ ತರಕಾರಿ ಬೆಳೆಯುವುದು ಒಂದು ಮುಖ್ಯ ಕೃಷಿ ಉದ್ಯಮ. ಇದರಿಂದ ರೈತರು ಉತ್ತಮ ಲಾಭವನ್ನೂ ಪಡೆಯುತ್ತಾರೆ. ಆದರೆ ತರಕಾರಿ ಬೆಳೆಯುವವರು ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿದ್ದು ಆಧುನಿಕತೆಯ ಪರಮಾವಧಿಯಲ್ಲಿ ತಮ್ಮ ಕೃಷಿಯನ್ನು ಸಾಗಿಸುತ್ತಿದ್ದಾರೆ. ಪ್ರತಿಯೊಂದು ಬೆಳೆಯಲ್ಲಿಯೂ ಪರಿಣತಿ ಹೊಂದಿ ಅದೇ ಬೆಳೆಯನ್ನು ಮಾತ್ರ ಬೆಳೆಯುವುದು ಇಲ್ಲಿಯ ಸಂಪ್ರದಾಯ. ಸಂಭವನೀಯ ಅಪಾಯಗಳಿಗಾಗಿ ವಿಮೆ ಇಳಿಸುತ್ತಾರೆ. ಆದುದರಿಂದ ಒಂದೇ ಬೆಳೆ ಬೆಳೆಯಲು ಅವರಿಗೇನೂ ಹೆದರಿಕೆಯಿಲ್ಲ.

ನಾಲ್ಕು ಎಕ್ರೆ ಟೋಮೆಟೋ ಬೆಳೆದು ಉತ್ತಮ ಜೀವನ ಸಾಗಿಸುತ್ತಿರುವ ಒಂದು ಕೃಷಿ ಕ್ಷೇತ್ರ ಸಂದರ್ಶಿಸಿದೆ. ತಂದೆ ಮತ್ತು ಇಬ್ಬರು ಮಕ್ಕಳು ಈ ಕೆಲಸದಲ್ಲಿ ನಿರತರಾಗಿದ್ದಾರೆ. ಮೂವರು ಬೇರೆ ಬೇರೆ ಮನೆಗಳಲ್ಲಿ ನಿಂತು ತಮ್ಮ ತಮ್ಮ ಪಾಲಿನ ಕೆಲಸಗಳನ್ನು ಮಾಡುತ್ತಿದ್ದಾರೆ. ಇಡೀ ನಾಲ್ಕು ಎಕ್ರೆ ಭಾಗವನ್ನು ಒಂದು ಗಾಜಿನ ಮನೆಯನ್ನಾಗಿ ಪರಿವರ್ತಿಸಿ, ಅದರೊಳಗಡೆ ಟೋಮೇಟೋ ಬೆಳೆಸಲಾಗುತ್ತದೆ. ಗಾಜಿನ ಮನೆಯನ್ನು ನಿರ್ಮಿಸಿರುವುದರಿಂದ ವರ್ಷದಲ್ಲಿ ಎರಡು ಬೆಳೆ ತೆಗೆಯಲು ಅವರಿಗೆ ಸಾಧ್ಯವಾಗುತ್ತಿದೆ. ಉಳುವೆಂ ಕೆಲಸವಿಲ್ಲ. ಪ್ರತಿ ಬೆಳೆಯ ನಂತರ ಗಿಡಗಳನ್ನು ಯಂತ್ರಗಳಿಂದ ಕಿತ್ತು ಉಗಿಯನ್ನು ಮಣ್ಣಿಗೆ ಬಿಟ್ಟು (ತಳದಿಂದ) ಮಣ್ಣನ್ನು ಪರಿಷ್ಕರಿಸಲಾಗುತ್ತದೆ. ಅನಂತರ, 4 ವಾರ ಪ್ರಾಯದ ಟೋಮೆಟೋ ಸಸಿಗಳನ್ನು ನೆಡಲಾಗುತ್ತದೆ. ಸಸಿಗಳು ದೊಡ್ಡದಾದಂತೆ ಪ್ರತಿಯೊಂದು ಸಸಿಯನ್ನು 'ದಾರದಿಂದ ಮೇಲೆತ್ತಿ ಕಟ್ಟಲಾಗುತ್ತದೆ. ಈ ಕೆಲಸಕ್ಕೆ ಮಾತ್ರ ಕೂಲಿಗಳನ್ನು ಉಪಯೋಗಿಸುತ್ತಾರೆ. ಕೂಲಿಯ ದರ ಗಂಟೆಗೆ 3 ಡಾಲರು, ನಾಲ್ಕು ಜನ ಕೆಲಸಗಾರರು ಒಂದು ವಾರದಲ್ಲಿ ಈ ಕೆಲಸವನ್ನು ಮುಗಿಸುತ್ತಾರೆ.

ಸಸಿಗಳು ದೊಡ್ಡದಾಗುತ್ತಿದ್ದಂತೆ ಪರಿಷ್ಕರಿಸಿದ ಹುಲ್ಲಿನ ತುಂಡುಗಳನ್ನು ಮಣ್ಣಿಗೆ ಸೇರಿಸಿ ಯಂತ್ರದಿಂದ ಅದನ್ನು ಹರಡುತ್ತಾರೆ. ಗಿಡಗಳಿಗೆ ನೀರುಕೊಡುವುದು ಮತ್ತು ಗೊಬ್ಬರ ಕೊಡುವ ಕೆಲಸಗಳನ್ನು ಯಂತ್ರಗಳು ಮಾಡುತ್ತವೆ. ಇಡೀ ಗಾಜಿನ ಮನೆಯ ಉದ್ದಕ್ಕೆ ಮತ್ತು ಅಗಲಕ್ಕೆ ಎತ್ತರದಲ್ಲಿ ಹರಡಿರುವ, ಸಪುರ ಕೊಳವೆ ಅಗತ್ಯವಿರುವಾಗ ಸಸಿಗಳಿಗೆ ನೀರು ಚಿಮುಕಿಸುತ್ತದೆ. ಗೊಬ್ಬರ ಕೊಡುವ ಸಮಯದಲ್ಲೂ ಇದೇ ನೀರಿನೊಡನೆ ನಿರ್ದಿಷ್ಟ ಪ್ರಮಾಣದ ಗೊಬ್ಬರವನ್ನು ಕರಗಿಸಿ ಚಿಮುಕಿಸಲಾಗುತ್ತದೆ. ಪ್ರತಿಯೊಂದು ಸಾಲಿಗೂ ಹರಿಯುವ ನೀರಿನ ಪ್ರಮಾಣ ಒಂದೇ ತೆರನಾಗಿರುವುದರಿಂದ ಎಲ್ಲಾ ಸಸಿಗಳೂ ಒಂದೇ ಲೆಕ್ಕದಲ್ಲಿ ಗೊಬ್ಬರ ಮತ್ತು ನೀರು ಸಿಕ್ಕಿ ಅವು ಒಂದೇ ಕ್ರಮದಲ್ಲಿ ಬೆಳೆಯಲು ಅನುಕೂಲವಾಗುತ್ತದೆ. ಇಡೀ ನಾಲ್ಕು ಎಕ್ರೆ ಭಾಗದಲ್ಲಿರುವ ಲಕ್ಷಾಂತರ ಸಸಿಗಳು ಎತ್ತರ ಮತ್ತು ಬೆಳವಣಿಗೆಯಲ್ಲಿ ಒಂದೇ ತೆರನಾಗಿದ್ದು ನಿಜವಾಗಿ ನನಗೆ ವಿಚಿತ್ರವೆನಿಸಿತು.

ಗಾಜಿನ ಮನೆಯಲ್ಲಿ ಬೆಳೆಸುವುದರಿಂದ ಚಳಿಗಾಲದಲ್ಲೂ ವಿಪರೀತ ತಂಡಿಯಿಂದ ಮತ್ತು ಹಿಮ ಬೀಳುವಿಕೆಯಿಂದ ಬೆಳೆ ನಾಶವಾಗದಂತೆ ನೋಡಲು ಅನುಕೂಲವಾಗುತ್ತದೆ ಉಷ್ಣಾಂಶ ಬಹಳ ಕಡಿಮೆಯಾದಾಗ ಇಡೀ ಗಾಜಿನ ಮನೆಯನ್ನು ವಿದ್ಯುತ್‌ನಿಂದ ಬಿಸಿಮಾಡುವ ತಾಂತ್ರಿಕ ವಿಧಾನವನ್ನು ಅಳವಡಿಸಿ ಕೊಂಡಿರುವುದರಿಂದ ಬೆಳೆಯ ಸಫಲತೆಯ ಬಗ್ಗೆ ಏನೂ ಯೋಚನೆಯಿಲ್ಲ.

ಸಸ್ಯ ಸಂರಕ್ಷಣೆ ಟೋಮೆಟೋ ಬೆಳೆಯಲ್ಲಿ ಅತೀ ಅಗತ್ಯ. ಮಣ್ಣನ್ನು ಮೊದಲೇ ಪರಿಷ್ಕರಿಸುವುದರಿಂದ ಮಣ್ಣಿನಿಂದ ಉತ್ಪಾದನೆಯಾಗುವ ರೋಗಗಳು ಬಹಳ ಕಡಿಮೆ. ವಾತಾವರಣದಿಂದ ಉತ್ಪತ್ತಿಯಾಗುವ ರೋಗಗಳನ್ನು ಮತ್ತು ಕೀಟಗಳನ್ನು ನಿಯಂತ್ರಿಸಲು ಪ್ರತಿ ಸಾಲಿನಲ್ಲಿಯೂ ಹೋಗಿ ಮದ್ದು ಚಿಮುಕಿಸುವ ಯಂತ್ರಗಳನ್ನು ಅಳವಡಿಸಿ ಕೊಂಡಿರುತ್ತಾರೆ. ಇಡೀ ನಾಲ್ಕು ಎಕ್ರೆ ಟೋಮೆಟೋ ಬೆಳೆಯನ್ನು ಕೇವಲ ನಾಲ್ಕು ಗಂಟೆಗಳಲ್ಲಿ ಮುಗಿಸುತ್ತಾರೆ. ಈ ಕೆಲಸಗಳನ್ನೆಲ್ಲಾ ಮಾಲಿಕರೇ ಮಾಡುವುದು.

ಸಸಿಗಳು ಹೂ ಬಿಟ್ಟ ನಂತರ, ಪ್ರತಿ ಹೂವಿಗೂ ಪರಾಗ ಸ್ಪರ್ಶವಾಗಿ ಕಾಯಿ ಹೆಚ್ಚಲು ಹೂವನ್ನು ಅಲುಗಿಸುವ ಒಂದು ಕಾರ್ಯಕ್ರಮ ನಿಜವಾಗಿಯೂ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಇದಕ್ಕಾಗಿ ವಿದ್ಯುತ್ ಚಾಲಿತ ಕಡ್ಡಿಯೊಂದನ್ನು ಉಪಯೋಗಿಸುತ್ತಾರೆ. ಈ ಕಡ್ಡಿ ವಿದ್ಯುತ್ ಸಂಪರ್ಕವಾದೊಡನೆ ಬಹುವೇಗದಲ್ಲಿ ನಡುಗಲು ಪ್ರಾರಂಭಿಸುತ್ತದೆ. (Vibration) ಆಗ ಕಡ್ಡಿಯನ್ನು ಪ್ರತಿ ಗೊಂಚಲಿಗೂ ತಾಗಿಸುವುದರಿಂದ ಹೂಗಳು ತ್ವರಿತ ಗತಿಯಿಂದ ಅಲುಗಿಸಲ್ಪಟ್ಟು ಪರಾಗಸ್ಪರ್ಶ ಖಚಿತವಾಗಿ ತನ್ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಕಾಯಿಗಳಾಗುತ್ತವೆ. ಈ ಕೆಲಸವನ್ನು ಒಬ್ಬ 8 ಗಂಟೆಗಳಲ್ಲಿ ಮುಗಿಸ ಬಲ್ಲ. (ನಾಲ್ಕು ಎಕರೆಗಳಲ್ಲಿ).

ಗಿಡಗಳು ದೊಡ್ಡದಾದಂತೆ ದಾರಗಳನ್ನು ಎಳೆದು ಕಟ್ಟಿ, ಅವು ಬಾಗದಂತೆ ನೋಡಿ ಕೊಳ್ಳಲಾಗುತ್ತದೆ ಕಾಯಿ ಗಿಡದಲ್ಲಿ ಹಣ್ಣಾದಾಗ ಅದನ್ನು ಕೊಯ್ದು ಚಿಕ್ಕ ಯಂತ್ರಗಳ ಮೂಲಕ ಸಾಗಿಸಲಾಗುತ್ತದೆ. ಗಾಜಿನ ಮನೆಯ ಟೋಮೆಟೋ ಕೃಷಿಯಲ್ಲಿ ಹಣ್ಣು ಕೊಯ್ಯಲು ಯಂತ್ರಗಳನ್ನು ಬಳಸುವುದಿಲ್ಲ.

ಈ ನಾಲ್ಕು ಎಕ್ರೆ ಟೋಮೆಟೋ ಕೇಂದ್ರಕ್ಕೆ ಒಟ್ಟು ತಗಲಿದ ವೆಚ್ಚ 5,00,000 (ಐದು ಲಕ್ಷ) ಡಾಲರುಗಳು ಇದು ಮುಖ್ಯವಾಗಿ ಯಂತ್ರಗಳಿಗೆ, ಕಟ್ಟಡಗಳಿಗೆ ಮತ್ತು ಗಾಜಿನ ಮನೆ ರಚಿಸಲು ಸಾಧಾರಣ 20—25 ಸಾವಿರ ಡಾಲರು ಖರ್ಚಾಗುತ್ತದೆ. ಎರಡು ಬೆಳೆಗಳಿಂದ ಉತ್ಪಾದನೆ ನಾಲ್ಕು ಎಕ್ರೆಗಳಿಂದ ಸುಮಾರು 45,00

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. C. 366/71

ಶೇಷಮ್ಮ —ಅರ್ಜಿದಾರಳು

ಮತ್ತು

ಪುತ್ತು ರಿಬೆಲ್ಲೊ ಕೂಡಾ —ಎದ್ರಿರು

1ನೇ ಪ್ರತಿವಾದಿ —ಪುತ್ತು ರಿಬೆಲ್ಲೊ, S/o ಮೇನ್ಯುಎಲ್ ರಿಬೆಲ್ಲೊ,

2ನೇ ಪ್ರತಿವಾದಿ —ಪಿಯಾದೆ ರಿಬೆಲ್ಲೊ W/o ಮೇನ್ಯುಎಲ್ ರಿಬೆಲ್ಲೊ, ಓಡಿಲ್ನಾಳ ಗ್ರಾಮ, ಬೆಳ್ತಂಗಡಿ ತಾಲೂಕು P. O. ಗೇರುಕಟ್ಟೆ-

—ಇವರಿಗೆ

ಈ ಮೇಲಿನ ಗೇಣಿ ಅರ್ಜಿಯು ನಿಮ್ಮಿಬ್ಬರ ಹಾಜರಾತಿಯ ಬಗ್ಗೆ ತಾ. 16—10—71ನೇ ಶನಿವಾರಕ್ಕೆ ವ್ಯಾದೆ ಇಟ್ಟಿರುತ್ತದೆ. ಈ ದಿನ ಬೆಳಿಗ್ಗೆ 11 ಗಂಟೆಗೆ ಈ ಮೇಲಿನ ಕೋರ್ಟಿನಲ್ಲಿ ನೀವಿಬ್ಬರೂ ಹಾಜರಾಗಿ ಉದಾಹರಿಸಿಕೊಳ್ಳ ತಕ್ಕದ್ದು. ತಪ್ಪಿದಲ್ಲಿ ಈ ಗೇಣಿ ಅರ್ಜಿಯನ್ನು, ನಿಮ್ಮನ್ನು ಶಿಪ್ಪಾ ಮಾಡಿ ಮುಂದುವರಿಸಲಾಗುವುದು ಎಂದು-ಕೋರ್ಟು ಹುಕ್ಕುಂ ಪ್ರಕಾರ ನಿಮಗಿಬ್ಬರಿಗೂ ತಿಳಿಸೋಣವಾಗಿರುತ್ತದೆ.

ಕುಕ್ಕಜೆ ರಾಮಕೃಷ್ಣ ಭಟ್
ಎಡ್ವಕೇಟ್, ಬೆಳ್ತಂಗಡಿ, ದ. ಕ.

ಬೆಳ್ತಂಗಡಿ, 21—9—71

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. C. 479/71

ನೇಮು ಪೂಜಾರಿ —ಅರ್ಜಿದಾರ

ಮತ್ತು

ಮಂಜಪ್ಪ ಪೂಜಾರಿ —ಎದ್ರಿ

ಮೇಲಿನ ಅರ್ಜಿಯ ಎದ್ರಿ ವೇಣೂರಿನ ಬಜಿರೆ ಗ್ರಾಮದ ಬ್ಯಲಬರಿ ಎಂಬಲ್ಲಿರುವ ಶ್ರೀ ಕೊರಗ ಪೂಜಾರಿಯವರ ಅಳಿಯ ಶ್ರೀ ಮಂಜಪ್ಪ ಪೂಜಾರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ:-

ಅರ್ಜಿದಾರನು 69—70ನೇ ವರ್ಷದ ಗೇಣಿ ವಸೂಲಿ ಬಗ್ಗೆ ನಿಮ್ಮ ಮೇಲೆ ಸಲ್ಲಿಸಿರುವ ಅರ್ಜಿ ನಿಮ್ಮ ಹಾಜರಾತಿ ಬಗ್ಗೆ ತಾರೀಕು 5—10—71 ಕ್ಕೆ ವ್ಯಾದೆಯಾಗಿರುತ್ತದೆ. ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ನೀವು ಆ ದಿವಸ ಬೆಳಿಗ್ಗೆ 11ಗಂಟೆಗೆ ಸ್ವತಹ ಯಾ ವಕೀಲ ದ್ವಾರ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಪ್ಪಾ ಮಾಡಿ ಅರ್ಜಿಯನ್ನು ತೀರ್ಮಾನಿಸಲಾದೀತು. ತಿಳಿದಿರಲಿ.

ಬಿ. ಕೆ. ಸೂರ್ಯನಾರಾಯಣ ರಾವ್
Advocate for Applicant

ಬೆಳ್ತಂಗಡಿ, 6—9—71

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 208/1971

ಕೆ. ನಾರಾಯಣಯ್ಯ —ವಾದಿ

ಮತ್ತು

ಅಣಯ್ಯ ಪೂಜಾರಿ —ಪ್ರತಿವಾದಿ

ಯವರೊಳಗೆ

ಉಡುಪಿ ತಾಲ್ಲೂಕು ಪುತ್ತೂರು ಗ್ರಾಮದ ಕಲ್ಯಾಣಪುರದಲ್ಲಿರುವ ಅಪ್ಪಯ್ಯ ಪೂಜಾರಿ ಅಳಿಯ ಅಣಯ್ಯ ಪೂಜಾರಿಗೆ

ವಾದಿಯು—ಪ್ರತಿವಾದಿಯಿಂದ ತಾರೀಕು 15—5—1968ನೆ ರುಪ್ಯಾ 2000/—ಕ್ಕೆ ಬರೆಕೊಟ್ಟ ಡಿಮಾಂಡ್ ನೋಟು ಪ್ರಕಾರ ಬರತಕ್ಕ ಅಸ್ಸಲು ಬಡ್ಡಿ ಕೂಡ ಸೇರಿ ರೂಪ್ಯಾ 2332—70ಕ್ಕೆ ಮಾಡಿದ ಮೇಲಿನ ದಾವೆಯು ತಾ. 29.10.71 ಕ್ಕೆ ಯಿಟ್ಟಿದೆ. ಏನಾದರೂ ತಕರಾರು ಯಿದ್ರೆ ಪ್ರತಿವಾದಿ ಸ್ವತಹಾ ವ—ವಕೀಲರ ಮುಖಾಂತರ ಹಾಜ್ರಾಗಿ ಕೋರ್ಟಿನಲ್ಲಿ ಹೇಳತಕ್ಕದ್ದು. ಇಲ್ಲವಾದ್ರೆ ಏಕ ಪಕ್ಷವಾಗಿ ತೀರ್ಮಾನಿಸಲಾಗುವದು.

(By order of Court)

B. YOGISHWARA HOLLA
Advocate for Plaintiff

Udipi, 22—9—71

HOTEL SATKAR
Boarding, Lodging & Restaurant
Behind Corporation Office,
9 Mission Road — Bangalore—27.
Phone No.— 1 72303 2 72504 Grams: HOST SATKAR
Vegetarian Cuisine
Attached Bath Rooms and Phones.
Running H and C water.
Moderate Charges
Railway Station, Laundry, Post office and Entertainment Area Nearby.
Large airy Rooms; Roof garden
Quiet, Calm Atmosphere
Personalised Service.

ಕಿಲಿಂಗುಗಳು, 30–41 ಲಕ್ಷ ರೂಪಾಯಿಗಳು ಅಲ್ಲಿಗೆ ನಿವ್ವಳ ಲಾಭ. ನಾಲ್ಕು ಎಕ್ರೆಗೆ ಸುಮಾರು 20,000ರಿಂದ 25,000 ಲಿಂಗುಗಳು ಇದು ನಂಬಲು ಸಹ ಕಷ್ಟ, ಆದರೆ ಇದು ಅವರು ನನಗೆ ಕೊಟ್ಟ ಮಾಹಿತಿ ನಂಬಲೇ ಬೇಕು.

ಈ ಕೃಷಿ ಕೇಂದ್ರದಲ್ಲಿ ನಾನು ಕಂಡ ಇನ್ನೊಂದು ವೈಶಿಷ್ಟ್ಯವೆಂದರೆ ಒಂದು ಎಲೆಕ್ಟ್ರಾನಿಕ್ ಕಾಲ್‌ಬೆಲ್. ಇದನ್ನು ಮಕ್ಕಳಿಬ್ಬರಲ್ಲಿ ಒಬ್ಬನು ನಿರ್ಮಿಸಿದ್ದಾನೆ. ತಂದೆ ಮತ್ತು ಮಕ್ಕಳಿಬ್ಬರೂ ಫಾರ್ಮಿನಿಂದ ದೂರವಿರುವುದರಿಂದ ಕೃಷಿ ಕೇಂದ್ರಕ್ಕೂ ಮತ್ತು ಮೂವರ ಮನೆಗಳಿಗೂ ಸಂಪರ್ಕವನ್ನೇರ್ಪಡಿಸಲಾಗಿದೆ. ಗಾಜಿನ ಮನೆಯಲ್ಲಿ ವಾತಾವರಣದ ಶಾಖದಲ್ಲಿ ಅಥವಾ

ಕುಂದಾಪುರ ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 9/1971

ವಾದಿ—ಸಣ್ಣಯ್ಯ ಭಟ್ಟ
ಪ್ರತಿವಾದಿ—ಪದ್ಮನಾಭಯ್ಯ

ಉಡ್ಪಿ ತಾಲ್ಲು ಹೆರಾಡಿ ಗ್ರಾಮದಲ್ಲಿರುವ ಮಸಿಗೆ ಬೈಲು ಶಂಕರನಾರಾಯಣಯ್ಯನವರ ಮಗ, ಹಾಲಿ ಮಂತ್ರಾಲಯದಲ್ಲಿ ರಾಘವೇಂದ್ರ ಸ್ವಾಮಿ ಮಠದಲ್ಲಿರುವ ಪದ್ಮನಾಭಯ್ಯನವರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ,

ಪ್ರತಿವಾದಿಯು ವಾದಿಗೆ ತಾ. 17—1—68 ರಲ್ಲು ರೂಪ್ಯಾ 1500–00ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಬಾಬ್ತು ಹಣ ಬಡ್ಡಿ ಬರಮಾಡಿ ಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾಖ್ಲು ಮಾಡಿದ ಮೇಲಿನ ದಾವೆಯು ತಾರೀಕು 15—10—1971ಕ್ಕೆ ತನ್ಸಿಗೆ ಇರುತ್ತದೆ, ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಮೇಲಿನ ಕೋರ್ಟು ಮುಂದೆ ಹಗಲು 11ಗಂಟೆಗೆ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಯ ಪಡ್ಸಿಯದೆ.

N. S Parameshwaraiah,
Advocate for Plff.
Date 29—8—1971, Coondapur.

In the Court of II Addl. Munsif of Puttur

I. A. No. I
in O. S. No. 420/70

Between:
Venkata Krishna Kalluraya—Petitioner
Vs.
Aithappa Gowda and others—Respondents

Notice to 3rd Respondent
Ishwarappayya, son of Subraya, residing at Madnoor village, Puttur taluk.

Please take notice that the above final decree application filed by the petitioner against you also posted for your appearance and to file any objections, if you have, on 4—10—1971. Therefore you are hereby informed that if you fail to appear on that date at 11 in the morning before the above Court, the matter will be proceeded further treating you as exparte

Sd/- K. T. Bhat,
Advocate for petitioner.
Puttur, S. K. 3—9—1971

ಇನ್ನಾವುದೇ ರೀತಿಯ ಅನಿರೀಕ್ಷಿತ ಬದಲಾವಣೆಗಳಾದರೆ, ಈ ಕರೆಗಂಟೆ ಮೂವರ ಮನೆಗೂ ಸಂದೇಶ ಕಳುಹಿಸುತ್ತದೆ. ರಾತ್ರಿಯಲ್ಲೂ ಸಹಾ ಅವರು ಬಂದು, ತಕ್ಕ ಕಾರ್ಯ ಕ್ರಮ ಕೈ ಗೊಂಡು ಆಗುವ ಹಾನಿಯನ್ನು ತಪ್ಪಿಸಲು ಇದು ಸಹಾಯಕವಾಗುತ್ತದೆ, ಇದು ನಿಜವಾಗಿಯೂ ಯಾಂತ್ರಿಕತೆಯ ಪರಮಾವಧಿಯೆಂದು ನನಗನ್ನಿಸಿತು.

ಇಡೀ ಕೃಷಿ ಕೇಂದ್ರವಲ್ಲಿರುವ ಅನೇಕ ಯಂತ್ರಗಳು ಹಾಗೂ, ವಿದ್ಯುತ್ ಸಲಕರಣೆಗಳ, ರಿಪೇರಿಯ ಕೆಲಸವನ್ನು ಅವರೇ ಮಾಡುತ್ತಾರೆ. ಅದಕ್ಕೆ ಬೇರೆ ತಂತ್ರಜ್ಞರನ್ನು ಕರೆಸುವುದಿಲ್ಲ. ಅದು ವಿಪರೀತ ವೆಚ್ಚದ ಕೆಲಸ. ಈ ನಾಲ್ಕು ಎಕ್ರೆ ಫಾರ್ಮಿನಲ್ಲಿ ಬಹುತೇಕ ಕೆಲಸಗಳನ್ನು ಈ ಮೂವರೇ ಮಾಡುತ್ತಾರೆ. ಶೇಕಡಾ 5ರಷ್ಟು ಕೆಲಸಗಳಿಗೆ ಕೂಲಿಯಾಳುಗಳನ್ನು ಹೊಂದುತ್ತಾರೆ. ಮೂರು ಜನರಿಗೂ ಮೂರು ಸ್ವಂತ ಮನೆಗಳಿವೆ, ಕಾರುಗಳಿವೆ. ಎಲ್ಲಾ ಆಧುನಿಕ ಸಲಕರಣೆಗಳನ್ನು ಹೊಂದಿರುತ್ತಾರೆ.

ಸಂದರ್ಶನ ಮುಗಿಸಿ ಬರುವಾಗ, ಇಷ್ಟೆಲ್ಲಾ ಯಂತ್ರಮಯವಾಗಿರುವ ಈ ಕೃಷಿ ಕೇಂದ್ರದಲ್ಲಿ ಟೋಮೆಟೋ ಗಿಡಗಳು ಮಾತ್ರ ಸಜೀವ ವಸ್ತುಗಳೆಂದು ಅನಿಸಿದವು. ಅವುಗಳ ಬದಲಿಗೆ ಟೊಮೆಟೋ ಬೆಳೆಸುವ ಯಂತ್ರವೊಂದಿದ್ದರೆ, ಅದೆಷ್ಟು ಚೆನ್ನಾಗಿರುತಿತ್ತು ಎಂದೆನಿಸದಿರಲಿಲ್ಲ.

ನಿಜವಾಗಿಯೂ ಇದೊಂದು ಕೃಷಿ ಕ್ಷೇತ್ರದಲ್ಲಿ ಕಾರ್ಖಾನೆ ಎನ್ನುವ ಭಾವನೆ ನನ್ನಲ್ಲಿ ಮೂಡಿತು.

●●

ನವಯುಗದ ಹೊಸ ಚಂದಾ ದರ

ಪತ್ರಿಕೆಗೆ ಬಳಸುವ ಕಾಗದದ ಬೆಲೆ ಏರಿಕೆ, ಮುದ್ರಣಾದಿಗಳ ವೆಚ್ಚದ ಹೆಚ್ಚಳದಿಂದಾಗಿ ನವಯುಗದ ವಾರ್ಷಿಕ ಚಂದಾ ದರವನ್ನು ರೂ. 10ರಿಂದ ರೂ. 12ಕ್ಕೆ ಅನಿವಾರ್ಯವಾಗಿ ಏರಿಸಬೇಕಾಗಿ ಬಂದಿದೆ. ಈ ಹೊಸ ಚಂದಾ ದರವು ಹೊಸ ಸಂಪುಟದಿಂದ ಅಂದರೆ ಇದೇ ಸಪ್ಟಂಬರದಿಂದ ಅನ್ವಯವಾಗುತ್ತದೆ ಚಂದಾದಾರರು ದಯಮಾಡಿ ಗಮನಿಸ ಬೇಕಾಗಿ ವಿನಂತಿ.

ಮೆನೇಜರ್

(ಮೂರನೇ ಪುಟದಿಂದ)

ದೂ ಆ ಮೂಲಗಳು ವಿವರಣೆ ನೀಡಿವೆ. ಜಗತ್ತಿನ ಇತರ ಯಾವ ದೇಶದ ನಾಯಕರ ಬಗೆಗೂ ಇಲ್ಲದ ಕಾತರ ಕೆಂಪು ಚೀನಾದ ನಾಯಕರ ಬಗೆಗೇಕೆ ಎಂಬುದು ಸೋಜಿಗ. ಮಾವೋರವರ ಅಸ್ವಾಸ್ಥ್ಯ—ನಿಧನಗಳ ಸುದ್ದಿ ಇದಕ್ಕೆ ಮೊದಲೂ ಹರಡಿದ್ದುಂಟು. ಒಂದೊಮ್ಮೆ ಈ ಸುದ್ದಿಯನ್ನು ಅಲ್ಲಗಳೆಯಲೆಂದು ಮಾವೋ ಯಾಂಗ್‌ಟ್ಸೆ ನದಿಯಲ್ಲಿ ಈಜಾಡಿದ ಚಿತ್ರವನ್ನು ಪೀಕಿಂಗ್ ಪ್ರಕಟಿಸಿತು; ಇದು ಕೃತಕ ಚಿತ್ರವೆಂದು ಜಗತ್ತು ಸಂದೇಹಪಟ್ಟ ಬಳಿಕ, ವಿದೇಶೀ ನಿಯೋಗವೊಂದಕ್ಕೆ ಮಾವೋ ಭೆಟ್ಟಿ ನೀಡಿ ಕುತೂಹಲವನ್ನು ತಣಿಸಿದ್ದರು. ಈ ಬಾರಿಯೂ ಸುದ್ದಿಯ ಅಲೆಗಳು ದೇಶ–ವಿದೇಶಗಳಲ್ಲಿ ಸಾಕಷ್ಟು ಜನಜನಿತವಾದ ಬಳಿಕ ಮಾವೋ ಜೀವಂತರಿದ್ದಾರೆ, ಸುದೃಢರಿದ್ದಾರೆಂದು ಕೆಂಪು ಚೀನಾ ಹೇಗೆ ಸಮರ್ಥಿಸ ಬಹುದು? ಪರ್ವತಾರೋಹಣ ಮಾಡುವ ಅಥವಾ ದೋಣಿ ನಡೆಸುವ ಮಾವೋ ಚಿತ್ರವನ್ನದು ಪ್ರಕಟಿಸ ಬಹುದೆ? ಅಥವಾ ನಿಕ್ಸನ್ನರ ಪೀಕಿಂಗ್ ಭೇಟಿಗೆ ಮೊದಲೇ ಮಾವೋ ವಾಶಿಂಗ್‌ಟನ್‌ಗೆ ಭೆಟ್ಟಿ ನೀಡಿ ಊಹಾಪೋಹೆಗಳಿಗೊಂದು ಪೂರ್ಣವಿರಾಮ ಹಾಕುವರೆ? ಮಾವೋ ಬಗ್ಗೆ ಜಗತ್ತಿನಲ್ಲಿ ಈ ಬಗೆಯ ಕಾತರತೆಗೆ ಕಾರಣವೇನು? ಹಾಗೆಯೇ ಕೆಂಪು ಚೀನೀಯ ನಾಯಕರ ಅಜ್ಞಾತವಾಸದ ಉದ್ದೇಶವೇನು? ತಮ್ಮ ಬಗ್ಗೆ ಬುದ್ಧಿವಂತ ಜಗತ್ತು ತೋರಿಸುತ್ತಿರುವ ಮಿತಿಮೀರಿದ ಆಸಕ್ತಿಯು ಅವರಿಗೆ ಪುಕ್ಕಟೆ ಮನರಂಜನೆಯೊದಗಿಸಿ ಕೊಡುತ್ತದೆಯೆ? "ಹುಲಿ ಬಂತೋ ಹುಲಿ" ಕಥೆಯ ನೆನಪಾಗುತ್ತದೆ! ಮಾವೋ ನಂತರ ಕೆಂಪು ಚೀನಾದ ಗತಿ ಬದಲಾಗುತ್ತದೆಂದು ಜಗತ್ತು ನಂಬಿ ಅವರ ನಿಧನದ ಬಗ್ಗೆ ಆತುರವಾಗಿದೆಯೆ? ಹಾಗೆಂದದು ನಂಬಿದ್ದರೆ, ನಿಜಕ್ಕೂ ಸುಳ್ಳೆನಿಸುತ್ತದೆ. ಅತ್ಯಧಿಕ ಆಸಕ್ತಿಯೆಂಬುದು ನಗೆಪಾಟಲಿಗೆ ಕಾರಣವಾಗುತ್ತದೆಂದು ಹಲವು ಬಾರಿ ಕೆಂಪು ಚೀನೀ ನಾಯಕರು ತೋರಿಸಿಕೊಟ್ಟಿದ್ದಾರೆ– ಮಾವೋ ಉತ್ತರಾಧಿಕಾರಿಯ ಆಯ್ಕೆಯು ಸುಗಮವಾಗಲೆಂದು ಈ ನಾಟಕ ನಡೆಯುತ್ತಿದೆಯೆ? ●

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

"ಯುಗಪುರುಷದ" ರಜತೋತ್ಸವ ಸಿದ್ಧತೆ

ಕಿನ್ನಿಗೋಳಿಯ ಯುಗಪುರುಷ ಮಾಸಿಕದ ರಜತೋತ್ಸವವು ಇದೇ ತಾ. 30 ರಿಂದ ನಾಲ್ಕು ದಿನಗಳವರೆಗೆ ಜರಗಲಿದೆ. ಈ ಬಗ್ಗೆ ಕಾರ್ಯನಿರ್ವಾಹಕ ಸಮಿತಿಯು ನಿರ್ಮಿಸಲ್ಪಟ್ಟು ಸಕಲ ಸಿದ್ಧತೆಗಳು ನಡೆಯುತ್ತಿವೆ. ಸಮಾರಂಭಕ್ಕಾಗಿ ನಿರ್ಮಿಸಲ್ಪಡುವ ದಿ। ಕವಿ ಪೇಜಾವರ ಸದಾಶಿವ ರಾಯರ ಸವಿನೆನಪಿನ "ಸದಾಶಿವ ಮಂಟಪ"ದ ಶಂಕುಸ್ಥಾಪನೆಯು ತಾ. 21ರಲ್ಲಿ ನೆರವೇರಿತು.

ಉಡುಪಿ ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 171/1971

ಗೋಪಾಲ ಪೈ —ವಾದಿ.
ಮತ್ತು
ಸೀತಮ್ಮ ಹೆಗ್ಗಡ್ತಿ ಕೂಡಾ –ಪ್ರತಿವಾದಿರು

ಪ್ರತಿವಾದಿರು:–
(2) ರಾಮಣ್ಣ ಹೆಗ್ಡೆ
(3) ದೊಡ್ಡಮ್ಮ ಹೆಗ್ಗಡ್ತಿ
(4) ಸಣ್ಣಮ್ಮ ಹೆಗ್ಗಡ್ತಿ
(6) ಜಯ ಹೆಗ್ಗಡ್ತಿ—
} 1ನೇ ಪ್ರತಿವಾದಿ ಸೀತಮ್ಮ ಹೆಗ್ಗಡ್ತಿಯ ಮಕ್ಕಳು ಕಾರ್ಕಳ ತಾಲೂಕು ಮುದ್ರಾಡಿ ಗ್ರಾಮದಲ್ಲಿರುವವರು.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:–

ನಿಮ್ಮ ಕುಟುಂಬಾರ್ಥದ ಆಸ್ತಿಯಲ್ಲಿ 1/13ನೇ ಅಂಶದ ಹಕ್ಕನ್ನು ಕೋರ್ಟು ಯೇಲಂನಲ್ಲಿ ಪಡೆದ ವಾದಿಯು ಹಿಸೆ ವಗ್ಯೆರೆ ನಿವೃತ್ತಿಗಳು ಕೇಳಿ ಮಾಡಿದ ಮೇಲ್ಕಂಡ ದಾವೆಯು ತಾರೀಕು 4–10–1971ಕ್ಕೆ ಯಿಟ್ಟಿದೆ. ಉದಾಪರಿಸುವಂಥಾದ್ದು ಯಿದ್ದರೆ ಆ ದಿವ್ಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳ ಬಹುದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Balachandra Rao
Advocate for Plaintiff
Udipi, 23–9–1971

ಕುಂದಾಪುರ ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 147/1971

ವಾದಿ–ವೀರಣ್ಣ ಸೆಟ್ಟಿ
ಪ್ರತಿವಾದಿ–ಪದ್ಮನಾಭ ಆಚಾರಿ.

ಉಡ್ಪಿ ತಾಲೂಕು ಕೋಟ್ತಟ್ಟು ಗ್ರಾಮದ ಪಂದಟ್ಟು ವೆಂಕಟ್ರಮಣ ಆಚಾರಿ ಮಗ ಕುಂದಾಪುರ ಕಸ್ಬೆಯಲ್ಲಿ ವಾಸ್ತವಿಸಿ ಬಂದಿದ್ದ ಪದ್ಮನಾಭ ಆಚಾರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ,

ಪ್ರತಿವಾದಿಯು ವಾದಿಗೆ ತಾ. 12–4–65 ರಲ್ಲು ರೂಪ್ಯಾ 1000—00ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಬಾಬ್ತು ಬಾಕಿಯಿರುವ ಹಣ ಬಡ್ಡಿ ಕೂಡಾ ರೂ. 1006–56ನ್ನು ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾಖ್ಲು ಮಾಡಿದ ಮೇಲಿನ ದಾವೆಯು ತಾ. 15–10–1971ಕ್ಕೆ ತನ್ಸಿಗೆ ಇರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಹಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿಯದೆ.

N. S. Parameshwaraiah
Advocate for Plff.
Date 27—8—1971. Coondapoor

READ &
ADVERTISE IN
NAVAYUGA WEEKLY

'ಗಾಂಧಿಜಿಯ ಕೊಲೆ'

(ಎರಡನೇ ಪುಟದಿಂದ)

ಸರದಾರರು ಮುಂಬಯಿಗೆ ಹೋಗಿದ್ದರು ಅವರು ಅಂದು ಬಿರ್ಲಾ ಭವನಕ್ಕೆ ಬಂದುದು ಗಾಂಧಿಜಿಯಲ್ಲಿ ಕ್ಷಮೆ ಕೇಳಿಕೊಳ್ಳಲು ಆ ಭೆಟ್ಟಿಯಿಂದ ಉಭಯತರಿಗೂ ತೃಪ್ತಿ, ಸಮಾಧಾನ. ಕಾಲ ಸವೆದುದು ಇಬ್ಬರಿಗೂ ತಿಳಿಯಲಿಲ್ಲ ಪ್ರಾರ್ಥನಾ ಸಭೆಯ ಕಾಲ ಮಿಂಚಿತೆಂಬುದು ಇಬ್ಬರಿಗೂ ಹೊಳೆಯಲಿಲ್ಲ ಸಂಜೆ 5 ಗಂಟೆ ಆಗಲೇ ಆಗಿತ್ತು ಗಾಂಧಿಜಿಯ ದೃಷ್ಟಿ ಗುರುಬಚನ ಸಿಂಗರತ್ತ ಹರಿಯಿತು ಅವರು ಗಡಿಯಾರದತ್ತ ಕಣ್ಣು ಹಾಯಿಸಿದರು ಸಮಯವಾಯಿತೆಂಬುದು ಗಾಂಧಿಜಿಗೆ ತಿಳಿಯಿತು ಪಟೇಲರಿಗೂ ಅದು ಅರ್ಥವಾಯಿತು ತಂದೆ-ಮಗಳು ಗಾಂಧಿಜಿಯ ಅಪ್ಪಣೆ ಪಡೆದು ಅಲ್ಲಿಂದೆದ್ದರು

ಸಂದರ್ಶಕರನ್ನು ಕಳುಹಿಸಿ ಕೊಟ್ಟ ಮೇಲೆ ಗಾಂಧಿಜಿ ಸ್ವಲ್ಪ ಸಮಯ ವಿಶ್ರಮಿಸಿ ಕೊಳ್ಳುತ್ತಿದ್ದರು. ಅಂದು ವಿಶ್ರಾಂತಿಗೆ ಅನುಕೂಲವಿರಲಿಲ್ಲ ಆಗಲೇ ಹೊತ್ತು ಮೀರಿತ್ತು ಅವರು ಪ್ರಾರ್ಥನಾ ಸಭೆಗೆ ಹೊರಡಲು ಚಡಪಡಿಸಿದರು ಒಬ್ಬನಿಗಾಗಿ ಹಲವರು ಕಾಯುವುದೆಂದರೆ—?

ಜನವರಿ 20ರ ಘಟನೆಯ ನಂತರ ಪ್ರಾರ್ಥನಾ ಸಭೆಗೆ ಬರುವವರ ಸಂಖ್ಯೆ ಹೆಚ್ಚಿತ್ತು. ಬಿರ್ಲಾ ಭವನದ ಹಸಿರು ಹಾಸಿನ ಮೇಲೆ ಜನ ಅವರ ಸಂದರ್ಶನಕ್ಕೆಂದು ಕಾದು ಕುಳಿತಿರುತ್ತಿದ್ದರು

ಗಾಂಧಿಜಿ ಕೋಣೆಯಿಂದ ಹೊರ ಬಂದರು. ಸಭೆ ಸೇರಿದ ಸ್ಥಳಕ್ಕೆ ಹೆಜ್ಜೆ ಹಾಕಲಾರಂಭಿಸಿದರು. ಗಾಂಧಿಜಿಯ ಮೊಮ್ಮಕ್ಕಳು- ಆವಾ ಮತ್ತು ಮನು—ಅವರ ಎರಡು ಪಾರ್ಶ್ವದಲ್ಲಿ ನಡೆದು ಬರುತ್ತಿದ್ದರು. ಅವರ ಭುಜಗಳ ಮೇಲೆ ಆಸರೆಗಾಗಿ ಗಾಂಧಿಜಿ ತಮ್ಮ ಕೈಗಳನ್ನು ಇರಿಸಿದ್ದರು 'ಇಂದು ಸಭೆಗೆ ತಡ ಮಾಡಿ ಹೊರಟರು' ಎಂದು ಗುರುಬಚನ ಸಿಂಗರು ಗಾಂಧಿಜಿಯೊಡನೆಂದರು ಗಾಂಧಿಜಿ ನಗುನಗುತ್ತ 'ತಡ ಮಾಡಿದವರಿಗೆ ತಕ್ಕ ಶಾಸ್ತಿಯಾಗುತ್ತದೆ' ಎಂದು ನುಡಿದರು

ರಘುನಾಥ ಬಿರ್ಲಾ ಭವನದ ಒಬ್ಬ ಮಾಲಿ ಆತ ಅಲ್ಲಿಗೆ ಬಂದು ಹದಿನಾಲ್ಕು ವರ್ಷ ಸಂದಿತ್ತು ಸಂಜೆ 5ರ ಸುಮಾರಿಗೆ ಗಾಂಧಿಜಿ ಸಭೆಗೆ ನಡೆದು ಹೋಗುವ ದೃಶ್ಯವನ್ನು ಆತ ಕಾದು ನೋಡುತ್ತಿದ್ದ ಅಂದು ಆತನಿಗೆ ಬೆಳೆಸಿದ ಗಿಡಗಳಿಗೆ ನೀರೂಡಿಸುವ ಕೆಲಸವಿರಲಿಲ್ಲ. ಆತ ಹೂ ಗಿಡಗಳ ಪಾತಿಗಳನ್ನು ಅಂದು ಸಜ್ಜುಗೊಳಿಸುತ್ತಿದ್ದ ಆತನ ಕೈಯಲ್ಲೊಂದು ಕುರ್ಪಿ. ಗಾಂಧಿಜಿ ಸಭೆಗೆ ನಡೆದು ಹೋಗುತ್ತಿದ್ದುದನ್ನು ಆತ ನೋಡಿದ ಅಭ್ಯಾಸ ಬಲದಿಂದೆನ್ನುವಂತೆ ಎದ್ದು ನಿಂತು ಬಾಗಿ ಕೈ ಮುಗಿದ ಸಭೆಗೆ ಅಂದು ಗಾಂಧಿಜಿ ತಡವಾಗಿ ಹೊರಟಿರುವುದು ಅವನಿಗೆ ತಿಳಿಯಿತು ಎಂದಿನಂತೆ ಅಂದು ಗಾಂಧಿಜಿಯ ಮುಂದು ಜನ ಇರಲಿಲ್ಲ. ಅವರಿಗೆ ದಾರಿ ಮಾಡಿ ಕೊಡಲು ಯಾರೂ ಬಂದಿರಲಿಲ್ಲ ಕುಳಿತ ಜನ ಗಾಂಧಿಜಿಗೆ ಎಡ ಮಾಡಿ ಕೊಟ್ಟರು ಸಭೆ ಸ್ತಬ್ಧವಾಗಿತ್ತು ಗಾಂಧಿಜಿ ವೇದಿಕೆಯ ಮೆಟ್ಟಿಲುಗಳನ್ನು ಹತ್ತಲಾರಂಭಿಸಿದರು ಒಂದು, ಎರಡು, ಮೂರು. ಎಲ್ಲರಿಗೂ ಕಾಣಿಸುವಂತೆ ವೇದಿಕೆಯ ಮೇಲೆ ನಿಂತು ಕೈಜೋಡಿಸಿದರು.

ಪಾಶ್ಚಿಮಾತ್ಯ ಉಡುಪು ಧರಿಸಿದ ಆಗಂತುಕ ಸಭೆಯ ಮಧ್ಯದಿಂದ ಎದ್ದು, ಸೀಳು ದಾರಿಯಲ್ಲಿ ವೇದಿಕೆಯ ಹತ್ತಿರಕ್ಕೆ ನಡೆದು ಬಂದ. ತಗ್ಗಿಸಿದ ತಲೆ. ಜೋಡಿಸಿದ ಕೈಗಳು, ಪಾದ ಮುಟ್ಟಿ ನಮಸ್ಕರಿಸುತಿದ್ದಾನೆ ಎಂದು ಕುಳಿತಿದ್ದವರು ಭಾವಿಸಿದರು. ಜೋಡಿಸಿದ್ದ ಕೈಗಳಲ್ಲಿ ಅಡಗಿಸಿಟ್ಟುಕೊಂಡ ಪಿಸ್ತೂಲಿಂದ ಆತ ಗಾಂಧಿಜಿಯತ್ತ ಗುರಿಯಿಟ್ಟು ಗುಂಡು ಹಾರಿಸಿದ ಒಂದು—ಎರಡು—ಮೂರು, ಮೂರು ಬಾರಿ ಗುಂಡು ಹಾರಿಸಿದ ಗಾಂಧಿಜಿಯ ಎದೆ, ಹೊಟ್ಟೆ, ಪಕ್ಕೆಗಳಲ್ಲಿ ಅವು ನಟ್ಟವು.

ಹತ್ತಿರದಲ್ಲಿ ನಿಂತಿದ್ದ ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಅಮರನಾಥ ವೇದಿಕೆಯತ್ತ ಧಾವಿಸಿದರು. ಅವರು ಗೋಡ್ಸೆಯನ್ನು ಹಿಡಿದುಕೊಂಡರು ಬಳಿಕ ಆತ ತನ್ನ ಕೆಲಸ ಪೂರೈಸಿದ್ದ 'ಹಾ ರಾಮ!' ಎಂದು ಮಹಾತ್ಮಜಿ ಕುಸಿದು ಬಿದ್ದರು ಮುಗಿದಿದ್ದ ಕೈಗಳು ಹಾಗೆಯೇ ಇದ್ದುವು ಅದನ್ನೆಲ್ಲ ನೋಡುತಿದ್ದ ರಘುನಾಥ, ಗೋಡ್ಸೆಯ ತಲೆಗೆ ತನ್ನ ಕುರ್ಪಿಯಿಂದ ಒಂದೇಟು ಬಾರಿಸಿದ ನಂದಾಲಾಲ್, ಗುರುಬಚನ ಸಿಂಗ್, ಅಮರನಾಥ, ರಘುನಾಥ ಗೋಡ್ಸೆಯ ಮೇಲೆ ಮುಗಿಬಿದ್ದರು ಪೊಲಿಸ್ ಠಾಣೆಗೆ ಅವನನ್ನು ಅಲ್ಲಿಂದ ಒಯ್ಯಲಾಯಿತು

ಬಿದ್ದ ಸ್ಥಳದಿಂದ ಗಾಂಧಿಜಿಯನ್ನು ಎತ್ತಿ ಕೋಣೆಗೊಯ್ದರು. ಅಷ್ಟರಲ್ಲಿ ಎಲ್ಲ ಮುಗಿದಿತ್ತು. ಗಾಂಧಿಜಿ ಇರಲಿಲ್ಲ

ಅಮೆರಿಕೆಯ ದೂತವಾಸಕ್ಕೆ ಸಂಬಂಧಿಸಿದ ಅಧಿಕಾರಿಯೊಬ್ಬರು ಅಂದಿನ ಸಭೆಯಲ್ಲಿ ಹಾಜರಿದ್ದರು ಅವರು ಗೋಡ್ಸೆಯ ಕೈಯನ್ನು ಮಿಸುಕಾಡದಂತೆ ಹಿಡಿದುಕೊಂಡರು ಅವರ ಪ್ರಸಂಗಾವಧಾನತೆಯಿಂದ ಗೋಡ್ಸೆ ಸಿಕ್ಕಿಬಿದ್ದ ಇಲ್ಲದಿದ್ದರೆ ಗೋಡ್ಸೆ ಗುಂಪಿನಲ್ಲಿ ಮಾಯವಾಗುತಿದ್ದ— ಆತನ ಕೈಯಲ್ಲಿ ಪಿಸ್ತೂಲಿತ್ತು ಅದರಲ್ಲಿ ಖರ್ಚಾಗದೆ ಉಳಿದ ನಾಲ್ಕು ಗುಂಡುಗಳಿದ್ದುವು- ಆತ ತನ್ನ ಹೆಸರು ಹೇಳಲು ನಿರಾಕರಿಸಿದ.

ಆಪ್ಟೆ—ಗೋಡ್ಸೆ ಜನವರಿ 29ರಂದು ಗ್ವಾಲಿಯರಿನಿಂದ ದೆಹಲಿಗೆ ಬಂದರು. ಅವರ ಕೈಯಲ್ಲಿ ಡಾಕ್ಟರ್ ಪರಚುರೆಯವರ ಮನೆಯಲ್ಲಿ ದಂಡಾವಧೆಯ ಮೂಲಕ ದೊರಕಿಸಿಕೊಂಡ ಪಿಸ್ತೂಲಿತ್ತು ಹಾಗೆ ಬಂದವರು ರೈಲು ನಿಲ್ದಾಣದ ಆರನೇ ನಂಬರಿನ ಕೋಣೆಯಲ್ಲಿ ಇಳಿದುಕೊಂಡರು

ಬೆಳಕು ಹರಿಯಿತು ಅವರ ಸಂಕಲ್ಪ ಸಿದ್ಧಿಯ ದಿನ ಉದಯಿಸಿತು ಮನಸ್ಸಿನಲ್ಲಿ ಮೂಡಿನಿಂತ ಉದ್ವೇಗ, ಉತ್ಸಾಹವನ್ನು ಅವರಿಂದ ಅದುಮಿಟ್ಟುಕೊಳ್ಳಲಾಗಲಿಲ್ಲ

ಸಭೆಯಲ್ಲಿ ಒಬ್ಬರ ಹತ್ತಿರ ಇನ್ನೊಬ್ಬರು ಕುಳಿತಿರಬೇಕೆಂದು ಅವರೊಳಗೇ ತೀರ್ಮಾನಿಸಿಕೊಂಡರು ಒಬ್ಬರು ಗುರಿ ಸಾಧನೆಯಲ್ಲಿ ವಿಫಲನಾದರೆ, ಇನ್ನೊಬ್ಬ ಅದನ್ನು ಮುಗಿಸಿ ಬಿಡಲು ಸಿದ್ಧವಿರಬೇಕು. ಅವರು ಈ ನಿಶ್ಚಯಕ್ಕೆ ಬಂದರು ಅನಂತರ ತಂದಿದ್ದ ರಿವಾಲ್ವರನ್ನು ಇನ್ನೊಮ್ಮೆ ಪರೀಕ್ಷಿಸಿದರು ಸರಿಯಾಗಿ ಕೆಲಸ ಮಾಡುತ್ತಿದೆ. ಎಂದು ತೃಪ್ತಿ ಗೊಂಡರು.

ಆಪ್ಟೆ, ಈ ಕೃತ್ಯದಿಂದ ಅವನು ದೂರವಿರಬೇಕೆಂದು ಅವರು ಮಾತನಾಡಿ ಕೊಂಡರು ಆಪ್ಟೆಗೆ ಬದುಕಿ ಉಳಿಯುವ ಆಸೆ ಆತನಿಗೋ ಕೈ ಹಿಡಿದ ಹೆಂಡತಿ ಇದ್ದಳು; ಇಬ್ಬರು ಮಕ್ಕಳಿದ್ದರು. ಜೊತೆಗೆ ಗಂಟು ಹಾಕಿ ಕೊಂಡ ಪ್ರೇಯಸಿ ಇದ್ದಳು

ಅಷ್ಟರಲ್ಲಿ ಜನ್ನು ಅವರಿಳಿದುಕೊಂಡ ಕೋಣೆಗೆ ಬಂದ ರೈಲ್ವೇ ಪ್ರಯಾಣಿಕರ ಸೇವೆ ಮಾಡಿ ಆತ ಹೊಟ್ಟೆ ಹೊರೆದುಕೊಳ್ಳುತ್ತಿದ್ದ. ನಿಲ್ದಾಣದ ಅಧಿಕಾರಿಗಳೆಲ್ಲ ಅವನ ಪರಿಚಯದವರು. ಈ ಹಿರಿಯನಲ್ಲಿ ಆ ಅಧಿಕಾರಿಗಳಿಗೆ ಎಲ್ಲಿಲ್ಲದ ಸಲುಗೆ ಆತ ಬೂಟ್ಸು ಪಾಲಿಷ್ ಮಾಡುತ್ತಿದ್ದ ಕೋಣೆಯಲ್ಲಿ ಉಳಿದುಕೊಂಡವರ ಬಟ್ಟೆ-ಬರೆ ಒಗೆಯಿಸಿ ಕೊಡುತಿದ್ದ, ಅನಂತರ ಬಹುಮಾನಕ್ಕಾಗಿ ಕೈ ಚಾಚುತಿದ್ದ

29ರ ಮಧ್ಯಾಹ್ನ ರೈಲಿನಿಂದಿಳಿದು, ನಿಲ್ದಾಣದ 'ರಿಟೈಯರಿಂಗ್ ರೂಂ' ಸೇರಿದ ಗೋಡ್ಸೆ—ಆಪ್ಟೆಯವರನ್ನು ಆತ ನೋಡಿದ. ಕೋಣೆಯೊಳಕ್ಕೆ ಬಂದು ಸಲಾಮಿಯ ಮುಜುರೆ ಸಲ್ಲಿಸಿದ ಅವನ ಪಾಲಿಕ್ಕೆ ಅವರು ಕೆಲವು ಕೊಳೆಯಾದ ಬಟ್ಟೆಗಳನ್ನು ಕೊಟ್ಟರು 'ನಾಳೆಯೇ ಸಿಗಬೇಕು' ಎಂದು ತಿಳಿಸಲು ಮರೆಯಲಿಲ್ಲ.

ಹಿಂದಿನ ದಿನ ಕೊಟ್ಟ ಬಟ್ಟೆಯ ಗಂಟೆ

ಕುಟುಂಬ ಯೋಜನೆಯಿಂದ ಸಂಸಾರದ ಖರ್ಚು ಕಡಿಮೆ

NAVAYUGA 30-9-1971

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ನೊಡನೆ ಆತ ಕೋಟೆಗೆ ಬಂದ ಜನ್ನುವಿಗೆ ಗೋಡ್ಸೆ ಧರಿಸಿದ್ದ ಬೂಟ್ಸು ಚೆನ್ನಾಗಿರುವಂತೆ ಕಾಣಿಸಲಿಲ್ಲ. ಅವುಗಳನ್ನು ತಿಕ್ಕಿ-ಉಜ್ಜಿ ಹೊಳೆಯುವ ಹಾಗೆ ಮಾಡುವ ಎಂದೆನ್ನಿಸಿತು. ಸಂಜೆ ಬಿರ್ಲಾ ಭವನಕ್ಕೆ ಗೋಡ್ಸೆ ಹೋಗಬೇಕಾಗಿತ್ತೆಂಬುದು ಆ ಮುದುಕನಿಗೆ ತಿಳಿದಿತ್ತು. ಅದೂ ಮಹತ್ವದ ಕೆಲಸಕ್ಕೆ—ಬೂಟ್ಸು ಚೆನ್ನಾಗಿರದಿದ್ದರೆ ಹೇಗೆ—? ಅಂದು ಸಂಜೆ ಚರಿತ್ರೆಯನ್ನು ನಿರ್ಮಿಸಿದ ಗೋಡ್ಸೆಯ ಬೂಟ್ಸುಗಳನ್ನು ಆ ವೃದ್ಧ ಶುಚಿಗೊಳಿಸಿದ.

ಅಂದು ಮಧ್ಯಾಹ್ನ ಆರನೇ ನಂಬರಿನ ಕೋಣೆಯನ್ನು ಅವರು ಬಿಡಲೇ ಬೇಕಾಗಿತ್ತು. ಇಪ್ಪತ್ತನಾಲ್ಕು ತಾಸುಗಳಿಗಿಂತ ಹೆಚ್ಚಿಗೆ ಅಲ್ಲಿ ನಿಲ್ಲಲು ಅವಕಾಶವಿರಲಿಲ್ಲ. ಅವರು ಸಂಬಂಧಪಟ್ಟ ಅಧಿಕಾರಿಯನ್ನು ಕಂಡು 'ಇನ್ನೊಂದು ದಿನ ಉಳಿಯಲು ಬಿಡಿ' ಎಂದು ಪ್ರಾರ್ಥಿಸಿದರು. ಆ ಅಧಿಕಾರಿ ಶ್ರೀ ಹರಿಕಿಶನ್ ನಿಯಮೋಲ್ಲಂಘನೆ ಸಾಧ್ಯವಿಲ್ಲ ಎಂದು ಖಡಾಖಂಡಿತವಾಗಿ ಉತ್ತರ ಕೊಟ್ಟ.

ಅವರು ಕೋಣೆಯಿಂದ ಹೊರ ಬಿದ್ದರು. ಮೊದಲ ತರಗತಿಯ ಪ್ರಯಾಣಿಕರು ತಂಗುವ ಕೋಣೆಗೆ ಬಂದರು. ವಿಷ್ಣು ಕರಕರೆ ಅವರನ್ನು ಕೂಡಿ ಕೊಂಡ. ಅವರಿಗೆ ಕೈ ತುಂಬ ಕೆಲಸ, ತಲೆ ತುಂಬ ಯೋಚನೆ. ಅವರು ನಿಲ್ದಾಣದಿಂದ ಹೊರ ಬಂದರು.

ಗೋಡ್ಸೆ ತನ್ನ ಫೋಟೋ ತೆಗೆಸಿಕೊಂಡ. ಅನಂತರ ಆಪ್ಟೆಗೊಂದು ಕಾಗದ ಬರೆಯಲು ನಿರ್ಧರಿಸಿದ. ಕಾಗದದ ಜೊತೆಗೆ, ಆಗ ತಾನೇ ತೆಗೆಸಿದ ಫೋಟೋವನ್ನು ಲಗತ್ತಿಸಿ; ಅಂದೇ ಅಂಚೆಯ ಪೆಟ್ಟಿಗೆಯಲ್ಲಿ ಹಾಕಿದ. ತಾನು ದೆಹಲಿಯಿಂದ ಬರೆದ ಕಾಗದ—ಆಪ್ಟೆಯ ದಸ್ತಗಿರಿಗೂ ಮೊದಲು ಅವನ ಕೈಸೇರಿದರೆ—30ರಂದು ಆಪ್ಟೆ ದೆಹಲಿಯಲ್ಲಿದ್ದಿಲ್ಲವೆಂದು ಸಾಧಿಸಲು ಸಹಾಯಕ ಆಗಬಹುದೆಂದು ಆತ ಯೋಚಿಸಿದ. ಅದಕ್ಕಿಂತಲೂ ಹೆಚ್ಚಿನ ಕೆಲಸವನ್ನು ಆಪ್ಟೆ ಈ ದಿಶೆಯಲ್ಲಿ ಮಾಡಿದ್ದ. ಒಪ್ಪಿಕೊಂಡಂತೆ ಅವನ ಪ್ರೇಯಸಿ ಮನೋರಮೆ 31ರಂದು ಮುಂಬಯಿಯಿಂದ ತಂತಿ ಕಳಿಸುತ್ತಾಳೆ. ಆ ತಂತಿಯೊಂದೇ ಅವನ ಪ್ರಾಣ ತಂತುವಿನ ರಕ್ಷಣೆಗೆ ಸಾಕಾಗಿತ್ತು.

ತನ್ನ ಹಂಚಿಕೆಯನ್ನು ಗೋಡ್ಸೆಯ ಮುಂದೆ ಆಪ್ಟೆ ಬಿಚ್ಚಿದ. ಅದನ್ನು ಕೇಳಿ ಗೋಡ್ಸೆ, ಆಪ್ಟೆಯನ್ನು ಶತ ಮೂರ್ಖನೆಂದು ಹೀಯಾಳಿಸಿದ. ತಂತಿಯ ಒಕ್ಕಣೆಯನ್ನು ಕೈಯಾರೆ ಬರೆದಿಟ್ಟು ಬಾರದಿದ್ದುದಕ್ಕೆ ಬೈದ. ಅವಳ ಬರವಣಿಗೆಯಲ್ಲಿರುವ ತಂತಿ ನಿನ್ನ ಕೊರಳನ್ನು ಕಾಯಬಲ್ಲುದೇ ಎಂದು ಪ್ರಶ್ನಿಸಿದ.

ಆಪ್ಟೆಗೆ ತನ್ನ ತಪ್ಪಿನ ಅರಿವಾಯಿತು ಆದರೆ ಆತ ಏನೂ ಮಾಡುವಂತಿರಲಿಲ್ಲ. ಹೊತ್ತು ನೆತ್ತಿಗೆ ಬಂದು ತಿರುಗಿತು. ಅವರಿಗೆ ಸಮಯ ಹೋಗುತ್ತಿರುವಂತೆ ಕಾಣಲಿಲ್ಲ. ತುಂಬ ನಿಧಾನವಾಗಿ ಚಲಿಸುತ್ತಿರುವಂತೆ ಕಾಣಿಸಿತು, ಗಡಿಯಾರದ ಮುಳ್ಳು. ಅವರ ಕಣ್ಣು ಗಡಿಯಾರದ ಮುಳ್ಳಿನ ಮೇಲೆ ನಟ್ಟಿತ್ತು. ಅಷ್ಟರಲ್ಲಿ ಸಂಜೆ 4-30 ಆಯಿತು. ಗಾಂಧಿಜಿಯ ಸಭೆಯ ಸಮಯ ಸಂಜೆ ಐದು. ಆ ಸಮಯಕ್ಕೆ ಸರಿಯಾಗಿ ಅವರು ಸಭೆಗೆ ಬರುತ್ತಾರೆ. ಅಷ್ಟರೊಳಗೆ ಅವರು ಬಿರ್ಲಾ ಭವನಕ್ಕೆ ತಲುಪಬೇಕು. ಅವರು ಅಲ್ಲಿಗೆ ಹೊರಟರು. ಬೇರೆ ಬೇರೆ ದಾರಿಯಿಂದ ಅಲ್ಲಿಗೆ ಬಂದರು. ಸಭೆಯಲ್ಲಿ ನೇರಿಕೊಂಡರು.

ಗುಂಪಿನಲ್ಲಿ ಸೇರಿಕೊಂಡ ಯಾರೂ ಅವರನ್ನು ಗಮನಿಸಲಿಲ್ಲ. ಪ್ರವೇಶಕ್ಕೆ ನಿರ್ಬಂಧ ಇರಲಿಲ್ಲ. ಅದು ಅವರಿಗೆ ತಿಳಿದಿತ್ತು. ಸಭೆಗೆ ಬರುವವರನ್ನು ಝಡತಿ ಮಾಡಿ ಒಳಕ್ಕೆ ಬಿಡ ಬೇಕೆಂದು ಸರಕಾರ ಜನವರಿ 20ರ ಘಟನೆಯ ನಂತರ ಸೂಚಿಸಿತ್ತು. ಗಾಂಧಿಜಿ ಅದಕ್ಕೆ ವಿರೋಧವಾಗಿದ್ದರು. ದೇಗುಲಕ್ಕೆ ಬರುವ ಭಕ್ತರನ್ನು ಶೋಧಿಸುವುದು ತೀರ ಅನ್ಯಾಯ. ಅದನ್ನು ಮಾಡಲು ನಾನು ಬಿಡಲಾರೆ ಎಂದು ಗಾಂಧಿಜಿ ನುಡಿದಿದ್ದರು. ಆದ್ದರಿಂದ ಅವರ ಪ್ರವೇಶಕ್ಕೆ ಯಾವ ಅಡ್ಡಿಯೂ ಬರುವಂತಿರಲಿಲ್ಲ.

ಕೆಲವರು ಗಾಂಧಿಜಿಯನ್ನು ಕೇಳಲು, ಬಂದಿದ್ದರು. ಹಲವರು ಈ ಪವಾಡ ಪುರುಷನ ದರ್ಶನ ಭಾಗ್ಯ ಪಡೆಯಲು ಬಂದಿದ್ದರು— ಬುದ್ಧನ ನಂತರ, ಅವನಿಗೆ ಸರಿದೊರೆಯಾಗಿ ನಿಲ್ಲಬಲ್ಲ ಸಮಕಾಲೀನ ಪುರುಷನ ದರ್ಶನ ಭಾಗ್ಯ ಯಾರಿಗೆ ಬೇಡ?

ಏನೋ ಗುಜು ಗುಜು, ಗದ್ದಲ. ಜನರ ದೃಷ್ಟಿ ಆ ಕಡೆಗೆ ತಿರುಗಿತು. ಗಾಂಧಿಜಿ ವೇದಿಕೆಯತ್ತ ನಡೆದು ಬರುತ್ತಿದ್ದರು. ಅದು ಅವರು ಈ ನೆಲದ ಮೇಲೆ ನಡೆದ ಕೊನೆಯ ನಡಿಗೆಯಾಯಿತು.

(ಆಧಾರಿತ)

ಅಭಿಪ್ರಾಯ

ಒಪ್ಪಂದಕ್ಕೆ ಒಪ್ಪಿದ ಇಂದಿರಾಜೀಯವರ ಇಂಗಿತ

ರಷ್ಯಾ-ಭಾರತ ಒಪ್ಪಂದದ ಹನ್ನೊಂದನೆಯ ನಿಬಂಧನೆಯಲ್ಲಿ ನಮೂದಿಸಲಾಗಿರುವಂತೆ ಬಳಕೆಗೆ ಬಂದಿರುತ್ತದೆ. ಅದಕ್ಕೊಪ್ಪಿರುವ ಇಂದಿರಾಜೀಯವರ ಇಂಗಿತವೇನು?

ಬಂಗಾಲದಲ್ಲಿ ಪಾಕಿಸ್ತಾನ ಹಾಕಿರುವ ಬೆಂಕಿ ಭಗಭಗನೆ ಉರಿಯುತ್ತಿದೆ. ಭಾರತದ ಸಂಸದಿನಲ್ಲಿ ಪೂರ್ವ ಬಂಗಾಲಕ್ಕೆ ಸಹಾಯಮಾಡುವದಾಗಿ ಘೋಷಿಸಿದ ಜವಾಬ್ದಾರಿ ವ್ಯಕ್ತಿಗಳು ಸಂಸದಿನಿಂದ ಹೊರಗೆ ಬಂದ ಮೇಲೆ ಬೇರೆ ಮಾತನ್ನು ಹೇಳಲಾರಂಭಿಸಿದರು. ಪೂರ್ವ ಪಾಕಿಸ್ತಾನವೆನ್ನಲಾಗುತ್ತಿರುವ ಪೂರ್ವ ಬಂಗಾಲವನ್ನು ಬಂಗ್ಲಾ ದೇಶವೆಂದು ಕರೆಯಬೇಕೆನ್ನುವ ಮಾತು ಕೇಳಿಬರುತ್ತಿದೆ. ಅದಕ್ಕಾಗಿ ಭಾರತೀಯ ಜನಸಂಘ ಸಂಸತಿನೆದುರು ದೀರ್ಘ ಸತ್ಯಾಗ್ರಹ ನಡೆಸಿತು. ಇತರ ಕೆಲವು ಪಕ್ಷಗಳು ಠರಾವನ್ನು ತಿಳಿಸಿವೆ ಇದ್ದರೂ ಇಂದಿರಾಜೀಯವರು ಅದಕ್ಕೆ ಸರಿಯಾದ ಸಮಯ ಬಂದಿಲ್ಲವೆನ್ನುತ್ತಿದ್ದಾರೆ. ಇದಕ್ಕೆ ಅವರೊಳಗಿನ ಅಭಿಪ್ರಾಯ ಭೇದವೇ ಕಾರಣ. ಪೂರ್ವ ಬಂಗಾಲವನ್ನು ಪ್ರತ್ಯೇಕ ಬಂಗ್ಲಾ ದೇಶವೆಂದು ನಾವು ಮಾನ್ಯ ಮಾಡಿದಲ್ಲಿ ಉಳಿದ ದೇಶಗಳೂ ಹಾಗೆ ಮಾಡುತ್ತವೆ. ಆಗ ಪಾಕಿಸ್ತಾನದ ಆಕ್ರಮಣವನ್ನು ತಡೆಯಲು ಎಲ್ಲರೂ ಮುಂದಾಗ ಬೇಕಾಗುತ್ತದೆ. ಸ್ವತಂತ್ರ ಬಂಗ್ಲಾ ದೇಶದ ಸ್ಥಾಪನೆಯಾದಾಗಲೇ ಅಲ್ಲಿಂದ ಓಡಿ ಬಂದಿರುವ ನಿರ್ವಾಸಿತರು ಹಿಂದಕ್ಕೆ ಹೋಗುವರು. ಇಲ್ಲದಿದ್ದಲ್ಲಿ ಹೋಗುವದಿಲ್ಲವೆಂಬುದು ಇತರರ ಅಭಿಪ್ರಾಯ. ಹಾಗೇನೂ ಇಲ್ಲ. ರಾಜಕೀಯ ಪರಿಹಾರೋಪಾಯವನ್ನು ಕಂಡು ಹಿಡಿದು ನಿರಾಶ್ರಿತರನ್ನು ಹಿಂದಕ್ಕೆ ಕಳುಹಿಸಲಾಗುತ್ತದೆಂದು ಹೇಳುವ ಇಂದಿರಾಜೀಯವರು ಘೋಷಣೆಗೆ ತಕ್ಕ ಕಾಲ ಬಂದಿಲ್ಲವೆನ್ನುತ್ತಿದ್ದಾರೆ

ಬಂಗಾಲ ಬೆಂಕಿಯ ಕೆನ್ನಾಲಗೆಯನ್ನೆದುರಿಸಲು, ಅಂದರೆ ಪಾಕಿಸ್ಥಾನ, ಚೈನಾ, ಅಮೆರಿಕಾದಿಗಳನ್ನೆದುರಿಸಲು, ಇಂದಿರಾಜೀಯವರು ರಷ್ಯಾದೊಂದಿಗೆ ಒಪ್ಪಂದಮಾಡಿಕೊಂಡಿರುವರು. ಇದರಲ್ಲಿ ಬಂಗ್ಲಾ ಬೆಂಕಿಯನ್ನು ನೊಂದಿಸಲು ಪರಿಹಾರೋಪಾಯವೇ ಇರುವದಿಲ್ಲ. ಹನ್ನೆರಡು ನಿಬಂಧನೆಗಳಲ್ಲಿ ಯಾವೊಂದು ನಿಬಂಧನೆಯೂ ಈ ಸಮಸ್ಯೆಗೆ ಸಂಬಂಧಪಟ್ಟದ್ದಿರುವದಿಲ್ಲ. ಇನ್ನು ಪಾಕಿಸ್ಥಾನವು ದೊಡ್ಡ ಪ್ರಮಾಣದಲ್ಲಿ ಸೈನಿಕ ಆಕ್ರಮಣ ನಡೆಸಿದಲ್ಲಿ ನಮ್ಮ ನಾಯಕರು ರಷ್ಯಾದ ಪ್ರಮುಖರನ್ನು ಕಂಡು ಮಾತುಕತೆಯಾಡಿ, ಆಕ್ರಮಣ ನಡೆದಿರುವದನ್ನು ಸ್ಪಷ್ಟಪಡಿಸಿ ಶಸ್ತ್ರಾಸ್ತ್ರ ನೆರವನ್ನು ಕೋರಬಹುದು. ಬೆಂಕಿ ತಾಗಿದ ಮೇಲೆ ಬಾವಿ ತೋಡುವ ವಿಧಾನ ಇದು.

ಇತರ ರಾಷ್ಟ್ರಗಳೊಂದಿಗೂ ಇಂತಹ ಒಪ್ಪಂದಗಳನ್ನು ಮಾಡಿಕೊಳ್ಳಲು ತಾವು ಸಿದ್ಧವೆಂದಿರುವ ಇಂದಿರಾಜೀ ಪ್ರಪಂಚ ಪ್ರದಕ್ಷಿಣೆಗೆ ಹೊರಡುವರು. ಆಗ ರಷ್ಯಾಕ್ಕೂ ಹೋಗದಿರಲಾರರು ಹಿಂದೆ, ಚುನಾವಣೆಯ ಪೂರ್ವ, ವಿಶ್ರಾಂತಿಗೆಂದು ಲೇಹಕ್ಕೆ ಹೋಗಿದ್ದ ಇಂದಿರಾಜೀ ರಹಸ್ಯವಾಗಿ ರಷ್ಯಾಕ್ಕೆ ಹೋಗಿ ಬಂದೊಡನೆ ಲೋಕ ಸಭೆಯನ್ನು ವಿಸರ್ಜಿಸಿ, ಹೊಸ ಚುನಾವಣೆಗೆ ಮುಂದಾದರು. ಪುನಃ ರಷ್ಯಾದಲ್ಲಿ ಅದೇನು ಅಂತಃರಂಗದ ಮಾತುಕತೆಗಳು ನಡೆಯಲಿವೆಯೋ ಏನೋ!

ಇಂದಿರಾಜೀಯವರ ಈ ಧೋರಣೆಯನ್ನು ಬೆಂಬಲಿಸುವವರಿದ್ದಾರೆಂಬುದನ್ನು ಪ್ರದರ್ಶಿಸಲು ಹಲವಾರು ಏರ್ಪಾಡುಗಳು ನಡೆಯುತ್ತಿವೆ. ಇಂತಹ ಪ್ರದರ್ಶನಗಳಲ್ಲೂ ಇತರ ಸ್ಥಳಗಳಲ್ಲೂ ಘೋಷಣೆಗೆ ಕ್ಲಪ್ತಕಾಲ ಬಂದಿಲ್ಲವೆಂದೇ ಅವರಾಡುತ್ತಿದ್ದಾರೆ. ಅದುವೇ ಪರಿಹಾರವಲ್ಲವೆಂದೂ ಅವರನ್ನದೆ ಇರುವದಿಲ್ಲ. ಇವು ಒಂದಕ್ಕೊಂದು ವಿರುದ್ಧವಲ್ಲವೇನು? ನಿಜವಾಗಿ ಅವರ ಮನಸ್ಸಿನ್ನೊಳಗಿರುವದಾದರೂ ಏನು? ಅದು ಅಷ್ಟು ಸ್ಪಷ್ಟವಿದೆ. ರಾಷ್ಟ್ರಾಧ್ಯಕ್ಷ ಗಿರಿಯವರು ಅದನ್ನು ಸಾಮಾನ್ಯನಿಗೂ ತಿಳಿಯುವ ರೀತಿಯಲ್ಲಿ ಹೇಳಿದ್ದಾರೆ. ಅವರು ಬೊಂಬಾಯಿಯ ಸಾಂಸ್ಕೃತಿಕ ಸಂಸ್ಥೆಯೊಂದರಲ್ಲಿ ಮಾತಾಡುತ್ತ, "ಬಂಗ್ಲಾ ದೇಶದ ಜನರಿಗೆ ನ್ಯಾಯ ಸಿಗಲೇ ಬೇಕು ... ಒಂದು ದಿನ ಒಂದು ಪಟ್ಟಣ ಕೂಡಾ ಗಣರಾಜ್ಯವೆಂದು ಕರೆದು ಕೊಂಡಲ್ಲಿ ನನಗೇನೂ ಆಶ್ಚರ್ಯವಿಲ್ಲವೆಂದಿದ್ದಾರೆ...."

ಪೂರ್ವ ಬಂಗಾಲವನ್ನು ಪ್ರತ್ಯೇಕ ದೇಶವೆನ್ನಲು ರಾಷ್ಟ್ರಾಧ್ಯಕ್ಷರೂ ಪ್ರಧಾನಿಗಳೂ ಸಿದ್ಧರಿಲ್ಲ. ಅಲ್ಲಿನ ಜನತೆಗೆ ನ್ಯಾಯವೆಂದರೆ, ಚುನಾವಣೆಯಲ್ಲಿ ಆರಿಸಿಕೊಂಡು ಬಂದಿರುವವರ ಸರಕಾರ ಸ್ಥಾಪನೆಯಾಗುವದು. ಇದುವೇ ರಾಜಕೀಯ ಪರಿಹಾರೋಪಾಯ. ಆಗ ನಿರ್ವಾಸಿತರು ಹಿಂದಕ್ಕೆ ಹೋಗುವರೆಂಬುದು ಇಂದಿರಾಜೀಯವರ ಅಭಿಪ್ರಾಯ. ಆದರೆ ನಿರ್ವಾಸಿತರ ಹೃದಯ ತಿಳಿದುಕೊಂಡಿರುವವರು ಅದು ಸಾಧ್ಯವೇ ಇಲ್ಲವೆನ್ನುತ್ತಿದ್ದಾರೆ.

ಅಮೆರಿಕದಲ್ಲಿ ಜನಾಭಿಪ್ರಾಯಕ್ಕೂ ಬಂಗ್ಲಾ ದೇಶದ ವಿಷಯದಲ್ಲಿ ನಡೆಯುತ್ತಿರುವ ಅಭಿಪ್ರಾಯ ಘರ್ಷಣೆಯ ಲಾಭ ಪಡೆದು ಕೊಳ್ಳಲು ಹಾಗೂ ಬಂಗಾಲದ ಕಮ್ಯೂನಿಸ್ಟರಿಗೆ ಬಹಳಷ್ಟು ಪ್ರಯೋಜನ ಆಗುವ ರೀತಿಯಲ್ಲಿ ರಷ್ಯಾ ಈ ರಾಜಕೀಯ ಪರಿಹಾರೋಪಾಯಕ್ಕೆ ಒಪ್ಪದೆ, ಅದೆಂತಾದರೂ ಪೂರ್ವ ಬಂಗಾಲ ತನ್ನ ಕಾಲ ಮೇಲೆ ತಾನು ನಿಲ್ಲುವಂತಾದಾಗ ಇಂದಿರಾಜೀಯವರೂ ಬಂಗ್ಲಾ ದೇಶವನ್ನು ಘೋಷಿಸದಿರುವದಿಲ್ಲ ಆ ಪರಿಸ್ಥಿತಿಯೂ ಕೈ ತಪ್ಪಿ ಹೋಗಕೂಡದೆಂದೇ ಅವರು ಕಾಲ ಕೈಗೂಡಿಲ್ಲವೆನ್ನುತ್ತ, ಕಾಲಕ್ಕೆ ತಕ್ಕ ಕೋಲ ಕಟ್ಟೋಣ, ಕುಣಿಯೋಣ ಬಾರಾ ಅನ್ನುತ್ತ ಶ್ರೀ ಸಾಮಾನ್ಯನನ್ನು ಮರುಳುಗೊಳಿಸುತ್ತಿದ್ದಾರೆ.

—ಶ್ರೀ ಶಿವಶಂಕರ.

ದೀಪಾವಳಿ
ವಿಶೇಷ
ಸಂಚಿಕೆ

ಜಾಹೀರಾತಿಗೆ
ಉತ್ತಮ
ಮಾಧ್ಯಮ

ನ ವ ಯು ಗ

ದೀಪಾವಳಿ ವಿಶೇಷ ಸಂಚಿಕೆಯು

ತಾ. 19-10-1971ರಂದು

ವಿಶೇಷ ಲೇಖನಗಳೊಂದಿಗೆ

ಆಕರ್ಷಣೀಯವಾಗಿ ಪ್ರಕಟವಾಗುವುದು.

ಚಿಕ್ಕ-ಚೊಕ್ಕ ಲೇಖನ, ಕವನಗಳಿಗೆ ಸ್ವಾಗತ.

Edited, Printed & Published by K. H.Shetty at the Navayuga Press, Udipi. S. India.

ಸ್ಥಾಪಕರು :
ದಿ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಸಂಪುಟ ೫೧
ಸಂಚಿಕೆ ೫

Vol. 51
No. 5

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, 7-10-1971

ಚಾರುಚಯನ

ದ್ರಾಮುಕ ಕಿವಿಯೊಳಗೆ ಇಂಡಿಕೇಟ್ ಕೀಡಿ

ಬಂಗ್ಲಾದೇಶ ಸಂಬಂಧದಲ್ಲಿ ಸೇರಿದ ಅಂತಾರಾಷ್ಟ್ರೀಯ ಸಮ್ಮೇಳನ ಪಾಕಿಸ್ತಾನದ ಅಧ್ಯಕ್ಷರ ಕೃತಿಯನ್ನು ಖಂಡಿಸುವಲ್ಲಿ ತೋರಿಸಿದ ಏಕಕಂಠತೆಯನ್ನು ಪ್ರಶ್ನೆಯ ಪರಿಹಾರವನ್ನು ಸೂಚಿಸುವಲ್ಲಿ ಪ್ರದರ್ಶಿಸಲಿಲ್ಲ. ಹೆಚ್ಚಿನವರು ಇದು ರಾಜ್ಯಕೀಯ ಪ್ರಶ್ನೆ; ಇದಕ್ಕೆ ರಾಜ್ಯಕೀಯ ಪರಿಹಾರವೇ ಅವಶ್ಯಕವೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದನ್ನು ಬಿಟ್ಟರೆ, ಈ ಸಮ್ಮೇಳನ ಏನನ್ನಾದರೂ ಮಾಡುವಲ್ಲಿ ಸಫಲವಾಗಲಿಲ್ಲ.

ಬಂಗ್ಲಾದೇಶದ ಸರಕಾರವನ್ನು ತಕ್ಷಣ ಮನ್ನಿಸಬೇಕು; ಮೊದಲ ಹೆಜ್ಜೆಯಾಗಿ ಭಾರತವೇ ಅದಕ್ಕೆ ಮಾನ್ಯತೆ ನೀಡಬೇಕೆಂದು ನೈಜೀರಿಯಾದ ನೇತೃತ್ವದ ಉಪಸಮಿತಿಯೊಂದು ಗೊತ್ತುವಳಿ ತಂದರೆ, ಅದು ವಿವಾದಾಸ್ಪದವಾಯ್ತು. ಭಾರತದ ಈ ಕೃತ್ಯದಿಂದ ಯಾಹ್ಯಾಖಾನರು ಯುದ್ಧ ಸಾರಬಹುದು; ಆಗ ಭಾರತದ್ದೇ ಮೇಲುಗೈಯಾಗುತ್ತದೆಂದು ಧೈರ್ಯ ತುಂಬಲಾಯ್ತು. ಆದರೆ, ಇಲ್ಲಿನ ಪ್ರಶ್ನೆ ಭಾರತವು ತಾನಾಗಿ ಯುದ್ಧವನ್ನು ಕರೆಯಬೇಕೆ? ಇದಕ್ಕೆ ತಯಾರಿದ್ದರೆ, ಅದು ನಿರಾಶ್ರಿತರ ವಸತಿಗಾಗಿ ಈ ಮೊದಲೇ ಬಂಗ್ಲಾ ದೇಶದಲ್ಲೇ ಅವಕಾಶ ಕಲ್ಪಿಸಿಕೊಳ್ಳಬಹುದಿತ್ತು.

"ಬಂಗ್ಲಾದೇಶದ ವಿದ್ಯಮಾನಗಳು ಪಾಕಿಸ್ತಾನದ ಆಂತರಿಕ ವಿಷಯ. ಅದರ ನಡುವೆ ತಲೆ ಹಾಕಿದರೆ, ಸಮರ ಶತಸ್ಸಿದ್ಧ. ಇದು ವಿಶ್ವಸಮರವಾಗುವುದೂ ಅಷ್ಟೇ ಸತ್ಯ. ಆದುದರಿಂದ ಭಾರತವು ಬಂಗ್ಲಾದೇಶಕ್ಕೆ ನೈತಿಕ ಬೆಂಬಲ ಮಾತ್ರ ಕೊಡುತ್ತ ಬಂದರೆ ಸಾಕು"– ಇದು ಮಾಜಿ ದಂಡನಾಯಕ ಕಾರ್ಯಪ್ಪನವರ ಅಭಿಮತ. ಬಂಗ್ಲಾದ ಬಂಡಾಯಕ್ಕೆ ಆರು ತಿಂಗಳು ತುಂಬಿ ಏಳು ಹಿಡಿಯಿತು. ಇದುವರೆಗೂ ಬಂಗ್ಲಾದೇಶೀಯರು ಸರ್ವಾಧಿಕಾರಿ ಯಾಹ್ಯಾಖಾನರ ದೈತ್ಯಶಕ್ತಿಯ ಮುಂದು ತಲೆಬಾಗಿಲ್ಲ. ಕೆಚ್ಚೆದೆಯಿಂದಲೇ ಅವರನ್ನು ಎದುರಿಸುತ್ತ ನಡೆದಿದ್ದಾರೆ ತಮ್ಮ ಸೈನಿಕ ಬಲದಿಂದ ಬಂಗ್ಲಾದೇಶೀಯರನ್ನು ಬಗ್ಗು ಬಡೆಯುವಲ್ಲಿ ಯಾಹ್ಯಾಖಾನರು ಸಂಪೂರ್ಣ ಅಯಶಸ್ವಿಯಾಗಿದ್ದಾರೆ.

ಬಂಗ್ಲಾ ದೇಶಕ್ಕೆ ಮನ್ನಣೆ ನೀಡುವ ವಿಚಾರಕ್ಕಿಂತಲೂ ಮುಖ್ಯವಾದ ಮತ್ತೊಂದು ವಿಷಯವಿದೆ. ಮಾನ್ಯತೆ ನೀಡಿ, ಶಸ್ತ್ರಾಸ್ತ್ರಗಳನ್ನು ಪೂರಯಿಸ್ಸದ ಮಾತ್ರಕ್ಕೆ ಬಂಗ್ಲಾ ಸಮಸ್ಯೆ ಇತ್ಯರ್ಥಗೊಳ್ಳುವುದು ಖಂಡಿತಕ್ಕೂ ಸಾಧ್ಯವಿಲ್ಲ. ಕೆಲವು ದೇಶಗಳು ಬಂಗ್ಲಾ ಪರ ನಿಂತರೆ, ಮತ್ತೆ ಕೆಲವು ಪಾಕ್ ಪರವಾಗಿ ನೇರಿಕೊಳ್ಳುವುದನ್ನು ಅಲ್ಲಗಳೆಯುವುದು ಸರ್ವಥಾ ಸಾಧ್ಯವಿಲ್ಲ. ಆಗ ಪ್ರಶ್ನೆಗೆ ಉತ್ತರ ಹೊರಡುವುದಕ್ಕೆ ಬದಲು ಶಸ್ತ್ರಾಸ್ತ್ರಗಳ ಜಣತ್ಕಾರವೇ ಬೃಹತ್ಪ್ರಮಾಣದಲ್ಲಿ ಕೇಳಿ ಬರುವುದು. ನ್ಯಾಯ–ಧರ್ಮ–ನೀತಿಗಳೆಲ್ಲ ತಿಪ್ಪೆಗುರುಳಿ ದೈತ್ಯಶಕ್ತಿಯ ತಾಂಡವಕ್ಕಾರಂಭವಾಗುವುದು.

ಬಂಗ್ಲಾ ದೇಶೀಯರ ಮೇಲೆ ಯಾಹ್ಯಾಖಾನರ ಅಮಾನುಷ ದಾಳಿ ಮುಂದುವರಿಯಲೇನು ಕಾರಣ? ಅವರಿಗೆ ವಿದೇಶಗಳು ಪೂರಯ್ಸುತ್ತಿರುವ ಶಸ್ತ್ರಾಸ್ತ್ರಗಳೇ. ಇವುಗಳಿಲ್ಲವಾದರೆ, ಯಾಹ್ಯಾ ಇಷ್ಟು ದಿನ ತಲೆಯೆತ್ತುತ್ತಿರಲಿಲ್ಲ. ಕೆಂಪು ಚೀನಾ ಮತ್ತು ಅಮೆರಿಕೆಗಳು ಅವರ ಪೂರಯ್ಕೆದಾರರಲ್ಲಿ ಅಪ್ರತಿಮರು. ಇವರಿಬ್ಬರೂ ತಮ್ಮ ಪೂರಯ್ಕೆಯನ್ನು ತಡೆಹಿಡಿದರೆ, ಯಾಹ್ಯಾ ನಿಶ್ಶಸ್ತ್ರರಾಗುತ್ತಾರೆ. ಆಗ, ಅವರವರ ಸೈತಿಕ ಬಲಗಳು ಮಾತ್ರ ಹೋರಾಡುತ್ತವೆ; ಬಂಗ್ಲಾ ದೇಶಕ್ಕೆ ನ್ಯಾಯ ತಾನಾಗಿಯೇ ದೊರೆಯುತ್ತದೆ. ಆದುದರಿಂದ ಬಂಗ್ಲಾದೇಶೀಯರ ಬಗ್ಗೆ ಅನುಕಂಪ ತೋರುವವರು ಮಾಡಬೇಕಾದ ಮೊತ್ತ ಮೊದಲ ಕಾರ್ಯವೆಂದರೆ, ಯಾಹ್ಯಾರ ಕೈಗಳಿಗೆ ವಿದೇಶೀ ಸೈನಿಕ ಶಕ್ತಿ ದೊರೆಯದಂತೆ ಮಾಡುವುದು ಮುಂದಿನದು ನಿರಾಶ್ರಿತರಿಗೆ ಪುನರ್ವಸತಿ ಇತ್ಯಾದಿ.

ನವದೆಹಲಿಯ ಅಂತಾರಾಷ್ಟ್ರೀಯ ಸಮ್ಮೇಳನದಲ್ಲೂ ಈ ಅಭಿಪ್ರಾಯ ಮೂಡಿದ್ದುಂಟು; ಆದರೆ, ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರು ಯಾರು? ರಾಜ್ಯಕೀಯದಲ್ಲಿ ಮಾನವತೆ-ನಿಸ್ವಾರ್ಥತೆಗಳಿಗೆ ಎಂದೋ ತಿಲಾಂಜಲಿ ಸಂದಿದೆ. ಮತ್ತೆ ಶಕ್ತಿವಂತರನ್ನು ತಡೆಯುವವರು ಯಾರು? ಎಲ್ಲರೂ ಒಂದಾದರೆ ಮಾತ್ರ ಸಾಧ್ಯ.

ಂ ಂ ಂ

ತಮಿಳು ನಾಡು ಇಂಡಿಕೇಟಿಗೆ ನಾಯಕ ಸುಬ್ರಹ್ಮಣ್ಯಂ ಕೃಷ್ಣಗಿರಿಯಲ್ಲಿ ಭಾರೀ ವಿಜಯ ಗಳಿಸಿದರು. ಅವರಿಗೆದುರಾದ ವಿರೋಧ ಅಗಣ್ಯ, ಕಿರಾಲಭೋಗಿ ಮರಕ್ಕೆ ಹುಲ್ಲು ಬಳ್ಳಿ. ಈ ಪ್ರಚಂಡತೆಗೆ ಆಳುವ ದ್ರಾಮುಕದ ಬೆಂಬಲವೇ ಕಾರಣ. ಏಕೆಂದರೆ, ಅಲ್ಲಿ ದ್ರಾಮುಕ ತನ್ನ ಅಭ್ಯರ್ಥಿಯನ್ನು ನಿಲ್ಲಿಸಿದ್ದಿಲ್ಲ; ಸಿಸುವಿಗೇ ಬೆಂಬಲ ನೀಡಿತ್ತು. ಸುಬ್ರಹ್ಮಣ್ಯಂ ಇಂಡಿಕೇಟಿಗರಾದರೂ ಆವರು ಏಳು ಪಕ್ಷಗಳ ಮೈತ್ರಿಕೂಟದ ಅಭ್ಯರ್ಥಿಯೆನಿಸಿದರು; ಅವರ ಪ್ರತಿಸ್ಪರ್ಧಿ ಏಕಾಕಿಯೊದರು. ಆದರೆ ಕೃಷ್ಣಗಿರಿ ಚುನಾವಣೆಗೆ ಮೊದಲೂ ಅನಂತರವೂ ದ್ರಾಮುಕ–ಇಂಡಿಕೇಟ್‌ಗಳ ನಡುವೆ ಸಾಕಷ್ಟು ಭಿನ್ನಾಭಿಪ್ರಾಯಗಳಿದ್ದುವು; ಮುಂದೆಯೂ ಇವು ಬೆಳೆಯುತ್ತವೆ.

ದ್ರಾಮುಕದ ಪ್ರತ್ಯೇಕತಾ ಭಾವ ಇತ್ತೀಚೆಗೆ ಮತ್ತಷ್ಟು ಬಲಿತಿದೆ. ಆದು ರಾಜ್ಯಸ್ವಾಯತ್ತತೆಯ ಬಗ್ಗೆ ತುಂಬ ತಲೆಕೆಡಿಸಿಕೊಳ್ಳುತ್ತಿದೆ. ಕಾವೇರಿ ನೀರು, ಪಾಸ ಪ್ರತಿಬಂಧ ಇತ್ಯಾದಿಗಳ ಬಗೆಗೂ ಕೇಂದ್ರ–ರಾಜ್ಯಗಳ ವಿಷಯದಲ್ಲಿ ವಿರಸ ತಲೆದೋರಿದೆ. ಇದು ಸರಕಾರಗಳಿಗೆ ಸಂಬಂಧಿಸಿದ್ದು ಎಂದು ಹೇಳಬಹುದಾದರೂ ವಾಸ್ತವಿಕವಾಗಿ ದ್ರಾಮುಕ ಇಂಡಿಕೇಟುಗಳಿಗೇ ಸೇರಿದ್ದು. ಕರುಣಾನಿಧಿಯವರು ರಾಜ್ಯಗಳ ಅಭಿವೃದ್ಧಿಗೆ ಸಂವಿಧಾನದಲ್ಲಿ ತಿದ್ದುಪಡಿ ಬಯಸುತ್ತಾರೆ. ಈಗಿರುವ ಸಂವಿಧಾನದಲ್ಲಿಯೇ ರಾಜ್ಯ ಉನ್ನತಿ ಹೊಂದಿರುವಾಗ ಮತ್ತೇಕೆ ತಿದ್ದುಪಡಿಯೆನ್ನುತ್ತಾರೆ ಸುಬ್ರಹ್ಮಣ್ಯಂ.

ವಿಧಾನ ಸಭೆಯಲ್ಲಿ ಇಂಡಿಕೇಟಿಗೆ ಯಾವ ಸ್ವರವೂ ಇಲ್ಲವಾದುದರಿಂದ, ಅದು ರಾಜ್ಯ ಮಟ್ಟದಲ್ಲಿ ತನ್ನ ಬೇರನ್ನು ಹರಡಿಸಬೇಕಾಗಿದೆ. ಏಪನ್ನಾವಷ್ಟೇಗೀಡಾದ ಸಿಂಡಿಕೇಟಿನಿಂದ ಭಾರೀ ಪ್ರಮಾಣದ ಪಕ್ಷಾಂತರವನ್ನು ಇಂಡಿಕೇಟು ನಿರೀಕ್ಷಿಸುತ್ತಿದೆ. ದ್ರಾಮುಕದಿಂದಲೂ ಅದು ಪಕ್ಷಾಂತರಕ್ಕೆ ಅವ್ಯಕ್ತ ಪ್ರೇರಣೆ ನೀಡುತ್ತದೆ. ಆದರೆ, ಈಯೆಲ್ಲವಕ್ಕೆ ಕೆಲವು ಕಾಲ ಕಾಯಬೇಕು. ಅದಕ್ಕೆಂದೇ ರಾಜ್ಯದ ಇಂಡಿಕೇಟು ದ್ರಾಮುಕ ನೇತೃತ್ವದ ಸಂಯುಕ್ತ ರಂಗದಲ್ಲಿ ಮುಂದುವರಿಯುವ ಗೊತ್ತುವಳಿ ಸ್ವೀಕರಿಸಿದೆ.

ಕೇರಳದಲ್ಲಿ ಸರಕಾರದಿಂದ ಹೊರಗುಳಿದು ಅಚ್ಯುತ ಮೆನನ್ನರ ಸಂಯುಕ್ತ ರಂಗದ ಸರಕಾರಕ್ಕೆ ಬೆಂಬಲ ನೀಡಿಯೇ ಇಂಡಿಕೇಟು ತೃಪ್ತವಾಗಲಿಲ್ಲ. ತನ್ನ ಮುಂದೆ ಮೆನನ್ನರನ್ನೂ ತಲೆ ತಗ್ಗಿಸುವಂತೆ ಮಾಡಿಯೇ ಸರಕಾರದಲ್ಲಿ ಸೇರಿಕೊಂಡಿತು. ಇನ್ನು ಕೆಲವು ದಿನಗಳಲ್ಲಿ ಮೆನನ್ನರ ನಾಯಕತ್ವವನ್ನೇ ಅದು ಪ್ರಶ್ನಿಸಿದರೂ ಆಶ್ಚರ್ಯವಲ್ಲ.

ತಮಿಳುನಾಡು ಇಂಡಿಕೇಟು ಸಪ್ತಪಕ್ಷೀಯ ಸಂಯುಕ್ತ ರಂಗದಲ್ಲಿ ಮುಂದುವರಿದರೂ ಅದು ರಂಗದ ನೀತಿಯನ್ನು ಬೆಂಬಲಿಸಬೇಕೆಂದಿಲ್ಲ. 'ಎರಡು ರಾಜ್ಯಕೀಯ ಪಕ್ಷಗಳ ನಡುವೆ ಅಭಿಪ್ರಾಯಭೇದಗಳಿರುವುದು ಸಹಜ. ಅದಕ್ಕೆಂದು ಒಕ್ಕೂಟ ಮುರಿಯ ಬೇಕಾಗಿಲ್ಲ' ಎಂಬ ಇಂಡಿಕೇಟು ಒಕ್ಕೂಟದಲ್ಲಿದ್ದುಕೊಂಡೇ ಒಕ್ಕೂಟವನ್ನು ವಿರೋಧಿಸಹೊರಟಂತಿದೆ. ದ್ರಾಮುಕದ ರಾಜ್ಯ ಸ್ವಾಯತ್ತ ನೀತಿಯಂತೆಯೇ ಇಂಡಿಕೇಟಿನ ಪಕ್ಷ ಸ್ವಾಯತ್ತ ನೀತಿಯಿದು.

"ನಮಗೆ ನಮ್ಮದೇ ಆದ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರಬೇಕಾಗಿದೆ. ಅವುಗಳ ಅನುಷ್ಠಾನದಲ್ಲಿ ಹೋರಾಟ ಅನಿವಾರ್ಯವಾದರೆ, ಆಗ ಅವಶ್ಯ ಹೋರಾಡುತ್ತೇನೆ."—ಇಂಡಿಕೇಟಿನ ಈ ನೀತಿಗೂ ದ್ರಾಮುಕದ ಪ್ರತ್ಯೇಕತಾ ನೀತಿಗೂ ತುಂಬ ಹೊಂದಾಣಿಕೆಯಿದೆಯೆನಿಸುತ್ತದೆ.

ದ್ರಾಮುಕವು ಇಂಡಿಕೇಟ್ ಮೈತ್ರಿಯಿಂದ ಬಹಳಷ್ಟನ್ನು ನಿರೀಕ್ಷಿಸಿತ್ತು. ಆದರೆ ಈಗೀಗ ಅದರ ಭ್ರಮನಿರಸನವಾಗುತ್ತಲಿದೆ. ಇಂಡಿಕೇಟಿನ ರಾಜ್ಯಘಟಕವು ದ್ರಾಮುಕದ ನೇತೃತ್ವವನ್ನು ಮುಂದೂಡಿ ತನ್ನ ಬಲವನ್ನು ಹೆಚ್ಚಿಸಿಕೊಳ್ಳಲು ಹವಣಿಸಿಕೊಂಡಂತಿದೆ. ಇದರಿಂದಲೇ ತನ್ನ ಲಾಭವೆಂದದು ಮನವರಿಕೆ ಮಾಡಿಕೊಂಡಿದೆ. ಪ್ರತ್ಯೇಕತಾ ಮನೋಭಾವನೆ" ತಮಿಳುನಾಡಿನಲ್ಲಿ ಬೇರುಬಿಟ್ಟಷ್ಟು ಪ್ರಾಯಃ ಮತ್ತಾವ ರಾಜ್ಯದಲ್ಲೂ ಹಬ್ಬಿಲ್ಲ. ಆದುದರಿಂದಲೇ ಒಕ್ಕೂಟದಲ್ಲಿದ್ದೇ ಒಕ್ಕೂಟದ ನೀತಿಯನ್ನು ತಿಪ್ಪೆಗೆಸೆದು ತನ್ನದೇ ನೀತಿಯನ್ನು ಅನುಸರಿಸುವ ಇಂಡಿಕೇಟ್ ನಿಲುವೇ. ಇದರಿಂದ ಇಂಡಿಕೇಟಿಗೆ ಲಾಭವಾಗಲಾರದೆನ್ನುವವರಿರಬಹುದು. ಆದರೆ, ದ್ರಾಮುಕಕ್ಕೆ ಮಾತ್ರ ಹಾನಿ ಖಂಡಿತ. ಕಿವಿಯಹೊಕ್ಕ ಕೀಡಿಯಂತೆ ಇಂಡಿಕೇಟು ಅದನ್ನು ಸತಾಯಿಸುತ್ತದೆ. ಮೂರು ವರ್ಷಕಾಲ ವಿರಸ ಬೆಳೆದು ಬಂದು ಮುಂದಿನ ಚುನಾವಣೆಯ ವೇಳೆ ದ್ರಾಮುಕವನ್ನು ಸದೆ ಬಡಿಯಲು ಇಂಡಿಕೇಟು ಈ ತಂತ್ರವನ್ನು ಹೂಡಿದಂತಿದೆ. ಅಷ್ಟರೊಳಗೆ ಸಿಂಡಿಕೇಟಿನ ಭವಿಷ್ಯವೂ ಬರೆದಿಡಲ್ಪಟ್ಟಿರುತ್ತದೆ.

ರಾಜ್ಯಕೀಯ ಪಕ್ಷಗಳ ನಡುವೆ ಸ್ಪರ್ಧೆ ಪೋಟಿಯಿರುವುದೂ ಚಾಣಕ್ಯತಂತ್ರ ನಡೆಯುವುದೂ ಸಮರ್ಥನೀಯವೇ ಅಲ್ಲವೇ? ರಾಜ್ಯಕೀಯವೆಂದರೆ ಇದಕ್ಕಿಂತ ಬೇರೇಯೇನಿದೆ? ●●

ನವಯುಗ
ಹೊನ್ನ ಹಬ್ಬದ ನಿಧಿಗೆ
ಉದಾರ ಸಹಾಯ ಮಾಡಿರಿ
ಹೊನ್ನ ಹಬ್ಬದ ವಿಶೇಷ ಸಂಚಿಕೆಗೆ ಜಾಹೀರಾತು ಕೊಟ್ಟು ಸಹಕರಿಸಿರಿ.

'ಗಾಂಧಿಜಿಯ ಕೊಲೆ'

(ನಾಲ್ಕನೆಯ ಭಾಗ)

ಬರೆದವರು: ಶ್ರೀ ಬಿ. ಕೃಷ್ಣ ಭಟ್, ಭದ್ರಾವತಿ.

20—1—48ರಂದು ಗಾಂಧಿಜಿ ಪ್ರಾರ್ಥನಾ ಸಭೆಯನ್ನುದ್ದೇಶಿಸಿ ಮಾತನಾಡುತಿದ್ದರು. ಆಗ ಆ ಸಭೆಯ ಮಧ್ಯಕ್ಕೊಂದು ಕೈ ಬಾಂಬನ್ನೆಸೆಯಲಾಯಿತು. ಹಾಗೆ ಎಸೆದ ಬಾಂಬು ಗಾಂಧಿಜಿ ಮಾತನಾಡುತ್ತಿದ್ದ ಸ್ಥಳಕ್ಕೆ ತುಸು ಅಂತರದಲ್ಲಿ ಸಿಡಿಯಿತು. ಜನ ತತ್ತರಿಸಿದರು. ಆದರೆ ಗಾಂಧಿಜಿ ವಿಚಲಿತರಾಗಲಿಲ್ಲ. ಮಾತನ್ನು ಮುಂದುವರಿಸಿದರು.

ಈ ಕೈ ಬಾಂಬನ್ನೆಸೆದು ಪ್ರಸಿದ್ಧಿ ಗಳಿಸಿದವನು ಶ್ರೀ ಮದನಲಾಲ್ ಪಾವ. ಆತ ಪೂರ್ವ ಪಂಜಾಬಿನಿಂದ ಬಂದ ನಿರಾಶ್ರಿತ. ಹೊಸ ಹೊರಪಿನ ಚಿಗುರು ಮೀಸೆಯ ಯುವಕ.

ಆತ ಕೆಲಸ ಹುಡುಕಿ ಕೊಂಡು ಮುಂಬಯಿಗೆ ಬಂದ. ಈ ಅಲೆದಾಟಗೆ ಡಾಕ್ಟರ್ ಜಗದೀಶಚಂದ್ರ ಜೈನರ ಪರಿಚಯವಾಯಿತು. ಡಾಕ್ಟರ್ ಜೈನರು ಶ್ರೀ ರಾಮನಾರಾಯಣ ರೂಯಿಯಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಅಲ್ಲಿಯ ವಿದ್ಯಾರ್ಥಿಗಳಿಗೆ ಅರ್ಧಮಾಗಧಿ, ಹಾಗೂ ಹಿಂದಿಯನ್ನು ಬೋಧಿಸುತಿದ್ದ ಈ ಆಚಾರ್ಯರಿಗೆ ಮದನಲಾಲನ ಬಗ್ಗೆ ಕನಿಕರ ಉಂಟಾಯಿತು. ಅವನಿಗೊಂದು ಕೆಲಸ ಕೊಡಿಸಿ ಕೊಡಲು ಅವರು ಪ್ರಯತ್ನಿಸಿದರು. ಅದು ಕೈ ಗೂಡಲಿಲ್ಲ. ಆದರೆ ಆಶ್ರಯ ಬೇಡಿ ಬಂದವನನ್ನು ಕೈಬಿಡಲಿಲ್ಲ. ತಮ್ಮ ಪುಸ್ತಕಗಳನ್ನು ಮಾರುವ ಕೆಲಸಕ್ಕೆ ಹಚ್ಚಿದರು. ಆಗಾಗ್ಗೆ ಹಣ–ಕಾಸು ಕೊಡುತ್ತಲೂ ಬಂದರು. ಆತ ಡಾಕ್ಟರ್ ಜೈನರಲ್ಲಿಗೆ ಆಗಾಗ ಬಂದು ಹೋಗಿ ಮಾಡುತಿದ್ದ. ಅವರು ಪರಸ್ಪರ ಸಂಧಿಸಿದ್ದು 1947ರ ನವೆಂಬರಿನಲ್ಲಿ.

ಪುಸ್ತಕ ಮಾರಿ ಬಂದ ಹಣದಲ್ಲಿ ಮದನಲಾಲನಿಗೆ ದಿನ ಕಳೆಯುವುದು ಕಷ್ಟವಾಯಿತು. ಅದನ್ನು ಆತ ಜೈನರಲ್ಲಿ ಹೇಳಿಕೊಂಡ. ಅದೃಷ್ಟ ಪರೀಕ್ಷಿಸಲು ಅಹಮದ್ ನಗರಕ್ಕೆ ಹೊರಟು ಹೋದ. ಅಲ್ಲಿ ಒಂದು ಹಣ್ಣಿನ ಅಂಗಡಿಯನ್ನು ತೆರೆದ. ಒಬ್ಬಳು ಶ್ರೀಮಂತ ಗುಜರಾಥಿ ಹೆಣ್ಣು ಮಗಳ ಬೆಂಬಲದಿಂದ ಪಠಾಕಿ ವ್ಯಾಪಾರ ಕುದುರಿಸಿ ಕೊಳ್ಳಲು ಹೆಣಗಾಡಿದ. ವಾಸಸ್ಥಳ ಬದಲಾಯಿಸಿದರೂ ಡಾಕ್ಟರ್ ಜೈನರ ಸಂಪರ್ಕ ಕಡಿದು ಕೊಳ್ಳಲಿಲ್ಲ. ಅವರಿಗೆ ಆಗಾಗ್ಗೆ ಬರೆಯುತಿದ್ದ. ಮುಂಬಯಿಗೆ ಬಂದವನು ಅವರಲ್ಲಿಗೆ ಹೋಗಿ ಬಂದು ಮಾಡುತಿದ್ದ. ಜನವರಿ ತಿಂಗಳಲ್ಲಿ ಹೀಗೆ ಮುಂಬಯಿಗೆ ಬಂದವನು ಡಾಕ್ಟರ್ ಜೈನರಲ್ಲಿಗೆ ಬಂದ. ಮಾತು ಕತೆಯ ಮಧ್ಯೆ ಆತ ಅಹಮದ್ ನಗರದಲ್ಲಿ ನಡೆದ ಸಭೆಯೊಂದರಲ್ಲಿ ತಾನು ಗಲಭೆ ಎಬ್ಬಿಸಿದ ವಿಚಾರ ತಿಳಿಸಿದ, ಹಿಂದುಗಳು— ಮುಸಲ್ಮಾನರು ಕೂಡಿ ಬಾಳಲು ಕಲಿಯಬೇಕೆಂಬ ಶ್ರೀ ಪಟವರ್ಧನ ಸಾಹೇಬರ ಭಾಷಣವನ್ನು ಆಕ್ಷೇಪಿಸಿ ಸಭೆ ಚದುರುವಂತೆ ಮಾಡಿದ್ದನ್ನು, ಈ ಸಂಗತಿಯನ್ನು ತಿಳಿದು ಕೊಂಡ ಶ್ರೀ ಸಾವರ್ಕರ್ ತನ್ನನ್ನು ಕರೆಸಿ ಕೊಂಡು, ಅಭಿನಂದಿಸಿ, ಬೆನ್ನು ತಟ್ಟಿದ್ದನ್ನು ಆ ವೇಶದಿಂದ ಹೇಳಿದ. ಅಂದು ಅವನ ಜೊತೆ ವಿಷ್ಣು ಕರಕರೆ ಅಲ್ಲಿಗೆ ಬಂದಿದ್ದ. ಆತ ಡಾಕ್ಟರ್ ಜೈನರಿಗೆ ಕರಕರೆಯ ಪರಿಚಯ ಮಾಡಿಸಿದ. ಕರಕರೆ ಅಹಮದ್ ನಗರದ ಭಾರೀ ಶ್ರೀಮಂತರೆಂದೂ, ಆರ್ಥಿಕವಾಗಿ ತನಗೆ ಬೆಂಬಲ ಕೊಡುತ್ತಿದ್ದಾರೆಂದೂ ಹೇಳಲು ಮರೆಯಲಿಲ್ಲ.

ಅಚಾತುರ್ಯದಿಂದ ಈ ಸಂಭಾಷಣೆ ಕಾಲದಲ್ಲಿ ಮದನಲಾಲ ತನ್ನ ಇತರ ಸಾಹಸಗಳನ್ನೂ ವರ್ಣಿಸಿದ. ಆತ ತಾನು ಕಟ್ಟಿದ ಗುಂಪಿನ ವಿಚಾರ, ಅದರ ಉದ್ದಿಶ್ಯದ ವಿವರವನ್ನೂ ಅವರಿಗೆ ತಿಳಿಸಿದ. ಭಾರತದ ಕೆಲವು ಹಿರಿಯ ನಾಯಕರನ್ನು, ಮುಖ್ಯವಾಗಿ ಗಾಂಧಿಜಿಯನ್ನು ಕೊಲ್ಲುವುದು, ಗುಂಪಿನ ಗುರಿ ಎಂಬುದನ್ನು ಬಾಯಿ ತಪ್ಪಿ ಡಾಕ್ಟರ್ ಜೈನರ ಮುಂದೆ ಆಡಿದ.

ಆತನ ಮಾತಿನಿಂದ ಡಾಕ್ಟರ್ ಜೈನರಿಗೆ ದಿಗಿಲಾಯ್ತು. ಅವನನ್ನು ಸರಿದಾರಿಗೆ ತರಲು ಅವರು ಎರಡು ತಾಸುಗಳನ್ನು ಕಳೆದರು. ಅದರಿಂದಾಗುವ ಕೆಡುಕು, ಕಷ್ಟ—ನಷ್ಟಗಳನ್ನು ತೋರಿಸಿ ಕೊಟ್ಟರು. ಇದರಿಂದ ಒಳಿತಿಲ್ಲವೆಂದು ತಿಳಿ ಹೇಳಿದರು. ಜೈನರ ಮಾತನ್ನು ಮದನಲಾಲ ತಾಳ್ಮೆಯಿಂದ ಕೇಳಿದ. ಅವರ ಹಿತವಾದಕ್ಕೆ ಮಂದನೆ ಸಲ್ಲಿಸಿದ. ಅನಂತರ ಅಲ್ಲಿಂದ ಎದ್ದ. ಹಾಗೆ ಹೋದವನು ಮರುದಿನ ಜೈನರನ್ನು ಕಾಣಲು ಬಂದ. ಬಂದವನು ಮನಸ್ಸು ಬದಲಾಯಿಸಿರುವೆನೆಂದೂ, ದೆಹಲಿಗೆ ಹೋಗುವುದಿಲ್ಲವೆಂದೂ ತಿಳಿಸಿದ.

ಈ ತಲೆಹೋಕ ಹುಡುಗನ ಮಾತಿಗೆ ಡಾಕ್ಟರ್ ಜೈನರು ಹೆಚ್ಚಿನ ಮಹತ್ವ ಕೊಡಲಿಲ್ಲ. ಆದರೂ ಅನುಮಾನ ಅವರನ್ನು ಬಾಧಿಸುತಿತ್ತು. ಅವರು ಶ್ರೀ ಜಯಪ್ರಕಾಶರ ಕಿವಿಯಲ್ಲಿ ಈ ಮಾತನ್ನು ಹಾಕಿದರು. ಆದರೆ ದೆಹಲಿಗೆ ಹೊರಟು ನಿಂತ ಜಯಪ್ರಕಾಶರಿಗೆ ಹೆಚ್ಚಿನ ವಿವರಗಳನ್ನು ತಿಳಿಸುವುದು ಆಗದೆ ಹೋಯಿತು.

21–1–48ರ ಪತ್ರಿಕೆಗಳಲ್ಲಿ ಬಂದ ವರದಿಗಳಿಂದ ಅವರಿಗೆ ದಿಗ್ಭ್ರಾಂತಿಯುಂಟಾಯಿತು. ಅಂದೇ ಅವರು ಸರದಾರ ಪಟೇಲರನ್ನು ಸಂಧಿಸಲು ಪ್ರಯತ್ನಿಸಿದರು. ಅಂದು ಪಟೇಲರು ಮುಂಬಯಿಯಲ್ಲಿದ್ದರು. ಆದರೆ ಪ್ರಯತ್ನ ಯಶಸ್ವಿಯಾಗಲಿಲ್ಲ. ಅನಂತರ ಅವರು ಮುಂಬಯಿಯ ಪ್ರಧಾನಿ ಬಿ.ಜಿ. ಖೇರರನ್ನೂ, ಗೃಹಮಂತ್ರಿ ಮುರಾರ್ಜಿಯವರನ್ನೂ ಕಂಡರು. ತಮಗೆ ತಿಳಿದು ಬಂದ ವಿಷಯವನ್ನು ಅವರಿಬ್ಬರಿಗೂ ತಿಳಿಸಿದರು ಕೊಲೆಯ ಜಾಲವನ್ನು ಬಯಲಿಗೆ ತರಲು ಸಹಕರಿಸುವುದಾಗಿ ಭರವಸೆ ಕೊಟ್ಟರು–ಡಾಕ್ಟರ್ ಜೈನರು ಕೊಲೆ ಮೊಕದ್ದಮೆಯಲ್ಲಿ ವಿಚಾರಣೆಯಾದ ಹತ್ತನೆಯ ಸಾಕ್ಷಿ. ತಮ್ಮ ಹೇಳಿಕೆಯ ಕಾಲದಲ್ಲಿ ಅವರು ಮದನಲಾಲನನ್ನೂ, ಕರಕರೆಯನ್ನೂ ಗುರುತಿಸಿದರು.

ಜನವರಿ ಇಪ್ಪತ್ತರಂದು ಆಪ್ಟೆ—ಗೋಡ್ಸೆ ದೆಹಲಿಯ ಮರೀನಾ ಹೋಟೆಲಿನ 40 ನೇ ನಂಬರಿನ ಕೋಣೆಯಲ್ಲಿ ಇಳಿದುಕೊಂಡಿದ್ದರು. ಅವರು ಅಲ್ಲಿಗೆ ಜನವರಿ 17ರಂದೇ ಬಂದಿದ್ದರು–ಹೋಟೆಲಿನ ಅಧಿಕಾರಿಗಳಿಗೆ ಅವರು ತಮ್ಮ ನಿಜವಾದ ಹೆಸರನ್ನು ತಿಳಿಸಿರಲಿಲ್ಲ ಎಸ್, ದೇಶಪಾಂಡೆ, ಎಂ. ದೇಶಪಾಂಡೆ ಎಂದು ಹೆಸರು ಬದಲಾಯಿಸಿಕೊಂಡಿದ್ದರು. ಸಂಬಂಧ ಪಟ್ಟ ರಿಜಿಸ್ಟರುಗಳಲ್ಲಿ ಹಾಗೆಂದೇ ಸಹಿ ಹಾಕಿದರು ವಿಚಾರಣೆಯ ಕಾಲದಲ್ಲಿ ಹೋಟೆಲಿನ ಈ ರಿಜಿಸ್ಟ್ರಿಯೇ ಕೋರ್ಟಿನ ಮುಂದೆ ಬಂತು. (Ex P \ 15) ಜೊತೆಗೆ ಗೋಡ್ಸೆ ಕೊಟ್ಟ ಹೇಳಿಕೆ ಈ ಅಂಶವನ್ನು ಸಮರ್ಥಿಸಿತು. ಅದರ ಪೂರ್ಣ ಪಾಠ ಇಂತಿದೆ: "ಜನವರಿ 14 ರಂದು ನಾನು ಆಪ್ಟೆ ಮುಂಬಯಿಗೆ ಬಂದೆವು–ಜನವರಿ 17ರಂದು ದಿಗಂಬರ ಬಾಡ್ಗೆಯ ಜೊತೆ ಕಾರಿನಲ್ಲಿ ಹತ್ತಾರು ಮಂದಿಯನ್ನು ಕಂಡು ಬಂದೆವು. ಅವರಿಂದ ಖರ್ಚಿಗೆ ಹಣ ಎತ್ತಿದೆವು. ಅಂದೇ ನಾನು ಮತ್ತು ಆಪ್ಟೆ ವಿಮಾನದಲ್ಲಿ ದೆಹಲಿಗೆಬಂದೆವು. ಟಿಕೇಟು ಪಡೆಯುವಾಗ ಬದಲಿ ಹೆಸರು ಕೊಟ್ಟೆವು. ನನ್ನನ್ನು ಡಿ. ಯನ್. ಕರ್ಮರಕರ ಎಂದೂ ಆಪ್ಟೆಯನ್ನು ಎಸ್. ಮರಾಠೆ ಎಂದೂ ಕರೆದು ಕೊಂಡೆವು. ದೆಹಲಿಗೆ ಬಂದವರು ಮರೀನಾ ಹೋಟೆಲಲ್ಲಿ ಇಳಿದು ಕೊಂಡೆವು.'

ಜನವರಿ 20ರಂದು ವಿಷ್ಣು ಕರಕರೆ, ಆಪ್ಟೆ, ಬೆಳಿಗ್ಗೆ 8–30ರ ಸುಮಾರಿಗೆ ದೆಹಲಿಯ ಹಿಂದೂ ಮಹಾಸಭಾ ಕಛೇರಿಗೆ ಬಂದರು. ಬಾಡ್ಗೆ, ಮದನಲಾಲ, ಗೋಪಾಲ ಗೋಡ್ಸೆ ಅಂದು ಅಲ್ಲಿಯೇ ಇದ್ದರು. ಹಿಂದಿನ ದಿನ ಅಲ್ಲಿದ್ದರೆಂಬುದರಲ್ಲಿಯೂ ಅನುಮಾನವಿಲ್ಲ.

ಆಪ್ಟೆ ಬಂದವನೇ, ಶಂಕರ ಕಿಸ್ಟಯ್ಯ, ಬಾಡ್ಗೆಯೊಡನೆ ಕಾರಿನಲ್ಲಿ ಹೊರಟು ನಿಂತ. ಕಾರು ಬಿರ್ಲಾ ಭವನದತ್ತ ಸಾಗಿತು. ಬಂಗಲೆಯ ಮುಂದು ಬಂದು ನಿಂತಿತು. ಮುಖ್ಯ ದ್ವಾರದ ಬಳಿ ಜವಾನ ಅವರನ್ನು ತಡೆದ. ಯಾರು, ಎಲ್ಲಿಗೆ, ಯಾರನ್ನು ಕಾಣಲು ಎಂದು ಪ್ರಶ್ನಿಸಿದ. ಆಪ್ಟೆ ಕಾರ್ಯದರ್ಶಿಯ ಭೆಟ್ಟಿಗೆಂದು ತಿಳಿಸಿದ. ಆ ಜವಾನ ಅಷ್ಟಕ್ಕೇ ಒಪ್ಪಿ ಕೊಳ್ಳಲಿಲ್ಲ. ಗುರುತಿನ ಚೀಟಿ ಯಾಚಿಸಿದ. ಆಪ್ಟೆ ಏನೋ ಗೀಚಿ ಅವನ ಕೈಗೆ ಕೊಟ್ಟ. ಆ ಚೀಟಿಯೊಡನೆ ಆತ ಬಂಗಲೆಯೊಳಕ್ಕೆ ಹೊರಟು ಹೋದ. ಆತ ಹೋದ ಸ್ವಲ್ಪ ಹೊತ್ತಿನಲ್ಲಿ ಸ್ಥೂಲ ಕಾಯದ, ಕರಿಯ ಸೂಟುಧಾರಿ–ವ್ಯಕ್ತಿಯೊಬ್ಬರು ಬಂಗಲೆಯ ಹೊ

(ಹನ್ನೊಂದನೇ ಪುಟ ನೋಡಿರಿ)

ಭಾರತದ ಕ್ಷಯರೋಗ ಸಮಿತಿ.

22ನೇ ಟಿಬಿ ಮೊಹರು ಮಾರಾಟ ಚಳುವಳಿ

ಭಾರತದಲ್ಲಿ ಆರು ಮಿಲಿಯಕ್ಕೂ ಹೆಚ್ಚಿಗೆ ಕ್ಷಯರೋಗಿಗಳಿದ್ದು ಅವರಲ್ಲಿ ಗಣನೀಯ ಸಂಖ್ಯಾಕರು ಯಾವಾಗಲೂ ಅನ್ಯರಿಗೆ ರೋಗ ಸೋಂಕಿಸುತ್ತಾರೆ. ಬೇಗನೆ ಕಂಡುಹಿಡಿದರೆ ಕ್ಷಯರೋಗವನ್ನು ಗುಣಪಡಿಸುವುದು ಸುಲಭ. ಸಾಮಾಜಿಕ ಮತ್ತು ಆರ್ಥಿಕ ತೊಂದರೆಗಳು ಹೆಚ್ಚಿನ ಕ್ಷಯರೋಗಿಗಳ ಚಿಕಿತ್ಸೆಗೆ ತೊಡಕನ್ನುಂಟು ಮಾಡುತ್ತವೆ. ಈ ಸಂಕಷ್ಟಗಳನ್ನು ತೊಲಗಿಸಲು ಸಮಾಜವು ಸಹಾಯಮಾಡಿದರೆ ಅದು ಅಪರೋಕ್ಷವಾಗಿ ಅವಕ್ಕೆ ಸಹಾಯ ಮಾಡಿದಂತಾಗುತ್ತದೆ.



ನೀವು ಟಿಬಿ ಮೊಹರುಗಳನ್ನು ಖರೀದಿಸಿ ನಿಮ್ಮ ರಾಜ್ಯದ ಕ್ಷಯರೋಗ ಸಮಿತಿಗೆ ಸಹಾಯ ಮಾಡಿರಿ. ಟಿಬಿ ಮೊಹರು ಮಾರಾಟದಿಂದ ಬಂದ ಉತ್ಪನ್ನವನ್ನು ಬಡ ಕ್ಷಯರೋಗಿಗಳ ಚಿಕಿತ್ಸಾ ಸೌಕರ್ಯಕ್ಕಾಗಿ ಉಪಯೋಗಿಸಲಾಗುತ್ತದೆ.

ಇಂದೇ ಟಿಬಿ ಮೊಹರುಗಳನ್ನು ಪಡಕೊಳ್ಳಿರಿ.

ಮೊಹರುಗಳು ಸಿಗುವ ಸ್ಥಳ: ಮೈಸೂರು ರಾಜ್ಯದ ಟಿ ಬಿ ಎಸೋಸಿಯೇಷನ್, 3, ಯೂನಿಯನ್ ಸ್ಟ್ರೀಟ್, ಬೆಂಗಳೂರು, ದ. ಕ. ಜಿಲ್ಲಾ ಟಿ ಬಿ ಎಸೋಸಿಯೇಷನ್, ಮಂಗಳೂರು, ಟಿ ಬಿ ಆಸ್ಪತ್ರೆಗಳು, ಚಿಕಿತ್ಸಾಲಯಗಳು, ವೈಎಂಸಿಎ, ವೈಡಬ್ಲ್ಯುಸಿಎ, ರೋಟರಿ ಕ್ಲಬ್‌ಗಳು, ಇಂಡಿಯನ್ ಮೆಡಿಕಲ್ ಎಸೋಸಿಯೇಷನ್ಸ್, ಮತ್ತಿತರ ಏಜನ್ಸಿಗಳು.

ಸ್ಥಳದಾನಿಗಳು :

Automotive Manufacturers, (Private) Ltd., Bombay.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು–4

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 5

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦—೨೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಜಾತೀಯತೆಯನ್ನು ಪ್ರಚೋದಿಸ ಹೊರಟ ಇವರು ಧೀಮರು

೧೯೭೨ರಲ್ಲಿ ಹಲವು ರಾಜ್ಯ ವಿಧಾನ ಸಭೆಗಳಿಗೆ ಹೊಸ ಚುನಾವಣೆಗಳು ನಡೆಯುವುದು ಸತ್ಯ. ಆದುದರಿಂದ ಅವನ್ನೆದುರಿಸಲು ರಾಜ್ಯಕೀಯ ಪಕ್ಷಗಳು ತಮ್ಮನ್ನು ಸಜ್ಜುಗೊಳಿಸಹೊರಟಿವೆ. ಇದು ಸಹಜವಾದುದೇ. ಪಕ್ಷದೊಳಗೆ ನಾನಾ ಕಾರಣಗಳಿಂದ, ಮುಖ್ಯವಾಗಿ ಅಧಿಕಾರ ಲಾಲಸೆಯಿಂದ ಹುಟ್ಟಿಕೊಂಡಿರುವ ಭಿನ್ನಾಭಿಪ್ರಾಯಗಳನ್ನು ತೇಪೆ ಹಚ್ಚಿ ಒಂದು ಮಾಡಲು ಪ್ರಧಾನಿ ಗಾಂಧಿಯವರೇ ಮುಂದೆಬಂದಿಪ್ಪಾರೆಂದ ಮೇಲೆ ಉಳಿದವರ ಪಾಡೇನು? ಆಂಧ್ರ ಪ್ರದೇಶದಲ್ಲಿ ಶ್ರೀ ಪಿ. ವಿ. ನರಸಿಂಗರಾಯರು ಡಾ| ರೆಡ್ಡಿಯವರ ಉತ್ತರಾಧಿಕಾರಿಯಾಗಲು ಆಕೆ ತನ್ನ ಒಪ್ಪಿಗೆ ನೀಡಿದ್ದೂ ಈ ತೇಪೆಹಾಕುವ ಕೆಲಸ ಮಾತ್ರವೇ. ಆದರೆ, ತೇಪೆಯೆಷ್ಟು ದಿನ ಬಾಳಿಕೆ ಬರುತ್ತದೆಂಬುದಕ್ಕೆ ಅನುಭವ ಸಾಕ್ಷಿ ಹೇಳುತ್ತದೆ. ಕರ್ನಾಟಕದ ಮುಖ್ಯ ಮಂತ್ರಿ ಆಸನದ ಮೇಲೆ ಇಷ್ಟರವರೆಗೆ ಇಬ್ಬರಕಣ್ಣುಗಳು ನಾಟಿದ್ದರೆ. ಇದೀಗ ಮೂರನೆಯವರ ನಿಡುನೋಟ ಬಿದ್ದು ಹೋಯಿತು ಚುನಾವಣೆಗಳಲ್ಲಿ ತಾವೇ ಜಯಭೇರಿ ಬಾರಿಸುವುದು ಖಂಡಿತವೆಂದು ನಂಬಿದವರು ಇಂಡಿಕೇಟಿಗರು. ಆದರ ಪ್ರಾದೇಶಿಕ ಅಧ್ಯಕ್ಷ ಶ್ರೀ ದೇವರಾಜ ಅರಸರು ಬಂದವರು ಹೋದವರೊಡನೆ ಮಾತ್ರವಲ್ಲ, ಬಂದಲ್ಲಿ ಹೋದಲ್ಲಿ ತಾನೇ ಭಾವಿ ಮುಖ್ಯ ಮಂತ್ರಿಯೆಂದು ಡಂಗುರ ಸಾರುತ್ತಾರೆ. ಮುಖ್ಯ ಮಂತ್ರಿಯಾಗುವ ಆಸೆ ಅವರಿಗಿದ್ದದ್ದು ಎಲ್ಲರಿಗೂ ಗೊತ್ತು; ಆದುದರಿಂದಲೇ ಅವರು ಶ್ರೀ ಸಿದ್ಧವೀರಪ್ಪನವರು ಸರಕಾರ ಸ್ಥಾಪಿಸಲೇ ಬಾರದೆಂದು ಚಂಡಿಹಿಡಿದದ್ದು; ಆದರೆ, ಅವರು ತನ್ನವರಿಗೆ ಈಗಾಗಲೇ ನೀಡಿದ ಭರವಸೆಗಳು ಹಿಮಾಲಯದಷ್ಟಿರುವುದರಿಂದ, ಅದಿನ್ನೂ ಚಂದ್ರಲೋಕವನ್ನೇ ಮುಟ್ಟುತ್ತ ನೆಗೆಯುತ್ತಿರುವುದರಿಂದ, ನೀಡಿದ ವಚನವನ್ನು ಪಾಲಿಸುವ ಇರಾದೆಯವರಿಗಿರುವುದಾದರೆ, ಅವರು ಮುಖ್ಯಮಂತ್ರಿಯಾಗಲೇ ಬಾರದು. ಇನ್ನೆರಡು ಹಳೆಯ ಕಣ್ಣುಗಳು ಸಿದ್ಧವೀರಪ್ಪರವು. ಪಾಪ, ಅವರು ಗದ್ದುಗೆಯನ್ನು ನೋಡಿಯೇ ತೃಪ್ತರಾಗಬೇಕು. ಏಕೆಂದರೆ, ಮಾಜಿ ಮುಖ್ಯಮಂತ್ರಿ ಶ್ರೀ ಕೆಂಗಲ್ಲರು ಸದ್ಯ ಗಾಂಧಿ ಸಂಪುಟದಲ್ಲಿದ್ದರೂ ಅವರನ್ನು ಹೊರದಬ್ಬುವ ಪ್ರಯತ್ನ ಅಲ್ಲಿ ನಡೆದಿದೆ ಆಗ ಅವರು ಕರ್ನಾಟಕದಲ್ಲಿ ತನ್ನದೇ ಸರಕಾರ ರಚಿಸ ಬಯಸುತ್ತಾರೆ.

ಕರ್ನಾಟಕ ಏಕೀಕರಣವು ಶಾಸನಬದ್ಧವೆನಿಸುವ ಹಂತದಲ್ಲಿ ಶ್ರೀ ಕೆಂಗಲ್ಲರು ಮಾಡಿದ ಪ್ರಯತ್ನ, ತೋರಿಸಿದ ಸಾಹಸ ಅವಿಸ್ಮರಣೀಯ. ಪ್ರಾಯಃ ರಾಜ್ಯದ ಹೆಸರು 'ಮೈಸೂರು' ಎಂದಿಂದೂ ಉಳಿಯುವುದಕ್ಕೆ ಅವರೇ ಕಾರಣಪುರುಷರು. 'ತಿಮ್ಮನವರೇ, ಮೈಸೂರಿನತ್ತ ತುಸು ನಿಗಾವಿರಲಿ' ಎಂದು ಶ್ರೀಮತಿ ಗಾಂಧಿ ಹೇಳಿದ್ದರಿಂದಲೇ ಅವರು ಉಬ್ಬಿ ಹೋಗುತ್ತಾರೆ. ರಾಜ್ಯಕೀಯದಿಂದ ತಳಮಳಗೊಂಡವರು ಕೇಂದ್ರದಲ್ಲೇ ಬಹುಕಾಲ ಉಳಿದುಕೊಂಡರು. ಆದರೆ, ಈಗ ಕೇಂದ್ರವೂ ಅವರಿಗೆ ಸಂಗಲಾರದ ತುತ್ತೆನಿಸಿದೆ.ಮುಖ್ಯವಾಗಿ ಗಂಡಸರೆಂದು ತಮ್ಮನ್ನುಕರೆದುಕೊಂಡವರಸೊಂಟಕ್ಕೆ ದಾರಬಿಗಿದು ಒಬ್ಬಾಕೆ ಹೆಂಗುಸು "ತಾಳಿಕೊಡೊ ತಿಮ್ಮಣ್ಣ" ಎಂದು ಕುಣಿದಾಡಿಸುತ್ತಿದ್ದಾರೆ:ಅವರೆಲ್ಲ ಕುಣಿಯುತ್ತಿದ್ದಾರೆ. ಆತ್ಮಾಭಿಮಾನವಿರುವವರಿಗೆ ಇದು ನೇರಿಕೆಯಾಗುವುದಿಲ್ಲ. ಶ್ರೀ ಕೆಂಗಲ್ಲರಿಗೆ ಇದೆಂತು ಸಹನೆಯಾದೀತು? ಆದುದರಿಂದಲೇ ಅವರು ಮುಖ್ಯ ಮಂತ್ರಿಯಾಗಿ ಮತ್ತೆ ರಾಜ್ಯಕ್ಕೆ ಬರಲು ಹಂಬಲಿಸುವುದು ವಾಸ್ತವವೇ. ಭಾರತ ಜನ ಜೀವನದ ಮೇಲೆ ಜಾತೀಯತೆಯ ಪ್ರಭಾವ ಅಕ್ಷುಣ್ಣವಾಗಿ ಬಿದ್ದು ಬಂದಿದೆ. ನಾಗರಿಕತೆಯ ಆರಂಭ ದಿನಗಳಿಂದಲೂ ಬೆಳೆದು ಬಂದಿರುವ ಇದು ಯಾವ ಶಾಸನದಿಂದಲೂ ದೂರವಾಗಲಿಲ್ಲ ಅಧಿಕಾರ ಲಾಲಸಿಗಳು ಜಾತೀಯತೆಯನ್ನು ಪ್ರಚೋದಿಸಿ ತಮ್ಮ ಲಾಭಗಿಟ್ಟಿಸಲು ಪ್ರಯತ್ನಿಸುತ್ತಿದ್ದಾರೆ. ಆದುದರಿಂದ ಸಮಾಜ ಜೀವನದ ಮೇಲೆ ಜಾತೀಯತೆಯು ಪ್ರಭಾವ ಬೀರಿದಂತೆ ತೋರಿದರೂ ಅದರ ಕಾಷ್ಟ ವ್ಯಸನಗಳೆಲ್ಲ ರಾಜ್ಯಕೀಯದ ಮೇಲೆಯೇ ಕಂಡು ಬರುತ್ತದೆ. ಜಾತೀಯತೆ–ಗುಂಪುಗಾರಿಕೆ—ಬೇಸಮಾಜವಾದ ಮೊದಲಾದ ದುಷ್ಟ ಶಕ್ತಿಗಳಿಗೆದುರು ಹೋರಾಡಿ ಗೆದ್ದವರೆಂದು ಹೇಳಿಕೊಳ್ಳುವ ಇಂಡಿಕೇಟಿಗರೇ ಪರಸ್ಪರ ಗುಂಪುಗಾರಿಕೆಯಲ್ಲಿ ಲೀನರಾಗಿದ್ದಾರೆ; ಜಾತೀಯತೆಯ ಕೈವಾರಿಯಾಗಿದ್ದಾರೆ. ಕರ್ನಾಟಕದ ಜನತೆಯನ್ನು ಜಾತಿಯ ಆಧಾರದಿಂದ ಲಿಂಗಾಯತರು, ಒಕ್ಕಲಿಗರು ಮತ್ತಿತರರೆಂದು ಮೂರು ಗುಂಪು ಮಾಡ ಬಹುದು. ಮೊದಲೆರಡು ಗುಂಪುಗಳು ನಾಕಷ್ಟು ಸಂಸದುವಾಗಿದ್ದು ಅವರಲ್ಲಿ ಅಧಿಕಾರದ ಬಗ್ಗೆ ಹಣಗಾಟ ಹಿಂದಿನಿಂದಲೂ ನಡೆಯುತ್ತಲೇ ಬಂದಿದೆ. ಮೂರನೆಯ ಗುಂಪಿನಲ್ಲಿ ಸಾವಿರ ಜಾತಿಯವರು ಸೇರಿದ್ದಾರೆ. ಇವರಲ್ಲಿ ಮುಂದುವರಿದವರು, ಹಿಂದುಳಿದವರು, ಬಹಳ ಹಿಂದುಳಿದವರು, ಗುಡ್ಡಗಾಡು ಜನಾಂಗಗಳು-ಹೀಗೆ ನಾನಾ ಕೋಮುಗಳವರಿದ್ದಾರೆ. ರಾಜ್ಯಕೀಯನಾಯಕರು 'ಮುಂದುವರಿದವರನ್ನು' ಬಿಟ್ಟು ಉಳಿದವರಿಗೆ ನಾನಾ ಆಶೆ ಆಮಿಷ ತೋರಿಸಿ ಪುಸಲಾಯಿಸಿ ತಮ್ಮತ್ತ ಒಲಿಸಿಕೊಳ್ಳುತ್ತಲೇ ಬಂದಿದ್ದಾರೆ. ಶ್ರೀ ದೇವರಾಜ ಅರಸರೂ ಇದಕ್ಕೆ ಹೊರತಾಗುವುದು ಸಾಧ್ಯವಿಲ್ಲ. ಆದರೆ, ಇಂಡಿಕೇಟ್ ನಾಯಕರು ತಂತಮ್ಮಲ್ಲೇ ಹೊಸತೊಂದು ತಂತ್ರ ಹೂಡಿಗಂತೆ ಭಾಸವಾಗುತ್ತದೆ. ಒಕ್ಕಲಿಗರು ಮತ್ತು ಲಿಂಗಾಯತರಿಗೆದುರಾಗಿ ಮೂರನೆಯ ಗುಂಪನ್ನು ಎತ್ತಿ ಕಟ್ಟುವ ಪ್ರಯತ್ನ ನಡೆದಿದೆ ಎಂದು ಶ್ರೀ ಕೆಂಗಲ್ಲರು ದೂರಬೇಕಾದರೆ ಶ್ರೀ ಎಲ್. ಆರ್. ನಾಯಕ, ಶ್ರೀ ಪಿ. ಜಿ. ಮುತ್ತಣ್ಣ ಮೊದಲಾದವರ ಹೇಳಿಕೆಯನ್ನು ಖಂಡಿಸಬೇಕಾದರೆ, ಒಳಗಡೆಯೇನೋ ಮಸಲತ್ತು ನಡೆಯುತ್ತಿರಲೇ ಬೇಕೆನಿಸುತ್ತದೆ. ಮೂರನೆಯ ಗುಂಪಿನ ನೂರಾರು ಕೋಮುಗಳಲ್ಲಿ ಆಸೆ ತೋರಿಸಿ ಹಲವನ್ನು ಸಂಘಟಿಸುವುದು ಸುಲಭವೆಂಬುದು ಸರ್ವಶ್ರುತ. ಆದುದರಿಂದ ಒಕ್ಕಲಿಗ—ಲಿಂಗಾಯತರ ನ್ಯಾಯದಲ್ಲಿ ಮೂರನೆಯ ಗುಂಪಿಗೆ "ಅಧಿಕಾರದ ದಂಡ' ನೆಪಕ್ಕಾದರೂ ನೀಡುವ ಗತ್ತುಗಾರಿಕೆ ಶ್ರೀ ಅರಸರು ತೋರಿಸಿದ್ದು, ಅದನ್ನು ಶ್ರೀ ಕೆಂಗಲ್ ಖಂಡಿಸಿರಲೂ ಬಹುದು.

ಈ ಸಂದೇಹಕ್ಕೆ ಶ್ರೀ ಕೆಂಗಲ್ಲರನ್ನು ಬಿಂಬಿಸುವ ಹೇಳಿಕೆ ಪುಟ ನೀಡುತ್ತದೆ. ಅದು ಶ್ರೀ ಹನುಮಂತಯ್ಯನವರು ರಾಜ್ಯ ರಾಜ್ಯಕಾರಣಕ್ಕೆ ಬರುವುದನ್ನೇ ವಿರೋಧಿಸುತ್ತದೆ. "ಕೆಲವೇ ಜನರ ಹಿತಾಶಕ್ತಿಗಳನ್ನು ಪ್ರತಿನಿಧಿಸುವ ಶ್ರೀ ಹನುಮಂತಯ್ಯನವರಿಗೂ ಒಕ್ಕಲಿಗ—ಲಿಂಗಾಯತರಿಗೂ ಯಾವ ಸಂಬಂಧವೂ ಇಲ್ಲ." ಇಲ್ಲಿಗೇ ಮುಗಿಯದೆ 'ಕಾಂಗ್ರೆಸ್ ತತ್ವಗಳಲ್ಲಿ ನಂಬಿಗೆಯಿಲ್ಲವಾದರೆ, ಪಕ್ಷದಿಂದ ಹೊರಕ್ಕೆ ಹೋಗಲು ಶ್ರೀ ಕೆಂಗಲ್ಲರಿಗೆ—ಇಂದಿರಾ ಭಕ್ತರಿಗೆ—ಕರೆ ನೀಡಿದೆ. 'ಸಾಮ್ಯವಾದಿ ಕಾರ್ಯಕ್ರಮದಲ್ಲಿ ನಂಬಿಕೆಯನ್ನು ವ್ಯಕ್ತಪಡಿಸಿರುವ ಸಚಿವ ಸಂಪುಟದ ಸದಸ್ಯರಾಗಿದ್ದು ಜಾತೀಯ ಭಾವನೆಯನ್ನು ಕೆರಳಿಸಲು ಶ್ರೀ ಕೆಂ

(ಹತ್ತನೇ ಪುಟ ನೋಡಿರಿ)

ಶ್ರೀ ಎಂ. ಸುಂದರರಾಮ ಶೆಟ್ಟಿ ವಿದೇಶ ಪ್ರಯಾಣ

ಅರಾಷ್ಟ್ರೀಕೃತ ವಿಭಾಗದ ಪ್ರಮುಖ ಬ್ಯಾಂಕ್— ವಿಜಯಾ ಬೇಂಕಿನ ಅಧ್ಯಕ್ಷ ಶ್ರೀ ಎಂ. ಸುಂದರರಾಮ ಶೆಟ್ಟರು ತಾ. 1—10—71ರಂದು ಪಶ್ಚಿಮ ಯುರೋಪು, ಇಂಗ್ಲೆಂಡ್, ಅಮೆರಿಕಾ ಮತ್ತು ಕೆನಡಾಗಳಲ್ಲಿಯ ಪ್ರಮುಖ ವಾಣಿಜ್ಯ ಕೇಂದ್ರಗಳಿಗೆ ವಾಣಿಜ್ಯ ಪ್ರವಾಸ ಕೈಕೊಂಡಿರುವರು. ಅವರು ಅಲ್ಲಿನ ಕಮರ್ಷಿಯಲ್ ಬ್ಯಾಂಕುಗಳ ಉನ್ನತ ಮಟ್ಟದ ಅಧಿಕಾರಿಗಳೊಡನೆ ಪರಸ್ಪರ ಹಿತಾಸಕ್ತಿಗಳಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲಿರುವರು

ಶ್ರೀ ಶೆಟ್ಟರ ಅಧ್ಯಕ್ಷತೆಯಲ್ಲಿ ವಿಜಯಾ ಬೇಂಕು ಸರ್ವಾಂಗೀಣ ಪ್ರಗತಿ ಸಾಧಿಸಿದ್ದು ಅದು ಹೊರದೇಶಗಳಿಗೂ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿದೆ.

ಇದೀಗ ವಿಜಯಾ ಬೇಂಕು ಜಗತ್ತಿನ ಎಲ್ಲಾ ಕರೆನ್ಸಿಗಳೊಂದಿಗೆ ವ್ಯವಹರಿಸಲು ಅಧಿಕಾರ ಹೊಂದಿದೆ ಅಲ್ಲದೆ ಅದು ಶೀಘ್ರವೇ ಅವರ ಬೆಳೆಯುತ್ತಿರುವ ಆಯಾತ ಮತ್ತು ನಿರ್ಯಾತದಾರರ ಅವಶ್ಯಕತೆಗಳನ್ನು ಪೂರೈಸಲು ಸಮರ್ಥವಾಗಲಿವೆ.

ಗೇಹರಾಜ್ಯದಲ್ಲಿ

ಉದಾರಾಂತಃಕರಣರ ಭೂರಿಸಂತರ್ಪಣೆ

'ನೋಡೀಂದ್ರೆ....'

'ಏನಪ್ಪಾ....'

'ಅಲ್ಲ, ಬಂಗ್ಲಾ ದೇಶದ ವಿದ್ಯಮಾನಗಳನ್ನು ಕೊನೆಗೊಳಿಸಲು ಯಾಹ್ಯಾಖಾನರು ಉತ್ಸುಕರಿದ್ದಾರಲ್ಲಾ?'

'ಯಾರು ಇಲ್ಲಾಂತಾರೆ?'

'ಮತ್ಯಾಕೆ ಸಮಸ್ಯೆ ಕೊನೆಗೊಳ್ಳುವುದಿಲ್ಲಾಂತ....'

'ಉತ್ಸಾಹಮಾತ್ರದಿಂದೇನಾಗುತ್ತೆ? ಸಮಸ್ಯೆ ಬಗೆಹರಿಯಬೇಕಾದರೆ, ಅದಕ್ಕೆ ಪ್ರಾಮಾಣಿಕ ಪ್ರಯತ್ನ ನಡೆಯಬೇಕು.'

'ಯಾರಿಂದ?'

'ಮುಖ್ಯವಾಗಿ ಯಾಹ್ಯಾಖಾನರಿಂದ.'

'ಅವರು ಆರಂಭ ಮಾಡಲು ಸಿದ್ಧರಿದ್ದೇವೆ; ಆರಂಭ ಮಾಡಿಯೂ ಇದ್ದೇವೆ ಎನ್ನುತ್ತಿದ್ದಾರಲ್ಲಾ?'

'ಅದೇ ನೋಡು, ಅವರ ಆರಂಭವೆನ್ನುವುದು ಬರಿಯ ನಾಟಕೀಯ. ಮಿಲಿಟರಿ ರಾಜ್ಯಪಾಲರ ಬದಲು ನಾಗರಿಗ ರಾಜ್ಯಪಾಲರ ನೇಮಕ ಮಾಡಿದ ಮಾತ್ರಕ್ಕೆ ಪರಿಸ್ಥಿತಿಗಳು ವಾಸ್ತವಾಂಶಕ್ಕಿಳಿಯುವುದಿಲ್ಲ."

'ಅದು ಸರೀನ್ನಿ. ನಿರಾಶ್ರಿತರ ಸ್ವಾಗತಕ್ಕೆ, ಈ ಸಂಬಂಧ ಭಾರತದೊಡನೆ ಮಾತುಕತೆಗೆ ಯಾಹ್ಯಾಖಾನರು ಸಿದ್ಧರಿದ್ದಾರೆಂದು ವಿಶ್ವಸಂಸ್ಥೆಯಲ್ಲಿ ವಾದಿಸಲಾಯಿತಲ್ಲಾ?'

"ಅಷ್ಟು ಮಾತ್ರವಲ್ಲ, ಬಂಗ್ಲಾ ವಿದ್ಯಮಾನಗಳು ಪಾಕಿಸ್ತಾನದ ಆಂತರಿಕ ಪ್ರಶ್ನೆ. ಇದರಲ್ಲಿ ಭಾರತ ಅಕ್ರಮ ಪ್ರವೇಶ ನಡೆಸಿದೆಯೆಂದೂ ಅದು ದೂರಿದೆ.'

'ಹೌದು, ಆದರೆ ಅದರ ಮಿತ್ರರಾಷ್ಟ್ರಗಳ ನಿಲುಮೆಯೂ ಇದೇ ತಾನೆ?'

"ಇಲ್ಲದುಂಟೆ?"

'ಒಂದು ರೀತಿಯಿಂದ ಅದೂ ಸರಿಯೆನ್ನಿ.'

'ಒಂದು ರೀತಿಯಾಕೆ? ಎಲ್ಲ ರೀತಿಯಿಂದಲೂ ಅದು ಸರಿಯೇ ಎನ್ನೋಣ. ಆದರೆ, ಬಂಗ್ಲಾದಿಂದ ಲಕ್ಷೋಪಲಕ್ಷ ನಿರಾಶ್ರಿತರು ಭಾರತಕ್ಕೆ ಓಡಿಬರುತ್ತಿದ್ದು, ಇವರನ್ನು ಸಾಕುವ ಹೊಣೆ ನಮ್ಮ ಮೇಲೆ ಪ್ರತ್ಯಕ್ಷವಾಗಿ ಬಿದ್ದಿರುವುದರಿಂದ, ಈ ಪ್ರಶ್ನೆಯು ನಮಗೂ ನೇರವಾಗೇ ಸಂಬಂಧಿಸಿದೆ.'

'ಹ್ಞೂಂ, ಅಂದರೆ, ಪಾಕಿಸ್ತಾನದ ಈ ಅಂತರಿಕ ಪ್ರಶ್ನೆ ನಮ್ಮನ್ನೂ ನೇರಕ್ಕೆಳೆದುಕೊಂಡಿದೆಯೆಂದಾಯ್ತು.'

'ಹೌದು. ಆದ್ದರಿಂದ, ಇದು ಪಾಕಿಸ್ತಾನದ 'ಆಂತರಿಕ' ವಿಷಯವಾಗಿ ಉಳಿದಿಲ್ಲವಾದ್ದರಿಂದ, ಸಮಸ್ಯೆಯ ಪರಿಹಾರಕ್ಕೆ ಪಾಕಿಸ್ತಾನವೂ ಅದರ ಮಿತ್ರರೂ ಏಕಮುಖದ ಪ್ರಯತ್ನ ನಡೆಸಬೇಕಾಗಿದೆ.'

'ಅಲ್ರಿ, ಯಾಹ್ಯಾಖಾನರ ಅಂತಹ ಪ್ರಯತ್ನ...."

"ಏನು ಪ್ರಯತ್ನವೇ ಅದು? ಬಂಗ್ಲಾ ದೇಶದ ಏಕೈಕ ನಾಯಕನನ್ನು ಬಂಧಿಸಿ, ಏಕಪಕ್ಷೀಯ ವಿಚಾರಣೆಗೆ ಗುರಿಮಾಡಿ, ಅವರ ಮೇಲೆ ದೇಶದ್ರೋಹದ ಆರೋಪ ಸಿದ್ಧಮಾಡಿ....'

'ಛೆ ಛೆ— ಅಷ್ಟು ಮುಂದಕ್ಕೆ ಹೋಗಿಲ್ಲ ತಾನೆ?'

'ಇದುವರೆಗೆ ಹೋಗದಿದ್ದರೇನಂತೆ, ಯಾಹ್ಯಾರ ಗುರಿಯೊಂದೇ....'

'ಏನು?'

'ಬಂಗ್ಲಾದೇಶೀಯರು ಶಸ್ತ್ರಾಸ್ತ್ರವನ್ನು ಕೆಳಗಿಟ್ಟು ಶರಣು ಬರಬೇಕು....'

'ಅದು ಹೇಗೆ ಸಾಧ್ಯ? ಈ ಆರುತಿಂಗಳ ಕಾಲ ಯಾಹ್ಯಾಖಾನರ ದೈತ್ಯಬಲವನ್ನೂ ತ್ರಿವಿಕ್ರಮಾವತಾರವನ್ನೂ ಎದುರಿಸಿದ ಬಂಗಾಳಿಗಳಿಂದ ಅದನ್ನು ನಿರೀಕ್ಷಿಸುವುದು ತಪ್ಪಾಗಬಹುದು....'

'ಇದುವರೆಗೆ ಮಳೆಗಾಲವಾಗಿತ್ತು. ಇದೀಗ ವರ್ಷರ್ತು ದೂರವಾಗಿ ಹೇಮಂತ ಕಾಲಿಟ್ಟಿದೆ. ಆದ್ದರಿಂದ, ಸೈನಿಕಶಕ್ತಿ ರವಾನೆಗೆ ಹನುಮಂತನ ವೇಗ ಬರಬಹುದು..'

'ಇದು ಬಂಗ್ಲಾ ನಾಗರಿಕರಿಗೂ ಅನ್ವಯಿಸುತ್ತದೆ.'

'ಆದರೆ ನೋಡು, ಅವರ ಬಳಿ ಏನು ಶಸ್ತ್ರಾಸ್ತ್ರವಿದೆ? ಯಾಹ್ಯಾರಿಗಾದರೆ, ಅವುಗಳ ಕಾರಖಾನೆಗಳೇ ಇವೆ. ಅವರ ಮಿತ್ರರು ಬೇಕೆಂಬಷ್ಟು ರವಾನೆ ಮಾಡಬಲ್ಲರು....'

'ಅಂದರೆ, ಪ್ರಸಂಗಕ್ಕೊಂದು ಪೂರ್ಣವಿರಾಮವಿಲ್ಲ....'

'ಇಲ್ಲದಿಲ್ಲಾನ್ನು, ಆದರೆ, ಅದೆಷ್ಟು ದೂರವೋ ...'

'ಅಲ್ರಿ, ಪ್ರಧಾನಿ ಗಾಂಧಿ ಮೋಸ್ಕೋವಿಗೆ ಅರ್ಜಂಟಾಗಿ ಹೋಗಿ ಬಂದ್ರಂತೆ ..'

'ಹ್ಞೂಂ, ಅತ್ತ ವಿಶ್ವ ಸಂಸ್ಥೆಯ ಅಧಿವೇಶನ ಆರಂಭವಾಗುವಾಗ್ಲೇ ಈ ಭೇಟಿ ನಡೆದದ್ದು ಏನೋ ವಿಲಕ್ಷಣ ವಿರಬಹುದು.'

'ಪಾಕಿಸ್ತಾನದಿಂದ ಸದ್ಯವೇ ಭಾರತ ಆಕ್ರಮಣ ಪ್ರಾರಂಭವಾಗುವುದೆಂದು ಅನಧಿಕೃತ ಮೂಲಗಳಿಂದ ತಿಳಿದು ಬಂದಿದ್ದು ಈ ವಿಷಯದಲ್ಲಿ....'

'ಅದ್ಯಾವ ವಿಷಯವೋ ಅವರವರಿಗೇ ಗೊತ್ತು. ಆದರೆ, ಈ ಭೆಟ್ಟಿ ಬಂಗ್ಲಾಕ್ಕೆ ವಿಶೇಷ ಪ್ರಾಧಾನ್ಯ ನೀಡಿದ್ದಂತೂ ನಿಜ. ಬಂಗ್ಲಾದಲ್ಲಿ ನಾಗರಿಕ ಶಾಂತ ಪರಿಸ್ಥಿತಿ ಬೇಗನೇ ನಿರ್ಮಾಣವಾಗಬೇಕೆಂದು ಈ ಬೆಟ್ಟಿ ಪ್ರತಿಪಾದಿಸಿತು.'

'ಅದು ಸರೀನ್ನಿ. ಆದ್ದರಿಂದ ಬಂಗ್ಲಾದೇಶಕ್ಕೆ ಮನ್ನಣೆ ನೀಡಲು ಭಾರತಕ್ಕೆ ವಿಶ್ವ ಸಮ್ಮೇಳನ ನೀಡಿದ ಕರೆಗೆ ಮಾನ್ಯತೆ ಬರಲಿಲ್ಲವೆಂಬುದು ಸಿದ್ಧವಾಯ್ತು....'

"ಹ್ಞೂಂ....ಆದರೆ ನೋಡು, ಭಾರತದ ಮಾಜಿ ವಿದೇಶ ಸಚಿವ ಶ್ರೀ ವಿ. ಕೆ. ಕೃಷ್ಣ ಮೆನನ್ನರು ಬಂಗ್ಲಾಕ್ಕೆ ಮನ್ನಣೆ ನೀಡಲು ತಡ ಮಾಡಿದರೆ, ಅದು ಮತ್ತೊಂದು ವಿಯತನಾಮವಾಗಬಹುದೆಂದು ಎಚ್ಚರಿಕೆ ನೀಡಿದ್ದಾರೆ...."

"ಅಲ್ರಿ, ಮನ್ನಣೆ ನೀಡುವ-ನೀಡದಿರುವ ಬಗ್ಗೆ ಭಿನ್ನಮತಗಳಿವೆ. ಮನ್ನಣೆ ನೀಡುವುದೆಂದರೆ, ಮುಂದಿನ ಗಂಡಾಂತರಗಳನ್ನು ಎಳೆದು ಹಾಕಿಕೊಂಡಂತೆ ಅಲ್ಲವೆ?"

"ಆ ಸಮಯಕ್ಕೆಂದೇ ರಶ್ಯದೊಡನೆ ಒಡಂಬಡಿಕೆಯಾದದ್ದು. ಈ ಸಮಸ್ಯೆಯು ಬಗೆಹರಿಯುವಲ್ಲಿ ವಿಳಂಬವಾಗುತ್ತ ಹೋದರೆ, ಭಾರತದ ಪ್ರಗತಿಯೂ ವಿಳಂಬಿಸುತ್ತ ಹೋಗುವುದು. ಆದುದರಿಂದ ತಾನು ಇಚ್ಛಿಸುವಂತೆ ಪರಿಹಾರ ಕಾರ್ಯ ನಡೆಯಲು ನಾಲ್ಕೂ ನಿಟ್ಟಿನಿಂದ ಪ್ರಯತ್ನ ನಡೆಸಲು ಭಾರತದ ಪ್ರಯತ್ನ...."

'ಅದರ ಸಲಹೆಗಳು?'

'ನಿರಾಶ್ರಿತರ ಪ್ರವಾಹ ಮರಳಲು ಬಂಗ್ಲಾ ದೇಶದಲ್ಲಿ ಶಾಂತ ವಾತಾವರಣ ನಿರ್ಮಿಸಬೇಕು.'

"ಶಾಂತವಾಗಿದೆಯೆನ್ನುತ್ತಾರಲ್ಲಾ ಯಾಹ್ಯಾಖಾನರು."

'ವಾತಾವರಣ ಶಾಂತವಾಗುವುದೆಂದರೆ, ಅದು ತನ್ನ ಸೇನಾಕಾರ್ಯಾಚರಣೆಗಳನ್ನು ನಿಲ್ಲಿಸುವುದು. ನಿರೀಹ ನಾಗರಿಕರ ಮೇಲೆ ಶಸ್ತ್ರ ಪ್ರಯೋಗಿಸುವುದರಿಂದ ಶಾಂತಿ ಹೇಗೆ ಸ್ಥಾಪನೆಯಾದೀತು?'

'ಆಯ್ತಪ್ಪ, ಆಮೇಲೆ?'

'ಬಂಧನದಲ್ಲಿರುವ ವಂಗ ಬಂಧು ಶೇಕ ಮುಜಿಬುರ್ ರೆಹಮಾನರನ್ನು ಬಂಧ ಮುಕ್ತಗೊಳಿಸುವುದು....'

'ಹ್ಞೂ....'

'ಮತ್ತು ಅವರೊಡನೆ ದುಂಡು ಮೇಜಿನ ಸುತ್ತ ಕುಳಿತು ಸಮಸ್ಯೆಯ ಪರಿಹಾರಕ್ಕೆ ಉಭಯ ಸಮ್ಮತ ರಾಜ್ಯಕೀಯ ನಿರ್ಧಾರ ಕೈಕೊಳ್ಳುವುದು.'

'ಅಲ್ಲಾರೀ....'

'ಏನು?'

"ನೋಡಿ, ಯಾಹ್ಯಾಖಾನ್, ಭುಟ್ಟೋ ಮಹಾಶಯ್ ಮತ್ತು ಮುಜಿಬುರ್ ರೆಹಮಾನರು ದುಂಡು ಮೇಜಿನ ಸುತ್ತ ಮಾತುಕತೆ ನಡೆಸಿದ ನಂತರವೇ ಬಂಗ್ಲಾ ಏಕಪಕ್ಷೀಯವಾಗಿ ಸ್ವಾತಂತ್ರ್ಯ ಘೋಷಿಸಿತಲ್ಲ?"

'ಹೌದು. ಸಮಸ್ಯೆಯ ಸೃಷ್ಟಿಕರ್ತರಿಗೇ ಅದರ ಪರಿಹಾರವೂ ಸಾಧ್ಯತಾನೆ?'

'ಅದು ಹೇಗಾಗುತ್ತದೆ? ಮುಜಿಬುರ್ ರಂತಹರ ಮುಂದೆ ಮಂಡಿನರಸ ಯಾಹ್ಯಾಖಾನರು ತಲೆವಾಗುವುದೆಂದರೆ?'

ನೋಡಮ್ಮಾ, ರಾಜ್ಯಕೀಯ ನಿರ್ಧಾರವೆಂದರೆ, ಅದರಲ್ಲಿ ಪ್ರತಿಷ್ಠೆಯ ಪ್ರಶ್ನೆ ಬರುವುದಿಲ್ಲ. ಮೇಲು—ಕೀಳು, ನ್ಯಾಯ—ಅನ್ಯಾಯ ಯಾವುದೂ ಇಲ್ಲ. ಒಂದು ರೀತಿಯಲ್ಲಿ ಹೇಳಬೇಕಾದರೆ, ಅನ್ಯಾಯವನ್ನು ನ್ಯಾಯವೆಂದು ಘೋಷಿಸುವುದನ್ನೇ 'ರಾಜ್ಯಕೀಯ ನಿರ್ಧಾರ'ವೆಂದು ಹೆಸರಿಸಬಹುದು....'

'ಅಯ್ಯಯ್ಯೊ' ಇದೆಂಥದು?'

'ನೋಡು, ದೊಡ್ಡ ತಪ್ಪನ್ನು ತಡೆಗಟ್ಟುವುದಕ್ಕಾಗಿ ಸಣ್ಣ ತಪ್ಪು ಮಾಡಿದರೆ, ಅದು ತಪ್ಪಾದರೂ ತಪ್ಪೆನಿಸುವುದಿಲ್ಲ. ಇಂತಹದನ್ನೇ ಹಿಂದಿನ ಕಾಲದಲ್ಲಿ ಆಪದ್ಧರ್ಮವೆಂದು ಕರೆದರು.'

'ಹ್ಞೂಂ....ಆದರೆ, ಇಲ್ಲಿ ಆಪತ್ತಿಗೆ ಸಿಕ್ಕವರು ಯಾರೂಂತ? ಯಾಹ್ಯಾಖಾನರು ತಾನು ಸಿಕ್ಕಿಕೊಂಡಿಲ್ಲವೆನ್ನುತ್ತಾರೆ; ಬಂಗ್ಲಾ ದೇಶೀಯರು ತಾವೂ ಇಲ್ಲಾಂತಾರೆ..'

ಅಯ್ಯೋ,ಅದ್ಯಾಕೆ ಚಿಂತಿಸ್ತೀಯ? ನಾವಿದ್ದೇವಲ್ಲಾ? ಪ್ರತಿದಿನ ಒಂದು ಲಕ್ಷ ನಿರಾಶ್ರಿತರಿಗೆ ಆಶ್ರಯ ನೀಡಿ ಭೂರಿ ಸಂತರ್ಪಣೆ ನಡೆಸುವ ಉದಾರಾಂತಃಕರಣರು!'

'ಹ್ಞೂಂ. ಅದು ಸರೀನ್ನಿ....'

'ಯಾವುದು?'

'ಈಗ ನೀವಂದದ್ದು....'

'ಏನೇ, ಇದೇನು?'

'ಹ್ಞೂಂ.......' — ಗೋ ೯ ರಾ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ **English Made Easy**

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಜನಪ್ರಿಯ ಆಂಗ್ಲ ಸ್ವಯಂಬೋಧಿನಿ ಬೆಲೆ: ರೂ. 2—00

●

Letter Writing Made Easy **ಸುಲಭದಲ್ಲಿ ಪತ್ರಲೇಖನ**

ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ. ಬೆಲೆ : ರೂ. 1—50

●

ಗೀತೆಯ ಕೈಗನ್ನಡಿ **ಭಗವದ್ಗೀತೆಯ ಸಮೂಲ ಭಾಷಾಂತರ**

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಸಮೂಲ ಅನುವಾದ. 450 ಪುಟಗಳ ಸುಂದರ ಕೈಹೊತ್ತಗೆ ಬೆಲೆ: ರೂ. 2-00

●

ಮನೆ-ಮದ್ದು **Home Remedies**

ಡಾ| ವಿ. ಆರ್. ಕೊರಡ್ಕಲ್‌ರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ಸುಲಭ ವಿಧಾನಗಳಿವೆ. ಹೆಂಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟ ಸಂಗ್ರಾಹ್ಯ ಪುಸ್ತಕ. ಬೆಲೆ : ರೂ. 2-00

ವಿ. ಪೊ. ವಿ. ಪಿ. ಮಾಡುವುದಿಲ್ಲ. ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಅಂಚೆ ವೆಚ್ಚ ಸೇರಿಸಿ ಮನಿಯಾರ್ಡರು ಮಾಡಿದರೆ ಬುಕ್ ಪೋಸ್ಟ್ ಮಾಡಲಾಗುವುದು.

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಪಾಲುಕೋಟೆ, ಉಡುಪಿ.

ಕವಲು ದಾರಿ-ಕೆಂಪು ದೀಪ

ರೆಡ್ಡಿ ವ್ಯೂಹ - ಸಂಜೀವಯ್ಯ ದಿಗ್ಬಂಧನ

ದಸರಾ ಮುಕ್ತಾಯವಾಯ್ತು, ಕರ್ನಾಟಕದ ನಾಡ ಹಬ್ಬ, ಅಂತೂ ಇಂತೂ ಕೊನೆಗೊಂಡಿತು, ಜತೆಗೆ ಜನಿಸಿದ ಹಗರಣವೂ ಸದ್ಯಕ್ಕೆ ತಣ್ಣಗಾಯ್ತು. ರಾಜ—ಮಹಾರಾಜರ ಕೈಯಿಂದ ರಾಜ್ಯ ತಪ್ಪಿದ ಮೇಲೆ ದಸರಾ ತನ್ನ ರಾಜಠೀವಿಯನ್ನು ಕಳೆದುಕೊಂಡಿತು ಈಗ ರಾಜತ್ವವನ್ನೂ ಕಳೆದುಕೊಳ್ಳುವ ದಿನವೆದುರುನೋಡುವಾಗ ದಸರಕ್ಕೂ ರಾಜರಿಗೂ ಸಂಬಂಧವೆಲ್ಲಿಂದ? ಆನೆಯ ಮೇಲೆ ಮಹಾರಾಜರ ಬದಲು ಭಾರತ ಮಾತೆಯ ಚಿತ್ರಪಟ ಸವಾರಿ ಮಾಡಿತು ಕೊನೆಗೂ ಜಂಬೂ ಸವಾರಿ ನಿಲ್ಲಲಿಲ್ಲ ದಸರಾದ ಕೊನೆಯಲ್ಲಿ ನಡೆದ ಇದು ಇಡಿಯ ದಸರವನ್ನೇ ನಾಟಕೀಯವಾಗಿ ಮಾಡಿತು

'ಜಂಬೂ ಸವಾರಿ'ರಾಜ ಮಹಾರಾಜರ ದಿಗ್ವಿಜಯದ ಸಂಕೇತವಾಗಿತ್ತು. ಅವರು ದಿಗ್ವಿಜಯ ಮಾಡಲಿ, ಮಾಡದಿರಲಿ, ಜೀವಂತ ಮೂರ್ತಿಯಾಗಿಯಾದರೂ ಇದ್ದರು ಅವರ ಸ್ಥಾನದಲ್ಲಿ ಭಾರತಮಾತೆಯ ಪಟವನ್ನು ಮೆರವಣಿಗೆ ಮಾಡಿದ್ದು ಸಕಾಲಿಕವೆಂದು ಸಾಧಿಸಬಹುದು ಬದಲಾದ ವಾತಾವರಣಕ್ಕೆ ನಾವು ಹೊಂದಿಕೊಂಡು ಹೋಗಲೇ ಬೇಕು ಈ ಸಲಹೆ ಮಾಡಿದವರು ಶ್ರೀ(ಕೆಂಗಲ್) ಹನುಮಂತಯ್ಯನವರು —ಇಂಡಿಕೇಟಿಗರು ಆದುದರಿಂದಲೇ ಚಾಮುಂಡೇಶ್ವರಿಯನ್ನು ಮೆಟ್ಟಿ ಭಾರತ ಮಾತೆ ಮೆರೆದಳು— ಜೈ ಭಾರತ ಮಾತೆ!

ದಸರಾ ಕರ್ನಾಟಕದ ನಾಡಹಬ್ಬ. ಅದಕ್ಕೂ ಭಾರತ ಮಾತೆಗೂ ಏನು ಸಂಬಂಧ ಎಂದು ಯಾರಾದರೂ ತುಟಿ ಬಿಚ್ಚಿದರೆ, ಅವರು ಕಿಡಿಗೇಡಿಗಳು, ಚಿಸ್ಸ್ಟಾಪ್ರಿಯರು. ನಮ್ಮದು ಏಕೈಕ ರಾಷ್ಟ್ರ ಕರ್ನಾಟಕವಾದರೂ ಭಾರತ ಜನನಿಯ ತನುಜಾತೆ ತನುಜಾತೆ ತನ್ನ ಹಬ್ಬದಲ್ಲಿ ಭಾರತ ಜನನಿಯನ್ನು ಆಮಂತ್ರಿಸಿ ತಲೆ ಮೇಲೆ ಹೊತ್ತುಕೊಳ್ಳುವುದೆಂದರೆ, ಅದು ಮಾತೃ ಭಕ್ತಿ ಶ್ರವಣ ಮಹಾಮುನಿ ತನ್ನ ಮಾತಾಪಿತೃಗಳನ್ನು ಹೊತ್ತುಕೊಂಡು ಪಿತೃ ಭಕ್ತಿಗ ಇನ್ನೊಂದು ಹೆಸರಾಗಿದ್ದಾನೆ ನಾವು ನಮ್ಮ ಕನ್ನಡಮ್ಮನನ್ನೂ ಭುವನೇಶ್ವರಿಯನ್ನೂ ಆರಾಧಿಸಹೊರಟಿದ್ದೇವೆ ಇದು ನಮ್ಮ ವಿಶಾಲ ಮನೋಭಾವನೆ, ಕನ್ನಡ ಭುವನೇಶ್ವರಿಯು ಪ್ರಾದೇಶಿಕಳು ಎನ್ನಾನ್ಯ ಚಿಕ್ಕ-ಮುಟ್ಟ ದೇವ ದೇವಿಯರ ಆರಾಧನೆಗಿಂತ ಏಕೈಕ ಭಗವಂತನನ್ನೇ ಒಲಿಸುವುದು ಉತ್ತಮ ನಕ್ಷವಲ್ಲವೆ? ಸಂಕುಚಿತತೆ, ಪ್ರಾದೇಶಿಕತೆ ಭಾಷೀಯತೆ ಜಾತೀಯತೆ— ಹೀಗೆ ಎಲ್ಲ ಈ ಮತಗಳಿಗೆ ತಿಲಾಂಜಲಿ ಕೊಟ್ಟರೇನೇ ನಾವು ಸರ್ವೋದಯ ಸಮಾಜದ ಸದಸ್ಯರಾಗುವ ಅರ್ಹತೆ ಹೊಂದಬಲ್ಲೆವೇನೋ! ಆದರೇನು, ಆನೆಯ ಮೆರವಣಿಗೆಯಲ್ಲಿ ನಾಯಿಗಳು ಬೊಗಳುವುದುಂಟು ಹಂದಿಗಳು ಗುರುಂಕೆನ್ನುವುದುಂಟು

ಂ ಂ ಂ

ಇಂಡಿಕೇಟಧ್ಯಕ್ಷ ಶ್ರೀ ಡಿ ಸಂಜೀವಯ್ಯನವರ ಮತ್ತ ಸುಳಿದಾಡುತಿದ್ದ ಆಂಧ್ರ ಪ್ರದೇಶದ ಮುಖ್ಯ ಮಂತ್ರಿ ದಂಡ ಅವರನ್ನು ಬಿಟ್ಟು, ತೆಲಂಗಾಣ ಪ್ರದೇಶದ ಶ್ರೀ ಪಿ ವಿ ನರಸಿಂಗರಾಯರ ಕೈಗಳನ್ನು ಸೇರಿತು ತೆಲಂಗಾಣವಾದಿಗಳನ್ನು ತೃಪ್ತಿಪಡಿಸುವುದೇ ಇದರ ರಹಸ್ಯವೆಂದು ಯಾರಾದರೂ ನಂಬಿದರೆ, ಅದು ಸುದ್ದಾಂಗ ಸುಳ್ಳು. ಶ್ರೀ ಸಂಜೀವಯ್ಯನವರು ರಾಜ್ಯದ ರಾಜ್ಯಕಾರಣಕ್ಕೆ ಬರಲೇ ಬಾರದು ಎಂದು ಬ್ರಹ್ಮಾನಂದ ರಡ್ಡಿಯವರ ಆಗ್ರಹದ ಕೋರಿಕೆಯ ಮುಂದೆ ಪ್ರಧಾನಿ ಗಾಂಧಿ ಕೊನೆಗೂ ತಲೆ ಬಾಗಿದರು. ತಮ್ಮ ಸಂಜೀವಯ್ಯನವರಿಗೆ ಕಾಯಲು ತಿಳಿಸಿ, ಹೈದರಾಬಾದಿನಲ್ಲಿ ರೆಡ್ಡಿ ನಾಟಕ ಮುಂದುವರಿಯಲು ಸದ್ಯ ಪರವಾನಿಗೆ ನೀಡಿದರು

ಶ್ರೀ ಪಿ ವಿ ನರಸಿಂಗರಾಯರು ತೆಲಂಗಾಣ ಪ್ರದೇಶದವರಾಗಿರುವುದು ಮಾತ್ರ ಅವರ ಮೇಲ್ಮೆಗೆ ಕಾರಣವಲ್ಲ ಹಲವು ವರ್ಷಗಳಿಂದ ಮಂತ್ರಿಯಾಗಿರುವ ಶ್ರೀ ರಾಯರು ತಮ್ಮ ಶಕ್ತಿ ಸಾಮರ್ಥ್ಯಗಳಿಂದ ಜನಪ್ರಿಯರಾಗಿದ್ದಾರೆ ಉತ್ತಮ ಶಿಕ್ಷಣವೇತ್ತರಾದ ಇವರು ಉಪಮುಖ್ಯ ಮಂತ್ರಿಯಾಗಿ ಶ್ರೀ ಬ್ರಹ್ಮಾನಂದ ರೆಡ್ಡಿ ಸಂಪುಟದಲ್ಲಿನ ಯಶಸ್ವಿ ಮಂತ್ರಿಗಳೆಂದು ಹೆಸರು ಪಡೆದಿದ್ದಾರೆ. ದಿಲ್ಲಿಯಲ್ಲಿ ಮಾತುಕತೆ ನಡೆಸಿ ಮರಳಿ ಬಂದ ಶ್ರೀ ರಡ್ಡಿಯವರು 'ತೆಲಂಗಾಣ ಪ್ರದೇಶದಲ್ಲಿ ಮುಖ್ಯಮಂತ್ರಿತನಕ್ಕೆ ಯೋಗ್ಯರಿಲ್ಲವೆನ್ನುವುದು ತಪ್ಪು' ಎಂದು ಹೇಳಿದ್ದು ತುಂಬ ಅರ್ಥವತ್ತು ಈ ಉದ್ಗಾರ ಪ್ರಧಾನಿ ಮತ್ತವರ ಬೆಂಬಲಿಗರ ಬಾಯಿಂದ ಹೊರಟಿರಬೇಕು ಶ್ರೀ ರಾಯರು ಆವರ ಉದ್ಗಾರವನ್ನು ಸುಳ್ಳು ಮಾಡಲು ಸಮರ್ಥರೇನೋ ನಿಜ ಆದರೆ ದಿಲ್ಲಿ ದೊರೆಗಳು ತಮ್ಮ ಉದ್ಗಾರವನ್ನು ಸಮರ್ಥಿಸಲು ಹೊಸ ನಾಟಕ ಹೂಡಿದರೂ ಹೂಡಬಹುದು. ಮುಂದಿನ ಚುನಾವಣಾ ನಂತರವಾದರೂ ಶ್ರೀ ಸಂಜೀವಯ್ಯನವರಿಗೆ ಮುಖ್ಯ ಮಂತ್ರಿತನ ದೊರೆಯುವಂತೆ ಮಾಡಬೇಡವೆ?

ಇದು ಸುಲಭದ ಕೆಲಸವಲ್ಲ. ಶ್ರೀ ರೆಡ್ಡಿಯವರಿಗದರ ಸುಳಿವು ಸಿಕ್ಕಿ ಬಿಟ್ಟಿದೆ. ಆದುದರಿಂದ ತನ್ನ ರಾಜ್ಯದಲ್ಲಿ ಪ್ರವೇಶಕ್ಕೆ ಎಡೆಯೇ ಇಲ್ಲವಂತೆ ಅವರು ದಿಗ್ಬಂಧನ ಮಾಡುತ್ತಾರೆ ಎಂತಹ ಚಕ್ರವ್ಯೂಹವನ್ನೂ ಭೇದಿಸುವ ಕಲೆ ಸಿದ್ಧಿಸಿಕೊಂಡಿರುವ ಶ್ರೀಮತಿ ಗಾಂಧಿ ಈ ರೆಡ್ಡಿ ವ್ಯೂಹವನ್ನು ಒಡೆಯ, ಸಂಜೀವಯ್ಯನವರನ್ನು ಹೊಗಿಸದೆ ಇರುವರೆ?—ಭವಿಷ್ಯವನ್ನು ಕಾದು ನೋಡಬೇಕಷ್ಟೆ.

ಂ ಂ ಂ

ಕೇರಳದ ಸಚಿವ ಸಂಪುಟದಲ್ಲಿ ಇಂಡಿಕೇಟು ಸೇರಿಕೊಂಡಿತು. ಮುಖ್ಯ ಮಂತ್ರಿ ಅಚ್ಯುತಮೆನನ್ನರೂ ಅವರ ಅಂಗ ಪಕ್ಷಗಳೂ ಇಂಡಿಕೇಟಿನ ಮುಂದೆ ತಮ್ಮ ಆಶಕ್ತತೆಯನ್ನು ಒಪ್ಪಿಕೊಂಡು, ಅದಕ್ಕೆ ಅನನ್ಯ ಶರಣು ಹೊಂದಿದುವು ಇಷ್ಟಕ್ಕೇ ಪ್ರಸಂಗ ಮುಗಿದಿದ್ದರೆ ಚಿಂತೆಯಿಲ್ಲವಿತ್ತು. ಇದೇ ವೇಳೆ ಕೇರಳದ ಪ್ರಸವಾ ಪಕ್ಷವು ಸಚಿವ ಸಂಪುಟದ ತನ್ನ ಪ್ರತಿನಿಧಿಯನ್ನು ಬದಲಾಯಿಸಲು ಬಯಸಿ ನಗೆಪಾಟಲಿಗೂ ನಾಶಕ್ಕೂ ಗುರಿಯಾಯಿತು

ಕೇರಳ ಶಾಸನ ಸಭೆಯಲ್ಲಿ ಮೂವರು ಪ್ರಸವಾ ಸದಸ್ಯರಿದ್ದಾರೆ ಇವರಲ್ಲಿ ಶ್ರೀ ಎನ್ ಕೆ ಬಾಲಕೃಷ್ಣನ್ ಸಂಪುಟದಲ್ಲಿನ ಪಕ್ಷದ ಪ್ರತಿನಿಧಿ ಶ್ರೀ ಮೆನನ್ನರು ತನ್ನ ಪಕ್ಷದಲ್ಲಿನ ಮೂವರು ಮಂತ್ರಿಗಳನ್ನು ಸೇರಿಸಿಕೊಂಡ ಅವಕಾಶವನ್ನು ಬಳಸಿ ಪ್ರಸವಾದ ರಾಜ್ಯ ಘಟಕದ ಅಧ್ಯಕ್ಷ ಶ್ರೀ ಗೋಪಾಲ ಪಿಳ್ಳೆಯವರಿಗೆ ತಾನೇ ಮಂತ್ರಿಯಾಗ

(ಎಂಟನೇ ಪುಟ ನೋಡಿರಿ)

ಕುಟುಂಬ ಯೋಜನೆಯಿಂದ ಸಂಸಾರದ ಖರ್ಚು ಕಡಿಮೆ

[illegible] ಸಮೀಪದಲ್ಲಿರುವ ಕುಟುಂಬ ಯೋಜನಾ ಕೇಂದ್ರಕ್ಕೆ ಅಥವಾ ಪ್ರಸೂತಿ ಮತ್ತು ಶಿಶು ಆರೋಗ್ಯ ಕೇಂದ್ರಕ್ಕೆ ಹೋಗಿ ವಿಚಾರಿಸಿ.

ಕನ್ನಡ ಕರಾವಳಿಯ ಕಲಾಸಿರಿ

ದಕ್ಷಿಣ ಕನ್ನಡ ಸಂಘಕ್ಕೆ ಒಂದು ವರ್ಷ ತುಂಬಿತು

ಪರಿಚಯ ಮಾಡಿಸಿದವರು: ಶ್ರೀ ಎಸ್. ಸೀತಾರಾಮ್

"ಏನೆಂದ್ರಿ, ದಕ್ಷಿಣ......."

"ಅದೇ ದಕ್ಷಿಣ ಕನ್ನಡ ಜಿಲ್ಲೆ ಅಂತ...."

"ಅದೆಲ್ಲಿದೆ?"

"ಅದು ನಮ್ಮ ಮೈಸೂರು ರಾಜ್ಯದ ಒಂದು ಮುಖ್ಯ ಜಿಲ್ಲೆ."

ಹೌದು. ನಮಗೇನೋ ಅದು ಅತ್ಯಂತ ಅಭಿಮಾನಾಸ್ಪದ ಜಿಲ್ಲೆ. ಆದರೆ ವಿಂಧ್ಯ ಪರ್ವತಗಳ ಆಚೆ ಇರುವ ಪ್ರದೇಶವೆಲ್ಲ ಮದರಾಸ್, ಅಲ್ಲಿನ ಜನರೆಲ್ಲ ಮದರಾಸಿಗಳು ಎನ್ನುವ ದಿಲ್ಲಿ ಜನಕ್ಕೆ ಇದು ಹೇಗೆ ತಾನೆ ಗೊತ್ತಾಗಬೇಕು? ದೇಶದ ಎಲ್ಲ ರಾಜ್ಯಗಳ, ಎಲ್ಲ ಭಾಷೆಗಳ, ಜಗತ್ತಿನ ನಾನಾ ರಾಷ್ಟ್ರಗಳ, ವಿಚಿತ್ರ ಭಾಷೆಗಳ ಜನ ನೆಲೆಸಿರುವ ಮಹಾನಗರ ದಿಲ್ಲಿ. ಇಂತಹ ಜನಕ್ಕೆ ನಮ್ಮ ಜಿಲ್ಲೆಯ ಪರಿಚಯ ಮಾಡಿಸುವ ಕಾರ್ಯ ಸಾಹಸದ್ದೇ ಸರಿ.

ದಿಲ್ಲಿಯಲ್ಲಿರುವ ಬುದ್ಧಿಜೀವಿಗಳ ಪೈಕಿ ಅನೇಕರಿಗೆ ದಕ್ಷಿಣ ಕನ್ನಡ ಜಿಲ್ಲೆಯ ಪರಿಚಯವಿಲ್ಲದೇ ಇರಬಹುದು. ಆದರೆ ಅವರಲ್ಲಿ ಹಲವರಾದರೂ 'ಯಕ್ಷಗಾನ' ಎಂಬ ಪದವನ್ನು ಕೇಳಿರಬಹುದು. ಕಥಕ್ಕಳಿಗೆ ಇನ್ನೊಂದು ಹೆಸರಿರಬಹುದೇ ಎಂದು ಅವರು ತಿಳಿದಿದ್ದಾರೆ.

ದಿಲ್ಲಿಯಲ್ಲಿ ಸುಮಾರು 15 ಸಹಸ್ರ ಕನ್ನಡಿಗರಿದ್ದಾರೆ. ಈ ಪೈಕಿ ಸುಮಾರು 400—500 ಕುಟುಂಬಗಳು ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದವು. ಇವರಲ್ಲಿ ಕೆಲವು ಬದ್ಧಿ ಜೀವಿಗಳು ಕಳೆದ ವರ್ಷ ಒಂದೆಡೆ ಕಲೆತಾಗ ದಿಲ್ಲಿ ಜನರಿಗೆ ನಮ್ಮ ಜಿಲ್ಲೆಯ ಜನ ಜೀವನ, ಸಂಸ್ಕೃತಿ, ಕಲೆಗಳನ್ನು ಪರಿಚಯ ಮಾಡಿಸಿಕೊಡಬಾರದೇಕೆ ಎಂಬ ಯೋಚನೆ ಬಂದಿದ್ದುಂಟು. ತಲೆಗೆ ಹೊಳೆದದ್ದು ಕಾರ್ಯರೂಪಕ್ಕೆ ಇಳಿಯಲು ಹೆಚ್ಚು ಸಮಯ ಬೇಕಾಗಲಿಲ್ಲ. ಕೆಲವರು ತರುಣರು ಪೌರೋಹಿತ್ಯ ವಹಿಸಿದರು. ಸರಿ, ದಕ್ಷಿಣ ಕನ್ನಡ ಸಂಘ (ಸೌತ್ ಕೆನರಾ ಕ್ಲಬ್) ರೂಪುಗೊಂಡಿತು.

ಉದಯ

ಸೆಪ್ಟೆಂಬರ್ 20, 1970. ಅಂದು ಭಾನುವಾರ ಸಂಜೆ. ಹೊಸ ದಿಲ್ಲಿಯ ವೈ. ಎ. ಸಿ. ಎ. ಟೂರಿಸ್ಟ್ ಹಾಸ್ಟಲಿನ ಸಭಾಂಗಣ. ಜನ ಕಿಕ್ಕಿರಿದು ಸೇರಿದ್ದಾರೆ. ಅಂದು ಸಂಘದ ಉದ್ಘಾಟನೆ. ಉದ್ಘಾಟನೆ ಮಾಡಿ ಸಂಘಕ್ಕೆ ಆಶೀರ್ವಚನವಿತ್ತವರು ಸುಪ್ರೀಂ ಕೋರ್ಟಿನ ಏಕೈಕ ಕನ್ನಡಿಗ ನ್ಯಾಯಮೂರ್ತಿಗಳೂ ದಕ್ಷಿಣ ಕನ್ನಡ ಜಿಲ್ಲೆಯ ಹೆಮ್ಮೆಯ ಪುತ್ರರೂ ಆದ ಶ್ರೀ ನ್ಯಾಯಮೂರ್ತಿ ಕೆ. ಸದಾನಂದ ಹೆಗ್ಡೆಯವರು. ಮದ್ದಳೆಯ ಧೀಂಕಾರ, ಗೆಜ್ಜೆಯ ಗಲಗಲ ನಿನಾದ, ತಾಳಗಳ ಸದ್ದು. ಕುಣಿಯುತ್ತ ಬಂದ ನಮ್ಮ ಕೃಷ್ಣ ಯಕ್ಷಗಾನ ಶೈಲಿಯಲ್ಲಿ! ದಕ್ಷಿಣ ಕನ್ನಡ ಜಿಲ್ಲೆಯ ವೈಶಿಷ್ಟ್ಯಪೂರಿತ ಯಕ್ಷಗಾನ, ಭೂತ ದರ್ಶನ, ಗ್ರಾಮ ಭಜನೆಗಳ ಭಾರಿ ಸಾಂಸ್ಕೃತಿಕ ಕಾರ್ಯಕ್ರಮ. ನೆರೆದಿದ್ದ ಜನ ದಕ್ಷಿಣ ಕನ್ನಡ ಜಿಲ್ಲೆಯ ನಾನಾ ಕಲಾಪ್ರಕಾರಗಳ ದರ್ಶನ ಪಡೆದರು. ದಕ್ಷಿಣ ಕನ್ನಡ ಜಿಲ್ಲೆಯನ್ನು ಕುರಿತ ಚಲನಚಿತ್ರವನ್ನೂ ವೀಕ್ಷಿಸಿದರು.

ಸಂಘವನ್ನು ಹೃತ್ಪೂರ್ವಕವಾಗಿ ಆಶೀರ್ವದಿಸುತ್ತಾ ಶ್ರೀ ನ್ಯಾಯಮೂರ್ತಿ ಹೆಗ್ಗಡೆಯವರು "ಸಾಂಸ್ಕೃತಿಕ ಕಾರ್ಯಚಟುವಟಿಕೆಗಳ ಪ್ರದರ್ಶನಕ್ಕೆ ಇಂತಹ ಸಂಘದ ಸ್ಥಾಪನೆ ಸ್ವಾಗತಾರ್ಹ. ಆದರೆ ಇದು ಪ್ರತ್ಯೇಕತಾ ಭಾವನೆಗೆ, ಪ್ರಾದೇಶಿಕ ಭಾವನೆಗೆ ಅವಕಾಶ ನೀಡಬಾರದು" ಎಂದು ಹಿತವಚನ ನೀಡಿದರು. ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದ ಉಡುಪಿಯ ಮಹಾತ್ಮ ಗಾಂಧಿ ಸ್ಮಾರಕ ಕಾಲೇಜಿನ ಪ್ರಿನ್ಸಿಪಾಲರಾದ ಪ್ರೊ| ಕು. ಶಿ. ಹರಿದಾಸ ಭಟ್ಟರು ದಕ್ಷಿಣ ಕನ್ನಡ ಜಿಲ್ಲೆಯ ಸಾಮಾಜಿಕ, ಆರ್ಥಿಕ ಸ್ವರೂಪದ ಪರಿಚಯವಿತ್ತರಲ್ಲದೆ ಈ ಜಿಲ್ಲೆಗೆ ತುಳುನಾಡು ಎಂಬ ಹೆಸರು ಶೋಭಾಯಮಾನವಾಗಿರುತ್ತದೆ ಎಂದೂ ಹೇಳಿದರು.

ಸಂಘದ ಮೊದಲನೆಯ ಕಾರ್ಯಕಾರಿ ಸಮಿತಿಗೆ ದಿಲ್ಲಿಯ ಆಕಾಶವಾಣಿ ಕೇಂದ್ರದಲ್ಲಿ ಸುದ್ದಿ ಸಂಪಾದಕರೂ ದಿಲ್ಲಿಯ ಕ್ರೀಡಾರಂಗದಲ್ಲಿ ಸುಪರಿಚಿತರೂ ಆಗಿರುವ ಶ್ರೀ ಎಂ.ಕೆ. ಧರ್ಮರಾಜ್ ಅವರು ಅಧ್ಯಕ್ಷರಾಗಿ ಆಯ್ಕೆಯಾದರು. ಸಿಂಡಿಕೇಟ್ ಬ್ಯಾಂಕಿನ ದಿಲ್ಲಿಯ ಶಾಖಾ ಮ್ಯಾನೇಜರ್‌ಗಳಲ್ಲಿ ಒಬ್ಬರಾದ ಶ್ರೀ ಎಸ್. ಎಂ. ರಾವ್ ಅವರು ಉಪಾಧ್ಯಕ್ಷರಾಗಿಯೂ ಭಾರತ ಸರ್ಕಾರದ ಜಾಹಿರಾತು ಮತ್ತು ಚಾಕ್ಷುಕ ಶಾಖೆಯಲ್ಲಿ ಕನ್ನಡ ವಿಭಾಗದ ಸಂಪಾದಕರೂ ಆಗಿರುವ ಶ್ರೀ ಬಿ. ಕೃಷ್ಣಾನಂದ ಹೆಗ್ಡೆಯವರು ಸಂಘದ ಮಹಾಕಾರ್ಯದರ್ಶಿಗಳಾಗಿಯೂ ಮೈಸೂರು ಸರ್ಕಾರದ ಸಮಾಚಾರ ಕೇಂದ್ರದ ಶ್ರೀ ಪಿ. ಎಸ್. ಕೆ. ಪ್ರಭು ಅವರು ಸಹಕಾರ್ಯದರ್ಶಿಗಳಾಗಿಯೂ ಆಯ್ಕೆಯಾದರು.

ಯಕ್ಷಗಾನ ಕಲೆಯಲ್ಲಿ ತರಬೇತಿ

ದಕ್ಷಿಣ ಕನ್ನಡ ಸಂಘದ ಮೂಲೋದ್ದೇಶಗಳನ್ನು ವಿವರಿಸುತ್ತಾ ಸಂಘದ ಮಹಾಕಾರ್ಯದರ್ಶಿಗಳಾದ ಶ್ರೀ ಹೆಗ್ಡೆಯವರು ಈಗ ಕೇವಲ ಜಿಲ್ಲೆಯ ವೈಶಿಷ್ಟ್ಯವೆನಿಸಿರುವ ಯಕ್ಷಗಾನ ಕಲೆಗೆ ದೇಶದ ನಾಟ್ಯಕಲಾ ರಂಗದಲ್ಲಿ ಒಂದು ಯೋಗ್ಯವಾದ ಸ್ಥಾನವನ್ನು ದೊರಕಿಸಿ ಕೊಡಲು ಪ್ರಯತ್ನಿಸುವುದು ಒಂದು ಉದ್ದೇಶವೆಂದರು. ದಿಲ್ಲಿಯಲ್ಲಿ ಯಕ್ಷಗಾನ ಕಲೆಯಲ್ಲಿ ತರಬೇತಿ ನೀಡುವ ಉದ್ದೇಶದಿಂದ ತಮ್ಮ ಸಂಘವು ಅಗತ್ಯವಾದ ವೇಷಭೂಷಣಗಳನ್ನು ತರಿಸಿದೆ, ತರಿಸುತ್ತಲೂ ಇದೆ ಎಂದು ಅವರು ಸಂದರ್ಶನವೊಂದರಲ್ಲಿ ತಿಳಿಸಿದರು.

ಇಂದು ಕಥಕ್ಕಳಿಯು ಕೇವಲ ಕೇರಳ ರಾಜ್ಯದ ವೈಶಿಷ್ಟ್ಯವೆನ್ನಿಸಿಕೊಂಡಿಲ್ಲ. ಅಂತರಾಷ್ಟ್ರೀಯ ಪುರಸ್ಕಾರವನ್ನೂ ಪಡೆದಿದೆ. ಕಥಕ್ಕಳಿಯನ್ನೂ ಯಕ್ಷಗಾನ ಕಲೆಯನ್ನೂ ಸೂಕ್ಷ್ಮವಾಗಿ ಅರ್ಥ ಮಾಡಿಕೊಂಡಿರುವವರು ಯಕ್ಷಗಾನ ಕಲೆಗೇ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿದ್ದಾರೆ. ತುಂಬ ಮೆಚ್ಚಿ ಕೊಂಡಿದ್ದಾರೆ. ರಾಷ್ಟ್ರದಲ್ಲಿ ಕೂಚಿಪುಡಿ ನೃತ್ಯಕಲೆಗೆ ವಿಪುಲವಾದ ಪ್ರಚಾರಕೊಟ್ಟು ಅಂತರಾಷ್ಟ್ರೀಯ ಖ್ಯಾತಿ ಗಳಿಸಲು ಕಾರಣರಾದವರಲ್ಲಿ ಒಬ್ಬರಾದ ಕೇಂದ್ರ ಪ್ರಸಾರ ಮತ್ತು ಸಮಾಚಾರ ಶಾಖೆಯ ಮಾಜಿ ಮಂತ್ರಿಗಳೂ ನ್ಯಾಷನಲ್ ಬುಕ್ ಟ್ರಸ್ಟ್ ಸಂಸ್ಥೆಯ ಅಧ್ಯಕ್ಷರೂ ಆದ ಡಾ. ಬಾಲಕೃಷ್ಣ ವಿಶ್ವನಾಥ ಕೇಸ್ಕರ್ ಅವರು ಸಹ ಯಕ್ಷಗಾನವನ್ನು ತುಂಬ ಮೆಚ್ಚಿಕೊಂಡಿದ್ದಾರೆ. ಈ ಕಲೆಗೆ ದೇಶದಲ್ಲಿ ತಕ್ಕ ಪ್ರಚಾರ, ಪ್ರೋತ್ಸಾಹ ದೊರೆತಿಲ್ಲ. ಈ ದೃಷ್ಟಿಯಿಂದ ನೋಡಿದಾಗ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ತರುಣರ ಸಾಹಸ ನಿಜಕ್ಕೂ ಪ್ರಶಂಸಾರ್ಹ.

ಪ್ರತಿಭಾವಂತ ಕಲಾವಿದರು

ಸಂಘದ ಹಲವಾರು ಸದಸ್ಯರು ದಿಲ್ಲಿಯಲ್ಲಿ ಉದರ ಪೋಷಣೆಗಾಗಿ ನಾನಾ ವೃತ್ತಿಗಳನ್ನು ಅವಲಂಬಿಸಿರಬಹುದು. ಆದರೆ ಅವರಲ್ಲಿ ಅಡಗಿರುವ ಕಲಾಪ್ರತಿಭೆ ಅಪ್ರತಿಮ. ಬಿ. ಬಾಲಕೃಷ್ಣ ಓರ್ವ ಪ್ರತಿಭಾವಂತ ಯಕ್ಷಗಾನ ಕಲಾವಿದರು. ನೃತ್ಯದಷ್ಟೇ ಮದ್ದಳೆ ವಾದ್ಯವನ್ನು ನುಡಿಸುವುದರಲ್ಲಿಯೂ ಎತ್ತಿದ ಕೈ. ಶ್ರೀ ಟಿ. ಕಾಂತಪ್ಪ ಮಾಸ್ತರರಲ್ಲಿ ಯಕ್ಷಗಾನ ಕಲೆಯನ್ನು ಕಲಿತು, ರಾಜ್ಯಪ್ರಶಸ್ತಿ ವಿಜೇತ, ಶ್ರೀ ಹಾರಾಡಿ ಕುಷ್ಟ ಗಾಣಿಗರಲ್ಲಿ ಪರಿಣತಿಯನ್ನು ಪಡೆದರು. ಅಷ್ಟೇ ಅಲ್ಲ. ಶ್ರೀ ಎಚ್. ಗೋಪಾಲ ನಾಯಕರಲ್ಲಿ ಮದ್ದಳೆಯನ್ನು ನುಡಿಸುವುದನ್ನೂ ಕಲಿತಿದ್ದಾರೆ. 1962ರಲ್ಲಿ ಅವರು ಡಾ. ಕೋಟ ಶಿವರಾಮ ಕಾರಂತರ ಯಕ್ಷಗಾನ ಬ್ಯಾಲೆ ಮಂಡಲಿಯನ್ನು ಸೇರಿ ಸುಮಾರು ಆರು ವರ್ಷಗಳ ಕಾಲ ಮೈಸೂರು ರಾಜ್ಯದ ಸಾಂಸ್ಕೃತಿಕ ತಂಡದ ಸದಸ್ಯರಾಗಿ ದೇಶದ ಎಲ್ಲ ಕಡೆಗಳಲ್ಲಿಯೂ ಪ್ರವಾಸ ಮಾಡಿ ತಾವು ಹೋದ ಕಡೆಗಳಲ್ಲೆಲ್ಲಾ ಯಕ್ಷಗಾನ ಕಲೆಯ ಪರಿಚಯ ಮಾಡಿಕೊಟ್ಟಿದ್ದಾರೆ.

ಈಗ ಶ್ರೀಯುತರು ದಿಲ್ಲಿಯಲ್ಲಿ ಇನ್ನೊಬ್ಬ ಕನ್ನಡಗಿತ್ತಿ, ಶ್ರೀಮತಿ ಮಾಯಾ ನಟರಾಜ ನಡೆಸುತ್ತಿರುವ ಭಾರತೀಯ ನಾಟ್ಯ ಸಂಸ್ಥೆಯೊಂದರಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಸಂಘದ ಇನ್ನೊಬ್ಬ ಸದಸ್ಯರಾದ ಶ್ರೀ ಪಿ. ವೆಂಕಟರಾಯರು ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಯಕ್ಷಗಾನ ಕಲೆಯನ್ನು ಮೈಗೂಡಿಸಿಕೊಂಡಿದ್ದಾರೆ. ಹಲವಾರು ಯಕ್ಷಗಾನ ಪ್ರಸಂಗಗಳಲ್ಲಿ ಭಾಗವಹಿಸಿದ್ದಾರಲ್ಲದೆ ಹಲವಾರು ಜನರಿಗೆ ವಿದ್ಯಾದಾನ ಮಾಡಿದ್ದಾರೆ.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

S. C. No. 44/1971

ಅಬ್ದುಲ್ ರಹಿಮಾನ್ ಸಾಹೇಬ್ — ವಾದಿ

ಮತ್ತು

ಇಸ್ಮಾಯಿಲ್ ಸಾಹೇಬ್ — ಪ್ರತಿವಾದಿ

ಇವರೊಳಗೆ

ನೋಟೀಸು

ಉಡುಪಿ ತಾಲ್ಲೂಕು ಪಡು ತೋನ್ಸೆ ಗ್ರಾಮದಲ್ಲಿ ರುವ ತಿಮ್ಮಣ್ಣಕುದ್ರು ಉಮ್ಮರ್ ಸಾಹೇಬರ ಮಗ ಮೇಲಿನ ನಂಬ್ರದ ಪ್ರತಿವಾದಿ ಇಸ್ಮಾಯಿಲ್ ಸಾಹೇಬರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಮೇಲಿನ ವಾದಿಯು ನಿಮ್ಮ ಮೇಲೆ ಪ್ಲೈಂಟು ನಿವೃತ್ತಿಕೇಳಿ ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾರೀಕು 25-11-1971 ರಂದು ಇಟ್ಟಿದ್ದು ನಿಮ್ಮದೇನಾದ್ರೂ ಉದಾಹರಣೆಯೂ ಆಕ್ಷೇಪಣೆ ಇದ್ದಲ್ಲಿ ನೀವು ಸ್ವತಹಾ ಯಾ ವಕೀಲರ ಮುಖಾಂತ್ರ ಆ ದಿನ ಬೆಳಗ್ಗೆ 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಉದಪರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ನಂಬ್ರವನ್ನು ಏಕಪಕ್ಷವಾಗಿ ತೀರ್ಮಾನಿಸಲಾಗುವುದು.

ಕೋರ್ಟು ಹುಕ್ಕುಂ ಮೇರೆಗೆ

ಪಿ. ಎನ್. ಕೃಷ್ಣಮೂರ್ತಿ ರಾವ್

ವಾದಿ ಕಡೆ ಎಡ್ವೊಕೇಟ್

ಉಡುಪಿ ದ.ಕ. ತಾ. 24-9-1071

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 137 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ "ಜೀವನ-ನಿಧಿ"ಯಲ್ಲಿ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಜಿಸ್ಟರ್ಡ್ ಆಫೀಸು:— **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, **ರೇಸ್ ಕೋರ್ಸ್ ರೋಡ್, ಬೆಂಗಳೂರು-1.**

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮನ್.

· ದಿಲ್ಲಿಯ ಕನ್ನಡಿಗರು ಸಾಮೂನ್ಯವಾಗಿ ಮೆಚ್ಚುವ ಸಂಘದ ಸಾಂಸ್ಕೃತಿಕ ಕಾರ್ಯಕ್ರಮವೆಂದರೆ ರಾಯಿಟರ್ಸ್ ಸುದ್ದಿ ಸಂಸ್ಥೆಯಲ್ಲಿರುವ ಬಿ. ಗೋಪಾಲಕೃಷ್ಣರವರ ಮುಕಾಭಿನಯ (ಮೈಮ್). ಇವರ ಅಭಿನಯವನ್ನು ಇಲ್ಲಿನ ಜನ ಮೆಚ್ಚುವುದಿರಲಿ ಪತ್ರಿಕೆಗಳೂ ಪ್ರಶಂಸಿಸಿವೆ. ಇವರ ಅಭಿನಯವು ಅಂತರಾಷ್ಟ್ರೀಯ 'ಖ್ಯಾತಿಯ ಮಾರ್ಸೆಲ್ ಮಾರ್ಸ್ಯೂ ಮತ್ತು ಇರ್ಷದ್ ಹಂಜತನ್ ಅವರ ಮಟ್ಟದಷ್ಟೇ. ಇದೆ ಎಂದು ಹೇಳಿ ಅವರಿಗೆ ಉತ್ತಮ ಭವಿಶವ್ಯವನ್ನು ಕೋರಿವೆ.

ರಾಜ್ಯೋತ್ಸವ

ಸಂಘವು ಸ್ಥಾಪನೆಯಾದಾರಭ್ಯ ಇಲ್ಲಿಯವರೆಗೆ ಹಲವಾರು ಕಾರ್ಯಕ್ರಮಗಳನ್ನು ನಡೆಸಿದೆ. ಇವುಗಳಲ್ಲಿ ಮುಖ್ಯವಾದದ್ದು ಕಳೆದ ವರ್ಷ ನವೆಂಬರ್ 1ರಂದು ನಡೆದ ಕನ್ನಡ ರಾಜ್ಯೋತ್ಸವ. ಅತಿ ವೈಭವದಿಂದ ನಡೆದ ಈ ಸಮಾರಂಭದಲ್ಲಿ ಆಗ ಸಂಸ್ಥಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀ ಸಿದ್ಧವನಹಳ್ಳಿ ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಸರ್ಕಾರದ ರಾಜ್ಯ ಮಟ್ಟದ ಮಂತ್ರಿಗಳಾದ ಶ್ರೀ ರಾಮನಿವಾಸ ಮಿರ್ಧಾ ಮತ್ತು ಶ್ರೀ ಕೆ. ಸಿ. ಪಂತ ಅವರು ಭಾಗವಹಿಸಿದ್ದರು. ಭಾಷಣಕಾರರು ಎಲ್ಲ ಸಂಸ್ಕೃತಿಗಳಿಗೂ ದೇಶದ ಏಕತೆಯೇ ಮೂಲಾಧಾರ ಎಂದು ತಿಳಿಸಿದರಲ್ಲದೆ ರಾಷ್ಟ್ರೀಯತೆ ಮತ್ತು ಭಾವೈಕ್ಯದ ಮೌಲ್ಯಗಳ ಬಗ್ಗೆ ಜನಜಾಗೃತಿಯನ್ನುಂಟು ಮಾಡುವುದು ಅಗತ್ಯವೆಂದೂ ಅಭಿಪ್ರಾಯಪಟ್ಟರು.

ಈ ಸಮಾರಂಭದ ಅಂಗವಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅಂಜಲಿಯವರಿಂದ ಅತ್ಯಂತ ಮನೋಹರವಾದ ಭಾರತನಾಟ್ಯ ನಡೆಯಿತು. ಪುರಂದರದಾಸರ ದೇವರನಾಮಗಳನ್ನು ಹಾಡಿದ ಶ್ರೀಮತಿ ಓಂಜೆರಿಯವರು ಮಲೆಯಾಳಿ. ಅವರು ಅತ್ಯಂತ ಸೊಗಸಾಗಿ ಭಕ್ತಿಗೀತೆಗಳನ್ನು ಹಾಡಿದರು. ಶ್ರೀ ವೆಂಕಟ ರಾಮ ಮತ್ತು ಶ್ರೀ ಬಿ. ಬಾಲಕೃಷ್ಣ ಅವರ ಯಕ್ಷಗಾನ ಪ್ರಸಂಗ ಅತ್ಯಂತ ರಂಜಕವಾಗಿತ್ತು.

ಹೊಸ ಎಂ. ಪಿ. ಗಳಿಗೆ ಸತ್ಕಾರ

ಈ ವರ್ಷ ಎಪ್ರಿಲ್ 4ರಂದು ಸಂಘವು ಮೈಸೂರು ರಾಜ್ಯದ ಹೊಸ ಲೋಕಸಭಾ ಸದಸ್ಯರನ್ನು ಬರಮಾಡಿಕೊಂಡು ಅವರನ್ನು ಗೌರವಿಸಿತು. ಈ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ಉಡುಪಿಯ ಶ್ರೀ ಪಿ. ರಂಗನಾಥ ಶೆಣೈ ಅವರು ಮೈಸೂರು ಕರಾವಳಿಯ ಪ್ರದೇಶದ ಜನತೆ ಇಡಿ ಭಾರತದ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಲು ಶ್ರಮಿಸಬೇಕು ಎಂದರು. ಈ ಸಮಾರಂಭದಲ್ಲಿ ಭಾಗವಹಿಸಿದ್ದ ಹಲವಾರು ಪಾರ್ಲಿಮೆಂಟ್ ಸದಸ್ಯರು ಭಾಷೆ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಭಿನ್ನತೆಯುಳ್ಳ ನಮ್ಮ ದೇಶದಲ್ಲಿ ಏಕತೆಯನ್ನು ಬೆಳೆಸುವ ಆವಶ್ಯಕತೆ ಇದೆ ಎಂದರು.

ಅನಕೃಗೆ ಅಶ್ರುತರ್ಪಣ

ಸಂಘದ ಸದಸ್ಯರು ಜುಲೈ 11ರಂದು ಅಧ್ಯಕ್ಷ ಶ್ರೀ ರಂಗನಾಥ ಶೆಣೈ ಅವರ ನಿವಾಸದಲ್ಲಿ ಸಭೆ ಸೇರಿ ಖ್ಯಾತ ಸಾಹಿತಿ, ಶ್ರೀ ಅನಕೃರವರ ನಿಧನದ ಬಗ್ಗೆ ತಮ್ಮ ಅತೀವ ದುಃಖವನ್ನು ಸೂಚಿಸಿದರು. ಈ ಸಂತಾಪ ಸೂಚಕ ಸಭೆಯಲ್ಲಿ ಶ್ರೀ ಶೆಣೈ, ಶ್ರೀ ಧರ್ಮರಾಜ ಮತ್ತು ಶ್ರೀ ಹೆಗ್ಡೆಯವರು ಮಾತನಾಡಿ ದಿವಂಗತ ಅನಕೃರವರ ಸಾಹಿತ್ಯವು ಚಿರಕಾಲವೂ ಸ್ಮರಿಸಲ್ಪಡುವುದೆಂದರು.

ಅನಂತರ ನಡೆದ ಹೊಸ ಕಾರ್ಯಕಾರಿ ಸಮಿತಿಯ ಚುನಾವಣೆಯಲ್ಲಿ ಪಾರ್ಲಿಮೆಂಟ್ ಸದಸ್ಯ, ಶ್ರೀ ಶೆಣೈ ಅವರು ಸಂಘದ ಅಧ್ಯಕ್ಷರಾಗಿ ಆಯ್ಕೆಯಾದರು. ಶ್ರೀ ಎಂ. ಕೆ. ಧರ್ಮರಾಜ್ ಮತ್ತು ಶ್ರೀ ಎಸ್. ಎ. ರಾವ್ ಅವರು ಉಪಾಧ್ಯಕ್ಷರುಗಳಾಗಿಯೂ ಶ್ರೀ ಪಿ. ವೆಂಕಟರಾವ್ ಅವರು ಪ್ರಧಾನ ಕಾರ್ಯದರ್ಶಿಯಾಗಿಯೂ, ಶ್ರೀ ಬಿ ಕೃಷ್ಣಾನಂದ ಹೆಗ್ಡೆಯವರು ಕಾರ್ಯಕ್ರಮಗಳ ಕಾರ್ಯದರ್ಶಿಗಳಾಗಿಯೂ, ಶ್ರೀ ಪಿ ಎಸ್.ಕೆ ಪ್ರಭು ಮತ್ತು ಕುಮಾರಿ ಉಷಾ ಕಿಣಿಯವರು ಸಹಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ದಕ್ಷಿಣ ಕನ್ನಡ ಸಂಘಕ್ಕೆ ಇದೇ ಸಪ್ಟೆಂಬರ್ 20ನೆಯ ದಿನಾಂಕಕ್ಕೆ ಒಂದು ವರ್ಷ ತುಂಬಿ ಅದು ಎರಡನೆಯ ವರ್ಷದಲ್ಲಿ ಕಾಲಿಟ್ಟಿತು.

ಉತ್ಸಾಹಿ ತರುಣರು ಸಂಘವೊಂದರ ಪ್ರೋತ್ಸಾಹಿತ್ವ ವಹಿಸಿದರೆ ಏನು ಕೆಲಸವನ್ನೂ ಸಾಧಿಸಬಲ್ಲರು ಎಂಬುದಕ್ಕೆ ದಕ್ಷಿಣ ಕನ್ನಡ ಸಂಘದ ಮಹತ್ಸಾಧನೆಯೇ, ಸಾಕ್ಷಿ. ಈ ಸಂಘಕ್ಕೆ ಉತ್ತಮ ಭವಿಷ್ಯವಿದೆ ಎಂಬುದರಲ್ಲಿ ಸಂದೇಹವೇ ಇಲ್ಲ.

●●

ಲೋಕೋ ಭಿನ್ನ ರುಚಿಃ

'ಮೆಚ್ಚಿದವನಿಗೆ ಮಸಣವೂ ಸುಖವಂತೆ' ಹಾಗೊಂದು ಗಾದೆ ಮಾತು ಹೇಳುತ್ತದೆ. ಗಾದೆಯಲ್ಲಿ ವೇದ ತುಂಬಿದೆಯಂತೆ. ಆದುದರಿಂದ ಆ ಮಾತನ್ನು ನಾವು ಸತ್ಯವೆಂದು ನಂಬ ಬೇಕು. ನಂಬುವಂಥ ಸಂಗತಿಗಳೂ ಅದಕ್ಕೆ ಪುಷ್ಟಿಕೊಡುತ್ತವೆ. ಜನತೆಯೂ ಅದೇ ರೀತಿ ವರ್ತಿಸುತ್ತದೆ. ಸ್ವಾತಂತ್ರ್ಯ ಪೂರ್ವ ಆಂಗ್ಲರ ಇನ್ನೂರು ವರ್ಷದ ಅಧಿಪತ್ಯವನ್ನು ಪ್ರಜೆ ಒಪ್ಪಿಕೊಂಡಿತು. ಇದಕ್ಕೆ ಒಗ್ಗಿಕೊಂಡಿತು. ಅವರ ನ್ಯಾಯಾನ್ಯಾಯವನ್ನು ವಿಮರ್ಶಿಸುವ ಶಕ್ತಿ ಮನುಷ್ಯನಿಗಿತ್ತೊ ಇಲ್ಲವೊ! :ಆಂಗ್ಲರ ದರ್ಪಕ್ಕೆ ಬಾಗಿತ್ತು; ಆಡಳಿತೆಗೆ ಹೊಂದಿಕೊಂಡಿತ್ತು.

ಇದ್ದಕ್ಕಿದ್ದಂತೆಯೇ ಈ (ಅ) ಸ್ವಾತಂತ್ರ್ಯದ ಉರಿಗಾಳಿ ಹಲವರಿಗೆ ಸಹಿಸದಾಯಿತು. ಈ ಜನತೆಯು ಒಗ್ಗಿಹೋದ ಮೌಢ್ಯವನ್ನು ದೂರ ಮಾಡಲು ಯತ್ನಿಸಿತು. ಯಶಸ್ವಿಯೂ ಆಯಿತು. ಆದರೆ ಅದೊಂದು ಪುಣ್ಯ ಘಳಿಗೆ—ಅಷ್ಟೆ. ಸ್ವಾತಂತ್ರ್ಯದಿಂದ ತನಗೆ ಏನೆಲ್ಲ ಸೌಲಭ್ಯ ಸಿಕ್ಕೀತು ಎಂದು ಜನತೆ ಯೋಚಿಸಿತ್ತೊ! ಜನತೆಯ ಮನಸ್ಸಿನ ಧಾಟಿ ಹೇಗಿತ್ತೋ ಎಂಬುದು ಊಹಿಸಲೇ ಕಷ್ಟ. ಅಂತೂ ಸ್ವಾತಂತ್ರ್ಯ ಬಂದುದರಿಂದ ಜನತೆಗೆ ತೃಪ್ತಿಯಾಗಲಿಲ್ಲ.

ಏನೋ ಒಂದು ಅಶಾಂತಿ; ಯಾವುದೋ ಒಂದು ಕೊರಗು; ತನ್ನ ಹಿತಕ್ಕೆ ಏನೇನೋ ಅಡ್ಡಿ ಆತಂಕಗಳೆಂಬ ಎದೆಗುದಿ-ಇದರಿಂದ ಶಾಂತಿಯ ದಾರಿಯನ್ನು ಬದಿಗೊತ್ತಿ ಮನಸ್ಸು ಕ್ರಾಂತಿಯತ್ತ ಒಲಿಯಿತು ಗಾಂಧಿ ಹೇಳಿದ ಸುಲಭದ ದಾರಿ, ಹುಟ್ಟಿದುದಕ್ಕೂ ಸತ್ತುದಕ್ಕೂ ಉಪಯೋಗಿಸಲು ತೊಡಗಿದರು. ಸಂಬಳ ಕಡಮೆಯಾಯಿತು. ಮುಷ್ಕರ ಹೂಡಿದರು; ಕೆಲಸ ಹೋಯಿತು. ಹರತಾಳ ಮೆರವಣಿಗೆ ಎಂದರು; ವಿದ್ಯಾ ಪರೀಕ್ಷೆಯಲ್ಲಿ ಡುಂಕಿ ಹೊಡೆದ ವಿದ್ಯಾರ್ಥಿ ಕೆರಳಿ, ಶಾಲಾ 'ಬಂದ್'ಗಾಗಿ ವಿದ್ಯಾರ್ಥಿಗಳನ್ನು ಎತ್ತಿ ಕಟ್ಟಿ 'ಇನ್ ಕ್ವಿಲಾಬ್ ಜಿಂದಾಬಾದ್' ಎಂದ. ಯಾವ ರಾಜಕೀಯವನ್ನು ಖಂಡಿಸಲು, ನಮ್ಮ ಸ್ವಾತಂತ್ರ್ಯವನ್ನು ಪಡೆಯಲು ನಿರ್ಬಲರಾದ ನಾವು ಒಗ್ಗಟ್ಟೊಂದೇ ಬಲವೆಂದು ಘೋಷಿಸಿ, ಜನತೆಯ ಧಮನಿಯಲ್ಲಿ ಬಿಸಿರಕ್ತವನ್ನು ಓಡಾಡಿಸಿದ ಅದೇ ತತ್ವವಿಂದು ಯಃಕಶ್ಚಿತ್ ಕೆಲಸಕ್ಕೂ ಉಪಯೋಗಿಸಿದ ರಾಮಬಾಣವಾಯಿತು. ಅಶಾಂತಿಗೊಂಡ ಜನತೆ ಈ ಅಸ್ತ್ರವನ್ನು ವಾಚಾಮಗೋಚರವಾಗಿ ಬಳಸಿತು. ತೃಪ್ತಿ ಇಲ್ಲ ಎಂದಾಗ ಆಂಗ್ಲರ ಆಳ್ವಿಕೆಯನ್ನು ಅಲ್ಲಲ್ಲಿ ಹಾಡಿ ಹೊಗಳಿ ತೃಪ್ತಿಪಟ್ಟುಕೊಂಡಿತು.

ರಾಷ್ಟ್ರದ ಮಾತು ಹೀಗಾದರೆ ಇನ್ನು ಮನೆ ಮನೆಯ ವ್ಯಕ್ತಿ ವ್ಯಕ್ತಿಯ ಸಂಗತಿಯೂ ಹೀಗೇ ಇರುತ್ತದೆ. ಕುಂಟಿರಲಿ, ಕುರುಡಿರಲಿ, ಬುದ್ಧಿಹೀನೆಯಾಗಿರಲಿ - ಆ ಹೆಂಡತಿ ಸತ್ತರೆ ಗಂಡನಾದವ ಅವಳ ಗುಣಗಾನ ಮಾಡಿ ತನ್ನ ಭವಿಷ್ಯವೇ ಮುಗಿಯಿತೆಂಬಂತೆ ನಿರಾಶನಾಗುವಂತೆ ಒಗ್ಗಿಹೋದ ರಾಷ್ಟ್ರದ ಸಂಸಾರ ಒಡೆದು, ಎಲ್ಲಾ ಗಂಡರೂ ವಿರಾಗಿಗಳಾಗಿದ್ದಾರೆ.

ಇನ್ನು ಹಲವರ ಮನೆಯ ಬಾಗಿಲು ಅಂಗಳ ಸುತ್ತು ಮುತ್ತು ನೋಡಿದಾಗ ವಾಕರಿಕೆ ಬರುವಂಥ ಸ್ಥಿತಿಯಲ್ಲಿರುತ್ತದೆ. ಅಲ್ಲಿನ ದುರ್ವಾಸನೆ ಸಹಿಸಲೂ ಹೊಂದಿಕೊಳ್ಳಲೂ ಅಸಾಧ್ಯವಾಗುತ್ತದೆ. ಅಂಥ ವಾತಾವರಣದಲ್ಲಿ ಬದುಕುವವರಿಲ್ಲವೇ? ಅದೇ ದುರ್ವಾಸನೆಯೂ ತನ್ನ ಮೂಗಿಗೆ ಹೊಡೆಯುವುದೇ ಇಲ್ಲಿ ಎನ್ನುವವರಿಲ್ಲವೆ? ತಗಣೆ, ಸೊಳ್ಳೆ ಇರುವ ಚಾಪೆಯಲ್ಲಿ ಮಲಗಿ ಗಾಢವಾದ ನಿದ್ರೆಯನ್ನು ಮಾಡುವವರೂ ಇದ್ದಾರೆ. ಅವರಿಗೆ ತಗಣೆಯ ಕಚ್ಚಾಟವೂ ಇಲ್ಲ. ಸೊಳ್ಳೆಯ ಸಂಗೀತವೂ ನಾಸ್ತಿ.

ನೀವು ಹಲವರು ಊಟ ಮಾಡುವಾಗ ನೋಡಿದ್ದೀರಾ? ಅನ್ನವನ್ನು ಕೈಯಲ್ಲಿ ಹಿಚಕಿ, ಹಿಚುಕಿ ಪಾಕ ಮಾಡಿ ನೋಡುವವರಿಗೇ ಅಸಹ್ಯ ಬರಿಸುತ್ತಾರೆ. ಅದು ಅಸಹ್ಯವೆಂದು ನಮಗನಿಸಿದರೆ ಅದನ್ನು ಉಣ್ಣುವವನಿಗೆ ಅದು ಅಸಹ್ಯವೂ ಇಲ್ಲ, ಹೇಸಿಗೆಯೂ ಇಲ್ಲ.

ಉಗುರು ಕಚ್ಚುವುದು, ನಾಲಗೆ ಕಡಿಯುವುದು— ಇತ್ಯಾದಿಗಳೆಲ್ಲ ಮನುಷ್ಯನಲ್ಲಿ ದುರಾಭ್ಯಾಸವಾಗಿ ಬಂದರೂ ಅದೊಂದು ಅಸಹ್ಯವೆಂದು ಅವನಿಗೆ ಗೊತ್ತೇ ಆಗುವುದಿಲ್ಲ. ತನ್ನಲ್ಲಿರುವ ಹಲವಾರು ದುರಾಭ್ಯಾಸಗಳು ಅವನಿಗದು ಚಂದವೇ; ಸಹ್ಯವೇ. ಅದರ ಕುರಿತು ನಾವೇನಾದರೂ ಮಾತನಾಡಿದರೆ ಅವನಿಗೆ ಮೊದಲು ನಾಚುಗೆಯಾದರೂ ತಾನು ಮಾಡುವುದು ಸರಿ, ಎಂದವನು ವಾದಿಸುತ್ತಾನೆ. ಕುತರ್ಕವಲ್ಲಾದರೂ ತನ್ನ ವಾದವನ್ನು ಸಮರ್ಥಿಸುತ್ತಾನೆ.

ಲೋಕೋ ಭಿನ್ನ ರುಚಿಃ ಆದರಿಂದಾಗಿ ಒಬ್ಬನಿಗೆ ಸಹ್ಯವಾದುದು ಇನ್ನೊಬ್ಬನಿಗೆ ಅಸಹ್ಯವಾಗಲೂ ಬಹುದು. ಅವನ ರುಚಿ ಹಾಗಿತ್ತು. ಅವನು ಒಪ್ಪಿಕೊಂಡ. ಅದರಂತೆ ನಡೆದ. ಸರಿಯೇ, ಆದರೆ ಹತ್ತು ಜನರಿಗೆ ಸರಿಯಾಗಿ ನಡೆದರೆ ಲೋಕಕ್ಕೆ ಸರಿಯಾಗಿ ನಡೆದಂತೆ ಎಂದು ಹಲವರಭಿಪ್ರಾಯ. ತಾನು ಹೀಗೇ ಇರುವುದು, ಹೀಗೇ ಮಾಡುವುದು ಎಂದು ಅದು ಕುತರ್ಕ. ತನಗೊಬ್ಬನಿಗೆ ನ್ಯಾಯ ಸಿಕ್ಕಿಲ್ಲವೆಂದು ಉಳಿದವರನ್ನು ಎಬ್ಬಿಸಿ, ಎತ್ತಿ ಕಟ್ಟಿ ಗುಲ್ಲೆಬ್ಬಿಸುವುದು. ನಮಗಲ್ಲ, ನಮ್ಮನ್ನು ಹೊಂದಿ ಕೊಂಡು ಬರುವ ಇತರರಿಗೂ ಪ್ರಗತಿ ಪಥವಲ್ಲ.

ನಾವು ಶಾಂತರಾಗಬೇಕು, ಶಾಂತ ರೀತಿಯಿಂದ ಬಾಳಬೇಕು, ಬದುಕಬೇಕು, ಎಲ್ಲರೂ ಒಂದಾಗಿ ದೇಶವನ್ನು ಮುನ್ನಡೆಸಬೇಕು. ನಮ್ಮ ರಾಷ್ಟ್ರ ಮಾದರಿಯ ರಾಷ್ಟ್ರವಾಗಬೇಕು—ಎಂಬ ಹಂಬಲ ನಮ್ಮಲ್ಲಿರಬೇಕು. ಚಿಕ್ಕ ಪುಟ್ಟ ಮಾತಿಗೆ ಉರಿದೆದ್ದು, ಪ್ರತಿಭಟಿಸಲು ಆರಂಭಿಸಬಾರದು. ನಾವೆಲ್ಲರು ಒಂದೇ ಎಂಬ ಭಾವವಿದ್ದರೆ–ನನ್ನ ನೋವು, ಎಲ್ಲರ ನೋವು ಎನ್ನುವ ಅರಿವು ಇದ್ದರೆ ಪರರನ್ನು ನೋಯಿಸಲು ಅಸಾಧ್ಯವಾದೀತು.

ನಮ್ಮ ಮುಂದಿರುವುದು ರಾಷ್ಟ್ರ. ಈ ರಾಷ್ಟ್ರ ನಮಗೆ ತಾಯಿ. ಅವಳ ಒಳಿತು ಕೆಡುಕು ಸಕಲರ ಕೈಯಲ್ಲಿ. ಮಾತೆಗಾಗಿ ಯಾರು ಯಾರು ಎಷ್ಟು ರಕ್ತ ಸುರಿಸಿದರು— ತಮ್ಮ ತನು ಮನ ಧನವನ್ನು ತೆತ್ತು ಮಾತೆಗಾಗಿ ಎಂಥ ತ್ಯಾಗವನ್ನು ಮಾಡಿಲ್ಲ. ಮಾಡುತ್ತಿಲ್ಲ! ಮಾತೆಗಾಗಿ ಸಕಲವನ್ನು

(ಒಂಭತ್ತನೇ ಪುಟ ನೋಡಿರಿ)

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

Ex C. No. 84/1971
O.S. No. 77/66

ಸುಶೀಲ ಭಕ್ತ ಕೂಡಾ— ಅರ್ಜಿದಾರರು
ಮತ್ತು
ಎ.ದಯಾನಂದ ನಾಯಕ್ ಕೂಡಾ— ಯದ್ರಿರು
ಇವರೊಳಗೆ

ನೋಟೀಸು

ಉಡ್ಪಿ ಕಸಬಾ ಕುಂಜಿಬೆಟ್ಟಿನಲ್ಲಿರುವ ನಾರಾಯಣ ನಾಯಕ್‌ರ ಮಕ್ಕಳು ಮೇಲಿನ ಅಮಲ್‌ಜಾರಿ ನಂಬ್ರದ 3ನೇ ಯದ್ರಿ ನಿತ್ಯಾನಂದ ನಾಯಕ್, 5ನೇ ಯದ್ರಿ ಸದಾನಂದ ನಾಯಕ್, 6ನೇ ಯದ್ರಿ ಸಚ್ಚಿದಾನಂದ ನಾಯಕ್, 7ನೇ ಯದ್ರಿಳು ಸುನಂದ ಯಾನೆ ಸುಲೋಚನಬ್ಬ, 9ನೇಯದ್ರಿಳು ಸುಗುಣ ಮತ್ತು 10ನೇ ಯದ್ರಿಳು ಸವಿತಾ—ಇವರಿಗೆ ಈ ಮೂಲಕ ತಿಳಿಸುವುದೇನೆಂದ್ರೆ—

ಸದ್ರಿ ಕೋರ್ಟಿನ O. S. 77/66ರಲ್ಲಾದ ತಾ. 22-6-1967 ಡಿಕ್ರಿಗನುಸಾರವಾಗಿ, ಮೇಲ್ಕಂಡ ಅರ್ಜಿದಾರರು ಯದ್ರಿರ ಮೇಲಿನ ಅಮಲ್‌ಜ್ಯಾರಿ ಅರ್ಜಿ ನಿವೃತ್ತಿಕೇಳಿ ದಾಖಲ್ಲು ಮಾಡಿರುವ ಅಮಲ್‌ಜ್ಯಾರಿ ಅರ್ಜಿಯು ತಾರೀಕು 10.10.1971ರಂದು ನಿಮ್ಮ (ಯದ್ರಿರ) ಹಾಜರಾತಿ ಬಗ್ಗೆ ಇಟ್ಟಿದ್ದು ನಿಮ್ಮದೇನಾದ್ರೂ ಆಕ್ಷೇಪವಿದ್ದಲ್ಲಿ ಆ ದಿನ ಬೆಳಿಗ್ಗೆ 11 ಗಂಟೆಗೆ ನೀವು ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗಿ ಉಪಪಾದಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ಅಮಲ್‌ಜ್ಯಾರಿ ನಂಬ್ರವನ್ನು ಅರ್ಜಿದಾರರ ಪರವಾಗಿ ತೀರ್ಮಾನಿಸಬಾಗುವುದು.

ಕೋರ್ಟಿನ ಹುಕ್ಕುಂ ಮೇರೆಗೆ
ಪಿ. ಎನ್. ಕೃಷ್ಣಮೂರ್ತಿ ರಾವ್
ಅರ್ಜಿದಾರರ ಕಡೆ ಎಡ್ವೋಕೇಟ್

ಉಡ್ಪಿ ದ.ಕ. ತಾರೀಕು 24.9.71.

ರೆಡ್ಡಿ ವ್ಯೂಹ - ಸಂಜೀವಯ್ಯ ದಿಗ್ಬಂಧನ

(ಐದನೇ ಪುಟದಿಂದ)

ಬೇಕೆಂಬ ಬಯಕೆ ಸಂಕಟವಾರಂಭವಾಯ್ತು. ರಾಜಿನಾಮೆ ನೀಡುವಂತೆ ಕೇಳಿಕೊಂಡರೆ ಆ ಬಾಲಕೃಷ್ಣ ಕೇಳಬೇಕೆ? ಪಕ್ಷ ಎರಡಾಯ್ತು. ಇಬ್ಬರದ್ದೇ ಬಹುಮತದ ತುಕುಡಿ.

ರಾಷ್ಟ್ರ ಮಟ್ಟದಲ್ಲಿ ಪ್ರಸವಾ ಮತ್ತು ಸಂಸವಾ ಪಕ್ಷಗಳು ಒಂದಾಗಿ ಭಾಸವಾ ಪಕ್ಷವು ರೂಪುಗೊಂಡಾಗ ಕೇರಳದ ಪ್ರಸವಾ ಪಕ್ಷವು ಸರಕಾರದಿಂದ ಹೊರ ಬರಬೇಕೆಂದು ಆದೇಶ ಬಂದಿತ್ತು. ಆದರೆ, ಅಧಿಕಾರ ಬಿಡಲೊಲ್ಲದವರು ಆ ಆದೇಶವನ್ನು ಧಿಕ್ಕರಿಸಿ ತಮ್ಮ ಪ್ರತ್ಯೇಕತೆಯನ್ನು ಉಳಿಸಿಕೊಂಡರು. ಈಗ ಈ ಪ್ರತ್ಯೇಕತೆಯು ವಿಚ್ಛಿನ್ನತೆಯಲ್ಲಿ ಪರ್ಯವಸಾನ ಗೊಂಡಿತು. ಇಲ್ಲಿಗೆ ಅದರ ಭವಿಷ್ಯವೂ ನಿರ್ಣಯವಾಯ್ತು. ಶಾಸಕರಾದ ಮೂವರು ಮೂರು ದಾರಿ ಹಿಡಿದು ಬೇರೆ ಬೇರೆ ಪಕ್ಷ ಸೇರಿಕೊಂಡರೆ, ಯಾದವೀ ಕಲಹ ಕೊನೆಗೊಳ್ಳುವುದು.

° ° °

ಒರಿಸ್ಸಾ ವಿಧಾನ ಸಭೆಗೆ ನಡೆದ ಉಪ ಚುನಾವಣೆಗಳಲ್ಲಿ ಬಿಜೂ ಪಟ್ನಾಯಕರ ಪತಾಕೆ ಬಾನೆತ್ತರ ಹಾರಿದ್ದು ದೊಡ್ಡ ಸಂಗತಿಯಲ್ಲ; ಆದರೆ, ಶ್ರೀಮತಿ ಗಾಂಧಿಯವರ ಮುಖಕ್ಕೆ ಮಸಿಬಳೆಯುವಂತಾದದ್ದು ಬೆಚ್ಚಿಕುಸಿದ ವಾರ್ತೆಯೇ ಸರಿ. ಬರಿಯ ಆರು ತಿಂಗಳುಗಳಿಗೆ ಮೊದಲು ಶ್ರೀಮತಿ ಗಾಂಧಿಯವರನ್ನು ಎತ್ತಿ ಹಿಡಿದಿದ್ದ ಒರಿಯಾ ಜನತೆ ಈಗೇಕೆ ಹೊತ್ತು ತಿಪ್ಪೆಗೆಸೆಯಿತು? ಇದು ವಿವೇಚನಾರ್ಹ. ಈ ಫಲಿತಾಂಶಗಳ ಬಗ್ಗೆ ಹಲಬಗೆಯ ವ್ಯಾಖ್ಯೆ ನಡೆಯುತ್ತದೆ. ಮುಂದಿನಾರು ತಿಂಗಳಲ್ಲಿ ನಡೆಯಲಿರುವ ಚುನಾವಣೆಗಳಿಗಿದು ದಿಕ್ಸೂಚಿಯೆನ್ನುವವರಿದ್ದಾರೆ. ಆದರೆ, ಈ ವಾದವನ್ನು ಒಪ್ಪುವುದಂತೂ ಸಾಧ್ಯವಿಲ್ಲ.

ಒರಿಸ್ಸಾದಲ್ಲಾದರೂ ಅಂದು ಇಂಡಿಕೇಟು ಅತ್ಯಂತ ದೊಡ್ಡ ಪಕ್ಷವೆಂದು ಆಯ್ಕೆಯಾಯಿತಷ್ಟೆ ಹೊರತು ಸರಕಾರ ರಚಿಸಲು ಅದು ಶಕ್ತವಾಗಲಿಲ್ಲ. ಈ ಆರು ತಿಂಗಳಲ್ಲಿ ಶ್ರೀಮತಿ ಗಾಂಧಿಯವರು ಒರಿಸ್ಸಾದ ಎಲ್ಲ ವ್ಯವಹಾರಗಳನ್ನೂ ಶ್ರೀಮತಿ ನಂದಿನಿ ಸತ್ಪತಿಯವರಿಗೆ ಒಪ್ಪಿಸಿ, ತಾವು ಇತರತ್ರ ಯೋಚನಾಮಗ್ನರಾಗಿದ್ದಾರೆ. ಶ್ರೀಮತಿ ಗಾಂಧಿ ಚುನಾವಣಾ ಕ್ಷೇತ್ರಗಳನ್ನು ಸಂದರ್ಶಿಸಿ, ತನ್ನ ಇಂದ್ರ ಜಾಲ ತೋರಿಸುತ್ತಿದ್ದರೆ, ಪರಿಣಾಮ ಬದಲಾಗುತಿತ್ತೋ ಏನೋ!

ಕೇಂದ್ರದ ಇಂಡಿಕೇಟ್ ಸರಕಾರದ ನೀತಿಗಳಿಗೆ ಮುಖ್ಯವಾಗಿ ಸಂವಿಧಾನ ತಿದ್ದುಪಡಿಗಳಿಗೆ ಒರಿಸ್ಸದ ಜನತೆ ಪ್ರತಿಭಟನೆ ಸಲ್ಲಿಸಿತು ಎಂಬ ವ್ಯಾಖ್ಯಾನವೂ ಅರ್ಥಹೀನವಾದದ್ದು. ಚುನಾವಣೆಯು ಶ್ರೀ ಸಾಮಾನ್ಯನನ್ನು ಹೊಂದಿಕೊಂಡಿದೆ. ಸಂವಿಧಾನ ತಿದ್ದುಪಡಿಯಿಂದ, ಬಂಗ್ಲಾ ನೀತಿಯ ಯುಕ್ತಾಯುಕ್ತತೆಯಿಂದ ಒಲಿಸಿಕೊಳ್ಳುವುದಾಗಲೀ, ಮುನಿಸಿ ಕೊಳ್ಳುವುದಾಗಲೀ ಸಾಧ್ಯವಿಲ್ಲ. ಕಾರಣ ಆಗ ರಾಜ್ಯನೀತಿಗಳಿಗೆ ತೀರ ಅನಭಿಜ್ಞ. ಅವನ ಅನುಭವಕ್ಕೆ ಬರುವುದು ಬೆಲೆಯೇರಿಕೆ, ಅಭಾವ ಪರಿಸ್ಥಿತಿಗಳು. ನೆನಪಿನಲ್ಲಿ ಉಳಿಯುವುದು ಆವರಿವರು ಹೇಳಿಕೊಟ್ಟ ಮಾತುಗಳು. 'ಇಂದಿರಾ ಗಾಳಿ ನಮಗನುಕೂಲವಾಗಿದೆ'ಯೆಂಬ ಮಿತಿಮೀರಿದ ಆತ್ಮವಂಚನೆಯೇ ಇಂಡಿಕೇಟಿನ ಸೋಲಿಗೆ ಮುಖ್ಯಕಾರಣ.

ಉಪ ಚುನಾವಣೆಗಳ ಫಲಿತಾಂಶದ ಪರಿಣಾಮವೇನಾಗಬಹುದು? ಕೇಂದ್ರದಲ್ಲಿ ಸಚಿವೆಯಾಗಿರುವ ಶ್ರೀಮತಿ ಸತ್ಪತಿಯವರ ಸ್ಥಾನಮಾನಗಳಿಗೆ ಚ್ಯುತಿ ಬಂದೀತೆ? ರಾಜ್ಯ ಘಟಕವನ್ನು ಬಲಪಡಿಸಲೆಂದು ಹೇಳಿ ಪುನರ್ಘಟನಾ ವೇಳೆ ಸತ್ಪತಿಯವರನ್ನು ಕಟಕ್ಕಿಗೆ ಕಳಿಸಬಹುದೆ? ತನಗೆ ತೀವ್ರ ಪ್ರತಿಸ್ಪರ್ಧಿಯಾಗಬಲ್ಲ ಸತ್ಪತಿಯವರನ್ನು ಪ್ರಧಾನಿ ಗಾಂಧಿ ಹೆಚ್ಚುಕಾಲ ಎತ್ತಿಹಿಡಿಯುವುದಿಲ್ಲವೆಂಬುದು ಕಂಡಿತ ಹೇಳಿಕೇಳಿ 'ಕಮ್ಯುನಿಸ್ಟ' 'ಲೇಬಲ್' ಕಳಚಿಕೊಂಡು ಬಂದ ಸತ್ಪತಿಯವರ ಗ್ರಹಚಾರವೇನೆಂದುವುದು ಪ್ರಧಾನಿಗೆ ಮಾತ್ರ ಗೊತ್ತು.

° ° °

ಚಾಲಿಹಾ, ಸುಖಾಡಿಯಾ, ರೆಡ್ಡಿ ಮಾಲೆಯಲ್ಲಿ ಮುಂದಿನ ಹೆಸರು ನಾಯಕರೆಂಬುದು ಜಗಜ್ಜನಿತ. ಶ್ರೀ ನಾಯಕರು ಶ್ರೀ ಚವನರ ಜೆಂಬಲಿಗರೆಂಬುದು ಅವರ ಪದಚ್ಯುತಿಗಿರುವ ಏಕಮಾತ್ರ ಕಾರಣ. ಆದರೆ, ಇತ್ತೀಚೆಗೆ ಅವರನ್ನು ಗದ್ದುಗೆಗಿಳಿಸುವಲ್ಲಿ ಹೆಚ್ಚಿನ ಆಸಕ್ತಿ ತನಗಿಲ್ಲವೆಂದು ಶ್ರೀಮತಿ ಗಾಂಧಿ ವರ್ತಿಸತೊಡಗಿದ್ದಾರೆ. ಮುಂದಿನ ಆರು ತಿಂಗಳಲ್ಲಿ ವಿಧಾನ ಸಭೆಗೆ ಚುನಾವಣೆಗಳು ನಡೆಯುವ ವೇಳೆ ಚವನರ ಮನಸ್ಸು ನೋಯಿಸಿದರೆ, ಅದರ ಪರಿಣಾಮ ನೆಟ್ಟಗಾಗದೆಂದುಲಕೆಗೂ ಗೊತ್ತು.

ಆದರೆ, ಶ್ರೀಮತಿ ಗಾಂಧಿಯ ಪ್ರಬಲ ಸಮರ್ಥಕ, ಯುವಜನ ನಾಯಕ ಕೇಂದ್ರ ಸಚಿವ ಶ್ರೀ ಮೋಹನ ಧಾರಿಯಾ ಮುಂದಿನ ವರ್ಷ ಶ್ರೀ ನಾಯಕರು ಅಧಿಕಾರ ತ್ಯಾಗ ಮಾಡಬೇಕೆಂದು ಕರೆ ನೀಡಿದ್ದಾರೆ. ಅಂದರೆ, ಚುನಾವಣಾ ನಂತರದಲ್ಲಿ ಅವರು ಮುಖ್ಯಮಂತ್ರಿಯಾಗಿ ಮುಂದುವರಿಯಬಾರದೆಂದು ಸಲಹೆ ನೀಡಿದ್ದಾರೆ. ಶ್ರೀ ನಾಯಕರೇನೂ ಮುದುಕರಲ್ಲ; ದೀರ್ಘಕಾಲ ಸುಖಾಡಿಯಾರಂತೆ, ಚಾಲಿಹಾರಂತೆ, ಅಧಿಕಾರ ಸ್ಥಾನವನ್ನು ಅನುಭವಿಸಿಕೊಂಡು ಬಂದವರೂ ಅಲ್ಲ ಅವರು ಮುಖ್ಯಮಂತ್ರಿಯಾಗಿ ಇನ್ನೂ ಹತ್ತು ವರ್ಷ ಕಳೆದಿಲ್ಲ. ಅವರಿಗಿಂತ ಪ್ರಾಯದಲ್ಲೂ, ಮಂತ್ರಿತನದ ಅನುಭವದಲ್ಲೂ, ಹಿರಿಯರಾದವರು ಕೇಂದ್ರದಲ್ಲಿಯೂ ಅನೇಕ ಮಂದಿಯಿದ್ದಾರೆ. ಹಾಗಿರುವಾಗ ಧಾರಿಯಾರವರು ನಾಯಕರಿಗೆ ಮಾತ್ರ ಈ ಬಗೆಯ ಕರೆ ನೀಡಿದುದರ ಉದ್ದೇಶ್ಯವೇನು? ಪ್ರಧಾನಿ ಗಾಂಧಿಯವರು ನೇರಾಗಿ ಹೇಳಲಾಗದ್ದನ್ನು ಧಾರಿಯಾ ಮುಖದಿಂದ ಹೇಳಿಸಿದರೆ? ದಲ್ಯಾಲಾಮಾರ ಬದಲಿಗೊಬ್ಬ ಪಂಥೇನ್‌ಲಾಮಾ ಅವರಿಗಿನ್ನೂ ಮಹಾರಾಷ್ಟ್ರದಲ್ಲಿ ದೊರೆಯಲಿಲ್ಲವಾದ್ದರಿಂದಲೇ ನಾಯಕರ ಪದಚ್ಯುತಿ ಆರು ತಿಂಗಳ ಕಾಲ ಮುಂದುವರಿಯಿತೆನ್ನಬೇಕು. ●●

ಸಣ್ಣ ಉಳಿತಾಯ ಯೋಜನೆಗೆ ಪ್ರಶಸ್ತಿ

ದ. ಕ. ಜಿಲ್ಲಾ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಶ್ರೀ ಬಿ. ನಾರಾಯಣ ನಾಯಕರಿಗೂ ಜಿಲ್ಲಾ ಕೋಅಪರೇಟಿವ್ ಫಿಶ್ ಮಾರ್ಕೆಟಿಂಗ್ ಫೆಡರೇಶನಿನ ಅಧ್ಯಕ್ಷ ಶ್ರೀ ಎಸ್. ಕೆ. ಅಮೀನರಿಗೂ ಸಣ್ಣ ಉಳಿತಾಯ ಯೋಜನೆಯ ಜಯಶೀಲತೆಗೆ ಕಳೆದ ವರ್ಷ ಸಲ್ಲಿಸಿದ ವಿಶೇಷ ಸೇವೆಗಾಗಿ ರಾಜ್ಯಸರಕಾರವು ಪ್ರಶಸ್ತಿ ಪತ್ರ ನೀಡಿ ಗೌರವಿಸಿದೆ. ಬೆಂಗಳೂರಿನ ವಿಧಾನ ಸೌಧದಲ್ಲಿ ಕಳೆದ ತಾ. 14ರಂದು ಜರಗಿದ ಸಮಾರಂಭದಲ್ಲಿ ಕೇಂದ್ರ ಅರ್ಥಖಾತೆಯ ಉಪಸಚಿವೆ ಶ್ರೀಮತಿ ದೋಪಟ್ಟಯವರು ಜಿಲ್ಲೆಯ ಜನಪ್ರಿಯ ಮುಂದಾಳುಗಳಿಗೆ ಪ್ರಶಸ್ತಿ ಪತ್ರ ವಿತರಣೆ ಮಾಡಿದರು.

ಹೊಟೆಲ್ ರೆಸ್ಟೋರೆಂಟ್ ನಡೆಸುವವರಿಗೆ ಸುಸಂಧಿ !

ಉತ್ತರ ಕನ್ನಡ ಜಿಲ್ಲಾ

ಸಿದ್ಧಾಪುರದಲ್ಲಿ ಮೈನ್ ರೋಡಿನಲ್ಲಿರತಕ್ಕ ಅಂಗಡಿ.

ಈ ಬಗ್ಗೆ ವಿಚಾರಿಸಿರಿ :

ಕೆನರಾ ಸ್ಟೋರ್ಸ್, ಸಿದ್ಧಾಪುರ (N.K.)

ಕುಂದಾಪುರ ಮು. ಕೋರ್ಟಿನಲ್ಲಿ

O.S. No. 115/71

ವಾದಿ— ಪ್ರಭಾಕರ ಟೈಲ್ ವರ್ಕ್ಸ್, ಕುಂದಾಪುರ

ಪ್ರತಿವಾದಿ— ತೀಕಪ್ಪ ಗೌಡ

ಪ್ರತಿವಾದಿಗೆ ಯಿ ಮೂಲಕ ತಿಳಿಯಪಡಿಸುವುದೇನೆಂದರೆ–

ಪ್ರತಿವಾದಿ H ತೀಕಪ್ಪ ಗೌಡ, ನಾಪುಕಾರ್, ಹೊಸನಗರ ತಾಲ್ಲೂಕು ರಿಪನ್‌ಪೇಟೆ ಗುಳಿಗದ್ದೆಯಲ್ಲಿರುವವ. ಶಿವಮೊಗ್ಗ ಡಿಸ್ಟ್ರಿಕ್ಟ್.

ವಾದಿಯು ನಿಮ್ಮ ಮೇಲೆ ದಾಖಲು ಮಾಡಿದ ಮೇಲ್ಕಂಡ ದಾವೆಯನ್ನು ತಾರೀಕು 6-11-1971 ಕ್ಕೆ ತಸ್ತಿಗ ಯಿಟ್ಟಿರುವುದರಿಂದ ನೀವು ಸದ್ರಿ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಬಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಂಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯನ್ನು ಕೇಳಿ ಫೈಸಲು ಮಾಡೋಣಾದೀತೆಂತ ಯಿ ಮೂಲಕ ತಿಳಿಸೋಣಾಗುತ್ತದೆ.

M. MADHAVA RAO

Advocate for Plaintiff

ತಾರೀಕು 29-9-71, ಕುಂದಾಪುರ.

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂ ಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

ಸುಂದರ ಕುಂದಾಪುರ ನಗರಪ್ರವೇಶ ದ್ವಾರದಲ್ಲಿ ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ–

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಓದಿರಿ! "ಗುಡಿ ಗೃಹಕಾರ್ಯ"

ಕನ್ನಡ ಪುಸ್ತಕ ಚಿಕ್ಕ ಬಂಡವಲಿನಲ್ಲಿ ನಿಮ್ಮ ಮನೆಯಲ್ಲಿ ಉದ್ಯೋಗ – ವ್ಯವಹಾರ ಮಾಡಿ ನಿಮ್ಮ ಆದಾಯ ಬೆಳೆಸಿಕೊಳ್ಳಿರಿ. ಪುಟ 234 ಬೆಲೆ ರೂ. 10 **'ನೂತನ ಸಣ್ಣ ಉದ್ಯಮ'** ಪುಟ 461, ಬೆಲೆ: ರೂ. 16. ಅಂಚೆ ವೆಚ್ಚ ರೂ. 2-50.

COTTAGE INDUSTRY (NU-6) P.B. No. 1262, Anguri Bagh Market, DELHI-6.

ನಿಮ್ಮ ಬಾಕಿ ಚಂದಾ ಹಣವನ್ನು ಕಳುಹಿಸಿರಿ

ಭದ್ರಾವತಿ ಲಯನ್ಸ್ ಕ್ಲಬ್ಬಿನ ಶ್ಲಾಘನೀಯ ಚಟುವಟಿಕೆಗಳು

ಕಳೆದ ತಾ. 25ರಂದು ಭದ್ರಾವತಿ ಲಯನ್ಸ್ ಕ್ಲಬ್ಬಿನವರು ಏರ್ಪಡಿಸಿದ ಲಯನ್ ಸದಸ್ಯರ ಮತ್ತು ಅತಿಥಿಗಳ ಸಭೆಯಲ್ಲಿ ಕ್ಲಬ್ಬಿನವರು ಪ್ರಕಟಿಸತೊಡಗಿದ 'ಭದ್ರಾಲಯನ್' ಎಂಬ ಪ್ರಕಟಣ ಪತ್ರಿಕೆಯನ್ನು ಮುಖ್ಯ ಅತಿಥಿಯಾಗಿ ಬಂದಿದ್ದ "ನವಯುಗ" ಸಂಪಾದಕ ಕೆ. ಹೊನ್ನಯ್ಯ ಶೆಟ್ಟರು ಬಿಡುಗಡೆಗೊಳಿಸುತ್ತಾ, ಈ ಕ್ಲಬ್ಬಿನವರು ಮಾಡುತ್ತಿರುವ ವಿವಿಧ ಸಾರ್ವಜನಿಕ ಕಾರ್ಯಗಳನ್ನು ಶ್ಲಾಘಿಸಿ ದಕ್ಷಿಣ ಕನ್ನಡಿಗರಾದ ಶ್ರೀ ಬಡೆಕ್ಕಿಲ ಕೃಷ್ಣ ಭಟ್, ಬಿ. ಮಾಧವಾಚಾರ್ಯ ಮತ್ತಿತರ ಡಾಕ್ಟರುಗಳೇ ಮೊದಲಾದವರು ಭದ್ರಾವತಿಯಲ್ಲಿ ಮಾಡಿರುವ, ಮಾಡುತ್ತಿರುವ ಸಾರ್ವಜನಿಕ ಕಾರ್ಯಗಳಿಗಾಗಿ ಅವರನ್ನು ಅಭಿನಂದಿಸಿ ತನಗಿತ್ತ ಗೌರವಕ್ಕಾಗಿ ಕೃತಜ್ಞತೆ ಸೂಚಿಸಿದರು.

ಲಯನ್ ಅಧ್ಯಕ್ಷ ಡಾ| ಎಸ್. ಎಸ್. ಭಟ್ಟರು ಆರಂಭದಲ್ಲಿ ಸ್ವಾಗತಿಸಿದ ಬಳಿಕ ಶ್ರೀ ಬಿ. ಕೃಷ್ಣ ಭಟ್ಟರು ಮುಖ್ಯ ಅತಿಥಿಗಳ ಪರಿಚಯ ಭಾಷಣ ಮಾಡಿದರು ಕಾರ್ಯದರ್ಶಿ ಡಾ| ಎಂ. ಶಂಕರ ಭಟ್ಟರು ವರದಿಯನ್ನೋದಿದರು. ಶ್ರೀ ಎಂ. ಸುಬ್ಬರಾಯರು ಇತರ ಅತಿಥಿಗಳ ಪರಿಚಯ ಮಾಡಿದರು ಮುಂದಿನ ಕಾರ್ಯಯೋಜನೆಗಳನ್ನು ಅಧ್ಯಕ್ಷರು ವಿವರಿಸಿದ ಮೇಲೆ ಕಾರ್ಯದರ್ಶಿಗಳು ವಂದನಾರ್ಪಣೆ ಮಾಡಿದರು. ಅಂತ್ಯದಲ್ಲಿ ಭೋಜನಕೂಟ ಏರ್ಪಡಿಸಲಾಗಿತ್ತು.

ಬೆಳಿಗ್ಗೆ ನಡೆದ ಸಮಾರಂಭದ ಅಂಗವಾಗಿ, ಉಚಿತ ವೈದ್ಯಕೀಯ ಸೇವಾ ಯೋಜನೆಯ ಪತಿಯಿಂದ ಸುಮಾರು ಮುನ್ನೂರು ಮಂದಿ ಮಕ್ಕಳಿಗೆ ಟ್ರಿಪಲ್ ಆಂಟಿಜೆನ್ ಚುಚ್ಚು ಮದ್ದಿನ ಮೊದಲ ಡೋಸನ್ನು ಕೊಡಲಾಯಿತು.

ಓಲ್ಡ್ ಟೌನಿನ ಸರಕಾರಿ ಜನರಲ್ ಆಸ್ಪತ್ರೆ, ಪುರಸಭಾ ಕಚೇರಿ ಹಾಗೂ ಡೋರ್ಸ್ಸೆ ಎಂಡ್ ಕೊ. ಕೇಂದ್ರಗಳಲ್ಲಿ ಲಯನ್ಸ್ ಕ್ಲಬ್‌ನ ವೈದ್ಯರುಗಳಾದ ಡಾ| ಎಂ. ಎಸ್. ಭಟ್, ಡಾ| ಜಿ. ಎಂ. ಮುರಿಗೇಂದ್ರಯ್ಯ ಡಾ| ಮಹಮುದಾಲಿ, ಡಾ| ಎ.ಎ. ಶೆಟ್ಟಿ, ಡಾ| ಎಚ್. ಟಿ. ರುದ್ರಪ್ಪ, ಡಾ| ಕರುಣಾಕರ ಶೆಟ್ಟಿ, ಡಾ| ಎಚ್. ಎಂ. ಎನ್. ಆರಾಧ್ಯ, ಕ್ಲಬ್‌ನ ಅಧ್ಯಕ್ಷ ಡಾ| ಎಸ್. ಎಸ್. ಭಟ್‌ರವರ ನೇತೃತ್ವದಲ್ಲಿ ಸದಸ್ಯರುಗಳ ನೆರವಿನಿಂದ ಕಾರ್ಯಕ್ರಮ ಕೈಗೊಂಡಿದ್ದರು.

ಲೋಕೋ ಭಿನ್ನ ರುಚಿಃ

(ಏಳನೇ ಪುಟದಿಂದ)

ತ್ಯಾಗ ಮಾಡುವ ಅಭಿರುಚಿಗಿಂತ ಹಿರಿದಾದುದೇನಿದೆ?

ಅತ್ಯಮೂಲ್ಯವಾದ ಸ್ವಾತಂತ್ರ್ಯ ನಮಗಿಂದು ಸಿಕ್ಕಿದೆ. ಇದನ್ನು ನಾವು ಕಾಪಾಡಿಕೊಂಡು ಬರಬೇಕು. ಇದಕ್ಕಾಗಿ ನಮ್ಮನಮ್ಮಲ್ಲೇ ಕಚ್ಚಾಡಿಕೊಂಡು ನಮ್ಮೊಳಗೇ ಹೊಡೆದಾಡಿಕೊಂಡು ಬೇರೊಬ್ಬನಿಗೆ ಇಲ್ಲಿ ಪ್ರವೇಶಿಸುವಂಥ ಎಡೆ ಸಿಕ್ಕಬಾರದು. ನಾವೆಲ್ಲರೂ ಒಕ್ಕೊರಲಿನಿಂದ ಭಾರತಾಂಬೆಗೆ ಜಯಜಯಕಾರವನ್ನು ಮಾಡಬೇಕು. ತಾನಿರುವುದು ಹೀಗೆ, ತನ್ನ ಧೋರಣೆ ಹೀಗೆ, ತನಗಿದು ಮೆಚ್ಚಿಗೆ, ಎಂಬ ತರ್ಕಗಳನ್ನು ದೇಶಕ್ಕಾಗಿ, ದೇಶ ಮಾತೆಗಾಗಿ ಬಿಡಬೇಕು. ಲೋಕೋದ್ಧಾರಕ್ಕಾಗಿ—ಈ ಸುಖಕ್ಕೆ ಊನ ಕಿಂಚಿತ್ತು ಬಂದರೂ ಸಹಿಸಿ ಕೊಳ್ಳಬೇಕು. ಮನಸ್ಸು ಅಶಾಂತವಾದರೂ ಶಾಂತಿಯನ್ನು ಹಿಡಿದು ತರಲು ಯತ್ನಿಸಬೇಕು. ಅಂದರೆ ಸಕಲರಲ್ಲೂ ತೃಪ್ತಿ ನೆಲಸುತ್ತದೆ. ತ್ಯಾಗ ಅಮರವಾಗುತ್ತದೆ.

ಸತ್ಯ, ನ್ಯಾಯ, ಧರ್ಮ—ಎಂದೆಂದೂ ಚಿರಾಯುವಾಗಲಿ.

—ಶ್ರೀ ಪ. ರಾಮಕೃಷ್ಣ ಶಾಸ್ತ್ರಿ

●●

ಶಾರದಾ ಕಲ್ಯಾಣ ಮಂಟಪ ಉದ್ಘಾಟನೆ

ತಾ. 29–9–71ರಂದು ಜರಗಿದ, ಉಡುಪಿ ಕುಂಜಿಬೆಟ್ಟಿನಲ್ಲಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ನಿರ್ಮಿಸಲಾದ ಶಾರದಾ ಕಲ್ಯಾಣ ಮಂಟಪದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಉಡುಪಿ ಶ್ರೀ ಕಾಣಿಯೂರು ಮಠಾಧೀಶ ಶ್ರೀ ವಿದ್ಯಾವಾರಿನಿಧಿ ತೀರ್ಥ ಶ್ರೀ ಪಾದಂಗಳವರು ಮಾತನಾಡುತ್ತಾ ಸ್ಥಾನಿಕ ಬ್ರಾಹ್ಮಣರನ್ನು ಪ್ರತ್ಯೇಕಿಸಿದ್ದರ ಕುರಿತು ಪ್ರಸ್ತಾಪಿಸಿ ಈ ಕುರಿತು ಯಾವ ಶಾಸ್ತ್ರಾಧಾರವೂ ಇಲ್ಲವೆಂದೂ ಇದು ನಮ್ಮ ಸಂಕುಚಿತ ಭಾವನೆಯ ದ್ಯೋತಕವಾಗಿದೆಯೆಂದೂ ನುಡಿದರು. ಶಂಕರಾಚಾರ್ಯರಾಗಲೀ, ಮಧ್ವಾಚಾರ್ಯರಾಗಲೀ ಭಿನ್ನ ಮತಗಳೊಡನೆ ವೈಮನಸ್ಸು ಬೆಳೆಸುವುದಕ್ಕೆ ಅವಕಾಶ ನೀಡಿದವರಲ್ಲ. ಅವರ ತತ್ವ ಧ್ಯೇಯೋದ್ದೇಶಗಳು ಅಜ್ಞಾನವನ್ನು ತೊಲಗಿಸಿ ದೇವತ್ವದ ಕಡೆಗೆ ಒಯ್ಯುವುದಾಗಿರುತ್ತದೆ ಎಂದರು. ಈ ಬಗ್ಗೆ ಅಷ್ಟಮಠಾಧಿಪತಿಗಳ ಪ್ರತಿಕ್ರಿಯೆಯನ್ನವರು ವಿವರಿಸಿ ಅಷ್ಟ ಮಠಾಧಿಪತಿಗಳು ಅವರಿಗೆ ಸಹಪಂಕ್ತಿ ಕೊಟ್ಟು ಏಕತೆಯನ್ನು ಸಾಧಿಸುವ ವಿಚಾರದಲ್ಲಿ ಆಶ್ವಾಸನೆ ಕೊಟ್ಟಿರುವರೆಂದೂ ತಿಳಿಸಿದರು. ಕೊನೆಯದಾಗಿ ಅವರು ಈ ಮಂದಿರದಲ್ಲಿ ಎಲ್ಲ ಸಮಾಜಕ್ಕೂ ಅನುಕೂಲವಾಗುವ ಸೇವೆ ಸತ್ಕಾರ್ಯಗಳು ಜರುಗಲೆಂದು ಹಾರೈಸಿದರು.

ಆರಂಭದಲ್ಲಿ ಶ್ರೀ ಎ. ಶ್ಯಾಮರಾಯರು ಸ್ವಾಗತಿಸಿ ಅತಿಥಿಗಳ ಪರಿಚಯ ಮಾಡಿದರು. ಶ್ರೀ ಎ. ಕೃಷ್ಣರಾಯರು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಚಟುವಟಿಕೆಗಳನ್ನು ವಿವರಿಸುತ್ತಾ ಶ್ರೀ. ಅಲೆವೂರು ಶ್ಯಾಮರಾಯರು ಹಾಗೂ ಅವರ ಪುತ್ರರು ಈ ಸ್ಥಳವನ್ನು ದಾನವಾಗಿ ಕೊಟ್ಟಿರುವುದಲ್ಲದೆ ಇತರ ರೀತಿಯಲ್ಲಿಯೂ ಅವರು ನೆರವಾಗಿರುವುದನ್ನು ತಿಳಿಸಿದರು.

ಮುಖ್ಯ ಅತಿಥಿ ಲೋಕ ಸಭಾ ಸದಸ್ಯ ಶ್ರೀ ಪಿ. ರಂಗನಾಥ ಶೆಣ್ಯೆಯವರು ಮಾತಾಡುತ್ತಾ, ಸ್ಥಾನಿಕ ಬ್ರಾಹ್ಮಣರು ಧಾರ್ಮಿಕ ಮನೋಭಾವದವರು, ಸಾತ್ವಿಕ ಸ್ವಭಾವದವರು–ದಾನಿಗಳೆಂದು ಕೊಂಡಾಡಿದರು. ಉಡುಪಿ ನಗರ ಸಭಾಪತಿ ಡಾ| ವಿ. ಎಸ್. ಆಚಾರ್ಯರು ಉಡುಪಿ ನಾಗರಿಕರ ಪರವಾಗಿ ಸಂಸ್ಥೆಗೆ ಶುಭಕೋರಿದರು.

ಎಂ. ಜಿ. ಎಂ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ ಭಟ್ಟರು ಮಾತನಾಡಿ ತೇಜಸ್ವಿ ವ್ಯಕ್ತಿಗಳು ಸಹಕಾರ ಬುದ್ಧಿಯವರೂ ಸಮಾಜ ಸೇವೆ ಮಾಡುವ ವ್ಯಕ್ತಿಗಳು ಈ ಸಮಾಜದಲ್ಲಿದ್ದಾರೆಂದು ನುಡಿದು ಮಂದಿರಕ್ಕೆ ಶುಭ ಹಾರೈಸಿದರು.

ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ಪ್ರಿನ್ಸಿಪಾಲ್ ಡಾ| ಪಿ. ಗುರುರಾಜ ಭಟ್ಟರು ಮಾತನಾಡುತ್ತಾ, ಸ್ಥಾನಿಕ ಬ್ರಾಹ್ಮಣರ ಚಾರಿತ್ರಿಕ ಹಿನ್ನೆಲೆಯನ್ನು ವಿವರಿಸಿದರು. ಸಮಾಜದ ಒಟ್ಟು ಹಿತ ಸಾಧಿಸಲ್ಪಡುವುದಾದರೆ ಗುಂಪುಗಾರಿಕೆ ಸ್ವಾಗತಾರ್ಹವೆಂದು ನುಡಿದ ಅವರು ಒಂದುಗೂಡಿಸುವ ಕೆಲಸ ವಿಶಿಷ್ಟವಾದುದೆಂದರು.

ಶ್ರೀ ಎಸ್. ವೆಂಕಟರಾಜರು ಮಾತನಾಡುತ್ತಾ ಶಿಲ್ಪದ ಸನಿಹಕ್ಕೆ ಹೋದಾಗ ಆನಂದಿಸುವಂತೆ ಈ ಮಹತ್ವದ ಕಾರ್ಯ ನೋಡಿ ನಾನು ಮೂಕನಾಗಿದ್ದೇನೆಂದರು.

ಮಂದಿರದ ಕಾರ್ಯದಲ್ಲಿ ನೆರವಾದವರಿಗೆಲ್ಲ ಉಡುಗೊರೆ ಇತ್ತ ಬಳಿಕ ಶ್ರೀ ಯು. ಅನಂತ ಕೃಷ್ಣರು ಧನ್ಯವಾದಗಳನ್ನರ್ಪಿಸಿದರು.

ಯಾಂತ್ರಿಕ ದೋಣಿ ಕೊರೊನೆಟ್—14 ನೀರಿಗಿಳಿಸುವ ಸಮಾರಂಭ

ಕೆನರಾ ಬೇಂಕಿಂಗ್ ಕಾರ್ಪೊರೇಶನಿನ ಚೇರ್‌ಮೆನ್ ಶ್ರೀ ಎಂ. ಆರ್. ಕಾಮತ್‌ರವರು ಮಲ್ಪೆಯಲ್ಲಿ ಕೊರೊನೆಟ್ ಕಂಪೆನಿಯ ನೂರು ಅಶ್ವಶಕ್ತಿಯ ಮೀನುಗಾರಿಕಾ ಯಾಂತ್ರಿಕ ದೋಣಿಯನ್ನು ನೀರಿಗಿಳಿಸುತ್ತಾ, ಮತ್ಸ್ಯೋದ್ಯಮ ಅಪಾಯಕಾರಿಯಾದ ಉದ್ಯಮ, ಶ್ರೀ ಮಧ್ವರಾಜರಂಥಹ ಉತ್ಸಾಹೀ ಉದ್ದಿಮೆದಾರರು ಮೀನುಗಾರರಲ್ಲಿ ಆತ್ಮ ವಿಶ್ವಾಸ ಹುಟ್ಟುವಂತೆ ಮಾಡಿರುವರಲ್ಲದೆ ಮತ್ಸ್ಯೋದ್ಯಮದ ಪ್ರಗತಿಗೆ ಸಹಾಯಕರಾಗಿರುತ್ತಾರೆ. ಕಷ್ಟ ಪರಿಶ್ರಮ ಮತ್ತು ಸಂಯಮಗಳಿಂದ ಮಾತ್ರ ನಾವು ಯಶಸ್ಸು ಪಡೆಯಲು ಸಾಧ್ಯ ಎಂದು ಹೇಳಿದರು. ಮೀನುಗಾರರ ಸಂಪಾದನೆಯಲ್ಲಿ ಏರುಪೇರು ಇರುವುದನ್ನವರು ಉಲ್ಲೇಖಿಸಿ ಉಳಿತಾಯ ಯೋಜನೆಯ ಮೂಲಕ ಉಳಿಸಿಕೊಳ್ಳುವ ಧ್ಯೇಯವನ್ನರಿಸಿಕೊಳ್ಳಬೇಕೆಂದು ಹೇಳಿದರು.

ಆರಂಭದಲ್ಲಿ ಕೊರೊನೆಟ್ ಕಂಪೆನಿಯ ಮಾಲಕ ಶ್ರೀ ಎಂ ಮಧ್ವರಾಜರು ಸ್ವಾಗತಿಸಿ ಮಲ್ಪೆಯಲ್ಲಿ ಆರಂಭದಿಂದ ಮತ್ಸ್ಯೋದ್ಯಮಿಗಳಿಗೆ ಸಹಕಾರವಿತ್ತ ಬ್ಯಾಂಕ್ ಕಾರ್ಪೊರೇಶನ್ ಬ್ಯಾಂಕೆಂದು ತಿಳಿಸಿದರು. ಕೊರೊನೆಟ್ ಸಂಸ್ಥೆಯ ನೂರು ಅಶ್ವಶಕ್ತಿಯ ಡೆನ್ಮಾರ್ಕಿನ ಮೀನುಗಾರಿಕಾ ದೋಣಿಗೆ ಈ ಬ್ಯಾಂಕ್ ಒಂದು ಲಕ್ಷ ರೂ. ನೆರವಿತ್ತದಕ್ಕೆ ಕೃತಜ್ಞತೆ ಸಲ್ಲಿಸಿದರು.

ಡಾ| ವಿ ಕೆ. ಬಲ್ಲಾಳ, ಜನಾಬ್ ಉಸ್ತಾದ್, ಅಬ್ದುಲ್ ರಜಾಕ್ ಮತ್ತು ಎಸ್. ಎಲ್. ನಾರಾಯಣ ಭಟ್ಟರು ಸಭಿಕರ ಪರವಾಗಿ ಮಾತಾಡಿದರು ಶ್ರೀ ಎಸ್. ಕೆ. ಅಮೀನರು ಧನ್ಯವಾದಗಳನ್ನರ್ಪಿಸಿದರು.

ಯಕ್ಷಗಾನ ಪಟು ವೀರಭದ್ರ ನಾಯ್ಕರಿಗೆ ಮೈಸೂರಲ್ಲಿ ಸನ್ಮಾನ

ರಾಜ್ಯ ಪ್ರಶಸ್ತಿ ವಿಜೇತ ವೀರಭದ್ರನಾಯಕರಿಗೆ ಮೈಸೂರಿನ ಜನತೆಯ ಪರವಾಗಿ ಮಧುಸೂದನ ವಾಸದ ಮೂಲಕರಾದ ಶ್ರೀ ರಾಮದಾಸ ಭಟ್ಟ ಸೋದರರು ತಾ. 15–9–71ರಂದು ಏರ್ಪಡಿಸಿದ ಸನ್ಮಾನ ಸಮಾರಂಭದಲ್ಲಿ ಮೈಸೂರಿನ ರಾಜ್ಯಪಾಲ ಶ್ರೀ ಧರ್ಮವೀರರು ಮಾತನಾಡುತ್ತಾ, ಯಕ್ಷಗಾನ ನಮ್ಮ ದೇಶದ ವಿಶಿಷ್ಟ ಜಾನಪದ ಕಲೆ, ಇದರ ಔನ್ನತ್ಯವನ್ನು ಕಾಪಾಡಿಕೊಂಡು ಭಾರತೀಯ ನೃತ್ಯ ಸಂಪ್ರದಾಯಕ್ಕೆ ಜಗತ್ತಿನ ಮನ್ನಣೆ ಸಿಗುವಂತೆ ಮಾಡುವುದು ನಮ್ಮ ಕರ್ತವ್ಯ. ರಾಜ್ಯ ಮತ್ತು ಕೇಂದ್ರದ ಎಕಾಡೆಮಿಗಳ ಜತೆಗೆ ಯಕ್ಷಗಾನ ಪ್ರಿಯರಾದ ರಾಮದಾಸ ಭಟ್ಟರಂಥ ಉದ್ದಿಮೆದಾರರು ತೋರುವ ಅಭಿಮಾನ ಹಾಗೂ ಜನತಾ ಕಲಾವಿದನೊಬ್ಬನನ್ನು ಸನ್ಮಾನಿಸುವ ಅವರ ಈ ಕಾರ್ಯ ಸ್ತುತ್ಯಾರ್ಹ ಎಂದರು.

ಶ್ರೀ ಸದಾನಂದ ಭಟ್ಟರು ಶ್ರೀ ನಾಯಕರಿಗೆ ಮಾನ ಪತ್ರ ಅರ್ಪಿಸಿದರು ಅಲ್ಲದೆ ಜತೆಗೆ ಗಂಧದ ಕೆತ್ತನೆಯುಳ್ಳ ರಜತಫಲಕವನ್ನೂ ನೀಡಿ ಗೌರವಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ| ಶಿವರಾಮ ಕಾರಂತರು ಯಕ್ಷಗಾನ ಪರಂಪರೆಯ ಕುರಿತು ಮಾತನಾಡಿ, ವೀರಭದ್ರನಾಯಕರಂಥವರು ತರುಣ ಕಲಾವಿದರಿಗೆ ತರಬೇತಿ ನೀಡಲು ಯೋಗ್ಯರೆಂದು ಪ್ರಶಂಸಿಸಿದರು.

ಆರಂಭದಲ್ಲಿ ಶ್ರೀ ಕು. ಶಿ. ಹರಿದಾಸ ಭಟ್ಟರು ಸ್ವಾಗತಿಸುತ್ತಾ ರಾಜ್ಯದ ಸಂಗೀತ ನಾಟಕ ಅಕಾಡೆಮಿಯು ಯಕ್ಷಗಾನದ ಬಗ್ಗೆ ಆಸಕ್ತಿ ತೋರಿಸಿದರೆ ಅದರ ಉಭಯ ಪರಂಪರೆಯನ್ನು ಉಳಿಸಿಕೊಳ್ಳಲು ವೀರಭದ್ರನಾಯಕರಂಥಹ ಸಮರ್ಥರು ನೆರವಾಗಬಲ್ಲರೆಂದೂ, ಡಾ| ಕಾರಂತರ ಸಂಶೋಧನೆ ಮತ್ತು ಪ್ರಯತ್ನಗಳ ಲಾಭವನ್ನು ಮೇಳಗಳು ಪಡೆಯಬೇಕೆಂದೂ ನುಡಿದರು.

ಅಂತ್ಯದಲ್ಲಿ ಬಿ. ಆರ್. ರಾಧಾಕೃಷ್ಣ ಭಟ್ಟರ ವಂದನೆಯ ತರುವಾಯ ಸಾಲಿಗ್ರಾಮ ಮೇಳದವರು 'ತಾಮ್ರ ಧ್ವಜ ಕಾಳಗ' ಮತ್ತು 'ಭೀಷ್ಮ ವಿಜಯ'ವೆಂಬ ಎರಡು ಪ್ರಸಂಗಗಳನ್ನು ಪ್ರದರ್ಶಿಸಿದರು.

ಶ್ರೀ ಎಂ. ಸುಂದರರಾಮ ಶೆಟ್ಟರಿಗೆ ಶುಭ ವಿದಾಯ

ವಿಜಯಾ ಬೇಂಕಿನ ಚೆಯರ್‌ಮೆನ್ ಶ್ರೀ ಎಂ. ಸುಂದರರಾಮ ಶೆಟ್ಟರು ಇದೇ ಅಕ್ಟೋಬರ ಒಂದನೇ ತಾರೀಕಿನಿಂದ 52 ದಿನಗಳವರೆಗೆ ವಿದೇಶ ಪ್ರವಾಸಕ್ಕೆ ಹೊರಡುವುದರಿಂದ ಅವರಿಗೆ ಶುಭ ವಿದಾಯ ಕೋರಲು ತಾ. 25–9–71ರಂದು ಮಂಗಳೂರಲ್ಲಿ ಮೋತಿಮಹಲಿನಲ್ಲಿ ಬ್ಯಾಂಕಿನ ಅಧಿಕಾರಿಗಳೂ ಸಿಬಂದಿಯವರೂ ವಿದಾಯ ಕೂಟವೊಂದನ್ನು ಏರ್ಪಡಿಸಿದ್ದರು.

ಆರಂಭದಲ್ಲಿ ಉಡುಪಿ ಗ್ರೂಪ್ ಮೆನೇಜರ್ ಶ್ರೀ ಬಿ. ಎಲ್. ಎನ್. ಹೆಗ್ಡೆಯವರು ಮಾತಾಡುತ್ತಾ, ಶ್ರೀ ಸುಂದರರಾಮ ಶೆಟ್ಟರು 52 ದಿನಗಳ ಪ್ರವಾಸದಲ್ಲಿ ವಿದೇಶ ವಿನಿಮಯ ವ್ಯವಹಾರದ ಸಂಬಂಧ ಇಟಲಿ, ಪಶ್ಚಿಮ ಜರ್ಮನಿ, ಬೆಲ್ಜಿಯಂ, ಫ್ರಾನ್ಸು, ಲಂಡನ್, ಅಮೆರಿಕಾ ಮತ್ತು ಕೆನಡಾ ಮುಂತಾದ ಸ್ಥಳಗಳನ್ನು ಸಂದರ್ಶಿಸಿ ಅಲ್ಲಿನ ಬ್ಯಾಂಕುಗಳೊಡನೆ ಪೂರ್ವಭಾವಿ ವಿಚಾರ ವಿನಿಮಯ ನಡೆಸುವರು ಎಂದು ನುಡಿದು ಶ್ರೀ ಶೆಟ್ಟರ ಕಾರ್ಯಕ್ಷಮತೆಯನ್ನು ಕೊಂಡಾಡಿ ಅವರಿಗೆ ಶುಭ ಪ್ರಯಾಣ ಕೋರಿದರು.

ಶ್ರೀ ಸುಂದರರಾಮ ಶೆಟ್ಟರು ಕೃತಜ್ಞತೆ ಸೂಚಿಸುತ್ತಾ ಬ್ಯಾಂಕು ಸಾಧಿಸಿದ ಪ್ರಗತಿಗೆ ನಾನೊಬ್ಬನೆ ಕಾರಣನಲ್ಲ. ಉತ್ಸಾಹ, ಶ್ರದ್ಧೆ, ನಿಷ್ಠೆ, ನಿರಂತರ ಶ್ರಮಗಳಿಂದ, ಒಗ್ಗಟ್ಟಿನ ಮನೋಭಾವದಿಂದ ದುಡಿದ ನಿಮ್ಮೆಲ್ಲರ ಸಹಕಾರದಿಂದ ಈ ಯಶಸ್ಸು ಸಾಧ್ಯವಾಗಿದೆ. ನಾನು ಏನಾದರೂ ಮಾಡಿದ್ದರೆ ಅದು ಕರ್ತವ್ಯ ಮಾತ್ರ ಎಂದು ಹೇಳಿದರು.

ಕಾಸರಗೋಡು ಗ್ರೂಪ್ ಮೆನೇಜರ್ ಶ್ರೀ ಐತಪ್ಪ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಮಿತ ಕುಟುಂಬ ಯೋಜನೆಗೆ.

ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, **ದ.ಕ.**

(ಮೂರನೇ ಪುಟದಿಂದ)

ಗೆಲ್ ಮಾಡಿದ ಪ್ರಯತ್ನವನ್ನು ಹೇಳಿಕೆ ಉಗ್ರವಾಗಿ ಟೀಕಿಸಿದೆ ಇದರ ಅರ್ಥವೇನು? ಶ್ರೀ ಕೆಂಗಲ್ಲರ ವಿರುದ್ಧ ಮೂರನೆಯ ಗುಂಪನ್ನು ಶ್ರೀ ದೇವರಾಜ ಅರಸರೇ ಎತ್ತಿ ಕಟ್ಟಿದ್ದಾರೆಯೆ? ಕೆಂಗಲ್ಲರು ಮುಂದು ಬಂದರೆ ತಾನು ಹಿಂದುಳಿಯಬೇಕೆಂಬುದು ಅವರಿಗೂ ತಿಳಿಯದ ಸಂಗತಿಯಲ್ಲ ಏಕೆಂದರೆ, ಶ್ರೀ ಹನುಮಂತಯ್ಯನವರ ಮೇಲೆ ಅಧಿಕಾರ ದುರುಪಯೋಗದ ಆರೋಪವಿದ್ದರೂ, ಸರ್ವಾಧಿಕಾರ ಪ್ರಿಯರೆಂಬ ಹೆಸರಿದ್ದರೂ ಅವರ ಧೀಮಂತಿಕೆಯನ್ನು ಮೆಚ್ಚದಿರುವವರಿಲ್ಲ. ಇಂಡಿಕೇಟಿನ ಈ ಅಂತಃಕಲಹ ಚುನಾವಣೆಯ ಮೇಲೆ ಅಚ್ಚಳಿಯದ ಪ್ರಭಾವ ಬೀರಿಯೇ ಬೀರುತ್ತದೆ

ಸಿಂಹ ಗರ್ಜನೆ

ತಾನೇ ಕಾಂಗ್ರೆಸ್ ಎಂದು ಹೇಳಿಕೊಳ್ಳುವ ಸಿಂಡಿಕೇಟಿನಲ್ಲೂ ಅಂತಃಕಲಹ ಮೂಡಿದೆ ಇದು ರಾಷ್ಟ್ರೀಯ ಮಟ್ಟದಲ್ಲಿ ನಡೆದಿದೆ ಪಕ್ಷದ ಹಿರಿಯ ನಾಯಕರನ್ನು, ನಾಯಕತ್ವವನ್ನು ಕಟುವಾಗಿ ಟೀಕಿಸುವುದು ಸರ್ವೇಸಾಮಾನ್ಯವಾಗಿದೆ. ಕೆಲವು ದಿನಗಳಿಗೆ ಮೊದಲು ಡಾ| ರಾಮ ಸುಭಗ ಸಿಂಗರು ಟೀಕಾಸ್ತ್ರ ಬಿಟ್ಟಿದ್ದರು. ಮೊನ್ನೆ ಮೊನ್ನೆ ಶ್ರೀಮತಿ ತಾರಕೇಶ್ವರಿ ಸಿಂಹರು ತಮ್ಮ ಕೂರಲಗು ಎಸೆದಿದ್ದಾರೆ. ಮುಂದಿನ ವರ್ಷ ಚುನಾವಣೆಗಳನ್ನು ಈ ಸ್ವರೂಪದ ಸಂಘಟನೆಯಿಂದ ಎದುರಿಸುವುದು ಸಾಧ್ಯವಿಲ್ಲವಾದ್ದರಿಂದ ತುರ್ತಾಗಿ ಪಕ್ಷದ ಚುನಾವಣೆಗಳು ನಡೆಯಬೇಕೆಂದು ಅವರು ಬಯಸಿದ್ದಾರೆ. ಪಕ್ಷದ ಹಿರಿಯ ನಾಯಕರಾದ, ಶ್ರೀಗಳಾದ ನಿಜಲಿಂಗಪ್ಪ, ಕಾಮರಾಜ, ಮುರಾರ್ಜಿ-ದೇಸಾಯಿ, ಸಾದಿಕ್ ಅಲಿ ಮೊದಲಾದವರು ಅಧಿಕಾರ ತ್ಯಾಗ ಮಾಡಬೇಕೆಂದೂ ಕಿರಿಯರಿಗೆ ಅವನ್ನು ಬಿಟ್ಟುಕೊಡಬೇಕೆಂದೂ ಅವರು ಕಟುವಾಗಿ ಕರೆ ನೀಡಿದ್ದಾರೆ. ಶ್ರೀಮತಿ ಸಿಂಹ ಮತ್ತು ಡಾ| ಸಿಂಗರು ಸಿಂಡಿಕೇಟಿನ ಉತ್ತರದ ತರುಣ ಪೀಳಿಗೆಯವರು ದಕ್ಷಿಣದಲ್ಲಿ ಶ್ರೀ ವೀರೇಂದ್ರ ಪಾಟೀಲರು ಇದ್ದ ಹಾಗೆ. 'ಹಳಬರಿಗೆ ಹಳೆಯವರು ಮಾತ್ರ ಗೋಚರಿಸುತ್ತಾರೆ' ಎಂಬ ಮಾತಿನಲ್ಲಿ ಸತ್ಯಾಂಶವಿದೆ ಪಕ್ಷದ ನಾಯಕರಿಗೂ ಕಾರ್ಯಕರ್ತರಿಗೂ ನಡುವೆ ಒಂದು ತಲೆಮಾರಿನ ಅಂತರವಿರುವಾಗ ಅವರ ನಡುವೆ ಒಮ್ಮತ ಮೂಡುವುದು ಸಾಧ್ಯವೇನು? ತಮ್ಮದೇ ಸರಿ ವೆಂದು ವಾದಿಸುವ, ಹಿರಿಯರನ್ನು ಹೊಂದಿಕೊಂಡು ಹೋಗಲು ಸಿದ್ಧರಿಲ್ಲದ ಕಿರಿಯರನ್ನು ಬೆದರಿಸಿ ಎಷ್ಟು ದಿನವಿಟ್ಟುಕೊಳ್ಳಬಹುದು? ತಂದೆ ಮುದುಕನಾದಾಗ, ಮಗನೊಡನೆ ಭಿನ್ನಮತ ಬಲಿತಾಗ, ಯಜಮಾನಿಕೆಯ ಕೀಲಿಕೈ ಬಿಟ್ಟುಕೊಟ್ಟು ಭಗವದ್ಗೀತೆ ಪಾರಾಯಣ ನಿರತರಾಗುವುದೇ ಹೆತ್ತವರಿಕೆ ಉತ್ತಮ ಇದರಿಂದ ಮಾನಸಿಕ ಶಾಂತಿ ದೊರೆಯದೆ ಹೋದರೂ ವೃಥಾ ಕಲಹ ತಪ್ಪುತ್ತದೆ, ಮನೆಯೆರಡಾಗುವುದು ತಪ್ಪುತ್ತದೆ—ಇಷ್ಟಾದರೂ ಸಮಾಧಾನವಿದೆ ತಾನೆ? ಶ್ರೀಮತಿ ತಾರಕೇಶ್ವರಿಯವರ ಈ ಸಲಹೆ ಸಿಂಡಿಕೇಟಿಗೆ ಮಾತ್ರವಲ್ಲ, ಎಲ್ಲ ರಾಜ್ಯಕೀಯ ಪಕ್ಷಗಳಿಗೂ ನಮ್ಮ ದೇಶದ ಮಟ್ಟಿಗೆ ಅನ್ವಯಿಸುತ್ತದೆ, ಏಕೆಂದರೆ, ನಮ್ಮಲ್ಲಿ ಮಗು ಹುಟ್ಟಿನಿಂದಲೇ ರಾಜ್ಯಕೀಯದ ಗಾಳಿಯನ್ನೇ ಉಸಿರಾಡುತ್ತದೆ

●●

—ಸತ್ಯಾಗ್ರಹದ ಯೋಗಿ—

ಭಾರತದ ಸತ್ಯಾಗ್ರಹದ ಯೋಗಿ ಗಾಂಧೀ
ಪಾರಗಾಣಿಸಿದೆ ಹಿಂಸೆಯ ಕಡಲಿನಿಂದ
ಸ್ವಾತಂತ್ರ್ಯತಪದ ಸಿದ್ಧಿಯ ಪಡೆದ
ಓ ಗಾಂಧಿ
ಜಾತಿ ಮತಗಳ ಸಮಾಧಿಯಲಿ ನಿಂದು
ಕಾತರತೆಯುಳಿದು ನೀ ವಿಷಯ
ಸುಖಗಳ ಮುಂದೆ
ವಾತಾಂಬುಪರ್ಣಾಶನಂತೆ ಬಳಿಸಂದು.

ಚರಕ ತಕ್ಕಲಿ ಪಿಡಿದು ಜಪಮಾಲೆ
ತಿರುವುತ್ತ
ಪರಸತ್ಯ ತತ್ತ್ವವನೆ ಹಂಬಲಿಸುತ
ಹರ ಕ್ರಿಸ್ತ ಅಲ್ಲಾ ಎನುತ್ತ ನೀ ಅದ್ವೈತ
ಪರಿಪೂರ್ಣರೂಪನಲಿ ಮನವತಾನಿತ್ತೆ.

ನಿನ್ನ ತಪದಾ ಫಲವನಿತ್ತು ಮುಕ್ತಿಯ
ಪಡೆದೆ
ತಾನಾಪ್ತಕಾಮನಾದವಗೆ ಸ್ಪೃಹೆಎಲ್ಲಿ?
ಉನ್ನತಿಯ ಸಾಧಿಸಿದ ಕರ್ತವ್ಯ
ಕರ್ಮಾರನೆ
ಇನ್ನೊಮ್ಮೆ ನವಯುಗದಿ ಬಾನಿನಗೆ
ಶರಣು.

—ಎಚ್ ವಿ ಪದ್ಮನಾಭ ಭಟ್ಟ,
ವಿದ್ವಾನ್.

●●

ಕುಂದಾಪುರ ಆ. ಕಾಂಗ್ರೆಸ್ ಕಚೇರಿಯ ಪ್ರಾರಂಭೋತ್ಸವ

ತಾ. 23-9-71ರಂದು ಕುಂದಾಪುರ ತಾಲೂಕು ಆ. ಕಾಂಗ್ರೆಸಿನ ಹೊಸ ಕಾರ್ಯಾಲಯವನ್ನು ಜಿಲ್ಲಾ ಆ. ಕಾಂಗ್ರೆಸ್ ಅಧ್ಯಕ್ಷ ಶ್ರೀ ಎ ಶಂಕರ ಆಳ್ವರು ಉದ್ಘಾಟಿಸುತ್ತಾ, ಆ ಕಾಂಗ್ರೆಸಿನ ಶಿಸ್ತು, ಧೋರಣೆಗಳಿಗೆ ಬದ್ಧರಾಗಿರುವವರಿಗೆ ಪಕ್ಷದ ಬಾಗಿಲು ಸದಾ ತೆರೆದಿದೆ ಎಂದರು

ಆರಂಭದಲ್ಲಿ ತಾಲೂಕು ಆಡಳಿತ ಕಾಂಗ್ರೆಸ್ ಕನ್ವೀನರ್ ಶ್ರೀ ಬಿ.ಎಸ್. ಜಗನ್ನಾಥ ಶೆಟ್ಟರು ಕಾರ್ಯಕರ್ತರನ್ನು ಸ್ವಾಗತಿಸಿ ತಮ್ಮ ಪಕ್ಷ ವಿಜಯ ಸಾಧಿಸುವುದು ನಿಶ್ಚಿತವೆಂದರು.

ಶ್ರೀ ವಿ. ಕೃಷ್ಣಪ್ಪ ಶೆಟ್ಟರು ಮಾತನಾಡಿ ಚುನಾವಣೆಯ ಸಮಯದಲ್ಲಿ ಸದಸ್ಯರು ವಹಿಸಿದ ಪಾತ್ರವನ್ನು ಮುಂದಕ್ಕೂ ಪಕ್ಷ ಸಂಘಟನೆಗಾಗಿ ನಿರ್ವಹಿಸುವ ಆಗತ್ಯವಿದೆಯೆಂದರು. ಶ್ರೀಗಳಾದ ಜಿ ರಾಮಕೃಷ್ಣರಾವ್, ವಿ ಶ್ರೀನಿವಾಸ ಶೆಟ್ಟಿ, ಎನ್.ಎಸ್. ಪರಮೇಶ್ವರಯ್ಯ, ಶ್ರೀಮತಿ ವಿನ್ನಿ ಫ್ರೆಡ್ ಫೆರ್ನಾಂಡಿಸ್, ಶ್ರೀ ಕಮಲಾಕ್ಷ ಶೆಣೈ ಮಾತಾಡಿ ಸಲಹೆ ಸೂಚನೆಗಳನ್ನಿತ್ತರು ಜಿಲ್ಲಾ ಕಾರ್ಯದರ್ಶಿ ಶ್ರೀ ಸುಬ್ಬಯ್ಯ ಶೆಟ್ಟರು ಮುಂಬರುವದಿನಗಳು ನಿರ್ಣಾಯಕವಾಗಿವೆಯೆಂದರು

ಶ್ರೀ ಬಿ ಎಸ್, ಜಗನ್ನಾಥ ಶೆಟ್ಟರು ಕುಂದಾಪುರ ಬ್ಲಾಕ್ ಆ. ಕಾಂಗ್ರೆಸ್ ಪರವಾಗಿ ಬಾಂಗ್ಲಾ ನಿರಾಶ್ರಿತರ ನೆರವಿಗಾಗಿ ಒಂದು ಸಾವಿರ ರೂ ಗಳ ಚೆಕ್ಕನ್ನು ಶ್ರೀ ಆಳ್ವರಿಗೆ ಹಸ್ತಾಂತರಿಸಿದರು

ಶ್ರೀ ಪಿ ರಂಗನಾಥ ಶೆಣೈಯವರು ಅಧ್ಯಕ್ಷ ಭಾಷಣ ಮಾಡುತ್ತಾ ನಿಷ್ಠೆಯಿಂದ ತತ್ವಬದ್ಧರಾಗಲು ಕಾರ್ಯಕರ್ತರಿಗೆ ಕರೆಯಿತ್ತರು. ಶ್ರೀ ಎ. ಗೋಪಾಲಕೃಷ್ಣ ಕೊಡ್ಗಿಯವರು ವಂದನೆಗಳನ್ನು ಸಲ್ಲಿಸಿದರು

ಶಿರ್ವ ರೋಟರಿ ಸಭೆ

ತಾ. 21-9-71ರಂದು ಶಿರ್ವ ರೋಟರಿ ಕ್ಲಬ್‌ನ ಸಭೆಯು ಉಪಾಧ್ಯಕ್ಷ ವಿಠ್ಠಲ್ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಡಾ|| ವೆಂಕಟಕೃಷ್ಣನವರು ಪರಿಚಯ ಭಾಷಣ ಮಾಡಿದರು ಪ್ರೊ| ಚಂದ್ರಶೇಖರ್ ಕೆ. ಯಂ. ಕಾರಂತರ ಪರಿಚಯ ಮಾಡಿಕೊಟ್ಟರು ಕಾರಂತರು ಇಂದಿನ ಸಮಾಜದಲ್ಲಿ ವ್ಯಕ್ತಿ ವಿಕಾಸಕ್ಕೆ ಉಂಟಾಗುವ ತಡೆ, ಅದನ್ನು ನಿವಾರಿಸುವ ವಿಧಾನ, ರೋಟರೆಕ್ಟ್ ಮತ್ತು ಇಂಟರೆಕ್ಟ್ ಸಂಸ್ಥೆಗಳು ನೀಡುವ ಅವಕಾಶ ಇತ್ಯಾದಿ ವಿಷಯಗಳ ಮೇಲೆ ಭಾಷಣವನ್ನಿತ್ತರು ರೋಟರಿ ಗವರ್ನರ್ ಪ್ರತಿನಿಧಿ ರೋ| ಪಿ ಶ್ರೀಪತಿ ಆಚಾರ್ಯರು ರೋಟರೆಕ್ಟ್ ಸಂಸ್ಥೆಗಳನ್ನು ಸ್ಥಾಪಿಸುವುದರ ಔಚಿತ್ಯವನ್ನು ವಿವರಿಸಿ, ಶಿರ್ವ ರೋಟರಿ ಕ್ಲಬ್ಬಿನ ಏಳಿಗೆಯನ್ನು ಪ್ರಶಂಸಿಸಿದರು. ಅಧ್ಯಕ್ಷರು ಸಮಯೋಚಿತ ಭಾಷಣ ಮಾಡಿ ಜನ್ಮದಿನದ ಸವಿ ನೆನಪಿಗಾಗಿ ಭೋಜನಕೂಟವೇರ್ಪಡಿಸಿದ ರೊ| ಆರ್ ವಿ ಕೃಷ್ಣ ಮತ್ತು ಸುಬ್ಬಯ್ಯ ಹೆಗ್ಡೆಯವರಿಗೆ ಶುಭ ಕೋರಿದರು. ರೊ| ಕೆ ಯಂ ದಲ್ಮೇದರು ಧನ್ಯವಾದವಿತ್ತರು,

ವಾರ್ತಾ ಇಲಾಖೆಯ ಹೊಸ ಡೈರೆಕ್ಟರ್

ಮೈಸೂರು ರಾಜ್ಯದ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಶ್ರೀ ವಿ ಜಿ ಕುಲಕರ್ಣಿ ಅವರು ಕೇಂದ್ರ ಸರಕಾರದ ಸೇವೆಗೆ ಹಿಂದಿರುಗುವ ಶ್ರೀ ಎಂ .ಡಿ ಮರಿಪುಟ್ಟಣ್ಣನವರಿಂದ ಅಧಿಕಾರ ವಹಿಸಿಕೊಂಡಿರುವರು

ತಿದ್ದುಪಡಿ

ಕಳೆದ ತಾ 30-9-1971ರ ಸಂಚಿಕೆಯ 9ನೇ ಪುಟದಲ್ಲಿ ಪ್ರಕಟವಾದ ಎಡ್ವೊಕೇಟ್ ಕುಕ್ಕಜೆ ರಾಮಕೃಷ್ಣ ಭಟ್ಟರ ಬೆಳ್ತಂಗಡಿ ಮುನ್ಸಿಫ್ ಕೋರ್ಟಿನ ಪ್ರಕಟಣೆಯಲ್ಲಿ R.R.C. 356/71 ಎಂತ ತಪ್ಪಾಗಿ ಮುದ್ರಿತವಾಗಿದೆ. ಅದು R.R.C.355/71 ಎಂದಾಗಬೇಕು.

—(ಸಂ ನ)

ನವಯುಗದ ಹೊಸ ಚಂದಾ ದರ

ಸಪ್ಟಂಬರದಿಂದ ರೂ. 12

ಪತ್ರಿಕೆಗೆ ಬಳಸುವ ಕಾಗದದ ಬೆಲೆ, ಸಾಗಾಟದ ದರ ಏರಿಕೆಯಿಂದಾಗಿಯೂ ಮುದ್ರಣಾದಿಗಳ ವೆಚ್ಚದ ಹೆಚ್ಚಳದಿಂದಾಗಿಯೂ ನವಯುಗದ ವಾರ್ಷಿಕ ಚಂದಾ ದರವನ್ನು ರೂ. 10 ರಿಂದ ರೂ 12ಕ್ಕೆ ಅನಿವಾರ್ಯವಾಗಿ ಏರಿಸಬೇಕಾಗಿ ಬಂದಿದೆ. ಈ ಹೊಸ ಚಂದಾ ದರವು ಹೊಸ ಸಂಪುಟದಿಂದ ಅಂದರೆ ಇದೇ ಸಪ್ಟಂಬರದಿಂದ ಅನ್ವಯವಾಗುವುದು ಚಂದಾದಾರರು ದಯಮಾಡಿ ಗಮನಿಸಿ, ಅದರಂತೆ ಚಂದಾ ಕಳಿಸಿ ಸಹಕರಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

—ಮೆನೇಜರ್

ದೀಪಾವಳಿ ವಿಶೇಷ ಸಂಚಿಕೆ



ಜಾಹೀರಾತಿಗೆ ಉತ್ತಮ ಮಾಧ್ಯಮ

ನವಯುಗ

ದೀಪಾವಳಿ ವಿಶೇಷ ಸಂಚಿಕೆಯು ತಾ. 19-10-1971ರಂದು ವಿಶೇಷ ಲೇಖನಗಳೊಂದಿಗೆ ಆಕರ್ಷಣೀಯವಾಗಿ ಪ್ರಕಟವಾಗುವುದು.

ಚಿಕ್ಕ-ಚೊಕ್ಕ ಲೇಖನ, ಕವನಗಳಿಗೆ ಸ್ವಾಗತ.

ನವಯುಗ ಸುವರ್ಣ ಮಹೋತ್ಸವ

ಸ್ಥಾಪನೆ. 1921 ಚಿನ್ನದ ಹಬ್ಬ: 1971

1971ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ

ನವಯುಗದ ನವೀಕರಣಕ್ಕಾಗಿ, ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

READ & ADVERTISE IN NAVAYUGA WEEKLY

'ಗಾಂಧಿಜಿಯ ಕೊಲೆ'

(ಎರಡನೇ ಪುಟದಿಂದ)

ರ ಬರುತ್ತಾರೆ. ತಗ್ಗಿಸಿದ ಧ್ವನಿಯಲ್ಲಿ ಆಪ್ಟೆ 'ಇವರೇ ಬಂಗಾಳದ ಪ್ರಧಾನಿ, ಶ್ರೀ ಸುಹ್ರವರ್ದಿ' ಎಂದು ಬಾಡ್ಗೆಗೆ ತಿಳಿಸಿದ.

ಮೂವರೂ ಅಲ್ಲಿಂದ ಕಾಲ್ದೆಗೆದರು. ತಮ್ಮ ಕಾರಿನಲ್ಲಿ ಕುಳಿತು ಕೊಂಡರು. ಕಾರು ಬಂಗಲೆಯನ್ನು ಬಳಸಿಕೊಂಡು ಬಿರ್ಲಾ ಭವನದ ಹಿಂಭಾಗಕ್ಕೆ ಬಂತು. ಆಪ್ಟೆ ಬಾಡ್ಗೆಗೆ ಆ ಸ್ಥಳದ ಪೂರ್ಣ ಮಾಹಿತಿ ಮಾಡಿಕೊಟ್ಟ. ಗಾಂಧಿಜಿ ಸಾಮಾನ್ಯವಾಗಿ ಕುಳಿತು ಕೊಳ್ಳುವ ತಾಣವನ್ನು ತೋರಿಸಿದ. ಆ ಸ್ಥಳಕ್ಕೆ ತೀರ ಹತ್ತಿರದಲ್ಲಿದ್ದ ಒಂದು ಕಿಂಡಿಯನ್ನು ತೋರಿಸಿ, ಆ ಕಿಂಡಿಯ ಮೂಲಕ, ಕೈ ಬಾಂಬನ್ನು ಎಸೆಯುವುದು, ರಿವಾಲ್ವರ್ ಮೂಲಕ ಗುರಿಯಿಟ್ಟು ಹೊಡೆಯುವುದು ಸುಲಭವೆಂದು ಹೇಳಿಕೊಟ್ಟ. ಆ ಸ್ಥಳಗಳ ಅಳತೆಯನ್ನೂ, ಕೈಯಲ್ಲಿದ್ದ ಟೇಪಿನ ಮೂಲಕ ತೆಗೆದುಕೊಂಡ.

ಅಂದು ಸಂಜೆ ಗಾಂಧಿಜಿ ಸಭೆಯನ್ನುದ್ದೇಶಿಸಿ ಮಾತನಾಡುವವರಿದ್ದರು. ನಿರಶನ ವ್ರತ ಕೈಗೊಂಡ ಮೊದಲುಗೊಂಡು ಅವರು ಸಭೆಗೆ ಬಂದಿರಲಿಲ್ಲ. ಜನವರಿ 18ರಂದು ದೆಹಲಿಯ ನಾಗರಿಕರ ಬೇಡಿಕೆಯಂತೆ ಅವರು ಉಪವಾಸ ನಿಲ್ಲಿಸಿದರು. ಆದರೆ 18-19ರಂದು ಅವರ ದೇಹದಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡುವ ತ್ರಾಣವಿರಲಿಲ್ಲ. ಸಂಜೆಯ ಸಭೆಗೆ ನೆಹರೂಜಿ ಬರುವ ನಿರೀಕ್ಷೆಯಿತ್ತು. ಗಾಂಧಿ-ನೆಹರು-ಸುಹ್ರವರ್ದಿ ಸಾಧ್ಯವಾದರೆ ಮೂವರನ್ನೂ ಮುಗಿಸಿ ಬಿಡುವ ಸಂಕಲ್ಪದೊಂದಿಗೆ ಅವರು ಅಲ್ಲಿಂದ ಕಾಲ್ದೆಗೆದರು.

ಮಧ್ಯಾಹ್ನದ ಸುಮಾರಿಗೆ ಹಿಂದೂ ಮಹಾಸಭೆಯ ಕಛೇರಿಗೆ ಹಿಂದಿರುಗಿದರು. ಅಲ್ಲಿ ಅವರಿಗಾಗಿ ಕಾಯುತ್ತಿದ್ದ ಗೋಪಾಲ ಗೋಡ್ಸೆ ಅವರೆಲ್ಲ ಅಲ್ಲಿಂದ ಕಛೇರಿಗೆ ಹತ್ತಿರದಲ್ಲಿದ್ದ ಕಾಡಿಗೆ ಹೊರಟು ಹೋದರು. ಕಾಡಿನಲ್ಲಿ ಶಂಕರ ಕಿಷ್ಟಯ್ಯ, ಗೋಪಾಲ ಗೋಡ್ಸೆ ತಂದ ರಿವಾಲ್ವರುಗಳನ್ನು ಪರೀಕ್ಷಿಸಿದರು. ಅವುಗಳು ದೋಷಯುತವಿದ್ದವು. ಅವರು ಆ ತಾಣದಿಂದ ಮರಳಿ ಬರುವುದಕ್ಕೂ ಮೊದಲು, ಅವರ ಬರವನ್ನೇ ಇದಿರು ನೋಡುತ್ತ ಕುಳಿತ್ತಿದ್ದರು. ಮದನಲಾಲ ಮತ್ತು ಕರಕರೆ.

ಅವರೆಲ್ಲ ಅಲ್ಲಿಂದ ಮರೀನಾ ಹೋಟೆಲಿಗೆ ಹೊರಟರು. ಆಪ್ಟೆ-ಗೋಡ್ಸೆ, ಬಾಡ್ಗೆ ತಂದ ಸ್ಫೋಟಕ ವಸ್ತುಗಳನ್ನು ಮಹಾಸಭೆಯ ಕಛೇರಿಯಿಂದ ಮರೀನಾ ಹೋಟೆಲಿಗೆ ಸಾಗಿಸಿದರು. ನಾಥೂರಾಮ ವಿನಾಯಕ ಗೋಡ್ಸೆ ಆಗ 40ನೇ ನಂಬರಿನ ಕೋಣೆಯಲ್ಲಿದ್ದ. ಸಹಿಸಲಾರದ ತಲೆನೋವಿನಿಂದ ನರಳುತ್ತ ಹಾಸುಗೆಯಲ್ಲಿ ಬಿದ್ದಿದ್ದ. ಕೋಣೆಗೆ ಹೊಂದಿ ಕೊಂಡಿದ್ದ ಸ್ನಾನದ ಮನೆಯಲ್ಲಿ ಗೋಪಾಲ ಗೋಡ್ಸೆ ಪುನಃ ರಿವಾಲ್ವರುಗಳನ್ನು ಪರೀಕ್ಷಿಸಲಾರಂಭಿಸಿದ. ಆಗ ಸಿಡಿದ ಗುಂಡುಗಳ ಗುರುತು ಗೋಡೆಯಲ್ಲಿ ಕಾಣಬಂದುವೆಂಬ ಸಂಗತಿ ವಿಚಾರಣೆಯ ಕಾಲದಲ್ಲಿ ನಿಚ್ಚಳವಾಗಿ ಹೊರ ಬಂತು.

ಅನಂತರ ಅವರೆಲ್ಲ ತಮ್ಮ ಹೆಸರುಗಳನ್ನು ಬದಲಾಯಿಸಿ ಕೊಂಡರು. ರಿವಾಲ್ವರು ಕೈ ಬಾಂಬುಗಳನ್ನು ಎತ್ತಿ ಕೊಂಡರು. ಯಾರು ಏನನ್ನು ಮಾಡಬೇಕು, ಯಾವುದನ್ನು ಎತ್ತಿ ಕೊಳ್ಳಬೇಕು, ಎಲ್ಲಿ ಕುಳಿತುಕೊಳ್ಳಬೇಕು ಎಂಬುದನ್ನು ನಿಶ್ಚಯಿಸಿಕೊಂಡರು. ನಿತ್ಯದ ಪೋಷಾಕಿನಲ್ಲಿ ಸಭೆಗೆ ಹೋಗುವುದು ಸರಿಯಲ್ಲವೆನಿಸಿತು. ಬಟ್ಟೆ ಬದಲಾಯಿಸಿದರು ಗೋಡ್ಸೆ ಸೈನಿಕರ ಪೋಷಾಕು ಹಾಕಿ ಕೊಂಡ. ಆಪ್ಟೆ ನೀಲಿ ಬಣ್ಣದ ಕೋಟು—ಪ್ಯಾಂಟು ಧರಿಸಿದ—ವಾಯು ಪಡೆಯ ಅಧಿಕಾರಿಯಂತೆ. ವಿಷ್ಣು ಕರಕರೆ, ಧೋತಿಯುಟ್ಟುಕೊಂಡ; ನೆಹರೂ ಜುಬ್ಬ ಧರಿಸಿದ. ಗಾಂಧಿ ಟೊಪ್ಪಿ ಇಟ್ಟು ಕೊಂಡ. ಮೊದಲೇ ಕಪ್ಪಗಿದ್ದ ಹುಬ್ಬುಗಳನ್ನು, ಬಣ್ಣ ಬಳಿದು ಮತ್ತಷ್ಟು ಕಪ್ಪಗೆ ಮಾಡಿಕೊಂಡ. ಕೃತಕ ಮೀಸೆ ಧರಿಸಿದ. ಹಣೆಗೊಂದು ಕುಂಕುಮದ ತಿಲಕವಿರಿಸಿಕೊಂಡ. ಗೋಪಾಲ ಗೋಡ್ಸೆ ತುಂಡು ಚಣ್ಣ, ಶರ್ಟು, ಕೋಟಿನಲ್ಲಿ ಹೊರಡಲನುವಾದ.

ಬಾಡ್ಗೆ ಧೋತಿಯುಟ್ಟುಕೊಂಡು, ಬಿಳಿಯ ಶರ್ಟು—ಕೋಟು ಸಿಕ್ಕಿಸಿಕೊಂಡ. ತಲೆಗೊಂದು ಟೊಪ್ಪಿಗೆ ಬೇರೆ. ಮದನಲಾಲ ತನ್ನ ಮಾಮೂಲಿಯ ವೇಷವೇ ಸೈಯೆಂದ. ಉಳಿಕೆಯವರು ಅವನನ್ನು ಹಾಗೆ ಹೊರಡಲು ಬಿಡಲಿಲ್ಲ. ಬೇರೆ ಮಾರ್ಗ ಕಾಣದೆ, ಆಪ್ಟೆಯ ಕೋಟೊಂದನ್ನು ತೆಗೆದುಕೊಂಡು ಹೊರಟ. ಆ ಕೋಟಿನಲ್ಲಿ ಅಗಸ ಹಾಕಿದ ಗುರುತುಗಳಿದ್ದುವು. ವಿಚಾರಣೆಯ ಕಾಲದಲ್ಲಿ ಆಪ್ಟೆಯಿಂದ ಸ್ವಾಧೀನ ಪಡಿಸಿಕೊಂಡ ಪ್ಯಾಂಟನ್ನೂ, ಮದನಲಾಲನ ಕೈಯಿಂದ ವಶಪಡಿಸಿಕೊಂಡ ಕೋಟನ್ನೂ ಪೋಲಿಸರು ಕೋರ್ಟಿನಮುಂದು ಹಾಜರು ಪಡಿಸಿದರು. ಅವೆರಡು ಸೇರಿ ಒಂದು ಪೂರ್ಣ 'ಸೂಟು' ಆಯಿತು.

ಅವರೆಲ್ಲ ಕಾರಿನಲ್ಲಿ ಬಿರ್ಲಾ ಭವನದ ಹಿಂಭಾಗಕ್ಕೆ ಬಂದರು. ಅವರನ್ನು ಅಲ್ಲಿ ಉಳಿಕೆ ಮೂವರು ಕೂಡಿ ಕೊಳ್ಳುತ್ತಾರೆ. ಅದನ್ನು ಬಿರ್ಲಾ ಭವನದ ಹಿಂಭಾಗದಲ್ಲಿ ವಾಸಮಾಡುತ್ತಿದ್ದ ನಾಥಕಚಂದನ ಹೆಂಡತಿ ಶ್ರೀಮತಿ ಸುಲೋಚನಾ ದೇವಿ ನೋಡಿದಳು. ಆಕೆ ಅಲ್ಲಿಗೆ ಬೇಕೆಂತಲೇ ಬಂದವಳಲ್ಲ. ತುಂಟ ಮಗನನ್ನು ಹಿಂಬಾಲಿಸಿಕೊಂಡು ಅಲ್ಲಿಗೆ ಬಂದಿದ್ದಳು. ಕಂಕುಳಲ್ಲಿ ಕೂಸೊಂದನ್ನು ಬೇರೆ ಎತ್ತಿ ಕೊಂಡಿದ್ದಳು. ಅವಳು ಇದನ್ನೆಲ್ಲ ನೋಡಿದಳು. ಅವರ ನಡತೆ ಅವಳಿಗೆ ವಿಚಿತ್ರವಾಗಿ ಕಾಣಿಸಿತು. ಸಭೆಗೆ ಬರುವವರು ಹಿಂಬಾಗಿಲಿನಿಂದೇಕೆ ಬರುತ್ತಾರೆ ಎಂಬ ಅನುಮಾನವೂ ಬಂತು. ಅಷ್ಟರಲ್ಲಿ ಅವರಲ್ಲೊಬ್ಬ ಯಾವುದಕ್ಕೋ ಬೆಂಕಿ ತಗುಲಿಸಿದ್ದು ಕಾಣಿಸಿತು. ಬೆಂಕಿ ಸ್ಪರ್ಶಿಸಿದ್ದೇ ತಡ. ಅದು ಪಟಾಕಿಯಂತೆ ಸಿಡಿಯಿತು. ಭಯಂಕರ ಸದ್ದಾಯಿತು. ಆಕೆ ಸುರಕ್ಷಿತ ಸ್ಥಳಕ್ಕೆ ಮಕ್ಕಳೊಡನೆ ಧಾವಿಸಿದಳು. ಮದ್ದಿನ ಸದ್ದು ಅವರನ್ನು ಆಕರ್ಷಿಸಿತು. ಹಲವರು ಗೋಡೆ ಹಾರಿ ಬಂದರು. ಅವರಿಗೆ 'ಆತನೇ' ಎಂದು ಮದನಲಾಲನನ್ನು ಸುಲೋಚನಾ ತೋರಿಸಿದಳು.

ಹಾಗೆ ಬಂದವರಲ್ಲಿ, ಫ್ಲೈಟ್ ಸಾರ್ಜೆಂಟ್ ರಾಮಚಂದ್ರ, ಬಿರ್ಲಾ ಭವನದ ಕಾವಲುಗಾರ ಭೋರ ಸಿಂಗ್ ಮತ್ತು ರತನ ಸಿಂಗ್ ಮುಖ್ಯರು. ರತನ ಸಿಂಗನ ಕೈಯಲ್ಲಿ ಪಿಸ್ತೂಲಿತ್ತು. ಆತ ಪಿಸ್ತೂಲನ್ನು ಮದನಲಾಲನತ್ತ ಎತ್ತಿ ಹಿಡಿದ. ಕಾಲ್ದೆಗೆದರೆ ಕೊಲ್ಲುವುದಾಗಿ ಬೆದರಿಕೆ ಹಾಕಿದ. ಮದನಲಾಲನಿಗೆ ಮುಂದೇನು ಮಾಡಬೇಕೆಂಬುದು ಹೊಳೆಯಲಿಲ್ಲ. ಅದರೊಳಗಾಗಿ ರಾಮಚಂದ್ರ ಅವನೆರಡು ಕೈಗಳನ್ನು ಭದ್ರವಾಗಿ ಹಿಡಿದಿದ್ದರು. ಅವನು ಯಾವ ಪ್ರತಿಭಟನೆಯನ್ನೂ ಮಾಡಲಿಲ್ಲ.

ಕರ್ನಾಲಿನ ಮ್ಯಾಜಿಸ್ಟ್ರೇಟ್ ಶ್ರೀ ಕೆ. ಯಸ್. ನಾನೆ ಅಲ್ಲಿಗೆ ಬಂದರು. ಅವರು ಗಾಂಧಿಜಿಯನ್ನು ಕಾಣಲು ದೆಹಲಿಗೆ ಬಂದಿದ್ದರು. ಶ್ರೀಮತಿ ನಾನೆ, ಅಂದಿಗೆ ಕೆಲವು ಸಮಯದ ಹಿಂದೆ ಒಂದು ಅಪಘಾತದಲ್ಲಿ ತೀರಿಕೊಂಡರು. ಅದನ್ನು ತಿಳಿದುಕೊಂಡ ಗಾಂಧಿಜಿ ಶ್ರೀ ನಾನೆಯವರಿಗೆ ಅನುತಾಪ ಸೂಚಿಸಿ ಒಂದು ಪತ್ರ ಬರೆದಿದ್ದರು. ಅದಕ್ಕೆ ಖುದ್ದಾಗಿ ಕೃತಜ್ಞತೆ ಸಲ್ಲಿಸಲು ಶ್ರೀ ನಾನೆ ಮಹಾತ್ಮಾಜಿಯ ದರ್ಶನಕ್ಕೆ ಅವಕಾಶ ಕಾಯುತ್ತಿದ್ದರು. ಅವರ ಸೂಚನೆಯಂತೆ ಮದನಲಾಲನನ್ನು ಪೋಲಿಸ್ ಠಾಣೆಗೆ ಒಯ್ಯಲಾಯಿತು.

ಝಡತಿ ಮಾಡಿದಾಗ ಮದನಲಾಲನ ಕಿಸೆಯಲ್ಲಿ ಮತ್ತೊಂದು ಕೈ ಬಾಂಬು ಸಿಕ್ಕಿತು. ಕಿಸೆಯಲ್ಲಿ ಏಳು ರೂಪಾಯಿಗಳು ದೊರೆತವು. ಅವುಗಳ ಜೊತೆಯಲ್ಲಿತ್ತು ಸುಂದರ ತರುಣಿಯೊಬ್ಬಳ ಫೋಟೋ! ಅದು ಮದನಲಾಲನ ಪ್ರೇಯಸಿ ಶಾಂತಳದು.

ಆಕೆ ಅಹಮದ್ ನಗರದವಳು. ಅವಳ ವಿಷಯ ಹೆಚ್ಚಿಗೆ ತಿಳಿದು ಬಂದಿಲ್ಲ. ಮದನಲಾಲನಲ್ಲಿ ಆಕೆ ಅನುರಕ್ತಳಾಗಿದ್ದಳೆಂಬುದು ಸುಸ್ಪಷ್ಟ. ಆಕೆ ಮದನಲಾಲನಿಗೆ ಕೆಲವು ಪ್ರಣಯ ಪತ್ರಗಳನ್ನು ಬರೆದಿದ್ದಳು ಆ ಪತ್ರಗಳು ಡಾಕ್ಟರ್ ಜೈನರ ಕೈಗೆ ಬಂದುವು. ಡಾಕ್ಟರ್ ಜೈನರ ವಿಳಾಸಕ್ಕೆ ತನಗೆ ಬರೆಯುವಂತೆ ಆಕೆಗೆ ಆತ ತಿಳಿಸಿದ್ದ. ಡಾಕ್ಟರ್ ಜೈನರು ಕೋರ್ಟಿನಲ್ಲಿ ಕೊಟ್ಟ ಹೇಳಿಕೆಯ ಪ್ರಕಾರ ಈ ಕಾಗದಗಳು ಅವನ ವಿಳಾಸಕ್ಕೆ ಜನವರಿ 17 ಮತ್ತು 19ರಂದು ತಲುಪಿದುವು. ಅದು ಅವರ ಕೈ ಸೇರುವುದಕ್ಕೂ ಮೊದಲು ಮದನಲಾಲ ಮುಂಬಯಿ ಬಿಟ್ಟಿದ್ದ. ಆತ ಜನವರಿ ಹದಿನೈದರಂದೇ ಮುಂಬಯಿ ಬಿಟ್ಟಿದ್ದರಿಂದ ಆ ಪ್ರಣಯ ಪತ್ರಗಳು ಅವನಿಗೆ ಸಿಗಲೇ ಇಲ್ಲ.

ಈ ಪತ್ರಗಳನ್ನು ಮದನಲಾಲ ಕೋರ್ಟಿನಲ್ಲಿ ನೋಡಿದ. ಜನವರಿ 19ರ ರಾತ್ರಿ 9.30ರ ಸುಮಾರಿಗೆ ದೆಹಲಿಯ ಹಿಂದೂ ಮಹಾ ಸಭಾ ಕಛೇರಿಯಿಂದ ಸಾವರ್ಕರ್ ಸದನಕ್ಕೆ ಒಂದು ಟ್ರಂಕಿನ ಕರೆಯನ್ನು ದೂರವಾಣಿಯ ಮೂಲಕ ಕೊಡಲಾಯಿತು. ಬೇಕಾಗಿದ್ದ ವ್ಯಕ್ತಿಗಳು—ದಾಮ್ಲೆ ಯಾ ಕಾಸರ್—ಸಿಗಲಿಲ್ಲವೆಂದು ಅದನ್ನು ರಾತ್ರಿ 11-23ರ ಸುಮಾರಿಗೆ ರದ್ದು ಪಡಿಸಲಾಯಿತು. ಕೊಲೆ ಮೊಕದ್ದಮೆಯಲ್ಲಿ ಈ ಫೋನ್ ಕರೆಯ ದಾಖಲೆಯನ್ನು, ಅಂಚೆ-ಮತ್ತು ತಂತಿ ಇಲಾಖೆಯಿಂದ ತರಿಸಿಕೊಂಡು Ex P. 70 ಎಂದು ಸ್ವೀಕರಿಸಲಾಯಿತು. ದೆಹಲಿಯಿಂದ ಯಾವ ಮಹತ್ವದ ಸಂಗತಿಯನ್ನು ಸಾವರ್ಕರ್ ಸದನಕ್ಕೆ ತಿಳಿಸುವುದಿತ್ತು.

(ಆ ಧಾ ರಿ ತ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಸಿಗುತ್ತವೆ
ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.
ವರ್ಗ, ಊಳಿಗ ಮತ್ತು ರಶೀದಿ ಪುಸ್ತಕಗಳೂ ಸಿಗುತ್ತವೆ.
ನವಯುಗ ಪ್ರೆಸ್, ಉಡುಪಿ.

NAVAYUGA 7-10-1971

Registered with the Registrar
of News Papers for India
under No. R. N. 3546/'57

REGD. No B. G. 176
LICENCE No. 33
Licensed to Post without Prepayment

ದೇವಾಲಯಗಳು—

—ಡಾ। ಪಿ. ಗುರುರಾಜ ಭಟ್

ದಕ್ಷಿಣ ಕನ್ನಡದ ಪ್ರಮುಖ ಶಕ್ತಿ ಕೇಂದ್ರಗಳು

1. ಕೊಲ್ಲೂರು, 2. ಉಪ್ಪುಗುಂದ, 3. ಸೇಕೂರು, 4. ಬಗ್ಗವಾಡಿ, 5. ನೀಲಾವರ, 6. ಉಡುಪಿ, (ಕಡಿಯಾಳಿ,ಇಂದ್ರಾಳಿ, ಪುತ್ತೂರು, ಬೈಲೂರು, ಕನ್ನರಪಾಡಿ, ಅಂಬಲಪಾಡಿ, ಹರೀಕ) 7. ಕುಂಜಾರು 8. ಬೆಳ್ಮಣ್ಣು 9. ಕುಂಜೂರು 10 ನಂದಿಕೂರು, 11. ಮುಂಡುಕೂರು, 12. ಕುಕ್ಕುಂದೂರು, 13 ಮೂಡಬಿದುರೆ, 14 ಇರುವೈಲು 15. ಪೊಳಲಿ, 16. ಪುತ್ತೂರಿನ ಕೊಡ್ಯಾಡಿ ಮತ್ತು ಕುಂಜೂರು, 17. ಚಿತ್ರಾಪುರ, 18. ವಿರಲದ ಸಮೀಪವಿರುವ ಪುಣ್ಚ, 19. ಕಟೀಲು, 20. ಸುಂದರ್ಶಿ. 21. ಮುಲ್ಕಿ ಬಪ್ಪನಾಡು, 22.ಆಲೆವೂರು, 23. ಪಾರೆಂಕಿ, 24. ಉದ್ಯಾವರ. ಮೇಲಿನ ಕ್ಷೇತ್ರಗಳು ಶಕ್ತ್ಯಾರಾಧನೆಯ ಸಂಪೂರ್ಣ ವಿವರವನ್ನು ಕೊಡುತ್ತವೆ ಎನ್ನುವಂತಿಲ್ಲ. ಶ್ರೀ ಶಂಕರಾಚಾರ್ಯರ ಕಾಲಕ್ಕೆನೇ ದೇವೀ ಉಪಾಸನೆಯು ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಪ್ರಬಲವಾಗಿತ್ತು. ನಮ್ಮ ಹಲವಾರು ದುರ್ಗಾಲಯಗಳು ಒಂದು ಸಾವಿರ ವರ್ಷಗಳಿಗಿಂತಲೂ ಪ್ರಾಚೀನವೆನ್ನಬಹುದು. ಇಲ್ಲಿರುವ ಮೂರ್ತಿಗಳನ್ನು ಪರಿಶೀಲಿಸಿದರೆ ಐತಿಹಾಸಿಕ ವಿಷಯವು ಸ್ವಲ್ಪಮಟ್ಟಿಗೆ ತಿಳಿಯೂಗ ಬಲ್ಲುದು.

ಜಿಲ್ಲೆಯ ಈ ದೇವಾಲಯಗಳ ಉಪಾಸನಾ ಮೂರ್ತಿಗಳನ್ನು ಪರಿಶೀಲಿಸಿದರೆ 1) ಮಹಿಷ—ಮಹಿಷಾಸುರ ಮರ್ದಿನಿ 2) ಸಪ್ತ ಮಾತೃ 3) ಕಾತ್ಯಾಯಿನೀ 4) ನಾರಾಯಣೀ 5) ಕಾಳೀ – ರೂಪಭೇದಗಳೇ ಹೆಚ್ಚಾಗಿ ಕಂಡು ಬರುತ್ತವೆ. ಪ್ರಾಯಶಃ ನಮ್ಮ ಜಿಲ್ಲೆಯಲ್ಲಿ ಕಂಡು ಬರುವಷ್ಟು ಮಹಿಷ ಮರ್ದಿನಿ ದೇವಾಲಯಗಳು ಇತರತ್ರ ದೊರಕುವುದು ದುರ್ಲಭವೆನ್ನಬಹುದು.

ಈ ರೀತಿಯ ಉಪಾಸನೆಗೆ ಮಾರ್ಕಂಡೇಯ ಪುರಾಣದದೇವೀ ಮಹಾತ್ಮ್ಯವೇ ಕಾರಣ. ನವರಾತ್ರಿಯಲ್ಲಿ ಈ ದೇವಾಲಯಗಳಲ್ಲಿ ಮಾತ್ರವಲ್ಲದೆ ಮನೆ, ಮನೆಗಳಲ್ಲೂ ದುರ್ಗಾನಮಸ್ಕಾರ (ಪೂಜೆ) ಮೂಲಕ ದೇವೀ ಆರಾಧನೆ ನಡೆಯುತ್ತದೆ.

ನಮ್ಮ ಜಿಲ್ಲೆಯಲ್ಲಿ ದುರ್ಗಾದೇವೀ ಆರಾಧನೆಯು ಒಂದು ವಿಶೇಷ ರೂಪದಲ್ಲಿ ನಡೆಯುತ್ತದೆ ಅದು ಲಿಂಗ ರೂಪದಲ್ಲಿ. ಇದಕ್ಕೆ ಕಾರಣವನ್ನೀಯುವುದು ಕಷ್ಟವಾದರೂ ಶಾಕ್ತಪಂಥವು ಶೈವ ಪಂಥದ ಒಂದು ಪ್ರಭೇದವೆಂದು ಪರಿಗಣಿಸಲ್ಪಡುವುದೇ ಕಾರಣವೆನ್ನ ಬಹುದು. ಕೊಲ್ಲೂರು ತುಳುನಾಡಿನ ಸಪ್ತಕ್ಷೇತ್ರದಲ್ಲಿ ಒಂದು. ಶಕ್ತಿ ಕೇಂದ್ರಗಳಲ್ಲಿ ಬಹುಪ್ರಸಿದ್ಧವಾದ ಸ್ಥಳ ಇಲ್ಲಿ ಮೂಲ ದೇವತಾ ಬಿಂಬ ಜ್ಯೋತಿರ್ಲಿಂಗ. ಉಪ್ಪುಗುಂದದ ದುರ್ಗಾಪರಮೇಶ್ವರೀ ದೇವಾಲಯದಲ್ಲಿ ಮಹಾಕಾಳೀ ಲಕ್ಷ್ಮೀ ಮತ್ತು ಸರಸ್ವತಿಗಳ ನಿರ್ದೇಶನವು ಲಿಂಗದ ರೂಪದಲ್ಲಿದೆ. ಸೌಕೂರಿನಲ್ಲಿಯೂ ಮೂರು ಲಿಂಗಗಳಿವೆ. ಅಂತೆಯೇ ಉಡುಪಿ ಪುತ್ತೂರು ಮತ್ತು ಇಂದ್ರಾಳಿ, ಆಲೆವೂರು, ಚಿತ್ರಾಪುರ, ಕಟೀಲು, ನಿಡ್ಡೋಡಿ, ಇರುವೈಲು, ಬಪ್ಪನಾಡು ಈ ಸ್ಥಳಗಳಲ್ಲಿ ದುರ್ಗಾದೇವಿಯು ಲಿಂಗದ ರೀತಿಯಲ್ಲಿ ಉಪಾಸನೆಯನ್ನು ಪಡೆಯುತ್ತಾಳೆ. ಶಾಕ್ತ ಹಾಗೂ ಶೈವ ಸಂಬಂಧವಾದ ದೇವತೆಗಳನ್ನು ಲಿಂಗದ ರೂಪದಲ್ಲಿ ಆರಾಧಿಸುವ ಕ್ರಮವಿತ್ತೆಂಬುದಕ್ಕೆ ಪ್ರತಿ ದೇಗುಲದ ನೈಋತ್ಯದಿಕ್ಕಿನಲ್ಲಿ ಸಪ್ತ ಮಾತೃಕಾ ಮತ್ತು ಗಣಪತಿ, ವೀರಭದ್ರ ದೇವತೆಗಳ ಪ್ರತೀಕವಾಗಿ ಲಿಂಗಗಳಿರುವುದೇ ಸಾಕ್ಷಿ. ಕೆಲವೊಮ್ಮೆ ಒಂದೇ ಲಿಂಗವಿರುವುದು. ಮೂರು ಲಿಂಗಗಳಿರುವಾಗ ಬಲಭಾಗದ ಮೊದಲನೇ ಲಿಂಗ ಇತರೆರಡು ಲಿಂಗಗಳಿಗಿಂತ ದೊಡ್ಡದಾಗಿದ್ದರೆ ಕಾಳೀ ಪ್ರಧಾನವೆಂದೂ ಮಧ್ಯ ಭಾಗದ ಲಿಂಗ ದೊಡ್ಡದಿದ್ದರೆ ಮಹಾಲಕ್ಷ್ಮೀ ಪ್ರಧಾನವೆಂದೂ ಎಡ ಭಾಗದ ಲಿಂಗ ದೊಡ್ಡದಿದ್ದರೆ ಸರಸ್ವತಿ ಪ್ರಧಾನವೆಂದೂ ತಿಳಿಯ ತಕ್ಕುದು. ಈ ದುರ್ಗಾರಾಧನೆಯಲ್ಲಿ ಪಂಚ ಮತ್ತು ನವ ದುರ್ಗಾ ಪ್ರಾಮುಖ್ಯವಾಗಿದೆ. ಬಗ್ಗವಾಡಿ, ನೀಲಾವರ, ಕಣ್ಣಾರ, ಕಡಿಯಾಳಿ, ಬಡಗುಬೆಟ್ಟು ಬೈಲೂರು, ಕುಂಜಾರು, ಕುಂಜೂರು, ಬೆಳ್ಮಣ್ಣು, ಮುಂಡುಕೂರು, ಪೊಳಲಿ, ಪಾರೆಂಕಿ, ಪುಣ್ಚ, ಕೊಡ್ಯಾಡಿ, ಪುತ್ತೂರು, ಕುಂಜೂರು,-ಕಾಸರಗೋಡು ಅಚ್ಚಾವರ, ಕುಕ್ಕುಂದೂರು, ಮಂದಾರ್ತಿ, ನಂದಿಕ್ಕೂರು, ಮೂಡಬಿದುರೆ ದುರ್ಗಾದೇವೀ— ಈ ದೇವಾಲಯಗಳ ಮಹಿಷ ಮಹಿಷಾಸುರ ಮರ್ದಿನಿ ಬಿಂಬಗಳನ್ನು ಯಾವ ಪ್ರತಿಮಾ ವಿಜ್ಞಾನಿಯೂ ನೋಡಿ ಅಭ್ಯಾಸ ಮಾಡ. ವ ಲಕ್ಷಣಗಳನ್ನೊಳಗೊಂಡಿವೆ. ಇವುಗಳು ಕಾಲಮಾನದಲ್ಲಿ ಕ್ರಿ. ಶ. 8ನೇ ಶತಕದಿಂದ ಕ್ರಿ. ಶ. 12ನೇ ಶತಕಕ್ಕೆ ಅನ್ವಯಿಸುತ್ತವೆ. ಹಲವಾರು ದೇವಾಲಯಗಳು ಬಿದ್ದು ಹೋಗಿವೆ. ದೃಷ್ಟಾಂತವಾಗಿ ಉದ್ಯಾವರದ ದೇವೀ ದೇವಾಲಯವನ್ನು ಹೇಳಬಹುದು.

ಉದ್ಯಾವರದಲ್ಲಿ ಭೈರವ ದೇವಾಲಯವೆಂಬಲ್ಲಿ ಅಖಿಲ ಕರ್ನಾಟಕ ಪ್ರಾಮುಖ್ಯತೆಯುಳ್ಳ ಬ್ರಾಹ್ಮೀ, ಮಾಹೇಶ್ವರೀ, ವೈಷ್ಣವೀ ಮತ್ತು ಚಾಮುಂಡಾ ಮೃಣ್ಮಯ ಮೂರ್ತಿಗಳಿವೆ. ಅಂತೆಯೇ ಬಾರಕೂರಿನಲ್ಲಿ ಮಹಾಲಕ್ಷ್ಮೀ ದೇವಾಲಯದಲ್ಲಿ ಬ್ರಾಹ್ಮಿ, ಮಹೇಶ್ವರೀ ಮತ್ತು ವೈಷ್ಣವೀ ಎಂಬ ಆಳುಪ್ರಮಾಣದ ಮೃಣ್ಮಯ ಬಿಂಬಗಳಿವೆ.

ಪೊಳಲಿಯ ಮೂಲ ದೇವತೆಯು ಮಹಿಷಮರ್ದಿನಿ. ಇಲ್ಲಿ ರಾಜ ರಾಜೇಶ್ವರೀ ದೇಗುಲವಿದೆ. ರಾಜರಾಜೇಶ್ವರೀ ವಿಗ್ರಹವು ದ್ವಿಬಾಹುವಾಗಿದ್ದು ಸಿಂಹ ಪೀಠದಲ್ಲಿ ಆರೂಢವಾಗಿ 12 ಅಡಿ ಎತ್ತರವಿದೆ. ಪ್ರಾಯಶಃ ಕರ್ನಾಟಕದಲ್ಲೇ ಇಷ್ಟು ಎತ್ತರದ ಮೃಣ್ಮಯ ಮೂರ್ತಿ ಇತರತ್ರ ಇರಲಾರದು. ಇಲ್ಲಿಯೇ ಇರುವ ದ್ವಿಬಾಹು ಕಾಳೀ, ಸ್ಕಂದ, ಗಣೇಶ ಮತ್ತು ಬ್ರಹ್ಮ ಮೂರ್ತಿಗಳೂ ಬಹು ವಿಶೇಷವಾದುವುಗಳು. ಪೊಳಲಿಯನ್ನು ದಕ್ಷಿಣ ಭಾರತದ ಹಿರಿದಾದ ಶಕ್ತಿ ಕೇಂದ್ರಗಳಲ್ಲಿ ಒಂದು ಎಂಬುದಾಗಿ ಪರಿಗಣಿಸಬಹುದು.

ಜಿಲ್ಲೆಯ ದೇವಿಯ ಮೂರ್ತಿಗಳನ್ನು ಉಲ್ಲೇಖಿಸುವಾಗ ಬಾರಕೂರು, ಕಾರ್ಕಳ ಮತ್ತು ಮಂಗಳೂರುಗಳಲ್ಲಿರುವ ಕಾಳಿಕಾಂಬಾಬಿಂಬಗಳ ಉಲ್ಲೇಖವನ್ನು ಮಾಡುವುದಗತ್ಯ. ಈ ಮೂರು ಬಿಂಬಗಳೂ ವಿಜಯನಗರ ಕಾಲದ ಶಿಲ್ಪವನ್ನು ಉತ್ಕೃಷ್ಟವಾದ ರೀತಿಯಲ್ಲಿ ನಿರ್ದೇಶಿಸುತ್ತವೆ. ಎತ್ತರದಲ್ಲಿ 2½' ಆಗಿದ್ದು ಕಡ್ಗ, ಕತ್ತರಿ, ಜಪಸರ ಮತ್ತು ಫಲಧಾರಿಯಾಗಿ ಲಲಿತಾಸನದಲ್ಲಿ ನಿರ್ದೇಶಿತವಾಗಿವೆ. ಪಾಣಿಪೀಠದಲ್ಲಿ ಮೂರು ರುಂಡಗಳು ತೋರಿಸಲ್ಪಟ್ಟಿದೆ. ಬಾರಕೂರಿನ ಬಿಂಬದಲ್ಲಿ ಒಂಟೆಯ ನಿರ್ದೇಶವಿದೆ: ಜಿಲ್ಲೆಯ ಅನೇಕ ದೇವೀ ವಿಗ್ರಹಗಳಲ್ಲಿ ಶಂಕ ಚಕ್ರಗಳೇ ಪ್ರಾಮುಖ್ಯ ಆಯುಧಗಳಾಗಿವೆ.

ಜಿಲ್ಲೆಯ ಆದ್ಯಂತ ಮಾರಿಗುಡಿಗಳಿವೆ. ಇವುಗಳ ಕಾಲ ನಿರ್ಧಾರ ಮಾಡುವುದು ಕಷ್ಟ. ಕಾಪು, ಕಾರ್ಕಳಗಳ ಮಾರಿಗುಡಿಗಳು ಬಹು ಪ್ರಸಿದ್ಧ.

ಮೇಲೆ ನಮೂದಿಸಿದ ಕೇಂದ್ರಗಳಲ್ಲಿ ಕೊಲ್ಲೂರು, ನೀಲಾವರ, ಕಡಿಯಾಳಿ, ಪೊಳಲಿ, ಕುಂಜಾರು, ಮೂಡಬಿದುರೆ ದುರ್ಗಾ ಅಗ್ರಸ್ಥಾನವನ್ನು ಹೊಂದುತ್ತವೆ. ●

ಉಡ್ಪಿ ಶಿವಿಲ್ ಜಡ್ಜರ ಕೋರ್ಟಿನಲ್ಲಿ

O. S. No. 28/1970.

M. ರಂಗನಾಥ ಅಡಿಗ ಕೂಡಾ— ವಾದಿರು

ಮತ್ತು

ಪದ್ಮನಾಭ ಅಡಿಗ ಕೂಡಾ— ಪ್ರತಿವಾದಿರು

ಇವರೊಳಗೆ

18ನೆ ಪ್ರತಿವಾದಿಳು– ಭವಾನಿ ಅಂಮ–ರಾಮಪ್ಪ ಅಡಿಗರ ಮಗಳು ೦ಬ್ರ ಲಕ್ಷ್ಮಿ ನಾರಾಯಣ.ಅಡಿಗ, ಮಿತ್ರಸಮಾಜ ಹೊಟೆಲು, ಶಿದ್ಧಾಪುರ, ಉತ್ತರಕನ್ನಡ.—ಇವರಿಗೆ ತಿಳಿಸುವದೇನೆಂದರೆ—

ವಾದಿರು ಪಾಲಿನ ಕುರಿತು ನಿಂಮ ಮೇಲೆ ಕೂಡಾ ಮಾಡಿದ ದಾವೆಯು ತಾರೀಕು 19–10–71ಕ್ಕೆ ನಿಂಮ ನೋಟ್ಸಿ ಬಗ್ಗೆ ಯಿಡೋಣಾಗಿಯದೆ. ಆ ಕುರಿತು ನಿಮಗೇನಾದ್ರೂ ಆಕ್ಷೇಪ ಹೇಳತಕ್ಕದ್ದು ಯಿದ್ರೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟಿನ ಮುಂದೆ ಬೆಳಿಗ್ಗೆ 11 ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತ ಯಿ ಮೂಲ್ಕ ತಿಳಿಸೋಣಾಗಿಯದೆ.

V. R Kidyur

Advocate for Plaintiffs

ಉಡ್ಪಿ, 30–9–71.

ನಿಮಗೆ ಬೇಕಾಗುವ

ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಕೊಲಿಟಿಯಲ್ಲಿ, ಸ್ಯಾಜಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ

ಈಗಿನ ನ್ಯಾಯ ಬೆಲೆಗೆ ಧರ್ಮಕಾಂಟಾ ಕೆರೆಟ ತೂಕದಲ್ಲಿ

ಮುಂದಾಗಿ ನಮ್ಮಿಂದ ಪಡೆಯಬಹುದು.

ವಾಸುದೇವ ಫೈನ್ ಜುವೆಲ್ಲರೀಸ್

ರಥಬೀದಿ—ಉಡುಪಿ, ದ. ಕ.

Gram: VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging.

107 Police Road, City Market.

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

Edited, Printed & Published by K. H. Shetty at the Navayuga Press, Udipi. S. India.

ಸ್ಥಾಪಕರು .
ದಿ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಸಂಪುಟ ೫೧
ಸಂಚಿಕೆ ೬

Vol. 51
No. 6

ಉಡುಪಿ, 14—10—1971

ಚಾರುಚಯನ

ಪೀಕಿಂಗಿನಲ್ಲಿ ಉತ್ತರಾಧಿಕಾರದ ಪ್ರಶ್ನೆ

ಅಕ್ಟೋಬರ ೧ ಕೆಂಪು ಚೀನಾದಲ್ಲಿ ಕಮ್ಯುನಿಸ್ಟ್ ಸರಕಾರದ ವಾರ್ಷಿಕೋತ್ಸವದ ದಿನ. ವೈಭವದ ಆಚರಣೆಯು ಸಂಪ್ರದಾಯ.

ಆದರೆ, ಈ ಅಕ್ಟೋಬರ ದಿನಾಚರಣೆಯಲ್ಲಿ ವೈಭವವಿರಲಿಲ್ಲ; ಸಂಪ್ರದಾಯ ಪಾಲನೆಯೂ ಇರಲಿಲ್ಲ. ಚೀನಿ ನಾಯಕಾಗ್ರಗಣ್ಯರೆಲ್ಲರೂ ಒಂದೇ ವೇದಿಕೆಯ ಮೇಲೆ ಇದುವರೆಗೆ ಕಂಡುಬರುತಿದ್ದರೆ, ಈ ಬಾರಿ ಪ್ರಮುಖರೇ ನಾಸ್ತಿ. ಪ್ರಧಾನಮಂತ್ರಿ ಚೌ-ಎನ್ ಲಾಯರೇ ಗೈರುಹಾಜರಿ.

ಚೀನಾದಲ್ಲೇನು ನಡೆದರೂ ಅದು ಭಾರಿ ಸುದ್ದಿಯಾಗುತ್ತದೆ ಈಗೀಗಂತೂ ಅದು ಸುದ್ದಿಯೋ ಸುದ್ದಿ. ಅಮೆರಿಕನ್ ಅಧ್ಯಕ್ಷ ನಿಕ್ಸನ್ನರು ಕೆಂಪು ಚೀನಾಕ್ಕೆ ಭೆಟ್ಟಿ ನೀಡಲಿದ್ದಾರೆ; ವಿಶ್ವಸಂಸ್ಥೆಯಲ್ಲಿ ಅದಕ್ಕೆ ಸ್ಥಾನ ನೀಡಿಸುವುದರ ಬಗ್ಗೆ ವಕಾಲತ್ತು ನಡೆಸುತಿದ್ದಾರೆ ಈ ತಿಂಗಳಾಂತ್ಯದಲ್ಲಿ ಅವರ ಭೆಟ್ಟಿಯ ವಿವಿಧ ಕಾರ್ಯಕ್ರಮಗಳು ಅಂತಿಮವಾಗಿ ರೂಪುಗೊಳ್ಳುವುದೆಂದು ಕೆಂಪು ಚೀನಾ ಬಹಿರಂಗಪಡಿಸಿದೆ.

ಇತ್ತೀಚಿಗಿನ ದಿನಗಳಲ್ಲಿ ಕೆಂಪು ಚೀನಾದಲ್ಲಿ ಹೊಸ ಗಾಳಿ ಬೀಸಿದೆಯೆಂದು ಹೇಳಬಹುದು ಮಾವೋ ತೀರ ವೃದ್ಧರಾಗಿದ್ದು, ಅವರ ಆರೋಗ್ಯ ಚೆನ್ನಾಗಿರಲಿ, ಇಲ್ಲದೇ ಇರಲಿ, ಬಹುಕಾಲ ಜೀವಿಸಿರುವುದು ಸಾಧ್ಯವಿಲ್ಲ. ಕಳೆದ ೨೨ ವರ್ಷಗಳ ಸುದೀರ್ಘಾವಧಿಯಲ್ಲಿ ಪ್ರಶ್ನಾತೀತ ನಾಯಕತ್ವವನ್ನವರು ಕೆಂಪು ಚೀನಾಕ್ಕೆ ನೀಡಿದ್ದಾರೆ.

ಮುಂದೇನು? ಅವರ ಉತ್ತರಾಧಿಕಾರಿ ಯಾರು?

ಉತ್ತರಾಧಿಕಾರದ ಸವಾಲೇ ಅಲ್ಲಿನ ಹೊಸ ಗಾಳಿಗೆ ಕಾರಣ. ಪ್ರಧಾನಿಯಾಗಿರುವ ಚೌ-ಎನ್-ಲಾಯ್ ತನಗಾ ಹುದ್ದೆ ದೊರೆಯಬೇಕಾದುದು ನ್ಯಾಯಬದ್ಧವೆಂದು ದೃಢವಾಗಿ ನಂಬಿದ್ದಾರೆ. ಅವರ ಜೊತೆಯಲ್ಲೇ ಅಲ್ಲಿನ ಪದಚ್ಯುತ ಅಧ್ಯಕ್ಷ ಲಿಯೂ ಅವರು ಬಂಧನದಿಂದ ತಪ್ಪಿಸಿಕೊಂಡು ರಶ್ಯದ ರಾಜಧಾನಿ ಮೋಸ್ಕೋ ಸೇರಿದ್ದಾರೆಂದು ವರದಿ.

ಈ ವರದಿಯನ್ನು ಸೋವಿಯತ್ತು ತಿರಸ್ಕರಿಸಬಹುದು; ಆದರೆ, ಒಂದು ತಿಂಗಳಿಗೆ ಮೊದಲೇ ಲಿಯೂ ಬಂಧನದಿಂದ ತಪ್ಪಿಸಿಕೊಂಡಿರುವುದು ಸತ್ಯ. ಇವರು ಅದು ಹೇಗೆ ತಪ್ಪಿಸಿಕೊಂಡರು ಎಂಬ ಪ್ರಶ್ನೆ ಬೇರೆ.

ಲಿಯೂ, ತನ್ನ ಕಳೆದುಕೊಂಡ ಸ್ಥಾನವನ್ನು ಮರಳಿ ಗಳಿಸಲು ಭಗೀರಥ ಪ್ರಯತ್ನ ಮಾಡಿದರೆ ಅದು ತಪ್ಪಲ್ಲ.

ಕೆಂಪು ಚೀನಾದಲ್ಲಿ ಮಾವೋ ವಿರೋಧಿ ಭಾವನೆಯನ್ನು ಹುಟ್ಟಿಸುವ ಸೂತ್ರದನ್ನು ಬೆಳೆಸುವ ವ್ಯವಸ್ಥಿತ ಪ್ರಯತ್ನ ನಡೆಯುತ್ತಿದೆ. ಸಾರ್ವಜನಿಕ ಸ್ಥಾನಗಳಲ್ಲಿದ್ದ ಮಾವೋ ಮೂರ್ತಿಗಳನ್ನೂ ಮಾವೋ ಭಾವಚಿತ್ರಪಟಗಳನ್ನೂ ಕಿತ್ತು ಹಾಕುವ ಕಾರ್ಯ ನಿರಂತರ ನಡೆಯುತ್ತಿದೆ

ಇದು ಮಾವೋಗೆ ಅರಿಯದ ಸಂಗತಿಯಲ್ಲ. ಅವರೂ ತಮ್ಮ ಹುಳುಕನ್ನು ಹೊರ ಹಾಕಲು, ತಮ್ಮ ನಾಯಕತ್ವದ ಮೇಲೆ ಪ್ರಶ್ನೆಯೆದ್ದಿದೆಯೆಂದು ವಿಶಾಲ ಜಗತ್ತಿಗೆ ಸಾರಲು ಅವರು ಸಿದ್ಧರಿಲ್ಲ ಆದ್ದರಿಂದಲೇ ಅಕ್ಟೋಬರ ಪರೇಡು ಬಂದು—ಸಂಪ್ರದಾಯ ಮುರಿತ—ಬರಿಯ ಸಂತೋಷಕೂಟದಿಂದಲೇ ಸಂತೃಪ್ತಿ. ಇದಕ್ಕೆ ಬಂದವರು ಬಂದರು, ಉಳಿದವರು ನಾಪತ್ತೆ.

ಮಾವೋ ವಿರೋಧಿ ಬಣದ ನಾಯಕತ್ವವನ್ನು ನೇಸಾನಾಯಕರೇ ವಹಿಸಿಕೊಂಡಂತಿದೆ. ಮಾವೋರವರ ಮಿತವಾದಿ ತತ್ವಗಳನ್ನು ಅವರು ವಿರೋಧಿಸಿ ಉಗ್ರಗಾಮಿ ನೀತಿಯನ್ನು ನೆಮ್ಮಿಕೊಂಡಿದ್ದಾರೆ.

ಆಕಾಶ-ಪಾತಾಳಗಳಲ್ಲಿದ್ದ ವಾಷಿಂಗ್‌ಟನ್—ಪೀಕಿಂಗ್‌ಗಳು ಹತ್ತಿರ ಬರುವುದನ್ನು ತೀವ್ರಗಾಮಿಗಳು ಸಹಿಸುವುದಿಲ್ಲ. ವಿಶ್ವಸಂಸ್ಥೆಯಲ್ಲಿ ಸದಸ್ಯತ್ವದ ಬಗ್ಗೆಯೂ ಅವರಿಗೆ ಹೆಚ್ಚು ಕಾಳಜಿಯಿಲ್ಲ.

ಈ ದಿಸೆಯಲ್ಲಿ ಅಮೆರಿಕೆಯೇ ಪೇಚಿಗೆ ಸಿಕ್ಕಿಕೊಂಡಿವೆಯೆನ್ನಬೇಕು. ವಾಶಿಂಗ್‌ಟನ್ನು ಕಳೆದ ಕಾಲು ಶತಮಾನದಿಂದಲೂ ಥೈವಾನನ್ನೇ ಚೀನಾವೆಂದು ಮನ್ನಿಸಿದೆ, ವಿಶ್ವಸಂಸ್ಥೆಯ ಶಾಶ್ವತ ಸದಸ್ಯರಾದ ಚತುರ್ಮಹಾರಾಷ್ಟ್ರಗಳಲ್ಲಿ ಅದನ್ನು ಒಂದೆಂದು ಮಾನ್ಯ ಮಾಡಿದೆ.

ಥೈವಾನಿಗೆ ನಾನಾ ಪ್ರಕಾರದ ನೆರವು ನೀಡಿದ್ದು ಅದರಲ್ಲಿ ಕೆಂಪು ಚೀನಾದ ಬಗ್ಗೆ ದ್ವೇಷ ಭಾವನೆ ಬೆಳೆಯಲು ಒತ್ತಾಸೆ ನೀಡುತ್ತಲೇ ಬಂದಿದೆ.

ತನ್ನ ಚೀನೀ ನೀತಿಯನ್ನು ವ್ಯಾಖ್ಯಾನಿಸುತ್ತ ಅದು ಥೈವಾನನ್ನು ಹಿಂದಿನಂತೆಯೇ ನೋಡಿಕೊಳ್ಳುವುದಾಗಿ ಭರವಸೆ ನೀಡಿದೆ.

ಅಂದರೆ, ಅದು ಎರಡು ಚೀನಾ ನೀತಿಯನ್ನು ಪ್ರತಿಪಾದಿಸುತ್ತದೆ.

ಇದು ಪೀಕಿಂಗಿಗೆ ಇಷ್ಟವಲ್ಲ.

ಅದು ತಾನೇ ಚೀನವೆಂದೂ ತನಗೇ ವಿಶ್ವಸಂಸ್ಥೆಯ ಶಾಶ್ವತ ಸದಸ್ಯತ್ವ ದೊರೆಯಬೇಕೆಂದೂ ಅದಿಲ್ಲದೆ ಬರಿಯ ಸದಸ್ಯತ್ವ ತನಗನಗತ್ಯವೆಂದು ಡಣಾಡಂಗುರ ಸಾರಿದೆ.

ಈ ಜಟಿಲತೆಯಿಂದ ಪಾರಾಗುವುದು-ಬಿಡುವುದು ನಿಕ್ಸನ್ನರಿಗೆ ಸೇರಿದ್ದು

ಕೆಂಪು ಚೀನಾದ ನೀತಿ-ತತ್ವಗಳು ಹೊಡೆದಾಟಕ್ಕೆ ಗುರಿಯಾಗಬಹುದು. ಮಾವೋ ತನ್ನ ಪ್ರಭಾವವನ್ನುಳಿಸಿಕೊಂಡು ತನಗೆ ಬೇಕಾದವರನ್ನೇ ಉತ್ತರಾಧಿಕಾರಿಯಾಗಿ ಮಾಡುವ ಪ್ರಯತ್ನ ನಡೆಸಬಹುದು

ಅವರ ವಿರೋಧಿಗಳೂ ತಮ್ಮ ಪ್ರಯತ್ನವನ್ನು ಮುಂದುವರಿಸುವುದು ಸಹಜ. ಆರಂಭದಲ್ಲಿ ಇವರು ಸಫಲತೆಯಿಂದ ದೂರವಿರಬಹುದು ಆದರೆ, ಒಂದೇ ನಾಯಕತ್ವ ಎಂದೆಂದಿಗೂ ಜನಪ್ರಿಯವಾಗಿ ಉಳಿಯುವುದಿಲ್ಲ

ಚೀನಾದ ಅಮೆರಿಕನ್ ನೀತಿ ಅಸ್ಪಷ್ಟವೇ. ಅಮೆರಿಕೆ ಎರಡು ಚೀನೀ ನೀತಿ ತಳೆದಿರುವವರೆಗೂ ಇದು ಸ್ಪಷ್ಟವಾಗುವುದಿಲ್ಲ.

ಪೀಕಿಂಗಿನಲ್ಲಿ ಯಾರು ಅಧಿಕಾರಕ್ಕೆ ಬರುತ್ತಾರೆ ಎಂಬುದು ನಮಗೆ ಅನಗತ್ಯ. ಪೀಕಿಂಗು ನವದೆಹಲಿಯನ್ನು, ಮೋಸ್ಕೋವನ್ನು ಹೇಗೆ ನೋಡುತ್ತದೆ ಎಂಬುದು ಮುಖ್ಯ. ರಾವಲ್ಪಿಂಡಿಯ ಸಿಂಹಾಸನದಲ್ಲಿ ಯಾರಿದ್ದರೂ ಅವರು ನವದೆಹಲಿಯನ್ನು ವಕ್ರ ದೃಷ್ಟಿಯಿಂದಲೇ ನೋಡುವುದು ಸಂಪ್ರದಾಯ ಅದೇ ರೀತಿ ಪೀಕಿಂಗಿನ ದೃಷ್ಟಿಯೂ ದೋಷಪೂರ್ಣವಾಗುಳಿದರೆ, ನಮಗೇನು ಲಾಭ?

ಮುಂದಿನ ಕೆಲವು ವರ್ಷಗಳಲ್ಲಿ ಜಾಗತಿಕ ಇತಿಹಾಸ ಹೊಸ ತಿರುವೊಂದನ್ನು ಕಾಣುತ್ತದೆ.

○ ○ ○

ಭಾರತದ ಪ್ರಧಾನಿ ಇಂದಿರಾಗಾಂಧಿಯವರು ಮೋಸ್ಕೋವಿಗೆ ಭೆಟ್ಟಿ ನೀಡಿದ ಮರುಗಳಿಗೆಯಲ್ಲೇ ರಶ್ಯನ್ ಅಧ್ಯಕ್ಷ ಪೊಡ್ಗೋರ್ನಿಯವರು ನವದೆಹಲಿಗೆ ಬಂದರು.

ಬಂಗ್ಲಾದೇಶದ ಪ್ರಶ್ನೆಯೇ ಸದ್ಯದ ಜಾಗತಿಕ ಪ್ರಶ್ನೆ.

ಬಂಗ್ಲಾ ದೇಶದ ವಿದ್ಯಮಾನಕ್ಕೆ ರಾಜ್ಯಕೀಯ ಪರಿಹಾರವೊಂದೇ ಸರ್ವ ಸಮ್ಮತ—ಇದರ ಬಗ್ಗೆ ಮೋಸ್ಕೋ—ನವದೆಹಲಿಗಳ ನಡುವೆ ಭಿನ್ನ ಮತವಿಲ್ಲ.

ಅಧ್ಯಕ್ಷ ಯಾಹ್ಯಾಖಾನರು ವಂಗ ಬಂಧು ಶೇಕ ಮುಜಿಬುರ ರಹಮಾನರ ಮೇಲೆ ಸೇಡಿನ ಕ್ರಮವನುಸರಿಸುತಿದ್ದಾರೆ. ಇದು ತೆರೆಯ ಮರೆಯಲ್ಲಿಲ್ಲ.

ಒಂದೊಮ್ಮೆ ಕ್ರೋಧಾವೇಶದಲ್ಲಿ ಯಾಹ್ಯಾಖಾನರು ಶೇಕರ ಮೇಲೆ ಉಗ್ರ ಕ್ರಮವನ್ನೇ ಕೈ ಕೊಂಡರೆ, ಬಂಗ್ಲಾ ದೇಶಕ್ಕೆ ದೇಶವೇ ಮೇಲೆ ಬಿದ್ದು ಅವರನ್ನೇ ಸುಟ್ಟು ಬೂದಿ ಮಾಡಬಹುದು.

ಇದು ಯಾಹ್ಯಾಖಾನರಿಗೂ ತಿಳಿದಿದೆ. ಹಾಗಾಗಿಯೇ ಅವರು ಮೀನಮೇಷವೆಣಿಸುತಿದ್ದಾರೆ.

ಬಂಗ್ಲಾ ಸಮಸ್ಯೆಗೊಂದು ಪರಿಹಾರವರಸಲು ಮೊದಲ ಹೆಜ್ಜೆ ರಹಮಾನರ ಅನಿರ್ಬಂಧ ಮುಕ್ತಿ.

ಪೊಡ್ಗೋರ್ನಿಯವರು ಈ ಬಗ್ಗೆ ಪ್ರಯತ್ನ ನಡೆಸುವುದಾಗಿ ಭರವಸೆ ನೀಡಿದ್ದಾರೆ. ಶೇಕರ ವಿರುದ್ಧ ಪ್ರತೀಕಾರದ ಭಾವನೆಯನ್ನು ಬಿಟ್ಟು ಬಿಟ್ಟು ಸಮಸ್ಯೆಯ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ನಡೆಸಬೇಕೆಂದವರು ಯಾಹ್ಯಾಖಾನರನ್ನು ಕೇಳಿಕೊಂಡಿದ್ದಾರೆ.

ಬಂಗ್ಲಾದೇಶದ ಬಗ್ಗೆ ಅನುಕಂಪ ಮಾಡುವ ಬದಲು, ಅಲ್ಲಿನ ನಿರಾಶ್ರಿತರ ಬಗ್ಗೆ ಮಾತ್ರ ಸಹಾನುಭೂತಿ ಪ್ರಕಟವಾಗ ಹತ್ತಿದೆ. ಆದುದರಿಂದಲೇ ಬಂಗ್ಲಾ ದೇಶಕ್ಕೆ ಮನ್ನಣೆ ನೀಡುವ ಪ್ರಶ್ನೆ ದೂರ ದೂರವಾಗುತ್ತಿದೆ.

ಪ್ರಚಲಿತ ಪರಿಸ್ಥಿತಿಯಲ್ಲಿ ಸೋವಿಯತ್ತು ಬಂಗ್ಲಾ ಸರಕಾರವನ್ನು ಮನ್ನಿಸಲು ಸಿದ್ಧವಿಲ್ಲ. ಅದು ಪಾಕಿಸ್ತಾನದ ಸ್ನೇಹವನ್ನು ಒಮ್ಮೆಗೇ ಕಡಿದುಕೊಳ್ಳಲಿಚ್ಛಿಸುವುದಿಲ್ಲ.

ಭಾರತ ಏಕಪಕ್ಷೀಯವಾಗಿ ಮನ್ನಣೆ ನೀಡುವಷ್ಟು ಎದೆಗಾರಿಕೆ ತೋರಿಸುವುದಿಲ್ಲ. ಹಾಗಾಗಿ ಪ್ರಶ್ನೆ ಮತ್ತೂ ಉದ್ದಕ್ಕೆ ಎಳೆಯುತ್ತಲೇ ಹೋಗುತ್ತದೆ.

ಈಗಾಗಲೇ ಏಳು ತಿಂಗಳು ಹಿಡಿದ ಬಂಗ್ಲಾ ಪ್ರಶ್ನೆ ಮತ್ತೊಂದು ವಿಯತನಾಮ ಪ್ರಶ್ನೆಯಾಗುತ್ತದೆಯೆಂಬುದರಲ್ಲಿ ಸತ್ಯಾಂಶ ವಿದೆಯೇ ಅನ್ನಿಸಹತ್ತಿದೆ.

● ●

ಜಗತ್ತಿನ ಅಭಿಪ್ರಾಯವನ್ನು ಕಡೆಗಣಿಸುವ ಮಾನವನು ಗರ್ವಿಯೆನಿಸುವನಲ್ಲದೆ ಅವಿಚಾರಿಯೆನಿಸುವನು.

○ ○ ○

'ಗಾಂಧೀಜಿಯ ಕೊಲೆ'

([illegible])

[illegible]— [illegible]

[illegible] 1947ರ [illegible]

[illegible]

ಕೊಂಡು [illegible]

[illegible]

[illegible]

10-1-18ರಂದು [illegible]

[illegible]

ನಿಷ್ಠೆ [illegible] ಅಪ್ಟೆ [illegible] ಹೊರಟು [illegible]

[illegible] ಯುನೆಟ್ಟಿನ ತನ್ನ ಭಾಗಕ್ಕೆ ಬಂದ ಕೆಲಸಗಳನ್ನು ಅರ್ಧವನ್ನು ಆಗಲೇ ಮುಗಿ ಯಿತು ಎಂದು ತಿಳಿಸಿದ. ಮೊಳಕ್ಕೆ [illegible] ಗೆ ಕಳುಹಿಸುವ [illegible] ಗೊತ್ತಿರುವವರಿಲ್ಲವನ್ನು ತಿಳಿಸಲು [illegible]

ಆದರೂ ಸಂಗ್ [illegible] ಬಿಡಲಿಲ್ಲ. 12ರಂದು ತನಗೆ [illegible] ಬೇಕಾದ ಹಣವನ್ನು [illegible] ದಿನ 13ರಂದು [illegible] ಸಾಗಿಸಾದ. [illegible] ದ [illegible] ಕಟ್ಟಿದರು. ಕಿಷ್ಟಯ್ಯಗೆ ಹೇ ಳಿದ. ಹಾಕಿದ [illegible] ಹೊರಟಿದ್ದ ಚೀಲದಲ್ಲಿ ಆಸ್ಫೋಟಕಗಳನ್ನು ಕಿಷ್ಟಯ್ಯ [illegible].

ಜನವರಿ 11ರಂದು ಗೋಡ್ಸೆ ತಿಪ್ಪಗೆ ಕು [illegible] ಅತಿ ಮಹತ್ವದ ಕೆಲಸವನ್ನು ಅಂದು ಪೂರೈಸಿದ ವಿಮಾ ಕಂಪೆನಿಯೊಂ ದರಲ್ಲಿ ಗೋಡ್ಸೆ ತನ್ನ ಜೀವ ವಿಮೆ ಮಾಡಿ ಸಿದ್ದ. ತನ್ನ ಸಹೋದರ, ಆ ಪಾಲಿಸಿಗಳಿಂದ ಬರಬೇಕಾದ ಮೊಬಲಗನ್ನು ಯಾರಿಗೆ ಪಾ ವತಿ ಮಾಡ ಬೇಕೆಂದು ಆತ ಗೊತ್ತು ಪಡಿ ಸಿರಲಿಲ್ಲ ಅಂದು ಅವುಗಳಿಗೆ ತನ್ನ ವಾರ ಸುದಾರರನ್ನು ನೇಮಿಸಿದ 3000—00 ರೂಪಾಯಿಗಳ ಪಾಲಿಸಿಯ ಹಣವನ್ನು ತನ್ನ ತಮ್ಮನ ಹೆಂಡತಿ ಸಿಂಧೂ ತಾಯಿಗೆ ಸೇರ ಬೇಕೆಂದೂ, 2000—00 ರೂಪಾ ಯಿನದು ಆಪ್ಟೆಯ ಹೆಂಡತಿ ಚಂಪೂ ತಾ ಯಿಗೆ ಸಲ್ಲ ಬೇಕೆಂದೂ ಬರೆದು ತಿಳಿಸಿದ. ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಎವೂ ಸಂಸ್ಥೆಯಿಂದ ಪಡೆದ ಆ ಪಾಲಿಸಿಗ ಳ ಕ್ರಮ ಸಂಖ್ಯೆ 1166101 ಮತ್ತು 1166102. ವಾರಸುದಾರರ ನೇಮಕ ಮಾಡಿ ಪತ್ರಕ್ಕೆ ಆಪ್ಟೆ ಸಾಕ್ಷಿ ಹಾಕಿದ್ದ. ವಿಚಾರಣೆಯ ಕಾಲದಲ್ಲಿ ಅವು ಬೆಳಕಿಗೆ ಬಂದವು.

ಜನವರಿ 14ರ ಸಂತೆ ಏಳರ ಸುಮಾರಿ ಗೆ ಬಾಡ್ಗೆ–ಕಿಷ್ಟಯ್ಯ ದಾದರನ್ನು [illegible] [illegible] ರ [illegible] ಮಹಾಸಭೆಯ ಕಾರ್ಯಾಲಯ ಕ್ಕೆ ಹೋದರು. [illegible] ಆಪ್ಟೆ– ಗೋಡ್ಸೆ [illegible] ತಿಳಿದಾಕ. [illegible] ಆಪ್ಟೆ [illegible] [illegible] ರು. [illegible] ದೆ ಲಕ್ಷಣಗಳು ಕಾಣಲಿಲ್ಲ. ಅವರು ತ ನ್ನ [illegible] ಗಂಟಿನೊಡನೆ ಅಲ್ಲಿಂದ ಹೊರಬಿದ್ದರು ಅಷ್ಟರಲ್ಲಿ ಆಪ್ಟೆ ಅಲ್ಲಿಗೆ ಬಂದ.

ಸಕಾಲದಲ್ಲಿ ಬಂದುದಕ್ಕೆ ಆಪ್ಟೆ ಅವ ರನ್ನು ಅಭಿನಂದಿಸಿದ ತನ್ನ ಭಾಗದಿಂದಾದ ಅಪರಾಧಕ್ಕೆ ಕ್ಷಮೆ ಯಾಚಿಸಿದ. ತಂದಿದ್ದ ಮಾಲನ್ನು ಸುರಕ್ಷಿತ ಸ್ಥಳದಲ್ಲಿಡಬೇಕಾಗಿದೆ ಎಂದು ಬಾಡ್ಗೆ–ಕಿಷ್ಟಯ್ಯರನ್ನು ಕರಕೊಂ ಡು ಕಾರ್ಯಾಲಯದಿಂದ ಹೊರಬಿದ್ದ. ದಾರಿಯಲ್ಲಿ ಗೋಡ್ಸೆ ಅವರನ್ನು ಕೂಡಿ ಕೊಂಡ ಅವರೆಲ್ಲ ಸಾವರ್ಕರ ಸದನವನ್ನು ಪ್ರವೇಶಿಸಿದರು. ಅದುವರೆಗೂ ಬಾಡ್ಗೆಯ ಕೈಯಲ್ಲಿದ್ದ ಚೀಲವನ್ನು ಆಪ್ಟೆ ತನ್ನ ಕೈಗೆ ತೆಗೆದುಕೊಂಡ. ಚೀಲದೊಡನೆ ಆತ ಒಳ ಕ್ಕೆ ಹೋದ ಗೋಡ್ಸೆ ಆತನನ್ನು ಹಿಂಬಾ ಲಿಸಿದ ಬಾಡ್ಗೆ–ಕಿಷ್ಟಯ್ಯ ಹೊರಗುಳಿದ ರು ಗೋಡ್ಸೆ–ಆಪ್ಟೆ ಹೆಚ್ಚು ಕಾಲ ಒಳಗೆ ಉಳಿಯಲಿಲ್ಲ. ಹತ್ತು ನಿಮಿಷದಲ್ಲಿ ಚೀಲ ಸಮೇತ ಹೊರ ಬಂದರು ಅಂದು ಅಲ್ಲಿ ಅವರು ಯಾರನ್ನು ಕಂಡರು–? ಚೀಲವ ನ್ನು ಯಾರಿಗೆ ತೋರಿಸಿದರು–? ಅದನ್ನು ಊಹೆಗೆ ಬಿಡುವುದು ಒಳ್ಳೆಯದು ಅಲ್ಲಿಂ ದ ಪುನಃ ಹಿಂದು ಮಹಾಸಭೆಯ ಕಛೇರಿ ಗೆ ಬಂದರು. ಒಂದು ಕಾರನ್ನು ಬಾಡಿಗೆಗೆ ಹಿಡಿದರು ಕಾರಿನಲ್ಲಿ ದೀಕ್ಷಿತ ಮಹಾರಾ ಜರಲ್ಲಿಗೆ ಹೊರಟರು [illegible]

([illegible])

ಕುಟುಂಬ ಯೋಜನೆಯಿಂದ ಸಂಸಾರದ ಖರ್ಚು ಕಡಿಮೆ

[illegible]

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 6

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು
ಸರಕಾರಗಳಲ್ಲಿ ಆರೋಗ್ಯ
ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 13
ಎರಡು ವರ್ಷಗಳಿಗೆ ರೂ. 24
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : 0–25

[illegible]

[illegible]

ಭಾರತವನ್ನು ಬಂಗಾರವಾಗಿ ಕಾಡುತ್ತಿದೆ ಮಾಯೆ

(೧)

[illegible]

[illegible]

[illegible]

[illegible]

ಗೇಹರಾಜ್ಯದಲ್ಲಿ

ಕ್ಯಾಬರೇ ವಿರೋಧ ಚಳುವಳಿ

"ಕೇಳಿದ್ಯೇನೆ, ಭಾರಿ ಛಲೋ...."

'ಏನೂಂತೇನೆ ಅಂಥಾದ್ದು....'

'ಮಹಿಳೆಯರಿಗಾಗಿ ವಿಶೇಷ ಚಳುವಳಿಯೊಂದು ಹುಬ್ಬಳ್ಳಿಯಲ್ಲಿ ಆರಂಭವಾಗಿದೆ; ಅದರ ಗಾಳಿ ರಾಜ್ಯದ ಇತರತ್ರವೂ ಹರಡಿತೆಂದರೆ, ಮನೆಯಲ್ಲಿ ಕೂತು ಕೂತು ಬೇಸರ ಬಂದಿರೋರಿಗೆ ಜಸ್ಟ್ ಛೇಂಜ್....'

'ಏನಂತೀರಾ ನೀವು?'

'ಅಲ್ಲ, ಕ್ಯಾಬರೇ ಎಂಬೋದು ದೊಡ್ಡ ದೊಡ್ಡ ಸಿಟಿಗಳಿಗೆ ಮಾತ್ರ ಅಂಟಿದ ರೋಗವಾಗಿತ್ತು. ಅದರ ಸೋಂಕು ಮಿನಿ ಸಿಟಿಗಳಿಗೂ ತಗಲಿ ಈಗ ಎಲ್ಲೆಲ್ಲೂ ಅದರದ್ದೇ ಕಾರುಬಾರು....'

"ಹ್ಞೂಂ, ಅದನ್ನೂ ಕಲೆ ಎಂದು ತಲೆಯಲ್ಲಿ ಹೊತ್ತುಕೊಳ್ಳುವ ನಿಮ್ಮಂಥ ಪುರುಷರು ತುಂಬಿರುವಾಗ ಮತ್ತೆ ಮಾಡೋದಾದ್ರೂ ಏನು?"

'ಛೆ, ಛೆ....ಹಾಗೆಲ್ಲ ಅನ್ನಬೇಡ್ವೇ ಮತ್ತೆ ನೋಡು, ಕ್ಯಾಬರೇ ಅನ್ನೋದೂ ಒಂದು ಕಲೆ ಅಂದರೆ ತಪ್ಪೇನು? ಆದರೆ, ಆಕ್ಷೇಪಣಿರುವುದು ನೃತ್ಯಕ್ಕಲ್ಲ, ಅರೆ ನಗ್ನ ಅಥವಾ ನಗ್ನವೇಷ ಭೂಷಣಗಳಿಗೆ ...'

'ಅಲ್ವಿ, ನಾನೊಂದು ಕೇಳ್ತೀನೆ....'

'ಏನು?'

'ಕ್ಯಾಬರೇ ನೃತ್ಯಗಾತಿ ಮೈತುಂಬ ಬಟ್ಟೆ ಹೊದ್ದುಕೊಂಡು ಕುಣಿಯ ಬಾರದೇಕೆ?'

'ಏಕೆ? ಪ್ರಾಯಃ ಇಂತಿಂಥ ನೃತ್ಯದ ವೇಷಭೂಷಣಗಳು ಇವಿವೆಂದು ಗೊತ್ತು ಮಾಡಲ್ಪಟ್ಟಿವೆ. ಅವನ್ನು ಬದಲಾಯಿಸಿದರೆ, ಆ ನೃತ್ಯ ಹೇಗಾದೀತು?'

'ಯಾಕಾಗದು?'

'ಅಲ್ವೆ, ರಾಜನ ತಲೆಗೆ ಕಿರೀಟವಿರಬೇಕಾದ್ದು. ರಂಕನ ಕೈಯಲ್ಲಿ ದೊಣ್ಣೆ ಬೇಕು. ಇದನ್ನು ಅದಲಾಬದಲಿ ಮಾಡಿದರೆ, ರಾಜ ಯಾರು, ರಂಕ ಯಾರು?'

'ಹ್ಞೂ....ಪುರುಷರ ಮನಸ್ಸು ಅತ್ಯಂತ ಚಂಚಲವಾಗಿ ಬಿಟ್ಟಿದೆ, ತುಂಬಿಯ ಹಾಗೆ. ಅವರು ಸಂಯಮವನ್ನು ಕಳೆದುಕೊಂಡು, ಇಂದ್ರಿಯಾಶಕ್ತರಾಗಿದ್ದಾರೆ. ಆದ್ದರಿಂದಲೇ ತಮ್ಮ ಅತೃಪ್ತಿಯನ್ನು ನೀಗಿಸಲು ಈ ಪ್ರಕಾರದ ಕೀಳು ನೃತ್ಯಗಳಿಗೆ ಮನವೊಲಿದಿದ್ದಾರೆ ...'

'ತಮ್ಮ ಪುರುಷರನ್ನು ವಕ್ರಮಾರ್ಗಕ್ಕೆಳೆಯುವುದು ಮಾತ್ರವಲ್ಲ, ಇದು ಸ್ತ್ರೀಕುಲಕ್ಕೇ ಅವಮಾನ, ಲಜ್ಜಾಸ್ಪದವೆಂದು ಹುಬ್ಬಳ್ಳಿಯ ಮಹಿಳೆಯರ ಅಭಿಪ್ರಾಯ....'

'ಹ್ಞೂಂ, ತಮ್ಮ ಪುರುಷರ ಪುರುಷತ್ವಕ್ಕೆ ಅವರೊಂದು ಸರ್ಟಿಫಿಕೇಟು ಕೊಟ್ಟಂತಾಯ್ತು....'

'ಆದ್ದರಿಂದ, ಕ್ಯಾಬರೆ ಪ್ರದರ್ಶನ ನಿಲ್ಲಿಸಬೇಕೆಂದು ಅವರು ಪ್ರದರ್ಶನಕಾರರನ್ನು ಕೇಳಿಕೊಂಡಿದ್ದಾರೆ....'

'ಅಲ್ರಿ, ಗಿರಾಕಿಗಳಿಗೆ ಬೇಕಾದುದನ್ನು ಒದಗಿಸುವುದು ವ್ಯಾಪಾರಿಯ ಧರ್ಮ. ಗಿರಾಕಿಗಳೇ ಇಲ್ಲದ ಮಾಲುಗಳನ್ನು ಯಾರು ಕೇಳುತ್ತಾರೆ?'

'ಅದು ಸರೀನ್ನು. ಅಂದರೆ, ಸ್ತ್ರೀಯರು ಪ್ರದರ್ಶನಕಾರರನ್ನು ಕೇಳಿಕೊಳ್ಳುವುದಕ್ಕೆ ಬದಲಾಗಿ, ಪುರುಷ ಸಮಾಜದ ಮನಸ್ಸನ್ನೇ ಒಲಿಸಿಕೊಳ್ಳುವುದು ಉತ್ತಮವಿತ್ತೆಂದು ತಾನೇ ನೀನು ಹೇಳುವುದು?'

'ಹ್ಞೂಂ....'

'ನೋಡು, ತಮ್ಮ ಪುರುಷರನ್ನೇ ಮೆಚ್ಚಿಸುವ ಶಕ್ತಿ ತಮಗಿಲ್ಲವೆಂದು ಅವರು ತಿಳಿದು ಕೊಂಡಿದ್ದರೆ....'

'ಸಾಕು ಬಿಡೀಂದ್ರೆ........'

'ಏನು, ಮುಖ ಕೆಂಪಾಯ್ತು?'

'ಹೋಗಿ, ಆಚೆ....'

'ಅಯ್ಯಯ್ಯೋ, ಪಾಪ, ಕೆಂಡ ಸಂಪಗೆಯಾಯ್ತು ನೋಡು ಮೂಗು ..'

'ಆದ್ರೆ ಆಗ್ಲಿ....'

'ಅಲ್ಲಮ್ಮ, ನಿನ್ನ ಮುಖದ ಮೇಲೆ ಬತ್ತಕಾಳು ಎಸೆದರೆ, ಅದು ಕೆಳಗೆ ಬೀಳುವುದ್ರಲ್ಲೇ ಅರಳಾಗಿಬಿಡುತ್ತೆ....'

'ಆಗಲಿ....'

'ನೋಡು....'

'ಏನು?'

'ಕೋಪ ಬಂತೇನು?'

'ಬಂದ್ರೇನು, ಬಿಟ್ರೇನು? ನಾನು ಏನೋಂತ ತಿಳ್ಕೊಂಡಿದ್ದೆ. ಆದ್ರೆ ನೀವೂನೂ ಹಾಗೇನೇ ಅಂತ ಈಗ ಗೊತ್ತಾಯ್ತು ಬಿಡಿ. ಎಷ್ಟಾದ್ರೂ ಗಂಡು ಜಾತಿತಾನೆ?'

'ಅಯ್ಯಯ್ಯೋ ಅಮ್ಮಾ. ಏನಿದೂಂತ? ಅಲ್ಲ, ಮಾತಿಗೆ ಅಂದ್ರೆ ನೀನು ನನ್ನನ್ನೂ ತಪ್ಪು ತಿಳಿಯೋದೆ?'

'ಮನಸ್ಸಿನಲ್ಲಿದ್ದುದನ್ನೇ ನಾಲಿಗೆಯಾಡಿತಷ್ಟೆ....'

'ಹಾಗೆಲ್ಲ ತಿಳ್ಕೋಬಾರ್ದು. ಮಾತಿಗೆ ಅಂದೆ. ನನ್ನ ನೀನಿನ್ನೂ ತಿಳ್ಕೊಳ್ಳಿಲ್ವೇನೆ?'

"ಗಂಡಸರ ಮನಸ್ಸು ಮಂಗನ ಹಾಗೆ ಅಂತ. ಹಿಂದಿನಿಂದಲೂ ಹೇಳಿದ್ದಾರೆ."

"ಸಮುದ್ರದಾಳಕ್ಕಿಳಿಯಬಹುದು, ಹೆಂಗಸಿನ ಹೃದಯದಾಳಕ್ಕಿಳಿಯಲಾಗದೆಂದೂ ಹೇಳಿದ್ದಾರಲ್ಲಾ...."

'ಆಯ್ತು, ಹೇಳ್ಲಿ....ಮತ್ತೆ?'

'ಮತ್ತೆ ನೋಡು, ನೂರು ಪುರುಷರನ್ನು ಒಲಿಸುವುದಕ್ಕಿಂತ ಒಬ್ಬ ಪ್ರದರ್ಶನಕಾರನನ್ನು ಗದರಿಸುವುದು ಸುಲಭ....'

'ಅಲ್ಲ, ನೀವೇನು ಹೇಳ್ತೀರಿ? ಕ್ಯಾಬರೆಗಳಿಗೆ ಪ್ರೋತ್ಸಾಹ ಕೊಡುವುದು ನ್ಯಾಯ–ನೀತಿ ಅಂತೀರೇನು?'

'ಛೆ, ಛೆ....ಎಂದೆಂದಿಗೂ ಸಾಧ್ಯವಿಲ್ಲ.'

'ಮತ್ತೆ ಅದು ಕಲೆ ಅಂದ್ರಿ....'

'ಅದರ ನಾಡಿನಲ್ಲಿ ಅದು ಕಲೆ ಆ ವೇಶಭೂಷೆ ಮೆಚ್ಚು. ಅವರು ಬೆಳೆದು ಬಂದ ಸಂಸ್ಕೃತಿಯೂ ಹಾಗೆ....'

'ಹ್ಞೂಂ....'

'ನಮ್ಮದು ಹಾಗಲ್ಲ ನೋಡು, ಸ್ನಾನಗೃಹದಲ್ಲಿ ಸ್ನಾನಮಾಡುತ್ತಿರುವವಳು ಸ್ವಸ್ತ್ರೀಯೇ ಆಗಿದ್ದರೂ ಆಕೆಯನ್ನು ನೋಡಬಾರದೆಂಬ ಕಟ್ಟಲೆಯಿರುವ ಸಂಸ್ಕೃತಿ....'

"ಆದ್ದರಿಂದ, ಹುಬ್ಬಳ್ಳಿ ಮಹಿಳೆಯರು ನ್ಯಾಯವಾದುದನ್ನೇ ಮಾಡಿದರಲ್ವೆ?"

'ಹೌದೂನ್ನು. ಮತ್ತೊಂದು ಸಂಗತಿ?'

'ಏನು?'

'ಕ್ಯಾಬರೇ ನೃತ್ಯಗಾತಿಯರೆಲ್ಲ ಮಹಿಳೆಯರೇ ಎಂಬುದನ್ನು ಮರೆಯ ಬಾರದು..'

"ಹ್ಞೂಂ....ಮಾವಿನ ತೋಪಿನ ನಡುವೆ ಬೆಳೆದ ಮುಳ್ಳು ಗಂಟಿಗಳು ಕೆಲವಿರುತ್ತವೆ. ಕಲೆಯ ಹೆಸರು ಹೇಳಿ ತಮ್ಮ ಮಾದಕ ಅಂಗಾಂಗ ಪ್ರದರ್ಶಿಸಿ, ಮೈಮಾರಿ ಕೊಂಡು ಹೊಟ್ಟೆ ಹೊರೆಯುತ್ತವೆ...."

"ಅಲ್ವೆ, ಪ್ರದರ್ಶನಕಾರರು ಇಲ್ಲವಾದರೆ, ಅವರ್ಯಾಕೆ ಬೆಳೆಯುತ್ತಾರೆ? ಗಿರಾಕಿಗಳಿಲ್ಲವಾದರೆ, ಪ್ರದರ್ಶನವೆಂತು ನಡೆಯುತ್ತದೆ?'

"ಎಲ್ಲ ತಪ್ಪು ನಮ್ಮದೇ ಅನ್ನಿ."

'ಇದಕ್ಕೆ ಸಂಶಯವೇನು? ನಾವು ಸರಿಯಾಗಿದ್ದರೆ, ನಮ್ಮ ಸಂಸ್ಕೃತಿಯ ತಿಲಾಂಶದಷ್ಟಾದರೂ ತಿಳಿದುಕೊಂಡಿದ್ದರೆ, ಹೀಗಾಗುತ್ತಿರಲಿಲ್ಲ ನೋಡು....'

'ಅದೂ ಹೌದು....'

"ಫ್ಯಾಷನ್ನಿನ ಹೆಸರಲ್ಲಿ ಗಂಡಸರು ಮೈತುಂಬ ಬಟ್ಟೆ ತೊಡಹೊರಡುತ್ತಾರೆ. ಒಂದರ ಮೇಲೊಂದರಂತೆ–ಒಳಅಂಗಿ, ಅಂಗಿ, ಕೋಟು–ಟೈ....ಆದರೆ, ಅವರ ಹೆಂಗಸರು ಸಾಧ್ಯವಾದಷ್ಟು ಕಡಿಮೆ ಬಟ್ಟೆ ಹೊದ್ದುಕೊಳ್ಳುತ್ತಾರೆ....'

'ಒಂದು ನೆನಪಿಗೆ ಬಂತು....'

'ಏನು?'

'ಮಹಾತ್ಮಾ ಗಾಂಧಿಯವರು ದೇಶದಲ್ಲಿ ಸಾಕಷ್ಟು ಬಟ್ಟೆಯಿಲ್ಲ; ಇದ್ದ ಬಟ್ಟೆಯ ಸಿಂಹಪಾಲು ಹೆಂಗಸರಿಗೆ ಮೈ ಮುಚ್ಚಬೇಕಾಗುತ್ತದೇಂತ, ತಾವು ಮಾನಮುಚ್ಚುವಷ್ಟು ಬಟ್ಟೆ ತೊಡುತ್ತಿರುವುದಾಗಿ ಹೇಳಿದ್ದರಂತೆ..'

"ಈಗ ಅದೇ ಗಾಂಧಿ ಮಾತನ್ನು ನಮ್ಮ ಫ್ಯಾಷನ್ ಲಲನೆಯರು ಹೇಳತೊಡಗಿದ್ದಾರೆ....'

"ಅವರು ಹೇಳಿಕೊಳ್ಳಲಿ. ಆದರೆ, ಗಾಂಧಿಯ ಬಳಿ ಒಂದೇ ಜೋಡು ಬಟ್ಟೆಯಿದ್ದದ್ದಂತೆ. ಆದರೆ, ಈ ಆಧುನಿಕ ಗಾಂಧಿಗಳಲ್ಲಿ ಗಾಡ್ರೆಜ್ ಕಪಾಟ ತುಂಬ ತುಂಡು ಬಟ್ಟೆಗಳು ತುಂಬಿವೆಯಲ್ಲಾ?"

'ಹದಿನಾಲ್ಕು ಮೊಳವನ್ನು ಇಪ್ಪತ್ತೆಂಟು ತುಂಡು ಮಾಡಿ ತುಂಬಿಸಿದ್ರೂನ್ನು....'

"ಇರಬಹುದು. ಗಾಂಧಿ ಅಂದದ್ದು ಬಟ್ಟೆ ಕೊಳ್ಳುವುದಕ್ಕೆ ಜನರಲ್ಲಿ ಹಣವಿಲ್ಲ ಬಡವರು...."

'ಇದು ಮಾತ್ರ ಈ ಆಧುನಿಕ ಗಾಂಧಿಗಳಿಗೆ ಅನ್ವಯವಾಗದು. ಅವರು ಮುಖಕ್ಕೆ ಬಳೆಯುವ ಸ್ನೋ–ಪೌಡರ್—ಕ್ರೀಮುಗಳ ಬೆಲೆಯಲ್ಲಿ ಒಂದು ತಾರೀಸಿನ ಕಟ್ಟಡ ಕಟ್ಟ ಬಹುದು....'

'ಏನು ಮಾಡೋದು, ಎಲ್ಲ ಜಾಹೀರಾತುಗಳ ಪ್ರಭಾವ. ಶ್ರೀಮಂತರು ಮರುಳಾಗುತ್ತಾರೆ; ಬಡವರೂ ಮತ್ತೂ ಮತ್ತೂ ಬಡವರಾಗಿ ಹೋಗುತ್ತಾರೆ....'

"ಅಲ್ವೆ, ಮಹಿಳೆಯರೆಲ್ಲ ಒಂದಾಗಿ ಕ್ಯಾಬರೇ ನೃತ್ಯಗಾತಿಯ ಮುಂದೆ ಡೆಲಿಗೇಶನ್ನು ಹೋಗಬೇಕು. ಆಕೆ ತನ್ನ ಹೊಟ್ಟೆ ಹೊರೆಯುವುದಕ್ಕೆ ಬೇರೆ ವಿಧಾನವರಸಬೇಕೆಂದು ಕೇಳಿಕೊಳ್ಳ ಬೇಕು. ಅಥವಾ ಮೈತುಂಬ ಬಟ್ಟೆ ಹೊದ್ದು ನಟಿಯುವಂತೆ ಸಲಹೆ ಮಾಡಬೇಕು...."

"ಅವರು ಕೇಳದಿದ್ದರೆ?"

"ಸತ್ಯಾಗ್ರಹ...."

'ಹ್ಞೂಂ.... ವೇಶ್ಯೆಯೊಬ್ಬಳ ಮನೆ ಮುಂದೆ ಸತ್ಯಾಗ್ರಹ ಮಾಡಿ ಆಕೆಯನ್ನು ಓಡಿಸಿದರಂತಲ್ಲಾ....? ಹಾಗೆ....'

'ಅದೂ ತ್ರಾಸವೇ ಅನ್ನು.'

'ಯಾಕೆ?'

'ಕ್ಯಾಬರೆಯ ಮುಂದೆ ಬೇಡವೆಂದು ಹೆಂಗುಸರು ಧರಣಿಕೂತರೆ, ಬೇಕೆಂದು ಪುರುಷರು ಕೂತುಕೊಳ್ಳ ಬಹುದು. ಎಷ್ಟೆಂದರೂ ಅದು ಕಲೆ.'

'ಆದರೆ ನೋಡಿ ಶಿಲ್ಪಕಲೆಯಲ್ಲ., ಜೀವಂತಎಲುಬುಮಾಂಸದಳನ್ನುಪ್ರದರ್ಶಿಸುವ ಕಲೆಯಾದ್ದರಿಂದಲೇ ನೈತಿಕ ಅಧಃಪತನ....'

"ಅಂದರೆ. ಮಾನಸಿಕವಾಗಿ ಅಧಃಪತಿತರಾದರೆ ಆಗಲಿ, ವ್ಯಾವಹಾರಿಕವಾಗಿ ಬೇಡ

(ಒಂಭತ್ತನೇ ಪುಟ ನೋಡಿರಿ)

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No.— 1 72303 2 72304 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು–4

ಪ್ರಧಾನಿಗೆ ಸೋವಿಯೆತ್‌ನಲ್ಲಿ ಆದರದ ಸ್ವಾಗತ

ಸೆಪ್ಟಂಬರ್ ದಿನಾಂಕ 27ರಿಂದ ಸೋವಿಯೆತ್ ಒಕ್ಕೂಟಕ್ಕೆ ಅಧಿಕೃತವಾದ ಭೇಟಿ ನೀಡಿದ ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರಿಗೆ ಆದರದ ಸ್ವಾಗತ ದೊರೆಯಿತು. ಖಂಡಿತವಾಗಿಯೂ ಸೋವಿಯೆತ್ ನಾಡಿಗೆ ಇದು ಅವರ ಮೊದಲನೆಯ ಭೇಟಿಯೇನೂ ಅಲ್ಲ. ಹಿಂದೆ ಅನೇಕ ಸಂದರ್ಭಗಳಲ್ಲಿ ಸೋವಿಯೆತ್ ಜನತೆಯು ಅವರನ್ನು ತಮ್ಮ ದೇಶದಲ್ಲಿ ಸ್ವಾಗತಿಸಿದ್ದಾರೆ. ಅಲ್ಲಿ ಅವರಿಗೆ ಲಭಿಸಿರುವ ವ್ಯಕ್ತಿಗತ ಜನಪ್ರಿಯತೆಯು ಬೇರೆ ಕೆಲವೇ ಮಂದಿ ಇತರ ವಿದೇಶೀ ಧುರೀಣರಿಗಿರುವ ಜನಪ್ರಿಯತೆಗೆ ಸಮನಾದುದು.

"ಇಂದಿರಾ" ಎಂಬ ಹೆಸರು ಸೋವಿಯೆತ್ ಒಕ್ಕೂಟದಲ್ಲಿ ಸುಪರಿಚಿತವಾದುದು. ಈಗ ಅನೇಕ ಸೋವಿಯೆತ್ ಪರಿವಾರಗಳಲ್ಲಿ 'ಇಂದಿರಾ' ಎಂಬ ಹೆಸರಿನ ಹೆಣ್ಣು ಮಕ್ಕಳು ಇದ್ದಾರೆ. ಇದಕ್ಕೆ ನಮ್ಮ ಪ್ರಧಾನ ಮಂತ್ರಿಯವರ ಅಪೂರ್ವ ವ್ಯಕ್ತಿತ್ವವೇ ಕಾರಣ. ಅವರು ಸ್ವದೇಶದಲ್ಲಿಯೂ ವಿದೇಶಗಳಲ್ಲಿಯೂ ಸಮಾನ ಜನಪ್ರಿಯತೆಯನ್ನು ಗಳಿಸಿಕೊಂಡಿದ್ದಾರೆ. ಶಾಂತಿಯ ಗಣ್ಯ ಪ್ರತಿಪಾದಕರೆಂದೂ, ಭಾರತ—ಸೋವಿಯೆತ್ ಮೈತ್ರಿಯ ಶಿಲ್ಪಿಯೆಂದೂ ಸೋವಿಯೆತ್ ಜನತೆಗೆ ಸುಪರಿಚಿತರಾಗಿದ್ದ ದಿ. ಜವಾಹರಲಾಲ್ ನೆಹರೂ ಅವರ ಮಗಳಾಗಿ ಶ್ರೀಮತಿ ಗಾಂಧಿಯವರು ಸದಾ ಸೋವಿಯೆತ್ ಜನತೆಯ ಆದರಕ್ಕೆ ಪಾತ್ರರಾದವರು. ಆದರೆ ಸ್ವತಃ ತಮ್ಮ ಹಕ್ಕಿನಿಂದಲೇ ಚತುರರಾದ ರಾಜನೀತಿಜ್ಞೆಯೂ, ರಾಜಕೀಯ ಧುರೀಣೆಯೂ, ಭಾರತ–ಸೋವಿಯೆತ್ ಮೈತ್ರಿಯ ಉಜ್ವಲ ಪ್ರತಿಪಾದಕಿಯೂ ಆಗಿರುವ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಸೋವಿಯೆತ್ ಜನತೆಯ ಮಹತ್ತರ ಪ್ರಶಂಸೆಯನ್ನೂ ಗೌರವವನ್ನೂ ಗಳಿಸಿಕೊಂಡಿದ್ದಾರೆ.

ಭಾರತದ ಪ್ರಧಾನ ಮಂತ್ರಿಯವರಾಗಿ ಇಂದಿರಾ ಗಾಂಧಿಯವರು 1966ರ ಎಪ್ರಿಲ್ ದಿನಾಂಕ 2ರಂದು ಮೊತ್ತ ಮೊದಲನೆಯ ಸಲ ಸೋವಿಯೆತ್ ರಾಜಧಾನಿಯಲ್ಲಿ ಕೆಲವು ಗಂಟೆ ಕಾಲ ಇದ್ದರು. ಆಗ ಅವರು ಲಂಡನಿನಿಂದ ಭಾರತಕ್ಕೆ ಮಾಸ್ಕೋ ಮಾರ್ಗವಾಗಿ ವಾಪಸು ಬರುತ್ತಿದ್ದರು. ಸೋವಿಯೆತ್ ಒಕ್ಕೂಟಕ್ಕೆ ಅವರ ಮೊದಲನೆಯ ಅಧಿಕೃತ ಸಂದರ್ಶನವು ಅದೇ ವರ್ಷ ಜುಲೈ ದಿನಾಂಕ 12ರಿಂದ 17ರವರೆಗೆ ನಡೆಯಿತು. ಪುನಃ 1967ರ ಅಕ್ಟೋಬರ್ ದಿನಾಂಕ 8ರಂದು ವಾರ್ಸಾ ನಗರಕ್ಕೆ ಹೋಗುತ್ತ ಮಾರ್ಗದಲ್ಲಿ ಸ್ವಲ್ಪ ಸಮಯದವರೆಗೆ ಪ್ರಧಾನ ಮಂತ್ರಿಯವರು ತಂಗಿದ್ದರು. 1967ರ ನವೆಂಬರ್ ದಿನಾಂಕ 7ರಂದು ಅಕ್ಟೋಬರ್ ಸಮಾಜವಾದಿ ಮಹಾಕ್ರಾಂತಿಯ 50ನೆಯ ವಾರ್ಷಿಕೋತ್ಸವಾಚರಣೆಯ ವೇಳೆಯಲ್ಲಿ ಆ ಸಮಾರಂಭದಲ್ಲಿ ಭಾಗವಹಿಸಲು ಅವರು ಮಾಡಿದ ನಿರ್ಧಾರವನ್ನು ಭಾರತ—ಸೋವಿಯೆತ್ ಮೈತ್ರಿಯ ಶುಭೇಚ್ಛುಕರೆಲ್ಲರೂ ತುಂಬಾ ಮೆಚ್ಚಿದರು. ಅವರು ಪುನಃ ತಮ್ಮ ಲಂಡನ್ ಪ್ರಯಾಣದ ವೇಳೆಯಲ್ಲಿ 1969ರ ಜನವರಿ ದಿನಾಂಕ 5ರಂದೂ, 1970ರ ಅಕ್ಟೋಬರ್ ದಿನಾಂಕ 20ರಂದು ಪ್ರಪಂಚ ಸಂಸ್ಥೆಯ ಉತ್ಸವಾಧಿವೇಶನದಲ್ಲಿ ಪಾಲ್ಗೊಳ್ಳುವಾಗ ನ್ಯೂಯಾರ್ಕ್ ಯಾತ್ರೆಯ ಸಂದರ್ಭದಲ್ಲಿಯೂ ಮಾರ್ಗಮಧ್ಯದಲ್ಲಿ ಮಾಸ್ಕೋದಲ್ಲಿ ತಂಗಿದ್ದರು.

ಈ ಎಲ್ಲ ಸಂದರ್ಭಗಳಲ್ಲಿಯೂ ಅವರಿಗೆ ಸೋವಿಯೆತ್ ಧುರೀಣರಿಂದ ಆದರದ ಸ್ವಾಗತವು ದೊರೆತುದು ಮಾತ್ರವಷ್ಟೇ ಅಲ್ಲದೆ, ಅವರುಗಳೊಡನೆ ಆಕೆಯು ನಡೆಸಿದ ಮಾತುಕತೆಗಳು ಭಾರತದಲ್ಲಿಯೂ ಹಾಗೂ ವಿದೇಶಗಳಲ್ಲಿಯೂ ವಿಶೇಷ ಕುತೂಹಲವನ್ನು ಕೆರಳಿಸಿದುವು. ರಾಜ್ಯ ಧುರೀಣರೂ ರಾಜನೀತಿಜ್ಞರೂ ಪರಸ್ಪರರ ದೇಶಗಳಿಗೆ ನೀಡುವ ಭೇಟಿಗಳು ಅಭಿಪ್ರಾಯ ವಿನಿಮಯಕ್ಕೆ ಅತ್ಯುತ್ತಮ ಅವಕಾಶವನ್ನು ಒದಗಿಸುತ್ತವೆ. ಇಂತಹ ಭೇಟಿಗಳು, ನಮ್ಮ ಪ್ರಧಾನ ಮಂತ್ರಿಯವರು ಈಗ ಕೈಗೊಂಡಿರುವಂತಹ ಸಂದರ್ಶನಗಳು ಕೂಡ, ಉನ್ನತ ಮಟ್ಟದ ರಾಜತಂತ್ರದ ಚಟುವಟಿಕೆಯನ್ನು ಸುಗಮಗೊಳಿಸುತ್ತದೆ. ಈ ಎಲ್ಲ ದೃಷ್ಟಿಕೋನಗಳಿಂದಲೂ, ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರ ಸಂದರ್ಶನವು ವಿಶೇಷ ಮಹತ್ವದ ಘಟನೆಯಾಗಿದೆ. ಈಗಿನ ಸಂದರ್ಶನವು ಶಾಂತಿ, ಸ್ನೇಹ ಮತ್ತು ಸಹಕಾರಗಳ ಕುರಿತಾದ ಭಾರತ–ಸೋವಿಯೆತ್ ಒಡಂಬಡಿಕೆಗೆ ಹಸ್ತಾಕ್ಷರವಾದ ತರುವಾಯ ಸಂಭವಿಸುತ್ತಿರುವ ವಾಸ್ತವಾಂಶವು, ಅದಕ್ಕೆ ವಿಶಿಷ್ಟ ಪ್ರಾಧಾನ್ಯವನ್ನು ನೀಡಿದೆ.

ಭಾರತದಲ್ಲಿಯೂ ಸೋವಿಯೆತ್ ಒಕ್ಕೂಟದಲ್ಲಿಯೂ ಉಭಯತಃ ಒಪ್ಪಂದಕ್ಕೆ ವ್ಯಾಪಕವಾದ ಸ್ವಾಗತವು ದೊರೆತಿದೆಯೆಂಬುದಷ್ಟು ಮಾತ್ರವೇ ಅಲ್ಲ. ಅದಕ್ಕೆ ಜಗತ್ತಿನಲ್ಲಿ ಎಲ್ಲ ಕಡೆಯೂ ಪ್ರಗತಿಶೀಲ, ಶಾಂತಿಪ್ರಿಯ ಜನತೆಯ ಸಂಪೂರ್ಣವಾದ ಬೆಂಬಲವೂ ದೊರೆತಿದೆ. ಭಾರತ–ಸೋವಿಯೆತ್ ರಾಜ್ಯ ಸಂಬಂಧಗಳ ಕಾಲು ಶತಮಾನದ ಮುತ್ಸದ್ದಿತನದ ಮಹೋನ್ನತ ಘಟನೆಯಾದ ಈ ಒಡಂಬಡಿಕೆಯು ಪರಸ್ಪರ ಭಾರತ ಮತ್ತು ಸೋವಿಯೆತ್ ದೇಶಗಳು ಒಂದಕ್ಕೊಂದು ಬೆಂಬಲವನ್ನು ನೀಡುತ್ತವೆಯೆಂಬುದನ್ನು ಜಗತ್ತಿಗೆ ತೋರಿಸಿ ಕೊಟ್ಟಿದೆ

ಈ ಒಪ್ಪಂದವು ದೀರ್ಘ ಕಾಲದವರೆಗೂ ಪ್ರಭಾವ ಬೀರುತ್ತದೆ. ಅದು ನಿಕಟ ಸಹಕಾರದ ಹೊಸ ಘಟ್ಟಕ್ಕೆ ನಾಂದಿಯಾಗಿದೆ.

"ಎರಡು ಶಾಂತಿಪ್ರಿಯ ದೇಶಗಳ ಮಧ್ಯೆ ಅಂತಃಕರಣ ಪೂರ್ವಕವಾದ ಸ್ನೇಹದ ಮತ್ತು ಒಳ್ಳೆಯ ನೆರೆಹೊರೆಯ ಸಂಬಂಧಗಳ ಅಧಿಕ ದೃಢೀಕರಣದ ಫಲನಿರೀಕ್ಷೆಗಳನ್ನೂ ಅದು ತೆರೆಯುತ್ತದೆ ಮತ್ತು ತಮ್ಮ ಫಲಪ್ರದವಾದ ಸಹಕಾರದಲ್ಲಿ ಉನ್ನತ ಘಟ್ಟಕ್ಕೆ ಸ್ಥಿತ್ಯಂತರವನ್ನು ಸೂಚಿಸುತ್ತದೆ" ಯೆಂದು 'ಪ್ರಾವ್ದ' ಪತ್ರಿಕೆಯು ಆಗಸ್ಟ್ ದಿನಾಂಕ 11ರ ಅಗ್ರಲೇಖನದಲ್ಲಿ ಬರೆಯಿತು.

ಶ್ರೀಮತಿ ಗಾಂಧಿಯವರು ಸೋವಿಯೆತ್ ಧುರೀಣರೊಡನೆ ಮಾತುಕತೆಗಳನ್ನು ನಡೆಸುವುದು ಉಭಯ ದೇಶಗಳಿಗೂ ಭಾವೀ ಉಪಕ್ರಮಗಳಿಗೆ ಮಹತ್ವಪೂರ್ಣವಾಗಿರುತ್ತದೆ. ಒಪ್ಪಂದದ ಸಂದರ್ಭವಾಗಿ ಉದ್ಭವಿಸುವ ಸಮಸ್ಯೆಗಳ ಬಗೆಗೆ ಸಕಾಲದಲ್ಲಿ ಪರಸ್ಪರ ಪರಾಮರ್ಶೆಗಳನ್ನು ನಡೆಸುವುದಕ್ಕೆ ಆವಶ್ಯಕ ವ್ಯವಸ್ಥೆಯನ್ನು ಏರ್ಪಡಿಸುವ ವಿಷಯವೂ ಸಹ ಇದೆ.

ಸರಕಾರದ ಹೊಸ ಮಾರ್ಗಗಳು

ಭಾರತಕ್ಕೆ ಅನೇಕ ಕ್ಷೇತ್ರಗಳಲ್ಲಿ ಮುಂದುವರಿದ ಔದ್ಯೋಗಿಕ ಸಹಕಾರದ ಆವಶ್ಯಕತೆ ಇದೆ. ನಿರ್ಮಿಸಲಾಗಿರುವ ಔದ್ಯೋಗಿಕ ಸಾಮರ್ಥ್ಯಗಳನ್ನು ಪೂರ್ತಿಯಾಗಿ ಸಾಧಿಸಲು ಔದ್ಯೋಗಿಕ ಕಚ್ಚಾ ಪದಾರ್ಥಗಳನ್ನು ಸೋವಿಯೆತ್ ಒಕ್ಕೂಟವು ಈಗಾಗಲೇ ನೀಡತೊಡಗಿದೆ. ಶ್ರಮವಿಭಜನೆಯಿಂದ ಉಭಯ ದೇಶಗಳಿಗೂ ಅಧಿಕ ಪ್ರಯೋಜನವಿದೆ.

ಭಾರತದಲ್ಲಿ ಜನಶಕ್ತಿಯ ಅಪಾರ ಮೂಲಾಧಾರವಿದೆ ಜವಳಿ, ಚರ್ಮದ ಸರಕುಗಳು, ಉಣ್ಣೆಯ ಹೆಣಿಗೆ ಉಡುಪುಗಳು, ಡಬ್ಬಿಗಳಲ್ಲಿ ತುಂಬಲಾದ ಹಣ್ಣುಗಳು, ಮೋಟರು ಕಾರುಗಳಿಗೆ ಬಿಡಿಭಾಗಗಳು, ಬಣ್ಣಗಳು, ಪ್ಲಾಸ್ಟಿಕ್ ಸಾಮಾನು, ರಾಸಾಯನಿಕ ವಸ್ತುಗಳು, ಇತ್ಯಾದಿ ಕ್ಷೇತ್ರಗಳಲ್ಲಿ ಸೋವಿಯೆತ್ ಆವಶ್ಯಕತೆಗಳನ್ನು ಭಾರತವು ಒದಗಿಸಬಲ್ಲುದು.

ಸೋವಿಯೆತ್ ಒಕ್ಕೂಟವು ನಮಗೆ ಅ

(ಎಂಟನೇ ಪುಟ ನೋಡಿರಿ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 186/1971

ಬಾಬಿ ಪೂಜಾರಿ —ವಾದಿಳು

ಮತ್ತು

U. L. ಅನಂತಾಚಾರ್ಯ ಊಪಾ —ಪ್ರತಿವಾದಿರು.

ಯಿವರೊಳಗೆ.

೩ನೇ ಪ್ರತಿವಾದಿ:— U. L. ಶ್ರೀ ಕಾಂತಾಚಾರ್ಯ- ಉಡುಪರ ಕುಂಜಿತಾಯ ಲಕ್ಷ್ಮೀನಾರಾಯಣಾಚಾರ್ಯರ ಮಗ—ಉಡ್ಪಿ ತಾಲೂಕು ಉದ್ಯಾವರ ಗ್ರಾಮದ–ಉದ್ಯಾವರ ಮಠ-

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:—

ವಾದಿಯು ನೀವು ಕೂಡಾ ಮೂರು ಜನರ ಮೇಲೆ ಇಂಜಂಕ್ಷನ್ ವಗೈರೆ ನಿವೃತ್ತಿಗಳನ್ನು ಕೇಳಿ ಮಾಡಿದ ಮೇಲ್ಕಂಡ ದಾವೆಯು ತಾರೀಕು 14–10–1971ಕ್ಕೆ ಯಿಟ್ಟಿದೆ. ಉಜಾಹರಿಸುವಂಥಾದ್ದು ಯಿದ್ದರೆ ಆ ದಿವಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ವಾಹೀರು ಮಾಡಿ ಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟು ಹುಕುಂ ಪ್ರಕಾರ,

K. Balachandra Rao

Advocate for Plaintiff.

Udipi, 30—9—1971

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 137 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{1}{2}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ "ಜೀವನ-ನಿಧಿ"ಯಲ್ಲಿ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,

ಚೆಯರ್‌ಮೆನ್.

ಕುಂದಾಪುರ ಮುನ್ಸೀಫ್ ಕೋರ್ಟಿನಲ್ಲಿ

O. S. 62/1970

ವಾದಿ. ಮೈಸರ ಗುರುರಾಜ.

ಪ್ರತಿವಾದಿರು— 1. ಪಿತಿಜಾಬಿ, 2. ಕುಷ್ಟಯ್ಯ ಯಾನೆ ಶೇಷಗಿರಿ ಹೊಳ್ಳ, 3. ಪರಮೇಶ್ವರ, 4. ನರಸಿಂಹ, 5. ರಾಧಾಕೃಷ್ಣ, 6. ಲಲಿತಮ್ಮ, 7. ರತ್ನ, 8. ಶ್ರೀಕೃಷ್ಣ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಭದ್ರಾವತಿ ಟೌನ್ ಚನ್ನಗಿರಿ ರೋಡಿನಲ್ಲಿರುವ ಕೃಷ್ಣವೇಣಿರು ಹೊಳ್ಳರ ವಿಧವೆ ಲಲಿತಮ್ಮ। ಇವರ ಮಕ್ಕಳು ರತ್ನ। ಶ್ರೀಕೃಷ್ಣ। ಸಹಾ ೩ ಜನರಿಗ ಈ ಮೂಲಕ ತಿಳಿಯ ಪಡಿಸುವುದೇನೆಂದರೆ.

ಸದ್ರಿ ವ್ಯವಹರಣೆಯ 1ನೇ ಪ್ರತಿವಾದಿಳು ತಾರೀಕು 14–4–1952ರಲ್ಲಿ ರೂಪಾಯಿ 500–00ಕ್ಕೆ ಬರೆದು ಬರೆಕೊಟ್ಟ ಈಡು ದಸ್ತಾವೇಜಿನ ಹಣ ಬಡ್ಡಿ ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 16–10–71ಕ್ಕೆ ತಸ್ತಿಗೆ ಇರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಹಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಜ್ವಾಹೀರು ಮಾಡಿಕೊಳ್ಳ ತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯ ಪಡಿಸಿಯದೆ.

N. S. Paramehwaraiah

Advocate for Plaintiff.

Date 19—9—71, Coondapoor

ಕನಲು ದಾರಿ—ಕೆಂಪು ದೀಪ-

ಸಾರಿಗೆ-ವಿದ್ಯುನ್ಮಂಡಳಿಗಳಿಗೆ ಯೋಗ್ಯ ಚಿಕಿತ್ಸೆ ನಡೆಯಬೇಕು

ನಮ್ಮ ರಾಜ್ಯ ಕರ್ನಾಟಕ ಉರುಫ್ ಮೈಸೂರು

ಭಾರತದ ಪ್ರಗತಿಶೀಲ ರಾಜ್ಯಗಳ ಸಾಲಿನಲ್ಲಿ ನಮ್ಮದು ಅಗ್ರ ಪಂಕ್ತಿ ಇದನ್ನು ಇಲ್ಲಿ ಆಡಳಿತೆ ನಡೆಸಿದವರೂ, ನಡೆಸದವರೂ ಹತ್ತಿರದವರೂ ದೂರದವರೂ ಒಕ್ಕೊರಲಿನಿಂದ ಹೇಳುತ್ತಾರೆ ಧನ್ಯೆ ಕರ್ನಾಟಕ ಭುವನೇಶ್ವರಿ

ನಮ್ಮ ಸರಕಾರದ ಹಲವು ರಾಷ್ಟ್ರೀಕೃತ ಉದ್ಯಮಗಳತ್ತ ಹೊರಳಿದ್ದ ಬಹಳ ಹಿಂದೆಯೇ ಸರಕಾರದ ನೇತೃತ್ವದಲ್ಲಿ ಇವು ಪ್ರಗತಿ ಹೊಂದುವುದು ಸಾಧ್ಯವೆಂಬ ದೃಢವಿಶ್ವಾಸ

ರಾಜ್ಯ ಸರಕಾರವು ಹೆಚ್ಚಿನ ಮಾರ್ಗಗಳನ್ನು ರಾಷ್ಟ್ರೀಕರಣಗೊಳಿಸಿ, ಅವುಗಳಲ್ಲಿ ಸಾರಿಗೆ ಬಸ್ಸುಓಡಿಸುವ ಏಕ ಸ್ವಾಮ್ಯ ಪಡೆಯಿತು ಖಾಸಗಿ ಬಸ್ಸುಗಳಿಗೆ ಆ ಮಾರ್ಗಗಳು ಸಿಗದಾದುವು

ರಾಜ್ಯ ಸಾರಿಗೆ ಮಂಡಳಿಯೊಂದು ಅಸ್ತಿತ್ವಕ್ಕೆ ಬಂದು ಸಾರಿಗೆಯ ಸಂಪೂರ್ಣ ವ್ಯವಸ್ಥೆಯನ್ನು ಸರಕಾರದ ಪರವಾಗಿ ಮಾಡುವುದು

ಈ ಮಂಡಳಿಯ ಕಾರ್ಯ ಹೇಗೆ ನಡೆಯುತ್ತಿದೆ? ಹಲವು ಸಮಗಾರರ ಕೈಸೇರಿದ ಚರ್ಮದ ಕತೆ ನೆನಪಿಗೆ ಬರುತ್ತದೆ

ಸಾರಿಗೆ ಮಂಡಳಿಯು ತಾನು ಗೊತ್ತುಪಡಿಸಿದ ಕಾರ್ಯಕ್ರಮಗಳಂತೆ ಬಸ್ಸುಓಡಿಸುತ್ತದೆ ಈ ಕಾರ್ಯಕ್ರಮಗಳನ್ನು ನಿರ್ಧರಿಸುವಾಗ, ಜನತೆಯ ಅವಶ್ಯಕತೆಗಳತ್ತ ಗಮನ ಹರಿಸಿದ್ದಿಲ್ಲ ಬಸ್ಸುಗಳು ನಿಶ್ಚಿತ ವೇಳೆಗೆ ಮೊದಲೇ ನಿಲ್ದಾಣ ಬಿಟ್ಟು ಹೋಗುವುದುಂಟು, ತಡವಾಗಿ ಹೊರಡುವುದೂ ಉಂಟು

ಮಾರ್ಗದ ನಡುವೆ ಪ್ರಯಾಣಾರ್ಥಿಗಳು ಕೈಯೆತ್ತಿ ನಿಲ್ಲಲು ಸಂಕೇತ ನೀಡಿದರೂ ನಿಲ್ಲದೆ ಮುಂದೋಡುವುದುಂಟು ಚಾಲಕ-ನಿಯಂತ್ರಕರಿಗೆ ಖುಶಿತೋರಿದರೆ, ತಾಸುಗಟ್ಟಲೆ ರಸ್ತೆಪಕ್ಕದಲ್ಲಿ ನಿಲ್ಲುವುದೂ ಉಂಟು

ಬಸ್ಸು ಜನಭರಿತವಾಗಿದ್ದರೂ ಖಾಲಿ ಸ್ಟೇಟ್‌ಮೆಂಟ್ ಹೋಗುತಿದ್ದ ಕಾಲವೊಂದಿತ್ತು. ಮುಜರಾಯಿ ಇಲಾಖೆಯ ಜವಾನತನವನ್ನು ಬಿಟ್ಟು ಎಸ್‌ಟಿ ಕಂಡೆಕ್ಟರನಾದವನು ಮೂರೇ ವರ್ಷಗಳಲ್ಲಿ ತಾರೀಸಿನ ಮನೆ ಕಟ್ಟಿಕೊಂಡಿದ್ದೂ ಉಂಟು

ಬಸ್ಸುಗಳ ಟ್ಯಾಂಕಿಯಿಂದ ಡೀಸಿಲ್ ಮಾಯವಾಗುವುದು— ಟೈರ್‌ಗಳು ಎಕ್ಸ್‌ಛೇಂಜ್ ಆಗುವುದು— ಬಿಡಿಭಾಗಗಳು ಬದಲಾಗುವುದು-ಇವೆಲ್ಲ ಸರ್ವಸಾಮಾನ್ಯ.

ಸಾರಿಗೆ ಮಂಡಳಿ ಧಾರಾಳನಷ್ಟವನ್ನನುಭವಿಸಿದ್ದ ದಿನಗಳಿದ್ದುವು ನಷ್ಟವನ್ನು ತುಂಬಿಕೊಡಲು ಜನತೆ ಮುಂದೆಬಂತು! ಮಂಡಳಿ ಬಸ್ಸುದರಗಳನ್ನು ಏರಿಸುತ್ತ ಬಂತು, ಮುಗ್ಧ ಜನತೆ ಅದನ್ನುತೆರುತ್ತಲೇ ಬಂತು

ಇತ್ತೀಚೆಗಿನ ಒಂದೆರಡು ವರ್ಷಗಳಿಂದ ಸಾರಿಗೆ ಮಂಡಳಿಗೆ ನಷ್ಟವಾಗುತ್ತಿಲ್ಲವಂತೆ ನಷ್ಟವನ್ನೂ ತುಂಬಿಕೊಡುವಷ್ಟು ಮಟ್ಟಿಗೆ ಸಾರಿಗೆ ದರವೇರಿದೆಯೆಂದೇ ಇದರ ಅರ್ಥ ಹೊರತು, ನೌಕರರು ಪ್ರಾಮಾಣಿಕರಾಗಿದ್ದಾರೆಂದಲ್ಲ

ಈಗ ವಿಸ್ತರಣೆ— ಸೌಲಭ್ಯಗಳ ಹೆಸರೆತ್ತಿ ಮತ್ತೆ ಸಾರಿಗೆ ಮಂಡಳಿ ಬಸ್ಸು ಪ್ರಯಾಣದ ದರ ಏರಿಸಲು ಹವಣಿಸಿದೆ

ತನ್ನ ನಿರ್ಧಾರವನ್ನದು ಗಜೆಟಿನಲ್ಲಿ ಪ್ರಕಟಿಸಿ, ನಾಗರಿಕರಿಂದ ಆಕ್ಷೇಪಣೆ ಕರೆದಿದೆ ಬೆಲೆಯೇರಿಕೆಯಿಂದ ನೊಂದು ಬಸವಳಿದ ನಾಗರಿಕರು ಆಕ್ಷೇಪಣೆ ಸಲ್ಲಿಸಿದ್ದೂ ಇದೆ

'ಈ ಆಕ್ಷೇಪಣೆಗಳೆಲ್ಲ ತಲೆಬುಡವಿಲ್ಲದವು' ಎಂಬುದು ಮೊದಲೇ ನಿರ್ಧಾರವಾಗಿರುವುದರಿಂದ ಅವುಗಳನ್ನೆಲ್ಲ ತಿರಸ್ಕರಿಸಿ ತನ್ನ ನಿರ್ಧಾರವನ್ನು ಧೃಢೀಕೃತಗೊಳಿಸಿದರೆ, ಕಲಸವಾದಂತೆಯೇ

ಸಾರಿಗೆ ಬಸ್ಸುಗಳಲ್ಲಿ ನಾಗರಿಕರಿಗೆ ಯಾವ ಸೌಕರ್ಯ ದೊರೆಯುತ್ತದೆ ಎಂಬುದು ಪ್ರಯಾಣಿಸಿದವರಿಗೆಲ್ಲ ಗೊತ್ತು ಹತ್ತಾರು ಮೈಲಿ ಪ್ರಯಾಣಿಸುವವರಿಗೆ ಸ್ಲೀಪಿಂಗ್ ಕೋಚುಗಳೇಕೆ ಬೇಕು?

ಸ್ಟಾಂಡಿಂಗ್, ಹ್ಯಾಂಗಿಂಗ್, ಫುಟ್‌ಬೋರ್ಡ್ ಪ್ಯಾಸೆಂಜರರಾಗಿಯೂ ಟ್ರಾವಲ್ ಮಾಡಲು ಪ್ರಯಾಣಾರ್ಥಿಗಳು ಮುಂದುವರಿದಾಗ, ಸೌಲಭ್ಯಕ್ಕೆ ಹೊಸ ಅರ್ಥ ಕಟ್ಟಬೇಕಾಗುತ್ತದೆ

ದೂರ ಯಾತ್ರಿಕರಿಗೆ ಹೆಚ್ಚಿನ ಸೌಲಭ್ಯ-ಸೌಕರ್ಯ ಬೇಕು ಆದಕ್ಕೋಸ್ಕರ ಅವರಿಗಾಗಿರುವ ಬಸ್ಸುಗಳ ಮಟ್ಟಿಗೆ ಅವು ಸೀಮಿತವಿರಬೇಕು

ಒಂದು ಉದ್ಯಮವು ವಿಶಾಲವಾಗಿ ಬೆಳೆದಂತೆ, ಅದು ಲಾಭದಾಯಕವೂ ಸೌಲಭ್ಯಪ್ರದಾಯಕವೂ ಆಗಬೇಕಾದದ್ದು ನ್ಯಾಯ ಕಡಿಮೆ ಬೆಲೆಯಲ್ಲಿ ಉತ್ತಮ ವಸ್ತುಗಳ ಪೂರೈಕೆಯಾಗುವುದು ಯುಗಧರ್ಮ

ವಾಮನನೆಂದು ಬಂದ ನಮ್ಮ ಸಾರಿಗೆ ಮಂಡಳಿ ತ್ರಿವಿಕ್ರಮನಾಗಿ ಬೆಳೆದದ್ದು ನಿಜ ಜತೆಗೆ ಅದರ ಹೊಟ್ಟೆ ಬಕಾಸುರನದ್ದಾದುದೂ ಸತ್ಯ

ಕೆಲವು ವರ್ಷಗಳಿಂದ ನಿರಂತರ ಸಾರಿಗೆ ದರ ಏರುತ್ತಲೇ ಬಂದಿದೆ, ಈಗ ಮತ್ತೂ ಏರುತ್ತದೆ

ಇದನ್ನು ಜನ ಹೇಗೆ ವಿರೋಧಿಸ ಬೇಕು? ಬಸ್ಸುಗಳನ್ನು ಬಹಿಷ್ಕರಿಸುವುದು ಈ ನಾಗರಿಕ ದಿನಗಳಲ್ಲಿ ಸಾಧ್ಯವಿಲ್ಲ

ಗೊಣಗುಟ್ಟುತ್ತಲೇ ಏರಿದ ಬೆಲೆ ತೆರಬೇಕು

ೋ ೋ ೋ

ರಾಜ್ಯದ ಇನ್ನೊಂದು ಮಂಡಳಿ ವಿದ್ಯುಚ್ಛಕ್ತಿ ಮಂಡಳಿ ರಾಜ್ಯ ಪುನರ್ಘಟನಾನಂತರ ಅಭಿವೃದ್ಧಿ ಹೊಂದಿದ ಬಾಬುಗಳಲ್ಲಿ ವಿದ್ಯುಚ್ಛಕ್ತಿಯೊಂದು ಇದು ನಿಸ್ಸಂದೇಹ

ಡಿಲ್ಲಿ ವಾಸಿಗಳಿಗೆ ಮಾತ್ರ ಮೀಸಲಾಗಿದ್ದ ವಿದ್ಯುತ್ ಹಳ್ಳಿವಾಸಿಗಳಿಗೂ ದೊರೆಯುವಂತಾದುದು ಸ್ತುತ್ಯ ಸರಕಾರಕ್ಕೆ ಇದಕ್ಕಾಗಿ ಧನ್ಯವಾದಗಳು

'ದೇವರು ಕೊಟ್ಟರೂ ಪೂಜಾರಿ ಬಿಡ' ವೆಂಬ ಗಾದೆಯನ್ನು ವಿದ್ಯನ್ಮಂಡಳಿ ಚಾಚೂ ತಪ್ಪದೆ ಅನುಷ್ಠಾನಕ್ಕೆ ತರುತ್ತದೆ ಲಂಚ-ರುಷುಮತ್ತುಗಳು ಇಲ್ಲಿ ತಾಂಡವವಾಡುತ್ತಿವೆ

ಕನೆಕ್ಷನ್‌ಗೆ ಅರ್ಜಿ ಗುಜರಾಯಿಸಿ ಒಂದು ವರ್ಷದ ಮೇಲೆ ಫಿಟ್ಟಿಂಗ್‌ಗೆ ಪರ್ಮಿಶನ್ ಬಂದರೆ ಪುಣ್ಯ ಡಿಪೊಜಿಟ್ ಕಟ್ಟಿ ಮತ್ತೊಂದೆರಡು ವರ್ಷಗಳಲ್ಲಿ ಕನೆಕ್ಷನ್ನು

ಈ ನಡುವೆ ನಿಮ್ಮ ಅಪ್ಲಿಕೇಶನ್ ಲ್ಯಾಪ್ಸ್ ಆಗಿದೆಯೆಂಬ ಉತ್ತರ ನಿಮಗೆ ಬಾರದಿದ್ದರೆ, ನೀವು ಹಿಂದಿನ ಜನ್ಮದಲ್ಲಿ ಭಾರೀ ಪುಣ್ಯ ಮಾಡಿರಬೇಕು

ಕಂಬಹಾಕಿ ಲೈನು ಎಳೆಯುವ ನೌಕರರಿಗೆ ಕಾಫೀಕಾಸು, ಕಂಬ ಹತ್ತಿ ಫ್ಯೂಸ್ ಬೋರ್ಡ್ ಇಟ್ಟು, ಮೀಟರ್ ಫಿಟ್ ಮಾಡಿದ ಲೈನ್‌ಮ್ಯಾನ್‌ಗೆ ಭಕ್ಷೀಸು, ವಿದ್ಯುದ್ದೀಪಗಳ ಬೆಳಗೋಣ ಕಾರ್ಯಕ್ರಮದ ವೀಕ್ಷಕ ಸುಪರವೈಸರಿಗೆ ಉಡುಗೊರೆ-ಇವೆಲ್ಲ ಮಾಮೂಲು.

ಈ ನಡುವೆ ನಿಮ್ಮ ಕಾಗದ ಪತ್ರಗಳು ಅಡಿಗೆ ಬೀಳದಂತೆ ಎಚ್ಚರಿಕೆ ವಹಿಸುವ ಕೆಲವರಿಗಾದರೂ ಕೈಬೆಚ್ಚಗೆ ಮಾಡಲೇ ಬೇಕು

ಇಷ್ಟೆಲ್ಲಾ ಗೋಟಾಳ ಬೇಡವೆಂದಿದ್ದರೆ ಮೂರೇ ದಿನಗಳಲ್ಲಿ ಕನೆಕ್ಷನ್ ದೊರಕಿಸಿಕೊಳ್ಳುವ ಮಾರ್ಗವೂ ಇದೆ ಕೆಲವು ನೂರರ ನೋಟುಗಳನ್ನು ಒಮ್ಮೆಲೇ ಚೆಲ್ಲಿ ಬಿಟ್ಟರೆ ಸಾಕು

ಒಮ್ಮೆಗೆ ಕರೆಂಟು ಬಂತು ಎಂದು ನೆಮ್ಮದಿಯ ಉಸಿರು ಬಿಡುವವರು ವಿರಳ ನಮ್ಮ ಜಿಲ್ಲೆಯಲ್ಲಂತೂ ಇಲ್ಲವೇ ಇಲ್ಲ

ಕರೆಂಟು ಫೈಲ್ ಆಗುವುದು ಇಲ್ಲಿನ ವಿದ್ಯುನ್ಮಂಡಳಿಗೆ ಅಂಟಿದ ಮಲೇರಿಯಾ ರೋಗ ಒಂದು ತಾಸಿಗೆ ಹತ್ತು ಸಲ ಮಿಂಚಿ ಮಾಯವಾಗುವುದೂ ಅಪರೂಪವಲ್ಲ

ಮಳೆಗಾಲದ ದಿನಗಳಲ್ಲಿ ಇದು ಸಾಮಾನ್ಯ ರೋಗ ಆ ಮೇಲೆ ಮಾಮೂಲು ಸೀಕು

ಒಂದೆರಡು ವರ್ಷಗಳಿಗೆ ಮೊದಲು ತಾಂತ್ರಿಕ ತೊಂದರೆಗಳನ್ನು ಸ್ಥಳೀಯ ಅಧಿಕಾರಿಗಳು ಮುಂದು ಮಾಡುತಿದ್ದರು ಬೇಕಾದ ಯಂತ್ರ—ತಂತ್ರಗಳೆಲ್ಲ ಬಂದು ಈಗ ಫಿಟ್ ಆಗಿವೆ ಆದರೂ ಅದರ ಹುಟ್ಟುಗುಣ ಬಿಟ್ಟಿಲ್ಲ

ವಾರದ ಬಿಡುವಿನ ದಿನ ಭಾನುವಾರ ಹಾಯಾಗಿರೋಣವೆಂದರೆ, ಆ ದಿನ ಕರೆಂಟು ಇರುವುದಾದರೆ, ಅದು ಎಂಟನೆಯ ಆಶ್ಚರ್ಯ ರಿಪೇರಿಯ ಹೆಸರಿನಲ್ಲಿ ಆ ದಿನಪೂರ್ತಿ ಕರೆಂಟು ಇಲ್ಲ

ಆಧುನಿಕ ಯುಗದಲ್ಲಿ ವಿದ್ಯುತ್ ಅವಶ್ಯಕ ವಸ್ತು. ಅದು ಪ್ರತಿಯೊಬ್ಬನಿಗೂ ದೊರೆಯಬೇಕು, ಬೇಕಾದಾಗ ಸಿಗಬೇಕು

ಈ ವಿದ್ಯುತ್ತಿನ ಬೆಲೆಯನ್ನೂ ಮೊನ್ನೆ ಮೊನ್ನೆ ಏರಿಸಲಾಯಿತು ನಷ್ಟ—ಕಷ್ಟವನ್ನು ತುಂಬಲು ಬೆಲೆಯೇರಿಕೆ. ನಷ್ಟ ಹೇಗೆ?

ಮರದ ಕಂಬಗಳು ಕಟ್ಟಿಗೆ ಡಿಪೋ ಸೇರಿ ಸೈಜುಗಳಾಗಿ ರೂಪಾಂತರವಾಗುವುದು, ಸಂಗೆ—ಕಬ್ಬಿಣ—ಸಿಮೆಂಟು—ಮತ್ತಿತರ ಒಡವೆ ವಸ್ತುಗಳು ಯಾವ ಯಾವದೋ ಅಂಗಡಿ ಸೇರುವುದು—ಸರ್ವೇಸಾಮಾನ್ಯ-ಜವ ಆಡುವ ಕೆಲವೊಮ್ಮೆ ನೋಡುವ ಸಂಗತಿ.

(ಏಳನೇ ಪುಟ ನೋಡಿರಿ)

ರಮೇಶನ ಮದುವೆಯೆ?

ನಾವೇಕೆ ಅವನಿಗೆ ಜೆಯಂಟ್ ಕ್ಯಾಶ್ ಸರ್ಟಿಫಿಕೆಟ್‌ಗಳನ್ನು ನೀಡಬಾರದು?

ಸಿಂಡಿಕೇಟ್ ಬ್ಯಾಂಕ್‌ನಿಂದ

ನಾವೂ ಸಹ ಕೊಂಡಿದ್ದೆವೆಂದು ನಿಮಗೆ ಗೊತ್ತಿದೆಯಷ್ಟೆ.

ಮೊತ್ತವು ಚಕ್ರಬಡ್ಡಿಯಿಂದ ಬೆಳೆಯುವ ಉಡುಗೊರೆಯೊಂದು ... ನಿಮಗೆ ಹೇಗೆ ಅನುಕೂಲವೋ ಹಾಗೆ ರೂ 10 ರೂ 100 ಹಾಗೂ ರೂ 1000ದ ಮೊತ್ತದ ಸರ್ಟಿಫಿಕೇಟ್‌ಗಳನ್ನು ... ನಮ್ಮೆಲ್ಲಾ ಶಾಖೆಗಳಲ್ಲಿ ದೊರೆಯುವವು.

ಸರ್ಟಿಫಿಕೇಟ್‌ಗಳ ಮೊತ್ತ	61 ತಿಂಗಳ ನಂತರ ದೊರೆಯುವ ಹಣ
ರೂ. 10	ರೂ. 14.24
ರೂ. 100	ರೂ. 142.40
ರೂ. 1000	ರೂ. 1424.00

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಚೇರಿ ಮಣಿಪಾಲ (ದ್ವಿ.ಕ. ಜಿಲ್ಲೆ)

ಶಾಖೆಗಳು 500

ಮತಪತ್ರಗಳ ಗೊಂದಲ

ಇಂದಿರಾ ಗಾಂಧಿಯವರು ಸ್ವತಂತ್ರ ಭಾರತದ ಇತಿಹಾಸದ ಸುವರ್ಣ ಪುಟಗಳಲ್ಲಿ ಕೆತ್ತಿಸಿದ ದಾಖಲೆಗಳಲ್ಲಿ ಒಂದಾದ ಮಧ್ಯಕಾಲೀನ ಚುನಾವಣೆಯ ಬಿರುಗಾಳಿಯಿಂದ ಕಿತ್ತುಹೋದ ಮನೆಗಳ ಛಾವಣಿಗೆ ಹುಲ್ಲು ಹೊದಿಸುವ ಕಾರ್ಯವಿನ್ನೂ ಮುಕ್ತಾಯಗೊಂಡಿಲ್ಲ ಇಂದಿರಾ ಗೆಲ್ಲುವುದು ಪ್ರತಿಯೊಬ್ಬರಿಗೂ ಆಶ್ಚರ್ಯವಾಗಿದ್ದ ಸಂದರ್ಭದಲ್ಲಿ ಅವರು ಗೆದ್ದುದು ವಿಶ್ವವನ್ನೇ ದಂಗು ಬಡಿಸಿತು ಇಂದಿರಾ ಯುಗದಲ್ಲಿ ಒಂದರ ಮೇಲೊಂದರಂತೆ ವಿಪತ್ತುಗಳು ಬಂದೆರಗಿದ್ದರೂ ಶ್ರೀ ಸಾಮಾನ್ಯ ಅವರನ್ನೇ ಚುನಾಯಿಸಿದುದು ನಿಜವಾಗಿಯೂ ದಿಗ್ಭ್ರಮೆಯ ಸಂಗತಿಯಾಗಿತ್ತು.

ಆದರೆ ಭಾರತದ ಆ- ಈ ಪಕ್ಷಗಳು ತಮ್ಮ ಪಾಂಚಜನ್ಯ ಶಂಖವನ್ನು ಊದುತ್ತಿರುವುದನ್ನು ಇನ್ನೂ ನಿಲ್ಲಿಸಿಲ್ಲ ಮತ ಪತ್ರಗಳ ವಿಚಾರದಲ್ಲಿ ಅವು ಗೊಂದಲ ಎಬ್ಬಿಸಿವೆ ಪ್ರತಿಯೊಂದು ಕ್ಷೇತ್ರದಲ್ಲೂ ಅಂದಾಜಿನಂತೆ ಈ ಹಿಂದಿನಷ್ಟು ಮತಗಳು ಯಾವ ಪಕ್ಷಕ್ಕೂ ಸಿಕ್ಕಿಲ್ಲವಾದುದರಿಂದ ಅವುಗಳು ಎಬ್ಬಿಸಿದ ಗೊಂದಲ ಅಸಹಜವೇನೂ ಆಗಿರಲಿಲ್ಲ ಪ್ರತಿ ಮತ ಪತ್ರದಲ್ಲೂ ಮತದಾರ ದನ ಮತ್ತು ಕರುಗಳನ್ನು ಚುನಾಯಿಸಿ ಒತ್ತಿದ ಕರೇ ಮುದ್ರೆ ಒಂದೇ ಸಾಲಿನಲ್ಲಿರುವುದರಿಂದ, ಅವುಗಳಲ್ಲಿ ಯಾವ ಅದಲುಬದಲಿಯೂ ಇಲ್ಲದಿರುವುದರಿಂದ ಈ ವಿಸ್ಮಯ ಸಂಗತಿ ಹುಡುಕುತ್ತಿದ್ದ ಬಳ್ಳಿ ಕಾಲಿಗೇ ತೊಡರಿದಂತಾಯಿತು

ಈ ಮತ ಪತ್ರಗಳನ್ನು ರಷ್ಯದಲ್ಲೇ ಮುದ್ರಿಸಿರಬೇಕು ಅದರಲ್ಲಿ ಮೊದಲೇ ಇಂದಿರಾ ಕಾಂಗ್ರೆಸಿನ ಚಿಹ್ನೆ ಹಾಕಿ, ಯಾವುದೋ ಆಸಿಡ್ ಹಾಕಿ ಅದನ್ನು ಕಾಣದಂತೆ ಮಾಡಿರಬೇಕು ಕೆಲದಿನಗಳ ತರುವಾಯ ಮತ್ತೆ ಹಾಕಿದ ಚಿಹ್ನೆ ಅಳಿದು, ಅದೇ ಮೊದಲಿನ ಮುದ್ರೆ ಎದ್ದು ಕಾಣುವಂತಾದುದೇ ರಶಿಯನ್ ಕಾಗದದ ವಿಶಿಷ್ಟ ಗುಣವೆಂದು ಒಂದು ವಾದವಿದ್ದರೆ ಪೋಲಿಂಗ್ ಅಧಿಕಾರಿಗಳಿಗೆ ಲಂಚ ಕೊಟ್ಟು ಮತಗಳನ್ನು ಬದಲಾಯಿಸಿರಬಹುದೆಂದೂ ಹೇಳುವವರಿದ್ದಾರೆ

ಈ ಎರಡು ಸಂಶಯಗಳನ್ನು ಸಮರ್ಥಿಸಬಹುದು ಈ ರೀತಿ ಆಸಿಡ್‌ನಿಂದ ಪವಾಡ ಮಾಡಲು ಸಾಧ್ಯವೆಂದು ಹುಬ್ಬಳ್ಳಿಯ ಪ್ರಪಂಚ (ವಾರ ಪತ್ರಿಕೆಯಲ್ಲಿ) ಸವಿವರವಾದ ಲೇಖನವೊಂದು ಪ್ರಕಟವಾಗಿದೆ ನನ್ನ ಪರಿಚಿತರಾದ ವೈದ್ಯರೊಬ್ಬರು (ಡಾ|| ಜಿ ಕೆ ಭಟ್) ಈ ರೀತಿ ಮಾಡಲು ಸಾಧ್ಯವೆಂಬುದನ್ನು ನನ್ನೆದುರೇ ಮನಗಣಿಸಿದ್ದಾರೆ ಅವರು ಒಂದು ಕಾಗದದ ಮೇಲೆ ತಮ್ಮ ಸಹಿ ಹಾಕಿದರು ಬಳಿಕ ಅದರ ಮೇಲೆ ಒಂದು ಔಷಧಿಯನ್ನು ಹಾಕಿದಾಗ ಆ ಸಹಿ ಸಂಪೂರ್ಣ ಕಾಣದಾಯಿತು ಅನಂತರ ಅದೇ ಕಾಗದದಲ್ಲಿ ಒಂದು ಬೇರೆ ಹೆಸರನ್ನು ಬರೆದು ನನಗೆ ತೋರಿಸಿ, ಆ ಕಾಗದವನ್ನು ಕುರ್ಚಿಯ ಮೇಲಿರಿಸಿ ಆ ಕಾಗದದ ಮೇಲಿಂದ ಕುಳಿತುಕೊಂಡರು ಕೆಲವು ನಿಮಿಷಗಳ ತರುವಾಯ ಆ ಕಾಗದವನ್ನು ಪರೀಕ್ಷಿಸಿದಾಗ ಅದರಲ್ಲಿ ಎರಡನೆಯ ಸಲ ಬರೆದ ಹೆಸರಿನ ಕುರುಹು ಕೂಡಾ ಇಲ್ಲದೆ ಮೊದಲು ಹಾಕಿದ್ದ ಸಹಿಯೇ ಒಡಮೂಡಿದಂತೆ ಇತ್ತು

ಎರಡನೆಯದಾಗಿ ಚುನಾವಣೆ ಕಳೆದು ಒಂದೆರಡು ದಿನಗಳ ಬಳಿಕ ಒಂದೆಡೆ ಗ್ರಾಮದ ಸರಕಾರಿ ಗೋಡಾನೊಂದರ ಹಿಂಭಾಗದಲ್ಲಿ ಗುರುತು ಮಾಡಲ್ಪಟ್ಟ ಮತಪತ್ರಗಳು ರಾಶಿಯಾಗಿ ಬಿದ್ದಿದ್ದವೆಂದು ವರದಿಗಾರರೊಬ್ಬರು ಪತ್ರಿಕೆಯಲ್ಲಿ ಬರೆದಿದ್ದರು ಇಂದಿರಾ ಗೆಲುವಿಗೆ ಹಲವಾರು ಸರಕಾರಿ ಅಧಿಕಾರಿಗಳ ಕೈವಾಡ ಅಥವಾ ಲಂಚದ ಆಮಿಷ ಇದ್ದಿರಲೇ ಬೇಕೆಂಬ ಸಂಗತಿ ಈ ವರದಿಯಿಂದಲೇ ವ್ಯಕ್ತವಾಗದಿರದು

ಈಗ ಮೈಸೂರಿನ ಪರಿಷ್ಕೃತ ನ್ಯಾಯಾಲಯದಲ್ಲಿ ಚುನಾವಣಾ ತಕರಾರುಗಳ ವಿಚಾರಣೆ ನಡೆಯುತ್ತಿದೆ ಮೈಸೂರು ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾದ ಆಡಳಿತ ಕಾಂಗ್ರೆಸಿನ ಅಭ್ಯರ್ಥಿ ತುಳಸೀದಾಸಪ್ಪನವರ ಮತಗಳು ತೀರಾ ವಿಲಕ್ಷಣವಾಗಿದ್ದವೆಂದು ಸಂಸ್ಥಾ ಕಾಂಗ್ರೆಸ್ ಪಕ್ಷದ ಡಾ| ತಿಮ್ಮೇಗೌಡ ಅವರು ಅರ್ಜಿ ಸಲ್ಲಿಸಿದ್ದಾರೆ ಅವರ ಹಿಂಬಾಲಕರಾಗಿ ಇತರ ಐದು ಮಂದಿಗಳಿದ್ದಾರಲ್ಲದೆ ಪ್ರತಿಸ್ಪರ್ಧಿಗಳಲ್ಲಿ ಡಾ| ಸರೋಜಿನಿ ಮಹಿಷಿಯವರೂ ಸೇರಿದ್ದಾರೆ

ತುಳಸೀದಾಸಪ್ಪನವರ ಇನ್ನೊಬ್ಬ ಪ್ರತಿಸ್ಪರ್ಧಿ ಸಂಜರಾಜ ಅರಸರವರಿಗೆ ಹಾಕಿದ ಮತಪತ್ರಗಳು ಮಂಕಾಗಿದ್ದವೆಂದೂ ಇವರದು ಕಾಂತಿಯುಕ್ತವಾಗಿತ್ತೆಂದೂ ಮತ ಪತ್ರ ಎಣಿಕೆ ಸಂದರ್ಭದಲ್ಲಿ ಹಾಜರಿದ್ದ ಸಾಕ್ಷಿಗಳು ತಿಳಿಸಿದ್ದಾರೆ ಇತರರ ಮತ ಪತ್ರಗಳಲ್ಲಿ ಬೇರೆ ಬೇರೆ ಕಡೆ ಚಿಹ್ನೆಯಿದ್ದರೂ ತುಳಸೀದಾಸಪ್ಪನವರದರಲ್ಲಿ ಒಂದೇ ಕಡೆಗಿತ್ತು

ಎಲ್ಲರೂ ತುಳಸೀದಾಸಪ್ಪನವರಂತೆ ಮಾಡಿಯೇ ಇಂದಿರಾ ಗಾಂಧಿ ಗದ್ದರೆಂದು ಹೇಳಲು ಯಾಕೆ ಸಾಧ್ಯವಿಲ್ಲ! ಇಂದಿರಾ ಮತ್ತು ರಷ್ಯನ್ ಮೈತ್ರಿ ಕೊಂಚ ಹಿಂದಿನದೇ ಇತ್ತೀಚೆಗೆ ಗ್ರೋಮಿಕೋ ಅವರೊಂದಿಗೆ ನಡೆಸಿದ ಒಪ್ಪಂದವೂ ಇಂಥ ಹಲವಾರು ಸಂಶಯಗಳಿಗೆ ಎಡೆ ಕೊಡುತ್ತಿದೆ ಒಬ್ಬ ಹೆಣ್ಣು ಕಿರುಬೆರಳಿನಲ್ಲಿ ಪ್ರಕೃತಿಯನ್ನೂ ಪುರುಷನನ್ನೂ ಕುಣಿಸಬಲ್ಲಳೆಂಬುದಕ್ಕೆ ನಿಜವಾಗಿಯೂ ಇದೊಂದು ಜೀವಂತ ಉದಾಹರಣೆಯಾಗಿದೆ

ಪಶ್ಚಿಮಂತರದಿಂದಾಗಿ ಸಂಸ್ಥಾ ಕಾಂಗ್ರೆಸಿನ ಕುರಿತು ಎಲ್ಲರೂ ಬಿನ್ನಾಭಿಪ್ರಾಯ ತಾಳಿದರಲ್ಲದೆ ನಿಷ್ಠೆ ಹಾಗೂ ಜನಪ್ರಿಯತೆಯಿಂದ ಆಡಳಿತ ಕಾಂಗ್ರೆಸ್ ಮೇಲೆ ಬಂದಿತೆಂದು ಇಂದಿರಾ ಕಾಂಗ್ರೆಸು ಹೇಳುತ್ತದೆ ಆದರೆ, ದಯಮಾಡಿ ಆಡಳಿತ ಕಾಂಗ್ರೆಸಿನವರು ಒಮ್ಮೆ ಕಲ್ಕತ್ತಕ್ಕೆ ಹೋಗಿ ಬರಲಿ ಅಲ್ಲಿ ಏನೇನು ನಡೆಯುತ್ತಿದೆಯೆಂದು ನೋಡಲಿ ಮೊನ್ನೆ ಅಲ್ಲಿಯೇ ಉತ್ತರಪಾರ ಹಳ್ಳಿಯಲ್ಲಿ, ಕೇವಲ ಹನ್ನೆರಡು ರೂಪಾಯಿ ಚರ್ಚೆಯಲ್ಲಿ ಮಾವ-ಸೊಸೆಯರೊಡನೆ ಜಗಳವಾಗಿ, ಕಬ್ಬಿಣದ ಸರಳಿನಿಂದ ಸೊಸೆಗ ಮಾವ ಹೊಡದ ಆಗ ಅಲ್ಲಿಗ ಬಂದ ಮಗ, ಹರಿನಾಥ ಘೋಷನೆಂಬ ಎಪ್ಪತ್ತು ವಯಸ್ಸಿನ ತಂದೆಯನ್ನು ಅದೇ ಸರಳಿನಿಂದ ತಿರುಗಿ ಹೊಡೆದು ಕೊಂದು ಹಾಕಿದ ಇಂಥ ನಕ್ಸಲ್ ಬಾರಿ ರಾರವ ನರಕದತ್ತ ಎಂದಾದರೂ ಇವರು ಕಣ್ಣೆತ್ತಿ ನೋಡಿದ್ದಾರೆಯೇ! ಇದೂ ಯಾವ ವಿಸ್ಮಯ ಕುರುಹು?

ಚುನಾವಣೆಗ ಮೊದಲೇ ಇಂದಿರಾ ಗಾಂಧಿಯವರು ಜನ ಸಂಘವನ್ನು ಒಂದು ಮಿನಿಟಿನಲ್ಲಿ ಮೂಲೆಗೆ ಕೂಡಿಸಬಲ್ಲೆನೆಂಬ ಆತ್ಮ ವಿಶ್ವಾಸ ಪ್ರದರ್ಶಿಸಿದಾಗ ಶ್ರೀ ಅತುಲ್ ಬಿಹಾರಿ ವಾಜಪೇಯಿಯವರು-ನಿಮ್ಮ ತಲೆಗೊಂಬಲು ಕಟ್ಟಿಕೊಳ್ಳಲು ಒಂದು ಮಿನಿಟು ಸಾಲದೆಂದಾಗ ಇದು ಸಾಧ್ಯವೇ? ಎಂದಿದ್ದರು ಮತ ಪತ್ರಗಳ ವಂಚನೆಯಿಂದ ಇತರ ಪಕ್ಷಗಳಿಗ ಅನ್ಯಾಯವಾಗಿದೆ ಯಾದರೆ ಅದು ಪ್ರಜಾಸತ್ತೆಗ ಮಾರಕವಲ್ಲದೆ ಮತ್ತೇನು?

—ಶ್ರೀ ಪ ರಾಮಕೃಷ್ಣ ಶಾಸ್ತ್ರಿ

(ಆರನೇ ಪುಟದಿಂದ)

ರಾಜ್ಯದ ಈ ಯೆರಡು ಮಂಡಳಿಗಳಿಗೆ ಬಡಿದಿರುವ ಜಾಡ್ಯವನ್ನು ಗುಣಪಡಿಸುವ ವೈದ್ಯರು ಬೇಕು ಮಲೇರಿಯಾ-ಪಕ್ಷವಾತ ಮತ್ತು ಬಸ್ಮಕ ರೋಗಗಳು ಮುಪ್ಪುರಿಗೊಂಡು ನಾರಿಗೆ ಮತ್ತು ವಿದ್ಯುನ್ಮಂಡಳಿಗಳನ್ನು ನರಪೇತಲವನ್ನಾಗಿ ಮಾಡಿವೆ

ಅವು ಜನತೆಯನ್ನೇ ಹಿಡಿದು ನುಂಗಲು ಬಂದಿವೆ ತಮ್ಮೆರಡು ಕೈಗಳನ್ನೂ ಬಹಳ ದೂರಕ್ಕೆ ಚಾಚಿ ತಬ್ಬಿಕೊಳ್ಳ ಹೊರಟಿವೆ ಈ ಪ್ರೇತಗಳಿಂದ ಶ್ರೀ ಸಾಮಾನ್ಯನಿಗ ಬಿಡುಗಡೆಯೆಂಬುದೇ ಇಲ್ಲವೆ?

ಸಮರ್ಥ ವೈದ್ಯರಿಗೆ ಪಿಎಚ್‌ಡಿ ಪದವಿ ಕಾದಿದೆ ●●

ಸಂದರ್ಶಿಸಿರಿ — ಸಂತೃಪ್ತರಾಗಿರಿ!!

ಬ್ಲೂಜಾರಾ ವಜ್ರಗಳಿಗೆ ಆಧುನಿಕ ಫ್ಯಾಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele GOLDKING Estd 1947 Phone 3242 Res. 3272



ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O S No 157/71

ಶ್ರೀ ಸೋದೆ ವಾದಿರಾಜ ಮಠ —ವಾದಿರು

ಮತ್ತು

ಎಚ್ಚು ಸೇರಿಗಾರ್ತಿ ಕೂಡಾ —ಪ್ರತಿವಾದಿರು

ಇವರೊಳಗೆ

2ನೇ ಪ್ರತಿವಾದಿ ರಾಧು ಸೇರಿಗಾರ್ತಿ, ರಾಮು ಸೇರಿಗಾರನ ತಂಗಿ, ಉಡುಪಿ ತಾಲೂಕು ಹೆರ್ಗ ಗ್ರಾಮದ ಪರ್ಕಳದಲ್ಲಿರುವವಳು ಇವರೀಗೆ

ವಾದಿರು ಗೇಣಿ ಬಾಕಿ ಬಗ್ಗೆ ವಾಕ್ಸು ಮಾಡಿದ ಮೇಲ್ಕಂಡ ದಾವೆಯು ತಾರೀಕು 28-10-71 ಕ್ಕೆ ಇಟ್ಟಿದೆ ಆ ದಿವಸ ಬೆಳಿಗ್ಗೆ 11 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಉತ್ತರಿಸುವರೆ ತಪ್ಪಿದ್ದಲ್ಲಿ ನಿಂಮ ಗೈರುಹಾಜರಿಯಲ್ಲಿ ಸದ್ರಿ ದಾವೆ ತೀರ್ಮಾನಿಸಲಾಗುವುದು

By order of Court

Sd/- V. G. Kedlaya,

M A LL B.,

Advocate for Plaintiff

ಉಡುಪಿ, ತಾ 27.9.71

ಇದು ನಮ್ಮ ಭಾರತ—

ಬದುಕು ನಾಚಬಾರದು

ನಾನು ಗುಜರಾತದ ಭಾಲ ಪ್ರದೇಶದಲ್ಲಿ ಪ್ರವಾಸ ಮಾಡುತ್ತಿದ್ದೆ. ಹಳ್ಳಿಗೆ ಸುಮಾರು ಒಂದೂವರೆ ಮೈಲು ದೂರವಿತ್ತು. ಮಧ್ಯಾಹ್ನದ ಹೊತ್ತು. ವಿಶ್ರಾಂತಿಗಾಗಿ ಒಂದು ಬಾವಿಯ ಬಳಿಯಿದ್ದ ಬೇವಿನ ಮರದ ನೆರಳಿಗೆ ಹೋದೆ.

ಅಲ್ಲೇ ಬಳಿಯಲ್ಲಿ ತುಸು ದೂರದಲ್ಲಿ ಒಬ್ಬ ರೈತನಿದ್ದನು. ಅವನತ್ತ ನನ್ನ ದೃಷ್ಟಿ ಸರಿಯಿತು. ದುರ್ದೈವದಿಂದ ಅವನ ಒಂದು ಕಾಲು ತುಂಡಾಗಿತ್ತು. ಅವನ ಹತ್ತಿರವೇ ಮರದ ಊರುಗೋಲೊಂದಿತ್ತು. ಆತನು ಕತ್ತಿಯಿಂದ ಹುಲ್ಲು ಕೊಯ್ಯುತ್ತಿದ್ದನು.

ನನ್ನನ್ನು ಕಾಣುತ್ತಲೇ ಆತ "ಅಕ್ಕಾ" ಎಂದು ಕೂಗಿ ಕರೆದನು. ಅದು ಕೇಳಿಸುತ್ತಲೇ ಒಬ್ಬಾಕೆ ನಡು ವಯಸ್ಸಿನ ಹೆಂಗಸು ಬಂದಳು. ರೈತನು ಆಕೆಯೊಡನೆಂದನು 'ನೋಡು, ಇವರಿಗೆ ಕುಡಿಯಲು ನೀರಾದರೂ ಕೊಡು.'

ಆ ಮಹಿಳೆ ತಕ್ಷಣವೇ ಬಾವಿಯಿಂದ ನೀರು ಸೇದಿದಳು. ನನಗೆ ಕುಡಿಯಲು ಕೊಟ್ಟಳು.

ನನಗೆ ಈಗ ಮಾತಾಡದಿರಲಾಗಲಿಲ್ಲ. ಅಪರಿಚಿತನಾದ ನನ್ನನ್ನು ಕೈಗೆ ದೊರೆತ ಸಾಧನಗಳಿಂದಲೇ ಉಪಚರಿಸಿದ ಅವರ ಮೇಲೆ ವಿಶ್ವಾಸ ಮೂಡಿತು.

'ನೀವು ಇಲ್ಲಿ ಬೇಸಾಯ ಮಾಡುತ್ತೀರೆಂದು ತೋರುತ್ತದೆ' ನಾನು ಮೆಲ್ಲಗೆ ಮಾತಿಗೆ ತೊಡಗಿದೆ.

'ಹೌದು ಸ್ವಾಮಿ' ಕುಳಿತಲ್ಲಿಂದಲೇ ರೈತ ಉತ್ತರಿಸಿದನು. 'ನಾವು ಓ ಅಲ್ಲಿ ಕಾಣುತ್ತದೆಯಲ್ಲಾ, ಆ ಹಳ್ಳಿಯಲ್ಲಿರುವವರು. ಇಲ್ಲಿ ನಮ್ಮ ಜಮೀನು ಇದೆ. ಸುಮಾರು ಒಂದು ಎಕರೆ ಭೂಮಿಯಲ್ಲಿ ಬೇಸಾಯ ಮಾಡಿ ನಾವು ಅಕ್ಕ–ತಮ್ಮ ಜೀವಿಸುತ್ತಿದ್ದೇವೆ.'

'ನಿಮ್ಮ ಒಂದು ಕಾಲು ತುಂಡಾಗಿ ಹೋಗಿದೆ. ಹಾಗಿರುವಾಗ ನೀವು ಬೇಸಾಯ ಹೇಗೆ ಮಾಡುತ್ತೀರಿ?'

'ಸುಮಾರು ಹನ್ನೆರಡು ವರ್ಷಗಳಿಗೆ ಹಿಂದೆ ನನ್ನ ಕಾಲಿಗೊಂದು ಮುಳ್ಳು ಚುಚ್ಚಿತು. ಏನಾಯಿತೋ ಏನೋ, ನಂಜು ಏರಿಯೇ ಬಿಟ್ಟಿತು. ಕೊನೆಗೆ ಆಸ್ಪತ್ರೆಗೆ ಹೋದೆ. ಅಲ್ಲಿ ಕಾಲೇ ತುಂಡು ಮಾಡಬೇಕೆಂದರು. ಮಾಡಿಸಿದೆ. ನಡೆದು, ನಿಂತು ನನ್ನಿಂದ ಕೆಲಸವಾಗುವುದಿಲ್ಲ. ಆದರೂ ಕೂತುಕೊಂಡು ಏನೇನೆಲ್ಲ ಆಗುತ್ತದೆಯೋ ಅವೆಲ್ಲವನ್ನೂ ಮಾಡುತ್ತೇನೆ. ಉಳಿದುದನ್ನು ನನ್ನ ಅಕ್ಕ ಮಾಡುತ್ತಾಳೆ.'

'ನಿನ್ನ ಅಕ್ಕನಿಗೆ ಮದುವೆಯಾಗಿಲ್ಲವೆ?'

'ಮದುವೆಯೇನೋ ಆಗಿತ್ತು. ದಮ್ಮಿನ ರೋಗದಿಂದ ಗಂಡ ಸತ್ತುಹೋದ. ಆಕೆಯ ಅತ್ತೆ ಮನೆಯವರು ತುಂಬ ಅನುಕೂಲವಂತರು. ಈಕೆಯನ್ನೂ ತಮ್ಮಲ್ಲಿಗೇ ಕರೆದಿದ್ದರು. ನಾನು ಕಾಲು ಕಳೆದುಕೊಂಡವನಾದೊಡನೆಯೇ ನನ್ನನ್ನು ಬಿಟ್ಟುಹೊರಟು ಹೋದಳು. ಅಂದಿನಿಂದ ಈಕೆ ನನ್ನೊಡನೆ ಬಂದು ನೆಲಸಿದ್ದಾಳೆ. ನಿನ್ನ ಅತ್ತೆ ಮನೆಯಲ್ಲಿ ಸುಖವಾಗಿ ಬದುಕುವುದನ್ನು ಬಿಟ್ಟು ಇಲ್ಲೇಕೆ ಕೊಳೆಯುತ್ತಿ ಎಂದು ನಾನು ಹಲವು ಬಾರಿ ಹೇಳಿದೆ. ಆದರೆ, ಅವಳು ಹೇಳುತ್ತಾಳೆ–ನೀನು ಇಷ್ಟೊಂದು ಕಷ್ಟದಲ್ಲಿರುವಾಗ ನಾನು ಅತ್ತೆ ಮನೆಯಲ್ಲಿ ಹೇಗೆ ಸುಖದಿಂದಿರಲಿ?' ಅಣ್ಣ ತಮ್ಮಂದಿರು ಸಂಕಟದಿಂದ ನವೆಯುತ್ತಿರುವಾಗ ಅಕ್ಕ ತಂಗಿಯರು ಸಹಾಯ ಮಾಡದೆ ಹೋದರೆ ಬದುಕು ನಾಚಿಕೊಳ್ಳದೆ?"

'ರೈತನ ಮಾತು ಕೇಳಿದ ನನ್ನ ಹೃದಯ ಆತನ ಅಕ್ಕನ ಅಂತರಾತ್ಮನ ಮುಂದೆ ಬಾಗಿ ಬಿಟ್ಟಿತು. ನಿಧಾನವಾಗಿ ಕೇಳಿದೆ— "ಇದು ಬಿರುಬಿಸಿಲು. ಈ ಸುಡುಬಿಸಿಲಲ್ಲಿ ಕೊಂಚ ಆರಾಮವಾಗಿ ಕೂತುಕೊಳ್ಳುವುದು ಬಿಟ್ಟು...."

"ಓ, ಇಂದು ನಮ್ಮ ಹಳ್ಳಿಗೆ ರವಿ ದಾದಾ ಬರುತ್ತಾರೆ. ಅವರ ಉಪದೇಶ ಕೇಳಬೇಕು. ಮಧ್ಯಾಹ್ನದ ನಂತರ ಇವತ್ತು ರಜೆ. ಬೇಗ ಬೇಗನೇ ಕೆಲಸ ಮುಗಿಸಿ ಮನೆಗೆ ಮರಳ ಬೇಕು. ಅದಕ್ಕಾಗೇ ಈಗ ಕೆಲಸ ಮಾಡುತ್ತಿದ್ದೇವೆ.'

ನನ್ನ ಹೃದಯ ತುಂಬಿ ಬಂತು. ನಾನೂ ನನ್ನ ಪರಿಚಯ ಹೇಳಿದೆ. ಅಕ್ಕ–ತಮ್ಮಂದಿರು ನನಗೆ ನಮಸ್ಕರಿಸಿದರು. ಅವರಿಬ್ಬರ ಆಗ್ರಹದ ಮೇರೆಗೆ ನಾನು ಅವರ ಮನೆಯಲ್ಲೇ ಬಿಡಾರ ಮಾಡಿದೆ. ನನ್ನ ತಿರುಗಾಟ ಮುಗಿದ ಮೇಲೆ ಧನ್ಯವಾದ ಹೇಳಿ ಮರಳಿದೆ.

ಅದು ಕಳೆದು ಹಲವಾರು ವರ್ಷವುರುಳಿದುವು. ಇಂದೂ ನನಗೆ ಒಮ್ಮೊಮ್ಮೆ ತಮ್ಮನಿಗಾಗಿ ದುಡಿಯುತ್ತಿರುವ ಆ ತ್ಯಾಗಿ ಅಕ್ಕನ ಮುಖ ಕಾಣಿಸುವುದುಂಟು. ಆಗ ನಾನು ತಲೆ ತಗ್ಗಿಸಿ ಆಕೆಯ ಆ ಪವಿತ್ರಾತ್ಮಕ್ಕೆ ವಂದಿಸುತ್ತೇನೆ.

(ಕೃಪೆ: ಕಲ್ಯಾಣ)

●●

ಪ್ರಧಾನಿಗೆ ಸೋವಿಯೆತ್‌ನಲ್ಲಿ ಆದರದ ಸ್ವಾಗತ

(ಐದನೇ ಪುಟದಿಂದ)

ನೇಕ ಬಗೆಯ ಸಂಯಂತ್ರಗಳನ್ನೂ, ಸರಂಜಾಮುಗಳನ್ನೂ, ದೊಡ್ಡ ನೌಕೆಗಳು, ಎಣ್ಣೆ ಟ್ಯಾಂಕರುಗಳು, ಕೆಲ ಬಗೆಯ ಲೋಹಗಳು, ಅನೇಕ ಔದ್ಯೋಗಿಕ ರಾಸಾಯನಿಕ ಪದಾರ್ಥಗಳು, ಮುಂತಾದುವುಗಳನ್ನು ಒದಗಿಸಬಲ್ಲುದು.

ಭಾರತಕ್ಕೆ 15000—20000 ಟನ್ ಹತ್ತಿಯನ್ನು ಪ್ರತಿವರ್ಷವೂ ಒದಗಿಸುವುದರ ಕುರಿತು ಇತ್ತೀಚೆಗೆ ಸೋವಿಯೆತ್ ನಾಡಿನೊಡನೆ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಭಾರತದಲ್ಲಿ ತಯಾರಿಸಲಾದ ಜವುಳಿಯನ್ನು ಸೋವಿಯೆತ್ ಒಕ್ಕೂಟಕ್ಕೆ ನಿರ್ಯಾತಗೊಳಿಸಲಾಗುವುದು. ಭಾರತದ ಉಣ್ಣೆ ಗಿರಣಿಗಳೂ, ಹೆಣಿಗೆಯ ಕಾರಖಾನೆಗಳೂ ಸೋವಿಯೆತ್ ನಾಡಿನಿಂದ ಹೆಚ್ಚು ಹೆಚ್ಚು ಉಣ್ಣೆಯನ್ನು ತರಿಸಿಕೊಂಡು, ಸೋವಿಯೆತ್ ದೇಶಕ್ಕೆ ಈ ಉದ್ಯಮಗಳಲ್ಲಿ ತಯಾರಿಸಲಾದ ಸರಕುಗಳನ್ನು ಹೆಚ್ಚು ಹೆಚ್ಚಾಗಿ ರವಾನಿಸಬಲ್ಲುವು.

ದೀರ್ಘ ಕಾಲಾವಧಿಯ ಯೋಜನೆಯ ಚಟುವಟಿಕೆಯಲ್ಲಿಯೂ ಸಮನ್ವಯಕ್ಕೆ ಅವಕಾಶವಿದೆ. ಈ ಕ್ಷೇತ್ರದಲ್ಲಿ ಬಹುಕಾಲದಿಂದಲೂ ಕ್ರಮಬದ್ಧ ಸಂಪರ್ಕಗಳು ವಿಕಾಸಗೊಂಡಿವೆ. ಭಾರತ—ಸೋವಿಯೆತ್ ಶಾಂತಿ—ಸ್ನೇಹ—ಸಹಕಾರ ಒಪ್ಪಂದವು ಈ ಸಂಪರ್ಕಗಳನ್ನು ಇನ್ನೂ ಬಲಪಡಿಸುವುದಕ್ಕೆ ನೂತನಾವಕಾಶಗಳನ್ನೂ ನಿರ್ಮಿಸಿದೆ.

ಈ ಸಂದರ್ಶನದ ಕಾಲದಲ್ಲಿ ಪ್ರಧಾನ ಮಂತ್ರಿಯವರಿಗೆ ಹೆಚ್ಚು ಕಾಲಾವಕಾಶವಿರಲಿಲ್ಲ. ಆದರೂ ಈ ಸ್ವಲ್ಪ ಕಾಲಾವಧಿಯಲ್ಲಿ ಸೋವಿಯೆತ್ ಜನತೆಯು ತಮ್ಮ ಮೆಚ್ಚಿಕೆಯನ್ನು ಅನೇಕ ಬಗೆಗೆ ತೋರಿಸಲು, ಭಾರತಕ್ಕೆ ದೃಢವಾದ ಬೆಂಬಲವನ್ನು ಸೂಚಿಸಲು ಅನೇಕ ಅವಕಾಶಗಳು ಅವರಿಗೆ ಲಭಿಸಿದುವು. ●●

ಸುಂದರ ಕುಂದಾಪುರ ನಗರದಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಬ್ರಹ್ಮಾವರಹಳ್ಳಿ ನಾಡಹಬ್ಬ

ಬ್ರಹ್ಮಾವರದ ಅಜಪುರ ಕರ್ನಾಟಕ ಸಂಘದವರು ತಾ. 28–9–71ರಂದು ಜರಗಿಸಿದ ಪದಿನಾರನೆಯ ನಾಡಹಬ್ಬದ ಅಧ್ಯಕ್ಷರಾಗಿ ಪ್ರಸಿದ್ಧ ಸಾಹಿತಿ ಶ್ರೀ ಸೇವ ನಮಿರಾಜ ಮಲ್ಲರು ಮಾತಾಡುತ್ತಾ, ಸರಸ್ವತೀ ಪುತ್ರರಾದ ಕಲಾವಿದರನ್ನು ಸನ್ಮಾನಿಸುವುದು ಹಿಡಿಕ್ಕೂ ಆದರ್ಶಪೂರ್ಣವಾದುದು. ಆದರೆ ಲಕ್ಷ್ಮೀಕಟಾಕ್ಷಕ್ಕಾಗಿ ಇಂತಹ ಕಲಾವಿದರು ತಮ್ಮ ಪ್ರತಿಭೆಯನ್ನು ಅಪವ್ಯಯ ಮಾಡುತ್ತಿರುವುದು ದೌರ್ಭಾಗ್ಯಕರ. ಅವರಿಗೆ ಇಂತಹ ಸ್ಥಿತಿ ಬಾರದಂತೆ ನೋಡಿಕೊಳ್ಳುವ ಜವಾಬ್ದಾರಿ ಸಮಾಜಕ್ಕೆ ಸೇರಿದೆ. ಇಂತಹ ಕೆಲಸಕ್ಕೆ ಜನತೆ ಬೆಂಬಲ ಕೊಡಬೇಕೆಂದು ಹೇಳಿದರು.

ಇದೇ ಸಂದರ್ಭದಲ್ಲಿ ಅರ್ಧ ಶತಕಕ್ಕೂ ಮೀರಿ ಯಕ್ಷಗಾನ ರಂಗದ ಸೇವೆ ಮಾಡಿದ ಕಲಾವಿದ ಶ್ರೀ ಶಿಷುಮತಿ ಪರಮೇಶ್ವರ ಹೆಬ್ಬಾರರನ್ನು 'ಹಾರಾಡಿ ರಾಮ ಗಾಣಿಗ ಸ್ಮಾರಕ ನಿಧಿ'ಯಿಂದ ಶಾಲು ಜೋಡಿಗಳೊಂದಿಗೆ ಅಧ್ಯಕ್ಷರ ಮೂಲಕ ಸನ್ಮಾನಿಸಲಾಯಿತು. ಶ್ರೀ ಹೆಬ್ಬಾರರು ಕೃತಜ್ಞತೆ ಸೂಚಿಸಿದರು.

ಆರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಬಿ. ಸರ್ವೋತ್ತಮ ಶೈಣುವರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಬೈಕಾಡಿ ವೆಂಕಟ ಕೃಷ್ಣರಾಯರು ವರದಿವಾಚನಮಾಡಿದರು. ಶ್ರೀ ಎಂ. ಸುಂದರ ಶೆಟ್ಟರು ಸಂದೇಶಗಳನ್ನೋದಿದರು. ಪಿ. ಎಂ. ರಾಜಗೋಪಾಲಚಾರ್ಯರು ಕಾವ್ಯವಾಚನ ಗೈದರು.

ಪುತ್ತೂರು II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

Ex 170/70 OS 286/62

S. ಕೃಷ್ಣಪ್ಪ —ಅರ್ಜಿದಾರ

ಮತ್ತು

ವೆಂಕಮ್ಮ ಕೂಡಾ —ಎದ್ರಿ

1ನೇ ಎದ್ರಿ–ವೆಂಕಮ್ಮ, d/o ಕೊರಪೊಳು ಹೆಂಗ್ಸು, ಬಂಟ್ವಾಳ ತಾಲ್ಲೂಕು ಉಳಿಗ್ರಾಮ.

ಅರ್ಜಿದಾರರು ನಿಮ್ಮ ಮೇಲೆ ಕೂಡಾ ಮಾಡಿದ ಸೋಲ್ಕಂಡ ಅಮಲ್ದಾರಿಯು ನಿಮ್ಮ ಹಾಜರಾತಿ ಬಗ್ಗೆ ಮತ್ತು ಆಕ್ಷೇಪಗಳಿದ್ದಲ್ಲಿ ತಿಳಿಸುವರೆಗೆ ಸೇಲು ಪೇವರಿಗೆ ಆಕ್ಷೇಪ ಹೇಳುವರೆ ತಾ. 19—10—71ರಂದು ವ್ಯಾದೆ ಇರುತ್ತದೆ. ಆ ಮದರಿಂದ ನೀವು ಆ ದಿವಸ ಬೆಳಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉಜ್ಜಾಪರಿಸಿ ಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವ್ವಾ ಮಾಡಿ ಅರ್ಜಿಯನ್ನು ಮುಂದುವರಿಸಲಾದೀತು ಎಂತ ಈ ಮೂಲಕ ನಿಮಗೆ ತಿಳಿಯಪಡಿಸೋಣಾಗಿಯದೆ.

(By order of Court)

Sd/- N. Subramanyam
Advocate for Petitioner
Puttur, 1—10—71

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

Ex. C. 509/1971

ಪರಿಕೃಷ್ಣ ಭಟ್ಟ —ಅರ್ಜಿದಾರ,ವಾದಿ.

ಭೀಮ ಭಟ್ಟ ಕೊಜಮೆ ಶಂಭಭಟ್ಟರ ಮಗ, ಬಂಟ್ವಾಳ ತಾಲ್ಲೂಕು ಕನ್ಯಾನ ಗ್ರಾಮದಲ್ಲಿ —ಎದ್ರಿ,ಪ್ರತಿವಾದಿ

ಇವರೀಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದ್ರೆ—

ಮೇಲಿನ ಅಮ್ಲಜ್ಯಾರಿಯಲ್ಲಿ ಅರ್ಜಿದಾರನು ನಿಮ್ಮ ಬಾಬ್ತು ಸ್ಥಿರಾಸ್ತಿ ಏಲಂಗೆ ಅಪೇಕ್ಷಿಸಿ ದಾಖಲು ಮಾಡಿದ ಯಿಸ್ತಿಹಾರಿನ ಶರತಗಳನ್ನು ನಿರ್ಣಯಿಸುವರೆ ಸದ್ರಿ ಅಮ್ಲಜ್ಯಾರಿಯು ತಾ. 4–11–71ಕ್ಕೆ ಇಟ್ಟಿರುವುದರಿಂದ ಆಕ್ಷೇಪಣೆಗಳಿದ್ರೆ ಸದ್ರಿ ದಿನ್ನ ಹಾಜರಾಗಿ ಉದಪರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲ್ಕ ತಿಳಿಸೋಣಾಗಿಯದೆ.

(Sd-) B. Ishwara Bhat
Advocate for Petitioner
ಪುತ್ತೂರು, ತಾ. 7—10—71

ನಿಮ್ಮ ರೈಲ್ವೆಯ ಬಗ್ಗೆ ತಿಳಿಯಿರಿ

ಭಾರತೀಯ ರೈಲ್ವೆ ನಿಮ್ಮ ಆಸ್ತಿ.

ರಾಷ್ಟ್ರೀಕೃತ ರೈಲ್ವೆ ದೇಶದ ಬಹುದೊಡ್ಡ ಆಸ್ತಿಯಾಗಿದ್ದು, ಅದರ ಮೌಲ್ಯ ಸುಮಾರು 3928 ಕೋಟಿ ರೂ.ಗಳಷ್ಟಿದೆ.

ರೈಲ್ವೆ ಇಲಾಖೆಯು ಪ್ರತಿದಿನ 2.6 ಕೋಟಿ ರೂ.ಗಳ ಆದಾಯವನ್ನು ಗಳಿಸುತ್ತಿದ್ದು, 13.6ಲಕ್ಷ ಮಂದಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿದೆ.

ರೈಲ್ವೆಯಲ್ಲಿ 11,300 ಎಂಜಿನ್ನುಗಳು 3,34,000 ಗೂಡ್ಸ್ ವ್ಯಾಗನ್‌ಗಳು ಮತ್ತು 34,700 ರೈಲುಬಂಡಿಗಳೂ ಇವೆ.

ದೇಶದಾದ್ಯಂತ 7060 ರೈಲ್ವೆ ನಿಲ್ದಾಣಗಳಿದ್ದು, ಸುಮಾರು 10,800 ರೈಲುಗಳು ಪ್ರತಿದಿನ ನಾರಿಗೆ ಸಂಚಾರ ಸೌಲಭ್ಯವನ್ನು ಒದಗಿಸಿವೆ ಪ್ರತಿನಿತ್ಯ ಈ ರೈಲ್ವೆಗಳಲ್ಲಿ 64 ಲಕ್ಷಕ್ಕೂ ಹೆಚ್ಚಿನ ಅಂದರೆ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 1ರಷ್ಟು ಜನರು ಪ್ರಯಾಣಮಾಡುತ್ತಾರೆ 5. 7 ಲಕ್ಷಕ್ಕೂ ಹೆಚ್ಚು ಟನ್‌ಗಳಷ್ಟು ಸರಕುಗಳನ್ನು ಸಾಗಿಸಲಾಗುತ್ತಿದೆ

ಭಾರತೀಯ ರೈಲ್ವೆಯ ಅಂಗವಾಗಿರುವ ದಕ್ಷಿಣ ರೈಲ್ವೆಯಲ್ಲಿ 246 ಡೀಸೆಲ್ ಇಂಜಿನ್ನುಗಳು 20 ವಿದ್ಯುತ್ ಎಂಜಿನ್ನುಗಳು, 1113 ಆವಿಯಿಂದ ಚಲಿಸುವ ಎಂಜಿನ್ನುಗಳು, 4755 ರೈಲು ಬಂಡಿಗಳು ಹಾಗೂ 34,210 ವ್ಯಾಗನುಗಳು ಇವೆ.

ದಕ್ಷಿಣ ರೈಲ್ವೆಯಲ್ಲಿ 1025 ನಿಲ್ದಾಣಗಳಿವೆ.

ಪ್ರತಿನಿತ್ಯ ಸುಮಾರು 900 ರೈಲುಗಾಡಿಗಳು ಓಡಾಡುವವು. 6.5ಲಕ್ಷ ಪ್ರಯಾಣಿಕರು ಈ ರೈಲುಗಾಡಿಗಳಲ್ಲಿ ಪ್ರಯಾಣ ಮಾಡುವರು. ರೈಲು ಜಂಕ್ಷನ್ನುಗಳಲ್ಲಿ ಈ ರೈಲುಗಾಡಿಗಳಿಗೆ ಪರಸ್ಪರ ಸಂಪರ್ಕ ಕಲ್ಪಿಸುವ ವ್ಯವಸ್ಥೆಯಿದೆ. ಇದರಿಂದಾಗಿ ಕೆಲವು ಬಾರಿ ಒಂದು ರೈಲು ಗಾಡಿಯ ಆಗಮನದಲ್ಲಿ ತಡವಾದರೆ ಅದರಿಂದ ಇತರ ರೈಲುಗಾಡಿಗಳಿಗೂ ವಿಳಂಬವಾಗುವುದು.

ಅಲಾರಾಂ ಸರಪಣಿಗಳನ್ನು ಸಕಾರಣವಿಲ್ಲದೆ ಎಳೆಯುವುದರಿಂದ ರೈಲುಗಾಡಿಗಳು ಸಮಯಕ್ಕೆ ಸರಿಯಾಗಿ ತಲುಪಲು ತೊಂದರೆಯಾಗುತ್ತವೆ

ಒಂದು ಡೀಸೆಲ್ ಎಂಜಿನ್‌ನ ಬೆಲೆ ಸುಮಾರು 23 ಲಕ್ಷ ರೂ.ಗಳು

ಮೀಟರ್‌ಗೇಜ್ ವಿದ್ಯುತ್ ಎಂಜಿನ್‌ಗೆ ಸುಮಾರು 11ಲಕ್ಷ ರೂ. ಗಳಾಗುವವು. ಆವಿಯಿಂದ ಚಲಿಸುವ ಎಂಜಿನ್ನಿನ ಬೆಲೆ ಸುಮಾರು 3ಲಕ್ಷರೂಗಳು.

ಪ್ರತಿ ಪ್ರಯಾಣಿಕರ ಬಂಡಿಗೆ 2 ಲಕ್ಷ ರೂ.ಗಳಾಗುವುವು.

ರೈಲ್ವೆ ಇಲಾಖೆಗೆ ಉಂಟಾಗುವ ನಷ್ಟ ನಮ್ಮ ದೇಶದ ಜನತೆಯ ನಷ್ಟ. ಈ ಇಲಾಖೆಗೆ ಸಂಬಂಧವಿಲ್ಲದ ಚಳುವಳಿಗಳ ಹೆಸರಿನಲ್ಲಿ ಒಮ್ಮೊಮ್ಮೆ ಮುಖ್ಯವಾದ ಹಾಗೂ ಹೆಚ್ಚು ಬೆಲೆಬಾಳುವ ರೈಲ್ವೆ ಉಪಕರಣಗಳಿಗೆ ಬೆಂಕಿಯಿಡಲಾಗುತ್ತಿದೆ; ಇಲ್ಲವೆ ನಾಶಗೊಳಿಸಲಾಗುತ್ತದೆ.

ರೈಲ್ವೆ ಉಪಕರಣಗಳನ್ನು ಕದಿಯುವುದರಿಂದ ಅಥವಾ ಅಪಹರಿಸುವುದರಿಂದ ಪ್ರಯಾಣಿಕರಿಗೆ ಒದಗಿಸಿರುವ ಅಮೂಲ್ಯ ಸೌಕರ್ಯಗಳ ಕೊರತೆಯಾಗುತ್ತದೆ.

ರೈಲ್ವೆ ಸಂಪತ್ತನ್ನು ರಕ್ಷಿಸುವ ನಿಮ್ಮ ಪವಿತ್ರ ಕರ್ತವ್ಯ ರೈಲ್ವೆ ಇಲಾಖೆಯ ಸೌಲಭ್ಯಗಳು ಇನ್ನೂ ಹೆಚ್ಚಿಸಲು ನೀವು ಇಲಾಖೆಗೆ ನೆರವಾಗಿ.

●●

ಕ್ಯಾಬರೇ ನಿರೋಧ ಚಳುವಳಿ

(ನಾಲ್ಕನೇ ಪುಟದಿಂದ)

ಅನ್ನೋದೇ ನೀನು?'

'ಮನಸ್ಸನ್ನು ಯಾರು ಓದುತ್ತಾರೆ? ಎಲ್ಲವೂ ಇಂದು ವ್ಯಾವಹಾರಿಕ ಯುಗ ನಗ್ನ ಭಿತ್ತಿ ಪತ್ರಗಳು, ಜಾಹಿರಾತುಗಳು ಚಿತ್ರಪಟಗಳು ಮಾಡಲಾಗದ ಭೀಕರತೆಯನ್ನು ಕ್ಯಾಬರೆ ಮಾಡುತ್ತದೆ—ವ್ಯಾವಹಾರಿಕವಾಗಿ....'

'ಹ್ಞೂಂ ...'

'ಏನು ಅಲ್ಲವೆ?'

'ಮತ್ತೇನು, ನಮ್ಮೂರಲ್ಲೂ ಶುರುವಾಗ್ಲಿ....'

''ಏನು'

'ಕ್ಯಾಬರೇ ನಿರೋಧ....'

'ನನಗೇನೂ ಬೇಕಾಗಿಲ್ಲೆ ...'

'ಉಳಿದವರಿಗಾಗಿ ...'

'ಅವರಿಗೆ ನಿರೋಧ ಬೇಕೆಂದು ಅನಿಸ ಬೇಕಲ್ಲವೆ?'

'ಮನವೊಲಿಸಿಕೊಂಡಾದರೂ....'

'ಯಾರದ್ದು?'

'ಮತ್ಯಾರದ್ದು ...'.

"ಹ್ಞೂಂ......."

—ಗೋರಾ.

ಯುಗಪುರುಷ ರಜತೋತ್ಸವ

'ಯುಗ ಪುರುಷ' ಮಾಸಪತ್ರಿಕೆಯ ಬೆಳ್ಳಿಹಬ್ಬ ಸಮಾರಂಭವನ್ನು ತಾ 4ರಂದು ಸಂಜೆ ಡಾ। ಟಿ ಎಂ ಎ ಪೈಯವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು ವಿವಿಧ ಕಲಾ—ಸಾಹಿತ್ಯ ಪತ್ರಿಕಾ ಪ್ರದರ್ಶನಗಳ ಉದ್ಘಾಟನೆಯನ್ನು ಧರ್ಮಸ್ಥಳ ಶ್ರೀ ವೀರೇಂದ್ರಹೆಗ್ಗಡೆಯವರು ನೆರವೇರಿಸಿದರು.

ಆರಂಭದಲ್ಲಿ ರಜತೋತ್ಸವ ಸಮಿತಿಯ ಅಧ್ಯಕ್ಷ ಕೆ.ಎನ್. ಮಲ್ಯರು ಅತಿಥಿಗಳನ್ನು ಸ್ವಾಗತಿಸಿದರು.

ಡಾ। ಟಿ.ಎಂ ಎ ಪೈಯವರು ಉದ್ಘಾಟಿಸುತ್ತಾ,ಉಡುಪರ ಪತ್ರಿಕೋದ್ಯಮದ 25 ವರ್ಷಗಳ ಅವ್ಯಾಹತ ಹೋರಾಟದ ಕಷ್ಟಕಾರ್ಪಣ್ಯಗಳನ್ನು ಬಲ್ಲೆನೆಂದೂ ಅವರ ಪ್ರಯತ್ನಕ್ಕೆ ಅಭಿಮಾನಿಗಳ ಪ್ರೋತ್ಸಾಹ, ಹಣದ ಬೆಂಬಲ, ದೇವೀ ಕೃಪೆ, ಕವಿ-ಬರಹಗಾರರ ನೆರವು ಬೇಕೆಂದೂ ಹೇಳಿ ಅವರ ಸಾಹಿತ್ಯ ಸೇವೆ ಅಖಂಡವಾಗಿ ನಡೆಯಲೆಂದು ಹಾರೈಸಿದರು.

ಶ್ರೀ ವೀರೇಂದ್ರ ಹೆಗ್ಗಡೆಯವರು ವಿವಿಧ ಪ್ರದರ್ಶನಗಳನ್ನು ಉದ್ಘಾಟಿಸುತ್ತಾ ಇನ್ನೂ ಹಲವಾರು ವರುಷಗಳವರೆಗೆ ಯುಗಪುರುಷವನ್ನು ಮುನ್ನಡೆಸುವ ಚೇತನ–ಶಕ್ತಿಯನ್ನು ಉಡುಪರಲ್ಲಿ ಧರ್ಮಸ್ಥಳದ ಮಂಜುನಾಥ ತುಂಬಿಸಲಿ ಎಂದು ಶುಭವನ್ನು ಹಾರೈಸಿದರು.

ಈ ಸಮಾರಂಭದ ಪ್ರಯುಕ್ತ ಏರ್ಪಡಿಸಿದ ಸಾಹಿತ್ಯ ಗೋಷ್ಠಿಯು ಎಂ ಜಿ.ಎಂ. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕು.ಶಿ. ಹರಿದಾಸಭಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು.ಆರಂಭದಲ್ಲಿ ಶ್ರೀ ಉಡುಪರು ಸಾಹಿತ್ಯ ಗೋಷ್ಠಿಯಲ್ಲಿ ಭಾಗವಹಿಸಲು ಬಂದಿದ್ದ ವಿದ್ವಾಂಸ ಸಾಹಿತಿಗಳೆಲ್ಲರ ಪರಿಚಯ ಮಾಡಿಸಿದರು ಪ್ರೊ। ಕು.ಶಿ ಹರಿದಾಸ ಭಟ್ಟರು ಸಾಹಿತ್ಯ ಗೋಷ್ಠಿಯಲ್ಲಿ ಭಾಗವಹಿಸಿದ ವಿದ್ವಾಂಸರ ವಿವಿಧ ವಿಚಾರಗಳ ಬಗ್ಗೆ ಸ್ಥೂಲವಾಗಿ ಮಾತನಾಡಿದರು. ಅವರು ಶ್ರೀ ಉಡುಪರ ಕಾರ್ಯ ಸಾಧನೆಯ ಬಗ್ಗೆ ಪ್ರಸ್ತಾಪಿಸಿದರು

ಮನೋರಂಜನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರು ವಹಿಸಿದ್ದರು. ಮನೋರಂಜನೆಯ ಅಂಗವಾಗಿ ರಾತ್ರಿ ಗಂಟೆ 9ಕ್ಕೆ ರೇಡಿಯೋ ಕಲಾವಿದರಾದ ಕಾಂಚನ ಶ್ರೀ ಸುಬ್ರಹ್ಮಣ್ಯ ಅಯ್ಯರ ಅವರ ಕರ್ನಾಟಕ ಸಂಗೀತ ಗೋಷ್ಠಿ ನಡೆಯಿತು.

'ಯುಗಪುರುಷ' ವಿಶೇಷ ಸಂಚಿಕೆ ಬಿಡುಗಡೆ

ಕಳೆದ ತಾ 5ರಂದು ಕಿನ್ನಿಗೋಳಿಯಲ್ಲಿ ಯುಗಪುರುಷ ರಜತೋತ್ಸವ ವಿಶೇಷ ಸಂಚಿಕೆಯನ್ನು ಪ್ರೊ। ಪರಮೇಶ್ವರ ಭಟ್ಟರು ಉದ್ಘಾಟಿಸಿದರು ಅವರು ಉಡುಪರ ಪತ್ರಿಕೋದ್ಯಮ ಸಾಹಸವನ್ನು ಪ್ರಶಂಸಿಸಿ ಕಟೀಲಿನ ಅಧಿದೈವ ಅವರಿಗೂ ಅವರ ಪತ್ರಿಕೆಗೂ ಚಿರಬಾಳ್ವೆ ನೀಡಲೆಂದು ಹಾರೈಸಿದರು.

ಕುವೆಂಪು, ಕಯ್ಯಾರ ಕಿಂಞಣ್ಣ ರೈ ಮತ್ತು ಜಿ.ಪಿ. ರಾಜರತ್ನಂ ಅವರ ಕವನಗಳನ್ನು ಶ್ರೀ ಇದಿನಬ್ಬರು ವಾಚಿಸಿದರು. ಬಳಿಕ ರೆ. ಫಾ। ಪಿ. ಎ ಡಿ'ಸೋಜಾರವರು ಸ್ವಸ್ತಿವಾಚನಗೈದರು. ಯುಗಪುರುಷ ಪ್ರಕಟಣಾಲಯದ 50ನೆಯ ಕೃತಿ 'ಜ್ಞಾನಯೋಗ–ಕರ್ಮಯೋಗ'ವನ್ನೂ ಶ್ರೀ ಮಧುಸೂದನ ಡಿ ಕುಶೆಯವರು ಉದ್ಘಾಟಿಸಿದರು ಬಳಿಕ ಶ್ರೀ ಜೆ ಬಿ.ಲಿಂಗಣ್ಣನವರು ಭಾಷಣ ಮಾಡಿದರು.

ರಾಷ್ಟ್ರಪ್ರಶಸ್ತಿ ವಿಜೇತ ಶ್ರೀ ಎಂ ವಾಸುದೇವರಾಯರು ಪತ್ರಿಕಾ ವ್ಯವಸಾಯದ ಕುರಿತು ಮಾತಾಡಿದ ಬಳಿಕ ಡಾ। ನಾಗಪ್ಪ ಆಳ್ವರು ಶ್ರೀ ಉಡುಪರನ್ನು ಅಭಿನಂದಿಸಿದರು.

ಅನಂತರ 'ಯುಗಪುರುಷ' ಉದಯಕ್ಕೆ ಕಾರಣರಾದ ಶ್ರೀಗಳಾದ ಬನ್ನಂಜೆ ರಾಮಾಚಾರ್ಯ, ಎಸ್ ಎಲ್ ನಾರಾಯಣಭಟ್, ಕಲಾಕಾರ ಆರ್ ಕೆ. ದೇವಾಡಿಗರ್ ಮತ್ತು ಆ ಗಾ ಕಿನ್ನಿಗೋಳಿ ಅವರುಗಳನ್ನು ಸನ್ಮಾನಿಸುವ ಸಮಾರಂಭವು ಶ್ರೀ ರಾಜಾರಾಮ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು ಸನ್ಮಾನಿತರು ಬಳಿಕ ಕೃತಜ್ಞತೆಗಳನ್ನರ್ಪಿಸಿದರು. ಅಧ್ಯಕ್ಷ ಶ್ರೀ ರಾಜಾರಾಮ ಮಲ್ಯರು ಪತ್ರಿಕೆಗೆ ಯಶಸ್ಸನ್ನು ಕೋರಿದರು.

ಡಾ। ಎಂ.ಸಿ ಶಾಸ್ತ್ರಿ ಅವರ ಅಧ್ಯಕ್ಷತೆಯಲ್ಲಿ ರಾತ್ರಿ ನಡೆದ ಮನರಂಜನಾ ಕಾರ್ಯಕ್ರಮದ ಅಂಗವಾಗಿ ಶ್ರೀ ಡಿ. ಸುಬ್ಬರಾಯರಿಂದ ಮುರಳೀವಾದನ, ಶ್ರೀ ಎಸ್. ಮಧ್ವೇಶ್ವರ ಶಿಷ್ಯೆಯರಿಂದ ಭರತನಾಟ್ಯ ಪ್ರದರ್ಶನಗಳು ಜರಗಿದವು. ಸಮಾರಂಭದ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ.ಕೆ. ಪೈಗಳು ಶ್ರೀ ಚಂದ್ರಕಾಂತ ಮಲ್ಯರು ಬರೆದ 'ತಂಪಕ್ಕಿ ತೀರಿತು' ಕಾದಂಬರಿಯನ್ನು ಬಿಡುಗಡೆ ಮಾಡಿದರು.

ಉಡುಪಿ ರೋಟರಿ ಸಭೆಯಲ್ಲಿ ಟಿ ಬಿ ಮುದ್ರೆ ಬಿಡುಗಡೆ

ಕಳೆದ ತಾ. 6ರಂದು ಮಣಿಪಾಲದ 'ವ್ಯಾಲಿ ವ್ಯೂ'ನಲ್ಲಿ ರೋಟರಿ ಅಧ್ಯಕ್ಷ ಡಾ। ಕೆ.ಮೋಹನದಾಸ ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಉಡುಪಿ ರೋಟರಿ ಕ್ಲಬ್‌ನ ಸಾಪ್ತಾಹಿಕ ಸಭೆಯಲ್ಲಿ "ಕ್ಷಯರೋಗ ಮುದ್ರೆ"ಗಳ ಮಾರಾಟವನ್ನು ಕೆ ಎಂ.ಸಿ. ಯ ಡೀನ್ ಡಾ। ಎ. ಕೃಷ್ಣರಾಯರು ಉದ್ಘಾಟಿಸಿದರು ಈ ಸಭೆಗೆ ಲಯನ್ಸ್ ಕ್ಲಬ್‌ನ ಸದಸ್ಯರೂ, ಇಂಡಿಯನ್ ಮೆಡಿಕಲ್ ಎಸೋಸಿಯೇಶನ್ನಿನ ಸದಸ್ಯರೂ ಆಮಂತ್ರಿಸಲ್ಪಟ್ಟಿದ್ದರು.

ಆರಂಭದಲ್ಲಿ ಡಾ। ಮೋಹನದಾಸ ಪೈಗಳು ಕಾರ್ಯಕ್ರಮದ ಸ್ಥೂಲ ಪರಿಚಯ ಮಾಡಿಕೊಡುತ್ತ ಕ್ಷಯರೋಗ ನಿವಾರಣಾಕಾರ್ಯಕ್ರಮದಲ್ಲಿ ಸೇವಾಸಂಘಗಳ ಸಂಘಟಿತ ಕಾರ್ಯಾಚರಣೆಯನ್ನು ಅಪೇಕ್ಷಿಸಿದರು.

ಡಾ। ಎ. ಕೃಷ್ಣರಾಯರು ಉದ್ಘಾಟಿಸಿದ ಬಳಿಕ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಉಡುಪಿ ಲಯನ್ಸ್ ಕ್ಲಬ್‌ನ ಅಧ್ಯಕ್ಷ ಹಾಗೂ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಆಸ್ಪತ್ರೆಯ ಖ್ಯಾತ ಶಸ್ತ್ರ ಚಿಕಿತ್ಸಾ ತಜ್ಞ ಡಾ।ಎ ಎ ಸ್ ನಾರಾಯಣರ ಪರಿಚಯವನ್ನು ಡಾ॥ ಅಲೆಕ್ಸಾಂಡರ್ ಮಾಡಿ ಕೊಟ್ಟರು.

ಡಾ।ಅಚ್ಯುತರಾಯರು ವಂದನಾರ್ಪಣೆ ಗೈದರು.

ಪುತ್ತೂರಿನಲ್ಲಿ ಎನ್. ಜಿ. ಓ. ಕಟ್ಟಡ ಉದ್ಘಾಟನೆ

ಪುತ್ತೂರಿನಲ್ಲಿ ಎನ್.ಜಿ ಓ. ನೌಕರರು ನಿರ್ಮಿಸಿದ ವಿಶ್ರಾಂತಿ ಗೃಹವನ್ನು ಮಾಜಿ ಮಂತ್ರಿ ಶ್ರೀ ವಿಟ್ಠಲದಾಸ ಶೆಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ತಾ 2ರಂದು ಉದ್ಘಾಟಿಸಿದರು. ಆರಂಭದಲ್ಲಿ ಎನ್ ಜಿ.ಓ. ಸಂಘದ ಅಧ್ಯಕ್ಷ ಶ್ರೀ ಎಸ್.ಬಿ ನಾರಾಯಣರವರು ಸ್ವಾಗತಿಸಿದರು. ಪುತ್ತೂರುತಾಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಬಿ ಸಂಕಪ್ಪ ರೈಗಳು ಕಟ್ಟಡಕ್ಕಾಗಿ ನೆರವಿತ್ತ ಸಾರ್ವಜನಿಕರ ಔದಾರ್ಯವನ್ನು ಪ್ರಶಂಸಿಸಿದರು ರಾಜ್ಯ ಎನ್.ಜಿ.ಓ ಸಂಘದ ಅಧ್ಯಕ್ಷ ಶ್ರೀ ಶ್ರೀಪತಿಯವರು ಎನ್. ಜಿ ಓ ಗಳ ಸಂಕಷ್ಟವನ್ನು ನಿವರಿಸಿ ಸಮಾರಂಭದ ಸಂಸ್ಮರಣ ಸಂಚಿಕೆಯನ್ನು ಬಿಡುಗಡೆಮಾಡಿದರು. ಶ್ರೀ ಕೆ. ಕೃಷ್ಣಯ್ಯನವರು ಕಟ್ಟಡ ನಿರ್ಮಾಣ ಕಾರ್ಯದ ವರದಿಯನ್ನೋದಿದರು.

ಶ್ರೀ ವೀರೇಂದ್ರ ಹೆಗ್ಗಡೆಯವರು ಮಾತಾಡುತ್ತಾ ನೌಕರರ ಉನ್ನತಿಗಾಗಿ ಸಾರ್ವಜನಿಕರು ಪ್ರಮಿಸಬೇಕೆಂದು ನುಡಿದರು. ಡಾ ಶಿವರಾಮ ಕಾರಂತರು ಮಾತಾಡಿದ ಬಳಿಕ ಹಿತಚಿಂತಕರ ಪರವಾಗಿ ವಿಧಾನ ಪರಿಷತ್ತಿನ ಸದಸ್ಯ ಶ್ರೀ ಕೆ ಜತ್ತಪ್ಪ ರೈ, ರೇವಣ ಸಿದ್ದಯ್ಯ ಮತ್ತು ಬಿ ಎಸ್ ಎ ಕುಮಾರಾಸ್ವಾಮಿರವರು ಎನ್ ಜಿ ಓ ಗಳಿಗೆ ಶ್ರೇಯಸ್ಸನ್ನು ಕೋರಿ ಮಾತಾಡಿದರು.

ಶ್ರೀ ವಿಠಲದಾಸ ಶೆಟ್ಟರು ತಮ್ಮ ಭಾಷಣದಲ್ಲಿ, ಸರಕಾರಿ ನೌಕರರು ತಮ್ಮ ಸ್ವಂತ ಸಂಘ ಸಂಸ್ಥೆಗಳನ್ನು ನಿರ್ಮಿಸಿಕೊಂಡು ಅಭಿಪ್ರಾಯ ವ್ಯಕ್ತಪಡಿಸಬಲ್ಲ ಸ್ವಾತಂತ್ರ್ಯ ಪಡೆದಿರುವುದರಿಂದ ಹಿಂದಿಗಿಂತ ಉತ್ತಮ ಸ್ಥಿತಿಯಲ್ಲಿರುವರೆಂದು ತಿಳಿಸಿ ಎನ್.ಜಿ ಓ ಗಳು ತಮ್ಮ ಪರಿಮಿತಿಯೊಳಗೆ ಕರ್ತವ್ಯ ನಿರ್ವಹಿಸಬೇಕೆಂದು ಅವರನ್ನು ಕೇಳಿಕೊಂಡರು ಅಂತ್ಯದಲ್ಲಿ ಶ್ರೀ ಸೀತಾರಾಮ ಕುಲಾಲರು ಧನ್ಯವಾದ ಅರ್ಪಿಸಿದರು.

●●

ದೀಪಾವಳಿ ವಿಶೇಷ ಸಂಚಿಕೆ



ಜಾಹೀರಾತಿಗೆ ಉತ್ತಮ ಮಾಧ್ಯಮ

ನವಯುಗ

ದೀಪಾವಳಿ ವಿಶೇಷ ಸಂಚಿಕೆಯು

ತಾ. 19–10–1971ರಂದು

ವಿಶೇಷ ಲೇಖನಗಳೊಂದಿಗೆ

ಆಕರ್ಷಣೀಯವಾಗಿ ಪ್ರಕಟವಾಗುವುದು.

ಚಿಕ್ಕ–ಚೊಕ್ಕ ಲೇಖನ, ಕವನಗಳಿಗೆ ಸ್ವಾಗತ.

ನಿಮ್ಮ ಬಾಕಿ ಚಂದಾ ಹಣವನ್ನು ಕಳುಹಿಸಿರಿ

ಪೂರ್ವ ಪಾಕಿಸ್ತಾನಿ ಮಕ್ಕಳಿಗೆ

ಯೂನಿಸೆಫ್ ಮೂಲಕ ಅಮೆರಿಕದ ನೆರವು

ಪೂರ್ವ ಪಾಕಿಸ್ತಾನದ ನೈಸರ್ಗಿಕ ಮತ್ತು ಮಾನವಕೃತ ಅವಘಡಗಳ ದೆಸೆಯಿಂದ ದುಸ್ಥಿತಿಗೀಡಾದ ಅತ್ಯಂತ ಹೃದಯವಿದ್ರಾವಕ ಸಂತ್ರಸ್ತರೆಂದರೆ ಲಕ್ಷಾಂತರ ಮಕ್ಕಳು.

ಪೂರ್ವ ಪಾಕಿಸ್ತಾನದಲ್ಲಿ ಬಡತನ ಮತ್ತು ಹಸಿವು ತುಂಬಿದ ಜನಭರಿತ ಪ್ರದೇಶಗಳಲ್ಲೂ ಭಾರತದಲ್ಲಿನ ನಿರಾಶ್ರಿತ ಶಿಬಿರಗಳಲ್ಲೂ ಇರುವ ಈ ಮಕ್ಕಳ ಆರೋಗ್ಯ ಮತ್ತು ಪ್ರಾಣರಕ್ಷಣೆಗೆ ಅಗತ್ಯವಾದ ಆಹಾರ ಒದಗಿಸಲು ಭಾರೀ ಪ್ರಮಾಣದ ವಿಶ್ವಸಂಸ್ಥೆ ಕಾರ್ಯಕ್ರಮವೊಂದಕ್ಕೆ ಅಮೆರಿಕ ಗಣನೀಯ ನೆರವನ್ನು ನೀಡುತ್ತಿದೆ.

ಭಾರತ, ಪೂರ್ವ ಪಾಕಿಸ್ತಾನಗಳಲ್ಲಿನ ಸುಮಾರು 35 ಲಕ್ಷ ಮಕ್ಕಳಿಗೆ 200 ದಿನಗಳಿಗೆ ಸಾಕಾಗುವಷ್ಟು ಹೆಚ್ಚು ಪ್ರೊಟೀನ್ ಅಂಶವುಳ್ಳ ಆಹಾರದ ಸರಬರಾಜು ಕಳೆದ ಜೂನ್‌ನಲ್ಲಿ ಆರಂಭವಾಯಿತು. ಮುಂದಿನ ವರ್ಷದಲ್ಲೂ ಈ ಸರಬರಾಜು ಮುಂದುವರಿಯುವುದು.

ಅಮೆರಿಕದ ಮಕ್ಕಳ ಆಹಾರ ನೀಡಿಕೆ ಕಾರ್ಯಕ್ರಮವೊಂದರಲ್ಲಿ ಕಾಳು—ಸೋಯಾ—ಹಾಲು ಮಿಶ್ರಣ ಮತ್ತು ಗೋಧಿ—ಸೋಯಾ ಮಿಶ್ರಣಗಳನ್ನು ಹಂಚಲಾಗುತ್ತಿದೆ. ಇಂಥ 2 ಕೋಟಿ ಡಾಲರು ಮೌಲ್ಯದ 155 ದಶಲಕ್ಷ ಪೌಂಡ್ ಆಹಾರವನ್ನು ಅಮೆರಿಕದ ಪರವಾಗಿ ವಿಶ್ವಸಂಸ್ಥೆ ಹಂಚುತ್ತಿದೆ.

ಇವರಲ್ಲಿ ಮೊದಲ 67 ದಶಲಕ್ಷ ಪೌಂಡುಗಳಷ್ಟು ವಿಶೇಷ ಆಹಾರ ಜರೂರಾಗಿ ಸರಬರಾಜಾಗುತ್ತಿದೆಯೆಂದು ಈ ಕಾರ್ಯಕ್ರಮವನ್ನು ನಿರ್ವಹಿಸುತ್ತಿರುವ ಅಮೆರಿಕದ ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಯ (ಎ. ಐ. ಡಿ.) ಅಧಿಕಾರಿಯೂ, ಪೂರ್ವ ಪಾಕಿಸ್ತಾನಕ್ಕೆ ಅಮೆರಿಕದ ಪರಿಹಾರ ನೆರವಿನ ಸಮನ್ವಯಾಧಿಕಾರಿಯೂ ಆದ ಮಾರಿಸ್ ಜೆ. ವಿಲಿಯಂಸ್ ಹೇಳಿದರು. ವಿಶ್ವಸಂಸ್ಥೆ ಮಕ್ಕಳ ನಿಧಿ ಸಂಸ್ಥೆ (ಯೂನಿಸೆಫ್), ಪೂರ್ವಪಾಕಿಸ್ತಾನದ ಚಿತ್ತಗಾಂಗ್ ಮತ್ತು ಢಾಕ್ಕಾಗಳಲ್ಲೂ, ಭಾರತದ ಕಲ್ಕತ್ತಾದಲ್ಲೂ ಪೂರ್ವ ಪಾಕಿಸ್ತಾನಿ ಮಕ್ಕಳಿಗೆ ಈ ಆಹಾರ ಹಂಚಿಕೆ ಕಾರ್ಯವನ್ನು ನೋಡಿಕೊಳ್ಳುತ್ತಿದೆ.

'ಯೂನಿಸೆಫ್'ನ ಮಕ್ಕಳ ಆಹಾರ ಹಂಚಿಕೆ ಕಾರ್ಯಕ್ರಮದ ಪ್ರಕಾರ ಪ್ರತಿಯೊಂದು ಮಗುವಿಗೆ ದಿನಕ್ಕೆ ಮೂರೂವರೆ ಔನ್ಸ್‌ಗಳಷ್ಟು ಅಮೆರಿಕನ್ ಸಂಸ್ಕರಿತ ಆಹಾರ ಮಿಶ್ರಣ ದೊರೆಯುತ್ತಿದೆ. ಒಂದು ದಿನಕ್ಕೆ ಸಾಕಾಗುವಷ್ಟು ಸತ್ವಾಂಶಗಳು ಈ ಮಿಶ್ರಣದಲ್ಲಿವೆ. ಜತೆಗೆ ಶಾಲೆಗೆ ಅಥವಾ ಹಂಚಿಕೆ ಕೇಂದ್ರಕ್ಕೆ ಬರಲು ಸಾಧ್ಯವಾಗದ ಇತರ ಮಕ್ಕಳಿಗಾಗಿ ಮನೆಗೊಯ್ಯಲು ಪ್ರತಿ ಮಗುವಿಗೆ ಇದರ ಮೂರರಷ್ಟು ಆಹಾರ ಕೊಡಲಾಗುತ್ತಿದೆ.

ಪೂರ್ವ ಪಾಕಿಸ್ತಾನ ಮತ್ತು ಭಾರತದಲ್ಲಿ ಹಂಚಿಕೆಗಾಗಿ ರವಾನಿಸಲು ಕೇಳಿರುವ ಬೇರೆ 38 ದಶಲಕ್ಷ ಪೌಂಡ್ ಆಹಾರ ಮಿಶ್ರಣದಲ್ಲಿ ಸಕ್ಕರೆಯನ್ನೂ ಸೇರಿಸಲಾಗುವುದು. ಇದಕ್ಕೆ 13 ಡಾಲರು ಲಕ್ಷ ಹೆಚ್ಚಿಗೆ ಖರ್ಚಾಗುವುದು. ಈ ಆಹಾರದಿಂದ ಮಕ್ಕಳಿಗೆ ಹೆಚ್ಚಿನ ಪುಷ್ಟಿ ದೊರೆಯುವುದು.

ಪೂರ್ವ ಪಾಕಿಸ್ತಾನವು ಹಲವು ಅನಾಹುತಗಳ ಸಮಸ್ಯೆಯಾಗಿವೆಯೆಂದು ಅಲ್ಲಿಗೆ ಭೇಟಿಯಿತ್ತು ಪರಿಶೀಲಿಸಿ ಬಂದ ವಿಲಿಯಂಸ್ ಹೇಳಿದರು. ಅಧಿಕ ಜನಸಂಖ್ಯೆಯ ಆ ಪ್ರದೇಶ ಚಂಡಮಾರುತ ಮತ್ತು ಪ್ರವಾಹಗಳಿಂದ ಬಹಳ ನೊಂದಿದೆಯೆಂದೂ, ಕಳೆದ ನವೆಂಬರಿನಲ್ಲಿ ಚಂಡಮಾರುತದಿಂದ 3,00,000 ಜನ ಸತ್ತು 20 ಲಕ್ಷ ಜನರಿಗೆ ನೆಲೆಯಿಲ್ಲವಾಗಿ 3 ಲಕ್ಷ ಟನ್ ಬತ್ತದ ಬೆಳೆ ಹಾಳಾಯಿತೆಂದೂ ಅವರು ನುಡಿದರು.

"ಅನಂತರ ಸಂಭವಿಸಿದ ಕ್ಷೋಭೆಯಿಂದ ಲಕ್ಷಾಂತರ ಪೂರ್ವ ಪಾಕಿಸ್ತಾನಿಗಳು ಭಾರತಕ್ಕೆ ವಲಸೆ ಹೋಗಿ ಆಶ್ರಯ ಪಡೆದರು. ಪೂರ್ವ ಪಾಕಿಸ್ತಾನದಲ್ಲಿ ಉಳಿದಿರುವ ಜನರಿಗೆ ಈಗಿನಿಂದ ಬರುವ ಕೊಯ್ಲುಗಾಲವಾದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ಉಗ್ರ ಕ್ಷಾಮ ಎದುರಾಗಬಹುದು. ಇದನ್ನು ತಪ್ಪಿಸಬೇಕು" ಎಂದು ಅವರು ವಿವರಿಸಿದರು.

ಪಾಕಿಸ್ತಾನ ಮತ್ತು ಭಾರತದಲ್ಲಿ ಸಂತ್ರಸ್ತ ಜನರ ನೆರವಿಗೆ ವಿಶ್ವಸಂಸ್ಥೆಯ ನೇತೃತ್ವದಲ್ಲಿ ನಡೆಯುತ್ತಿರುವ ಪರಿಹಾರ ಕಾರ್ಯಕ್ರಮಕ್ಕೆ ಬೆಂಬಲವಾಗಿ ಅಮೆರಿಕವು ಭಾರತದಲ್ಲಿನ ಪೂರ್ವ ಪಾಕಿಸ್ತಾನಿ ನಿರಾಶ್ರಿತರಿಗಾಗಿ 8 ಕೋಟಿ 32 ಲಕ್ಷ ಡಾಲರುಗಳಷ್ಟೂ, ಪೂರ್ವ ಪಾಕಿಸ್ತಾನದಲ್ಲಿನ ಜನತೆಗಾಗಿ 15 ಕೋಟಿ, 46 ಲಕ್ಷ ಡಾಲರುಗಳಷ್ಟೂ ನೆರವನ್ನಿತ್ತಿದೆ.

● ●

ಕಾಯಕದಲ್ಲಿ ಮೇಲು-ಕೀಳೆಂಬುದಿಲ್ಲ; ಜನರೇ ಅದಕ್ಕೆ ಆ ಸ್ವರೂಪವನ್ನು ಕೊಡುತ್ತಾರೆ.

ನವಯುಗದ

ಹೊಸ ಚಂದಾ ದರ

ಸಪ್ಟೆಂಬರದಿಂದ ರೂ. 12

ಪತ್ರಿಕೆಗೆ ಬಳಸುವ ಕಾಗದದ ಬೆಲೆ, ನಾಗಾಟದ ದರ ಏರಿಕೆಯಿಂದಾಗಿಯೂ ಮುದ್ರಣಾದಿಗಳ ವೆಚ್ಚದ ಹೆಚ್ಚಳದಿಂದಾಗಿಯೂ ನವಯುಗದ ವಾರ್ಷಿಕ ಚಂದಾ ದರವನ್ನು ರೂ. 10 ರಿಂದ ರೂ. 12ಕ್ಕೆ ಅನಿವಾರ್ಯವಾಗಿ ಏರಿಸಬೇಕಾಗಿ ಬಂದಿದೆ. ಈ ಹೊಸ ಚಂದಾ ದರವು ಹೊಸ ಸಂಪುಟದಿಂದ ಅಂದರೆ ಇದೇ ಸಪ್ಟೆಂಬರದಿಂದ ಅನ್ವಯವಾಗುವುದು. ಚಂದಾದಾರರು ದಯಮಾಡಿ ಗಮನಿಸಿ, ಅದರಂತೆ ಚಂದಾ ಕಳಿಸಿ ಸಹಕರಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

—ಮೆನೇಜರ್

ತುಳುಕೂಟ

ತುಳುಕೂಟದ ಅಧ್ಯಕ್ಷ ಶ್ರೀ ಎಸ್. ಆರ್. ಹೆಗ್ಡೆಯವರು ಇತ್ತೀಚೆಗೆ ಪತ್ರಕರ್ತರೊಂದಿಗೆ ಮಾತಾಡುತ್ತಾ "ತುಳುಕೂಟ"ವು ತುಳುಲಿಪಿ, ಸಾಹಿತ್ಯ ಮತ್ತು ನಾಟಕಾದಿಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ 1970ರ ಪ್ರಾರಂಭದಲ್ಲಿ ಪ್ರಾರಂಭಿಸಿದ ಕೇವಲ ಸಾಂಸ್ಕೃತಿಕ ಸಂಘವಾಗಿದೆಯೆಂದು ತಿಳಿಸಿದರು. 1970 ಮೇ ತಿಂಗಳಲ್ಲಿ ನಗರದ ಪುರಭವನದಲ್ಲಿ ತುಳುಕೂಟದವರು ಏರ್ಪಡಿಸಿದ್ದ ಸಮ್ಮೇಳನವೊಂದರಲ್ಲಿ ಪ್ರಸಿದ್ಧ ತುಳು ಲೇಖಕರು ಮತ್ತು ಇತರ ಖ್ಯಾತ ಮಹನೀಯರು ಮಾತನಾಡಿದ್ದರೆಂದರು.

ಪ್ರಥಮ ಹೆಜ್ಜೆಯಾಗಿ ನಾವು ಅಖಿಲಭಾರತ ಆಕಾಶವಾಣಿಯಲ್ಲಿ ತುಳು ಕಾರ್ಯ ಕ್ರಮಗಳಿಗೆ ಅಸ್ಪದ ಕೊಡಬೇಕೆಂದು ಭಾರತ ಸರಕಾರವನ್ನು ವಿನಂತಿಸಿಕೊಂಡದ್ದನ್ನು ತಿಳಿಸಿದರು.

ತುಳುಲಿಪಿ, ಸಾಹಿತ್ಯ ಮತ್ತು ನಾಟಕಗಳಿಗೆ ಸರ್ವವಿಧದ ಪ್ರೋತ್ಸಾಹ ಈಯುವಂತೆ ನಾವು ರಾಜ್ಯಸರಕಾರವನ್ನು ವಿನಂತಿಸಿದ್ದು, ಈ ವಿಚಾರದಲ್ಲಿ ಅದು ಮುಂದೆ ಬಂದಿದ್ದು ತುಳುಭಾಷೆ ಮತ್ತು ಸಾಹಿತ್ಯದ ಕುರಿತು ಸಂಶೋಧನೆ ನಡೆಸುವಂತೆ ಮಂಗಳೂರು ಸ್ನಾತಕೋತ್ತರ ಕೇಂದ್ರಕ್ಕೆ ಪತ್ರ ಬರೆದಿದೆಯೆಂದು ತಿಳಿಸಲು ಸಂತೋಷಪಡುವುದಾಗಿ ಶ್ರೀ ಹೆಗ್ಡೆ ತಿಳಿಸಿದರು. ಈ ಕೂಟವು "ತುಳುಕೂಟ"ವೆಂಬ ಹೆಸರಿನ ಮಾಸಪತ್ರಿಕೆಯನ್ನು ಪ್ರಾರಂಭಿಸಿದ್ದು ಅದಕ್ಕೆ ತುಳು ಮಾತನಾಡುವ ಜನರಿಂದ ಉತ್ತಮ ತರದ ಪ್ರೋತ್ಸಾಹ ದೊರೆಯುತ್ತಿದೆಯೆಂದರು. ಈ ಎಲ್ಲಾ ಕಾರ್ಯಗಳಿಗೆ ಹೇರಳ ಹಣದ ಅವಶ್ಯಕತೆಯಿದ್ದು ಸಂಸ್ಥೆಯ ಆರ್ಥಿಕ ಶಕ್ತಿಯನ್ನು ಬಲಗೊಳಿಸಲು ಇದೇ ತಾ. 16 ಮತ್ತು 17ರಂದು ಮಂಗಳೂರಿನ ಪುರಭವನದಲ್ಲಿ ಮಂಗಳೂರು ಗಣೇಶ ನಾಟಕ ಸಭಾದವರ "ಬಾಡಾಯಿದ್ದ ಬಂಗಾರ್" ಎಂಬ ತುಳು ನಾಟಕ ಪ್ರದರ್ಶನ ಏರ್ಪಡಿಸಿದ್ದು ಈ ಕಾರ್ಯಕ್ರಮಕ್ಕೆ ಸಾರ್ವಜನಿಕರು ಸಹಕರಿಸಬೇಕಾಗಿ ಕೇಳಿಕೊಂಡರು.

ಶ್ರೀಗಳಾದ ರಮಾನಂದ ಚೂರ್ಯ ಮತ್ತು ಶ್ರೀ ಕೆ. ಎನ್. ಟೈಲರ್‌ರವರು ನಾಟಕದ ಕುರಿತು ವಿವರಣೆಗಳನ್ನು ನೀಡಿದರು. ಅಂತ್ಯದಲ್ಲಿ ತುಳುಕೂಟದ ಉಪಾಧ್ಯಕ್ಷ ಶ್ರೀ ಎಸ್.ಕೆ. ಅಮಿನ್‌ರವರು ಧನ್ಯವಾದ ಅರ್ಪಿಸಿದರು.

ಉಡುಪಿಯಲ್ಲಿ ಅಂಚೆ–ತಂತಿ ಸಪ್ತಾಹ

ತಾ. 8—10—71ರಂದು ಅಂಚೆ–ತಂತಿ ಸಪ್ತಾಹವು ಉಡುಪಿ ಪ್ರಧಾನ ಅಂಚೆ ಮತ್ತು ತಂತಿ ಕಚೇರಿಯಲ್ಲಿ, ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ಪ್ರಿನ್ಸಿಪಾಲ್ ಡಾ। ಪಿ. ಗುರುರಾಜ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ದ. ಕ. ಜಿಲ್ಲಾ ಅಂಚೆ ಮತ್ತು ತಂತಿ ಕಚೇರಿಗಳ ಸುಪರಿಂಟೆಂಡೆಂಟ್ ಕು। ವಿಮಲಾ ಮೆನನ್ ಸ್ವಾಗತಿಸಿದರು. ಸಭಿಕರ ಪರವಾಗಿ ಶ್ರೀ ಬಿ. ವಿಠಲ ಶೆಟ್ಟಿಗಾರ್ ಮತ್ತು ಶ್ರೀ ಬಿ. ರಾಮರಾಯ ಶೆಟ್ಟರು ಭಾಷಣ ಮಾಡಿ ಇಲಾಖೆಯ ಕಾರ್ಯದಕ್ಷತೆಯನ್ನು ಕೊಂಡಾಡಿದರು ಮುಖ್ಯ ಅತಿಥಿ ಶ್ರೀ ಬಿ. ಯೋಗೀಶ ಹೊಳ್ಳರು ಮಾತನಾಡಿ 24 ತಾಸೂ ಕಾರ್ಯನಿರತರಾಗಿರುವ ಈ ಇಲಾಖೆಯ ಸೇವಾಕಾರ್ಯವನ್ನು ಶ್ಲಾಘಿಸಿದರು

ಅಧ್ಯಕ್ಷ ಡಾ। ಭಟ್ಟರು ಮಾತನಾಡುತ್ತಾ, ವಾರ್ತಾವಾಹಕವಾದ ಈ ಇಲಾಖೆ ದೇಹದ ನಾಡಿಯಂತೆ ಪ್ರಾಮುಖ್ಯವಾದುದು. ಕಾರ್ಯ ನಿರ್ವಹಣೆಯ ಜತೆಗೆ ಸಾರ್ವಜನಿಕ ಸೇವೆಯನ್ನು ನಿರ್ವಹಿಸುತ್ತಿರುವ ಈ ಇಲಾಖೆಗೆ ಸಾರ್ವಜನಿಕರ ಸಹಕಾರ, ತ್ಯಾಗ ಮತ್ತು ಜವಾಬ್ದಾರಿಯೂ ಮುಖ್ಯ ಎಂದರು.

ಅಂತ್ಯದಲ್ಲಿ ಟೆಲಿಫೋನ್ ಇಲಾಖಾಧಿಕಾರಿ ಶ್ರೀ ಅಲ್ವಿನ್ ಪಿರೇರರು ಧನ್ಯವಾದಗಳನ್ನರ್ಪಿಸಿದರು.

ಪೂರ್ಣಪ್ರಜ್ಞ ಕಾಲೇಜಿನ ಲೈಬ್ರರಿ ಕಟ್ಟಡಗಳ ಉದ್ಘಾಟನೆ

ಪೂರ್ಣಪ್ರಜ್ಞ ಕಾಲೇಜಿನ ಪಠಮಾನೋತ್ಸವ ಸಮಿತಿಯ ಆಶ್ರಯದಲ್ಲಿ ನಿರ್ಮಿಸಲ್ಪಟ್ಟ ನೂತನ ಲೈಬ್ರರಿ ಮತ್ತು ವಾಚನಾಲಯ ಕಟ್ಟಡಗಳ ಉದ್ಘಾಟನಾ ಸಮಾರಂಭವು ತಾ. 8ರಂದು ಸಂಸತ್ ಸದಸ್ಯ ಶ್ರೀ ಪಿ. ರಂಗನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆಯವರಿಂದ ನೆರವೇರಿತು.

ಆರಂಭದಲ್ಲಿ ಸಮಿತಿಯ ಅಧ್ಯಕ್ಷ ಶ್ರೀ ಪಿ. ವಿ. ಆಚಾರ್ಯರು ಸ್ವಾಗತಿಸಿದರು. ಪ್ರೊ। ಪಿ. ರಾಧಾಕೃಷ್ಣಾಚಾರ್ಯರು ಸಂದೇಶಗಳನ್ನೋದಿದರು. ಸಮಿತಿಯ ಕಾರ್ಯದರ್ಶಿ ಪ್ರೊ। ಕೆ. ಸದಾಶಿವರಾಯರು ವರದಿವಾಚನಗೈದರು.

ಶ್ರೀ ವೀರೇಂದ್ರ ಹೆಗ್ಗಡೆಯವರು ಉದ್ಘಾಟಿಸಿ ವಿದ್ಯಾರ್ಥಿಗಳು ಲೈಬ್ರರಿಯ ಸಂಪೂರ್ಣ ಪ್ರಯೋಜನ ಪಡೆಯಲೆಂದು ಹಾರೈಸಿದರು. ಅದಮಾರು ಮಠದ ಶ್ರೀ ಶ್ರೀ ವಿಭುದೇಶ ತೀರ್ಥ ಶ್ರೀ ಪಾದಂಗಳವರು ಜ್ಞಾನ ಜ್ಯೋತಿ ಮಾನವನನ್ನು ಧರ್ಮದ ಕಡೆಗೆ ಒಯ್ಯಬೇಕೆಂದರು. ಕಾಲೇಜಿನ ನೂತನ ಪ್ರಿನ್ಸಿಪಾಲ್ ಡಾ। ಪಿ. ನಾರಾಯಣ ರಾವ್‌ರವರು ಲೈಬ್ರರಿಯ ಬೀಗದ ಕೈಗಳನ್ನು ಸ್ವೀಕರಿಸಿದರು.

ಕಾಲೇಜು ಯೂನಿಯನ್ ಅಧ್ಯಕ್ಷ ಶ್ರೀ ರಾಧಾಕೃಷ್ಣ ಶೆಟ್ಟಿಯವರು ಬಾಂಗ್ಲಾ ಪರಿಹಾರ ನಿಧಿಗಾಗಿ ಸಂಗ್ರಹಿಸಿದ ರೂ. 1700—80ನ್ನು ಪ್ರಧಾನಿಗೆ ಒಪ್ಪಿಸಲು ಶ್ರೀ ರಂಗನಾಥ ಶೆಣೈಯವರ ವಶಕ್ಕೆ ನೀಡಿದರು. ಅಂತ್ಯದಲ್ಲಿ ಶ್ರೀ ಯು ಪರಶುರಾಮ ನಾಯಕರು ವಂದನೆಗಳನ್ನರ್ಪಿಸಿದರು.

ಯುಗಪುರುಷ ರಜತೋತ್ಸವ ಸಮಾರೋಪ

'ಯುಗಪುರುಷ' ರಜತೋತ್ಸವ ಸಮಾರೋಪ ಸಮಾರಂಭವು ತಾ. 6ರಂದು ಜರಗಿತು. ಕಿನ್ನಿಗೋಳಿಯ ಪೊಂಪೈ ಹಾಯರ್ ಸೆಕೆಂಡರಿ ಶಾಲೆಯ ಮುಖ್ಯೋಪಾಧ್ಯಾಯ ರೆ। ಫಾ। ಎಲೋಸಿಯಸ್ ಅಲ್ವಾನ್ಸರು ಮುಂಜಾನೆ ಧ್ವಜವಂದನೆ ನೆರವೇರಿಸಿ "ಸದಾಶಿವ ಮಂಟಪ"ದಲ್ಲಿ ಕನ್ನಡ ಗೀತಾವಾಚನ ಸ್ಪರ್ಧೆಯನ್ನು ಉದ್ಘಾಟಿಸಿದರು.

ಸಂಜೆ "ಸದಾಶಿವ ಮಂಟಪ"ದಲ್ಲಿ ಕವಿ ಕಯ್ಯಾರ ಕಿಂಞ್ಞಣ್ಣ ರೈಗಳ ಅಧ್ಯಕ್ಷತೆಯಲ್ಲಿ ಕವಿಸಮ್ಮೇಳನ ಜರಗಿತು. ರಜತೋತ್ಸವ ಸಮಿತಿಯ ಅಧ್ಯಕ್ಷ ಶ್ರೀ ಕೆ. ಎನ್. ಹುಲ್ಯರು ಸ್ವಾಗತಿಸಿದರು. ಸಂಪಾದಕ ಶ್ರೀ ಕೊ.ಅ.ಉಡುಪರು ಪರಿಚಯ ಭಾಷಣಮಾಡಿದರು. ಕವಿ ಕಯ್ಯಾರರು ಮಾತಾಡುತ್ತಾ, ಉಡುಪರು ಈ ತನಕ ಯುಗಪುರುಷಕ್ಕಾಗಿ ದುಡಿದಿದ್ದಾರೆ. ಅವರ ಪರಿಶ್ರಮಕ್ಕೆ ಸಮಾಜ ಸಾಕಷ್ಟು ಬೆಂಬಲ ಕೊಡಬೇಕು. ಅವರ ಸಾಹಿತ್ಯ ಮತ್ತು ಪತ್ರಿಕಾ ಸೇವೆ ಜನಶಕ್ತಿ ಮತ್ತು ದೈವೀಶಕ್ತಿಯಿಂದ ಮುನ್ನಡೆಯಲಿ ಎಂದು ಹಾರೈಸಿದರು. ಶ್ರೀ ಉಡುಪರು ವಂದನೆಗಳನ್ನರ್ಪಿಸಿದ ಬಳಿಕ ಶ್ರೀ ನಾರಾಯಣ ಸ್ವಾಮಿ ಮತ್ತು ಬಳಗದವರಿಂದ ನಾಗಸ್ವರ ವಾದನ ಗೋಷ್ಠಿ ನಡೆಯಿತು.

ರಾತ್ರಿ ಶ್ರೀ ರಾಘವೇಂದ್ರ ಸ್ವಾಮಿಗಳ ತ್ರಿಶತಮಾನೋತ್ಸವ ಸಮಾರಂಭವು ಪೇಜಾವರ ಶ್ರೀಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಬಳಿಕ ಶ್ರೀ ಗುರುವೇದವ್ಯಾಸದಾಸರಿಂದ "ಗುರುರಾಘವೇಂದ್ರ ಚರಿತ್ರೆ"ಯ ಹರಿಕಥೆ, ಕಿನ್ನಿಗೋಳಿಯ "ಮಿತ್ರವೃಂದ"ದವರಿಂದ "ಯಾರ ಹೆಂಡತಿ...? "ಎಂಬ ನಗೆನಾಟಕ ನಡೆಯಿತು.

ಬಿಕೊಜ್ಯೋ ಉದ್ಘಾಟನೆ

ಭಾರತ ಇಂಡಸ್ಟ್ರಿಯಲ್ ಎಂಡ್ ಕೇನಿಂಗ್ ಕೋ. ಲಿ ಕಾಪು, ಅವರ ನೂತನ ತಯಾರಿಕೆಯಾದ ಬಿಕೊಜ್ಯೋ ಎನ್ನುವ ಹಣ್ಣು ರಸದ ಪಾನೀಯವನ್ನು ತಾ. 11ನೇ ಸಂಜೆ ಮಂಗಳೂರಿನ ಮೋತಿಮಹಾಲಿನಲ್ಲಿ ಡಾ। ಎಂ.ಡಿ. ಅಡಪ್ಪರ ಅಧ್ಯಕ್ಷತೆಯಲ್ಲಿ ಜರಗಿದ ಸಮಾರಂಭದಲ್ಲಿ ಜಿಲ್ಲಾಧಿಕಾರಿ ಶ್ರೀ ಎಸ್. ಎ ಮುತ್ತಣ್ಣನವರು ಉದ್ಘಾಟಿಸಿದರು. ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ.ಕೆ.ಪೈಯವರು ಮುಖ್ಯ ಅತಿಥಿಗಳಾಗಿ ಭಾಷಣವಿತ್ತರು. ಆರಂಭದಲ್ಲಿ ಮೆನೇಜಿಂಗ್ ಡೈರೆಕ್ಟರ್ ಶ್ರೀ ಕೆ. ಗೋವಿಂದ ಶೆಟ್ಟರು ಸ್ವಾಗತಿಸಿದರು. ಅಂತ್ಯದಲ್ಲಿ ಶ್ರೀ ಕೆ.ಸಿ. ಶೆಟ್ಟರು ಧನ್ಯವಾದ ಸಮರ್ಪಿಸಿದರು.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟರುಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

'ಗಾಂಧಿಜಿಯ ಕೊಲೆ'

(ಎರಡನೇ ಪುಟದಿಂದ)

ತ್ತಿದಾಗ ರಾತ್ರಿ 10-30 ಆಗಿತ್ತು. ದೀಕ್ಷಿತಜೀ ಆಗಲೇ ನಿದ್ದೆಹೋಗಿದ್ದರು. ಅವರನ್ನು ಎಬ್ಬಿಸುವ ಗೋಜಿಗೆ ಯಾರೂ ಹೋಗಲಿಲ್ಲ. ಕೆಲಸದವನ ಕೂಡೆ, ಜತನದಿಂದ ಚೀಲವನ್ನು ಇಟ್ಟುಕೊಳ್ಳುವಂತೆ ತಿಳಿಸಿ ಅಲ್ಲಿಂದ ಹೊರಬಿದ್ದರು. ಹಿಂದು ಮಹಾಸಭೆಯ ಕಛೇರಿಯ ಇದಿರು ಬಾಡ್ಗೆ-ಕಿಷ್ಟಯ್ಯರನ್ನು ಕಾರಿನಿಂದ ಇಳಿಯಲು ತಿಳಿಸಿದರು. ಕಾರ್ಯಾಲಯದಲ್ಲಿ ಉಳಿಯುವಂತೆ ಸಲಹೆ ಮಾಡಿದರು. ಆಪ್ಟೆ ಪ್ರಯಾಣದ ವೆಚ್ಚವೆಂದು 50-00 ರೂಪಾಯಿಗಳನ್ನು ಬಾಡ್ಗೆಯ ಕೈಗೆ ಕೊಟ್ಟ. ಕಾರು ಹೊರಟಿತು. ಬಾಡ್ಗೆ-ಕಿಷ್ಟಯ್ಯ ಕಛೇರಿಯನ್ನು ಪ್ರವೇಶಿಸಿದರು. ನವ ತರುಣನೊಬ್ಬ ಅವರಿಬ್ಬರನ್ನು ನೋಡಿ ನಕ್ಕು 'ಎಂದು ಬಂದಿರಿ' ಎಂದು ಪ್ರಶ್ನಿಸಿದ. ಬಾಡ್ಗೆಗೆ ಅವನ ಗುರುತು ಹತ್ತಲಿಲ್ಲ. ಆತ ಬೇರಾರೂ ಆಗಿರಲಿಲ್ಲ— ಜನವರಿ 9ರಂದು ಬಾಡ್ಗೆಯ ಮನೆಗೆ ಬಂದ ಮದನಲಾಲ. ಅಷ್ಟು ತಿಳಿಸುವ ತನಕವೂ ಬಾಡ್ಗೆ ಅವನನ್ನು ಅಚ್ಚರಿಯಿಂದ ನೋಡುತ್ತಲೇ ಇದ್ದ.

ಜನವರಿ 15ರಂದು ಆಪ್ಟೆ ಬೆಳಕು ಹರಿಯುವುದಕ್ಕೂ ಮೊದಲು ಹಾಸುಗೆ ಬಿಟ್ಟಿದ್ದ. ಅವನ ತಲೆ ತುಂಬ ಯೋಚನೆ; ಕೈ ತುಂಬ ಕೆಲಸ. ವ್ಯವಸ್ಥಿತ ರೀತಿಯಲ್ಲಿ ರೂಪಿಸಲು ಜೇಬು ತುಂಬ ಹಣ. ಎದ್ದವನೇ ಏರ್ ಇಂಡಿಯಾ ಆಫೀಸಿಗೆ ಹೊರಟ. ಜನವರಿ ಹದಿನೇಳರಂದು ದೆಹಲಿಗೆ ತೆರಳುವ ವಿಮಾನದಲ್ಲಿ ಸ್ಥಳವನ್ನು ಕಾಯ್ದಿರಿಸಿ, ಟಿಕೆಟ್ಟುಗಳನ್ನು ಪಡೆದ. ಪ್ರಯಾಣ ಮಾಡುವವರ ಹೆಸರು ಕೊಡದೆ ಯಾರು ಸ್ಥಳ ಕಾಯ್ದಿರಿಸುತ್ತಾರೆ–? ಡಿ. ಯನ್. ಕರ್ಮರ್‌ಕರ್, ಯಸ್. ಮರಾರಿ ಎಂದು ಹೆಸರು ನೋಂದಾಯಿಸಿದ. ಆಪ್ಟೆ–ಗೋಡ್ಸೆ ಈ ಹೆಸರಿನಲ್ಲಿ ಜನವರಿ 17ರಂದು ಮುಂಬಯಿಯಿಂದ ದೆಹಲಿಗೆ ಹೋದರೆಂಬುದು ವಿಚಾರಣೆಯ ಕಾಲದಲ್ಲಿ ರುಜುವಾಯಿತು.

ಟಿಕೆಟು ಕೊಂಡು ಕೊಂಡು ಆಪ್ಟೆ ನೇರ ಕೋಣೆಗೆ ಬಂದ. ಅಲ್ಲಿಂದ ಗೋಡ್ಸೆಯೊಡನೆ ಅಂದು ಮಹಾಸಭೆಯ ಕಛೇರಿಗೆ ಹೋದ. ಅಲ್ಲಿ ಅವರಿಬ್ಬರ ದಾರಿಯನ್ನೇ ಕಾಯುತ್ತ ಕುಳಿತಿದ್ದರು, ಬಾಡ್ಗೆ, ಶಂಕರ, ಮದನಲಾಲ ಪ್ರಭೃತಿಗಳು. ಮದನಲಾಲ ಹೊರ ಹೊರಡಲು ಇನ್ನೂ ಅಣಿಯಾಗಿರಲಿಲ್ಲ. ಅವನನ್ನು ಅಲ್ಲಿಯೇ ಬಿಟ್ಟು ಉಳಿಕೆಯುವರು ಅಗ್ರಣಿ ಪತ್ರಿಕೆಯ–ಶಿವಾಜಿ ಪ್ರೆಸ್—ಕಛೇರಿಗೆ ಧಾವಿಸಿದರು. ಅಲ್ಲಿ ಪ್ರೆಸ್ಸಿನ ಮೂಲಕ ಶ್ರೀ ಜಿ ಯಂ. ಜೋಷಿಯವರನ್ನು ಸಂಧಿಸಿದರು. ಕರಕರೆ ಆಗ ಜೋಷಿಯವರ ಜೊತೆಗಿದ್ದ. ಶಂಕರನನ್ನು ಹೊರ ಬಾಗಿಲಲ್ಲಿ ಕುಳ್ಳಿರಿಸಿ, ಅವರೆಲ್ಲ ಒಕ್ಕೆ ಹೋದರು. ಒಳಗೇನು ನಡೆಯಿತೆಂಬುದು ಶಂಕರನಿಗೆ ತಿಳಿಯಲಿಲ್ಲ. ಪ್ರೆಸ್ಸಿನೊಳಕ್ಕೆ ನುಸುಳಿದ, ಅವರು ಬಾಡ್ಗೆಯನ್ನು ಹೊರಗೇ ಕೂರಿಸಿ, ಗೋಡ್ಸೆ, ಆಪ್ಟೆ, ಕರಕರೆ, ಜೋಷಿ ಪ್ರೆಸ್ಸಿನ ಕಛೇರಿಯನ್ನು ಪ್ರವೇಶಿಸಿದರು. ಅವರೊಳಗೆ ನಡೆದ ರಹಸ್ಯ ಮಾತುಕತೆಯನ್ನು ಬಾಡ್ಗೆಯಿಂದ ಕೇಳುವುದು ಆಗಲಿಲ್ಲ. ಅಲ್ಲೇನು ನಡೆಯಿತೆಂಬುದು ಚಿದಂಬರ ರಹಸ್ಯವಾಗಿ ಉಳಿದಿದೆ.

ಪ್ರೆಸ್ಸಿನಿಂದ ಅವರೆಲ್ಲ ಕಾರಿನಲ್ಲಿ ದಾದರಿಗೆ ಬಂದರು. ಮದನಲಾಲ ಅವರ ನಿರೀಕ್ಷಣೆಯಲ್ಲಿ ಅಲ್ಲಿ ಕುಳಿತಿದ್ದ. ಆತ ಕಾರು ಹತ್ತಿದ. ಹಾಸುಗೆಯನ್ನು ತೆಗೆದುಕೊಳ್ಳುವಂತೆ ಆಪ್ಟೆ ಅವನಿಗೆ ಸೂಚಿಸಿದ. ಮದನಲಾಲ ಅಂತೆಯೇ ಮಾಡಿದ. ಕಾರು ಭೂಲೇಶ್ವರಕ್ಕೆ ತಿರುಗಿತು. ದೀಕ್ಷಿತಜೀಯವರ ಬಂಗಲೆಯ ಮುಂದು ನಿಂತಿತು. ಎಲ್ಲರೂ ಕಾರಿನಿಂದಿಳಿದು ಬಂಗಲೆಯನ್ನು ಪ್ರವೇಶಿಸಿದರು. ಕಾರಿನಲ್ಲಿ ತಂದಿದ್ದ ಹಾಸುಗೆಯನ್ನು ಹಿಡಿದುಕೊಂಡೇ ಮದನಲಾಲ ಅವರನ್ನು ಅನುಸರಿಸಿದ. ಹಾಸಿಗೆಯ ಸುರುಳಿಯನ್ನು ಮುಂಭಾಗದ ತೊಟ್ಟಿಯಲ್ಲಿರಿಸಿ, ಒಳ ಮನೆಗೆ ನುಸುಳಿದ. ದೀಕ್ಷಿತಜಿ ಹೊರಬಂದರು. ವಂದನೆ–ಪ್ರತಿವಂದನೆಗಳ ಶಾಸ್ತ್ರ ಮುಗಿಯಿತು. ಹಿಂದಿನ ದಿನ ತಂದಿರಿಸಿದ ಗಂಟನ್ನು ಹಿಂದಿರುಗಿಸುವಂತೆ ಬಾಡ್ಗೆ ಅವರನ್ನು ಪ್ರಾರ್ಥಿಸಿದ. ಅಣತಿಯಂತೆ ನೌಕರನೊಬ್ಬ ಆ ಮೂಟೆಯನ್ನು ಹೊರಕ್ಕೆ ತಂದಿಟ್ಟ. ಪುನಃ ಮೂಲನ್ನೊಮ್ಮೆ ಪರಿಕಿಸಲಾಯಿತು. ಬಿಚ್ಚಿದ ಗಂಟನ್ನು ಮೊದಲಿನಂತೆ ಗಂಟು ಕಟ್ಟಿದರು. ಆಪ್ಟೆ ಅದನ್ನು ಕರಕರೆಯ ಕೈಗೆ ಕೊಟ್ಟ. ಕರಕರೆ ಅದನ್ನು ಮದನಲಾಲನ ಕೈಗೆ ಹಸ್ತಾಂತರಿಸಿದ. ಹಾಸುಗೆಯ ಸುರುಳಿಯಲ್ಲಿ ಅದನ್ನು ಭದ್ರವಾಗಿ ಇಡಲು ಸಲಹೆ ಕೊಟ್ಟ. ಮದನಲಾಲ ಅದರಂತೆ ಮಾಡಿದ. ಆಪ್ಟೆ ಅವರಿಬ್ಬರನ್ನು ಆ ರಾತ್ರಿಯೇ ದೆಹಲಿಗೆ ಹೊರಟು ಹೋಗಲು ತಿಳಿಸಿದ. ಕರಕರೆ, ಮದನಲಾಲ ಅಂದೇ ಅಲ್ಲಿಂದ ಕಾಲ್ದೆಗೆದರು.

ಅವರು ಹೊರ ಬಿದ್ದ ಮೇಲೆ, ಆಪ್ಟೆ ಬಾಡ್ಗೆಯನ್ನು ತಮ್ಮೊಡನೆ ದೆಹಲಿಗೆ ಬರುವಂತೆ ತಿಳಿಸಿದ. ದೆಹಲಿಯಲ್ಲಿ ನಡೆಸಬೇಕೆಂದಿರುವ ಕೆಲಸವನ್ನು ವಿವರಿಸಿದಲ್ಲಿ ಬರಲು ತನ್ನ ಅತಂಕವಿಲ್ಲವೆಂದು ಬಾಡ್ಗೆ ಹೇಳಿದ. ಸಾವರ್ಕರ್, ನೆಹರೂ, ಗಾಂಧಿ, ಸುಹ್ರವರ್ದಿಯವರನ್ನು ಮುಗಿಸಿ ಬಿಡಲು ತನಗೂ—ಗೋಡ್ಸೆಗೂ ಆದೇಶ ಕೊಟ್ಟಿರುವರೆಂದು ಆಪ್ಟೆ ಅವನಿಗೆ ತಿಳಿ ಹೇಳಿದ. ಪುಣೆಯಲ್ಲಿ ಕೊಂಚ ಕೆಲಸವಿದೆಯೆಂದೂ, ಅದಕ್ಕೆ ಅವಕಾಶ ಕೊಟ್ಟಲ್ಲಿ ದೆಹಲಿಗೆ ಹೊರಡಲು ಆಕ್ಷೇಪವಿಲ್ಲವೆಂದೂ ಬಾಡ್ಗೆ ತಿಳಿಸಿದ. ದೆಹಲಿಗೆ ಹೋಗಿ ಬರುವ ವೆಚ್ಚವನ್ನು ತಾನೇ ವಹಿಸಿಕೊಳ್ಳುವೆನೆಂದು ಆಪ್ಟೆ ಭರವಸೆ ನೀಡಿದ. ಅನಂತರ ಅವರೆಲ್ಲ ಹಿಂದೂ ಮಹಾಸಭೆಯ ಕಟ್ಟಡಕ್ಕೆ ಬಂದರು. ಮದನಲಾಲ ಇನ್ನೂ ಅಲ್ಲಿಯೇ ಇದ್ದ. ಸ್ಟೇಷನ್ ತಲುಪುವದರಲ್ಲಿ ರೈಲು ಹೊರಟಿತ್ತು. ಆದರಿಂದ ರಾತ್ರಿ ಹೊರಡುವ ಇನ್ನೊಂದು ರೈಲಿನಲ್ಲಿ ದೆಹಲಿಗೆ ಹೋಗುವುದಾಗಿ ಅತ–ತಿಳಿಸಿದ.

ಅದೇ ರಾತ್ರಿ ಬಾಡ್ಗೆ, ಕಿಷ್ಟಯ್ಯನೊಡನೆ ಪುಣೆಗೆ ಹೊರಟು ಹೋದ. ಅದೇ ರೈಲಿನಲ್ಲಿ ಗೋಡ್ಸೆ ಪುಣೆ ತಲುಪಿದ. ಜನವರಿ 16ರ ಬೆಳಗಿನ ಝಾವ ಪುಣೆ ಸೇರಿದ ಬಾಡ್ಗೆ ಸಂಜೆಯ ತನಕ ಮನೆಯಲ್ಲಿದ್ದ. ಸಂಜೆಯ ಹೊತ್ತು ಮುಂಬಯಿ ವಿಧಾನ ಸಭೆಯ ಸದಸ್ಯ ಶ್ರೀ ಘಿರಲ್ ಅವರ ಭೆಟ್ಟಿಗೆ ಹೋದ. ತಂದಿದ್ದ ಸ್ಫೋಟಕ ಸಾಮಗ್ರಿಗಳನ್ನು ಅವನ ಪರಿಕೆಕ್ಷೆಕ್ಕಿಟ್ಟಿಸಿದ. ಹೈದರಾಬಾದ್ ಕಾಂಗ್ರೆಸ್ ಮುಖಂಡರಿಗೆ ಅದನ್ನು ತಲುಪಿಸುವಂತೆಯೂ, ಒಲವು ಪ್ರತಿಫಲವನ್ನು ಅವರಿಂದ ವಸೂಲು ಮಾಡಿ ತನಗೆ ಕೊಡುವಂತೆಯೂ ಪ್ರಾರ್ಥಿಸಿದ. ಆತ ಅಲ್ಲಿಂದ ಹಿಂದಿರುಗುವುದರೊಳಗಾಗಿ ಗೋಡ್ಸೆ ಎರಡೆರಡು ಬಾರಿ, ಅವನನ್ನು ಹುಡುಕಿಕೊಂಡು ಅಲ್ಲಿಗೆ ಬಂದಿದ್ದ. ಗೋಡ್ಸೆ ಬಂದ ಸಂಗತಿಯನ್ನು ಶಂಕರ ಕಿಷ್ಟಯ್ಯ ತಿಳಿಸಿದ. ಬಾಡ್ಗೆ ಗೋಡ್ಸೆಯನ್ನು ಹುಡುಕಿಕೊಂಡು 'ಹಿಂದೂ ರಾಷ್ಟ್ರ' ಕಛೇರಿಗೆ ನಡೆದ. ಗೋಡ್ಸೆ ಅಲ್ಲಿ ಕಾದು ಕೊಂಡಿದ್ದ. ಬಾಡ್ಗೆಯನ್ನು ಕಂಡೊಡನೆ ಗೋಡ್ಸೆ 'ದೆಹಲಿಗೆ ಬರುವುದು ನಿಜವಷ್ಟೆ' ಎಂದು ಪ್ರಶ್ನಿಸಿದ. ಬಾಡ್ಗೆ ತನ್ನ ಸಮ್ಮತಿ ಸೂಚಿಸಿದ. ಬಾಡ್ಗೆಯ ಬಾಯಿಯಿಂದ ಆ ಉತ್ತರ ಬರುವುದೇ ಬೇಕಾಗಿತ್ತು. ಗೋಡ್ಸೆ ತನ್ನ ಬಳಿ ಇಟ್ಟುಕೊಂಡಿದ್ದ ಪಿಸ್ತೂಲನ್ನು ಬಾಡ್ಗೆಯ ಕೈಗೆ ಕೊಟ್ಟು, ಅದನ್ನು ಮುಂಬಯಿಗೆ ತರುವಂತೆ ತಿಳಿಸಿದ. ಸಾಧ್ಯವಾದರೆ ಪಿಸ್ತೂಲನ್ನು ಯಾರಿಗಾದರೂ ವಿಕ್ರಯಿಸಿ, ಒಂದು ಒಳ್ಳೆಯ ರಿವಾಲ್ವರನ್ನು ಸಂಗ್ರಹಿಸಲು ಹೇಳಿದ. ಬಾಡ್ಗೆ ಆ ಪಿಸ್ತೂಲಿನೊಡನೆ ಶ್ರೀ ದರ್ಪರ ಮನೆಗೆ ಹೋದ. ಶ್ರೀ ದರ್ಪರು ಹೈದರಾಬಾದು ಕಾಂಗ್ರೆಸಿನ ಕಾರ್ಯಕರ್ತರು. ಬಾಡ್ಗೆ, ಶ್ರೀ ದರ್ಪರಿಗೆ ಸಿಡಿಮದ್ದು, ತುಪಾಕಿ, ತೋಟಾ, ರಿವಾಲ್ವರುಗಳನ್ನು ಒದಗಿಸಿದ್ದ. ಗೋಡ್ಸೆ ಕೊಟ್ಟ ಪಿಸ್ತೂಲನ್ನು ದರ್ಪರಿಗೆ ಕೊಟ್ಟು, ಅವರ ಬಳಿಯಿಂದ ತಾನು ಒದಗಿಸಿದ್ದ ಒಂದು ರಿವಾಲ್ವರು ಮತ್ತು ಕೆಲವು ತೋಟಾಗಳೊಡನೆ ಬಾಡ್ಗೆ ಅಲ್ಲಿಂದ ಹೊರ ಬಿದ್ದ.

ಬಾಡ್ಗೆ—ಕಿಷ್ಟಯ್ಯ ಜನವರಿ ಹದಿನೇಳರಂದು ರಿವಾಲ್ವರು ತೋಟಾ ಸಮೇತ ಮಧ್ಯಾಹ್ನ 2.40ರ ಗಾಡಿಗೆ ಹೊರಟು ರೈಲಿನಲ್ಲಿ ಕುಳಿತರು. ಮಾರನೆ ಬೆಳಗ್ಗೆ ಮುಂಬಯಿಯಲ್ಲಿ ದಾದರ ತಲುಪಿದರು. ಕಿಷ್ಟಯ್ಯ ದಾದರ ನಿಲ್ದಾಣದಲ್ಲಿ ರೈಲಿನಿಂದಿಳಿದ, ಬಾಡ್ಗೆ ಬೋರಿ ಬಂದರಿನಲ್ಲಿ ರೈಲಿನಿಂದಿಳಿದು ಆತ ಸ್ಟೇಷನಿನಿಂದ ಹೊರ ಬರುತ್ತಿರುವಂತೆಯೇ ಗೋಡ್ಸೆ–ಆಪ್ಟೆ ಅವನಿಗಾಗಿ ಕಾದು ನಿಂತಿರುವುದು ಕಾಣಿಸಿತು.

ದೆಹಲಿಗೆ ಹೋಗುವುದಂತೂ ನಿಶ್ಚಯ. ಕೈಯಲ್ಲಿ ಸಾಕಷ್ಟು ಹಣವಿದ್ದರೆ ಒಳಿತು ಎಂದು ತೋರಿತು ಆಪ್ಟೆಗೆ. ಹೊಳೆದದ್ದು ಅವನ ಸಲಹೆಯನ್ನು ಅನುಮೋದಿಸಿದರು. ಅಲ್ಲೇ ನಿಂತಿದ್ದ ಟ್ಯಾಕ್ಸಿಯನ್ನು ಬಾಡಿಗೆಗೆ ಗೊತ್ತು ಮಾಡಿಕೊಂಡು ಅವರು ಸೇ... ಮಹಾರಾಜ್ ಮಧುರ್ ದಾಸರಲ್ಲಿಗೆ ಹೋದರು. ಬಾಡ್ಗೆ ಮಾರುವೇಷದಲ್ಲಿ, ಗೋಡ್ಸೆ—ಆಪ್ಟೆಯವರ ಪರಿಚಯ ಮಾಡಿಕೊಟ್ಟ. ಅಲ್ಲಿ ಸ್ವಲ್ಪ ಹೊತ್ತು ಕಳೆದು, ಅನಂತರ ಹಿಂದೂ ಮಹಾಸಭೆಯ ಕಛೇರಿಗೆ ಹೋದರು. ಅವರು ತಲುಪುವುದರಲ್ಲಿ ಶಂಕರ ಕಿಷ್ಟಯ್ಯ ಅಲ್ಲಿ ಬಿಡಾರ ಹೂಡಿದ್ದ.

ಎಲ್ಲರೂ ಸಾವರ್ಕರರ ಸದನಕ್ಕೆ ಹೊರಟರು. ಶ್ರೀ ಸಾವರ್ಕರರ ದರ್ಶನ ಲಾಭ ಪಡೆಯುವುದು ಅವರ ಉದ್ದೇಶ. ಕಿಷ್ಟಯ್ಯ ಸದನದ ಹೊರಗೆ ಕಾರಿನಲ್ಲೇ ಕಾದ. ಉಳಿದವರೆಲ್ಲ ಬಂಗಲೆಯನ್ನು ಪ್ರವೇಶಿಸಿದರು. ಬಾಡ್ಗೆಯನ್ನು ಕೆಳಗಿನ ಕೋಣೆಯಲ್ಲಿ ಕೂರಿಸಿ ಆಪ್ಟೆ—ಗೋಡ್ಸೆ ಮಹಡಿಯ ಮೆಟ್ಟಲು ಹತ್ತಿದರು. ಸ್ವಲ್ಪ ಹೊತ್ತು ಮೇಲೆ ಕಳೆಯುವ ಕೆಳಗೆ ಬಂದರು. ಅವರನ್ನು ಹಿಂಬಾಲಿಸಿ ಕೊಂಡು ಬಂದರು ಶ್ರೀ ಸಾವರ್ಕರ್, ತುಂಬಿದ ಮನದಿಂದ 'ಯಶಸ್ವಿಗಳಾಗಿ' ಎಂದು ಹರಸಿ ಕಳುಹಿಸಿದರು.

ದೀಕ್ಷಿತಜೀ ಮಹಾರಾಜರು ಮೊಕದ್ದಮೆಯಲ್ಲಿ ಪ್ರಾಸಿಕ್ಯೂಷನ್ ಪರ ವಿಚಾರಣೆಯಾದ 14ನೆಯ ಸಾಕ್ಷಿ. ಬಾಡ್ಗೆ ಕೊಟ್ಟ ವಿವರಗಳನ್ನು ಅವರು ತಮ್ಮ ಹೇಳಿಕೆಯಲ್ಲಿ ಸಮರ್ಥಿಸಿದರು.

— (ಆಧಾರಿತ)

ಜನ್ಮಭೂಮಿ

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :

ಬೆಂಗಳೂರು, ಮಂಗಳೂರು ಮತ್ತು ಮೈಸೂರು

NAVAYUGA 14 –10 –1971

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಅಮೋಘ ಶಿಲ್ಪಕಲಾ ಸೃಷ್ಟಿ
ಕೋನಾರಕದ ಸೂರ್ಯಕ್ಷೇತ್ರ

ಶ್ರೀ ಎಚ್. ಎಂ. ನಾರಾಯಣ ಭಟ್

ಶಿಲ್ಪಕಲಾ ಪ್ರೌಢಿಮೆಗೂ ವಾಸ್ತು ವಿಜ್ಞಾನಕ್ಕೂ ಹಿಂದಿನ ಕಾಲದಿಂದಲೇ ಹೆಸರಾಂತ ಒರಿಯಾ ನಿವಾಸಿಗಳ ಒಂದು ಅಪೂರ್ವ ಸಾಧನೆಯ ದಿವ್ಯ ಸ್ಮಾರಕವಾಗಿ ಕೋನಾರಕದ ಸೂರ್ಯ ಕ್ಷೇತ್ರ ವಿರಾಜಿಸುತ್ತಿದೆ. ಅತಿ ಅದ್ಭುತಕರ ಹಾಗೂ ಅಪೂರ್ವವಾಗಿರುವ ಈ ಕಗ್ಗಲ್ಲಿನ ಕ್ಷೇತ್ರವು ಪುರಿಯಿಂದ ಸುಮಾರು 20 ಮೈಲಿ ದೂರ ಕಡಲ ತೀರದಲ್ಲಿದೆ.

ಕಲಾ ಬೋಧೆಗೆ ಒಂದು ಪ್ರಮಾಣ ಪತ್ರವಾಗಿಯೂ ಶಿಲ್ಪ ಕಲಾಕೌಶಲ್ಯಗಳ ನಿದರ್ಶನವಾಗಿಯೂ ಇದ್ದ ಈ ಕ್ಷೇತ್ರ ಜೀರ್ಣವಾಗಿ ಭಗ್ನಾವಸ್ಥೆಯನ್ನು ತಲಪಿದೆ. ಕುಸಿದು ಬಿದ್ದಿರುವ ಕ್ಷೇತ್ರ ವಠಾರ ಮತ್ತು ಭಾಗಗಳ ಅವಶಿಷ್ಟಗಳು ಸಂದರ್ಶಕರ ಮನಸ್ಸನ್ನು ಕರಗಿಸುತ್ತಿವೆ.

ಈ ಪ್ರದೇಶಕ್ಕೆ ವರ್ಷಕ್ಕೊಮ್ಮೆ ಸಾವಿರಾರು ಮಂದಿ ತೀರ್ಥಾಟಕರು ಸೂರ್ಯದೇವನ ದರ್ಶನಕ್ಕಾಗಿ ಆಗಮಿಸುವರು. ಇತರ ದಿನಗಳಲ್ಲಿ ಸಂದರ್ಶಕರು ಕಡಿಮೆ ಸಮೀಪದ ಸಮುದ್ರದ ತೆರೆಗಳ ಸಪ್ಪಳವು ಈ ಪ್ರದೇಶವನ್ನು ಆವರಿಸಿದ ನಿಶ್ಶಬ್ದತೆಯನ್ನು ಭೇದಿಸುತ್ತಿರುತ್ತದೆ.

ರಥಾಕೃತಿಯ ವಿಶಿಷ್ಟ ಕ್ಷೇತ್ರ

ಕ್ರಿ. ಶ. 1238ರಲ್ಲಿ ನರಸಿಂಹದೇವನೆಂಬ ರಾಜನು ಈ ಕ್ಷೇತ್ರವನ್ನು ನಿರ್ಮಿಸಿದನು. ಇದಕ್ಕಾಗಿ ಆ ಕಾಲದಲ್ಲಿಯೇ ರೂ. 36 ಕೋಟಿ ವೆಚ್ಚವಾಗಿತ್ತೆನ್ನಲಾಗಿದೆ. ಈ ಹಣವು ಆ ರಾಜ್ಯದ ಆಗಿನ ವಾರ್ಷಿಕ ತೆರಿಗೆ ವರಮಾನದ 12 ಪಾಲು! 12ಸಾವಿರ ಮಂದಿಯ ನಿರಂತರ ಪರಿಶ್ರಮದ ಫಲವಿದೆಂದು ಅಕ್ಬರ ಚಕ್ರವರ್ತಿಯ ಕಾಲದಲ್ಲಿ ಅಬ್ದುಲ್ ಫಾಸಲ್ ಅಲೂಮಿ ಎಂಬ ಚರಿತ್ರಕಾರನು ಅಭಿಪ್ರಾಯ ಪಟ್ಟಿದ್ದನು.

ಈ ಕ್ಷೇತ್ರವು ಒಂದು ರಥದ ಆಕೃತಿಯದು. ಇದಕ್ಕೆ ಎರಡು ಭಾಗಗಳಲ್ಲಾಗಿ ಒಟ್ಟು ಹನ್ನೆರಡು ಶಿಲಾ ಚಕ್ರಗಳು! ಪ್ರತಿ ಚಕ್ರದಲ್ಲಿಯೂ ವಿಶಿಷ್ಟ ಕಲಾ ಸೃಷ್ಟಿಗಳೂ! ಏಳು "ಕುದುರೆ"ಗಳೂ. ಹನ್ನೆರಡು ಚಕ್ರಗಳು ವರ್ಷದ 12 ತಿಂಗಳುಗಳನ್ನೂ ಏಳು ಕುದುರೆಗಳು ವಾರದ ಏಳು ದಿನಗಳನ್ನೂ ಗುರುತಿಸುತ್ತವೆನ್ನಲಾಗಿದೆ. ಕ್ಷೇತ್ರದ ಗೋಡೆಗಳಲ್ಲಿ ಮನುಷ್ಯ–ಮೃಗಾದಿಗಳ ಭವ್ಯ ಚಿತ್ರಗಳೂ ಉತ್ತಮ ಮಟ್ಟದ ಶಿಲ್ಪಕಲಾ ಪ್ರೌಢಿಮೆಯನ್ನು ಪ್ರದರ್ಶಿಸಿವೆ. ಆ ಕಲಾಕುಶಲರ ಸಹನೆ ಮತ್ತು ಭಾವನೆ ಸ್ತುತ್ಯಾರ್ಹ! ಈ ಕ್ಷೇತ್ರ ನಿರ್ಮಾಣಕ್ಕೆ ಸಿಮೆಂಟು ಅಥವಾ ಅದರಂತಹ ಇತರ ವಸ್ತುಗಳನ್ನು ಉಪಯೋಗಿಸಿಲ್ಲವಂತೆ. ಪ್ರತಿಯೊಂದು ಕಲ್ಲೂ (ಶಿಲ್ಪ ಕಲಾಕೃತಿ) ಮತ್ತೊಂದರ ಭಾರವನ್ನು ಹೊರುವ ಹಾಗೂ ಒಂದು ಮತ್ತೊಂದರಿಂದ ಬಿಟ್ಟು ಹೋಗದ ಹಾಗೂ ಪ್ರಾವೀಣ್ಯತೆಯಿಂದ ಇರಿಸಲಾಗಿವೆ.

ಸುಪ್ರಸಿದ್ಧ ಇಂಜಿನಿಯರ್ ಮದನ ಮೋಹನ ಗಾಂಗುಲಿಯ ಅಭಿಪ್ರಾಯ ಹೀಗೆ:—

"ಯಂತ್ರೋಪಕರಣ– ಕ್ರೇನ್– ರಾಟೆ ಮತ್ತು ಇತರ ಭಾರೋದ್ಧಹನ ಯಂತ್ರಗಳಿಲ್ಲದಿದ್ದ ಆ ಕಾಲದಲ್ಲಿ ಇಷ್ಟು ಭಾರವಾದ ಕಲ್ಲುಗಳನ್ನೂ ಕಬ್ಬಿಣವನ್ನೂ ಇಷ್ಟು ಎತ್ತರಕ್ಕೆ ಎತ್ತಿ ನಾಜೂಕಾಗಿ ಇರಿಸಿರುವುದನ್ನು ನೋಡುವಾಗ ಆಶ್ಚರ್ಯವಾಗುತ್ತದೆ. ಕ್ಷೇತ್ರದ ಸಮೀಪ ಎಲ್ಲಿಯೂ ಕಲ್ಲುಗಳನ್ನು ತೆಗೆದ ಸ್ಥಳವೂ ಕಾಣುತ್ತಿಲ್ಲ. ಸುಮಾರು 80 ಮೈಲಿ ದೂರದಿಂದಲೇ ಕಲ್ಲುಗಳನ್ನು ತಂದಿರಬೇಕು. 200 ಟನ್ ಭಾರದ ಕಲ್ಲುಗಳನ್ನು 170 ರಿಂದ 200 ಅಡಿ ಎತ್ತರದವರೆಗೆ ಏರಿಸಿದ ಕೆಲಸಗಾರರ ಶ್ರಮ ಸಾಹಸಗಳೂ ಅದ್ಭುತ ರಹಸ್ಯವಾಗಿ ಉಳಿದಿವೆ.

ಭಾರತೀಯ ಶಿಲ್ಪಿಗಳು ಈವರೆಗೆ ನಿರ್ಮಿಸಿರುವ ಶಿಲ್ಪ ಕಲಾ ಸೃಷ್ಟಿಗಳ ಪೈಕಿ ಈ ಕ್ಷೇತ್ರ ಪ್ರಶಸ್ತವಾಗಿ ಪರಿಗಣಿಸಲ್ಪಟ್ಟಿದೆ.

ಕ್ಷೇತ್ರವಠಾರದಲ್ಲಿ ಬಿದ್ದಿರುವ ಶಿಲ್ಪಕಲಾಕೃತಿಗಳೇ ಈ ಪ್ರಶಸ್ತಿಯನ್ನು ಕರೆದು ಹೇಳುತ್ತಿವೆಯೆಂದು ಪ್ರಸಿದ್ಧ ಶಿಲ್ಪಕಲಾವಿದ ಪರ್ಸಿಬ್ರಾನ್ ಅಭಿಪ್ರಾಯಪಟ್ಟಿದ್ದಾರೆ.

ಪ್ರತಿಯೊಂದನ್ನು ವಿಮರ್ಶಿಸುವವರೂ ಯಾವುದರಲ್ಲೂ ತೃಪ್ತಿ ಹೊಂದದವರೂ ಎಲ್ಲದರಲ್ಲಿಯೂ ತಪ್ಪು ಕಂಡುಹಿಡಿಯುವವರೂ ಈ ಕ್ಷೇತ್ರದಲ್ಲಡಕವಾದ ಕಲಾ ಕುಶಲತೆಯ ಬಗ್ಗೆ ಪ್ರಶಂಸಿಸದಿರರೆಂದು ಅಬ್ದುಲ್ ಫಾಸಲ್ ಅಲೂಮಿ ಪ್ರಸ್ತಾಪಿಸಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ

ಶಿಲೆಗಳ ಮೌನ ಸಂಗೀತ

ಕ್ಷೇತ್ರದ "ಜಗಮೋಹನ್ ಹಾಲ್" ಅತಿ ಪ್ರಧಾನವಾದುದು. 100 ಚದರ ಅಡಿ ವಿಸ್ತೀರ್ಣ—100 ಅಡಿ ಎತ್ತರದ ಹಾಲಿನ ಮೇಲ್ಛಾವಣಿಯನ್ನು ನಾಲ್ಕು ಸ್ತೂಪಗಳು ಹೊತ್ತು ನಿಂತಿವೆ. ಪೂರ್ವ ಭಾಗದ ಪ್ರವೇಶದ್ವಾರದಲ್ಲಿ ಆನೆಗಳ ಮೇಲೆ ಸಿಂಹಾಕೃತಿಗಳು. ಕ್ಷೇತ್ರದೊಳಗೆ ಮನೋಹರವಾದ ಸಿಂಹಾಸನ ಪೀಠ ಇದು ಸೂರ್ಯದೇವನ ಪೀಠವೆಂದು ಸಂಕಲ್ಪ. ನೃತ್ಯಶಾಲೆ ಮತ್ತು ಭೋಗ ಮಂಟಪಗಳೂ ಆಕರ್ಷಕವಾಗಿವೆ. ಈ ಕ್ಷೇತ್ರದಲ್ಲಿ ಅಳವಡಿಸಲಾದ ಶಿಲ್ಪಕಲಾ ಕೃತಿಗಳು ಐಶ್ವರ್ಯದ ಪ್ರತೀಕಗಳೆಂದು ಅಗ್ನಿ ಪುರಾಣ ವರ್ಣಿಸಿರುವುದಾಗಿ ಪ್ರತೀತಿ. ಅಶ್ಲೀಲಕ್ಕೆ ಆಸ್ಪದ ನೀಡದ ಶೃಂಗಾರರಸ ಪ್ರಧಾನವಾದ. ಅನೇಕ ದಂಪತಿಯರ ಚಿತ್ರಗಳೂ ಗೋಡೆಗಳನ್ನು ಅಲಂಕರಿಸಿವೆ. ಕ್ಷೇತ್ರದ ಗೋಪುರದ ಮೇಲೆ ಗಾಯನ ಮೇಳಗಾರರ ಭೀಮಾಕೃತಿಯ ರೂಪಗಳಿವೆ ಬರೇ ಶಿಲೆಗಳಲ್ಲಿ ಸಂಗೀತ ಕವಿತೆ ಹಾಡುವ ಚೇತನವನ್ನಿಲ್ಲಿ ಆಹ್ವಾನಿಸಲಾಗಿದೆಯೆಂಬ ಘೋಷಣೆಯನ್ನು ಈ ರೂಪಗಳು ಸದಾ ಘೋಷಿಸುತ್ತಿರುವಂತೆ ಭಾಸವಾಗುತ್ತದೆ. ಅಂತರ್ಯದಲ್ಲಿ ಶತಮಾನಗಳಿಂದಲೂ ಪೂರ್ತಿಯಾಗದೆ ಉಳಿದಿರುವ ಅಮೋಘ ಕಲಾ ಸೃಷ್ಟಿಯೆಂದು ಸಾರುತ್ತಿರಲೂ ಬಹುದು!

(—ಸಂಗ್ರಹ)

●●

ಸಾಮುದಾಯಿಕ ಅಭಿವೃದ್ಧಿ ಯೋಜನೆ; ಸಿದ್ಧಿ ಹಾಗೂ ಸಾಧನೆ

ಸಾಮುದಾಯಿಕ ಅಭಿವೃದ್ಧಿ ಯೋಜನೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳು ದೇಶದ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಹಾಗೂ ಜಿಲ್ಲಾ ಮಟ್ಟದ ಆಡಳಿತ ಇವುಗಳಲ್ಲಿ ವಿಶೇಷ ಪಾತ್ರವನ್ನು ವಹಿಸಿವೆ. ಈ ಯೋಜನೆಗಳಿಂದಾಗಿ ಗ್ರಾಮೀಣ ಪ್ರದೇಶಗಳಿಗೆ ನವಚೇತನ ಬಂದಂತಾಗಿದೆ. ತಮಗೆ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ಈ ಯೋಜನೆಗಳು ಈ ಹಿಂದೆ ದೇಶದಲ್ಲಿ ಸಾಧಿಸಲಾಗದ್ದನ್ನು ಸಾಧಿಸಲು ಪ್ರಯತ್ನಿಸಿವೆ. ಬೇಸಾಯ ಅಭಿವೃದ್ಧಿ ಈ ಯೋಜನೆಗಳ ಮುಖ್ಯ ಉದ್ದೇಶ. ಅಲ್ಲದೆ ಗ್ರಾಮೀಣ ಪ್ರದೇಶ ಇತರ ಕಾರ್ಯಕ್ಷೇತ್ರಗಳಿಗೂ ಮಹತ್ವದ ಲಕ್ಷವನ್ನು ನೀಡಿವೆ.

ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸಲು ಅಲ್ಲಿನ ಜನ ಸಹಕಾರಪಡೆಯುವುದು ಹಾಗೂ ಅವರಲ್ಲಿ ಅಂತಹ ಮನೋಭಾವವನ್ನು ಬೆಳೆಸುವುದು ಪಂಚಾಯತ್ ರಾಜ್‌ಸಂಸ್ಥೆಗಳ ಮುಖ್ಯ ಉದ್ದೇಶಗಳಲ್ಲಿ ಒಂದು. ಇದರಿಂದಾಗಿ ಸಕಾಲದಲ್ಲಿ ಹಣ ಹೂಡುವುದರ ಜೊತೆಗೆ ಅಲ್ಲಿನ ಜನರ ನೆರವು ಅಗತ್ಯವೆಂಬುದನ್ನು ಅರಿತು ಆ ಬಗ್ಗೆ ಕ್ರಮಕೈಗೊಳ್ಳಲಾಗಿದೆ. ಇಡೀ ಭಾರತದ ಗ್ರಾಮೀಣ ಪ್ರದೇಶವನ್ನು ಇದೀಗ 5265 ಸಾಮುದಾಯಿಕ ಅಭಿವೃದ್ಧಿ ಬ್ಲಾಕ್‌ಗಳನ್ನಾಗಿ ವಿಂಗಡಿಸಲಾಗಿದ್ದು 492 ಗುಡ್ಡಗಾಡು ಅಭಿವೃದ್ಧಿ ಬ್ಲಾಕುಗಳನ್ನು ಸೇರಿಸಲಾಗಿದೆ. ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಾಮುದಾಯಿಕ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳಿಗಾಗಿ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ 97. 9 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

ಸಾಮುದಾಯಿಕ ಅಭಿವೃದ್ಧಿ ಯೋಜನೆಗಳಿಂದ ಬೇಸಾಯಗಾರರಿಗೆ ಉತ್ತಮ ಬೇಸಾಯಕ್ಕೆ ಅಗತ್ಯವಾದ ಬಿತ್ತನೆ ಬೀಜಗಳು, ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳು, ಹಾಗೂ ನವೀನ ಬೇಸಾಯ ಉಪಕರಣಗಳನ್ನು ಸರಬರಾಜು ಮಾಡಲಾಗುತ್ತಿದೆ. ಇಷ್ಟೇ ಅಲ್ಲದೆ ರೈತರಿಗೆ ಸಣ್ಣ ನೀರಾವರಿ ಯೋಜನೆಗಳ ಸೌಲಭ್ಯಗಳು, ಉತ್ತಮ ತಳಿಯ ಪ್ರಾಣಿಗಳು, ಪಕ್ಷಿಗಳು ಇವುಗಳನ್ನು ಒದಗಿಸಲಾಗುತ್ತಿದೆ. ಹಳ್ಳಿಗಳ ನೈರ್ಮಲ್ಯದ ದೃಷ್ಟಿಯಿಂದ ರಸ್ತೆ ನಿರ್ಮಾಣ, ಹಳ್ಳಗಳನ್ನು ಮುಚ್ಚುವುದು, ಸಾರ್ವಜನಿಕ ಶೌಚಗೃಹಗಳ ನಿರ್ಮಾಣ ಇವೇ ಮೊದಲಾದ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇವುಗಳ ಜೊತೆಗೆ ಮಕ್ಕಳ ಶಿಕ್ಷಣ, ವಯಸ್ಕರ ಶಿಕ್ಷಣ, ಕುಡಿಯುವ ನೀರಿನ ಸೌಲಭ್ಯಗಳನ್ನು ಗ್ರಾಮೀಣ ಜನರಿಗೆ ಒದಗಿಸಲಾಗುತ್ತಿದೆ. ರೈತರಿಗಾಗಿ ಹೆಚ್ಚು ಬೆಳೆ ತೆಗೆಯುವ ವಿಧಾನಗಳು, ಬಾವಿತೋಡುವುದು, ರಸ್ತೆಗಳನ್ನು ನಿರ್ಮಿಸುವುದರ ಬಗ್ಗೆಯೂ ಪ್ರತ್ಯಕ್ಷ ಶಿಕ್ಷಣವನ್ನು ನೀಡಲಾಗುತ್ತಿದೆ. ಎಲ್ಲಾ ರಾಜ್ಯಗಳ ಬ್ಲಾಕುಗಳ ಯೋಜನೆಯಲ್ಲಿ ಸಣ್ಣ ನೀರಾವರಿಗೆ ಆದ್ಯತೆ ನೀಡಲಾಗಿದೆ. 3.73ಕೋಟಿ ರೂ. ಗಳ ಬಂಡವಾಳ ಹೂಡಿ 321 ಕೈಗಾರಿಕಾ ಎಸ್ಟೇಟುಗಳನ್ನು ನಿರ್ಮಿಸಲಾಗಿದೆ. ಇವುಗಳಲ್ಲಿ ಒಟ್ಟು 1509 ಕೈಗಾರಿಕಾ ಘಟಕಗಳಿವೆ. ಬ್ಲಾಕ್ ಅಭಿವೃದ್ಧಿ ಯೋಜನೆಯಲ್ಲಿ ಕುಟುಂಬಯೋಜನೆಗೆ ಹೆಚ್ಚಿನ ಪ್ರಾಶಸ್ತ್ಯವನ್ನೂ ನೀಡಲಾಗುತ್ತಿದೆಯಲ್ಲದೆ ಈ ಯೋಜನೆಗೆ ಜನತೆಯ ಸಹಕಾರವೂ ದೊರೆತಿದೆ. ಗ್ರಾಮಾಂತರ ಜನತೆಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲು ಈ ಯೋಜನೆಯಲ್ಲಿ ಪ್ರಯತ್ನಿಸಲಾಗುತ್ತಿದೆ. ಈಗಾಗಲೇ ಪ್ರಾಯೋಗಿಕ ಯೋಜನೆಗಳನ್ನು ಕೈಗೊಳ್ಳಲಾಗಿದೆ.

●●

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

READ & ADVERTISE IN NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India.

ನವಯುಗ

ದೀಪಾವಳಿ ಸಂಚಿಕೆ ೧೯೭೧

NAVYUGA

DEEPAVALI SPECIAL 1971

೫೦ ಪೈಸೆ

ದಾರಿಯುದ್ದಕ್ಕೂ ದೀಪದ ಸಾಲು



ಸಹಸ್ರಾರು ದೀಪಗಳು ದಾರಿಯುದ್ದಕ್ಕೂ ಬೆಳಗಿವೆ. ಮಿಣುಕು ದೀಪ, ಹಣತೆದೀಪ, ಗೂಡುದೀಪ, ಕಾಲುದೀಪ— ನಾನಾ ತೆರನ ದೀಪರಾಜಿಗಳು ಆವರಿಸಿದ ಕತ್ತಲನ್ನು ಹಿಂತಳ್ಳಿ ಬೆಳಕಿನ ಪ್ರಭೆಯನ್ನು ದಾರಿಯುದ್ದಕ್ಕೆ ಪಸರಿಸುತ್ತವೆ.

ಪ್ರಗತಿಯ ದಾರಿಯ ಮೊದಲ ಹಂತಗಳಲ್ಲಿ ಮುಳ್ಳುಕಲ್ಲುಗಳು, ಏರುಪೇರುಗಳು ಎದುರಾಗುತ್ತವೆ. ಸಿಂಡಿಕೇಟ್ ಬ್ಯಾಂಕು ಕಳೆದ **47** ವರ್ಷಗಳಲ್ಲಿ ನಡೆದು ಬಂದ ದಾರಿ ಆ ತೆರನಾದುದು. ಆರಂಭದ ವರ್ಷಗಳಲ್ಲಿ ಬ್ಯಾಂಕು ತನ್ನ ಹಾದಿಗುಂಟ ಇದಿರಾದ ತೊಡವುಗಳನ್ನು, ಮುಳ್ಳಿನ ಬೇಲಿಗಳನ್ನು, ಕತ್ತಲು ತುಂಬಿದ ದುರ್ಗಮ ಪ್ರದೇಶಗಳನ್ನು ಸರಿದು ಇಂದು ಸುಗಮವಾದ, ಸುರಕ್ಷಿತವಾದ, ಬೆಳಕು ತುಂಬಿದ ಅರಣ್ಯವನ್ನು ಸೇರಿದೆ.

ಇಂದು ದಾರಿಯ ಇಕ್ಕೆಲಗಳಲ್ಲಿ ದೀಪಗಳು ಉರಿಯುತ್ತಿವೆ. ದಾರಿಯ ಚಲನೆ ಸುಗಮವೆನಿಸಿದೆ. ಪ್ರಗತಿಯ ತುದಿಯ ಸೋಪಾನವನ್ನು ಮುಟ್ಟಿ ವ್ಯಕ್ತಿಯ ಸಂತೃಪ್ತ ಬದುಕಿನ ಮೂಲಾಧಾರವೆನಿಸಿದ ಆರ್ಥಿಕ ನೆಲೆಯನ್ನು ಸುಭದ್ರವೂ, ಸುರಕ್ಷಿತವೂ ಮಾಡಲು ಹವಣಿಸುತ್ತದೆ.

ದೀಪಾವಳಿಯ ಶುಭಾಶಯಗಳೊಂದಿಗೆ ನಮ್ಮ ಗ್ರಾಹಕರಿಗೆ ಅವರ ಪ್ರೋತ್ಸಾಹ, ಸಹಕಾರಗಳಿಗೆ ಈ ಮೂಲಕ ಕೃತಜ್ಞತೆಯನ್ನು ಸೂಚಿಸುತ್ತೇವೆ.

ಸಿಂಡಿಕೇಟ್ ಬ್ಯಾಂಕ್

ಹೆಡ್ ಆಫೀಸು:

ಮಣಿಪಾಲ (ಮೈಸೂರು ರಾಜ್ಯ)

ಕೆ. ಕೆ. ಪೈ

ಕಸ್ಟೋಡಿಯನ್

ಸ್ಥಾಪನೆ. 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S K.

ಸಂಪುಟ : 51
ಸಂಚಿಕೆ : 7

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ·
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ 12
ಎರಡು ವರ್ಷಗಳಿಗೆ ರೂ 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ . ೦–೨೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು

ಸಂಪಾದಕೀಯ

ದೀಪಾವಳಿಯ ಚಿರನೂತನ ಅಮರ ಸಂದೇಶ

ಮನೆ ಮನೆಯಲ್ಲಿಸೊಡರು'ಹಚ್ಚಿ ಸಂಭ್ರಮಿಸುವ ಹಬ್ಬ ದೀಪಾವಳಿ–ಮನೆಯೊಡನೆ ಮನವನ್ನೂ ಬೆಳಗಿಕೊಳ್ಳಿರೆಂಬ ಭವ್ಯ ದಿವ್ಯ ಸಂದೇಶ ಹೊತ್ತು ಮತ್ತೊಮ್ಮೆ ಬಂದಿದೆ ಮೂರು ದಿನಗಳ ಹರುಷ ನೂರು ದಿನ ನಿಲ್ಲಲೆಂಬ ಹಾರೈಕೆಯೊಡನೆ ದೀಪಾವಳಿಯ ಆಚರಣೆ ನಡೆಯುತ್ತದೆ ಚಳಿಗಾಲದ ಆರಂಭದ ದಿನಗಳಲ್ಲಿ ಬರುವ ಈ ದೀಪಾವಳಿ ಹಬ್ಬದ ಪೌರಾಣಿಕ ಹಿನ್ನೆಲೆಯಲ್ಲಿ ನೂರು ಕಥೆಗಳೂ ಹೆಣೆದು ಕೊಂಡಿವೆ ಭಾರತೀಯ ಧರ್ಮ, ಶಿಕ್ಷಣ, ಕಲೆ, ಸಾಹಿತ್ಯ,ಸಮಾಜ, ರಾಜ್ಯಕೀಯ ಕೂಡ ಭಾರತೀಯತೆಯೆಲ್ಲ–ಪೌರಾಣಿಕ ಪ್ರಭಾವದಲ್ಲಿಯೇ ಬೆಳದು ಬಂದಿದೆ ಜಾತ್ಯತೀತತೆಯ, ಸಮಾಜವಾದದ ಘೋಷಣೆಗಳ ಇಂದಿನ ಯುಗದಲ್ಲಿಯೂ ದೀಪಾವಳಿಯ ಅಮರ ಸಂದೇಶ ನಿತ್ಯ ನೂತನವಾಗಿ ಪರಿಣಮಿಸುತ್ತಲೇ ಬಂದಿದೆ

ಭಗವಾನ್ ನಾರಾಯಣನು ಕೃಷ್ಣಾವತಾರ ತಳೆದು ನಾರೀ ಕುಲಪಾತುಗ ನರಕಾಸುರನನ್ನು ನರಕಕ್ಕೆ ದಡಿದ ಪುಣ್ಯದಿನ ಚತುರ್ದಶಿ ಮಹಿಳಾಮಣಿಯರನ್ನು ಕ್ರೂರ ರಾಕ್ಷಸರ ಬಂದನದಿಂದ ಮುಕ್ತಗೊಳಿಸಿ ಅವರನ್ನು ವಿಮೋಚನೆಗೊಳಿಸಿದ ಪರ್ವದಿನವದು "ಯತ್ರನಾರ್ಯಸ್ತು ಪೂಜಂತೇ ರಮಂತೇ ತತ್ರದೇವತಾಃ" ನಾರಿಯರು ಪೂಜೆಗೊಳ್ಳುವಲ್ಲಿ ದೇವತೆಗಳು ಪ್ರಸನ್ನರಾಗಿರುತ್ತಾರೆ– ಇದು ಪುರಾತನೋಕ್ತಿ ನಾರಿಯರನ್ನು ಭಾರತೀಯ ಸಂಸ್ಕೃತಿ ಪುರಾಣಗಳು ಎಂದೂ ದ್ವಿತೀಯ ವರ್ಗದ ಪ್ರಜೆಗಳೆಂದು ಭಾವಿಸಿಲ್ಲ ಆದರೆ, ಈ ಬಗೆಯ ದುರ್ಭಾವನೆಯನ್ನು ನಾರಿಯರ ಮನದಲ್ಲಿ ಮೂಡಿಸಿ ಸುಂದರ ಸಂಸಾರಗಳನ್ನು ಒಡೆಮ ಹೋಳು ಹೂಡುವ ಪಾತುಕರು ಈಗ ಸಮಾಜದಲ್ಲಿ ತುಂಬ ತೊಡಗಿದ್ದಾರೆ ಸ್ವಾತಂತ್ರ್ಯದ ಹಸರಲ್ಲಿ ಸ್ವೈರ ವೃತ್ತಿಗೆ ಆಸ್ಪದ ದೊರತರೆ, ಸಮಾಜ ಪಾತುಕ ನರಕಾಸುರರ ಬಂಧಿಗಳಾಗಿ ಅವರು ತಮ್ಮ ಬದುಕನ್ನು ನಷ್ಟಗೊಳಿಸುತ್ತಿದ್ದಾರೆ ನಾರೀಮಣಿಗಳ ನಗ್ನ ಅರೆ ನಗ್ನ ಚಿತ್ರ–ಭಿತ್ತಿ ಚಿತ್ರಗಳು ಅವರಿಗೆ ಅಪಮಾನವನ್ನು ಮಾಡುತ್ತಿವೆ ನಾಟಕ–ಸಿನೇಮಾಗಳಲ್ಲಿ ಕಲೆಯ ಹಸರಲ್ಲಿ ಮಾದಕ ಅಂಗ ಪ್ರದರ್ಶನಾದಿಗಳು ನಾರೀಕುಲ ಕಲಂಕವೆಂಬ ಜಾಗೃತಿ ಮೊನ್ನೆ ಮೊನ್ನೆ ಹುಬ್ಬಳ್ಳಿಯ ಮಹಿಳೆಯರಲ್ಲಾಯಿತು ಇದೇ ಬಗೆಯಲ್ಲಿ ವೇಶ್ಯಾ ಸಮಸ್ಯೆ ಮತ್ತೊಂದು ಹಳೆಯ ಶಾಪ ಸ್ವಾತಂತ್ರ್ಯ ಮತ್ತುಸಮಾನತೆಗಳು ಸರಿದಾರಿಯಲ್ಲಿ ನಡೆದರೆ, ಭೂಕೈಲಾಸವಾಗುತ್ತದೆ ಎದಿಲ್ಲದೆ ಅವೃಸ್ವೇಚ್ಛೆಯಲ್ಲಿ ಪರ್ಯವಸಾನ ಹೊಂದಿದರೆ ಹಾಲಿನಂತಹ ಸಂಸಾರಗಳಿಗೆ ಹುಳಿ ಹಿಂಡಿದಂತೆಯೇ ಸರಿ ಭಾರತೀಯ ಸಂಸ್ಕೃತಿಯ ಪೂಜನೀಯರೆಂಗವೆನಿಸಿದ ನಮ್ಮ ನಾರೀಮಣಿಯರನ್ನು ವಿದೇಶೀ ಸಂಸ್ಕೃತಿ ಮತ್ತು ಸ್ಫೋಟಕ ಉಪಮಾನಕರ ಸನ್ನಿವೇಶಗಳಿಂದ ಬಿಡುಗಡೆ ಮಾಡುವ ಅಗತ್ಯವಿಂದು ಹೆಚ್ಚಿದೆ ರೂಪವೆನ್ನುವುದು ಸಮಾಜಕ್ಕೆ ಶಾಪವಾಗಿ ಪರಿಣಮಿಸ ಬಾರದು ಸಮಾಜಕೆ ಸಂಸ್ಕೃತಿಗೆ ಅದು ಪೋಷಕವಾಗಿ ಉಳಿದು ಮೆರೆಯಬೇಕು, ಅದಕ್ಕೆ ತಲೆಬಾಗಬೇಕು.

ಮೂರಡಿ ನೆಲವನ್ನು ಬೇಡಿದ ವಾಮನ ತ್ರಿವಿಕ್ರಮನಾಗಿ ದಾನಿ ಬಲಿಯನ್ನು ಪಾತಳಕ್ಕಟ್ಟಿದ ದಿನ ಅಮಾವಾಸ್ಯೆ ಬಲೀಂದ್ರ ಪೂಜೆ–ಆ ದಿನ ನಡೆಯುತ್ತದೆ ಬಲಿಯ ಮನೆಬಾಗಿಲನ್ನು ಇಂದಿಗೂ ತ್ರಿವಿಕ್ರಮ ಕಾಯುತ್ತಿದ್ದಾನೆಂದೂ ಬಲಿಯು ಚಿರಂಜೀವಿಯೆಂದು ನಮ್ಮ ಕಲ್ಪನೆ ಬಲಿಯಂತಹ ರಾಕ್ಷಸಕುಲ ಸಂಜಾತನಲ್ಲಿ ರಾಕ್ಷಸೋಚಿತ ದುರ್ಗುಣಗಳು ಮನೆಮಾಡಿದ್ದರೂ ಆತನು ಪರಪೀಡೆಯನ್ನೇ ಸ್ವಧರ್ಮವೆಂದು ನಂಬಿ ಅದರಂತೆ ನಡೆದಿದ್ದರೂ ತನ್ನ ಕೊನೆಗಾಲದಲ್ಲಿ ಭೂಮಿದಾನ ಮಾಡಿದ ಶ್ರೇಯಸ್ಸಿಗೆ ಭಾಜನನಾದನು ಅಜಮಿಳನನ್ನು ಅಂತ್ಯಕಾಲದಲ್ಲಿ ನಾರಾಯಣನೆಂಬ ನಾಮ ಸ್ವರ್ಗಕ್ಕೊಯ್ದಂತೆ ಬಲಿಯನ್ನು ಈ ಭೂಮಿದಾನವು ಚಿರಂಜೀವಿಯನ್ನಾಗಿಸಿದೆ ಉಳ್ಳವರು ಇಲ್ಲದವರಿಕೆ ಕೊಟ್ಟು ಅವರನ್ನೂ ಸಂತುಷ್ಟಗೊಳಿಸುವ ಪರಿಪಾಟ ಅನಾದಿಕಾಲದ್ದು ಸಮಾನತೆಯನ್ನು ಘೋಷಿಸುವ ಇಂದಿನ ಯುಗದಲ್ಲಿ ಅದನ್ನು ಬರೀ ಕಾನೂನಿನ ಬಲದಿಂದ ತರುವುದು ಸಾಧ್ಯವಿಲ್ಲ, ಅದು ಉಳ್ಳವರ ಹೃದಯಾಂತರಾಳದಲ್ಲಿ ಮೂಡಿಬರಬೇಕು ಆದರೆ, ನಮ್ಮ ನಾಯಕರೆನಿಸಿಕೊಳ್ಳುವವರು ಉಳ್ಳವರ ಮನಸ್ಸನ್ನು ನೋಯಿಸುವ, ದಾನ–ಉದಾರತೆಯ ಬೀಜವನ್ನೇ ನಿರ್ನಾಮಗೊಳಿಸುವ ಕಾರ್ಯಗಳನ್ನು ಮಾಡುತ್ತಲೇ ಬಂದಿದ್ದಾರೆ ಕಾನೂನಿನ ಬಲದಿಂದಲೇ ಸಮಾಜವಾದವನ್ನು ತಂದೇತೀರುತ್ತೇವೆಂಮ ಜಂಬಕೊಚ್ಚಿಕೊಳುತ್ತಾರೆ ಭಗವಾನ್ ವಿಷ್ಣುವಾದರೂ ಬಲಿಯನ್ನು ಕೆಣಕಿದಾನ ಪಡೆಯಲಿಲ್ಲ, ಆತನನ್ನು ಮೆಚ್ಚಿಸಿಕೊಂಡೇ ತನ್ನ ಉದ್ದೇಶವನ್ನು ಈಡೇರಿಸಿ ಶ್ರೀ ಸಾಮಾನ್ಯರನ್ನು ಉದ್ಧರಿಸಿದನೆಂಬುದನ್ನು ಮರೆಯಲಾದೀತೆ? ನಮ್ಮ ಅಧಿನಾಯಕರು ಪ್ರತಿಷ್ಠೆಯ ಗೀಳನ್ನು ಬಿಟ್ಟು ಬಿಡಬೇಕು, ಉಪಾಯಾಂತರದಿಂದ ಸಂಪನ್ಮೂಲಗಳ ಲಾಭವನ್ನು ಎಲ್ಲರಿಗೂ ದೊರಕಿಸಿಕೊಡಬೇಕು ನೊಂದ ಮನವನ್ನು ಬೆಸೆಯುವುದು ಸಾಧ್ಯವಿಲ್ಲವಷ್ಟೆ

ಮೂರನೆಯದು ಗೋಪೂಜೆಯ ಸಂಭ್ರಮದ ದಿನ ಭಾರತದಲ್ಲಿ ದನವೇ ಧನವೆನಿಸಿದ್ದ ಕಾಲವೊಂದಿತ್ತು ಗೋದಾನಕಿಂತ ಮಿಗಿಲಾದ ದಾನವಿಲ್ಲವೆಂಬ ಮಾತಿತ್ತು 'ತುರುಕರು ಇದ್ದರೆ ಉಣಬಹುದು' ಎಂದು ದಾಸರ ಬೊಧಿಸಿದ್ದೂ ಉಂಟು ಶ್ರೀ ಕೃಷ್ಣ ಗೋಪಾಲ ತಾನೆ? ದನಗಳನ್ನು ಚೆನ್ನಾಗಿ ಸಾಕಿ ಸಲಹಿದರೆ ಮೊಸರುಣ್ಣಬಹುದೆಂಬುದನ್ನು ಭಗವಾನ್ ಕೃಷ್ಣನೇ ಪ್ರತ್ಯಕ್ಷ ಪ್ರಯೋಗ ಮಾಡಿ ನಮಗ ತೋರಿಸಿದ್ದಾರೆ ಆದರೆ ನಮ್ಮ ದನಗಳ ಕತೆಯೇನು? ಜನಗಳಂತೆಯೇ ಅವೂ ಅರೆಹೊಟ್ಟೆಯುಣ್ಣುತ್ತನೆ, ಅರೆಜೀವವಾಗಿ ಬದುಕಿವೆ ಸಂಖ್ಯೆಯಲ್ಲೇನೋ ಹುಲುಸಾಗಿವೆ, ಆದರೆ ಅವುಗಳ ಉತ್ಪನ್ನ ಕ್ಷೀರ ಕೆಳಮಟ್ಟದಲ್ಲಿವೆ ಈ ಪರಿಸ್ಥಿತಿಯಿರುವುದರಿಂದಲೇ ಜನಾರೋಗ್ಯವೂ ಕ್ಷೀಣವಾಗಿದೆ ವಿದೇಶಗಳಲ್ಲಿ ಹೈನವೃತ್ತಿಯಿಂದಲೇ ಬದುಕುವ ಪರಿವಾರಗಳು ಇದ್ದರೆ, ನಮ್ಮಲ್ಲಿ ಅದು ದುಸ್ಸಾಧ್ಯವೆನಿಸಿದೆ ಪಶು ಸಂಗೋಪನೆಯನ್ನು ಸಮರ್ಪಕವಾಗಿ ಮಾಡುವ ಶಕ್ತಿ ನಮಗಿಲ್ಲ ಅವುಗಳಿಗೆ ಮೇವಿನ ಅಭಾವ ಬೇರೆ ಗೋವುಗಳನ್ನು ಮಾತೆಗೆ ಸಮನಾಗಿ ಪೂಜಿಸುವವರೂ ಅವೇ ಗೋವುಗಳನ್ನು ಕಡಿಯುವವರೂ ನಮ್ಮ ದೇಶದಲ್ಲಿ ಒಂದಾಗಿ ಬಾಳಿಕೊಂಡಿದ್ದಾರೆ ಈ ವಿಭಿನ್ನತೆಯು ಕೆಲವೊಮ್ಮೆ ಘರ್ಷಣೆಗಳಿಗೆ ಕಾರಣವಾದದ್ದೂ ಇದೆ ಭಾರತೀಯ ಸಂಸ್ಕೃತಿಯು ಗೋಹತ್ಯೆಯನ್ನು ಮಹಾಪಾಪವೆಂದು ಸಾರುತ್ತದೆ— ಅಂದರೆ, ಗೋವುಗಳನ್ನು ಚೆನ್ನಾಗಿ ಪರಿಪೋಷಿಸದೆ ಅವುಗಳ ಹೃದಯವನ್ನು ಹನನ ಮಾಡುವುದಕ್ಕೆ ಅವಕಾಶ ಕಲ್ಪಿಸುತ್ತದೆಂದು ತಿಳಿಯಬಾರದು ತಾಯಿಯಂತೆ ಹಾಲು ನೀಡುವ ಗೋವಿನ ಬಗ್ಗೆ ಉದಾರ ಭಾವನೆ ಮಾತ್ರ ಸಾಲದು, ತಾಯಿಯಂತೆಯೇ ಅವನ್ನು ದೃಡವಾಗಿ ಬೆಳೆಯುವಂತೆ ಆರೋಗ್ಯಕರವಾಗಿರುವಂತೆ ಸಂರಕ್ಷಿಸಬೇಕು

ಜಲ—ನೆಲ—ಆಕಾರಗಳು ಮಾನವನ ಬದುಕಿಗೆ ಅನಿವಾರ್ಯಗಳು ವಾಯು—ತೇಜಸ್ಸುಗಳು ಅಪರಿಹಾರ್ಯಗಳು ಅವನು ಜಲವನ್ನು ಪೂಜಿಸುತ್ತಾನೆ, ನೆಲವನ್ನು ಆರಾಧಿಸುತ್ತಾನೆ ಆಕಾಶಕ್ಕೆ ಕೈ ಮುಗಿಯುತ್ತಾನೆ ವಾಯು ತೇಜಸ್ಸುಗಳನ್ನು ಅಭಿನಂದಿಸುತ್ತಾನೆ ಹಣತೆಯಲ್ಲಿ ದೀಪ ಹಚ್ಚಿ ಅಂಧಕಾರವನ್ನು ಬೆಳಗುತ್ತಾನೆ, ತನ್ನ ಹೃದಯದಲ್ಲಿ ಮನೆಮಾಡಿರುವ ಅಜ್ಞಾನಾಂಧಕಾರವನ್ನು ಜ್ಞಾನ ದೀಪ ಹಚ್ಚಿ ದೂರಮಾಗೆಯುತ್ತಾನೆ ಧನಲಕ್ಷ್ಮಿ–ಧಾನ್ಯ ಲಕ್ಷ್ಮಿಯರನ್ನು ಆಹ್ವಾನಿಸಿ ತನ್ನನ್ನು ತನು ಬೆಳಗಿಕೊಳ್ಳುತ್ತಾನೆ, ಸಮಾಜವನ್ನು ಬೆಳಗುತ್ತಾನೆ ಪ್ರತಿಯೊಬ್ಬ ನಾಗರಿಕನೂ ತನ್ನ ಉನ್ನತಿಯನ್ನು ಸಾಧಿಸಿಕೊಂಡರೆ, ಸಮಾಜವಾದ ತನಗೆ ತಾನಾಗಿಯೇ ಸ್ಥಾಪನೆಗೊಳ್ಳುತ್ತದೆ ನಮಗಿಂದು ಸಮಾಜವಾದದ ಬಗ್ಗೆ ಘೋಷಣೆಗಳು ಅನಗತ್ಯ ಆ ಬಗ್ಗೆ ಗೊತ್ತುವಳಿಗಳು,ಅನಪೇಕ್ಷಣೀಯ ಶಾಸನಗಳು ಅಪರಿಹಾರ್ಯ ವೇನಲ್ಲ ವ್ಯಕ್ತಿಗತ ಉನ್ನತಿಗೆ ಸೂಕ್ತ ವಾತಾವರಣ ಮಾತ್ರ ಅತ್ಯಗತ್ಯ ಆದರೆ, ನಾವಿಂದು ಇದೊಂದನ್ನುಬಿಟ್ಟು ಉಳಿದೆಲ್ಲವನ್ನೂ ಮಾಡುತಿದ್ದೇವೆ ಕಾಗದದ ಸಮಾಜವಾದವನ್ನೇ ನೈಜವೆಂದು ಭ್ರಮಿಸಿ ಮೋಸ ಹೋಗಿದ್ದೇವೆ ಈ ವರ್ಷದ ದೀಪಾವಳಿ ನಮ್ಮ ನಾಯಕರ ಹೃದಯಗಳನ್ನು ಬೆಳಗಲಿ, ತಮ್ಮ ತಪ್ಪುಗಳನ್ನು ಅವರು ಕಂಡುಕೊಂಡು ದೇಶವನ್ನು ಸರಿದಾರಿಯಲ್ಲಿ ಮುನ್ನಡೆಸಲಿ

ಈ ಸಂಚಿಕೆ ಹಂಚಿಕೆ

ಸೊಡರ ಹಬ್ಬದ ಸಂದರ್ಭದಲ್ಲಿ ಈ ಸಂಚಿಕೆಯನ್ನು ನಾವು ಒದುಗರ ಕೈಗಳಲ್ಲಿಟ್ಟಿದ್ದೇವೆ ಧನ–ಧಾನ್ಯ ಪೂಜೆಯಲ್ಲೇ ಮೈಮರೆಯದೆ ಜ್ಞಾನಪೂಜೆಗೂ ಒಂದು ಅವಕಾಶವೊದಗಿಸುವ ನಮ್ಮ ಉದ್ದೇಶ್ಯ ಸಾರ್ಥಕವಾದರೆ, ನಾವು ಸಂತೃಪ್ತರು ಈ ಸಂಚಿಕೆಗೆ ತಮ್ಮ ಅಮೂಲ್ಯ ಲೇಖನಗಳನ್ನು ಕಳುಹಿಸಿದ ಲೇಖಕ ಬಂಧುಗಳು ಅಭಿನಂದನಾರ್ಹರು ಸಂಚಿಕೆಯಲ್ಲಿ ತಮ್ಮ ಜಾಹಿರಾತುಗಳನ್ನು ನೀಡಿ ಸಹಕರಿಸಿದ ಸಂಘಸಂಸ್ಥೆಗಳಿಗೆ ನಾವು ಕೃತಜ್ಞರು ನಮ್ಮ ಹಿತೈಷಿಗಳೆಲ್ಲರಿಗೂ ವಿರೋಧಿಕೃತ್ ಸಂವತ್ಸರದ ಈ ದೀಪಾವಳಿಯು ಹೊಸ ಹರುಷವನ್ನು ತಂದು ಅವರ ಬದುಕನ್ನು ಬಂಗಾರ ಮಾಡಲಿಯೆಂದುಹಾರೈಸುತ್ತೇವೆ ●

ಕಾರ್ಯನಿಷ್ಠೆಯಿಂದ ಪವಾಡ ನಿರ್ಮಾಣ

ಶ್ರೀ ಎಂ. ಸುಂದರರಾಮ ಶೆಟ್ಟಿ

ಬ್ಯಾಂಕುಗಳ ಜನ್ಮಭೂಮಿ ದಕ್ಷಿಣ ಕನ್ನಡ. ಈ ಜಿಲ್ಲೆ ಹೆತ್ತ ಹಲವಾರು ಬ್ಯಾಂಕುಗಳಲ್ಲಿ ಒಂದು ವಿಜಯಾ ಬ್ಯಾಂಕು ಬಾಲ್ಯದಿಂದ ಬಾಲಗ್ರಹ ಬಡಿದಂತಿದ್ದ ಈ ಬ್ಯಾಂಕು ೧೯೬೦ರ ತನಕವೂ ಅದರಿಂದ ಮುಕ್ತಿ ಹೊಂದಲಿಲ್ಲ. ಒಬ್ಬೊಬ್ಬನ ಒಂದೊಂದು ದೀರ್ಘ ಕಾಲದ ರೋಗ ಯಾರೋ ಒಬ್ಬನಿಂದ ರಾತ್ರೆ ಬೆಳಗಾಗುತ್ತಲೇ ದೂರವಾಗುವುದು ಕತೆಗಳಲ್ಲಿ ಸರ್ವೇಸಾಮಾನ್ಯ. ವಿಜಯಾ ಬ್ಯಾಂಕಿಗೆ ಬಡಿದ ಬಾಲಗ್ರಹ ೧೯೬೨ರಲ್ಲಿ ಶ್ರೀ ಎಂ ಸುಂದರರಾಮ ಶೆಟ್ಟರಿಂದ ದೂರವಾಯ್ತು.

ಅಂದಿನಿಂದ ಇಂದಿನವರೆಗೂ ಬ್ಯಾಂಕು ಪವಾಡ ನಿರ್ಮಿಸಿದೆ. ಶ್ರೀ ಶೆಟ್ಟರನ್ನು ಪವಾಡಪುರುಷನನ್ನಾಗಿ ಮಾಡಿದೆ. ಒಂದೂವರೆ ಕೋಟಿ ರೂಪಾಯಿಗಳ ಠೇವಣಿಯನ್ನು ಮೂವತ್ತುಮೂರೂವರೆ ಕೋಟಿಗೆ ಅವರು ಏರಿಸಿದ್ದಾರೆ. ೨೧ ಶಾಖೆಗಳನ್ನು ೧೩೭ ಶಾಖೆಗಳಿಗೆ ಹೆಚ್ಚಿಸಿದ್ದಾರೆ. ಒಂದು ಸೀಮಿತ ಪ್ರದೇಶದಲ್ಲಿ ಮಾತ್ರ ಬೇರು ಬಿಟ್ಟಿದ್ದ ಬ್ಯಾಂಕನ್ನು ದೇಶವ್ಯಾಪಿಯಾಗಿ ಮಾಡಿದ್ದಾರೆ ಇಂದು ೧೭೦೦ ಜನ ನೌಕರರನ್ನು ಹೊಂದಿರುವ ಬ್ಯಾಂಕು ವಿದೇಶೀ ವ್ಯವಹಾರಕ್ಕೂ ಮುಂದೆ ಬಂದಿದೆ.

ಈ ಬಗೆಯ ಅದ್ಭುತ ಪವಾಡ ಅಸಾಮಾನ್ಯವೇ. ರಾಷ್ಟ್ರೀಕೃತ ಬೇಂಕುಗಳ ನಡುವೆ ಸ್ಪರ್ಧಾತ್ಮಕ ಮನೋ ಭಾವನೆಯಿಂದ ಸೇವೆಗೆ ಮುಂದಾಗುವುದು, ಜತೆಯಲ್ಲೇ ಬ್ಯಾಂಕಿಗೆ ನಷ್ಟವಾಗದಂತೆ ಎಚ್ಚರಿರುವುದು ಕಡಮೆ ಮಹತ್ವದಲ್ಲ. ೧೯೬೨ರಿಂದ ಬ್ಯಾಂಕಿನ ಗೌರವ ಅಧ್ಯಕ್ಷರಾಗಿ, ೧೯೬೯ರಿಂದ ಪೂರ್ಣಾವಧಿಯ ಅಧ್ಯಕ್ಷರಾಗಿ ಸೇವಾಬದ್ಧರಾಗಿರುವ ಶ್ರೀ ಸುಂದರರಾಮ ಶೆಟ್ಟರು ಒಬ್ಬ ವ್ಯಕ್ತಿಯ ನಿಷ್ಠಾಯುಕ್ತ ಸೇವೆಯಿಂದ ಒಂದು ಸಂಸ್ಥೆಯನ್ನು ಎಲ್ಲರ ಸಹಕಾರದಿಂದ ಹೇಗೆ ಬೆಳೆಸಬಹುದೆಂದು ತೋರಿಸಿ ಕೊಟ್ಟ ಧೀಮರು

ಸದಾ ನಗುಮೊಗದಿಂದ ಕೂಡಿರುವ ಶ್ರೀ ಶೆಟ್ಟರು ಇರುವೆಯಂತೆ ಕ್ರಿಯಾಶೀಲರು. ಒಂದು ನಿ ಮಿ ಷ ವ ನ್ನೂ ವ್ಯರ್ಥ ಕಳೆಯುವುದೆಂದರೆ ಅವರಿಗಾಗದು. ಸದೈವ ಬ್ಯಾಂಕಿನ ಹಿತಾಭಿವೃದ್ಧಿಗಳತ್ತಲೇ ಚಿಂತಿಸುತ್ತಿರುವ ಶ್ರೀಯುತರು ತಾವು ಬೇರೆ ಬ್ಯಾಂಕು ಬೇರೆಯೆಂದು ತಿಳಿದವರಲ್ಲ. ಇಂತಹ ಅಭ್ಯಾಸ ಅವರಿಗೆ ಅಂಟಿದ್ದು ಸಾಮಾನ್ಯ ವಿಮೆಯಿಂದ. ಬಾಲ್ಯವನ್ನು ಕಳೆಯುತ್ತಲೇ ಅವರು ಇಳಿದದ್ದು ವಿಮಾ ವಿಭಾಗದಲ್ಲಿ. ಅಲ್ಲಿ ತನ್ನ ಕರ್ತವ್ಯತತ್ಪರತೆಯಿಂದ ಕ್ರಿಯಾ ಶಕ್ತಿ-ಸಾಧನೆಗಳಿಂದ ಮೇಲೆ ಮೇಲಿನ ಹುದ್ದೆಗಳನ್ನು ಪಡೆಯುತ್ತಲೇ ಹೋದರು.

೧೯೬೨ರ ವರೆಗೂ ಅವರಿಗೂ ವಿಜಯಾ ಬ್ಯಾಂಕಿಗೂ ಸಂಬಂಧವಿತ್ತು. ಆ ವರ್ಷ ಅದರ ಗೌರವ ಅಧ್ಯಕ್ಷರಾಗಿ ಆಯ್ಕೆಯಾದದ್ದು ಬ್ಯಾಂಕಿನ ಸುದೈವ. ಅಂದಿನಿಂದಲೇ ಬ್ಯಾಂಕಿನ ಚರ್ಯೆ ಬದಲಾಯಿತು. ವಾಮನ ರೂಪ ತ್ರಿವಿಕ್ರಮವಾಯ್ತು. ಇಂತಹ ಪವಾಡ ಬ್ಯಾಂಕಿಂಗ್ ಇತಿಹಾಸದಲ್ಲಿ ಅಪರೂಪ ಮಾತ್ರವಲ್ಲ; ಅಪರೂಪದಲ್ಲಿ ಅಪರೂಪ.

ಶ್ರೀ ಸುಂದರ ರಾಮ ಶೆಟ್ಟರು ಬ್ಯಾಂಕಿನ ಪೂರ್ಣಾವಧಿಯ ಅಧ್ಯಕ್ಷರಾದ ಸಮಯ—ಸನ್ನಿವೇಶಗಳೂ ವಿಲಕ್ಷಣವೇ. ದೇಶದ ಸರಕಾರಿ ಒಡೆತನದ 'ರಾಷ್ಟ್ರೀಕೃತ ಬ್ಯಾಂಕುಗಳು' ಕೇರಿ ಕೇರಿಗಳಲ್ಲಿ ಶಾಖೆಗಳನ್ನು ತೆರೆಯಲು ಸಾಲನೀಡಲು ಮುಂದೆ ಬರುತ್ತಿವೆ. ಈಗಾಗಲೇ ಭದ್ರ ಬುನಾದಿ[illegible] ಮೇಲೆ ನಿಂತ ಈ ಬ್ಯಾಂಕುಗಳು ಒಂ[illegible] ಮ್ಮೆ ನಷ್ಟವನ್ನಾದರೂ ಸಹಿಸ ಬಲ್ಲವು[illegible] ದರೆ, ವಿಜಯಾ ಬ್ಯಾಂಕು ಇನ್ನೂ ಅಭಿ[illegible] ದ್ಧಿಶೀಲವಾಗುತ್ತಿದೆ ಮಾತ್ರ. ಆದುದರಿಂ[illegible] ಹೊಸ ಹೊಸ ಶಾಖೆಗಳನ್ನು ತೆರೆಯುವ[illegible] ಹೊಸ ಹೊಸ ಸಾಲಗಳನ್ನು ನೀಡುವಲ್ಲಿ[illegible] ದು ತುಸುವಾದರೂ ಎಚ್ಚರ ತಪ್ಪಿದರೆ, ಪಾಯ ಖಂಡಿತವೇ. ಶ್ರೀ ಶೆಟ್ಟರು ವಿ[illegible] ವ್ಯವಹಾರದಲ್ಲಿ ಹೊಂದಿದ ಸುದೀರ್ಘ[illegible] ನುಭವ ಅವರ ರೋಮರೋಮಗಳಲ್ಲಿ[illegible] ಬಿ ತಳುಕಾಡುತ್ತಿದೆ. ಆದುದರಿಂದಲೇ[illegible] ರೆಲ್ಲೂ ಕೈಮೈಸುಟ್ಟುಕೊಳ್ಳಲಿಲ್ಲ; ಕಳೆದ[illegible] ರ್ಷ ಎಂಟು ಲಕ್ಷ ರೂಪಾಯಿಗಳ ಲಾ[illegible] ನ್ನೇ ಬ್ಯಾಂಕು ತೋರಿಸಿದೆ.

ಶ್ರೀ ಸುಂದರರಾಮ ಶೆಟ್ಟರು ಮ[illegible] (ದ. ಕ. ಜಿಲ್ಲೆ)ಯವರು. ಗೌರವಸ್ಥ ನ[illegible] ತನಕ್ಕೆ ಸೇರಿದವರು. ತಮ್ಮ ಕ್ರಿಯಾಸಿದ್ಧಿ[illegible] ಯಿಂದ ವಂಶವನ್ನೂ ಊರನ್ನೂ ಬೆಳಗಿದ[illegible] ರು. ದಕ್ಷಿಣ ಕನ್ನಡ ಜಿಲ್ಲೆಯು ಹೆತ್ತ[illegible] ತ್ಪುತ್ರರಲ್ಲಿ ಶ್ರೀ ಶೆಟ್ಟರೂ ಒಬ್ಬರೆಂಬು[illegible] ನಿರ್ವಿವಾದ. ಅವರು ಸದ್ಯ ವಿದೇಶೀ ಬ್ಯಾ[illegible] ಕಿಂಗ್ ವ್ಯವಹಾರ ಸಂಬಂಧದ ಮಾತುಕ[illegible] ಗೆಂದು ವಿದೇಶ ಸಂಚಾರಕ್ಕೆ ತೊಡಗಿದ್ದಾ[illegible] ಅವರ ಸಂಚಾರ ಯಶಪ್ರದವಾಗಲಿ; ವಿ[illegible] ಯಾ ಬ್ಯಾಂಕಿನ ಮೂಲಕ ಅವರ ಸೇವೆ[illegible] ಹುಕಾಲ ದೇಶಕ್ಕೆ ದೊರೆಯುವಂತಾಗಲಿ[illegible]

ಸ್ಥಾಪನೆ: 1947 | ರಜತೋತ್ಸವ ವರ್ಷ 1971

ಬಂದಿದೆ ಉಲ್ಲಾಸದ ದೀಪಾವಳಿ! ತುಂಬಲಿ ಸರ್ವತ್ರ ಶುಭಾವಳಿ!

ದೀಪಾಲಂಕಾರದಿಂದ ಮನೆ-ಮನೆಯೂ ಬೆಳಗುವಂತೆ

ನಮ್ಮ ಚಿನ್ನಾಭರಣಗಳಿಂದ ಮೈ-ಮನ ಪ್ರಕಾಶಿಸಲಿ!

1947ರಲ್ಲಿ ನಮ್ಮ ಸಂಸ್ಥೆಯು ಉದಯಿಸಿತು. ಅಂದಿನಿಂದ ಇಂದಿನವರೆಗೆ ನಾವು ಸಲಿಸುತ್ತ ಬಂದಿರುವ ಸೇವೆಯು ನಮ್ಮನ್ನು ಮುನ್ನಡೆಸಿ ತಂದಿದೆ. ಈ ಬಗ್ಗೆ ನಮ್ಮ ಅಪಾರ ಗ್ರಾಹಕರಿಗೂ ಹಿತೈಷಿಗಳಿಗೂ ನಾವು ಕೃತಜ್ಞರು.

ರಜತೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದ ಜಿಲ್ಲೆಯ ಅತ್ಯಾಧುನಿಕ ಸೌಂದರ್ಯವರ್ಧಕ ಚಿನ್ನಾಭರಣಗಳ ಭಂಡಾರ.

ದೀ ಪಾ ವ ಳಿ ಯ ಶು ಭಾ ಶ ಯ ಗ ಳು !

ಎಸ್. ಎಲ್. ಶೇಟ್ ಡಾಯ್‌ಮಂಡ್ ಹೌಸ್

ಕಾರ್ನಾಡು ಸದಾಶಿವರಾವ್ ರಸ್ತೆ, ಹಂಪನಕಟ್ಟೆ, ಮಂಗಳೂರು-1

S. L. SHET DIAMOND HOUSE

K. S. RAO ROAD, MANGALORE-1

ವಿದ್ವಾನ್ ಕೆ. ವೆಂಕಟರಾಯಾಚಾರ್ಯ

ಗೋಕರ್ಣ ಮಠದ

ಎರಡು ಚಾರಿತ್ರಿಕ ವಿಚಾರಗಳು

[ಜಿಜ್ಞಾಸಾತ್ಮಕಗಳು]

ದಂತಕತೆಗಳು ನಾನಾ ಕಾರಣಗಳಿಂದ ಹುಟ್ಟುತ್ತವೆ. ಇವುಗಳ ಸತ್ಯಾಸತ್ಯತೆಯನ್ನು ದಾಖಲೆಗಳಿಂದಲೇ ನಿರ್ಣಯಿಸಬೇಕು. ಗೋಕರ್ಣ ಮಠದ ಎರಡು ಚಾರಿತ್ರಿಕ ವಿಚಾರಗಳ ಮೇಲೆ ಜಿಜ್ಞಾಸೆ ನಡೆದರೆ ಮಾತ್ರ ಅವುಗಳ ಸತ್ಯಾಸತ್ಯತೆಯ ಬಗ್ಗೆ ನಿರ್ಣಯವಾಗಬಲ್ಲುದು. ಗತಾನುಗತಿಕ ದಂತಕಥೆಗಳಿಂದ ಗಲಿಬಿಲಿ ಮಾತ್ರವುಳಿದೀತು.



" ಕಣ್ಣು ನೋಯುತ್ತಾ? ನೀರು ಬರುತ್ತಾ ? "
"ತುಂಬಾ ಬರುತ್ತೇ ಡಾಕ್ಟ್ರೇ ಅಳುವಾಗ."

ಇತ್ತೀಚಿನ ಬರೆಹದಲ್ಲಿ ಎರಡು ಐತಿಹ್ಯಗಳ ಬಗೆಗೆ ಚಾರಿತ್ರಿಕ ವಿಚಾರಗಳ ಆಧಾರಗಳೇನಿವೆಯೆಂಬುದು ಚರ್ಚಿಸಲಾಗಿದೆ.

೧) ಶ್ರೀ ಗೋಕರ್ಣ ಪರ್ತಗಾಳಿ ಜೀವೋತ್ತಮ ತೀರ್ಥ ಶ್ರೀಪಾದ ವಡೆಯರ ಸ್ವಾಮಿಯವರಿಗೆ ಉಡುಪಿಯ ಶ್ರೀ ಸೋದೆ ವಾದಿರಾಜ ಮಠದ ಶ್ರೀ ವಾದಿರಾಜ ಸ್ವಾಮಿಯವರಿಂದ ಆದರದ ಮನ್ನಣೆ–ಎಂಬೀ ಶೀರ್ಷಿಕೆಯ ಲೇಖನದ ಪುನರ್ಮುದ್ರಣವು ಉ. ಕ ಜಿಲ್ಲೆಯ ಕುಮಟದಿಂದ ಪ್ರಕಟವಾಗುವ 'ಜೀವೋತ್ತಮ' ದಲ್ಲಿದೆ. ಈ ಐತಿಹ್ಯ ಯಥಾಪ್ರತಿ ಬರೆದು, ಇದರ ಬಗೆಗೆ ಕೆಲವು ಜಿಜ್ಞಾಸೆಗಳು ಇಲ್ಲಿ ಬರೆಯಲಿವೆ; (ಇದು 16ನೆ ಶತಕದಲ್ಲಿ ನಡೆದುದು).

ಇಂದಿನ ಸೋದಾ ಆ ಕಾಲದಲ್ಲಿ ಸುಧಾನಗರಿ ಎನಿಸಿಕೊಂಡಿತ್ತು. ಅರಸಪ್ಪ ನಾಯಕ ಪಟ್ಟದ ಪ್ರಭು. ಅವರ ಆಶ್ರಯದಲ್ಲಿ ವಾದಿರಾಜರ ತಪೋವನ ಮಠ ನಡೆದಿದ್ದವು ಸ್ವಾದಿಯ ರಮಾ–ತ್ರಿವಿಕ್ರಮ ದೇವಾಲಯವನ್ನು ಅರಸಪ್ಪ ನಾಯಕನ ಪ್ರೀತ್ಯರ್ಥವಾಗಿಯೆ ವಾದಿರಾಜರು ಮುಂದಾಗಿ ಕಟ್ಟಿಸಿದರು ಪ್ರತಿದಿನ ಸ್ವಾಮಿಗಳೇ ತ್ರಿವಿಕ್ರಮನ ಪೂಜೆ ವಿನಿಯೋಗಾದಿಗಳನ್ನು ನಡೆಯಿಸುವುದು ವಾಡಿಕೆ. ಬಲಿಚಕ್ರವರ್ತಿಯ ಗರ್ವನಿರ್ವಹಣೆಗಾಗಿ ಬಂದ ವಾಮನಮೂರ್ತಿ ತ್ರಿವಿಕ್ರಮನಾಗಿ ಪೂಜೆಗೊಳ್ಳುತ್ತಿದ್ದಾನೆ ಪೂಜೆಮುಗಿದು ಆರತಿಯಾಗುತ್ತದೆ. ಸ್ವತಃ ಸ್ವಾಮಿಗಳೇ ಆರತಿಯನ್ನು ಬೆಳಗುತ್ತಿದ್ದಾರೆ. ಸ್ವಾಮಿಗಳು ಒಮ್ಮೆಲೇ ಹೊರಗೆ ನೋಡಿದರು. ನೋಡಿದವರು. ಗಂಟೆ ಆರತಿ ಸಮೇತವಾಗಿಯೇ ದೇವಾಲಯದ ಹೊರ ಬಂದರು ಗಂಟೆಬಾರಿಸಿತು, ಭಕ್ತರೂ, ಮಠದ ಕಾರುಭಾರಿಗಳೂ ನೋಡುತ್ತಲೇ ಇದ್ದಾರೆ ಆಕಾಶದತ್ತ ಮುಖವಾಗಿ ಅದೇ ಆರತಿಯನ್ನು ಬೆಳಗಿಬಿಟ್ಟರು, ಸ್ವಾಮಿಗಳು.

ಎಲ್ಲೆಲ್ಲಿಯೂ ಮ್ಲಾನವದನ. ಭಕ್ತಜನಗಳಲ್ಲಿ ಕಾತರ. ಇಂದು ಇದೆಂಥ ಅಚಾತುರ್ಯ ನಡೆದು ಹೋಯಿತು! ಪ್ರಜಾಭಿಪ್ರಾಯ ಕೆರಳಿತು. ತೀರ್ಥ ಪ್ರಸಾದ ವಿತರಣೆಯಾದ ನಂತರ ಸ್ವಾಮಿಗಳಿಗೆ ಅದರ ಸ್ಪಷ್ಟೀಕರಣ ಕೇಳಿದರು. ವಾದಿರಾಜ ಸ್ವಾಮಿಗಳು ನಗುತ್ತ 'ತ್ರಿವಿಕ್ರಮನ ಭಕ್ತ ಶಿರೋಮಣಿಯಾದ ಜೀವೋತ್ತಮ ತೀರ್ಥರು ಸ್ವದೇಹವನ್ನು ತ್ಯಜಿಸಿ, ಪರಮಾತ್ಮನನ್ನು ಸೇರಲು ಹೊರಟದ್ದು, ಕಂಡೆ. ಇಲ್ಲಿ ಒಳಗಿದ್ದವನೂ, ಅಲ್ಲಿ ಹೊರಟದ್ದವನೂ ಒಬ್ಬನೇ ಆದ್ದರಿಂದ ಈ ಆರತಿಯನ್ನು ಆತನಿಗೆ ತೋರಿಸಿದೆನೆಂದರು.

ಆಡಳಿತ ವರ್ಗದಲ್ಲಿ ದ್ವೇಷದ ಹೊಗೆಯೆದ್ದಿತು ಇವರ ಸತ್ವ ಪರೀಕ್ಷಣೆಗಾಗಿ ಭಟಕಳದಲ್ಲಿಗೆ(ಇಂದಿನ ಪರ್ತಗಾಳಿಮಠ ಆಗ ಭಟಕಳದಲ್ಲಿತ್ತು) ಜನ ಹೋಯಿತು. ಅದೇ ದಿನ ಅಷ್ಟೇ ಹೊತ್ತಿಗೆ ಜೀವೋತ್ತಮ ತೀರ್ಥರು ಅವಸಾನವಾಗಿದ್ದರು. ಪ್ರಚಂಡ ಕ್ಷೋಭೆಯೆದ್ದಿತು. ತಕರಾರು ಅಷ್ಟ ಮಠದ ಹಿರಿಯರ ಹತ್ತಿರವೂ ಹೋಯಿತು ಸಾರ್ವಜನಿಕ ವಿಚಾರಣೆ ನಡೆಯ ಬೇಕೆಂದರು ಸೋದೆಯಿಂದ ವಾದಿರಾಜರನ್ನು ಕರೆಯಿಸಿದರು "ಪುಣ್ಯಾತ್ಮನಾದ ಜೀವಾತ್ಮ ದೇಹಮುಕ್ತನಾಗಿ ಪರಮಾತ್ಮನನ್ನು ಸೇರಿದಾಗ ಅವನೇ ಪರಮಾತ್ಮ! ಅಲ್ಲಿ ಭಿನ್ನತೆಯಿಲ್ಲ'ವೆಂದರು ಅಂದಿನ ಅವರ ಪ್ರಶ್ನೋತ್ತರ ಸಂಸ್ಕೃತದಲ್ಲಿ ಸೋದೆಮಠದಲ್ಲಿ (ಉಡುಪಿಯಲ್ಲಿ) ಇನ್ನೂ ಇದೆ ಈ ವಿಷಗಳಿಗೆಯ ನಂತರ ತಾನು ಉಡುಪಿಗೇ ಬಾರೆನೆಂದು ವಾದಿರಾಜರು ಸೋದೆಯಲ್ಲಿಯೇ ಬಂದು ನೆಲಸಿದರು ಇಂದು ಅವರ ತಪೋವನ, ಸಮಾಧಿ, ತ್ರಿವಿಕ್ರಮ ದೇವಾಲಯ ಸ್ವಾದಿಯಲ್ಲಿ ಇದೆ" (ಆರಾಧನಾ ಶಿರಸಿ ತಾ 16–12–63. ಪುಟ. 17)

ಜಿಜ್ಞಾಸೆಗಳು: ಜೀವೋತ್ತಮ ತೀರ್ಥರು ಶ್ರೀ ಮಧ್ವಾಚಾರ್ಯರಿಂದ ನಾಲ್ಕನೆಯ ಸ್ವಾಮಿಗಳೆಂದು ತಿಳಿದು ಬರುತ್ತಿದೆ (ಮಾಧ್ವ ವಾಙ್ಮಯತಪಸ್ವಿಗಳು ಪು.518) ಅವರ ಕಾಲ ಯಾವುದು? ವಾದಿರಾಜರು ಮಧ್ವಾಚಾರ್ಯರಿಗಿಂತ 20 ನೆಯವರು (1480–1600 ಇಸ್ವಿಯಲ್ಲಿ ಇದ್ದರೆಂದು ಕೇಳುತ್ತದೆ ಇವರಲ್ಲಿ ಏಕಕಾಲಮಾನ ಸಂಭವವಲ್ಲ!

ಶ್ರೀ ಜೀವೋತ್ತಮ ತೀರ್ಥರು ಬಹಳ ಕಾರಣಿಕರೆನ್ನಲು ಈ ಪ್ರವಾದವುಂಟಾಗಿರಬೇಕು. ಆದರೆ, ಇದು ನಂಬತಕ್ಕುದಲ್ಲ. ಏಕೆಂದರೆ, ಇಲ್ಲಿ ಇಕ್ಕಡೆಗೆ ಜೀವಾತ್ಮ—ಪರಮಾತ್ಮರ ಅಭೇದ ನಿರೂಪಣೆಯಿದೆ ಇದು ದ್ವೈತ ಸಿದ್ಧಾಂತಕ್ಕೆ ತೀರಾ ದೂರವಾದುದು ಹಾಗಾಗಿ ಇದರ ಸತ್ಯಾಸತ್ಯತೆಯ ಬಗ್ಗೆ ಶ್ರೀ ಗೋಕರ್ಣ ಮಠಾಧೀಶರೂ, ಶ್ರೀ ಸೋದೆಯ ಮಠಾಧೀಶರೂ ತಕ್ಕ ಪ್ರಕಟನೆಗಳನ್ನು ಅವಶ್ಯವಾಗಿ ಕೊಡಬೇಕು ತಮ್ಮ ಶಿಷ್ಯಾವಳಿ ಇಂತಹ ಅನಾಧಾರದ ಹೇಳಿಕೆಗಳಿಂದ ತಮ್ಮೊಳಗೆ ಬೇಸರವಾಗುವಂತೆಳಸಲು ಬಿಡಬಾರದು. ಚಾರಿತ್ರಿಕಾಭಿಮಾನಿಗಳು ಈ ಬಗ್ಗೆ ಎಚ್ಚರ ವಹಿಸಬೇಕು! ಸಾಮಾಜಿಕರೂ ಇತ್ತ ಹೆಚ್ಚು ಗಮನಿಸಬೇಕಾಗಿ ಅರಿಕೆ.

೨) ಶ್ರೀ ಗೋಕರ್ಣ ಮಠದ ಹಿಂದಿನ ಸ್ವಾಮಿಗಳೊಬ್ಬರ (ವಿದ್ಯಾಧೀಶರ) ಬಗೆಗೆ ದೊರೆತ ಬೇರೊಂದು ಲಿಖಿತ ರೂಪದ ವಿಷಯವಿದು, ಈ ಗೆಗೆ ಚಾರಿತ್ರಿಕವಾದ ಆಧಾರವಿಲ್ಲೆಂದೇ ಇಲ್ಲಿ ಜಿಜ್ಞಾಸಾತ್ಮಕವಾಗಿ ಬರೆದಿದೆ.

"ವಿದ್ಯಾಧೀಶ ವಡೇರು ಸಂಜ್ಞಕಯತಿಂ
ಶ್ರೀ ಮಾಧ್ವ ಭಟ್ಟಾರಕಂ|
ಜಿತ್ವಾ ಕೆಳದಿ ವೆಂಕಟಯ್ಯ ಸನ್ನಿಧೌ
ಆಂದೋಲಿಕಾಂ ಪ್ರಾಪ್ತವಾನ್|
ಯಶ್ಚಕ್ರೇ ಮುನಿವರ್ಯ ಸೂತ್ರ ವಿವೃತಿಂ
ಸಿದ್ಧಾಂತ ಭಂಗಂ ತಥಾ|
ಮಾಧ್ವಾನಾಂ. ತಮಹಂ ಗುರೂಪ

(ಇಪ್ಪತ್ನಾಲ್ಕನೇ ಪುಟ ನೋಡಿರಿ)

Oh! What a Joy!!!
With
BikoJoy!!!

● Double action
○ Refreshing
○ Health giving



★ 5 Star Drinks

× Mangorus
× Biccola
× Brinda
× Orange
× Lemon

Mangorus contains
Alphonso Juice

Bharath Industrial & Canning Co. Ltd.
KAUP, S.K.
Gram: BICCO
Phone: 29 & 41
Sales Depot: Bhavanthi St., Mangalore—1
Phone: 3266

ಪ್ರೊ। ಎಂ. ಎಸ್.ಎಸ್.ರಾವ್

ಅಣುಶಕ್ತಿಯು ಇಂದು ಆಹಾರ ಸಮಸ್ಯೆಯನ್ನು ನೀಗಿಸಬಲ್ಲುದೆ?

ಇಂದು ಮಾನವ ಜೀವನದ ಉನ್ನತಿಯಲ್ಲಿ ಅಣುಶಕ್ತಿಯ ಅಪಾರ ಕ್ರಾಂತಿಕಾರಕ ಭಾಗವಿದೆ. ಅವುಗಳನ್ನು ಬಳಸಿಕೊಳ್ಳಬಹುದಾದ ರೀತಿ ನೀತಿಗಳಿಂದ ಮಾನವನ ಭಾಗ್ಯದ ಬಾಗಿಲು ತೆರೆಯುವುದರಲ್ಲಿ ಸಂದೇಹವಿಲ್ಲ. ಪ್ರಕೃತ ಲೇಖನ ಕೃಷಿರಂಗದಲ್ಲಿ ಅಣುಶಕ್ತಿಯ ಬಳಕೆಯ ಅಪಾರ ಪ್ರಯೋಜನದ ಕುರಿತು ವಿದ್ವತ್ಪೂರ್ಣ ಪ್ರಬಂಧವಾಗಿದೆ. ಅಣುಶಕ್ತಿಯಿಂದ ಆಹಾರ ಸಮಸ್ಯೆ ಬಗೆಹರಿಯ ಬಲ್ಲುದೇ ಎಂಬುದಕ್ಕೆ ಪ್ರೊಫೆಸರ್ ರಾಯರು "ಹೌದು" ಎಂದು ಸಾಧಾರವಾಗಿ ಸಿದ್ಧಪಡಿಸಿ ತೋರಿಸುತ್ತಾರೆ.

ವಿಜ್ಞಾನವೇ ಪ್ರಾಧಾನ್ಯವಾದ ಇಂದಿನ ಜಗತ್ತಿನಲ್ಲಿ ಅಣುಶಕ್ತಿಯಿಂದ ಮಾನವನಿಗೇನು ನೇರ ಪ್ರಯೋಜನವಾಗಿದೆ? ಎಂದು ಕೇಳುವವರಿಗೆ ಕೊರತೆಯೇನಿಲ್ಲ. ಅನೇಕ ಹಿಂದುಳಿದ ರಾಷ್ಟ್ರಗಳ ಜನತೆ ಹಸಿವು ದಾರಿದ್ರ್ಯಗಳಿಂದ ತೊಳಲುತ್ತಿರುವಾಗ, ಮಾನವನು ಭೂಮಿಯ ಮೇಲೆ ನಿಂತು ಚಂದ್ರ ಲೋಕದ ಕಡೆ ಮುಖಮಾಡಿ, ಕೋಟಿಗಟ್ಟಲೆ ಹಣವ್ಯಯ ಮಾಡಿ, ಅಣುಶಕ್ತಿಯಿಂದ ಆಕಾಶ ಯಾನದ ಅದ್ಭುತ ಸಾಧನೆಗಳನ್ನು ಕೈಕೊಳ್ಳುವುದರಿಂದ ಬರುವ ತಕ್ಷಣದ ಲಾಭವಾದರೂ ಏನು? ಎಂದು ಚಿಂತಿಸುವವರಿಗೂ ಅಭಾವವಿಲ್ಲ ಆದರೆ ಕ್ಷಣಕಾಲ ನಿರ್ವಿಕಾರವಾಗಿ ಆಲೋಚಿಸಿದರೆ, ಅಣುಶಕ್ತಿಯ ಅಪಾರ, ಕ್ರಾಂತಿಕಾರಕ, ಸಾಧ್ಯತೆಗಳೂ ಮತ್ತು ಅವುಗಳನ್ನು ಬಳಸಿಕೊಳ್ಳ ಬಹುಗಾದ ರೀತಿ ನೀತಿಗಳಿಂದ ಮಾನವನ ಭಾಗ್ಯದ ಬಾಗಿಲು ತೆರೆಯುವುದರಲ್ಲಿ ಸಂದೇಹವಿಲ್ಲ. ಈ ಅಣುಶಕ್ತಿಯು ಮಾನವನ ಕೈಯಲ್ಲಿ ಅತ್ಯಂತ ವಿಧೇಯ ಸೇವಕನಾಗಿ ಕೆಲಸ ಮಾಡಬಲ್ಲವು. ವಿಕಿರಣ ಹೊಂದುವ ಅಣುಗಳು ಆಹಾರ ಸಮಸ್ಯೆಗಳನ್ನು ಎದುರಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತವೆಯೆಂಬುದನ್ನು ಗಮನಿಸಿದಾಗ ಅವುಗಳ ಹಿರಿಮೆ ಗೋಚರವಾಗುತ್ತದೆ. ಆದ್ದರಿಂದ ಕೃಷಿರಂಗದಲ್ಲಿ ಅಣುಶಕ್ತಿಯ ಬಳಕೆಯ ಬಗೆಗೆ ಮಾತ್ರ ವಿಷಯಾಲೋಚನೆಯನ್ನು ಸೀಮಿತ ಗೊಳಿಸಿ ಕೊಳ್ಳಬಹುದು. ಇಂದು ಆರ್ಥಿಕ ಮಹತ್ವದ ಹೊಸ ಹೊಸ ಸಸ್ಯ–ಪ್ರಾಣಿ ತಳಿಗಳನ್ನು ಶೋಧಿಸುವಿಕೆ, ಈಗ ಇರುವುದನ್ನೇ ಉತ್ತಮ ಪಡಿಸುವಿಕೆ ಹೊಸ ಹೊಸ ಬಗೆಯ ಆಹಾರಗಳ ಪರಿಷ್ಕರಣ ಮತ್ತು ಸಂಶ್ಲೇಷಣೆ ಹಾಗೂ ಸಂಯೋಜನೆ, ಅವುಗಳನ್ನು ಹದಗೊಳಿಸುವಿಕೆ, ಧೀರ್ಘಕಾಲ ಕಾಯ್ದಿಡುವಿಕೆ ಸಾಗಣೆ ಇತ್ಯಾದಿ ರಂಗಗಳಲ್ಲಿ ಈಗ ಅನೇಕ ಮಹತ್ವದ ಸಾಧನೆಗಳು ಉಂಟಾಗುತ್ತಿವೆ. ಭಾರತವೂ ಈ ದಿಶೆಯಲ್ಲಿ ಗಮನಾರ್ಹವಾದ ಮುನ್ನೆಜ್ಜೆ ಇಡುತ್ತಿದೆ.

ಜಗತ್ತಿನ ಅನೇಕ ಪ್ರಮುಖ ರಾಷ್ಟ್ರಗಳಲ್ಲಿ ಇಂದು ಅಣು ರಿಯಾಕ್ಟರ್‌ಗಳಿಂದ ರೇಡಿಯೊ ಐಸೊಟೋಪ್‌ಗಳನ್ನು (Radio isotope) ಉತ್ಪಾದಿಸಲಾಗುತ್ತಿದೆ. ಇವುಗಳಲ್ಲಿ 'ಗಾಮಾ ರೇಡಿಯೇಷನ್' (Gama Radiation) ಎಂಬುದು ಒಂದು ವಿಧ ಅದರಲ್ಲಿ 'ಕೋಬಾಲ್ಟ್—60' (Cobalt—60) ಎಂಬುದು ಬಹು ಉಪಯುಕ್ತವಾದುದು. ಅದನ್ನು ದೊಡ್ಡ 'ಗ್ರ್ಯಾಫೈಟ್ ರಿಯಾಕ್ಟರು'ಗಳಲ್ಲಿ ಕೋಬಾಲ್ಟ್ ಧಾತುವನ್ನು ವಿಕಿರಣತೆಗೆ ಒಳಪಡಿಸುವುದರಿಂದ. ಈ ಕೋಬಾಲ್ಟ್—60 ಎಂಬುದನ್ನು ಸಾಕಷ್ಟು ಪ್ರಮಾಣ ಮತ್ತು ಅಲ್ಪ ಬೆಲೆಯಲ್ಲಿ ಉತ್ಪಾದಿಸಬಹುದಾಗಿದೆ ಕೃಷಿ ರಂಗದಲ್ಲಿ ಅಣುಶಕ್ತಿಯನ್ನು ಬಳಸಿಕೊಳ್ಳುವ ಮುಖ್ಯ ಉದ್ದೇಶವೆಂದರೆ, ಅಣುವಿಕಿರಣತೆಯಿಂದ ವಿವಿಧ ಸಸ್ಯಗಳ ಬೀಜಗಳು ಪರಾಗ ಶಿಲೀಂಧ್ರ ಸಂಸ್ಕರಿಸಿದ ಆಹಾರಗಳು ಆಂಟಿ ಬಯೊಟಿಕ್ ವಸ್ತುಗಳನ್ನು ಒಳಗೊಂಡ ಅನೇಕ ವೈದ್ಯಕೀಯ ಮಹತ್ವದ ರಾಸಾಯನಿಕ ವಸ್ತುಗಳು ಇತ್ಯಾದಿಗಳನ್ನು ಉತ್ತಮಗೊಳಿಸಿ, ಪ್ರಾಯೋಗಿಕ ಬಳಕೆ ಮತ್ತು ಉಪಯುಕ್ತತೆಯ ದೃಷ್ಟಿಯಿಂದ ಅವುಗಳನ್ನು— ಎಷ್ಟರ ಮಟ್ಟಿಗೆ ಬಳಸಿಕೊಳ್ಳಬಹುದು ಎಂಬುದೇ ಆಗಿರುತ್ತದೆ.

ಈಗ ಭಾರತದ ಹಲವಾರು ಕಡೆ ಇರುವ ಅಣುಶಕ್ತಿಯ ಉತ್ಪಾದನಾ ಕೇಂದ್ರಗಳಲ್ಲಿ ವಿಜ್ಞಾನಿಗಳು ಬತ್ತ, ಗೋದಿ, ಜೋಳ, ರಾಗಿ ಮುಂತಾದ ಆಹಾರ ಧಾನ್ಯಗಳು, ಶೇಂಗ, ಕುಸುಬಿ ಮುಂತಾದ ಎಣ್ಣೆಯ ಬೀಜಗಳು, ಹತ್ತಿ, ನಾರು ಮುಂತಾದ ಉದ್ದಿಮೆಯ ವಸ್ತುಗಳು ಮುಂತಾದುವುಗಳ ಮೇಲೆಲ್ಲ ತಳಿ ಸುಧಾರಣೆಗಳಿಂದ ಅದ್ಭುತ ಪ್ರಗತಿ ಸಾಧಿಸುತ್ತಿದ್ದಾರೆ. ಈ ಉದ್ದೇಶಕ್ಕಾಗಿ 'ಅಣು ತೋಟಗಳು (Atomic—Gardens) ಎಂಬುವುಗಳನ್ನು ಅಲ್ಲಲ್ಲೇ ನಿರ್ಮಿಸಿದ್ದಾರೆ. ಅಲ್ಲಿ ಹಲವಾರು ಸ್ಥಳಗಳಲ್ಲಿರುವ ರಿಯಾಕ್ಟರುಗಳಿಂದ ಸಿದ್ಧವಾದ ಕೋಬಾಲ್ಟ್—60 ಮತ್ತು ಗಾಮಾಕಿರಣಗಳು, ಕ್ಷ–ಕಿರಣಗಳು ಹಾಗೂ ರಾಸಾಯನಿಕ ತಳಿ ಸುಧಾರಕಗಳು (Chemical matagans) ಇತ್ಯಾದಿಗಳನ್ನು ಬಳಸಿ, ತಳಿ ಸುಧಾರಣೆಗಳನ್ನು ಮಾಡುತ್ತಿದ್ದಾರೆ ಈ ವಿಕಿರಣತೆಯೆಂಬುದು ಬೀಜಗಳ ಇಲ್ಲವೆ ಸಸ್ಯಗಳ 'ಜೀನ್' (Gene) ಅಥವಾ ವಂಶವಾಹಿಗಳಲ್ಲಿ ವಿಕೃತಿಗಳನ್ನು (Mutations) ಉಂಟು ಮಾಡುತ್ತವೆ. ವಂಶವಾಹಿಗಳು ಆನುವಂಶಿಕ ಗುಣಗಳನ್ನು ಹೊತ್ತು ಪೀಳಿಗೆಯಿಂದ ಪೀಳಿಗೆಗೆ ಸಾಗಿಸುವುದರಿಂದ ಅವು ಒಂದೊಂದು ಸಸ್ಯದ ಬೆಳವಣಿಗೆ. ಹೂ ಬಿಡುವ ಕಾಲ ಮತ್ತು ಇಳುವರಿ ಅಥವಾ ಉತ್ಪಾದನಾ ಪ್ರಮಾಣ ಹೊಸ ಹೊಸ ಲಕ್ಷಣಗಳು ಮುಂತಾದುವುಗಳನ್ನೆಲ್ಲ ನಿರ್ಧರಿಸುತ್ತವೆ. ಹೀಗೆ ತಯಾರಾದ ಹೊಸ ಬಗೆಯ ಬೀಜಗಳ ಮೂಲಕ ವಿಕೃತಿಗೆ ಒಳಪಟ್ಟ ಗುಣಗಳೆಲ್ಲ ವರ್ಗಾವಣೆ ಹೊಂದುತ್ತವೆ.

ಉದಾಹರಣಾರ್ಥವಾಗಿ ದಿಲ್ಲಿಯ ಬಳಿ ಇರುವ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ 'ಗಾಮ ತೋಟ'ದಲ್ಲಿ ಅತ್ಯಂತ ಪ್ರಮುಖ ಧಾನ್ಯ ಬೆಳೆಯೆನಿಸಿದ ಗೋದಿಯ ಮೇಲೆ ಸಾಕಷ್ಟು ಮಹತ್ವದ ಪರಿಶೀಲನೆಗಳು ನಡೆದಿವೆ. ಅಲ್ಲಿ ಸಿದ್ಧವಾದ NP. 836 ಎಂಬ ಗೋಧಿಯ ಹೊಸತಳಿಯೊಂದನ್ನು ಈಗ ಭಾರತದಲ್ಲಿ ಸಾರ್ವತ್ರಿಕ ಬೆಳೆಯಾಗಿ ಬಿಡುಗಡೆ ಮಾಡಲಾಗಿದೆ. ಈ ತಳಿಯ ಧಾನ್ಯ ಕಾಳುಗಳ ಲಕ್ಷಣ ಮತ್ತು ಉತ್ಪಾದನೆಯು ಇತರ ಸಾಮಾನ್ಯ ತಳಿಗಳಿಗಿಂತ ಎಲ್ಲ ದೃಷ್ಟಿಯಿಂದಲೂ ಅತ್ಯುತ್ತಮವಾಗಿದೆ ಎನ್ನಲಾಗುತ್ತದೆ ಅಂತೆಯೇ 2 ಮೆಕ್ಸಿಕನ್ ಗಿಡ್ಡ ತಳಿಗಳ (ಸೊನೋರ-64 ಮತ್ತು ಟಿರ್ಮರೋಜೋ) ಬೀಜಗಳನ್ನು ಅಣು ವಿಕಿರಣತೆಗೆ ಒಳಪಡಿಸಿ ಬಿಳಿಯ ಕಾಳುಗಳುಳ್ಳ ಹೊಸ ತಳಿಯನ್ನು ಉತ್ಪಾದಿಸಲಾಗಿದೆ. ಇದನ್ನು ಈಗ ಎಲ್ಲ ಕಡೆ ಬೆಳೆಯುವಂತಾಗಿದೆ. ಅದೇ ರೀತಿ ಜೋಳದ ತೆನೆಯನ್ನು ಹೋಲುವಂತೆ ಟಿಸಿಲೊಡೆದ ತೆನೆಗಳಿರುವ ಗೋಧಿಯ ತಳಿಗಳನ್ನು ಕೂಡ ಉತ್ಪಾದಿಸುವ ಪ್ರಯತ್ನಗಳು ಈಗೀಗ ಆರಂಭವಾಗಿವೆ

ಇಷ್ಟೇ ಅಲ್ಲದೆ ಭತ್ತದ ಬೆಳೆಯಲ್ಲಿಯೂ ತಳಿ ವಿಕಿರಣತೆಯ ವಿಧಾನಗಳಿಂದ (Radiation methods) 2 ಹೊಸ ಜಾತಿಯ ತಳಿಗಳನ್ನು ಉತ್ಪಾದಿಸಲಾಗಿದೆ. ಅವುಗಳಲ್ಲಿ ಕೃಷಿರಂಗದ ದೃಷ್ಟಿಯಿಂದ ಪ್ರಧಾನವಾದ 'P. T. B. 10' ಮತ್ತು 'G. E. B. 24' ಎಂಬುವು ಗಮನಾರ್ಹವಾಗಿವೆ. ಹೀಗೆ ಹೊಸದಾಗಿ ನಿರ್ಮಾಣವಾದ 'P. T. B. 10' ಎಂಬುದು ತನ್ನ ಮೂಲ ತಳಿಗಳಿಗಿಂತ 50—60%ದಷ್ಟು ಹೆಚ್ಚು ಇಳುವರಿ ಕೊಡುತ್ತವೆ. ಜತೆಗೆ ಇದು ಒಂದು ಉರುಟು ಅಥವಾ ಬಿರುಸು ತಳಿಯಾಗಿದ್ದು, ಮುಂಬೈ ರಾಜ್ಯದಲ್ಲಿ (ಮಹಾರಾಷ್ಟ್ರದಲ್ಲಿ) ಇತರ ತಳಿಗಳಿಗಿಂತ ಹೂ ಬಿಡುವುದಕ್ಕೆ 2 ತಿಂಗಳ ಹೆಚ್ಚು ಅವಧಿ ತೆಗೆದುಕೊಳ್ಳುತ್ತದೆ. ಆದರೆ ಕೇರಳ ರಾಜ್ಯದಲ್ಲಿ ಹೂ ಬಿಡಲು ಇತರ ಮೂಲ ತಳಿಗಳಷ್ಟೇ ವೇಳೆ ತೆಗೆದುಕೊಂಡರೂ, ಅಲ್ಲಿ ಅದು ಅತಿ ಜನಪ್ರಿಯವಾಗಿದೆ. ಅದನ್ನು ಇನ್ನಷ್ಟು ವ್ಯಾಪಕವಾಗಿ ಪರಿ

(ಇಪ್ಪತ್ತಮೂರನೇ ಪುಟ ನೋಡಿರಿ)

THE PRESS
for NEAT
CLEAR
ARTISTIC PRINTING
NAVAYUGA PRESS
Printers for —
NAVAYUGA Weekly
We undertake all kinds of Bookwork, job work etc.
Proprietors :
NAVAYUGA ENTERPRISE LTD.
Regd.Office: PALUKOTE, UDIPI, S.K

With best compliments
from
M. Mahabala Shetty
P. W. D. CONTRACTOR
Behind Commerce College,
VIDYANAGARA
HUBLI-21
Phone: 4022

ಶ್ರೀ ಜನಾರ್ದನ, ಎಂ.ಎ., ಬಿ.ಇಡಿ.

ಬಂಗ್ಲಾ ದೇಶ - ನಮ್ಮ ನಿಲುಮೆ ಸರಿಯೆ?

ಬಂಗ್ಲಾ ದೇಶದ ಬಗ್ಗೆ ತೀವ್ರ ಸಹಾನುಭೂತಿ ತೋರಿಸುವುದು ಇಂದು ನಮ್ಮ ನಡೆದು ಬಂದದಾರಿ. ಆದರ ಜತೆಗೆ ಭಾರತ ಅದಕ್ಕೆ ಮನ್ನಣೆ ನೀಡಿ ಆದರ್ಶ ಹಾಕಿಕೊಡ ಬೇಕೆಂಬ ಬೇಡಿಕೆ—ಅಗ್ರಹ ಬೇರೆ. ಈ ಸಂಬಂಧದಲ್ಲಿ ನಮ್ಮ ನಿಲುವು ಸರಿಯೆ?—ಈ ಸಂಬಂಧದ ವಿವೇಚನೆಯನ್ನು ವಿವಿಧ ಮುಖಗಳಿಂದ ಇಲ್ಲಿ ಮಾಡಲಾಗಿದೆ.

ಬಾಂಗ್ಲಾ ದೇಶದ ಜನತೆ ಅನುಭವಿಸುತ್ತಿರುವ ಸಂಕಷ್ಟಗಳ ವರದಿಗಳಿಂದ ದಿನದ ಪತ್ರಿಕೆಗಳು ತುಂಬಿರುತ್ತವೆ. ಇತಿಹಾಸದಲ್ಲಿ ಕಂಡು ಕೇಳಿರದ ಅಮಾನುಷ ದಬ್ಬಾಳಿಕೆ ಹಾಗೂ ಕ್ರೌರ್ಯಗಳ ಪ್ರದರ್ಶನದಿಂದ ಹೃದಯ ತಲ್ಲಣಿಸುತ್ತಿದೆ. ಬಾಂಗ್ಲಾ ದೇಶದಲ್ಲಿ ಜನತೆ ನಡೆಸುತ್ತಿರುವ ಹೋರಾಟಕ್ಕೆ ನಮ್ಮಲ್ಲಿ ಅನುಕಂಪಹೊರಸೂಸುತ್ತದೆ. ಅವರು ಜಯಶಾಲಿಗಳಾಗಲೆಂದು, ಬಾಂಗ್ಲಾ ಬಹುಬೇಗ ಅಸ್ತಿತ್ವಕ್ಕೆ ಬರಲೆಂದು ನಾವು ಮನಸಾ ಹಾರೈಸುತ್ತೇವೆ; ಸಾಧ್ಯವಿದ್ದರೆ ನೆರವು ನೀಡಲು ನಾವು ಮುಂದಾಗುತ್ತೇವೆ. ಮಾನವೀಯ ಅನುಕಂಪದಿಂದ ನಾವು ಹೀಗೆ ಮಾಡುವೆವೆ?

ರಾಜ್ಯಶಾಸ್ತ್ರದ ತತ್ವಗಳಂತೆ ರಾಷ್ಟ್ರೀಯತೆ ಹಾಗೂ ರಾಷ್ಟ್ರಗಳ ಆವಶ್ಯಕ ಮೂಲಾಂಶಗಳು ಬಾಂಗ್ಲಾ ದೇಶದಲ್ಲಿ ಕಂಡುಬರುತ್ತವೆ. ಪಾಕಿಸ್ತಾನವು ಏಕರಾಷ್ಟ್ರವಲ್ಲ; ದ್ವಿರಾಷ್ಟ್ರ ರಾಜ್ಯ ಎಂಬ ತೀರ್ಮಾನಕ್ಕೆ ಬರಲು ಕಷ್ಟವೇನಿಲ್ಲ. ಆಧುನಿಕ ಕಾಲದ 'ಏಕರಾಷ್ಟ್ರ—ಏಕರಾಜ್ಯ' ವಾದದ ನೆರಳಿನಲ್ಲಿ ಬಾಂಗ್ಲಾ ಜನತೆ ಪ್ರತ್ಯೇಕ ಸ್ವತಂತ್ರ ರಾಜ್ಯ ಸ್ಥಾಪಿಸುವುದು ಅನಿವಾರ್ಯ ಮತ್ತು ವ್ಯಾವಹಾರ್ಯ ಎಂದು ನಮಗನಿಸುತ್ತದೆ. ಹಾಗಾದರೆ ನಮ್ಮ ಸಹಾನುಭೂತಿ, ನಮ್ಮ ನೆರವು ಈ ತತ್ವಗಳ ಮೇಲೆ ಆಧರಿಸಲ್ಪಟ್ಟಿದೆಯೆ?

ಪಾಕಿಸ್ತಾನ ನಮ್ಮ ನೆರೆಯ ರಾಜ್ಯ. ನಾವು ಬಯಸದಿದ್ದರೂ ಅವರು ನಮ್ಮ ವೈರಿಗಳಾಗಿದ್ದಾರೆ. ದೇಶ ಹೋಳಾದಾಗ ವೈರಿಯ ಬಲ ಕುಗ್ಗುತ್ತದೆ. ವೈರಿಯ ಅಸಹಾಯಕತೆಯಲ್ಲಿ ನಮ್ಮ ಮೇಲ್ಮೆ ಇದೆಯೆಂದು ಭಾವಿಸುವುದು ರಾಜನೀತಿಯ ಜಾಣಾಕ್ಷತನ. ಹಾಗೆಂದೇ ನಮ್ಮ ಬೆಂಬಲವೆ?

ಈ ಒಂದೊಂದು ದೃಷ್ಟಿಯೂ ಬಾಂಗ್ಲಾ ದೇಶದ ಹೋರಾಟವನ್ನು ಮತ್ತು ಅದರ ಅಂತಿಮ ಗುರಿಯಾದ 'ಸ್ವತಂತ್ರ ಬಾಂಗ್ಲಾ' ವನ್ನು ಬೆಂಬಲಿಸಲು ಕಾರಣಗಳನ್ನು ನೀಡಬಹುದು. ನಮ್ಮ ಹೃದಯವಂತಿಕೆಗಾಗಿ, ನಮ್ಮ ತಾತ್ವಿಕ ದೃಷ್ಟಿಕೋನಕ್ಕಾಗಿ, ನಮ್ಮ ವ್ಯವಹಾರ ಚತುರತೆಗಾಗಿ ನಾವು ಹೆಮ್ಮೆಪಡಬಹುದೇನೊ.

ರಾಜಕೀಯದಲ್ಲಿ ನಾವು ಕೈಗೊಳ್ಳುವ ನಿರ್ಧಾರಗಳಿಗೆ ಭೂತಕಾಲದ ಆಗುಹೋಗುಗಳು ಆಧಾರವಾಗುತ್ತವೆ. ಹಾಗೆಂದು ಈ ನಿರ್ಧಾರಗಳು ಭವಿಷ್ಯತ್ತಿನಲ್ಲೂ ನಿರೀಕ್ಷಿಸಿದ ಫಲಕೊಡುತ್ತವೆಂದು ಭಾವಿಸುವುದು ಶುದ್ಧ ತಪ್ಪು ಭಾವನೆ ಎನ್ನುವುದಕ್ಕೆ ಇತಿಹಾಸದಲ್ಲಿ ದಾಖಲೆಗಳಿವೆ. ಆದುದರಿಂದ ಬಾಂಗ್ಲಾ ದೇಶದ ಸ್ಥಾಪನೆಯಲ್ಲೂ, ನಮ್ಮ ನಿರೀಕ್ಷೆ ಈಡೇರುವದೆಂದು ನಂಬಲು ಹಲವು ನಿದರ್ಶನಗಳು ನಮ್ಮ ಮುಂದಿರುವಾಗಲೂ, ನಮ್ಮ ನಿರೀಕ್ಷೆ ತಲೆಕೆಳಗಾಗುವ ಸಾಧ್ಯತೆಗಳಿವೆಯೆಂದು ನಂಬುವುದರಲ್ಲೂ ತಪ್ಪಿಲ್ಲ. ವಸ್ತುಸ್ಥಿತಿ ತಿಳಿದಿಲ್ಲದ ಪರಿಸ್ಥಿತಿಯೊಂದಕ್ಕೆ ಇರುವ ಹಲವು ಮುಖಗಳಲ್ಲಿ ಇದೂ ಒಂದು. ಬಾಂಗ್ಲಾ ದೇಶದ ರಚನೆಗಾಗಿ ನಾವು ನೀಡುತ್ತಿರುವ ನೆರವು ಭವಿಷ್ಯತ್ತಿನಲ್ಲಿ ಒಂದು ಐತಿಹಾಸಿಕ ದುರಂತವಾಗಿ ಪರಿಣಮಿಸೀತೆ? ಈ ಯೋಚನೆ ವಿಕೃತ ಮನಸ್ಸಿನ ಕಲ್ಪನೆಯೆಂದು ಹಲವರಿಗೆ ಹೊಳೆಯಬಹುದಾದರೂ, ಆದರ ವಿವೇಚನೆ ನಮ್ಮನ್ನು ಆಕರ್ಷಿಸದಿದ್ದರೂ ಹೆಚ್ಚು ಜಾಗೃತರನ್ನಾಗಿ ಮಾಡೀತೆಂಬ ವಿಶ್ವಾಸವಿದೆ. ಇಂತಹ ವಿವೇಚನೆ ಭಾರತಕ್ಕೆ ಅಗತ್ಯವಿರುವಷ್ಟು ಬೇರೆ ದೇಶಗಳಿಗೆ ಇಲ್ಲ. ಬಾಂಗ್ಲಾದ ಅಸ್ತಿತ್ವದಿಂದ ಒಳ್ಳೆಯದನ್ನೋ ಕೆಟ್ಟದನ್ನೋ ಅನುಭವಿಸ ಬೇಕಾದವರೂ ಭಾರತೀಯರೇ.

ಬಾಂಗ್ಲಾ ಹೋರಾಟವು ಹಲವು ವಾಸ್ತವಿಕ ಅಂಶಗಳನ್ನು ಆಧರಿಸಿದೆಯೆನ್ನುವುದು ಎಲ್ಲರಿಗೂ ತಿಳಿದಿದೆ. ರಾಜಕೀಯ ಅಸಮಾನತೆ ಮತ್ತು ಆರ್ಥಿಕ ಶೋಷಣೆಗೆ ಬಲಿಯಾದ ಜನತೆಯೊಂದರ ಹೋರಾಟ ಇದೆಂದು ನಾವು ಅರ್ಥ ಮಾಡಿಕೊಂಡಿದ್ದೇವೆ. ಆದರೆ ಈ ಹೋರಾಟ ದೇಹದ ಒಂದೆಡೆ ಮೂಡಿದ ಹುಣ್ಣನ್ನು ಗುಣಪಡಿಸಲು ದೇಹವನ್ನೇ ಇಬ್ಭಾಗಿಸ ಹೊರಟ ವೈದ್ಯನ ಕ್ರಮವೆನ್ನಿಸದೆ? ಹೋರಾಟದಲ್ಲಿ ಹೊರ ನೆರವಿನಿಂದಲೇ ಆಗಲಿ, ಜಯಶೀಲವಾಗಿ ಹೊರಹೊಮ್ಮುವ ಬಾಂಗ್ಲಾ ದೇಶವು ಆಂತರಿಕ ಸಮಸ್ಯೆಯ ಪರಿಣಾಮವಾಗಿ ಒಂದು ರಾಜ್ಯದಿಂದ ಸಿಡಿಯುವ ವಿಚ್ಛಿದ್ರತೆಯ ಮೂರ್ತಸ್ವರೂಪವೆನಿಸುವುದು. ಅಂದರೆ ಬಾಂಗ್ಲಾದ ವಿಜಯ ವಿಚ್ಛಿದ್ರಕಾರೀ ಶಕ್ತಿಗೆ ದೊರೆಯುವ ಜಯವೆನಿಸದೆ? ವೈವಿಧ್ಯತೆಯಲ್ಲಿ ಯಶಸ್ವಿಯಾಗಿ ಏಕತೆಯನ್ನು ಸಾಧಿಸುತ್ತಿರುವ ಭಾರತವು ಹಲವು ರಾಷ್ಟ್ರಗಳಿಂದ ಕೂಡಿದೆಯೆಂದು ವಾದಿಸುವವರೂ ಇದ್ದಾರೆ. ಭಾರತದ ಯಾವ ಭಾಗವೂ ಅಸಮಾನತೆ ಹಾಗೂ ಶೋಷಣೆಗಳಿಗೆ ಗುರಿಯಾಗಿಲ್ಲವೆಂದು ಹೇಳೋಣವೆಂದರೆ ಕೆಲವು ಸಮಯದಿಂದ ನಡೆಯುತ್ತಿರುವ ತೆಲಂಗಾಣ ಚಳವಳಿ ಅದಕ್ಕೆ ಅಡ್ಡಿಯೊಡ್ಡುತ್ತಿದೆ. ಹೆಚ್ಚು ಅಧಿಕಾರಗಳು, ಒಳಾಡಳಿತದಲ್ಲಿ ಸ್ವಾತಂತ್ರ್ಯ ಬೇಕೆನ್ನುವ ರಾಜ್ಯನಾಯಕರ ಭಾವನೆಯ ಹಿನ್ನೆಲೆಯಾದರೂ ಏನಿರಬಹುದು? ಬಾಂಗ್ಲಾದಲ್ಲೂ ಮೊದಲೆದ್ದ ಕೂಗು ಇದೇ ತಾನೆ? ಹಾಗಿರುವಾಗ ನಮ್ಮ ನೆರೆಯ ರಾಷ್ಟ್ರವೊಂದರ ಯಶಸ್ಸಿನಿಂದ ಭಾರತದೊಳಗಿನ ರಾಜ್ಯಗಳೋ, ಪ್ರದೇಶಗಳೋ ಸ್ಫೂರ್ತಿ ಪಡೆದಾಗ, ಹೊರ ರಾಜ್ಯವೊಂದರಲ್ಲಿ ನಾವೇ ಮನ್ನಿಸಿದ ವಿಚ್ಛಿದ್ರತೆಯನ್ನು ನಮ್ಮ ರಾಜ್ಯದೊಳಗೆ ನಾವು ಮನ್ನಿಸದೇ ತಡೆಗಟ್ಟಲು ನಮ್ಮಿಂದ ಸಾಧ್ಯವಾದೀತೆ?

ಬಾಂಗ್ಲಾ ದೇಶ ನಿರ್ಮಾಣದೊಂದಿಗೆ ಭಾರತದ ನೆರೆಯಲ್ಲಿ ಮಿತ್ರರಾಷ್ಟ್ರವೊಂದು ತಲೆಯೆತ್ತುವುದೆನ್ನುವುದು ಕೇವಲ ಆಶಾಭಾವನೆಯಷ್ಟೇ ಅಲ್ಲ, ಅಕಾಲಿಕ ನಿರ್ಧಾರವೂ ಹೌದು. ಅಸ್ತಿತ್ವಕ್ಕೆ ಬರದ ರಾಷ್ಟ್ರವೊಂದರ ಭಾವೀ ವಿದೇಶ ಧೋರಣೆಯ ಮೇಲೆ ಈ ನಿರ್ಧಾರ ಅವಲಂಬಿಸಿರುತ್ತದೆ. ಈಗ ಎಲ್ಲವೂ ಅಸ್ಥಿರ. ಬಾಂಗ್ಲಾ ದೇಶದಂತಹ ಕಿರಿಯ ರಾಷ್ಟ್ರವೊಂದು ಹಿರಿಯ ರಾಷ್ಟ್ರದ ನೆರವಿಲ್ಲದೇ ಅಭಿವೃದ್ಧಿ ಸಾಧಿಸದು ಹಾಗೂ ಅಸ್ತಿತ್ವದಲ್ಲಿ ಉಳಿಯದು. ಹಾಗೇ ಅವರಿಗೆ ಸಕಲ ನೆರವನ್ನೂ ನೀಡಬಲ್ಲ ಶಕ್ತಿ ಭಾರತಕ್ಕಿಲ್ಲದಿರುವುದರಿಂದ ಅದು ಸಮಕಾಲೀನ ಬಲಾಢ್ಯ ರಾಷ್ಟ್ರವೊಂದರ ತೆಕ್ಕೆಗೆ ಸುಲಭದಲ್ಲಿ ಬೀಳಬಹುದಾದ ಸಾಧ್ಯತೆಗಳಿವೆಯಾದುದರಿಂದ ಆದರ ಭಾವೀ ಧೋರಣೆಗಳ ಕುರಿತು ಊಹಿಸುವುದು, ಈ ಊಹೆಯ ಮೇಲೆ ನಿರ್ಧಾರ ಕೈಗೊಳ್ಳುವುದು ಮತಿವಂತರ ಲಕ್ಷಣವಲ್ಲ. ಭಾಷೆ, ಸಂಸ್ಕೃತಿಗಳಲ್ಲಿ ಭಾರತೀಯರಾದ ಬಂಗಾಲಿಗಳನ್ನು ಹೋಲುತ್ತಾರೆಂಬ ಕಾರಣದಿಂದ ಮತ್ತು ಇಂದು ಅವರು ಪ್ರದರ್ಶಿಸುತ್ತಿರುವ ಸ್ನೇಹ ಭಾವನೆಗಳ ಮೇಲಿನಿಂದ ಅವರು ಎಂದೂ ಭಾರತದ ದ್ವೇಷಿಗಳಾಗಲಾರರೆನ್ನುವುದೂ ಸರಿಯಲ್ಲ. ಸ್ನೇಹ, ಬಾಂಧವ್ಯಗಳನ್ನು ಒಂದು ತಕ್ಕಡಿ

(ಇಪ್ಪತ್ತೆರಡನೇ ಪುಟ ನೋಡಿರಿ)

ದೀಪಾವಳಿಯ ಶುಭಾಶಯ

ಆರೋಗ್ಯಲಾಭದಿಂದ
ಆಯುಷ್ಯದ ಉಳಿತಾಯವಾಗಲಿ.
ನಿಮ್ಮ ಮನೆ, ಮನ
ಸುಖಸಮೃದ್ಧಿಯಿಂದ ತುಂಬಿ ತುಳುಕಲಿ.
ದೀಪಾವಳಿಯು ಸರ್ವರಿಗೂ
ಶಾಂತಿದಾಯಕವಾಗಲಿ.
ದೇವ ಧನ್ವಂತರಿಯ ಕೃಪೆ ಇರಲಿ.

ನಾಯಕ ಆಯುರ್ವೇದಾಶ್ರಮ,
ಕಟಪಾಡಿ, ದ. ಕ.
ಸ್ಥಾಪಕ: ಪಾಂಗಾಳ ಲಕ್ಷ್ಮೀನಾರಾಯಣ ನಾಯಕ

"ಎಲ್ಲರಿಗೂ ಮೊದಲು ನಾನೇ ಮಿಂದೆ ಮಾವಾ—"

"ಯಾವಾಗ ಮಿಂದ್ಯೋ? ಈಗ ತಾನೇ ನೀರು ಬರ್ತೆ?"

"ನಿನ್ನೆಯೇ ಮಿಂದು ಬಿಟ್ಟೆ ಮಾವಾ"

ಶ್ರೀ ವೇಂಕಟೇಶ ಮಹಾತ್ಮೆ

[ಯಕ್ಷಗಾನ ಕೃತಿಯ ಲಘು ಪರಿಚಯ]

ಪ್ರಸಿದ್ಧ ಯಕ್ಷಗಾನ ಭಾಗವತ ಶ್ರೀ ಅಗರಿ ಶ್ರೀನಿವಾಸ ಭಾಗವತರ ಶ್ರೀ ವೇಂಕಟೇಶ ಮಹಾತ್ಮ್ಯೆಯೊಂದು ಸುಂದರ ಕೃತಿ. ಅಭಿನಯಯೋಗ್ಯ. ಆಧಾರಿತವಾದರೂ ಕವಿ ಪ್ರತಿಭೆಗೆ ಚ್ಯುತಿಬಾರದ ಮೌಲಿಕ ಯಕ್ಷಗಾನ ಕಾವ್ಯ.

ಯಕ್ಷಗಾನ-ಬಯಲಾಟಗಳು ಕನ್ನಡ ನಾಡಿನ ಒಂದು ವಿಶಿಷ್ಟ ಕಲೆ. ಈ ಕಲೆಯನ್ನು ಉಳಿಸಿ-ಬೆಳೆಸಿಕೊಂಡು ಬಂದವರು, ಕಲಾಭಿಮಾನಿಗಳು ಹಾಗೂ ಆ ಕಲೆಯನ್ನು ತಮ್ಮ ಜೀವನದ ಆಧಾರವಾಗಿಟ್ಟುಕೊಂಡ ವ್ಯವಸಾಯಿಗಳು, ಬಯಲಾಟ ಮೇಳಗಳ ಪೋಷಕರಾಗಿರುವ ಅನೇಕ ದೇವಳಗಳ ಅಧಿಕಾರಿಗಳು!

ಯಕ್ಷಗಾನ, ಬಯಲಾಟಗಳೆಂದರೆ ಜನರಲ್ಲಿ ಅದೆಷ್ಟು ಉತ್ಸಾಹ ಆದರ ಆಶ್ಚರ್ಯ! ಹತ್ತು ಹನ್ನೆರಡು ಮೈಲುಗಳಿಗಿಂತಲೂ ಹೆಚ್ಚು ದೂರದಿಂದಲೂ ಜನರು ಪ್ರಸಿದ್ಧ ಕಲಾವಿದರ ಕೂಟ—ಮೇಳಗಳ ಯಕ್ಷಗಾನ-ಬಯಲಾಟಗಳನ್ನು ಕೇಳಲು—ಕಾಣಲು ನಡೆದು ಬರುವರೆಂದರೆ ಆ ಕಲೆಗಳ ಮೇಲೆ ಆ ಜನರಿಗೆ ಅದೆಷ್ಟು ಸಂಪರ್ಕ ಅಭಿಮಾನ ಇದೆ ಎಂದು ವ್ಯಕ್ತವಾಗುವುದು.

"ಯಕ್ಷಗಾನ" ಎಂದೊಡನೆ ಸಾಮಾನ್ಯವಾಗಿ ಜನರು ಕೇಳುವುದು, ಅದರಲ್ಲಿ ಭಾಗವಹಿಸುವ ಕಲಾವಿದರು ಯಾರು ಯಾರೆಂದು? ಭಾಗವತರು ಯಾರು? ಅರ್ಥದಾರಿಗಳಾರೆಂದು? ಭಾಗವತರು ಶ್ರೀ ಅಗರಿಯವರೆಂದರಾಯಿತು; ಯಕ್ಷಗಾನದ ಹಾಡುಗಳನ್ನು ಕೇಳಿ ಆನಂದಿಸುವ ಭಾಗ್ಯ ತಮಗೊದಗಿತೆಂದು ಜನರು ಬಹಳಷ್ಟು ಉತ್ಸಾಹ ತಾಳುವರು. ಶ್ರೀ ಅಗರಿಯವರು ಯಕ್ಷಗಾನ (ಬಯಲಾಟ)ಗಳಲ್ಲಿ ಹಾಡುತ್ತಿರುವಾಗ ಅವರಂತೆ ಧ್ವನಿ ಗೂಡಿಸಲು ಯತ್ನಿಸುವವರೂ ಎಷ್ಟೋ ಮಂದಿಗಳಿದ್ದಾರೆ. ಅಂತಹ ಖ್ಯಾತಿವೆತ್ತ ಶ್ರೀ ಅಗರಿ ಶ್ರೀನಿವಾಸ ಭಾಗವತರ, ಯಕ್ಷಗಾನ ಪ್ರಸಂಗ, 'ಶ್ರೀ ವೇಂಕಟೇಶ ಮಹಾತ್ಮೆ' ಅಥವಾ 'ಪದ್ಮಾವತೀ ಪರಿಣಯ' ಎಂಬುದರ ಪರಿಚಯವು ಇಲ್ಲಿ ತುಸು ಬರೆಯಲಾಗಿದೆ. (ಅವರ ಭರತೇಶ ವಿಜಯ, ಲಲಿತೋಪಾಖ್ಯಾನಗಳೂ ತುಳು ಸಿರಿ ಮಹಾತ್ಮೆಗಳೂ ಅಚ್ಚಾಗಿವೆ!)

1963ರಲ್ಲಿ ಅಚ್ಚಾದ 'ಶ್ರೀ ವೆಂಕಟೇಶ ಮಹಾತ್ಮ್ಯೆ' ಅಥವಾ 'ಪದ್ಮಾವತೀ ಪರಿಣಯ (ತಿರುಪತಿ ಮಹಾತ್ಮೆ ಎಂದೂ ಪ್ರಸಿದ್ಧವು)' ಎಂಬ ಯಕ್ಷಗಾನ ಪ್ರಸಂಗವು ಭಾರತದ ಪ್ರಸಿದ್ಧ ಪುಣ್ಯಕ್ಷೇತ್ರಗಳಲ್ಲೊಂದಾದ ತಿರುಪತಿಗೆ ಸಂಬಂಧಿಸಿದ್ದಾಗಿದೆ—

|| ಮತ್ತೇಭವಿಕ್ರೀಡಿತವೃತ್ತ ||

"ತೊರೆದೆನ್ನಂ ಕರವೀರ ಕೈದಿಹಳು
ಲ|ಕ್ಷ್ಮೀ ದೇವಿ ವೈಕುಂಠ ಮಂ|ದಿರ
ವಿನ್ನೇತಕೆ? ವೇಂಕಟಾಚಲದಿ ನಾ|
ಸದ್ಭಕ್ತರಿಷ್ಟಾರ್ಥಮಂ|| ನಿರತಂ ಪಾಲಿ
ಸೆನೆಂದು, ಬಂದು ಮುದದಿಂ| ಪದ್ಮಾ
ವತೀ ದೇವಿಯಂ| ವರಿಸಿರ್ಪಾ ಹರಿ
ಶ್ರೀನಿವಾಸ ದಯದಿಂ| ನೀ ಪಾಲಿ
ಸೆಮ್ಮಂ ಸದಾ||"

ಈ ಮೊದಲ ವೃತ್ತದಲ್ಲಿ ಲಕ್ಷ್ಮೀ ದೇವಿಯಿಲ್ಲದ ವೈಕುಂಠದಲ್ಲಿ ತಾನೇಕೆ ಇನ್ನಿರಬೇಕೆಂದು ಬಗೆದ ಶ್ರೀನಿವಾಸನು ಕಲಿಯುಗದಲ್ಲಿ ವೆಂಕಟಾಚಲವೆಂದು ಪ್ರಸಿದ್ಧವಾದ ಸ್ಥಳದಲ್ಲಿ ಭಕ್ತರ ಇಷ್ಟಾರ್ಥಗಳನ್ನು ಸಲಿಸುತ್ತಾ ನೆಲೆ ನಿಂತನೆಂದಿದೆ. ಈ ಪರ್ವತಕ್ಕೆ ಕೃತ, ತ್ರೇತ, ದ್ವಾಪರ ಯುಗಗಳಲ್ಲಿ ಅನುಕ್ರಮವಾಗಿ ವೃಷಭಾಚಲ, ಅಂಜನಾಚಲ, ಶೇಷಾಚಲವೆಂಬ ಹೆಸರಿದ್ದು; ಕಲಿಯುಗದಲ್ಲಿ ವೇಂಕಟ (ಪಾಪಗಳನ್ನೆಲ್ಲಾ ನೀಗಿಸುವ) ಶೈಲ' ಎಂಬ ಹೆಸರು ಬಂದಿತೆಂಬಲ್ಲಿಂದ ಕಥಾ ಪ್ರಾರಂಭವಾಗುವುದು. ಸಂಸ್ಕೃತದಲ್ಲಿರುವ ಈ ಕತೆಯೇ ಇಲ್ಲಿಗೆ ಆಧಾರವಾದರೂ, ಕೆಲವೊಮ್ಮೆ ರಸವತ್ತಾದ ಘಟ್ಟಗಳು ಇಲ್ಲಿವೆಯೆಂಬುದೇ ಈ ಕನ್ನಡ ಕೃತಿಯ ವಿಶೇಷ.

ಕಾಲಹಸ್ತಿಯಲ್ಲಿ ಪುರಂದರನೆಂಬ ವಿಪ್ರನಿಗೆ ಮುಪ್ಪಿನಲ್ಲಿ ಓರ್ವ ಪುತ್ರನು ಜನಿಸಿದನು. ಆತನಿಗೆ ಮಾಧವನೆಂಬ ಹೆಸರಿಟ್ಟು ವೈದಿಕ ಕರ್ಮಾಂಗಗಳನ್ನು ಮಾಡಿಸಿ, ಗುರು ಮುಖದಿಂದ ಸಕಲ ವಿದ್ಯೆಗಳನ್ನು ಕಲಿಸಿ, ಚಂದ್ರಲೇಖೆಯೆಂಬ ಕುಲವತಿಯೊಂದಿಗೆ ವಿವಾಹ ಮಾಡಿಸಿದನು. ತಂದೆ ಮಾಧವನು ಕಾಲಗತಿಯಿಂದ ಇಂದ್ರಿಯ ವಿಕಾರವಶನಾಗಿ, ಚಂದ್ರಲೇಖೆಯನ್ನು ಹಗಲು ಹೊತ್ತೆನ್ನದೆ ಬೇಟಕ್ಕೆ ಕಾಡುತ್ತಾ, ಆಕೆ ಹೇಳಿದ ನೀತಿಯನ್ನು ತಿರಸ್ಕರಿಸಿ, ತನ್ನಿಚ್ಛೆಯಂತೆ ನಡೆವಂತೆ ಒಡಂಬಡಿಸಿದನು. ಪತಿಯಾಜ್ಞೆ ಮೀರಲಾರದೆ ಆಕೆ ನೀರುತರಲು ಜಲಾಶಯಕ್ಕೆ ತಾನು ಬರುವೆನೆಂದು ಹೇಳಿ ಸಮಜಾಯಿಸಿದಳು. ಅಂತೆ ಮುಂದಾಗಿ ಜಲಾಶಯಕ್ಕೆ ತೆರಳಿದ ಮಾಧವನು, ಅಲ್ಲಿ ಕುಂತಳೆ ಎಂಬ ಚಂಡಾಲಿನಿಯನ್ನು ಕಂಡು, ಮೋಹಿತನಾಗಿ, ಆಕೆಯನ್ನು ಹೊಂದುವ ಸ್ವವಿಚಾರದಿಂದ ಕೂಡಿ, ಅಲ್ಲಿಗೆ ಬಂದ ಚಂದ್ರಲೇಖೆಯನ್ನು ಹಿಂದೆ ಕಳುಹಿಸುವನು! ಮಾಧವನು ಬಳಿಕ ಕುಂತಳೆಯ ಬಳಿಗೆ ಹೋಗಿ ತನ್ನನ್ನು ವರಿಸೆಂದು ಕೇಳಲು, ಆಕೆ ಹೇಳುವ ನೀತಿ ಉಲ್ಲೇಖನೀಯವಿದೆ:—

||ಶಂಕರಾಭರಣ—ಅಷ್ಟ||

"ಶುದ್ಧ ಚಾಂಡಾಲಿನಿ ನಾನು| ನೆರೆ|
ಮದ್ಯ ಮಾಂಸ
ಗಳ ಸೇವಿಪೆನು| ನೆರೆ| ಬದ್ಧ ಮಾತುಗಳ
ನುಸುರೆನು||
ನಿತ್ಯ| ಕದ್ದು ಜೀವನ ಗೈಯು|
ತಿದ್ದಪಾಪಿಣಿಯೈಸೆ|
ಬುದ್ಧಿಯಿಲ್ಲದೆ ದುರಿ|
ತಾಬ್ಧಿಯೊಳ್ಮುಳುಗಿಹೆ||
ವೇದ ಪುರಾಣ ಶಾಸ್ತ್ರಗಳ| ನೆರೆ |
ಓದಿ ತಿಳಿದಿಹೆ|
ಧರ್ಮಗಳ| ಹೊಲ|
ಸಾದಕಾರ್ಯವುತೆರವಲ್ಲ | ನಿಲ |
ದೈದು ವಿವೇಕದಿ| ಹಾದಿ ತಪ್ಪದೆ ಸ್ಮರ|
ವೇದನೆಯಿಂದೆನೆ||"

ಹೀಗೆ ಆತ ವಿವೇಕದ ನುಡಿಯನ್ನು ಕೇಳದೆ ಆಕೆಯನ್ನೇ ವರಿಸುವೆನೆಂದು ಹೇಳುತ್ತಾನೆ.

ಆಗ ಆಕೆಯೆಂದಳು:—

||ಕಾಂಬೋಧಿ-ರೂಪಕ ತಾಳ||

"ಎಂತವೋ ಪೂರ್ವದ ಪುಣ್ಯ|
ಫಲದಿಂದ ದೊರಕಿದು |
ಬೆಳೆಯಲಿ ಬ್ರಾಹ್ಮಣ ಜನ್ಮ||
ಹೊಲತಿಯಾಸೆಯೊಳ್ಕೆಡಿ|ಸಲು
ಬೇಡ ಹೋಗು ನೀ|
ತಿಳಿದು ವಿವೇಕದಿ ಧರ್ಮ||"

ಮಾಧವನು ಪೂರ್ವ ಸುಕೃತದ ಫಲದಿಂದ ನಿನ್ನ ಸಂಯೋಗದ ಫಲ ದೊರಕಿತೆನ್ನುತ್ತಾ—

||ಸುರುಟಿ—ಏಕ||

"ನಳಿನಾಂಬಕಿ ನಿನ್ನ| ನೆರೆಯ|
ದುಳಿಯದೆನ್ನ ಹರಣ||
ಇಳೆಯೊಳು ಭೂಸುರ ಹತ್ಯಕೆ ಸಮ್ಮನೆ|
ಸಿಲುಕದೆ ಪ್ರೇಮದಿ ಸಲಿಸೆನ್ನಿಷ್ಟವ"||

ಎಂದು ಆಕೆಯನ್ನು ಬಲತ್ಕಾರದಿಂದ ಹಿಡಿಯುವನು. ಮತ್ತೆ ಆಕೆಯನ್ನು ವರಿಸುವೆನೆಂದೂ ಹೇಳಿದನು.

ಆಗ ಕುಂತಳೆಯು:

"ನುಡಿದ ನೀತಿಯ ಕೇಳದೊಡಗೂಡಿ
ದೆಯವೆನ್ನ|
ಕಡಿದಿಕ್ಕು ಜನಿವಾರ, ಕುಡಿ ಸುರೆಯ
ನಿದಕೊ ನಾ|
ಕೊಡುವೆ ಮಾಂಸವ ತಿನ್ನು ತೊಡನೆ
ಬೋಳಿಸು ತಲೆಯ, ತಡವೇಕೆ ನಿನಗೆ
ನಾನು||
ಮಡದಿಯೊಡೆನು ಯೆನ್ನ ಬಿಡದೆ
ನೀ ಬಂದೆಮ್ಮ
ಗುಡಿಸಲಿನೊಳಿಹುದೆಂದು ನುಡಿಯ
ಲಡಕವ ನೊಡಂ|
ಬಡತಾಕೆ ಸಹಬಂದು ಪಡೆದು
ಹೊಲೆತನವನತಿ ಸಡಗರದೊಳಿರು
ತಿರ್ದನು || "

ಮಾಧವನು ಹೀಗೆ ಹನ್ನೆರಡು ವರ್ಷ ಕುಂತಳೆಯ ಸಂಗದಲ್ಲಿದ್ದು ಕಾಲಕಳೆದನು. ಕುಂತಳೆ ಮಡಿಯಲು ವಿವೇಕೋದಯವಾಗಿ, ತಾನು ಮಾಡಿದ ಕುಕೃತ್ಯಗಳನ್ನು ನೆನೆದು, ಪಶ್ಚಾತ್ತಾಪ ಪಟ್ಟು, ಯಾತ್ರಿಕರ ಗುಂಪೊಂದರಲ್ಲಿ ಸೇರಿ, ಶೇಷಾಚಲಕ್ಕೆ ಬಂದು, ಕಪಿಲ ತೀರ್ಥದಲ್ಲಿ ಮಿಂದು, ಪಿತೃಗಳಿಗೆ ಪಿಂಡ ಪ್ರದಾನ ಮಾಡಿ, ಪದ್ಮನಾಭನನ್ನು ಸ್ಮರಿಸಲು, ಅದುವರೆಗೆ ಆತನ ದೇಹವನ್ನು ಆವರಿಸಿಕೊಂಡಿದ್ದ ಹೊಲೆತನವು ಸುಟ್ಟು ನೀಕರಿಯಾಯಿತು. ಬ್ರಹ್ಮ ರುದ್ರರು ಆಗ ಪ್ರತ್ಯಕ್ಷರಾಗಿ ಹೇಳಿದರು:

|| ಭಾಮಿನಿ ||

'....ದುರಿತಗಳನೀ ಗಿರಿಯೊಳಗೆ ನೀ |
ಗಿರುವ ಕಾರಣದಿಂದ ವೇಂಕಟ|
ಗಿರಿಯೆನುತ ಪೀ ಶೈಲ ರಂಜಿಸಲಿನ್ನು
ಕಲಿಯುಗದಿ || '

ಅಲ್ಲದೆ "ಸ್ವಾಮಿ ಪುಷ್ಕರಣಿಯಲ್ಲಿ ಮಿಂದು ವರಾಹ ಸ್ವಾಮಿಯನ್ನು ದರ್ಶನ ಮಾಡು. ದೇಹವನ್ನು ತೊರೆ ಮುಂದಿನ ಜನ್ಮದಲ್ಲಿ ಪಾಂಡವರ ಕುಲದಲ್ಲಿ ಸುಧರ್ಮನೆಂಬ ಅರಸನಿಗೆ ಮಗನಾಗಿ ಜನಿಸಿ, ಆಕಾಶರಾಯನೆಂಬಭಿಧಾನದಿಂದ ಮೆರೆಯುವೆ. ಆಗ ಲಕ್ಷ್ಮೀ ದೇವಿಯನ್ನು ಸುತೆಯಾಗಿ ಪಡೆಯುವೆ. ಶ್ರೀನಿವಾಸನಿಗೆ ಆಕೆಯನ್ನು ವಿವಾಹ ಮಾಡಿಕೊಡು' ಎಂಬ ಪ್ರಮಾಣವನ್ನು ಆತ ಹೊಂದುವನು (ಆಕಾಶರಾಯನಾರೆಂಬ ಪೂರ್ವಪೀಠಿಕೆಯಿಲ್ಲಿಗೆ ದೇವತೆಗಳಿಂದ ಮುಗಿಯಿತು)

ಆ ಮುಂದಿನ ಕಥಾ ಭಾಗವಿದು:

ತ್ರಿಮೂರ್ತಿಗಳಲ್ಲಿ ಶ್ರೇಷ್ಠನಾರೆಂದು ತಿಳಿಯಲು ಭೃಗು ಮುನಿಯು ವೈಕುಂಠವನ್ನು ಸೇರಿದನು. ಅಲ್ಲಿ ಯೋಗ ನಿದ್ರೆಯಲ್ಲಿದ್ದ ವಿಷ್ಣುವನ್ನು ಭೃಗು ಮುನಿಯು ಕಾಲಿಂದ ಒದೆದನು. ವಿಷ್ಣುವು ಆತನ ಕಾಲಲ್ಲಿದ್ದ ಲಾಂಛನವನ್ನು ಸೆಳೆದನು. ಆ ಬಳಿಕ:—

|| ಮೋಹನ ಕಲ್ಯಾಣಿ—ಅಷ್ಟ ||

"ವರಚರಣವು ಕೋಮಲ|
ಪಾಷಾಣದಂ| ತಿರುವೆನ್ನ ವಕ್ಷಃಸ್ಥಳ ||
ಭರದೊಳೊದೆದುದರಿಂದ ನೊಂದುದು |
ಚರಣ ಪಂಕಜವೆಂದು ಲಕ್ಷ್ಮಿ |
ವರನು ಪಾದವ ತೊಳೆದ ಜಲವನು |
ಹರುಷದಲಿ ನಿಜಶಿರದಿ ಧರಿಸಿದ || "

ಇದರಿಂದ ಸಂತುಷ್ಟನಾದ ಭೃಗು ಮುನಿಯು 'ಸತ್ವಗುಣೋಪೇತನಾದ ಶ್ರೀ ಹ

(ಇಪ್ಪತ್ತೊಂದನೆ ಪುಟ ನೋಡಿರಿ)

ದೀಪಾವಳಿಯ ಶುಭಾಶಯಗಳು!

ನೂರ್ ಎಂಡ್ ಕೊ.,

ಡೀಲರ್ಸ್ :

ಇಂಡಿಯನ್ ಆಯಿಲ್ ಕೊರ್ಪರೇಶನ್ ಲಿಮಿಟೆಡ್

ಮೂಲ್ಕಿ, ದ. ಕ.

NOOR & CO.,

Dealers : INDIAN OIL CORPORATION LTD.

MOOLKY, S. K.

Phone - 22

ವಿದ್ವಾನ್ ಯ. ನಾ. ಉಡುಪ

ನಮ್ಮ ರಾಷ್ಟ್ರೀಯ ಪರಂಪರೆ

ಭಾರತೀಯ ಸಂಸ್ಕೃತಿ ಅತ್ಯಂತ ಪ್ರಾಚೀನ. ಅಂದಿನಿಂದಲೂ ವಿವಿಧ ಸಂಸ್ಕೃತಿಗಳ ಆಕ್ರಮಣಕ್ಕೆ ಇದು ತುತ್ತಾಗುತ್ತ ಬಂದಿದೆ. ಆದರೂ ಇದು ತನ್ನತನವನ್ನು ಸಂರಕ್ಷಿಸಿಕೊಂಡು ಬದುಕುಳಿದಿದೆ. ಇದಕ್ಕೆ ಅದರ ಉದಾರತೆ, ಸಹೃದಯತೆ ಮತ್ತು ಪರಿಪೂರ್ಣತೆಯೇ ಕಾರಣ.

ಹಲವು ಸಹಸ್ರ ವರ್ಷಗಳಿಂದ ಅಪರಿಚ್ಛಿನ್ನವಾಗಿ ಸಾಗಿಬಂದ ನಮ್ಮ ರಾಷ್ಟ್ರೀಯ ಪರಂಪರೆಯ ಭವ್ಯವಾದ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಇತಿಹಾಸವು ಅತ್ಯುಜ್ವಲವಾದುದು; ಅಲ್ಲದೆ ಆರ್ಥಿಕ ಹಾಗೂ ವಾಣಿಜ್ಯಶಾಸ್ತ್ರ, ಯುದ್ಧ ಶಾಸ್ತ್ರ, ಲಲಿತ ಕಲೆಗಳು, ವಾಙ್ಮಯ ಸಂಪತ್ತು, ಧರ್ಮ ಮತ್ತು ತತ್ವಜ್ಞಾನ- ಇವುಗಳ ಹಿನ್ನೆಲೆಯಿಂದ ಬೆಳಗಿದ ನಮ್ಮ ರಾಷ್ಟ್ರವು ಜಗತ್ತಿನ ವಿವಿಧ ದೇಶಗಳ ಮಧ್ಯೆ ತನ್ನದೇ ಆದ ವಿಶಿಷ್ಟ ಗಾಂಭೀರ್ಯ, ಸೌಂದರ್ಯ, ಪ್ರತಿಭೆ ಮತ್ತು ತೇಜಸ್ಸುಗಳಿಂದ ಕೂಡಿ ಜ್ವಲಿಸುವ ದೇಶವಾಗಿದೆ. ವಿಶ್ವದ ಯಾವ ರಾಷ್ಟ್ರಗಳಿಗೂ ಇಲ್ಲದ ಅಧಿಕವಾದ-ಪ್ರಾಚೀನ ಹಾಗೂ ಪ್ರಭಾವಯುತವಾದ ಪರಂಪರೆ ಮತ್ತು ಶಕ್ತಿಯು ನಮ್ಮ ಭಾರತ ದೇಶಕ್ಕಿದ್ದು ಆಸೇತು ಹಿಮಾಚಲ ಪರ್ಯಂತ ವಿಶಾಲವಾಗಿ ಹಬ್ಬಿ ಹರಡಿರುವ ಈ ಪುಣ್ಯ ಭೂಮಿಯು ಸುಖ ಶಾಂತಿ ಸಮೃದ್ಧಿಗಳ ನೆಲೆವೀಡಾಗಿ ಜಗತ್ತಿನಲ್ಲೇ ಪ್ರಥಮ ಸ್ಥಾನ ಪಡೆದಿರುತ್ತದೆ.

ಜಗತ್ತಿನ ವಾಙ್ಮಯದಲ್ಲಿ ಕಾಣುವ ಪ್ರಥಮ ಪ್ರಾಚೀನ ಗ್ರಂಥವಾದ ಋಗ್ವೇದವು ಅಪಾರವಾದ ಜ್ಞಾನ- ಭಂಡಾರವಾಗಿದ್ದು ವಿಶ್ವಕ್ಕೇ ಭಾರತ ಇತ್ತಿರುವ ವಿಶಿಷ್ಟವಾದ ಮೊದಲ ಕೊಡುಗೆಯಾಗಿದೆ. ವಿದ್ವಾಂಸರು ಹಾಗೂ ಸಂಶೋಧಕರು "ವೇದ ಸಾಹಿತ್ಯವು ವಿಶ್ವದ ಏಕಮೇವಾದ್ವಿತೀಯವಾದ ಆಧ್ಯಾತ್ಮಿಕ ಸಾಹಿತ್ಯ ಸಂಗ್ರಹವಾಗಿದ್ದು ಆದಿ ಜನಾಂಗದ ಸಂಸ್ಕೃತಿಯ ಮಹೋನ್ನತ ಮಟ್ಟದ ವಿವರಗಳನ್ನೊಳಗೊಂಡ ವಿಶೇಷ ಮೌಲ್ಯದ ಸಾಹಿತ್ಯ ನಿಧಿಯಾಗಿದೆ"–ಎಂದು ಹೇಳಿರುತ್ತಾರೆ. ಇಲ್ಲಿನ ಆರ್ಯ ಋಷಿಗಳು ಜಾತಿ, ಮತ, ಪಂಥಗಳೂ, ದೇಶಕಾಲ ಜನಾಂಗಗಳೆಂಬ ಭೇದವಿಲ್ಲದೆ ಜಗತ್ತೆಲ್ಲವೂ ತನ್ನ ಮನೆ, ವಿಶ್ವದ ವಿವಿಧ ಜನಾಂಗಗಳೆಲ್ಲಾ ಸ್ವಕುಟುಂಬನೆಂದು ಪರಿಗಣಿಸಿ "ಸರ್ವೇ ಜನಾಃ ಸುಖಿನೋ ಭವಂತು" (ಸರ್ವ ಜನರೂ ಸುಖಿಗಳಾಗಲಿ) ಎಂದು ತ್ರಿಕರಣ ಪೂರ್ವಕವಾಗಿ ಹಾಡಿ ಹರಸಿದ ವಿಶ್ವ ವಿಶಾಲ ದೃಷ್ಟಿಯ ಭೂಮಿಯೇ ಭಾರತ. 'ಏಕಂ ಸತ್, ವಿಪ್ರಾ ಬಹು ಧಾ ವದಂತಿ' "ಭಗವಂತನೊಬ್ಬನೇ,ನಾಮಗಳು ಹಲವು" ಎಂಬ ಸರ್ವಧರ್ಮ ಸಮನ್ವಯ ಸಂದೇಶವನ್ನು ಲೋಕಕ್ಕೆ ಮೊಟ್ಟಮೊದಲು ವೇದಗಳ ಮೂಲಕ ಘೋಷಿಸಿದ ಭೂಮಿಯೇ ನಮ್ಮ ಪಾವನ ಭಾರತ.

ಜೀವನವೆಂದರೇನು? ಜಗತ್ತಿಗೂ ಜೀವನಕ್ಕೂ ಸಂಬಂಧವೇನು? ಹುಟ್ಟು ಸಾವುಗಳ ಅನಂತ ಚಕ್ರವ್ಯೂಹದಿಂದ ಮಾನವನಿಗೆ ವಿಮೋಚನೆ ಇಲ್ಲವೇ? ಜೀವನದ ಗುರಿ ಏನು? ನೆಲೆ ಯಾವುದು?—ಎಂಬುವರ ಬಗೆಗೆ ಆಳವಾಗಿ ಚಿಂತಿಸಿ ಪ್ರಾಯೋಗಿಕವಾದ ಹಾಗೂ ರಚನಾತ್ಮಕವಾದ ಪರಿಹಾರವನ್ನು ಕಂಡು ಹಿಡಿದು ಜಗತ್ತಿಗೇ ಪ್ರಥಮತಃ ಬೆಳಕನ್ನು ನೀಡಿದ ವೈದಿಕ ಋಷಿಗಳು ನಮ್ಮ ರಾಷ್ಟ್ರೀಯ ಪರಂಪರೆಗೆ ಸೇರಿದವರು. ಜೀವನದ ಕುರಿತಾಗಿ ಅತ್ಯಂತ ಕಿರಿದಾದ ವಿಚಾರದಿಂದ ಹಿರಿಯ ಗಹನ ಸಂಗತಿಗಳವರೆಗೆ ಲೌಕಿಕ ಮತ್ತು ಪಾರಮಾರ್ಥಿಕ ಎಂಬ ಈ ಎರಡು ದೃಷ್ಟಿಕೋನಗಳಿಂದ ಪರ್ಯಾಲೋಚಿಸಿ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳ ಸಾಧನೆಗೆ ಪೂರಕವೂ ಪ್ರೇರಕವೂ ಆಗಬೇಕೆಂದು ನಿರ್ಧರಿಸಿ ಮಾನವನ ಬಾಳು ಸರ್ವಾಂಗ ಸೌಖ್ಯ ಪದವೂ ಹಸನೂ ಆಗಬೇಕೆಂದು ಘೋಷಿಸಿದ ನಮ್ಮವರ ರಾಷ್ಟ್ರೀಯ ವಿಚಾರಧಾರೆ ಮತ್ತು ಸಂಸ್ಕೃತಿಗಳು ಅತ್ಯಂತ ಪ್ರಾಚೀನವಾದಂತೆ ನಿತ್ಯನೂತನವೂ ಮೌಲ್ಯ ಪ್ರದವೂ ಹೌದು

ನಮ್ಮ ರಾಷ್ಟ್ರದ ಭೌಗೋಳಿಕವಾದ ಮೇರೆ ಮತ್ತು ವೈಶಾಲ್ಯಗಳು ಪ್ರಾಚೀನ ಭಾರತದ ಅರ್ಧಕ್ಕೂ ಕಡಿಮೆ ಎನ್ನಿಸಿರುವುದು ಶೋಚನೀಯವಾದ ಸಂಗತಿ. ಹಿಂದಿನ ಬೃಹತ್ ಭಾರತಕ್ಕೆ ಇಂದಿನ ಅಫಘಾನಿಸ್ಥಾನ, ಅರೇಬಿಯಾ, ಇಂಡೋಚೀನಾ. ಟಿಬೆಟ್, ಸಿಂಹಳ, ಜಾವಾ, ಕಾಂಬೋಡಿಯಾ, ಬರ್ಮಾ, ಇವೆಲ್ಲಾ ಸೇರಿದ್ದುವು. ಮ್ಯಾಸಿಡೋನಿಯನ್‌ರು ಭಾರತೀಯರಿಗಾಗಿ ಇರಾಣವನ್ನು ಬಿಟ್ಟುಕೊಟ್ಟಿದ್ದರು. ಮೇವಾಡದ ರಾಣರು ಚಿತ್ತೂರಿನಲ್ಲಿ ತಮ್ಮ ವಂಶವನ್ನು ಸ್ಥಾಪಿಸಿ ಖೊರಾಸಾನಕ್ಕೆ ಹೋದರಂತೆ! (ಸ್ಟ್ರಾಬೋ ಸಾಹೇಬರು) ಸಮ್ರಾಟನಾದ ಸುದಾಸನು ಬೇರೆ ಬೇರೆ ದೇಶವನ್ನೊಳಗೊಂಡ ಜಗತ್ತನ್ನೇ ಜಯಿಸಿದವನೆಂದು ಐತರೇಯ ಬ್ರಾಹ್ಮಣದಲ್ಲಿ ಹೇಳಿದೆ. ಪುರೂರವನ ಪಥದಲ್ಲಿ ಮಹಾ ಸಾಗರದಲ್ಲಿಯ ೧೩ ನಡು ಗಡ್ಡೆಗಳು ಇದ್ದುವೆಂದು ಮಹಾಭಾರತದ ಆದಿಪರ್ವದಲ್ಲಿ ಹೇಳಿದೆ. ಧರ್ಮರಾಜನು ರಾಜಸೂಯ ಯಾಗವನ್ನು ಮಾಡಿದ ಕಾಲಕ್ಕೆ ರೋಮ್‌ನವರು ಅತ್ಯಂತ ಬೆಲೆಯುಳ್ಳ ಕಾಣಿಕೆಗಳನ್ನು ಆತನಿಗೆ ತಂದಿದ್ದರೆಂಬ ಉಲ್ಲೇಖವಿದೆ. ಸಗರ ರಾಜನ ೬೦,೦೦೦ ಮಂದಿ ಮಕ್ಕಳು ಸಮುದ್ರ ಪ್ರಯಾಣದಲ್ಲಿ ನಿಪುಣರಾಗಿದ್ದು, ಸಗರನು ಅನೇಕ ಸಮುದ್ರಗಳನ್ನೂ ಆಳುತ್ತಿದ್ದನೆಂದು ತಮ್ಮ ರಾಜಸ್ಥಾನದ ಇತಿಹಾಸದಲ್ಲಿ ಕರ್ನಲ್ ಟಾಡರು ಬರೆದಿದ್ದಾರೆ. ಗ್ರೀಕರಿಗೂ ಮೌರ್ಯರಿಗೂ ರಾಜಕೀಯ ಸಂಬಂಧವಿದ್ದು ಸೆಲ್ಯೂಕಸನು ಚಂದ್ರಗುಪ್ತನಿಗೆ ಹೆಣ್ಣು ಕೊಟ್ಟ ಸಂಗತಿಯೂ ಇತಿಹಾಸ ಪ್ರಸಿದ್ಧವಿದೆ. ಅಶೋಕನು ಬೌದ್ಧ ಧರ್ಮೋಪದೇಶಕರನ್ನು ಸಿರಿಯ, ಈಜಿಪ್ಟ್, ಮ್ಯಾಸಿಡೋನಿಯಾ, ಯುರೋಪ್, ಆಫ್ರಿಕಗಳಿಗೆ ಕಳುಹಿಸಿದ್ದನು. ಅಶೋಕನ ಒಂದು ಶಿಲಾಲಿಪಿಯಲ್ಲಿ ಸಿರಿಯಾದ ಆಂಟಿಯೋಕಸ್, ಈಜಿಪ್ತದ ಟಾಲೆಮಿ. ಮ್ಯಾಸಿಡೋನದ ಆ್ಯಂಟಿಗೆನಸ್, ಎಪಿರಸದ ಎರಡನೆಯ ಅಲೆಗ್ಸಾಂಡರ್ ಮೊದಲಾದವರ ಹೆಸರು ಕಂಡು ಬರುತ್ತವೆ. ರಾಮಾಯಣ ಭಾರತಗಳ ಕಾಲದ ಬೃಹದ್ಭಾರತಗಳ ವಿವರ ರಾಮಾಯಣ ಭಾರತಗಳಲ್ಲಿವೆ. ಅಲ್ಲದೆ ಚೀನಾ. ಜಪಾನ್. ಫಿಲಿಪೈನ್ಸ್. ಫರ್ಮೋಸಾ. ಗ್ರೀಸ್. ಮೆಸಪೊಟೋಮಿಯಾ, ತುರ್ಕಿಸ್ತಾನಗಳಲ್ಲೂ ನಮ್ಮ ರಾಷ್ಟ್ರೀಯ ಪರಂಪರೆಗಳು ಭಾರತೀಯರಿಂದಲೇ ಹಬ್ಬಿ ಹರಡಿ ಅಲ್ಲಿನ ಜನಜೀವನದಲ್ಲಿ ವಿಶೇಷ ಪ್ರಭಾವ ಉಂಟು ಮಾಡಿದಂತೆ ತೋರುತ್ತವೆ.

ಪ್ರಾಚೀನ ಭಾರತದಲ್ಲಿ ಚಿಕ್ಕ ಮಾವಿನ ಗೊರಟಿನೊಳಗೆ ನಯವಾದ ರೇಶ್ಮೆಯ ಸೀರೆಯನ್ನು ತುಂಬಿಕೊಡುತ್ತಿದ್ದ ಕುಶಲ ನೇಯ್ಗೆಗಾರರೂ. ಹೊರ ದೇಶಗಳಿಗೆ ತೆರಳಿ ಭಾರತದ ವ್ಯಾಪಾರ ಸಾಮಗ್ರಿಗಳನ್ನು ಮಾರಿ ಹೇರಳ ಸಂಪತ್ತನ್ನು ಗಳಿಸುತ್ತಿದ್ದ ವಣಿಜರೂ ನಮ್ಮಲ್ಲಿ ವಿಪುಲವಾಗಿದ್ದರು. ಋಗ್ವೇದದ ಕಾಲದಿಂದಲೂ ಭಾರತೀಯರು ನೂಲುವಿಕೆ ಮತ್ತು ನೇಯ್ಗೆಯಲ್ಲಿ ಪ್ರಗತಿ ಹೊಂದಿದ್ದರು. ಇವರು ಚೀನದ ರೇಷ್ಮೆಯನ್ನು ನುರಿಯಿಸಿ ಇಲ್ಲಿಯ ಗಾಳಿಯ ಪರೆಯಂತಹ ಬಟ್ಟೆಗಳನ್ನು ನೇದು ರೋಮನ್ನರ ತಲೆದೂಗಿಸಿದರು. ಕ್ರಿ. ಶ. ೩ನೇ ಶತಮಾನದಲ್ಲೇ ಭಾರತೀಯರು ಇಲಿಗಳ ಉಣ್ಣೆಯಿಂದ ಬೆಚ್ಚಗಿನ ಬಟ್ಟೆಗಳನ್ನು ತಯಾರಿಸುತ್ತಿದ್ದರು. ಢಾಕ್ಕಾದ ಮಸ್ಲೀನನ್ನು ಔರಂಗಜೇಬನ ಮಗಳು ಒಂದರ ಮೇಲೊಂದರಂತೆ ಏಳು ಸೀರೆಗಳನ್ನುಟ್ಟರೂ ಅವಳ ಮೈ ಕಾಣಿಸುತ್ತಿತ್ತಂತೆ! (ಮಿ. ಬಾಟ್ಲಿ)

ಶಿಲ್ಪಕಲೆಯೆಂಬುದು ರಾಷ್ಟ್ರಜೀವನ ಹಾಗೂ ರಾಷ್ಟ್ರಸ್ವಭಾವಕ್ಕೊಂದು ಕನ್ನಡಿಯೆಂಬುದನ್ನು ಒಪ್ಪಿದರೆ ಭಾರತದ ರಾಷ್ಟ್ರೀಯ ಪರಂಪರೆ ಅಸ್ವಾದ್ಯವೆನ್ನ ಬೇಕಾಗುವುದು. ಗಝನಿ ಮಹಮ್ಮದನು ಮಥುರೆಯಿಂದ ತನ್ನ ದೇಶದ ಖಲೀಫನಿಗೆ ಬರೆದ ಪತ್ರದಲ್ಲಿ 'ಹಿಂದುಸ್ಥಾನದ ಕಟ್ಟಡಗಳು ಮುಸಲ್ಮಾನರ ಮತನಿಷ್ಠೆಗಿಂತ ನಿಶ್ಚಯವಾಗಿಯೂ ಕಡಿಮೆ ಭದ್ರತೆಯುತವಾದವಲ್ಲ' ಎಂದು ಬರೆದದನ್ನು ಓದಿದರೆ ಇಲ್ಲಿಯ ಶಿಲ್ಪಿಗಳು ಅನುಪಮರಾದವರು ಎನ್ನಲು ಸಂದೇಹ ತೋರುವುದಿಲ್ಲ. ದೇವರ ಬಗ್ಗೆ ಭಾರತೀಯರ ನಿಚ್ಚಟಭಕ್ತಿ ಮತ್ತು ಸೌಂದರ್ಯದ ಬಗ್ಗೆ ಅವರ ಬಹು ಸೂಕ್ಷ್ಮ ಕಲ್ಪನೆ–ಇವೆಲ್ಲಾ ಭಾರತೀಯ ಶಿಲ್ಪಕಲೆಯಲ್ಲಿ ಮೂರ್ತಿಮತ್ತಾಗಿ ಒಡಮೂಡಿರುತ್ತವೆ.' (ಮಿ ರಸ್ಕಿನ್)

ಋಗ್ವೇದ ಕಾಲದಿಂದಲೂ ಪಟ್ಟಣ ಕಟ್ಟುವ ಶಾಸ್ತ್ರ ಬೆಳೆಯುತ್ತಾ ಬಂದು, ಅದರ ಕುರಿತಾಗಿ ಮಾನಸಾರವೆಂಬ ಒಂದು ದೊಡ್ಡ ಗ್ರಂಥವೇ ಹುಟ್ಟಿದೆ. ಇದರಲ್ಲಿ ೪೦ ಪ್ರಕಾರದ ಹಳ್ಳಿ ಪಟ್ಟಣಗಳ ರಚನೆಯ ವರ್ಣನೆ ಇದೆ! ಕರ್ನಲ್ ಟಾಡರು ಭಾರತೀಯ ವಾಸ್ತುಕಲೆ ಮತ್ತು ಶಿಲ್ಪದ ವೈವಿಧ್ಯತೆಯನ್ನೂ. ಭವ್ಯತೆಯನ್ನೂ ಬಣ್ಣಿಸುವುದೆಂದರೆ ತಮ್ಮ ಕೈಮೀರಿದ್ದೆನ್ನುತ್ತಾರೆ. ಜಗನ್ನಾಥ ಪುರಿಯ ಹತ್ತಿರವಿದ್ದ ಕೊನಾರ್ಕವೆಂಬಲ್ಲಿಯ ಸೂರ್ಯ ದೇವಾಲಯದ ನಿರ್ಮಾಣಕ್ಕೆ ೧೨ ವರ್ಷದ ರಾಜ್ಯ ಕಂದಾಯ ವೆಚ್ಚವಾಗಿದೆಯೆಂದು ಅಬುಲ್ ಫಜಲನು ತನ್ನ ಐನ್ ಅಕಬರಿಯಲ್ಲಿ ಬರೆದಿದ್ದಾನೆ. ಇವನೇ ಹಿಂದೂ ಜನರ ಚಿತ್ರಗಾರಿಕೆಯು ಕಲ್ಪನೆಗೆ ಮೀರಿದ ಮಾತು; ಇವರನ್ನು ಸರಿಗಟ್ಟುವವರು ಜಗತ್ತಿನಲ್ಲೇ ವಿರಳರೆನ್ನುತ್ತಾನೆ.

ಭಾರತೀಯ ಸಂಗೀತಕ್ಕೆ ಸಾಮವೇದವೇ ತಳಹದಿ. ಇದರಿಂದಲೇ ಜಗತ್ತಿನ ಸಂಗೀತ ಶಾಸ್ತ್ರವೆಂಬ ಮಹಾವೃಕ್ಷ ಬೆಳೆದು ಹೆಮ್ಮರವಾಯಿತು. ಮಿ. ಸ್ಟ್ರಿಟನ್ ಸಾಹೇಬರು ಅಕಬರನ ಕಾಲದ ನಾಯಕ ಗೋಪಾಲನು ಹಾಡಿದ ದೀಪಕ ರಾಗವನ್ನೂ, ತಾನಸೇನನು ರಾತ್ರಿಯಲ್ಲಿ ಹಾಡುವ ಶ್ರೀ ರಾಗವನ್ನು ಮಧ್ಯಾಹ್ನ ಸಮಯದಲ್ಲಿ ಹಾಡಿದ ಪರಿಣಾಮವನ್ನೂ ವರ್ಣಿಸಿರುವರು.

ನಮ್ಮ ರಾಷ್ಟ್ರೀಯ ಪರಂಪರೆಗಳಲ್ಲಿ ತತ್ವಶಾಸ್ತ್ರ. ಧರ್ಮಶಾಸ್ತ್ರ ಯೋಗಶಾಸ್ತ್ರ, ಭಾಷಾ ಶಾಸ್ತ್ರಗಳು ಘನತೆ ಪಡೆದಂತೆ, ಶರೀರ ಶಾಸ್ತ್ರ ಮತ್ತು ಆಯುರ್ವೇದ ಶಾಸ್ತ್ರಗಳೂ ಮುಗಿಲು ಮುಟ್ಟಿದ್ದುವೆಂದು ಹೇಳುತ್ತಾರೆ. ಧನ್ವಂತರಿಯೆಂಬ ಪುರಾತನ ವೈದ್ಯನ ಶಿಷ್ಯನೇ ಸುಶ್ರುತ. ಅಲ ಮಂಸೂರ ಎಂದೊಬ್ಬ ಅರಬ ರಾಜನು ಕ್ರಿ.ಶ. ೭೫೩–೭೭೪ರಲ್ಲಿ ತನ್ನ ವಿದ್ವಾಂಸರಿಂದ ತನ್ನ ಭಾಷೆಗೆ ಚರಕ– ಸುಶ್ರುತರ ವೈದ್ಯಕೀಯ ಗ್ರಂಥವನ್ನು ಭಾಷಾಂತರಿಸಿದನು. ಮಂಕಾ ಎಂಬ ಹಿಂದೀ ವೈದ್ಯನು ಇರಾಣದ ಖಲೀಫ್ ಹ

(ಹನ್ನೊಂದನೇ ಪುಟ ನೋಡಿರಿ)

HOTEL SATKAR

Boarding, Lodging & Restaurant

behind Corporation Office,

9 Mission Road — Bangalore—27.

Phone No.— 1 72303 / 2 72304 Grams: HOST SATKAR

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms: Roof garden

Quiet, Calm Atmosphere

Personalised Service

ಶ್ರೀ "ನವಗಿರಿನಂದ"

ನಾವೆಲ್ಲ ನೆರೆಕರೆಯವರೇ

ನೆರೆಕರೆಯವರ ಕರೆಕರೆಯ ನೆರೆಯಿಂದ ನೊಂದ ಮನೆಯೊಡತಿಯ ಹೃದಯದ ಅಪೇಕ್ಷೆಯಂತೆ ದೂರದ ಪ್ಲಾಟಿನಲ್ಲಿ ಸ್ವಂತ ಮನೆಕಟ್ಟಿ ಕುಳಿತದ್ದಾಯ್ತು. ಈಗ ಆಕೆಯೇ ಅನ್ನುತ್ತಾಳೆ— ನೆರೆಕರೆ ಬೇಕು........ಕಷ್ಟದಲ್ಲೂ ಸುಖವಿರುವಂತೆ ನೆರೆಕರೆಯವರ ಕರೆಕರೆಯಲ್ಲೂ ಒಂದು ಅವ್ಯಕ್ತ ಹಿಗ್ಗು ಇದ್ದೇ ತೀರಬೇಕಲ್ಲವೆ?

"ಸಾಕೋ ಸಾಕಾಯ್ತಪ್ಪ ಈ ನೆರೆಕರೆಯವರ ಕಾಟ. ನಮ್ಮ ಪ್ಲಾಟಿನಲ್ಲಿ ಬೇಗ ಒಂದು ಗುಡಿಸಲಾದರೂ ಕಟ್ಟಿರಪ್ಪ. ಹೋಗಿ ಬಿಡುವ—" ಅಂತ ಇವಳ ಪಲ್ಲವಿ ಕೇಳಿ ಕೇಳಿ ಸಾಕಾಯ್ತು.

ತಕ್ಕೊಂಡು ಕಾದಿಟ್ಟಿರುವ ಸ್ಥಳ ನಗರಕ್ಕೆ ಹೊರಗೆ. ಮುಂದೆ ಎಂದೋ ನಗರವಾಗಬೇಕಷ್ಟೆ; ಈಗ ಅಲ್ಲಿ ನಾವು ಮನೆ ಕಟ್ಟಿ ವಾಸಮಾಡಿಬಿಟ್ಟರೆ, ತರಕಾರಿ ಬಿಡಿ, ಒಂದು ಎಳೆ ಮೆಣಸು, ಉಪ್ಪು, ಹುಳಿ ಬೇಕಾದರೂ ಮೂರು ಮೈಲು ದೂರ ಹೋಗಬೇಕು. ಸುತ್ತುಮುತ್ತೂ ಯಾರೂ ಇರಲಾರರು. ಎಲ್ಲೋ ಅಲ್ಲೊಂದು ಇಲ್ಲೊಂದು ಮನೆ ಏಳುತ್ತಾ ಇದೆಯಷ್ಟೇ. ಇದೆಲ್ಲಾ ಬಿಡಿಸಿ ಹೇಳಿದರೆ, "ನಿಮಗೇನು ಗೊತ್ತು? ಹಗಲೆಲ್ಲಾ ಆಫೀಸಿನಲ್ಲಿರುತ್ತೀರಿ, ಮನೆಯಲ್ಲಿ ನೆರೆಕರೆಯವರ ಕಾಟದ ನಡುವೆ ಒದ್ದಾಡುವವಳು ನಾನು ತಾನೆ?—" ಎನ್ನುತ್ತಾಳೆ.

ನನಗೆ ಗೊತ್ತಿಲ್ಲವೆಂದರೇನು? ನೆರೆಕರೆಯವರ ವಿಷಯ ಗೊತ್ತಿಲ್ಲದವರು ಯಾರಾದರೂ ಇದ್ದಾರೆಯೆ? ನಾನು ಕೂಡಾ ಒಬ್ಬ ನೆರೆಕರೆಯವನೇ. ಆಫೀಸಿನಲ್ಲಿರುವ ಸಹೋದ್ಯೋಗಿಗಳೂ ನೆರೆಕರೆಯವರೇ.

ಇನ್ನೊಬ್ಬರಿಗೆ ಹಿತರೂ ಅಹಿತರೂ ಹೀಗೆ ಎರಡೂ ಆಗಿ ಕಾಣಿಸುವವರು ನೆರೆಕರೆಯವರು. ನಾನೂ ಅಂಥವನೇ. ನೀವೂ ಅಂಥವರೇ. ಪ್ರಪಂಚದಲ್ಲಿರುವ ಪ್ರತಿಯೊಬ್ಬರೂ ಇನ್ನೊಬ್ಬರಿಗೆ ನೆರೆಕರೆಯವರಾಗಿರುತ್ತಾರೆ.

ನಗರದ ಕೆಲವು ನೆರೆಕರೆಗಳಿಗೆ ವಿಭಾಗವು ಗೊತ್ತಾಗುವುದಿಲ್ಲವಾದರೆ, ಅದೆಲ್ಲ ಒಂದು ಮನೆಯೊಳಗೊ, ಒಂದು ಕಂಪೌಂಡಿನೊಳಗೋ ಇರುವ ಬೇರೆ ಬೇರೆ ಬಿಡಾರಗಳೆಂದರ್ಥ. ಕಂಪೌಂಡುಗಳು ನೆರೆಕರೆಗಳನ್ನು ವಿಭಾಗಿಸಿಕೊಟ್ಟರೆ, ಗ್ರಾಮಗಳಲ್ಲಿ ಅಂಗಳದ ತೊಡಮೆಗಳು, ದರೆಗಳು, ಕೆರೆಗಳು, ಗದ್ದೆಗಳು, ತೋಟಗಳು ನೆರೆಕರೆಗಳನ್ನು ವಿಭಾಗಿಸಿ ಕೊಡುತ್ತವೆ.

ಒಂದು ಮನೆಯಲ್ಲಿ ಏನೋ ಒಂದು ಗುಸುಗುಸು ನಡೆದರೇ ಸಾಕು; ಅದರ ವಾಸನೆ ನೆರೆಮನೆಗೆ ಬಡೆಯುತ್ತದೆ. ಕಾರಣ ಪ್ರತಿ ಮನೆಯವರೂ ತಮ್ಮ ನೆರೆಮನೆಯ ಕಡೆಗೆ ಮುಖ್ಯ ಲಕ್ಷ್ಯ ಕೊಡುತ್ತಾರೆ. ಅದರಲ್ಲೂ ಹೆಚ್ಚಾಗಿ ಹೆಂಗುಸರಿಗೆ ನೆರೆಮನೆಯ ಹೆಂಗುಸರ ಮೇಲೆಯೇ ಕಣ್ಣು. ಎಲ್ಲಾ ಹೆಂಗುಸರಿಗೂ ಹೇಳಿದೆನೆಂದು ಕೊಂಡು ನನ್ನನ್ನು ಕಣ್ಣುಕೆಕ್ಕರಿಸಿ ನೋಡಬೇಡಿರಮ್ಮ ಸದ್ಯ. ನಮಗೆ ಅಂಟಿಕೊಂಡಿರುವ ಮನೆಗಳಿಂದ ಹಿಡಿದು ಒಂದು ಕೂಗಳತೆಯ ದೂರದಲ್ಲಿರುವಂಥಾದ್ದೆಲ್ಲವೂ ನೆರೆಮನೆಗಳೇ.

ನಗರದ ಕೂಗಳತೆಗೂ ಗ್ರಾಮಗಳ ಕೂಗಳತೆಗೂ ವ್ಯತ್ಯಾಸವುಂಟು. ನಗರಗಳಲ್ಲಿ ಹತ್ತಿರ ಹತ್ತಿರ ಮನೆಗಳಾದುದರಿಂದ ಕೂಗಿ ಮಾತಾಡುವ ಶಕ್ತಿ ಕುಂಠಿತವಾಗಿದೆ. ಹಳ್ಳಿಗಳಲ್ಲಿ ಹಾಗಲ್ಲ; ಅಲ್ಲಿಯ ಕೆಲವು ಹೆಂಗಸರು ಸಾಧಾರಣವಾಗಿ ಮಾತಾಡುವುದೇ ಒಂದು ಫರ್ಲಾಂಗೂ ದೂರ ಕೇಳಿಸುವಂಥಾದ್ದು. ಕೂಗಿ ಮಾತಾಡಿದರೆ ಅರ್ಧ ಮೈಲಿಗೂ ಕೇಳಿಸೀತು. ಎಲ್ಲಿಯೋ ಗುಡ್ಡದಲ್ಲಿ ಮೇಯುತ್ತಿದ್ದ ದನವನ್ನು ಮನೆಯ ಅಂಗಳದಲ್ಲಿ ನಿಂತು ಕೂಗಿ ಕರೆಯುವವರು ಹಳ್ಳಿಗಳಲ್ಲಿದ್ದಾರೆ. ಅಂತೆಯೇ ಗ್ರಾಮಗಳ ಒಂದು ಮನೆಯಲ್ಲಿ ಏನಾದರೂ ಆದರೆ ಅದು ಕೂಡಲೇ ಒಂದಕ್ಕೊಂದು ನೆರೆಕರೆಯಾಗಿರುವ ಮನೆಗಳಲ್ಲಿ ನಿಮಿಷ ಮಾತ್ರದಲ್ಲಿ ಹರಡಿ ಬಿಡುತ್ತದೆ. ಅಲ್ಲಿನವರ ಕಂಠಶಕ್ತಿಯಂತೆ ಕಿವಿಯ ಶಕ್ತಿಯೂ ಹೆಚ್ಚಾಗಿರಬಹುದು. ನಗರವಾಸಿಗಳಿಗೆ ಕಿವಿಯ ಶಕ್ತಿ ಉಡುಗಲು ಎಷ್ಟೋ ಕಾರಣಗಳುಂಟು. ವಾಹನಗಳ ಶಬ್ದಗಳಿಂದ, ಧೂಳಿನಿಂದ ಯಂತ್ರಗಳ ಘರ್ಘರಗಳಿಂದ, ಲೌಡು ಸ್ಪೀಕರುಗಳಿಂದ, ಹೊತ್ತು ಗೊತ್ತಿಲ್ಲದೆ ಕಿರುಚುವ ರೇಡಿಯೋಗಳಿಂದ ಕಿವುಡು ಬಂದಿರಬಹುದು, ನೆರೆಕರೆಗಳು ತೀರ ಅಂಟಿಕೊಂಡೇ ಇರುವುದರಿಂದ ಮೆಲ್ಲ ಮೆಲ್ಲ ಮಾತನಾಡಿ ಕಂಠ ಶಕ್ತಿಯೂ ಕಿವಿಶಕ್ತಿಯೂ ತಗ್ಗಿದ್ದರೂ ಇದ್ದೀತು. ಅದು ಹೇಗಿದ್ದರೂ ನೆರೆಕರೆಗಳಿದ್ದಲ್ಲಿ ಅವುಗಳಿಂದಾಗುವ ಯಾವುದೋ ಒಂದು ಪರಿಣಾಮವೂ ಉಂಟೇ ಉಂಟು.

ನೆರೆಕರೆಯವರ ಪ್ರತಿಫಲಿತಗಳು ಗಂಡುಸರ ಮೇಲೆ ಬೀಳುವುದಕ್ಕಿಂತಲೂ ಹೆಂಗುಸರ ಮೇಲೆ ಬೀಳುವುದೇ ಹೆಚ್ಚು. ಅದೂ ಮಕ್ಕಳಿಂದಾಗಿಯೇ ಪ್ರಾರಂಭಿಸುತ್ತದೆ. ಅವುಗಳಿಂದೇಳುವ ಒಳಿತು ಕೆಡುಕುಗಳು ಅವರವರ ಹಣೆಯಲ್ಲಿ ಬರೆದ ಹಾಗೆ. ಒಳ್ಳೆಯ ನೆರೆಕರೆ ಬೇಕೆನ್ನುವುದು ಅದಕ್ಕೇ.

ಮುಖ್ಯವಾಗಿ ನೆರೆಕರೆಯವರಿಂದ ಮೊದಲು ಮೂಡುವುದು ಒಂದು ಬಗೆಯ ಸ್ಪರ್ಧೆಯ ಭಾವ. ನೆರೆಕರೆಯವಳಿಗಿಂತ ಒಂದು ಪಟ್ಟು ಹೆಚ್ಚು ತಾನಾಗ ಬೇಕೆಂದು ಪ್ರತೀ ನೆರೆಕರೆಯವಳ ಭಾವನೆ. ಅವರ ಮೇಲಾಟಗಳಿಂದ ಲಾಭ ಕಂಡ ವ್ಯಾಪಾರಿಗಳಿದ್ದಾರು; ದಿವಾಳಿಯಾದ ಗಂಡಂದಿರೂ ಇದ್ದಾರು.

ನನ್ನವಳ ಅನುಭವಗಳನ್ನೂ ಇವಳು ಆಗಾಗ ನನ್ನ ಕಿವಿಗೆ ತುಂಬಿಸುತ್ತಲೇ ಇರುತ್ತಾಳೆ. ನಗರವಾಸಿಗಳಾದುದರಿಂದ ನಮ್ಮದು ಬಹಳ ಅಕ್ಕ ಪಕ್ಕದ ನೆರೆಮನೆಗಳು, ನಮ್ಮಲ್ಲಿ ಏನೋ ಒಂದು ದಿನ ವಿಶೇಷ ಸೂಚನೆ, ಅಂದರೆ ಚಕ್ಕುಲಿ ಕರಿಯುವುದೋ, ಅಕ್ಕಿ ಅರೆಯುವುದೋ, ಯಾಲಕ್ಕೀ ಪರಿಮಳವೋ, ಬೆಲ್ಲ ಪಾಕದ ಸುವಾಸನೆಯೋ ಹೊರಟಾಗ ನೆರೆಮನೆಯಾಕೆ ಬಂದು "ಏನ್ಮಾಡ್ತಿಯೇ?...." ಅಂತ ಹರಟೆಗೆ ಶುರು ಮಾಡುತ್ತಾಳೆ. ಹೋಗನ್ನಲಿಕ್ಕೂ ಇಲ್ಲ, ಇರಿ ಅನ್ನಲಿಕ್ಕೂ ಇಲ್ಲ. ಕಡೆಗೆ ಮಾಡುವುದರಲ್ಲಿ ಸ್ವಲ್ಪ ಅವಳಿಗೂ ಕೊಡಬೇಕಾಗುತ್ತದೆ. ಆಕೆ ಬೇಡ ಬೇಡವೆನ್ನುವುದೂ ಈಕೆ ಉಪಚಾರ ಮಾಡುವುದೂ ತಪ್ಪದ ಸರಿಯೇ. ಆಗಲೂ ಕಪ್ಪಾದದ್ದೋ ಪುಡಿಯಾದದ್ದೋ, ಅರೆಬೆಂದದ್ದೋ ಆಕಾರ ಕೆಟ್ಟದ್ದೋ ನಾವಿಟ್ಟುಕೊಂಡು, ಅವರಿಗೆ ಅಳಿಯನಿಗೆ ಕೊಡುವ ಹಾಗೆ ಉತ್ತಮವಾದುದನ್ನೇ ಆರಿಸಿ ಕೊಡಬೇಕಾಗುತ್ತದೆ. ಏಕೆಂದರೆ ತಾನು ಮಾಡುವುದರಲ್ಲಿ ಅವಳಿಗಿಂತಲೂ ಹೆಚ್ಚಿನವಳೆನಿಸಿಕೊಳ್ಳಬೇಕಷ್ಟೇ?

ನೆರೆಕರೆಯವರೊಳಗೆ ಇನ್ನೊಂದು ಸರ್ವ ಸಾಧಾರಣವಾದ ಗುಣವೆಂದರೆ ಸಾಲ ಕೇಳುವುದು. ಹಣದ ವಿಷಯ ಹಾಗಿರಲಿ. ಅದು ಬೇರೆ ಲೆಕ್ಕ. ಲೆಕ್ಕಕ್ಕೆ ಸಿಕ್ಕದಂತೆ ಅಥವಾ ಲೆಕ್ಕ ಕೇಳಲು ನಾಚಿಕೆಯಾಗುವಂತೆ ಕೈಸಹಾಯವೆಂಬ ಚೂರು ಚಾರು ಕೈಗಡಗಳು.

ಮರುಕು ಚಮಚ ಮೊದಲುಗೊಂಡು ಹಾಲು ಸಕ್ಕರೆಯವರೆಗೂ ಕೈಗಡ ಕೇಳುವ ಪರಿಪಾಠದವರಿದ್ದಾರೆ. ಕೆಲವರು ದುಡ್ಡಿನ ಸಹಾಯ ಕೇಳುವ ವಿಧಾನವೇ ಬೇರೆ. ಬೀದಿಯಲ್ಲಿ ಮಿಠಾಯಿಯೋ ಐಸ್‌ಕ್ರೀಮೋ ಕೂಗಿತೆಂದರೆ, ಅವರ ಮಕ್ಕಳು ಪ್ರತಿಕೂಗು ಹಾಕಲು, ಆಕೆ ಒಂದೆರಡಾಣೆಯದು ತನ್ನ ಮಕ್ಕಳಿಗೆ ತೆಗೆಸಿಕೊಟ್ಟು, ಈಚೆ ಮನೆಗೆ ಓಡಿಬಂದು, "ಚಿಲ್ಲರೆ ಇಲ್ಲ, ಆಮೇಲೆ ಕೊಟ್ಟರ್ತೀನಿ, ಎರಡಾಣೆ (ಒಂದಾಣೆ....ಕಾಲಾಣೆ—) ಕೊಡಿ" ಅನ್ನುತ್ತಾಳೆ. ಇವಳು ಕೊಡುತ್ತಾಳನ್ನಿ. ಅವಳು ಮರೆಯುವುದೂ ಸಹಜ ಸಣ್ಣ ಕಾಸು ಕೇಳಲಿಕ್ಕೂ ಇಲ್ಲ, ಬಿಡಲಿಕ್ಕೂ ಅಲ್ಲ. ಅಂತೆಯೇ ಇತ್ತೀಚೆಗೆ ನನ್ನವಳೂ "ಅಯ್ಯೋ ನನ್ನ ಹತ್ತಿರವೂ ಚಿಲ್ರೆ ಇಲ್ವಲ್ಲಾ!" ಎನ್ನುತ್ತಾಳಂತೆ. ಇನ್ನು ಯಾವ ಲೆಕ್ಕಕ್ಕೂ ಸಿಕ್ಕದ ಸಹಾಯ ಒಂದುಂಟು. ಬೆಂಕೀಕಡ್ಡಿ. ಕೇಳುವುದೇನೋ "ಬೆಂಕೀಕಡ್ಡೀ ಕೊಡೀ" ಅಂತ. ಒಂದೇ ಕೊಡುವುದು ಮರ್ಯಾದೆಯಲ್ಲವಷ್ಟೆ?" ಪೇಪರ್ ಬಂತಾ, ಸ್ವಲ್ಪ ನೋಡಿ ಕೊಡ್ತೇವೆ" ಅಂತ ಒಯ್ಯುವುದೂ ಲೆಕ್ಕಪಕ್ಕದ್ದಲ್ಲ. ಇ

(ಇಪ್ಪತ್ತನೇ ಪುಟ ನೋಡಿರಿ)

ಕೊಡುವವನಿಗೆ ಹರುಷ
ಪಡೆವವನಿಗೆ ಹರುಷ
ಜನಪ್ರಿಯ "ಪ್ರಕಾಶ"

ಮೂವತ್ತು ವರ್ಷಗಳಿಗೂ ಮಿಕ್ಕಿ
ದೇಶದ ವಿವಿಧ ರಾಜ್ಯಗಳಲ್ಲಿ
—ತಾರತಮ್ಯ ತಿಳಿದ ಜನರಿಂದ
ಆದರಿಸಲ್ಪಟ್ಟಿವೆ—

ಪ್ರಕಾಶ ಬೀಡಿಗಳು
PRAKASH BEEDIES

ಎಲ್ಲ ಕಾಲಗಳಲ್ಲಿ ಎಲ್ಲ ಜನರಿಗೆ
ಸೇವನೆಯು ಆನಂದವೀಯುತ್ತಿವೆ!

ದೀಪಾವಳಿಯ ಶುಭಾಶಯಗಳನ್ನು ಕೋರುವ—

ಕೆ. ಎಂ. ಆನಂದ ಪ್ರಭು ಎಂಡ್ ಸನ್ಸ್

ಬಂದರ, ಮಂಗಳೂರು–1
ಫೋನ್ : 3718

ಫೆಕ್ಟರಿ : ಕೊಡಿಯಾಲಬೈಲ್, ಮಂಗಳೂರು–3
ಫೋನ್ : 3532

ನಮ್ಮ ರಾಷ್ಟ್ರೀಯ ಪರಂಪರೆ

(ಒಂಭತ್ತನೇ ಪುಟದಿಂದ)

ರೂನ್-ಉಲ್-ರಶೀದನ ಬೇನೆಯನ್ನು ಗುಣಪಡಿಸಿದನಂತೆ! ಪ್ರೊ| ವಿಲ್ಸನರು "ಹಿಂದುಗಳು ಔಷಧ ಚಿಕಿತ್ಸೆಯಂತೆ ಶಸ್ತ್ರಚಿಕಿತ್ಸೆಯಲ್ಲೂ ಪ್ರಾವೀಣ್ಯ ಪಡೆದಿದ್ದಾರೆ" ಎನ್ನುತ್ತಾರೆ ಹೊಸಕಿವಿ ಮೂಗುಗಳನ್ನೂ ಪ್ರಾಚೀನ ಭಾರತದ ವೈದ್ಯರು ಮಾಡಿಹಾಕುತ್ತಿದ್ದರೆಂದು ಪ್ರೊ|ವೆಬರರು ಹೇಳಿದ್ದಾರೆ

ಹಿಂದುಗಳ ರಸಶಾಸ್ತ್ರದ ಕುರಿತು ಮಿ| ಎಲ್ಫಿನ್‌ಸ್ಟನ್‌ರು 'ಭಾರತೀಯ ವೈದ್ಯರಿಗೆ ಈಗಿನ ಸಲ್ಫ್ಯೂರಿಕ್ ಆ್ಯಸಿಡ್, ನೈಟ್ರಿಕ್ ಆ್ಯಸಿಡ್, ಮ್ಯುರೇಟಿಕ್ ಆ್ಯಸಿಡ್, ಆಕ್ಸೈಡ್ ಆಫ್ ಕೋಪರ್, ಐಯರ್ನ್, ಲೆಡ್, ಟಿನ್ ಮತ್ತು ಜಿಂಕ್, ಕಾಪರ್ ಸಲ್ಫೇಟ್, ಕಾರ್ಬೋನೇಟ್ ಆವ್ ಲೆಡ್ ಮುಂತಾದುವುಗಳಿಂದ ಔಷಧ ತಯಾರಿಸುವುದು ಗೊತ್ತಿತ್ತೆನ್ನುತ್ತಾರೆ

ಸ್ಲೆಜೆಲನ್ನು—'ಹಿಂದುಗಳೇ ಗಣಿತದಲ್ಲಿ ದಶಾಂಶ ಪದ್ಧತಿಯ'ನ್ನು ಶೋಧಿಸಿದರು ಮನುಷ್ಯನು ಮಾಡಿದ ಶೋಧಗಳಲ್ಲಿ ಇದು ಹೆಚ್ಚಿನದೆನ್ನುತ್ತಾರೆ.

ಪೃಥ್ವಿಯು ತನ್ನ ಅಚ್ಚಿನಲ್ಲಿ ತಿರುಗುವುದನ್ನು ಕೋಪರ್ ನಿಕಸನಾಗಲೀ, ಗೆಲಿಲಿಯೋವಾಗಲೀ ಪ್ರಥಮ ಕಂಡು ಕೊಂಡುದಲ್ಲ ಐತರೇಯ ಬ್ರಾಹ್ಮಣದಲ್ಲಿ ಈ ವಿಚಾರ ಹೇಳಲ್ಪಟ್ಟಿದೆ ಗುರುತ್ವಾಕರ್ಷಣದ ವಿಷಯ ಮೊತ್ತಮೊದಲು ನ್ಯೂಟನನು ಕಂಡುಕೊಂಡುದಲ್ಲ ಸಿದ್ಧಾಂತ ಶಿರೋಮಣಿಯೂದ ಭಾಸ್ಕರಾಚಾರ್ಯನು ನ್ಯೂಟನ್ನನಿಗಿಂತ ಮೊದಲೇ ಗೊತ್ತುಹಚ್ಚಿ ಬರೆದಿದ್ದಾನೆ

ವೇದದಲ್ಲಿ ಎಲ್ಲಾ ಶಾಸ್ತ್ರಗಳ ಬೀಜಗಳೂ ಅಡಗಿವೆ ಹೋರಿನ ಕೈ| ವಾ| ಗುರುದತ್ತರು ಋಗ್ವೇದದೊಳಗಿನ

ಮಿತ್ರಂ ಹುವೆ ಪೂತಂ ದಕ್ಷಂ ವರುಣಂ ಚರಿಶಾದಸಂ ಧಿಯಂ ಘೃತಾಚಿಂ ಸಾಧಂತಾ||

ಈ ಋಚೆಗೆ ಘೃತಾಚಿ ಹಾಗೂ ಸಾಧಂತಾ ಇವುಗಳ ಮಿಶ್ರಣದಿಂದ ನೀರು ಆಗಬಹುದು ವರುಣವೆಂದರೆ ಜಲಜನಕವೆಂತಲೂ, ಮಿತ್ರನೆಂದರೆ ಆಮ್ಲಜನಕವೆಂತಲೂ ದಕ್ಷನೆಂದರೆ ಶಕ್ತಿ ಎಂದೂ ಅರ್ಥ ಮಾಡಿದ್ದಾರೆ

ಸ್ವಾಯಂಭೂ ಮನುವಿನ ಮಗನಾದ ಪ್ರಿಯವ್ರತನು ಜಗತ್ತನ್ನು ಏಳುದ್ವೀಪಗಳಾಗಿ ವಿಂಗಡಿಸಿದನಂತೆ ಜಂಬೂ ದ್ವೀಪ (ಏಶ್ಯಾ), ಪ್ಲಕ್ಷದ್ವೀಪ (ದ ಅಮೇರಿಕ), ಶಕದ್ವೀಪ (ಯುರೋಪು), ಶಾಲ್ಮಲಿದ್ವೀಪ (ಆಸ್ಟ್ರೇಲಿಯಾ) ಕುಶದ್ವೀಪ (ಓಸ್ಯಾನಿಯಾ), ಇವುಗಳ ಸಂಸ್ಕೃತದ ಹೆಸರು ಈಗ ನಷ್ಟವಾಗಿದ್ದರೂ ಭಾರತದ ಪರಂಪರೆಯು ಈ ದ್ವೀಪಗಳಲ್ಲೆಲ್ಲಾ ಹಾಸು ಹೊಕ್ಕಾಗಿತ್ತೆನ್ನಲು ಅದರ ಕುರುಹುಗಳು ಇನ್ನೂ ನಾಮಾವಶೇಷವಾಗಿಲ್ಲವೆಂದೂ ನಿಸ್ಸಂದೇಹವಾಗಿ ಹೇಳಬಹುದು

ನಮ್ಮ ರಾಷ್ಟ್ರೀಯ ಕಾವ್ಯಗಳಾದ ರಾಮಾಯಣ ಮಹಾ ಭಾರತವನ್ನು ಗ್ರೀಕರ ಇಲಿಯಡ್ ಮತ್ತು ಆಡೆಸಿ ಕಾವ್ಯಗಳಿಗೆ ಹೋಲಿಸಿದರೆ ಗಜ—ಅಜಗಳಿಗೆ ಹೋಲಿಸಿದಂತಾಗುವುದು ಮಹಾಭಾರತದಲ್ಲಿ ಎರಡುಲಕ್ಷದ ಇಪ್ಪತ್ತು ಸಾವಿರ ಸಾಲುಗಳೂ ರಾಮಾಯಣದಲ್ಲಿ ನಲವತ್ತೆರಡು ಸಾವಿರ ಸಾಲುಗಳೂ ಇವೆ ಇಲಿಯೆಡ್‌ದಲ್ಲಿ ಹದಿನೈದು ಸಾವಿರದ ಆರುನೂರತೊಂಬತ್ತು ಮೂರು ಪಂಕ್ತಿಗಳು ಆಡೆಸಿಯಲ್ಲಿ ಒಂಬತ್ತು ಸಾವಿರದ ಎಂಟ್ನೂರ ಅರುವತ್ತೆಂಟು ಚರಣಗಳೂ ಇವೆ ಕೆಲವರಂತೂ ಇಲಿಯೆಡ್ ಕಾವ್ಯವು ರಾಮಾಯಣವನ್ನು ನೋಡಿಕೊಂಡೇ ಬರೆದುದೆನ್ನುತ್ತಾರೆ ಇಲಿಯೆಡ್ ಕಾವ್ಯದೊಳಗಿನ ಟ್ರಾಯ್ ಪಟ್ಟಣವೇ ನಮ್ಮಲ್ಲಿಯ ಲಂಕೆ ಸ್ಪಾರ್ಟಾ ಎಂದರೆ ಅಯೋಧ್ಯೆ, ಹೆಲೆನ್ ಎಂದರೆ ಸೀತೆ, ಮೆನೆಲಾಸ್ ಎಂದರೆ ರಾಮ ಪ್ಯಾರಿಸ್ ಎಂದರೆ ರಾವಣ ಹೀಗೆ ಹೋಲಿಸಿದರೆ ಕೂಡುತ್ತದೆ 'ಕಾಳಿದಾಸನು ತನ್ನ ಅಪ್ರಮಿತವಾದ ಕಾವ್ಯನಾಟಕಗಳನ್ನು ರಚಿಸಿ ಆರ್ಯ ಜನಾಂಗಕ್ಕೇ ಗೌರವವನ್ನು ತಂದುದಲ್ಲದೆ ನಾಗರಿಕತೆ ಹೊಂದಿದ ಮನುಷ್ಯ ಜಾತಿಗೇನೇ ಗೌರವವನ್ನುಂಟು ಮಾಡಿರುವನು' ಎಂದು ಪ್ರೊ| ಹೀರನ್‌ರು ಹೇಳಿದ್ದಾರೆ ಭಾವಕಾವ್ಯಗಳಲ್ಲಿ ಗೀತಗೋವಿಂದವೇ ಅತ್ಯಂತ ಸುಂದರ, ಗಂಭೀರ—ಮಧುರ ಪೂರ್ಣವೂ ಆಗಿದೆ ಇದಕ್ಕೆ ಸರಿಗಟ್ಟುವ ಕಾವ್ಯಗಳೇ ಜಗತ್ತಿನಲ್ಲಿಲ್ಲ ರಸಿಕತೆ, ಭಾವಸಂಪತ್ತಿ, ಕೃಷ್ಣನ ಭಕ್ತಿ, ಅಗ್ಗಳಿಕೆ—ಇವೇ ಈ ಕಾವ್ಯದ ವೈಶಿಷ್ಟ್ಯಗಳು ಭಾವನೆಯೇ ಇದರ ಜೀವಾಳ, ಕೃಷ್ಣಭಕ್ತಿಯ ಹುಚ್ಚು ಹಿಡಿಸುವುದೇ ಈ ಕಾವ್ಯದ ಪ್ರಯೋಜನ

'ಜಗತ್ತಿನೊಳಗಿರುವ ಪ್ರತಿಯೊಂದು ಪ್ರಾಣಿಗೆ ಮುಕ್ತಿಯಾಗುವಂತೆ ಪ್ರಯತ್ನಿಸಲು ನಾನು ಜೀವಂತನಾಗಿರುವೆನಲ್ಲದೆ ನನ್ನೊಬ್ಬನಿಗೆ ಮೋಕ್ಷ ಲಭಿಸಬೇಕೆಂತಲ್ಲ' ಎಂದು ಕೈಗೆ ಬಂದ ಮುಕ್ತಿ ಪದವಿಯನ್ನು ಕಾಲಿನಿಂದೊದೆಯುವ ಬುದ್ಧನಂತಹ ವಿಶ್ವವೀರರನ್ನು ನಾವು ಹಿಂದೂ ದೇಶದೊಳಗೆ ಕೆಲವರನ್ನು ಕಾಣಬಹುದು ಇವರೆಲ್ಲಾ ನಮ್ಮ ರಾಷ್ಟ್ರೀಯ ಯುಗಪುರುಷರು!

ಹಿಂದೂ ಧರ್ಮದ ತತ್ವಗಳು ನಿತ್ಯವಾದವುಗಳು ಅವಕ್ಕೆ ನಾಶವಿಲ್ಲ ಹಿಂದೂ ಧರ್ಮವೆಂದರೆ ವಿಶ್ವ ಧರ್ಮವಾಗಿದೆ ವಿಶ್ವದೊಳಗಿನ ಮಾನವ ಜಾತಿಯನ್ನಾಳಲು ಈ ಧರ್ಮವು ಯೋಗ್ಯವಾಗಿದೆ ಬೇರೆ ಮತಗಳಂತೆ ಮನುಷ್ಯನ ಅಧೀನತೆಯನ್ನೂ ಅಸಹಾಯ ಸ್ಥಿತಿಯನ್ನೂ ಹಿಂದೂ ಧರ್ಮವು ಒಪ್ಪುವುದಿಲ್ಲ ಮನುಷ್ಯನು ದೇವಾಂಶನೂ ಸ್ವತಂತ್ರನೂ ಇರುವನೆಂದು ಹಿಂದೂ ಧರ್ಮಕ್ಕೆ ಪೂರ್ಣ ನಂಬಿಕೆ ಇರುವುದರಿಂದ ನೆಲಕ್ಕೆ ಬಿದ್ದವನನ್ನು ಹುರಿಗೊಳಿಸಿ ಮೇಲಕ್ಕೆತ್ತುವುದಲ್ಲದೆ, ಅದು ಆತನಿಗೆ ದಿವ್ಯ ದೃಷ್ಟಿಯನ್ನೂ ಕೊಡುವುದು ಈ ಕಾರ್ಯವು ಇನ್ನಾವ ಮತದಿಂದಲೂ ಸಾಧ್ಯವಿಲ್ಲ

ವಾಡಿಕೆಯಾಗಿ ಹಳೆಯ ಧರ್ಮ—ಪಂಥಗಳಿಂದಲೇ ಹೊಸ ಧರ್ಮಗಳು ಹುಟ್ಟುವುವು ಈ ಮೇರೆಗೆ ಹಳೆಯ ಧರ್ಮ—ಮತಗಳೆಂದರೆ, ಹೊಸ ಧರ್ಮದ ತಾಯಿತಂದೆಗಳು ಕ್ರಿಸ್ತ ಧರ್ಮವೂ ಮೋಸೆಸದ ಮಂತ್ರಗಳಿಂದ ಹುಟ್ಟಿತು ಮೋಸೆಸವು ಈಜಿಪ್ತರಿಂದ ಹುಟ್ಟಿತು ಈಜಿಪ್ತರು ಹಿಂದೂ ದೇಶದಿಂದ ತಮ್ಮ ಧರ್ಮವನ್ನೆತ್ತಿಕೊಂಡರು ಅದರಂತೆಯೇ ಮಹಮ್ಮದೀಯ ಧರ್ಮವಾದರೂ ಮೋಸೆಸ್, ಕ್ರಿಸ್ತಿ ಹಾಗೆ ಪಾರ್ಸಿ ಧರ್ಮಗಳ ಬೆರಕೆಯಿರುವುದೆಂದು ಕೆಲವು ಲೇಖಕರ ಮತ ಬುದ್ಧ ಧರ್ಮವಂತೂ ಬ್ರಾಹ್ಮಣರ ಜೀವವಿಲ್ಲದ ಧರ್ಮ ವಿರುದ್ಧವಾಗಿ ಹೊರಟಿಂದ ಬಂಡಾಯವೆಂದು ಎಲ್ಲರೂ ಒಪ್ಪುವರು. ಜೈನ ಧರ್ಮವಾದರೋ ಹಿಂದೂ ಧರ್ಮದ ಮರಿಯೇ ಆಗಿದೆ

ಹಿಂದೂ ಧರ್ಮದ ಕುರುಹುಗಳು ಈಗಲೂ ಪರದೇಶಗಳಲ್ಲಿ ಕಾಣಿಸುತ್ತಿವೆ ಅಮ್ಮನ್ ಎಂಬುದು ಈಜಿಪ್ತರ ಶ್ರೇಷ್ಠವಾದ ದೇವರು ಅದು ಭಾರತೀಯರ ಓಂಕಾರಕ್ಕೆ ಹೊಂದುತ್ತದೆ ಸಿಕಂದರ ಬಾದಶಹನು ಈಜಿಪ್ತಕ್ಕೆ ಹೋದಾಗ ಅಲ್ಲಿಯ ಗುಡಿಗಳಲ್ಲಿ ಶಿವನ ಮೂರ್ತಿಯನ್ನು ಕಂಡ ಸಂಗತಿಯು ಪ್ರಸಿದ್ಧವಿದೆ ಗ್ರೀಕರ ಫೀನ್ಸ್‌ನಿಗೆ (ಬ್ರಹ್ಮ) ಮೂರು ತಲೆಗಳಿದ್ದುವೆಂದೂ, ಅವನೇ ಸೃಷ್ಟಿ ನಿರ್ಮಿಸಿದನೆಂದೂ ಗ್ರೀಕರಲ್ಲಿ ಹೇಳಿಕೆಯಿದೆ ಇದರಂತೆಯೇ ಈಜಿಪ್ತರ ಗ್ರೀಕರ, ಅಸೀರಿಯನರ ಪುರಾಣಗಳಿಗೆಲ್ಲಾ ಹಿಂದೂ ಪುರಾಣಗಳೇ ಆಧಾರಗಳು ಗ್ರೀಕರ ಹೋಮರ್ ಕವಿಯು ಬರೆದ ಇಲಿಯಡ್ ಕಾವ್ಯಕ್ಕೆ ವೇದಗಳೇ ಆಧಾರವೆಂದು ಮೇಕ್ಸ್ ಮುಲ್ಲರರು ಹೇಳಿರುವರು ಗ್ರೀಕರ ದೇವ ದೇವತೆಗಳ ಹೆಸರುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅವು ಹಿಂದೂ ದೇವತೆಗಳ ಹೆಸರುಗಳೇ ಹೇಳಬಹುದು ಉದಾಹರಣೆ—ವರುಣ, ಜನುಸ್—ಗಣೇಶ ವ್ಹಲಕನ್—ವಿಶ್ವಕರ್ಮ, ಸಿರಿಸ್—ಶ್ರೀ ಮುಂತಾದವು ಸಾಮಾನ್ಯ—ಹಿಂದೂ ದೇವತೆಗಳೇ ಒಂದಿಲ್ಲೊಂದು ಬಗೆಯಿಂದ ಇಡಿ ಜಗತ್ತಿನ ಸಂಸ್ಕೃತಿಯಲ್ಲಿ ಸೇರಿಕೊಂಡು ಬೇರೆ ಬೇರೆ ಹೆಸರುಗಳನ್ನು ಪಡೆದಿರುವರೆಂಬುದು ವಿಭೂಷಣವಿಲ್ಲ

ಜಗತ್ತನ್ನಾಳುವ ಶಾಸ್ತ್ರವೇ ತತ್ವಶಾಸ್ತ್ರ ಈ ಶಾಸ್ತ್ರದ ತತ್ವಗಳೇ ಜಗತ್ತಿಗೆ ಮಾರ್ಗದರ್ಶಕವಾಗಿರುತ್ತವ ಮನುಷ್ಯನ ಮನಸ್ಸಿಗೆ ಸಿಲುಕದ ಈ ತತ್ವ ಶಾಸ್ತ್ರಕ್ಕೆ ಜಗತ್ತೇ ಬಾಗುವುದು ಪೂರ್ವಕಾಲದಲ್ಲಿ ದೂರ ದೂರದ ದೇಶದವರು ಜ್ಞಾನ ಸಂಪಾದನೆಗಾಗಿ ಮತ್ತು ತತ್ವ ಶಾಸ್ತ್ರದ ಅಧ್ಯಯನಕ್ಕಾಗಿ ಭಾರತಕ್ಕೇ ಬರುತ್ತಿದ್ದರು ಈ ಕಾರ್ಯವು ಅನೇಕ ಶತಮಾನಗಳವರೆಗೆ ಅಖಂಡವಾಗಿ ನಡೆಗಿತ್ತು ತತ್ವ ಶಾಸ್ತ್ರಕ್ಕಂತೂ ಗ್ರೀಕರಿಗೆ ಹಿಂದೂ ಜನರೇ ಗುರುಗಳು ಪ್ರಖ್ಯಾತ ಗ್ರೀಕ್ ತತ್ವಜ್ಞನಾದ ಪಾ

(ಹದಿನೆಂಟನೇ ಪುಟ ನೋಡಿರಿ)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೇಲ್ ಶಿವಪ್ರಸಾದ

ಕುಂದಾಪುರ, ದ. ಕ.



ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ ರುಚಿಯಾದ ಭೋಜನ ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಶ್ರೀ ಕೊರಾಡಿ ಸದಾಶಿವ ಕಲ್ಕೂರ

ಇಕ್ಕುಳಲ್ಲಿ ಸಿಲುಕಿದ ಇಲಿ-ಭಾರತೀಯ

ಶ್ರೀ ಸಾಮಾನ್ಯನನ್ನು ಆತನ ಶ್ರೀಮಾದ ಸೇವಕ ನೇತಾರನನ್ನು, ನೀತಿ ನಿರೂಪಕನನ್ನು ಎಲ್ಲರನ್ನು ಕಾಡುವ ಪ್ರಶ್ನೆ "ದ್ವಂದ್ವ". ದ್ವಂದ್ವ ಭಾವ ನಮ್ಮ ಅಸಭ್ಯತೆಯ, ಅಸಂಸ್ಕೃತಿಯ ಪ್ರತೀಕ ಇದರ ಪರಿಣಾಮ? ಭಾರತೀಯನನ್ನು ಇಕ್ಕುಳಲ್ಲಿ ಸಿಕ್ಕಿ ಹಾಕಿಕೊಂಡ ಇಲಿಯನ್ನಾಗಿಸಿದೆ

ಹಳೆಗಾಲದ ಸನ್ನೆಗೋಲಿನ ಸಲಕರಣೆಯನ್ನು ಬಿಟ್ಟು ಸುಖಚಿಂತನೆಯಿಂದ ನಾವೊಂದು ಹೊಸ ಮಾದರಿಯ ಯಂತ್ರವನ್ನು ತರುತ್ತೇವೆ. ಹೊಸದರಲ್ಲಿ ಹೊಗಳುತ್ತೇವೆ ಕೊನೆಗೆ ಅದರ ದುರುಸ್ತಿಗಾಗಿ ಹಲವು ಹನ್ನೆರಡು ಮಂದಿಯ ಕಾಲಿಗೆ ಬೀಳುವುದು, ಸುತ್ತು ಯಾತ್ರೆ ತಿರುಗುವುದೇ ನಮ್ಮ ಜೀವನವಾಗುತ್ತದೆ ಹೊಸ ಹರೆಯದಲ್ಲಿ ಕೊಬ್ಬಿದ ಹೆಣ್ಣನ್ನಪ್ಪಿ ಸೃಷ್ಟಿತತ್ವದ ಹರಿಕಾರರಾಗಿ ಉಬ್ಬುತ್ತೇವೆ ಕೊನೆಗೆ ಸೊರಗಿದ ಆ ಹೆಣ್ಣಿನ ನಷ್ಟಗೊಂಡ 'ವಿಟೀಲಿಟಿ'ಗಾಗಿ ಬಾಟ್ಲಿ ಬಗಲಲ್ಲಿಟ್ಟು ಆಸ್ಪತ್ರೆ ಕಟ್ಟೆ ತುಳಿಯುತ್ತೇವೆ. ನಮ್ಮ ಕಾಯಕವನ್ನು ಕಂಡ ಅಂಗಡಿ ಜಗಲಿಯ ವೈಗಳನೂ ನಮ್ಮ ಪಾಲಿಗೆ ಧನ್ವಂತರಿಯೋ, ರಾಜವೈದ್ಯನೋ ಆಗುತ್ತಾನೆ ಇದ್ದ ನೂರು ದಂಡೆ ಸಾಲದೇ, ಇನ್ನೊಂದಿದ್ದರೆ ಮಗುಚಾಟಕ್ಕೆ ಸುಖವೆಂದು ಒಂದೊಂದನ್ನೇ ಹಚ್ಚಿಕೊಳ್ಳುತ್ತೇವೆ. ಕೊನೆಗೆ ನೈಯಿಲ್ಲಾರಗಳೆ, ಎಲ್ಲವೂ ನಮ್ಮನ್ನೇ ಚೂರು ಚೂರು ಮಾಡುವಷ್ಟು ಚುಚ್ಚುತ್ತವೆ ಕೌಟುಂಬಿಕ ಜೀವನದಿಂದ ರಾಷ್ಟ್ರಜೀವನದ ತನಕ ನಮ್ಮ ಜೀವನ ನಿರ್ವಹಣೆಯ ಮಾರ್ಗವಿಷ್ಟೆ ನಮ್ಮಿಂದ ಉದ್ಘಾಟಿತವಾದ ಸಂಸ್ಥೆಗಳೆಷ್ಟು? ಸಂಘಗಳೆಷ್ಟು? ಅಭಿವೃದ್ಧಿಯ ಪಾನಗಳೆಷ್ಟು? ಇಲಾಖೆಗಳೆಷ್ಟು? ಇವುಗಳಲ್ಲಿ ಕೊಳೆತು ನಾರುವ ಕಸಕಡ್ಡಿ, ಬೆಕ್ಕು ಇಲಿಗಳ ಹೆಣಗಳೆಷ್ಟು? ಇವುಗಳ ಶುದ್ಧೀಕರಣವೇ ಬಲು ದೊಡ್ಡ ಸಾಹಸ ಗುಡಿಸಿದ ಕಸ ಹೊರಲು ಯಾವ ಬಂಜರು ಮರುಭೂಮಿಯೂ ಸಾಲದು.

ಒಂದು ಕಾಲದಲ್ಲಿ ನಾವು ರಾಜರೇ ನಮ್ಮ ಪರಮ ಶತ್ರುಗಳೆಂದು ಭಾವಿಸಿದ್ದೆವು. ರಾಜಕಾರಣಿಗಳೇ ಪರಮ ಪವಿತ್ರರೆಂದು ಅಂಗೀಕರಿಸಿದೆವು ಪ್ರಜೆ ಸಾರ್ವಭೌಮನಾಗುವ ಕಾಲವಾಗಲೀ, ಪ್ರಬುದ್ಧತನವಾಗಲೀ ಇಂದಿಗೂ ಬಂದಿಲ್ಲ. ಬದಲಾವಣೆಯೇ ಸೊಗಸುಗಾರಿಕೆಯೆಂದು ಮುನ್ನುಗ್ಗಿದೆವು ನಮ್ಮ ಜೀವನದ ಮೌಲ್ಯ, ಅಂತಸ್ತು ಏರಿದಂತೆ ಕಾಣುವುದಿಲ್ಲ. ಆದಾದರೆ ಒಳ್ಳೆಯದು; ಇದಾದರೆ ಒಳ್ಳೆಯದು–ಹೇಳಲಾಗದು ಒಂದು ಕಾಲದ ಒಳ್ಳೆಯದೇ ಇನ್ನೊಂದು ಕಾಲಕ್ಕೆ ಕೆಟ್ಟದು ಒಂದು ಮಿತಿಯವರೆಗೆ ಎಲ್ಲವೂ ಒಳ್ಳೆಯದೇ. ನಮ್ಮ ಲಕ್ಷ್ಯವಿರಬೇಕಾದದ್ದು ಕಾಲಮಿತಿಯಲ್ಲಿ, ಬಾಧಕವಿಲ್ಲದ ಅವಧಿಯವರೆಗೆ ಮಾತ್ರ. "ನೀವು ಹೆತ್ತ ಮಕ್ಕಳು ಹೆಚ್ಚಿಗೆ, ನಿಮ್ಮ ಸಂತಾನವನ್ನು ನೆಲ ಹೊರಲಾರದು" ಎಂದರಚುವ ಸರಕಾರ ಯಂತ್ರ ಒಂದು ಕಡೆ. ಭಾರತವನ್ನು ನಿಸ್ಸಂತಾನಗೊಳಿಸಲು ಕುಟುಂಬ ಯೋಜನೆಗೆ ಸಹಕಾರ ನೀಡುವ ಧನ ಸೊಕ್ಕಿದ ರಾಷ್ಟ್ರಗಳು ಇನ್ನೊಂದು ಕಡೆ ಈ ಕಸವೃಷ್ಟಿ ಯಾವ ಕಾರಣದಿಂದಾಗಲೀ ಯಾವುದೇ ರಾಷ್ಟ್ರದಲ್ಲಿ ಸಿದ್ಧರಾದ ನಿರಾಶ್ರಿತರು ನುಸುಳುವುದಕ್ಕಿರುವ ಸ್ವರ್ಗ ಭೂಮಿಯೆಂದರೆ ಭಾರತ ನಮ್ಮ ಕೃಪಾಛತ್ರದ ಹರವು ಬಹಳ ದೊಡ್ಡದು ಇದು ಅಂಗೈ ಹುಣ್ಣು ಬರ್ಮಾ, ಟಿಬೇಟ್, ಪಾಕೀಸ್ಥಾನ, ಸಿಲೋನ್ ಎಲ್ಲಿಯವರೇ ಇರಲಿ—ಮನೆ ಕಳಕೊಂಡವರು, ಜೀವನ ಕಳಕೊಂಡರು – ಇಲ್ಲಿ ಉಸಿರಾಡಿ ನಾಳೆ ಇವರಿಗೆ ಪೊಂಗುನಾಮವಿಟ್ಟು–ಇಲಿಯಾಗಿ ಹೊಗ್ಗಿದವರು ಹುಲಿಯಾಗಿ ಅರ್ಭಟಿಸಬಹುದು. ಇಲ್ಲಿಯ ಮೂಲ ನಿವಾಸಿಗಳೆಂದು ಪರಿಗಣಿಸಿಕೊಂಡು ಬಂದ ನಾಗರಿಕರು ನಿರಾಶ್ರಿತರಾಗಿ ಎಲ್ಲಿಗೆ ಓಡಬಹುದೋ? ಅಥವಾ ಇಂದು ನಾವು ಭಾರತೀಯರೆಂಬವರೆಲ್ಲರೂ ನಿರಾಶ್ರಿತರೇ ಇದ್ದಿರಲೂ ಬಹುದು. ಆರ್ಯರೂ, ದ್ರಾವಿಡರೂ ಎಲ್ಲರೂ ಇಲ್ಲಿಗೆ ಬಂದವರು. ಮೊತ್ತಮೊದಲಿಗೆ ಇದು ಮಾನವ ಸಭ್ಯತೆಯೇ ಇಲ್ಲದ ಬಂಜರು ಬೆಂಗಾಡು ನಮಗೊಂದು ರಾಷ್ಟ್ರ ಭಾಷೆಯಿದೆಯೇ? ರಾಷ್ಟ್ರ ಧರ್ಮವಿದೆಯೇ? ಪರಕೀಯವಾದದ್ದರಲ್ಲಿ ನಮಗಿರುವ ಅಭಿಮಾನ ಆಸಕ್ತಿ ನಮ್ಮದ್ದರಲ್ಲಿಲ್ಲ. ನಮ್ಮದ್ದೆಲ್ಲಾ ನಿರಾಶ್ರಿತರದ್ದೇ ಇವೆ ಇದೂ ಸೂಕ್ತವೇ! ಅಭಯ ನೀಡುವುದು ವೀರೋಚಿತ ಧರ್ಮ 'ಕೆಟ್ಟವನಿಗೆ ನಾನಿದ್ದೇನೆ' ಎನ್ನ ಬೇಕಾದರೆ ಎದೆ ಧೈರ್ಯವನ್ನು ತಟ್ಟಿಕೊಳ್ಳಬೇಕು ಇಲ್ಲವಾದಲ್ಲಿ ನಾಳೆ ನಮ್ಮ ತಲೆ ನಾವೇ ಕುಟ್ಟಿಕೊಳ್ಳಬೇಕಾದೀತು ಮನೆ ಮಕ್ಕಳನ್ನು ಬೀದಿ ಪಾಲು ಮಾಡಿ ವಿರಕ್ತ ಮರದ ವೈಗಳ್ಳರ ಪಾದ ಪೂಜೆ ಮಾಡಿದರೆಂತಾದೀತು? ರಾಷ್ಟ್ರ ಹೊತ್ತ ನಾಯಕರ ಸ್ವಸ್ತಿವಾಚನವು ಬಡಬೋರೆಗೌಡನಿಗೆ ಭಯವಾದರೆ ಇದೆಂತಹ ಧರ್ಮವಾದೀತು? ನಮ್ಮ ಬದುಕೇ ಸತ್ತ ಮೇಲೆ ಇನ್ನೊಬ್ಬನನ್ನು ಬದುಕಿಸುವುದೆಂತು? ಪ್ರಾಣ ರಕ್ಷಣೆಗಾಗಿ ಜೇಡರ ಬಲೆಯನ್ನು ಹಿಡಿದು ತೂಗಾಡುವವನ ಕಾಲನ್ನು ಹಿಡಿದು ಮತ್ತೊಬ್ಬ ತೂಗಾಡಿದರೆ? ..

ಯಾವನೋ ಒಬ್ಬ ಮುಟ್ಠಾಳನನ್ನು ಕೇಂದ್ರವಾಗಿಟ್ಟು ಒಂದು ಹುಯ್ಲನ್ನೆಬ್ಬಿಸಿದೆವು. 'ಭಾರತದಲ್ಲಿ ಹೆಣ್ಣನ್ನು ಅಧೋಗತಿಯಲ್ಲಿ ಕಾಣಲಾಗುತ್ತದೆ' ಈ ಚಿತ್ರಕ್ಕೆ ಜೀವಕಳೆ ತುಂಬಿದೆವು. ಆ ಕಾಲದಲ್ಲಿ ಒಂದು ಹೆಣ್ಣಿಗಾಗಿ ಎಷ್ಟೆಷ್ಟೋ ಬ್ರಾಹ್ಮಣರನ್ನೂ ಮಂಗಗಳನ್ನೂ ಕೊಲ್ಲಿಸಿದ ಮಹಾನುಭಾವನ ನೆನಪಾಗಲಿಲ್ಲ ಒಂದು ಹೆಣ್ಣಿಗಾಗಿ ಐದು ಜನ ಸಚ್ಚರಿತ್ರರು ಒಂದೇ ಸೂತ್ರಕ್ಕೆ ಗಂಟು ಬಿದ್ದುದೂ, ಹದಿನಾರು ಸಾವಿರ, ತೊಂಭತ್ತಾರು ಸಾವಿರ ಮಡದಿಯರನ್ನು ಸಂರಕ್ಷಿಸಿದುದು ಯಾವುದೂ ಸ್ಮೃತಿ ಪಟಲಕ್ಕೆ ಬಂದಿರಲಿಲ್ಲ. ಮಹಿಳೆಯರನ್ನು ಪುರುಷರು ತುಳಿದುದೆಷ್ಟು ಸತ್ಯವೋ, ಅಷ್ಟೇ ಸತ್ಯ ಹೆಣ್ಣಿಗೆ ದಾಸನಾಗಿ ಗಂಡು ಮಾಡಬಾರದ್ದನ್ನು ಮಾಡಿದ್ದೂ ಉಂಟು. ಇವುಗಳೆಲ್ಲ ಬಲಾಬಲದ ಪ್ರಶ್ನೆ. ಸಕಾಲಿಕ ಶಕ್ತಿಯ ಉನ್ನತಿ–ಅವನತಿ. ಇದು ಎಲ್ಲಾ ಕಾಲದಲ್ಲೂ ಇದ್ದದ್ದೇ ರೋಗ.

ಗಂಡಸು–ಹೆಂಗಸು ಬೇರೆ ಬೇರೆಯೆಂಬ ಸಿದ್ಧಾಂತವನ್ನು ನಾವು ನಾವೀನ್ಯವಾಗಿ ಮಂಡಿಸಿದೆವು ಒಂದುತನವಿಲ್ಲದಿದ್ದಲ್ಲಿ ಸೃಷ್ಟಿ ಚಕ್ರದ ಕರಕರ ಸದ್ದು ಎಂದಾದರೂ ನಿಂತೀತೆ? ಈ ಬಿರಿ ಬಿಟ್ಟ ಎರಕದ ಜಾಗಂಟೆ ಶ್ರುತಿಗೆ ಕೂಡಿತೆ? ಸಹನೆಯಿಂದ ಕೂಡಿದ, ಸುಮಧುರವಾದ ಹೆಣ್ಣಿನ ಹಾಲಿನಂತಹ ಮನಸ್ಸಿಗೆ ಹುಳಿ ಹಿಂಡಲು ಏನೆಲ್ಲ ಸಾಧ್ಯವಿದೆಯೋ ಅಷ್ಟೆಲ್ಲ ಸುದಾರಣೆಯನ್ನು ಮಾಡುತ್ತಿದ್ದೇವೆ 'ನೀನು ಹಾಕಿದ್ದನ್ನು ನಾನು ತಿನ್ನುತ್ತೇನೆ'ಂದು ಒಂದು ಮನೆಯ ಗೃಹಕೃತ್ಯವನ್ನು ಹೆಣ್ಣಿಗೊಪ್ಪಿಸುವುದು ಆಕೆಯನ್ನು ದಾಸಿಯನ್ನಾಗಿ ಮಾಡಿದ ಹಾಗಾಯಿತೆ? ಯಾವುದೋ ರಾಷ್ಟ್ರದಲ್ಲಿ ಹೆಣ್ಣು ಬೀದಿ ಬೀದಿ ಅಲೆದರೆ–ನಮ್ಮಲ್ಲಿ ಅಲೆಯುವುದೂ ಸಂಸ್ಕೃತಿಯೇ? ಸರಿಸಮಾನತೆಯ ಹೋರಾಟ ಪ್ರಾಕೃತವಾಗಿಯೇ ಇಲ್ಲ. ಗರ್ಭ ಧಾರಣೆಯಾದ ಗಂಡಿಲ್ಲ. ಗಂಡಿನ ವೇಷ ಭೂಷಣ ಕೊಟ್ಟರೂ ಮೊಲೆ ಮಾಯವಾದ ಹೆಣ್ಣಿಲ್ಲ ಹೆಣ್ಣು ಹೆಣ್ಣೇ ಗಂಡು ಗಂಡೇ ಇವರಲ್ಲಿ ಯಾರು ಹೆಚ್ಚು ಯಾರು ಕಡಿಮೆ? ಬಾಳಲರಿಯದವರು ಎಲ್ಲಾ ಕಾಲದಲ್ಲೂ ಕಳಪೆಯೇ 'ಬಾಳ್ವೆ' ಎಂಬುದಕ್ಕೆ ಲಿಂಗಬೇಧವಿಲ್ಲ ಬಾಳುವುದಕ್ಕೆ ಗಂಡು ಗಂಡಾಗಿರಲೇ ಬೇಕು, ಹೆಣ್ಣು ಹೆಣ್ಣಾಗಿರಲೇ ಬೇಕು. ಆದರೆ ಹೆಣ್ಣಿನ ಮೃದುತ್ವ ನಾಶವಾಗುತ್ತಾ ಹೋದಂತೆ ರಾಷ್ಟ್ರದ 'ಮಾತೃತ್ವ'ವೂ ನಾಶವಾಗುತ್ತದೆ. ಈ ಭೀಕರ ಸೋಲನ್ನುಂಡ ಸಂತಾನವು ಖಂಡಿತಾ ಬಾಳಲಾರದು ಇದು ಸೃಷ್ಟಿತತ್ವ. ನಮ್ಮ ಯಾವುದೇ ಸುಧಾರಣೆಯಿರಲಿ ಸೃಷ್ಟಿತತ್ವಕ್ಕೆ ವಿರೋಧವಾಗಿದ್ದರೆ, ಅದು ಭ್ರಮೆಯಿಂದ ತಾತ್ಕಾಲಿಕ ಸತ್ಯವಾಗಿ ಭಾಸವಾಗಬಹುದು ಆದರಿದು ಅಸಫಲ; ಅಸಹಜವು ಬದುಕಲಾರದು.

'ಅಣ್ಣ ತಮ್ಮಂದಿರಂತೆ ಇರಬೇಕು' ಎಂಬುದೊಂದು ಹಳೆಯ ಮಾತು. ಬುದ್ಧಿ ಬೆಳೆಯುವವರೆಗೆ ಅಣ್ಣ ತಮ್ಮಂದಿರಲ್ಲಿ ಸ್ನೇಹವಿರಬಹುದೋ ಏನೋ? 'ಅಣ್ಣ ತಮ್ಮಂದಿರಂತಿರಬಾರದು' ಎಂಬುದು ಹೊಸಗಾದೆ ಒಂದು ಕಾಲದಲ್ಲಿ ಬೆಲೆಯುಳ್ಳದ್ದು ಇಂದು ಬೆಲೆ ಕಳಕೊಳ್ಳಬಾರದೆಂದಿಲ್ಲ ಭಾರತ, ಪಾಕೀಸ್ಥಾನವೆಂಬ ಎರಡು ಹೋರಿಗಳ ಅಣ್ಣ ತಮ್ಮಂದಿರು ಬಾಳುತ್ತಿರುವ ರೀತಿಯನ್ನು ಕಾಣುವಾಗ ಪ್ರಪಂಚದ ಯಾವ ರಾಷ್ಟ್ರೀಯನೂ ಹೀಗಿರಬಾರದು ಎನಿಸುವುದಿಲ್ಲವೇ? ಪಾಲಾಗಿ ಇಪ್ಪತ್ತನಾಲ್ಕು ವರ್ಷ ಸಂದರೂ ಇವರ ಗೋಳಾಟ ನರಳಾಟ ತಪ್ಪಲಿಲ್ಲ. ಕೌಟುಂಬಿಕ ಜೀವನದಲ್ಲೂ ಇದನ್ನೇ ಕಾಣುತ್ತೇವೆ. ಯಾವ ಮನೆಯಲ್ಲಿ ಅವಿಭಕ್ತರಾದ ಅಣ್ಣ ತಮ್ಮಂದಿರು ಚೆನ್ನಾಗಿದ್ದಾರೆ? ನಾವು ಹೇಳುವುದುಂಟು

(ಹದಿನೇಳನೇ ಪುಟ ನೋಡಿರಿ)



ಮರೆಯಲಾಗದ ತುಳುನಾಡ ರಾಜಧಾನಿ - ಬಾರಕೂರು

ಡಾ॥ ಪ್ರಿನ್ಸಿಪಾಲ್ ಪಿ. ಗುರುರಾಜ ಭಟ್.

ಬಾರಕೂರಿನ ಬಗ್ಗೆ ಅಭ್ಯಾಸ-ಪರಿಶ್ರಮಪೂರ್ಣ ಅಧ್ಯಯನ ನಡೆಸಿದ ಡಾ॥ ಭಟ್ಟರು ಈ ತುಳುನಾಡ ರಾಜಧಾನಿಯ ಬಗ್ಗೆ ಅಧಿಕಾರವಾಣಿಯಿಂದ ಬರೆಯಬಲ್ಲವರೊಬ್ಬರು. ಬಾರಕೂರಿನ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲುವಲ್ಲಿ ಈ ಲೇಖನ ತುಂಬ ಸಹಾಯಕವಾಗಿದೆ.

ಲೇಖಕರು

++

ಮುನ್ನುಡಿ

ದಕ್ಷಿಣ ಭಾರತದ ಇತಿಹಾಸವನ್ನು ಅಭ್ಯಾಸ ಮಾಡುವವರು ಬಾರಕೂರು ಪಟ್ಟಣದ ಹೆಸರನ್ನು ಕೇಳಿರುವುದು ಮಾತ್ರವಲ್ಲದೆ ಅದರ ಪ್ರಾಮುಖ್ಯತೆಯನ್ನು ತಿಳಿದಿರಬಹುದು. ಬಾರಕೂರು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲೂಕಿಗೆ ಸೇರಿದೆ. ಸೀತಾನದಿ ದಂಡೆಯ ಮೇಲಿದೆ. ಅರಬೀ ಸಮುದ್ರದ ಕರಾವಳಿಯಲ್ಲಿದೆ. ಇತಿಹಾಸ ಕಾಲದಲ್ಲಿ ಇದು ಹಿರಿದಾದ ಪಟ್ಟಣವಾಗಿ ಹಂಗರಕಟ್ಟೆ ಬಂದರದ ತನಕ ವಿಸ್ತರಿಸಿದ್ದರೂ ಈಗ ಸಂಪೂರ್ಣವಾಗಿ ಪಾಳುಬಿದ್ದ ಊರಾಗಿದೆ. ಐದಾರು ಶತಮಾನಗಳ ವರೆಗೆ ತುಳುನಾಡಿನ ರಾಜಕೀಯ ಕೇಂದ್ರ ಬಾರಕೂರಾಗಿತ್ತು.

ಬಾರಕೂರಿನಲ್ಲಿ ಹಲವಾರು ಶಾಸನಗಳು ದೊರಕಿವೆ. ಇವುಗಳು ಕ್ರಿ. ಶ. 10ನೇ ಶತಕದಿಂದ ಕ್ರಿ. ಶ. 16ನೇ ಶತಕದ ವರೆಗಿನ ತುಳುನಾಡ ಇತಿಹಾಸಕ್ಕೆ ಮೂಲ ವಸ್ತುವನ್ನು ಒದಗಿಸುತ್ತವೆ. ಹಲವಾರು ಅಡ್ಡಾದಿಡ್ಡಿಯಾಗಿ ಬಿದ್ದುಕೊಂಡಿವೆ. ಕೆಲವು ಬಚ್ಚಲುಮನೆಗಳಿಗೋ, ಕಾಲುದಾರಿಗೋ ಉಪಯೋಗಿಸಲ್ಪಟ್ಟಿವೆ. ಅನೇಕ ಮೂರ್ತಿಗಳು ಭಿನ್ನವಾಗಿ ಮುರಿದುಬಿದ್ದು ಅವುಗಳಲ್ಲಿ ಹಲವು ಬೇರೆ ಬೇರೆ ಕಡೆಗೆ ಒಯ್ಯಲ್ಪಟ್ಟಿವೆ. ದೇವಾಲಯಗಳೂ, ಗುಡಿಗೋಪುರಗಳೂ ಬಹು ಜೀರ್ಣಾವಸ್ಥೆಯಲ್ಲಿರುವುದು, ಮಾತ್ರವಲ್ಲದೆ ಕೆಲವು ನಾಮಾವಶೇಷವಾಗಿವೆ. ಚಾರಿತ್ರಿಕ ಬಾರಕೂರಿನಲ್ಲಿ 365 ದೇಗುಲಗಳಿದ್ದುವೆಂದೂ ದಿನಕ್ಕೆ ಒಂದರಂತೆ ಒಂದೊಂದು ದೇವಾಲಯದಲ್ಲಿ ಉತ್ಸವ ಇಲ್ಲಿ ನಡೆಯುತ್ತಿತ್ತೆಂದೂ ಜನರ ಅಂಬೋಣ. ಈ ದೇಗುಲಗಳಲ್ಲಿ ಈಗ ಕೆಲವಕ್ಕೆ ಮಾತ್ರ ಅರ್ಚನಾದಿ ಧಾರ್ಮಿಕ ಕ್ರಿಯೆಗಳು ನಡೆಯುತ್ತವೆ.

ಬಾರಕೂರಿಗೆ ಅವರದ್ದೇ ಆದ ಒಂದು ಸ್ಥಳಪುರಾಣವಿದೆ. ಇದರ ಪ್ರಕಾರ ಈ ಊರಿನ ಹೆಸರು 'ವಾರಕೂಲ'ವೆಂದಾಗಿದೆ. ಆದರೆ ಈ ಪುರಾಣವನ್ನು ಪರಿಶೀಲಿಸಿದರೆ ಇದು 18ನೇ ಶತಮಾನದಲ್ಲಿಯೋ, ಅವರ ನಂತರವೋ ಹುಟ್ಟಿಕೊಂಡಿತೆಂದು ಹೇಳಬಹುದು. ಅಂತೆಯೇ ತುಳುನಾಡಿನಲ್ಲೆಲ್ಲ ವಿಶೇಷವಾಗಿ ಪ್ರಚಾರದಲ್ಲಿಯೂ, ಗಮನದಲ್ಲಿಯೂ ಇರುವ 'ಭೂತಾಳಪಾಂಡ್ಯ' ರಾಯನ ಕತೆಯೂ ಅಳಿಯ ಸಂತಾನದ ಕಟ್ಟುಕಟ್ಟಳೆಗಳೂ ಬಾರಕೂರಿಗೇನೇ ಸಂಬಂಧಿಸಿದುದಾಗಿವೆ. ಆದರೆ ಆಶ್ಚರ್ಯಕರವಾದ ಸಂಗತಿಯೆಂದರೆ ಈ ಕತೆಗೆ ನಮಗಿಷ್ಟರತನಕ ಯಾವ ಆಧಾರವೂ ದೊರಕಿಲ್ಲ. 'ಭೂತಾಳ ಪಾಂಡ್ಯ'ನೆಂಬ ಈ ಹೆಸರು ಯಾವ ಕೈಫಿಯತ್ತಿನಲ್ಲಿಯೂ, ತಾಮ್ರಶಾಸನದಲ್ಲಿಯೂ ಕಂಡು ಬರುವುದಿಲ್ಲ. (ಕ್ರಿ.ಶ. 15ನೇ ಶತಕದ ಒಂದು ಶಿಲಾಲೇಖದಲ್ಲಿ 'ಭೂತ ಪಾಂಡ್ಯನ ಜಿತಿಕಲ್ಲು' ಎಂಬ ಉಲ್ಲೇಖವಿದೆ) ಈತನನ್ನು ಕಾಲ್ಪನಿಕ ವ್ಯಕ್ತಿಯೆಂದೇ ತಿಳಿದುಕೊಳ್ಳಬೇಕು. ಅಳಿಯ ಸಂತಾನದ ಕಟ್ಟು ಕಟ್ಟಳೆಗಳನ್ನು ಒಳಗೊಂಡ ಸಾಹಿತ್ಯವನ್ನೋದಿದರೆ ಅದು ಅರ್ವಾಚೀನವೆಂಬುವಕ್ಕೆ ಯಾವ ಸಂದೇಹವೂ ಇಲ್ಲ. ತುಳುನಾಡಿನಲ್ಲಿ ಪ್ರಚಾರದಲ್ಲಿದ್ದ ಅಳಿಯ ಸಂತಾನವೆಂಬ ಪ್ರಾಚೀನ ಸಾಮಾಜಿಕ ವ್ಯವಸ್ಥೆಯ ಪರವಾಗಿ ಒಂದು ಕಟ್ಟುಕತೆ ಕಳೆದ ಶತಮಾನದಲ್ಲಿ ಹುಟ್ಟಿಕೊಂಡಿತೆಂದು ಊಹಿಸಬಹುದು. ಈ ಸ್ಥಳ ಪುರಾಣದಲ್ಲಾಗಲೀ ಭೂತಾಳ ಪಾಂಡ್ಯ ರಾಯನ ಕತೆಯಲ್ಲಾಗಲೀ ಆಳುಪರ ಉಲ್ಲೇಖವಿಲ್ಲದಿರುವುದನ್ನು ಕಂಡಾಗ ಈ ಹಲವಾರು ಶಾಸನಗಳನ್ನು ಅಭ್ಯಾಸ ಮಾಡುವ ಮೊದಲು ಹುಟ್ಟಿಕೊಂಡ ಕತೆ ಇದೆಂದು ಭಾಸವಾಗುತ್ತದೆ. ಐತಿಹ್ಯವು ಒಂದು ವಿಕ್ರಮಾದಿತ್ಯನ ಕತೆಯನ್ನೂ ತಿಳಿಸುತ್ತದೆ. ನಮ್ಮ ಜಿಲ್ಲೆಯಲ್ಲಿ ಇಷ್ಟರ ತನಕ ದೊರಕಿದ ಯಾವ ದಾಖಲೆಯೂ ಈ ವಿಕ್ರಮಾದಿತ್ಯನ ಪ್ರಸ್ತಾವನೆಯನ್ನು ಮಾಡುವುದಿಲ್ಲ. ಬಾರಕೂರಿನ ಮೇಲೆ ಯಾವನಾದರೂ ಒಬ್ಬ ವಿಕ್ರಮಾದಿತ್ಯನೆಂಬ ಅರಸನು ಅಧಿಕಾರ ಆಧಿಪತ್ಯವನ್ನು ನಡೆಸಿದ್ದರೆ, ಅದು ಕಲ್ಯಾಣಿ ಚಾಳುಕ್ಯ ವಂಶದ 6ನೇ ವಿಕ್ರಮಾದಿತ್ಯನೆಂದು ಅಭಿಪ್ರಾಯಪಡಬಹುದು ಈತನ ಕಾಲ ಕ್ರಿ ಶ. 11--12ನೇ ಶತಮಾನ.

ಬಾರಕೂರಿಗೆ ಸೇರಿದ ನಾಲ್ಕು ಸ್ಥಳಗಳು ಗಣನೀಯವಾಗಿವೆ- ಹೊಸಾಳ (ಹೊಸ ಹೊಳಲು), ಕಚ್ಚೂರು (ಕಬ್ಬೂರು) ಹಾನೆಹಳ್ಳಿ, ಹೇರಾಡಿ; 'ಹೊಸ ಹೊಳಲು' ಹೊಸಾಳವಾಗಿ ಮಾರ್ಪಟ್ಟಿತ್ತು; ಅಂತೆಯೇ "ಪನ್ನಿರ್ಪಳ್ಳಿ" ಎಂಬ ಊರು ಹಾನೇಹಳ್ಳಿಯಾಯಿತು- ಕ್ರಿ.ಶ. 12ನೇ ಶತಕದ ಆನಂತರದಲ್ಲಿ. ಹಾನೇಹಳ್ಳಿಯ ಒಂದು ಭಾಗವಾದ 'ಬಂಡೇಮಠ'ವು ಬಂಡೀಮಠವಾಗಿ ಈಗ ಬಕಾಸುರನ ವಧೆಯಾದ ಸ್ಥಳವೆಂದೂ ರೂಪುಗೊಂಡಿದೆ. ಅಂತೆಯೇ ಬಾರಕೂರಿನ ಸಮೀಪವಿರುವ ಬೆಣ್ಣೆ ಕುದುರೆಂಬ ಸ್ಥಳಕ್ಕೆ ವಿಚಿತ್ರವಾದ ಕತೆಯಿದೆ. ಇದೆಲ್ಲ 18ನೇ ಶತಮಾನದ ಅನಂತರ ಐತಿಹಾಸಿಕವಾದ ಜ್ಞಾನ ಸರಿಯಿಲ್ಲದೆ ಪ್ರಚಾರಕ್ಕೆ ಬಂದ ಕತೆಗಳಾಗಿವೆ. ಕ್ರಿ. ಶ. 14 ನೇ ಶತಕದ 'ಕಬ್ಬೂರು' ಎಂಬ ಹೆಸರು ಈಗ ಕಚ್ಚೂರಾಗಿದೆ. ಹಿರಿದಾದ ಪಾಡಿ ಹೇರಾಡಿ.

ಬಾರಕೂರಿನಲ್ಲಿ ಹಳೆ ಬಾರಕೂರೆಂಬ ಸ್ಥಳವಿದೆ. ಇಲ್ಲಿ ಎತ್ತರವಾದ ದಿಣ್ಣೆ ಕಂಡುಬರುತ್ತದೆ. ಸಮೀಪವೇ ಒಂದು ಶಕ್ತಿ ದೇಗುಲವಿದೆ. ಈ ಗುಡಿಯಲ್ಲಿ ಪ್ರಾಚೀನತೆ ಕಂಡುಬರುವುದಿಲ್ಲ. ಆದರೆ ದಿಬ್ಬವನ್ನು ಅಗತೆಮಾಡಿದರೆ ಕ್ರಿ. ಶಕದ ಆದಿಭಾಗಕ್ಕೆ ಸಂಬಂಧಿಸಿದ ಕುರುಹುಗಳು ದೊರಕಬಹುದು, ಈ ದಿಬ್ಬದ ಸಮೀಪವೇ ಕ್ರಿ. ಪೂರ್ವದ ಕೆಲವು ಮಡಿಕೆ ಚೂರುಗಳು ದೊರಕಿವೆ.

ಬಾರಕೂರು—ಈ ಹೆಸರಿನ ಮೂಲ ರೂಪ 'ಬರಕನೂರು'. ಈ ಬರಕನೂರೆಂಬ ಹೆಸರು ಸು. ಕ್ರಿ. ಶ 10ನೇ ಶತಮಾನದಷ್ಟು ಪ್ರಾಚೀನವೆಂದು ಅಭಿಪ್ರಾಯಪಡಬಹುದು. ಕ್ರಿ. ಶ. 12ನೇ ಶತಮಾನದಲ್ಲಿ ಈ ಹೆಸರು ಬಾರಹ ಕನ್ಯಾಪುರವೆಂದಾದುದು ಶಾಸನಗಳಿಂದ ತಿಳಿದು ಬರುತ್ತದೆ. ಈ ಹೆಸರುಗಳಿಗೆ ಅರ್ಥ ಕಲ್ಪಿಸುವುದೇ ಕಷ್ಟ. ಕ್ರಿ. ಶ 13ನೇ ಶತಮಾನಕ್ಕೆ ಬಾರಕೂರು ಹಿರಿದಾದ ಪಟ್ಟಣವಾಗಿ ಬೆಳೆದಂತೆ ಕಂಡು ಬರುತ್ತದೆ. ಇಲ್ಲಿ ಹತ್ತು ಕೇರಿಗಳೂ ಹತ್ತು ಕೆರೆಗಳೂ ಪ್ರತಿಯೊಂದು ಕೇರಿಯ ವ್ಯವಸ್ಥೆಯನ್ನು ನೋಡಿಕೊಳ್ಳಲು 'ಹಲರು' ಮತ್ತು 'ಸೆಟ್ಟಿಕಾರರ, ಸಮಿತಿಯೂ ಇದ್ದುದು ತಿಳಿದು ಬರುತ್ತದೆ. ಬಾರಕೂರಿನಲ್ಲಿ ದೊರಕಿದ ಕ್ರಿ. ಶ. 1399ರ ಹರಿಹರ ರಾಯನ ಕಾಲದ ಶಿಲಾ ಲೇಖವು ಸಾರ್ವಜನಿಕವಾಗಿ ಮಾಡಿದ ಕಾನೂನನ್ನು ಈ ಕೆಳಗಿನವರ ಸಮಕ್ಷಮ ಮಾಡಿದ್ದೆಂದು ತಿಳಿಸುತ್ತದೆ "ಮಹಾ ಪ್ರಧಾನ ನಾಗರಸ ಒಡೆಯರು ಆ ಹರಿಹರರಾಯರ ನಿರೂಪದಿಂದ ಬಾರಕೂರ ರಾಜಧಾನಿಯೊಳಿರ್ದು ಪ್ರತಿಪಾಲಿಸುತ್ತಿದ್ದಲ್ಲಿ ಆ ನಾಗರಸ ಒಡೆಯರು ಬಾರಕೂರ ಹತ್ತು ಕೇರಿಯ ಹದಿನಾರು ಮಂದಿ ಸೆಟ್ಟಿಕಾರರು, 770 ಎಳವೆಳೆಗೊಳಗಾದವರೂ ಹಂಜಮಾನದ ಹಲರೂ ನಾಗುವಳಿಗೆಯ ತೊಳಹರೂ (ಕೊಳಹರು) ಮೂಡಿಲ ನಿಡಂಬುರರು ಅರುವತ್ತು ಬಲ್ಲಾಳುಗಳು ನಾಲ್ಕು ಗ್ರಾಮ, ನಾಲ್ಕು ನಾಡು ನಾಡರು ನಾಯಕರು ಒಳಗಾದ ಸಮಸ್ತ ಕಟ್ಟಳೆಯವರಿಗೆ ಮಾನ್ಯವಾಗಿ ಕೊಟ್ಟ ಹರವರಿಗೆ. ಬರದು ನಟ್ಟ ಶಿಲಾ ಶಾಸನ". ಬಾರಕೂರಿಗೆ ಒಬ್ಬ ಸ್ಥಾನಪತಿಯೂ ಇದ್ದನು. ಈ ಹತ್ತು ಕೇರಿಗಳಾವುವೆಂದರೆ—ಕೋಟೆಕೇರಿ, ಎರಡುಕೇರಿ, ಮೂರುಕೇರಿ (ಮೂಡು ಕೇರಿ) ಮಣಿಗಾರ ಕೇರಿ, ಚೌಳಿಕೇರಿ, ಪಟಸಾಲ ಕೇರಿ, ಭಂಡಾರಕೇರಿ, ಹೊಸಕೇರಿ, ಬಳೆಗಾರ ಕೇರಿ, ಮತ್ತು ರಂಗನ ಕೇರಿ. ಕ್ರಿ. ಶ 14ನೇ ಶತಮಾನದ ಒಂದು ಶಾಸನವು ದಕ್ಷಿಣ ಭಾರತದ 28 ಪ್ರಮುಖ ಕೇಂದ್ರಗಳಲ್ಲಿ ತುಳುನಾಡಿನ ಹೊನ್ನಾವರ, ಭಟಕಳ, ಬಾರಕೂರು ಮತ್ತು ಮಂಗಳೂರುಗಳನ್ನು ಹೆಸರಿಸುತ್ತದೆ. ಹೊಯ್ಸಳರ ಕಾಲದ ಶಾಸನಗಳಲ್ಲಿ ಅವರ ರಾಜ್ಯದ ಮೇರೆಗಳನ್ನು ನಮೂದಿಸುತ್ತ ಪಶ್ಚಿಮ ಭಾಗದ ಮೇರೆಯು 'ಬಾರಕನೂರ ಘಟ್ಟ'ವೆಂಬುದಾಗಿ ಉಲ್ಲೇಖವಿದೆ. ಬಾರಕೂರಿನಲ್ಲಿ ದೊರೆತ ತೇದಿಯಿಲ್ಲದ ಎರಡು ಶಾಸನಗಳಲ್ಲಿ ನಮಗೆ ಪ್ರಥಮವಾಗಿ, 'ತುಳುವಿಷಯ'ಕ್ಕೆ ಉಲ್ಲೇಖ ಕಂಡು ಬರುತ್ತದೆ. ಸುಮಾರು 11 ನೇ ಶತಮಾನಕ್ಕೆ ಈ ಶಾಸನಗಳನ್ನು ಅನ್ವಯಿಸಬಹುದು. ಬಾರಕೂರು ತುಳುನಾಡಿ

ಬಟ್ಟೆ ವಿನಾಯಕ

ಪಂಚಲಿಂಗೇಶ್ವರ ಗಣಪತಿ

ನ ರಾಜಧಾನಿಯಾಗಿದ್ದರೂ "ತುಳು" ಭಾಷೆಯು ಇಲ್ಲಿ ಇಂದಿಗೂ ಪ್ರಚಾರದಲ್ಲಿಲ್ಲ. ಇದಕ್ಕೆ ಸರಿಯಾದ ಕಾರಣವನ್ನು ಹುಡುಕಲು ಇನ್ನೂ ಸಾಧ್ಯವಾಗಲಿಲ್ಲ.

ಬಾರಕೂರಿನ ಗತವೈಭವ

ಚೌಳಿಕೇರಿಯ ಪಂಚಲೋಹದ ಗಣಪತಿ

ರಾಜಕೀಯ ಇತಿಹಾಸ

ಬಾರಕೂರಿನ ಅಧಿಕೃತ ರಾಜಕೀಯ ಇತಿಹಾಸವು ಕ್ರಿ. ಶ. 10—11ನೇ ಶತಮಾನಕ್ಕೆ ಪ್ರಾರಂಭವಾಗುತ್ತದೆ. ಕ್ರಿ. ಶ. 11ನೇ ಶತಮಾನದಲ್ಲಿ ಬಾರಕೂರನ್ನು ತಾತ್ಕಾಲಿಕವಾಗಿ ಚೋಳರು ವಶಪಡಿಸಿಕೊಂಡಿದ್ದರೆಂದು ತಿಳಿಯಲವಕಾಶವಿದೆ. ಚೋಳಿಯ ಕೇರಿ (ಚೌಳಿಕೇರಿ) ಎಂಬೀ ಹೆಸರು ಚೋಳರಿಂದ ಬಂದುದಾಗಿರಬೇಕು. ಬಾರಕೂರನ್ನು ಕೇಂದ್ರವಾಗಿಟ್ಟುಕೊಂಡು ತುಳುನಾಡನ್ನು ಎಂದರೆ ಆಳುವ ಖೇಡವನ್ನು ಈ ಕೆಳಗಿನ ಆಳುಪರಸರು ಆಳಿಕೊಂಡಿದ್ದರು. ಮೊದಲನೇ ಬಂಕಿದೇವ, ಪಟ್ಟಿಯೊಡೆಯ, ಪಾಂಡ್ಯಪಟ್ಟಿಯೊಡೆಯ, ಕವಿಯಾಳುಪೇಂದ್ರ, ಮೊದಲನೇ ಕುಲಶೇಖರ, ಕುಂದಣ, ಎರಡನೇ ದತ್ತಾಳುಪ (ವಲ್ಲಭದೇವ) ವೀರಪಾಂಡ್ಯದೇವ, ಬಲ್ಲಮಹಾದೇವಿ (ವೀರ ಪಾಂಡ್ಯನ ರಾಣಿ), ನಾಗದೇವರಸ, ಎರಡನೇ ಬಂಕಿದೇವ ಮತ್ತು ಸೋಯಿದೇವ. ಇಲ್ಲಿ ಇವರ ಆಳ್ವಿಕೆಯು ಕ್ರಿ. ಶ. 10—11ನೇ ಶತಕದಿಂದ ಕ್ರಿ. ಶ. 14ನೇ ಶತಮಾನದವರೆಗೆ ಹರಡಿತ್ತು. ಕವಿಯಾಳುಪೇಂದ್ರರಸನು ಸುಮಾರು 60 ವರ್ಷ ರಾಜ್ಯವಾಳುತ್ತಿದ್ದನು. ವೀರ ಪಾಂಡ್ಯನ ರಾಣಿಯಾದ ಬಲ್ಲಮಹಾದೇವಿಯು ಆಳುಪರಲ್ಲಿ ಪ್ರಖ್ಯಾತ ರಾಣಿಯಾಗಿ ರಾಜ್ಯಭಾರ ಮಾಡಿದಳು. ಈ ಅರಸರು ಪಂಡಿತಪಾಂಡ್ಯ, ಪಾಂಡ್ಯಧನಂಜಯ ಎಂಬ ಬಿರುದನ್ನು ಸಾಮಾನ್ಯವಾಗಿ ಧರಿಸಿಕೊಂಡಿದ್ದರು. ಈ ಆಳುಪರಸರಿಗೂ ಮಧುರೆಯ ಪಾಂಡ್ಯರಿಗೂ ಯಾವ ರೀತಿಯ ಸಂಬಂಧವಿತ್ತೆಂದು ಇಂದಿಗೂ ತಿಳಿದುಬಂದಿಲ್ಲ. ಈ ಸಮಸ್ಯೆಯನ್ನು ಸಂಶೋಧನೆಯಿಂದಲೇ ಬಗೆಹರಿಸಬೇಕು. ಇಷ್ಟರ ತನಕ ದೊರಕಿದ ದಾಖಲೆಯ ಪ್ರಕಾರ ಪಾಂಡ್ಯದೇಶದಿಂದ ಯಾವ ಅರಸನೂ ಬಾರಕೂರಿಗೆ ಬಂದು ಆಳಿಕೊಂಡಿದ್ದ ವಿಚಾರ ತಿಳಿದು ಬಂದಿಲ್ಲ. ಈ ಆಳುಪರಸರು ಕ್ರಿ. ಶ. 6–7ನೇ ಶತಮಾನದಿಂದಲೂ ತುಳುನಾಡಿನ ಸಾರ್ವಭೌಮರಾಗಿದ್ದರು. ಇವರು ಧರಿಸಿಕೊಂಡಿದ್ದ ಪಾಂಡ್ಯಧನಂಜಯ, ಪಂಡಿತಪಾಂಡ್ಯ, ಪಾಂಡ್ಯ ಚಕ್ರವರ್ತಿ ಎಂಬ ಬಿರುದುಗಳಿಂದಾಗಿ ಒಂದು ಕಟ್ಟುಕತೆ ರಚಿತವಾಗಿರಬೇಕೆಂದು ಹೇಳಬಹುದು.

ಆಳುಪರು ಪ್ರಾರಂಭದಿಂದಲೂ ಕರ್ಣಾಟಕ ಸಾರ್ವಭೌಮರ ಅಧೀನರಾಗಿದ್ದರು. ಆದರೆ ಆಡಳಿತೆಯ ದೃಷ್ಟಿಯಿಂದ ಸ್ವತಂತ್ರರೇ ಆಗಿದ್ದರೆನ್ನಬಹುದು. ಹೊಯ್ಸಳರ ಕಾಲದಲ್ಲಿ ಮೂರನೇ ವೀರಬಲ್ಲಾಳನಿಗೂ ಆಳುಪರ ಕುಲಕ್ಕೂ ರಕ್ತಸಂಬಂಧವಾಗಿದ್ದಂತೆಯೂ ಚಿಕ್ಕಾಯಿತಾಯಿಯೆಂಬ ಆಳುಪ ಮನೆತನದ ರಾಣಿಯನ್ನು ಆತನು ವಿವಾಹವಾಗಿದ್ದನೆಂದೂ ಅನಂತರ ತುಳುನಾಡು ಹೊಯ್ಸಳ ಸಾಮ್ರಾಜ್ಯದ ಪ್ರತ್ಯಕ್ಷ ಅಂಗವಾಯಿತೆಂದೂ ಹೇಳಬಹುದು.

ವಿಜಯನಗರದ ಆಳ್ವಿಕೆಯ ಕಾಲದ ಪ್ರಾರಂಭದಿಂದಲೂ ಬಾರಕೂರು ಅವರ ಅಧೀನವಾಗಿತ್ತು. ಅವರ ಕಾಲದಲ್ಲಿ ಮಂಗಳೂರು ಮತ್ತು ಬಾರಕೂರು ಎಂಬ ಎರಡು ಪ್ರಾಂತ್ಯಗಳಾಗಿ ತುಳುನಾಡು ವಿಭಾಗಿಸಲ್ಪಟ್ಟು ಪ್ರತ್ಯೇಕ ರಾಜ್ಯಪಾಲರಿಂದ ಆಳಲ್ಪಡುತ್ತಿತ್ತು. ಕೆಲವೊಮ್ಮೆ ಎರಡೂ ಪ್ರಾಂತಗಳಿಗೂ ಒಬ್ಬನೇ ರಾಜ್ಯಪಾಲನಿದ್ದನು. ಈ ಸಮಯದಲ್ಲಿ ಬಾರಕೂರಿಗೆ 'ಬಾರಕೂರ ತುಳುರಾಜ್ಯ' ಎಂಬ ಹೆಸರಿತ್ತು. ರಾಜ್ಯಪಾಲರ ಕೋಟೆ, ಅರಮನೆ ಅಡಿಸ್ಥಳದ ಅವಶೇಷ ಇಂದಿಗೂ ತೋರಿಬರುತ್ತದೆ. ಇದೂ ಪ್ರಾಕ್ತನ ವಿಭಾಗದಿಂದ ಅಗತೆಮಾಡಲು ಯೋಗ್ಯ ಸ್ಥಳವಾಗಿದೆ. ವಿಜಯನಗರ ಸಾಮ್ರಾಜ್ಯಕ್ಕೆ ಬಾರಕೂರು ಬಂದರದ ಅಗತ್ಯ ವಿಶೇಷವಾಗಿತ್ತು. ಕ್ರಿ. ಶ. 1345ರಿಂದ ಕ್ರಿ. ಶ. 1600ರ ವರೆಗೆ ಈ ಕೆಳಗಣ ರಾಜ್ಯಪಾಲರುಗಳು ಬಾರಕೂರಿನಲ್ಲಿ ಆಳಿಕೊಂಡಿದ್ದರು. ಮಲೆಯ ದಣ್ಣಾಯಕ, ಗೋಪರಸ ಒಡೆಯ, ಶಂಕರದೇವ ಒಡೆಯ, ಹಡಪದ ಗೌತರಸ,ಮಾದರಸ, ಪಂಡರಿದೇವ ಒಡೆಯ, ಬೊಮ್ಮರಸ ಒಡೆಯ, ಜಕ್ಕಣ್ಣ ಒಡೆಯ,ಮಲ್ಲಪ್ಪ ಒಡೆಯ, ಸಿಂಗಣ್ಣ ಒಡೆಯ, ಹೆಗ್ಗಡೆ ಶಂಕರಸ, ಮಲ್ಲಪ್ಪ ಒಡೆಯ, ನಾಗರಸ ಒಡೆಯ, ಬಸವಣ್ಣ ಒಡೆಯ, ಮಹಾಬಳದೇವ ಒಡೆಯ, ಮಹಾಪ್ರಧಾನ ಶಂಕರದೇವ ಒಡೆಯ, ಹರಿದೇವ ಒಡೆಯ, ವಿರುಪಣ್ಣ ಒಡೆಯ, ಮಹಾಮಂತ್ರಿ ನರಸಿಂಹದೇವ ಒಡೆಯ, ತಿಮ್ಮರಸ ಒಡೆಯ, ಪುರುಷೋತ್ತಮದೇವ, ಅಣ್ಣರಸ ಒಡೆಯ, ತಿಮ್ಮಣ್ಣ ಒಡೆಯ, ಆಚರಸ ಒಡೆಯ, ರುಪಣ್ಣ ಒಡೆಯ, ರಾಯರಸ ಒಡೆಯ, ದೇವಪ್ಪ ಒಡೆಯ, ಲಿಂಗಪ್ಪ ಒಡೆಯ, ಬಾನಪ್ಪ ಒಡೆಯ, ದೇವಣ್ಣ ಒಡೆಯ, ಪಂಡರಿದೇವ ಒಡೆಯ, ಗುರುವಪ್ಪ ಒಡೆಯ, ದೇವಪ್ಪ ದಣ್ಣಾಯಕ, ಶಂಕರ ದೇವ ಒಡೆಯ, ಲಕ್ಕಣ್ಣ ಒಡೆಯ, ವಿಠರಸ ಒಡೆಯ, ಕೊಂಡರಾಜ ಒಡೆಯ, ಮಹಾಪ್ರಧಾನ ವಿಠರಸ ಒಡೆಯ, ವಿರೂಪಾಕ್ಷ ದೇವ ಒಡೆಯ, ಹಂಪರಸ ಒಡೆಯ, ಕೊಂನಕಳಸ ಮಹಾರಾಯ, ಸಾಧಾರಣ ದೇವ ಒಡೆಯ, ಬಸವರಸ ಒಡೆಯ, ಸೋಮಣ್ಣ ಒಡೆಯ, ಮಲ್ಲಪನಾಯಕ, ರತ್ನಪ್ಪ ಒಡೆಯ, ವಿಜಯಪ್ಪ ಒಡೆಯ, ವಿಠರಸ ಒಡೆಯ, ಯತಿರಾಯ ಒಡೆಯ, ವಿಜಯಣ್ಣ ಒಡೆಯ, ಅಳಿಯ ತಮ್ಮಣ್ಣ ಒಡೆಯ, ಆಚಪ್ಪ ಒಡೆಯ, ಏಕದಳಖಾನ ಒಡೆಯ, ಮಲ್ಲಪ್ಪ ಒಡೆಯ, ಕಳಿಯ ಎಲ್ಲಪ್ಪ ಒಡೆಯ. ಈ ರಾಜ್ಯಪಾಲರಲ್ಲಿ ಕೆಲವರು ಎರಡು–ಮೂರು ಅವಧಿಯವರೆಗೂ ಅಧಿಕಾರದಲ್ಲಿದ್ದರು. ವಿಜಯನಗರದ ಅಧಿಕಾರ ಸ್ಥಾಪನೆಯಾದ ಅನಂತರ ತುಳುನಾಡಿನ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ವ್ಯವಸ್ಥೆಗಳಲ್ಲಿ ಹಲವಾರು ಬದಲಾವಣೆಗಳಾದುವು. ಕರ್ಣಾಟಕದ ಇತರ ಭಾಗಗಳಿಗೂ ತುಳುನಾಡಿಗೂ ನಿಕಟ ಸಂಬಂಧ ಬೆಳೆಯಿತು. ಬೃಹತ್ಬಂದರವಾದ ಬಾರಕೂರಿನ ಅವಶ್ಯಕತೆ ವಿಜಯ ನಗರಕ್ಕೆ ವಿಶೇಷವಾಗಿದ್ದುದರಿಂದಲೇ ಅದರ ಮೇಲೆ ಅವರ ಅಧಿಕಾರ ಎಡೆಬಿಡದೆ ಇತ್ತು.

ಆಳುಪರ ಕಾಲದಲ್ಲಿ ಪಾಂಡ್ಯ ಗದ್ಯಾಣವೆಂಬ ಬಂಗಾರದ ನಾಣ್ಯಗಳು ಬಳಕೆಯಲ್ಲಿದ್ದುವು. ಇವು 'ಅಚ್ಚುನಾಣ್ಯ'ಗಳಾಗಿದ್ದು ಒಂದು ಕಡೆಯಲ್ಲಿ ಪೂರ್ಣಕುಂಭ ಅಥವಾ ಚಾಮರ ಮತ್ತು ಕಾಲು ದೀಪಗಳು ಇಬ್ಬದಿಗಳಲ್ಲಿ ಕೂಡಿಕೊಂಡಿರುವ ಎರಡು ಮೀನುಗಳ ಚಿತ್ರಗಳಿಂದಲೂ ಇನ್ನೊಂದು ಕಡೆಯಲ್ಲಿ ಪಾಂಡ್ಯ ಧನಂಜಯವೆಂಬ ಬರಹದಿಂದಲೂ ಕೂಡಿ ಕೊಂಡಿದ್ದುವು. ಒಂದು



ಮೂಡುಕೇರಿ ಗಣೇಶ

ಚೌಳಿಕೇರಿಯ ಗಣೇಶ

ಬಾರಕೂರಿನ ಚಾರಿತ್ರಿಕ ಅವಶೇಷಗಳು

ನಾಣ್ಯವು 51 ಗ್ರೈನಿನಿಂದ 56 ಗ್ರೈನಿನ ತನಕ ಭಾರವಾಗಿತ್ತು. ಈ ನಾಣ್ಯಗಳು ಮಂಗಳೂರು ಮತ್ತು ಬಾರಕೂರು ಟಂಕ ಸಾಲೆಗಳಿಂದ ಹೊರಡುತ್ತಿದ್ದುವೆನ್ನಬಹುದು. ಮಂಗಳೂರು ಮತ್ತು ಬಾರಕೂರು ಗದ್ಯಾಣಗಳಿಗೆ ಶಾಸನದ ಉಲ್ಲೇಖವಿದೆ. ಕ್ರಿ. ಶ. 1139—'40ರ ಬಾರಕೂರಿನಲ್ಲಿ ದೊರೆಕಿದ ಶಾಸನವು ಅಲ್ಲಿಯ ಪಂಚ ಲಿಂಗೇಶ್ವರ (ಮಾರ್ಕಂಡೇಶ್ವರ) ದೇವರಿಗೆ ಕವಿಯೊಳು ಪ್ರೇಂಪ್ರದೇವನು 30ಗದ್ಯಾಣಗಳನ್ನು ದಾನವಾಗಿತ್ತ ಉಲ್ಲೇಖ ಮಾಡುತ್ತವೆ. ಮಿಶ್ರ ಲೋಹದಿಂದ ನಿರ್ಮಿಸಿದ ನಾಣ್ಯಗಳು ಕ್ರಿ. ಶ. 15ನೇ ಶತಕದ ವರೆಗೂ ಬಳಕೆಯಲ್ಲಿದ್ದುವು. ಪಾಂಡ್ಯ ಧನಂಜಯ ಎಂಬ ಈ ಹೆಸರು ದೇವನಾಗರಿ ಲಿಪಿಯಲ್ಲಿಯೂ ಬರೆಯಲ್ಪಡುತ್ತಿತ್ತು. ಕನ್ನಡ ಲಿಪಿಯಲ್ಲಿ ಬರೆದ ಕ್ರಿ. ಶ. 12—13ನೇ ಶತಕದ ಒಂದು ನಾಣ್ಯವೂ ಕ್ರಿ. ಶ. 14ನೇ ಶತಕದ ಕೆಲವು ನಾಣ್ಯಗಳೂ ದೊರಕಿವೆ.

ವಿಜಯ ನಗರದ ಕಾಲದಲ್ಲಿ ಬಂಗಾರ, ಬೆಳ್ಳಿ, ತಾಮ್ರಗಳಿಂದ ಮಾಡಿದ ಗದ್ಯಾಣ, ವರಾಹ, ಹೊನ್ನು ಮತ್ತು ಹಣವೆಂಬ ನಾಣ್ಯಗಳೂ ಕಾಟಿ ಗದ್ಯಾಣ; ಅರ್ಧ ಕಾಟಿ ಗದ್ಯಾಣ, ಪ್ರತಾಪ ಗದ್ಯಾಣ, ದೊಡ್ಡ ವರಾಹ, ಘಟ್ಟಿ ವರಹ ಇತ್ಯಾದಿ ನಾಣ್ಯಗಳೂ ಬಳಕೆಯಲ್ಲಿದ್ದುವು. ಈ ನಾಣ್ಯಗಳು ಬಳಕೆಯಲ್ಲಿದ್ದರೂ ವ್ಯವಹಾರದಲ್ಲಿ ವಸ್ತು ವಿನಿಮಯವೇ (Barter) ಹೆಚ್ಚು ಪ್ರಚಾರದಲ್ಲಿತ್ತೆಂದು ಹೇಳಬಹುದು. ವಾಣಿಜ್ಯ ವ್ಯವಹಾರದಲ್ಲಿ ಪಶ್ಚಿಮ ಕರಾವಳಿಯ ಹಿರಿದಾದ ಕೇಂದ್ರಗಳಲ್ಲಿ ಬಾರಕೂರು ಒಂದಾಗಿತ್ತು.

ಬಾರಕೂರಿನ ಧಾರ್ಮಿಕ ಇತಿಹಾಸ

(ಅಳಿದು ಉಳಿದು ಬಂದ ಪ್ರಾಚೀನ ಅವಶೇಷಗಳು) ಬಾರಕೂರು ದೇಗುಲಗಳ ಆಗರವಾಗಿತ್ತು. ಇವುಗಳಲ್ಲಿ ಹೆಚ್ಚಿನವು ಕಣ್ಮರೆಯಾಗಿವೆ. ಅವಶೇಷವಾಗಿ ಇಂದಿಗೂ ಉಳಿದಿರುವ ದೇಗುಲಗಳಲ್ಲಿ 1) ಕೋಟಿಕೇರಿ ಮಾರ್ಕಂಡೇಶ್ವರ (ಪಂಚಲಿಂಗೇಶ್ವರ) 2) ಮೂಡುಕೇರಿ ಸೋಮನಾಥ 3) ಚೌಳಿಕೇರಿ ಗಣಪತಿ, 4) ಮಣಿಗಾರ ಕೇರಿ ಸಿದ್ಧೇಶ್ವರ 5) ಹೊಸಾಳ ಮಹಾಲಕ್ಷ್ಮಿ, 6) ಮೂಡುಕೇರಿ (ಪಟಸಾಲಕೇರಿ?) ಕಾಳಿಕಾಂಬ ದೇವಾಲಯಗಳು ತಕ್ಕ ಮಟ್ಟಿಗಿವೆ. ಇವು ಪ್ರೇಕ್ಷಕರನ್ನು ತಮ್ಮೆಡೆಗೆ ಆಕರ್ಷಿಸುವ ರೀತಿಯಲ್ಲಿವೆ ಎನ್ನುವಂತಿಲ್ಲ. ಇಲ್ಲಿ ಕಾಣಸಿಗುವ ಶಿಲ್ಪಗಳೂ ಗಾತ್ರದಲ್ಲಿ ಹಿರಿದಾದುವುಗಳೆನ್ನುವಂತಿಲ್ಲ. ಆದರೆ ಪ್ರಾಕ್ತನ ವಿಮರ್ಶಕರಿಗೂ, ಪ್ರತಿಮಾ ವಿಜ್ಞಾನಿಗಳಿಗೂ, ಶಿಲ್ಪ ಶಾಸ್ತ್ರಾಭ್ಯಾಸಿಗಳಿಗೂ ತುಂಬ ಪ್ರೇರಕಶಕ್ತಿಯಾಗಬಲ್ಲ ಹಲವಾರು ಮೂರ್ತಿಗಳಿವೆ. ಈ ದೃಷ್ಟಿಯಿಂದ ಹಾಗೂ ಕಾಲಮಾನಕ್ಕೆ ಅನುಕೂಲವಾದ ಪ್ರಾಮುಖ್ಯ ಶಿಲ್ಪಗಳನ್ನು ಆರಿಸಿ ಸೂಕ್ಷ್ಮವಾದ ವಿವರವನ್ನು ಕೊಡಲಾಗಿದೆ.

ಪಂಚಲಿಂಗೇಶ್ವರ ದೇವಾಲಯದ ದೃಶ್ಯ

ಬಾರಕೂರಿನಲ್ಲಿ ಪಂಚಲಿಂಗೇಶ್ವರ ದೇಗುಲವು ಅತಿ ಪ್ರಾಚೀನವಾದುದೆನ್ನಬಹುದು. ಇದರಲ್ಲಿ ಕ್ರಿ. ಶ. 8ನೇ ಶತಮಾನ, ಕ್ರಿ. ಶ. 11-12ನೇ ಶತಮಾನ, ಕ್ರಿ. ಶ. 14ನೇ ಶತಮಾನಗಳ ನಿರ್ಮಾಣ ರೂಪಾಂತರಗಳು ಕಂಡು ಬರುತ್ತವೆ. ಗರ್ಭಗೃಹವು ಗಜಪೃಷ್ಠಾಕಾರವಾಗಿದೆ. ಸಿದ್ಧೇಶ್ವರ, ಸೋಮನಾಥ ಚೌಳಿಕೇರಿ ಗಣಪತಿ ಇತ್ಯಾದಿ ದೇಗುಲಗಳನ್ನವಲೋಕಿಸುವಾಗ ಬಹಳ ಪ್ರಾಚೀನತೆ ಕಂಡು ಬರುವುದಿಲ್ಲ. ಪಂಚಲಿಂಗೇಶ್ವರ ದೇವಾಲಯಕ್ಕೆ ಕ್ರಿ. ಶ. 12ನೇ ಶತಕದಲ್ಲೂ ಇನ್ನಿತರ ದೇಗುಲಗಳಿಗೆ 13ನೇ ಶತಕದಲ್ಲೂ ಅನಂತರವೂ ಅರಸರಿಂದ ದಾನ, ದತ್ತಿಕೊಟ್ಟ ಉಲ್ಲೇಖ ವಿಪುಲವಾಗಿ ಕಂಡು ಬರುತ್ತದೆ. ಇಲ್ಲಿ ಕಂಡು ಬರುವ ಮೂರ್ತಿಗಳನ್ನವಲೋಕಿಸುವಾಗ ಸ್ಥೂಲವಾಗಿ ಈ ಕೆಳಗಿನ ಕಾಲ ನಿರ್ಣಯವನ್ನು ಮಾಡಬಹುದು (ಈ ತೆರನಾದ ಅವಲೋಕನೆ ಇದು ಪ್ರಥಮವಾಗಿ ನಡೆಯುವುದೆನ್ನಬಹುದು.)

ಶಿಲಾಬಿಂಬಗಳು:

1. ಚೌಳಿ ಕೇರಿ ಗಣಪತಿ —(ಕ್ರಿ.ಶ. 8ನೇ ಶತಕ)—ಬಿಂಬವು 15" ಎತ್ತರವಾಗಿದ್ದು ದ್ವಿಬಾಹುವಾಗಿದೆ. ಅತಿ ಚಿಕ್ಕ ಕಿರೀಟವಿದೆ; ಮುಖವು ವರಾಹದ ಮುಖವನ್ನು ಹೋಲುತ್ತದೆ.

2. ಪಂಚಲಿಂಗೇಶ್ವರ (ಮಾರ್ಕಂಡೇಶ್ವರ)ದ ಬ್ರಹ್ಮಚಾರಿ ಸ್ಕಂದ—(ಕ್ರಿ.ಶ. 8ನೇ ಶತಕ)– 2¼' ಎತ್ತರವಾಗಿದ್ದ ದ್ವಿಬಾಹುವಾಗಿದೆ. ಒಂದು ತರದ ನಯವಾದ ನಸುಕೆಂಪು ಶಿಲೆಯಿಂದ ಕೊರೆದ ಕೌಪೀನ ಧಾರಿಯಾದ, ದಂಡ ಮತ್ತು ಕುಕ್ಕುಟವನ್ನು ಧರಿಸಿದ ಬಿಂಬವಿದು. ಅಪೂರ್ವವಾದ ಮೂರ್ತಿಯಿದು.

3. ಇದೇ ದೇಗುಲದಲ್ಲಿರುವ ಆದಿತ್ಯ ವಿಗ್ರಹ (ಕ್ರಿ.ಶ. 9–10ನೇ ಶತಕ)—ಇದು ಸಹಸ್ಕಂದ ವಿಗ್ರಹದ ಶೈಲಿಯನ್ನೇ ಹೋಲುತ್ತದೆ. ಅದೇ ತರದ ಶಿಲೆಯಿಂದ ಮಾಡಲ್ಪಟ್ಟಿದೆ. 3' ಎತ್ತರವಾದ ಈ ಮೂರ್ತಿಯು ಬಹು ಚೆನ್ನಾದ ಕಲಾಕೃತಿಯಾಗಿದೆ.

4. ಪಂಚಲಿಂಗೇಶ್ವರ ದೇವಾಲಯದ ನವರಂಗದಲ್ಲಿರುವ ಜನಾರ್ದನನ ಉಬ್ಬು ಶಿಲ್ಪ (ಕ್ರಿ.ಶ. 9—10ನೇ ಶತಕ).

5. ಕೋಟಿಕೇರಿ ಬಟ್ಟೆ ವಿನಾಯಕ (ಕ್ರಿ.ಶ. 9—10ನೇ ಶತಮಾನ) ಪದ್ಮ ಪೀಠದಲ್ಲಿ ಕುಳಿತಿರುವ 1½' ಎತ್ತರದ ದ್ವಿಬಾಹು ಗಣಪತಿ. ಬಹು ಸಚೇತನ ಮೂರ್ತಿಯಿದಾಗಿದೆ.

6. ಬಳೆಗಾರ ಕೇರಿಯ ದೇವೀ ಮೂರ್ತಿಗಳು – (ಕ್ರಿ.ಶ. 10ನೇ ಶತಕ)—ಇವು ಬ್ರಾಹ್ಮೀ, ಮಹೇಶ್ವರೀ, ಮತ್ತು ವೈಷ್ಣವೀ ಎಂಬ ಸಪ್ತ ಮಾತೃಕೆಯರಲ್ಲಿ ಮೂವರ ಆಳುಪ್ರಮಾಣದ ಮೂರ್ತಿಗಳು. ಮೂರ್ತಿಗಳ ಲಾವಣ್ಯ ಮತ್ತು ಕಲಾಕೌಶಲ್ಯ ಬಣ್ಣಕೊಡುವುದರಿಂದಾಗಿ ಮಾಸಿ ಹೋಗಿದೆ. ಈ ದೇವಾಲಯವನ್ನು ಮಹಾಲಕ್ಷ್ಮೀ ದೇಗುಲವೆನ್ನುತ್ತಾರೆ.

7. ಪಂಚಲಿಂಗೇಶ್ವರದ ನವರಂಗದಲ್ಲಿರುವ ಗಣಪತಿ (ಕ್ರಿ. ಶ. 10ನೇ ಶತಕ)—ಪಾಶಾಂಕುಶ ಮತ್ತು ಕೆಳಗಿನ ಎರಡೂ ಕೈಗಳಲ್ಲಿ ಮೋದಕವನ್ನು ಧರಿಸಿದ ನೀಳವಾಗಿ. ನೇರವಾಗಿ ಕೆಳಗಿಳಿದ ಸೊಂಡಿಲನ್ನು ಪಡೆದ ಈ ಮೂರ್ತಿಯು ಪ್ರಾಚೀನವೆನ್ನಬಹುದು.

8. ಸಿದ್ಧೇಶ್ವರ ದೇಗುಲದ ನವರಂಗದಲ್ಲಿರುವ ಮಹಿಷಾಸುರ ಮರ್ದಿನಿ (ಕ್ರಿ. ಶ. 10—11ನೇ ಶತಕ)—13 ಇಂಚು ಎತ್ತರವಾಗಿರುವ ಬಹು ಜೀರ್ಣವಾದ ಈ ಮೂರ್ತಿಯು ಕಲ್ಯಾಣಿ ಚಾಲುಕ್ಯರ ಕಾಲದ ಉತ್ಕೃಷ್ಟ ಶಿಲ್ಪದಂತೆ ಕಂಡು ಬರುತ್ತದೆ.

9. ಮೂಡುಕೇರಿಯ ಸೋಮನಾಥ ದೇಗುಲದ ನವರಂಗದಲ್ಲಿರುವ ಶಾರದಾ—(ಕ್ರಿ. ಶ. 11ನೇ ಶತಕ)—ಇದು ಸಹ ಕಲ್ಯಾಣಿ ಚಾಲುಕ್ಯರ ಶಿಲ್ಪಕ್ಕೆ ಉತ್ತಮ ನಿದರ್ಶನ. ಸು. 1½ ಅಡಿ ಎತ್ತರವಾಗಿದ್ದು ಗಟ್ಟಿ ಶಿಲೆಯಿಂದ ಕೊರೆಯಲ್ಪಟ್ಟಿದೆ. ಸರ್ವಾಕಾರದ ತೋರಣವೂ ಲಾವಣ್ಯಮಯವಾದ ಮುಖವೂ ಆಕರ್ಷಣೀಯವಾಗಿದೆ. ಕ್ರಿ. ಶ. 12ನೇ ಶತಕಕ್ಕೆ ಈ ಶಾರದಾ ದೇವಿಗೆ ಶಾಸನದ ಉಲ್ಲೇಖವಿದೆ.

10. ಮೂಡುಕೇರಿಯ ಸೋಮನಾಥ ದೇಗುಲದ ನವರಂಗದಲ್ಲಿರುವ ಜನಾರ್ದನ (ಕ್ರಿ. ಶ. 11-12ನೇ ಶತಮಾ

ದ್ವಿಬಾಹು ಗಣೇಶ

ಪಂಚಲಿಂಗೇಶ್ವರ ದೇವಾಲಯದಲ್ಲಿರುವ ಅಪೂರ್ವ ಆದಿತ್ಯ ವಿಗ್ರಹ

ಶ್ರೌಳವ ವಸನವಧರಿಸಿ ಬಿಂಕದಿ ನಿಂತಿದೆ - ಬಾರಕೂರು

ನ)—ಈ ಬಿಂಬವೂ ಕಗ್ಗಲ್ಲಿಂದ ಕೊರೆಯಲ್ಪಟ್ಟು, 3 ಅಡಿ ಎತ್ತರವಾಗಿದ್ದು, ಮೇಲಿನ ಕೈಗಳಲ್ಲಿ ಚಕ್ರ, ಶಂಖಗಳೂ ಕೆಳಗಿನ ಎಡಕೈಯು ಕಟಿಸ್ಥಾನದಲ್ಲೂ ಬಲಕೈಯು ಪದ್ಮ ವರದನಾಗಿಯೂ ಇವೆ. ಶೈಲಿಯನ್ನು ಕಂಡಾಗ ಕ್ರಿ. ಶ. 12ನೇ ಶತಮಾನಕ್ಕಿಂತ ಅರ್ವಾಚೀನವಲ್ಲವೆಂದೆನಿಸುತ್ತದೆ.

11. ಕೋಟಿಕೇರಿ ವೇಣುಗೋಪಾಲ ಕೃಷ್ಣ (ಕ್ರಿ. ಶ. 11ನೇ ಶತಕ). ಒದು ಬುಡದಿಂದ ತುದಿಯ ತನಕ 4½ ಅಡಿ ಎತ್ತರವಾಗಿದ್ದು ಕಡುಕರಿ ಶಿಲೆಯಿಂದ ನಿರ್ಮಿತವಾಗಿದೆ. ಪ್ರಭಾವಳಿಯಲ್ಲಿ ದಶಾವತಾರದ ನಿರ್ದೇಶವಿದೆ. ವಿಷ್ಣುವಿನ ವಾಹನವಾದ ಗರುಡನು ಪಾಣಿಪೀಠದ ಎದುರು ನಿರ್ದೇಶಿಸಲ್ಪಟ್ಟಿದ್ದಾನೆ. ಗೋವುಗಳು ಶ್ರೀಕೃಷ್ಣನ ಗಾನವನ್ನು ಆಳಿಸಿ ಕೇಳುತ್ತಿವೆ. ಈ ಮೂರ್ತಿಯನ್ನು ಕರ್ಣಾಟಕದ ಶ್ರೇಷ್ಠವಾದ ಶ್ರೀ ಕೃಷ್ಣ ಬಿಂಬಗಳಲ್ಲಿ ಒಂದೆಂಬುದಾಗಿ ಪರಿಗಣಿಸಬಹುದು. ಪ್ರಭಾವಳಿಯ ಇಕ್ಕಡೆಗಳಲ್ಲಿ ಶಂಖ ಚಕ್ರಗಳಿರುವುದರಿಂದ ಇದು ಕೇಶವ ಸ್ವರೂಪಿ ಎನ್ನಬಹುದು.

12. ಮಹಿಷಾಸುರ ದೇಗುಲದ ರೇವಂತ (ಕ್ರಿ. ಶ. 11—12ನೇ ಶತಕ) ಇದೊಂದು 3 ಅಡಿ ಎತ್ತರದ ಶಿಲ್ಪ. ಕುದುರೆಯನ್ನು ಸವಾರಿ ಮಾಡಿಕೊಂಡ ರೇವಂತನ ನಿರ್ದೇಶವೂ ಕುದುರೆಯ ನಿರ್ದೇಶವೂ ಬಹು ಚೈತನ್ಯ ಪೂರ್ಣವಾಗಿವೆ. ಕುದುರೆಯ ಮುಂಗಾಲಿನ ಕೈಕೆಳಗೆ ಹುಲಿಯ ನಿರ್ದೇಶವಿದೆ. ಕುಂಡೋದರ ಮತ್ತು ಭೂತಾಳ ಪಾಂಡ್ಯರಾಯನಿಗೆ ಸಂಬಂಧಿಸಿದ ಕತೆಗೂ ಈ ದೇಗುಲಕ್ಕೂ ಸಂಬಂಧವಿದೆ ಎಂದು ಪ್ರತೀತಿ. ಆದರೆ ಈ ಬಿಂಬವು ಜೈನ ಬ್ರಹ್ಮದಂತೆ ಕಂಡು ಬರುತ್ತದೆ. ಇಲ್ಲಿಯೇ ಮರದಿಂದ ಮಾಡಿದ ಪಂಚ ಮುಖ ನಂದಿಯೂ ಒಂದು ಕೋಡಿನಿಂದ ಕೂಡಿದ ನಂದಿಯೂ ಇವೆ. ಈ ದೇಗುಲವು ಈಗ ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ.

13. ಚೌಳಿಕೇರಿಯ ಹಾಡಿಯಲ್ಲಿರುವ ಭಿನ್ನವಾದ ಜನಾರ್ದನ ಬಿಂಬ (ಕ್ರಿ.ಶ.11–12ನೇ ಶತಕ) ನಸುಕೆಂಪು ಶಿಲೆಯಿಂದ ಕೊರೆದ ಈ ಬಿಂಬವು ಪ್ರಯೋಗ ಚಕ್ರ, ಶಂಖಗಳನ್ನು ಧರಿಸಿ ಸಪೂರವಾದ ಅರ್ಧ ಚಂದ್ರಾಕಾರದ ಪ್ರಭಾವಳಿಯಿಂದಲೂ ಕಿರೀಟ ಮುಕುಟದಿಂದಲೂ ಕೂಡಿದೆ.

14. ಕೂಡ್ಲು ಜನಾರ್ದನ (ಕ್ರಿ. ಶ. 11—12ನೇ ಶತಕ) ಬಾರಕೂರಿನಿಂದ ಎರಡು ಮೈಲು ದೂರದಲ್ಲಿರುವ ಕೂಡ್ಲು ಎಂಬಲ್ಲಿ ಚಿಕ್ಕದಾದೊಂದು ಗುಡಿಯಲ್ಲಿರುವ ಬಲಕೆಳಗೈ ಭಿನ್ನವಾದ ಶ್ರೀ ಜನಾರ್ದನ ಬಿಂಬವು ಪ್ರಭಾವಳಿ ರಹಿತ ಪೂರ್ಣ ಬಿಂಬವಾಗಿದ್ದು ಕ್ರಿ. ಶ. 11–12ನೇ ಶತಮಾನಕ್ಕೆ ಅನ್ವಯಿಸಬಹುದು.

15. ಮೂಡುಕೇರಿ ಗಣಪತಿ (ಕ್ರಿ. ಶ. 12–13ನೇ ಶತಮಾನ) 3½ ಅಡಿ ಎತ್ತರದ ಪುಷ್ಟವಾದ ಈ ಬಿಂಬವು ಹೊಯ್ಸಳ ಶೈಲಿಯಲ್ಲಿದೆ ಪಾಶಾಂಕುಶ, ದಂತ ಮತ್ತು ಫಲಧಾರಿಯಾದ ಈ ಬಿಂಬವು ಜಿಲ್ಲೆಯ ಉತ್ತಮ ಗಣೇಶ ಬಿಂಬಗಳಲ್ಲಿ ಒಂದಾಗಿದೆ.

ಕೋಟಿಕೇರಿಯ ಅಖಿಲ ಕರ್ಣಾಟಕ ಪ್ರಾಮುಖ್ಯತೆಯುಳ್ಳ ಶ್ರೀಕೃಷ್ಣ ವಿಗ್ರಹ

16. ಮೂಡುಕೇರಿಯ ಗೋಪಾಲಕೃಷ್ಣ (ಕ್ರಿ. ಶ. 14ನೇ ಶತಕ) 2½ ಅಡಿ ಎತ್ತರದ ಮನಮೋಹಕವಾದ ಈ ಮೂರ್ತಿಯನ್ನು ವಿಜಯನಗರದ ಕಾಲದ ಪ್ರಥಮ ಹಂತದ ಚೆನ್ನಾದ ಕಲಾಕೃತಿ ಎನ್ನಬಹುದು. ಚಕ್ರ, ಶಂಖ ಪ್ರಭಾವಳಿಯಲ್ಲಿರುವುದರಿಂದ ಜನಾರ್ದನ ಸ್ವರೂಪಿಯಾಗಿದೆನ್ನಬಹುದು.

17. ಮೂಡುಕೇರಿಯಲ್ಲಿ ನಾರಾಯಣಿ ಮತ್ತು ಪರವಾಸುದೇವ (ಕ್ರಿ. ಶ. 13–14ನೇ ಶತಕ) ಗೋಪಾಲಕೃಷ್ಣ ದೇಗುಲದ ಸಮೀಪ ಚಿಕ್ಕದಾದೊಂದು ಗುಡಿಯಲ್ಲಿ ಒಂದು ನಾರಾಯಣೀ ಬಿಂಬವಿದೆ. ಪದ್ಮಾಸನಸ್ಥವಾದ, ಪ್ರಯೋಗ ಚಕ್ರ, ಶಂಖಧಾರಿಯಾದ ಈ ಬಿಂಬವು ಸ್ವಲ್ಪ ಜೀರ್ಣವಾದರೂ ಕಲಾಕೃತಿಯಲ್ಲಿ ಚೆನ್ನಾಗಿದೆ. ಅಂತೆಯೇ ಇಲ್ಲಿಯೇ ಸಂಪೂರ್ಣ ಬಿದ್ದು ಹೋದ ಗುಡಿಯ ಭಿನ್ನವಾದ ಪರವಾಸುದೇವ ಮೂರ್ತಿಯೂ ಆಕರ್ಷಣೀಯವಾಗಿದೆ. ಎರಡೂ ಬಿಂಬಗಳೂ ಸುಮಾರು 2½' ಎತ್ತರವಾಗಿವೆ.

18. ಮೂಡುಕೇರಿ ಕಾಳಿಕಾಂಬಾ (ಕ್ರಿ. ಶ. 14ನೇ ಶತಕ) ಇದೊಂದು 2¾' ಎತ್ತರದ ಅಪೂರ್ವ ವಿಗ್ರಹ. ವಿಜಯನಗರ ಕಾಲದ ಪ್ರಥಮ ಹಂತದ ಶ್ರೇಷ್ಠವಾದ ಕಲಾಕೃತಿ. ಮೇಲಿನ ಕೈಗಳಲ್ಲಿ ಖಡ್ಗ ಮತ್ತು ಕತ್ತರಿಗಳೂ ಕೆಳಗಿನ ಬಲಕೈಯಲ್ಲಿ ನೀಲೋತ್ಪಲವೂ ಎಡಕೈ ಅಭಯವಾಗಿಯೂ ಇವೆ. ಪಾಣಿಪೀಠದಲ್ಲಿ ಮೂರು ರುಂಡಗಳ ಶಿಲ್ಪವೂ ಮೂರು ಒಂಟಿಗಳ ನಿರ್ದೇಶನವೂ ಇವೆ. ಇದೂ ಒಂದು ವೈಚಿತ್ರ್ಯ.

19. ಮೂಡುಕೇರಿ ವೀರಭದ್ರ (ಕ್ರಿ.ಶ. 13—14ನೇ ಶತಕ) 5' ಎತ್ತರದ ಕ್ರಿಯಾಶೀಲತೆಯನ್ನು ತೋರಿಸುವ ವೀರಭದ್ರನ ಉಬ್ಬು ಶಿಲ್ಪವು ಒಂದು ಆಕರ್ಷಣೀಯವಾದ ಮೂರ್ತಿಯಾಗಿದೆ. ಇದರ ಶಿಲ್ಪವು ರೇವಂತ ಶಿಲ್ಪವನ್ನೇ ಹೋಲುವುದರಿಂದ ಇದರ ಕಾಲಮಾನವನ್ನು ಒಂದು ಶತಮಾನ ಹಿಂದಕ್ಕೆ ಅನ್ವಯಿಸಬಹುದೆಂದು ಹೇಳಬಹುದು. ಕಲ್ಯಾಣಿ :ಚಾಲುಕ್ಯರ ಶೈಲಿಯನ್ನು ಚೆನ್ನಾಗಿ ಪ್ರತಿಬಿಂಬಿಸುವುದಲ್ಲದೆ ಜಿಲ್ಲೆಯ ಉತ್ತಮ ಶಿಲ್ಪಗಳಲ್ಲಿ ಒಂದಾಗಿದೆ.

20. ನಾಗರ ಮಠದ ಕೇಶವ ಮೂರ್ತಿ (ಕ್ರಿ.ಶ. 14—15ನೇ ಶತಕ) 4' ಎತ್ತರವಾದ ಕಗ್ಗಲ್ಲಿನಿಂದ ಕೊರೆದ ಈ ಬಿಂಬವು ಬಿಂದು ಉಬ್ಬು ಶಿಲ್ಪವಾಗಿದೆ. ಇದರ ಕೆಲವು ಲಕ್ಷಣಗಳು ಕ್ರಿ.ಶ 12—13ನೇ ಶತಕಕ್ಕೆ ಅನ್ವಯಿಸಬಹುದಾದರೂ ಸ್ಥೂಲವಾಗಿ ಇದನ್ನು ವಿಜಯನಗರ ಕಾಲಕ್ಕೆ ಸೇರಿಸಬಹುದಾಗಿದೆ. ಗದೆಯೂ ಮೇಲ್ಮುಖವಾಗಿ ಧರಿಸಲ್ಪಟ್ಟಿದೆ ಮಾತ್ರವಲ್ಲದೆ, ಸಂಪೂರ್ಣ ಪದ್ಮವೂ ಕಂಡು ಬರುತ್ತದೆ.

21. ಚಂಡಿಕಾಬಿಂಬ (ಕ್ರಿ.ಶ. 15ನೇ ಶತಕ) ಚೌಳಿಕೇರಿಯ ಒಂದು ಚಿಕ್ಕಗುಡಿಯಲ್ಲಿರುವ ಡಮರು ತ್ರಿಶೂಲಿ ಮತ್ತು ಪಾನಪಾತ್ರ ಖಡ್ಗಧಾರಿಯಾದ ಸಿಂಹ ಲಾಂಛನವಿರುವ 22" ಎತ್ತರದ ಈ ಮೂರ್ತಿಯು ವಿಜಯನಗರ ಕಾಲದ್ದಾಗಿದೆ.

ಪಂಚಲೋಹದ ಮೂರ್ತಿಗಳು

ಈಗ ಉಳಿದು ಬಂದಿರುವ ಪಂಚಲೋಹದ ಮೂರ್ತಿಗಳನ್ನು ಪರಿಶೀಲಿಸಿದರೂ ಕಾಲ ನಿರ್ದೇಶಕ್ಕೆ ತುಂಬಾ ಸಹಾಯವಾಗಬಹುದು. ಚೌಳಿಕೇರಿಯ ಗಣಪತಿ ಬಿಂಬವೂ (6"), ಪಂಚಲಿಂಗೇಶ್ವರದಲ್ಲಿರುವ ಕೇಶವ ಮೂರ್ತಿಯೂ (7"), ಮೂಡುಕೇರಿಯಲ್ಲಿರುವ ಒಂದು ದ್ವಿಬಾಹು ಗಣಪತಿ (7"), ಮತ್ತು ಮೂರು ಸದಾಶಿವ ಮೂರ್ತಿಗಳೂ (8") ಎಷ್ಟೆಂದರೂ ಕ್ರಿ ಶ. 12ನೇ ಶತಮಾನಕ್ಕಿಂತ ಪೂರ್ವದ ಬಿಂಬಗಳಾಗಿವೆ. ಮೂಡುಕೇರಿಯ ಬಿಂಬಗಳನ್ನು ಬಂಗಾರದ ತಗಡಿನಿಂದ ಮುಚ್ಚಿದುದರಿಂದ ಪ್ರತಿಮಾ ವೈಶಿಷ್ಟ್ಯವನ್ನು ಸಂಪೂರ್ಣವಾಗಿ ನಿರ್ಧರಿಸಲು ಸಾಧ್ಯವಿಲ್ಲ.

ಬಾರಕೂರು ಧರ್ಮದ ಆಗರವಾಗಿತ್ತು. ಪಂಚಲಿಂಗೇಶ್ವರನ ಆರಾಧನೆಯು ಕ್ರಿ. ಶ. 8ನೇ ಶತಮಾನದಿಂದಲೂ ಇಲ್ಲಿ ಬಳಕೆಯಲ್ಲಿತ್ತೆಂದು ಹೇಳಬಹುದು. ಮೂಲಸ್ಥಾನ ಸಪ್ತಮಾತೃಕಾರಾಧನೆಯೂ ಗಣಪತಿಯವಾಗಿದೆ. ಶೈವ ಧರ್ಮವು ಪ್ರಬಲವಾಗಿತ್ತು. ಅಂತೆಯೇ ವೈಷ್ಣವ ಪಂಥವೂ ಜನಾದರಣೀಯವಾಗಿತ್ತು. ಗಣಪತಿ ಮತ್ತು ಶಕ್ತಿ ಪೂಜೆಯ ಹಿಂದುಳಿದಿರಲಿಲ್ಲ. ನಾಥಪಂಥವೂ ಸಾಕಷ್ಟು ಜನಾದರಣೀಯವಾಗಿತ್ತು. ಕ್ರಿ.ಶ. 1425ರ ಒಂದು ಶಾಸನವು 'ಹಂಗುಳಾದೇವಿ' ದೇವಸ್ಥಾನದ ಉಲ್ಲೇಖಮಾಡುತ್ತದೆ. ಇದು ನಾಥಪಂಥದ ಪ್ರಸಿದ್ಧ ಗೇಗುಲವಾಗಿತ್ತು. ಕ್ರಿ.ಶ. 1399ರಲ್ಲೇ ಸಮಸ್ತ ಬಾರಕೂರಿಗೆ ನಾರಾಯಣ ದೇವಾಲಯವು ಪ್ರಮುಖ ದೇವ ಮಂದಿರವಾಗಿದ್ದುದನ್ನು ಕಂಡಾಗ ಕ್ರಿ.ಶ. 15ನೇ ಶತಕದ ಪ್ರಾರಂಭದಲ್ಲಿ ವೈಷ್ಣವ ಪಂಥವು ಸಾಕಷ್ಟು ಜನಾದರಣೀಯವಾಗಿತ್ತೆಂದು ಹೇಳಲಡ್ಡಿಯಿಲ. (ಹತ್ತರ ನಾರಾಯಣನೆಂದರೆ ಹತ್ತು ಕೇರಿಗಳಿಗೂ ಅಧಿಪತಿಯಾದ ನಾರಾಯಣ ಎಂದರ್ಥವಾಗುತ್ತದೆ.) ಈ ದೇಗುಲದಲ್ಲಿ ಈಗ ಮೂರ್ತಿ ಇಲ್ಲ. ಹೀಗೆ ಎಲ್ಲಾ ಪಂಥಗಳ ಸಮನ್ವಯ ಇಲ್ಲಿ ಆಗಿತ್ತೆಂದರೆ, ಅತಿಶಯೋಕ್ತಿಯಾಗಲಾರದು.

ಜೈನ ಧರ್ಮವು ಎಂದಿನಿಂದ ಇಲ್ಲಿ ಪ್ರಾರಂಭವಾಯಿತೆಂದು ನಿರ್ದಿಷ್ಟವಾಗಿ ಹೇಳುವುದು ದುಸ್ತರವಾದರೂ ದೊರಕಿದ ಅವಶೇಷಗಳನ್ನವಲೋಕಿಸಿ ನಿರ್ಧರಿಸುವುದಾದರೆ ಕ್ರಿ. ಶ. 12ನೇ ಶತಕಕ್ಕೆ ಅದು ಇಲ್ಲಿ ಬೇರೂರಿತೆನ್ನಬಹುದು. ಬಾರಕೂರಿನಲ್ಲಿ ಹಿರಿಯ ಮತ್ತು ಕಿರಿಯ ಬಸ್ತಿಗಳಿದ್ದುವೆನ್ನಬಹುದು. ಹಿರಿಯ ಬಸ್ತಿಯು ಚೌಳಿಕೇರಿಯಲ್ಲೂ (ಈಗ ಪೂರ್ತಿ ಜೀರ್ಣಾವಸ್ಥೆಯಲ್ಲಿದೆ. ಪ್ರಾಕ್ತನ ವಿಭಾಗದ ನೋಟೀಸು ಬೋರ್ಡು ನಶಿಸಿ ಹೋಗುತ್ತಿರುವ ಅವಶೇಷವನ್ನವಲೋಕಿಸುತ್ತದೆ). ಕಿರಿಯ ಬಸ್ತಿಯು ಮೂಡುಕೇರಿಯಲ್ಲೂ ಇದ್ದುವು. ನಮಗೆ ದೊರಕಿದ ಭಿನ್ನವಾದ ಒಂದು ತೀರ್ಥಂಕರ ಮತ್ತು ಒಂದು ಪದ್ಮಾವತೀ ಬಿಂಬಗಳಿಂದ ಇಲ್ಲಿ ಖಂಡಿತವಾಗಿಯೂ ಜೈನ ಪಂಥವು ಕ್ರಿ. ಶ. 12ನೇ ಶತಮಾನದಲ್ಲಿತ್ತೆನ್ನಬಹುದು. ಮಹಿಷಾಸುರ ದೇವಾಲಯದ ರೇವಂತನೂ ಒಂದು ಸಾಕ್ಷಿ. ಪ್ರಯತ್ನಪಟ್ಟರೆ ಬಾರಕೂರನ್ನು ಒಂದು ಉತ್ತಮ ಪ್ರವಾಸೀ ಕೇಂದ್ರವಾಗಿ ಮಾಡಬಹುದು.

●●

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಇಕ್ಕುಳಲ್ಲಿ ಸಿಲುಕಿದ ಇಲಿ-ಭಾರತೀಯ

(ಹನ್ನೆರಡನೇ ಪುಟದಿಂದ)

'ಹೆಂಡತಿ ಬರುವ ಮೊದಲು.' ಆ ಮೊದಲು ಅವರಿಗೆ ಬುದ್ಧಿ ಬೆಳೆದಿರಲಿಲ್ಲ. ಇಲ್ಲೆಲ್ಲ ಆಡಕವಾದುದು ಮೂಲ ಹಕ್ಕು. ಅದರ ನಂತರ ಅಧಿಕಾರ, ಅಂತಸ್ತು, ಯಜಮಾನಿಕೆ, ಜ್ಯೇಷ್ಠತ್ವ, ಶ್ರೇಷ್ಠತ್ವ—ಮುಂತಾದವುಗಳು. ಇತ್ತೀಚೆ ಕೇಳುತ್ತಿರುವ 'ಮೂಲಭೂತ ಹಕ್ಕಿನ ರದ್ಧತಿ'ಯೆಂಬ ಘೋಷಣೆಯಲ್ಲಿ ಔಚಿತ್ಯವಿದೆ. ಇದನ್ನು ಕೂಲಂಕಷವಾಗಿ ತರ್ಕಿಸಿದಾಗ ಇಂತಹವನಿಗೆ ಇಂತಹವನು ಮಗನೆಂಬ ದಾಖಲೆ ಕೇವಲ ಜನನ ರಿಜಿಸ್ಟ್ರಿಯಲ್ಲಿರುತ್ತದೆ. ಆಗ ಅಣ್ಣ ತಮ್ಮಂದಿರ ಮಾತೇನು ಬಂತು? ದಾಯಾದಿ ಮತ್ಸರಕ್ಕೆಲ್ಲಿ ಎಡೆಯುಂಟು? ಆಗ ಐವತ್ತೈದು ಕೋಟಿಯೂ ಅಣ್ಣ ತಮ್ಮಂದಿರೆ ಆಗುವರು.

ನಮ್ಮ ಜನ ಆಸ್ತಿಕ ಮನೋಧರ್ಮದವರು. ನಿತ್ಯಜೀವನದಲ್ಲಿ ಸದಾಚಾರಿಗಳಾಗಿ ಬಾಳುವವರ ಸಂಖ್ಯೆ ಅತ್ಯಲ್ಪ. ಋಜು ಜೀವನಕ್ಕೆ ವಂಚಿತರಾಗಿ ಗಳಿಸಿದುದರಲ್ಲಿ ನಾಲ್ಕು ಕಾಸನ್ನು ದೇವರ ಡಬ್ಬಿಗೆಸೆಯದಿದ್ದಲ್ಲಿ ಭೀತಿ; ಪಾಪ ಪ್ರಜ್ಞೆ. ದೇವರಿಗೆ ಬೆಳ್ಳಿ ಬಂಗಾರ ಒಪ್ಪಿಸಿದ ಸೂಳೆಯರೆಷ್ಟಿಲ್ಲ? ಗಳಿಕೆಯಲ್ಲಿ ಚಾಂಡಾಲರಾಗಿ, ಹಲವರ ಅನ್ನದ ಕಲ್ಲಾಗಿ—ಸಹಸ್ರಕುಂಭಾಭಿಷೇಕ, ಬ್ರಹ್ಮೋತ್ಸವವನ್ನು ಮಾಡಿಸಿ ಚಿನ್ನದ ಕೋಲನ್ನು ಹೆಗಲಮೇಲಿರಿಸಿ ಸಂಭಾವಿತರಾಗಿ ದಿಗ್ವಿಜಯ ಮಾಡುವವರೆಷ್ಟು ಮಂದಿಯಿಲ್ಲ. ಇಂತಹ ಡಾಂಭಿಕ ಭಕ್ತರನ್ನು ಪೋಷಿಸುವ ಮಠ ದೇವಾಲಯಗಳಿಗಿಂತ ತಾತ್ವಿಕವಾಗಿ ಕಸಾಯಿಖಾನೆಗಳು ಪರಮ ಪವಿತ್ರ ಕ್ಷೇತ್ರಗಳು. ಇವರನ್ನು ಆಶೀರ್ವದಿಸುವ ಸ್ವಾಮಿ, ಪುರೋಹಿತರುಗಳಿಗಿಂತ ತಾತ್ವಿಕವಾಗಿ ಚಾಂಡಾಲನು ಶ್ರೇಷ್ಠನೆನ್ನಿಸಬಲ್ಲ. ಇವುಗಳೆಲ್ಲ ಪಾಪದ್ರವ್ಯದ, ಕಾಳಸಂತೆಯ ಹಣದ ವಿನಿಮಯ ಕೇಂದ್ರಗಳು. ಭಾರತದ ಧರ್ಮ ಮನ್ನಣೆಯನ್ನು ವ್ಯಾಪಾರಿ ತಂತ್ರದಲ್ಲಿ ಬಳಸಿ ಅಜ್ಞಾನವನ್ನು ಮತ್ತೂ ಬೆಳೆಸುವ ಕಾರ್ಖಾನೆಗಳು. ಪುರುಷಾರ್ಥಗಳಲ್ಲಿ ಅರ್ಥವೊಂದೇ ನಮ್ಮ ವ್ಯವಹಾರ ಧರ್ಮ. ಕಾಮದ ಇತಿಮಿತಿಯನ್ನು ಅರಿತು ರಸಿಕರಾಗಿ ಅನುಭವಿಸುವವರೆಷ್ಟು ಮಂದಿ? ಏನೋ ಕೆಲವು ಪುಸ್ತಕ ಓದಿದ ಗುಂಗಿನಿಂದಲೋ, ಬಿಡು ಸಮಯದ ಸದುಪಯೋಗವೋ ನಾವು ಪ್ರಕಾಂಡ ಪಂಡಿತರೆಂದು ಅನ್ಯರು ಅರಿತುಕೊಳ್ಳಲೆಂದೋ—ಧರ್ಮ, ಮೋಕ್ಷದ ವಿಚಾರವೆತ್ತಿ ಬಹಳ ಆಡುತ್ತೇವೆ. ಹಣಕ್ಕಿಂತ ಮುಂದೆ ನಮ್ಮ ದೃಷ್ಟಿ ಹರಿದಿಲ್ಲ. ಕ್ಷಣದಿಂದ ಕ್ಷಣಕ್ಕೆ ಹಣದತ್ತ ದೃಷ್ಟಿ ಹೆಚ್ಚಿಗೆ ಹರಿಯುತ್ತಿದೆ. ಸಾಲದ ಬಡ್ಡಿಯೂ, ಕ್ಯಾನ್ಸರ್ ಗಡ್ಡೆಯೂ ಬೆಳೆದಂತೆ.

ನಾವೆಲ್ಲರೂ ಮಿತವ್ಯಯದ ಕುರಿತಾಗಿ ಆಡುತ್ತಿದ್ದೇವೆ. ಸಾಮಾಜಿಕವಾಗಿ ನಮ್ಮ ಪರಿಗಣನೆಗೆ ಒಳಪಟ್ಟ ಕೆಳವೆಯ ಜನತೆಗೆ ಈ ಬೋಧನೆಯನ್ನು ಮಾಡುತ್ತಿದ್ದೇವೆ. ನಮಗೆ 'ಟೆರಿಲಿನ್' 'ಮಸಾಲೆ ದೋಸೆ'ಯ ಚಟ ಹತ್ತಿದ್ದರೆ ಆತನಿಗೆ ಕಳ್ಳುಸಾರಾಯಿಯ ಚಟ. ಸಾವಿರಾರು ರೂಪಾಯಿ ಸಂಬಳ ತಿನ್ನುವವರಿಗೂ, ಲಂಚದ ಆಸೆ ಹಿಂಗಿಲ್ಲ; ದಿನಕ್ಕೆ ಸಾವಿರಗಟ್ಟಲೆ ಲಾಭಗಿಟ್ಟಿಸುವವನಿಗೂ ಸಂತೃಪ್ತಿ ಮೂಡಿಲ್ಲ. ಇನ್ನು ನಮ್ಮ ಉದ್ಯಮಗಳ ಬುಡವೆಲ್ಲ ತೂತು. ಸವೆದ ಬುಡಕ್ಕೆ ಹೊಸ ತಗಡು ಬೆಸೆದವರೇ ಇಲ್ಲ. ಎಲ್ಲವನಿಗೂ ಅವನ ಸಂಪಾದನೆಯ ಮಟ್ಟದಲ್ಲಿ ದಿನಗಳೆಯ ಬೇಕೆಂದಿಲ್ಲ. ಈ ತತ್ವವು ಅನಾಗರಿಕ ಸ್ಥಿತಿ; ಅಸಂಸ್ಕೃತಿ. ಅವನೀರಿಸಿಕೊಂಡ ಮಟ್ಟಕ್ಕೆ ಸಂಪಾದನೆಯಾಗಬೇಕು. ಈ ಮಟ್ಟಕ್ಕೆ ಸರಿಯಾಗಿ ಯಾರನ್ನೆಲ್ಲಿ ಕೆತ್ತಿ ತನ್ನನ್ನು ಮೆತ್ತಿಕೊಂಡರೂ ಪಾಪವಿಲ್ಲ. ಇದು ಮೋಸವೂ ಅಲ್ಲ. ಬದುಕಬೇಕೆಂದಿದ್ದವನು ಮೋಸ ಹೋಗಬಾರದು. ಮೋಸಗಾರನದು ಚಾಕಚಕ್ಯತೆ; ಬುದ್ಧಿಮತ್ತತೆ. ಮೋಸಹೋದವನದ್ದು ಅಜಾಗ್ರತೆ; ಹುಂಬತನ. ನಾಚಿಕೆಗೇಡಿ ಜನ್ಮ. ಪಂಚ ತಂತ್ರದ ಎಲ್ಲಾ ಕತೆಗಳೂ ಸಮಾಜ ಜೀವನದಲ್ಲಿ ಪ್ರಯೋಗವಾಗುತ್ತಿವೆ. ವಿಶ್ವಾಸ ದೂರ ಸರಿಯುತ್ತಿದೆ.

ನಮ್ಮ ಆಶ್ರಯಕ್ಕೆ ಒಳಪಟ್ಟವರು ನಮ್ಮ ಅನುಭವದಂತೆ ದಿನಗಳೆಯಬೇಕೆಂಬ ಶಾಸನವನ್ನು ಮಾಡುತ್ತಿದ್ದೇವೆ. ಅನುಭವಿಸುವವನ ಮನಸ್ಸೇನು? ಇಚ್ಛೆಯೇನು? ನಮ್ಮ ಗ್ರಹಿಕೆಗೆ ಒಳಪಡುವುದಿಲ್ಲ. ಆತನಿಗೂ ಯೋಚಿಸುವ ಅರ್ಹತೆ, ಸ್ವಾತಂತ್ರ್ಯವಿದೆಯೆಂಬ ಮನ್ನಣೆಯನ್ನು ನೀಡುವುದಕ್ಕೆ ಹಿಂಜರಿಯುತ್ತೇವೆ. ಮುಕ್ತ ಸ್ನೇಹದಿಂದ ಕಾಲಕಳೆಯುವುದಕ್ಕೆ ನಾವು ಬೆಂಬಲಿಗರಲ್ಲ. ಎಲ್ಲರೂ ಬೃಹಸ್ಪತಿಗಳಾಗಬೇಕೆಂಬ ಸಂಕಲ್ಪ ಒಳ್ಳೆಯದೇ. ತಾನೇ ಬೃಹಸ್ಪತಿಯೆಂಬ ಕುತ್ಸಿತ ಎಲ್ಲರಲ್ಲೂ ಯಾಕೆ ತಾನೇ ತಲೆಹಾಕಬೇಕಿತ್ತು? ಇದನ್ನು ಆತ್ಮೋತ್ಕರ್ಷವೆನ್ನಲೇ? ಆತ್ಮಾಭಿಮಾನವೆನ್ನಲೇ? ಯಾವುದೋ ಗಂಡಾಂತರದ ಹಾದಿ ಎನ್ನಲೇ? ಸಾಮಾಜಿಕವಾದ ನೀತಿಯನ್ನು ಉಪದೇಶಿಸುವುದಕ್ಕೆ ಯಾರೂ ಹಿಂಜರಿಯುತ್ತಿಲ್ಲ. ಅಹಿತ ಘಟನೆ ನಡೆದಾಗ ಅದನ್ನು ಖಂಡಿಸುವ ನೈತಿಕಶಕ್ತಿ ನಮ್ಮಲ್ಲಿ ಅಡಗಿಯೇ ಹೋಗಿದೆ. ಹೊಳೆಯಲ್ಲೊಂದು ಹೆಣ ತೇಲಿದರೆ ಎಲ್ಲರೂ ಅದನ್ನು ಮುಂದೆ ಮುಂದೆ ನೂಕಿ ಬಿಡುವವರೇ. ಒಬ್ಬಾತ ಹೆಣ್ಮಗಳನ್ನು ಒಬ್ಬಾತ ರೋಮಿಯೋ ಕೀಟಲೆಮಾಡಿದರೆ ಗೇಲಿ ಮಾಡುವವರ ತಂಡವೇ ಹೆಚ್ಚು. ಅನೀತಿಯ ಪ್ರತಿಭಟನಾ ಶಕ್ತಿಯನ್ನು ಕಳಕೊಂಡಷ್ಟು ಮತ್ತೇನನ್ನೂ ನಾವು ಕಳಕೊಂಡಿಲ್ಲ. ವಿಷಯದ ಮೇಲೆ ಭಿನ್ನಾಭಿಪ್ರಾಯ ಪ್ರವೇಶವಿರುವುದರ ಬದಲು, ವ್ಯಕ್ತಿ ವ್ಯಕ್ತಿಯ ಮೇಲೆ ದ್ವೇಷ ಬೆಳೆಯುವುದಕ್ಕೆ ಸಹಕಾರಿಯಾದ ಮನೋ ಭೂಮಿಕೆಗಳೂ, ವಿದ್ಯಮಾನಗಳೂ ಉಂಟಾಗುತ್ತವೆ. ಇಲ್ಲಿರುವ ಮೂಲಹೇತು: 'ನಾನೆಲ್ಲಿ ನಿನ್ನೊರಕ್ಕೆ ಸಿಲುಕುವೆನೋ ಎಂಬ ಬಲುದೊಡ್ಡ ಭೀತಿ. ಒಬ್ಬನ ಮೇಲೆ ಒಬ್ಬ ಭಯ ತಾಳುವ ಹೊತ್ತು ಕಾದಿದೆ. ಎದುರಾಗಿ ಒಬ್ಬರನ್ನು ಒಬ್ಬ ಪ್ರತಿಭಟಿಸದಿದ್ದರೂ, ಹಿಂದಿನಿಂದ ಒಬ್ಬನ ಮೇಲೆ ಮತ್ತೊಬ್ಬನ ಸವಾರಿ ಇದ್ದೇ ಇದೆ. ಎತ್ತಿಕಟ್ಟುವುದು ಇವುಗಳೆಲ್ಲ ಬದುಕಿಗೆ ನಮ್ಮಿಂದ ನಾವೇ ಸೃಷ್ಟಿಸಿಕೊಂಡ ಸಂಕೋಲೆಗಳು. ಮಾನವ ಕರ್ತವ್ಯದಿಂದ ವಿಮುಖರಾಗಿ ಪ್ರತಿಯೊಂದಕ್ಕೂ ಸರಕಾರವನ್ನು ಎದುರು ನೋಡುವ, ಆಡಳಿತಯಂತ್ರಕ್ಕೆ ಜೋತು ಬೀಳುವ ಪರತಂತ್ರ ಜೀವನ ಮಾರ್ಗಕ್ಕೆ ಮುಂದಡಿಯಿಡುತ್ತಿದ್ದೇವೆ.

ಮನಸ್ಸಿನಲ್ಲಿ ಸದಾಕಾಲ ಉಚ್ಚ ಆದರ್ಶ ಧ್ಯೇಯ ವಾಕ್ಯಗಳನ್ನು ಸ್ಮರಿಸುತ್ತಿದ್ದರೂ ಹತ್ತು ಪೈಸೆ ಲಾಭಕ್ಕೆ ಎಂತಹ ಮಿತ್ರನನ್ನೂ ಹೊಂಡಕ್ಕೆ ಇಳಿಸುವುದಕ್ಕೆ ಹೇಸದ ಸ್ವಭಾವ ಬೆಳೆಯುತ್ತಿದೆ. ಲಾಭ ದೃಷ್ಟಿಯಲ್ಲದೇ ವ್ಯವಹಾರವಿಲ್ಲ. ಸ್ನೇಹದ ಗುರಿಯೂ ಲಾಭದ ಆಶೆಯಿಂದಲೇ ಪ್ರೇರಿತವಾಗಿರುತ್ತದೆ. ನಮ್ಮಲ್ಲಿ ಹರಡಿರುವ ದೇಶಭಕ್ತಿಗೂ ಪ್ರೇರಣೆ ಲಾಭವೇ. ಎಲ್ಲವೂ ಲಾಭಕ್ಕಾಗಿ. ಭಾರತೀಯನು ಎಲ್ಲಿ ನಷ್ಟವನ್ನು ಕಂಡಿದ್ದಾನೆ? ನಷ್ಟವನ್ನೆಲ್ಲಿ ಉಂಡಿದ್ದಾನೆ? ಏಕಮುಖವಾದ ಧೋರಣೆ, ನಿಲುವು, ಕರ್ತವ್ಯಪ್ರಜ್ಞೆ, ಶೀಲ ಸ್ವಭಾವ, ಗುಣ ನಡತೆಯನ್ನು ಬೆಳಸಿಕೊಳ್ಳದ ನಾವು ಎಲ್ಲದರಲ್ಲೂ ಲಾಭವನ್ನು ಹೊಂದಿದರೂ, 'ಜೀವನ' ಎಂಬ ಅಮೂಲ್ಯ ವಸ್ತುವಿನಲ್ಲಿ ನಾವು ನಷ್ಟಹೊಂದಿದ್ದೇವೆ. ನಮ್ಮೆಲ್ಲರನ್ನೂ ಕಾಡುತ್ತಿರುವುದು 'ದ್ವಂದ್ವ'ಭಾವ. ಹಾಗೋ! ಹೀಗೋ! ಇದು ಕೇವಲ ಜನ ಸಾಮಾನ್ಯರನ್ನು ಕಾಡುತ್ತಿರುವ ಪ್ರಶ್ನೆಯಲ್ಲ; ಆಟಲತೆಯಲ್ಲಿ, ನಮ್ಮನ್ನಾಳುತ್ತಿರುವ ವರಿಷ್ಠರಲ್ಲಿ, ನಮಗೆ ನೀತಿ ನಿರ್ದೇಶನ ಮಾಡುತ್ತಿರುವ ಗುರುಹಿರಿಯರಲ್ಲಿ, ಸನ್ಯಾಸಿ ಸ್ವಾಮಿಗಳಲ್ಲಿ, ಸಾಹಿತಿ ದಿಗ್ಗಜಗಳಲ್ಲಿ, ಪತ್ರಿಕಾ ರಂಗದ ಅಧ್ವರ್ಯುಗಳಲ್ಲಿ ಕಂಡು ಬರುತ್ತಿರುವುದು ಈ ದ್ವಂದ್ವ ಬುದ್ಧಿ. ದ್ವಂದ್ವ ಬುದ್ಧಿಯು ಸಂಸ್ಕಾರ ಜನ್ಯವಾದುದಲ್ಲ. ಅದೊಂದು ನಿಶ್ಚಲ ಮನಸ್ಥಿತಿಯಲ್ಲಿ ಅಪಕ್ವವಾದುದು. ಸ್ಥಿರತೆಯನ್ನು ಕಳಕೊಂಡುದು. ನಮ್ಮ ಜನಜೀವನದಲ್ಲಿ ಸಾಮುದಾಯಿಕ ಬಾಳ್ವೆಯಲ್ಲಿ ಬೇರುವಿಡಿದು ಬೆಳೆದಿರುವ ದ್ವಂದ್ವ ಬುದ್ಧಿ ನಾಶವಾಗುವ ತನಕ ನಾವು ಭಾರತೀಯರು ಇಕ್ಕುಳದಲ್ಲಿ ಸಿಲುಕಿದ ಇಲಿಗಳೆನ್ನದೇ ವಿಧಿಯಿಲ್ಲ.

●●

"ಇಲ್ಲಿ ಮೆನೇಜರ್ ಕೆಲಸ ಮಾತ್ರಾನೇ ಖಾಲಿ ಇದೆ...."
"ಆ ಮೇಲೇನಾರೋ ಕೆಲಸಾನೇ ಕೊಟ್ಬಿದೀ, ಎರಡೇ ದಿನದಲ್ಲಿ ಕಲ್ತುಬಿಡ್ತೇನೆ ಸ್ವಾಮಿ"

Gram: VISHWA   Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

ನಮ್ಮ ರಾಷ್ಟ್ರೀಯ ಪರಂಪರೆ

(ಪನ್ನೊಂದನೇ ಪುಟದಿಂದ)

ಯ-ಥಾಗೋರಾಸನು ತತ್ವಶಾಸ್ತ್ರ ಕಲಿಯಲಿಕ್ಕೆಂದೇ ಭಾರತಕ್ಕೆ ಬಂದು ಪುನರ್ಜನ್ಮದ ಸಿದ್ಧಾಂತವನ್ನು ತಿಳಿದುಕೊಂಡನು. ಈತನ ಹಾಗೆಯೇ ಥೇಲ್ಸ್ ಡಿಮೊಕ್ರಿಟಸ್ ಮುಂತಾದವರು ಇಲ್ಲಿಗೆ ಬಂದಿದ್ದರೆಂದೂ, ಇಲ್ಲಿಂದ ತಮ್ಮ ರಾಷ್ಟ್ರಕ್ಕೆ ಅವರು ಹೋದ ಮೇಲೆಯೇ ಮಹಾಕೀರ್ತಿಶಾಲಿಗಳಾದರೆಂದೂ ತಿಳಿಯುತ್ತದೆ. ಅನೇಕ ಶತಮಾನಗಳವರೆಗೆ ಗ್ರೀಕರಂತೂ ಭಾರತವೆಂದರೆ ಮೋಕ್ಷಭೂಮಿಯೆಂದು ತಿಳಿದುದರಿಂದ ನಿಜವಾದ ಜ್ಞಾನ ಸಂಪಾದನೆಗಾಗಿ ಭಾರತಕ್ಕೆ ಧಾವಿಸುತ್ತಿದ್ದರು. ಡಿಮೆಟ್ರಿಯಸ್ ಎಂಬವನು ಆರ್ಯರ ತತ್ವ ಶಾಸ್ತ್ರದ ಹುಚ್ಚು ಹಿಡಿದವನಾಗಿ ತನ್ನ ಮನೆಮಾರು ಆಸ್ತಿಯನ್ನೆಲ್ಲಾ ಒಬ್ಬ ಸ್ನೇಹಿತನಿಗೊಪ್ಪಿಸಿ, ಭಾರತದ ಬ್ರಾಹ್ಮಣರ ಸಹವಾಸದಲ್ಲಿ ಉಳಿದ ಕಾಲವನ್ನು ಕಳೆಯಬೇಕೆಂದು ಎರಡನೆಯ ಶತಮಾನದ ಮಧ್ಯದಲ್ಲಿ ಇಲ್ಲಿಗೆ ಬಂದನೆಂದೂ ಹೇಳುತ್ತಾರೆ.

ದೇಶಾಭಿಮಾನ, ಜಾತ್ಯಭಿಮಾನ, ಕುಲಾಭಿಮಾನಗಳು—ಇವೆಲ್ಲಾ ಭಾರತೀಯ ಜೀವನದ ತಿರುಳುಗಳು. ಇವುಗಳಲ್ಲಿ ಸ್ವದೇಶಾಭಿಮಾನವು ಸುಧಾರಿಸಿದ ಜನಾಂಗಗಳಲ್ಲಿನ ಜನರ ಹುಟ್ಟು ಗುಣವಾಗಿರುತ್ತದೆ. ಋಗ್ವೇದ ಕಾಲದಿಂದಲೂ 'ಜನ್ಮಭೂಮಿಯು ಸ್ವರ್ಗಕ್ಕಿಂತ ಮೇಲೆ ಎಂಬುದು (ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ) ನಮ್ಮ ರಾಷ್ಟ್ರೀಯರ ಮಂತ್ರದ ಪಲ್ಲವಿಯಾಗಿದೆ. ಇದನ್ನು ಆರ್ಯರು ತಮ್ಮ ಸಹಸ್ರಮಾನ ವರ್ಷಗಳ ಇತಿಹಾಸದಲ್ಲಿ ಅನೇಕ ಸಾರಿ ಆಚರಣೆಯಲ್ಲಿ ತೋರಿಸಿದ್ದಾರೆ. ಭರತ ಖಂಡದಲ್ಲಿ ಮನುಷ್ಯನಾಗಿ ಹುಟ್ಟುವುದು ಮತ್ತು ಸಾಯುವುದು—ಅದೆಷ್ಟು ಜನ್ಮದ ಪುಣ್ಯವೋ ಎಂದು ಅನೇಕರು ಹೇಳಿದ್ದಾರೆ.

ಶ್ಲೋ|| ಗಾಯಂತಿ ದೇವಾಃ ಕಿಲ
ಗೀತ ಕಾನಿ
ಧನ್ಯಾಸ್ತು ತೇ ಭಾರತ ಭೂಮಿ ಭಾಗೇ||
(ಶ್ರೀಮದ್ಭಾಗವತ)

ಯಾವುದೊಂದು ಜನಾಂಗದೊಳಗಿನ ಜನರ ಶೀಲ ಸ್ವಭಾವಗಳೇ ಆಯಾ ಜನಾಂಗದವರ ನಿಜವಾದ ಯೋಗ್ಯತೆಯನ್ನು ತಿಳಿಯುವ ಕನ್ನಡಿಗಳಾಗಿರುತ್ತವೆ. ಈ ದೃಷ್ಟಿಯಿಂದ ನೋಡಿದರೆ ಪ್ರಾಚೀನ ಆರ್ಯರನ್ನು ಸರಿಗಟ್ಟುವವರು ಪ್ರಾಚೀನ ಅರ್ವಾಚೀನ ಕಾಲದಲ್ಲಿ ನಮಗಾರೂ ಕಾಣಿಸುವುದಿಲ್ಲ. ಪ್ರಾಚೀನ ಆರ್ಯರ ಸಾಧುವೃತ್ತಿ ಸಾಧು ಜೀವನ, ಪ್ರಾಮಾಣಿಕತನ, ಸತ್ಯ ಸಂಧತೆ, ಧೈರ್ಯ, ಅಚ್ಚುಕಟ್ಟುತನ, ಶೌರ್ಯ ಮುಂತಾದುವುಗಳನ್ನು ಪ್ರತಿಯೊಬ್ಬರೂ ಮಾತು ಮಾತಿಗೆ ಮಾದರಿ ಎಂದು ಹೇಳುವಂತಿತ್ತು. ಸ್ತ್ರೀಯರಿಗಂತೂ ರಾಮಾಯಣದ ಶ್ರೀ ಸೀತಾದೇವಿಯೇ ಆದರ್ಶಳು.

ವೇದಗಳ ಕಾಲದಿಂದಲೇ ಪ್ರಪಂಚದ ರಾಷ್ಟ್ರಗಳ ಮಧ್ಯೆ ತನ್ನದೇ ಆದ ಪ್ರತಿಭೆ, ವೈಶಿಷ್ಟ್ಯಗಳಿಂದ ಬೆಳಗಿದ ಭಾರತವು ಇತ್ತೀಚಿನ ಇತಿಹಾಸಕಾಲದಲ್ಲಿ ಅನೇಕ ವಿಧವಾದ ರಾಜಕೀಯ, ಸಾಂಸ್ಕೃತಿಕ ಹಾಗೂ ಸಾಮಾಜಿಕವಾದ ಪರಕೀಯ ಧಾಳಿ ಆಘಾತಗಳಿಗೆ ಸಿಲುಕಿತು. ಜಗತ್ತಿನಲ್ಲಿ ಪ್ರಾಚೀನವಾದ ರಾಷ್ಟ್ರಗಳೆಂದೂ ಜಗತ್ಪ್ರಸಿದ್ಧವಾದ ಗ್ರೀಕ್, ಬ್ಯಾಬಿಲೋನಿಯಾ; ಈಜಿಪ್ಟ್, ರೋಮ್, ಅಸೀರಿಯ, ಸುಮೇರಿಯಾ ಮುಂತಾದ ದೇಶಗಳ ಭವ್ಯ ಸಂಸ್ಕೃತಿಗಳೆಲ್ಲಾ ಇಂದು ನಾಮಾವಶೇಷವಾಗಿ ಹೋಗಿರುವುದು ಐತಿಹಾಸಿಕವಾದ ಸತ್ಯವಾಗಿರುತ್ತದೆ. ಆ ರಾಷ್ಟ್ರಗಳಿಗಿಂತ ಹಿರಿದಾಗಿದ್ದು ಸಮಕಾಲೀನವಾದ ಭಾರತ ಮಾತ್ರ ಇಂದಿಗೂ ಕೂಡಾ ತನ್ನತನವನ್ನು ಕಳೆದುಕೊಳ್ಳದೆ ಉಳಿಸಿ ಕೊಂಡಿರುತ್ತದೆ. ಅನೇಕ ರಾಜರ ಆಳ್ವಿಕೆ, ಸಾಮ್ರಾಜ್ಯಗಳ ಉತ್ಥಾನ ಮತ್ತು ಪತನ, ಪರದೇಶಗಳ ಮತೀಯವಾದ ರಾಜಕೀಯ ಆಘಾತ—ಇವುಗಳನ್ನೆಲ್ಲಾ ಇದಿರಿಸಿ ಸಹಿಸಿಕೊಂಡು ಇನ್ನೂ ಈ ಹಿಂದೂ ಧರ್ಮವು ನಿತ್ಯ ನೂತನವಾಗಿ ಉಳಿದಿರುವುದು. ಭಾರತೀಯ ಆಧ್ಯಾತ್ಮಿಕ ಶಕ್ತಿ ಮತ್ತು ಸಾಂಸ್ಕೃತಿಕ ಶಕ್ತಿಗಳ ಪರಿಣಾಮವಾಗಿದ್ದು ಅದೇ ಭಾರತದ ಗಣ್ಯತೆ ಮತ್ತು ವೈಶಿಷ್ಟ್ಯವಾಗಿರುತ್ತದೆ.

ಸ್ವಾಮಿ ವಿವೇಕಾನಂದರು ಜಗತ್ತಿನಲ್ಲೆಲ್ಲಾ ಹಿಂದೂ ಧರ್ಮದ ದಿವ್ಯಸಂದೇಶಗಳನ್ನು ಪಸರಿಸಿ ಭಾರತಕ್ಕೆ ಮರಳಿ ಬಂದಾಗ ಹೇಳಿದ ಮಾತುಗಳು ಈ ಸಂದರ್ಭದಲ್ಲಿ ಚಿರಸ್ಮರಣೀಯವಾದವುಗಳು. "ಪ್ರಪಂಚದಲ್ಲಿ ಯಾವುದಾದರೂ ಪುಣ್ಯ ಭೂಮಿಯೆಂದು ಕರೆಸಿಕೊಳ್ಳಲು ಯೋಗ್ಯವಾಗಿದ್ದರೆ, ಜೀವಿಗಳು ತಮ್ಮ ಜೀವಿತದ ಕೊನೆಯ ಕರ್ಮವನ್ನು ಸವೆಸಲು ಬರಬೇಕಾದ ಸ್ಥಳವೊಂದಿದ್ದರೆ, ಭಗವಂತನ ಎಡೆಗೆ ಸಂಚರಿಸುತ್ತಿರುವ ಪ್ರತಿಯೊಂದು ಜೀವಿಯೂ ತನ್ನ ಕೊನೆಯ ಯಾತ್ರೆಯನ್ನು ಪೂರೈಸುವುದಕ್ಕೆ ಒಂದು ಕರ್ಮಭೂಮಿಗೆ ಬರಬೇಕಾದರೆ, ಯಾವುದಾದರೂ ದೇಶದಲ್ಲಿ ಮಾನವ ಕೋಟಿ ಮಾಧುರ್ಯತೆ, ಔದಾರ್ಯತೆ, ಪವಿತ್ರತೆ, ಶಾಂತಿ, ಎಲ್ಲಕ್ಕಿಂತ ಹೆಚ್ಚಾಗಿ ಧ್ಯಾನ ಮತ್ತು ಅಂತರ್ಮುಖ ಜೀವನದಲ್ಲಿ ತನ್ನ ಪರಾಕಾಷ್ಠತೆಯನ್ನು ಮುಟ್ಟಿದ್ದರೆ ಅದು ಈ ಭಾರತದ ದೇಶವಾಗಿರುತ್ತದೆ." (Complete Works of Swami Vivekananda, Vol. III)

ಸ್ವಾಮಿ ವಿವೇಕಾನಂದರ ಮಾತುಗಳಲ್ಲಿ ನಮ್ಮ ರಾಷ್ಟ್ರೀಯ ಪರಂಪರೆಗಳ ಸಂಪೂರ್ಣ ವ್ಯಾಖ್ಯಾನವಡಗಿರುತ್ತದೆ. ಇಲ್ಲಿ ಅಧ್ಯಾತ್ಮ ವಿಚಾರವು ಈ ಕಾಲಕ್ಕೆ ಪ್ರಾಯೋಗಿಕವಲ್ಲವೆಂದು ಇದನ್ನು ಕಡೆಗಣಿಸಿರುವ ಪಂಗಡವೂ ಇಲ್ಲದಿಲ್ಲ. ಕೆಲವರು ಅಧ್ಯಾತ್ಮಜೀವಿಗಳ ಸೋಗನ್ನು ತಳೆದ ಆಷಾಢಭೂತಿಗಳೂ ಅಲ್ಲಲ್ಲಿ ಅಸಂಖ್ಯರಾಗಿದ್ದಾರೆ. ಅವರು ಇಂದಿನ ಅಕ್ಕಿಗಳೆಡೆಯ ಕಲ್ಲುಗಳಂತಾಗಿದ್ದಾರೆ. ಕಲ್ಲುಗಳಿವೆಯೆಂದು ನಮಗೆ ಅಕ್ಕಿಯನ್ನು ಬಿಡಲು ಸಾಧ್ಯವುಂಟೇ?

ಭಾರತ ದೇಶವು ಧಾರ್ಮಿಕವಾದ ಪವಿತ್ರ ಭೂಮಿಯಾಗಿರುವುದರಿಂದ ಇಲ್ಲಿಯ ವಿಶಿಷ್ಟ ಆಗುಹೋಗುಗಳೂ, ಜೀವನದ ಸ್ಥಿತಿಗತಿಗಳೂ ಎಲ್ಲವೂ ಧರ್ಮದ ಆಧಾರದಲ್ಲಿಯೇ ನಡೆಯಬೇಕಾಗಿದೆ. ಈ ಕುರಿತಾಗಿ ಸ್ವಾಮಿ ವಿವೇಕಾನಂದರು ಹೇಳಿದ ಮಾತುಗಳು ನಮಗೆ ಎಂದಿಗೂ ಮಾರ್ಗದರ್ಶಕವಾಗಿಯೇ ಇರುತ್ತವೆ. "ತ್ಯಾಗ ಮತ್ತು ಸೇವೆಯೇ ಭಾರತದ ಆದರ್ಶ××× ಧರ್ಮವೊಂದೇ ಜೀವನ ಸತ್ತ್ವ. ಅದಿಲ್ಲದೆ ಬದಲಿಗೆ ಎಷ್ಟೇ ರಾಜಕೀಯವಿರಲಿ, ಸಾಮಾಜಿಕ ಸುಧಾರಣೆಗಳಿರಲಿ, ಕುಬೇರನ ಸಂಪತ್ತನ್ನೇ ಭಾರತದ ಪ್ರತಿಯೊಂದು ಮಗುವಿನ ತಲೆಯ ಮೇಲೆ ಸುರಿದರೂ ಭಾರತವು ನಾಶ ಹೊಂದುವುದು ಖಂಡಿತ." (Complete Works of Swami Vivekananda Vol. III)

ನಮ್ಮ ರಾಷ್ಟ್ರೀಯ ಪರಂಪರೆಗಳು ಸಾಗರದಂತೆ ವಿಶಾಲವಾಗಿದ್ದರೂ ಸಾಗರವನ್ನು ನೋಡಲು ಹೋದವರು ಒಂದು ಬಿಂದಿಗೆಯಲ್ಲಿ ಸಮುದ್ರದ ಪುಣ್ಯೋದಕವನ್ನು ತಂದು ಅದರಿಂದಲೇ ತೃಪ್ತಿಪಡುವರು. ನಾನು ಖಂಡುಗದಲ್ಲಿ ಅಳೆಯಬೇಕಾದ ವಿಚಾರಗಳನ್ನು ಬಳ್ಳದಿಂದ ಅಳೆದಿದ್ದೇನೆ. ಕೊನೆಯದಾಗಿ ಬೃಹದಾರಣ್ಯಕೋಪನಿಷತ್ತಿನ ಈ ಪ್ರಾರ್ಥನೆಯು ನಮ್ಮ ರಾಷ್ಟ್ರೀಯ ಪರಂಪರೆಗಳ ಪ್ರತಿಚಿತ್ರವಾಗಿದೆ.

ಓಂ ಅಸತೋ ಮಾ ಸದ್ಗಮಯ|
ತಮಸೋ ಮಾ ಜ್ಯೋತಿರ್ಗಮಯ|
ಮೃತ್ಯೋರ್ಮಾಽಮೃತಂ ಗಮಯ||
ಓಂ ಪೂರ್ಣಮದಃ ಪೂರ್ಣಮಿದಂ|
ಪೂರ್ಣಾತ್ ಪೂರ್ಣ ಮುದಚ್ಯತೇ|
ಪೂರ್ಣಸ್ಯ ಪೂರ್ಣ ಮಾದಾಯ
ಪೂರ್ಣ ಮೇವಾವ ಶಿಷ್ಯತೇ ||
ಓಂ ಶಾಂತಿಃ | ಶಾಂತಿಃ| ಶಾಂತಿಃ|

'ಅಸತ್ಯದಿಂದ ಸತ್ಯಕ್ಕೂ, ತಮಸ್ಸಿನಿಂದ ಜ್ಯೋತಿಗೂ, ಮೃತ್ಯುವಿನಿಂದ ಅಮೃತತ್ವಕ್ಕೂ ನನ್ನನ್ನು ಕರೆದುಕೊಂಡು ಹೋಗು' 'ಅದು (ಪರಬ್ರಹ್ಮವು) ಪೂರ್ಣವು. ಇದು (ವ್ಯಕ್ತವಾದ ಜಗತ್ತು) ಪೂರ್ಣವು. ಪೂರ್ಣದಿಂದ ಪೂರ್ಣವು ಹೊರಟುಬಂದಿದೆ. ಪೂರ್ಣದ ಪೂರ್ಣತ್ವವನ್ನು ತೆಗೆದ ಮೇಲೆ ಪೂರ್ಣತ್ವವೇ ಉಳಿಯುತ್ತದೆ.'

ನಮ್ಮ ರಾಷ್ಟ್ರೀಯ ಪರಂಪರೆಗಳು ಪುನಃ ಚೇತನವನ್ನು ಹೊಂದಿ ಭಾರತದಲ್ಲಿ ಬಾಳಿ ಬೆಳಗಲಿ!

ಭಾರತೀಯರ ಪರಂಪರೆಯ ಸಿಂಹಾವಲೋಕನವಾದ ಈ ಬರಹವು ಭಾರತೀಯರಲ್ಲಿ ಪ್ರಾಚೀನ, ಸನಾತನ ಶಕ್ತಿಗಳನ್ನೆಲ್ಲಾ ಮೂಡಿಸಲಿ!

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy
ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಜನಪ್ರಿಯ ಆಂಗ್ಲ ಸ್ವಯಂಬೋಧಿನಿ ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯು ಕನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ
ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಸಮೂಲ ಅನುವಾದ. 450 ಪುಟಗಳ ಸುಂದರ ಕೈಹೊತ್ತಗೆ ಬೆಲೆ: ರೂ. 2-00

ಮನೆ-ಮದ್ದು Home Remedies
ಡಾ| ವಿ. ಆರ್. ಕೊರಡ್ಕಲ್‌ರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ಸುಲಭ ವಿಧಾನಗಳಿವೆ. ಹೆರಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟ ಸಂಗ್ರಾಹ್ಯ ಪುಸ್ತಕ. ಬೆಲೆ: ರೂ. 2-00
ವಿ. ಸೂ. ವಿ. ಪಿ. ಮಾಡುವುದಿಲ್ಲ. ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಅಂಚೆ ವೆಚ್ಚ ಸೇರಿಸಿ ಮನಿಯಾರ್ಡರು ಮಾಡಿದರೆ ಬುಕ್ ಪೋಸ್ಟ್ ಮಾಡಲಾಗುವುದು.

— ಪ್ರತಿಗಳು ಸಿಗುವ ಸ್ಥಳ —
ನವಭಾರತ ಪುಸ್ತಕ ಭಂಡಾರ, ಬಾಲ್ಕುಕೋಟೆ, ಉಡುಪಿ.

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು—4

ಶ್ರೀ ಪ. ರಾಮಕೃಷ್ಣ ಶಾಸ್ತ್ರಿ

ರಾಮಾಯಣದ ವಿದೇಶ ಸಂಚಾರ

ರಾಮಾಯಣ ಭಾರತದ ಕತೆ ಮಾತ್ರವಲ್ಲ, ಅದು ವಿಶ್ವಕಥೆಯಾಗಿದೆ. ಅದು ದರಿಂದಲೇ ರಾಮಾಯಣವನ್ನು ಹೋಲುವ 'ರಾಮಕತೆ'ಗಳು ಜಗತ್ತಿನಾದ್ಯಂತ ವಿದ್ಯಮಾನವಿವೆ. ಶ್ರೀರಾಮನೂ ಅವನ ಅಮರ ಗಾಥೆಯೂ ವಿಶ್ವವಂದ್ಯವಾಗಿರುವಂತೆ ಆದಿಕವಿ ವಾಲ್ಮೀಕಿಯೂ ಪ್ರಾತಃ ಸ್ಮರಣೀಯನೇ.

'ರಾಮಂ ವಿದ್ಧಿ ಪರಂ ಬ್ರಹ್ಮ ಸಚ್ಚಿದಾನಂದಮದ್ವಯಂ| ಸರ್ವೋಪಾಧಿ ವಿನಿರ್ಮುಕ್ತಂ ಸತ್ತಾಮಾತ್ರಮಗೋಚರಂ|ಸೀತಾ ಸಾಕ್ಷಾಜಗದ್ಧೇತು ಚಿಚ್ಛಕ್ತಿರ್ಜಗದಾತ್ಮಿಕಾ' (ಅ. ರಾ)

ಶ್ರೀರಾಮನೇ ಪರಬ್ರಹ್ಮ. ಸೀತೆಯೇ ಮೂಲ.ಲಕ್ಷ್ಮಣನೇ ಆದಿಶೇಷನೆಂಬ ತತ್ವದಲ್ಲಿ ಆದಿಕವಿ ವಾಲ್ಮೀಕಿ ನಿರೂಪಿಸಿದ ರಾಮಾಯಣ ಪರಮ ಪವಿತ್ರವಾದುದು. ಗಹನವಾದ ವೇದಾಂತ ಅದರಲ್ಲಿ ಅಡಕವಾಗಿದ್ದು, ಕವಿ ಚಮತ್ಕೃತಿ, ನಿರೂಪಣಾ ಸಾಮರ್ಥ್ಯಗಳಿಂದಾಗಿ ಇದೊಂದು ಜೀವಂತ ಮೇರುಕೃತಿಯಾಗಿದೆಯೆಂದರೆ ಅತಿಶಯೋಕ್ತಿಯಲ್ಲ.

ಶ್ರೀ ರಾಮನ ಕಾಲ ನಿರ್ಣಯದಲ್ಲಿ ಯಾವ ಪಂಡಿತರೂ ಸಮರ್ಥರಾಗಿಲ್ಲ ಆತ ಮತ್ತು ವಾಲ್ಮೀಕಿಯರು ಕ್ರಿಸ್ತಪೂರ್ವ 1550ರಿಂದ 3000ದ ಒಳಗೆ ಆಗಿ ಹೋದರೆಂದು ಅನೇಕರ ವಾದ. ಹೀಗಾದರೂ ಅಲ್ಪಾವಧಿಯಲ್ಲೇ ರಾಮಾಯಣ ವಿಶ್ವದ ನಾಡು ನುಡಿಗಳ ಮೇಲೆ ಬೀರಿದ ಪ್ರಭಾವ ಅಚ್ಚಳಿಯದಂಥದ್ದು. ಭಾರತೀಯ ಸಂಸ್ಕೃತಿಯ ಪುನರುಜ್ಜೀವಿತದೊಂದಿಗೆ ನಮ್ಮ ನೆರೆ ನಾಡುಗಳಾದ ಈಜಿಪ್ಟ್, ಗ್ರೀಕ್, ಟಿಬೆಟ್, ಬೆಬಿಲೋನಿಯ, ಸುಮೇರ್, ಅಸ್ಸೀರಿಯ (ಹಿಟೈಟ್), ಮಲಯ, ಜಾವಾ, ಸಯಾಂ, ಸಿಂಹಳ, ಬರ್ಮಾ, ಚೀನೀ ತುರ್ಕಿಸ್ತಾನ, ಇಂಡೋಚೀನ, ಚೀನ, ಸುಮಾತ್ರ, ಕಂಬುಜ—ಇವೇ ಮೊದಲಾದ ಹದಿನೇಳು ಗಣನೀಯ ದೇಶಗಳಲ್ಲಿ ಕ್ರಿಸ್ತಾಬ್ದದ ತಾರುಣ್ಯದಲ್ಲೇ ಪ್ರಭಾವ ಬೀರುವುದರೊಂದಿಗೆ ಒಂದೊಂದು ವಿಧದಿಂದ ಬೆಳೆದು ಬಂದಿದೆ. ಆ ದೇಶದವರು ಅದನ್ನು ತಮ್ಮದೇ ಆಗಿ ಉಳಿಸಿಕೊಂಡಿರುವುದು ಭಾರತದ ಹಿರಿಮೆಯೊಂದಿಗೆ ವಾಲ್ಮೀಕಿಯ ಕಾವ್ಯದ ಅನುಪಮತೆಗೆ ದ್ಯೋತಕವಾಗಿದೆ.

ವಿದೇಶಗಳಲ್ಲಿ ರಾಮಾಯಣದ ಕತೆ ಹಲವು ತರದಲ್ಲಿ ರೂಪಾಂತರ ಹೊಂದಿದೆ. ಅದರ ಪಾವಿತ್ರ್ಯವನ್ನು, ಸೌಂದರ್ಯವನ್ನು, ಹಿರಿಮೆ–ಗರಿಮೆಗಳನ್ನು ಬೆಳೆಸುವುದರಲ್ಲಿ ಅವರು ಹೊಂದಿದ ಸಾಫಲ್ಯ ಭಾರತದ ಧಾರ್ಮಿಕತೆಗೆ ಸನ್ಮಾನ್ಯ ಚಿಹ್ನೆಯೂ ನಿಜ.

ವಾಲ್ಮೀಕಿಯ ಕಾಲ ಕ್ರಿಸ್ತಪೂರ್ವ ಒಂಭೈನೂರೆಂದು ಗ್ರೀಕರು ತರ್ಕಿಸುತ್ತಾರೆ. ವಾಲ್ಮೀಕಿಯೇ ಗ್ರೀಕ್ ಕವಿ ಹೋಮರ್ ಬರೆದ ಇಲಿಯಡ್ ಕಾವ್ಯದ ಆಧಾರದಲ್ಲಿ ರಾಮಾಯಣವನ್ನು ಬರೆದನೆಂದು ಹೇಳುತ್ತಾರೆ. ಮಲಯ ಮತ್ತು ಜಾವಗಳಲ್ಲಿ ರಾಮಾಯಣದ ಕತೆಗಳು ಅನೇಕ ವಿಧದಿಂದ ರೂಪಾಂತರ ಹೊಂದಿವೆ. ಕ್ರೈಸ್ತ ದೇವತೆಯಾದ ಆದಮನನ್ನು ಸಿಂಹಳದಲ್ಲಿ ರಾವಣನು ತಪಸ್ಸಿನಿಂದ ಸಿದ್ಧಿಸುವ ಕತೆ ಇದರಲ್ಲಿದೆ. ಮಲಯ. ಪಹಾಂಗ್ ಮೊದಲಾದೆಡೆಯಲ್ಲಿ ಮುಸ್ಲಿಮರು ಸಾಮ್ರಾಜ್ಯ ಕಟ್ಟಿಕೊಂಡು ಮಲಚ್ಛದ ಪರಮೇಶ್ವರನೆಂಬಾತನ ದೊರೆತನದಲ್ಲಿ ರಾಜ್ಯವಾಳುತ್ತಾರೆ.

ಮಲಯದಲ್ಲಿ ಮೂಲ ರಾಮಾಯಣಗಳಾಗಿ 'ಸೆರಕ್ ಕೆಂಡ' ಹಾಗೂ 'ರಾಮಕ್ಲಿಂಗ್' ಗಳಿದ್ದುವು. ಇವುಗಳನ್ನು ಅಳಿಸಿ, ಬೃಹತ್ತಾದ 'ಹಿಕಾಯತ್ ಸೆರಿ ರಾಮ' ಸಿದ್ಧವಾಯಿತು. ಇದರಲ್ಲಿ ರಾವಣನು ವಿದ್ಯಾಧರಿಯೊಬ್ಬಳನ್ನು ಬಲಾತ್ಕರಿಸಿ, ಇಂದ್ರಜಿತ್ತು ಹುಟ್ಟುವ ಕತೆಯಿದೆ. ಸೈತಾನ್, ಆಬಿಲ್, ಕಬಿಲ್ ಮುಂತಾದ ಕ್ರೈಸ್ತ ದೇವತೆಗಳ ಕತೆಗಳೂ ಪ್ರಮುಖದಲ್ಲಿ ಇದರೊಂದಿಗೆ ಸೇರಿಕೊಂಡಿವೆ.

ಮೊದಲು ಆದಿ ರಾಮಾಯಣ ಕ್ರಿಸ್ತಾಬ್ಧ ಮೊದಲನೆಯ ಶತಮಾನದಲ್ಲಿ ಜಾವಾ ದೇಶವನ್ನು ಪ್ರವೇಶ ಮಾಡಿತು. ಅಲ್ಲಿ ಅದು ಹತ್ತು ಹಲವು ರೂಪಾಂತರ ಹೊಂದಿತೆನ್ನಬಹುದು. ಆದರೆ ಇವರು ಹಿಂದುಗಳು ಹಾಗೂ ಶಿವದೇವರಿಗೆ ಪಕ್ಷಪಾತಿಗಳಾಗಿದ್ದಾರೆ. ಇವರು ಮೂಲ ರಾಮಾಯಣದಲ್ಲಿ ಪ್ರಾರಂಭದಲ್ಲಿ ಇವರ ಅರಸರ ವಂಶೇತಿಹಾಸ, ಮತ್ತು ವಿಷ್ಣುವಿನ ಹಲವು ಅವತಾರಗಳ ವಿವರವಿದೆ. ಇಪ್ಪತ್ತೆರಡನೆಯ ಪರಿಚ್ಛೇದದ ತರುವಾಯ ಶ್ರೀ ರಾಮನ ಕತೆಯೂ ಪ್ರಾರಂಭವಾಗುತ್ತದೆ. ಬಳಿಕ ಇಪ್ಪತ್ತೊಂಬತ್ತು ಪರಿಚ್ಛೇದಗಳಲ್ಲಿ ರಾಮ ಹಾಗೂ ರಾವಣನ ಪೂರ್ವಜರ ವಂಶಾವಳಿಗಳಿವೆ. ತಾವು ರಾಮನ ವಂಶಜರೆಂದು ಜಾವಾದ ರಾಜರು ಹೇಳುತ್ತಾರೆ. ಮಜಪಹಿತ್ ನಗರದಲ್ಲಿ ಆಳುತ್ತಿದ್ದ ಜಾವಾ ಅರಸರು ಅನೇಕ ಶಿವ ದೇವಾಲಯಗಳನ್ನು ಕಟ್ಟಿಸಿದ್ದಾರೆ. ಈ ದೇವಾಲಯಗಳ ಪ್ರಾಕಾರದಲ್ಲಿ ರಾಮಾಯಣದ ಶಿಲ್ಪ ಚಿತ್ರಗಳನ್ನು ಬಿಡಿಸಿದ್ದಾರೆ.

ಜಾವಾದ ಜೋಂಗ್ರಂಗ್ ದೇವಾಲಯದ ಶಿಲ್ಪ ಚಿತ್ರಗಳಲ್ಲಿ ಶ್ರೀರಾಮನ ಕತಾ ವಿವರಣೆಯ ನಲವತ್ತೆರಡು ರಚನೆಗಳು ಪ್ರಾಮುಖ್ಯವಾಗಿದ್ದು, ಕಪಿಗಳು ಲಂಕೆಗೆ ಮುತ್ತಿಗೆ ಹಾಕಿದುದೇ ಇದರಲ್ಲಿ ಕೊನೆಯದು. ಅಲ್ಲಿಂದ ಮುಂದೆ ಶ್ರೀ ರಾಮನ ಯಾವುದೇ ಕತೆಯೂ ಜಾವಾದ ಕವಿಗೆ ಗೊತ್ತಿಲ್ಲ ಲಂಕಾಕಾಂಡವೆ ಅದರ ಕೊನೆಯ ಭಾಗ. ಉತ್ತರ ಕಾಂಡ ಇಲ್ಲಿಲ್ಲ. ರಾವಣ ವಧೆಯ ಮೊದಲೇ ರಾಮ ಹತ್ತು ಸಾರೆ ಅಶ್ವಮೇಧ ಯಾಗ ಮಾಡಿರುವನಾದರೂ ಈ ರಾಮಾಯಣ ಬಹುಮಟ್ಟಿಗೆ ವಾಲ್ಮೀಕಿ ರಾಮಾಯಣಕ್ಕಿಂತ ಹೊರತಾಗಿಲ್ಲ. ಜಾವಾದ ಕವಿ ಜಸಧಿಪೂರ್ ರಚಿಸಿದ ಸೆರತ್ ರಾಮಾ

VAIDYARATNAM P. S. VARIER'S

ARYA VAIDYA SALA

KOTTAKKAL (KERALA STATE)

Head Office Telephones — Kottakkal Exchange.

Office with Extension to Administrator & Manager	Phone No. 31
Nursing Home	Phone No. 44
Chief Physician	Phone No. 25
Managing Trustee (Residence)	Phone No. 27
,, (Office)	Phone No. 61
Manager (Residence)	Phone No. 26
Administrator (Residence)	Phone No. 41

MADRAS BRANCH

No. 1, Krishnamachari Road, NUNGAMBAKKAM — MADRAS-34.
(Phone No. 811275)

Other Branches

1. Kozhikode (Phone: 2155)
2. Palghat (Phone: 104)
3. ,, Sales Depot (Phone: 584)
4. Alwaye
5. Erode (Phone: 172)
6. Tirur (Phone: 31)
7. Ernakulam (Phone: 33026)
8. Trivandrum (Phone: 3924)

and

Over 100 Authorised Agencies and Depots.

Genuine Standard Ayurvedic Medicines and expert medical advice available at our Head Office at Kottakkal and all Branches. Medical advice through correspondence given by our Chief Physician at Kottakkal. Special Treatments like Pizhichil Navarakizhi. etc. are conducted under the supervision of our Chief Physician at our GOLDEN JUBILEE NURSING HOME, KOTTAKKAL.
Reserve your accommodation before starting.

MANAGING TRUSTEE.

ಯಣದಲ್ಲಿ ರಾವಣನ ಪೂರ್ವ ಕತೆಯೊಂದಿಗೆ ಉತ್ತರ ಕಾಂಡ ವೃತ್ತಾಂತ ಸರಳ ಸಂಕ್ಷೇಪವಾಗಿ ಬರೆಯಲ್ಪಟ್ಟಿವೆ.

ಪಾಲಿ ನೇಸ್ಸ ಮತ್ತು ಸಂಸ್ಕೃತ ಭಾಷೆಗಳ ಚರ್ವಣದಿಂದ ಹುಟ್ಟಿದ "ಕಕವಿನ್" ಭಾಷೆಯಲ್ಲಿ ಜಾವಾದ ರಾಮಾಯಣ ಬರೆಯಲಾಗಿದೆ. ಕ್ರಿಸ್ತಶಕ ಹನ್ನೆರಡನೆಯ ಶತಮಾನದ ಪ್ರಾರಂಭದಲ್ಲಿ ಬರೆದಿರುವ ರಾಮಾಯಣಕ್ಕಿಂತ ಹಿಂದಿನ ಪಾಠಾಂತರ ಇಲ್ಲಿ ಲಭ್ಯವಿಲ್ಲ. ಇದರಲ್ಲಿ ಯುದ್ಧೋತ್ತರ ಕಾಂಡವಿಲ್ಲ. ಈ ರಾಮಾಯಣದ ಆಧಾರದಿಂದ ಅಲ್ಲಿ "ವಯಂಗ್" ಜಾನಪದ ನೃತ್ಯ ಹುಟ್ಟಿಕೊಂಡಿದೆ.

ಜಾವಾದ ರಾಮಾಯಣದಲ್ಲಿ ಶ್ರೀ ರಾಮನ ಹೆಸರು ಭಾರ್ಗವ; ಲಕ್ಷ್ಮಣನ ಹೆಸರು ಮುರ್ಧಕ; ಕಾಲನೆಂದರೆ ಜನಕ; ಸಿಂತೆಯೆಂದರೆ ಸೀತೆ; ಅನುಮಾನ್‌ನೆಂದರೆ ಆಂಜನೇಯ; ಜಿಂತಯುನೆಂದರೆ ಜಟಾಯು. ರಾಮ ಸೀತೆಯರು ಕಪಿ ರೂಪದಿಂದ ವಿಹರಿಸುತ್ತಿದ್ದಾಗ ಹುಟ್ಟಿದ ಮಗನೇ ಹನುಮಂತ. ರಾಮ ಲಂಕೆಗೆ ಮುತ್ತಿಗೆ ಹಾಕಿದ ಅನಂತರ ಮೂವತ್ತು ಪರಿಚ್ಛೇದಗಳಷ್ಟು ಮಹಾಭಾರತದ ಕತೆ ಬಂದಿದೆಯಲ್ಲದೆ ರಾಮಾಯಣದ ವೃತ್ತಾಂತವೇ ನಾಸ್ತಿ. ಆ ಮೇಲಿನ ಪರಿಚ್ಛೇದಗಳಲ್ಲಿ ರಾಮಾಯಣ ಮುಂದುವರೆಯುತ್ತದೆ. ರಾವಣನ ಚಿತ್ರದಲ್ಲಿದ್ದ ವ್ಯಜನವೊಂದು ಸೀತೆಯ ಕೈಯಲ್ಲಿತ್ತೆಂದು ಅನುಮಾನದಲ್ಲಿ ಸೀತಾ ಪರಿತ್ಯಾಗ, ಕಾಲ (ಜನಕ)ನ ಆಶ್ರಮದಲ್ಲಿ ಪುನರ್ಮಿಲನ; ರಾಮನ ಮಲತಂಗಿ (ತಾಯಿ ಅಲ್ಲ) ಕೈಕೇಯಿಯ ದುಷ್ಪ್ರವೃತ್ತಿಯಿಂದ ಸೀತೆ ರಾವಣನ ಬೀಸಣಿಕೆಯನ್ನು ಪಡೆದಿರುವುದು ತಿಳಿಯುತ್ತದೆ. ಆ ಕೈಕೇಯಿಗೆ ವಿಭೀಷಣನೊಂದಿಗೆ ಮದುವೆ ಆಗುತ್ತದೆ. ರಾಮನ ಮಗ ಲವನಿಗೆ ಇಂದ್ರಜಿತ್ತುವಿನ ಮಗಳೊಂದಿಗೆ ಮದುವೆಯಾಗುವ ಚಿತ್ರ ವಿಚಿತ್ರ ಕತೆಗಳು ಇಲ್ಲಿ ಪ್ರಚಲಿತವಾಗಿವೆ.

ಪ್ರಾಚೀನ ಈಜಿಪ್ತಿನಲ್ಲಿ ರಾಜನಾಗಿದ್ದ ರಮೇಸಸ್‌ನ ಆಧಾರದಲ್ಲಿ ರಾಮಾಯಣ ಬರೆಯಲಾಗಿದೆ ಕ್ರಿಸ್ತ ಪೂರ್ವ 2000ದಲ್ಲಿದ್ದ ಈತ ತನ್ನ ತಂಗಿಯನ್ನೆ (ಸೀತೆ) ಮದುವೆಯಾದನೆಂದು ಇದರಲ್ಲಿದೆ. ಅಸ್ಸೀರಿಯ, ಸುಮೇರಿಯಗಳಲ್ಲಿ ನರಾಂಸಿನ್ ಅಂದರೆ ರಾಮಚಂದ್ರನ ಕತೆಯಿದೆ. ಈಜಿಪ್ತಿಯನ್ನರಲ್ಲಿ ಹಿಟ್ಟೈಟ್ ರಾಜರ ಮೇಲೇ ಬರೆಯಲ್ಪಟ್ಟಿರುವ ರಾಮಾಯಣದಲ್ಲಿ ಕ್ರಿಸ್ತಪೂರ್ವ 1500ರಲ್ಲಿ ಆಳುತ್ತಿದ್ದ ರಾಜಾ ಹಿಟ್ಟೈಟನ್ನೇ ಇದರಲ್ಲಿ ದಶರಥ.

ಮಲಯದ ರಾಜ ಜಯವರ್ಮ (968—1001) ಬಸೂ ಆನ್‌ನಲ್ಲಿ ಕಟ್ಟಿಸಿದ ದೇವಾಲಯದ ಗೋಡೆಯಲ್ಲಿ ಮೂಲ ರಾಮಾಯಣದ ಅನೇಕ ಘಟ್ಟಗಳ ಶಿಲ್ಪಕೃತಿಗಳನ್ನು ಬರೆಸಿದ್ದಾನೆ. ಸಯಾಮಿನ ಅರಸರ ತಲೆಮಾರು 1 ನೆಯ ರಾಮ 2 ನೆಯ ರಾಮ ಮುಂತಾಗಿ ಕರೆಯಲ್ಪಟ್ಟಿದೆ. 1350ರಲ್ಲಿ ರಾಜನಾದ ರಾಮಾಧಿಪತಿಗೆ ಬ್ಯಾಂಕಾಕೇ ರಾಜಧಾನಿಯಾಗಿತ್ತು. ಅದಕ್ಕೆ ಅಯೋಧ್ಯೆಯೆಂದು ಹೆಸರಿಟ್ಟಿದ್ದ. ಇಲ್ಲಿ ರಾಮಾಯಣದ ಹಲವು ಭಿತ್ತಿ ಪತ್ರಗಳಿವೆ. ಅಂಗೋರವಾತ ಜಗತ್ತಿನಲ್ಲೇ ವಿಶಾಲವಾದ ದೇವ ಮಂದಿರ. ಅದರಲ್ಲೂ ರಾಮಾಯಣದ ಭವ್ಯ ನಿರೂಪಣೆಯಿದೆ. ಮಲಯದ ಬೌದ್ಧ ವಿಹಾರದ ಗೋಡೆಗಳಲ್ಲೂ ರಾಮಾಯಣದ ಕೆತ್ತನೆಗಳಿವೆ.

ಚೀನೀ ತುರ್ಕಿಸ್ತಾನದಲ್ಲಿ ಪ್ರಾಚೀನವಾದ ಖೋಟಾನಿಸ್ ಭಾಷೆಯ ರಾಮಾಯಣ ಲಭ್ಯವಾಗಿದೆ. ಇದರಲ್ಲಿ ಸಹಸ್ರ ಕೈಗಳ ಕಾರ್ತವೀರ್ಯಾರ್ಜುನನೇ ದಶರಥ. ಒಬ್ಬನೇ ಮಗ ಪರಶುರಾಮ—ಆತ ದಶರಥನ ಮಕ್ಕಳಾದ ರಾಮ-ಲಕ್ಷ್ಮಣರನ್ನು ಕೊಲ್ಲಲು ಬಂದಾಗ ದಶರಥ ಮಕ್ಕಳನ್ನು ಮಾಳಿಗೆಯಲ್ಲಿ ಅಡಗಿಸಿಡುತ್ತಾನೆ. ತನ್ನ ಮಗಳಾದ ಸೀತೆಯನ್ನೇ ರಾವಣ ಮೋಹಿಸಿ ಅಧಃಪತನಕ್ಕಿಳಿಯುತ್ತಾನೆ. ಆವಳನ್ನು ಸ್ವಯಂವರವಿಲ್ಲದೆ ರಾಮ ಮದುವೆಯಾಗುತ್ತಾನೆ; ಈ ರಾಮಾಯಣದಲ್ಲಿ ಹನುಮಂತ ಸುಗ್ರೀವರಿಲ್ಲ. ಬದಲು ನಂದನೆಂಬ ಕೋತಿಯಿದೆ.

ಚೀನೀ ತುರ್ಕಿಸ್ತಾನದಲ್ಲಿ ದಶರಥನಿಗೆ ರಾಮಲಕ್ಷ್ಮಣರಿಬ್ಬರೇ ಮಕ್ಕಳೆಂದೂ ಸೀತೆ ಅವರಿಬ್ಬರಿಗೂ ಹೆಂಡತಿಯೆಂದೂ ಹೇಳುತ್ತಾರೆ. ಇದರಲ್ಲಿ ರಾವಣ ಸಾಯುವುದಿಲ್ಲ. ರಾಮನ ಕ್ಷಮೆ ಸಿಗುತ್ತದೆ. ಸೀತಾ ಪರಿತ್ಯಾಗದ ವೃತ್ತಾಂತವಿಲ್ಲ, ತನ್ನ ಶೀಲದ ಕುರಿತು ಸಂಶಯಿಸಿದ ಪ್ರಜೆಗಳಿಗಾಗಿ ಸೀತೆಯೇ ಭೂ ಪ್ರವೇಶ ಮಾಡುತ್ತಾಳೆ.

ಅಗ್ನಾಂ ದೇಶದಲ್ಲಿ 'ಹೊ-ತೂನ್-ಕಿನ್ಸ್'ನಲ್ಲಿ ರಾಜನಾದ ದಶರಥನ ಕುರಿತೇ ಬರೆಯಲ್ಪಟ್ಟಿದೆ. ಇಲ್ಲಿ ರಾಮಾಯಣಕ್ಕೆ ದಾನವರಾಜನೆಂಬ ಹೆಸರಿದೆ. ದಶರಥನ ಸುತೆ ಸೀತೆಯನ್ನು ಮೋಹಿಸಿ, ರಾವಣ ಲಂಕೆಗೆ ಒಯ್ಯುತ್ತಾನೆ. ಆಗ ದಶರಥನ ಮಗ ರಾಮನು ಕಪಿ ಸೇನೆಯೊಂದಿಗೆ ಲಂಕೆಗೆ ಧಾಳಿಯಿಟ್ಟು ಸೀತೆಯನ್ನು ತರುತ್ತಾನೆ.

ಇರಾಸಿನಲ್ಲಿ ರಾಮನೆಂದರೆ ಬುದ್ಧ. ರಾಮಾಯಣ ಜಾತಕ ಕತೆಗಳ ರೀತಿಯಲ್ಲಿ ಬರೆಯಲ್ಪಟ್ಟಿದೆ. ರಾಮನಿಂದ ಸೋತ ರಾವಣ ಬುದ್ಧನಿಂದ ಧರ್ಮೋಪದೇಶ ಪಡೆಯುವ ವಿಚಾರವಿದೆ. ಚೀನದಲ್ಲೂ ಒಬ್ಬ ಬೌದ್ಧ ಬಿಕ್ಷು ಜಾತಕ ಕತೆಯ ರೂಪದಲ್ಲಿ ಕ್ರಿಸ್ತಾಬ್ದ 240ರಲ್ಲಿ ರಾಮಾಯಣ ಬರೆದನು. ಇದರಲ್ಲಿ ರಾಮಾಯಣದ ಪ್ರಮುಖ ಘಟನೆಗಳು ಸರಿಯಾಗಿಯೇ ಬಂದಿವೆ. ಆದರೆ ಮಲತಾಯಿಯ ಕೌಟಿಲ್ಯದ ಬದಲು ಧೂರ್ತನಾದ ಚಿಕ್ಕಪ್ಪನಿಗೆ ಅಂಜಿ ರಾಮ ಕಾಡಿಗೆ ಹೋಗುತ್ತಾನೆ. ಚಿಕ್ಕಪ್ಪ ಸತ್ತ ತರುವಾಯ ಅಯೋಧ್ಯೆಗೆ ಹಿಂತಿರುಗಿ ಆರಸನಾಗುತ್ತಾನೆ. ಉತ್ತರಕಾಂಡವಾಗಲಿ ವಾಲಿ ವಧೆಯಾಗಲಿ ಅದರಲ್ಲಿಲ್ಲ. ಸುಗ್ರೀವನ ಚಿಕ್ಕಪ್ಪ ವಾಲಿ, ಶ್ರೀ ರಾಮನಿಗೆ ಹೆದರಿ ಪರದೇಶಕ್ಕೆ ಪರಾರಿಯಾಗುವ ಕತೆಯಿದೆ.

ಇಂಡೋಚೀನ, ಸಿಂಹಳಗಳಲ್ಲಿ ರಾಮಾಯಣ ನೆಲ ನೆಲದಲ್ಲೂ ಹಾಸು ಹೊಕ್ಕಾಗಿ ಬೆಳೆದು ಬಂದಿದೆ. ಕ್ರಿಸ್ತ ಪೂರ್ವ 600ರಲ್ಲಿ ಕಾಂಬುಜದ ಒಬ್ಬ ರಾಜ, ರಾಮಾಯಣದ ನಿತ್ಯ ಪಾರಾಯಣಕ್ಕೆ ವ್ಯವಸ್ಥೆ ಮಾಡಿದ ಕತೆಯೊಂದಿಗೆ ಹೊತೊನ್-ಕಿನ್ಸ್‌ದಲ್ಲಿ ವಾಲ್ಮೀಕಿಗೆ ಒಂದು ದೇವಾಲಯವಿದೆ. ಇಂಡೋನೇಸ್ಯದಲ್ಲಿ ಎಂಟರಿಂದ ಹತ್ತನೆಯ ಶತಮಾನದೊಳಗೆ ನಿರ್ಮಾಣವಾದ ರಾಮಾಯಣದ ವಿವಿಧ ಘಟ್ಟಗಳ ಶಿಲ್ಪ ಕಲಾ ಕೆತ್ತನೆಗಳಿವೆ.

ಸಿಂಹಳವೇ ಹಿಂದಿನ ಲಂಕೆಯೆಂದು ಕರೆಯಲು ಸಾಕಷ್ಟು ಸಾಕ್ಷ್ಯಗಳು, ದೇವಾಲಯಗಳು ಅಲ್ಲಿವೆಯಲ್ಲದೆ ಇತ್ತೀಚೆಗೆ ಒಬ್ಬ ಬೌದ್ಧ ಭಿಕ್ಷು ರಾವಣನ ದೇಹ ಸಿಂಹಳದ ಗುಹೆಯೊಂದರಲ್ಲಿ ಸುರಕ್ಷಿತವಾಗಿದೆಯೆಂದು ಹೇಳಿದುದರಿಂದ ಅದಕ್ಕಾಗಿ ಒಂದು ಸಂಶೋಧಕ ಸಮಿತಿಯೂ ನೇಮಕವಾಗಿದೆ.

"ಚರಿತಂ ರಘುನಾಥಸ್ಯ ಶತಕೋಟಿ ಪ್ರವಿಸ್ತರಂ"

ಎಂದು ಲೋಕೋಕ್ತಿಯಿದೆ. ಶ್ರೀ ರಾಮಚಂದ್ರನ ಕತೆ ಶತಕೋಟಿ ವಿಧದಿಂದ ನಿಜವಾಗಿಯೂ ವಿಶ್ವವ್ಯಾಪಕಗೊಂಡಿದೆ. ಈ ಕತೆ ಒಂದೊಂದು ವಿಧದಲ್ಲಿ ಬದಲಾಯಿಸಲ್ಪಟ್ಟಿದೆಯೆಂಬ ಖೇದವಿದ್ದರೂ ಇರಬಹುದು. ಆದರೆ ಇದು ನವಃಗೊಂದು ಅಭಿಮಾನದ ಸಂಗತಿ. ಎಂದೋ ಒಮ್ಮೆ ವಾಲ್ಮೀಕಿ ಬರೆದ ಈ ಮಹಾಕಾವ್ಯ ಪ್ರತಿ ದೇಶದಲ್ಲೂ ಜನಪ್ರಿಯತೆಯ ಪರಿಧಿ ಗೆರೆ ದಾಟಿದೆಯೆಂಬುದು ಆನಂದದ ವಿಚಾರ. ಭಾರತದಲ್ಲೇ ಒಂದೊಂದು ಭಾಷೆಯ ರಾಮಾಯಣ ಒಂದೊಂದು ರೀತಿಯದಾಗಿರುವಾಗ ಇದೊಂದು ಏನು ಹೆಚ್ಚುಗಾರಿಕೆ? ಅಂತೂ ರಾಮಾಯಣದ ಅಗ್ರ ಪಂಕ್ತಿ ವಿಶ್ವಾದರಣೀಯ.

● ●

ನಾವೆಲ್ಲ ನೆರೆಕರೆಯವರೇ

(ಹತ್ತನೇ ಪುಟದಿಂದ)

ದು ಕೇಳ್ತದೆಯೇ ಒಯ್ಯುವಷ್ಟರವರೆಗೂ ಹೋಗುವಂಥಾದ್ದು. ಮಿಸು ಕಾಡಿದರೆ ಮರ್ಯಾದೆಯ ಪ್ರಶ್ನಾಯಿತು.

ನೆರೆಕರೆಗಳಿಂದ ತಾಳ್ಮೆಯ ಪಾಠವನ್ನು ಕೂಡಾ ನಿತ್ಯ ಪಡೆಯಬಹುದು. ಪ್ರತಿ ನೆರೆಕರೆಗಳ ಕಡೆಗೂ ಆಕರ್ಷಿತರಾಗುವ ಮಕ್ಕಳು ಮರಿಗಳ ಕಸಗಳು, ಹಳೆಯ ಚಪ್ಪಲಿ, ಬಚ್ಚಲನೀರು, ಹಾರಿ ಬೀಳುವ ಎಂಜಲೆಲೆ ಮುಂತಾದುವುಗಳೇ ತಾಳ್ಮೆಯ ಪಾಠ ಕಲಿಸುವ ಮಾಸ್ಟರುಗಳು.

ಇದೆಲ್ಲಾ ತಾಳಿ ತಾಳಿ, ತಾಳ್ಮೆಗೆಡಲು ಕಾರಣವಾಗಿ ನಾನೊಂದು ಪ್ಲಾಟು ತೆಗೆದು ಹಾಕಿದ್ದಿತ್ತಲ್ಲವೆ? ಅಂತೆಯೇ ಇವಳ ಹಟ. ಕಡೆಗೆ ಅವಳ ಹಟವೇ ಗೆದ್ದಿತು. ಹೇಗೋ ಪೇಚಾಡಿ ಸ್ವಂತ ಮನೆ ಕಟ್ಟಿ ಬಿಟ್ಟೆನ್ನಿ. ಬಿಡಾರ ಹೋದುದೂ ಆಯಿತು. ನೆರೆಕರೆಗಳಿಲ್ಲದ ನಮ್ಮ ಮನೆ; ನೆಮ್ಮದಿಯ ಮನೆ.

ಈ ನೆಮ್ಮದಿ ಎಷ್ಟು ದಿನ? ನನ್ನವಳ ಮುಖ ಬಾಡುತ್ತಾ ಇದೆ. ಭಯದ ಉದ್ಗಾರಗಳು ಕೇಳುತ್ತಾ ಇವೆ. ಮುಖ್ಯವಾಗಿ ಹರಟೆ ಹೊಡೆಯುವ ಸುಖವಿಲ್ಲದೆ, ಇವಳ ನಾಲಗೆ ದಪ್ಪ ಕಟ್ಟುತ್ತಾ ಇದೆ. ಆ ಮೇಲೆ ನೈ ಕೈ ಸಹಾಯಕ್ಕೆ ಹತ್ತಿರದಲ್ಲಿ ಯಾರೂ ಇಲ್ಲ ಒಂದು ಭಾರವಾದ ಸಾಮಾನು ಎತ್ತಲು ನೆರೆಯವರನ್ನು ಕರೆಯುವುದು ಹೇಗೆ? ಗಂಡಸಗಳು ಮನೆಯಲ್ಲಿಲ್ಲದಿರುವಾಗ, ಹಾವೋ ಚೇಳೋ, ಮತ್ತೇನೋ ಬಂತೆನ್ನಿ, ನೆರೆಕರೆಯವರನ್ನೂ ಕರೆಯಲು ಯಾರಿದ್ದಾರೆ? ರಾತ್ರಿಯಲ್ಲಿ ಕಳ್ಳನೇ ಬಂದರೂ ಕೂಗಿದರೆ ಬರುವವರಾರಿಲ್ಲ. ನಾವು ನಿರ್ಭೀತಿಯಿಂದ ನಿದ್ದೆ ಮಾಡಲಿಕ್ಕೆ ಕೂಡಾ ನೆರೆಕರೆಗಳು ಬೇಕು. ನೆರೆಕರೆಯ ಗದ್ದಲಗಳು ಸುಖನಿದ್ರೆಗೆ ಎಷ್ಟು ಕೇಡೋ ಅವರ ನೆರವಿನ ಧೈರ್ಯ ಸುಖನಿದ್ರೆಗೆ ಅಷ್ಟು ಸಹಾಯವೆಂದು ಈಗ ಗೊತ್ತಾಗುತ್ತದಂತೆ ಆವಳಿಗೆ.

ನೆರೆಕರೆಯವರೊಡನೆ ಮನಸ್ತಾಪ ಮಾಡಿಕೊಂಡರೆ ಭೂಲೋಕವೆ ನರಕವಾದೀತು. ತುಸು ಯೋಚನೆ ಮಾಡುವಾಗ ನೆರವಿನ ಮನೆ ಎಂಬರ್ಥದಲ್ಲಿಯೇ ನೆರೆಮನೆ ಬಂದಿರಬೇಕೆನಿಸುತ್ತದೆ. ಕರೆ ಅಂದರೆ ಬದಿ. ಪ್ರಾಸಹೊರಳುವುದರಿಂದ ನೆರೆಕರೆ ಎನಿಸಿತು. ಇವುಗಳೊಂದಿಗೆ "ಹೊರೆ"ಯೂ ಕಾಡುತ್ತದೆ. "ಹೊರೆ" ಎಂದರೆ ಭಾರ ತಾನೆ? ನೆರೆಕರೆಗಳ ಹೊರೆ ಹೊತ್ತುಕೊಂಡು ಮುಗುಳುನಗುತ್ತಾ ದಿನದೂಡದೆ ನಿರ್ವಾಹವಿಲ್ಲ. ನಗರವಾಸಿಗಳಿಗಂತೂ ಆ 'ಹೊರೆ' ಇನ್ನೂ ಸಾರ್ಥಕ. ಅಲ್ಲಿ ನೆರೆಕರೆ ಹೊರೆಗಳೆಲ್ಲಾ ಒಂದೇ ಕಟ್ಟಡದಲ್ಲಿ. ಮಾಳಿಗೆಯ ಬಿಡಾರಗಳು ಹೊರೆಗಳು.

ಈ ಬಗೆಯ ನೆರೆಕರೆ ಹೊರೆಗಳು ಗಂಡುಸರಿಗೆ ಮುಳ್ಳಿನ ಅನುಭವ ಕೊಡುವುದೂ ಉಂಟು ತನ್ನವಳಿಗಿಂತ ನೆರೆಮನೆಯವಳು ಸುಂದರಿಯಾಗಿಯೋ ವೈಯಾರಿಯಾಗಿಯೋ ಇದ್ದರೆ, ಅಥವಾ ಈ ಮನೇ ಹುಡುಗ ಆ ಮನೇ ಹುಡುಗಿಯರ ವ್ಯವಹಾರಗಳೇನಾದರೂ ನಡೆದರೆ ಮುಳ್ಳಾಗುವುದೂ ಉಂಟು, ಕಲ್ಯಾಣವಾಗುವುದೂ ಉಂಟು. ಕಲಹ ಕಷಾಯವಾಗುವುದೂ ಉಂಟು.

ಈಗ ನನ್ನವಳ ಬಾಯಿಯಿಂದ ಸ್ಪಷ್ಟವಾದ ಉದ್ಗಾರಗಳೇ ಹೊರಡಲಾರಂಭವಾಗಿವೆ. 'ಅಯ್ಯೊ! ನಮಗೆ ನೆರೆಕರೆ ಇರೋ ಮನೇನೇ ಬೇಕೂಂದ್ರೆ! ಒಂದು ಕೂಗಿದರೂ ಯಾರೂ ಕೇಳೋರಿಲ್ಲ. ನೀವಿಲ್ಲದಾಗ ಯಾರಾದರೂ ಒಳಗೆ ನುಗ್ಗಿದರೆ ಏನು ಗತೀಂತ?....'

ಏನು ಮಾಡುವುದು? ಕಟ್ಟಿಕೊಂಡವಳಾಯಿತು. ಹಾಗೆ ಹೇಳಿದರೂ ಕೇಳಬೇಕು. ಹೀಗೆ ಹೇಳಿದರೂ ಕೇಳಬೇಕು. ಅಕ್ಕಪಕ್ಕಗಳಲ್ಲಿ ಬೇಗನೇ ಮನೆಗಳು ಏಳಬೇಕು ಅಂತ ದೇವರನ್ನು ಬೇಡಿಕೊಳ್ಳುತ್ತಿದ್ದೇನೆ.

ಪುಣ್ಯಕಾಲ ಪಕ್ಕದ ಪ್ಲಾಟಿನವರು ಪಂಚಾಂಗ ತೆಗೆಯುವ ಮುಹೂರ್ತ ನಡೆಸಿದರು. ● ●

ರಾಜ್ಯದ ಹೈಸ್ಕೂಲುಗಳಿಗೆ

ನವಯುಗ

ಮೈಸೂರು ರಾಜ್ಯದ ಡಿ. ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65-56ರ ಪತ್ರದಂತೆ ತರಿಸಿಕೊಳ್ಳಲು ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿ.

3 ವಿಶೇಷ ಸಂಚಿಕೆ ಸಹಿತ ವಾರ್ಷಿಕ ಚಂದಾ ರೂ. 12/- ಮಾತ್ರ.

2 ವರ್ಷಕ್ಕೆ ರೂ. 20.

ಮೆನೇಜರ್, ನವಯುಗ, ಉಡುಪಿ.

ಶ್ರೀ ವೇಂಕಟೇಶ ಮಹಾತ್ಮೆ

ಅಶಿ

(ಎರಡನೇ ಪುಟದಿಂದ)

ರಿಯೇ ;ಸರ್ವೋತ್ತಮ'ನೆಂದು ಹೊಗಳುತ್ತಾ ತೆರಳಿದನು.

ಇತ್ತ ಲಕ್ಷ್ಮಿಯು ಕುಪಿತಳಾಗಿ ನುಡಿದಳು:

|| ಕಾಫಿ—ಅಷ್ಟ ||

"ಅರ್ತಿಯಿಂದಾಲಿಂಗನ ಗೈವ ಉರಕೆ|
ಯಲ್ವೆಜಬಂದು ಘಾತಿಯೊಳೊದೆಯಲಿಕೆ||
ಚಿತ್ತದಿ ಬೇಸರ ತಳೆಯದೆ ಮುನಿಯು|
ಭಕ್ತಿಯಿಂಪೂಜಿಸುತಲೆ ಕಳುಹಿದೆಯ||
ಪರಮ ಪಾವನ ವಕ್ಷಃಸ್ಥಳ
ಮುನಿಯಿಂದ|
ಹರಿಯೇ ಕೇಳಪವಿತ್ರವಾಯ್ತುದರಿಂದ||
ಇರಲಾರೆ ತಾಳಿಕೊಂಡವಮಾನ
ವಿದನು|........||"

ಅಂತೆ ಹರಿಯನ್ನು ತೊರೆದು ಕರವೀರ ಪುರದಲ್ಲಿ ನೆಲೆಸಿದಳು, ಲಕ್ಷ್ಮೀ ದೇವಿ!

ಇಂದಿರೆಯು ಪ್ರೇಮ ಕಲಹದಿಂದ ಹರಿಯನ್ನು ಬಿಟ್ಟು ಹೋಗಲು, ಹರಿಯು ಬೇಸರದಿಂದ ಮನುಜಾಕೃತಿಯನ್ನು ತಳೆದು, ಭೂಲೋಕಕ್ಕೆ ಬಂದು, ಶೇಷಾಚಲದಲ್ಲಿ ಸ್ವಾಮಿ ಪುಷ್ಕರಣಿ ತೀರದ ತಿಂತಿಣಿ ವೃಕ್ಷದಡಿಯ ಹುತ್ತದಲ್ಲಿ ಗುಪ್ತವಾಗಿ ವಾಸಿಸುತ್ತಿದನು.

"....ಸಿರಿಯು ಗೋಪಾಲಕಿಯಾಗಿ ವಿಧಿಯು ತುರುವಾಗಲು ಶಂಕರನು ಕರುವಾಗಿ ನೆರೆಹು...." ಚೋಳರಾಜನ ಗೋವೃಂದವನ್ನು ಸೇರಿಕೊಂಡರು. ಹುತ್ತದಲ್ಲಿ ನೆಲೆಸಿರುವ ಶ್ರೀವರನಿಗೆ ಈ ಗೋವು ನಿತ್ಯವೂ ಹಾಲನ್ನು ಸುರಿದು, ರಾಜನಾಲಯಕ್ಕೆ ಬರಿಕೆಚ್ಚಲಲ್ಲಿ ಹಿಂತಿರುಗಲು, ಚೋದ್ಯಗೊಂಡ ಗೋಪಾಲಕನು ಇದನ್ನು ಪತ್ತೆ ಮಾಡಿ ಗೋವನ್ನು ಕಡಿವೆನೆಂದೆತ್ತಿದ ಕತ್ತಿಯ ಹೊಡೆತಕ್ಕೆ ಶ್ರೀವರನು ತನ್ನ ಶಿರವೊಡ್ಡಿದನು! ಸುರಿವ ರಕ್ತವ ಕಂಡು ಗೋಪಾಲಕನು ಧರೆಗುರುಳಿದನು. ಗೋವು ಚೋಳ ರಾಜನ ಇದಿರಲ್ಲಿ ಬಂದು ಹೊರಳಾಡಿತು. ಚರರಿಂದ ವಿಜವನ್ನರಿತ ರಾಜನು ಹುತ್ತದೆಡೆಗೆ ಬಂದು, "ಗೋವಳನನ್ನು ಕೊಂದೆಯೊ" ಎಂದು ಖತಿಯಿಂದ ಕೇಳಿದನು.

ಆಗ ಶ್ರೀನಿವಾಸನು ಶಪಿಸಿದನು:

|| ಬೇಹಾಗ್–ಅಷ್ಟ ||

....ನಿರ್ಗತಿಕನಾಗಿರೆ ಬಂದು ನೆಲಸಿದಡೀ
ಶೈಲದಿ ||
ತಲೆಗೆ ಹೊಡಿಸಿದೆ|
ತಲೆ ಮದದಿಂದಲೇ ತಲೆ ಪಿಶಾಚಿಯ
ಜನ್ಮವ || '

ಚೋಳ ರಾಜನು ಭಯ ಭಕ್ತಿಯಿಂದ ಶ್ರೀ ಧರನನ್ನು ಪ್ರಾರ್ಥಿಸಲು, ಅಭಯವಿತ್ತನು:—

|| ವಾರ್ಧಿಕ್ಯ ||

....ಆಕಾಶರಾಯನೆಂಬ|
ಧರಣಿಪಾಲಕ ತನ್ನ ತರಳೆ ಪದ್ಮಾವತಿಯ
ಪರಿಣಯವ ಗೈವನೆನಗಿತ್ತು ಸ್ವರ್ಣ
ಕಿರೀಟ|
ಧರಿಸುವೆನು ಶುಕ್ರವಾರದೊಳು ಕಂಗಳಿಂ
ದಶ್ರುಜಲಸುರಿಯುತಿರಲು ||

|| ಕಂದ ||

"ಆರು ಗಳಿಗೆಗಳ ತನಕಂ|
ಧಾರಿಣಿಪತಿ ನೋಡಲದ ಪಿಶಾಚಿಯ
ಜನ್ಮಂ| ತೀರಿ ಸುಖದೊಳಿಹೆ....'

ಮುಂದೆ ಶ್ರೀನಿವಾಸನು ತನ್ನ ಗಾಯಕ್ಕೆ ಔಷಧವನ್ನರಸುತ್ತಾ ಶೇಷಾಚಲಕ್ಕೆ ಹೋದಾಗ–ಸುರರಿಗೆ ಬಾಧೆಯನ್ನೀಯುತ್ತಿದ್ದ ವೃಷಭಾಸುರನನ್ನು ಕೊಂದು ಹಿಂದಿರುಗುತ್ತಿದ್ದ ವರಾಹ ಸ್ವಾಮಿಯ ದರ್ಶನ ಮಾಡಿ, ತನ್ನ ಕತೆಯನ್ನು ಆತನಿಗೆ ಹೇಳಿ, ತನ್ನ ವಾಸಕ್ಕೆ ಸ್ಥಳವನ್ನು ಕೊಡುವಂತೆ ಕೇಳಿದನು. ವರಾಹನು, "ಕೊಡದೆ ವಿತ್ತವ ಸ್ಥಳ| ಪಡೆವುದು ನೀತಿಯೇ ಪೊಡವಿಯೊಳಗೆ ವೇಂಕಟೇಶ?...." ಎನ್ನಲು

ಶ್ರೀನಿವಾಸನು "ಮುಂದೆನ್ನ ಭಕ್ತರು|
ಬಂದು ಮೊದಲು ಭಕ್ತಿ|
ಯಿಂದ ಕ್ಷೀರಾಭಿಷೇಕದಲಿ ||
ಚಂದದಿ ನಿನ್ನ ಪೂಜಿಸುತೆನ್ನ ಪೂಜಿಸೆ |
ಹೊಂದುವೆನವರ ಸೇವೆಗಳ||...."ಎಂದನು!

ಅಂತೆ ಆತನಿಗೆ ಸ್ಥಳವನ್ನಿತ್ತು, ಆತನ ಸೇವೆಗೆ ಬಕುಳಾವತಿಯೆಂಬ ದಾಸಿಯನ್ನು ವರಾಹ ಸ್ವಾಮಿಯು ನೇಮಿಸುತ್ತಾ, 'ಹಿಂದಣ ಭವದಲಿ ಯಶೋದೆಯಾಗಿದ್ದುಗೋ|ವಿಂದ ನಿನ್ನಯ ವಿವಾಹೋತ್ಸವವ ಕಾಣಬೇ|ಕೆಂದು ಬೆಸಗೊಳಲು ಮುಂದಣ ಭವದಿ ತೋರಿಸುವೆನೆಂದು ನೀನುಡಿದಂದದಿ|| ಬಂದಳೀ ಭವದಿ ಬಕುಳಾವತಿಯೆನುವ ಪೆಸರಿ|ನಿಂದ ನೀನವಳಭೀಷ್ಟವ ಸಲಿಸಿಪೂರೆಯಬೇಕು....'ಎಂದು ಪಾರ್ಥಿಸಿದನು.

ಅನಂತರ ವೇಂಕಟೇಶನು ಬಕುಳಾವತಿ ಸಹಿತ ವೇಂಕಟಾಚಲದಲ್ಲಿ ವಾಸಿಸತೊಡಗಿದನು.

ಆಕಾಶರಾಯನು ಸಂತತಿಗಾಗಿ ಪುತ್ರ ಕಾಮೇಷ್ಟಿಯನ್ನು ಮಾಡಿ ಪದ್ಮಾವತಿಯನ್ನು ಪುತ್ರಿಯಾಗಿ ಪಡೆದನು. ಪ್ರಾಯ ಪ್ರಬುದ್ಧೆಯಾದ ಪದ್ಮಾವತಿ ಸಖಿಯರೊಂದಿಗೆ ವಿಹಾರಕ್ಕೆಂದು ವನಕ್ಕೆ ತೆರಳಿದ್ದಾಗ, ಅಲ್ಲಿಗೆ ಬೇಟೆಗೆಂದು ಬಂದ ವೇಂಕಟೇಶನು ಆಕೆಯನ್ನು ಕಂಡು, ಮೋಹಪರವಶನಾದನು. ವೇಂಕಟೇಶನು ಪದ್ಮಾವತಿಯನ್ನು ಮಾತನಾಡಿಸುವೆನೆಂದು ಮುಂದೆ ಬಂದನು.

ಆಗ ಅವರೊಳಗಿನ ಸರಸ ಸಂಭಾಷಣೆ ಇಂತಿದೆ:—

|| ಬೇಹಾಗ್—ಅಷ್ಟ ||

ಶ್ರೀನಿವಾಸ: "ದೇವಕಿಯೆನ್ನವ್ವೆ
ಜನಕನು|
ಶೌರಿಯು ವಾಸು|
ದೇವನೆಂದು ಕರೆವರೆನ್ನನು|
ಈ ವಿಧದಿ ಕನ್ಯಾರ್ಥಿಯಾಗಿ|
ನಾವನಕೆ ನಿನ್ನೆಡೆಗೆ ಬಂದೆ|
ಬಾವಕಿಯೇ ನೀನಾರೆನುವದ|
ನಾವಧಾನದಿಂದ ಪೇಳು||"

ಪದ್ಮಾವತಿಯು, ತೋಂಡ ದೇಶದ ಆಕಾಶರಾಯನ ಮಗಳು ತಾನೆಂದೂ, ವಿಹಾರಕ್ಕಾಗಿ ಸಖಿಯರೊಂದಿಗೆ ವನಕ್ಕೆ ಬಂದಿರುವೆನೆಂದೂ, ಮಾನಿನಿಯರೊಡನೆ ಮಾತನಾಡುವ ನಿನ್ನ ನಡತೆಯಿಂದ ಮನವು ನಾಚುವುದೆಂದೂ ಪೇಳಿದಳು.

ಶ್ರೀನಿವಾಸನು: "ಕೋಪಿಸದಿರು
ಬರಿಪೆಯೆನ್ನೋಳು|
ಸುಂದರಿಯೆ ನಿನ್ನ| ರೂಪವನ್ನು
ಕಂಡಾಕ್ಷಣದೊಳು||
ಪಾಪಿಯಾದ ಸ್ಮರನು ಇಕ್ಷು|
ಚಾಪ ತೆಗೆದು ಶರವನೆಚ್ಚು|
ತಾಪವನ್ನು ತಾಳಲಾರೆ|
ನೀ ಪ್ರೇಮದಲಿ ವರಿಸು ನೀರೆ||"

ಎನಲು ಪದ್ಮಾವತಿಯು ಖತಿಗೊಂಡು
'ಎಚ್ಚರವಾಗಿದ್ದು ನುಡಿ' ಎಂದಳು.

ಶ್ರೀನಿವಾಸನು 'ಬೀರಿ ನಿನ್ನ ಓರೆ ನೋಟವ
ಆ ಬೇಡಿಯಿಂದ|
ನಾರಿ ಬಿಗಿದು ಮನವತೆರಳುವ|
ದಾರಿಯರಿಯೆ ವಿಧಿ ಬರಹವ|
ಮೀರಲಾರಿಗಳವು ಜಗದಿ|
ಸೇರಿ ನಿನ್ನ ಸುಖಿಸದ–ಳಿಯ|
ಲಾರೆನೆನ್ನ ಸಲಹೆ ದಯದಿ||" ಎಂದನು.

ಪದ್ಮಾವತಿಯು, ಸಖಿಯರನ್ನು ಕೂಗಲು ಶ್ರೀನಿವಾಸನು ಓಡುವನು.

ವಿರಹಾಗ್ನಿಯಿಂದ ಬೆಂದ ನೊಂದ, ಶ್ರೀನಿವಾಸನು, ಬಕುಳಾವತಿಯನ್ನು ಕನ್ಯಾರ್ಥಿಯಾಗಿ ಆಕಾಶರಾಯನಲ್ಲಿಗೆ ಕಳುಹಿಸಿದನು.ಆಕೆಯಿಂದ ಆ ಕಾರ್ಯ ಕೈಸಾಗದೆಂದು, ತಾನೇ ಕೊರವಂಜಿಯಾಗಿ ತೆರಳುವನು.

ಇತ್ತ ಪದ್ಮಾವತಿಯು ವಿರಹಾಗ್ನಿಯಿಂದ ತೋಳಲಾಡುವಳು 'ಆರನ್ನೂ ನೋಡಳು, ಆರೊಡನೆಯೂ ನುಡಿಯಳು' ಎಂದು ತಾಯಿ ಧರಣೀ ದೇವಿ ಪತಿಯಲ್ಲಿ ಅರುಹಿ, ನಾನಾ ರಕ್ಷೆಗಳನ್ನ ಮಾಡಿಸುವಳು.

ವೇಂಕಟೇಶನು ಹರಕು ಬಟ್ಟೆಯುಟ್ಟು ಗುಂಜಾಭರಣತೊಟ್ಟು, ಕೊರವಂಜಿಯಾಗಿ ಮಡಿಲಲ್ಲಿ ಸರಸಿಜಭವನನ್ನು ಶಿಶುವಾಗಿಸಿ, "—ಮೇಷ ವೃಷಭ ಮೀನ|ರಾಶಿಗಳೆಲ್ಲವ ಲೇಸಾಗಿ ಗುಣಿಸಿ ನಾನು|| ಶೋಧಿಸಿ ಪೇಳುವೆ| ನೈಸೆ ಸರ್ವರಿಗೆ ಶು|ಭಾಶುಭ ಫಲಗಳನ್ನು||" ಎಂದು ಕೂಗುತ್ತಾ, ರಾಜ ಬೀದಿಯಲ್ಲಿ ಬರುವನು. ಧರಣೀ ದೇವಿ ಕೊರವಂಜಿಯನ್ನು ಕರೆಸಿ, ಕಣಿಯ ಕೇಳಲು, ಪದ್ಮಾವತಿಯ ಅವಸ್ಥೆಗೆ ಪರಿಹಾರವನ್ನು ಸೂಚಿಸಿ ಬಕುಳಾವತಿಯ ಕಾರ್ಯಸುಗಮವಾಗುವಂತೆ ಮಾಡುವನು. ಅಂತೆ, ಆಕಾಶರಾಯನು ಪದ್ಮಾವತಿಯನ್ನು ವೇಂಕಟೇಶನಿಗೆ ವಿವಾಹ ಮಾಡಿಕೊಡುವನು.

ಪೌರಾಣಿಕವಾದ ಈ ಕತೆಯನ್ನು ಸರಸ ಸರಳವಾದ ಪದ್ಯಗಳಲ್ಲಿ ಹೆಣೆದು, ಕನ್ನಡ ನುಡಿಯೊಡತಿಗೆ 'ಕಂಠ ಸೂತ್ರ'ವಾಗಿ ಶ್ರೀ ಅಗರಿ ಭಾಗವತರು ತೊಡಿಸಿದ್ದಾರೆನ್ನಲು ಅಭ್ಯಂತರವಿಲ್ಲ

ಶ್ರೀ ಅಗರಿ ಶ್ರೀನಿವಾಸ ಭಾಗವತರು ಯಕ್ಷಗಾನ ಬಯಲಾಟಗಳ ಹಾಡುಗಾರರು ಮಾತ್ರವಲ್ಲ, ಯಕ್ಷಗಾನ ಕರ್ತರೂ ಆಗಿರುವರು (ಪ್ರಸಂಗಗಳಲ್ಲಿ; ಶ್ರೀ ಮಹಾದೇವಿ ಲಲಿತೋಪಾಖ್ಯಾನ,ತುಳುನಾಡಸಿರಿ ಮಹಾತ್ಮ್ಯೆ, ಭರತೇಶ ವೈಭವ– ಅಚ್ಚಾಗಿವೆ. ಶಿವಲೀಲಾರ್ಣವ, ಪ್ರಭಾವತೀ ಪರಿಣಯ ಬಪ್ಪನಾಡು ಕ್ಷೇತ್ರ ಮಹಾತ್ಮ್ಯೆ, ಶ್ರೀ ದೇವೀ ಮಹಾತ್ಮ್ಯೆ, ಚಂದ್ರಾವಳಿ ವಿಲಾಸ ಮೊದಲಾದುವುಗಳು ಅಚ್ಚಾಗಿಲ್ಲ.)

(ತಾ. 18—10—1963ರಲ್ಲು ವಿದ್ಯಾದಾಯಿನೀ ಹೈಸ್ಕೂಲಲ್ಲಿ ಸನ್ಮಾನ ಪತ್ರ ಮತ್ತು ನಿಧಿ ಸಮರ್ಪಿಸಿ, ಶ್ರೀಯುತರನ್ನು ಗೌರವಿಸುವ ಸಮಾರಂಭವು ಯಶಸ್ವಿಯಾಗಿ ಜರಗಿತ್ತು ನವರಾತ್ರಿ ಉತ್ಸವದ ಆರಂಭದ ದಿನ ನವರಾತ್ರಿ ಉತ್ಸವದ ಪ್ರಧಾನ ಅಂಗವಾದ ಬಯಲಾಟಗಳು ಜರಗಿಸಲ್ಪಡುವ ಆ ಶುಭ ದಿನದಲ್ಲಿ ಬಯಲಾಟಗಳ ಸೂತ್ರಧಾರನಾದ ಭಾಗವತರೊಬ್ಬನನ್ನು ಸನ್ಮಾನಿಸುವ ಸಮಾರಂಭ ಜರಗಿತ್ತೆಂದರೆ ಅದು ಆ ವ್ಯಕ್ತಿಯ ಘನತೆಗೆ ದ್ಯೋತಕ! ಅದರಲ್ಲೂ ತನ್ನ ಸ್ವಕ್ಷೇತ್ರದಲ್ಲಿ, ತಾನು ವಿದ್ಯಾದಾನ ಪಡೆದಿರುವ ವಿದ್ಯಾಲಯದಲ್ಲಿ, ಹಿರಿಯ ಯಕ್ಷಗಾನ ಭಾಗವತ – ಕೃತಿಕಾರ (ಈಗ ದಿವಂಗತ) ಶ್ರೀ ಬಲಿಪ ನಾರಾಯಣ ಭಾಗವತರ ದಿವ್ಯಹಸ್ತದಿಂದ ಸನ್ಮಾನ ಪಡೆವುದೆಂದರೆ, ಅದು ಆ ವ್ಯಕ್ತಿಯ ಹಿರಿಮೆ, ಘನತೆಗಳೆಷ್ಟು ಎನ್ನುವುದಕ್ಕೆ ನಿದರ್ಶನಗಳು!

ಶ್ರೀ ಭಾಗವತರು, 'ಪೌರಾಣಿಕ ಕತೆಗಳನ್ನು ಈ ತರದ ಕೃತಿಗಳಲ್ಲಿ ಪರಿಚಯಿಸುವುದೇ ಯಕ್ಷಗಾನ ಕಲೆಗೆ ಚೆನ್ನಾದುದು' ಎನ್ನುತ್ತಾರೆ. ಅಂತೆ, ಶ್ರೀ ಅಗರಿ ಶ್ರೀನಿವಾಸ ಭಾಗವತರು ಹಾಡುವ ಯಕ್ಷಗಾನ ಪ್ರಸಂಗಗಳು ಹಲವು (ಹಿಂದಿನ ಪ್ರಸಂಗ ಕರ್ತೃಗಳ ಕೃತಿಗಳಲ್ಲದೆ ಅವರೇ ಸ್ವಯಂ ರಚಿಸಿದವುಗಳೂ ಹಲವಾರು ಇವೆ ಅವುಗಳಲ್ಲಿ ಹೆಚ್ಚಿನವು ಅವರ ಬಾಯ್ದೆರೆಯಾಗಿಯೇ ಉಳಿದಿವೆ). ಅಂತಹ ಕೃತಿಗಳನ್ನು ಸಂಗ್ರಹಿಸಿ ಪ್ರಕಟಿಸಲು ಮುಂದಾಗುವ ಅಭಿಮಾನಿಗಳು ಬೇಕು. ಸರಕಾರದ ಹಾಗೂ ಜನರ ಪ್ರೋತ್ಸಾಹ ಸಹಕಾರಗಳು ಬೇಕು.

ನಿಮಗೆ ಬೇಕಾಗುವ
ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,
ಉತ್ತಮ ವಜ್ರಗಳು
ಕೊಲಿಟಿಯಲ್ಲಿ, ಸ್ವಾಜಿನಲ್ಲಿ, ಕ್ರಯದಲ್ಲಿ ಪರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂಟಾ ಕೆರಟು ತೂಕದಲ್ಲಿ
ಮುಂದಾಗಿ ನಮ್ಮಿಂದ ಪಡೆಯಬಹುದು.
ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

ಬಂಗ್ಲಾ ದೇಶ - ನಮ್ಮ ನಿಲುಮೆ ಸರಿಯೆ?

(ಹಿಂದಿನ ಪುಟದಿಂದ)

ಯಲ್ಲೂ, ಮತವನ್ನು ಇನ್ನೊಂದರಲ್ಲೂ ಇಟ್ಟು ತೂಗಿದಾಗ ಈ ಆಧುನಿಕ ಯುಗದಲ್ಲೂ ಮತದ. ತಕ್ಕಡಿ ಕೆಳಗಿಳಿಯುವುದನ್ನೂ, ಆದೇ ಹಲವು ದುರಂತಗಳಿಗೆ ಕಾರಣವಾಗುವುದನ್ನೂ ನಾವು ಕಂಡಿದ್ದೇವೆ. ನೌಕಾಲಿಯ ನೆತ್ತರ ರಂಗು ಇನ್ನೂ ಮಾಸಿಲ್ಲ; ಬಿಸಿ ಆರಿಲ್ಲ ಅದರಲ್ಲಿ ಭಾಗಿಗಳಾದವರು ಇದೇ ಬಂಗಾಲಿ ಬಂಧುಗಳಷ್ಟೆ! ಇತಿಹಾಸದ ಪುನರಾವರ್ತನೆಯಾಗುತ್ತದೆಂದು ನಂಬುವವರಿಗೆ ಇಲ್ಲಿ ಎಚ್ಚರಿಕೆ ಇದೆ

ಬಾಂಗ್ಲಾ ದೇಶದ ಹೋರಾಟದಲ್ಲಿ ಪೂರ್ವದಲ್ಲಿ ಒಮ್ಮೆ ನಾಯಕ ಮುಜಿಬುರ್ ರೆಹಮಾನ್ ಘೋಷಿಸಿದ್ದರಂತೆ: 'ನಾವು ಮುಸ್ಲಿಮರೂ ಅಲ್ಲ, ಹಿಂದುಗಳೂ ಅಲ್ಲ; ನಾವು ಬಂಗಾಲಿಗಳು!' ಒಂದು ಜನತೆಯ ಧೀರೋದಾತ್ತ ನಾಯಕನ ಪ್ರಾಮಾಣಿಕತೆಯನ್ನು ಶಂಕಿಸುವುದು ನನ್ನ ಉದ್ದೇಶವಲ್ಲವಾದರೂ ಈ ಘೋಷಣೆಯ ಹಿಂದೆ ದುರಾಲೋಚನೆಯೋ, ದೂರಾಲೋಚನೆಯೋ ಇಲ್ಲವೆಂದು ಶಂಕಿಸದಿರುವುದಾದರೂ ಹೇಗೆ? ಅವರೂ ಬಂಗಾಲಿಗಳು; ಭಾರತದ ಪಶ್ಚಿಮ ಬಂಗಾಲದ ಜನತೆಯೂ ಬಂಗಾಲಿಗಳು, ಪೂರ್ವ ಬಂಗಾಲಿಗಳು ಪಾಕಿಸ್ತಾನದ ನೆಲ, ಭಾಷೆ, ಸಂಸ್ಕೃತಿಗಳಿಂದ ಭಿನ್ನವಾದ ನೆಲ, ಭಾಷೆ, ಸಂಸ್ಕೃತಿಗಳನ್ನು ಹೊಂದಿರುವರೆಂಬ ಅಂಶಗಳು ದ್ವಿರಾಷ್ಟ್ರವಾದಕ್ಕೆ ಪುಷ್ಟಿಕೊಡುವುದಾದರೆ ಅವೇ ಅಂಶಗಳು ಬೇರ್ಪಟ್ಟ ಒಂದೇ ನೆಲ, ಭಾಷೆ ಹಾಗೂ ಸಂಸ್ಕೃತಿಗಳ ಜನತೆಯ ಐಕ್ಯಕ್ಕೂ ಪುಷ್ಟಿಕೊಡಲಾರವೆ? ಈಗೀಗ ಬಾಂಗ್ಲಾ ಹೋರಾಟದ ಬದಲಾದ ರೀತಿ ಮತ್ತು ಗತಿಗಳನ್ನು ಗಮನಿಸಬೇಕು. 'ಮುಕ್ತಿವಾಹಿನಿ' ಎಂದು ಕರೆಯಲ್ಪಡುವ ಸ್ವಾತಂತ್ರ್ಯ ಸೇನೆ ಎಡಪಕ್ಷೀಯ ತೀವ್ರವಾದಿಗಳಿಂದ ನಿಯಂತ್ರಿಸಲ್ಪಡುತ್ತಿದೆಯೆನ್ನಲಾಗುತ್ತಿದೆ. ತೀವ್ರವಾದಿಗಳ ತವರುಮನೆಯಾದ ಬಂಗಾಲ ಭಾರತದಿಂದ ಪ್ರತ್ಯೇಕವಾಗಿ ಪೂರ್ವ ಬಂಗಾಲಿಗಳೊಂದಿಗೆ ಐಕ್ಯವಾಗಲು ಯತ್ನಿಸಿದರೆ ಅದು ಬಾಂಗ್ಲಾ ದೇಶ ನಿರ್ಮಾಣ, ಅದಕ್ಕೆ ಭಾರತ ನೀಡಿದ ನೆರವು ಮನ್ನಣೆಗಳಿಗೆ ಭಾರತ ಪ್ರತಿಯಾಗಿ ಪಡೆಯುವ ಸೂಕ್ತ ಬಳುವಳಿಯಾಗದೇ?

ಬಾಂಗ್ಲಾ ದೇಶ ಸಮಸ್ಯೆ, ಭಾರತಕ್ಕೆ ಕೋಟಿ ಸನಿಹದ ನಿರಾಶ್ರಿತರ ಪ್ರವಾಹವನ್ನು ತಂದಿದೆ. ಈ ಸಮಸ್ಯೆಗೆ ಬಾಂಗ್ಲಾ ದೇಶ ನಿರ್ಮಾಣದಲ್ಲಿ ಸಹಜ ಪರಿಹಾರ ಕಾಣಲಾಗುತ್ತಿದೆ. ಬಾಂಗ್ಲಾ ದೇಶ ಅಸ್ತಿತ್ವಕ್ಕೆ ಬಂದಾಗ ನಿಜವಾಗಿಯೂ ಈ ನಿರಾಶ್ರಿತರು ತಮ್ಮ ನಾಡಿಗೆ ಮರಳಬಹುದು. ಇದೀಗ ಬಂದ ನಿರಾಶ್ರಿತರಲ್ಲಿ ಹಿಂದುಗಳೇ ಅಸಂಖ್ಯರು; ಅವರನ್ನೂ ಬಾಂಗ್ಲಾ ದೇಶ ಒಳಸೇರಿಸುತ್ತದಲ್ಲವೆ? ಪರಿಸ್ಥಿತಿ ನಮ್ಮೆಣಿಕೆಯಂತೆ ಮುಂದುವರಿಯಬೇಕೆನ್ನುವುದು ಸಹಜ ಭಾವನೆ. ಆದರೆ ಪರಿಸ್ಥಿತಿ ನಮ್ಮ ನಿಯಂತ್ರಣಕ್ಕೊಳಪಟ್ಟಿಲ್ಲ. ಬಾಂಗ್ಲಾ ದೇಶದಲ್ಲಿ ಹಿಂದುಗಳು ಅಲ್ಪಸಂಖ್ಯಾಕರು. ಅಧಿಕಾರಕ್ಕೆ ಬರುವ ಸರಕಾರ ಅಥವಾ ಬಹುಸಂಖ್ಯಾತರಿಂದ ಕೂಡಿದ ಸಮಾಜ ಒಂದಲ್ಲ ಒಂದು ದಿನ ಅವರಿಗೆ ಪುನಃ 'ನಿರಾಶ್ರಿತ'ರೆಂಬ ಬಿರುದನ್ನು ದಯಪಾಲಿಸುವುದಿಲ್ಲವೆಂದು ಹೇಳುವುದಾದರೂ ಹೇಗೆ? ನಮ್ಮ ಮಿತ್ರರೆಂದೇ ಪರಿಗಣಿತರಾದ (ಚೀನಾದ ಮಾತಂತಿರಲ್ಲಿ) ಬರ್ಮಾ, ಇಂಡೋನೇಶಿಯಾ, ಸಿಂಹಳಗಳೂ ತಮ್ಮ ಧೋರಣೆಗಳಿಂದಾಗಿ ಭಾರತಕ್ಕೆ ನಿರಾಶ್ರಿತರನ್ನು ಅಟ್ಟಲಿಲ್ಲವೆ? ಹಾಗಿರಲು ನಿರಾಶ್ರಿತರ ಸಮಸ್ಯೆಗೆ ಬಾಂಗ್ಲಾ ನಿರ್ಮಾಣವೊಂದೇ ಪರಿಹಾರವಲ್ಲ. ಪ್ರಸಕ್ತ ಪರಿಸ್ಥಿತಿಯನ್ನು ಅಭ್ಯಸಿಸಿದರೆ ಭಾರತ ಇರುವ ವರೆಗೂ ಈ ಪ್ರವಾಹ ಬಂದೇ ಬರುತ್ತದೆನ್ನಿಸುತ್ತದೆ!

ಜಗತ್ತಿನ ನಾಗರಿಕ ರಾಷ್ಟ್ರಗಳು ಅಂತಾರಾಷ್ಟ್ರೀಯ ಕಾಯದೆ ಕಟ್ಟುಪಾಡುಗಳನ್ನು ಮನ್ನಿಸ ಬೇಕಾಗುತ್ತದೆ. ಒಂದು ದೇಶದ ಆಂತರಿಕ ವ್ಯವಹಾರದಲ್ಲಿ ಪ್ರತ್ಯಕ್ಷವಾಗಿಯಾಗಲೀ ಪರೋಕ್ಷವಾಗಿಯಾಗಲೀ ಕೈ ಹಾಕಬಾರದೆಂಬುದು ಅಂತಹ ಒಂದು ಸ್ವೀಕೃತ ನೀತಿ. ಬಾಂಗ್ಲಾ ಗಲಭೆ ಪಾಕಿಸ್ತಾನದ ಆಂತರಿಕ ಪರಿಸ್ಥಿತಿಯೆಂಬ ವಾದಕ್ಕೆ ಜಗತ್ತಿನ ಬಲಿಷ್ಠ ರಾಷ್ಟ್ರಗಳು ಅಂಟಿಕೊಂಡಿವೆ. ಮಧ್ಯೆ ಪ್ರವೇಶಿಸಬೇಕೆಂಬ ಭಾರತದ ಕರೆಗೆ ವಿಶ್ವ ಸಂಸ್ಥೆಯಿಂದಲೂ ಅದೇ ಪ್ರತಿಕ್ರಿಯೆ ನಿರೀಕ್ಷಿಸಿದ್ದು, ಈ ದೃಷ್ಟಿಯಿಂದ ಬಾಂಗ್ಲಾ ದೇಶ ರಚನೆಗೆ ನೆರವಾಗುವ ಯಾವ ದೇಶವಾದರೂ ಅಂತಾರಾಷ್ಟ್ರೀಯ ಕಾಯದೆಯ ಮುಂದೆ ಅಪರಾಧಿಯಾಗುತ್ತದೆ. ನಾಳೆ ಭಾರತದಲ್ಲೂ ಇಂತಹದೇ ಒಂದು ಸಮಸ್ಯೆ ಉದ್ಭವಿಸಿದರೆ, ಹೊರಗಿನ ರಾಷ್ಟ್ರವೊಂದು ಪ್ರತ್ಯೇಕತಾವಾದಿಗಳಿಗೆ ಯಾವುದೇ ನೆರವು ನೀಡುವುದನ್ನು ಭಾರತ ಸಹಿಸಬಲ್ಲುದೆ?

ಅನಿರ್ದಿಷ್ಟ ಗುರಿಯತ್ತ ಓದುಗರನ್ನು ಕೊಂಡೊಯ್ದು ಮಧ್ಯದಲ್ಲಿ ಕೈ ಬಿಡುವುದು ಈ ಲೇಖನದ ಉದ್ದೇಶವಲ್ಲ. ಪತ್ರಿಕೆಗಳಲ್ಲಿ, ಭಾಷಣಗಳಲ್ಲಿ ಬಾಂಗ್ಲಾ ಸಮಸ್ಯೆಯ ಪರಿಹಾರಕ್ಕಾಗಿ ಸೂಚಿಸಲ್ಪಡುತ್ತಿರುವ ಏಕೈಕ ವಿಧಾನವನ್ನು ವಿರೋಧಿಸುವುದೂ ಇದರ ಗುರಿಯಲ್ಲ. ಆದರೆ ಅವೆಲ್ಲ ಕೇವಲ ಒಂದು ಮುಖವನ್ನು ಮಾತ್ರ ಪ್ರದರ್ಶಿಸುತ್ತಿದ್ದು ಭವಿಷ್ಯದ ದೃಷ್ಟಿಯಿಂದ ಉಚಿತ ಅಥವಾ ಅನುಚಿತವಾಗಿರಬಹುದಾದ ಸಾಧ್ಯತೆಯಿದೆಯೆಂದು ಸೂಚಿಸುವುದು ಇದರ ಉದ್ದೇಶ. ಅನುಚಿತವಾಗದಿರಲೆಂಬ ಆಶಾವಾದದಲ್ಲಿ ನಮ್ಮ ದನಿಯೂ ಸೇರಿಕೊಂಡಿದೆ. ಬಾಂಗ್ಲಾ ಸಮಸ್ಯೆಯಲ್ಲಿ ನಮ್ಮ ದೇಶದ ನಿಲುಮೆಯ ಸಮರ್ಪಕತೆಯನ್ನು ವಿಶ್ಲೇಷಿಸಲು ಸಮಸ್ಯೆಯ ಈ ಮುಖವು ಸಹಕಾರಿಯಾದೀತು.

ಮೇಲಿನ ಕೆಲವು ಅಂಶಗಳು ಸಮಸ್ಯೆಯೊಂದರ ಕರಾಳ ಮುಖವನ್ನು ನೆನಪಿಗೆ ತರುತ್ತವೆ. ಈ ಕೆಲವಲ್ಲಿ ಯಾವುದೇ ಒಂದು ಸಂಭವಿಸಿದರೂ ಅದರ ಪರಿಣಾಮ ಭಾರತದ ಮೇಲೆ ಕ್ರೂರವಾಗಿಯೇ ಇರುತ್ತದೆ. ಇವು ವಾಸ್ತವಿಕವಲ್ಲದಿರ ಬಹುದು. ಆದರೆ ವಾಸ್ತವಿಕತೆ ಕೆಲವು ಸಲ ವರ್ಣನಾತೀತ ಕರಾಳವಾಗಿರುವುದುಂಟು. ಆದು ವಾಸ್ತವಿಕತೆಯ ತಪ್ಪಲ್ಲ; ಅದನ್ನು ಮುಂದಾಗಿ ಚಿಂತಿಸದಿರುವವರ ತಪ್ಪು. ಅದನ್ನು ಇದಿರಿಸಲು ಹಿಂಜರಿಯುವವರ ತಪ್ಪು.

●●

ಓಟನ್ನು ಕೊಡಿರಣ್ಣಾ ಓಟು!

ಓಟನ್ನು ಕೊಡಿರಣ್ಣ ಓಟು
ಓಟನ್ನು ಕೊಡಿರಣ್ಣಾ ಓಟು |
ನಿಮ್ಮ ಓಟಿನಿಂದಲೆ ನಮ್ಮ ಕಿಸೆ ತುಂಬಾ ನೋಟು |
ಹಾಗಲ್ಲ ನಿಮ್ಮ ಕಿಸೆತುಂಬ ನೋಟು ||
ಓಟು ಕೊಟ್ಟವರ್ಗೆ ನಾ ಏಟನ್ನು ಕೊಡಲಾರೆ |
ಎಷ್ಟಾದರೂ ಹೊಟ್ಟೆಗ್ಹಿಟ್ಟೇ ನಾ ಕೊಟ್ಟೇನು ||
ಓಟಿನಿಂದಲೆ ಊಟ ಓಟಿನಿಂದಲೆ ಪಾಠ |
ಓಟಿನಿಂದಲೆ ಆಟ ಓಟಿನಿಂದಲೆ ಓಟ ||
ಓಟನಿಂದಲೆ ಹೋಟು ಓಟನಿಂದಲೆ ಬೂಟು |
ಓಟಿನಿಂದಲೆ ಸೂಟು ಓಟನಿಂದಲೆ ಕೋಟು ||
ಓಟನಿಂದಲೆ ಸೀಟು ಓಟನಿಂದಲೆ ರೇಟು |
ಓಟನಿಂದಲೆ ನಂಟು ಓಟನಿಂದಲೆ ಲಾಠಿ ಏಟು ||
ಓಟನಿಂದಲೆ ಹುಟ್ಟು ಓಟನಿಂದಲೆ ಸಾವು |
ಓಟನಿಂದಲೆ ಪೆಟ್ಟು ಓಟನಿಂದಲೆ ನೋವು ||
ಓಟನಿಂದಲೆ ಗುಟ್ಟು ಓಟನಿಂದಲೆ ಗಂಟು |
ಓಟನಿಂದಲೆ ಕೊನೆಗೆ ಚಟ್ಟ ನೀ ಕಟ್ಟು ||

ಬಿ. ರಮಾನಂದ ಮೂರ್ತಿ,
ಮೈಸೂರು.

●●

ನಮ್ಮ ಅಸಂಖ್ಯಾತ ಗ್ರಾಹಕರಿಗೂ
ಹಿತೈಷಿಗಳಿಗೂ
ಬೆಳಕಿನ ಹಬ್ಬ— ದೀಪಾವಳಿಯ ಶುಭಾಶಯಗಳು!

ಕಾರವಾರದ ನಿಸರ್ಗ ಸೌಂದರ್ಯ ಸವಿಯಲಾಗಮಿಸುವ
ಪ್ರವಾಸೀ ಅತಿಥಿಗಳ
ಹಾರ್ದಿಕ ಸತ್ಕಾರಕ್ಕೆ ನಾವು ಮೀಸಲು

ಉಡುಪಿ ಶ್ರೀಕೃಷ್ಣ ವಿಲಾಸ
ಮೈನ್ ರೋಡ್, ಕಾರವಾರ

'ಐಸ್‌ಕ್ರೀಮ್' ಮುಂತಾದ ತಂಪು ಪಾನೀಯಗಳು ನಮ್ಮ ವೈಶಿಷ್ಟ್ಯ
ಗ್ರಾಹಕರ ತೃಪ್ತಿಯೇ ನಮ್ಮ ಧ್ಯೇಯ

ಮ್ಹಾಲಕ : ಕೆ. ಸಂಜೀವ ರಾವ್

Please visit & enjoy
UDIPI SHRI KRISHNA VILAS
Main Road, KARWAR, N. K.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. C. 257/1971.

ಕೆ. ಯಸ್. ದೇವರಾವ್ — ಅರ್ಜಿದಾರ.
ಟಿ. ಕೆ. ಫರಿಯದ್ — ಎದ್ರಿ.

ಟಿ. ಕೆ. ಪರಿಯದ್, ಕುಂಞಿ ಮಾಮು ಬ್ಯಾರಿಗಳ ಮಗ, ಬೆಳ್ತಂಗಡಿ ತಾಲ್ಲೂಕು ನವಸಾಲು ಗ್ರಾಮದಲ್ಲಿ, ಪೋಸ್ಟು: ನವಸಾಲು, ದ. ಕ. ಇವರಿಗೆ ತಿಳಿಯ ಪಡಿಸುವುದೇನೆಂದರೆ:

ಅರ್ಜಿದಾರರು ಮೇಲ್ಕಾಣಿಸಿದ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲಿನ ಅರ್ಜಿಯು ತಾ. 23-10-1971ನೇ ದಿವಸ ನಿಮ್ಮ ಹಾಜರಾತಿಯ ಬಗ್ಗೆ ಇರುವುದರಿಂದ ನೀವು ಸ್ವತಹ ಯಾ ವಕೀಲರ ಮೂಲಕ ಮೇಲ್ಕಾಣಿಸಿದ ಕೋರ್ಟಿನಲ್ಲಿ 23-10-1971ನೇ ದಿವಸ ಬೆಳಗ್ಗೆ 11 ಗಂಟೆಗೆ ಹಾಜ್ರಾಗಿ ಉಪಾಪರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಕೋರ್ಟಿನವರಿಗೆ ಯುಕ್ತ ತೋರಿದಂತೆ ಮುಂದುವರಿಸಲಾದೀತು.

(By Order of Court)
Pulu Narayana Bhat
Advocate for Applicant.
Belthangady, 10—10—1971.

ಅಣುಶಕ್ತಿಯು ಇಂದು ಆಹಾರ ಸಮಸ್ಯೆಯನ್ನು ನೀಗಿಸಬಲ್ಲುದೆ?

(ಆರನೇ ಪುಟದಿಂದ)

ಶೀಲಿಸಲು ಅಲ್ಲಲ್ಲೇ ಕೆಲವು ಪರಿಶೀಲನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

'G. E. B. 24' ಎಂಬ ಒಂದು ತಳಿಯು ಕೂಡ ಕಾಳುಗಳ ಆಕಾರ–ಬಣ್ಣಗಳ ದೃಷ್ಟಿಯಿಂದ ಆಕರ್ಷಕವಾಗಿದ್ದು, ಅದರ ಹೆಚ್ಚು ಇಳುವರಿಯು. ಇತರ ಮೂಲ ತಳಿಗಗಳಿಗಿಂತ (ವಿಕಿರಣತೆಗೆ ಒಳಗಾಗದವು) ಸುಮೂರು 20—25% ಹೆಚ್ಚಿದೆ. ಮೇಲಾಗಿ ಅದು ಹೂ ಬಿಡುವುದು ಕೂಡ ಬೇಗವೇ. ಇದನ್ನು ಮತ್ತಷ್ಟು ಪರಿಶೀಲಿಸಲು ಮಹಾರಾಷ್ಟ್ರ, ಟ್ರಾಂಬೆ, ಮೈಸೂರಿನ ಶಹಬಾದ್ ಮುಂತಾದೆಡೆ ಕೆಲವು ಪರಿಶೀಲನಾ ಕೇಂದ್ರಗಳಲ್ಲಿ ವ್ಯಾಪಕವಾಗಿ ಪರಿಶೀಲಿಸಲಾಗಿದೆ. ಆದರಿಂದ ಈ ಹೊಸ ತಳಿಯು ಎಲ್ಲೆಲ್ಲೂ ಹೆಚ್ಚು ಇಳುವರಿಯನ್ನೇ ಕೊಡುತ್ತಿದೆಯೆಂದು ಕಂಡು ಬಂದಿದೆ.

ಇದೇ ರೀತಿ ಎಣ್ಣೆಯ ಬೀಜಗಳಲ್ಲಿ; ಅದರಲ್ಲಿಯೂ ಮುಖ್ಯವಾಗಿ ಶೇಂಗ ಅಥವಾ ಕಡಲೆಕಾಯಿಯಲ್ಲಿ ತಳಿವಿಕಿರಣ ವಿಧಾನಗಳಿಂದ ಶೀಘ್ರ ಬೆಳೆ ಹಾಗೂ ಹೆಚ್ಚು ಇಳುವರಿಕೊಡುವ ಹೊಸ ತಳಿಗಳನ್ನೂ ಉತ್ಪಾದಿಸುವ ಕಾರ್ಯಗಳನ್ನು ಕೈಕೊಳ್ಳಲಾಗಿದೆ. ಈ ಶೇಂಗದಲ್ಲಿ ಈಗ ನಿರ್ಮಾಣವಾಗಿರುವ ಒಂದು ಹೊಸ ತಳಿಯಲ್ಲಿ (Giant or bold type) ಮೂಲ ತಳಿಗಿಂತ ಸುಮೂರು 2 ಪಟ್ಟಿನಷ್ಟು ದೊಡ್ಡದಾಗಿಯೂ ಒಳಗಿನ ಕಾಳುಗಳು ಸುಮೂರು 2 ಪಟ್ಟಿನಷ್ಟು ಹೆಚ್ಚು ತೂಕವುಳ್ಳವೂ ಆಗಿರುತ್ತವೆಯೆಂದು ಕಂಡುಬಂದಿದೆ. ಸಾಮಾನ್ಯವಾಗಿ ಅಣು ವಿಕಿರಣತೆಗೆ ಒಳಗಾಗದ ತಳಿಯ ಕಾಯಿಗಳ ಸರಾಸರಿ ಗಾತ್ರ 2.75×1.25 ಸೆಂ. ಮೀ ಇದ್ದರೆ, ವಿಕಿರಣತೆಗೆ ಒಳಗಾದ ತಳಿಗಳ ಕಾಯಿಗಳ ಗಾತ್ರವು 4×1.75 ಸೆಂ. ಮೀ. ನಷ್ಟು ಇರುವುವೆಂದು ಗೊತ್ತಾಗಿದೆ.

ಅಣು ವಿಕಿರಣತೆಗೆ ಒಳಪಡಿಸಿ ಸುಮೂರು 15—20ಬಗೆಯ ಪ್ರಾಮುಖ್ಯ ಬೆಳೆಗಳ ಹೊಸ ತಳಿಗಳನ್ನು ಜಗತ್ತಿನ ನಾನಾ ಭಾಗಗಳಲ್ಲಿ ಇಂದು ಉತ್ಪಾದಿಸಲಾಗಿದೆ. ಅವುಗಳ ಪೈಕಿ,ಮೇಲೆ ನಮೂದಿಸಿದವುಗಳ ಜತೆಗೆ, ನೆರಳಿನಲ್ಲಿ ಬೆಳೆಯುವ ತಂಬಾಕು ಗಿಡ ರೋಗವಿಮುಕ್ತ ಬಟಾಣಿ, ಅವರೆ ಇತ್ಯಾದಿ. ಅಧಿಕ ಸಾರಜನಕ ಸಹಿಷ್ಣು ಬಾರ್ಲಿ ಬೆಳೆ, ಚಳಿಗಾಲದಲ್ಲಿ ಬೆಳೆಯುವ ಸಧೃಢ ಹಾಗೂ ಹೆಚ್ಚು ಇಳುವರಿ ನೀಡುವ ಬಾರ್ಲಿ, ದಪ್ಪ ಹಾಗೂ ಬಿರುಸು ಸಿಪ್ಪೆಯುಳ್ಳ ಮತ್ತು ಸುರಕ್ಷಿತವಾಗಿ ಹಡಗುಗಳಲ್ಲಿ ಸಾಗಿಸಲು ಅನುಕೂಲವಾಗುವಂತಹ ಶೇಂಗಾ; ಕೆಲವು ಬಗೆಯ ರೋಗವಿಮುಕ್ತ ಓಟ್ಸ್, ಬಾರ್ಲಿ, ಗೋಧಿ, ಭತ್ತ, ರಾಗಿ, ಜೋಳ, ಕಬ್ಬು ಇತ್ಯಾದಿ ಗಮನಾರ್ಹವಾಗಿವೆ.

ಹೀಗೆ ಅಪೇಕ್ಷಿತ ಗುಣಗಳೆಲ್ಲ ಇರುವ ಮತ್ತು ಹೆಚ್ಚು ಇಳುವರಿ ಕೊಡುವ ಹೊಸ ಹೊಸ ತಳಿಗಳನ್ನು ಉತ್ಪಾದಿಸುವುದರ ಜತೆಗೆ ಬೆಳೆದ ಆಹಾರಗಳನ್ನು ಸುರಕ್ಷಿತವಾಗಿ ಸಂಗ್ರಹಿಸುವುದೂ, ಆಹಾರ ಸಮಸ್ಯೆಯ ನಿವಾರಣೆಯಲ್ಲಿ ಒಂದು ಮಹತ್ವದ ಅಂಶವೆನ್ನುವುದು ಗಮನಾರ್ಹ. ಸಾಮಾನ್ಯವಾಗಿ ಆಹಾರ ಸಂಗ್ರಹಣೆಯಲ್ಲಿ ಶೈತ್ಯೀಕರಣ (Refregiration)ಜಲಶೋಷಣೆ (denydration) ಮತ್ತು ಕೆಲವು ರಾಸಾಯನಿಕ ವಸ್ತುಗಳ ಬಳಕೆ ಇತ್ಯಾದಿಗಳು ಸಮಾವೇಶಗೊಂಡಿರುತ್ತವೆ ಆದರೆ ಈ ವಿಧಾನಗಳಿಗೆ ಸ್ಥಳಾವಕಾಶ, ಸಾಗಣೆ, ಉಷ್ಣತೆ, ಕ್ರಿಮಿಕೀಟ ಮತ್ತು ಇಲಿ, ಹೆಗ್ಗಣಗಳಂತಹ ಪ್ರಾಣಿಗಳಿಂದ ರಕ್ಷಣೆ ಇತ್ಯಾದಿಗಳೆಲ್ಲ ಒಂದೊಂದೂ ಸಮಸ್ಯೆಯಾಗಬಹುದು.

ಇತ್ತಿತ್ತಲಾಗಿ ಕೆಲವು ಬಗೆಯ ಆಹಾರ ವಸ್ತುಗಳನ್ನು ಅಣುವಿಕಿರಣತೆಗೆ ಒಳಪಡಿಸಿ ಸುರಕ್ಷಿತವಾಗಿ ಸಂಗ್ರಹಿಸುವುದು ಮತ್ತು ಅವುಗಳ ಪ್ಯಾಕಿಂಗ್ ವಸ್ತುಗಳನ್ನು ಕ್ರಿಮಿಶುದ್ಧಗೊಳಿಸುವುದು ಇತ್ಯಾದಿಗಳೆಲ್ಲ ಸಾಧ್ಯವಾಗುತ್ತಿದೆ. ಜರ್ಮನಿಯಲ್ಲಿ ಇಂತಹ ಉದ್ದೇಶಗಳಿಗೇ ಮೀಸಲಾದ ಒಂದು ಸಂಸ್ಥೆ ಇದೆ. ಸುಮೂರು 1930—35ರ ಅವಧಿಯಲ್ಲಿ ಫ್ರಾನ್ಸ್ ದೇಶದಲ್ಲಿ ಆಹಾರ ವಸ್ತುಗಳನ್ನು ಕ್ಷಕಿರಣಗಳಿಗೆ ಒಳಪಡಿಸುತ್ತಿದ್ದುದುಂಟು. ಇಂದು ಅಮೆರಿಕದಲ್ಲಿ ವಿಕಿರಣತೆಯ ಸಹಾಯದಿಂದ ಗೋಧಿ ಮತ್ತು ಅದರ ಉತ್ಪನ್ನಗಳನ್ನು ಕ್ರಿಮಿಶುದ್ಧಗೊಳಿಸಿ ಬಳಕೆಗೆ ಬಿಡುಗಡೆ ಮಾಡಲಾಗುತ್ತದೆ.

ಭಾರತದಲ್ಲಿಯೂ ಕೆಲಮಟ್ಟಿಗೆ ಸಿದ್ಧಗೊಳಿಸಿದ ಅಥವಾ ಹದಗೊಳಿಸಿದ ಆಹಾರ ವಸ್ತುಗಳು, ಹಣ್ಣು ಹಂಪಲುಗಳು, ಕಾಯಿ ಪಲ್ಲೆಗಳು, ಉಪ್ಪಿನಕಾಯಿ,ಚಟ್ನಿ. ಹಣ್ಣಿನ ರಸಗಳು, ಮೀನು, ತತ್ತಿ, ಮಾಂಸ ಮುಂತಾದ ಬೇಗ ಕೆಡುವ ಆಹಾರ ವಸ್ತುಗಳು ಇತ್ಯಾದಿಗಳನ್ನೆಲ್ಲ ದೀರ್ಘಕಾಲ ಸುರಕ್ಷಿತವಾಗಿ ಇಡುವ ಕ್ರಮಗಳನ್ನು ಅಲ್ಲಿ ಇಲ್ಲಿ ಕೈಕೊಳ್ಳಲಾಗುತ್ತಿದೆ. ವಿಕಿರಣತೆಯ ಸಹಾಯದಿಂದ ಈ ಇಡೀ ಶೈತ್ಯಾಗಾರ, ಇಲ್ಲವೇ ಸಂಗ್ರಾಹಕಗಳನ್ನು ಕ್ರಿಮಿಶುದ್ಧಗೊಳಿಸಿದರೂ ನಾಕು ಅಂತೆಯೇ ವಿಕಿರಣತೆಗೆ ಒಳಪಟ್ಟ ಬಟಾಟೆ, (ಆಲೂಗಡ್ಡೆ) ಮತ್ತು � ಉಳ್ಳಿ (ಉಳ್ಳೀಗಡ್ಡೆ)ಮುಂತಾದವು ಮೊಳೆಯದೇ ಇರುವುದರಿಂದ, ಅವುಗಳನ್ನು ಹೆಚ್ಚು ಕಾಲ ಸುರಕ್ಷಿತವಾಗಿ ಸಂಗ್ರಹಿಸಬಹುದು. ಅದೇ ರೀತಿ ಕೆಲವು ಪ್ರಮುಖ ಬಗೆಯ ಹಣ್ಣುಗಳನ್ನು (ಉದಾ ಮಾವು, ಬಾಳೆ, ಸೇಬು, ಕಿತ್ತಳೆ ಇತ್ಯಾದಿ) ತಡವಾಗಿ ಮಾಗುವಂತೆ ಮಾಡುವುದು ಸಾಧ್ಯವಿದೆ. ಆದರಿಂದ ಅವುಗಳನ್ನು ಸಾಗಿಸುವಾಗ ಉಂಟಾಗ ಬಹುದಾದ ಅನಿವಾರ್ಯ ಅದ

With best compliments from

The Canara Nursery Research Gardens

(Well known orchard in South Kanara)

POST: ULIARGOLI,

KAUP, S. Kanara.

(Mysore State)

Founder:

LATE KAUP MUDDANNA SHETTY

Varieties of grafted fruit and flower plants are available for sale.

Phone: 42 Kuap

ದೀಪಾವಳಿಯ ಶುಭಾಶಯಗಳು !

ಮೈಸೂರು ಟ್ಯಾಪ್ ಫೌಂಡ್ರಿ

ಎಸ್. ಸಿ. ರೋಡು, ಬಂಡಿ ಶೇಷಮ್ಮ ಛೌಲ್ಟ್ರಿ,

ಬೆಂಗಳೂರು - ೯.

ಆಧುನಿಕ ಯಂತ್ರಸಾಧನಗಳಿಂದ ಸುಸಜ್ಜಿತವಾಗಿ "ಮೈಸೂರು ಟ್ಯಾಪ್ ಫೌಂಡ್ರಿ"ಯಲ್ಲಿ ಪ್ರಿಂಟಿಂಗ್ ಟ್ಯಾಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.

ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟ್ಯಾಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ.

ಇಂದೇ ವಿವರಗಳಿಗೆ ಬರೆಯಿರಿ.

The Mysore Type Foundry

LETTERS FOUNDERS

S. C. Road, Bandi Seshamma Choultry

BANGALORE-9

ಚಟಿಕೆಗಳು ಮುಚ್ಚು ಕಾಲ ವಿಳಂಬದಿಂದ ಅವು ಕೆಡದಂತೆ ಕಾಪಾಡಬಹುದು. ಹಾಗೆಯೇ ಕೆಲವೊಂದು ಸೀಸನ್‌ಗಳಲ್ಲಿ ಮಾತ್ರ ದೊರೆಯುವ ಹಣ್ಣು ಹಂಪಲು ಕಾಯಿಪಲ್ಲೆಗಳನ್ನು ವರ್ಷವಲ್ಲಿ ಇನ್ನಷ್ಟು ಹೆಚ್ಚು ದಿನಗಳ ಕಾಲ ಲಭ್ಯವಾಗುವಂತೆ ಸಂಗ್ರಹಿಸಿಟ್ಟು, ಬೇಕಾದಷ್ಟನ್ನೇ ಬಳಕೆಗೆ ಬಿಡುಗಡೆ ಮಾಡಬಹುದು.

ಇದೇ ರೀತಿ ಮೀನು, ಪ್ರಾನ್ (Prawn) ಮುಂತಾದ ಜಲಜನ್ಯ ಆಹಾರ ಮೂಲಗಳನ್ನು ವಿಕಿರಣತೆಯಿಂದ ಕ್ರಿಮಿ ಶುದ್ಧಗೊಳಿಸಿ ದೀರ್ಘಕಾಲ ಸಂರಕ್ಷಿಸಿ, ಸಂಗ್ರಹಿಸಿ ವರ್ಷವಿಡೀ ಬಳಸುತ್ತ ಹೋಗಬಹುದು. ಈ ವಿಧಾನದಲ್ಲಿ ಸಂಗ್ರಹಿಸಬೇಕಾದ ಆಹಾರ ವಸ್ತುಗಳಲ್ಲಿರುವ ನೀರಿನಂಶವನ್ನು ಕೆಲಮಟ್ಟಿಗೆ ಕಡಿಮೆಮಾಡಿ ನಂತರ ಅವುಗಳ ಮೇಲೆ ಗಾಮಾ ಕಿರಣಗಳನ್ನು ಹಾಯಿಸಿದರೆ, ಅವು ಮತ್ತೆ 4—6 ತಿಂಗಳುಗಳ ವರೆಗೆ ಕೆಡದಂತೆ ಇರಬಲ್ಲವು. ಇದರಿಂದ ಕೆಲವೇ ತಾಸುಗಳಲ್ಲಿ ಬಾಡಿ, ಬತ್ತಿ, ನಿರುಪಯೋಗಿಯಾಗಿಹೋಗುತ್ತಿದ್ದ ಕೆಲವು ಆಹಾರ ವಸ್ತುಗಳನ್ನು (ಹಣ್ಣು, ಕಾಯಿಪಲ್ಲೆ, ಮೀನು, ತತ್ತಿ ಇತ್ಯಾದಿ) ಇಂದು ಕೆಲವು ವಾರ- ತಿಂಗಳುಗಳ ವರೆಗೆ ಸಂಗ್ರಹಿಸಬಹುದೆಂದಾಗ ಅದರಿಂದ ಆಗುವ ಲಾಭವೆಷ್ಟು!

ಆದರೆ ಕೃತಕ ವಿಕಿರಣತೆಗೆ ಒಳಪಟ್ಟ ಆಹಾರ ವಸ್ತುಗಳಲ್ಲಿ ಒಮ್ಮೊಮ್ಮೆ ವಿಕಿರಣತೆಯಿಂದಾಗುವ ಪರಿಣಾಮಗಳು ಮುಂದುವರೆಯುವ ಸಾಧ್ಯತೆ, ಸಂಭವಗಳ ಬಗೆಗೆ ಈಗೀಗ ವಿಜ್ಞಾನಿಗಳು ವಿಚಾರಪರರಾಗಿದ್ದಾರೆ. ಏಕೆಂದರೆ. ಅಮೇರಿಕದ ಕಾರ್ನೆಲ್ ವಿಶ್ವವಿದ್ಯಾಲಯ ಪ್ರಯೋಗಾಲಯಗಳಿಂದ 'ಪ್ರೊ–ಸ್ಟೀನರ್ಜ್' ಎಂಬಾತ ವರದಿಮಾಡಿರುವಂತೆ, ವಿಕಿರಣತೆಯ ಮಾಧ್ಯಮದಿಂದ ಸಂಗ್ರಹಿತ ಆಹಾರವಸ್ತುಗಳ ಕೋಶಗಳಲ್ಲಿ ಕೆಲವು ಅನಿರೀಕ್ಷಿತ ಮತ್ತು ಅಸಾಮಾನ್ಯ ಬದಲಾವಣೆಗಳು ಉಂಟಾಗುವ ಸಂಭವವಿದ್ದೇ ಇರುತ್ತದೆ. ಆದರೆ ಅನೇಕ ವೈಜ್ಞಾನಿಕ ಪರಿಣತರ ಅಭಿಪ್ರಾಯದಲ್ಲಿ ಈ ರೀತಿ ಕೋಬಾಲ್ಟ್—60 ಕ್ಷ ಕಿರಣಗಳು, ಗಾಮ ಕಿರಣಗಳು ಇತ್ಯಾದಿ ವಿಧಾನಗಳಿಂದ ಯಾವುದೇ ವಸ್ತುಗಳನ್ನು, ಕ್ರಿಮಿ ಶುದ್ಧ (Ster lise) ಗೊಳಿಸಿದಾಗ, ಅದರಿಂದ ಉಂಟಾಗುವ ವಿಕಿರಣತೆಯ ಪ್ರಭಾವ ಅತ್ಯಲ್ಪ ಇಲ್ಲವೆ ಅಸಂಭವ ಎಂಬುದು ಗಮನಾರ್ಹ.

ಕೋಬಾಲ್ಟ್—60 ಮೂಲಗಳಿಂದ ಗಾಮಾಕಿರಣಗಳನ್ನು ಬಳಸಿದರೆ, ಅದರಿಂದ ಪ್ರಚೋದನೆಗೊಂಡ ಕೋಶವಸ್ತು ಇಲ್ಲವೆ ಧಾತುಗಳು ಕ್ಷಣಿಕವೋ ಇಲ್ಲವೇ ಅಪರೂಪವೋ ಆಗಿರುತ್ತವೆಯೆಂಬ ಭಾವನೆಗೆ ಸಮರ್ಥನೆ ಇದೆ. ಆದರೆ ಇಷ್ಟೆಲ್ಲ ಸಾಧ್ಯತೆ ಅನುಕೂಲತೆಗಳಿದ್ದಾಗ ಇದರಲ್ಲಿ ಕೆಲವು ನ್ಯೂನತೆಗಳೇನೂ ಇಲ್ಲವೆಂದಲ್ಲ. ಉದಾಹರಣೆಗೆ ಈ ವಿಧಾನಗಳನ್ನು ಬಳಸುವುದಕ್ಕೆ ಮುಖ್ಯ ಅವುಗಳ ಸ್ಥಾಪನೆಗೆ ಬೇಕಾಗುವ ಅಧಿಕ ವೆಚ್ಚ, ಸೂಕ್ತ ತರಬೇತಿ ಹೊಂದಿದ ಜನರ ಅಭಾವ ನಿಯೋಜಿತ ಪ್ರಮಾಣದಲ್ಲಷ್ಟೇ ವಿಕಿರಣತೆಯ ಬಳಕೆ ಮತ್ತು ಅದರ ಬಗ್ಗೆ ವಹಿಸಬೇಕಾದ ಎಚ್ಚರಿಕೆಯ ಕ್ರಮಗಳು ಒಮ್ಮೊಮ್ಮೆ ಅಂತಹ ಆಹಾರ ವಸ್ತುಗಳಲ್ಲಿ ಉಂಟಾಗಬಹುದಾದ ಅನಪೇಕ್ಷಣೀಯ ವಾಸನೆ ಇಲ್ಲವೆ ರುಚಿ ಇತ್ಯಾದಿ ಅಂಶಗಳು ಮುಂತಾದುವುಗಳೆಲ್ಲದರ ಬಗೆಗೆ ಇನ್ನೂ ಲಕ್ಷ್ಯ ಪೂರೈಸಬೇಕಾಗಿದೆ.

ಒಟ್ಟಿನಲ್ಲಿ ಅಣುಶಕ್ತಿಯಿಂದ ಆಹಾರ ಸಮಸ್ಯೆ ಬಗೆಹರಿಯ ಬಲ್ಲದೇ? ಎಂದು ಕೇಳಿದರೆ ಅದಕ್ಕೆ ಉತ್ತರ "ಹೌದು!" ಎಂದು ಸಿದ್ಧವಾಗಿಯೇ ಇದೆ. ಅಲ್ಲೊಂದು ಇಲ್ಲೊಂದು ಅಲ್ಪ ಪ್ರಮಾಣದ ನ್ಯೂನತೆಗಳಿದ್ದರೆ ಅವುಗಳಿಗೆ ಪರಿಹಾರವೇನೂ ಅಸಾಧ್ಯವಲ್ಲ.

●●

ಎರಡು ಚಾರಿತ್ರಿಕ ವಿಚಾರಗಳು

(ಐದನೇ ಪುಟದಿಂದ)

ಮಗುರುಂ ರಂಗೋಜಿ ಭಟ್ಟಂ ಭಜೇ||' (ಮುಂಬೈ ಸಂಸ್ಕೃತ ಸೀರೀಸ್ 1915 "ವೈಯಾಕರಣ ಭೂಷಣ" ಪುಟ 259)

ಈ ಪದ್ಯದ ಹಿಂದು ಮುಂದು ಸಾಲುಗಳ ವಿಷಯೋಧಾಹರಣಗಳು 'ಇದಂ ಪೂರ್ವಿಯಾಗಿ, 'ವಿಜಯನಗರ ಸ್ಮಾರಕ ಗ್ರಂಥ'ದಲ್ಲಿತ್ತೆಂದೂ, ಇಲ್ಲಿ ಹೆಸರಿಸಿದ ಕೆಳದಿ ೧ನೆಯ ವೆಂಕಟಪ್ಪ ನಾಯಕನು ಇಸ್ವಿ 1595ರಿಂದ 1629ರ ತನಕ ಇದ್ದವನೆಂದೂ ಹೇಳಿದೆ. (ಪ್ರಾಧ್ಯಾಪಕ ಪಿ. ಕೆ. ಗೋಡೆ: ಸ್ಟಡೀಸ್ ಇಂಡಿಯನ್ ಲಿಟರರಿ ಹಿಸ್ಟರಿ. ಸಂಪುಟ 3. ಪುಟ.205–210)

ಜಿಜ್ಞಾಸೆಗಳು: ವಡೇರು ಮಠವೆಂಬುದು ಶ್ರೀ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠದ ಬಿರುದು. (ಕೆಳದಿ ೧ನೆಯ ವೆಂಕಟಪ್ಪನ ಕಾಲದ ಮೊದಲ ಹಂತದಲ್ಲಿ ಶ್ರೀ ವಾದಿರಾಜರು ಇದ್ದರು.) 1600ರ ನಂತರ ಶ್ರೀ ವಿದ್ಯಾಧೀಶ ವಡೇರನ್ನು ರಂಗೋಜಿ ಭಟ್ಟನು ಗೆದ್ದವನಿರಬೇಕು. ಆದರೆ, ಗೋಕರ್ಣ ಮಠದ ಪೀಳಿಗೆಯಲ್ಲಿ ವಿದ್ಯಾಧೀಶರೆಂಬ ಹೆಸರಿಲ್ಲ (ಮೂ. ವಾ. ತ. ಪುಟ 518). ರಂಗೋಜಿ ಭಟ್ಟನು ಬೇರೆಯಾರೊಂದಿಗೆ ವಾದಿಸಿದ್ದನೆಂಬುದೂ ಇಲ್ಲಿಲ್ಲ; ಬೇರೆಲ್ಲೂ ಹೇಳಿಲ್ಲ! ಸ್ವಸ್ವಗ್ರಂಥದಲ್ಲಿ ಮಾತ್ರ ಹೀಗೆಲ್ಲಾ ಬರೆದುದಕ್ಕೆ ಆಧಾರವಿಲ್ಲ! ಈ ಬಗೆಗೆ ಶ್ರೀ ಗೋಕರ್ಣ ಮಠಾಧೀಶರೂ, 'ವೈಯಾಕರಣ ಭೂಷಣ'ದ ಅಭ್ಯಾಸುಗಳೂ, ಚಾರಿತ್ರಿಕಾಭಿಮಾನಿಗಳೂ ತಕ್ಕಂತೆ ವ್ಯವಹರಿಸಿ, ನೈಜವಿಚಾರಗಳನ್ನು ಪ್ರಕಟಿಸುವುದು ವಿಹಿತವಾಗಿದೆ.

ಪ್ರಾಚೀನ ಲೇಖನಗಳಾದ ಶಿಲಾಶಾಸನಗಳಲ್ಲೂ, ತಾನು ಸೋತಿದ್ದರೂ, ತಾನು ಗೆದ್ದೆನೆಂಬುದನ್ನು ಬರೆಯಿಸುವ ಪರಿಪಾಟಿಯಿದೆಯಂತೆ. ಅದಕ್ಕೆಲ್ಲಾ ಇತರತ್ರ ದೊರೆವ ಸದಾಧಾರಗಳಿಂದಲೇ ತಕ್ಕಂತೆ ವಿವೇಚಿಸುವುದು ಚಾರಿತ್ರಿಕದಲ್ಲಿರುವ ವೈಜ್ಞಾನಿಕ ಪ್ರಜ್ಞೆಯಾಗಿದೆ. ಪರರ ನಿಂದೆಯಿಂದ ಸ್ವಂತದ ಉತ್ಕರ್ಷವಾಗಲಿದೆಯಿದೆ, ಆದರೆ ಅದನ್ನು ಮುಂದಿನವರಲ್ಲಿ ಯಾರಾದರೂ ವಿವೇಚಿಸಿದರೆ ಅದರ ಯಥಾರ್ಥತೆಯ ತಿಳಿವಾದೀತೆಂದು ತಿಳಿಯದೇನೇ ಇವೆಲ್ಲಾ ತರದ ನಿರೂಪಣೆಗಳಿರಬೇಕು. ಆತ್ಮೀಯರಿಗೆ ಇದು ರುಚಿತವಾದರೂ, ಚಾರಿತ್ರಿಕವಾಗಿ ತೀರಾ ತೊಂದರೆಗೀಡು ಗೊಳಿಸುವುದು! ಪೂರ್ವಗ್ರಹ–ಪಾಕ್ಷಿಕದರ್ಶನ, ಏಕಮತೀಯ ಸಮ್ಮತಿಗಳಲ್ಲದೆ, ಸಾರ್ವತ್ರಿಕದ ಧರ್ಮ–ಸತ್ಯ–ನೀತಿಗಳ ಹಿನ್ನೆಲೆಯಲ್ಲಿ ಇವನ್ನು ಪರಿಶೀಲಿಸಬೇಕಾಗಿದೆ. ದೀಪಾವಳಿಯ ಸುಜ್ಯೋತಿಯು ನಮ್ಮಲ್ಲಿ ಈ ಬಗೆಗೆ ಇನ್ನಾದರೂ ಸುಜ್ಞಾನವನ್ನು ಬೆಳಗಿಸಲೆಂದು ಹಾರಯಿಕೆ!

●●

ಶ್ರೀ ಕೃಷ್ಣ ಸಲಹೈ

ಬೆರಳಿನಲಿ ಬಾಗಿಲನು ಸದ್ದುಗೈವವನಾರ್ರು?
ನಾನಿರುವೆ ಮಾಧವಂ ಕುಟಿಲತೆಯದೇಕೆ!
ಏನೇಂ ವಸಂತನೇಂ? ಅಲ್ಲಲ್ಲುನಾಂಚಕ್ರಿ!
ಕುಂಬಾರ ನೀನಿಹೆಯ? ನಾಂಧರಣಿ
ಧರನಲ್ತೆ!
ಎರಡು ನಾಲಗೆಯಹಿಯೆ? ಅಹಿಯಲ್ಲ,
ಅಹಿಮರ್ದಿ!
ಗರುಡನೇಂ? ಗರುಡವಾಹನನೆಂಬೆ,
ಹರಿನಾನು!
ಕಪಿಯಲ್ಲೆ? ಎನೆಮಾಣಿ ಸಲ್ಕಾರದಲ್ಲಿಂದ!
ಮಡದಿ (ಭಾಮೆ)ಯೊಲುಮೆಗೆ ಸೋತ
ಶ್ರೀ ಕೃಷ್ಣ ಸಲಹೈ!

ಸಂಸ್ಕೃತ ಪದ್ಯದ ಅನುವಾದ:

ಶ್ರೀ ಕೃಷ್ಣನು ಅನಾದಿ ಬ್ರಹ್ಮಚಾರಿಯಾದರೂ ಷೋಡಶ ಸ್ತ್ರೀ ಸಹಸ್ರೇಶನೆಂದ ಮೇಲೆ ಪ್ರಿಯೆ ಸತ್ಯಭಾಮೆಯಲ್ಲಿಗೆ ಬರುವಾಗ ರಾತ್ರಿವಿಳಂಬವಾಗಿತ್ತು. ಬಾಗಿಲು ಮುಚ್ಚಿ ಕದಹಾಕಿತ್ತು. ಭಾಮೆಯನ್ನು ಸೇರಲು ಶ್ರೀ ಕೃಷ್ಣನ ಪ್ರಯತ್ನವೆಲ್ಲಾ ಖಂಡಿತಾ ನಾಯಿಕೆಯಲ್ಲಿ ಸಫಲವಾಗದೆ ಹೋಯಿತು. 'ನಿದ್ದೆ ಬಂದವರನ್ನು ಎಚ್ಚರಗೊಳಿಸಬಹುದು. ಆದರೆ ನಟಿಸುವವರನ್ನು ಸಾಧ್ಯವೇ?.' ಶ್ರೀಕೃಷ್ಣ ನಾಡಿದ ಹಿರಿಮೆಯ ಮಾತುಗಳಾದ ಮಾಧವ, ಚಕ್ರಿ, ಧರಣೀಧರ, ಅಹಿಮರ್ದಿ, ಹರಿ ಮುಂತಾದ ಪರಿಚಯದ ಮಾತಗಳನ್ನು ಅರ್ಥಾಂತರದಿಂದ ವಸಂತ, ಕುಂಬಾರ, ಸರ್ಪ, ಗರುಡ, ಕಪಿ ಎಂದು ಹೀನಾಯವಾಗಿ ಪರಿವರ್ತಿಸಿ ವಕ್ರೋಕ್ತಿಯಿಂದ ನಿಂದಿಸಿದಳು. ಆದರೆ ಅದರಲ್ಲಿ ಮಧುರಾ ಭಕ್ತಿಯು ಅಡಗಿತ್ತು. ಶ್ರೀ ಕೃಷ್ಣನು ಸೋಲ ಬೇಕಾಯಿತು! ಹೀಗೆ ಶ್ರೀ ಕೃಷ್ಣ ಸತ್ಯಭಾಮೆಯರಲ್ಲಿ ನಡೆದ ಸಂಸ ಸಂಭಾಷಣೆಯು ಇಲ್ಲಿ ನಿರೂಪಿತವಾಗಿದೆ.

—ಎಚ್. ಎ. ಪದ್ಮನಾಭ ಭಟ್ಟ
'ಶಿರೋಮಣಿ, ವಿದ್ವಾನ್, ರತ್ನ'

●●●

ದೀಪಾವಳಿಯ ಹಾರ್ದಿಕ ಶುಭಾಶಯಗಳು!

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ, ಉಡುಪಿ. ಫೋನ್: 366

ಉತ್ತಮ 22 ct ಖಾತ್ರಿ ಚಿನ್ನದ ಆಭರಣಗಳನ್ನು ಮತ್ತು ಬೆಳ್ಳಿಯ ಯಾವತ್ತೂ ಒಡವೆಗಳನ್ನು ಖಾತ್ರಿಯಾಗಿ ಮನಸ್ಸಿಗೆ ಒಪ್ಪುವಂತೆ ತಯಾರಿಸಿ ಕೊಡುತ್ತೇವೆ. ವಿವಿಧ ಮಾದರಿಯ ಪವನು ಬಂಗಾರದ ನೆಕ್ಲೆಸ್, ಬಳೆ, ಉಂಗುರ, ಬೆಂಡೋಲೆ, ಬೊಟ್ಟು, ಟಿಕ್ಕಿ, ಬೇಸರಿಗಳು, ಕರಿಮಣಿ, ಲಕ್ಷ್ಮೀತಾಳಿ, ತರವಾರು ಪೆಂಡೆಂಟು ಇತ್ಯಾದಿಗಳಿಗೆ

● ಇಂದೇ ನಮ್ಮ ಶೋರೂಮನ್ನು ಸಂದರ್ಶಿಸಿರಿ ●

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

Phone: 676 Residence ತೆಂಕಪೇಟೆ, ಉಡುಪಿ. ಫೋನ್: 366

ರೇಡಿಯೋ ಮತ್ತು ಟ್ರಾನ್ಸಿಸ್ಟರುಗಳು, ಫ್ಯಾನುಗಳು, ಸೋಫಾ ಕಂ–ಬೆಡ್, ಗಡಿಯಾರಗಳು, ಎಲ್ಲಾ ತರದ ಸ್ಟೈಯಿನ್‌ಲೆಸ್ ಸ್ಟೀಲಿನ ಪಾತ್ರೆಗಳು, ಉಡುಕೊರೆಯ ಸಾಮಾನುಗಳು, ಟೇಪ್‌ರೆಕೋರ್ಡು ಇನ್ನೂ ಹಲವಾರು ತರದ ಸಾಮಾನುಗಳು ಇವುಗಳಿಗಾಗಿ

ಇಂದೇ ಸಂದರ್ಶಿಸಿರಿ!

ದೀಪಾವಳಿ ಸಲುವಾಗಿ ಸ್ಪೆಶಲ್ ರಿಯಾಯತಿ ದರದಲ್ಲಿ ಮಾರಾಟ ಮಾಡುತ್ತೇವೆ.

ಪ್ರೊಪ್ರೈಟರು: ಯು. ರಾಘವೇಂದ್ರ ಕೃಷ್ಣ ಭಟ್.

ಶ್ರೀ ಎಚ್. ಎಂ. ನಾರಾಯಣ ಭಟ್

ಸೌಹಾರ್ದತೆಯ ದುರುಪಯೋಗ

ಭಾರತೀಯ ಶಿಲ್ಪಕಲಾಕೃತಿಗಳ ಸಾಗಾಟ

ಕೋಹಿನೂರ್ ವಜ್ರ, ಮಯೂರ ಸಿಂಹಾಸನ, ವಿಶಿಷ್ಟವೂ ಅಪೂರ್ವವೂ ಅಮೂಲ್ಯವೂ ಆದ ತಾಳೆಯೋಲೆ ಗ್ರಂಥಗಳು ಇತ್ಯಾದಿಗಳನ್ನು ವಿದೇಶೀಯರು ಅಧಿಕಾರದ ಹಾಗೂ ಐಶ್ವರ್ಯದ ಪ್ರಭಾವ ಬೀರಿ ಭಾರತದಿಂದ ಕೊಂಡುಹೋದರು. ಪರಸ್ಪರ ಪ್ರೀತಿ—ಔದಾರ್ಯಗಳ ಹೆಸರಲ್ಲೂ ಅನೇಕ ಅಮೂಲ್ಯ ಸಾಧನಗಳನ್ನು ಉದಾರಶೀಲರಾದ ನಾವು ಇತರರಿಗೆ ನೀಡಿದೆವು. ಆಧುನಿಕರೆಂದು ತಾವೇ ಕರೆದುಕೊಳ್ಳುವ ವಿದೇಶೀ ಧನಿಕರು ಭಾರತೀಯ ಶಿಲ್ಪಕಲೆ—ಶಿಲ್ಪ ಕೃತಿಗಳ ಬಗ್ಗೂ ಮೋಹಿತರಾಗಿರುವರು. ಎಷ್ಟು ಬೆಲೆತೆತ್ತಾದರೂ ಭಾರತದ ಶಿಲಾಕೃತಿ—ಕಲಾಕೃತಿಗಳನ್ನು ಹೊಂದುವ 'ಫೇಶನ್' ವಿದೇಶೀಯರಲ್ಲಿ ಬೆಳೆಯುತ್ತಿದೆ.

ಹಲವು ಸಂದರ್ಭಗಳಲ್ಲಿಯೂ ಕಳ್ಳರೂ ಕಾಳಸಂತೆಗಾರರೂ ಭಾರತೀಯ ವಿಗ್ರಹಗಳನ್ನೂ ಶಿಲಾಕೃತಿಗಳನ್ನೂ ಅಮೇರಿಕಾ, ಯುರೋಪ್ ಮತ್ತಿತರ ರಾಷ್ಟ್ರಗಳಿಗೆ ಅಲ್ಲಿನ ಕಲಾಪ್ರೇಮಿಗಳಿಗೆ ಮತ್ತು ವಸ್ತುಸಂಗ್ರಹಾಲಯಗಳಿಗೆ ಒದಗಿಸುತ್ತವೆ. ನಮ್ಮ ಪುರಾತನ ಕ್ಷೇತ್ರಗಳಿಗೂ ಪ್ರಾಚೀನ ವಸ್ತುಗಳಿಗೂ ಇದೊಂದು ಅಪಾಯಕರ ಬೆದರಿಕೆಯಾಗಿ ಪರಿಣಮಿಸಿದೆ. ಈ ಕಳ್ಳಸಾಗಾಟ ವ್ಯವಹಾರವನ್ನು ಯಶಸ್ವಿಯಾಗಿ ನಿಯಂತ್ರಿಸಲಾಗಿಲ್ಲ.

ರೂ. 75 ಲಕ್ಷ ಬೆಲೆಯ ವಿಗ್ರಹ

ನ್ಯೂಯೋರ್ಕಿನ ಒಂದು ಕಾಳಸಂತೆಯಲ್ಲಿ ಹತ್ತು ಲಕ್ಷ ಡಾಲರ್ (ರೂ. 75 ಲಕ್ಷ) ಬೆಲೆಗೆ ವಿಕ್ರಯಕ್ಕಿರಿಸಲ್ಪಟ್ಟುದಾಗಿ ಸರಕಾರದ ತಿಳುವಳಿಕೆಗೆ ಬಂದಿದೆಯೆಂದಾಗಿ ಕೆಲವು ಕಾಲ ಹಿಂದೆ ಲೋಕ ಸಭೆಯಲ್ಲಿ ಸಾಂಸ್ಕೃತಿಕ ಖಾತೆಯ ಸಚಿವ ಶ್ರೀ ಡಿ.ಪಿ. ಯಾದವ್ ಪ್ರಸ್ತಾಪಿಸಿದ್ದುದಾಗಿ ವರದಿಯಿತ್ತು. ಕೇಂದ್ರ ಸರಕಾರದ ಸಂರಕ್ಷಣೆಗೊಳಪಟ್ಟ ಹಲವು ಅಮೂಲ್ಯ ಕಲಾಕೃತಿಗಳೂ ಕಳವಾಗಿದ್ದವು ಅಮೇರಿಕಾವನ್ನು ತಲಪಿರುವುದಾಗಿ ಗೊತ್ತಾಗಿದೆಯಾಗಿಯೂ ಈ ಆಕ್ಷೇಪಗಳ ಬಗ್ಗೆ ಅಮೆರಿಕದ ಸರಕಾರದ ಶ್ರದ್ಧೆಯನ್ನು ಸೆಳೆಯಲು ಅಲ್ಲಿನ ಭಾರತೀಯ ರಾಯಭಾರಿಯನ್ನು ನಿರ್ದೇಶಿಸಲಾಗಿದೆಯೆಂದೂ ಸಚಿವರು ಲೋಕ ಸಭೆಯನ್ನು ತಿಳಿಸಿದ್ದರು.

1960ರಲ್ಲಿ ತಂಜಾವೂರಿನ ಶಿವಪುರದಿಂದ ಕಳವಾದ ವಿಗ್ರಹವಿದೆಂದು ಹೇಳಲಾಗಿದೆ. ಚತುರ್ಬಾಹುವಾದ ಮಹಾ ವಿಷ್ಣು ಪ್ರತಿಮೆಯೊಂದನ್ನು ಇತ್ತೀಚೆಗೆ ಮುಂಬಯಿಯಲ್ಲಿ ಪತ್ತೆ ಹಚ್ಚಿ ಪುನಃ ಪ್ರತಿಷ್ಠೆ ಮಾಡಿದ ವರದಿಯಿತ್ತು. ಈ ವಿಗ್ರಹವನ್ನು ವಿದೇಶಗಳಿಗೆ ಕಳುಹಿಸುವುದಕ್ಕಾಗಿ ಕಾದಿರಿಸಲಾಗಿತ್ತು.

ಭಾರತದ ವಿವಿಧೆಡೆಗಳಲ್ಲಿ ಕಳ್ಳಸಾಗಾಟಗಾರರು ವಿದೇಶೀಯರಿಗಾಗಿ ಸಂಗ್ರಹಿಸಿಟ್ಟ ಅನೇಕ ಕಲಾಕೃತಿಗಳನ್ನು ವಶಪಡಿಸಿಕೊಳ್ಳುವ ಕಾರ್ಯವೀಗ ಸಾಧಾರಣವಾಗಿದೆ. ಹೀಗೆ ಪತ್ತೆಯಾಗುವ ಅಮೂಲ್ಯ ವಸ್ತುಗಳು ನಮ್ಮ ದೇಶದಿಂದ ವಿದೇಶಗಳಿಗೆ ಕಳ್ಳ ಸಾಗಾಟವಾಗುವ ಸಾಧನಗಳ ಒಂದಂಶ ಮಾತ್ರ.

ಒಂದು ಬುದ್ಧ ವಿಗ್ರಹ

ಕಲಾಕೃತಿಗಳನ್ನು ಕದಿಯುವುದೂ ನಕಲಿ ಕಲಾಕೃತಿಗಳನ್ನಿತ್ತು ಕಲಾಭಿಮಾನಿಗಳನ್ನೂ ಕಲಾಪ್ರೇಮಿಗಳನ್ನೂ ವಂಚಿಸುವುದೂ ಜಾಗತಿಕ ಹವ್ಯಾಸವಾಗಿ ಬೆಳೆದಿದೆ. ಆದರೆ ಕಲಾವಸ್ತುಗಳ ಬೃಹತ್ ಪ್ರಮಾಣದ ಅಪಹಾರವೂ ಕಳ್ಳ ಸಾಗಾಟವೂ ಭಾರತದಷ್ಟು ಇತರ ಯಾವ ದೇಶದಲ್ಲಾದರೂ ಹೆಚ್ಚಿದೆಯೋ ಸಂಶಯ.

1968ರಲ್ಲಿ ನಳಂದದಲ್ಲಿನ ಪ್ರಾಚೀನ ವಸ್ತು ಸಂಗ್ರಹಾಲಯದಿಂದ ಕದ್ದು ಹೋದ ಒಂದು ಬುದ್ಧ ವಿಗ್ರಹ 1970ರಲ್ಲಿ ಸಿಯಾಟಲಿಯೂ ಮ್ಯೂಸಿಯಂ ಪ್ರಕಟಿಸಿದ ಕರಪತ್ರದ ಪ್ರಕಾರ ಅವರ ಹೊಸ ಕಲಾ ಸಂಗ್ರಹ ವಸ್ತುಗಳ ಯಾದಿಯಲ್ಲಿ ಅಡಕವಾಗಿದೆ.

8ನೇ ಶತಮಾನದಲ್ಲಿ ನಳಂದದ ಶಿಲ್ಪ ಕಲಾಲಯದಲ್ಲಿ ಈ ವಿಗ್ರಹ (ಕಂಚಿನ) ನಿರ್ಮಿಸಲ್ಪಟ್ಟಿತ್ತೆನ್ನಲಾಗಿದೆ.

ದಕ್ಷಿಣ ಭಾರತದಿಂದ ಕೊಂಡು ಹೋದ ಐದಡಿ ಎತ್ತರದ ಒಂದು ಮನೋಹರ ಶಿಲಾ ವಿಗ್ರಹವೂ ಗುಪ್ತರ ಕಾಲದ ಒಂದು ಪ್ರತಿಮೆಯೂ ಹನ್ನೊಂದನೆಯ ಶತಮಾನದ ಬ್ರಹ್ಮ ದೇವನ ವಿಗ್ರಹವೂ ಜೋನ್ ಡಿ. ರೋಕ್ ಫೆಲ್ಲರ್‌ನ ಖಾಸಗಿ ವಸ್ತುಸಂಗ್ರಹಾಲಯವನ್ನು ಅಲಂಕರಿಸುತ್ತಿರುವವಂತೆ

ಕಳೆದ ಮೂರು—ನಾಲ್ಕು ವರ್ಷಗಳಲ್ಲಿ ಅಮೇರಿಕಾ ದೇಶದ ವಸ್ತು ಸಂಗ್ರಹಾಲಯಗಳು ಪ್ರಕಟಿಸಿದ 'ಕ್ಯಾಟಲಾಗ್'ನಲ್ಲಿ ಭಾರತದಿಂದ ಸಂಗ್ರಹಿಸಿದ 1300 ರಷ್ಟು ಶಿಲ್ಪಾಕೃತಿಗಳೂ ಕುಶಲ ವಸ್ತುಗಳೂ ಇವೆಯೆನ್ನಲಾಗಿದೆ.

ಬಿಡಿಸಲಾಗದ ಒಗಟು

ಹೀಗೆಲ್ಲಾ ಕಲಾಕೃತಿಗಳನ್ನು ಭಾರತದಿಂದ ಹೇಗೆ ಸಾಗಿಸಿದರು? ಯಾರಿಗೂ ತಿಳಿಯದು. ಪ್ರಾಚೀನ ವಸ್ತುಗಳ ಸಂಗ್ರಹಕ್ಕೆ ಸಂಬಂಧಿಸಿದ ನಿಬಂಧನೆಗಳೂ ನಿಯಂತ್ರಣಗಳೂ ಸಾಕಷ್ಟಿವೆ. ಆದರೂ ಇವು ಹೇಗೆ ಸಂಗ್ರಹಿಸಲ್ಪಟ್ಟವೆಂದು ಈಗ ಇವುಗಳ ಮಾಲಕರನ್ನು ಪ್ರಶ್ನಿಸಿದರೆ, "ನಮಗೆ ತಿಳಿಯದು" ಎಂದು ಅವರೂ ಹೇಳುವ ಅಭ್ಯಾಸ ಬೆಳೆಸಿದ್ದಾರೆ. ಈ ಒಗಟಿಗೆ ಅಧಿಕೃತರೂ ಉತ್ತರವನ್ನು ಸರಿಯಾಗಿ ನೀಡಲು ಸಮರ್ಥರಾಗಿಲ್ಲ.

ಭಾರತದ ಪುರಾತನ ಕ್ಷೇತ್ರಗಳೂ ಪ್ರಾಚೀನ ಅವಶೇಷಗಳೂ ವಿವಿಧೆಡೆಗಳಲ್ಲಾಗಿ ಚದರಿವೆ. ಸಂರಕ್ಷಣೆಗೊಳಪಡದ ಅಸಂಖ್ಯಾತ ಅಪೂರ್ವ ವಸ್ತುಗಳು ಇಲ್ಲಿ ಇನ್ನೂ ಇವೆ. ಇವುಗಳ ಬಳಿ ಸೇರಲು ದಾರಿಯೂ ದುರ್ಗಮ.

ನಮ್ಮ ದೇಶದಲ್ಲಿ ಸುಮಾರು 200 ವಸ್ತು ಸಂಗ್ರಹಾಲಯಗಳಿವೆ. ಈ ಪೈಕಿ ಹಲವು ವಸ್ತು ಸಂಗ್ರಹಾಲಯಗಳಿಂದಲೂ ಅಮೂಲ್ಯ ಹಾಗೂ ಅಪೂರ್ವ ಕಲಾಕೃತಿಗಳು ಆಗಾಗ ಕಳವಾಗುತ್ತಿರುತ್ತವೆ.

ಜೈಪುರದ ವಸ್ತು ಸಂಗ್ರಹಾಲಯದಿಂದ ಅನೇಕ 'ತೈಲ ಚಿತ್ರ'ಗಳು ಕಾಣೆಯಾದವು. ನಕಲಿ ಕಲಾಸೃಷ್ಟಿಗಳನೇಕವೂ ವಸ್ತು ಸಂಗ್ರಹಾಲಯಗಳನ್ನು ಅಲಂಕರಿಸಲಾತೊಡಗಿವೆ.

ಸಮರ್ಥ ಜಾಲ

ಕಲಾಕೃತಿಗಳನ್ನು ಸಾಗಿಸಲು ಬಹಳ ಜಾಗರೂಕತೆಯಿಂದ ಪ್ರವರ್ತಿಸುತ್ತಿರುವ ಆಯೋಜಿತ ವಿಧಾನಗಳಿವೆ. ಅಪೂರ್ವ ಕಲಾವಸ್ತುಗಳನ್ನು ಸಂಗ್ರಹಿಸಲು ಆಸಕ್ತರಾದ ಕಲಾಪ್ರೇಮಿಗಳು ನಮ್ಮ ದೇಶದಲ್ಲೂ ಇದ್ದಾರೆ. ಕಳವಾದ ಕಲಾವಸ್ತು ನೇರಾಗಿ ಇಂತಹ ಕಲಾಪ್ರೇಮಿಗಳನ್ನು ಸೇರುತ್ತದೆ. ಇವರು ಸಾಮಾನ್ಯವಾಗಿ ಪ್ರಭಾವಾನ್ವಿತ ವ್ಯಕ್ತಿತ್ವವುಳ್ಳವರು. ನಿಬಂಧನೆಗಳ ಕ್ರೂರ ಹಸ್ತಗಳಿಂದ ತಪ್ಪಿಸಿಕೊಳ್ಳಲೂ ಇವರಿಗೆ ಪ್ರಯಾಸವಿಲ್ಲ. ಆಡಳಿತ ಚಕ್ರಕ್ಕೆ ಸಿಲುಕುವ "ಕೆಂಪುನಾಡ"ವೂ ಇವರ ಸಹಾಯಕ್ಕಿದೆ. ಕಲಾವಸ್ತುಗಳು ಭಾರತವನ್ನು ತೊಲಗುವ ತನಕವೂ "ಕೆಂಪುನಾಡ" ತನ್ನ ಪ್ರಭಾವ ಬೀರುತ್ತದೆ.

ಕೆಲವು ಸಂದರ್ಭಗಳಲ್ಲಿ ಈ ಬಗೆಯ ಕಳ್ಳತನಗಳ ಅನ್ವೇಷಣೆ ಬಗ್ಗೆ ಸಲಹೆ ನೀಡುವವರೂ ಇದೇ "ಕಲಾಪ್ರೇಮಿ"ಗಳ ಗುಂಪಿಗೆ ಸೇರಿದವರೇ ಆಗಿರುತ್ತಾರೆ. ಇಷ್ಟೇ ಅಲ್ಲ ವಿದೇಶೀ ಧನಿಕರಿಗೆ ಕಲಾವಸ್ತುಗಳನ್ನು ಅನಧಿಕೃತವಾಗಿ ಒದಗಿಸಿ ಲಾಭಗಳಿಸುವವರೂ ಈ ವರ್ಗದವರಾಗಬಾರದೆಂದಿಲ್ಲ.

ಯಂತ್ರೋಪಕರಣಗಳ ನೆರವು

"ಖಜುರಾಹೋ"ವಿನ ದ್ವಾರಪಾಲಕರ ಮತ್ತು ಭಿತ್ತಿವಿಗ್ರಹಗಳ ರುಂಡಗಳನ್ನು ವಿದ್ಯುತ್ ಯಂತ್ರಗಳ ಸಹಾಯದಿಂದ ತುಂಡರಿಸಿದ್ದಾಗಿ ಹೇಳಲಾಗಿದೆ. ಈ ಬಗೆಯ ಯಂತ್ರೋಪಕರಣಗಳ ಸಹಾಯದಿಂದ ಕಂಬ, ಗೋಡೆ, ವಿಗ್ರಹಗಳಿಂದ ತಮಗೆ ಬೇಕಾದ ಭಾಗವನ್ನು ಕತ್ತರಿಸಿ ತೆಗೆದು ಸಾಗಿಸಲು "ಕಳ್ಳ"ರಿಗೆ ಸಾಧ್ಯವಾಗುವುದಂತೆ! ಮತ್ತೆ ಇವು ಗೋಪ್ಯವಾಗಿ ಕಲಾಪ್ರೇಮಿಗಳ ಭವನಗಳನ್ನೂ ವ್ಯಾಪಾರ ಕೇಂದ್ರಗಳನ್ನೂ ತಲಪುತ್ತವೆ. ವಿದೇಶೀ ಸಂಚಾರಿಗಳಲ್ಲಿ ಅನೇಕರೂ ಕಲಾಪ್ರೇಮಿಗಳು ಅಥವಾ ವಸ್ತುಸಂಗ್ರಹಾಲಯದಧಿಕೃತರಾಗಿರಲೂ ಬಹುದು. ಇಂತಹ "ತಜ್ಞ"ರ ಸಲಹೆ ಮೇರೆಗೂ ಕಳ್ಳತನಗಳು ಸಂಭವಿಸಲು ಸಾಧ್ಯ.

ವ್ಯಾಜ ವಿಧಾನಗಳು

ನೇಪಾಳದಿಂದ ಕೃತ್ರಿಮವಾಗಿ ಸಂಪಾದಿಸಿದ 'ಸರ್ಟಿಫಿಕೇಟು'ಗಳನ್ನೂ 'ಬಿಲ್'ಗಳನ್ನೂ ಹಾಜರುಪಡಿಸಿಯೂ ಹಣದ ಪ್ರಭಾವ ಬೀರಿಯೂ ವಿದೇಶೀಯರೂ "ನಾರ್ಕೇ ವಾಸ್ತ್" ಆಯಾತ ಕಂಪೆನಿಗಳ ಹೆಸರಲ್ಲಿ ಕಲಾವಸ್ತುಗಳನ್ನು ಹಡಗುಗಳ ಮೂಲಕವೂ ವಿಮಾನಗಳ ಮೂಲಕವೂ ಭಾರತದಿಂದ ದಾಟಿಸಿದ ನಿದರ್ಶನಗಳಿವೆ.

(—ಸಂಗ್ರಹ)

ದೀಪಾವಳಿಯ ಹಾರ್ದಿಕ ಶುಭಾಶಯಗಳು !

ಎಂ. ಚಿಕ್ಕಯ ಶೆಟ್ಟಿ

ಆನಂದ ಉಪಾಹಾರ ಗೃಹ

ನ್ಯೂ ಆರ್ಥರ್ ರೋಡು, ತಾರ್‌ದೇವ್,

ಬೊಂಬಾಯಿ – 34

Kindly

Contribute generously

to the

NAVAYUGA

GOLDEN JUBILEE FUND 1971

"ನಿಮ್ಮ ಮಗ ಮದುವೇನೇ ಬೇಡಾಂತ ಹೋಗ್ತಾ ಇದ್ದಾನೆ. ನೋಡ್ತಾ ಸುಮ್ಮನಿದ್ದೀರಾ? ಹೇಳೀಂದ್ರೆ ಅವನಿಗೆ ಬುದ್ಧಿ"

"ನಿನ್ನ ನೋಡೀ ನೋಡೀ ಬುದ್ಧಿ ತಂದ್ಕೊಂಡೇ ಹಾಗೆ ಹೇಳ್ತಾನೇಂತ ಕಾಣುತ್ತೆ. ನಾನೇನು ಬುದ್ಧಿ ಹೇಳೋದು ಮಣ್ಣು?"

ಈ ನೆಲವೆ ಹೊಲಸಯ್ಯ!

ಈ ನೆಲವೆ ಹೊಲಸಯ್ಯ; ಇಲ್ಲಿ ಬದುಕಲೂ
ಬಿಡರಯ್ಯ!
ಇಲ್ಲಿ ಸಲ್ಲದರು, ಅಲ್ಲಿಯೂ ಸಲರಯ್ಯ!
ಇಲ್ಲೇನು, ಅಲ್ಲೇನು, ಎಲ್ಲಿಯೂ ಸಲರಯ್ಯ
—ಇದು ನಿಜವಿದ್ದರೂ ಬದುಕುವುದು
ಎಂತಯ್ಯ?
ಛಲ ಬೇಕು ಶರಣಂಗೆ,
ಹೀಗೆ ಹೇಳಿದ ನೀನೆ
ಬದುಕುವಾಸೆಯ ತೊರೆದು ಬಯಲಾದೆ
ಯಯ್ಯ!
. ನಿನ್ನ ಪಾಡೇ ಹೀಗಾಗಿರಲು
ಉಳಿದವರ ಹಾಡ ಕೇಳುವವರಾರಯ್ಯ?
ಮಡದಿಯರು ನಿನಗಿಬ್ಬರೆಂಬುದನು
ತಿಳಿದಿರುವೆನಯ್ಯ!
ನಿನ್ನಂತೆ ನಮಗಿರುವರೆರಡು ಮಂದಿ.
ಅವರಾಟ, ಕಾಟದಲ್ಲಿ ಮುರಿದತ್ತು ಮನ.
ಇಬ್ಬರಿರುವರು ಎಂದು
ಇಬ್ಭಾಗವಾಗುವುದೆ ಮನ?
ಬಾಳೊ! ನುಚ್ಚು—ನೂರು
ಬಾಳೆ ಹೋಳಾಗಿರಲು ಉಳಿವುದೇ
ದೇಶ—ಕೋಶ?
ಮನದಂತೆ, ಮನೆಯಂತೆ ದೇಶ ಛಿದ್ರ-ಛಿದ್ರ
ಒಬ್ಬಳದು ಮುತ್ತಿಹಳು ಪಾತಾಳಕ್ಕೆ
ಇನ್ನೊಬ್ಬಳೆಳೆಯುತ್ತಿಹಳು ಕಾಣದೆತ್ತರಕೆ
ಜಗ್ಗಾಟವಿದರಲ್ಲಿ ಬಾಳು ಜರ್ಜರಿತ.
—ಸಿಂಡಿಂಡಿಕೇಟುಗಳ ಜಗಳದಲಿ
ಮತದಾರ ಮತಿಕಳೆದುಕೊಳ್ಳವೊಲು—
ಈ ಪಕ್ಷಕಾಗದರು, ಆ ಪಕ್ಷಕೂ ಸಲರಯ್ಯ
ಇಲ್ಲಿ ಹೊಲಸೆಬ್ಬಿಪರು, ಅಲ್ಲಿಯೂ
ಕಿಲುಬ ಬೆರಸುವರಯ್ಯ!
ಬಯಲಾಗದುಳಿದಿರುವುದೀ ಸತ್ಯವಯ್ಯ!

—ಶ್ರೀ ಬಿ. ಕೃಷ್ಣ ಭಟ್,
ಭದ್ರಾವತಿ

●●

With best compliments
from

M/s. R. N. Shetty & Company

ENGINEERS & CONTRACTORS
14, ASHOK NAGAR,
HUBLI-22

Phone: 2112 Res. 2265 Office

In the Court of the Munsiff of Bantwal, S. K.

O. S. No. 185 of 1969

Between:—

Vasudeva Aithala —Plaintiff

and

Anantharama Aithala (Since dead) & others —Defendants.

To

The 7th Defendant:-

Bhagirathi, W/o, Vishweshwarayya, Halasinadu house, Post: Halasinadu, Via-Coondapur,

Please take notice that the above suit stands posted to 5—11—1971 or your appearance at 11 A. M. before the Munsiff Court Bantwal. You are directed to appear on that day before the said court in person or through advocate. If you fail to appear on that day the suit will proceed with in your absence.

(By order of Court)

K. Keshava Bhat
Advocate for Plaintiff.

B. C. Road, 14—10—1971

ನವಯುಗದ

ಹೊಸ ಚಂದಾ ದರ

ಸಪ್ಟಂಬರದಿಂದ ರೂ. 12

ಪತ್ರಿಕೆಗೆ ಬಳಸುವ ಕಾಗದದ ಬೆಲೆ, ಸಾಗಾಟದ ದರ ಏರಿಕೆಯಿಂದಾಗಿಯೂ ಮುದ್ರಣಾದಿಗಳ ವೆಚ್ಚದ ಹೆಚ್ಚಳದಿಂದಾಗಿಯೂ ನವಯುಗದ ವಾರ್ಷಿಕ ಚಂದಾ ದರವನ್ನು ರೂ. 10 ರಿಂದ ರೂ. 12ಕ್ಕೆ ಅನಿವಾರ್ಯವಾಗಿ ಏರಿಸಬೇಕಾಗಿ ಬಂದಿದೆ. ಈ ಹೊಸ ಚಂದಾ ದರವು ಹೊಸ ಸಂಪುಟದಿಂದ ಅಂದರೆ ಇದೇ ಸಪ್ಟಂಬರದಿಂದ ಅನ್ವಯವಾಗುವುದು. ಚಂದಾದಾರರು ದಯಮಾಡಿ ಗಮನಿಸಿ, ಅದರಂತೆ ಚಂದಾ ಕಳಿಸಿ ಸಹಕರಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

—ಮೆನೇಜರ್

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

1971ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ

ಯೋಚಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

With best compliments

from

B. S. Jagannath Shetty

Contractor,

COONDAPUR, S. K.

ಉಚಿತ ವಿಮೆ ಪಡೆಯಿರಿ

ಕೆನರಾ ಬೇಂಕು ಅದರ ಎಲ್ಲಾ ಶಾಖೆಗಳಲ್ಲಿಯೂ
ಠೇವಣಿ—ಉಚಿತ ವಿಮಾ ಸಂಯೋಜಿತ ಯೋಜನೆಯ ಸೌಲಭ್ಯವನ್ನು
ಒದಗಿಸುವುದು.

ವಿವರಗಳಿಗೆ ದಯಮಾಡಿ ನಿಮ್ಮ ಸಮೀಪದ ಶಾಖೆಯ ಸಂಪರ್ಕ ಬೆಳೆಸಿರಿ.

ಕೆನರಾ ಬ್ಯಾಂಕ್

ಪ್ರಧಾನ ಕಛೇರಿ : ಬೆಂಗಳೂರು-2

ಜನತಾ ಸೇವೆಯಲ್ಲಿ

1—10—1971ರಲ್ಲಿದ್ದಂತೆ ಭಾರತದಾದ್ಯಂತ 550ಕ್ಕೂ ಹೆಚ್ಚಿನ ಶಾಖೆಗಳು

— ಇನ್ನೂ ಹೆಚ್ಚು ಹೆಚ್ಚು ಶಾಖೆಗಳನ್ನು ತೆರೆಯಲಾಗುವುದು —

55 ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈ) ಲಿಮಿಟೆಡ್

ನಂಜನಗೂಡು (ಮೈಸೂರ್ ಸ್ಟೇಟ್)

ಶಾಖೆಗಳು : ಬೆಂಗಳೂರು, ಮಂಗಳೂರು ಮತ್ತು ಮೈಸೂರು

REGD. No. 176
LICENCE No. 33
Licensed to Post without Prepayment

You benefit in more ways when you bank with

Vijaya Bank





The Vijaya Bank Ltd.
Regd. Office : Mangalore
Admn. Office : Race Course Road, Bangalore-1.
Chairman : M. Sunder Ram Shetty

Bensons 1819

Total No. of Branches 137

Mysore	101	Maharashtra	3
Kerala	26	Andhra Pradesh	1
Tamil Nadu	5	Delhi	1

Our Total No. of Branches in South Kanara 41

Edited, Printed & Published by K. H. Shetty at the Navayuga Press, Udipi, S. India.

ಸ್ಥಾಪಕರು :
ದಿ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಸಂಪುಟ ೫೧
ಸಂಚಿಕೆ ೮

Vol. 51
No. 8

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, 28—10—1971

ಇಂಡಿಕೇಟಿನೊಳಗೊಂದು ಸಿಂಡಿಕೇಟು

ಸತ್ತವರಿಗೆಲ್ಲಾ ಸ್ವರ್ಗ ಸಿಗುವುದುಂಟೆ?

ಫೆಬ್ರವರಿ ೭೨ರಲ್ಲಿ ವಿಧಾನ ಸಭೆಗೆ ಚುನಾವಣೆ ನಡೆಯುವುದೀಗ ಖಚಿತ. ಅದಕ್ಕಿಂತ ಮೊದಲೇ ಕರ್ನಾಟಕದಲ್ಲಿ ಚುನಾವಣೆ ನಡೆಯಬೇಕೆಂಬ ಬಹುಜನರ ಬೇಡಿಕೆ ಅಪುರಸ್ಕೃತ. ಇನ್ನುಳಿದಿರುವ ಮೂರು-ಮೂರೂವರೆ ತಿಂಗಳುಗಳ ಅವಧಿಯಲ್ಲಿ ಹಣಾಹಣಿಗೆ ಆರಂಭ. ಯಾರ ತಲೆ ಗಟ್ಟಿ ಎಂದು ಮುಂದೆ ನೋಡಬೇಕಾದ್ದು ಅಪರಿಹಾರ್ಯ.

ಪ್ರಾಯಃ ಕರ್ನಾಟಕದ ಮಟ್ಟಿಗೆ ಪ್ರಬಲ ಸ್ಪರ್ಧೆಯು ಇಂಡಿಕೇಟ್–ಸಿಂಡಿಕೇಟ್‌ಗಳ ನಡುವೆ. ತನ್ನ ಭದ್ರಕೋಟೆಯ ಆಧಾರಸ್ತಂಭಗಳೆಲ್ಲ ರಾತ್ರಿ ಬೆಳಗಾಗುವುದರೊಳಗೆ ಉರುಳಿ ಹೋಗಿ ದುರಂತಕ್ಕೀಡಾದ ಸಿಂಡಿಕೇಟು ತಾನಿನ್ನೂ ಸಬಲ ಇದ್ದೇನೆಂದು ತೋರಿಸಿಕೊಡಬೇಕಾಗಿದೆ. ಲೋಕಸಭಾ ಮಧ್ಯಾವಧಿ ಚುನಾವಣೆಯಲ್ಲಿ ತನ್ನ ವಿರೋಧಿಗಳೆಲ್ಲರನ್ನೂ ಮೆಟ್ಟಿ ಧ್ವಜ ಹಾರಿಸಿದ ಇಂಡಿಕೇಟು 'ಇಂದಿರಾಗಾಳಿ'ಯನ್ನು ಕನ್ನಡಿಗರಿನ್ನೂ ಸೇದುತಿದ್ದಾರೆಂದು ಸಿದ್ಧಮಾಡಬೇಕಾಗಿದೆ. ಉಳಿದ ಪಕ್ಷಗಳು ತಮಗೂ ದಿವ್ಯ ಭವ್ಯ ಭವಿಷ್ಯತ್ತಿದೆಯೆಂದು ಹೆಮ್ಮೆಪಡಬೇಕು. ಅದಕ್ಕಾಗಿ ಚುನಾವಣಾ ತಂತ್ರ ಈಗಿಂದೀಗಲೇ ಆರಂಭವಾಗಬೇಕು.

ಬೆಳಗಾಂವಿಯಲ್ಲಿ ರಾಜ್ಯ ಇಂಡಿಕೇಟ್ ಸಮ್ಮೇಳನ ಸೇರಿತು. ಪ್ರಧಾನಿ ಗಾಂಧಿಯವರೇ ಉದ್ಘಾಟಕರಾಗಿ ಬಂದು ಬುದ್ಧಿ ಹೇಳಿದರು. ಸಮಾಜವಾದ – ಪ್ರಗತಿವಾದಗಳ ಗುತ್ತೇದಾರಿಯನ್ನು ಮತ್ತಾರಿಗೂ ಬಿಟ್ಟುಕೊಡಬಾರದೆಂದು ಉಗ್ಗಡಿಸಿದರು. ಮರಾಠಿಗರ ವಕ್ರದೃಷ್ಟಿ ಬಿದ್ದಿರುವ ಬೆಳಗಾಂವಿ ನಗರದ ಭವಿಷ್ಯದ ಬಗ್ಗೆ ಅವರೆಂದೂ ತುಟಿ ಬಿಚ್ಚಲಿಲ್ಲ. ಅವರ ಸಮ್ಮೇಳನವೂ ಪ್ರಸ್ತಾಪ ಮಾಡಲಿಲ್ಲ. ಆದರೆ, ಜನ ಬಿಡಬೇಕೆ? ಶ್ರೀಮತಿ ಗಾಂಧಿ ಗುಡುಗಿದರು— "ಹಿಂಸೆ, ಬಲಾತ್ಕಾರ, ವತ್ತಾಯ, ಬೆದರಿಕೆಗಳಿಗೆ ಸೊಪ್ಪು ಹಾಕುವವಳು ನಾನಲ್ಲ."

ಇವೆಲ್ಲವನ್ನೂ ಹೊಡಿದವರು ಮರಾಠಿಗರು. ಆದುದರಿಂದ ಕೇಳಿದವರಿಗೆ ತುಸು ಸಮಾಧಾನವಾಯ್ತು, ಜತೆಗೆ ಪ್ರಧಾನಿ ಕನ್ನಡಿಗರ ಪರರಿದ್ದಾರೆ, ಇಂದಿರಮ್ಮನಲ್ಲಿ ವಿಶ್ವಾಸವಿಟ್ಟು ... ಗಲೆಂದು ತಿಳಿದರು. ತಮ್ಮ ಸಂತೋಷ ಅವರಿಗೆ ತಡೆಯುವುದಾಗಲಿಲ್ಲ. ಬಾಯ್ಬಿಟ್ಟು ಕೇಳಿದರು–'ಅಂದರೆ, ನೀವಂದಂತೆ ನಾವು ಸುಮ್ಮನೆ ಕುಳಿತಿದ್ದೇವೆ. ಬೆಳಗಾಂವಿಯನ್ನು ನಮ್ಮಲ್ಲಿಯೇ ಉಳಿಯಗೊಡುತ್ತೀರಾ?'

ಪ್ರಾಯಃ ಪ್ರಧಾನಿ ಗಾಂಧಿ ಈ ಪ್ರಶ್ನೆಯನ್ನು ನಿರೀಕ್ಷಿಸಿರಲಿಲ್ಲ. ತನ್ನ ಗುಡುಗಿನ ಮುಂದೆ ಎಲ್ಲರೂ ಅಪ್ರತಿಭರಾಗುತ್ತಾರೆಂಬ ಅವರ ವಿಶ್ವಾಸವೀಗ ಹಾರಿ ಹೋಯ್ತು. ಉತ್ತರಿಸದಿರುವುದು ಸಾಧ್ಯವಿಲ್ಲ. ಹಾಗೆಂದು ಮಾತಿನಿಂದ ಸಿಕ್ಕಹಾಕಿಕೊಳ್ಳುವುದೂ ಆಗದ ಮಾತು. 'ಕನ್ನಡಿಗರ ಹಿತರಕ್ಷಣೆ ಮಾಡುವಾಗ ಮರಾಠಿಗರದನ್ನು ಮರೆಯುವುದೆಂತು?'

ಅಂದರೇನು? ಸದ್ಯ ಯಥಾಸ್ಥಿತಿ. ಎಲ್ಲಿಯವರೆಗೆ? ೧೯೫೬ರಿಂದಲೂ ಉಳಿದು ಬಂದಿರುವ ಮಹಾರಾಷ್ಟ್ರ– ಕರ್ನಾಟಕ ಗಡಿತಂಟೆಯ ಗೋಣು ಮುರಿಯಲವರು ಸಿದ್ಧರಿಲ್ಲ. ಈ ಪ್ರಶ್ನೆಯನ್ನು ಸದ್ಯಕ್ಕೆ ಹಾಗೇ ಬಿಟ್ಟು ಬಿಡುತ್ತಾರೆ; ಮುಂದಿನ ಚುನಾವಣಾ ನಂತರ ಬೀಸುವ ಗಾಳಿಯ ಸುಳಿವು ನೋಡಿಕೊಂಡು ಮುಂದಿನ ಮಾತು.

ಬೆಳಗಾಂವಿ ಸಮ್ಮೇಳನದಲ್ಲಿ ಸ್ವಾರಸ್ಯ ನಡೆದು ಗೊಂದಲದಲ್ಲಿ ಅದು ಪರ್ಯವಸಾನ ಹೊಂದಿತೆಂದು ವರದಿ. ಪ್ರಸಂಗ ಆರಂಭವಾದದ್ದು 'ಆರಂಭದ ಇಂಡಿಕೇಟಿಗರು– ಮುಂದಿನ ಇಂಡಿಕೇಟಿಗರು ಎಂಬ ವಿಷಯದಲ್ಲಿ. ಹಿಂದು ಮುಂದುಗಳ ಸೀಮೆ ಲೋಕಸಭಾ ಮಧ್ಯಾವಧಿ ಚುನಾವಣೆಗಳು. ಇದಕ್ಕೆ ಮೊದಲು ಪಕ್ಷಾಂತರಗೊಂಡು ಬಂದವರೆಲ್ಲ ಮಡಿಭಟ್ಟರೆಂಬ ಭಾವನೆ ಹಾಗೆ ಬಂದವರಲ್ಲಿ ಮೂಡಿದೆ. ಇದಕ್ಕೆ ಶ್ರೀ ನುಗ್ಗೇನಹಳ್ಳಿ ಶಿವಪ್ಪನವರೂ ಹೊರಗಿನವರಲ್ಲ. ಒಂದು ಕಾಲದಲ್ಲಿ ಅವರು ವಿಧಾನ ಸಭೆಯಲ್ಲಿ ವಿರೋಧಿ ಪಕ್ಷದ ನಾಯಕರಾಗಿ ಮೆರೆದವರು. ಅವರು ಅಧಿಕಾರದಲ್ಲಿ ಇಲ್ಲದಿರಬಹುದು; ಆದರೆ, ಅವರ ಗೌರವ ಯಾವ ಅಧಿಕಾರಿಗೂ ದೊರೆಯುತ್ತಿರಲಿಲ್ಲ. ಮಾರ್ಚ್ ಚುನಾವಣೆಗಳಿಗೆ ಮೊದಲು ಅವರಿಗೆ ಅಧಿಕಾರದ ಇಂದಿರಾಗಾಳಿ ಬಡಿಯಿತು. ಅವರು ಇಂಡಿಕೇಟ್ ಸೇರಿದರು. ಎಂ.ಪಿ. ಆದರು. ಆದರೆ, ಅವರ ಹಿಂದೆ ನೂರಾರು ಮಂದಿ ಬಂದೇ ಬಿಟ್ಟರು.

ಹಿಂದೆ ಬಂದವರು ಸುಮ್ಮನಿರುತ್ತಾರೆಯೆ? ಅವರೇನು ಅನುಯಾಯಿಗಳಾಗಿರಲು ಬಂದವರೆ? ಅಧಿಕಾರದ ಗಾಳಿ ಯತ್ತವೆಂಬುದರ ಸುಳಿವು ಸಿಕ್ಕೇ ಇತ್ತ ಸರಿದು ಬಂದವರು. ಯಾರನ್ನು ಹೇಗೆ ಹಿಂದೆ ಹಾಕಬೇಕೆಂಬ ಕಲೆಯನ್ನು ಕರಗತ ಮಾಡಿಕೊಂಡವರು. ಅವರು ಹಿಂದು–ಮುಂದು ಸೀಮೆಯನ್ನು ಒಪ್ಪುವುದಿಲ್ಲ. ಎಲ್ಲರೂ ಇಂಡಿಕೇಟು. ತಮಗೂ ಅಧಿಕಾರ ಬೇಕು. ಹುಟ್ಟಿನಿಂದ ಬಂದ ಕಿವಿಗಳಿಗಿಂತ ಅನಂತರ ಮೂಡಿ ಬಂದ ಕೊಂಬು ಗಟ್ಟಿ. ಗೂಳಿಗಳು ಹೋರಾಡುವುದೂ ಇದರ ಬಲದಿಂದಲೇ. ಅವರೇನು ಮಾಡಿದರು? ತಮ್ಮ ಸ್ವಾರ್ಥ ಸಾಧನೆಗಾಗಿ ಅಧಿಕಾರಕ್ಕಾಗಿ ಹಿಂದಿನವರನ್ನು ಹಿಂದೆ ತಳ್ಳುವ ಪ್ರಯತ್ನಕ್ಕೆ ಮುಂದಾದರು.

ಇದರ ಬಿಸ್ಪು ತಾಗಿದ್ದು ಶಿವಪ್ಪನವರಿಗೆ, ಅವರಂಥವರಿಗೆ. ಜಾತಿ ಬಿಟ್ಟರೂ ಸುಖ ಸಿಗಲಿಲ್ಲ. ಎಂತಲೇ ಬೆಳಗಾಂವಿ ಸಮ್ಮೇಳನದಲ್ಲಿ ಗೊತ್ತುವಳಿಯೊಂದನ್ನು ತಂದರು. ಅದು ದೇವರಾಜ ಅರಸರಿಗೆ ಪಥ್ಯವಾಗಲಿಲ್ಲ. ಹೊಸಬರನ್ನು ಪಕ್ಷಕ್ಕೆ ಸೇರಿಸುವಾಗ, ಅವರ ಉದ್ದೇಶವೇನೆಂಬುದನ್ನು ಪರಿಶೀಲಿಸಬೇಕು–ಹೊಸಬರು ಹಳಬರ ಸ್ಥಾನಮಾನಗಳನ್ನು ಬಳಿಸಲು ಎಳಸಬಾರದು.–ಮತ್ತೆ ಇಂಡಿಕೇಟಿನಲ್ಲೊಂದು ಸಿಂಡಿಕೇಟು ಕಟ್ಟಬೇಕೇ?–ಇತ್ಯಾದಿ ಇತ್ಯಾದಿ ಗೋಗರೆದರು. ಸಮರ್ಥನೆ ಪ್ರತಿಭಟನೆಗಳ ನಡುವೆ ಸಮ್ಮೇಳನ ಸಮಾಪ್ತ. ಯಶಪ್ರಾಪ್ತ.

ತಮ್ಮ ಬೇರು ಗಟ್ಟಿ ಮಾಡಲು ದೇವರಾಜ ಅರಸರು ಏನನ್ನೂ ಮಾಡುತ್ತಾರೆ. ಚುನಾವಣೆಗಳ ಚುಕ್ಕಾಣಿ ಹಿಡಿದವರು ಅವರೇ ಆದುದರಿಂದ ಅವರ ನಾವೆ ಲೀಲಾಜಾಲವಾಗಿ ಹರಿದಾಡುತ್ತದೆ. ಇಪ್ಪತ್ತೇಳು ಎಂಪಿಗಳಲ್ಲಿ ಹದಿನೇಳು ಎಂಪಿಗಳು ನಮಗೆ ಅರಸರು ಬೇಡವೆಂದು ಒಕ್ಕೊರಲಿನಿಂದ ಇಂದಿರಾ ಕಾಲಿಗೆ ದೊಂಬಾಲು ಬಿದ್ದು ಬೇಡಿಕೊಂಡರೂ ಇಂದಿರಾದೇವಿ ಜಪ್ಪೆನ್ನಲಿಲ್ಲ. ಅಂತಹ ಅರಸರಿಗೆ ಕೆಂಗಲ್, ಕೃಷ್ಣಪ್ಪ, ಸಿದ್ಧವೀರಪ್ಪ, ಕೋಲೂರು ಮಲ್ಲಪ್ಪನವರೇ ಕಾಲಕಸವಾಗಿರುವಾಗ ಶಿವಪ್ಪನವರೇನು? ಆದ್ದರಿಂದಲೇ ಶಿವಪ್ಪನವರು ಹೇಳುತ್ತಾರೆ—ಹೊಸ ಸದಸ್ಯರ ಸೇರ್ಪಡೆಯ ವಿಷಯದಲ್ಲಿ ನಾಯಕರಲ್ಲಿ ಯಾವ ಭಿನ್ನಮತವೂ ಇಲ್ಲ. ಎ. ಐ. ಸಿ. ಸಿ. ಗೊತ್ತು ಪಡಿಸಿದ ಕ್ರಮವನ್ನು ಕಟ್ಟು ನಿಟ್ಟಾಗಿ ಅನುಸರಿಸಬೇಕೆಂದೂ ಹಿಂಬಾಗಿಲಿಂದ ಪಕ್ಷಕ್ಕೆ ಜನ ಬಂದು ಸೇರುವುದಾದರೆ, ಅನಗತ್ಯ ತೊಂದರೆಯುಂಟಾಗುವುದೆಂದು ತಾನು ಹೇಳಿದ್ದೆಂದು ಸ್ಪಷ್ಟೀಕರಿಸಿದ್ದಾರೆ.

(ಹನ್ನೆರಡನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
137 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{4}$% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

'ಗಾಂಧೀಜಿಯ ಕೊಲೆ'

(ಭಾಗ ಆರು)

ಬರೆದವರು ಶ್ರೀ ಬಿ. ಕೃಷ್ಣ ಭಟ್, ಭದ್ರಾವತಿ

ಶ್ರೀ ಸಾವರ್ಕರರ ಆಶೀರ್ವಾದ ಪಡೆದ ಬಳಿಕ, ಆಪ್ಟೆ–ಗೋಡ್ಸೆ–ಬಾಡ್ಗೆ ಅವರ ಚಟುವಟಿಕೆಯನ್ನು ಸಹಾನುಭೂತಿಯಿಂದ ಕಾಣುತಿದ್ದ ಅಪ್ಪುಲ್‌ಪುರ್‌ಕರ್‌ರನ್ನು ಭೆಟ್ಟಿಯಾಗಲು ಬಂದರು. ಅವರ ಅದೃಷ್ಟ ಚೆನ್ನಾಗಿತ್ತು. ಅವರು ಮನೆಯಲ್ಲಿದ್ದರು. ಹೈದರಾಬಾದಿನಲ್ಲಿ ನಡೆಯುತಿದ್ದ ಚಟುವಟಿಕೆಗಳ ಬಗ್ಗೆ ಅವರೊಳಗೆ ವಿಚಾರ ವಿನಿಮಯ ನಡೆಯಿತು. ಅತಿಥೇಯರು, ಹೊರಡಲು ಆತುರಪಡುತಿದ್ದ ಅತಿಥಿಗಳ ಕೈಯಲ್ಲಿ 100-00 ರೂಪಾಯಿನ ದೇಣಿಗೆ ಕೊಟ್ಟರು.

ಕಾರು ಕುರ್ಲಾ ಕಡೆಗೆ ಓಡಿತು. ಕುರ್ಲಾದಲ್ಲಿ ಆರ್. ಯಂ. ಪಟಂಕರರನ್ನು ಕುಳ್ಳಿರಿಸಿಕೊಂಡು, ಅವರ ಆದೇಶದಂತೆ ಮಹದೇವ ಗಣೇಶ ಕಾಳೆಯವರ ವಾಸದ ಮನೆಗೆ ಹೋದರು. ಕಾಳೆಯವರು ಬರೆಯುವ ಮಸಿಯ ತಯಾರಕರು. ಪಟಂಕರ್ ಕಾಳೆಯವರಿಗೆ ಜೊತೆಗಿದ್ದ ಸ್ನೇಹಿತರ ಪರಿಚಯ ಮಾಡಿಕೊಟ್ಟರು. ಅನಂತರ ಅವರೊಳಗೆ ಚರ್ಚೆ ನಡೆಯಿತು. ಅದು ನಡೆದುದು ಇಂಗ್ಲೀಷಿನಲ್ಲಿ. ಬಾಡ್ಗೆಗೆ ಅದರ ತಲೆ–ಬುಡ ತಿಳಿಯಲಿಲ್ಲ. ಆದರೆ ಮಾತುಕತೆ ನಡೆಯುತಿದ್ದಂತೆಯೇ ಕಾಳೆಯವರು ಮಹಡಿಯ ಮೇಲಕ್ಕೆ ಹೋಗಿ ಬಂದರು. ಬರುತ್ತಾ ತಂದಿದ್ದ ನೋಟಿನ ಕಟ್ಟನ್ನು ಆಪ್ಟೆಯ ಕೈಯಲ್ಲಿರಿಸಿದರು. ಆ ಗಂಟೆನೊಡನೆ ಅವರು ಮಥುರದಾಸರಲ್ಲಿಗೆ ಬಂದರು. ಅವರು ಬಟ್ಟೆಗಳಿಗೆ ಬಣ್ಣ ಹಾಕುವ ಉದ್ದಿಮೆ ನಡೆಸುತಿದ್ದರು. ಅವರು ಮನೆಯಲ್ಲಿರಲಿಲ್ಲ. ಅವರ ಮನೆಯ ಬಳಿ ಬಾಡ್ಗೆ—ಕಿಷ್ಟಯ್ಯರನ್ನು ಇಳಿಸಿ, ಅಗತ್ಯದ ಕೆಲಸವಿದೆ ಎಂದು ಆಪ್ಟೆ–ಗೋಡ್ಸೆ ಕಾರಿನಲ್ಲಿ ಹೊರಟು ಹೋದರು. ಮಥುರದಾಸರ ಆಗಮನವನ್ನೇ ನಿರೀಕ್ಷಿಸುತ್ತ ಬಾಡ್ಗೆ—ಕಿಷ್ಟಯ್ಯ ಒಂದೆಡೆ ನಿಂತರು. ಒಂದು ತಾಸು ಕ್ರಮಿಸಿರಬಹುದು. ಅಷ್ಟರಲ್ಲಿ ಗೋಡ್ಸೆ–ಆಪ್ಟೆ ಅಲ್ಲಿಗೆ ಬಂದರು. ಅದರೊಳಗಾಗಿ ಸೇಠರು ಗೂಡು ಸೇರಿದ್ದರು. ಆಪ್ಟೆ ಅವರೊಡನೆ ಇಂಗ್ಲೀಷಿನಲ್ಲಿ ಏನೋ ಮಾತನಾಡಿದ. ಅವರು ಸಾವಿರ ರೂಪಾಯಿಗಳ ದಾನ ನೀಡಿದರು. ಚರಣದಾಸ ಮಥುರದಾಸರು ಪ್ರಾಸಿಕ್ಯೂಷನ್ ಪರ ವಿಚಾರಣೆಯಾದ ಹನ್ನೊಂದನೆಯ ಸಾಕ್ಷಿ.

ಇಷ್ಟು ಮೊತ್ತವನ್ನು ಸಂಗ್ರಹಿಸಿಕೊಂಡು, ಆ ಗುಂಪು ಕಾರಿನಲ್ಲಿ ಸಾಂತಕ್ರೂಸ್ ವಿಮಾನ ನೆಲೆಯತ್ತ ಧಾವಿಸಿತು. ಆಪ್ಟೆ ಅಲ್ಲಿ ಕಾರಿನಿಂದಿಳಿದ. 250-00 ರೂಪಾಯಿಗಳನ್ನು ಬಾಡ್ಗೆಯ ಕೈಯಲ್ಲಿಟ್ಟು, ರಾತ್ರಿಯ ಪಂಜಾಬ್ ಮೇಲಿನಲ್ಲಿ ದಹಲಿಗೆ ಹೊರಡಲು ಹೇಳಿ ಗೋಡ್ಸೆಯೊಡನೆ ಹೊಟು ಹೋದ.

ಬಾಡ್ಗೆ ಕೈಗೆ ಹತ್ತಿದ ದುಡ್ಡು ಸಾಲದೆ ಸಿತು. ಆತ ಶಂಕರ ಕಿಷ್ಟಯ್ಯನೊಡನೆ ಬ್.ಕೆ.ಪಟವರ್ಧನರನ್ನು ಅರಸುತ್ತ ಹೋದ. ಅವರ ಗ್ರಹಚಾರಕ್ಕೆ ಆತ ಮನೆಯಲ್ಲಿರಲಿಲ್ಲ. ಅವರನ್ನು ಕಾಯುವುದು ಅನಿವಾರ್ಯವಾಯಿತು. ಕಾರಿನವನಿಗೆ ಬಾಡಿಗೆಯೆಂದು 55|— ರೂ.ಗಳನ್ನು ತೆತ್ತು, ಪಟವರ್ಧನರ ನಿರೀಕ್ಷೆಯಲ್ಲಿ ಅಲ್ಲಿಯೇ ಕುಳಿತ. ಆವರೇನೋ ಬಂದರು. ಆದರೆ ಅವರ ಕೈಯಲ್ಲಿ ಹಣವಿರಲಿಲ್ಲ. ಇರಲಿಲ್ಲವೆಂದು ಬರಿಗೈಯಲ್ಲಿ ಕಳಿಸಲಿಲ್ಲ. ಪಟಂಕರ್, ಆಚಾರ್ಯಮಾಸ್ತರರೆನ್ನುವ ಸ್ನೇಹಿತರಿಂದ ತಲಾ 200—00ರಂತೆ ಕೈಗಡ ತೆಗೆದುಕೊಂಡು ಬಾಡ್ಗೆಯ ವಶಕೊಟ್ಟರು. ಅದೇ ರಾತ್ರಿ ಬಾಡ್ಗೆ—ಕಿಷ್ಟಯ್ಯ ಮುಂಬಯಿ ಬಿಟ್ಟು, 19ರಂದು ದೆಹಲಿಯಲ್ಲಿ ಪ್ರತ್ಯಕ್ಷರಾದರು.

ಅವರನ್ನು ಸ್ವಾಗತಿಸಲು ಯಾರೂ ನಿಲ್ದಾಣಕ್ಕೆ ಬಂದಿರಲಿಲ್ಲ. ಬಾಡಿಗೆಗೊಂದು ಟಾಂಗಾಮಾಡಿ ಕೊಂಡು ಅವರು ದೆಹಲಿಯಲ್ಲಿರುವ ಹಿಂದು ಮಹಾಸಭೆಯ ಕಛೇರಿಗೆ ಹೋದರು. ಜವಾನನೊಬ್ಬನನ್ನು ಉಳಿದು ಕೊಳ್ಳಲು ಸ್ಥಳ ಕೇಳಿದರು. ಆತ ಅವರಿಗೆ ಹಿಂಭಾಗದಲ್ಲಿದ್ದ ವಿಶಾಲವಾದ ಕೊಟಡಿಯನ್ನು ತೋರಿಸಿದ. ಆಗಲೇ ರಾತ್ರಿ ಹನ್ನೊಂದು ದಾಟಿತ್ತು. ಹಾಸುಗೆಯ ಸುರುಳಿಯನ್ನು ಬಿಚ್ಚಿ ಕಾಲು ಚಾಚುವಷ್ಟರಲ್ಲಿ ಅಲ್ಲಿಗೆ ಮದನಲಾಲ ಬಂದ. ಆತ ಅವರಿಬ್ಬರಿಗೆ ತನ್ನ ಜೊತೆಗಿದ್ದ ಗೋಪಾಲ ಗೋಡ್ಸೆಯ ಪರಿಚಯ ಮಾಡಿ ಕೊಟ್ಟ. ಅಷ್ಟರಲ್ಲಿ ಗೋಡ್ಸೆ—ಆಪ್ಟೆ ಅಲ್ಲಿಗೆ ಬಂದರು. ಬಾಡ್ಗೆ-ಕಿಷ್ಟಯ್ಯರನ್ನು ರೈಲು ನಿಲ್ದಾಣದಲ್ಲಿ ಇದಿರುಗೊಳ್ಳಲೆಂದು ಅವರು ನಿಲ್ದಾಣಕ್ಕೆ ಹೋಗಿ, ಅವರನ್ನು ಕಾಣದೆ ನಿರಾಶರಾಗಿ ಅಲ್ಲಿಗೆ ಬಂದಿದ್ದರು. ಇಬ್ಬರಿಗೂ ವಿಶ್ರಮಿಸಿಕೊಳ್ಳಲು ಹೇಳಿ, ಗೋಡ್ಸೆ—ಆಪ್ಟೆ ಮರೀನಾ ಹೋಟೆಲಿಗೆ ಮರಳಿದರು.

ಜನವರಿ 15ರಂದು ಮುಂಬಯಿ ಬಿಟ್ಟ, ಮದನಲಾಲ—ಕರಕರೆ 11ರ ಮಧ್ಯಾಹ್ನ ದೆಹಲಿ ಸೇರಿದರು. ಅಂದು ಅವರ ಜೊತೆ ಅಂಗ್ಚೇಕರ್ ಎನ್ನುವವರು ಪ್ರಯಾಣ ಮಾಡಿದರು. ಅವರನ್ನೂ ಕರೆದು ಕೊಂಡು ಮದನಲಾಲ್—ಕರಕರೆ ಹಿಂದೂ ಮಹಾಸಭೆಯ ಕಛೇರಿಗೆ ಹೋದರು. ಅಲ್ಲಿ ಅವರಿಗೆ ಉಳಿದುಕೊಳ್ಳಲು ಸ್ಥಳ ಸಿಗಲಿಲ್ಲ. ಅವರು ಕುಳಿತ ಗಾಡಿ ಬಿರ್ಲಾ ಮಂದಿರಕ್ಕೆ ಹೋಯಿತು. ಅಲ್ಲಿಯೂ ಇಳಿದುಕೊಳ್ಳಲು ಅವಕಾಶ ದೊರೆಯಲಿಲ್ಲ. ವಸತಿಗೆ ಸ್ಥಳ ಹುಡುಕಿಕೊಂಡು ಅವರು 'ಚಾಂದನೀ ಚೌಕಕ್ಕೆ' ಬಂದರು. ಅಗ್ಗದ ಹೋಟೆಲೊಂದರಲ್ಲಿ – ಷರೀಫ್ ಹೋಟೆಲಲ್ಲಿ— ಬಾಡಿಗೆಗೊಂದು ಕೋಣೆ ಹಿಡಿದರು. ಹೋಟೆಲಿನ ರಿಜಿಸ್ಟರಿನಲ್ಲಿ ಕರಕರೆ ಬಿ. ಯಂ ವ್ಯಾಸ್ ಎಂದು ಸಹಿ ಮಾಡಿದ. ಮದನಲಾಲ ತನ್ನ ಹೆಸರನ್ನು ಮರೆ ಮಾಚಲಿಲ್ಲ. ಹಾಗೆಯೇ ರುಜು ಮಾಡಿದ. ರೈಲಿನಲ್ಲಿ ತಮಗೆ ಜೊತೆಯಾದ ಅಂಗ್ಚೇಕರರೊಡನೆ ಮದನಲಾಲ–ಕರಕರೆ ತಮ್ಮ ದೆಹಲಿ ಪ್ರವಾಸದ ಉದ್ದಿಶ್ಯವನ್ನು ತಿಳಿಸಿರಲಿಲ್ಲ. ಜಲಂಧರಿನಲ್ಲಿ ಮದನಲಾಲನ ಲಗ್ನ ನಡೆಯುವುದಿದೆ. ಕನ್ಯೆ ಗೊತ್ತಾಗಿದೆ. ದೆಹಲಿಯಲ್ಲಿರುವ ಬಂಧುಗಳನ್ನು ಕರೆಯಲು ಹೋಗುತಿದ್ದೇವೆ. ಅವರನ್ನು ಖುದ್ದು ಆಹ್ವಾನಿಸಿ ಜಲಂಧರಕ್ಕೆ ಹೋಗುವುದಾಗಿ ತಿಳಿಸಿದ್ದರು. ಈ ಹೋಟೆಲಿನ ರಿಜಿಸ್ಟರೂ ಕೋರ್ಟಿಗೆ ಬಂತು. ಅಂಗ್ಚೇಕರ್ ಪ್ರಾಸಿಕ್ಯೂಷನ್ ಪರ ಸಾಕ್ಷಿ ಹೇಳಿದರು. ಮದನಲಾಲ–ಕರಕರೆಯನ್ನು ಕೋರ್ಟಿನಲ್ಲಿ ಗುರುತಿಸಿದರು. ಷರೀಫ್ ಹೋಟೆಲಿಗೆ ಕೊಡಬೇಕಾಗಿದ್ದ ಬಾಡಿಗೆಯನ್ನು ಮೂವರೂ ಹಂಚಿಕೊಂಡೆವು ಎಂದು ಹೇಳಲು ಮರೆಯಲಿಲ್ಲ.

ಜನವರಿ 14ರಂದು ಮುಂಬಯಿಯಲ್ಲಿ ಖಂಡಿತ ಸಿಗುವುದಾಗಿ ಬಾಡ್ಗೆಗೆ ಕೊಟ್ಟ ಮಾತನ್ನು ಆಪ್ಟೆ ಮರೆತಿರಲಿಲ್ಲ. ಮುಂಬಯಿಯ ಹಿಂದು ಮಹಾಸಭೆಯ ಕಛೇರಿಯಲ್ಲಿ, ಒಪ್ಪಿಕೊಂಡ ಮಾಲಿನೊಡನೆ ಆತ ತನ್ನನ್ನು ಕಾಯುತ್ತಿರಬಹುದೆಂಬ ಸಂಗತಿ ಪೂರ್ತಿಯಾಗಿ ಅವನ ಸ್ಮೃತಿ ಪಥದಿಂದ ಅಳಿಸಿ ಹೋಗಿರಲಿಲ್ಲ. ಆದ್ದರಿಂದ ಆದಷ್ಟು ಬೇಗನೆ ಪುಣೆ ಬಿಡಲು ಆತ ಚಡಪಡಿಸಿದ. ಆಪ್ಟೆ–ಗೋಡ್ಸೆ ಜನವರಿ 14ರಂದು ಪುಣೆಯ ರೈಲು ನಿಲ್ದಾಣಕ್ಕೆ ಧಾವಿಸಿ ಬಂದರು. ಎರಡು ಪ್ರಥಮ ತರಗತಿಯ ಟಿಕೇಟುಗಳನ್ನು ಪಡೆದರು. ಮುಂಬಯಿಗೆ ಹೊರಟು ನಿಂತ ಎಕ್ಸ್‌ಪ್ರೆಸ್ ಗಾಡಿಯನ್ನು ಹತ್ತಿದರು. ಆ ರೈಲು 2-30ರ ಸುಮಾರಿಗೆ ಪುಣೆಯಿಂದ ಹೊರಟು 6-30ರ ಸುಮಾರಿಗೆ ಮುಂಬಯಿ ತಲುಪುತ್ತಿತ್ತು. ರೈಲು ಹೊರಡಲು ಇನ್ನೂ ಸಮಯವಿತ್ತು. ಗೋಡ್ಸೆ ರೈಲಿನಿಂದಿಳಿದ. ಪ್ಲಾಟ್ ಫಾರಂ ಮೇಲೆ ಅತ್ತಿಂದಿತ್ತ ಅಲೆಯಲಾರಂಭಿಸಿದ.

ಆಪ್ಟೆ ಕುಳಿತಿದ್ದ ಡಬ್ಬಿಯನ್ನು ಹೆಣ್ಣುಮಗಳೊಬ್ಬಳು ಪ್ರವೇಶಿಸಿದಳು. ಅವಳನ್ನು ಹಿಂಬಾಲಿಸಿದಳು ವಯಸ್ಸಾದ ಮಹಿಳೆಯೊಬ್ಬಳು. ವಯಸ್ಸಾದವಳು ಒಂದು ಮೂಲೆಯಲ್ಲಿ ಸ್ಥಳ ಮಾಡಿಕೊಂಡು ಕುಳಿತಳು. ಆದರೆ ಆ ತರುಣಿ ಗಾಡಿ ತುಂಬ ತನ್ನ ಕಣ್ಣು ಹಾಯಿಸುತ್ತ ನಿಂತಳು. ಆಕೆ ಏನನ್ನೋ ಹುಡುಕುತ್ತಿರುವಂತೆ ತೋರಿತು.

ಆ ಸುಂದರ ತರುಣಿ ಬೇರಾರೂ ಅಗಿರಲಿಲ್ಲ. ಮಹಾರಾಷ್ಟ್ರದ ತರುಣರ ಹೃದಯವನ್ನು ತನ್ನ ಕಣ್ನೋಟಗಳಿಂದ ಸೆರೆಹಿಡಿದ ಸುಪ್ರಸಿದ್ಧ ಸಿನೆಮಾ ತಾರೆ— ಶಾಂತಾ ಮೋದಕ್. ವಯಸ್ಸಾದ ಮಹಿಳೆ, ಅವಳ ತಾಯಿ ಚಂಪಾವತಿ ಮೋದಕ್. ಅವರಿಬ್ಬರ ಸಾಕ್ಷಿಯನ್ನು ಕೆಂಪು ಕೋಟೆಯಲ್ಲಿ ನಡೆದ ಕೊಲೆ ಖಟ್ಲೆಯಲ್ಲಿ ತೆಗೆದುಕೊಳ್ಳಲಾಯಿತು. ಚಂಪಾವತಿ ಪ್ರಾಸಿಕ್ಯೂಷನ್ ಪರ ವಿಚಾರಣೆಯಾದ ಹದಿಮೂರನೆಯ ಸಾಕ್ಷಿ. ಕುಮಾರಿ ಶಾಂತಾ ಮೋದಕಳ ಕ್ರಮಸಂಖ್ಯೆ ಮೂವತ್ತೊಂದು. ಪುಣೆ–ಮುಂಬಯಿ ಮಧ್ಯೆ ನಡೆದ ಅಂದಿನ ಸ್ವಾರಸ್ಯಕರ ಪ್ರಸಂಗವನ್ನು ಶಾಂತಾ ಕೋರ್ಟಿನಲ್ಲಿ ಹೀಗೆ ವಿವರಿಸಿದಳು.

'ಸಾಮಾನ್ಯವಾಗಿ ನಾನಿರುವುದು ಪುಣೆಯಲ್ಲಿ. ಆದರೆ ನನ್ನ ಹೆಚ್ಚಿನ ಕೆಲಸವಿರುವುದು ಮುಂಬಯಿಯಲ್ಲಿ. ನನ್ನ ಒಡ ಹುಟ್ಟಿಗಳಲ್ಲಿ ತ್ರಿಯಂಬಕ ಎನ್ನುವವರು ಮುಂಬಯಿಯಲ್ಲಿಯೇ ನೆಲಸಿದ್ದಾರೆ. ಅವರ ವಾಸದ ಮನೆ ಶಿವಾಜಿ ಪಾರ್ಕಿನಲ್ಲಿದೆ. 14-1-48ರಂದು ನಾನು ತಾಯಿಯ ಜೊತೆ ಪುಣೆಯಿಂದ, ಮುಂಬಯಿಗೆ ತೆರಳಿದೆ– ಸಂಜೆ 3ರ ಸುಮಾರಿಗೆ ಪುಣೆಯಿಂದ

(ಹನ್ನೊಂದನೆಯ ಪುಟ ನೋಡಿರಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಪಾಕ್ ಮತ್ತು ಕೆಂಪು ಚೀನಾಗಳ

ಯಾವ ಜನ್ಮದ ಮೈತ್ರಿ

ಪ್ರಧಾನಿ ಇಂದಿರಾಗಾಂಧಿಯವರು ಗೃಹಶಾಖಾ ಮಂತ್ರಿಗಳಾದರೂ ಪ್ರಧಾನಿ ಮಂತ್ರಿಯೂ ಆಗಿರುವುದರಿಂದ ವಿದೇಶ ನೀತಿಯನ್ನು ಸಂಪೂರ್ಣವಾಗಿ ಸರ್ದಾರ್‌ಸ್ವರ್ಣ ಸಿಂಗರಿಗೇ ಬಿಡುವಂತಿಲ್ಲ. ಬಂಗ್ಲಾ ದೇಶದ ಬಗ್ಗೆ ಆರು ತಿಂಗಳುಗಳಿಗೆ ಹಿಂದೆ ತಳೆದಿದ್ದ ಅವರ ನೀತಿ ಈಗ ಬದಲಾಗಿರುವುದು ಸ್ವಯಂವೇದ್ಯ.ಬಂಗ್ಲಾ ದೇಶವು ಪಾಕಿಸ್ತಾನದಿಂದ ಸಿಡಿದ ಸ್ವತಂತ್ರ ದೇಶವಾಗ ಬೇಕು ಎಂಬುದು ಅಂದಿನ ನಿಲುವೆಯಾಗಿದ್ದಂತೆ ಅವರ ವರ್ತನೆ ಇತ್ತು. ಇಲ್ಲಿಯೂ ಅಮೆರಿಕೆ ಅವರಿಗೆ ಸಂಪೂರ್ಣ ಮೋಸ ಮಾಡಿದ್ದರಿಂದ ಅದು ಹೆಬ್ಬಯಕೆಯಾಗುತ್ತದೆಂದು ಅವರು ಕೂಡಲೇ ತಿಳಿದುಕೊಂಡು, 'ರಾಜಕೀಯ ಪರಿಹಾರ'ದ ಮಾತನ್ನು ಪುರಸ್ಕರಿಸ ಹೊರಟರು. ವಾರವೆರಡು ವಾರಗಳಲ್ಲಿ ಮುಗಿದು ಹೋಗುತ್ತದೆಂದವರು ನಂಬಿದ್ದ ಸಮಸ್ಯೆ ದಿನದಿನಕ್ಕೂ ಅವರನ್ನು ಸಿಕ್ಕು ಹಾಕಿಕೊಂಡೇ ಹೋಗುತ್ತಿದೆ. ಅವರೊಂದಿಗೆ ಭಾರತವೂ ಸುಳಿಯಲ್ಲಿ ಮುಳುಗುತ್ತಿದೆ.

ವಿಶ್ವದ ಬೇರೆ ಬೇರೆ ರಾಷ್ಟ್ರ ಪ್ರಮುಖರಿಗೆ ಅವರು ಪತ್ರ ಬರೆದು ಭಾರತಕ್ಕೆ ಅನಪೇಕ್ಷಣೀಯವಾಗಿ ಅಡಹಾಯ್ದ ಗಂಭೀರ ಸಮಸ್ಯೆಯನ್ನೆದುರಿಸುವಲ್ಲಿ ಅವರ ಸಹಾನುಭೂತಿ-ಸಹಕಾರಗಳನ್ನು ಬಯಸಿದರು. ಹಲವು ದೇಶಗಳಿಗೆ ತಮ್ಮ ಮಂತ್ರಿಗಳನ್ನು, ಉಪಮಂತ್ರಿಗಳನ್ನು ಅಟ್ಟಿ, ಮುಖತಃ ದೊಂಬಾಲು ಬೀಳುವಂತೆ ಮಾಡಿದರು. ನಿರಾಶ್ರಿತರ ಹೊಟ್ಟೆಹೊರೆಯಲು ಕೋಟಿಗಟ್ಟಲೆ ರೂಪಾಯಿ ಹರಿವಂತೆಯೇ ಇವರ ವಿದೇಶ ಸಂಚಾರದಲ್ಲೂ ವಿದೇಶೀ ವಿನಿಮಯ ಕೊಚ್ಚಿಹೋಯಿತು. ಆದರೆ ಯಾವ ಸಹಾನುಭೂತಿ — ಸಹಾಯವನ್ನು ಆಕೆ ಬಯಸಿದ್ದರೋ ಅದು ಅವರಿಗೆ ಎಲ್ಲಿಂದಲೂ ಸಿಗಲಿಲ್ಲ. ಬರಿಯ ಬಾಯ್ಮಾತಿನ ಸಹಾನುಭೂತಿಯೇತಕ್ಕೆ? ಆದರಿಂದಲೇ ನಮ್ಮ ರಾಗ ಬದಲು. ರಾಜ್ಯಕೀಯ ಪರಿಹಾರವೇ ಬೇಕು—ಅದು ಮುಜಿಬುರ್ ರೆಹಮಾನರೊಂದಿಗೆ ಸಂಧಾನದಿಂದಲೇ ಸಾಧ್ಯ—ಮೊದಲು ಆಕಾಶ—ಅನಂತರ ಪಾತಾಳ.

ಇದರ ಪರಿಣಾಮ ಯಾಹ್ಯಾಖಾನರ ಮೇಲೂ ಆಗದುಂಟೆ? ಅವರು ತಮ್ಮ ತುಟಿಗಳೊಳಗೇ ನಕ್ಕಿರ ಬಹುದು. ಅವರು ತಮ್ಮ ಸೇನೆಯನ್ನು ಸಿದ್ಧಗೊಳಿಸಿ ಭಾರತದ ಮೇಲೆ ಆಕ್ರಮಣಕ್ಕೆ ಸಿದ್ಧರಾಗಿದ್ದಾರೆಂದೂ ಸುದ್ದಿ—ವರದಿ—ದೃಢವರದಿ. ಸಂರಕ್ಷಣಾ ಮಂತ್ರಿ ಶ್ರೀ ರಾಮರು ನಮ್ಮ ಸೇನೆಗೂ ಆಜ್ಞೆ ನೀಡಿದ್ದಾರೆಂದು ಕಿಂವದಂತಿ.

ಎಂಟು ವರ್ಷಗಳಿಗೆ ಮೊದಲು ಕೆಂಪು ಚೀನಾ ಆಕ್ರಮಣ ಮಾಡಿದಾಗಲೂ ನಾವು ಇದೇ ರೀತಿ ಹೇಳುತ್ತಿದ್ದೆವು—ಗಡಿ ಭದ್ರವಾಗಿದೆ—ನಮ್ಮ ಸೇನೆಯೂ ಇದೆ. ಚೀನೀಯ ಗುಂಡುಗಳು ಹಾರ ತೊಡಗಿದ ಮೇಲೆ ನಾವು ಬಂದೂಕು ಹುಡುಕ ಹೊರಟದ್ದನ್ನು ನೆನೆದರೆ ನಗೆಯು ಬರುತ್ತದೆ. ಯಾಹ್ಯಾಖಾನರು ಕಾಲು ಕೆದರಿ ಜಗಳ ಕರೆಯುವಾಗ, ನಾವು ಶ್ರೀರಾಮ ನಾಮ ಜಪಿಸುತ್ತ ಮೂಗು ಹಿಡಿದು ಕೂತುಕೊಳ್ಳುವುದರಿಂದ ಎಂದಿಗೂ ನಮ್ಮ ಮೂಗು ಉಳಿಯುವುದಿಲ್ಲ.

○ ○ ○

ಶ್ರೀಮತಿ ಇಂದಿರಾಗಾಂಧಿಯವರು ಎಲ್ಲರಿಗೂ ಪತ್ರ ಬರೆದಂತೆ ಕೆಂಪು ಚೀನಾದ ಪ್ರಧಾನಿ ಶ್ರೀ ಚೌ-ಎನ್-ಲಾಯ್‌ಗೂ ಬರೆದರು. ಇತರರೆಲ್ಲರಿಂದ ಸಹಾನುಭೂತಿಯ ನಾಲ್ಕು ಪಂಕ್ತಿ ಬಂದರೂ ಚೌ-ಎನ್-ಲಾಯರಿಂದ ಏನೂ ಬರಲಿಲ್ಲ. ಭಾರತದೊಂದಿಗೆ ತನ್ನ ಸಂಬಂಧವನ್ನು ಸುಧಾರಿಸಲು ಉತ್ಸುಕವಿದೆಯೆಂದು ಹೇಳಿಕೊಳ್ಳುವ ಕೆಂಪು ಚೀನಾವು ಈಗ ಅನಾಯಾಸವಾಗಿ ಒದಗಿ ಬಂದ ಅವಕಾಶವೊಂದನ್ನು ಕಳೆದುಕೊಳ್ಳುವುದೇಕೆ? ಶ್ರೀಮತಿ ಗಾಂಧಿಯವರಿಗೆ ಸಹಾನುಭೂತಿ ತೋರಿಸಿ ನಾಲ್ಕಕ್ಷರ ಬರೆದರೆ, ಸುಧಾರಣೆಯಲ್ಲಿ ಅದೊಂದು ಮುಂದಿನ ಹೆಜ್ಜೆಯಾಗುವುದು. ಆದರೆ ಚೌ ಮೌನ—ನಿರ್ವಾಣ.

ಕೆಂಪು ಚೀನಕ್ಕೆ ಯುಕ್ತರಾಷ್ಟ್ರ ಸಂಘದಲ್ಲಿ ಪ್ರಾತಿನಿಧ್ಯ ಬೇಕೆಂದು ಮೊದಲಿಗೆ ಸಮರ್ಥಿಸಿದ ದೇಶ ಭಾರತ. ತನಗೂ ಚೀನಾಕ್ಕೂ ಘರ್ಷಣೆ ನಡೆದ ಮೇಲೂ ಭಾರತ ಚೀನಾ ಪ್ರವೇಶಕ್ಕೆ ಪ್ರತಿಭಟಿಸಿದ್ದೆಂಬುದಿಲ್ಲ. ಇದೀಗ, ಅಮೆರಿಕದ ಚೀನಾಪರ ನೀತಿ ಬದಲಾಗಿ ಅದಕ್ಕೆ ಪ್ರವೇಶ ಸಿಗಲಿದೆಯೆನ್ನುವಾಗ, 'ಎರಡು ಚೀನಾ' ನೀತಿಯನ್ನು ಖಂಡಿಸಿ ತಾನೇ ಬೇಡವೆನ್ನುವ ದಿಟ್ಟತನವನ್ನು ಲಾಯ್ ತೋರಿಸುತ್ತಾರೆ. ತೈವಾನವನ್ನು ಹೊರ ಹಾಕಬೇಕು: ಅನಂತರ ತನಗೆ ಪ್ರವೇಶ ನೀಡಬೇಕು ಎನ್ನುವ ಛಲ ಅವರದ್ದು. ಅಂತಹ ಚೌ-ಎನ್-ಲಾಯ್ ಭಾರತದ ಗೃಹಾಂತರ ಪರಿಸ್ಥಿತಿಯಲ್ಲೇಕೆ ಸಹಾನುಭೂತಿ ತೋರಿಸುತ್ತಾರೆ?

ವಾಸ್ತವಿಕವಾಗಿ ಲಾಯಿಗೆ ಇಂದಿರಾ ಗಾಂಧಿಯ ಮೇಲೆ ಸಹತಾಪವಿದೆಯಂತೆ. ಆದರೆ, ಬಂಗ್ಲಾವನ್ನು ಅವರು ಬಂಗ್ಲಾ ನೆಂದು ಕರೆಯುವುದೇ ಇಲ್ಲ ಪೂರ್ವ ಪಾಕಿಸ್ತಾನವನ್ನು ಹೇಗೆ ಆಳಬೇಕೆಂದು ಯಾಹ್ಯಾಖಾನರಿಗೆ ಲಾಯ್ ಸಲಹೆ ನೀಡುವುದು ಹೇಗೆ ಸಾಧ್ಯ? ಖಾನರಿಗೆ ಸಲಹೆ ನೀಡಬೇಕೆಂದು ಕೇಳಿಕೊಳ್ಳುವ ಗಾಂಧಿ ತನಗೆ ಲಾಯ್ ಸಲಹೆ ನೀಡಿದರೆ ಏನು ಹೇಳುತ್ತಾರೆ? ಆಂತರಿಕ ವ್ಯವಹಾರದಲ್ಲಿ ಲಾಯರು ಮಧ್ಯೆ ಪ್ರವೇಶಿಸಿದರೆನ್ನರೆ? ಆದುದರಿಂದ ಲಾಯರ ಮಟ್ಟಿಗೆ ಬಂಗ್ಲಾದ ಪ್ರಶ್ನೆ ಗೃಹ ಕಲಹ ಮಾತ್ರ, ಅದರಲ್ಲಿ ಅಂತಾರಾಷ್ಟ್ರೀಯ ಸ್ವರೂಪ ಇಲ್ಲವೇ ಇಲ್ಲ. ಬಂಗ್ಲಾವನ್ನೂ ಬಂಗ್ಲಾದೇಶೀಯರನ್ನೂ ಯಾಹ್ಯಾಖಾನರು ಪುಡಿಗುಟ್ಟಿ ಊದಿಬಿಟ್ಟರೂ ಚೀನಾ ತುಟಿ ಬಿಚ್ಚದು. ಭಾರತವೂ ಹಾಗೇ ತೆಪ್ಪಗೆ ಕುಳಿತಿರಬೇಕು. ಮೂಕವಾಗಿ ಪರಿಸ್ಥಿತಿಯನ್ನು ಸಹಿಸಬೇಕು.

ಚೌ-ಪಾಕಿಸ್ತಾನದ ಮೈತ್ರಿಗೆ ಸುಮಾರು ಎರಡು ದಶಕ ತುಂಬಿತು. ಈ ಮಾವ ಅಳಿಯನ ಮೈತ್ರಿಗೆ ಹುಳಿ ಹಿಂಡಲು ಚೌ ತಯಾರಿಲ್ಲ. ಎಲ್ಲರಿಂದಲೂ ಎಲ್ಲ ಬಗೆಯಲ್ಲೂ ಸ್ನೇಹವುಳಿಸಿಕೊಂಡು ದೇಶವನ್ನು ದಿವಾಳಿ ತೆಗೆಯುವ ತಂತ್ರ ಪಾಕ್ ನಾಯಕರಿಗೆ ಮಾತ್ರ ಕರತಲಾಮಲಕ. ಪರಸ್ಪರ ವಿರೋಧಿಗಳಾದ ರಷ್ಯ, ಚೀನ, ಅಮೆರಿಕೆ ಮೂರು ಮಹಾರಾಷ್ಟ್ರಗಳೂ ಯಾಹ್ಯಾಖಾನರ ನಿಕಟ ಮಿತ್ರರು. ಈ ಅಲಭ್ಯ ಮಿತ್ರತನವನ್ನು ಕಳೆದುಕೊಳ್ಳಲು ಮೂವರೂ ತಯಾರಿಲ್ಲ. ಆದುದರಿಂದ ಗಾಂಧಿಯ ಪತ್ರವನ್ನು ಓದಿ 'ಪಂಚಶೀಲ'ದ ಕೈವಾರಿಗಳಾದ ತಾವು ಏನೂ ಹೇಳಲಾರೆನೆಂದು ಲಾಯರು ಯಾಹ್ಯಾರ ಮೂಲಕವೇ ಡಂಗುರ ಸಾರಿದ್ದಾರೆ. ●

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು-4

ಭಾರತೀಯ ಕ್ಷಯರೋಗ ನಿವಾರಣಾ ಸಮಿತಿ

ನವದೆಹಲಿ

22ನೆಯ ಟಿ ಬಿ ಮೊಹರು ಮಾರಾಟ ಚಳುವಳಿ

ಕ್ಷಯರೋಗದ ಆರಂಭದ ಸರ್ವಸಾಮಾನ್ಯ ಚಿಹ್ನೆಗಳೆಂದರೆ ದೇಹಾಲಸ್ಯ, ಹಸಿವೆ ಮತ್ತು ಭಾರ ಕಡಮೆಯಾಗುವುದು. ಕಫ ಜ್ವರ ಮತ್ತು ಇನ್ನು ಕೆಲವು ರೋಗಿಗಳಲ್ಲಿ ರೋಗವು ಉಲ್ಬಣಗೊಂಡಾಗ ರಕ್ತ ಕಾರುವುದು ಸಹ ಉಂಟು. ರೋಗಿಗಳ ಉಗುಳು ಪರೀಕ್ಷೆ ಮತ್ತು ಎಕ್ಸ್‌ರೇಯಿಂದ ಆರಂಭದಲ್ಲಿಯೇ ಕ್ಷಯರೋಗವನ್ನು ಕಂಡುಹಿಡಿಯಲು ಸಹಾಯವಾಗುತ್ತದೆ. ಶೀಘ್ರ ರೋಗ ಪರೀಕ್ಷೆ ಮತ್ತು ಕ್ರಮಾಗತ ಚಿಕಿತ್ಸೆ ಇವುಗಳಿಂದ ಗುಣ ನಿಶ್ಚಯ. ನಿರ್ದಿಷ್ಟ ಔಷಧಿಗಳು ಸಿಗುವುದರಿಂದ ಕ್ಷಯರೋಗವು ಗುಣಪಡಿಸಬಹುದಾದ ರೋಗವೆಂಬುದು ನೆನಪಿಡತಕ್ಕ ಮುಖ್ಯ ವಿಷಯ.



ಬಡ ಕ್ಷಯ ರೋಗಿಗಳಿಗೆ ಉಚಿತ ಔಷಧಗಳು ಮತ್ತು ಇತರ ಸಹಾಯವನ್ನು ಮಾಡಲು ಅನುಕೂಲವಾಗುವಂತೆ ಟಿ ಬಿ ಮೊಹರುಗಳನ್ನು ಪಡಕೊಂಡು ನಿಮ್ಮ ರಾಜ್ಯದ ಟಿ ಬಿ ಎಸೋಸಿಯೇಷನ್ನಿಗೆ ಬೆಂಬಲ ಕೊಡಿರಿ.

ಇಂದೇ ಟಿ ಬಿ ಮೊಹರುಗಳನ್ನು ಪಡಕೊಳ್ಳಿರಿ.

ಮೊಹರುಗಳು ಸಿಗುವ ಸ್ಥಳಗಳು:— ದಕ್ಷಿಣ ಕನ್ನಡ ಜಿಲ್ಲಾ ಟಿ ಬಿ ಎಸೋಸಿಯೇಷನ್, ಮಂಗಳೂರು, ಟಿ ಬಿ ಆಸ್ಪತ್ರೆಗಳು, ಟಿ ಬಿ ಚಿಕಿತ್ಸಾ ಕೇಂದ್ರಗಳು, ವೈಎಂಸಿಎ, ವೈಡಬ್ಲ್ಯುಸಿಎ, ರೋಟರಿ ಕ್ಲಬ್‌ಗಳು ಮತ್ತು ಇತರ ಏಜನ್ಸಿಗಳು.

ಈ ಸ್ಥಳದ ದಾನಿಗಳು :

Lucas Electrical Tractor Services Ltd.,
Madras.

ಮನೆಯೊಂದಾದಲ್ಲಿ ಇರಬೇಕಾದ ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2-00

❖ ❖ ❖

ಪ್ರತಿಯೊಬ್ಬನೂ ನಿತ್ಯ ಪಠಿಸಬೇಕಾದ
ಗೀತೆಯ ಸಮೂಲ ಅನುವಾದ

ಗೀತೆಯ ಕೈಗನ್ನಡಿ

ಪಾಕೆಟ್ ಎಡಿಶನ್ ಬೆಲೆ ರೂ. 2-00

❖ ❖ ❖

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

❖ ❖ ❖

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ

ಬೆಲೆ ರೂ. 1 50.

ಪುಸ್ತಕ ಬೇಕಾದವರು ಆಯಾಯ ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಬುಕ್ ಪೋಸ್ಟ್ ವೆಚ್ಚ ಸೇರಿಸಿ ಮನಿಯಾರ್ಡರು ಮಾಡುವುದು. ವಿಶೇಷ ಅಂಚೆವೆಚ್ಚ ತಗಲುವುದರಿಂದ ವಿ. ಪಿ. ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ಗೇಹರಾಜ್ಯದಲ್ಲಿ

ಅನಧಿಕಾರಿಗಳಲ್ಲಿ ಒಡಂಬಡಿಕೆ ಏಕೆ?

'ಅಲ್ರಿ, ಪಾಕಿಸ್ತಾನ ಮತ್ತೊಮ್ಮೆ ನಮ್ಮ ಮೇಲೆ ಆಕ್ರಮಣಕ್ಕೆ ಭಾರೀ ಸಿದ್ಧತೆ ನಡೆಸುತ್ತಿದೆಯಂತೆ........'

"ಹ್ಞೂಂ. ನಾವೇನು ಬಳೆ ತೊಟ್ಟು ಕೊಂಡು ಕೂತಿಲ್ಲ ತಾನೆ?"

"ಹೌದೂನ್ನಿ. ಸಂರಕ್ಷಣಾ ಸಚಿವರು ಹಾಗೇಂತ ಹೇಳುತ್ತಾರೆ...."

"ಅಂದ್ರೆ ಅವ್ರ ಮಾತ್ನಲ್ಲಿ ವಿಶ್ವಾಸವಿಲ್ಲ ವೇನು?'

'ಇಲ್ಲದೆ ಉಂಟೆ?'

'ನಮ್ಮ ರಾಮರು ಡಣಾಡಂಗುರ ಸಾರಿಬಿಟ್ಟಿದ್ದಾರೆ— ಬಂಗ್ಲಾದಲ್ಲಿ ಪ್ರಶಾಂತ ಪರಿಸ್ಥಿತಿ ಸ್ಥಾಪನೆಗೊಳ್ಳುವ ತನಕ ನಮ್ಮ ಸೇನೆಯನ್ನು ಮರಳಿ ಕರೆಸುವುದಿಲ್ಲಾಂತ..'

"ಅದು ಹೌದೂನ್ನಿ. ಜತೆಗೆ ರಾಜಸ್ಥಾನದಲ್ಲಿಯೂ ಗಡಿರಕ್ಷಣೆಯ ಭಾರವನ್ನು ಸೇನೆಯ ಕೈಗಳಿಗೊಪ್ಪಿಸಿದೆಯೆಂದೂ ಸುದ್ದಿ ಇದೆ.'

'ಈಗಲಾದರೂ ಗೊತ್ತಾಯಿತಲ್ಲ? ಹಿಂದಿನ ಅನುಭವಗಳಿಂದ ನಮ್ಮ ಸಚಿವರುಗಳೆಲ್ಲ ಚೆನ್ನಾಗಿ ಪಾಠ ಕಲಿತಿರೋದು?'

'ಹ್ಞೂಂ.... ಅಷ್ಟೂ ಮಾಡದೆ ಹೋದರೆ ಅವರು ಮತ್ತ್ಯಾಕಾಗುತ್ತಾರೆ?"

'ನೋಡು, ರಾಜ್ಯಸರಕಾರಗಳಿಗೆ ಮತ್ತಿತರ ಖಾಸಗಿ ಸಂಸ್ಥೆಗಳಿಗೆ ಅವಶ್ಯವೆನಿಸಿದಾಗ ಟ್ರಕ್ಕುಗಳನ್ನು ಪೂರೈಸ್ಲಲು ಕೇಳಿಕೊಂಡಾಗಿದೆಯಂತೆ. ಅವೆಲ್ಲವೂ ಒಪ್ಪಿಗೆ ಸೂಚಿಸಿವೆಯಂತೆ........'

'ಅಲ್ರಿ, ಅವೆಲ್ಲ ಯಾಕೇಂತ?'

'ಮತ್ಯಾಕೆ, ಯುದ್ಧದ ಸಾಮಾನು ಸರಂಜಾಮು ಪೂರಯ್ಸಲು...."

'ಅಂದ್ರೆ, ಸದ್ಯ ಯುದ್ಧವಾಗುವುದು ಗ್ಯಾರಂಟಿ ಅಂತ....'

'ಹೇಗೆ ಹೇಳುವುದು? ಯೂಹ್ಯಾಖಾನರು ಕಾಲುಕೆದರಿ ಜಗಳಕ್ಕೆ ಕರೆಯುತಿದ್ದಾರೆ. ಆದರೆ, ನಾವು ಮಾತ್ರ ಮಿತಿಮೀರಿದ ತಾಳ್ಮೆ ತೋರಿಸುತಿದ್ದೇವೆ....'

'ತಲ್ರಿ, ಗಡಿಯಲ್ಲಿ ಪಾಕ್ ಸೈನಿಕರು ನಮ್ಮನ್ನು ವಿನಾಕಾರಣ ಪ್ರಚೋದಿಸುತಿದ್ದಾರಂತೆ... '

"ಹ್ಞಾಂ....'

"ಅಮೇರಿಕೆಯ ಶಸ್ತ್ರಾಸ್ತ್ರ ಬಲದಿಂದ ಕೊಬ್ಬಿದ ಯಾಹ್ಯಾಖಾನರು ಬಂಗ್ಲಾ ದೇಶೀಯರನ್ನು ಎದುರಿಸಲು ಅಸಮರ್ಥರಾಗಿ ತನ್ನ ಸೋಲಿಗೆ ಭಾರತವನ್ನು ಬೊಟ್ಟು ಮಾಡುತಿದ್ದಾರೆ....'

'ಹೌದೂನ್ನು ಬಂಗ್ಲಾ ದೇಶೀಯರಿಗೆ ಭಾರತ ಸೈನಿಕ ನೆರವು ನೀಡುತ್ತಿದೆಯೆಂದವರು ಆರೋಪಿಸುತ್ತಾರೆ ಸತ್ಯಸಂಗತಿಯೆಂದರೆ ಬಂಗ್ಲಾಗಳು ನಗದಿ ಹಣತೆತ್ತು ಬೇರೆ ಬೇರೆ ಮೂಲಗಳಿಂದ ಸೈನಿಕೋಪಕರಣ ಕೂಡಿಸುತಿದ್ದಾರೆ. ..'

'ಅಲ್ರಿ, ಯಾಹ್ಯಾಖಾನರು ಯಾವಾಗ ಬೇಕಾದರೆ ಆಗ, ಎಲ್ಲಿ ಬೇಕೋ ಅಲ್ಲಿ, ಯಾರೊಡನೆ ಬೇಕಾದರೂ ಮಾಡನಾಡಲು ಸಿದ್ಧರಿದ್ದಾರಂತೆ ...'

'ಏನು ಮಾತಾಡುವುದೆ?'

'ಮತ್ತಿನ್ನೆಂಥದು? ಭಾರತ–ಪಾಕ್ ವಿವಾದದ ಬಗ್ಗೆ ...'

'ಅಲ್ವೆ, ಅಂಥ ವಿವಾದ ಎದ್ದಿರುವುದಾದರೂ ಏನು?'

'ಬಂಗ್ಲಾ....'

'ಇಲ್ಲೇ ಯಾಹಾಖ್ಯಾನರು ತಪ್ಪಿ-ಬಿದ್ದಿರೋದು....'

'ಏನು?'

'ಬಂಗ್ಲಾ ಸಮಸ್ಯೆಯು ಭಾರತ–ಪಾಕ್ ಸಮಸ್ಯೆಯೇ ಅಲ್ಲ ...'

'ಮತ್ತೆ?'

'ಅದು ಅಂತಾರಾಷ್ಟ್ರೀಯ ಸಮಸ್ಯೆ. ಇದರ ಪರಿಹಾರ ಅವರು ಇವರೊಡನೆ ಮಾತಾಡುವುದರಿಂದ ಆಗುವುದಿಲ್ಲ. ಶೇಕ್ ಮುಜಿಬುರ್ ರೆಹಮಾನರ ನಾಯಕತ್ವದಲ್ಲಿ ಬಹು ಮತಗಳಿಸಿ ಆಯ್ಕೆಯಾದ ಅವಾಮಿಲೀಗಿನೊಂದಿಗೆ ನೇರ ಮಾತುಕತೆ ನಡೆಸಿದರೆ ಮಾತ್ರ ಪರಿಹಾರ ಸಾಧ್ಯ.'

'ಅಲ್ರಿ, ಶೇಕ ಮುಜಿಬುರರನ್ನು ಕ್ಷಮಿಸಿ ಬಿಡುವುದಕ್ಕೂ ತಾನು ಸಿದ್ಧ—ಜನತೆ ಬಯಸುವುದಾದರೆ ಅಂದಿದ್ದಾರಲ್ಲ ಯಾಹ್ಯಾ?'

'ಅಲ್ವೆ. ರೆಹಮಾನರನ್ನು ಯಾಹ್ಯಾಖಾನರು ಕ್ಷಮಿಸ ಬೇಕಾದ ಅಗತ್ಯವಿಲ್ಲ. ಸತ್ಯ ಹೇಳುವುದಾದರೆ, ಮುಜಿಬುರರೇ ಯಾಹ್ಯಾಖಾನರನ್ನು ಕ್ಷಮಿಸ ಬೇಕು.'

'ಯಾಕೆ?'

'ಬಂಗ್ಲಾದಲ್ಲಿ ಬಹುಮತಗಳಿಸಿಕೊಂಡು ಗೆದ್ದದ್ದು ರೆಹಮಾನರ ಅಪರಾಧವೇ? ಬಹುಮತ ಪಡೆದ ಪಕ್ಷಕ್ಕೆ ಅಧಿಕಾರ ಹಸ್ತಾಂತರ ಮಾಡದಿದ್ದದ್ದು ಯಾಹ್ಯಾಖಾನರ ಅಪರಾಧವೆ?'

'ಅಲ್ರಿ, ರೆಹಮಾನರು ಸ್ವತಂತ್ರ ಬಂಗ್ಲಾವೆಂದು ಘೋಷಿಸಿ....'

'ಅದ್ರಲ್ಲಿ ತಪ್ಪೇನು? ಬಹುಮತಗಳಿಸಿದ ಪಕ್ಷಕ್ಕೆ ಅಧಿಕಾರ ಕೊಡದೆ ಅದನ್ನು ಬಹಿಷ್ಕರಿಸಿದರೆ, ಮುಜಿಬ್ ಮತ್ತೇನು ಮಾಡಬೇಕು?'

'ಹ್ಞಾಂ. ಅದೂ ಹೌದೂನ್ನಿ. ನೋಡಿ, ಈಗಂತೂ ಭಾರತ–ಪಾಕ್ ಯುದ್ಧದ ಕಾರ್ಮೋಡಗಳು ದಟ್ಟೈಸುತ್ತಿವೆ. ಗುಡುಗು ಮಿಂಚು ಆರಂಭವಾಗಿವೆ. ಒಂದೊಂದು ಹನಿಯೂ ಉದುರುತ್ತಿದೆ. ಅದೆಂದು ಭೋರ್ಗರೆಯಾಗುವುದೆಂದು ಎಲ್ಲರೂ ಅಂಜಿದ್ದಾರೆ.'

'ಆದರೆ ನೋಡು, ಮೊದಲ ಗುಂಡು ಪಾಕಿಸ್ತಾನದತ್ತಣಿಂದಲೇ ಬೀಳಬೇಕು.'

'ಅದು ಹೌದೂನ್ನಿ. ಯಾಹ್ಯಾಖಾನರ ಬೆದರಿಕೆಗೆ ಸೊಪ್ಪು ಹಾಕುವ ಲಕ್ಷಣವೇ ಬಾರಿಯಿಲ್ಲ. ಆದ್ದರಿಂದ ಅವರೇ ಹೆದರಿದಂತಿದೆ. ಇಲ್ಲವಾದರೆ ಯುದ್ಧವೆಂದೋ ಆರಂಭವಾಗಿ ಹೋಗುತ್ತಿತ್ತು.'

'ಹ್ಞಾಂ ರಶ್ಯದೊಡನೊಂದು ಒಡಂಬಡಿಕೆಯಾಗಿದೆಯಲ್ಲ?'

'ಅಲ್ರಿ, ಶಾಶ್ವೆಂಟ್ ಒಡಂಬಡಿಕೆಯಂತಹ ಒಂದು ಒಡಂಬಡಿಕೆಯನ್ನು ರಶ್ಯ ಸಾಧಿಸುವುದಾದರೆ, ಅದಕ್ಕೆ ಅಮೇರಿಕದ ಬೆಂಬಲವಿದೆಯಂತೆ....'

'ಅಲ್ವೆ, ಭಾರತದೊಡನೆ ಏತಕ್ಕಾಗಿ ಒಡಂಬಡಿಕೆ? ಒಡಂಬಡಿಕೆ ಯಾರೊಡನೆ ಮಾಡಿಕೊಳ್ಳಬೇಕೋ ಆ ವ್ಯಕ್ತಿ ಯಾಹ್ಯಾಖಾನ ಕಪಿಮುಷ್ಟಿಯಲ್ಲೇ ಇರುವಾಗ....'

'ಯಾರು ಮುಜಿಬ್....'

'ಹ್ಞೂಂ....'

"ಯಾಹ್ಯಾಖಾನರು ಹಾಗನ್ನುವುದಿಲ್ಲ. ಇದು ಭಾರತ–ಪಾಕ್ ವಿವಾದವೆನ್ನುತ್ತಾರೆ...."

'ನಾವು ಒಪ್ಪುವುದಿಲ್ಲ ...'

'ಅಂತಲೇ ಹೋರಾಟದ ಅಂಜಿಕೆ....'

'ಹ್ಞೂಂ....ಕಾರಣವಿಲ್ಲದೆ ಧಾಳಿ ಮಾಡುವುದು ಪಾಕ್ ಹುಟ್ಟು ಗುಣ ಒಂದು ವೇಳೆ ಪಾಕ್—ಭಾರತ ಸಮರ ನಡೆದರೂ ತಾಷ್ಕೆಂಟಿನಂತಹ ಒಡಂಬಡಿಕೆ ನಮಗೆ ಬೇಕಾಗಿಲ್ಲ.'

'ಯಾಕೆ?'

'ಅದು ನಮಗೆ ಮಾತ್ರ ಬಂಧನಕಾರಿಯಾಗಿ ಪರಿಣಮಿಸಿದ್ದರಿಂದ. ಆದುದರಿಂದ ಲೇ ಲಾಹೋರ್— ಸಿಯಾಲ್ಕೋಟೆಗಳನ್ನೂ ನಮ್ಮ ಸೇನೆ ವಶ ಪಡಿಸಲು ಮುಂದುವರಿಯುವುದೆಂಬ ಗಂಭೀರ ಎಚ್ಚರಿಕೆ ನೀಡಿದ್ದಾರೆ, ಜಗಜ್ಜೀವನರಾಮರು....'

"ಅಲ್ರಿ, ಏನಾದೀತೂಂತ?"

"ಈಗ್ಲೇ ಹೇಗೆ ಹೇಳೋಣ? ಯಾಹ್ಯಾಖಾನರ ತಲೆ ತಗ್ಗಿದರೂ ತಗ್ಗ ಬಹುದು."

'ಅಮೇರಿಕೆಯೊಂದಿದೆಯಲ್ಲ?'

"ಅಲ್ಲ, ಅಮೇರಿಕೆ ಯಾಹ್ಯಾಖಾನರ ತಲೆಯನ್ನು ಎಷ್ಟು ದಿನಾಂತ ಎತ್ತಿ ಹಿಡಿದೀತು?"

'ಹಾಗೆ....ಅಲ್ಲ ನೋಡಿ, ಕೆನೆಡಾದ ಸಂಚಾರದ ವೇಳೆ ರಶ್ಯದ ಪ್ರಧಾನಿ ಕೊಸಿಗಿನ್ನರ ಮೇಲೆ ಯಾರೊ ದಾಳಿ ನಡೆಸಿದರಂತೆ..'

'ಹೌದು. ಹಂಗೇರಿಯಿಂದ ಬಂದು ಒಟ್ಟಾವದಲ್ಲಿ ನೆಲಸಿದವನಂತೆ ಅವ. ದಶಕದ ಹಿಂದೆ ರಶ್ಯ ಹಂಗೇರಿಯಲ್ಲಿ ತೋರಿದ ದಮನ ನೀತಿಯಿಂದ ನೊಂದವನಂತೆ....'

'ಪುಣ್ಯಕ್ಕೆ ಕೋಸಿಗಿನ್ ಅಪಾಯದಿಂ

(ಏಳನೇ ಪುಟ ನೋಡಿರಿ)



ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

Ex. C. 113/1970 S. C. 82/66

ವೀರಯ್ಯ ಪೂಜಾರಿ —ಅರ್ಜಿದಾರ

Vs.

1ಮೋನಪ್ಪ—ಪೆರ್ನು ಪೂಜಾರಿ ಮಗಳು 2 ಶಿವಪ್ಪ ಪೂಜಾರಿ– 1ನೇ ಎದ್ರಿಯ ಮಗ ಬೆಳ್ತಂಗಡಿ ತಾಲ್ಲು ತೆಂಕಗ್ರಾಮದ ಮೇಗಿನ ಮುಂಡೇಲು —ಎದ್ರಿರು

ಇವರೀಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದ್ರೆ—

ಮೇಲ್ಕಂಡ ಅಮಲ್ಜಾರಿಯಲ್ಲಿ ಅರ್ಜಿದಾರನು ದಾಖಲು ಮಾಡಿದ ಸ್ಥಿರಾಸ್ತಿ ಏಲಂ ಯಿಸ್ತಿಹಾರಿನ ಶರತಗಳನ್ನು ನಿರ್ಣಯಿಸುವ ಬಗ್ಗೂ ಅರ್ಜಿದಾರಗೆ ಏಲಂ ಸಮಯ ದರ್ಖಾಸ್ತಿಗೆ ಸಿಲ್ಲುವರಿ ಪರ್ಮಿಶನ್ ಕೊಡಿಸಬೇಕಾಗಿ ಮಾಡಿದ ಅರ್ಜಿ ಕೂಡಾ ತಾ. 4.11.71ಕ್ಕೆ ಯಿಟ್ಟಿರುವುದರಿಂದ ಅದ್ಕೆ ನಿಂಮದೇನಾದರೂ ಆಕ್ಷೇಪಣೆಗಳಿದ್ರೆ ಸದ್ರಿ ದಿವ್ಸ ಮಜ್ಕೂರು ಕೋರ್ಟು ಮುಂದೆ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ನೀವು ಸ್ವತಃ ವ ವಕೀಲರ ದ್ವಾರಾ ಹಾಜರಾಗಿ ಉಪಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರುಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗಿಯದೆ.

(Sd) B. ISHWARA BHAT
Advocate, PUTTUR

ಬೆಳ್ತಂಗಡಿ, ತಾ. 21.10.71.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O.S. No. 128 /1971

ಶಾರ್ದಾಬಿ — ವಾದಿ

ಮಹ್ಮಾಬಿ ಕೂಡಾ —ಪ್ರತಿವಾದಿರು

3ನೆ ಪ್ರತಿವಾದಿ ಅಬ್ದುಲ್ ಜಲೀಲ್–ಶೇಕ್ ಅಬ್ದುಲ್ ಕರಿಂ ಸಾಹೇಬರ ಮಗ, ಕಾರ್ಕಳ ತಾಲ್ಲು ಮಾಳ್ಪಾಡಿ ಗ್ರಾಮದ ಅಲಂಗಾರು. ಇವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ —

ವಾದಿಯು ನೀವು ಪಗ್ಗೆಕೆಯರ ಮೇಲೆ ದಾಖಲು ಮಾಡಿದ ಮೇಲ್ಕಂಡ ದಾವೆಯು ನಿಂಮ ಹಾಜರಾತಿ ಬಗ್ಗೆ ತಾರೀಕು 4.11.71ಕ್ಕೆ ಯಿಟ್ಟಿರುವುದರಿಂದ ಅದಕ್ಕೆ ನಿಂಮದೇನಾದರೂ ಆಕ್ಷೇಪಣೆಗಳಿದ್ರೆ ಸದ್ರಿ ದಿವ್ಸ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಮೇಲ್ಕಂಡ ಕೋರ್ಟುಮುಂದೆ ನೀವು ಯಾ ವಕೀಲರ ಮುಖಾಂತ್ರ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರುಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗಿಯದೆ

(Sd) B. ISHWARA BHAT
Advocate for Pltf.

ಬೆಳ್ತಂಗಡಿ, ತಾ. 21.10.71.

ಸಂಪಾದಕೀಯ

ಶ್ರೀರಂಗಪಟ್ಟಣದಲ್ಲಿ ನಿಜ ಬಣ್ಣ ಬಯಲುಮಾಡಿದರು

ಮೈಸೂರಿನ ಹುಲಿ ಟಿಪ್ಪು ಸುಲ್ತಾನರ ಮರಿಮಗರನ್ನು ಕರೆಸಿ ಶ್ರೀರಂಗಪಟ್ಟಣದಲ್ಲಿ ಮುಸ್ಲಿಮ್ ಸಮ್ಮೇಳನವೇರ್ಪಡಿಸಿದವರು ಅವರಿಗಾಗಲೀ ದೇಶಕ್ಕಾಗಲೀ ಯೋಗ್ಯ ಕಾರ್ಯಮಾಡಲಿಲ್ಲವೆಂದು ವಿಷಾದದಿಂದಲೇ ಹೇಳುತ್ತೇವೆ ರಾಜ್ಯಕೀಯದ ಸೋಂಕಿನಿಂದ ದೂರವಿರುವುದೆಂದು ಹೇಳಲಾದ ಸಮ್ಮೇಳನದಲ್ಲಿ ಆಮಂತ್ರಿತ ರಾಜ್ಯಕೀಯ ನಾಯಕರು ರಾಜ್ಯಕೀಯೇತರ ವಿಷಯಗಳನ್ನೇ ಮಾತಾಡಿದರೂ ಸಮ್ಮೇಳನದ ಗೊತ್ತುವಳಿಗಳು ರಾಜ್ಯಕೀಯದಿಂದ ದೂರವ್ಹಿಯಲಿಲ್ಲ, ಇವುಗಳು ಮುಸ್ಲಿಂ ಸಮ್ಮೇಳನವನ್ನು ಗುಂಪು ರಾಜ್ಯಕೀಯ ಸಮ್ಮೇಳನವಾಗಿಯೇ ಮಾಡಿದುವೆಂದು ತಿಳಿಯಲು ನಾಚಿಗೆಯಾಗುತ್ತದೆ ಈ ಸಮ್ಮೇಳನದ ಗತಿವಿಧಿಗಳನ್ನು ಗಮನಿಸಿದ ಬಳಿಕ ಜಾತ್ಯತೀತ ರಾಷ್ಟ್ರದಲ್ಲಿ ಈ ರೀತಿಯ ಜಾತೀಯ ಸಮ್ಮೇಳನಗಳು ಜಾತೀಯತೆಯ ಜ್ವಾಲೆಗೆ ತುಪ್ಪವೆರೆಯ ಬಲ್ಲವೆಂದು ತಿಳಿಯಲು ತಡವಾಗುವುದಿಲ್ಲ. ಆದುದರಿಂದ ಇವುಗಳು ಅನವಶ್ಯ ಮತ್ತು ಅನಪೇಕ್ಷಣೀಯವಾದ ಭಾವೋದ್ರೇಕಕ್ಕೆ ಪರಿಪೋಷಕವಾಗುತ್ತವೆಯೆಂಬುದೂ ಒಟ್ಟಿನಲ್ಲಿ ದೇಶದ ಭಾವೈಕ್ಯಕ್ಕೆ ಒಂದಲ್ಲೊಂದು ರೀತಿಯಿಂದ ಮಾರಕವಾಗುತ್ತವೆಂಬುದೂ ವೇದ್ಯವಾಗುತ್ತದೆ.

ಸಮ್ಮೇಳನದ ಉದ್ಘಾಟನಾ ವೇಳೆ ಕೇಂದ್ರ ಸಚಿವ ಶ್ರೀ ಮೊಯಿನುಲ್ ಹಕ್ ಚೌಧುರಿಯವರು ಮುಸ್ಲಿಮರು ದೇಶದ ಸರ್ವತೋಮುಖ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಪಾಲುಗೊಳ್ಳಬೇಕೆಂದೂ ಸಾಂಪ್ರದಾಯಿಕ ಮನೋಭಾವ ತ್ಯಜಿಸಬೇಕೆಂದೂ ಬುದ್ಧಿ ಹೇಳಿದರು ಇಂಡಿಕೇಟ್ ನಾಯಕ ಶ್ರೀ ದೇವರಾಜ ಅರಸರು ಸಮಾಜವಾದದಲ್ಲಿ ಭರವಸೆಯುಳ್ಳ ಅಲ್ಪ ಸಂಖ್ಯಾತರು ವಿಶೇಷವಾದ ರಾಜ್ಯಕೀಯ ಹಕ್ಕುಗಳನ್ನು ಕೇಳಬಾರದೆಂದೂ, ಒಂದು ವೇಳೆ ಹಾಗೆ ಕೇಳಿದರೆ ಅದು ಅನ್ಯಾಯವಾಗುವುದೆಂದೂ ದೇಶಾಭಿವೃದ್ಧಿ ಕಾರ್ಯಗಳಲ್ಲಿ ಜಾತಿ ಮತ ಭೇದವೆಣಿಸದೆ ಸರ್ವರೂ ಸಮಭಾಗಿಗಳಾಗಬೇಕೆಂದೂ ಹಿತವಚನನಾಡಿದರು ಆದರೆ, ತಾವೇ ಆಹ್ವಾನಿಸಿದ-ನಾಯಕರ ಮಾತುಗಳನ್ನು ಸಮ್ಮೇಳನದ ಕಾರ್ಯಕರ್ತರು ಸಂಪೂರ್ಣ ಮರೆತರು ಉರ್ದು ಶಾಲೆಗಳನ್ನು ಮುಂದೆಯೂ ಉಳಿಸಿಕೊಳ್ಳುವ, ಮುಸ್ಲಿಮರ ವೈಯಕ್ತಿಕ ಶಾಸನದ ಸಂಬಂಧದ ಗೊತ್ತುವಳಿಗಳು ಅವರು ಸಂಪ್ರದಾಯವನ್ನೂ ಪ್ರತ್ಯೇಕತೆಯನ್ನೂ ಬಿಟ್ಟು ಕೊಡಲು ಸಿದ್ಧರಿಲ್ಲವೆಂಬುದನ್ನು ಎತ್ತಿ ತೋರಿಸುತ್ತದೆ. ಸ್ತ್ರೀ—ಪುರುಷರು ಸಮಾನರೆಂಬುದನ್ನು ಮುಂದುವರಿದ ಮುಸ್ಲಿಂ ರಾಷ್ಟ್ರಗಳೂ ಒಪ್ಪಿಕೊಂಡಿರುವಾಗ ಈ ಸಮ್ಮೇಳನವು ಅದನ್ನು ವಿರೋಧಿಸುವಂತೆ ವರ್ತಿಸುವುದರಿಂದ ಮುಸ್ಲಿಮರಿಗಾಗಲಿ ದೇಶಕ್ಕಾಗಲೀ ಒಳಿತಾಗುವುದು ಸಾಧ್ಯವಿಲ್ಲ ಮುಸ್ಲಿಮರ ಪ್ರತ್ಯೇಕತಾ ಮನೋಭಾವದಿಂದಾಗಿಯೇ ಭಾರತವು ಹಿಂದೆ ವಿಭಜನೆಗೊಂಡ ಕಠೋರ ಸತ್ಯದ ನೆನಪಾದಾಗ, ರಾಜ್ಯ ಮುಸ್ಲಿಮ್ ಸಮ್ಮೇಳನವು ಇದೇ ಬಗೆಯ ಪ್ರತ್ಯೇಕತೆಗೆ ಪ್ರೋತ್ಸಾಹ ಕೊಡುತ್ತಿರುವುದನ್ನು ಗಮನಿಸುವಾಗ, ಇಂತಹ ಸಮ್ಮೇಳನಗಳ ಔಚಿತ್ಯವೇನೆಂದು ಪ್ರಶ್ನಿಸ ಬೇಕಾಗುತ್ತದೆ ಜಾತ್ಯತೀತ ರಾಷ್ಟ್ರದಲ್ಲಿ ಅವರವರ ಜಾತಿ–ಧರ್ಮಗಳ ವಿಶ್ವಾಸದಂತೆ ನಡೆಯಲು ಪ್ರತಿಯೊಬ್ಬರಿಗೂ ಅಧಿಕಾರವಿದೆಯೆಂಬುದು ನಿಜ ಆದರೆ, ತಮ್ಮ ಧಾರ್ಮಿಕ ಸ್ವಾತಂತ್ರ್ಯ ಮತ್ತೊಬ್ಬನ ಧಾರ್ಮಿಕ ಭಾವನೆಗಳನ್ನು ಕೆಣಕದಂತೆ ನೋಡಿಕೊಳ್ಳುವುದೂ ಅವಶ್ಯ ಮುಸ್ಲಿಮರಂತೆಯೇ ಉಳಿದ ಜಾತಿಯವರೂ ಇದೇ ಬಗೆಯ ಪ್ರತ್ಯೇಕತೆ ಮತ್ತು ಸಂಪ್ರದಾಯಶೀಲತೆಯ ಗುಂಗಿನಲ್ಲಿ ಮಾನವತೆಯನ್ನು ಮರೆತು ಉನ್ಮತ್ತರಂತೆ ವರ್ತಿಸಿದರೆ, ಪರಿಣಾಮವೆಲ್ಲಿ ನಿಂತೀತು?

ಸಚಿವ ಹಕ್ ಚೌಧುರಿಯವರು ಮುಸ್ಲಿಮರೆಂಬ ಕಾರಣದಿಂದ, ಶ್ರೀ ಅರಸರು ಇಂಡಿಕೇಟ್ ಅಧ್ಯಕ್ಷರೆಂಬುದರಿಂದ ಸಮ್ಮೇಳನಕ್ಕೆ ಆಹ್ವಾನಿತರಾದರು ರಾಜ್ಯದ ಮುಸ್ಲಿಮರು ಶ್ರೀಮತಿ ಇಂದಿರಾಗಾಂಧಿಯ ಹಿಂದಿದ್ದಾರೆಂದು ಅವರ ಕಾರ್ಯಕರ್ತರು ತೋರಿಸಿಕೊಡ ಹೊರಟರು ಭಾರತ ಸರಕಾರದ ಬಂಗ್ಲಾನೀತಿಯನ್ನು ಬೆಂಬಲಿಸುವುದರಿಂದ ಮತ್ತು ಪಾಕಿಸ್ತಾನವನ್ನು ಖಂಡಿಸುವುದರಿಂದ ಭಾರತೀಯತೆಯನ್ನೂ ಜಾತ್ಯತೀತತೆಯನ್ನೂ ಪುರಸ್ಕರಿದಂತಾಗುತ್ತವೆಂದವರು ನಂಬಿದ್ದಂತೆ ಪ್ರದರ್ಶನ ನಡೆಸಿದರು ಆದರೆ ಪಾಕಿಸ್ತಾನದ ಮುಸ್ಲಿಮರಿಗಿಂತ ದೇಶದೊಳಗೆ ಇರುವ ಕಿವಿಹೊಕ್ಕ ಕೀಡಿಯಂತಹ ಮತಾಂಧ ಮುಸ್ಲಿಮರಿಂದ ದೇಶಕ್ಕೆ ಹಾನಿಯೆಂಬುದನ್ನು ಅವರು ಮರೆತು ಬಿಟ್ಟರು ಇನ್ನು ಮುಂದೆ ರಾಜ್ಯಕೀಯ ನಾಯಕರು–ಅಧಿಕಾರ ಸ್ಥಾನದಲ್ಲಿದ್ದು ಜಾತ್ಯತೀತತೆಯ ಬಗ್ಗೆ ಮಾರುದ್ದ ಮಾತಾಡುವವರು–ಜಾತೀಯ ಸಭೆ ಸಮ್ಮೇಳನಗಳಲ್ಲಿ ಭಾಗವಹಿಸುವುದಕ್ಕೆ ಮೊದಲು ನೂರುಬಾರಿ ಯೋಚಿಸುವುದುತ್ತಮ ಇಲ್ಲವಾದರೆ, ಜಾತೀಯವಾದಿಗಳೊಂದಿಗೆ ಅವರ ಹೆಸರೂ ಹಾಳಾಗುತ್ತದೆ, ಅವರಿಗೂ ಜಾತೀಯವಾದಿಗಳೆಂಬ ಲೇಬಲ್ ಅಂಟಿಕೊಳ್ಳುತ್ತದೆ ಮುಸ್ಲಿಂ ಜನತೆ ಯಾವ ಪಕ್ಷದಲ್ಲೇ ಇರಲಿ, ಅದು ತನ್ನ ಪ್ರತ್ಯೇಕತೆಯನ್ನು ತ್ಯಜಿಸಲು ಬಯಸುವುದಿಲ್ಲವೆಂಬುದು ಶ್ರೀರಂಗಪಟ್ಟಣದ ಸಮ್ಮೇಳನ ಘೋಷಿಸಿ, ಜನತೆಯನ್ನು ಒಂದು ಶತಮಾನದಷ್ಟು ಹಿಂದೆಳೆಯಿತೆಂಬುದು ಖೇದಜನಕವೆನ್ನದೆ ಗತ್ಯಂತರವಿಲ್ಲ.

ಜಾತೀಯ ಪ್ರಾತಿನಿಧ್ಯ

ಪಡುಬಿದ್ರೆಯಲ್ಲಿ ಜಿಲ್ಲೆಯ ಹಿಂದುಳಿದ ವರ್ಗಗಳ ಪರಿಷತ್ತು ಸೇರಿತು ಇದರಲ್ಲಿ ಶ್ರೀ ಪೇಜಾವರ ಮಠಾಧೀಶರು 'ಜಾತೀಯವಾಗಿ ರಾಜ್ಯಕೀಯ ಪ್ರಾತಿನಿಧ್ಯ ನೀಡುವುದು ಅಹಿತಕರ'ವೆಂದು ಹೇಳಿದರು ಶ್ರೀ ದೇವರಾಜ ಅರಸರು ಈ ಮಾತನ್ನು ಸಮರ್ಥಿಸಿದರು ತೀರ ಬಡವರು ಯಾವ ಜಾತಿಯವರೇ ಇರಲಿ, ಅವರು ಹಿಂದುಳಿದವರು ಎಂದು ಘೋಷಿಸಿದರು ಆದರೆ, ಮುಂದೆ ಪರಿಷತ್ತು ಸ್ವೀಕರಿಸಿದ ಗೊತ್ತುವಳಿಯೊಂದರಲ್ಲಿ ಪಕ್ಷದ ಚುನಾವಣೆ ಮತ್ತು ಸಂಘಟನಾ 'ರಂಗದಲ್ಲಿ ಹಿಂದುಳಿದವರಿಗೆ ಪ್ರಾತಿನಿಧ್ಯವನ್ನು ಬಯಸಲಾಯಿತು "ಇತ್ತೀಚಿನ ಕೆಲವು ದಿನಗಳಲ್ಲಿ ಜಾತೀಯ ಸಂಘಟನೆಗಳು ಬಲಿಯುತ್ತಿವೆ ಇವುಗಳಲ್ಲಿ ಕೆಲವಕ್ಕೆ 'ಹಿಂದುಳಿದವರು,' 'ಅಲ್ಪ ಸಂಖ್ಯಾತ'ರು' ಮೊದಲಾದ ಪದಗಳಿಂದ ರಕ್ಷಣೆಯೂ ಇದೆ ಇವುಗಳಿಂದ ಜಾತ್ಯತೀತತೆ ಬಲಿಯುತ್ತಲೇ ಹೋಗುತ್ತದೆಂಬುದನ್ನು ಅಲ್ಲಗಳೆಯಲಾದೀತೆ? ಸ್ವಾರ್ಥಲಾಭಕ್ಕಾಗಿ ಒಂದು ಜಾತಿಯನ್ನು ಇನ್ನೊಂದು ಜಾತಿಯ ಮೇಲೆ ಎತ್ತಿಕಟ್ಟುವ ಪುಢಾರಿಗಳೂ ಇರುವಾಗ ಜಾತೀಯತೆ"ಯ ನಾಶಕ್ಕೆ ಬದ್ಧಕಟಿಯಾಗ ಬಲ್ಲ ನೀತಿಯನ್ನು ರೂಪಿಸುವ ಅಗತ್ಯವಿಂದು ಹೆಚ್ಚಿದೆ. ಇಲ್ಲವಾದರೆ, ಒಂದು ಚೇಳು ಸತ್ತು ನೂರು ಚೇಳುಗಳೇ ಹುಟ್ಟುವಂತೆ ಒಂದು ರಾಷ್ಟ್ರೀಯತೆ ನಶಿಸಿ ನೂರು ಜಾತೀಯತೆ ಉದ್ಭವಿಸುತ್ತದೆ

● ●

ಮಟ್ಟು ಗುಳ್ಳ ಬೆಳೆಗೆ ಸಂಜೀವಿನಿ ಪ್ರಯೋಗ

ಉಡುಪಿಯಿಂದ ಸುಮಾರು ಎಂಟು ಮೈಲು ದಕ್ಷಿಣದಲ್ಲಿ, ಸಮುದ್ರ ಕಿನಾರೆಯಲ್ಲಿ ಮಟ್ಟುಗ್ರಾಮವಿದೆ. ಇಲ್ಲಿ ಸುಮಾರು ೮೦೦ ಸಣ್ಣ ರೈತ ಕುಟುಂಬಗಳು ೩೦೦ ಎಕ್ರೆ ಹೊಲದಲ್ಲಿ ಗುಳ್ಳದ ಬೆಳೆ ಬೆಳೆಸುತ್ತವೆ ಈ ಕುಟುಂಬಗಳ ಜೀವನೋಪಾಯದ ಪ್ರಮುಖ ಸಾಧನ ಗುಳ್ಳ

ಉಡುಪಿಯ ಸೋದೆ ಮಠದ ಶ್ರೀ ವಾದಿರಾಜ ಯತಿಗಳು ತಮ್ಮ ಮಠ ಹೊಕ್ಕ ಮಟ್ಟು ಗ್ರಾಮದ ರೈತರಿಗೆ ವಿಶೇಷ ರೀತಿಯ ಗುಳ್ಳದ ಬೀಜವಿತ್ತು ಅನುಗ್ರಹಿಸಿದರೆಂದು ಪ್ರತೀತಿ ಇದು ಸುಮಾರು ೪೦೦ ವರ್ಷಗಳಿಗೆ ಹಿಂದಿನ ದಂತಕತೆ ಅಂದಿನಿಂದಲೂ ಮಟ್ಟುಗುಳ್ಳ ಹೆಸರುವಾಸಿ. ವಾದಿರಾಜ ಬದನೆಯೆಂಬುದು ಈ ಗುಳ್ಳದ ಪರ್ಯಾಯನಾಮ ಇದಕ್ಕೆ ವ್ಯಾಪಕ ಬೇಡಿಕೆ ರು

ಮೈಸೂರು ರಾಜ್ಯದಲ್ಲಿ

ಸಿಂಡಿಕೇಟ್ ಬ್ಯಾಂಕ್‌ನ 244 ಶಾಖಾ ಕಛೇರಿಗಳು

ನಿಮ್ಮ ಸೇವೆಯಲ್ಲಿವೆ.



ದೇವಕನ್ನಿಕೆ, ಬೇಲೂರು ದೇವಾಲಯ, ಮೈಸೂರು ರಾಜ್ಯ.

ಸಿಂಡಿಕೇಟ್ ಬ್ಯಾಂಕ್‌ನ ಒಟ್ಟು 244 ಶಾಖೆಗಳು ಮೈಸೂರು ರಾಜ್ಯದಲ್ಲೆಲ್ಲ ಹರಡಿ ಅದರ ಆರ್ಥಿಕ ಬೆಳವಣಿಗೆಗೆ ನೆರವಾಗುತ್ತಿವೆ ರಾಜ್ಯದ ಪ್ರಸಿದ್ಧ ಬ್ಯಾಂಕ್ ಆಗಿರುವ ಸಿಂಡಿಕೇಟ್ ಬೆಳಗಾವಿ, ಬಳ್ಳಾರಿ, ಬಿಜಾಪುರ, ಧಾರವಾಡ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ—ಈ ಆರು ಜಿಲ್ಲೆಗಳಲ್ಲಿ ಲೀಡ್ ಬ್ಯಾಂಕ್ ಆಗಿದೆ

ಮೈಸೂರು ರಾಜ್ಯದಲ್ಲಿ ಶಾಖೆಗಳ ಹಂಚಿಕೆ

ಜಿಲ್ಲೆ	ಶಾಖೆಗಳು	ಜಿಲ್ಲೆ	ಶಾಖೆಗಳು
ಬೆಂಗಳೂರು	27	ಹಾಸನ	3
ಬೆಳಗಾವಿ	20	ಕೋಲಾರ	1
ಬಳ್ಳಾರಿ	8	ಮಂಡ್ಯ	1
ಬೀದರ	2	ಮೈಸೂರು	8
ಬಿಜಾಪುರ	16	ಉತ್ತರಕನ್ನಡ	28
ಚಿಕ್ಕಮಗಳೂರು	6	ರಾಯಚೂರು	9
ಚಿತ್ರದುರ್ಗ	4	ಶಿವಮೊಗ್ಗ	9
ಕೊಡಗು	6	ದಕ್ಷಿಣ ಕನ್ನಡ	78
ಧಾರವಾಡ	12	ತುಮಕೂರು	3
ಗುಲ್ಬರ್ಗಾ	3	ಜಮ್ಮಾ	244

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಛೇರಿ	ಶಾಖೆಗಳು	ಕಸ್ಟೋಡಿಯನ್
ಮಣಿಪಾಲ	500	ಕೆ. ಕೆ ಪೈ

ಚಿ ಆಕಾರಗಳಲ್ಲಿ ಇದು ಉಳಿದ ಗುಳ್ಳೆಗಳಿಗಿಂತ ಪ್ರತ್ಯೇಕ. ಸ್ವಾದಿಷ್ಟ.

ಗುಳ್ಳದ ಬೆಳೆಗೂ ಕ್ರಿಮಿ ಕೀಟಾದಿಗಳಿಂದ ರೋಗ ಬಂದು, ಅದು ಹಾಳಾಗುವುದುಂಟು. ಹಾಗಾದರೆ, ರೈತ ಜನಾಂಗಕ್ಕೆ ಅಪಾರ ನಷ್ಟ. ಅವರ ಜೀವನ ದುರ್ಭರ. ಆದುದರಿಂದ ಗುಳ್ಳ ಬೆಳೆಯನ್ನು ಸಂರಕ್ಷಿಸುವುದು ಅಪೇಕ್ಷಣೀಯ. ಇದಕ್ಕಾಗಿ ಗುಳ್ಳದ ಗಿಡಗಳಿಗೆ ಸಾಮೂಹಿಕವಾಗಿ ಕ್ರಿಮಿನಾಶಕಗಳನ್ನು ಸಿಂಪಡಿಸುವ ಯೋಜನೆಯೊಂದು ಸಿದ್ಧವಾಗಿದೆ. ಜಿಲ್ಲೆಯ ಲೀಡ್ ಬ್ಯಾಂಕಾದ ಸಿಂಡಿಕೇಟ್ ಬ್ಯಾಂಕು, ಮಾರ್ಜಿನಲ್ ಫಾರ್ಮರ್ಸ್ ಎಂಡ್ ಎಗ್ರಿಕಲ್ಚರಲ್ ಲೇಬರರ್ಸ್ ಡೆವೆಲೆಪ್‌ಮೆಂಟ್ ಏಜನ್ಸಿ (ದ. ಕ. ಜಿಲ್ಲೆ) ಯೊಡನೆ ಸಹಕರಿಸಲು ಮುಂದೆ ಬಂದಿದೆ. ಮಟ್ಟುವಿನಲ್ಲಿ ಸಭೆ ಸೇರಿದ ರೈತರೂ ಬ್ಯಾಂಕು ಏಜನ್ಸಿ ಮತ್ತು ಜಿಲ್ಲಾ ಸಹಕಾರಿ ಕೃಷಿ ಅಭಿವೃದ್ಧಿ ಸಂಘದ ಪ್ರತಿನಿಧಿಗಳೂ ವಿಚಾರ ವಿನಿಮಯ ಮಾಡಿದರು. ಬೆಳೆಗೆ ಸಾಮೂಹಿಕವಾಗಿ ಕೀಟನಾಶಕ ಸಿಂಪಡಿಸಲು ಗುತ್ತಿಗೆಯನ್ನು ಉಡುಪಿಯ ಕೃಷಿಕೇಂದ್ರ ವಹಿಸಿತು. ವೆಚ್ಚದಲ್ಲಿ ಮೂರರಲ್ಲೊಂದಂಶವನ್ನು ಏಜನ್ಸಿ ವಹಿಸುವುದೆಂದು ಹೇಳಲಾಯ್ತು. ಕೀಟನಾಶಕ ಚಿಮುಕಿಸಲು ಮತ್ತು ನೀರು ಹರಿಯಿಸಲು ಆರ್ಥಿಕ ಅನನುಕೂಲವುಳ್ಳವರಿಗೆ ಸಿಂಡಿಕೇಟ್ ಬ್ಯಾಂಕು ಸಾಲ ನೀಡಲು ಮುಂದೆ ಬಂತು.

ಈ ಯೋಜನೆಯು ಅತ್ಯಂತ ಯಶಸ್ವಿಯಾಗುವುದೆಂದೂ ತನ್ಮೂಲಕ ಉತ್ಪಾದನೆಯಲ್ಲಿ ಹೆಚ್ಚಳ–ರೈತರ ಸಾಂಪತ್ತಿಕ ಸ್ಥಿತಿ ಸುಧಾರಣೆ ಏಕಕಾಲದಲ್ಲಿ ಸಾಧ್ಯವಾಗುವುದೆಂದು ನಿರೀಕ್ಷೆಯಿದೆ. ●

ಸ್ವೀಕಾರ—ವಿಮರ್ಶೆ

Hindus and Family Planning

(ಹಿಂದುಗಳು ಮತ್ತು ಕುಟುಂಬ ಯೋಜನೆ)

ಬರೆದವರು: – ಶ್ರೀ ಸುಧೀರ್ ಲಕ್ಷ್ಮಣ ಹೇಂಶ್ರೆ, ಬಿ.ಎ.ಎಲ್.ಎಲ್.ಬಿ.

ಪ್ರಕಾಶಕರು:—ಸುಪ್ರಜಾ ಪ್ರಕಾಶನ, ಸುಪ್ರಜಾ ಭವನ, ರೋಪಲೇನ್, ಚಂದನ್‌ವಾಡಿ, ಬೊಂಬಾಯಿ–2. ಡೆಮಿ 1/8 ಆಕಾರದ 160 ಪುಟಗಳು, ಬೆಲೆ—ರೂ.11/-

'ಹಿಂದುಗಳು ಮತ್ತು ಕುಟುಂಬ ಯೋಜನೆ ಎಂಬೀ ವಿಚಾರ ಪ್ರಚೋದಕ ಆಂಗ್ಲ ಭಾಷೆಯ ಪುಸ್ತಕದಲ್ಲಿ ಹಿಂದೂಜನಾಂಗಕ್ಕೆ ಈಗಿನ ಸರಕಾರವು ಈ ಯೋಜನೆಯಿಂದ ವಿವಿಧ ವಿಧಗಳ ದುಷ್ಪರಿಣಾಮಗಳನ್ನುಂಟು ಮಾಡಿದುದು ಅತಿ ಶೋಚನೀಯವೆಂಬುದನ್ನು ಗ್ರಂಥಕರ್ತರು ತಕ್ಕ ನಿದರ್ಶನಗಳನ್ನು ಕೊಟ್ಟು ವಿಶದ ಪಡಿಸಿದ್ದಾರೆ. ಮುಸಲ್ಮಾನರು ಎಷ್ಟೂ ಸ್ತ್ರೀಯರನ್ನು ಮದುವೆ ಮಾಡಿ ಕೊಳ್ಳಬಹುದು. ಅವರ ಇಸ್ಲಾಂ ಕಾನೂನನ್ನು ತಿದ್ದುವ ಧೈರ್ಯ ನಮಗಿಲ್ಲವಾದರೂ, ಹಿಂದೂಗಳಿಗೆ ಮಾತ್ರ ಏಕಪತ್ನೀವ್ರತವನ್ನು ಬೋಧಿಸಿ ಹಿಂದು ಜನಾಂಗದಲ್ಲಿ ಕೃತ್ರಿಮರೀತಿಗಳಿಂದ ಕುಟುಂಬ ವೃದ್ಧಿಯಾಗದ ಸಾಧನ ಮಾಡುವ ಸರಕಾರದ ಧೋರಣೆಯು ಮುಂದೆ ಕೆಲವು ದಶಕಗಳಲ್ಲಿ ಹಿಂದುಗಳ ಸಂಖ್ಯೆಯನ್ನು ತಗ್ಗಿಸಿ ಮುಸಲ್ಮಾನರ ಸಂಖ್ಯೆಯನ್ನು ಹೆಚ್ಚಿಸುವುದು. ಆಗ ದೇಶದಲ್ಲಿ ಕ್ಷೋಭೆಯುಂಟಾಗಿ ದೇಶದ ಚರಿತ್ರೆಯು ಹಿಂದುಗಳ ಅವನತಿಯನ್ನು ಕಾಣಿಸಬಹುದು. ಅತ್ಯಂತ ಸುಲಭವಾದ ರೀತಿಯಲ್ಲಿ ಉದಾಹರಣೆಗಳನ್ನು ಕೊಟ್ಟು ದೇಶದಲ್ಲಿ ಶೇಕಡಾ 80ರಷ್ಟು ಇರುವ ಹಿಂದುಗಳ ಸಂಖ್ಯೆಯನ್ನು ಕೆಳಗಿಳಿಸಿ ದೇಶಕ್ಕೆ ಕೇಡು ಬಾರದಂತೆ ಸರಕಾರಕ್ಕೆ ತಕ್ಕ ಎಚ್ಚರಕೊಟ್ಟ ಈ ಪುಸ್ತಕವನ್ನು ಪ್ರತಿಯೊಬ್ಬ ಭಾರತೀಯನೂ ಓದಿ ತಿಳಿದರೆ ಸರಕಾರದ ನೀತಿಯನ್ನು ವಿರೋಧಿಸಲು ಅನುಕೂಲವಾದೀತು. ಕೃತಕ ಉಪಾಯಗಳಿಂದ ಸಂತತಿಯನ್ನು ಹಿಂದೂ ಜನರಲ್ಲಿ ನಿರೋಧಿಸಿದರೆ ಮುಂದಿರುವ ಅಪಾಯಗಳು ಯಾವುವು? ಅವು ಎಷ್ಟು ಅಗಾಧವಾಗಿವೆ ಎಂಬುದನ್ನೂ ಲೇಖಕರು ಈ ಪುಸ್ತಕದಲ್ಲಿ ಅಂಕೆ ಸಂಖ್ಯೆಗಳಿಂದ ತೋರಿಸಿದ್ದಾರೆ. ಈ ತನಕ ಸರಕಾರವು 500 ಕೋಟಿ ರೂಪಾಯಿಗಳನ್ನು ಸಂತತಿ ನಿರೋಧ ಯೋಜನೆಗಾಗಿ ವೆಚ್ಚ ಮಾಡಿದೆ. ನಮ್ಮ ಜನಾಂಗದಲ್ಲಿ ಕುಟುಂಬ ವೃದ್ಧಿಯೇ ಮುಖ್ಯವಾದ ಬಲ. ಆ ಬಲವನ್ನು ಕೆಡಿಸಿ ನಾವು ದುರ್ಬಲರಾಗುವುದು ತಪ್ಪು. ಠಾಗೋರ, ತಿಲಕ, ಗಾಂಧಿಯರು ಜನ್ಮವೆತ್ತಿದ ಈ ಪುಣ್ಯ ಭೂಮಿಯನ್ನು ಅನಾಚಾರಕ್ಕೆ ಸರಕಾರವು ಉತ್ತೇಜನ ಕೊಡಬಾರದೆಂದು ಈ ಪುಸ್ತಕದಲ್ಲಿ ಒತ್ತಿ ಹೇಳಲಾಗಿದೆ. ಸರಕಾರವು ಈ ಪುಸ್ತಕವನ್ನು ತಜ್ಞ ಜ್ಞಾನಿಗಳ ಮೂಲಕ ಶೋಧಿಸಿ ಅರ್ಥವತ್ತಾದ ಈ ಪುಸ್ತಕದ ಸಾರವನ್ನು ಅರಿತುಕೊಂಡರೆ ಮುಂದಕ್ಕಾದರೂ ಇಟ್ಟ ತಪ್ಪು ಹೆಜ್ಜೆಯನ್ನು ತಿದ್ದಿಕೊಂಡು ದೇಶಕ್ಕಾಗಬಹುದಾದ ಕೇಡನ್ನು ತಪ್ಪಿಸ ಬಹುದು.

—B. S. Rao

ಉಡುಪಿಯಲ್ಲಿ ದೇವರಾಜ ಅರಸರು

ರಾಜ್ಯದ "ಇಂಡಿಕೇಟ್" ಅಧ್ಯಕ್ಷ ಶ್ರೀ ದೇವರಾಜ ಅರಸರು ಪಡುಬಿದ್ರಿಯ ಹಿಂದುಳಿದವರ ಪರಿಷತ್ತಿನಲ್ಲಿ ಭಾಗವಹಿಸಿದ ಬಳಿಕ ಉಡುಪಿಗೆ ಬಂದರು. ಇಲ್ಲಿನ ರಥಬೀದಿಯಲ್ಲಿ ಸಾರ್ವಜನಿಕ ಸಭೆನಡೆಯಿತು ಆ. ೨೧ ಸಭೆಯಲ್ಲಿ ಜಿಲ್ಲೆಯ ಇಂಡಿಕೇಟ್ ಅಭ್ಯರ್ಥಿಗಳು ಉಪಸ್ಥಿತರಿದ್ದರು.

ಉಡುಪಿಯ ಎಂ.ಪಿ. ಶ್ರೀ ಪಿ. ರಂಗನಾಥ ಶೆಣೈಯವರು ಮಾತನಾಡುತ್ತ "ಅನ್ಯಾಯದಿಂದ ಶ್ರೀಮಂತರನ್ನು ದರೋಡೆ ಮಾಡಿ ಸಮಾಜವಾದವನ್ನು ತರುವುದು ನಮ್ಮ ಉದ್ದೇಶವಲ್ಲ. ಐಶ್ವರ್ಯವನ್ನು ಬೇರೆ ಬೇರೆ ವಿಧಿವಿಧಾನಗಳಿಂದ ವಿಕೇಂದ್ರೀಕರಣಗೊಳಿಸುವುದರ ಮೂಲಕ ಅದನ್ನು ಹಂಚುವುದು ಸಾಧ್ಯ. ಇದಕ್ಕೆ ಸರಕಾರ ಕೊಟ್ಟಷ್ಟು ಪರಿಹಾರ ಪಡೆದು ಆಸ್ತಿವಂತರು ತಮ್ಮ ಆಸ್ತಿ ಬಿಟ್ಟುಕೊಡುವಂತೆ ಮಾಡುವ ಸಂವಿಧಾನ ತಿದ್ದುಪಡಿ ಅನುಕೂಲ"ವೆಂದರು. ಅವರು ಮುಂದರಿದು, ನಿರುದ್ಯೋಗ ನಿವಾರಣೆಗಾಗಿ ಮಾಡಿದ, ಮಾಡುತ್ತಿರುವ ಪ್ರಯತ್ನಗಳನ್ನೂ ಜಿಲ್ಲೆಯ ಪ್ರಗತಿಯ ಭವಿಷ್ಯವನ್ನೂ ವಿವರಿಸಿದರು.

ಶ್ರೀ ದೇವರಾಜ ಅರಸರು ಚುನಾವಣಾ ಭಾಷಣವನ್ನೇ ಮಾಡಿದರು. ಹಳೆಯ ಕಾಂಗ್ರೆಸಿನ ಮೇಲೆ ಜನತೆಗೆ ವಿಶ್ವಾಸ ಹಾರಿಹೋಗಿದೆಯೆಂದೂ ಆದಕ್ಕಾಗಿ ಶ್ರೀಮತಿ ಗಾಂಧಿಯವರ ನೇತೃತ್ವದ ತಮ್ಮ ಪಕ್ಷವನ್ನದು ಬೆಂಬಲಿಸಿತೆಂದೂ ದೃಢವಿಶ್ವಾಸ ತೋರ್ಪಡಿಸಿದರು. ಹಣ ಮತ್ತು ಜಾತಿಗಳ ಬಲದಿಂದ ಚುನಾವಣೆ ಗೆಲ್ಲುವ ತಂತ್ರ ೧೯೬೭ರಲ್ಲೇ ಮುಗಿದು ಹೋಯಿತೆಂದೂ ಮುಂದೆಂದಿಗೂ ಅದು ಸಾಧ್ಯವಿಲ್ಲವೆಂದೂ ಭವಿಷ್ಯ ನುಡಿದರು. ಜನತೆಯು ಜಾಗ್ರತವಾಗಿರುವ ಬಗ್ಗೆ ಸಂತೋಷ ಸೂಚಿಸಿದರು. ಕೇಂದ್ರ ಸರಕಾರದ ಸಾಧನೆ–ಸಂವಿಧಾನ ತಿದ್ದುಪಡಿಯನ್ನು ಸಮರ್ಥಿಸಿಕೊಂಡರು. "ನಮ್ಮ ಸಮಸ್ಯೆ ಆರು ತಿಂಗಳಲ್ಲಿ ಮುಗಿಯುವಂತಹದ್ದಲ್ಲ. ಸಮಸ್ಯೆಯ ನಿವಾರಣೆಯಲ್ಲಿ ಎಲ್ಲರ ಸಹಕಾರ, ಮತ್ತು ತ್ಯಾಗ ಅವಶ್ಯ. ಸಂಪತ್ತನ್ನು ಹೆಚ್ಚಿಸಿ ದೇಶದ ಜನರ ಹಿತ ಸಾಧಿಸಬೇಕು" ಎಂದವರು ಅಭಿಪ್ರಾಯ ಪಟ್ಟರು.

ಆರಂಭದಲ್ಲಿ ಶ್ರೀ ಯೋಗೀಶ್ವರ ಹೊಳ್ಳರು ಸ್ವಾಗತಿಸಿದರು; ಕೊನೆಯಲ್ಲಿ ಶ್ರೀ ಪ್ರಭಾಕರ ಹೆಗ್ಡೆಯವರು ಧನ್ಯವಾದವರ್ಪಿಸಿದರು.

● ●

ಮುನ್ನಡೆಯಲ್ಲಿ ನಮ್ಮ ಸಣ್ಣ ಕೈಗಾರಿಕಾ ಕ್ಷೇತ್ರ

ದೇಶದ ಸಣ್ಣ ಕೈಗಾರಿಕಾಕ್ಷೇತ್ರ ಇಂದು 65 ಲಕ್ಷಕ್ಕೂ ಹೆಚ್ಚು ಮಂದಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿದೆ. ಕಳೆದ ವರ್ಷ ಸಣ್ಣ ಕೈಗಾರಿಕೆಗಳಲ್ಲಿ 4056 ಕೋಟಿ ರೂ. ಬೆಲೆಬಾಳುವ ವಸ್ತುಗಳನ್ನು ಉತ್ಪಾದಿಸಿವೆ. ಸದ್ಯದಲ್ಲಿ 190727 ಸಣ್ಣ ಕೈಗಾರಿಕಾ ಘಟಕಗಳು ರಿಜಿಸ್ಟ್ರಾರರ ದಾಖಲೆಯನ್ನು ಪಡೆದಿದ್ದು ಪ್ರತಿವರ್ಷ ಅವುಗಳ ಸಂಖ್ಯೆ ಶೇಕಡಾ 11ರಷ್ಟು ಹೆಚ್ಚುತ್ತಿವೆ. 1965—66ರಲ್ಲಿ ಸಣ್ಣ ಕೈಗಾರಿಕಾ ಘಟಕಗಳ ವಾರ್ಷಿಕ ಹೆಚ್ಚಳ ಶೇಕಡಾ 8ರಷ್ಟಿತ್ತು.

ಸಣ್ಣ ಕೈಗಾರಿಕಾ ಕ್ಷೇತ್ರದ ತ್ವರಿತ ಅಭಿವೃದ್ಧಿಯ ದೃಷ್ಟಿಯಿಂದ ಕೆಲವು ವಸ್ತುಗಳನ್ನು ಈ ಕ್ಷೇತ್ರದಲ್ಲಿಯೇ ತಯಾರಿಸಲು ಸರ್ಕಾರ ಕ್ರಮಕೈಗೊಂಡಿದೆ. ಮೇಲ್ವರ್ಗ ಬಳಕೆದಾರರ ವಸ್ತುಗಳು,ಉತ್ಪಾದಕರ ವಸ್ತುಗಳು ಇತ್ಯಾದಿ ವಸ್ತುಗಳು ಸಣ್ಣಕೈಗಾರಿಕಾ ಕ್ಷೇತ್ರಕ್ಕೆ ಮೀಸಲಾಗಿಟ್ಟಿರುವ ವಸ್ತುಗಳಲ್ಲಿ ಸೇರಿವೆ.

ಸಣ್ಣ ಕೈಗಾರಿಕೆಗಳ ಸರ್ವಾಂಗೀಣ ಪ್ರಗತಿಗಾಗಿ ಹಣಕಾಸಿನ ನೆರವುನೀಡಲು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಂಡಿದೆಯಲ್ಲದೆ, ಬ್ಯಾಂಕುಗಳು ಹಾಗೂ ಇತರ ಸಹಕಾರಿ–ಸಂಘಗಳು ಈ ಬಗ್ಗೆ ಶ್ರಮವಹಿಸುತ್ತಿವೆ. ಬ್ಯಾಂಕುಗಳ ರಾಷ್ಟ್ರೀಕರಣದ ನಂತರ ಸಾಲದನೆರವಿನ ಪ್ರಮಾಣ ನಿರೀಕ್ಷೆಗೂ ಮೀರಿ ಹೆಚ್ಚಿದೆ. ಈವರೆಗೆ ಸಣ್ಣ ಕೈಗಾರಿಕೆಗಳಿಗಾಗಿ 400 ಕೋಟಿರೂ.ಗಳ ನೆರವು ನೀಡಲಾಗಿದೆ.

ಸಣ್ಣ ಕೈಗಾರಿಕಾ ಕ್ಷೇತ್ರಕ್ಕೆ ನೀಡಿರುವ ಉತ್ತೇಜನದಿಂದಾಗಿ ಆ ಕೈಗಾರಿಕೆಗಳನ್ನು ಆಧರಿಸಿರುವ ಸಹಾಯಕ ಕೈಗಾರಿಕೆಗಳೂ ಬೆಳೆಯುತ್ತಿವೆ. 1969—70ರಲ್ಲಿ ಸುಮಾರು 10 ಸಹಸ್ರ ಸಹಾಯಕ ಕೈಗಾರಿಕಾ ಘಟಕಗಳು 27.80ಕೋಟಿ ರೂ. ಬೆಲೆಬಾಳುವ ವಸ್ತುಗಳನ್ನು ಒದಗಿಸಿತು.

● ●

ಬಾಗಲಕೋಟೆಯಲ್ಲಿ ನೂತನ ರೂಮುಗಳ ಪ್ರಾರಂಭೋತ್ಸವ

ಬಾಗಲಕೋಟೆಯ ಶ್ರೀ ಎಸ್. ಕೆ. ಉಡುಪಿ & ಸನ್ಸ್ ಅವರ ಉಡುಪಿ ಶ್ರೀ ಧನಲಕ್ಷ್ಮೀ ಹೊಟೇಲ್ ಬೋರ್ಡಿಂಗ್ ಮತ್ತು ಲಾಜಿಂಗ್‌ನಲ್ಲಿ ತಾ. 18–10–71ರಂದು ಶ್ರೀ ಮಹಾಲಕ್ಷ್ಮೀ ಮತ್ತು ಶ್ರೀ ಮಹಾ ಸರಸ್ವತಿ ಪೂಜೆ ಜರಗಿ ತಾ. 20ನೇ ಮುಂಜಾನೆ ಸತ್ಯನಾರಾಯಣ ಪೂಜೆಯಾಗಿ ಹೊಸತಾಗಿ ನಿರ್ಮಿಸಲ್ಪಟ್ಟ ಅಟಾಚ್‌ಡ್ ಬಾತ್‌ರೂಂ ಸೌಕರ್ಯವುಳ್ಳ ರೂಮುಗಳ ಪ್ರಾರಂಭೋತ್ಸವವು ವಿಜೃಂಭಣೆಯಿಂದ ನೆರವೇರಿತು. ಇದಕ್ಕೆ ಬಹುಸಂಖ್ಯೆಯಲ್ಲಿ ಜನರು ಆಗಮಿಸಿ ಪ್ರಸಾದ ತಾಂಬೂಲವನ್ನು ಸ್ವೀಕರಿಸಿ ಶುಭ ಹಾರೈಸಿದರು,

ಬೇಕಾಗಿದ್ದಾರೆ

ಪ್ರಿಂಟಿಂಗ್ ಪ್ರೆಸ್‌ನ ನಾನಾ ವಿಭಾಗಗಳಲ್ಲಿ ತರಬೇತಿಗಾಗಿ ಕನಿಷ್ಠ ಎಂಟನೆ ತರಗತಿ ತನಕ ಓದಿದ ಸ್ಥಳೀಯ ಹುಡುಗರನ್ನು ತೆಗೆದುಕೊಳ್ಳಲಾಗುವುದು. ಒಂದೆರಡು ವರ್ಷಗಳ ಅನುಭವವಿದ್ದವರನ್ನೂ ಸೇರಿಸಿಕೊಳ್ಳಲಾಗುವುದು.

ನವಯುಗ ಪ್ರೆಸ್, ಉಡುಪಿ

ಚಂದಾದಾರರಲ್ಲಿ ವಿನಂತಿ

ಕೆಲವೊಂದು ಅನಾನುಕೂಲತೆಗಳಿಂದಾಗಿ ಈ ಸಂಚಿಕೆಯಲ್ಲಿ ಬರೀ ಹತ್ತು ಪುಟಗಳನ್ನು ಮಾತ್ರ ಕೊಡಲಾಗಿದೆ. ಈ ಬಗ್ಗೆ ಚಂದಾದಾರರು ಮನ್ನಿಸಬೇಕಾಗಿ ವಿನಂತಿ.

ಮೆನೇಜರ್.

ಉಡ್ಪಿ ಮುನ್ಸೀಫ್ ಕೋರ್ಟಿನಲ್ಲಿ

O.S. No. 121/1971

ಶ್ರೀ ಸೋದೆ ವಾದಿರಾಜ ಮಠ ಉಡ್ಪಿ

—ವಾದಿರು.

ಮತ್ತು

ಶಾಮು ನ್ಯಾಕ ಕೂಡಾ — ಪ್ರತಿವಾದಿರು.

2ನೇ ಪ್ರತಿವಾದಿ – ಎಡ್ವರ್ಡ್ ಡಿ'ಸೋಜ, ಅಬ್ರಹಾಮ್ ಡಿ'ಸೋಜರ ಮಗ. ಉಡ್ಪಿ ತಾಲೂಕು ಶಿರ್ವ ಗ್ರಾಮ—ಯಿವರಿಗೆ

ವಾದಿರು ನಿಂಮ ಮೇಲೆ ಗೇಣಿ ಬಾಕಿ ಕೇಳಿ ದಾಕ್ಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 9–11–71ಕ್ಕೆ ಇಟ್ಟದೆ. ಆ ದಿವ್ಸ ಬೆಳಿಗ್ಗೆ 11ಗಂಟೆಗೆ ಕೋರ್ಟು ಮುಂದೆ ಹಾಜ್ರಾಗಿ ಉದಾಹರಿಸುವರೆ ತಪ್ಪದ್ರೆ ನಿಂಮ ಗೈರ್ ಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾನಿಸಲಾದೀತು.

By Order of Court.

Sd- V. G. Kedlaya,

M.A.,L.L.B,

ವಾದಿರ ಕಡೆ ಅಡ್ವೋಕೇಟ್.

ಉಡ್ಪಿ, ತಾ. 15–10–1971

ದಯಮಾಡಿ ನಿಮ್ಮ ಬಾಕಿ ಚಂದಾ ಹಣವನ್ನು ಕಳುಹಿಸಿರಿ

Kindly

Contribute generously

to the

NAVAYUGA

GOLDEN JUBILEE FUND 1971

ಕೈಗಾರಿಕಾ ತ್ವರಿತ ಪ್ರಗತಿ

ಸ್ವಾತಂತ್ರ್ಯಾನಂತರದ ಭಾರತದಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ಅಭಿವೃದ್ಧಿಯ ವೇಗ ತೀವ್ರಗೊಂಡಿದೆ. ಕೈಗಾರಿಕಾ ಉತ್ಪಾದನೆಯಲ್ಲಿ ವೈವಿಧ್ಯತೆಯಿದೆ.

ಈಗ ದೇಶದಲ್ಲಿ ಅತ್ಯಂತ ಸರಳ ವಸ್ತುಗಳಿಂದ ಹಿಡಿದು ಅತ್ಯಂತ ಪರಿಷ್ಕೃತ ಸಾಧನೋಪಕರಣಗಳನ್ನು ತಯಾರಿಸುವ ಶಕ್ತಿಯಿದೆ. ಈಗ ಸೈಕಲ್, ಮೋಟಾರ್ ಸೈಕಲ್, ಹೊಲಿಗೆ ಯಂತ್ರ, ವಿದ್ಯುತ್ ಬೀಸಣಿಗೆ, ಬ್ಲೇಡು, ಉಕ್ಕು, ಮಷೀನ ಟೂಲ್ಸ್, ರಾಸಾಯನಿಕ ಗೊಬ್ಬರ ತಯಾರಿಕಾ ಯಂತ್ರ ತಯಾರಿಸಲಾಗುತ್ತಿದೆ. ತೈಲ ಶುದ್ಧೀಗಾರಗಳನ್ನು ಸ್ಥಾಪಿಸಲಾಗಿದೆ.

ಇಂದು ಭಾರತವು ಪರಿಷ್ಕೃತ ಯಂತ್ರಗಳು, ಬಾಯ್ಲರ್, ಸ್ವಿಚ್‌ಗೇರ್, ಟ್ರಾನ್ಸ್‌ಫಾರ್ಮರ್ ಹಾಗು ವಾಲ್ವ್‌ಗಳನ್ನು ಏಷ್ಯಾ, ಆಫ್ರಿಕಾ ಮತ್ತು ಯುರೋಪ್ ಖಂಡದ ಅನೇಕ ದೇಶಗಳಿಗೆ ರಫ್ತು ಮಾಡುತ್ತಿದೆ.

ಎರಡು ದಶಕದ ಹಿಂದೆ ದೇಶದಲ್ಲಿ 15 ಲಕ್ಷ ಟನ್ ಉಕ್ಕು ತಯಾರಾಗುತ್ತಿದ್ದುದು ಈಗ 60 ಲಕ್ಷ ಟನ್‌ಗಳಿಗೇರಿದೆ.

ಇಂದು ಕೈಗಾರಿಕಾ ಉತ್ಪಾದನೆಯಲ್ಲಿ ಏರಿಕೆಯಾಗಿದೆ. ಸಕ್ಕರೆಯ ಉತ್ಪಾದನಾ ಮಟ್ಟ 1969ರಲ್ಲಿ 38-68 ಲಕ್ಷ ಟನ್‌ಗಳಿದ್ದುದು 1970ರಲ್ಲಿ 42-67 ಲಕ್ಷ ಟನ್‌ಗಳಿಗೇರಿತು. ಸಿಮೆಂಟ್ ಉತ್ಪಾದನೆ 1.37 ಕೋಟಿ ಟನ್‌ಗಳಿಂದ 1.40ಕೋಟಿ ಟನ್‌ಗಳಿಗೇರಿತು; ಶಾಖ ನಿರೋಧಕ ಸಾಮಗ್ರಿಗಳ ತಯಾರಿಕೆ 6.46 ಲಕ್ಷ ಟನ್‌ಗಳಿಂದ 6.59 ಲಕ್ಷ ಟನ್‌ಗಳಿಗೇರಿದೆ.

ಕಳೆದ ವರ್ಷ ಮಷೀನ್ ಟೂಲುಗಳ ತಯಾರಿಕೆ 1969ನೇ ಇಸವಿಯ ತಯಾರಿಕೆಗಿಂತ ಶೇಕಡ 34.7ರಷ್ಟು ಹೆಚ್ಚಾಗಿತ್ತು. ಇದೇ ಅವಧಿಯಲ್ಲಿ ವಿದ್ಯುತ್ ಮೋಟಾರುಗಳ ತಯಾರಿಕೆ ಶೇಕಡ 34.6ರಷ್ಟು, ಮೋಟಾರ್ ಸೈಕಲ್ ತಯಾರಿಕೆಗೆ ಶೇಕಡ 24.6ರಷ್ಟು ಹಾಗು ರೇಡಿಯೋಗಳ ತಯಾರಿಕೆ ಶೇಕಡ 2.8ರಷ್ಟು ಹೆಚ್ಚಾಗಿದೆ. ●

ಗೇಹ ರಾಜ್ಯದಲ್ಲಿ

(ನಾಲ್ಕನೇ ಪುಟದಿಂದ)

ದ ಪಾರಾದರಂತೆ....'

'ಹ್ಞೂಂ...ಜತೆಗೆ ಕೆನೆಡಾದ ಮರ್‍ಯಾದೆಯೂ ಉಳಿಯಿತಂತೆ.'

'ಮತ್ತೆ ನೋಡಿ....'

'ಏನು?'

'ರೇಲ್ವೆ ಮಂಡಳಿಯ ಅಧ್ಯಕ್ಷ ಪದದಿಂದ ಗಾಂಗೂಲಿಯನ್ನು ವಜಾಮಾಡಿದರಂತೆ -ರಾಷ್ಟ್ರಪತಿಗಳು ಆಜ್ಞೆ ಹೊರಡಿಸಿ....'

'ಹೌದು. ರೈಲ್ವೆ ಮಂತ್ರಿಗೂ ಅವರಿಗೂ ಭಿನ್ನಾಭಿಪ್ರಾಯ ಬಲಿತು ಹೋಯ್ತಂತೆ.'

'ಅಲ್ರಿ, ಹೀಗೆಲ್ಲ ಉನ್ನತ ಅಧಿಕಾರಿಗಳನ್ನು ವಜಾ ಮಾಡುತ್ತ ಹೋದರೆ, ಮಂತ್ರಿಗಳನ್ನು ಮೆಚ್ಚಿಸುವುದರಲ್ಲೇ ಅಧಿಕಾರಿಗಳು ತೊಡಗ ಬೇಕಾಗುತ್ತದೆ....'

'ಹೌದು....'

'ಮತ್ತೆ ಅವರ ಸೇವೆ?'

'ಅದನ್ನು ಮಂತ್ರಿಗಳು ಮಾಡುತ್ತಾರೆ.'

'ಭಾಷಣ ಬಿಗಿದು....'

'ಅದು ಹೇಗೇ ಇರಲಿ....'

'ಅಲ್ರಿ, ಗಾಂಗೂಲಿ ಕುಳಿತಿದ್ದ ರೇಲ್ವೆ ಬೋಗಿಯನ್ನೂ ಕಳಚಿ ಬಿಟ್ಟು ಅವರಿಗೆ ಅಪಮಾನ ಮಾಡಲಾಯ್ತಂತೆ....'

'ಮಾನ-ಅಪಮಾನಗಳನ್ನು ಸಮಾನವೆಂದು ಭಾವಿಸಿದರಾಯ್ತಲ್ಲ?'

'ಮಂತ್ರಿ—ಅಧಿಕಾರಿಗಳ ನಡುವೆ ನೀತಿ-ವ್ಯವಹಾರಗಳ ಸಂಬಂಧ ಭಿನ್ನಮತ ವಿರಬಹುದಾದರೂ ಅದನ್ನು ಪರಸ್ಪರ ತಿಳುವಳಿಕೆಯಿಂದ ನೀಗಿಸಬಹುದಿತ್ತು. ಈ ರೀತಿಯ ಉಗ್ರಕ್ರಮ....'

'ಆ ಬಗ್ಗೆ ಮಾತಾಡದಿರುವುದೇ ಕ್ಷೇಮ. ಅಧಿಕಾರ ದಂಡ ಕೈಯಲ್ಲಿರುವಾಗ ಅದನ್ನು ಉಪಯೋಗಿಸುವುದರಲ್ಲಿ ಅನ್ಯಾಯವೆಲ್ಲಿ?'

'ಆದರೂ ಬ್ರಹ್ಮಾಸ್ತ್ರವಿದೆಯೆಂತ ಗುಬ್ಬಿಯ ಮೇಲೆ ಬಳಸುವುದೆ?'

'ಗಾಂಗೂಲಿ ಗುಬ್ಬಿಯೆನ್ನುತ್ತೀಯ?'

'ಗಾಂಗೂಲಿ ಅಂತೇನು? ಸರಕಾರದ ಕೃಪಾಕಟಾಕ್ಷದಲ್ಲಿರುವವರೆಲ್ಲ ಗುಬ್ಬಿಗಳೇ. ಮಂತ್ರಿಗಳಿಗೆ ಮುಜುರೆ ಹಾಕಿಕೊಂಡಿದ್ದ ರಕ್ಷಣೆ....'

'ಯಾರಿಗೆ?'

'ಎಲ್ಲರಿಗೂ....'

'ಹೌದೆ?'

'ಹ್ಞೂಂ....' — ಗೋ ೯ ರಾ.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಆಹಾರಧಾನ್ಯ ಉತ್ಪಾದನೆಯಲ್ಲಿ ಹೊಸ ಮಜಲು

ಭಾರತದ ಕೃಷಿ ಇತಿಹಾಸದಲ್ಲಿ ಪ್ರಪ್ರಥಮವಾಗಿ ಆಹಾರಧಾನ್ಯಗಳ ಉತ್ಪಾದನೆ ಹೊಸ ಮಜಲನ್ನು ಮುಟ್ಟಿದೆ.

1970—71ರಲ್ಲಿ ದೇಶದ ಆಹಾರ ಉತ್ಪಾದನೆಯು 107. 81 ದಶಲಕ್ಷಟನ್‌ಗಳಾಗಿತ್ತು. ಕಳೆದ ವರ್ಷದ ಆಹಾರ ಉತ್ಪಾದನಾ ಮಟ್ಟ 99. 6ದಶಲಕ್ಷಟನ್. 1949–50ರಲ್ಲಿ 54. 9 ದಶಲಕ್ಷಟನ್ ಆಹಾರ ಧಾನ್ಯ ಉತ್ಪಾದಿಸಲಾಯಿತು.

ನಾಲ್ಕನೇ ವರ್ಷ ಸತತವಾಗಿ ಹೊಸದಾಖಲೆ ಸ್ಥಾಪಿಸುವ ಮಟ್ಟದಲ್ಲಿಗೋಧಿ ಬೆಳೆತೆಗೆಯಲಾಗುತ್ತಿದೆ. 1970–71 ರಲ್ಲಿ 23.25 ದಶಲಕ್ಷ ಟನ್ ಗೋಧಿ, 42.45 ದಶಲಕ್ಷ ಟನ್ ಅಕ್ಕಿ 8 ದಶಲಕ್ಷ ಟನ್ ಬಾಜು 7.41 ದಶಲಕ್ಷ ಟನ್ ಮೆಕ್ಕೆಜೋಳ ಹಾಗೂ 2.26 ದಶಲಕ್ಷ ಟನ್ ರಾಗಿ ಬೆಳೆಯಾಯಿತು.

ಭಾರತೀಯ ಬೇಸಾಯಗಾರರಲ್ಲಿ ಹೆಚ್ಚು ವೈಜ್ಞಾನಿಕ ಪ್ರಜ್ಞೆ ಬೆಳೆಯುತ್ತಿರುವುದು ಅಧಿಕ ಆಹಾರ ಉತ್ಪಾದನೆಗೆ ಕಾರಣವಾಗಿದೆ. ಭಾರತೀಯ ಬೇಸಾಯಗಾರರು ಯಾಂತ್ರೀಕೃತ ಕೃಷಿ ಕೈಗೊಳ್ಳುತ್ತಿದ್ದಾರೆ. ಇಂದು ಭಾರತದ ಕೃಷಿಭೂಮಿಯಲ್ಲಿ ಟ್ರಾಕ್ಟರ್ ಸಾಧನ ಎಲ್ಲೆಲ್ಲೂ ಕಣ್ಣಿಗೆ ಕಾಣಿಸುತ್ತದೆ ಅಧಿಕ ಸಂಖ್ಯೆಯ ಬೇಸಾಯಗಾರರು ಹೊಸ ಕೃಷಿ ವಿಧಾನ ಅಳವಡಿಸುತ್ತಿದ್ದಾರೆ. ಅವರು ಅಧಿಕ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರ ಹಾಗೂ ಅಧಿಕ ಇಳುವರಿ ಬಿತ್ತನೆ ಬೀಜಗಳನ್ನು ಬಳಸುತ್ತಿದ್ದಾರೆ.

ಸಂಗ್ರಹಿಸಲೇಬೇಕಾದ ಉತ್ತಮ ಪುಸ್ತಕಗಳು

ಇಂದಿನ ವಿಜ್ಞಾನ ಮತ್ತು ಮಾನವ	(ಯು. ಎಲ್. ಆಚಾರ್ಯ)	ರೂ.	1 = 50
ನಡುಹಗಲಿನ ಕಗ್ಗತ್ತಲೆ	(ಕು. ಶಿ. ಹರಿದಾಸ ಭಟ್ಟ)	,,	2 = 50
ಶಿಕ್ಷಣದ ಧ್ಯೇಯಗಳು	(ಕೆ. ಬಿ. ರಾಮಕೃಷ್ಣರಾವ್ & ಯು. ಎಲ್. ಆಚಾರ್ಯ)	,,	2 = 25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಕು. ಶಿ. ಹರಿದಾಸ ಭಟ್ಟ)	,,	2 = 50
ಹಿರೋಶಿಮಾದಿಂದ ಜಿನೇವ	(ಯು. ರಾಘವೇಂದ್ರ ಆಚಾರ್ಯ)	,,	1 = 50
ಮೋಹದ ಮಹಾಜಾಲ	(ವೀರಪ್ಪ ಯಗಟಿ)	,,	1 = 75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	,,	1 = 50
ಕಥಾ ಕೌಮುದಿ	(,,)	,,	1 = 50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್ಟನ್	(ಯು. ಎಲ್. ಆಚಾರ್ಯ)	,,	1 = 25
ಏಶಿಯದ ಸಂಪತ್ತು	(ಕು. ಶಿ. ಹರಿದಾಸ ಭಟ್ಟ)	,,	2 = 00
ಭಾವಾರ್ಜನೆ	(ನಚಿಕೇತ)	,,	1 = 25
ಅಮೆರಿಕದ ಆರು ಕಥೆಗಳು	(ಕು. ಶಿ. ಹರಿದಾಸ ಭಟ್ಟ)	,,	1 = 75
ಋಣಯಾತ್ರೆ	(ನಚಿಕೇತ)	,,	1 = 50
ಚಿತ್ರಾಂಗದೆ	(ಕೆ. ಕೆ. ಶೆಟ್ಟಿ)	,,	0 = 60
ರವೀಂದ್ರರ ಕಿರುಗತೆಗಳು	(ಹನುಮಂತರಾವ್ ಮಾಂಜ್ರೇಕರ್)	,,	0 = 90
ಹಸುರು ಹಂಸ	(ನಚಿಕೇತ)	,,	2 = 00
ಬಿರಿದ ಮುಗುಳು	(ಎಸ್. ಗೋಪಿಚಂದ ರಾವ್)	,,	1 = 50
ಭಾರತದ ವೀರಾಂಗನೆಯರು	(ಕೆ. ಎನ್. ಭಟ್ ಶಿರಾಡಿಪಾಲ್)	,,	1 = 50
ಮೇರಿ ಕೊಟ್ಟ ಬೆಂಡೋಲೆ	(ಎಸ್. ಸದಾಶಿವ ರಾವ್)	,,	1 = 80

ಪ್ರತಿಗಳು ಸಿಗುವ ಸ್ಥಳಗಳು :

1. **ನವಯುಗ ಪ್ರೆಸ್, ಉಡುಪಿ.**
2. **ನವಭಾರತ ಪುಸ್ತಕ ಭಂಡಾರ, ಉಡುಪಿ.**

ಮೈಸೂರು ರಾಜ್ಯ ಟಿ. ಬಿ. ಸಮಿತಿ

ಮೈಸೂರು ರಾಜ್ಯದ ಇ. ಎಸ್. ಟಿ. ವಿಭಾಗದ ಮಾಜಿ ಸ್ಪೆಷಲ್ ಆಫೀಸರ್ ಹಾಗೂ ಮೈಸೂರು ರಾಜ್ಯದ ಈಗಿನ ಕ್ಷಯರೋಗ ನಿರೋಧ ಸಮಿತಿಯ ಆಡಳಿತ ಮತ್ತು ಟೆಕ್ನಿಕಲ್ ಸಮಿತಿಯ ಸದಸ್ಯರಾದ ಡಾ। ಟಿ. ಮಾಣಿಕಂಠವರು ಕಳೆದ ತಾ 13-10-71ರಂದು ಮಂಡ್ಯ ಹಾಗೂ ಮೈಸೂರಿಗೆ ಸಂದರ್ಶನವಿತ್ತು ಜಿಲ್ಲಾ ಟಿ. ಬಿ. ಸಮಿತಿಗಳ ಕಾರ್ಯಕರ್ತರೊಡನೆ ಟಿ. ಬಿ. ನಿರೋಧ ಚಳುವಳಿಯ ವಿವಿಧ ಅಭಿವೃದ್ಧಿಯ ಕುರಿತು ಚರ್ಚಿಸಿದರು. ಮಂಡ್ಯದ ಜಿಲ್ಲಾ ಟಿ. ಬಿ. ಸಂಸ್ಥೆಗಳು ಟಿ. ಬಿ ರೋಗಿಗಳ ಮೇಲ್ವಿಚಾರಣೆಗೆ ಸ್ವಯಂಸೇವಕದಳದ ಸ್ಥಾಪನೆ ಹಾಗೂ ಟಿ. ಬಿ. ಅಂಚೆ ಚೀಟು ಮಾರಾಟದ ಹೆಚ್ಚುವಳಿಗೆ ಅನುಕೂಲವಾಗುವಂತಹ ಹೆಜ್ಜೆಗಳನ್ನಿಡಬೇಕೆಂದು ನಿಶ್ಚಯಿಸಿತು.

13ನೇ ತಾರೀಕಿನ ಸಂಜೆ ಡಾ। ಟಿ. ಮಾಣಿಕಂಠರವರು ಮಂಡ್ಯ ಟಿ. ಬಿ. ಸಂಸ್ಥೆಯವರು ಏರ್ಪಡಿಸಿದ ಉತ್ತಮ ಆಹಾರ ಒದಗಿಸುವ ಯೋಜನೆಯನ್ನು ಅಲ್ಲಿಯ ಟಿ ಬಿ. ಕೇಂದ್ರದಲ್ಲಿ ಉದ್ಘಾಟಿಸಿದರು.

ಇಂತಹುದೇ ಒಂದು ಕೇಂದ್ರವನ್ನು ಮಂಡ್ಯದ ಮೈಶುಗರ್ ಕಂಪೆನಿಯ ಕೆಲಸಗಾರರ ಬಡಾವಣೆಯಲ್ಲಿ ಸ್ಥಾಪಿಸುವ ಯೋಜನೆಯೂ ಇದೆ. ಮೈಸೂರಿನ ಜಿಲ್ಲಾ ಟಿ. ಬಿ. ಸಂಸ್ಥೆಯು ಉತ್ತಮ ಆಹಾರ ಯೋಜನೆಯನ್ನು ಮೈಸೂರಿನ ಟಿ. ಬಿ ಕೇಂದ್ರದಲ್ಲೂ ಪ್ರಾರಂಭಿಸುವ ಯೋಜನೆಯಾಗಿದೆ.

ಮೈಸೂರಿನ ರಾಜ್ಯಪಾಲರು ಇದೇ ತಿಂಗಳ 6ರಂದು ರಾಜಭವನದಲ್ಲಿ 22ನೆ ಟಿಬಿ ಅಂಚೆಚೀಟಿಗಳನ್ನು ಬಿಡುಗಡೆ ಗೊಳಿಸುವ ಸಂದರ್ಭದಲ್ಲಿ ಮಕ್ಕಳಿಗೆ ಉತ್ತಮ ಆಹಾರ ಪೂರೈಸುವ ಯೋಜನೆಯನ್ನು ತೀವ್ರಗತಿಯಲ್ಲಿ ಜಾರಿಗೆ ತಂದು ಕ್ಷಯರೋಗ ಬಾರದಂತೆ ತಡೆಗಟ್ಟಲು ಪ್ರಯತ್ನಿಸಬೇಕೆಂದು ಕರೆಯಿತ್ತುದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು.

ಶಿರ್ವ ರೋಟರಿ ಸಭೆ

ತಾ 8-10-71ರಂದು ಜರಗಿದ ಶಿರ್ವ ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯಲ್ಲಿ ಶಿರ್ವದವರೇ ಆದ ಪ್ರಕೃತ ಬೊಂಬಾಯಿ ಮಜ್ಗಾಂವ್ ಡೋಕ್‌ನಲ್ಲಿ ಎಂಜಿನಿಯರ್ ಆಗಿರುವ ಜಿ. ನಾರಾಯಣ ಶೆಣೈ ಇವರು ಮುಖ್ಯ ಅತಿಥಿಗಳಾಗಿ ಭಾಷಣ ಮಾಡುತ್ತ ಕಾರ್ಮಿಕ, ಯಂತ್ರ ಮತ್ತು ಸಾಮಗ್ರಿಗಳ ಹೊಂದಾಣಿಕೆಯಿಂದ ಹೇಗೆ ಉತ್ಪತ್ತಿಯನ್ನು ಹೆಚ್ಚಿಸ ಬಹುದೆಂದು ತಿಳಿಸಿ ಸಾರ್ವಜನಿಕ ಕ್ಷೇತ್ರದಲ್ಲಿ ಮಜ್ಗಾಂವ್ ಡೋಕ್ ಮಾತ್ರ ಲಾಭದಾಯಕವಾಗಿ ನಡೆಯುತ್ತದೆ. ಅದಕ್ಕೆ ಕಾರಣ ಕಾರ್ಮಿಕ ಮತ್ತು ಅಧಿಕಾರಿ ವರ್ಗದೊಳಗಿನ ಪರಸ್ಪರ ತಿಳುವಳಿಕೆ ಎಂದರು.

ಬಂಟವಾಳ ಮುನ್ಸಿಫ್ ಕೋರ್ಟಿನಲ್ಲಿ

O. S. 18/71.

ಅಣ್ಣು ಅಜಿಲ — ವಾದಿ

ಮತ್ತು

ಶಿವದೇವಿ ಕೂಡಾ — ಪ್ರತಿವಾದಿರು

3ನೇ ಪ್ರತಿವಾದಿ ಪದ್ಮರಾಜ, ಶಿವದೇವಿ ಅಂಜನ ಮಗ, ಬಂಟವಾಳ ತಾಲೂಕು ಉಳಿ ಗ್ರಾಮದಲ್ಲಿರುವವರು.

ಮೇಲ್ಕಂಡ ವಾದಿಯು ಕುಟುಂಬದ ಆಸ್ತಿಗಳ ಪಾಲಿಗೆ ಮಾಡಿದ ವ್ಯಾಜ್ಯವು ತಾರೀಕು 18-11-1971ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ನೀವು ಸ್ವತಹ ಅಥವಾ ವಕೀಲರ ಮುಖಾಂತರ ಆ ದಿನ ಹಗಲು 11 ಗಂಟೆಗೆ ಹಾಜರಾಗಲು ತಪ್ಪಿದರೆ ನಿಮ್ಮ ಶಿವಾಯಿ ಡಿಕ್ರಿ ಮಾಡಲಾದೀತು.

(ಕೋರ್ಟು ಹುಕುಂ ಪ್ರಕಾರ)

ಇ. ವೆಂಕಟೇಶ್ವರ ಭಟ್ಟ
ವಾದಿ ಕಡೆ ಎಡ್ವೊಕೇಟ್

B. C. ರೋಡು, 19-10-71

ಇದು ನಮ್ಮ ಭಾರತ

ಅಧಿಕಾರಿಯು ಕಾದು ನಿಂತನು

[illegible]ರಲ್ಲಿ ಘಟಿಸಿದ ಘಟನೆಯಿದು. ದೊಡ್ಡ ಅಧಿಕಾರಿಯಾಗಿದ್ದ ಪಂಡಿತ ಶ್ರೀ ಸತ್ಯಸ್ವರೂಪರು ಇಂಡಿಯಾ ಗೇಟಿನಿಂದಾಗಿ ಕಾರ್ಯಾಲಯದಿಂದ ಮರಳುತ್ತಿದ್ದರು. ಮಾರ್ಗದಲ್ಲಿ ಬ್ಯಾಗೊಂದು ಬಿದ್ದಿರುವುದು ಅವರಿಗೆ ಕಂಡಿತು. ಇದರಲ್ಲಿ ರೂ. ೨೫೦೦ ನಗದಿ ಮತ್ತು ಕೆಲವು ಅಮೂಲ್ಯ ಕಾಗದ ಪತ್ರಗಳಿದ್ದುವು. "ಇದನ್ನು ತೆಗೆದುಕೊಂಡು ಹೋಗಿ ಪೋಲೀಸು ಸ್ಟೇಶನ್ನಿಗೆ ಒಪ್ಪಿಸಬೇಕು; ಅದು ಯಾರದ್ದೋ ಅವರಿಗದು ಸೇರಬಹುದು'' ಎಂದವರು ಯೋಚಿಸಿದರು

ಅವರು ಬ್ಯಾಗನ್ನೆತ್ತಿಕೊಂಡು ತುಸು ದೂರ ನಡೆದರು. ಆಗ ಅವರಿಗನ್ನಿಸಿತು: 'ಕಳೆದುಕೊಂಡ ಇದನ್ನು ಅರಸುತ್ತ ಯಜಮಾನ ಈ ದಾರಿಯಾಗಿ ಬಾರದಿರುತ್ತಾನೆಯೆ?' ಅವರು ಆ ಬ್ಯಾಗು ಮೊದಲು ಬಿದ್ದಿದ್ದಲ್ಲಿಗೇ ಮರಳಿ ಬಂದರು, ಅಲ್ಲಿ ನಿಂತುಕೊಂಡರು. ಆ ಬ್ಯಾಗಿನ ಒಡೆಯನ ದಾರಿ ಕಾಯುತ್ತ ಇದ್ದರು.

ತುಸು ಸಮಯ ಕಳೆಯಿತು. ಅಷ್ಟರಲ್ಲಿ ಒಬ್ಬ ಸೈಕಲ್ ಸವಾರ ಆ ದಾರಿಯಾಗಿ ಬರುತ್ತಿದ್ದನು. ಅವನ ಮುಖ ಬಹಳಷ್ಟು ಚಿಂತಿತವಾಗಿತ್ತು. ಅವನ ಕಣ್ಣಿಗೆ ಪಂಡಿತರ ಬಗಲಲ್ಲಿದ್ದ ಬ್ಯಾಗು ಕಂಡಿತು. ಅವನು ಸೈಕಲಿನಿಂದಿಳಿದನು. ಪಂಡಿತರ ಬಳಿ ಬಂದು ವಿನಯದಿಂದ ಹೇಳಿದನು-'ಸ್ವಾಮಿ ಈ ಬ್ಯಾಗು ನನ್ನದು. ಇದರಲ್ಲಿ ೨,೫೦೦ ರೂಪಾಯಿಗಳಿದ್ದುವು; ಕೆಲವು ಕಾಗದ ಪತ್ರಗಳೂ ಇವೆ. ಆ ಹಣವನ್ನು ಬ್ಯಾಂಕಿನಲ್ಲಿ ಜಮೆ ಮಾಡಬೇಕಾಗಿತ್ತು. ಆದರೆ, ಬ್ಯಾಂಕಿನ ಕೆಲಸದ ವೇಳೆ ಮುಗಿದದ್ದರಿಂದ ಬ್ಯಾಗನ್ನು ಸೈಕಲಿನಲ್ಲಿಟ್ಟು ಮನೆಗೆ ಮರಳುತ್ತಿದ್ದೆ. ಎಲ್ಲಿ ಹೇಗೆ ಬಿದ್ದು ಹೋಯಿತೋ ತಿಳಿಯಲಿಲ್ಲ. ಮನೆಗೆ ಹೋಗಿ ನೋಡುವಾಗ ಬ್ಯಾಗು ಕಳೆದುಕೊಂಡುದು ಗೊತ್ತಾಯಿತು. ಕೂಡಲೇ ಮತ್ತೆ ಸೈಕಲ್ ಏರಿ ಎಲ್ಲಿಯಾದರೂ ಸಿಕ್ಕೀತೇ ಎಂದು ಬಂದೆ. ನೀವಿದನ್ನು ಪೋಲೀಸು ಠಾಣೆಗೆ ಒಪ್ಪಿಸಿದರೆ, ನನಗದು ಸಿಗಬೇಕಾದರೆ, ತುಂಬ ತ್ರಾಸ ಪಡ ಬೇಕಾಗುವುದು. ಆದುದರಿಂದ ಹೇಗೂ ಸುದೈವದಿಂದ ತಮ್ಮಂಥವರಿಗೇ ಅದು ಸಿಕ್ಕಿದೆ. ನನಗದನ್ನು ಕೊಟ್ಟು ಬಿಟ್ಟರೆ, ಆಜೀವ ತಮ್ಮನ್ನು ನೆನೆದುಕೊಂಡಿರುತ್ತೇನೆ.'

ಅತನ ಮಾತುಗಳಿಂದ ಪಂಡಿತರಿಗೆ ಸಂಪೂರ್ಣ ತೃಪ್ತಿಯಾಯ್ತು. ಅವರು ಬ್ಯಾಗನ್ನವರಿಗೆ ಕೊಟ್ಟು ಬಿಟ್ಟರು. ತನ್ನ ಕಳೆದುಕೊಂಡ ಸಂಪತ್ತನ್ನು ಮತ್ತೆ ಮರಳಿ ಪಡೆದ ಆ ವ್ಯಕ್ತಿಯ ರೋಮ ರೋಮವೂ ಆನಂದತುಂದಿಲವಾಯ್ತು. ತನ್ನ ಕರ್ತವ್ಯಪಾಲನೆ ಮಾಡಿದ್ದರಿಂದ ಪಂಡಿತರಿಗೂ ಸಂತೋಷವೆನಿಸಿತು. ಆ ವ್ಯಕ್ತಿ ಧನ್ಯವಾದ ಹೇಳಿ ಅರಳಿದ ಮುಖದಿಂದ ಮತ್ತೆ ಸೈಕಲ್ಲೇರಿತು. ಪಂಡಿತರ ಮನಸ್ಸೂ ತೃಪ್ತಿಯಿಂದ ತುಂಬಿತ್ತು. ●

ಅಕಾಡೆಮಿ ಘಟಿಕೋತ್ಸವ

ಮಣಿಪಾಲ ಶಿಕ್ಷಣ ಅಕಾಡೆಮಿಯ ನಾಲ್ಕನೆಯ ವಾರ್ಷಿಕ ಸಮಾರಂಭದಲ್ಲಿ ಭಾರತ ಮತ್ತು ಸಿಂಹಳಗಳ ಅಂತರ್ ವಿಶ್ವವಿದ್ಯಾಲಯ ಮಂಡಳಿ ಕಾರ್ಯದರ್ಶಿ ಡಾ। ಅಮ್ರಿಕ್ ಸಿಂಗ್ ಅವರು ಪದವೀದಾನ ಭಾಷಣ ಮಾಡುತ್ತಾ, ಶಾಲಾ ಶಿಕ್ಷಣಕ್ಕೆ ಪ್ರಾಶಸ್ತ್ಯ ಅಗತ್ಯವೆಂದು ನುಡಿದು ಕಾಲೇಜು ಶಿಕ್ಷಣಕ್ಕಾಗಿ ವೆಚ್ಚ ಮಾಡಿದ ಹಣದ ಅರ್ಧ ಭಾಗವೂ ಕೂಡಾ ವೃತ್ತಿ ಶಿಕ್ಷಣಕ್ಕಾಗಿ ವ್ಯಯವಾಗುತ್ತಿಲ್ಲವೆಂದು ನುಡಿದರು. ಎರಡು ವಿಧದ ವೃತ್ತಿ ಶಿಕ್ಷಣ ಸಂಸ್ಥೆಗಳು ಅಸ್ತಿತ್ವಕ್ಕೆ ಬರಬೇಕೆಂದು ನುಡಿದ ಅವರು ಒಂದು ವಿಧದವುಗಳನ್ನು ಸರಕಾರವೂ ಇನ್ನೊಂದನ್ನು ಖಾಸಗೀ ಸಂಸ್ಥೆಗಳೂ ನಡೆಸಬೇಕೆಂದರು. ಪರಿಶ್ರಮದ ದುಡಿಮೆ, ತಮ್ಮ ನೆಲದ ಬಗ್ಗೆ ಪ್ರೀತಿ ವಾಸ್ತವಿಕ ಯೋಜನೆ ಇವುಗಳಿಂದ ದೇಶದ ಸಮಸ್ಯೆಗಳ ನಿವಾರಣೆ ಸಾಧ್ಯ ಎಂದು ಡಾ। ಸಿಂಗ್ ಹೇಳಿದರು.

ಆರಂಭದಲ್ಲಿ ಅಕಾಡೆಮಿ ಅಧ್ಯಕ್ಷ ಡಾ। ಟಿ. ಎಂ. ಎ. ಪೈಯವರು ಸ್ವಾಗತಿಸಿ ಅಂತ್ಯದಲ್ಲಿ ಖ್ಯಾತ ಶಿಕ್ಷಕ ಪ್ರೊ। ಎಸ್. ವಿ. ಪರಮೇಶ್ವರ ಭಟ್ ಮತ್ತು ಕಯ್ಯಾರ ಕಿಞ್ಞಣ್ಣ ರೈ ಅವರಿಗೆ ಗೌರವ ಫೆಲೋಶಿಪ್ ನೀಡಿ ಗೌರವಿಸಿದರು.

ಸಮಾರೋಪದ ಪ್ರಧಾನ ಭಾಷಣಕಾರರಾಗಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಡೀನ್ ಡಾ। ಎ. ಕೃಷ್ಣರಾವ್‌ರವರು ಮಾತಾಡಿದ ಬಳಿಕ ನಡೆದ ಚರ್ಚೆಯಲ್ಲಿ ಡಾ। ನೇಲಿಯತ್, ಡಾ। ಅಗರ್‌ವಾಲ, ಪ್ರೊ। ಬಿ. ಎ. ಕೃಷ್ಣಮೂರ್ತಿ, ಡಾ। ಅಮ್ರಿಕ್ ಸಿಂಗ್, ಪ್ರೊ। ಕೆ. ಡಿ. ಕಿಣಿ, ಡಾ। ಚಾರಿ, ಪ್ರೊ। ಹರಿದಾಸ್ ಭಟ್ ಮತ್ತು ಪ್ರೊ। ಹಂದೆ ಮೊದಲಾದವರು ಭಾಗವಹಿಸಿದರು.

ಹೆಬ್ರಿಯಲ್ಲಿ ಬಸ್ ನಿಲ್ದಾಣದ ಉದ್ಘಾಟನೆ

ಹೆಬ್ರಿ ಪಂಚಾಯತಿನವರು ರೂ. 36,000 ವೆಚ್ಚದಲ್ಲಿ ಹೊಸತಾಗಿ ನಿರ್ಮಿಸಿದ ಬಸ್ ನಿಲ್ದಾಣ ಕಟ್ಟಡದ ಉದ್ಘಾಟನೆಯನ್ನು ತಾ. 12–10–71ರಂದು ಶ್ರೀ ಪೇಜಾವರ ಶ್ರೀ ವಿಶ್ವೇಶ ತೀರ್ಥ ಶ್ರೀ ಪಾದಂಗಳವರು ನೆರವೇರಿಸುತ್ತಾ ತಂಗುಮನೆ ನಿರ್ಮಾಣ ಧರ್ಮ ಸಮ್ಮತ ಕಾರ್ಯವೆಂದು ಹೇಳಿ ಸೇವೆ ನಿಸ್ವಾರ್ಥವಾಗಲಿ ಎಂದರು. ಸರಕಾರ ಮತ್ತು ಸಮಾಜ ಪರಸ್ಪರ ಸಹಕರಿಸಿಕೊಂಡು ನಡೆದರೆ ಮಾತ್ರ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ ಎಂದು ನುಡಿದರು. ಹೆಬ್ರಿ ಎಲ್ಲ ಮುಖಗಳಲ್ಲಿ ಬೆಳೆಯುತ್ತಿರುವುದಕ್ಕೆ ತಮ್ಮ ಮೆಚ್ಚುಗೆಯನ್ನವರು ವ್ಯಕ್ತಪಡಿಸಿದರು.

ಆರಂಭದಲ್ಲಿ ಶ್ರೀಗಳವರನ್ನು ಭುಜಂಗ ಬಲ್ಲಾಳ ಸ್ಮಾರಕ ಸಮಾಜ ಮಂದಿರದಿಂದ ಆನೆ ಬಿರುದಾವಳಿಯಿಂದ ಮೆರವಣಿಗೆಯ ಮೂಲಕ ಉದ್ಘಾಟನಾ ಸಮಾರಂಭದ ಸ್ಥಳಕ್ಕೆ ಕರೆದೊಯ್ಯಲಾಯಿತು. ಸಮಾಜ ಮಂದಿರದಲ್ಲಿ ಶ್ರೀಗಳವರನ್ನು ಪಂಚಾಯತ ಅಧ್ಯಕ್ಷ ಶ್ರೀ ಬಿ. ವಿಠ್ಠಲ ಹೆಗ್ಡೆ, ಕಾರ್ಕಳ ತಾಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷ ಶ್ರೀ ಎಸ್. ಎಂ ಅಡ್ಯಂತಾಯ, ಶ್ರೀ ಎಚ್. ಸುಬೋಧ ಬಲ್ಲಾಳ ಮೊದಲಾದವರು ಇದಿರ್ಗೊಂಡರು.

ಸಮಾರಂಭದ ಆದಿಯಲ್ಲಿ ಶ್ರೀ ಬಿ ವಿಠ್ಠಲ ಹೆಗ್ಡೆಯವರು ಸ್ವಾಗತಿಸಿದರು. ಶ್ರೀ ರತ್ನಾಕರ ಶೆಟ್ಟರು ಸಮಾರಂಭಕ್ಕೆ ಶುಭಕೋರಿ ಬಂದ ಸಂದೇಶಗಳನ್ನು ಓದಿದರು ಸಭಿಕರ ಪರವಾಗಿ ಶ್ರೀ ಬಿ. ಪಿ. ಸೋಮಯಾಜಿ ಮತ್ತು ಡಾ। ಯು. ಕೃಷ್ಣ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಕಾರ್ಕಳ ತಾಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ। ಎಸ್. ಎಂ. ಅಡ್ಯಂತಾಯರು ಮಾತನಾಡುತ್ತಾ ಧರ್ಮ ಜಾಗೃತಿಯ ಕಾರ್ಯ ಶ್ರೀ ಪೇಜಾವರ ಶ್ರೀಗಳಂಥ ತಪಸ್ವಿಗಳಿಂದ ನಡೆಯಬೇಕೆಂದು ನುಡಿದರು. ಅಲ್ಲದೆ ಶ್ರೀ ಬಿ. ವಿಠ್ಠಲ ಹೆಗ್ಡೆಯವರೇ ಮೊದಲಾದ ಕಾರ್ಯಕರ್ತರೂ, ಮುಖಂಡರೂ ಇಲ್ಲಿರುವಾಗ ಹೆಬ್ರಿ ತಾಲೂಕು ಕೇಂದ್ರವಾಗುವುದರಲ್ಲಿ ಸಂದೇಹವಿಲ್ಲವೆಂದು ಹಾರೈಸಿದರು. ಅಂತ್ಯದಲ್ಲಿ ಶ್ರೀ ಬಿ. ವಿಠ್ಠಲ ಹೆಗ್ಡೆಯವರು ಧನ್ಯವಾದ ಸಮರ್ಪಿಸಿದರು.

ಅದಮಾರು ಶ್ರೀಗಳವರ ತೀರ್ಥಯಾತ್ರಾ ಸಂದರ್ಶನ

ಉಡುಪಿಯಲ್ಲಿ ಶ್ರೀ ಕೃಷ್ಣ ಪೂಜೆಗಾಗಿ, ಮುಂದಿನ ಪರ್ಯಾಯದ ಮೂರ್ಧಪೀಠವನ್ನೇರಲಿರುವ ಅದಮಾರು ಶ್ರೀಗಳವರು, ತಮ್ಮ ಪಟ್ಟದ ದೇವರು ಕಾಲಿಯ ಮರ್ದನ ಶ್ರೀ ಕೃಷ್ಣನ ಸಹಿತ ಪರಿವಾರದೊಂದಿಗೆ ಉಡುಪಿಯಿಂದ ತಾ. 11–10–71ರಂದು ತೀರ್ಥ ಕ್ಷೇತ್ರಗಳ ಯಾತ್ರೆಯನ್ನು ಕೈಗೊಂಡಿದ್ದಾರೆ.

ಅವರು ದಾವಣಗೆರೆ, ಹುಬ್ಬಳ್ಳಿ, ಬೆಳಗಾಂ, ಪೂನಾ ಮಾರ್ಗವಾಗಿ ಬೊಂಬಾಯಿಗೆ ತೆರಳಿ, ಅಲ್ಲಿ ಕೆಲವು ದಿನವಿದ್ದು ಮುಂದೆ ನಾಸಿಕ, ದ್ವಾರಕಿ, ಪ್ರಭಾಸ, ಮಾತೃಗಯಾ, ಪುಷ್ಕರ ತೀರ್ಥಗಳನ್ನು ಸಂದರ್ಶಿಸುವವರಿದ್ದಾರೆ. ಈ ವೇಳೆ ಬರೋಡಾ, ಅಹಮದಾಬಾದ್, ಅಜಮೀರ್ ಮಾರ್ಗವಾಗಿ ಮಥುರಾ ವೃಂದಾವನ ಗೋಕುಲಗಳಿಗೂ ತೆರಳಿ ಅಲ್ಲಿಂದ ಡಿಲ್ಲಿಯ ಮೂಲಕ ಕುರುಕ್ಷೇತ್ರ, ಹರಿದ್ವಾರ, ಹೃಷೀಕೇಶಗಳ ಯಾತ್ರೆ ಗೈಯುತ್ತಾರೆ.

ಮರಳಿ ಬರುವಾಗ ಕಾಶೀ, ಗಯಾ, ಪ್ರಯಾಗ ಜಗನ್ನಾಥಗಳಲ್ಲಿದ್ದು ಅಲ್ಲಿಯ ತೀರ್ಥಸ್ನಾನ ದರ್ಶನಗಳನ್ನು ಪಡೆದು, ಹೈದರಾಬಾದ್, ವಿಜಯವಾಡ, ಮದ್ರಾಸುಗಳಿಗಾಗಿ ತಿರುಪತಿ, ಘಟಿಕಾಚಲನ್ನೂ ಸಂದರ್ಶಿಸಿಕೊಂಡು ಬೆಂಗಳೂರಿಗೆ ಬಂದು ಅಲ್ಲಿ ಅಭಿಮಾನಿಗಳಿಂದ ಬಿನ್ನವತ್ತಳೆ ಸನ್ಮಾನಗಳನ್ನು ಸ್ವೀಕರಿಸಲಿದ್ದಾರೆ. ಅಲ್ಲಿಂದ ಮೈಸೂರು ದಾರಿಯಾಗಿ ಸುಬ್ರಹ್ಮಣ್ಯ-ಧರ್ಮಸ್ಥಳ ಕ್ಷೇತ್ರ ದರ್ಶನ ಪಡೆದು ತಾ. 7–1–72 ಸಂಜೆಗೆ ಸಾಂಪ್ರದಾಯಿಕವಾಗಿ ಉಡುಪಿಯ ಪುರ ಪ್ರವೇಶವನ್ನು ಮಾಡಲಿದ್ದಾರೆ

ಶ್ರೀಗಳವರ ಈ ತೀರ್ಥ ಕ್ಷೇತ್ರ ಸಂದರ್ಶನಗಳ ವೇಳೆ ಆಯಾ ಊರಿನ ಭಕ್ತ ಜನರ ಶಿಷ್ಯ ಜನತೆಯ ಅಪೇಕ್ಷೆಯಂತೆ ಅಲ್ಲಲ್ಲಿ ಪೂಜೆ ಪ್ರವಚನಗಳನ್ನು ನಡೆಸಿ ಫಲ ಮಂತ್ರಾಕ್ಷತೆಗಳನ್ನಿತ್ತು ಅನುಗ್ರಹಿಸುತ್ತಾರೆ ಎಂದು ಶ್ರೀ ಮಠದ ಕಡೆಯಿಂದ ತಿಳಿಸುತ್ತಾರೆ.

ನವಯುಗದ

ಹೊಸ ಚಂದಾ ದರ

ಸಪ್ಟಂಬರದಿಂದ ರೂ. 12

ಪತ್ರಿಕೆಗೆ ಬಳಸುವ ಕಾಗದದ ಬೆಲೆ, ಸಾಗಾಟದ ದರ ಏರಿಕೆಯಿಂದಾಗಿಯೂ ಮುದ್ರಣಾದಿಗಳ ವೆಚ್ಚದ ಹೆಚ್ಚಳದಿಂದಾಗಿಯೂ ನವಯುಗದ ವಾರ್ಷಿಕ ಚಂದಾ ದರವನ್ನು ರೂ. 10 ರಿಂದ ರೂ. 12ಕ್ಕೆ ಅನಿವಾರ್ಯವಾಗಿ ಏರಿಸಬೇಕಾಗಿ ಬಂದಿದೆ. ಈ ಹೊಸ ಚಂದಾ ದರವು ಹೊಸ ಸಂಪುಟದಿಂದ ಅಂದರೆ ಇದೇ ಸಪ್ಟಂಬರದಿಂದ ಅನ್ವಯವಾಗುವುದು. ಚಂದಾದಾರರು ದಯಮಾಡಿ ಗಮನಿಸಿ, ಅದರಂತೆ ಚಂದಾ ಕಳಿಸಿ ಸಹಕರಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

—ಮೆನೇಜರ್

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303 2 72304 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ನವಯುಗ

ಹೊನ್ನ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ

ಹೊನ್ನ ಹಬ್ಬದ ವಿಶೇಷ ಸಂಚಿಕೆಗೆ ಜಾಹೀರಾತು ಕೊಟ್ಟು ಸಹಕರಿಸಿರಿ.

ನವಯುಗದ ೨೬–೮–೭೦ರ ಸಂಚಿಕೆಯಲ್ಲಿ 'ಭೂಲೋಕದ ಅಮೃತ–ಹಾಲು' ಲೇಖನ ಪ್ರಕಟವಾಗಿರುತ್ತದೆ. ಅದರ ಲೇಖಕರು ಪ್ರೊ| ಶೇರ್ ಸಿಂಗ್. ಅವರು ಪಶುಸಾಯ ಶಾಖೆಯ ಕೇಂದ್ರ ಸ್ಟೇಟ್ ಸಚಿವರು. ಅವರು ಅನೇಕ ವರ್ಷಗಳಿಂದ ಸಚಿವ ಸಂಪುಟದಲ್ಲಿದ್ದುಕೊಂಡು ಹಲವಾರು ಖಾತೆಗಳನ್ನು ಕಂಡಿರುವ ಅನುಭವಿ ಅಮಾತ್ಯರು.

'ಗಾಂಧಿಜಿಯ ಕೊಲೆ'

(ಎರಡನೇ ಪುಟದಿಂದ)

ಹೊರಡುವ ಎಕ್ಸ್‌ಪ್ರೆಸ್ ಗಾಡಿಯಲ್ಲಿ ನಾವು ಹೊರಟದ್ದು. ಗಾಡಿಯನ್ನು ಹತ್ತಿದ ನಾನು ಅನುಕೂಲ ಸ್ಥಳಕ್ಕಾಗಿ ಇತ್ತಿಂನತ್ತ ಕಣ್ಣು ಹಾಯಿಸಿದೆ. ಕಿಟಕಿಯ ಬಳಿ ಕುಳಿತಿದ್ದ ಸಭ್ಯ ಮನುಷ್ಯರೊಬ್ಬರು 'ಏನು ಹುಡುಕುತಿದ್ದೀರಿ' ಎಂದು ಪ್ರಶ್ನಿಸಿದರು. ಕಿಟಕಿಯ ಬಳಿ ಕುಳಿತುಕೊಳ್ಳಲು ಸ್ಥಳ ಬೇಕಾಗಿದೆ ಎಂದು ನಾನು ಉತ್ತರಿಸಿದೆ. ಬೇಕಾದರೆ ಇಲ್ಲಿಯೇ ಕುಳಿತುಕೊಳ್ಳಿ ಎಂದು ಆ ಸಭ್ಯ ಮನುಷ್ಯರು ತಾವು ಕುಳಿತಲ್ಲಿಂದ ಎದ್ದರು– ಆ ಸ್ಥಳವನ್ನು ತೆರವು ಮಾಡಿಕೊಟ್ಟರು. ನಾನು ಹೋಗಿ ಆ ಸ್ಥಳದಲ್ಲಿ ಕುಳಿತುಕೊಂಡೆ. ಅಷ್ಟರಲ್ಲಿ ಶಿಳ್ಳು ಕೇಳಿಬಂತು. ರೈಲು ಹೊರಟಿತು. ಆಗ ಇನ್ನೊಬ್ಬರು ಡಬ್ಬಿಯೊಳಕ್ಕೆ ಬಂದರು. ಇವರು ಬಂದವರೇ ನನಗೆ ಸ್ಥಳ ಕೊಟ್ಟ ಸಭ್ಯರ ಪಕ್ಕದಲ್ಲಿ ಹೋಗಿ ಕುಳಿತುಕೊಂಡರು. ರೈಲು ಸ್ವಲ್ಪ ದೂರ ಕ್ರಮಿಸಿತು. ಆ ಸಹ ಪ್ರಯಾಣಿಕರು 'ನೀವು ಬಿಂಬಾ ಅಲ್ಲವೇ' ಎಂದು ಮರಾಠಿಯಲ್ಲಿ ಪ್ರಶ್ನಿಸಿದರು. ತಾರಾ ಜಗತ್ತಿನಲಿ ನನ್ನನ್ನು ಬಿಂಬಾ ಎಂದೇ ಕರೆಯುತ್ತಾರೆ–ಅವರ ಪ್ರಶ್ನೆಗೆ ನಾನು ಹೌದೆಂದೆ. ಮುಂಬಯಿ ತಲಪುವ ತನಕವೂ ನಾವು ಪರಸ್ಪರ ಸಂಭಾಷಿಸುತಿದ್ದೆವು.

ದಾದರಿನಲ್ಲಿ ನಾವು ರೈಲಿನಿಂದಿಳಿದೆವು. ತ್ರಿಯಂಬಕ ನಮ್ಮನ್ನು ಕರೆದೊಯ್ಯಲು ಸ್ಟೇಷನಿಗೆ ಬಂದಿದ್ದ. ನನ್ನ ಸಹ ಪ್ರಯಾಣಿಕರು ಶಿವಾಜಿ ಪಾರ್ಕಿಗೆ ಹೋಗುವವರಿದ್ದರು. ಬೇಕಾದರೆ ನಿಮ್ಮನ್ನಲ್ಲಿ ಬಿಡುತ್ತೇನೆ ಎಂದು ನಾನು ಅವರನ್ನು ಆಹ್ವಾನಿಸಿದೆ. ಅವರು ಒಪ್ಪಿಕೊಂಡು ನನ್ನ ಜೊತೆ ಕಾರಿನಲ್ಲಿ ಕುಳಿತರು. ತ್ರಿಯಂಬಕನ ಮನೆಯೂ, ಸಾವರ್ಕರ ಸದನವೂ ಒಂದೇ ಬೀದಿಯಲ್ಲಿದೆ. ಎರಡು ಮನೆಗಳು ಅಕ್ಕ–ಪಕ್ಕದಲ್ಲಿವೆ. ಆ ಎರಡು ಮನೆಗಳ ಮಧ್ಯೆ ವಿಶಾಲವಾದ ಒಂದು ಖಾಲಿ ನಿವೇಶನವಿದೆ. ನಮ್ಮ ಕಾರನ್ನು ಸಾವರ್ಕರ ಸದನದ ಮುಂದು ನಿಲ್ಲಿಸಿ ಅವರನ್ನು ಬೀಳ್ಕೊಟ್ಟೆ. ಅವರು ಸದನದೊಳಕ್ಕೆ ಹೋದುದನ್ನು ನಾನು ಕಂಡೆ.'

ಆಕೆ ಹೇಳಿಕೆ ಕೊಟ್ಟದು ಮಾತ್ರವಲ್ಲ, ನ್ಯಾಯಾಧೀಶರ ಸಮ್ಮುಖದಲ್ಲಿ 14.1.48 ರಂದು ತನ್ನ ಜೊತೆ ಪ್ರಯಾಣ ಮಾಡಿದವರೆಂದು ಗೋಡ್ಸೆ–ಆಪ್ಟೆಯರನ್ನು ಬೊಟ್ಟು ಮಾಡಿ ತೋರಿಸಿದಳು.

ಈ ಸೊಗಸುಗಾತಿಯ ಜೊತೆ ನಡೆಸಿದ ಚಕ್ಕಂದವೇ ಅಂದು ಸಕಾಲದಲ್ಲಿ ಹಿಂದು ಮಹಾಸಭೆಯ ಕಛೇರಿ ತಲುಪಲು ಆಪ್ಟೆಗೆ ಅಡ್ಡಿಯಾಗಿ ನಿಂತಿತೇನೋ—?

(ಆಧಾರಿತ)

ಶ್ರೀ ಶಿವಶಂಕರ

ಅಮೃತವನ್ನೀಯುವ ಕೆಚ್ಚಲನ್ನು ಕೊಯ್ಯುವುದುಂಟೆ?

ಅವರು ತಮ್ಮ ಲೇಖನದಲ್ಲಿ, 'ಇತ್ತೀಚಿಗೆ ನಡೆದ ರಾಜ್ಯಗಳ ಪಶುಸಂಗೋಪನಾ ಮಂತ್ರಿಗಳ ಸಮ್ಮೇಳನದಲ್ಲೂ....ದೇಶದ ಅಭಿವೃದ್ಧಿ ಯೋಜನೆಗಳ ಗುರಿಸಾಧನೆಗೆ ಪಶುಸಂಗೋಪನೆಯೂ ಅತಿ ಮುಖ್ಯವಾಗಿದೆ ಎಂದು ಸಮ್ಮೇಳನ ಅಭಿಪ್ರಾಯ ಪಟ್ಟಿದೆ" ಯೆಂದು ಬರೆದಿರುವರು.

ಪಶು ಸಂಗೋಪನೆಯ ಕುರಿತು ಮಾನ್ಯ ಮಂತ್ರಿಗಳಿಗೆ ಸದಭಿಪ್ರಾಯವಿದೆಯೆಂದು ಈ ಲೇಖನದಿಂದ ತಿಳಿದು ಬರುತ್ತದೆ. ಈ ಅಭಿಪ್ರಾಯ ಖಾತೆ ಬದಲಾದಂತೆ ಬದಲಾಗುತ್ತದೆಯೋ? ಇಲ್ಲವಾದಲ್ಲಿ ಬಹಳ ಒಳ್ಳೆಯದು. ಇದೇ ಅಮಾತ್ಯರು ಆಹಾರ ಮಂತ್ರಿಗಳಾಗಿದ್ದಲ್ಲಿ ಏನು ಹೇಳುತ್ತಿದ್ದರು? ಸೆಕ್ಯೂಲರಿಸಮಿನ ಸ್ಪೆಶಲ್ ಸಚಿವರಾಗಿದ್ದಲ್ಲಿ ಏನು ಹೇಳುತ್ತಿದ್ದರು? ಆ ಆದರೆ ಹೋದರೆಗಳ ವಿಷಯ ಈಗ ಬೇಡ.

ಒಂದೆಡೆ ಗೋರಕ್ಷಣೆಯ ಮಾತುಕೇಳಿರುವಂತೆ ಇನ್ನೊಂದೆಡೆ ಗೋಭಕ್ಷಣೆಯ ಘೋರ ಸದ್ದು ಕೇಳಿಬರುತ್ತದೆ. ಮಾನ್ಯ ಮಂತ್ರಿಯವರು ಇಲ್ಲಿ ಪಶುಸಂವರ್ಧನೆಯ ಕುರಿತು ಉಲ್ಲೇಖಿಸಿದ್ದಾರೆಯೇ ವಿನಃ ಪಶು ಸಮ್ವರ್ಧನೆಯ ಕುರಿತು ಅಲ್ಲ. ಅವರಿರುವ ಸಂಪುಟದಲ್ಲಿ ಅನೇಕ ಅಮಾತ್ಯರು ಗೋಹತ್ಯೆಯನ್ನು ಪ್ರೋತ್ಸಾಹಿಸುವವರಿದ್ದಾರೆ. ಇಂತಹವರು ಒಂದೇ ಮಂತ್ರಿಮಂಡಲದಲ್ಲಿ ದನವೂ ಹುಲಿಯೂ ಒಂದೇ ಸಳ್ಳದಲ್ಲಿ ಇರುವದು ಆಶ್ಚರ್ಯವೇ ಇದೆ. ಗೋಹತ್ಯೆಗೆ ಎಲ್ಲಿಲ್ಲದ ಪ್ರೋತ್ಸಾಹ ಸಿಗುತ್ತದೆ ಭಾರೀ ಸಂಖ್ಯೆಯಲ್ಲಿ ಹತ್ಯಾಕಾಂಡವನ್ನು ನಡೆಸಬೇಕೆಂದು ಭಯಂಕರ ವೈತ್ಯಯಂತ್ರಗಳನ್ನು ಅದಕ್ಕಾಗಿ ದುಬಾರೀ ಬೆಲೆ ಕೊಟ್ಟು ಪರದೇಶಗಳಿಂದ ತರಿಸಿ, ಕೊಲೆಮನೆಗಳನ್ನು ಕಟ್ಟಲಾಗುತ್ತಿದೆ. ಪಶುವಧೆ ಪ್ರತಿಬಂಧಿಸಬೇಕೆಂದು ಬೇಡಿಕೊಳ್ಳುತ್ತಿರುವವರನ್ನು ಕಾರಾಗೃಹಕ್ಕೆ ಕಳುಹಿಸಲಾಗುತ್ತಿದೆ. ಹೀಗೆ ಪಶುಸಂವರ್ಧನೆಯ ಮಾತೆತ್ತಿ, ಪಶುಸಮ್ವರ್ಧನೆಗೆ ಪ್ರೋತ್ಸಾಹಿಸುತ್ತಿರುವವರು ಮಂತ್ರಿಗಳಾಗುತ್ತಿದ್ದು. ಪಶುಗಳನ್ನು ಕೊಲೆಮನೆಗೂ ಪಶುಪ್ರೇಮಿಗಳನ್ನು ಕಾರಾಗೃಹಕ್ಕೂ ಕಳುಹಿಸುತ್ತಿದ್ದಾರೆ. ಇದು ದೈನಂದಿನ ಕಾರ್ಯಕ್ರಮ. ಹಾಗಿರುವಾಗ ಶೇರ್ ಸಿಂಗರು ರಾಷ್ಟ್ರದ ಅಭಿವೃದ್ಧಿಗೆ ಗೋಹತ್ಯೆ ಪ್ರತಿಬಂಧ ಅತ್ಯವಶ್ಯಕವೆನ್ನುವ ರೀತಿಯಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಇಂದಿನ ದುರವಸ್ಥೆಗೆ ಗೋರಕ್ತ ಭೂಮಿಯ ಮೇಲೆ ಬೀಳುತ್ತಿರುವದೇ ಕಾರಣವೆನ್ನುವ ರೀತಿಯಲ್ಲಿ ಅವರು ವಿವರಿಸಿದ್ದಾರೆ.

ರಾಷ್ಟ್ರದ ಅಭಿವೃದ್ಧಿಗೆ ಅದ್ಯಾರಾದರೂ ಅಡ್ಡಿ ಬಂದಾರೆ? ಬರುತ್ತಾ ಇದ್ದಾರಲ್ಲವೇ? ಹಿಂದೆ ಆಕ್ರಮಣಗಾರ ಆಡಳಿತ ಯಂತ್ರ ಗೋಮಾತೆಯ ಕೊರಳನ್ನು ಕೊಯ್ಯುತ್ತಿದೆ; ನಮ್ಮ ದೇಶದ ಅಭಿವೃದ್ಧಿಗೆ ಅಡ್ಡಿ ಬರುತ್ತಿದೆಯೆಂದು ನಮ್ಮ ನೇತಾರರು ನುಡಿಯುತ್ತಿದ್ದರು. ಅದು ನಿಜವೇ ಇತ್ತು. ಇಂದು? ನಮ್ಮವರೇ ಹೀಗೆ ಮಾಡುತ್ತಿದ್ದಾರೆ! ಈ ರಾಷ್ಟ್ರದ ಮಾನ ಬಿಂದು, ಗೌರವದ ಕುರುಹು, ಸನ್ಮಾನದ ಸಂಕೇತ ದನವೆಂಬುವನ್ನು ಆಕ್ರಮಣಗಾರರು ಅರಿತಿದ್ದು ಆಕಳುಗಳ ನಾಶಕ್ಕೆ ಸೊಂಟ ಬಿಗಿದುಕೊಂಡಿದ್ದರು. ಈಗ? ಅದೇ ಮನೋಭಾವನೆಯುಳ್ಳವರ ಮತದಾಶೆಯಿಂದ ಇಂದಿನ ಆಡಳಿತ ಯಂತ್ರ ಅದೇ ಕೆಲಸವನ್ನು ಮುಂದರಿಸುತ್ತಿದೆ ಅದಕ್ಕೆ ಸೆಕ್ಯೂಲರಿಸಮಿನ ಬಣ್ಣವನ್ನು ಕೊಡಲಾಗುತ್ತಿದೆ. ಅಂತೂ ಗೋಹತ್ಯೆ ನಡೆಯುತ್ತಾ ಇದೆ ರಾಷ್ಟ್ರದ ಅಭಿವೃದ್ಧಿ ಕುಂಟುತ್ತಾ ಇದೆ. ಏನೇ ಆಗಲಿ, ಅವರಿಗೆ ಅಧಿಕಾರದಲ್ಲಿ ಶೇರ್ [ಪಾಲು] ಬೇಕು.

ಪಶುಸಂಗೋಪನಾ ಶಾಖೆಯ ಮಂತ್ರಿಗಳ ಸಮ್ಮೇಳನದಲ್ಲಿ ಗೋವಧೆ ಪ್ರತಿಬಂಧಿಸಲ್ಪಡದಿರುವ ರಾಜ್ಯಗಳ ಮಂತ್ರಿಗಳೂ ಇದ್ದರು. ಅವರು ಗೋಹತ್ಯೆಯನ್ನು ನಿಷೇಧಿಸುವ ಕುರಿತು ಚಕಾರವನ್ನೆತ್ತಿರುವದಿಲ್ಲ. ಅದೇ ರೀತಿ ಪ್ರತಿಬಂಧಿಸಿರುವ ರಾಜ್ಯಗಳ ಮಂತ್ರಿಗಳು ಅತ್ತ ಬೆಟ್ಟು ಮಾಡಿ ತೋರಿಸಿರುವದಿಲ್ಲ. ಅಂತೂ ಅಮಾತ್ಯ ವೃಂದ ಕೂಡಿತು, ಮಾತಾಡಿತು, ಚದರಿತು. ಗೋಹತ್ಯೆ ಹಾಗೆಯೇ ಉಳಿಯಿತು.

ಶ್ರೀ ಶೇರ್ ಸಿಂಗರು ಹಾಲನ್ನು ಭೂಲೋಕದ ಅಮೃತವೆನ್ನುತ್ತಾರೆ. ಅಮೃತವನ್ನೀಯುವ ಕೆಚ್ಚಲನ್ನು ಕೊಯ್ಯುವದು ನ್ಯಾಯವೇನು? ಶೇರ್ ಅಂದರೆ ಸಿಂಹ (ಸಿಂಗ)ಗಳು ಆಹಾರಕ್ಕಾಗಿ ದನವನ್ನು ಕೊಲ್ಲುವದುಂಟು, ಅದಕ್ಕೆ ದನದ ಹಾಲು ಅಮೃತವೆಂಬುದು ಗೊತ್ತಿರುವದಿಲ್ಲ ಕೆಚ್ಚಲಿನಲ್ಲೇ ಇದ್ದರೂ ಉಣ್ಣೆ (ಸುಂಗು) ಹಾಲನ್ನುಣ್ಣುವದಿಲ್ಲ. ಅದಕ್ಕೆ ರಕ್ತವೇ ಬೇಕು. ನಮ್ಮ ಶೇರ್ ಸಿಂಗರು ಹಾಗಲ್ಲ. ಅವರಿಗೆ ದನದ ಹಾಲು ಅಮೃತವೆಂಬುದು ಗೊತ್ತು. ಹಾಗೆ ಗೊತ್ತಿದ್ದೂ ಗೋವಧೆಗೆ ಅವರು ಪರೋಕ್ಷವಾಗಿಯಾದರೂ ಪ್ರೋತ್ಸಾಹವನ್ನೀಯುತ್ತಿರುವದು ಅವರ ಹೆಸರಿಗೆ ತಕ್ಕುದಾಗಿರ ಬಹುದಾದರೂ ಜ್ಞಾನಕ್ಕಲ್ಲ.

ದೀಪಾವಳಿಯ ಈ ಶುಭಪರ್ವದಲ್ಲಿ ದೇಶದಾದ್ಯಂತ ಗೋಪೂಜೆ ನಡೆಯುತ್ತದೆ. ಆದರೆ ಇನ್ನೊಂದೆಡೆ ಗೋವಧೆ ನಡೆಯುತ್ತಾ ಇದೆ. ಎಂತಹ ವಿರುದ್ಧ ಕೃತ್ಯಗಳು!

ಮಾನ್ಯ ಮಂತ್ರಿ ಮಹಾಶಯರು ತಮ್ಮ ವರ್ಚಸ್ಸನ್ನುಪಯೋಗಿಸಿಯಾದರೂ ಗೋಹತ್ಯೆ ತಡೆಯಲು ಮುಂದಾಗುವರೇ? ಗೋಪಾಲಕೃಷ್ಣನೇ ಅವರೆಲ್ಲರಿಗೂ ಸದ್ಬುದ್ಧಿಯನ್ನೀಯಬೇಕು.

●●

ಸುಂದರ ಕುಂದಾಪುರ ನಗರದಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

ಫೋನ್: 77

Please Visit

HOTEL SHIVAPRASAD

High Class Boarding, Lodging & Restaurant

COONDAPUR, S. K.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು–4

NAVAYUGA 28-10-1971

Registered with the Registrar
of News Papers for India
under No R. N. 3546/'57

REGD. No. B. G. 176
LICENCE No. 33
Licensed to Post without Prepayment

ಸೋವಿಯೆತ್ತಿನ ಗ್ರೊಮಿಕೋ ಹೇಳುತ್ತಾರೆ

ಪೂರ್ವ ಪಾಕಿಸ್ತಾನದಲ್ಲಿ ಅಪಾಯ ಪರಿಸ್ಥಿತಿ

ಪ್ರಪಂಚ ಸಂಸ್ಥೆಯ 24ನೆಯ ಸಾಧಾರಣ ಸಭಾಧಿವೇಶನದಲ್ಲಿ ಸರಿಸುಮಾರು ಎಲ್ಲ ಪ್ರತಿನಿಧಿಗಳೂ ಯಾವುದಾದರೊಂದು ರೂಪದಲ್ಲಿ ಪೂರ್ವ ಪಾಕಿಸ್ತಾನಿ ನಿರಾಶ್ರಿತರ ಕುರಿತು ಮಾತನಾಡಿದರು. ಸಂ. ರಾ. ಅಮೆರಿಕ, ಸೋವಿಯೆತ್ ಒಕ್ಕೂಟ ಮತ್ತು ಅನೇಕ ಇತರ ದೇಶಗಳು ಗಣನೀಯ ಸಹಾಯವನ್ನು ಮಾಡುತ್ತಿವೆಯೆಂಬುದೂ ಸುಪರಿಚಿತ ವಿಷಯವೇ. ಆದರೆ ಈ ಸಮಸ್ಯೆಯನ್ನು ಎದುರಿಸುವುದರಲ್ಲಿ ವಿಶೇಷ ವ್ಯತ್ಯಾಸಗಳು ಕಂಡುಬರುತ್ತವೆ. ಆಹಾರ, ಆಸರೆ ಇಲ್ಲದ ಮಿಲಿಯಗಟ್ಟಲೆ ಜನರ ಜೀವನವನ್ನು ಸುಗಮಗೊಳಿಸುವ ಸಾರ್ವತ್ರಿಕ ಪ್ರಯತ್ನಕ್ಕೆ ತಾವು ನೀಡುವ ಸಹಾಯದ ಬಗೆಗೆ ಪ್ರತಿಯೊಂದು ರೀತಿಯ ಪ್ರಚಾರವನ್ನೂ ಕೆಲವು ದೇಶಗಳು ನಡೆಸುತ್ತವೆ. ಆದರೆ ಈ ಸಮಸ್ಯೆಯ ರಾಜಕೀಯ ಸ್ವರೂಪದ ಇತ್ಯರ್ಥದ ಆವಶ್ಯಕತೆಯನ್ನು ಅವು ಮರೆಯುತ್ತವೆ. ನಿರಾಶ್ರಿತರಿಗೆ ಸಹಾಯ ನೀಡುವುದರ ಜತೆಗೆ, ಆ ಕ್ಷೇತ್ರದಲ್ಲಿ ಉದ್ಭವಿಸಿರುವ ಸಮಸ್ಯೆಗಳ ಸಾರ್ವತ್ರಿಕ ರಾಜಕೀಯ ಇತ್ಯರ್ಥದ ಪರಿಣಾಮಕಾರಿ ಕಾರ್ಯಕ್ರಮಗಳೂ ನಡೆಯಬೇಕೆಂಬ ವಾಸ್ತವಾಂಶದಿಂದ ಇತರ ಸೋವಿಯೆತ್ ದೇಶಗಳು, ವಿಶಿಷ್ಟತಃ ಸೋವಿಯೆತ್ ಒಕ್ಕೂಟವು ಮುಂದುವರಿಯುತ್ತವೆ.

ಈ ಸಾಧಾರಣ ಸಭಾಧಿವೇಶನದಲ್ಲಿ, ಸೋವಿಯೆತ್ ಒಕ್ಕೂಟದ ವಿದೇಶಾಂಗ ಸಚಿವರಾದ ಆಂದ್ರೇಯ್ ಗ್ರೊಮಿಕೊ ಅವರು ಈ ಸಮಸ್ಯೆಯ ಇತ್ಯರ್ಥವನ್ನು ಸಾಧಿಸಬೇಕಾದ ಆವಶ್ಯಕತೆಯನ್ನು ಸೂಚಿಸಿದರು.

ಅಂತಾರಾಷ್ಟ್ರೀಯ ಸಮಸ್ಯೆ

ಪೂರ್ವ ಪಾಕಿಸ್ತಾನದಲ್ಲಿನ ಘಟನೆಗಳಿಗೆ ಶುದ್ಧಾಂಗವಾಗಿ ಆಂತರಿಕ ಮಹತ್ವವಿದೆಯೆಂದೂ, ಅವು ಕೇವಲ ಪಾಕಿಸ್ತಾನಿ ಸರಕಾರದ ವ್ಯವಹಾರಕ್ಕೆ ಸಂಬಂಧಪಟ್ಟವೆಯೆಂದೂ ಸಂ. ರಾ. ಅಮೆರಿಕದ ರಾಜ್ಯಕಾರ್ಯದರ್ಶಿ ರೋಜರ್ಸ್ ಹೇಳಿದುದನ್ನು ಯಾರೂ ಒಪ್ಪಲಾರರು. ಇದು ಗಂಭೀರವಾದ ಅಂತಾರಾಷ್ಟ್ರೀಯ ಸಮಸ್ಯೆಯಾಗಿದೆ.

ಪೂರ್ವ ಪಾಕಿಸ್ತಾನದ ಜನತೆಯ ವಿರುದ್ಧವಾಗಿ ಸಾಮುದಾಯಿಕ ಪ್ರಮಾಣದ ಪೀಡನೆಗಳು ನಡೆಯುತ್ತಿರುವುದರಿಂದ, ಅಲ್ಲಿ ಅಭೂತಪೂರ್ವ ಪರಿಸ್ಥಿತಿಯುಂಟಾಗಿದೆ. ಸುಮಾರು 10 ಮಿಲಿಯ (ಒಂದು ಕೋಟಿ) ಜನರು ತಮ್ಮ ಮನೆಮಾರುಗಳನ್ನು ತೊರೆದು ನೆರೆ ನಾಡಾದ ಭಾರತದ ಭೂಭಾಗದ ಮೇಲೆ ಆಶ್ರಯವನ್ನು ಅರಸುವ ಬಲಾತ್ಕಾರಕ್ಕೆ ಗುರಿಯಾಗಿದ್ದಾರೆ.

ಈ ನಿರಾಶ್ರಿತರ ನಿರಂತರ ಪ್ರವಾಹವು ಭಾರತಕ್ಕೆ ಗಂಭೀರವಾದ ಸಮಸ್ಯೆಗಳನ್ನೂ ತೊಂದರೆಗಳನ್ನೂ ತಂದೊಡ್ಡಿದೆ. ಅವು ಆರ್ಥಿಕ ಸ್ವರೂಪದ ವಿಷಯಗಳು ಮಾತ್ರವಲ್ಲ ಅವುಗಳಿಗೆ ರಾಜಕೀಯ ಸ್ವರೂಪವೂ ಉಂಟು. ಹಿಂದುಸ್ತಾನ ಉಪಖಂಡದ ಮೇಲೆ ಉದ್ರಿಕ್ತತೆಯ ತೀವ್ರೀಕರಣ ಮತ್ತು ಭಾರತ ಹಾಗೂ ಪಾಕಿಸ್ತಾನ ದೇಶಗಳ ಮಧ್ಯೆ ನೇರವಾದ ಸೈನಿಕ ಸಂಘರ್ಷದ ಸಾಧ್ಯತೆ ಇದೇ ಈಗ ಅಲ್ಲಿ ವಿಕಾಸಗೊಂಡಿರುವ ಪರಿಸ್ಥಿತಿಯ ವಿಶಿಷ್ಟ ಸ್ವರೂಪವಾಗಿದೆ.

ಅಲ್ಲಿ ವಿಕಾಸಗೊಂಡಿರುವ ಪರಿಸ್ಥಿತಿಯನ್ನು ನಿರಾಶ್ರಿತರ ಸಮಸ್ಯೆಗೂ ಅವರಿಗೆ ನೀಡಲಾಗುವ ಧನ ಸಹಾಯದ ಸಮಸ್ಯೆಗೂ ತಗ್ಗಿಸುವುದೆಂದರೆ, ವಾಸ್ತವ ಸ್ಥಿತಿಯ ಬಗೆಗೆ ಉದ್ದೇಶಪೂರ್ವಕವಾಗಿಯೇ ಕಣ್ಣುಮುಚ್ಚಿಕೊಂಡಂತಾಗುತ್ತದೆ. ಮತ್ತು ಸ್ವಲ್ಪ ಮಟ್ಟಿಗೆ ಅಲ್ಲಿನ ಅಸಹಜ ಪರಿಸ್ಥಿತಿಗೆ ಕಾನೂನುಬದ್ಧತೆಯ ರೂಪವನ್ನು ನೀಡಿದಂತಾಗುತ್ತದೆ.

ರಾಜಕೀಯ ಇತ್ಯರ್ಥವೇ ಪರಿಹಾರ

ಪೂರ್ವ ಪಾಕಿಸ್ತಾನದಲ್ಲಿ ಉದ್ಭವಿಸಿರುವ ಪ್ರಶ್ನೆಗಳಿಗೆ ರಾಜಕೀಯ ಇತ್ಯರ್ಥವನ್ನು ಸಾಧಿಸುವುದರ ಮೂಲಕ, ವಿಶಿಷ್ಟವಾಗಿ ಪೂರ್ವಪಾಕಿಸ್ತಾನಕ್ಕೆ ನಿರಾಶ್ರಿತರನ್ನು ಹಿಂದಕ್ಕೆ ಕಳಿಸುವುದರ ಮೂಲಕ ಮಾತ್ರವೇ ಈ ಕ್ಷೇತ್ರದಲ್ಲಿ ಉದ್ರಿಕ್ತತೆಯನ್ನು ಕಡಿಮೆಮಾಡಬಹುದೆಂದು ನಮಗೆ ದೃಢವಾದ ವಿಶ್ವಾಸವುಂಟಾಗಿದೆ. ಆದರೆ ಈ ಕಾರ್ಯವನ್ನು, ಅಲ್ಲಿ ಅವರಿಗೆ ಸಂಪೂರ್ಣ ಭದ್ರತೆಯನ್ನು ಖಾತರಿಗೊಳಿಸಿದಾಗ ಮಾತ್ರವೇ ಸಾಧಿಸ ಬಹುದು.

ಖೇದಜನಕ ವಿಷಯವೇನೆಂದರೆ ಪಾಕಿಸ್ತಾನಿ ಆಡಳಿತ ವಲಯಗಳ ಚರ್ಯೆಗಳು, ಅವಾಮಿಲೀಗ್ ಮುಖಂಡರಾದ ಷೇಖ್ ಮುಜೀಬುರ್ ರಹಮಾನರ ಬಂಧನ, ಅವರ ವಿರುದ್ಧವಾಗಿ ರಹಸ್ಯವಾಗಿ ನಡೆಯುತ್ತಿರುವ ವಿಚಾರಣೆ—ಇವು ಎಷ್ಟು ಮಾತ್ರಕ್ಕೂ ಪಾಕಿಸ್ತಾನದ ಪರಿಸ್ಥಿತಿಯ ಸಹಜೀಕರಣದ ಲಕ್ಷ್ಯಕ್ಕೂ, ಮತ್ತು ಪೂರ್ವ ಪಾಕಿಸ್ತಾನದ ಜನತೆಗಳ ಅನನ್ಯ ಹಕ್ಕುಗಳ ಹಾಗೂ ಕಾನೂನು ಬದ್ಧ ಹಿತಗಳ ಬುನಾದಿಯ ಮೇಲೆ ಅಲ್ಲಿನ ಸಮಸ್ಯೆಗಳ ಇತ್ಯರ್ಥದ ಲಕ್ಷ್ಯಕ್ಕೂ ಹೊಂದಿಕೆಯಾಗಿರಲಾರವು.

ಹಿಂದುಸ್ತಾನ ಉಪಖಂಡದ ಮೇಲೆ ಭುಗಿಲೇಳುತ್ತಿರುವ ಸೈನಿಕ ಸಂಘರ್ಷ ಪರಿಸ್ಥಿತಿಯನ್ನು ಸಕಾಲದಲ್ಲಿ ನಂದಿಸಲಾಗುವುದೆಂದೂ, ಅದು ಈ ಕ್ಷೇತ್ರದ ರಾಜ್ಯಗಳ ನಡುವಣ ಸೈನಿಕ ಸಂಘರ್ಷಕ್ಕೆ ಮಾರ್ಗಮಾಡಿಕೊಡುವುದಿಲ್ಲವೆಂದೂ ಆಸೆಯನ್ನು ಸೋವಿಯೆತ್ ಒಕ್ಕೂಟವು ವ್ಯಕ್ತಪಡಿಸುತ್ತದೆ. ಏಶಿಯಾದ ಜನತೆಗಳಿಗೆ ಸುಸ್ಥಿರ ಶಾಂತಿಯ ಆವಶ್ಯಕತೆ ಇದೆಯೆಂದೂ, ಅವರ ಸಂಪನ್ಮೂಲಗಳನ್ನೂ ಪ್ರಯತ್ನಗಳನ್ನೂ ಹೋರಾಟಗಳಿಗಾಗಿ ಬಳಸದೆ, ಅವರ ಜೀವನ ಪ್ರಮಾಣಗಳು, ಆರ್ಥಿಕ ವ್ಯವಸ್ಥೆ ಮತ್ತು ಸಂಸ್ಕೃತಿ—ಈ ಎಲ್ಲ ಕ್ಷೇತ್ರಗಳ ಅಭಿವೃದ್ಧಿಗೆ ಆಧಾರವಾಗಿರುವ ಅಲ್ಲಿನ ಸಾಮಾಜಿಕ, ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ಬಳಸಬೇಕೆಂದೂ ನಮಗೆ ದೃಢವಾದ ನಂಬಿಕೆಯಿದೆ.

●●

ಸತ್ತವರಿಗೆಲ್ಲಾ ಸ್ವರ್ಗ ಸಿಗುವುದುಂಟೆ?

(ಒಂದನೇ ಪುಟದಿಂದ)

ಟಿಕೇಟು ಉಳ್ಳವರ ನಡುವೆಯೇ ತನಗೆ ಬೇಕಾದವರನ್ನು ಗೇಟ್ ಕೀಪರ್ ಥಿಯೇಟರಿಗೆ ಒಳ ಬಿಡುತ್ತಾನೆ. ತಮಗೆ ಬೇಕಾದವರನ್ನು, ತನ್ನ ಸ್ಥಾನಕ್ಕೆ ಅಡ್ಡ ಬರುವವರನ್ನು ದಮನಿಸಲೆಂದೇ, ಅರಸರು ಇಂಡಿಕೇಟಿಗೆ ಸೇರಿಸುತ್ತಾರೆ. ಬೇಡಾದವರನ್ನು ಬೇಕೆಂದೇ ದೂರವಿಡುತ್ತಾರೆ. ಕಳೆದ ಮಾರ್ಚ್ ತಿಂಗಳ ಚುನಾವಣೆಗಳಲ್ಲಿ ಇಂದಿರಾ ಗಾಂಧಿಯ ಹೆಸರು ಸವಾಡ ತೋರಿಸಿದಂತೆ ಮುಂದಿನ ಫೆಬ್ರವರಿಯೊಳಗೆ ತನ್ನ ಹೆಸರು ಮಂಕು ಬೂದಿಯೆರಚಿ ಬಿಡಬೇಕೆಂದು ಅರಸರ ಸದಾಶಯ. ಡಿಲ್ಲಿಯಲ್ಲಿ ಇಂದಿರಾ ಗಾಂಧಿಯಂತೆ, ಬೆಂಗಳೂರಲ್ಲಿ ದೇವರಾಜ ಅರಸರು ಪ್ರಶ್ನಾತೀತ ನಾಯಕರೆನಿಸಲು ಶತ ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದ ಅವರು ಚುನಾವಣೆಯಲ್ಲಿ ಗೆದ್ದರೂ ಗೆಲ್ಲಬಹುದು; ಆದರೆ, ಅದರ ಹಿಂದೆಯೇ ನೂರು ಛಿದ್ರಗಳು ಮೂಡುತ್ತವೆ. ಈಗಿನ ಹತ್ತು ಛಿದ್ರಗಳನ್ನು ಮುಚ್ಚಿದಂತೆ ಅವನ್ನು ಹೊಲಿಯುವುದು ಸಾಧ್ಯವಿಲ್ಲ.

ಶ್ರೀ ಶಿವಪ್ಪನವರು ಭಿನ್ನಮತದ ಮಾತೆತ್ತಲೇ ಬಾರದು. ಅವರು ವಿಚ್ಛಿದ್ರತೆಯ ಮಾತೆತ್ತಿದರೆ, ಅವರ ಮೇಲೆ ಶಿಸ್ತಿನ ಕ್ರಮ ಕೈಕೊಳ್ಳಲೂ ಅರಸರು ಹಿಂದೆ ಮುಂದೆ ನೋಡುವುದಿಲ್ಲ. ಆಗ. ಶಿವಪ್ಪ ಏನು ಮಾಡಬೇಕು? ಇಂಡಿಕೇಟ್ ಸೇರಿಕೊಂಡ ಶಿವಪ್ಪನವರು ತಮ್ಮ ಹಲ್ಲುಗಳನ್ನು ಕಳೆದುಕೊಂಡಿದ್ದಾರೆ. ಇಂಡಿಕೇಟ್ ನಾಯಕರಿಗೆ ಅವರು ಬೇಕಾಗಿಲ್ಲ; ಉಳಿದವರನ್ನು ಶಿವಪ್ಪನವರೇ ದೂರ ಮಾಡಿದ್ದಾರೆ. ದೊರೆಯುತ್ತಿರುವ ಗೌರವವನ್ನೇ ಪರ್ವತವೆಂದು ತಿಳಿದು ಅವರೀಗ ಅರಸಗಾಥೆ ಹಾಡಬೇಕಾಗಿದೆ. ಇವರಂಥವರು ಇನ್ನೂ ಹಲವರಿದ್ದಾರೆ. ಪಾಪ ಏನೇನೂ ಆಶಿಪಟ್ಟು ಬಂದವರಿಗೆ ಏನೇನೂ ಸಿಗುವುದಿಲ್ಲವೆಂಬುದೀಗ ಖಾತ್ರಿಯೂ ಆಗಿದೆ.

ಪಕ್ಷಾಂತರ ಪ್ರವೃತ್ತಿ ಪಡೆಯಲೆಂದೇ ದೇವರಾಜರು ಈ ರೀತಿ ನಡೆಯುತ್ತಿದ್ದಾರೆಯೆ? ●

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 198/1971.

ಅಕ್ಕಯ್ಯ ಶೆಟ್ತಿ ಕೂಡಾ — ವಾದೀರು

ಮತ್ತು

ವಿಠಲ ಹೆಗ್ಡೆ ಕೂಡಾ —ಪ್ರತಿವಾದಿರು

3ನೇ ಪ್ರತಿವಾದಿ: – ರತ್ನ ಹೆಗ್ಗಡ್ತಿ – ತುಂಗಮ್ಮ ಹೆಗ್ಗಡ್ತಿರ ಮಗಳು–ಉಡ್ಪಿ ತಾಲ್ಲೂಕು ವಾರಂಬಳ್ಳಿ ಗ್ರಾಮ. ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ: —

ತಾರೀಕು 1—5—1958ನೇ ರಿಜಿಸ್ತ್ರಿ ಈಡು ದಸ್ತಾವೇಜಿನ ಬಾಬ್ತು ನೀವು ವ ನಿಮ್ಮ ಕುಟುಂಬದಿಂದ ವಾದಿರಿಗೆ ಬಹಾ ಅಸ್ಲು ಬಡ್ಡಿ ಆೈವೇಜುಗಳನ್ನು ಬರಮಾಡಿಕೊಳ್ಳುವರೆ ವಾದಿರು ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು. 28–10–1971ಕ್ಕೆ ಯಿಟ್ಟದೆ–ಉದಾಹರಿಸುವಂಥಾದ್ದು ಯಿದ್ದರೆ ಆ ದಿವ್ಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿ ಕೊಳ್ಳಬಹುದು—ತಪ್ಪಿದ್ರೆ— ನಿಮ್ಮ ಗೈರು ಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದು—

ಕೋರ್ಟು ಹ್ಕುಂ ಪ್ರಕಾರ,

K. Balachandra Rao

Advocate for Plaintiff.

Udipi, 30—9—1971.

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

READ &
ADVERTISE IN
NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India.